Regd. No. M. 3618

Estd: 1921 ಸ್ಥಾಪನ

5-1-1950

LICENCE No. 31
Licensed to Post
without Prepayment

FOUNDER:
Sri. A. B. Shetty
Minister for Agriculture
& Veterinary

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30 ವಾರ ೧೯

NAVAYUGA WEEKLY Post Box No. 22 UDIPI, S. K.

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol 30 No. 19

# ನವ ಯುಗಾನುಸಾರ ನಾವು....

1950ನೇ ಇಸವಿ-ಒಂದು ಸರಹದ್ದು ಅವಧಿ-ಈಗ ತಾನೇ ಬಂದಿದೆ. ಈ ವರುಷದ ಆದಿಭಾಗದಿಂದ — ಜನವರಿ ತಾ. 26ರಿಂದ — ಭಾರತದಲ್ಲಿ ಜನತಾಯುಗವಾರಂಭಿಸಲಿದೆ; 'ರಿಪಬ್ಲಿಕ್ ಭಾರತ'ವು ಅಸ್ತಿತ್ವಕ್ಕೆ ಬರಲಿದೆ. ಜನತಾರಾಜ್ಯ ಭಾರತವು ಪೂರ್ಣ ಸ್ವತಂತ್ರವಾದ ಪ್ರತಿಜ್ಞೆ, ಆಜ್ಞೆ, ಗೌರವ, ಚಿಹ್ನೆ, ನಾಣ್ಯ, ಚೀಟುಗಳನ್ನು ಆ ದಿನದಿಂದ ಅಂಗೀಕರಿಸಿಕೊಳ್ಳುವುದು. ಅದೇರೀತಿ ಭಾರತೀಯರೆಲ್ಲರೂ ಕಾಲೋಚಿತವಾದ ಪ್ರತಿಜ್ಞಾಧಾರಿಗಳಾಗಿಯೇ ಈ ನವಯುಗವನ್ನು ಪ್ರವೇಶಿಸಬೇಕು.

ಪ್ರಧಾನಮಂತ್ರಿ, ಹಾಗೂ ರಾಷ್ಟ್ರದ ಸರ್ವ ಪ್ರಥಮನಾಯಕ ಮತ್ತು ಪೂರ್ಣ ಸ್ವಾತಂತ್ರ್ಯ ನಿರ್ಧಾರದ ಜನಕನಿರುವ ಪಂಡಿತ ಜವಾಹರಲಾಲರು ಈ ಸಂದರ್ಭದಲ್ಲಿ ತಾನು 20 ವರುಷಗಳ ಮೊದಲು ಹೇಗಿದ್ದೆನೋ ಹಾಗಾಗುವೆನೆಂಬ ಪ್ರತಿಜ್ಞೆ ತೊಡಬೇಕು. 1930ನೇ ಜನವರಿ 26ರಲ್ಲಿ ಅಖಿಲ ರಾಷ್ಟ್ರದಿಂದ ಪ್ರಥಮ ಬಾರಿ 'ಸಂಪೂರ್ಣ ಸ್ವಾತಂತ್ರ್ಯ'ದ ಪ್ರತಿಜ್ಞೆ ಮಾಡಿಸುವಾಗ ತನ್ನಲ್ಲಿ ಯಾವ ಧೋರಣೆ ಮತ್ತು ಭಾವನೆಗಳಿದ್ದವೋ ಅವುಗಳನ್ನೇ 1950ನೇ ಜನವರಿ 26ರಲ್ಲಿ ಪುನಃ ಆವಾಹನೆ ಮಾಡಿಕೊಂಡು ಆ ಪ್ರಕಾರವೇ ಮುಂದೊತ್ತುವೆನೆಂದು ಶಪಥ ತೊಡಬೇಕು.

ಉಪಪ್ರಧಾನಿ, ಗೃಹ ಮತ್ತು ಸಂಸ್ಥಾನಗಳ ಸಂಬಂಧದ ಸಚಿವನಾಗಿರುವ ಹಾಗೂ ನಿಜಕ್ಕೂ ಸರಕಾರೀ ಯಂತ್ರದ ಚಾಲಕರಿರುವ ಸರ್ದಾರ್ ವಲ್ಲಭಾಯಿಗಳು ಈ ಹೊಸಯುಗದಲ್ಲಿ ತನ್ನ ಮುಷ್ಟಿ ಸಡಲಿಸಿಕೊಳ್ಳುವೆನೆಂಬ ಪ್ರತಿಜ್ಞೆ ತೊಡಬೇಕು. ಈಗ ಬಂದಿರುವ 'ಜನತಾ ರಾಜ್ಯ'ವು ಸತ್ಯಕ್ಕೂ ಸಾರ್ಥಕವಾಗುವಂತೆ, ತಾನಿನ್ನು ಅಂಗೈ ಅರಳಿಸಿ ಜನತೆಯು ನಡುವಿನಿಂದೇಳುವ ಅಧಿಕಾರವನ್ನು ಹಿಡಿದುಕೊಳ್ಳುವೆನೇ ಹೊರತು ಮುಷ್ಟಿ ಬಿಗಿದು, ದಿಲ್ಲಿಯಿಂದ ಕೆಳಗದನ್ನು ಇಳಿಸಲಾರೆನೆಂದು ದೃಢ ನಿರ್ಧಾರ ಮಾಡಿಕೊಂಡು, ಈ ನವ ವಿಧಾನವನ್ನು ಜಯಶೀಲಗೊಳಿಸುವುದಕ್ಕಾಗಿಯೇ ತನ್ನೆಲ್ಲಾ ಸಂಘಟನಾ ಶಕ್ತಿಯನ್ನು ವಿನಿಯೋಗಿಸುವ ಶಪಥ ತೊಡಬೇಕು.

ಕೇಂದ್ರ ಸರಕಾರದ ಎಲ್ಲಾ ಮಂತ್ರಿಗಳೂ ಜನತಾವಿಧೇಯತಾ ಪ್ರತಿಜ್ಞೆಯನ್ನು ತೊಡಬೇಕು. 'ಜನತಾ ರಾಜ್ಯ' ಕ್ರಮಕ್ಕನುಸಾರವಾಗಿ ಜನತೆಯಿಂದಾರಿಸಲ್ಪಟ್ಟವರು ತಾವಲ್ಲವಾದ್ದರಿಂದ, ಈ ಮಾರ್ಪಾಟಿತ ಕಾಲದಲ್ಲಿ ತಮ್ಮ ಸ್ಥಾನವು ಕೃತಕ ಮತ್ತು ತಾತ್ಕಾಲಿಕವಾದರೂ ಕೇವಲ ಜನತಾಧೀನ ವರ್ತನೆಗಳಿಂದ ತಾವು ಕೃತಕೃತ್ಯರಾಗಿಯೇ ತೀರಬೇಕೆಂದು ಶಪಥ ತೊಡಬೇಕು.

ಪ್ರತಿಯೊಂದು ಪ್ರಾಂತ್ಯದ ಪ್ರತಿಯೊಬ್ಬ ಮಂತ್ರಿಯೂ ಹೊಸಯುಗದಲ್ಲಿ ತಾನು ಅಧಿಕಾರಕ್ಕಿಂತ ಹೆಚ್ಚಾಗಿ ಜನತೆಯ ಆಧಾರವನ್ನು ಅವಲಂಬಿಸಿರಬೇಕಾಗುವದೆಂಬುದನ್ನು ಗಮನಿಸಿ, ತನ್ನ ಸ್ಥಾನಮಾನಗಳ ಜತನ ಕಾರ್ಯಕ್ಕಿಂತ ಹೆಚ್ಚಾಗಿ ಜನತಾ ಕಾರ್ಯದತ್ತ ಲಕ್ಷ್ಯಕೊಡುವೆನೆಂದು ಪ್ರತಿಜ್ಞೆ ತೊಟ್ಟಿರಬೇಕು.

ಪ್ರತಿಯೊಂದು ಜನಪ್ರತಿನಿಧಿ ಸಭೆ, ಸಂಸ್ಥೆಗಳ ಸದಸ್ಯರೂ, ತಮ್ಮನ್ನಾರಿಸಿದ ಮತದಾರ ಕ್ಷೇತ್ರವು ಈ ಹೊಸಯುಗದಲ್ಲಿ ಎಷ್ಟು ವಿಸ್ತರಿಸಿರುವುದೋ ಅಷ್ಟು ಪರಿಮಾಣದಲ್ಲಾದರೂ ತಮ್ಮ ಹೃದಯ, ಧೋರಣೆ ಮತ್ತು ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಳ್ಳುವೆವೆಂದು ಪ್ರತಿಜ್ಞೆ ಮಾಡುವುದು ಅಗತ್ಯ.

ಯಾವುದೇ ಇಲಾಖೆಗೆ ಸೇರಿದ ಪ್ರತಿಯೊಬ್ಬ ಸರಕಾರೀ ನೌಕರನೂ ತಾನು ಕೈಕೊಳ್ಳುವ ಹೊಸ ಪ್ರತಿಜ್ಞೆಯೆಂಬುದು ಈ ಮೊದಲಿನ ಪ್ರತಿಜ್ಞೆಗಳಂತೆ, ಬ್ರಿಟಿಷ್ ರಾಜರ ಅಥವಾ ವಸಾಹತು ಭಾರತದ ವಿಧೇಯತಾ ಪ್ರತಿಜ್ಞೆಯಾಗಿರದೆ ಪ್ರತ್ಯಕ್ಷ ಜನತೆಯ ಸನ್ನಿಧಿಯಲ್ಲೇ ಎಂಬುದನ್ನು ಲಕ್ಷ್ಯದಲ್ಲಿಟ್ಟುಕೊಂಡು, ಆ ಪ್ರತಿಜ್ಞೆಯ ಪೂರ್ಣ ಪರಿಪಾಲನೆಗಾಗಿ ಯಾವುದೇ ರೀತಿಯ ಜನತಾ ದ್ರೋಹವೂ ತನ್ನಾವುದೇ ವರ್ತನೆಯಿಂದಾಗದಂತೆ ನೋಡುವೆನೆಂದು ಶಪಥ ಕೈಕೊಂಡರಾಯಿತು.

ಸರ್ವ ಹೊಣೆಗಾರಿಕೆಯನ್ನೂ ಸಂಪೂರ್ಣ ತಮ್ಮದನ್ನಾಗಿ ಮಾಡಿರುವ ಹೊಸ ಕಾಲ ಮತ್ತು ಹೊಸ ಶಾಸನಗಳು ಈಗ ಬಂದಿವೆ ಎಂಬುದನ್ನು ಭಾರತೀಯ ಜನ ಸಾಮಾನ್ಯರೆಲ್ಲರೂ ಮಂದಟ್ಟು ಮಾಡಿಕೊಂಡು, ಅದಕ್ಕನುಸಾರವಾಗಿ ಈ ಯುಗಾರಂಭದಿಂದ ಹೊಸ ಚೇತನವುಳ್ಳ ಹೊಸ ಮನುಷ್ಯರೇ ತಾವಾಗುವೆವೆಂದು ಪ್ರತಿಜ್ಞೆ ತೊಟ್ಟು, ಪುನರ್ಜನ್ಮ ಪಡೆದಂತಿರಬೇಕು.

ರಾಷ್ಟ್ರದ ಆಗುಹೋಗುಗಳಲ್ಲಿ ಪಂಡಿತ ನೆಹರುಗಳಿಗಿರುವಷ್ಟೇ ಹೊಣೆಗಾರಿಕೆ ಮತ್ತು ಆಸಕ್ತಿ ತನಗೂ ಇದೆಯೆಂದು ಭಾರತೀಯರಲ್ಲಿ ಪ್ರತಿಯೊಬ್ಬನೂ ಭಾವಿಸಿಕೊಂಡು ಆದಕ್ಕನುಸಾರವಾಗಿ ತನ್ನಲ್ಲಿ ನೆಹರು ಯೋಗ್ಯತೆಗಳನ್ನು ಆವಾಹನೆ ಮಾಡಿಕೊಳ್ಳುವ ಪ್ರಯತ್ನವನ್ನು ಶಕ್ತ್ಯಾನುಸಾರ ನಡಿಸಲು ಈ ಸಂದರ್ಭದಲ್ಲೇ ಕಟಿಬದ್ಧರಾಗಬೇಕು.

ಮೊದಲು ನುರಿತ ಬ್ರಿಟಿಷರದಾಗಿದ್ದ, ಆ ಮೇಲೆ ನಮ್ಮ ವಿಶ್ವಾಸಾರ್ಹ ಹಾಗೂ ಸಮರ್ಥ ಧುರೀಣರದಾಗಿರುವ ರಾಜ್ಯಭಾರ ನಿರ್ವಹಣಾ ಹೊಣೆಗಾರಿಕೆಯು ಈಗ ತಮ್ಮದಾಗಿರುವದೆಂದೂ ಬ್ರಿಟಿಷರ ಅನುಭವ ಮತ್ತು ತುಲನಾತ್ಮಕಬುದ್ಧಿ ಹಾಗೂ ನೆಹರು ವಲ್ಲಭಾಯಿಗಳಂತಹ ನಾಯಕರ ದೇಶಪ್ರೇಮ ಮತ್ತು ಸಂಘಟನಾಶಕ್ತಿ ತಮ್ಮಲ್ಲಿ ತೋರಿಬಂದರೇನೇ ಈ ಬದಲಾವಣೆ ಸಾರ್ಥಕವಾಗಬಹುದೆಂದೂ ಭಾರತೀಯ ಜನತೆ ಸ್ಪಷ್ಟವಾಗಿ ಗ್ರಹಿಸಿಕೊಂಡು ಈ ನವಯುಗಾರಂಭದಿಂದ ಅಂತಹ ಸಾರ್ಥಕ ಬಾಳುವೆಯನ್ನೇ ನಿರ್ವಹಿಸುವೆವೆಂದು ಶಪಥ ತೊಡಬೇಕು.

ಈ ವರೆಗೂ ಕಿರಿ ಮೆಂಬರರಾಗಿದ್ದು, ಯಜಮಾನರಾಡಳಿತೆಯಲ್ಲಿ ಸಿಕ್ಕಿದಷ್ಟನ್ನು ಉಂಡು 'ಬೇಜವಾಬ್ದಾರ'ರಾಗಿದ್ದ ತಾವು ಜನವರಿ ತಾ. 26 ರಿಂದ 'ಪಟ್ಟೇದಾರ'ರಾಗಿ ಮಾರ್ಪಡುವೆವೆಂಬುದನ್ನು ಸ್ವತಃ ಗ್ರಹಿಸಿಕೊಂಡು ಯಜಮಾನಿಕೆಯ ಹೊಣೆಗಾರಿಕೆ, ಬುದ್ಧಿವಂತಿಕೆ, ಘನತೆ, ಪರಿಶ್ರಮಗಳನ್ನು ಪ್ರದರ್ಶಿಸುವ ಶಪಥಧಾರಿಗಳಾಗಬೇಕು.

ಈ ಹೊಸಯುಗದಲ್ಲಿ ತಮ್ಮಲ್ಲಿರುವ ಅಜ್ಞಾನ ಮತ್ತು ದೌರ್ಬಲ್ಯಗಳನ್ನೇ, ತಮ್ಮನ್ನು ಮೂಲೆಗೆ ತಳ್ಳಿಬಿಡುವ ಪುಂಡಾಟಗಾರರೆಂದು ಕಟ್ಟಿಕೊಂಡು, ಅವುಗಳಿಗವಕಾಶವನ್ನೇ ಕೊಡಲಾರೆವೆಂದು ಜನಸಾಮಾನ್ಯರು ಶಪಥ ತೊಡಬೇಕು.

ಈ ಕಾಲದಲ್ಲೂ ಕಳ್ಳಸಂತೆ, ಮಹಾಟು ವಂಚನೆಗಳನ್ನು ನಡೆಸಿದರೆ, ಸ್ವತಃ ತಾವು ಚೋರಪಾಸನೆ ಮಾಡಬೇಕಾದುದನ್ನೇ ಕರವು ಮಾಡಿದಂತಾಗುವದೆಂಬ ನಾಚಿಕೆ ಮೊಳೆತು, ಎಲ್ಲವನ್ನೂ ಕ್ರಮಬದ್ಧಗೊಳಿಸುವೆವೆಂದು ವ್ಯಾಪಾರಿಗಳು ಶಪಥ ತೊಡಬೇಕು.

ಅಧಿಕಾರ ಆಹಾರ ಎಲ್ಲವುಗಳ ಮಟ್ಟಿಗೂ 'ತನಗೆ ತಾನೇ' ಎಂದಾಗಿರುವ ಈ ಕಾಲದಲ್ಲೂ ರಾಷ್ಟ್ರವನ್ನು ಆಹಾರ ಸ್ವಾವಲಂಬಿಯಾಗಿ ಮಾಡಲು ಅಗತ್ಯವಿರುವ ತನ್ನ ಪಾಲಿನ ಕಾರ್ಯ ನಿರ್ವಹಣದಲ್ಲಿ ಆಲಸಿಗನಾದರೆ, ಬಾಯಿಗೆ ತುತ್ತು ತುರುಕಿ ಸತತವೂ ಕೈಯನ್ನೇ ತಲೆಯಮೇಲಿಟ್ಟುಕೊಳ್ಳುತುಕೊಂಡ 'ಗ್ರಹಚಾರ'ವನ್ನು ತನಗೆ ತಾನೇ ನಿರ್ಮಿಸಿದಂತಾಗುವುದರಿಂದ ಪ್ರತಿಯೊಬ್ಬ ರೈತನೂ ಸರ್ವ ಶಕ್ತಿಯಿಂದ ದುಡಿಯುವ ಪ್ರತಿಜ್ಞೆ ವಹಿಸಬೇಕು.

ಜನತೆಯಿಂದ—ಜನತೆಗಾಗಿ—ಜನತೆಯದೇ ಆಗಿ ಇರುವ ಹೊಸ ರಾಜ್ಯಭಾರ ಬಂದಿರುವಾಗ ಅದಕ್ಕೆ ಹೊರಗಿನ ಆಕ್ರಮಣ, ಒಳಗಿನ ಅಕ್ರಮಗಳ ಬಾಧೆಯಿಲ್ಲಿಯೂ ತಟ್ಟದಂತೆ ಎಲ್ಲೆಲ್ಲಿ ಅಗತ್ಯವೋ ಅಲ್ಲಲ್ಲಿ ಎಚ್ಚರಿಕೆ ಮತ್ತು ಪರಿಪಾಲನೆ ನಡೆಸುವುದು ತನ್ನ ಸ್ವಂತ ಕರ್ತವ್ಯ ಹೊರತು ಬೇರೇನೂ ಅಲ್ಲವೆಂಬ ಅಭಿಮಾನ ಮತ್ತು

(೨ನೇ ಪುಟ ನೋಡಿರಿ)

THE VIJAYA BANK, Ltd.,
H. O., MANGALORE.

A. With a net work of Branches through out the District and one each at Mercara and Bombay.

B. With a standing of 18 years service.

C. With total resources of over 40 Lakhs.

Fixed deposits are now accepted at the following rates of interest.

3 months ... 3% P. A. 6 months ... 3½% P. A.
12 months ... 3¾% P. A. 24 months ... 4% P. A.

*All kinds of banking business transacted.*

Sri B. M. Hegde,
Advocate & President District Board,
South Kanara.
(CHAIRMAN OF THE BOARD OF DIRECTORS)

# ಜನತಾ ರಾಜ್ಯ ಭಾರತದ- ರಾಜಾಜಿಯೊ ರಾಜೇಂದ್ರರೊ?

ಬರುವ ಜನವರಿ ತಾ. 26ಕ್ಕೆ ಅಸ್ತಿತ್ವಕ್ಕೆ ಬರಲಿರುವ ಭಾರತ ಜನತಾ ರಾಜ್ಯದ ಪ್ರಥಮಾಧ್ಯಕ್ಷನಾಗುವ ಭಾಗ್ಯ ಯಾರದೆಂಬ ಕುರಿತು ಈಗ ರಾಷ್ಟ್ರದಲ್ಲಿ ಊಹಾಪೋಹಗಳೆದ್ದಿವೆ. ಈ ಸ್ಥಾನದ ಸಾಪೇಕ್ಷತೆ, ಪ್ರಾಮುಖ್ಯತೆ ಮತ್ತು ಗೌರವವು ಅತಿ ಹೆಚ್ಚಿನದಾದ್ದರಿಂದ ರಿಪಬ್ಲಿಕ್ ಭಾರತದ ಪ್ರಥಮಾಧ್ಯಕ್ಷನಾಗುವವ, ನಮ್ಮ ಮುಂದಾಳುಗಳ ಪೈಕಿ ಸಾರ್ಥಕ ಜೀವಿಯೆಂಬುದು ನಿರ್ವಿವಾದ. ಅಂತೆಯೇ ಆ ಘನ ಸ್ಥಾನದ ಅರ್ಹತೆಯುಳ್ಳ, ಸರ್ವ ಜನಾದರಣೀಯ ಘನವಂತನೇ ಅವನಾಗಬೇಕೆಂಬುದೂ ಖಂಡಿತ. ಭಾರತ ಜನತಾರಾಜ್ಯದ ಆರಂಭದಲ್ಲೇ ಅದರ ಅಗ್ರಪೀಠಕ್ಕೇರುವ ಸೌಭಾಗ್ಯ ಯಾರದಾಗಬಹುದು ಎಂಬುದೇ

ರಾಜೇಂದ್ರಜಿ.

ಈಗಿನ ಪ್ರಶ್ನೆ. ಜನವರಿ ತಾ. 24ರಲ್ಲಿ ಘಟನಾ ಸಮಿತಿಯು ಅಧ್ಯಕ್ಷನ ಆರಿಸುವಿಕೆಗಾಗಿಯೇ ಸೇರಲಿದೆ; ಆ ದಿನಬಿಟ್ಟು ಮಾರಣೇ ದಿನವೇ ಈ ಮಹಾಧ್ಯಕ್ಷನು ಜನತಾ ರಾಜ್ಯೋದ್ಘಾಟನೆಯ ಘನಗೌರವ ವಿಧಿಗಳನ್ನು ನೆರವೇರಿಸಲಿದ್ದಾರೆ; ಅಂದಿನಿಂದ ಈ ಅಗ್ರಪೀಠಾರೋಹಿ ಭಾರತದ ಅಧಿಕಾರ ಕ್ಷೇತ್ರದಂತೆಯೇ ಭಾರತೀಯರ ಹೃದಯ ರಂಗದಲ್ಲೂ ಒಂದು ವಿಶಿಷ್ಟ ಸ್ಥಾನ ಸಂಪಾದಿಸಿಕೊಳ್ಳಲಿದ್ದಾರೆ.

## ಮಧ್ಯಾವಧಿ ಅಧ್ಯಕ್ಷ

ಬರುವ 24ನೇ ತಾರೀಕಿಗೆ ಚುನಾವಣೆ ನಡೆಯಲಿರುವ ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆಯಿರಲಾರದೆಂಬುದನ್ನು ಈಗಲೇ ನಿರ್ಧರಿಸಿಟ್ಟುಕೊಳ್ಳಲಡ್ಡಿಯಿಲ್ಲ. ಹಿರಿಯ ಅಗ್ರಗಣ್ಯ ದೇಶಭಕ್ತರಲ್ಲೊಬ್ಬನನ್ನೇ ಆ ಸ್ಥಾನಕ್ಕಾರಿಸಬೇಕಾದುದು ಸ್ವಾಭಾವಿಕ. ಅಂತಹ ಮಾನ್ಯರು ಕೂಡಾ ಸ್ಥಾನಕ್ಕಾಗಿ ಸ್ಪರ್ಧಿಸಿಕೊಳ್ಳುವರೆಂದು ಊಹಿಸುವುದು ಕಷ್ಟ. ಮೇಲಾಗಿ ಈ ಬಾರಿಯ ಅಧ್ಯಕ್ಷ ಚುನಾವಣೆಯು ಮಧ್ಯಾವಧಿಯ ಮಟ್ಟಿಗೆ ಮಾತ್ರ. ಹೊಸ ಘಟನೆಯನ್ವಯ ಈಸಲದ ರಾಷ್ಟ್ರಾಧ್ಯಕ್ಷನಾರಿಸಲ್ಪಡುವದಿಲ್ಲ; ಅದು ಜಾರಿಗೆ ಬರುವ ಎರಡು ದಿನಗಳಿಗೆ ಮುಂಚಿತವಾಗಿ, ಪ್ರಚಲಿತ ವಿಧಾನಾನುಸಾರವಾಗಿಯೇ ಈ ಆರಿಸುವಿಕೆ ನಡೆಯಲಿದೆ. ಪ್ರೌಢ ಮತದಾರರಿಂದಾರಿಸಲ್ಪಡುವ ಎಲ್ಲಾ ಪ್ರಾಂತಿಕ ಶಾಸನ ಸಭೆಗಳ ಮತ್ತು ಕೇಂದ್ರ ಪಾರ್ಲಿಮೆಂಟಿನ ಎಲ್ಲಾ ಸದಸ್ಯರ ಒಟ್ಟು ಮತದಿಂದ ಭಾರತಾಧ್ಯಕ್ಷನಾರಿಸಲ್ಪಡಬೇಕೆಂಬುದು ನವ ರಾಜ್ಯ ಶಾಸನದಲ್ಲಿರುವ ನಿಯಮ. ಅಂತಹ ಚುನಾವಣೆಗಳು ನಡೆದು, ಆ ವಿಧಾನದಿಂದಲೇ ಅಧ್ಯಕ್ಷನನ್ನಾರಿಸಿಕೊಳ್ಳುವ ಅವಧಿಯ ವರೆಗೆಂದು, ಈ ಬಾರಿ ಘಟನಾ ಸಮಿತಿಯೇ ಅಧ್ಯಕ್ಷನನ್ನಾರಿಸಿಕೊಳ್ಳುವದಿದೆ. ಹೊಸ ಘಟನೆಯನ್ವಯ ಹೊಸ ಸಾರ್ವತ್ರಿಕ ಚುನಾವಣೆಗಳಾಗಿ ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳ ರಚನೆ ಮತ್ತು ಅಧ್ಯಕ್ಷನ ಕ್ರಮಬದ್ಧ ಆಯ್ಕೆಯ ಕಾರ್ಯಗಳು 1951ನೇ ಮಧ್ಯಾವಧಿಯಲ್ಲಿ ಪೂರ್ಣಗೊಳ್ಳಬಹುದೆಂದು ಈಗಿನ ನಿರೀಕ್ಷೆ. ಹೀಗಾಗಿ ಬರುವ ತಾ. 24ಕ್ಕೆ ಗದ್ದುಗೆಯೇರುವ ಅಧ್ಯಕ್ಷನು ಸುಮಾರು ಒಂದೂವರೆ ವರುಷ ಮಾತ್ರ ಆ ಪೀಠದಲ್ಲಿರತಕ್ಕವನು; ನಡುಗಾಲಾವಧಿಯ ರಾಷ್ಟ್ರಾಧ್ಯಕ್ಷ. ಇಂತಹ ಅಧ್ಯಕ್ಷನನ್ನು ಒಮ್ಮತದಿಂದ ಆರಿಸಿಕೊಳ್ಳಬೇಕೆಂಬ ಬಯಕೆ ನವದಿಲ್ಲಿಯಲ್ಲಿಯ ನಾಯಕ ವರ್ಗ ಮತ್ತು ಘಟನಾ ಸಮಿತಿ ಸದಸ್ಯರಲ್ಲಿ ಸಹಜವಾಗಿ ಮೊಳೆತಿದೆ.

## ಇಬ್ಬರಲ್ಲೊಬ್ಬರು

ವಸಾಹತು ರಾಜ್ಯಭಾರವು, ಜನತಾ ರಾಜ್ಯಭಾರವಾಗಿ ಸ್ಥಿತಿ ಮಾರ್ಪಾಟುಗೊಳ್ಳುವಂತೆಯೇ, ಇದ್ದಲ್ಲೇ ಸ್ಥಾನ ಮಾರ್ಪಾಟುಗೊಳ್ಳಬಹುದಾದ ಇಬ್ಬರು ಅಗ್ರಾಸನಾಧಿಪತಿಗಳು ಈಗ ಕಂಡುಬರುತಿದ್ದಾರೆ. ಅಂತಹ ಸ್ಥಾನಾಪನ್ನರಿಬ್ಬರಿರುವ ಬದಲಿಗೆ ಒಬ್ಬನೇ ಇರುತಿದ್ದರೆ, ಪ್ರಥಮಾಧ್ಯಕ್ಷನಾರೆಂಬ ಕುರಿತು ಇಂತಹ ಊಹಾಪೋಹಗಳೇಳಬೇಕಾಗಿಯೇ ಇರುತ್ತಿರಲಿಲ್ಲ. ಇಂದು ರಾಷ್ಟ್ರದ ಅಗ್ರಗಣ್ಯಾಧಿಕಾರಿಯಾಗಿರುವ ಗವರ್ನರ್ ಜನರಲರೊಬ್ಬರು; ಘಟನಾ ಸಮಿತಿ ಅಧ್ಯಕ್ಷ ಮತ್ತೊಬ್ಬರು. ಇಂದು ಗವರ್ನರ್ ಜನರಲನಿರುವ ಸ್ಥಾನಕ್ಕೇನೇ ನಾಳೆ ಅಧ್ಯಕ್ಷನೇರಬೇಕ.—ಆದ್ದರಿಂದ ಇಂದಿನ ಗವರ್ನರ್ ಜನರಲ್ ರಾಜಾಜಿಯನ್ನೇ ನಾಳೆ ಅಧ್ಯಕ್ಷನಾಗಿ ಆರಿಸಿದರಾಯಿತು—ಎಂಬುದೊಂದು ರೀತಿ. ಈ ತನಕ ಘಟನಾಸಮಿತಿಯಾಗಿದ್ದು ನವರಾಜ್ಯ ಶಾಸನಗಳನ್ನು ತಯಾರಿಸಿದ ಸಭೆಯೇ, ತಾ. 26ರಿಂದ ಆ ಶಾಸನಗಳನ್ನು ಜಾರಿಯಲ್ಲಿಡುವ ಪಾರ್ಲಿಮೆಂಟಾಗುವುದರಿಂದ ಘಟನಾ ಸಮಿತಿ ಅಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರನ್ನೇ ಕೇಂದ್ರಾಧ್ಯಕ್ಷನಾಗಿ ಮಾರ್ಪಡಿಸಿಕೊಂಡರಾಯಿತು ಎಂಬುದು ಮತ್ತೊಂದು ವಿಧ. ಅಂತೂ ರಾಜಾಜೀ ಮತ್ತು ರಾಜೇಂದ್ರ ಪ್ರಸಾದ್, ಈ ಇಬ್ಬರಲ್ಲೊಬ್ಬರು ಜನತಾ ರಾಜ್ಯ ಭಾರತದ ಪ್ರಥಮಾಧ್ಯಕ್ಷನಾಗತಕ್ಕವರೆಂಬುದು ಸರ್ವಸಮ್ಮತ ವಿಷಯ. ಅಂತೆಯೇ ಸರ್ವ ಸಮ್ಮತಿಯಿಂದ ತಮಗಾ ಸ್ಥಾನ ದೊರೆಯುವಂತಿದ್ದರೆ, ಅದನ್ನು ಬೇಡವೆನ್ನುವವರು ಇವರಿಬ್ಬರೂ ಅಲ್ಲ. ಆದರೆ ಆ ಸ್ಥಾನಕ್ಕಾಗಿ ಪರಸ್ಪರ ಸ್ಪರ್ಧಿಸಿಕೊಳ್ಳುವುದಂತೂ ರಾಜಾಜೀ-ಪ್ರಸಾದ್‌ಜೀಗಳಿಂದ ಎಂದಿಗೂ ಆಗದ ಮಾತು. ಅವರೊಳಗೆ ಸ್ಪರ್ಧೆಯಿದೆ, ಎಂದು ಪ್ರಕಟವಾಗಿದ್ದ ವಾರ್ತೆಯನ್ನು ಡಾ। ರಾಜೇಂದ್ರ ಪ್ರಸಾದರು ಈ ಮೊದಲೇ ಕಂಠೋಕ್ತವಾಗಿ ಅಲ್ಲಗಳೆದಿದ್ದರು. ಬಹಿರಂಗಕ್ಕಾವ ಪೈಪೋಟಿ ಚಿಹ್ನೆಯೂ ಕಾಣಿಸದಿದ್ದರೂ, ಈ ಇಬ್ಬರು ಮುಂದಾಳುಗಳ ಪೈಕಿ ಯಾರೇ ಆದರೂ ಸ್ವತಃ ಅಂತಹ ಉಮೇದ್ವಾರಿಕೆಯನ್ನೆಂದಿಗೂ ತೋರಿಸುವವರಲ್ಲವಾದರೂ 'ಈ ಪೈಕಿ ಯಾರು?' ಎಂಬ ಪ್ರಶ್ನೆಯು ನಮ್ಮ ನಾಯಕ ವರ್ಗದ ತಲೆಗೆ ವಿಶೇಷ ಕೆಲಸ ಕೊಟ್ಟಿರಬೇಕು. ಈಗ ಈ ಕುಂತೊಂದು ನಿರ್ಧಾರವಾಗಿರುವಂತೆ ತೋರುತ್ತಿದೆ.

## ರಾಜೇಂದ್ರರಾಗಬಹುದು.

ಬಾಬು ರಾಜೇಂದ್ರ ಪ್ರಸಾದರನ್ನು ರಿಪಬ್ಲಿಕ್ ಭಾರತಾಧ್ಯಕ್ಷನಾಗಿ ಸರ್ವಾನುಮತದಿಂದಾರಿಸಿಕೊಳ್ಳುವ ನಿರ್ಣಯವು ನಾಯಕ ಪಂಗಡದಲ್ಲಾಗಿದೆ, ಎಂದು ತಿಳಿದು ಬಂದಿದೆ. ರಾಜಾಜಿಯೇ ಈ ನಿರ್ಣಯದ ಸೂಚಕರಿರಬಹುದು. ಅವರು ಇತ್ತೀಚೆಗೆ ಕೈಕೊಂಡ ಮದ್ರಾಸ್, ಮೈಸೂರು, ಹೈದರಾಬಾದ್ ಪ್ರವಾಸದ ವೇಳೆ ತಾನಿನ್ನು ವಿರಾಮ ಹೊಂದಲಿಚ್ಛಿಸುತ್ತೇನೆಂದು ಜಾಹೀರು ಮಾಡಿದ್ದರು; ತನ್ನ ಅಧಿಕಾರಾವಧಿಯಲ್ಲೇ ಆಂಧ್ರ ಪ್ರಾಂತ್ಯ ನಿರ್ಮಾಣವಾಗುವುದು ತನಗೆ ಬಹಳ ಸಂತೋಷದ ವಿಷಯವೆಂಬಂತಹ ಅಳತೆಗಳನ್ನು ಅಲ್ಲಲ್ಲಿ ವ್ಯಕ್ತಪಡಿಸಿದ್ದರು. ನಾಳೆ ತಾನು ಅಲ್ಲಿರುವವನಲ್ಲ, ಎಂಬ ನಂಬುಗೆಯನ್ನು ಈ ಮೊದಲೇ ದೇಶದಲ್ಲವರು ಮೂಡಿಸಿದ್ದರು. ತನಗಿನ್ನೂ ಅಗ್ರಪೀಠಬೇಕಾಗಿಲ್ಲನೆಂಬುದನ್ನು ರಾಜಾಜಿಯೇ ನಾಯಕವರ್ಗಕ್ಕೆ ಸ್ಪಷ್ಟವಾಗಿ ತಿಳಿಸಿರಬೇಕು. ಬಾಬು ರಾಜೇಂದ್ರ ಪ್ರಸಾದರೇ ಮುಂದಾಗಿ, ರಾಷ್ಟ್ರನಾಯಕರೆಲ್ಲರಿಂದ ಪ್ರೇರಣೆ ಬಂದರೂ ರಾಜಾಜೀ ಆ ಪದವೀ ಸ್ವೀಕಾರವನ್ನು ನಿರಾಕರಿಸಿರಬೇಕು. ಹಾಗಾಗಿ ಬಾಬು ರಾಜೇಂದ್ರ ಪ್ರಸಾದರಿಗಾ ಸ್ಥಾನವು ಅನಿವಾರ್ಯ

(೧ನೇ ಪುಟದಿಂದ ಮುಂದುವರಿದುದು.)

ಆತ್ಮೀಯತೆಯಿಂದ ಪ್ರತಿಯೊಬ್ಬನೂ 'ರಾಷ್ಟ್ರರಕ್ಷಕ'ನಾಗುವ ಪ್ರತಿಜ್ಞೆ ತೊಡಬೇಕು.

ವ್ಯಕ್ತಿಶಃ ತಾನು ಸಮೂಹ ಜೀವಿ, ರಾಷ್ಟ್ರಾನುಯಾಯಿಯೆಂದು ನೆನಸಿಕೊಂಡು, ಸಾಮೂಹಿಕ ಸ್ವರೂಪಿ ಹಾಗೂ ರಾಷ್ಟ್ರಾಂತರ್ಗತನಾದ ತಾನು ಪ್ರಜಾಧಿಕಾರಿ ಹಾಗೂ ಪೂರ್ಣತೆಯುಳ್ಳವನೆಂಬ ಆತ್ಮಬಲ ಮತ್ತು ನಿಷ್ಠೆಯಿಂದ ದೇಶದ ಇನ್ನು ಮುಂದಿನ ಕೃತಿಯೊಂದು ಆಗುಹೋಗುಗಳಲ್ಲೂ ಸ್ವಯಂಭಾಗಿಯಾಗಲು ಪ್ರತಿಯೊಬ್ಬನೂ ಶಪಥಪೂರ್ವಕ ಕಂಕಣ ತೊಡಬೇಕು.

'ಸ್ವರಾಜ್ಯಬಂದಿದೆ' ಎಂಬುದನ್ನು ಬ್ರಿಟಿಷರಿದ್ದ ಎಲ್ಲಾ ಅಧಿಕಾರಸ್ಥಾನಗಳಿಗೂ ನಮ್ಮವರೇ ಬಂದಿದ್ದಾರೆ ಎಂಬುದರಿಂದ ಅರಿತುಕೊಂಡಂತೆ 'ಜನತಾ ರಾಜ್ಯ' ಬಂದಿದೆ ಎಂಬುದಕ್ಕೆ, ಈ ವರೆಗಿದ್ದ ಬ್ರಿಟಿಷ್ ನಿರ್ಮಿತ ಶಾಸನಗಳ ಸ್ಥಾನದಲ್ಲಿ ಹೊಸ ಶಾಸನಗಳು ಬಂದಿರುವ ಏಕಮಾತ್ರ ಕಾರಣವಿರುವಂತಾಗದೆ ಸ್ವತಃ ಹೊಣೆಗಾರರಿರುವ ಜನತೆಯ ಚೇತನದ ಮೂಲಕವೂ ಅದು ಮುಂದಟ್ಟಾಗುವಂತಿರಬೇಕು. ಅದಕ್ಕಾಗಿ ಪ್ರತಿಯೊಬ್ಬನೂ ಪ್ರೌಢಿಮೆ, ಯೋಗ್ಯತೆಯುಳ್ಳವನಾಗಿ ತುಂಬಿಕೊಳ್ಳುವ ಪಂಥ ತೊಡಬೇಕು.

ವ್ಯಕ್ತಿಯ ಮುಖ ನೋಡುವ ಬದಲಿಗೆ ಸಂಗತಿಯ ಸ್ವರೂಪವಂತ ಕೊಳ್ಳುವೆವು—ಆಲೋಚನೆಗಳನ್ನೂ ಆಹಾರ ಧಾನ್ಯಗಳಂತೆಯೇ ಕ್ರಯಕ್ಕೆ ಅಥವಾ ಎರವಿಗೆ ತಂದು ಬಳಸುವ ಬದಲಿಗೆ ಸ್ವತಃ ನಿರ್ಮಿಸಿ ಉಪಯೋಗಿಸಿಕೊಳ್ಳುವೆವು— ಅಂಧಾನುಕರಣೆ ಮತ್ತು ಅತಿಪಯಾಕಾಂಕ್ಷೆಯ ಅಡಿಮೇಲು ವೈಪರೀತ್ಯಗಳಿಲ್ಲದಂತೆ ಮಾಡಿ, ವಸ್ತುಸ್ಥಿತಿಯನ್ನಾಧರಿಸಿ ನಿಲ್ಲುವೆವು—ಮಾತು, ನಡತೆ, ಭಾವನೆ, ಆಚರಣೆ, ಯಾವುದರಲ್ಲೇ ಆದರೂ ಅನಗತ್ಯವಾದುದನ್ನು ಅಂಶಮಾತ್ರವೂ ಬಯಸದೆ, ಅಗತ್ಯವಿರುವುದರ ಅಣುಮಾತ್ರವನ್ನೂ ಬಾಕಿ ಬಿಡದೆ ಯಥಾರ್ಥವಾದಿಗಳಾಗುವೆವು — ಎಂದು ಪ್ರತಿಯೊಬ್ಬನೂ ಈ ಯುಗಾರಂಭದಲ್ಲಿ ಪ್ರತಿಜ್ಞೆ ತೊಡಬೇಕು.

ಜನತಾರಾಜ್ಯ— ನವಯುಗ— ಬರುತ್ತಿದೆ; ಈ ಹೊಸ ಮನ್ವಂತರಕ್ಕೆ ಹೇಳಿಸಿದ ಶಪಥಧಾರಿಗಳಾಗಿ ನವೀನ ಕಾಲ ಮತ್ತು ನವ ರಚನೆಯನ್ನು ಎಲ್ಲಾ ವಿಧಾನಗಳಿಂದಲೂ ಸಂಪೂರ್ಣ ಸಾರ್ಥಕಗೊಳಿಸಬೇಕು.


**New Year Greetings**

to all our Policyholders, Agents, Medical Examiners and Wellwishers for their Happiness and Prosperity.

********

**KOCHIKAR BROTHERS LTD.,**

*Chief Agents,*

**THE BOMBAY LIFE ASSURANCE CO., LTD.**

*Offices at:*—Madras, Bombay, Bangalore, Coimbatore, Madura, Trivandrum, Calicut, Mangalore and Udipi.

...ವಾಗಿರಬೇಕು. ರಾಜಾಜೀ-ಪ್ರಸಾದಜೀ, ಇವರಿಬ್ಬರಲ್ಲಿ ಯಾರೇ ಆದರೂ ರಾಷ್ಟ್ರದ ಅನುಮೋದನೆಯಿದ್ದೇ ಇದ್ದಿತೆಂಬುದು ನಿರ್ವಿವಾದ. ಅಂತೆಯೇ ಆ ಪಂಗ್ತಿಯ ಬೇರೊಬ್ಬರು ಚುನಾಯಿಸಲ್ಪಡುತ್ತಿದ್ದರೂ ರಾಯಭಾರೀ ವರ್ಗದಲ್ಲಿ ದಕ್ಷಿಣ ಭಾರತೀಯರು ಸಾಕಷ್ಟು ಕಂಡು ಬರುತ್ತಿಲ್ಲವೆಂಬುದರಿಂದ ಡಾ. ಸುಬ್ಬರಾಯನರನ್ನು ಇಂಡೋನೇಶಿಯಾ ರಿಪಬ್ಲಿಕಿಗೆ ರಾಯಭಾರಿಯಾಗಿ ನೇಮಕ ಮಾಡಿಸಿದವರೂ

# -ಮೊದಲನೇ ಅಧ್ಯಕ್ಷನಾರು?

## ಪ್ರಾಯಶಃ ಡಾ। ರಾಜೇಂದ್ರರೇ.

"ಇದೇಕೆ ಹೀಗೆ?" ಎಂಬ ಪ್ರಶ್ನೆ ಏಳುತ್ತಿರಲಿಲ್ಲ. ಆದರೆ ಆ ಸ್ಥಾನಕ್ಕೆ ಮಿಕ್ಕವರಿಗಿಂತ ಹತ್ತಿರವಾಗಿದ್ದವರು ಇವರಿಬ್ಬರು. ಇವರಲ್ಲಿಯೂ ಡಾ। ರಾಜೇಂದ್ರರೇ ಆರಿಸಲ್ಪಡುವುದಾದರೆ ನಿಜಕ್ಕೂ ರಾಷ್ಟ್ರಕ್ಕೆ ಹೆಚ್ಚಿನ ಸಂತೋಷವಾಗಬಹುದು.

### ರಾಜಾಜೀ ವ್ಯಕ್ತಿತ್ವ

ಸೂಕ್ಷ್ಮ ವಿವೇಚನೆ, ದೂರದೃಷ್ಟಿ, ಬುದ್ಧಿವಂತಿಕೆಯಲ್ಲಿ ರಾಜಾಜಿಯನ್ನು ಸರಿಗಟ್ಟಬಲ್ಲವರು ಬೇರಿಲ್ಲ. ರಾಜಕೀಯ ಕಾರ್ಯ ಮತ್ತು ವಾದಗಳಲ್ಲಿ ರಾಜಾಜಿಯಿಂದ ಬಿಡಿಸಲಾಗದುದು ಅಥವಾ ಜಯಿಸಲಾಗದುದಿಲ್ಲವೆಂಬಷ್ಟು ಅಗಾಧ ಪ್ರತಿಭೆ ಮತ್ತು ಪ್ರೌಢಿಮೆ ಅವರದಿದೆ. ಮೇಲಾಗಿ ಗಾಂಧಿಜಿಯಿಂದ ವಿಶೇಷವಾಗಿ ಗೌರವಿಸಲ್ಪಡುತ್ತಿದ್ದ ವ್ಯಕ್ತಿ ರಾಜಾಜಿ; ಅತಿ ಚತುರನೂ ಅಂತೆಯೇ ಆಧ್ಯಾತ್ಮಿಕವಾದಿಯೂ ಇರುವ ರಾಜಾಜಿಯ ಸಾದಾ ವರ್ತನೆ, ವ್ಯವಹಾರ ವಿಧಾನ, ವಾಗ್ವೈಖರಿ, ಇವೆಲ್ಲವೂ 'ಗಾಂಧೀ ಡೋಲಿರ'ಯವುಗಳಿವೆ. ಮಹಾತ್ಮಾಜೀಯ ಮರಣಾನಂತರವಂತೂ, ಗಾಂಧೀ ಉಪದೇಶಾಮೃತಗಳ ಪ್ರತ್ಯಕ್ಷರೂಪ ಮಾಡಿಸುತ್ತಿರುವ ಮಾತುಗಳೆಂದರೆ ರಾಜಾಜಿಯವುಗಳು. ರಾಷ್ಟ್ರಪಿತನ ವಿಯೋಗದಿಂದ ಖಾಲಿಯಾದ ಗುರುಸ್ಥಾನದ ಅಭಾವವನ್ನು ಕಲವೇ ಅಂಶದಷ್ಟಾದರೂ ನಿವಾರಿಸುವ ಕೆಲಸವು ಗವರ್ನರ್ ಜನರಲ್ ಸ್ಥಾನದಿಂದ ರಾಜಾಜಿಯಿಂದಾಗಿದೆ ಎನ್ನಲಡ್ಡಿಯಿಲ್ಲ. ಶ್ರೀ ಸಿ. ರಾಜಗೋಪಾಲಾಚಾರ್ಯರಲ್ಲಿರುವ ಇಂತಹ ಹಿರಿಮೆ ಮತ್ತು 'ಗಾಂಧಿತ್ವ'ವನ್ನು ಗಣಿಸಿಯೇ, ಸಲಹೆಗಾರನಾಗಿ ಅಗ್ರ ಪೀಠದಲ್ಲಿ ಇವರನ್ನು ರಾಷ್ಟ್ರ ನಾಯಕರು ಇಟ್ಟುಕೊಂಡಿದ್ದರು. ದೂರದೃಷ್ಟಿ ಮತ್ತು ಸೂಕ್ಷ್ಮವಿವೇಚನೆಯ ಆವಶ್ಯಕತೆ ಬಿದ್ದಾಗಲೆಲ್ಲಾ ಸರಕಾರೀ ನಾಯಕರು ಅವುಗಳನ್ನು ಈ ಗವರ್ನರ ಜನರಲನಿಂದ ಪಡೆಯುತ್ತಿದ್ದರೆನ್ನಬೇಕು. ಹೈದರಾಬಾದ್ ಕ್ರಿಯಾಚರಣೆಯ ವೇಳೆ, "ಹಿಂದಿನಂತೆಯೇ ಸಿಕುಂದರಾಬಾದ್, ಬೊಲಾರಂ, ತ್ರಿಮುಲ್ಗೇರಿಗಳಲ್ಲಿ ಭಾರತದ ಸೇನೆ ನಿಲ್ಲಿಸಲು ಬಿಡಬೇಕು" ಎಂಬ ಕ್ರಮಬದ್ಧ ಸೂಚನೆಯನ್ನು ಮುಂದಿಟ್ಟುಕೊಂಡೇ ಸೇನೆನುಗ್ಗಿಸುವಂತೆ ಸಲಹೆಯಿತ್ತವರು ರಾಜಾಜಿಯೆಂಬ ಪ್ರತೀತಿಯಿದೆ. ದಕ್ಷಿಣ ಭಾರತೀಯರಿಗೂ ಕೇಂದ್ರಾಡಳಿತೆಗೂ ಇರುವ ಸಂಬಂಧವು ತುಸು ಸಡಿಲಾದುದೆಂಬುದನ್ನೂ ಅಬ್ರಾಹ್ಮಣರ ಒಂದು ವರ್ಗದವರಲ್ಲಿರುವ ಭಾವನೆಯನ್ನೂ ಗಮನಿಸಿ ಶ್ರೀ ಷಣ್ಮುಗಂ ಚೆಟ್ಟಿಯಾರರಂತಹ ಹಿಂದಿನ ಕಾಂಗ್ರೆಸ್ ವಿರೋಧಿಯನ್ನೂ ಕೇಂದ್ರ ಮಂತ್ರಿಮಂಡಲದಲ್ಲಿ ಸೇರಿಸಿಕೊಳ್ಳುವಂತೆ ಮಾಡಿದವರು ರಾಜಾಜಿ. ಸ್ವತಂತ್ರ ಭಾರತದ ಇಂತಾಗಿರಬೇಕೆಂದು ಊಹಿಸಬಹುದು. ಕಾಂಗ್ರೆಸ್ ವಿರೋಧಿಯಿದ್ದು, ಮತ್ತೀಗಲೂ ಕಾಂಗ್ರೆಸ್ ನಾಯಕತ್ವದ ಕುರಿತು ನಿಷ್ಠೆಯಿಲ್ಲದಂತಿರುವ ಡಾ. ಅಂಬೇಡ್ಕರರ ಯೋಗ್ಯತೆಯಂತೆಯೇ ಅವರ ಪ್ರಾತಿನಿಧ್ಯದ ಹಿನ್ನೆಲೆಯಲ್ಲಿರುವ ಹರಿಜನ ಸಮಾಜವನ್ನೂ ಗಣಿಸಿ, ಭಾರತ ಸರಕಾರದ ಕಾನೂನು ಮಂತ್ರಿಸ್ಥಾನಕ್ಕವರನ್ನು ಕರೆಯಿಸಿಕೊಂಡವರೂ ರಾಜಾಜಿಯೇ. ಇಂತಹ ದೂರದೃಷ್ಟಿ ಮತ್ತು ವಿವೇಚನೆಯ ಕಾಲಾಳುಗಳು ರಾಜಾಜಿಯಿಂದ ಬಹಳ ನಡೆದಿವೆ. ರಾಷ್ಟ್ರ ನಾಯಕರು ತಮ್ಮಲ್ಲಿಲ್ಲದ, ಕೆಲವು ಅವಶ್ಯಕ ಗುಣಯೋಗ್ಯತೆಗಳ ಉಪಯೋಗಗಳನ್ನು ರಾಜಾಜಿಯಿಂದಾಗಿ ಪಡಕೊಂಡಿದ್ದಾರೆ. ಆದರೆ, ಅತಿರೇಕ ಜಾಣನೇದಿಗೂ ಅತಿ ಮಾನ್ಯನಾಗದ ಸಂಪ್ರದಾಯಕ್ಕೆ ರಾಜಾಜಿ ಕೂಡಾ ಹೊರತಾಗಿಲ್ಲ. ಅವರ ಮೇದುಳು ಕೊಂಡಾಡಲ್ಪಡುತ್ತಿರುವಷ್ಟು ಅವರ ಹೃದಯ ಗೌರವಿಸಲ್ಪಡುತ್ತಿಲ್ಲ. ರಾಷ್ಟ್ರದ ಸಾಮಾನ್ಯರಿಂದ ಹಿಡಿದು ಧುರೀಣರ ವರೆಗಿನ ಎಲ್ಲರೂ ರಾಜಾಜಿಯ ಆಲೋಚನೆ ಕೇಳಬಹುದು. ಅವರೆಲ್ಲರಿಗೂ ಎಲ್ಲಾ ಸಂದರ್ಭಗಳಲ್ಲೂ ಒಳ ಹಾದಿಗಳನ್ನು ತೋರಿಸಬಲ್ಲವರು ರಾಜಾಜಿ. ಆದರೆ ಸಾಮಾನ್ಯ ಜನತೆಯಾಗಲಿ, ನಾಯಕವರ್ಗವಾಗಲಿ, ರಾಜಾಜಿಯ ನಾಯಕತ್ವವನ್ನು ಅನುಸರಿಸಿ, ಅವರ ಹಿಂದಿನಿಂದ ಹೋದೀತೆನ್ನಲಾಗುವದಿಲ್ಲ. ಜನತಾ ರಾಜ್ಯಾಧ್ಯಕ್ಷಗಿರಿಯಲ್ಲಿ, ಗವರ್ನರ್ ಜನರಲ್ ಹುದ್ದೆಗಿಂತ ಹೆಚ್ಚಿನ ಜನನಾಯಕ ಅಂಶ ಹುದುಗಿದೆ; ಆಜ್ಞಾಧಿಕಾರ ತುಂಬಿದೆ. ಅಂತಹ ಪ್ರಶ್ನಾತೀತಗಾಂಭೀರ್ಯವು ರಾಜಾಜಿಯಲ್ಲಿದೆ ಎಂಬುದು ಕೂಡಾ ಎಲ್ಲರಿಗೂ ಮಂದಟ್ಟಾಗುವಷ್ಟು ಒಡೆದು ತೋರುತ್ತಿಲ್ಲ. ಆದ್ದರಿಂದ ಮುಂದಿನ ಅಧ್ಯಕ್ಷರು ಅವರಾಗುವುದಾದರೆ ಆಕ್ಷೇಪ ಬರುವಂತಿಲ್ಲವಾದರೂ ಅವರಾಗದೆ ಹೋದರೆ ಕುಗ್ಗುವವರು ಕಡಿಮೆ.

ರಾಜಾಜಿ.

### ರಾಜೇಂದ್ರಜೀ ವ್ಯಕ್ತಿತ್ವ

'ಗಾಂಧಿತ್ವ'ವೆಂಬುದು, ರಾಜಾಜಿಯ ವೇಷ, ಹಾವಭಾವ ಮತ್ತು ನುಡಿಕಟ್ಟಿನಂತಹ ಕಲೆಗಳಲ್ಲಿ ಮಾತ್ರ ನಿಂತಿದ್ದರೆ, ಡಾ. ರಾಜೇಂದ್ರ ಪ್ರಸಾದರ ಹೃದಯದಲ್ಲೇ ನಿಂತಿದೆ. ರಾಷ್ಟ್ರದ ಅಗ್ರಗಣ್ಯ ಕಾಂಗ್ರೆಸ್ ನಾಯಕರ ಪೈಕಿ, ಮಹಾತ್ಮಾಜೀ ಹಾಕಿಟ್ಟಿರುವ ಪಥದಲ್ಲಿ ನಿಷ್ಠೆಯಿಂದ ಹೆಜ್ಜೆಯಿಡುವವರಾಗಿ ತೋರುತ್ತಿರುವವರು ಡಾ. ಪ್ರಸಾದರೇ. ಭಾರತದ ರಾಜಕೀಯ ರಂಗನಾಯಕನಾಗಿ ಗಾಂಧಿಜೀ ಕಾಣಿಸಿಕೊಂಡಂದಿನಿಂದ ಬಾಬು ರಾಜೇಂದ್ರ ಪ್ರಸಾದರು ಅವರ ನಿಕಟಾನುಯಾಯಿಗಳಲ್ಲೊಬ್ಬರಾಗಿದ್ದಾರೆ. ...ವರೆಗೆ ಸಂದರ್ಭಾನುಸಾರವಾಗಿ ಆಗೊಮ್ಮೆ ಈಗೊಮ್ಮೆಯಾದರೂ ಮಹಾತ್ಮಾಜೀಯ ಪಥಬಿಟ್ಟು ಪಕ್ಕಕ್ಕೆ ಸರಿಯದ ಪ್ರಮುಖ ನಿದಿಷ್ಟಾನಾದರೆ ಅದು ಡಾ. ರಾಜೇಂದ್ರರೊಬ್ಬರೇ. ಇವರು ತನ್ನ ಮಾತು ಕೃತಿಗಳಲ್ಲಿ, ಅಥವಾ ಭಾವನೆಯಲ್ಲಿ ಒಂದೇ ಒಂದು ಬಾರಿಯಾದರೂ ಮಹಾತ್ಮಾಜೀಯ ಅಭಿಪ್ರಾಯಕ್ಕೆ ಭಿನ್ನಮತ ತೋರಿಸಿದುದಿಲ್ಲ. ಗಾಂಧೀ ಪಂಥಾನುಸಾರವಾಗಿ ಸೇವೆಯೇ ರೂಪುಗೊಂಡಿರುತ್ತಾರೆ ಡಾ! ಪ್ರಸಾದ್. ಈಗ ಕೂಡಾ ವಿ.ಕ್ಕೈಬಿಟ್ಟ ಪ್ರಸಂಗದ ಸಂದರ್ಭವಶಾತ್ ಮಹಾತ್ಮಾಜೀಯನ್ನು ಸ್ಮರಿಸಿನಾಗ ವುದಿದೆ-ಅಂತಹ ಆರಾಧನೆ ಮಾಗಿದ ವೇಲೆ ತಮ್ಮ ವೈಶಿಷ್ಟ್ಯಾನುಸಾರವಾದ ನಿತ್ಯಕರ್ಮಗಳಲ್ಲೇ ನಿರತರಾಗುವದಿದೆ. ಆದರೆ ಡಾ. ಪ್ರಸಾದರು ಮಹಾತ್ಮಾಜೀಯನ್ನು ಮೌನವಾಗಿ ತನ್ನಲ್ಲೇ ಆವಾಹನೆ ಮಾಡಿಕೊಂಡಂತಿರುವವರು. ಅವರು ಮಿಕ್ಕ ಸಂದರ್ಭಗಳ ಮಾತಂತಿರಲಿ—ಮಹಾತ್ಮ ಗಾಂಧಿಜೀಯ ನಾಮವನ್ನಾದರೂ ಆವೇಗಪೂರ್ಣವಾಗಿ ಉಚ್ಚರಿಸಿದುದಿಲ್ಲ; ಗಾಂಧಿತ್ವದಲ್ಲವನ್ನು ಪಕ್ವಗೊಂಡ ವ್ಯಕ್ತಿತ್ವ ಅವರದು. ಇಂತಹ ಗಾಂಧೀ ತತ್ವಾವಲಂಬಿಗಳು ಮಹಾತ್ಮರ ಆಶ್ರಮವಾಸಿ ಶಿಷ್ಯರಲ್ಲಿ ಹೊರತು ರಾಜಕಾರಣಿಗಳಲ್ಲಿ ಅನ್ಯಥಾ ಕಾಣಸಿಗುವದಿಲ್ಲ. ಗಾಂಧೀ ತತ್ವತಲ್ಲೀನತೆಯ ಸಾಕ್ಷಾತ್ ಚಿಹ್ನೆಯಾಗಿರುವ ಶಾಂತ ಗಂಭೀರ ಪ್ರವೃತ್ತಿಯೇ ಡಾ. ರಾಜೇಂದ್ರರದಿರುವುದರಿಂದ ಅವರ ಚಟುವಟಿಕೆಗಳಲ್ಲಿ ತೀಕ್ಷ್ಣತೆ ಹಾಗೂ ತೀವ್ರತೆ ಕಡಿಮೆ. ಅದಕ್ಕನುಗುಣವಾಗಿ, ಅವರ ಮೌನ ಸೇವೆಗಳಿಗೆ ಇಡೀ ರಾಷ್ಟ್ರದ ಗದ್ದಲದ ಶ್ಲಾಘನೆಗಳು ದೊರಕುವ ಬದಲಿಗೆ ಮೌನ ಗೌರವವೇ ದೊರೆತಿದೆ. ಜನಮನದಲ್ಲಿ ಈ ಗೌರವವು ಮೇಲ್ಗಡೆ ಕವಲೊಡೆದು ಕಾಣಿಸಿಕೊಳ್ಳದೆ ಗೆಡ್ಡೆಯಂತೆ ಹುದುಗಿಕೊಂಡಿದೆ. ಹೀಗಾಗಿ ರಾಷ್ಟ್ರದ ಚಟುವಟಿಕೆರಂಗದಲ್ಲಿರುವುದಕ್ಕಿಂತ ಹೆಚ್ಚಾಗಿ ಡಾ. ರಾಜೇಂದ್ರರು ಜನತೆಯ ಅಂತರಂಗದಲ್ಲಿದ್ದಾರೆ. ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ, ಕೆಲವು ಸಮಸ್ಯಾತ್ಮಕ ಸನ್ನಿವೇಶಗಳಲ್ಲಿ ಸಿಲುಕಿಕೊಂಡಾಗ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಈ ನಿರ್ವಿಕಾರ ಬುದ್ಧಿಯ ಚತುರ ಮುತ್ಸದ್ದಿಯ ಸಲಹೆಯಂತೆ ನಿರ್ಧಾರಕ್ಕೆ ಬರುವ ಕ್ರಮವಿದ್ದಿತು. ಘಟನಾ ಸಮಿತಿಯ ಅಧ್ಯಕ್ಷರಾಗಿ ಸುಮಾರು ಮೂರು ವರುಷಗಳ ವರೆಗೆ ಅದರ ಕರ್ಣಧಾರಿತ್ವ ವಹಿಸಿದ ಅವರ ಅಧ್ಯತೆಯೂ ರಾಷ್ಟ್ರಕ್ಕೆ ...ಯಾಗಿ ಮನವರಿಕೆಯಾಗಿದೆ. ಕರ್ನಾಟಕ ಕಾಂಗ್ರೆಸಿನ ರಾಜೀನಾಮೆ ಸಂಬಂಧವರಾವಿಸ ಚರ್ಚೆಯ ವೇಳೆ ಗಾಂಧಿಜೀಯವರಿದ್ದರೆ ಅಥವಾ ಡಾ। ರಾಜೇಂದ್ರ ಪ್ರಸಾದರು ಡಿಲ್ಲಿಯಲ್ಲಿರುತ್ತಿದ್ದರೆ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಅಷ್ಟು ಕಠೋರವಾದ ನಿರ್ಣಯ ಮಾಡುತ್ತಿರಲಿಲ್ಲವೆಂದು ಕನ್ನಡಿಗರೀಗ ಪಶ್ಚಾತ್ತಾಪ ಪಡುತ್ತಿದ್ದಾರೆ. ಆದರೆ "ಭಾಷಾ ನ್ಯಾಯ ಪ್ರಾಂತ್ಯರಚನೆಯ ತತ್ವವನ್ನು ಕಾಂಗ್ರೆಸ ಅವಲಂಬಿಸಿ ಎತ್ತಿಹಿಡಿದುದು ಕೇವಲ ಪ್ರಚಾರೋದ್ದೇಶದಿಂದ" ಎಂದು ಒಂದರೆ ಹೇಳಿದ್ದ ರಾಜಾಜಿಯ ಮಾತು ಕನ್ನಡಿಗರಿಂದ ಟೀಕಿಸಲ್ಪಡುತ್ತಿದೆ. ಗಾಂಧಿ ಅನುಯಾಯಿ, ಸ್ವಚ್ಛ ಹೃದಯಿ, ಯೋಗ್ಯ, ಚತುರ, ಕಾರ್ಯಪಟು, ಸೇವಾಜೀವಿ, ಮುಂದಾಳು ರಾಜೇಂದ್ರಜೀ ಜನತಾ ರಾಜ್ಯ ಭಾರತದ ಪ್ರಥಮಾಧ್ಯಕ್ಷನಾಗುವುದು ಸರ್ವಸಮ್ಮತವಿದೆ.


**The Agricultural & Industrial Bank Ltd.,**
COONDAPOOR
Estd. 1934

*We Wish All our Shareholders, Depositors and Patrons a Happy and More Prosperous New Year.*

Coondapoor, 25-12-1949

A. Malhan Pai.
General Manager

ಶ್ರೇಷ್ಠ ಸ್ವಾತಂತ್ರ್ಯ ಮುಗಿಯುತ್ತಲೇ ವಿಶ್ವಕ್ಕೆ ಶಾಂತಿ ಸ್ಥಾಪನೆಗಾಗಿ, ಶೀಘ್ರದೊಳ್ಳಗಿ ಒಂದು ಸಂಘಟನಾತ್ಮಕ ಯೋಜನೆಯನ್ನು ಅಂಗೀಕರಿಸಿಕೊಳ್ಳುತಿದ್ದರೂ, ಈಗ ಆರಂಭಿಸಿರುವ 1950 ಜಾಗತಿಕ ಶಾಂತಿ ಮತ್ತು ಭದ್ರ ಭವಿಷ್ಯದೊಂದಿಗೇನೇ ತೊಡಗಬೇಕಿದ್ದಿತು. ಆದರೆ ಹಾಗಾಗಿಲ್ಲ. ಮುಖ್ಯವಾಗಿ ಪ್ರಮುಖ ರಾಷ್ಟ್ರಗಳೊಳಗಿನ ಅವಿಶ್ವಾಸ ಮತ್ತು ದ್ವೇಷಾಸೂಯೆಗಳು ಪ್ರಪಂಚವನ್ನೇ ಸಂದಿಗ್ಧಾವಸ್ಥೆಗೀಡು ಮಾಡಿವೆ. ಒಂದು ಪ್ರಾಮುಖ್ಯವತಿಯಾಗಿರುವ 1950ನೇ ಇಸವಿ ಬಂದಿದೆಯಾದರೂ ಲೋಕಸ್ಥಿತಿಯಲ್ಲಾವ ಹೊಸ ಮಾರ್ಪಾಟವನ್ನೂ ಅದು ತನ್ನೊಂದಿಗೆ ತಂದಿಲ್ಲ. ತಾನು ಸಂದು ಹೋಗುವ ಮೊದಲು ಅಂತಹ ಹೊಸತನ್ನದು ನಿರ್ಮಿಸಬಲ್ಲುದಾದರೆ, ಸಾರ್ಥಕವಾಗುವದು.

## ಅಂತರ್ರಾಷ್ಟ್ರೀಯ

ರಾಷ್ಟ್ರ-ರಾಷ್ಟ್ರಗಳೊಳಗಿನ ಮತ್ತು ಹೆಚ್ಚಿನವುಗಳ ಸ್ವರಾಷ್ಟ್ರೀಯ ಸ್ಥಿತಿಗತಿಗಳು ಬಹುತೇಕವಾಗಿ ಇದ್ದಂತಿವೆ.

. ಸಿರಿಯದಲ್ಲಿ ದಶಂಬರ್ ಆದಿಯಲ್ಲೇ ಅಧ್ಯಕ್ಷನಾಗಿ ಆರಿಸಲ್ಪಟ್ಟಿದ್ದ ಹಾಸಿಮ್ ಅಟಾಸಿ ಪಾಶರು, ಅಲ್ಲಿದ್ದ ಸೇನಾಬಂಡಾಯದ ದೆಸೆಯಿಂದ ತಿಂಗಳಾಂತ್ಯದೊಳಗೆ ರಾಜೀನಾಮೆಯೊಪ್ಪಿಸಬೇಕಾಯಿತು.

ಯುಗೊಸ್ಲೇವಿಯದ ನಾಯಕ ಮಾರ್ಶಲ್ ಟಿಟೋ ರಶ್ಯದ ಸರಕಾರೀ ನಾಯಕರ ಮೇಲೆ ಮತ್ತಲ್ಲಿಯ ಕಮ್ಯೂನಿಸ್ಟ್ ಪಕ್ಷದ ಮೇಲೆ ಬಲವಾದ ಆರೋಪಗಳನ್ನು ಮಾಡಿ, ಅವರು ಮಾರ್ಕ್ಸ್ ತತ್ವಗಳಿಗೆ ದ್ರೋಹಮಾಡುತಿದ್ದಾರೆಂದೂ, ತಮ್ಮ ಧೋರಣೆಯನ್ನು ಅವರು ಬದಲಾಯಿಸಿಕೊಳ್ಳದಿದ್ದರೆ ಸ್ವತಃ ಅವರ ಜನರೇ ಅವರಿಗೆ ಬುದ್ಧಿಕಲಿಸಲಿದ್ದಾರೆಂದೂ ಸಾರಿದ್ದಾರೆ. ರಶ್ಯ ಯುಗೊಸ್ಲೇವಿಯ ಮನಃಕಷಾಯವು ಕುದಿದುಳ್ಳುತ್ತಿದೆ.

ಫ್ರೆಂಚರು ತಮ್ಮ ಗುಲಾಮ ರಾಷ್ಟ್ರವಾಗಿಟ್ಟು ಆಳುತ್ತ ಬಂದಿದ್ದ ವೀಟ್‌ನಾಮ್ನ್ನೀಗ 'ಫ್ರೆಂಚ್ ಕೇಂದ್ರದೊಳಗಿನ ಸ್ವತಂತ್ರ ಭಾಗ'ವಾಗಿ ಜಾಹೀರುಮಾಡಿ, ಅಲ್ಲಿಯ ಮಾಜೀ ಚಕ್ರವರ್ತಿ ಬಾವೊದಾಯಿಯ ಕೈಗೆ ಅಲ್ಲಿಯ ಅಧಿಕಾರವನ್ನೊಪ್ಪಿಸಿದ್ದಾರೆ.

ಇರಾನಿನ ಶಾ ಅವರು ಕಳೆದ್ವಾರು ವಾರಗಳಲ್ಲಿ ಅಮೇರಿಕದಲ್ಲಿದ್ದು ಅಧ್ಯಕ್ಷ ಟ್ರುಮೇನ್ ಮತ್ತಿತರ ಪ್ರಮುಖಾಧಿಕಾರಿಗಳೊಂದಿಗೆ ವಿಚಾರ ವಿನಿಮಯ ನಡೆಸಿದುದರ ಪರಿಣಾಮವಾಗಿ ಅಮೇರಿಕಾ-ಇರಾನ್ ಮೈತ್ರಿಯು ಮತ್ತಷ್ಟು ಬಲಗೊಂಡಿದೆ. ಇರಾನಿಗೆ ಅಮೇರಿಕದ ಆರ್ಥಿಕ ಸಹಾಯ ಮಾತ್ರವಲ್ಲದೆ ಸೇನಾ ಸಹಾಯ ಕೂಡಾ ದೊರೆಯುವ ವಾಗ್ದಾನವಾಗಿವೆ.

ರಶ್ಯಕ್ಕೆ ಸೆರೆ ಸಿಕ್ಕಿದ್ದ ಸಹಸ್ರಾರು ಜಪಾನರ ಅದೃಷ್ಟವೇನಾಯಿತೆಂಬುದೀವರೆಗೂ ಸ್ಪಷ್ಟವಾಗದೆ ಸಮಸ್ಯೆಯಾಗಿಯೇ ಉಳಿದಿದೆ. ಈ ಬಾರಿಯ ಕ್ರಿಸ್‌ಮಸ್ ದಿನಗಳಲ್ಲಿ 12 ಮಂದಿ ಜಪಾನ್ ಕೈದಿಗಳಿಗೆ ರಶ್ಯದ ಸೇನಾ ಕೋರ್ಟೊಂದು 12ರಿಂದ 25 ವರುಷಗಳ ವರೆಗಿನ ಶಿಕ್ಷೆ ವಿಧಿಸಿದೆ.

# ಕಮ್ಯೂನಿಸ್ಟ್ ಚೈನಕ್ಕೆ ಭಾರತದ ಮನ್ನಣೆ.

## ಭಾರತ-ಚೈನಾ

ಇದೇ ದಶಂಬರ್ ತಾ. 30ರಲ್ಲಿ ಭಾರತ ಸರಕಾರವು ಚೈನದ ಕಮ್ಯೂನಿಸ್ಟ್ ಸರಕಾರವನ್ನು ಮಾನ್ಯಮಾಡಿಕೊಂಡಿತು. ಸರ್ದಾರ್ ಪಾನಿಕ್ಕರರು ಕೆಂಪು ಚೈನದಲ್ಲಿ ಭಾರತದ ರಾಯಭಾರಿಯಾಗಿ ನೇಮಕ ಪಡೆದು ಪೆಂಕಿಂಗಿಗೆ ಹೋಗಲಿದ್ದಾರೆಂದು ತಿಳಿದುಬಂದಿದೆ. ಅಮೇರಿಕವೊಂದನ್ನು ಬಿಟ್ಟರೆ ಮತ್ತೆಲ್ಲಾ ರಾಷ್ಟ್ರಗಳೂ ಕಮ್ಯೂನಿಸ್ಟ್ ಚೈನಕ್ಕೆ ಮನ್ನಣೆಕೊಡುವ ಮನಸ್ಸುಮಾಡಿವೆಯೆನ್ನಬಹುದು. ಬ್ರಿಟಿಷ್ ಸರಕಾರದ ನಿರ್ಧಾರವಿಷ್ಟರಲ್ಲೇ ಆಗಿದ್ದು ಸಿಲೋನಿನಲ್ಲಿ ಸದ್ಯದಲ್ಲೇ ಸೇರಲಿರುವ ಕಾಮನ್‌ವೆಲ್ತ್ ವಿದೇಶ ಮಂತ್ರಿಗಳ ಸಮ್ಮೇಳನವಾದೊಡನೆಯೇ ಬ್ರಿಟನು, ಕೆನಡಾ ಮೊದಲಾದವುಗಳ ಮನ್ನಣೆ ಜಾಹೀರಾಗುವದೆಂದು ನಿರೀಕ್ಷಿಸಲಾಗಿದೆ. ವಸ್ತುಸ್ಥಿತಿಯನ್ನಾಧರಿಸಿ ಕೆಂಪು ಚೈನವನ್ನೀರೀತಿ ಎಲ್ಲರೂ ಒಪ್ಪಿಕೊಳ್ಳಬೇಕಾಗಿ ಬಂದಿದೆ. 1950ನೇ ವರುಷ ಹಿಡಿಯುವಾಗ ಚೈನದ ಇಡೀ ಮೂಲಭೂಮಿಯು ಕಮ್ಯೂನಿಸ್ಟರ ವಶದಲ್ಲಿರುವುದು ಸ್ಪಷ್ಟವಾಗಿ ಕಂಡುಬರುವ ಸಂಗತಿ. ಚಿಯಾಂಗ್‌ಕೈಶೇಕರ ರಾಷ್ಟ್ರೀಯ ಸರಕಾರ ಮತ್ತು ಸೇನೆಗಳಿರುವದು ಮೂಲಚೈನವನ್ನು ಬಿಟ್ಟಿರುವ ಫೋರ್ಮೋಸಾ ಮತ್ತು ಹೈನಾನ್ ಎಂಬೆರಡು ದ್ವೀಪಗಳಲ್ಲಿ ಮಾತ್ರ. ಚೈನದೊಳಗಡೆಯಲ್ಲೂ ತಮ್ಮ ಸಂಘಟಿತ ಗೊರಿಲ್ಲಾ ಪಡೆಗಳಿವೆಯೆಂದು ರಾಷ್ಟ್ರೀಯರನ್ನುತ್ತಿರುವರಾದರೂ ಅವುಗಳಿಂದೇನೂ ಕೆಲಸವಾಗುವಂತಿಲ್ಲ. ಹೈನಾನ್ ದ್ವೀಪದ ಮೇಲೆ ಧಾಳಿಗೆ ಹೋದ ಕಮ್ಯೂನಿಸ್ಟ್ ಬೋಟುಗಳನ್ನೊಂದು ಬಾರಿ ರಾಷ್ಟ್ರೀಯ ಸೈನಿಕರು ಹೊಡೆದು ಹಿಮ್ಮೆಟ್ಟಿಸಿದ್ದಾರಾದರೂ ಆ ಎರಡು ದ್ವೀಪಗಳಲ್ಲೂ ಅವರನ್ನು ಸುರಕ್ಷಿತತೆಯಿಂದ ಬಾಳಲು ಕಮ್ಯೂನಿಸ್ಟರು ಬಿಡುವಂತಿಲ್ಲವೆಂಬುದು ಖಂಡಿತ; ಫೋರ್ಮೋಸಾದ ಮಟ್ಟಿಗೆ ಚಿಯಾಂಗ್-ಕೈ-ಶೇಕರಿಗೆ ಅಮೇರಿಕದ ಸಹಾಯ ದೊರೆಯಬಹುದೆಂದೂ, ಆ ಮೂಲಕ ಅವರು ಅಲ್ಲಿ ಚಿರಕಾಲ ನಿಲ್ಲುವಂತಾಗಬಹುದೆಂದೂ ಊಹೆಯಿದೆ. ಏಶ್ಯಾದಲ್ಲಿ ಕಮ್ಯೂನಿಸ್ಟರು ವ್ಯಾಪಿಸಿಕೊಳ್ಳದಂತೆ ಅಡ್ಡ ಬೇಲಿಯಾಗಿರುವ ಅಮೇರಿಕದ ರಕ್ಷಣಾ ಸಾಲಿನ ಒಂದು ಗಡಿಯಾಗಿ ನಿಲ್ಲಲು ಫೋರ್ಮೋಸಾ ಅನುಕೂಲವಾದ ದ್ವೀಪ. ಆದರೆ ಇದು ಎಷ್ಟರ ಮಟ್ಟಿಗೆ ಸಾಧ್ಯ ಮತ್ತು ಸಂಭವನೀಯವೆಂದು ಹೇಳಲು ಬರುವದಿಲ್ಲ. ಚಿಯಾಂಗ್ ಕೈಶೇಕರು ತನ್ನ ಹೊಸ ವರುಷದ ಸಂದೇಶದಲ್ಲಿ ರಶ್ಯವನ್ನು ಕಠಿಣವಾಗಿ ಟೀಕಿಸಿದ್ದಾರೆ. ಗತಕಾಲದಲ್ಲಾದ ಎಲ್ಲಾ ತಪ್ಪುಗಳ ಜವಾಬ್ದಾರಿಯನ್ನು ತಾನೇ ವಹಿಸಿಕೊಂಡು "ಮೋಸ್ಕೋ ಆಕ್ರಮಣಗಾರರು ಮಾನವ ಚರಿತ್ರೆಯಲ್ಲೇ ಅತಿದೊಡ್ಡ ಅಪರಾಧಿಗಳಾಗಿದ್ದಾರೆ" ಎಂದು ರಶ್ಯದ ಮೇಲೆ ಕಿಡಿಗಾರಿದ್ದಾರೆ. "ಇಂದಿನ ರಶ್ಯದ ಆಕ್ರಮಣೇಚ್ಛೆಯು ಹಿಂದಿನ ಜಪಾನರ ಮಾದರಿಯದೇ. ಇ... ರೂ ರಶ್ಯವು ಅಂಗೀಕರಿಸಿರುವ ವಿಧಾನ... ಳು ಮತ್ತಷ್ಟು ಹೀನ ಮಟ್ಟದವುಗಳ... ಸೋವಿಯೆಟ್ ರಶ್ಯದ ಆಕ್ರಮಣ ಧೋರಣೆಯು ಹಿಂದಿನ ಝಾರ್ ಸರಕಾರ... ತಹದೇ ಇದ್ದರೂ ಕಮ್ಯೂನಿಸ್ಟ್ ಅಂ... ರಾಷ್ಟ್ರೀಯವಾದಿಗಳ ಕ್ರಮವಿಧಾನಗ... ಮತ್ತಷ್ಟು ದ್ರೋಹಪೂರ್ಣವಾದವುಗಳ..." ಎಂದು ಖಂಡಿಸುತ್ತಾ ತನ್ನ ಇಡೀ ಆಯ... ಷ್ಯವನ್ನು ಕಮ್ಯೂನಿಸಮನ್ನು ಪ್ರತಿಭ... ಸಲು ಉಪಯೋಗಿಸುವೆನೆಂಬ ಶಪಥ... ನ್ನು ಸಾರಿ 1950ರಲ್ಲಿ ಸ್ಥಿತಿ ಬದಲಾ... ಸಬಹುದೆಂಬ ಆಶೆಯನ್ನು ವ್ಯಕ್ತಪಡಿ... ದ್ದಾರೆ.

## ಸ್ವತಂತ್ರ ಇಂಡೋನೇಶಿಯ

ಇಂಡೋನೇಶಿಯವು ಡಚ್ಚರ ಗುಲಾ... ಗಿರಿಯಿಂದ ಪೂರ್ಣ ಮುಕ್ತಾಯಗೊಂ... ದಶಂಬರ್ ತಾ. 27ರಲ್ಲಿ ಸರ್ವ ಸ್ವತಂ... ಜನತಾ ರಾಷ್ಟ್ರವಾಗಿ ಪುನರ್ಜನ್ಮಗೊಂ... ತು. ಸುಮಾರು 2500 ದ್ವೀಪಗಳಾಗಿರ... ಇಂಡೋನೇಶಿಯದ 7 ಕೋಟಿಗೂ ಮಿ... ದ ಜನರು ತಾ. 27-12-1949 ಅಪರಾಹ್ನ 5 ಘಂಟೆಗೆ ಸ್ವತಂತ್ರ ಸಾ... ಭೌಮಾಧಿಕಾರೀ ಜನತೆಯಾಗಿ ಮಾ... ಟ್ಟರು. ಈ ಸ್ವಾತಂತ್ರ್ಯೋದ್ಘಾಟ... ಸಮಾರಂಭವು ಅತ್ಯಂತ ವೈಭವ ಮ... ಆಕರ್ಷಣೀಯ ರೀತಿಯಿಂದ ಜರಗಿ... ಭಾರತ ಸರಕಾರದ ಪ್ರತಿನಿಧಿಯಾ... ಆರೋಗ್ಯ ಮಂತ್ರಿ ಶ್ರೀಮತಿ ಅಮ... ಕೌರರು ಅಲ್ಲಿಗೆ ಹೋಗಿ ಈ ಉತ್ಸವ... ಭಾಗವಹಿಸಿದ್ದರು. ಪಾಕಿಸ್ತಾನ್, ಬ... ಈಜಿಪ್ಟ್, ಸಯಾಮ್, ಪಿಲಿಪ್ಪಾಯಿನ... ಮತ್ತಿತರ ಏಶ್ಯಾ ರಾಷ್ಟ್ರಗಳ ಪ್ರತಿ... ಗಳು ಸ್ವತಃ ಆಗಮಿಸಿದ್ದರು. ಇಂಡೋನೇಶಿಯದ ಸಂಬಂಧ ಢಿಲ್ಲಿಯಲ್ಲಿ ಸೇ... ಏಶ್ಯದ ಸಮ್ಮೇಳನ ಭಾಗಿಗಳಾಗಿದ್ದ... ರಾಷ್ಟ್ರಗಳಿಗೆ ವಿಶೇಷ ಆಮಂತ್ರಣ... ತು. ಅಮೇರಿಕಾ, ಇಂಗ್ಲೆಂಡು, ಆದಿ... ಗಿ ಎಲ್ಲಾ ಮಿತ್ರ ರಾಷ್ಟ್ರಗಳ ಅಧಿನಾ... ಕರೂ ಭಾರತದ ಗವರ್ನರ್ ಜನರಲ... ಇಂಡೋನೇಶಿಯದ ಸ್ವಾತಂತ್ರ್ಯೋತ್ಸವ... ಶುಭಸಂದೇಶಗಳನ್ನು ಕಳುಹಿದ್ದರು ಅ... ಯೇ ಇವೆಲ್ಲಾ ರಾಷ್ಟ್ರಗಳೂ ತಮ್ಮ...


THE
PANGAL NAYAK BANK, LTD.,
Head Office: UDIPI.

SAVE FOR THE FUTURE.

*SEASON DEPOSITS* terminable on or before 30-6-1950 are accepted from 1-10-1949 at the following rates:

For 3, 4 or 5 months at 3 % p. a.
For 6, 7 or 8 months at 3½% p. a.

Invest in our 3 YEAR CASH CERTIFICATES yielding interest at over 4% p. a.

For particulars please contact any of our Branch offices.

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ಸಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ವಾಕಿಸ್ಟರು:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಋತುಸ್ರಾವ ನಿಂತಿತು
'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹಠತಪ್ಪಿ ಋತುಸ್ರಾವವಾಗದು. ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದುವುದು, ಯಾವ ಬಾಧಕವೂ ಇಲ್ಲ. ಸಾರಾರು ಮಂದಿಗೆ ಖಾತ್ರಿ ಗುಣವಾಗಿ... ಬೆಲೆ; ರೂ 3.; ಸ್ಪೆಶಲ್ ರೂ. 5 ಅಧಿಕಾಧಿಕ ಸ್ಪೆಶಲ್ ರೂ. 8-[ವಿ. ಹನ್ನೆರಡಾಣೆ ಪ್ರತ್ಯೇಕ.]
MRS. D. DEVEE, F. DS. (N. J
Tollygunge CALCUTTA
ಸ್ವಾಕಿಸ್ಟರು: ಶಹಾ ಕಂಪೆನಿ, ಮಂಗಳೂ...

# ಇಂಡೋನೇಶಿಯದಲ್ಲಿ ಸ್ವತಂತ್ರ ಜನ ರಾಜ್ಯ

ಯಭಾರಿಗಳನ್ನು ಅಲ್ಲಿ ನೇಮಿಸಿವೆ. ಭಾರತದ ರಾಯಭಾರಿಯಾಗಿ ಡಾ| ಸುಬ್ಬರಾಯನರು ಅಲ್ಲಿದ್ದಾರೆ. ನವೋದಿತ ಜನತಾ ರಾಜ್ಯ ಇಂಡೋನೇಶಿಯದ ಅಧ್ಯಕ್ಷ ಡಾ| ಸೊಯಿಕರ್ನೊ ಮತ್ತು ಪ್ರಧಾನ ಮಂತ್ರಿ ಡಾ| ಹಟ್ಟಾರು ತಮ್ಮ ಮಂತ್ರಿ ಮಂಡಲಿಯೊಂದಿಗೆ, ಬಹುತೇಕವಾಗಿ ಇಡೀ ಪ್ರಪಂಚದ ಸಹಾನುಭೂತಿ ಶ್ಲಾಘನೆ, ಪ್ರೋತ್ಸಾಹಗಳನ್ನು ಪಡೆದು ಪೂರ್ಣ ಸ್ವತಂತ್ರಾಧಿಕಾರ ನಿರ್ವಹಿಸಹತ್ತಿದ್ದಾರೆ.

## ಅಲ್ಲಿಯ ಸ್ವಾತಂತ್ರ್ಯಾಂದೋಲನ

ಇಂಡೋನೇಶಿಯದ ಸ್ವಾತಂತ್ರ್ಯಸಾಧನೆಯು ಬಹು ಮಟ್ಟಿಗೆ ಭಾರತದ ಸ್ವಾತಂತ್ರ್ಯಸಾಧನೆಯನ್ನೇ ಹೋಲುತ್ತಿದೆ. ಅದು ಕೆಲವು ಶತಮಾನಗಳಿಂದ ಡಚ್ ಸಾಮ್ರಾಜ್ಯಶಾಹಿಯ ಅಧೀನ ರಾಷ್ಟ್ರವಾಗಿದ್ದಿತು. ಕಳೆದ ನಾಲ್ಕು ವರ್ಷಗಳಲ್ಲಿ ಡಚ್ ಸೇನಾಬಲದಿದಿರು ಇಂಡೋನೇಶಿಯಾ ಸ್ವಾತಂತ್ರ್ಯವಾದಿಗಳು ಕೊಟ್ಟಿದ್ದ ಸಂಗ್ರಾಮವು ಚರಿತ್ರಾರ್ಹವಾದುದು. ಕಳೆದ ಮಹಾಯುದ್ಧದಲ್ಲಿ ಡಚ್ಚರ ಕೈಯಿಂದ ಜಪಾನರು ಸುಲಭದಲ್ಲಿ ಇಂಡೋನೇಶಿಯವನ್ನು ಆಕ್ರಮಿಸಿಕೊಂಡಿದ್ದರು; ಆ ಕಾಲದಲ್ಲೇ ಇಂಡೋನೇಶಿಯಾ ರಿಪಬ್ಲಿಕನರ ಸ್ವಾತಂತ್ರ್ಯಾಂದೋಲನವೊಳೆತಿದ್ದು ಬ್ರಿಟಿಷ್ ಸೈನ್ಯರಿಂದ ಜಪಾನರೋಡಿಸಲ್ಪಟ್ಟು ಯುದ್ಧ ರಾಹು ವಿಮೋಚನೆಗೊಂಡೊಡನೆ ಡಚ್ ಮತ್ತು ಇಂಡೋನೇಶಿಯಾ ರಿಪಬ್ಲಿಕನರೊಳಗೆ ಸಶಸ್ತ್ರ ತಿಕ್ಕಾಟಗಳಾರಂಭಿಸಿದ್ದುವು. ಸಂಯುಕ್ತ ರಾಷ್ಟ್ರಸಂಘದ ಭದ್ರತಾ ಕೌನ್ಸಿಲು ನೇಮಿಸಿದ್ದ 'ಸುಸಮಿತಿ'ಯು ಅಲ್ಲಿ ನಡೆಸಿದ್ದ ಸಂಧಾನ ಪ್ರಯತ್ನಗಳು ವಿಫಲವಾಗಿ 1948ರಲ್ಲಿ ಡಚ್ಚರೊಮ್ಮೆ ಪ್ರಬಲ ಸೇನಾಧಾಳಿಯನ್ನಾರಂಭಿಸಿಬಿಟ್ಟರು. ಆ ಬಾರಿಯ ಡಚ್ ಹೊಡೆತದಿಂದ ನಿಸ್ಸಹಾಯಕ ಇಂಡೋನೇಶಿಯವು ಸಂಪೂರ್ಣವಾಗಿ ಅವರ ಬಗಲೊಳಗೆ ಬೀಳುವ ಅಪಾಯ ಸನ್ನಿಹಿತವಾದಾಗ, ಸೊಂಟಕಟ್ಟಿ ನಿಂತು ಇಂಡೋನೇಶಿಯದ ರಕ್ಷಣೆಗೆ ನೆರವಾಗಿ, ಅದರ ಅದೃಷ್ಟವನ್ನು ಬದಲಾಯಿಸಿದ ಕೀರ್ತಿಯು ಪಂಡಿತ ನೆಹರುಗಳಿಗೆ ಸಲ್ಲಬೇಕು. ಪಂಡಿತ ನೆಹರುಗಳು ಕೂಡಲೇ ಏಸ್ಯಾದ 17 ರಾಷ್ಟ್ರಗಳ ಸಮ್ಮೇಳನವೊಂದನ್ನು ನವದಿಲ್ಲಿಯಲ್ಲಿ ಕರೆದು 1949ನೇ ಅಂತ್ಯದೊಳಗೆ ಇಂಡೋನೇಶಿಯಕ್ಕೆ ಪೂರ್ಣ ಸ್ವಾತಂತ್ರ್ಯದಾನ ಮಾಡುವ ಸೂಚನೆಗಳನ್ನು ತಯಾರಿಸಿದ್ದಲ್ಲದೆ, ಡಚ್ಚರ ಸಾಮ್ರಾಜ್ಯಶಾಹಿ ಆಕ್ರಮಣ ಧೋರಣೆಯು ಲೋಕಶಾಂತಿಗೆ ಅಪಾಯಕರವೆಂದು ಎಚ್ಚರಿಸಿ ಲೋಕದ ಕಣ್ಣನ್ನು ತೆರೆದರು. ತತ್ಪರಿಣಾಮವಾಗಿ ಅಮೇರಿಕವು ಈ ಜಗಳದಲ್ಲಿ ವಿಶೇಷಾಸಕ್ತಿ ವಹಿಸಿ ಡಚ್ಚರ ಮೇಲೆ ಒತ್ತಾಯ ಹಾಕಿದ್ದಲ್ಲದೆ, ಭದ್ರತಾ ಕೌನ್ಸಿಲು ಕೂಡಲೇ ಯುದ್ಧವನ್ನು ನಿಲ್ಲಿಸುವ ಕಟ್ಟಾಜ್ಞೆ ಕೊಟ್ಟಿತು. ಈ ತಡೆ, ನಿರ್ಬಂಧ ಮತ್ತು ಲೋಕಮತಕ್ಕೆದಿರಾಗಿ ಬೇರೆ ಮಾಡಲಾಗದೆ ಡಚ್ಚರು ಹಾದಿಗೆ ಬಂದರು. ಹೇಗೂ ಸಮ್ಮೇಳನ ನಡೆದು ಇಂಡೋನೇಶಿಯಾಕ್ಕೆ ಜನತಾ ಸಾರ್ವಭೌಮಾಧಿಕಾರ ದಾನಮಾಡುವ ವ್ಯವಸ್ಥೆಗಳಾಗಿ, ತದನುಸಾರವಾಗಿ ಅಲ್ಲಿ ಪೂರ್ಣ ಸ್ವಾತಂತ್ರ್ಯ ಸ್ಥಾಪನೆಗೊಂಡಿದೆ. ಈ ಸ್ವಾತಂತ್ರ್ಯ ಸಂಪಾದನೆಯ ಆಶ್ರಯದಾತರೆಂದು ಪಂಡಿತ ನೆಹರುಗಳ ಮೇಲೆ ಇಂಡೋನೇಶಿಯಾ ನಾಯಕರು ಚಿರಕೃತಜ್ಞತಾ ಭಾವನ ವಹಿಸಿದ್ದಾರೆ. ಅಲ್ಲಿ ಈಗಿನ ಅಧಿಕಾರೀ ಪಕ್ಷಕ್ಕಿದಿರಾಗಿ ಕಮ್ಯೂನಿಸ್ಟ್ ಪಕ್ಷವು ಹೋರಾಡುತ್ತ ಬಂದಿದ್ದು, ಬೆಳೆಯುತ್ತಲಿದ್ದಿತು. ಡಚ್ ಮತ್ತು ಇಂಡೋನೇಶಿಯಾ ರಿಪಬ್ಲಿಕನರೊಳಗಿನ ಘರ್ಷಣೆಯು ಇನ್ನೂ ದೀರ್ಘಕಾಲ ಮುಂದುವರಿಯುತ್ತಿದ್ದರೆ ಕಮ್ಯೂನಿಸ್ಟರ ಕಾಲು ಬಲಿವ ಸಂಭವವಿದ್ದಿತು. ಅದನ್ನೂಹಿಸಿ, ಅಮೇರಿಕ, ಇಂಗ್ಲೆಂಡುಗಳು ಡಚ್ಚರ ಮನಃಪರಿವರ್ತನೆಯ ಕೆಲಸ ಮಾಡಿದ್ದುವು. ಈಗ ಅಧಿಕಾರ ವಹಿಸಿರುವ ಸೊಯಿಕರ್ನೊ, ಹಟ್ಟಾರು ಇಂಡೋನೇಶಿಯದ ನೆಹರು, ವಲ್ಲಭಭಾಯಿಗಳಂತಿರುವುದರಿಂದ ಅವರ ಅಧಿಕಾರ ಮತ್ತು ಜನತಾ ಬೆಂಬಲವಿದಿರಲ್ಲಿ ಕಮ್ಯೂನಿಸ್ಟರು ಪ್ರಬಲಿಸುವುದಿನ್ನು ಪ್ರಯಾಸವಾಗಬಹುದು. ಹೇಗಾಗಿ, ಸ್ವತಂತ್ರ ಇಂಡೋನೇಶಿಯದ ಉದಯದಿಂದ, ಮಿತ್ರ ರಾಷ್ಟ್ರಗಳಿಗನುಕೂಲ ಹಾಗೂ ರಶ್ಯಕ್ಕೆ ಪ್ರತಿಕೂಲವುಳ್ಳ ಒಂದು ರಾಷ್ಟ್ರವು ಏಸ್ಯಾದಲ್ಲಿ ನಿರ್ಮಾಣಗೊಂಡಂತಾಗಿದೆ. ಭಾರತವಂತೂ ತಾನು ಸ್ವತಂತ್ರನಾದ ಬೆನ್ನಲ್ಲೇ, ಏಸ್ಯಾದ ತನ್ನ ಸಹೋದರ ರಾಷ್ಟ್ರವೊಂದನ್ನು ಸ್ವತಂತ್ರಗೊಳಿಸಲು ನೆರವಾಗಿ ಕೃತಕೃತ್ಯನಾದ ಹೆಗ್ಗಳಿಕೆ ಪಡುವಂತಾಗಿದೆ.

## ಸೊಯಿಕರ್ನೊ-ಹಟ್ಟಾ

ಯುದ್ಧಾನಂತರದ ಅವಧಿಯಲ್ಲಿ ಏಸ್ಯಾ ರಾಷ್ಟ್ರಗಳೆಲ್ಲಾಗಿರುವಂತಹ ಸ್ಥಿತಿಮತಿ ಮಾರ್ಪಾಟುಗಳು ಬೇರಾವ ಭೂಭಾಗದಲ್ಲೂ ಆಗಿಲ್ಲವೆನ್ನಬಹುದು; ಈ ಕಾಲದಲ್ಲಿ ಸ್ವತಂತ್ರಗೊಂಡ ಏಸ್ಯಾ ರಾಷ್ಟ್ರಗಳಾದ ಭಾರತ, ಬರ್ಮ ಮತ್ತು ಇಂಡೋನೇಶಿಯಾಗಳಿಗೆ ಜನತಾ ಬೆಂಬಲದಿಂದ ಸ್ವಾತಂತ್ರ್ಯ ಹೋರಾಟಗಳನ್ನು ನಡೆಸಿದ್ದ ಪ್ರಮುಖರೇ ಪ್ರಥಮಾವಧಿಯ ಅಧಿಪತಿಗಳಾಗಿಯೂ ದೊರೆತಿರುವುದು ಸುದೈವವೆನ್ನಬೇಕು.

ನವ ಜನತಾ ರಾಜ್ಯ ಇಂಡೋನೇಶಿಯದ ಅಧ್ಯಕ್ಷ ಡಾ| ಸೊಯಿಕರ್ನರ ತಂದೆ ಜಾವಾದ ಓರ್ವ ಧನವಂತ ಮುಸ್ಲಿಮ; ತಾಯಿಯು ಹಿಂದೂ ವಂಶಸ್ಥಳಿರುವ ಬಾಲಿಸ್ ಮಹಿಳೆ. 1901ನೇ ಜೂನ್ 6ರಲ್ಲಿ ಜನಿಸಿದ್ದ ಡಾ| ಸೊಯಿಕರ್ನೊಗೆ ಈಗ 48 ವರ್ಷ ಮಾತ್ರ. ಅವರು ಇಂಜನೀಯರಿಂಗಿನ ಓರ್ವ 'ಡಾಕ್ಟರೇಟ್'. ಬಾಲ್ಯದಲ್ಲಿ ಕಲಾವಿದರೆಂದು ಹೆಸರು ಪಡೆದಿದ್ದ ಸೊಯಿಕರ್ನೊ ಆ ಮೇಲೆ ರಾಜಕೀಯವಾದಿಯಾಗಿ ಮಾರ್ಪಟ್ಟಿದ್ದರು. ಆದಿಭಾಗದಲ್ಲೇ ಸಾಮ್ರಾಜ್ಯಶಾಹೀ ವಿರೋಧ ಕೃತಿಗಳನ್ನು ರಚಿಸಿ 1929ರಿಂದ 1931ರ ವರೆಗೆ ಜೈಲುವಾಸವನ್ನನುಭವಿಸಿದ್ದರು. ಬಿಡುಗಡೆ ಹೊಂದಿದೊಡನೆ ಮತ್ತೊಂದು ಪುಸ್ತಕ ಬರೆದು ಪುನಃ ಸೆರೆಮನೆಗೆ ದೂಡಲ್ಪಟ್ಟಿದ್ದರು. ಕಳೆದ ದ್ವಿತೀಯ ಮಹಾಯುದ್ಧದಲ್ಲಿ ಜಪಾನರು ಇಂಡೋನೇಶಿಯವನ್ನು ಆಕ್ರಮಿಸಿಕೊಂಡಾಗ, ಸ್ವಾತಂತ್ರ್ಯ ಚಳವಳವನ್ನು ಬಲಗೊಳಿಸುವುದಕ್ಕಾಗಿ, ಡಚ್ಚರ ಸೆರೆಮನೆ ಸೇರುವುದಕ್ಕಿಂತ ಜಪಾನರ ಕೈಕೆಳಗೆ ಇಂಡೋನೇಶಿಯಾ ನಾಯಕನಾಗಿ ನಿಲ್ಲುವುದು ವಿಹಿತವೆಂದು ಬಗೆದು ಡಾ| ಸೊಯಿಕರ್ನೊ ತನ್ನಾ ಸ್ಥಾನಾನುಕೂಲತೆಯನ್ನು ರಿಪಬ್ಲಿಕ್ ಗುಪ್ತ ಚಳವಳವನ್ನು ಬಲಗೊಳಿಸಲು ಉಪಯೋಗಿಸಿಕೊಂಡರು. ಆಕ್ರಮಿತ ಕಾಲದಲ್ಲಿ ಅವರು ನಡೆಸಿದ್ದ ಸಂಘಟನೆಯ ಪರಿಣಾಮವಾಗಿ, ಜಪಾನರಿಲ್ಲಿಂದ ಓಡಿಸಲ್ಪಟ್ಟ ಎರಡೇ ದಿನಗಳಲ್ಲಿ 'ಇಂಡೋನೇಶಿಯಾ ರಿಪಬ್ಲಿಕ್' ಘೋಷಣೆ ಮಾಡಿ ತಾತ್ಕಾಲಿಕ ಸರಕಾರ ರಚಿಸಿಕೊಳ್ಳಲು ಡಾ| ಸೊಯಿಕರ್ನೊ ಸಮರ್ಥರಾದರು. 1945ನೇ ಅಗೋಸ್ತಿನಲ್ಲೇ ಇವರು ರಿಪಬ್ಲಿಕಿನ ಅಧ್ಯಕ್ಷರಾಗಿ ಆರಿಸಲ್ಪಟ್ಟು ಆ ಮೇಲೆ ಡಚ್ಚರೊಡನೆ ಸ್ವಾತಂತ್ರ್ಯ ಹೋರಾಟ ಕೊಡುತ್ತಾ ಬಂದಿದ್ದರು. ಮಧ್ಯಮ ಎತ್ತರಕ್ಕಿಂತಲೂ ಕುಳ್ಳಗಿದ್ದು ಚಟ್ಟೆಯಂತಹ ಗಟ್ಟಿಮುಟ್ಟು ಪ್ರಕೃತಿಯ ಸೊಯಿಕರ್ನೊ ಇಂಡೋನೇಶಿಯಾ ಸಂಸ್ಕೃತಿಯ ದ್ಯೋತಕ ಮೂರ್ತಿಯಾಗಿದ್ದಾರೆ. ಅವರು ಆಕರ್ಷಣೀಯ ಭಾಷಣಕರ್ತರು. ಡಾ| ಸೊಯಿಕರ್ನೊರಷ್ಟು ಜನಪ್ರಿಯತೆಗಳಿಸಿರುವ ಬೇರೊಬ್ಬ ವ್ಯಕ್ತಿಯೇ ಇಂಡೋನೇಶಿಯದ ಚರಿತ್ರೆಯಲ್ಲಿಲ್ಲ.

ರಿಪಬ್ಲಿಕ್ ಇಂಡೋನೇಶಿಯದ ಪ್ರಧಾನ ಮಂತ್ರಿಯಾಗಿರುವ ಡಾ| ಹಟ್ಟಾ "ರಿಪಬ್ಲಿಕ್ ಪಕ್ಷದ ಮೆದುಳು" ಎಂದು ಹೆಸರು ಪಡೆದವರು. 1902ನೇ ಅಗೋಸ್ತು 1ರಲ್ಲಿ ಸುಮಾತ್ರದ ಒಂದು ಧನವಂತ ಕುಟುಂಬದಲ್ಲಿ ಜನಿಸಿದವರಿವರು. ಈಗ ಕೇವಲ 47ನೇ ವಯಸ್ಸು. ಹೊಲೆಂಡಿನ ಯುನಿವರ್ಸಿಟಿಯೊಂದರಲ್ಲಿ ಅರ್ಥಶಾಸ್ತ್ರದಲ್ಲಿ 'ಡಾಕ್ಟರೇಟ್' ಪಡೆದವರು. ತನ್ನ ವಿದ್ಯಾರ್ಥಿ ದಸೆಯಲ್ಲಿಯೇ ರಾಜಕಾರಣದಲ್ಲಿ ಪ್ರವೇಶಿಸಿದ್ದರು. 1917ರಲ್ಲಿ 'ತರುಣ ಸುಮಾತ್ರೀ ಸಂಘ'ದ ಕಾರ್ಯಕಾರೀ ಸಮಿತಿಯ ಒಂದು ಪ್ರಮುಖ ಸ್ಥಾನದಲ್ಲಿದ್ದರು. 1927ರಲ್ಲಿ ಬ್ರಸ್ಸೆಲಿನಲ್ಲಿ ನೆರೆದ ಅಂತರ್ರಾಷ್ಟ್ರೀಯ ಸಂಸ್ಥೆಯೊಂದರ ಸಮ್ಮೇಳನಕ್ಕೆ ಬಂದಿದ್ದ ಡಾ| ಹಟ್ಟಾರಿಗೆ ಅಲ್ಲಿಯೇ ಪಂಡಿತ ನೆಹರುಗಳ ಪರಿಚಯವಾಯಿತು. ಅಂದಿನಿಂದೀ ವರೆಗೂ ಇವರಿಬ್ಬರೂ ಆಪ್ತಸ್ನೇಹಿತರಾಗಿದ್ದಾರೆ. ಅಲ್ಲಿಂದ ಮರಳಿದವರೇ ಡಾ| ಹಟ್ಟಾ ಇಂಡೋನೇಶಿಯದ 'ರಾಷ್ಟ್ರೀಯ ಶಿಕ್ಷಣ ಪಕ್ಷದ" ಪ್ರಮುಖ ಸದಸ್ಯನಾದರು. ಇಂಡೋನೇಶಿಯದ ಜನರಲ್ಲಿ ಸ್ವಾಭಿಮಾನ, ಸ್ವಾತಂತ್ರ್ಯಾಭಿಮಾನದ ಜಾಗ್ರತಿಯನ್ನೆಬ್ಬಿಸಿದ ಪಕ್ಷವಿದೇ. ಇವೆಲ್ಲಾ ಚಟುವಟಿಕೆಗಳ ದೆಸೆಯಿಂದ ಡಚ್ [illegible] ಕೈವಾಕ್ಷಿಗೇದಾಗಿ ಡಾ| ಹಟ್ಟಾ ಡಿಗಾಲಿಗೆ ಗಡೀಪಾರು ಮಾಡಲ್ಪಟ್ಟರು. ಜಪಾನ್ ಆಕ್ರಮಣ ಬರ್ಖಾಸ್ತಾಗಿ ಇಂಡೋನೇಶಿಯಾ ರಿಪಬ್ಲಿಕ್ ಉದಯವಾದೊಡನೆಯೇ ಡಾ| ಹಟ್ಟಾ ಅದರ ಬೆಂಗಾವಲಾಗಿ ಮತ್ತು ಸರಕಾರದ ಧೋರಣೆ ನಿರ್ಮಾಪಕರಾಗಿ ದುಡಿದರು. ಪೂರ್ವ-ಪಶ್ಚಿಮಗಳ ಶಾಂತ ಸೌಹಾರ್ದತಾಪೂರ್ಣವಾದ ಪ್ರಜಾಪ್ರಭುತ್ವವೇ ಡಾ| ಹಟ್ಟರ ರಾಜಕೀಯ ಧೋರಣೆ. "ಸ್ವತಂತ್ರ ಇಂಡೋನೇಶಿಯವು 'ಇಸ್ಲಾಮಿಕ್' ಆಗಿರುವ ಬದಲಿಗೆ 'ಏಸ್ಯಾಟಿಕ್' ಆಗಿರುವುದು" ಎಂದಿವರೀಗ ಘೋಷಿಸಿದ್ದಾರೆ.

ಈ ರೀತಿ 1950 ಹಿಡಿಯುವಾಗ ಏಸ್ಯಾದ ಮತ್ತೊಂದು ರಾಷ್ಟ್ರವು ಸ್ವತಂತ್ರವಾಯಿತು. ಆ ಸ್ವಾತಂತ್ರ್ಯಕ್ಕೆ ಒಂದಂಶ ಭಾರತವೇ ಜೊತೆ [illegible] ಪ್ರವೇಶ, ಇಡೀ ಪ್ರಪಂಚದಲ್ಲೇ ದೊಡ್ಡದಾದ, ಲೋಕದ ನಾಲ್ಕನೇ ಒಂದಂಶದಷ್ಟು ವಿಸ್ತಾರ ಮತ್ತು ನಾಲ್ಕನೇ ಒಂದಂಶ ಜನಸಂಖ್ಯೆಯಿರುವ ಚೈನವು ಕಮ್ಯೂನಿಸ್ಟ್ ರಾಷ್ಟ್ರವಾಯಿತು. ಭಾರತವು ಅದನ್ನೂ 1950 ಹಿಡಿಯುವಾಗಲೇ ಮನ್ನಿಸಿಕೊಂಡಿದೆ. ನೆರೆಯ ರಾಷ್ಟ್ರಗಳೊಂದಿಗೆ ಮೈತ್ರೀ ಸಂಬಂಧ ಕಟ್ಟಿಕೊಳ್ಳುವ ಮೂಲಕ ಭಾರತವು ಹೊಸ ವರ್ಷವನ್ನು ಆರಂಭಿಸಿದೆ.


## ಉಡುಪಿ ಪರ್ಯಾಯ ವಸ್ತು ಪ್ರದರ್ಶನ, 1950.

ತಾರೀಕು 1-1-1950ರಿಂದ 22-1-1950ರ ವರೆಗೆ ಉಡುಪಿಯಲ್ಲಿ ಕೈಗಾರಿಕ "ವಸ್ತು ಪ್ರದರ್ಶನ" ನಡೆಯಲಿದೆ ತಯಾರಿಕರಿಗೆ ತಮ್ಮ ಕೈಗಾರಿಕೆಯ ವಸ್ತು ಪ್ರದರ್ಶನಕ್ಕೆ ಇದೊಂದು ಸುಸಂಧಿ. ಕೆಲವೇ ಸ್ಟಾಲುಗಳು ಉಳಿದಿವೆ.

ಈ ಕುರಿತು ಯೋಗ್ಯ "ಸುವರ್ಣ ಸಂಚಿಕೆ"ಯೊಂದನ್ನು ಪ್ರಕಾಶಗೊಳಿಸಲಿದೆ ಅದರಲ್ಲಿ ಕೊಡುವ ಜಾಹೀರಾತು ಮಹತ್ಪ್ರಯೋಜನಕಾರಿಯಾದುದು.

ಪ್ರದರ್ಶನದ ಸಂಪೂರ್ಣ ಉಳಿತಾಯವನ್ನು
''ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿ''ಗೆ
ದಾನವಾಗಿ ಕೊಡಲಾಗುವುದು.

ವಿವರಕ್ಕೆ ಇಂದೇ ಬರೆಯಿರಿ

Inserted by:-
**The Canara Industrial & Banking Syndicate Ltd, UDIPI.**

ಕಾರ್ಯದರ್ಶಿ
ಉಡುಪಿ ಪರ್ಯಾಯ
ವಸ್ತು ಪ್ರದರ್ಶನ 1950
ಉಡುಪಿ.

THE
Canara Banking Corporation Ltd.
(Incorporated in India)
Estd: 1906.
HEAD OFFICE, **UDIPI, S. I.**

| | |
|---|---|
| Capital Authorised .... .... .... | Rs. 25,00,000. |
| Capital Issued & Subscribed .... | Rs. 20,00,000. |
| Capital Paid Up. .... ... .... | Rs. 19,99,800. |
| Reserves .... .... .... | Rs. 8,91,000. |

**Banking business of every description transacted**

ಗುರುವಾರ ಉಡುಪಿ ೫-೧-೧೯೫೦

## ಬಳ್ಳಾರಿಯ ಸ್ಥಾನ

ಪ್ರಚಲಿತ ಮದ್ರಾಸ್ ಪ್ರಾಂತ್ಯದೊಳಗಿನ ತೆಲುಗು ಭಾಷಾ ಭಾಗಗಳನ್ನು ವಿಂಗಡಿಸಿ, ಆಂಧ್ರಪ್ರಾಂತ್ಯವಾಗಿ ನಿರ್ಮಿಸುವುದಕ್ಕಾಗಿ, ಸಂಬಂಧಪಟ್ಟ ಎಲ್ಲಾ ವಿಷಯಗಳ ಪಟ್ಟಿ ತಯಾರಿಸಲು ಕೇಂದ್ರ ಸರಕಾರದ ಸೂಚನೆಯಂತೆ, ಮದ್ರಾಸ್ ಮಂತ್ರಿಮಂಡಲವು ರಚಿಸಿಕೊಂಡಿದ್ದ ವಿಭಜನಾ ಸಮಿತಿಯು ತನ್ನೆಲ್ಲಾ ಕೆಲಸಗಳನ್ನು ಮುಗಿಸಿಕೊಂಡು, ಮದ್ರಾಸ್ ಮಂತ್ರಿ ಮಂಡಲಕ್ಕೆ ಇದೇ ತಾ. 2ರಲ್ಲಿ ವರದಿಯೊಪ್ಪಿಸಿತು—ತಾ. 3ನೇ ಪೂರ್ವಾಹ್ನವೇ ಮಂತ್ರಿಮಂಡಲದ ಸಭೆಸೇರಿ ತನ್ನ ಅವಸರದ ವರದಿಯೊಂದನ್ನು ಕೇಂದ್ರ ಸರಕಾರಕ್ಕೆ ಕಳುಹಿಸಿದೆ. ಪೂರ್ಣ ವರದಿ ಹಿಂದಿನಿಂದ ಹೋಗಲಿದೆ—ಎಂದು ತಿಳಿದುಬಂದಿದೆ. "ಎಲ್ಲಾ ವಿಷಯಗಳಲ್ಲೂ ವಿಭಜನಾ ಸಮಿತಿಯ ಆಂಧ್ರ ಮತ್ತು ಆಂಧ್ರೇತರ ಸದಸ್ಯರೊಳಗೆ ಒಮ್ಮತವಿದ್ದಿತು" ಎಂದೀ ಸಂಬಂಧವಾಗಿ ಪ್ರಕಟವಾಗಿದೆ. ಕನ್ನಡಿಗರಿಗೆ ಸ್ಥಾನವಿರದಿದ್ದ ಆ ವಿಭಜನಾ ಸಮಿತಿಯ ಸರ್ವಸಮ್ಮತ ವಿಷಯಗಳಲ್ಲಿ ಕನ್ನಡಿಗರ ಹಕ್ಕಿನ ಬಳ್ಳಾರಿ ಜಿಲ್ಲೆಯ ಮೂರು ತಾಲೂಕುಗಳನ್ನು ಆಂಧ್ರಪ್ರಾಂತ್ಯದೊಳಗೆ ಸೇರಿಸುವ ನಿರ್ಣಯವೂ ಒಂದೆಂಬುದು ಶೋಚನೀಯ ಹಾಗೂ ನೋಚಿಗದ ಸಂಗತಿ. ವಿಭಜನಾ ಸಮಿತಿಯಲ್ಲಿ ಕನ್ನಡಿಗ ಸದಸ್ಯರನ್ನು ಸೇರಿಸಿಕೊಳ್ಳದಿದ್ದ ಕುರಿತು ಅಖಿಲ ಕರ್ನಾಟಕವೆಷ್ಟು ಸಿಟ್ಟಾಗಿದೆ, ಎಂಬುದು ಎಲ್ಲರಿಗೂ ಮನವರಿಕೆಯಾಗಿರುವ ವಿದ್ಯಮಾನ. ಈ ಸಂಬಂಧವಾಗಿ ಕನ್ನಡಿಗರಲ್ಲಿ ಎದ್ದ ಕ್ರೋಧ, ಸಂದೇಹಗಳು ಸಕಾರಣವಾದವುಗಳೆಂಬುದಕ್ಕೆ ವಿಭಜನಾ ಸಮಿತಿಯ ಈ ತೀರ್ಮಾನವೇ ನಿದರ್ಶನ. ಚಾರಿತ್ರಿಕ, ಸಾಂಸ್ಕೃತಿಕ, ಭಾಷಾ ವಾರು, ಖನೇತ ಮಾರಿ, ಇಂಪೀರಿಯಲ್ ಹಾಗೂ ಜಿಲ್ಲಾ ಗೆಝೆಟಿಯರುಗಳ ಆಧಾರಗಳೇ ಇಡೀ ಬಳ್ಳಾರಿ ಜಿಲ್ಲೆಯು ಕರ್ನಾಟಕದ ಅಂಗವೆಂಬುದನ್ನು ನಿಸ್ಸಂಶಯವಾಗಿ ಸಿದ್ಧಮಾಡಿ ತೋರಿಸಿರುವುದನ್ನು ಬಳ್ಳಾರಿ ಕನ್ನಡಿಗರ ಎಲ್ಲಾ ಪ್ರತಿನಿಧಿಗಳೂ, ಜನಾಭಿಪ್ರಾಯ ತಿಳಿಯಲು ಬಂದಿದ್ದ ಮದ್ರಾಸ್ ಮಂತ್ರಿಗಳಾದ ಶ್ರೀಗೋಪಾಲರೆಡ್ಡಿ ಮತ್ತು ಶ್ರೀ ಭಕ್ತವತ್ಸಲಮರಿಗೆ ಖಚಿತಪಡಿಸಿದ್ದರು. ಬಳ್ಳಾರಿ ಜಿಲ್ಲೆಯನ್ನು ತುಂಡರಿಸುವುದರಿಂದ ಅಲ್ಲಿಯ ಜನಮತವನ್ನು ಬಲವಾಗಿ ನೋಯಿಸಿದಂತಾಗುವದೆಂಬುದನ್ನು ಮತ್ತೀ ವೇದನೆಯ ಶಮನಕ್ಕಾಗಿ ತೀವ್ರ ಆಂದೋಲನವೇಳಬಹುದೆಂಬುದನ್ನು ಮಂತ್ರಿದ್ವಯರಿಗೆ ಮನದಟ್ಟು ಮಾಡಲಾಗಿದ್ದಿತು. ಆದರೂ ರಾಯಲಸೀಮೆಯ ಇತರ ಜಿಲ್ಲೆಗಳ ಕರ್ನಾಟಕಭಾಗಗಳೊಂದಿಗೆ ಬಳ್ಳಾರಿಯ ಆಲೂರು, ಆದೋನಿ ಮತ್ತು ರಾಯದುರ್ಗ ತಾಲೂಕುಗಳನ್ನೂ ಆಂಧ್ರದೊಳಗೆ ಸೇರಿಸಲು ವಿಭಜನಾ ಸಮಿತಿ ನಿರ್ಧರಿಸಿದುದು ಅತ್ಯಂತ ಶೋಚನೀಯ ಮತ್ತು ತೀವ್ರ ಖಂಡನೀಯವಿದೆ. ಸರ್ವಸಮ್ಮತ ಕರ್ನಾಟಕ ಭಾಗಗಳಾಗಿರುವ ಉಳಿದ ಆರು ತಾಲೂಕುಗಳು ಮದ್ರಾಸ್ ಪ್ರಾಂತ್ಯದಲ್ಲೇ ಉಳಿಯಬೇಕೆಂದು ವಿಭಜನಾ ಸಮಿತಿಯ ಶಿಫಾರಸಿದೆಯಾದರೂ ಈ ಕನ್ನಡ ಪ್ರದೇಶದೊಳಗಿರುವ ತುಂಗಭದ್ರಾ ಅಣೆಕಟ್ಟಿನ ಯೋಜನಾ ನಿರ್ವಹಣ ಜವಾಬ್ದಾರಿಯನ್ನು ಆಂಧ್ರ ಪ್ರಾಂತ್ಯಕ್ಕೆ ಬಿಟ್ಟುಕೊಡುವ ನಿರ್ಣಯವಾಗಿದೆ. ಬಳ್ಳಾರಿ ಜಿಲ್ಲೆಯ ನ್ಯಾಯಬದ್ಧ ಸ್ಥಾನ ಮತ್ತು ತ್ರಿಮೂರ್ತಿ ಸಮಿತೀ ವರದಿಯ ಶರ್ತಗಳಿಗೆ ಬದ್ಧ ವಿರೋಧವಾದ ನಿರ್ಣಯವನ್ನು "ವಿಭಜನಾ ಸಮಿತಿ" ಮಾಡಿದುದು ನ್ಯಾಯವೇ ಎಂದು ಪ್ರಶ್ನಿಸುವುದಕ್ಕಿಂತಲೂ ಹೀಗೆ ಮಾಡುವ ಅಧಿಕಾರವಾದರೂ ಅದಕ್ಕಿದೆಯೆ?—ಇಂತಹ ಅನ್ಯಾಯ ಹಾಗೂ ಅಕ್ರಮ ತೀರ್ಮಾನವನ್ನು ಸಹಿಸಿಕೊಳ್ಳುವಷ್ಟು ಕನ್ನಡಿಗರು ನಿರಭಿಮಾನಿಗಳೇ? ನಿಸ್ಸಹಾಯಕರೆ?—ಎಂದು ಒತ್ತಿ ಕೇಳಬೇಕಾಗಿ ಬಂದಿದೆ. ಹಿಂದೊಮ್ಮೆ ಕಾಂಗ್ರೆಸಿನಿಂದ ನೇಮಕಗೊಂಡಿದ್ದ ಕೇಳ್ಕರ್ ಸಮಿತಿಯು, ಪ್ರಶ್ನೆಗೊಳಗಾಗಿರುವ ಈ ಮೂರು ತಾಲೂಕುಗಳನ್ನು ಆ ಕಾಲದಲ್ಲಿ ತಾತ್ಕಾಲಿಕವಾಗಿ ಆಂಧ್ರದ ಪಾಲಿನವೆಂದು ತೀರ್ಮಾನಿಸಿದ್ದುದು ನಿಜ; ಆದರೆ "ನಿಶ್ಚಿತ ಕಾಲದಲ್ಲಿ ಪುನರಾಲೋಚನೆ ಮಾಡಬೇಕಾದ ವಿಷಯವಿದು" ಎಂದು ಕೇಳ್ಕರ್ ಸಮಿತಿಯೇ ಸೂಚಿಸಿದ್ದುದನ್ನು ಮರೆಯಬಾರದು. ಆ ಕಾಲವೆಂದೋ ಕಳೆದು ಹೋಗಿ, ಪುನರ್ವಿಮರ್ಶೆಯ ಅವಧಿ ಬಂದು ಅದೂ ಹಳೆಯದಾಗಿರುವ ಕಾಲವಿದು. "ಬೇರೆ ಭಾಷಾ ಭಾಗಗಳವರ ಪ್ರಶ್ನೆಯಿಲ್ಲದ ನಿರಾಕ್ಷೇಪಣೀಯ ಭಾಗಗಳನ್ನಷ್ಟೇ ಸೇರಿಸಿಕೊಂಡು ಪ್ರಕೃತ ಭಾಷಾವಾರು ಪ್ರಾಂತ್ಯಗಳನ್ನು ರಚಿಸತಕ್ಕದ್ದು" ಎಂದು ಜವಾಹರ್—ವಲ್ಲಭಾಯಿ—ಪಟ್ಟಾಭಿ ಸಮಿತಿಯಂತೂ ಸ್ಪಷ್ಟ ಶರ್ತ ಹಾಕಿದೆ. ಈ ಸಮಿತಿಯ ಇತರ ಶರ್ತಗಳಂತೆ ವರ್ತಿಸಲು ಆಂಧ್ರರಿಗೆ ಸಾಧ್ಯವಾದಂತೆ, ದುರ್ದೈವವಶಾತ್ ತಮ್ಮಿಂದಾಗಲಿಲ್ಲವೆಂಬ ಪಶ್ಚಾತ್ತಾಪ ಪೂರ್ಣ ಆತ್ಮಸಂಯಮನವೊಂದಲ್ಲವಾಗಿದ್ದರೆ, ಆಂಧ್ರ ಪ್ರಾಂತ್ಯರಚನೆಯಾಗುವಾಗ, ಅದರೊತ್ತಿನ ಕರ್ನಾಟಕ ಪ್ರಾಂತ್ಯ ಮಾತ್ರ ಆಗದಿರುವ ಈ ಸನ್ನಿವೇಶದಲ್ಲಿ ಕನ್ನಡಿಗರ ಆಂದೋಲನವು ಇಷ್ಟು ಶಾಂತಸ್ವರೂಪದ್ದಾಗುತ್ತಿರಲಿಲ್ಲವೆಂಬುದನ್ನು ಲಕ್ಷ್ಯದಲ್ಲಿಡಬೇಕು. ಯಾವ ತ್ರಿಮೂರ್ತಿ ಸಮಿತಿಯ ಶರ್ತಗಳ ಪಾಲನೆಗಾಗಿ ಕನ್ನಡಿಗರ ಮೂಲಭೂತ ಹಕ್ಕಿನ ಪ್ರಾಂತ್ಯರಚನೆಯ ಪ್ರಶ್ನೆ ಕೂಡಾ ಹಿಂದೂಡಲ್ಪಟ್ಟಿರುವುದೋ, ಆ ತ್ರಿಮೂರ್ತಿ ಸಮಿತಿಶರ್ತಗಳಿಗೆ ಆಂಧ್ರರ ಸ್ವಾರ್ಥಸಾಧನೆಯೆದಿರಲ್ಲಿ ಮಾತ್ರ ಬೆಲೆಯೇ ಇಲ್ಲವೇನು? ಬಳ್ಳಾರಿಯ ಆ ಮೂರು ತಾಲೂಕುಗಳೂ ತಮ್ಮವೆಂದು ಕನ್ನಡಿಗರ ವಾದವಿರುವಂತೆಯೇ ತಮ್ಮವೆಂದು ಆಂಧ್ರರ ಬೇಡಿಕೆಯೂ ಇದೆ ಎಂಬುದು ನಿಜ. ನಿಷ್ಪಕ್ಷಪಾತೀ ನ್ಯಾಯಶೋಧಕರ ತೀರ್ಮಾನಕ್ಕೆ ಬಿಡಬೇಕಾಗಿರುವ ವಿವಾದವಿದು. ಆದರೆ ಇಂತಹ ವಿವಾದಾಸ್ಪದ ಪ್ರದೇಶಗಳನ್ನು ಬಿಟ್ಟೇ ಭಾಷಾವಾರು ಪ್ರಾಂತ್ಯರಚಿಸಬೇಕೆಂಬುದು ಈಗ ಅಸ್ತಿತ್ವದಲ್ಲಿರುವ ತೀರ್ಮಾನ. ಇದಕ್ಕೆ ವ್ಯತಿರಿಕ್ತವಾಗಿ ವರ್ತಿಸುವ ಅಧಿಕಾರ ವಿಭಜನಾ ಸಮಿತಿಗಾಗಲೀ, ಮದ್ರಾಸ್ ಸರಕಾರಕ್ಕಾಗಲೀ ಇದೆಯೆ? ಈ ಸಂಬಂಧದ ಕ್ರಮ ಮತ್ತು ನ್ಯಾಯಪಾಲನೆ ಮಾಡುವ ಜವಾಬ್ದಾರಿಯು ಕೇಂದ್ರ ಸರಕಾರದ್ದಿದೆ. ಕಾಲದಲ್ಲಿ ಮತ್ತು ಸರಿಯಾದ ರೀತಿಯಿಂದ ಕೇಂದ್ರ ಸರಕಾರದ ಲಕ್ಷ್ಯವನ್ನೀ ಕಡೆಗೆ ಎಳೆಯುವ ಹೊಣೆಗಾರಿಕೆ ಕನ್ನಡಿಗರದ್ದಾಗಿದೆ. ಮದ್ರಾಸ್ ಮಂತ್ರಿಮಂಡಲದ ವರದಿಯು ಕೇಂದ್ರನಾಯಕರ ಕೈ ಸೇರುವಾಗಲೇ ಬಳ್ಳಾರಿ ಜಿಲ್ಲೆ ಮತ್ತಿತರ ಕರ್ನಾಟಕ ಭಾಗಗಳ ಸಂಬಂಧದ ಕನ್ನಡಿಗರ ಆಕ್ಷೇಪಗಳೂ ಅವರ ಕೈಸೇರುವವೆಂದು ನಿರೀಕ್ಷಿಸುತ್ತೇವೆ. ಕನ್ನಡಿಗರ ಹಕ್ಕು, ಕೇಂದ್ರ ನಾಯಕರ ಮಾತು, ಇವೆಂಡನ್ನೂ ಮುರಿದು ಹಾಕುವ ಅನ್ಯಾಯವಿದಾದ್ದರಿಂದ ಕನ್ನಡಿಗರಂತೆಯೇ ರಾಷ್ಟ್ರನಾಯಕರಿಗೂ ಅಸಹ್ಯವಾಗಬೇಕಾದ ವಿಷಯವಿದು. ತಾವೇ ಮುಂದಿಟ್ಟಿದ್ದ ಸೂತ್ರಗಳ ಪಾಲನೆ ಮಾಡುವುದರಲ್ಲಿ ನೆಹರೂ ವಲ್ಲಭಾಯಿಗಳು ತಪ್ಪಿ ಬೀಳಲಾರರೆಂದೂ ಆಂಧ್ರದೊಂದಿಗೆ ಕರ್ನಾಟಕ ಪ್ರಾಂತ್ಯ ರಚನೆಯಾಗದ ದೆಸೆಯಿಂದ ನಿರಾಶ ಮತ್ತು ಕ್ಷೋಭೆಗೀಡಾಗಿರುವ ಕನ್ನಡಿಗರನ್ನು ಬಳ್ಳಾರೀ ಸಂಬಂಧದ ವಿಶ್ವಾಸಘಾತುಕತನಕ್ಕೂ ಬಲಿಮಾಡಿ, ಕುರುವಿನ ಮೇಲೆ ಬೊಕ್ಕೆಯೆಬ್ಬಿಸಲಾರರೆಂದೂ ದೃಢವಾಗಿ ನಂಬುತ್ತೇವೆ.

## ಭಾರತದ ಸ್ಥಿತಿಗತಿ

ಭಾರತದ ಪಾಲಿನ ಸಮಸ್ಯೆಗಳ ಪೈಕಿ ಹೊಸ ವರುಷದ ಪಾಲಿಗೆ ಪ್ರಾಮುಖ್ಯದ್ದಾಗಿ ಉಳಿದುಕೊಂಡಿರುವ ಜಟಿಲಿನ ಪ್ರಶ್ನೆಗಳೆಂದರೆ ಕಾಶ್ಮೀರ ಮತ್ತು ಪಾಕಿಸ್ತಾನ್ ವ್ಯಾಪಾರ ಸಂಬಂಧದವುಗಳಿವೆ. ನ್ಯೂಯೋರ್ಕಿನಲ್ಲಿ ಭದ್ರತಾ ಕೌನ್ಸಿಲಿನ ಅಧ್ಯಕ್ಷ ನೋಟನರು ನಡೆಸಿದ ಸುಮಾರು 15 ದಿನಗಳ ಸಂಧಾನ ಪ್ರಯತ್ನವು ಜಯಶೀಲವಾಗಿ ಮುಂದೊತ್ತದೆ ಸ್ತಬ್ಧವಾಗಿದೆ. ಕೌನ್ಸಿಲು ಅಧ್ಯಕ್ಷ ಪ್ರಯತ್ನ ಮತ್ತವರು ಮುಂದಿಟ್ಟ ಸಂಧಾನ ಸೂತ್ರಗಳು ಅತ್ಯಂತ ಗುಪ್ತವಾಗಿದ್ದುವು. ಡಿಶಂಬರ್ 16ರೊಳಗೆ ಭಾರತ ಮತ್ತು ಪಾಕಿಸ್ತಾನ್ ಪ್ರತಿನಿಧಿಗಳಿಂದ ಅವರು ಉತ್ತರಗಳನ್ನು ಅಪೇಕ್ಷಿಸಿದ್ದರು. ಭಾರತ ಪ್ರತಿನಿಧಿಗಳು ನಿಶ್ಚಿತಾವಧಿಯೊಳಗೆ ಉತ್ತರ ಕಳುಹಿದ್ದರೂ, ಭಾರತದ ಅಭಿಪ್ರಾಯ ತಿಳಿದುಕೊಂಡ ನಂತರ ಅದಕ್ಕೆ ಪ್ರತಿಯಾಗಿ ಮದೊಂದನ್ನೇ ಹಿಂದಿನಿಂದಲೂ ತಮ್ಮ ಅಭ್ಯಾಸವಾಗಿ ಮಾಡಿಕೊಂಡಿರುವ ಪಾಕಿಸ್ತಾನಿಗಳು ಮಾತ್ರ ಇದಕ್ಕಾಗಿಯೇ ಕಾಲಹರಣ ಮಾಡಿದ್ದರೆಂದು ತಿಳಿದು ಬರುತ್ತದೆ. ಈ ನಡುವೆ ಭದ್ರತಾ ಕೌನ್ಸಿಲಧ್ಯಕ್ಷರ ಸಂಧಾನ ಸೂಚನೆಗಳನ್ನು ಭಾರತವು ನಿರಾಕರಿಸಿತೆಂಬ ಗುಟ್ಟು ಹೇಗೋ ರಟ್ಟಾಗಿದೆ. ಕಾಶ್ಮೀರ ಕಮಿಶನಿನ ಹಿಂದಿನ ಸೂಚನೆಗಳ ಪುನರುಚ್ಚಾರದಂತಿದ್ದು, ಭಾರತ ಮತ್ತು ಪಾಕಿಸ್ತಾನ ಸೇನೆಗಳಿಗೆ ಸಮಾನ ಸ್ಥಾನಮಾನಗಳನ್ನೂ ಆಜಾದ್ ಕಾಶ್ಮೀರ ಸೈನ್ಯಕ್ಕೆ ಕ್ಷೇತ್ರಾಧಿಕಾರವನ್ನೂ ಸೂಚಿಸಿರುವ ಭದ್ರತಾ ಕೌನ್ಸಿಲಧ್ಯಕ್ಷರ ಸೂಚನೆಯನ್ನು ಭಾರತವು ಒಪ್ಪುವ ಸಂಭವವೇ ಇಲ್ಲವೆಂದು ಪ್ರಕಟವಾಗಿದೆ.

ಭಾರತ ಮತ್ತು ಪಾಕಿಸ್ತಾನಗಳೊಳಗಿನ ವ್ಯಾಪಾರ ಬಹಿಷ್ಕಾರಾಸ್ತ್ರ ಪ್ರಯೋಗಗಳು ಯಥಾಪ್ರಕಾರವಿವೆ. ಭಾರತವು ಇದ್ದಿಲು ರವಾನೆಯನ್ನು ನಿಲ್ಲಿಸಿದುದಕ್ಕೆ ಪ್ರತೀಕಾರವಾಗಿ ಪಾಕಿಸ್ತಾನವು ತನ್ನ ಭೂಮಾರ್ಗವಾಗಿ ಪೂರ್ವ ಪಂಜಾಬಿಗೆ ಪೆಟ್ರೋಲು ಹೋಗದಂತೆ ತಡೆಹಾಕುವದೆಂಬ ನಿರಾಧಾರ ವಾರ್ತೆಯಿದೆ. ಈ ಪೆಟ್ರೋಲು ಸರಬರಾಯಿಯು 'ಬಾರ್ಸೆಲೋನಾ ಒಡಂಬಡಿಕೆ'ಯನ್ವಯ ಅಂತರ್ರಾಷ್ಟ್ರೀಯ ಒಪ್ಪಂದ ಪ್ರಕಾರ ನಡೆಯುತ್ತಿರುವುದರಿಂದ ಅದನ್ನು ಭಂಗಿಸಿದಲ್ಲಿ ಪಾಕಿಸ್ತಾನವನ್ನು ಅಂತರ್ರಾಷ್ಟ್ರೀಯ ಅಪರಾಧಿಯಾಗಿ ಮಾಡಬಹುದೆಂದು ಭಾರತವು ನಿರೀಕ್ಷಿಸುತ್ತದೆ. ಅಸ್ಸಾಮಿನಿಂದ, ಕಲ್ಕತ್ತೆಗೆ ರವಾನೆಯಾಗಿದ್ದು ಹಾದಿಯಲ್ಲಿ ಪೂರ್ವ ಬಂಗಾಳದಲ್ಲಿ ಪಾಕಿಸ್ತಾನವು ತಡೆಹಿಡಿದಿದ್ದ 100000ಮಣ ಸಾಮಾನುಗಳ ಬಿಡುಗಡೆ ಮಾಡಿದ.

ಜಾಗತಿಕ ಶಾಂತಿವಾದಿಗಳ ಕೊನೆಯ ಅಧಿವೇಶನವು ಗಾಂಧಿಜೀಯ ಸೇವಾಗ್ರಾಮ ಆಶ್ರಮದಲ್ಲಿ ನೆರೆದು ಬಾಬುರಾಜೇಂದ್ರ ಪ್ರಸಾದ್ ಮತ್ತು ಪಂಡಿತ ನೆಹರುಗಳು ಗಾಂಧೀ ಪಥ ಹಾಗೂ ಲೋಕ ಶಾಂತಿಯ ಕುರಿತು ಭಾಷಣಗಳನ್ನಿತ್ತರು.

ಪಂಡಿತ ಜವಾಹರಲಾಲರು ನಾಗಪುರಕ್ಕೆ ಬಂದಿದ್ದು ಜನವರಿ ತಾ. 1ರಲ್ಲಿ ಅಲ್ಲಿಯ ಯುನಿವರ್ಸಿಟಿಯ ಪದವೀದಾನ ಸಮಾರಂಭದ ಭಾಷಣಮಾಡುತ್ತಾ "ರಾಷ್ಟ್ರಕ್ಕಾಗಿ ವಿಶೇಷ ಶ್ರಮಿಸಿರಿ" ಎಂಬುದೇ ತನ್ನ ಹೊಸ ವರುಷದ ಸಂದೇಶವೆಂದು ವಿವರಿಸಿ ಹೇಳಿದರು. ನಾಗಪುರದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಾ, ಕಲ್ಕತ್ತದಲ್ಲಿ ಸೇರಿದ್ದ ಹಿಂದೂ ಮಹಾ ಸಭಾಧಿವೇಶನದ ಅಧ್ಯಕ್ಷ ಡಾ. ಖರೆಯವರು "ಅಖಂಡ ಭಾರತ ನಿರ್ಮಿಸಲು ಭಾರತ ಮತ್ತು ಪಾಕಿಸ್ತಾನ

ಗಳ ಪುನರ್ಮಿಲನಕ್ಕಾಗಿ ದುಡಿಯುವುದೇ ಮಹಾಸಭೆಯ ಉದ್ದೇಶ" ಎಂದಿದ್ದುದನ್ನು ಕಠಿಣವಾಗಿ ಖಂಡಿಸಿ "ಇದು ತೀರಾ ಬೇಜವಾಬ್ದಾರಿಯ ಜನತಾ ವಂಚನೆ"ಯೆಂದರು. "ಸದ್ಯ ಸ್ಥಿತಿಯಲ್ಲಿ ಭಾರತ ಪಾಕಿಸ್ತಾನಗಳ ಪುನರ್ಮಿಲನದ ಬಡಾಯಿ ಹಾರಿಸುವುದಕ್ಕರ್ಥವಿಲ್ಲ. ಯಾವುದೇ ಭಾಗದ ಜನತೆಯ ಜಾತೀಯತಾ ಭಾವನೆಯನ್ನು ಎಬ್ಬಿಸುವುದು ಅತ್ಯಂತ ಅಪಾಯಕರ. ಕೇವಲ ಒಂದೂವರೆ ವರುಷದ ಮೊದಲು ಭೀಕರ ಹತ್ಯಾಕಾಂಡ, ಅಮಾನುಷ ಹಾಗೂ ಪಾಶವಿಕ ಧ್ವಂಸಗಳನ್ನು ನಿರ್ಮಿಸಿದ್ದ ಜಾತೀಯತೆಯನ್ನು ಭಾರತದಲ್ಲಿ ಪುನಃ ಬೋಧಿಸುವುದು ತೀರಾ ಹುಚ್ಚುತನ. ಇಲ್ಲಿ ಜಾತೀಯತೆಯು ಪುನಃ ತಲೆಯೆತ್ತಿದಲ್ಲಿ ನಮ್ಮ ಗುರಿಯಾಗಿರುವ ಸ್ವಾತಂತ್ರ್ಯ ರಕ್ಷಣೆ ಮತ್ತು ಪ್ರಗತಿಶೀಲ ಹಾಗೂ ಪ್ರಭಾವೀ ಭಾರತದ ನಿರ್ಮಾಣವು ಅಸಾಧ್ಯವೆಂಬುದನ್ನು ಸದಾಕಾಲ ಸ್ಪಷ್ಟವಾಗಿ ನೆನಪಿನಲ್ಲಿಡಬೇಕು. ಈ ಜಾತೀಯವಾದದೊಡನೆ ಹೋರಾಡುವುದರಲ್ಲೇ ಗಾಂಧಿಜೀ ತನ್ನ ಅಮೂಲ್ಯ ಪ್ರಾಣವನ್ನು ಬಲಿಕೊಟ್ಟರೆಂಬುದನ್ನು ಜನರಿಷ್ಟು ಬೇಗನೇ ಮರೆತು ಬಿಡಬಾರದು. ಪಾಕಿಸ್ತಾನವು ಪುನಃ ಭಾರತದೊಂದಿಗೆ ಸೇರಿಕೊಳ್ಳುವ ಪ್ರಶ್ನೆಯೇ ಇಲ್ಲವೆಂದು ನಾನು ಸ್ಪಷ್ಟಪಡಿಸುತ್ತೇನೆ. ಭಾರತವು ದೊಡ್ಡ ದೊಡ್ಡ ಹಾಗೂ ಕಷ್ಟದಾಯೀ ಸಮಸ್ಯೆಗಳನ್ನಿದಿರಿಸಬಹುದು; ಆದರೆ ಪಾಕಿಸ್ತಾನವು ಇನ್ನಷ್ಟು ದೊಡ್ಡದಾದ ಮತ್ತು ಅಜೇಯವಾದ ಸಮಸ್ಯೆಗಳಲ್ಲಿ ಸಿಕ್ಕಿಕೊಂಡಿದೆ. ಹೀಗಿರುವಾಗ, ಪಾಕಿಸ್ತಾನವನ್ನು ಪುನಃ ತಂದುಕೊಳ್ಳುವ ಮಾತಾಡುವವರು ನಮ್ಮ ಹೊರೆ ಮತ್ತು ಸಂಕಷ್ಟಗಳನ್ನು ಹೆಚ್ಚಿಸುತ್ತಾರೆ. ಇದು ಅತಿಭೀಕರ, ಅಪಾಯಕರ ಪ್ರಚಾರ. ಮುಸ್ಲಿಂ ಲೀಗಿನ ಜಾತೀಯತೆಯು ಇಲ್ಲಿಂದ ಪಾಕಿಸ್ತಾನಕ್ಕೆ ವರ್ಗಾಯಿಸಲ್ಪಟ್ಟು ಹಿತವಾಗುವದೆಂಬ ಆಶೆಯು ಪಾಕಿಸ್ತಾನ್ ಸ್ಥಾಪನೆಯಲ್ಲಿದ್ದಿತು. ಭಾರತದಂತಹ ಪ್ರಜಾಸತ್ತಾತ್ಮಕ ರಾಷ್ಟ್ರದಲ್ಲಿ ಜಾತೀಯತೆಗೆ ಸ್ಥಾನವೇ ಇಲ್ಲ" ಎಂದು ಪಂ. ನೆಹರು ಸ್ಪಷ್ಟಪಡಿಸಿದ್ದಾರೆ.

---

**ಕಟೀಲು**— ಮೂಲ್ಕಿ ಹರಿಜನ ದಿನಾಚರಣೆಯ ಕಮಿಟಿಯವರು ನಿಶ್ಚಯಿಸಿದ ಪ್ರಕಾರ ಈ ತಿಂಗಳ ಹರಿಜನ ದಿನಾಚರಣೆಯು ಕಟೀಲಿನಲ್ಲಿ ಆಚರಿಸಿದರು. ತಾ. 30ನೇ ಶುಕ್ರವಾರ ಬೆಳಿಗ್ಗೆ ಮೂಲ್ಕಿ, ಪಡುಪಣಂಬೂರು, ಪಾವಂಜೆ, ಪಂಜ, ಕಿನ್ನಿಗೋಳಿಯಿಂದ ಹರಿಜನರು ಮೆರವಣಿಗೆ ಮಾಡಿಕೊಂಡು ಕಟೀಲಿಗೆ ಬಂದು, ಅಲ್ಲಿ ಭಜನೆ ಮಾಡುತ್ತಾ [illegible]ಂಕದ ವರೆಗೆ ಹೋಗಿ ತಿರುಗಿ ಬಂದು ಸ್ಥಳೀಯ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನವನ್ನು ಪ್ರವೇಶಿಸಿ ಹಣ್ಣುಕಾಯಿಗಳನ್ನು ಅರ್ಪಿಸಿ ಪೂಜೆಮಾಡಿ, ಗಂಧಪ್ರಸಾದಾದಿಗಳನ್ನು ಪಡಕೊಂಡು ನಂತರ ಅಲ್ಲಿಯೇ ಇವರೊಂದಿಗೆ ಸಹಕರಿಸದೆ ದೂರನಿಂತು ಪಿಳಪಿಳನೆ ನೋಡುತ್ತಿದ್ದ ಜನರನ್ನುದ್ದೇಶಿಸಿ ಶ್ರೀ ಯಂ ಆರ್. ಕೊಂಜರು, ಹರಿಜನದಿನಾಚರಣೆ, ಹರಿಜನೋದ್ಧಾರದ ಕುರಿತು ಭಾಷಣ ಮಾಡಿ ಸಮೀಪದಲ್ಲಿದ್ದ ಶ್ರೀ ದುರ್ಗಾಪರಮೇಶ್ವರೀ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಲಘು ಉಪಹಾರವನ್ನು ಮಾಡಿ ಹಿಂತಿರುಗಿದರು.

---

# ಆಂಧ್ರ ಪ್ರಾಂತ್ಯದ ಪಾಲುಪಟ್ಟಿ ತಯಾರಿ.

ಆಂಧ್ರ ಪ್ರಾಂತ್ಯದ ಪಾಲು ವಿಂಗಡಿಸುವ ಕಾರ್ಯಗಳನ್ನು ಮದ್ರಾಸ್ ಮಂತ್ರಿ ಮಂಡಲದ ವಿಭಜನಾ ಸಮಿತಿಯು ಅಲ್ಪಾವಧಿಯಲ್ಲಿ ಕ್ಷಿಪ್ರಗತಿಯಿಂದ ನಿರ್ವಹಿಸಿ ಮುಗಿಸಿದೆ. ಬೇರಾವುದೇ ವಿಷಯದಲ್ಲಾದರೂ ಮದ್ರಾಸ್ ಸರಕಾರವು ನೇಮಿಸಿದ್ದ ಬೇರಾವ ಸಮಿತಿಯೂ ಇಷ್ಟು ಪರಿಣಾಮಕಾರಿಯಾಗಿ ಸಕಾಲದಲ್ಲಿ ಕಾರ್ಯ ನೆರವೇರಿಸಿದ ಬೇರೊಂದು ದಾಖಲೆ ಕಾಣುವದಿಲ್ಲ. ಆಂಧ್ರ-ತಮಿಳು ಸದಸ್ಯರೊಳಗೆ ತೀವ್ರ ಭಿನ್ನಾಭಿಪ್ರಾಯಗಳಿರಬಹುದೆಂದು ಊಹಿಸಿದ್ದ ವಿಷಯಗಳಲ್ಲಿ ಕೂಡಾ ಆಶ್ಚರ್ಯಕರ ಒಮ್ಮತ ಕಂಡುಬಂದಿದೆ. ಜನವರಿ 26ರೊಳಗೆ ಆಂಧ್ರ ಪ್ರಾಂತ್ಯ ರಚಿಸಿಕೊಳ್ಳಬೇಕೆಂಬ ತೆಲುಗರ ಆತುರವೂ ಮದ್ರಾಸ್ ನಗರದ ಹಕ್ಕನ್ನು ಸುಲಭದಲ್ಲಿ ಬಿಟ್ಟುಕೊಟ್ಟ ತೆಲುಗರನ್ನು ಬೇಗನೇ ದೂರಕ್ಕಟ್ಟುವುದು ಹಿತಕರವೆಂಬ ತಮಿಳರ ಅಂತರ್ಯವೂ ಇಂತಹ ಕ್ಷಿಪ್ರಗತಿಯ ಕೆಲಸಕ್ಕೆ ಕಾರಣವಾದುವೆನ್ನಬಹುದು.

**ಸಮಿತಿಯ ಕೆಲಸ**

ಶ್ರೀಗಳಾದ ಕುಮಾರಸ್ವಾಮಿರಾಜಾ, ಭಕ್ತವತ್ಸಲಮ್, ಸಂಜೀವ ರೆಡ್ಡಿ, ಮಾಧವ ಮೆನನ್, ಗೋಪಾಲ ರೆಡ್ಡಿ (ಮದ್ರಾಸ್ ಮಂತ್ರಿಗಳು) ಟಿ. ಪ್ರಕಾಶಂ, ಟಿ. ಟಿ. ಕೃಷ್ಣಮಾಚಾರಿ, ಕಲಾ ವೆಂಕಟರಾವ್—ಈ ಎಂಟು ಮಂದಿಯ ವಿಭಜನಾ ಸಮಿತಿಯು ಜನವರಿ ತಾ. 1ರ ವರೆಗಿನ 14 ದಿನಗಳಲ್ಲಿ ದಿನಕ್ಕೆ ಸರಾಸರಿ 2 ತಾಸುಗಳಂತೆ ಸಭೆಸೇರಿ ಆಂಧ್ರ ಪಾಲುಪಟ್ಟಿಯ ಕೆಲಸವನ್ನೆಲ್ಲಾ ಮುಗಿಸಿಕೊಂಡಿದೆ. ಈ ಮೂಲ ಸಮಿತಿಗೆ ಸಹಾಯಕವಾಗಿ 5 ಮಂದಿ ಐ. ಸಿ. ಯಸ್. ಆಫೀಸರರು ಮತ್ತು ಎಕೌಂಟೆಂಟ್ ಜನರಲರಿದ್ದ ಎರಡು ಉಪಸಮಿತಿಗಳಿದ್ದುವು. ತಾ. 2ರಲ್ಲಿ ಅದರ ಕೊನೆಯ ಸಭೆಸೇರಿ ತನ್ನ ವರದಿ ತಯಾರಿಸಿ ತಾ. 3ರಲ್ಲೇ ಮದ್ರಾಸ್ ಮಂತ್ರಿಮಂಡಲವು ಆ ವರದಿಯ ಪರಿಶೀಲನಾ ಶಾಸ್ತ್ರ ಮುಗಿಸಿ ಕೇಂದ್ರ ಸರಕಾರಕ್ಕೆ ತನ್ನ ಅವಸರದ ವರದಿಯೊಂದನ್ನು ಕಳುಹಿಕೊಟ್ಟು ಸವಿವರವಾದ ವರದಿಯನ್ನು ಹಿಂದಿನಿಂದ ಕಳುಹುವೆನೆಂದು ತಿಳಿಸಿದೆ. ಕೊಲೊಂಬೊದಲ್ಲಿ ಸೇರಲಿರುವ ಕಾಮನ್‌ವೆಲ್ತ್ ಸಮ್ಮೇಳನಕ್ಕಾಗಿ ಪ್ರಧಾನಿ ಪಂಡಿತ ನೆಹರುಗಳು ಇದೇ ತಾ. 8ರಲ್ಲಿ ಹೊರಡಲಿದ್ದು, ತಾ. 17ಕ್ಕೆ ಅಲ್ಲಿಂದ ಮರಳಲಿರುವರಾದ್ದರಿಂದ ಅವರು ಹೊರಡುವ ಮೊದಲೇ ಆಂಧ್ರ ಪ್ರಾಂತ್ಯದ ಪಾಲುಪಟ್ಟಿ ವಿಷಯ ಭಾರತ ಸರಕಾರದ ಕೈಸೇರಿ ಜನವರಿ ತಾ. 26ರೊಳಗೆ ನವ ಪ್ರಾಂತ್ಯರಚನೆಮಾಡಲನುಕೂಲವಾಗಬೇಕೆಂದೇ ಮದ್ರಾಸ್ ಸರಕಾರವು ಮುಂದಾಗಿ ಅವಸರದ ವರದಿಯೊಂದನ್ನು ಕಳುಹಿಸಿದುದಾಗಿದೆ.

**ಮುಖ್ಯ ವಿಭಾಗ**

ಆಂಧ್ರ ಪ್ರಾಂತ್ಯದ ರಾಜಧಾನಿಯು ಸದ್ಯಕ್ಕಾದರೂ ಮದ್ರಾಸ್ ನಗರದಲ್ಲಿಂದ, ಹೊರಗಿರಬೇಕು. ಬಳ್ಳಾರಿಯ ಸರ್ವಸಮ್ಮತ ಕನ್ನಡ ಭಾಗಗಳಾದ ಆರು ತಾಲೂಕುಗಳು ಆಂಧ್ರವನ್ನು ಕಳೆದುಳಿಯುವ ಮದ್ರಾಸ್ ಪ್ರಾಂತ್ಯದಲ್ಲೇ ಇರಬೇಕು; ಅಲ್ಲಿಯ ಉಳಿದ ಮೂರು ತಾಲೂಕುಗಳನ್ನು ಆಂಧ್ರದೊಳಗೆ ಸೇರಿಸಬೇಕು. ಬಳ್ಳಾರಿಯ ಕನ್ನಡ ಭಾಗದಲ್ಲಿರುವ ತುಂಗಭದ್ರಾ ಅಣೆಕಟ್ಟು ಯೋಜನೆಯನ್ನು ಆಂಧ್ರ ಪ್ರಾಂತ್ಯಕ್ಕೊಪ್ಪಿಸಿ, ಅದರ ಕಾರ್ಯನಿರ್ವಹಣದಲ್ಲಿ ಆಂಧ್ರ ಸರಕಾರದೊಂದಿಗೆ ಮದ್ರಾಸ್ ಸರಕಾರವೂ ಸಹಭಾಗಿಯಾಗಬೇಕು. ಆಂಧ್ರ ಮತ್ತು ಆಂಧ್ರೇತರ ವಿಭಾಗಗಳ ಜನಸಂಖ್ಯೆಯನ್ನಾಧರಿಸಿ, ಈಗಿನ ಮದ್ರಾಸ್ ಪ್ರಾಂತ್ಯದ ಎಲ್ಲಾ ಆಯ-ಸಂದಾಯ, ಉತ್ಪನ್ನ-ಖರ್ಚು, ರಿಸರ್ವ್ ನಿಧಿ, ಸಾಮಗ್ರಿ ಉಪಕರಣ, ಮೊದಲಾದುವುಗಳನ್ನು ವಿಭಾಗಿಸಿಕೊಳ್ಳಬೇಕು. ಆ ಪ್ರಕಾರ ಈಗಿನ ಮದ್ರಾಸ್ ಪ್ರಾಂತ್ಯದ ಆಯ-ವ್ಯಯಗಳಲ್ಲಿ ನೇಕಡಾ 36·5ರಷ್ಟು ಆಂಧ್ರ ಪ್ರಾಂತ್ಯಕ್ಕೂ ಉಳಿದ 63.5 ಮದ್ರಾಸ್ ಪ್ರಾಂತ್ಯಕ್ಕೂ ದೊರೆಯುವವು. ಎಸೆಂಬ್ಲಿ ಕೌನ್ಸಿಲು ಸದಸ್ಯರು, ಎಲ್ಲಾ ವಿಭಾಗಗಳ ನೌಕರರೇ ಮೊದಲಾದವರನ್ನು ಯಾವ ಕ್ಷೇತ್ರದವರೆಂಬುದನ್ನಾಧರಿಸಿ ವಿಂಗಡಿಸಿಕೊಳ್ಳಲಾಗುವದು. ಆಂಧ್ರ ಶಾಸನ ಸಭಾಸ್ಥಾಪನ. ಸರಕಾರೀ ಭವನಗಳು ಆಂಧ್ರ ಪ್ರಾಂತ್ಯದೊಳಗೇನೇ ಇರಬೇಕು. ಆಂಧ್ರದ ಹೈಕೋರ್ಟು, ಮತ್ತಿತರ ಸರಕಾರೀ ಕಾರ್ಯಾಲಯಗಳು ಎರಡು ಸರಕಾರಗಳ ಒಪ್ಪಂದಾನುಸಾರ ರಾಜಧಾನಿಗೆ ವರ್ಗಾಯಿಸಲ್ಪಡುವ ವರೆಗೆ ತಾತ್ಕಾಲಿಕವಾಗಿ ಮದ್ರಾಸಿನಲ್ಲಿರಬಹುದು. ಆಂಧ್ರ ರಾಜಧಾನಿಯ ನಿರ್ಮಾಣಕ್ಕಾಗಿ 1 ಕೋಟಿ ರೂಪಾಯಿಗಳನ್ನು ಆಂಧ್ರರಿಗೀಯಲಾಗುವದು. ಆಂಧ್ರ ಪ್ರಾಂತ್ಯವು ರೂ. 6·5 ಕೋಟಿ ರೂಪಾಯಿಗಳ ಕೊರತೆಯ ಪ್ರಾಂತ್ಯವಾಗುವದೆಂದು ದಾರ್ ಸಮಿತಿ ಸೂಚಿಸಿದ್ದರೂ ಈಗಿನ ವಿಭಜನಾ ಸಮಿತಿ ಹೊಸ ಲೆಕ್ಕಗಳನ್ನು ಹಾಕಿ ಅದು 1 ಕೋಟಿ ರೂಪಾಯಿಗೂ ಕಡಿಮೆಯಾಗುವದೆಂದು ಅಂದಾಜು ಕಟ್ಟಿದೆ. ಆಂಧ್ರ ಕಳೆದುಳಿದ ಮದ್ರಾಸ್ ಪ್ರಾಂತ್ಯವು [illegible] ಕೋಟಿ ರೂ.ಗಳಷ್ಟು ಕೊರತೆಯದಾಗುವದು. ಸಮಿತಿ ಸದಸ್ಯರಲ್ಲೊಬ್ಬರಾದ ಶ್ರೀ ಟಿ. ಪ್ರಕಾಶಮರು ಆಂಧ್ರ ರಾಜಧಾನಿಯನ್ನು ತಾತ್ಕಾಲಿಕವಾಗಿಯೂ ಮದ್ರಾಸಿನಲ್ಲಿಡಲು ಬಿಡದುದಕ್ಕಾಗಿ, ಮತ್ತಿತರ ಹಣಕಾಸಿನ ಲೆಕ್ಕಾಚಾರಕ್ಕಾಗಿ ತನ್ನ ಅಸಮ್ಮತಿ ಸೂಚಕ ಟಿಪ್ಪಣಿ ಬರೆದಿದ್ದಾರೆ. ಮದ್ರಾಸ್ ನಗರದ ಸೋಂಕೇ ತಮಗಿಲ್ಲದಂತಾದುದಕ್ಕಾಗಿ ತೆಲುಗರ ವಿರೋಧ ಸಭೆಗಳು ನಡೆದಿವೆ

ಬಳ್ಳಾರಿ ಜಿಲ್ಲೆಯನ್ನು ವಿಭಾಗಿಸಿ ಅಲ್ಲಿಯ ಮೂರು ತಾಲೂಕುಗಳನ್ನು ಆಂಧ್ರದೊಳಗೆ ಸೇರಿಸುವ ಸೂಚನೆಯಿಂದ ಅಖಿಲ ಕರ್ನಾಟಕವು ಅತಿರೇಕ ಸಿಟ್ಟುಗೊಂಡಿದೆ. ಸಮಿತಿಯು, ಕನ್ನಡ ಭಾಗಗಳನ್ನೂ ಆಂಧ್ರದೊಳಗೆ ಸೇರಿಸುವ ನಿರ್ಧಾರ ಮಾಡಿದುದನ್ನು ಬಲವಾಗಿ ಖಂಡಿಸಿ, ಇದನ್ನು ಪ್ರತಿಭಟಿಸಿ ಕೊನೆಯ ತನಕವೂ ಹೋರಾಡಲಿರುವ ಕನ್ನಡಿಗರ ಅಚಲ ನಿರ್ಧಾರವನ್ನು ತಿಳಿಸಿ, ಕರ್ನಾಟಕ ಕಾಂಗ್ರೆಸ್ ಶಿಷ್ಟ ಮಂಡಲದ ನಾಯಕ ಶ್ರೀ ಬಲವಂತರಾವ್ ದಾತಾರ ಮತ್ತು ಹಣಮಂತ ರಾವ್ ಮೊಹರೆಯವರು ಕೇಂದ್ರ ಸರಕಾರಕ್ಕೆ ಮನವಿ ಮಾಡಿಕೊಂಡಿದ್ದಾರೆ.

---

ಕಾರ್ಕಳದಲ್ಲಿ ಇದೇ ತಾ. 3ನೇ ಆದ ರಾತ್ರೆ ಜನಾಬ್ ಯಚ್. ಯಸ್. ಮುಸ್ಲೀನ್ ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ಜರಗಿತು. ಅಧ್ಯಕ್ಷರು ತನ್ನ ಭಾಷಣದಲ್ಲಿ, ಕರ್ನಾಟಕ ಪ್ರಾಂತ್ಯ ರಚನಾ ಸಂಬಂಧದ ಆಂದೋಲನಗಳನ್ನು ಪ್ರಸ್ತಾಪಿಸಿ, ರಾಷ್ಟ್ರವೀದಿನ ಅತಿ ಪ್ರಾಮುಖ್ಯ ಸಮಸ್ಯೆಗಳಲ್ಲಿ ಸಿಲುಕಿರುವಾಗ ಎಲ್ಲರೂ ಭಾರತದ ಪ್ರತಿನಿಧಿ ನಾಯಕರಿಗೆ ವಿಧೇಯತೆಯ ಪೂರ್ಣ ಬೆಂಬಲವೀಯಬೇಕಲ್ಲದೆ, ಹೊಸ ತೊಡಕುಗಳನ್ನು ಮುಂದೊಡ್ಡಬಾರದೆಂದರು. "ಭಾರತದ ಇಂದಿನ ಆರ್ಥಿಕ, ರಾಜಕೀಯ ಸಂಬಂಧದ ಭೀಕರಾವಸ್ಥೆಯನ್ನು ಗಮನಿಸಿ, ಮತ್ತು ಆವಶ್ಯವಿರುವ ಭಾರತದ ಏಕರೂಪಕ್ಕೆ [illegible] ಪಥದಲ್ಲಿಟ್ಟುಕೊಂಡು, ಕಾರ್ಕಳದ ಈ ಸಾರ್ವಜನಿಕ ಸಭೆಯು, ಕರ್ನಾಟಕ ಪ್ರಾಂತ್ಯ ರಚನಾ ಸಂಬಂಧದ ಅ. ಭಾ. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ದಶಂಬರ್ 21ರ ನಿರ್ಣಯಕ್ಕೆ ತನ್ನ ಪೂರ್ಣ ಹಾಗೂ ಹೃತ್ಪೂರ್ವಕ ಅನುಮೋದನೆಯನ್ನೀಯುತ್ತದೆ. ಮತ್ತು ಕರ್ನಾಟಕದ ಜನತೆಯು ಈ ನ್ಯಾಯ ಮತ್ತು ಉಚಿತ ನಿರ್ಧಾರಕ್ಕೆ ಪೂರ್ಣ ಬೆಂಬಲ ಕೊಡಬೇಕೆಂದೂ, ಹೊಸಪ್ರಾಂತ್ಯ ರಚನೆಗಾಗಿ ಎದ್ದಿರುವ ಸದ್ಯದ ದುರ್ವಿವೇಕದ ಚಳವಳಿಯಿಂದ ದೂರವಿರಬೇಕೆಂದೂ ಕೇಳಿಕೊಳ್ಳುತ್ತದೆ" ಎಂಬ ನಿರ್ಣಯವನ್ನು ನಿಷ್ಠಾವಂತ ಕಾಂಗ್ರೆಸಿಗ ವಕೀಲ್ ಶ್ರೀ ಎಂ. ಎಸ್. ಅಧಿಕಾರಿಗಳು ಮುಂತಂದು, ಕರ್ನಾಟಕದ ಕೆಲವು ಜವಾಬ್ದಾರೀ ಕಾಂಗ್ರೆಸಿಗರೇ, ಅವಸರದ ಕರ್ನಾಟಕ ಪ್ರಾಂತ್ಯ ರಚನೆಗಾಗಿ ಹೂಡಿರುವ ಚಳವಳವನ್ನು ಖಂಡಿಸಿದರು. ಕಾಲೋಚಿತ ಕಾರ್ಯ ಮಾಡುವವರೆಂಬ ನಂಬುಗೆಯಿಡಬಹುದಾದ ಪ್ರೀತಿಪಾತ್ರ ರಾಷ್ಟ್ರನಾಯಕರ ಕಡೆಗಿನ ಜನತೆಯ ವಿಶ್ವಾಸವು ಕುಗ್ಗು[illegible] ಇಂತಹ ಅಪಪ್ರಚಾರಗಳನ್ನು ಸಕಾಲದಲ್ಲಿ ತಡೆಗಟ್ಟದಿದ್ದರೆ ಕಾಂಗ್ರೆಸಿಗೆ ಅಪಮಾನ ಸಮೀಪಿಸಬಹುದಾದ್ದರಿಂದ ಕರ್ನಾಟಕದ ಜನತೆಯು ಅಂತಹ ಆಂದೋಲನವನ್ನು ಪರಿಣಾಮಕಾರಿಯಾಗಿ ಪ್ರತಿಭಟಿಸಬೇಕೆಂದರು. ವಕೀಲ್ ಶ್ರೀ ಕೆ. ಜಿ. ಕಾಮತರು ನಿರ್ಣಯವನ್ನು ಅನುಮೋದಿಸಿ ತ್ರಿಮೂರ್ತಿ ಸಮಿತಿಯ ವರದಿಯ ಸ್ಥಿತಿಗತಿಗಳನ್ನು ವಿವರಿಸಿ, ತದ್ವಿರುದ್ಧವಾದ ಆಕ್ರಮ ವರ್ತನೆಯು ವಿಶ್ವಾಸಘಾತಕ್ಕೆ ದಾರಿಯಾಗುವಂತಹದೆಂದರು. ಶ್ರೀಗಳಾದ ಕೇಶವರಾವ್, ಚಂದ್ರ ಶೆಟ್ಟಿ, ಕೆ. ಪಿ. ಮುಕುಂದ ಪ್ರಭು, ಜಿ. ಜೋಗಿ. ಸದಸ್ಯ; ಬಿ. ಸುಬ್ರಾಯ ಪೈ, ಇವರ ಭಾಷಣಗಳಾಗಿ ಠರಾವು ಸರ್ವಾನುಮತದಿಂದ ಮಂಜೂರಾಯಿತು.

ಪರ್ಯಾಯ ಸ್ಪೆಶಲ್ ಕನ್ನಡ ಚಿತ್ರ

## ❖ ನಾಗ ಕನ್ನಿಕಾ ❖

ರತ್ನಮಾಲ, ರಾಘವೇಂದ್ರ ರಾವ್, ಜಯಶ್ರೀ,

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಶ್ರೀದೇವಿಪ್ರಸನ್ನ

ವಿಚಾರಿಸಿರಿ

# ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ ಲೈಫ್ ಇನ್ಶ್ಯೂರೆನ್ಸ್ ಕೊ, ಲಿಮಿಟೆಡ್.

(ಸ್ಥಾಪನೆ: 1934)

ಚೆಯರ್‌ಮೆನ್: ಶ್ರೀ. ಎಮ್ ಒಟಿ ಎಮ್. ಚಿದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

**ಮಂಗಳೂರು ಶಾಖೆ:**
ಕೆ. ಎಸ್. ರಾವ್. ರೋಡು,
ಹಂಪನಕಟ್ಟೆ, ಮಂಗಳೂರು.

**ಕೇಂದ್ರ ಕಾರ್ಯಾಲಯ:**
"ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್ ಪೋಸ್ಟು ಬಾಕ್ಸ್ ನಂಬ್ರ 142
ಮದ್ರಾಸು

## ಉಡುಪಿ

**ಸ್ಕಾಟು ಶಿಬಿರ**- ಕಳೆದ ತಾ. 2 ರಲ್ಲಿ ಮಲ್ಪೆ ವಡಭಾಂಡೇಶ್ವರದಲ್ಲಿ ಹಿಂದೂಸ್ಥಾನ್ ಸ್ಕೌಟು ಸಂಸ್ಥೆಯ ಕಬ್ ಮಾಸ್ತರರ ತರಬೇತಿ ಶಿಬಿರವು ಮುನಿಸಿಪಲ್ ಕಮೀಶನರ್ ಶ್ರೀ ಬಾಲ ಗಂಗಾಧರನ್ ಅವರಿಂದ ಉದ್ಘಾಟಿಸಲ್ಪಟ್ಟಿತು. ತಾ. 31 ರಲ್ಲಿ ಶಿಬಿರದ ಮುಕ್ತಾಯ ಸಮಾರಂಭವು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ವಿವಿಧ ಕಾರ್ಯಕ್ರಮಗಳಾದುವು. ಶ್ರೀ ಕೆ. ವಿಠಲ ಶೆಣೈಯವರು ಧನ್ಯವಾದಗಳನ್ನರ್ಪಿಸಿದರು. ಸರಕಾರಿ ಹಾ। ಎ। ಶಾಲಾ ಮಾಸ್ತರ್ ವಿದ್ಯಾರ್ಥಿಗಳು ಈ ಶಿಬಿರದಲ್ಲಿ ತರಬೇತಿ ಹೊಂದಿದರು. ಶ್ರೀ ಬೋಳೂರು ಶ್ರೀನಿವಾಸರಾಯರು ಶಿಬಿರದ ಮುಖ್ಯಾಧಿಕಾರಿಗಳಾಗಿದ್ದರು, ಶ್ರೀ. ಕೆ. ಆನಂದ ಸೆಟ್ಟರು ಸಹಾಯಕರಾಗಿದ್ದರು.

**ರಾಷ್ಟ್ರೀಯ ಸ್ವಯಂಸೇವಕ ಸಂಘದ ಶಿಬಿರ** ಶಿಬಿರವು ಕಳೆದ ತಾ 25 ರಲ್ಲಿ ಕುಂಜಿಬೆಟ್ಟಿನಲ್ಲಿ ಪ್ರಾರಂಭಿಸಲ್ಪಟ್ಟಿತು. ಅದರ ಸಮಾರೋಪ ಉತ್ಸವವು ಇದೇ ತಾ. 1 ರಲ್ಲಿ ಗಾಂಧಿ ಮೈದಾನದಲ್ಲಿ ಡಾ. ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಕಾರ್ಕಳ ಸದಾಶಿವರಾವ್, ಶ್ರೀ. ದೇಶಪಾಂಡೆಯವರ ಭಾಷಣಗಳಾದುವು. ಸ್ವಯಂಸೇವಕರು ಕುಂಜಿಬೆಟ್ಟಿನಿಂದ ಗಾಂಧಿ ಮೈದಾನಕ್ಕೆ ಬ್ಯಾಂಡ್ ವಾಲಗದೊಂದಿಗೆ 'ಮಾರ್ಚ್' ಶಿಸ್ತಿನಿಂದ ಬಂದು ತಾವು ಕಲಿತ ವ್ಯಾಯಾಮಗಳ ಪ್ರದರ್ಶನವಿತ್ತ ದೃಶ್ಯವು ಗಂಭೀರವಾಗಿತ್ತು.

**ನೂಲುವ ಪರೀಕ್ಷೆ**- ದಶಂಬರ್ ತಾ. 28ನೇ ಪೂರ್ವಾಹ್ನ ಉಡುಪಿ ಮುನ್ಸಿಪಲ್ ನೋರ್ತ್ ಶಾಲೆಯಲ್ಲಿ ಉಡುಪಿ ನೋರ್ತ್ ರೇಂಜಿನ ಶಾಲೆಗಳ ಇನ್ಸ್‌ಪೆಕ್ಟರ್ ಶ್ರೀ ಎಚ್. ಸಂಜೀವರಾವ್ ಇವರಿಂದ ಉಡುಪಿ ರೇಂಜಿಗೆ ಸಂಬಂಧಪಟ್ಟ ಉಪಾಧ್ಯಾಯ, ಉಪಾಧ್ಯಾಯಿನಿಯರ ಬಗ್ಗೆ ಏರ್ಪಡಿಸಿದ ತಕ್ಲಿ ಮತ್ತು ಚರ್ಕದಲ್ಲಿ ನೂಲುವ ಪರೀಕ್ಷೆಯು ಜರಗಿಸಲ್ಪಟ್ಟಿತು. 8 ಮಂದಿ ಉಪಾಧ್ಯಾಯರೂ, 17 ಮಂದಿ ಉಪಾಧ್ಯಾಯಿನಿಯರೂ ಭಾಗವಹಿಸಿದ್ದರು. ಸರ್ಕಲ್ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಕೆ. ನಂಜುಂಡ ಕಾಮತರೇ ಮೊದಲಾದವರು ಈ ಸಂದರ್ಭದಲ್ಲಿ ಹಾಜರಿದ್ದರು.

**ಕೃಷ್ಣ ವಿಲಾಸದ ಉದ್ಘಾಟನೆ**— ಉಡುಪಿಯ ಮಧ್ಯವರ್ತಿ ಸ್ಥಳವಾದ ಹಾಲು ಕೋಟೆ - ಸಂತೆಕಟ್ಟೆ ಕೂಡುವಲ್ಲಿ ಈಚೆಗೆ ವಿದ್ಯುದ್ದೀಪಗಳಿಂದಲಂಕೃತವಾಗಿ ಕಟ್ಟಿಸಲ್ಪಟ್ಟ ಶ್ರೀ ಲಕ್ಷ್ಮೀನಾರಾಯಣ ಭಟ್ಟರ ತಿಂಡಿತೀರ್ಥಗಳ ಉಪಹಾರಗೃಹ 'ಕೃಷ್ಣ ವಿಲಾಸ'ದ ಉದ್ಘಾಟನಾ ಸಮಾರಂಭವನ್ನು ಉಡುಪಿಯ ಜನಪ್ರೀತ ನಿವೃತ್ತ ಬೋರ್ಡು ಹ್ಯಸ್ಕೂಲ್ ಮುಖ್ಯೋಪಾಧ್ಯಾಯರಾದ ಶ್ರೀ ಆರ್. ಫೆರ್ನಾಂಡೀಸರು ಇದೇ ತಾ. 2ರಲ್ಲಿ ಸಂಜೆ ಮಹಾ ಜನ ಸಮುದಾಯದ ಮುಂದೆ ಯಶಸ್ವಿಯಾಗಿ ನೆರವೇರಿಸಿದರು. ರೋಯಲ್ ಮಹಾಲಿನ ವ್ಯಾಲಕ ಶ್ರೀ ವೆಂಕಟ್ರಮಣಭಟ್ಟರೊಂದಿಗೆ ಪರಿಪಕ್ವ ಅನುಭವ ಪಡೆದ ಶ್ರೀ ಭಟ್ಟರು ಅವರಂತೆಯೇ ಜನಪ್ರೀತಿಯನ್ನು ಸಂಪಾದಿಸಿ ಮೇಲ್ತರಗತಿಯ ಉಪಾಹಾರಗೃಹದ ಕೊರತೆಯನ್ನು ನೀಗಿಸುವಂತಾಗಲೆಂದು ಉದ್ಘಾಟಕರು ತನ್ನ ಭಾಷಣದಲ್ಲಿ ಹೇಳಿದರು.. ಶ್ರೀ ಕೆ. ವಿಠಲಶೆಣೈಯವರು ಉದ್ಘಾಟಕರ ಮಾತುಗಳನ್ನು ಪುಷ್ಟೀಕರಿಸಿ ಮಾತನಾಡಿದರು, ವಕೀಲ್ ಶ್ರೀ ಕೆ. ಎಲ್. ಐತಾಳರು ಧನ್ಯವಾದಗಳನ್ನರ್ಪಿಸಿದ ನಂತರ ಚಹಾ ಸತ್ಕಾರದಿಂದ ಸಮಾರಂಭವು ಕೊನೆಗೊಂಡಿತು.

## ಪರ್ಯಾಯ ವಸ್ತುಪ್ರದರ್ಶನ

ಉಡುಪಿಯ ಪರ್ಯಾಯ ವಸ್ತುಪ್ರದರ್ಶನವು ಇದೇ ತಾ. ೧ರಲ್ಲಿ ಸಂಜೆ ಜಿಲ್ಲಾ ಕಲೆಕ್ಟರ್ ಜನಾಬ್ ಸಯದ್ ಅಹಮ್ಮದ್ ಅವರಿಂದ ತೆರೆಯಲ್ಪಟ್ಟಿತು. ವಸ್ತುಪ್ರದರ್ಶನ ಕಮಿಟಿಯ ಕಡೆಯಿಂದ ಶ್ರೀಗಳಾದ ಎಮ್. ವಿಠಲಕಾಮತ್ ಮತ್ತು ಟಿ. ಎ. ಪೈಗಳವರು ಕಲೆಕ್ಟರರಿಗೆ ಹೂಮಾಲೆಗಳನ್ನರ್ಪಿಸಿದರು. ಶ್ರೀ ಟಿ. ಎ. ಪೈಗಳು ಸ್ವಾಗತಭಾಷಣ ಮಾಡುತ್ತಾ ಇಂತಹ ಪ್ರದರ್ಶನಗಳ ಆವಶ್ಯಕತೆ, ಅವನ್ನು ಯಶಸ್ವಿಯಾಗಿ ಮಾಡಲು ಜನತೆ ನೀಡಬೇಕಾದ ಬೆಂಬಲ, ಇತ್ಯಾದಿ ವಿಷಯಗಳನ್ನು ಸೂಚಿಸಿ ಈ ಪ್ರದರ್ಶನದ ಉತ್ಪತ್ತಿಯನ್ನು ಮಹಾತ್ಮಾ ಗಾಂಧಿ ಸ್ಮಾರಕ ಕಾಲೇಜು ಕಟ್ಟಡ ನಿಧಿಗೆ ವಿನಿಯೋಗಿಸಲಾಗುವುದೆಂದರು. ಜಿಲ್ಲಾ ಕಲೆಕ್ಟರರು ತನ್ನ ಉದ್ಘಾಟನಾ ಭಾಷಣದಲ್ಲಿ ಇಂತಹ ಪ್ರದರ್ಶನಗಳಿಂದಲೇ ಜನತೆಯು ಕೈಗಾರಿಕೆ ಉದ್ಯಮಗಳಲ್ಲಿ ನಿರತರಾಗಲು ಶಕ್ಯವಿದೆಯೆಂದರು. ಮಲ್ಪೆ ಬಂದರವು ಮಹಾ ಬಂದರವಾಗಿ ಪರಿಣಮಿಸುವ ಕಾಲಕ್ಕೆ ಉಡುಪಿಯ ಹಾಗೂ ಜಿಲ್ಲೆಯ ಕೃಷಿ ಕೈಗಾರಿಕೆ, ಬೇಂಕಿಂಗ್ ಉದ್ಯಮಗಳು ಜಗತ್ತಿಗೇನೇ ಆದರ್ಶಪ್ರಾಯವಾಗುವಂತಾಗಲೆಂದು ಹಾರೈಸಿದರು. ಉಡುಪಿಯ ಚರಿತ್ರೆಯಲ್ಲೇ ಅಪೂರ್ವ, ಹಾಗೂ ಈ ಬಾರಿಯ ಪರ್ಯಾಯೋತ್ಸವ ಕಾಲದ ಪ್ರಾಮುಖ್ಯ ಜನಾಕರ್ಷಣೆಯಾಗಿರುವ ಈ ವಸ್ತುಪ್ರದರ್ಶನವು ತಾ. 22ರವರೆಗೆ ನಡೆಯಲಿದೆ. ಬೆಲೆ, ಕಲೆ, ರಂಜನೆ, ಅನುಭವ, ಶಿಕ್ಷಣಕ್ಕೆ ಸಂಬಂಧಿಸಿದ ವಿವಿಧ ವಸ್ತು, ವಿಷಯಗಳ 60 ಕ್ಕೂ ಮಿಕ್ಕಿದ "ಸ್ಟಾಲು"ಗಳು ಇಲ್ಲಿವೆ. ಪ್ರತಿದಿನವೂ ನಾಟಕ, ನರ್ತನ, ಗಾಯನ, ಶಕ್ತಿ ವ್ಯಾಯಾಮ ಪ್ರದರ್ಶನ, ಮತ್ತು ಕೌಶಲ್ಯ ದಾಟಗಳಿವೆ. ಉಳಿತಾಯವು ಉಡುಪಿಯ 'ಗಾಂಧೀ ಮೆಮೋರಿಯಲ್ ಕಾಲೇಜ್'ಗೆ ಹೋಗಲಿರುವ ಈ ಉಪಯುಕ್ತ ಪ್ರದರ್ಶನವು ಊರ, ಪರವೂರ ವ್ಯಾಪಾರಿಗಳ ಹಾಗೂ ಕಲಾವಿದರ ಕೂಡ-ಸಹಕಾರದಿಂದ, ಉಡುಪಿಯ ಅಷ್ಟ ಸ್ತ್ರೀ ಪುರುಷರ ಉತ್ಸಾಹೀ ವ್ಯವಸ್ಥಾಪಕತ್ವದಲ್ಲಿ ಜಯಶೀಲವಾಗಿ ಜರಗುತ್ತಿದೆ.

## ಹೊಸ ವರುಷದ ಅಭಿನಂದನಾ ಸಭೆ

ಗಣನೀಯ ನಾಗರಿಕರೊಬ್ಬರನ್ನು ವರ್ಷಂಪ್ರತಿಯೂ ಹೊಸ ವರುಷದ ಪ್ರಾರಂಭದಲ್ಲಿ ಗೌರವಿಸುವ ಸಂಪ್ರದಾಯವನ್ನಿಟ್ಟುಕೊಂಡ ದಿ ಜನರಲ್ ಇನ್ವೆಸ್ಟ್‌ಮೆಂಟ್ ಎಂಡ್ ಕಮರ್ಶಿಯಲ್ ಕೊರ್ಪರೇಶನ್ ಸಂಸ್ಥೆಯವರು ಈ ಸಲ ಕಾರ್ಕಳದ ಜನಾಬ್ ಎಚ್. ಎಸ್. ಹುಸ್ಸೇನ್ ಸಾಹೇಬ್, ಎಮ್. ಎಲ್. ಎ. ಅವರನ್ನು ಗೌರವಿಸಲು ತಾ. ೧ರಲ್ಲಿ ಸಿಂಡಿಕೇಟ್ ಬೇಂಕಿನ ಹೊಸ ಕಟ್ಟಡದಲ್ಲಿ ಸನ್ಮಾನ ಸಭೆಯೊಂದನ್ನು ಏರ್ಪಡಿಸಿದ್ದರು. ಅಂದಿನ ಸಭೆಯ ಅಧ್ಯಕ್ಷತೆಯನ್ನು ಮಂಗಳೂರ ವಕೀಲ್ ಶ್ರೀ ಬಿ. ವೈಕುಂಠ ಬಾಳಿಗರು ವಹಿಸಿದ್ದರು. ಶ್ರೀ ಟಿ. ರಮೇಶ ಪೈಗಳು ಸ್ವಾಗತ ಭಾಷಣಮಾಡಿ ಹೊಸ ವರುಷದ ಶುಭಾಶಯವನ್ನು ಕೋರಿದ ಬಳಿಕ ಡಾ. ಟಿ. ಮಾಧವ ಪೈ, ಡಾ. ಎಸ್. ಆರ್. ಪೈಗಳವರು ಮಾನ್ಯ ಅತಿಥಿಯ ಗುಣಗಾನ ಮಾಡಿದರು. ಜನಾಬ್ ಸಾಹೇಬರು ಅಭಾರ ಮನ್ನಿಸುತ್ತಾ ರಿಪಬ್ಲಿಕ್ ಉದಯವಾಗುವ ಈ ವರುಷದಲ್ಲಿ ಜನತೆಯ ಕರ್ತವ್ಯವೇನಿದೆ ಎಂಬುದನ್ನು ಕಾಲೋಚಿತ ಮಾತುಗಳಿಂದ ಸೂಚಿಸಿದರು. ಅಧ್ಯಕ್ಷರ ಭಾಷಣ, ಧನ್ಯವಾದಾರ್ಪಣಗಳೊಂದಿಗೆ ಸಭಾಂತ್ಯವಾಯಿತು.

**ಬೆಳ್ಳೆ**— ಶ್ರೀ ಎಮ್. ಕೇಶವ ಶೆಣೈಯರು ರಾಜಿನಾಮೆಕೊಟ್ಟ ಬೆಳ್ಳೆ ಪಂಚಾಯತ ಬೋರ್ಡಿನ ಅಧ್ಯಕ್ಷ ಸ್ಥಾನಕ್ಕೆ ಶ್ರೀ ಬಿ. ಗೋಪಾಲಕೃಷ್ಣ ಬಲ್ಲಾಳರು ಸರ್ವಾನುಮತದಿಂದ ಆರಿಸಲ್ಪಟ್ಟಿದ್ದಾರೆ.

ಬಿಳಿ ಕಾಗದ! ನಾಜೂಕಿನ ಬೈಂಡು!

## ೧೯50ನೇ ಇಸವಿಯ ಪಾಕೆಟ್ ಡೈರಿಗಳು

| | | |
|---|---|---|
| ದೊಡ್ಡದು | (ಕೆಲಿಕೊ ಬೈಂಡ್) | 1-12-0 |
| ,, | (ಸಾದಾ ಬೈಂಡ್) | 1-8-0 |
| ಮದ ಸೈಜು | (ಕೆಲಿಕೊ) | 1-4-0 |
| ,, | (ಸಾದಾ) | 1-0-0 |
| ಸಣ್ಣದು | (ಕೆಲಿಕೊ) | 1-0-0 |
| ,, | (ಸಾದಾ) | 0-12-0 |

(ಟಪ್ಪಾಲು ಖರ್ಚು ಪ್ರತ್ಯೇಕ.)

ಸಿಗುವ ಸ್ಥಳಗಳು:—

**ನವಭಾರತ ಬುಕ್ ಡಿಪೊ, ಉಡುಪಿ.**
**ನವಯುಗ ಪ್ರೆಸ್, ಉಡುಪಿ.**

### ಈ ವರೆಗೆ ಪ್ರಕಟವಾದ 'ಅಂತರಂಗ'ದ ಪ್ರಕಟಣೆಗಳು

| | | | |
|---|---|---|---|
| ೧೯೪೯ರ ಬಿರುದಾವಳಿ (ಎಂ. ವಿ. ಹೆಗ್ಡೆ) | 0 | 2 | 0 |
| ಹೈದರಾಬಾದ್ ವಿಜಯ (ಯಕ್ಷಗಾನ ,, ) | 0 | 3 | 0 |
| ಸೆರೆಯಾಳು (ನೀಳ್ಗತೆ) ಕುಲಕರ್ಣಿ ಬಿಂದುಮಾಧವ | 0 | 4 | 0 |
| ಗಾದಿಯ ಗಾಂಧಿ (ಸೂಕ್ಷ್ಮಪರಿಚಯ)ಎಂ. ವಿ. ಹೆಗ್ಡೆ | 0 | 3 | 0 |
| ಶಾಂತಿಯ ಮಡಲಿನಲ್ಲಿ(ನೀಳ್ಗತೆ) ಪ. ಸು. ಭಟ್ಟ | 0 | 3 | 0 |
| ಬಲಿಪೀಠದಲ್ಲಿ (ನಾಟಕ) ಆರ್. ಕಲ್ಯಾಣಮ್ಮ | 0 | 3 | 0 |
| ಅಗಲಿದ ಅಕ್ಕ ಸರೋಜಿನಿ (ಎಂ. ವಿ. ಹೆಗ್ಡೆ) | 0 | 3 | 0 |
| ನನ್ನ ಹೆಂಡತಿ(ಕತೆಗಳು)ಮೊಳಕೋಡ ನಾರಾಯಣ ಹೆಗಡೆ | 0 | 3 | 0 |
| ಪುಣ್ಯಫಲ (ನೀಳ್ಗತೆ) ಗಿರಿಬಾಲೆ | 0 | 3 | 0 |
| ಸುಖದದಾರಿ (ವೈರಾಗ್ಯಶತಕ) ಕೆ. ಎ. ದೇವದಾಸ | 0 | 3 | 0 |
| ಸುಕಾಂತ (ಅನುವಾದಿತ ಕತೆ) ವೀ. ಜ. ಹಿತ್ತಲಮನಿ | 0 | 3 | 0 |
| ನಂಜಮುಖಿ (5 ಪ್ರಬಂಧಗಳು) ಬಿ. ಎಚ್. ಶ್ರೀಧರ | 0 | 3 | 0 |
| ಜಾತೀಭೂತಕ್ಕೆ ಬಲಿ (ನೀಳ್ಗತೆ) ಕೆ. ದೇವಕಿ | 0 | 3 | 0 |
| ಜನಸೇವೆಯ ಸೋಗಿನಲ್ಲಿ! (ಕತೆ) ಕೆ. ಶಿವರಾಮ ಶೆಟ್ಟಿ | 0 | 3 | 0 |
| ನಾ ಕಂಡ ಅವಳು (ಕತೆ) ಶ್ರೀಪತಿ | 0 | 3 | 0 |
| ತ್ರಿವೇಣಿ (ಪ್ರಬಂಧಗಳ ಸಂಗ್ರಹ) | 0 | 3 | 0 |
| ಸಲುವಂಗಿ (ಕತೆ)ಎಸ್.ಸುಬ್ಬರಾಮಯ್ಯ, ಬಿ.ಎ.(ಆನರ್ಸ್) | 0 | 3 | 0 |
| ಬಾಡಿಗೆಯ ಮನೆ ಮತ್ತು ಮುಸುಕು (ನಾಟಕಗಳು) | 0 | 3 | 0 |
| ವರ್ತಮಾನ ಕಾಲದ ನಾಲ್ವರು ಮಹಾನುಭಾವರು | 0 | 4 | 0 |
| ದೇವರ ನಾಮ ಮತ್ತು ಅದರ ಸಾಧನೆ( ಬಿ. ವಿ. ಶರ್ಮ) | 0 | 3 | 0 |
| ಎರಡು ಕತೆಗಳು | 0 | 3 | 0 |
| ಸರಸ-ವಿರಸ! (೪ ವಿನೋದ ಚಿತ್ರಗಳು) | 0 | 3 | 0 |
| ಹೃದಯೇಶ್ವರಿ (ಕಾದಂಬರಿ) | 0 | 3 | 0 |
| ವಿವಿಧ ವಿಷಯ ಕೋಶ ಭಾಗ ೨ (ವೈಜ್ಞಾನಿಕ ಸಂಗ್ರಹ) | 0 | 6 | 0 |
| ನುಡಿ ಮುತ್ತುಗಳು (ಎಂ. ವಿ ಹೆಗ್ಡೆ) ಮಾಲೆ ೧ | 0 | 3 | 0 |
| ,, ,, ಮಾಲೆ ೨ | 0 | 3 | 0 |
| ,, ,, ಮಾಲೆ ೩ | 0 | 3 | 0 |
| ಕುಲವಿಲ್ಲದ ಹೆಣ್ಣು(ಪಿ.ವೆಂಕೋಬಾಚಾರ್ಯ ಬಿ.ಎ,ಬಿ.ಟಿ.) | 1 | 0 | 0 |
| ತವರು ಮನೆಯಿಂದ (ಸೌ ಶಾರದಾ ದೇವಿ) | 0 | 3 | 0 |
| ಭಾಗ್ಯ ಲಕ್ಷ್ಮಿ (ನಾಟಕ) ಬೆಳ್ಳಂಗಡಿ ಲಕ್ಷ್ಮಣರಾವ್ | 1 | 0 | 0 |
| ಯುಗವಾಣಿ (ಕವನ ಸಂಗ್ರಹ) ಕು. ಶಿ. ಹರಿದಾಸಭಟ್ಟ | 0 | 8 | 0 |
| ಸ್ತ್ರೀ ಹೃದಯ— (ವಾಸಂತಿ ಪಡುಕೋಣೆ) | 0 | 3 | 0 |
| ದ್ವೇಷ- (ಶ್ರೀನಿವಾಸಮೂರ್ತಿ ಗೊರೂರು) | 0 | 3 | 0 |
| ಕಲಾವಿದನ ದಿನಚರಿ (ಯಸ್ಸೆಲ್) | 0 | 3 | 0 |
| ಪ್ರಜಾಪ್ರಭುತ್ವವನ್ನು ಕುರಿತು ಶಿವರಾಮ ಕಾರಂತರು) | 0 | 4 | 0 |
| ಆಧುನಿಕ ಭಾರತ (ಎಚ್. ಭೀಮರಾವ್) | 0 | 4 | 0 |
| ಭಾರತದ ಸಾಹಿತ್ಯ ಮತ್ತು ಕಲೆಗಳು (ವಿಶ್ವೇಶ್ವರ ಶರ್ಮ) | 0 | 4 | 0 |
| ಸ್ತ್ರೀ ಸ್ವಾತಂತ್ರ್ಯ ಬೇಕೆ? (ವೈದ್ಯ ವಿನಾಯಕರಾವ್) | 0 | 3 | 0 |
| ಕಾಲವೇ ಬದಲಾಗಿದೆ (ಕು. ಶಿ ಹರಿದಾಸ ಭಟ್ಟ) | 0 | 3 | 0 |

ಸಿಗುವ ಸ್ಥಳ:—

**ಅಂತರಂಗ ಕಾರ್ಯಾಲಯ, ಉಡುಪಿ.**

## ಮಂಗಳೂರು

**ಅಳಿಯ ಸಂತಾನ ಪ್ರಚಾರ ಸಮಿತಿ** ಸಭೆಯು ಈಚೆಗೆ ಮಂಗಳೂರಿನಲ್ಲಿ ರಾ। ಬ। ಎನ್. ಎಮ್. ಅದ್ಯಂತಾಯರ ಅಧ್ಯಕ್ಷತೆಯಲ್ಲಿ ಜರಗಿ ಅಳಿಯಸಂತಾನ ಕಾನೂನಿನ ದೆಸೆಯಿಂದಾಗಿ ಉಂಟಾಗಬಹುದಾದ ವಿಭಾಗ ತಗಾದೆಗಳು ಕೋರ್ಟು ಕಚೇರಿಗಳಿಗೆ ಹೋಗದೇನೇ ಮಧ್ಯಸ್ತಿಕೆಯಿಂದ ತೀರ್ಮಾನಿಸುವರೆ ಕುಂದಾಪುರ ಮತ್ತು ಕಾರ್ಕಳ ತಾಲೂಕುಗಳಲ್ಲಿ ಈ ಕೆಳಗಿನ ಮಹನೀಯರು ತಮ್ಮ ಸೇವೆಯನ್ನು ಸಲ್ಲಿಸಲು ತಯಾರಿರುವರು. ಅಪೇಕ್ಷಿತ ಜನರು ಅವರನ್ನು ಕಂಡು ತಮ್ಮ ಪಾಲಪಾಲೆಗಳನ್ನುಬಗೆಹರಿಸಿಕೊಳ್ಳಬಹುದೆಂದು ನಿರ್ಧರಿಸಿದೆ:—

**ಕುಂದಾಪುರ ತಾಲೂಕು**— ಶ್ರೀಗಳಾದ ಕೆ. ವೆಂಕಪ್ಪಸೆಟ್ಟಿ, ಬಿ. ಶಿವರಾಮಸೆಟ್ಟಿ, ಕೆ. ಸೂರಪ್ಪಸೆಟ್ಟಿ, ವೈ. ಮಂಜಯ್ಯ ಸೆಟ್ಟಿ, ವಿ. ಶ್ರೀನಿವಾಸಸೆಟ್ಟಿ, ಕೆ. ಸಂಜೀವ ಸೆಟ್ಟಿ, ವೈ. ಸೂರ್ಯಣ್ಣ ಸೆಟ್ಟಿ, ಬಿ. ತೇಜಪ್ಪ ಸೆಟ್ಟಿ, ಕೆ. ಸುಬ್ಬಣ್ಣ ಸೆಟ್ಟಿ, ಎನ್. ಶಿವರಾಮ ಸೆಟ್ಟಿ, ಎಮ್. ಮುತ್ತಯ್ಯ ಸೆಟ್ಟಿ, ಎಚ್. ಹಿರಿಯಣ್ಣ ಸೆಟ್ಟಿ.

**ಕಾರ್ಕಳ ತಾಲೂಕು**- ಶ್ರೀಗಳಾದ ಎನ್. ಎಮ್. ಅದ್ಯಂತಾಯ, ಎಚ್. ಪಿ. ಎ. ಜೈನ್, ಕೆ ಕುಮಾರಯ್ಯ ಶಾಸ್ತ್ರಿ, ಧರಣಪ್ಪ ಅತಿಕಾರಿ, ಎಸ್. ಮುದ್ದಣ್ಣ ಸೆಟ್ಟಿ, ಜ. ನಾಗಣ್ಣ ಹೆಗ್ಡೆ, ಕೆ. ಹೊನ್ನಯ್ಯ ಹೆಗ್ಡೆ, ದಿ. ನಾಗಪ್ಪ ಹೆಗ್ಡೆ, ಎ. ಎನ್. ಸೀತಾರಾಮಾಚಾರ್, ದಿ. ರಾಮಚಂದ್ರರಾವ್, ಎನ್. ರಾಮಪ್ಪ, ಕೆ. ಮಹಾಬಲ ಹೆಗ್ಡೆ.

**ದ. ಕ. ಜಿಲ್ಲೆಗೆ ವಿದ್ಯುತ್ ಸರಬರಾಯಿ** ವಿಚಾರವಾಗಿ ಈಚೆಗೆ ಮದ್ರಾಸುಮಂತ್ರಿ ಶ್ರೀ ಭಕ್ತವತ್ಸಲಂ ಅವರು ನ್ಯಾಯವಿಧಾಯಕ ಸಭೆಯಲ್ಲಿ ಹೇಳಿಕೆಯೊಂದನ್ನಿತ್ತಿದ್ದರು. ಆ ಯೋಜನೆಯಂತೆ ಜೋಗದಿಂದ ವಿದ್ಯುತ್ ತರಲು ತಂತಿ ಮತ್ತು ಕಂಬಗಳೇ ಮೊದಲಾದುವುಗಳಿಗಾಗಿ ವೆಚ್ಚದ ಮಂಜೂರಾತಿಯೂ ಆಗಿದೆ. ಇದು ಸಾಧಾರಣ 62 ಲಕ್ಷರೂ.ಗಳಗೂ ಮಿಾರುವುದು. ಯೋಜನೆಯುಪೂರ್ಣವಾಗಲು 10 ವರ್ಷ ಬೇಕಾಗುವುದು. ಜಿಲ್ಲೆಗೆ ವಿದ್ಯುತ್ತನ್ನು ಪೂರೈಸುವಲ್ಲಿ ಉತ್ಸಾಹದಿಂದ ಕೆಲಸಮಾಡಿದ ಮಂತ್ರಿಗಳನ್ನು ಅಭಿನಂದಿಸಿ ಮುಂದಿನ ಕೆಲಸವನ್ನು ರಭಸದಿಂದ ಮಾಡಬೇಕೆಂದು ಬಿನ್ನವಿಸಿಕೊಳ್ಳುವ ಮನವಿಯೊಂದನ್ನು ಜಿಲ್ಲಾ ವಾಣಿಜ್ಯ ಸಂಘವು ಸರಕಾರಕ್ಕೆ ಕಳುಹಿಸಿಯದೆ.

**ಪೋಲೀಸ್ ವೇನ್ ಮತ್ತು ಕಂಪೆನಿ ಬಸ್ಸಿಗೆ ಢಿಕ್ಕಿ ಹೊಡೆತ**— ಕಳೆದ ತಾ. 25ರಲ್ಲು ಬೆಳಿಗ್ಗೆ ಮಂಗಳೂರಿನ ಲಾಲ್‌ಬಾಗ್ ಸಮಿಾಪದಲ್ಲಿ ಮರವೂರು ಬಸ್ಸಿಗೆಗಸ್ತಿನ ಪೋಲೀಸ್ ವೇನ್ ಢಿಕ್ಕಿ ಹೊಡೆದು ಮಗುಚಿಬಿತ್ತು, ಇದರಿಂದಾಗಿ ಪೋಲೀಸ್ ಲಾರಿಯಲ್ಲಿದ್ದವರಲ್ಲಿ ಏಳುಮಂದಿ ಪೋಲೀಸರಿಗೆ ಜಖಂ ಆಗಿ ಅವರನ್ನು ಕೂಡಲೇ ಆಸ್ಪತ್ರೆಗೊಯ್ಯಲಾಯಿತು. ಬಸ್ಸಿನಲ್ಲಿದ್ದವರಿಗೇನೂ ಆಗಲಿಲ್ಲ.

**ಕುದ್ರೋಳಿ ಕೋಮನ್ವೆಲ್ತ್ ಹಂಚಿನ ಕಾರ್ಖಾನೆಯು**—ಇಬ್ಬರು ಮಜೂರರನ್ನು ಕೆಲಸದಿಂದ ತೆಗೆದು ಹಾಕಿದುದಕ್ಕಾಗಿಯೂ ಇನ್ನಿತರ ಮಜೂರ ಕೇಳಿಕೆಗಳನ್ನು ಸಲ್ಲಿಸದಿರುವುದಕ್ಕಾಗಿಯೂ ಆ ಕಾರ್ಖಾನೆಯ ಮಜೂರರು ಇದೇ ತಾ 9ರಿಂದ ಮುಷ್ಕರ ಹೂಡುವುದಾಗಿ ನೋಟೀಸು ಕೊಟ್ಟಿರುತ್ತಾರೆ. ಇದಕ್ಕಾಗಿ ಈ ಮಜೂರರ ಸಭೆಯೊಂದು ಶ್ರೀ। ಬಿ. ಎಸ್. ಭಾಸ್ಕರ ರೈಗಳ ಅಧ್ಯಕ್ಷತೆಯಲ್ಲಿ ಕಳೆದ ತಾ. 22ರಲ್ಲು ಜರಗಿತು. ಶ್ರೀಗಳಾದ ಕೆ. ಕೆ. ಸೆಟ್ಟಿ ಮತ್ತು ಬಿ. ಆರ್. ಕರ್ಕೇರರು ವ್ಯಾಪಲಿಕರ ವರ್ತನೆಯನ್ನು ಖಂಡಿಸಿ ಮಜೂರರ ಕೇಳಿಕೆಗಳನ್ನು ಸಮರ್ಥಿಸಿ ಮಾತನಾಡಿದರು.

**ಜಿಲ್ಲಾ ಬೋರ್ಡಿನ ಮುಂಗಡ ಪತ್ರದ ಸಾರಾಂಶ**—1949–50ನೆ ವರ್ಷದ ಪ್ರಾರಂಭದಲ್ಲಿ ರೂ. 2,51,020ರಷ್ಟು ಉಳಿತಾಯ. ಅಂದಾಜು ಪಟ್ಟಿಯಲ್ಲಿ ಈ ಸಂಖ್ಯೆಯು ರೂಪಾಯಿ 1,29,260 ಆಗಬಹುದೆಂದು ನಿರೀಕ್ಷಿಸಲಾಗಿತ್ತು. ಮೊದಲು ಊಹಿಸಿದ ರೂ. 7,56,180ರ ಬದಲಿಗೆ ರೂ. 8,25,590ರಷ್ಟು ತಿದ್ದಿದ ಮುಂಗಡ ಪತ್ರದಲ್ಲಿನ ಒಟ್ಟು ಆದಾಯವಾಗಿದೆ. ಮೂಲ ಮುಂಗಡ ಪತ್ರದಲ್ಲಿ ರೂ. 8,75,770 ವೆಚ್ಚವಾಗಬಹುದೆಂದು ಅಂದಾಜು ಮಾಡಿದ್ದರೂ ತಿದ್ದಿದ ಮುಂಗಡ ಪತ್ರದಲ್ಲಿನ ವೆಚ್ಚವು ರೂ. 10,25·710ರಷ್ಟಾಗಿದೆ. ಹೀಗೆ ಈ ಒಟ್ಟು ಆದಾಯಕ್ಕೆ 1949—50ನೆ ವರ್ಷದ ಪ್ರಾರಂಭ ಶಿಲ್ಕನ್ನು ಸೇರಿಸಿದರೆ ಇಡೀ ವರ್ಷದ ಆದಾಯವು ರೂ. 10,76,510 ಆಗುತ್ತದೆ. ಇದರಿಂದ ವೆಚ್ಚ ರೂ. 10,25,710ನ್ನು ಕಳೆದರೆ ಈ ವರ್ಷದ ತಿದ್ದಿದ ಮುಂಗಡ ಪತ್ರದಲ್ಲಿ ರೂ. 50,880ರಷ್ಟು ಉಳಿತಾಯವಾಗುತ್ತದೆ.

1950–51ನೆ ವರ್ಷದ ಅಂದಾಜುಪಟ್ಟಿಯಲ್ಲಿ ಪ್ರಾರಂಭ ಶಿಲ್ಕು ರೂ. 50,880. ಈ ವರ್ಷದ ಆದಾಯವು ರೂ. 9,05,980 ಎಂದೂ ವೆಚ್ಚವು ರೂ. 10,55,380 ಎಂದೂ ಅಂದಾಜು ಮಾಡಲಾಗಿದೆ. ಇದರಿಂದಾಗಿ ಈ ಅಂದಾಜು ಪಟ್ಟಿಯಲ್ಲಿ ರೂ. 98,507ರಷ್ಟು ಕೊರತೆಯಿದೆ.

**ಪ್ರಾಥಮಿಕ ಶಿಕ್ಷಣದ ಮುಂಗಡ ಪತ್ರದ ಸಾರಾಂಶ**- 1949–50ನೆ ವರ್ಷದಲ್ಲಿ ರೂ. 2,83,100ರಷ್ಟು ಕಡಿಮೆಯಾಗಬಹುದೆಂದು ಅಂದಾಜು ಮಾಡಿದರೂ ವರ್ಷದ ಪ್ರಾರಂಭದಲ್ಲಿ ರೂಪಾಯಿ 44,270ರಷ್ಟು ಉಳಿತಾಯವೇ ಆಗುವಂತಾಯಿತು. ಈ ವರ್ಷದ ಮೂಲ ಮುಂಗಡ ಪತ್ರದಲ್ಲಿ ರೂ. 9,75·220ರಷ್ಟು ಆದಾಯವಾಗಬಹುದೆಂದು ನಿರೀಕ್ಷಿಸಿದರೂ ಬಜೇಟಿನಲ್ಲಿ ಒಟ್ಟು ಆದಾಯವು ರೂಪಾಯಿ 12,03,500.

1950–51ನೇ ವರ್ಷದ ವೆಚ್ಚವು ರೂ 16,28,110 ಆಗಬಹುದೆಂದು ಊಹಿಸಿದ ರೂ ಒಟ್ಟು ವೆಚ್ಚ ರೂ. 15,96,670. ಈ ವರ್ಷದ ತಿದ್ದಿದ ಮುಂಗಡ ಪತ್ರದಲ್ಲಿ ಒಟ್ಟು ಆದಾಯವು ರೂ. 12,30,500 ಆಗಿರುವುದರಿಂದ ಈ ವರ್ಷದ ಕೊನೆಗಾಗುವ ರೂ. 321,900ರಷ್ಟರ ಕೊರತೆಯುಂಟಾಗುವುದು. 1950–51ನೆ ವರ್ಷದ ಮುಂಗಡ ಪತ್ರವು ರೂ. 3,21,900ರಷ್ಟರ ಕೊರತೆಯಿಂದಲೇ ಪ್ರಾರಂಭವಾಗುತ್ತದೆ. ಈ ವರ್ಷದ ಮುಂಗಡ ಪತ್ರದಲ್ಲಿ ಆದಾಯವು ರೂ 9,15,020 ಎಂದೂ ತಿದ್ದಿದ ಮುಂಗಡ ಪತ್ರದಲ್ಲಿ ಈ ಆದಾಯವು ರೂ 12,30,500 ಎಂದೂ ಇದೆ. ಪ್ರಾಥಮಿಕ ಶಿಕ್ಷಣದ ಸಾಮಾನ್ಯ ಲೆಖ್ಖದಲ್ಲಿನ ಒಟ್ಟು ವೆಚ್ಚವು ರೂ. 18,45,090 ಆ ಬಾಬ್ತಿನ ಒಟ್ಟು ಆದಾಯವು ರೂ. 9,15,020. ಆದುದರಿಂದ ಪ್ರಾಥಮಿಕ ಶಿಕ್ಷಣದ ಸಾಮಾನ್ಯ ವೆಚ್ಚದಲ್ಲೂ ರೂ. 12,51,970ರಷ್ಟರ ಕೊರತೆಯಿದೆ. ಕೊರತೆಯನ್ನು ಭರ್ತಿಮಾಡಿಕೊಳ್ಳುವುದಕ್ಕಾಗಿ ಮುಂಗಡಪತ್ರ ಸಮಿತಿಯು 1950–51ನೆ ವರ್ಷದಲ್ಲಿ ಎಲ್ಲಾ ಹೊಟೇಲುಗಳಿಗೆ ನಾಲ್ಕು ರೂಪಾಯಿಗಳಂತೆ ತೆರಿಗೆ ಹಾಕಬೇಕೆಂದೂ, ಇದರಿಂದಾಗಿ ರೂ. 8500 ಆದಾಯವಾಗಬಹುದೆಂದೂ, ಕಾಳುಗಳ ಅಂಗಡಿಗಳ ಲೈಸನ್ಸು ದರವನ್ನು ಒಂದು ರೂಪಾಯಿಯಿಂದ ಮೂರು ರೂಪಾಯಿಗೆ ಏರಿಸಬೇಕೆಂದೂ, ಕುಳುಕುಂದ ಮತ್ತು ಸೀತಾನದಿಗಳಲ್ಲಾಗುವ ಜಾನುವಾರು ಸಂತೇಟುಪ್ಪ ಜಾನುವಾರುಗಳ ತಲಾ ಒಂದರ ...ಯುರುವ ನಾಲ್ಕಾಣೆಯನ್ನು ಎಂಟಾಣೆಯಾಗಿಯೂ, ಎರಡಾಣೆಯನ್ನು ನಾಲ್ಕಾಣೆಯಾಗಿಯೂ ಏರಿಸಬೇಕೆಂದೂ ಸೂಚಿಸಿರುತ್ತದೆ. ಇದಲ್ಲದೆ ಬೋರ್ಡು ಶಾಲೆಗಳಲ್ಲಿ ಶಾಲಾ ಫೀಸಿನ ದರವನ್ನು ಪ್ರತಿ ಕಂತಿನಲ್ಲಿ ಈಗಿರುವುದಕ್ಕಿಂತ ಎಂಟಾಣೆ ಹೆಚ್ಚಿಸಬೇಕೆಂದೂ ಸೂಚಿಸಿರುತ್ತದೆ

### ನೋಟೀಸು

ಕೊಪ್ಪಾ ತಾಲ್ಲೂಕು ಅಬ್ಬಿಡ ಗ್ರಾಮದ ನಗ್ಗಾಪುರದಲ್ಲಿಯಿರುವ ಬೈಕಾಡಿ ಕೂಸಮ್ಮ ಸಡ್ತಿ ಮಕ್ಕಳು ಭಾಗಮ್ಮ ಸಡ್ತಿಯು ಯಿಾ ಮೂಲ್ಕ ಸರ್ವರಿಗೂ ತಿಳಿಯಪಡಿಸುವದೇನಂದ್ರೆ- ಸಡ್ತಿ ಕೂಸಮ್ಮ ಸಡ್ತಿರ ಮಗ ವ ನನ್ನ ಅಣ್ಣ ಅಣ್ಣಯ್ಯ ಸೆಟ್ರು ಕುಟುಂಬದ ಯಜಮಾನನೆಂಬ ಧೋರಣೆ ಮೇಲೆ ನಮ್ಮೆಲ್ಲರ ಯಿಷ್ಟಕ್ಕೆ ವಿರೋಧವಾಗಿ ವ ಕುಟುಂಬದ ಪ್ರಯೋಜನವನ್ನು ಯೆಣಿಸದೆ ಸ್ವಾರ್ಥಕ್ಕಾಗಿಯೂ ಇತರರ ಪ್ರೇರೇಪಣೆಯಿಂದಲೂ ಮಹಾಲಿಂಗಶೆಟ್ಟರ ಮೇಲೆ ಕುಟುಂಬದ ಹಕ್ಕಿನ ಆಸ್ತಿಗಳನ್ನು ಭೋಗ್ಯಾದಿ ಅದವಿನಿಂದ ಬಿಡಿಸಿಕೊಳ್ಳುವ ಉದ್ದೇಶ್ಯವಾಗಿ ಮಾಡಿದ ಉಡ್ಪಿ ಡಿ. ಮು. ಕೋರ್ಟು ಕ್ರಮನಂಬ್ರ 418'45 ನೇ ಡಿಕ್ರಿ ಜ್ಯಾವೇಜು ಕಟ್ಟುವ ಉದ್ದೇಶ್ಯವೆಂತಲೂ, ಆ ವ್ಯವಹರಣೆ ಬಾಬ್ತು ಖರ್ಚಿನ ಬಗ್ಯೆಂತಲೂ, ಕುಟುಂಬದ ಹಕ್ಕಿನ ಎಲ್ಲಾ ಆಸ್ತಿಗಳನ್ನು ಹೆಚ್ಚು ದರದ ಬಡ್ಡಿಯ ಮೇಲೆ ಬೋಡು ಮಾಡಿ, ಆ ಮೂಲ್ಕ ಆಸ್ತಿಗಳನ್ನೇ ಕಳಕೊಳ್ಳುವ ವಿಲೇವಾರಿಯಲ್ಲಿರುತ್ತಾರೆ. ಆ ಪ್ರಕಾರ ಕುಟುಂಬಕ್ಕೆ ಭೋಗ್ಯಾದಿ ಅಡವಿನ ಆಸ್ತಿಗಳನ್ನು ಬಿಡಿಸಿಕೊಳ್ಳುವ ಅವಶ್ಯವು, ಹಾಗೇ ಬಿಡಿಸಿಕೊಳ್ಳುವದರಿಂದ ಪ್ರಯೋಜನವು ಇರುವದಿಲ್ಲಾ. ಆದುದರಿಂದ ಕುಟುಂಬಕ್ಕೆ ನಷ್ಟವುಂಟುಮಾಡುವ ಯಿಾ ಕೆಲಸದಲ್ಲಿ ಯಾರಾದರೂ ಸೇರಿ ಸಡ್ತಿ ಅಣ್ಣಯ್ಯ ಸೆಟ್ರಿಗೆ ಸಾಲಕೊಟ್ಟಲ್ಲಿ ಅಂಥಾ ಸಾಲವು ಕುಟುಂಬವನ್ನಾಗಲೀ ಕುಟುಂಬದ ಆಸ್ತಿಗಳನ್ನಾಗಲೀ ಬದ್ಧಪಡಿಸತಕ್ಕದ್ದಲ್ಲಾ ಯೆಂಬದನ್ನು ಯಿಾ ಮೂಲ್ಕ ತಿಳಿಯಪಡಿಸಿದ್ದೇನೆ.

● ॥ ಈ ಎಡಗೈ ಹೆಬ್ಬೆಟ್ಟಿನ ಗುರುತು ಮತ್ತು ಈ ಎಂಡು ಗೆರೆ ಸದರಿ ಭಾಗಮ್ಮ ಶೆಡ್ತಿರ ರುಜು. ಸದರಿಯವರ ಮಗ ಅಂತಯ್ಯ ಸೆಟ್ಟಿ ಬರಹ.

ಮೊಕ್ಕಾಂ ನಗ್ಗಾಪುರ
ತಾರೀಕು 30-12-49


— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀವಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

**ಆಯುರ್ವೇದ ಔಷಧಾಲಯ, ಗದಗ-ಸಿಟಿ-**

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ ವಿಜಾಪುರ— ಬಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ... ಕೆಮಿಸ್ಟ, ಹಾವೇರಿ ಬ್ಯಾಡಗಿ



**ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ**

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ವರೆ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳಿಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

**ಆಯುರ್ವೇದ ಔಷಧಾಲಯ, ಗದಗ-**



**ಮೂಲ್ಕಿ ಬೇಂಕ್,**

ಲಿಮಿಟೆಡ್, ಮೂಲ್ಕಿ

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

**The Moolky Bank Ltd.,**
**Moolky, S. K.**



ಸಾಗುವಳಿದಾರರು ಕೊಡುವ ದೃಢಪತ್ರಿಕೆ ಮತ್ತು ಮನೆವಾರ್ತೆ ಖರ್ಚಿಗೆ ಗೇಣಿ ಬಿಕ್ಕಿ ಪಡೆಯುವರೆ ರೈತರು ಕೊಡತಕ್ಕ ಅರ್ಜಿ ವಗೈರೆ ಫಾರ್ಮುಗಳು ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

# ದೇಶೀಯರಾಜರ ದುಂದುಗಾರಿಕೆ!

## ಸಂಸ್ಥಾನಾಧೀಶರೂ ಮತ್ತವರ ಜೀವನ ನೀತಿಯು ಭೋಗಲಾಲಸೆಯೂ.

«ಬ್ರಿಟಿಷ್ ಹಿಂದುಸ್ಥಾನದ ಸಂಸ್ಥಾನಾಧೀಶರಿಗೆ ಕೈಕೊಟ್ಟಿದೆ.» ಎಂಬ ಶಿರೋನಾಮೆಗಡಿಯಲ್ಲಿ ಪ್ರಸಿದ್ಧ ಪತ್ರಿಕೋದ್ಯಮಿ ಮಿ। ಡಬ್ಲ್ಯು ಫೋರ್ಡ್‌ರವರು ಪಕಡಿಸಿದ ಹಿಂದೀ ಲೇಖನ ಸಂಸ್ಥಾನಾಧಿಪತಿಗಳು ಅನುಭೋಗಿಸುತ್ತಿದ್ದ ಸುಖ ಸಂಪತ್ತುಗಳು ಈಗಿನ ಸುಧಾರಿತ ವಾತಾವರಣದಲ್ಲಿ ಸಂಭವಸಾಧ್ಯವಾದ ಸಂಗತಿಯಂತಾಗಿದೆಎಂದು ಬರೆಯುತ್ತಾರೆ.

"ಪಂಡಿತ ನೆಹರೂರವರ ಲೇಖನಿಯು ಒಂದು ರೇಖೆಯಿಂದ ಈಗ ಈ ವೈಭೋಗದ ಯುಗವೊಂದು ಕೊನೆಗೊಳ್ಳುವಂತಾಯಿತು, ಜಗತ್ತಿನ ಅಸಮಾನ ಧನ ದುರ್ವ್ಯಯಗಳಾಗಿದ್ದ ಅಲ್ಲಿನ ದೇಶಿ ರಾಜರಿಗೆ ಈಗ ಕೃಶಾವಸ್ಥೆ ಬಂದಿದೆ" ಎಂದವರು ಬರೆಯುತ್ತಾರೆ. ಮಿ। ಫೋರ್ಡ್‌ರ ಸಂಪೂರ್ಣ ಲೇಖನದ ಸಾರಾಂಶ ಹೀಗಿದೆ:

ನಿಜಾಮರ ಬಳಿ ಒಂದು ದೊಡ್ಡ ಈಜುಕೊಳವನ್ನು ತುಂಬುವಷ್ಟು ವೈಢೂರ್ಯಗಳಿವೆಂದು ಅದರ ಒಂದು ಯಾದಿ ತೆಗೆಯಲು ಕರೆಯಲ್ಪಟ್ಟ ಆಭರಣ ತಜ್ಞ ಜರ್ಮನರೊಬ್ಬರು ತಿಳಿಸಿದರು.

ಇಪ್ಪತ್ತು ವರ್ಷಗಳ ಹಿಂದೆ ಒಮ್ಮೆ ನಾನು ನಿಜಾಮರ ಅರಮನೆಯ ಪ್ರಮದ ಉದ್ಯಾನವನ್ನೊಂದರಲ್ಲಿ ನೋಡಿದ ದೃಶ್ಯವು ಬಹುಶಃ ನನ್ನ ಸಂಭವಿಸಲಿಕ್ಕಿಲ್ಲ. ಅಕ್ಷಿನ ಕೊಳವೊಂದು ... ನ್ನು ಆರಿಸಿ ಗೋಣಿಗಟ್ಟಲೆಯಲ್ಲಿ ... ಗಳನ್ನು ಅದರಲ್ಲಿ ತುಂಬಿಸುತ್ತಿ ... ತಮ್ಮ ಸಂಪತ್ತಿನಿಂದ ಕಣ್ಣಿಗೆ ಹಬ್ಬ ... ಒಂದರು ನಿಜಾಮರ ನವರತ್ನ ಭಂಡಾರದ ಯಾದಿಯೊಂದನ್ನು ತಯಾರಿಸಲು ತಜ್ಞರಿಗೆ ಮೂರು ವರ್ಷಗಳು ಹಿಡಿದುವಂತೆ. ನಿಜಾಮರು ತಮ್ಮ ಖಾಸಗಿ ಕಚೇರಿಯಲ್ಲಿ ಪತ್ರಗಳ ಭಾರಕ್ಕಿಡಲು ದೊಡ್ಡದೊಂದು ಸಾಣೆಗೆ ಹಿಡಿಯದ ಕಚ್ಚಾ ವಜ್ರವೊಂದನ್ನು ಉಪಯೋಗಿಸುವರು.

### ಮದ್ಯದ ಮಳೆ!

ಬಿಕಾನೇರದ ಮಹಾರಾಜರು ಒಮ್ಮೆ 80 ಐರೋಪ್ಯ ಅತಿಥಿಗಳನ್ನು ಒಂದು ಔತಣಕ್ಕೆ ಆಮಂತ್ರಿಸಿದ್ದರು. ಪ್ರತಿಯೊಬ್ಬ ಗೃಹಸ್ಥನಿಗೆ ಒಂದೊಂದು ಬಂಗಾರದ ಸಿಗರೇಟ್ ಕರಡಿಗೆಯೂ, ಪ್ರತಿಯೊಬ್ಬ ಮಹಿಳೆಗೆ (ಕೂಟದಲ್ಲಿ 11 ಐರೋಪ್ಯ ಸ್ತ್ರೀಯರಿದ್ದರು) ಒಂದೊಂದು ವಜ್ರದ ಬೆಂಡೋಲೆಯೂ ಪಾರಿತೋಷಕ ಕೊಡಲ್ಪಟ್ಟಿತು.

ಕೆಲ ವರ್ಷಗಳ ಹಿಂದೆ ಬಾರಿಯದ ಮಹಾರಾಜರ ಸ್ವಂತ ಮದುವೆಗೆ 25 ಲಕ್ಷ ಪವನು ಮೌಲ್ಯದ ಉಡುಗೊರೆಗಳು ಬಂದಿದ್ದುವು. ಅವನ್ನು ಕಾಯಲು 400 ಸಶಸ್ತ್ರ ಸೈನಿಕರನ್ನು ಇಡಲಾಗಿತ್ತು.

ವರ್ಷಕ್ಕೆ 190 ಲಕ್ಷ ಪವನು ಉತ್ಪತ್ತಿಯುಳ್ಳ ಒಬ್ಬ ಸಂಸ್ಥಾನಾಧೀಶನು ತನ್ನ ಮಗಳ ಮದುವೆಗೆ ಒಂದು ವರ್ಷದ ಉತ್ಪತ್ತಿಯನ್ನೆಲ್ಲ ವ್ಯಯಿಸಿದ್ದನು. ಇದರಲ್ಲಿ ಹೆಚ್ಚಿನ ಖರ್ಚು ಅವನು ಅತಿಥಿಗಳ ಸೌಕರ್ಯಕ್ಕಾಗಿ ಏರ್ಪಡಿಸಿದ ಒಂದು ಮದ್ಯದ ನಳ್ಳಿಗೇ ಆಗಿತ್ತು. ಆ ನಳ್ಳಿಯಿಂದ ಅತ್ಯುತ್ತಮ ಫ್ರೆಂಚ್ ಶೆಂಪೇನ್ ಮದ್ಯವು ಸೀಪರ್ಸನಿಯಾಗಿ ಸೂಸಲ್ಪಡುತಿತ್ತು. 24 ತಾಸುಗಳ ತನಕ ಇದು ಬಿಡದೆ ಮದ್ಯವನ್ನು ಸುರಿಸಿತು. ಅದೇ ರೀತಿ ಅಂದಿನ ಮದುವೆ ಮೆರವಣಿಗೆಯು ಅರಮನೆಯ ದ್ವಾರವನ್ನು ಪ್ರವೇಶಿಸುವಾಗ ಅತೀ ಮೌಲ್ಯದ ಫ್ರೆಂಚ್ ಸುಗಂಧ ದ್ರವ್ಯಗಳ ಮಳೆಯೇ ಸುರಿಸಲ್ಪಟ್ಟಿತು

### ನಾಯಿಗಳ ಲಗ್ನ ಸಮಾರಂಭ

ಮತ್ತೊಬ್ಬ ಮಾಂಡಲಿಕನು ತನ್ನ ಬೇಸಗೆ ಕಾಲದ ಅರಮನೆಯನ್ನೆಲ್ಲ ಬಂಗಾರದಿಂದಲೇ ರಚಿಸಿದ್ದನು ನೀರಿನ ಕೊಳವೆಗಳು ಕೂಡ ಬಂಗಾರದವಾಗಿದ್ದುವು ರಾಜಧಾನಿಯಿಂದ ಬೆಟ್ಟದ ಮೇಲಿರುವ ಆ ಅರಮನೆಗೆ ಹೋಗುವ ಮಾರ್ಗವನ್ನೆಲ್ಲ ಚಂದ್ರಕಾಂತ ಶಿಲೆಯಿಂದ ಮುಚ್ಚಿಸಿಬಿಟ್ಟಿದ್ದನು. ಈಗ ಆ ಚಿನ್ನದರಮನೆಯ ಮಾರಾಟ ಮಾಡಲು ಆ ಅರಸನು ಪ್ರಯತ್ನಿಸುತ್ತಿರುವನು; ಇಲ್ಲವೇ ಅದು ಬೇಗನೆ ಜನತಾ ಸರಕಾರದ ವಶವಾಗುವುದು.

ಜುನಾಗಡದ ನವಾಬನು ಪಾಕಿಸ್ತಾನಕ್ಕೆ ಓಡಿ ಹೋಗುವ ಮೊದಲು ತನ್ನ ಅರಮನೆಯಲ್ಲಿ ತನ್ನ ಪ್ರೀತಿಯ ನಾಯಿಗಳೆರಡರ ವಿವಾಹ ಮಹೋತ್ಸವವನ್ನು ನೆರವೇರಿಸಿದ್ದನು. ಎಂಟು ಸಾವಿರ ಅತಿಥಿಗಳು ಈ ಸಮಾರಂಭಕ್ಕೆ ಆಮಂತ್ರಿತರಾಗಿದ್ದರು, ಪ್ರತಿಯೊಬ್ಬರಿಗೂ ಆ ಸಂದರ್ಭದಲ್ಲಿ ಬಹುಮಾನವನ್ನು ಕೊಡಲಾಗಿತ್ತು.

### ವಿಪುಲ ಸಂಪತ್ತಿನ ಗನಿ

ಜೈಪುರದ ಮಹಾರಾಜರ ವಶದಲ್ಲಿ ಶತಮಾನಗಳಿಂದ ಯಾರೂ ನೋಡಿರದ ಸಂಪತ್ತಿನ ರಾಶಿಯಿದೆ. ಇದನ್ನು ಒಂದು ವ್ಯಾಘ್ರ ದುರ್ಗದಲ್ಲಿಡಲಾಗಿದೆ. ಇದನ್ನು ಮಹೋಗ್ರ ವಂಶದ ರಾಜಪೂತರು ಕಾವಲು ಮಾಡುತ್ತಿರುವರು ಆ ಸಂಸ್ಥಾನದ ಮಹಾರಾಜನು ಮೃತನಾದಾಗ ಆ ದುರ್ಗದಿಂದ ಅಮೂಲ್ಯವಾದ ಮೂರು ಆಭರಣಗಳನ್ನು ಪಟ್ಟಕ್ಕೇರುವ ರಾಜನು ಚುನಾಯಿಸಬಹುದು.

### ದುಃಖಿತ ದಿಲ್ಲಿಯ ಅಂಗಡಿಗಾರರು

ಹೊಸ ದಿಲ್ಲಿಯ ಅಂಗಡಿಗಾರರು ಇಂದು ಭಾರತದ ಪ್ರಜೆಗಳಲ್ಲಿ ಅತ್ಯಂತ ದುಃಖಿತ ಜನರೆಂದೆನಿಸಿಕೊಳ್ಳುವರು. ಪ್ರತಿ ವರ್ಷ ಈ ಸಂಸ್ಥಾನಾಧೀಶರು ವ್ಯಾಸರಾಯರಿಂದ ದಿಲ್ಲಿಗೆ ಆಮಂತ್ರಿತರಾಗುತಿದ್ದರು, ಪೋಂಜರಿಗೆಯ ಉಡುಪುಗಳನ್ನುಧರಿಸಿ,ಅಮೂಲ್ಯಾಭರಣಗಳ ಮುಂಡಾಸುಗಳನ್ನು ತೊಟ್ಟು, ನಾನಾ ತರದ ಪದಕಗಳನ್ನು ತೂಗಾಡಿಸಿ ಇವರ ಪರಿವಾರವು ಸಾಲು ಕಾರುಗಳಲ್ಲಿ ವ್ಯಾಸರಾಯ ಭವನಕ್ಕೆ ತೆರಳುತಿತ್ತು. ಈ ರಾಜರುಗಳು ತಮ್ಮೊಡನೆ ದೀರ್ಘ ಪರಿವಾರವನ್ನೂ ತರುತ್ತಿದ್ದರು. ಒಮ್ಮೊಮ್ಮೆ ಒಬ್ಬ ರಾಜನು ಅಲ್ಲಿಯ ಅತ್ಯಾಧುನಿಕ ಅಂಗಡಿಯೆದುರಿನಲ್ಲಿ ಕಾರು ನಿಲ್ಲಿಸಿ ಖರೀದಿಗಿಳಿಯುವನು. ಅಂಗಡಿಗಾರರಾದರೊ ಇವರನ್ನು ಕಂಡೊಡನೆ ತಮ್ಮ ವಸ್ತುಗಳ ಬೆಲೆಯನ್ನು ಮುಮ್ಮಡಿ ನಾಲ್ಮಡಿ ಹೆಚ್ಚಿಸುತಿದ್ದರು. ತಮ್ಮ ರಾಜಗಿರಾಕಿಗಳು ಬೆಲೆಯ ಚೌಕಸಿ ಮಾಡುವವರಲ್ಲವೆಂದವರಿಗೆ ಖಾತ್ರಿಯಿತ್ತು.

ನಾನೊಂದು ಸಲ ನೋಡುತಿದ್ದ ಹಾಗೆ ಒಬ್ಬ ರಾಜನು 13,350 ಪವನು ಬೆಲೆಯ ಸುಗಂಧ ದ್ರವ್ಯಗಳನ್ನು ಕೊಂಡನು, ಮತ್ತೊಬ್ಬ ರಾಜನು ಒಂದು ಮರದ ಸಾಮಾನು ತಯಾರಿಸುವ ಅಂಗಡಿಯನ್ನುಹೊಕ್ಕು ಐಳೇ ನಿಮಿಷದ ಪರಿಶೀಲನಾನಂತರ 78 ಸಾವಿರ ಪವನಿನ ವಸ್ತುಗಳನ್ನು ತಯಾರಿಸಿಕೊಡಲು 'ಆರ್ಡರ'ನ್ನು ಇತ್ತನು.

### ಗತ ವೈಭವ

ಇಂದು ದಿಲ್ಲಿಯು ಈ ಅರದೀ ಕತೆಯ ವೈಭವವನ್ನು ಕಳೆದುಕೊಂಡಿದೆ. ಇಂದು ಯಾವ ಸಂಸ್ಥಾನಾಧೀಶರೂ ಗವರ್ನರ್ ಜನರಲ್ಲರಿಂದ ಸತ್ಕರಿಸಲ್ಪಡಲು ಅಲ್ಲಿಗೆ ಬರುತ್ತಿಲ್ಲ. ಅವರಿಗೆ ಇಂದು ದಿಲ್ಲಿಗೆ ಬರುವ ಏನಾದರೂ ಕೆಲಸವಿದ್ದರೆ ಅದು ತಮ್ಮ ಸ್ವಂತ ಆಸ್ತಿಯ ವಿಷಯ ಇಲ್ಲವೆ ಜೀವನಾಶನದ ಕುರಿತು ಸಂಸ್ಥಾನ ಖಾತೆಯ ಅಧಿಕಾರಿಗಳೊಡನೆ ವಿಚಾರ ವಿನಿಮಯ ಮಾಡಲಿಕ್ಕೆ ಮಾತ್ರ ಅದು ಕೂಡಾ ಇಂದವರು ತಮ್ಮ ಗುರುತನ್ನು ಮರೆಸಿಯೇ ಅಲೆದಾಡುವರು.

ಅಲ್ವಾರಿನ ಮಹಾರಾಜರು ದಿಲ್ಲಿಯಲ್ಲಿ ಅತ್ಯಾಧುನಿಕ ಹೋಟೆಲೊಂದನ್ನು ಸ್ಥಾಪಿಸಿದ್ದರು. ಅವರಿಗೆ ಸ್ನೇಹಿತರನ್ನು ಔತಣಗಳಿಂದ ಸತ್ಕರಿಸಬೇಕೆಂದು ಆಶೆಯಾದರೆ ಅದು ಮುಗಿಯುವ ತನಕ ಹೋಟೆಲು ಸಾರ್ವಜನಿಕಕ್ಕೆ ಮುಚ್ಚಲ್ಪಡುತಿತ್ತು. ಈಚೆಗೆ ಈ ರಾಜರು ದಿಲ್ಲಿಗೆ ಬಂದಾಗ ಅವರ ಆಪ್ತ ಕಾರ್ಯದರ್ಶಿಗಳು, ಕಾರನ್ನು ಬಿಡುತಿದ್ದ ಒಬ್ಬ ಸೇವಕನು ಮಾತ್ರ ಒಳಿಯುಲ್ಲಿದ್ದ.

ಅನೇಕ ರಾಜರು ದಿಲ್ಲಿಯಲ್ಲಿನ ತಮ್ಮ ಅರಮನೆಗಳನ್ನು ಮಾರಾಟಕ್ಕೊ ಬಾಡಿಗೆಗೊ ಕೊಡುತಿದ್ದಾರೆ ಅಂತೂ ದಿಲ್ಲಿಯ "ಸುವರ್ಣಯುಗವು ಬ್ರಿಟಿಷರ ನಿರ್ಗಮನ ನಿಧಾರವಾದಂದೇ ಅಂತ್ಯವಾಗಿದೆ". ಹೀಗೆಂದೊಬ್ಬ ದಿಲ್ಲಿ ಅಂಗಡಿಗಾರನು ನನ್ನೊಡನೆ ಹೇಳಿ ನಿಟ್ಟುಸಿರು ಬಿಟ್ಟ.

(ಸ್ವ. ಮಾ.)


# ಗೆಲ್ಲಿರಿ ರೂ. ೫,೦೦೦

ನರಗಳ ದೌರ್ಬಲ್ಯತೆ,ರಕ್ತವಿಹೀನತೆ, ಕ್ಷೀಣತೆ, ಆಯಾಸಯುತರಾಗಿ, ಕುಂದಿದವರಾಗಿ, ಮುಂಗೋಪವುಳ್ಳವರಾಗಿರುವಿರಾ? ನೀವು ಯೌವನವಂತ ಯುವಕರಾಗಿ ಕಾಣಿಸಲಾಶಿಸುವಿರಾ? ಯೌವನದ ಕಾಂತಿಯು ನಿಮ್ಮ ಕಣ್ಣುಗಳಲ್ಲಿ ಮತ್ತು ಮುಖ ವರ್ಚಸ್ಸಿನಲ್ಲಿ ತೋರ್ಪಡಿಸಿಕೊಳ್ಳುವ ಮಹದಾಸೆಯು ನಿಮ್ಮ ಅಂತರಂಗದ ಹೆಬ್ಬಯಕೆಯಲ್ಲವೇ ಈ ಆಸೆಯು ನೆರವೇರಲು ಅಸಾಧ್ಯವೆಂದು ಅಧೈರ್ಯವನ್ನು ತೊರದೂಡಿ ಇಂದೇ ಪುನರ್ ಯೌವನ ಮಾತ್ರೆಗಳು ಮತ್ತು ಎಣ್ಣೆಯನ್ನು ಉಪಯೋಗಿಸಿರಿ.

ಈ 'ಪುನರ್‌ಯೌವನ ಮಾತ್ರೆ ಮತ್ತು ಎಣ್ಣೆ'ಯು ನರಗಳಿಗೆ ಅದ್ಭುತ ಶಕ್ತಿಯನ್ನು ಕೊಟ್ಟು ಜೀರ್ಣಶಕ್ತಿಯನ್ನು ಹೆಚ್ಚಿಸಿ ನರಗಳನ್ನು ಶಕ್ತಿಯುತರನ್ನಾಗಿ ಮಾಡುವುದಲ್ಲದೆ, ಯೌವನದ ಹುರುಪು ದೇಹದಲ್ಲಿ ಉಕ್ಕುವುವು, ಈ ಮಾತ್ರೆಗಳು ಯೌವನ ಪುನರಾಗಮನಕ್ಕೆ ಉತ್ತಮ ಸಹಕಾರಿಯಲ್ಲವೇ ದೇಹಾರೋಗ್ಯ, ಮಹತ್ವ ಪ್ರಾಣಶಕ್ತಿ ಇವುಗಳಿಗೆ ನೆರವಿತ್ತು ತೇಜೋವಂತರನ್ನಾಗಿ ಮಾಡುವುದು. ಈ ಶಕ್ತಿವರ್ಧಕ ಮಾತ್ರೆಗಳು ಭಾರತದ ಅನೇಕ ಪ್ರದರ್ಶನಗಳಲ್ಲೂ ಮತ್ತು ಇಟಲಿ ದೇಶದಲ್ಲಿ ನಡೆದ ಅಂತರಾಷ್ಟ್ರೀಯ ವಸ್ತು ಪ್ರದರ್ಶನದಲ್ಲಿಯೂ ಪ್ರದರ್ಶಿತವಾಗಿ, ಶ್ರೇಷ್ಠತೆಯ ಬಗ್ಗೆ ಬಹುಮಾನ ಪತ್ರಗಳನ್ನು ಪಡೆದಿವೆ ಅನೇಕ ವೈದ್ಯ ಪ್ರವೀಣರು ಈ ಅಮೂಲ್ಯ ಪರಿಶೋಧನೆಯನ್ನು ಪರೀಕ್ಷಿಸಿ ಮೆಚ್ಚಿರುವರು. ಈ ಔಷಧಿಯ ಖ್ಯಾತಿ ಮತ್ತು ಪರಿಣಾಮದ ಬಗ್ಗೆ ಈ ವರವಿಗೂ ನಮಗೆ ಬಂದಿರುವ ಮೆಚ್ಚುಗೆಯ ಓಲೆಗಳು ಸುಳ್ಳೆಂದು ಸಾಬೀತು ಮಾಡುವವರಿಗೆ ನಗದು ೫೦೦೦ ರೂಪಾಯಿ ಬಹುಮಾನ ಕೊಡಲಾಗುತ್ತೆ.

ಪುನರ್ ತಾರುಣ್ಯ ಮಾತ್ರೆಗಳು:— ಬೆಲೆ ರೂ. ೫—೦—೦
ಪುನರ್ ತಾರುಣ್ಯ ತೈಲ ಬೆಲೆ ರೂ. ೫—೮—೦

ನಿಷ್ಪ್ರಯೋಜಕವೆಂದು ಸಾಬೀತಾದರೆ ಹಣ ವಾಪಸ್

ನಮ್ಮ ಲಂಡನ್ ನಗರದ ಪ್ರತಿನಿಧಿ:—

ಮೆಸರ್ಸ್ ಯಂಗ್ ಅಂಡ್ ಹೊವರ್ಡ್, ಲಿಮಿಟೆಡ್, ಲಂಡನ್ ಇ. ಸಿ. ೨

ನಿಮ್ಮ ಅವಶ್ಯಕತೆಗಾಗಿ

ದಾರುಲ್-ಷಫಾ ಗೋಲಿಯನ್ (ರಿಜಿಸ್ಟರ್ಡ್)

N.U. ಬಟಾಲ, ಈಸ್ಟ್ ಪಂಜಾಬ್, [ಇಂಡಿಯಾ]

**DAR-UL-SHAFA GOLIAN** [Regd]

N. U. BATALA, E. Punjab (India)

ಸ್ಥಳೀಯ ಮಾರಾಟಗಾರರು:

ಶ್ರೀ ಗಿರಿಜಾ ಮೆಡಿಕಲ್ ಸ್ಟೋರ್ಸ್

ಅಕ್ಕಾಟ್ ಶ್ರೀನಿವಾಸಾಚಾರ್ಯರ ಬೀದಿ, ಬೆಂಗಳೂರು ಸಿಟಿ.



# ವಿವಿಧ ಪಾತ್ರೆಗಳು



...ವಿಧ ತಾಮ್ರ, ಹಿತ್ತಾಳೆ, ಕಂಚು ... ಗಳೂ ... ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ






Approved firm by the Govt. of Mysore Certificated by the Agent of the Govt of Cylone & Indian.





ಶ್ರೀ ಕೊರಡ್ಕಲ್ ಶ್ರೀನಿವಾಸ ರಾಯರ

# 'ಸುಲಭದಲ್ಲಿ ಇಂಗ್ಲಿಷ್'

(ENGLISH MADE EASY)

ಮನೆಯಲ್ಲಿ ನೀವಾಗಿ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.

ಬೆಲೆ: ೧—೮—೦

ಡಾಕ್ಟರ್ ಕೊರಡ್ಕಲ್ ವೆಂಕಟಪ್ಪಯ್ಯರ

# 'ಮನೆ ಮದ್ದು'

(HOME REMEDIES)

೨೦೦ ಕಾಹಿಲೆಗಳಿಗೆ ಮನೆಯಲ್ಲೇ ಮಾಡಿಕೊಳ್ಳಬಹುದಾದ ೧೦೦೦ ಮದ್ದುಗಳ ವಿವರವಿರುವ ಪುಸ್ತಕ. ಬೆಲೆ: ರೂ. ೨

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ,
ಉಡುಪಿ.

ನವಯುಗ ಪ್ರೆಸ್, ಉಡುಪಿ.

## ಜನಸಂಖ್ಯೆ ಮತ್ತು ಆಹಾರೋತ್ಪತ್ತಿ

[೧೯೪೯ನೆಯ ಆಗಸ್ಟ್, ಸೆಪ್ಟೆಂಬರುಗಳಲ್ಲಿ ಇಂಗ್ಲೆಂಡಿನಲ್ಲಿ ನಡೆದ "ಬ್ರಿಟಿಷ್ ಅಸೋಸಿಯೇಷನ್ ಫಾರ್ ದಿ ಅಡ್ವಾನ್ಸ್‌ಮೆಂಟ್ ಆಫ್ ಸಯನ್ಸ್" ಎಂಬ ಸಂಸ್ಥೆಯು ಸಭೆಯಲ್ಲಿ ಸರ್ ಜಾನ್ ರಸ್ಸೆಲ್ ಎಂಬ ವಿಜ್ಞಾನ ಶೋಧಕರು ಕೊಟ್ಟ ಅಧ್ಯಕ್ಷ ಭಾಷಣದಿಂದ.]

ಭೂಪ್ರಪಂಚದಲ್ಲಿ ಈಗ ವಾಸವಿರುವ ಮನುಷ್ಯ ಸಂಖ್ಯೆ ಒಟ್ಟು ೨೩೦ ಕೋಟಿ ಎಂದು ಅಂದಾಜಾಗಿದೆ. ಈ ಸಂಖ್ಯೆ ಕಳೆದ ೧೦೦ ವರ್ಷಗಳಲ್ಲಿ ವರ್ಷವೊಂದಕ್ಕೆ ಸರಾಸರಿ ೨ ಕೋಟಿಯಂತೆ ಬೆಳೆದು ಬಂದದ್ದೆಂದು ಲೆಕ್ಕ ಮಾಡಿರುವವರು ಹೇಳುತ್ತಾರೆ. ಇದನ್ನು ಗಣಿಸಿ ನೋಡಿದರೆ ಘಂಟೆಯೊಂದಕ್ಕೆ ...೦೦ರಂತೆ, ಅಥವಾ ಮಿನಿಟ್ ಒಂದಕ್ಕೆ ...ರಂತೆ, ಅಥವಾ ಮೂರು ಸೆಕೆಂಡಿಗೆ ೨ರಂತೆ, ಹಗಲೂ ರಾತ್ರಿಯೂ ಎಡೆಬಿಡದೆ ಪ್ರಜಾಭಿವೃದ್ಧಿಯಾಗಿದೆಯೆಂದು ಗೊತ್ತಾಗುತ್ತದೆ. ವೈದ್ಯ ಸಂಧಾನಗಳಲ್ಲಿಯೂ ಸಮಾಜ ಸ್ವಾಸ್ಥ್ಯಕ್ಕೆ ಸಂಬಂಧಪಟ್ಟ ಏರ್ಪಾಟುಗಳಲ್ಲಿಯೂ ಪರಿಷ್ಕಾರಗಳು ಇನ್ನೂ ಹೆಚ್ಚಿದಂತೆಲ್ಲ ಪ್ರಜೋತ್ಪತ್ತಿಯು ವೇಗ ಇನ್ನೂ ಹೆಚ್ಚಾಗಲಿದೆ.

ಆದರೆ ಹೀಗೆ ಪ್ರಜಾಭಿವೃದ್ಧಿಯಾಗಿರುವುದು ಎಲ್ಲ ದೇಶಗಳಲ್ಲೂ ಒಂದೇ ಸಮಾನವಾಗಿಲ್ಲ. ನಾಗರಿಕತೆಯಲ್ಲಿ ಮುಂದೆ ಬಂದಿರುವ ದೇಶಗಳಲ್ಲಿರುವುದಕ್ಕಿಂತ ಹಿಂದುಳಿದಿರುವ ದೇಶಗಳಲ್ಲಿ ಅಭಿವೃದ್ಧಿಯು ವೇಗ ಜೋರಾಗಿದೆ.

ನಾನಾ ಭೂಭಾಗಗಳಲ್ಲಿ ಭೂಗುಣ ವಾಯುಗುಣ ಮೊದಲಾದ ಕಾರಣಗಳಿಂದ ಜನಸ್ತೋಮದ ಒತ್ತಡವು ಒಂದೇ ಸಮನಾಗಿಲ್ಲದೆ ಹೆಚ್ಚುಕಡಮೆಯಾಗಿರುವುದೂ, ಆಹಾರೋತ್ಪತ್ತಿಯ ವಿಚಾರದಲ್ಲಿ ನಾವು ಜ್ಞಾಪಕದಲ್ಲಿರಿಸಿಕೊಳ್ಳಬೇಕಾದ ಸಂಗತಿ. ಈ ಸಂದರ್ಭದಿಂದ ಆಹಾರದ ಉತ್ಪತ್ತಿಯ ಪರಿಮಾಣವೂ ಉಪಯೋಗದ ಪರಿಮಾಣವೂ ದೇಶದಿಂದ ದೇಶಕ್ಕೆ ವ್ಯತ್ಯಾಸವಾಗುತ್ತದೆ.

ಭೂಮಂಡಲದಲ್ಲಿ ನೆಲವಾಗಿರುವ ಭಾಗ ೩೫೭೦ ಕೋಟಿ ಎಕರೆಯೆಂದು ಅಂದಾಜಾಗಿದೆ. ಆದರೆ ಆ ವಿಸ್ತೀರ್ಣದಲ್ಲಿ ಸುಮಾರು ೧,೧೦೦ ಕೋಟಿ ಎಕರೆಗಳಷ್ಟು ಮಾತ್ರ ವಾಯುಗುಣದ ದೃಷ್ಟಿಯಿಂದ ವ್ಯವಸಾಯಕ್ಕೆ ಅನುಕೂಲವಾದದ್ದೆಂದು ಅಂದಾಜಾಗಿದೆ. ಈ ಕೃಷಿಯೋಗ್ಯವೆನಿಸಿರುವ ಭಾಗದಲ್ಲಿಯೂ ಬಹು ಪ್ರದೇಶಗಳು ಸದ್ಯಕ್ಕೆ ಮನುಷ್ಯನ ಕೈಗೆ ಅಸಾಧ್ಯವಾದುವಾಗಿವೆ. ಈಗ ವಾಸ್ತವವಾಗಿ ವ್ಯವಸಾಯದಲ್ಲಿರುವ ಭೂಮಿಯು ಒಟ್ಟು ವಿಸ್ತೀರ್ಣ ಸುಮಾರು ೩೦೦ ಕೋಟಿ ಎಕರೆಗಳಿಂದ ೪೦೦ ಕೋಟಿ ಎಕರೆಗಳ ಒಳಗೆ ಎಂದು ತೋರುತ್ತದೆ; ಎಂದರೆ, ಭೂಮಂಡಲದ ಒಟ್ಟು ನೆಲದ ವಿಸ್ತಾರದಲ್ಲಿ ಶೇಕಡಾ ೭ರಷ್ಟು ಅಥವಾ ೧೦ರಷ್ಟು ಮಾತ್ರ ಈಗ ಬೆಳೆ ಬೆಳೆಯುತ್ತದೆ. ಇದರಲ್ಲಿ ಶೇಕಡ ೮೫ರಷ್ಟು ಅಥವಾ ೯೦ರಷ್ಟು ಭಾಗ ಆಹಾರದ ಬೆಳೆ; ಮಿಕ್ಕದ್ದು [ಹತ್ತಿ, ಸಣಬು ಮೊದಲಾದ] ಕಾರ್ಖಾನೆಗಳ ಬೆಳೆ.

ಒಟ್ಟು ಪ್ರಪಂಚದ ಲೆಕ್ಕದಲ್ಲಿ ಒಬ್ಬ ಮನುಷ್ಯನಿಗೆ ಆಹಾರೋತ್ಪತ್ತಿಯ ಜಮೀನು ಈಗ ಸರಾಸರಿ ಒಂದೂವರೆ ಎಕರೆಯಷ್ಟು ಇವೆಯೆಂದು ಗೊತ್ತಾಗಿದೆ. ಈ ವಿಸ್ತಾರ ಒಬ್ಬ ಮನುಷ್ಯನ ಆಹಾರಕ್ಕೆ ಸಾಕೆಂದು ತೋರುತ್ತದೆ. ಹವಾಮಾನದ ದೃಷ್ಟಿಯಿಂದ ಭೂಮಂಡಲದ ನೆಲದಲ್ಲಿ ತಲೆಯೊಂದಕ್ಕೆ ಐದು ಎಕರೆಯಷ್ಟು ಬೇಸಾಯದ ಜಮೀನು ದೊರೆಯುವಂತಿರುವುದರಿಂದ, ಈಗ ಸದ್ಯ ಆಬಾದಿನಲ್ಲಿರುವ ಒಂದೂವರೆ ಎಕರೆಯನ್ನು ಅದರಿಂದ ಕಳೆಯಲಾಗಿ, ತಲೆಯೊಂದಕ್ಕೆ ಉಳಿದ ಮೂರೂವರೆ ಎಕರೆಯಷ್ಟು ಪ್ರದೇಶ ಇನ್ನೂ ಮೀಸಲಾಗಿ ಉಳಿದುಕೊಂಡಿರುತ್ತದೆ. ಆದ್ದರಿಂದ ಲೋಕದಲ್ಲಿ ಮುಂದೆ ಆಗಬಹುದಾದ ಜನಾಭಿವೃದ್ಧಿಗೆ ಆಹಾರೋತ್ಪತ್ತಿ ಸಾಲದೆ ಹೋಗಬಹುದೆಂದು ನಾವು ಕೊರಗಬೇಕಾಗಿಲ್ಲ.

ಸ. ವೆಂ

## ೧೫೦ ವರ್ಷಗಳ ವರೆಗೆ ಬದುಕಬಹುದು

### ● ರಶಿಯನ್ ಶಾಸ್ತ್ರಜ್ಞನ ಶೋಧ ●

ಬೊಗೊಮೊಲೆಟ್ಸ್ ಎಂಬ ರಶಿಯನ್ ಶಾಸ್ತ್ರಜ್ಞನು ಮನುಷ್ಯನ 'ಲಿಂಫಟಿಕ್' ಗ್ರಂಥಿಯಿಂದ ಲಸಿಕೆ (ಸೀರಮ್)ಯನ್ನು ತೆಗೆದಿದ್ದಾನೆ. ಆದರಿಂದ ಮನುಷ್ಯನ ಆಯುರ್ಮರ್ಯಾದೆಯು ೧೫೦ ವರ್ಷಗಳ ವರೆಗೆ ಬೆಳೆಯುವದೆಂಬುದು ಈ ಶಾಸ್ತ್ರಜ್ಞನ ಅಭಿಪ್ರಾಯ. ಇದನ್ನು ನಾನಾ ರೀತಿಯಿಂದ ಪ್ರಯೋಗ ಮಾಡಿ, ಕೊನೆಯ ನಿರ್ಣಯಕ್ಕೆ ಬಂದಿದ್ದಾನೆ.

ಯಾವನೊಬ್ಬನಿಗೆ ಏನಾದರೊಂದು ಕೆಟ್ಟ ರೋಗ ಬರಬಹುದು, ಅಥವಾ ಯಾವದೋ ಒಂದು ಅಪಘಾತವೂ ಸಂಭವಿಸಬಹುದು. ಇಂತಹ ಆಕಸ್ಮಿಕ-ಅಪಘಾತಗಳನ್ನು ಬಿಟ್ಟರೆ, ಮನುಷ್ಯನು ಬರೇ ಮುಪ್ಪಿನಿಂದ ಜಾಗ್ರತೆ ಸಾಯಲಾರನು. ೧೫೦ ವರ್ಷ ಗಟ್ಟಿಮುಟ್ಟಾಗಿ ಬದುಕಿ ಬಾಳುವನು.

ಮಂಗನ ಗ್ರಂಥಿಯ ಪ್ರಯೋಗಕ್ಕಿಂತಲೂ ಇದು ಹೆಚ್ಚು ಮಹತ್ವವಾದುದು. ಆದರಿಂದ ಯೌವನವು ಸ್ವಲ್ಪ ಕಾಲದ ವರೆಗೆ ಮಾತ್ರ ಉಳಿಯುವದು. ಆದರೆ ಬಹು ದೀರ್ಘ ಕಾಲದ ವರೆಗೆ ಇದರ ಪ್ರಯೋಜನವಾಗುವದು. ಜಗತ್ತಿನ ಶಾಸ್ತ್ರಜ್ಞರೆಲ್ಲ ಇದರಲ್ಲಿ ಹೆಚ್ಚು ಮನಸ್ಸು ಹಾಕಿದ್ದಾರೆ. ಮತ್ತು ಇದರ ಮಹತ್ವವನ್ನು ಮನಗಂಡಿದ್ದಾರೆ.

ಈಗ ಸ್ಟಾಲಿನ್‌ರಿಗೆ ೭೦ ವರ್ಷ. ಸ್ಟಾಲಿನ್‌ರು ಈ ಹೊಸ ಔಷಧವನ್ನು ಸೇವಿಸಿದ್ದಾದರೆ, ಅವರು ನಮ್ಮೊಡನೆ ಮತ್ತೆ ೮೦ ವರ್ಷ ಬದುಕಬಹುದು. ಸರದಾರ ವಲ್ಲಭಭಾಯಿ ಪಟೇಲರಿಗೆ ೭೫ ವರ್ಷ. ಈ ಔಷಧದಿಂದ ಇವರೂ ಮತ್ತೆ ೭೫ ವರ್ಷ ಬದುಕಬಹುದು. ಇದು ಎಂತಹ ಭಯಂಕರ ವಿಚಾರ?

ಈ ಔಷಧವು ಸರ್ವ ರೀತಿಯಿಂದಲೂ ಯಶಸ್ವಿಯಾದರೆ, ಅಜ್ಜ ಮುತ್ತಜ್ಜರು ಕೂಡ ಮೊಮ್ಮಕ್ಕಳು ಮರಿಮಕ್ಕಳೊಡನೆ ಇರಬಹುದು. ನಿವೃತ್ತಿವೇತನವು ೧೨೦ ಅಥವಾ ೧೪೦ನೆ ವರ್ಷ ದೊರೆಯಬೇಕಾಗುವದು. ಜನರ ವಿದ್ಯೆ ಅನುಭವಗಳ ಪ್ರಯೋಜನವು ಹೆಚ್ಚು ದೊರೆಯುವದು. ಅದರಿಂದ ಹೆಚ್ಚು ಉತ್ಪಾದನೆ ಮೊದಲಾದವೂ ಆಗುವವು.

ಮತ್ತೆ ಇದರಿಂದ ಅನೇಕ ತೊಂದರೆಗಳೂ ಹೆಚ್ಚುವವು. ಜನಸಂಖ್ಯೆಯು ಮಿತಿ ಮೀರಿ ಬೆಳೆಯುವದು. ಆಹಾರ, ವಸತಿ ಮೊದಲಾದ ಜೀವನಾವಶ್ಯಕ ವಸ್ತುಗಳೂ ಬೇಕಾಗುವವು. ಇದನ್ನು ಮತ್ತೆ ಶಾಸ್ತ್ರಜ್ಞರು ಹುಡುಕಿ ಶೋಧ ಮಾಡಬೇಕಾದೀತು.

ಈ ಔಷಧವು ನೂರಾರು ವರ್ಷಗಳ ಪೂರ್ವದಲ್ಲಿಯೇ ಗೊತ್ತಾಗಿದ್ದರೆ, ನಮ್ಮ ಅಜ್ಜ ಮುತ್ತಜ್ಜರೆಲ್ಲ ನಮ್ಮೊಡನೆ ಇರುತ್ತಿದ್ದರು. ಹಿಂದೆ ಆದ ದೊಡ್ಡ ದೊಡ್ಡ ಜನರೆಲ್ಲ ಈಗ ಇರಬಹುದಾಗಿತ್ತು.

---

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ-

O. S. No. 853/48

ಮಹಮ್ಮದ ಹಾಜಿ 2ಅಮ್ಮದ ಬ್ಯಾರಿ, ...ಇಾ ಮಾಯಿಕುಟ್ಟಿ ಬ್ಯಾರಿಗಳ ಮಕ್ಕಳು ...ವಾದಿಯು ಕಳನಾಡು ಗ್ರಾಮದಲ್ಲಿಯೂ ...ವಾದಿಯು ಪಮ್ನಾಡ ಗ್ರಾಮದಲ್ಲಿಯೂ ...ರುತ್ತಾರೆ.

ಮತ್ತು

...ಕಣ್ಣನ ನಾಯರ ಸಹಾ— ಪ್ರತಿವಾದಿಯು.
...ನೇ ಪ್ರತಿವಾದಿ- ಅಂದುಂಇಾ ಬ್ಯಾರಿ, ಅಲಿ...ದು ಬ್ಯಾರಿ ಮಗ, ಉದ್ಮ ಗ್ರಾಮದಲ್ಲಿರು...ನ.

...ರಿಂದ 4ನೇ ಪ್ರತಿವಾದಿಯು ವಾದಿಗೆ ...ಕೊಟ್ಟ ಅವಾರ್ಡ ದಸ್ತಾವೇಜು ಪ್ರಕಾರ ...ದ 3 ವರ್ಷಗಳ ಹುಟ್ಟುವಳಿ ಮತ್ತು ...ಸ್ವಾಧೀನ ಬಗ್ಗೆ ದಾಖಲು ಮಾಡಿದ ಮೇ...ಂಡ ವ್ಯಾಜ್ಯವು ತಾರೀಕು9-1-50ಕ್ಕೆ 9ನೇ ...ತಿವಾದಿಯು ನೋಟಿಸಿನ ಬಗ್ಗೆ ಯಿಟ್ಟ...ತ ಈ ಮೂಲಕ ಆತಗೆ ತಿಳಿಸೋಣಾಗಿ...ದೆ.

**K. Devadasa Shenai,**
Vakil for Plffs.

ಕಾಸರಗೋಡು }
29-12-49 }

---

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ,

S. C. No 340/49.

B. S. ಶಂಕರರಾಯ, ರಾವ್‌ಸಾಹೇಬ ರಾಮಯ್ಯ ಆಳ್ವರ ಮಗ, ಶಿರಿವಾಗಿಲು ಗ್ರಾಮ.
—ವಾದಿ.

ಮತ್ತು

K. M. ಅಹಂಮದ, ಗಡಿಯಾಳ ಮಂಮದ ಬ್ಯಾರಿ ಮಗ, ಕಾಸರಗೋಡು ಕ್ಸಬಾ.
—ಪ್ರತಿವಾದಿ.

ವಾದಿಯು ಈ ಮೂಲಕ ತಿಳಿಸುವದೇನಂದ್ರೆ:—

ಪ್ರತಿವಾದಿಯಿಂದ ಬರತಕ್ಕ ಪ್ರೋ. ನೋಟಿನ ಅಸಲು ಬಡ್ಡಿ ರೂಪಾಯಿ 85-14-0ನ್ನು ಬರಮಾಡಿಕೊಳ್ಳುವರೆ ವಾದಿಯು ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 10-1-1950ಕ್ಕೆ ತನಿಖೆಗೆ ಯಿಟ್ಟ ಕಾರಣ ಆ ದಿವಸ ಕೋರ್ಟಿನ ಮುಂದೆ ಹಗಲು 10 ಗಂಟೆಗೆ ಹಾಜರು ಆಗ...ವರೆ ತಪ್ಪಿದ್ರೆ ಎಕ್ಸ್‌ಪಾರ್ಟಿ ಮಾಡೋಣಾದೀತು ಎಂಬ ಸಂಗ್ತಿ ಯೀ ಮೂಲ್ಕ ತಿಳ್ಸಿದದಾಗಿಯದೆ.

**B. Amrita Rao,**
Vakil for Plaintiff.

Kasaragod }
30-12-49 }

ಡಿ. ಎನ್. ಪಂಡಿತರ ಶ್ರೇಷ್ಠವಾದ

**ಪಾಥ್ರಿಸ್ ನೀಮ್**

ಟೂಥ್‌ಪೌಡರ್ ಉಪಯೋಗಿಸಿರಿ

ಸ್ಟಾಕಿಸ್ಟರು:- ನಾಯಕ್ಸ್ ಬೀಡಿ ವರ್ಕ್ಸ್, ಸಂತೆಕಟ್ಟೆ, ಉಡುಪಿ.




ಶಾಖಾ ಕಚೇರಿ:—ಶ್ರೀ. ಕೆ. ಪಿ. ಭವಾನಿಶಂಕರ ಶೆಟ್ಟಿ, ಡಿವಿಜನಲ್ ಮೆನೇಜರ್, ಜಯಂತ್ ಬಿಲ್ಡಿಂಗ್, ಮೈದಾನ್ ರೋಡು, ಮಂಗಳೂರು.

...ಶಿಶು ...ಮರಣ ಹೆಚ್ಚಾಗಿ ಹಿಂದುಸ್ಥಾನದಲ್ಲಿಕ್ಕೆ ಬದಲಾಗಿ ...ಲಾದ ಪಾಶ್ಚಾತ್ಯದೇಶಗಳಿಗಿಂತ, ಹಡೆದವರ ಅದರಲ್ಲೂ ತಾಯಿಯ ಅಜ್ಞಾನ ಅಶಿಕ್ಷಣ ಅಲಕ್ಷ್ಯಗಳೇ ಮುಖ್ಯ ಕಾರಣವಾಗಿವೆಯೆಂದು ಹೇಳಬಹುದು. ರಾಷ್ಟ್ರದ ಭಾವೀ ಪ್ರಜೆಗಳಾದ ಶಿಶುಗಳ ವಿಷಯದಲ್ಲಿ ತಾಯಿಯ ಮೇಲೆ ಹೆಚ್ಚಿನ ಹೊಣೆಗಾರಿಕೆಯಿದೆ. ಅದನ್ನಾಕೆ ಜೋಕೆಯಿಂದ ನಿರ್ವಹಿಸಬೇಕು. ಈ ಶಿಶು ಸಂಪತ್ತನ್ನು ಸರಿಯಾಗಿ ಜೋಪಾನ ಮಾಡಬೇಕು, ಎಂಬ ಅರಿವನ್ನು ನಮ್ಮ ಹೆಣ್ಣು ಮಕ್ಕಳಿಗೆ ಉಂಟುಮಾಡಿಕೊಡುವದು ಅಗತ್ಯ.

ಶಿಶುಗಳ ಸಂಗೋಪನೆ ಅವು ಜನಿಸುವದಕ್ಕಿಂತ ಮೊದಲಿನಿಂದಲೇ ಆರಂಭವಾಗುತ್ತದೆ. ಅದಕ್ಕೆ ತಂದೆ ತಾಯಿಗಳು ಆರೋಗ್ಯವಂತರಾಗಿರುವದು ಮೊತ್ತಮೊದಲಿನ ವಿಷಯ ಅಲ್ಲದೆ ಗರ್ಭಿಣಿ ಸ್ತ್ರೀಯು ತನ್ನ ಭಾವೀ ಸಂತಾನದ ಯೋಗ್ಯ ಪೋಷಣೆಯ ದೃಷ್ಟಿಯಿಂದ ತನ್ನ ಆಹಾರ ವಿಹಾರಗಳಲ್ಲಿ ಯೋಗ್ಯ ಕ್ರಮವನ್ನು ಅನುಸರಿಸುವದು ಒಳ್ಳೆದು. ಅದರಿಂದ ಸಂತಾನವು ಜನ್ಮ ತಳೆದ ಮೇಲೆ ರೋಗ ತಗಲುವ ಸಂಭವ ಕಡಿಮೆಯಾಗುತ್ತದೆ. ದಂಪತಿಗಳಿಗೆ ಉಷ್ಣ ರೋಗವಿದ್ದರೆ, ಗರ್ಭಿಣಿಗೆ ನಾಲ್ಕು ಅಥವಾ ಎಂಟನೆಯ ತಿಂಗಳಲ್ಲಿ ಗರ್ಭಪಾತವಾಗುವ, ಇಲ್ಲವೆ ಹುಟ್ಟಿದ ಕೂಸು ಬಕ್ಕೆಗಳೆದ್ದು ಸಾಯುವ ಭಯವುಂಟು. ಆದುದರಿಂದ ಇಂತಹ ರೋಗಗಳಿಲ್ಲದಂತೆ ದಂಪತಿಗಳು ಎಚ್ಚರ ವಹಿಸಬೇಕು. ಈ ಉಷ್ಣ ವಿಕಾರವಿದ್ದವರು ; ಗರ್ಭಧಾರಣೆಯ ಮೂರನೆಯ ತಿಂಗಳಿಂದ ಮೂರು ನಾಲ್ಕು ಸಾಲ್ವರ್ಸನ್ ಇಂಜೆಕ್ಷನ್ ತೆಗೆದುಕೊಳ್ಳುವದು ಒಳ್ಳೆಯದು.

ಇನ್ನು ಮಗು ಹುಟ್ಟಿದ ಮೇಲಂತೂ ತಾಯಿಯ ಮತ್ತು ಬಾಣಂತಿತನದ ಕೆಲಸವನ್ನು ವಹಿಸಿಕೊಂಡ ಹೆಣ್ಣು ಮಕ್ಕಳ ಕರ್ತವ್ಯಕರ್ಮಗಳು ಹೆಚ್ಚಾಗಿವೆ. ಬಾಣಂತಿ ತೆಗೆದುಕೊಳ್ಳಬೇಕಾದ ಮದ್ದು, ಊಟ, ಆಕೆಗೆ ಮತ್ತು ಕೂಸಿಗೆ ಮಾಡಬೇಕಾದ ಆರೈಕೆ ಮೊದಲಾದವುಗಳ ಸಾಮಾನ್ಯ ಜ್ಞಾನ ಅವರಿಗಿರಬೇಕು.


**ಅಮೃತಾಂಜನ**

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

REGD

ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.



ಎಲ್ಲಾ ತರದ ಶಾಸ್ತ್ರೀಯ

ಆಯುರ್ವೇದ ಔಷಧಗಳಿಗೆ

**'ಮಹಾಜನ'**

ಕಾಸರಗೋಡು

ಇವರ ತಯಾರಿಕೆಗಳನ್ನು

ವಿಚಾರಿಸಿರಿ.


ಮಹಿಳಾ ಪುಟ

# ಕೂಸುಗಳ ಲಾಲನೆ-ಪಾಲನೆ

ಲೇಖಕರು:-ಡಾಕ್ಟರ್ ಶ್ರೀಮತಿ ರತ್ನಾಬಾಯಿ ಪಾಟೀಲ, ಬಾಗಿಲುಕೋಟೆ.

ಬಾಣಂತಿಯ ಅಥವಾ ಕೂಸಿನ ಸಣ್ಣಪುಟ್ಟ ಅನಾರೋಗ್ಯದ ತಕರಾರುಗಳಿಗೆ ಡಾಕ್ಟರರಿಗೆ ಅಥವಾ ವೈದ್ಯರಿಗೆ ಮೊರೆ ಹೋಗುವ ನಮ್ಮ ಹೆಣ್ಣು ಮಕ್ಕಳ ಅಜ್ಞಾನವು ದೂರವಾಗಲೇಬೇಕು. ಇಂತಹ ಚಿಕ್ಕಪುಟ್ಟ ಔಷಧೋಪಚಾರಗಳ ವಿಷಯದಲ್ಲಿಯೂ ತಿಳುವಳಿಕೆಯಿಲ್ಲದ ಮೂಲಕ, ಪ್ರಪಂಚದ ಆರ್ಥಿಕ ಅಸಮಾರ್ಥತೆಯ ಮೂಲಕ ಡಾಕ್ಟರರ ಇಲ್ಲವೆ ವೈದ್ಯರ ನೆರವನ್ನು ಪಡೆಯುವದಕ್ಕಾಗದೆ ಕೂಸುಗಳ ಆರೋಗ್ಯ ಹೆಚ್ಚು ಕೆಡುವದುಂಟು. ಅಲ್ಲದೆ ತಮಗೆ ತಿಳಿಯದ ವಿಷಯದಲ್ಲಿ ತಮ್ಮಂತೆಯೆ ಅಜ್ಞಾನಿಗಳಾದ ಕಂಡಕಂಡವರನ್ನು ಕೇಳಿ, ಅವರು ಹೇಳಿದ್ದನ್ನೆಲ್ಲ ಮಾಡಿಯೂ ಕೂಸನ್ನು ಮತ್ತಷ್ಟು ಹೆಚ್ಚು ಮರಣ ಭಯದಲ್ಲಿ ಕೆಡಹುವ ಉದಾಹರಣೆಗಳೂ ಇವೆ. ಆದುದರಿಂದ ರಾಷ್ಟ್ರದ ಸಂತಾನ ಸಂಪತ್ತಿಯ ರಕ್ಷಣೆಯ ವಿಶೇಷ ಹೊಣೆಗಾರಿಕೆಯುಳ್ಳ ಹೆಣ್ಣು ಮಕ್ಕಳಿಗೆ ಶಿಶು ಸಂಗೋಪನೆಯ ಬಗ್ಗೆ ತಕ್ಕ ಮಟ್ಟಿನ ಶಿಕ್ಷಣವನ್ನಾದರೂ ಕೊಡುವದು ಅತ್ಯಗತ್ಯ.

ನಮ್ಮ ಅನೇಕ ಹೆಣ್ಣು ಮಕ್ಕಳ ಪ್ರಕೃತಿ ಅನಾರೋಗ್ಯಕರವಾದ ಮತ್ತು ಅವ್ಯವಸ್ಥಿತವಾದ ಆಹಾರ ವಿಹಾರಗಳಿಂದಲೂ ಒಳ್ಳೆಯ ವಾಯುಸೇವನೆ ಮತ್ತು ತಕ್ಕ ವ್ಯಾಯಾಮಗಳ ಅಭಾವದಿಂದಲೂ ತೀರ ಅಶಕ್ತ ಅಥವಾ ನಾಜೂಕಾಗಿರುತ್ತದೆ. ಇಂಥವರ ಹೆರಿಗೆ ಸುಲಭವಾಗಿ ಸುಸೂತ್ರವಾಗಿ ಆಗುವುದು ಕಠಿನವೇ. ಇವರ ಹೆರಿಗೆಗೂ ಬಾಣಂತಿತನಕ್ಕೂ ಮನೆ ಅಷ್ಟು ಸರಿಯಾದ ಸ್ಥಳವಲ್ಲ. ತಜ್ಞರಾದ ಡಾಕ್ಟರಿಣಿಯರೂ ದಾದಿಯರೂ ಉಳ್ಳ ಮತ್ತು ಸಕಲ ವಿಧದ ಸಾಧನ ವ್ಯವಸ್ಥೆಯಿರುವ ಹೆರಿಗೆ ಆಸ್ಪತ್ರೆಗೆ ಹೋಗುವುದು ಒಳ್ಳೆಯದು. ಆರೋಗ್ಯಕರವಾದ ವಾತಾವರಣವೂ ಅಲ್ಲಿರುವದು. ಅಲ್ಲಿ ಹತ್ತು ದಿವಸ ಬಾಣಂತಿತನ ಮಾಡುವರು. ಮೂರು ತಿಂಗಳ ಉಪಚಾರದ ಅಗತ್ಯವಿಲ್ಲ.

ಕೂಸುಗಳ ಆರೈಕೆಯ ವಿಷಯದಲ್ಲಿಯೂ ತಾಯಿ, ಸೂಲಗಿತ್ತಿ ಮತ್ತು ಬಾಣಂತಿತನ ಮಾಡುವ ಹಿರಿಯರು ಗಮನಿಸತಕ್ಕ ಮಾತುಗಳೂ ಬಹಳ ಇವೆ. ಜನನವಾದ ಕೂಡಲೆ ಕೂಸುಗಳ ಹೊಟ್ಟೆಯೊಳಗಿನ ಕಶ್ಮಲವನ್ನು ತೆಗೆಯುವದಕ್ಕೆ ನಾಲ್ಕಾರು ಹನಿ ಔಡಲೆಣ್ಣೆ ಚೀಪಿಸುವ ರೂಢಿಯಿದೆ. ಮರುದಿವಸ ತಾಯ ಮೊಲೆಯಲ್ಲಿ ಹಾಲು ಬಿದ್ದಿರುವದಿಲ್ಲವೆಂದು ಬರೀ ಜೇನುತುಪ್ಪ ಔಡಲೆಣ್ಣೆ ಕೊಡುವದು ಲೇಸು. ತಾಯಿಯ ಮೊಲೆಹಾಲೇ ಎಳಗೂಸಿಗೆ ಶ್ರೇಷ್ಠವಾದ ಆಹಾರ. ದೇವರು ಕೂಸಿನ ವಯೋಮಾನಕ್ಕನುಸರಿಸಿ ಪಚನಕ್ಕೆ ಅನುಕೂಲವಾಗಿ ನೀರಾದ ಹಾಲನ್ನು ತಾಯ ಮೊಲೆಯಲ್ಲಿರಿಸಿರುತ್ತಾನೆ. ಆದಷ್ಟು ಮಟ್ಟಿಗೆ ಬೇರೆ ಅಥವಾ ಕೃತ್ರಿಮ ಹಾಲನ್ನು ಕೂಸಿಗೆ ಉಣಿಸುವದು ಒಳ್ಳೆಯದಲ್ಲ. ಎಷ್ಟೋ ಸಿರಿವಂತರು ತಾಯಂದಿರಿಗೆ ತ್ರಾಸವಾಗುವದು, ಪಥ್ಯ ಮಾಡಬೇಕಾಗುವದು ಎಂದು ತಿಳಿದು ಎಡು ಆಕಳುಗಳ ಹಾಲನ್ನೋ ಕೊತ್ತಿನ ಹಾಲನ್ನೋ ಉಣಿಸುವದುಂಟು, ಅದು ಭ್ರಾಮಕ ವಿಚಾರ. ಆದರಿಂದ ಕೂಸಿಗೆ ಯೋಗ್ಯ ಪೋಷಣೆ ದೊರೆಯದೆ ರೋಗಿಯಾಗುವ ಸಂಭವವೇ ಹೆಚ್ಚು. ಕೂಸಿಗೆ ಅನ್ಯಸ್ತ್ರೀಯ ಮೊಲೆಯುಣ್ಣಿಸುವ ಸಂದರ್ಭದಲ್ಲಿ, ಆಕೆ ನಿರೋಗಿಯಾಗಿರಬೇಕು; ಕೂಸಿನ ಬಗ್ಗೆ ಮಮತೆಯ ಆಸ್ಥೆಯುಳ್ಳವಳಾಗಿ ಪಥ್ಯ ಮಾಡಬೇಕಾಗುವದು. ಇಂತಹ ದಾದಿ ಸಿಕ್ಕುವ ಸಂಭವ ಕಡಿಮೆ. ದೇವದತ್ತವಾದ ತಾಯಿಯ ಹಾಲು ಕೂಸಿಗೆ ಅಮೃತವಿದ್ದಂತೆ.

ಕೂಸುಗಳು ಬಾಲಗ್ರಹದಿಂದ ಮತ್ತು ಹೊಟ್ಟೆಯ ಬೇನೆಯಿಂದ ಸಾವಿಗೀಡಾಗುವದು ಹೆಚ್ಚು. ಬಾಲಗ್ರಹವಿದ್ದ ಕೂಸುಗಳಿಗೆ ಮಾತ್ರ ತಾಯಿಯ ಹಾಲನ್ನು ಬಿಡಿಸಿ ಪಚನವಾದರೆ ಆಡಿನ ಹಾಲು ಇಲ್ಲವೆ ಆಕಳ ಹಾಲು ನೀರುಬೆರಸಿ ಹಾಕಬೇಕು. ಗ್ಲ್ಯಾಕ್ಸೋ ನಿರ್ದಿಷ್ಟ ಪ್ರಮಾಣದಲ್ಲಿ ಕೊಡಲಿಕ್ಕೆ ಅಡ್ಡಿಯಿಲ್ಲ

ಕೃತ್ರಿಮ ಹಾಲಿನಿಂದ ಕೂಸಿನ ಹೊಟ್ಟೆ ಕೆಡುವ ಸಂಭವವಿದೆಯಾದ್ದರಿಂದ ಮಿತವಾಗಿಯೂ ಸಮಯ ನಿಯಮಿತವಾಗಿಯೂ ಹಾಕಬೇಕು. ಒಮ್ಮೆ ಹಾಲೆರೆದ ಮೇಲೆ ಕನಿಷ್ಠಪಕ್ಷ ೩ ತಾಸಾದರೂ ಬಿಡಬೇಕು. ಹಾಲನ್ನು ಗ್ರ್ಯಾಜ್ಯುಏಟೆಡ್ ಬಾಟ್ಲಿಯಿಂದ ಹಾಕಬೇಕು ಕೂಸು ತನಗೆ ಬೇಕಾದಷ್ಟನ್ನು ಕುಡಿದು ಉಳಿದದ್ದನ್ನು ಬಿಡುವದು. ಒತ್ತಾಯದಿಂದ ಹಾಕಬಾರದು ಬಹುಜನ ತಾಯಂದಿರು ಕೂಸು ಅಳುವದಕ್ಕೆ ಹಸಿವೆಯೊಂದೇ ಕಾರಣವೆಂದು ತಿಳಿದು ಪುನಃ ಪುನಃ ಹಾಲು ಹಾಕುತ್ತಾರೆ. ಹಾಗಲ್ಲ; ಅನೇಕ ಕಾರಣಗಳಿಗಾಗಿ ಕೂಸಿಗೆ ಅಳುವಿನ ಅಸ್ತ್ರವನ್ನು ದೇವರು ಕೊಟ್ಟಿರುತ್ತಾನೆ. ಅಳುವಿನಿಂದ ತೆಗೆದುಕೊಂಡ ಆಹಾರದ ಪಚನಕ್ಕೆ ಸಹಾಯವಾಗುತ್ತದೆ. ತಂಡಿಯಾದರೆ, ಹುಳುಹುಪ್ಪಡಿ ಕಡಿದರೆ, ಹೊಟ್ಟೆ ನೊಂದರೆ, ದೇಹಕ್ಕೆ ಯಾವದೇ ಬಗೆಯ ತೊಂದರೆಯಾದರೆ ಕೂಸು ಅಳುತ್ತದೆ. ಏಕೆ ಅಳುತ್ತದೆಂಬುದನ್ನು ಶೋಧಿಸಿ ಅದರ ನಿವಾರಣೆ ಮಾಡುವದು ತಾಯಿಯ ಕರ್ತವ್ಯ


*Nambiar's*

**ARYA VAIDYA SALA**

**UDIPI**

*Ideal House for Ayurvedic Treatment.*

T. N. Kelu Nambiar,

*Vaidya.*



BUY INDIAN! ENCOURAGE INDIAN INDUSTRY!

**ಅಮಲಕೀ ತೈಲ AMALAKI HAIR OIL**

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

Highly perfumed and medicated, worth using daily by one and all, keeps hair black and relieves head-ache etc.

REGD. TRADE MARK

Manufactured by:-

**Swadeshi Oushadhi Bhandara** (Regd.)

KUNJAL P. O. Brahmavar, S. K.



ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

**ರಾಯಲ್ ಮಹಾಲಿನಲ್ಲಿ**

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

**For up-to-date Lodging & Boarding**

**ROYAL MAHAL,**

UDIPI, S. Kanara.

ಪರ್ಲ್ ಕಾಢಾ ಶರೀರದ ಒಳಗಿನ ಮತ್ತು ಹೊರಗಿನ ಉರುವನ್ನು ತೆಗೆದು ಹಾಕಿ ಪ್ರಕೃತಿಯನ್ನು ತಂಪಾಗಿಡುವದು ಅಪಚನ ಅಜೀರ್ಣವನ್ನು ಸರಿಪಡಿಸುವದು, ಶಾರೀರಿಕ ಮತ್ತು ಮಾನಸಿಕ ಶಕ್ತಿಯನ್ನು ಬೆಳೆಸುವದು ಧಾತು ಸ್ಥಾನದಲ್ಲಿಯ ಉಷ್ಣತೆಯನ್ನು ಹೋಗಲಾಡಿಸಿ ಪುಷ್ಟಿಕರ ಮಾಡುವದು

ನಿಮ್ಮ ಹತ್ತಿರದ ಕೆಮಿಸ್ಟರ ಕಡೆಯಿಂದ ಇಂದೇ ಒಂದು ಬಾಟಲಿಯನ್ನು ತಂದು ಸೇವಿಸಲು ಪ್ರಾರಂಭಿಸಿರಿ

**ಪರ್ಲ್ ಎಂಡ್ ಕಂಪನಿ**

ಮುಂಬಯಿ —೨


Edited, Printed & Published by K. H. Shetty at the Navayuga Press Udipi, S. India.

Regd. No. M. 3618

Estd: 1921 ಸ್ಥಾಪನೆ

12-1-1950

LICENCE No. 31
Licensed to Post
without Prepayment

FOUNDER:
Sri. A. B. Shetty
Minister for Agriculture
& Veterinary

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30 ವಾರ ೨೦

# NAVAYUGA WEEKLY UDIPI, S. K.

Post Box No. 22

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol 30 No. 20

## ಅಂದು-ಇಂದು

ಹೇಗಿದ್ದರೂ 'ಸುರಾಜ್ಯಕ್ಕಿಂತ ಸ್ವರಾಜ್ಯ ಉತ್ತಮ'; ಸುವರ್ಣ ಸರಪಣಿಯಲ್ಲೇ ಆದರೂ ಕಟ್ಟಿ ಹಾಕಿಸಿಕೊಂಡಿರುವುದಕ್ಕಿಂತ ಚಲನಾ ಸ್ವಾತಂತ್ರ್ಯ ಪಡೆದಿರುವುದು ಹಿತಕರ. ಎಂತಹ ಸ್ಥಿತಿಯಿದ್ದರೂ ಭಾರತವು ದಾಸ್ಯ ರಾಷ್ಟ್ರವಾಗಿದ್ದುದಕ್ಕಿಂತ, ಸ್ವತಂತ್ರ ರಾಷ್ಟ್ರವಾಗಿರುವ ಇಂದಿನ ಭಾಗ್ಯ ದೊಡ್ಡದು. ಇದು ಪ್ರಶ್ನಾತೀತ ವಿಷಯ; ಸರ್ವಸಮ್ಮತ ಸಂಗತಿ.

ನರಕ ಸದೃಶ ಸ್ವಾತಂತ್ರ್ಯಕ್ಕಾದರೂ ಸ್ವರ್ಗ ಸದೃಶ ಗುಲಾಮಗಿರಿ ಸಮಾನವಾಗುವಂತಿಲ್ಲ; ಅದನ್ನು ಇದರೊಂದಿಗೆ ಸ್ವೇಚ್ಛೆಯಿಂದ ಬದಲಾಯಿಸಿಕೊಳ್ಳಲೊಪ್ಪುವ ಜನಾಂಗವಿರಲಾರದು. ಚಿನ್ನವೆಂದಿಗೂ ಪ್ರಾಣಕ್ಕೆ ಸಾಟಿಯಲ್ಲ. ಸ್ವಾತಂತ್ರ್ಯವೇ ಪ್ರಾಣ—ಸುಖಭೋಗಗಳು ಚಿನ್ನಾಭರಣ.

ಗುಲಾಮರಾಗಿದ್ದ ನಾವು ಸ್ವತಂತ್ರರಾಗಿದ್ದೇವೆ; ಅಂದು ಪರರದಾಗಿದ್ದ ಮನೆಯ ಯಜಮಾನಿಕೆ ಇಂದು ನಮ್ಮದಾಗಿದೆ. ಮನೆಯ ಅಧಿಕಾರದ ಮಟ್ಟಿಗೆ ಅಂದು-ಇಂದಿನ ವ್ಯತ್ಯಾಸ ಹೀಗಿದ್ದರೆ, ಮನೆಯಾಡಳಿತೆಯಲ್ಲಿ ಹೇಗೆ? ಗೃಹ ಸುಖಪೂರ್ತಿಗಾಗಿ, ಮನೇ ಹಕ್ಕನ್ನೆಂದಿಗೂ ಮಾರಬಾರದೆಂಬುದು ನಿಜವಿರುವಂತೆಯೇ ಗೃಹಕೃತ್ಯ ಹಾಳಾದ ದೆಸೆಯಿಂದಲೇ, ಮನೇ ಮಾರಾಟವಾಗುವದಿದೆ, ಎಂಬ ಅಪಾಯವನ್ನೂ ಲಕ್ಷ್ಯದಲ್ಲಿಟ್ಟುಕೊಂಡು, ಅಂದು-ಇಂದಿನ ತುಲನೆ ಮಾಡಬೇಕಾದುದು ಅಗತ್ಯ.

ಗುಲಾಮ ಭಾರತದಲ್ಲಿರದಿದ್ದಂತಹ ಹೊಸಾಪತ್ತುಗಳು ಅಧಿಕಾರ ಬದಲಾವಣೆಯ ದೆಸೆಯಿಂದಾಗಿಯೇ, ಸ್ವತಂತ್ರ ಭಾರತದಲ್ಲಿದ್ದುದ್ದು; ಸ್ವತಂತ್ರಾಡಳಿತೆಯು ಅವುಗಳನ್ನು ಸಾಕಷ್ಟು ಜಯಶೀಲವಾಗಿ ನಿವಾರಿಸಿಕೊಂಡಿದೆ. ಹೀಗಾಗಿ ಈ ಮಟ್ಟಿಗೆ ಅಂದಿನ ಸ್ಥಿತಿಯೇ ಇಂದೂ ಉಳಿದಿದೆ.

ಅಂದಿನ ಕಾಂಗ್ರೆಸ್ ಆಡಳಿತೆಯಲ್ಲಿ ಖರೆ, ನೇಮನರಂತಹ ನಾಯಕರ ಮೇಲೆ ಕಾಂಗ್ರೆಸ್ ನಿಯಮ ಮೀರಿದ ಆರೋಪಗಳಿಗಾಗಿ ಶಿಸ್ತು ಜಾರಿ ನಡೆದಿದ್ದರೆ, ಇಂದು ಕಾಂಗ್ರೆಸ್ ಮಂತ್ರಿಗಳ ಮೇಲೆ ವಂಚನೆ, ಪಕ್ಷಪಾತ, ದುರ್ವರ್ತನೆಗಳ ಆರೋಪದ ಮಾತುಕತೆಗಳು ಕೇಳಿ ಬರುತ್ತಿವೆ.

ಅಂದು ಲೋರ್ಡ್ ಲಿನ್‌ಲಿತ್‌ಗೋ ಹೇಳುತ್ತಿದ್ದ "ಶಾಂತ ಸದ್ವ್ಯವಹಾರವಿರಬೇಕಲ್ಲದೆ, ಮುಷ್ಕರ, ಅಸಹಕಾರದಂಥವುಗಳಲ್ಲ" ಎಂಬ ಮಾತುಗಳನ್ನೇ ಇಂದು ಪಂಡಿತ ಜವಾಹಿರಲಾಲರೂ, ಅಂದು ಪಂಡಿತ ಜವಾಹಿರಲಾಲರು ಹೇಳುತ್ತಿದ್ದ "ಕ್ರಾಂತಿ ಸಮಾನತೆ, ಪ್ರಗತಿ"ಯ ವೀರ ಮಂತ್ರಗಳನ್ನೇ ಇಂದು ಸಮತಾವಾದಿಗಳೂ ಪಠಿಸುತಿದ್ದಾರೆ.

ಅಂದು, ಬಿಳಿ ಟೋಪಿಗಳು ಕಾಂಗ್ರೆಸಿನ ಸತ್ಯ, ಅಹಿಂಸೆ, ತ್ಯಾಗ, ಸೇವೆಗಳ ದ್ಯೋತಕಗಳೆಂದು ಸರ್ವಸಾಮಾನ್ಯ ಭಾವನೆಯಿದ್ದಿದ್ದರೆ, ಇಂದು, ಅವು ಕಳ್ಳಸಂತೆಯವರ ಅಸತ್ಯ, ಅನಾಚಾರ, ಸ್ವಾರ್ಥ, ಅತ್ಯಾಚಾರಗಳ ಚಿಹ್ನೆಗಳೆಂಬ ಭಾವನೆ ಸರ್ವಸಾಮಾನ್ಯವಾಗಿದೆ.

ಅಂದು ಕಾಂಗ್ರೆಸಿಗರು, ತಾವು ಜನತಾ ಸೇವಕರೆಂಬಂತೆ ತೋರಿಸಿಕೊಳ್ಳುತಿದ್ದರೆ, ಇಂದು ಅವರು ತಾವೇ ಜನತೆಯ ಅಧಿಕಾರಿಗಳೆಂಬಂತೆ ವರ್ತಿಸುತಿದ್ದಾರೆ.

ಅಂದು ಊಟ, ಉಡಿಗೆಗಳ ಅನುಕೂಲತೆಯಿದ್ದಷ್ಟು ಇಂದಿಲ್ಲ; ಅಂದಿದ್ದ ಕಡಿಮೆ ಧಾರಣೆ, ರಿಯಾಯತಿ ಘೋಷಣೆಗಳ ಸ್ಥಾನದಲ್ಲಿ ಇಂದು ವಿಶೇಷ ಬೆಲೆ, ಅತಿರೇಕ ಸುಲಿಗೆ ಬುದ್ಧಿಗಳೇ ನಿಂತಿವೆ. ಅಂದು ಹತ್ತಾರ ಮಟ್ಟದಲ್ಲಿದ್ದ ಕರಕಂದಾಯಗಳೂ, ನಿಯಂತ್ರಣ, ಅಂಕುಶಗಳೂ, ಅಡ್ಡಿ ಅಡಚಣೆಗಳೂ ಇಂದು ನೂರರ ಅಂತಸ್ತಿಗೇರಿವೆ.

ಅಂದು ಅಧಿಕಾರಿಗಳನ್ನು ಅಮಾನ್ಯ ಮಾಡುವ, ಅಧಿಕಾರಗಳನ್ನು ಶಂಕೆ ಸಂಕೋಚಗಳೊಡನೆ ಸ್ವೀಕರಿಸುವ ಮನೋವೃತ್ತಿಯಿದ್ದಿತು; ಇಂದು ಅಧಿಕಾರಿಗಳನ್ನು ಕೃತಾರ್ಥರೆಂದು ಭಾವಿಸುವ ಮತ್ತು ಅಧಿಕಾರಗಳನ್ನು ಆಶಿಸುವ ಲಾಲಸೆ ಬೆಳೆದಿದೆ. ಅಂದು ಅಧಿಕಾರ ಭೀತಿ ಮತ್ತು ಸೇವಾ ಸ್ಫೂರ್ತಿ ಪ್ರದರ್ಶಿಸುತಿದ್ದ ಎರಡು ವರ್ಗಗಳವರು ಇಂದು ಅವುಗಳನ್ನು ಪರಸ್ಪರ ಬದಲಾಯಿಸಿಕೊಂಡಿದ್ದಾರೆ.

ಅಂದು, ರಾಜಕೀಯ ಗಂಧ ಗಾಳಿ ಕೂಡಾ ಸೋಂಕಿರದ ಜನಸಾಮಾನ್ಯರೂ ಇಂದು ಢಿಲ್ಲಿಯ ರಾಜಕೀಯಕ್ಕೂ ಹಳ್ಳಿಯ ಪಡಿಯಕ್ಕಿಗೂ ಗಂಟು ಹಾಕುವ ವರೆಗೂ ರಾಜಕಾರಣದ ಚರ್ವಿತಚರ್ವಣ ನಡೆಸುತಿದ್ದಾರೆ.

ಮೇಲ್ಗಡೆ ನಮೂದಿಸಿದ ಅದಲುಬದಲಾವಣೆಗಳು, ಎಲ್ಲೆಲ್ಲೂ ಕಂಡು ಬರುವವುಗಳು; ಕೇಳಿ ಬರುವವವುಗಳು. ಎಲ್ಲೆಡೆಯಲ್ಲೂ, ಬಾರಿಬಾರಿಗೂ ವಿಮರ್ಶಿಸಲ್ಪಡುತ್ತಿರುವವುಗಳೇ, ಆ ಸಂಬಂಧದ ದೂರುದೂಷಣೆಗಳಲ್ಲಿ ಕೆಲವಂಶ ಸತ್ಯಾಂಶವಿದ್ದರೆ, ಕೆಲವಂಶ ಅತಿಶಯೋಕ್ತಿಗಳಿರಬಹುದು.

ಹೊಸತಾಗಿ ಮನೆಯೊಳಗೆ ಒಕ್ಕಲಾದವನು, ತನ್ನಿಚ್ಛೆಯಲ್ಲಿರುವ ದುಃಸ್ಥಿತಿ ಮತ್ತು ಕೃಷಿಗಳನ್ನು ಆಗಲೇ ಮಾಡಿ ತೋರಿಸುವ ಐಂದ್ರಜಾಲ ಪ್ರದರ್ಶಿಸಬೇಕೆಂದಾರೂ ಹೇಳಲಾರರು. ಆದರೆ ಹಾಗೆ ಒಕ್ಕಲಾದವನು ತಾನು ಪ್ರಥಮತಃ ಮಾಡಬೇಕಾಗಿರುವ ಕೆಲಸಗಳನ್ನೂ ಮಾಡದಿದ್ದರೆ— ಕಸ ಗುಡಿಸಿ, ಸಾಮಾನುಗಳನ್ನೆಲ್ಲಾ ಸರಿಯಾಗಿ ಇಟ್ಟು, ನಿತ್ಯಕರ್ಮಕ್ಕೆ ತೊಡಗುವ ಸರ್ವ ಪ್ರಥಮ ಕೆಲಸಕ್ಕೂ ಕೈ ಹಾಕದೆ, ಆ ಅಸ್ತವ್ಯಸ್ತ ಮನೆಯಲ್ಲೇ ಆಸನ ಬಿಡಿಸಿ, ಕುಳಿತು ಯಜಮಾನಿಕೆಯ ರೀತಿ ಪ್ರದರ್ಶನಕ್ಕೆ ತೊಡಗುತ್ತಾನಾದರೆ—ಆಗ ಆವನ ವರ್ತನೆಯನ್ನು ಪ್ರಶ್ನಿಸದೆ ನಿರ್ವಾಹವಿಲ್ಲ.

ಭಾರತದ ಆರ್ಥಿಕ, ಸಾಮಾಜಿಕ ಅಸಮಾನತೆಗಳನ್ನು ನಿವಾರಿಸಿ ಪ್ರಗತಿ ಮತ್ತು ಸಮಾನತೆಯನ್ನು ಸ್ಥಾಪಿಸುವ ವಾಯಿದೆ ಮೀರಿಲ್ಲವೆಂಬುದನ್ನು ಒಪ್ಪಿಕೊಳ್ಳೋಣ. ಆದರೆ ಸ್ವತಂತ್ರಾಡಳಿತೆಯ ಆರಂಭದೊಂದಿಗೆ ಕಂಡು ಬರಲೇಬೇಕಾಗಿದ್ದ 'ನೌಕರ ಯಂತ್ರದ ದುರಸ್ತಿ'ಯಂತಹ ದೈನಂದಿನ ಕಾರ್ಯಕಲಾಪಗಳಾದರೂ ಈಗ ಕಂಡು ಬರುತ್ತಿವೆಯೆ?

ಜನಸಾಮಾನ್ಯರ ನಿತ್ಯ ಜೀವನದ ಅನುಭವದಿಂದ ಹೇಳುವದಾದರೆ, ಸರಕಾರೀ ನೌಕರರ ಮರ್ಜಿ ಮತ್ತು ವರ್ತನೆಗಳು ಅಂದಿಗಿಂತಲೂ ಇಂದು ಕಳಪೆಯ ಮಟ್ಟಕ್ಕಿಳಿದಿವೆಯೆಂಬುದು ಕಠೋರ ಸತ್ಯ. ನೌಕರರೇ ಸರಕಾರೀ ಯಂತ್ರದ ಪ್ರಮುಖ ಭಾಗವೆಂಬುದನ್ನು ಮಂತ್ರಿಗಳು ಜಾಹೀರಾಗಿ ಒಪ್ಪಿಕೊಂಡು "[illegible] ನೌಕರರೊಡನೆ ಆತ್ಮೀಯತೆಯಿಂದ ಸಹಕರಿಸಿರಿ" ಎಂದು ಸಾರ್ವಜನಿಕರಿಗೂ, "ಶುದ್ಧ ಮನಸ್ಸಿನಿಂದ ಸಾರ್ವಜನಿಕರೊಡನೆ ಬೆರೆತು, ಅವರ ಸಹಕಾರ, ಸಹಾನುಭೂತಿಗಳನ್ನು ದೊರಕಿಸಿಕೊಂಡೇ ಜನಸೇವಾ ಕಾರ್ಯ ನಿರ್ವಹಿಸಿರಿ" ಎಂದು ನೌಕರರಿಗೂ ಉಪದೇಶಿಸುತಿದ್ದಾರೆ. ಆದರೆ ಈ ಉಪದೇಶದಂತೆ ನೌಕರವರ್ಗ ವರ್ತಿಸುತ್ತಿದೆಯೆ?

ತಮ್ಮ ನೌಕರ ವರ್ಗದ ಮರ್ಜಿ, ವರ್ತನೆಗಳನ್ನು ಸುಧಾರಿಸುವ ಮಟ್ಟಿಗೂ ಮಂತ್ರಿಗಳಾದವರು ಕೇವಲ ಉಪದೇಶ ವಾಕ್ಯಗಳನ್ನಾಡಿ ಸುಮ್ಮಗಿರಬೇಕೆಂದಿಲ್ಲ ಸ್ವತಃ ಅವುಗಳನ್ನು ಯೋಗ್ಯ ರೀತಿಯಿಂದ ಚಾಲು ಮಾಡುವ ಅಧಿಕಾರ ಅವರದು; ಮಂತ್ರಿಗಳೇ ಕೆಲಸ ಮಾಡಿರುವರೆ? [illegible] ಅನುಭವಕ್ಕೆ ಬರುವಷ್ಟು ನಿಜಕ್ಕೂ ಮಾಡಿಲ್ಲ!

ವಂಶ ಪಾರಂಪರ್ಯವಾಗಿ, ಜನತೆಯ ನಡುವೆ ಇರುವ ಆರ್ಥಿಕ, ಸಾಮಾಜಿಕ

THE UNITED KARNATAK INSURANCE COMPANY, LIMITED.

**WANTED**

A Branch Manager for Udipi Branch—only capable, hard working men with previous experience need aply to:—

Camp: Udipi.
1-12-'49

N. S. Kini.
Director-Secretary.

ಪ್ರಜಾಪ್ರಭುತ್ವ-ಅಸ್ವಿ, ಪಕ್ಷಪಾತ ಅನುಭವಿಸಿ ಗದಲ್ಲಿ ತಮ್ಮ ಹೋರಿದ ಅಲ್ಪಾಧಿಕ್ಯ-ಅ ಭ್ಯರ್ಥಿಗಳನ್ನು ಒಪ್ಪಿಗೆ ನಾಮಕರಣ ಪ್ರಕಟಿಸಿ ಮಾಡುವುದು ಅತಿ ಪ್ರಯಾಸ ಹಾಗೂ ಅಪಾಯಕಾರಿಯಾಗಬಹುದು. ಆದ ರೀ ನೌಕರ ವರ್ಗದಲ್ಲಿರುವ ಲಂಚ, ಸಂ ಚು, ದುರ್ಬುದ್ಧಿ, ದುರ್ವರ್ತನೆಗಳೂ ಬಹು ಕಾಲದಿಂದಿರುವವುಗಳಾದ್ದರಿಂದ ಕಾಲಕ್ರ ಮೇಣ ಅವು ಸವೆದುಹೋಗಬೇಕಲ್ಲದೆ ಕೂಡಲೇ ಕತ್ತರಿಸಿ ಹಾಕಲು ತಾವು ಕೈ ಯಿಕ್ಕಬಾರದೆಂದು ಮಂತ್ರಿಸ್ಥಾನಗಳಲ್ಲಿರು ವ ಕಾಂಗ್ರೆಸಿಗರ ಅಭಿಮತವಿರಬಹುದೇ? ಹಾಗಾದರೆ ಈ ದಿನ ಇವರಿಂದಾಗುವ ಕಾ ರ್ಯವಾದರೂ ಏನು?

ಸಂಚುವಂಚನೆ, ದಗಾಖೋರತನದಂ ತಹ ದುರ್ಬುದ್ಧಿಗಳು ಕೂಡಾ ಸ್ವತಂತ್ರ ಭಾರತದಲ್ಲಿ ಸ್ವತಃ ಮತ್ತು ಕ್ರಮಶಃ ನಿ ವಾರಣೆಯಾಗುವ ಆಪತ್ತುಗಳ ಪಟ್ಟಿಗೆ ಸೇರುವಂತಹವೆಂದಾದರೆ, ಸ್ವಭಾವಬದ್ಧ ಕಳ್ಳರಿಗೆ, ಕುಡುಕರಿಗೆ, ದರೋಡೆಗಾರರಿಗೆ ಮಾತ್ರ ಕಠಿಣ ಶಿಕ್ಷೆಗಳಾಗಬೇಕೆ? ಇದೇ ದೃಷ್ಟಿಯಿಂದ ನೋಡುವದಾದರೆ ಚಿಕ್ಕಂ ದಿನಿಂದಲೇ ನೌಕರಿಯಲ್ಲಿದ್ದು ಕ್ರಮಶಃ ಮೇಲೇರುತ್ತಾ ಹೋಗಿ ಉಚ್ಚಾಧಿಕಾರಿ ಗಳಾದವರೇ ಜವಾಬ್ದಾರೀ ಅಧಿಕಾರ ಸ್ಥಾನಕ್ಕೇ ಬೇಕಿಟ್ಟತಲ್ಲದೆ, ಕೇವಲ ಸ್ವಾತಂತ್ರ್ಯ ಹೋರಾಟವನ್ನಷ್ಟೇ ಕೊ ಟ್ಟ ಅನುಭವವುಳ್ಳ ಕಾಂಗ್ರೆಸಿಗರು ಒಮ್ಮೆ ಗೇ ಮಂತ್ರಿಗಳಾಗಿ ಆರಿಸಲ್ಪಟ್ಟುದು ಸರಿ ಯೆ? ಈ ನೋಟ ಪ್ರಕಾರವೇ ಸತ್ಯವು ತ್ತುನ್ಯಾಯ ಪಾಲನೆ, ಹಾಗೂ ನಿರ್ವಂ ಚಕ ಜನತಾ ಸೇವೆಯೇ ದೀ ರ್ಘಾವಧಿಯ ಅಭ್ಯಾಸವಾಗಿ ಬಂದಿರುವ ಕಾಂಗ್ರೆಸಿಗರು ತಮ್ಮಲ್ಲಿ ಅಥವಾ ತಮಗೆ ಹೊಣೆಗಾರರಾದ ತಮ್ಮ ನೌಕರರಲ್ಲಿ ಇಂತಹ ದಕ್ಷಿಣ್ಯಗಳನ್ನು ಇರಗೊಡಿ ಸುವುದಾದರೂ ಹೇಗೆ? ಆದರೆ ಪರಂಪರಾ ಗತ ಪಾಪದ ಮಟ್ಟಿಗೂ ಸಹನೆಯೆಂಬು ದಿರಲೇಬಾರದು. ತಾನೆ!

ಅಂದು ಕಾಂಗ್ರೆಸ್ ಮಂತ್ರಿಗಳಾಗಿದ್ದ ವರು ವೇಷ ಮರೆಯಿಸಿಕೊಂಡು ಹೋಗಿ ದುರ್ವ್ಯಾಪಾರಗಳನ್ನು ನಡೆಸುತ್ತಿದ್ದವ ನ್ನು ಪತ್ತೆ ಹಚ್ಚಿದ್ದ ಕೆಲವು ಕಥೆಗಳ ನ್ನಾದರೂ ಕೇಳಿದ್ದೆವು; ಇಂದು ಅಂತಹ ಅನ್ಯಾಯಗಳಿಗಾಗಿ ಶೋಧನೆಗೆ ಹೊರ ಡುವ ಪ್ರಯಾಸವನ್ನು ಕಾಂಗ್ರೆಸ್ ಮಂತ್ರಿ ಗಳು ವಹಿಸುವ ಅಗತ್ಯವೇ ಇಲ್ಲ, ಕಾಲಿ ತಲ್ಲೇ ಕಾಣುವಷ್ಟು ಅವು ಸರ್ವವ್ಯಾಪಿ ಯಾಗಿವೆ; ಸ್ವತಃ ಮಂತ್ರಿಗಳಿಗೂ ಅಲ್ಲಲ್ಲಿ ತಾಗಿವೆ, ಎಂಬ ಮಾತುಕೂಡಾ ಏಳುವಂ ತಾಗಿದೆ. ಹಾಗಾದರೆ?

ಅಧಿಕಾರಾರೂಢ ಕಾಂಗ್ರೆಸಿಗರಲ್ಲಿ ಯ ಥಾರ್ಥತೆಯಿದ್ದರೆ, ಈಗ ತಮ್ಮ ಪಾಲಿನ ಕರ್ತವ್ಯಗಳಾಗಿರುವ ಉದ್ಘಾಟನೋ ತ್ಸವ, ಶಂಕುಸ್ಥಾಪನೆ, ಪದವೀದಾನ ಸ ಮಾರಂಭದಂತಹವುಗಳನ್ನು ಎರಡು ವಾ ರಗಳ ಮಟ್ಟಿಗಾದರೂ ನಿಲ್ಲಿಸಿಕೊಂಡು, ತ ಮ್ಮ ಕೈಕೆಳಗಿನ ಇಲಾಖೆಯ ನೌಕರರ ಮನೋವೃತ್ತಿ ಮತ್ತು ವರ್ತನೆ ಹೇಗಿದೆ ಎಂಬುದರ ಕೂಲಂಕಷ ಶೋಧನೆಗೆ ತೊ ಡಗಲಿ. ಮತ್ತು ಅವುಗಳಲ್ಲಿರುವ ದೋಷ ನಿ ವಾರಣೆಗಾಗಿ ಕಠಿಣ ನಿಯಮಗಳನ್ನು ಹಾಕಲಿ.

ಅಂದಿನ ಬ್ರಿಟಿಷರಾಡಳಿತೆಯಲ್ಲಿ ಕೆಲ ವು ಆಶ್ರಿತ ರಾಜ್ಯಗಳ ಸರಕಾರೀ ನೌಕರ ವರ್ಗದಲ್ಲಿ ಕಂಡುಬರುತ್ತಿದ್ದ ನಡೆನು ವ ರ್ತನೆಗಳೇ ಇಂದಿನ ಸ್ವರಾಜ್ಯಾಡಳಿತೆಯಲ್ಲಿ ದೇಶ ತುಂಬಾ ಹರಡಿ ಹೋದಂತಿವೆ. ಅಂದಿನ ಬ್ರಿಟಿಷರಲ್ಲಿದ್ದ ಆಡಳಿತ ಚಾತು ರ್ಯ, ಕಠೋರ ಶಿಸ್ತು, ನಿಷ್ಠೆ, ನ್ಯಾಯ ನಿಷ್ಠುರತೆ, ಇಂದಿನ ತಮ್ಮಲ್ಲಿ ಕಡಿ ಮೆಯಾಗಿರುವುದೇ ಇಂತಹ ದುಸ್ಥಿ ತಿಗೆ ಕಾರಣವೆಂಬುದನ್ನು ಗಮನಿಸಿ ಮುಂ ದಾಗಿ ಈ ಕೊರತೆಯನ್ನು ನಿವಾರಿಸಿ ಕೊಳ್ಳಲಿ.

ತಾವು ಎಂತಹ ಉದಾತ್ತ ಭಾಷಣ ಕೊಟ್ಟರೂ, ಎಷ್ಟೊಂದು ಜನ ಹಿತಕಾ ರೀ ಶಾಸನ ಮತ್ತು ಯೋಜನೆಗಳನ್ನು ತಯಾರಿಸಿದರೂ, ಅದೆಲ್ಲವೂ ಇಂದಿನ ನೌಕರ ಯಂತ್ರದ ಸ್ಥಿತಿಯಲ್ಲಿ-ಹಾಳಾದ ಕಾರಿನಲ್ಲಿರುವ ಡ್ರೈವರನ ಹಾದಿಯಂತೆ ಸಾಗಲಾರದೆಂಬುದನ್ನು ಮಂತ್ರಿಗಳು ತಿಳಿದಿರಲಿ. ಆದ್ದರಿಂದ ಮುಂದಾಗಿ ಕಾರು ರಿಪೇರಿಯಾಗಲಿ!

ಸರಕಾರೀ ನೌಕರರ ಇಂದಿನ ಭಾವನೆ, ವರ್ತನೆಗಳ ದೆಸೆಯಿಂದ ಜನಸಾಮಾನ್ಯರ ದೈನಂದಿನ ಲಘು ಕಾರ್ಯಗಳು ಕೂಡಾ ಭಗೀರಥ ಪ್ರಯತ್ನಾನಂತರವೇ ಸಿದ್ಧಿ ಸುವ ಸ್ಥಿತಿಯೊದಗಿದೆ. ಈ ಮಟ್ಟಿಗೆ ವ ರ್ಚಸ್ಸುಳ್ಳವರಿಗೆ ಮತ್ತು ಸಿರಿವಂತರಿಗೆ ಮಾತ್ರ ಪೂರ್ಣ ಅನುಕೂಲತೆಗಳಿರುವ ಯುಗವಿದು. "ಸ್ವರಾಜ್ಯವಿನ್ನನ್ನು ತಂದಿ ತೇ!" ಎಂಬ ರೋದನ ಕೇಳಿಬರುತ್ತಿದೆ. ಇದನ್ನೂ ಕೆಲಕಾಲ ಸಹಿಸಿಕೊಳ್ಳಬೇಕೆಂ ದು ಜನತೆಯನ್ನು ಬೋಧಿಸುವ ಕಾರಣ ಮತ್ತು ಅಧಿಕಾರ ಕಾಂಗ್ರೆಸ್ ಮಂತ್ರಿಗಳಿ ಗಿಲ್ಲ. ಅವರೇ ಆತ್ಮಶೋಧನೆ ಮಾಡಿ ಕೊಂಡು ಶುದ್ಧೀಕಾರ್ಯಕ್ಕಿಳಿಯಲಾರರೆ?

# ಜನವರಿ 26ರೊಳಗೆ-

## ಬಳ್ಳಾರಿ ಸಂಬಂಧದಲ್ಲಿ ಕನ್ನಡಿಗರ ಆಕ್ಷೇಪ-

ಬಳ್ಳಾರಿಯ ಒಂಭತ್ತು ತಾಲೂಕುಗ ಳ ಪೈಕಿ, ಆರು ತಾಲೂಕುಗಳು ನಿರ್ವಿವಾ ದವಾಗಿ ಕನ್ನಡ ಪ್ರದೇಶಗಳಾಗಿರುವುದರಿಂ ದ, ಅವುಗಳನ್ನು ಆಂಧ್ರ ಕಳೆದುಳಿಯುವ ಮದ್ರಾಸ್ ಪ್ರಾಂತ್ಯದಲ್ಲೇ ಇರಗೊಡಿಸಿ, ಉಳಿದ ಆಲೂರು, ರಾಯದುರ್ಗ, ಆದೋ ನಿ, ಈ ಮೂರು ತಾಲೂಕುಗಳನ್ನು ಆಂ ಧ್ರ ಪ್ರಾಂತ್ಯದೊಳಗೆ ಸೇರಿಸಬೇಕೆಂದು "ವಿಭಜನಾ ಸಮಿತಿ"ಯು ನಿರ್ಣಯಿಸಿದಂ ತೆ, ಮದ್ರಾಸ್ ಮಂತ್ರಿ ಮಂಡಲವು ಕೇಂ ದ್ರ ಸರಕಾರಕ್ಕೆ ಇದೇ ತಾ. 4ರಲ್ಲಿ ತನ್ನ ವರದಿಯೊಪ್ಪಿಸಿದ್ದಿತು. ತಮ್ಮ ಜಿಲ್ಲೆ ಯನ್ನೀ ರೀತಿ ವಿಂಗಡಿಸುವ ಕುರಿತು ಬ ಳ್ಳಾರಿಯ ಅತ್ಯಧಿಕ ಸಂಖ್ಯಾಕರ ಪ್ರಬಲ ವಿರೋಧವಿದೆ; ಈ ವಿರೋಧ ಭಾವನೆಯ ಸರಿಯಾದ ಪರಿಚಯವನ್ನು, ಜನಮತ ವಿ ಚಾರಣೆಗಾಗಿ ಬಂದಿದ್ದ ಮದ್ರಾಸ್ ಮಂ ತ್ರಿಗಳಾದ ಶ್ರೀ ಗೋಪಾಲ ರೆಡ್ಡಿ ಮತ್ತು ಶ್ರೀ ಭಕ್ತವತ್ಸಲಮರಿಗೆ ಮಾಡಿಟ್ಟಾಗು ವಂತೆ ಮಾಡಿಕೊಡಲಾಗಿದ್ದಿತು "ನಮ್ಮ ಮುಂದೆ ಬಂದ ಅಭಿಪ್ರಾಯಗಳ ಪೈಕಿ ಹೆಚ್ಚಿನವು ಬಳ್ಳಾರೀ ವಿಭಜನೆಗೆ ವಿರೋ ಧವಾಗಿದ್ದುವು" ಎಂದು ಬಳ್ಳಾರಿಯಲ್ಲಿ ಶ್ರೀ ಬಿ. ಗೋಪಾಲ ರೆಡ್ಡಿಯವರೇ ಒಪ್ಪಿ ಕೊಂಡಿದ್ದರು, ಹೀಗಿದ್ದೂ ಈ ಮಂತ್ರಿ ದ್ವಯರ ವರದಿಯನ್ನಾಧರಿಸಿ 'ವಿಭಜನಾ ಸಮಿತಿ'ಯಿಂದ ಮದ್ರಾಸ್ ಮಂತ್ರಿ ಮಂ ಡಲಕ್ಕೆ, ಮದ್ರಾಸ್ ಮಂತ್ರಿ ಮಂಡಲದಿಂ ದ ಕೇಂದ್ರ ಸರಕಾರಕ್ಕೆ, ಬಳ್ಳಾರಿಯನ್ನು ವಿಂಗಡಿಸಿ ಕನ್ನಡಿಗರ ಹಕ್ಕಿನ ಮೂರು ತಾಲೂಕುಗಳನ್ನು ಆಂಧ್ರದೊಳಗೆ ಸೇರಿ ಸುವ ಶಿಫಾರಸು ಏನಾಯಿತೆಂಬುದು ಹೇ ಗೆಂಬುದೇ ಅರ್ಥವಾಗುವದಿಲ್ಲ ಕನ್ನಡಿಗ ರ ಒಮ್ಮತದ ಆಕ್ಷೇಪಗಳಿದಿರು ನಿಂತು ಕೊಂಡೇ "ವಿಭಜನಾ ಸಮಿತಿಯಲ್ಲಿ ಕ ನ್ನಡಿಗರಿಲ್ಲದಿದ್ದರೂ ಅವರಿಗೆ ನ್ಯಾಯವ ನ್ನೇ ನಾವು ಮಾಡಿದ್ದೇವೆ" ಎಂಬು ಶ್ರೀ ಬಿ. ಗೋಪಾಲ ರೆಡ್ಡಿಗಳು ಹೇಳುವದಾ ದಾದರೂ ಯಾವ ಮನಸ್ಸಾಕ್ಷಿಯನ್ನಾಧ ರಿಸಿಯೋ!

### ಬೆಲೆಯುಳ್ಳ ಆಕ್ಷೇಪ

ನಾವು ಕಳೆದ ವಾರದ ಸಂಚಿಕೆಯಲ್ಲೇ ಸ್ಪಷ್ಟಪಡಿಸಿರುವಂತೆ, ಪ್ರಕೃತ ಇಡೀ ಬಳ್ಳಾರಿ ಜಿಲ್ಲೆಯ ತಂಟೆಗೆ ತೆಲುಗರು ಬರಕೂಡ ದೆಂಬ ಕನ್ನಡಿಗರ ಆಕ್ಷೇಪವು ನ್ಯಾಯವಾ ದುದ; ಸಾಧಾರವಾದುದು; ಮತ್ತು ಕೇಂ ದ್ರ ನಾಯಕರಿಂದ ಮನ್ನಿಸಲ್ಪಡಲೇಬೇ ಕಾದುದು. ಆದರ ಬೆನ್ನಲ್ಲೇ 'ಬಳ್ಳಾರಿ ಸಂಬಂಧದ ವ್ಯವಸ್ಥೆಯಾದ ಮೇಲೆಯೇ ಆಂಧ್ರ ಪ್ರಾಂತ್ಯದ ರಚನೆ" ಎಂ ಅಭಿಪ್ರಾಯವನ್ನು ಪಂಡಿತ ನೆಹ... ಗಳು ಹೊರಗೆಡಹಿದ್ದಾರೆ. ರಾಷ್ಟ್ರ ... ಯಕರು ತಾವು ತ್ರಿಮೂರ್ತಿ ಸ... ತಿಯ ಮೂಲಕ ಮಂಡಿಟ್ಟಿದ್ದ ಶ... ಗಳನ್ನು ಅಕ್ಷರಶಃ ಪಾಲಿಸಿ ಕೊಡಲು ... ದ್ಧರಿದ್ದಾರೆ, ಎಂಬ ಭರವಸೆಯು ಈ ಮ... ಲಕ ದೊರೆತಿರುವುದು ಸಮಾಧಾನಕ... ಬಳ್ಳಾರೀ ಸಂಬಂಧದ ಕನ್ನಡಿಗರ ಆಕ್ಷೇ... ಪಗಳನ್ನು ಕೇಂದ್ರ ಸರಕಾರದ ನಾಯ... ರಿಗೆ ಸರಿಯಾದ ವಿಧಾನಗಳಿಂದ ಮನ... ಣಿಸುವ ಪ್ರಯತ್ನಗಳಾಗಿರುವುದು ಶ್ಲಾ... ನೀಯ. ಬೊಂಬಾಯಿಯಲ್ಲಿರುವ ಸರ್ದಾ... ರ್ ವಲ್ಲಭಭಾಯಿಗಳೆಡೆಗೆ ಕನ್ನಡಿಗರ ಶಿ... ಮಂಡಲಿಯು ಹೋಗಿ, ಬಳ್ಳಾ... ಸಂಬಂಧದ ಎಲ್ಲಾ ವಿಷ... ಗಳನ್ನೂ ಅವರೊಡನೆ ನಿವೇ... ಸಿಕೊಂಡಿದ್ದಿತು. ಕೇಂದ್ರ ಸರಕಾ... ಮನವಿಗಳು ಹೋಗಿವೆ. 'ರಾಜೀನಾಮೆ... ಸಂಬಂಧದ ನಿರ್ಣಯ ಮತ್ತು ಆಚ... ಗಳಲ್ಲಿ ಕನ್ನಡಿಗರು ತೋರಿಸಿರುವ ಅ... ವ್ಯಸ್ತತೆ ಮತ್ತು ಅಚಾತುರ್ಯಗಳು ... ಳ್ಳಾರಿ ಸಂಬಂಧದ ಅವರ ಆಚರಣೆ... ಕ್ಕಿಲ್ಲ. ಮೊದಲನೆಯದು ತ್ರಿಮೂ... ಸಮಿತಿಯ ಸೂತ್ರಗಳಿಗೆ ವಿರುದ್ಧವಾ... ದ್ದರೆ, ಎರಡನೆಯದು ಆ ಸೂತ್ರಗಳಿಗ... ಸಾರವಾಗಿದೆ. ಮೊದಲನೆಯದು, ಪ್ರಾ... ತ್ಯರಚನೆಯ ಮಟ್ಟಿಗೆ ಕೇಂದ್ರ ನಾಯ... ಗತಿಯನ್ನು ಅವರು ಅಂಗೀಕರಿಸಿರ... ಮತ್ತು ಕನ್ನಡಿಗರು ಒಪ್ಪಿಕೊಂಡಿರ... ವಿಧಾನಗಳಿಂದ ತಪ್ಪಿಸುವಂತಹದಿ... ರೆ, ಎರಡನೆಯದು ಅವರ ವಿಧಾನಗಳನ... ಅವರು ಪಾಲಿಸುವಂತೆ ಮಾಡಲು ಪ್ರೇ... ಪಿಸುವಂತಹದಿದೆ. ಆದ್ದರಿಂದ ಬಳ್ಳಾ... ಜಿಲ್ಲೆಯು ಕನ್ನಡಿಗರ ಸಮ್ಮತಿ ವಿನ... ಆಂಧ್ರ ಪ್ರಾಂತ್ಯದೊಳಗೆ ಸೇರುವಂತಿ... ಆ ಸಂಬಂಧದ ಒಂದು ವ್ಯವಸ್ಥೆಯು ... ಲುಗರು ಮತ್ತು ಕನ್ನಡಿಗರೊಳಗಾ... ಕೊಳ್ಳದೆ ಆಂಧ್ರ ಪ್ರಾಂತ್ಯವಾಗುವಂತಿ... ಅಂತಹ ವ್ಯವಸ್ಥೆಯು ಜನವರಿ 26ರೊ... ಗಾಗುವುದು ಅಸಂಭವವಾದ್ದರಿಂದ ಆಂ... ಆಂಧ್ರ ಪ್ರಾಂತ್ಯವು ಅಸ್ತಿತ್ವಕ್ಕೆ ... ವಂತಿಲ್ಲ— ಎಂದೀಗ ನಿರೀಕ್ಷಿಸಬಹುದು...

### ಕಲಿಯಬೇಕಾದ ಪಾಠ.

'ರಾಜೀನಾಮೆಗೆ ಅನುಮತಿ ಯಾ... ಸುವ' ಚಳವಳವೆದ್ದಂದಿನಿಂದ ನಾವು ... ತಿ ಬಾರಿಯೂ ಸವಿವರ ವಿಮರ್ಶೆಯೊ... ಗೆ ಸ್ಪಷ್ಟಪಡಿಸಿರುವ ವಸ್ತು ಸ್ಥಿತಿಯೆ... ಭಾಷಾವಾರು ಪ್ರಾಂತ್ಯ ರಚಿಸುವುದ... ಕೇಂದ್ರ ನಾಯಕರಿಗೆ ಉತ್ಸಾಹವೇನ... ಇಲ್ಲ. ಅಗತ್ಯವಿದ್ದೋ ಅನಗತ್ಯವ... ಯೋ, ಪ್ರಕೃತ ಇಡೀ ರಾಷ್ಟ್ರದ ದೊ...




Approved firm by the Govt. of Mysore
Certificated by the Agent of the Govt. of Ceylon in India.

# ಕೆನರಾ ಬ್ಯಾಂಕ್, ಲಿಮಿಟೆಡ್

(ಸ್ಥಾಪನೆ ೧೯೦೬)

(ಜೊತೆಗಾರರ ಪರಿಮಿತಿಸಲ್ಪಟ್ಟು ಭಾರತದಲ್ಲಿ ಸಾಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ೧,೦೦೦ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೫೦ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತವೆ.

| | | | | |
|---|---|---|---|---|
| ೩ ತಿಂಗಳು | ... | ... | ನೂರಕ್ಕೆ ವರ್ಷಕ್ಕೆ | ೨। |
| ೪ ರಿಂದ ೫ ತಿಂಗಳು | ... | ... | ,, ,, | ೨॥ |
| ೬ ರಿಂದ ೯ ತಿಂಗಳು | ... | ... | ,, ,, | ೨॥। |

ರೂ. ೧,೦೦೦ಕ್ಕೆ ಕಡಿಮೆಯಲ್ಲದ ರೂ. ೧೦,೦೦೦ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದು ಕೊಳ್ಳಬಹುದು.

ಮಂಗಳೂರು ಶಾಖೆಗಳು

(1) ಬಂದರ ರೋಡ್; (2) ಡೊಂಗರಕೇರಿ,

ಇತರ ಶಾಖೆಗಳು: ಕಾರ್ಕಳ, ಬಂಟವಾಳ, ಮುಲ್ಕಿ, ಕುಂದಾಪುರ, ಉಡುಪಿ, ಗಂಗೊಳ್ಳಿ, ಪುತ್ತೂರು, ಕಾಸರಗೋಡು, ಬೊಂಬಾಯಿ, ಇತ್ಯಾದಿ ಇತ್ಯಾದಿ.

**CANARA BANK, LIMITED**

**(Estd 1906)**

# -ಆಂಧ್ರ ಪ್ರಾಂತ್ಯ ರಚನೆ ಸಾಧ್ಯವೆ?

## ಮದ್ರಾಸ್ ನಗರದ ಕುರಿತು ಹೆಚ್ಚಿನ ಆಂಧ್ರರ ಬೇಡಿಕೆ.

ಗಾರಿಕೆಯ ದೃಷ್ಟಿಯಿಂದ ಭಾಷಾನ್ವಯ ಪ್ರಾಂತ್ಯ ರಚನೆಗೆ ಸ್ವತಃ ನ್ಯಾಯ ಹಾಕಲು ...ವರು ಅನುಕೂಲಿಸಿದ್ದಾರೆ. ಆದರೂ, ಸಂಬಂಧಪಟ್ಟ ಭಾಷಾಭಾಗಗಳವರು ಅಪೇಕ್ಷಿಸಿದರೆ, ಮತ್ತು ಸಂಬಂಧದ ಸರ್ವಸಮ್ಮತ ಯೋಜನೆಯನ್ನು ತಮ್ಮ ಮುಂದಿಟ್ಟರೆ ಅವರು ಸಂತೋಷಪೂರ್ವಕ ಭಾಷಾನುಸಾರ ಪ್ರಾಂತ್ಯ ರಚಿಸಿಕೊಡುವರು. ...ಪ. ವರದಿಯಲ್ಲಿ ಒಂದಿರುವುದಾದರೂ ಈ ಘೋಷಣೆ ಮತ್ತು ರೀತಿನೀತಿ ನಿರ್ದೇಶಗಳೇ. ಆ ತ್ರಿಮೂರ್ತಿ ವರದಿಯ ಶರ್ತಗಳೆಂದರೆ, ಸದ್ಯ ಸ್ಥಿತಿಯಲ್ಲಿ ವೈಷಮ್ಯ, ಮೇಲಾಟ ಸ್ಪರ್ಧೆಯಂತಹ ಅಶಾಂತಿ ನಿರ್ಮಿತ ಭಾವನೆಗಳು ಗಡಿ ಮೀರಿ ಹೋಗದಂತೆ ಹಾಕಿರುವ ತಡೆಗಳೇ ... ಕೊಂಡು ಪ್ರಾಂತ್ಯ ರಚನೆಯಾಗದಂತೆ ಮಾಡಿರುವ ಅಸಾಧ್ಯ ಬೇಡಿಕೆಗಳೇನೂ ಇಲ್ಲ. ಅಂದ ಮೇಲೆ ಅವುಗಳನ್ನು ಪಾಲಿಸಿಯೇ ಸ್ವಭಾಷಾ ಪ್ರಾಂತ್ಯ ರಚಿಸಿಕೊಳ್ಳುವುದರಲ್ಲಿ ಕನ್ನಡಿಗರು ತಮ್ಮೆಲ್ಲ ಶಕ್ತಿ ಉತ್ಸಾಹಗಳನ್ನು ವ್ಯಯಿಸಬೇಕಲ್ಲದೆ, ಅ...ನಾಯಕರಿಂದ ಮನ್ನಣೆ ಕೂಡುವಂತ ಘೋಷಣೆ ಪ್ರದರ್ಶಿಸಿ ಫಲವಿಲ್ಲ. ಆಂಧ್ರರು ತ್ರಿಮೂರ್ತಿ ವರದಿ ಶರ್ತಗಳನ್ನು ಸ್ಪಷ್ಟ...ಕೊಂಡು ಮದ್ರಾಸ್ ನಗರದ ಮೇಲಿನ ಬೇಡಿಕೆಯನ್ನು ಬಿಟ್ಟುಕೊಟ್ಟರು—ವೈ...ರು, ವ್ಯವಹಾರವೇನೆಂದರೆ ಕನ್ನಡಿಗರ ...ಕಂಡುಬರುತ್ತಿರುವಂತಹ ಬಹುಮುಖೀ ಅಭಿಪ್ರಾಯಗಳನ್ನು ತೋರಿಸಿದ ಆಂಧ್ರ ಪ್ರಾಂತ್ಯ ರಚನೆಯ ಮಟ್ಟಿಗೆ ತೆಲುಗರಲ್ಲಿ ಅಖಂಡಾಭಿಮತವನ್ನು ಮುಂದಿಟ್ಟ...— ಕೇಂದ್ರ ನಾಯಕರು ತಾವು ಕೊಟ್ಟ ...ತಿಪಂತ ಆಂಧ್ರ ಪ್ರಾಂತ್ಯ ರಚನೆ ಮಾಡಲು ಮುಂದಾದರು. ಈಗ ಕನ್ನಡಿಗರ ವಾದವಿರುವ ಬಳ್ಳಾರಿಯ ಭಾಗಗಳನ್ನು ಕೇಳಿದ್ದಾರೆ— ಅದು ತ್ರಿಮೂರ್ತಿ ವರದಿಯ ಶರ್ತಕ್ಕೆ ವಿರುದ್ಧವಿರುವುದರಿಂದ, ...ದರೆ ವ್ಯವಸ್ಥೆಯಾಗದ ಆಂಧ್ರ ರಚನೆಯಾಗದೆಂದು ಕೇಂದ್ರ ನಾಯಕರು ಹೇಳಿದ್ದಾರೆ. ಕೇಂದ್ರದ ಈ ನ್ಯಾಯವಂತರ ಮುಖದಲ್ಲಿ ಪ್ರಾಂತ್ಯ ರಚನೆಯ ಮ...ಗಿ ತೆಲುಗರು ಗೆದ್ದರೆ, ಬಳ್ಳಾರಿ ಪ್ರಶ್ನೆಯ ಮಟ್ಟಿಗೆ ಕನ್ನಡಿಗರು ಗೆಲ್ಲಬಹುದು. ಈ ರೀತಿ, ಕ್ರಮಪಾಲನಾ ಪರೀಕ್ಷೆಯಲ್ಲಿ ಪಾಸಾಗುವವರಿಗೆ ಸರ್ಟಿಫಿಕೇಟು ನೀಡುವ ನಿಷ್ಪಕ್ಷಪಾತೀ ಘೋಷಣೆಯನ್ನು ಕೇಂದ್ರ ನಾಯಕರು ಮಾಡಿರುವಾಗ, ಅವರು ಕನ್ನಡಿಗರನ್ನು ಉಪೇಕ್ಷಿಸಿ ಆಂಧ್ರರ ಕಡೆಗೆ ಪಕ್ಷಪಾತ ವಹಿಸಿದ್ದಾರೆ, ಎಂದು ದೂರುವುದು ನ್ಯಾಯವೆ? ಅಂತಯೇ ...ಜೇನಾಮೆ ಪ್ರಕರಣಗಳಂತಹ ಮುಷ್ಕರ ಬುದ್ಧಿ ಪ್ರದರ್ಶಿಸುವ ಬದಲಿಗೆ ತ್ರಿಮೂರ್ತಿ ಸೂಚನೆಗಳಂತೆ ಮೈಸೂರು ಸಮೇತ ಅಖಿಲ ಕರ್ನಾಟಕದ ಜನತೆಯು ಸಮ್ಮತದ ಯೋಜನೆ ತಯಾರಿಗೆ ಪ್ರಯತ್ನಿಸಿ, ಆ ಕಾರ್ಯದಲ್ಲಿ ತಮಗಗತ್ಯಬೀಳುವಲ್ಲೆಲ್ಲಾ ಕೇಂದ್ರ ನಾಯಕರ ಸಹಾಯವನ್ನು ಪಡೆಕೊಳ್ಳುವುದೇ ಕರ್ನಾಟಕದ ಮುಂದಾಳುಗಳ ಕರ್ತವ್ಯವಲ್ಲವೆ? ಮನೇ ವಿವಾದವೆಬ್ಬಿಸಿರುವ ಕರ್ನಾಟಕದ ಮುಖಂಡರು ಈಗಲಾದರೂ ಈ ಪಾಠವನ್ನು ಕಲಿತುಕೊಳ್ಳಬೇಕಾದುದಗತ್ಯ.

### ಮದ್ರಾಸ್ ಕೌನ್ಸಿಲಿನಲ್ಲಿ

ಭಾಷಾವಾರು ಪ್ರಾಂತ್ಯ ರಚನೆಯ ಕೊನೆಯ ತೀರ್ಮಾನ ಕರ್ತರಿರುವ ಕೇಂದ್ರ ನಾಯಕರ ಆಲೋಚನೆಗಳು ಹೀಗಿದ್ದರೆ ಬಳ್ಳಾರಿ ವಿಭಜನೆಯ ಶಿಫಾರಸು ಮಾಡಿರುವ ಮದ್ರಾಸ್ ಸರಕಾರದ ಭಾವನೆಯೆಂತ ಹದೆಂಬುದನ್ನು ಮದ್ರಾಸ್ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಆ ಸಂಬಂಧವಾಗಿ ಬಂದ ಪ್ರಶ್ನೆಗಳಿಗೆ ಕೌನ್ಸಿಲ್ ನಾಯಕ ಮತ್ತು ಆರೋಗ್ಯ ಮಂತ್ರಿ ಡಾ| ಯಸ್. ಯಸ್. ರಾಜನ್ ರು ಸರಕಾರದ ಪರವಾಗಿ ಕೊಟ್ಟ ಈ ಕೆಳಗಿನ ಉತ್ತರಗಳು ಕೆಲಮಟ್ಟಿಗೆ ವಿದಿತ ಪಡಿಸಿವೆ—

ಶ್ರೀ. ಬಿ. ಭೀಮರಾವ್—ಕನ್ನಡಿಗರ ಅತ್ಯಧಿಕ ಬಹುಮತವಿರುವ ಬಳ್ಳಾರಿ ಜಿಲ್ಲೆಯ ಕುರಿತು ಪ್ರಾಮುಖ್ಯ ನಿರ್ಧಾರಗಳನ್ನು ಕೈಕೊಳ್ಳಲಿರುವ ವಿಭಜನಾ ಸಮಿತಿಯಲ್ಲಿ ಓರ್ವ ಕನ್ನಡ ಪ್ರತಿನಿಧಿಯನ್ನೂ ಸೇರಿಸಿಕೊಳ್ಳದಿರಲು ಕಾರಣವೇನು?

ಡಾ| ರಾಜನ್— ಪ್ರಾಂತ್ಯದ ಉಳಿದ ಭಾಗಗಳಿಂದ ಆಂಧ್ರ ಕ್ಷೇತ್ರವನ್ನು ಬಿಂಗಡಿಸುವುದೇ ಅಲ್ಲಿದ್ದ ಕೆಲಸ. ಆ ಸಮಿತಿಯಲ್ಲಿ, ವಿಶಿಷ್ಟ ಕನ್ನಡ ಮಹನೀಯರೊಬ್ಬರನ್ನು ಸೇರಿಸಿಕೊಳ್ಳುವುದಗತ್ಯವೆಂದು ನಮಗನ್ನಿಸಲಿಲ್ಲ.

ಶ್ರೀ. ಭೀಮರಾವ್— ಕನ್ನಡ ಜನತೆಯ ಅಭಿಪ್ರಾಯಗಳನ್ನು ತಿಳಿದುಕೊಳ್ಳಲಾಗುವಂತೆ, ಆದರಲ್ಲೂ ಒಬ್ಬ ಮಹನೀಯರು ಆ ಸಮಿತಿಯಲ್ಲಿ ಕಲಸ ಮಾಡಬೇಕೆಂದು ಮುಂದೆ ಬಂದಿದ್ದರೂ ಕೂಡಾ, ಓರ್ವ ಕನ್ನಡಿಗ ಸದಸ್ಯನನ್ನು ಸೇರಿಸಿಕೊಳ್ಳದಿದ್ದುದೇಕೆ?

ಡಾ| ರಾಜನ್— ಆ ಜಿಲ್ಲೆಯ ಬಹುಸಂಖ್ಯಾಕ ತಾಲೂಕುಗಳನ್ನು ಆಂಧ್ರ ಕ್ಷೇತ್ರದಿಂದ ಹೊರಗಿಡಲಾಗಿದೆ. ಈ ಆರು ತಾಲೂಕುಗಳನ್ನು ಹೊರತುಪಡಿಸಬೇಕೆಂದೂ ತೆಲುಗು ಭಾಷಾಭಾಗಗಳು ಮಾತ್ರವೇ ಆಂಧ್ರ ಪ್ರಾಂತ್ಯಕ್ಕೆ ಸೇರಬೇಕೆಂದೂ ವಿಭಜನಾ ಸಮಿತಿ ಶಿಫಾರಸು ಮಾಡಿದ್ದಿತು. ಸರಕಾರವೇ ಅಂತಹ ಪ್ರಾತಿನಿಧ್ಯ ವಹಿಸಿ ತಮ್ಮ ಶಿಫಾರಸುಗಳಲ್ಲಿ ಆ ಕಡೆಗಿನ ಗುಣವಾದ ರಿಯಾಯತಿಯನ್ನು ಸಾಕಷ್ಟು ಮಾಡಿರುವಾಗ, ಕನ್ನಡಿಗರ ಒಂದು ಪ್ರತ್ಯೇಕ ಪ್ರಾತಿನಿಧ್ಯವಿರಬೇಕಾಗಿದ್ದ ಆವಶ್ಯಕತೆ ತೋರುವುದಿಲ್ಲ.

ಶ್ರೀ. ಭೀಮರಾವ್— ಈಗ ಆಂಧ್ರ ಪ್ರಾಂತ್ಯದಲ್ಲಿ ಸೇರಿಸಲ್ಪಟ್ಟಿರುವ ಆದೋನಿ, ಆಲೂರು, ರಾಯದುರ್ಗ ತಾಲೂಕುಗಳು ಕೂಡಾ ಪ್ರಾಮುಖ್ಯವಾಗಿ ಕನ್ನಡ ತಾಲೂಕುಗಳೆಂಬುದೂ, ಜಿಲ್ಲಾ ಬೋರ್ಡು ಚುನಾವಣೆಗೆ ಆಂಧ್ರ ಪ್ರಾಂತಿಕ ಕಾಂಗ್ರೆಸ್ ಸಮಿತಿಯು ಈ ತಾಲೂಕುಗಳಲ್ಲಿ ನಿಲ್ಲಿಸಿದ್ದ ಹುರಿಯಾಳುಗಳ ಪೈಕಿ ಒಬ್ಬನ ವಿನಹ ಉಳಿದ ಎಲ್ಲರೂ ಸೋತು ಹೋಗಿದ್ದರೆಂಬುದೂ ನಿಜವಲ್ಲವೆ?

ಡಾ| ರಾಜನ್— ಆಗಿರಬಹುದು; ಆದರೆ ಇದು ಇಂದಿನ ಸ್ಥಿತಿಯಲ್ಲೇನೂ ಹೆಚ್ಚು ಕಡಿಮೆ ಮಾಡುವಂತಹದಲ್ಲ.

ಶ್ರೀ. ಆದಿತ್ಯನ್—ವಿಭಜನಾ ಸಮಿತಿಯ ಇಬ್ಬರು ಮಂತ್ರಿಗಳ ಮೂಲಕ ಈ ವಿಷಯದಲ್ಲಿ ಬಳ್ಳಾರಿಯ ಸಾರ್ವಜನಿಕ ಅಭಿಪ್ರಾಯವನ್ನು ಸಂಗ್ರಹಿಸಿದ್ದಿಲ್ಲವೆ?

ಡಾ| ರಾಜನ್—ಇದೆ.

ಮಿ. ಅಬ್ದುಲ್ ಲತೀಫ್ ಫರೂಕಿ— "ಬಳ್ಳಾರಿ ಜಿಲ್ಲೆಯಿಂದ ಬಂದಿರುವ ಆಕ್ಷೇಪಗಳ ದೆಸೆಯಿಂದಾಗಿ ಜನವರಿ 26 ರೊಳಗೆ ಆಂಧ್ರ ರಚನೆ ಮಾಡುವುದು ಕಷ್ಟವಾದೀತು" ಎಂದು ಪ್ರಧಾನಿ ನೆಹರು ಗಳು ಹೇಳಿದ್ದರೆಂದು ವರದಿಯಾಗಿರುವುದನ್ನು ಮಂತ್ರಿಗಳು ಓದಿರುವರೆ?

ಡಾ| ರಾಜನ್—ಇಲ್ಲ.

ಶ್ರೀ. ಸತ್ಯನಾರಾಯಣ ರಾವ್—ವಿಭಜನಾ ಸಮಿತಿಯಲ್ಲಿ ಬಳ್ಳಾರಿಯ ಕನ್ನಡ ಭಾಗಗಳ ಪ್ರಾತಿನಿಧ್ಯ ವಹಿಸಿದ್ದವರು ಆಂಧ್ರೇತರ ಸದಸ್ಯರ ಪೈಕಿ ಯಾರು?

ಡಾ| ರಾಜನ್—ಆ ಸಮಿತಿಯಲ್ಲಿ ಆಂಧ್ರೇತರ ಭಾಗಗಳ ಮೂರು ಅಥವಾ ನಾಲ್ಕು ಮಂದಿ ಸದಸ್ಯರಿದ್ದರು. ಬಳ್ಳಾರಿ ಜಿಲ್ಲೆಯ ಸಂಬಂಧವಾಗಿ ನಡೆದ ಇವೆಲ್ಲಾ ಕೆಲಸಗಳಿಗೆ ಅವರೇ ಜವಾಬ್ದಾರರು.

ಶ್ರೀ. ಭೀಮರಾವ್—ಶ್ರೀ ಗಳಾದ ಭಕ್ತವತ್ಸಲಮ್, ಗೋಪಾಲ ರೆಡ್ಡಿಗಳು ಬಳ್ಳಾರಿಯಲ್ಲಿ ಸಂಚರಿಸಿದ್ದಾಗ, ಅವರೆದಿರು ಹಾಜರಾದವರ ಪೈಕಿ ಸೇಕಡಾ 95ರಷ್ಟು ಮಂದಿ, ಯಾವ ಕಾರಣಕ್ಕಾಗಿಯಾದರೂ ಬಳ್ಳಾರಿಯನ್ನು ವಿಭಜಿಸಬಾರದೆಂದೂ, ಅದರ ಯಾವದೇ ಭಾಗವನ್ನು ಆಂಧ್ರ ಕ್ಷೇತ್ರದೊಳಗೆ ಸೇರಿಸಬಾರದೆಂದೂ ಕೇಳಿಕೊಂಡಿದ್ದರೆಂಬುದು ನಿಜವೆ?

ಡಾ| ರಾಜನ್—ಆದಾಗಿರಬಹುದು.

ಭೀಮರಾವ್—ಮದ್ರಾಸಿನ ಒಂದು ದಿನ ಪತ್ರಿಕೆಯಲ್ಲಿ ಪ್ರಕಟವಾದಂತೆ, ಭಾರತ ಸರಕಾರವು ತನ್ನ ದ್ವಿತೀಯ ಸೂಚನಾ ರವಾನೆಯಲ್ಲಿಯೇ, ಬಳ್ಳಾರಿಯ ವಿವಾದಾತ್ಮಕ ತಾಲೂಕುಗಳನ್ನು ಆಂಧ್ರದೊಳಗೆ ಸೇರಿಸುವ ಕುರಿತು ತನ್ನ ವಿರೋಧವನ್ನು ವ್ಯಕ್ತಪಡಿಸಿದುದಿದೆಯೆ?

ಡಾ| ರಾಜನ್— ಪತ್ರಿಕಾ ವರದಿಗಳು ಏನನ್ನೂ ಹೇಳಬಹುದು. ಆದರೆ ಸರಕಾರಕ್ಕೇನೂ ಅಂತಹ ವರದಿಗಳು ಬದ್ಧಗೊಳಿಸುವಂತಿಲ್ಲ; ಮತ್ತವು ಸತ್ಯ ಸ್ಥಿತಿಯೋ ಅಲ್ಲವೋ ಎಂಬುದನ್ನು ಹೇಳುವಂತಿಲ್ಲ.

ಶ್ರೀ. ಭೀಮರಾವ್— ಅಧಿಕೃತ ಪ್ರೇರಣೆಗೊಳಗಾಗಿ ಪತ್ರಿಕೆಯು ಪ್ರಕಟಿಸಿರುವ ಆ ಸುದ್ದಿಯನ್ನು ಸರಕಾರವು......

ಅಧ್ಯಕ್ಷರು— ಈ ಪ್ರಸ್ತಾಪವು ಆಂಧ್ರದಿಂದ ಹೊರಗಿರಿಸಿದ ಆರು ತಾಲೂಕುಗಳ ಸಂಬಂಧದ್ದೆಂದು ನಂಬುತ್ತೇನೆ. ಜಿಲ್ಲೆಯ "ವಿವಾದಾತ್ಮಕ ಭಾಗ"ವೆಂಬ ಮಾತು ಕೇವಲ ಈ ಆರು ತಾಲೂಕುಗಳಿಗೆ ಸಂಬಂಧಿಸಿದ್ದಾಗಿದೆ

ಶ್ರೀ. ಭೀಮರಾವ್— ಅಲ್ಲ; ಇಡೀ ಜಿಲ್ಲೆಯೇ ವಿವಾದಕ್ಕೊಳಗಾಗಿದೆ. 'ವಿವಾದಾತ್ಮಕ ಭಾಗ'ವೆಂದರೆ, ಈಗ ಆಂಧ್ರದೊಳಗೆ ಸೇರಿಸಲ್ಪಟ್ಟಿರುವ ಆ ಮೂರು ತಾಲೂಕುಗಳೇ. ಕೇಳ್ಕರ್ ವರದಿಯ ಕುರಿತು ಇಕ್ಕಡೆಯವರೂ ಸಮಾಧಾನಗೊಂಡಿರದೆ, ಪ್ರತಿಯೊಬ್ಬರೂ ಬಳ್ಳಾರಿ ಇಡೀ ಜಿಲ್ಲೆ, ಅಥವಾ ಜಿಲ್ಲೆಯ ಅತಿ ಹೆಚ್ಚಿನ ಭಾಗಗಳ ಹಕ್ಕು ಬೇಡುತ್ತಿದ್ದಾರೆಂದು ದಾರ್ ಸಮಿತಿಯು ತನ್ನ ವರದಿಯ 34ನೇ ಕಲಮಿನಲ್ಲಿ ನಮೂದಿಸಿರುವುದು ನಿಜ ತಾನೆ?

ಡಾ| ರಾಜನ್—ಅದು ಕೇವಲ ಒಂದು ಅಭಿಪ್ರಾಯ ನಮಗೀಗ ಆ ವರದಿಯ ಸಂಬಂಧವೇನೂ ಇಲ್ಲ

ಶ್ರೀ. ಭೀಮರಾವ್—ಈ ಮೂರು ತಾಲೂಕುಗಳು ವಿವಾದರಹಿತ ತೆಲುಗು ತಾಲೂಕುಗಳೆಂಬ ತೀರ್ಮಾನಕ್ಕೆ ಸರಕಾರವು ಬಂದದ್ದು ಯಾವಾಗ?

ಡಾ| ರಾಜನ್—ಅಲ್ಲಿ ಆಂಧ್ರ ಜನತೆಯೇ ಅತ್ಯಧಿಕ ಸಂಖ್ಯೆಯಲ್ಲಿದೆ.

ಆಂಧ್ರ ಪ್ರಾಂತ್ಯ ರಚನೆಯ ಕುರಿತು ಕೇಂದ್ರ ಸರಕಾರ ಮತ್ತು ಮದ್ರಾಸ್ ಸರಕಾರದೊಳಗೆ ನಡೆದಿದ್ದ ಸೂಚನಾ ವ್ಯವಹಾರಗಳು, ವಿಭಜನಾ ಸಮಿತಿಯ ವರದಿ, ಇತ್ಯಾದಿಗಳು ಕೌನ್ಸಿಲಿನ ಮುಂದೆ ಬರುವಂಥವುಗಳಲ್ಲವೆಂದು ಮಂತ್ರಿಗಳೆಂದರು. ಜನವರಿ 26ರೊಳಗೆ ಆಂಧ್ರ ಪ್ರಾಂತ್ಯ ರಚನೆಯಾಗುವಂತೆ ಮಾಡುವ ಅವಸರದ ದೆಸೆಯಿಂದ ಸಭೆಯ ಅನುಮತಿ ಪಡೆಕೊಂಡು ಕೆಲಸ ಮಾಡುವದಸಾಧ್ಯವಾಯಿತೆಂದರು.

The Agricultural & Industrial Bank Ltd.,
COONDAPOOR.
Estd. 1934

*We Wish All our Shareholders, Depositors and Patrons a Happy and More Prosperous New Year.*

Coondapoor, 25-12-1949. A. Madhava Pai, General Manager.

# ಪಂಡಿತ ನೆಹರುಗಳ ಅಭಿಮತ

## ಇತರ ಆಕ್ಷೇಪಗಳು.

ಬಳ್ಳಾರಿಯ ಸಂಬಂಧವಾಗಿ, ಬೆಲೆ ಬಾಳದೇ ಬೇಕಾದ ಕನ್ನಡಿಗರ ಪ್ರಬಲಾಕ್ಷೇಪವಿರುವಾಗ, ಈಗಿನ ಪ್ರಾಂತ್ಯ ರಚನಾ ವ್ಯವಸ್ಥೆಯಿಂದ ಆಂಧ್ರರಲ್ಲೇ ಬಹು ಸಂಖ್ಯಾಕರು ಅಸಮಾಧಾನಗೊಂಡಂತಿದೆ. ಹಣಕಾಸಿನ ಪಾಲುಪಟ್ಟಿಯ ಕುರಿತೂ ಮತಭೇದಗಳಿವೆಯಾದರೂ ತೆಲುಗರ ಮುಖ್ಯ ಆಕ್ಷೇಪವು ಮದ್ರಾಸ್ ನಗರದ ಮೇಲಿನ ತಮ್ಮ ಹಕ್ಕನ್ನು ಈಗಿಂದೀಗಲೇ ಬಿಟ್ಟುಕೊಡುವುದಕ್ಕಿದೆ. ವಿಭಜನಾ ಸಮಿತಿಯ ಎಂಟು ಮಂದಿ ಸದಸ್ಯರಲ್ಲಿ ಶ್ರೀಗಳಾದ ಗೋಪಾಲ ರೆಡ್ಡಿ, ಸಂಜೀವ ರೆಡ್ಡಿ, ಕಲಾ ವೆಂಕಟರಾವ್, ಟಿ. ಪ್ರಕಾಶಮ್— ಈ ನಾಲ್ವರು ತೆಲುಗರು. ಈ ಪೈಕಿ ಉಳಿದ ಮೂವರು ವಿಭಜನಾ ಸಮಿತಿಯ ತೀರ್ಮಾನಕ್ಕೊಪ್ಪಿದಾಗ ಶ್ರೀ. ಟಿ. ಪ್ರಕಾಶಮರು, ತಾತ್ಕಾಲಿಕವಾಗಿ ಮದ್ರಾಸಿನಲ್ಲಿ ಆಂಧ್ರ ರಾಜಧಾನಿಯನ್ನು ಗೊಡಿಸದುದಕ್ಕಾಗಿಯೂ, ಹಣಕಾಸಿನ ಕೆಲವು ಲೆಕ್ಕಾಚಾರಗಳಿಗಾಗಿಯೂ ತಮ್ಮ ಅಸಮ್ಮತಿ ಸೂಚಿಸಿದ್ದರು. ಅಂತೆಯೇ ಇದೇ ತಾ. ೨ರಲ್ಲಿ ಸೇರಿದ್ದ ಆಂಧ್ರ ಪ್ರಾಂತಿಕ ಕಾಂಗ್ರೆಸ್ ಕಮಿಟಿಯೂ ಆಂಧ್ರದ ತಾತ್ಕಾಲಿಕ ರಾಜಧಾನಿಯನ್ನು ಮದ್ರಾಸಿನಲ್ಲೇ ಇರಗೊಡಿಸಬೇಕೆಂದು ನಿರ್ಣಯಿಸಿದೆ. ವಿವಾದವುಳ್ಳ ವಿಷಯಗಳನ್ನು ಮಧ್ಯ ಪಂಚಾಯಿತಿಕೆಗೆ ಬಿಟ್ಟು, ಸರ್ವಸಮ್ಮತ ವಿಷಯಗಳನ್ನಾಧರಿಸಿ, ಸಾಧ್ಯವಾದರೆ ಜನವರಿ 26ರೊಳಗೆ ಆಂಧ್ರ ಪ್ರಾಂತ್ಯ ನಿರ್ಮಿಸಬೇಕೆಂದು ಆಂಧ್ರ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಠರಾಯಿಸಿದೆ. ಮದ್ರಾಸ್ ನಗರದ ಹಕ್ಕನ್ನು ಈಗಲೇ ಪೂರ್ಣ ಬಿಟ್ಟು, ತಾ. 26ರೊಳಗೆ ಆಂಧ್ರ ಪ್ರಾಂತ್ಯ ನಿರ್ಮಾಣ ಮಾಡಿಸುವುದಕ್ಕಿಂತ ಆ ನಗರದ ಹಕ್ಕು ಸಾಧನೆಗಾಗಿ ಕೆಲಕಾಲ ಕಾಯುವಂತಾದರೂ ಚಿಂತಿಲ್ಲವೆಂಬುದೇ ಆಂಧ್ರ ಕಾಂಗ್ರೆಸಿನ ಅಭಿಮತ. ಪುರಾತನ ಕಾಲದಲ್ಲಿ ಮದ್ರಾಸ್ ನಗರವು ಆಂಧ್ರದ್ದಾಗಿದ್ದರೂ ಈಗ ಅಲ್ಲಿ ನಿಜಕ್ಕೂ ತಮಿಳರೇ ಅಧಿಕ ಸಂಖ್ಯಾಕರು. ತ್ರಿಮೂರ್ತಿ ಸಮಿತಿಯು ಪ್ರಕೃತ ಮದ್ರಾಸ್ ನಗರದ ಪ್ರಸ್ತಾಪವೆತ್ತದೆ ಆಂಧ್ರ ಪ್ರಾಂತ್ಯ ರಚಿಸಬಹುದೆಂದು ಸೂಚಿಸಿದ್ದರಿಂದ, ರಿಪಬ್ಲಿಕ್ ಭಾರತದೊಂದಿಗೇನೇ ಆಂಧ್ರವನ್ನು ಅಸ್ತಿತ್ವಕ್ಕೆ ತರುವ ಆಸೆಯಿಂದ ತೆಲುಗರದನ್ನೊಪ್ಪಿಕೊಂಡಿದ್ದರು. "ಮದ್ರಾಸ್ ನಗರವು ಮುಂದೆ ಕಮಿಷನರರ ಆಡಳಿತಕ್ಕೊಳಗಾಗುವದೇ ಹೊರತು ತಮಿಳರದಾಗುವದಿಲ್ಲ. ಆ ರೀತಿ ಮೂರನೆಯದಾಗುವ ನಗರವನ್ನು ಸದ್ಯಕ್ಕೆ ಸೇರಿಸಿಕೊಳ್ಳದೇನೇ ಆಂಧ್ರ ಪ್ರಾಂತ್ಯ ರಚಿಸುವುದರಿಂದ ಹಕ್ಕು ಬಿಟ್ಟಂತಾಗವದಿಲ್ಲ" ಎಂಬ ಡಾ|| ಪಟ್ಟಾಭಿಗಳ ವಾದದ ಮೇಲೆ ಭರವಸೆಯಿಟ್ಟ ಆಂಧ್ರ ಕಾಂಗ್ರೆಸ್ ಅನುಮೋದಿಸಿದಕ್ಕೊಪ್ಪಿಗೆ ಕೊಟ್ಟದ್ದಿತು. ಆ ರೀತಿ ಮದ್ರಾಸ್ ಸಿಟಿ ಬೇರೆಯಾಗುವವರೆಗೆ ಆಂಧ್ರದ ರಾಜಧಾನಿಯನ್ನು ಅಲ್ಲೇ ಇರಗೊಡಿಸಿದರೆ, ಕೊನೆಯ ವರೆಗೂ ತಮಿಳರಿಗದು ಪೂರ್ಣ ಹಕ್ಕನ್ನು ಬಿಟ್ಟುಕೊಡದಂತಾಗುವದೆಂದು ಅವರು ಊಹಿಸಿದ್ದರು. ಆದರೀಗಲೇ ಮದ್ರಾಸ್ ನಗರದ ಹೊರವಲಯಕ್ಕೆ ಆಂಧ್ರ ರಾಜಧಾನಿ ಸಾಗಬೇಕೆಂದು ನಿರ್ಣಯವಾಗಿರುವುದರಿಂದ ತೆಲುಗರಲ್ಲಿ ತಾವು ತಪ್ಪಿಬಿದ್ದೆವೆಂಬ ದಿಗಿಲೇಳಹತ್ತಿದೆ. ಇನ್ನು ಬಳ್ಳಾರಿ ಇಡೀ ಜಿಲ್ಲೆಯು ಆಂಧ್ರದ ಹೊರಗುಳಿಯಬೇಕೆಂಬ ನಿರ್ಣಯವಾದರೆ ಅವರು ಮತ್ತಷ್ಟು ನಿರಾಶೆಗೀಡಾಗಬಹುದು. ಅತ್ತ ಇದೇ ತಾ. 8ರಲ್ಲಿ ಮದ್ರಾಸಿನಲ್ಲಿ ಸೇರಿರುವ ಚಿತ್ತೂರು, ಕಡಪಾ, ಕರ್ನೂಲು, ನೆಲ್ಲೂರು, ಅನಂತಪುರ, ಬಳ್ಳಾರಿ — ಈ ನಾಲ್ಕು ಜಿಲ್ಲೆಗಳುಳ್ಳ ರಾಯಲ್ ಸೀಮೆಯ ಮಹಾಸಭಾಧಿವೇಶನದ ಅಧ್ಯಕ್ಷ ಶ್ರೀ. ನರಸಿಂಹ ರೆಡ್ಡಿಯವರು ಸದ್ಯಕ್ಕೆ ಭಾಷಾವಾರು ಪ್ರಾಂತ್ಯ ರಚನೆ ಮಾಡಲೇ ಬಾರದೆಂದೂ ಸದ್ಯ ಸ್ಥಿತಿಯಲ್ಲಿ ರಾಯಲ ಸೀಮೆಯು ಆಂಧ್ರದೊಳಗೆ ಸೇರಲು ತಯಾರಿಲ್ಲವೆಂದೂ ಘೋಷಿಸಿದ್ದಾರೆ. ಈ ಮಾದರಿಯ ನಿರ್ಣಯವನ್ನು ಆ ರಾಯಲ ಸೀಮಾ ಮಹಾ ಸಭಾಧಿವೇಶನವು ಮಾಡಲಿದೆ. ತೀವ್ರ ಗತಿಯಿಂದ ಮುಂದೊತ್ತಿ ಬಂದ ಆಂಧ್ರ ರಚನಾ ಕಾರ್ಯವು ಈ ರೀತಿ ಇತ್ತ ಬಳ್ಳಾರಿಯ ಪ್ರಶ್ನೆ, ಅತ್ತ ಮದ್ರಾಸ್ ನಗರದ ಪ್ರಶ್ನೆಯೆಂಬ ಇಕ್ಕಳದೊಳಗೆ ಸಿಕ್ಕಿಕೊಂಡು ತಟಸ್ಥವಾಗಿದೆ.

## ನೆಹರೂ ಅಭಿಮತ.

ಇದೇ ಸಂದರ್ಭದಲ್ಲಿ ಪಂಡಿತ ನೆಹರುಗಳೀ ಕುರಿತಾಡಿರುವ ಮಾತುಗಳು 'ಜನವರಿ 26ರಲ್ಲೇ ಆಂಧ್ರ ಪ್ರಾಂತ್ಯ ಮೂಡುವುದು ಅಸಂಭವ'ವೆಂಬುದನ್ನು ಖಚಿತಪಡಿಸಿವೆ. ಇದೇ ತಾ. 6ರಲ್ಲಿ ಸಭೆಯ ಪತ್ರಿಕಾಪ್ರತಿನಿಧಿಗಳೆದಿರು ಪಂಡಿತ ನೆಹರುಗಳೆಂದಿದ್ದರು: "ಆಂಧ್ರ ಪ್ರಾಂತ್ಯ ನಿರ್ಮಾಣವನ್ನು ಕೇವಲ ಒಂದು ದಿನದ ಮಟ್ಟಿಗಾದರೂ ತಡಮಾಡಬೇಕೆಂಬ ಇಚ್ಛೆ ನಮಗಿಲ್ಲ. ಸಂಬಂಧಪಟ್ಟವರ ಪೂರ್ಣ ಸಮ್ಮತಿಯಿರಬೇಕೆಂಬ ಶರ್ತದೊಡನೆ ಮದ್ರಾಸ್ ಪ್ರಾಂತ್ಯವನ್ನು ವಿಂಗಡಿಸಲು ನಾವು ಒಪ್ಪಿಕೊಂಡಿರುವೆವೆಂಬುದೆ ಸರ್ವ ಪ್ರಥಮ ವಿಷಯ. ಈ ತತ್ವವನ್ನು ಒಪ್ಪಿಕೊಂಡ ಮೇಲೆ ಕಾರ್ಯವನ್ನು ಬೇಗ ಆಗುವುದೋ ಅಷ್ಟು ಮಾಸಿ. ಅದೇ ಕಾಲದಲ್ಲಿ ಭಾವೀ ಸಂಭವಗಳನ್ನು, ಅದರಲ್ಲೂ ಮುಖ್ಯತಃ ಹಣಕಾಸಿನ ವಿಚಾರಗಳನ್ನು, ಆಲೋಚಿಸಿಕೊಳ್ಳದೆ ಇಂತಹ ದೊಡ್ಡ ಹೆಜ್ಜೆಯನ್ನಾರೂ ಇಡಲಾರರು. ಕೇಂದ್ರದಿಂದ ಅಥವಾ ಇತರ ಪ್ರಾಂತ್ಯಗಳಿಂದ ದೊಡ್ಡ ಮೊತ್ತವನ್ನು ಕೊಡಬೇಕಾಗುವ ಸ್ಥಿತಿಯಲ್ಲಿ ಆಕಸ್ಮಿಕವಾಗಿ ಸಿಲುಕಿಕೊಳ್ಳಲು ನಾವಿಚ್ಛಿಸುವುದಿಲ್ಲ. ಹಣಕಾಸು ಮತ್ತಿತರ ವಿಷಯಗಳೊಂದಿಗೆ, ಕರ್ನಾಟಕ ಜನತೆಯ ಅತ್ಯಂತ ಬಲವಾದ ಆಕ್ಷೇಪಗಳಿರುವ ಬಳ್ಳಾರಿಯ ಪ್ರಶ್ನೆಯಂತಹ ಇತರ ಕಂಟಕಗಳೂ ಇವೆ. ಇವೆಲ್ಲವೂ ಮುಂದಿನ ಕೆಲವೇ ದಿನಗಳೊಳಗೆ ಇತ್ಯರ್ಥ ಹೊಂದುವವೋ ಇಲ್ಲವೋ ನನಗರಿಯದು. ಅವುಗಳ ಇತ್ಯರ್ಥವಾದೊಡನೆಯೇ ಕಾರ್ಯ ಮುಂದೊತ್ತುವೆವು".

ಕೊಲಂಬೋದಲ್ಲಿ ಇದೇ ತಾ. 9ಕ್ಕೆ ಸೇರಿರುವ ಕಾಮನ್‌ವೆಲ್ತ್ ರಾಷ್ಟ್ರಗಳ ವಿದೇಶಮಂತ್ರಿ ಸಮ್ಮೇಳನಕ್ಕಾಗಿ ಹೊರಟಿದ್ದ ಪಂಡಿತ ಜವಾಹರಲಾಲರು, ತಾ 8 ಲ್ಲಿ ಒಂದು ತಾಸು ಮದ್ರಾಸ್ ನಗರದಲ್ಲಿ ತಡೆದಿದ್ದರು. ಈ ಸಂದರ್ಭದಲ್ಲೇ ಪತ್ರಿಕಾಪ್ರತಿನಿಧಿಗಳೊಟ್ಟಿಗೆ, ವಿಚಾರಿಸಿದಾಗ ಪಂಡಿತಜೀ ಹೊರಗೆಡಹಿದ ಅಭಿಪ್ರಾಯವು, 'ಆಂಧ್ರ ಪ್ರಾಂತ್ಯವು ತಾ. 26 ರೊಳಗಿನ ಮಾತಾಗಿಂದೆ, ಮುಂದಿನ ತಿಂಗಳುಗಳ ಪಾಲಿಗೆ ಹೋಗುವಂತಹದಿದೆ' ಎಂಬುದನ್ನು ಸೂಚಿಸಿದೆ.

ಮದ್ರಾಸ್ ನಗರದ ಪ್ರಮುಖ ಪತ್ರಿಕಾವಾರ್ತೆಲ್ಲಾ ಅಲ್ಲಿ ನೆರೆದಿದ್ದರು. ಆದುದರಿಂದ ಕೂಡಿದ ಕೂಟ ಪ್ರಥಮತಃ ಪದ್ಧತಿಯಂತೆ ಪಂಡಿತ ನೆಹರುಗಳ ಮೊದಲ ಮಾತುಗಳಾಗುವವೆಂಬ ನಿರೀಕ್ಷೆಯಿಂದ ಆ ಗುಂಪು ಕೆಲವು ಕ್ಷಣ ಮೌನವಾಗಿತ್ತು. ಆಗ ಪಂಡಿತಜೀ "ಈಗ ಇಲ್ಲಿ ಯಾವುದೋ ಒಂದು ನಿರೀಕ್ಷೆಯ ವಾತಾವರಣ ಹರಡಿದಂತಿದೆ" ಎಂದು ಪ್ರಾರಂಭಿಸಿದರು. "ಹೌದು ಸರ್, ಈಗ ಇಲ್ಲಿಯ ಬಹಳ ಮಂದಿಯ ತಲೆಯ ಅಗ್ರಭಾಗದಲ್ಲಿ ನಿಂತಿರುವ ವಿಷಯದ ಸಂಬಂಧವಾಗಿ ತಾವೇನನ್ನಾದರೂ ಹೇಳುವಿರೆಂಬ ನಿರೀಕ್ಷೆಯಲ್ಲಿದ್ದೇವೆ" ಎಂದೊಬ್ಬ ಪತ್ರಿಕಾವಾಲರಂದರು.

ಪಂಡಿತಜೀ— "ಅಂದರೇನದು? ಆಂಧ್ರ ಪ್ರಾಂತ್ಯದ ಪ್ರಶ್ನೆಯೆ? ಅದರಲ್ಲಿ ನಾನು ಹೇಳುವಂತಹದಾದರೂ ಏನಿದೆ? ಆ ಕೆಲಸವನ್ನು ಸಾಧ್ಯವಿದ್ದಷ್ಟು ಶೀಘ್ರ ಗತಿಯಿಂದ ಸಾಗಿಸಬೇಕೆಂದೇ ನಮ್ಮಿಚ್ಛೆ. ಹೇಳುವುದಿಷ್ಟೆ."

ಓರ್ವ ಪತ್ರಿಕೋದ್ಯಮಿ— "ಅದ ಇಷ್ಟರಿಂದಲೇ ವಿಶೇಷ ಹೇಳಿದಂತಾ ಲಿಲ್ಲ".

ನೆಹರು— "ಇಲ್ಲಿ ವಿಶೇಷ ಹೇಳುವ ತಹದು ಕೂಡಾ ಏನೂ ಇಲ್ಲ. ಯಾವಾ ಒಂದು ನಿರ್ಧಾರವಾಗಿದೆಯೋ, ದ ನ್ನು ಸಾಧ್ಯವಿದ್ದಷ್ಟು ಬೇಗನೇ ಕಾಯ ಕ್ಕಿಳಿಸಬೇಕಾಗಿದೆ. ವಿಳಂಬಕ್ಕೆ ಕಾರಣ ವರ್ಮಾನದ ಅಭಾವ ನೆ ಅಲ್ಲ; ವರ್ಮಾನವಾಗಿದೆ. ಆದರೆ ಕೆಲವು ವಿಚಾರ ಮತ್ತು ಪರೀಕ್ಷೆಗಳ ಮಾತ್ರ ಆಗ ಕಾಗಿದೆ".

ಮತ್ತೋರ್ವ— "ಅದೆಷ್ಟು ಬೇಗ ಆಗ ಹುದ ?"

ನೆಹರು— "ಒಂದು ವಿಷಯವನ್ನು ನನ್ನ ದಿಗೆ ಹಾಕಿಟ್ಟುಬಿಡುವುದು ಎಲ್ಲ ಕಡೆ ವರಗೂ ಕಡು ಕಷ್ಟವಲ್ಲವೇನು? ಆದರೆ, ತೆಯೇ ನೀವೊಂದು ಸಂಗತಿಗಾಗಿ ನೆಗ ಬೇಳಲಿಕ್ಕು ಸಾಧ್ಯವಿಲ್ಲ; ಸಾಧ್ಯವೇನು?"

ಓರ್ವ ಪತ್ರಿಕೋದ್ಯಮಿ— "ಜನವ 26ರೊಳಗೆ ಈ ವಿಷಯವನ್ನು ಪೂರೈಸಿಕೆ ಳ್ಳುವ ಮಟ್ಟಿಗಿರುವ ಅನಾನುಕೂಲತೆ ಳೇನು?"

ನೆಹರು— "ಹಾಗಾಗುವುದು ತೀರಾ ಷ್ಟದ ಸಂಗತಿಯೆಂದು ನನಗನ್ನಿಸುತ್ತ ಕೆಲವು ವಿಷಯಗಳ ಸ್ಪಷ್ಟೀಕರಣವಾಗ ಳಿದಿದೆ, ಮತ್ತಿದು ಕೇವಲ ತತ್ವಗಳ ಸಂಬಂಧೀಯ ಪ್ರಶ್ನೆಯೇನೂ ಅಲ್ಲ, ವ ಲಾಗಿ ಇದೊಂದು ಮಹತ್ವದ ವಿಷಯ ರುವುದರಿಂದ ಯಾವುದೇ ರೀತಿಯಾ ಗಲಿ ಲಿಯನ್ನು ನಿರ್ಮಿಸುವ ಕೆಲಸವಾವುದನ್ನಾ ದರೂ ಮಾಡಿಬಿಡುವುದರಲ್ಲಿ ಜಾಣ ಯಿಲ್ಲ".

ಮತ್ತೊಬ್ಬ— "ಜನವರಿ 26ರೊ ಈ ಕಾರ್ಯವಾಗಬೇಕೆಂದು ಹಲವು ಜ ರು ಆತುರದಿಂದಿದ್ದಾರೆ".

ನೆಹರು— "ಅವರು ಹಾಗಿರಬಹುದು. ಆದರೆ ಇದರಲ್ಲಿ ಕೆಲವೊಂದು ಸಾರ್ವತ್ರಿಕ ಪರ್ಯಾಲೋಚನೆಗಳಿರುವುದರಿಂದ ಬೇರೆ ಪರೀಕ್ಷಾಂತ. ಕೇವಲ ಸಾಮೂಹಿಕ ರೀ ಯ ಆಸಕ್ತಿಯನ್ನಷ್ಟೇ ವಹಿಸಿರ ಪರ ದನ್ನು ನೀವು ನೋಡಿಕೊಳ್ಳಬೇಕು. ಇ ಯ ಜನರಿಗೇನೇ ಇದರಲ್ಲಿ ಹಿತ್ತಿನ ಹಿತವಿರುವದೇನೋ ನಿಸ್ಸಂದೇಹ."

ಮತ್ತೋರ್ವ— "ಹೊಸರಾಜ್ಯ ಘಟ ಯಲ್ಲಿ ಅಡಕವಾಗಿರುವ ಕೆಲವು ಕಾಯ ರೀತಿಗಳಿಂದಾಗಿ, ಆಂಧ್ರಪ್ರಾಂತ್ಯ ಜನವರಿ26 ರೊಳಗಾಗದಿದ್ದರೆ ಮತ್ತ ಅನಿಶ್ಚಿತಾವಧಿಯ ವರೆಗೂ ಹಿಂದೆಬೀಳ ದೆಂಬ ಭಾವನೆ ಇಲ್ಲಿದೆ."

ನೆಹರು— "ನಾನು ಹಾಗೆ ನೆನೆಸುವದಿಲ್ಲ ಯಾಕೆಂದರೆ, ಒಂದು ವಿಷಯ ಪ್ರೊವೈಡ ಸಹತ್ತಿದರೆ, ಅದನ್ನು ಸಾಗಿಸಿ ಕೊಂಡ ಯ್ಯುವ ಬಲವು ಸ್ವತಃ ಅದರ ಚಲನೆ ಲೇ ಅಡಗಿಕೊಂಡಿರುತ್ತದೆ."

ಓರ್ವ— "ಎಪ್ರಿಲ್ 1 ರೊಳಗಾದರೂ ಕೆಲಸವಾಗಬಹುದೆ?"

ನೆಹರು—(ನಗುತ್ತ) "ಅದನ್ನು ಕೂಡ ನಾನು ಊಹಿಸುವುದಿಲ್ಲ. ಆದರೆ ಖಂಡಿತ ಹೇಳಲು ಬರುವುದಿಲ್ಲ."


The Canara Industrial & Banking Syndicate Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925. ಪ್ರಧಾನ ಕಾರ್ಯಾಲಯ ಉಡುಪಿ, ದ. ಭಾರತ.

ಕುಟುಂಬದ ಯಜಮಾನನ ಜವಾಬ್ದಾರಿ

ಈಗಿನ ನಿಮ್ಮ ಸಂಪಾದನೆಯು ಎಷ್ಟೇ ಉತ್ತಮವಿರಲಿ, ನೀವು ಕುಟುಂಬದ ಯಜಮಾನನಾಗಿದ್ದಲ್ಲಿ, ನಾಳಿನ ಕುಟುಂಬದ ಪೋಷಣೆಯ ಚಿಂತೆಯು ನಿಮಗೆ ಇದ್ದೇ ಇರಬಹುದಷ್ಟೆ. ಆದರೆ ಈಗಿನ ನಿಮ್ಮ ಸಂಪಾದನೆ ಸಮಯದಲ್ಲೆ ಉಳಿತಾಯದ ಪ್ರಶ್ನೆಯೂ ನಿಮ್ಮಲ್ಲಿದ್ದರೆ ನಾಳಿನ ಸಮಸ್ಯೆಗಳೆಲ್ಲವನ್ನೂ ಬಗೆಹರಿಸಲು ಶಕ್ಯವಿದೆ. ನಮ್ಮಲ್ಲಿ ಸೇವಿಂಗ್ಸ್ ಬೇಂಕ್ ಲೆಕ್ಕವನ್ನ ತೆರೆಯಿರಿ. ಅಂತೆಯೇ ನಮ್ಮ ರಜತ ಮಹೋತ್ಸವದ ಕ್ಯಾಷ್ ಸರ್ಟಿಫಿಕೇಟುಗಳಿಗಾಗಿ ವಿಚಾರಿಸಿರಿ.

ಟಿ. ಎಂ. ಎ. ಪೈ,
ಚೆಯರ್‌ಮೆನ್ ಮತ್ತು ಮೆನೇಜಿಂಗ್ ಡ್ಯಾರೆಕ್ಟರ್.

ಪ್ರಪಂಚದ ವಿದ್ಯಮಾನಗಳಲ್ಲಿ ಮುಖ್ಯವಾದುವುಗಳು ಹೆಚ್ಚೇನಂತ ಇದ್ದಂತಿವೆಯಾದರೂ ಒಂದೆರಡು ಆಶ್ಚರ್ಯಗಳೂ ಹೊಸ ಘಟನೆಗಳೂ ಕಳೆದ ದಿನಗಳಲ್ಲಿ ಕಂಡುಬಂದಿವೆ. ಭಾರತದ ಪಾಲಿಗೆ ವಿದೇಶ ಸಂಬಂಧದ ಕೆಲವು ವಿಷಯಗಳು ಒದಗಿವೆಯಾದರೂ ಮುಖ್ಯವಾಗಿ ಅದು, ತಾನಿನ್ನು ಕೆಲವೇ ದಿನಗಳಲ್ಲಿ ಏರಲಿರುವ 'ರಿಪಬ್ಲಿಕ್' ಸ್ಥಾನಕ್ಕನುಗುಣವಾದ ಸಿದ್ಧತೆಯಲ್ಲಿದೆ.

# ಜಾಗತಿಕ ವಿದ್ಯಮಾನ

## ಅಂತರ್ರಾಷ್ಟ್ರೀಯ

ಕಮ್ಯೂನಿಸ್ಟ್ ಚೈನವನ್ನು ಬ್ರಿಟನು ಮಂಜೂರು ಮಾಡಿಕೊಂಡಿತು. ಆ ಸಂಬಂಧದ ಮನ್ನಣಾ ಪತ್ರವು ಬ್ರಿಟಿಷ್ ವಿದೇಶ ಖಾತೆಯಿಂದ ಚೈನೀ ಕಮ್ಯೂನಿಸ್ಟ್ ಸರಕಾರದ ವಿದೇಶ ಖಾತೆಗೆ ಹೋಗಿದೆ. ಕೆಂಪು ಚೈನದಲ್ಲಿ ಬ್ರಿಟಿಷ್ ರಾಯಭಾರಿಯಾಗಿ ಮಿ. ಗ್ರಾಹಾಮರ ನೇಮಕವಾಗಿದೆ. ಚೈನದ ಚಿಯಾಂಗ್ ಕೈ ಶೇಕ ಸರಕಾರದ ಅವಶೇಷವೀಗ ಉಳಿದಿರುವ ಫೋರ್ಮೋಸಾ ದ್ವೀಪಕ್ಕೆ ಅಮೆರಿಕವು ಸೇನಾ ಸಹಾಯ ಕಳುಹುವುದಿಲ್ಲವೆಂದೂ, ಅಲ್ಲಿರುವ ಚೀನೀ ಸೇನೆಗಳಿಗೆ ಯಾವ ಸಲಹೆಯನ್ನೂ ಕೊಡುವದಿಲ್ಲವೆಂದೂ ಅಮೇರಿಕಾಧ್ಯಕ್ಷ ಟ್ರೂಮೇನರು ಜಾಹೀರುಮಾಡಿದ್ದಾರೆ.

ಮಾರ್ಶಲ್ ಟಿಟೋನ ಯುಗೊಸ್ಲೇವಿಯ ಮತ್ತು ರಶ್ಯದೊಳಗಿನ ಇಂದಿನ ಘರ್ಷಣೆಯು ಮಹಾಹೋರಾಟವೊಂದಕ್ಕಾಸ್ಪದ ಕೊಡಬಹುದೇ, ಎಂಬ ಸ್ಪಷ್ಟ ಭೀತಿಗವಕಾಶವಿತ್ತಿದೆ. ಯುಗೊಸ್ಲೇವಿಯದ ಮೇಲೆ ರಶ್ಯಕ್ಕಿರುವ ಇಂದಿನ ದ್ವೇಷದ ತೀಕ್ಷ್ಣತೆಯ ಮೇಲಿಂದ ಕ್ಷಿಪ್ರದಲ್ಲೇ ಧಾಳಿಯೊಂದು ನಡೆಯುವುದು ಸಂಭವನೀಯವಾಗಿ ಕಾಣುತ್ತಿದೆ. ಅಂತಹ ಧಾಳಿ ನಡೆದಲ್ಲಿ ಅಮೆರಿಕವು ಯುಗೊಸ್ಲೇವಿಯಕ್ಕೆ ಬೆಂಬಲವಾಗುವುದೂ ಬಹುಮಟ್ಟಿಗೆ ಸಂಭವನೀಯವೇ. ರಶ್ಯವು ಯುಗೊಸ್ಲೇವಿಯದಾಕ್ರಮಣದ ಪೂರ್ವ ತಯಾರಿಯನ್ನು ಇಷ್ಟರಲ್ಲೇ ನಡೆಸಿದೆಯೆಂದೂ, ಅದಕ್ಕಾಗಿ ಸರಹದ್ದಿನಲ್ಲಿ ಹಂಗೇರಿಯ ಪರ್ವತ ಪ್ರದೇಶಗಳಲ್ಲಿ ಗುಪ್ತವಾಗಿ ಧಾಳಿ ನಿಲ್ದಾಣಗಳನ್ನು ರಚಿಸಿದೆಯೆಂದೂ ಪತ್ರಿಕಾ ವರದಿಗಳಿವೆ. ಅತ್ತ ಯುಗೊಸ್ಲೇವಿಯಕ್ಕೆ ಅಮೆರಿಕದ ರಾಯಭಾರಿಯಾಗಿ ನಿಯೋಜಿಸಲ್ಪಟ್ಟಿರುವ ಜವಾಬ್ದಾರೀ ಅಧಿಕಾರಿ ಜೋರ್ಜ್ ವಿ. ಅಲ್ಲೆನರು "ಸದ್ಯ ಖಚಿತವಾಗಿರುವಂತೆ ರಶ್ಯವು ಯುಗೊಸ್ಲೇವಿಯದ ಮೇಲೆ ನಡೆಸುವ ಆಕ್ರಮಣವನ್ನು ಅಮೆರಿಕವು ವಿರೋಧಿಸುವುದು. ಆಕ್ರಮಣವನ್ನು ಇದಿರಿಸುವ ಘೋಷಣೆ ಅಮೆರಿಕದ್ದೆಂಬುದನ್ನು ಅಧ್ಯಕ್ಷ ಟ್ರೂಮೇನರು 1948ನೇ ದಶಂಬರ್ 22ರಲ್ಲೇ ಜಾಹೀರು ಮಾಡಿದ್ದರು. ಸೋವಿಯೆಟ್ ಪ್ರಚಾರಗಳಿಂದಷ್ಟೇ ಅಲ್ಲ, ಮೊಲಟೊವರಂತಹ ಜವಾಬ್ದಾರೀ ರಶ್ಯನ್ ಅಧಿಕಾರಿಗಳ ಮಾತಿನ ಮೇಲಿಂದಲೂ ಯುಗೊಸ್ಲೇವಿಯದ ಕ್ಷೇತ್ರವೀಗ ಸ್ಪಷ್ಟವಾಗಿ ಆಕ್ರಮಣ ಭೀತಿಗೊಳಗಾಗಿದೆ. ಅಮೆರಿಕದ ಆಕ್ರಮಣ ವಿರೋಧ ಘೋಷಣೆಯನ್ನು ಲಗಾವು ಮಾಡಬೇಕಾದ ಸಂದರ್ಭವದು' ಎಂದು ಖಂಡತುಂಡವಾಗಿ ಹೇಳಿದ್ದಾರೆ. ಮುಂದೆ ಅಲ್ಲಿ ಎಂತಹ ಸ್ಫೋಟವೇಳುವುದೋ ಎಂದು ಆತುರದಿಂದ ನಿರೀಕ್ಷಿಸಬೇಕಾಗಿದೆ.

ಅಮೆರಿಕಾ ಮತ್ತು ಇಂಗ್ಲಾಂಡುಗಳೊಳಗೆದ್ದಿರುವ ಸುವ್ಯಕ್ತ ಭಿನ್ನಾಭಿಪ್ರಾಯವೊಂದು, ಅಪಾಯಕರ ಆಕಾರ ಹೊಂದುವಂತಹುದಲ್ಲವಾದರೂ ಸೋಜಿಗ ಮತ್ತು ಆಸಕ್ತಿಯನ್ನು ನಿರ್ಮಿಸುವಂತಹದಿದೆ. ರಶ್ಯದ ಆಕ್ರಮಣ ಭೀತಿಯಿಂದ ಪಶ್ಚಿಮ ಯುರೋಪು ರಾಷ್ಟ್ರಗಳಿಗೆ ಕೆಲವೊಂದು ಶರ್ತಗಳ ಮೇಲೆ ಅಮೆರಿಕವು ಶಸ್ತ್ರ ಸಾಮಾಗ್ರಿಗಳನ್ನು ಸರಬರಾಯಿ ಮಾಡುವ ಒಡಂಬಡಿಕೆಯಿದೆ. ಈ ಪಶ್ಚಿಮ ಯುರೋಪು ರಾಷ್ಟ್ರಗಳ ರಕ್ಷಣಾ ಕೌನ್ಸಿಲು ತನ್ನ ಭಾಗದ ರಕ್ಷಣಾ ಯೋಜನೆಯೊಂದನ್ನು ತಯಾರಿಸಿಕೊಂಡಿದೆ. ಅದಕ್ಕನುಸಾರವಾಗಿ ಆ ರಾಷ್ಟ್ರಗಳಿಗೆ ಕಳುಹುವ ಶಸ್ತ್ರ ಸಾಮಾಗ್ರಿಗಳ ವಿನಿಯೋಗದ ಕುರಿತು ಅಮೆರಿಕವು ಕೆಲವು ನಿರ್ಬಂಧಗಳನ್ನು ಹಾಕಿದ್ದಿತು. ಈ ನಿರ್ಬಂಧಗಳಿಗೆ ಬ್ರಿಟನು ತನ್ನ ಒಪ್ಪಿಗೆ ನಿರಾಕರಿಸಿದೆ. ಹೀಗಾಗಿ ಯುರೋಪಿಗೆ ರವಾನೆಯಾಗಲು ಹಡಗಗಳಲ್ಲಿ ತುಂಬಿಸಿದ್ದ 1,000,000,000 ಪೌಂಡುಗಳಷ್ಟು ಬೆಲೆಯ ಯುದ್ಧೋಪಕರಣಗಳನ್ನೀಗ ತಡೆದಿಡಲಾಗಿದೆ. ಈ ಸಂಬಂಧದ ಭಿನ್ನಾಭಿಪ್ರಾಯ ನಿವಾರಣೆಗೆ ಇನ್ನು ಕೆಲವು ವಾರಗಳು ಹಿಡಿಯಬಹುದು. ಅವರೆಗೂ ಯುರೋಪಿಗೆ ಅಮೆರಿಕದಿಂದ ಯುದ್ಧೋಪಕರಣಗಳ ಸರಬರಾಯಿಯಾಗುವಂತಿಲ್ಲ. "ಬಂಡವಳಗಾರ ಕುಟುಂಬದೊಳಗೆ" ಎದ್ದಿರುವ ಈ ಜಗಳದ ಕುರಿತು ರಶ್ಯದ ರೇಡಿಯೋ ಮತ್ತು ಪತ್ರಿಕೆಗಳು ಪರಿಹಾಸ್ಯ ಮಾಡಹತ್ತಿವೆ.

ಈಜಿಪ್ಟಿನಲ್ಲಿ ನಡೆದ ಮಹಾಚುನಾವಣೆಯಲ್ಲಿ ಪ್ರಚಲಿತ ಸರಕಾರೀ ಪಕ್ಷವನ್ನು ಸೋಲಿಸಿ ನಾಹಾಸ್ ಪಾಶಾರ ವಾಫ್ಡ್ ಪಕ್ಷವು ಗೆದ್ದು ಬಂದಿದೆ. ಹೊಸ ಪಾರ್ಲಿಮೆಂಟಿನ 319 ಸ್ಥಾನಗಳ ಪೈಕಿ 171 ಕ್ಕೂ ಮಿಕ್ಕಿದ ಸ್ಥಾನಗಳು ಅದೊಂದಕ್ಕೇನೇ ದೊರೆತಿರುವಾಗ ಮಿಕ್ಕವು ಮಿಕ್ಕ ಪಕ್ಷಗಳೊಳಗೆ ಹಂಚಿಹೋಗಿವೆ. ಈಜಿಪ್ಟಿನ ವಾಫ್ಡ್ ಪಕ್ಷವು ಭಾರತದ ಕಾಂಗ್ರೆಸ್ ಪಕ್ಷದಂತಿದ್ದು, ಅದರ ನಾಯಕ ನಾಹಾಸ್ ಪಾಶರು, ಇದರ ನಾಯಕ ಪಂಡಿತ ನೆಹರುಗಳ ಆತ್ಮೀಯ ಸ್ನೇಹಿತ. ಸ್ವಾತಂತ್ರ್ಯ ಹೋರಾಟ ಕಾಲದಲ್ಲೇ ಈ ಸ್ನೇಹ ಸಂಬಂಧವುಂಟಾಗಿದ್ದಿತು. ವಾಫ್ಡ್ ಪಕ್ಷದ ಚುನಾವಣಾ ವಿಜಯಕ್ಕಾಗಿ ಪಂಡಿತ ನೆಹರುಗಳ ಅಭಿನಂದನಾ ಪತ್ರವನ್ನು ಅಲ್ಲಿ ಭಾರತದ ರಾಯಭಾರಿಯಾಗಿರುವ ಮಿ. ಫೈಝಿ ಅವರು ಮುಸ್ತಫಾ ನಾಹಾಸ್ ಪಾಶರಿಗೊಪ್ಪಿಸಿದಾಗ ನಾಹಾಸ್ ಪಾಶರು "ಇದು ಮಿತ್ರನಿಂದ ಮಿತ್ರನಿಗೆ ಬಂದಿರುವ ಪತ್ರ. ಇದನ್ನು ತಂದು ಕೊಟ್ಟ ನೀವು ಕೂಡಾ ಮಿತ್ರರಾದಿರಿ" ಎಂದಿದ್ದರು.

ಸಿಲೋನಿನ ಕೊಲೊಂಬೋದಲ್ಲಿ ಕಾಮನ್‌ವೆಲ್ತ್ ರಾಷ್ಟ್ರಗಳ ವಿದೇಶ ಮಂತ್ರಿ ಸಮ್ಮೇಳನ ಸೇರಿದೆ. ಸಿಲೋನಿನ ಪ್ರಧಾನಿ ಸೇನಾನಾಯಕೆ ಅಧ್ಯಕ್ಷರಾಗಿದ್ದಾರೆ. ಭಾರತವದರಲ್ಲಿ ಮುಖ್ಯ ಭಾಗ ವಹಿಸಲಿದೆ, ಎಂದು ಆ ಸಮ್ಮೇಳನಕ್ಕೆ ಹೊರಟಿದ್ದ ಬ್ರಿಟನಿನ ಕಾಮನ್‌ವೆಲ್ತ್ ಸಂಬಂಧ ಮಂತ್ರಿ ನೋಯೆಲ್ ಬೇಕರರು ಬೊಂಬಾಯಿಯಲ್ಲಿ ಅಂದಿದ್ದರು.

## ಭಾರತ ವಿದ್ಯಮಾನ

ಕಾಶ್ಮೀರ ವಿವಾದದ ಕುರಿತು ಭದ್ರತಾ ಕೌನ್ಸಿಲಿನ ಅಧ್ಯಕ್ಷ ಜನರಲ್ ಮೆಕ್‌ನಾಟನರು ಮುಂದಿಟ್ಟಿದ್ದ ರಾಜೀ ಸೂಚನೆಗಳಿಗೆ ಪರಸ್ಪರ ವಿರುದ್ಧವಾದ ತಿದ್ದುಪಡಿ ಸೂಚನೆಗಳು ಭಾರತ ಮತ್ತು ಪಾಕಿಸ್ತಾನ್ ಪ್ರತಿನಿಧಿಗಳಿಂದ ಹೋಗಿವೆ. ಅವುಗಳನ್ನೊಂದುಗೂಡಿಸುವುದು ಅಸಾಧ್ಯವಾದ್ದರಿಂದ ಇನ್ನೀ ವಿಷಯವು ಭದ್ರತಾ ಕೌನ್ಸಿಲಿನ ಸ್ವಂತ ಪರಿಶೀಲನೆಗೊಳಗಾಗಬಹುದು. ಸಂಧಾನದಾಸೆ ಪೂರ್ಣ ಕುಸಿದು ಹೋಗಿದೆ. ವಿವಾದ ವಿಷಯಗಳನ್ನು ಮೂರನೇ ಮಧ್ಯಸ್ಥಗಾರನೊಬ್ಬನ ತೀರ್ಮಾನಕ್ಕೊಪ್ಪಿಸಿಕೊಡಲು ಭಾರತವೆಂದಿಗೂ ತಯಾರಿಲ್ಲವೆನ್ನುತ್ತಾ ಪಂಡಿತ ನೆಹರುಗಳಂದಿದ್ದರು: "ನಾಲ್ಕು ಮಿಲಿಯ ಜನತೆಯ ಅದೃಷ್ಟವನ್ನು ತೀರ್ಮಾನಿಸುವಂತೆ, ಅವನೆಷ್ಟೇ ದೊಡ್ಡವನಿದ್ದರೂ ಓರ್ವ ವ್ಯಕ್ತಿಯನ್ನು ಕೇಳಿಕೊಳ್ಳಲು ಸಾಧ್ಯವಿಲ್ಲ."

ಭಾರತ ಮತ್ತು ಪಾಕಿಸ್ತಾನಗಳೊಳಗೆ ನಾರು ವಹಿವಾಟುಗಳ ಸಂಬಂಧವಾಗಿ ಎದ್ದಿರುವ ವಿವಾದದಲ್ಲಿ ಪ್ರಕೃತ ವಿಶೇಷ ಬದಲಾವಣೆಯಾಗಿಲ್ಲ. ಆದರೆ ಸ್ಥಿತಿ ಸುಧಾರಿಸುವ ಲಕ್ಷಣಗಳು ಕಾಣಿಸುತ್ತಿವೆ. ಪಾಕಿಸ್ತಾನದ ವ್ಯಾಪಾರಖಾತೆಯ ಕಾರ್ಯದರ್ಶಿ ಮತ್ತು ಪಾಕಿಸ್ತಾನ್ ನಾರು ಬೋರ್ಡಿನ ಅಧ್ಯಕ್ಷ ಮಿ. ಫರೂಕಿಯವರು ಕಲ್ಕತ್ತೆಗೆ ಬಂದು ಸಂಬಂಧಪಟ್ಟ ಅಧಿಕಾರಿಗಳೊಡನೆ ಈ ಕುರಿತು ಮಾತಾಡ ತೆರಳಿದ್ದಾರೆ. ಭಾರತವು ಪಡಕೊಂಡಿದ್ದ, ಈಗ ಪಾಕಿಸ್ತಾನವು ತಡೆದಿಟ್ಟಿರುವ 500,000 ಬೇಲುಗಳಷ್ಟು ನಾರನ್ನು ಬಿಡುಗಡೆಮಾಡುವ ಸಂಬಂಧದ ಮಾತುಕತೆಗಳಾಗಿದ್ದುವು. ಈ ಕುರಿತು ಪಾಕಿಸ್ತಾನದ ನಿರ್ಣಯವು ಸದ್ಯದಲ್ಲೇ ಪ್ರಕಟವಾಗುವದೆಂದು ತಿಳಿದುಬರುತ್ತದೆ. ಭಾರತ ವಲಯದಿಂದ ಭಾರತ ವಲಯಕ್ಕೇನೇ ಸಾಗುತ್ತಿದ್ದ 60000 ಬೇಲುಗಳಷ್ಟು ನಾರನ್ನು ಪೂರ್ವ ಬಂಗಾಳದಲ್ಲಿ ಪಾಕಿಸ್ತಾನವು ತಡೆದಿಟ್ಟಿದ್ದಿತಷ್ಟೆ? ಅದನ್ನೀಗ ಹೋಗಲು ಬಿಡಬೇಕೆಂದು ಪಾಕಿಸ್ತಾನ್ ಸರಕಾರದ ಆಜ್ಞೆಯಾಗಿದೆ. ಅಸ್ಸಾಮಿನ ಕಸ್ಟಮ್ಸ್ ಆಫೀಸರರು ಸಂಬಂಧಪಟ್ಟ ವಿವರಗಳನ್ನು ಕೊಡಲು ವಿಳಂಬಿಸಿದುದೇ ಇಂತಹ ತಡೆಗೆ ಕಾರಣವಲ್ಲದೆ ತಮ್ಮ ತಪ್ಪೇನೂ ಇಲ್ಲವೆಂದು ಪಾಕಿಸ್ತಾನ್ ಪೂರ್ವ ಬಂಗಾಳ ಸರಕಾರದ ಹೇಳಿಕೆ ಹೊರಟಿದೆ.

ಪ್ರಾಂತಿಕ ಶಾಸನ ಸಭೆ ಮತ್ತು ಕೇಂದ್ರ ಪಾರ್ಲಿಮೆಂಟು ಎರಡರ ಸದಸ್ಯತ್ವವೂ ಒಬ್ಬನಿಗಿರಬಾರದೆಂಬ ನಿಯಮಾನುಸಾರ ಪಾರ್ಲಿಮೆಂಟಿನಲ್ಲಿ ಖಾಲಿಬೀಳುವ ಸ್ಥಾನಗಳಿಗೆ ವಿವಿಧ ಪ್ರಾಂತಿಕ ಶಾಸನಸಭೆಗಳ ಮೂಲಕ ಉಪ ಚುನಾವಣೆಗಳಾಗುತ್ತಿವೆ. ಮದ್ರಾಸ್ ಪ್ರಾಂತ್ಯದ ಮಟ್ಟಿಗೀ ರೀತಿ ಖಾಲಿ ಬಿದ್ದ 20 ಸ್ಥಾನಗಳಿಗೆ 20 ಮಂದಿ ಕಾಂಗ್ರೆಸಿಗರು ಅವಿರೋಧ ಆಯ್ಕೆ ಹೊಂದಿದ್ದಾರೆ. ಮಹಿಳೆಯರು ಶಾಸನ ಸಭಾ ಚಟುವಟಿಕೆಗಳಲ್ಲಿ ಹೆಚ್ಚೆಚ್ಚು ಭಾಗಿಗಳಾಗುವಂತೆ ಅವಕಾಶ ದೊರಕಿಸಿಕೊಡಬೇಕೆಂದು ಪ್ರಧಾನಿ ನೆಹರೂಗಳು ಪ್ರಾಂತಿಕ ಪ್ರಧಾನಿಗಳಿಗೆ ಸೂಚಿಸಿದ್ದರು. ಮದ್ರಾಸಿನಿಂದ ಯಾವ ಮಹಿಳೆಯನ್ನೂ ಆರಿಸಿಕೊಳ್ಳದಿದ್ದುದಕ್ಕಾಗಿ ಭಾರತ ಸರಕಾರದ ಆರೋಗ್ಯ ಮಂತ್ರಿ ಶ್ರೀಮತಿ ಅಮೃತ ಕೌರರು ವ್ಯಸನ ಸೂಚಿಸಿ, ಎರಡು ಸ್ಥಾನಗಳನ್ನಾದರೂ ಮಹಿಳೆಯರಿಗೀಯಬೇಕೆಂದು ವಿನಂತಿಸಿಕೊಂಡಿದ್ದಾರೆ.

ಇದೇ ತಾ. 24ಕ್ಕೆ ಸೇರಲಿರುವ ಘಟನಾ ಸಮಿತಿಯ ಮಂಗಳಾಧಿವೇಶನವು ರಿಪಬ್ಲಿಕಿನ ಅಧ್ಯಕ್ಷಸ್ಥಾನಕ್ಕೆ ಬಾಬು ರಾಜೇಂದ್ರಪ್ರಸಾದರನ್ನೇ ಆರಿಸಿಕೊಳ್ಳುವದು ಬಹುಮಟ್ಟಿಗೆ ಸಂಭವನೀಯವೆಂದು ತಿಳಿದು ಬಂದಿದೆ. ಜನವರಿ 26ನೇ ಮುಂಜಾನೆ ಸೇರುವ ದರ್ಬಾರಿನಲ್ಲಿ ಗವರ್ನರ್ ಜನರಲ್ ರಾಜಾಜಿ ಭಾರತ ರಿಪಬ್ಲಿಕಿನ ಘೋಷಣೆ ಮಾಡಿ ಅಧ್ಯಕ್ಷರಿಗೆ ಗಾದಿಬಿಟ್ಟು ಕೊಡುವರೆಂದೂ, ಮರುದಿನ ಮದ್ರಾಸಿಗೆ ಹೊರಡುವ ರಾಜಾಜಿಯನ್ನು ಬೀಳ್ಕೊಳ್ಳುವ ಧಿಕ್ಷೆಯಲ್ಲಿ ರಾಜಯೋಗ್ಯ ವಿದಾಯ ಗೌರವೋತ್ಸವ ಜರಗುವವೆಂದೂ ತಿಳಿದು ಬಂದಿದೆ.


**THE VIJAYA BANK, Ltd.,**

H. O., MANGALORE.

A. With a net work of Branches through out the District and one each at Mercara and Bombay.

B. With a standing of 18 years service.

C. With total resources of over 40 Lakhs.

Fixed deposits are now accepted at the following rates of interest.

3 months .. 3% P. A. 6 months ... 3¼% P. A.

12 months ... 3½% P. A. 24 months .. 4% P. A.

*All kinds of banking business transacted.*

Sri B. M. Hegde,

*Advocate & President District Board, South Kanara.*

(CHAIRMAN OF THE BOARD OF DIRECTORS)

THE
Canara Banking Corporation Ltd.
(Incorporated in India)
Estd: 1906.
HEAD OFFICE: UDIPI, S. I.

| | |
|---|---|
| Capital Authorised .... .... .... | Rs. 25,00,000. |
| Capital Issued & Subscribed .... | Rs. 20,00,000. |
| Capital Paid-Up .... .... .... | Rs. 19,99,800. |
| Reserves .... .... .... | Rs. 8,91,000. |

**Banking business of every description transacted**

ಗುರುವಾರ ಉಡುಪಿ ೧೨-೧-೧೯೫೦

# ಇಂದಿನ ಕರ್ತವ್ಯ

ಇನ್ನು ಹದಿನೈದೇ ದಿನಗಳಲ್ಲಿ ಭಾರತವು 'ಜನತಾರಾಜ್ಯ'ವಾಗಿ ಮಾರ್ಪಡಲಿದೆ; ಸ್ವತಂತ್ರ ಭಾರತವು ಸ್ವತಃ ತಯಾರಿಸಿಕೊಂಡಿರುವ ನವರಾಜ್ಯ ಶಾಸನವು ಜಾರಿಗೆ ಬರಲಿದೆ. ರಾಷ್ಟ್ರದ ಸ್ಥಾನ ಮತ್ತು ನಿಧಾನಗಳನ್ನೇ ಬದಲಾಯಿಸುವ ಅತಿ ಮಹತ್ವದ ಸನ್ನಿವೇಶವಿದು, ಎಂದು ಮತ್ತೊಮ್ಮೆ ಹೇಳಬೇಕೆಂದಿಲ್ಲ. ಆದರೆ ಕೇವಲ ಹೊಸ ನಾಮ, ಹೊಸ ತೊಡುಗೆಗಳೇ ಒಬ್ಬ ವ್ಯಕ್ತಿಯಂತೆಯೇ ಒಂದು ರಾಷ್ಟ್ರಕ್ಕೂ ಯೋಗ್ಯತೆಯನ್ನೀಸಲಾರವು. ಆಡಳಿತೆಯ ಜವಾಬ್ದಾರಿ ಬರುವ ಜನತೆಯಲ್ಲಿ ಅದಕ್ಕನುಗುಣವಾದ ಪ್ರೌಢಿಮೆಯಿರಬೇಕು; ಆ ಮೂಲಕ ಜನತಾರಾಜ್ಯ ಸಾರ್ಥಕಗೊಳ್ಳಬೇಕು. ಭಾರತೀಯ ಜನಸಾಮಾನ್ಯರಲ್ಲಿ ಈ ದಿನ ಅಂತಹ ಯೋಗ್ಯತೆ ಸಾಕಷ್ಟು ಕಂಡು ಬರುವುದಿಲ್ಲ; ಅದಕ್ಕೆ ಕಾರಣಗಳವೆಯಾದ್ದರಿಂದ ಇಷ್ಟರಕ್ಕಾಗಿ ಎದೆ ಕಳಕೊಳ್ಳಬೇಕೆಂದಿಲ್ಲ; ಆದರೆ ಜನತೆಯ ಅಸಾಮರ್ಥ್ಯ, ಅಯೋಗ್ಯತೆಗಳ ನಿವಾರಣೆಗಾಗಿ ಪ್ರಯತ್ನಗಳಾಗಬೇಕಾಗಿದ್ದ ಈ ಕಾಲದಲ್ಲಿ ಅಂತಹದೇನೂ ನಡೆದಿಲ್ಲವೆಂಬುದು ಮಾತ್ರ ನಿರಾಶೆಗವಕಾಶವಿತ್ತಿದೆ.

ಸ್ವಾತಂತ್ರ್ಯಾಂದೋಲನದ ಆ ಕಾಲದಿಂದ ಸ್ವಾತಂತ್ರ್ಯಗಳಿಕೆಯ ಈ ಕಾಲದ ವರೆಗೂ ಕೆಲವೇ ಮಂದಿ ನಾಯಕರು ಮಾತ್ರ ಮುಂದೆ ಹೋಗಿದ್ದು, ಅವರ ಅನುಯಾಯೀ ಜನಸಾಮಾನ್ಯರು ತದನುಸಾರವಾಗಿ ಹೆಜ್ಜೆಯಿಡಲಾರದೆ ಹಿಂದಾಳಿದೇ ಇರುವ ಈ ವ್ಯತ್ಯಾಸವು ಸುಸ್ಪಷ್ಟವಿದೆ. ಹಿಂದೆ ಬಿದ್ದಿರುವ ಈ ವರ್ಗದ ಮೇಲೆ ಇದು ವರೆಗೆ ಅಂತಹ ಹೊರೆಯೇನೂ ಬಿದ್ದುದಿಲ್ಲವಾದ್ದರಿಂದ, ಈ ಕೊರತೆಯು ರಾಷ್ಟ್ರ ಜೀವನದಲ್ಲಿ ವಿಶೇಷ ಅಪಾಯಕರವಾಗಿ ತೋರಿದುದಿಲ್ಲ. 1947ನೇ ಆಗೋಸ್ತು 15ರ ವರೆಗೆ ಬ್ರಿಟಿಷರ ಕೌಶಲ್ಯಪೂರ್ಣ ಆಡಳಿತೆಯು ಅದಕ್ಕೊಂದು ಪರದೆಯಾಗಿದ್ದಿತು; ಅಂದಿನಿಂದ 1950ನೇ ಜನವರಿ 26ರ ವರೆಗೆ ಮತ್ತಾಮೇಲೂ ಕೆಲಕಾಲ ಭಾರತದ ಅಗ್ರಗಣ್ಯ ಮುಂದಾಳುಗಳ ಜನಮನಾಧಿಕಾರ ಮತ್ತು ಲೋಕಾಕರ್ಷಕ ನಾಯಕತ್ವವು ಈ ಕೊರತೆಯನ್ನು ಮರೆಮಾಡಿ ನಿಂತಿರಬಹುದು. ಆದರೆ ಆ ಮೇಲೆ ಮೂಲತಃ ಅಂತಹ ಸ್ಥಾನಕ್ಕೆ ಬರಲಿರುವ ಜನಸಾಮಾನ್ಯರ ನಿಜರೂಪವು ಬೆಳಕಿಗೆ ಬೀಳಲೇಬೇಕು. ಅಂತಹ ಭವಿಷ್ಯದ ನಿರೀಕ್ಷೆಯು, ಕುರೂಪ ವದನದ ಪರದೆಯೆತ್ತುವ ಸಂದರ್ಭದಂತೆ ಅಳುಕನ್ನೇ ಹುಟ್ಟಿಸುತ್ತಿದೆ. ಹಿಂದೀ ಜನಸಾಮಾನ್ಯರು ಹೊಣೆ ನಿರ್ವಹಣ ಯೋಗ್ಯತೆಗಳನ್ನು ನಿಜಕ್ಕೂ ಗಳಿಸಿಕೊಂಡಿಲ್ಲ. ಮಿಕ್ಕ ಕೊರತೆಗಳ ಕಡೆಗೆ ಬಿದ್ದಷ್ಟು ಲಕ್ಷ್ಯ ಕೂಡಾ ಈ ಪ್ರಮುಖ ಅಭಾವದ ಕಡೆಗೆ ಬಿದ್ದಿಲ್ಲ. ಜನತೆಯ ಮನೋಗತಿ ಇದ್ದಂತಿದ್ದು, ರಾಜ್ಯ ಶಾಸನಗಳು ಮಾತ್ರ ಬದಲಾಯಿಸಿದರೆ ಇಂತಹ ಮಾರ್ಪಾಟಿನಿಂದ ಹೊಸತೇನಾದರೂ ನಿರ್ಮಾಣಗೊಂಡೀತೆಂದು ನಿರೀಕ್ಷಿಸುವುದು ವ್ಯರ್ಥ; ನವ ಶಾಸನವು ತಾನಾಗಿ ಮಾಡಿಸುವ ಕೆಲವು ವಿಧಾನಗಳೇನೋ ಕಂಡು ಬರಬಹುದು. ಆದರೆ ಸರಕಾರ-ಸರಕಾರೀ ಧೋರಣೆ-ಆರ್ಥಿಕ ಸಾಮಾಜಿಕ ಸ್ಥಿತಿಗತಿ-ಜನತೆಯ ನಿತ್ಯಜೀವನ-ಎಲ್ಲಿಯೂ ಏನೊಂದೂ ಬದಲಾವಣೆಗೊಳ್ಳದು. ಪ್ರಚಲಿತ ಸ್ಥಿತಿಯೇ ಚಿರಂಜೀವಿಯಾಗಬೇಕೆಂದು ಜನಹಿತಾಕಾಂಕ್ಷಿಗಳಾರೂ ಬಯಸುತ್ತಿಲ್ಲ; ಆದರೀ ಸ್ಥಿತಿಯನ್ನು ಪ್ರಗತಿಪರವಾಗಿ ಬದಲಾಯಿಸಿಕೊಳ್ಳಲು ಅಗತ್ಯವಿರುವ ಜನತಾಜಾಗೃತಿ ನಿರ್ಮಿಸುವವರು ಕೂಡಾ ಇಲ್ಲ. 'ಆಗಬೇಕು, ಮಾಡುವವರಿಲ್ಲ' ಎಂಬಂತಹ ಇಂದಿನ ನಿಸ್ಸಹಾಯಕತೆಯು ನಿಜಕ್ಕೂ ಶೋಚನೀಯ.

ಆ ಜಾಗೃತಿಯೆಂದರೇನು ಮತ್ತದನ್ನು ನಿರ್ಮಿಸಬೇಕಾದವರಾರು, ಎಂಬ ಸವಿವರ ವಿಮರ್ಶೆ ಇಲ್ಲಿ ಅನಗತ್ಯ. ಸ್ವಾಧಿಕಾರ ಬಂದರೂ ಅದೀವರೆಗೆ ಪೂರ್ಣ ಸಾರ್ಥಕವಾಗಿಲ್ಲ; ನಾಳೆ ಅದರ ಸ್ವೀಕಾರ ಮಾಡಿದಾಗ ಅದಾದರೂ ಸಂಪೂರ್ಣ ಸಫಲವಾದೀತೆಂಬ ಭರವಸೆ ಸದ್ಯಸ್ಥಿತಿಯಲ್ಲಿಲ್ಲ. ಶಾಸನಬದ್ಧವಾಗಿ ಗುಲಾಮಗಿರಿಯಿಂದ ವಿಮೋಚನೆ— ವಿಮೋಚನೆಯ ಬೆನ್ನಲ್ಲಿ ವಿಧಾಯಕ ರಚನೆ— ಹೀಗೆ ಪ್ರಗತಿಹೊಂದುತ್ತಾ ಬಂದಿದ್ದೇವೆ. ಆದರೀ ಅವಧಿಯಲ್ಲಿ ಜೀವನರಂಗದಲ್ಲಿ ಬಡಸ್ಥಿತಿಯಿಂದ ಬರಗಾಲಕ್ಕೇನೇ ಇಳಿಜಾರಿದಂತಿದ್ದೇವೆ. ಮುಖ್ಯವಾಗಿ ಜನಸಾಮಾನ್ಯರ ಆರ್ಥಿಕ, ಸಾಮಾಜಿಕ ಸ್ಥಿತಿ ಸುಧಾರಣೆಯ ತಳಗಟ್ಟೆಂಬುದರಿಂದಲೇ ಅಮೂಲ್ಯವಾಗಿರುವ ರಾಜಕೀಯ ಸ್ವಾತಂತ್ರ್ಯವು, ಇದು ವರೆಗೂ ಅಂತಹ ಅಸ್ತಿವಾರವಾಗುವ ಬದಲಿಗೆ ಆ ಮಟ್ಟಿಗೆ ಕುಣಿ ಬೀಳುತ್ತಲೇ ಬಂದಂತಾಗಿದೆ. ಆರ್ಥಿಕ, ಸಾಮಾಜಿಕ ಅವನತಿಯಾಗಿರುವಾಗ, ಸದ್ಯಕ್ಕಿಂತಹ ಅದ್ಭುತವನ್ನೇ ಸಾಧಿಸಿದ್ದರೂ ರಾಜಕೀಯ ಪ್ರಗತಿಯಾಗಿದೆ ಎಂಬ ಭರವಸೆಯನ್ನು ಶಾಶ್ವತವಾಗಿ ಕಟ್ಟಿಕೊಳ್ಳಲು ಸಾಧ್ಯವಿಲ್ಲ. ಆದರೂ ಇಂದು ಸಣ್ಣಪುಟ್ಟ ರಾಜಕೀಯಾಂದೋಲನಗಳ ಕಡೆಗೆ ರಾಷ್ಟ್ರನಾಯಕರ ಮತ್ತು ರಾಷ್ಟ್ರದ ಲಕ್ಷ್ಯ ಹರಿದಂತೆ, ಜನತೆಯ ಜೀವನಾಂದೋಲನಗಳ ಕಡೆಗೆ ಹರಿದಿಲ್ಲ. ಆ ಜೀವನ ಸಂಕಷ್ಟಗಳನ್ನನುಭವಿಸುತ್ತಿರುವ ಜನಸಾಮಾನ್ಯರಲ್ಲಿರುವ ಅಜ್ಞಾನ, ಅಯೋಗ್ಯತೆ, ಮತ್ತು ರಾಜಕೀಯ ಆಗುಹೋಗುಗಳೇ ಸರ್ವಸ್ವವಾಗಿರುವ ನಾಯಕರಲ್ಲಿರುವ ಅಧಿಕಾರ, ಅಧ್ಯತೆಗಳೇ ಹೀಗಾಗಲು ಕಾರಣ. ಜನತಾರಾಜ್ಯ ಭಾರತದಲ್ಲಿ, ಜನತೆಯೇ ಎಲ್ಲಕ್ಕೂ ಮೂಲಕ ಜವಾಬ್ದಾರರಾಗಿರುವುದರಿಂದ, ಜನಸಾಮಾನ್ಯರಲ್ಲಿ ಯೋಗ್ಯತೆಯಿದ್ದರೆ ಅವರೇ ಭಾಗದ ತಪ್ಪನ್ನು ತಿದ್ದಿಕೊಳ್ಳುವ ಅವಕಾಶವಿದೆ. ಬದಲಿಗೆ ಇಂದಿನಂತೆ, ರಾಜಕೀಯ ನಾಯಕರ ಮಾತುಕೃತಿಗಳ ಹತ್ತನೇ ಒಂದಂಶದಷ್ಟನ್ನು ಮಾತ್ರ ಅರ್ಥಮಾಡಿಕೊಳ್ಳುವಷ್ಟೇ ಜ್ಞಾನ— ಬಂದ ಬಂದ ಆಜ್ಞೆಗಳನ್ನು ಶಿರಸಾವಹಿಸಿ ಶಕ್ತ್ಯಾನುಸಾರ ವರ್ತಿಸುವಷ್ಟೇ ಯೋಗ್ಯತೆ— ಜನಸಾಮಾನ್ಯರದೆಂದಾದರೆ, ಯಾವ ಹೆಸರು ಹೊತ್ತುಕೊಂಡು ಎಂತಹ ಹೊಸ ವಿಧಾನ ತೋರಿಬಂದರೂ ಸ್ಥಿತಿ ಬದಲಾಯಿಸದು. ಆದರೂ ಯಾವ ರಾಜಕೀಯ ಪಕ್ಷದ ಲಕ್ಷ್ಯವೂ ಈ ಕಡೆಗೆ ಬಿದ್ದಿಲ್ಲವೆಂಬುದು ಸಖೇದಾಶ್ಚರ್ಯ ವಿಷಯ. ಅಧಿಕಾರಾರೂಢ ಪಕ್ಷವು ಸ್ವಾರ್ಥ ದೃಷ್ಟಿಯಿಂದ ಪ್ರಚಲಿತ ಸ್ಥಿತಿಯನ್ನೇ ಊರ್ಜಿತದಲ್ಲಿಡಲು ಬಯಸುತ್ತದೆಂಬ ಅನ್ಯಪಕ್ಷೀಯರ ವಾದವನ್ನೊಪ್ಪಿಕೊಂಡರೆ ಜನಮತ ಸುಧಾರಣೆಯ ಕಡೆಗೆ ಕಾಂಗ್ರೆಸಿನ ಗಮನ ಬೀಳದಿರುವುದು ಸಹಜವೆನ್ನಬೇಕಾಗುತ್ತದೆ. ತಮ್ಮ ಮೇಲಿನ ಈ ಆರೋಪವು ನಿರಾಧಾರವಾದುದೆಂದು ಕಾಂಗ್ರೆಸಿಗರನ್ನುತ್ತಾರಾದರೆ 'ಮತ್ತೇಕೆ ಇಂತಹ ಅಸಡ್ಡೆ?' ಎಂದು ಇವರನ್ನೇ ಒತ್ತಿ ಕೇಳಬೇಕಾಗಿ ಬರುತ್ತದೆ. ಮಿಕ್ಕ ರಾಜಕೀಯ ಪಕ್ಷಗಳನ್ನಂತೂ "ಸಾಮಾಜಿಕ ಹಿತದೃಷ್ಟಿ ಮತ್ತು ಸ್ವಂತ ಹಿತಸಾಧನೆ, ಇವೆರಡರ ಮೇಲಿಂದಲೂ ಜನಮತವನ್ನು ಸಂಘಟಿಸುವ ಆವಶ್ಯಕತೆಯಿರುವ ನೀವೇಕೆ ಆ ಕೆಲಸ ಮಾಡುತ್ತಿಲ್ಲ?" ಎಂದೇ ಪ್ರಶ್ನಿಸಬೇಕಾಗಿದೆ. ಕಮ್ಯೂನಿಸ್ಟ್ ಪಕ್ಷದ ಮೇಲೀಗ ಸರಕಾರದ ಕಣ್ಣಿದೆ; ಒಂದೆರಡು ಪ್ರಾಂತ್ಯಗಳಲ್ಲಿ ಬಹಿಷ್ಕಾರ ಕೂಡಾ ಇದೆ. ಆರ್. ಯಸ್. ಯಸ್. ತನಗೂ ರಾಜಕೀಯಕ್ಕೂ ಸಂಬಂಧವೇ ಇಲ್ಲವೆನ್ನುತ್ತಾ ತನ್ನ ವೈಶಿಷ್ಟ್ಯಾನುಸಾರವಾಗಿ ಭರದಿಂದ ಸಂಘಟನಾ ಕಾರ್ಯ ಮಾಡುತ್ತಿದೆ. ಹಿಂದೂಮಹಾಸಭೆಗೀಗ ಪುನಃ ರಾಜಕಾರಣ ಬೇಕೆನ್ನಿಸಿದೆ. ಆದರೆ, ಕೇವಲ ಡಂಗುರಜೀವಿಯಿದ್ದೂ ಆ ಜೀವನಾಡಿಗಳ ಚಲನೆ ಕೂಡಾ ಪರಸ್ಪರ ವಿರುದ್ಧವೆಂಬಂತಿರುವ ಮಹಾಸಭೆಯು ಜನತೆಯ ನಡುವೆ ಪ್ರವೇಶಿಸಿದರೆ ಅಪಹಾಸ್ಯ ದೊರೆತಷ್ಟು ಸ್ವಾಗತ ದೊರೆವಂತಿಲ್ಲ. ಕಾಂಗ್ರೆಸನ್ನು 'ಪ್ರಚಲಿತ ಸ್ಥಿತಿಭಕ್ತ' ಅಥವಾ 'ಅಧಿಕಾರದ ಅಮಲಿನಿಂದ ಪೈಮರೆತವ' ಎಂದು ಗಣಿಸಿ ಬಿಟ್ಟುಬಿಟ್ಟಲ್ಲಿ ಮತ್ತುಳಿಯುವುದು ಸಮತಾವಾದ ಪಕ್ಷವೊಂದೇ. ಈ ಪಕ್ಷವೇಕೆ ಸದ್ಯಸ್ಥಿತಿಯಲ್ಲಿ ಜನತಾ ಸಂಘಟನೆಯೊಂದನ್ನೇ ಕೈಕೊಂಡು ದೇಶವ್ಯಾಪೀ ಜಾಗೃತಿಯನ್ನಬ್ಬಿಸಬಾರದು? ಕಾಂಗ್ರೆಸ್ ಮತ್ತು ಸಮತಾವಾದಿ ಪಕ್ಷದ ಧ್ಯೇಯ ಧೋರಣೆಗಳು ಕೆಲವಂಶ ಭಿನ್ನವಾಗಿದ್ದರೂ ಬಹುಮಟ್ಟಿಗೆ ಏಕಪ್ರಕಾರವಿವೆ; ಅವು ಜನಪ್ರಿಯವಾಗಿವೆ. ಕಾಂಗ್ರೆಸು ಈಗಿನ ಧೋರಣೆಗಳತ್ತ ಮನಃಪೂರ್ವಕವಾಗಿ ಮತ್ತು ತೀವ್ರ ಗತಿಯಿಂದ ಸಾಗುತ್ತಿಲ್ಲವೆಂಬುದೇ ಸಮತಾವಾದಿಗಳ ಆಕ್ಷೇಪ. ಆದರೀ ಕಡೆಯ ಆಕ್ಷೇಪಕ್ಕಿಂತ "ಸಮತಾವಾದಿಗಳು ಬಡಾಯಿ ಹಾರಿಸುವುದನ್ನು ಬಿಟ್ಟು ಕಾರ್ಯತಃ ಏನನ್ನಾದರೂ ಮಾಡಬಾರದೇಕೆ?" ಎಂದು ಹಂಗಿಸುತ್ತಿರುವ ಸರ್ದಾರ್ ಪಟೇಲರ ಮಾತೇ ಜನತೆಗೀ ಸಂದರ್ಭದಲ್ಲಿ ಹೆಚ್ಚು ಮನದಟ್ಟಾಗುತ್ತದೆ. "ಅಂಚೆ ನೌಕರರ ಬೇಡಿಕೆಗಳ ಕುರಿತು 1941ರಲ್ಲಿ ಅಂಚೆ ಖಾತೆಯ ಮಂತ್ರಿಗಳು ಕೊಟ್ಟಿದ್ದ ಆಶ್ವಾಸನೆಗಳನ್ನು ಫೆಬ್ರುವರಿ ೧ರೊಳಗೆ ಪಾಲಿಸದಿದ್ದರೆ ಜೀವಾವಧಿ ಅನಶನ ಕೈಕೊಳ್ಳುವೆ"ನೆಂಬಂತಹ ಕರ ಕ್ಷೇತ್ರದಿಂದ ಪಂಥಕ್ಕಾಗಿ ಜೈಪ್ರಕಾಶ ನಾರಾಯಣರು ಧುಮುಕಿ ಸೊಂಟಕಟ್ಟುವ ಬದಲಿಗೆ, ನಡುಬಗಿದ ಒಕ್ಕಲಿಗರಾಳಿದರಾಗದೆ? ತಮ್ಮ ವೈಶಿಷ್ಟ್ಯಾನುಸಾರವಾಗಿ ಜನತಾ ಸಂಘಟನ ಮಾಡುವುದೆಂದರೆ ಹೇಗೆ ಎಂಬ ಮಟ್ಟಿಗೆ ಆರ್. ಯಸ್. ಯಸ್., ಕಮ್ಯೂನಿಸ್ಟ್‌ರಂತಹ ಪ್ರತಿಗಾಮೀ, ಅತಿಗಾಮೀ ಪಕ್ಷಗಳ ಮಾದರಿ ಕಣ್ಣ ಮುಂದಿದೆ. ಒಂದು ಪಕ್ಷವು ಸಹಾಯಗಳಂತಹ ವರ್ಚಸ್ಸುಳ್ಳವರ ನಾಯಕತ್ವ, ಅಧಿಕಾರ ಅಥವಾ ಸರಕಾರೀ ಬೆಂಬಲದಿಂದ ಮಾತ್ರ ಪ್ರಬಲಿಸಬೇಕಾಗಿಲ್ಲವೆಂಬುದಕ್ಕೆ ಭಾರತದ ಆವೆರಡು ಪಕ್ಷಗಳೇ ನಿದರ್ಶನ. ಯೋಗ್ಯ ಸಂದರ್ಭವೀಗ ಬಂದಿರುವಾಗ, ಸಮತಾವಾದಿಗಳು ಜನಮತ ಸುಧಾರಣೆ, ಜನತಾ ಸಂಘಟನ ಮಾಡುವ ಕಡೆಗೆ ತಮ್ಮ ಸರ್ವ ಶಕ್ತಿ ಮತ್ತು ಲಕ್ಷ್ಯವನ್ನು ಹರಿಸಿ, ಅದನ್ನು ಸದ್ವಿನಿಯೋಗಿಸಿಕೊಳ್ಳದೆ ಅಪ್ರಮುಖ ಹಾಗೂ ತಾತ್ಕಾಲಿಕ ವಿಷಯಗಳಿಗಾಗಿ ಪ್ರಾಣಾವಧಿ ಪ್ರಯತ್ನ ಮಾಡುವುದರಲ್ಲೇ ದಿನದೂಡುತ್ತಿರುವುದು ನಿಜಕ್ಕೂ ಶೋಚನೀಯ.

---

**ಧಾರವಾಡದಲ್ಲಿ ಆಕಾಶವಾಣಿ**

ಕೇಂದ್ರವು ಇದೇ ತಾ. 9ನೇ ಸೋಮವಾರ ಭಾರತ ಸರಕಾರದ ಸುದ್ದಿ ಮತ್ತು ಆಕಾಶವಾಣಿ ಮಂತ್ರಿ ಶ್ರೀ. ದಿವಾಕರರಿಂದ ಉದ್ಘಾಟಿಸಲ್ಪಟ್ಟು, ಈಗ ಚಾಲಿನಲ್ಲಿದೆ. ಈ ವ್ಯವಸ್ಥೆಯಿಂದ ಅಖಿಲ ಕರ್ನಾಟಕವು ಆನಂದಗೊಂಡಿದೆ.

---

**ಕಟಪಾಡಿ:-** ಇಲ್ಲಿಯ ಪಂಚಾಯತ ಬೋರ್ಡಿನ ತಾಬೆಯೊಳಗಿರುವ ದೀಪದ ಕಂಬಗಳಲ್ಲಿ ಇತ್ತೀಚೆಗೆ ಹೆಚ್ಚಿನವುಗಳಲ್ಲಿ ದೀಪ ಉರಿಯುವುದೇ ಇಲ್ಲ. ಚಿಮಿಣಿ ಎಣ್ಣೆ ಅಭಾವವೋ ಬೋರ್ಡಿನ ಅಸಡ್ಡೆಯೋ ಎಂದು ಗ್ರಾಮಸ್ಥರೊಬ್ಬರು ಬರೆಯುತ್ತಾರೆ.

# ಕಾಂಗ್ರೆಸ್ ಪಾಳೆಯದೊಳಗಿನ ಮತಭೇದ.

ಭಾರತದಲ್ಲಿಂದು ಅಧಿಕಾರ ಸ್ಥಾನದಲ್ಲಿರುವ ಕಾಂಗ್ರೆಸಿಗೆ ಸಶಕ್ತ ಇದಿರುಪಕ್ಷವೆಂಬುದಿಲ್ಲದ ದೆಸೆಯಿಂದ ಎಲ್ಲೆಡೆಯಲ್ಲೂ ಕಾಂಗ್ರೆಸ್ ಪಕ್ಷದ ಒಳಗಡೆಯಲ್ಲೇ ಪ್ರತಿವಾದಿಪಕ್ಷಗಳು ಹುಟ್ಟಿಕೊಂಡಿರುವದು ಕಂಡು ಬರುತ್ತಿದೆ. ಮದ್ರಾಸಿನ ಕಾಂಗ್ರೆಸ್ ಶಾಸನ ಸಭಾಪಕ್ಷದೊಳಗಡೆ ಆರಂಭದಿಂದ ಈವರೆಗೂ ಇರುವ ಪ್ರತಿಸ್ಪರ್ಧಿ ಪಂಗಡಗಳ ಕಾಳಗಗಳು ಜನಜನಿತವಿವೆ. ಆ ದೆಸೆಯಿಂದ ಇಡೀ ಪ್ರಾಂತ್ಯದ ವಾತಾವರಣವು ಕಲುಷಿತವಾಗಿದೆ; ಒಳಕುದಿಗಳು ಅಂತರಂಗದಲ್ಲಿ ತಾಂಡವವಾಡುತ್ತಿವೆ. ಇದೇ ಮಾದರಿಯ ದುರ್ದೆಸೆಯ ಪ್ರತಿಯೊಂದು ಪ್ರಾಂತ್ಯದ ಕಾಂಗ್ರೆಸ್ ಶಾಸನ ಸಭಾಪಕ್ಷಕ್ಕೂ ಬಡಿದಿದೆ. ಕಳೆದ ವರುಷದಲ್ಲಿ ಏಕಮಾತ್ರ ಲಾಭದಾಯೀ ಆಯವ್ಯಯ ಪಟ್ಟಿ ತಯಾರಿಸಿದ್ದ ಸಂಯುಕ್ತ ಪ್ರಾಂತ್ಯದ ಕಾಂಗ್ರೆಸ್ ಪಕ್ಷವೂ ಇಬ್ಭಾಗವಾಗಿರುವ ಸ್ಪಷ್ಟ ಚಿಹ್ನೆಯು ಈಗ ತಾನೇ ಕಾಣಸಿಕೊಂಡಿದೆ. ಸಂಯುಕ್ತ ಪ್ರಾಂತ್ಯದ ಕಾಂಗ್ರೆಸ್ ಪ್ರಧಾನಿ ಪಂಡಿತ ಗೋವಿಂದ ವಲ್ಲಭಪಂತರು, ಕಾಂಗ್ರೆಸ್ ಅಧಿಕಾರ ವಹಿಸಿಕೊಳ್ಳಲಾರಂಭಿಸಿದಂದಿನಿಂದ ಈವರೆಗೂ ಆ ಪ್ರಾಂತ್ಯದ ಮುಖ್ಯ ಮಂತ್ರಿ ಸ್ಥಾನದಲ್ಲಿರುವವರು. ರಾಜಾಜಿ ಮೊದಲಾದ ಅಗ್ರಗಣ್ಯ ಶಾಸನ ಸಭಾ ಮುತ್ಸದ್ದಿಗಳ ಪಂಗ್ತಿಗೆ ಸೇರಿದವರು. ಅಲ್ಲಿ ನಿಸ್ಸಂದೇಹವಾಗಿ ಪ್ರಬಲ ಜನಮತದ ವಿಶ್ವಾಸಕ್ಕೆ ಪಾತ್ರರಾದವರು. ಮದ್ರಾಸಿನಲ್ಲಿ ರಾಜಾಜಿಯವರನ್ನು ಹೊರಗೆ ತಳ್ಳಿದಂತೆ ಸಂಯುಕ್ತ ಪ್ರಾಂತ್ಯದಲ್ಲಿ ಪಂಡಿತ ಪಂತರನ್ನು ವಿಸರ್ಜಿಸಿ ಬಿಡುವ ಶಕ್ತ ಪ್ರತಿವಾದಿಗಳು ಕಾಣುವದಿಲ್ಲ. ಆದರೂ ಅಲ್ಲಿಯ ನ್ಯಾಯವಿಧಾಯಕ ಸಭಾ ಕಾಂಗ್ರೆಸ್ ಪಕ್ಷವು ಇಬ್ಭಾಗವಾಗಿದೆ.

### ತಾ. ೮ರ ಸಭಾತ್ಯಾಗ.

ದ್ವಿಸದಸ್ಯತ್ವವಿರಬಾರದೆಂಬ ನಿಯಮಾನುಸಾರವಾಗಿ ಪಾರ್ಲಿಮೆಂಟಿನಲ್ಲಿ ಸಂಯುಕ್ತ ಪ್ರಾಂತ್ಯದ ಪಾಲಿನ 25 ಸ್ಥಾನಗಳು ಖಾಲಿ ಬಿದ್ದಿರುವುದರಿಂದ, ಅವುಗಳಿಗೆ ಉಮೇದ್ವಾರರನ್ನು ನಿಲ್ಲಿಸುವ ತೀರ್ಮಾನಕ್ಕಾಗಿ ಸಂಯುಕ್ತ ಪ್ರಾಂತ್ಯದ ಕಾಂಗ್ರೆಸ್ ಶಾಸನ ಸಭಾ ಸದಸ್ಯರ ಪಕ್ಷದ ಸಭೆಯು ತಾ. 8ನೇ ರಾತ್ರಿ ಲಕ್ನೋದಲ್ಲಿ ಸೇರಿದ್ದಿತು. ಅದಕ್ಕೂ ಮುಂದಾಗಿ ಸಂಯುಕ್ತ ಪ್ರಾಂತೀಯ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಮತ್ತು ಆ ಪ್ರಾಂತ್ಯದ ಶಾಸನ ಸಭಾ ಕಾಂಗ್ರೆಸ್ ಪಕ್ಷದ ಕಾರ್ಯಕಾರೀ ಮಂಡಲಿಯ ಜತೆ ಸಭೆ ನಡೆದಿದ್ದಿತು. ಸರ್ದಾರ್ ಪಟೇಲರು ಈ ಸಭೆಯಲ್ಲಿ ಸ್ವತಃ ಹಾಜರಿದ್ದರು. 20 ನಿಮಿಷಗಳ ಉಪದೇಶವನ್ನೂ ಕೊಟ್ಟಿದ್ದರು. ಪಾರ್ಲಿಮೆಂಟಿನ ಸ್ಥಾನಗಳಿಗೆ ಉಮೇದ್ವಾರರನ್ನು ಚುನಾಯಿಸಲು ಏಳು ಮಂದಿಯುಳ್ಳ ಒಂದು ಕಮಿಟಿಯನ್ನು ರಚಿಸಿಕೊಳ್ಳಬೇಕೆಂದು ಈ ಜತೆ ಸಭೆಯು ಶಾಸನ ಸಭಾ ಕಾಂಗ್ರೆಸ್ ಪಕ್ಷಕ್ಕೆ ಶಿಫಾರಸು ಮಾಡಿತ್ತು. ರಾತ್ರಿ ಶಾಸನ ಸಭಾಪಕ್ಷದ ಸಭೆಯಲ್ಲಿ ತೀವ್ರ ಚರ್ಚೆ ಮತ್ತು ವಾಗ್ವಾದಗಳಾದುವು. ಕೊನೆಗೆ ಪ್ರತಿವಾದಿ ಒಳಪಂಗಡದವರು ಪಕ್ಷದ ನಿರ್ಣಯದ ನಿಷೇಧಾರ್ಥವಾಗಿ ಸಭಾತ್ಯಾಗ ಮಾಡಿದರು. ಹಾಜರಿದ್ದ 174 ಸದಸ್ಯರ ಪೈಕಿ ಸಭಾತ್ಯಾಗ ಮಾಡಿದವರು 22 ಮಂದಿಯೆಂದು, ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿಯ ಹೇಳಿಕೆಯಿದ್ದರೆ, 80 ಮಂದಿಯೆಂದು ಆ ವಿರುದ್ಧ ಪಂಗಡದವರ ಅಂಬೋಣವಿದೆ. ಈ ಅಂಕೆಯ ಮಟ್ಟಿಗೂ ಒಮ್ಮತವಿಲ್ಲ! ಇಂತಹ ನಿಷೇಧ ಪ್ರದರ್ಶಿಸಿದವರಲ್ಲಿ ಪ್ರತಿವಾದಿ ಪಂಗಡದ ನಾಯಕ ಮತ್ತು ಅಭಿವೃದ್ಧಿ ಖಾತೆಯ ಮಂತ್ರಿಯಾಗಿರುವ ಶ್ರೀ. ಕೇಶವ ದೇವೊ ಮಾಲವೀಯ, ಮಾಜೀ ಅರ್ಥಮಂತ್ರಿ ಶ್ರೀ. ಕೃಷ್ಣ ದತ್ತ ಪಾಲಿವಾಲ, ಪಾರ್ಲಿಮೆಂಟರಿ ಕಾರ್ಯದರ್ಶಿ ಶ್ರೀ. ಜಗನ್ ಪ್ರಸಾದ್ ರಾವತ್, ಶ್ರೀ. ತ್ರಿಲೋಕ ಸಿಂಗ್ ಮೊದಲಾದವರಿದ್ದಾರೆ. ಇನ್ನೀ ವಿರುದ್ಧ ಪಂಗಡದವರೆಲ್ಲರೂ ಕಾಂಗ್ರೆಸ್ ಪಕ್ಷಕ್ಕೇನೇ ರಾಜೀನಾಮೆ ಕೊಡುವರೆಂಬ ಸುದ್ದಿಯಿದೆ. ಏ. ಮಂದಿಯ ಚುನಾವಣಾ ಸಮಿತಿಯ ಓರ್ವ ಸದಸ್ಯನಾಗಿ ನೇಮಕಗೊಂಡಿದ್ದ ಭಾರತ ಸರಕಾರದ ವಹಿವಾಟು ಖಾತೆಯ ಮಂತ್ರಿ ಮಿ. ರಾಫಿ ಅಹಮ್ಮದ್ ಕಿಡ್ವಾಯಿಯವರೂ ಆ ಸ್ಥಾನಕ್ಕೆ ರಾಜಿಯಿತ್ತಿದ್ದಾರೆ.

### ಸರ್ದಾರರ ಸಂದೇಶ

ಸಂಯುಕ್ತ ಪ್ರಾಂತೀಯ ಕಾಂಗ್ರೆಸ್ ಪಕ್ಷದ ಈ ಒಳ ಬಿಕ್ಕಟ್ಟು ಆಧುನಿಕ ಕಾಂಗ್ರೆಸ್ ರಂಗದ ಅಪೂರ್ವ ಘಟನೆಯೇನೂ ಅಲ್ಲವಾದ್ದರಿಂದ ಸೋಜಿಗವಿಲ್ಲ. ಆದರೆ ರಾಷ್ಟ್ರದ ಅಧಿಕಾರ ಪ್ರಾಪ್ತಿಯ ನಂತರ ಕಾಂಗ್ರೆಸ್ ಹಿಡಿದಿದ್ದ ಅಧೋಪಥದಲ್ಲಿಯೇ ಅದು ಕ್ರಮಶಃ ಮುಂದೊತ್ತುತ್ತಿದೆ, ಎಂಬುದಕ್ಕೆ ಮತ್ತೊಂದು ನಿದರ್ಶನವಿದು. ತಾಸು ಪ್ರತ್ಯಕ್ಷ ಹಾಜರಿದ್ದು ಹೊರಡಿಸಿದ ಸೂಚನೆಗೆ ಮನ್ನಣೆಯಿಲ್ಲದಂತೆಯೇ ಇಂತಹ ಪ್ರತಿಭಟನೆ ಬಂದುದನ್ನು ಕಂಡ ಸರ್ದಾರ್ ಪಟೇಲರು ಲಕ್ನೋದಿಂದ ಡಿಲ್ಲಿಗೆ ಹೊರಡುವಾಗ ಕೊಟ್ಟು ಹೋದ ಸಂದೇಶವು ಕಾಂಗ್ರೆಸಿಗರೆಲ್ಲರಿಗೂ ಶಿಸ್ತು ಪಾಲನಾ ನೆನಪನ್ನು ಮತ್ತೊಮ್ಮೆ ಕೊಡುವಂತಹದಿದೆ.

"ಪಾರ್ಲಿಮೆಂಟಿಗೆ ಹುರಿಯಾಳುಗಳನ್ನಾರಿಸಿಕೊಳ್ಳುವ ಪ್ರಶ್ನೆಯನ್ನು ಇಲ್ಲಿ ದುರ್ದೈವವಶಾತ್ ಎತ್ತುವ ಬರುವ ವಾದ ಪ್ರತಿವಾದಗಳ ಕುರಿತು ಒಂದು ಯೋಗ್ಯ ಹಾಗೂ ಸಮಾಧಾನಕರ ತೀರ್ಮಾನವಾಗುವಂತೆ ಸಹಾಯ ಮಾಡಬೇಕೆಂದೇ ನಾನು ಲಕ್ನೋವಿಗೆ ಬಂದೆ. ಯಾವುದೇ ವಿಧದ ಕಾರ್ಯಾಚರಣೆಯನ್ನು 'ಡಿಕ್ಟೇಟ್' ಮಾಡುವ ಉದ್ದೇಶದಿಂದಲ್ಲ-ಸ್ಥಳೀಯ ಸಂಸ್ಥೆಗೆ ನನ್ನ ಸಲಹೆ ಮತ್ತು ಬಲವನ್ನು ಕೊಡಬೇಕೆಂಬ ಬಯಕೆಯಿಂದಲೇ ನಾನು ನನ್ನ ಕರ್ತವ್ಯ ನಿರ್ವಹಣ ಮಾಡಿದ್ದೆ. ಪ್ರಾಂತೀಕ ಕಾಂಗ್ರೆಸಿನ ಎರಡು ಪಂಗಡಗಳ ಅಭಿಪ್ರಾಯಗಳನ್ನೂ ನಾನು ಗಾಢ ಲಕ್ಷ್ಯಪೂರ್ವಕ ಮತ್ತು ಗಾಢಸಂತಾಪಪೂರ್ವಕ ಆಲಿಸಿದ್ದೆ. ಈ ಭಿನ್ನಾಭಿಪ್ರಾಯಗಳ ಕಾರಣಗಳು ಸಹಜ,ಮೂಲಭೂತ, ಹಾಗೂ ಸಂಸ್ಥೆಯ ತತ್ವಾನುರೂಪವಾಗಿ ಇರದೆ, ನಾವೆಲ್ಲರೂ ಯಾವ ಸಂಸ್ಥೆಗೆ ಸೇರಿದವರೆಂಬ ಗೌರವ ಮತ್ತು ಹಕ್ಕು ಬಾಧ್ಯತೆಗೊಳಗಾಗಿರುವೆವೋ ಆ ಸಂಸ್ಥೆಯ ಕಲ್ಯಾಣ ಮತ್ತು ಹಿತ ಸಂಬಂಧಗಳಿಗೆ ಪೂರ್ಣ ಕಂಟಕಪ್ರಾಯವಾಗಿವೆ ಎಂಬುದು ಮನವರಿಕೆಯಾಗಲು ನನಗೆ ಹೆಚ್ಚು ಸಮಯ ಹಿಡಿಯಲಿಲ್ಲ. ಹೀಗಾಗಿ ಸಂಸ್ಥೆಯ ದೃಷ್ಟಿಯಿಂದ, ಇದೂ ಇತರ ಪ್ರಾಂತ್ಯಗಳಷ್ಟೇ ಕಳಕಳಿಯದು ಅಥವಾ ಅದಕ್ಕಿಂತ ಮಾಸಿಯೆಂದು ಆತ್ಮ ಸಮಾಧಾನ ಹೊಂದಲೆಡೆಯಿಲ್ಲ. ಸಂಸ್ಥೆಯ ಮತ್ತು ರಾಷ್ಟ್ರದ ವಿಶಾಲ ಹಿತಸಂಬಂಧಗಳ ಇದಿರಲ್ಲಿ ನೀವೀಗ ಚರ್ಚಿಸುತ್ತಿರುವ ವಿಷಯ ಕ್ಷುಲ್ಲಕವಾದುದೆಂದೂ, ಒಂದು ಮಹಾ ಸಂಸ್ಥೆಯ ಪ್ರತಿನಿಧಿಗಳಾಗಿರುವ ನೀವು ಪರಸ್ಪರ ಮೈತ್ರೀಭಾವ ಮತ್ತು ಸೌಹಾರ್ದತಾ ಮೂಲಕವೇ ಭಿನ್ನಾಭಿಪ್ರಾಯಗಳನ್ನು ಒಂದುಗೂಡಿಸಿಕೊಳ್ಳಬಹುದೆಂದೂ, ಈ ಭಾವನಾ ಪ್ರೇರಣೆಗೊಂಡರೆ ಸರ್ವವಿಶ್ವಾಸಪಾತ್ರ ಚುನಾವಣಾ ಸಮಿತಿಯೊಂದನ್ನು ಆರಿಸಿಕೊಳ್ಳಲು ಕಷ್ಟವಿಲ್ಲವೆಂದೂ ನಾನು ನನ್ನ ಸಂಯುಕ್ತ ಪ್ರಾಂತ್ಯದ ಮಿತ್ರರಿಗೆ ಸಲಹೆಕೊಟ್ಟಿದೆ. ಕಳೆದ ಆರು ತಿಂಗಳುಗಳಲ್ಲಿ ಪಂಡಿತ ಜವಾಹಿರಲಾಲರು ಈ ಪ್ರಾಂತ್ಯಕ್ಕೆ ಎರಡು ಬಾರಿ ಭೇಟಿಕೊಟ್ಟಿದ್ದೂ, ತಮ್ಮೊಳಗೆ ಪಂಗಡವಾರು ವೈಷ್ಯೋಟಿಯಲ್ಲವೆಂಬ ಭಾವನೆಯನ್ನು ಅವರಲ್ಲೂ ಸಾರ್ವಜನಿಕರಲ್ಲೂ ನಿರ್ಮಿಸಿದ್ದುದಕ್ಕೆ ವಿರುದ್ಧವಾಗಿ ಇನ್ನೂ ಪಂಗಡವಾರು ಮನೋವೃತ್ತಿಯು ಹಬ್ಬಿರುವುದನ್ನು ಕಂಡು ನನಗಾಶ್ಚರ್ಯವಾಗುತ್ತಿದೆ" ಎನ್ನುತ್ತಾ ಸರ್ದಾರ್ ಪಟೇಲರು ಕಾಂಗ್ರೆಸಿಗರೊಳಗಿರುವ ಪಂಗಡ ರಚನೆಗಳ ಪ್ರಮಾದಗಳನ್ನು ನಿಷೇಧಿಸಿ, ಹೇಗಿದ್ದರೂ ಬಹುಮತದ ನಿರ್ಧಾರವೊಂದಾದ ಮೇಲೆ ಅದನ್ನನುಸರಿಸಲು ಎಲ್ಲರೂ ಬದ್ಧರಿದ್ದಾರೆ, ಎಂಬ ಕ್ರಮವನ್ನೆತ್ತಿ ಹೇಳಿದ್ದಾರೆ.

### ಇತರ ಭೇದಗಳು

ಅಧಿಕಾರರಂಗದಲ್ಲಿ ಕಾಂಗ್ರೆಸಿಗರೊಳಗೆ ಇಂತಹ ಖಂಡನೀಯ ಬಿಕ್ಕಟ್ಟುಗಳಿರುವಂತೆಯೇ ಪ್ರತ್ಯಕ್ಷ ಕಾಂಗ್ರೆಸ್ ರಂಗದಲ್ಲಿಯೂ ಶಿಸ್ತು ಸಂಯಮನಗಳು ತೀರಾ ಸಡಿಲುಬಿದ್ದಿವೆ, ಎಂಬುದಕ್ಕೆ ಎಲ್ಲೆಲ್ಲೂ ನಿದರ್ಶನಗಳು ದೊರಕುತ್ತಿವೆ. ಕರ್ನಾಟಕ ಪ್ರಾಂತ್ಯ ರಚನೆ ಸಂಬಂಧದ ನವ ಧ್ವನಿಗಳು ಕೂಡಾ ಈಗ ಕಾಂಗ್ರೆಸ್ ಶಿಸ್ತಿನ ಅವರಣಕ್ಕೆ ಬಂದು ಬಡಿಯಹತ್ತಿವೆಯೆಂಬುದನ್ನು ಲಕ್ಷ್ಯದಲ್ಲಿಡಬೇಕು. ಕಾಂಗ್ರೆಸ್ ಅಧ್ಯಕ್ಷರೇ ಪ್ರಾಂತ್ಯ ಸಂಬಂಧದ ವಿವಾದದಲ್ಲೊಂದು ಪಕ್ಷವಾಗಿ ನಿಂತಿರುವಾಗ–ನಾನು ಪಕ್ಷಾತೀತನೆಂಬ ನಂಬುಗೆಯು ನೆರೆ ಪ್ರಾಂತ್ಯದವರಲ್ಲಿ ಮೂಡುವಂತೆ ವರ್ತಿಸಲು ಸ್ವತಃ ಅವರಿಗೇನೇ ಅಸಾಧ್ಯವಾಗಿರುವಾಗ–ವಿಶಾಲ ರಾಷ್ಟ್ರೀಯ ಭಾವನೆಯ ಘನತತ್ವವನ್ನು ಮಿಕ್ಕ ಕಾಂಗ್ರೆಸಿಗರಿಗೆ ಬೋಧಿಸಿ ಫಲವಿಲ್ಲ. ಆಂಧ್ರ ಪ್ರಾಂತ್ಯ ರಚನಾಸಂಬಂಧಗ ಪಂಡಿತ ನೆಹರುಗಳ ಮದ್ರಾಸ್ ಹೇಳಿಕೆ ಮತ್ತು ಬಳ್ಳಾರಿಯ ಪ್ರಶ್ನೆಯ ಸಂಬಂಧವಾಗಿ ಅವರು ಇದೇ ತಾ. 9ರಲ್ಲಿ ಆಡಿರುವ ಮಾತುಗಳು ಅಧ್ಯಕ್ಷಸ್ಥಾನೋಚಿತ ಅಲ್ಲ. ವಾಸನೆ ಹೊಡೆದಿವೆ. ಜನವರಿ 26ರೊಳಗೆ ಆಂಧ್ರ ಪ್ರಾಂತ್ಯವಾಗುವದು ಅತಿ ಕಷ್ಟವೆಂಬ ಪಂಡಿತಜೀಯ ಅಭಿಪ್ರಾಯದ ಕುರಿತು ಡಾ. ಪಟ್ಟಾಭಿಯೆಂದರು. "1947ನೇ ಆಗೋಸ್ತು 15ರ ಮೊದಲು ಸ್ವರಾಜ್ಯ ಸಂಪಾದಿಸಿಕೊಳ್ಳುವುದು ಬಹಳ ಕಷ್ಟವಾಗಿ ತೋರಿಬಂದಿತ್ತು. ಆದರೂ ಲೋರ್ಡ್ ಮೌಂಟ್ ಬೇಟನರೊಂದು ಕಾಲನಿಯಾಮಕ ಪಟ್ಟಿಯಿಟ್ಟುಕೊಂಡು ಕೆಲಸ ಮಾಡಿದರು; ಅದಾಗಿ ಹೋಯಿತು. ಅಷ್ಟು ಕಷ್ಟಗಳಿದ್ದರೂ, ವಿದೇಶೀಯರ ಕೈಯಲ್ಲಿದ್ದ ಸ್ವರಾಜ್ಯವನ್ನು 1947ರ ಆಗೋಸ್ತು 15ರಲ್ಲೇ ತೆಗೆದುಕೊಳ್ಳಲು ಸಾಧ್ಯವಾಗಿರುವಾಗ, ಆಂಧ್ರ ವಿಭಜನೆಯ ಈ ಸರಳ ಕಾರ್ಯವು ನಿಶ್ಚಿತಾವಧಿ ಜನವರಿ 26ರೊಳಗಾಗಲು ಕಷ್ಟವಾಗದು." ಡಾ| ಪಟ್ಟಾಭಿಗಳು ಪ್ರಕೃತ ಮದ್ರಾಸ್ ನಗರವು ಆಂಧ್ರ ಮತ್ತು ತಮಿಳರ ಜತೆ ರಾಜಧಾನಿಯಾಗಿರಬಹುದೆಂದು ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ. ಬಳ್ಳಾರಿಯ ಕುರಿತು "ಶ್ರೀ. ಭೀಮರಾವ್ ಎಂ.ಎಲ್.ಎ, ಯಂತಹ ಹಿರಿಯ ಚತುರರು ಆಂಧ್ರದಲ್ಲಿರಬೇಕೆಂದು ಬಯಸಿದ್ದರು. ಆದರೆ, ದೀರ್ಘಾವಧಿ- ಅದರಲ್ಲೂ ಕರ್ನಾಟಕ ಪ್ರಾಂತ್ಯವಾಗಲು ತಡವಾದರೆ ಆವರೆಗೂ ಕನ್ನಡಿಗರು ಆಂಧ್ರ ಪ್ರಾಂತ್ಯದಲ್ಲೇ ಉಳಿದುಕೊಂಡರೆ, ಅವರು ಆಂಧ್ರದೊಳಗೇನೆ ತಲ್ಲೀನತೆ ಹೊಂದಿ ಆ ಭಾಗಕ್ಕೆ ಅಂಟಿಹೋಗಬಹುದೆಂಬ ಹೆದರಿಕೆ ಕನ್ನಡಿಗರಿಗಿದೆ. ಈ ಸಂದೇಹಕ್ಕೆ ಮಾನ್ಯತೆ ಕೊಡಲೇಬೇಕು. ಆದ್ದರಿಂದ ಕನ್ನಡಿಗರು ಆಂಧ್ರದೊಂದಿಗೆ ಸೇರಿ ಆದರೊ... [illegible] ವ ಅಪಾಯಕೀಡಾಗುವ ಬದಲಿಗೆ ತಮಿಳುಪ್ರಾಂತ್ಯದಲ್ಲೇ ಉಳಿದು ತಮ್ಮ ವೈಶಿಷ್ಟ್ಯವನ್ನು ಉಳಿಸಿಕೊಳ್ಳುವುದು ಹಿತ" ಎಂದು ವ್ಯಂಗ್ಯೋಕ್ತಿ ಮಾಡಿದ್ದಾರೆ. ಕಾಂಗ್ರೆಸ್ ಅಧ್ಯಕ್ಷರಿಗೆ ಹೇಳಿಸದ ಒಳ ಚಾತುರ್ಯ, ಅತ್ಯಾತುರ ಮತ್ತು ನಂಜು ಈ ಮಾತುಗಳಲ್ಲಿ ಹುದುಗಿರುವುದನ್ನು ಅರಿಯಬಹುದು!

---

### ಉಡುಪಿ

**ಮಕರಸಂಕ್ರಾಂತಿ ಜಾತ್ರೆಯು** ಇದೇ ತಾ. 8ರಲ್ಲು ಪ್ರಾರಂಭವಾಗಿದೆ. ತಾ. 12ರಲ್ಲು ಬ್ರಹ್ಮರಥೋತ್ಸವ, ತಾ. 14ರಲ್ಲು ಚೂರ್ಣೋತ್ಸವ, ತಾ. 16ರಲ್ಲು ಸೋದೆ ಸ್ವಾಮಿಗಳವರ ಪರ್ಯಾಯದ ಅ... [illegible] ರಥೋತ್ಸವ ಜರಗುವುದು.

**ಶ್ರೀ ಕಾಣೂರು ಸ್ವಾಮಿಗಳ ಪರ್ಯಾಯವು** ಇದೇ ತಾ. 17ನೇ ಮಂಗಳವಾರ ಜರಗುವುದು. ಅಂದು ಸೂರ್ಯೋದಯದ ಮೊದಲು ಪರ್ಯಾಯ ಮೆರವಣಿಗೆಯು ಜೋಡುಕಟ್ಟೆಯಿಂದ ಹೊರಟು ಕೋರ್ಟು ರಸ್ತೆ ತೆಂಕಪೇಟೆಗಾಗಿ ರಥಬೀದಿಗೆ ಬರುವುದು. ಬಳಿಕ ಶ್ರೀ ಕೃಷ್ಣ ಸನ್ನಿಧಿಯಲ್ಲಿ ಅಧಿಕಾರ ಸ್ವೀಕಾರ, ನಂತರ ವಸಂತ ಮಹಲಿನಲ್ಲಿ ಪರ್ಯಾಯ ದರ್ಬಾರ್ ಮೊದಲಾದ ಕಾರ್ಯಕ್ರಮಗಳಾಗುವುವು.

---

### ದ. ಕ. ಜಿಲ್ಲಾ ಸಮಾಚಾರ

ಕುಂಬಳೆ.-ಫಿರ್ಕಾದಲ್ಲಿ ಡಿಸೆಂಬರ ತಿಂಗಳಲ್ಲಿ ನಡೆದ ಗ್ರಾಮಸುಧಾರಣೆ ಕೆಲಸಗಳ ವರದಿಯಲ್ಲಿ ಹಲವಾರು ಕೈಗಾರಿಕಾ ತರಬೇತಿ ಕೇಂದ್ರಗಳನ್ನು ತೆರೆಯಲಾಗಿದೆ ಎಂದೂ, ಬುಲ್ ಡೋಜರು ಯಂತ್ರದ ಸಹಾಯದಿಂದ ಮೂರು ಎಕ್ರೆ ಗುಡ್ಡ ಸ್ಥಳವನ್ನು ಸಮತಟ್ಟುಗೊಳಿಸಿ ಗದ್ದೆಗಳನ್ನು ರಚಿಸಲಾಗಿದೆ ಎಂದೂ ಹೇಳಲಾಗಿದೆ.

**ಶಿರ್ವ:**-ಶಿರ್ವ ಗ್ರಾಮಾಭಿವೃದ್ಧಿ ಸಂಘದ ಸಭೆಯು ಇದೇ ತಾ. 7ರಲ್ಲು ಶ್ರೀ ಎಸ್. ಅಣ್ಣಯ್ಯ ಹೆಗ್ಡೇರ ಅಧ್ಯಕ್ಷತೆಯಲ್ಲಿ ಜರಗಿ ಶಿರ್ವ, ಸೊರ್ಕಳ ಕೆರೆ, ಸುಳ್ಳೆದು ಕೆರೆ, ನ್ಯಾರ್ಮ ಕೆರೆ ಮತ್ತು ಶಿರ್ವ ಕಟ್ಟವನ್ನು ಕೂಡಲೇ ದುರಸ್ತಿ ಪಡಿಸಿ ಹೆಚ್ಚಿನ ಬೆಳೆ ಬೆಳೆಸಲು ಅನುಕೂಲ ಸಂದರ್ಭ ಒದಗಿಸಿ ಕೊಡುವಂತೆ ಸರಕಾರವನ್ನು ಕೇಳಿಕೊಳ್ಳುವ, ಶಿರ್ವ ಪ್ರಾಂತಕ್ಕೊಂದು ಸಬ್ ಪೋಸ್ಟಾಫೀಸು, ರಜಿಸ್ಟ್ರೇಶನ್ ಆಫೀಸು, ಕೃಷಿ ಸಬ್ ಡಿಪೊ, ಪೋಲೀಸ್ ಸ್ಟೇಶನ್ ಮತ್ತು ಪ್ರೊಹಿಬಿಶನ್ ಸ್ಟೇಶನ್ ತೆರೆಯುವುದು ಅತೀ ಅಗತ್ಯವಿರುವುದರಿಂದ ಅವನ್ನು ಬೇಗನೆ ತೆರೆಯುವಂತೆ ಸಂಬಂಧಪಟ್ಟವರಿಗೆ ಬರೆಕೊಳ್ಳುವ ಮೊದಲಾದ ನಿರ್ಣಯಗಳಾದುವು.

**ಫಲಿಮಾರ.:**—ಸ್ಥಳೀಯ ಬೋ. ಹಾ. ಎಲಿಮೆಂಟರಿ ಶಾಲೆಯ ವರ್ಷಾವಧಿ ಪರೀಕ್ಷೆಯು ಈಚೆಗೆ ಜರಗಿ ಶಾಲಾ ಕೆಲಸಗಳು ಉತ್ತಮ ರೀತಿಯಲ್ಲಿ ಜರಗಿಸಲ್ಪಟ್ಟಿವೆಯೆಂದೂ ಶಾಲೆಗೆ ಕಟ್ಟಡದ, ಅಧ್ಯಾಪಕರ ಹಾಗೂ ಸಾಹಿತ್ಯಗಳ ಅಭಾವ ತುಂಬಾ ಇದೆಯೆಂದೂ ಇಲಾಖಾ ಅಧಿಕಾರಿಗಳು ಅಭಿಪ್ರಾಯ ಪಟ್ಟಿರುತ್ತಾರೆ. ಈ ನ್ಯೂನತೆಗಳನ್ನು ಹೋಗಲಾಡಿಸಲು ಊರವರ ಸಭೆಯೊಂದು ಇದೇ ತಾ. 5ರಲ್ಲಿ ಶ್ರೀ ಆರ್. ವಿ. ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿತು. ಸಾಧಾರಣ ಒಂದು ಸಾವಿರ ವಿದ್ಯಾರ್ಥಿಗಳಿರುವ ಈ ಶಾಲೆಗೆ ಕಟ್ಟಡದ ವ್ಯವಸ್ಥೆಯನ್ನು ಗ್ರಾಮಸ್ಥರು ಬೇಗನೇ ಮಾಡಬೇಕಾಗಿಯೂ ಸಾಹಿತ್ಯ ವ ಉಪಾಧ್ಯಾಯರ ಅಭಾವವನ್ನು ದ. ಕ. ಜಿಲ್ಲಾ ಬೋರ್ಡಿನವರು ಹೋಗಲಾಡಿಸಬೇಕಾಗಿಯೂ ನಿರ್ಣಯಿಸಲಾಯಿತು.

**ಕುಂಬಳೆ:**-ಇದೇ ತಾ. 3ರಲ್ಲು ಇಲ್ಲಿಯ ಎಚ್. ಇ. ಬೋರ್ಡ ಶಾಲಾ ಕಟ್ಟಡದಲ್ಲಿ ವಯಸ್ಕರಿಗಾಗಿ ರಾತ್ರಿ ಶಾಲೆಯೊಂದನ್ನು ತೆರೆಯಲಾಗಿದೆ.

ಮಕ್ಕಳ ಆಟದ ಹಬ್ಬದ ಪ್ರಾರಂಭೋತ್ಸವವು ತಾ. 4ರಲ್ಲು ಮಂಗಲಪಾಡಿ ಎಚ್. ಇ. ಬೋರ್ಡ ಶಾಲೆಯ ಬಳಿಯಲ್ಲಿ ಶ್ರೀ ಬಿ. ನಾರಾಯಣ ಪಡುಂಜರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ನೇಮಪ್ಪ ಆಳ್ವರು ಧ್ವಜಾರೋಹಣ ಮಾಡಿದರು. ಶಾಲಾ ಡಿಪ್ಯುಟಿ ಇನ್ಸ್ಪೆಕ್ಟರ್ ಶ್ರೀ ಟಿ. ಎಲ್. ರಾಯರು ಉತ್ಸವದ ಉದ್ಘಾಟನೆ ಮಾಡಿದರು.

**ಮೂಡಬಿದ್ರೆ:**- ದ. ಕ. ಜಿಲ್ಲಾ ಬೋರ್ಡ ಪ್ರೆಸಿಡೆಂಟ್ ಶ್ರೀ ಬಿ. ಮಂಜಯ್ಯ ಹೆಗ್ಡೆರು ಕಳೆದ ತಾ. 30ರಲ್ಲು ಮೂಡಬಿದ್ರೆಯಲ್ಲಿ ಮೊಕ್ಕಾಂ ಮಾಡಿ ಅಲ್ಲಿಯ ಆಸ್ಪತ್ರೆಯನ್ನು ಸಂದರ್ಶಿಸಿದರು. ಮೆಡಿಕಲ್ ಆಫೀಸರರ ಕುರಿತು ಶ್ರೀ ಎಸ್. ಬಾಬುಸೆಟ್ಟಿ ಮೊದಲಾದವರು ಮಾಡಿದ ಅರ್ಜಿಯನ್ನು ತನ್ನಿ ನಡಿಸಿ ಹೆಚ್ಚಿನ ವಿಚಾರಣೆಗೆ ಅವಕಾಶವಿಲ್ಲವೆಂದಭಿಪ್ರಾಯ ಪಟ್ಟರು. ಮೆಡಿಕಲ್ ಆಫೀಸರರು ತಕರಾರು ದೂರುಗಳಿಗೆ ಆಸ್ಪದ ನೀಡಲಾರರೆಂದು ಭರವಸೆಯಿತ್ತರು ಈ ಸಂದರ್ಭದಲ್ಲಿ.

**ಬೆಳ್ಳೆ:**- ತಾ 20-12-49ರಲ್ಲಿ ಹೆಂಗವಳ್ಳಿ ಗ್ರಾಮದ ಪಕ್ಕುಶೆಟ್ಟಿ ಮತ್ತು ಚಂದಯ್ಯ ಹೆಗ್ಡೆ ಎಂಬವರು ಮೃಗ ಬೇಟೆಯಲ್ಲಿ ಜಾನುವಾರುಗಳಿಗೆ ಉಪದ್ರವ ಕೊಡುತಿದ್ದ ಎರಡು ಚಿಟ್ಟೆ ಹುಲಿಗಳನ್ನು ಕೊಂದು ಹಾಕಿರುವರು. ಇದರಿಂದ ಸದ್ರಿ ಗ್ರಾಮಸ್ಥರಿಗೆ ತುಂಬಾ ಉಪಕಾರವಾಗಿರುತ್ತದೆ.

**ಶಿರೂರ :**- ಶಿರೂರು, ಹೆಗ್ಗುಂಜೆ ಬಿ. ಟಿ, ಕುದಿ ಮತ್ತು ವಂಡಾರು ಶಾಲೆಗಳ ಮಕ್ಕಳ ಹಬ್ಬವು' ಶಿರೂರು ಶಾಲೆಯಲ್ಲಿ ತಾ 31-12-49ರಲ್ಲಿ ಶ್ರೀ. ಎ. ಹಿರಿಯಣ್ಣಶೆಟ್ರ ಅಧ್ಯಕ್ಷತೆಯಲ್ಲಿ ಜರಗಿತು. ಅಂದು ವಿದ್ಯಾರ್ಥಿ ವಿದ್ಯಾರ್ಥಿನಿಯರ ವಿವಿಧ ಶಾರೀರಿಕ ಚಟುವಟಿಕೆಗಳೂ ಕೇಂದ್ರಶಾಲಾ ಮೆನೆಜರ್ ಶ್ರೀ. ಎಚ್. ಮುಹಾಲಿಂಗಶೆಟ್ಟರ ಸಿಹಿತಿಂಡಿ ಹಂಚೋಣವೂ ನಡೆದು, ಧನ್ಯವಾದ ಮಂಗಲಗಳೊಡನೆ ಸಭೆಯು ವಿಸರ್ಜನೆಯಾಯಿತು.

**ಹಂಗಾರಕಟ್ಟೆ:**- ಇಲ್ಲಿಯ ಕೋಡಿಬೆಂಗ್ರೆಯಲ್ಲಿ ಜಿಲ್ಲಾ ಬೋರ್ಡಿನಿಂದ ಮಾಡಿಸಲಾದ ಬಾವಿಯು ಬಹು ಸಂಖ್ಯಾಕ ಬಡವರಿಗೆ ಉಪಯೋಗವಾಗಿತ್ತು. ಆದರೆ ದುರ್ದೈವದಿಂದ ಕಳೆದ 2 ವರ್ಷಗಳಿಂದ ಸತ್ತ ಇಲಿ ಹೆಗ್ಗಣಾದಿಗಳಿಂದ ತುಂಬಿಹೋಗಿ, ಇದರ ನೀರನ್ನೇ ಹೊಂದಿಕೊಂಡಿದ್ದ ಬಡವರು ತುಂಬಾ ಕಷ್ಟ ಮತ್ತು ನಷ್ಟ ಪಡಬೇಕಾಗಿ ಬಂದದೆ. ಸಂಬಂಧಪಟ್ಟ ಅಧಿಕಾರಿಗಳು ಬಡನಿವಾಸಿಕರ ಮೇಲೆ ದಯಾದೃಷ್ಟಿ ಇಟ್ಟು ಸದರಿ ಬಾವಿಯನ್ನು ದುರಸ್ತಿ ಪಡಿಸಬೇಕಾಗಿ ವಿನಂತಿ.

**ಕುಂದಾಪುರ:**- ತಾ 30-12-49ರಲ್ಲು 'ಹರಿಜನ ದಿನಾಚರಣೆಯು ವಿಜೃಂಭಣೆಯಿಂದ ಜರಗಿತು. ಅಂದು ಬೆಳಿಗ್ಗೆ ಕುಂದಾಪುರ ಆರ್. ಡಿ. ಓ, ತಹಶೀಲದಾರ, ಕೊಂಗ್ರೆಸ್ಸು ಕಾರ್ಯದರ್ಶಿ ಮೊದಲಾದವರು ಬರತಕಲ್ಲು ಕೊಲನಿಯನ್ನು ಸಂದರ್ಶಿಸಿ, ಹರಿಜನರಿಗೆ ಶುಚಿತ್ವವನ್ನು ತಿಳಿಯಹೇಳಿ, ಬಾಲಕರಿಗೆ ಹಂದ್ಯಾಟಗಳನ್ನು ಏರ್ಪಡಿಸಿ, ನೆರೆದವರಿಗೆಲ್ಲ ಸಿಹಿತಿಂಡಿ ಹಂಚಿದರು. ಮಧ್ಯಾಹ್ನ 4 ಘಂಟೆಗೆ ಸರಿಯಾಗಿ ವಕೀಲ ಶ್ರೀ ಕೆ. ವೆಂಕಪ್ಪಸೆಟ್ರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಕೂಡಿ, ಅಧ್ಯಕ್ಷರಿಂದ ಹರಿಜನ ವಿಧಾರ್ಥಿಗಳಿಗೆ ಒಂದೊಂದು ಜೊತೆ ಹೊಸಬಟ್ಟೆಗಳನ್ನು ಹಂಚಲಾಯಿತು. ಆ ಮೇಲೆ ಅಲ್ಲಿಂದ ಮೆರವಣಿಗೆ ಹೊರಟು ಪೇಟೆಯ ಸುತ್ತು ಬಂದು ಗಾಂಧಿಮೈದಾನಿನಲ್ಲಿ ತಿರುಗಿ ಸಭೆಕೂಡಿ, ದಿನಾಚರಣೆಯ ಗುರಿ ಉದ್ದೇಶದ ಕುರಿತು ಶ್ರೀ ಎಂ. ಎಂ. ಹೆಗ್ಡೆಯವರು ವಿಸ್ತಾರವಾಗಿ ಮಾತನಾಡಿದರು. ಆಮೇಲೆ ಸಭಾಧ್ಯಕ್ಷ ಶ್ರೀ ಕೆ. ವೆಂಕಪ್ಪಸೆಟ್ರು ಮಾತನಾಡಿದದ ಬಳಿಕ ಕುಂದಾಪುರ ತಹಶೀಲದಾರ ಶ್ರೀ ಕೆ. ದೇವೇಂದ್ರ, ಅವರು ನೆರೆದವರಿಗೂ, ಹೊಸಬಟ್ಟೆಗಳನ್ನುಕೊಡಲು ಧನಸಹಾಯ ಮಾಡಿದ ಮಹನೀಯರಿಗೂ ಧನ್ಯವಾದಗಳನ್ನರ್ಪಿಸಿದರು. ರಾಷ್ಟ್ರಗೀತೆಯೊಂದಿಗೆ ಸಭಾಂತ್ಯವಾಗಿ ಹರಿಜನರು ಕುಂದೇಶ್ವರ ದೇವಸ್ಥಾನ ಪ್ರವೇಶಿಸಿ ಗಂಧ ಪ್ರಸಾದವನ್ನು ಸ್ವೀಕರಿಸಿದರು,

**ಚೇರ್ಕಾಡಿ:**—ಆರ್. ಕೆ. ಪಾಟ್ಕರ್ ಶಾರದಾ ಹಾಯರ್ ಎಲಿಮೆಂಟರೀ ಶಾಲೆಯ ವರ್ಷಾಂತ್ಯೋತ್ಸವವು ಕಳೆದ ತಾ. 1-1-1950ರಲ್ಲಿ ಶ್ರೀ ಎಚ್. ಸಂಜೀವರಾವ್, ಡಿಪ್ಯುಟಿ ಇನ್ಸ್ಪೆಕ್ಟರ್ ಉಡ್ಪಿ ನೋರ್ತ್ ರೇಂಜ್, ಇವರ ಅಧ್ಯಕ್ಷತೆಯಲ್ಲಿ ಜರಗಿತು. ವರದಿವಾಚನ, ಬಹುಮಾನ ವಿತರಣೆ, ಸಾಧನ್ಸ ಕಾಳಗ ಯಕ್ಷಗಾನ ನಾಟಕ, ರಾಜೇ ಸಂಯುಕ್ತೆ, ಸಂಗೀತ ನಾಟಕ ಮೊದಲಾದ ಕಾರ್ಯಕ್ರಮಗಳಿದ್ದುವು. ಅಧ್ಯಕ್ಷರ ಸಂಗ್ರಹವಾದ ಭಾಷಣಾನಂತರ ಮುಖ್ಯೋಪಾಧ್ಯಾಯರಿಂದ ಧನ್ಯವಾದಗಳು ಸಮರ್ಪಿಸಲ್ಪಟ್ಟು ಸಭೆಯು ಜನಗಣಮನದೊಂದಿಗೆ ಮುಕ್ತಾಯ ಹೊಂದಿತು."

**ಮುಂಡ್ಕೂರ.:**- ಈ ವರ್ಷ ಹಿಂಗಾರು ಮಳೆಯಿಲ್ಲದ ಕಾರಣ ಮುಂಡ್ಕೂರು ಮತ್ತು ಆಸುಪಾಸಿನ ಗ್ರಾಮಗಳಲ್ಲಿ ಸುಗ್ಗಿ ಪೈರ ನೀರಿಲ್ಲದೆ ಒಣಗಿ ಕಮರಿ ಹೋಗಿದೆ, ಅರ್ಧ ವಾಸಿಗಿಂತಲೂ ಹೆಚ್ಚಿನ ಗದ್ದೆಗಳಲ್ಲಿ ಬೆಳೆಯೇ ಇಲ್ಲವಾಗಿದೆ, ಮುಂಡ್ಕೂರಲ್ಲಿ ಹೊಳೆಗೆ ಕಟ್ಟ ಕಟ್ಟಿರುವದರಿಂದ ಹೊಳೆ ಬದಿಯ ಗದ್ದೆಗಳಿಗೆ ಮಾತ್ರ ಏತದ ಮೂಲಕ ನೀರು ಹಾಯಿಸಿ ಫಸಲು ಬರುವಂತೆ ಪ್ರಯತ್ನಿಸಲಾಗಿದೆ. ಹೊಳೆ ಕಿನಾರೆಗೆ ದೂರವಿರುವ ಗದ್ದೆಗಳೆಲ್ಲಾ ಸುಟ್ಟಂತಾಗಿ ರೈತರು ಗೋಳಾಡುವಂತಾಗಿದೆ. ಕೆಲವು ರೈತರಿಗೆ ಮುಂದಿನ ಸುಗ್ಗಿ ಬೆಳೆಗೆ ಬೀಜಕ್ಕೆ ತತ್ವಾರವಾಗಿದೆ. ದಯಾಳು ಸರಕಾರವು ಈ ವಿಚಾರವನ್ನು ತನ್ನಿ ನಡಿಸಿ ರೈತರಿಗೆ ತಕ್ಕ ಸಹಾಯವನ್ನು ನೀಡಲು ಮುಂದೆ ಬರುವುದೇ? ಎಂದು ಗ್ರಾಮ ನಿವಾಸಿಗಳೊಬ್ಬರು ತಿಳಿಸುತ್ತಾರೆ.

**ಬೊಂಬಾಯಿ:**-ಇಲ್ಲಿಗೆ ಬಂದಿದ್ದ ಉದಿಯಾವರ ಗ್ರಾಮದ ಪಟೇಲ್ ಶ್ರೀಯು, ಭಾಸ್ಕರಶೆಟ್ಟರನ್ನು ಉದಿಯಾವರ ಗ್ರಾಮಸ್ಥರು ಆಗಾಖಾನ್ ಬಿಲ್ಡಿಂಗ್, ಒಂದನೇ ಮಾಳಿಗೆ, ದಲಾಲ್ ಸ್ಟ್ರೀಟ್, ಫೋರ್ಟ್, ಇಲ್ಲಿಗೆ ಕಳೆದ ತಾ. 18ಕ್ಕೆ ಆಮಂತ್ರಿಸಿ, ಒಂದು ಸತ್ಕಾರಕೂಟವನ್ನು ಏರ್ಪಡಿಸಿರುವರು. ಗ್ರಾಮಸ್ಥರ ಪರವಾಗಿ ಶ್ರೀಗಳಾದ ಯನ್. ಯಂ. ಉದಿಯಾವರ, ಯು. ಪುಟ್ಟಪ್ಪ, ಯು. ತೌಡಪ್ಪ, ಎ. ಡಿ. ಕೋಟ್ಯಾನ್, ಯು ಪಿ. ಕುಂದರ್ ಮತ್ತು ಯು. ಅಪ್ಪಯ್ಯ ಇವರುಗಳು ಅತಿಥಿಯವರ ವಿಷಯ ಭಾಷಣವನ್ನಿತ್ತಿರುವರು. ಶ್ರೀ ಭಾಸ್ಕರಶೆಟ್ಟರು ತನ್ನ ಮೇಲಿನ ಅಭಿಮಾನಕ್ಕಾಗಿ ಆಭಾರ ಸೂಚಿಸಿದರು. ಬಳಿಕ ಗುಂಪಿನ ಭಾವಚಿತ್ರವೊಂದನ್ನು ತೆಗೆಯಲಾಯಿತು.

---


ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವರ್ಗದಾರರಿಗೆ—ಶಾಲೆಗಳಿಗೆ–
ಬೇಕಾಗುವ ರಿಜಿಸ್ಟ್ರಿಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳೂ, ಎಕೌಂಟ್
ಪುಸ್ತಕ, ಕುರಿಫಂಡು
ಪುಸ್ತಕಗಳೂ ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.





ಶ್ರೀ ಕೊರಡ್ಕಲ್
ಶ್ರೀನಿವಾಸ
ರಾಯರ

'ಸುಲಭದಲ್ಲಿ ಇಂಗ್ಲಿಷ್'
(ENGLISH MADE EASY)
ಮನೆಯಲ್ಲಿ ನೀವಾಗಿ ಇಂಗ್ಲಿಷ್
ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.
ಬೆಲೆ: ೧—೮—೦

ಡಾಕ್ಟರ್ ಕೊರಡ್ಕಲ್ ವೆಂಕಟರಾಯರ
'ಮನೆ ಮದ್ದು'
(HOME REMEDIES)
೨೦೦ ಕಾಹಿಲೆಗಳಿಗೆ ಮನೆಯಲ್ಲೇ ಮಾಡಿಕೊಳ್ಳಬಹುದಾದ ೧೦೦೦ ಮದ್ದುಗಳ ವಿವರವಿರುವ ಪುಸ್ತಕ. ಬೆಲೆ: ರೂ. ೨
ಪ್ರತಿಗಳು ನಿಮ್ಮೂರ ಪುಸ್ತಕವ್ಯಾಪಾರಿಗಳಲ್ಲಿ ಸಿಗದಿದ್ದರೆ ಬರೆಯಿರಿ-

**ನವಭಾರತ ಪುಸ್ತಕ ಭಂಡಾರ,**
**ಉಡುಪಿ.**

**ನವಯುಗ ಪ್ರೆಸ್, ಉಡುಪಿ**



ಪರ್ಯಾಯ ಸ್ಪೆಶಲ್ ಕನ್ನಡ ಚಿತ್ರ

## ❖ ನಾಗ ಕನ್ನಿಕಾ ❖

ರತ್ನಮಾಲ, ರಘುವೇಂದ್ರ ರಾವ್, ಜಯಶ್ರಿ,
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.



## ಕುಲವಿಲ್ಲದ ಹೆಣ್ಣು

(ಸರಸ ಸಾಮಾಜಿಕ ಕಾದಂಬರಿ)

ಬರೆದವರು:— ಪಿ. ವೆಂಕೋಬಾಚಾರ್ಯ, ಬಿ.ಎ ಬಿ.ಟಿ.

ದೇವದಾಸಿ ಕುಲದ ಉದ್ಧಾರವೇ ಮುಖ್ಯ ಕಥಾವಸ್ತು.

**ಕುಸುಮಳು ವೇಶ್ಯಾಪುತ್ರಿಯಾದರೂ ಅವಳು ವೇಶ್ಯೆಯಲ್ಲ!**
**ಅವಳ ಕತೆ ಹೇಗೆ ಸಾಗಿದೆ ಎಂದು ಓದಿಯೇ ತಿಳಿಯಿರಿ.**

ದಪ್ಪ ಪುಸ್ತಕ ಬೆಲೆ ರೂ **1—0—0**

ಪ್ರತಿಗಳು, ಅಂತರಂಗ ಕಾರ್ಯಾಲಯ, ಉಡುಪಿ,
**ಯಾ ನವಯುಗ ಪ್ರೆಸ್. ಉಡುಪಿ ಇಲ್ಲಿ ದೊರೆಯುತ್ತವೆ.**



ಶರೀರದಲ್ಲಿಯ ಅಸಹ್ಯ ಉಷ್ಣತೆಯನ್ನು ಇದರಿಂದಲೇ ತೆಗೆದು ಹಾಕಿರಿ




ಪಿರಿಕಾಡಾ ಶರೀರದ ಒಳಗಿನ ಮತ್ತು ಹೊರಗಿನ ಉರುವನ್ನು ತೆಗೆದು ಹಾಕಿ ಪ್ರಕೃತಿಯನ್ನು ತಂಪಾಗಿಡುವದು, ಅಪಚನ ಅಜೀರ್ಣವನ್ನು ಸರಿಪಡಿಸುವದು, ಶಾರೀರಿಕ ಮತ್ತು ಮಾನಸಿಕ ಶಕ್ತಿಯನ್ನು ಬೆಳೆಸುವದು ಧಾತು ಸ್ಥಾನದಲ್ಲಿಯ ಉಷ್ಣತೆಯನ್ನು ಹೋಗಲಾಡಿಸಿ ಪುಷ್ಟಿಕರ ಮಾಡುವದು

ನಿಮ್ಮ ಹತ್ತಿರದ ಕೆಮಿಸ್ಟರ ಕಡೆಯಿಂದ ಇಂದೇ ಒಂದು ಬಾಟಲಿಯನ್ನು ತಂದು ಸೇವಿಸಲು ಪ್ರಾರಂಭಿಸಿರಿ



ಪರ್ಲ ಎಂಡ್ ಕಂಪನಿ
ಮುಂಬಯಿ ೨೭

## ಮಂಗಳೂರು

ಟ್ರೇಕ್ಟರ್ ಮೊದಲಾದ ಕೃಷಿ ಯಂತ್ರಗಳನ್ನು ಬಾಡಿಗೆಗೊದಗಿಸುವಲ್ಲಿ, ಪಡಿಲು ಸ್ಥಳಗಳನ್ನು ಬೇಸಾಯ ಮಾಡಲೆಳಸುವ ರೈತರಿಗೆ ಪ್ರಥಮ ಪ್ರಾಶಸ್ತ್ಯ ಕೊಡಲಾಗುವುದೆಂದೂ, ಹೊಸ ಭೂಮಿಯನ್ನು ಕೃಷಿ ಮಾಡುವವರಿಗೆ ಹೆಚ್ಚಿನ ಪ್ರೋತ್ಸಾಹ ಕೊಡಲಾಗುವುದೆಂದೂ ಜಿಲ್ಲಾ ಕೃಷಿ ಆಫೀಸರರ ಪ್ರಕಟಣೆ ಹೊರಟಿದೆ.

**ಚಿನ್ನದಂಗಡಿಯಲ್ಲಿ ಮೋಸ**–ಬಗ್ರಾಡೇಶದಿಂದ ಬಂದೆನೆಂದೂ ವ್ಯಾಪಾರಿಯೆಂದೂ ಹೇಳಿಕೊಂಡು ತಾರಾಚಂದ ಮದನ ಗೋಪಾಲನೆಂಬವನು ಮಂಗಳೂರಿನ ವಿಶ್ವ ಭವನದಲ್ಲಿ ಕಳೆದ ತಾ. 24ರಲ್ಲಿ ಉಳಿದುಕೊಂಡಿದ್ದನು. ಅವನು ನಗರದ ಚಿನ್ನ ವ್ಯಾಪಾರಿಗಳಲ್ಲಿಗೆ ಹೋಗುತ್ತಲೂ ಬರುತ್ತಲೂ ಇದ್ದು ಕಳೆದ ತಾ. 30ರಲ್ಲು ಪೂರ್ವಾಹ್ನ ಮಂಗಳೂರು ತೇರು ಬೀದಿಯ ಪಿ. ಕೇಶವ ನಿರೋಘ ಭಂಡಾರ್ಕರರ ಚಿನ್ನದಂಗಡಿಯಿಂದ ಇನ್ನೂರು ತೊಲೆ ಭಂಗಾರವನ್ನೂ ಐವತ್ತು ಪವನುಗಳನ್ನೂ ಕೊಂಡುಕೊಂಡನು. ಚಿನ್ನದ ಗಟ್ಟಿಗಳನ್ನು ತಾನೇ ತಂದಿದ್ದ ಹಿತ್ತಾಳೆ ಪೆಟ್ಟಿಗೆಯಲ್ಲಿಟ್ಟು ಮುದ್ರೆ ಮಾಡಿ ಸಂಜೆ ನಾಲ್ಕು ಗಂಟೆಗೆ ಬಂದು ಕೊಂಡು ಹೋಗುತ್ತೇನೆಂದು ಹೇಳಿ ಎರಡು ನೂರು ರೂಪಾಯಿ ಮುಂಗಡವಿತ್ತು ಹೋದವನು ಸಂಜೆ ಐದು ಗಂಟೆಯಾದರೂ ಹಿಂತಿರುಗಲಿಲ್ಲ. ಬಳಿಕ ಪೆಟ್ಟಿಗೆಯನ್ನು ಒಡೆದು ನೋಡುವಾಗ ಅದರಲ್ಲಿ ಚಿನ್ನದ ಗಟ್ಟಿಗಳ ಬದಲು ಸೀಸದ ಗಟ್ಟಿಗಳಿದ್ದುವು. ಪೋಲೀಸರಿಗೆ ವರದಿ ಮಾಡಲಾಗಿ ಅವರು ಅವನನ್ನು ಹುಡುಕುತ್ತಲಿದ್ದಾರೆ. ಆತನು ಮಂಗಳೂರಿನ ಬಾಡಿಗೆ ಕಾರಿನಲ್ಲೇ ಅರಸಿಕೆರೆಗೆ ಹೋಗಿ ಅಲ್ಲಿಂದ ಎತ್ತ ಹೋದನೆಂದು ತಿಳಿದಿಲ್ಲವೆಂದೂ ವಾರ್ತೆಯಿದೆ. ಚಿನ್ನದ ಬೆಲೆಯು ರೂ. 26,700 ಎಂದು ಅಂದಾಜು ಮಾಡಲಾಗಿದೆ.

**ವಂಚನೆಯ ಪ್ರಯತ್ನ:** ದ. ಕ. ಜಿಲ್ಲಾ ಬಾಗಾಯಿತು ಕೃಷಿಕರ ಸಹಕಾರಿ ಸಂಘವನ್ನು ವಂಚಿಸುವ ದೊಡ್ಡ ಪ್ರಯತ್ನವೊಂದು ಈಚೆಗೆ ನಡೆಯಿತು. ಸಂಘದ ಗಿರಾಕಿಗಳೊಬ್ಬರ ಹೆಸರಲ್ಲಿ 'ಕೂಡಲೆ ಐದು ಸಾವಿರ ರೂಪಾಯಿ ಕಳುಹಿಸಬೇಕು' ಎಂಬ ತಂತಿಯೊಂದು ಸಂಘದ ಅಧಿಕಾರಿಗಳಿಗೆ ಬಂತು. ಅದೇ ಕಾಲದಲ್ಲಿ ಯಾರ ಹೆಸರಲ್ಲಿ ತಂತಿ ಬಂದಿದ್ದಿತೋ ಅವರು ಸಂಘದ ಕಚೇರಿಯಲ್ಲಿ ಹಾಜರಿದ್ದರು. ತಂತಿ ಮೋಸದ್ದು ಎಂದು ಅನುಮಾನಿಸಲಾಯಿತು. ಹಣವನ್ನು ಕಳುಹಿಸಿ ಕೊಡುವುದಾಗಿ ತಂತಿ ಕೊಟ್ಟವನಿಗೆ ತಿಳಿಸಿ, ಪೋಲೀಸರಿಗೆ ವರದಿ ಮಾಡಿ, ತಂತಿ ಕೊಟ್ಟವನನು ಹಣವನ್ನು ಪಡೆಯುವುದಕ್ಕೆಂದು ಬಂದಾಗ ಅವನನ್ನು ಕೈದು ಮಾಡಲಾಯಿತು. ಹೆಚ್ಚಿನ ಪರಿಶೋಧನೆಗಳು ನಡೆಯುತ್ತಿವೆ.

**ಶ್ರೀ ಪರಮೇಶ್ವರಿ ಧರ್ಮ ವೈದ್ಯಾಶ್ರಮದ** ವಾರ್ಷಿಕೋತ್ಸವವು ಇದೇ ತಾ. 1ರಲ್ಲು ಶ್ರೀ ಟಿ ಎಚ್. ಎಮ್. ಸದಾಶಿವಯ್ಯ, ಸಬ್ ಜಡ್ಜ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ವೈದ್ಯಾಶ್ರಮದ ಸ್ಥಾಪಕರೂ ವೈದ್ಯರೂ ಆದ ಡಾ. ಬಿ. ಬಿ. ಅತ್ತಾವರ, ಅವರು ಸ್ವಾಗತ ಬಯಸಿ, ವೈದ್ಯಾಶ್ರಮದ ವರದಿ ಒಪ್ಪಿಸಿದರು. ಹಲವಂ ಭಾಷಣಗಳಾದ ನಂತರ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಭಾರತದಲ್ಲಿಂದು ಜನರಿಗೆ ವೈದ್ಯಕೀಯ ಸಹಾಯ ಸಾಕಷ್ಟು ಸಿಗುತ್ತಿಲ್ಲವೆಂದೂ, ಡಾ. ಅತ್ತಾವರರ ಸೇವೆ ಈ ದೃಷ್ಟಿಯಿಂದ ಸ್ತುತ್ಯವೆಂದೂ ತಿಳಿಸಿ, ಡಾ ಬಿ. ಬಿ. ಅತ್ತಾವರರಿಗೂ ಅವರ ಸಂಸ್ಥೆಗೂ, ಶ್ರೇಯಸ್ಸು ಕೋರಿದರು. ಅಂದು ಹಳ್ಳಿಗರು ಬಂದು ಕಿಂಚಿತ್ ಧನ ಸಹಾಯವನ್ನಿತ್ತು ತಮ್ಮ ವೈದ್ಯರನ್ನು ಅಭಿನಂದಿಸಿದರು.

**ಮಂಗಳೂರಿನ ಫಾಸಿಸ್ಟ್ ವಿರೋಧಿ ಸಂಘದ** ಕಸ್ಟೇನರು ಕೊಟ್ಟ ಹೇಳಿಕೆಯೊಂದರಲ್ಲಿ ಕೆ. ಪಿ. ಸಿ. ಸಿ. ಯವರ್ಕಿಂಗ್ ಕಮಿಟಿಯು ಕರ್ನಾಟಕದ ಪ್ರಾಂತರಚನೆಯ ಪ್ರಶ್ನೆಯನ್ನೆತ್ತಿ ಕೈಕೊಂಡ ಕ್ರಮದ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಸ್ವೀಕರಿಸಿದ ನಿರ್ಣಯವು ಫ್ಯಾಸಿಸ್ಟ್ ಮನೋಭಾವದಿಂದ ಕೂಡಿದೆಯೆಂದೂ, ಕರ್ನಾಟಕ ಪ್ರಾಂತಿಕ ಕಾಂಗ್ರೆಸ್, ಕಾಂಗ್ರೆಸ್ ವರಿಷ್ಠರ ಈ ಪ್ರತಿಗಾಮಿ ಧೋರಣದಿಂದ ಬೆದರದೆ, ಇಟ್ಟ ಹೆಜ್ಜೆಯನ್ನು ಹಿಂದಿಡದೆ, ಕರ್ನಾಟಕ ಪ್ರಾಂತರಚನೆಗಾಗಿ ಪರಿಣಾಮಕಾರಿಯಾದ ಮುಂದಿನ ಕ್ರಮ ಕೈಕೊಳ್ಳಬೇಕೆಂದೂ ಹೇಳಿದ್ದಾರೆ. ಅದೇ ಹೇಳಿಕೆಯಲ್ಲಿ ಅವರು ಒಕ್ಕೂಟ ಕರ್ನಾಟಕದ ಧುರೀಣರು ಮೈಸೂರಿನ ವಿಲಯನಕ್ಕಾಗಿ ಅಲ್ಲಿಯ ಅಧಿಕಾರ ಲಾಲಸಿ ಪ್ರತಿಗಾಮಿ ಮುಖಂಡರಿಗೆ ಮರೆಹೋಗದೆ ಮೈಸೂರಿನ ಜನತೆಯ ಸಂಪರ್ಕದಿಂದ ವಿಲಯನವನ್ನು ಸಾಧಿಸಬೇಕೆಂದು ಹೇಳಿದ್ದಾರೆ.

**ಸಹಸ್ರ ಕುಂಭಾಭಿಷೇಕ**–ಮಂಗಳೂರಿನ ವೆಂಕಟ್ರಮಣ ದೇವಸ್ಥಾನದಲ್ಲಿ ತಾ 2ರಲ್ಲು ಕಾಶೀಮಠಾಧೀಶ ಶ್ರೀ ಸುಧೀಂದ್ರ ತೀರ್ಥ ಮತ್ತು ಗೋಕರ್ಣ ಮಠಾಧೀಶ ಶ್ರೀ. ದ್ವಾರಕಾನಾಥ ತೀರ್ಥರ ಸನ್ನಿಧಿಯಲ್ಲಿ ಸಹಸ್ರ ಕುಂಭಾಭಿಷೇಕವೂ ನೂತನವಾಗಿಯ ಶಿಖರ ಕಲಶ ಪ್ರತಿಷ್ಠೆಯೂ ಜರಗುವುದು.

---

### ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 128 of 1919

R. E. P. 555/1:49

ಪಿ. ಆರ್. ಎ. ಅನಂದಕೃಷ್ಣ ಮುದಲಿಯಾರ್ ಎಂಡ್, ಕೊ. ...ವಾದಿ.

ಶ್ರೀ ಮಹಾತಾಯ ಮ್ಯಾಟಿಚ್ ಕಮ್ಮರ್ಶಿಯಲ್ ಎಂಡ್ ಇಂಡಸ್ಟ್ರಿಯಲ್ ಕಂಪೆನಿ ಲಿಮಿಟೆಡ್ —ಪ್ರತಿವಾದಿರು

...ಗಾರನಿಶಿ ವ ಪ್ರತಿವಾದಿ, ಬಿ ಶ್ರೀನಿವಾಸ ಹೊಳ್ಳ, ಬೈಂದೂರು ನಾರಾಯಣ ಹೊಳ್ಳರ ಮಗ, ಕುಂದಾಪುರ ಕಸಬಾ ಗ್ರಾಮ ಇವರಿಗೆ-

ವಾದಿ ಕಂಪೆನಿಯವರು ಪ್ರತಿವಾದಿ ಕಂಪೆನಿ ಮೇಲೆ ಪಡೆದ ಸದ್ರಿ ಡಿಕ್ರಿ ಮೇಲೆ ಸದ್ರಿ ಅಮಲ್ಜಾರಿ ಮಾಡಿ ಪ್ರತಿವಾದಿ ಕಂಪೆನಿ ಬಾಬ್ತು ಮಂಗಳೂರು ಡಿ ಮು. ಕೋರ್ಟ O S. 65/49ನೇ ದಾವೆಯಲ್ಲಿ R-I-A 209 of 1949ನೇ ಅರ್ಜಿ ಮೂಲಕ ಪಡೆದ ವ O. S. 329/1949ನೇ ದಾವೆಯಲ್ಲಿ R-1-A- 762/49ನೇ ಅರ್ಜಿ ಮೂಲಕ ಜಪ್ತಾದ ಸೊತ್ತುಗಳನ್ನು ಸಹಾ ಜಪ್ತಿ ಯೇಲಮ್ಮಿಗೆ ಅಪೇಕ್ಷಿಸಿದುವುದ್ರಿಂದ ಸದ್ರಿ ಸೊತ್ತುಗಳ ಒಬ್ಬ ಜ್ಯಾಮೀನುದಾರರಾದ ನೀವು ಸದ್ರಿ ಸೊತ್ತುಗಳನ್ನು ಈ ಕೋರ್ಟಿನ ಇನ್ನೊಂದು ಹುಕುಂ ಬರುವ ತನಕ ರೀತೀಜ ಮಾಡದ ಹಾಗೂ ಪರಾಧೀನ ಮಾಡದ ಹಾಗೂ ಈ ಮೂಲಕ ನಿಮ್ಮನ್ನು ನಿರ್ಬಂಧಿಸಲಾಗಿರುತ್ತದೆ. ಈ ಕುರಿತು ನಿಮ್ಮದೇನಾದರು ಆಕ್ಷೇಪ ಇದ್ದಲ್ಲಿ ತಾರೀಕು 18-1-50 ನೇ ದಿವಸ ಹಗಲು 11 ಗಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ಕೋರ್ಟು ಹುಕುಂ ಮೇರೆಗೆ ತಿಳಿಸೋಣಾಗುತ್ತದೆ.

K. Raghunatha Shenai,
Pleader for Pltf-
Coondapoor. 22-12-1949.

---

### ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R.E.P. 302/49 O. S 669/47

ದಿ ಕಥೋಲಿಕ್ ಬ್ಯಾಂಕ್ ಲಿಮಿಟೆಡ್, –ಅರ್ಜಿದಾರ.

K. ಗಣಪತಿ ಶೇಟ್ ಸಹಾ ..ಎದ್ರಿರು.

2. K. ಲಕ್ಷ್ಮೀನಾರಾಯಣ ಶೇಟ್, ಪುಟ್ಟಪ್ಪ ಶೇಟರ ಮಗ, ಕುಂದಾಪುರ ಕಸಬಾ ಗ್ರಾಮ.

ಅರ್ಜಿದಾರನ ಕಡೆಯಿಂದ ಈ ಮೂಲಕ ತಿಳಿಯಪಡಿಸುವದೇನೆಂದ್ರೆ, ಸದ್ರಿ ಅಮಲ್ಜಾರಿಯಲ್ಲಿ ಎದ್ರಿರ ಬಾಬ್ತು ಸ್ಥಿರಾಸ್ತಿ ಏಲಂ ಮಾಡಿಸುವಗೋಸ್ಕರ ಅರ್ಜಿದಾರನು ಹಾಜರ್ಪಡಿಸಿದ ಇಸ್ತಿಹಾರಿನ ಶರ್ತ ನಿರ್ಣಯಿಸುವಗೋಸ್ಕರ ತಾ. 25-1-50ಕ್ಕೆ ಅಖೈರಿ ಸನ್ನಿಗೆ ಯಿಡಲಾಗಿಯದೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪವಿದ್ರೆ ಸದ್ರಿ ದಿವಸ ಹಗಲು 11 ಗಂಟೆಗೆ ಸ್ವತಹಾ ವ ವಕೀಲರ ದ್ವಾರಾ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಅರ್ಜಿದಾರನ ಕಡೆಯಿಂದ ಈ ಮೂಲಕ ತಿಳಿಯಪಡಿಸಿಯದೆ.

G. Sanjiva Rao, B.A., LL.B
Vakil for Peter.
Kundapur, Date 5-1-50.


BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

Highly perfumed and medicated, worth using daily by one and all, keeps hair black and relieves headache etc.

REGD TRADE MARK

Manufactured by:-

Swadeshi Oushadhi Bhandara (Regd-)

KUNJAL P. O. Brahmavar, S. K.



"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ಸಿ. ಶಾಸ್ತ್ರೀ,

ಇವರ ನವಜೀವಾತು ಎಂಬ ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿ ಸ್ವದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಸುಲಭವಾಗಿರುವದು.

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:– ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.



— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಪಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಬಸಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಂಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಅಂಡ್ ಎಲ್ ಕಮಲಹಾಸ ಕೆಮಿಸ್ಟ, ಹಾವೇರಿ, ಬ್ಯಾಡಗಿ



ಬೇಕಿ ಕಾಗದ! ನಾಜೂಕಿನ ಬೈಂಡು!

೧೯೫೦ನೇ ಇಸವಿಯ ಪಾಕೆಟ್ ಡೈರಿಗಳು

| | | |
|---|---|---|
| ದೊಡ್ಡದು | (ಕೆಲಿಕೊ ಬೈಂಡ್) | 1-12-0 |
| ,, | (ಸಾದಾ ಬೈಂಡ್) | 1-8-0 |
| ಹದ ಸೈಜು | (ಕೆಲಿಕೊ) | 1-4-0 |
| ,, | (ಸಾದಾ) | 1-0-0 |
| ಸಣ್ಣದು | (ಕೆಲಿಕೊ) | 1-0-0 |
| ,, | (ಸಾದಾ) | 0-12-0 |

(ಟಪ್ಪಾಲು ಖರ್ಚು ಪ್ರತ್ಯೇಕ.)

ಸಿಗುವ ಸ್ಥಳಗಳು:–

ನವಭಾರತ ಬುಕ್ ಡಿಪ್ಪೊ, ಉಡುಪಿ.

ನವಯುಗ ಪ್ರೆಸ್, ಉಡುಪಿ.

# ಪ್ರೇಮವು ಸೃಷ್ಟಿಯ ಸೂತ್ರ

[ಶ್ರೀ ಪಾಟೀಲ ಕಲ್ಲನಗೌಡರು, ಪಾರ್ಲಿಮೆಂಟರಿ ಸೆಕ್ರೆಟರಿ ಇವರ 'ಜೀವನದ ಜ್ಯೋತಿ ದೀಪ' ಎಂಬ ಲೇಖನ ಮಾಲೆಯೊಳಗಿನ ಒಂದು ಲೇಖನ]

ದ್ವೇಷಕ್ಕೆಗಳನ್ನು ಪಡೆಕ್ಕ ಪ್ರತ್ಯೇಕವಾಗಿ ಕಾಲಾವಧಿಗಳನ್ನು ನಡೆಸಬಹುದಾದರೆ, ಎಂಥ ಸಿಹಿಯಾದ ಎಷ್ಟು ಆನಂದಕರ! ಎನಿಷ್ಟು ಸುಖಕರವಾದದ್ದು! ನಾತ್ತ ಅಲ್ಲಿಲ್ಲಿ ವಾಸಿಸಬಹುದೇ? ಹೌದು; ಅಲ್ಲಿ ನೀವು, ನಾನು ಪ್ರತಿಯೊಬ್ಬನೂ ಸಹ ವಾಸಿಸಬಹುದು. ಆದರೆ ಪ್ರತಿಯೊಬ್ಬನಲ್ಲಿರುವ ಆ ಉನ್ನತ ಶಕ್ತಿಯನ್ನು ನಾವು ತಿಳಿದು ನಡೆದ ಪ್ರಮಾಣದಿಂದ ಆ ತಂದ ಸುಖಜೀವನವು ನಮಗೆ ದೊರೆಯುವದು. ನಮ್ಮ ಜೀವನದಲ್ಲ ಕೂಡುವ ಎಲ್ಲರ ಆತ್ಮದೊಳಗಿನ ಪರಮಾತ್ಮನನ್ನು ಗುರ್ತಿಸಿ ನಡೆದಾಗ ಮಾತ್ರ ಸ್ವರ್ಗಜೀವಿಗಳಂತೆ ಸುಖಿಸಬಹುದು. ಇಲ್ಲವಾದರೆ ಅದರಿಂದ ನಾವು ದೂರವೇ ಇರಬೇಕಾಗುವದು.

ಪ್ರತಿಯೊಂದು ಜೀವಿಯ ಅಂತರ್ಯದೊಳಗಿನ ಪರಮಾತ್ಮನನ್ನು ಗುರ್ತಿಸುತ್ತ ನಡೆದಂತೆ ಆತನ ಪರಿಚರಿಯು ಹೆಚ್ಚುತ್ತ ನಡೆಯುವದು. ಇದು ಎಂಥ ಸವಲತ್ತು-ನಿಮ್ಮ ನನ್ನ ಮತ್ತು ಎಲ್ಲರ ಸವಲತ್ತು. ಎರಡನೆಯವರನ್ನು ಮೋಸಗಾರರು ಇಲ್ಲವೇ ಕೆಟ್ಟವರೆಂದು ತಿಳಿಯುವದು ನಮಗೆ ಬೇಡ. ನಾವು ಕೆಟ್ಟ ಅಥವಾ ಬದಲಾಗುವ ನೀಚತನದಾಚೆಗೆ ನೋಡುವ ಶಕ್ತಿಯುಳ್ಳವರಾಗಿದ್ದೇವೆ. ಶಾಶ್ವತವಾದ, ಎಂದೂ ಬದಲಾಗದಂಥ ಪವಿತ್ರವಾದ ಸೌಂದರ್ಯವನ್ನೇ ಬೀರುವಂಥ ಆತ್ಮವನ್ನು ನೋಡಬಲ್ಲ ನಾವು ಕೊಳಚೆ, ದುರ್ಗುಣಗಳ ಕಡೆಗೇಕೆ ನೋಡಬೇಕು? ಆಗ ಮಾತ್ರ ಎರಡನೆಯವರನ್ನು ತಿರಸ್ಕರಿಸುವ ಇಲ್ಲವೆ ದೂಷಿಸುವ ಕಾರ್ಯದಲ್ಲಿ ನಮ್ಮನ್ನು ನಾವೇ ತಿರಸ್ಕರಿಸಿಕೊಂಡಂತೆಯೂ, ದೂಷಿಸಿಕೊಂಡಂತೆಯೂ ಆಗುತ್ತದೆಂಬುದನ್ನು ತಿಳಿಯುವಷ್ಟು ಬುದ್ಧಿವಂತರಾಗುವೆವು.

ಈ ಬಗೆಯ ಅನುಭವವು ನಮ್ಮನ್ನು ಪ್ರೇಮದಲ್ಲಿ ಮುಳುಗಿಸಿ ಬಿಡುತ್ತದೆ. ಅದು ಅಮ್ಲಾನವಾಗಿ ತುಂಬಿ ಹರಿಯುತ್ತ ಭೆಟ್ಟಿಯಾದವರಲ್ಲೆಲ್ಲ ನವಚೈತನ್ಯವನ್ನುಂಟು ಮಾಡುತ್ತದೆ. ಪರಸ್ಪರ ಪ್ರೇಮದಿಂದಲೇ ನವ ಜೀವನದ ಕಳೆಯು ಜೀವನಕ್ಕೆ ಬರುತ್ತದೆ. ನಮ್ಮ ಪ್ರೇಮವು ತಿರುಗಿ ನಮ್ಮೆಡೆಗೆ ಎಲ್ಲ ಕಡೆಯ ಪ್ರೇಮದ ಕಿರಣಗಳನ್ನು ಎಳೆಕೊಂಡು ಬರುತ್ತದೆ. "ಯಾವನೊಬ್ಬನು ಎಷ್ಟು ಪ್ರೀತಿಸುತ್ತಾನೆಂಬುವದನ್ನು ಹೇಳು; ಅವನು ದೇವರನ್ನು ಎಷ್ಟು ನೋಡಿರುವನೆಂಬುದನ್ನು ನಾನು ನಿನಗೆ ಹೇಳುತ್ತೇನೆ, ಅವನು ಎಷ್ಟು ಪ್ರೀತಿಸುವನೆಂಬುದನ್ನು ಹೇಳು; ದೇವರೊಡನೆ ಅವನೆಷ್ಟು ವಾಸಿಸುವನೆಂಬುದನ್ನು ಹೇಳುತ್ತೇನೆ; ಅವನು ಎಷ್ಟು ಪ್ರೀತಿಸುತ್ತಾನೆಂಬುದನ್ನು ಹೇಳು, ಪರಮಾತ್ಮನ ರಾಜ್ಯದೊಳಗೆ—ಸ್ವರ್ಗದೊಳಗೆ ಅವನೆಷ್ಟು ದೂರ ಹೋಗಿರುವದನ್ನು ಹೇಳುತ್ತೇನೆ." ಪ್ರೇಮವು ಎಲ್ಲ ಶಾಸನ ನಿಯಮಗಳಾಚಿನ ಮಹಾಶಾಸನ. ಸರ್ವ ಶಾಸನಗಳ ಪರಿಪೂರ್ತತೆ ಪ್ರೇಮಾಧಿಕಾರದಲ್ಲಿನ ಪ್ರೇಮನಿಯಮ ಸರ್ವ ನಿಯಮಗಳನ್ನು ಮೀರಿಸಿದ್ದಾಗಿದೆ.

ಒಂದು ಸೃಷ್ಟಿಯಿಂದ ಪ್ರೇಮವೇ ಎಲ್ಲವೂ ಇರುತ್ತದೆ. ಅದು ಜೀವನದ ಜೀವಾಳವು. ಅಂತೆಯೇ ಗಾಂಧೀಜಿಯವರು "ಪ್ರೇಮವು ಸೃಷ್ಟಿಯ ಸೂತ್ರ"ವೆಂದು ಹೇಳಿದ್ದಾರೆ. ಅದು ಜಗತ್ತನ್ನು ಚಲಿಸಬಲ್ಲದು. ಅಂತೆಯೇ ಗಾಂಧೀಜಿಯವರು 'ಪ್ರೇಮವು ವಿರೋಧವನ್ನು ಗೆಲ್ಲುತ್ತದೆ'ಂಬ ಮಾತನ್ನು ನಂಬಿ ನಡೆದು ವಿಶ್ವ ನಿದರ್ಶನಕ್ಕೆ ಅದರ ಸತ್ಯತೆಯನ್ನು ತೋರಿಸಿರುವದು. ಪ್ರೇಮದ ವಿಚಾರ ರಾಜ್ಯದಲ್ಲಿ ಜೀವಿಸು; ಅಂದರೆ ಎಲ್ಲರಿಂದಲೂ ಪ್ರೇಮವು ನಿನ್ನನ್ನು ಆವರಿಸುತ್ತದೆ. ದೂಷಣೆ ಹೊಟ್ಟೆಕಿಚ್ಚುಗಳ ವಿಚಾರದಲ್ಲಿದ್ದರೆ, ಅವೇ ಎಲ್ಲ ಕಡೆಯಿಂದಲೂ ಬಂದು ನಮ್ಮನ್ನು ಮುಸುಕುತ್ತಿವೆ. ಯಾಕಂದರೆ "ನೀಚತನದ ವಿಷದಿಂದಲೂ, ಹೊಟ್ಟೆಕಿಚ್ಚೆಂಬ ಬಾಣದಿಂದಲೂ, ನಮಗೆ ತಿರುಗಿ ಎಂದೂ ಮಾಯದಂಥ ಗಾಯಗಳಾಗುತ್ತವೆ" ಸಿಟ್ಟು, ಗಾಯಗಳು ನಮ್ಮನ್ನು ಸತತವಾಗಿ ಸುಡುತ್ತಲಿವೆ "ತನಗೆ ಮುನಿವರಿಗ ತಾ ಮುನಿಯಲೇಕಯ್ಯ? ತನಗಾದಡೆ ಏನು? ಅವರಿಗಾದಡೆ ಏನು? ತನುವಿನ ಕೋಪತನ ಹಿರಿತನದ ಕೇಡು, ಮನದ ಕೋಪ ತನ್ನ ಅರುವಿನ ಕೇಡು; ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ, ನೆರೆಮನೆಯ ಮುಸುಕುವದೇ? ಕೂಡಲ ಸಂಗಮ ದೇವಾ'. ಎಂದು ಹೇಳುವದರಲ್ಲಿ ಬಸವಣ್ಣನವರು ಮಾನಸ ಶಾಸ್ತ್ರವನ್ನೇ ಹೇಳಿದ್ದಾರೆ. ಪ್ರೇಮಧರ್ಮದ ಮರ್ಮವನ್ನು ಉಸುರಿದ್ದಾರೆ ಕಣ್ಣದ್ದವರು ಅದನ್ನು ಕಾಣಬಹುದು.

ಹೊಸದಾಗಿ ನಮ್ಮಲ್ಲಿ ಮೂಡಿದ ವಿಚಾರಗಳೆಲ್ಲ ನಮ್ಮಿಂದ ಹೊರಗೆ ಹೊರಟ ಶಕ್ತಿಗಳೇ ಇರುವವು. ಆ ಪ್ರತಿಯೊಂದು ವಿಚಾರವು ತನ್ನ ತರದ ಅನೇಕ ವಿಚಾರಗಳಿಂದ ಕೂಡಿಕೊಂಡು ಹಿಂತಿರುಗಿ ಬರುವದು; ಇದು ಬದಲಾಗದಂಥ ನಿಯಮವು. ನಮ್ಮಲ್ಲಿ ಬಂದ ವಿಚಾರಗಳೆಲ್ಲ ಒಂದಿಲ್ಲೊಂದು ಪ್ರಕಾರದಿಂದ ಅನ್ಯರ ಮೇಲೆ ಪರಿಣಾಮವನ್ನುಂಟುಮಾಡುತ್ತವೆ. ಪ್ರೇಮ ಮತ್ತು ಆತುರದ ಆವೇಶಗಳೆಲ್ಲ ವಿಶ್ವದ ಶಾಶ್ವತ ನಿಯಮಗಳಿಗನುಸಾರವಾಗಿರುವವು. ಯಾಕಂದರೆ 'ಪರಮಾತ್ಮನು ಪ್ರೇಮವು' ಇವುಗಳಿಂದ ಶರೀರದಲ್ಲಿ ನವಚೈತನ್ಯವೂ, ನವಜೀವನವೂ ಬರುತ್ತವೆ. ಮುಖಚರ್ಯೆಯು ಸೌಂದರ್ಯವುಳ್ಳದ್ದಾಗುತ್ತದೆ. ಧ್ವನಿಯು ಇಂಪಾಗುತ್ತದೆ. ಎಲ್ಲ ರೀತಿಯಿಂದಲೂ ಮಾನವನನ್ನು ಆಕರ್ಷಿತ ವಸ್ತುವನ್ನಾಗಿ ಮಾಡುತ್ತದೆ. 'ನಿನ್ನ ಪ್ರೇಮವು ಅನ್ಯರ ಮೇಲಿದ್ದಂತೆ ಅನ್ಯರ ಪ್ರೇಮವು ನಿನ್ನ ಮೇಲೆ ಆಗುವದು.' ಎಂಬ ಮಾತು ನಿಜವು. ಅದರ ಪರಿಣಾಮವು ಮೊದಲು ಮನಸ್ಸಿನ ಮೇಲೆ ಆಗಿ, ಅಲ್ಲಿಂದ ಶರೀರದ ಮೇಲೆ ಆಗುತ್ತದೆ. ಅದೆಲ್ಲ ನಮ್ಮ ಮೂಲ ಶಕ್ತಿಗೆ ಹೆಚ್ಚಾದ ಜೀವನ ಶಕ್ತಿಯನ್ನು ಹೊರಗಿನಿಂದ ತಂದು ಕೂಡಿಸಿದಂತಾಗುತ್ತದೆ. ಆ ಮೇಲೆ ಶಾಶ್ವತವಾಗಿ ಮಾನಸಿಕ ಮತ್ತು ಶಾರೀರಿಕ ಜೀವನದ ಬೆಳವಣಿಗೆಯಾಗುತ್ತ ಅದರ ಪರಿಣಾಮವು ಫಲದ್ರೂಪವಾಗುತ್ತದೆ.

ದೂಷಣೆ ಮತ್ತು ಅದರ ಜಾತಿಯವುಗಳಾದ ವಿಚಾರಗಳೆಲ್ಲ ಅಸ್ವಾಭಾವಿಕವೂ ವಿಶ್ವದ ಶಾಶ್ವತ ನಿಯಮಗಳಿಗೆ ವಿಸಂಗಿತವಾದವುಗಳೂ ಆಗಿರುವವು. ಪ್ರೇಮವು ನಿಯಮದ ಸಂಪೂರ್ತಿಯಾಗಿರುವದರಿಂದ ಪ್ರೇಮದ ವಿರೋಧಭಾವಗಳಾದ ಮೂಲಕ ಇವು ನಿಯಮಗಳನ್ನುಲ್ಲಂಘಿಸುವಂಥವುಗಳಾಗಿರುವವು. ಕಾಯಿದೆಯ ಉಲ್ಲಂಘನವು ಒಂದಿಲ್ಲೊಂದು ರೀತಿಯಿಂದಾದರೂ, ದುಃಖ ನೋವುಗಳಿಲ್ಲದೆ ಎಂದೂ ಆಗಲಾರದು. ಇದರಿಂದ ತಪ್ಪಿಸಿಕೊಳ್ಳುವದು ಸಾಧ್ಯವಿಲ್ಲ. ಈ ವಿಶೇಷ ತರದ ಕಾಯಿದೇಭಂಗದಸ್ವರೂಪವಾವುದು? ಸಿಟ್ಟು, ದ್ವೇಷ, ಹೊಟ್ಟೆಕಿಚ್ಚು, ತಿರಸ್ಕಾರ, ಅಸೂಯೆ, ಚಾಡಿ ಮುಂತಾದ ಕೆಟ್ಟ ಭಾವನೆಗಳು ವಿಷಭರಿತವಾಗಿರುವದರಿಂದ, ಅವುಗಳ ಪರಿಣಾಮವು ಮನಸ್ಸಿನ ಮೇಲೆ ಮಾತ್ರವಲ್ಲದೆ ದೇಹದ ಮೇಲೆ ಭಯಂಕರವಾಗಿ ತಪ್ಪದೆ ಆಗುವದು. ದೇಹಶಕ್ತಿಯನ್ನು ಅವು ಕುಗ್ಗಿಸುವದಲ್ಲದೆ. ಹಾಗೇ ಬಿಟ್ಟರೆ, ಇಡೀ ದೇಹವನ್ನೇ ಸಣ್ಣ ಮಾಡುತ್ತವೆ ಅವುಗಳಿಂದ ಬೇರೆ ತರದ ರೋಗಗಳೂ ಉಂಟಾಗಿ ಕಡೆಗೆ ದೇಹವನ್ನು ಸಂಪೂರ್ಣ ನಾಶಮಾಡುತ್ತವೆ. ಇದಲ್ಲದೆ, ಇದರಿಂದ ಮನಸಿನೊಳಗಿನ ನಾಶಕಾರಕ ಭಾವಗಳಲ್ಲದೇ ಹೊರಗಿನಿಂದಲೂ ಅನೇಕ ನಾಶಕಾರಕ ಬೀಜಗಳು ಬಂದು ನಮ್ಮಲ್ಲಿ ಸೇರುತ್ತವೆ. ನಮ್ಮಲ್ಲಿಯ ನಾಶಕಾರಕ ಶಕ್ತಿಗೆ ಮತ್ತಿಷ್ಟು ಪುಷ್ಟಿ ಕೊಟ್ಟು, ಬೇಗನೆ ನಮ್ಮನ್ನು ಗೋರಿಯ ಹಾದಿಗೆ ಒಯ್ಯಲು ಪ್ರಯತ್ನಿಸುತ್ತವೆ.

ಪ್ರೇಮವು ಪ್ರೇಮವನ್ನು ಹುಟ್ಟಿಸುತ್ತದೆ. ದ್ವೇಷದಿಂದ ದ್ವೇಷವು ಹುಟ್ಟುತ್ತದೆ. ಪ್ರೇಮವೂ, ಸದ್ಭಾವವೂ, ಶಾರೀರಿಕ ಬಲವನ್ನು ಬೆಳೆಸುತ್ತವೆ, ಮತ್ತು ಹುರುಪುಗೊಳಿಸುತ್ತವೆ. ಆದರೆ ಅಸೂಯೆ ದ್ವೇಷಗಳಿಂದ ಶಾರೀರಿಕ ಮತ್ತು ಮಾನಸಿಕ ಅಶಕ್ತತೆಯು ಬೆಳೆಯುವದು. ಪ್ರೇಮವು ಜೀವದ ಸಂರಕ್ಷಕ ವಸ್ತುವು: ಪ್ರೇಮವು ಜೀವದ ಜೀವಾಳವು. ದ್ವೇಷವು ಸಾವಿನ ಸಂರಕ್ಷಕ ವಸ್ತುವು. ಅದು ಮರಣದ ಜೀವಾಳವು.

ಹೃದಯಗಳೆಲ್ಲ ನಿಷ್ಠೆಪೂರಿತವಾಗಲಿ;
ಭಾವಗಳೆಲ್ಲ ಧೈರ್ಯಭರಿತವಾಗಲಿ;
ದೈವಕ್ಕೆಲ್ಲ ಉತ್ತಮತ್ವವ ನೀಡು; ಆಗ
ಭಾವವೆಲ್ಲ ಅಗದಿರದು ಸೌಖ್ಯದಬೀಡು.
ಕೊಡು ಪ್ರೇಮ, ಹರಿಯುವದು
ನಿನ್ನೆಡೆಗೆ ತಾನು,
ಬೇಡಿದಾಗ ಬರುವದು ಬಲವಾಗಿ
ನಿನ್ನೆಡೆಗೆ ಅದು,
ಬೇಡ ಬಡಬಡಿಕೆ; ನಿನಗಾಗಿ ಕಾದಿ
ಹವು ನಂಬು,
ನೋಡು; ನಡೆ ಇಂಲಿ, ನಂಬಿಗೆಯು
ಶಬ್ದ ಕಾರ್ಯದಲಿ.

(ಲೋಕಮತ)

---


## ನೋಟಿಸು

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O S. 397/1949

ಶ್ರೀಮಂಪ್ರಿತ್ವೇಶತೀರ್ಥ ಸ್ವಾಮಿಗಾರು-ಪೇಜಾವರ ಮಠಾಧಿಪತಿಗಳು-ಜನರಲ್ ಏಜಂಟ M. ನಾರಾಯಣಾಚಾರ್ಯ. -ವಾದಿಯು

ಮತ್ತು

ರಘುರಾಮ ಭಟ್ಟ-ವಾಮನ ಭಟ್ಟರ ಮಗ, ಉಡ್ಪಿ ಕಸ್ಬಾ ತೆಂಕಪೇಟೆ.

-1ನೇ ಪ್ರತಿವಾದಿ

ಇವರೊಳಗೆ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ-

ವಾದಿಗೆ ನೀವು ಕೂಡಾ ತಾರೀಕು 31-12-1942ರಲ್ಲು ಬರಕೊಟ್ಟ ಬಾಡಿಗೆ ಕರಾರು ಪ್ರಕಾರ ಬಹಾ ತಾ. 5-11-47 ರಿಂದ 10-4-48ರ ವರೇಗಿನ ಬಾಡಿಗೆ ಬಾಕಿ ಬಗ್ಗೆ ಮಾಡಿದ ಮೇಲ್ಕಂಡ ದಾವೆಯು ತಾರೀಕು 18-1-1950ಕ್ಕೆ ಯಿಟ್ಟಿದೆ. ಉಜ್ರಾಹರಿಸುವಂಥಾದ್ದಿದ್ದರೆ ಸದ್ರಿ ದಿವ್ಸ ಪೂರ್ವಾಹ್ನ ಘಂಟೆ 10ಕ್ಕೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜವಾಬು ಮಾಡಿಕೊಳ್ಳತಕ್ಕದ್ದು, ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂದ ತೀರ್ಮಾನಿಸಲ್ಪಡುವದು.

**K. Ramakrishna Rao,**
Vakil for Plaintiff-

ಉಡುಪಿ, ತಾ. 9-1-1950.



*Nambiar's*
**ARYA VAIDYA SALA**
**UDIPI**
*Ideal House for Ayurvedic Treatment.*
T. N. Kelu Nambiar,
*Vaidya.*



### ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿ, ಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೬ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

**ಆಯುರ್ವೇದ ಔಷಧಾಲಯ, ಗದಗ.**



## ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ

S C No: 476 1949.

ಡಾನಿಯೇಲ್‌ಫರಾಯಸ್-ಇಚಾಕ ಫರಾಯಸರ ಮಗ, ಮಂಗಳೂರು ಪೌನ್ಸ್, ಕದ್ರಿ ..ವಾದಿ.

ಮತ್ತು

ಪಿ. ಡಿ. ನಾನಯ್ಯ-ವೆಂಕಪ್ಪ ಹೆಗ್ಗಡೆರ ಮಗ, ಯುನಿವರ್ಸಲ್ ಫಾಯರ್ ಎಂಡ್ ಜನರಲ್ ಇನ್ಸ್ಯೂರೆನ್ಸ್ ಯೇಜಂಟ್ ಉಡ್ಪಿ ಕಸಬಾ.

—ಪ್ರತಿವಾದಿ

ಇವರೊಳಗೆ

ವಾದಿಯ ಬಾಬ್ತು ಪ್ಲೇಂಟ್ A ಶೆಡ್ಯೂಲಿನಲ್ಲಿ ಕಾಣಿಸಿದ ಉಪ್ಪರಿಗೆ ಕೋಣೆಯನ್ನು ಪ್ರತಿವಾದಿಯು ಬಾಡಿಗೆಗೆ ವಹಿಸಿಕೊಂಡು ತಾ. 28-6-47ರಲ್ಲು ವಾದಿಗೆ ಬರ್ಸಿಕೊಟ್ಟ ಬಾಡಿಗೆ ಚೀಟಿನ ಮೇರೆಗೆ ಅನುಭವಿಸಿ ಒಂದಿರುವ ಸದ್ರಿ ಉಪ್ಪರಿಗೆ ಕೋಣೆಯ ತಾ 1-9-49ರ ವರೆಗೆ ಬಂಶಕ್ಕ ಬಾಡಿಗೆ ವ ಬಡ್ಡಿ ಕೂಡಾ, ರೂ. 249-13-0ಕ್ಕೆ ವಾದಿಯು ದಾಖಲು ಮಾಡಿದ ಸದ್ರಿ ವ್ಯಾಜ್ಯವು ತಾ. 16-1-50ಕ್ಕೆ ಇಡೋಣಾಗಿಯದೆ. ಸದರಿ ದಿವಸ ಪ್ರತಿವಾದಿಯು ಪೂರ್ವಾಹ್ನ ಘಂಟೆ 10ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಸದರಿ ವ್ಯಾಜ್ಯದಲ್ಲಿ ಹಾಜರಾಗುವರೇ ತಪ್ಪಿದ್ದಲ್ಲಿ ಪ್ರತಿವಾದಿಯು ಗೈರುಹಾಜ್ರಿಯಿಂದ ಸದ್ರಿ ವ್ಯಾಜ್ಯವನ್ನು ಯೇಕಪಕ್ಷವಾಗಿ ತೀರ್ಮಾನಿಸಲ್ಪಡುವದು.

Gratian C Rego
Vakil for Plaintiff-

ತಾರೀಖು, 5-1-50.

ಇಂದು ಎಲ್ಲೆಲ್ಲೂ ಆಹಾರದ ಅಧಿಕ ಉತ್ಪಾದನೆಯ ಕೂಗು "ಅಧಿಕ ಆಹಾರ ಬೆಳೆಯಿರಿ" ಕೇಳುತ್ತಿದೆ. ಆದರೆ 'ಹೆಚ್ಚು ಆಹಾರ ಬೆಳೆಸಿರಿ' ಎಂಬ ಪ್ರಚಾರ ಬರೇ ಪತ್ರಿಕೆಗಳಲ್ಲಿ ಮತ್ತು ಪೇಟೆ ಜನರ ಮುಂದೆ ಆಗಿದೆ. ನಿಜವಾಗಿ ಈ ಪ್ರಚಾರ ಎಲ್ಲಿ ಕೇಳಿಸಬೇಕು? ಇದನ್ನು ಕೇಳತಕ್ಕ ಜನತೆಯ ವಾಸಸ್ಥಳ ಯಾವುದು? ಎಂಬುದನ್ನು ಯೋಚಿಸದೆ ಸಂಬಂಧವಿಲ್ಲದ ಜನತೆಯ ಮುಂದೆ ಪ್ರಚಾರ ಮಾಡಿದಲ್ಲಿ ಎಷ್ಟರಮಟ್ಟಿನ ಪ್ರಯೋಜನ ದೊರಕೀತು? ಅಲ್ಲದೆ ಓದಲಿಕ್ಕೆ ಬಾರದ ಜನತೆಗೆ ಸಂಬಂಧಿಸಿದ ಪತ್ರಿಕಾ ಪ್ರಕಟಣೆ ಎಷ್ಟರ ಮಟ್ಟಿಗೆ ಯಶಸ್ವಿಯಾದೀತು?

ಆಹಾರ ಬೆಳೆಯುವವನು ರೈತ ಅಥವಾ ಕೃಷಿಕ. 'ಹೆಚ್ಚು ಆಹಾರ ಬೆಳೆಯಿರಿ' ಎಂಬ ಘೋಷ ಈ ರೈತರ ಕಿವಿಯೊಳಗೆ ಸೇರಿ ಪ್ರತಿಧ್ವನಿಸಬೇಕು. ಈ ರೈತನ ವಾಸ ವಿಪುಲವಾಗಿ ಹೊಲಗದ್ದೆಗಳಿರುವ ಹಳ್ಳಿಗಳಿಗೆ ಹೋಗಿ ರೈತರ ಮುಂದೆ ಇದನ್ನು ಸಾರಬೇಕು. ಈಗ ದಿನವಿಡೀ ಪ್ರಚಾರ ವಾಣಿಯನ್ನು ಕೇಳಿ ಕೇಳಿ ಬೇಸತ್ತಿರುವ ಪೇಟೆಯ ನವನಾಗರಿಕರಾದರೋ ಹಳ್ಳಿಯವರು ಬೆಳೆದುದನ್ನು ತಿಂದು

# ರೈತರ ಅಜ್ಞಾನ

## ಮೂಢತೆಯು ದೂರವಾಗಬೇಕಾದರೆ ಅಜ್ಞಾನವು ತೊಲಗಬೇಕು

ತೇಗುವವರು. ಅಧಿಕಾರ ವರ್ಗದವರ ಮತ್ತು ಪತ್ರಿಕೆಗಳವರ ಗುಲ್ಲು ಹಳ್ಳಿಯ ರೈತರ ಮುಂದೆ ನಡೆಯಬೇಕು. ಮಂತ್ರಿಗಳ ವೇದವಾಕ್ಯಗಳು ರೈತರಿಗೆ ಕೇಳಿಸುತ್ತಿರಬೇಕು. ಇಂದಿನಂತೆ ನಗರಗಳಲ್ಲಿ ಮತ್ತು ಪತ್ರಿಕೆಗಳಲ್ಲಿ ಮಾತ್ರ ಆಹಾರ ಹೆಚ್ಚಿಸಿರೆಂಬ ಕೂಗು ಮುಂದುವರಿದರೆ ೧೯೫೧ನೇ ವರ್ಷದಲ್ಲಿ ಪರದೇಶಗಳಿಂದ ಆಹಾರ ಧಾನ್ಯಗಳನ್ನು ಆಮದು ಮಾಡುವುದನ್ನು ನಿಲ್ಲಿಸುತ್ತೇವೆಂಬ ವಿಚಾರವು ಕನಸಿನ ಮಂಡಿಗೆಯೇ ಸರಿ.

ಹಳ್ಳಿಯ ರೈತರಲ್ಲಿ ಅಜ್ಞಾನ–ಅರೆಜ್ಞಾನ. ಮೌಢ್ಯಗಳು ಮುಸುಕಿರುವುವು. ಮೂಢತೆಯು ದೂರವಾಗಬೇಕಾದರೆ ಅಜ್ಞಾನವು ತೊಲಗಿ ಜ್ಞಾನೋದಯವು ಅಗತ್ಯ. ಹಳ್ಳಿಯ ರೈತರಲ್ಲಿ ಜ್ಞಾನವುಂಟಾಗಬೇಕಾದರೆ ನಗರಗಳಲ್ಲಿಯ ಘೋಷಣೆಗಳಿಂದ ಅಥವಾ ವಾರ್ತಾ ಪತ್ರಿಕೆಗಳ ಪ್ರಕಟಣೆಯಿಂದ ಸಾಧ್ಯವಿಲ್ಲ. ವಾರ್ತಾಪತ್ರಿಕೆಗಳನ್ನಾದರೂ ಓದುವವರು ಯಾರು? ಪಟ್ಟಣಿಗರಲ್ಲವೇ? ಹಳ್ಳಿಯ ರೈತರು ಎಷ್ಟು ಮಂದಿ ಪತ್ರಿಕೆಗಳನ್ನು ಕಂಡು ನೋಡುವರು?

ಇಂದಿನ ನವ ಸುಧಾರಣಾ ಕೃಷಿ ರೀತಿಗಳನ್ನು ಹಳ್ಳಿ ರೈತರಲ್ಲಿ ಹೇಳಿದಾಗ 'ಭೂಮಿ ಕೆಡುವುದು' 'ಅದರಿಂದ ಸಿಗುವ ಭಾಗ್ಯವಷ್ಟರ ಮಟ್ಟಿಗೇ ಇದೆ' 'ಹಳೆಕೇಸರಿಯಾದ ಕ್ರಮ ಮತ್ತು ನಮ್ಮ ಅಜ್ಜ ಮುತ್ತಜ್ಜಂದಿರಿಗೆ ಬುದ್ಧಿಯಿರಲಿಲ್ಲವೇ?' 'ಅಷ್ಟು ಮಾ ಕ್ರಿ ವ ಲ್ಲ' 'ವಿನಾಶಕಾಲೇ ವಿಪರೀತ ಬುದ್ಧಿ' ಎಂಬಂತೆ ನಮ್ಮ ಹೊಸ ಕ್ರಮಗಳು' ಇತ್ಯಾದಿ ಮೂಢ ಭಾವನೆಯ ಉತ್ತರಗಳನ್ನು ಕೊಡುವರು. ಇವೆಲ್ಲಾ ಹೋಗಲು ಸರ್ಕಾರದ ಕಡ್ಡಾಯವೂ ಮತ್ತು ರೈತರ ಮುಂದೆ ಕೃಷಿ ಸುಧಾರಣೆಯ ಹೆಚ್ಚೆಚ್ಚು ಪ್ರಯೋಗಗಳು ಮತ್ತು ಭಾಷಣಗಳು ಕಂಡು ಕೇಳಿಸುವುದರಿಂದಲೇ ಸಾಧ್ಯ.

### ಸ್ವಂತ ಅನುಭವ

ರೈತರಲ್ಲಿಯ ಮೂಢತೆಯ ಕುರಿತು ಒಂದು ಉದಾಹರಣೆಯನ್ನು ವ್ಯಕ್ತ ಪಡಿಸುತ್ತೇನೆ ಮತ್ತು ಅದನ್ನು ತೊಲಗಿಸುವುದರಿಂದ ಕೃಷಿಯನ್ನು ಹೇಗೆ ಸುಧಾರಿಸಬಹುದೆಂಬ ಬಗ್ಗೆ ನನ್ನ ಸ್ವಂತ ಅನುಭವವನ್ನು ಹೇಳುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ತಾಲೂಕುಗಳಲ್ಲಿ ಒಂದು ಮತ್ತು ಎರಡು ಬೆಳೆಯ [ಗದ್ದೆ]ಗಳು ಹೆಚ್ಚು. ಅವುಗಳಲ್ಲೂ ಒಂದೇ ಬೆಳೆಯ ಭೂಮಿಯೇ [ಬಯಲುಗಳಲ್ಲಿ] ಅಧಿಕವೆನ್ನಬಹುದು. ರೈತರು ಒಂದು ಬೆಳೆಯ ಕೊಯ್ಲು (ಭತ್ತದ ಪೈರಿನ ಕೊಯ್ಲು) ಆದ ನಂತರ ತಮ್ಮ ಗದ್ದೆಯನ್ನು ಪಡಿಲು [ಪಾಳಿ] ಬಿಡುವ ವಾಡಿಕೆಯನ್ನು ಕರಾವಳಿ ಪ್ರತಿಯೊಂದು ಕಡೆಗಳಲ್ಲೂ ನೋಡುತ್ತೇವೆ. ಆದರೆ ಸಾಧ್ಯವಿದ್ದ ಮಟ್ಟಿಗೆ ಹೆಚ್ಚಿನ ಪ್ರಯೋಜನ ಯಾಕೆ ಪಡೆಯಬಾರದು? ಪ್ರಯೋಜನ ಪಡೆಯಬೇಕಾದರೆ ಪ್ರತಿಯೊಂದು ಭೂಮಿಯನ್ನು ಕೊಯ್ಲಾದ ಕೂಡಲೇ (ತ್ವನವಿರುವಾಗಲೇ) ಎರಡು ಮೂರು ಸಾರಿ ಉಳಬೇಕು. ಹೀಗೆ ಮಾಡುವುದರಿಂದ ಮಣ್ಣು ಸಡಿಲಿಸುವುದು. ಸಡಿಲಿಸಿದ ಮಣ್ಣಿನೊಳಗೆ ಸಾಕಷ್ಟು ಸೂರ್ಯನ ಕಿರಣ ಮತ್ತು ಗಾಳಿಯು ಸೇರಿ ಮಣ್ಣು ಫಲವತ್ತಾಗುವುದು. ಒಳ್ಳೇ ಫಸಲು ಬರಬೇಕಾದರೆ ಫಲವತ್ತಾದ ಮಣ್ಣು ಅವಶ್ಯ. ಪಡಿಲು ಬಿಡುವ ಭೂಮಿಗಿಂತ ಉತ್ತು ಬಿಟ್ಟ ಭೂಮಿಯಿಂದ ಸ್ವಲ್ಪ ಮಟ್ಟಿಗಾದರೂ ಹೆಚ್ಚು ಫಸಲು ದೊರೆಯುವುದೆಂದು ಅನುಭವಪೂರ್ವಕ ಹೇಳುತ್ತೇನೆ. ಉತ್ತಾದ ನಂತರ ಕೃಷಿ ಇಲಾಖಾ ಡಿಪೋಗಳಲ್ಲಿ ದೊರೆಯುವ ಗೊಬ್ಬರದ ಬೀಜಗಳನ್ನು ಚೆಲ್ಲಿ (ಬಿತ್ತಿ) ಬಿಡುವುದು ಮತ್ತೂ ಉತ್ತಮ. ಹಸಿ ಹಸಿಗೊಬ್ಬರದಿಂದ ಸಿಗುವ ಅಂಶ ಇದರಿಂದಲೂ ದೊರೆಯುವುದು. ಮುಂದಿನ ಬೆಳೆಯ ಸಮಯದಲ್ಲಿ ಹಸುರು ಗೊಬ್ಬರ ಚೆಲ್ಲಿ ಭೂಮಿಯನ್ನು ಹದಮಾಡಿದಾಗ ಫಲವತ್ತಾದ ಮಣ್ಣು ತಯಾರಾಗುವುದು. ಇದರಿಂದ ಬೆಳೆಬೆಳೆಸುವ ಕಾಲದಲ್ಲಿ (ಮಳೆಗಾಲದ ಕೃಷಿಯ ವೇಳೆ) ಮೂರು ನಾಲ್ಕು ಸಾರಿ ಉಳುವ ಬದಲು ಒಂದೇ ಬಾರಿ ಉತ್ತರೆ ಸಾಕಾಗುವುದು. ಇದರಂತೆ ಕುಮರಿಗಳ ಫಸಲು ದೊರೆತ ಮೇಲೆ ಎರಡು ಸಾರಿ ಉತ್ತು ಗೊಬ್ಬರದ ಬೀಜಗಳನ್ನು ಚೆಲ್ಲಿ ಬಿಡುವುದು ಅಗತ್ಯ. ಇಂಥ ಪ್ರದೇಶಗಳಲ್ಲಿ ಚೆಲ್ಲಿಬಿಟ್ಟ ಬೀಜಗಳು ಮೊಳಕೆ ಬಂದು ಬಿಸಿಲಿನ ತಾಪಕ್ಕೆ ಸಿಡಿದ ಬೀಜಗಳು ಮುಂದಿನ ಮೇ ತಿಂಗಳಲ್ಲಿ ಒಂದೆರಡು ಮಳೆಬಂದಾಗ ಪುನಃ [illegible] ಗೊಬ್ಬರವಾಗುವುದು.

### ಎರಡು ಬೆಳೆಗಳ ಭೂಮಿಗಳು

ಮೇಲಿನಂತೆ ಎರಡು ಬೆಳೆಗೆ ಭೂಮಿಯನ್ನು ಉತ್ತುಹಾಕುವುದು ಅತ್ಯಗತ್ಯ. ಆದರೆ ಈ ಭೂಮಿಯನ್ನು ಕೊಯ್ಲು ಆದನಂತರ ಪ್ರಥಮತಃ ಎರಡು ಸಾಲು ಮಾಡಬೇಕು. ಅನಂತರ (ಹಟ್ಟಿಯ ಗೊಬ್ಬರ)ವನ್ನು ಚೆಲ್ಲಿ ಮತ್ತೊಂದು ಸಾಲುಮಾಡಿ ಹಲಿಗೆ ಹಾಕಿ ಬಿಡಬೇಕು. ಈ ರೀತಿ ಮಾಡುವುದರಿಂದ ಗೊಬ್ಬರದ ಸಾರವು ಮಣ್ಣಿನಲ್ಲಿ ಸಾಕಷ್ಟು ಸೇರಿಕೊಳ್ಳುವುದು, ಮಳೆಬಂದ ಕೂಡಲೇ ಕೊಳೆತು ಮಣ್ಣಿನೊಡನೆ ಬೆರತುಕೊಳ್ಳುವುದು. ಅಷ್ಟು ಮಾತ್ರವಲ್ಲದೆ ಕೃಷಿಯಿಲ್ಲದ ಕಾಲದಲ್ಲಿ ಸುಮ್ಮನೆ ಕಾಲ ಹಾಳು ಮಾಡುವ ಬದಲು ತಿಂಗಳಿಗೊಂದಾವರ್ತಿ ಒಂದು ಯಾ ಎರಡು ಸಲ ಉತ್ತುಹಾಕುವುದು ಉತ್ತಮ.

ಈ ರೀತಿಯ ಪಡಿಲು ಬಿಡುವ ಭೂಮಿಯ ಸದುಪಯೋಗವನ್ನು ಪಡೆಯಬಹುದು. ಆದರೆ ಇಲ್ಲಿ ಉತ್ತುಹಾಕುವುದರಿಂದ ಮಣ್ಣು ಸೂರ್ಯನ ತಾಪಕ್ಕೆ ಸುಟ್ಟು ಹೋಗುತ್ತದೆಂಬ ಮೂಢ ಭಾವನೆಯನ್ನು ಸಂಪೂರ್ಣ ದೂರಮಾಡಿಕೊಳ್ಳಿರಿ.

ಕೃಷಿಕರು ಕೃಷಿಯಲ್ಲಿ ನವಸುಧಾರಣಾಸಕ್ತರಾಗಬೇಕು.

[ಕೃಷಿಕರ ಬಂಧು ಪತ್ರಿಕೆಯಲ್ಲಿ ಶ್ರೀ ಕೆ. ತ್ರಿಯಂಬಕರಾವ್‌ರವರ ಲೇಖನ,


**ಈ ವರೆಗೆ ಪ್ರಕಟವಾದ 'ಅಂತರಂಗ'ದ ಪ್ರಕಟಣೆಗಳು**

| | | | |
|---|---|---|---|
| ಗರ್ಲ್ಲರ ಬಿರುದಾವಳಿ (ಎಂ. ವಿ. ಹೆಗ್ಡೆ) | 0 | 2 | 0 |
| ಹೈದರಾಬಾದ್ ವಿಜಯ (ಯಕ್ಷಗಾನ ,, ) | 0 | 3 | 0 |
| ಸೆರೆಯಾಳು (ನೀಳ್ಗತೆ) ಕುಲಕರ್ಣಿ ಬಿಂದುಮಾಧವ | 0 | 4 | 0 |
| ಗಾದೆಯ ಗಾಂಧಿ (ಸೂಕ್ಷ್ಮ ಪರಿಚಯ) ಎಂ. ವಿ. ಹೆಗ್ಡೆ | 0 | 3 | 0 |
| ಶಾಂತಿಯ ಮಡಲಿನಲ್ಲಿ (ನೀಳ್ಗತೆ) ಪ. ಸು. ಭಟ್ಟ | 0 | 3 | 0 |
| ಬಲಿಪೀಠದಲ್ಲಿ (ನಾಟಕ) ಆರ್. ಕಲ್ಯಾಣಮ್ಮ | 0 | 3 | 0 |
| ಅಗಲಿದ ಅಕ್ಕ ಸರೋಜಿನಿ (ಎಂ. ವಿ. ಹೆಗ್ಡೆ) | 0 | 3 | 0 |
| ನನ್ನ ಹೆಂಡತಿ (ಕತೆಗಳು) ಮಾಳಕೋಡ ನಾರಾಯಣ ಹೆಗಡೆ | 0 | 3 | 0 |
| ಪುಣ್ಯಫಲ (ನೀಳ್ಗತೆ) ಗಿರಿಬಾಲೆ | 0 | 3 | 0 |
| ಸುಖದದಾರಿ (ವೈರಾಗ್ಯಶತಕ) ಕೆ. ಎ. ದೇವದಾಸ | 0 | 3 | 0 |
| ಸುಕಾಂತ (ಅನುವಾದಿತ ಕತೆ) ವೀ. ಚ. ಹಿತ್ತಲಮನಿ | 0 | 3 | 0 |
| ಪಂಚಮುಖಿ (5 ಪ್ರಬಂಧಗಳು) ಬಿ. ಎಚ್. ಶ್ರೀಧರ | 0 | 3 | 0 |
| ಜಾತೀಭೂತಕ್ಕೆ ಬಲಿ (ನೀಳ್ಗತೆ) ಕೆ. ದೇವಕಿ | 0 | 3 | 0 |
| ಜನಸೇವೆಯ ಸೋಗಿನಲ್ಲಿ! (ಕತೆ, ಕೆ. ತಿಮ್ಮರಾಮ ಶೆಟ್ಟಿ | 0 | 3 | 0 |
| ನಾ ಕಂಡ ಅವಳು (ಕತೆ) ಶ್ರೀಪತಿ | 0 | 3 | 0 |
| ತ್ರಿವೇಣಿ (ಪ್ರಬಂಧಗಳ ಸಂಗ್ರಹ) | 0 | 3 | 0 |
| ನಿಲುವಂಗಿ (ಕತೆ) ಎಸ್. ಸುಬ್ಬರಾಮಯ್ಯ, ಬಿ.ಎ. (ಆನರ್ಸ್) | 0 | 3 | 0 |
| ಬಾಡಿಗೆಯ ಮನೆ ಮತ್ತು ಮುಸುಕು (ನಾಟಕಗಳು) | 0 | 3 | 0 |
| ವರ್ತಮಾನ ಕಾಲದ ನಾಲ್ವರು ಮಹಾನುಭಾವರು | 0 | 4 | 0 |
| ದೇವರ ನಾಮ ಮತ್ತು ಅದರ ಸಾಧನೆ (ಬಿ. ವಿ. ಶರ್ಮ) | 0 | 3 | 0 |
| ಎರಡು ಕತೆಗಳು | 0 | 3 | 0 |
| ಸರಸ–ವಿರಸ! (೪ ವಿನೋದ ಚಿತ್ರಗಳು) | 0 | 3 | 0 |
| ಹೃದಯೇಶ್ವರಿ (ಕಾದಂಬರಿ) | 0 | 3 | 0 |
| ವಿವಿಧ ವಿಷಯ ಕೋಶ ಭಾಗ ೨ (ವೈಜ್ಞಾನಿಕ ಸಂಗ್ರಹ) | 0 | 6 | 0 |
| ನುಡಿ ಮುತ್ತುಗಳು (ಎಂ. ವಿ. ಹೆಗ್ಡೆ) ಮಾಲೆ ೧ | 0 | 3 | 0 |
| ,, ,, ಮಾಲೆ ೨ | 0 | 3 | 0 |
| ,, ,, ಮಾಲೆ ೩ | 0 | 3 | 0 |
| ಕುಲವಿಲ್ಲದ ಹೆಣ್ಣು (ಸಿ. ವೆಂಕಟಾಚಾರ್ಯ ಬಿ.ಎ., ಬಿ.ಟಿ.) | 1 | 0 | 0 |
| ತವರು ಮನೆಯಿಂದ (ಸೌ। ಶಾರದಾ ದೇವಿ) | 0 | 3 | 0 |
| ಭಾಗ್ಯ ಲಕ್ಷ್ಮಿ (ನಾಟಕ) ಬೆಳ್ತಂಗಡಿ ಲಕ್ಷ್ಮಣರಾವ್ | 1 | 0 | 0 |
| ಯುಗವಾಣಿ (ಕವನ ಸಂಗ್ರಹ, ಕು. ತಿ. ಹರಿದಾಸಭಟ್ಟ | 0 | 8 | 0 |
| ಸ್ತ್ರೀ ಹೃದಯ— (ವಾಸಂತಿ ಪಡುಕೋಣೆ) | 0 | 3 | 0 |
| ದ್ವೇಷ- (ಶ್ರೀನಿವಾಸಮೂರ್ತಿ ಗೊರೂರು) | 0 | 3 | 0 |
| ಕಲಾವಿದನ ದಿನಚರಿ (ಯಸ್ವೇಲ್) | 0 | 3 | 0 |
| ಪ್ರಜಾಪ್ರಭುತ್ವವನ್ನು ಕುರಿತು (ವಿಮಲಾನಂದ ದಾಸ ?) | 0 | 4 | 0 |
| ಆಧುನಿಕ ಭಾರತ (ಎಚ್. ಶ್ರೀಮಂತರಾವ್) | 0 | 4 | 0 |
| ಭಾರತದ ಸಾಹಿತ್ಯ ಮತ್ತು ಕಲೆಗಳು (ವಿಶ್ವೇಶ್ವರ ಶರ್ಮ) | 0 | 4 | 0 |
| ಸ್ತ್ರೀ ಸ್ವಾತಂತ್ರ್ಯ ಬೇಕೆ? (ನೈನ್ಯ ವಿನಾಯಕರಾವ್) | 0 | 3 | 0 |
| ಕಾಲವೇ ಬದಲಾಗಿದೆ (ಕು. ತಿ. ಹರಿದಾಸ ಭಟ್ಟ) | 0 | 3 | 0 |

ಸಿಗುವ ಸ್ಥಳ:—

ಅಂತರಂಗ ಕಾರ್ಯಾಲಯ, ಉಡುಪಿ.

| | | | |
|---|---|---|---|
| ಹಂಬಲ (ಕೃಷ್ಣಮೂರ್ತಿ ಕಿತ್ತೂರು) | 0 | 3 | 0 |

ಅಥವಾ ನವಯುಗ ಪ್ರೆಸ್, ಉಡುಪಿ


**Notice**

In the court of the district Munsiff of Kasaragod.

O. S No 498 of 1949

R. I. A. No. 3036 of 1949

Between,

Kasaragod Sri Venkatramana Temple by its trustees, K. Devadasa Shenoy and others.

—Plffs. Petrs.

And

Abdul Khader and others

— Defendants.

To, 1st. defendant Abdul Khader, son of Padar Abdul Kadre Beary, residing at 1st. Floor, Room No. 16 Engineering Building, Trese Road, Bombay No. 1.

The above suit filed by the plaintiffs against you and others for recovery of the arrears of rent and possession of the properties belonging to the Temple stands posted to 17-1-1950 for your notice by substituted service. If you have any objections you may appear before this court on the said date and urge your objections failing which the suit will be decided in your absence.

K. P. Anantha Rao,
Advocate for Plaintiffs

Kasaragod, Date 6-1-1950.


**ಮೂಲ್ಕಿ ಬೇಂಕ್,**

ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

**The Moolky Bank Ltd.,**

**Moolky, S. K.**

ಶಿಶುಗಳಲ್ಲಿ ಕಾಣಿ ಹಿಂಸಿಸುವ ಸ್ವಭಾವ ಬೆಳೆಯಲು ಪ್ರಧಾನ ಕಾರಣ ಜ್ವರ... ಮೇಲೆ ಬಳಲು ಮಕ್ಕಳ ... ಉಂಟು. ಹುಡುಗರು ಸಾಮಾನ್ಯವಾಗಿ ಹೇಳಬಹುದು ಅವಿಧೇಯರಾಗಿರುವುದು ಬಾಲ್ಯಾವಸ್ಥೆಯಲ್ಲಿ ಅವು ಬೆಳಸಿಕೊಂಡಿರುವ ಹಟ ಸ್ವಭಾವವೇ ಕಾರಣ.

ಮಕ್ಕಳು ಅವಿಧೇಯರಾಗಿ ತಮ್ಮ ಮನ ಬಂದಂತೆ ವರ್ತಿಸುವುದಕ್ಕೆ ಅನೇಕ ಕಾರಣ ಗಳುಂಟು. ಮಕ್ಕಳನ್ನು ಹೆಚ್ಚಾಗಿ ಮುದ್ದಿ ಸುವುದು, ಅವುಗಳಿಗೆ ಕಂಡ ಕಂಡಾಗಲೆಲ್ಲಾ ತಿಂಡಿ ಕೊಡುತ್ತಲೇ ಇರುವುದು, ಅವು ತಮ್ಮ ನಿತ್ಯದ ಕೆಲಸಗಳಲ್ಲಿ ಒಂದು ಕಟ್ಟು, ನಿಯ ಮವನ್ನು ಅನುಸರಿಸದೆ ಇರುವುದು ಇವೆ ಲ್ಲಾ ಮಕ್ಕಳ ಅದಕ್ಕೆ ಕಾರಣಗಳು.

ದುರ್ಬಲವಾಗಿರುವ ಮಗು ಆಗಿಂದಾಗ್ಗೆ ಚಂಡಿ ಹಿಡಿಯುವುದನ್ನು ಕಲಿತು ಬಿಟ್ಟರೆ ಕೆಲವು ಸಂದರ್ಭಗಳಲ್ಲಿ ಅದರ ಜೀವಕ್ಕೇ ಅಪಾಯ ತಟ್ಟುವುದುಂಟು. ಇಂತಹ ಮಗು ಚಂಡಿ ಹಿಡಿದು ಅಳಲಾರಂಭಿಸುವುದರಿಂದ ಅದರ ಹೃದಯದಲ್ಲಿ ರಕ್ತದ ಚಲನೆಯ ವೇಗ ಹೆಚ್ಚಿ ರಕ್ತದ ಒತ್ತಡ ಹೆಚ್ಚುವುದು. ಇದರಿಂದ ಶಿಶುವಿನ ಬೆಳವಣಿಗೆಗೆ ಬಹಳ ತೊಂದರೆಯಾಗುತ್ತದೆ

**ಚಂಡಿ ಹಿಡಿಯುವುದು**

ಶಿಶು ತನಗೆ ಬೇಕಾದ ವಸ್ತುಗಳನ್ನು ಪಡೆಯಲು ಸಾಧ್ಯವಿಲ್ಲದಿರುವ ಸಂದರ್ಭದಲ್ಲಿ ಅಥವಾ ಅದರ ಇಚ್ಛೆ ಸಲ್ಲದಿದ್ದಾಗ ನೆಲದ ಮೇಲೆ ಬಿದ್ದು ಹೊರಳಾಡಿ ಗಟ್ಟಿಯಾಗಿ ಕಿರುಚುವುದು. ನೆಲವನ್ನು ಕಾಲಿನಿಂದ ಎಡೆ ಬಿಡದೆ ಒದೆಯುವುದು, ಮುಖ ನೀಲಿ ಬಣ್ಣಕ್ಕೆ ತಿರುಗುವ ವರೆಗೂ ಉಸಿರು ಕಟ್ಟಿಕೊಳ್ಳುವದು ಈ ಪ್ರದರ್ಶನಗಳ ಮೂಲಕ ತನ್ನ ಅಸಮಾಧಾನವನ್ನು, ಕೋಪವನ್ನು ಹೊರ ತೋರುವುದಕ್ಕೆ ಚಂಡಿ ಹಿಡಿಯುವುದೆನ್ನುವುದು.

ಸಾಮಾನ್ಯವಾಗಿ ಈ ಪ್ರದರ್ಶನಗಳು ಸಹಾನುಭೂತಿಯುತ ತಾಯಿಯನ್ನು ಬೆದರಿಸುವುವೇ ವಿನಹ, ಅವುಗಳಿಂದ ಸ್ವಸ್ಥವಾಗಿ

ಶಿಕ್ಷಣ ಕ್ಷೇತ್ರ

# ಮಕ್ಕಳ ಚಂಡಿತನ ಬಿಡಿಸುವ ವಿಧಾನ

[ಶ್ರೀಮತಿ ಇಂದಿರಮ್ಮ]

ರುವ ಶಿಶುಗಳಿಗೆ ಯಾವ ರೀತಿಯಲ್ಲೂ ಅಪಾಯ ತಟ್ಟುವುದಿಲ್ಲ.

**ಉಸಿರು ಕಟ್ಟಿಕೊಳ್ಳದಂತೆ ಮಾಡಲು ಕ್ರಮ**

ಶಿಶು ಉಸಿರು ಕಟ್ಟಿಕೊಳ್ಳುವ ದುರಭ್ಯಾಸವನ್ನು ಬಿಡಿಸಲು ಅದರ ಮುಖದ ಮೇಲೆ ತಣ್ಣೀರೆರಚುವ ಪದ್ಧತಿಯೊಂದುಂಟು. ಆದರೆ ಇದರಿಂದ ಶಿಶುವಿಗೆ ಗಾಬರಿಯಾದರೆ ಅದು ವಿಪರೀತ ಹೆದರಿ ಅಸ್ವಸ್ಥವಾಗಬಹುದು ಈ ತಂತ್ರವನ್ನು ಬಿಡಿಸಲು, ಅದರಿಂದ ತನ್ನ ಮೇಲೆ ಯಾವ ಪರಿಣಾಮವೂ ಆಗಿಲ್ಲದಂತೆ ಅಥವಾ ಮಗುವಿನ ಈ ಆಟವನ್ನು ತಾನು ನೋಡದೆ ಇರುವ ಹಾಗೆಯೇ ತಾಯಿಯಾದವಳು ವರ್ತಿಸಬೇಕು.

ಮಗು ಚಂಡಿ ಹಿಡಿದ ಮಾತ್ರಕ್ಕೆ ಅದು ಅಸ್ವಸ್ಥವೆಂದು ಹೇಳಲಾಗುವುದಿಲ್ಲ. ಆದರೆ ಶಾಂತ ಸ್ವಭಾವದ ಶಿಶುವು ಹಠಾತ್ತನೆ ಚಂಡಿ ಹಿಡಿಯುವುದಕ್ಕಾರಂಭಿಸಿದರೆ ಕೂಡಲೆ ಶಿಶುವನ್ನು ವೈದ್ಯರಿಗೆ ತೋರಿಸಿ ಚಿಕಿತ್ಸೆ ಮಾಡುವುದು ಅತ್ಯಗತ್ಯ. ಇಂತಹ ಶಿಶುವಿಗೆ ಮೆದುಳಿನ ನರದ ದೌರ್ಬಲ್ಯ ಅಥವಾ ಮುಂದೆ ಕಣ್ಣಿನ ನರಗಳ ದೌರ್ಬಲ್ಯವೊದಗಿ ಅದು ಕಷ್ಟಕ್ಕೊಳಗಾಗಬಹುದು. ಕೆಲವು ವೇಳೆ ಅಸ್ವಸ್ಥತೆಯಿಂದ ಶಿಶುಗಳು ಸಹನೆ ಕಳೆದುಕೊಂಡು ಚಂಡಿ ಹಿಡಿಯುವುದುಂಟು.

ಮಕ್ಕಳು ಚಂಡಿ ಹಿಡಿಯುವುದಕ್ಕೆ ಹೊಟ್ಟೆಕಿಚ್ಚು, ತಾಯಿಯ ಅಸಡ್ಡೆ, ಇವುಗಳೂ ಕಾರಣವಾಗಬಹುದು. ಕೆಲವು ಸಂದರ್ಭಗಳಲ್ಲಿ ಹೆಚ್ಚು ಆಟದಿಂದ ಸುಸ್ತಾಗಿರುವುದರಿಂದಲೂ ಅದು ಕೋಪ ವ್ಯಕ್ತಪಡಿಸುವುದುಂಟು ಹಸಿದ ಮಕ್ಕಳೂ ಕೂಡ ಈ ತಂತ್ರದಲ್ಲಿ ತೊಡಗುವುದು ಸಾಮಾನ್ಯ.

**ಈ ದುರಭ್ಯಾಸ ತಡೆಗಟ್ಟಲು ಕ್ರಮ.**

ಶಿಶು ಈ ದುರಭ್ಯಾಸವನ್ನು ಬಿಡುವಂತೆ ಮಾಡಬೇಕಾದರೆ ಅದು ಸದಾ ಕಾಲ ಆಟಗಳಲ್ಲಿ ನಿರತವಾಗಿರುವಂತೆ ಮಾಡಿ ಅದನ್ನು ಸಂತೋಷವಾಗಿಡಬೇಕು.

ಅವುಗಳನ್ನು ಹೆಚ್ಚು ಮುದ್ದಿಸುವುದರಿಂದ ಅವು ತಮ್ಮ ಬೆದರಿಕೆಯಾಟವನ್ನು ಹೆಚ್ಚಿಸುವವೆಂದು ಮೇಲೆ ಹೇಳಲಾಗಿದ್ದರೂ ಸಹ ಶೈಶವಾವಸ್ಥೆಯಲ್ಲಿ ಅವುಗಳನ್ನು ಸಂತೋಷವಾಗಿಡಲು ತಾಯಿ ಸೂಕ್ತ ಗಮನಕೊಡುವುದು ಅತ್ಯಗತ್ಯ. ಜೊತೆಗೆ ಹಿತಮಿತವಾದ ಆಹಾರ, ಮತ್ತು ತಾಯಿಯ ಮುದ್ದಾಟಗಳಿಂದ ಶಿಶುಗಳು ದೃಢಕಾಯರಾಗಿ ಆರೋಗ್ಯವಾಗಿರಲು ಸಹಾಯವಾಗುವುದು.

ಹಾಗೆ ಮಾಡದೆ ವಿಧೇಯತೆ ಕಲಿಸಿಕೊಡುವ ನೆಪದಲ್ಲಿ ಶಿಶುವನ್ನು ಹೆಚ್ಚು ಶಿಕ್ಷಿಸಲಾರಂಭಿಸಿದರೆ ಅದು ಪೋಲಿ ಬೀಳಲು ಪರೋಕ್ಷವಾಗಿ ಸಹಾಯ ಮಾಡಿದಂತಾಗುವುದು. ಈ ಕಾರಣದಿಂದ ಶಿಶುವಿನ ಪೋಷಣೆಗೆ ತಾಯಿಯಾದವಳು ಸೂಕ್ತ ಗಮನ ಕೊಡಬೇಕು.

ಆದರೆ ಇತ್ತೀಚೆಗೆ ವಿದ್ಯಾವತಿಯರಾದ ಮಹಿಳೆಯರು ತಮ್ಮ ಮಕ್ಕಳ ಬೆಳವಣಿಗೆಗೆ ಸೂಕ್ತ ಗಮನ ಕೊಡದಿರುವುದು ಕಂಡುಬರುತ್ತದೆ. ಮಗುವನ್ನು ಎತ್ತಿ ಆಡಿಸುವುದು, ಅದಕ್ಕೆ ಬೇಕಾದ ಆಟಪಾಟಗಳಲ್ಲಿ ಆಸಕ್ತಿ ವಹಿಸುವುದು ಅಪಮಾನಕರವೆಂದೇ ಕೆಲವು ಮಂದಿ ವಿದ್ಯಾವತಿಯರ ಭಾವನೆಯಾಗಿರುವುದು ತೀರ ಶೋಚನೀಯ. ಶಿಶುವಿಗೆ ಹಾಲೂಡಿಸಲು ಇಂತಹ ಹೆಂಗಸರು ಸಾಮಾನ್ಯವಾಗಿ ಸೀಸೆಗಳನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ.

ಸೀಸೆಗಳಲ್ಲಿ ಹಾಲು ಪದ್ಧತಿಯನ್ನು ಸದಾ ಕಾಲದಲ್ಲಿ ಉಪಯೋಗಿಸುವುದರಿಂದ ಶಿಶುಗಳ ಆರೋಗ್ಯಕ್ಕೆ ಭಂಗವಾಗುವುದು. ಆದ್ದರಿಂದ ತಾಯಿಯಾದವಳು ಮಗುವಿಗೆ ಆಗಿಂದಾಗ್ಗೆ ಮೊಲೆಹಾಲು ಕುಡಿಸುವುದು ಅತ್ಯಗತ್ಯ. ಇದರಿಂದ ತಾಯಿಯ ನಿಕಟ ಸ್ಪರ್ಶ ಗಮನದಿಂದ ಶಿಶುಗಳ ಬೆಳವಣಿಗೆ ಸಾಧ್ಯವಾಗುವುದು, ಸ್ವಲ್ಪ ವಯಸ್ಸಿಗೆ ಬರುವ ವರೆಗೂ ಶಿಶುವಿನ ತಾಯಿಯು ಈ ರೀತಿ ವಿಶೇಷ ಗಮನ ಕೊಡುವುದು ಸೂಕ್ತ ಕಾಲಕ್ರಮೇಣ ಶಿಶುಗಳು ಬೇರೆ ಆಟಪಾಟಗಳಲ್ಲಿ ಆಸಕ್ತಿ ವಹಿಸುವುದರಿಂದ ಅನಂತರ ತಾಯಿಯ ಗಮನ ಕಡಿಮೆಯಾದರೂ ತೊಂದರೆಯಾಗಲಾರದು.

ಮಕ್ಕಳನ್ನು ಪೋಷಿಸುವ ವಿಷಯದಲ್ಲಿ ತಾಯಿಯಾದವಳು ಬೇಜಾರು ಪಟ್ಟುಕೊಂಡರೆ ಪ್ರಯೋಜನವಾಗಲಾರದು. ಆಗಿಂದಾಗ್ಗೆ ಅವಳು ಶಿಶುಗಳನ್ನು ಮುದ್ದಿಸುವುದು ಅವುಗಳಿಗೆ ಸರಿಯಾದ ಸಮಯದಲ್ಲಿ ಆಹಾರವೊದಗಿಸುವುದು, ಇವೇ ಮೊದಲಾದ ಅಗತ್ಯ ಕೆಲಸಗಳಿಗೆ ಸಮರ್ಪಕವಾಗಿ ಗಮನ ಕೊಡುವುದರಿಂದ ಶಿಶುವಿನ ಆರೋಗ್ಯ ರಕ್ಷಣೆ ಮತ್ತು ಬೆಳವಣಿಗೆಗೆ ಸುಲಭಸಾಧ್ಯವಾಗುವುದು.

(ಚಿ.ಗಂ.)


**ಅಮೃತಾಂಜನ**

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ನೋವುಗಳಿಗೂ, ಎದೆ ನೋವು, ಗಾಯಗಳು, ಚಾತುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

REGD
ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ಎಲ್ಲಾ ತರದ ಶಾಸ್ತ್ರೀಯ
ಆಯುರ್ವೇದ ಔಷಧಗಳಿಗೆ
'ಮಹಾಜನ'
ಕಾಸರಗೋಡು
ಇವರ ತಯಾರಿಕೆಗಳನ್ನು
ವಿಚಾರಿಸಿರಿ.

For Life Assurance
CONSULT
THE NEW GUARDIAN OF INDIA
LIFE ASSURANCE Co. LTD.,
(Established 1934)
Chairman: ri. M. C. T M Chi dambaram Chettyar
A Policy in this progressive Life Office is a good investment, its Agency is a valuable business connection.
MANGALORE BRANCH: K. S. R Road, Hampankatta, Mangalore
HEAD OFFICE: United India Life Building, MADRAS

ಡಿ ಎನ್. ಪಂಡಿತರ ಶ್ರೇಷ್ಠವಾದ
ಪಾಯೊರಿಯಾ ಪೌಡರ್ ... ಪಾಥಿಸ್ ನೀಮ್
ಟೂಥ್‌ಪೌಡರ್ ಉಪಯೋಗಿಸಿರಿ
ಸ್ಟಾಕಿಸ್ಟರು: ನಾಯಕ್ಸ್ ಬೀಡಿ ವರ್ಕ್ಸ್, ಸಂತೆಕಟ್ಟೆ, ಉಡುಪಿ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈರಿಗ, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.
For up-to-date Lodging & Boarding
ROYALMAHAL,
UDIPI, S. Kanara.

**ಋತುಸ್ರಾವ ನಿಂತಿತು**

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುತ್ತಿದ್ದು, ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ-ಬೆಲೆ, ರೂ 3-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ. 6-[ವಿ. ಪಿ. ಹಸ್ಸರಡಾಕ ಪ್ರತ್ಯೇಕ.]
MIS. D. DEVEE, F. DB (N. J.)
Tollygunge CALCUTTA.
ಸ್ಟಾಕಿಸ್ಟರು: ಕಣಾಕಂಪೆನಿ, ಮಂಗಳೂರು

ವಿವಿಧ ಪಾತ್ರೆಗಳು



ಯಾವ ತರ್ಹದ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.


EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd No M 3618

Estd 192[illegible] ಸ್ಥಾಪನ

30ನೇ ವರ್ಷ
19—1—195[illegible]

LICENCE No. 31
Licensed to Post
without Prepayment

ನವಯುಗ
ಚಂದಾ ವಿವರ
(ಮುಂಗಡ)
ವರ್ಷಕ್ಕೆ ರೂ 5 4 0
6 ತಿಂಗಳಿಗೆ ರೂ 3-0 0
ಬಿಡಿ ಪ್ರತಿಗೆ ರೂ 0-2 0

FOUNDER
Sri A B. Shetty
Minister for Agriculture
& Veterinary

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30
ವಾರ ೧

NAVAYUGA WEEKLY UDIPI, S.K.
Post Box No. 22

Vol 30
No 1

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ ಬಿ ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

# ಜನತಾ ಸಪ್ತಾಹ ನಡೆಯಲಿ!

ಈ ದಿನದಿಂದ ಆರಂಭಿಸುವ ವಾರವು ಅಂತ್ಯಗೊಂಡ ಮರುದಿನವೇ ಭಾರತದಲ್ಲಿ ಜನತಾ ರಾಜ್ಯೋದಯವಾಗುವುದು. ಈ ಗುರುವಾರದ ನಂತರ ಬರುವ ಗುರುವಾರವೇ ಭಾರತವನ್ನು 'ರಿಪಬ್ಲಿಕ್'ಗೊಳಿಸುವುದು. ಇಂದಿನಿಂದ ಅಂದಿನ ವರೆಗಿನ ಒಂದು ವಾರದಷ್ಟು ಪ್ರಾಮುಖ್ಯವಾದ ಬೇರೊಂದು ಸಪ್ತಾಹವೇ ಭಾರತದ ಚರಿತ್ರೆಯಲ್ಲಿಲ್ಲವೆನ್ನಬಹುದು

ನಮ್ಮಲ್ಲಿ 'ಏಳು' ಸಂಖ್ಯೆಗೆ ಮಹತ್ವದ ಸ್ಥಾನವಿದೆ. 'ಏಳು ಜನ್ಮ' 'ಏಳೇಳು ಲೋಕ' 'ಸಪ್ತಸಾಗರ' 'ಸಪ್ತ ಮಹರ್ಷಿಗಳ' ಮುಂತಾದುವು ಸನಾತನ ಕಾಲದಿಂದಲೂ ಬಳಕೆಯಲ್ಲಿವೆ. ಏಳರೊಂದಿಗೆ ಎಲ್ಲವೂ ಸಂಪೂರ್ಣವೆಂಬ ಭಾವನೆಯಿದೆ. ಜನತಾರಾಜ್ಯ ಭಾರತದ ಉದ್ಘಾಟನೆಗೀಗ ಉಳಿದಿರುವ ಏಳು ದಿನಗಳೂ ಅತಿ ಮಹತ್ವದವುಗಳೆಂದು ಬೇರೆ ಹೇಳಬೇಕಾಗಿಲ್ಲ.

'ಸಪ್ತಾಹ'ದ ಆಚರಣೆಯೂ ಹಲವು ರಂಗಗಳಲ್ಲಿ ವಿಶೇಷ ಬಳಕೆಯಲ್ಲಿದೆ. 'ರಾಷ್ಟ್ರೀಯ ಸಪ್ತಾಹ' 'ಚರಕ ಸಪ್ತಾಹ' 'ಸಸಿ ಸಪ್ತಾಹ' 'ಭಜನಾಸಪ್ತಾಹ' 'ಸಪ್ತೋತ್ಸವ'ದಂತಹ ಆಚರಣೆಗಳು ನಮ್ಮವು. ಅಂತೆಯೇ ರಿಪಬ್ಲಿಕ್ ಭಾರತ ಉದ್ಘಾಟನೆಯ ವರೆಗಿನ ಏಳು ದಿನ 'ಜನತಾ ಸಪ್ತಾಹ'ವಾಗಿ ಆಚರಿಸಲ್ಪಡಬೇಕಾದುದು ಅಗತ್ಯ ಮತ್ತು ಸ್ವಾಭಾವಿಕವಾಗಿ ಕಾಣುತ್ತಿದೆ

ಯಾವುದಾದರೊಂದು ನಾಟಕದಲ್ಲಿ ಪಾತ್ರವಹಿಸುವವರಾದರೂ ಕೊನೆಯ ಪಕ್ಷ ಏಳು ದಿನಗಳ ತರಬೇತಿಯನ್ನು ಹೊಂದಬೇಕು; ರಾಷ್ಟ್ರದ ಮಹಾ ನಿರ್ವಹಣ ಕಾರ್ಯದಲ್ಲಿ ಪ್ರತ್ಯಕ್ಷ ಭಾಗವಹಿಸುವವರಿಗೆ ಅಷ್ಟೂ ಬೇಡವೇನು? ಯಾವುದಾದರೊಂದು 'ಮಂತ್ರ' ಬಾಯಿಗೆ ಬರಬೇಕಾದರೂ ಕಡಿಮೆಯಾಗಿ ಏಳು ಬಾರಿಯಾದರೂ ಉಚ್ಚರಿಸಬೇಕು—'ಜನತಾ ರಾಜ್ಯ' ಮಂತ್ರವನ್ನು ಮನನ ಮಾಡಿಕೊಳ್ಳಲು ಇಷ್ಟಾದರೂ ಪ್ರಯತ್ನ ಬೇಡವೆ?

ಆದ್ದರಿಂದ ಜನತೆಯು ಈ ಏಳು ದಿನಗಳಲ್ಲಿ ಜನತಾ ರಾಜ್ಯದ ಯಥಾರ್ಥ ಪ್ರಜೆಗಳಾಗುವ ಯೋಗ್ಯತೆಯು ತಮ್ಮಲ್ಲಿ ತುಂಬಿಕೊಳ್ಳುವ ತಪಸ್ಸನ್ನಾಚರಿಸಬೇಕು. ಆ ಮೂಲಕವೇ ಈ ಸಪ್ತಾಹವನ್ನು ಜಯಶೀಲಗೊಳಿಸಬೇಕು. ಇದುವರೆಗೂ ಸ್ವಜ್ಞಾನದ ಮಟ್ಟಿಗೆ– ರಾಜ್ಯಕಾರ್ಯಜ್ಞಾನಾನುಭವಗಳಲ್ಲಿ– ಏಳರ ಹುಡುಗರಂತಿರುವವರು, ಏಳೇ ದಿನಗಳ ಈ ಅವಧಿಯಲ್ಲಿ ನಲ್ವತ್ತೇಳರ ಪ್ರೌಢರಾಗಿ ಮಾ[illegible]

ಇನ್ನೊಂದು ವಾರದಲ್ಲಿ ಉದಯಿಸುವ ಜನತಾ ರಾಜ್ಯವು ಜನತೆ ಹೇಗಿದೆಯೋ ಹಾಗಿದ್ದೀತು ಹೊರತು ಬೇರಾಗದು. ಆ ದಿನ ಜರಗಲಿರುವದೆಂದರೆ ಜನತೆಗೇನೇ ತುತ್ತತುದಿಯ ಸಾರ್ವಭೌಮಾಧಿಕಾರ ಮತ್ತು ಮೂಲ ಹೊಣೆಗಾರಿಕೆಯಿರುವ ರಾಜ್ಯಶಾಸನಗಳೇ. ಅವುಗಳನ್ನು ಸ್ವತಃ ನಿರ್ವಹಿಸುವ ಯೋಗ್ಯತೆಯು ಜನತೆಯಲ್ಲಿಲ್ಲದಿದ್ದರೆ, ಅದು ಬಂದರೂ ಬಾರದಿದ್ದರೂ ಒಂದೇ. 'ಪಟ್ಟದಾನೆ'ಯಾಗಿದ್ದು [illegible] ಭೋಗ [illegible] ಬೇರೆಯವರ [illegible] ಗಿರುವ ನಿದರ್ಶನಗಳು [illegible] ಜೀವನದಲ್ಲಿ ನೋಡಸಿಗುತ್ತವೆ – ರಾಷ್ಟ್ರ ಜೀವನದಲ್ಲಿ [illegible] ಆದ್ದರಿಂದ 'ಜನತೆ ಜಾಗೃತಿಗೊಳ್ಳಲಿ' 'ಜನತೆ ಬಲಗೊಳ್ಳಲಿ' 'ಜನತೆ ಸಮರ್ಥವಾಗಲಿ' ಎಂದು ಈ ಕಾಲದಲ್ಲಿ ಹೇಳಿದಷ್ಟೂ ಕಡಿಮೆಯೇ

ಜನತೆಯ ಮೇಲೆ ಬೀಳಲಿರುವ [illegible] ಅಪೇಕ್ಷಿಸದ ಮಹಾ ಜವಾಬ್ದಾರಿ [illegible]. ತನ್ನಿಚ್ಛೆಯಂತೆ ಲೋಕ— ಲೋಕ ಪದ್ಧತಿಯಂತೆ ತಾನು ನಡೆಯಬೇಕೆಂದು ಬಯಸುವುದು ಮಾನವ ಸಹಜ ಸ್ವಭಾವ [illegible] ಪಾಲಿಗೀಗ [illegible] ರಾಜ್ಯ ಬರುತ್ತಿದೆ. ಅದರ ಆ ರಾಜ್ಯಪದ್ಧತಿಗನುಗುಣವಾಗಿ ತಾವಿರುವೆವೇ ಎಂಬುದನ್ನು ನೋಡಿಕೊಂಡು ಹಾಗಿರಲು ಪ್ರಯತ್ನಿಸುವ ಅವಧಿಯೀಗ ಒಂದಿದೆ. ಅದಕ್ಕಾಗಿಯೇ ಈ 'ಜನತಾ ಸಪ್ತಾಹ'ವ ಆಚರಿಸಬೇಕಾದುದು ಅಗತ್ಯ.

ಈ ಸಪ್ತಾಹದಲ್ಲಿ ಹಿಂದೀ ಜನ ಸಾಮಾನ್ಯರು ಸಾಧಿಸಿಕೊಳ್ಳಬೇಕಾದುದನ್ನು- ತುಂಬಿಸಿಕೊಳ್ಳಬೇಕಾದುದನ್ನು — ಇಲ್ಲಿ ಸಂಕ್ಷೇಪವಾಗಿ ಕೊಡಬಹುದಲ್ಲವೆ?

ಮೊದಲನೇ ದಿನವನ್ನು 'ಚಿತ್ತಶುದ್ಧಿ ದಿನ'ವಾಗಿಯೇ ಆಚರಿಸಬಹುದು. ಇದುವರೆಗೆ ಜನಸಾಮಾನ್ಯರಲ್ಲಿ ವಸ್ತುಸ್ಥಿತಿಯ ಕುರಿತು ಅಸ್ತವ್ಯಸ್ತವಾದ ಅಭಿಪ್ರಾಯಗಳು ಹಾಗೂ ಅಜ್ಞಾನಗಳೇ ತುಂಬಿಹೋಗಿವೆ. ತತ್ಪರಿಣಾಮವಾಗಿ ಹಲವು ಮೂಢ ನಂಬಿಗೆಗಳೂ ಬಯಲ ಭ್ರಾಂತಿ ಮತ್ತು [illegible] ಕಲ್ಪನೆಗಳೂ ಹುದುಗಿಕೊಂಡಿವೆ ಮಾಯಾಪ್ರಪಂಚವೊಂದು ಕಡೆಗಲ್ಲದೆ ಜನಸಾಮಾನ್ಯದ ಕಡೆಗೆ ಕೊಂಡೊಯ್ಯುವ ಸಾಧನಗಳು ಇನ್ನೂ ಇವೇ ಅಲ್ಲ, ಆದ್ದರಿಂದ ಮೊದಲಿನ ದಿನವು ಇವೆಲ್ಲವನ್ನೂ [illegible] ಮನವನ್ನು ಧರಿಸಿ ಹೊಸ ರೀತಿಯಿಂದ ಚಿಂತಿಸುವ ಚಿತ್ತಶುದ್ಧಿ ದಿನವಾಗಬೇಕು.

ಎರಡರಿಂದ ನಾಲ್ಕರ ವರೆಗಿನ ಮೂರು ದಿನಗಳನ್ನು ಭೂತ-ವರ್ತಮಾನ-ಭವಿಷ್ಯತ್ಕಾಲಗಳ ಆಗುಹೋಗುಗಳ ಸರಿಯಾದ ಜ್ಞಾನ ಸಂಪಾದಿಸಿಕೊಳ್ಳುವದಕ್ಕಾಗಿ ವಿನಿಯೋಗಿಸಿಕೊಳ್ಳಬೇಕು; ಮುಂದಾಗಿ ಗತಕಾಲದಲ್ಲಿ ಭಾರತವು ಎಂತೆಂತಹ ಅವಸ್ಥೆಗಳನ್ನು ದಾಟಿ ಬಂದಿದ್ದರೆ, ಆ ಮಹಾಪರ್ಯಾಟಗಳಲ್ಲಿ ಜನಸಾಮಾನ್ಯರು ಭಾಗ ವಹಿಸಿದುದೆಷ್ಟು, ಮತ್ತು ಪರಿಣಾಮಗಳನ್ನು ಪಡೆದುದೆಷ್ಟು ಎಂಬುದನ್ನು ತುಲನಾತ್ಮಕವಾಗಿ— ಅಗತ್ಯವುಳ್ಳ ಆಧಾರಗಳನ್ನೂ ಸಲಹೆಗಳನ್ನೂ ಪಡಕೊಂಡೇ— ಯೋಚಿಸಿಕೊಳ್ಳಬೇಕು

ಆ ಮೇಲೆ ಭಾರತವೀ ದಿನ ಹೇಗಿದೆ ಯಾವ ಸ್ಥಿತಿಯಲ್ಲಿದ್ದುದು ಯಾವ ಸ್ಥಿತಿಗೆ ಬಂದಿದೆ- ಎಂಬುದನ್ನು ಸಂಯಾ[illegible] ಮುಂದಿಟ್ಟು ಮಾಡಿಕೊಳ್ಳಬೇಕು; ಆ [illegible]ಚಿತ್ರವನ್ನು ಮನೋಫಲಕದಲ್ಲಿ ಸ್ಪಷ್ಟವಾಗಿ ಮೂಡಿಸಿಕೊಳ್ಳಬೇಕು. ಇಂದಿ[illegible] 1947ನೇ ಆಗೋಸ್ತು 15ರಿಂದ 195[illegible]ನೇ ಜನವರಿ 26ರ ವರೆಗಿನ ಅವಧಿಯ[illegible] ಅಧಿಕಾರ ಮತ್ತೆಲ್ಲಾ ಆಗುಹೋಗುಗಳು ಜನತೆಯ ಹೆಸರಿನಿಂದಲೇ ನಡೆಯುತ್ತಿದ್ದರೂ ಕೇವಲ ಜನತೆಗೆ ಹಿತಕರವಾಗುವ ಅಂಶ ಅವುಗಳಲ್ಲೆಷ್ಟು ಎಂಬುದನ್ನು ಶೋಧಿಸಿ ನೋಡಿಕೊಳ್ಳಬೇಕು.

ತದನಂತರ ಈಗ ಬರುತ್ತಿರುವ ಹೊಸ ವಿಧಾನಗಳ ರೂಪರೇಖೆ ಮತ್ತು ಭಾವೀ ಸಂಭವಗಳನ್ನು ಮನವರಿಕೆಮಾಡಿಕೊಳ್ಳುವ ವಿಚಾರ. ಜನವರಿ 26ರಲ್ಲಿ ಜಾರಿಗೆ ಬರುವ ಹೊಸ ರಾಜ್ಯಾಂಗದ ರೂಪರೇಖೆಯಾವುದು? ಪ್ರಚಲಿತ ರಾಜ್ಯಶಾಸನಕ್ಕೂ ಈ ಭಾವೀ ರಾಜ್ಯ ಘಟನೆಗೂ ಇರುವ ವ್ಯತ್ಯಾಸಗಳೇನು? ಎಂಬೆಲ್ಲಾ ವಿಷಯಗಳನ್ನು ಸೂಕ್ಷ್ಮವಾಗಿ ಮತ್ತು ಗಾಢವಾಗಿ ಜನಸಾಮಾನ್ಯರು ತಿಳಿದುಕೊಳ್ಳಬೇಕು

ನವರಾಜ್ಯ ಶಾಸನದಲ್ಲಿ ಸಾಮಾನ್ಯರಾದ ತಮಗೆ ದೊರೆತಿರುವ ಸ್ಥಾನ ಮತ್ತು ಅಧಿಕಾರವಾವುದು ಮತ್ತೆಲ್ಲಿ? ಅವುಗಳನ್ನು ತಾವು ಉಪಯೋಗಿಸುವ ಯಾವ ವಿಧಾನಕ್ಕೆ ಯಾವ ರೀತಿಯ ಪ್ರತಿಫಲ? ಎಂಬ ಜ್ಞಾನದೇವತೆಯನ್ನು ತಮ್ಮಲ್ಲಿ ಆವಾಹನ ಮಾಡಿಕೊಳ್ಳುವವರಂತೆ ಜನ ಸಾಮಾನ್ಯರು ಹೊಸ ಘಟನೆ ಮತ್ತು ಭವಿಷ್ಯವನ್ನು ಮನನ ಮಾಡುವುದರಲ್ಲೇ ತಲ್ಲೀನರಾಗಬೇಕು.

ಐದರಿಂದ ಏಳರ ವರೆಗಿನ ಮೂರು ದಿನಗಳನ್ನೂ ಆ ಮೊದಲಿನ ನಾಲ್ಕು ದಿನಗಳಲ್ಲಿ ನಡೆಸಿದ ಹೃದಯ ಮತ್ತು ಮೆದುಳು ಮಂಥನಗಳ ಪರಿಣಾಮಗಳನ್ನು ತಮ್ಮಲ್ಲಿ ಸಾಕ್ಷಾತ್ಕರಿಸಿಕೊಳ್ಳುವದಕ್ಕಾಗಿ ವಿನಿಯೋಗಿಸಲಿಡಬೇಕು

ಹೊಸ ರಾಜ್ಯ ಘಟನೆಯಂತೆ ತಮ್ಮ ಪ್ರತಿ ಪ್ರಾಯಸ್ಥರೆಲ್ಲರಿಗೂ ಬಂದಿರುವ ಮತಾಧಿಕಾರ-ಆ ಅಧಿಕಾರದ ಮೂಲಕವೇ ತಮಗೆ ಬೇಕಾಗುವವರನ್ನು ಸ್ಥಳೀಯ ಸಂಸ್ಥೆಗಳಿಂದಾರಂಭಿಸಿ, ಪ್ರಾಂತಿಕ ಶಾಸನ ಸಭೆ ಮತ್ತು ಪಾರ್ಲಿಮೆಂಟಿಗೂ ಆರಿಸಿಕೊಳ್ಳು[illegible]

THE VIJAYA BANK, Ltd,
H. O, MANGALORE

A With a net work of branches throughout the District and one each at Mercara and Bombay

B With a standing of 18 years service

C With total resources of over 40 Lakh

Fixed deposits are now accepted at the following rates of interest

3 months 3% P A [illegible] months [illegible] P A
12 months 3[illegible] P A [illegible] months 4% P A

*All kinds of banking business transacted*

[illegible]

South Kanara

ಸ್ಥಾಪಿಸಿ [illegible] ಮಂತ್ರಿ ಮತ್ತು ಕೇಂದ್ರಾಧ್ಯಕ್ಷನು ಆರಿಸಲ್ಪಟ್ಟ ಎಲ್ಲಾ ಅಧಿಕಾರಿಗಳೂ ಆಳು ತ್ತಾಡುವ ಬಗೆ— ಈ ಅಗ್ರ ಪಂಕ್ತಿಯ ಅಧಿಕಾರಿಗಳಿಂದಾರಂಭಿಸಿ, ಕೆಳ ನೌಕರರ ವರೆಗಿನವರೂ ಎಲ್ಲಾ ಶಾಸನ ಮತ್ತು ಕ್ರಮ ನಿಯಮಗಳೂ ಕೇವಲ ಜನತೆಗೇನೇ ಹೊಣೆಯಾಗಿದ್ದು ತಮ್ಮ ವಿಶ್ವಾಸ ಕಳಕೊಂಡೊಡನೆ ಅವರಲ್ಲಿ ಯಾರೇ ಆದರೂ, ಅವುಗಳಲ್ಲಾವುದೇ ಆದರೂ ಸ್ಥಾನ ತಪ್ಪಬೇಕಾಗಿರುವ ಕ್ರಮ-ಇವೆಲ್ಲವನ್ನೂ ಸರಿಯಾಗಿ ಮುಂದಟ್ಟು ಮಾಡಿಕೊಳ್ಳಬೇಕು. ಇಂತಹ ಮೂಲ ಅಧಿಕಾರಸ್ಥಾನ-ಮುಖ್ಯ ನಿರ್ದೇಶಕತ್ವ—ಬಂದಿರುವ ತಾನು ಅದಕ್ಕನುಗುಣವಾದ ಯೋಗ್ಯತೆಯುಳ್ಳವನೇ ಎಂದು,ಸಾರ್ವಜನಿಕರಲ್ಲಿ ಪ್ರತಿಯೊಬ್ಬನೂ ತನ್ನನ್ನು ತಾನೇ ಪರಿಸ್ಥಿತಿಯ ಇದಿರತಟ್ಟೆಯಲ್ಲಿಟ್ಟುಕೊಂಡು ತೂಗಿ ನೋಡಬೇಕು. ಆ ತೂಕದಲ್ಲಿ ಎಷ್ಟಂಶ ಕಡಿಮೆ ಕಾಣುವುದೋ ಅಷ್ಟಂಶಗಳನ್ನೂ ತುಂಬಿಸಿಕೊಳ್ಳಬೇಕು.

ಜನತೆ ಅರಿತುಕೊಳ್ಳದೆ ಬಿಟ್ಟಿರುವ ಅಂಶಗಳಿವೆ-ಅರಿತುಕೊಳ್ಳಬೇಕು. ಅತಿಶಯೋಕ್ತಿ, ಅಸಂಬದ್ಧ ವರ್ಣನೆಗಳನ್ನು ನಂಬಿಯೂ, ಅಸಡ್ಡೆಯಿಂದಿದ್ದೂ ಅಜ್ಞಾನ ಮತ್ತು ಆಲಸ್ಯದ ಅಮಲಿನಿಂದ ಹಗುರವಾದುದಿದೆ—ಭಾರ ಹೆಚ್ಚಿಸಿಕೊಳ್ಳಬೇಕು ಎಲ್ಲಕ್ಕಿಂತ ಹೆಚ್ಚಾಗಿ ಮತ್ತು ಎಲ್ಲದರ ಸಾರವಾಗಿ 'ಮಾಡುವವರು ಬೇರೆ, ಅನುಭವಿಸುವವರು ನಾವು' ಎಂದಿರುವ ಭಾವನೆಯನ್ನೇ ಬದಲಾಯಿಸಿ 'ಮಾಡಿ ಉಣ್ಣುವವರೇ ನಾವು' ಎಂಬ ನಂಬಿಕೆಯನ್ನು ಮೊಳೆಯಿಸಿಕೊಳ್ಳಬೇಕು.

ಈ ಹೊಸ ಯುಗದಲ್ಲಿ ಸ್ಥಾನಮಾನಗಳ ಮಟ್ಟಿಗೆ ಹಿಂಭಾಗದ ಹಿಂದೀ ಜನಸಾಮಾನ್ಯರ ಒಲವು ಮತ್ತು ಬಲವನ್ನೇ ಮುಂಭಾಗದ ಮಿಕ್ಕವರು ಅವಲಂಬಿಸಿರಬೇಕಲ್ಲದೆ, ಜನತೆ ಪರಾವಲಂಬಿಯಾಗಿಲ್ಲ. ಹೀಗಾದರೂ ಬುದ್ಧಿ, ಶಕ್ತಿ, ಭಾವನೆ, ಯೋಗ್ಯತೆಯ ಮಟ್ಟಿಗೆ ಸಾಮಾನ್ಯ ಜನತೆ ಸ್ವಾವಲಂಬಿಯಾಗಿಲ್ಲ. ಈ ಸ್ವಾವಲಂಬನೆ ಬಂದರೆ, ಆ ಮೂಲಕವೇ ಜನತಾರಾಜ್ಯ ಸಾರ್ಥಕಗೊಂಡೀತು. ಅಂತಹ 'ಸ್ವ' ವೃದ್ಧಿಗಾಗಿ ಈ ಸಪ್ತಾಹ.

ಜನವರಿ 26, 'ಜನತಾ ಸಪ್ತಾಹ' ಮಂಗಳಾಚರಣೆಗಾಗಿಯೇ ಬಂದಂತಿದ್ದಲ್ಲಿ,ಆಧುನಿಕ ಕಾಲದ ಮಹಾ ಯಜ್ಞವೊಂದು ಭಾರತದಲ್ಲಿ ನಡೆದಂತಾಗುವುದು. ನಿಜಕ್ಕೂ ಕಲ್ಯಾಣಸಾಧನೆಯಾಗುವದು.

ಜನವರಿ 26ಕ್ಕೆ ನಾಲ್ಕನೇ ದಿನವಾಗಿ ಜನವರಿ 30—ಗಾಂಧಿಜೀಯ ಬಲಿದಾನ ದಿನ—ಬರಲಿದೆ. ಪ್ರೌಢತಾ ಸಾಧನೆ ಮಾಡಿದ ಬೆನ್ನಲ್ಲೇ ಪುಣ್ಯಸ್ಮರಣೆ ಮಾಡುವ ಸುಯೋಗವೆಂದರೆ ಹೀಗೆ.

ಕಾಲಕ್ಕಿಂತ ದೊಡ್ಡ ಗುರುವಿಲ್ಲ; ಅದೀಗ ಭಾರತೀಯರ ಪಾಲಿಗೆ ತೆರೆಬೇಕಾಗಿರುವ ದಿನಗಳನ್ನೇ ಮುಂದೊಡ್ಡಿದೆ. ಇವ ಹತ್ತಿಸಿಕೊಳ್ಳಲು ಒತ್ತಿ ಹೊಸೆಯುವಂತೆ— ಸುವರ್ಣದಾಗರ ಸೇರಲು ಸುರಂಗ ನುಗ್ಗಿ ಹೋಗುವಂತೆ— ಮುಂದಿನ ದಿನಗಳನ್ನು ಭಾರತೀಯರು ಸದ್ವಿನಿಯೋಗಿಸಿ ಕೊಂಡರೇನೇ ಆ ಮೇಲೆ ಬೆಳಕು, ಭಾಗ್ಯ!

[illegible] ಜನತಾರಾಜ್ಯ ಸ್ಥಾಪನೆಯ ದಿನ ಸಮೀಪಿಸುತ್ತಿದ್ದಂತೆ, ಅದರ ಪ್ರಧಾನಿ, ಉಪಪ್ರಧಾನಿಗಳಿಬ್ಬರೂ ತಂತಮ್ಮ ಪಾಲಿನ ಕರ್ತವ್ಯ ನಿರ್ವಹಣದಲ್ಲಿ ನಿರತರಾಗಿರುವುದು ಕಂಡುಬರುತ್ತದೆ. ಪ್ರಧಾನಿ ಮತ್ತು ವಿದೇಶ ಮಂತ್ರಿಯಾಗಿರುವ ಪಂಡಿತ ಜವಾಹಿರಲಾಲರು ಕಾಮನ್‌ವೆಲ್ತ್ ರಾಷ್ಟ್ರಗಳ ವಿದೇಶ ಮಂತ್ರಿಗಳ ಸಮ್ಮೇಲನಕ್ಕಾಗಿ ಕೊಲಂಬೋವಿಗೆ ಹೋದವರು ಅಲ್ಲಿ ಸರ್ವರನ್ನೂ ವಿಶೇಷಾಕರ್ಷಿಸಿದ್ದಾರೆ; ಎಲ್ಲರ ಪ್ರೇಮಾದರ ಮತ್ತು ಆತ್ಮೀಯತೆ ಗಳಿಸಿದ್ದಾರೆ. ನೆಹರು, ಅಮೆರಿಕ ಇಂಗ್ಲೆಂಡುಗಳಿಗೆ ಹೋದರೆ, ಅಲ್ಲಿ ತನ್ನನ್ನು ಸಂಧಿಸುವವರನ್ನು ಪರಮಾಪ್ತರನ್ನಾಗಿ ಮಾಡಿಕೊಳ್ಳಬಲ್ಲರೆಂಬುದು ಈ ಮೊದಲೇ ಸಿದ್ಧವಾಗಿದ್ದರೆ, ಸ್ವರಾಷ್ಟ್ರದ ತರಗತಿಯಲ್ಲೇ ಇರುವ ಸಿಂಹಳದಂತಹ ದೇಶದಲ್ಲಿ ಸಮಪಂಕ್ತಿಯ ರಾಷ್ಟ್ರಗಳ ಪ್ರಮುಖರ ನಡುವಿನಲ್ಲಿದ್ದರೆ, . ಅವರನ್ನು ಆತ್ಮೀಯರನ್ನಾಗಿ ಮಾರ್ಪಡಿಸಬಲ್ಲರೆಂಬುದೂ ಈಗ ಸಿದ್ಧವಾಗಿದೆ. ಕೊಲಂಬೋದಲ್ಲಿ ಪಂಡಿತ ಜವಾಹಿರಲಾಲ ನೆಹರುಗಳನ್ನು ಭಾರತದಲ್ಲಿ ಹೇಗೋ ಹಾಗೆಯೇ 'ಪಂಡಿತಜೀ' ಎಂದು ಸಂಬೋಧಿಸುವವರೇ ಹೆಚ್ಚಿಗೆ. ಈ ಸಂಬೋಧನೆಯು ಎಂತಹ ಆತ್ಮೀಯ ಪೂಜ್ಯ ಭಾವನೆಯನ್ನು ಹೊರಗೆಡಹುತ್ತದೆಂಬ ಅರ್ಥವಂತೇ ಅಲ್ಲಿ ಸೇರಿರುವ ಆಸ್ಟ್ರೇಲಿಯ, ಕೆನಡಾ, ನ್ಯೂಜೀಲೆಂಡು, ಫಿಲಿಪ್ಪಾಯನ್ಸ್ ಮೊದಲಾದ ರಾಷ್ಟ್ರಗಳವರು ಅವರನ್ನು 'ಪಂಡಿತಜೀ'ಯೆನ್ನುತ್ತಿದ್ದಾರೆ. "ನಾವು ನಮ್ಮ ಪಂಡಿತಜೀಯ ಕುರಿತು ಹೆಗ್ಗಳಿಕೆ ಪಡುತ್ತೇವೆ" ಎಂದು ಕೆನಡಾದ ಪ್ರತಿನಿಧಿಯೆಂದಿದ್ದ ಕಾಮನ್‌ವೆಲ್ತ್ ರಾಷ್ಟ್ರ ಪ್ರಮುಖರ ಪ್ರೀತ್ಯಾದರಗಳ ಸರಮಾಲೆಯಿಂದಲಂಕರಿಸಲ್ಪಟ್ಟು ಅಲ್ಲಿ ಶೋಭಿಸುತ್ತಿದೆ ಪಂಡಿತಜೀಯ ವ್ಯಕ್ತಿತ್ವ. ಒಂದು ರಾಷ್ಟ್ರದ ಪ್ರತಿನಿಧಿಯ ಕಡೆಗಿರುವ ಇಂತಹ ಆಕರ್ಷಣೆಯು ಕೇವಲ ವ್ಯಕ್ತಿಗೌರವವಾಗಿಯೇ ಉಳಿದುಕೊಳ್ಳದೆ ರಾಷ್ಟ್ರ ರಾಷ್ಟ್ರಗಳೊಳಗಿನ ಸಂಬಂಧ ವಹಿವಾಟುಗಳಲ್ಲೂ ತನ್ನ ಮುದ್ರೆಯನ್ನೊತ್ತುವಂತಹದಿರುವುದರಿಂದ ಅಲ್ಲಿ ಪಂಡಿತಜೀ ತನ್ನ ಉದ್ದೇಶ ನೆರವೇರಿಸಿಕೊಂಡು ರಿಪಬ್ಲಿಕ್ ರಾಜ್ಯೋದ್ಘಾಟನೆಯ ಮೊದಲು ಭಾರತಕ್ಕೆ ಮರಳುವರೆಂದು ನಿರೀಕ್ಷಿಸಬಹುದು.

ಇತ್ತ ಗೃಹ ಮಂತ್ರಿ ಸರ್ದಾರ್ ವಲ್ಲಭಭಾಯಿಗಳೂ ತನ್ನ ಪಾಲಿನ ಕರ್ತವ್ಯವನ್ನು ಅಷ್ಟೇ ಪರಿಣಾಮಕಾರಿಯಾಗಿ ನಿರ್ವಹಿಸುತಿದ್ದಾರೆ. ಮುಂದಿನ ವಿಶೇಷ ಕಾಲದಲ್ಲಿ ಒಳ ವ್ಯವಸ್ಥೆ ಭದ್ರವಿರಬೇಕೆಂಬ ದೃಷ್ಟಿಯಿಂದ ಸಂಯುಕ್ತ ಪ್ರಾಂತ್ಯ ಮತ್ತು ಬಂಗಾಳಗಳ ಕಾಂಗ್ರೆಸ್ ಪಕ್ಷದೊಳಗಡೆಯ ಬಿರುಕುಗಳನ್ನು ಮುಚ್ಚುವುದರಲ್ಲೂ, ಪೋಲೀಸು ದಳದಂತಹ ರಾಷ್ಟ್ರದೊಳಗಾವಲು ಎಲ್ಲಿಯೂ ಕಣ್ಣು ಕೂರದಂತೆ, ಸಡಿಲು ಬೀಳದಂತೆ ನೋಡುವುದರಲ್ಲೂ ಅವರು ತೊಡಗಿದ್ದಾರೆ. ಈ ಪೈಕಿ ಸಂಯುಕ್ತ ಪ್ರಾಂತ್ಯದ ಕಾಂಗ್ರೆಸಿಗರ ನಡುವೆ ಅವರ ಪ್ರಥಮ ಪ್ರಯೋಗವು ಆಯಶಸ್ವಿಯಾದಂತೆ ತೋರಿ ಬಂದರೂ ಅಲ್ಲಿಯ ಒಳರೋಗವನ್ನು ಪ್ರತ್ಯಕ್ಷ ಪರಿಶೀಲಿಸಿ ಬಂದ ಈ ಸೋಲರಿಯದ ಪಂಡಿತರು ಅದನ್ನು ಗುಣಪಡಿಸದೆ ಎಂದಿಗೂ ಬೆಳೆಯಲು ಬಿಡಲಾರರೆಂದು ದೃಢವಾಗಿ ನಂಬಬಹುದು. ನವದೆಹಲಿಯ ಪೋಲೀಸ್ ಅಧಿಕಾರಿಗಳ ಸಮ್ಮೇಲನದಲ್ಲೂ, ಕಲ್ಕತ್ತದ ಕಾಂಗ್ರೆಸಿಗರ ಸಭೆಯಲ್ಲೂ ಸರ್ದಾರರು ಕೊಟ್ಟದ್ದ ಉಪದೇಶಗಳು ಅಖಿಲ ರಾಷ್ಟ್ರದ ಪೋಲೀಸು ದಳಗಳವರಿಗೂ ಅಖಿಲ ಭಾರತದ ಕಾಂಗ್ರೆಸಿಗರಿಗೂ ಸರ್ವಸಮಾನವಾಗಿ ಅನ್ವಯಿಸುವಂತಹದಿವೆ ಆದ್ದರಿಂದ ಅವುಗಳ ಸಾರವನ್ನಿಲ್ಲಿ ಕೊಡಲಾಗಿದೆ.

## ಪೋಲಿಸರ ಕರ್ತವ್ಯ.

ಇದೇ ತಾ. 12ರಿಂದ ಮೂರು ದಿನಗಳ ವರೆಗೆ ನವದಿಲ್ಲಿಯಲ್ಲಿ ನಡೆದ ಎಲ್ಲಾ ಪ್ರಾಂತ್ಯ ಮತ್ತು ಸಂಸ್ಥಾನಗಳ ಅಖಿಲ ಭಾರತ ಪೋಲೀಸ್ ಪ್ರಮುಖಾಧಿಕಾರೀ ಸಮ್ಮೇಳನವನ್ನು ಉದ್ಘಾಟಿಸುತ್ತಾ ಸರ್ದಾರ್ ವಲ್ಲಭಭಾಯಿಗಳೆಂದರು:

"ಒಂದು ವಿದೇಶೀ ಸರಕಾರದ ಧೋರಣೆಯ ಉಪಕರಣವಾಗಿದ್ದ ಸ್ಥಿತಿಯಿಂದ, ನಿಮ್ಮ ಸ್ವಂತ ಸರಕಾರದ ಹಸ್ತೋಪಕರಣವಾಗಿ ಮಾರ್ಪಾಟುಗೊಳ್ಳುವ ಸ್ಥಿತಿಯು ಅಧಿಕಾರಿಗಳಿಗೂ ಪೋಲೀಸರಿಗೂ ಕಷ್ಟದಾಯೀ ಸಮಸ್ಯೆಗಳನ್ನು ನಿರ್ಮಿಸಿರಬೇಕೆಂಬುದು ನಿಸ್ಸಂದೇಹ. ಆದರೂ ಕೂಡಾ ಪೋಲೀಸು ಪಡೆಗಳ ಅಧಿಕಾರಿಗಳೂ ಪೋಲೀಸರೂ ಎಷ್ಟು ತ್ವರಿತವಾಗಿ, ಸಂತೋಷಪೂರ್ವಕವಾಗಿ ಹಾಗೂ ಹೊಂದಿಕೊಂಡು ಈ ಬದಲಾವಣೆಯ ಕಡೆಗೆ ತಮ್ಮನ್ನು ತಾವು ಸರಿಪಡಿಸಿಕೊಂಡರೆಂಬುದು ನನಗೆ ಗೊತ್ತಿರುವಷ್ಟು ಬೇರೊಬ್ಬರಿಗರಿಯದು. ಕಾರ್ಯದ ಸ್ವಭಾವದಲ್ಲಿ ಮಾತ್ರವಲ್ಲ, ರೀತಿನೀತಿಗಳಲ್ಲಿ ಹಾಗೂ ಸ್ಥಿತಿಗತಿಗಳಲ್ಲಿ ಕೂಡಾ ಬದಲಾವಣೆಯಾಗಬೇಕಾಗಿದ್ದುದರಿಂದ, ಪೋಲೀಸರು ತಮ್ಮ ದೈನಂದಿನ ಕಾರ್ಯ ನಿರ್ವಹಣದಲ್ಲಿ ಜನತೆಯ ಹಾಗೂ ಸಮಸ್ಯೆಗಳ ಕಡೆಗೆ ಬೇರೆ ವಿಧಾನವನ್ನೇ ಅನುಸರಿಸಬೇಕಾಗಿದ್ದಿತು. ನೀವು ಜನತೆಯ ಸೇವಕರು ಮತ್ತು ಸ್ನೇಹಿತರೆಂಬ ನಿತ್ಯದ ಉಪದೇಶ ಪಲ್ಲವಿಯನ್ನೇ ಹಾಡಿ ನಾನು ನಿಮ್ಮನ್ನು ಬೇಸರಕ್ಕೀಡು ಮಾಡಲಾರೆ. ನಿಮ್ಮ ಸ್ವಂತ ಸರಕಾರವು ಅವರಿಂದ ಯೋಗ್ಯ ಹಾಗೂ ಪರಿಣಾಮಕಾರೀ ಕೆಲಸವಾಗಬೇಕೆಂದು ಅಪೇಕ್ಷಿಸುತ್ತದೆ, ಎಂಬುದನ್ನು ನೀವು ನಿಮ್ಮ ಕೈಕೆಳಗಿನ ಜನರಿಗೆ ಮುಂದಟ್ಟು ಮಾಡಬೇಕೆಂದಷ್ಟೇ ನಾನು ನಿಮ್ಮನ್ನು ಕೇಳಿಕೊಳ್ಳುತ್ತೇನೆ. ಸೇವಾನಂದವೆಂಬುದೇ ಸ್ವತಃ ಒಂದು ಉಡುಗೊರೆಯಾಗಿದ್ದರೂ, ನಿಮ್ಮ ಸರಕಾರಕ್ಕೆ ಅಥವಾ ಜನತೆಗೆ ನೀವು ಸಲ್ಲಿಸುವ ಯಥಾರ್ಥ ಸೇವೆಗೆ ಪ್ರತಿಫಲ ದೊರೆಯದೆ ಹೋಗದೆಂಬ ಕುರಿತು ನನಗೇನೂ ಸಂದೇಹವಿಲ್ಲ; ನಿಮ್ಮ ಸ್ವಂತ ಅನುಭವದಲ್ಲಿಯೇ ಈ ಕುರಿತು ಸಾಕಷ್ಟು ನಿದರ್ಶನಗಳು ದೊರೆತಿರಬಹುದೆಂದು ನಾನು ನಂಬುತ್ತೇನೆ. ವಿಶೇಷತಃ ಗತಕಾಲದಲ್ಲಿ ಪೋಲೀಸರು ಕೆಲಸ ಮಾಡಬೇಕಾಗಿ ಬಂದಿದ್ದ ವಾತಾವರಣ ಮತ್ತು ಸ್ಥಿತಿಗತಿಗಳ ದೆಸೆಯಿಂದ ಕಾಲಕ್ರಮೇಣವೇ ಪೋಲೀಸರ ಯೋಗ್ಯತೆಗಳು ಸಾರ್ವಜನಿಕರ ಶ್ಲಾಘನೆ ಸಂಪಾದಿಸಬೇಕಾಗಿದೆ, ಆದ್ದರಿಂದ ನೀವು ವಿಮರ್ಶೆಗಳ ಕಡೆಗೆ ಅಸಹನೆ ಪಡುವದಾಗಲೀ ಸುಸಂಭಾವನೆ ದೊರೆಯಲಿಲ್ಲವೆಂದು ಭಾವಿಸಿಕೊಂಡು ಬೇಸರಗೊಳ್ಳುವುದಾಗಲೀ ಸಲ್ಲದು. ಪೋಲೀಸರಿಂದ ಪರಿಣಾಮಕಾರಿ, ಯೋಗ್ಯ ಹಾಗೂ ನಿಷ್ಪಕ್ಷಪಾತದ ಕೆಲಸಗಳಾದಲ್ಲಿ, ಅವುಗಳಿಗೆ ಜನತೆಯ ಹೃದಯದಲ್ಲಿ ಉಚ್ಚನ ಸ್ಥಾನ ದೊರೆಯುವುದೆಂದೂ, ಪೋಲಿಸರನ್ನು ರಾಷ್ಟ್ರದ ಉತ್ತಮ ಸ್ನೇಹಿತರೆಂದು ಸಾರ್ವಜನಿಕರು ಭಾವಿಸಿಕೊಳ್ಳುವಂತಾಗುವದೆಂದೂ ನನಗೆ ಖಾತ್ರಿಯುಂಟು. ಪೋಲಿಸ್ ರಾಜ್ಯವನ್ನಾಧರಿಸಿ ಒಂದು ಪ್ರಜಾಸತ್ತಾ ಸರಕಾರವೆಂದಿಗೂ ಬಾಳಲಾಗಲಾರದೆಂಬುದನ್ನು ಆಡಳಿತ ಯಂತ್ರದ ತೀರಾ ಕೆಳ ಅಂತಸ್ತಿನ ನೌಕರರಂತೆಯೇ ಮಂತ್ರಿಗಳ ವರೆಗಿನ ಎಲ್ಲರೂ ತಿಳಿದಿರಬೇಕಾಗಿದೆ. ಅದು ಜನತೆಯ ಸಂತೋಷಪೂರ್ಣ ಸಮ್ಮತಿ ಮತ್ತು ಸಹಕಾರದಿಂದ ಮಾತ್ರವೇ ಚಾಲನೆಗೊಳ್ಳಬಲ್ಲುದು. ತಕ್ಷೀರು ಪ್ರತಿಬಂಧ ಅಥವಾ ಶೋಧನೆಯಲ್ಲೇ ಇರಲಿ ಅಥವಾ ಗೊಂದಲವೆದ್ದ ಜನತಂಡವನ್ನು ಇಲ್ಲವೇ ಸಭೆ ಸ

# ಪೋಲೀಸರಿಗೆ
## ಸರ್ದಾರರ ಸಂದೇಶ.

The Canara Industrial & Banking Syndicate Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925. ಪ್ರಧಾನ ಕಾರ್ಯಾಲಯ ಉಡುಪಿ, ದ. ಭಾರತ.

ಕುಟುಂಬದ ಯಜಮಾನನ ಜವಾಬ್ದಾರಿ

ಈಗಿನ ನಿಮ್ಮ ಸಂಪಾದನೆಯು ಎಷ್ಟೇ ಉತ್ತಮವಿರಲಿ, ನೀವು ಕುಟುಂಬದ ಯಜಮಾನನಾಗಿದ್ದಲ್ಲಿ, ನಾಳಿನ ಕುಟುಂಬದ ಪೋಷಣೆಯ ಚಿಂತೆಯು ನಿಮಗೆ ಇದ್ದೇ ಇರಬಹುದಷ್ಟೆ. ಆದರೆ ಈಗಿನ ನಿಮ್ಮ ಸಂಪಾದನೆ ಸಮಯದಲ್ಲೇ ಉಳಿತಾಯದ ಪ್ರಶ್ನೆಯೂ ನಿಮ್ಮಲ್ಲಿದ್ದರೆ ನಾಳಿನ ಸಮಸ್ಯೆಗಳೆಲ್ಲವನ್ನೂ ಬಗೆಹರಿಸಲು ಶಕ್ಯವಿದೆ. ನಮ್ಮಲ್ಲಿ ಸೇವಿಂಗ್ಸ್ ಬೇಂಕ್ ಲೆಕ್ಕವನ್ನು ತೆರೆಯಿರಿ. ಅಂತೆಯೇ ನಮ್ಮ ರಜತ ಮಹೋತ್ಸವದ ಕ್ಯಾಷ್ ಸರ್ಟಿಫಿಕೇಟುಗಳಿಗಾಗಿ ವಿಚಾರಿಸಿರಿ.

ಟಿ. ಎಂ. ಎ. ಪೈ.
ಚೆಯರ್‌ಮೆನ್ ಮತ್ತು ಮೆನೇಜಿಂಗ್ ಡ್ಯಾರೆಕ್ಟರ್.

# -ಕಾಂಗ್ರೆಸಿಗರಿಗೆ

## ದೇಶದ ಮುಂದಿನ ಹಾದಿ-



ಮೂಹಗಳನ್ನು ವ್ಯವಸ್ಥೆಗೆ ತರುವುದರಲ್ಲೇ ಆಗಲಿ, ಪೋಲೀಸರ ಕಾರ್ಯಗಳಿಗೆ ಸಾರ್ವಜನಿಕರ ಸಹಕಾರದ ಅಗತ್ಯವಿರುವಷ್ಟು ಬೇರೊಂದು ರಂಗದಲ್ಲಿರಲಾರದು. ಭಾರತೀಯರ ವಿಶ್ವಾಸವಿಡಲು ತಡಮಾಡುವ ಜನರಲ್ಲ. ಆದ್ದರಿಂದ ಅದನ್ನು ಸಂಪಾದಿಸಿಕೊಳ್ಳಲು ನಿಮಗೆ ಹೆಚ್ಚು ಕಾಲವೇನೂ ಬೇಕಾಗದು. ಒಮ್ಮೆ ನೀವದನ್ನು ದೊರಕಿಸಿಕೊಂಡಿರಾದರೆ, ಮತ್ತದನ್ನು ಉಳಿಸಿಕೊಳ್ಳುವಿರೆಂದು ನನಗೆ ಖಾತ್ರಿಯಿದೆ. ತೀರಾ ಕಡಿಮೆ ಸಂಖ್ಯೆಯ ಆಫೀಸರರು ಮತ್ತು ಅಲ್ಪ ಪರಿಮಾಣದ ತಂಟೇತಿಯೊಡನೆ, ಕಳೆದ ಮೂರು ವರುಷಗಳಲ್ಲಿ ಎಂತಹ ಸಂಕಷ್ಟದಾಯೀ ಪರಿಸ್ಥಿತಿ ಮತ್ತೆಂತಹ ಸುದೀರ್ಘ ಯಾತನೆಯನ್ನನುಭವಿಸಿ ಪೋಲೀಸು ಪಡೆಗಳು ಕೆಲಸ ಮಾಡಿದ್ದುವೆಂಬುದು ಸಹ ನನಗೆ ಸರಿಯಾಗಿ ಮನವರಿಕೆಯಾಗಿದೆ. ಅವರ ಈ ಅಗ್ನಿ ಪರೀಕ್ಷೆಯ ಅವಧಿಯು ಸ್ವಾತಂತ್ರ್ಯೋದಯದ ಒಂದು ವರುಷಕ್ಕೆ ಮೊದಲೇ ಆರಂಭವಾಗಿದ್ದಿತು. ಕಾರಣವೆಂದರೆ, ಸ್ವರಾಜ್ಯ ಸ್ಥಾಪನೆಯ ಒಂಭತ್ತು ತಿಂಗಳ ಮೊದಲೇ ಅಸ್ತಿತ್ವಕ್ಕೆ ಬಂದಿದ್ದ ಜನಪ್ರತಿನಿಧಿ ಸರಕಾರದ ದೆಸೆಯಿಂದ ಪೋಲೀಸರ ಪಾಲಿಗೆ ಇಬ್ಬರು ಯಜಮಾನರ ಸೇವೆ ಮಾಡುವ ಅಸಹನೀಯ ಸ್ಥಿತಿಯೊದಗಿದ್ದಿತು. ಒಂದೆಡೆಯಿಂದ ಹೊರಡಲಿದ್ದಿರುವ ಅಧಿಕಾರದೊಡನೆ ವ್ಯವಹರಿಸಬೇಕಾಗಿದ್ದರೆ ಮತ್ತೊಂದು ಕಡೆಯಿಂದ ರಾಷ್ಟ್ರೀಯ ಸರಕಾರದ ಕೈ ಕೆಳಗೆ ಕೆಲಸ ಮಾಡಬೇಕಾಗಿ ಬಂದಿತ್ತು. ಹೊರಡುತ್ತಿರುವ ಸರಕಾರದ ಅವಶೇಷಾಧಿಕಾರಿಗಳು, ಹೊರಡುವಾಗ ಸ್ವಾಭಾವಿಕವಾಗಿ ಎಷ್ಟೋ ಸಂದರ್ಭಗಳಲ್ಲಿ ಸದ್ವರ್ತನೆಗಳನ್ನೇನೂ ತೋರಿಸಲಿಲ್ಲ. 1947ನೇ ಆಗೋಸ್ತು 15ರ ನಂತರ ತಲತಲಾಂತರಗಳಿಂದ ತೋರಿಬಾರದಿದ್ದಂತಹ ಅಸ್ಥಿರತೆ ಮತ್ತು ಅಭದ್ರತಾ ಸ್ಥಿತಿಯು ಭಾರತದ ಕೆಲವು ಭಾಗಗಳಲ್ಲಿ ಹರಡಿಕೊಂಡಿತು. ತೀವ್ರ ಭಯಾತುರಗಳನ್ನು ಎಬ್ಬಿಸುತ್ತಾ ಜಾತೀಯತಾ ಘರ್ಷಣೆ ವ್ಯಾಪಿಸಿದ್ದಿತು. ನಮ್ಮ ಸ್ವಾತಂತ್ರ್ಯದ ಸುಸ್ಥಾಪನೆ ಮತ್ತು ರಾಷ್ಟ್ರದ ಪ್ರಗತಿಗಗತ್ಯವಿರುವ ಶಾಂತಿ ಮತ್ತು ಭದ್ರತೆಯನ್ನು ನಮ್ಮ ಕೈಕೆಳಗಿನ ಎಲ್ಲಾ ಶಕ್ತಿಗಳ ಸಮೇತ ಕಾಪಾಡಿಕೊಳ್ಳುವ ಕರೆಯು ನಮಗೆ ಬಂದುದು ಇಂತಹ ವಾತಾವರಣದಲ್ಲಿಯೇ. ಎಲ್ಲಾ ವಿಭಾಗಗಳ ಪೋಲೀಸ್ ಪಡೆಯು ನಿಷ್ಠೆ ಮತ್ತು ಕಾರ್ಯನಿರ್ವಹಣಾ ರಾಷ್ಟ್ರವನ್ನು ಒಂದೊಂದೇ ಬಿಕ್ಕಟ್ಟಿನಿಂದ ಪಾರು ಮಾಡುತ್ತಾ ಹೋಯಿತು. ಇದಕ್ಕಾಗಿ ಅವರಿಗೆ ಕೇಂದ್ರ ಹಾಗೂ ಪ್ರಾಂತಿಕ ಸರಕಾರಗಳವರು ಗಾಢ ಕೃತಜ್ಞರಾಗಿದ್ದಾರೆ. ಇದೇ ಕಾಲದಲ್ಲಿ ಪರಿಸ್ಥಿತಿಯ ಕುರಿತು ಪ್ರಸನ್ನ ಚಿತ್ತದಿಂದಿದ್ದು, ಈ ಮೊದಲಿನ ಸಂಧಿಗ್ಧಾವಧಿಗಳಲ್ಲಿ ಗೆದ್ದು ಬಂದವರು ನಾವಾದ್ದರಿಂದ ಯಾವ ಪ್ರಯತ್ನವೂ ಇಲ್ಲದೆ ಇನ್ನೊಮ್ಮೆ ಹಾಗೆಯೇ ಮಾಡಬಲ್ಲೆವೆಂಬ ಭಾವನೆಗೆ ಬಲಿಬದ್ದರದು ಪೂರ್ಣ ತಪ್ಪಾಗುವುದು. ಬಿಕ್ಕಟ್ಟಿನ ದಿನಗಳು ಇನ್ನೂ ನಮ್ಮ ಮುಂದಿವೆ. ವಿಘಾತಕ ಚಳವಳಿಗಳು ಅಲ್ಲಲ್ಲಿ ತಲೆಯೆತ್ತುತ್ತಿವೆ. ಹೀಗಿದ್ದೂ ಜನರು ದುರ್ದೈವವಶಾತ್ ಪುನಃ ಆಸಡ್ಡೆಯ ಧೋರಣೆ ವಹಿಸಿ ಮೈಮರೆಯುತಿದ್ದಾರೆ; ತಾವು ಪಾರಾಗಿ ಬಂದ ಅಪಾಯಗಳನ್ನು ಮರೆತು, ಇನ್ನೂ ತಮಗೆ ಬಂದೊದಗಬಹುದಾದ ಅಂತಹ ಅಪಾಯಗಳ ಕಡೆಗೆ ಅಲಕ್ಷ್ಯ ಮಾಡತೊಡಗಿದ್ದಾರೆ. ಹೇಗಿದ್ದರೂ ನೀವು, ಎಚ್ಚರ ತಪ್ಪಬಾರದು; ರಾಷ್ಟ್ರದ ಒಳ ಭದ್ರತೆಗೆ ಅಪಾಯ ತಟ್ಟದಂತೆ ನೋಡುವ ಅವಶ್ಯಕ ಸಿದ್ಧತೆಗಳನ್ನು ಬಿಟ್ಟಿರಬಾರದು. ಆದ್ದರಿಂದಲೇ ಪೋಲೀಸರ ಸಾಮರ್ಥ್ಯ, ದೃಢತೆ ಮತ್ತು ಶಕ್ತಿ ಯೋಗ್ಯತೆಗಳು ಕೊನೆಯ ಪಕ್ಷ ಸಮೀಪ ಭವಿಷ್ಯದಲ್ಲಾದರೂ ಕುಸಿಯುವ ನಿರೀಕ್ಷೆಯಿರಬಾರದೆಂಬ ಸ್ಪಷ್ಟ ಕರೆಯನ್ನು ನಿಮಗೀಯಬೇಕೆಂದು ನಾನಿಚ್ಛಿಸುತ್ತೇನೆ. ಕೈಕೆಳಗಿನ ಜನರಲ್ಲಿ ಆ ಅಮೋಘ ಸ್ಫೂರ್ತಿಯನ್ನು ತುಂಬಿಸುವುದೇ ಉತ್ತಮ ಪೋಲೀಸ್ ಆಫೀಸರನ ಯೋಗ್ಯತಾ ಬಿಲ್ಲೆಯಾಗಿರುವುದರಿಂದ, ನೀವೆಲ್ಲರೂ ಅದನ್ನು ಮಾಡುವಿರೆಂಬ ಮಟ್ಟಿಗೆ ನಾನು ನಿಮ್ಮನ್ನು ಅವಲಂಬಿಸಿರಬಲ್ಲೆ. ನಿಮ್ಮ ಕರ್ತವ್ಯ ಪಾಲನೆಯಲ್ಲಿ ನೀವು ಪ್ರತಿಭಟಿಸಬೇಕಾಗಿ ಬರುವ ಪ್ರತಿಗಾಮೀ ಸಂಸ್ಥೆಗಳ ಕುರಿತು ನಾನೀಗ ಒಂದು ಮಾತು ಹೇಳುತ್ತೇನೆ. ತತ್ವರಹಿತ ಹಾಗೂ ನಿರ್ಣಯಾತ್ಮಕ ಸಣ್ಣ ಪಂಗಡಗಳು, ತಮ್ಮ ಜುಲುಮೆಯ, ಭಯಾನಕ ಕೃತ್ಯಗಳಿಂದ ಜನತಾವರ್ಗದ ಸರ್ವಸಾಮಾನ್ಯ ಕಾನೂನು ವಿಧೇಯತಾ ಗುಣವನ್ನು ಹದಗೆಡಿಸುವುದರಲ್ಲೂ ತಮ್ಮ ಬೇರಾಯದೇ ಹಂಚಿಕೆಗಳಿಂದ ಕಾನೂನು ಕಾಯಿದೆಗಳನ್ನು ಒದೆಯುವುದರಲ್ಲೂ ಹೇಗೆ ಜಯಶೀಲವಾಗಿವೆ, ಎಂಬುದು ಚರಿತ್ರೆಯಲ್ಲಿ ನೋಡಸಿಗುತ್ತದೆ. ಅಂತೆಯೇ ಅಂತಹ ಹಂಚಿಕೆಗಳಿಗೆ ಯಾವುದೇ ವಿಜಯ ದೊರಕಿದ್ದರೂ ಅದಕ್ಕೆ ಜನತೆಯ ದುರ್ಬಲವಾದ ಹಾಗೂ ನೈತಿಕ ಶಕ್ತಿಶೂನ್ಯವಾದ ಮನಸ್ಸು, ನಿಶ್ಶಕ್ತ ಹಾಗೂ ನಿರರ್ಥಕವಾದ ಪ್ರತಿಭಟನೆ ಮೂಲ ಕಾರಣವೆಂಬ ಪಾಠ ಕೂಡಾ ಚರಿತ್ರೆಯಿಂದ ನಮಗೆ ದೊರೆಯುತ್ತಿದೆ. ನಾವು ಹೀಗೆ ತಪ್ಪಿ ಬೀಳದೆ, ಇಂತಹ ಪ್ರತಿಗಾಮೀ ಶಕ್ತಿಗಳನ್ನು ಅತಿ ಹೆಚ್ಚಿನ ದೃಢ ನಿರ್ಧಾರ ಮತ್ತು ಸುಯೋಜಿತ ಹಂಚಿಕೆಗಳಿಂದ ದಮನಿಸುವೆವೆಂದು ಖಂಡಿತ ಮಾಡಿಕೊಳ್ಳಬೇಕು".

ಸರ್ದಾರ್ ಪಟೇಲರು ಕಮ್ಯೂನಿಸ್ಟ್ ಹಂಚಿಕೆಗಳನ್ನು ಪ್ರಸ್ತಾಪಿಸಿ ಈ ಮಟ್ಟಿಗೆ ನೆರೆರಾಷ್ಟ್ರಗಳಲ್ಲಾದ, ಆಗುತ್ತಿರುವ, ಘಟನೆಗಳಿಂದ ಭಾರತವು ಕಲಿಯಬೇಕಾದ ಪಾಠವಿದೆಯೆಂಬುದನ್ನು ಜ್ಞಾಪಕ ಮಾಡಿ ಇಲ್ಲಿ ಪೋಲೀಸ್ ಪಡೆಯ ಕರ್ತವ್ಯವೆಂತಹದೆಂಬುದನ್ನು ಒತ್ತಿ ಹೇಳಿದರು. ಸಾರ್ವಜನಿಕ ಸಹಕಾರ ಗಳಿಸಿಯೇ, ಇಂತಹ ಮೂಲಕುರಾರ ಅಪಾಯಗಳನ್ನು ಗೆಲ್ಲಬೇಕೆಂದರು.

### ಕಾಂಗ್ರೆಸಿಗರ ಕರ್ತವ್ಯ.

ಪಶ್ಚಿಮ ಬಂಗಾಳದ ಕಾಂಗ್ರೆಸಿಗರೊಳಗೆ ಎದ್ದಿರುವ ಭಿನ್ನತೆಗಳನ್ನು ನಿವಾರಿಸುವುದಕ್ಕಾಗಿ ಕಲ್ಕತ್ತೆಗೆ ಹೋಗಿದ್ದ ಸರ್ದಾರ್ ವಲ್ಲಭಾಯಿಗಳು ಇದೇ ತಾ 13ರಲ್ಲಿ ಅಲ್ಲಿಯ ಪ್ರಾಂತಿಕ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಮತ್ತು ಕಾಂಗ್ರೆಸ್ ಶಾಸನ ಸಭಾ ಪಕ್ಷದ ಜತೆ ಸಭೆಯಲ್ಲಿ ಮಾತಾಡುತ್ತಾ ಹೇಳಿದರು:—

"ಬಂಗಾಳ ಪ್ರಾಂತ್ಯದ ಗೊಂದಲಗಳ ವರದಿಗಳು ಕೆಲ ಕಾಲದಿಂದ ನಮಗೆ ಬರುತ್ತಲೇ ಇವೆ. ಅವುಗಳಲ್ಲಿ ಕೆಲವು ಅತಿಶಯೋಕ್ತಿಯುವಿರಬಹುದು. ಹೇಗಿದ್ದರೂ ಅದು ಭಾರತದಲ್ಲೂ ಹೊರವಲಯದಲ್ಲೂ ಬಂಗಾಳಕ್ಕೆ ದುಷ್ಕೀರ್ತಿಯನ್ನು ತಂದಿದೆ. ಆದ್ದರಿಂದ ಇಲ್ಲಿಯ ಕಾಂಗ್ರೆಸಿಗರು ಒಟ್ಟುಗೂಡಬೇಕಾದುದು ಅತ್ಯಗತ್ಯ. ಸ್ವಾತಂತ್ರ್ಯ ಹೋರಾಟಗಳಲ್ಲೂ ದೇಶ ವಿಭಜನೆಯ ಪರಿಣಾಮವಾಗಿಯೂ ಬಂಗಾಳವು ಅತೀವ ಕಷ್ಟನಷ್ಟಗಳಿಗೀಡಾಗಿದ್ದಿತು. ಕಮ್ಯೂನಿಸ್ಟರ ಸಧ್ಯದ ಆಂದೋಲನಗಳು ರಾಷ್ಟ್ರಕ್ಕೊಂದು ಅಪಾಯವಾಗಿ ಪರಿಣಮಿಸಿವೆ. ಇಂತಹ ಸಂದರ್ಭದಲ್ಲಿ ಕಾಂಗ್ರೆಸಿಗರು ಸರಕಾರದೊಡನೆ ಸಹಕರಿಸುವ ಬದಲಿಗೆ, ಅದನ್ನು ಟೀಕಿಸುತ್ತಲೇ ಹೋಗುವುದಾದರೆ ಈ ಅಪಾಯವನ್ನು ಇದಿರಿಸುವುದಾದರೂ ಹೇಗೆ? ಸರಕಾರೀ ಅಧಿಕಾರಿಗಳ ಮತ್ತು ಪೋಲೀಸರ ವರ್ತನೆಗಳನ್ನು ಸದಾ ಕಾಲ ಟೀಕಿಸುತ್ತಾ ಹೋಗುವುದರಿಂದ ಅವರ ನೈತಿಕತೆಗೇನೇ ಧಕ್ಕೆ ಬೀಳುವುದು. ಗತಕಾಲದಲ್ಲಿ ಕಾಂಗ್ರೆಸ್ ಸ್ವಯಂಸೇವಕರು ಹೇಗಿದ್ದರೋ ಹಾಗಿದ್ದಾರೆ ಇವರು. ಜನತೆಯ, ಅದರಲ್ಲೂ ವಿಶೇಷವಾಗಿ ಕಾಂಗ್ರೆಸಿಗರ ಸಹಕಾರ ದೊರೆತರೆ, ಅವರು ಇಂದಿನ ಸಮಸ್ಯೆಗಳಿಂದ ರಾಷ್ಟ್ರವನ್ನು ಪಾರುಗೊಳಿಸುವ ಸಹಾಯಕರಾಗುವರು. ಕಾಂಗ್ರೆಸ್ ಪಕ್ಷೀಯರು ತಮ್ಮೊಳಗಿನ ಭಿನ್ನಭೇದಗಳನ್ನು ಹೊರಗಿನ ಯಾವ ಸಹಾಯವೂ ಇಲ್ಲದೆ, ತಾವಾಗಿ ತೀರ್ಮಾನಿಸಿಕೊಳ್ಳುವ ವಿಧಾನಗಳನ್ನು ಕಂಡುಹಿಡಿಯಬೇಕು. ಆ ಮೂಲಕ ಕಾಂಗ್ರೆಸ್ ಸಂಸ್ಥೆಯನ್ನು ಬಲಗೊಳಿಸಿ, ತದನುಸಾರವಾಗಿ ಕಾಂಗ್ರೆಸ್ ಮಂತ್ರಿ ಮಂಡಲಗಳ ಕೈ ಗಟ್ಟಿ ಮಾಡಿ, ಇಂದು ರಾಷ್ಟ್ರವನ್ನಿದಿರಿಸಿರುವ ವಿವಿಧ ಸಮಸ್ಯೆಗಳನ್ನು ಬಿಡಿಸಿಕೊಳ್ಳಲಾಗುವಂತೆ ಮಾಡಬೇಕು. ಪ್ರತಿಯೊಬ್ಬ ಕಾಂಗ್ರೆಸಿಗನೂ ತನ್ನ ಹೃದಯಾಂತರಾಳದಲ್ಲಿ ಒಕ್ಕಟ್ಟನ್ನು ಬಯಸುತ್ತಾನಾದರೂ ಆ ಒಕ್ಕಟ್ಟು ಸಾಧನೆಯ ಹಾದಿಯಲ್ಲಿ ಅಡ್ಡವಾಗಿರುವುದಾವುದು ಎಂಬುದನ್ನು ತಿಳಿಯುವುದರಲ್ಲಿ ಮಾತ್ರ ತಪ್ಪಿ ಬೀಳುತಿದ್ದಾನೆ. ಆ ತಳಿತೆಯಲ್ಲೀಗ ದುರ್ವರ್ತನೆಗಳು ಮತ್ತು ಸಂಬಂಧಿಕ ಪಕ್ಷಪಾತತೆಗಳಿವೆ ಎಂದು ನಾನೇ ಹಲವು ಬಾರಿ ಹೇಳಿದ್ದೇನೆ. ಜನತಾ ಸೇವಕರಾಗಿರುವ ಕಾಂಗ್ರೆಸಿಗರು ಈ ಪಾಪಗಳನ್ನು ಉಜ್ಜಿಕೊಳ್ಳಲು ಏನು ಮಾಡಿದ್ದಾರೆ, ಎಂಬುದೇ ಕಾಂಗ್ರೆಸಿಗರಿಗೆ ನನ್ನ ಸವಾಲು. ಅದನ್ನು ಸರಿಗೊಳಿಸಲಿರುವ ದಾರಿಯೊಂದರೆ ಸರಕಾರವನ್ನು ವಿಮರ್ಶಿಸುವುದೊಂದೇ ಅಲ್ಲ. ಸ್ವಪಕ್ಷ ಪಾತಕೆಯ ದುರ್ಬಲತೆಯನ್ನು ನಿವಾರಿಸುವುದಕ್ಕಾಗಿ ಕಾಂಗ್ರೆಸಿಗರು ಅವಿಶ್ರಾಂತವಾಗಿ ಪ್ರಯತ್ನ ಮಾಡಬೇಕಾದುದೇ ಈಗಿನ ಕೆಲಸ. ಆಹಾರ ಧಾನ್ಯಗಳ ಧಾರಣೆ ಹೆಚ್ಚಬೇಕೆಂಬ ಕೆಲವು ಕಾಂಗ್ರೆಸಿಗರ ಧೋರಣೆಯು ಖಂಡನೀಯವಿದೆ. ಆಹಾರ ಧಾನ್ಯಗಳ ಧಾರಣೆಯೇರಿದರೆ, ತದನುಸಾರವಾಗಿ ಇತರ ಸಾಮಾಗ್ರಿಗಳ ಬೆಲೆಯೂ ಏರಿ ಇನ್ನಷ್ಟು ಆರ್ಥಿಕ ಅವನತಿಯುಂಟಾಗುವುದು."

ಕಲ್ಕತ್ತೆಯಲ್ಲಿ ತಾ. 15ರಲ್ಲೇ ಬಂಗಾಳಾ ನೇಶನಲ್ ಚೇಂಬರ್ ಓಫ್ ಕಾಮರ್ಸ್—ಬಂಗಾಳಾ ಚೇಂಬರ್ ಓಫ್ ಕಾಮರ್ಸ್—ಇಂಡಿಯನ್ ಚೇಂಬರ್ ಓಫ್ ಕಾಮರ್ಸ್—ಈ ಮೂರು ಸಂಸ್ಥೆಗಳ ಜತೆ ಮಾನಪತ್ರ ಸ್ವೀಕರಿಸುತ್ತಾ ಸದಾತರಿಂದಿದ್ದರು: "ಸಮಾಜವು ಚಲ್ಲಾಪಿಲ್ಲಿಯಾಗಬೇಕೆಂದಿದ್ದರೆ, ಅಥವಾ ಸರಕಾರವು ಚಲ್ಲಾಪಿಲ್ಲಿಯಾಗಬೇಕೆ

(೮ನೇ ಪುಟ ನೋಡಿರಿ)

THE BOMBAY LIFE ASSURANCE COMPANY, LTD.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೇಂಡ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ಪ್ರಗತಿಪರವಾದ
ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು
ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

(೩ನೇ ಪುಟದಿಂದ)

ವ್ಯಕ್ತಿ, ಈಗ ಪ್ರವಾಸ್ತ್ರ ಕಲ್ಕತ್ತೆಯ ಉದ್ದಿಮೆ ವಹಿವಾಟುಗಳನ್ನು ವಿಸರ್ಜಿಸಿಕೊಂಡು ನೀವು ಬೇರೆ ಕಡೆಗೆ ಹೋಗಬಹುದು. ಕಲ್ಕತ್ತೆಗೀಗ ಅಪಾಯ ನೆಲೆಯಾಗಿದೆ ವಿಶ್ವಾಸ ನಿರ್ಮಾಣಗೊಂಡ ವಿನಹ ಇಲ್ಲಿಯ ವ್ಯಾಪಾರ ವಹಿವಾಟುಗಳು ಅಭಿವೃದ್ಧಿ ಹೊಂದಲಾರವು. ರಾಷ್ಟ್ರವನ್ನು ಸ್ಥಾಪಿಸಿಕೊಂಡ ಮೇಲೆ, ಆರ್ಥಿಕ ಭದ್ರತೆಯುಂಟಾಗುವಂತೆ ನೋಡುವುದೇ ಪ್ರಥಮ ಕರ್ತವ್ಯವೆಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ನಮ್ಮೆರಡು ರಾಷ್ಟ್ರಗಳೊಳಗಿನ ಸಂಬಂಧದ ಮಟ್ಟಿಗೆ ಪಾಕಿಸ್ತಾನದೊಡನೆ ನಮಗಿರುವ ಪ್ರಚಲಿತ ತೊಂದರೆಗಳು ಕಾಲಕ್ರಮೇಣ ಮಾಯವಾಗುವಂತಹವಿವೆ. ಸರಿಸಮಾನ ಹಿತಸಂಬಂಧಗಳು ನಮ್ಮನ್ನು ಒಂದುಗೂಡಿಸುವಂತಹವಿವೆ"

ಇದೇ ತಾ. 15ರಲ್ಲಿ ಕಲ್ಕತ್ತದ ಬ್ರಿಗೇಡ್ ಪರೇಡ್ ಮೈದಾನಿನಲ್ಲಿ ಸೇರಿದ್ದ ಐದು ಲಕ್ಷ ಜನರ ಪೂರ್ಣ ಪ್ರಶಾಂತ ಸಭೆಯಲ್ಲಿ ಭಾಷಣ ಮಾಡುತ್ತಾ ಸರ್ದಾರ್ ಪಟೇಲರು ಜನತೆಯ ಮುಂದಿರುವ ಹಾದಿಯಾವುದೆಂಬುದನ್ನು ನಿಸ್ಸಂಕೋಚವಾಗಿ ಸುಸ್ಪಷ್ಟವಾಗಿ ವಿವರಿಸಿದ್ದರು. "ಪ್ರಚಲಿತ ಭಾರತ ಸರಕಾರವನ್ನು ಬದಲಾಯಿಸಬೇಕೆಂದು ಜನರ ಇಚ್ಛೆಯಾಗಿದ್ದರೆ, ಒಂದೋ ಚುನಾವಣೆಯ ಮೂಲಕ ಅಥವಾ ಕ್ರಾಂತಿಯ ಮೂಲಕವೇ ಅದನ್ನು ಮಾಡಬಹುದು ಆದರೆ ಪೋಲೀಸರ ಮೇಲೆ ಬೋಂಬೊಗೆಯುವಂತಹ ಹಿಂಸೆಯು ಕ್ರಾಂತಿಯಾಗಿರದೆ ಕೇವಲ ಹುಚ್ಚಾಟವಾಗಿದೆ" ಎಂದರು. "ನಿಯಂತ್ರಣಗಳ ಮೂಲಕ ಕಳ್ಳಸಂತೆ ವಹಿವಾಟುಗಳನ್ನು ತಡೆಗಟ್ಟಬೇಕಾಗಿದೆ ಹೊರತು ಉದ್ದಿಮೆಗಳ ರಾಷ್ಟ್ರೀಕರಣ ಕೈಕೊಳ್ಳಲು ಸರಕಾರದೊಡನೀಗ ಸಾಕಷ್ಟು ಧನ, ಜನಬಲ ಇಲ್ಲವೆಂದರು. ಮುಂದಿನ ಐದು ವರುಷಾವಧಿಯು ದೇಶದ ಪಾಲಿಗೆ ಕಠಿಣ ಕಾಲವೆನ್ನುತ್ತಾ, ಕಮ್ಯೂನಿಸ್ಟರಂತಹ ಕೆಲವೇ ಮಂದಿ ಕಟುಕರ ವಿಧ್ವಂಸಕ ಚಟುವಟಿಕೆಗಳನ್ನು ನಿರ್ಮೂಲಿಸಲು ಜನತೆ ಸಂಘಟನೆಯಿಂದ ತಯಾರಾಗಬೇಕೆಂದು ಕೇಳಿಕೊಂಡು, ಕ್ರಾಂತಿ ಮೂಲಕ ಪಡೆಕೊಂಡ ಸ್ವಾತಂತ್ರ್ಯದಲ್ಲಿ ಸರ್ವರೂ ಬಂಧುಭಾವದಿಂದಿರಬೇಕೆಂದು ವಿಜ್ಞಾಪಿಸಿಕೊಂಡರು.

ಈ ರೀತಿ ಸರ್ದಾರ್ ಪಟೇಲರು ರಾಷ್ಟ್ರದೊಳಗಿನ ಕಸಕಲ್ಮಷಗಳನ್ನು ಝಾಡಿಸಿ ತೆಗೆಯುವುದರಲ್ಲೂ, ಪಂಡಿತ ನೆಹರುಗಳು ಹೊರ ಸಂಬಂಧಗಳನ್ನು ಮತ್ತಷ್ಟು ಗಟ್ಟಿ ಮಾಡುವುದರಲ್ಲೂ, ಅವಿಶ್ರಾಂತವಾಗಿ ಶ್ರಮಿಸುತ್ತಿದ್ದಾರೆ ತಾ. 15ರಲ್ಲಿ ಕೊಲಂಬೋದಲ್ಲಿ ತನಗಾಗಿ ಏರ್ಪಾಡಾಗಿದ್ದ ನಾಲ್ಕು ಲಕ್ಷಕ್ಕೂ ಮಿಕ್ಕಿದ ಸಂದಣಿಯಿದ್ದ ಸಾರ್ವಜನಿಕ ಸತ್ಕಾರ ಸಭೆಯಲ್ಲಿ ಭಾಷಣವೀಯುತ್ತಾ ಪಂಡಿತ ನೆಹರುಗಳು ಭಾರತ-ಸಿಂಹಳಗಳು ಪರಸ್ಪರ ಸಹಕರಿಸಿಕೊಳ್ಳಬೇಕಾದ ಅವಶ್ಯಕತೆಯನ್ನು ಮನಗಾಣಿಸಿದ್ದಾರೆ. ಜನತಾ ರಾಜ್ಯರಥವನ್ನು ನೆಹರು ವಲ್ಲಭಾಯಿ ಶ್ವೇತಾಶ್ವಜತೆಯು ಎಳೆದು ತರುತ್ತಿದೆ, ಎಂಬಂತಿದೆ ಈ ದೃಶ್ಯ!

# ಫೆಬ್ರವರಿ 5ರಿಂದ ಜೈಪ್ರಕಾಶ್ ಉಪವಾಸ ಬೀಳುವರೆ?

## ಭಾರತ ಸರಕಾರದ ಮೇಲೆ ಮಾತು ಮುರಿದುಕೊಂಡ ಆರೋಪ!

ಸಮತಾವಾದಿ ನಾಯಕ ಶ್ರೀ ಜೈಪ್ರಕಾಶ ನಾರಾಯಣರೀಗ ಹೊಸ ರೀತಿಯಿಂದ ಜನತೆಯ ಲಕ್ಷ್ಯದೊಂದಂಶವನ್ನು ತನ್ನೆಡೆಗೆಳೆದಿರುವರು. ಅಂಚೇ ಜವಾನರ ಮುಷ್ಕರಾವಧಿಯ ಸಂಬಳದ ಸಂಬಂಧವಾಗಿ ಭಾರತ ಸರಕಾರದ ಸುದ್ದಿ ರವಾನೆ ಖಾತೆಯ ಮಂತ್ರಿಗಳು ಕೊಟ್ಟಿದ್ದ ಮಾತು ಭಾರತ ಸರಕಾರದಿಂದ ಕಾರ್ಯತಃ ಜಾರಿಯಾಗುವಂತೆ ಮಾಡುವುದಕ್ಕಾಗಿ ಬರುವ ಫೆಬ್ರವರಿ 5ನೇ ತಾರೀಕಿನಿಂದ ತಾನು ಆಮರಣಾಂತ ಉಪವಾಸ ಹಿಡಿಯುವೆನೆಂದು ಜೈಪ್ರಕಾಶರು ಜಾಹೀರು ಮಾಡಿದ್ದಾರೆ.

### ನೆಹರುಗಳಿಗೆ ಪತ್ರ

ತನ್ನೀ ಉಪವಾಸದ ನಿರ್ಧಾರದ ಕಾರಣಗಳನ್ನು ನಮೂದಿಸಿ ಜೈಪ್ರಕಾಶ್ ನಾರಾಯಣರು ಪ್ರಧಾನಿ ನೆಹರುಗಳಿಗೆ ಜನವರಿ ತಾ. 6ರಲ್ಲೊಂದು ಪತ್ರ ಬರೆದಿದ್ದರು. ಆ ಪತ್ರವು ಪರಿಸ್ಥಿತಿಯ ಪರಿಚಯ ಮಾಡಿಕೊಡುವಂತಹದಿದೆ, ತಾನು ಅಧ್ಯಕ್ಷನಾಗಿರುವ 'ಅಖಿಲ ಭಾರತ ಅಂಚೆ ಜವಾನರ ಸಂಘ"ವು ಮುಷ್ಕರವು ತಸಂಗ್ರಹಕ್ಕೆ ತೊಡಗಿದುದು.-ಆ ಸಂಬಂಧವಾಗಿ ಸುದ್ದಿ ರವಾನೆ ಖಾತೆಯ ಮಂತ್ರಿ ಮತ್ತು ತನ್ನೊಳಗೆ ನಡೆದಿದ್ದ ಸಂಧಾನ ಮಾತುಕತೆ-ಮುಷ್ಕರ ಮತ ಸಂಗ್ರಹಾನಂತರ ತಾನು ಮುಷ್ಕರವನ್ನು ಅನಿಶ್ಚಿತಾವಧಿಗೂ ಹಿಂದೆ ಹಾಕಿದುದು, ಇತ್ಯಾದಿ ಹಿನ್ನೆಲೆ ವಿಷಯಗಳನ್ನು ಜೈಪ್ರಕಾಶರು ತನ್ನ ಪತ್ರದಲ್ಲಿ ವಿವರಿಸಿದ್ದಾರೆ "1946ರ ಮುಷ್ಕರದ ಅವಧಿಯ ಸಂಬಳವನ್ನು ಸಲ್ಲಿಸಲು ಸಾಧ್ಯವಿರುವುದನ್ನು ತಾನು ಮೂರು ತಿಂಗಳಲ್ಲೇ ಮಾಡುತ್ತೇನೆಂದು ಸುದ್ದಿ ಚಲಾವಣೆ ಖಾತೆಯ ಮಂತ್ರಿ ಮಿ ರಫಿ ಅಹಮ್ಮದ್ ಕಿಡ್ವಾಯಿಯವರು ನನಗಾ ಮಾತುಕತೆಯ ವೇಳೆ ಆಶ್ವಾಸನೆ ಕೊಟ್ಟಿದ್ದರು ತಾನದನ್ನು ಮುಷ್ಕರಾವಧಿಯ ಸಂಬಳ ರೂಪದಿಂದ ಸಲಾಯಿಸದ ರಜೆಯ ಅಥವಾ ಸ್ಪೆಶ್ಯಲ್ ರಜೆಯ ಸಂಬಳವಾಗಿ ಕೊಡಲಾಗುವ ವಿಧಾನವನ್ನಂಗೀಕರಿಸುತ್ತೇನೆಂದೂ ಅವರು ಹೇಳಿದ್ದರು. ಕಳೆದ ವರುಷದ ಜನವರಿಯಲ್ಲಿ, ತುಟ್ಟಿಭತ್ತೆಯನ್ನು ರೂ. 10ರಷ್ಟು ಏರಿಸುವುದಾಗಿ ಭಾರತ ಸರಕಾರವು ಪ್ರಕಟಿಸಿತು ಅಂಚೆ ಮತ್ತು ತಂತಿ ಖಾತೆಗಳ ಜವಾನರು ಮತ್ತು ಕೆಳ ನೌಕರರ ಕಲವೊಂದು ವರ್ಗದವರಿಗೆ ಆ ಮೊದಲೇ ಪ್ರತ್ಯೇಕ ಮಧ್ಯಾವಧಿ ತುಟ್ಟಿಭತ್ತೆಯನ್ನು ಕೊಡಲಾಗುತಿತ್ತು ಇಂಥವರ ಈ ಮಧ್ಯಾವಧಿ ಭತ್ತೆಯ ಅಂಶವನ್ನು ಸರಕಾರವು ಜನವರಿಯಲ್ಲಿ ಮಂಜೂರು ಮಾಡಿದ 10 ರೂಪಾಯಿಯ ತುಟ್ಟಿಭತ್ತೆ ಕೊಡವಾಗ ವಜಾ ತೆಗೆದೇ ಕೊಟ್ಟಿತ್ತು. ನನ್ನ ಸಂಘವು ಈ ಕಡಿತದ ಕುರಿತ ನಿಷೇಧ ಸೂಚಿಸಿದಾಗ ಮಿ. ರಫಿ ಅಹಮ್ಮದ್ ಕಿಡ್ವಾಯಿಯವರು ಆ ಕಡಿತ ಮಾಡದಿಲ್ಲವೆಂಬ ಆಶ್ವಾಸನೆ ಕೊಟ್ಟರು. ಈ ಆಶ್ವಾಸನೆಗಳು ದೊರೆತು ಇಂದಿಗೆ ಹತ್ತು ತಿಂಗಳುಗಳು ಕಳೆದಿವೆ ಆದರೂ ಅವುಗಳನ್ನೂ ಜಾರಿಗೆ ಒಯ್ದಿಲ್ಲ. ಕಳೆದ ಹತ್ತು ತಿಂಗಳುಗಳಲ್ಲಿ ಈ ವಾಗ್ದಾನಗಳನ್ನು ಮಿ. ರಫಿ ಅಹಮ್ಮದ್ ಕಿಡ್ವಾಯಿಯವರು ಎಂದಿಗೂ ಅಲ್ಲಗಳೆದಿಲ್ಲ; ಹಾಗೆ ಮಾಡುವುದು ಯೋಗ್ಯ ಮನುಷ್ಯನಾಗಿರುವ ಅವರಿಂದಾಗದ ಮಾತು ಕೂಡಾ. ಆದರೆ ಅರ್ಥ ಸಚಿವರು ಮತ್ತು ಮಂತ್ರಿಮಂಡಲವು ಅವರನ್ನು ಹಿಂದೆಹಾಕಿಬಿಟ್ಟಂತೆ ಕಾಣುತ್ತದೆ. ಇದರಿಂದಾಗಿ ಕೆಲಸಗಾರರು ಮತ್ತವರ ಪ್ರತಿನಿಧಿಗಳು ಅವಸ್ಥೆಯೊಳಗೆ ಸಿಲುಕಿದ್ದಾರೆ ತನ್ನ ಆಶ್ವಾಸನೆಗಳಿಗೆ ಮತ್ತು ಪ್ರತಿಜ್ಞೆಗಳಿಗೆ ಬೆಲೆಯಿಲ್ಲವೆಂದಾಗುವುದರಿಂದ ಸರಕಾರದ ಸ್ಥಾನವಾದರೂ ಅಸಹನೀಯವಾಗಲಾರದೆಂದು ನನಗನ್ನಿಸುತ್ತಿದೆ. ಕಳೆದ ಬಾರಿ ನಾನು ಮಿ ಕಿಡ್ವಾಯಿಯವರೊಂದಿಗೆ ನಿಮ್ಮ ಭೇಟಿ ಮಾಡಿದ್ದೆ. ಸರಕಾರದ ಅರ್ಥಿಕ ಸಂಕಷ್ಟಗಳೆಂತಹವಿದ್ದರೂ, ಅದರ ಮಂತ್ರಿಗಳಲ್ಲೊಬ್ಬರು ಕೆಲಸಗಾರರಿಗೆ ಕೊಟ್ಟ ವಾಗ್ದಾನಗಳನ್ನು ಪಾಲಿಸಲು, ಮರ್ಯಾದೆಯ ದೃಷ್ಟಿಯಿಂದ ಸರಕಾರವು ಬದ್ಧವಿದೆ ಎಂಬುದನ್ನು ನಿಮ್ಮ ಮನಸ್ಸಿಗೆ ನಾಟಿಸುವ ಪ್ರಯತ್ನ ನಾನಲ್ಲಿ ಮಾಡಿದ್ದೆ. ಸಚಿವ ಮಂಡಲಿಯ ಮಂತ್ರಿಯೊಬ್ಬನು ಸ್ಪಷ್ಟ ವಾಗ್ದಾನ ಮಾಡಿದ ಮೇಲೆ, ಉತ್ತರದಾಯಿತ್ವ ಪ್ರತಿಯಾಗಿ ಕೆಲಸಗಾರರು ಯಥಾಯೋಗ್ಯ ವರ್ತನೆ ವಹಿಸಿಯೂ ಆದ ಮೇಲೆ, ಸರಕಾರ ಅಥವಾ ಯಾವುದೇ ಮಂತ್ರಿಮಂಡಲವು ಸಂಬಂಧಪಟ್ಟ ಸಂಗತಿಯ ತಪ್ಪುಸರಿಗಳ ಕುರಿತು ಮತ್ತೆ ವಿಮರ್ಶಿಸುವುದಕ್ಕರ್ಥವಿಲ್ಲ. ತಮ್ಮೊಳಗೆ ಅಂತರಂಗದಲ್ಲಿ ಮಂತ್ರಿಮಂಡಲಿ ವಿಚಾರಿಸಿ ಸಂಬಂಧಪಟ್ಟ ಮಂತ್ರಿಗೆ ತನ್ನ ಅಭಿಮತ ಹೇಳಬಹುದು; ಆದರೆ ಕೊಟ್ಟುಬಿಟ್ಟ ವಾಗ್ದಾನವನ್ನಂತೂ ಪಾಲಿಸಲೇಬೇಕು. ತನ್ನ ಮಾತನ್ನು ತಾನೇ ಪಾಲಿಸಿಕೊಳ್ಳಲಾಗದ ಸ್ಥಿತಿಯಲ್ಲಿದ್ದರೂ ಮಿ ಕಿಡ್ವಾಯಿಯವರು ಮಂತ್ರಿಮಂಡಲದಲ್ಲಿ ಇನ್ನೂ ಉಳಿದುಕೊಂಡಿರುವುದಾದರೂ ಹೇಗೋ ನನಗರಿಯದು. ನಮ್ಮ ಸಂಧಾನ ಮಾತುಕತೆಗಳಲ್ಲಿ ಬಂದಿದ್ದ ಇತರ ಬೇಡಿಕೆಗಳ ಕುರಿತೂ ಸಮಾಧಾನಕರ ತೀರ್ಮಾನವಾಗಿಲ್ಲ. ಅಂಚೇ ಮತ್ತು ತಂತಿ ಖಾತೆಯ ನೌಕರರ ಸಂಬಂಧವಾಗಿ ನೇಮಕಗೊಂಡಿದ್ದ 'ತಜ್ಞರ ಸಮಿತಿ'ಯ ಶಿಫಾರಸುಗಳ ಕುರಿತು ವಿಚಾರಿಸಲು ನಮ್ಮ ಸಂಘದ ಪ್ರತಿನಿಧಿಯು ಮಾನ್ಯ ಮಂತ್ರಿಗಳನ್ನೂ ಅವರ ಸಹೋದ್ಯೋಗಿಗಳನ್ನೂ ಭೇಟಿಯಾದಾಗ "ಹೆಚ್ಚಿಗೆ ಒಂದೇ ಒಂದು

ಡಿ ಎನ್. ಪಂಡಿತರ ಶ್ರೇಷ್ಠವಾದ

ಪಾಂಡಿಸ್ ನೀಮ್

ಟೂಥ್ ಪೌಡರ್ ಉಪಯೋಗಿಸಿರಿ

ಸ್ವಾಕಿಸ್ಟರು: ನಾಯಕ್ಸ್ ಬೀಡಿ ವರ್ಕ್ಸ್, ಸಂತೆಕಟ್ಟೆ, ಉಡುಪಿ.

ಜೀವವಿಮೆಗಾಗಿ

ವಿಚಾರಿಸಿರಿ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ

ಲೈಫ್ ಇನ್ಶೂರೆನ್ಸ್ ಕಂ., ಲಿಮಿಟೆಡ್.

(ಸ್ಥಾಪನೆ 1934)

ಚೆಯರ್‌ಮೆನ್. ಶ್ರೀ. ಎಮ್. ಸಿಟಿ ಎಮ್. ಚಿದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೋಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ

ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,
ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ:
"ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್" ಪೋಸ್ಟು ಬಾಕ್ಸ್ ನಂಬ್ರ 142
ಮದ್ರಾಸು.

...ವ್ಯೆ ಖರ್ಚಿರುವ ಯಾವ ಶಿಫಾರಸನ್ನೂ ಜಾರಿಗೆ ತರಲು ಸಾಧ್ಯವಿಲ್ಲವಾದ್ದರಿಂದ ಈ ವಿಷಯವನ್ನು ನಾವು ಚರ್ಚಿಸಲಿಚ್ಛಿಸುವುದಿಲ್ಲ" ಎಂಬ ಮಾತು ಬಂತು. ಇದು ನಿಜವಾಗಿಯೂ ಕೆಲಸಗಾರರಿಗೆ ಕಠೋರ ತಾಡನ ಕೊಟ್ಟಂತಾಯಿತು. ಔದ್ಯೋಗಿಕ ವಿವಾದಗಳ ತೀರ್ಮಾನಕ್ಕಾಗಿ ಉಪವಾಸ ವಿಧಾನವನ್ನು ಅಂಗೀಕರಿಸಲು ನನಗಿಷ್ಟವಿಲ್ಲ. ಆದರೆ ನಾವಿಲ್ಲಿ ಎತ್ತಿಕೊಂಡಿರುವುದು ಒಂದು ನೈತಿಕ ವಾದವನ್ನೇ ಹೊರತು ಉದ್ಯಮೀ ವಿವಾದವನ್ನಲ್ಲ. ಓರ್ವ ಮಂಡಲೀ ಮಂತ್ರಿಯೇ ನನಗೆ ಮಾತುಕೊಟ್ಟಿದ್ದರು; ಆ ಮಾತಿನಂತೆ ಕೆಲಸವಾಗಿಲ್ಲ. ಯಾವ ಸರಕಾರವಾದರೂ ಹೀಗೆ ವರ್ತಿಸುವುದು ತಪ್ಪು. ಅದರಲ್ಲೂ, ಗತ ವರುಷಗಳಲ್ಲಿ ಸತ್ಯದ ಮೇಲೆ ವಿಶೇಷ ಭಾರ ಹಾಕಿದ್ದ ಕಾಂಗ್ರೆಸ್ ಸರಕಾರವಂತೂ ಹೀಗೆ ವರ್ತಿಸುವುದು ಇನ್ನಷ್ಟು ದೊಡ್ಡ ಅಪರಾಧ. ಆದ್ದರಿಂದ ನಿಮ್ಮ ಮಂತ್ರಿಮಂಡಲದ ಓರ್ವ ಸದಸ್ಯನಿಂದ ಬಂದಿದ್ದ ವಾಗ್ದಾನಗಳನ್ನು ನಿಮ್ಮ ಸರಕಾರವು ಪಾಲಿಸಿ ಕೊಡಲೆಂದು ನ್ಯಾವ ವರೆಗೂ ಉಪವಾಸ ಮಾಡುವುದೊಂದೇ ಈಗ ನನ್ನ ಪಾಲಿಗೆ ಬಂದಿದೆ ನನ್ನ ಮುಂದಿರುವ ಇನ್ನೊಂದು ವಿಧಾನವೆಂದರೆ ಸಾಮೂಹಿಕ ಮುಷ್ಕರ. ಆದರೆ ಅದರಿಂದ ಸಾರ್ವಜನಿಕರಿಗೆ ಅತಿ ಹೆಚ್ಚಿನ ಅನಾನುಕೂಲತೆಯು ಅಥವಾ ಮುಷ್ಕರ ಸಂಬಂಧದ ಕಷ್ಟನಷ್ಟಗಳು ಒದಗಬಹುದಾದ್ದರಿಂದ ನಾನದಕ್ಕೆ ವಿರೋಧವಿದ್ದೇನೆ."

## ಇದು ನಿಜವೇ?

ತನ್ನ ಪ್ರಾಣವನ್ನೇ ಪಣವಾಗಿ ಇಟ್ಟು ...ಪ್ರಕಾಶರು ಮುಂದೊಡ್ಡಿರುವ ನಿವಾ...ತಿ ವೇತನ್ನು ಸಂಬಳದ ಪ್ರಶ್ನೆಗಿಂತ ಹೆ...ಗಿ ಸದ್ವರ್ತನೆಯ ಸವಾಲನ್ನು ಎಬ್ಬಿ... ಪಂಡಿತ ನೆಹರುಗಳಿಗೆ ಅವರು ಬರೆ...ಪತ್ರದ ಕುರಿತು ಸರಕಾರದ ಉತ್ತರವೆಂಬುದು ಇದುವರೆಗೆ ತಿಳಿದು ಬಂದಿ...ದರೂ ಸುದ್ದಿ ಚಲಾವಣಾ ಖಾತೆ ಮಂತ್ರಿ ಮಿ. ರಾಫಿ ಅಹಮ್ಮದ್ ಕಿ...ಯಿಗಳು ಇದೇ ತಾ. 12ರಲ್ಲಿ ಬೊಂಬಾಯಿಯಲ್ಲಿ ಪತ್ರಿಕೋದ್ಯಮಿಯೊಬ್ಬನಿಂ 1936ರಲ್ಲಾದ 25 ದಿನಗಳ ಮುಷ್ಕರದ ಸಂಬಳವನ್ನು ಕೊಡುವೆನಾಗಿ ...ರವು ಸೂಚಿಸಿದ್ದಿತೆ?'' ಎಂದು ...ಲ್ಪಟ್ಟಾಗ "ಮುಷ್ಕರಾವಧಿಯ ...ಳವನ್ನು ಕೊಡುವಂತಿಲ್ಲವೆಂದು ಸರ...ವು ಸ್ಪಷ್ಟಪಡಿಸಿದ್ದಿತು" ಎಂದು ...ಕ್ತವಾಗಿ ಹೇಳಿದ್ದಾರೆ. "ಈ ಸಂಬಂ...ಗಿ ಶ್ರೀ ಜೈಪ್ರಕಾಶ್ ನಾರಾಯಣರಿ...ನಾವ ವಾಗ್ದಾನವನ್ನೂ ಕೊಟ್ಟಿಲ್ಲ" ...ದ್ದಾರೆ. 'ಮುಷ್ಕರಾವಧಿಯ ಸಂಬಳ' ಎಂಬ ಹೆಸರು ಹಾಕದೆ 'ರಜೆಯ ಸಂಬಳ'ವೆಂಬ ಹೆಸರಿನಿಂದ ರಶೀದಿ ಪಡಕೊಂಡು ಅದೇ ಹಣವನ್ನು ಸಲ್ಲಿಸುವೆನೆಂದು ಮಿ. ಕಿಡ್ವಾಯಿಗಳೆಂದಿದ್ದರೆಂದೇ ಜೈಪ್ರಕಾಶರು ತನ್ನ ಪತ್ರದಲ್ಲಿ ಬರೆದಿದ್ದರು. ಆದ್ದರಿಂದ 'ಮುಷ್ಕರಾವಧಿಯ ಸಂಬಳ'ದ ಮಟ್ಟಿಗೆ ಇವರಿಬ್ಬರ ವಾದಗಳೂ ಸತ್ಯವಾಗಲು ಸಾಧ್ಯವಿದೆ ವಿವಾದವು ಹೆಸರಿನ ಕ್ಷೇತ್ರ ಬಿಟ್ಟು ಸಂದಾಯದ ರಂಗಕ್ಕೆ ಬರುತ್ತದೆ. ಯಾವುದೇ ಹೆಸರಿನಿಂದಾದರೂ ಅಂಚೇ ಜವಾನರಿಗೆ ಅಷ್ಟು ಹಣವನ್ನು ಕೊಡಲು ಮಿ. ಕಿಡ್ವಾಯಿಯವರೊಪ್ಪಿದುದು ಹೌದೆ? ಆ ಮೇಲೆ ಅರ್ಥ ಮಂತ್ರಿ ಮತ್ತು ಮಂತ್ರಿಮಂಡಲವು, ಇಂತಹ ಸಂದಾಯವು ನಷ್ಟದ ಬಾಬೆಂದು ಲೆಕ್ಕ ಹಾಕಿ, ಅಂದಿನಿಂದೀವರೆಗೆ ಕೈಬಾಯಿಯ ಪೈಕಿ ಯಾವುದನ್ನೂ ಮುಂದೆ ಮಾತಡದೆ ಸುಮ್ಮಗಿದ್ದು ಬಿಟ್ಟುದು ನಿಜವೇ? ಎಂಬ ಪ್ರಶ್ನೆಯೇಳುತ್ತದೆ. ಈ ಕುರಿತು ಭಾರತ ಸರಕಾರದ ಸ್ಪಷ್ಟ ಹೇಳಿಕೆ ಹೊರಡುವ ವರೆಗೆ ಜೈಪ್ರಕಾಶರ ಮಾತನ್ನು ಸತ್ಯವೆಂದು ಗಣಿಸದೆ ನಿರ್ವಾಹವಿಲ್ಲ ಇದು ಭಾರತ ಸರಕಾರದ ಸುದ್ದೀ ಸಂಚಲನಾ ಖಾತೆಯ ಮಂತ್ರಿಗಳ ಅನುಭವ ಹಾಗೂ ಮನೋಬಲದ ಮುಂದೆಯೂ ಕೇಂದ್ರ ಮಂತ್ರಿಮಂಡಲದ ವರ್ತನೆಯ ದಿರಲ್ಲೂ ದೊಡ್ಡ ಪ್ರಶ್ನಾರ್ಥಕ ಚಿಹ್ನೆಯನ್ನು ಮೂಡಿಸುವ ಸ್ಥಿತಿಯೇ ಸರಿ. ಎಂತಹ ಸತ್ಕೀರ್ತಿ ಮತ್ತು ಜನತಾ ವಿಶ್ವಾಸ ಗಳಿಸಿರುವ ಸರಕಾರನೇ ಇರಲಿ-ಅದು ತನ್ನೀ ಯೋಗ್ಯತೆಯನ್ನಾಧರಿಸಿ ಬೇರೇನನ್ನು ಮಾಡಿದರೂ ನಡೆಯಬಹುದು; ಮಾತು ಮುರಿದುಕೊಂಡರೆ ಮಾತ್ರ ಮಾನವುಳಿಯದು. ಆದರೀ ಸ್ಥಿತಿ ಚಿತ್ರವು ಶಾಸ್ತ್ರೀಜ್ ಜೈಪ್ರಕಾಶ ನಾರಾಯಣರೇ ಬಿಡಿಸಿ ತೋರಿಸಿದಂತಹದಿದೆ. ಇದು ನಾಣ್ಯದ ಒಂದು ಬದಿ. ವಿವಾದದಲ್ಲೊಂದು ಕಡೆಯ ವಾದ ಮಾತ್ರ. ಭಾರತ ಸರಕಾರದ ಕಡೆಯ ರ ಹೇಳಿಕೆಯನ್ನು ಕಂಡ ಮೇಲೇನೇ ಈ ಕುರಿತೊಂದು ತೀರ್ಮಾನಕ್ಕೆ ಬರಬೇಕಾಗಿದೆ.

## ಇದು ಸರಿಯೆ?

ಪ್ರಕೃತ, ಮನಸ್ಸಿಗೆ ನಾಟುವಂತಿರುವ ಜೈಪ್ರಕಾಶರ ವಾದವನ್ನು ಒಪ್ಪಿಕೊಂಡರೂ ಅವರು ಇಷ್ಟಕ್ಕಾಗಿ ಅನಶನವ್ರತ ಧಾರಣೆ ಮಾಡಬೇಕೇ? ಎಂದು ಪ್ರಶ್ನಿಸದೆ ನಿರ್ವಾಹವಿಲ್ಲ. ಎಂತಹ ಕಾರಣವಿದ್ದರೂ ಜೈಪ್ರಕಾಶರಂತಹ ಧುರೀಣರು ಸದ್ಯ ಸ್ಥಿತಿಯಲ್ಲಿ ಸದ್ಯದ ಸರಕಾರಕ್ಕೆದಿರಾಗಿ ಈ ಮಾದರಿಯ ವರ್ತನೆಕೈಕೊಳ್ಳಬಾರದಿದ್ದಿತು. ಅವರನ್ನುವಂತೆ ಆ ಅಪರಾಧದ ನಿವಾರಣೆಗಿರುವ ಮತ್ತೊಂದು ವಿಧಾನವಾದ ಸಾರ್ವತ್ರಿಕ ಮುಷ್ಕರವನ್ನಾರಂಭಿಸುವುದರಿಂದ ಸಾರ್ವಜನಿಕರಿಗೆ ತೊಂದರೆಗಳೊದಗುತಿದ್ದುವೇನೋ ನಿಜ; ಆದರೆ ಅದರ ಬದಲಿಗೆ ಜೈಪ್ರಕಾಶರಂಗೀಕರಿಸಿಕೊಂಡ ಈ ವಿಧಾನವು ಸಾರ್ವಜನಿಕರನ್ನು ವೇದನೆಗೀಡುಮಾಡುವುದಂತೂ ಖಂಡಿತ. ಮೇಲಾಗಿ ಉದ್ಯಮೀ ವಹಿವಾಟಿಗೆ ಸಂಬಂಧಿಸಿರಲಿ, ರೀತಿ ನೀತಿಗಳಿಗೇನೇ ಸಂಬಂಧಿಸಿರಲಿ, ಕೆಲಸಗಾರರೊಂದು ವಿಭಾಗದ ಸಂಬಳದ ಪ್ರಶ್ನೆಯಂತಹ ಸಾರ್ವಜನಿಕ ಸಮಸ್ಯೆಯ ಸಂಬಂಧವಾಗಿ ಓರ್ವ ವ್ಯಕ್ತಿಯು ತನ್ನ ಪ್ರಾಣವನ್ನು ಪಣಕ್ಕೊಡ್ಡುವ ರಾಜಕೀಯ ದ್ಯೂತದಲ್ಲೊಂದು ತೀರ್ಮಾನಕ್ಕೆ ಬರಲು ಸರಕಾರಕ್ಕೆ ಅತ್ಯಂತ ಕಷ್ಟವಾಗುವದು ಸ್ವಾಭಾವಿಕ. ಒಂದು ಅಪಕ್ಷಯ ಜೀವನಾ ವಂಚನೆ ನಡೆದ... ಬ ಪ್ರಾಣಾವಧಿ ಸಂತಾಪವು ಜೈ... ಶ್ ನಾರಾಯಣರಂತಹ ದೇಶ ಪ್ರ... ಧುರೀಣರಿಗಿದ್ದರೆ, ಅದು ಜನತೆ... ಅಷ್ಟೇ ಮಂದಟ್ಟಾಗುವಂತೆ ಮುಂ... ಸತ್ಯ ಸ್ಥಿತಿಯನ್ನು ಬಯಲಿಗೆಳೆದು ಇದಿರುವಾದಿ ಸರಕಾರದ ಹೇಳಿಕೆಗಳ... ಹೊರಗೆ ಹಾಕಿಸಿ, ಆ ನಂತರವೇ ಕ... ಕಾರ್ಯ ಕೈಕೊಳ್ಳಬಹುದಿದ್ದಿತು. ... ಕೈಕೊಳ್ಳಬೇಕಾಗಿ ಬರುವಾಗಲಾದರೆ... 'ಅನ್ನ ಸತ್ಯಾಗ್ರಹ'ದಂತಹ ಕಾರ್ಯಾ... ರಣೆಯು ಇಂಥಾ ವಿಷಯಕ್ಕೆ ಹೇಗೆ ಹೊ... ಕೆಯಾಗುವುದೋ ಅರ್ಥವಾಗುವದಿಲ್ಲ. ಮಹಾವಾದಿ ನಾಯಕ ಜೈಪ್ರಕಾ... ಮಾಹಂತಿರಲಿ- ಸತ್ಯಾಗ್ರಹದ ಜನಕ... ಹಾತ್ಮಾಗಾಂಧಿಯವರು ಈ ವಿವಾದದ... ಟ್ಟಗೆ ಜೈಪ್ರಕಾಶರ ಸ್ಥಾನವಲ್ಲಿರುತಿದ್ದರೆ... ವರಾದರೂ ಇಷ್ಟಕ್ಕಾಗಿ ಪ್ರಾಣಾವಧಿ... ನ ಕೈಕೊಳ್ಳುತ್ತಿರಲಿಲ್ಲವೆಂದು ಖಂಡಿತ... ಗಿ ಹೇಳಬಹುದು. ಜೈಪ್ರಕಾಶರ ಪ್ರಾ... ವಧಿ ಉಪವಾಸವಂತೂ ವಿಷಯ, ವ್ಯಕ್ತಿ... ಎರಡಕ್ಕೂ ಹೊಂದಿಕೆಯಾಗುವಂತಹದ... ಏನೇನೂ ಶೋಭಿಸುವುದಿಲ್ಲ. ಜೈಪ್ರ... ಶರ ಘೋಷಣೆ, ಭಾವನೆ ಮತ್ತು ಮಾ... ಗಾರಿಕೆಯ ಮೇಲಿಂದ ಪ್ರಚಲಿತ ಸರ... ರದ ಹುಳುಕು ಮತ್ತು ದೌರ್ಬಲ್ಯಗ... ನ್ನು ಬೆಳಕಿಗೆ ಹಾಕಬೇಕೆಂಬ ಬಯಕೆ... ವರಿಗಿರುವಷ್ಟುಒಂದು ವರ್ಗದ ನೌಕರರಿ... ನ್ಯಾಯ ಸಂಪಾದಿಸಿ ಕೊಡಬೇಕೆಂಬ, ... ಲ್ಲನೇ ಸತ್ಯಪಾಲನೆಯಾಗಬೇಕೆಂಬ ಆತ... ರವಿಲ್ಲವೆಂಬುದು ಸ್ಪಷ್ಟವಿದೆ. ಸದ್ಯ ಸ್ಥಿತಿ... ಯಲ್ಲಿ ಇದು ಅತ್ಯಂತ ಶೋಚನೀಯ ಮ... ನೋವೃತ್ತಿ. ಈ ಕುರೂಪಿ ವಿವಾದವು ಇ... ನ್ನೂ ಬೆಳೆಯಲಾರದೆಂದೂ ಜೈಪ್ರಕಾಶ... ರ ನಿಯೋಜಿತ ತಪಸ್ಸು ತಪ್ಪಿ ಹೋಗುವ... ದೆಂದೂ ಆಶಿಸಬೇಕಾಗಿದೆ.

...ed firm by the Govt. of Mysore
...ated by the Agent of the Govt of
... & Indian


In the court of the Subordinate Judge of South Kanara
O. S. No. 201/1949

Between:–

Sankamma and others — Plaintiffs
and
Guddappa Bhandary and others —Defendants

To

Ramanna Adyanthaya son of Mukhambhika, as guardian of minor Defendants 64, female child, 65th deft- female child, 66th deft- female child, 67th deft- male child (children of Kashi)-clerk in Vijaya Bank Ltd. Kasaragod Taluk.

40th Defendant- Subbayya Hegde, son of Krishnamma. Residing in Akkar village, Mangalore Taluk.

26th Defendant- Shankernarayana, son of Akkamma

7th Defendant- Sundari, daughter of Abbakke.

38th Defendant- Subbayya Hegde. son of Ramakke. } Residing in Madras Rhuvalis Road, Vepery, Madras.

34th Defendant- Rajmohan Hegde, son of Chandrabhagi, working in Bangalore, Ideal Auto Works, Nehru Block, Sheshadripuram, Bangalore.

39th Defendant- Sadananda Hegde, son of Ramakke, residing in Neburmal House, Macnbakal, Karkal Taluk.

37th Defendant- Kutty Hegde, son of Ramakke. Residing in Hiribettu C/o Sadashiva Hegde, Udipi Taluk.

NOTICE

Please take notice that the Plaintiffs abovenamed has filed a suit against you for partition of the plaint immovable properties and posted to 25-1-1950 for hearing. It is hereby informed that if you fail to appear either in person or through a lawyer on the said date, the court will decide the case exparte.

(By order)

Mangalore } G. Somasheker Rao,
DATE 10–1–50



ಶ್ರೀ ಕೊರಡ್ಕಲ್ ಶ್ರೀನಿವಾಸ ರಾಯರ

'ಸುಲಭದಲ್ಲಿ ಇಂಗ್ಲಿಷ್'

(ENGLISH MADE EASY)

ಮನೆಯಲ್ಲಿ ನೀವಾಗಿ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.
ಬೆಲೆ: ೧—೮—೦

ಡಾಕ್ಟರ್ ಕೊರಡ್ಕಲ್ ವೆಂಕಟ್ರಾಯರ

'ಮನೆ ಮದ್ದು'

(HOME REMEDIES)

೩೦೦ ರೋಗಗಳಿಗೆ ಮನೆಯಲ್ಲೇ ಮಾಡಿ ಉಪಯೋಗಿಸಬಹುದಾದ ೧೦೦೦ ಮದ್ದುಗಳ ವಿವರವಿರುವ ಪುಸ್ತಕ. ಬೆಲೆ: ರೂ. ೨

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಬರೆಯಿರಿ-

ನವಭಾರತ ಪುಸ್ತಕ ಭಂಡಾರ,
ಉಡುಪಿ.

ನವಯುಗ ...

THE
Canara Banking Corporation Ltd.
(Incorporated in India)
Estd: 1906.
HEAD OFFICE: UDIPI, S. I.

| | |
|---|---|
| Capital Authorised .... .... .... | Rs. 25,00,000. |
| Capital Issued & Subscribed .... | Rs. 20,00,000. |
| Capital Paid Up .... .... .... | Rs. 19,99,800. |
| Reserves .... .... .... | Rs. 8,91,000. |

Banking business of every description transacted

ಗುರುವಾರ ಉಡುಪಿ ೧೯–೧ ೧೯೫೦

## ಪಂಚಾಯತು ಮಸೂದೆ.

ಸಾರ್ವಜನಿಕರ ಅವಗಾಹನೆಗಾಗಿ, ಮದ್ರಾಸ್ ಸರಕಾರವು ಕೆಲವು ತಿಂಗಳುಗಳ ಮೊದಲೇ ಪ್ರಕಟಿಸಿದ್ದ 'ಗ್ರಾಮ ಪಂಚಾಯತುಗಳ ಮಸೂದೆ'ಯು ಮದ್ರಾಸ್ ಎಸೆಂಬ್ಲಿಯಲ್ಲಿ ಸವಿವರವಾಗಿ ಚರ್ಚಿಸಲ್ಪಟ್ಟು ಕಳೆದ ವಾರ ಮಂಜೂರಾಗಿದೆ. ಎಸೆಂಬ್ಲಿಯಿಂದ ಹೊರ ಬೀಳುವಾಗ ಮೂಲ ಮಸೂದೆಯ ಆಕಾರದಲ್ಲಿ ಗಣ್ಯ ಬದಲಾವಣೆಯೇನೂ ಆಗಿಲ್ಲವಾದ್ದರಿಂದ, ಈಗಲೇ ವಿಮರ್ಶಿಸಲ್ಪಟ್ಟಿದ್ದ ಈ ಯೋಜನೆಯ ಕುರಿತು ಈಗ ಹೆಚ್ಚಿನ ವರ್ಣನೆ ಅನಗತ್ಯ. ಗ್ರಾಮಾಧಿಕಾರಿಯು, ಮತಾಧಿಕಾರವಿರದ 'ಎಕ್ಸ್ ಓಫಿಶಿಯೋ' ಸದಸ್ಯನಾಗಿ ಕೂಡಾ ಪಂಚಾಯತಿನಲ್ಲಿ ಸೇರಕೂಡದೆಂಬ ಸಣ್ಣ ಬದಲಾವಣೆಯೊಂದರ ವಿನಃ, ಬೇರಾವ ವ್ಯತ್ಯಾಸವೂ ಆ ಮಸೂದೆಯ ಕರಡು ಪ್ರತಿ ಮತ್ತು ಕೊನೆಯ ಆಕಾರಗಳೊಳಗೆ ಕಾಣುವದಿಲ್ಲ. ಗ್ರಾಮದ ವಿದ್ಯೆ, ನೌಕರ್ಯ, ಆರೋಗ್ಯ, ಅಭಿವೃದ್ಧಿ ಇತ್ಯಾದಿ ಎಲ್ಲಾ ವಿಷಯಗಳಿಗೂ ಸಂಬಂಧಿಸಿದ ವಿಶೇಷಾಧಿಕಾರಗಳನ್ನು ನಿರ್ವಹಿಸಲು, ಅಲ್ಲಿಯ ಪ್ರೌಢ ಮತದಾರರಿಂದಾರಿಸಲ್ಪಡುವ ಪ್ರತಿನಿಧಿ ಮಂಡಲಿಯೇ ಗ್ರಾಮ ಪಂಚಾಯತು. ಇದರ ಅಧ್ಯಕ್ಷನ, ಪಂಚಾಯತು ಸದಸ್ಯರಿಂದಾರಿಸಲ್ಪಡದೆ, ಸದಸ್ಯರಂತೆಯೇ ನೇರವಾಗಿ ಊರ ಮತದಾರರಿಂದ ಆರಿಸಲ್ಪಡುವವನು. ಪ್ರಾಂತಿಕ ಸರಕಾರದಿಂದ ನೇಮಕಗೊಳ್ಳುವ ಇನ್ಸ್ಪೆಕ್ಟರ್ ಮತ್ತವನ ಕೈಕೆಳಗಿನ ಕ್ಷೇತ್ರವಾರು ಅಧಿಕಾರಿಗಳು ಈ ಗ್ರಾಮ ಪಂಚಾಯತುಗಳ ಮೇಲ್ತನಿಖೆ ನಡೆಸುವರು. ಬಹುತೇಕವಾಗಿ ಗ್ರಾಮಸ್ಥರ ನಿತ್ಯಜೀವನಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳ ಹೊಣೆಗಾರಿಕೆಯೂ ಈ ಪಂಚಾಯತಿಗಿರುವಂತೆ, ವಿಶೇಷ ಕಂತಿಂಗೆ [illegible] ರವ ಅಧಿಕಾರ ಮತ್ತು ನ್ಯಾಯ ತೀರ್ಮಾನಾಧಿಕಾರ ಕೂಡಾ ಇದಕ್ಕಿದೆ. ಒಟ್ಟಿನ ಮೇಲೆ ಗ್ರಾಮ ಪಂಚಾಯತು ಸ್ಥಾಪನೆಗೊಂಡರೆ, ಕೇಂದ್ರ ಸರಕಾರದೊಳಗಡೆಯಲ್ಲಿ ಪ್ರಾಂತಿಕ ಸರಕಾರವಿರುವಂತೆಯೇ ಪ್ರಾಂತಿಕ ಸರಕಾರದೊಳಗಡೆ ಗ್ರಾಮ ಸರಕಾರವೊಂದು ಅಸ್ತಿತ್ವಕ್ಕೆ ಬಂದಂತಾಗುವದು.

ರಾಮರಾಜ್ಯ ಸ್ಥಾಪನೆಯನ್ನು ತನ್ನ ಧ್ಯೇಯವಾಗಿ ಇಟ್ಟುಕೊಂಡಿದ್ದ ಮಹಾತ್ಮಾಜೀ, ಆ ರಾಮರಾಜ್ಯದ ಆಕಾರವೆಂದು ಗ್ರಾಮ ಪಂಚಾಯತನ್ನೇ ಕಲ್ಪಿಸಿದ್ದರು. ಇದೇ ತಾ. 26ರಲ್ಲಿ ಜಾರಿಗೆ ಬರುವ ನವರಾಜ್ಯ ಶಾಸನದ 'ರಾಷ್ಟ್ರ ಧೋರಣೆಯ ನಿರ್ದೇಶಕ ಸೂತ್ರ'ಗಳಲ್ಲಿ ಗ್ರಾಮ ಪಂಚಾಯತುಗಳ ಸ್ಥಾಪನೆಯೂ ಒಂದಾಗಿದೆ. ಹಳ್ಳೀ ಸ್ವಾಧಿಕಾರ, ಮತ್ತು ಸ್ವಾವಲಂಬನೆಯೇ ನಿಜವಾದ ಸ್ವಾತಂತ್ರ್ಯವೆಂಬ ಪಲ್ಲವಿಯು ಸಂದರ್ಭಾನುಸಾರವಾಗಿ ಸರ್ವರಿಂದಲೂ ಹಾಡಲ್ಪಡುತ್ತಿದೆ. ಹೀಗಿರುವಾಗ ಗ್ರಾಮ ಪಂಚಾಯತು ಸ್ಥಾಪನೆಯು ಮಹತ್ವದ ಹಾಗೂ ಅಗತ್ಯದ ವಿಷಯವೆಂದು ಬೇರೆ ಹೇಳಬೇಕಾಗಿಲ್ಲ. ಮದ್ರಾಸ್ ಸರಕಾರದ ಈ ಯೋಜನೆಯು ಸ್ವಾಗತಾರ್ಹ ಹಾಗೂ ಶ್ಲಾಘನೀಯವಿದೆ.

ಆದರೆ, ನಾವು ಈ ಸಂಬಂಧವಾಗಿ ಈ ಮೊದಲೇ ಹೇಳಿದಂತೆ ಪಂಚಾಯತುಗಳ ಸ್ಥಾಪನೆಗಿಂತಲೂ, ಅವುಗಳ ಸಾರ್ಥಕತೆಯ ಕಡೆಗೆ ವಿಶೇಷ ಲಕ್ಷ್ಯ ಕೊಡದಿದ್ದರೆ ಉದ್ದೇಶ ಸಫಲಗೊಳ್ಳದು; ಮಾತ್ರವಲ್ಲ, ಪ್ರತಿಕೂಲ ಪರಿಣಾಮವಾಗುವ ಅಪಾಯವೂ ಇದೆ. ನವರಾಜ್ಯ ಘಟನೆ, ನವೀನ ಯೋಜನೆಗಳನ್ನು ರೂಪುಗೊಳಿಸುವುದರಲ್ಲಿ ಮೇಧಾವಿಗಳಿಗೆ ಮಾತ್ರ ಕೆಲಸವಿದ್ದರೆ, ಅವುಗಳನ್ನು ಅಸ್ತಿತ್ವದಲ್ಲಿಡಲು ಸಾಕಷ್ಟು ಶಕ್ತಿ ಯೋಗ್ಯತೆಗಳೇ ಬೇಕಾಗುತ್ತವೆ. ಆದ್ದರಿಂದ 'ಜನತೆ ಸಶಕ್ತರಾಗದೆ ಜನತಾರಾಜ್ಯ ಸಫಲ ಹೊಂದದು' ಎಂಬುದಕ್ಕಿಂತಲೂ ಹೆಚ್ಚಿನ ಆಗ್ರಹಪೂರ್ವಕ 'ಗ್ರಾಮಸ್ಥರಲ್ಲಿ ಯೋಗ್ಯತೆ ಮೂಡದ ಗ್ರಾಮ ಪಂಚಾಯತು ಸಾರ್ಥಕವಾಗದು' ಎನ್ನಬೇಕಾಗಿದೆ. ಹಳ್ಳಿಗಳ ಆರ್ಥಿಕ ಸ್ಥಿತಿ ಮಾತ್ರವಲ್ಲ, ಹಳ್ಳಿಗರ ಮನೋವೃತ್ತಿ ಕೂಡಾ ಇಂದು ಇರಬೇಕಾದಂತಿಲ್ಲ. ಮಧ್ಯಕಾಲೀನ ಪಾಳೆಯಗಾರ ಮನೋವೃತ್ತಿಯು ಶೇಷಾಂಶವೆಲ್ಲಿಯಾದರೂ ಈಗಲೂ ಉಳಿದಿರುವದಾದರೆ ಅದು ಭಾರತದ ಹಳ್ಳಿಗಳಲ್ಲಿ; ಪುಂಡು ನಾಯಕತ್ವದ ಹಾರ್ದಿಕ ಹಾಗೂ ಭಯಭರಿತ ಆರಾಧನೆಗಳು ಕಾಣ ಸಿಗುವುದು ಕೂಡಾ ಇಲ್ಲಿಯೇ. ಇಂತಹ ವಾತಾವರಣದ ಮೇಲೆ ಚೆಲ್ಲಿಬಿಡುವ ಅಧಿಕಾರವು, ಅಲ್ಲಿಯ ಶಾಯಿ ಚಿತ್ತುಗಳನ್ನು ತಾನೂ ಅಂಟಿಸಿಕೊಂಡು ಹಾಳಾಗುವ ಖಾಲಿ ಕಾಗದದಂತಾಗದೆ, ಅವುಗಳನ್ನು ಎಳಕೊಂಡು ತೆಗೆಯುವ 'ಬ್ಲೋಟಿಂಗ್ ಪೇಪರ್' ನಂತಿರಬೇಕಾದು ಅಗತ್ಯ. ಕ್ರಮನಿಯಮಗಳ ಮಟ್ಟಿಗೆ ಗ್ರಾಮ ಪಂಚಾಯತುಗಳು ತಪ್ಪು ಬೀಳದಂತೆ ನೋಡಲು ಸರಕಾರೀ ಮೇಲ್ವಿಚಾರಕರಿರಬಹುದು. ಆದರೆ ಈ ಪಂಚಾಯತುಗಳಿಂದ ಆಗಬಹುದಾದ ಮಹಾಸಂಭವು ಅಷ್ಟೇ ಅಲ್ಲ. ಅಜ್ಞಾನ, ನಿಸ್ಸಹಾಯಕತೆ ಮತ್ತು ಅಂಧಶ್ರದ್ಧೆ ತುಂಬಿದ ಪ್ರಚಲಿತ ಗ್ರಾಮ ವಾತಾವರಣವನ್ನು ಆಧರಿಸಿ, ಪುಂಡರು ಸ್ಥಾನ ಸಂಪಾದಿಸಿಕೊಂಡವರ ಕೈ ಕೆಳಗೇನೇ ಹೆಚ್ಚಿನ ಹಳ್ಳಿಗಳು ನೇತಾಡಿಕೊಂಡಿವೆ ಎಂದರೆ ಉತ್ಪ್ರೇಕ್ಷೆಯಾಗದು. ಇಂತಹ ಗ್ರಾಮ ಪುಡಾರಿಗಳು ನಿಯೋಜಿತ ಹೊಸ ಅಧಿಕಾರವು ಅನ್ಯರ ಕೈಗೆ ಹೋಗುವುದನ್ನು ಸಹಿಸಿಕೊಳ್ಳಲು, ಅಥವಾ ತಾವಾಗಿ ಪ್ರಜೆಗಳ ಸ್ಥಿತಿ ಬದಲಾವಣೆಗಾಗಿ ಈ ಅಧಿಕಾರವನ್ನು ಉಪಯೋಗಿಸಿಕೊಳ್ಳಲು, ಎಂದಿಗೂ ಸಿದ್ಧರಿಲ್ಲ. ಸರಕಾರದ ಹಸ್ತಕರಾದ ಮೇಲ್ವಿಚಾರಣಾಧಿಕಾರಿಗಳು ಈ ಪಟ್ಟಿಗೆ ಆ ಪ್ರಮುಖರ ಬಲೆಯೊಳಗೇನೇ ಬೀಳುವ ಸಂಭವ ಹೆಚ್ಚಾಗಿ. ಪರಿಸ್ಥಿತಿ ಹೀಗಾಗಲು ಬಿಟ್ಟರೆ, ಗ್ರಾಮಾಧಿಕಾರದ ಹೆಸರಿನಿಂದ, ಸದ್ಯದ ದುಃಸ್ಥಿತಿಯ ದ್ಯೋತಕಗಳಂತಿರುವ ಕೆಲವೇ ಮಂದಿ ಗ್ರಾಮ ಪುಡಾರಿಗಳ ದುಃಶಕ್ತಿಗೆ ಅಧಿಕಾರದ ಮುಕುಟವನ್ನೂ ಇಟ್ಟಂತಾಗುವುದೇ ಹೊರತು ಬೇರಿಲ್ಲ. ಹೀಗಾಗದೆ ತಾವು, ಊರ ಜನರ ಸೇವಕರೆಂಬ ಭಾವನೆಯು ಊರ ಪ್ರೌಢ ಮತದಾರರಿಂದಾರಿಸಲ್ಪಡುವ ಪಂಚಾಯತ ಸದಸ್ಯರಲ್ಲಿ ಮತ್ತು ಅಧ್ಯಕ್ಷನಲ್ಲಿ ಮೂಳೆಬೇಕಾದರೆ ಆರಿಸುವ ಮತ್ತು ಆರಿಸಲ್ಪಡುವವರ ಮನೋವೃತ್ತಿ ಪೂರ್ಣ ಬದಲಾಗಬೇಕು. ವ್ಯಕ್ತಿಗತ ಶ್ರೀಮಂತಿಕೆ, ಮನೆತನ, ಹಣ, ದಾಕ್ಷಿಣ್ಯಗಳಿಗಿಂತ ಜನಸೇವಾ ಯೋಗ್ಯತೆ ಮತ್ತು ಆಸಕ್ತಿ ಹೆಚ್ಚಿನದ — ಸಾರ್ವಜನಿಕ ಹಿತ ಸಂಬಂಧಗಳಿಗಲ್ಲದೆ, ಸ್ವಾರ್ಥ ಮತ್ತು ಸ್ವಪ್ರತಾಪಕ್ಕೆ ಇಲ್ಲಿ ಸ್ಥಾನವಿಲ್ಲ — ಎಂಬುದನ್ನು ಎಲ್ಲರೂ ಮನಗಾಣುವಂತಾಗಿ ಸ್ವೇಚ್ಛಾವರ್ತನೆಯ ಬದಲು ಪ್ರಾತಿನಿಧ್ಯಯಾಚರಣೆ ತೋರಿ ಬಂದರೆ ಮಾತ್ರ ಪಂಚಾಯತು ಆಡಳಿತೆ ಸಾರ್ಥಕವಾದೀತು. ಸರಕಾರದ ಮೇಲ್ವಿಚಾರಣಾ ಹಕ್ಕು ಇಷ್ಟು ಒಳಗಡೆಗೆ ಚಾಚುವಂತಹದಲ್ಲ; ಜನರಲ್ಲಿ ಯೋಗ್ಯತೆಯನ್ನು ಅಭ್ಯಾಸ ಮಾಡಿಸಿ ಹೊರತು, ಆಜ್ಞಾಪಿಸಿ ತುಂಬಿಸಲಾಗುವದಿಲ್ಲ. ಆದ್ದರಿಂದ ಇಲ್ಲಿಯೂ ಜನಸೇವಾಸಕ್ತಿಯುಳ್ಳ ಪ್ರಗತಿಶೀಲ ಕಾರ್ಯಕರ್ತರ ಕಡೆಗೇನೇ ಕಣ್ಣು ನೀಡಬೇಕಾಗಿದೆ. ಹಳ್ಳೀ ಜನತೆಯಲ್ಲಿ ಜ್ಞಾನ ಮತ್ತು ಜಾಗೃತಿ ನಿರ್ಮಿಸಿ, ಅಧಿಕಾರ ನಿಲ್ದಾಣದಲ್ಲೇ ಅವರ ಕೈ ಕಟ್ಟಲಾಗುವ ಸುಯೋಗವೊಂದು ಈಗ ಸಾರ್ವಜನಿಕ ಕೆಲಸಗಾರರಿಗೊದಗಿದೆ. ಜನಸೇವಾಕಾಂಕ್ಷಿ ವರ್ಗದೊಳಗೆ, ರಾಜಕೀಯ, ಸಾಮಾಜಿಕ, ಆರ್ಥಿಕ ಭಿನ್ನಾಭಿಪ್ರಾಯಗಳೆಂತಹವಿದ್ದರೂ ಹಳ್ಳಿಗಳಲ್ಲೀಗ ವ್ಯಾಪಿಸಿಕೊಂಡಿರುವ ಅಜ್ಞಾನ, ಅಂಧಶ್ರದ್ಧೆಗಳನ್ನು ನಿವಾರಿಸುವುದಗತ್ಯವೆಂಬ ಕುರಿತು ಅವರಲ್ಲಿ ಎರಡಭಿಪ್ರಾಯಗಳಿಲ್ಲ. ಅಂದ ಮೇಲೆ ತಂತಮ್ಮ ಪಕ್ಷಾಭಿವೃದ್ಧಿ ಸಾಧನೆಯ ಮತ್ತು ಜನತೋದ್ಧಾರದ ದೃಷ್ಟಿಯಿಂದ ರಾಜಕೀಯ ಪಕ್ಷಗಳ ಕಾರ್ಯಕರ್ತರು ಈ ಸಂದರ್ಭದಲ್ಲಿ ಗ್ರಾಮಗಳತ್ತ ಮುಖಮಾಡಬೇಕು. ಜನತಾರಾಜ್ಯದೊಳಗಡೆಯ ಈ ಗ್ರಾಮರಾಜ್ಯದಲ್ಲಿ ಹಳ್ಳೀ ಜನಸಾಮಾನ್ಯರ ಹೊಣೆಗಾರಿಕೆಯೆಂತಹದೆಂಬ ಪರಿಚಯವನ್ನು ಅವರಿಗೆ ಮಾಡಿಕೊಟ್ಟು, ಅವರಲ್ಲಿ ಆತ್ಮಕತೆ ತುಂಬಿಸಬೇಕಲ್ಲದೆ, ಪಂಚಾಯತು ಕಾರ್ಯಕಲಾಪಗಳಲ್ಲಿ ಲೋಪದೋಷಗಳುಂಟಾಗದಂತೆ ಗ್ರಾಮಕ್ಷೇತ್ರದಲ್ಲಿಯೂ ಮೇಲಧಿಕಾರಿಗಳ ಸಂಬಂಧ ಬೆಳೆಸಿಯೂ ಪ್ರಯತ್ನಿಸಬೇಕು. ಇದೇ ರೀತಿ ಲಿಪಿಬದ್ಧ ಕ್ರಮ ನಿಯಮಗಳ ಪಾಲನೆಯ ಕಡೆಗೆ ಲಕ್ಷ್ಯಕೊಡುವಂತೆಯೇ, ಶುದ್ಧ ಪ್ರಜಾಸತ್ತಾ ತತ್ವಗಳಿಗೆ ಯಾವನೇ ಪಂಚಾಯತಾಧ್ಯಕ್ಷ ಅಥವಾ ಯಾವುದೇ ಪಂಚಾಯತಿನಿಂದ ಲೋಪ ತಟ್ಟದಂತೆ ನೋಡುವುದರಲ್ಲೂ ಸರಕಾರ ಕೂಡಾ ಸರ್ವಕಡೆಗಳಿಗೂ ಸದಾ ಕಣ್ಣಿಟ್ಟಿರಬೇಕು. ಈ ಮೂಲಕ ಗ್ರಾಮ ಪಂಚಾಯತುಗಳನ್ನಾಧರಿಸಿ, ಹಳ್ಳಿಗರ ದುರ್ಬಲ ಮನೋವೃತ್ತಿ ಮತ್ತು ಹಳ್ಳಿಗಳ ದುಸ್ಥಿತಿಯನ್ನು ಸಾಧ್ಯವಿದ್ದಷ್ಟು ಬೇಗನೇ ನಿವಾರಣೆ ಮಾಡುತ್ತಾ ಹೋದರೇನೇ ಈ ಹೊಸ ವ್ಯವಸ್ಥೆಯು ತನ್ನ ಗುರಿ ಮುಟ್ಟೀತು. ಪಂಚಾಯತುಗಳ ರೂಪರೇಖೆ ನಿರ್ಮಿಸಿದಂತೆಯೇ, ಅವುಗಳೊಳಗಡೆ ಯಥಾಯೋಗ್ಯ ಬಣ್ಣ ಬಳಿಯುವ ಈ ಸಾಧನಾ ಕಾರ್ಯಗಳ ಕಡೆಗೂ ಸರಕಾರದ, ಸಾರ್ವಜನಿಕ ಕೆಲಸಗಾರರ, ಹಾಗೂ ಸಂಬಂಧಪಟ್ಟ ಸರ್ವರ ಲಕ್ಷ್ಯ ಬೀಳುವುದೆಂದು ನಿರೀಕ್ಷಿಸುತ್ತೇವೆ.

---

**ಪದ್ಮಶಾಲಿ ಸಮಾಜಸೇವಾ ಸಂಘ ಮುಂಬಯಿ.** ಈ ಸಂಘದ ಚತುರ್ದಶ ವಾರ್ಷಿಕೋತ್ಸವವು ಇದೇ ಜನವರಿ ತಿಂಗಳ ತಾ. 29 ನೇ ಆದಿತ್ಯವಾರ ಅಪರಾಹ್ನ ಗಂಟೆ 2ಕ್ಕೆ ಸರಿಯಾಗಿ ಬೋರಾಬಜಾರ್ ಸ್ಟ್ರೀಟ್ ನಂ.200 'ಮಾಪ್ಲಾ ಬಿಲ್ಡಿಂಗ್'ನಲ್ಲಿ ಶ್ರೀ ಎ. ಬಿ. ಶೆಟ್ಟಿಗಾರ್ ರವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗಿಸಲು ನಿಶ್ಚಯಿಸಿರುವುದರಿಂದ ಅಂದು ಸ್ವಜಾತಿ ಬಾಂಧವರೆಲ್ಲರೂ ದಯಮಾಡಿ ಚಿತ್ತೈಸಿ ಸಭಾಕಾರ್ಯವನ್ನು ಸಾಂಗಗೊಳಿಸಿ ನಮ್ಮನ್ನು ಪ್ರೋತ್ಸಾಹಿಸಬೇಕಾಗಿ ಅಪೇಕ್ಷಿಸುವ,

ಜನಾರ್ಧನ್ ಬಿ. ಶೆಟ್ಟಿಗಾರ್,
ಪದ್ಮಯಂ. ಶೆಟ್ಟಿಗಾರ್,
ಗೌ. ಜೊ. ಕಾರ್ಯದರ್ಶಿಗಳು.

---

**ಮರವಂತೆ–ಕುಂದಾಪುರ ತಾಲೂಕು** ಮರವಂತೆ ಗ್ರಾಮದ ಶ್ರೀ ಜಕ್ಕನಕಟ್ಟೆಯಲ್ಲಿರುವ ಶ್ರೀ ಯಕ್ಷೇಶ್ವರಿ ಅಮ್ಮನವರ ಜಾತ್ರೆಯು ಇದೇ ತಿಂಗಳ ತಾ. 21ನೆ ಶನಿವಾರ ಪ್ರಾರಂಭವಾಗಿ ಮರುದಿನ ಸಂಜೆ ಮುಕ್ತಾಯವಾಗಲಿರುವುದು. ಸ್ಥಳದ ಕೃಪಾಕಟಾಕ್ಷವು ಬಹಳ ಮಹತ್ವದ್ದಿರುವುದರಿಂದ ಆಸ್ತಿಕ ಭಕ್ತರು ಜಾತ್ರೆಗೆ ಬಂದು ತಮ್ಮ ಇಷ್ಟಾರ್ಥಗಳನ್ನು ನೆರವೇರಿಸಿಕೊಳ್ಳಬೇಕಾಗಿ ಸಂಬಂಧಪಟ್ಟವರು ತಿಳಿಸುತ್ತಾರೆ.

**ಬಂಟ್ವಾಳ–** ಇದೇ ತಾ. 11ರಲ್ಲು ಜಿಲ್ಲಾ ಆಂಧ್ರ ಸುಂಟರಗಾಳಿಯ ರಿಲೀಫ್ ಕಮಿಟಿಯ ಸಹಾಯಾರ್ಥವಾಗಿ ಇಲ್ಲಿಯ ಜಯಲಕ್ಷ್ಮಿ ಟಾಕೀಸಿನ ಮ್ಯಾನೇಜರ್ ಕೃಷ್ಣ ಕುಡ್ವರು ಸಿನೆಮಾ ದೇಖಾವೆಯೊಂದನ್ನಿತ್ತರು. ಜಿಲ್ಲಾ ಬೋರ್ಡು ಪ್ರೆಸಿಡೆಂಟ್ ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟ್ ಮೊದಲಾದ ಅಧ್ಯ ಮಹನೀಯರು ಹಾಜರಿದ್ದರು. ಶ್ರೀ ನಾರಾಯಣರಾಯರು ಕಾಲೋಚಿತ ಮಾತುಗಳನ್ನಾಡಿದರು. ಡಾ. ಎಮ್. [illegible] ಹೆಗ್ಡೆಯವರು ಸರ್ವರಿಗೂ ಧನ್ಯವಾದ ಸಮರ್ಪಿಸಿದರು. ಸಿನೆಮಾ ದೇಖಾವೆಯಿಂದ ರೂಪಾಯಿ 3000 ಜಮೆಯಾಗಿರುವುದೆಂದು ಹೇಳಲಾಗಿದೆ.

ಪ್ರಾಪಂಚಿಕ ವಿದ್ಯಮಾನಗಳೂ ಕ್ಷಿಪ್ರ ಕ್ಷೇಕವಾಗಿ ಭಾರತದ ಸ್ಥಿತಿಗತಿಗಳೂ ಯಥಾಪ್ರಕಾರ ಸಾಗಿವೆ. ಅನಿಶ್ಚಿತ ಹಾಗೂ ಹೆಚ್ಚಿನಂಶ ಅಸಮಾಧಾನಕರವಾಗಿರುವ ಇಂತಹ ವಾತಾವರಣದಲ್ಲೇ ಒಂದೊಂದೇ ವಾರವು ಉರುಳುತ್ತಿರುವುದನ್ನು ಕಾಣುವಾಗ ಯಾವುದಾದರೊಂದು ಗಡಿಗೆ ಅದು ಮುಟ್ಟುವ ಕಾಲವೆಂದಿಗೋ ಎಂಬ ಆತುರವೇಳುತ್ತಿದೆ. ಈ ಕುರಿತು ನಿಶ್ಚಯವಾಗಿ ಏನನ್ನಾದರೂ ಹೇಳಬಲ್ಲ ಭವಿಷ್ಯವಾದಿಗಳು ಕೂಡಾ ಲೋಕದಲ್ಲೇ ಕಂಡುಬರುತ್ತಿಲ್ಲ.

## ಪರದೇಶಗಳಲ್ಲಿ

ಜಾಗತಿಕ ಸಂಘದ ಭದ್ರತಾ ಕೌನ್ಸಿಲಿನಲ್ಲಿ ಚೈನದ ಚಿಯಾಂಗ್ ಕೈಶೇಕ್ ಸರಕಾರದ ಪ್ರತಿನಿಧಿ ಡಾ। ಟ್ಸಿಯಾಂಗರೇ ಸದಸ್ಯನಾಗಿರುವುದನ್ನು ಆಕ್ಷೇಪಿಸಿ, ರಶ್ಯದ ಪ್ರತಿನಿಧಿಗಳು ಇದೇ ತಾ 14ಕ್ಕೆ ಕೌನ್ಸಿಲ್ ಸಭೆಯಿಂದ ಹೊರ ನಡೆದಿದ್ದರು. ಚೀನೀ ರಾಷ್ಟ್ರೀಯ ಸರಕಾರದ ಪ್ರತಿನಿಧಿಯನ್ನು ಭದ್ರತಾ ಕೌನ್ಸಿಲಿನಿಂದ ಹೊರ ತಳ್ಳಬೇಕೆಂದು ರಶ್ಯದ ಪ್ರತಿನಿಧಿ ಎಮ್. ಜಾಕೊಬ್ ಮಾಲಿಕರು ತಂದ ಸೂಚನೆಯು ಬಿದ್ದು ಹೋದೊಡನೆ, ತಮ್ಮ ಗೈರು ಹಾಜರಿಯಲ್ಲಿ ಭದ್ರತಾ ಕೌನ್ಸಿಲು ಮಾಡುವ ಯಾವ ನಿರ್ಣಯವೂ ರಶ್ಯಕ್ಕೆ ಬದ್ಧವಾಗಲಾರದೆಂದೂ ಚೀನೀ ರಾಷ್ಟ್ರೀಯ ಸರಕಾರಕ್ಕೆ ಪ್ರಾತಿನಿಧ್ಯವಿರುವ ವರೆಗೆ ರಶ್ಯವು ಭದ್ರತಾ ಕೌನ್ಸಿಲಿನ ಕಾರ್ಯಕ್ರಮಗಳಲ್ಲಿ ಭಾಗವಹಿಸಲಾರದೆಂದೂ ಜಾಹೀರುಮಾಡಿ ಅವರು ಅಲ್ಲಿಂದ ಹೊರಬಿದ್ದಿದ್ದರು.

ಚೈನದ ಉತ್ತರ ಪ್ರಾಂತ್ಯಗಳನ್ನು ವಿಂಗಡಿಸಿ, ಅವುಗಳನ್ನು ಸೋವಿಯೆಟ್ ಕೇಂ

# ಜಾಗತಿಕ ಆಗುಹೋಗುಗಳು

ದ್ರದೊಂದಿಗೆ ಜೋಡಣೆಗೊಳಿಸಿಕೊಳ್ಳುವ ಹಂಚಿಕೆಯಲ್ಲೀಗ ರಶ್ಯವಿದೆ ಎಂದು ಅಮೆರಿಕದ ಗೃಹಕಾರ್ಯದರ್ಶಿ ಡೀನ್ ಅಚೆಸನರಂದಿದ್ದಾರೆ.

ಯುಗೊಸ್ಲೋವಿಯಾದ ಸ್ವಾತಂತ್ರ್ಯಾಪಹರಣಕ್ಕಾಗಿ ರಶ್ಯವು ನುಗ್ಗಿದರೆ, ಅಂತಹ ಅವಸರದ ಸಂದರ್ಭದಲ್ಲಿ ಮಾರ್ಶಲ್ ಟಿಟೋರಿಗೆ ಅದೊಂದು ಮಿತಿಯ ಸೇನಾ ಸಹಾಯವನ್ನೊದಗಿಸುವ ಹಂಚಿಕೆಗಳನ್ನು ಅಮೇರಿಕ ಸರಕಾರದ ರಾಷ್ಟ್ರಾಧ್ಯಕ್ಷ ಟ್ರುಮೇನರಿಗೆ ಶಿಫಾರಸು ಮಾಡಿದೆ.

ಬರ್ಮದ ಅಂತರ್ಯುದ್ಧದಲ್ಲಿ ಕಳೆದ ದಿನಗಳಲ್ಲಿ ಇದಿರಾಳಿ ಸೇನೆಗಳ ಮೇಲೆ ಬರ್ಮಾ ಸರಕಾರದ ಸೇನೆಗಳು ಗಣನೀಯ ವಿಜಯಗಳನ್ನು ದೊರಕಿಸಿಕೊಂಡಿವೆ. ವಿರೋಧಿ ಕರೆನ್ ಜನರು ತಮ್ಮದನ್ನಾಗಿ ಮಾಡಿಕೊಂಡಿರುವ ಕ್ಷೇತ್ರದ ರಾಜಧಾನಿ ಲೊಯಿಕಾವನ್ನು ಕಠಿಣ ಕಾಳಗಾನಂತರ ಸರಕಾರೀ ಸೇನೆ ಸ್ವಾಧೀನಪಡಿಸಿಕೊಂಡಿತು. ರಂಗೂನಿಗೆ ಈಶಾನ್ಯದಲ್ಲಿ 220 ಮೈಲು ದೂರದಲ್ಲಿರುವ ಈ ನಗರದಿಂದ ಹಿಮ್ಮೆಟ್ಟುವಾಗ ಕರೆನರು ಅದಕ್ಕೆ ಬೆಂಕಿ ಹಚ್ಚಿ ಹೋಗಿದ್ದರು. ಇತರೆ ಹಲವು ಹಳ್ಳಿಗಳೂ ಮರಳಿ ಸರಕಾರೀ ಸೇನೆಗಳ ಹಸ್ತಗತವಾಗಿವೆ.

ಚೈನದ ಪೆಕಿಂಗಿನಲ್ಲಿರುವ ಅಮೆರಿಕನ್ ರಾಯಭಾರಿ ನಿಲಯವನ್ನು ಕಮ್ಯೂನಿಸ್ಟ್ ಸರಕಾರದ ಅಧಿಕಾರಿಗಳು ಸ್ವಾಧೀನಪಡಿಸಿಕೊಂಡ ಕುರಿತು, ಆ ಸರಕಾರದೊಡನೀವರೆಗೆ ಸಂಬಂಧವಿಟ್ಟುಕೊಂಡಿರದ ಅಮೇರಿಕ ಸರಕಾರವು ಬ್ರಿಟನಿನ ಮೂಲಕ ತನ್ನ ನಿಷೇಧವನ್ನು ಚೈನೀ ಸರಕಾರಕ್ಕೆ ರವಾನಿಸಿದೆ.

ಬ್ರಿಟಿಷ್ ಪಾರ್ಲಿಮೆಂಟು ಇದೇ ಫೆಬ್ರುವರಿ ತಾ.3ರಲ್ಲಿ ವಿಸರ್ಜಿಸಲ್ಪಟ್ಟು ಫೆಬ್ರುವರಿ ತಾ. 22ರಲ್ಲೇ ಮಹಾ ಚುನಾವಣೆ ನಡೆಯುವದೆಂದು ನಿಶ್ಚಯವಾಗಿದೆ. ಈಗ ಅಲ್ಲಿ ಚುನಾವಣಾ ಪ್ರಚಾರದ ಬಿರುಸು ವಾತಾವರಣ ವ್ಯಾಪಿಸಿಕೊಂಡಿದೆ. ಕಾಮನ್ಸ್ ಸಭೆಯ 265 ಸ್ಥಾನಗಳಿಗೂ ಇಂದು ಅಧಿಕಾರದಲ್ಲಿರುವ ಲೇಬರ್ ಪಕ್ಷ ಮತ್ತು ಚರ್ಚಿಲ್ಲರ ಕನ್ಸರ್ವೇಟಿವ್ ಪಕ್ಷಗಳು ಸ್ಪರ್ಧಿಸಿಕೊಳ್ಳಲಿವೆ. ಪ್ರಧಾನ ಮಂತ್ರಿ ಮಿ. ಅಟ್ಲಿಗಳಿಗೆ ಓರ್ವ ಕನ್ಸರ್ವೇಟಿವ್, ಓರ್ವ ಲಿಬರಲ್ ಮತ್ತೋರ್ವ ಸ್ವತಂತ್ರ ಲೇಬರ್ ಸ್ಪರ್ಧಿಗಳಿದ್ದಾರೆ. ಚರ್ಚಿಲ್ಲರಿಗೆ ಲೇಬರ್, ಲಿಬರಲ್, ಮತ್ತು ಕಮ್ಯೂನಿಸ್ಟ ಸ್ಪರ್ಧಿಗಳಿದ್ದಾರೆ. ಇದೇ ರೀತಿ ಕ್ರಿಪ್ಸ್, ಬೆವಿನ್, ಈಡನ್ ಮೊದಲಾದ ಎಲ್ಲಾ ಪ್ರಮುಖರೂ ಮೂರು ಅಥವಾ ನಾಲ್ಕು ಮಂದಿಯೊಡನೆ ಸ್ಪರ್ಧಿಸಬೇಕಾಗಿಬಂದಿದೆ. ಒಟ್ಟು 1800 ಉಮೇದ್ವಾರಿಗಳು ಚುನಾವಣಾ ಹೋರಾಟರಂಗಕ್ಕಿಳಿದಿದ್ದಾರೆ.

ಮೋಸ್ಕೋದಲ್ಲಿ ಭಾರತದ ರಾಯಭಾರಿಯಾಗಿರುವ ಡಾ। ಯಸ್. ರಾಧಾಕೃಷ್ಣನರು ಇದೇ ತಾ. 15ರಲ್ಲಿ ಮಾರ್ಶಲ್ ಸ್ಟಾಲಿನರೊಡನೆ 30 ಮಿನಿಟುಗಳ ಮಾತುಕತೆಯಾಡಿದರು. ಸ್ಟಾಲಿನರನ್ನು ಮುಖತಃ ಭೇಟಿಯಾದ ಭಾರತೀಯ ಪ್ರಮುಖನೆಂದರೆ ಡಾ। ರಾಧಾಕೃಷ್ಣನರೇ. ತಮ್ಮ ಸಂಭಾಷಣೆಯ ವೇಳೆ ಮಾರ್ಶಲ್ ಸ್ಟಾಲಿನರು ಭಾರತೀಯ ವಿದ್ಯಮಾನಗಳ ಕುರಿತು ಗಾಢ ಆಸಕ್ತಿ ಪ್ರದರ್ಶಿಸಿದರೆಂದೂ, ಮಾತುಕತೆಯು ಸುಖಕರ ವಾತಾವರಣದಲ್ಲಿ ಸರ್ವ ಸಾಮಾನ್ಯ ವಿಷಯಗಳ ಕುರಿತು ನಡೆಯಿತೆಂದೂ ಡಾ। ರಾಧಾಕೃಷ್ಣನ್ ಅಂದಿದ್ದಾರೆ. ಸ್ಟಾಲಿನ್-ರಾಧಾಕೃಷ್ಣನ್ ಸಂಭಾಷಣೆಯ ವೇಳೆ ರಶ್ಯದ ವಿದೇಶ ಮಂತ್ರಿ ವಿಶಿನ್ಸ್ಕಿ, ಮತ್ತು ರಶ್ಯದ ಭಾರತ ಕಚೇರೀ ಸಲಹೆಗಾರ ರಾಜೇಶ್ವರ ದಯಾಳರು ಹಾಜರಿದ್ದರು. ಸೋವಿಯೆಟ್ ವಿದೇಶ ಕಾರ್ಯಾಲಯದ ಯುರೋಪು ಶಾಖೆಯ ಅಧಿಪತಿ ವ್ಲಾಡಿಮಿರ್ ಪಾವ್ಲೋವರವರು ಇವರಿಬ್ಬರ ಸಂಭಾಷಣೆಗಳ ಭಾಷಾಂತರಕಾರರಾಗಿದ್ದರು. ಪಾವ್ಲೋವ್ ಯುದ್ಧ ಕಾಲದ 'ತ್ರಿಮೂರ್ತಿ' ಕೂಟಗಳಲ್ಲಿ ಭಾಷಾಂತರ ಕೆಲಸ ಮಾಡಿದವರಿದ್ದಾರೆ.

ಸಿಂಹಳದ ಕೊಲಂಬೋದಲ್ಲಿ ಇದೇ ತಾ. 9ರಲ್ಲಿ ಆರಂಭಿಸಿದ ಕಾಮನ್‌ವೆಲ್ತ್ ರಾಷ್ಟ್ರಗಳ ವಿದೇಶ ಮಂತ್ರಿ ಸಮ್ಮೇಲನವು ಇದೇ ತಾ. 14ರ ವರೆಗೆ ನಡೆದು ಪೂರ್ಣಗೊಂಡಿದೆ. ಈ ಸಮ್ಮೇಳನದ ಚರ್ಚೆಗೆಳೆಲ್ಲವು ಗೋಪ್ಯವಾಗಿ, ಸೌಹಾರ್ದ್ರಪೂರ್ಣ ವಾತಾವರಣದಲ್ಲಿ ನಡೆದಿದ್ದುವು. ಮುಖ್ಯವಾಗಿ ಪೂರ್ವ ಏಸ್ಯಾದ ಆರ್ಥಿಕ ಸ್ಥಿತಿ ಸುಧಾರಿಸುವುದನ್ನಾಧರಿಸಿಯೇ ಕಾಮನ್‌ವೆಲ್ತ್ ರಾಷ್ಟ್ರಗಳ ಪ್ರಗತಿ ಸಾಧಿಸಲ್ಪಡಬೇಕೆಂಬ ಅಭಿಪ್ರಾಯವು ಈ ಸಮ್ಮೇಳನದಲ್ಲಿ ಸೂಚಿಸಲ್ಪಟ್ಟಿತಲ್ಲದೆ ಏಸ್ಯಾದ ಪೂರ್ವ-ದಕ್ಷಿಣ ಭಾಗಗಳ ಸ್ಥಿತಿ ಸುಧಾರಣೆಗಾಗಿ ಕಾಮನ್‌ವೆಲ್ತ್ ರಾಷ್ಟ್ರಗಳ ಒಂದು ಸಮಿತಿಯನ್ನು ನೇಮಿಸಿಕೊಳ್ಳುವಂತೆ, ಈ ಸಮ್ಮೇಳನವು ಕಾಮನ್‌ವೆಲ್ತ್ ಸರಕಾರಗಳಿಗೆ ಶಿಫಾರಸು ಮಾಡಿದೆ. ಕೊನೆಯ ದಿನ ಪತ್ರಿಕಾವಾಲರಿದಿರು ಬಹಿರಂಗ ಸಭೆ ಸೇರಿ ಸಂಗತಿ ನಿರೂಪಣೆಮಾಡಲಾಯಿತು.

## ಭಾರತದಲ್ಲಿ

ಕೊಲೊಂಬೋ ಸಮ್ಮೇಳನಕ್ಕೆ ಹೋಗಿದ್ದ ಪಂಡಿತ ಜವಾಹಿರಲಾಲರು ಇದೇ ತಾ. 15ರಲ್ಲೂ, ಕಲ್ಕತ್ತಕ್ಕೆ ತೆರಳಿದ್ದ ಸರ್ದಾರ್ ವಲ್ಲಭಾಯಿಗಳು ತಾ. 16ರಲ್ಲೂ ನವಧಿಲ್ಲಿಗೆ ಮರಳಿದ್ದಾರೆ. ಭಾರತದ ಎಲ್ಲಾ ಪ್ರಾಂತಿಕ ಸರಕಾರಗಳೂ ಇದೇ ತಾ. 26ರ 'ರಿಪಬ್ಲಿಕ್ ದಿನಾಚರಣೆ'ಯ ವಿಶೇಷ ವ್ಯವಸ್ಥೆಗಳನ್ನು ಸಿದ್ಧಗೊಳಿಸಿವೆ. ಆ ದಿನದ ಶುಭಸ್ಮರಣೆಗಾಗಿ ದೊಡ್ಡ ಸಂಖ್ಯೆಯಲ್ಲಿ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಲಾಗುವದೆಂದು ಪಂಡಿತ ನಹರು ತಿಳಿಸಿದ್ದಾರೆ.

ಬರುವ ಎಪ್ರಿಲ್ 1ರಿಂದ ಬೊಂಬಾಯಿಯಿಡೀ ಪ್ರಾಂತ್ಯದಲ್ಲಿ ಪೂರ್ಣ ಪಾನ ನಿಷೇಧ ಜಾರಿಗೆ ಬರಲಿದೆ. ಬರುವ ಎಪ್ರಿಲ್ 1 ರಿಂದ ಸಂಸ್ಥಾನಗಳಲ್ಲಿರುವ 24 ವಿಮಾನ ನಿಲ್ದಾಣಗಳ ಪೂರ್ಣಾಧಿಕಾರವನ್ನು ಭಾರತ ಸರಕಾರವು ವಹಿಸಿಕೊಳ್ಳುವುದು.

ಕಳೆದ ದಿನಗಳಲ್ಲಿ ಕಮ್ಯೂನಿಸ್ಟರು ಪೋಲೀಸರ ಮೇಲೆ ಬಾಂಬೆಸೆತ, ಕೊಲೆ, ದರೋಡೆಗಳಂತಹ ರೌದ್ರ ಕೃತ್ಯಗಳನ್ನು ಕಲ್ಕತ್ತ ಮತ್ತು ಆಂಧ್ರದ ಕೆಲವು ಊರುಗಳಲ್ಲಿ ಭೀಕರ ಪರಿಮಾಣದಲ್ಲಿ ನಡೆಸಿದ್ದರು.

ಜನವರಿ 26ರೊಳಗೆ ಆಂಧ್ರ ಪ್ರಾಂತ್ಯ ರಚಿಸುವ ಪ್ರಶ್ನೆಯು ಕೇಂದ್ರ ಸರಕಾರವೇನು ಮಾಡಲಿದೆ, ಎಂಬ ನಿರೀಕ್ಷೆಯಡಿಯಲ್ಲಿ ತೂಗಾಡುತ್ತಿದೆ. ಬಳ್ಳಾರಿ ಸಂಬಂಧದ ಕನ್ನಡಿಗರ ಆಕ್ಷೇಪ, ಮದ್ರಾಸ್ ನಗರವನ್ನೀಗಲೇ ಬಿಡುವುದರಲ್ಲಿ ತೆಲುಗರಿಗಿರುವ ಅತೃಪ್ತಿ, ಹಣಕಾಸಿನ ಸಂಬಂಧದ ಸೂಕ್ಷ್ಮ ಪರಿಶೀಲನೆ, ಇತ್ಯಾದಿಗಳ ಕುರಿತು ಸ್ಪಷ್ಟ ತೀರ್ಮಾನಗಳು ಈ ವರೆಗಾಗಿಲ್ಲವಾದ್ದರಿಂದ 26ನೇ ತಾರೀಕಿನೊಳಗೆ ಕೆಲಸ ಪೂರ್ಣಗೊಳ್ಳುವುದು ಕಷ್ಟವೆಂದು ಕಾಣುತ್ತದೆ. ಕರ್ನಾಟಕ ಕಾಂಗ್ರೆಸ್ ಕೌನ್ಸಿಲಿನ ರಾಜನಾಮೆ ನಿರ್ಣಯದ ಸಂಬಂಧದ ಮುಂದಿನ ಪರಿಶೀಲನೆಗಾಗಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಮಹಾಸಭೆಯು ಫೆಬ್ರುವರಿ ಮೊದಲನೇ ವಾರದಲ್ಲಿ ಸೇರಲಿರುವದೆಂದು ತಿಳಿದು ಬಂದಿದೆ

ಆಂಧ್ರದವರೇ ಇದ್ದು, ಕಾಂಗ್ರೆಸ್ ಅಧ್ಯಕ್ಷ, ಕಾರ್ಯದರ್ಶಿಯರಿರುವ ಡಾ. ಪಟ್ಟಾಭಿ ಮತ್ತು ಕಲಾ ವೆಂಕಟರಾಯರು ಆಂಧ್ರ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಾರ್ಯಕಲಾಪಗಳಲ್ಲಿ ಅನವಶ್ಯವಾಗಿ ಕೈಹಾಕುತಿದ್ದಾರೆಂದು ಸರ್ದಾರ್ ಪಟೇಲರಲ್ಲಿ ದೂರಿದಲ್ಲಿ ಶ್ರೀ. ಟಿ. ಪ್ರಕಾಶಮ್ಮರ ಮುಂದಾಳುತ್ವದಲ್ಲಿ ನಿಯೋಗಮಂಡಲಿಯೊಂದು ಧಿಲ್ಲಿಗೆ ಹೋಗುವದೆಂದು ತಿಳಿದು ಬಂದಿದೆ.


'ಅಂತರಂಗ'ಕ್ಕೆ
6 ರೂಪಾಯಿ
ಚಂದಾ ಕೊಟ್ಟು
ಒಂದೇ ವರ್ಷದಲ್ಲಿ
50 ಪುಸ್ತಕಗಳನ್ನು ಪಡೆಯಿರಿ.
'ಅಂತರಂಗ' ಉಡುಪಿ.



ಓದಲೇ ಬೇಕಾದ ಪುಸ್ತಕಗಳು
ಶ್ರೀ. ಕೆ. ಕೆ. ಶೆಟ್ಟರ
ಪ್ರೇಮ ವಿಜಯ
(ಸಾಮಾಜಿಕ ನಾಟಕ)
ಬೆಲೆ ರೂ 1—0—0
ವ್ಯಭಿಚಾರಿಣಿ ಯಾರು
(ಸಾಮಾಜಿಕ ನಾಟಕ)
ಬೆಲೆ ರೂ 1—0—0
ವಿವಿಧ ಕತೆಗಾರರ
ಪ್ರೇಮ ಪ್ರವಾಹ
(ಕಥಾ ಸಂಕಲನ)
ಬೆಲೆ ರೂ 0—3—0
ನವಭಾರತ ಬುಕ್ ಡಿಪ್ಪೊ,
ಉಡುಪಿ.


## ನೋಟೀಸು.

ಉಡುಪಿ ಡಿ. ಮು. ಕೋರ್ಟಿನಲ್ಲಿ.

O. P. No. 2/1950.

T. ರಾಮಚಂದ್ರರಾವ್. ಪಿ. ವೆಂಕಟ್ರಾಯರ ಮಗ. ಉಡುಪಿ ತಾಲೂಕು ತೆಂಕನಿಡಿಯೂರು ಗ್ರಾಮ— } ಅರ್ಜಿದಾರ

ಈ ಮೂಲಕ ಸರ್ವರಿಗೂ ತಿಳಿಯಪಡಿಸುವುದೇನಂದ್ರೆ:—

ಮೇಲ್ಕಂಡ ಅರ್ಜಿ— ವ್ಯವಹರಣೆಯಲ್ಲಿ ಅರ್ಜಿದಾರನ ತಂದೆಯಾ 14-1-1948ರಲ್ಲಿ ಮೃತಪಟ್ಟ ಪಿ. ವೆಂಕಟ್ರಾಯರಿಗೆ ಚಲ್ಲನಾಯ್ಕ ಕೂಡಾ 2ಜನರು ತಾ 23-5 47ರಲ್ಲಿ ರೂ. 200/ಕ್ಕೆ ಮತ್ತು ಅಡಂಸ್ಯಾಬ ಕೂಡಾ 3ಜನರು ತಾ.13-5-46ರಲ್ಲಿ ರೂ.150/ಕ್ಕೆ ಬರಕೊಟ್ಟ ಡಿ. ನೋಟುಗಳ ಸಾಲದ ಬ್ಯಾಬಜನ್ನು ವಸೂಲು ಪಡಿಯುವರೆ ಅರ್ಜಿದಾರನೇ ಹಕ್ಕುದಾರನೆಂತಲೂ ಈ ಕುರಿತು ಅರ್ಜಿದಾರನ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿಯೂ ವಗೈರೆ ಸಂಗ್ತಿಗಳನ್ನು ಕಾಣ್ಸಿ ಅರ್ಜಿದಾರನು ದಾಖಲ್ಲು ಮಾಡಿರುವ ಮೇಲ್ಕಂಡ ಅರ್ಜಿಯನ್ನು ತಾ 8-2-50ಕ್ಕೆ ಯಿಟ್ಟಿರುತ್ತದೆ. ಈ ಕುರಿತು ಆಕ್ಷೇಪ ಹೇಳಲುಳ್ಳವರು ಸದ್ರಿ ತಾ.8-2-50ನೇ ದಿವಸ ಬೆಳಿಗ್ಗೆ 10ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವುದು.—

**P. V. Achar.**
Vakil for Petitioner.
ಉಡುಪಿ. ತಾ.17-1-50.

ಶ್ರಾವಣೇಸಿ

... ಶ್ರೀ ಸನ್ನ್ಯಾಸಿ ... ನ ಸ್ಟ್ಯಾಂಡರ್ಡ್ ... ಶ್ರೀ ವಿ. ಟ. ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಪಿ. ಡಿ. ಪೆ...ಲ್ಲಿ ಅವರು ಬಾಲಗೇಣೆ (ದುಸ್ಥಿತಿಯನ್ನು ವಿವರಿಸಿ, ನಿವಾರಣೋಪಾಯ ಸೂಚಿಸಿ, ಪರಿಷತ್ತಿನ ಉದ್ಘಾಟನೆ ಮಾಡಿದರು. ಸ್ವಾಗತ ಸಮಿತಿ ಕಾರ್ಯದರ್ಶಿ ಶ್ರೀ ಎನ್. ವಿಠಲದಾಸರು ಭಾಷಣ ಮಾಡುತ್ತಾ ರೈತರಿಗೆ ಸಂಬಂಧಿಸಿದ ಹಲವಾರು ವಿಷಯಗಳನ್ನು ಸಭೆಯ ಮುಂದಿಟ್ಟರು. ರೈತರ ಸಂಕಷ್ಟಗಳು, ಅವುಗಳನ್ನು ಬಗೆಹರಿಸುವ ವಿಧಾನ, ರೈತರ ಸಂಘಟನೆಯ ಆವಶ್ಯಕತೆ ಮೊದಲಾದ ವಿಷಯಗಳನ್ನೆತ್ತಿ ಅಧ್ಯಕ್ಷರ ಭಾಷಣವಾಯಿತು. ಒಕ್ಕಲುತನ ಸುಧಾರಣಾ ಮಸೂದೆಯ ಅವಶ್ಯಕತೆ, ಸ್ಥಂಭನ ಹುಕುಮಿನ ಜರೂರಾತಿ, ಸರಕಾರ ತೀರ್ವೆಯ ಎರಡರಷ್ಟಕ್ಕಿಂತ ಜಾಸ್ತಿ ಗೇಣಿ ಇರಕೂಡದು, ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ರೈತನಿಗೆ ದಿನಾ ಒಂದರ ಅರ್ಧ ಸೇರು ಅಕ್ಕಿ, ಬೀಜ ಇತ್ಯಾದಿ ನಿಯೋಗಗಳಿಗೆ ಪ್ರತ್ಯೇಕ ಅಕ್ಕಿ ವ ಭತ್ತ ವಿಂಗಡಿಸಿಡಲ್ಪಟ್ಟ ನಂತರವೇ ಉಳಿದುದನ್ನು ಉಳಿತಾಯವೆಂದು ಪರಿಗಣಿಸಬೇಕು, ಮಲ್ಪೆ ಬಂದರಾಗಬೇಕು, ಇತ್ಯಾದಿ ನಿರ್ಣಯಗಳಾದುವು. ಪರಿಷತ್ತು ಮುಗಿದ ನಂತರ ಸಾರ್ವಜನಿಕ ಸಭೆಯು ಗಾಂಧಿ ಮೈದಾನಿನಲ್ಲಿ ಜರಗಿತು.

**ಪರ್ಯಾಯ ಮಹೋತ್ಸವ-**ಶ್ರೀ ಕಾಣೂರು ಸ್ವಾಮಿಗಳವರ ಪರ್ಯಾಯ ಮಹೋತ್ಸವವು ಇದೇ ತಾ 17ರಲ್ಲು ಯಶಸ್ವಿಯಾಗಿ ಜರಗಿತು. ಪರ್ಯಾಯ ಮೆರವಣಿಗೆ, ಪರ್ಯಾಯ ದರ್ಬಾರು, ಅನ್ನ ಸಂತರ್ಪಣೆ, ಬ್ರಹ್ಮರಥೋತ್ಸವಾದಿ ಕಾರ್ಯಕ್ರಮಗಳು ಈ ಶುಭ ಮುಹೂರ್ತದಲ್ಲಿ ಜರಗಿದವು.

**ಜಿಲ್ಲಾ ಬೋರ್ಡ್ ಸಭೆಯು-**ಉಡುಪಿ ಬೋರ್ಡ್ ಹೈಸ್ಕೂಲ್ ಪೀಪಲ್ಸ್ ಹಾಲಿನಲ್ಲಿ ಇದೇ ತಾ 17ರಲ್ಲು ಅಪರಾಹ್ನ 3 ಗಂಟೆಗೆ ಬೋರ್ಡ್ ಅಧ್ಯಕ್ಷ ಶ್ರೀ. ಬಿ. ಪಿ. ದಯಾ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಮೈಸೂರು ಸಹಿತ ಕರ್ನಾಟಕ ಪ್ರಾಂತ ರಚನೆ ಕೂಡಲೇ ಆಗಬೇಕು ಎಂಬ ನಿರ್ಣಯವು ಒಮ್ಮತದಿಂದ ಪಾಸಾಯಿತು. ಬೋರ್ಡ್ ಹೈಸ್ಕೂಲ್ ಪೀಪಲ್ಸ್ ಹಾಲನ್ನು ಬೇಸಿಕ್ ಟ್ರೈನಿಂಗ್ ಬಿಟ್ಟು ಕೊಟ್ಟುದನ್ನು ಅಭ್ಯಾಗ ಸೂಚಿಸಿ ಸ್ವೀಕರಿಸಲಾಯಿತು. ಮಂಗಳೂರು ಟೌನ್ ಹಾಲ್ ಟ್ರಸ್ಟಿಗೆ ಬೋರ್ಡಿನ ಪ್ರತಿನಿಧಿಯಾಗಿ ಡಾ। ಬಾಲಪ್ಪ ಸೆಟ್ಟರನ್ನು ಆರಿಸಲಾಯಿತು. ವೃತ್ತಿ ತೆರಿಗೆ ಅಪ್ಪೀಲು ಕಮಿಟಿಗಳಿಗೆ ಆಯಾಯ ತಾಲೂಕುಗಳಿಂದ ಜಿಲ್ಲಾ ಬೋರ್ಡಿಗೆ ಬಂದ ಪ್ರತಿನಿಧಿಗಳೇ ಮೆಂಬರಾಗಿರಬೇಕೆಂದು ನಿರ್ಧಾರವಾಯಿತು. ಗೇಣಿ ಅಕ್ಕಿಯನ್ನು ಉಳಿತಾಯ ಅಕ್ಕಿಯೆಂದು ನಿರ್ಧರಿಸಕೂಡದಾಗಿ ಸರಕಾರವನ್ನು ಕೇಳಿಕೊಳ್ಳಲಾಯಿತು.

ದ. ಕನ್ನಡ

ಮೂಲ್ಕಿ-ಬಿಲ್ಲವ ಸಮಾಜ ಸೇವಾ ಸಂಘದಲ್ಲಿ ಬ್ರಹ್ಮಶ್ರೀ (ನಾರಾಯಣ ಗುರು

ಸ್ವಾಮಿಪ್ರತಿಷ್ಠಾ ಪ್ರತಿಷ್ಠಾ ದಿನಾಚರಣೆಯು ಇದೇ ಜನವರಿ ತಿಂಗಳ 8ನೇ ಆದಿತ್ಯವಾರ ಅಪರಾಹ್ನ ಶ್ರೀ. ಯಂ. ಸೋಮನಾಥನವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಕೋಡಿ ಮೊದಲಾದ ಆಸುಪಾಸಿನ ಗ್ರಾಮಗಳ ಭಜನೆಗಳು ಬಂದಿದ್ದುವು.

ಕಾರ್ಯಕ್ರಮದಂತೆ ಅಧ್ಯಕ್ಷರ ಚುನಾವಣೆಯಾಗಲು ಶ್ರೀ ದೇವತಾ ಪ್ರಾರ್ಥನೆಯಾಗಿ ಸಭಾ ಕಾರ್ಯಗಳು ಆರಂಭವಾದುವು. ಸಂಘದ ಗೌ. ಕಾರ್ಯದರ್ಶಿಯವರು ಶ್ರೀ ಗುರು ಪ್ರತಿಷ್ಠಾ ದಿನಾಚರಣೆಯ ಸಂಕ್ಷಿಪ್ತ ವರದಿಯನ್ನಿತ್ತ ನಂತರ ನೆರೆದ ಸಭಿಕರಲ್ಲಿ ಶ್ರೀಗಳಾದ ಕೆ. ಚೆನ್ನ ಕೋಟಿಯಾನ್, ಡಾಕ್ಟರ್ ಸಿ. ಸಿ. ಸುವರ್ಣ, ಕೆ. ಉಗ್ಗಪ್ಪ, ಕೆ. ಸೋಮಪ್ಪ, ಯಂ. ಕೆ. ಎಲ್ಲಪ್ಪ, ಯನ್. ಟಿ ಸುವರ್ಣರೇ ಮೊದಲಾದವರು ಭಾಷಣವಿತ್ತರು. ನಂತರ ಅಧ್ಯಕ್ಷರ ಭಾಷಣವಾಗಿ ಶ್ರೀ ಗುರು ಪೂಜೆಯಾಗಿ ಪ್ರಸಾದ ಹಂಚಲ್ಪಟ್ಟ ಮೇಲೆ ಧನ್ಯವಾದಾರ್ಪಣವಾಗಿ ಸಭೆಯು ಕೊನೆಗೊಂಡಿತು.

### ನಿಧನ

ಕಟಪಾಡಿ: ಹೆನರಾಂತ ನಾಯಕರ ಮನೆತನದ ಶ್ರೀ ಪಾಂಗಾಳ ವಾಮನ ನಾಯಕರು ಹೃತ್ಕ್ರಿಯೆ ರೋಗದಿಂದ ತಾ. 12-1-50 ರಂದು ಉಡುಪಿಯಲ್ಲಿ ಅಕಾಲ ನಿಧನಕ್ಕೆ ತುತ್ತಾದರೆಂದು ತಿಳಿಸಲು ವಿಷಾದಿಸುವೆವು. ಮೃತರು ಸದ್ಗುಣ ಭರಿತರಾಗಿದ್ದು ಬಡಜನರ ಪ್ರೀತಿ ಆದರಗಳಿಗೆ ತುಂಬಾ ಪಾತ್ರರಾಗಿದ್ದರು. ಅವರ ಅಕಾಲ ನಿಧನದಿಂದ ಅವರ ಕುಟುಂಬದವರಿಗುಂಟಾದ ಅಪಾರ ಶೋಕದಲ್ಲಿ ನಾವೂ ಸಹಭಾಗಿಗಳಾಗಿರುವುದಲ್ಲದೆ ಅವರ ಆತ್ಮಕ್ಕೆ ಶ್ರೀ ಭಗವಂತನು ಚಿರಶಾಂತಿಯನ್ನಿಯಲೆಂದು ಕೋರುವೆವು.


**ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.**

ತಾರೀಕು 15—1—50ರಿಂದ ಚಿಕ್ಕರಿದ 3 ನೇವಾರ

ಮುಂದೆಂದೂ ಬಾರದ ಈ ಯೋಗ ಈಗ ಮನೆಬಾಗಿಲಿಗೆ ಬಂದಾಗ ಕರೆದು ಸ್ವಾಗತಿಸಿರಿ. ಮಹಾತ್ಮರವರ ಕನ್ನಡ

**ನಾಗ ಕನ್ನಿಕಾ**

ಜಯಶ್ರೀ, ಪ್ರತಿಮಾ, ರತ್ನಮಾಲ, ರಾಘವೇಂದ್ರ ರಾವ್, ಮೊದಲಾದವರು.



**ಈ ವರೆಗೆ ಪ್ರಕಟವಾದ 'ಅಂತರಂಗ'ದ ಪ್ರಕಟಣೆಗಳು**

| | | | | |
|---|---|---|---|---|
| ೧೯೪೮ರ ಬಿರುದಾವಳಿ (ಎಂ. ವಿ. ಹೆಗ್ಡೆ) | | 0 | 2 | 0 |
| ಹೈದರಾಬಾದ್ ವಿಜಯ (ಯಕ್ಷಗಾನ ,, ) | | 0 | 3 | 0 |
| ಸೆರೆಯಾಳು (ನೀಳ್ಗತೆ) ಕುಲಕರ್ಣಿ ಬಿಂದುಮಾಧವ | | 0 | 4 | 0 |
| ಗಾದೆಯ ಗಾಂಧಿ (ಸೂಕ್ತ ಪರಿಚಯ)ಎಂ. ವಿ. ಹೆಗ್ಡೆ | | 0 | 3 | 0 |
| ಶಾಂತಿಯ ಮಡಲಿನಲ್ಲಿ (ನೀಳ್ಗತೆ) ಪ. ಸು. ಭಟ್ಟ | | 0 | 3 | 0 |
| ಬಲಿಪೀಠದಲ್ಲಿ (ನಾಟಕ) ಆರ್. ಕಲ್ಯಾಣಮ್ಮ | | 0 | 3 | 0 |
| ಆಗಲಿ ಅಕ್ಕ ಸರೋಜಿನಿ (ಎಂ. ವಿ. ಹೆಗ್ಡೆ) | | 0 | 3 | 0 |
| ನನ್ನ ಹೆಂಡತಿ (ಕತೆಗಳು) ಮಾಳಕೋಡ ನಾರಾಯಣ ಹೆಗಡೆ | | 0 | 3 | 0 |
| ಪುಣ್ಯಫಲ (ನೀಳ್ಗತೆ) ಗಿರಿಬಾಲೆ | | 0 | 3 | 0 |
| ಸುಖದಪಾರಿ (ವೈರಾಗ್ಯಶತಕ) ಕೆ. ಎ. ದೇವದಾಸ | | 0 | 3 | 0 |
| ಕಾಲವೇ ಬದಲಾಗಿದೆ (ಕು. ಶಿ ಹರಿದಾಸ ಭಟ್ಟ) | | 0 | 3 | 0 |
| ಹಂಬಲ (ಕೃಷ್ಣಮೂರ್ತಿ ಕಿತ್ತೂರ) | | 0 | 3 | 0 |
| ನುಡಿ ಮುತ್ತುಗಳು (ಎಂ. ವಿ. ಹೆಗ್ಡೆ) | ಮಾಲೆ ೧ | 0 | 3 | 0 |
| ,, ,, | ಮಾಲೆ ೨ | 0 | 3 | 0 |
| ,, ,, | ಮಾಲೆ ೩ | 0 | 3 | 0 |
| ಸುಕಾಂತ (ಅನುವಾದಿತ ಕತೆ) ವೀ. ಜ- ಹಿತ್ತಲಮನಿ | | 0 | 3 | 0 |
| ಪಂಚಮುಖಿ (5 ಪ್ರಬಂಧಗಳು) ಬಿ. ಎಚ್. ಶ್ರೀಧರ | | 0 | 3 | 0 |
| ಜಾತೀಭೂತಕ್ಕೆ ಬಲಿ (ನೀಳ್ಗತೆ) ಕೆ. ದೇವಕಿ | | 0 | 3 | 0 |
| ಜನಸೇವೆಯ ಸೋಗಿನಲ್ಲಿ (ಕತೆ) ಕೆ. ಶಿವರಾಮ ಶೆಟ್ಟಿ | | 0 | 3 | 0 |
| ನಾ ಕಂಡ ಅವಳು (ಕತೆ) ಶ್ರೀಪತಿ | | 0 | 3 | 0 |
| ತ್ರಿವೇಣಿ (ಪ್ರಬಂಧಗಳ ಸಂಗ್ರಹ) | | 0 | 3 | 0 |
| ಸಲುವಂಗಿ (ಕತೆ)ಎಸ್. ಸುಬ್ಬರಾಮಯ್ಯ, ಬಿ ಎ. (ಆನರ್ಸ್) | | 0 | 3 | 0 |
| ಬಾಡಿಗೆಯ ಮನೆ ಮತ್ತು ಮುಸುಕು (ನಾಟಕಗಳು) | | 0 | 3 | 0 |
| ವರ್ತಮಾನ ಕಾಲದ ನಾಲ್ವರು ಮಹಾನುಭಾವರು | | 0 | 4 | 0 |
| ದೇವರ ನಾಮ ಮತ್ತು ಆದರ ಸಾಧನೆ (ಬಿ. ವಿ. ಶರ್ಮ) | | 0 | 3 | 0 |
| ಎರಡು ಕತೆಗಳು | | 0 | 3 | 0 |
| ಸರಸ-ವಿರಸ! (೮ ವಿನೋದ ಚಿತ್ರಗಳು) | | 0 | 3 | 0 |
| ಹೈಮವೇಶ್ವರಿ (ಕಾದಂಬರಿ) | | 0 | 3 | 0 |
| ವಿವಿಧ ವಿಷಯ ಕೋಶ ಭಾಗ ೨ (ವೈಜ್ಞಾನಿಕ ಸಂಗ್ರಹ) | | 0 | 6 | 0 |
| ಕುಲವಿಲ್ಲದ ಹೆಣ್ಣು (ಪಿ. ವೆಂಕೋಬಾಚಾರ್ಯ ಬಿ.ಎ., ಬಿ.ಟಿ.) | | 1 | 0 | 0 |
| ತವರು ಮನೆಯಿಂದ (ಸೌ। ಶಾರದಾ ದೇವಿ) | | 0 | 3 | 0 |
| ಭಾಗ್ಯ ಲಕ್ಷ್ಮಿ (ನಾಟಕ) ಬೆಳ್ಳಂಗಡಿ ಲಕ್ಷ್ಮಣರಾವ್ | | 1 | 0 | 0 |
| ಯುಗವಾಣಿ (ಕವನ ಸಂಗ್ರಹ) ಕು. ಶಿ. ಹರಿದಾಸಭಟ್ಟ | | 0 | 8 | 0 |
| ಸ್ತ್ರೀ ಹೃದಯ— (ವಾಸಂತಿ ಪಡುಕೋಣೆ) | | 0 | 3 | 0 |
| ದ್ವೇಷ- (ಶ್ರೀನಿವಾಸಮೂರ್ತಿ ಗೊರೂರು) | | 0 | 3 | 0 |
| ಕಲಾವಿದನ ದಿನಚರಿ (ಯಸ್ಸೆಲ್) | | 0 | 3 | 0 |
| ಪ್ರಜಾಪ್ರಭುತ್ವವನ್ನು ಕುರಿತು ಶಿವರಾಮ ಕಾರಂತರು) | | 0 | 4 | 0 |
| ಆಧುನಿಕ ಭಾರತ (ಎಚ್. ಭೀಮರಾವ್) | | 0 | 4 | 0 |
| ಭಾರತದ ಸಾಹಿತ್ಯ ಮತ್ತು ಕಲೆಗಳು (ವಿಘ್ನೇಶ್ವರ ಶರ್ಮ) | | 0 | 4 | 0 |
| ಸ್ತ್ರೀ ಸ್ವಾತಂತ್ರ್ಯ ಬೇಕೆ? (ವೈದ್ಯ ವಿನಾಯಕರಾವ್) | | 0 | 3 | 0 |

ಸಿಗುವ ಸ್ಥಳ:—

**ಅಂತರಂಗ ಕಾರ್ಯಾಲಯ, ಉಡುಪಿ.**

ಅಥವಾ **ನವಯುಗ ಪ್ರೆಸ್, ಉಡುಪಿ**



**ಋತುಸ್ರಾವ ನಿಂತಿತು**

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹಡೆತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾಧಾರಣ ... ಮಾಂದಿಗೆ ಖಾತ್ರಿ ಗುಣವಾಗಿದೆ. ...: ರೂ 3-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ. 8- [ವಿ. ಪಿ. ಪಸ್ಟೇಜಾಣೆ ಪ್ರತ್ಯೇಕ.]

M/s. D. DEVEE, F. DS. (N. J.)
Tollygunge CALCUTTA.

... ದು: ಸಹಾಕಂಪೆನಿ, ಮಂಗಳೂರು


### ನಿಡಂಬೂರು ಪಂಚಾಯತ ಬೋರ್ಡ್ ಫಾರಿ ಮತ್ತು ಮಾರ್ಕೆಟು ಗುತ್ತಿಗಳ ಏಲಮು ಪ್ರಕಟಣೆ

ಈ ಬೋರ್ಡಿನ **ಬಂಕೇರಕಟ್ಟ ಫಾರಿಯ ಮತ್ತು ಕಿನ್ನಿಮೂಲ್ಕಿ ವ ಕಡೇಕಾರು ಉಪ್ಪಿನ ಕೋಟಿಯ ಎರಡು ದಿನವಹಿ ಮೀನು ಮಾರ್ಕೆಟುಗಳ** ಫೀಸು ವಸೂಲಿಯ ಸ್ವಾತಂತ್ರ್ಯದ ಗುತ್ತಿಗಳನ್ನು ಈ ಬೋರ್ಡಿನ ಪ್ರೆಸಿಡೆಂಟರು ತಾ. 1-4-1950 ರಿಂದ 31-3-1951ರ ವರೆಗಿನ 1 **ವರ್ಷದ ಅವಧಿಗೆ** ಮಾತ್ರ ಇದೇ **ತಾ. 28-1-1950ನೇ ಶನಿವಾರ ಸಂಜೆ ಗಂಟೆ 5ಕ್ಕೆ** ಈ ಬೋರ್ಡಿನ ಆಫೀಸಿನಲ್ಲಿ ಬಹಿರಂಗವಾಗಿ ಪ್ರತ್ಯೇಕಪ್ರತ್ಯೇಕ ಏಲಂ ಮಾಡಲಿರುವರು.

ಬಂಕೇರಕಟ್ಟ ಫಾರಿಯ ಕುರಿತು ರೂ. 100, ಕಿನ್ನಿಮೂಲ್ಕಿ ಮೀನು ಮಾರ್ಕೆಟಿನ ಕುರಿತು ರೂ. 50, ಕಡೇಕಾರು ಮೀನು ಮಾರ್ಕೆಟಿನ ಕುರಿತು ರೂ. 15, ಈ ಮೇರೆಗೆ ಪ್ರಥಮ ವಾರಿನ ಮೊಬಲಗಾಗಿ ನಿರ್ಣಯಿಸಲ್ಪಟ್ಟಿದೆ.

ಬಿಡ್ಡರರು ಪ್ರತಿಯೊಬ್ಬರೂ ಆಯಾ ಏಲಮಿಗೆ ಮೊದಲು ಪ್ರತಿಯೊಂದು ಗುತ್ತಿಯ ಕುರಿತು ರೂ. 5ರಂತೆ ಪ್ರಥಮ ಕೀವಣಿಯನ್ನೂ, ತನ್ನ ತಮ್ಮ ಅಧ್ಯಕೆಯ ಕುರಿತು ತಮ್ಮತಮ್ಮ ಗ್ರಾಮಗಳ ಪಟೇಲರ ಸರ್ಟಿಫಿಕೇಟನ್ನೂ ಹಾಜರು ಮಾಡಿಯೇ ಬಿಡ್ ಮಾಡಲು ತೊಡಗತಕ್ಕದು. ಅತ್ಯಂತ ಅಧಿಕ ಬಿಡ್ಡನ್ನೇ ಬೋರ್ಡಿನ ಅನುಮೋದನಕ್ಕೆ ಒಳಪಟ್ಟು ಕಾಯಂ ಮಾಡಲಾಗುವುದು. ಸೋತ ಬಿಡ್ಡರರ ಕೀವಣಿಗಳನ್ನು ಏಲಂ ಮುಗಿದೊಡನೆ ಹಿಂದೆ ಕೊಡಲಾಗುವುದು.

ಏಲಂ ಕಾಯಂ ಆದ ಬಿಡ್ಡರನು ಕಾಯಂ ಆದ ಬಿಡ್ಡಿನ ಅರ್ಧಾಂಶವನ್ನು ಏಲಂ ಮುಗಿದೊಡನೆ ಪ್ರೆಸಿಡೆಂಟರಿಗೆ ತೆತ್ತು ರಶೀದಿ ಪಡೆಯತಕ್ಕದಲ್ಲದೆ, ಮಿಕ್ಕುಳಿದ ಅರ್ಧಾಂಶವನು ಸರಿಯಾದ 6 ಕಂತುಗಳಿಂದ 1950ನೇ ಎಪ್ರಿಲ್ ತಿಂಗಳ ಲಾಗಾಯ್ತು ಪ್ರತಿತಿಂಗಳ ಕೊನೆಯ ತಾರೀಕಿಗೇ (ಅದು ಆದಿತ್ಯವಾರವಾದರೆ ಆ ಹಿಂದಿನ ಶನಿವಾರವೇ) ತೆತ್ತು ಬರುವ ಕುರಿತೂ ತನ್ನ ಆ ಗುತ್ತಿಗೆ ಸಂಬಂಧಿಸಿದ ಶರ್ತಗಳನ್ನು ಅನುಸರಿಸಿ ನಡೆದು ಬರುವ ಕುರಿತೂ ನಿರ್ದಿಷ್ಟವಾದ ಫಾರಮಿನಲ್ಲಿ ತಕ್ಕ ಠಸೆಯಲ್ಲಿ ತನ್ನ ಖರ್ಚಿನಿಂದ ಒಂದು ಕರಾರನ್ನು ಬೋರ್ಡಿಗೆ ಬರೆದು ಕೊಡತಕ್ಕದು ತಪ್ಪಿದಲ್ಲಿ ಆತನು ಕಟ್ಟಿದ ಕೀವಣಿಯನ್ನು ಕಳೆದುಕೊಳ್ಳುವುದಲ್ಲದೆ, ಆತನ ಗುತ್ತಿಯ ಕುರಿತು ಆ ಮೇಲೆ ನಡೆಯಬಹುದಾದ ಪುನಃ ಏಲಮಿನ ಖರ್ಚುಗಳನ್ನೂ ನಷ್ಟಗಳನ್ನೂ ಬೋರ್ಡಿಗೆ ಕೂಡಿಸಿಕೊಡಲು ಬದ್ಧನಾಗುವನು. ಮೇಲಾಗಿ ತನ್ನ ಗುತ್ತಿಯನ್ನು ತಾ 1-4-1950ಕ್ಕೆ ಸ್ವಾಧೀನ ಪಡೆಯಲೂ ಅನರ್ಹನಾಗುವನು.

ತಿಂಗಳು ಕಟ್ಟಲೆಯಂತೆ ಮೇಲೆ ಹೇಳಿದ ಯಾವುದಾದರೂ ಕಂತನ್ನು ತೆರಲು ತಪ್ಪಿದಲ್ಲಿ ತೆರದುಳಿದ ಸಂಪೂರ್ಣ ಹಣವನ್ನು ರೂ. 0-8-0ರದಂಡನೆಯೂ ಮತ್ತು ಬಾಕಿಯಾದ ಕಂತಿನ ತಾರೀಕಿನ ಲಾಗಾಯ್ತು ಸಾ. ಸೇ. 6ರ ಬಡ್ಡಿಯ ಸಮೇತ ಏಕ ಗಂಟಿನಿಂದ ತೆರಲು ಆಧವನು ಬದ್ಧನಾಗುವನು.

ಬೋರ್ಡಿನ ಅನುಮತಿಯಿಲ್ಲದೆ ಗುತ್ತೆದಾರನು ತನ್ನ ಹಕ್ಕನ್ನು ಪರಭಾರೆ ಮಾಡಕೂಡದು. ಗುತ್ತಿಗೆ ಅಗತ್ಯವುಳ್ಳ ಕಟ್ಟಡಗಳನ್ನು, ದೋಣಿ, ಬೋರ್ಡ್ ಮುಂತಾದ ಉಪಕರಣಗಳನ್ನು ತನ್ನ ಖರ್ಚಿನಿಂದಲೇ ಆತನು ಒದಗಿಸಿಕೊಳ್ಳತಕ್ಕದು. ಗುತ್ತಿಯ ಸ್ಥಳದ ಸರಕಾರ ತೀರ್ವೆ ಸೆಸ್ಸುಗಳನ್ನು ಆತನೇ ತೆರತಕ್ಕದು; ಮೇಲಾಗಿ ಈ ಬೋರ್ಡಿನ ಉಪನಿಯಮಗಳಿಗೂ, ಫೀಸಿನ ದರಗಳಿಗೂ ಅನುಸರಿಸಿಯೇ ತನ್ನ ಕರ್ತವ್ಯಗಳನ್ನು ಆತನು ಪಾಲಿಯಿಸಿ ಬರತಕ್ಕದು.

**ಎನ್. ರಾಜಗೋಪಾಲಕೃಷ್ಣರಾವ್**
ಪ್ರೆಸಿಡೆಂಟ್,

ನಿಡಂಬೂರು ಪಂಚಾಯತ ಬೋರ್ಡ್,
ಕಡೇಕಾರು, ತಾ. 14ನೇ ಜನವರಿ 1950.

## ಮಂಗಳೂರು

**ಘಟನಾ ಸಮಿತಿ ಸದಸ್ಯರಾದ** ಶ್ರೀ ಎಚ್. ವಿ. ಕಾಮತರು ಕಳೆದ ವಾರ ಮಂಗಳೂರಿಗೆ ಬಂದಿದ್ದು ಜಿಲ್ಲಾ ವಾಣಿಜ್ಯ ಸಂಘದಲ್ಲಿ ಭಾಷಣವಿತ್ತರು. ಸಂಘದ ಅಧ್ಯಕ್ಷ ಶ್ರೀ ವಿ. ಎಸ್. ಕುಡ್ವರು ಮಾನ್ಯ ಅತಿಥಿಗಳಿಗೆ ಸುಸ್ವಾಗತವಿತ್ತ ಬಳಿಕ ಶ್ರೀ. ಕಾಮತರು ಕಾಲೋಚಿತ ಮಾತುಗಳನ್ನಾಡುತ್ತಾ ಭಾರತ ಪ್ರಜಾಪ್ರಭುತ್ವದಲ್ಲಿ ಸರ್ವರೂ ತಮ್ಮ ಜವಾಬ್ದಾರಿಯನ್ನರಿತುಕೊಂಡು ರಾಷ್ಟ್ರದ ಉನ್ನತಿಗಾಗಿ ದುಡಿಯಬೇಕೆಂದರು. ಕಳ್ಳಸಂತೆ, ಸಮಾಜಘಾತಕ ಘೋರ ಹಗಳನ್ನು ತಡೆಗಟ್ಟಲು ಎಲ್ಲರೂ ನೆರವಾಗಬೇಕೆಂದರು. ಕೆನರಾ ಹ್ಯಾಸ್ಕೂಲಿನ ವಿದ್ಯಾರ್ಥಿ ಸಂಘದಲ್ಲಿಯೂ ಮಾತನಾಡುತ್ತಾ ವಿದ್ಯಾರ್ಥಿಗಳಲ್ಲಿ ಶಿಸ್ತು ಮೊದಲಾದುವು ಚೆನ್ನಾಗಿರಬೇಕೆಂದರು.

**ಭಾರತ ಪ್ರಜಾಪ್ರಭುತ್ವ ದಿನಾಚರಣೆ** ಸಂಬಂಧವಾಗಿ ಜಿಲ್ಲಾ ಕಲೆಕ್ಟರ್ ಜನಾಬ್ ಸಯ್ಯದ್ ಅಹಮ್ಮದ್ ಅವರು ಈಚೆಗೆ ಒಂದು ಸಭೆಯನ್ನು ಜರಗಿಸಿ ತಾ 26ರ ಕಾರ್ಯಕ್ರಮವನ್ನು ನಿಶ್ಚಯಿಸಿದರು. ಆ ದಿನ ಸಂಜೆ 4½ ಗಂಟೆಗೆ ಧ್ವಜಾರೋಹಣ, ಪೋಲೀಸ್ ಮತ್ತು ಸ್ಕಾಟು ದಳದವರ ಪೆರೇಡ್, ಬಳಿಕ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಸಾರ್ವಜನಿಕ ಸಭೆ, ರಾತ್ರಿ ಕಟ್ಟೋಣಗಳನ್ನು ದೀಪಗಳಿಂದಲಂಕರಿಸುವುದು ಇತ್ಯಾದಿ ಕಾರ್ಯಕ್ರಮಗಳಾಗುವುವು ತಾ. 26ರಲ್ಲು ಕೆಲಸಗಾರರಿಗೆಲ್ಲಾ ಸಂಬಳ ಸಹಿತ ರಜೆಕೊಡಬೇಕೆಂದು ಎಲ್ಲಾ ಕಾರ್ಖಾನೆಗಳ ಮ್ಹಾಲಕರನ್ನು ಕೇಳಿಕೊಳ್ಳುವ ನಿರ್ಧಾರವೂ ಆಯಿತು.

**ಆತ್ಮಹತ್ಯೆ-ಸ್ಥಳೀಯ ಗೋಶನ್** ಹೆಂಗಸರ ಆಸ್ಪತ್ರೆಗೆ ದಾಖಲು ಮಾಡಲ್ಪಟ್ಟ ದ್ರೌಪದಿ ಎಂಬ 50 ವರುಷ ಪ್ರಾಯದ ಹೆಂಗಸೊಬ್ಬಳು ಕ್ಷಯರೋಗದಿಂದ ನರಳುತ್ತಿದ್ದು ತಾ. 9ರಲ್ಲು ರಾತ್ರಿ ಅದೇ ಮಟಾರದ ಬಾವಿಗೆ ಹಾರಿ ಮೃತಳಾದಳೆಂದು ತಿಳಿದು ಬರುತ್ತದೆ.

**ವಯಸ್ಕರ ಶಿಕ್ಷಣ-** ಇದೇ ಬರುವ ಫೆಬ್ರವರಿ 3ರಿಂದ 7ರ ತನಕ ವಯಸ್ಕರ ಶಿಕ್ಷಣ ವಾರದ ಆಚರಣೆಯನ್ನು ಇಡೀ ಜಿಲ್ಲೆಯಲ್ಲಿ ನಡೆಸಬೇಕಾಗಿ ಈಚೆಗೆ ಕೂಡಿದ ಸಭೆಯಲ್ಲಿ ನಿರ್ಧಾರವಾಗಿ ಆ ಬಗ್ಗೆ ಕಾರ್ಯಕ್ರಮ ತಯಾರಿಸಲು ಒಂದು ಕಮಿಟಿಯು ನೇಮಕವಾಯಿತು.

**ದ. ಕ. ಜಿಲ್ಲಾ ಆಹಾರ ಸಮಿತಿ** ಸಭೆಯು ಈಚೆಗೆ ಜಿಲ್ಲಾ ಕಲೆಕ್ಟರ್ ಜನಾಬ್ ಸಯ್ಯದ್ ಅಹಮ್ಮದರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲೆಯ ಆಹಾರದ ಪರಿಸ್ಥಿತಿ ಕುರಿತು ಜಿಲ್ಲಾ ಸರಬರಾಯಿ ಅಫೀಸರರು ಮಾತನಾಡಿದರು. 7000 ಟನ್ ಅಕ್ಕಿಯನ್ನು ಜಿಲ್ಲೆಯ ಹೊರಗೆ ಕಳುಹಿಸುವುದರಲ್ಲಿ ಆರ್ಥನಿಸ್ಸಿದೆಂದೂ ಆ ಸಾಗಾಟದಲ್ಲಿ 34,000 ಟನ್ ಕೊರತೆ ಉಂಟಾ... ದೆಂದೂ ಶ್ರೀ ಕೆ. ಡಿ ಜನರಲ್ ಶೆಣೈ ... ಟೀಕಿಸಿದರು. ಸಂಗ್ರಹಣದ ವಿರುದ್ಧ ... ವಾಸವಾಯಿತು

ಹಲವು ಕಡೆಗಳಲ್ಲಿ ಮೊದಲನೆ ಬೆ... ಹಾಳಾದುದರಿಂದಲೂ ಮಳೆಯಿಲ್ಲದೆ ... ನೆ ಬೆಳೆಯು ಕೂಡಾ ಸಂಪೂರ್ಣವಿಲ್ಲ... ರಿಂದಲೂ ಅಕ್ಕಿ ಸಂಗ್ರಹಿಸುವಾಗ ಸ್ವ... ಯೆಯಿಂದ ರೈತನೊಡನೆ ವರ್ತಿಸಬೇ... ಶ್ರೀ ಕೆ. ಆರ್. ಕಾರಂತರು ಹೇ... ಪ್ರೊಸಿಕ್ಯೂಶನ್ ಕೇಸುಗಳನ್ನು ಹೆಚ್ಚು ... ಕೊಡದೆ ಕಳ್ಳಸಂತೆಯಲ್ಲಿ ಮಾರುವವ... ಲೆಮಾತ್ರ ಮಾಡಲಾಗಿದೆಯೆಂದು ... ರ ದೊರೆಯಿತು. ಪ್ರತಿ ತಿಂಗಳು ... ಟನ್ ಸಕ್ಕರೆಯನ್ನು ಈ ಜಿಲ್ಲೆಗೆ ಸಂ... ಮಾಡಬೇಕೆಂದು ರೆವಿನ್ಯೂ ಬೋರ್ಡ... ಕೇಳಿಕೊಳ್ಳಲಾಯಿತು.

**ಮುಷ್ಕರ ಪ್ರಾರಂಭ-** ಕುದ್ರೋ... ಕಾಮನ್ವೆಲ್ತ್ ಹಂಚಿನ ಕಾರ್ಖಾನೆಯ ... ಮಾರು 500 ಕೆಲಸಗಾರರು ಕಾರ್ಖಾನೆ ... ಮ್ಹಾಲಿಕರು ತಮ್ಮ ಕೇಳಿಕೆಗಳನ್ನು ಮ... ದಿದ್ದುದರಿಂದ ಇದೇ ತಾ. 9ರಿಂದ ಮು... ಪ್ರಾರಂಭಿಸಿರುವರು.

**ವಿದ್ಯಾರ್ಥಿ ಕಾಂಗ್ರೆಸ್–** ಮಂಗ... ರು ಶಾಖೆಯ ಸಾಮಾನ್ಯ ಸಭೆಯು ... ತಾ. 15ರಲ್ಲು ಜರಗಿ ಹೊಸ ಕಾರ್ಯ... ಸಮಿತಿಯ ಚುನಾವಣೆ, ಜಿಲ್ಲಾ ಸಮ್ಮೇ... ಕರೆಯುವ ವಿಚಾರಗಳನ್ನು ಪರ್ಯಾಲೋಚಿಸಿತು.

**ಶ್ರೀಯುತ ಕೊಂಚಾಡಿ ದಯಾನಂದ** B E, S.M, M P H.

ದಕ್ಷಿಣ ಕನ್ನಡ ಜಿಲ್ಲಾ ಪದ್ಮಶಾಲಿ ಸಮಾಜದಲ್ಲಿ ಪ್ರಥಮವಾಗಿ ಅಮೇರಿಕದ ಉಚ್ಚ ವಿದ್ಯಾಭ್ಯಾಸಂಗವನ್ನು ತೀರಿಸಿ ಸ್ವದೇಶಕ್ಕೆ ಹಿಂತಿರುಗಿದ ಈ ಮಹನೀಯರನ್ನು ಕಿನ್ನಿಮೂಲ್ಕಿ ಪದ್ಮಶಾಲಿ ಸಮಾಜ ಸೇವಾ ಸಂಘದವರು ಸ್ವಾಗತಿಸಿ ತಾರೀಕು 8-1-1950ನೇ ಆದಿತ್ಯವಾರ ಅವರ ಗೌರವಾರ್ಥವಾಗಿ ಮಾನಪತ್ರವನ್ನು ಸಮರ್ಪಿಸಿ ಸತ್ಕಾರ ಕೂಟವನ್ನು ಕೊಟ್ಟರು.

## ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿ...

O. S. No. 559/40

ಅಹಮದ್ ಕುಟ್ಟಿ ಬೆರೂಲ್ –ವಾ...
ಅಬ್ದುಲ್ಲರಹಿಮ್ ಕಂಬಾರ- ಪ್ರತಿವಾ...

ಕವರೊಳ್ಳನೆ

ಸದ್ರಿ ಪ್ರತಿವಾದಿ ಅಬ್ದುಲ್ಲರಹಿಮ್ ... ಬಾರಗೆ.

ನೀವು ಬರಕೊಟ್ಟಪ್ರೊ. ನೋಟಿನ ಅಸ... ಬಡ್ಡಿ ಖ್ಯನೇಜನ ವಸೂಲು ಕುರಿತುಮೊಲ್ಕ... ದ ವ್ಯಾಜ್ಯವು ದಾಖಲಾಗಿರುತ್ತದೆ. ಸದ್ರಿ ವ್ಯಾಜ್ಯವು ತಾ. 28-1-50ಕ್ಕೆ ತನ್ಕಿಗೆ ಇಟ್ಟಿ... ತ್ತದೆ. ಆದ್ರಿಂದ ನೀವು ಖುದ್ದಾಗಲೀ ಯ... ವಕೀಲರ ಮುಖಾಂತರವಾಗಲೀ ಸದ್ರಿ ಮ... ಲ್ಯಾಜ್ಯದ ತಾರೀಕಿಗೆ ಕೋರ್ಟಿನಲ್ಲಿ ಹ... ಜ್ರಾಗದಿದ್ದ ಪಕ್ಷದಲ್ಲಿ ನಿಮ್ಮನ್ನು ಎಕ... ಪಾರ್ಟಿ ಮಾಡಿ ತೀರ್ಪು ಕೊಡೋದಾಗುತ್ತದೆ.

(Sd.) C. Abdulla,
Advocate for Plff.
Kasaragod, 12-1-50.


## ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಘಾಯಗಳು, ಚಾಚುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷಘಾತ, ಮಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

**ಅಮೃತಾಂಜನ ಲಿಮಿಟೆಡ್**

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

# 'ಮಹಾಜನ್'

ಕಾಸರಗೋಡು

ಇವರ ತಯಾರಿಕೆಗಳನ್ನು ವಿಚಾರಿಸಿರಿ.

## ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

**೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ**

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲೆ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಆಹಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:- ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೆರಿ ಪ್ರೆಸ್. ನಂಜುಂಡೇಶ್ವರ ಮಾರ್ಕೆಟ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

# ಕುಲವಿಲ್ಲದ ಹೆಣ್ಣು

(ಸರಸ ಸಾಮಾಜಿಕ ಕಾದಂಬರಿ)

ಬರೆದವರು:— ಪಿ ವೆಂಕೋಬಾಚಾರ್ಯ, ಬಿ.ಎ.ಬಿ.ಟಿ

ದೇವದಾಸಿ ಕುಲದ ಉದ್ಧಾರವೇ ಮುಖ್ಯ ಕಥಾವಸ್ತು

ಕುಸುಮಳು ವೇಶ್ಯಾಪುತ್ರಿಯಾದರೂ ಅವಳು ವೇಶ್ಯೆಯಲ್ಲ!
ಅವಳ ಕತೆ ಹೇಗೆ ಸಾಗಿದೆ ಎಂದು ಓದಿಯೇ ತಿಳಿಯಿರಿ.

ದಪ್ಪ ಪುಸ್ತಕ ಬೆಲೆ ರೂ. 1—0—0

ಪ್ರತಿಗಳು, ಅಂತರಂಗ ಕಾರ್ಯಾಲಯ, ಉಡುಪಿ,
ಯಾ ನವಯುಗ ಪ್ರೆಸ್, ಉಡುಪಿ ಇಲ್ಲಿ ದೊರೆಯುತ್ತವೆ

ಬಿಳಿ ಕಾಗದ! ನಾಜೂಕಿನ ಬೈಂಡು!

**1950ನೇ ಇಸವಿಯ**

# ಪಾಕೆಟ್ ಡೈರಿಗಳು

| | | |
|---|---|---|
| ದೊಡ್ಡದು | (ಕೆಲಿಕೊ ಬೈಂಡ್) | 1-12-0 |
| ,, | (ಸಾದಾ ಬೈಂಡ್) | 1-8-0 |
| ಮದ ಸೈಜು | (ಕೆಲಿಕೊ) | 1-4-0 |
| ,, | (ಸಾದಾ) | 1-0-0 |
| ಸಣ್ಣದು | (ಕೆಲಿಕೊ) | 1-0-0 |
| ,, | (ಸಾದಾ) | 0-12-0 |

(ಟಪ್ಪಾಲು ಖರ್ಚು ಪ್ರತ್ಯೇಕ.)

ಸಿಗುವ ಸ್ಥಳಗಳು.–

ನವಭಾರತ ಬುಕ್ ಡಿಪ್ಪೊ, ಉಡುಪಿ.

ನವಯುಗ ಪ್ರೆಸ್, ಉಡುಪಿ.

ಜನಮತ

## ಕಾರಂತರ ಹೊಸ ಪ್ರಯೋಗ

ಕಲೆ ನಾಡಿನ ಸಂಸ್ಕೃತಿಯ ಪ್ರತೀಕ. ಕಲೆಯೊಡನೆಯೇ ನಾಡಿನ ಸಂಸ್ಕೃತಿ ಬೆಳೆದುಕೊಂಡು ಬರುತ್ತದೆ. ಅದ್ದರಿಂದಲೇ ಯಕ್ಷಗಾನ ನಮ್ಮ ನಾಡಿನ ಸಂಸ್ಕೃತಿಯ ಪ್ರತೀಕವಾಗಿತ್ತು. ಅದು ಬಹುಕಾಲದಿಂದಲೂ ಪಂಡಿತರನ್ನೂ ಪಾಮರರನ್ನೂ ತನ್ನೆಡೆಗೆ ಸೆಳೆದುಕೊಂಡು ನಡೆದು ಬಂದಿತ್ತು. ಅದು ಜನಮನದಲ್ಲಿ ನಮ್ಮ ಪ್ರಾಚೀನ ಹಿರಿಮೆಯನ್ನು ಬಿಂಬಿಸಿ ಅವರ ನೈತಿಕ ಮಟ್ಟವನ್ನು ಎತ್ತರಿಸುವುದರಲ್ಲಿ ಬಹಳವಾಗಿ ದುಡಿದಿತ್ತು. ಅಂತಹ ಯಕ್ಷಗಾನ ಕಲೆ ಇಂದು ನಿರ್ಜೀವವಾಗುತ್ತಾ ನಡೆದಿದೆ. ಅವನತಿಯ ಹಾದಿ ಹಿಡಿದಿದೆ. ತನ್ನ ನೈತಿಕ ಮಟ್ಟವನ್ನು ಕಳಕೊಂಡಿದೆ. ಇಂದು ಯಕ್ಷಗಾನವು ವಿದ್ಯಾವಂತ ಸಮಾಜವನ್ನು ಆಕರ್ಷಿಸುವ ಶಕ್ತಿ ಸಾಲದೆ ಇಂದಿನ ವಾಕ್ಚಿತ್ರ ಯುಗದಲ್ಲಿ ಕಣ್ಮುಚ್ಚ ಹೊರಟಿದೆ. ಇಂತಹ ಪರಿಸ್ಥಿತಿಯಲ್ಲಿರುವ ಯಕ್ಷಗಾನವನ್ನು ಆಧುನಿಕ ರೀತಿಗೆ ಒಪ್ಪುವಂತೆ ತನ್ನದೇ ಆದ ವಿಶಿಷ್ಟ ಹಾದಿಯೊಂದರಲ್ಲಿ ಪಂಡಿತರನ್ನೂ ಪಾಮರರನ್ನೂ ರಂಜಿಸಿ ಅಳಿಯುವ ಕಲೆಯನ್ನು ಉಳಿಸಿದ ಶ್ರೇಯಸ್ಸು ಶ್ರೀಯುತ ಶಿವರಾಮ ಕಾರಂತರದು.

ಕಾರಂತರ ಪರಿಚಯ ಮಾಡಿಕೊಡುವುದು ಅನಾವಶ್ಯಕ ಮತ್ತು ಅಶಕ್ಯ ಕೂಡಾ. ಇಂದು ಅವರು "ಕನ್ನಡಕ್ಕೊಬ್ಬನೇ ಕಾರಂತ" ಎಂಬ ಮಟ್ಟದಲ್ಲಿದ್ದಾರೆ. ಅವರ ಕಲಾಸೇವೆಯ ಪರಿಚಯ ಮಾಡಿಕೊಡುವುದಂತು ಸಂಭವವೇ ಇಲ್ಲ. ಹಾಗೆ ಹೊರಟವ ಮುಗ್ಗರಿಸಿ ಬಿದ್ದಾನು. ಅಷ್ಟು ವಿಶಾಲ ಕಾರ್ಯಕ್ಷೇತ್ರ ಅವರದು. ಸಂಸ್ಕೃತಿ, ಸಾಹಿತ್ಯ, ಚಿತ್ರ, ಗಾಯನ, ವಿದ್ಯೆ, ರಾಜಕೀಯ, ಚಲಚಿತ್ರ, ನರ್ತನ ಇವೇ ಮೊದಲಾದ ಇನ್ನೂ ಅನೇಕ ವಿಷಯಗಳನ್ನು ಮನನ ಮಾಡಿ ಪ್ರಯೋಗಿಸಿದ ಜೀವ ಕಾರಂತರದು. ಎಲ್ಲದರಲ್ಲಿಯೂ ತನ್ನದೇ ಆದ ಹೊಸ ಹಾದಿಯನ್ನು ಕಂಡುಕೊಳ್ಳುವ ಅಪಾರ ಬುದ್ಧಿ ಶಕ್ತಿಯೂ ಅವರಿಗಿದೆ.

ಶ್ರೀ ಕಾರಂತರು 1950ರ ಉಡುಪಿ ಪರ್ಯಾಯ ಪ್ರವೇಶದಲ್ಲಿ ಸುತ್ತ ಸಾವಿರಗಳ ಸಂತರ ಕಿವಿಗೆ ಗೆಜ್ಜೆ ಕಟ್ಟಿ ರಂಗ ಮಂಟಪದಲ್ಲಿ ಕುಣಿದು ಬಂದರು. ಜೊತೆಗೇ ನೂತನ ನೃತ್ಯ ಒಂದಕ್ಕೆ ಜನ್ಮವಿತ್ತರು. ಕಿನ್ನರ ನೃತ್ಯವೆಂದು ಅದಕ್ಕೆ ಹೆಸರಿಸಿದರು. ಯಕ್ಷಗಾನದ ಹಿಮ್ಮೇಳ, ಪಾರ್ತಿ ಸುಬ್ಬನ ಪದ್ಯ, ಯಕ್ಷಗಾನದ ರಾಗಕ್ಕೆ ದಕ್ಷಿಣಾದಿಯನ್ನೂ ಬೆರಸಿದ ಹಾಡು, ಇವಿಷ್ಟು ತೆರೆಯ ಹಿಂದಿನಿಂದ. ಪಾತ್ರಗಳು ರಂಗಮಂಟಪಕ್ಕೆ ಪ್ರವೇಶಿಸಿ ಹಾಡಿನ ಅರ್ಥವನ್ನು ಹಾವಭಾವ, ಚಲನವಲನಗಳಿಂದ ತೋರಿಸುವುದು ಇದರ ರೀತಿ. ಇಲ್ಲಿ ಎಲ್ಲಕ್ಕಿಂತ ಹೆಚ್ಚಾಗಿ ಭಾವಕ್ಕೆ ಪ್ರಾಧಾನ್ಯವಿದೆ. ಅವರು ಭಾವವನ್ನೇ ಎಲ್ಲಾ ಕಡೆಯಲ್ಲೂ ಎತ್ತಿ ತೋರಿಸಲು ಪ್ರಯತ್ನಿಸಿದ್ದಾರೆ. ಶಾಸ್ತ್ರಗಳು ಭಾವಕ್ಕನುಸರಿಸಿ ಹುಟ್ಟಿದವೇ ಹೊರತು, ಶಾಸ್ತ್ರಕ್ಕನುಸರಿಸಿ ಭಾವಗಳು ಹುಟ್ಟಲಿಲ್ಲ. ಎಂದಿನವೋ ನಿರ್ಜೀವ ಶಾಸ್ತ್ರಗಳಿಗೆ ಇಂದಿನ ಸಜೀವ ಭಾವಗಳನ್ನು ಬಲಿಕೊಡುವುದರಲ್ಲಿ ಅರ್ಥವಿಲ್ಲ. ಅದಕ್ಕಾಗಿಯೇ ನೃತ್ಯ ಪ್ರಪಂಚದಲ್ಲಿ ಕಾರಂತರದು ಹೊಸ ಪ್ರಯೋಗ.

ಅವರೇ ಹೇಳಿದಂ- ಈ ನೃತ್ಯ ನಾಟಕ ಬರೇ ಇಪ್ಪತ್ತು ದಿನಗಳ ತಯಾರಿ. ಏನೂ ಅರಿವಿಲ್ಲದ ಜನರನ್ನು ಹಿಡಿದು ಅವರಿಗೆ ಇಪ್ಪತ್ತು ದಿನದೊಳಗೆ ನಟನೆ ಭಾವನೆಗಳನ್ನೆಲ್ಲ ತಿಳುಹಿ ರಂಗಮಂಟಪದಲ್ಲಿ ಕುಣಿಸಿ ಯಶಸ್ವಿಯಾಗುವುದು ಕಾರಂತರಿಗ ಮಾತ್ರ ಸಾಧ್ಯ. ನಾಲ್ನೂರು ಐನೂರು ಪುಟಗಳ ಪುಸ್ತಕಗಳನ್ನು ಇಪ್ಪತ್ತು ಇಪ್ಪತ್ತೈದು ದಿನದಲ್ಲಿ ಬರೆದು ಮುಗಿಸುವ ಓಟ ಅವರದು. ಇದು ಅವರದೇ ಒಂದು ವೈಶಿಷ್ಟ್ಯ. ಅವರಲ್ಲೂ ಬೇಕಾದಷ್ಟು ಜನ ಸಿಗದೆ ಉಡುಪಿಗೆ ಬಂದ ಮೇಲೆ ಅಲ್ಲಿನವರೇ ಮೂರು ನಾಲ್ಕು ಮಂದಿಯನ್ನು ಮೂರುನಾಲ್ಕು ದಿನದಲ್ಲಿ ತಯಾರಿಸಿ ಕುಣಿಸಿದುದು ಆಶ್ಚರ್ಯವೇ ಸರಿ.

ಕಥಾ ಭಾಗವು ರಾಮಾಯಣದಿಂದ್ದಾದುದು. ಸೀತಾಪಹರಣ. ಅದರಲ್ಲಿ ಕಾರಂತರ ಶೂರ್ಪನಖಿಯ ಪಾತ್ರವು ಒಂದು ರಸಮಯ ಕಾವ್ಯ. ಕಾಲಕಾಲಕ್ಕೆ ಬೇಕಾದ ಭಾವನೆಗಳನ್ನು ಅಂಗಗಳ ಬಳುಕಾಟ, ಮೊಗದ ವಿನ್ಯಾಸ, ಕಣ್ಣಿನ ಮಾಟದಿಂದ ತೋರಿಸುವಾಗ ರಸನೇ ಹರಿದು ಬಂದಂತೆ ಭಾಸವಾಗುತ್ತಿತ್ತು. ಆಸೆ, ಮತ್ಸರ, ಸಂತೋಷ, ದುಃಖ, ಕೋಪ, ನಾಚಿಕೆ ಈ ಭಾವಗಳ ಮೂರ್ತಿಯನ್ನೇ ಕಡೆದು ಅವರು ಜನರ ಮುಂದೆ ನಿಲ್ಲಿಸುತ್ತಿದ್ದರು. ತನ್ನ ಅಭಿನಯದಿಂದ ಜನರನ್ನು ಮುಗ್ಧ ಮಾಡಿ ಬಿಟ್ಟಿದ್ದರು. ಉಳಿದ ಪಾತ್ರಧಾರಿಗಳೂ ತಮ್ಮತಮ್ಮ ಪಾತ್ರವನ್ನು ಚೆನ್ನಾಗಿಯೇ ನಿರ್ವಹಿಸಿದ್ದಾರೆ. ಕಪಟ ಸನ್ಯಾಸಿಯ ಪಾತ್ರ ಅಷ್ಟೊಂದು ಚೆನ್ನಾಗಿರಲಿಲ್ಲ. ಆದರೆ ಅದು ನಾಲ್ಕು ದಿನದ ತಯಾರಿ. ರಾವಣನ ಪಾತ್ರದಲ್ಲಿ ಮಾತ್ರ ದರ್ಪವಾಗಲೀ ಅಳ್ತನವಾಗಲೀ ಇರಲಿಲ್ಲ. ಅದರಲ್ಲೂ ಶೂರ್ಪನಖಿಯ ಎದುರು ಅದು ಏನೂ ಇಲ್ಲವಾಗಿತ್ತು. ಉಡುಪು ತೊಡುಪುಗಳು ಪಾತ್ರಕ್ಕನುಸರಿಸಿ ಬಹಳ ಮನೋಹರವಾಗಿದ್ದುವು. ಹಿಮ್ಮೇಳವು ಜನರ ಮನವನ್ನು ಸೆಳೆದಿತ್ತು. ಹಾಡು ಅಂದವಾಗಿಯೂ ಜನಸಾಮಾನ್ಯರಿಗೆ ಅರ್ಥವಾಗುವಂತೆಯೂ ಹಾಡಲ್ಪಟ್ಟಿತ್ತು. ಅಂತೂ ಇದು ಕಾರಂತರು ನೃತ್ಯ ಕ್ಷೇತ್ರದಲ್ಲಿ ಮಾಡಿದ ಒಂದು ದಿಗ್ವಿಜಯವೇ ಸರಿ. ಕಾರಂತರು ಯಕ್ಷಗಾನ ಕಲೆಯಂತಹ ಕನ್ನಡ ನಾಡಿನ ಒಂದು ಪ್ರಾಚೀನ ಕಲೆಯನ್ನು ತಮ್ಮದೇ ಆದ ಹೊಸ ರೂಪದಲ್ಲಿ ರಂಗಕ್ಕೆ ತಂದು ಜನಮನವನ್ನು ಸೆಳೆದು ಅಳಿಯುವುದನ್ನು ಉಳಿಸಿಕೊಂಡರು. ಆ ಮೂಲಕ ತನ್ನ ಕೀರ್ತಿಯನ್ನು ಹೆಚ್ಚಿಸಿಕೊಂಡರು. ಅವರು ಇದೇ ರೀತಿ ಕಲಾಸೇವೆಯನ್ನು ಇನ್ನೂ ಹೆಚ್ಚು ಮಾಡುವಂತೆ ದೇವರು ಕರುಣಿಸಲಿ ಎಂದು ನಾವು ಪ್ರಾರ್ಥಿಸುತ್ತೇವೆ.

—ಎ. ಎಲ್. ಆಳ್ವ

## ಅ. ನ. ಕೃ. ಸಾಹಿತ್ಯ ಸೇವಾ ರಜತೋತ್ಸವ ಸಮಾರಂಭ

ಶ್ರೀ ಅ. ನ. ಕೃಷ್ಣ ರಾಯರ ಮೊದಲ ಕೃತಿ "ನಾಡುಮನೆಯೋ ಮನೆ ಹಾಳೋ". ಇಂದಿಗೆ ೨೫ ವರ್ಷಗಳ ಹಿಂದೆ ಪ್ರಕಟವಾಗಿ ಕನ್ನಡ ನಾಡಿನಲ್ಲಿ ಅಪೂರ್ವ ವಿಚಾರ ಕ್ರಾಂತಿಯನ್ನು ಹಬ್ಬಿಸಿತು. ಅಂದಿನಿಂದ ಇಂದಿನವರೆಗೂ ಅವರ ಕೃತಿಗಳೆಲ್ಲ ನಮ್ಮ ಸಮಾಜದ ವಿವಿಧ ಕುಕಸ್ತುಗಳ ನಿವಾರಣೆಗೆ, ನಾಡಿನ ಪ್ರಗತಿಗೆ ಸಹಾಯಕವಾಗಿವೆ. ಸಾಹಿತ್ಯದ ಪ್ರಗತಿಯ, ಕನ್ನಡ ಜನಪದದ ಮುನ್ನಡೆಯ ಮೈಲಿಗಲ್ಲುಗಳಾಗಿವೆ; ಕನ್ನಡ ನಾಡಿನ ನೂರಾರು ತರುಣ ಸಾಹಿತಿಗಳಿಗೆ ಬೆಳಕು ತೋರಿ ಮಾರ್ಗ ದರ್ಶಕವಾಗಿ, ಮುನ್ನಡೆಸಿವೆ. ಇದುವರೆಗೆ ಅವರು ೫೦ ಗ್ರಂಥಗಳನ್ನು ಕನ್ನಡ ನಾಡಿಗೆ ಅರ್ಪಿಸಿದ್ದಾರೆ.

ಸಾಹಿತ್ಯರಂಗದಲ್ಲಿ ಅವರ ಸೇವೆ ನಾನಾಮುಖವಾದುದು. ಕಾದಂಬರಿ, ಸಣ್ಣ ಕತೆಗಳಲ್ಲಿಂದು ಅವರು ನಾಡಿನಲ್ಲಿ ಪ್ರಮುಖ ಸ್ಥಾನ ಗಳಿಸಿದ್ದಾರೆ ಎಂದರೂ ಸರಿಯೆ. ಜತೆಗೆ ಕಲಾ ವಿಮರ್ಶೆ, ನ್ಯಾಸಗಳು, ಹರಟೆ, ವೀರಶೈವ ಸಾಹಿತ್ಯ-ಸಂಸ್ಕೃತಿ ನಾಟಕ, ಹಾಗೂ ಎಲ್ಲ ರಂಗಗಳಲ್ಲೂ ದುಡಿದು ತನ್ನ ಹಿರಿಮೆ ವ್ಯಕ್ತ ಪಡಿಸಿಕೊಂಡಿದಾರೆ.

ನಾಡಿನ ಏಕೀಕರಣಕ್ಕಾಗಿ ಅಹರ್ನಿಶಿ ದುಡಿದು ನಾಡಿನ ಎಲ್ಲ ಮಹಾ ಜನತೆಯ ಆದರ ವಿಶ್ವಾಸ, ಅಭಿಮಾನಗಳಿಗೆ ಪಾತ್ರರಾಗಿದ್ದಾರೆ.

ಪ್ರಗತಿಶೀಲ ಸಾಹಿತ್ಯರಂಗದ ಮುಂದಾಳುವಾಗಿ ದುಡಿದಿದಾರೆ.

ಕನ್ನಡನಾಡಿನ ಮಹಾಜನತೆಯಿಂದ ಅಭಿಮಾನಪೂರ್ವಕವಾಗಿ ತರುಣರ ನಾಯಕ ಎಂದು ಕರೆಸಿಕೊಂಡಿದಾರೆ.

ಎಂತಲೇ ಅ. ನ. ಕೃ. ಅವರ ಸಾಹಿತ್ಯ ಸೇವೆಯ ರಜತೋತ್ಸವವನ್ನು ಆಚರಿಸಲು ನಾವು ನಿರ್ಧರಿಸಿದ್ದೇವೆ. ಕನ್ನಡ ನಾಡಿನ ಮೂಲೆ ಮೂಲೆಗಳಲ್ಲೂ ಈ ಸಾಂಸ್ಕೃತಿಕ ದಿನ, ಕನ್ನಡ ದಿನ, ನಮ್ಮೆಲ್ಲರ ಉತ್ಸವ ಆಚರಿಸಲ್ಪಡಬೇಕೆಂದು ನಾಡಿನ ಸಾಹಿತ್ಯ, ಕಲಾ, ಸಂಸ್ಕೃತಿ, ಏಕೀಕರಣದ- ಕನ್ನಡ ರಾಷ್ಟ್ರದ.. ಅಭಿಮಾನಿಗಳನ್ನು ನಾವು ಕೇಳಿಕೊಳ್ಳುತ್ತೇವೆ.

ಆ ದಿನ ಅವರ ಅಭಿಮಾನಿಗಳೆಲ್ಲ, ಅವರ ಗೆಳೆಯರೆಲ್ಲ ತಮ್ಮದೇ ಆದ ಕೃತಿಗನ್ನು ತಾವೇ ಪ್ರಕಟಿಸಿ ಅವರಿಗೆ ಅರ್ಪಿಸುವುದು ಉಚಿತವೆಂದು ನಾವು ತಿಳಿದೆವು. ೨೫ ವರ್ಷದ ಅವರ ಸಾಹಿತ್ಯ ಸೇವೆಯ ಕುರುಹಾಗಿ ೨೫ ಪುಸ್ತಕಗಳನ್ನಾದರೂ ಅವರಿಗೆ ಅರ್ಪಿಸಬೇಕೆಂದು ನಮ್ಮ ಬಯಕೆ.

ಹೀಗೆ ಪುಸ್ತಕಗಳನ್ನು ಅರ್ಪಿಸಲೆಳಸುವವರು ಶ್ರೀ ಅ. ನ. ಕೃ. ರ ನಾನಾ ಮುಖವಾದ ಸಾಹಿತ್ಯ ಸೇವೆಯ ವಿಚಾರವನ್ನು ನೆನೆದು ಪ್ರಗತಿಪರ ಸಾಹಿತ್ಯ ಕೃತಿಗಳನ್ನು ಪ್ರಕಟಿಸಬೇಕೆಂದು ಸೂಚಿಸದಿರಲಾರೆವು. ಕೃತಿ ಕಾರರು ಕೃತಿಗಳನ್ನು ಪ್ರಕಟಿಸುವ ವ್ಯವಸ್ಥೆ ತಾವೇ ಮಾಡಬೇಕು. ಆದರೆ ಅಂಥ ಎಲ್ಲ ಗ್ರಂಥಗಳ ಹೊರ ರಕ್ಷಾಪತ್ರವು ಒಂದೇ ರೀತಿಯಾಗಿರಬೇಕು. ಎಂಬುದು ನಮ್ಮ ಬಯಕೆ. ಅಂತಲೇ ಅದನ್ನು ನಾವಿಲ್ಲೇ ಮುದ್ರಿಸಿ ಕಳುಹಿಸುತ್ತೇವೆ. ಲೇಖಕರು ತಮಗೆಷ್ಟು ರಕ್ಷಾಪತ್ರಗಳು ಬೇಕಾಗಿವೆಯೆಂಬುದನ್ನು ತಿಳಿಸಿ, ಅಷ್ಟಕ್ಕಾಗುವ ಹಣವನ್ನು ಕಳುಹಿಸಬೇಕು. ರಕ್ಷಾಪತ್ರಗಳು ರಜತ ವರ್ಣದ್ದಿದ್ದು ಅದರ ಮೇಲೆ ಮೇಲ್ಗಡೆಗೆ (ಶ್ರೀ) ಅ. ನ. ಕೃ. ಅವರ ಪುಟ್ಟ ಭಾವಚಿತ್ರ ಅದರ ಸುತ್ತ ಅ. ನ. ಕೃ. ಅವರ ಸಾಹಿತ್ಯ ಸೇವೆಯ ರಜತೋತ್ಸವ ಕಾಣಿಕೆ ಎಂಬ ಅಂಕಿತ ಮುದ್ರಿಸಲ್ಪಡುವುದು ಜತೆಗೆಗ್ರಂಥದ ಲೇಖಕ ಹಾಗೂ ಪ್ರಕಾಶಕರ ಹೆಸರುಗಳು ಮುದ್ರಿಸಲ್ಪಡುತ್ತವೆ.

ಒಳಗಡೆಗೆ "ಅರ್ಪಣೆ" ಯ ಪುಟ ಒಂದಿದ್ದು ಅಲ್ಲಿ (ಶ್ರೀ) ಅ. ನ. ಕೃ. ರ ಪಡಿಯಚ್ಚು ಪ್ರಕಟಿಸಿ ಅದರಡಿಯಲ್ಲಿ "(ಶ್ರೀ) ಅ ನ. ಕೃಷ್ಣರಾಯರು ಕನ್ನಡನಾಡು ಸಾಹಿತ್ಯ ಸಂಸ್ಕೃತಿಗಳಿಗೆ ಸಲ್ಲಿಸಿದ ೨೫ ವರ್ಷಗಳ ಅಖಂಡ ಸೇವೆಯ ರಜತೋತ್ಸವ ಸಮಾರಂಭದ ಸಂಭ್ರಮದಲ್ಲರ್ಪಿಸಿದ ಕಾಣಿಕೆ" ಎಂದು ಮುದ್ರಿತವಾಗುವದು. ಈ ಭಾಗವನ್ನು ನಾವೇ ಮುದ್ರಿಸಿ ವಿವಿಧ ಲೇಖಕ,ಪ್ರಕಾಶಕರಿಗೆ ಕಳುಹಿಸಿಕೊಡುತ್ತೇವೆ.

ಅ. ನ. ಕೃ. ಸಾಹಿತ್ಯ ಸೇವಾ ರಜತೋತ್ಸವವು ೧೯೫೦ ಜನವರಿ ೨೬ರಿಂದ ೯ ನೇ ೧೯೫೦ರೊಳಗಾಗಿ ನಾಡಿನ ಎಲ್ಲೆಡೆಯೂ ಆಚರಿಸಲ್ಪಡಬೇಕೆಂಬುದು ನಮ್ಮ ಬಯಕೆ. ಉತ್ಸವದ ಸಂದರ್ಭದಲ್ಲಿ ಅವರ ಭಾವಚಿತ್ರ ಅನಾವರಣ, ನಾನಾ ಮುಖಸೇವೆಯ ಬಗೆಗೆ ಭಾಷಣಗಳು ನಡೆಯಬಹುದು. ಕರ್ನಾಟಕ ಏಕೀಕರಣ ಚಳವಳಿಗಾಗಿ ಸ್ವಯಂಸೇವಕರನ್ನು, ನಿಧಿಯನ್ನು ಸೇರಿಸುವ ಕಾರ್ಯ ಮಾಡಬಹುದು. ಪುಸ್ತಕ ಭಂಡಾರದ ಸ್ಥಾಪನೆ, ಸ್ಪರ್ಧೆ ಇತ್ಯಾದಿಗಳಿಂದಲೂ ಅವರ ನಾಟಕಗಳ ಅಭಿನಯ, ಅವರ ಅಭಿಮಾನಿಗಳ ಸಂಗೀತ, ವಿವಿಧ ವಿನೋದಾವಳಿಗಳ ಮೂಲಕ ಧನ ಸಂಗ್ರಹಿಸಿ ಆ ನಿಧಿಯಿಂದ ಅವರ ಹೆಸರಿನಲ್ಲಿ ವಾಚನಾಲಯವನ್ನಾಗಲಿ ಅಥವಾ ಏಕೀಕರಣ ಸಂಘಕ್ಕೆ ಸಹಾಯ ಏರ್ಪಡಿಸಬಹುದು.

ಈ ಕಾರ್ಯಕ್ರಮಗಳನ್ನೆಲ್ಲ ಏರ್ಪಡಿಸುವವರು ನಮಗೆ ತಿಳಿಸಬೇಕಾಗಿ ವಿನಂತಿಸುತ್ತೇವೆ. ಪ್ರತಿಯೊಂದೆಡೆಯ ಕಾರ್ಯಕ್ರಮವೂ ಮೂರು ನಾಲ್ಕು ದಿನಗಳ ಅಂತರದಲ್ಲಿ ನಡೆದರೆ, ಸಾಧ್ಯವಾದೆಡೆಗಳಲ್ಲೆಲ್ಲ ಶ್ರೀ. ಅ. ನ. ಕೃ.ರು ಭಾಗವಹಿಸುವುದು ಸಾಧ್ಯವಾಗುತ್ತದೆ.

ಆದಕ್ಕಾಗಿ ಉತ್ಸವನಡೆಸುವವರೂ, ಗ್ರಂಥ ಪ್ರಕಟಿಸುವವರೂ, ಹೆಚ್ಚಿನ ವಿಚಾರಗಳಿಗೆಲ್ಲ ನಮಗೆ ಬರೆದು ತಿಳಿಸಿ ವಿಚಾರ ವಿನಿಮಯ ಮಾಡಿಕೊಳ್ಳಬೇಕಾಗಿ ಸಂಬಂಧಪಟ್ಟ 'ಅ. ನ. ಕೃ. ಸಾಹಿತ್ಯ ಸೇವಾ ರಜತೋತ್ಸವ ಸಮಿತಿ, ಬೆಂಗಳೂರು' ಇವರ ವಿನಂತಿಯಿದೆ.

## Notice

In the Court of the District Munsiff of Coondapoor.

O. S. No. 509 of 1949
and
R. I. A. No 1722 of 1949.

Between Ramadevaru Aithala (dead) and another. Plaintiff.

and

Nagappayya Herle and another Defendants.

To

Nagappayya Herle (1st deft) son of Manjayya Herle, residing at Anjaneya Prasanna Cooffee Club, Arlepet Bangalore City, and a permanent resident of Gilyar village, Udipi Taluk.

Please take notice that the above suit filed by Ramadevaru Aithala against you and your son the 2nd defendant for recovery of interest due in respect of a simple mortgage deed executed by you on 25-3-1948 and the R. I. A. filed by his son to implead him as the legal representative of the deceased mortgagee stands posted to 2-2-1950 at 11 A. M. before the above said court. If you fail to appear on the said date before the said court either in person, or through a duly instructed pleader you will be declared exparte and the suit proceeded with in your absence.

(Sd) K. Ramappayya B. A., B. L.
[illegible]ate for Plff.
[illegible]—1—1950

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OI[L]

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.



REGD. TRADE MARK

Highly perfumed and medicated worth using daily by one and all keeps hair black and relieves head ache etc.

Manufactured by:-

**Swadeshi Oushadhi Bhandara** (Regd

KUNJAL P. O. Brahmavar, S. K.

# ಮಕರ ಸಂಕ್ರಾಂತಿ

ಶ್ರೀ ಆರ್. ಕೆ. ಪ್ರಭು.

ಸಾಮಾನ್ಯವಾಗಿ ಭಾರತದ ಎಲ್ಲ ಭಾಗಗಳಲ್ಲಿ ವಾಸಿಸುವ ಹಿಂದುಗಳು ವಿಶೇಷತಃ ಸೌರಮಾನ ಪಂಚಾಂಗವನ್ನು ಅನುಸರಿಸುವವರು (ಇದೇ ಜನವರಿ ೧೪ನೇ ದಿನಾಂಕ) ಮಕರ ಸಂಕ್ರಾಂತಿ ಎಂಬ ಹಬ್ಬವನ್ನು ಸಂಭ್ರಮದಿಂದ ಆಚರಿಸುವರು. "ಮಕರ" ಎಂಬ ಶಬ್ದವು ಮೊಸಳೆ ಎಂಬ ಅರ್ಥವನ್ನು ಕೊಡುವದು. ಆದರೆ ಹಿಂದೂ ಜೋತಿಷ ಶಾಸ್ತ್ರದಲ್ಲಿ ವ್ಯಾವಹಾರಿಕ ಮಾತಿನಲ್ಲಿ ಅದೊಂದು ಬಗೆಯ ಜಲಪ್ರಾಣಿಯೆಂದು ವರ್ಣಿಸಲಾಗುತ್ತಿದೆ. ಅದಕ್ಕೆ ಚಿಗುರೆಯ ಮೈಮೊಗವಿದ್ದು ಬಾಲ ದಂತಿರುವುದು. ಹಿಂದೂ ಜೋತಿಷ್ ಗ್ರಂಥಗಳಲ್ಲಿ ಮಕರ ಎಂಬ ಹೆಸರು ೧೨ ರಾಶಿಗಳಲ್ಲಿಯ ಒಂದು ರಾಶಿಯ ನಕ್ಷತ್ರಗಳ ಗುಂಪಿಗೆ ಕೊಡಲಾಗಿದೆ. ಪಾಶ್ಚಾತ್ಯ ಜೋತಿಷ ಶಾಸ್ತ್ರದಲ್ಲಿ ಇದೇ ನಕ್ಷತ್ರಗಳ ಗುಂಪಿಗೆ ಕ್ಯಾಪ್ರಿಕಾರ್ನಸ್ ಎಂಬ ಹೆಸರು ಬಂದಿದೆ. ಆ ಹೆಸರು ಬರಲು ಕಾರಣ ಆ ನಕ್ಷತ್ರಗಳ ಗುಂಪು ಆಕಾರದಲ್ಲಿ ಆಡಿನ ಹಾಗೆ ಕಂಡು ಮೊಸಳೆಯ ಬಾಲದ ಹಾಗೆ ಬಾಲವಿರುತ್ತದೆ. ಗ್ರೀಕರಲ್ಲಿ ಮತ್ತೂ ಹಿಂದುಗಳಲ್ಲಿ ಪ್ರಚಲಿತವಿದ್ದ ಈ ಹನ್ನೆರಡು ರಾಶಿಗಳಲ್ಲಿಯ ಕೆಲವುಗಳ ಹೆಸರು ವರ್ಣನೆಗಳು ಏಕರೂಪತೆಯನ್ನು ತೋರುವುದರಿಂದ ಇವರಿಂದ ಅವರಾಗಲೀ ಅವರಿಂದ ಇವರಾಗಲೀ ವಿಚಾರಗಳನ್ನು ಎರವಲಾಗಿ ತೆಗೆದುಕೊಂಡಿರಬಹುದೆಂಬುದು ಸ್ಪಷ್ಟವಿದೆ. ಈ ಅದಲು ಬದಲು ಕ್ರಿಸ್ತಶಕದ ಮೊದಲು ಒಂದೆರಡು ಶತಮಾನಗಳಲ್ಲಿ ಆಗಿರಬಹುದು.

'ಸಂಕ್ರಾಂತಿ' ಶಬ್ದವು ಸಂಧಿಕಾಲ, ಎಂದು ಸೂಚಿಸುವುದು. ಮಕರ ಸಂಕ್ರಾಂತಿ ಎಂಬ ಶಬ್ದ ಜೋಡಣೆಯು ಸೂರ್ಯನು ಮಕರ ರಾಶಿಯಲ್ಲಿ ಹಾಯ್ದುಹೋಗುತ್ತಾನೆಂಬ ಸೂಚನೆಯನ್ನು ಕೊಡುವುದು. ಸೂರ್ಯನ ಮಾರ್ಗಕ್ರಮಣವು ಬಹು ಪ್ರಾಚೀನ ಕಾಲದಿಂದಲೂ ಹನ್ನೆರಡು ರಾಶಿಗಳಲ್ಲಿ ವಿಭಾಗಿಸಲ್ಪಟ್ಟಿದೆಯಾದ್ದರಿಂದ ಒಂದೊಂದು ರಾಶಿಗೆ ಒಂದೊಂದು ಸಂಕ್ರಾಂತಿಯಂತೆ ವರುಷಕ್ಕೆ ಹನ್ನೆರಡು ಸಂಕ್ರಾಂತಿಗಳು ಇರಬಹುದಾಗಿವೆ. ಆದರೆ ನಾಲ್ಕು ಸಂಕ್ರಾಂತಿಗಳು ಮಾತ್ರ—ಮೇಷ, ಕರ್ಕ, ತುಲಾ ಮತ್ತೂ ಮಕರ ಇವು ಸೂರ್ಯನ ಮಾರ್ಗಕ್ರಮಣದಲ್ಲಿಯ ಅವಸ್ಥೆಗಳಾಗಿ ಪ್ರಾಮುಖ್ಯ ಪಡೆದಿರುವುದರಿಂದ ಅವುಗಳಿಗೆ ಮಹತ್ವ ಬಂದಿವೆ. ಸುಮಾರು ೩೦೦೦ ವರ್ಷಗಳಿಂದ ಚಳಿ, ಮಳೆ, ಗಾಳಿ, ಬಿಸಿಲುಗಳಲ್ಲಿ ಸ್ಥಿತ್ಯಂತರಗಳನ್ನು ತೋರುತ್ತಿರುವುದರಿಂದ ಮತ್ತೂ ಆ ಸಮಯಕ್ಕೆ ಸೂರ್ಯನು ಮೇಲ್ಕಾಣಿಸಿದ ಆ ರಾಶಿಗಳಲ್ಲಿ ಪ್ರವೇಶ ಮಾಡುವನಾದ್ದರಿಂದ ಆ ನಾಲ್ಕು ಸಂಕ್ರಾಂತಿಗಳು ಮುಂದೆಬಂದಿವೆ. ಅದರಲ್ಲಿಯೂ ಕರ್ಕ ಮತ್ತೂ ಮಕರ ಸಂಕ್ರಾಂತಿಗಳು ಬಹು ಮುಖ್ಯ ಮತ್ತೂ ಪವಿತ್ರವೆಂದು ಎಣಿಸಲಾಗಿದೆ. ಏಕೆಂದರೆ ಅವು ಬೇಸಗೆ ಕಾಲದ ಅತ್ಯುನ್ನತ ಮಟ್ಟವನ್ನೂ ಚಳಿಗಾಲದ ಅತ್ಯುನ್ನತ ಮಟ್ಟವನ್ನೂ ತೋರುವವು. ಕರ್ಕ ರಾಶಿಯಲ್ಲಿ ಸೂರ್ಯನ ಪ್ರವೇಶವಾದೊಡನೆ ದಕ್ಷಿಣಾಯನಕ್ಕೆ ಮೊದಲಾಯಿತು, ಎಂದು ಸೂಚನೆ ಕೊಟ್ಟಂತಾಯಿತು. ಅದರಂತೆ ಮಕರ ರಾಶಿಯಲ್ಲಿ ಸೂರ್ಯನ ಪ್ರವೇಶವಾದೊಡನೆ ಉತ್ತರಾಯಣಕ್ಕೆ ಮೊದಲಾಯಿತು ಎಂದು ಸೂಚನೆ ಬಂದಂತೆ ಆಗುವದು

ಮಕರ ಸಂಕ್ರಾಂತಿಯು ಚಳಿಗಾಲದ ಮುಖವನ್ನು ಮತ್ತೂ ದೀರ್ಘರಾತ್ರಿಕಾಲವನ್ನು ಸೂಚಿಸುವುದರಿಂದಲೂ ಬಹು ಮಹತ್ವವನ್ನು ಪಡೆದಿದೆ. ಆದುದರಿಂದ ಇಡಿ ವರ್ಷದಲ್ಲಿ ಅದೊಂದು ಸಂಧಿಕಾಲವೆಂದು ಗಣಿಸಲಾಗಿದೆ ಅಲ್ಲದೆ ಸುಗ್ಗಿ ಕಾಲದ ಪ್ರಾರಂಭದ ಮುನ್ನುಡಿಯೆಂದು ಈ ಹಬ್ಬವನ್ನು ಸಾರ್ವತ್ರಿಕವಾಗಿ ಬಹು ಸಂಭ್ರಮದಿಂದ ಆಚರಿಸುತ್ತ ಬಂದಿದೆ. ಹಾಗೆ ನೋಡಿದರೆ ತಮಿಳರಲ್ಲಿ ಮಕರ ಸಂಕ್ರಾಂತಿಯು ದಿವಸಾರಂಭದ ದಿನವೆಂದು ಆಚರಿಸುತ್ತಲಾಗಿದೆ. ಆ ದಿನಕ್ಕೆ ಪೊಂಗಲ್ ಎಂದೂ ಕರೆಯುವರು. ಆ ಶಬ್ದದ ಅರ್ಥ 'ಕುದಿಯೋಣ' ಎಂದೂ ಆಗುತ್ತದೆ. ಅಂದರೆ ಹಬ್ಬವಾಚರಿಸುವಾಗ ರಾಶಿ ಮಾಡಿ ಹೊಸದಾಗಿ ಬಂದ ಅಕ್ಕಿ ಮತ್ತೂ ಹಾಲು ಕೂಡಿಸಿ ಬೇಯಿಸುವ ಪರಿಪಾಠವಿದ್ದುದರಿಂದ ಈ ಹೆಸರು ಆ ದಿನಕ್ಕೆ ಬಂದುದಾಗಿದೆ. ಇದು ತಮಿಳುನಾಡಿನಲ್ಲಿ ಪ್ರಾಮುಖ್ಯ ಲಕ್ಷಣವಾಗಿದೆ. ಪೊಂಗಲ್ ಇದು ಸುಗ್ಗಿಯ ಹಬ್ಬದ ಲಕ್ಷಣಸೂಚಿಯಾಗಿದೆ. ದಕ್ಷಿಣದಲ್ಲಿ ಒಕ್ಕಲಿಗರು ಈ ಹಬ್ಬವನ್ನು ಬಹು ಆಸ್ಥೆಯಿಂದ ಆಚರಿಸುವರು. ಈ ಹಬ್ಬವು ಮೂರು ದಿನಗಳ ವರೆಗೆ ಆಚರಿಸಲ್ಪಡುತ್ತದೆ. ಮೊದಲನೆಯ ದಿನ ಅಭ್ಯಂಗಸ್ನಾನ, ಸಮೀಪದಲ್ಲಿ ನದಿಯಿದ್ದರೆ ಆ ನದಿಯಲ್ಲಿಯೇ ಸ್ನಾನ ಮಾಡುವರು, ಮಡಿಯಾದ ವಸ್ತ್ರಗಳನ್ನುಟ್ಟುಕೊಳ್ಳುವರು, ಹೆಣ್ಣು ಮಕ್ಕಳು ಹೊಸ ಅರಿವೆ ವಸ್ತ್ರಾಲಂಕಾರಗಳಿಂದ ಭೂಷಿತರಾಗುವರು; ಹೂವು ಮುಡಿಯುವರು. ಹೊಸದಾಗಿ ಬಂದ ಧಾನ್ಯವನ್ನು ತೆಗೆದುಕೊಂಡು ಹಾಲು ಸಕ್ಕರೆ ಬೆರಸಿ ಮನೆಯ ಅಂಗಳದಲ್ಲಿ ಅದನ್ನು ಉಕ್ಕಿಸುವರು. ಆ ಪಾಯಸವು ಸಿದ್ಧವಾದ ಮೇಲೆ ಕುಲದೇವತೆಗೆ ನೈವೇದ್ಯ ಮಾಡಿ ಸಕಲ ಪರಿಜನ ಸಮೇತರಾಗಿ ಅದರ ಪ್ರಸಾದವನ್ನು ಸೇವಿಸುವರು.

ಹಬ್ಬದ ೨ನೇ ದಿನದ ಅಂಗವಾಗಿ ಒಕ್ಕಲುತನದ ಆಧಾರಸ್ತಂಬವಾದ ದನಗಳ ಪೂಜೆಗಳನ್ನು ಮಾಡುವರು. ದನಗಳನ್ನು ಮೈತೊಳೆದು ತಿಲಕ ಹಚ್ಚಿ ಪೂಜೆಮಾಡಿ ಹೂಹಾರಗಳನ್ನು ಹಾಕಿ ಪೊಂಗಲ್ ಪಾಯಸ ನೈವೇದ್ಯ ಮಾಡುವರು. ಮನೆಯ ಹೆಣ್ಣು ಮಕ್ಕಳು ಹುಡುಗರು ಆ ದನಗಳಿಗೆ ಪಾಯಸ ತಿನ್ನಿಸುವದರಲ್ಲಿ ಪ್ರಮುಖ ಭಾಗ ವಹಿಸುವರು. ಮೂಕ ಪ್ರಾಣಿಗಳೊಡನೆ ಬಾಂಧವ್ಯ ಬೆಳೆಸುವರು. ಆ ಮನೋಹರವಾದ ದೃಶ್ಯವು ಬಹುಜನ ಪ್ರಿಯವಾಗಿರುವದು.

ಮೂರನೆಯ ದಿನ ಸಂಪೂರ್ಣ ವಿಶ್ರಾಂತಿ ಎಲ್ಲ ದನ, ಜನಗಳಿಗೂ. ಅಂದು ಅಂಗಡಿಗಳನ್ನು ಮುಚ್ಚುವರು. ಎಲ್ಲೆಡೆಯಲ್ಲಿಯೂ ಸಾರ್ವತ್ರಿಕ ವಿರಾಮ. ದನಗಳನ್ನು ಮೇಯಲಿಕ್ಕೆ ಅಡವಿಗೆ ಒಯ್ಯದೆ ಕೊಟ್ಟಿಗೆಗಳಲ್ಲಿ ಕಟ್ಟಿ ಬಾಳೆ-ತೆಂಗು ಮುಂತಾದ ಸವಿ ಸವಿಯಾದ ಪದಾರ್ಥ ತಿನ್ನಲಿಕ್ಕೆ ಕೊಡುವರು.

ಉತ್ತರ ಭಾರತದಲ್ಲಿ ಈ ಹಬ್ಬಕ್ಕೆ 'ಕಿಚಡಿ' ಎನ್ನುವರು. ಆ ದಿನ ಅಕ್ಕಿ ಮತ್ತೂ ಬೇಳೆಯ ಕಿಚಡಿಯನ್ನು ಮಾಡುವರು. ಅದನ್ನು ಬಡವ-ಬಲ್ಲಿದವರು ರುಚಿ ರುಚಿ ಮಾಡಿಕೊಂಡು ತಿನ್ನುವರು ದಕ್ಷಿಣದಂತೆ ಇಲ್ಲಿಯೂ ಕೂಡ ಹಬ್ಬವು ಮೂರು ದಿನಗಳ ವರೆಗೆ ಆಚರಿಸಲ್ಪಡುತ್ತದೆ. ಮೊದಲ ದಿನ ಸಮೀಪದ ನದಿಗಳಲ್ಲಿ (ಗಂಗೆಯೊ ಯಮುನೆಯೊ ಅಥವಾ ಪ್ರಯಾಗದ ತ್ರಿವೇಣಿ ಸಂಗಮದಲ್ಲಿಯೊ) ಸ್ನಾನ ಮಾಡುವರು. ಮಕರ ಸಂಕ್ರಾಂತಿಯ ಪೂರ್ವ ಕಾಲದಲ್ಲಿ ತ್ರಿವೇಣಿ ಸಂಗಮದಂಥ ಪವಿತ್ರಸ್ಥಾನದಲ್ಲಿ ಸ್ನಾನ ಮಾಡುವದು ಬಹು ಪುಣ್ಯಕಾರಕವೆಂದು ಉತ್ತರ ಭಾರತದ ಸಾವಿರಾರು ಜನರು ಈ ತ್ರಿವೇಣಿ ಸಂಗಮಕ್ಕೆ ಮಕರ ಸಂಕ್ರಾಂತಿಯ ದಿನ ಬಂದು ಸ್ನಾನಮಾಡುವರು. ತ್ರಿವೇಣಿ ಸಂಗಮದಲ್ಲಿ ಸ್ನಾನಮಾಡುವದರಿಂದ ಪಾಪ ತೊಳೆದುಹೋಗುವದೆಂಬ ನಂಬಿಕೆಯಿದೆ, ಮತ್ತು ಪಶ್ಚಾತ್ತಾಪದ ನಂತರ ಹೊಸಬಾಳನ್ನು ಪ್ರಾರಂಭಿಸಲು ಅನುಕೂಲ ಮಾಡಿಕೊಡುವರು. ಬ್ರಾಹ್ಮಣರಿಗೆ ಸಾಧುಗಳಿಗೆ ದಾನ ಮಾಡುವರು. ಇವು ಈ ಹಬ್ಬ ಆಚರಿಸುವ ಕೆಲವು ಮುಖ್ಯ ಲಕ್ಷಣಗಳು. ವರ್ಷಕ್ಕೊಂದು ಸಾರೆ ಮಾಘ ಮೇಳಾ ಎಂಬ ಹೆಸರಿನಿಂದ ಜಾತ್ರೆ ಸೇರುವದು. ಇದು ಮಕರ ಸಂಕ್ರಾಂತಿಯ ದಿನ ಪ್ರಾರಂಭವಾಗಿ ಮುಂದೆ ಒಂದು ತಿಂಗಳ ವರೆಗೆ ನಡೆಯುವದು. ಈ ಸಮಯದಲ್ಲಿ ಹಿರಿಕಿರಿಯರೆಂಬ ಭೇದ ಭಾವವಿಲ್ಲದೆ ಪಟಗಳನ್ನು ಹಾರಿಸುವರು.

ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಒಂದು ಪ್ರತ್ಯೇಕವಾದ ನಡೆವಳಿಕೆ ಇದೆ. ಮಕರ ಸಂಕ್ರಾಂತಿಯ ದಿನ ಕುಸುರೆಳ್ಳು ಕೊಡುವುದೇ ಆ ಪದ್ಧತಿ. ಎಳ್ಳುಬೆಲ್ಲದ ಮಿಶ್ರಣವನ್ನೂ ಕೊಡುವ ಪರಿಪಾಠವುಂಟು. ಎಳ್ಳು-ಬೆಲ್ಲವನ್ನು ಕೊಡುವಾಗ "ಎಳ್ಳು-ಬೆಲ್ಲ ತೆಗೆದುಕೊಂಡು ಒಳ್ಳೇ ಮಾತಾಡಿರಿ" ಎಂದು ಅನ್ನುವರು. ಈ ಪರಿಪಾಠದಿಂದ ಬಂಧುತನ, ಗೆಳೆತನಗಳು ಬೆಳೆಯಲು ಆಸ್ಪದವಾಗುವದು. ನಡೆದುಹೋದ ಯಾವುದೇ ಅಹಿತ ಪ್ರಸಂಗವನ್ನು ಮರೆಯಲು ಈ ಹಬ್ಬವು ಬಹು ಹಿತಕಾರಿಯಾಗಿದೆ. ಹೆಣ್ಣುಮಕ್ಕಳು, ಹುಡುಗರಿಗಂತೂ ಇದು ನಿಜವಾದ ಹಬ್ಬ. ಹೊಸ ಅರಿವೆಗಳನ್ನು ಹಾಕಿಕೊಂಡು ನಸುನಗುತ ಕುಸರೆಳ್ಳು ಕೊಡುತ್ತ ಆಡ್ಯಾಡುವುದು ಅವರ ಪ್ರೇಮನಕ್ಕೊಂದು ಹಬ್ಬ. ಕುಸಿಬಿ, ಕೊಬ್ಬರಿ ಎಣ್ಣೆಗಳಿಗಿಂತ ಈ ಹಬ್ಬದಲ್ಲಿ ಹೆಚ್ಚು ಪವಿತ್ರವೆಂದು ಎಳ್ಳೆಣ್ಣೆಯನ್ನು ಉಪಯೋಗಿಸುವ ರೂಢಿ. ಮಹಾರಾಷ್ಟ್ರದ ಕೆಳಭಾಗದಲ್ಲಿ ಮಕರ ಸಂಕ್ರಾಂತಿಯ ದಿನ ಮಕ್ಕಳಾಗದೆ ಇದ್ದ ಹೆಣ್ಣು ಮಕ್ಕಳು ಆಚರಿಸುವ ಕೆಲ ವಿಶಿಷ್ಟ ಪದ್ಧತಿಗಳು ಆಡಕವಾಗಿವೆ. ಯಾರಿಗೂ ಗೊತ್ತಿಲ್ಲದೆ ತೆಂಗಿನಕಾಯಿಯೊಂದನ್ನು ನೆರೆಮನೆಯ ಬ್ರಾಹ್ಮಣನ ಮನೆಯಲ್ಲಿಯ ಪಾತ್ರೆಯಲ್ಲಿ ಬಂಜೆ ಹೆಣ್ಣುಮಗಳು ಇಟ್ಟರೆ ಅವಳಿಗೆ ಮಕ್ಕಳಾಗುವವು ಎಂಬ ವಿಶ್ವಾಸ ಅನೇಕರಲ್ಲಿದೆ. ಬಂಜೆ ಹೆಣ್ಣುಮಗಳು ಪೂಜೆಮಾಡಿದ ೫ ತೆಂಗಿನಕಾಯಿಗಳನ್ನು ೫ ಮೊದಲಗಿತ್ತಿಯರಿಗೆ ಕೊಟ್ಟರೆ ಅವಳಿಗೆ ಮಕ್ಕಳಾಗುವವು ಎಂಬ ನಂಬುಗೆ ಇದೆ.

ಬಂಗಾಲ, ಕಾಶ್ಮೀರ, ಮತ್ತು ಹಿಮಾಲಯದ ಅಡಿ ಪ್ರದೇಶದಲ್ಲಿಯ ಕೆಲ ವಿಭಾಗಗಳಲ್ಲಿ ಮಕ್ಕಳಿಗೆ ಪಕ್ಷಿಗಳಾಕಾರದ ಬೆಂಡುಭತಾಸುಗಳ ಮಾಲೆಯನ್ನು ಹಾಕುವ ರೂಢಿಯುಂಟು. ಮರುದಿನ ಈ ಬೆಂಡುಭತಾಸುಗಳನ್ನು ನಿಜವಾದ ಪಕ್ಷಿಗಳಿಗೆ ಹಾಕಿ ತಿನ್ನಿಸುತ್ತಾರೆ. ಈ ಪದ್ಧತಿ ಹೇಗೆ ಒದಗಿ ಬಂದಿತೋ ತಿಳಿಯದು. ಮಕರ ಸಂಕ್ರಾಂತಿಯು ದಿನ ಆಚರಿಸಲಾಗುವ ಒಂದು ಸಾರ್ವತ್ರಿಕ ಪದ್ಧತಿಯಂದರೆ ಮನೆಯ ಬಾಗಿಲೆದುರು ಭತ ಗೋದಿ ಮುಂತಾದವುಗಳ ತೆನೆಗಳನ್ನು ಕಟ್ಟುವದು, ಕೆಲವು ತೆನೆಗಳನ್ನು ಮನೆಯಲ್ಲಿಯ ಭಂಡಾರಕ್ಕೆ ಕಟ್ಟುವದು. ಹೀಗೆ ಮಾಡುವದರಿಂದ ಕುಟುಂಬದ ಉತ್ಕರ್ಷವಾಗುವದೆಂದು ನಂಬಲಾಗಿದೆ.

ಮೇಲೆ ವಿವರಿಸಿದ ಮಾತುಗಳನ್ನು ಲಕ್ಷಿಸಿದರೆ ಮಕರ ಸಂಕ್ರಾಂತಿಯು ಧಾರ್ಮಿಕ ಭಾವನೆಯುಳ್ಳ ಹಬ್ಬವಾಗಿರದೆ ಲೌಕಿಕ ವಿಚಾರ ತಳಹದಿಯುಳ್ಳ ಹಬ್ಬವಾಗಿದೆ. ಆದುದರಿಂದ ಅಲ್ಲಲ್ಲಿಯ ಸ್ಥಳೀಕ ಬದಲಾವಣೆಗಳನ್ನು ಮಾಡಿಕೊಂಡು ಎಲ್ಲ ಜಾತಿಮತಪಂಥದವರು ಆಚರಿಸಲು ಅನುಕೂಲವಾದ ಹಬ್ಬವಾಗಿದೆ. ಪ್ರಾಮುಖ್ಯವಾಗಿ ಇದು ಸುಗ್ಗಿಯ ಹಬ್ಬವಾದ್ದರಿಂದ ಸಂಕುಚಿತ ಜಾತೀಯ ಭಾವನೆಗೆ ಇಲ್ಲಿ ಆಸ್ಪದವೇ ಇಲ್ಲ. ಸುಗ್ಗಿಯ ಕಾಲದಲ್ಲಿ ಎಲ್ಲರಿಗೂ ಹಿಗ್ಗು. ದವಸಧಾನ್ಯದ ವಿಪುಲತೆಯಿಂದ ಜನಮನಗಳಿಗೆ ಹಿಗ್ಗು. ಹುಲುಸಾದ ಬೆಳೆ ಬರಲು ನೆರವಾದುದಕ್ಕಾಗಿ ದನಗಳನ್ನು ಅಂತಃಕರಣದಿಂದ ನೋಡಿಕೊಳ್ಳಬೇಕೆಂಬುವ ಪ್ರವೃತ್ತಿ ಹುಟ್ಟಿಸುವ ಹಬ್ಬವಿದು. ದನಗಳ ಆರೈಕೆ, ಪೋಷಣೆ ಮಾಡುವ ವಿಚಾರ ಬಂದಾಗ ಜಾತಿಭೇದದ ಜಂಜಾಟವೆಲ್ಲಿ ಬರುವುದು? ಯಾವುದೇ ಜಾತಿಯವರಿರಲಿ ದನ-ದವಸ-ಧಾನ್ಯಗಳ ವೈಪುಲ್ಯಕ್ಕಾಗಿ ದುಡಿಯುವವನಾದ್ದರಿಂದ ಲಕ್ಷ್ಯವೆಲ್ಲ ಕಾರ್ಯದ ಮೇಲೆ ಕೇಂದ್ರೀಕೃತವಾಗುವದು. ಜಾತಿಭೇದವು ಹಿಂದುಳಿಯುವದು. ಅಲ್ಲದೆ ಬಾಂಧವ್ಯ ಬೆಳೆಸಲು ಅನುವು ಮಾಡಿಕೊಡುವ ಎಳ್ಳು ಬೆಲ್ಲ ಕೊಡುವ ಪದ್ಧತಿಯೂ ಇದೆ. ಇವೇ ಮೊದಲಾದ ಪದ್ಧತಿಗಳನ್ನು ಆಚರಣೆಯಲ್ಲಿ ತಂದು ಸುಗ್ಗಿಯ ಹಬ್ಬವು ಸಕಲರಿಗೆ ಹಬ್ಬದ ಸುಗ್ಗಿಯಾಗುವಂತೆ ಮಾಡಿದರೆ ಮಕರ ಸಂಕ್ರಾಂತಿಯು ಸಾರ್ಥಕವಾಗುವದು.

(ಸಂಜೀವನ)

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

**ಪಥ್ಯ:**—ಹರವೀದಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಧಾರುಗಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ ವಿಜಾಪುರ—ಶಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಂಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಪೂ ,ಕೆಮಿಸ್ಟ, ಹಾವೇರಿ, ಬ್ಯಾಡಗಿ

**Advertisement**

S. V. High School, Ganguli

Tenders are invited for the construction of a Superstructure of a wing of the S.V. High School at Ganguli consisting of a Library room, Assembly Hall and two other rooms as per plan which is available for inspection in the School Office. Further particulars can also be obtained from the School office. Tenders must reach the manager of the High School by 25-1-1950. All correspondence and the tenders may Kindly be sent to

The Manager
**S. V. High School**
Ganguli S. K.

Ganguli 12—1—1950

ಇದೇ ಜನವರಿ ಇಪ್ಪತ್ತಾರರಂದು ಭಾರತವು ಸ್ವತಂತ್ರ ಸಾರ್ವಭೌಮ ಪ್ರಜಾರಾಜ್ಯವಾಗಿ ಘೋಷಿಸಲ್ಪಡಲಿದೆ. ಅಂದಿನಿಂದ ಪ್ರತಿಯೊಬ್ಬ ಭಾರತೀಯನು ಹೊಣೆಗಾರ ವ್ಯಕ್ತಿಯಾಗುವನು. ಆದ್ದರಿಂದ ನಾವೀಗ ಆತ್ಮನಿರೀಕ್ಷಣೆ ಮಾಡಿಕೊಂಡು ಮುಂದಿನ ದಾರಿಯನ್ನು ನಿರ್ಣಯಿಸುವುದರಲ್ಲಿ ಔಚಿತ್ಯವಿದೆ.

ಸ್ವಾತಂತ್ರ್ಯವೆಂದರೆ ಸ್ವೇಚ್ಛಾಚಾರವೆಂದು ಬಗೆಯುವ "ರಾಜಕಾರಣಿ"ಗಳೇ ಇಂದು ನಮಗೆ ಹೆಚ್ಚು ಮಂದಿ ಕಂಡು ಬರುತ್ತಿದ್ದಾರೆ. ಆದರೆ ತನ್ನನ್ನು ತಾನು ಹಿಡಿತದಲ್ಲಿಟ್ಟುಕೊಳ್ಳುವುದೇ—ಇಂದ್ರಿಯಗಳನ್ನು ತನ್ನ ವಶವರ್ತಿಗಳನ್ನಾಗಿ ಮಾಡಿಕೊಳ್ಳುವುದೇ—ನಿಜವಾದ ಸ್ವರಾಜ್ಯ. ತನ್ನ ಕರ್ತವ್ಯದ ಪರಿಪೂರ್ತಿಗಾಗಿ ಸತತ ದುಡಿದು ದೇಶದ ಉನ್ನತಿಯನ್ನು ಮನಸಾ ಹಾರೈಸುತ್ತಿರುವವನೇ ನಿಜವಾದ ಸ್ವಾತಂತ್ರ್ಯ ಪಡೆದವ ಎಂದು ಜನತೆ ಅರಿಯದಾಗಿದೆ.

ನಾಡಿಗೆ ಸ್ವಾತಂತ್ರ್ಯ ಬಂದೊಡನೆ ಉಣ್ಣಲು ಆಹಾರ, ಉಳಕೊಳ್ಳಲು ವಸತಿ, ಖರ್ಚಿಗೆ ಹಣ, ಮತ್ತು ಇತರ ಸೌಕರ್ಯಗಳು ತಮ್ಮ ಕಾಲ ಬಳಿಗೆ ತನ್ನಿಂದ ತಾನೇ ಬಂದು ಬೀಳುವುದಾಗಿ ಹಲವಾರು ಅಜ್ಞ ಮಂದಿ ಭಾವಿಸಿತ್ತು; ಭ್ರಾಂತಿಯ ಭಾವನೆಗೆ ಒಳಗಾಗಿತ್ತು. ಆದರೆ ಅದು ಹಾಗೆ ಸಿಗದೆ ಹೋದಾಗ ಆ ಜನ ಕಂಗಾಲಾದರು. ಹೆಂವರ ಮೇಲೆ ಆ ತಪ್ಪನ್ನು ಹೊರಿಸಲು ಪ್ರಾರಂಭಿಸಿದರು. ದೇವಲೋಕದ ಅಮರ ಸುಖವನ್ನು ಕನಸಿನಲ್ಲಿ ಪಡೆಯುತ್ತಿರುವ ವ್ಯಕ್ತಿಯನ್ನು ಯಾರಾದರೂ ಎಚ್ಚರಿಸಲು ಅದು ಕಾಣದಾಗಲು ವ್ಯಥಪಟ್ಟು ಎಚ್ಚರಿಸಿದವನನ್ನು ಗದರಿಸುವಂತಾಯಿತು ಆ ಜನರ ರೀತಿ. ಅವರ ಈ ತಿಳಿಗೇಡಿತನ ಇನ್ನೂ ಕಳೆದಂತೆ ಕಾಣುವುದಿಲ್ಲ. "ನಮ್ಮ ದೇಶ ನಮ್ಮದಾದ ಮೇಲೆ ಗೇಯುವ ಹಂಬಲವೇಕೆ? ನಮಗೆ ಬೇಕಾದ ಸೌಕರ್ಯಗಳನ್ನು ಸರಕಾರವೇ ಒದಗಿಸಿಕೊಡಬೇಕು. ಹಾಗೆ ಒದಗಿಸಿಕೊಡದಿದ್ದರೆ ಅದು ಅಕ್ಷಮ್ಯ ಅಪರಾಧ" ಎಂಬ ಮನೋಭಾವನೆಗೆ ಅವರು ಇನ್ನೂ ಅಂಟಿಕೊಂಡಿದ್ದಾರೆ. ಇಂತಹ ಮನೋವೃತ್ತಿ ನಿರಕ್ಷರಿಗಳಲ್ಲಿ ಕ್ಷಮ್ಯ. ಆದರೆ ಹಲವಾರು ಮಂದಿ ಅಕ್ಷರಸ್ಥ 'ಜ್ಞಾನಿ'ಗಳು ಕೂಡಾ ಇದೇ ಮನೋಭಾವನೆಯನ್ನು ಇಟ್ಟುಕೊಂಡು ಜನರಲ್ಲೂ ಹಬ್ಬಿಸಲು ಪ್ರಯತ್ನಿಸುತ್ತಿರುವುದು ಮಾತ್ರ ಅಕ್ಷಮ್ಯ. ಈ ಮನೋವೃತ್ತಿಯ ಹಿಂದೆ ಸ್ವಾರ್ಥವು ಪರಾರ್ಥದ ವೇಷಧರಿಸಿ ಕುಳಿತಿರುವುದನ್ನು ನಾವು ಕಾಣಬಹುದು. ಇಂದು ನಮ್ಮ ದೇಶದ ಮುಂದಿರುವ ನೂರಾರು ಜಟಿಲ ಸಮಸ್ಯೆಗಳನ್ನಂತೂ, ಇಡೀ ವಿಶ್ವವನ್ನು ನುಂಗಿರುವ ಹಲವಾರು ಸಮಸ್ಯೆಗಳೇ ನಮ್ಮನ್ನೂ ಕಾಡಿಸುತ್ತಿರುವುವೇ ಹೊರತು ಅವು ಭಾರತದವೇ ಮಾತ್ರವಲ್ಲ ಎಂಬುದರ ಮನವರಿಕೆಯಾಗಿಯೂ ಅವರು ಇಲ್ಲದ ಸಲ್ಲದ ಉಪದೇಶಮಾಡಿ ಜನರನ್ನು ಅಡ್ಡದಾರಿಗೆ ಎಳೆಯುತ್ತಿದ್ದಾರೆ. ಎಂದರೆ ಮೇಲೆ ಹೇಳಿದ ಮಾತಿನ ಸತ್ಯಾಸತ್ಯತೆಯ ಬಗ್ಗೆ ಮನವರಿಕೆಯಾಗಬಹುದು. ಇ

# ನಮ್ಮ ಕರ್ತವ್ಯ

ಲೇಖಕರು:—ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವ

ವರು ದೇಶದಲ್ಲಿ ಒಂದು ವಿನಾಶಕಾರೀ ಸ್ಫೋಟನವನ್ನು ತಯಾರಿಸುತ್ತಿದ್ದಾರೆ. ಈ ರೀತಿ ವಿನಾಶಕಾರೀ ವಸ್ತುವಿನ ಮೇಲೆ ಕುಳಿತು ಬಿದಿಕ್ಕೇ ಬೆಂಕಿಕೊಟ್ಟು ಅದರ ಆಂದಚಂದವನ್ನು ನೋಡುತ್ತಿರುವ ಈ ವರ್ಗಕ್ಕೆ ಕಾಲವೇ ಬುದ್ಧಿ ಕಲಿಸೀತು! ಆದರೆ ಅರಿಯದ ಹಲವಾರು ಮಂದಿಯನ್ನೂ ಈ ಜನರು ಸಂಗ್ಯಕ್ಕೆ ಬೆಲ್ಲ ಹಚ್ಚಿ ಈ ವಿನಾಶಕಾರೀ ಕೇಂದ್ರದೆಡೆಗೆ ತಮ್ಮೊಡನೆ ಎಳೆದೊಯ್ಯುತ್ತಿರುವುದು ಮಾತ್ರ ಬಹಳ ವ್ಯಸನಾಸ್ಪದವಾದ ವಿಚಾರ.

ಸ್ವಾತಂತ್ರ್ಯವೆಂಬುದು ಮನಸ್ಸಿಗೆ ಮಾತ್ರ ಅರಿವಾಗಬಲ್ಲ ಒಂದು ಸ್ಥಿತಿ ವಿಶೇಷವೇ ಹೊರತು ಇಂದ್ರಿಯಗಳಿಗೆ ಸುಖನೀಡಬಲ್ಲ ವಸ್ತು ವಿಶೇಷವಲ್ಲ. ಮುಂದೆ ಅದೇ ಬಾಹ್ಯ ಸುಖಗಳನ್ನೂ ಒದಗಿಸಿಕೊಡಬಲ್ಲ ಹಾದಿಯಾದೀತು ಅಷ್ಟೇ. ಆದರೆ ಇದನ್ನು ಎಷ್ಟು ಮಂದಿ ಅರಿತಿದ್ದಾರೆ? ಅರಿತಿದ್ದರೆ ಇಂದು ದೇಶದಲ್ಲಿ ಏಳುವ ಇಲ್ಲಸಲ್ಲದ 'ಕೂಗು' ವಾದ' ಗಳಿಗೆ ಎಡೆಯಿದ್ದಿತೇ? ಒಬ್ಬನು ಇನ್ನೊಬ್ಬನ ಅಡಿಯಾಳಾಗಿ ತಿಂಗಳಿಗೆ ನೂರು ರೂಪಾಯಿ ಪಡೆಯುತ್ತಾನೆ; ಮತ್ತೊಬ್ಬನು ಸ್ವತಂತ್ರನಾಗಿ ಬಾಳಿ ತಿಂಗಳಿಗೆ ಅರವತ್ತು ರೂಪಾಯಿ ಸಂಪಾದಿಸುತ್ತಾನೆ ಎಂದು ಭಾವಿಸುವ. ಇವರಲ್ಲಿ ಮೊದಲನೆಯವನಿಗಿಂತ ಎರಡನೆಯವನೇ ಹೆಚ್ಚು ಸುಖಿಯಾಗಿರುತ್ತಾನೆ ಮೊದಲನೇಯವನಿಗೆ ರೂಪಾಯಿ ಹೆಚ್ಚು ದೊರಕುತ್ತಿದ್ದರೂ ಪಾರತಂತ್ರ್ಯವಿದ್ದುದರಿಂದ ಎರಡನೆಯವನಂತೆ ಶಾಂತಿಯಾಗಲೀ ಉತ್ಸಾಹವಾಗಲೀ ದೊರಕುವುದಿಲ್ಲ. ಇದನ್ನೇ ಸರ್ವಜ್ಞ "ಬಂಗಾರದ ಮನೆಗಿಂತ ಸಿಂಗಡದ ಗುಡಿಲೇಸು" ಎಂದಿದ್ದಾನೆ ಇದೇ ಸ್ಥಿತಿ ಒಂದು ದೇಶಕ್ಕೂ ಅನ್ವಯಿಸುತ್ತದೆ ನಮಗೆ ಬ್ರಿಟಿಷರ ಗುಲಾಮರಾಗಿರುವ ಕಾಲಕ್ಕಿಂತ ಈಗ ಬಹಳ ಹೆಚ್ಚಿನ ಸೌಕರ್ಯಗಳೇನೂ ದೊರೆತಿಲ್ಲವಾದರೂ (ಅದು ಪರಿಸ್ಥಿತಿಯ ವಿಷಮತೆಯ ಹೆಸೆಯಿಂದ ಎಂಬುದನ್ನು ಮರೆಯಲಾಗದು) ನಾವು ಸುಖಿಗಳಾಗಿದ್ದೇವೆ. ಅದು ನಾವು ಸ್ವತಂತ್ರರಾದುದರಿಂದಲೇ. ಒಂದು ವೇಳೆ ಹೆಚ್ಚಿನ ಮಂದಿಗೆ ಆ ಸುಖ ದೊರೆತಿಲ್ಲವಾದರೆ ಅದು ಅವರ 'ದಾಸ್ಯ ಮನೋವೃತ್ತಿಯ ದ್ಯೋತಕವಾಗಿದೆ ಅಷ್ಟೇ!

ಇಂದು ಹೆಚ್ಚಿನ ಮಂದಿಯ ಮನದ ಓಟ ಒಂದು ವಿಚಿತ್ರ ಗತಿಯಲ್ಲಿ ಸಾಗಿರುತ್ತದೆ. ಹೆರವರ ತಪ್ಪೊಪ್ಪುಗಳನ್ನು ಹೆಕ್ಕಿ ವಿಮರ್ಶೆ ಮಾಡುವುದರಲ್ಲೇ ಕಾಲ ಕಳೆಯುತ್ತಿದ್ದಾರೆ. ಜನ ತಮ್ಮ ಬಾಳನ್ನೇ ವಿಮರ್ಶೆಗೆ ಗುರಿಮಾಡಿಕೊಳ್ಳುವ ಹವ್ಯಾಸ ಕಾಣಯಾಗಿದೆ. ಇಂದಿನ ಕೃತಕ ವಾತಾವರಣದಲ್ಲಿ ಬಾಳನ್ನು ಹಸನುಮಾಡಿಕೊಳ್ಳುವ ಬುದ್ಧಿ ದಿವಾಳಿ [illegible]ಗದಿದೆ. ಹೆರವರ ಟೀಕೆಯೇ ಇಂದಿನ ಪ್ರವಚನ. ಕರ್ತವ್ಯದ ಸ್ವರ್ಣಯುಗವು ಕಳೆದು ಹಕ್ಕು ಬಾಧ್ಯತೆಯ ಸ್ಫೋಟನ ಯುಗವು [illegible]ಲೆಹಾಕಿದೆ. ಇಂತಹ ಕಾಲದಲ್ಲಿ ಸ್ವಾತಂತ್ರ್ಯವೆಂದರೆ ತಮ್ಮ ಹಕ್ಕಿಗಾಗಿ (ಮಾತ್ರ) ಇನ್ನೂ ಹೆಚ್ಚಾಗಿ ಹೋರಾಡುವ ಅರ್ಹತೆ ಪಡೆಯುವುದು ಎಂದು ತಿಳಿದುಕೊಂಡರು ಜನ!

ಸ್ವಾತಂತ್ರ್ಯದ ನಿಜವಾದ ಜ್ಞಾನವುಳ್ಳ ವ್ಯಕ್ತಿಗಳ ಹೊಣೆ ಸ್ವತಂತ್ರರಾದ ಕೂಡಲೆ ಹೆಚ್ಚುತ್ತದೆ. ಅವರು ಇಂದು ದೇಶದ ಮುಂದಿರುವ ಜಟಿಲ ಸಮಸ್ಯೆಗಳಾದ ಆಹಾರದ ಅಭಾವ, ಆರ್ಥಿಕ ವಿಷಮತೆ, ಸಾಮಾಜಿಕ ಗೊಂದಲ, ಕಳ್ಳಸಂತೆ ಮತ್ತು ಇತರ ಜೀವನಾವಶ್ಯಕ ವಸ್ತುಗಳ ಕೊರತೆ ಇವುಗಳನ್ನು ಹೋಗಲಾಡಿಸಲು ಹೋರಾಡಬೇಕಾಗಿದೆ. ಇಂದಿನ ವಿಷಮ ಪರಿಸ್ಥಿತಿಯ ನಿಜವಾದ ಕಾರಣವನ್ನು ಅರಿತುಕೊಂಡು ಜನತೆಗೆ ತಿಳುಹಿ ಅದನ್ನು ಕಳೆದೂಗೆಯಲು ದುಡಿಯಬೇಕಾಗಿದೆ ನಾವು. ಪ್ರತಿಯೊಂದಕ್ಕೂ ಸರಕಾರದ ಮೇಲೆ ಹೊಂದಿಕೊಂಡಿರುವುದೆಂದರೆ ಅದು ನಮ್ಮ ದೌರ್ಬಲ್ಯದ ದ್ಯೋತಕವಾಗಿದೆ. ಈ ದುರ್ದೈವೀ ಮನೋವೃತ್ತಿಯನ್ನು ಕಳೆದೊಗೆದು ಸ್ವಾವಲಂಬಿಗಳಾಗಿ ಬಾಳಲು ಕಲಿಯಬೇಕಾಗಿದೆ. ನಾವು ನಮ್ಮ ಜೀವನವನ್ನು ಮಹಾತ್ಮಾ ಗಾಂಧಿಯವರ ಈ ಕೆಳಗಿನ ಮಾತುಗಳಿಗೆ ಅನುಸಾರವಾಗಿ ರೂಪಿಸಿಕೊಂಡು ಭಾರತವನ್ನು ಅವರ ಕನಸಿನ ರಾಮರಾಜ್ಯವನ್ನಾಗಿ ಮಾಡಲು ಮನಸಾ ನೆನಸುವಾ "ಭಾರತ ವಾಸಿಗಳ ಸ್ವರ್ಣ ರೂಪರಾದುದರಿಂದ ಒಂದು ಕಾಲದಲ್ಲಿ ಸ್ವರ್ಣ ಭೂಮಿ ಎಂದು ಹೆಸರುಗೊಂಡಿತ್ತು ಈ ಭಾರತ ಭೂಮಿ. ಭೂಮಿಯೇನೋ ಇಂದೂ ಅದೇ. ಆದರೆ ಜನ ಬದಲಯಿಸಿದ್ದಾರೆ. ಆದ್ದರಿಂದ ಇಂದು ಭಾರತ ಭೂಮಿ ಹಾಳು ಬಿದ್ದಂತಿದೆ. ಅದನ್ನು ಮತ್ತೆ ಸ್ವರ್ಣ ಭೂಮಿಯನ್ನಾಗಿ ಮಾಡಲು ಸದ್ಗುಣಗಳ ಮೂಲಕ ನಮ್ಮನ್ನು ಸ್ವರ್ಣರೂಪರನ್ನಾಗಿ ಮಾಡಿಕೊಳ್ಳಬೇಕಾಗಿದೆ. ನಮ್ಮನ್ನು ಹೊನ್ನಾಗಿಸಬಲ್ಲ ಸ್ಪರ್ಶಮಣಿ ಅಕ್ಷರಶಃ ನಮ್ಮಲ್ಲೇ ಅಡಗಿದೆ. ಅದೇ 'ಸತ್ಯ'. ಆದ್ದರಿಂದ ಪ್ರತಿಯೊಬ್ಬ ಭಾರತೀಯನೂ ಸತ್ಯವನ್ನು ತನ್ನ ಜೀವನದ ಉಸಿರಾಗಿ ಮಾಡಿಕೊಂಡರೆ ಭಾರತವು ಸುರಾಜ್ಯವಾದೀತು. ಈ ಮಾತಿನಂತೆ ನಮ್ಮ ಜೀವನವನ್ನು ರೂಪಿಸುವುದಾಗಿ ನಾವು ಭಾರತವು ಪ್ರಜಾರಾಜ್ಯವಾಗಿ ರೂಪಗೊಳ್ಳುವ ಶುಭ ದಿನದಂದು ಪ್ರತಿಜ್ಞೆ ಮಾಡಿಕೊಳ್ಳುವಾ!


## ವಿವಿಧ ಪಾತ್ರೆಗಳು



ಎಲ್ಲಾ ತರದ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಕುಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ



*Nambiar's*

**ARYA VAIDYA SALA**

UDIPI

*Ideal House for Ayurvedic Treatment.*

T. N. Kelu Nambiar,
*Vaidya*



ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

## ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣ ಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಪ್ಯೆರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದಂತೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

**ROYAL MAHAL,**

UDIPI, S. Kanara.



"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ಸಿ. ಶಾಸ್ತ್ರೀ,
ಇವರ

ನವಜೀವಾತು
ಎಂಬ
ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ| ಯಂ. ಸಿ. ಶಾಸ್ತ್ರೀ, ಯಲ್. ಐ
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಥಾನಿಕರು:—ಡಾ| ಐ ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.



## ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

**The Moolky Bank Ltd.,**
**Moolky, S K**

Regd. No. M. 3618

Estd: 1921 ಸ್ಥಾಪನೆ

26—1—1950

LICENCE No. 31
Licensed to Post
without Prepayment

ನವ ಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
ಆರು ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

FOUNDER:
Sri. A. B. Shetty
Minister for Agriculture & Veterinary

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30
ವಾರ 22

NAVAYUGA WEEKLY Post Box No. 22 UDIPI, S. K.

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol 30
No. 22

ಇಂದು ಜನತಾ ಯುಗಾದಿ.

ಭಾರತವು ಪೂರ್ಣ ಸ್ವತಂತ್ರ ಜನತಾ ರಾಜ್ಯವಾಗಿ ಈ ದಿನ ಮಾರ್ಪಟ್ಟಿದೆ. ಇಂದಿನಿಂದ ಹೊಣೆಗಾರಿಕೆ, ಆಡಳಿತೆ, ಮತ್ತು ಸಾರ್ವಭೌಮಾಧಿಕಾರ, ಸಂಪೂರ್ಣವಾಗಿ ಹಿಂದೀ ಜನತೆಯದೇ

ಸುಮಾರು ಎರಡು ಶತಮಾನಗಳಿಂದ ಇಲ್ಲಿದ್ದ ಬ್ರಿಟಿಷ್ ನಿರ್ಮಿತ ರಾಜ್ಯಾಂಗ ಶಾಸನದ ಸ್ಥಾನಕ್ಕೆ ಈ ದಿನವೇ, ಕಳೆದ ಮೂರು ವರುಷಗಳಲ್ಲಿ ಭಾರತ ಘಟನಾ ಸಮಿತಿ ತಯಾರಿಸಿದ್ದ ಹೊಸ ಘಟನೆ ಬಂತಿದೆ.

ಕೆಲವು ಸಂದರ್ಭ, ಸನ್ನಿವೇಶಗಳಲ್ಲಿ ಭಾರತ ರಾಷ್ಟ್ರಧ್ವಜದೊಂದಿಗೆ ಬ್ರಿಟಿಷ್ ಧ್ವಜವೂ ಈ ವರೆಗೆ ಹಾರಾಡಬೇಕಾಗಿತ್ತು. ಅಂತಹ ಸಂದರ್ಭ ಇನ್ನು ಮುಂದ ಇಲ್ಲ; ಇಂದಿನಿಂದ ಭಾರತದಲ್ಲಿ ತಯಾರಾಗುವ ನಾಣ್ಯ, ಚೀಟು, ಮತ್ತಿತರ ಎಲ್ಲಾ ವಿಧಾನಗಳಲ್ಲೂ 'ರಿಪಬ್ಲಿಕ್ ಭಾರತ'ದ ನಿಶ್ಚಿತ ಕುರುಹುಗಳಲ್ಲದೆ ಬ್ರಿಟಿಷ್ ಚಿಹ್ನೆಗಳು ಮೂಡುವಂತಿಲ್ಲ. ಬ್ರಿಟಿಷ್ ರಾಜರ ಜನ್ಮದಿನ, ಅಭಿಷೇಕದಿನದಂಥವುಗಳು ಇನ್ನು ಭಾರತದಲ್ಲಿ ಆಚರಿಸಲ್ಪಡುವಂತಿಲ್ಲ. ಬ್ರಿಟಿಷ್ ರಾಜರ ಹೆಸರಿನಿಂದ ಇನ್ನಿಲ್ಲಿ ಯಾವುದೇ ವಿಧದ ನೇಮಕ ಅಥವಾ ಜಾಹೀರುನಾಮೆಗಳಾಗುವಂತಿಲ್ಲ. ಎಲ್ಲಾ ವಿಧದ ಪ್ರತಿಜ್ಞೆಗಳೂ ಇನ್ನು ಸಂಪೂರ್ಣವಾಗಿ ರಿಪಬ್ಲಿಕ್ ಭಾರತದ ಹೆಸರು ಹೇಳಿಯೇ. ಇಂಗ್ಲೆಂಡಿನ ರಾಜರ ಹೆಸರಿನಿಂದ ನೇಮಿಸಲ್ಪಡುತಿದ್ದ ಗವರ್ನರ್ ಜನರಲನ ಸ್ಥಾನಕ್ಕೀಗ ಹಿಂದೀ ಜನತೆಯ ಮತವನ್ನಾಧರಿಸಿರುವ ಅಧ್ಯಕ್ಷ ಬಂದಿದ್ದಾನೆ. ನಿನ್ನೆಯ ವರೆಗೂ ಇದ್ದ, ನಾಮ ಮಾತ್ರ ಹೊರ ವಿಧೇಯತೆ ಕೂಡಾ ಕಳೆದು ಹೋಗಿ ಈ ದಿನದಿಂದ, ಜನತೆಗೇನೇ ಹೊಣೆಯಾಗಿರುವ ರೀತಿಯು ಬುಡದಿಂದ ತುದಿಯ ವರೆಗೂ ಬಂದಿದೆ.

ಆದಿಭಾಗದಲ್ಲಿ ಕಂತೆಂಗಿ ಕೊಡುವವರಿಗೆ ಮಾತ್ರವಿದ್ದ ಮತಾಧಿಕಾರವು ಕೊನೆಯ ಭಾಗದಲ್ಲಿ ಅಕ್ಷರಸ್ಥರಿಗೆಲ್ಲರಿಗೂ ಬಂದಿದ್ದಿತು; ಈ ದಿನದಿಂದ ಆ ಹಕ್ಕು ಪ್ರಾಯಸ್ಥರೆಲ್ಲರಿಗೂ ಇದೆ.

ಇಂದಿನಿಂದ ರಾಜಕೀಯ ಹಾಗೂ ಸಾರ್ವಜನಿಕ ರಂಗದಲ್ಲಿ ಎಲ್ಲರೂ 'ಭಾರತೀಯ'ರು ಹೊರತು ಯಾವುದೇ ಜಾತಿ, ಮತ, ಪಂಥಗಳವರೆಂದು ಪ್ರತ್ಯೇಕ ಗಣಿಸಲ್ಪಡುವಂತಿಲ್ಲ; ಸಾರ್ವಜನಿಕ ಜೀವನದಲ್ಲಿ ಜಾತಿ ಮತ ಭೇದವನ್ನಾಧರಿಸಿ ಅಸ್ಪೃಶ್ಯತೆಯನ್ನಾಚರಿಸುವುದು ಈ ದಿನದಿಂದ ಶಿಕ್ಷಾರ್ಹವಾಗುತ್ತದೆ. ಸರಕಾರೀ ಹಾಗೂ ಸಾರ್ವಜನಿಕ ಸ್ಥಾನ, ಮಾನ, ಸಂದರ್ಭಗಳ

# ಈ ದಿನದಿಂದ-

(ತಾ. 26—1—1950ನೇ ಗುರುವಾರ)

ಮಟ್ಟಿಗೆ ಇಂದಿನಿಂದ ಎಲ್ಲರೂ ಸಮಾನರು.

ಕೇಂದ್ರಾಧ್ಯಕ್ಷನೊಬ್ಬನ ಹೊರತು ಈ ದಿನವೇ ರಾಷ್ಟ್ರದಲ್ಲಿ ಬದಲಾಗುವ ಬೇರೆ ಮುಖ್ಯ ಸ್ಥಾನವಾವುದೂ ಕಾಣುವದಿಲ್ಲವಾದರೂ, ಅಧಿಕಾರದಲ್ಲಿರುವವರೆಲ್ಲರೂ 'ಜನತೆ ನಮ್ಮ ಧನಿಗಳು' ಎಂಬ ನಿಷ್ಠೆಯನ್ನು ಇಂದಿನಿಂದ ವಿಶೇಷವಾಗಿ ವಹಿಸುವಂತಾಗಿದೆ.

ಯಾವುದೇ ವಿಧದ ಶಾಸನಕ್ಕೊಳಗಾಗಿ ಅಲ್ಲ— ದೀರ್ಘಾವಧಿಯಿಂದ ಇರುವ ಸಂಪ್ರದಾಯ ಮತ್ತು ಸ್ವಭಾವಕ್ಕೆ ಕಟ್ಟುಬಿದ್ದು ಇನ್ನೂ ಕೆಲ ಕಾಲ ಎಲ್ಲಾ ಅಧಿಕಾರಗಳು ಮತ್ತು ಜನರು ಈಗ ಇರುವಂತೆಯೇ ಇರಬಹುದಾದರೂ ಜನತೆಗೇನೇ ಮೂಲಾಧಿಕಾರ ಮತ್ತು ಮೇಲಧಿಕಾರ ಬಂದಿರುವ ಸ್ಥಿತಿ ಮಾರ್ಪಾಟವು ಪ್ರತಿಯೊಂದು ಸಂದರ್ಭದಲ್ಲೂ ತನ್ನ ಪ್ರಭಾವವನ್ನು ಬೀರುತ್ತಾ ಹೋಗಲಿದೆ; ಸರ್ವರಿಗೂ ಜನತಾ ಶಿಕ್ಷಣ ಕೊಡುತ್ತಾ ಹೋಗಲಿದೆ; ತತ್ಪರಿಣಾಮವಾಗಿ ಎಲ್ಲವೂ ಕ್ರಮಶಃ ಬದಲಾಯಿಸಲಿದೆ

ನಾವು ಈ ದಿನ ಪಡೆದಿರುವ ಹೊಸ ಜೀವನ ಕ್ರಮದಲ್ಲಿ ಮುಖ್ಯವಾಗಿ ಗಣಿಸಬೇಕಾಗಿರುವ ಅಂಶಗಳಿವು:-

ಭೌಗೋಲಿಕವಾಗಿ:— ಭಾರತದ ಅಖಂಡ ಸ್ವರೂಪವು ಅಭೇದ್ಯವಾಗುವಂತೆ ಬಿಗುವಾಗಿ ಜೋಡಣೆಗೊಂಡಿತು. ರಾಷ್ಟ್ರದೊಳಗಡೆಯಲ್ಲಿದ್ದ ನೂರಾರು ಗಡಿಬೇಲಿಗಳನ್ನು ಕಿತ್ತೊಗೆದು, ಆಡಳಿತಾನುಕೂಲತೆಯ ದೊಡ್ಡ ಕ್ಷೇತ್ರಗಳನ್ನಾಗಿ ವಿಸ್ತರಿಸಿಕೊಂಡುದಲ್ಲದೆ ಪ್ರಾಂತ್ಯ—ಸಂಸ್ಥಾನಗಳೊಳಗಿನ ಭೇದಗಳನ್ನೂ ನಿವಾರಿಸಿ ಇಡೀ ರಾಷ್ಟ್ರಕ್ಕೆ ಸುಭದ್ರ, ಸಬಲ, ಅಖಂಡ ರೂಪವನ್ನು ಕೊಡಲಾಗಿದೆ. ತುಂಡು, ತುಣುಕುಗಳಾಗಿದ್ದ ಸ್ವರ್ಣಭೂಮಿ ಭಾರತವನ್ನು ಎರಕ ಹೊಯ್ಯುವಲ್ಲಿ ಹೊಯ್ದುಕೊಂಡು, ಜೋಡಣೆ ಮಾಡಬೇಕಾದಲ್ಲಿ ಜೋಡಿಸಿಕೊಂಡು ನಿಜಕ್ಕೂ ಸುವರ್ಣ ತಟ್ಟೆಯನ್ನಾಗಿ ಮಾಡಿಟ್ಟಂತಾಗಿದೆ.

ಅಧಿಕಾರಿಕವಾಗಿ:— ಯಾವುದೇ ವಿಧದ ಒಳಾಭಿಮಾನವು ಪ್ರಬಲಿಸಿ, ಅಖಿಲ ರಾಷ್ಟ್ರಾಭಿಮಾನವನ್ನು ಹಿಂದೆ ಹಾಕದಂತೆ ನೋಡುವುದಕ್ಕಾಗಿ ಕೇಂದ್ರಾಧಿಕಾರವನ್ನು ಹೆಚ್ಚಿಸಲಾಗಿದೆ. ವಿಶೇಷ ಸಂದರ್ಭಗಳಲ್ಲಿ ಪ್ರಾಂತ್ಯದ ಎಲ್ಲಾ ಆಡಳಿತೆಯನ್ನೂ ವಹಿಸಿಕೊಳ್ಳುವ ಅಧಿಕಾರವಿರುವಂತೆಯೇ ಸಾಮಾನ್ಯ ಕಾಲದ ಶೇಷಾಧಿಕಾರ ಮತ್ತು ಕೆಲವು ಪ್ರಾಮುಖ್ಯಾಧಿಕಾರಗಳೂ ಕೇಂದ್ರಕ್ಕೇನೇ ಸೇರಿಹೋಗಿವೆ. ಈ ದೆಸೆಯಿಂದಾಗಿ, ಸ್ವತಃ ಕೇಂದ್ರವು, ಆರ್ಥಿಕ ಏಕಪ್ರಕಾರ ಅಖಿಲ ರಾಷ್ಟ್ರದ ಮನೋವೃತ್ತಿಯು ಸಡಿಲು ಬೀಳದೆ, ದೇಶದ ಯಾವುದೇ ಒಂದು ಭಾಗದಲ್ಲಿ ಎಂತಹ ಪ್ರತಿಕೂಲ ವಿದ್ಯಮಾನವೆದ್ದರೂ ಅದು ಸಕಾಲದಲ್ಲಿ ನಿಯಂತ್ರಣಕ್ಕೊಳಗಾಗುವಂತಾಗಿದೆ. ಮಧ್ಯದಲ್ಲಿ ಗಟ್ಟಿ ಗೂಟವನ್ನು ಹಾಕಿ, ಅದನ್ನಾವರಿಸಿರುವ ಯಾವ ಭಾಗವೂ ಹದ್ದುಮೀರಿ ಅಲುಗಾಡದಂತೆ ಎಲ್ಲವನ್ನೂ ಅದಕ್ಕೆ ಬಿಗಿದು ಕಟ್ಟಿದಂತಿರುವ ವ್ಯವಸ್ಥೆಯಿದು.

ಮಾನಸಿಕವಾಗಿ:— ಪಾಕಿಸ್ತಾನ್ ಸ್ವರ್ಮಾಣಕ್ಕೆ ಹೇತುವಾದ ಪ್ರತ್ಯೇಕ ಮತದಾನ ಪದ್ಧತಿ ರದ್ದಾಗಿ, ಜಾತ್ಯತೀತ ಜನತಾ ರಾಜ್ಯದಲ್ಲಿ ಎಲ್ಲರಿಗೂ ಸಮಾನ ಸ್ಥಾನ, ಮಾನ, ಸಂದರ್ಭ ವೇದಿಸುವುದರಿಂದ ಸರ್ವರೂ ಸಮಾನತೆಯಿಂದ ವರ್ತಿಸುವುದು ಇಂದಿನಿಂದ ಅನಿವಾರ್ಯವಾಗಿದೆ. ಜನತೆಯಲ್ಲಿ ಏಕಪ್ರಕಾರ ಎಲ್ಲರ ಆಶ್ರಯ. ಸಹಕಾರ, ಸಹಾನುಭೂತಿ ಗಳಿಸಿಯೇ ಇನ್ನು ಮುಂದಿನ ಕೆಲಸ ಹೊರತು ಜಾತಿ, ಮತವನ್ನಾಧರಿಸಿ ಯಾವ ಕಾರ್ಯವೂ ನಡೆಯದಾದ್ದರಿಂದ,

THE
UNITED KARNATAK INSURANCE COMPANY, LTD., DHARWAR.
Established: 1929.
Wishes all our Shareholders, Policy-holders, Doctors, Fiel Workers, and Patrons, a Happy and more Prosperous carreer in our new Republic of India.

ಈ ಘಟನೆ ಪ್ರಳಯಕಾಂತವೆನ್ನಬಹುದಾಗಿತ್ತು. ವಿವಿಧ ಭೇದಗಳೂ ಹೊಸ್ತಿಲಲ್ಲಿ ಕಾಣುತ್ತಿದ್ದ ಬಿಸಿಯ ಗಾಳಿ ಇನ್ನೂ ಸ್ಥಾನ ಮಾಡಿಕೊಳ್ಳುತ್ತಿವೆ. ದೇಶದೊಳಗಣ ಅನೇಕ ವರ್ಷಗಳ ಸರ್ವೇಷ ಬೆಳೆದು ಬಂದಿದ್ದ ವಿಷ ಗಿಡಗಳಿಗೆ, ನೀರು ಗೊಬ್ಬರವಿಕ್ಕದೆ ಅಲ್ಲೇ ಕಡಿದು ನಾಶ ಮಾಡಿಬಿಡುವ ವ್ಯವಸ್ಥೆಯಿದು.

ಶಾಸನಬದ್ಧವಾಗಿ ಈ ಹೊಸ ವ್ಯವಸ್ಥೆಗಳೆಲ್ಲವೂ ಈ ದಿವಸದಿಂದ ಜಾರಿಗೆ ಬಂದಿವೆಯಾದರೂ, ಹೊಸ ವಿಧಾನಾನುಸಾರವಾಗಿ ಮಹಾ ಚುನಾವಣೆಗಳು ನಡೆಯುವ ವರೆಗೂ ಜನ ಸಾಮಾನ್ಯರಿಗೆ ಈ ಬದಲಾವಣೆಯು ಸರಿಯಾಗಿ ಮನವರಿಕೆಯಾಗುವಂತಿಲ್ಲ.

ಸ್ವತಂತ್ರ ಭಾರತದ ಪ್ರಜಾಸತ್ತಾತ್ಮಕ ರಾಜ್ಯಶಾಸನವೆಂದರೆ ರಾಜ್ಯಾಂಗದ ಆಕಾರ ಬದಲಾವಣೆ ಮಾತ್ರ; ಈ ಹೊಸ ತಳಹದಿಯ ಮೇಲೆ, ಜನತೆಯ ನಿತ್ಯ ಜೀವನ ವಿಧಾನಗಳಿಗೆ ಸಂಬಂಧಿಸಿರುವ ಹಳೆಯ ಕಾಯಿದೆ ಕಾನೂನುಗಳೇ ಇರುವುದರಿಂದ ಜನರ ದೈನಂದಿನ ಆಗು ಹೋಗುಗಳಲ್ಲಾವ ಬದಲಾವಣೆಯೂ ಗೋಚರಿಸಲಾರದು. ರಾಜ್ಯಾಂಗ ನವೀನತೆ ಒದಗಲಾದುದು ಜನತೆಯ ಪ್ರತ್ಯಕ್ಷ ಅನುಭವಕ್ಕೆ ಬರಬೇಕು ಚುನಾವಣೆಗಳ ಕಾಲದಲ್ಲೇ.

ಆದ್ದರಿಂದ ಈ ದಿನದಿಂದ, ಮಹಾ ಚುನಾವಣೆಗಳ ವರೆಗಿನ ಅವಧಿಯನ್ನು ಜನತೆಯು 'ತರಬೇತಿ ಸಮಯ'ವಾಗಿ ಗಣಿಸಿ ಸಾರ್ಥಕಪಡಿಸಬೇಕಾದುದು ಮುಖ್ಯ. ಸ್ವತಃ ಜನತೆಯು ಉಪಯೋಗಿಸಿಕೊಳ್ಳಲಿರುವ ಅಧಿಕಾರವನ್ನು ಉಪಯೋಗಿಸಿ ಕೊಡುವ— ಅದರ ಗೊಡವೆಗೇನೇ ಜನತೆ ಹೋಗದಿದ್ದರೆ ಜನತೆಯ ಗೊಡವೆಗೆ ಅದಾಗಿ ಬಾರದಿರುವ—ಶಾಸನವಿದು. ಜನತೆಗಾಗಿ ರಚಿಸಲ್ಪಟ್ಟಿರುವ ಈ ರಾಜದಂಡಕ್ಕೆ, ಜನತೆ ಕೈಯಿಕ್ಕದರೆ ಮಿಕ್ಕವರೆಲ್ಲರೂ ಇವರ ಅಜ್ಞಾಧೀನರಾಗುವರು. ಆ ರಾಜದಂಡವು ಅನಾಥವಾಗಿ ಉಳಿದುಕೊಂಡರೆ, ಹಿಡಿತದ ಅನುಭವವುಳ್ಳ ಉದ್ದ ಕೈಯವರೇ ಅದನ್ನು ಹಿಡಿದುಕೊಳ್ಳುವರು.

ಈ ಹಕ್ಕನ್ನು ಹಿಡಿದುಕೊಳ್ಳುವ ಪ್ರಜ್ಞೆಯು ಸಾರ್ವಜನಿಕರಲ್ಲಿ ಇಲ್ಲದೆ ಹೋದರೆ, ಅವರ ಪಾಲಿಗೆ ಈ ದಿನದ ಸಭೆ, ಮೆರವಣಿಗೆ, ತಿಂಡಿ ತೀರ್ಥ, ಅಲಂಕಾರ, ಉತ್ಸವಗಳ ಹೊರತು ಬೇರೇನನ್ನೂ ಈ ಬದಲಾವಣೆ ತಾರದಂತಾಗುವದು; ಬದಲಿಗೆ, ಈ ದಿನದಿಂದ ತಾವೇ ಮೂಲಾಧಿಕಾರಿಗಳು— ಎಲ್ಲರೂ ಸಂಪೂರ್ಣವಾಗಿ ತಮಗೆ ಶೇಕಡಾ ಶೇಕಡಾ— ಪ್ರತಿಷ್ಠಿತರು ತಾಂತು ಪಡೆಯಬಲ್ಲರಾದರೆ, ಈಗ ಬಿದ್ದಿರುವ ಕಾಲದಲ್ಲಿ ಉಪ್ಪವರಿಗೆ ಪ್ರಜಾಪ್ರಭುತ್ವ ಅರ್ಹಕ್ಕಿಸಿ, ಶಿಕ್ಷಿಸಿ, ಸಾರ್ವಜನಿಕರು ತಮ್ಮಿಚ್ಛೆಯ ಕಾರ್ಯಮಾಡಿಸಿಕೊಳ್ಳಬಲ್ಲರು.

ಸಾರ್ವಜನಿಕರಿಗೆ ಸದ್ಯದ ಬದಲಾವಣೆಯು ಮುಂದಟ್ಟಾಗದಿದ್ದರೆ, ಮುಂದಿನ ಮಹಾ ಚುನಾವಣೆಯಲ್ಲಾದರೂ ಅಷ್ಟೆ! ತಮ್ಮಲ್ಲಿ ವೋಟು ಕೊಡುವವರ ಸಂಖ್ಯೆ ಮತ್ತು ತಮ್ಮ ಜಿಲ್ಲೆಯಿಂದ ಶಾಸನ ಸಭೆಗಳಿಗೆ ಆರಿಸಲ್ಪಡುವವರ ಸಂಖ್ಯೆ ಹೆಚ್ಚಿದುದು ಮತ್ತು ಅದಕ್ಕನುಸಾರವಾಗಿ ತಮ್ಮ ಮತದಾರ ಕ್ಷೇತ್ರ ಕಿರಿದುಗೊಂಡುದು ಮಾತ್ರ ಅವರಿಗೆ ತಿಳಿದು ಬಂದೀತು; ಎಲ್ಲಾ ವಿಧದ ಒತ್ತಡವೂ ಹೆಚ್ಚಿರುವ ಅನುಭವವಾದೀತು, ಹೊರತು ಬೇರೇನೂ ಆಗದು. ಬದಲಿಗೆ ಈ ಬದಲಾವಣೆಯ ಆಕಾರ ಮತ್ತು ಅರ್ಥ ಜನತೆಗೆ ಮುಂದಟ್ಟಾದರೆ ತಮ್ಮ ಹಿತಸಾಧಕ ಪಕ್ಷ ಮತ್ತು ವ್ಯಕ್ತಿಗಳನ್ನೇ ಆರಿಸಿಕೊಳ್ಳುವ ಜ್ಞಾನ ಹಾಗೂ ಜಾಗ್ರತಿ ಹುಟ್ಟಿ, ಅದರ ಪರಿಣಾಮವನ್ನು ಮುಂದಿನ ಆಡಳಿತೆಯ, ಎಲ್ಲಾ ವಿಧಾನಗಳ ಮೂಲಕವೂ ಪ್ರತ್ಯಕ್ಷ ಅನುಭೋಗಿಸುವಂತಾದೀತು.

ಜನತೆ ಜಾಗ್ರತಿಗೊಳ್ಳದಿದ್ದರೆ, ಜನಮತದ ಬೆಲೆಯು ಚುನಾವಣೆ ಮುಗಿದ ದಿನದಿಂದಲೇ ಕಳೆದು ಹೋದೀತು. ಚುನಾಯಿತ ಪ್ರತಿನಿಧಿಗಳು ಜನಮತವನ್ನು ಕಾಲದಂತೆ ಆಧರಿಸಿಕೊಂಡು ಅಧಿಕಾರ ನಿರ್ವಹಿಸುವ ಬದಲಿಗೆ, ಅದು ತಾವು ಸ್ವಸಾಮರ್ಥ್ಯದಿಂದ ಕಿತ್ತುಕೊಂಡ ಗೂಟವೆಂಬಂತೆ, ಅದನ್ನು ಧರಿಸಿಕೊಂಡು ಅಧಿಕಾರ ರಂಗದಲ್ಲಿ ಸ್ವೇಚ್ಛೆಯಿಂದ ಆಡ್ಡಾಡಿಯಾರು. ಬದಲಿಗೆ, ಜನತೆ ಜೋಕೆಗಾರಿಕೆಯಿಂದ ಮತದಾನವಮಾಡಿದರೆ, ಜನತೆಯ ಅಭಿಮತವು ಒಂದು ಕಾಲುವೆಯಾಗಿ ಹರಿದು ಅಕ್ಷಯ ಕೇಂದ್ರ ಪಾರ್ಲಿಮೆಂಟ್ ಹಾಗೂ ಆ ಸರಕಾರ ಸರೋವರವನ್ನೂ ಇತ್ತ ಮತ್ತೊಂದು ಪ್ರವಾಹವಾಗಿ ಹರಿದು ಇಲ್ಲಿಯ ಪ್ರಾಂತಿಕ ಶಾಸನ ಸಭೆ ಹಾಗೂ ಈ ಸರಕಾರಕೆರೆಯನ್ನೂ ತುಂಬಿಸಿಕೊಟ್ಟೀತು. ಆ ಮೂಲಕ ಜನಮತ ಜಲವೇ ಎಲ್ಲೆಲ್ಲೂ ಪ್ರವಹಿಸಿ ಜನಹಿತ ಸಾಧನೆಯ ಬೆಳೆ ಬೆಳೆದೀತು.

ಈ ರೀತಿ ಜನತೆಯ ಜ್ಞಾನ ಅಥವಾ ಅಜ್ಞಾನದ ಮೂಲಕವೇ ಇನ್ನು ಮುಂದಿನ ಸ್ವರ್ಗ ಅಥವಾ ನರಕದ ನಿರ್ಮಾಣ. ಜನತೆ ಅಜ್ಞಾನಿಯಾಗಿದ್ದರೆ, ಈಗ ಬಂದಿರುವ ಅಧಿಕಾರವು ಅದರ ಕಂಠಕ್ಕೊಂದು ಹಗ್ಗವಾಗಿ ಸುತ್ತಿಕೊಂಡು, ಅದನ್ನ ಕತ್ತು ಲೋ ಎಳೆದೀತು–ಜನತೆ ಜ್ಞಾನಿಯಾಗಿದ್ದರೆ ಇದು ಕಂಠಹಾರವಾಗಿ ಶೋಭಿಸಿ ಸೌಮಾಂಗಲ್ಯವನ್ನು ಉಂಟುಮಾಡೀತು. ಕುರುಡು ಜನತೆಯ ಕೈಯಲ್ಲಿದು ತುಘಲಕ್ ಅನ್ಯರ ಕೈಯಲ್ಲಿರುವ ಕೋಲು–ಕಣ್ತೆರೆದ ಜನತೆಯ ಕೈಯಲ್ಲಿ ಇದೇ ನಡೆಯಲಾಗುವ ಮತ್ತು ಹೊಡೆಯಲಾಗುವ ಕೈ ಬೆತ್ತ. ಅರಿಯದ ಜನತೆ ಈ ಅಧಿಕಾರದ ಮೂಲಕ ತನ್ನ ಧನಿಗಳನ್ನು ನಿರ್ಮಿಸಿ ಕೊಂಡೀತು–ಅರಿತ ಜನತೆ ಈ ಮೂಲಕ ತನ್ನ ನೌಕರರನ್ನು ನೇಮಿಸಿಕೊಂಡೀತು. ವ್ಯತ್ಯಾಸವಿಷ್ಟೆ.

ವಸ್ತುತಃ ತನಗೆ ಈ ದಿನ [illegible] ಮತ್ತು ಜೋಕೆಗಾರಿಕೆ ಬಂದಿದ್ದ[illegible]ನ್ನು, ಸ್ವತಃ ಜನತೆಯೇ ಅರಿತು[illegible]ದಿದ್ದರೆ, ಜನತೆಯ ಪೈಕಿ ಅದನ್ನ[illegible]ವೇ ಮುಂದೆ ಅದರ ಪೂರ್ಣ ಪ್ರ[illegible]ನ ಪಡೆಯುವಂತಾಗುವದು. ಕು[illegible] ಖಾಲಿ ಖಜಾನೆಯಲ್ಲಿ ಹೊಸತಾಗಿ [illegible] ಹಕ್ಕಿನ ದ್ರವ್ಯ ತುಂಬಿಸುದು ಕ[illegible]ರಪೈಕಿ ಒಬ್ಬಿಬ್ಬರಿಗೆ ಮಾತ್ರ ತಿಳಿದು[illegible] ಮಿಕ್ಕವರು ಅದರ ಗೊಡವೆಯನ್ನ[illegible]ದ್ದರೆ, ಅದು ಆ ಒಬ್ಬಿಬ್ಬರ ಮ[illegible]ನ್ನಾಧರಿಸಿ ಹೇಗೆ ವಿನಿಯೋಗ [illegible]ತೋ ಹಾಗೆಯೇ ಆದೀತು. ಆ[illegible] ಖಜಾನೆ ತುಂಬಿದಂತೆಯೇ ಜ್ಞಾ[illegible] ಬಬೇಕಾದುದು ಈಗ ಆಗತ್ಯ.

ಸಂಗತಿ ಹೀಗಿರುವಾಗ ಜನತೆ[illegible]ಲಿಗೆ ಇಂದಿನಿಂದ ಯಾರನ್ನೇ [illegible] ದೂರಿ ಸುಮ್ಮಗಿರುವ ಅವಸ್ಥೆಯು[illegible] ಗತಕಾಲದಲ್ಲಿ ಆದ ಪ್ರಮಾದ[illegible] ತೊಡೆದು ಹಾಕುವ, ತಿದ್ದಿಕೊಳ್ಳು[illegible] ಚಲಿತ ಸ್ಥಿತಿಯಲ್ಲಿ ಮಾಡಬೇಕಾದು[illegible] ಮಾಡುವ —ಭಾವೀ ಸಂಭವಗಳ[illegible]ರೀಕ್ಷಿಸಿ, ಭವಿಷ್ಯವನ್ನು ರೂಪಿಸಿ [illegible]ವ —ಪೂರ್ಣ ಜವಾಬ್ದಾರಿ ಜನ[illegible] ಬಂದಿದೆ. ಒಂದೋ ಜನತೆಯೊಪ್ಪಿ[illegible]ಟ್ಟರೆ, ಹಾಗೆ ಅಧಿಕೃತರಾದವರು [illegible] ಶಿರಸಾವಹಿಸಿ ಪೂರ್ವಹಿಸಿಯಾರು; [illegible] ಜನತೆ ಕಡೆಗಣಿಸಿ ಬಿಟ್ಟರೆ, ಆ ಕ[illegible]ಣ್ಣಿಟ್ಟವರು ಅದನ್ನು ಹೆಕ್ಕಿಕೊಂಡ[illegible] ಸಿಯಾರು. ಇಂದಿನಿಂದ ಇವೆರಡೇ[illegible] ನಗಳುಳಿದಿವೆಯಾದ್ದರಿಂದ ಜನ ಸ[illegible]ನ್ಯರು ತಮ್ಮನ್ನು ತಾವು, ತಮ್ಮ[illegible] ವ್ಯವನ್ನು ತಾವು ಅರಿತು [illegible] ದರಿಯಿತು.

ಈ ದಿನದಿಂದ ಜಾರಿಯಲ್ಲಿರುವ[illegible] ತಾ ರಾಜ್ಯದ ಆಕಾರ ಮತ್ತು [illegible]ಷ್ಟೆ. ಇಷ್ಟನ್ನರಿತುಕೊಂಡರೆ ಈ [illegible] ಯುಗವನ್ನು ಸಂಚಯ ಮಾಡಿಕೊ[illegible] ಪ್ರವೇಶಿಸಿದಂತಾಗುವದು.

ಈ ಗುರುವಾರ, ತಾ 26–1–19[illegible]ಲ್ಲಿ ಆರಂಭಿಸಿರ ನವಯುಗವು ಸಾ[illegible]ವಾಗಲಿ; ಸರ್ವರಿಗೂ ಕಲ್ಯಾಣಕಾ[illegible]ಗಲಿ; ಜಯಿಸಲಿ. ಜೈ ಹಿಂದ್!


# The Canara Industrial & Banking Syndicate Ltd.

## ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925. ಪ್ರಧಾನ ಕಾರ್ಯಾಲಯ ಉಡುಪಿ, ದ. ಭಾರತ.

**ಕುಟುಂಬದ ಯಜಮಾನನ ಜವಾಬ್ದಾರಿ**

ಈಗಿನ ನಿಮ್ಮ ಸಂಪಾದನೆಯು ಎಷ್ಟೇ ಉತ್ತಮವಿರಲಿ, ನೀವು ಕುಟುಂಬದ ಯಜಮಾನನಾಗಿದ್ದಲ್ಲಿ, ನಾಳಿನ ಕುಟುಂಬದ ಪೋಷಣೆಯ ಚಿಂತೆಯು ನಿಮಗೆ ಇದ್ದೇ ಇರಬಹುದಷ್ಟೆ. ಆದರೆ ಈಗಿನ ನಿಮ್ಮ ಸಂಪಾದನೆ ಸಮಯದಲ್ಲೆ ಉಳಿತಾಯದ ಪ್ರಶ್ನೆಯೂ ನಿಮ್ಮಲ್ಲಿದ್ದರೆ ನಾಳಿನ ಸಮಸ್ಯೆಗಳೆಲ್ಲವನ್ನೂ ಬಗೆಹರಿಸಲು ಶಕ್ಯವಿದೆ. ನಮ್ಮಲ್ಲಿ ಸೇವಿಂಗ್ಸ್ ಬೇಂಕ್ ಲೆಕ್ಕವನ್ನು ತೆರೆಯಿರಿ. ಅಂತೆಯೇ ನಮ್ಮ ರಜತ ಮಹೋತ್ಸವದ ಕ್ಯಾಷ್ ಸರ್ಟಿಫಿಕೇಟುಗಳಿಗಾಗಿ ವಿಚಾರಿಸಿರಿ.

ಟಿ. ಎಂ. ಎ. ಪೈ.
ಚೆಯರ್‌ಮೆನ್ ಮತ್ತು ಮೆನೇಜಿಂಗ್ ಡ್ಯಾರೆಕ್ಟರ್.






Approved firm by the Govt. of Mysore
Certificated by the Agent of the Govt. of Cylone & India.



# ಕುಲವಿಲ್ಲದ ಹೆಣ್ಣು

(ಸರಸ ಸಾಮಾಜಿಕ ಕಾದಂಬರಿ)

ಬರೆದವರು:—ಪಿ. ವೆಂಕೋಬಾಚಾರ್ಯ, ಬಿ.ಎ.ಬಿ.ಟಿ.

ದೇವದಾಸಿ ಕುಲದ ಉದ್ಧಾರವೇ ಮುಖ್ಯ ಕಥಾವಸ್ತು.

**ಕುಸುಮಳು ವೇಶ್ಯಾಪುತ್ರಿಯಾದರೂ ಅವಳು ವೇಶ್ಯೆಯಲ್ಲ!**
**ಅವಳ ಕತೆ ಹೇಗೆ ಸಾಗಿದೆ ಎಂದು ಓದಿಯೇ ತಿಳಿಯಿರಿ.**

ದಪ್ಪ ಪುಸ್ತಕ ಬೆಲೆ ರೂ. **1–0–0**

ಪ್ರತಿಗಳು, ಅಂತರಂಗ ಕಾರ್ಯಾಲಯ, ಉಡುಪಿ,
ಯಾ ನವಯುಗ ಪ್ರೆಸ್, ಉಡುಪಿ ಇಲ್ಲಿ ದೊರೆಯುತ್ತವೆ.



ಬಿಳಿ ಕಾಗದ! ನಾಜೂಕಿನ ಬ್ಯಾಂ[illegible]

**1950ನೇ ಇಸವಿಯ[illegible]**
**ಪಾಕೆಟ್ ಡೈರಿಗಳ[illegible]**

| | | |
|---|---|---|
| ದೊಡ್ಡದು (ಕೆಲಿಕೊ ಬೈಂಡ್) | | 1 1[illegible] |
| ,, | (ಸಾದಾ) | 1–[illegible] |
| ಸಣ್ಣದು | (ಕೆಲಿಕೊ) | 1–4 |
| ,, | (ಸಾದಾ) | 0–1[illegible] |

(ಟಪ್ಪಾಲು ಖರ್ಚು ಪ್ರತ್ಯೇಕ.)

ಸಿಗುವ ಸ್ಥಳಗಳು:—

**ನವಭಾರತ ಬುಕ್ ಡಿಪೊ, ಉಡು[illegible]**
**ನವಯುಗ ಪ್ರೆಸ್, ಉಡುಪಿ**

# ವಸಾಹತು ಸ್ವರಾಜ್ಯದಿಂದ- ಜನತಾ ರಾಜ್ಯದ ವರೆಗೆ.

ಭಾರತವು ಆಗೋಸ್ತು 15ರಲ್ಲಿ, ಸ್ವೇಚ್ಛೆಯಿಂತೆ ಅಧಿಕಾರ ಬದಲಾಯಿಸಿಕೊಳ್ಳುವ ಅಧಿಕಾರ ಸಹಿತವಾದ ವಸಾಹತು ಸ್ವರಾಜ್ಯವನ್ನು ಗಳಿಸಿಕೊಂಡಂದಿನಿಂದ, 1950ನೇ ಜನವರಿ 26ರಲ್ಲಿ ವಸಾಹತು ರಾಷ್ಟ್ರಕೂಟದ ಸದಸ್ಯತ್ವವುಳಿಸಿಕೊಂಡೇ ಪೂರ್ಣ ಸ್ವತಂತ್ರಗೊಳ್ಳುವ ವರೆಗಿನ ಅವಧಿಯು ಈ ರಾಷ್ಟ್ರದ ಚರಿತ್ರೆಯಲ್ಲಿ ಒಂದು ಪ್ರಾಮುಖ್ಯ ಅಧ್ಯಾಯವಾಗಿ ರಾಜಿಸುವಂತಹದು. ಭಾರತದ ಸರ್ವ ಭಾಗಗಳ ಮತ್ತು ಸರ್ವ ಭಾರತೀಯರ ಪಾಲಿಗೆ ಅಗ್ನಿ ಪರೀಕ್ಷೆಯ ಅವಧಿಯೇ ಇದಾಗಿತ್ತು. ಗಳಿಸಿಕೊಂಡ ಬೆನ್ನಲ್ಲೇ ಸ್ವಾತಂತ್ರ್ಯವನ್ನು ಕೈತಪ್ಪಿಸಲು, ಅಥವಾ ಸಂಪೂರ್ಣ ಕೆಡಿಸಿಬಿಡಲು ಸಾಧ್ಯವಿದ್ದ ಹಲವು ವಿಶೇಷ ಘಟನೆಗಳು ಈ ಅವಧಿಯಲ್ಲಿ ನಡೆದಿದ್ದುವು. ಕಷ್ಟಕಾಲದಲ್ಲಿ, ವಿಶೇಷ ಅನಾಹುತಗಳೊಂದಿಗೆ ಬಂದುಬಿದ್ದಿದ್ದ ಸ್ವಾತಂತ್ರ್ಯದ ಆದಿಭಾಗದಲ್ಲಿ ಸಹಜವಾಗಿ ತಾಗಿದ್ದ ಗಂಡಾಂತರಗಳು ಮತ್ತು ಅವುಗಳನ್ನು ನಿವಾರಿಸಿಕೊಂಡ ರೀತಿನೀತಿಗಳು ಜನತಾ ರಾಜ್ಯದ ಸ್ವತಂತ್ರ ಪ್ರಜೆಗಳಿಗೆ ಉತ್ತಮ ಪಾಠವಾಗುವಂಥವಿವೆ. ಆದ್ದರಿಂದ, ಜನತಾ ರಾಜ್ಯೋದಯದ ಈ ಶುಭಮುಹೂರ್ತದಲ್ಲಿ ನಾವೀಗ ದಾಟಿ ಬಂದಿರುವ ಕೆಲವು ಘಟನೆಗಳನ್ನು ಇಲ್ಲಿ ನೆನಪಿಗೆ ತರಲಾಗಿದೆ

ಸ್ವರಾಜ್ಯ ಸ್ಥಾಪನೆಯ ವೇಳೆ ನಡೆದ ಜಾತೀಯ ಗೊಂದಲವು ಎಷ್ಟು ಭೀಕರ ಸ್ವರೂಪದ್ದಾಗಿತ್ತೆಂದರೆ, ಆಗ ತಾನೇ ಅಧಿಕಾರ ವಹಿಸಿದ ಬೇರಾವ ಸರಕಾರವಾದರೂ ಆ ಸಂದರ್ಭದಲ್ಲಿ ಅಡಿಮೇಲಾಗುವ ಸಂಭವವಿದ್ದಿತು. ಲಕ್ಷಗಟ್ಲೆ ನಿರಾಶ್ರಿತರನ್ನು ಅತ್ತಿಂದಿತ್ತ ಸಾಗಿಸುವ ವ್ಯತ್ತಿವರ ಜೀವನ ವ್ಯವಸ್ಥೆ ಮಾಡುವ ಅತಿ ದೊಡ್ಡ ಪರಿಮಾಣದ ಎದೆಬಲ, ಕಾರ್ಯಶಕ್ತಿ ಮತ್ತು ಹಣದ ವ್ಯಯ ಭಾರವು ನವೋದಿತ ಸರಕಾರವೊಂದನ್ನು ಆಗಲೇ ಕುಸಿದು ಕೆಡಹಿಬಿಡುತ್ತಿತ್ತು. ಆದರೂ ಭಾರತದ ನಾಯಕರಲ್ಲಿ ಈ ಆಪತ್ತನ್ನು ಜಯಿಸಬಲ್ಲ ಮನೋಬಲ ಮತ್ತು ಕಾರ್ಯಶಕ್ತಿಯೂ ಭಾರತದಲ್ಲಿ ಈ ಅಪಾರ ವ್ಯಯವನ್ನು ಹೋಬಲ್ಲ ಧನ ಜನಬಲವೂ ಇದೆಯೆಂಬುದು ಪ್ರದರ್ಶಿಸಲ್ಪಟ್ಟಿತು. ಇದ, ಆದಿಭಾಗದಲ್ಲೇ ನಡೆದ ಅಗ್ನಿ ಪರೀಕ್ಷೆ; ಇದರಲ್ಲಿ ಜಯಿಸಿದ ಸ್ವತಂತ್ರ ಭಾರತವು ಮುಂದಿನ ಎಂತಹ ಆಪತ್ತುಗಳನ್ನಾದರೂ ಎದುರಿಸಬಲ್ಲುದೆಂಬ ಭರವಸೆ ದೊರೆತಿದೆ.

ಕಾಂಗ್ರೆಸ್ ಆಡಳಿತೆಯ ಮೇಲೆ ಜನರಿಗೆಂತಹ ವಿಶ್ವಾಸವಿದೆಯೆಂಬುದನ್ನೂ ಆ ಜಾತೀಯ ಗೊಂದಲವು ಅಸಾಮಾನ್ಯ ರೀತಿಯಿಂದ ತೋರಿಸಿಕೊಟ್ಟಿತು. ದೇಶದ ಇಬ್ಭಾಗ ಗೆರೆ ಬಿದ್ದ ಬಂಗಾಳ ಮತ್ತು ಪಂಜಾಬು ಪ್ರಾಂತ್ಯಗಳೆರಡೂ ಸ್ವಾಭಿಮಾನಿ ಮತ್ತು ಸಾಹಸಿ ಜನರಿಂದ ತುಂಬಿದ್ದ ಪ್ರಾಂತ್ಯಗಳು. ಒಂದು ಕಾಲದಲ್ಲಿ ತಮ್ಮ ಪ್ರಾಂತ್ಯ ವಿಭಜನೆಯಾಯಿತೆಂದು ಇಡೀ ದೇಶದಲ್ಲಿ ಹೊಸ ಬಿಸಿಯನ್ನು ನಿರ್ಮಿಸಿದ್ದ ಬಂಗಾಳಿಗಳ ಪ್ರಾಂತ್ಯಾಭಿಮಾನವು ಅಸದೃಶವಾದುದು. ಪಂಜಾಬೀ ಸಿಕ್ಖರ ಸ್ವಾಭಿಮಾನವೂ ಅನ್ಯಾದೃಶವಾದುದು; ರಾಷ್ಟ್ರ ವಿಭಜನೆಯಾಗಿ ಇವೆರಡು ಅಭಿಮಾನಗಳನ್ನೂ ಕೆರಳಿಸಿ, ಎರಡು ಕಡೆಗಳಿಗೂ ಕತ್ತರೀ ಪ್ರಯೋಗ ನಡೆಯಿತು. ಮೇಲಾಗಿ ಆ ಜಾತೀಯ ಗೊಂದಲದ ವೇಳೆ ಅಖಿಲ ರಾಷ್ಟ್ರದ ಸರ್ವಸಾಮಾನ್ಯ ಹಿಂದುಗಳೆಲ್ಲರ ಮನಸ್ಸೂ ಪರಮಾವಧಿ ಬಿಸಿಯೇರಿದ್ದಿತು; ಆ ಕಾಲದ ಈ ಹಿಂದೂ ಉದ್ವೇಗಕ್ಕನುಗುಣವಾದ ಧೋರಣೆಯನ್ನೇ ಕಾಂಗ್ರೆಸ್ ಸರಕಾರ ವಹಿಸಿರಲಿಲ್ಲ. ಈ ರೀತಿ ಜನತೆಯಲ್ಲಿ ಹರಡಿದ್ದ ಪ್ರತಿಕೂಲ ಮನೋವೃತ್ತಿಗಳಿಗೆ ಜನತಾ ಪ್ರತಿನಿಧಿ ಸ್ಥಾನದಲ್ಲಿರುವ ಸರಕಾರವನ್ನು ಗದ್ದುಗೆಯಿಂದಿಳಿಸಿಬಿಡುವ ಶಕ್ತಿಯಿದ್ದಿತು. ಆದರೂ ಕಾಂಗ್ರೆಸ್ ಸರಕಾರವಿರಬಾರದೆಂದು ಚಳವಳ ಹೂಡುವ ಇಚ್ಛೆ ಮತ್ತು ಧೈರ್ಯ ಆ ಕಾಲದಲ್ಲಿ ಯಾರಿಗೂ ಇರಲಿಲ್ಲ. ಬಿರುಗಾಳಿ ವಾತಾವರಣದಲ್ಲೆದ್ದ ಪ್ರಚಂಡ ಅಲೆಗಳು ಭೋರ್ಗರೆಯುತ್ತಾ ಅಪ್ಪಳಿಸಿಬಿಡುವಂತೆ ಕಾಣುತಿದ್ದರೂ ಅವುಗಳ ತಳಭಾಗದ ಪ್ರವಾಹವು ಕಾಂಗ್ರೆಸ್ ಸರಕಾರಗಳ ಕಡೆಗೇನೇ ಹರಿದುಕೊಂಡಿದ್ದಿತು— ತಾತ್ಕಾಲಿಕಾವೇಶಗಳು ಎಂತಹವಿದ್ದರೂ ಹೃದಯಾಂತರಾಳದಲ್ಲಿ ಕಾಂಗ್ರೆಸ್ ಸರಕಾರದ ಮೇಲೆ ಎಲ್ಲರ ಸಹಾನುಭೂತಿ ಮತ್ತು ಭರವಸೆಯಿದ್ದಿತು. ಇದು ಕಾಂಗ್ರೆಸಿನೊಡನೆ ಜನತೆಗಿರುವ ಹೃದಯ ಸಂಬಂಧಕ್ಕೊಂದು ಉಜ್ವಲ ನಿದರ್ಶನ

ಬ್ರಿಟಿಷರು ಪ್ರತ್ಯಕ್ಷ ತಮ್ಮ ಅಧೀನದಲ್ಲಿದ್ದ ಭಾರತ ಭೂಭಾಗವನ್ನು ಸ್ವತಂತ್ರಗೊಳಿಸಿ ಹೋಗುವಾಗ, ತಮ್ಮ ಮೇಲಧಿಕಾರದಡಿಯಲ್ಲಿ ಆಶ್ರಿತ ರಾಜರ ಅಧೀನವಿದ್ದ ಸುಮಾರು 560 ಸಂಸ್ಥಾನಗಳ ಭವಿಷ್ಯದ ಕುರಿತು ಏನನ್ನೂ ಹೇಳದೆ ಹೋಗಿದ್ದರು. ತೋರುವಿಕೆಯ ಮಟ್ಟಿಗೆ ಬ್ರಿಟಿಷರ ಈ ಧೋರಣೆಗೆ ಕ್ರಮಬದ್ಧವಾದ ಕಾರಣವಿತ್ತೆಂಬುದೇನೋ ನಿಜ; ಆದರೆ ನವೋದಿತ ಭಾರತ ಸರಕಾರವನ್ನು ಅಡಿ ತಪ್ಪಿಸಲು ಈ ಸಂಸ್ಥಾನಗಳ ಸಮಸ್ಯೆಯೇ ಸಾಕೆಂಬ ಕುಹಕ ಬುದ್ಧಿಯು ನಿರೀಕ್ಷೆಯೂ ಬ್ರಿಟಿಷರಲ್ಲಿ ಆಗ ಇದ್ದಿರಬಹುದು. ನಿಜಕ್ಕೂ ಈ ಸಂಸ್ಥಾನಗಳೆಲ್ಲವೂ ಏಕ ನಿರ್ದೇಶಕತ್ವದಲ್ಲಿ ಸಂಘಟಿಸಿಗೊಂಡು ಭಾರತ ಸರಕಾರಕ್ಕೆದುರು ಬೀಳುವ ಅನುಕೂಲತೆ ಮತ್ತು ಅವಕಾಶ ದೊರಕುತಿದ್ದರೆ ಕೆಲಸ ಕೆಟ್ಟು ಹೋಗುತಿತ್ತು. ಮೂಲ ಭಾರತವು ಸ್ವರಾಜ್ಯ ಸಂಪಾದನೆಯೊಂದಿಗೇ ಪಾಕಿಸ್ತಾನ್ ತುಂಡನ್ನು ಕಳಕೊಳ್ಳಬೇಕಾಗಿ ಬಂದಂತೆಯೇ ಸ್ವರಾಜ್ಯ ಸಾಧನೆಯಾದ ಬೆನ್ನಲ್ಲೇ ಒಳಗಡೆಯಲ್ಲೊಂದು ರಾಜಸ್ಥಾನ್ ವಿಭಾಗವನ್ನು ನಿರ್ಮಿಸಿಕೊಳ್ಳುತಿದ್ದಿತು. ಆದರೆ 'ಸರ್ದಾರ್ ವಲ್ಲಭಾಯಿ ಎಂದರೇನು?' ಎಂಬ ಶಕ್ತ್ಯವತಾರದ ಪರಿಚಯ ಸರ್ವರಿಗೂ ಆಗುವ ರೀತಿಯಲ್ಲಿ ಭಾರತ ಸರಕಾರವು ಈ ಸಂಸ್ಥಾನೀ ಸಮಸ್ಯೆಯನ್ನು ಬಗೆಹರಿಸಿಕೊಂಡಿತು. ನಿಜಕ್ಕೂ ಈ ಸಂಸ್ಥಾನಗಳ ಜೋಡಣೆಯೆಂಬುದು, ಸ್ವತಂತ್ರ ಭಾರತವು ಅಸ್ತಿತ್ವಕ್ಕೆ ಬಂದ ಕೂಡಲೇ ಮತ್ತೊಂದು ರಾಷ್ಟ್ರವನ್ನು ಗೆದ್ದುಕೊಂಡಷ್ಟೇ ಹೆಚ್ಚಿನ ಮಹತ್ಕಾರ್ಯ.

ಇನ್ನು ಹೈದರಾಬಾದನ್ನು ಗೆದ್ದುಕೊಂಡ ರೀತಿ. ಅದರಲ್ಲಿದ್ದ ಮಿಂಚು ವೇಗವು ಕೇವಲ ಹೈದರಾಬಾದ್ ಕಂಟಕವನ್ನು ಕಿತ್ತೊಗೆಯುವ ಉದ್ದೇಶದ್ದಲ್ಲ; ತತ್ಪ್ರತಿಕ್ರಿಯೆಯಾಗಿ ಮೂಡಬಹುದಾಗಿದ್ದ ಇತರ ಕಂಟಕಗಳಿಗೆ ಅವಕಾಶವೊದಗದಂತೆ ಮತ್ತು ಭಾರತದ ಶಕ್ತಿ ಯೋಗ್ಯತೆಗಳು ಪ್ರಪಂಚಕ್ಕೆ ಅರಿವಾಗುವಂತೆ ಮಾಡುವ ದೂರದೃಷ್ಟಿಯಿಟ್ಟುಕೊಂಡೇ ಆ ಕೆಲಸವನ್ನು ಆ ರೀತಿ ಸಾಧಿಸಲಾಗಿದ್ದಿತು. ಭಾರತದ ಈ ವಿಜಯ ವಿಧಾನವು ಅದರ ಅಹಿತ ಚಿಂತಕರು ಮುಂಗೈ ಕಚ್ಚಿಕೊಳ್ಳುವಂತೆ ಮಾಡಿದೆ.

ಅಂದೇ ಆರಂಭಿಸಿ, ಇಂದಿನ ವರೆಗೂ ಉಳಿದುಕೊಂಡಿರುವ ಸಮಸ್ಯೆಯೆಂದರೆ ಕಾಶ್ಮೀರದ್ದು. ಅಲ್ಲಿಯ ಭೂಸ್ಥಿತಿ ಮತ್ತು ವಿದ್ಯಮಾನಗಳ ಮೇಲಿಂದ ಭಾರತವು ಅಲ್ಲಿ ಇಂತಹ ಕೂಡ ಹೊತ್ತು ಕೆಲಸ ಸಾಗಿಸುತ್ತಿರುವುದೇ ಒಂದು ಗಣ್ಯ ಸಾಹಸವೆನ್ನಬೇಕು. ಮುಂದೆ ಹೇಗಾದರೂ ವಂಚನೆ ಅಥವಾ ಪ್ರಮಾದಗಳಿಗೀಡಾಗುವ ಸನ್ನಿವೇಶಗಳನ್ನು ಭಾರತವೀಗ ದಾಟಿ ಬಂದಿದೆಯಾದ್ದರಿಂದ ಪಶ್ಚಾತ್ತಾಪಪಡುವ ಸಂದರ್ಭ ಇನ್ನೊದಗದು.

ಎಳೇ ಸ್ವಾತಂತ್ರ್ಯದ ಜೋಪಾಸನೆಗಗತ್ಯವಿರುವ ಮುಂಜಾಗ್ರತೆ, ಪಹರೇ ಪ್ರೌಢಿಮೆ, ಸಹನೆ, ಶಕ್ತಿ ಯೋಗ್ಯತೆಗಳು ಎಲ್ಲೆಲ್ಲಾ ರಂಗಗಳಲ್ಲಿ ಸಮಾಧಾನಕರ ರೀತಿಯಿಂದ ಪ್ರದರ್ಶಿಸಲ್ಪಟ್ಟರೂ ಸ್ವಾತಂತ್ರ್ಯ ಶಿಲ್ಪಿ, ರಾಷ್ಟ್ರಪಿತನ ದೇಹರಕ್ಷಣೆಯ ಹೊಣೆಯನ್ನು ಸರಿಯಾಗಿ ನಿರ್ವಹಿಸಲು ಸಂಬಂಧಪಟ್ಟವರಿಂದಾಗದೆ ಹೋಯಿತೆಂಬುದನ್ನು ಈ ಸಂದರ್ಭದಲ್ಲಿ ಸ್ಮರಿಸದಿರಲಾಗುವುದಿಲ್ಲ. ಆದರೆ ಗಾಂಧಿಜೀ ತನ್ನ ಜೀವನಕ್ಕನುಗುಣವಾದ ಮರಣ ಮಕುಟ ಹೊತ್ತು, ಮಾನವ ವರ್ಗದ ಹೃದಯ ಪೀಠಾರೂಢರಾಗಿ, ಜಾತೀಯ ದುರ್ಭಾವನೆಗಳನ್ನು ಅಲ್ಲಿಂದೋಡಿಸಿಬಿಟ್ಟರಾದ್ದರಿಂದ ಇಲ್ಲಿಯೂ ಸಾರ್ಥಕತೆಯೇ ಕಾಣುತ್ತಿದೆ.

ಆರ್. ಎಸ್. ಎಸ್., ಕಮ್ಯೂನಿಸ್ಟರಂತಹ ಪಕ್ಷಗಳ ಕಡೆಗೂ ಈ ಅವಧಿಯಲ್ಲಿ ಯೋಗ್ಯ ಪ್ರಯೋಗಗಳಾಗಿವೆ.

ಜನಸಾಮಾನ್ಯರ ಪ್ರತ್ಯಕ್ಷಾನುಭವಕ್ಕೆ ಬರುವ ಸತ್ಸಾಧನೆ ಯಾವುದೂ ಈ ವರೆಗಾಗಿಲ್ಲವೆನ್ನಲಾಗುವಂತೆ ಜನಜೀವನ ಸ್ಥಿತಿಸುಧಾರಣೆ, ಆರ್ಥಿಕ ಸಾಮಾಜಿಕ ಅಭಿವೃದ್ಧಿ ಸಾಧನೆ, ಆಗಿಲ್ಲ. ಆದರೀ ಮುಖ್ಯ ಹಾಗೂ ನಿಜ ಕಾರ್ಯವು ಇಂದು ಜಾರಿಗೆ ಬಂದಿರುವ 'ಜನತಾರಾಜ್ಯ'ದೊಂದಿಗೇನೇ ಆರಂಭಿಸುವುದು ಉಚಿತ. 47ನೇ ಆಗೋಸ್ತು 15ರಿಂದ 50ನೇ ಜನವರಿ 26ರ ವರೆಗಿನ ಕಾಲವು ಕ್ಷೇತ್ರ ತಯಾರೀ ಅವಧಿಯೆಂದು ಗಣಿಸಿ, ಇನ್ನು ಮುಂದಿನ ಕಾಲವನ್ನು ಪ್ರಗತಿ ಸಾಧನೆಗಾಗಿ ಸರಿಯಾಗಿ ಉಪಯೋಗಿಸಿಕೊಂಡರಾಯಿತು.

ಈ ರೀತಿ ಕಳೆದೆರಡು ಶತಮಾನಗಳಲ್ಲಿ ಹಲವು ದೇಶಾಭಿಮಾನಿ ವೀರ ಸ್ತ್ರೀಪುರುಷರು— ಕೊನೆಯ ಅಂಕದಲ್ಲಿ ಗಾಂಧಿಜೀಯ ಸೇನಾನಿತ್ವದಲ್ಲಿ ಸಹಸ್ರಾರು ಬಂಧುಭಗಿನಿಯರು— ಹೋರಾಡಿ ಗಳಿಸಿದ್ದ ಸ್ವಾತಂತ್ರ್ಯವನ್ನು 15 ಆಗೋಸ್ತು 47ರಿಂದ 26 ಜನವರಿ 50ರ ವರೆಗೆ ರಕ್ಷಿಸಿಕೊಂಡು, ಅದನ್ನು ಸುಭದ್ರಗೊಳಿಸಿ, ಇಂದಿನ ರಾಷ್ಟ್ರ ನಾಯಕರು ಜನತೆಯ ಕೈಗದನ್ನು ಬದಲಾಯಿಸುತಿದ್ದಾರೆ. ಅವರೆಲ್ಲರನ್ನು ಕೃತಜ್ಞತಾಭಾವದಿಂದ ಅಭಿನಂದಿಸಿ ಈ ಜವಾಬ್ದಾರಿಗೆ ತಲೆಯೊಡ್ಡಬೇಕಾದುದು ಈಗ ಜನತೆಯ ಕರ್ತವ್ಯ.


## ಕೆನರಾ ಬ್ಯಾಂಕ್, ಲಿಮಿಟೆಡ್

(ಸ್ಥಾಪನೆ ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಭಾರತದಲ್ಲಿ ಸಾಂಘೀಕರಿಸಿದ್ದು)

**ಮುದ್ದತಿ ಠೇವುಗಳು**

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ೧,೦೦೦ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೫೦ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಠೇವಿಗೆ ಸ್ವೀಕರಿಸಲಾಗುತ್ತದೆ.

| | | | | |
|---|---|---|---|---|
| ೩ ತಿಂಗಳು | ... | ... | ನೂರಕ್ಕೆ ವರ್ಷಕ್ಕೆ | [illegible] |
| ೪ ರಿಂದ ೫ ತಿಂಗಳು | ... | ... | " " | [illegible] |
| ೬ ರಿಂದ ೯ ತಿಂಗಳು | .. | .. | " " | [illegible] |

ರೂ. ೧,೦೦೦ಕ್ಕೆ ಕಡಿಮೆಯಲ್ಲದ ರೂ. ೧೦,೦೦೦ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದು ಕೊಳ್ಳಬಹುದು.

ಮಂಗಳೂರು ಶಾಖೆಗಳು

(1) ಬಂದರ ರೋಡ್; (2) ಡೊಂಗರಕೇರಿ,

ಇತರ ಶಾಖೆಗಳು: ಕಾರ್ಕಳ, ಬಂಟವಾಳ, ಮುಲ್ಕಿ, ಕುಂದಾಪುರ, ಉಡುಪಿ, ಗಂಗೊಳ್ಳಿ, ಪುತ್ತೂರು, ಕಾಸರಗೋಡು, ಬೊಂಬಾಯಿ, ಇತ್ಯಾದಿ ಇತ್ಯಾದಿ.

**CANARA BANK, LIMITED**

**(Estd 1906)**



## NOTICE

Tenders are invited for the supply of furniture according to plans which are open for inspection during working hours.

*Apply to the Principal:*

**Mahatma Gandhi Memorial College. Udipi**

# ಬಾಪೂಜೀ—

ಇದೇ ಗುರುವಾರ, ಜನೆವರಿ ತಾ 26ರಲ್ಲಿ 'ಭಾರತ ರಿಪಬ್ಲಿಕ್' ಉದ್ಘಾಟನೆಯಾದರೆ, ಇಂದಿಗೆ ನಾಲ್ಕನೇ ದಿನ ಸೋಮವಾರ ಜನವರಿ ತಾ 30 ಗಾಂಧೀಜಿ ಬಲಿದಾನದ ಎರಡನೇ ವರ್ಷಂತಿ; 'ಸರ್ವೋದಯ ದಿನ'. ನಾವೀಗ ಆಚರಿಸುತ್ತಿರುವ ಜನತಾ ರಾಜ್ಯೋತ್ಸವ ಸಮಾರಂಭದಲ್ಲಿ ಎಲ್ಲರಿಗಿಂತ ಹೆಚ್ಚಿಗೆ ಸ್ಮರಣೆಗೆ ಬರುತ್ತಿರುವವರು ಮಹಾತ್ಮಾ ಗಾಂಧಿ ಇಂದಿನ ಸ್ವಾತಂತ್ರ್ಯದ ಮೂಲ ಶಿಲ್ಪಿ ಅವರು; ಆದರೂ ಈ ಸ್ವಾತಂತ್ರ್ಯದ ಆಕಾರ ನಿರ್ಮಾಣವು ಅಮೂಲಾಗ್ರವಾಗಿ ಗಾಂಧಿಜೀಯ ನಿರ್ದೇಶಾನುಸಾರ ನಡೆದಿರುವಂತಹದಲ್ಲ. ಹೆಚ್ಚೇಕೆ, ಇದು ದೊರೆತ ವಿಧಾನ ಕೂಡಾ ಗಾಂಧಿಜೀಗೆ ಸಮಾಧಾನಕರವಾಗಿರಲಿಲ್ಲ. ಹೀಗಾಗಿ ಇಂದಿನದು ಮಹಾತ್ಮಾಜೀಯು ಕನಸಿನ 'ಸ್ವರಾಜ್ಯ'ವಲ್ಲ.

## ಗಾಂಧಿಜೀಯು ಸ್ಥಾನ

'ರಾಷ್ಟ್ರಪಿತ' 'ಸ್ವಾತಂತ್ರ್ಯದ ಜನ್ಮದಾತ' ಎಂದು ಮಹಾತ್ಮರನ್ನು ನೆನಸುವಾಗಲೇ, ಇಂದಿನ ರಾಷ್ಟ್ರವು—ಈ ಸ್ವಾತಂತ್ರ್ಯವು ಗಾಂಧಿಜೀಯು ಬಯಕೆಯದಲ್ಲವೆಂದರೆ ಒಂದು ಸಮಸ್ಯೆಯನ್ನೇ ಮುಂದಿಟ್ಟಂತಾಗಬಹುದು. ನಿಜಕ್ಕೂ ಇಲ್ಲಿ ಅಂತಹ ಬಣ್ಣ ಮಿಶ್ರಣಗಳಿವೆ. ಗಾಂಧಿಜೀ ನಾಯಕತ್ವ ವಹಿಸುವ ಮೊದಲೇ ಭಾರತದ ಬಂಧವಿಮೋಚನೆಗಾಗಿ ಹಂಬಲಿಸುತಿದ್ದವರು ಹಲವರಿದ್ದರು. ಅದಕ್ಕಾಗಿ ವಿಧ್ವಂಸಕ ಉಗ್ರೋಪಾಯಗಳನ್ನು ಕೈಕೊಳ್ಳುತಿದ್ದ ಕ್ರಾಂತಿಕಾರರೂ ಇದ್ದರು, ವಿನಯಶೀಲರಾಗಿ ಸ್ವಾಧಿಕಾರ ಯಾಚಿಸುತಿದ್ದ ರಾಜಕೀಯವಾದಿಗಳೂ ಇದ್ದರು. ಗಾಂಧೀವಿಧಾನಗಳಿಗಿಂತ ಬಗೆಬಗೆಯಾದ ರೀತಿ ನೀತಿಗಳಿಂದ ಸ್ವರಾಜ್ಯಕ್ಕಾಗಿ ಒದ್ದಾಡುತಿದ್ದವರು ಆ ಕಾಲದಲ್ಲೂ ಇದ್ದೇ ಇದ್ದರು. ಆದರೆ ಇವರೆಲ್ಲರೂ, ತುಂತುರುಗಳನ್ನು ಹಿಡಿಯುಸುವ ಜಲಚರಗಳಂತೆ ವಿಸ್ತಾರ ರಾಷ್ಟ್ರ ಶರಧಿಯಲ್ಲಿ ಸೇರಿಹೋಗಿದ್ದರು; ಸ್ವಾತಂತ್ರ್ಯದ ಪ್ರಚಂಡ ಅಲೆಗಳನ್ನೆಬ್ಬಿಸುವ ಬಿರುಗಾಳಿಯಾಗಿ ತೋರಿಬಂದುದು ಗಾಂಧಿಜೀಯ ನಾಯಕತ್ವ ಮಾತ್ರ. ಸ್ವಾತಂತ್ರ್ಯವು ಅಖಿಲ ರಾಷ್ಟ್ರದ ಜನತೆಗೆ ಬೇಕಾದುದೆಂಬುದನ್ನು ಖಚಿತಪಡಿಸಿ, ಅದನ್ನೀಯುವುದು ಬ್ರಿಟನರ ಪಾಲಿಗೆ ಅನಿವಾರ್ಯವಾಗುವ ಪರಿಸ್ಥಿತಿಯನ್ನು ನಿರ್ಮಿಸಿದವರು ಮಹಾತ್ಮರೇ. ರಾಷ್ಟ್ರದ ಮೂಲೆ ಮೂಲೆಯಲ್ಲೂ, ಕೋಟಿ ಕೋಟಿ ಜನತೆಯ ಹೃದಯದಲ್ಲೂ ಓಧ್ವನಿಗೊಡುವಂತೆ ಸ್ವಾತಂತ್ರ್ಯ ಕಹಳೆಯನ್ನೂದಿದ ಸೇನಾನಿ ಗಾಂಧಿಜೀಯೊಬ್ಬರೇ. ಗಾಂಧೀ ನಿರ್ಮಿತ ರಾಷ್ಟ್ರವ್ಯಾಪೀ ಜನಜಾಗ್ರತಿಯಿಲ್ಲವಾಗಿದ್ದರೆ, ಮಿಕ್ಕೆಲ್ಲರ ಕೋಲಾಹಲಗಳೂ ಕೇವಲ ಗುಂಪು, ಪಂಗಡಗಳ ಚಳವಳವನ್ನಿಕ್ಕೆ ಕಡೆಗಣಿಸಲ್ಪಡುತಿದ್ದುವು. ಆದ್ದರಿಂದ ಇಂದಿನ ಸ್ವಾತಂತ್ರ್ಯದ ಜನಕ, ಸ್ವತಂತ್ರ ರಾಷ್ಟ್ರದ ಪಿತ ಗಾಂಧಿಜೀಯೆಂಬುದು ಅಕ್ಷರಶಃ ಸತ್ಯ

ಈ ಸ್ವಾತಂತ್ರ್ಯದ ಆಕಾರ ಮಾತ್ರ ಗಾಂಧಿಜೀಯು ಕಲ್ಪನೆಯದಲ್ಲವೆಂಬುದೂ ಅಷ್ಟೇ ಸತ್ಯ. ಇದಕ್ಕೂ ಕಾರಣಗಳಿವೆ. ಮಹಾತ್ಮರದು ಅತಿ ಮಾನುಷತ್ವ; ಸಾಮಾನ್ಯ ಜನ ಮಟ್ಟವನ್ನು ಮೀರಿ [illegible], ಅಷ್ಟೆಯು ತನ್ನ ಪ್ರಚಂಡ ಕಿರಣಗಳಿಂದ [illegible] ಕತ್ತಲೆಯನ್ನು [illegible] ಅಪರ್ಕ—ಜನತೆಯು ಕೈಗ್ಯದೀಪವಾಗಿ ನಿಂತು ಬೆಳಕು ಬೀರಿದವರೇನೂ ಅಲ್ಲ. ಗಾಂಧಿಜೀಯ ಮನಸ್ಸು, ಮಾತು, ಕೃತಿಗಳಂತೆಯೇ ಅವರ ಧ್ಯೇಯ ಕೂಡಾ ಜನಸಾಮಾನ್ಯರ ದೃಷ್ಟಿಗೆ ನಿಲುಕದಷ್ಟು ದೊಡ್ಡದು. ಗಾಂಧೀ ಧ್ಯೇಯವಾಗಿರುವ ಗುರಿ ಮುಟ್ಟಲು ಗಾಂಧೀ ಸಮಾನ ಆತ್ಮಬಲವೇ ಬೇಕಾಗಬಹುದು. ಭಾರತದ ಮೂಕಮಿಲಿಯ ಜನತೆಯು ಇಂತಹ ಉಚ್ಚ ಮಟ್ಟಕ್ಕೇರುವುದು ಅಸಾಧ್ಯ. ಅಂತೆಯೇ ಗಾಂಧಿಜೀಯು ಪೂರ್ಣ ಪರಿಶುದ್ಧ ಹೃದಯವು ಅದಕ್ಕನುಗುಣವಾದ ಅತ್ಯುಚ್ಚ ಬಯಕೆಯನ್ನಲ್ಲದೆ, ಅಪೂರ್ಣ ಸುಖದ ಅಭಿಲಾಷೆಯನ್ನು ಕಟ್ಟಿಕೊಳ್ಳುವುದೂ ಅಸಾಧ್ಯವೇ. ಹೀಗಾಗಿ ಮಹಾತ್ಮಾಜೀ ತನ್ನ ಯೋಗ್ಯತೆಗನುಸಾರವಾಗಿ ಯಾವುದೇ ವಿಧದ ಮೇಲು—ಕೀಳು, ಕಷ್ಟ—ಸಂಕಟ, ಅತೃಪ್ತಿ, ಅಸಹನೆ—ಸ್ಪರ್ಧೆ, ಕೊಳೆ—ಕಂಟಕಗಳಿಂದ 'ರಾಮ ರಾಜ್ಯ'ವನ್ನು ಬಯಸಿದ್ದರು. ಇವೆಲ್ಲವೂ ಒಂದಲ್ಲೊಂದು ಪರಿಮಾಣದಲ್ಲಿ ಇದ್ದೇ ಇರುವ 'ಸ್ವತಂತ್ರ ರಾಜ್ಯ' ಮಾತ್ರ ಈಗ ದೊರೆತಿದೆ

## ವ್ಯವಹಾರ್ಯ ವರ್ತನೆ.

ಆದರೂ ಮಹಾತ್ಮಾಜೀ ವ್ಯವಹಾರಾತೀತರಿರಲಿಲ್ಲ; ತನ್ನ ಗುರಿ ಸಿದ್ಧಿಸದೆ ಸಮಾಧಾನಗೊಳ್ಳಲು ಅವರಿಗೆ ತಿಳಿದಿರಲಿಲ್ಲವಾದರೂ, ಜನತೆಯ ಕಡೆಗೆ ನೋಡಿ ಸಾಧ್ಯಾಸಾಧ್ಯತೆಯ ತೂಕ ಮಾಡಿ, ಅದಕ್ಕನುಗುಣವಾದ ಧೋರಣೆ ವಹಿಸಲು ಅವರು ಸದಾ ಸಿದ್ಧರಿದ್ದರು. ರಾಷ್ಟ್ರವನ್ನು ಯಾವ ಕಾಲದಲ್ಲಿ ಯಾವ ಹಾದಿ ಹಿಡಿಸಬೇಕು, ಎಂಬ ಗೂಢವನ್ನರಿತು ವರ್ತಿಸುವುದರಲ್ಲಿ ಮಹಾತ್ಮಾಜೀ ತನ್ನ ಜೀವಮಾನದಲ್ಲಿ ಎಂದೂ ತಪ್ಪಿ ಬಿದ್ದುದಿಲ್ಲ ಜನತೆಯ ಹೃದಯವನ್ನು ಆಕರ್ಷಿಸಿ, ಪಕ್ವಗೊಳಿಸಿ, ಆ ಮೂಲಕ ಎಂತಹ ಕಠಿಣ ಕಾರ್ಯಕ್ರಮಗಳಿಗಾದರೂ



ಮೋಹಕ ರೂಪ ಕೊಟ್ಟು ತೋರಿಸುವ ಸರಳ ಮಾತು ಮತ್ತು ಸುಲಭ ಕೃತಿಗಳ ಮೂಲಕವೇ ಮಹಾತ್ಮಾಜೀ ಮೊದ್ದು ಭಾರತೀಯರನ್ನು ಯೋಧ ಭಾರತೀಯರಾಗಿ ಮಾರ್ಪಡಿಸಿದ್ದರೆಂದ ಮೇಲೆ ಹಿಂದೀ ಜನಸಾಮಾನ್ಯರ ಸ್ವಭಾವ ಮತ್ತು ಯೋಗ್ಯತೆಯ ಪರೀಕ್ಷೆ ಅವರಿಗಿದ್ದಷ್ಟು ಬೇರಾರಿಗೂ ಇರಲಿಲ್ಲವೆನ್ನಬಹುದು. ಇಂತಹ ಜನತೆಯನ್ನಾದರೂ ತಾನಿರುವ ಅಂತಸ್ತಿಗೇನೇ ಸಾಧ್ಯವಿದ್ದಷ್ಟು ಎಳೆದುಕೊಳ್ಳಬೇಕಲ್ಲದ, ಯಾವ ಕಾರಣಕ್ಕಾಗಿಯಾದರೂ ತಾನೇ ಅವರ ಮಟ್ಟಕ್ಕಿಳಿಯಬಾರದು, ಎಂಬ ಛಲ ಮಹಾತ್ಮರದಾಗಿದ್ದಿತು. ಗಾಂಧಿಜೀಯ ಕಾಲದಲ್ಲಿ ಭಾರತೀಯ ಮನೋವೃತ್ತಿಯು ಎಂದೂ ಇಳಿಮೊಗವಾಗದೆ ಮೇಲ್ಮೊಗವಾಗಿದ್ದುದರ ಮೂಲ ಕಾರಣವು ಗಾಂಧಿಜೀಯು ಈ ಎಳೆತವೇ. ಅವರ ವಿಯೋಗಾನಂತರ ಅಂತಹ ಉಜ್ವಲಾಕರ್ಷಣೆ ಮೇಲ್ಗಡೆಯಲ್ಲಿಲ್ಲದ ದೆಸೆಯಿಂದ ಎಲ್ಲರೂ ತಂತಮ್ಮ ಕಾಲಡಿಯನ್ನೇ ನೋಡಲಾರಂಭಿಸಿದರು; ಸಂಕುಚಿತ ಸ್ವಾರ್ಥ, ಮೇಲಾಟಗಳ ತಾಂಡವ ನಡೆಯಹತ್ತಿದೆ. ಗಾಂಧಿಜೀಯ ಆಕರ್ಷಣೀಯ ಆಚರಣೆಗಳು ರಾಷ್ಟ್ರದ ಪಾಲಿಗೆ ಹೇಗೆ ಆವಶ್ಯಕವಿದ್ದುವೋ ಅದೇ ರೀತಿ ಅವರ ಆದರ್ಶ ಜೀವನವೂ ಅಗತ್ಯವೇ ಇದ್ದಿತು. ರಾಷ್ಟ್ರದ ಆರ್ಥಿಕ ವ್ಯವಸ್ಥೆ ಸರಿಯಾಗಿಲ್ಲ, ಸಂಪತ್ತು ಯೋಗ್ಯ ರೀತಿಯಿಂದ ವಿತರಣೆಗೊಂಡಿಲ್ಲವೆಂಬ ಆಕ್ಷೇಪವು ಸಹಜವಾದುದೇ. ಸಂಪತ್ತು ಮತ್ತು ಅವಕಾಶ, ಅನುಕೂಲತೆಗಳು ಒಂಭೈನೂರತೊಂಭತ್ತು ಮಂದಿಯನ್ನು ತಪ್ಪಿಸಿಕೊಂಡು ಹೋಗಿ, ಒಬ್ಬನನ್ನೇ ಸೇರಿಕೊಳ್ಳುತ್ತಿವೆ; ಹಲವರ ಪಾಲಿನ ಭಾಗ್ಯ ಒಬ್ಬನದೇ ಆಗುತ್ತಿದೆ, ಎಂಬ ಸಂತಾಪವು ಸಕಾರಣವಾದುದೇ. ಆದರೇ ಅಸ್ತವ್ಯಸ್ತತೆ ದೇಶದ ಆರ್ಥಿಕ ರಂಗದಲ್ಲಿ ಮಾತ್ರವಿರುವುದಲ್ಲ—ಯೋಗ್ಯತಾ ರಂಗದಲ್ಲೂ ಇದೆ. ಮಹಾ ವ್ಯಕ್ತಿಯನ್ನಿಸುವ ಗುಣ ನಡತೆಗಳೆಲ್ಲವೂ ಕೋಟ್ಯಾವಧಿ ಜನರ ಪೈಕಿ ಒಬ್ಬನಲ್ಲೇ ಸೇರಿಹೋಗುತ್ತಿವೆ. ಮಹಾತ್ಮಾಜೀಯಂತೂ ಭಾರತೀಯರಲ್ಲಿ ಮಾತ್ರವಲ್ಲ, ಪ್ರಾಪಂಚಿಕ ಜನತೆಯಲ್ಲೇ ಅತಿ ಹೆಚ್ಚಿನ ಯೋಗ್ಯತೆಯನ್ನು ಗಳಿಸಿಕೊಂಡಿದ್ದ ಲೋಕೈಕ ಶ್ರೀಮಂತ. ಆದರೆ ಯಾವ ಶ್ರೀಮಂತಿಕೆಯಾದರೂ ಸಾಮಾನ್ಯ ಬಡ ಜನರ ಉದ್ಧಾರಕ್ಕಾಗಿ ವಿನಿಯೋಗ ಹೊಂದಬೇಕೆಂಬುದೇ ಮಹಾತ್ಮರ ತತ್ವ. ಅವರೀ ತತ್ವವನ್ನು ತನ್ನ ಸಂಪತ್ತಾದ ಅತಿಮಾನುಷತ್ವಕ್ಕೂ ಅನ್ವಯಿಸಿದ್ದರು. ತನ್ನೆಲ್ಲಾ ಮಹಾಶಕ್ತಿಯನ್ನೂ ಸಾಮಾನ್ಯ ಜನತೆಯ ಸೇವೆಗಾಗಿ ಬಳಸಿದ್ದರು. ಆ ಮೂಲಕ ತಾನು ಆದರ್ಶ ಪಥದಲ್ಲಿ ನಿಂತುಕೊಂಡೇ ಜನತೆಯೊಡನೆ ಹೊಕ್ಕು ಬಳಕೆಯನ್ನಿಟ್ಟುಕೊಂಡಿದ್ದರು ಜನತಾ ಹಿತದೃಷ್ಟಿಯಿಂದ ಹೇಗಾಗಬೇಕು, ಎಂಬದನ್ನು ಸಂದರ್ಭೋಚಿತವಾಗಿ ತಿಳಿದುಕೊಂಡೇ ಮಾರ್ಗದರ್ಶನ ಮಾಡುತಿದ್ದರು. 1947ನೇ ಅಗೋಸ್ತು 15ರಲ್ಲಿ ರಾಷ್ಟ್ರವನ್ನು ಇಬ್ಭಾಗಿಸಿ, ಜಾತೀಯ ಹೊಡೆದಾಟಗಳ ರಕ್ತಾಭಿಷೇಕದೊಂದಿಗೆ ಸ್ಥಾಪನೆಗೊಂಡ ಸ್ವರಾಜ್ಯವು ಗಾಂಧಿಜೀಯ ಮನಸ್ಸಿಗೆ ಹಿಡಿಸಿರಲಿಲ್ಲ. ಆದರೂ ಪರಿಸ್ಥಿತಿಯ ಮೇಲಿಂದ ಅದೊಂದೇ ಹಾದಿಯೆಂದು ನೆಹರು, ವಲ್ಲಭಾಯಿಗಳು ಆಗ್ರಹಪಡಿಸಿದುದನ್ನೂ, ಜನತೆಯ ಸ್ಥಿತಿಮತಿಯನ್ನೂ ಗಮನಿಸಿ, ಅವರು ಅದಕ್ಕೆ ತನ್ನ ಬೆಂಬಲ ಕೊಟ್ಟಿದ್ದರು. ಆದರೆ ತಾನು ಮಾತ್ರ ಆ ಸ್ವಾತಂತ್ರ್ಯೋತ್ಸವ ದಿನದಲ್ಲಿ ಬಂಧು-ಭಾವಾಮೃತವನ್ನು ನವಖಾಲಿಯ ಬಂಜರು ಭೂಮಿಯಲ್ಲಿ ಚಲ್ಲುತ್ತಾ ಬರಿಗಾಲಿನಿಂದಲೇ ಹಳ್ಳಿ ಅಲೆಯುತ್ತಿದ್ದರು. ಇದು ಮಹಾತ್ಮಾಜೀಯು ವೈಶಿಷ್ಟ್ಯ. ಜನತೆಯ ಜೀರ್ಣಶಕ್ತಿಗೆ ಸಹಿಸದ ಕನ್ನಯಾವ ತತ್ವವನ್ನೂ ಒತ್ತಾಯದಿಂದ ರಾಷ್ಟ್ರದ ಗಂಟಲೊಳಗೆ ತುರಕಿದವರು ಮಹಾತ್ಮಾಜೀಯಲ್ಲ.

## ಈಗ ಇರುತ್ತಿದ್ದರೆ.......

ಜನತಾರಾಜ್ಯ' ಸ್ಥಾಪನೆಗೊಳ್ಳುವ ಈ ದಿನ ಮಹಾತ್ಮಾಜೀಯಿರುತಿದ್ದರೆ, — ಆ ಕಾಲದಲ್ಲಿ ಸ್ವಾತಂತ್ರ್ಯ ಹೋರಾಟ ನಡೆಸುವ ಸರ್ವಾಧಿಕಾರವನ್ನು ಅವರಿಗೆ ಕೊಡುತಿದ್ದಂತೆ ಈ ಜನತಾರಾಜ್ಯೋದ್ಘಾಟನೆಯ ಪೂರ್ಣಾಧಿಕಾರವನ್ನು ಅವರಿಗೀಯುತಿದ್ದರೆ—ಅವರೀ ಸಂದರ್ಭದಲ್ಲಿ ಯಾವ ಉಪದೇಶವೀಯುತಿದ್ದರು?

ಯಾವುದೇ ವಿಧದ ಸೂರೆಸುಲಿಗೆ, ಕೃತಕ ಮೇಲು-ಕೀಳು ಮತ್ತು ಭಿನ್ನ ಭೇದಗಳಿಲ್ಲದ ಪರಿಶುದ್ಧ ಮತ್ತು ಪ್ರಗತಿಗಾಮಿಯಿರು

1947ನೇ ಆಗೋಸ್ತು 15ರಂದು ಗಾಂಧಿಜೀ.

# -ಇರುತ್ತಿದ್ದರೆ

...ವ 'ರಾಮರಾಜ್ಯ' ಸ್ಥಾಪನೆಯೇ ಮಹಾತ್ಮರ ಗುರಿಯಾಗಿದ್ದಿತು. "ಯೋಗ್ಯ ರೈತನೊಬ್ಬನನ್ನು ಭಾರತದ ಮುಖ್ಯಮಂತ್ರಿ ಸ್ಥಾನಕ್ಕೇರಿಸಿ, ಪಂಡಿತ ಜವಾಹಿರಲಾಲರನ್ನು ಅವನ ಕಾರ್ಯದರ್ಶಿಯಾಗಿ ಕೆಲಸ ಮಾಡುವಂತೆ ಕೇಳಿಕೊಳ್ಳಬೇಕೆಂಬುದೇ ನನ್ನಿಚ್ಛೆ" ಎಂದವರು ತನ್ನ ಕೊನೆಯ ಹೇಳಿಕೆಯಲ್ಲಂದಿದ್ದರು. 'ರಾಜ್ಯವು ರೈತನದು' ಎಂದು ಅವರು ಪ್ರತಿ ಸಂದರ್ಭದಲ್ಲೂ ಒತ್ತಿ ಹೇಳುವದಿದ್ದಿತು. ಅವರು ಹಿಂಸೆರಹಿತ ಮಹಾ ಕ್ರಾಂತಿಕಾರನಿದ್ದಂತೆಯೇ ದ್ವೇಷಾಸೂಯೆರಹಿತ ಉಜ್ವಲ ಸಮತಾವಾದಿಯೂ ಆಗಿದ್ದರು. ರಾಜ್ಯ ಶಾಸನ ತಯಾರಿ ಮತ್ತು ಜನತಾ ರಾಜ್ಯೋದ್ಘಾಟನಾ ಕಾಲದಲ್ಲಿ ಗಾಂಧಿಜೀಯಿರುತ್ತಿದ್ದರೆ ಈ ಕೆಳಗಿನಂತೆ ನಿರ್ದೇಶಿಸುತ್ತಿದ್ದರೇನೋ:—

ಎಷ್ಟೇ ವಿಳಂಬವಾದರೂ, ಎಂತಹ ಕಷ್ಟ ನಷ್ಟಗಳಿದ್ದರೂ, ಮುಂದಾಗಿ ಅಖಿಲ ಭಾರತದ ಪಕ್ಷ್ಯಸ್ಥರೆಲ್ಲರನ್ನು ಸಮ್ಮತದಾರರಾಗಿ ಸೇರಿಸಿಕೊಂಡು, ಅವರಿಂದ ಮತ್ತು ಅವರ ನಡುವಿನಿಂದಲೇ ಪ್ರತಿನಿಧಿಗಳನ್ನಾರಿಸಿ, ಘಟನಾ ಸಮಿತಿ ರಚಿಸಿಕೊಳ್ಳಬೇಕೆಂದು ಆದಿಯಲ್ಲೇ ಸೂಚಿಸುತ್ತಿದ್ದರು ಸರಕಾರದಲ್ಲಿ ಮತ್ತು ರಾಷ್ಟ್ರನಾಯಕ ಸ್ಥಾನದಲ್ಲಿ ಇರುವ ಯಾರೂ ಈ ಘಟನಾ ಸಮಿತಿಯ ಸದಸ್ಯರಾಗಿರದೆ, ಅವರೆಲ್ಲರನ್ನೂ ಘಟನಾ ಸಮಿತಿಯ ಸಲಹೆಗಾರ ಸಮಿತಿಯಾಗಿ ನೇಮಿಸಿಕೊಳ್ಳುವ ವ್ಯವಸ್ಥೆ ಸೂಚಿಸುತ್ತಿದ್ದರು.

ಸತ್ಯ, ಅಹಿಂಸೆ, ಸಮಾನತೆ ಮತ್ತು ದುಡಿಮೆಯು ಈ ಘಟನೆಯ ತಾತ್ವಿಕ ಸಂಬಂಧದ ಪರಿಚ್ಛೇದಗಳಲ್ಲಿಯೂ, ಮುಂದಾಗಿ ಗ್ರಾಮ ಪಂಚಾಯತು, ಮತ್ತದ ನ್ಯಾಯಧರಿಸಿಯೇ ಕ್ಷೇತ್ರವಾರು, ಪ್ರಾಂತೀಯ ಹಾಗೂ ಕೇಂದ್ರಾಧಿಕಾರ ರೂಪುಗೊಳ್ಳುವಂಥಾ ವಿಧಾನಗಳನ್ನು ಆಡಳಿತ ಸಂಬಂಧದ ಪರಿಚ್ಛೇದಗಳಲ್ಲಿಯೂ ಮೂಡಿಸುತ್ತಿದ್ದರು.

ಇವೆರಡು ತಳಹದಿ ವಿಭಾಗಗಳನ್ನಾಧರಿಸಿಯೇ ರಾಜ್ಯಾಂಗದ ಎಲ್ಲಾ ವಿಧಾನಗಳೂ ಬುಡದಿಂದ ತುದಿಯ ವರೆಗೆ ರೂಪುಗೊಳ್ಳುವಂತೆ, ಅಲ್ಲಾ ಅಕ್ಷರಾಕ್ಷರ ಪರಿಶೀಲಿಸಿ ತಿದ್ದುಪಡಿಗಳನ್ನು ಸೂಚಿಸುತ್ತಾ ಹೋಗುತ್ತಿದ್ದರು ಕೇಂದ್ರಾಧ್ಯಕ್ಷ ಸ್ಥಾನಕ್ಕೆ, ಮದಿ ರೈತನೊಬ್ಬನನ್ನು ಸೂಚಿಸುತ್ತಿದ್ದರು.

ಈ ದಿನದ ಜನತಾ ರಾಜ್ಯೋದ್ಘಾಟನೋತ್ಸವದಲ್ಲಿ ಧ್ವಜಾರೋಹಣ ಮಾಡುವ, ಭಾವಚಿತ್ರ ಅನಾವರಣಗೊಳಿಸುವ, ಸಭಾಧ್ಯಕ್ಷತೆ ವಹಿಸುವ, ಗೌರವಗಳು ಹಳ್ಳೀ ರೈತ ಮತ್ತು ಕೆಲಸಗಾರರಿಗೆ ಮಾತ್ರ ದೊರಿಯಬೇಕೆಂದು ನಿರ್ದೇಶಿಸುತ್ತಿದ್ದರು.

ಈ ದಿವಸ ಕೇರಿ ಗುಡಿಸಲುಗಳ ಸ್ವಚ್ಛತೆ, ಅಲಂಕಾರವನ್ನು ಮತ್ತು ಹಸಿವು ಪೀಡಿತರ, ಸಂಕಟ ಪೀಡಿತರ, ರೋಗ ಪೀಡಿತರ ಅರೈಕೆಯನ್ನು ಮುಖ್ಯ ಕಾರ್ಯಕ್ರಮಗಳನ್ನಾಗಿ ಮಾಡುತಿದ್ದರು. ಈ ದಿನದ ಪ್ರಾಮುಖ್ಯ ಸಭೆ, ಸಮಾರಂಭಗಳ



ನ್ನು ಹಳ್ಳೀ ಮೂಲೆಗಳಲ್ಲೇ ಇಡಿಸುತ್ತಿದ್ದರು.

ಜನತಾ ರಾಜ್ಯೋದಯ ದಿನದಂದು ಕೈಕೊಳ್ಳುವ 'ಜನಸೇವಾ ಪ್ರತಿಜ್ಞೆ'ಯೊಂದನ್ನು ತಯಾರಿಸಿ, ಅದನ್ನೀದಿನ ಪ್ರತಿಯೊಬ್ಬ ಸ್ತ್ರೀ ಪುರುಷನೂ ಉಚ್ಚರಿಸುವಂತೆಯೂ, ಉಚ್ಚಾರಾನಂತರ ಕೊನೆಯ ವರೆಗೂ ಅದನ್ನಾಚರಿಸುವಂತೆಯೂ ನೋಡುವ ವ್ಯವಸ್ಥೆಯನ್ನು ಶಾಸನಬದ್ಧಗೊಳಿಸಲು ಸೂಚಿಸುತ್ತಿದ್ದರು.

ಇದುವರೆಗಿನ ರಾಷ್ಟ್ರ ಪ್ರಮುಖರಲ್ಲಿ ಮತ್ತು ಹೆಸರಾದವರಲ್ಲಿ ಹಾಗೂ ಶ್ರೀಮಂತರಲ್ಲಿ ಯಾರೇ ಆದರೂ ಈ ಹೊಸ ಶಾಸನದನ್ವಯ ನಡೆಯುವ ಮುಂದಿನ ಮಹಾ ಚುನಾವಣೆಯಲ್ಲಿ ಉಮೇದ್ವಾರರಾಗದೆ, ಜನತೆಯ ನಡುವೆ ನಿತ್ಯ ಜೀವನ ನಡೆಯಿಸಿಕೊಂಡು ಜನಸಾಮಾನ್ಯರಾಗಿದ್ದವರೇ ಉಮೇದ್ವಾರರಾಗಬೇಕೆಂದು ಸೂಚಿಸುತ್ತಿದ್ದರು. ಹಾಗೆ ಚುನಾವಣೆಗೊಳ್ಳುವ ನಿಜವಾದ 'ಜನತಾ ಸರಕಾರ'ದ ಕೈಕೆಳಗೆ ಸಲಹೆಗಾರರಾಗಿ ಮತ್ತು ನೌಕರರಾಗಿ ಕೆಲಸ ಮಾಡಲು ತಯಾರಿರಬೇಕೆಂದು ನೆಹರು, ವಲ್ಲಭಭಾಯಿಗಳಿಂದಾರಂಭಿಸಿ ಎಲ್ಲಾ ಪ್ರಮುಖರಿಗೂ ಅವಳಿತೆಯ ಅನುಭವವುಳ್ಳ ಇತರರಿಗೂ ನಿರ್ದೇಶಿಸುತ್ತಿದ್ದರು.

ವೇಲ್ಲಾಡೆ ನಮೂದಿಸಿರುವ ವಿಧಾನಗಳಂತೆ ಹೊಸರಾಜ್ಯಭಾರವಿಲ್ಲವೆಂದು ಮನವಂಕೆಯಾಗುತಿದ್ದರೆ 1947ನೇ ಅಗೋಸ್ಟ 15ರಲ್ಲಿ ನವಾಖಾಲಿ ಸುತ್ತುತಿದ್ದಂತೆಯೇ, ಬಿರುಗಾಳೀ ಅನಾಹುತವನ್ನು ಅನುಭವಿಸುತ್ತಿರುವ ಆಂಧ್ರದ ಸರ್ಕಾರ್ ಜಿಲ್ಲೆಯೊಂದರ ಹಳ್ಳಿಯಲ್ಲಿ ಇಬ್ಬರು ರೈತರನ್ನು ಎಡಬಲಗಳಲ್ಲಿಟ್ಟುಕೊಂಡು, ಅವರ ಹೆಗಲಿನ ಆಧಾರದಿಂದ, ಗುಡ್ಡೆ, ಗದ್ದೆ, ಕಟ್ಟಹುಣಿಗಳಲ್ಲಿ ಕಾಲೆಳೆಯುತ್ತಾ 1950ನೇ ಜನವರಿ 26ನ್ನು ದಾಟುತಿದ್ದರೇನೊ!

# ಅಧ್ಯಕ್ಷ ಶ್ರೀ

ಬಾಬು ರಾಜೇಂದ್ರ ಪ್ರಸಾದರು ಭಾರತ ಜನತಾರಾಜ್ಯದ ಪ್ರಥಮಾಧ್ಯಕ್ಷನಾಗಿ ಸರ್ವಾನುಮತದಿಂದ ಆರಿಸಲ್ಪಟ್ಟಿದ್ದಾರೆ

ಪ್ರಧಾನಿ ಪಂಡಿತ ಜವಾಹಿರಲಾಲ ನೆಹರುಗಳ ಸೂಚನೆ, ಉಪಪ್ರಧಾನಿ ಸರ್ದಾರ ವಲ್ಲಭಭಾಯಿ ಪಟೇಲರ ಅನುಮೋದನೆಯುಳ್ಳ ಡಾ। ರಾಜೇಂದ್ರ ಪ್ರಸಾದರ ನಾಮಪತ್ರವನ್ನು ಕಾಂಗ್ರೆಸ್ ಪಕ್ಷದ 'ಚೀಫ್ ವ್ಹಿಪ್' ಶ್ರೀ ಸತ್ಯನಾರಾಯಣ ಸಿಂಹರು ಆ ಸಂಬಂಧದ ರಿಟರ್ನಿಂಗ್ ಆಫೀಸರ್ ಶ್ರೀ. ಎಚ್. ವಿ. ಆರ್. ಅಯ್ಯಂಗಾರರ ಸಮಕ್ಷಮ ಇದೇ ತಾ. 23ರಲ್ಲಿ ಹಾಜರುಪಡಿಸಿದರು. ಅಧ್ಯಕ್ಷ ಸ್ಥಾನಕ್ಕೆ ಬೇರೆ ಉಮೇದ್ವಾರೀ ಪತ್ರವಿರಲಿಲ್ಲ. ತಾ. 24ರಲ್ಲಿ ಘಟನಾ ಸಮಿತಿ ಸಭೆಯಲ್ಲಿ ಡಾ। ರಾಜೇಂದ್ರ ಪ್ರಸಾದರ ಆಯ್ಕೆ ಜಾಹೀರಾಯಿತು. ಈ ಜಾಹೀರುನಾಮೆಯನ್ನು ಬರೆದ ಕಾಗದಗಳನ್ನು ಶಾಂತಿನಿಕೇತನದಲ್ಲಿ ಕಲಾಪೂರ್ಣವಾಗಿ ತಯಾರಿಸಲಾಗಿದ್ದು ಅವುಗಳಿಗೆ ಎಲ್ಲಾ ಸದಸ್ಯರ ಸಹಿ ಬಿದ್ದಿದೆ ಅಧ್ಯಕ್ಷರ ಅವಿರೋಧ ಆಯ್ಕೆಯಾದ ವೇಳೆ ಘಟನಾ ಸಮಿತಿಯಲ್ಲಿ ಹಲವರ ಅಭಿನಂದನಾ ಭಾಷಣಗಳಾದವು ಅಧ್ಯಕ್ಷರು ಉತ್ತರವಿತ್ತರು.

ಘಟನಾ ಸಮಿತಿ ಸದಸ್ಯರ ಸಹಿ ಪಡೆಯಲು ವಿಶೇಷ ಹೊದಿಕೆಗಳುಳ್ಳ ಮೂರು ಪ್ರತಿ 'ನವರಾಜ್ಯ ಶಾಸನ' ಗ್ರಂಥಗಳು ತಯಾರಾಗಿವೆ. ಆ ಪೈಕಿ ಒಂದು ಸುಂದರ ಇಂಗ್ಲಿಷ್‌ಲಿಪಿಯ ಮುಖ್ಯ ಗ್ರಂಥ; ಇದಕ್ಕೆ ಪ್ರತಿಯೊಬ್ಬ ಸದಸ್ಯನೂ ಸಹಿ ಹಾಕಬೇಕಾಗಿದೆ, ಮತ್ತೊಂದು ಭಾಷಿತ ಇಂಗ್ಲಿಷ್ ಪ್ರತಿ, ಮೂರನೆಯದು ಕೈಬರಹದ ಹಿಂದೀ ಪ್ರತಿ. ಇದಕ್ಕೆ ಸದಸ್ಯರು ಇಷ್ಟವಿದ್ದರೆ ಸಹಿ ಹಾಕಬಹುದು. ಸುಂದರ ಲಿಪಿಯ ಮೂಲಇಂಗ್ಲಿಷ್ ಪ್ರತಿಯು, ಆಡು ತೊಗಲಿನಿಂದ ಮಾಡಲ್ಪಟ್ಟಿದ್ದು ಸುಮಾರು 25 ಸೇರು ತೂಕವಿದೆ.

ತಾ. 24ರಲ್ಲಿ ಅಧ್ಯಕ್ಷ ಚುನಾವಣೆ ಮತ್ತು ಘಟನಾಸಹಿಸ್ವೀಕಾರಾನಂತರ ಸುಮಾರು ಮೂರು ವರುಷಗಳಲ್ಲಿ ದುಡಿದು ಹೊಸ ರಾಜ್ಯ ಶಾಸನ ತಯಾರಿಸಿದ ಘಟನಾ ಸಮಿತಿ ಅಂತರ್ಧಾನವಾಯಿತ !

ಪ್ರಥಮಾಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರು ಜನತಾರಾಜ್ಯ ಭಾರತದ ಕಳಶ ಪ್ರಾಯರಾಗಿ ಮೂಡಿ ಬಂದರು; ಅವರ ಕೆಳಗಡೆ ನೆಹರೂ ಮಂಡಲಿ, ಪಾರ್ಲಿಮೆಂಟು, ಪ್ರಾಂತಿಕ ಸರಕಾರಗಳು ಮತ್ತು ಶಾಸನ ಸಭೆಗಳು ಹೊಸ ಜೀವಗೊಂಡು ಪ್ರತಿಷ್ಠಾಕಾರ ನಿಂತಿವೆ


**On this Memorable day**

Of the 26th of January in the year 1950 of the inauguration of the Indian Republic, we have the pleasure to announce the birth of our

**Vijaya Cash Certificates**

"Spend less and Save more" shall be the Motto of every Indian Citizen

Vijaya Cash Certificates are the safest and best media for a discriminating investor. They mature on the expiry of three years and carry interest at 4½%

Rules on application at any of our following Offices

Head Office —**Kadri Road, Mangalore**

Branches City Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara

**B. Majnaya Hegde**

Advocate & President, District Board, S. Kanara.

CHAIRMAN

VIJAYA BANK, LTD,



ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

"ನನ್ನನ್ನು ನೀನು ಮರೆತರೂ ನಿನ್ನನ್ನು ನಾನು ಮರೆಯಲಾರೆ. ಆಪಾರ ರಿಂದ ಪುನಃ ಪುನಃ ನಿನ್ನ ಆತಿಥ್ಯಕ್ಕಾಗಿ ನಿನ್ನ ಮನೆ ಬಾಗಿಲಿಗೆ ಬಂದಿರುವೆನು ' ಎಂದು ಭಗವಂತನೇ ಭಕ್ತರ ಭಾಗ್ಯ ಕೋರುತ್ತಿದ್ದಾನೆ

ತಾರೀಕು 24—1—50

ಶ್ರೀ ಕೃಷ್ಣಲೀಲಾ (ಕನ್ನಡದಲ್ಲಿ)

ಮಹಾತ್ಮರವರ ಮುತ್ತಿನ ಕಾಣಿಕೆ

ಕೆಂಪರಾಜ್ ಬಳ್ಳಾರಿ ಲಲಿತ, ರತ್ನಮಾಲ ಪ್ರತಿಮಾ, ಮೊದಲಾದವರು

ನಿರೀಕ್ಷ್ನಿಸಿರಿ, ಕನ್ನಡದಲ್ಲಿ ಕನಕೋತ್ಸವ.

ಭಾರತಿ



ಭಾರದ್ವಾಜರ

ಇಂಗ್ಲಿಷ್ × ಇಂಗ್ಲಿಷ್ × ಕನ್ನಡ

ಡಿಕ್ಷನರಿಗಳು

ದೊರೆಯುತ್ತವೆ.

ಬೆಲೆ ರೂ 5 0 0

ಸಿಂಗನ್ನಡ ಅರ್ಥಕೋಶ 1 8 0

ನವಯುಗ ಪ್ರೆಸ್, ಉಡುಪಿ.

ಅಥವಾ

ನವಯುಗ ಆಫೀಸು, ಉಡುಪಿ.

THE
Canara Banking Corporation Ltd.
(Incorporated in India)
Estd: 1906
*HEAD OFFICE:* **UDIPI, S. I.**

**SEASON DEPOSITS**

for Rs. 5,000/- and over in multiples of Rs. 1,000/- maturing within 30-9-1950 are now accepted at all offices of the Bank at the following rates:-

| | | |
|---|---|---|
| 3 months | .... ... | 2¼% p. a. |
| 4 to 5 „ | .... .... | 2½% p. a. |
| 6 to 9 „ | .... .... | 2¾% p. a. |

ಗುರುವಾರ ಉಡುಪಿ ೨೬-೧-೧೯೫೦

## ನವಯುಗ

ಈ ಸಂಚಿಕೆ ಹೊರಡುವ ದಿನ ನವಯುಗಾರಂಭ ದಿನ; ಜನತಾ ಯುಗಾದಿ. ಸಪವೇನ್ನಂತರ ತೊಡಗುವ ಈ ಚಿರ ಪ್ರಾಮುಖ್ಯ ದಿನದ ಕಾರ್ಯಕ್ರಮಗಳಲ್ಲೇ ಎಲ್ಲರೂ ತಲ್ಲೀನರಾಗಿದ್ದಾರೆ. 'ನವಯುಗ'ವೂ ಇದಕ್ಕೆ ಅಪವಾದವಾಗುವಂತಿಲ್ಲ. ಈ ಸಂಚಿಕೆ ತುಂಬ ಈ ದಿನಕ್ಕೆ ಸಂಬಂಧಿಸಿದ ವಿಷಯಗಳೇ ಬಂದಿವೆ. ಆದ್ದರಿಂದ ಇಲ್ಲಿ ಹೆಚ್ಚಿಗೆ ಹೇಳುವಂಥಹದು ಉಳಿದಿಲ್ಲ.

ಭಾರತೀಯರು ಒಂದು ಅಂತಸ್ತು ಮೇಲೇರುವ ದಿನವಿದು. 'ವಸಾಹತು ಸ್ವರಾಜ್ಯ'ದಿಂದ 'ಸಾರ್ವಭೌಮಾಧಿಕಾರೀ ಪ್ರಜಾಸತ್ತಾ ಜನತಾರಾಜ್ಯ'ಕ್ಕೆ ಭಡ್ತಿ ಹೊಂದುವ ಸನ್ನಿವೇಶವಿದು. ಆಗೋಸ್ತು 15ನೇ 'ಸ್ವರಾಜ್ಯ ದಿನ'ವನ್ನು ಆಚರಿಸಲಾರಂಭಿಸಿ ಎರಡೂವರೆ ವರುಷ ತುಂಬುವುದರೊಳಗೆ ಜನವರಿ 26ನೇ 'ಜನತಾರಾಜ್ಯ' ದಿನವನ್ನು ಆಚರಿಸುವ ಭಾಗ್ಯ ನಮಗೆ ದೊರೆತಿದೆ. ನಿಜಕ್ಕೂ ಈ ಮಟ್ಟಿಗೆ ನಾವು ತೀವ್ರ ಪ್ರಗತಿ ಹೊಂದಿದ್ದೇವೆ.

ಆದರೆ ಈ ಸಂದರ್ಭದಲ್ಲಿ ಜನಸಾಮಾನ್ಯರ ಅಂತರ್ಯವೇನನ್ನುತ್ತಿದ್ದೆ ಎಂಬ ಕಡೆಗೊಮ್ಮೆ ಕಿವಿಗೊಡಬೇಕು. 1947ನೇ ಆಗೋಸ್ತು 15ರಲ್ಲಿ ಅವರು ತೋರಿಸಿದ್ದಂತಹ ಹಿಗ್ಗು 1950ನೇ ಜನವರಿ 26ರಲ್ಲಿ ಕಂಡು ಬರುತ್ತಿದೆಯೇ ಎಂದು ಕುಲಂಕಷ ಮಾಡಿ ನೋಡಬೇಕು. ಜನಸಾಮಾನ್ಯರು ಆ ದಿನಕ್ಕಿಂತಲೂ ಹೆಚ್ಚಿನ ಹಿಗ್ಗಳಿಕೆಯನ್ನು ಈ ದಿನ ಪಡಬೇಕಿದ್ದಿತು. ಅಂದು ಬಂದಿದ್ದುದು ರಾಷ್ಟ್ರಕ್ಕೆ ರಾಜಕೀಯ ಸ್ವಾತಂತ್ರ್ಯ; ಇಂದು ಬರುತ್ತಿರುವುದು ಜನತೆಗೇನೇ ಆ ಸ್ವಾತಂತ್ರ್ಯದ ಸಂಪೂರ್ಣಾಧಿಕಾರ. ಆದರೂ ಮದುವೇ ದಿನ ಮದುಮಗನೇ ಮುಖ ಮುರುಟಿಸಿಕೊಂಡಿರುವಂತೆ, ಜನತಾ ಸ್ವಾತಂತ್ರ್ಯೋತ್ಸವದ ದಿನ ಜನತೆಯೇ ನಿರುತ್ಸಾಹಗೊಂಡಿದೆ. "ಆಗೋಸ್ತು 15ರ ಸ್ವಾತಂತ್ರ್ಯದ ಭಾಗ್ಯವುಂಡಾಯಿತು—ಇನ್ನು ಜನವರಿ 26ರ ಸುಖವುಂಡಾಯಿತು!" ಎಂಬ ನಿರಾಶೋದ್ಗಾರ ಕೇಳಿಬರುತ್ತಿದೆ. ರಾಜಕಾರಣವಂತರು ಆಗೋಸ್ತು 15ರಂದೆ ಭಾಗ್ಯದ ಪರಿಚಯ ಮಾಡಿಕೊಂಡಿರಬಹುದು; ಆದರೆ ಭಾರತೀಯ ಜನಸಂಖ್ಯೆಯಲ್ಲಿ ಇಂತಹ ಜನ ಗಣ್ಯ ಭಾಗವಾಗಿಲ್ಲ. ಹೆಚ್ಚಿನವರು ತಮ್ಮ ಅನುದಿನದ ಸುಖದುಃಖಗಳ ಮೇಲಿಂದಲೇ ರಾಜ್ಯಭಾರದ ಬೆಲೆ ಕಟ್ಟುವವರಿದ್ದಾರೆ. ಇಂಥವರ ಅನುಭವಕ್ಕೆ ಬಂದು, ಶ್ಲಾಘನೆ ಗಳಿಸಿಕೊಡುವ ಕಾರ್ಯಗಳೇನೂ ಸ್ವತಂತ್ರ ಆಳಿತೆಯಲ್ಲಿ ನಡೆದಿಲ್ಲ. ಹೀಗಾಗಲು ಕಾರಣಗಳಿದ್ದುವು; ಆದರೆ ಅವುಗಳನ್ನರಿತುಕೊಳ್ಳುವಷ್ಟು ಜ್ಞಾನ ಹೆಚ್ಚಿನವರಲ್ಲಿರಲಿಲ್ಲ. ಅಂತಹ ಜನರಿಗೆ ಆಗೋಸ್ತು 15ರಲ್ಲಿ ಬ್ರಿಟಿಷರ ಆಳ್ವಿಕೆ ಹೋಗಿ ನಮ್ಮವರ ಆಳಿತೆ ಬಂದಿದೆ ಎಂಬೊಂದು ಸಂಗತಿಯಾದರೂ ಸ್ಪಷ್ಟವಾಗಿತ್ತು; ಈ ಬಾರಿ ಪುನಃ ಹೊಸ ಸ್ವಾತಂತ್ರ್ಯ ಬಂದಿದೆ ಎಂದರೇನು, ಎಂಬ ಅರ್ಥ ಕೂಡಾ ಅವರಿಗೆ ಸರಿಯಾಗಿ ಹೊಳೆದಿರಲಾರದು. ಜನತಾರಾಜ್ಯ ಉದ್ಘಾಟನೋತ್ಸವದ ಸಂಭ್ರಮಗಳು ಈ ದಿನ ಕಣ್ಣಿಗೆ ಬೀಳುತ್ತಿರುವಷ್ಟು ಈ ನವರಾಜ್ಯಭಾರದ ಸಂಗತಿಗಳಾವುವೂ ಅವರ ದೃಷ್ಟಿಪಥದ ಮುಂದಿರಲಾರವು. ಯಾರ ಹೆಸರಿನ ಅಧಿಕಾರ ಸ್ಥಾಪನೆಗಾಗಿ ಇಷ್ಟೆಲ್ಲಾ ಸಂಭ್ರಮಗಳೋ, ಆ ಜನಸಾಮಾನ್ಯರ ಮನೋಸ್ಥಿತಿ ಈ ಸಂದರ್ಭದಲ್ಲಿ ಹೀಗಿದೆಯೆಂಬುದು ಲಕ್ಷ್ಯಿಸಬೇಕಾದ ವಿಷಯ. ಇದು ಸಂಭ್ರಮದ ಬಾಲ ವಿವಾಹದ ನೆನಪನ್ನೇ ತರುತ್ತಿದೆ!

ಆದರೂ ನಿರಾಶೆಗೆಡೆಯಿಲ್ಲ. ಜನತೆಯ ಯೋಗ್ಯತಾ ಸಂಪಾದನೆಗೆ ಅವಕಾಶ ಮತ್ತು ಅನುಕೂಲತೆಗಳನ್ನೂ ಉಳಿದಿವೆ. ಹೊಸ ರಾಜ್ಯಶಾಸನವು ಈ ದಿನ ಜಾರಿಗೆ ಬರುತ್ತಿದೆಯಾದರೂ ಇಂದಿನಿಂದಲೇ ಅಧಿಕಾರ ಬದಲಾವಣೆಯೇನೂ ನಡೆಯುವಂತಿಲ್ಲ. ಮಹಾ ಚುನಾವಣೆಯಾಗಿ, ಪ್ರಾಂತ್ಯ ಮತ್ತು ಕೇಂದ್ರದಲ್ಲಿ ಹೊಸ ಸರಕಾರಗಳು ರಚಿಸಲ್ಪಡುವ ವರೆಗೂ ಈಗಿನವರೇ ಅಧಿಕಾರ ಚಾಲೂ ಮಾಡಲಿದ್ದಾರೆ. ಈ ದಿನ ಜಾರಿಗೆ ಬರುತ್ತಿರುವ ಹೊಸ ರಾಜ್ಯ ಶಾಸನವಾದರೂ ಈ ವರೆಗಿದ್ದ ರಾಜ್ಯಾಂಗ ವಿಧಾನಕ್ಕಿಂತ ಪೂರ್ಣ ಭಿನ್ನವಾಗಿರದೆ, ಅದೇ ತಿದ್ದುಪಡಿಹೊಂದಿ ವಿಕಾಸಗೊಂಡಂತಿದೆ. ಸ್ವೇಚ್ಛಾಧಿಕಾರವಿದ್ದ 'ವಸಾಹತು ಸ್ವರಾಜ್ಯ'ವು ಕಾಮನ್‌ವೆಲ್ತ್ ರಾಷ್ಟ್ರಕೂಟದ ಸದಸ್ಯತ್ವವಿರುವ 'ಪೂರ್ಣ ಸ್ವಾತಂತ್ರ್ಯ'ವಾಗಿ ರೂಪುಗೊಂಡ ಈ ಬದಲಾವಣೆಯಾದರೂ ಭಿನ್ನ ವಿದ್ಯಮಾನವನ್ನೇನೂ ನಿರ್ಮಿಸುವಂತಹದಲ್ಲ. ಅಕ್ಷರಸ್ಥರಿಲ್ಲರಿಗೂ ಇದ್ದ ಮತಾಧಿಕಾರವು ಪ್ರಾಯಸ್ಥರೆಲ್ಲರಿಗೂ ಬಂದ ಮಾತ್ರಕ್ಕೆ ತೀರಾ ಹೊಸ ಕ್ರಮ ಬಂದಂತಾಗದು. ಇಂದು ರಾಷ್ಟ್ರಾಧಿಕಾರ ನಿರ್ವಹಿಸುತ್ತಿರುವ ನಾಯಕರು ನೇರಾಗಿ ಜನಮತದಿಂದಾರಿಸಲ್ಪಟ್ಟವರಲ್ಲವಾದರೂ ಅಂತಹ ಸಂದರ್ಭವೊದಗುತಿದ್ದರೆ, ಮತ್ತಿನ್ನು ಒದಗುವದಾದರೆ, ಅವರೇ ಆರಿಸಲ್ಪಡುತಿದ್ದರು ಮತ್ತು ಆರಿಸಲ್ಪಡುವರು ಎಂಬುದು ನಿಸ್ಸಂದೇಹ. ಈ ರೀತಿ, ಪ್ರಚಲಿತ ಸ್ಥಿತಿಯಿಂದ ಅದರ ಮೇಲಿನ ಪ್ರಗತಿ ಅಂತಸ್ತೊಂದಕ್ಕೇನೇ ನಾವೀಗ ಕಾಲಿಡುತಿದ್ದೇವೆ ಹೊರತು, ಯಾವವಿಧದಿಂದಲೂ ಹೊಸ ಅಸ್ತಿವಾರವನ್ನು ಹಾಕುತ್ತಿಲ್ಲ. ಅಂತೆಯೇ ಜನತೆಯು ಅಜ್ಞಾನದ ದೆಸೆಯಿಂದ ಈ ವರೆಗೆ ಪ್ರಮಾದಗಳಾಗಿದ್ದುದು ನಿಜವಾದರೆ, ಇನ್ನು ಮುಂದೆ ಇದೇ ದಾವಗಾಕಾರಿಯ ಪ್ರಕಾರ ಅವುಗಳ ಪಂಪಾಣವೂ ಬೆಳೆಯೀತು, ಹೊರತು ಹೊಸ ಗಂಡಾಂತರವೇನೂ ಏಳದು ಆದರೆ ಹೀಗಿರುವುದೇ ಒಂದು ಮಹತ್ವಾದ ಗಂಡಾಂತರ. ಆದ್ದರಿಂದ ಇಂತಹ ದುಸ್ಥಿತಿ ನಿವಾರಣೆಗಾಗಿ ಜನಸಾಮಾನ್ಯರು ಅಗತ್ಯವುಳ್ಳ ಜ್ಞಾನ ಮತ್ತು ಯೋಗ್ಯತೆಯನ್ನು ಗಳಿಸಿಕೊಳ್ಳಬೇಕಾದುದೊಂದೇ ಮುಖ್ಯ.

ತಾ. 26ನೇ ಜನತಾ ಯುಗಾದಿಯ ದಿನ ಜನತೆ ತನ್ನನ್ನು ತಾನರಿತುಕೊಂಡರಾಯಿತು. ಬ್ರಿಟಿಷ್ ಮತದಾರರದಾಗಿದ್ದ ಹೊಣೆಗಾರಿಕೆ, ಹಿಂದೀ ಮತದಾರರದಾಗಿರುವುದೇ ಹಿಂದಿನ ಗುಲಾಮ ಭಾರತಕ್ಕೂ ಇಂದಿನ ಸ್ವತಂತ್ರ ಭಾರತಕ್ಕೂ ಇರುವ ವ್ಯತ್ಯಾಸ.

# ಈ ದಿನದ-ನೆನಪಿಗಾಗಿ.



ಜನತಾ ರಾಜ್ಯೋದ್ಘಾಟನಾ ದಿನ, ಸಾರ್ವಜನಿಕರು ಮನನ ಮಾಡಿಕೊಳ್ಳಬೇಕೆಂದು ಕಾಂಗ್ರೆಸ್ ಅಧಿನಾಯಕ ಮಂಡಲಿಯು ಸೂಚಿಸಿರುವ, ನವರಾಜ್ಯ ಶಾಸನದ ಪ್ರಸ್ತಾವನೆಯು ಹೀಗಿದೆ:-

"ನಾವು ಭಾರತದ ಜನತೆ, ಭಾರತವನ್ನು ಸಾರ್ವಭೌಮಾಧಿಕಾರೀ ಪ್ರಜಾಸತ್ತಾ ಜನತಾರಾಜ್ಯವಾಗಿ ರಚಿಸಿಕೊಳ್ಳಲು ತದೇಕನಿಷ್ಠೆಯ ನಿರ್ಧಾರ ಮಾಡುತ್ತಾ ಅದರ ಎಲ್ಲಾ ನಾಗರಿಕರಿಗೆ— ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು —ಚಿಂತನೆ, ಭಾವಸೂಚನೆ, ನಂಬಿಕೆ, ವಿಶ್ವಾಸ ಮತ್ತು ಆರಾಧನಾ ಸ್ವಾತಂತ್ರ್ಯವನ್ನು—ಸ್ಥಾನ ಮತ್ತು ಸಂದರ್ಭಗಳಲ್ಲಿ ಸಮಾನತೆಯನ್ನು—ಒದಗಿಸುವುದಕ್ಕೆ, ಮತ್ತು ಅವರ ನಡುವೆ ವ್ಯಕ್ತಿಗತ ಘನತೆ ಮತ್ತು ರಾಷ್ಟ್ರದ ಐಕ್ಯತೆಗೆ ಸಾಧಕವಾದ ಭ್ರಾತೃತ್ವವನ್ನು ಪ್ರವರ್ಧಿಸುವುದಕ್ಕೆ ನಮ್ಮ ಘಟನಾ ಸಮಿತಿಯಲ್ಲಿ, 1949ನೇ ನವಂಬರ್ 26 ಈ ದಿನದಲ್ಲಿ ಈ ಮೂಲಕ ಈ ಘಟನೆಯ ಅಂಗೀಕಾರ, ನಿರ್ಣಯ ಮತ್ತು ನಮಗೆ ಸಾವೇದಾನ, ಮಾಡಿಕೊಳ್ಳುತ್ತೇವೆ"

೦೦ ೦೦ ೦೦

ಈ ದಿನ ಭಾರತ ಜನತಾ ರಾಜ್ಯದಲ್ಲಿ 9 ಪ್ರಾಂತ್ಯಗಳು, 8 ಸಂಸ್ಥಾನ ಅಥವಾ ಸಂಸ್ಥಾನ ಒಕ್ಕೂಟಗಳು, 11 ಚೀಫ್ ಕಮಿಶನರರ ಪ್ರಾಂತ್ಯಗಳು ಇವೆ. ಇವೆಲ್ಲವೂ ಇನ್ನು ಮುಂದೆ 'ಸಂಸ್ಥಾನ'ಗಳೆಂದು ಕರೆಯಲ್ಪಡುವವು. ಪ್ರಾಂತ್ಯಗಳು:—ಮದ್ರಾಸ್, ಮಧ್ಯ ಪ್ರದೇಶ, ಬೊಂಬಾಯಿ, ಸಂಯುಕ್ತ ಪ್ರಾಂತ್ಯ, ಬಿಹಾರ್, ಒರಿಸ್ಸಾ ಅಸ್ಸಾಮ್, ಪೂರ್ವ ಪಂಜಾಬು, ಪಶ್ಚಿಮ ಬಂಗಾಳ. ಸಂಸ್ಥಾನ ಅಥವಾ ಸಂಸ್ಥಾನ ಕೂಟಗಳು:-ರಾಜಸ್ಥಾನ್, ಕಾಶ್ಮೀರ, ಹೈದರಾಬಾದ್, ಮಧ್ಯ ಭಾರತ, ಮೈಸೂರು, ಸೌರಾಷ್ಟ್ರ, ಪೆಪ್ಸು, ತಿರುವಾಂಕೂರ್-ಕೊಚ್ಚಿ. ಚೀಫ್ ಕಮಿಶನರರ ಪ್ರಾಂತ್ಯಗಳು:- ವಿಂಧ್ಯ ಪ್ರದೇಶ, ಹಿಮಾಚಲ ಪ್ರದೇಶ, ಮಣಿಪುರ, ಕೂಚ್, ಭೋಪಾಳ್, ತ್ರಿಪುರ, ಅಂದಮಾನ್ ನಿಕೋಬಾರ್ ದ್ವೀಪ ಸಮೂಹ, ಅಜ್ಮೀರ್, ಕೂರ್ಗ್, ಡಿಲ್ಲಿ, ಬಿಲಾಸಪುರ.

ಪ್ರಾಂತ್ಯಗಳು ಮತ್ತು ಕಮಿಶನರರ ಕ್ಷೇತ್ರಗಳ ಜತೆಗೆ 500ಕ್ಕೂ ಮಿಕ್ಕಿದ ಸಂಸ್ಥಾನಗಳಿದ್ದು ಶತಛಿದ್ರವಾಗಿದ ರಾಷ್ಟ್ರವೀಗ ಒಟ್ಟು 28 ಸಂಸ್ಥಾನಗಳ ಆಡಳಿತಾನುಕೂಲ ಸಂಹದ್ದುಗಳನ್ನಷ್ಟೇ ಹಾಕಿಕೊಂಡಿದೆ. ಅದೇ ರೀತಿ ಮಧ್ಯಕಾಲದ ಬರ್ಬರಾಡಳಿತೆ, ನಿರಂಕುಶಾಡಳಿತೆ, ಅರ್ಧಮರ್ಧ ಪ್ರಜಾಪ್ರಭುತ್ವ ಮುಂತಾದ ವಿವಿಧ ರೀತಿಯ ಆಳ್ವಿಕೆಯಿದ್ದ ಎಲ್ಲಾ ಭಾಗಗಳನ್ನೂ ಏಕಪ್ರಕಾರ ಸಮಮಟ್ಟಕ್ಕೆ ತಂದು, ಪೂರ್ಣ ಪ್ರಜಾಪ್ರಭುತ್ವದ ವಿಧಾನವನ್ನು ಸರ್ವವ್ಯಾಪಿಗೊಳಿಸಲಾಗಿದೆ.

೦೦ ೦೦ ೦೦

ಈ ವರೆಗಿದ್ದ ನಾಮಮಾತ್ರ ಮೇಲ್ಗೊಣವು ಕೂಡಾ ಈ ದಿನ ತಪ್ಪಿ ಹೋಗಿ ರಾಜ್ಯಾಡಳಿತೆಯ ಭಾರವು ಸಂಪೂರ್ಣವಾಗಿ ಜನಮತದ ಮೇಲೆಯೇ ಬೀಳುತ್ತಿದೆ. ಇಂದಿನಿಂದ ಎಲ್ಲಕ್ಕೂ ಜನತೆಯೇ ಆಧಾರ; ಜನತೆಯದೇ ಸಾರ್ವಭೌಮಾಧಿಕಾರ ಆದ್ದರಿಂದ ಪುನಃಪುನಃ ಹೇಳಬೇಕಾದುದಿಷ್ಟೆ: — ಸಾರ್ವಜನಿಕರಲ್ಲಿ ಪ್ರತಿಯೊಬ್ಬರೂ ತಮ್ಮ ಜ್ಞಾನ, ಶಕ್ತಿ, ಯೋಗ್ಯತೆಗಳನ್ನು ಹೆಚ್ಚಿಸಿಕೊಳ್ಳಬೇಕು. ಇಂದು ಬಂದಿರುವ ಅಧಿಕಾರಕ್ಕೆ ಸಗುಣವಾದ ಅರ್ಹತೆ ಗಳಿಸಿಕೊಳ್ಳಬೇಕು

ಜನತಾ ರಾಜ್ಯೋದ್ಘಾಟನಾ ದಿನವು ಜನತೆಯ ಆತ್ಮ ಶುದ್ಧೀ ದಿನವಾಗಲಿ.

ತನ್ನ ಪಾಲಿಗೀಗ ಬಿದ್ದಿರುವ ಕರ್ತವ್ಯವನ್ನು, ತನ್ನದಾಗಿರುವ ಹೊಣೆಗಾರಿಕೆಯನ್ನು ಜಯಶೀಲವಾಗಿ ನಿರ್ವಹಿಸುವೆನೆಂದು ಈ ದಿನ ಪ್ರತಿಯೊಬ್ಬನೂ ಪ್ರತಿಜ್ಞೆ ತೊಡಲಿ.

ಇಂದು ತಮ್ಮದಾಗಿರುವ ರಾಜ್ಯದಲ್ಲಿ ಮತ್ತು ಸ್ವತಃ ತಮ್ಮಲ್ಲಿ ಇರುವ ಅಗತ್ಯವಿಲ್ಲದ ಅಂಶಗಳನ್ನು ನಿವಾರಿಸಿಕೊಳ್ಳುವುದಕ್ಕೂ, ಅಭಾವವಿರುವ ವಿಷಯಗಳನ್ನು ತುಂಬಿಸಿಕೊಳ್ಳುವುದಕ್ಕೂ ಸರ್ವಶಕ್ತಿಯಿಂದ ಸದಾಕಾಲ ಶ್ರಮಿಸುವೆನೆಂಬ ಶಪಥ ಸರ್ವರದಾಗಲಿ.

ಜೈ ಹಿಂದ್!

ಸಾರ್ವಭೌಮಾಧಿಕಾರೀ ಪ್ರಜಾಸತ್ತ ಜನತಾ ರಾಜ್ಯದಲ್ಲಿ ಆ ಕಡೆ ನಮೂದಿಸಿರುವ 28 ಸಂಸ್ಥಾನಗಳ ಸರಕಾರಗಳಿಗೆ, ಈ ಮೊದಲು ಪ್ರಾಂತ್ಯಗಳಿಗಿದ್ದ ಅಧಿಕಾರ ವಿಭಾಗಗಳಿಗಿಂತ ಹೆಚ್ಚಿನದೇನೂ ದೊರೆಸಿಲ್ಲ. ಕೆಲವಂಶ ಕಡಿಮೆಯೇ ಆಗಿದೆ. ಈ ಉಪ ಭಾಗಗಳಲ್ಲಿ ಇದುವರೆಗಿರುವ ಸರಕಾರಗಳಲ್ಲಿ ಅಥವಾ ಮಂತ್ರಿಗಳಲ್ಲಿ ಯಾವ ಬದಲಾವಣೆಯೂ ಇಲ್ಲ. ಇಂದಿನಿಂದ ವಿಶೇಷ ಸ್ಥಾನ ಮಾನ ಮತ್ತು ಅಧಿಕಾರ ಗಳಿಸಿಕೊಂಡಿರುವುದು ಕೇಂದ್ರ ಸರಕಾರವೇ. ಕೇಂದ್ರಾಧಿಕಾರ ನಿರ್ವಹಿಸುತ್ತಿರುವವರನ್ನು ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳುವ ಆಗತ್ಯವಿದೆ.

**ಇಳಿದ ಕಿರೀಟ ರಾಜಾಜಿ**—ಇದುವರೆಗಿದ್ದ ಭಾರತದ ಅಗ್ರ ಪೀಠದಿಂದ ಈಗ ತಾನೇ ನಿವೃತ್ತಿ ಹೊಂದುತ್ತಿರುವ ರಾಜಾಜಿಯನ್ನು ಈ ಸಂದರ್ಭದಲ್ಲಿ ಮುಂದಾಗಿ ಸ್ಮರಿಸಬೇಕಾಗಿದೆ. ತಾ. 26ನೇ ಪೂರ್ವಾಹ್ನ ಜನತಾರಾಜ್ಯದ ಜಾಹೀರುನಾಮೆ ಮಾಡಿ, ಅಧ್ಯಕ್ಷ ರಾಜೇಂದ್ರರಿಗೆ ಪೀಠ ಬಿಟ್ಟುಕೊಟ್ಟು ಗವರ್ನರ್ ಜನರಲ್ ರಾಜಾಜಿ ಕೆಳಗಿಳಿಯುತಿದ್ದಾರೆ. ಭಾರತದಲ್ಲಿ ಬ್ರಿಟಿಷ್ ಆಳ್ವಿಕೆ ಪ್ರಾರಂಭವಾದಂದಿನಿಂದ, ಇಲ್ಲಿಯ ಅಗ್ರಸ್ಥಾನವಾಗಿದ್ದ "ಗವರ್ನರ್ ಜನರಲ್" ಹುದ್ದೆಯೇ ರಾಜಾಜಿ ಇಳಿದೊಡನೆ ಇಲ್ಲಿ ಅಂತರ್ಧಾನವಾಗಿದೆ. ಸ್ವಲ್ಪಾವಧಿಯಲ್ಲಿ ಗವರ್ನರ್ ಜನರಲಾಗಿದ್ದು ಸ್ವತಃ ತನ್ನ ಹಾಗೂ ಆ ಪೀಠದ ಘನತೆ ಮತ್ತು ವರ್ಚಸ್ಸನ್ನು ಹೆಚ್ಚಿಸಿಕೊಂಡ ರಾಜಾಜಿಯನ್ನು ಈ ಸಂದರ್ಭದಲ್ಲಿ ಅಭಿನಂದಿಸಬೇಕು. ಅವರ ವಿದಾಯವು ಯುಗ ಪರಿವರ್ತನೆಯ ದ್ಯೋತಕ.

**ಅಧ್ಯಕ್ಷ ಪ್ರಸಾದ್**— ರಿಪಬ್ಲಿಕ್ ಭಾರತದ ಪ್ರಥಮಾಧ್ಯಕ್ಷನಾಗುವ ಯೋಗವು ಡಾ। ರಾಜೇಂದ್ರ ಪ್ರಸಾದರದು. ರಾಜೇಂದ್ರರು ಅಲ್ಲಿ ರಾಜಿಸುತ್ತಿರುವುದರಿಂದ ಗಾಂಧಿತ್ವವೇ ಅಗ್ರಪೀಠಾರೋಹಣ ಮಾಡಿದಂತಾಗಿದೆ. ಸ್ವತಃ ಭಾರತದ ಈ ಹುದ್ದೆಯ ಕಡೆಗೆ ಸಹಜವಾಗಿ ಸಲ್ಲಬೇಕಾಗಿರುವ ಭಕ್ತಿ ಗೌರವಗಳ ಜತೆಗೆ ಗಾಂಧಿತ್ವಕ್ಕೆ ಮೀಸಲಿರುವ ಹೃದಯ ಕಾಣಿಕೆಯೂ ಸೇರುವಂತಾಗಿದೆ. ನಿರ್ಮಲಚರಿತ ಅಧ್ಯಕ್ಷ ಪ್ರಸಾದರ ಆಳ್ವಿಕೆ ಸುಗಮವಾಗುವದು—ನ್ಯಾಯದ-ಯಾಯಾದದು— ಕಲ್ಯಾಣಕರವಾಗುವದು, ಎಂದು ನಿರೀಕ್ಷಿಸಬಹುದು. ಇವರು ಗಾಂಧಿವಾದದ ಪ್ರತಿನಿಧಿ.

**ಪ್ರಧಾನಿ ನೆಹರು**—ಆ ಸ್ಥಾನಕ್ಕೆ ಹೊಸಬರಲ್ಲ; ಆ ಸ್ಥಾನದಷ್ಟೇ ಸೊಗಸಾಗಿ ಜನತೆಯ ಹೃದಯ ಪೀಠದಲ್ಲಿಯೂ ರಾಜಿಸುತ್ತಿರುವವರು. ಈ ಸಾರ್ವಭೌಮಾಧಿಕಾರೀ ಜನತಾ ರಾಜ್ಯದ ಕನಸನ್ನು ಎಲ್ಲರಿಂತ ಮುಂದಾಗಿ ಕಂಡು, ಅದನ್ನೇ ಗುರಿಯಾಗಿ ನಿರೂಪಿಸಿದ್ದವರು ಇವರೇ. ಈಗ ಅವರ ಬಯಕೆ ಫಲಿಸಿರುವುದಷ್ಟೇ ಅಲ್ಲ—ಅದನ್ನು ಚಾಲು ಮಾಡುವ ಸೂತ್ರ ಸ್ವತಃ ಅವರ ಕೈಗೇನೇ ಬಂದಿದೆ. ಈ ಜನತಾ ನಾಯಕನಿಂದ ಜನತಾರಾಜ್ಯದಲ್ಲಿ ಜನತಾಹಿತವನ್ನು ಸಾಧಿಸುವ ಬಗೆಯನ್ನು ಭರವಸೆಯಿಂದ ನಿರೀಕ್ಷಿಸಬಹುದು. ಪ್ರಧಾನಿ ಜವಾಹರಲಾಲರು, ಶುದ್ಧ ಮಾನುಷತ್ವದ ಪ್ರತಿನಿಧಿ.

**ಉಪ ಪ್ರಧಾನಿ ವಲ್ಲಭಭಾಯಿ**— ಸ್ವತಂತ್ರ ಸರಕಾರೀ ಯಂತ್ರದ ಯಥಾರ್ಥ ಚಾಲಕನೇ ಸರ್ದಾರ್ ವಲ್ಲಭಭಾಯಿ. ಕಾರ್ಯಶಕ್ತಿ, ಸಂಘಟನಾ ಸಾಮರ್ಥ್ಯ, ಕ್ರಮ-ನಿಯಮ ಪಾಲನೆಯಲ್ಲಿ ಸರ್ದಾರ್ ಕೈಗೆ ಸಮಾನವಾದ ಹಸ್ತ ಲೋಕರಂಗದಲ್ಲೇ ಬಹಳ ಕಾಣ ಸಿಗುವಂತಿಲ್ಲ. ರಾಷ್ಟ್ರವು ಸ್ವರಾಜ್ಯಗಳಿಸಿಕೊಂಡಂದಿನಿಂದ ಪೂರ್ಣ ಸ್ವಾವಲಂಬಿಯಾಗುವ ಇಂದಿನವರೆಗೆ ಸರ್ದಾರರ ಈ ಶಕ್ತಿಯ ಪ್ರಯೋಗಕ್ಕೂ ತುಂಬಾ ಸಂದರ್ಭಗಳೊದಗಿದ್ದುವು. ಮುಂದಿನ ಜನತಾ ರಾಜ್ಯ ಭಾರತಕ್ಕಂತೂ ಇಂತಹ ಸಾರಥಿತ್ವ ಅಗತ್ಯವಾಗಿಬೇಕು. ಸಮಸ್ಯೆಗಳ ಹುಚ್ಚು ಕುದುರೆಗಳ ಮೇಲೆಲ್ಲಾ ಸರ್ದಾರರು ಸವಾರಿಮಾಡಿ ಗೆದ್ದಿದ್ದಾರೆ. ಅವರು ಅಲ್ಲಿ ಇದ್ದಾರೆಂಬುದರಿಂದಲೇ ಸ್ವತಂತ್ರ ಭಾರತವು ತನ್ನ ಆಪತ್ತು, ಆತಂಕ ನಿಂತ್ರಿತ ಹಾದಿಯಲ್ಲಿ ಭರವಸೆಯಿಂದ ಸಾಗಬಲ್ಲದು. ಉಪಪ್ರಧಾನಿ ವಲ್ಲಭಭಾಯಿ ಶಕ್ತಿ, ಸಾಹಸಗಳ ಪ್ರತಿನಿಧಿ.

**ಅರ್ಥಮಂತ್ರಿ ಜೋನ್ ಮಥಾಯಿ**—ಎಳೇ ಸ್ವತಂತ್ರ ಭಾರತದ ಹೊಸ ಖಜಾನೆಯ ಕೆಳ ತೂತುಗಳನ್ನು ಮುಚ್ಚಿಕೊಂಡು ಮೇಲ್ಬಾಯಿಯನ್ನು ಅಗಲವಡಿಸಿಕೊಳ್ಳುವುದರಲ್ಲಿ ಮಿ. ಜೋನ್ ಮಥಾಯಿಗಳು ಇಷ್ಟರಲ್ಲೇ ಸಾಕಷ್ಟು ಪ್ರಾವೀಣ್ಯ ತೋರಿಸಿದ್ದಾರೆ. ಇಂಥಾ ಲೆಕ್ಕಾಚಾರ ಪ್ರವೀಣನ ಸಹಾಯ ಭಾರತ ಪ್ರಜಾರಾಜ್ಯಕ್ಕೂ ಅಗತ್ಯವಿದೆ. ಇವರು ಕ್ರೈಸ್ತ ಪ್ರತಿನಿಧಿ.

**ರಕ್ಷಣಾಮಂತ್ರಿ ಬಲದೇವಸಿಂಗ್**— ದೇಶವಿಭಜನೆಯ ದೆಸೆಯಿಂದ ಸಮಾಜ ಹಾಗೂ ಎದೆಯೊಡೆದು ಹೋದಂತಾಗಿದ್ದ ಸಿಖ್ಖರಲ್ಲಿ ಹೊಸ ಭರವಸೆಯುದಯಿಸಿ, ಅವರು ಸುಧಾರಿಸಿಕೊಳ್ಳುವಂತಾಗಲು ಸರ್ದಾರ್ ಬಲದೇವಸಿಂಗರು ರಕ್ಷಣಾಮಂತ್ರಿವೂ ಒಂದು ಕಾರಣ. ಸರ್ದಾರ್ ಬಲದೇವಸಿಂಗರ ಮಂತ್ರಿತ್ವದ ಅವಧಿಯಲ್ಲಿಯೇ ಭಾರತದ ರಕ್ಷಣಾಯೋಗ್ಯತೆಯ ಪರೀಕ್ಷೆ ಕೆಲವು ಬಾರಿ ನಡೆದಿದ್ದಿತು. ಅವೆಲ್ಲವುಗಳಲ್ಲೂ ರಾಷ್ಟ್ರ ಮತ್ತು ರಕ್ಷಣಾ ಮಂತ್ರಿ ಪಾಸಾಗಿದ್ದಾರೆ. ಇವರು ಸಿಖ್ ಪ್ರತಿನಿಧಿ.

**ಕಾನೂನು ಮಂತ್ರಿ ಅಂಬೇಡ್ಕರ್**—ಇವರ ಯೋಗ್ಯತೆ, ಪ್ರತಿಭೆ ಮತ್ತು ದೇಶಪ್ರೇಮವು ಸರಿಯಾಗಿ ಪ್ರಕಾಶಗೊಳ್ಳುವಂತಹ ಸಂದರ್ಭಗಳು ಇಷ್ಟರಲ್ಲೇ ಒದಗಿವೆ. ಹೊಸ ರಾಜ್ಯ ಶಾಸನದ ಕರಡು ತಯಾರೀ ಸಮಿತಿಯ ನಾಯಕನೇ ಇವರು; ಇಂದು ರಾಷ್ಟ್ರದ ಎಲ್ಲರ ಚಿಂತನೆಗೀಡಾಗಿರುವ 'ಹಿಂದೂ ಕೋಡು ಮಸೂದೆ'ಯ ಜನಕನೂ ಈ ಕಾನೂನು ಮಂತ್ರಿಯೇ. ಪ್ರಜಾರಾಜ್ಯ ಭಾರತಕ್ಕೆ ಇಂತಹ ಕಾಯಿದೇ ಪಂಡಿತ— ಅದರಲ್ಲೂ ಹರಿಜನ ಸಮಾಜದ ಆಶ್ಚರ್ಯಕರ ಅಮೂಲ್ಯ ರತ್ನ—ಅಗತ್ಯವಾಗಿ ಬೇಕು. ಇವರು ಹರಿಜನ ಪ್ರತಿನಿಧಿ.

**ವಿದ್ಯಾ ಮಂತ್ರಿ ಆಜಾದ್**—ಮೌಲಾನರ ವರ್ಣನೆ ಅನಗತ್ಯ. ಮುಖ್ಯವಾಗಿ ಪ್ರಾಂತಿಕ ಹಕ್ಕಾಗಿರುವ ವಿದ್ಯಾ ಸಂಬಂಧವಾಗಿ ಕೇಂದ್ರ ಸರಕಾರವು ನಿರ್ವಹಿಸುವಂಥಾ ಕಾರ್ಯಭಾರಗಳು ವಿಶೇಷವಿಲ್ಲ. ಸ್ವತಃ ಘನ ವಿದ್ವಾಂಸನಿರುವ ಮೌಲಾನಾ ಆಜಾದರು ಇಗ.ವ ಅನೇಕಗಳಕೆ [illegible] ಸದ್ವಿನಿಯೋಗಿಸಿಕೊಂಡಿದ್ದಾರೆ; ಮುಂದಕ್ಕೂ ಹಾಗೆ ಮಾಡಲು ಅವರು ಬೇಕೇ ಬೇಕು. ಇವರು ಸುವಿವೇಕದ ಹಾಗೂ ಮುಸಲ್ಮಾನರ ಪ್ರತಿನಿಧಿ.

**ಆರೋಗ್ಯ ಮಂತ್ರಿ ಅಮೃತ ಕೌರ್**-ಶ್ರೀಮತಿಯವರು ಆ ಕಾಲದಿಂದಲೂ ಗಾಂಧೀಜೀಯ ನಿಕಟಾನುಯಾಯಿಗಳಲ್ಲೊಬ್ಬರಾಗಿದ್ದರು. ಕ್ರೈಸ್ತ ಮಹಿಳೆಯೆಂಬ ನೆನಪೇ ಹುಟ್ಟದಂತೆ ಅಂದಿನಿಂದೀವರೆಗೂ ಭೇದರಹಿತ ನಿರ್ಮಲ ಜೀವನವನ್ನು ನಡೆಸಿಕೊಂಡು ಬಂದಿದ್ದಾರೆ. ದೇಶದ ಆರೋಗ್ಯ ಮಂತ್ರಿಯಾಗಿರುವಂತೆಯೇ ದೇಶೀಯರ ಮನಾರೋಗ್ಯಕ್ಕೊಂದು ಆದರ್ಶವಾಗಿಯೂ ಇರಬಲ್ಲರು. ಇವರು ಮಹಿಳಾ ಪ್ರತಿನಿಧಿ.

**ಆಹಾರ ಮಂತ್ರಿ ಜೈರಾಮ ದಾಸ್**—ಶ್ರೀ ಜೈರಾಮ ದಾಸ್ ದೌಲತ್‌ರಾಮ್ ಅವರು ಬಿಕ್ಕಟ್ಟಿನ ಈ ಕಾಲದಲ್ಲಿ ವಿಶೇಷ ಶ್ರಮಿಸುತ್ತಿರುವ ಮಂತ್ರಿಗಳಲ್ಲೊಬ್ಬರಾಗಿದ್ದಾರೆ. 1951ನೇ ಅಂತ್ಯದೊಳಗೆ ಜಯ ಧ್ವಜ ಹಾರಿಸಲೇಬೇಕೆಂಬ ಗುರಿಯಿಟ್ಟುಕೊಂಡಿರುವ ಆಹಾರಾಭಾವ ನಿವಾರಣಾ ಯುದ್ಧದ ಸೇನಾನಿಯಂತಿದ್ದಾರೆ.

**ಕಾರ್ಮಿಕರ ಮಂತ್ರಿ ಜಗಜ್ಜೀವನ ರಾಮ್**— ಇವರು ಮತ್ತೋರ್ವ ಹರಿಜನ ಸಚಿವ. ಶ್ರಮಜೀವಿಗಳ ಹಿತಸಂಬಂಧಗಳನ್ನೂ ರಾಷ್ಟ್ರೀಯ ಹಿತವನ್ನೂ ಏಕ ಹಾದಿ ಹಿಡಿಸುವ ಕಲೆಯಲ್ಲಿ ನಿಪುಣತೆ ತೋರಿಸಿದ್ದಾರೆ.

**ಕಾಮಗಾರ ಮಂತ್ರಿ ಗಡ್ಗಿಲ್**:-ಇವರ ಚಾತುರ್ಯ ಮತ್ತು ಚುರುಕುತನಗಳನ್ನು ಇಷ್ಟರಲ್ಲೇ ಕಾಣುವಂತಾಗಿದೆ. ಕಾಮಗಾರಿಕೆ, ಗಣಿ ಮತ್ತು ವಿದ್ಯುಚ್ಛಕ್ತಿ ಖಾತೆಗಳ ಅಧಿಕಾರ ವಹಿಸಿರುವ ಇವರ ಅನುಭವಗಳು ಪ್ರಜಾರಾಜ್ಯಭಾರದಲ್ಲೂ ಪ್ರಯೋಜನಕಾರಿಯಾಗುವಂಥವುಗಳೇ.

**ಉದ್ದಿಮೆ ಮಂತ್ರಿ ಡಾ। ಮುಖರ್ಜಿ**:-ಡಾ। ಶ್ಯಾಮಾಪ್ರಸಾದ ಮುಖರ್ಜಿಗಳು ಹಿಂದೂ ಮಹಾಸಭೆಯ ಅಗ್ರಗಣ್ಯ ನಾಯಕರಲ್ಲೊಬ್ಬರಾಗಿದ್ದವರು. ಮತನಿಷ್ಠೆಯ ಎಲ್ಲರಿಗೂ ಮಾದರಿಯಾಗುವ ಪ್ರಾತಿನಿಧ್ಯವೆಂಬಂತೆ ಡಾ। ಮುಖರ್ಜಿಗಳ ಮಂತ್ರಿತ್ವ ಪ್ರಜಾರಾಜ್ಯಕ್ಕೂ ಬೇಕೇಬೇಕು.

**ರೈಲ್ವೇಮಂತ್ರಿ ಎನ್. ಜಿ. ಅಯ್ಯಂಗಾರ್**—ದೇಶ ವಿಭಜನೆಯಾಗದ ಮುನ್ನ ರೂಪಿಸಲ್ಪಟ್ಟಿದ್ದ ಘಟನಾ ಸಮಿತಿಯ ಸೂತ್ರಗಳಲ್ಲಿದ್ದ ಸೂಕ್ಷ್ಮ ತೊಡಕುಗಳನ್ನು ಕಂಡುಹಿಡಿದು ತನ್ನ ಬುದ್ಧಿ ಶಕ್ತಿಯಿಂದ ರಿಪ್ಪನ್ನಾಯಕರನ್ನು ಆಕರ್ಷಿಸಿ ಭಾರತದ ರೈಲ್ವೇ ಮತ್ತು ಸರಂಜಾಮು ಖಾತೆಗಳ ಮಂತ್ರಿ ಸ್ಥಾನಕ್ಕೇರಿದ್ದಾರೆ.

**ಸುದ್ದಿ ವಹಿವಾಟು ಮಂತ್ರಿ ಕಿದ್ವಾಯಿ**—ಇವರು ಮತ್ತೋರ್ವ ಮುಸ್ಲಿಂ ಮಂತ್ರಿ. ಪ್ರಗತಿ ಶೀಲ ಮನೋವೃತ್ತಿಯವರು. ಜೈ ಪ್ರಕಾಶ್ ನಾರಾಯಣರ ಅನ್ನಸತ್ಯಾಗ್ರಹದ ಪ್ರಶ್ನೆಯೀಗ ಇವರ ಮುಖದಿದಿರಲ್ಲಿ ನಿಂತಿದೆ.

**ವ್ಯಾಪಾರ ಮಂತ್ರಿ ನಿಯೋಗಿ**— ಈ ಸ್ಥಾನಕ್ಕೆ ಹೇಳಿಸಿದ ಜನ ಇವರು.

ಮಂತ್ರಿಮಂಡಲದ ಸದಸ್ಯರಿರುವ ಪ್ರಥಮ ದರ್ಜೆಯ ಈ ಮಂತ್ರಿಗಳಲ್ಲದೆ ಆಕಾಶವಾಣಿ ಖಾತೆಯ ಮಂತ್ರಿ ಶ್ರೀ ದಿವಾಕರ್, ರೈಲ್ವೆ ಮತ್ತು ಸರಂಜಾಮು ಖಾತೆಯ ಮಂತ್ರಿ ಶ್ರೀ. ಸಂತಾನಂ ಮೊದಲಾದ ಇತರ ಸಚಿವರೂ ಕೇಂದ್ರದಲ್ಲಿದ್ದಾರೆ.

---

## ಉಡುಪಿ
## ಪರ್ಯಾಯ ವಸ್ತು ಪ್ರದರ್ಶನ

ಗಾಂಧೀ ಮೆಮೋರಿಯಲ್ ಕಾಲೇಜಿನ ಸಹಾಯಾರ್ಥವಾಗಿ ಡಾ. ಟಿ. ಎಲ್. ಬಿತಾಳರ ಭಾವೀ ಚಿಕಿತ್ಸಾ ಮಂದಿರ ಪ್ರಾಕಾರದಲ್ಲಿ 'ಪ್ರದರ್ಶನ ಸಮಿತಿ'ಯ ಆಶ್ರಯದಲ್ಲಿ ತಾ. 1ರಲ್ಲಿ ಆರಂಭಿಸಿದ್ದ 'ಪರ್ಯಾಯ ವಸ್ತು ಪ್ರದರ್ಶನ'ವು22 ದಿನ ಜಯಶೀಲವಾಗಿ ಜರಗಿ ಇದೇ ತಾ.22ರಲ್ಲಿ ಕೊನೆಗೊಂಡಿತು. ಕೊನೆಯ ದಿನ ವಕೀಲ್ ಶ್ರೀ. ಎಮ್. ವಿಟ್ಠಲಕಾಮತರ ಅಧ್ಯಕ್ಷತೆಯಲ್ಲಿ ಪ್ರದರ್ಶನರಂಗಮಂಟಪದಲ್ಲಿ ಸೇರಿದ ಸಭೆಯಲ್ಲಿ ಸಮಿತೀ ಕಾರ್ಯದರ್ಶಿ ಶ್ರೀ ಟಿ. ಎ. ಪೈಗಳು ಪ್ರದರ್ಶನದ ಇದುವರೆಗಿನ ಕಾರ್ಯಕಲಾಪಗಳನ್ನು ವಿವರಿಸಿ, ಸಹಾಯ, ಸಲಹೆ, ಸಹಾನುಭೂತಿಯಿತ್ತವರೆಲ್ಲರನ್ನೂ ಅಭಿನಂದಿಸಿದರು. ಈ ಪ್ರದರ್ಶನದಿಂದ ಸುಮಾರು 25 ಸಾವಿರ ರೂಪಾಯಿಗಳ ಉಳಿತಾಯವಾಗಬಹುದೆಂದು ಅಂದಾಜು ಮಾಡಲಾಗಿದೆ. ಪ್ರದರ್ಶನ ಭಾಗಿಗಳಾದ 'ಸ್ಟಾಲು'ಗಳವರಿಗೂ ಸ್ವಯಂಸೇವಕ ಸೇವಿಕೆಯರಿಗೂ, ಮನರಂಜಕ ಕಾರ್ಯಕಲಾಪಗಳಲ್ಲಿ ಭಾಗವಹಿಸಿದವರಿಗೂ ಚಿನ್ನದ ಪದಕಗಳೂ ಸರ್ಟಿಫಿಕೇಟುಗಳೂ ಜಾಹೀರಾದವು. ಅಧ್ಯಕ್ಷರು ಸಹಕರಿಸಿದ ಸರ್ವರನ್ನೂ ಅಭಿನಂದಿಸಿ ಶ್ರೀ ಟಿ. ಎ. ಪೈಗಳ ಕಾರ್ಯವನ್ನು ಕೊಂಡಾಡಿದರು.

22 ದಿವಸಗಳ ಈ ಪ್ರದರ್ಶನದ ವ್ಯವಸ್ಥಾಕಾರ್ಯಗಳಲ್ಲಿ ಉಡುಪಿಯ ಅನೇಕ ಸ್ತ್ರೀ ಪುರುಷರು ಜನಸೇವಾಬುದ್ಧಿಯಿಂದ ಸ್ವಯಂಸೇವಿಕೆಯರು ಹಾಗೂ ಸ್ವಯಂಸೇವಕರಾಗಿ ದುಡಿದಿದ್ದರು. ರಂಗಮಂಟಪದಲ್ಲಿ ಪ್ರತಿದಿನ ಎರಡು ಬಾರಿ ನಡೆಯುತಿದ್ದ ಮನರಂಜಕ ಕಾರ್ಯಕ್ರಮಗಳಲ್ಲಿ ನಾಟಕ ನರ್ತನ, ಗಾಯನ, ವಾದನ, ಕೌಶಲ್ಯದಾಟ, ಸಿನೆಮಾ ಮುಂತಾದ ವಿವಿಧ ವಿಧಾನಗಳಿದ್ದುವು. ದಕ್ಷಿಣಕನ್ನಡಕ್ಕಪೂರ್ವವಿರುವ 'ಕಥಕ್ಕಳಿ' 'ಕಿನ್ನರ ನೃತ್ಯ'ಗಳನ್ನೂ ಇಲ್ಲಿ ಕಾಣುವಂತಾಯಿತು. ಪರ ಊರು, ಅನ್ಯ ಜಿಲ್ಲೆಗಳ ಕಲಾವಿದರೂ ಈ ರಂಗಮಂಟಪದಲ್ಲಿ ತೋರಿಬಂದಿದ್ದರಾದರೂ ಮುಖ್ಯವಾಗಿ ಉಡುಪಿಯ ಕಲಾವಂತರ ಪ್ರೌಢಿಮೆ, ಪ್ರತಿಭೆಗಳು ಪ್ರಕಾಶಕ್ಕೆ ಬದ್ದುವೆನ್ನಬೇಕು. ಇಂತಹ ಬಹು ವಿಧ ಫಲಕಾರಿ ಪ್ರದರ್ಶನವನ್ನು 20 ಸಾವಿರಕ್ಕೂ ಮಿಕ್ಕಿದ ಜನ ಸಂದರ್ಶಿಸಿರಬಹುದೆಂದು ಅಂದಾಜು ಮಾಡಲಾಗಿದೆ.

## ಜನತಾ ರಾಜ್ಯ ಉದ್ಘಾಟನಾ

ಉತ್ಸವವು ಇದೇ ತಾ 26 ಮತ್ತು 27ರಲ್ಲಿ ಉಡುಪಿಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಆಚರಿಸಲ್ಪಡಲಿದೆ. ತಾ 26ನೇ ಮುಂಜಾನೆ ಎಲ್ಲೆಲ್ಲೂ ಪ್ರಾರ್ಥನೆ—7½ ಘಂಟೆಗೆ ರಥಬೀದಿಯಿಂದ ಪ್ರಭಾತ ಮೆರವಣಿಗೆ ಹೊರಟು, ಅನುಕ್ರಮವಾಗಿ ಮುನ್ಸಿಪಲ್ ಆಫೀಸು, ಮುನ್ಸಿಫ್ ಕೋರ್ಟು, ತಾಲೂಕು ಕಚೇರಿಯಲ್ಲಿ ಧ್ವಜಾರೋಹಣಗಳು—ತಾಲೂಕು ಕಚೇರಿಯಲ್ಲಿ ಜನತಾರಾಜ್ಯಾಧ್ಯಕ್ಷರ ಭಾವಚಿತ್ರ ಅನಾವರಣ—ಅಲ್ಲೇ ಹರಿಜನರಿಗೆ ಪಾಯಸ ವಿತರಣ. ನಡೆಯುವುವು. ಅಪರಾಹ್ನ 3ಕ್ಕೆ ಶಾಲೆಗಳಲ್ಲಿ ಮಕ್ಕಳಿಗೆ ಲಾಡು ವಿತರಣ—4½ ಘಂಟೆಗೆ ಬೋರ್ಡು ಹೈಸ್ಕೂಲು ವಠಾರದಿಂದ ಪುರ ಮೆರವಣಿಗೆ ಹೊರಟು ನಗರ ಸಂಚರಿಸಿ 5-30ಕ್ಕೆ ಗಾಂಧೀ ಮೈದಾನಿನಲ್ಲಿ ಸಾರ್ವಜನಿಕ ಸಭೆ, ಧ್ವಜಾರೋಹಣ, ಭಾಷಣಗಳಿವೆ. ತಾ. 27ರಲ್ಲಿ ಪೂರ್ವಾಹ್ನ ತಾಲೂಕು ಕಚೇರಿಯಲ್ಲಿ ಬಡವರಿಗೆ ಅಕ್ಕಿ ವಿತರಣವೂ ಅಪರಾಹ್ನ ಗಾಂಧೀ ಮೈದಾನಿನಲ್ಲಿ ಸಾರ್ವಜನಿಕ ಸಭೆ ಜರಗಿ ವಿವಿಧ ವಿನೋದಾವಳಿಗಳೂ ನಡೆಯಲಿವೆ. ಸಾರ್ವಜನಿಕರೆಲ್ಲರೂ ಈ ಕಾರ್ಯಕ್ರಮಗಳಲ್ಲಿ ಭಾಗ ವಹಿಸುವುದಲ್ಲದೆ ಚರಿತ್ರಾರ್ಹವಾದ ಇವೆರಡು ದಿನಗಳಲ್ಲೂ ತಂತಮ್ಮ ಮನೆ, ಕಾರ್ಯಾಲಯ, ಪೇಟೆಗಳಲ್ಲಿ ರಾಷ್ಟ್ರಧ್ವಜವೇರಿಸಿಕೊಂಡು, ತೋರಣ ದೀಪಾಲಂಕಾರ ಮಾಡಿಕೊಳ್ಳಬೇಕೆಂದು ನಗರ ಸಭಾಧ್ಯಕ್ಷ ಮತ್ತು ಡಿಸ್ಟ್ರಿಕ್ಟ್ ಕಾಂಗ್ರೆಸ್ ಅಧ್ಯಕ್ಷ [illegible] ಪ್ರಕಟಿಸಿದ್ದಾರೆ.

## ಮಂಗಳೂರು

**ಸಂತಾಪಸೂಚಕ ಸಭೆ**—ಇದೇ ತಾ. 18ರಲ್ಲಿ ರಾತ್ರಿ ಮಂಗಳೂರು ಎಸ್. ಕೆ. ಡಿ. ಬಿ. ಹಾಸ್ಟೆಲಿನ ವಿದ್ಯಾರ್ಥಿ ಸಭೆಯು ಶ್ರೀ ಪಲ್ಯಾನ ಮಹಾಲಿಂಗ ಭಟ್ಟರ ಅಧ್ಯಕ್ಷತೆಯಲ್ಲಿ ಸೇರಿ ಪ್ರಸಿದ್ಧ ಕನ್ನಡ ಸಾಹಿತಿಗಳೂ ವಿಮರ್ಶಕರೂ ಆದ ಶ್ರೀಮಾನ್ ಮುಳಿಯ ತಿಮ್ಮಪ್ಪಯ್ಯನವರ ನಿಧನದ ಬಗ್ಗೆ ಅತೀವ ಸಂತಾಪಸೂಚನೆಯನ್ನು ವ್ಯಕ್ತಪಡಿಸಿತು.

**ಎಲೋಸಿಯಸ್ ಕಾಲೇಜಿನಲ್ಲಿ**—ತಾ. 19ರಲ್ಲು ಶ್ರೀ ಮುಳಿಯ ತಿಮ್ಮಪ್ಪಯ್ಯನವರ ನಿಧನದ ಕುರಿತು ಸಂತಾಪಸೂಚಕ ಸಭೆಯು ಜರಗಿತು. ರೆ|ರೆಕ್ಟರ್, ಶ್ರೀ ಬಿ. ಭುಜಂಗರಾವ್ ಮೊದಲಾದವರು ಮಾತನಾಡಿದರು. ಕಾಲೇಜಿಗೆ ಆ ದಿನ ರಜೆಕೊಡಲಾಗಿತ್ತು.

**ಭಾರತ ಪ್ರಜಾಪ್ರಭುತ್ವ ಉದ್ಘಾಟನಾ ಸಮಾರಂಭ**—ಇದೇ ತಾ. 26ರಲ್ಲು ಸಂಜೆ 4½ ತಾಸಿಗೆ ಮಂಗಳೂರು ಕೇಂದ್ರ ಮೈದಾನಿನಲ್ಲಿ ರಾಷ್ಟ್ರಧ್ವಜಾರೋಹಣ ಸಮಾರಂಭವು ನೆರವೇರಲಿರುವುದು. ಪ್ರಜಾಪ್ರಭುತ್ವ ಸಮಾರಂಭಕ್ಕಾಗಿಯೇ ನಿರ್ಮಿಸಲ್ಪಡುವ ಧ್ವಜಕಂಭದಲ್ಲಿ ಧ್ವಜಾರೋಹಣ ಸಮಾರಂಭವನ್ನು ಜಿಲ್ಲಾ ಕಲೆಕ್ಟರರು ನೆರವೇರಿಸಲಿರುವರು. ಇದಾದ ಬಳಿಕ ಪೋಲೀಸರ ಕವಾಯತು ನಡೆದು ಜಿಲ್ಲಾ ಕಲೆಕ್ಟರರು ವಂದನ ಸ್ವೀಕರಿಸುವರು. ಮಹಾಜನರು ಈ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಕೇಳಿಕೊಳ್ಳಲಾಗಿದೆ.

**ಸಸಿ ಬೆಳೆಸುವ ಯೋಜನೆಯಲ್ಲಿ** ಅತ್ಯುತ್ತಮ ಸಸಿಗಳನ್ನು (ಹಸುರು ಗೊಬ್ಬರಕ್ಕನುಕೂಲಿಸುವಂಥವು) ಎಡಪದವಿನಲ್ಲಿ ಬೆಳೆಸಿದ ಶ್ರೀ ಎಸ್. ಪಿ. ಎಸ್. ಅಲ್ಬುಕರ್ಕರವರಿಗೂ ಎಡಪದವಿನ ಪಟೇಲ್ ಶ್ರೀ ಪಟ್ಟಾಭಿ ರಾಮರಾಯರಿಗೂ ತಾ. 17ರಲ್ಲು ಕಲೆಕ್ಟರರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಪಾರಿತೋಷಕಗಳನ್ನು ಹಂಚಲಾಯಿತು. ಕಲೆಕ್ಟರರು ಆಹಾರ ಬೆಳೆಯ ಹೆಚ್ಚಳಕ್ಕೆ ಹಸಿ ಸೊಪ್ಪಿನ ಗೊಬ್ಬರದ ಅವಶ್ಯಕತೆಯ ಕುರಿತು ಮಾತನಾಡಿದರು.

**ಬೊಕ್ಕಪಟ್ಣಕ್ಕೆ ಪ್ರಥಮಸ್ಥಾನ**:- ಕರ್ನಾಟಕದಲ್ಲಿ ಪ್ರಧಾನ ಬಂದರ ನಿರ್ಮಾಣದ ಯೋಜನೆಯನ್ನು ಇನ್ನೆರಡು ವರುಷಗಳ ಮುಟ್ಟಿಗೆ ಮುಂದೆ ಹಾಕಲಾಗಿದೆ ಎಂದು ಬೆಂಗಳೂರಿನಲ್ಲೊಂದೆಡೆ ಮಾತನಾಡುತ್ತಾ ಕೇಂದ್ರ ರೈಲ್ವೆ ಉಪಮಂತ್ರಿಗಳಾದ ಶ್ರೀ ಸಂತಾನಂರವರು ತಿಳಿಸಿದರು. ಮುಲ್ಕಿಯನ್ನು ಆರಿಸಿಕೊಳ್ಳಲು ಅಭಿವೃದ್ಧಿ ಸಮಿತಿಯು ಸೂಚಿಸಿತ್ತೆಂದೂ ಶ್ರೀ ಸಂತಾನಂರವರು ತಿಳಿಸಿದರು.

**ಕಂಕನಾಡಿ ಬೈದರ್ಕಳ ಗರಡಿಯಲ್ಲಿ**:—ವರ್ಷಾವಧಿ ಜರಗತಕ್ಕ ಉತ್ಸವಾದಿಗಳು ಅಧ್ಯಕ್ಷ ಶ್ರೀ. ಬಿ. ನರ್ಸಪ್ಪನವರ ನೇತೃತ್ವದಲ್ಲಿ ಈಚೆಗೆ ವಿಜೃಂಭಣೆಯಿಂದ ಜರಗಿದುವು. ಜಿಲ್ಲಾ ಜಡ್ಜರೇ ಮೊದಲಾದ ಮಹನೀಯರು ಆಗಮಿಸಿದ್ದರು.

**ಮಂಗಳೂರು ನಗರಸಭೆಯು**:—ಇದೇ ತಾ. 16ರಲ್ಲು ಸಂಜೆ ಶ್ರೀ. ಎಲ್. ಸಿ. ಪಾಯಸರ ಅಧ್ಯಕ್ಷತೆಯಲ್ಲಿ ಜರಗಿತು. ಕಂಕನಾಡಿ ಸಿಮ್ಮೇರಿ ರಸ್ತೆಗೆ ಕೂಡಲೇ ತಾರು ಹಾಕಬೇಕೆಂಬ ಆ ವಾರ್ಡಿನ ಪ್ರತಿನಿಧಿಗಳ ಸೂಚನೆಯು ವಿಶೇಷವಾಗಿ ಚರ್ಚೆಗೊಳಗಾಗಿ ಸರಕಾರದಿಂದ ಸಿಗುವ ಹಣದ ದೃಷ್ಟಿಯಿಂದಲೂ ಮತ್ತು ಪೌರಸಭೆಯು ಈ ಮೊದಲು ಮಾಡಿದ ತೀರ್ಮಾನಕ್ಕನುಗಣವಾಗಿಯೂ ಆ ರಸ್ತೆಗೆ ತಾರು ಹಾಕುವ ರಸ್ತೆಗಳಲ್ಲಿ ಆರನೇ ಸ್ಥಾನ ಕೊಡಲಾಯಿತು. ನಗರದ ಕೊಳೆಯನ್ನು 'ಡ್ರೈನೇಜ್' ರೀತಿಯಿಂದ ಹೊರಹಾಕುವ ಯೋಜನೆಯ ಕುರಿತು ಸಭೆಯಲ್ಲಿ ಚರ್ಚೆ ನಡೆಯಿತು. ಒಂಭತ್ತು ಲಕ್ಷ ವೆಚ್ಚದ(ಬಂದರದಲ್ಲಿ ಮಾತ್ರ)ಡ್ರೈನೇಜ್ ಯೋಜನೆಯೊಂದಕ್ಕೆ ಸರಕಾರವು ಸಹಾಯಧನ ನೀಡಲು ತಿರಸ್ಕರಿಸಿದುದಕ್ಕೆ ಪೌರಸಭೆ ವಿಷಾದಪಟ್ಟಿತು. ಆ ಕುರಿತು ಸದಸ್ಯ ಕೌನ್ಸಿಲರು ಮಾತನಾಡುತ್ತಾ ಪೈಲೇರಿಯ ನಿಂದ ಜನರು ಕಷ್ಟಕ್ಕೀಡಾಗುವುದನ್ನು ನಿವಾರಿಸಲು ತಗಲುವುದರಿಂದ ಅದರ ಭವಿಷ್ಯವೇ ಹಾಳಾಗುತ್ತಿದೆಯೆಂದೂ ಪ್ರಾಂತೀಕರಣದ ಪ್ರಶ್ನೆ ಬಗೆಹರಿಯಡೆ ಮದ್ರಾಸು ಸರಕಾರದಿಂದ ನಾವು ಏನನ್ನೂ ಪಡೆಯುವಂತಿಲ್ಲವೆಂದೂ ಎಚ್ಚರಿಕೆಯಿತ್ತರು. ನಗರಸಭೆಯು ಈ ಯೋಜನೆಯನ್ನು ಅನಿವಾರ್ಯವಾಗಿ ಈ ವರ್ಷವೇ ತನ್ನ ಸ್ವಂತ ವೆಚ್ಚದಿಂದ ಕೈಕೊಳ್ಳುವುದೆಂಬ ತೀರ್ಮಾನವಾಯಿತು. ನಗರ ಸಭೆಯು ಆಂಧ್ರ ನೆರೆ ಸಂಕಟ ಪರಿಹಾರ ನಿಧಿಗೆ ಐವತ್ತು ರೂಪಾಯಿ ಕೊಡಲು ನಿಧರ್ಿಸಿತು.

**ಹಿಂದೀ ಪ್ರಜಾರಾಜ್ಯ ಉದ್ಘಾಟನಾ ಸಮಾರಂಭವನ್ನು** ಇದೇ ತಾ 26 ಮತ್ತು 27ರಲ್ಲು ಮರ ದೇವಾಲಯಗಳಲ್ಲಿ ವಿಶೇಷ ಪ್ರಾರ್ಥನೆ, ದೀಪೋತ್ಸವಾದಿಗಳಿಂದ ಆಚರಿಸಿ ಆ ಬಾಬ್ತು ವರದಿಯನ್ನು ಕಳುಹಿಸಬೇಕಾಗಿ ಮದ್ರಾಸಿನ ಹಿಂದೂ ರಿಲೀಜಿಯಸ್ ಎಂಡೋವೆಂಟ್ ಬೋರ್ಡಿನ ಅಕ್ಕರೆಯ ಸರ್ಕಿಲಾರು ಹೊರಟಿದೆ. ದ. ಕ. ಜಿಲ್ಲಾ ಕಲೆಕ್ಟರರಿಂದಲೂ ಸಾರ್ವಜನಿಕ ಸಂಘಸಂಸ್ಥೆಗಳೂ ವಿದ್ಯಾಮಂದಿರಗಳೂ, ಎಲ್ಲರೂ ಈ ಶುಭ ದಿನವನ್ನು ಧ್ವಜಾರೋಹಣ, ಪ್ರಾರ್ಥನೆ, ಸಭೆ, ಮೆರವಣಿಗೆ, ದೀಪಾಲಂಕಾರಗಳಿಂದ ಆಚರಿಸಬೇಕಾಗಿ ವಿನಂತಿ ಹೊರಟಿರುವುದು. ಉತ್ತರಾಯಣ ಪುಣ್ಯಕಾಲ. ಅದರಲ್ಲೂ ಮಾಘಮಾಸದ ಭೀಷ್ಮಾಷ್ಟಮಿ, ಮಧ್ವನವಮಿ ಪರ್ವದಿನಗಳಲ್ಲೆ ಈ ಆಚರಣೆಯು ಬರುವುದರಿಂದ ಹಿಂದೂ ಜನರು ದ್ವಿಗುಣಿತ ಉತ್ಸಾಹದಿಂದ ಉದ್ಘಾಟನಾ ಸಮಾರಂಭವನ್ನು ಆಚರಿಸುವರಾಗಿ ನಿರೀಕ್ಷಿಸಲಾಗಿದೆ.

**ವರ್ಧಂತಿ**- ಮಂಗಳೂರು ಗವರ್ನ್‌ಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ವರ್ಧಂತ್ಯುತ್ಸವವು ಇದೇ ತಾ. 28 ಮತ್ತು 29 ಈ ದಿನಗಳಲ್ಲಿ ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ಶ್ರೀ ಬಿ. ಮಂಜಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಶಾಲಾ ಹಳೆಯ ವಿದ್ಯಾರ್ಥಿಗಳಿಗೆ ಆದರಪೂರ್ವಕ ಆಮಂತ್ರಣವಿದೆ ಎಂದು ಮುಖ್ಯೋಪಾಧ್ಯಾಯರು ತಿಳಿಸುತ್ತಾರೆ.

### ವಯಸ್ಕರ ಶಿಕ್ಷಣ ಸಪ್ತಾಹದ ಪ್ರಚಾರ ಸಮಿತಿಯ ವರದಿ

ಸದರಿ ಸಮಿತಿಯು ಶ್ರೀ ರಂಗನಾಥ ಪೂಂಜರ ಅಧ್ಯಕ್ಷತೆಯಲ್ಲಿ ಸೇರಿ ಈ ಕೆಳಗಿನ ನಿರ್ಣಯಗಳನ್ನು ಮಾಡಿತು.

೧ ಸಪ್ತಾಹದ ಅವಧಿಯಲ್ಲಿ ಎಲ್ಲಾ ಕಾರಖಾನೆಗಳ ಒಡೆಯರು ಅವರ ಮಜೂರರ ಸಭೆಗಳನ್ನು ಜರಗಿಸಿ ವಿದ್ಯೆಯ ಪ್ರಯೋಜನ, ಬೆಲೆ ಮತ್ತು ಓದಿನ ಬೆಲೆಯನ್ನು ಅವರಿಗೆ ವಿವರಿಸುವಂತೆ ಅವಕಾಶ ಕಲ್ಪಿಸಲು ಕೇಳಿಕೊಳ್ಳುವುದು.

೨ ವಿದ್ಯಾವಂತರ ಜವಾಬ್ದಾರಿಯನ್ನು ತಿಳಿಸಲು ಅನುಕೂಲವಾಗುವರೆ ಎಲ್ಲಾ ಶಾಲಾ, ಕಾಲೇಜು ಮತ್ತು ಹೋಸ್ಟೇಲುಗಳಲ್ಲಿರುವ ವಿದ್ಯಾರ್ಥಿಗಳ ಸಭೆ ಜರಗಿಸಲು ಸಂಬಂಧಪಟ್ಟವರನ್ನು ಕೇಳಿಕೊಳ್ಳುವುದು.

೩ ವರ್ತಮಾನ ಪತ್ರಿಕೆಗಳಲ್ಲಿ ನಿಸ್ಸೀಮ ಸ್ವಾತಂತ್ರ್ಯ ಕೊಟ್ಟು ಪ್ರಚಾರ ಕಾರ್ಯಕ್ಕೆ ಕೈಕೊಳ್ಳುವರೆ ಸಂಬಂಧಪಟ್ಟ ಸಂಪಾದಕರನ್ನು ಕೇಳಿಕೊಳ್ಳುವುದು.

೪ ಖಾತೆಯವರು ವಿದ್ಯಾ ಮಹತ್ವವನ್ನು ಸಾರ್ವಜನಿಕರಿಗೆ ತಿಳಿಯುವ ಮತ್ತು ಅವಶ್ಯಕತೆಯನ್ನು ವಿವರಿಸುವ ಚಿತ್ರ ಪತ್ರಿಕೆಗಳನ್ನು ಒದಗಿಸುವಂತೆ ಕೇಳಿಕೊಳ್ಳುವುದು.

ಸಪ್ತಾಹವು ಯಶಸ್ವಿಯಾಗುವಂತೆ ಈ ಕೆಳಗಿನ ಕಾರ್ಯಕ್ರಮವನ್ನು ಕೇಂದ್ರ ಸಮಿತಿಯು ಸೂಚಿಸಿದೆ.

೧ನೇ ದಿನ ತಾ. ೩-೨-೧೯೫೦ ಉದ್ಘಾಟನಾ ದಿನ. ೨ನೇ ದಿನ ಧ್ವಜ ದಿನ ೩ನೆ ದಿನ ವಾಚನಾಲಯಕ್ಕಾಗಿ ಪುಸ್ತಕಗಳ ಶೇಖರಣ ಮತ್ತು ವಿತರಣ. ೪ನೇ ದಿನ ತಾ.೬-೨-೧೯೫೦ ವಿದ್ಯಾ ಕೇಂದ್ರಗಳ ಸಂದರ್ಶನೆ ಮತ್ತು ಹೊಸ ಕೇಂದ್ರಗಳನ್ನು ತೆರೆಯುವುದು. ೫ನೇ ದಿನ ತಾ. ೭-೨-೧೯೫೦ ಸಮ್ಮೇಳನಾದಿನ. ಮನೋರಂಜನೆ ಮತ್ತು ಪ್ರಚಾರ ಕಾರ್ಯಕ್ರಮ.

## ದ. ಕನ್ನಡ

**ಪುತ್ತೂರು ಅಳಿಯ ಕಟ್ಟನ್ನು ಆಚರಿಸುವವರ ಸಭೆಯು** ಈಗ ಚರ್ಚೆ ನಡೆಯುತ್ತಿರುವ ಹಿಂದೂ ಕೋಡು ಶಾಸನದ ಮತ್ತು ಈ ಮೊದಲು ಜ್ಯಾರಿಗೆ ಬಂದಿರುವ ಅಳಿಯ ಸಂತಾನದ ಆಕ್ಟು, ಇವುಗಳ ಕುರಿತು ಕಳದ ತಾ 16ರಲ್ಲು ಪುತ್ತೂರು ಟೌನ್ ಬ್ಯಾಂಕ್ ಕಟ್ಟಡದಲ್ಲಿ ಶ್ರೀ ವಕೀಲ್ ಮಂಗೇಶರಾಯರ ಅಧ್ಯಕ್ಷತೆಯಲ್ಲಿ ಜರಗಿ, ಈ ವಿಷಯ ಸರಿಯಾಗಿ ಪ್ರಚಾರಮಾಡುವ ಉದ್ದಿಶ್ಯ ಇನ್ನೊಂದು ಸಭೆಯನ್ನು ಬರುವ ತಾ 30ಕ್ಕೆ ಕರೆವರೆ ನಿರ್ಣಯಿಸಿರುತ್ತದೆ. ಆ ದಿನಕ್ಕೆ ಎಲ್ಲರೂ ತಪ್ಪದೆ ಬರುವಂತೆ ವಿನಂತಿಸಲಾಗಿದೆ.

**ಪೆರ್ಡೂರು**:- ತಾ. 21-1-50ರಲ್ಲಿ B. E. M. ಹಾಯರ್ ಎಲಿಮೆಂಟರಿ ಶಾಲೆಯಲ್ಲಿ, ಈ ಊರಿನ ಶಾಲೆಗಳ ಮಕ್ಕಳ "ಆಟದ ಹಬ್ಬವು" ಶ್ರೀ. ರಘುನಾಥ ಹೆಗ್ಡೆ M.A.L.T. ಅವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಆ ಹಬ್ಬವನ್ನು ಆಚರಿಸುವ ಧ್ಯೇಯ, ವಿವರ, ಉದ್ದಿಶ್ಯದ ಕುರಿತು ಶ್ರೀಗಳಾದ B. ಲಕ್ಷ್ಮೀನಾರಾಯಣ ಬಲ್ಲಾಳ್, T. A. ಕುಂದರ್, ರಮೇಶ್ ಅಡಿಗಳ್ ಮತ್ತು A. V. ಸೂಡರವರು ಮಾತಾಡಿದರು. ಅಧ್ಯಕ್ಷರ ಭಾಷಣವಾಗಿ ಹೆಡ್ ಮಾಸ್ತರರಿಂದ ಧನ್ಯವಾದಾರ್ಪಣೆಯಾದೊಡನೆ, ಸಭೆಯು ಚದರಿತು.

**ಬೈಲೂರು** ತಾ. 30—1—1950ನೇ ಸೋಮವಾರ ಪೂರ್ವಾಹ್ನ ಘಂಟೆ 10ಕ್ಕೆ ಬೈಲೂರು ಗಾಂಧಿ ಸ್ಮಾರಕ ಭವನದ ಶಂಕುಸ್ಥಾಪನೆಯು ಜಿಲ್ಲಾ ಬೋರ್ಡ್ ಪ್ರೆಸಿಡೆಂಟರಾದ ಶ್ರೀ ಬಿ ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಶ್ರೀ ಜಾರ್ಕಳ ನಾಗಣ್ಣ ಹೆಗ್ಡೆರಿಂದ ಜರಗಲಿರುವುದು.

**ಕಡೇಕಾರು**—ನಿಡಂಬೂರು ಪಂಚಾಯತ ಬೋರ್ಡಿನ ಬಂಕೇಕಟ್ಟ, ಬಾರಿಯ ಮತ್ತು ಕಡೇಕಾರು ಕಿನ್ನಿಮೂಲ್ಕಿಗಳ ಎರಡು ದಿನವಹಿ ಮೀನು ಮಾರ್ಕೇಟುಗಳ ಈ 1950-51ನೆಯ ವರ್ಷಾವಧಿಯ ಫೀಸು ವಸೂಲಿಯ ಸ್ವಾತಂತ್ರ್ಯದ ಗುತ್ತೆಗಳನ್ನು ತಾ. 28-1-1950ರಂದು ಸಂಜೆ ಗಂಟೆ 5ಕ್ಕೆ ಬೋರ್ಡಿನ ಪ್ರೆಸಿಡೆಂಟರು ಅವರ ಆಫೀಸಿನಲ್ಲಿ ಏಲಂ ಮಾಡುತ್ತಾರೆ. ಅಗತ್ಯಪಟ್ಟವರೆಲ್ಲರೂ ಬಂದು ಬಿಡ್ ಮಾಡಲು ಅವಕಾಶವಿದೆ.

**ಕುಂದಾಪುರ**-ಇಲ್ಲಿ ಹೊಸತಾಗಿ ತೆರೆದಿರುವ ಪ್ರಕಾಶ ಮೇಚ್ ಎಂಡ್ ಪ್ಲೈವುಡ್ ಫೇಕ್ಟರಿಯ ಪ್ರಾರಂಭೋತ್ಸವವು ತಾ. 16 ರಂದು ಶ್ರೀ ವಿ. ಎಸ್. ಕುಡುವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಕಾರ್ಯಕ್ರಮದಂತೆ ದೇವರ ಪ್ರಾರ್ಥನೆಯಾದ ಬಳಿಕ, ಮಾನ್ಯ ಅಧ್ಯಕ್ಷರ ಹಸ್ತದಿಂದ ಫೇಕ್ಟರಿಯ ಉದ್ಘಾಟನೆ ಮಾಡಲ್ಪಟ್ಟಿತು. ತರುವಾಯ ಬಂದ ಮಹನೀಯರಿಗೆಲ್ಲಾ ಲಘು ಉಪಹಾರ ನಡೆಯಿತು. ಆ ಮೇಲೆ ನೆರೆದ ಸಭಿಕರಲ್ಲಿ ಶ್ರೀ ಕೆ. ಎಲ್. ಕಾರಂತ (ಟೀಚರ್) ಶ್ರೀ ಕೆ. ತೇಜಪ್ಪ ಶೆಟ್ಟಿ, (ಡೆಮೋನ್‌ಸ್ಟ್ರೇಟರರು,) ಶ್ರೀ ಕೆ. ನರಸಿಂಹ ಕಾಮತ್, ವಕೀಲ್, ಶ್ರೀ ಬಿ. ಶಿವರಾಮ ಶೆಟ್ಟಿ, ವಕೀಲ್, ಇವರು ಕಂಪೆನಿಯ ಶ್ರೇಯಸ್ಸು ಬಯಸಿ ಇಂಥ ಫೇಕ್ಟರಿಯ ಅವಶ್ಯಕತೆಯನ್ನು ವಿವರಿಸಿ ಬೇಕಾದ ಸಲಹೆ ಸೂಚನೆಗಳನ್ನು ತಿಳಿಸಿ ಭಾಷಣವಿತ್ತುದಲ್ಲದೆ ಈ ಫೇಕ್ಟರಿಯ ಜೊತೆ ಮೆನೇಜಿಂಗ್ ಡೈರೆಕ್ಟರರುಗಳು ಶ್ರೀ ಸೋನ್ಸರ ಮತ್ತು ಶ್ರೀ ಎಸ್. ಪಿ. ಕೋಳಾರ ಇವರ ಅನುಭವ ಚಟುವಟಿಕೆಗಳನ್ನು ಪ್ರಶಂಸಿಸಿ ಭಾಷಣವಿತ್ತರು. ನಂತರ ಅಧ್ಯಕ್ಷರು ಕಂಪೆನಿಯ ಶ್ರೇಯಸ್ಸು ಬಯಸಿ ನಮ್ಮ ಜಿಲ್ಲೆಯಲ್ಲಿ ಇಂಥ ಫೇಕ್ಟರಿಯು ಇರಲಿಲ್ಲ. ಮೊದಲಾಗಿ ಜನ್ಮವೆತ್ತಿದ ಈ ಫೇಕ್ಟರಿಯು ಅದಕ್ಕೆ ಹೇಳಿಸಿದ ಸ್ಥಳದಲ್ಲಿ ತಲೆ ಎತ್ತಿದೆಯೆಂದೂ ಇದು ಸುಗಮವಾಗಿ ಸಾಗಿ ಬಲಿತು ಬೆಳೆದು ಬಾಳುವಂತೆ ಹರಸಿ ಸಾಲೋಚಿತ ಭಾಷಣವನ್ನಿತ್ತರು. ಆ ಮೇಲೆ ಶ್ರೀ ಕೊಳ್ಕೇಬೈಲು ಸೂರಪ್ಪ ಶೆಟ್ಟಿ, ಎಡ್ವೊಕೇಟ್ ರವರು ಮಾನ್ಯ ಅಧ್ಯಕ್ಷರಿಗೆ ಅಭಿವಂದನೆಯನ್ನರ್ಪಿಸಿ, ನೆರೆದ ಸಭಿಕರಿಗೆ ಆಭಾರ ಸೂಚಿಸಿ ಧನ್ಯವಾದವನ್ನಿತ್ತ ಬಳಿಕ ಸಭೆಯು ಚದರಿತು.


# The Canara Industrial & Banking Syndicate Ltd.,

(Incorporated In India, Liability Of Shareholders Limited)

**NOTICE**

Notice is hereby given that the 25 Ordinary Shares numbered 3501 to 3525 comprised in Share Certificate No. 16 fully paid at Rs. 250/- in the GENERAL INVESTMENT TRUST LIMITED, KADEKAR and standing in the name of Mr. A Sanjiva Panduranga Kamath, Sodemutt Lane, Udipi and held by us under blank transfer will be sold by public auction at the local office of the Syndicate on Saturday the 11th February, 1950 at 2 P. M., or at any other date convenient to the Syndicate.

"Ramakrishna Bldgs", Hospital Road, UDIPI. 18—1—1950.

**H. D. S Pai**, Cert. A.I.I.B, AGENT AT UDIPI.






ಶ್ರೀ ಕೊರಡ್ಕಲ್ ಶ್ರೀನಿವಾಸರಾಯರ

'ಸುಲಭದಲ್ಲಿ ಇಂಗ್ಲಿಷ್'

(ENGLISH MADE EASY)

ಮನೆಯಲ್ಲಿ ನೀವಾಗಿ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ. ಬೆಲೆ: ೧—೮—೦

ಡಾಕ್ಟರ್ ಕೊರಡ್ಕಲ್ ವೆಂಕಟರಾಯರ

'ಮನೆ ಮದ್ದು'

(HOME REMEDIES)

೨೦೦ ಕಾಹಿಲೆಗಳಿಗೆ ಮನೆಯಲ್ಲೇ ಮಾಡಿಕೊಳ್ಳಬಹುದಾದ ೧೦೦೦ ಮದ್ದುಗಳ ವಿವರವಿರುವ ಪುಸ್ತಕ. ಬೆಲೆ: ರೂ. ೨

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಬರೆಯಿರಿ-

**ನವಭಾರತ ಪುಸ್ತಕ ಭಂಡಾರ, ಉಡುಪಿ**

**ನವಯುಗ ಪ್ರೆಸ್, ಉಡುಪಿ**

## ದಕ್ಷಿಣ ಕನ್ನಡ ಮುಸಲ್ಮಾನ್ ಬಂಧುಗಳಲ್ಲಿ ವಿನಂತಿ.

ಇದೇ ಜನವರಿ ತಾ. 14ರಲ್ಲಿ ಮದರಾಸಿನಲ್ಲಿ ನಾಬ್ ಅಬ್ದುಲ್ ಹಮೀದ್ ಖಾನ್ ಸಾಹೇ M.L.A. ರವರು ಜರಗಿಸಿದ ಮುಸಲ್ಮಾನ್ ನ್ವೆನ್ಶನ್ ಎಂಬ ಮುಸಲ್ಮಾನರ ಪರಿಷತ್ತಿ ಲ್ಲಿ ಇಡೀ ಮದರಾಸ್ ಪ್ರಾಂತ್ಯದ ಮುಸ ಲ್ಮಾನರು ಇನ್ನು ಮುಂದೆ ದೇಶದ ರಾಜಕೀ ಯ ವಿಷಯಗಳಲ್ಲಿಯೂ ಇದೇ ಜನವರಿ ತಾ. ೨೬ರ ಆರಭ್ಯಾತು ಜಾರಿಗೆ ಬರುವಂಥಾ ಸ್ವ ತಂತ್ರ ಪ್ರಜಾಪ್ರಭುತ್ವದ ಶಾಸನದ ಪ್ರಕಾರ ಮುಂದಿನ ಸರಕಾರ ರಚನೆಯ ಅಧೀನದಲ್ಲಿ ಯೂ ಯಾವ ರೀತಿಯಲ್ಲಿ ನಡಕೊಳ್ಳಬೇಕೆಂ ಬ ಕುರಿತು ಚೆನ್ನಾಗಿ ಆಲೋಚಿಸಲಾಗಿಯದೆ. ಆ ಮುಸ್ಲಿಂ ಕನ್ವೆನ್ಶನಿನ ಠರಾವು ನೋರಗೆ ಮುಂದಿನ ಪೂರ್ಣ ಪ್ರಜಾಪ್ರಭುತ್ವದ ಸರ ಕಾರದ (Sovereign Democratic Republic) ಕಾರ್ಯಕ್ರಮದಲ್ಲಿ ಜಾತಿ ಯ ರಾಜಕೀಯ ಸಂಸ್ಥೆಗಳಿಗೆ ಯಾವ ಅವಕಾಶವಿಲ್ಲದೆ ಇರುವದರಿಂದಲೂ ಅಂ ಥ ಜಾತಿವಾರು ರಾಜಕೀಯ ಸಂಸ್ಥೆಗಳು ಸ್ವಲ್ಪ ಮಾತ್ರಕ್ಕೂ ಸಫಲವಾಗಲಿಕ್ಕಿಲ್ಲವಾದ್ದ ರಿಂದಲೂ–ಅಂಥಾ ಸಂಸ್ಥೆಗಳ ಆವಶ್ಯಕತೆ ಯು ಇನ್ನು ಮುಂದೆ ಇರುವದಿಲ್ಲವಾದ್ದರಿಂ ದಲೂ ಎಲ್ಲಾ ಮುಸಲ್ಮಾನರು ಇನ್ನು ಮುಂ ದೆ ಸಾರ್ವಜನಿಕ ಹಿತದೃಷ್ಟಿಯ ಕಾರ್ಯ ಕ್ರಮವನ್ನು ಇಟ್ಟುಕೊಂಡು ಜಾತಿ ಮತಕ್ಕೆ ಸಂಬಂಧವಲ್ಲದ ಬೇರೆ ರಾಜಕೀಯ ಸಂಸ್ಥೆ ಗಳಲ್ಲಿ ಸೇರುವ ಕುರಿತು- ಯಾ- ಸಾಧ್ಯವಿ ದ್ದ ಪಕ್ಷದಲ್ಲಿ ಜಾತಿ ಮತ ಬೇಧವಿಲ್ಲದ ಒಂದು ಹೊಸ ರಾಜಕೀಯ ಸಂಸ್ಥೆಯನ್ನು ಸ್ಥಾಪಿಸುವ ಕುರಿತು ಎಲ್ಲಾ ಮುಸಲ್ಮಾನ್ ಬಂಧುಗಳು, ಎಲ್ಲಾ ಮುಸಲ್ಮಾನ್ ಜಮಾತ್ ಗಳು ಅಂಜುಮನ್ ಸಂಸ್ಥೆಗಳು ಸಹ ತಮ್ಮ ಅಭಿಪ್ರಾಯಗಳನ್ನು ಆ ದಷ್ಟು ಬೇಗನೇ ಇಂದಿನಿಂದ ಒಂದು ತಿಂಗಳವಳಗೆ ನನ್ನ ಮೂಲಕ ತಿಳಿಸಬೇಕಾಗಿರುತ್ತದೆ. ಇನ್ನು ಮುಂದಿನ ಪೂರ್ಣ ಪ್ರಜಾಪ್ರಭು ತ್ವದ ಸರಕಾರ (Republic) ದಲ್ಲಿ ಜಾತಿ ಯ ಪ್ರತ್ಯೇಕ ಮತದಾನ-ಯಾ- ಪ್ರಾತಿ ನಿಧ್ಯವು ಶಾಸನ ಸಭೆಗಳಲ್ಲಿಯೂ ಸ್ಥಳಿಕ ಸಂಸ್ಥೆಗಳಲ್ಲಿಯೂ ಇರಲಿಕ್ಕಿಲ್ಲ. ಆದ ಕಾರಣ ಮುಸಲ್ಮಾನರಿಗೆ ಈತನಕಯಿದ್ದ ಪ್ರತ್ಯೇಕ ಮತದಾನ ಯಾ ಪ್ರಾತಿನಿಧ್ಯದ ಹಕ್ಕು ಪೂರ್ಣ ಅಂತ್ಯವಾಗಿ ಇನ್ನು ಮುಂದೆ ಮಿಶ್ರಿತ (Joint) ಮತದಾನ ಮತ್ತು ಪ್ರಾತಿ ನಿಧ್ಯಕ್ಕೆ ಒಳಪಟ್ಟಿರುವ ಎಲ್ಲಾ ರಾಜಕೀಯ ವಿಷಯಗಳಲ್ಲಿಯೂ ಮುಸಲ್ಮಾನರು ರಾ ಷ್ಟ್ರೀಯ ಸೇವೆಯ ಬಗ್ಗೆ ಭಾಗ ವಹಿಸ ಬೇಕಾದ ಕಾಲವು ಈಗಾಗಲೇ ಬಂದಿರುತ್ತದೆ. ಆದಕಾರಣ ಇನ್ನು ಮುಂದೆ ಮುಸಲ್ಮಾನರ ಭವಿಷ್ಯವನ್ನೇ ನಿರ್ಣಯಿಸುವ ಈ ಮಹತ್ತಾ ದ ಸಂಧಿಗ್ಧ ಕಾಲದಲ್ಲಿ ಮುಸಲ್ಮಾನರು ಇದೇ ಜನವರಿ ತಾರೀಕು 26ರಿಂದ ಜಾರಿಗೆ ಬರಲಿ ಕ್ಕಿರುವ ಹೊಸ ಶಾಸನ ಸರಕಾರದ ಕಾರ್ಯ ಕ್ರಮವು ನಿರಾತಂಕವಾಗಿ ಸ್ಥಾಪಿಸಲ್ಪಟ್ಟು ಸಾರ್ವಜನಿಕ ಹಿತಸಾಧನೆಯಲ್ಲಿ ಪೂರ್ಣ ಯಶಸ್ವಿಯಾಗುವ ಬಗ್ಗೂ ಬೇರೆಯೆಲ್ಲಾ ಜಾತಿಮತದವರೊಡನೆ ಸರಿಸಮಾನರಾಗಿ ಕೂಡಿಕೊಂಡು ರಾಷ್ಟ್ರ ಸೇವೆಯನ್ನು ಸಲ್ಲಿ ಸುವ ಬಗ್ಗೂ ಕೂಡ ನಿರ್ಧಾರ ಮಾಡುವಂ ಥಾದ್ದು ಅತೀ ಅಗತ್ಯವಾಗಿರುತ್ತದೆ.

ಜಾತಿ ಮತಕ್ಕೆ ಸಂಬಂಧವಲ್ಲದ ಮತ್ತು ಎಲ್ಲಾ ಜಾತಿ ಮತದವರು ನಿರಾತಂಕವಾಗಿ ಸೇರುವರೆ ಅವಕಾಶವಿರುವ ದೀರ್ಘಕಾಲ ದಿಂದ ಸ್ಥಾಪಿಸಲ್ಪಟ್ಟು ಮತ್ತು ದೇಶಕ್ಕೆ ಮ ಹತ್ತಾದ ಸೇವೆಯನ್ನು ಸಲ್ಲಿಸಿ ಸ್ವಾತಂತ್ರ್ಯ ವನ್ನು ಸಂಪಾದಿಸಿದ ಕೊಂಗ್ರೆಸ್ಸಿನಂತಹ ಬೇ ರೆ ಯಾವ ರಾಜಕೀಯ ಸಂಸ್ಥೆಯೂ ತತ್ಕಾಲ ದಲ್ಲಿ ನಮ್ಮ ಈ ದೇಶದಲ್ಲಿ ಕಂಡು ಬರುವು ದಿಲ್ಲ. ಕಮ್ಯೂನಿಸ್ಟ್ ರಾಜಕೀಯ ಸಂಸ್ಥೆ ಯು ಮತ್ತು ಅದರ ತತ್ವಗಳು ಮುಸಲ್ಮಾನ ರಿಗೂ ಅವರ ಮತಾಚಾರದ ತತ್ವಗಳಿಗೂ ಸ ರಿಬೀಳುವಂಥವುಗಳಲ್ಲವೆಂಬುದು ಸ್ಪಷ್ಟವಾದ ಸಂಗತಿ. ನಮ್ಮ ದೇಶದಲ್ಲಿ ಕೇಂದ್ರದಲ್ಲಿ ಯೂ ಪ್ರಾಂತ್ಯಗಳಲ್ಲಿಯೂ ಕೊಂಗ್ರೆಸ್ಸು ಸಂಸ್ಥೆಯೇ ಈಗ ಅಧಿಕಾರದಲ್ಲಿದೆ. ಇನ್ನು ಮುಂದೆ ಕೂಡ ದೀರ್ಘ ಕಾಲದವರೆಗೂ ಈ ಕೊಂಗ್ರೆಸ್ ಸಂಸ್ಥೆಯೇ ಅಧಿಕಾರದಲ್ಲಿ ಇರ ಬಹುದೆಂಬುದು ಮತ್ತು ಇರುವುದು ಅವಶ್ಯ ವೆಂಬುದು ಕೂಡಾ ನಮ್ಮ ಕೋರಿಕೆ ಕೊಂಗ್ರೆ ಸ್ ಸಂಸ್ಥೆಯಲ್ಲಿ ಇತ್ತೀಚೆಗೆ ಪ್ರವೇಶಿಸಿರುವ ಕೆಲವು ಕೊರತೆಗಳನ್ನು ಆಗಾಗ್ಗೆ ಕೂಡಲೇ ಕಿತ್ತುಹಾಕಿ ದೀರ್ಘ ಕಾಲದ ಅತೀ ಶ್ರೇಷ್ಠ ವಾಗಿರುವ ಈ ರಾಷ್ಟ್ರೀಯ ಕೊಂಗ್ರೆಸ್ ಸಂಸ್ಥೆ ಯನ್ನು ಬಲಪಡಿಸಿಕೊಳ್ಳುವದು ಉತ್ತಮ. ಈ ಕೊಂಗ್ರೆಸ್ ಸಂಸ್ಥೆಯ ಸ್ಥಾನವನ್ನು ವಹಿಸಿಕೊಳ್ಳುವರೆ ಯೋಗ್ಯವಾದ ಮತ್ತು ಅದೇ ಪ್ರಮಾಣದ ಒಳ್ಳೇ ರೀತಿಯಲ್ಲಿ ದೀ ರ್ಘ ಕಾಲದಿಂದ ಸ್ಥಾಪಿಸಲ್ಪಟ್ಟ ಜಾತಿಮತ ಭೇದವಿಲ್ಲದ ಬೇರೆ ಯಾವ ರಾಜಕೀಯ ಸಂ ಸ್ಥೆಯೂ ನಮ್ಮ ಈ ದೇಶದಲ್ಲಿ ಇರುವದಿಲ್ಲ ವೆಂಬುದನ್ನು ಚೆನ್ನಾಗಿ ನೆನಪಿನಲ್ಲಿಡಬೇಕು. ಜಾತಿ ಮತ ಭೇದವಿಲ್ಲದ ಒಂದು ಹೊಸ ರಾಜಕೀಯ ಸಂಸ್ಥೆಯನ್ನು ಪ್ರತ್ಯೇಕವಾಗಿ ಸ್ಥಾಪಿಸುವದು ತತ್ಕಾಲಕ್ಕೆ ಮುಸಲ್ಮಾನರಿ ಗೇನೇ ಸಾಧ್ಯವಿಲ್ಲವೆಂಬುದು ಸ್ಪಷ್ಟವಾಗಿರು ತ್ತದೆ. ಆದರೆ ರಾಜಕೀಯ ವಿಷಯಗಳನ್ನು ಬಿಟ್ಟು ಬೇರೆ ಆವಶ್ಯಕತೆಗಳ ಬಗ್ಗೆ ಮುಸ ಲ್ಮಾನರು ಮತ್ತು ಬೇರೆ ಎಲ್ಲಾ ಜಾತಿಯವ ರು ಸಹ ತಮ್ಮ ತಮ್ಮ ಜಾತಿವಾರು ಸಂಸ್ಥೆ ಗಳನ್ನು ಪ್ರತ್ಯೇಕವಾಗಿ ಸ್ಥಾಪಿಸಿಕೊಳ್ಳುವರೆ ಅಡ್ಡಿ-ಯಾ-ಆಕ್ಷೇಪ ಇರಲಿಕ್ಕಿಲ್ಲ.

—H. S Hussain,
B A., B. L., M. L. A.
Karkal, S. Kanara.

### ಪ್ರಜಾರಾಜ್ಯ ಗೀತೆ

(ಲಾವಣಿ)

●

ಪ್ರಕಾಶವಾಯಿತು-ಪ್ರಜಾಪ್ರಭುತ್ವದ।
ಪ್ರಚಂಡ ಸೂರ್ಯೋದಯವಾಯ್ತು!॥ಅ.ಪ॥
ವಿಕಾಸಗೊಂಡಿತು-ಪ್ರಸನ್ನ ಭಾರತ।
ಹೃದಯಾಂಬುಜವತಿ ಕಳೆಯಾಂತು! ॥ಪ॥
ಸಾವಿರದೆಂಟ್ನೂರೈವತ್ತೇಳರ।
ಸ್ವಾತಂತ್ರ್ಯಾಹವದಂಕುರವು॥
ಜೀವಿಸಿ ತೊಂಭತ್ತೆರಡು ಕಾಲದಲಿ।
ಕೊಟ್ಟ ಫಲವ ಕಂಡೆವು ನಾವು ॥೧॥
ಸ್ವಾತಂತ್ರ್ಯೋತ್ಸವದೆರಡು ವತ್ಸರದ
ಮೇಲೆ ಸ್ವರಾಜ್ಯದ ಪಥದಲ್ಲಿ॥
ಖ್ಯಾತ ಭಾರತದ ಪ್ರಜಾಪ್ರಭುತ್ವದ।
ಕಹಳೆ ಮೊಳಗಿತೀ ರಾಷ್ಟ್ರದಲಿ ॥೨॥
ಸಾವಿರದೊಂಭೈನೂರೈವತ್ತನೆ।
ಜನವರಿ_ಇಪ್ಪತ್ತಾರರಲಿ॥
ಸಾವು ನೋವುಗಳ ಗಣಿಸದೆ ಬಯಸಿದ।
ಜನತಾರಾಜ್ಯವು ಬಂತಿಲ್ಲಿ!॥ ॥೩॥
ದಾದಾ, ಗೋಖಲೆ, ಬಾಲ, ಲಾಲನುತ।
ನೆಹರು, ದಾಸ, ಭೋಸರ ವಿಚಾರಿ॥
ಗಾಂಧಿ ಮಹಾತ್ಮನ ತ್ಯಾಗಯೋಗದಿಂ।
ದಾಯ್ತು ಸ್ವರಾಜ್ಯದ ಜಯಭೇರಿ ॥೪॥
ವಿನುತ ಜವಾಹರ, ಪಟೇಲ ಮುಖ್ಯರ।
ಚಂಡ ಸಾಹಸದ ಬಲದಿಂದ॥
ಜನಾಧಿಕಾರದ ಪ್ರಜಾಧಿಪತ್ಯವು।
ಭಾರತಕೊದಗಿಹುದಾನಂದ! ॥೫॥
ನಮ್ಮ ರಾಷ್ಟ್ರವಿದು_ರಾಷ್ಟ್ರಕೆ ಬರುವಾ।
ಕ್ಲೇಶ, ಕೋಪಗಳು ನಮಗೆಂದು॥
ನಮ್ಮವರೀ ನವ ಭಾರತ ರಾಷ್ಟ್ರವ।
ಕಾಪಾಡುವುದೈಕ್ಯದೆ ನಿಂದು ॥೬॥
ಜನಾನುರಂಜನ ರಾಜೇಂದ್ರನ ಘನ।
ಪದವಿಯು ರಾಷ್ಟ್ರಾಧ್ಯಕ್ಷತನ॥
ಜನತಾರಾಜ್ಯದೊಳೊಪ್ಪಿ ಶೋಭಿಸಲಿ।
ಭಾರತ ರಾಷ್ಟ್ರವು ರಾಜಿಸಲಿ ॥೭॥
ವಿರೋಧಿ ಸಂವತ್ಸರದ_ಮಾಘ-ಭೀ॥
ಷ್ಮಾಷ್ಟಮಿಯಲಿ_ಭಾರತದಲ್ಲಿ॥
ವಿರಾಜಿಸಿರುವೀ ಪ್ರಜಾಪ್ರಭುತ್ವಕೆ।
ಜಯಲಕ್ಷ್ಮಿಪ್ರಿಯನೊಲಿದಿರಲಿ! ॥೮॥
—ಪುಂಡೂರು ಲಕ್ಷ್ಮೀನಾರಾಯಣ
ಪುಣಿಂಚತ್ತಾಯ (ಕಾಸರಗೋಡು,)

---

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. 572/49

ಸಾಕ್ಷಿಯಾನೆ ರುಕ್ಮಿಣಿ ಅಮ್ಮ–ವಾದಿಳು. ...ಲ್ ಖಾದಿರ ಸಹಾ –ಪ್ರತಿವಾದಿರು. ...ದಿ ಕಡೆಯಿಂದ ಈ ಮೂಲ್ಕ ಜಾಹೀ ...ಮಾಡಿಕೊಳ್ಳುವದೇನೆಂದ್ರೆ— ...ಹಮ್ಮದ್ 3 ಕರೀಮ್- ಕಾಶಿಮನ ...ಳು, 4 ಹವ 5 ಸಾತಿಮ 6 ರಾಬಿಯ ...ನನ ಮಕ್ಕಳು. 7 ಮಿರಾ 8 ಅಬ್ಬ ... 9 ಆಸಾಕ 10 ಬುಡನ್_ಸಾಬು ಮ... 11 ಹಸನ್ 12 ಕಾಶಿಮ್-ಅಲಿ ಮ... 14 ಯಿಬ್ರಾಹಿಮ್–ಯಿಸ್ಮಾಲ್ಲಿ ಮಗ ...ಸಾಕ–ಸುಲಿಮಾನನ ಮಗ. 17 ಕು... –ಸುಲಿಮಾನನ ಮಗ.

...ಬ್ರ 1ನೇ ಶಿರೂರು ಗ್ರಾಮ— ...ನಿಳಿಗೆ ಪ್ರತಿವಾದಿರಿಂದ ಬರತಕ್ಕ ಸರ್ವ ...ಸರ್ವಧಾರಿಗಳ ಮೂಲಗೇಣಿ ಗೇಣಿ 14-3-0ನ್ನು ಬರಮಾಡಿಕೊಳ್ಳುವರೆ ...ನ ದಾವೆಯು ತಾ. 8-2-50ಕ್ಕೆ ಆಜ್ಞೆ ...ಗೆ ಯಿಟ್ಟದೆ. ಆ ಕುರಿತು ನಿಮ್ಮದೇನಾ ...ಉದಾಹರಣೆಯಿದ್ರೆ ಮೇಲ್ಕಂಡ ಕೋ ...ಮುಂದೆ ಹಗ್ಲು 11 ಗಂಟೆಗೆ ಸ್ವತಹಾ ವ ...ರ ದ್ವಾರಾ ಹಾಜರಾಗಿ ಜಾಹೀರುಮಾ ...ತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರಹಾ ...ಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡು ...ಬ ಸಂಗ್ತಿ ಈ ಮೂಲ್ಕ ತಿಳಿಯ

...G. Sanjiva Rao B A LLB,
Vakil for Plff.
...dapur


ಕೇಂದ್ರ ಸರಕಾರದಿಂದ ರಿಜಿಸ್ಟ್ರಿಸಲ್ಪಟ್ಟ ನಂ. 4672

ಭಾರತದ ಪ್ರಜಾಪ್ರಭುತ್ವದ ಸ್ಮರಣಾರ್ಥವಾಗಿ

ರೂ. 24,000

ಎಲ್ಲ ಸರಿಯಾದ 20 ಉತ್ತರಗಳಿಗೆ ಹಂಚಲಾಗುವುದು.

ರೂ. 1200/- ಎಲ್ಲ ಸರಿಯಾದ ಪ್ರತಿ ಉತ್ತರಕ್ಕೆ
ರೂ. 100/- ಎರಡು ಸಾಲು ಸರಿ ಇರುವ ,,
ರೂ. 20/- ಒಂದು ಸಾಲು ಸರಿ ಇರುವ ,,
} ಗ್ಯಾರಂಟಿ ಇದೆ.

ಅತ್ಯಧಿಕ ಉತ್ತರ ಕಳುಹಿಸುವವರಿಗೆ ರೂ. 500 ಬಹುಮಾನದ ಗ್ಯಾರಂಟಿಯಿದೆ.

ಇಲ್ಲಿ ತೋರುವ ಚೌಕದಲ್ಲಿ 8ರಿಂದ 23ರ ವರೆಗಿನ ಅಂಕೆಗಳನ್ನು ಉದ್ದಕ್ಕೆ,ಅಡ್ಡಕ್ಕೆ ಅಥವಾ ಮೂಲೆಯಿಂದ ಮೂಲೆಗೆ ಕೂಡಿಸುವಾಗ ಉತ್ತರ 62 ಬರುವಂತೆ ತುಂಬಿಸಿರಿ. ಒಂದು ಅಂಕೆಯನ್ನು ಒಮ್ಮೆ ಮಾತ್ರ ಬರೆಯಬಹುದು.

ಟಪ್ಪಾಲಿಗೆ ಹಾಕುವ ಕೊನೆಯ ತಾ. 6-2-1950. ಉತ್ತರ ತಾ.16-2-1950.

ಪ್ರವೇಶ ಧನ: ಪ್ರತಿ ಉತ್ತರಕ್ಕೆ ರೂ. 1/- 3 ಉತ್ತರಗಳಿಗೆ ರೂ. 2. ಎಂಟು ಉತ್ತರಗಳಿಗೆ ರೂ 5.

ನಿಬಂಧನೆ: ಮೇಲೆ ನಮೂದಿಸಿದ ದರದಲ್ಲಿ ಪ್ರವೇಶ ಧನದೊಂದಿಗೆ ಖಾಲಿ ಕಾಗದದಲ್ಲಿ ಎಷ್ಟೂ ಉತ್ತರ ಕಳುಹಬಹುದು. ಹಣವನ್ನು ಮನಿಯಾರ್ಡರ್ ಅಥವಾ ಪೋಸ್ಟಲ್ ಆರ್ಡರ್ ಮೂಲಕ ಕಳುಹಿಸಬೇಕು. ರೂ. 1200 ಕನಿಷ್ಟ ಬಹುಮಾನವನ್ನು ದೆಹಲಿಯ ಪ್ರಸಿದ್ಧ ಬೇಂಕೊಂದರಲ್ಲಿ ಭದ್ರಪಿಟ್ಟಿರುವುದಕ್ಕೆ ಪೂರ್ಣ ಸರಿಹೋಲುವ ಪ್ರತಿ ಉತ್ತರಕ್ಕೆ ಕೊಡುವ ಗ್ಯಾರಂಟಿಯಿದೆ. ಉತ್ತರದ ಫಲಿತಾಂಶ ಬೇಕಿದ್ದರೆ, ನಿಮ್ಮ ವಿಳಾಸ ಬರೆದು, ಸ್ಟಾಂಪು ಅಂಟಿಸಿದ ಲಕೋಟೆ ಕಳಿಸಿರಿ. ವ್ಯವಸ್ಥಾಪಕರ ನಿರ್ಧಾರವೇ ಕೊನೆಯದು ಮತ್ತು ನ್ಯಾಯಬದ್ಧವಾದದ್ದು.

ನಿಮ್ಮ ಉತ್ತರ ಮತ್ತು ಪ್ರವೇಶಧನ ಇವರಿಗೆ ಕಳುಹಿಸಿರಿ.

ಕಳೆದ ಬಗೆಟು 58ರ ವಿವರ

| | | | |
|---|---|---|---|
| 8 | 11 | 18 | 21 |
| 22 | 20 | 7 | 9 |
| 15 | 17 | 14 | 12 |
| 13 | 10 | 19 | 16 |

THE ORGANIZER.

Red Fort Trading Co, (21) Regd.


## ಜಿಲ್ಲಾ ಸಮಾಚಾರ

**ಮಣಿಪುರ—** ನೇತಾಜಿ ಸುಭಾಸ್ ಚಂದ್ರಭೋಸರ ಜನ್ಮದಿನಾಚರಣೆಯು ಇದೇ ತಾ. 21ರಲ್ಲು ಮಣಿಪುರ ನೇತಾಜಿ ಯುವಕ ಸಂಘದ ಆಶ್ರಯದಲ್ಲಿ ರಾಷ್ಟ್ರಧ್ವಜವಂದನೆ, ಮಕ್ಕಳ ಮೆರವಣಿಗೆ, ಸುಣ್ಣಪಾದೆ ಮೈದಾನ ನಲ್ಲಿ ಶ್ರೀ ಎಮ್. ಕೃಷ್ಣಯ್ಯ ಪಟ್ಟೆರ ಅಧ್ಯಕ್ಷತೆ ಯಲ್ಲಿ ಸಾರ್ವಜನಿಕ ಸಭೆ, ಭಾಷಣಗಳಿಂದ ಸಾಂಗವಾಗಿ ಜರಗಿತು.

**ಕುಂಬಳೆ—** ಇಲ್ಲಿಯ ಜಾತ್ರೆಯ ಪ್ರಯುಕ್ತ ಇದೇ ತಾ. 16ರಿಂದ 18ರ ತನಕ ವಸ್ತು ಪ್ರದರ್ಶನ ನಡೆಯಿತು. ಕೃಷಿಕಾರ್ಯಾಭಿವೃದ್ಧಿ ಶಾಖೆಯ ನೇತೃತ್ವದಲ್ಲಿ. ಪುತ್ತೂರು ಡಿವಿಜನಲ್ ಆಫೀಸರ್ ಶ್ರೀ ಎಚ್. ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ಕೃಷ್ಯಾಭಿವೃದ್ಧಿ ಕಮಿಟಿಯ ಸಭೆ ಜರಗಿತು.

**ಸುರತ್ಕಲ್—** ವಿದ್ಯಾದಾಯಿನಿ ಹೈಸ್ಕೂಲ್, ಸುರತ್ಕಲ್ ಇದರ ಸ್ಕೂಲ್‌ಡೇ ಸಮಾರಂಭವು ಇದೇ ತಾ. 28ನೇ ಶನಿವಾರ ಸಂಜೆ 5 ಗಂಟೆಗೆ ಶಾಲಾ ವಠಾರದಲ್ಲಿ ಜರಗ ಲಿರುವುದು.

**ಬಾರಕೂರು-** ಇಲ್ಲಿಯ ಶ್ರೀ ಭಂಡಾ ರಕೇರಿ ಮಠದಲ್ಲಿ ಇದೇ ತಾ. 25, 26, 27ರ ಲ್ಲಿ ಸಂಪ್ರದಾಯ ಪ್ರಕಾರ ಸದ್ವಿದ್ಯಾ ಪುರದ ಸ್ವಾಮಿಗಳವರ ನೇತೃತ್ವದಲ್ಲಿ ಶ್ರೀ ಮನ್ಮಧ್ವ ರಾದ್ಧಾಂತ ಸಂವರ್ಧಕ ಸಭೆಯ ಏಳನೆ ಅಧಿ ವೇಶನವು ಜರಗಲಿರುವುದು.

**ಪುತ್ತೂರು-** ಈ ತಾಲೂಕಿನ ಆಸು ಪಾಸುಗಳಲ್ಲಿ ಸಿಡುಬು ಪ್ರಾರಂಭವಾಗಿ ಇಪ್ಪ ತ್ತರಿಗೆ ತಗಲಿ ಮೂವರ ಮರಣವಾಗಿದೆಯೆಂ ದು ಸುದ್ದಿ ಇದೆ.

**ಕಾಸರಗೋಡು-** ಪೆರ್ಲ ಸತ್ಯನಾರಾ ಯಣ ಹೈಸ್ಕೂಲಿನ ಅಧ್ಯಾಪಕರೂ, ವಿದ್ಯಾ ರ್ಥಿ ವಿದ್ಯಾರ್ಥಿನಿಯರೂ ತಾ 18ರಲ್ಲಿ ಸಭೆ ಗೂಡಿ ಶ್ರೀ ಪಂಡಿತ ಮುಳಿಯ ತಿಮ್ಮಪ್ಪ ಯ್ಯನವರ ನಿಧನದ ಬಗ್ಗೆ ಸಂತಾಪ ಸೂಚಕ ನಿರ್ಣಯವನ್ನು ಮಾಡಿದರು.

**ಕಟಪಾಡಿ** ಇದೇ ತಾ 25 ಯಾ 26 ರಲ್ಲಿ ಕಟಪಾಡಿ ಸಬ್ ಪೋಸ್ಟಾಫೀಸಿನಲ್ಲಿ ಹೊಸತಾಗಿ ಟೆಲಿಗ್ರಾಫ್ ದಾಖೆ ತೆರೆಯಲ್ಪ ...

ಜನವರಿ ತಾ. 26ನೇ ದಿನ ನಮ್ಮ ದೇಶದ ಮುಂದಿನ ಆಡಳಿತ ಕಾರ್ಯಕ್ರಮದ ಬಗ್ಗೆ ಘಟನಾ ಸಮಿತಿಯವರು ಸುಮಾರು 2½ ವರುಷಗಳಿಂದ ಶ್ರಮಪಟ್ಟು ತಯಾರಿಸಿ ಮಂಜೂರಾದ ರಚನೆಯು ಜ್ಯಾರಿಗೆ ಬರಲಿರುವುದು. ನಮ್ಮ ದೇಶದ ಮುಂದಿನ ಆಡಳಿತೆಯು ಘಟನಾ ಬಂಧನೆಯು ಸಾರ್ವಭೌಮ ಪ್ರಜಾ ಪ್ರಭುತ್ವದ ಧ್ಯೇಯದಿಂದ ತಯಾರಾದ್ದರಿಂದ ಅದು ಯಾವ ರೂಪದ್ದು, ಅದರಲ್ಲಿ ಅಡಕವಾಗಿರುವ ತತ್ವಗಳೇನು, ಎಂಬುದನ್ನು ತಿಳಿದುಕೊಳ್ಳುವುದು ಅಗತ್ಯ. ಮಾತ್ರವಲ್ಲ, ಇದೇ ಸುಸಮಯವಾಗಿದೆ.

ನಮ್ಮ ರಾಜ್ಯವು 'ಇಂಡಿಯನ್ ಯೂನಿಯನ್' ಎಂದು ಕರೆಯಲ್ಪಡುವುದು. ನಮ್ಮ ರಾಜ್ಯದ ಕಾರಭಾರವು 'ಸ್ವತಂತ್ರ ರಿಪಬ್ಲಿಕ್' ಎಂಬ ಶೀರೋನಾಮದಿಂದ ಕರೆಯಲ್ಪಡುವುದು. ಇದಕ್ಕೆ ಮುಖ್ಯಾಧಿಕಾರಿಯಾಗಿ ಒಬ್ಬ ಅಧ್ಯಕ್ಷನಿರುವನು. ಈ ವ್ಯಕ್ತಿಯು ಚುನಾಯಿತನಾಗಬೇಕು. ಈ ಮೂಲಕ ಈ ಹಿಂದೆ ನಮ್ಮ ಮೇಲೆ ಅಧಿಕಾರ ನಡೆಸಿಕೊಂಡು ಬಂದ ಬ್ರಿಟಿಷ್ ಮಹಾರಾಜರ ಸಂಪೂರ್ಣ ಅಧಿಕಾರವನ್ನು ಕಿತ್ತೊಗೆಯಲಾಗಿದೆ. ನಾವು ಬ್ರಿಟಿಷರ ಅಧಿಕಾರವನ್ನು ತ್ಯಜಿಸಿದ್ದೇವೆ ಹೊರತು ಅವರ ಸಂಪರ್ಕವನ್ನು ಸಂಪೂರ್ಣ ಕಡಿಯಲಿಲ್ಲ. ಕಾಮನ್‌ವೆಲ್ತ್ ಎಂಬ ರಾಷ್ಟ್ರಗಳ ಕೂಟಕ್ಕೆ ನಾವು ಸೇರಿಕೊಂಡಿರುವೆವು. ಅಂಥಾ ಕೂಟದ ಒಂದು ಗೂಡುವಿಕೆಯ ಹೆಗ್ಗುರುತಾಗಿ ಬ್ರಿಟಿಷ್ ಸಾಮ್ರಾಟರನ್ನು ಇಂಗೊಡಿಸುವರೆ ಮಾತ್ರ ಒಪ್ಪಿಕೊಂಡಿದ್ದೇವೆ. ಅವರಿಗೆ ಅದರಲ್ಲಿ ಏನೂ ಅಧಿಕಾರವಿಲ್ಲದಿರುವುದರಿಂದ ನಮಗೇನೂ ಬಾಧಕವಿಲ್ಲ.

ಇಂಡಿಯನ್ ಯೂನಿಯನ್ ಎಂಬುದು ಅನೇಕ ಪ್ರಾಂತಗಳು ಅಥವಾ ಸ್ವತಂತ್ರ ರಾಜ್ಯಗಳಿಂದ ಕೂಡಿದ ಒಂದು ಒಕ್ಕೂಟ ಸರಕಾರವು. ಸುಮಾರು 500ಕ್ಕೆ ಮಿಕ್ಕಿ ಇರುವ ದೊಡ್ಡ ಮತ್ತು ಸಣ್ಣ ರಾಜ್ಯಗಳೆಲ್ಲಾ ಬದಲಾವಣೆಗಳನ್ನು ಹೊಂದಿರುವವು. ಕೆಲವು ಸಣ್ಣ ರಾಜ್ಯಗಳೆಲ್ಲಾ ಒಂದಾಗಿ ಪ್ರಾಂತಗಳಾಗಿವೆ. ಕೆಲವು ಚಿಕ್ಕ ಪುಟ್ಟ ರಾಜ್ಯಗಳು ನೆರೆಯ ಪ್ರಾಂತಗಳೊಳಗೆ ಸೇರಿಕೊಂಡು, ಕೆಲವು ದೊಡ್ಡ ರಾಜ್ಯಗಳು ಪ್ರಾಂತಗಳಾಗಿ ಮಾಡಲ್ಪಟ್ಟವು. ನಮ್ಮ ದೇಶದ ವಿಭಾಗ ಕಾಲದಲ್ಲಿ ಒಂಭತ್ತು ಪ್ರಾಂತಗಳೂ ನಾಲ್ಕು ಕಮೀಶನರ ಬಳಿ ಪ್ರಾಂತ್ಯಗಳೂ 500ಕ್ಕೆ ಮಿಕ್ಕಿದ ರಾಜ್ಯಗಳೂ ಇದ್ದವು. ಈಗಿನ ರೀತಿಯಂತೆ ಇವೆಲ್ಲ ಮಾಯವಾಗಿ ಹದಿನೇಳು ಪ್ರಾಂತ ವ ರಾಜ್ಯಗಳೂ ಕೇಂದ್ರ ಸರಕಾರದಿಂದ ಆಡಳಿತ ನಡೆಸಲ್ಪಡುವ ಹನ್ನೆರಡು ಚಿಕ್ಕ ಪ್ರಾಂತಗಳೂ ಇವೆ.

ಈ ಎಲ್ಲಾ ರಾಷ್ಟ್ರದ ಪ್ರಾಂತಗಳಿಗೂ ಮುಖ್ಯಾಧಿಕಾರ ಅಥವಾ ಮೇಲಧಿಕಾರ ನಡೆಸುವರೆ ಒಂದು ಕೇಂದ್ರ ಸರಕಾರವಿರುವದು.




ಶರೀರದಲ್ಲಿಯ ಅಸಹ್ಯ ಉಷ್ಣತೆಯನ್ನು ಇದರಿಂದಲೇ ತೆಗದು ಹಾಕಿರಿ

PEARL Kadha PURE HERBAL TONIC

ಪರ್ಲ್ ಕಾಢಾ ಶರೀರದ ಒಳಗಿನ ಮತ್ತು ಹೊರಗಿನ ಉರುವನ್ನು ತೆಗದು ಹಾರ್ ಪ್ರಕೃತಿಯನ್ನು ತಂಪಾಗಿಡುವದು, ಅಪಚನ ಅಜೀರ್ಣವನ್ನು ಸರಿಪಡಿಸುವದು, ಶಾರೀರಿಕ ಮತ್ತು ಮಾನಸಿಕ ಶಕ್ತಿಯನ್ನು ಬೆಳೆಸುವದು ಧಾತು ಸ್ಥಾನದಲ್ಲಿಯ ಉಷ್ಣತೆಯನ್ನು ಹೋಗಲಾಡಿಸಿ ಪುಷ್ಟಿಕರ ಮಾಡುವದು

ನಿಮ್ಮ ಹತ್ತಿರದ ಕೆಮಿಸ್ಟರ ಕಡೆಯಿಂದ ಇಂದೇ ಒಂದು ಬಾಟಲಿಯನ್ನು ತಂದು ಸೇವಿಸಲು ಪ್ರಾರಂಭಿಸಿರಿ

ಪರ್ಲ್ ಎಂಡ್ ಕಂಪನಿ
ಮುಂಬಯಿ ೨

## ನಮ್ಮ ರಾಜ್ಯ ಘೋಷಣೆ

ಲೇಖಕರು:- ಶ್ರೀ ... ಶಾಸ್ತ್ರೀ, ಬಿ. ಎ.

ಅದರ ಮುಖ್ಯಸ್ಥನು ಅಧ್ಯಕ್ಷನೆಂದು ಕರೆಯಲ್ಪಡುವನು. ಈತನು ಬಹುಮತದಿಂದ ಚುನಾಯಿತನಾಗಬೇಕು. ಈತನು ಎಲ್ಲಾ ಪ್ರಾಯಸ್ಥ ಮೆಂಬರರಿಂದ ಬಹುಮತ ಪಡೆದು ನೇರವಾ ಚುನಾವಣೆಯಾಗುವದಲ್ಲ. ಜನರಿಂದ ಓಟು ಪಡೆದು ಚುನಾಯಿತರಾದ ಕೇಂದ್ರ ಶಾಸನ ಸಭೆಗಳ ಮತ್ತು ರಾಷ್ಟ್ರಗಳ ಸಭೆಯ ಮೆಂಬರರಿಂದ ಬಹುಮತದಿಂದ ಚುನಾಯಿತನಾಗಬೇಕು. ಓಟುಕೊಡುವರೆ ಅರೆವಾಸಿ ವೋಟಿನ ಹಕ್ಕು ಕೇಂದ್ರ ಸಭೆಗೂ ಅರೆವಾಸಿ ಓಟು ಎಲ್ಲಾ ಪ್ರಾಂತಗಳ ಸಭೆಗೆ ಒಟ್ಟುಕೂಡಿಯೂ ಇರುವದು. ಹೀಗೆ ಚುನಾಯಿತನಾದ ಅಧ್ಯಕ್ಷನಿಗೆ ಒಂಭತ್ತು ವರುಷದ ವರೆಗೆ ಅವಧಿಯಿರುವದು. ಅನಂತರ ಪುನಃ ಚುನಾವಣೆಗೆ ಉಮೇದ್ವಾರನಾಗಿ ನಿಲ್ಲುವ ಹಕ್ಕು ಅತನಿಗಿರುವದು. ಅಧ್ಯಕ್ಷನು ರಶ್ಯದ ಸ್ಟಾಲಿನ್ ಅಥವಾ ಸ್ಪೆಯಿನಿನ ಫ್ರಾಂಕೋನಂತೆ ಸರ್ವಾಧಿಕಾರಿಯಲ್ಲ. 'ಸ್ವೇಚ್ಛೆಯಿಂದ ವರ್ತಿಸಲು ಸಾಧ್ಯವಿಲ್ಲ. ಈತನಿಗೆ ಕೆಲವು ಅಧಿಕಾರಗಳನ್ನು ಕೊಟ್ಟಾಗ್ಯೂ, ಮಂತ್ರಿಗಳ ಉಪದೇಶದಂತೆ ಶಾಸನಗಳಿಗೆ ಒಳಪಟ್ಟು ಇತರ ಪ್ರಜಾಪ್ರಭುತ್ವ ದೇಶಗಳ ಮುಖ್ಯಾಧಿಕಾರಿಗಳು ನಡೆದು ಬಂದ ಕ್ರಮವನ್ನು ಅನುಸರಿಸಿ ನಡೆಯತಕ್ಕದ್ದು. ಈ ಅಧ್ಯಕ್ಷನಿಗೆ ಒಬ್ಬ ಉಪ್ತಿನ ಅಧ್ಯಕ್ಷ (ಉಪಾಧ್ಯಕ್ಷ) ನಿರುವನು. ಆತನನ್ನು ಕೇಂದ್ರ ಶಾಸನ ಸಭೆಯೇ ಚುನಾಯಿಸುವದು.

ಕೇಂದ್ರ ಶಾಸನ ಸಭೆಯು, ಅಂದರೆ ಇಂಡಿಯನ್ ಯೂನಿಯನ್ ಪಾರ್ಲಿಮೆಂಟು ಇತರ ಪ್ರಜಾಪ್ರಭುತ್ವ ಸರಕಾರಗಳಿರುವ ಇಂಗ್ಲಂಡು, ಅಸ್ಟ್ರೇಲಿಯ, ಕೆನಡಾ ಮತ್ತು ಅಮೇರಿಕ ದೇಶಗಳಲ್ಲಿರುವಂತೆ ಎರಡು ಸಭೆ ಅಥವಾ ಮನೆಗಳಿಂದ (House) ಕೂಡಿರುವದು. ಇವುಗಳೆಂದರೆ ಪೈಕಿ ಒಂದು ಕೌನ್ಸಿಲ್ ಅಫ್ ಸ್ಟೇಟು (Council of State) ಎಂದೂ ಇನ್ನೊಂದು ಹೌಸು ಅಫ್ ಪೀಪಲ್ (House of People) ಎಂದೂ ಕರೆಯಲ್ಪಡುವವು. ಇವುಗಳ ಪೈಕಿ ಒಂದನೆಯದಾದ ಕೌನ್ಸಿಲು ಅಫ್ ಸ್ಟೇಟಿಗೆ 250 ಮೆಂಬರರಿರುವರು. ಈ ಎಲ್ಲಾ ಮೆಂಬರರೂ ಚುನಾಯಿತರಲ್ಲ. ಇವರ ಪೈಕಿ ಹನ್ನೆರಡು ಮೆಂಬರರನ್ನು ಅಧ್ಯಕ್ಷರು ನೇಮಿಸುವದಾಗಿದೆ. ನೇಮಕ ಮಾಡುವಾಗ ಅಧ್ಯಕ್ಷರು ಅವರ ಕಲಾ, ವಿದ್ವತ್ ಅಥವಾ ಇತರ ತರದ ಪ್ರವೀಣತೆಯ ಆಧಾರವನ್ನು ಗಣನೆಗೆ ತೆಕ್ಕೊಳ್ಳಬೇಕಾಗಿಯದೆ. ಮಿಕ್ಕುಳಿದ ಮೆಂಬರರನ್ನು ಪ್ರಾಂತೀಯ ಎಸೆಂಬ್ಲಿ (Lower House) ಗಳು ಒಂದು ಹೊಸ ವಿಧಾನದಲ್ಲಿ ಚುನಾಯಿಸುವದಾಗಿದೆ. ಇದರ ಪ್ರಕಾರ ಪ್ರತಿಯೋರ್ವ ಓಟರನೂ ತನಗಿರುವ ಒಂದೇ ಓಟನ್ನು ಬದಲಾಯಿಸಿ ಬೇಕಾದ ಜನರಿಗೆ ಚುನಾಯಿಸಿ ಕೊಡಬಹುದು. ಈ ತರದ ದಾಮಾಷಾಯದ ಓಟಿನಿಂದ ಒಂದು ಪ್ರಯೋಜನವಿದೆ. ಇದರಿಂದ ಅಲ್ಪ ಸಂಖ್ಯಾತರಿಗೆ ಚುನಾಯಿತರಾಗುವರೆ ಎಡೆ ಉಂಟು. ಒಬ್ಬ ಉಮೇದ್ವಾರನ ಬೆಂಬಲಿಗರು ಅನೇಕರಿದ್ದರೂ ಅವರು ಬೇರೆ ಬೇರೆ ಕಡೆಗಳಲ್ಲಿ ಚೆಲ್ಲಿ ಹೋಗಿ ಇರುವುದರಿಂದ ಅತನಿಗೆ ಸಾಕಷ್ಟು ಓಟು ಯಾವದಾದರೊಂದು ಕಡೆಯಲ್ಲಿ ಎಂದಿಗೂ ದೊರೆಯಲಾರದ ಸಂದರ್ಭದಲ್ಲಿ ಈ ಕ್ರಮವು ಸಹಾಯಕರವಾದದ್ದು. ಈ ಕೌನ್ಸಿಲಿಗೆ ಪ್ರಾಂತಗಳಿಂದ ಬರತಕ್ಕ ಮೆಂಬರರ ಸಂಖ್ಯೆಯು ಜನ ಸಂಖ್ಯೆಯನ್ನು ಹೊಂದಿರುವದು. ಒಂದು ಮಿಲಿಯ ಜನರಿಗೆ ಒಂದು ಪ್ರತಿನಿಧಿಯಂತೆ ಇದೆ. ಜನಸಂಖ್ಯೆಯು ಐದು ಮಿಲಿಯಕ್ಕೆ ಜಾಸ್ತಿ ಇದ್ದಲ್ಲಿ ಹಾಗೆ ಜಾಸ್ತಿ ಇರುವ ಪ್ರತಿ ಎರಡು ಮಿಲಿಯ ಜನರಿಗೆ ಒಂದು ಪ್ರತಿನಿಧಿಯಂತೆ ಆರಿಸುವದಾಗಿದೆ. ಈ ಕೌನ್ಸಿಲಿಗೆ ಜೀವಮಾನದ ಅವಧಿಯನ್ನು ಕೊಡಲಿಲ್ಲ. ಇದು ಯಾವ ಕಾಲದಲ್ಲೂ ಒಂದೇ ಸವನೆ ಪೂರ್ಣ ಬರಖಾಸ್ತು ಆಗತಕ್ಕದ್ದಲ್ಲ. ಪ್ರತಿ ಎರಡು ವರುಷಕ್ಕೆ ⅓ ಅಂಶದ ಮೆಂಬರರು ಮಾತ್ರ ಹೊರ ಹೋಗಿ ಬೇರೆ ಪ್ರತಿನಿಧಿಗಳು ಅವರ ಸ್ಥಾನಕ್ಕೆ ಬರುವರು. ಇದು ಆಸ್ಟ್ರೇಲಿಯ ಮತ್ತು ಅಮೇರಿಕದ ಸಿನೆಟು ಸಭೆಗಳನ್ನು ಹೋಲುತ್ತದೆ.

ಎರಡನೇ ಸಭೆಯಾದ ಹೌಸ್ ಅಫ್ ದಿ ಪೀಪಲ್ (The House of the People) ಇದಕ್ಕಿಂತ ದೊಡ್ಡದಾಗಿದೆ. ಇದರಲ್ಲಿ ಒಟ್ಟು 500 ಪ್ರತಿನಿಧಿಗಳಿಗೆ ಮೀರದೆ ಮೆಂಬರರಿರಬೇಕು. ಪ್ರಾಯಸ್ಥ ಮೆಂಬರರೆಲ್ಲರೂ ಓಟುಕೊಟ್ಟು ಬಹುಮತದಿಂದ ಚುನಾಯಿಸುವದಾಗಿದೆ. ಐದು ಲಕ್ಷ ಜನರಿಗೆ ಒಂದು ಪ್ರತಿನಿಧಿಯಂತೆ ಚುನಾಯಿಸುವದಾಗಿದೆ. ಈ ಸಭೆಯ ಜೀವಾವಧಿಯು ಐದು ವರುಷಗಳ ವರೆಗೆ ಮಾತ್ರ. ಈ ಚುನಾವಣೆಗೆ ಜಾತಿ, ಮತ ಮತ್ತು ವರ್ಣಭೇದಗಳಿಲ್ಲ. ಎಲ್ಲರೂ ಸಮಾನರೆಂದೇ ಎಣಿಸಲ್ಪಡಬೇಕಾಗಿದೆ. ಇದುವರೆಗೆ ಪ್ರತ್ಯಪ್ರತ್ಯೇಕ ಮೆಂಬರರನ್ನು ಆರಿಸುವ ಹಕ್ಕು ಜಾತಿ, ಮತ ಮತ್ತು ಪಂಗಡಗಳಿಗೆ ಕೊಟ್ಟು ಬ್ರಿಟಿಷರು

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:- ಆಯುರ್ವೇದ ಭೂಷಣ ಯಂ. ಸಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ— ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ವಾಕಿಸ್ಟರು:— ಡಾ। ಎ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಚ್ಚು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:— ಹುಬ್ಬಳ್ಳಿ ಧಾರವಾಡ,— ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ಬಿಜಾಪುರ— ... ಬಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ
ದಾವಣಗೇರಿ:— ದಾವಣಗೇರಿ ಪ್ರೆಸ್ಸ್ ಆರ್ ಎಲ್ ... , ಹಾವೇರಿ, ಬ್ಯಾಡಗಿ

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವದು, ಹಕೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ— ಬೆಲೆ; ರೂ 3-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ. ೯- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

Mrs. D. DEVEE, F. US (N. J.)
Tollygunge CALCUTTA
ಸ್ಟಾಕಿಸ್ಟರು: ಕಹಾಕಂಪೆನಿ, ಮಂಗಳೂರು

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ
'ಮಹಾಜನ'
ಕಾಸರಗೋಡು
ಇವರ ತಯಾರಿಕೆಗಳನ್ನು ವಿಚಾರಿಸಿರಿ.

ನಮ್ಮ ಒಳ್ಳೆಟ್ಟನ್ನೇ ಬಡಿಗೊತ್ತಿದ್ದರು. ಇದರಿಂದ ನಾನಾತರದ ಭೇದಭಾವಗಳು ವೈಶಮ್ಯಗಳುಂಟಾಗಿ ನಮ್ಮ ಏಳಿಗೆಗೆ ಹಾನಿ ಬಂದಿದೆ. ಈಗ ಅದೆನ್ನೆಲ್ಲಾ ವಿಸರ್ಜಿಸಲಾಗಿದೆ. ಆದರೆ ಶೆಡ್ಯೂಲ್ಡು ಕಾಸ್ಟು ಅಂದರೆ ಹರಿಜನರು ಮತ್ತು ಹಿಂದುಳಿದ ಜನಾಂಗಕ್ಕೆ ಮಾತ್ರ ಸ್ಥಾನಗಳನ್ನು ಕಾದಿಡಲಾಗಿದೆ. ಇದು ಕೂಡಾ ಬರೇ ಹತ್ತು ವರುಷಗಳ ಮಟ್ಟಿಗಾಗಿದೆ. ಎಂಗ್ಲೋ ಇಂಡಿಯನ್ ಇವರ ಜನಸಂಖ್ಯೆಯು ಕಡಮೆಯಾದ್ದರಿಂದಲೂ ಮತ್ತು ಅನೇಕ ಕಡೆಗಳಲ್ಲಿ ಚೆಲ್ಲಿ ಇರುವುದರಿಂದಲೂ ಇವರಿಗೆ ಸಾಕಷ್ಟು ಮೆಂಬರಿಕೆ ದೊರೆಯದೆ ಇರುವಲ್ಲಿ ಅಧ್ಯಕ್ಷರು ಇವರ ಸ್ಥಾನಕ್ಕೆ 2 ಜನರನ್ನು ನೇಮಿಸಬಹುದಾಗಿದೆ. ಈ ರಿಯಾಯತಿಯು ಸಹಾ ಬರೇ ಹತ್ತು ವರುಷಗಳ ವರೆಗೆ ಮಾತ್ರವಿರುವದು. ಹಣ ಕಾಸಿನ ವ್ಯವಹಾರ ಹೊರತು ಬಾಕಿ ಎಲ್ಲಾ ವಿಷಯಗಳಲ್ಲಿ ಎರಡು ಸಭೆಗಳಿಗೂ ಸರಿಸಮಾನವಾದ ಹಕ್ಕು ವ ಅಧಿಕಾರವಿರುವದು. ಪ್ರಜಾಪ್ರಭುತ್ವ ಇರುವ ಇತರ ದೇಶಗಳಲ್ಲಿ ನಡೆದು ಬಂದ ಪದ್ಧತಿಯಂತೆ ಹಣಕಾಸಿನ ವ್ಯವಹಾರದ ಮಟ್ಟಿಗೆ ಕೆಳಗಿನ ಮನೆಗೆ (Lower House) ಸಂಪೂರ್ಣ ಅಧಿಕಾರವಿದೆ. ಈ ಸಭೆಯು ಪ್ರಾಯಸ್ಥ ಎಲ್ಲಾ ಮೆಂಬರರ ಓಟುಗಳಿಂದ ಚುನಾಯಿಸಲ್ಪಡುವ ಕಾರಣ ಇದನ್ನೇ ಮತದಾರರ ಪ್ರತಿನಿಧಿ ಎಂದು ಎಣಿಸಲಾಗಿದೆ. ಈ ಎರಡು ಸಭೆಗಳೊಳಗೆ ಭೇದ ಅಥವಾ ಜಿಜ್ಞಾಸಗಳು ಬಂದಲ್ಲಿ ಎರಡು ಸಭೆಯವರೂ ಒಟ್ಟು ಕೂಡಿದ ಸಮ್ಮೇಳನದಲ್ಲಿ ಚರ್ಚಿಸಿ ಬಹುಮತದಂತೆ ತೀರ್ಮಾನಿಸುವದಾಗಿದೆ.

ನಮ್ಮ ಅಧ್ಯಕ್ಷರು ಫ್ರೆಂಚು ಅಧ್ಯಕ್ಷರ ಹಾಗೆ ಬರೇ ಹೆಸರಿನ ಅಧ್ಯಕ್ಷರಲ್ಲ. ಇವರಿಗೆ ಕೆಲವು ಅಧಿಕಾರಗಳಿವೆ. ಪಾರ್ಲಿಮೆಂಟು ಸಭೆ ಸೇರುವರೆ ತಡವಿರುದಾದರೆ ಓರ್ಡಿನೆನ್ಸು ಮೂಲಕ ಕೆಲವು ಕಾನೂನುಗಳನ್ನು ಜ್ಯಾರಿಗೆ ತರುವ ಹಕ್ಕಿದೆ. ದೇಶದಲ್ಲಿ ಅವಾಂತರಗಳು, ಶಾಂತಿಭಂಗ ಅಥವಾ ರಕ್ಷಣೆಗೆ ತೊಂದರೆಯಾದಲ್ಲಿ ಅಥವಾ ಇನ್ನಿತರ ಅವಘಡಗಳನ್ನು ಎದುರಿಸುವ ಅಧಿಕಾರವಿದೆ. ಈ ಅಧಿಕಾರವು ಅಧ್ಯಕ್ಷರಿಗೆ ಇರುವದಾದರೂ ಅದು ಪದ್ಧತಿ ಪ್ರಕಾರ ಮಂತ್ರಿಗಳ ಆಲೋಚನೆ ಮೇರೆಗೇನೇ ಚಾಲೂಗುವುದು.


## Notice.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. E. P. 574/49

O. S. 66/1945

ಅರ್ಜಿದಾರ— ಬಿ. ಎಸ್. ಸೂರಪ್ಪ ಶೆಟ್ಟಿ (Assignee D. H.)

ಎದ್ರಿರು—ಕಾವೇರಮ್ಮ ಕೂಡಾ (Judgement debtors)

ಮೇಲಣ ಡಿಕ್ರಿಯ ಪ್ಲೆಂಟಿವಾದಿ ಉಡುಪಿ ತಾಲ್ಕು ಶೀರೂರುಗ್ರಾಮದಲ್ಲಿರುವ ಸುಬ್ಬಕ್ಕ ಶೆಡ್ತಿರ ಮಗ ರಾಮಣ್ಣ ಶೆಟ್ಟಿ 1, ಮತ್ತು ಉಡ್ಪಿ ತಾಲ್ಕು ಬಡಾನಿಡಿಯೂರು ಗ್ರಾಮದಲ್ಲಿರುವ ಮಂಜುನಾಥ ಉಡ್ಪರ ವಿಧವೆ ಕಾವೇರಮ್ಮ 1,(1ನೇ ಪ್ರತಿವಾದಿ) ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಅರ್ಜಿದಾರನ ಹೆಸರಿಗಾದ ಡಿಕ್ರಿ ಟ್ರಾನ್ಸ್ಫರ್ ಮಂಜೂರು ಮಾಡುವ ಬಗ್ಗೂ, ಡಿಕ್ರಿಯಿಂದ ಕಾಣುವ ಆಸ್ತಿಯನ್ನು ಮಾರಾಟದ ಬಗ್ಗೂ ಕೂಡಾ ಅರ್ಜಿದಾರನು ದಾಖಲು ಮಾಡಿದ ಮೇಲಣ ಅಮ್ಲಜಾರಿ ತಾರೀಕು 28-1-50ಕ್ಕೆ ತನಿಖೆಗೆ ಇಡೋಣಾಗಿದೆ. ಆ ಕುರಿತು ನಿಮ್ಮಷ್ಟೇನಾದರೂ ಆಕ್ಷೇಪವಿದ್ದಲ್ಲಿ ಸದ್ರಿ ತಾರೀಕಿನಲ್ಲಿ ಕೋರ್ಟಿನ ಮುಂದೆ ಹ್ಯಾಜರು ಮಾಡಿಕೊಳ್ಳತಕ್ಕದ್ದು ಎಂತ ಈ ಮೂಲಕ ನಿಮಗೆ ತಿಳಿಸೋಣಾಗಿದೆ.

(By order of the Court )

**A. N. Rao,**

Advocate for Petitioner.
(Assignee decree-holder)

Coondapoor }
17-1-50 }


ನಮ್ಮ ಹೊಸ ಶಾಸನದ ಪ್ರಕಾರ ಎಲ್ಲಾ ಪ್ರಾಂತಗಳೂ ಅವುಗಳ ಒಳಆಡಳಿತೆ ಮಟ್ಟಿಗೆ ಸ್ವತಂತ್ರವಿರುವವಾದರೂ ದೇಶದ ಹಿತದೃಷ್ಟಿಯಿಂದಾಗಲೀ ಗಂಡಾಂತರಗಳನ್ನೆದುರಿಸುವ ನಿಮಿತ್ತದಿಂದಾಗಲೀ ಪ್ರಾಂತ್ಯಾಡಳಿತೆಯಲ್ಲಿ ಕೈಹಾಕುವ ಅಧಿಕಾರವು ಕೇಂದ್ರ ಸರಕಾರಕ್ಕಿರುವುದು. ಆರಂಭದಲ್ಲಿ ಈ ದೃಷ್ಟಿ ಇಲ್ಲದಿದ್ದರೂ ಈಗಿನ ಕೋಮುವಾರು, ಜಾತೀವಾರು, ಭಾಷಾವಾರು ಇತ್ಯಾದಿ ಪಾರ್ಟಿಪಂಗಡಗಳ ಚಳವಳಿಯ ವಿದ್ಯಮಾನಗಳನ್ನು ತಿಳಿದು ಹೀಗೆ ಮಾಡಿರುವರು.

ನಮ್ಮ ಯೂನಿಯನ್ನಿನ ಅಂಗಗಳಾಗಿ ಪ್ರಾಂತಗಳ ಆಡಳಿತೆ ಕ್ರಮವು ಈ ಕೆಳಗಿನಂತಿದೆ. ಇದರ ಮುಖ್ಯ ಅಧಿನಾಯಕನು ಒಬ್ಬ ಗವರ್ನರನಾಗಿರುತ್ತಾನೆ. ಆತನನ್ನು ಕೇಂದ್ರ ಸರಕಾರದ ಅಧ್ಯಕ್ಷನು ನೇಮಿಸುವದಾಗಿದೆ. ಈ ಆಫೀಸರನ ಅವಧಿಯು ಐದು ವರುಷಗಳ ತನಕವಿರುವದು. ಇಲ್ಲಿ ಲೆಜಿಸ್ಲೇಟಿವ್ ಕೌನ್ಸಿಲು(Legislative Council) ಮತ್ತು ಲೆಜಿಸ್ಲೇಟಿವ್ ಎಸೆಂಬ್ಲಿ (Legislative Assembly) ಎಂಬ ಎರಡು ಶಾಸನಸಭೆಗಳಿವೆ. ಮದ್ರಾಸು, ಬೊಂಬಾಯಿ, ಬಂಗಾಳ, ಬಿಹಾರ, ಸಂಯುಕ್ತಪ್ರಾಂತ ಮತ್ತು ಪಂಜಾಬ ಈ ಆರು ಪ್ರಾಂತಗಳಲ್ಲಿ ಮಾತ್ರ ಹೀಗೆ ಎರಡು ಮನೆಗಳಿರುವವು. ಬಾಕಿ ಎಲ್ಲಾ ಪ್ರಾಂತಗಳಲ್ಲಿ ಒಂದೇ ಸಭೆಯಿರುವದು. ಈ ಎಲ್ಲಾ ಪ್ರಾಂತಗಳಲ್ಲೂ ಹೆಚ್ಚಿನ ಅಧಿಕಾರ ಕೆಳಸಭೆಗೆ (Lower House) ಇರುವದು. ಇದಕ್ಕೆ ಮೆಂಬರರನ್ನು ಚುನಾಯಿಸುವಾಗ 75,000ಕ್ಕೆ ಒಬ್ಬ ಪ್ರತಿನಿಧಿಯಂತೆ ಚುನಾಯಿಸುವದಾಗಿದೆ. ಆದರೆ ಎಸೆಂಬ್ಲಿಯ ಒಟ್ಟು ಪ್ರತಿನಿಧಿಗಳ ಸಂಖ್ಯೆಯು 500ಕ್ಕೆ ಮೇಲ್ಪಡಬಾರದಾಗಿದೆ ಮತ್ತು ಕನಿಷ್ಠಪಕ್ಷ 60 ಮೆಂಬರರಿಗೆ ಕಡಮೆಯಿಲ್ಲದೆ ಚುನಾಯಿಸಬೇಕೆಂತಲೂ ಇದೆ. ಪ್ರಾಯಸ್ಥರೆಲ್ಲರೂ ಓಟರರು. ಈ ಸಭೆಯ ಜೀವಾವಧಿಯು ಐದು ವರುಷದ ಮಟ್ಟಿಗೆ ಮಾತ್ರ ಇದೆ. ಮೇಲಿನಸಭೆಯ [Upper House] ಮೆಂಬರರ ಸಂಖ್ಯೆಯು ಎಸೆಂಬ್ಲಿಯ ಮೆಂಬರರ ಸಂಖ್ಯೆಯ ¼ ಅಂಶಕ್ಕೆ ಮೀರದಂತಿರಬೇಕಾಗಿದೆ. ಈ ಸಭೆಯ ಒಟ್ಟು ಸಂಖ್ಯೆಯಲ್ಲಿ ⅓ ಅಂಶದಷ್ಟು ಸದಸ್ಯರು ಮುನ್ಸಿಪಾಲಿಟಿ, ಡಿ. ಬೋರ್ಡು ಇನ್ನಿತರ ಸ್ಥಳೀಯ ಸಂಸ್ಥೆಗಳಿಂದ ಚುನಾಯಿಸಲ್ಪಡುವರು. $^1/_{12}$ ಅಂಶದ ಮೆಂಬರರನ್ನು ಡಿಗ್ರಿಹೊಂದಿ ಮೂರು ವರುಷಕ್ಕೆ ಮಿಕ್ಕಿದ ವಿದ್ಯಾವಂತರಿಂದ ಆರಿಸುವರು. $^1/_{12}$ ಅಂಶದ ಮೆಂಬರರನ್ನು ವಿದ್ಯಾಖಾತೆಯವರು ಆರಿಸುವರು. ⅓ ಅಂಶವನ್ನು ಎಸೆಂಬ್ಲಿ ಅಂದರೆ ಕೆಳಸಭೆಯವರು ಆರಿಸುವರು. ಇನ್ನುಳಿದವರನ್ನು ಗವರ್ನರರು, ಕಲಾವಿಜ್ಞಾನಿಗಳು ಹಾಗೂ ವಿವಿಧ ಶಾಸ್ತ್ರಗಳಲ್ಲಿ ಉತ್ತೀರ್ಣರಾದವರೊಳಗಿನಿಂದ ಆರಿಸಿ ನೇಮಿಸುವರು. ಈ ಕೌನ್ಸಿಲು ಬರಖಾಸ್ತು ಆಗತಕ್ಕದ್ದಲ್ಲ. ಎರಡು ವರುಷಕ್ಕೊಮ್ಮೆ ⅓ನೇ ಅಂಶದವರು ಹೊರಹೋಗಿ ಅವರ ಸ್ಥಾನಕ್ಕೆ ಬೇರೆಯವರು ಚುನಾಯಿತರಾಗುವರು. ಇದಕ್ಕೆ ಅವಧಿ ಇಲ್ಲ. ಈ ಕೌನ್ಸಿಲು ಅನಾವಶ್ಯಕವೆಂದು ಕಂಡು ಬಂದಲ್ಲಿ ಕೆಳಗಿನ ಸಭೆಯವರ ⅔ ಬಹುಮತದಿಂದ ಇದನ್ನು ತೆಗೆದು ಹಾಕಬಹುದು.

ಪ್ರಾಂತಗಳ ಮಂತ್ರಿ ಮಂಡಲದ ಮುಖ್ಯಸ್ಥನು ಮುಖ್ಯಮಂತ್ರಿ ಎಂದು ಕರೆಯಲ್ಪಡುವನು. ಕೆಳ ಶಾಸನ ಸಭೆಗೆ ಹಣಕಾಸಿನ ವ್ಯವಹಾರದಲ್ಲಿ ಸಂಪೂರ್ಣ ಅಧಿಕಾರವಿದೆ. ಮಾತ್ರವಲ್ಲ, ಬೇರೆ ಕಾನೂನುಗಳಲ್ಲಿ ಸಹಾ ಕೌನ್ಸಿಲು (Upper House) ತಂದ ಠರಾವನ್ನು ಎಸೆಂಬ್ಲಿಯು ಪುನಃ ತಿರಸ್ಕಾರ ಮಾಡಿದಲ್ಲಿ ಎಸೆಂಬ್ಲಿಯ ಅಪೇಕ್ಷೆಯ ಪ್ರಕಾರವೇ ಅದು ಗವರ್ನರರ ಸಹಿ ಪಡೆದು ಜ್ಯಾರಿಗೆ ಬರುವದು. ಈ ಕೌನ್ಸಿಲಿಗೆ ಕೇಂದ್ರ ಕೌನ್ಸಿಲಿಗಿರುವಷ್ಟು ಅಧಿಕಾರವಿಲ್ಲ. ಪ್ರಾಂತ್ಯಗಳಲ್ಲಿರುವ ಎರಡು ಸಭೆಗಳೊಳಗೆ ಭಿನ್ನಾಭಿಪ್ರಾಯ ಬಂದಲ್ಲಿ ತೀರ್ಮಾನಿಸುವ ಬಗ್ಗೆ ಎರಡು ಸಭೆಗಳೂ ಕೂಡಿ ತೀರ್ಮಾನಿಸುವ ಕ್ರಮವಿಲ್ಲ. ಪ್ರಾಂತಗಳ ಸಭೆಯು ನಡೆಯದ ಕಾಲದಲ್ಲಿ, ಅಂದರೆ ಸಭೆಕೂಡುವರೆ ವಿಳಂಬವಿದ್ದಲ್ಲಿ ಗವರ್ನರರು ಓರ್ಡಿನೆನ್ಸು ಮೂಲಕ ತಾತ್ಕಾಲಿಕ ಕಾನೂನು ಜ್ಯಾರಿಗೆ ತರಬಹುದು. ಆದರೆ, ಇಂಥಾ ಕಾನೂನಿಗೆ ಕೇಂದ್ರ ಸರಕಾರದ ಅನುಮತಿ ಬೇಕು. ಘಟನಾ ಸಮಿತಿಯು ಆರಂಭದಲ್ಲಿ ಪ್ರಾಂತ್ಯಗಳಿಗೆ ಸಂಪೂರ್ಣ ಸ್ವತಂತ್ರದ ಅಧಿಕಾರವನ್ನು ಕೊಡುವದಲ್ಲದೆ ಬಿಟ್ಟುಹೋದ ಅಥವಾ ಬಾಕಿಉಳಿದ ಎಲ್ಲಾ ವಿಚಾರಗಳ ಸರ್ವ ಹಕ್ಕು ಕೊಡುವದೆಂಬ ಉದ್ದೇಶವಿದ್ದರೂ ದೇಶದ ಈಗಿನ ಪರಿಸ್ಥಿತಿಯನ್ನು ಗಮನಕ್ಕೆ ತಂದುಕೊಂಡು ಅದನ್ನೆಲ್ಲಾ ಅಲ್ಲಗಳೆದು ಕೇಂದ್ರ ಸರಕಾರವನ್ನೇ ಬಲಪಡಿಸಿರುವದು. ಪ್ರಾಂತಗಳಿಗಿಂತ ಜಾಸ್ತಿ ಹಲವು ಲಾಭುಗಳನ್ನು ಕೇಂದ್ರ ಸರಕಾರಕ್ಕೆ ಸೇರಿಸಿರುವದು. ಯಾವದಾದರೊಂದು ಪ್ರಾಂತದ ಕಾಯಿದೇಶೀರ ಆಡಳಿತೆಯು ಮುರಿದುಬೀಳುವ ಸಂದರ್ಭದಲ್ಲಿ ಅಥವಾ ಅನಾಯಕತ್ವ ಉಂಟಾಗುವ ಭೀತಿತೋರಿ ಬಂದಲ್ಲಿ ಅಂಥಾ ಪ್ರಾಂತಾಡಳಿತೆಯ ಜವಾಬ್ದಾರಿಯನ್ನು ಕೇಂದ್ರ ಸರಕಾರಕ್ಕೆ ತೆಗೆದು ಕೊಳ್ಳುವರೆ ಅಧ್ಯಕ್ಷರಿಗೆ ಅಧಿಕಾರವಿದೆ.

ನಮ್ಮ ಶಾಸನದಲ್ಲಿ ಹಲವು ಹೊಸ ವಿಚಾರಗಳು ಅಡಕವಾಗಿವೆ. 1. ವ್ಯಕ್ತಿಯ ಹಕ್ಕು ಬಾಧ್ಯತೆಗಳ ಕುರಿತು ಮುಖ್ಯ ವ್ಯಕ್ತಿತ್ವದ ಹಕ್ಕುಗಳು ಸ್ಪಷ್ಟಪಡಿಸಲ್ಪಟ್ಟಿವೆ. ಇದಕ್ಕೆ ಯಾವ ಕಾರಣಗಳಿಂದಲೂ ಧಕ್ಕೆ ಬಾರದಂತೆ ಶಾಸನದಲ್ಲಿ ಕಾಣಿಸಿದೆ; ಮಾತ್ರವಲ್ಲ, ಕೋರ್ಟು ಮೂಲಕ ಬಾಧಕ ಬಂದಲ್ಲಿ ಎದುರಿಸುವ ಅಧಿಕಾರವಿದೆ. ಇವುಗಳಲ್ಲಿ ಮುಖ್ಯವಾಗಿ ಅಸ್ಪೃಶ್ಯತೆಯನ್ನು ತೆಗೆದು ಹಾಕಿದ್ದಾರೆ. 2. ಸರಕಾರದಿಂದ ಸಹಾಯ ಪಡೆಯುವ ಶಾಲೆ ಕೋಲೇಜುಗಳಲ್ಲಿ ಜಾತಿ, ಮತ, ವರ್ಣಭೇದಗಳಿಲ್ಲದೆ ವಿದ್ಯಾರ್ಥಿಗಳಿಗೆ ಪ್ರವೇಶಕೊಡತಕ್ಕದ್ದು. ಈ ವಿನಹ ಇನ್ನು ಧರ್ಮೋದ್ದೇಶದ ಪರವಾಗಿ ಕೆಲವು ವಿಚಾರಗಳು ಹೊಗಳಲ್ಪಟ್ಟಿವೆ. ಇವುಗಳನ್ನು ಕಾನೂನು ಪ್ರಕಾರ ಜ್ಯಾರಿಮಾಡತಕ್ಕದ್ದಲ್ಲವಾದರೂ ನಮ್ಮ ಮುಂದಿನ ಗುರಿಯಾಗಿ ತೋರಲ್ಪಡುತ್ತವೆ. ಉದಾಹರಣೆ; ಪಾನನಿರೋಧ, ಜಾನುವಾರು ಕೊಲೆಗೆ ನಿಷೇಧ, ಮುಂತಾದವುಗಳು. ಈ ಶಾಸನವನ್ನು ನಾವು ನಮ್ಮ ಧರ್ಮಶಾಸ್ತ್ರವೆಂಬಂತೆ ದೇವತಾ ಭಕ್ತಿಯಿಂದ ಅನುಸರಿಸಿ ನಡೆಯಬೇಕು. ಇದನ್ನು ಮುರಿಯುವ ಆಲೋಚನೆಯುಳ್ಳವರೆಲ್ಲಾ ದೇಶದ್ರೋಹಿಗಳೆಂದು ತಿಳಿಯತಕ್ಕದ್ದು. ಇದರ ರಕ್ಷಣೆಯ ಬಗ್ಗೆ ದೇಶದಲ್ಲಿ ನ್ಯಾಯವಾದ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ ತತ್ವಗಳನ್ನು ಆಧರಿಸಿ, ನಿಜವಾದ ಪಾರ್ಟಿ ಪಂಗಡಗಳ ಜನರಿಂದ ಸ್ಥಾಪಿಸಲ್ಪಟ್ಟು, ದೇಶದಲ್ಲಿ ಪ್ರಚಾರ ಮಾಡಿ ಪ್ರಜಾಮತವು ಬೆಳೆಯುವಂತೆ ಮುಂದುವರಿಸಬೇಕಾಗಿದೆ.


*For Life Assurance*

CONSULT

## THE NEW GUARDIAN OF INDIA
LIFE ASSURANCE Co. LTD.
(Established 1934)

Chairman: ri. M. C. T. M. Chidambaram Chettyar.

A Policy in this progressive Life Office is a good investment; its Agency is a valuable business connection.

MANGALORE BRANCH:
K. S. R Road,
Hampankatta, Mangalore

HEAD OFFICE:
United India Life Buildng,
MADRAS



## ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಛಾಯವಾಗಿದ್ದರೆ,....ಚಟ್ಟು ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನರುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.



## ವಿವಿಧ ಪಾತ್ರೆಗಳು

ಯಾವ ತ್ರ್ಯಾವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ಕಮ್ಮಿ ಕ್ರಯಕ್ಕೆ ಹೇರಳವಾಗಿ ಯೂ ಚೆಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಜಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಮಾನವನಿಗೆ ಬೇಕಾದುದರಲ್ಲಿ ಹೆಚ್ಚಿನಂಶವನ್ನು ಒದಗಿಸುವುದರಲ್ಲಿ ಪ್ರಾಣಿಗಳು ಅತಿ ಪ್ರಾಚೀನ ಕಾಲದಿಂದಲೂ ಪ್ರಾಮುಖ್ಯ ಪಾತ್ರ ನಿರ್ವಹಿಸಿಕೊಂಡು ಬಂದಿವೆ. ಪಶುಪಾಲಕರು ಅವರಿಗೆ ಬೇಕಾದ ಎಲ್ಲಾ ವಸ್ತುಗಳನ್ನೂ ಅವರ ಮಂದೆಗಳಿಂದ ಪಡೆಯುತ್ತಿದ್ದರು. ಅವುಗಳ ಮಾಂಸವನ್ನೂ ಹಾಲನ್ನೂ ತಮ್ಮ ಆಹಾರವನ್ನಾಗಿಯೂ, ಅವುಗಳ ಚರ್ಮಗಳನ್ನು ತಮ್ಮ ಉಡಿಗೆ ತೊಡಿಗೆಗಳನ್ನಾಗಿಯೂ ಕೆಲವು ವೇಳೆ ಅವುಗಳ ಎಲುಬುಗಳನ್ನು ಆಯುಧ- ಸಲಕರಣೆಗಳನ್ನಾಗಿ ಸಹ ಉಪಯೋಗಿಸುತ್ತಿದ್ದರು.

ಪ್ರಾಣಿಗಳಿಂದ ಅತ್ಯಂತ ಲಾಭ ಪಡೆಯಬೇಕಾದರೆ, ಅವುಗಳಿಗೆ ಸಹ ಸರಿಯಾದ ಹಾಗೂ ಸಾಕಷ್ಟು ಆಹಾರಬೇಕು. ಸರಿಯಾದ ಪಾಲನೆ ಇರಬೇಕು. ರೋಗರುಜೆ ಬಂದ ಸಮಯದಲ್ಲಿ ತಕ್ಕ ಎಚ್ಚರಿಕೆ ಶುಶ್ರೂಷೆಗಳು ಅವಶ್ಯ. ಜಮೀನನ್ನು ಸರಿಯಾಗಿ ಉಳಬೇಕಾದರೆ ಎತ್ತುಗಳು ಬಲಿಷ್ಠವಾಗಿಯೂ ಆರೋಗ್ಯವಾಗಿಯೂ ಇರಬೇಕು. ಮಗುವಿಗೆ ಶುದ್ಧ ಹಾಲು ಬೇಕೆಂದಾದರೆ ಹಸುವನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಅದಕ್ಕೆ ಸಾಕಷ್ಟು ಪುಷ್ಟಿಕರ ಆಹಾರವಿರಬೇಕು. ಅದು ರೋಗಕ್ಕೆ ತುತ್ತಾದರೆ ವ ಅದು ಬಲಹೀನ ಸ್ಥಿತಿಯಲ್ಲಿದ್ದರೆ ಅದರ ಕಡೆಗೆ ಸಾಕಷ್ಟು ಗಮನ ಕೊಡಬೇಕು. ಹಿಂದುಸ್ಥಾನದಲ್ಲಿ ಹಸುವನ್ನು ದೇವರಂತೆ ಭಕ್ತಿಯಿಂದ ಪೂಜಿಸುತ್ತಾರೆ. ಆದರೆ ಅದನ್ನು ಕಾಪಾಡಿಕೊಳ್ಳುವ ಕ್ರಮವು ಅತಿ ಶೋಚನೀಯವಾಗಿದೆ

### ಸಹಿವಾಲ್ ಜಾತಿ

ಇಡೀ ಪ್ರಪಂಚದಲ್ಲಿ ಹಿಂದುಸ್ಥಾನದಲ್ಲಿರುವಷ್ಟು ಅಧಿಕ ಜಾನುವಾರು ಸಂಖ್ಯೆ ಇತರ ಯಾವ ದೇಶದಲ್ಲಿಯೂ ಇಲ್ಲ; ಆದರೆ ಹಾಲಿನ ಪ್ರಮಾಣ ನಮ್ಮಲ್ಲಿ ಅತಿ ಕಡಿಮೆ. ಹಿಂದುಸ್ಥಾನದಲ್ಲಿ ಪ್ರತಿಯೊಬ್ಬನು ದಿನಕ್ಕೆ ಸರಾಸರಿ 5 ಔನ್ಸುಗಳಷ್ಟು ಹಾಲು ಉಪಯೋಗಿಸುತ್ತಾನೆ. ಆದರೆ ಅಮೇರಿಕದಲ್ಲಿ ಸರಾಸರಿ 36 ಔನ್ಸುಗಳಷ್ಟೂ ಬ್ರಿಟನಿನಲ್ಲಿ 41 ಔನ್ಸುಗಳಷ್ಟೂ ಉಪಯೋಗಿಸಲ್ಪಡುತ್ತದೆ ನ್ಯೂ ಡಿಲ್ಲಿಯಲ್ಲಿರುವ ಹಿಂದೀಯ ಕೃಷಿಸಂಶೋಧನಾ ಕ್ಷೇತ್ರದಲ್ಲಿರುವ ಜಾನುವಾರು ವಿಭಾಗದಲ್ಲಿ ಸಹಿವಾಲ್ ಜಾತಿಯ ದನಗಳನ್ನು ಸುಧಾರಿಸುವ ಕುರಿತು ಕೆಲವು ಸಮಯದಿಂದ ಪರೀಕ್ಷಾ ಪ್ರಯೋಗಗಳು ನಡೆಯುತ್ತಿವೆ. ಈ ಜಾತಿಯ ಪ್ರಾಣಿಗಳು ಹಾಲು ತುಂಬಾ ಕರೆಯುತ್ತವೆ.

ಸಹಿವಾಲ್ ಜಾತಿಯ ಮಟ್ಟಿಗೆ (ಅ) ಹಾಲಿನ ಪ್ರಮಾಣವನ್ನು ಹೆಚ್ಚಿಸುವದು. (ಆ) ದನಗಳು ಬೇಗನೇ ಪ್ರಾಯಕ್ಕೆ ಬರುವಂತೆ ಮಾಡುವದು, (ಇ) ಹಾಲು ಬತ್ತಿರುವ ಕಾಲವನ್ನು

ಪ್ರಶ್ನೋತ್ತರಪ್ರಶ್ನೆ

# ಉತ್ತಮ ತಳಿಗೆಯ ದನಕರುಗಳೇ ದೇಶದ ಸೌಭಾಗ್ಯವೆನ್ನಬಹುದು.

ತಗ್ಗಿಸುವುದು, (ಈ) ಒಳ್ಳೇ ಬೀಜದ ಹೋರಿಗಳನ್ನು ಪಡೆಯುವುದು— ಈ ನಾಲ್ಕು ಉದ್ದೇಶಗಳಿಗೆ ಪರೀಕ್ಷಾ ಪ್ರಯೋಗಗಳು ನಡೆಯುತ್ತವೆ. ಜಾಗ್ರತೆಯಿಂದ ಪೋಷಿಸುವುದರಿಂದಲೂ, ಆಹಾರ ಕೊಡುವುದನ್ನು ನಿಯಂತ್ರಿಸುವುದರಿಂದಲೂ ಕೆಲವು ಮನೋರಂಜಕ ಫಲಿತಾಂಶಗಳು ಕಂಡುಬಂದಿವೆ.

ಹಾಲಿನ ಪ್ರಮಾಣವು 1914 ರಲ್ಲಿ 105 ಪೌಂಡುಗಳಷ್ಟಿದ್ದುದು 1947 ರಲ್ಲಿ 209 ಪೌಂಡುಗಳಷ್ಟಕ್ಕೆ ಏರಿದೆ.

ಪ್ರಥಮ ಕರು ಹಾಕುವ ಪ್ರಾಯವು 1904 ರಲ್ಲಿ 41 ತಿಂಗಳುಗಳಿದ್ದುದು 1947 ರಲ್ಲಿ 29½ ತಿಂಗಳುಗಳಿಗೆ ಇಳಿದಿದೆ

ಹಾಲು ಬತ್ತಿರುವ ಕಾಲಾವಧಿಯು 1938 ರಲ್ಲಿ 208 ದಿನಗಳಿದ್ದುದು 1947 ರಲ್ಲಿ 133 ದಿನಗಳಷ್ಟಕ್ಕೆ ತಗ್ಗಿದೆ.

ಅದಲ್ಲದೆ ಅನೇಕ ಒಳ್ಳೇ ಬೀಜದ ಹೋರಿಗಳನ್ನು ಇಲ್ಲಿ ತಯಾರಿಸಿ ಪ್ರಾಂತಗಳಿಗೂ ಸಂಸ್ಥಾನಗಳಿಗೂ ಮಾರಲಾಗಿದೆ. ಸಾಧಾರಣ ಹಸುವಿಗೆ ಸರಿಹೋಲಿಸಿದರೆ ಹಾಲು ಕೊಡುವ ಸಾಮರ್ಥ್ಯವು ತುಂಬಾ ಸುಧಾರಿಸಿರುತ್ತದೆ. ಈ ಕ್ಷೇತ್ರದಲ್ಲಿ ನಿಯಂತ್ರಿತ ಪರಿಸ್ಥಿತಿಯಲ್ಲಿ ಸಾಕಿದ ಒಂದು ಹಸು ಹಳ್ಳಿಯ 10 ಹಸುಗಳು ಕೊಡುವಷ್ಟು ಹಾಲು ಕೊಡುತ್ತದೆ. ಇದರಿಂದ ಪೋಷಣೆವು ಎಷ್ಟು ಕಡಿಮೆಯಾಗುತ್ತದೆಂದು ನಾವೇ ಊಹಿಸಿಕೊಳ್ಳಬಹುದು ಈ ಕ್ಷೇತ್ರದಲ್ಲಿರುವ ಒಳ್ಳೇ ವಂಶಾವಳಿಯ ಹಸುವಿಗೆ 13 ಪೌಂಡುಗಳಷ್ಟು ಒಣ ಹುಲ್ಲು ಇತ್ಯಾದಿ ಮೇವೂ, 8 ಪೌಂಡುಗಳಷ್ಟು ಹಿಂಡಿಗಳಂತಿರುವ ಕೇಂದ್ರೀಕೃತ ವಸ್ತುಗಳೂ ಸಾಕಾಗುವಾಗ ಹಳ್ಳಿಯ 10 ಹಸುಗಳಿಗೆ ಕಡಿಮೆಯಲ್ಲಿ 120 ಪೌಂಡುಗಳಷ್ಟು ಮೇವೂ 8 ಪೌಂಡುಗಳಷ್ಟು ಹಿಂಡಿಯೂ ಬೇಕಾಗುತ್ತದೆ.

ಈ ಕ್ಷೇತ್ರದಲ್ಲಿರುವ "ತಮಿಲಿ" ಎಂಬ ಒಂದು ಹಸು 306 ದಿನಗಳ ತನಕ ಒಟ್ಟು 13,004 ಪೌಂಡುಗಳಷ್ಟು ಹಾಲು ಕರೆದಿರುತ್ತದೆ. ಅಂದರೆ ದಿನಕ್ಕೆ 42.5 ಪೌಂಡುಗಳಷ್ಟು, ಅಥವಾ ಸುಮಾರು ಮಣಕ್ಕಿಂತಲೂ ಹೆಚ್ಚಿಗೆ ಹಾಲು ಕೊಟ್ಟಂತಾಯಿತು ಹಿಂದುಸ್ಥಾನವು ಇನ್ನೂ ಕೆಳಮಟ್ಟದಲ್ಲಿಯೇ ಇದೆ. ಈ ಹಾಲಿನ ಪ್ರಮಾಣವು ತೃಪ್ತಿಕರವಾಗಿದೆಯಾದರೂ ಇತರ ಕೆಲವು ದೇಶಗಳಲ್ಲಿ ದೊರೆಯುವ ಪರಮಾವಧಿಕ ಮಿತಿಗೆ ಹೋಲಿಸಿದರೆ ಇದು ಸಾಕಷ್ಟಿಲ್ಲವೆಂದು ಒಪ್ಪಬೇಕು.

### ಗಡಸುಗಳ ಬೆಳವಣಿಗೆ

ಈ ಕ್ಷೇತ್ರದಲ್ಲಿ ಗಡಸುಗಳ ಬೆಳವಣಿಗೆಯನ್ನು ಜಾಗ್ರತೆಯಿಂದ ಕಲಿಯಲಾಗುತ್ತದೆ ಏನಾದರೂ ಕೊರತೆ ಅಥವಾ ಊನತೆಗಳಿದ್ದ ಅವನ್ನು ಕೂಡಲೇ ಸರಿಪಡಿಸಲು ಯೋ[illegible] ಏರ್ಪಾಡುಗಳಿವೆ. ಈ ಕ್ಷೇತ್ರದಲ್ಲಿರುವ ಒಂ[illegible] ಆರೋಗ್ಯವಂತ ಗಡಸು ದಿನಕ್ಕೆ ಒಂದು ಪೌ[illegible] ಡಿನಂತೆ ಆರು ತಿಂಗಳು ಪ್ರಾಯವಾಗುವ[illegible] ರೆಗೆ ಬೆಳೆಯುತ್ತದೆ. ಜೋಡಿಗೆ ಕೂಡುವ[illegible] ಮಯದಲ್ಲಿ—ಒಂದೂವರೆ ವರ್ಷ ಪ್ರಾಯ[illegible] ವಾಗುವುದಕ್ಕಿಂತ ಮುಂಚೆ ಬಿಡುವುದಿಲ್ಲ - ಅದು ಕಡಿಮೆಯಲ್ಲಿ 600 ಪೌಂಡುಗಳ[illegible] ಭಾರವಿರಬೇಕು. ಈ ರೀತಿ ಇಲ್ಲದಿದ್ದರೆ [illegible] ರಾದ ಪಶುವೈದ್ಯರು ಕೊರತೆಯನ್ನು [illegible] ಪಡಿಸಲು ಯತ್ನಿಸುತ್ತಾರೆ.

ಒಳ್ಳೇ ಉತ್ತಮ ವಂಶಾವಳಿಯ ಹ[illegible] ಗಳನ್ನೂ ಹೋರಿಗಳನ್ನೂ ಈ ಕ್ಷೇತ್ರದ[illegible] ನಿಯಂತ್ರಿತ ಕ್ರಮಗಳಲ್ಲಿ ಸಾಕಲಾಗುತ್ತ[illegible] ಇಂತಹ ಪ್ರಾಣಿಗಳನ್ನು ವಿವಿಧ ಪ್ರಾಂತಿಕ [illegible] ಕಾರಗಳು ನಡೆಸಿಕೊಂಡು ಬರುವ ಜಾ[illegible] ವಾರುಗಳ ಪರೀಕ್ಷಾ ಕ್ಷೇತ್ರಗಳಿಗೆ ಕಳುಹಿ[illegible] ಲಾಗುತ್ತದೆ. ಕೆಲವು ಪ್ರಾಣಿಗಳನ್ನು ಕೆ[illegible] ವೇಳೆ ಇತರ ಜನರಿಗೂ ಮಾರಲಾಗುತ್ತ[illegible] ಆದರೆ ಒಂದು ನಿರ್ದಿಷ್ಟ ಗುಣಕ್ಕೆ ಮೀ[illegible] ಪ್ರಾಣಿಗಳನ್ನು ಹೆಚ್ಚಾಗಿ ಪ್ರಾಂತಿಕ ಸರಕಾ[illegible] ಗಳಿಗೂ ಜಾನುವಾರು ಕ್ಷೇತ್ರಗಳಿಗೂ ಕ[illegible] ಲಾಗುತ್ತದೆ.

### ಮೇವು

ದನಕರುಗಳು ಅತ್ಯುತ್ತಮ ರೀತಿ[illegible] ದಕ್ಷತೆಯಿಂದಿರಬೇಕಾದರೆ ಹಾಗೂ ಅವು ಉತ್ಪಾದನಾ ಸಾಮರ್ಥ್ಯವು ಕೆಟ್ಟುಹೋ[illegible] ದಿರಬೇಕಾದರೆ, ಮುಖ್ಯವಾಗಿ ಬೇಕಾದ[illegible] ಒಳ್ಳೆಯ ಆಹಾರ, ಹಿಂದುಸ್ಥಾನದಲ್ಲಿ ಜಾ[illegible] ವಾರುಗಳಿಗೆ ಮೇವುಗಳು ಸಾಕಷ್ಟಿಲ್ಲ. [illegible] ಗಳು ಅಸಂಖ್ಯಾತ ಇವೆ, ಪರಿಣಾಮವೇ[illegible] ಪ್ರಾಣಿಗಳು ಅಲ್ಪಾಹಾರದಿಂದಲೂ ಅಲ್ಪ[illegible] ಷಣೆಯಿಂದಲೂ ಬಳಲುತ್ತವೆ. ಧನಿ[illegible] ರುವ ಕೆಲವೇ ಹಸುಗಳು ಒಳ್ಳೆ ಸ್ಥಿತಿಯ[illegible] ಬಹುದು.

ಈ ಕ್ಷೇತ್ರವು ನಮ್ಮ ದೇಶದಲ್ಲಿ ಬೆಳೆಯ[illegible] ಕೆಲವು ಜಾತಿಯ ಹುಲ್ಲುಗಳನ್ನು ಸುಧಾ[illegible] ವ ಕುರಿತು ತುಂಬಾ ಸಂಶೋಧನೆ ನಡೆ[illegible] ಇದಲ್ಲದೆ ಪರದೇಶಗಳಿಂದ ಸಹ ಮೇವಿನ[illegible] ಲ್ಲುಗಳನ್ನು ತರಿಸಿ ಹಿಂದುಸ್ಥಾನದಲ್ಲಿ ಬೆ[illegible] ವಂತೆ ಯತ್ನಿಸುತ್ತದೆ. ಹುಲ್ಲು ಬೆಳೆ[illegible] ಒಂದು ವಿಭಾಗವನ್ನು ನಿರ್ಮಿಸಲಾಗಿದೆ. 60 ವಿಧದ ಹುಲ್ಲುಗಳು ಬೆಳೆಸಲ್ಪಟ್ಟು[illegible] ಕ್ಷಾ ಪ್ರಯೋಗ ನಡೆಯುತ್ತಿದೆ. ಪ್ರಾ[illegible] ಸರಕಾರಗಳಿಗೆ ತಮ್ಮ ಪ್ರಾಂತಗಳಲ್ಲಿ ಪರ[illegible] ಪ್ರಯೋಗ ನಡೆಸುವಂತೆ ಇಲ್ಲಿಂದ ಹ[illegible] ಗಳನ್ನು ಕಳುಹಿಸಲಾಗುತ್ತದೆ.


ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ನೋವುಗಳಿಗೂ, ಎದೆನೋವು, ಘಾಯಗಳು, ಬಾವುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ನೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

REGD

ಹುಳುಕಡ್ಡಿ ಮದ್ದುಗಳಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.



ದಿ ಎನ್. ಪಂಡಿತರ ಶ್ರೇಷ್ಠವಾದ

## ಪಾಧಿಸ್ ನೀಮ್

ಟೂಥ್ ಪೌಡರ್ ಉಪಯೋಗಿಸಿರಿ

ಸ್ಟಾಕಿಸ್ಟರು: ನಾಯಕ್ಸ್ ಬೀಡಿ ವರ್ಕ್ಸ್, ಸಂತೆಕಟ್ಟೆ, ಉಡುಪಿ.



BUY INDIAN! ENCOURAGE INDIAN INDUSTRY!

## ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD.



Highly perfumed and medicated, worth using daily by one and all, keeps hair black and relieves head-ache etc.

TRADE MARK

Manufactured by:-

**Swadeshi Oushadhi Bhandara** (Regd.)

KUNJAL P. O. Brahmavar, S. K.



ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

## ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

**For up-to-date Lodging & Boarding**

**ROYAL MAHAL,**

UDIPI, S. Kanara.



## ಮುಲ್ಕಿ ಬೇಂಕ್

ಲಿಮಿಟೆಡ್, ಮುಲ್ಕಿ

1921 ರಲ್ಲಿ ಸ್ಥಾಪಿತವಾಗಿ 2[illegible] ವರುಷಗಳಿಂದ ಊರ ಜನರ ಹಿ[illegible] ಕ್ಕಾಗಿ ಡಿಪೋಸಿಟ್ ಹಣಕ್ಕೆ ನ[illegible] ಯವಾದ ಬಡ್ಡಿಯಿಂದಲೂ, ಸಾ[illegible] ದ ಹಣಕ್ಕೆ ಅತೀ ಕಡಿಮೆ ದ[illegible] ಬಡ್ಡಿಯಿಂದಲೂ ಜನ ಹಿತಸಾ[illegible] ನೆಯನ್ನು ಮಾಡುತ್ತಿರುವುದು.

**The Moolky Bank Ltd.**

**Moolky, S. K.**


[illegible] & Published by K. H. Shetty at the Navayuga Press Udipi, S. India.

Regd. No. M. 3618

Estd: 1921 ಸ್ಥಾಪನೆ

30ನೇ ವರ್ಷ
2-2-1950

LICENCE No. 31
Licensed to Post
without Prepayment

FOUNDER:
Sri. A. B. Shetty
Minister for Agricultur
& Veterinary

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
ತಿಂಗಳಿಗೆ ರೂ. 3-0-0
ಪ್ರತಿಗೆ ರೂ. 0-2-0

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30
ವಾರ ೨೩

NAVAYUGA WEEKLY Post Box No. 22 UDIPI, S. K.

Vol 30
No. 23

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

ಭಾರತವು ಪ್ರಜಾರಾಜ್ಯವಾಗಿ ಮಾ...ಟ್ಟ ಐದನೇ ದಿನದಲ್ಲಿ 'ಸರ್ವೋದಯ' ...ಚರಣೆ ನಡೆಯಿತು. ರಾಷ್ಟ್ರದ ಜನ ಮಾನ್ಯರಿಂಗೆ ಹೊಣೆಗಾರಿಕೆ ಬಂದ ದಿನದ ಬಸ್ಕೋಣೆಯಾದ ಬೆನ್ನಲ್ಲೇ ರಾಷ್ಟ್ರಪಿತ... ರು. ಅಣ್ಣನ ಕೈಬಳೆ ಕಳವು ಮಾಡುವಷ್ಟು, ಮತ್ತೊಮ್ಮೆ ವೇಶ್ಯಾಗೃಹ ಪ್ರವೇಶಿಸುವಷ್ಟು ಚಪಲತೆ ಅವರಲ್ಲಿತ್ತು. ವ್ಯಕ್ತಿಗತ ಮಹತ್ವಾಕಾಂಕ್ಷೆ ಹಾಗೂ ಧನಾಕಾಂ... ಫಲಿಸುವಂತಹದಿರುವುದರಿಂದ ತಮ್ಮ ದೌರ್ಬಲ್ಯಗಳ ಕ್ಷಿಪ್ರ ನಿವಾರಣೆಯಾಗಲಿಲ್ಲವೆಂದು ಯಾರೂ ನಿಂ... ಕೆಗೊಳ್ಳಬಾರದೆಂಬ ಪಾಠ ಇಲ್ಲಿದೆ.

# ...ಬಾಪೂಜಿಯಿಂದ ಕಲಿಯಬೇಕಾದ ಪಾಠಗಳು

...ಸರ್ವರ ಹಿತಕ್ಕಾಗಿ ತನ್ನ ಪ್ರಾಣಾರ್ಪಣ ಮಾಡಿದ ದಿನದ ಗಂಭೀರ ಸ್ಮರಣೆ ...ಯಿತು

ಜನವರಿ ತಾ. 26ರಲ್ಲಿ ಆದಿಯಾಗಿ, ಜ... ತಾ. 30ರಲ್ಲಿ ಅಂತ್ಯವಾದ 5 ದಿನ ...ಅವಧಿಯು ಭಾರತೀಯ ಜನಸಾಮಾ...ನ್ಯರಿಗೆ ಆತ್ಮಶುದ್ಧಿಯ ಮತ್ತು ಅನು...ಸಂಪಾದನೆಯ ಕಾಲವಾಗಿ ಕಳೆದಿದ್ದ... ಜನತೆಯ ಭವಿಷ್ಯದ ಕುರಿತು ಚಿಂತಿ... ಅಂಶವೇ ಇನ್ನಿಲ್ಲ. ಅಥವಾ ತಾ. ...ರಲ್ಲಿ ಬಂದಿದ್ದ ಅಧಿಕಾರವನ್ನು ತಾ. ...ಕೊಡುತ್ತಿದ್ದ ಬೋಧನೆಗನುಸಾರವಾ...ಗಿಯೇ ಉಪಯೋಗಿಸಿಕೊಳ್ಳುವೆವೆಂಬ ಶ... ಜನತೆಯದಾಗಿದ್ದರೂ ರಾಷ್ಟ್ರದ ಭವಿ...ಷ್ಯ ಉಜ್ವಲವಾಗುವದು.

ಜನತೆಯು ಗಾಂಧಿಜೀಯಿಂದ ಈ ...ಲದಲ್ಲಿ ಕಲಿಯಬೇಕಾದ ಪಾಠ...ಗಳಾವುವು? ರಾಷ್ಟ್ರಪಿತನನ್ನು ...ಕೊಂಡೇ ರಾಷ್ಟ್ರವು ಜನತೆಯದಾಗಿರು...ವಾಗ, ಈ ಜನತೆಯು ಆ ಜನಕನಿಂದ ಪ...ಡೆದುಕೊಳ್ಳಬೇಕಾದ ಅಂಶಗಳಾವುವು?

ರಾಷ್ಟ್ರದ ಜನತೆಯೀಗಲೂ ಅಜ್ಞಾನಿಗ...ಳಾಗಿದ್ದಾರೆ; ಅಪೂರ್ಣರಾಗಿದ್ದಾರೆ; ಒಂ...ದು ರೀತಿಯಿಂದ ಮಂಕಾಗಿಯೇ ಇದ್ದಾ... ರಾಷ್ಟ್ರಪಿತ ಸರ್ವಜ್ಞಾನಿಯಾಗಿದ್ದರು; ...ಮನುಷ್ಯತ್ವ ಪೂರ್ಣಗೊಂಡವರಿದ್ದರು; ...ಸಾತ್ವಿಕನಾಗಿದ್ದರು. ಪೂರ್ಣ ಅವತಾ...ರ ಮತ್ತು ಪೂರ್ಣ ಹೊಣೆಗಾರಿಕೆಯ ...ತಂತ್ರ ಗಳಿಸಿರುವ ಸಾರ್ವಜನಿಕರು, ...ಕ್ರಿಮೇಲ್ಪಂಕ್ತಿಯಾಗಿ ಆ ಪೂರ್ಣ ...ನವ ಮಹಾತ್ಮಾಜೀಯ ಕಡೆಗೇನೇ ...ಲೂ ನೋಡಬೇಕಾದುದಗತ್ಯ.

...ಹುಡುಗಾಟಿಕೆಯಲ್ಲಿ ಸರ್ವಸಾಮಾನ್ಯ...ರ ಲಾಲಸೆಗಳೆಲ್ಲವೂ ಗಾಂಧಿಯವರ...ಲ್ಲಿತ್ತು. ತನ್ನ 17ನೇ ವಯಸ್ಸಿನಲ್ಲೇ ...ವಿನ ತಂದೆಯಾಗುವಷ್ಟು ಸಂಸಾರಿ...ಕ ಸುಖದುಃಖಗಳಲ್ಲಿ ಅವರು ಮುಳುಗಿದ್ದ... ಕ್ಷೆಯಿಂದ ವಕೀಲೀ ಉದ್ಯೋಗವನ್ನು ಸ್ವೀಕರಿಸಿದ್ದರು. ಆದ್ದರಿಂದ ಸಾಮಾನ್ಯ ಜೀವನ ವಿಧಾನಗಳಲ್ಲಿ ತೊಡಗಿರುವ ಅಥವಾ ಸಂಸಾರಿಗಳಾಗಿರುವ ಯಾರೇ ಆದರೂ ಗಾಂಧೀಜಿಯ ಜೀವನಾದರ್ಶವು ತಮಗೆ ಎಟಕದಂತಹ ವಿಷಯವೆಂದು ಹೆದರಬೇಕೆಂದಿಲ್ಲ.

ವಕಾಲತಿಗಾಗಿ ದಕ್ಷಿಣಾಫ್ರಿಕಕ್ಕೆ ಹೋಗಿದ್ದಾಗ, ಅಲ್ಲಿ ಬ್ರಿಟಿಷರು ತೋರಿಸುತ್ತಿದ್ದ ವರ್ಣದ್ವೇಷಜನ್ಯ ಅತ್ಯಾಚಾರಗಳಿಗೆ ಸ್ವತಃ ಬಲಿಯಾಗಿ ಗಾಂಧಿಜೀಯು ಅಭಿಮಾನ ಮತ್ತು ಆತ್ಮಶಕ್ತಿ ಜಾಗೃತಿಗೊಂಡರೂ, ಅವರು ಆದಿಭಾಗದಲ್ಲಿ ಒಮ್ಮೆಗೇ ಮಹಾತ್ಮನಾಗಿ ಮಾರ್ಪಡದೆ, ತನ್ನ ಪತ್ನಿಯ ಮೇಲೆ ಮತ್ತಿತರರ ಕಡೆಗೆ ತನ್ನ ಅಧಿಕಾರ ಚಾಲೂಮಾಡಲು ಹವಣಿಸುತ್ತಿದ್ದರೆಂಬುದು ಅವರ ಆತ್ಮಚರಿತ್ರೆಯಿಂದ ತಿಳಿಯುತ್ತದೆ. ಆತ್ಮಶುದ್ಧೀಕಾರ್ಯ ಅಥವಾ ಯೋಗ್ಯತಾ ಸಂಪಾದನೆಯು ಕ್ರಮವಾಗಿ...

ಅರಾಳ ಕಾಯಿದೇ ಕ್ರಮಗಳಿದ್ದ ದಕ್ಷಿಣಾಫ್ರಿಕದಿಂದ ಭಾರತಕ್ಕೆ ಮರಳಿದಾಗ, ಇಲ್ಲಿ 'ರೌಲೆಟ್ ಆಕ್ಟ್' ನಂತಹ ಕಠೋರ ಶಾಸನವಿದ್ದುದನ್ನು ಕಂಡು, ಇವೆಲ್ಲಕ್ಕೂ ಮೂಲವಾದ ಗುಲಾಮಗಿರಿಯನ್ನು ನಿವಾರಿಸಿಯೇ ಸಿದ್ಧವೆಂಬ ಪ್ರಾಣಾವಧಿ ಸಾಹಸಕ್ಕೆ ಮಹಾತ್ಮಾಜೀ ತನ್ನನ್ನು ತಾನರ್ಪಿಸಿಕೊಂಡಿದ್ದರು. ಆಪತ್ತಿನ ಮೇಲೆ ಆಪತ್ತೊದಗಿದಾಗ ಅವುಗಳ ಮೂಲಭೇದನೆಯು ಹತಬೆಳೆಯಬೇಕೇ ಹೊರತು ಎದೆ ಕಳಕೊಳ್ಳಬಾರದೆಂಬ ನಿರ್ದೇಶಕತ್ವ ಇಲ್ಲಿದೆ.

1920ರಲ್ಲಿ ಅಸಹಕಾರ ಚಳವಳ ಹೂಡಿ ಅದು ಜನತೆಯ ದೌರ್ಬಲ್ಯದ ದೆಸೆಯಿಂದ ಗುರಿಮುಟ್ಟದೆಹೋದರೂ 1930ರಲ್ಲಿ ಉಪ್ಪಿನ ಸತ್ಯಾಗ್ರಹ, ಆ ಮೇಲೆ 1932ರಲ್ಲಿ ಕಾಯದೇ ಭಂಗ ಚಳವಳ ಹೂಡಿದ್ದರು. ಇವುಗಳಲ್ಲಿಯೂ ಸಾಕಷ್ಟು ಸಾರ್ವಜನಿಕ ಶಕ್ತಿ ಯೋಗ್ಯತೆಗಳು ಕಂಡುಬಾರದೆ ವಿಜಯ ಕೈಸೇರದಿದ್ದರೂ ನಿರಾಶರಾಗದೆ 1942ರಲ್ಲಿ 'ಕ್ವಿಟ್ ಇಂಡಿಯಾ' ಆಂದೋಲನವೆಬ್ಬಿಸಿದರು. ನ್ಯಾಯವಾದ ಒಂದು ಉದ್ದೇಶ ಸಾಧನೆಯಲ್ಲಿ ಫಲಪಡೆಯುವ ಮಟ್ಟಿಗೆ ಮೇಲಿಂದ ಮೇಲೆ ಪರಾಭವಗೊಂಡರೂ ಮರಳಿಮರಳಿ ಯತ್ನಿಸಬೇಕು, ಎಂಬ ಮೇಲ್ಪಂಕ್ತಿ ಇಲ್ಲಿದೆ.

ಕೊನೆಯವರೆಗೂ ತನ್ನ ಚಳವಳಗಳ ಕಾಲದಲ್ಲೇ ಬ್ರಿಟಿಷ್ ಆಡಳಿತೆಯನ್ನು ಬರ್ಖಾಸ್ತು ಪಡಿಸಲು ಗಾಂಧಿಜೀಯಿಂದಾಗಿರಲಿಲ್ಲವಾದರೂ ಗಾಂಧಿಜೀಯ ಚಳವಳಗಳ ದೆಸೆಯಿಂದಾಗಿಯೇ ಬ್ರಿಟಿಷ್ ಆಳ್ವಿಕೆಗೆ ಇಲ್ಲಿ ನಿಂತಿರುವುದು ಅಸಾಧ್ಯವಾಯಿತೆಂಬುದನ್ನೂ, ಬ್ರಿಟಿಷ್ ಆಡಳಿತೆಯು ಕ್ರೂರತೆ ಪರಮಾವಧಿ ಅತೃಪ್ತಿಯನ್ನು ನಿರ್ಮಿಸಿದ್ದರೂ ಬ್ರಿಟಿಷ್ ಜನರ ಕುರಿತು ಯಾವ ದ್ವೇಷಾಸೂಯೆಯನ್ನೂ ಗಾಂಧಿಜೀ ಹುಟ್ಟಿಸಿರಲಿಲ್ಲವೆಂಬುದನ್ನೂ ಈ ಸಂದರ್ಭದಲ್ಲಿ ನೆನಪಿನಲ್ಲಿಡಬೇಕು. ಸಾತ್ವಿಕರೂಪೀ ವಿರೋಧದ ಪ್ರತ್ಯಕ್ಷ ಪರಿಣಾಮ ಹೇಗೆ ಕಂಡರೂ ಅವ್ಯಕ್ತ ಸತ್ಫಲವಿದ್ದೇ ಇದೆ ಎಂಬುದನ್ನೂ, ಅದು ವಿಷಯವನ್ನಲ್ಲದೆ ವ್ಯಕ್ತಿಯನ್ನು ಖಂಡಿಸಬಾರದೆಂಬುದನ್ನೂ ಇದರಿಂದ ಅರಿತುಕೊಳ್ಳಲಿಕ್ಕಿದೆ.

ಒಂದು ರಾಷ್ಟ್ರದ ರಾಜಕೀಯ ಹೋರಾಟವನ್ನೂ ಸತ್ಯ, ಅಹಿಂಸೆಯಂತಹ ಉಪಕರಣಗಳನ್ನು ಉಪಯೋಗಿಸಿದ ಸೇನಾನಿಯೆಂದರೆ ಇಡೀ ಪ್ರಪಂಚದಲ್ಲಿ ಗಾಂಧಿಜೀಯೊಬ್ಬರೇ. ಈ ಶಸ್ತ್ರ ವಿದ್ಯೆಯಲ್ಲಿ ಗಾಂಧಿಜೀಗೆ ಅವರ ನಿತ್ಯಜೀವನದ ಅನುಭವವೇ ಗುರು. ತನ್ನ ಮನಸ್ಸಾಕ್ಷಿಯನ್ನು ನಿರ್ಮಲವಾಗಿರಿಸಿ, ಆ ಬರೆಯಲ್ಲಿ ನಲ್ಲೇ ಪ್ರತಿಯೊಂದು ವಿಷಯ ಮತ್ತು ಘಟನೆಯನ್ನು ಪರೀಕ್ಷಿಸುವ ಅಭ್ಯಾಸವು ಗಾಂಧಿಜೀಯದಾಗಿದ್ದುದರಿಂದಲೇ ಅವರು

The Canara Industrial & Banking Syndicate Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925. ಪ್ರಧಾನ ಕಾರ್ಯಾಲಯ ಉಡುಪಿ, ದ. ಭಾರತ.

ಕುಟುಂಬದ ಯಜಮಾನನ ಜವಾಬ್ದಾರಿ

ಈಗಿನ ನಿಮ್ಮ ಸಂಪಾದನೆಯು ಎಷ್ಟೇ ಉತ್ತಮವಿರಲಿ, ನೀವು ಕುಟುಂಬದ ಯಜಮಾನನಾಗಿದ್ದಲ್ಲಿ, ನಾಳಿನ ಕುಟುಂಬದ ಪೋಷಣೆಯ ಚಿಂತೆಯು ನಿಮಗೆ ಇದ್ದೇ ಇರಬಹುದಷ್ಟೆ. ಆದರೆ ಈಗಿನ ನಿಮ್ಮ ಸಂಪಾದನೆ ಸಮಯದಲ್ಲೇ ಉಳಿತಾಯದ ಪ್ರವೃತ್ತಿಯೂ ನಿಮ್ಮಲ್ಲಿದ್ದರೆ ನಾಳಿನ ಸಮಸ್ಯೆಗಳೆಲ್ಲವನ್ನೂ ಬಗೆಹರಿಸಲು ಶಕ್ಯವಿದೆ. ನಮ್ಮಲ್ಲಿ ಸೇವಿಂಗ್ಸ್ ಬೇಂಕ್ ಲೆಕ್ಕವನ್ನು ತೆರೆಯಿರಿ. ಅಂತೆಯೇ ನಮ್ಮ ರಜತ ಮಹೋತ್ಸವದ ಕ್ಯಾಷ್ ಸರ್ಟಿಫಿಕೇಟುಗಳಿಗಾಗಿ ವಿಚಾರಿಸಿರಿ.

ಟಿ. ಎಂ. ಎ. ಪೈ.
ಚೆಯರ್‌ಮೆನ್ ಮತ್ತು ಮೆನೇಜಿಂಗ್ ಡೈರೆಕ್ಟರ್.

ಹ ಗಾದರು. ಯಾವುದೇ ಅನುಕರಣೆಗೆ ಕಟ್ಟುಬೀಳದೆ ತಂತಮ್ಮ ಮನಸ್ಸಾಕ್ಷಿಯನ್ನು ಶುದ್ಧವಾಗಿಟ್ಟುಕೊಂಡು, ಅದನ್ನೇ ಶಕ್ತ್ಯಾನುಸಾರ ಅನುಸರಿಸುವಷ್ಟೇ ಸಾರ್ಥಕ ಜೀವಿಯೆಂಬ ಆದರ್ಶ ಇಲ್ಲಿದೆ.

ಮಹಾತ್ಮಾಜೀಯ ಉಡುಪು ತೀರಾ ಬಡ ದರ್ಜೆಯವರ ಒಂದೆರಡು ಬೈರಾಸುಗಳು ಮಾತ್ರ; ಆಹಾರವೂ ಅದಕ್ಕನುಗುಣವಾಗಿ ಸಾದಾ ತರಗತಿಯದು. ನಿತ್ಯವೃತ್ತಿ ಕೈಲಾಗದವರ ಕಸಬಾಗಿರುವ ನೂಲುವಿಕೆ. ಭಾಷಣ ಮತ್ತು ಬರಹ ಸಾಮಾನ್ಯರಿಗೂ ಅರ್ಥವಾಗುವಂತಹ ಸರಳ ಶೈಲಿಯಲ್ಲೇ. ಅತ್ಯುನ್ನತ ಸ್ಥಾನದ ಶಕ್ತಿ, ಯೋಗ್ಯತೆಗಳಿದ್ದೂ ತೀರಾ ಕೆಳ ತರಗತಿಯವರ ಮಾರ್ಜ ವರ್ತನೆಗಳಿದ್ದುದರಿಂದಲೇ ಅವರು ಮಹಾತ್ಮನಾಗಿ, ಸರ್ವರ ಹೃದಯಾಧಿದೇವತೆಯಾದರು. ರೀತಿ, ರಿವಾಜುಗಳಲ್ಲಿಂದ ಘನತೆ ಮತ್ತು ಅವುಗಳಿಗೆ ದೊರೆಯದ ಗೌರವ ಸಾದಾತನ, ಸರಳತೆಗಿದೆ ಎಂಬುದನ್ನು ಇದರಿಂದ ಕಲಿತರಾಯಿತು.

ಹಾಗಿದ್ದರೂ ತಾನು ಸತ್ಯದ ಆರಾಧಕನೇ ಹೊರತು ಅದರ ಅಧಿಪತಿಯಾಗಿಲ್ಲವೆಂದು ಗಾಂಧಿಜೀ ಪ್ರತಿ ಸಂದರ್ಭದಲ್ಲೂ ಹೇಳುತಿದ್ದರು. "ನಾನು ಹಿಮಾಲಯದಂತಹ ತಪ್ಪುಮಾಡಿದೆ" ಎಂದು ಅವರೇ ಒಪ್ಪಿಕೊಂಡ ನಿದರ್ಶನಗಳೂ ಇವೆ. ಯಾವ ವಿಭಾಗದಲ್ಲಿ ಎಷ್ಟೇ ತುಂಬಿಕೊಂಡವನಿದ್ದರೂ ಅಪಾರವಾದೀ ಪ್ರಪಂಚದಲ್ಲಿ ಪೂರ್ಣತೆಪಡೆದವರಿಲ್ಲವೆಂಬ ನೆನಪು ಯಾವುದೇ ವಿಧದ ದುರಭಿಮಾನ ಪಡುವಾಗಲೂ- 'ತಪ್ಪುಮಾಡದವರಿಲ್ಲ' ವೆಂಬ ನೆನಪು ಯಾವುದೇ ವಿಧದ ನಿರಾಶೆ ಮತ್ತು ಸಂತಾಪ ಮೊಳೆಯುವಾಗಲೂ- ಮೂಡಬೇಕಾದುದು ಅಗತ್ಯ.

---

### ನೋಟೀಸು

ಕುಂದಾಪುರ ಡಿ. ಮು. ಕೋರ್ಟನಲ್ಲಿ.

O P. No 5/1950.

ಅರ್ಜಿದಾರ ಮ್ಯಸರ ಬುಡಿಜಾಬಿ, ಕಾಜಿ ಪಕೀರ ಸಾಹಿಬರ ಮಗಳು ವ ಅಬ್ದುಲ ರಜಾಕ ಸಾಹೆಬರ ವಿಧವೆ ಯುವಳ ರಕ್ಷಕ ತಂದೆ ಕಾಜಿ ಪಕೀರ ಸಾಹೆಬ, ಜಾತಿ ಶಾಬು ಸಾಹೆಬನ ಮಗಾ. ಉಡ್ಪಿ ತಾಲ್ಲೂಕು ಪಡು ತೋನ್ಸೆ ಗ್ರಾಮದಲ್ಲಿರುವವರು.

Post Kallyanapur.

ಎದ್ರಿ ಕಿದಿಯೂರು ಹಸನ್ ಸಾಹೆಬ, ಕಿದಿಯೂರು ಮ್ಯದಿನ ಸಾಹೆಬನ ಮಗಾ, ಉಡ್ಪಿ ತಾಲ್ಲೂಕು ಕೋಡಿ ಗ್ರಾಮದ ಬೆಂಗ್ರೆಯಲ್ಲಿರುವವಾ. Post Hangarcatta.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನಂದ್ರೆ:-

ಅರ್ಜಿದಾರಳು ತನ್ನ ಗಂಡ ಹಾಲಿ ಮೃತ ಅಬ್ದುಲ ರಜಾಕ ಸಾಹೆಬಗೆ ಬರತಕ್ಕ ಸಾಲದ ಹಣದ ಪೈಕಿ ತನ್ನ ಅಂಶದ ಹಣ ರೂ 337-11-0 ವಸೂಲಿ ಕುರಿತು ತನ್ನ ಹೆಸರಿಗೆ ಸಕ್ಸೆಸನ್ ಸರ್ಟಿಫಿಕೆಟುಕೊಡ್ಬೇಕಾಗಿ ದಾಖಲು ಮಾಡಿದ ಮೇಲಿನ ಅರ್ಜಿಯು ತಾ. 16-2-1950ಕ್ಕೆ ಮೇಲ್ಕಂಡ ಕೋರ್ಟನಲ್ಲಿ ತನ್ಕಿಗೆ ಯಿಡೋಣಾಗಿರುತ್ತದೆ. ಆ ಕುರಿತು ಯಾರದ್ದಾದರೂ ಆಕ್ಷೇಪಣೆ ಯಿದ್ದರೆ ಸದ್ರಿ ದಿವ್ಸ ಪೂರ್ವಾನ್ಹ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟನಲ್ಲಿ ಹಾಜ್ರಾಗಿ ಜಾಹಿರು ಮಾಡತಕ್ಕದ್ದೆಂದು ಈ ಮೂಲಕ ಸರ್ವ ಜನರಿಗೆ ತಿಳಿಸೋಣಾಗುತ್ತದೆ.

(Sd) M Mahabala Hebbar,
Advocate for Petitioner.

ಮೊಕಾಂ ಕುಂದಾಪುರ ತಾ 26-1-1950.

---

ಖ್ಯಾತ ರಂಗದಲ್ಲೇ ಅಗ್ರಣಿ ಗಾಂಧೀಜೀ ಕೆಳಗೊತ್ತಲ್ಪಟ್ಟವರನ್ನೇ ನೋಡಿ, ಅವರನ್ನು ಮೇಲೆತ್ತುವ ಕಾರ್ಯಕ್ರಮ ಕಡೆಗೆ ಹೆಚ್ಚೇ ಒಲಿಯುತ್ತಿದ್ದರು; ಪ್ರತಿಯೊಂದು ಕ್ಷೇತ್ರದಲ್ಲೂ ಮೇಲ್ತರಗತಿಯವರ ಕಡೆಗೆ ದೃಷ್ಟಿಯಿಟ್ಟೇ ಕಾರ್ಯ, ವರ್ತನೆ, ಧೋರಣೆ ವಹಿಸುವವರು ಈ ಮಟ್ಟಿಗೆ ನಿಜಕ್ಕೂ ಗಾಂಧಿಜಿಯನ್ನು ಅನುಕರಿಸಿದರಾಯಿತು

ತ್ರಿಕರಣ ಶುದ್ಧತೆಯಲ್ಲಿ ಗಾಂಧಿಜೀ ಅಸಾಮಾನ್ಯನಿದ್ದಂತೆಯೇ ತ್ರಿಕಾಲಜ್ಞಾನ ಮತ್ತು ಕಾಲೋಚಿತ ವರ್ತನೆಗಳ ಮಟ್ಟಿಗೂ ಅವರು ಅದ್ವಿತೀಯರೇ ಇದ್ದರು. ಅವರ ದೇವಭಕ್ತಿ, ಧಾರ್ಮಿಕಾಚರಣೆಗಳು ಧರ್ಮಕ್ಕೇನೇ ಪ್ರಾಧಾನ್ಯತೆಯಿರುವ ಭಾರತದ ಜನಸಾಮಾನ್ಯರ ಹೃದಯವನ್ನು ಆಕರ್ಷಿಸಿಕೊಳ್ಳಲು ಕಾರಣಗಳಾದುವು. ಅವರ ಅಹಿಂಸಾತ್ಮಕ ಚಳವಳಗಳು ಸಾರ್ವಜನಿಕರೆಲ್ಲರ ಸಮಭಾಗಿತ್ವ ಗಳಿಸಿಕೊಳ್ಳಲು ಅನುಕೂಲವಾದಂತೆಯೇ, ಅತಿಪ್ರಬಲ ಶಸ್ತ್ರ ಶಕ್ತಿಯ ಬ್ರಿಟಿಷ್ ಸಾಮ್ರಾಜ್ಯದಿದಿರ ಹೋರಾಟದಿದಿರು ನಿಶ್ಶಸ್ತ್ರ ಜನತೆಯ ಪಾಲಿಗೆ ಅನಿವಾರ್ಯವಾಗಿಯೂ ಇದ್ದುವು. ಖಾದಿ, ಅಸ್ಪರ್ಶತಾ ನಿವಾರಣೆ, ಹಿಂದೂ ಮುಸ್ಲಿಂ ಐಕ್ಯತೆ, ಸ್ತ್ರೀಜಾಗರಣಾದಿ ಅವರ ಕಾರ್ಯಕ್ರಮಗಳು ರಾಷ್ಟ್ರದ ವೈಶುದ್ಧ್ಯಯಂತೆಗೇ ಮನೋಶುದ್ಧಿಯನ್ನೂ ಸಾಧಿಸುವಂಥವುಗಳಿದ್ದುವು. ಸ್ವತಃ ಅವರ ಅತಿಮಾನುಷಶಕ್ತಿ ಮತ್ತು ಗತಿಹೀನ ಮನುಷ್ಯನ ಮರ್ಜಿಗಳು ಭಾರತೀಯರ ಬಂಧವಿಮೋಚನ ಮತ್ತು ಭಾರತೀಯ ಸಾಮಾನ್ಯರ ನಿಕಟ ಸಂಪರ್ಕಕ್ಕೆ ಅವಶ್ಯಕವಿದ್ದುವು. 'ಜನತೆಗಾಗಿ ಮತ್ತು ಜನತೆಯೊಡನೆ ನಾವು' 'ಕಾಲ ಮತ್ತು ಪರಿಸ್ಥಿತಿಗನುಗುಣವಾಗಿ ಮಾತೃಕೃತಿ' ಎನ್ನುವವರೆಲ್ಲರೂ ಈಮಟ್ಟಿಗೆ ಗಾಂಧಿಜೀಯನ್ನೇ ಮೇಲ್ಪಂಕ್ತಿಯಾಗಿ ಇಟ್ಟುಕೊಳ್ಳಬೇಕು.

ಹಿಂಸಾಚರಣೆಗಳ ಬಿಸಿಯೇನೂ ಇಲ್ಲದೆ, ತೀವ್ರ ಬದಲಾವಣೆಗಳನ್ನು ತಂದೊಡ್ಡುವ ಮಟ್ಟಿಗೆ ಗಾಂಧಿಜೀ ಅತ್ಯುಗ್ರ ಕ್ರಾಂತಿಕಾರ; ಶಸ್ತ್ರ ಸಲಕರಣೆಯಿಲ್ಲದೆ, ಆಕ್ರಮಣಗಾರರನ್ನು ಓಡಿಸಿ ಬಿಡುವ ಮಟ್ಟಿಗೆ ಅವರು ಅಗ್ರಗಣ್ಯ ಸೇನಾನಿ; ನಾಶಾಪಹಾರಗಳಿಲ್ಲದೆ ಸಮಾನತೆ ಸಾಧಿಸುವ ಮಟ್ಟಿಗೆ ಅವರು ಅತ್ಯುಜ್ವಲ ಸಮತಾವಾದಿ. ವಿಶ್ವಕ್ರಾಂತಿಕಾರರಿಗೆ-ಸೇನಾನಿಗಳಿಗೆ— ಸಮತಾವಾದಿಗಳಿಗೆ — ಪರಿಶುದ್ಧತೆಯ ಮಟ್ಟಿಗೆ ಗಾಂಧಿಜೀಯ ಉನ್ನತ ಅಂತಸ್ತಿಗೇರುವುದಸಾಧ್ಯವಾದ್ದರಿಂದಲೇ ಅವರು ಕೆಳಮಟ್ಟದ ದ್ವೇಷಾಸೂ[ಯೆ] ಹಿಂಸೆ, ಮೇಲಾಟಗಳನ್ನು ಹೊಡೆದು[...] ರೆ. ಶುದ್ಧ ಹೃದಯ, ಸಾತ್ವಿಕ ಭಾ[...] ಗಳಿಂದಲೇ ತೀವ್ರ ಸುಧಾರಣೆಗಳನ್ನು [...] ಧಿಸಬಹುದೆಂಬುದನ್ನು ಎಲ್ಲಾ ತೀ[...] ಗಾಮಿಗಳೂ ಗಾಂಧಿಜೀಯಿಂದ ಕಲಿ[...] ಕೊಳ್ಳಬಹುದು.

'ಹೆದರಬೇಡ; ಹೆದರಿಸಬೇಡ' '[...] ಯಬೇಡ; ಬಲಿಗೆಗೊಳಗಾಗಬೇಡ' [...] ಬುದೇ ಗಾಂಧಿಜೀಯ ನಕಾರ ಸೂ[...] ಗಳು. 'ಬಂಡೆಯ ದೃಢತೆ ಮತ್ತು ಬ[...] ಯ ಮೃದುತ್ವವುಳ್ಳ ಮನಸ್ಸು ಬೇ[...] 'ಸತ್ಯದ ಮೈಗಾವಲಾಗಿ ಸಾವೇ [...] ವಂತಿದ್ದರೂ ಎಲ್ಲಾ ಸಂದರ್ಭಗಳ[...] ಸತ್ಯಕ್ಕೆ ಆಮಂತ್ರಣ ಕೊಡಬೇ[...] ಸಾಯುವ ಮತ್ತು ನೋಯುವ [...] ನ್ನು ಬೇರಾರಿಗೂ ಕೊಡದೆ ಅದು ನ[...] ಆಗಿರಬೇಕು' ಎಂಬುದೇ ಗಾಂಧಿಜೀ[...] ಸ್ವೀಕಾರಸೂಚನೆಗಳು. ಈ ಬೇಡ-ಬೇ[...] ಗಳನ್ನು ತಂತಮ್ಮ ಶಕ್ತಿ ಮತ್ತು [...] ಗತಿಗನುಸಾರವಾಗಿ ಸರ್ವರೂ ಮ[...] ಮಾಡಿಕೊಂಡು ವರ್ತಿಸಿದರಾಯಿತು.

ಹೃದಯವನ್ನಲ್ಲದೆ ಪರಕೀಯರ[...] ರಾವುದನ್ನೂ ಅವರು ಸೂರೆಮಾಡಿದು[...] ಶಿಕ್ಷೆಯ ಮಟ್ಟಿಗೆ ಅವರು ತನ್ನನ್ನು ತ[...] ಶಿಕ್ಷಿಸಿಕೊಂಡುದೊಂದಲ್ಲದೆ ಪರರನ್ನು [...] ಕ್ಷಿಸಿದುದಾಗಲಿ, ಪರಕೀಯ ಶಿಕ್ಷೆಗೆ [...] ನು ಒಳಗಾದುದಾಗಲಿ ಇಲ್ಲ. ಒ[...] ಸಂಪಾದನೆ ಮತ್ತು ಆತ್ಮದಮನದ [...] ಟ್ಟಿಗೆ ಸರ್ವರೂ ನಾವ ಧಾರ್ಯನು[...] ಗಾಂಧೀ ಅನುಯಾಯಿಗಳಾದರಾಯಿ[...]

ಈ ದಿನ ಕೇವಲ ವೇಷಭೂಷ[...] ಮಟ್ಟಿಗೆ ಗಾಂಧಿಜೀಯನ್ನನುಕರಿಸ[...] ರು—ಪರಪೀಡೆಗಾಗಿ ಅಸಹಕಾರ, [...] ವಾಸ ಇತ್ಯಾದಿಗಳನ್ನು ಆಚರಿಸು[...] ಲ್ಲಿ ಮಾತ್ರ ಗಾಂಧೀ ಭಕ್ತರಾಗ[...] ರು—ಮುಂಭಾಗದ ಬೋರ್ಡುಗಳ, [...] ಣ ಲೇಖನಗಳ, ಮಟ್ಟಿಗಷ್ಟೇ ಗಾ[...] ಸ್ಮರಣೆ ಮಾಡುವವರು – ಮೇಲಿನ [...] ವಿಧಾನಗಳಲ್ಲೂ ತ್ರಿಕರಣಪೂರ್ವಕ[...] ಸರ್ವಶಕ್ತಿಯಿಂದ ಗಾಂಧಿಜೀಯನ್ನನುಕರಿಸಲು ಪ್ರಯತ್ನಿಸಿದರಾಯಿತು; ಮೈಲ್ಲಾ ಆಚರಣೆಗಳ ವೇಳೆಯ[...] ಗಾಂಧೀ ಆದರ್ಶವನ್ನು ನೆನಪು ವ[...] ಕೊಂಡರಾಯಿತು.

ಎಲ್ಲರೂ ಗಾಂಧಿಗಳಾಗಲಾರರು. [...] ರೆ ಗಾಂಧಿಜೀಯ ಪಾಠಗಳನ್ನು [...] ಕೊಂಡರೆ ಎಲ್ಲರೂ ಉತ್ತಮರಾಗಬ[...] ಗಾಂಧಿಜಿಯ ಕನಸಿನ, ತ್ರೇತಾಯ[ುಗದ] 'ರಾಮರಾಜ್ಯ' ಅಥವಾ 'ಭೂಸ್ವರ್ಗ" ಮೂಡಲಾರದೇನೋ. ಆದರೆ ಅವರ[...] ರ್ಶವನ್ನು ಅನುಕರಿಸಿದರೆ ಸಾರ್ಥಕ, ಸಮಾನತಾ ಹಾಗೂ ಅತ್ಯುನ್ನತ ಜ[...] ರಾಜ್ಯ ಮೂಡಲಡ್ಡಿಯಿಲ್ಲ.

---


## ಕಾರ್ಯನಿರ್ವಹಣೆಯು ರಚನಾತ್ಮಕ ಕಾರ್ಯಕ್ರಮವು

## ಅಭ್ಯುದಯ ಮತ್ತು ಅಭಿವೃದ್ಧಿಯ ಹೆಜ್ಜೆಯೊಡನೆ ಓಡಲು

**ಯಾವಾಗಲೂ ನಮಗೆ ಸಹಾಯಕವಾಗುತ್ತದೆ.**

ಈ ವಿಷಯವು ಕೆಳಗೆ ನಮೂದಿತವಾಗಿರುವ ಭಾರತದ ಪ್ರಖ್ಯಾತ ಮತ್ತು ಪ್ರಮುಖ ಇನ್‌ಷೂರೆನ್ಸ್ ಗೆಜೆಟ್ಟುಗಳ ಪ್ರಶಂಸೆಯಿಂದ ಸಿದ್ಧವಾಗುತ್ತದೆ

x x x x x

(ಎ) "ಇನ್‌ಷ್ಯೂರೆನ್ಸ್ ವರ್ಲ್ಡ್" ತನ್ನ ಅಕ್ಟೋಬರ್ ೧೯೪೯ರ ಸಂಚಿಕೆಯಲ್ಲಿ ಈ ರೀತಿ ಬರೆಯುತ್ತದೆ:

"ವರ್ಷದೊಡನೆ ಆಗಮಿಸಿದ ಹಲವು ಕುಂದುಕೊರತೆಗಳಿದ್ದಾಗ್ಯೂ ೧೯೪೮ನೇ ವರ್ಷ ಬೆಂಗಳೂರು ಪ್ರಾವಿಡೆಂಟಿಗೆ ವ್ಯಾಪಾರ ದೃಷ್ಟಿಯಲ್ಲಿ ಫಲಕಾರಿಯಾದ ಮತ್ತೊಂದು ವರ್ಷವಾಯಿತು.... ..ಈ ವಿಪರ್ಯಾಸಾತ್ಮಕ ಸಾಲಿನ ಹಿನ್ನೆಲೆಯನ್ನು ಗಮನಿಸಿದರೆ ಇದು ತುಂಬ ತೃಪ್ತಿಕರವೆಂದೇ ಗಣಿಸಬೇಕು,.....ಈ ವರ್ಷದಲ್ಲಿ ಸಂಸ್ಥೆಯ ಬಡ್ತಿಯು ಶೇ. ೪೨ಕ್ಕೆ ಹೆಚ್ಚಿದ್ದಕ್ಕಾಗಿ ಸಂತೋಷ ಸೂಚಿಸಬೇಕು. ಬೆಂಗಳೂರು ಪ್ರಾವಿಡೆಂಟಿನ ಏಕ ಮಟ್ಟದ ಅಭ್ಯುದಯಕ್ಕೆ, ಸಂಸ್ಥೆಯ ಅಧ್ಯಕ್ಷರೂ ಹಾಗೂ ಮ್ಯಾನೇಜಿಂಗ್ ಡೈರೆಕ್ಟರರಾದ ಶ್ರೀ ಸೆಟ್ಟಿ, ವೆಂಕಟರಾಮಯ್ಯನವರು ಹಾಗೂ ಕಾರ್ಯದರ್ಶಿ ಮತ್ತು ವ್ಯವಸ್ಥಾಪಕರಾದ ಶ್ರೀ ಎ. ವಿ. ನಾರಾಯಣಮೂರ್ತಿ, ಬಿ ಎ., ಬಿ.ಎಲ್.ರವರೂ **ಮೂಲ ಕಾರಣರೆಂದು** ಒತ್ತಿ ಹೇಳಬೇಕಾಗಿದೆ..."

x x x x x

(ಬಿ) ಇಂಡಿಯನ್ ಇನ್‌ಷ್ಯೂರೆನ್ಸ್ ಜರ್ನಲ್ ತನ್ನ ಸೆಪ್ಟೆಂಬರ್ ೧೯೪೯ರ ಸಂಚಿಕೆಯಲ್ಲಿ ಈ ರೀತಿ ಬರೆಯುತ್ತದೆ,

"ಬೆಂಗಳೂರು ಪ್ರಾವಿಡೆಂಟ್ ಇನ್‌ಷ್ಯೂರೆನ್ಸ್ ಕಾರ್ಪೊರೇಷನ್ ಲಿ .....ನ ಮುಂದುವರಿಯುತ್ತಿರುವ ಉನ್ನತಿಯು ಸಂಸ್ಥೆಯ ವ್ಯವಸ್ಥಾಪಕ ವರ್ಗದ ಹಿರಿಮೆಯ ಉತ್ಸಾಹವನ್ನು ಮತ್ತು ಕಾರ್ಯದಕ್ಷತೆ, ಬುದ್ಧಿವಂತಿಕೆಗಳನ್ನು ವ್ಯಕ್ತಪಡಿಸುತ್ತದೆ ........ ಹೋಲಿಕೆಯಲ್ಲಿ ದಿ ಬೆಂಗಳೂರು ಪ್ರಾವಿಡೆಂಟ್ ಇನ್‌ಷ್ಯೂರೆನ್ಸ್ ಕಾರ್ಪೊರೇಷನ್, ಭಾರತದ ಹಲವು ಪ್ರಾವಿಡೆಂಟ್ ಸಂಸ್ಥೆಗಳಿಗಿಂತ ನೂತನವಾದರೂ, ಸಧ್ಯದಲ್ಲಿ ಅದರಷ್ಟು ಕಾಲದ ಎಲ್ಲಾ ಪ್ರಾವಿಡೆಂಟ್ ಸಂಸ್ಥೆಗಳಿಗಿಂತಲೂ ಇದು **ಅತಿ ದೊಡ್ಡದು ಮತ್ತು ಜಯಪ್ರದವಾದುದು.**

x x x x x

ಈ ಸನ್ನಿವೇಶಗಳಿರುವಾಗ

ಪ್ರಗತಿದಾಯಕ ಹಾಗೂ ಜನಪ್ರಿಯವೆಂದೆನಿಸಿಕೊಂಡಿರುವ ವಂಶಪಾರಂಪರ್ಯವಾಗಿ ಸಲ್ಲುವ ಕಮಿಷನ್ನಿನ ಸೌಕರ್ಯದ ಈ ಸಂಸ್ಥೆಯನ್ನು ಸೇರಿ.

**ಬೇಕಾಗಿದ್ದಾರೆ**

ಇಂಡಿಯನ್ ಡೊಮಿನಿಯನ್ ಅದ್ಯಂತ ಆರ್ಗನೈಜರುಗಳು, ಸ್ಪೆಷಲ್ ಏಜಂಟರುಗಳು ಮತ್ತು ಏಜಂಟರುಗಳು ಆಕರ್ಷಕ ರೀತಿಯ ಸಂಬಳ ಅಥವಾ ಕಮಿಶನ್ ಮೇಲೆ ಬೇಕಾಗಿದ್ದಾರೆ.

ವಿವರಗಳಿಗೆ ಕೆಳಕಂಡ ವಿಳಾಸಕ್ಕೆ ಬರೆಯಿರಿ:—

ಮ್ಯಾನೇಜಿಂಗ್ ಡೈರೆಕ್ಟರ್

**ದಿ ಬೆಂಗಳೂರು ಪ್ರಾವಿಡೆಂಟ್ ಇನ್‌ಷ್ಯೂರೆನ್ಸ್ ಕಾರ್ಪೊರೇಷನ್ ಲಿಮಿಟೆಡ್.**

ಹೆಡ್ ಆಫೀಸ್:— "ವಿಸ್ಟಾಟಿಕ್ ಬಿಲ್ಡಿಂಗ್ಸ್", ಬೆಂಗಳೂರು ಸಿಟಿ



ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗ[ಳಿಗೆ]

**'ಮಹಾಜನ**

**ಕಾಸರಗೋಡು**

ಇವರ ತಯಾರಿಕೆಗಳನ[್ನು]

ವಿಚಾರಿಸಿರಿ.



# ಪ್ರಜಾರಾಜ್ಯದ ಆದಿಭಾಗದಲ್ಲಿ- ನೆನಪಿರಲಿ!

ಭಾರತ ಪ್ರಜಾರಾಜ್ಯದ ಆದಿಭಾಗದಲ್ಲಿ, ಆ ಸಂಬಂಧದ ಕೆಲವು ನೆನಪು ಮತ್ತು ಊಹೆಗಳು ಏಳುತ್ತಿರುವುದು ಸ್ವಾಭಾವಿಕ. ನಾವು ಹೆಗ್ಗಳಿಕೆಪಡಬೇಕಾದ– ಸಂತೋಷಿಸಬೇಕಾದ – ಆಶ್ಚರ್ಯಪಡಬಹುದಾದ–ಸಂಗತಿಗಳು ಕೆಲವಿವೆ; ಕಠೋರ ಶಪಥ ಮತ್ತು ಸದಾಶ್ರಮ ವಹಿಸಿ ಹೊಣೆ ನಿರ್ವಹಿಸಬೇಕಾದ ಅಂಶಗಳಂತೂ ಇದ್ದೇ ಇವೆ. ಅಂತೂ ಜನಸಾಮಾನ್ಯರು ಈ ಸಂದರ್ಭದಲ್ಲಿ ಸರ್ವ ಸ್ಥಿತಿಗತಿಗಳನ್ನೂ ಯಥಾವತ್ತಾಗಿ ತಿಳಿದುಕೊಳ್ಳಬೇಕಾದುದು ಮತ್ತು ತಮ್ಮನ್ನು ತಾವು ಅರಿತುಕೊಳ್ಳಬೇಕಾದುದು ಅಗತ್ಯ.

ഠഠ ഠഠ ഠഠ

ಇಂದಿನ ಪೂರ್ಣ ರಾಜಕೀಯ ಸ್ವಾತಂತ್ರ್ಯದ ನಿರ್ಧಾರಸಿಕ ಪಂಡಿತ ಜವಾಹಿರಲಾಲರು. ಕೆಲಸಕ್ಕೆ ಬೀಳದ ದೊಡ್ಡ ಮಾತುಗಳನ್ನು ಆಡುವುದನ್ನೂ ಆತ್ಮವಂಚಕ ದ್ರೋಹವಾಗಿ ಗಣಿಸಿದ್ದ ಗಾಂಧಿಜೀ ಆದಿಭಾಗದಲ್ಲಿ ಕಾಂಗ್ರೆಸಿನ ಧ್ಯೇಯವನ್ನು ಸಂಪೂರ್ಣ ಸ್ವಾತಂತ್ರ್ಯವೆಂದು ಜಾಹೀರು ಮಾಡಲು ಮುಂದಾಗಿರಲಿಲ್ಲ. ಅಂದಿನ ರಾಜಕೀಯ ಸ್ಥಿತಿಗತಿಗಳು ಹಾಗಿದ್ದುವು. ಇಂತಹ ಪರಮಾವಧಿ ಘೋಷಣೆ ಮಾಡುವುದರಿಂದ ಬ್ರಿಟಿಷರನ್ನು ಒಮ್ಮೆಗೇ ದಿಗಿಲುಗೊಳಿಸಿದಂತಾಗುವುದು– ಅವರು ಹಿಂದೀ ಸ್ವಾತಂತ್ರ್ಯಾಂದೋಲನವನ್ನು ಸರ್ವಶಕ್ತಿಯಿಂದ ಕೊನೆಯ ವರೆಗೂ ವಿರೋಧಿಸುವ ಧೋರಣೆ ವಹಿಸಬೇಕಾಗುವುದು– ಎಂಬುದು ಸ್ಪಷ್ಟವಿದ್ದಿತು. ಅಂತೆಯೇ ಆ ಕಾಲದಲ್ಲಿ ಭಾರತೀಯರ ದೇಶಾಭಿಮಾನವು ಎಚ್ಚರಗೊಂಡಿದ್ದರೂ ಅದಕ್ಕನುಗುಣವಾಗಿ ಶಕ್ತಿ ಸಂಘಟನೆ ಸಾಕಷ್ಟಾಗಿರಲಿಲ್ಲ. ಆದ್ದರಿಂದ ಗಾಂಧಿಜೀಯ ನಿರ್ದೇಶಕತ್ವದಲ್ಲೇ ಪ್ರಥಮತಃ ಕಾಂಗ್ರೆಸು 'ವಸಾಹತು ಸ್ವರಾಜ್ಯ'ವನ್ನು ತನ್ನ ಗುರಿಯಾಗಿ ಸ್ವೀಕರಿಸಿಕೊಂಡಿದ್ದಿತು; ಆ ಮೇಲೆ 'ಪೂರ್ಣ ಸ್ವಾತಂತ್ರ್ಯ'. 'ವಸಾಹತು ಸ್ವಾತಂತ್ರ್ಯ'ಗಳ ಪೈಕಿ, ಯಾವ ಹೆಸರಿಗೂ ಸಂಪೂರ್ಣ ಕಟ್ಟು ಬೀಳದೆ, ಭಾರತೀಯರ ಸ್ವಾತಂತ್ರ್ಯಕ್ಕೆ ಮತ್ತು ಸ್ವಾವಲಂಬನಾ ಮನೋವೃತ್ತಿಗೆ ಯಾವ ತಡೆಯೂ ಇರದಂತಹ 'ಪೂರ್ಣ ಸ್ವರಾಜ್ಯ'ವನ್ನೇ ತನ್ನ ಗುರಿಯಾಗಿ ಅದು ಸ್ವೀಕರಿಸಿಕೊಂಡಿತು. ಬ್ರಿಟಿಷ್ ಸಂಬಂಧ ಕಡಿದುಕೊಳ್ಳುವ, ಪೂರ್ಣ ಸ್ವಾತಂತ್ರ್ಯವನ್ನೇ ಕಾಂಗ್ರೆಸು ತನ್ನ ಗುರಿಯಾಗಿ ಸ್ವೀಕರಿಸಿಕೊಳ್ಳುವಂತೆ ಮಾಡಿದವರು ಪಂಡಿತ ಜವಾಹಿರಲಾಲರು. 1929ನೇ ಲಾಹೋರು ಕಾಂಗ್ರೆಸಿನಲ್ಲಿ ಅವರು ಸ್ವತಃ ಈ ನಿರ್ಣಯವನ್ನು ಮುಂತಂದು ಮಂಜೂರು ಮಾಡಿಸಿಕೊಂಡರು; 'ಆ ಮೊದಲು ಈ ಗುರಿ ಸ್ವೀಕಾರಕ್ಕಾಗಿ ರಾಷ್ಟ್ರ ತುಂಬಾ ಪ್ರಚಾರವನ್ನೂ ನಡೆಸಿದ್ದರು. ಈ ಲಾಹೋರು ನಿರ್ಣಯವು ಸ್ಥಿತಿಯನ್ನು ಬದಲಾಯಿಸುವ ಹೊತ್ತಿನಲ್ಲಿ, ಪಂಡಿತ ಮೋತಿಲಾಲ ನೆಹರುಗಳ ನಾಯಕತ್ವದ ಸಮಿತಿಯಿಂದ ತಯಾರಿಸಲ್ಪಟ್ಟು ಕಾಂಗ್ರೆಸ್ ಸಮೇತ ಸರ್ವ ಪಕ್ಷೀಯರಿಂದ ಅಂಗೀಕಾರ ಹೊಂದಿದ 'ನೆಹರು ವರದಿ'ಯು ದೇಶದ ಮುಂದಿದ್ದಿತು. ಆ ಸರ್ವಪಕ್ಷೀಯ ಸಮ್ಮೇಳನದಲ್ಲೇ ಪಂಡಿತ ನೆಹರುಗಳು ತನ್ನ ತಂದೆಯ ಈ ವರದಿಯನ್ನು ತುಚ್ಛೀಕರಿಸಿ ಮಾತಾಡಿದ್ದರು; ಬಾಬು ಸುಭಾಸ್‌ಚಂದ್ರ ಬೋಸರು ನೆಹರೂ ಬೆಂಬಲಕ್ಕಿದ್ದರು. ರಾಷ್ಟ್ರದ ಯುವಕ ಜನಾಂಗದ ನಾಯಕದ್ವಯವಾಗಿ ನೆಹರು, ಸುಭಾಸರು ಆ ಕಾಲದಲ್ಲೇ ಎಲ್ಲರ ಹೃದಯಗಳನ್ನಾಕರ್ಷಿಸಿಕೊಂಡಿದ್ದರು; 'ನೆಹರೂ ವರದಿ'ಗೂ ಬ್ರಿಟಿಷ್ ಸರಕಾರದಿಂದ ಮನ್ನಣೆ ದೊರೆಯದೆ ಹೋದುದರಿಂದ ಜವಾಹಿರ್– ಸುಭಾಸ್‌ಚಂದ್ರರ ವಾದವೇ ಪ್ರಾಮುಖ್ಯತೆ ಪಡೆಯಿತು; ಲಾಹೋರು ಕಾಂಗ್ರೆಸು ಪೂರ್ಣ ಸ್ವಾತಂತ್ರ್ಯದ ನಿರ್ಧಾರ ಮಾಡುವಂತಾಯಿತು. ಮಹಾತ್ಮಾಜೀ ಕಾಲೋಚಿತವಾಗಿ ಅದಕ್ಕೆ ಬೆಂಬಲವಾದರು. 1929ನೇ ದಶಂಬರ 31ನೇ ಮಧ್ಯ ರಾತ್ರಿಯಲ್ಲಾದ ಈ ಸ್ವಾತಂತ್ರ್ಯ ನಿರ್ಧಾರ ಕಹಳೆಯು ಭಾರತೀಯ ಹೃದಯದಲ್ಲೆಲ್ಲಾ ಶಾಶ್ವತವಾಗಿ ಧ್ವನಿ ಕೊಡುವಂತೆ ಮಾಡುವದಕ್ಕಾಗಿ 1930ನೇ ಜನವರಿ 26ನ್ನು 'ಸ್ವಾತಂತ್ರ್ಯ ಪ್ರತಿಜ್ಞೆ' ಧರಿಸುವ ದಿನವಾಗಿ ರಾಷ್ಟ್ರವಾಚರಿಸಿತು. ಅಂದಿನಿಂದ ಪ್ರತಿ ಜನವರಿ 26, ಸ್ವಾತಂತ್ರ್ಯ ಪ್ರತಿಜ್ಞೆಯ ದಿನವಾಗಿ ದೇಶದ ಮೂಲೆಮೂಲೆಗಳಲ್ಲೂ ಆಚರಿಸಲ್ಪಡುತ್ತಾ ಬಂತು. 1950ನೇ ಜನವರಿ 26ರಲ್ಲಿ ಅದು ಸಾಕ್ಷಾತ್ಕಾರಹೊಂದಿತು. ಈ ರೀತಿ ಕಳೆದ 20 ವರುಷಗಳಲ್ಲಿ ಅನುಕ್ರಮವಾದ ಪಠನಾಲಾಪದಿಂದಲೂ ಹಲವು ಹೋರಾಟಗಳ ರೂಪದಿಂದಲೂ ತೋರಿ ಬಂದಿದ್ದ ಶಪಥವೊಂದು ಮೊನ್ನೆ 26ನೇ ಗುರುವಾರ ಸಾರ್ಥಕವಾಯಿತು; ಸಫಲಗೊಂಡಿತು; ಭಾವನೆಯಾಗಿ ಮತ್ತು ಸಾಧನೆಯಾಗಿ ಇದ್ದುದು ವಸ್ತುಸ್ಥಿತಿಯಾಗಿ ಮೂಡಿನಿಂತಿತು. ಇಪ್ಪತ್ತು ವರುಷಗಳ ಮೊದಲು ಈ ನಿರ್ಧಾರ ಮಾಡಿಸಿದಾಗ ಪಂಡಿತ ನೆಹರುಗಳು ಅನುಭವರಹಿತ ರಾಜಕೀಯ ಭ್ರಾಂತನಾಗಿ ಹಲವರಿಗೆ ತೋರಿಬಂದಿದ್ದರೇ ಹೊರತು, ಒಂದು ದಿನ ತಾನೇ ಒಡೆಯನಾಗುವ ಮನೆಗೆ ಅಸ್ತಿವಾರ ಹಾಕುತ್ತಿರುವವನಂತೆ ಕಂಡಿರಲಿಲ್ಲ. ಪೂರ್ಣ ಸ್ವಾತಂತ್ರ್ಯದ ಗುರಿಸಾಧನೆಗಾಗಿ ಪ್ರಾಣಕೊಡಲು ತಯಾರಾದ್ದವರಾದರೂ, ಅದಿಷ್ಟು ಬೇಗನೇ ಈ ರೀತಿ ರೂಪುಗೊಂಡೀತೆಂದು ನಿರೀಕ್ಷಿಸಿರಲಿಲ್ಲ. ಆದ್ದರಿಂದ ಇಂದಿನ ಈ ಸ್ವಾತಂತ್ರ್ಯ ಪೂರ್ಣತೆಯು ಆಶ್ಚರ್ಯಾನಂದದ ಮತ್ತು ವಿಶೇಷ ಹೆಗ್ಗಳಿಕೆಯ ವಿಷಯ. "ವಸಾಹತು ಸ್ವರಾಜ್ಯ"ವು "ಪೂರ್ಣ ಸ್ವಾತಂತ್ರ್ಯ"ವಾಗಿ ಕಾಂಗ್ರೆಸಿನ ಗುರಿ ನಿರೂಪಣೆಯಲ್ಲಿ ಮಾರ್ಪಟ್ಟ ಮಾದರಿಯಲ್ಲೇ ಕಳೆದ 1947ನೇ ಆಗೋಸ್ತು 15ರಿಂದ 1950ನೇ ಜನವರಿ 26ರಲ್ಲಿ ರಾಷ್ಟ್ರದ ಜೀವನರಂಗದಲ್ಲೂ ಮಾರ್ಪಟ್ಟಿತು. ಇಲ್ಲಿದೆ ಸಾಮ್ಯತೆ ಮತ್ತು ಸಾರ್ಥಕತೆ!

ഠഠ ഠഠ ഠഠ

ಸ್ವಾತಂತ್ರ್ಯ ದೊರೆತಿರುವಾಗ ಎಲ್ಲವನ್ನೂ ಒಂದೇ ಬಾರಿ ಅಡಿಮೇಲು ಹಾಕಿ, ಹೊಸ ರಾಷ್ಟ್ರವನ್ನು ಒಮ್ಮೆಗೇ ಕಟ್ಟಿ ಬಿಡಲು ಪ್ರಯತ್ನಿಸುತ್ತಿರುವಂತೆ ತೋರಿಸಿ, ಕಾಲಸ್ಥಿತಿಯ ಕಷ್ಟನಷ್ಟಗಳಿಂದ ಕುಗ್ಗಿರುವ ಜನತಾ ಹೃದಯವನ್ನು ಈ ಮೂಲಕ ಸ್ವಾಧೀನಪಡಿಸಿಕೊಳ್ಳುವ ಆಟಗಾರರನ್ನು ಈದಿನ ಕಾಣುತ್ತಿದ್ದೇವೆ. ವ್ಯವಹಾರ್ಯ ಜಗತ್ತಿನಲ್ಲಿರುವ ಸರ್ವರಿಗೂ ಮುಂದಟ್ಟಾಗುವಂತಹ ಈ ಒಂದು ನಿದರ್ಶನವು ನಮ್ಮ ಕಣ್ಣ ಮುಂದಿದೆ:- ಸರ್ವಸಮಾನತೆಯ ಸ್ವರವು ಭಾರತೀಯ ಜನಸಾಮಾನ್ಯರ ಹೃದಯದಲ್ಲೂ ಮಾರ್ದನಿಸುವಂತೆ ಇಲ್ಲಿ ಆದರ ಪ್ರಥಮೋಚ್ಚಾರ ಮಾಡಿದ್ದವರು ಪಂಡಿತ ನೆಹರುಗಳು. ತನ್ನ ಪ್ರಥಮ ಬಾರಿಯ ಕಾಂಗ್ರೆಸ್ ಅಧ್ಯಕ್ಷ ಭಾಷಣದಲ್ಲಿ ರಶ್ಯದ ಸಮತಾವಾದಿ ಚಳವಳಿಯ ಶ್ಲಾಘನೆಯನ್ನೇ ಪಂಡಿತಜೀ ತುಂಬಿಸಿದ್ದರು. ಪಂಡಿತ ನೆಹರುಗಳು ಅಂದಿನಷ್ಟೇ ಇಂದೂ ಸಮತಾವಾದಿಗಳು. ಆದರೂ ಅಂದಿನ ಆಂದೋಲನಗಾರ ನೆಹರು ಮತ್ತು ಇಂದಿನ ಆಡಳಿತೆಗಾರ ನೆಹರುಗಳೊಳಗೆ ವ್ಯತ್ಯಾಸ ಕಂಡು ಬರುತ್ತಿದೆಯಾದರೆ ಅದು ಆಡಿದಷ್ಟೇ ಸುಲಭದಲ್ಲಿ ಮಾಡಲಾಗುವುದಿಲ್ಲವೆಂಬ ಸಹಜ ತಾರತಮ್ಯ ಮಾತ್ರ. ಸಮತಾವಾದದ, ಅಥವಾ ಕ್ರಾಂತಿಕಾರೀ ಪ್ರಗತಿಶೀಲ ಚಳವಳಿಯ ಉತ್ಕಟೇಚ್ಛೆ ಬೇರಾವ ಅತ್ಯುಗ್ರ ಕ್ರಾಂತಿಕಾರನೊಬ್ಬನಲ್ಲಿಷ್ಟಿರಬಹುದೋ ಅಷ್ಟೇ ಪಂಡಿತ ನೆಹರುಗಳಲ್ಲೂ ಇದೆ. ಹೆಚ್ಚಿನದಾಗಿ ಬೇರಾರಿಗೂ ಇರದಂತಹ ಸಾರ್ವಜನಿಕ ಬೆಂಬಲ ನೆಹರುಗಳಿಗಿದೆ. ಹೀಗಿದ್ದೂ ಪಂಡಿತ ಜವಾಹಿರಲಾಲರಿಂದ ಆಗದಂತಹ ಕೆಲಸ ಬೇರೆಯವರಿಂದ ಆಗಬಹುದೆಂದು ನಿರೀಕ್ಷಿಸುವುದು ಕೇವಲ ಭ್ರಮೆಯೇ ಸರಿ. ಹೀಗಂದ ಮಾತ್ರಕ್ಕೆ ಜನತೆಯು ತನ್ನ ಭವಿಷ್ಯದ ಭಾರವನ್ನೆಲ್ಲಾ ನೆಹರೂ ಸರಕಾರದ ಹೆಗಲ ಮೇಲೆ ಹಾಕಿ ತೂಕಡಿಸುತ್ತಿರಬೇಕೆಂಬ ಅರ್ಥವಲ್ಲವೇ ಅಲ್ಲ. ಕೆಲಸಕ್ಕೆ ಬೀಳುವುದಾವುದು– ಎಂದೆಂದಿಗೂ ಕನಸಾಗಿಯೇ ಉಳಿದು ಕೆಲಸವನ್ನು ಕೆಡಿಸುತ್ತಾ ಹೋಗುವಂತಹದಾವುದು, ಎಂಬ ತುಲನಾತ್ಮಕ ಬುದ್ಧಿಯಿಟ್ಟುಕೊಂಡು ಹೊಣೆಗಾರ ಜನಾಂಗವಾಗಿ ಮಾರ್ಪಡಬೇಕೆಂಬುದೇ ಇಲ್ಲಿಯ ತಾತ್ಪರ್ಯ.

ഠഠ ഠഠ ഠഠ

ಸರ್ವರೂ ಮನವರಿಕೆ ಮಾಡಿಕೊಳ್ಳಬೇಕಾದ ಇತರ ಅಂಶಗಳಿವು:—

ಕಷ್ಟನಷ್ಟಗಳನ್ನನುಭವಿಸಿ, ಪ್ರಾಣಬಲಿ ಕೊಟ್ಟು, ನಮ್ಮೀ ಸ್ವಾತಂತ್ರ್ಯವನ್ನು ಸಾಧಿಸಿ ಕೊಡಲು ಸಿಪಾಯಿ ಹೋರಾಟ ಕಾಲದಿಂದಾರಂಭಿಸಿ, ಗಾಂಧೀಯುಗದ ವರೆಗಿನ ನಮ್ಮ ಹಿರಿಯರುಗಳಿದ್ದರು. ಅವರು ಸಂಪಾದಿಸಿಕೊಟ್ಟ ಈ ಸ್ವಾತಂತ್ರ್ಯಕ್ಕೆ ಆರಂಭಕಾಲದಲ್ಲಿ ಬಡಿದಿದ್ದ ಅಸಾಧ್ಯ ಆತಂಕ ಅನಾಹುತಗಳನ್ನು ನಿವಾರಿಸಿ ಜೋಪಾಸನೆಮಾಡಿಡಲು ನೆಹರು ವಲ್ಲಭಾಯಿಗಳಿದ್ದರು. ಈ ಆಸ್ತಿಯೀಗ ವಾರೀಸು ಹಕ್ಕು ಸಮೇತ ಸ್ವಾಧೀನತೆಗೆ ಬಂದಿರುವ ಜನಸಾಮಾನ್ಯರು, ಇದನ್ನು ಉಳಿಸಿಕೊಂಡು, ಊರ್ಜಿತ ಪಡಿಸುವ ಕಡೆಗೆ ಪೂರ್ಣ ಲಕ್ಷ್ಯಕೊಡಬೇಕಾದುದು ಅಗತ್ಯ. ನಮ್ಮ ಹಿರಿಯರು ನಮಗೆ ಮಾಡಿದಂತಹ ಉಪಕಾರವನ್ನು ಸ್ವತಃ ನಾವು ನಮಗೆ ಮತ್ತು ನಮ್ಮ ಕಿರಿಯರಿಗೆ ಮಾಡಬೇಕಾದುದು ನಮ್ಮ ಸ್ಥಾನಮಾನೋಚಿತ ಕರ್ತವ್ಯವಾಗಿ ಬಂದಿದೆ.

ರಾಜಕೀಯ ಸ್ವಾತಂತ್ರ್ಯವು ಇನ್ನು ಪೂರ್ಣಗೊಳ್ಳಲಿಕ್ಕಿರುವ ಅಂಶವುಳಿದಿಲ್ಲ; ತಮ್ಮ ಭವಿಷ್ಯವನ್ನು ತಾವೇ ರೂಪಿಸಿಕೊಳ್ಳುವ ಪರಮಾವಧಿ ಅಧಿಕಾರ ಭಾರತೀಯ ಜನಸಾಮಾನ್ಯರಿಗೀಗ ದೊರೆತಿದೆ. ಅದಕ್ಕನುಗುಣವಾದ ಅನುಭವ, ಚಾತುರ್ಯ, ಗುಣ, ಶಕ್ತಿಯ ತರಬೇತಿ ಕೂಡಾ ಗಾಂಧಿಜೀ ಬೋಧನೆಯ ಮೂಲಕ ಮತ್ತು ಅಸಾಮಾನ್ಯ ಸ್ಥಿತಿಗತಿಗಳಿಂದಾಗಿ ಜನತೆಗೆ ದೊರೆತಿದೆ. ಅದನ್ನಿನ್ನಷ್ಟು ಹೆಚ್ಚಿಸಿಕೊಳ್ಳಲಾಗುವಂತೆ ಹೆಚ್ಚಿನ ಗಂಡಾಂತರಗಳನ್ನು ನಿವಾರಿಸಿ, ಸರ್ವಸಾಮಾನ್ಯ ವಾತಾವರಣವನ್ನು ಹಿರಿಮುಖಂಡರೇ ನಿರ್ಮಿಸಿಟ್ಟಿದ್ದಾರೆ. ಇಷ್ಟೆಲ್ಲಾ ವ್ಯವಸ್ಥೆಗಳಾಗಿರುವಾಗ ಇನ್ನೂ ಬಾಕಿ ಇರುವ ಅಂಶಗಳೆಲ್ಲವನ್ನೂ ಸ್ವತಃ ತುಂಬಿಸಿಕೊಳ್ಳಲು ಜನತೆಯಿಂದಾಗದೆ ಹೋದರೆ, ಹಿಂದೀಯರು ಪ್ರಜಾಪ್ರಭುತ್ವಕ್ಕೆಂದಿಗೂ ಅಗದವರೆಂಬ ಅಪವಾದ ತಟ್ಟಬಹುದು.

ಜನವರಿ 26ರಲ್ಲಿ ಜಾರಿಗೆ ಬಂದ ಹೊಸ ಶಾಸನದನ್ವಯ ಮಹಾ ಚುನಾವಣೆಗಳಾಗುವ ವರೆಗೂ ಈಗಿನ ಸರಕಾರಗಳೇ ಅಸ್ತಿತ್ವದಲ್ಲಿದ್ದರೂ, ಅವೆಲ್ಲವೂ ಸಂಪೂರ್ಣವಾಗಿ ಜನಮತವನ್ನೇ ಆಧರಿಸಿ, ಅವಲಂಬಿಸಿ, ಇರಬೇಕಾದುದರಿಂದ ಅವರೆಲ್ಲರೂ ಇತ್ತ ಸದಾ ಲಕ್ಷ್ಯಕೊಡುತ್ತಿರಬಹುದು. ಜನಮತವು ಪ್ರತಿಕೂಲವಾದ ಕೂಡಲೇ ಈಗ ಕೂಡಾ ಯಾವ ಸರಕಾರವಾದರೂ ಉರುಳಲೇಬೇಕು. ಯಾರು ಜನತಾಹಿತಚಿಂತಕರು,— ಈಗ ಇರುವವರು ಮಾರ್ಪಟ್ಟ ಸ್ಥಿತಿಗನುಸಾರವಾಗಿ ಜನಮತವನ್ನು ಹೇಗೆ ಮನ್ನಿಸುವರು—ಎಂಬ ಪರೀಕ್ಷೆಗಾಗಿ ಮುಂದಿನ ಚುನಾವಣೆಯವರೆಗೆ ಅವಧಿ ದೊರೆತುದು ಕೂಡಾ ಸ್ವಾಗತಾರ್ಹ ವಿಷಯವೇ.

ಅಂತೂ ಜನತೆಯಿದ್ದಂತೆ ಇರುವ ಜನತಾ ರಾಜ್ಯವಿದು. ಜನತೆ ಯೋಗ್ಯರೂ.. ಸಂಗತಿಸಾಧಕರೂ—ಪ್ರಗತಿಶೀಲರೂ ಆದರಾಯಿತು.

# ಜನತಾ ರಾಜ್ಯದಲ್ಲೇನಿದೆ?

- ಜನತೆಗಿನ್ನೂ ಅಜ್ಞಾನ ಉಳಿದಿದೆ
- ಅಭಾವ, ಅತಿರೇಕ, ತುಟ್ಟಿಗಳಿವೆ
- ಹೊಸ ಆದರ್ಶ ಮಾತ್ರ ಬಂದಿದೆ

'ನಾವು, ಭಾರತದ ಜನತೆ, ತದೇಕ ನಿಷ್ಠೆಯಿಂದ ಭಾರತವನ್ನು ಸಾರ್ವಭೌಮಾಧಿಕಾರೀ ಪ್ರಜಾಸತ್ತಾ ಪ್ರಜಾರಾಜ್ಯವಾಗಿ ರಚಿಸುವ ನಿರ್ಧಾರ ಮಾಡಿ, ಅದರ ಎಲ್ಲಾ ನಾಗರಿಕರಿಗೂ:

ಸಾಮಾಜಿಕ, ಆರ್ಥಿಕ, ಮತ್ತು ರಾಜಕೀಯ ನ್ಯಾಯವನ್ನು;

ಯೋಚನೆ, ವಾಕ್, ನಂಬಿಕೆ, ಶ್ರದ್ಧೆ ಮತ್ತು ಪೂಜಾ ಸ್ವಾತಂತ್ರ್ಯವನ್ನು;

ಸ್ಥಾನ ಮತ್ತು ಸುಸಂದರ್ಭಗಳ ಸಮಾನತೆಯನ್ನು, ಹಾಗೂ ಅವರೆಲ್ಲರ ನಡುವೆ-

ವ್ಯಕ್ತಿಗತ ಘನತೆಗೆ ಮತ್ತು ರಾಷ್ಟ್ರದ ಐಕ್ಯತೆಗೆ ಆಶ್ರಯವಾಗುವ ಬಂಧುತ್ವವನ್ನು

ಸಾಧಿಸಿಕೊಡುವುದರಕ್ಕಾಗಿ, ನಮ್ಮ ಘಟನಾಸಮಿತಿಯಲ್ಲಿ ಈ ಮೂಲಕ ಈ ಘಟನೆಯನ್ನು ಅಂಗೀಕರಿಸಿಕೊಳ್ಳುತ್ತೇವೆ; ಶಾಸನ ಮಾಡುತ್ತೇವೆ; ನಮಗೆ ನಾವೇ ಕೊಟ್ಟುಕೊಳ್ಳುತ್ತೇವೆ"

ಎಂಬ ಮೂಲ ಮಾತುಗಳುಳ್ಳ ನವರಾಜ್ಯ ಶಾಸನವು ಇದೇ ತಾ. 26 ರಿಂದ ನಮ್ಮ ನಡುವೆ ಜಾರಿಯಲ್ಲಿದೆ. ಮೇಲಿನ ನಿರ್ದೇಶಗಳಿಗನುಸಾರವಾಗಿ ಇರುವ ರಾಜ್ಯಾಂಗ ವಿಧಾನಗಳ ಕುರಿತು ಯಾರೂ ಅತೃಪ್ತಿ ಪಡಲು ಕಾರಣವಿಲ್ಲ. ಮಹಾತ್ಮಾಜೀ ಈಗ ಇರುತ್ತಿದ್ದರೆ ಈ ಪ್ರಸ್ತಾವನೆಗೆ ತನ್ನ ಪೂರ್ಣ ಆಶೀರ್ವಾದ ಕೊಡುತಿದ್ದರು; ಕಮ್ಯುನಿಸ್ಟರಂತಹ ಉಗ್ರವಾದಿಗಳಾದರೂ 'ಯಥಾರ್ಥ ಜನರಾಜ್ಯ" ಸ್ಥಾಪನೆಯೊಂದೇ ಅವರ ಗುರಿಯಾಗಿರುತಿದ್ದರೆ, ಅದಕ್ಕೆ ಪೂರ್ಣಾವಕಾಶವಿರುವ ಈ ಮೂಲ ಸೂತ್ರಗಳ ಕುರಿತು ಅಸಮ್ಮತಿಸುತ್ತಿರಲಿಲ್ಲ; ಹಿಂದೂ ಮಹಾಸಭೆ, ಮತ್ತಿತರ ಜಾತೀಯವಾದಿ ಪಕ್ಷಗಳಾದರೂ ಧರ್ಮೋದ್ಧಾರವಷ್ಟೇ ಅವುಗಳ ಉದ್ದೇಶವಾಗಿದ್ದಲ್ಲಿ ಅಂತಹ ಸ್ವಾತಂತ್ರ್ಯವಿದ್ದೇ ಇರುವ ಈ ಸೂತ್ರಗಳನ್ನು ಆಕ್ಷೇಪಿಸಬೇಕೆಂದಿಲ್ಲ. ತಮ್ಮ ನಿತ್ಯಜೀವನದ ಸುಖದುಃಖಾನುಭವವೇ ಸರ್ವಸ್ವವಾಗಿರುವ ಜನಸಾಮಾನ್ಯರ ಪಾಲಿಗಂತೂ ಇದು, ಅವರ ರಾಜ್ಯಕ್ಕೆ ಹಾಕಿಟ್ಟ ಅಸ್ತಿವಾರ. ಅಂದ ಮೇಲೆ ಇಂತಹ ಸರ್ವಸಮ್ಮತ ಅಮೂಲ್ಯ ಪೀಠಿಕೆಯೊಂದಿಗೆ ಆರಂಭವಾಗಿರುವ ನವರಾಜ್ಯ ಶಾಸನವು ಸಫಲವಾಗಲೇನಡ್ಡಿ?

## ಆದರ್ಶ ಮಾತ್ರದಿಂದೇನು?

ಅಡ್ಡಿಗಳಿವೆ. ಉಚ್ಚ ಧ್ಯೇಯ, ದೊಡ್ಡ ಮಾತುಗಳು ತಾವಾಗಿ ಅಂತಹ ಉನ್ನತ ಮಟ್ಟವನ್ನು ಸಾಧಿಸಿಕೊಡುವಂತಿಲ್ಲ. ಅದಕ್ಕನುಗುಣವಾಗಿ ಕೆಲಸವಾಗಬೇಕು. ಆಗುತ್ತಿದೆಯೇ? ಆಗುವಂತಿದೆಯೆ? ಕಳೆದ 30 ವರುಷಗಳ ಭಾರತ ರಾಜಕೀಯದತ್ತ ದೃಷ್ಟಿ ಹರಿಸಿದರೆ, ರಾಷ್ಟ್ರವು ಹೊಸ ಚೇತನ ತೋರಿಸಿ, ನವಜೀವನಕ್ಕೆ ಕಾಲಿಟ್ಟ ಅವಧಿಯದು. ಎಂಬುದು ಸುಗೋಚರವಿದೆ. ಆದರೂ ಈ ಅವಧಿಯಲ್ಲಿ ಆಡಿತೋರಿಸುತ್ತಾ ಬಂದಿದ್ದ ಆದರ್ಶಗಳು ವಸ್ತುತಃ ಈ ವರೆಗೂ ಅಸ್ತಿತ್ವಕ್ಕೆ ಬಂದಿಲ್ಲವೆಂಬುದೂ ಅಷ್ಟೇ ಸ್ಪಷ್ಟವಿದೆ. ನಾವು ದೊಡ್ಡ ದೊಡ್ಡ ತತ್ವಗಳನ್ನು ಜಾಹೀರು ಮಾಡುತ್ತಾ ಬಂದಂತೆ, ಅವುಗಳಿಗೆ ಕ್ರಮಶಃ ಕಾರ್ಯರೂಪ ಕೊಡುತ್ತಾ ಹೋದುದನ್ನು ಕಾರ್ಯದಲ್ಲಿ ಮುಂದುವರಿಸಿಲ್ಲ. ಕಾಂಗ್ರೆಸಿನ ಧ್ಯೇಯ, ಧೋರಣೆ ಪತ್ರಗಳು ಚುನಾವಣಾ ಘೋಷಣೆಗಳಲ್ಲಿರುವಂತೆ ಕಾಂಗ್ರೆಸ್ ರಾಜ್ಯಭಾರದಲ್ಲಿಲ್ಲವೆಂಬ ಒಂದೇ ನಿದರ್ಶನದಿಂದ ಈ ಸಂಗತಿ ಸರ್ವರಿಗೂ ಮನದಟ್ಟಾಗುವಂತಿದೆ. ಆದ್ದರಿಂದಲೇ ನವರಾಜ್ಯ ಶಾಸನದ ಈ ಅಮೂಲ್ಯ ಪ್ರಸ್ತಾವನೆಯೊಂದರ ಮೇಲಿಂದಲೇ ನಾವು ಭವಿಷ್ಯದ ಕುರಿತು ಭರವಸೆಯಿಡಲಾಗುವದಿಲ್ಲ. ನಮ್ಮ ಜಾಹೀರು ಆದರ್ಶಗಳ ಅಂತಸ್ತಂತಸ್ತುಗಳಿಗೆ ಕಳಶಪ್ರಾಯವಾಗಬಲ್ಲ ಉಚ್ಚಾದರ್ಶವೊಂದು ಸೇರಿತೆಂದು ಸಂತೋಷಿಸಬಹುದೇ ಹೊರತು, ನಮ್ಮ ದುಃಸ್ಥಿತಿಯು ಈ ಮೂಲಕ ನಿವಾರಣೆಗೊಂಡೀತೆಂಬ ಧೈರ್ಯ ವಹಿಸಲಾಗುವದಿಲ್ಲ. ಅಂತಹ ಭರವಸೆ ಮೂಡಬೇಕಾದರೆ, ಅಕ್ಷರಶಃ ಅದನ್ನು ವಸ್ತುಸ್ಥಿತಿಯಾಗಿ ಮೂಡಿಸುವ ಕಾರ್ಯಗಳಾಗಬೇಕು. ಮಿಕ್ಕ ವಿಷಯ ಹಾಗಿರಲಿ; ರಾಜ್ಯಭಾರಕ್ರಮವು ಆ ಪೀಠಿಕಾ ಸೂತ್ರಗಳಂತೆ ಒಮ್ಮೆಗೇ ಮಾರ್ಪಡುವ ಮಾತಂತಿರಲಿ; ನವರಾಜ್ಯ ಶಾಸನದಲ್ಲಿರುವ ಈ ಮೊದಲ ಪುಟಕ್ಕನುಗುಣವಾಗಿಯೇ ಆ ನಂತರದ ಎಲ್ಲಾ ಪುಟಗಳೂ ಬರೆಯಲ್ಪಟ್ಟಿರುವವೇ ಎಂಬುದನ್ನು ನೋಡಿದರೂ ಸಾಕು. ಈ ಪೀಠಿಕೆಯು ತೋರ್ಬೆರಳಾಗಿ ತೋರಿಸಿರುವ ಕ್ರಮ ವಿಧಾನಗಳಿಗೆ ಆಕಾರಕೊಡುವ ಹಸ್ತಗಳಂತೆ ನವಘಟನೆಯ ಉಳಿದ ಎಲ್ಲಾ ಪರಿಚ್ಛೇದಗಳು ಮತ್ತು ಕಲಮುಗಳಿರಬೇಕಾಗಿತ್ತಷ್ಟೆ? ಇಂದಿನ ನವರಾಜ್ಯ ಶಾಸನದ ಸರ್ವಾಂಗಗಳೂ ಅಕ್ಷರಶಃ ಹಾಗಿವೆಯೇ? ಹೌದೆನ್ನಲು ಸಾಧ್ಯವಿಲ್ಲ. ಜನಮತಕ್ಕನುಸಾರವಾಗಿ, ತಿದ್ದಲಾಗದ ಸಂಗತಿ ಯಾಗಲೀ ಅಧಿಕಾರಗಳಾಗಲೀ, ಇಂದಿನ ಘಟನೆಯಲ್ಲಿಲ್ಲವೆಂಬುದೇನೋ ನಿಜ ಆದರೆ ಹಿಂದೀ ಜನಸಾಮಾನ್ಯರ ಸದ್ಯಸ್ಥಿತಿಯಲ್ಲಿ ಬೇರಾವ ಮಹತ್ಸಾಧನೆಗಿಂತಲೂ ಕಷ್ಟಕರವಾದ ಕೆಲಸವೆಂದರೆ ಜನಮತವನ್ನು ರೂಪಿಸುವುದೇ! ಹೀಗಾಗಿ ಭಾರತೀಯ ಜನಸಾಮಾನ್ಯರ ನಿತ್ಯಸ್ಥಿತಿ ಈ ನವರಾಜ್ಯ ಶಾಸನ ಜಾರಿಗೆ ಬಂದ ದಿನದಿಂದ ಯಾವ ರೀತಿಯಿಂದಲೂ ಬದಲಾಗಿಲ್ಲವೆಂಬುದೇ ಪರಂಪರಾಗತ ಸತ್ಯ.

## ಹಾಗಾದರೆ ಹೇಗೆ?

ಅಂದ ಮೇಲೆ ಈ ಪ್ರಸ್ತಾವನೆಯನ್ನು ಅಕ್ಷರಶಃ ಸಾರ್ಥಕ ಪಡಿಸಿಕೊಳ್ಳಲು ಆಗಬೇಕಾದುದೇನು? ಎಂಬ ಪ್ರಶ್ನೆಯಿದೆ. ಜನತೆಯದೇ ಮೂಲಾಧಿಕಾರ ಮತ್ತು ಮೇಲಧಿಕಾರ ಬಂದಿರುವಾಗ ಜನಮತವು ಜಾಗ್ರತಗೊಂಡು, ತಮಗೆ ಇಂತಹದೇ ಆಗಬೇಕು ಎಂಬುದನ್ನು ಮುಂದಿಡುವ ಯೋಗ್ಯತೆ ಗಳಿಸಬೇಕಾದುದಿಲ್ಲಿ ಮುಖ್ಯ ಆದರೆ ರಿಪಬ್ಲಿಕ್ ದಿನ ಎಲ್ಲೆಡೆಯಲ್ಲೂ ಬಾರಿಬಾರಿಗೂ ಪರಿಕಲ್ಪಿಟ್ಟಿರುವ ಈ ಜನತಾ ರಾಜ್ಯ—ಜನಮತ ಮಂತ್ರಗಳ ನಿಜಾರ್ಥವೆಂದರೆ ಜನತೆಯು ತನ್ನ ಬುದ್ಧಿ, ಯೋಗ್ಯತೆಗಳನ್ನು ವಿಕಾಸಗೊಳಿಸಿಕೊಂಡು ತನ್ನ ಪ್ರತಿನಿಧಿಗಳಳನ್ನೂ ಅಭಿವ ತವನ್ನೂ ಮುಂದೊಡ್ಡುವ ಮಟ್ಟಕ್ಕೇರಬೇಕೆಂಬುದೇ; ಹಾಗಿಲ್ಲದಿರುವ 'ಜನಮತ'ವೆಂದರೆ ಅರಾಜಕತೆಯೇ ಸರಿ. ಇಂದು ರಾಷ್ಟ್ರದಲ್ಲಿ ಅಧಿಕಾರ ನಿರ್ವಹಿಸುತ್ತಿರುವವರೆಲ್ಲರೂ ಜನತೆಯಿಂದ ಮುಂದೊಡ್ಡಲ್ಪಟ್ಟವರೇ; ಆದರೂ ನಿರೀಕ್ಷಿಸಿದ್ದಷ್ಟು ಕೆಲಸ ಈ ಜನ ಪ್ರತಿನಿಧಿಗಳಿಂದಾಗಿಲ್ಲವೆಂದಾದರೆ- ಮತ್ತು ಹಾಗಿದ್ದೂ ಅವರಿನ್ನೂ ಜನಪ್ರತಿನಿಧಿ ಸ್ಥಾನದಲ್ಲಿದ್ದಾರೆಂದಾದರೆ-- ಜನತೆಗೆ ಹೇಳಿಸಿದ್ದೇ ದೊರೆತಿದೆ, ಎಂದರ್ಥ ಸಾಕಷ್ಟು ಕೆಲಸಗಳಾಗದಿರಲು ಕಾರಣಗಳು ಬೇರೆ ಹೊರತು, ಅಧಿಕಾರ ನಿರ್ವಹಿಸುತ್ತಿರುವವರ ತಪ್ಪೇನೂ ಇಲ್ಲವೆಂಬ ಅರ್ಥ ಒಂದೆಡೆಯಿಂದ ಮೂಡುತ್ತದಾದರೆ, ಮತ್ತೊಂದು ದಿಕ್ಕಿನಿಂದ ಜನತೆಗೆ ಯಾವುದೂ ಅರ್ಥವಾಗದ ದೆಸೆಯಿಂದ ಅಧಿಕಾರದಲ್ಲಿರುವವರು ಮಾಡಿದ್ದು ನಡೆದಿದೆ ಎಂಬ ತಾತ್ಪರ್ಯವೂ ಹುಟ್ಟುತ್ತದೆ. ಸದ್ಯ ಸ್ಥಿತಿಯಲ್ಲಿ ಇವೆರಡೂ ಸತ್ಯ. ಕಾಲೋಚಿತ ಕಂಟಕಗಳಿರುವುದೂ ನಿಜ; ಜನತೆ ಅಜ್ಞಾನಿಯಾಗಿರುವುದೂ ಸತ್ಯ. ಈ ತಡೆ ತೊಡಕುಗಳನ್ನು ಕಡೆಹಾಯುವ ಪ್ರಯತ್ನ ಇಂದಾಗಬೇಕು. ಈ ಪೈಕಿ ಇಡೀ ಜಗತ್ತಿಗೇನೇ ಬಡಿದಿರುವ ಕಾಲಜನ್ಯ ಕಷ್ಟ, ಅಭಾವಗಳ ನಿವಾರಣೆಗೆ ದೀರ್ಘಾವಧಿಯು ಹಾಗೂ ಸರ್ವಶಕ್ತಿಯ ಶ್ರಮ ಬೇಕು; ಪರಂಪರಾಗತವಾಗಿ ಉಳಿದು ಬಂದಿರುವ ಜನತೆಯ ಅಜ್ಞಾನ ನಿವಾರಣೆ ಕೂಡಾ ವಿಶೇಷ ಪ್ರಯತ್ನಕ್ಕೇನೇ ಸಾಧ್ಯವಾದ ವಿಷಯ. ಆದರೂ ಇವೆರಡು ಕೊರತೆಗಳಲ್ಲಿರುವ ಒಂದು ಸ್ಪಷ್ಟ ಭಿನ್ನತೆಯನ್ನು ಮರೆಯಲಾಗುವುದಿಲ್ಲ ಇಂದಿನ ಹೆಚ್ಚಿನ ಅತಿರೇಕಾಭಾವಗಳು ಕಳೆದ ಮಹಾಯುದ್ಧದೊಂದಿಗೆ ಹುಟ್ಟಿಕೊಂಡಿದ್ದರೆ, ಇವು ಹುಟ್ಟಿ ಬಾಳಿರುವ ಈ ಅವಧಿಯೇ ಜನಸಾಮಾನ್ಯರ ರಾಜಕೀಯ ಜ್ಞಾನವನ್ನು ಹೆಚ್ಚಿಸುವ ವಿಶೇಷ ಘಟನೆಗಳದ್ದು ನಿರ್ಮಿಸುತ್ತಾ ಬಂದಿದೆ. ಆದುದರಿಂದ ಕಳೆದ ಕೆಲವು ವರುಷಗಳಿಂದ ರಾಷ್ಟ್ರದ ಜನತೆಯು ನಿತ್ಯ ಜೀವನೋಪಕರಣಗಳಿಗೆ ಕೊರತೆಯಾಗುತ್ತಾ ಬಂದಂತೆ, ಜನತೆಯ ಜ್ಞಾನಾನುಭವಗಳು ಹೆಚ್ಚಾಗುತ್ತಾ ಹೋಗಬೇಕಿದ್ದಿತು ಹಿಂದೀ ಸಾಮಾನ್ಯರಲ್ಲಿ ಈ ಯೋಗ್ಯತೆ ಲವಂಶ ಬೆಳೆದಿದೆಯಾದರೂ, ಅದು ಸಾಕಷ್ಟು ಪರಿಮಾಣದಲ್ಲಲ್ಲ ಯಾವುದೇ ವಲು ಕೀಳು ಸ್ಥಿತಿಗತಿಗಳ ಪೈಕಿ ಕಾಲವಶ ಹೊಣೆ ಮಾಡಬೇಕಾದುದಾವುದು, ಕಾ ಅಯೋಗ್ಯತೆಯೇ ಹೊಣೆಯಾಗಿರುವುದು ವುದು, ಎಂಬ ಸ್ಪಷ್ಟ ವ್ಯತ್ಯಾಸವನ್ನು ಯಾವ ಮನೋಮಟ್ಟ ಕೂಡಾ ಈ ತೆ ಜನತೆಯ ದಾಗಿಲ್ಲ. ಹೀಗಾಗಿ ಎಲ್ಲವೂ ಒಸಮೋಲೋಗರವಾಗಿ ನಿಂತಿದೆ. ಈ ವ್ಯಸ್ತತೆಯನ್ನು ನಿವಾರಿಸಿ ವ್ಯವಸ್ಥೆಯ ಡುವ ಕೆಲಸವಾಗಬೇಕಾದುದು—ಜನಮತ ಶುದ್ಧೀಕರಣ ನಡೆಯಬೇಕಾದುದು ಇಂದು ಅತ್ಯಗತ್ಯ.

## ಆ ತಯಾರಿ ಹೇಗೆ?

ಈ ಜನಮತ ಸುಧಾರಣೆಯ ಮ ನ್ನು ಕೂಡಾ ಮೇಲಿಂದ ಮೇಲೆ ಹೇ ತ್ತಾ ಕೇಳುತ್ತಾ ಕಾರ್ಯತಃ ಅದು ದ ಎಂಬ ಕಡೆಗೆ ನೋಟ ಬೀರುವಾಗ ಮಾತು ಕೂಡಾ ನಮ್ಮ ಉಚ್ಚಾದರ್ಶ ಜಾಹೀರಾತು ಮಾತ್ರದಲ್ಲೊಂದಾಗಿ ಉಳಿದು ಹೋಗುವುದೇನೋ ಎಂಬ ಮೂಡುತ್ತಿದೆ! 'ಅಧಿಕ ಯೋಗ್ಯತೆ ಸಿರಿ!' 'ಅಧಿಕಾಹಾರ ಬೆಳೆಸಿರಿ!' ಎಂ ಡು ಸೊಲ್ಲುಗಳು ಕೂಡಾ ಕೇವಲ ಘನೆಗಳಾಗಿಯೇ ಉಳಿದುಕೊಂಡು ರ್ಯರಂಗಕ್ಕಿಳಿಯದಿದ್ದರೆ, ಮತ್ತೀ ತಾ ರಾಜ್ಯದಲ್ಲಿ ಆಳುವ, ಬಾಳುವ ಕೂಡಾ ಬಾಯ್ಬಡಿಯಾಗಿಯೇ ಹೊ ನಿಜಕ್ಕೂ ಇಲ್ಲವೆಂದಾಗುವದು! ಈ ಕತೆಯು ದಂಗುಗೊಳಿಸುವಂತಹದು; ಗ್ಯ ವಿನೋದವನ್ನೆಬ್ಬಿಸುವಂತಹದು ದ್ದರಿಂದ ಅಡಿದಷ್ಟೂ ಕಾರ್ಯತಃ ಡುವಂತಹ ಜನತಾ ಯೋಗ್ಯತಾ ಧನಾ ವಿಧಾನಗಳಾವುವು, ಎಂಬ ನ್ನೇ ಇಲ್ಲೀಗ ವಿಚಾರಿಸಬೇಕಾಗಿದೆ.

ಮೊದಲನೆಯದಾಗಿ ಮಾರ್ಪಟಿತ ಗನುಗುಣವಾದ ಜ್ಞಾನಾನುಭವ,


THE BOMBAY LIFE ASSURANCE COMPANY, LTD.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು.-

ಬೊಂಬಾಯಿ, ಮದ್ರಾಸು, ಬಂಗಳೂರು, ಕೊಯಮುತ್ತೂರು, ತ್ರಿವೆಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

# ಈ ರಾಜ್ಯದಲ್ಲೇನಾಗಬೇಕು?

- ಜ್ಞಾನ ಯೋಗ್ಯತೆ ಹೆಚ್ಚಬೇಕು
- ಹೊಣೆಗಾರಿಕೆ ಕಲಿಯಬೇಕು
- ಹೊಸ ಜೀವನಕ್ರಮ ಬರಬೇಕು

ಯೋಗ್ಯತೆಗಳನ್ನು ಜನಸಾಮಾನ್ಯರಲ್ಲಿ ಮೂಡಿಸುವವರಾರು ಮತ್ತು ಹೇಗೆ, ಎಂಬ ಪ್ರಶ್ನೆಯಿದೆ. ಯಾವುದೇ ಒಂದು ಪಕ್ಷವು ಜನತೆಗಂತಹ ಶಿಕ್ಷಣ ಕೊಡಲಿಕ್ಕೆ ಮುತ್ತದಾದರೆ, ಅಂತಹ ಪಕ್ಷವು ತನ್ನ ಧ್ಯೇಯ, ಧೋರಣೆ, ಕಾರ್ಯಕ್ರಮಗಳನ್ನಷ್ಟೇ ಕಲಿಸಿಕೊಟ್ಟು ಜನತೆಯನ್ನು ವಶಪಡಿಸಿಕೊಳ್ಳಲು ಪ್ರಯತ್ನ ಪಟ್ಟೀತೆಂದು ತಿಳಿದುಕೊಳ್ಳಬೇಕು. ಅಂತಹ ಯಾವುದೇ ವಿಶಿಷ್ಟ ಪಕ್ಷ ಸಂಗಡಗಳ ಮಾತಿಗೆ ಕಿವಿಗೊಡದೆ ಜನರು ತಾವಾಗಿ, ಅಭ್ಯಾಸ ಮೂಲಕ ಎಲ್ಲವನ್ನೂ ಕಲಿತುಕೊಳ್ಳಬೇಕೆಂದರೆ, ಅದಾದರೂ ಹೇಗೆ ಎಂಬ ಪ್ರಶ್ನೆಯೇಳುತ್ತದ. ಕಳೆದ ಮಹಾಯುದ್ಧದಲ್ಲಿ ನಡೆದ ವಿಶೇಷ ಘಟನೆಗಳು—ಅವುಗಳ ಕಾರಣ ಮತ್ತು ಪರಿಣಾಮ— ಭಾರತಕ್ಕೆ ಸ್ವಾತಂತ್ರ್ಯದಾನವಾದ್ದರೀತಿನೀತಿ-ರಾಷ್ಟ್ರವಿಭಜನೆ ಮತ್ತದನ್ನನುಸರಿಸಿ ನಡೆದ ಭೀಕರ ಜಾತೀಯ ಗೊಂದಲ—ಹೈದರಾಬಾದು ಮತ್ತಿತರ ಆಶ್ರಿತ ರಾಜ್ಯಗಳ ಸ್ಥಿತಿಗತಿ—ಬಾಪೂಜಿಯ ಪ್ರಾಣ ಬಲಿದಾನ—ಆಹಾರಾಭಾವ, ನಿತ್ಯ ಜೀವನೋಪಕರಣಗಳ ಅಭಾವ ಮತ್ತು ಧಾರಣೆ ಹೆಚ್ಚಳ—ಇಂದಿನ ಪ್ರಜಾರಾಜ್ಯ ರಚನಾಕಾರ್ಯ ಮತ್ತದರ ಸ್ಥಾಪನೆ—ಮುಂತಾದ ಅಸಾಮಾನ್ಯ ಸಂಗತಿಗಳೇ ಅಂದಿನಿಂದೀವರೆಗೂ ನಡೆಯುತ್ತಾ ಬಂದಿವೆ. ಇವುಗಳ ವಾರ್ತೆ ಕೇಳದ, ಚರ್ವಿತ ಚರ್ವಣ ನಡೆಸದ ಜನರಿಲ್ಲ. ಹೃದಯವನ್ನು ಕದಡಿ, ಜಾಗೃತಿಯನ್ನು ಬಡಿದೆಬ್ಬಿಸಿ, ಮೆದುಳನ್ನು ಕುಲುಕಿ, ವಿಷಯ ಜ್ಞಾನ ಮತ್ತು ಅನುಭವಗಳನ್ನು ತುಂಬಿಸಿದ ಈ ಘಟನೆಗಳಿಗಿಂತ ಹೆಚ್ಚಿನ ಜನತಾ ಗುರು ಬೇರಿರಲಾರರು. ಇಂತಹ ಶಿಕ್ಷಣದಲ್ಲಿ ನವೆದರೂ ಸಾರ್ವಜನಿಕರ ಬುದ್ಧಿ ಮತ್ತು ಹೃದಯ ಇನ್ನೂ ಸಾಕಷ್ಟು ಪಕ್ವವಾಗಿಲ್ಲವೆಂದಾದರೆ, ಜನತೆ ತಾನಾಗಿ ಕಲಿತು ಪಾಸಾಗಬೇಕು, ಎಂದು ನಿರೀಕ್ಷಿಸುವುದು ವ್ಯರ್ಥ. ಪಕ್ಷ ಸಂಗಡಗಳಿಂದ ದೊರೆಯುವ ಶಿಕ್ಷಣವು, ಒಂದಲ್ಲೊಂದು ಗೂಟಕ್ಕೆ ಕಟ್ಟಿಹಾಕಿಯುವಂತಹದಾಗುವದೆಂಬ ಭಯವೊಂದೆಡೆ-ಯಾವ ಪಕ್ಷದ ಗೊಡವೆಯೂ ಇಲ್ಲದೆ ಜನರು ತಾವಾಗಿ ಬುದ್ಧಿ ಕಲಿಯಲು ಸಾಧ್ಯವಿಲ್ಲವೆಂಬ ಅನುಭವ ಇನ್ನೊಂದೆಡೆ. ಆದುದರಿಂದ ಸಾರ್ವಜನಿಕರನ್ನು ಯೋಗ್ಯರನ್ನಾಗಿ ಮಾರ್ಪಡಿಸುವ ಬೇರಾವ ವಿಧಾನವಿದೆ, ಎಂದು ಶೋಧಿಸಬೇಕಾಯಿತು. ಈ ಕೆಲಸವು ಸರಕಾರದ ಮೂಲಕವೇ ನಡೆಯಬೇಕಾಗಿದೆ, ಎಂಬ ಯೋಚನೆಯೀ ಸಂದರ್ಭದಲ್ಲಿ ಮೂಡುತ್ತದ.

## ಸರಕಾರಿ ಸಮದೃಷ್ಟಿ

ಆದರೆ ಇಂದಿನ ಸರಕಾರವು ಕಾಂಗ್ರೆಸ್ಸಿನದಲ್ಲವೆ? ಕಾಂಗ್ರೆಸ್ ಸರಕಾರವು ಕೊಡುವ ಶಿಕ್ಷಣವು ಜನರನ್ನು ಕಾಂಗ್ರೆಸ್ಸಿನತ್ತ ಎಳೆಯುವಂತಹದಾಗಲಾರದೇ? ಎಂಬ ಸಂದೇಹ ಮೂಡಬಹುದು. ಯಾವ ಪಕ್ಷವೇ ಅಧಿಕಾರದಲ್ಲಿರಲಿ—ಸಮದೃಷ್ಟಿಯಿಂದ, ನಿಷ್ಪಕ್ಷಪಾತತೆಯಿಂದ ರಾಷ್ಟ್ರ ಧೋರಣೆ ವಹಿಸಿ, ಅದು ನಿರ್ವಹಿಸುವ ಕೆಲವು ಕಾರ್ಯಕ್ರಮಗಳಿವೆ. ಒಂದು ಮಹಾ ನಿದರ್ಶನ ಇಂದಿನ ನವರಾಜ್ಯ ಶಾಸನವೇ. ಈ ರಾಜ್ಯಾಂಗ ವಿಧಾನಗಳು, ಕಾಂಗ್ರೆಸಿಗರೇ ಅತ್ಯಧಿಕ ಬಹುಸಂಖ್ಯೆಯುಳ್ಳ ರಾಜ್ಯ ಘಟನಾ ಸಮಿತಿಯಿಂದ ತಯಾರಿಸಲ್ಪಟ್ಟದ್ದರೂ ಕಾಂಗ್ರೆಸ್ ಪಕ್ಷದ ಸ್ವಾರ್ಥ ಸಾಧನಾ ದೃಷ್ಟಿಯಿಂದ ಸೇರಿಕೊಂಡಿರುವ ವಿಷಯವೆಂದು, ಅದರಲ್ಲಾವ ಅಂಶವನ್ನಾದರೂ ತೋರಿಸಲು ಮನಸ್ಸಾಕ್ಷಿ ಭಕ್ತರಾರಿಗಾದರೂ ಅಸಾಧ್ಯ. ಯಾವ ಪಕ್ಷೀಯನಾದರೂ ಶಾಸನ ಸಭೆಯೊಂದರ ಅಧ್ಯಕ್ಷನಾಗಿ ಆರಿಸಲ್ಪಟ್ಟೊಡನೆ ಪಕ್ಷಾತೀತ ಸಮದೃಷ್ಟಿಯವನಾಗಿ ಮಾರ್ಪಡುವ ಕ್ರಮವಿದೆ; ಸರಕಾರದಿಂದ ನೇಮಕ ಹೊಂದುವ ನ್ಯಾಯಾಧೀಶರಾದರೂ ನ್ಯಾಯವನ್ನಾಧರಿಸಿ ಸರಕಾರದ ವಿರುದ್ಧ ತೀರ್ಮಾನ ಕೊಡಬೇಕಾಗುವ ಸಂದರ್ಭಗಳಿವೆ. ಮುಂದಿನ ಮಹಾಚುನಾವಣೆಯು ನಿಷ್ಪಕ್ಷಪಾತವಾಗಿ ನಡೆಯುವಂತೆ ನೋಡಲು ಚುನಾವಣಾ ಅಧಿಕಾರಿಯನ್ನು ರಾಷ್ಟ್ರಾಧ್ಯಕ್ಷರು ನೇಮಿಸಬೇಕೆಂದೂ, ಈ ಅಧಿಕಾರಿಯು ಪಕ್ಷಾತೀತನಾಗಿದ್ದು ಚುನಾವಣಾ ವ್ಯವಸ್ಥೆಗಳನ್ನು ನಡೆಸಬೇಕೆಂದೂ ನವ ರಾಜ್ಯ ಶಾಸನದಲ್ಲೊಂದು ನಿಬಂಧನೆಯಿದೆ. ಕಾಂಗ್ರೆಸ್ ಆಡಳಿತೆಯ ಅಗ್ರಗಣ್ಯಾಧಿಕಾರಿಯಿಂದ ನೇಮಕ ಹೊಂದುವ ಈ ಚುನಾವಣಾಧಿಕಾರಿಯು ಕಾಂಗ್ರೆಸ್ ಪಕ್ಷಕ್ಕೆ ಹಿತಕರವಾಗುವ ವರ್ತನೆ ವಹಿಸಿಯಾನೆಂಬ ಅಪನಂಬಿಕೆಗೆ ಅವಕಾಶವೇ ಇಲ್ಲ. ಅದೇ ರೀತಿ ಜನತಾ ಶಿಕ್ಷಣಕ್ಕಾಗಿ ಸರಕಾರದಿಂದಲೇ ನಿಷ್ಪಕ್ಷಪಾತೀ ವ್ಯವಸ್ಥೆಗಳಾಗಬೇಕಾದುದು ಅಗತ್ಯವನ್ನಿಸಿದೆ. ಪ್ರೌಢರಿಗೆ ಅಕ್ಷರಾಭ್ಯಾಸ ಮಾಡಿಸುವ ವ್ಯವಸ್ಥೆಯನ್ನು ಯೋಜಿಸಿದಂತೆಯೇ ಇಂದಿನ ನವರಾಜ್ಯ ಶಾಸನ—ರಾಜಕೀಯ ವಿದ್ಯಮಾನ—ಆರ್ಥಿಕ, ಸಾಮಾಜಿಕ ಸ್ಥಿತಿಗತಿ— ಇತ್ಯಾದಿ ಕಾಲ ಪ್ರಾಮುಖ್ಯ ಸಂಗತಿಗಳನ್ನು ಪ್ರಾಯಸ್ಥರೆಲ್ಲರಿಗೂ ಕಲಿಸಿಕೊಡುವ ತರಬೇತಿ ಶಾಲೆಗಳನ್ನು ಸರಕಾರವು ಹಳ್ಳಿಹಳ್ಳಿಗಳಲ್ಲೂ ಸ್ಥಾಪಿಸುವ ವ್ಯವಸ್ಥೆ ಮಾಡಬಾರದೇಕೆ? ಈ ರಾಷ್ಟ್ರವ್ಯಾಪೀ ಕಾರ್ಯವು ಸರಕಾರೀ ಖಜಾನೆಗಾವ ತೂತನ್ನೂ ಕೊರೆಯದಂತೆ ಮಾಡಲು, ಪ್ರತಿಫಲಾಪೇಕ್ಷೆಯಿಲ್ಲದೆ ಜನ ಸೇವಾಬುದ್ಧಿಯಿಂದ ಕೆಲಸ ಮಾಡುವ ಪಕ್ಷಾತೀತ ಅನುಭವಿಗಳನ್ನೇ ಶಿಕ್ಷಕರನ್ನಾಗಿ ಕರೆಯಬಹುದು. ಆ ಯಾ ಶಿಕ್ಷಣ ಕೇಂದ್ರಗಳಿಗೆ ಮತ್ತೂ ಬೇಕಾಗುವ ಅಲ್ಪ ವೆಚ್ಚಗಳನ್ನು ಆಯಾ ಕ್ಷೇತ್ರಗಳಲ್ಲೇ ಸಂಗ್ರಹಿಸಿಕೊಳ್ಳುವ ವಿಧಾನವನ್ನು ಸೂಚಿಸಬಹುದು. ತರಬೇತಿಯ ಅವಧಿಯನ್ನು ಕೇವಲ ಮೂರು ತಿಂಗಳಿಟ್ಟು ವಾರಕ್ಕೆರಡೇ ದಿನ ಪಾಠ ಪ್ರವಚನ ನಡೆಸಬಹುದು. ಯಾವ ಪ್ರಜಾಸತ್ತಾ ರಾಷ್ಟ್ರದಲ್ಲೂ ಇದುವರೆಗೆಂದೂ ನಡೆಯದಿದ್ದಂತಹ ಈ ರಾಜಕೀಯ ಶಿಕ್ಷಣ ಕ್ರಮವನ್ನು ಭಾರತದಲ್ಲಿ ಜಾರಿಗೆ ತರುವವೆಂದರೆ ದು ಅಪಹಾಸ್ಯಕರವಾಗಿ ತೋರುವವರಿರಬಹುದು. ಆದರೆ ಪ್ರಜಾರಾಜ್ಯದ ಹೊಣೆಗಾರಿಕೆ ಬಂದಿರುವ ಹಿಂದೀ ಸಾಮಾನ್ಯ ಜನರ—ಅದರಲ್ಲೂ ಮುಖ್ಯವಾಗಿ ಹಳ್ಳಿಗರ—ಮನೋಸ್ಥಿತಿ ಹೇಗಿದೆ, ಎಂಬುದನ್ನರಿತವರು ಇಂತಹ ತರಬೇತಿ ಅತ್ಯಗತ್ಯವೆಂಬುದನ್ನು ಮನಗಾಣದಿರರು. ಇಷ್ಟೊಂದು ಶೋಚನೀಯ ಮನೋವೃತ್ತಿಯಿರುವಲ್ಲಿ ಮೇಲಿನ ಮಾದರಿಯ ಶಿಕ್ಷಣದಿಂದ ಸತ್ಪರಿಣಾಮವುಂಟಾದೀತೇ ಎಂಬ ಸಂದೇಹ ಮೂಡುವದು ಸಹಜ. ಆದರೆ 'ನೀವೇ ಈಗ ರಾಷ್ಟ್ರದ ಧನಿಗಳು" ಎಂಬ ಡಂಗುರವು ಎಲ್ಲೆಡೆಗಳಿಂದಲೂ ಜನಸಾಮಾನ್ಯರ ಕಿವಿಗೆ ಬಡಿದಿರುವಾಗ 'ನಮಗೇನು ಬಂದಿದೆ?" ಎಂಬುದನ್ನು ತಿಳಿದುಕೊಳ್ಳಬೇಕೆಂಬ ಆತುರವು ಈ ಕಾಲದಲ್ಲಿ ಜನಸಾಮಾನ್ಯರಲ್ಲುಂಟಾಗಿದೆ. ಹೀಗೆ ತಿಳಿಯಬೇಕೆಂಬಾಶೆಯಿರುವಾಗಲೇ ಕಲಿಸಹತ್ತಿದರೆ ನಿಜಕ್ಕೂ ಪರಿಣಾಮವಾಗಬಹುದು. ನಿರೀಕ್ಷಿಸಿದಷ್ಟು ವಿಜಯ ದೊರೆಯದೆ ಹೋದರೂ ಹೊಸ ವೆಚ್ಚವೇನೂ ಇಲ್ಲದೆ, ಪ್ರಚಾರ ರೂಪರೂಪದಿಂದ ನಡೆದು ಹೋಗುವ ಈ ಶಿಕ್ಷಣದಿಂದ ನಷ್ಟವೆಂತೂ ಆಗದು. ಇಂತಹ ವ್ಯವಸ್ಥೆಗೆ ಸರಕಾರ ಮುಂದಾಗದಿದ್ದರೆ ಜನತೆಯ ಯಥಾರ್ಥ ಮುಂದಾಳುಗಳು ತಾವಾಗಿ ಈ ಪ್ರಯೋಗಕ್ಕೆಳೆಯುವುದು ಅಗತ್ಯ. ಹೀಗಿಲ್ಲವಾದರೆ, ಪ್ರಚಲಿತ ವಿಧಾನಗಳಿಲ್ಲವುಗಳ ಮೂಲಕವಾದರೂ ಜನಮನದಲ್ಲಿ ನೆಡಬೇಕಾದುದನ್ನು ನೆಡಲೇ ಬೇಕು.

## ಇಲ್ಲವಾದರೆ....

ಈ ರೀತಿ ಕಾಲವು ತುಂಬಕೊಟ್ಟ ಪ್ರಾಯದಂತೆಯೇ, ಕಲಿಯುವಿಕೆಯಿಂದ ತುಂಬಿಕೊಳ್ಳುವ ಬುದ್ಧಿಯಿಲ್ಲಿಯೂ ಪ್ರೌಢರಾಗುವ ಪ್ರಜೆಗಳ ಪ್ರಜಾರಾಜ್ಯವು ಮಾತ್ರ ಪ್ರಗತಿಗಾಮಿಯಾದೀತು. ಏನಿಲ್ಲೆಂದರೂ ಮುಂದಿನ ಮಹಾ ಚುನಾವಣೆಯಲ್ಲಿ ಅದರ ಸತ್ಪರಿಣಾಮ ತೋರಿಬಾರದಿರಲಾರದು. ಚುನಾವಣೆಗೆ ಇನ್ನೂ ಸುಮಾರು ಒಂದೂವರೆ ವರುಷ ಉಳಿದಿದೆ; ಈ ಅವಧಿಯೊಳಗೆ ಮತ್ತೆ ಕೆಲವು ಮಹಾ ಸಂಗತಿಗಳು ಸಂಭವಿಸಬಹುದು. ಆಡಳಿತೆಯ ಜವಾಬ್ದಾರಿ ಯಾರ ಮತ್ತು ಯಾವ ಪಕ್ಷದ ಹೆಗಲ ಮೇಲೆ ಬೀಳುವುದು ಹಿತಕರವೆಂಬುದನ್ನು ಸ್ಪಷ್ಟವಾಗಿ ತಿಳಿಯಲಾಗುವ ವಾತಾವರಣ ಮೂಡಬಹುದು. ಜನತೆ ಅಷ್ಟು ತಯಾರಾಗಿ ನಿಂತರೆ, ಯುದ್ಧ ಮಾಡಿದುದ ಇಂಗ್ಲೆಂಡನ್ನು ಪಾರುಮಾಡಿದ ಮರುದಿನವೇ ಚರ್ಚಿಲ್ಲನ್ನು ಕೆಳಗಿಳಿಸಿಕೊಂಡ ಬ್ರಿಟಿಷ್ ಮತದಾರರಿಂದಾಗಿದ್ದ ಕೌತುಕವೇ ಹಿಂದೀ ಮತದಾರರಿಂದಲೂ ಆಗಬಾರದೆಂದಿಲ್ಲ. ಅಥವಾ ಪ್ರಗತಿಸಾಧನೆಗಾಗಿ ಬೇರೇನಾದೀತೋ ಈಗ ಊಹಿಸುವುದಸಾಧ್ಯ. ಬದಲಿಗೆ ಸಾರ್ವಜನಿಕರು ಇಂದಿನಂತೆಯೇ ಅರಿಮನಸ್ಸು, ಅರ್ಧ ಮಂಕು ಸ್ಥಿತಿಯಲ್ಲೇ ಉಳಿದುಕೊಂಡರೆ ಮುಂದಿನ ಮಹಾ ಚುನಾವಣೆಯಲ್ಲಾದರೂ ಇಂದಿನ ಸ್ಥಿತಿಯೇ ಉಳಿದುಕೊಂಡೀತೆಂದು ಖಚಿತವಾಗಿ ಹೇಳಬಹುದು. ವೋಟರರು ಹೆಚ್ಚಿದಾರು—ಉಮೇದ್ವಾರಿಗಳ ಸಂಖ್ಯೆ ಹೆಚ್ಚೀತು—ಪ್ರಚಾರ, ಓಡಾಟ, ಕಾದಾಟಗಳ ಗದ್ದಲವೆಲ್ಲವೂ ಅದೇ ಪರಿಮಾಣದಲ್ಲಿ ಬೆಳೆದು ಇದ್ದ ಸಂಗತಿಯೇ ನಾನಾ ನಾಟಕಾಂದಿಂದ ವಿಶ್ವಾಕಾರಕ್ಕೇರೀತು ಹೊರತು ಹೊಸತೇನೂ ಮೂಡದು. ಪ್ರಜಾರಾಜ್ಯದಲ್ಲಿ ಇಷ್ಟೇ ಆದರೆ ಸಾಕೇನು? ಜನಸಾಮಾನ್ಯರಿಗೀಗ ಬೇಕಾಗಿರುವುದು ಈ ಸಂಖ್ಯೆ ಮತ್ತು ಗದ್ದಲಗಳ ಹೆಚ್ಚಳ ಮಾತ್ರವೇನು? ಇಂದು ಎಲ್ಲರೂ ಆಲೋಚಿಸಬೇಕಾದ ವಿಷಯವಿದು.

---


**On this Memorable day**

Of the 26th of January in the year 1950 of the inauguration of the Indian Republic, we have the pleasure to announce the birth of our

**Vijaya Cash Certificates**

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices.

Head Office:—**Kadri Road, Mangalore.**

Branches:- City-Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara.

**B. Manjaya Hegde.**
Advocate & President, District Board, S. Kanara.
CHAIRMAN
VIJAYA BANK, LTD.



ಬಿಳಿ ಕಾಗದ! ನಾಜೂಕಿನ ಬೈಂಡು!

**೧೯೫೦ನೇ ಇಸವಿಯ ಪಾಕೆಟ್ ಡೈರಿಗಳು**

| | | |
|---|---|---|
| ದೊಡ್ಡದು | (ಕೆಲಿಕೊ ಬೈಂಡ್) | 1-12-0 |
| ,, | (ಸಾದಾ) | 1-8-0 |
| ಸಣ್ಣದು | (ಕೆಲಿಕೊ) | 1-4-0 |
| ,, | (ಸಾದಾ) | 0-12-0 |

(ಟಪ್ಪಾಲು ಖರ್ಚು ಪ್ರತ್ಯೇಕ.)

ಸಿಗುವ ಸ್ಥಳಗಳು:—

ನವಭಾರತ ಬುಕ್ ಡಿಪೊ, ಉಡುಪಿ.

ನವಯುಗ ಪ್ರೆಸ್, ಉಡುಪಿ.

THE

Canara Banking Corporation Ltd.

(Incorporated in India)

Estd: 1906.

*HEAD OFFICE*, **UDIPI, S. I.**

**SEASON DEPOSITS**

for Rs. 5,000/- and over in multiples of Rs. 1,000/- maturing within 30-9-1950 are now accepted at all offices of the Bank at the following rates:-

| | | |
|---|---|---|
| 3 months | .... ... | 2¼% p. a. |
| 4 to 5 „ | .... .... | 2½% p. a. |
| 6 to 9 „ | .... .... | 2¾% p. a. |


ಗುರುವಾರ ಉಡುಪಿ ೨-೨-೧೯೫೦

## ಸರಕಾರದ ಕರ್ತವ್ಯ

ಭಾರತದ ಪ್ರಜಾರಾಜ್ಯ ನವಜೀವನದಲ್ಲಿ ಇಂದಿಗೆ ಒಂದು ವಾರ ದಾಟಿತು. ಈ ನವಯುಗಾರಂಭ ದಿನಗಳಲ್ಲಿ ದೇಶದ ಪೇಟೆ-ಹಳ್ಳಿ, ಕೇಂದ್ರ-ಮೂಲೆಗಳಲ್ಲೆಲ್ಲಾ ನಡೆದ ಸಂಭ್ರಮೋತ್ಸವಗಳೂ ಏಹುತೇಕವಾಗಿ ಎಲ್ಲಾ ವರ್ಗದ ಜನರೂ ಪ್ರದರ್ಶಿಸಿದ ಆನಂದೋತ್ಸಾಹಗಳೂ ಚಿರಸ್ಮರಣೀಯವಿವೆ. ರಾಷ್ಟ್ರದ ಜನತೆಯು ಈ ನವೀನ ವ್ಯವಸ್ಥೆಯ ಮೂಲಕ ಏನನ್ನು ಸಾಧಿಸಲಿಚ್ಛಿಸುತ್ತಿದೆ ಎಂಬುದೂ ಅಂದಿನ ಸಭೆ, ಸಮಾರಂಭಗಳ ವೇಳೆ ಸರಿಯಾಗಿ ಪ್ರಕಾಶಗೊಂಡಿದೆ. ಲೋಕವು ನಮ್ಮಿಂದ ನಿರೀಕ್ಷಿಸುತ್ತಿರುವುದೇನು, ಎಂಬ ಕುರಿತು ಹೃದಯಸ್ಪರ್ಶಿ ಮಾತುಗಳು ಹೊರಗಿನಿಂದ್ಲೂ ಕೇಳಿಬಂದುವು. ಜನತಾ ರಾಜ್ಯ ಸ್ಥಾಪನೋತ್ಸವವನ್ನಾಚರಿಸಿದ ಬೆನ್ನಲ್ಲೇ ಸರ್ವೋದಯ ದಿನವನ್ನು ದೇಶವಾಚರಿಸಿತು. ಈ ಸಂದರ್ಭದಲ್ಲೂ "ನಾವು ಹೇಗಿರಬೇಕು?" ಎಂಬುದರ ಜ್ಞಾಪನೆ ನಡೆಯಿತು. "ಸಂಕುಚಿತ ಭೇದಭಾವಗಳನ್ನು ಬಿಟ್ಟು ಗಾಂಧೀ ತತ್ವಾನುಸಾರ ವಿಶಾಲ ಹೃದಯಿಗಳಾಗಿರಿ" ಎಂಬ ಉಪದೇಶ ಪ್ರಧಾನಿ ಪಂಡಿತ ನೆಹರುಗಳಿಂದ-"ಆರ್ಥಿಕ ಸ್ವಾವಲಂಬನೆಯಿಂದಲೇ ನಿಜವಾದ ಸ್ವಾತಂತ್ರ್ಯ; ಸ್ವದೇಶೀ ವಸ್ತುಗಳನ್ನೇ ಉಪಯೋಗಿಸಿರಿ" ಎಂಬ ಬೋಧನೆ ಉಪಪ್ರಧಾನಿ ಸರ್ದಾರ್ ಪಟೇಲರಿಂದ-ಮತ್ತೊಮ್ಮೆ ಆಗಿದೆ. ಅಂತೂ, ಭಾರತೀಯ ಜನಸಾಮಾನ್ಯರ ಮನೋರೋಗವನ್ನು ಗುಣಪಡಿಸಬಲ್ಲ ತಿಂಡೀ ರೂಪದ ಗುಳಿಗೆಗಳು ಕಳೆದ ವಾರದಲ್ಲಿ ದೊರಕಿವೆ. ಇವು ಕಾಲೋಚಿತ ಮತ್ತು ಉಪಯೋಗಕಾರಿ, ಎಂದು ಪ್ರತ್ಯೇಕ ಹೇಳಬೇಕಾಗಿಲ್ಲ.

ಸಮಯೋಚಿತವಾಗಿ ಜನಸಾಮಾನ್ಯರ ಮತಿ ಸುಧಾರಿಸಬೇಕಾದಂತೆಯೇ, ಸರಕಾರೀ ರೀತಿನೀತಿಗಳು ಕೂಡಾ ಪ್ರಗತಿಗಾಮಿಯಾಗಬೇಕಾದುದು ಅಗತ್ಯವೆಂಬುದನ್ನು ಈ ಸಂದರ್ಭದಲ್ಲಿ ಒತ್ತಿ ಹೇಳಬೇಕಾಗಿದೆ. ಆಗೋಸ್ತು 15ರ ಸ್ವರಾಜ್ಯ ದಿನದ ಬಂದು ಮುಂದಿನ ಅನುಭವಗಳ ಮೇಲಿಂದ ಜನವರಿ 26ರ ಜನರಾಜ್ಯ ದಿನದ ಆಶೆ, ನಿರೀಕ್ಷೆಗಳು ತೀರಾ ಮಿತವಾಗಿದ್ದುವೆಂಬುದನ್ನು ಮರೆಯಲಾಗುವದಿಲ್ಲ. ಆಗೋಸ್ತು 15ರಲ್ಲಿ ಜನಸಾಮಾನ್ಯಗಿಟ್ಟುಕೊಂಡಿದ್ದ ಆಶೆಗಳಲ್ಲಿ ಹೆಚ್ಚಿನವು ಫಲಿಸದೆ ಹೋಗಿವೆ; ಕೆಲವಂಶ ವಿರುದ್ಧ ಫಲವೇ ತೋರಿಬಂದಿದೆ. ಜನವರಿ 26ರ ನಂತರ ಎಂದಿಗೂ ಹಾಗಾಗಲಾರದೆಂಬ ಸ್ಪಷ್ಟ ಭರವಸೆ ದೊರೆತಿಲ್ಲ. ಸ್ಥಿತಿಗತಿ ಹೇಗಿದ್ದರೂ, "ನಮ್ಮ ರಾಷ್ಟ್ರದಲ್ಲಿ ನಮ್ಮದೇ ಆಡಳಿತೆ" ಎಂಬ ದೇಶಾಭಿಮಾನ ಮತ್ತು ಸ್ವಾಭಿಮಾನ ಭಾರತೀಯರಲ್ಲಿದೆ. ಹೀಗಾಗಿ ಗಣರಾಜ್ಯ ಸ್ಥಾಪನಾ ದಿನವು ವಿಶೇಷ ಸಂಭ್ರಮದಿಂದ—ಆದರೂ ಅಂತರಾಳದ ಚಿಂತೆಯೊಂದಿಗೆ—ಆಚರಿಸಲ್ಪಟ್ಟಿತು. ಈ ಹೊಸ ಯುಗವು ಒಂದೆರಡು ದಿನದ ಮಟ್ಟಿಗೆ ಬಾಯಿ ಸಿಹಿಮಾಡಿಸುವ, ಮತ್ತು ಎಲ್ಲೆಲ್ಲೂ ಬೆಳಕನ್ನು ತೋರಿಸುವ, ಹಬ್ಬದ ರೂಪದಿಂದಾರಂಭಿಸದೆ, ದಿನಕ್ಕೊಂದು ಪಾಪಿಷ್ಠಾದರೂ ಅಕ್ಕಿ ಹೆಚ್ಚಿಸಿದ ಮುಹೂರ್ತವಾಗಿ ತೊಡಗುತ್ತಿದ್ದರೆ, ಆರಂಭಿಸಿರುವುದು ನಿಜಕ್ಕೂ ಸುಖದಾಯೀ ಜನತಾರಾಜ್ಯವೆಂಬುದು ಬಹುಸಂಖ್ಯಾಕ ಜನತೆಗೆ ಮನದಟ್ಟಾಗುತಿತ್ತು. ಆದರಿಂದಿನ ಸ್ಥಿತಿಯಲ್ಲಿ ಯುಗಾದಿ ಹಬ್ಬವನ್ನಷ್ಟೇ ಆಚರಿಸಲು ಸಾಧ್ಯ ಹೊರತು, ಜನಸಾಮಾನ್ಯರ ನಿತ್ಯ ಜೀವನದಲ್ಲಿ ಅನುಭವಕ್ಕೆ ಬರುವ ಹೊಸ ಯುಗವನ್ನೇ ಆರಂಭಿಸಲು ಸಾಧ್ಯವಿಲ್ಲ. ಅನಿವಾರ್ಯ ಅಡಚಣೆಗಳಿರುವಲ್ಲಿಯೂ ಸರಕಾರವು ಸುಖಿಂದ್ಯಾಹಗಳನ್ನು ನಿವಾರಿಸುವ ಅತಿ ಮಾನುಷ ಶಕ್ತಿ ಪ್ರದರ್ಶಿಸಬೇಕೆಂದಾರೂ ಹೇಳಲಾರರು. ಆದರೆ, ಜನತೆಯಿಂದ- ಜನತೆಗಾಗಿ- ಜನತೆಯದಾಗಿ ಇರುವ ಸರಕಾರ ತಮ್ಮದೆನ್ನುತ್ತಾ ಜನತೆಯು ಅಡೆಗೆ ಮಾಡಬೇಕಾದ ಸ್ವಾಭಾವಿಕ ಕರ್ತವ್ಯಗಳನ್ನೂ ಮರೆತು ಬಿಡುವುದನ್ನು ಮಾತ್ರ ಜನರು ಮುಂದಕ್ಕೂ ಸಹಿಸುತ್ತಾ ಹೋಗಲಾರರು. ಅಧಿಕಾರದ ಹೊಣೆ ಹೊತ್ತವರನ್ನು ಸುತ್ತಿರಿಸಿರುವ ವಿಶೇಷ ಕಂಟಕಗಳಿವೆ. ಆದ್ದರಿಂದ ನಿತ್ಯ ಜೀವನ ಸ್ಥಿತಿ ಸುಧಾರಣೆಗಾಗಿ ಜನತೆ ಆಗ್ರಹಪಡಿಸಬಾರದು—ಎಂಬ ಪಲ್ಲವಿಯನ್ನು ಅವಧಿ ಮೀರಿಯೂ ಹಾಡುತ್ತಾ ಹೋದರೆ ಅರ್ಥ ಕೆಡುತ್ತದೆ. ಭಾರತದ ಸರ್ವ ಶಕ್ತಿ ಮತ್ತು ಸರ್ವ ಲಕ್ಷ್ಯವನ್ನೂ ಎಳೆಯುವಷ್ಟು ದೊಡ್ಡದಾಗಿರದ ಕಾಶ್ಮೀರದ ಸಮಸ್ಯೆಯೊಂದನ್ನು ಬಿಟ್ಟರೆ, ರಾಷ್ಟ್ರ ನಾಯಕರನ್ನು ಬೇರಾವ ಗಣ್ಯ ರಾಜಕೀಯ ಕಂಟಕವೂ ಇಂದು ಇದಿರಿಸಿ ನಿಂತಿಲ್ಲ. ರಾಷ್ಟ್ರ ರಕ್ಷಣೆ, ಆಹಾರಾಭಾವ ನಿವಾರಣೆ, ಆರ್ಥಿಕ ಸ್ಥಿತಿ ಸುಧಾರಣೆ ಮಂತ್ರಿತ್ರಯ ರಾಷ್ಟ್ರೀಯ ನಿತ್ಯ ಕರ್ಮಾಗಳಷ್ಟೇ ಆಗಿವೆ. ಒಂದು ರಾಷ್ಟ್ರದ ಬಾಳುವೆಯ ವಿಧಾನಗಳೇ ಅವು, ಎಂಬುದರ ಮೇಲೆ ಇವುಗಳನ್ನೂ ವಿಶೇಷಾಪತ್ತುಗಳೆಂದು ಗಣಿಸಲಾಗುವದಿಲ್ಲ. ಹೊಸತಾಗಿ ಸ್ವತಂತ್ರವಾದ ಭಾರತದ ಪಾಲಿನ ಈ ನಿತ್ಯಾಚರಣೆಗಳಲ್ಲಾ ಅಸಾಮಾನ್ಯ ಜಾಗರೂಕತೆ, ವಿಶೇಷ ಲಕ್ಷ್ಯ ಮತ್ತು ಕಠಿಣಶ್ರಮ ಬೇಕಾಗಬಹುದೇನೋ ನಿಜ. ರಾಷ್ಟ್ರದ ಸರ್ವ ಪ್ರಮುಖಾಂಗವಾಗಿರುವ ಜನಸಾಮಾನ್ಯರ, ಆರ್ಥಿಕ, ಆಹಾರ, ಸಾಮಾಜಿಕ ಕೊರತೆಗಳಕಡೆಗೆ ವಿಶೇಷ ಲಕ್ಷ್ಯ ಕೊಟ್ಟು, ಅವುಗಳ ನಿವಾರಣೆಗಾಗಿ ಹೆಚ್ಚಿನ ಶ್ರಮ ವಹಿಸುವ ಮೂಲಕವೇ ಕೆಲಸವಾಗಬೇಕು. ರಾಷ್ಟ್ರದ ಸರಕಾರಗಳೀಗ ಈ ಕಡೆಗೆ ಪೂರ್ಣ ವಿಮುಖವಾಗಿವೆ, ಎಂದು ನಮ್ಮ ಅಂಬೋಣವಲ್ಲ. ಆದರೆ ಪ್ರಚಲಿತ ಸಾಮಾಜಿಕಾರ್ಥಿಕ ಅಂತಸ್ತುಗಳನ್ನು ಇನ್ನು ಹಲವು ವರುಷಗಳ ವರೆಗಾದರೂ ಊರ್ಜಿತದಲ್ಲಿಟ್ಟು ಅದರಲ್ಲಿಯೇ ದುರಸ್ತಿ, ಮತ್ತುದನ್ನೇ ಪುಷ್ಟಿಗೊಳಿಸುವ ಧೋರಣೆ ಸರಕಾರದ್ದೆಂಬುದು ಖಚಿತವಾಗಿದೆ. ಉದ್ಯಮಗಳ ರಾಷ್ಟ್ರೀಕರಣದಂತಹ ಕ್ರಾಂತಿಕಾರೀ ಬದಲಾವಣೆ ಕೈಕೊಳ್ಳಲು ಪ್ರಕೃತ ಸರಕಾರದ ವಶ ಸಾಕಷ್ಟು ಧನ, ಜನ ಬಲವಿಲ್ಲವೆಂಬ ವಾದ ಕೇಳಿಬರುತ್ತಿದೆ. ಈ ಕುರಿತು ಈವಾಗ ವಿಚಾರ ವಿಮರ್ಶೆ ನಡೆಸಲು ಇಲ್ಲಿ ಅವಕಾಶವಿಲ್ಲ. ಆದರೆ ರಾಷ್ಟ್ರದಲ್ಲಿ ಸಂಪತ್ತು ಮತ್ತು ಉತ್ಪಾದನೆಗಳ ಅಸ್ತವ್ಯಸ್ತತೆಯೂ ಸರಕಾರಕ್ಕೆ ಹಣದ ಕೊರತೆಯೂ ಇರುವ ಈ ಕಾಲದಲ್ಲಿ ಇವೆರಡು ಲೋಪದೋಷಗಳನ್ನೂ ನಿವಾರಿಸಬಲ್ಲ ರಾಷ್ಟ್ರೀಕರಣದಂತಹ ಹೆಜ್ಜೆಯಿಡಲು ಅಗತ್ಯವುಳ್ಳ ಧನ ಜನಬಲ ಸಂಪಾದಿಸಿಕೊಳ್ಳುವದು ಸರಕಾರಕ್ಕೆ ಸಾಧ್ಯವಿಲ್ಲದೆ ಹೋ, ತೆ? ಅಥವಾ ಮನಸ್ಸಿಲ್ಲದೆಯೋ? ಎಂದು ಪ್ರಶ್ನಿಸಬೇಕಾಗುತ್ತದೆ.

ಅಧಿಕಾರ ಮತ್ತದರ ಸೂತ್ರಧಾರಿಗಳು ಬದಲಾದರೂ ಸರಕಾರೀ ನೌಕರ ಯಂತ್ರ ಹಳೇ ಮಾದರಿಯಲ್ಲೇ—ಕೆಲವಂಶ ಹಿಂದಿಗಿಂತಲೂ ಕಳತೀ ವಿಧಾನದಿಂದ—ಚಾಲೂಗುತ್ತಿರುವ ಕಹಿ ಅನುಭವವು ಸಾಮಾನ್ಯ ಜನರ ನಿತ್ಯ ಜೀವನದಲ್ಲಾಗುತ್ತಿದೆ. ಜನರಿಗೆ ತಾವು ಕೊಡುವಂತಹದನ್ನು ಮತ್ತು ಮಾಡುವಂತಹದನ್ನು, ಸ್ವಕರ್ತವ್ಯದೃಷ್ಟಿಯಿಂದ ಮತ್ತು ಜನರಾಜ್ಯೋಚಿತ ವಿನಯಶೀಲತೆಯಿಂದ, ಸರಕಾರೀ ನೌಕರರೆಲ್ಲರೂ ಮಾಡುವಂತೆ ವಿಧಿಸಲು ಸರಕಾರದ ಶಿರಸ್ಸಾಗಿರುವವರಿಗ ಸಾಧ್ಯವಿಲ್ಲದ ಮಾತೆ? ಇಂದು ನೌಕರರು ಮತ್ತು ಸಾಮಾನ್ಯ ಜನತೆಯೊಳಗಿನ ಹೊಕ್ಕುಬಳಕೆ ಹೇಗಿದೆ, ಎಂಬ ನಿಜ ಚಿತ್ರ ಮಂತ್ರಿಗಳಾಗಿರುವವರ ಕಣ್ಣ ಮುಂದೆಯೇ? ಈ ಸಂಬಂಧದ ಸುಧಾರಣೆ ಕೂಡಾ ತೋರಿ ಬಾರದಿದ್ದರೆ, ಜನರಾಜ್ಯ ಬಂದಿದೆ ಎಂಬ ಅನುಭವವು ಸಾಮಾನ್ಯ ಜನರಿಗಾಗುವದಾದರೂ ಹೇಗೆ? ಪ್ರಜಾರಾಜ್ಯದಾದಿಭಾಗದಲ್ಲಿ ಅಧಿಕಾರದ ಸೂತ್ರಧಾರಿಗಳಾಗಿರುವವರು, ನ್ಯಾಯಪ್ರಕಾರ ಜನತೆಯನ್ನು ಎಚ್ಚರಿಸುತ್ತಿರುವಂತೆಯೇ ತಮ್ಮನ್ನೂ ತಾವು ಎಚ್ಚರಿಸಿಕೊಳ್ಳಲಿ- ತಾವೀಗ ಯಾರ ಆಶ್ರಯಕ್ಕೆ ಸಂಪೂರ್ಣವಾಗಿ ಒಳಗಾಗಿರುವರೋ ಅ

## ಭಾರತ

ಜನವರಿ ತಾ 26 ಮತ್ತು 27ರಲ್ಲಿ ಪ್ರಜಾ ರಾಜ್ಯ ಉದ್ಘಾಟನಾ ಸಮಾರಂಭವ ರಾಷ್ಟ್ರದ ರಾಜಧಾನಿ, ಪ್ರಾಂತಿಕ ರಾಜಧಾನಿಗಳು, ಪೇಟೆ ಪಟ್ಟಣಗಳು, ಹಳ್ಳಿ ಮೂಲೆಗಳು, ಸಂದು ಕೇರಿಗಳೆಂಬಂತೆ ವೇಡಿಗಳಲ್ಲಾ ಅತ್ಯಂತ ವಿಜೃಂಭಣೆ ಮತ್ತು ಗಂಭೀರತೆಯಿಂದ ಆಚರಿಸಲ್ಪಟ್ಟಿತು ರಾಷ್ಟ್ರದ ಪ್ರತಿಯೊಂದೆಡೆ, ಜಲ, ಹ ಯು, ಈ ದಿನಗಳಲ್ಲಿ ಆನಂದ ಶೋಭೆಗೊ ಡಿದ್ದುವೆನ್ನಲಡ್ಡಿಯಿಲ್ಲ.

### ಜನತಾ ರಾಜ್ಯ ಜನನ

ಜನವರಿ ತಾ 26ನೇ ಪೂರ್ವಾಹ್ನ ತಾಸು 10-20ಕ್ಕೆ ಸರಿಯಾಗಿ ಭಾರ ಪ್ರಜಾರಾಜ್ಯ ಉದಯಿಸಿತು. 10-1 ತಾಸಿಗೆ ಸರಿಯಾಗಿ ಗವರ್ನರ್ ಜನರಲ ರಾಜಾಜೀ ನಿಯೋಜಿತಾಧ್ಯಕ್ಷ ಡಾ| ರ ಜೇಂದ್ರ ಪ್ರಸಾದರೊಂದಿಗೆ ಮೆರವಣಿ ಯಿಂದ ದರ್ಬಾರ್ ಭವನಕ್ಕಾಗಮಿಸಿ ರು. ರಾಜಾಜಿ ಸಿಂಹಾಸನದಲ್ಲಿಯೂ ಜೇಂದ್ರರು ಅವರ ಪಕ್ಕದೊಂದು ಆಸ ದಲ್ಲಿಯೂ ಮಂಡಿಸಿದರು. ಹೊಸ ಮೂಡಿ ತೋರುತಿದ್ದ ವದನ ಸಮೂಹ ಳು ಒಳಗಡೆಯಲ್ಲಿದ್ದರೆ, ಹೊರಗೆ ಜ ಸಂದಣಿಯು ಹೊಸಚೇತನ ವಿಶ್ರಿ ಜೈಕಾರ ನಡೆದಿದ್ದಿತು. ಆನಂದೋದ್ರೇ ಗಳೇ ಜೀವವೆತ್ತಿ ತೋರಿದಂತಿರುವ ಜ ತೋತ್ಸಾಹ ಚಟುವಟಿಕೆಗಳ ಮತ್ತು ವಿ ಯುಭೇರಿ, ದುಸುರ್, ಗನ್ನುಗಳ ಸಿಡಿ ಮುಂತಾದ ಗದ್ದಲಗಳ ನಡುವೆ ಗವರ್ನ ರ್ ಜನರಲ್ ರಾಜಾಜೀ ಭಾರತವು ' ತಂತ್ರ ಸಾರ್ವಭೌಮಾಧಿಕಾರೀ ಪ್ರಜಾ ತ್ತ ಜನತಾರಾಜ್ಯ'ವಾಯಿತೆಂಬ ಬಾ ರನ ಮೆಯನ್ನೋದಿದರು. ಆದರ ನ್ನಲ್ಲೇ ಡಾ| ರಾಜೇಂದ್ರ ಪ್ರಸಾದರ ಅಧ್ಯಕ್ಷನಾಗಿ ಆರಿಸಿಕೊಂಡ ಘಟನಾ ಸ ತಿಯ ಸೂಚನೆಯನ್ನು ತಿಳಿಸಿ, ದೇವ

ಜನಸಾಮಾನ್ಯರ ಸ್ಥಿತಿಗತಿಗಳ ಕಡೆ ಸ್ವಕರ್ತವ್ಯದೃಷ್ಟಿಯಿಂದ ಹಾಗೂ ಭಾ ಚನಾವಣೆಯ ದೃಷ್ಟಿಯಿಂದ ಕೂ ಲಕ್ಷ್ಯಕೊಡಲಿ—ಎಂದು ಈ ಪ್ರಮುಖ ವಧಿಯಲ್ಲಿ ಒತ್ತಿ ಹೇಳುತ್ತೇವೆ.

### ದಿವಂಗತ

**ಮುಳಿಯ ತಿಮ್ಮಪ್ಪಯ್ಯನವರು**

ಕನ್ನಡದ ಹಿರಿಯ ಸಾಹಿತಿಗಳಲ್ಲೊಬ್ಬರಾಗಿದ್ದ, ಪಂಡಿತ ಮುಳಿಯ ತಿಮ್ಮಪ್ಪಯ್ಯನವರು ಜನವರಿ ತಾ. 16ರಲ್ಲಿ ಮದ್ರಾಸಿನಲ್ಲಿ ನಿಧನಗೊಂಡರೆನ್ನಲು ವಿಷಾದಿಸುತ್ತೇವೆ. ಆಧುನಿಕ ಕನ್ನಡ ಸಾಹಿತ್ಯರಂಗದಲ್ಲಿ ಹಳೇಗನ್ನಡ ಯೋಗ್ಯ ಪ್ರತಿನಿಧಿಯಾಗಿ ರಾಜಿಸುತಿದ್ದರು ಮುಳಿಯದವರು. ಅವರ ಬರಹ ಮತ್ತು ಮಾತು ತೂಕವುಳ್ಳವುಗಳಿದ್ದು ಕೆಲವು ಚಿರಮಾನ್ಯ ಗ್ರಂಥಗಳನ್ನು ಬರೆದಿದ್ದರು. ಹಲವು ಶಿಷ್ಯರನ್ನೂ ಅನುಯಾಯಿಗಳನ್ನೂ ಗಳಿಸಿದ್ದರಲ್ಲದೆ ಸರ್ವಜನ ಮಾನ್ಯರಾಗಿದ್ದರು. ಪಂಡಿತ ಮುಳಿಯ ತಿಮ್ಮಪ್ಪಯ್ಯನವರ ವಿಯೋಗದಿಂದ ಕನ್ನಡಕ್ಕೆ ಕದ ಪುತ್ರರತ್ನವೊಂದು ಕಳೆದು ಹೋದಂತಾಯಿತು.

# -ಪ್ರಜಾರಾಜ್ಯ ಆರಂಭೋತ್ಸವ

ಜನತಾ ರಾಜ್ಯದ ಪ್ರಥಮಾಧ್ಯಕ್ಷನನ್ನು ಆಶೀರ್ವದಿಸಲೆಂದೂ ಭಾರತ ಜನತೆ ಸುಖ ಸಮೃದ್ಧಿ ಮತ್ತು ಪ್ರಗತಿ ಹೊಂದಿ ಲೋಕೋನ್ನತಿಗೆ ನೆರವಾಗಲೆಂದೂ ಹಾರೈಸಿ, ಗವರ್ನರ್ ಜನರಲ್ ರಾಜಾಜಿ ಅಧ್ಯಕ್ಷ ರಾಜೇಂದ್ರರನ್ನು ಸಿಂಹಾಸನಕ್ಕೆ ಕರತಂದರು ಕೀಳದಿದರು ಈ ನಿವೃತ್ತ ಮತ್ತು ನವಾರೋಹಿ ಗಾಂಧೀಭಕ್ತ ರಾಷ್ಟ್ರಪ್ರಮುಖರಿಬ್ಬರು ಅತ್ಯಂತ ಆತ್ಮೀಯತೆಯಿಂದ ಕೈಜೋಡಿಸಿಕೊಂಡು ನಿಂತ ದೃಶ್ಯವು ಸಭಿಕರ ಹೃದಯವನ್ನು ಕಲಕಿತು. 'ಮಹಾತ್ಮಾ ಗಾಂಧೀಜೀಕಿ ಜೈ' ಕಾರಹಾಕಿಸಿತು. 10-26ಕ್ಕೆ ಸರಿಯಾಗಿ ಅಧ್ಯಕ್ಷರು ಪ್ರತಿಜ್ಞಾವಿಧಿ ಸ್ವೀಕರಿಸಿದರು. ಅದೇ ಹೊತ್ತಿನಲ್ಲಿ ಸರಕಾರೀ ಭವನದ ಮೇಲ್ಭಾಗದಲ್ಲಿ ಆ ವರೆಗೆ ಹಾರಾಡುತಿದ್ದ ಗವರ್ನರ್ ಜನರಲ್ ಧ್ವಜವಿಳಿಸಲ್ಪಟ್ಟು ಭಾರತಾಧ್ಯಕ್ಷ ಧ್ವಜವೇರಿತು. ಸಿಂಹಾಸನದ ಹಿಂಬದಿಯಲ್ಲಿ ಈ ಮೊದಲು ಬ್ರಿಟಿಷ್ ಅಧಿಕಾರ ಸೂಚಕವಾಗಿ ಹೊರಂಜಿತ ಕೆಂಪು ವೆಲ್ವೆಟ್ ಆಚ್ಛಾದನೆಯಲ್ಲಿ ರಂಜಿಸುತ್ತಿದ್ದ ದೊಡ್ಡ ಬ್ರಿಟಿಷ್ ಕಿರೀಟದ ಸ್ಥಾನದಲ್ಲಿ, ರಾಷ್ಟ್ರ ಚಿಹ್ನೆಯಾದ ತುದಿಯಲ್ಲಿ ಮೂರು ಸಿಂಹಗಳುಳ್ಳ ಅಶೋಕ ಸ್ತಂಭ ರಾಜಿಸುತಿದ್ದು, ಕಾಲ ಪರಿವರ್ತನೆಯನ್ನು ಮನಗಾಣಿಸುತಿತ್ತು. ಅಂತೆಯೇ ಚರಿತ್ರೆಯಲ್ಲೇ ಪ್ರಥಮ ಬಾರಿ ಬುದ್ಧ ಪ್ರತಿಮೆಯೊಂದನ್ನು ದರ್ಬಾರ್ ಭವನದಲ್ಲಿ ಅಧ್ಯಕ್ಷ ಪೀಠದ ಹಿಂಬದಿಯಲ್ಲಿಟ್ಟಿದ್ದರು. ಆದರೆ ಅದರ ಬಲಗೈ ಕಳೆದು ಹೋಗಿರುವುದರ ಕಡೆಗೆ ಸಭಿಕರು ಅಲ್ಲಿಯೇ ಲಕ್ಷ್ಯವಿಳೆದರು. ಪ್ರತಿಜ್ಞಾವಿಧಿ ಮುಗಿಸಿ ಅಧ್ಯಕ್ಷ ಡಾ. ಪ್ರಸಾದರು ಈ ಚಿರಸ್ಮರಣೀಯ ದಿನದ ಮಹತ್ವವನ್ನು ತಿಳಿಸಿ ಚಿಕ್ಕ ಭಾಷಣವಿತ್ತರು. ಸಂದರ್ಭಾನುಗುಣ ಆಜ್ಞೆಗಳಿಗೆ ಅಧ್ಯಕ್ಷ ಸಮ್ಮತಿ ದೊರೆತ ಮೇಲೆ ದರ್ಬಾರ್ ಹಾಲ್‌ನಿಂದ ಪುನಃ ಮೆರವಣಿಗೆ ಹೊರಟು ಮೇಲಂತಸ್ತು ಪ್ರವೇಶವಾಯಿತು. ಅಲ್ಲಿ ಪದ್ಧತಿ ಪ್ರಕಾರ ವಿದೇಶೀ ರಾಯಭಾರಿಗಳ, ಅಧಿಕಾರಿಗಳ ಹಾಗೂ ಸ್ನೇಹಿತರ ಮಂತ್ರಿಗಳ ಪರಿಚಯ ಸಂಭಾವನೆಗಳಾದುವು.

ಜನತಾ ರಾಜ್ಯ ಜಾಹೀರು ಮತ್ತು ಅಧ್ಯಕ್ಷಪದ ಸ್ವೀಕಾರೋತ್ಸವ ನಡೆದ ದರ್ಬಾರ್ ಹಾಲಿಗೆ ನಿಯೋಜಿತಾಧ್ಯಕ್ಷರಾಗಮಿಸಿದ ಮುಂಜಾನೆಯ, ಮತ್ತು ಅಪರಾಹ್ನ ನಡೆದ ರಾಜ ಯೋಗ್ಯ ಪ್ರಚಂಡ ಮೆರವಣಿಗೆಗಳು ಅನ್ಯಾದೃಶ ವೈಭವದ ಹಾಗೂ ಅವರ್ಣನೀಯ ದೃಶ್ಯಗಳಾಗಿದ್ದುವು. ಪೂರ್ವಾಹ್ನ ನಿವೃತ್ತ ಹಾಗೂ ನಿಯೋಜಿತ ಅಗ್ರಗಣ್ಯಾಧಿಕಾರಿಗಳಿಬ್ಬರೂ ಜತೆಯಲ್ಲಿ ಜಯದುಂದುಭಿ, ಸ್ಫೋಟಿ ಗದ್ದಲ, ಜೈಕಾರಗಳ ನಡುವೆ ದರ್ಬಾರ್ ಹಾಲಿನ ಮಹಾದ್ವಾರ ಪ್ರವೇಶಿಸುವಾಗ ಒಳಗಿದ್ದವರು ಎದ್ದು ನಿಂತು ಸ್ವಾಗತಿಸಿದ್ದರು. ಅಪರಾಹ್ನ ಸರಕಾರೀ ಭವನದಿಂದ 'ಇರ್ವಿನ್' ಸ್ಟೇಡಿಯಮಿನವರೆಗೆ ಆರು ಅಶ್ವಗಳ ರಾಜರಥದಲ್ಲಿ ಕುಳಿತ ಅಧ್ಯಕ್ಷರ ರಾಜಯೋಗ್ಯ ಮೆರವಣಿಗೆಯು ಅತ್ಯಮೋಘವಿದ್ದು, ಹತ್ತು ಲಕ್ಷ ಮಂದಿ ದಾರಿಯುದ್ದಕ್ಕೂ ಅದನ್ನೀಕ್ಷಿಸುತ್ತಾ ಪ್ರಚಂಡ ಜೈಘೋಷವನೆಬ್ಬಿಸುತ್ತಿದ್ದರು.

ಅಧ್ಯಕ್ಷರು ಇರ್ವಿನ್ ಸ್ಟೇಡಿಯಮಿನಲ್ಲಿ ಸೇನಾಕವಾಯತನ್ನು ಕಂಡು ಸೇನಾ ವಂದನೆ ಸ್ವೀಕರಿಸಿದರು. ನಿವೃತ್ತ ಗವರ್ನರ್ ಜನರಲರನ್ನು ಬೀಳ್ಕೊಳ್ಳುವ ಸಂಭ್ರಮವು ಹೃದಯಸ್ಪರ್ಶಿಯಿದ್ದಿತು. ಪರದೇಶಗಳಲ್ಲೂ 'ಭಾರತ ಜನತಾ ರಾಜ್ಯ" ಉತ್ಸವ, ಸಂತೋಷ ಕೂಟಗಳು ನಡೆದಿದ್ದುವು. ರಿಪಬ್ಲಿಕ್ ಭಾರತಕ್ಕೆ ಪ್ರಪಂಚದ ಎಲ್ಲಾ ರಾಷ್ಟ್ರಗಳ ಪ್ರಮುಖರೂ ತಮ್ಮ ಶುಭಾಶಯಗಳನ್ನು ಕಳುಹಿದ್ದರು.

---

## ಉಡುಪಿಯಲ್ಲಿ ಪ್ರಜಾರಾಜ್ಯ ಉದ್ಘಾಟನಾ ಸಮಾರಂಭ.

ಇದೇ ತಾ.26 ಮತ್ತು 27ರಲ್ಲಿ ಉಡುಪಿಯ 'ಜನತಾರಾಜ್ಯ' ಸ್ಥಾಪನೋತ್ಸವಗಳನ್ನು ಸಂದರ್ಭೋಚಿತ ಸಂಭ್ರಮ ಹಾಗೂ ಗಂಭೀರತೆಯಿಂದ ಜಯಶೀಲವಾಗಿ ಜರಗಿಸಿತು. ತಾ. 26ನೇ ಮುಂಜಾನೆ, ಆನೆ, ಅಗ್ನಿಶಾಮಕದಳದವರ ಸಾಲಂಕೃತ ಮೋಟಾರು, ಪೋಲೀಸುದಳ, ಅಗ್ನಿಶಾಮಕದಳ, ಗೃಹರಕ್ಷಕರು, ಸ್ವಯಂಸೇವಿಕೆಯರು, ಸ್ವಯಂಸೇವಕರು, ಕಾಂಗ್ರೆಸ್ ಕೆಲಸಗಾರರು, ಅಧಿಕಾರೀ ಅನಧಿಕಾರೀ ಪ್ರಮುಖರು ಮತ್ತಿತರ ಪುರಜನರಿದ್ದ ಪ್ರಭಾತ ಮೆರವಣಿಗೆಯು ರಥಬೀದಿಯಿಂದ ಹೊರಟು ಪ್ರಥಮತಃ ನಗರಸಭಾ ಭವನ ಪ್ರವೇಶಿಸಿತು. ಅಲ್ಲಿ ಡಿಸ್ಟ್ರಿಕ್ಟ್ ಮುನ್ಸಿಫ್ ಮಿ। ಕುಲಾಸೂರವರು ರಾಷ್ಟ್ರ ಧ್ವಜಾರೋಹಣ ಮಾಡಿದರು. ಅಲ್ಲಿಂದ ಹೊರಟ ಮೆರವಣಿಗೆಯು ಮುನ್ಸಿಫ್ ಕೋರ್ಟಿಗೆ ಬಂದು, ಅಲ್ಲಿ ತಹಶೀಲ್ದಾರ್ ಶ್ರೀ ಪಿ. ಸೀತಾರಾಮ ಸೆಟ್ಟರಿಂದ ಧ್ವಜಾರೋಹಣವಾಯಿತು. ಆಮೇಲೆ ತಾಲೂಕು ಕಚೇರಿಗೆ ಮೆರವಣಿಗೆ ಮುಂದುವರಿದು, ಅಲ್ಲಿ ಮುನ್ಸಿಪಲ್ ಕಮಿಶನರ್ ಶ್ರೀ ವಿ. ಬಾಲಗಂಗಾಧರನ್ ಅವರಿಂದ ರಾಷ್ಟ್ರಧ್ವಜಾರೋಹಣವಾಯಿತು. ನಂತರ ತಾಲೂಕು ಕಚೇರಿಯೊಳಗಡೆ ವಕೀಲ್ ಶ್ರೀ ಕೆ. ಜಿ. ಬಲ್ಲಾಳರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿದಾಗ, ವಕೀಲ್ ಶ್ರೀ ಎಮ್. ವಿಠ್ಠಲಕಾಮತರು ಪ್ರಜಾರಾಜ್ಯ ಸ್ಥಾಪನೆಯ ಮಹತ್ವಗಳ ಕುರಿತು ಭಾಷಣವಿತ್ತರು. ಅಧ್ಯಕ್ಷ ಶ್ರೀ ಬಲ್ಲಾಳರು ನವಯುಗಾರಂಭ ಮುಹೂರ್ತವನ್ನು ಜ್ಞಾಪಿಸಿ, ಎಲ್ಲರೂ ಹೊಸ ಶಾಸನವನ್ನು ಜಯಶೀಲಗೊಳಿಸಲು ಶ್ರಮಿಸಬೇಕಾದ ಆವಶ್ಯಕತೆಯನ್ನು ವರ್ಣಿಸಿದರು. ಉಡುಪಿ ಸರ್ಕಲ್ ಕಾಂಗ್ರೆಸ್ ಅಧ್ಯಕ್ಷ ಶ್ರೀ ಬಾಳ್ಕೆಬೀಡು ಕೃಷ್ಣಯ್ಯ ಹೆಗ್ಡೆಯವರು, ಅದೇ ಮುಹೂರ್ತದಲ್ಲಿ ಜನರಾಜಾಧ್ಯಕ್ಷ ಗಾದಿಗೇರಿರುವ ಬಾಬು ರಾಜೇಂದ್ರ ಪ್ರಸಾದರ ಗುಣಕಥನ ಮಾಡಿ, ಪರಿವರ್ತಿತ ಯುಗದ ಸ್ಮರಣೆಯಾಗಿ ಅಧ್ಯಕ್ಷ ರಾಜೇಂದ್ರರ ಭಾವಚಿತ್ರವನ್ನು ಅನಾವರಣ ಮಾಡಿದರು. ತಹಶೀಲ್ದಾರ್ ಶ್ರೀ ಪಿ. ಸೀತಾರಾಮಸೆಟ್ಟರ ಧನ್ಯವಾದಗಳಾದುವು. ಆ ಮೇಲೆ ತಹಶೀಲ್ದಾರರ ನೇತೃತ್ವದಲ್ಲಿ ತಾಲೂಕು ಕಚೇರಿಯಲ್ಲಿ ಹರಿಜನರಿಗೂ ಇತರ ಬಡಜನರಿಗೂ ಯಥೇಚ್ಛ ಪಾಯಸ ಹಂಚಲಾಯಿತು. ಮುನ್ಸಿಪಲ್ ಕ್ಷೇತ್ರದ ಎಲ್ಲಾ ಶಾಲೆ, ಹೈಸ್ಕೂಲು, ಕಾಲೇಜುಗಳಲ್ಲೂ ವಿದ್ಯಾರ್ಥಿಗಳಿಗೆ ಲಾಡು, ಪೆಪ್ಪರ್ ಮಿಠಾಯಿ ವಿತರಣೆಯಾಯಿತು. ಅಪರಾಹ್ನ ಬೋರ್ಡು ಹೈಸ್ಕೂಲು ವಠಾರದಲ್ಲಿ ಸರ್ವ ಶಾಲಾ ವಿದ್ಯಾರ್ಥಿಗಳೂ ಪುರಜನರೂ ಜಮೆಯಾಗಿ, ಅಗ್ನಿ ಶಾಮಕದಳ, ಪೋಲೀಸುದಳ, ವಿದ್ಯಾರ್ಥಿ ವಿದ್ಯಾರ್ಥಿನಿಯರು, ಪುರಜನರಿದ್ದ ಪ್ರಚಂಡ ಮೆರವಣಿಗೆಯು ಆನೆ, ಅಧ್ಯಕ್ಷ ಮತ್ತಿತರ ಪ್ರಮುಖರ ಭಾವಚಿತ್ರಗಳಿದ್ದ ಶೃಂಗರಿತ ಕಾರು, ರಾಷ್ಟ್ರಧ್ವಜ-ಬ್ಯಾಂಡುವಾಲಗ, ರಾಷ್ಟ್ರಗೀತೆ, ಜಯಘೋಷ, ಗರ್ನಾಲುಗಳ ಸಂಭ್ರಮದಿಂದ ನಗರದ ಪ್ರಮುಖ ರಸ್ತೆಗಳನ್ನು ಹಾದು ಗಾಂಧೀ ಮೈದಾನಿಗೆ ಬಂತು. ಅಲ್ಲಿ ಉಡುಪಿ ಸರ್ಕಲ್ ಕಾಂಗ್ರೆಸ್ ಅಧ್ಯಕ್ಷ, ಕಾರ್ಯದರ್ಶಿಯರಾದ ಶ್ರೀ ಬಿ. ಕೃಷ್ಣಯ್ಯ ಹೆಗ್ಡೆ, ಶ್ರೀ ಕೆ. ನರಹರಿ ಕಾಮತರ ಸೂಚನೆ, ಅನುಮೋದನೆಗಳಂತೆ ವಕೀಲ್ ಶ್ರೀ ಎಮ್. ವಿಟ್ಠಲಕಾಮತರು ಅಧ್ಯಕ್ಷತೆ ವಹಿಸಿ, ರಾಷ್ಟ್ರಗೀತೆ ಹಾಡಲಾಯಿತು. ನಗರಸಭಾಧ್ಯಕ್ಷ ಶ್ರೀ ಉಪೇಂದ್ರ ಶ್ರೀನಿವಾಸ ನಾಯಕರು ಸಂದರ್ಭೋಚಿತ ಮಾತುಗಳೊಡನೆ ರಾಷ್ಟ್ರಧ್ವಜವನ್ನಾರೋಹಿಸಿದರು. ಆ ಮೇಲೆ ಅಧ್ಯಕ್ಷರ ಮುಮ್ಮಾತುಗಳಾಗಿ, ಶ್ರೀ ಟಿ. ಅನಂತಪೈಗಳು ಆ ದಿನ ಜಾರಿಗೆ ಬಂದಿರುವ ನವರಾಜ್ಯಘಟನೆಯ ಅಂಗೋಪಾಂಗ ಮತ್ತು ಸ್ಥಿತಿಗತಿಗಳನ್ನು ವಿವರಿಸಿ ಭಾಷಣವಿತ್ತರು. ನವರಾಜ್ಯ ಭಾರದಲ್ಲಿ ಜನಸಾಮಾನ್ಯರದಾಗಿರುವ ಹೊಣೆ ಮತ್ತು ಕರ್ತವ್ಯಗಳ ಕುರಿತು ಶ್ರೀ ಎಮ್. ವಿ. ಹೆಗ್ಡೆಯರ ಭಾಷಣವಾಯಿತು. ಅಧ್ಯಕ್ಷರು ನವರಾಜ್ಯ ಶಾಸನ ಮತ್ತು ಅಧ್ಯಕ್ಷ ರಾಜೇಂದ್ರ ಪ್ರಸಾದರ ಕುರಿತು ಮಾತನಾಡಿದ ಮೇಲೆ 'ಜನಗಣಮನ'ದೊಂದಿಗೆ ಸಭಾಂತ್ಯವಾಯಿತು.

ತಾ. 27ನೇ ಪೂರ್ವಾಹ್ನ ತಾಲೂಕು ಕಚೇರಿಯಲ್ಲಿ ತಹಸೀಲ್ದಾರ್ ಶ್ರೀ. ಪಿ. ಸೀತಾರಾಮ ಸೆಟ್ಟರ ನೇತೃತ್ವದಲ್ಲಿ ಬಡ ಜನರಿಗೆಲ್ಲಾ ಪಾವಕ್ಕಿ ವಿತರಣೆಯಾಯಿತು. ಅಪರಾಹ್ನ ಡಾ। ಸುಂದರರಾಮ ಪೈಗಳ ಅಧ್ಯಕ್ಷತೆಯಲ್ಲಿ ಗಾಂಧೀಮೈದಾನಿನಲ್ಲಿ ಸಾರ್ವಜನಿಕ ಸಭೆಸೇರಿ ರಾಷ್ಟ್ರೀಯ ಪ್ರಾರ್ಥನೆಯಾದ ಮೇಲೆ ಮುನ್ಸಿಪಲ್ ಹೆಲ್ತ್ ಆಫೀಸರ್ ಡಾ। ರಾಧಾಕೃಷ್ಣನ್, ಇವರು ಆಟ ಪಂದ್ಯಾಟದ ಕುರಿತು ವಿವರಿಸಿದರು ಶ್ರೀಮತಿ ಮನೋರಮಾಬಾಯಿ ಆಚಾರ್ಯರು ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಿದರು. ಆ ಮೇಲೆ ವಿವಿಧ ವಿನೋದಾವಳಿಗಳಾದುವು. 'ಕಾನ್ವೆಂಟ್' 'ಸಾತ್ ಗರ್ಲ್ಸ್ ಸ್ಕೂಲ್', 'ಕಿನ್ನಿಮೂಲ್ಕಿ ಗರ್ಲ್ಸ್ ಸ್ಕೂಲ್' 'ಮಹಿಳಾ ಟ್ರೈನಿಂಗ್ ಸ್ಕೂಲ್' ಪಿ. ರಾಮದಾಸ್ ಪೈ ಮತ್ತು ಪಾರ್ಟಿ ಹಾಗೂ ಇತರರು ಭಾಗವಹಿಸಿ ನಾಟಕ, ನರ್ತನ, ಗಾಯನ, ವಾದನ, ಲಾವಣಿ, ಇತ್ಯಾದಿಗಳಾದುವು. ಅಧ್ಯಕ್ಷ ಡಾ. ಸುಂದರರಾಮಪೈಗಳು ಭಾಷಣವೀಯುತ್ತಾ ಹೊಸ ರಾಜ್ಯ ಘಟನೆಯನ್ವಯ ಬಂದಿರುವ ಜನತಾ ಜವಾಬ್ದಾರಿಯನ್ನು ವಿವರಿಸಿ, ಗಾಂಧಿಜಿಯ ತತ್ವಾನುಸಾರ ವರ್ತಿಸುವ ಆವಶ್ಯಕತೆಯನ್ನು ತಿಳಿಸಿದರು. ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಕೆ. ನರಹರಿ ಕಾಮತರ ಅಭಿವಂದನೆ, ಭಾರತ ಮಾತಾಪೂಜೆಯಾಗಿ, ಜನಗಣಮನದೊಂದಿಗೆ ಸಮಾರಂಭವು ಮುಗಿಯಿತು.

ಎರಡು ದಿನಗಳಲ್ಲೂ ನಗರದ ಎಲ್ಲೆಡೆಯಲ್ಲೂ ಧ್ವಜ, ತೋರಣಾಲಂಕಾರಗಳೂ ದೀಪಾಲಂಕಾರಗಳೂ ನಡೆದಿದ್ದುವು. ಪೂಜಾಲಯಗಳಲ್ಲಿ ವಿಶೇಷ ಪ್ರಾರ್ಥನೆಗಳಿದ್ದುವು. ಪೋಸ್ಟಾಫೀಸಿನಲ್ಲಿ ತಾ. 26ನೇ ಮುಂಜಾನೆ, ರಾಷ್ಟ್ರಧ್ವಜಾರೋಹಣ, ಪೋಸ್ಟು ಮಾಸ್ಟರರ ನೇತೃತ್ವದಲ್ಲಿ ಚಹಾ ಕೂಟ, ಭಾಷಣಗಳಿದ್ದುವು. ಮುನ್ಸಿಪಲ್ ಆಫೀಸು, ಮತ್ತಿತರ ಪಾಲಾ ಕಾಲೇಜು ಸಂಘ ಸಂಸ್ಥೆಗಳ ಆಶ್ರಯದಲ್ಲೂ 'ಜನತಾರಾಜ್ಯ ಸ್ಥಾಪನೋತ್ಸವಗಳು ನಡೆದಿದ್ದುವು. ಮುಕುಂದಪನಿವಾಸದಲ್ಲಿ ತಾ. 27ನೇ ರಾತ್ರಿ ಗಾಯನಕಚೇರಿಯಿದ್ದಿತು ಈ ಚರಿತ್ರಾರ್ಹವಾದ ಎರಡು ದಿವಸಗಳಲ್ಲಿಯೂ ಕಟ್ಟಡ ರಸ್ತೆಗಳ ಸಮೇತ ಉಡುಪಿಯ ಸರ್ವರೂ ಸಂತೋಷೋತ್ಸಾಹ ಪ್ರದರ್ಶನಭಾಗಿಗಳಾಗಿದ್ದರೆನ್ನಬಹುದು.

**ಸರ್ವೋದಯ ದಿನಾಚರಣೆ**– ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಬಾಪೂಜೀ ಬಲಿದಾನ ದಿನವು ಇದೇ ತಾ. 30ರಲ್ಲಿ ಆಚರಿಸಲ್ಪಟ್ಟಿತು. ಅಂದು ಪೂರ್ವಾಹ್ನ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಕೆ. ನರಹರಿಕಾಮತ್ ಮತ್ತಿತರ ಕಾರ್ಯಕರ್ತ ಸ್ತ್ರೀಪುರುಷರು ಕೊರಗರ ವಸಾಹತಿಗೆ ಹೋಗಿ, ಗುಡಿಸಲು ಸಂದರ್ಶನೆಗಳನ್ನು ಮಾಡಿ, ಅಲ್ಲಿ ಭಜನೆ, ಬೋಧನೆ ನಡಿಸಿ, ಪಂಚಕಜ್ಜಾಯ ಹಂಚಿದರು. ಅಪರಾಹ್ನ ಬೋರ್ಡು ಹೈಸ್ಕೂಲಿನ 'ಪೀಪಲ್ಸ್ ಹಾಲ್'ನಲ್ಲಿ ಮುನ್ಸಿಪಲ್ ಕಮಿಶನರ್ ಶ್ರೀ ವಿ. ಬಾಲಗಂಗಾಧರನ್ ಇವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಸೇರಿ ಸೂತ್ರಯಜ್ಞ ನಡೆಯಿತು. ಎರಡು ಮಿನಿಟಿನ ಮೌನ ಪ್ರಾರ್ಥನೆಯಾಗಿ, ಗೀತಾ ಪ್ರವಚನ, ಗಾಂಧೀಗೀತೆಗಳಾಗಿ ಸಭಿಕರಲ್ಲಿ ಕೆಲವರ ಮತ್ತು ಅಧ್ಯಕ್ಷರ ಗಾಂಧೀ ಸ್ಮಾರಕ ಭಾಷಣಗಳಾದುವು. ರಾತ್ರಿ ಬೋರ್ಡು ಹೈಸ್ಕೂಲು ವಿದ್ಯಾರ್ಥಿಗಳು ಭಜನೆ ನಡೆಸಿದರು.

'ಗಾಂಧೀ ಮೆಮೋರಿಯಲ್ ಕಾಲೇಜ'ನಲ್ಲಿ ಪ್ರಿನ್ಸಿಪಾಲ್ ಶ್ರೀ ಸುಂದರರಾಯರ ಅಧ್ಯಕ್ಷತೆಯಲ್ಲಿ ಸರ್ವೋದಯ ದಿನಾಚರಣಾ ಸಭೆ ಸೇರಿ ಭಾಷಣಗಳಾದುವು.

**ದ. ಕ. ಜಿಲ್ಲಾ ಬೋರ್ಡು** ಆಫೀಸಿನಲ್ಲಿ ತಾ. 26ರಲ್ಲು ಬೆಳಿಗ್ಗೆ ಡಾ. ನಾಗಪ್ಪ ಆಳ್ವರು ರಾಷ್ಟ್ರ ಧ್ವಜಾರೋಹಣ ಮಾಡಿದರು. ಜಿಲ್ಲಾ ಬೋರ್ಡಿನ ಅಧ್ಯಕ್ಷ ಶ್ರೀ ಬಿ. ಮಂಜಯ್ಯಹೆಗ್ಡೆಯವರು ಮಹಾತ್ಮಾಜೀಯವರ ಭಾವಚಿತ್ರ ಅನಾವರಣ ಮಾಡಿದರು, ಈ ಚಿತ್ರವನ್ನು ಬೋರ್ಡಿನ ಕಾರ್ಯದರ್ಶಿಯಾದ ಶ್ರೀ ಎಮ್. ಸುಂದರರಾಯರು ದಾನ ಮಾಡಿದ್ದರು. ಅಲ್ಪಾಹಾರ, ಬೋರ್ಡು ನೌಕರರಿಗೆ ವಸ್ತ್ರದಾನ ಮೊದಲಾದ ಕಾರ್ಯಕ್ರಮಗಳೂ ಆದುವು. ರಾತ್ರಿ ಸಮಯದಲ್ಲಿ ಬೋರ್ಡ ಆಫೀಸು [illegible] ಪಗಳಿಂದ ಸಿಂಗರಿಸಲ್ಪಟ್ಟಿತ್ತು.

---


THE

**Canara Banking Corporation Limited.**

(Incorporated in India with Limited Liability)

ESTD: 1906

HEAD OFFICE UDIPI (S. I)

*NOTICE*

The ordinary Annual General Meeting of the Share-holders of the Corporation will be held at its Registerd Office at Udipi, on Sunday, the 12th March 1950, at 3 P.M. to transact the following business:

(1) To receive, consider and adopt the Directors' Report and the Balance sheet as at 31-12-'49 and the Profit & Loss Statement for the year 1949, with the Auditors report.

(2) To declare a dividend.

(3) To elect four Directors in place of those who retire by rotation but who are eligible for re-election.

(4) To appoint an Auditor or Auditors for the year 1950 and fix the amount of his or their remuneration.

**N. B.** The Register of members and Transfer Books of the Corporation will remain closed from 27-2-'50 to 12-3-'50 (both days inclusive).

(By order of the Board)

**V. R. Kamath,**

General Manager.

Udipi D. 22-1-1950



**NOTICE**

Tenders are invited for the supply of furniture according to plans which are open for inspection during working hours.

Apply to the Principal

**Mahatma Gandhi Memorial College, Udipi.**

## ದ. ಕನ್ನಡ

### ಪ್ರಜಾಪ್ರಭುತ್ವ ದಿನಾಚರಣೆ

**ಕುರುಕಾಲು**—ಪಂಚಾಯತ ಬೋರ್ಡಿನ ಆಶ್ರಯದಲ್ಲಿ ತಾ. 26-1-50ನೇ ಗುರುವಾರ ಪೂರ್ವಾಹ್ನ ಕುಂಜಾರು ಗಿರಿಜಾ ಹಾಯರ್ ಎಲಿಮೆಂಟರಿ ಶಾಲೆಯ ವಠಾರದಲ್ಲಿ ಉಡುಪಿ ರೂರಲ್ ವೆಲ್‌ಫೇರ್ ಆಫೀಸರ್ ಶ್ರೀ ಕಣ್ಣನ್ ನಾಯರರ ಹಸ್ತದಿಂದಲೂ, ಕುರುಕಾಲು ಗಣಪತಿ ಎಲಿಮೆಂಟರಿ ಶಾಲೆಯ ವಠಾರದಲ್ಲಿ ಪಟೇಲ್ ಶ್ರೀ ಕೆ. ಚಂದಯ್ಯ ಶೆಟ್ರ ಹಸ್ತದಿಂದಲೂ ಆಯಾಯ ಶಾಲೆಗಳ ವಿದ್ಯಾರ್ಥಿಗಳ ಮತ್ತು ಜನತೆಯ ನೆರವಿನಿಂದ ಧ್ವಜಾರೋಹಣ ಕಾರ್ಯಕ್ರಮಗಳು ಜರಗಿಸಲ್ಪಟ್ಟವು. ಅಂದು ಅಪರಾಹ್ನ ಕುಂಜಾರು ಶಾಲೆಯಿಂದಲೂ, ಕುರುಕಾಲು ಶಾಲೆಯಿಂದಲೂ ರಾಷ್ಟ್ರಧ್ವಜಧಾರಿಗಳಾದ ವಿದ್ಯಾರ್ಥಿಗಳ ವ ಗ್ರಾಮಸ್ಥರಿಂದಕೂಡಿದ ಎರಡು ಮೆರವಣಿಗೆಗಳು ಬೇಂಡು, ವಾಲಗ, ರಾಷ್ಟ್ರಗೀತೆ ವಗೈರೆ ಜಯಘೋಷಗಳಿಂದ ಪ್ರತ್ಯಪ್ರತ್ಯೇಕ ಹೊರಟು, ಶಂಕರಪುರ ರಸ್ತೆಯಲ್ಲಿ ಒಂದಾಗಿ ಕಲೆತು, ವಾಪಾಸು ಕುಂಜಾರು ಶಾಲಾ ವಠಾರಕ್ಕೆ ಬಂದು ಉಡುಪಿ ತಾಲೂಕು ಹೆಲ್ತ್ ಇನ್ಸ್‌ಪೆಕ್ಟರ್ ಶ್ರೀ ಆರ್. ವೇಣುಗೋಪಾಲರಾಯರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಜನತಾರಾಜ್ಯದ ಮಹತ್ವದ ಕುರಿತು, ಸಭಿಕರ ಸ್ಪೈಕಿ ಶ್ರೀಗಳಾದ ಯು. ನರಸಿಂಹ ಆಚಾರ್ಯ, ಹಂಡೆ ಶ್ರೀಪಾದದಾಸ್, ಕುರುಕಾಲು ಗಣಪಯ್ಯ ಶೆಟ್ಟಿ, ಕೆ. ಅನಂತರಾಮಭಟ್ಟ, ಕೆ. ನಾರಾಯಣ ಆಚಾರ್ಯರಿಂದಲೂ ಸಭಾಧ್ಯಕ್ಷರಿಂದಲೂ ಭಾಷಣಗಳಾಗಿ ಹೆಡ್ಮಾಸ್ತರ್ ಶ್ರೀ ಕೆ. ವಾಸುಶೆಟ್ಟರು ಧನ್ಯವಾದಗಳನ್ನು ಅರ್ಪಿಸಿದ ಬಳಿಕ, ಮಕ್ಕಳಿಗೆ ತಿಂಡಿ ಹಂಚಲ್ಪಟ್ಟು ಸಭೆಯು ಮುಕ್ತಾಯವಾಯಿತು.

**ಕಟಪಾಡಿ**-ಪ್ರಜಾರಾಜ್ಯ ಸ್ಥಾಪನೋತ್ಸವ ನಿಮಿತ್ತ ತಾ. 26ರಲ್ಲಿ ಕಟಪಾಡಿ ಹೈಸ್ಕೂಲ್ ವಿದ್ಯಾರ್ಥಿಗಳ ಪ್ರಭಾತ ಪೇರಿ, ಧ್ವಜವಂದನೆಯಾಗಿ ಪಂಚಾಯತ ಬೋರ್ಡು ಆಫೀಸಿನಲ್ಲಿ ಶ್ರೀ ಪಿ. ದಯಾನಂದ ಸಾಲ್ಯರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಪಂಚಕಜ್ಜಾಯ ವಿತರಣೆಯಾಯಿತು. ಅಪರಾಹ್ನ ಏಣಗುಡ್ಡೆ ಶಾಲಾ ಮಕ್ಕಳ ಮೆರವಣಿಗೆಯಾಗಿ, ಕಟಪಾಡಿ ಹೈಸ್ಕೂಲ್ ವಠಾರದಲ್ಲಿ ಶ್ರೀ ಕೆ. ವಾಸುದೇವ ಕಿಣಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ರಾತ್ರಿ ದೀಪೋತ್ಸವವಿತ್ತು. ತಾ. 27ರಲ್ಲಿ ಪಂಚಾಯತ ಬೋರ್ಡಿನಲ್ಲಿ ಸಭೆ ಮತ್ತು ಉಪಾಹಾರ ನಡೆಯಿತು. ತಾ. 30ನೇ ಸೋಮವಾರ ದಿನಾಚರಣೆಯ ಅಂಗವಾಗಿ ಏಣಗುಡ್ಡೆ ಶಾಲೆಯಲ್ಲಿ ಸಾರ್ವಜನಿಕ ಭಜನೆ, ಅಪರಾಹ್ನ ಮೌನವಾಗಿ ನಡೆದು, ಕಟಪಾಡಿ ಹೈಸ್ಕೂಲ್ ವಠಾರದಲ್ಲಿ ಡಾ. ಕೆ. ಜಿ. ಕಿಣಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಇದೇ ದಿನ ಪೂರ್ಣ ಹರತಾಳವಿದ್ದಿತು.

**ಸುರತ್ಕಲ್**- ಪ್ರಜಾರಾಜ್ಯೋದಯ ಸಮಾರಂಭವು ತಾ. 26ರಲ್ಲು ಶ್ರೀ ಬಿ. ಎಸ್. ಭಾಸ್ಕರರೈಗಳ ಅಧ್ಯಕ್ಷತೆಯಲ್ಲಿ ಜರಗಿ ಧ್ವಜವಂದನೆ, ಮೆರವಣಿಗೆ, ಭಾಷಣಾದಿ ಕಾರ್ಯಕ್ರಮಗಳಾದವು.

ತಾ. 28ರಲ್ಲು ವಿದ್ಯಾದಾಯಿನಿ ಹೈಸ್ಕೂಲಿನ ವಾರ್ಷಿಕೋತ್ಸವವು ಶ್ರೀ ಟಿ. ಎಚ್. ಎಮ್. ಸದಾಶಿವಯ್ಯ, ಸಬ್‌ಜಡ್ಜ್, ಮಂಗಳೂರು ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಇ. ಶ್ರೀನಿವಾಸರಾಯರು ಶಾಲೆಯ ಸ್ವಸ್ತಿವಾಚನ ಮಾಡಿದರು. ಬಹುಮಾನ ವಿತರಣ, ವಿನೋದಾವಳಿಗಳಾದ ನಂತರ ಸಭಾಂತ್ಯವಾಯಿತು.

**ಅಜೆಕಾರು**- ಸ್ಥಳೀಯ ಬೊ. ಹಾ. ಎಲಿಮೆಂಟರಿ ಶಾಲೆಯಲ್ಲಿ ಪ್ರಜಾಪ್ರಭುತ್ವ ದಿನಾಚರಣೆಯು ಮೆರವಣಿಗೆ, ಧ್ವಜವಂದನೆ, ಸಭೆ, ಭಾಷಣ ಮೊದಲಾದ ಕಾರ್ಯಕ್ರಮಗಳಿಂದ ಜರಗಿತು.

**ಐಕಳ**- ಸ್ಥಳೀಯ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಪ್ರಜಾರಾಜ್ಯ ದಿನವು ಶ್ರೀ ಬಾಲಕೃಷ್ಣ ಸೆಟ್ರ ಅಧ್ಯಕ್ಷತೆಯಲ್ಲಿ ಕೂಡಿದ ಸಭೆಯಲ್ಲಿ ಭಾಷಣ ಇತ್ಯಾದಿ ಕಾರ್ಯಕ್ರಮಗಳಿಂದ ಆಚರಿಸಲ್ಪಟ್ಟಿತು.

**ಕುತ್ಯಾರು**-ಇಲ್ಲಿಯ ವಿದ್ಯಾದಾಯಿನಿ ಶಾಲೆಯಲ್ಲಿ ಜಾನಪದ ರಾಜ್ಯ ಉದಯ ದಿನಾಚರಣ ನಿಮಿತ್ತ ತಾ. 26 ರಲ್ಲು ಬೆಳಗ್ಗೆ ಶ್ರೀ ಮಹಾಬಲ ಸೆಟ್ಟರಿಂದ ಧ್ವಜಾರೋಹಣ, ಸಂಜೆ ಮೆರವಣಿಗೆ, ಸಾರ್ವಜನಿಕ ಸಭೆ, ಶ್ರೀಗಳಾದ ಕೆ. ಎಲ್ಲಪ್ಪ ಹೆಗ್ಡೆ ಮೊದಲಾದವರಿಂದ ಭಾಷಣ, ಕುತ್ಯಾರು ಅರಮನೆಯಲ್ಲಿ ವಿದ್ಯಾರ್ಥಿಗಳಿಗೆ ತಿಂಡಿ ಹಂಚಿಕೆ, ಸಹಸ್ರ ಜ್ಯೋತಿರ್ಮಯ ದೀಪಾವಳಿ ಸೇವೆ, ದೇವಸ್ಥಾನದಲ್ಲಿ ಪ್ರಾರ್ಥನಾ ಕಾರ್ಯಕ್ರಮ ಜರಗಿತು.

**ಅಲೆವೂರು**—ಇಲ್ಲಿಯ ಪಂಚಾಯತ ಬೋರ್ಡಿನ ಆಶ್ರಯದಲ್ಲಿ ಪ್ರಜಾರಾಜ್ಯ ಉದ್ಘಾಟನಾ ಸಮಾರಂಭವು ತಾ. 26ರಲ್ಲು ಪಂಚಾಯತಬೋರ್ಡು ಆಫೀಸಿನಲ್ಲಿ, ಸಂಬೋಧಿನಿ ಶಾಲೆಯಲ್ಲಿ ಮತ್ತು ಸಾಹುಕಾರ ಪೇಟೆಯಲ್ಲಿ ಅನುಕ್ರಮವಾಗಿ ಶ್ರೀಗಳಾದ ವೆಂಕಟೇಶ ಕಿಣಿ, ಅಣ್ಣಯ್ಯ ಭಟ್ ಮತ್ತು ಯು. ಕೃಷ್ಣಭಟ್ಟರಿಂದ ರಾಷ್ಟ್ರಧ್ವಜಾರೋಹಣ, ಧ್ವಜವಂದನೆಗಳಿಂದ ಪ್ರಾರಂಭವಾಯಿತು. ಮೂಡುಅಲೆವೂರು, ಪಡುಅಲೆವೂರು, ಕುಕ್ಕಿಕಟ್ಟೆ ಬಾಲಿಕಾ ಪಾಠಶಾಲೆಯ ಮಕ್ಕಳಿಗೆಲ್ಲಾ ಲಾಡು ಹಂಚಲಾಯಿತು. ಶಾಲಾಮಕ್ಕಳ ಹಾಗೂ ಪುರಜನರ ಮೆರವಣಿಗೆಯೂ ಮೂಡು ಪಡು ಅಲೆವೂರು ದೇವಸ್ಥಾನಗಳಲ್ಲೂ ಅಲೆವೂರು ಕೇಂದ್ರ ಶ್ರೀ ರಾಮಮಂದಿರದಲ್ಲೂ ವಿಶೇಷ ಪೂಜಾ ಪ್ರಾರ್ಥನಾದಿಗಳಾದುವು. ತಾ. 27ರಲ್ಲು ಸಾಹುಕಾರ ಪೇಟೆಯಲ್ಲಿ ಬಡವರಿಗೆಲ್ಲಾ ಶ್ರೀ ಗೋಪಾಲ ಪ್ರಭುಗಳ ಲೆಖ್ಖದಿಂದ ಯಥೇಚ್ಛ ಪಾಯಸ ಬಡಿಸಲಾಯಿತು.

**ಬನ್ನಾಡಿ**— ಸ್ಥಳೀಯ ಪಂಚಾಯತ ಬೋರ್ಡಿನ ನೇತೃತ್ವದಲ್ಲಿ ಶ್ರೀ ಬನ್ನಾಡಿ ಪ್ರಾಥ ಪ್ರಾಥಮಿಕ ಶಾಲಾ ವಠಾರದಲ್ಲಿ ಜನತಾ ಸರಕಾರ ಸ್ಥಾಪನೆಯ ಸುಮುಹೂರ್ತವು ತಾ. 26 ರಲ್ಲು ಬೆಳಗ್ಗೆ ಧ್ವಜವಂದನೆ, ಸಂಜೆ ಶ್ರೀ ಅಣ್ಣಪ್ಪ ಚಡಗರ ಅಧ್ಯಕ್ಷತೆಯಲ್ಲಿ ಸಭೆ, ಶ್ರೀಗಳಾದ ಬಿ. ಸುಬ್ಬಣ್ಣ ಹೆಗ್ಡೆ ಮೊದಲಾದವರ ಭಾಷಣಾದಿ ಕಾರ್ಯಕ್ರಮಗಳಿಂದ ಜಯಶೀಲವಾಗಿ ಜರಗಿದು.

**ಕಲ್ಯಾಣಪುರ**- ಇಲ್ಲಿಯ ಮಹಾಜನರು ತಾ. 26ರಲ್ಲು ವಾದ್ಯ ಘೋಷಗಳ ಮೆರವಣಿಗೆಯಿಂದ ಹೊರಟು ಶ್ರೀ ಟಿ. ನಾಗರಾಜ ಹೆಗ್ಡೆಯವರ ನೇತೃತ್ವದಲ್ಲಿ ಧ್ವಜಾರೋಹಣ ಕಾರ್ಯಕ್ರಮವನ್ನು ಮುಗಿಸಿ, ಸಂಜೆ ಡಾ. ಮಂಜುನಾಥಯ್ಯನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿಸಿ ಹಲವರಿಂದ ಭಾಷಣಗಳನ್ನು ಮಾಡಿಸಿ ಪ್ರಜಾಪ್ರಭುತ್ವ ದಿನಾಚರಣೆಯನ್ನು ಸಾಂಗಗೊಳಿಸಿದರು. ಮಿಲಾಗ್ರಿಸ್ ಹೈಸ್ಕೂಲಿನಲ್ಲಿ ರಾತ್ರಿ ಉಡುಪಿ ಡಿ. ಮುನ್ಸಿಫ್ ಶ್ರೀ ಕೊಲಾಸೋರವರು ಮಹಾಜನರನ್ನೂ ವಿದ್ಯಾರ್ಥಿಗಳನ್ನೂ ಉದ್ದೇಶಿಸಿ ಕಾಲೋಚಿತ ಭಾಷಣ ಮಾಡಿದರು.

**ಚೇರ್ಕಾಡಿ**— ಇಲ್ಲಿಯ ಆರ್. ಕೆ. ಪಾಟ್ಕರ್ ಶಾರದಾ ಹಾ. ಎ. ಶಾಲೆಯಲ್ಲಿ, ರಿಪಬ್ಲಿಕ್ ದಿನಾಚರಣೆಯು ಶ್ರೀ ಕೃಷ್ಣರಾಯ ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ಜರಗಿ ವಿವಿಧ ಕಾರ್ಯಕ್ರಮಗಳಾದುವು.

**ಕೊಲ್ಲೂರು**— ಪ್ರಜಾರಾಜ್ಯ ಉದಯೋತ್ಸವ ದಿನ ತಾ. 26ರಲ್ಲು ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದಲ್ಲಿ ಪ್ರಾತಃಕಾಲ ಮಹಾಜನರ ಕೂಡುವಿಕೆಯಿಂದ ಪ್ರಾರ್ಥನಾಪೂರ್ವಕ ಹದಿನೈದು ನಿಮಿಷ ಘಂಟಾಘೋಷ ಮಾಡಲಾಯಿತು. ಬಳಿಕ ರಾಷ್ಟ್ರಧ್ವಜ ಹಾರಿಸಲಾಯಿತು. ಪೂರ್ವಾಹ್ನ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಸಾರ್ವಜನಿಕ ಸಭೆಯು ಪಂಚಾಯತ ಬೋರ್ಡು ಪ್ರೆಸಿಡೆಂಟರ ಅಧ್ಯಕ್ಷತೆಯಲ್ಲಿ ಸೇರಿ, ದೇವಸ್ಥಾನದ ಎಕ್ಸಿಕ್ಯೂಟಿವ್ ಆಫೀಸರ್ ಶ್ರೀ ಡಿ. ನಾರಾಯಣಸೆಟ್ಟರೇ ಮೊದಲಾದವರ ಭಾಷಣಗಳಾದುವು. ಸಂಜೆ ಶ್ರೀ ದೇವಸ್ಥಾನದಲ್ಲಿ ದೀಪೋತ್ಸವ ಜರಗಿತು. ತಾ. 27ರಲ್ಲು ಪಂಚಾಯತ ಬೋರ್ಡಿನ ಲೆಖ್ಖದಿಂದ ಹರಿಜನರಿಗೂ ಬಡವರಿಗೂ ಭೋಜನ ಕೊಡಲಾಯಿತು. ಸಂಜೆ ಶಾಲಾ ಮಕ್ಕಳಿಗೆ ಲಾಡು ಹಂಚಲಾಯಿತು.

**ಉಪ್ಪಿನಂಗಡಿ**- ಇಲ್ಲಿಯ ಮಹತೋಭಾರ ಶ್ರೀ ಸಹಸ್ರಲಿಂಗೇಶ್ವರ ದೇವರ ಸನ್ನಿಧಿಯಲ್ಲಿ ತಾ. 15-2-50 ರಿಂದ 11-3-50ರ ತನಕ ಮಖೆ ಜಾತ್ರೆ ವಿವಿಧ ಕೂಟ, ಉತ್ಸವ, ತೀರ್ಥಸ್ನಾನಾದಿ ಕಾರ್ಯಕ್ರಮಗಳಿಂದ ಜರಗಲಿರುವುದು.

### ಮಂಗಳೂರು

ಭಾರತ ಪ್ರಜಾಪ್ರಭುತ್ವ ಉದ್ಘಾಟನೋತ್ಸವವು ತಾ. 26 ಮತ್ತು 27ರಲ್ಲು ಮಂಗಳೂರಲ್ಲಿ ವೈಭವದಿಂದ ಆಚರಿಸಲ್ಪಟ್ಟಿತು. ಪ್ರಮುಖ ಬೀದಿಗಳು, ಸರಕಾರಿ ಕಟ್ಟಡಗಳು, ಮನೆಗಳೆಲ್ಲಾ ಶೃಂಗಾರವಾಗಿ ಅಲಂಕರಿಸಲ್ಪಟ್ಟಿದ್ದವು.

26ರಲ್ಲು ಬೆಳಿಗ್ಗೆ ಕೇಂದ್ರ ಮೈದಾನಿನಲ್ಲಿ ಧ್ವಜವಂದನೆಯಾಯಿತು. ಡಾ। ಕೆ. ನಾಗಪ್ಪ ಆಳ್ವರು ಧ್ವಜಾರೋಹಣ ಮಾಡಿದರು. ಶ್ರೀ ರಾಮಕೃಷ್ಣರಾವರು ಈ ದಿನದ ಮಹತ್ವದ ಕುರಿತು ಮಾತನಾಡಿದರು. ಸಂಜೆ ಕೇಂದ್ರ ಮೈದಾನಿನಲ್ಲಿ ಜಿಲ್ಲಾ ಕಲೆಕ್ಟರರು ಧ್ವಜವನ್ನೆರಳಿಸಿ, ಪ್ರಜಾಪ್ರಭುತ್ವ ಇಸ್ತಿಹಾರನ್ನು ಉದ್ಘೋಷಿಸಿದರು. ಬಳಿಕ ಪೋಲೀಸ್‌ದಳ, ಅಗ್ನಿವಿನಾಶಕದಳ, ಸ್ಕೌಟುದಳಗಳಿಂದ ವಂದನೆ ಸ್ವೀಕರಿಸಿದರು. ಬಳಿಕ ಸಾರ್ವಜನಿಕ ಸಭೆಯು ಶ್ರೀ ಬಿ. ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು. ಡಾ। ಕೆ ನಾಗಪ್ಪಆಳ್ವರು ಹೊಸ ಪ್ರತಿಜ್ಞಾ ವಿಧಿಯನ್ನೋದಿದರು. ನಂತರ ಶ್ರೀಗಳಾದ ಕೆ. ಕೆ. ಸೆಟ್ಟಿ, ಎಸ್. ಎಸ್. ಕಿಲ್ಲೆ, ಎಲ್. ಸಿ. ಪಾಯಿಸ್, ಎಮ್. ಸಿ. ಅಹಮದ್, ಎಸ್. ಗೋಪಾಲ ಸಾಲೆನ್ನ ಮೊದಲಾದವರ ಸಂದರ್ಭೋಚಿತ ಭಾಷಣಗಳಾದುವು. ಶ್ರೀ ಕೆ. ಆರ್. ಆಚಾರ್ಯರು ಮಾತನಾಡುತ್ತಾ ಕೀರ್ತಿಶೇಷ ಕಾರ್ನಾಡು ಸದಾಶಿವರಾಯರ ನೆನಪು ಮಾಡಿದರು. ಮರುದಿನ ಬಂದರದಲ್ಲಿ ದೋಣಿ ನಡೆಸುವ, ಈಜುವ, ಮುಳುಗುವ ಪಂದ್ಯಾಟ, ಕೇಂದ್ರ ಮೈದಾನಿನಲ್ಲಿ ಸೈಕಲ್, ಜಟ್ಟಿ, ಎತ್ತಿನ ಗಾಡಿ ಪಂದ್ಯಾಟ ಮೊದಲಾದ ಚಟುವಟಿಕೆಗಳಲ್ಲಿ ಸ್ಪರ್ಧೆ ನಡೆಯಿತು. ಉತ್ತೀರ್ಣರಾದವರಿಗೆ ಬಹುಮಾನ ಹಂಚಲಾಯಿತು.

### ಶಂಕರನಾರಾಯಣ

#### ಜಾಹಿರಾತು

ತಾರೀಖು 11-1-50ರಲ್ಲು ಕೆ. ಕೃಷ್ಣ ಮಂಜನು ಶಂಕರನಾರಾಯಣದಿಂದ ಸೈಕಲಲ್ಲಿ ಹೊರಟು ಹಾಲಾಡಿ, ಹುಣ್ಸೆಮಕ್ಕಿ, ಬಸ್ರೂರು ಮಾರ್ಗವಾಗಿ ಕುಂದಾಪುರಕ್ಕೆ ಹೋಗುವಾಗ ಶ್ರೀ ಶಂಕರನಾರಾಯಣ ದೇವರ ಬಾಪ್ತು ಹಾಗೂ ಕಾಸಾ ಬಾಪ್ತು ಕೂಡಾ ಶರಟಿನ ಕಿಸೆಯಲ್ಲಿದ್ದ ನೂರು ರೂಪಾಯಿ ನೋಟು 4, ಒಂದು ರೂಪಾಯಿ ನೋಟು 3 ಕೂಡಾ ರೂಪಾಯಿ 403ನ್ನು ಹಾಕಿರುವ ಕಾಕಿ ಬಣ್ಣದ ಕಾಗದದ ಕವರು ಮಾರ್ಗದಲ್ಲಿ ಪರಾಮೋಶಿಯಿಂದ ಕೆಳಗೆ ಬಿದ್ದು ಕಾಣೆಯಾಗಿದೆ. ಈತನಕ ಪತ್ತೆಯಾಗಲಿಲ್ಲ. ಆ ಕಾರಣ ಯಾರಿಗಾದರೂ ಸಿಕ್ಕಿರುವಲ್ಲಿ ಸದ್ರಿ ಮೊಬಲಗನ್ನು ಶಂಕರನಾರಾಯಣ ದೇವರ ಭಂಡಾರಕ್ಕೆ ತಂದೊಪ್ಪಿಸಿ ಶ್ರೀದೇವರ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇನೆ. ಅಂಥವರ ಹೆಸರನ್ನು ಹಾಗೂ ಪತ್ತೆಹಚ್ಚಲು ಸಹಕರಿಸುವ ಮಹಾನುಭಾವರ ಹೆಸರನ್ನು ಸನ್ನಿಧಿಯಲ್ಲಿ ಶಾಶ್ವತವಾಗಿ ಉಳಿಯುವಂತೆ ತಕ್ಕ ಏರ್ಪಾಡು ಮಾಡುವ ಮೂಲಕ ಯೋಗ್ಯ ರೀತಿಯಲ್ಲಿ ಸನ್ಮಾನಿಸಲಾಗುವುದು.

ಎಸ್. ಎಸ್. ಉಡುಪ.

ಶಂಕರನಾರಾಯಣ, ತಾ. 30-1-50.


ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ನಾವು ಹೇಳುವುದರಲ್ಲಿ ಸ್ವಾರಸ್ಯವಿಲ್ಲ. ನೀವು ನೋಡಿ,

ನಿಮ್ಮ ಮರೆನ್ನು ಕಳುಹಿಸಿರಿ.

ತಾರೀಕು 1—2—50

ವೀಣಾ

ಜಗತ್ ಪಿಕ್ಚರ್ಸ್

ಪಿರಿಶಾ, ಹೇಮಾವತಿ, ಸುಲೋಚನ ಚಟರ್ಜಿ. ಯಾಕೂಬ್, ರಿಹಮಾನ್, ಮತ್ತಿತರರು



## THE UDIPI BANK LIMITED.

(Estd: 1925)

**NOTICE**

The 25th Annual Ordinary General Meeting of the shareholders of the Bank will be held at the registered office of the Bank at Udipi on Sunday 26th Febrvary 1950, at 10 A. M. to transact the following business:—

1. To consider and adopt the balance sheet as at 31st December 1949 the P. & L. Account for the year ended 31st December 1949, the Auditor's Report thereon and the Director's 25th Annual Report.
2. To declare a dividend.
3. To elect Directors in the places of those retiring under Articles 92 & 98. The retiring Directors are eligible for re-election.
4. To determine the Siotting fee to be paid to the Directors.
5. To appoint an Auditor for 1950 and to fix his remuneration. Last Year's Auditor is eligible for re-election.

**N. B.** The Transfer Books and Register of Members of the Bank will remain closed from 10th February 1950 to 27th February 1950, both days inclusive.

(By order of the Directors)

Office of the Bank,
UDIPI,
21st January 1950.

**U. V. PRABHU,** B. A., B. M.,
MANAGER.

# ದ. ಕ. ಜಿಲ್ಲೆಯಲ್ಲಿ ಪ್ರಜಾಪ್ರಭುತ್ವ ದಿನಾಚರಣೆ

**ಕೊಕ್ಕಡ**- ಭಾರತ ಪ್ರಜಾಪ್ರಭುತ್ವ ಉದಯ ದಿನಾಚರಣೆಯು ಕಳೆದ ತಾ. 26 ರಲ್ಲು ಕೊಕ್ಕಡ ಬೋರ್ಡು ಶಾಲೆಯಲ್ಲಿ ಪೂರ್ವಾಹ್ನ ಧ್ವಜ ವಂದನೆ, ಭಜನೆ, ಮಕ್ಕಳಿಗೆ ತಿಂಡಿ ಹಂಚೋಣ ಕಾರ್ಯಕ್ರಮಗಳಿಂದಲೂ, ಸಂಜೆ ಶ್ರೀ ಜಿ ಕೃಷ್ಣ ಬಾಳ್ತಿಲ್ಲಾಯರ ಅಧ್ಯಕ್ಷತೆಯಲ್ಲಿ ಸಭೆ, ಭಾಷಣ, ರಾತ್ರಿ ಯಕ್ಷಗಾನ ಕೂಟದಿಂದಲೂ ಸಾಂಗವಾಗಿ ಜರಗಿತು.

**ಕಡಿಕೆ**-ಇಲ್ಲಿಯ ಬೋರ್ಡು ಶಾಲೆಯಲ್ಲಿ ಪ್ರಜಾರಾಜ್ಯೋದಯ ಸಮಾರಂಭವು ತಾ. 26ರಲ್ಲು ಶಾಲಾ ಬಾಲಕರಿಂದ ಧ್ವಜ ವಂದನೆ, ನಗರ ಮೆರವಣಿಗೆ, ಮಕ್ಕಳಿಗೆ ತಿಂಡಿ ಹಂಚೋಣ, ಸಂಜೆ ಶ್ರೀ ಕೆ. ರಾಮಯ್ಯ ಸೆಟ್ಟರ ಅಧ್ಯಕ್ಷತೆಯಲ್ಲಿ ಸಭೆ, ಭಾಷಣ ಕಾರ್ಯಕ್ರಮಗಳಿಂದ ಆಚರಿಸಲಾಯಿತು.

**ಹಳ್ಳಿ**-ಜಾನಪದ ದಿನಚರಣೆಯು ಇಲ್ಲಿಯ ಬೋರ್ಡು ಶಾಲೆಯಲ್ಲಿ ಪ್ರಭಾತ ಫೇರಿ, ಶಾಲಾ ಮಕ್ಕಳ ಮೆರವಣಿಗೆ, ಶ್ರೀ ಪಿ ವಾಸುದೇವ ಪೈಗಳಿಂದ ಧ್ವಜಾರೋಹಣ, ಶ್ರೀ ಬಡಗಬೆಟ್ಟು ತಿಮ್ಮಪ್ಪ ಹೆಗ್ಡೆರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಮೊದಲಾದ ಕಾರ್ಯಕ್ರಮಗಳಿಂದ ನೆರವೇರಿತು.

**ಕಳತ್ತೂರು**—ಇಲ್ಲಿಯ ಬೋರ್ಡು ಶಾಲೆಯಲ್ಲಿ ತಾ. 26ರಲ್ಲು ಬೆಳಿಗ್ಗೆ ಶ್ರೀ ಎಮ್. ಗೋಪಾಲಕೃಷ್ಣಪೈಗಳಿಂದ ಧ್ವಜಾರೋಹಣ, ಪುರಮೆರವಣಿಗೆ, ಶ್ರೀ ಕೆ.ವಿ. ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಭಾಷಣ, ಬಹುಮಾನ ವಿತರಣೆ, ಲಘು ಉಪಾಹಾರಾದಿ ಕಾರ್ಯಕ್ರಮಗಳು ಪ್ರಜಾಪ್ರಭುತ್ವ ದಿನಾಚರಣೆ ಸಂಬಂಧ ಜರಗಿದವು.

**ಸಾಂತೂರು ಕೊಪ್ಲ**—ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ತಾ.26 ರಲ್ಲು ಊರ ಸದ್ಗೃಹಸ್ಥರ ಸಭೆಯು ಶ್ರೀ ...ಲ್ಲಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಪ್ರಜಾಪ್ರಭುತ್ವ ದಿನಾಚರಣೆ ಕುರಿತು ಭಾಷಣ ...ಳಾಗಿ ಮಕ್ಕಳಿಗೆ ತಿಂಡಿ ಹಂಚಲಾಯಿತು.

**ಪಡುಪಣಂಬೂರು**—ಇಲ್ಲಿಯ ಹಾ... ಶಾಲೆಯಲ್ಲಿ ತಾ. 26ರಲ್ಲು ಪ್ರಜಾಪ್ರಭು... ದಿನಾಚರಣೆಯು ಧ್ವಜಾರೋಹಣ, ಮೆರವಣಿಗೆ, ಶ್ರೀ ಹೊನ್ನಯ್ಯ ಬಿ. ಸುವರ್ಣರ ಅಧ್ಯಕ್ಷತೆಯಲ್ಲಿ ಸಭೆ, ಭಾಷಣ, ಮಕ್ಕಳಿಗೆ ಸಿಹಿ ತಿಂಡಿ ಹಂಚೋಣ ಮೊದಲಾದ ಕಾರ್ಯಕ್ರಮಗಳಿಂದ ಸಾಂಗವಾಗಿ ಜರಗಿತು.

**ತೆಕ್ಕಟ್ಟೆ**— ಸ್ಥಳೀಯ ಕಾಂಗ್ರೆಸ್ ಪಂಚಾಯತು, ಗ್ರಾಮಸೇವಾಸಮಿತಿ, ಶಾಲಾ ಕಮಿಟಿ ಮತ್ತು ಸಹಕಾರಿ ಸಂಘಗಳ ಸಂಯುಕ್ತ ಸೇರುವಿಕೆಯಿಂದ ಜಾನಪದ ಉದಯೋತ್ಸವವು ತಾ. 26ರಲ್ಲು ಸಾಂಗವಾಗಿ ಜರಗಿತು. ಧ್ವಜಾರೋಹಣ, ಶ್ರೀ ಕೆ. ವಿ. ಕೋರನ್ ವೈದ್ಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಭಾಷಣ, ಮೆರವಣಿಗೆ, ತಿಂಡಿಹಂಚೋಣ ಮೊದಲಾದುವು ಅಂದಿನ ಪ್ರಾಮುಖ್ಯ ಕಾರ್ಯಕ್ರಮಗಳಾಗಿದ್ದುವು. ಸ್ಥಳೀಯ ಪಂಚಾಯತ ಬೋರ್ಡು ಈ ಸಮಾರಂಭದಲ್ಲಿ ಸಹಕರಿಸಲಿಲ್ಲವಂತೆ.

**ಬ್ರಹ್ಮಾವರ**-ಸ್ಥಳೀಯ ಸರ್ಕಲ್ ಕಮಿಟಿಯ ನೇತೃತ್ವದಲ್ಲಿ ಪ್ರಜಾರಾಜ್ಯ ದಿನೋತ್ಸವವು ತಾ. 26ರಲ್ಲು ಯಶಸ್ವಿಯಾಗಿ ಜರಗಿತು. ಪ್ರಾತಃಕಾಲ ಪ್ರಭಾತ ಫೇರಿಯಾದ ನಂತರ ಬೋರ್ಡು ಶಾಲಾ ಮುಖ್ಯೋಪಾಧ್ಯಾಯರಿಂದ ಧ್ವಜಾರೋಹಣ, ಪೋಲೀಸ್, ಪ್ರೊಹಿಬಿಶನ್ ಶಾಖೆ, ಮತ್ತು ಸಾರ್ವಜನಿಕರಿಂದ ಧ್ವಜವಂದನೆಯಾಗಿ ಶಾಲಾ ಮಕ್ಕಳಿಗೆ ತಿಂಡಿ ಹಂಚೋಣವಾಯಿತು ಸಂಜೆ ಸಾರ್ವಜನಿಕ ಮೆರವಣಿಗೆ ಸ್ವರಾಜ್ಯ ಮೈದಾನಿನಲ್ಲಿ ರೆ। ಫಾ। ಪಿ। ಜಿ। ಕೋಶಿಯವರ ಅಧ್ಯಕ್ಷತೆಯಲ್ಲಿ ಮಹಾಜನ ಸಭೆ, ಶ್ರೀಗಳಾದ ಬಿ ವಿಠಲ ಸೆಟ್ಟಿ, ಬಿ. ವಿ. ಮಾಧವ ರಾವ್, ವೆಂಕಟರಮಣ ಅಡಿಗ, ಬಿ. ಎಸ್. ಕಾಮತ್ ಮೊದಲಾದವರಿಂದ ಭಾಷಣ, ಶ್ರೀ ವೈ. ರಾಮನ್ ಗುರುಕ್ಕಳ್‌ರವರಿಂದ ಧನ್ಯವಾದಾರ್ಪಣೆ, ಮಂಗಳ ಗೀತೆಗಳಾದುವು.

**ಪಡುತೋನ್ಸೆ**—ಇಲ್ಲಿಯ ಪಂಚಾಯತ ಬೋರ್ಡಿನ ನೇತೃತ್ವದಲ್ಲಿ ತಾ. 26 ರಲ್ಲು ಪ್ರಜಾಧಿಪತ್ಯ ಸ್ಥಾಪನೆಯ ಸಮಾರಂಭೋತ್ಸವವು ಶ್ರೀ ಜಿ. ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಜರಗಿ, ಸದ್ರಿ ಪಂಚಾಯತ ಬೋರ್ಡಿನ ಅಧ್ಯಕ್ಷ ಶ್ರೀ ಪಿ. ವೆಂಕಟಕೃಷ್ಣರಾಯರಿಂದ ಧ್ವಜಾರೋಹಣ ನಡೆಯಿತು ಮೆರವಣಿಗೆ, ಸಭೆ, ಭಾಷಣ, ಮಕ್ಕಳಿಗೆ ತಿಂಡಿ ಹಂಚೋಣ ಮೊದಲಾದ ಕಾರ್ಯಕ್ರಮಗಳೂ ಆದುವು.

**ಕಂಬದ ಕೋಣೆ**—ಭಾರತದ ಪ್ರಜಾರಾಜ್ಯ ದಿನೋತ್ಸವವು ತಾ. 26ರಲ್ಲು ಪಂಚಾಯತ ಬೋರ್ಡು ವತಿಯಿಂದ ಶ್ರೀ ಯಚ್. ಕೃಷ್ಣಕಾರಂತರ ನೇತೃತ್ವದಲ್ಲಿ ಸಂಭ್ರಮದಿಂದ ಜರಗಿತು. ಈ ಸಂಬಂಧ ದೇವಾಲಯಗಳಲ್ಲಿ ಪ್ರಾರ್ಥನೆ, ಸಾರ್ವಜನಿಕ ಸಭೆ, ಭಾಷಣ, ಮೆರವಣಿಗೆ, ಹಂಜನ ಮತ್ತು ಬಡವಿದ್ಯಾರ್ಥಿಗಳಿಗೆ ವಸ್ತ್ರದಾನ ಇತ್ಯಾದಿ ಕಾರ್ಯಕ್ರಮಗಳಾದುವು.

**ಮಣಿಪಾಲ**—ಜನತಾರಾಜ್ಯ ಉದ್ಘಾಟನಾ ಸಮಾರಂಭವು ತಾ. 26ರಲ್ಲು ಬೆಳಿಗ್ಗೆ ಶ್ರೀ ಟಿ. ಉಪೇಂದ್ರ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿ ಪ್ರಾರ್ಥನೆ, ಧ್ವಜಾರೋಹಣ, ಮೆರವಣಿಗೆ ಇತ್ಯಾದಿ ಕಾರ್ಯಕ್ರಮಗಳಿಂದ ಸಾಂಗವಾಗಿ ಜರಗಿತು.

**ಬೊಂಬಾಯಿ**- ಶ್ರೀ ಭಗವತಿ ನೃತ್ಯಕಲಾ ಮಂದಿರದಲ್ಲಿ ತಾ. 26ರಲ್ಲು ಭಾರತದಲ್ಲಿ ಪ್ರಜಾಪ್ರಭುತ್ವ ಉದಯವಾದ ಸಂತೋಷ ಸೂಚನಾರ್ಥವಾಗಿ ಮಂದಿರದ ಅಧ್ಯಕ್ಷ ಶ್ರೀ ಎ. ಐತಪ್ಪ ಭಂಡಾರಮನೆಯವರು ಭಾರತ ಧ್ವಜಾರೋಹಣ ಮಾಡಿದರು. ನಂತರ ಮಕ್ಕಳಿಗೆ ತಿಂಡಿಹಂಚಿದರು.

**ಫಲಿಮಾರು**—ತಾ 28ರಲ್ಲು ಉಡುಪಿ ಸಿಂಡಿಕೇಟ್ ಬೇಂಕಿನ ಫಲಿಮಾರು ಶಾಖೆಯ ರಜತ ಮಹೋತ್ಸವಕ್ಕೆ ಸಂಬಂಧಪಟ್ಟ ಸಮಾರಂಭವು ಫಲಿಮಾರಿನಲ್ಲಿ ಡಾ. ಕುಮಾರನ್ ನಂಬಿಯಾರರ ಅಧ್ಯಕ್ಷತೆಯಲ್ಲಿ ಜರಗಿತು. ಹಾಜರಿದ್ದ ಡಾ. ಟಿ. ಮಾಧವ ಪೈಗಳು ನವಯುಗ ರಾಜ್ಯಾರಂಭದಲ್ಲಿ ಹಳ್ಳಿಗರು ಮಾಡತಕ್ಕ ಕರ್ತವ್ಯ, ಬೇಂಕಿನ ವ್ಯವಹಾರ, ವಯಸ್ಕರ ಶಿಕ್ಷಣ ಇತ್ಯಾದಿ ವಿಷಯಗಳನ್ನೆತ್ತಿ ಭಾಷಣವಿತ್ತರು. ಸಭಿಕರ ಭಾಷಣಗಳಾದ ನಂತರ ಫಲಿಮಾರು ಬೋರ್ಡು ಹಾ. ಎ. ಶಾಲೆಯನ್ನು ಹೈಸ್ಕೂಲಾಗಿ ಮಾಡಬೇಕಾಗಿ ಸರ್ವಸಮ್ಮತ ನಿರ್ಧಾರವಾಯಿತು.

**ಉಳ್ಳಾಲ** ದ. ಕ. ಜಿಲ್ಲಾ ಬೋರ್ಡು ಪ್ರೆಸಿಡೆಂಟ್ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ಕಳೆದ ತಾ. 20ರಲ್ಲು ಉಳ್ಳಾಲಕ್ಕೆ ಹೋಗಿ ಅಲ್ಲಿಯ ಪ್ರಾಥಮಿಕ ಶಾಲೆಗಳನ್ನು ಸಂದರ್ಶಿಸಿದರು. ರೂರಲ್ ಡಿಸ್ಪೆನ್ಸರಿಯೊಂದನ್ನು ಸ್ಥಾಪಿಸಬೇಕಾಗಿ ಹಳ್ಳಿಗರು ಮಾಡಿದ ಮನವಿಯನ್ನು ಮನ್ನಿಸಿ ಶ್ರೀ ಹೆಗ್ಡೆಯವರು ಆ ಕುರಿತು ಕಟ್ಟಡದ ಬಗ್ಗೆ ಶ್ರೀ ಪಿ. ಎಸ್. ಅಲ್ಬುಕರ್ಕರಿಂದ ಪತ್ರ ಬಂದೊಡನೆ ಪರಿಶೀಲಿಸಲಾಗುವುದೆಂದರು. ಶಾಲಾಕಟ್ಟಡಗಳ ದುರುಸ್ತಿ ಅತ್ಯಗತ್ಯವಿರುವುದರಿಂದ ಆ ಬಗ್ಗೆ ಪ್ರತ್ಯೇಕ ಬರೆಕೊಳ್ಳಬೇಕಾಗಿ ಸಂಬಂಧಪಟ್ಟ ಶಾಲಾ ಮುಖ್ಯೋಪಾಧ್ಯಾಯರಿಗೆ ಸೂಚನೆಯಿತ್ತರು

**ಮದ್ರಾಸು**- ಕನ್ನಡ ನಾಡಿನ ಸುಪ್ರಸಿದ್ಧ ಸಾಹಿತಿಗಳೂ ಉದ್ದಾಮ ಕವಿಗಳೂ ನಿಷ್ಣಾತ ಸಂಶೋಧಕರೂ ಆದ ಶ್ರೀ ಮುಳಿಯ ತಿಮ್ಮಪ್ಪಯ್ಯನವರ ಆಕಸ್ಮಿಕ ನಿಧನದ ಸಲುವಾಗಿ ಸಂತಾಪ ಸೂಚಿಸುವ ಹಾಗೂ ಅವರ ಆತ್ಮಕ್ಕೆ ಚಿರಶಾಂತಿಯನ್ನು ಬಯಸುವ ನಿರ್ಣಯವು ತಾ. 22ರಲ್ಲು ಕೂಡಿದ ಮದ್ರಾಸು ಕರ್ನಾಟಕ ಸಂಘದ ಸಭೆಯಲ್ಲಿ ಅಂಗೀಕರಿಸಲಾಯಿತು.

**ಪುಣ್ಯದಿನಾಚರಣೆ**- ತಾ. 22ರಲ್ಲು ಸಂಜೆ ಸರ್. ಎಮ್. ಸಿ. ಟಿ. ಮುತ್ತಯ್ಯ ಚೆಟ್ಟಿಯಾರ್ ಹೈಸ್ಕೂಲಲ್ಲಿ ಕೀರ್ತನಪಟು ಶ್ರೀ ಸಿ. ಸರಸ್ವತಿ ಬಾಯಿಯವರ ಅಧ್ಯಕ್ಷತೆಯಲ್ಲಿ ಪುರಂದರದಾಸರ ಪುಣ್ಯದಿನಾಚರಣೆಯು ಜರಗಿತು. ಶ್ರೀಮತಿ ಲಲಿತಾಬಾಯಿ ಕಾಮಣ್ಣ ಮತ್ತು ಪಾರ್ಟಿಯವರು ಪಕ್ಕವಾದ್ಯಗಳೊಂದಿಗೆ ಶ್ರೀ ಪುರಂದರದಾಸರ ಕೀರ್ತನೆಗಳನ್ನು ಹಾಡಿದರು. ಶ್ರೀ ಎಮ್. ಮರಿಯಪ್ಪಭಟ್, ಅವರು ಧನ್ಯವಾದಗಳನ್ನರ್ಪಿಸಿದರು.

**ಕಾರ್ಕಳ**—ಭಾರತ ಪ್ರಜಾಪ್ರಭುತ್ವ ದಿನಾಚರಣೆ ಸಂಬಂಧವಾಗಿ ತಾ. 26ರಲ್ಲು ಪ್ರಭಾತಫೇರಿಯು ಹೊರಟು ಗಾಂಧಿ ಮೈದಾನಕ್ಕೆ ಬಂದು ಅಲ್ಲಿ ಶ್ರೀ ಕೆ. ವೆಂಕಟೇಶ ಪ್ರಭುಗಳಿಂದ ಧ್ವಜಾರೋಹಣ ಮತ್ತು ವಂದನೆಗಳಾದುವು. ಬಡವರಿಗೆ ಪಾಯಸ ದಾನ ಪ್ರಾಥಾಲಾ ಮಕ್ಕಳಿಗೆ ತಿಂಡಿ ಹಂಚೋಣವೂ ಆಗಿ ಸಂಜೆ ಸಾರ್ವಜನಿಕ ಮೆರವಣಿಗೆ ಹೊರಟು ಜನಾಬ್ ಎಚ್. ಎಸ್ ಹುಸ್ಸೇನ್, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಮಹಾಜನ ಸಭೆ ಸೇರಿತು. ಶ್ರೀಗಳಾದ ಕೆ. ವೆಂಕಟೇಶ ಪ್ರಭು, ಟಿ. ಎಮ್. ಎಚ್. ಸದಾಶಿವಯ್ಯ, ಎಚ್. ಗಣಪತಿ ಕೆದ್ಲಾಯ, ಕೆ. ಮಹಾಬಲ ಹೆಗ್ಡೆ, ಕೆ. ಗಣಪತಿ ಕಾಮತ್ ಬಿ. ಶಿವರಾಯ ಸೆಟ್ಟಿ, ಮೊದಲಾದವರು ಭಾಷಣಮಾಡಿದರು. ರಾತ್ರಿ ಪೇಟೆಯಲ್ಲಿ ದೀಪಾಲಂಕಾರವಿತ್ತು.

ರಾಷ್ಟ್ರೀಯ ಸ್ವಯಂಸೇವಕ ಸಂಘದಲ್ಲಿ ಶ್ರೀ ಕೆ. ಗಣಪತಿ ಶೆಣೈಯವರ ಅಧ್ಯಕ್ಷತೆಯಲ್ಲಿ, ಡಿ. ಮು. ಕೋರ್ಟಿನ ವಕೀಲ ಕೂಟದಲ್ಲಿ ಜಿಲ್ಲಾ ಸಬ್ ಜಡ್ಜ್ ಶ್ರೀ ಸದಾಶಿವಯ್ಯರ ಅಧ್ಯಕ್ಷತೆಯಲ್ಲಿ ರಾಷ್ಟ್ರ ಮುಖಂಡರ ಭಾವಚಿತ್ರ ಅನಾವರಣಗಳ ಮೂಲಕವೂ ಇತರ ವಿದ್ಯಾ ಸಂಸ್ಥೆಗಳಲ್ಲೂ ಪ್ರಜಾಪ್ರಭುತ್ವ ದಿನಾಚರಣೆಯು ಯಶಸ್ವಿಯಾಗಿ ಜರಗಿತು.

**ಆಯುರ್ವೇದ ಪರಿಷತ್ತು**- ದ. ಕ. ಜಿಲ್ಲಾ ಆಯುರ್ವೇದ ವೈದ್ಯ ಪರಿಷತ್ತನ್ನು ಕಾರ್ಕಳದಲ್ಲಿ ಬರುವ ಎಪ್ರಿಲ್ ತಿಂಗಳ ತಾ. 28ರಿಂದ 30ರ ವರೆಗೆ ವಿವಿಧ ಕಾರ್ಯಕ್ರಮಗಳಿಂದ ಜರಗಿಸಬೇಕಾಗಿ ಸ್ವಾಗತ ಸಮಿತಿಯು ನಿರ್ಧಾರವಾಗಿದೆ.


ಡಿ. ಎನ್. ಪಂಡಿತರ ಶ್ರೇಷ್ಠವಾದ

ಪಾಡಿಸ್ ನೀಮ್

ಟೂಥ್‌ಪೌಡರ್ ಉಪಯೋಗಿಸಿರಿ

ಸ್ವಾಕಿಸ್ಟರು: ನಾಯಕ್ಸ್ ಬೀಡಿ ವರ್ಕ್ಸ್, ಸಂತೆಕಟ್ಟೆ, ಉಡುಪಿ.



ಶ್ರೀ ಕೊರಡ್ಕಲ್ ಶ್ರೀನಿವಾಸರಾಯರ

'ಸುಲಭದಲ್ಲಿ ಇಂಗ್ಲಿಷ್'

(ENGLISH MADE EASY)

ಮನೆಯಲ್ಲಿ ನೀವಾಗಿ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.

ಬೆಲೆ: ೧—೮—೦

ಡಾಕ್ಟರ್ ಕೊರಡ್ಕಲ್ ವೆಂಕಟರಾಯರ

'ಮನೆ ಮದ್ದು'

(HOME REMEDIES)

೨೦೦ ಕಾಹಿಲೆಗಳಿಗೆ ಮನೆಯಲ್ಲೇ ಮಾಡಿಕೊಳ್ಳಬಹುದಾದ ೧೦೦೦ ಮದ್ದುಗಳ ವಿವರವಿರುವ ಪುಸ್ತಕ. ಬೆಲೆ: ರೂ. ೨

ಪ್ರತಿಗಳು ನಿಮ್ಮೂರ ಪುಸ್ತಕವ್ಯಾಪಾರಿಗಳಲ್ಲಿ ಸಿಗದಿದ್ದರೆ ಬರೆಯಿರಿ—

**ನವಭಾರತ ಪುಸ್ತಕ ಭಂಡಾರ, ಉಡುಪಿ.**

**ನವಯುಗ ಪ್ರೆಸ್, ಉಡುಪಿ.**

ಜೀವವಿಮೆಗಾಗಿ

ವಿಚಾರಿಸಿರಿ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ

ಲೈಫ್ ಇನ್ಶ್ಯೂರೆನ್ಸ್ ಕೊ., ಲಿಮಿಟೆಡ್.

(ಸ್ಥಾಪನೆ: 1934)

ಚೆಯರ್‌ಮೆನ್: ಶ್ರೀ. ಎಮ್. ಸಿಟಿ ಎಮ್. ಚಿದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಮಂಗಳೂರು ಶಾಖೆ: ಕೆ. ಎಸ್. ರಾವ್. ರೋಡು, ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ: "ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್" ಪೋಸ್ಟು ಬಾಕ್ಸ್ ನಂಬ್ರ 142 ಮದ್ರಾಸು.

'ಅಂತರಂಗ'ಕ್ಕೆ

6 ರೂಪಾಯಿ

ಚಂದಾ ಕೊಟ್ಟು

ಒಂದೇ ವರ್ಷದಲ್ಲಿ

50 ಪುಸ್ತಕಗಳನ್ನು ಪಡೆಯಿರಿ.

'ಅಂತರಂಗ' ಉಡುಪಿ.

# ಸ್ವತಂತ್ರ ಸಾರ್ವಭೌಮ ಭಾರತದ ರೂಪರೇಷೆ

ಇಂದಿನಿಂದ ನಮ್ಮ ಭಾರತ ಪ್ರಜಾರಾಜ್ಯವೆಂದು ತಿಳಿಯಲ್ಪಡುವುದು. ಇಂದಿನಿಂದ ನಾವೇ ನಮ್ಮ ಹಾಗೂ ದೇಶದ ಭವಿಷ್ಯನ್ನು ರೂಪಿಸುವವರಾಗಿರುತ್ತೇವೆ. ಇಂಥ ಚಾರಿತ್ರಿಕ ದಿನದಲ್ಲಿ ವಿಭಜನೆಯ ನಂತರದ ನಮ್ಮ ದೇಶದ ವ್ಯವಸ್ಥಿತ ರಾಜಕೀಯ ಸ್ವರೂಪದ ರೂಪರೇಖೆಯನ್ನು ಸಂಕ್ಷಿಪ್ತವಾಗಿ ನೋಡುವುದು ಉಚಿತವಾಗಿದೆ.

ಹಿಂದೂದೇಶ ಭಾರತ ಮತ್ತು ಪಾಕಿಸ್ತಾನಗಳಾಗಿ ವಿಭಜಿಸಲ್ಪಟ್ಟರೂ, ಇಂದು ಭಾರತದ ವಿಸ್ತೀರ್ಣ ೧೨,೬೯,೬೪೧ ಚದರ ಮೈಲು ಮತ್ತು ಜನಸಂಖ್ಯೆ ೩೪,೧೯,೩೪,೪೦೬. ಇಷ್ಟು ವಿಶಾಲ ಜನ ನಿಬಿಡ ದೇಶವು ಆಡಳಿತೆಯ ಸೌಕರ್ಯ, ಚರಿತ್ರೆ, ಸಂಸ್ಕೃತಿ ಮತ್ತು ಪರಂಪರೆಗಳನ್ನು ಅನುಲಕ್ಷಿಸಿ ಈ ಕೆಳಗಿನಂತೆ ಸಂಸ್ಥಾನ (States)ಗಳಾಗಿ ವಿಂಗಡಿಸಲ್ಪಟ್ಟಿದೆ:.

೧ ಮುಂಬಯಿ, ೨ ಮದ್ರಾಸು, ೩ ಪಶ್ಚಿಮ ಬಂಗಾಲ, ೪ ಯುಕ್ತಪ್ರಾಂತ, ೫ ಪಂಜಾಬ, ೬ ಬಿಹಾರ, ೭ ಮಧ್ಯಪ್ರದೇಶ, ೮ ಅಸ್ಸಾಮ್ ಮತ್ತು ೯ ಒರಿಸ್ಸಾ; ಈ ಸಂಸ್ಥಾನಗಳು ಅಥವಾ ಪ್ರಾಂತಗಳು ಗವರ್ನರರ ಪ್ರಾಂತಗಳೆಂದು ಪರಿಗಣಿಸಲ್ಪಡುವುವು.

೧ ಹೈದರಾಬಾದು, ೨ ಕಾಶ್ಮೀರ ಮತ್ತು ಜಮ್ಮು, ೩ ಮೈಸೂರು, ೪ ಮಧ್ಯಭಾರತ, ೫ ಪಟಿಯಾಲ ಮತ್ತು ಪೂರ್ವ ಪಂಜಾಬದ ಸಂಸ್ಥಾನೀ ಒಕ್ಕೂಟ, ೬ ರಾಜಸ್ಥಾನ, ೭ ಸೌರಾಷ್ಟ್ರ, ೮ ತಿರುವಾಂಕೂರು ಮತ್ತು ಕೊಚ್ಚಿ, ೯ ವಿಂಧ್ಯ ಪ್ರದೇಶ; ಈ ಸಂಸ್ಥಾನಗಳು ರಾಜಪ್ರಮುಖರ ಸಂಸ್ಥಾನಗಳೆಂದು ಪರಿಗಣಿಸಲ್ಪಡುವುವು; ಮತ್ತು ೧ ಅಜ್ಮೀರ, ೨ ಭೋಪಾಲ, ೩ ಬಿಲಾಸಪುರ, ೪ ಕೂಚ್-ಬಿಹಾರ, ೫ ಕೊಡಗು, ೬ ದೆಹಲಿ, ೭ ಹಿಮಾಚಲ ಪ್ರದೇಶ, ೮ ಕಚ್ಚ್, ೯ ಮಣಿಪುರ, ೧೦ ತ್ರಿಪುರ ಮತ್ತು ಅಂಡಮಾನ ಹಾಗೂ ನೈಕೋಬರ ದ್ವೀಪಗಳು; ಇವು ಕಮಿಶನರರ ಸಂಸ್ಥಾನಗಳೆಂದು ಪರಿಗಣಿಸಲ್ಪಡುವುವು. ಭಾರತ ಹೀಗೆ ಒಟ್ಟಿಗೆ ಇಪ್ಪತ್ತೊಂಭತ್ತು ಘಟಕಗಳಾಗಿ ವಿಭಾಗಿಸಲ್ಪಟ್ಟಿದೆ ಎಂದು ನಮಗೆ ತಿಳಿಯುವುದು. ಈಗ ಈ ಘಟಕಗಳ ವೈಶಿಷ್ಟ್ಯವನ್ನು ಒಂದೊಂದನ್ನಾಗಿ ಸ್ಥೂಲ ನೋಟದಿಂದ ನೋಡೋಣ.

**ಮುಂಬಯಿ:-** ಇದರ ವಿಸ್ತೀರ್ಣ ೧,೦೨,೮೯೧ ಚದರ ಮೈಲು, ಜನಸಂಖ್ಯೆ ೨,೭೯,೪೮,೯೮೦. ಇದರ ಭೂಮಿಯು ಫಲವತ್ತಾಗಿದೆಯಾದರೂ ಗುಜರಾಥ ದಕ್ಷಿಣದ ತಪ್ಪಲಿನ ಕೆಲವು ಭಾಗ ಸಾರವತ್ತಾಗಿ ಇಲ್ಲ. ಹತ್ತಿ, ಭತ್ತ. ಇವು ಮುಖ್ಯ ಉತ್ಪತ್ತಿ. ಅರಿವೆಯ ಗಿರಣಿಗಳು ಮುಂಬಯಿ, ಅಹಮ್ಮದಾಬಾದು ಮತ್ತು ಬಡೋದೆಗಳಲ್ಲಿ ಇವೆ. ಮುಂಬಯಿ ಪ್ರಕೃತಿದತ್ತ ಹಾಗೂ ಸುಂದರ ಬಂದರ ಸ್ಥಳವಾಗಿದೆ, ಇದು ರಾಷ್ಟ್ರದ ಪ್ರಮುಖ್ಯ ಸಂಸ್ಥಾನವಾಗಿರುತ್ತದೆ.

**ಮದ್ರಾಸು:-** ಇದರ ವಿಸ್ತೀರ್ಣ: ೧,೨೬,೧೬೬ ಚದರ ಮೈಲು. ಜನಸಂಖ್ಯೆ ೪,೯೩,೪೧,೮೧೦. ಇದರ ಭೂಮಿಯು ಏರುತಗ್ಗು, ಮಲೆನಾಡುಗಳಿಂದ ಕೂಡಿರುತ್ತದೆ. ಭತ್ತ, ಕಾಫೀ, ಜೋಳ, ಹತ್ತಿ ಮತ್ತು ನೆಲಕಡಲೆ ಈ ಪ್ರದೇಶದಲ್ಲಿ ಬೆಳೆಯುತ್ತವೆ. ನೀರಾವರಿ ಯೋಜನೆಗಳಿಂದ ಇಲ್ಲಿ ಹೆಚ್ಚು ಸ್ಥಳ ಸಾಗುವಳಿಗೆ ಒಳಪಟ್ಟಿದೆ. ಮದ್ರಾಸು ಪ್ರಾಮುಖ್ಯ ಬಂದರಗಳಲ್ಲಿ ಒಂದಾದರೂ ಕೃತ್ರಿಮವಾಗಿದೆ. ಇದರ ಅಂತರ್ಗತದಲ್ಲಿ ಅನೇಕ ನದಿಗಳು ಹರಿಯುತ್ತವೆ. ಇನ್ನೂ ಸಣ್ಣಪುಟ್ಟ ಆದರೂ ಗಮನಾರ್ಹ ಬಂದರಗಳಿವೆ. ಈ ರಾಷ್ಟ್ರದಲ್ಲಿ ತೊಗಲಿನ, ಅರಿವೆಯ ಗಿರಣಿಗಳೂ ಇವೆ, ಬಂಗಾಲ ಕೊಲ್ಲಿಯ ಪಶ್ಚಿಮ ಭಾಗದ ದಂಡೆಯನ್ನು ಹೆಚ್ಚು ಕಡಿಮೆ ಸಂಪೂರ್ಣವಾಗಿ ಇದೇ ಆಕ್ರಮಿಸುತ್ತದೆ.

**ಪಶ್ಚಿಮ ಬಂಗಾಲ:-** ಇದರ ವಿಸ್ತೀರ್ಣ: ೩೬೬೨೩ ಚದರ ಮೈಲು. ಜನಸಂಖ್ಯೆ ೨,೧೪,೪೧,೮೮೨. ಇದರ ಮುಖ್ಯ ಉತ್ಪತ್ತಿ ಭತ್ತ ಮತ್ತು ಸಣಬು, ಕಲ್ಲಿದ್ದಲಿನ ಗಣಿಗಳೂ ಇಲ್ಲಿವೆ. ಇದರ ಎಲ್ಲಾ ಭೂಮಿ ಫಲವತ್ತಾಗಿರುತ್ತದೆ. ಏರುತಗ್ಗುಗಳು ಗಮನಿಸುವವಷ್ಟು ಇಲ್ಲ. ಗಂಗಾ ಮತ್ತು ಬ್ರಹ್ಮಪುತ್ರ ನದಿಗಳ ಸಂಗಮವಾಗಿ ಬಂಗಾಲ ಕೊಲ್ಲಿಯನ್ನು ಕೂಡುವುದಕ್ಕೆ ಈ ಪ್ರದೇಶದಲ್ಲಿ ಹರಿಯುವ ನದಿಯು ಹುಗ್ಲಿಯೆಂದು ಕರೆಯಲ್ಪಡುವುದು. ಇದರ ಮುಖದಲ್ಲೇ ಕಲ್ಕತ್ತ ಬಂದರವು ನೆಲಸಿದೆ. ಈ ಬಂದರವು ಜಗತ್ತಿನಲ್ಲೇ ಪ್ರಾಮುಖ್ಯತೆ ಪಡೆದಿದೆ. ಇಲ್ಲಿಂದ ಬಂಗಾಲದ ಮಾತ್ರವಲ್ಲದೆ, ಅಸ್ಸಾಮದ, ಬಿಹಾರದ, ಮಧ್ಯಪ್ರದೇಶದ ರಫ್ತು ಹಾಗೂ ಆಮದುಗಳು ನಡೆಯುತ್ತವೆ. ಕಬ್ಬಿಣದ ಕಾರಖಾನೆಗಳು, ಸೆಣಬಿನ ಗಿರಣಿಗಳು ಇವೇ ಮುಂತಾದ ಉದ್ಯಮಗಳ ಕೇಂದ್ರ ಇದು. ಈ ಸಂಸ್ಥಾನವು ಭಾರತದ ಸುಖದುಃಖದಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ.

**ಅಸ್ಸಾಮ್.-** ಇದರ ವಿಸ್ತೀರ್ಣ ೬೩,೭೨೯ ಚದರ ಮೈಲು. ಜನಸಂಖ್ಯೆ ೮೧,೧೮,೨೭೩ ಭತ್ತ, ಚಹ ಇವೇ ಇದರ ಮುಖ್ಯ ಉತ್ಪತ್ತಿ. ಮರಗೆಲಸದ ಗಿರಣಿಗಳೂ ಇಲ್ಲಿವೆ. ಇಲ್ಲಿಯ ಪ್ರದೇಶ ಗುಡ್ಡಗಾಡು. ಜನಸಂಖ್ಯೆ, ಶಿಲಾಂಗ ತಪ್ಪಲಿನ ಸುತ್ತುಮುತ್ತವೇ ಹೆಚ್ಚಾಗಿದೆ. ಹೊರ ಪ್ರಾಂತಗಳವರು ಇಲ್ಲಿಯ ಚಹದ ತೋಟಗಳಲ್ಲಿ ಕೆಲಸ ಮಾಡುವುದಕ್ಕೆ ಬರುತ್ತಾರೆ. ಇದು ಭಾರತದ ಪೂರ್ವ ಗಡಿಯಲ್ಲಿ ಇದೆ.

**ಒರಿಸ್ಸಾ:** ಇದರ ವಿಸ್ತೀರ್ಣ ೫೦,೩೪೯ ಚದರಮೈಲು. ಜನಸಂಖ್ಯೆ:೧,೦೭,೪೩,೨೬೫. ಇಲ್ಲಿಯ ಮುಖ್ಯ ಉತ್ಪತ್ತಿ ಭತ್ತ. ಮಲೆನಾಡುಗಳ ಉತ್ಪತ್ತಿಯೂ ಧಾರಾಳ ಇದೆ ಪ್ರದೇಶ ಬಹಳ ಏರುತಗ್ಗುಗಳಿಂದ ಕೂಡಿದೆ. ಕಟಕ ಇಲ್ಲಿಯ ರಾಜಧಾನಿ.

**ಬಿಹಾರ:** ಇದರ ವಿಸ್ತೀರ್ಣ:೬೯,೭೪೪ ಚದರಮೈಲು. ಜನಸಂಖ್ಯೆ: ೩,೬೩,೪೦,೧೫೧. ಇಲ್ಲಿ ಕಲ್ಲಿದ್ದಲಿನ ಗಣಿಗಳಿವೆ; ಸಕ್ಕರೆಯ ಕಾರ್ಖಾನೆಗಳಿವೆ. ಇಲ್ಲಿಯ ಮುಖ್ಯ ಬೆಳೆಗಳು: ಭತ್ತ, ಗೋದಿ, ಸಕ್ಕರೆ ಮತ್ತು ಬಾರ್ಲಿ. ಇದೂ ಒಂದು ಮಹತ್ವದ ಸಂಸ್ಥಾನ.

**ಮಧ್ಯಪ್ರದೇಶ:** ಇದರ ವಿಸ್ತೀರ್ಣ: ೯೮,೫೭೫ ಚದರಮೈಲು. ಜನಸಂಖ್ಯೆ: ೧,೬೮,೧೩,೫೮೪. ಇದು ಕೊಳ್ಳಗಳನ್ನು, ಗುಡ್ಡಗಳನ್ನು ಕೂಡಿಕೊಂಡಿರುವುದರಿಂದ ಪ್ರದೇಶವು ಏರುತಗ್ಗುಗಳಿಂದ ಕೂಡಿದೆ. ಹೆಸರೇ ಸೂಚಿಸುವಂತೆ ಇದು ಭಾರತದ ಮಧ್ಯಪ್ರದೇಶದಲ್ಲಿದೆ. ಇಲ್ಲಿಯ ಮುಖ್ಯ ಉತ್ಪತ್ತಿ: ಜೋಳ, ಹತ್ತಿ, ಭತ್ತ ಮತ್ತು ಗೋದಿ, ಮೈಕಾದ ಗಣಿಗಳೂ ಇಲ್ಲಿವೆ. ಹಲವು ಕಡೆಗಳಲ್ಲಿ ನೀರಾವರಿ ಯೋಜನೆಗಳಿವೆ.

**ಯುಕ್ತಪ್ರಾಂತ (ಯು. ಪಿ.)** ಇದರ ವಿಸ್ತೀರ್ಣ. ೧,೪೮,೪೩೯ ಚದರಮೈಲು. ಜನಸಂಖ್ಯೆ: ೬,೦೧,೨೧,೧೦೭. ಇದು ಕೃಷಿಪ್ರಧಾನ ಪ್ರದೇಶ, ಗೋದಿ, ಭತ್ತ, ಜೋಳ ಮತ್ತು ಕಬ್ಬು ಇವೇ ಇಲ್ಲಿಯ ಮುಖ್ಯ ಉತ್ಪತ್ತಿ. ಇಲ್ಲಿ ಐದು ಪ್ರಾಮುಖ್ಯ ನೀರಾವರಿ ಯೋಜನೆಗಳಿವೆ ಹಿಮಾಲಯ ಪರ್ವತಗಳ ಪ್ರದೇಶವೂ ಇದರಲ್ಲಿ ಸಮಾವೇಶಗೊಂಡಿರುವುದರಿಂದ ಮರಮುಟ್ಟುಗಳೂ ಧಾರಾಳವಾಗಿವೆ. ಈ ಪ್ರದೇಶವನ್ನು ಬಿಟ್ಟು ಇನ್ನುಳಿದ ಪ್ರದೇಶ ಸಮತಟ್ಟಾಗಿದೆ. ಇಲ್ಲಿ ಸಕ್ಕರೆಯ ಕಾರ್ಖಾನೆ, ಉಣ್ಣೆ ಬಟ್ಟೆಗಳನ್ನು ತಯಾರಿಸುವ ಗಿರಣಿಗಳೂ ಇವೆ. ಇದು ಪ್ರಾಮುಖ್ಯ ಸಂಸ್ಥಾನಗಳಲ್ಲಿ ಒಂದಾಗಿದೆ.

**ಪಂಜಾಬ:** ಇದರ ವಿಸ್ತೀರ್ಣ ೩೭,೦೫೮ ಚದರಮೈಲು. ಜನಸಂಖ್ಯೆ: ೧,೨೬,೧೭,೧೭೫. ಇಲ್ಲಿಯ ಮುಖ್ಯ ಬೆಳೆಗಳು ಗೋದಿ ಮತ್ತು ಹತ್ತಿಯಾದರೂ ಭತ್ತ ಕೂಡಾ ಕೆಲವು ಕಡೆಗಳಲ್ಲಿ ಬೆಳೆಯುತ್ತದೆ. ಇಲ್ಲಿ ಹತ್ತಿಯನ್ನು ಗಂಟುಕಟ್ಟುವ ಗಿರಣಿಗಳು ಅನೇಕವಿವೆ. ನದಿಗಳು ಹಲವು ಇದ್ದರೂ ಕಾಲುವೆ ಅಣೆಕಟ್ಟುಗಳಿಂದ ಬಹಳ ಪ್ರದೇಶ ಸಾಗುವಳಿಯಾಗುತ್ತದೆ. ಇದು ಭಾರತ-ಪಾಕಿಸ್ತಾನಗಳ ವಾಯುವ್ಯ ಸರಹದ್ದಿನಲ್ಲಿರುವುದರಿಂದ ಇದಕ್ಕೆ ಬಹಳ ಮಹತ್ವವಿದೆ.

**ಕಾಶ್ಮೀರ ಮತ್ತು ಜಮ್ಮು:** ಇದರ ವಿಸ್ತೀರ್ಣ: ೮೫,೮೮೫ ಚದರಮೈಲು. ಜನಸಂಖ್ಯೆ: ೪೦,೨೧,೬೧೬. ಭಾರತದ ರಾಜಪ್ರಮುಖರ ರಾಷ್ಟ್ರಗಳ ಪೈಕಿ ಅತಿ ದೊಡ್ಡದು. ಇದು ಸುಂದರ ದೇಶ. ಗೋಧಿಯು ಮುಖ್ಯ ಬೆಳೆಯಾಗಿದೆ. ಇಲ್ಲಿ ರತ್ನ ಗಂಬಳಿ ಮತ್ತು ಉಣ್ಣೆ ಬಟ್ಟೆಗಳನ್ನು ತಯಾರಿಸುವ ಜಗತ್ತಿನಲ್ಲೇ ಹೆಸರುವಾಸಿಯಾದ ಕೈಗಾರಿಕಾ ಕೇಂದ್ರಗಳಿವೆ. ಹಣ್ಣುಹಂಪಲುಗಳೂ ಇಲ್ಲಿ ಧಾರಾಳವಾಗಿ ಇದ್ದು ದೇಶ ಪರದೇಶಗಳಿಗೆ ರಫ್ತು ಮಾಡಲ್ಪಡುತ್ತದೆ. ಇಲ್ಲಿಯ ಸೃಷ್ಟಿಸೌಂದರ್ಯವನ್ನು ನೋಡಲು ಜಗತ್ತಿನ ಮೂಲೆಮೂಲೆಗಳಿಂದ ಜನರು ಬರುತ್ತಾರೆ. ಇದರಿಂದ ಈ ಸಂಸ್ಥಾನಕ್ಕೆ ವರಮಾನ ಬರುತ್ತದೆ. ಇದೇ ವೃತ್ತಿಯಲ್ಲಿ ಇಲ್ಲಿಯ ಹಲವು ಜನರ ಜೀವನ ನಡೆಯುತ್ತದೆ.

**ಹೈದರಾಬಾದು:** ಇದರ ವಿಸ್ತೀರ್ಣ ೮೨,೩೧೩ ಚದರಮೈಲು. ಜನಸಂಖ್ಯೆ:೧,೬೩,೩೮,೫೩೪. ಜೋಳ, ಹತ್ತಿ ಮತ್ತು ಭತ್ತ ಇಲ್ಲಿಯ ಮುಖ್ಯ ಉತ್ಪತ್ತಿ.

**ಮೈಸೂರು:** ಇದರ ವಿಸ್ತೀರ್ಣ ೨೯,೪೫೮ ಚದರ ಮೈಲು. ಜನಸಂಖ್ಯೆ ೭೩,೨೯,೧೪೦. ಜೋಳ, ಕಾಫೀ, ಸೆಜ್ಜೆ ಇಲ್ಲಿಯ ಮುಖ್ಯ ಉತ್ಪತ್ತಿ. ಇಲ್ಲಿ ಬಂಗಾರದ ಗಣಿಗಳೂ, ಜಲಪಾತಗಳೂ ಇವೆ. ಇದನ್ನು ಪಶ್ಚಿಮ ಭಾರತದ ಉದ್ಯಾನವೆಂದೂ ಕರೆಯುತ್ತಾರೆ.

**ದಿಲ್ಲಿ:** ಇದರ ವಿಸ್ತೀರ್ಣ ೫೭೪ ಚದರ ಮೈಲು. ಜನಸಂಖ್ಯೆ: ೯,೧೭,೯೩೯. ಇದು ಭಾರತದ ರಾಜಧಾನಿ.

**ರಾಜಸ್ಥಾನ:** ಇದರ ವಿಸ್ತೀರ್ಣ: ೧,೩೨,೫೮೪ ಚದರ ಮೈಲು. ಜನಸಂಖ್ಯೆ: ೧,೩೬,೭೫,೪೭೫.

**ಮಧ್ಯಭಾರತ:** ಇದರ ವಿಸ್ತೀರ್ಣ ೫೧,೦೭೨ ಚದರಮೈಲು. ಜನಸಂಖ್ಯೆ:೪೦,೪೦,೦೬,೧೫೯.

**ವಿಂಧ್ಯಪ್ರದೇಶ:** ವಿಸ್ತೀರ್ಣ: ೨೬,೦೦೪ ಚದರಮೈಲು. ಜನಸಂಖ್ಯೆ: ೪೦,೦೬,೧೫೯.

**ತಿರುವಾಂಕೂರು-ಕೊಚ್ಚಿ:** ವಿಸ್ತೀರ್ಣ: ೧೦,೫೫೭ ಚದರ ಮೈಲು. ಜನಸಂಖ್ಯೆ. ೭೯,೯೧,೬೪೭.

**ಸೌರಾಷ್ಟ್ರ**-ವಿಸ್ತೀರ್ಣ: ೩೭,೮೯೪ ಚದರಮೈಲು, ಜನಸಂಖ್ಯೆ ೪೯,೦೪,೧೫೬.

**ಪಟಿಯಾಲ ಮತ್ತು ಪೂರ್ವ ಪಂಜಾಬ ಸಂಸ್ಥಾನೀ ಒಕ್ಕೂಟ:** ವಿಸ್ತೀರ್ಣ ೩೨,೦೩೭. ಜನಸಂಖ್ಯೆ: ೫೨,೫೩,೯೮೯.

ಇನ್ನುಳಿದ ೭,೧೬೧ ಚದರ ಮೈಲು ಮತ್ತು ೭,೯೧,೪೫೪ ಜನಸಂಖ್ಯೆ ಕೇಂದ್ರ ಸರಕಾರದ ಆಡಳಿತೆಯಡಿ ಬರುತ್ತವೆ.

ಹೀಗೆ ಭಾರತದ ಚರಿತ್ರೆಯಲ್ಲಿ ಮೊತ್ತ ಮೊದಲಿಗೆ ಒಂದು ಸ್ವತಂತ್ರ ಕೇಂದ್ರೀಕೃತ ಮತ್ತು ಭದ್ರ ಭಾರತವು ಇಂದು ತಲೆ ಎತ್ತಿದೆ.

ಇಂಥ ಭಾರತವನ್ನು ಉಳಿಸಿ, ಬೆಳಸಿ, ಬೆಳಗಿಸಿ ಪ್ರಗತಿಪರ ಮಾರ್ಗದಲ್ಲಿ ನಡಿಸಿ ಜಗತ್ತಿನ ಶ್ರೇಷ್ಠ ರಾಷ್ಟ್ರಗಳಲ್ಲಿ ಒಂದಾಗಿ ಮೆರೆಯಿಸುವ ಹೊಣೆಯು ನಮ್ಮೆಲ್ಲರನ್ನು ಸೇರಿಕೊಂಡಿದೆ. (ಸಂಡ)

**The Catholic Bank Ltd, Shirva.**

ಉಡುಪಿ ತಾಲೂಕು ಪಿಲಾರ ಪೋಸ್ಟು ಕುತ್ಯಾರು ಗ್ರಾಮದಲ್ಲಿರುವ ಬೊಮ್ಮು ಸೆಟ್ಟಿಯ ಅಳಿಯ ಶ್ರೀ ಶುಕ್ರಸೆಟ್ಟಿಯು ಮೇಲ್ಕಾಣಿಸಿದ ಬ್ಯಾಂಕಿನಿಂದ ತಾರೀಕು 13 ಆಗೋಸ್ಟ್, 47ನೇ ಇಸವಿಯಲ್ಲಿ ರೂಪಾಯಿ ನಾಲ್ಕುನೂರಕ್ಕೆ J. L. No 23/209 (Rs. 400) ಈಡಿಟ್ಟ ನಗಗಳನ್ನು ಸಮಯಕ್ಕೆ ಸರಿಯಾಗಿ ಬಿಡಿಸದೇ ಇರುವುದರಿಂದಲೂ ಸದರೀಯಾ ರಿಜಿಸ್ಟ್ರಿ ನೋಟೀಸು ಕೊಟ್ಟಲ್ಲಿ ಸಹಾ ಬಿಡಿಸದೇ ಇರುವುದರಿಂದಲೂ ಸದರೀ ಆಸಾಮಿಗೆ ಈ ಮೂಲಕ ತಿಳಿಸುವುದೇನೆಂದ್ರೆ ಸದರೀಯವನು ಸದರೀ ಬ್ಯಾಂಕಿನಲ್ಲಿ ಇಡಿಟ್ಟಿರುವ ನಗಗಳನ್ನು ತಾರೀಕು 8-2-1954 ರೊಳಗೆ ಬಿಡಿಸದೇ ಇದ್ದಲ್ಲಿ ಸದರೀಯವನು ಈಡಿಟ್ಟಿರುವ ನಗಗಳನ್ನು ಶನಿವಾರ ತಾ. 11-2-1950 ಗಂಟೆ 1ಕ್ಕೆ ಬ್ಯಾಂಕಿನ ಪರಾರದಲ್ಲಿ ಬಹಿರಂಗವಾಗಿ ಏಲಂ ಮಾಡುವುದು ಎಂಬುದು ನೆನಪಿರಲಿ.

ತಾ. 28-1-1950
Shirva

**C. D. Souza,**
Agent.

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ಸಿ. ಶಾಸ್ತ್ರೀ,
ಇವರ
**ನವಜೀವಾತು**
ಎಂಬ
**ಸೂತಿಕಾ ರಸಾಯನ**

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಸುಲಭವಾಗಿರುವುದು.



ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಥಾಕಿಸ್ಟರು:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

# ಮಹಾತ್ಮರ ಕೊಲೆಯಾಗುತ್ತಿದೆ!

ಲೇಖಕ:—ಶ್ರೀ. ಪಿ. ವರ್ಮ ಲಕ್ಷ್ಮೀನಾರಾಯಣ ಆಳ್ವ

ಭಾರತವು ಮಹಾ ಪುರುಷರ ನೆಲೆವೀಡು. "ಸ್ವರ್ಗದ ದೇವತೆಗಳೇ ಭಾರತದಲ್ಲಿ ಹುಟ್ಟಿಬರಲು ಕಾತರಿಸುತ್ತಿದ್ದಾರೆ" ಎಂದು ಕವಿಗಳು ಇಲ್ಲಿ ಹುಟ್ಟಿಬಂದ ಮಹಾ ಜೀವಿಗಳ ಕಿಂತಿಣಿಯನ್ನು ಕಂಡೇ ಹೇಳಿರಬೇಕು. ಸಮಾಜದ ಕಟ್ಟುಕಟ್ಟಳೆಗಳನ್ನೆಲ್ಲ ವ್ಯಕ್ತಿಗಳು ತಮ್ಮ ಸ್ವಾರ್ಥಕ್ಕಾಗಿ ಮುರಿದು ಮುಕ್ಕಿ, ಸಮಾಜ ಮತ್ತು ದೇಶ ಒಂದು ವಿಷಮ ಪರಿಸ್ಥಿತಿಯಲ್ಲಿ ಸಿಕ್ಕಿಕೊಳ್ಳುವಾಗ ಮಹಾ ಜೀವಿಗಳೇ ಹುಟ್ಟಿಬಂದು ಅಂತಹ ಅವ್ಯವಸ್ಥಿತ ಪರಿಸ್ಥಿತಿಯನ್ನು ಎದುರಿಸಿ ಶಾಂತಿಯನ್ನು ಸ್ಥಾಪಿಸಬೇಕಾಗುತ್ತದೆ. ಕರ್ತವ್ಯಚ್ಯುತರಾದ ಜನರಿಗೆ ತಮ್ಮ ಕರ್ತವ್ಯದ ಅರಿವು ಮಾಡಿಕೊಟ್ಟು ಅವರನ್ನು ಉನ್ನತ ಧ್ಯೇಯದೆಡೆಗೆ ನಡೆಯಿಸಬೇಕಾಗಿದೆ. ಭಾರತದಲ್ಲಿ ಹೀಗೆ ಜನರಿಗೆ ದಾರಿ ತೋರಬಲ್ಲ ವ್ಯಕ್ತಿಗಳು ಸಾವಿರಾರು ಹುಟ್ಟಿಬಂದಿದ್ದಾರೆ. ಅವರು ತಮ್ಮ ಜೀವನ ಸರ್ವಸ್ವವನ್ನೂ ಜನಸೇವೆಗಾಗಿ ತೇದಿದ್ದಾರೆ. ಆದ್ದರಿಂದಲೇ ಜಗತ್ತನ್ನೇ ಬೆಳಗಬಲ್ಲ ಬೆಳಕು ಇಲ್ಲಿ ಬೆಳಗಿದೆ. ಜಗತ್ತಿನ ಮೂಲೆ ಮೂಲೆಗಳು ಈ ಅಕ್ಷಯ ಜ್ಯೋತಿಗಳಿಂದ ತಮ್ಮ ಹಣತೆಗಳನ್ನು ಹೊತ್ತಿಸಿಕೊಂಡಿವೆ! ದೈವೀ ಸಂಸ್ಕೃತಿಯ ಅವಿಚ್ಛಿನ್ನ ತೊರೆಯೊಂದು ಭಾರತದಲ್ಲಿ ಅವಿರತವಾಗಿ ಹರಿಯುತ್ತಿದೆ. ಜಗತ್ತಿನ ಎಲ್ಲಾ ರಾಷ್ಟ್ರಗಳು ಈ ತೊರೆಯಿಂದ ಅಮೃತವನ್ನು ಕೊಡಗಳಲ್ಲಿ ಹೊತ್ತುಕೊಂಡು ಸಾಗಿಸಿ ಕುಡಿದು ತಮ್ಮ ದಾಹವನ್ನು ಕಳೆದಿವೆ! ಆದರೆ ನಾವೇನು ಮಾಡುತ್ತಿದ್ದೇವೆ? ಇತ್ತ ದೃಷ್ಟಿ ಹಾಯಿಸಿದರೆ ನಾಚಿಕೆಯಿಂದ ತಲೆತಗ್ಗಿಸಬೇಕಾದೀತು ನಾವು. ಜಗತ್ತೆಲ್ಲವೂ ನಮ್ಮ ಕಡೆಗೆ ನೋಡುತ್ತಿದ್ದರೆ, ನಾವು ಜಗತ್ತಿನ ಕಡೆಗೆ ನೋಡುತ್ತಿದ್ದೇವೆ. ಬಾಯಾರಿದ ಪಥಿಕ ಕಾಲಬಳಿಯ ತುಂಬಿದ ಸರಸ್ಸನ್ನು ಬಿಟ್ಟು ಮೃಗಜಲದ ಬೆನ್ನು ಹತ್ತಿದಂತಾಗಿದೆ ನಮ್ಮ ಪರಿಸ್ಥಿತಿ. ನಮ್ಮ ಕೆಲಸ ಇಲ್ಲೇ ಕೊನೆಗಾಣುವುದಿಲ್ಲ. ಇದಕ್ಕಿಂತಲೂ ದುಃಖಾಸ್ಪದವಾದ ಘಾತುಕ ಕೆಲಸವನ್ನು ನಾವು ಮಾಡುತ್ತಾ ಬಂದಿದ್ದೇವೆ; ಇಂದೂ ಅದೇ ಕೆಲಸದಲ್ಲಿ ತನ್ಮಯರಾಗಿದ್ದೇವೆ. ಬೆಳಗುತ್ತಿರುವ ಬೆಳಕಿನಲ್ಲಿ ನಮ್ಮ ಸ್ವಾರ್ಥಪೂರಿತ ಕಾರ್ಯಗಳನ್ನು ಎಸಗಲಾಗದುದಕ್ಕಾಗಿ ನಾವು ಆ ಬೆಳಕನ್ನೇ ನಂದಿಸಲು ಪ್ರಯತ್ನಿಸಿದ್ದೇವೆ; ಪ್ರಯತ್ನಿಸುತ್ತಿದ್ದೇವೆ. ಕಳ್ಳನಿಗೆ ತನ್ನ ಕೆಲಸವೆಸಗಲು ತಿಂಗಳ ಬೆಳಕು ಆತಂಕಕಾರಿಯಾಗಿರುವಂತೆ ನಮ್ಮ "ಕತ್ತಲ ಕೆಲಸ"ಗಳಿಗೆ ಈ ಸಚ್ಚರಿತ್ರರೂಪೀ ಬೆಳಕು ವಿಘ್ನಕಾರಿಯಾಗಿದೆ. ತನ್ನ ಕ್ಷುಲ್ಲಕ ಸ್ವಾರ್ಥಕ್ಕಾಗಿ ಇಡೀ ವಿಶ್ವವನ್ನೇ ನರಮೇಧದ ಅಗ್ನಿಕುಂಡಕ್ಕೆಳೆದ ಹಿಟ್ಲರನಿಗಿಂತ ನಾವೇನೂ ಕಡಿಮೆಯವರಾಗಿಲ್ಲ!

ಭಾರತದಲ್ಲಿ ಹುಟ್ಟಿ ಬಾಳಿದ ಮಹಾ ವ್ಯಕ್ತಿಗಳು ಒಂದೇ ಅಚ್ಚಿನಲ್ಲಿ ಎರಕ ಹೊಯ್ದ ಬೊಂಬೆಗಳಲ್ಲ. ನೂರಾರು ಕ್ಷೇತ್ರದಲ್ಲಿ ವ್ಯವಹರಿಸಿ ನೂರಾರು ಹಾದಿಯನ್ನು ತುಳಿದೂ ಆದರ್ಶವನ್ನು ಎತ್ತಿ ಹಿಡಿದವರು. ಮಾರ್ಗದರ್ಶಕರಾದವರು ಇಲ್ಲಿ ಬಾಳಿದ್ದಾರೆ. ದೈವದ ಸಾಕ್ಷಾತ್ಕಾರಕ್ಕಾಗಿ ಐಹಿಕ ಭೋಗ ಭಾಗ್ಯಗಳನ್ನೆಲ್ಲ ಕಾಲಲ್ಲಿ ಒದ್ದವರಿದ್ದಾರೆ. ರಾಜ್ಯೈಶ್ವರ್ಯಗಳ ನಡುವೆ ಇದ್ದೂ ಋಷಿಯಾಗಿ ಬಾಳಿದ ತ್ಯಾಗಿಗಳಿದ್ದಾರೆ, ಸತ್ಯವ್ರತ ಪರಿಪಾಲನೆಗಾಗಿ ರಾಜ್ಯ ಸರ್ವಸ್ವವನ್ನೂ ದಾನ ಮಾಡಿದ ಸತ್ಯಶೋಧಕರಿದ್ದಾರೆ, ಪಿತೃವಚನವನ್ನು ಸಲಿಸುವುದಕ್ಕಾಗಿ ರಾಜ್ಯ ಸಿಂಹಾಸನವನ್ನೇ ತೊರೆದ ಪಿತೃಭಕ್ತರಿದ್ದಾರೆ, ಮಾಂಸವನ್ನು ಮಾರಿಕೊಂಡು ಜೀವಿಸಿಯೂ ಧರ್ಮದ ಮರ್ಮವನ್ನು ಅರಿತವರಿದ್ದಾರೆ. ಕ್ಷೌರ ಮಾಡುತ್ತಾ ಆತ್ಮಸಾಕ್ಷಾತ್ಕಾರವನ್ನು ಮಾಡಿಕೊಂಡವರಿದ್ದಾರೆ. ಗೃಹಕೃತ್ಯದಲ್ಲಿದ್ದೇ ಬ್ರಹ್ಮಜ್ಞಾನವನ್ನು ಪಡೆದ ಮಹಿಳೆಯರಿದ್ದಾರೆ. ಹೀಗೆ ಭಾರತದಲ್ಲಿ ಹುಟ್ಟಿದ ಮಹಾ ಜೀವಿಗಳ ಮತ್ತು ಅವರು ಬಾಳಿದ ಕ್ಷೇತ್ರಗಳ ಯಾದಿಯನ್ನು ತಯಾರಿಸುತ್ತಾ ಹೋದರೆ ಅದಕ್ಕೆ ಅಂತ್ಯವಿಲ್ಲದೆ ಹೋದೀತು. ಆದರೆ ಈ ಸಂಖ್ಯೆ ಮುಖ್ಯವಲ್ಲ. ಈ ಮಹಾ ಜೀವಿಗಳು ಬೆಳಗಿದ ಬೆಳಕಿನಲ್ಲಿ ನಮ್ಮ ಬಾಳಿನ ಹಾದಿಯನ್ನು ಹುಡುಕಿಕೊಳ್ಳುವುದು ಮುಖ್ಯ. ಆದರೆ ನಾವು ಮಾತ್ರ ಈ ಮಹಾ ಜೀವಿಗಳ ಸುತ್ತಲೂ ಪವಾಡಗಳ ಕಂತೆಯನ್ನೇ ರಾಶಿ ಹಾಕಿ ಅವರ ನಿಜವಾದ ಜೀವನವು ಜನರ ಮುಂದಿನಿಂದ ಕಣ್ಮರೆಯಾಗುವಂತೆ ಮಾಡಿದ್ದೇವೆ. ಹೀಗೆ ತಮ್ಮ ನೈಜ ವ್ಯಕ್ತಿತ್ವವನ್ನು ಕಳಕೊಂಡ ಮಹಾ ಜೀವಿಗಳು ಪವಾಡಗಳ ನಡುವಣ ಬೊಂಬೆಗಳಂತೆ ಕಾಣುತ್ತಿದ್ದಾರೆ. ಅವರಲ್ಲಿದ್ದ ತ್ಯಾಗ ಪ್ರೇಮಗಳಂತಹ ಮಾನವ ಸಹಜ ಗುಣಗಳು ದೈವೀ ಪವಾಡಗಳ ನಡುವೆ ಸಿಲುಕಿ ಕಾಣದಾದುವು. ಈ ರೀತಿ ನಾವು ಆ ಮಹಾಜೀವಿಗಳು ಮಾಡಿದ ಮಾನವಸಾಧ್ಯ ಕೆಲಸಗಳನ್ನು ಅದ್ಭುತ ಕೆಲಸಗಳಾಗಿ ಪರಿವರ್ತಿಸಿ ಅವರ ಭೌತಿಕ ದೇಹದೊಡನೆ ಜೀವನ ಸಂದೇಶವನ್ನೂ ಮಣ್ಣುಗೂಡಿಸಿದೆವು. ಅಷ್ಟುಮಾತ್ರವಲ್ಲದೆ ಹಲವಾರು ಸಂಘ ಸಂಸ್ಥೆಗಳಿಗೆ ಆ ಮಹಾ ಪುರುಷರ ಹೆಸರನ್ನು ಇಟ್ಟು ಅದರೊಳಗಿಂದ ನಮ್ಮ ಸ್ವಾರ್ಥವನ್ನು ಸಾಧಿಸತೊಡಗಿದೆವು. ವಾಕ್ಚಿತ್ರಕಾರರಂತೂ ದೇವರ ಹೆಸರಲ್ಲಿ ಬಹಳಷ್ಟು ಹಣಗಳಿಸಿದರು. ತಮಿಳು ಚಿತ್ರಗಳನ್ನು ಕಂಡವರಿಗೆ ವಾಕ್ಚಿತ್ರಗಳಲ್ಲಿ ದೇವರನ್ನು ಯಾವ ಮಟ್ಟಕ್ಕೆ ಇಳಿಸಿದ್ದಾರೆ ಎಂಬುದು ತಿಳಿದಿರಬಹುದು.

ಪೌರಾಣಿಕ ವ್ಯಕ್ತಿಗಳ ಗತಿ ಹೀಗಾದರೆ ಚಾರಿತ್ರಿಕ ಮಹಾಜೀವಿಗಳದು ಹೊಸಪರಿಯಾಯಿತು. ಪವಾಡಗಳಿಂದಲೇನೋ ಆ ವ್ಯಕ್ತಿಗಳನ್ನು ಮರೆಮಾಡಲು ಚರಿತ್ರೆಯ ಬೆಳಕಿನೆದುರು ಸಾಧ್ಯವಾಗಲಿಲ್ಲ. ಆದರೆ ಪಕ್ಷಪಂಗಡಗಳ ಸಂಕುಚಿತ ಕ್ಷೇತ್ರಕ್ಕೆಳೆದು ಅವರಿಗೆ ಚಿತ್ರಹಿಂಸೆ ಕೊಡಲಾಯಿತು! ಅವರ ಪವಿತ್ರ ತತ್ವಗಳು ಪಕ್ಷಪಂಗಡಗಳ ಸಂಕುಚಿತ ಸ್ವಾರ್ಥಕ್ಕೆ ಬಲಿಯಾದುವು. ಹೀಗೆ ಎಲ್ಲರನ್ನೂ ತಿಂದು ತೇಗಿದ ನಾವು ಈಗ ಭಾರತೀಯ ಜಗತ್ತಿಗೆ ನೀಡಿದ ಅನರ್ಘ್ಯ ಕಾಣಿಕೆ—ಮಹಾತ್ಮಾ ಗಾಂಧಿಯವರ ಮೇಲೆ ನಮ್ಮ ಕರಾಳ ಕೈಯನ್ನು ನೀಡಿದ್ದೇವೆ. ಅವರ ತಾತ್ವಿಕ ದೇಹವನ್ನು ಬಲಿತೆಕ್ಕೊಂಡರೆ ಮತ್ತೆ ನಮ್ಮ ದುರಾಚಾರೀ ಕೃತ್ಯಗಳನ್ನು ತಡೆಯುವ ದೈವೀಕ ಶಕ್ತಿ ಬೇರಿಲ್ಲ. ನಮ್ಮ ಅಲ್ಪ ದಾಹಕ್ಕಾಗಿ ಸಾವಿರಾರು ಮಂದಿಯ ದಾಹ ಕಳೆಯುವ ಸರಸ್ಸನ್ನೇ ಬರಿದುಮಾಡುವ ಸಾಹಸ ಕಾರ್ಯಕ್ಕೆ ನಾವಿಂದು ಕೈಯಿಕ್ಕಿದ್ದೇವೆ!

ಮಹಾತ್ಮರ ವಿಶ್ವವ್ಯಾಪೀ ತತ್ವಗಳನ್ನು ಇಂದು ಹಲವಾರು ಮಂದಿ ತಮ್ಮ ಸ್ವಾರ್ಥಕ್ಕಾಗಿ ಉಪಯೋಗಿಸಿಕೊಂಡು ಅದರ ಕೊಲೆ ಮಾಡುತ್ತಿರುವುದನ್ನು ನಿತ್ಯವೂ ನಾವು ನೋಡುತ್ತಿದ್ದೇವೆ. "ಮಹಾತ್ಮರು ಮರಣಹೊಂದಿದರೇ! ನೀವು ನಮ್ಮೂರಿಗೆ ಬಂದಾಗ ನಮ್ಮ ಹೋಟೇಲಿನಲ್ಲಿಯೇ ಇಳಿದುಕೊಳ್ಳಿ!" "ಮಹಾತ್ಮರು ಅಮರರಾದರು. ನಾಡಿನೊಡನೆ ನಾವೂ ಕಣ್ಣೀರು ಸುರಿಸುತ್ತೇವೆ! ನೀವು ನಮ್ಮ ಗಾಂಧೀ ಮಾರ್ಕಿನ ಸಾಮಾನುಗಳನ್ನೇ ಕೊಂಡುಕೊಳ್ಳಿರಿ! ನಕಲಿ ಮಾಲಿಗೆ ಮೋಸಹೋಗದಿರಿ!!" "ಮಹಾತ್ಮರು ಕಳೆದು ಹೋದರು. ನಾವೆಲ್ಲ ಸಾಯುವವರೇ! ಆದ್ದರಿಂದ ನೀವು ನಮ್ಮ ಕಂಪೆನಿಯಲ್ಲೇ ವಿಮೆ ಇಳಿಸಿ ನಿಮ್ಮ ಭವಿಷ್ಯತ್ತನ್ನು ಭದ್ರಪಡಿಸಿಕೊಳ್ಳಿರಿ!" ಇಂತಹ ನೂರಾರು ಜಾಹೀರಾತುಗಳನ್ನು ನಾವು ದಿನವೂ ಪತ್ರಿಕೆಗಳಲ್ಲಿ ಕಾಣುತ್ತಿದ್ದೇವೆ! ಇನ್ನು ಗಾಂಧೀಜಿಯವರ ಭಾವಚಿತ್ರವೊಂದನ್ನು ಅಚ್ಚು ಹಾಕಿಸಿದ ಗಾಂಧೀ ಪತ್ರಿಕೆಗಳು, ನಾಲ್ಕು ಚದರ ಅಡಿ ಚಚ್ಚೌಕವಿರುವ ಗಾಂಧೀ ಮೈದಾನುಗಳು, ಮನುಷ್ಯ ಮಾತ್ರರು ಸಂಚರಿಸುವಾಗ ಮೂಗಿಗೆ ಕರವಸ್ತ್ರ ಹಿಡಕೊಂಡೇ ಸಂಚರಿಸಬೇಕಾದ ಗಾಂಧೀ ರಸ್ತೆಗಳು ಪ್ರತಿಯೊಂದು ಊರಿನಲ್ಲೂ ಇಲ್ಲದಿಲ್ಲ. ಇಲ್ಲದಿದ್ದರೆ ಬಹುದೊಡ್ಡ ಕುಂದು ಆ ಊರಿಗೆ! ಪೇಟೆಯಲ್ಲಿ ದೊರಕುವ ಸಿಗರೇಟು, ಬೀಡಿ, ಹೇರ್‌ಓಯಿಲ್, ಸ್ನೋ ಮೊದಲಾದ ವಿಲಾಸೀ ವಸ್ತುಗಳಂತೂ ತಮ್ಮ ಮುಂದೆ ಗಾಂಧೀನಾಮವನ್ನು ಧರಿಸಿಕೊಂಡು ಜನರನ್ನು ಮರುಳುಗೊಳಿಸ ಹೊರಟಿವೆ. ಈಗೀಗ ವಾಕ್ಚಿತ್ರಗಳೂ ಮಹಾತ್ಮರ ಹೆಸರಿನ ಲಾಭವನ್ನು ಪಡೆಯಹತ್ತಿವೆ. ದೇವರನ್ನು ಹಾದಿ, ಬಟ್ಟಲು ಕೊಟ್ಟಿಗೆ, ಚರಂಡಿಗಳಲ್ಲಿ ನಿಲ್ಲಿಸಿದ ದೇವ ಭಕ್ತರಾಗಹತ್ತಿರುತ್ತಾರೆ ಎಂಬುದು ಗಾಂಧೀಜೀಯವರ ತಾತ್ವಿಕ ದೇಹದ ಮೇಲೆ ಬಂದ ಬಹುದೊಡ್ಡ ಗಂಡಾಂತರವೇ ಸರಿ! ಇನ್ನು ಮುಂದಾಳುಗಳೆನ್ನಿಸಿ ಕೊಳ್ಳುವವರು ವೇದಿಕೆಗಳಲ್ಲಿ ಮಹಾತ್ಮರ ಹೆಸರನ್ನು ನೂರಾರು ಸಲ ಬಳಸಿ ತಮಗೊಂದು ಸ್ಥಾನವನ್ನು ಗಳಿಸಲು ಯತ್ನಿಸುತ್ತಿದ್ದಾರೆ. ಸ್ಥಾನಗಳಿಸಿದವರು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಗಾಂಧೀಜೀಯವರ ಅನುಯಾಯಿಗಳೆನ್ನಿಸಿಕೊಳ್ಳುವವರು ಮಹಾತ್ಮರ ತತ್ವಗಳನಿತು ಉನ್ನತ ಮಟ್ಟಕ್ಕೆ ಹತ್ತಲು ಸಾಧ್ಯವಾದಾಗ ಆ ತತ್ವಗಳನ್ನೇ ತಮ್ಮ ಮಟ್ಟಕ್ಕೆ ಹತ್ತಲು ಸಾಧ್ಯವಾದಾಗ ಆ ತತ್ವಗಳನ್ನೇ ತಮ್ಮ ಮಟ್ಟಕ್ಕೆ ಎಳೆದುಕೊಳ್ಳಹತ್ತಿದ್ದಾರೆ.

ಈ ರೀತಿ ಮಹಾತ್ಮರ ಭೌತಿಕ ದೇಹವನ್ನು ಅಂದು ಒಬ್ಬ ಗೋಡ್ಸೆಯು ಬಲಿತೆಕ್ಕೊಂಡಿದ್ದರೆ ಇಂದು ಸಾವಿರಾರು ಗೋಡ್ಸೆಯರು ಮುತ್ತಿ ಬಿದ್ದು ಅವರ ತಾತ್ವಿಕ ದೇಹವನ್ನು ಹರಿದು ತಿನ್ನುತ್ತಿದ್ದಾರೆ. ಸಾವಿರಾರು ಮಹಾಜೀವಿಗಳು ನಮ್ಮಲ್ಲಿ ಹುಟ್ಟಿದ್ದರೂ ನಾವು, ನಮ್ಮ ಅವಿವೇಕತನದಿಂದ ಅವರನ್ನೆಲ್ಲ ಕಳೆದುಕೊಂಡಿದ್ದೇವೆ. ಆಗಲಿ, ಕಳೆದವರು ಹೋದರು; ಈಗ ಉಳಿದಿರುವ ಒಂದೇ ಒಂದಾದ ಅನರ್ಘ್ಯ ರತ್ನವನ್ನು, ಮಹಾತ್ಮರ ತಾತ್ವಿಕ ದೇಹವನ್ನು ನಾವು ರಕ್ಷಿಸಿಕೊಳ್ಳಬೇಕಾಗಿದೆ. ಈ ರತ್ನವನ್ನು ಕಾಯ್ದುಕೊಳ್ಳುವುದರಲ್ಲಿಯೇ ನಮ್ಮ ಭವಿಷ್ಯತ್ತು ನಿಂತಿದೆ. ಆದುದರಿಂದ ಈ ರತ್ನವನ್ನು ದುರುಪಯೋಗ ಪಡಿಸಲೆಳಸುತ್ತಿರುವ ಮಂದಿಯೊಡನೆ ನಾವು ಅಸಹಕಾರ ಹೂಡಬೇಕಾಗಿದೆ. ಮಹಾತ್ಮರ ಹೆಸರಿಂದ ಮಾರಲ್ಪಡುತ್ತಿರುವ ವಸ್ತುಗಳಿಗೆ ಬಹಿಷ್ಕಾರ ಹಾಕಬೇಕಾಗಿದೆ. ಇದಕ್ಕಾಗಿ ಜನಸಿದ್ಧವಾಗುತ್ತದೆ ಎಂದು ಭಾವಿಸೋಣ.





Approved firm by the Govt. of Mysore
Certificated by the Agent of the Govt. of Cylone & Indian.



BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

S.O.B.

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD.

Highly perfumed and medicated, worth using daily by one and all, keeps hair black and relieves head-ache etc.

TRADE MARK

Manufactured by:-
Swadeshi Oushadhi Bhandara (Regd.)
KUNJAL P. O. Brahmavar, S. K.



— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಸುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು, ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:—ಬಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟ ಧಾರವಾಡ ವಿಜಾಪುರ—
ಚನಬಸಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಂಡೇಶ್ವರ ಮೂರ್ತಿ ದಾವಣಗೇರಿ
ದಾವಣಗೇರಿ:—ದಾವಣಗೇರಿ ಪ್ರೆಸ್ಸ ಟಿ ಎಲ್ ಕಮಲಾಪುರ, ಕೆಮಿಸ್ಟ, ಹಾವೇರಿ, ಬ್ಯಾಡಗಿ



ಋತುಸ್ರಾವ ನಿಂತಿತು

'ಕುಮಾರಿ' ಪಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ— ಬೆಲೆ; ರೂ 3.; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ. 8- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

Mrs. P. DEVEE, F. DS. (N. J.)
Tollygunge CALCUTTA
ಸ್ಟಾಕಿಸ್ಟರು: ಶಣಾ ಕಂಪೆನಿ, ಮಂಗಳೂರು

## ಆನೆಕಾಲು ರೋಗ

[illegible]—

ಕ್ರಿಮಿಗಳನ್ನು ನಾಶಮಾಡಲು ಯತ್ನಿಸಬೇಕು.

ಆನೆಕಾಲು ರೋಗವೆಂದರೇನೆಂದು ಎಲ್ಲರಿಗೂ ಗೊತ್ತು. ಈ ರೋಗದಿಂದ ಮನುಷ್ಯನ ವಿವಿಧ ಅಂಗಗಳೂ ನರನಾಡಿಗಳೂ ಊದಿಕೊಳ್ಳುತ್ತವೆ ಆದರೆ ಕಾಲುಗಳಲ್ಲಿ ಈ ರೋಗದ ಚಿಹ್ನೆಯು ಹೆಚ್ಚಾಗಿ ಕಾಣುತ್ತದೆ ಈ ರೋಗಕ್ಕೆ ತುತ್ತಾದ ಮನುಷ್ಯನರೂಪವೇ ಬದಲಾಗುತ್ತದೆ. "ಆನೆಕಾಲು" ರೋಗ ಎಂಬ ಹೆಸರೇ ಸೂಚಿಸುವಂತೆ ರೋಗವು ಬಾಧಿಸಲ್ಪಟ್ಟ ಅಂಗವು ಆನೆಯಂತೆ ದೊಡ್ಡದಾಗಿ ಉಬ್ಬುವುದಾಗಿದೆ. ಅವನಿಂದ ಚುರುಕಾಗಿ ಯಾವ ಕೆಲಸವನ್ನೂ ನಿರ್ವಹಿಸಲು ಸಾಧ್ಯವಿಲ್ಲದಂತಾಗುತ್ತದೆ. ಅವನು ತನ್ನ ಹುಟ್ಟಿಗೆ ವ್ಯರ್ಥ ಜೀವಿಯಾಗುತ್ತಾನಲ್ಲದೆ ಇಡೀ ಸಮಾಜಕ್ಕೇನೇ ಒಂದು ಹೊರೆಯಾಗುತ್ತಾನೆ.

ಈ ರೋಗವು ಕೂದಲಿನಂತಿರುವ ಹುಳದಿಂದ ಉಂಟಾಗುತ್ತದೆ ಈ ಹುಳವು ಸುಮಾರು 2 ಅಂಗುಲ ಉದ್ದವಾಗಿದೆ. ಇವು ಹೆಚ್ಚಾಗಿ ರೋಗ ತಗಲಿದ ಮಾನವನ ದುಗ್ಧರಸ ನಾಳದಲ್ಲಿಯೂ ರಸಗ್ರಂಥಿಗಳಲ್ಲಿಯೂ ವಾಸಿಸುತ್ತವೆ. ಹೆಣ್ಣು ಹುಳಗಳು ಅಸಂಖ್ಯಾತ ಮೊಟ್ಟೆಗಳನ್ನಿಡುತ್ತವೆ. ಇವು ಆಗಿಂದಾಗ ಹೆಚ್ಚಾಗಿ ರಾತ್ರಿ ಸಮಯದಲ್ಲಿ ರಕ್ತದಲ್ಲಿ ಕಾಣಿಸಿಕೊಳ್ಳುತ್ತವೆ. ಇವು ಅತ್ಯಂತ ಸಣ್ಣ ಜೀವಾಣುಗಳಾಗಿರುವುದರಿಂದ ಸೂಕ್ಷ್ಮದರ್ಶಕ ಯಂತ್ರದ ಸಹಾಯದಿಂದ ಮಾತ್ರ ಕಾಣಬಹುದು. ಹೊಸ ರಕ್ತದಲ್ಲಿ ಅವನ್ನು ನೋಡಿದರೆ ಅವು ಹಾವಿನಂತೆ ಚುರುಕಾಗಿ ಚಡಪಡಿಸುತ್ತಿರುವುದು ಕಾಣುತ್ತದೆ.

ಈ ರೋಗವು ಒಬ್ಬವ್ಯಕ್ತಿಯಿಂದ ಇನ್ನೊಂದು ವ್ಯಕ್ತಿಗೆ ಕೆಲವು ನಮೂನೆಗಳ ಹೆಣ್ಣು ಸೊಳ್ಳೆಗಳ ಮೂಲಕ ಹಬ್ಬುತ್ತದೆ ಮನುಷ್ಯನ ರಕ್ತ ಹೀರುವಾಗ ಈ ಸೊಳ್ಳೆಗಳು ಮೊಟ್ಟೆಗಳನ್ನು ಹೀರಿಕೊಳ್ಳುತ್ತವೆ. ಇಂತಹ ಮೊಟ್ಟೆಗಳು ಸೊಳ್ಳೆಗಳ ದೇಹದೊಳಗೆ ಪೂರ್ಣಸ್ಥಿತಿಗೆ ಬದಲಾವಣೆ ಹೊಂದುತ್ತವೆ. ಕೊನೆಗೆ ಎಳೆಹುಳಗಳು ಸೊಳ್ಳೆಯು ಯಾವ ಜೀವಿಯನ್ನು ಕಚ್ಚುತ್ತದೋ ಆ ಜೀವಿಯ ದೇಹದೊಳಗೆ ಹೋಗಿ ಸೇರುತ್ತವೆ ಈ ರೀತಿ ಮೊಟ್ಟೆಯೊಡೆಯಲು ಸುಮಾರು 10 ರಿಂದ 12 ದಿನಗಳು ಹಿಡಿಯುತ್ತದೆ ರೋಗ ತಗಲಿದ ಸೊಳ್ಳೆಯು ಆರೋಗ್ಯವಂತನಾದ ಮನುಷ್ಯನ ದೇಹವನ್ನು ಕಚ್ಚಿದಾಗ, ಈ ಎಳೆಯ ಜೀವಾಣುಗಳು ಸೊಳ್ಳೆಯು ಕಡಿತದಿಂದುಂಟಾದ ತೂತಿನ ಮೂಲಕವಾಗಿಯಾಗಲೀ ಈ ಜೀವಾಣುಗಳೇ ಸ್ವತಃ ಮಾಡಿದ ತೂತುಗಳ ಮೂಲಕವಾಗಿಯಾಗಲೀ ದೇಹದೊಳಕ್ಕೆ ಹೋಗುತ್ತವೆ. ದೇಹದೊಳಗೆ ಪ್ರವೇಶಿಸಿತೆಂದರೆ ನಂತರ ಅಲ್ಲಿಯೇ ಬೆಳೆಯುತ್ತವೆ. ಈ ರೀತಿ ಬೆಳೆದು ಬಲಿಯುವುದಕ್ಕೆ ಸುಮಾರು 6 ರಿಂದ 12 ತಿಂಗಳುಗಳ ಸಮಯ ಬೇಕು.

ಈ ರೋಗವು ನಮ್ಮ ಪ್ರಾಂತದ ಕರಾವಳಿ ಪ್ರದೇಶಗಳಲ್ಲಿ ಹೆಚ್ಚಾಗಿದೆ ಹೆಚ್ಚುಕಡಿಮೆ ಎಲ್ಲಾ ಜಿಲ್ಲೆಗಳ ವಿವಿಧ ಭಾಗಗಳಲ್ಲಿ ಈ ರೋಗದ ಉಪದ್ರವವಿದೆ ಪೂರ್ವ ಮತ್ತು ಪಶ್ಚಿಮ ಗೋದಾವರಿ ಜಿಲ್ಲೆಗಳಲ್ಲಿ ಇದರ ಕಾಟ ಹೆಚ್ಚೆಂದೇ ಹೇಳಬಹುದು.

ಈ ರೋಗವನ್ನು ಹಬ್ಬಿಸುವ ಎರಡು ನಮೂನೆಯ ಸೊಳ್ಳೆಗಳಿವೆ. ಇವುಗಳನ್ನು "ಕುಲೆಕ್ಸ್" ಮತ್ತು "ಮೆನ್ಸೋನಿಯೋಡ್ಸ್" ಎಂದು ಕರೆಯಲಾಗುತ್ತದೆ. ಈ ಸೊಳ್ಳೆಗಳು ತಮ್ಮ ಮೊಟ್ಟೆಗಳನ್ನಿಡುವ ಹಾಗೂ ಬೆಳೆಸಿಕೊಳ್ಳುವ ಕ್ರಮಗಳಲ್ಲಿ ವ್ಯತ್ಯಾಸವಿದೆ. ಕುಲೆಕ್ಸ್ ಜಾತಿಯ ಸೊಳ್ಳೆಗಳು ನೀರಿನ ಮೇಲೆ ಮೊಟ್ಟೆಗಳನ್ನಿಡುತ್ತವೆ ಮೊಟ್ಟೆಯೊಳಗಿಂದ ಬಂದ ಕೀಟಗಳು ಉಸಿರಾಡುವುದಕ್ಕೋಸ್ಕರ ಆಗಾಗ ನೀರಿನ ಮೇಲ್ಭಾಗಕ್ಕೆ ಬರುತ್ತವೆ. ನಂತರದ ದಶೆಯಲ್ಲಿಯೂ ಇದೇ ರೀತಿ ಉಸಿರಾಡಲು ಸೊಳ್ಳೆಯು ಮರಿಗಳು ನೀರ ಮೇಲೆ ಸೇರುತ್ತಿರುತ್ತವೆ. ಆದರೆ ಮೆನ್ಸೋನಿಯೋಡ್ಸ್ ಜಾತಿಯ ಸೊಳ್ಳೆಗಳು ಮೊಟ್ಟೆಗಳನ್ನು ನೀರಲ್ಲಿ ಬೆಳೆಯುವ ಸಸಿಗಳ ಎಲೆಯ ಕೆಳಭಾಗದಲ್ಲಿಡುತ್ತವೆ ಮೊಟ್ಟೆಯೊಡೆದು ಬರುವ ಕೀಟಗಳು ಈ ಸಸಿಗಳ ಸಣ್ಣ ಸಣ್ಣ ಬೇರುಗಳಿಗೆ ಅಂಟಿಕೊಂಡು ಈ ಬೇರುಗಳ ಅಣುಕೋಶಗಳ ಮುಖಾಂತರ ಬೇಕಾದ ವಾಯುವನ್ನು ಉಸಿರಾಡುತ್ತವೆ. ನಂತರದ ದಶೆಯಲ್ಲಿಯೂ ಕೀಟಗಳು ಈ ಸಸಿಗಳ ಬೇರುಗಳಿಗೆ ಅಂಟಿಕೊಂಡಿರುತ್ತವೆ. ಹೀಗೆ ಅವು ಕುಲೆಕ್ಸ್ ಜಾತಿಯಂತೆ ನೀರ ಮೇಲ್ಭಾಗಕ್ಕೆ ಬರುವುದಿಲ್ಲ.

ಆನೆಕಾಲು ರೋಗವು ಹೆಚ್ಚಾಗಿ ತಗಲುವುದು ಮನುಷ್ಯನ 30 ರಿಂದ 50 ವರ್ಷ ಪ್ರಾಯದೊಳಗೆ. ಈ ಕಾಲದಲ್ಲಿಯೇ ಮನುಷ್ಯನು ಅತ್ಯಧಿಕ ಕೆಲಸ ನಿರ್ವಹಿಸುತ್ತಿರುವುದು. ಆದರೆ ಈ ರೋಗದಿಂದ ಬಳಲುವವರಿಗೆ ಕಷ್ಟದ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. ಹೀಗೆ ಈ ರೋಗವು ದೇಶಕ್ಕೆ ಅಪಾರ ಆರ್ಥಿಕ ನಷ್ಟವನ್ನುಂಟುಮಾಡುತ್ತದೆನ್ನಬಹುದು. ಆನೆಕಾಲು ಪೂರ್ಣ ತಡೆಯಬಹುದಾದ ಒಂದು ರೋಗವಾಗಿದೆ. ನೀರಿನ ಮೇಲೆ ಬೆಳೆಯುವ ಸಸಿಗಳನ್ನು ಸಂಪೂರ್ಣ ತೆಗೆಯುವುದರಿಂದಲೂ ವಾರಕ್ಕೊಮ್ಮೆ ಚರಂಡಿ, ಕೊಳಕು ನೀರಿನ ಹೊಂಡಗಳ ಮೇಲೆ ಕ್ರಿಮಿನಾಶಕ ಎಣ್ಣೆಗಳನ್ನು ಚಿಮುಕಿಸುವುದರಿಂದಲೂ ಈ ಸೊಳ್ಳೆಗಳ ಹುಟ್ಟನ್ನು ಅಡಗಿಸಬಹುದು ದೇಹದ ಮಾನವಶಕ್ತಿಯನ್ನು ನಾಶಮಾಡುವ ಈ ರೋಗದಿಂದ ದೂರವಾಗಿರಲು ಪ್ರತಿಯೊಬ್ಬನೂ ತಕ್ಕ ಜಾಗ್ರತೆ ವಹಿಸಬೇಕು.

(—ಮ. ಸ)


**ಅಮೃತಾಂಜನ**

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ಬಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

REGD

ಬುಳುಕಡ್ಡಿ ಮದ್ದುನಮ್ಮಲ್ಲಿ ಸಿಕ್ಕುತ್ತದೆ

**ಅಮೃತಾಂಜನ ಲಿಮಿಟೆಡ್**

ಮದರಾಸು

ಬೊಂಬಾಯಿ ಮತ್ತು ಕಲ್ಕತ್ತ.



## ವಿವಿಧ ಪಾತ್ರೆಗಳು

ಯಾವ ತರ್ಹ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,

ರಥಬೀದಿ, ಉಡುಪಿ.



## ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

**೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ**

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಗಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉರಿಉರಿ ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲೆ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆ ಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಬಳ್ಳೊಳ್ಳಿ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೆರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ಶ್ರೀವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ.



*Nambiar's*

**ARYA VAIDYA SALA**

UDIPI

*Ideal House for Ayurvedic Treatment.*

T. N. Kelu Nambiar,

*Vaidya*



ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

## ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬ್ರೆಕ್‌ಫಾಸ್ಟ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟರಮಣಭಟ್.

**For up-to-date Lodging & Boarding**

**ROYAL MAHAL,**

UDIPI, S. Kanara.



## ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

**The Moolky Bank Ltd.,**

**Moolky, S. K.**

EDITED, PRINTED & PUBLISHED BY K H SHETTY AT THE NAVAYUGA PRESS UDIPI, S. INDIA.

Regd. No. M. 3618 | Estd: 1921 ಸ್ಥಾಪನೆ | 9-2-1950

LICENCE No. 31
Licensed to Post
without Prepayment

ನವ ಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

FOUNDER:
Sri A. B. Shetty
Minister for Agriculture
& Veterinary

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30 | ವಾರ ೨೪

# NAVAYUGA WEEKLY UDIPI, S. K.

Post Box No. 22

Vol 30 | No 24

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

## ವ್ಯಕ್ತಿಯಲ್ಲ-ವಿಷಯ.

ಭಾರತೀಯ ಜನಜೀವನದಲ್ಲಿ ಸಾರ್ವಜನಿಕ ಹಿತಸಂಬಂಧಗಳಿಗಿಂತ, ವ್ಯಕ್ತಿಗತ ಪೂಜೆ ಗೌರವಗಳ ಕಡೆಗೆ ನೋಡುವ ಅಭ್ಯಾಸವೇ ಮುಖ್ಯವಾಗಿದೆ. ನಮ್ಮಲ್ಲೇ ನೋಡುವುದಾದರೆ. ಈ ಚಟವು ಪೇಟೆಪಟ್ಟಣಗಳಲ್ಲಿರುವುದಕ್ಕಿಂತ ಹಳ್ಳೀವಲಯಗಳಲ್ಲಿ ಹೆಚ್ಚಾಗಿದೆ; ಲೋಕರಂಗ ಪ್ರತ್ಯ ದೃಷ್ಟಿಬೀರುವುದಾದರೆ, ಮುಂದು .ರಿದ ಪಾಶ್ಚಾತ್ಯ ರಾಷ್ಟ್ರಗಳಲ್ಲಿರುವುದಕ್ಕಿಂತ ಭಾರತದಲ್ಲಿದು ಅಧಿಕ ಪರಿಮಾಣದಲ್ಲಿದೆ. ವ್ಯಕ್ತಿಯ ಬದಲಿಗೆ ವಿಷಯವನ್ನು-ಖಾಸಗೀ ಗುಣ ಯೋಗ್ಯತೆಗಳಿಗಿಂತ ಹೆಚ್ಚಾಗಿ ಸಾರ್ವಜನನಿಕ ಕಾರ್ಯಯೋಗ್ಯತೆಯನ್ನು— ಗಣಿಸುವ ಅಭ್ಯಾಸವು ಹಿಂದೀ ಸಾರ್ವಜನಿಕರಲ್ಲಿ ಬಂದರೆ ನಮ್ಮ ಸಾರ್ವಜನಿಕ ಜೀವನವು ಸರಿಯಾದ ದಿಕ್ಕಿನತ್ತ ಮುಖಮಾಡಿದಂತಾಗುವದು.

ಇದು ವರೆಗೂ ಭಾರತದಲ್ಲಿ ವ್ಯಕ್ತಿಪ್ರಾಧಾನ್ಯತೆಯುಳಿದಿರಲು ಕಾರಣಗಳಿವೆ. ಪೂರ್ವ ಕಾಲದಲ್ಲಿ ರಾಜರುಗಳ ಸ್ವೇಚ್ಛಾಡಳಿತಗಳೇ ಇಲ್ಲಿದ್ದುವು. ಆ ರಾಜರ ಖಾಸಗೀ ಸ್ವಭಾವಗಳೇ ಜನಜೀವನದ ಎಲ್ಲಾ ರಂಗಗಳಲ್ಲೂ ಪ್ರಭಾವ ಬೀರುತ್ತಾ ಹೋಗಿದ್ದುವು. ಬ್ರಿಟಿಷ್ ರಾಜಕಾರಣದಲ್ಲಿ ವ್ಯಕ್ತಿ ಪ್ರಾಮುಖ್ಯತೆ ಕಡಿಮೆಯಿದ್ದರೂ ಬ್ರಿಟಿಷ್ ಆಳ್ವಿಕೆಯ ಆರಂಭ ಕಾಲದಲ್ಲಿ ಭಾರತೀಯ ಜನತೆಗೆ ರಾಜಕಾರಣದ ಸಂಪರ್ಕವೇನೂ ಇರಲಿಲ್ಲ. ಆದರೂ ಭಾರತೀಯರು ತಮ್ಮ ಸ್ವಭಾವಬದ್ಧ ವ್ಯಕ್ತಿ ಆರಾಧನಾ ಮೋಹದಿಂದ ವಿಕ್ಟೋರಿಯಾ ರಾಣಿಯ ಕಡೆಗೆ ವಿಶೇಷ ರೀತಿಯ ಗೌರವ ಮತ್ತು ಶ್ಲಾಘನೆಗಳನ್ನು ಸಲ್ಲಿಸುತ್ತಿದ್ದರು.

ಗಾಂಧಿಜೀಯ ನಾಯಕತ್ವವೆಂಬುದು ಹಿಂದೀಯರ ನಾಯಕಾರಾಧನಾ [illegible]ಸಿವನ್ನು ಹಿಂಗಿಸುವ ದೊಡ್ಡ ಕಾರಣ, ಅಂಧಾರಾಧಕರು ಮಾತ್ರವಲ್ಲ, [illegible]ಜ್ಞಾನಿಗಳು ಕೂಡಾ ತಲೆಬಾಗಲೇಬೇಕಾದ ಪವಿತ್ರ ಹಾಗೂ ಮಹಾನ್ ವ್ಯಕ್ತಿತ್ವ ಗಾಂಧಿಜೀಯದಾಗಿತ್ತಾದರೂ ವಿಚಾರಪರ ಗುಣಗ್ರಹಣೆಗೂ, ಹಿಂದೀಯರ ಪರಂಪರಾಗತ ಆರಾಧನಾ ಬುದ್ಧಿಗೂ ವ್ಯತ್ಯಾಸವಿದೆ. ಆದರೆ ಮಹಾತ್ಮಾ ಗಾಂಧಿಯವರ ವ್ಯಕ್ತಿತ್ವದಲ್ಲಿ ಓರ್ವ ಮಾನವನ ವಿಶೇಷ ಯೋಗ್ಯತೆಗಳಷ್ಟೇ ಅಲ್ಲ—ಒಂದು ರಾಷ್ಟ್ರಕ್ಕವಶ್ಯವುಳ್ಳ ಗುಣನಡತೆಗಳೂ ತುಂಬಿಕೊಂಡಿದ್ದುದರಿಂದ ಗಾಂಧೀ ಆರಾಧನೆಯಿಂದ ವ್ಯಕ್ತಿಯಾರಾಧನೆಯ ಹಾನಿ ತಟ್ಟಲಿಲ್ಲ. ಬದಲಿಗೆ ರಾಷ್ಟ್ರೋದ್ಧಾರಕ ಕಾರ್ಯಗಳಿಗೆ ವಿಶೇಷ ಅನುಕೂಲವಾಯಿತು.

ಸಾರ್ವಜನಿಕರ ಪಾಲಿನ ಕರ್ತವ್ಯಗಳನ್ನು ಮಾಡುವ ಶಕ್ತಿಯೋಗ್ಯತೆಗಳು ಓರ್ವ ಗಾಂಧಿಯಲ್ಲಿದ್ದುವು; ಇದ್ದರಿಂದ ವ್ಯಕ್ತಿ ಗಾಂಧಿಯ ಮೇಲಿನ ನಿಷ್ಠೆಯು ಸಾರ್ವಜನಿಕ ಕಾರ್ಯಗಳ ಮೇಲಿನ ನಿಷ್ಠೆಯಂತಾಗಿ ಸಫಲ ಕೊಟ್ಟಿತು.

ಹಿಂದಿನ ವ್ಯಕ್ತಿ ಪ್ರಧಾನ ಕಾಲಗಳೆಲ್ಲವೂ ಅನುಕ್ರಮವಾಗಿ ಕಳೆದುಹೋಗಿ ಭಾರತದಲ್ಲೀಗ ಪ್ರಜಾ ರಾಜ್ಯ ಬಂದಿದೆ; ಆದರೆ ಭಾರತೀಯ ಜನಸಾಮಾನ್ಯರ ಮನಸ್ಸಿನಲ್ಲಿ ಈಗಲೂ ವ್ಯಕ್ತಿಗತ ಪ್ರಾಧಾನ್ಯತೆಯೇ ಉಳಿದಿದೆ. ತತ್ಪರಿಣಾಮವಾಗಿ ಜನತಾರಾಜ್ಯವೂ ಯಥಾರ್ಥವಾಗಿ ಕೆಲವೇ ವ್ಯಕ್ತಿಗಳ ರಾಜ್ಯವಾಗಿ ಸಾಗುವ ಅಪಾಯವಿದೆ.

ಇಂದಿನ ಪ್ರಜಾರಾಜ್ಯದ ಶಿಖರ ಸೇರಿರುವ ದಿಲ್ಲಿಯಿಂದಾರಂಭಿಸಿ, ಅದರ ಬುಡವಿರುವ ಹಳ್ಳಿಯ ವರೆಗೂ ದೃಷ್ಟಿಯೋಡಿಸುತ್ತಾ ಬಂದರೆ ಎಲ್ಲೆಲ್ಲೂ ವ್ಯಕ್ತಿಗತ ಪ್ರಾಧಾನ್ಯತೆ, ಪ್ರಾಮುಖ್ಯತೆಗಳೇ ಒಡೆದು ಕಾಣುತ್ತಿವೆ. ಸಾರ್ವಜನಿಕ ಕಾರ್ಯ ನಿರ್ವಹಣಕ್ಕಗತ್ಯವುಳ್ಳ ಯೋಗ್ಯತೆಗಳು ಸಂಬಂಧಪಟ್ಟ ವ್ಯಕ್ತಿಯಲ್ಲಿರಬೇಕೆಂದು ನಿರೀಕ್ಷಿಸುವುದಕ್ಕೂ, ವ್ಯಕ್ತಿಬಾಂಧವನಾದ್ದರಿಂದ ಸಾರ್ವಜನಿಕ ಕಾರ್ಯಭಾರವು ಆತನಿಗೇ ವಹಿಸಲು ಎಂದೂ ನಿರ್ಧರಿಸುವುದಕ್ಕೂ ವ್ಯತ್ಯಾಸವಿದೆ. ಮೊದಲನೆಯದರಲ್ಲಿ ವಿಷಯಕ್ಕಾಗಿ ವ್ಯಕ್ತಿ ಎಂದಿದ್ದರೆ, ಎರಡನೆಯದರಲ್ಲಿ ವ್ಯಕ್ತಿಗಾಗಿ ಸಂಗತಿಯೆಂದಿದೆ. ಸಮೂಹದೊಡನೆ ತಾದಾತ್ಮ್ಯಗೊಳ್ಳುವ ಮೂಲಕ ವ್ಯಕ್ತಿತ್ವವು ಅಂತರ್ಧಾನಗೊಳ್ಳಬೇಕೆಂಬುದೇ ಸಾರ್ವಜನಿಕ ಜೀವನದ ಮೂಲಸೂತ್ರ; ಬದಲಿಗೆ ಸಮೂಹದ ಕಡೆಗೆ ಸಲ್ಲಬೇಕಾದ ಮತ್ತು ಸಮೂಹದ ಪಾಲಿನದಾದ ಲಕ್ಷ್ಯವೆಲ್ಲವನ್ನೂ ವ್ಯಕ್ತಿಯ ಕಡೆಗೆ ಸಲ್ಲಿಸಿದರೆ ಯಥಾರ್ಥ ಸಾಮೂಹಿಕ ಜೀವನವೇ ಮಾಯವಾಗುವದು.

ಸಾರ್ವಜನಿಕ ಲಕ್ಷಣಗಳ ಬದಲಿಗೆ ವ್ಯಕ್ತಿಗಳ ಕಡೆಗೇನೇ ಹೇಗೆ ಲಕ್ಷ್ಯ ಬೀಳುತ್ತಿದೆ, ಎಂಬುದರ ಕೆಲವು ನಿದರ್ಶನಗಳು ಇಲ್ಲಿವೆ—

ಗವರ್ನರ್ ಜನರಲ್ ರಾಜಾಜಿಯು ಅಧಿಕಾರಚ್ಯುತರಾಗಿ, ಬಾಬು ರಾಜೇಂದ್ರ ಪ್ರಸಾದರು ಅಧ್ಯಕ್ಷಗಾದಿಗೇರಿದ ಹಿನ್ನೆಲೆಯಾಗಿ ಭಾರತದಲ್ಲಿ ಮಹತ್ವದ ಅಧಿಕಾರ ಬದಲಾವಣೆಗಳಾಗಿವೆ. ಆದರೆ ಹಿಂದಿನ ಮತ್ತು ಇಂದಿನ ಅಧಿಕಾರಗಳ ರೂಪರೇಖೆ, ವ್ಯತ್ಯಾಸಗಳೇನು, ಎಂಬುದರ ಸೂಕ್ಷ್ಮ ಪರಿಚಯವು ಜನತೆಗಿಲ್ಲ. ಬದಲಿಗೆ ಪಂಡಿತ ನೆಹರುಗಳು ರಾಜಾಜಿಯನ್ನೇ ಸೂಚಿಸಿದ್ದರೂ, ಘಟನಾ ಸಮಿತಿಯ ಕಾಂಗ್ರೆಸ್ ಪಕ್ಷದ ಕೆಲವು ಸದಸ್ಯರು ಬಾಬು ರಾಜೇಂದ್ರರನ್ನು ಮುಂದೊಡ್ಡಿ ನೆಹರುಗಳ ಕಾರ್ಯವಾಗದಂತೆ ಸಾಧಿಸಿದರೆಂಬ ಒಳವಾರ್ತೆಯನ್ನೆತ್ತಿಕೊಂಡು ವಿವಿಧ ರೀತಿಯ ಪ್ರಚಾರಗಳಾಗಿವೆ. ಅಭಿಪ್ರಾಯ ಸ್ವಾತಂತ್ರ್ಯವಿರುವಲ್ಲಿ ಭಿನ್ನಾಭಿಪ್ರಾಯಗಳೇಳುವುದು ಸ್ವಾಭಾವಿಕವೆಂದೂ, ಅವುಗಳಿಗೆ ಅನಗತ್ಯ ಪ್ರಾಮುಖ್ಯತೆ ಕೊಡದೆ, ವ್ಯಕ್ತಿಗತ ಸಂಬಂಧಗಳನ್ನು ಗಂಟುಹಾಕಿ ತೋರಿಸದೆ, ಕ್ರಮಪ್ರಕಾರ ಯಾರು ಮತ್ತು ಯಾವುದು ಮುಂದಾಗುವರೋ, ಅವರನ್ನು ಮತ್ತದನ್ನು ಮನ್ನಿಸಿ, ಆ ಕಡೆಗಿನ ತಮ್ಮ ಭಾವನೆ ಮತ್ತು ಕರ್ತವ್ಯ [illegible]ಗಿರಬೇಕೋ ಹಾಗಿಟ್ಟುಕೊಳ್ಳುವುದಷ್ಟೇ ತಮ್ಮ ಪಾಲಿನ ಕೆಲಸವೆಂದೂ ಸಾರ್ವಜನಿಕರು ತಿಳಿದಿರಬೇಕು.

'ಉತ್ತರ ಭಾರತದವರಿಗೆ ದಕ್ಷಿಣಭಾರತೀಯನಾದ ರಾಜಾಜಿ ಅಗ್ರಪೀಠಸ್ಥರಾವುದು ಸಮ್ಮತವಿರಲಿಲ್ಲ' 'ಹಿಂದೂ ಕೋಡು ಮಸೂದೆಗೆ ವಿರುದ್ಧಾಭಿಪ್ರಾಯ ವ್ಯಕ್ತಪಡಿಸಿರುವ ಬಾಬು ರಾಜೇಂದ್ರ ಪ್ರಸಾದರು ಅಧ್ಯಕ್ಷರಾದುದರಿಂದ ಆ ಮಸೂದೆಯ ಪ್ರಬಲ ಸಮರ್ಥಕರಾಗಿರುವ ನೆಹರುಗಳ ಅಭಿಪ್ರಾಯಕ್ಕೆ ಆತಂಕ ಬೀಳಬಹುದು' 'ಅಧ್ಯಕ್ಷರಾಯ್ಕೆಯಲ್ಲಿ ಪಂಡಿತ ನೆಹರುಗಳ ಅಭಿಮತವು ಅಮಾನ್ಯವಾದುದನ್ನು ಕಾಣುವಾಗ ಪಂಡಿತಜೀ ಅಲ್ಲಿ ಮಿಕ್ಕವರ ಕೈಗೊಂಬೆಯಾಗಿದ್ದಾರೆ ಹೊರತು ತನ್ನ ಹಿಂದೆ ಎಲ್ಲರನ್ನೂ ಕಟ್ಟಿಕೊಂಡಿಲ್ಲ' ಎಂಬ ಅಭಿಪ್ರಾಯಗಳಲ್ಲಿ ಕೆಲವಂಶ ಸತ್ಯವಿರಬಹುದಾದರೂ, ಹೆಚ್ಚಿನಂಶ ವ್ಯಕ್ತಿಗತ ಭಾವನೆ, ಅತಿಶಯೋಕ್ತಿ, ಸ್ವಧರ್ಮಲಾಲಸೆಗಳು ತುಂಬಿವೆ. ಇದು, ನಿರ್ಲಿಪ್ತ ಮನಸ್ಸಿನದಿರಬೇಕಾದ ಸಾರ್ವಜನಿಕ ಕಾರ್ಯಾಸಕ್ತಿಯನ್ನು ವಿಕಾರಗೊಳಿಸಿಕೊಂಡಂತೆಯೇ ಸರಿ.

'ನೆಹರು ವಲ್ಲಭಾಯಿಗಳು, ಮಾಡಿದ್ದೊಂದಾದ ಮೇಲೆ ಮತ್ತೆ ಮಾತನಾಡಕ್ಕಿಲ್ಲ' ಎಂಬ ವಿಶ್ವಾಸ ಹೆಚ್ಚಿನವರಲ್ಲಿ ಬೇರೂರಿ ನಿಂತಿದೆ. ಈ ನಂಬಿಕೆಗೆ ದ್ರೋಹವಾಗದಂತಹ ವರ್ತನೆಯು ನೆಹರು ವಲ್ಲಭಾಯಿಗಳದಿದೆಯಾದರೂ, ಪ್ರಜಾಸತ್ತಾತ್ಮಕ ಪ್ರಜಾಪ್ರಭುತ್ವದಲ್ಲಿ ಪ್ರಜಾವರ್ಗವು ಸದಾಕಾಲ ವಿಚಾರ ಜಾಗ್ರತಿಯಲ್ಲಿರಬೇಕೇ ಹೊರತು, ತನ್ನನ್ನು ತಾನೇ ಎಂತಹ ಬಲವಾದ ಗೂಟಗಳಿಗಾದರೂ ಕಟ್ಟಿ ಹಾಕಿಸಿಕೊಂಡು ಸ್ತಬ್ಧವಾಗಿರಕೂಡದು.

ಈ ಕಾಲದ ಪತ್ರಿಕಾಂಶಗಳ ಕಡೆಗೆ ನೋಡಿದರೆ ಎಲ್ಲಾ ಪ್ರಾಂತ್ಯಗಳಲ್ಲೂ ಅಧಿಕಾರ ನಿರ್ವಹಿಸುತ್ತಿರುವ ಕಾಂಗ್ರೆಸ್ ಪಕ್ಷದ ಒಳಗಡೆಯಲ್ಲೇ ಬಿರುಕುಗಳು ರಂ

THE UNITED KARNATAK INSURANCE COMPANY, LTD., DHARWAR.

Established: 1929.

OTHER ISSUES

Offers their valuable service to the public of India in making their sweet home, always happy.

For good investments and valuable connections, please consult us.

ದು ಬರುತ್ತಿವೆ; ಒಳಪಾಳಯಗಳುಂಟಾಗಿವೆ. ಈ ಒಡಕುಗಳು, ಪ್ರಾಂತ್ಯದ ಜನತೆಯತ್ತ ದೃಷ್ಟಿಯಿಟ್ಟು ಅಲ್ಲಿಯ ಸ್ಥಿತಿಗತಿಗಳ ಮೇಲಿಂದ ಹುಟ್ಟಿದವುಗಳಾಗಿರದೆ ವ್ಯಕ್ತಿಗತ ದ್ವೇಷಾಸೂಯೆ, ಸ್ಪರ್ಧೆಗಳಿಂದಲೇ ಜನಿಸಿದವುಗಳಿವೆ. ವ್ಯಕ್ತಿ ಪ್ರಾಧಾನ್ಯತೆಯನ್ನು ಅಡಿಗೊತ್ತಿ ಜನಸೇವಾಬುದ್ಧಿ ಅಥವಾ ಸಾರ್ವಜನಿಕ ಮನೋವೃತ್ತಿಯು ಮೇಲಾಗುತಿದ್ದರೆ 'ಸ್ಥಾನಕ್ಕಾಗಿ ಮೇಲಾಟ'ವೆಂಬುದಿರುತಿದ್ದಿಲ್ಲ.

ಈ ನೋಟವನ್ನು ಕ್ರಮಶಃ ಕೆಳಗಡೆಗೆ ಬೀರುತ್ತಾ ಬಂದರೆ ಜಿಲ್ಲಾ ಬೋರ್ಡು, ನಗರ ಸಭೆಗಳಂತಹ ಸ್ಥಳೀಯ ಸಂಸ್ಥೆಗಳ ಚುನಾವಣೆ ಮತ್ತು ಆಡಳಿತೆಗಳಲ್ಲಿ ಮತ್ತಷ್ಟು ಸಂಕುಚಿತ ಸ್ವರೂಪದ ವ್ಯಕ್ತಿ ಪ್ರಭಾವಗಳೇ ಗೋಚರಿಸುತ್ತಿವೆ. ಶಾಸನ ಸಭೆಗಳಲ್ಲಿ ಈ ವ್ಯಕ್ತಿಪ್ರಭಾವವು ಗುಂಪು, ಪಂಗಡ ಅಥವಾ ಜಾತೀಯವರ್ಗಗಳಷ್ಟು ದೊಡ್ಡ ಆಕಾರದಲ್ಲಾದರೂ ಇದೆ; ಸ್ಥಳೀಯ ಸಂಸ್ಥೆಗಳಲ್ಲಿದು ಕೇವಲ ವ್ಯಕ್ತಿ ಅಥವಾ ಒಳಜಾತಿಯ ಮಟ್ಟಕ್ಕಿಳಿದಿದೆ

ಶಿಕ್ಷಿತರು ಮತ್ತು ಸುಧಾರಿತರಿರುವ ಪೇಟೆ ಪಟ್ಟಣಗಳಲ್ಲಿ ಕೂಡಾ, ಯಾವುದೇ ರೀತಿಯಿಂದ ಧನ, ಸ್ಥಾನ, ಮಾನಗಳಿಸಿಕೊಂಡವನಿಗೇನೇ, ಅವನಿಗೇನೂ ಪರಿಶ್ರಮವಿರದ ಕ್ಷೇತ್ರಗಳಲ್ಲಿ ಕೂಡಾ ಪ್ರಾಮುಖ್ಯತೆ ದೊರೆಯುತ್ತಿದೆ.

ನೋಟವನ್ನು ಇನ್ನೂ ಕೆಳಗಿಸುತ್ತಾ ಬಂದಂತೆ ಇನ್ನಷ್ಟು ಹೇಯ ದೃಶ್ಯಗಳೇ ಕಣ್ಣಿಗೆ ಬೀಳುತ್ತಾ ಹೋಗುತ್ತವೆ. ಹಳ್ಳೀ ಪಂಚಾಯತ ಬೋರ್ಡು, ಪಂಚಾಯತ ಕೋರ್ಟು, ಗ್ರಾಮಾಧಿಕಾರಿತನ ಇತ್ಯಾದಿಗಳಲ್ಲಿ, ಎಂತಹ ದುರ್ವಿಧಾನಗಳಿಂದಲೇ ಆದರೂ "ಪ್ರಬಲ" ನನ್ನಿಸಿಕೊಂಡವನಿಗೆ ಮಾತ್ರ ಸ್ಥಾನ, ಮಾನಗಳು ದೊರೆಯುತ್ತಿವೆ ಗ್ರಾಮಗಳ ಪಾಲಿನ ಯಾವ ಅಧಿಕಾರವಾದರೂ, ಅದು ಗ್ರಾಮಸ್ಥರ ಮೇಲೆ ಹತೋಟಿಯಿರುವವರ ಪಾಲಿಗೆ ಮೀಸಲಿಟ್ಟದ್ದೆಂಬ ಪೂರ್ವ ನಿಶ್ಚಯದೊಡನೆಯೇ ಅಲ್ಲಿ ಪ್ರಸ್ಥಾಪಿಸಲ್ಪಡುತ್ತಿದೆ.

ಹಳ್ಳಿಗಳಲ್ಲಿ ಪ್ರತಿಷ್ಠೆ, ವರ್ಚಸ್ಸು, ಸ್ಥಾನಗಳಸುವುದಾದರೂ ಅಲ್ಲಿಯ ಅಜ್ಞಾನ ಮತ್ತು ಅಂಧಾನುಯಾಯಿತ್ವಗಳನ್ನು ತಮ್ಮ ಅನುಕೂಲತೆಗಾಗಿ ಬಳಸಿಕೊಳ್ಳುವ ಮೂಲಕವೇ. ಯಾರಲ್ಲಿ ವಂಶಪರಂಪರಾಗತ ಸ್ಥಾನಮಾನ ದಬ್ಬಾಳಿಕೇ ಸಾಮರ್ಥ್ಯ ದುಸ್ಸಾಧನಾಬಲ, ಮತ್ತು ದುಂದುಗಾರಿಕೆ ವಿಶೇಷವಾಗಿರುವುದೋ ಅಂಥವರೇ ಮುಂದಾಳುಗಳಾಗುವರು. ಜನರೆಲ್ಲರೂ ಮರುಮಾತು, ಪ್ರತಿವರ್ತನೆಯಿಲ್ಲದೆ ಅಂಥವರನ್ನು ಅನುಕರಿಸುವರು. ವ್ಯಕ್ತಿ ಪ್ರಭಾವದ ಪರಮಾವಧಿ ಕಳತೆಯನ್ನು ಅಲ್ಲಿ ವಿವಿಧ ರೂಪಗಳಲ್ಲಿ ಕಾಣಬಹುದು.

ಈ ರೀತಿ ನಮ್ಮ ಜನಜೀವನದಲ್ಲಿ ಆಮೂಲಾಗ್ರವಾಗಿ ವ್ಯಕ್ತಿ ಪ್ರಭಾವ—ನಾಯಕಾರಾಧನೆ—ವಿಚಾರರಹಿತ ಅನುಯಾಯಿತ್ವ—ವ್ಯಾಪಿಸಿ ಹೋಗಿದೆ. ಪುರಾತನ ಕಾಲದಿಂದ ಆಧುನಿಕ ಯುಗದ ವರೆಗೂ ಏಕಪ್ರಕಾರ ಇಲ್ಲಿ ಉಳಿದುಕೊಂಡಿರುವ ಮನೋವೃತ್ತಿಯಿದು. ಭಾರತೀಯರಲ್ಲಿ ನಾಗರಿಕತೆ, ವಿಷಯಜ್ಞಾನಗಳು ಬೆಳೆಯುತ್ತಾ ಬಂದಂತೆ ಬುದ್ಧಿ ವಿಕಾಸಗೊಂಡಂತೆ, ಚುನಾವಣೆಯಲ್ಲಿದ್ದ [illegible] ಧನ್ನೆ ಹೊಡೆಯುವ ಎಚ್ಚರಿಕೆ ಬಂದು ಎಲ್ಲೆಲ್ಲೂ ಹುಟ್ಟಿಕೊಂಡಿತಲ್ಲ! ಹಿಂದಿನ ಕಾಲದ 'ಮುಂದಾಳುತ್ವ'ವು ಇಂದು ಹಳ್ಳಿಗಳಲ್ಲಿ ಕೂಡಾ ಮತ್ತೊಂದು ಆಕಾರ ತಾಳಿದೆ ಆದರೂ ಹಳ್ಳಿಯಿಂದಾರಂಭಿಸಿ ಡಿಲ್ಲಿಯ ವರೆಗಿನ ಎಲ್ಲೆಡೆಯಲ್ಲೂ, ಉಗ್ರಾಣಿ ನೇಮಕದಿಂದಾರಂಭಿಸಿ ಅಧ್ಯಕ್ಷ ನೇಮಕದ ವರೆಗಿನ ಎಲ್ಲಾ ವಿಷಯಗಳಲ್ಲೂ ವಿಷಯಕ್ಕಿಂತ ಹೆಚ್ಚಾಗಿ ವ್ಯಕ್ತಿಯನ್ನು ಗಣಿಸುವ ಪರಿಪಾಠವಿದೆ ಎಂಬುದನ್ನೊಪ್ಪಬೇಕು. ಈ ಮಟ್ಟಿಗೆ ಹಳೇ ಕಾಲಕ್ಕೂ ಆಧುನಿಕ ಯುಗಕ್ಕೂ ಇರುವ ವ್ಯತ್ಯಾಸವೆಂದರೆ, ಗತಕಾಲದಲ್ಲಿ ಮಾಸಗೀಲಾಲಸೆ, ವ್ಯಕ್ತಿಯಾರಾಧನೆಗಳು ಬರ್ಬರ ವಿಧಾನಗಳಿಂದ ನಡೆಯುತಿದ್ದರೆ, ಈಗ ಅವು ನಾಗರಿಕ ನಿಯಮಗಳ ಸೋಗಿನಿಂದ ನಡೆಯುತ್ತಿವೆ.

ನಿದರ್ಶನಕ್ಕಾಗಿ—ಸರಕಾರೀ ಅಥವಾ ಸಾರ್ವಜನಿಕ ಸಂಸ್ಥೆ, ಇಲಾಖೆಗಳ ನೇಮಕಗಳನ್ನೇ ನೋಡೋಣ ಆ ನೇಮಕಗಳ ಪೈಕಿ ತತ್ಸಂಬಂಧದ ಗುಣ, ಯೋಗ್ಯತೆಗಳನ್ನಾಧರಿಸಿಯೇ ಆಗುತ್ತಿರುವವುಗಳೆಷ್ಟು? ವ್ಯಕ್ತಿಗತ ಸಂಬಂಧ ಅಥವಾ ವ್ಯಕ್ತಿಗಳ ಪ್ರಭಾವಕ್ಕೊಳಗಾಗಿ ನಡೆಯುತ್ತಿರುವವಗಳೆಷ್ಟು? ಪತ್ರಿಕೆಗಳಂತಹ ಸಾರ್ವಜನಿಕ ಉಪಕರಣಗಳಾದರೂ ವ್ಯಕ್ತಿಗಳತ್ತ ನೋಡದೆ, ವಿಷಯವನ್ನಷ್ಟೇ ನೋಡುವವುಗಳೆಷ್ಟಿವೆ?

ಹಿಂದೀ ಜನಸಾಮಾನ್ಯರಲ್ಲಿ ಎಲ್ಲಾ ಸಂದರ್ಭಗಳಲ್ಲೂ ನ್ಯಾಯಾನ್ಯಾಯಗಳನ್ನು—ಸರಿ ತಪ್ಪುಗಳನ್ನು—ತೂಗಿ ನೋಡಿ, ವಿಂಗಡಿಸಿ ತೀರ್ಮಾನಿಸುವ ಜ್ಞಾನವಿಲ್ಲವೇನೋ ನಿಜ; ಆದರೆ ಅಂತಹ ಯೋಗ್ಯತೆಯಿದ್ದ ಜವಾಬ್ದಾರೀ ಸ್ಥಾನಗಳಲ್ಲಿರುವವರನ್ನು ಸ್ವಭಾವಾನುಗುಣ ವ್ಯಕ್ತಿಗತ ಸೋಟಿ, ಪ್ರಭಾವಗಳೇ ಆವರಿಸಿಕೊಂಡಿವೆ. 'ವ್ಯಕ್ತಿಯಲ್ಲ—ವಿಷಯ' ಎಂಬ ಮೂಲತತ್ವವು ಎಲ್ಲಿಯೂ ಸಂಪೂರ್ಣವಾಗಿ ಪಾಲಿಸಲ್ಪಡುತ್ತಿಲ್ಲ.

ಪ್ರಜಾರಾಜ್ಯೋದಯದೊಡನೆ, ವ್ಯಕ್ತಿ ಪ್ರಭಾವಕ್ಕಾಧಾರವಾಗಿದ್ದ ವಾತಾವರಣ ಮಾಯವಾಗಿದೆ. ರಾಜರುಗಳ ಪ್ರತಾಪಯುಗವನ್ನು ಮುಗಿಸಿಯೇ ಗಾಂಧೀ ಯುಗ ಉದಯಿಸಿತು. ಗಾಂಧೀಜೀಯಂತಹ ಅಗಣಿತ ಪ್ರಭಾವ ಮಾಹಾತ್ಮ್ಯರನ್ನು ನಿರ್ಮಿಸುವ ಶಕ್ತಿ ಇನ್ನು ಭಾರತಕ್ಕಿಲ್ಲ; ಅಂತಹ ವಾತಾವರಣ ಪುನರ್ನಿರ್ಮಾಣಗೊಳ್ಳುವಂತಿಲ್ಲ. ಆ ಕಾಲದ ನೆಹರೂ, ವಲ್ಲಭಾಯಿಗಳಲ್ಲಿದ್ದಂತಹ ಆಕರ್ಷಣೆ ಈ ಕಾಲದ ನೆಹರು ವಲ್ಲಭಾಯಿಗಳಲ್ಲಿಲ್ಲವೆಂಬುದು ಮನವರಿಕೆಯಾಗಿರುವ ವಿಷಯ. ಅಂತೂ ಗಾಂಧಿಜೀ ಅಥವಾ ಗಾಂಧೀ ಅನುಯಾಯೀ ಮಹಾನಾಯಕರಂತಹ ತೇಜಃಪುಂಜ ವಿಶೇಷ ವ್ಯಕ್ತಿತ್ವಗಳು ಪ್ರಜಾರಾಜ್ಯ ಭಾರತದಲ್ಲಿ ಇನ್ನು ಉದಿಸಬೇಕೆಂದಿಲ್ಲ; ಉದಿಸುವಂತಿಲ್ಲ. ಅಜೇಯ ವ್ಯಕ್ತಿಗತ ಆಕರ್ಷಣೆಗಳಿಗೆ ಅವಕಾಶವಿರದಂತಹ ವಾತಾವರಣ ಇಂದು ನಿರ್ಮಾಣಗೊಂಡಿದೆ.

ಇಂದಿನ ಸ್ವತಂತ್ರ ಆಡಳಿತೆಯಲ್ಲೂ ಅತ್ಯಾಕರ್ಷಣೀಯ ಹಾಗೂ ಅಸಮಾನ್ಯ ವ್ಯಕ್ತಿತ್ವ ತೋರಬರಬೇಕಾದರೆ ಜರ್ಮನಿಯಲ್ಲಿ ಹಿಟ್ಲರನು ಮಾಡಿದಂತಹ ಅದ್ಭುತಗಳನ್ನು ಮಾಡಬಲ್ಲ ಸರ್ವಾಧಿಕಾರಿತ್ವ ಇಲ್ಲಿ ಮೂಡಬೇಕು ಭಾರತದ ಸಂಸ್ಕೃತಿ ಮತ್ತು ವಾತಾವರಣವು ಇಂತಹ ಅದ್ವಿತೀಯ ಸರ್ವಾಧಿಕಾರಕ್ಕೆ ಹೊಂದಿಕೆಯಾಗುವಂತಹದಲ್ಲ. ಇಡೀ ಪ್ರಪಂಚದ ಯಾವ ರಾಷ್ಟ್ರದಲ್ಲೇ ಆದರೂ ಇನ್ನೊಮ್ಮೆ 'ಹಿಟ್ಲರ್' ಅಂಥವನು ಹುಟ್ಟುವುದು ಅಸಂಭವ

ಹಿಟ್ಲರನಂತಹ ಏಕ ಸರ್ವಾಧಿಕಾರಿಯ ಉತ್ಥಾನಕ್ಕೆ ಭಾರತ ಸ್ಥಿತಿಗತಿ ಪ್ರತಿಕೂಲವಿದ್ದರೂ, ಮೇಲ್ಗಡೆ ನಮೂದಿಸಿರುವಂತೆ ಭಾರತದಲ್ಲಿ ಎಲ್ಲೆಲ್ಲೂ ಮರಿಹಿಟ್ಲರರು ಮತ್ತು ಹಿಟ್ಲರ್‌ಶಾಹಿಯ ಕೊಳಕು ಮಾದರಿಗಳು ತುಂಬಿಕೊಂಡಿವೆ. ಗಾಂಧಿಜೀ ಅಥವಾ ಅವರ ಅನುಯಾಯೀ ನಾಯಕರುಗಳಂಥವರ ನಿರ್ಮಾಣವನ್ನು ಅಸಾಧ್ಯಗೊಳಿಸುವ ವಾತಾವರಣವು ಈಗಲೇ ನಿರ್ಮಾಣವಾಗಿದೆಯಾದರೂ, ಸರ್ವೆಡೆ ವ್ಯಾಪಿಸಿರುವ ಹಿಟ್ಲರಶಾಹಿ ಮತ್ತು ಮರಿಹಿಟ್ಲರರನ್ನು ಒಮ್ಮೆಗೇ ನಿರ್ಮೂಲಿಸುವ ವಾತಾವರಣ ಇಂದು ಮೂಡಿಲ್ಲ.

ಜನತೆಯ ಸರ್ವಲಕ್ಷ್ಯವೂ ತನ್ನೆಡೆಗೆ ಬೀಳುವಂತೆ ಮಾಡುವ ಬದಲಿಗೆ, ತಾನು ಜನತೆಯ ಕಡೆಗೆ ಸಂಪೂರ್ಣ ಲಕ್ಷ್ಯಕೊಡಬೇಕಾದಂತಹ ಸ್ಥಿತಿಯಿದ್ದರೆ, ಅಲ್ಲಿ ಯಾವನೊಬ್ಬನೂ ವಿಶೇಷತ್ವಗಳಿಸಿ ದೂರವುಳಿದುಕೊಳ್ಳದೆ ಜನಸಮುಸ್ತರೊಡನೆ ಬೆರೆತು ಹೋಗುತ್ತಾನೆ ಶಾಸನಬದ್ಧವಾಗಿ ಭಾರತದಲ್ಲಿಂದು ಅಂತಹ ಸ್ಥಿತಿಯುಂಟಾಗಿದೆ. ಚುನಾವಣೆ ಮತ್ತಿತರ ಸಂದರ್ಭಗಳಲ್ಲಿ ಜನಮತವನ್ನೇ ಗಣಿಸಬೇಕಾಗುತ್ತದೆ; ಒಡಗೂಡಿ ಒಲಿಸಬೇಕಾಗುತ್ತದೆ.

ಆದರೆ, ಇಲ್ಲಿ ಮೊದಲೇ ಹೇಳಿರುವಂತೆ, ಈ ಜನಮತವೇ ಒಳಗಡೆಯ ಕೆಲವು ವ್ಯಕ್ತಿಗಳ ಕಾಲಕಂಕಣಕ್ಕೆ ಬಿಗಿಯಲ್ಪಟ್ಟಿರುವುದರಿಂದ ಜನಮತದ ಹೆಸರಿನಿಂದ ಈ ಕೆಲವೇ ವ್ಯಕ್ತಿಗಳ ಆಟ ನಡೆಯುವ ಅಪಾಯ ಉಳಿದಿದೆ. ಈ ಮಧ್ಯಸ್ಥಗಾರರ ಸ್ಥಾನಮಾನ ತಪ್ಪುತ್ತಾ ಹೋಗಿ ಜನತೆಗೂ ಸರ್ವ ಸಂಗತಿಗಳಿಗೂ ಪ್ರತ್ಯಕ್ಷ ಸಂಬಂಧವುಂಟಾಗುವ ಕಾಲವು ಕ್ರಮಶಃ ಬರಬಹುದು. ಯಾವ ಪ್ರಯತ್ನವಿಲ್ಲದೆಯೂ ಇಂದಿನ ವಾತಾವರಣದಲ್ಲಿ ಈ ಸವೆತ ನಡೆಯುತ್ತಾ ಹೋದೀತು.

ರಾಜಶಾಹಿಯ ಕಾಲ-ಆ ಮೇಲೆ ಹೋರಾಟಯುಗ—ಒಂದಂತೆ ವ್ಯಕ್ತಿಗಳ ಮಹತ್ವಿಕೆ ಉಳಿಯುತ್ತಾ, ಬೆಳೆಯುತ್ತಾ ಬಂದಿದ್ದಿತು; ಆ ನಂತರ ಪ್ರಜಾ ಪ್ರತಿನಿಧಿ ಸ್ವರಾಜ್ಯ, ಪ್ರಜಾರಾಜ್ಯ ಬಂದಂತೆ ವ್ಯಕ್ತಿ ಮಹತ್ವಿಕೆಯಳಿಯುತ್ತಾ ಸಾಮೂಹಿಕ ಪ್ರಾಧಾನ್ಯತೆ ಮೆರೆಯುತ್ತ, ಬೆಳೆಯುತ್ತಾ ಹೋದೀತು. ತನ್ನಂತೆ ಆಗುತ್ತಾ ಹೋಗುವುದಾದರೆ, ಮೊದಲನೆಯದಿದ್ದಷ್ಟೇ ಕಾಲ ಹಿಡಿದೀತು, ಎರಡನೆಯದು ಬರಬೇಕಾದರೂ.

ಜನತೆ ತಮ್ಮ ದೌರ್ಬಲ್ಯಗಳನ್ನು ಸ್ಮರಿಸಿಕೊಂಡು, ಆತ್ಮ ಶುದ್ಧೀಕರಣ ಮಾಡಿಕೊಳ್ಳುವ ಪಂಥ ತೊಟ್ಟರೆ, ವ್ಯಕ್ತಿಗತ ಮಹತ್ವಗಳೆಲ್ಲವನ್ನೂ ಕೂಡಲೇ ಕಳಚಿಕೊಳ್ಳಲು ಸಾಧ್ಯವಿದೆ; ಅದಕ್ಕನುಕೂಲವಾದ ವಾತಾವರಣ ಈಗ ನಿರ್ಮಾಣಗೊಂಡಿದೆ. ಜನತೆ ಜಾಗ್ರತಿಗೊಂಡು ಜ್ಞಾನ, ಯೋಗ್ಯತೆ ಗಳಿಸಬೇಕೆನ್ನುವುದು ಇಷ್ಟಕ್ಕಾಗಿಯೇ.

ಜನರೀಗಲೇ ಜಾಗ್ರತಗೊಂಡರೆ, ಯಥಾರ್ಥ ಪ್ರಜಾರಾಜ್ಯ ಈಗಲೇ ಉದಯಿಸುವುದು; ಜನ ಕಣ್ಣು ಮುಚ್ಚಿಕೊಂಡು ಕಾಲಹರಣ ಮಾಡಿದರೆ, ಈಗಿನವರ ಮಕ್ಕಳು, ಮೊಮ್ಮಕ್ಕಳ ಕಾಲದಲ್ಲಾದರೂ ಆ ರಾಜ್ಯ ಬಂದೇ ತೀರುವುದು!

The Canara Industrial & Banking Syndicate Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925. ಪ್ರಧಾನ ಕಾರ್ಯಾಲಯ ಉಡುಪಿ, ದ. ಭಾರತ.

ಕುಟುಂಬದ ಯಜಮಾನನ ಜವಾಬ್ದಾರಿ

ಈಗಿನ ನಿಮ್ಮ ಸಂಪಾದನೆಯು ಎಷ್ಟೇ ಉತ್ತಮವಿರಲಿ, ನೀವು ಕುಟುಂಬದ ಯಜಮಾನನಾಗಿದ್ದಲ್ಲಿ, ನಾಳಿನ ಕುಟುಂಬದ ಪೋಷಣೆಯ ಚಿಂತೆಯು ನಿಮಗೆ ಇದ್ದೇ ಇರಬಹುದಷ್ಟೆ. ಆದರೆ ಈಗಿನ ನಿಮ್ಮ ಸಂಪಾದನೆ ಸಮಯದಲ್ಲೇ ಉಳಿತಾಯದ ಪ್ರಶ್ನೆಯೂ ನಿಮ್ಮಲ್ಲಿದ್ದರೆ ನಾಳಿನ ಸಮಸ್ಯೆಗಳೆಲ್ಲವನ್ನೂ ಬಗೆಹರಿಸಲು ಶಕ್ಯವಿದೆ. ನಮ್ಮಲ್ಲಿ ಸೇವಿಂಗ್ಸ್ ಬೇಂಕ್ ಲೆಕ್ಕವನ್ನು ತೆರೆಯಿರಿ. ಅಂತೆಯೇ ನಮ್ಮ ರಜತ ಮಹೋತ್ಸವದ ಕ್ಯಾಷ್ ಸರ್ಟಿಫಿಕೇಟುಗಳಿಗಾಗಿ ವಿಚಾರಿಸಿರಿ.

ಟಿ. ಎಂ. ಎ. ಪೈ.
ಚೆಯರ್‌ಮೆನ್ ಮತ್ತು ಮೆನೇಜಿಂಗ್ ಡೈರೆಕ್ಟರ್.

ಬಿಳಿ ಕಾಗದ! ನಾಜೂಕಿನ ಬೈಂಡು!

1950ನೇ ಇಸವಿಯ

ಪಾಕೆಟ್ ಡೈರಿಗಳು

| | | |
|---|---|---|
| ದೊಡ್ಡದು | (ಕೆಲಿಕೊ ಬೈಂಡ್) | 1-12-0 |
| ,, | (ಸಾದಾ) | 1-8-0 |
| ಸಣ್ಣದು | (ಕೆಲಿಕೊ) | 1-4-0 |
| ,, | (ಸಾದಾ) | 0-12-0 |

(ಟಪ್ಪಾಲು ಖರ್ಚು ಪ್ರತ್ಯೇಕ.)

ಸಿಗುವ ಸ್ಥಳಗಳು:—

ನವಭಾರತ ಬುಕ್ ಡಿಪೋ, ಉಡುಪಿ.

ನವಯುಗ ಪ್ರೆಸ್, ಉಡುಪಿ.

# ಭಾಷಾನ್ವಯ ಪ್ರಾಂತ್ಯರಚನೆ...?

...ನವರಿ 26ರಲ್ಲಿ ಜಾರಿಗೆ ಬಂದಿರುವ ...ರಾಜ್ಯ ಶಾಸನದಲ್ಲಿ ಭಾಷಾನ್ವಯ ...ಪ್ರಾಂತ್ಯವಾವುದೂ ಅಸ್ತಿತ್ವಕ್ಕೆ ಬಂದಿಲ್ಲ. ...ಟನಾ ತಯಾರಿಯ ಆದಿಭಾಗದಲ್ಲಿ ಹೊ... ಶಾಸನದೊಂದಿಗೇನೇ ಆಂಧ್ರ, ಕರ್ನಾ... ಕ, ಕೇರಳ, ಮಹಾರಾಷ್ಟ್ರ ಪ್ರಾಂತ್ಯ... ಉದ್ಭವಿಸಬಹುದೆಂಬ ನಿರೀಕ್ಷೆಯ... ಸಂಬಂಧಪಟ್ಟ ಭಾಗಗಳ ಜನರು ...ಟ್ಟಿಕೊಂಡಿದ್ದರು. ಘಟನಾ ತಯಾರಿ ...ರ್ಣಗೊಂಡು, ಅದು ಜಾರಿಗೆ ಬರುವ ...ರೆಗಿನ ಮಧ್ಯಾವಧಿಯಲ್ಲಿ ಆಂಧ್ರ ಪ್ರಾಂ... ವೊಂದರ ರಚನೆಯು ನಿಶ್ಚಿತ ಕೆಲಸ ...ಾಗಿದ್ದುವು. ಜನವರಿ 26ರೊಳಗೆ ...ಂಧ್ರ ಪ್ರಾಂತ್ಯಕ್ಕೆ ಅಸ್ತಿವಾರ ಬೀಳುವು... ಖಂಡಿತ ಮತ್ತು ಸರ್ವ ಸಮ್ಮತವೆಂದಾ...ದ್ದಿತು. ಆದರೆ ನಿಶ್ಚಿತಾವಧಿಗೆ ಕೆಲವೇ ...ಗಳಿರುವಾಗ 'ಆ ದಿನ ಆಂಧ್ರ ...ಪ್ರಾಂತ್ಯವಿಲ್ಲ' ಎಂದು ಪ್ರಕಟವಾಯಿತು. ...ಗ ಕರ್ನಾಟಕ, ಕೇರಳ, ಮಹಾರಾಷ್ಟ್ರಗಳ ...ಗತಿಯನ್ನೇ ಆಂಧ್ರವೂ ಹಿಡಿದಿದೆ. ಮಿ... ಭಾಷಾನ್ವಯ ಪ್ರಾಂತ್ಯಗಳ ರಚನೆಗೆ ...ವಂತಹ ಕೆಲಸಗಳನ್ನು, ಅದೇ ಕಾಲದ...ಲ್ಲಿ, ಇನ್ನು ಆಂಧ್ರ ಪ್ರಾಂತ್ಯ ರಚನೆ... ಮಾಡಬೇಕಾಗಿದೆ. ಹೀಗಾಗಿ ಇನ್ನೊ... ಆಂಧ್ರದ ಪ್ರಶ್ನೆಯನ್ನೆತ್ತಿಕೊಳ್ಳುವಾ... ಮಿಕ್ಕ ಭಾಷಾವಾರು ಪ್ರಾಂತ್ಯಗಳ ...ಶ್ನೆಯನ್ನೂ ಎತ್ತಿಕೊಂಡಾರು—ಅಥ... ಬೇರಿಲ್ಲವಾದರೂ ಕನ್ನಡಿಗರು ತ... ಪ್ರಾಂತ್ಯದ ಪ್ರಶ್ನೆಯನ್ನು ಅದೇ ಕಾ...ಲ್ಲಿ ಅಷ್ಟೇ ರಭಸದಿಂದ ಸ್ವತಃ ಎತ್ತಿ...ದಾರು.

## ...ಆಂಧ್ರರಚನೆಯ ಗಡಿಬಿಡಿ

...ಒತ್ತಿನ ಭಾಗಗಳವರು ಸ್ವಭಾಷಾ ...ಪ್ರಾಂತ್ಯ ರಚನೆಗಾಗಿ ಅಷ್ಟೇ ಆತುರದಲ್ಲಿ ...ಾಗ ಆಂಧ್ರ ಪ್ರಾಂತ್ಯವೊಂದನ್ನು ಜ...ರಿ 26ರೊಳಗೆ ರಚಿಸಬಹುದೆಂದು ...ಂಧ್ರ ನಾಯಕರು ಒಪ್ಪಿಕೊಂಡುದೇ ...ಕ್ಕೂ ಒಂದು ಆಶ್ಚರ್ಯ. ತಮಗಿಂ... ಮುಂದಾಗಿ ತೆಲುಗರ ಬಯಕೆ ಕೈಗೂ...ವದೆಂಬ ಕುರಿತು ಕನ್ನಡಿಗರಾಗಲೀ, ಇ...ರಾಗಲೀ ಅಸೂಯೆಪಡುವ ಮಾತಿಲ್ಲ; ...ರೆ ತಮ್ಮ ಪ್ರಾಂತ್ಯದ ನಿರ್ಮಾಣ ...ತ್ರ ಹಿಂದೆ ಬೀಳಬೇಕೇಕೆ, ಎಂದು ...ರು ಈ ಕಾರಣದಿಂದಾಗಿ ಅಸಹನೆ ...ಳ್ಳುವುದು ಸ್ವಾಭಾವಿಕ. ಅಂತಹ ಅ...ಸಹನೆಯು ಆಂಧ್ರ ಪ್ರಾಂತ್ಯ ನಿರ್ಮಾಣ ...ರ್ಯಗಳ ಸಂದರ್ಭದಲ್ಲಿ ಕನ್ನಡಿಗರಿಂ... ತೋರಿಬಂದಿತ್ತು. ಸಮಾನ ಹಂಗ್ರಿಯ...ರುವವರ ಪೈಕಿ, ಮಿಕ್ಕವರ ಗೊಡವೆಗೆ ...ೋಗದೆ ಒಬ್ಬನನ್ನು ಮಾತ್ರ ಮುಂದೆ ...ದರೆ ಪಕ್ಷಪಾತದ ಆರೋಪ ತಮಗೆ ...ತ್ತೀತೆಂಬುದನ್ನು ಊಹಿಸಲಾಗದವರು ...ಂಧ್ರ ನಾಯಕರಲ್ಲ. ಆದರೆ, ಅವರು ...ಾವ ಮೋಹ, ದ್ವೇಷವೂ ಇಲ್ಲದೆ, ಸ್ವ...ಪ್ರಾಂತ್ಯಯಾಚಿಸುವ ಎಲ್ಲಾ ಭಾಷಾಭಾಗ...ವರನ್ನೂ ಏಕದೃಷ್ಟಿಯಿಂದ ಕಂಡೇ ...ಪಕ್ಷಪಾತಿ ತ್ರಿಮೂರ್ತಿ ಸಮಿತಿ ವರದಿ...ನ್ನು ಮುಂದಿಟ್ಟದ್ದು. ಆ... ದಿಯ ಶರ್ತಗಳಂತೆ ವರ್ತಿ... ...ು ಮಿಕ್ಕವರಂದಾಗದೆ, ತೆಲು...ಂದ ಮಾತ್ರ ಸಾಧ್ಯವಾದ್ದರಿಂದ ಬಾಕಿ...ವರ ಗೋಜಿಬಿಟ್ಟು, ತೆಲುಗರ ಪ್ರಾಂ... ರಚಿಸಿಕೊಡಲು ಅವರು ಒಪ್ಪಲೇ ...ಕಾಯಿತು. ಕೊನೆಗೆ ಆ ತ್ರಿಮೂರ್ತಿ

ಸಮಿತಿ ವರದಿಯ ಶರ್ತಗಳಿಗೇನೇ ವಿರುದ್ಧವಾದ ಅಂಶಗಳು ಆಂಧ್ರ ಪ್ರಾಂತ್ಯ ರಚನೆಯ ಮಟ್ಟಿಗೂ ಮುಂದೆ ಬಂದುದರಿಂದ ಜನವರಿ 26ರೊಳಗೆ ಅದೂ ರಚನೆಯಾಗಲಿಲ್ಲ.

## ಯಾರ ಮನಸ್ಸು ಏನನ್ನುತ್ತಿದೆ?

ಆಂಧ್ರ ಪ್ರಾಂತ್ಯ ರಚನೆ ಹಿಂದೆಬಿದ್ದುದರಿಂದ ಯಾರ ಹೃದಯವಾವ ಧ್ವನಿಕೊಡುತ್ತಿದೆ ಎಂಬುದನ್ನು ಊಹಿಸಲು ಕಷ್ಟವಿಲ್ಲ. ಪಟ್ಟಾಭಿ, ಕಲಾವೆಂಕಟರಾಯರ ಪಂಗಡಿಗರಾದ ತೆಲುಗರನ್ನು ಬಿಟ್ಟರೆ ಮಿಕ್ಕ ತೆಲುಗರಾದರೂ ಈ ಕುರಿತು ನಿರಾಶೆಗೊಂಡಿರಲಾರರು. ತ್ರಿಮೂರ್ತಿ ಸಮಿತಿಯ ಶರ್ತಗಳಂತೆ, ಮದ್ರಾಸ್ ನಗರದ ಬೇಡಿಕೆಯನ್ನು ಬಿಟ್ಟು ಪ್ರಾಂತ್ಯ ರಚಿಸಿಕೊಳ್ಳಲು ತೆಲುಗರು ಒಪ್ಪಿದ್ದರಾದರೂ, ಮದ್ರಾಸ್ ಸಂಬಂಧದ ಶರ್ತದೊಕ್ಕಣೆಯ ಕುರಿತು ತಮಿಳರು ಮತ್ತು ತೆಲುಗರು ಬೇರೆ ಬೇರೆ ಅರ್ಥ ಮತ್ತು ಭಿನ್ನ ನೋಟಗಳನ್ನೇ ಕಟ್ಟಿಕೊಂಡಿದ್ದರು. ಮದ್ರಾಸ್ ನಗರದ ಮಟ್ಟಿಗೆ ತೆಲುಗರಿಗೆ ಯಾವ ಹಕ್ಕೂ ಇರದೆ, ಅದು ತಮಿಳು ಪ್ರಾಂತ್ಯದ್ದಾಗಿಯೇ ಇರುವಂತಹದೆಂದು ತ್ರಿಮೂರ್ತಿ ಸಮಿತಿಯ ತೀರ್ಮಾನವೆಂದೇ ತಮಿಳರ ಅಭಿಪ್ರಾಯ; ಅದಕ್ಕನುಸಾರವಾಗಿ ಆಂಧ್ರರು ಕೂಡಲೇ ಮದ್ರಾಸ್ ನಗರದಿಂದ ಬಿಡಾರ ಕೀಳಬೇಕಲ್ಲದೆ, ತಾತ್ಕಾಲಿಕವಾಗಿಯಾದರೂ ತಮ್ಮ ರಾಜಧಾನಿಯನ್ನು ಅಲ್ಲಿರಗೊಡಿಸುವುದರಿಂದ ಮುಂದೆ ಕಷ್ಟಕ್ಕಿಟ್ಟೀತು ಎಂದೂ ತಮಿಳರು ಖಂಡಿತಾಭಿಪ್ರಾಯಪಟ್ಟಿದ್ದರು. ತೆಲುಗರ ನೋಟ ಬೇರೆಯೇ ಇತ್ತು. ಮದ್ರಾಸಿನ ಬೇಡಿಕೆಯನ್ನು ಇಂದು ತಾವು ಬಿಡಬೇಕಾಗಿ ಬಂದಂತೆಯೇ ನಾಳೆ ತಮಿಳರೂ ಬಿಡಬೇಕಾಗಿ ಬರಬಹುದು; ಅದು ತಮಿಳರ ಪ್ರತ್ಯೇಕಾಡಳಿತೆಯೊಳಗಾಗಬಹುದು; ಹೊಸ ರಾಜಧಾನಿ ಗೊತ್ತು ಹಚ್ಚುವ ವರೆಗೆಂದು, ಆ ಕಾಲ ಬರುವ ವರೆಗೆ ತಾವು ಮದ್ರಾಸ್ ನಗರದಲ್ಲೇ ಉಳಿದುಕೊಂಡರಾಯಿತು. ಅಂತಹ ಸಂದರ್ಭವೊದಗಿದರೆ ತಮಿಳರೊಂದಿಗೇನೇ ತಾವು ಮದ್ರಾಸ್ ಬಿಡುವಂತಾದೀತು—ಒದಗದಿದ್ದರ ಮುಂದಕ್ಕೂ ಮದ್ರಾಸಿನಲ್ಲೇ ಉಳಿದುಕೊಂಡು ತಮಿಳರ ಸರಿಸಮ ಹಕ್ಕನ್ನು ಸಮಕಾಲದ ವರೆಗೂ ಅನುಭವಿಸಬಹುದು— ಎಂದು ಆಂಧ್ರರು ಊಹಿಸಿದ್ದರು. ಆದರೆ ಪ್ರಾಂತ್ಯ ವಿಭಜನಾ ಸಮಿತಿಯ ಶಿಫಾರಸು ಆಂಧ್ರರ ಈ ಬಯಕೆಗನುಗುಣವಾಗಿ ಇರಲಿಲ್ಲ. ಹೊಸ ಪ್ರಾಂತ್ಯವಾಗುವುದರೊಂದಿಗೇನೇ ಅವರು ಮದ್ರಾಸ್ ನಗರವನ್ನು ಬಿಡುವ, ಮತ್ತು ಮುಂದೆ ಎಂದೆಂದಿಗೂ ಅದರ ಪ್ರಸ್ತಾಪವನ್ನೇ ಎತ್ತಲಾಗದಂತಹ ವ್ಯವಸ್ಥೆ ಅದರಲ್ಲಿ ರೂಪಿಸಲ್ಪಟ್ಟದ್ದಿತು. ಈ ದೆಸೆಯಿಂದ ಶ್ರೀ. ಟಿ. ಪ್ರಕಾಶಮರ ಹಿಂಬಾಲಕರಾದ ಬಹು ಸಂಖ್ಯಾತ ತೆಲುಗರು ನಿರಾಶೆಗೊಂಡರು. ಕೂಡಲೇ ಮದ್ರಾಸ್ ನಗರದಿಂದ ತಾವು ದೂರ ಹೋಗುವುದಕ್ಕಿಂತ, ಆಂಧ್ರ ಪ್ರಾಂತ್ಯ ರಚನೆಯೇ ದೂರ ಹೋಗುವುದು ವಾಸಿ, ಎಂಬ ಭಾವನೆ ಅವರಲ್ಲಿ ಮೊಳೆಯಿತು. ಇಂದು ಹಾಗಾಗಿದೆ; ಆಂಧ್ರರಲ್ಲಿ ಹೆಚ್ಚಿನವರು ಶಾಂತಚಿತ್ತದಿಂದಿದ್ದಾರೆ. ಮದ್ರಾಸ್ ನಗರದ ಗೊಡವೆ ಬಿಡಿಸಿ, ತೆಲುಗರನ್ನು ಆದಷ್ಟು ಬೇಗನೇ ದೂರಕ್ಕಟ್ಟಿ ಬಿಡಬೇಕೆಂಬ ಆತುರದಿಂದ, ಆಂಧ್ರ ಪ್ರಾಂತ್ಯರಚನೆಯ ಕೆಲಸಗಳನ್ನು ಅತ್ಯವಸರದಿಂದ ಮಾಡಿಕೊಟ್ಟದ್ದ ತಮಿಳರಾದರೂ ಪ್ರಕೃತ ಆತುರಕ್ಕೀಡಾಗುವಂತಿಲ್ಲ. ಇನ್ನೊಮ್ಮೆ ಮದ್ರಾಸ್ ನಗರದ ಬೇಡಿಕೆ ತೆಲುಗರಿಂದ ಮುಂದೆ ಬಂದೀತೆಂಬ ಮಾತಂತಿರಲಿ; ಸದ್ಯಸ್ಥಿತಿಯಲ್ಲಿ ಆಂಧ್ರ ಪ್ರಾಂತ್ಯ ರಚನೆಯ ಪ್ರಶ್ನೆಯೇ ಹಲವು ವರುಷಗಳ ವರೆಗೆ ಹಿಂದೆ ಬಿದ್ದೀತೆಂದು ನಂಬಲು ಕಾರಣಗಳಿವೆಯಾದ್ದರಿಂದ ತಮಿಳರಂತೂ ಸಮಾಧಾನದಿಂದಲೇ ಇದ್ದಾರೆ. ಕನ್ನಡಿಗರು ನಿಜಕ್ಕೂ ಒಮ್ಮೆಗೊಂದು ಕಂಟಕ ಕಳೆದುಹೋಯಿತೆಂಬ ಸಮಾಧಾನದುಸಿರು ಬಿಡಲೇ ಬೇಕು. ಆಂಧ್ರವೊಂದು ಮಾತ್ರ ನವರಾಜ್ಯ ಶಾಸನದಲ್ಲಿ ಮೂಡಿ ತೋರಿ ಕರ್ನಾಟಕವು ಹಿಂದೆ ಬೀಳುತಿದ್ದರೆ, ಕೆಲವೆಡೆಯ ಕನ್ನಡಿಗರ ಸ್ಥಿತಿ ಶೋಚನೀಯವಾಗುತಿತ್ತು. ಮಾತ್ರವಲ್ಲ; ಮುಂದೆ ಕರ್ನಾಟಕದ ರಚನೆಯ ಪ್ರಶ್ನೆಯನ್ನು ಮುಂದೊಡ್ಡುವ ಸಂದರ್ಭವೆಂದು ಬರುತಿತ್ತೋ ಹೇಳುವುದಸಾಧ್ಯ. ಇನ್ನೊಮ್ಮೆ ಆಂಧ್ರದ ಪ್ರಶ್ನೆ ಮುಂದೆ ಬರುವಾಗಲೇ ಅದರ ಜತೆಯಲ್ಲಿ ಕರ್ನಾಟಕದ ಪ್ರಶ್ನೆಯನ್ನೂ ಮುಂದೊಡ್ಡಲು ಸಾಧ್ಯವಿದೆ; ಆಂಧ್ರವಾದದ ಬಲವನ್ನು ಕನ್ನಡಿಗರೂ ಉಪಯೋಗಿಸಿಕೊಳ್ಳಲಾಗುವ ಅನುಕೂಲತೆಯಿದೆ. ಕಚ್ಚಾಟವೆದ್ದಲ್ಲಿ, ಎಲ್ಲಾ ಭಾಷಾ ಭಾಗಗಳವರ ಕೆಲಸಕ್ಕೂ ಧಕ್ಕೆಯೆಂಬುದು ಸ್ವತಃಸಿದ್ಧವಾದ್ದರಿಂದ ಕನ್ನಡಿಗರನ್ನು ಹಿಂದೂಡುವ ಒತ್ತಡ ಆಂಧ್ರರಿಂದ ಬೀಳದು. ಇಲ್ಲಿ ನಿಜಕ್ಕೂ ಚಿಂತನೆಗೀಡಾಗಿರುವವರೆಂದರೆ ಕೇಂದ್ರ ನಾಯಕರು. ಆಂಧ್ರ ಪ್ರಾಂತ್ಯ ಮತ್ತಿತರ ಭಾಷಾವಾರು ಪ್ರಾಂತ್ಯ ರಚಿಸಬೇಕೋ, ಬೇಡವೋ ಎಂದು ಅವರ ಮನಸ್ಸೀಗ ಬುಡದಲ್ಲಿಯೇ ಅಡಿಮೇಲಾಗಹತ್ತಿದೆ.

## ಮುಂದೇನು?

ವಸ್ತುಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸುವಾಗ ಆಂಧ್ರರು ಮಾತ್ರವಲ್ಲ; ಭಾಷಾನ್ವಯ ಪ್ರಾಂತ್ಯ ಯಾಚಿಸುತ್ತಿರುವ ಕನ್ನಡಿಗರು, ಮಲೆಯಾಳಿಗಳು, ಮಹಾರಾಷ್ಟ್ರೀಯರೇ ಮೊದಲಾದವೆಲ್ಲರೂ ತಮ್ಮ ಬಯಕೆಯು ಬರಿಯ ಕನಸಾಗಿಯೇ ಉಳಿದು ಹೋದೀತೇ ಎಂದು ಹೆದರಲು ಅವಕಾಶವಿದೆ. ನವೀನಾಂಧ್ರ ಪ್ರಾಂತ್ಯವು ಆರ್ಥಿಕ ಭದ್ರತೆಯದಾಗಲಾರದೆಂಬ ಭೀತಿಯೇ ಅದರ ರಚನೆಯನ್ನು ಹಿಂದೂಡಿದ ಪ್ರಬಲ ಕೈ; ಶರ್ತ ಪ್ರಕಾರ ಆಂಧ್ರರೊಳಗೆ, ಆಂಧ್ರರು ಮತ್ತವರೊತ್ತಿನ ಕನ್ನಡಿಗರೊಳಗೆ ಒಮ್ಮತವಿಲ್ಲವೆಂಬ ಕಾರಣ ಆ ಮೇಲಿನದು. ಈ ಪೈಕಿ ಮೊದಲನೇ ಸಂದೇಹವು ಪ್ರತಿಯೊಂದು ಭಾಷಾವಾರು ಪ್ರಾಂತ್ಯದ ಮಟ್ಟಿಗೂ ಕೇಂದ್ರ ನಾಯಕರಲ್ಲಿ ಮೂಡಬಹುದು. ಎರಡನೇ ಸಂದೇಹವನ್ನು ನಿಜಗೊಳಿಸುವ ನಿದರ್ಶನಗಳು ಭಾಷಾನ್ವಯ ಪ್ರಾಂತ್ಯ ರಚನಾ ಪ್ರಶ್ನೆಯನ್ನು ಮುಂದೆ ಬರುವಾಗಲೆಲ್ಲಾ ಇನ್ನಷ್ಟು ದೊಡ್ಡ ಪರಿಮಾಣದಲ್ಲಿ ತೋರಿಬರಲಿವೆ. ಹಾಗಾದರೆ ಎಂದಾದರೊಂದು ಕಾಲದಲ್ಲಾದರೂ ಭಾಷಾನ್ವಯ ಪ್ರಾಂತ್ಯಗಳಾಗುವವೇ ಎಂಬ ಸಂದೇಹವೇಳುತ್ತಿದೆ. ತಾವು ಈ ತತ್ವವನ್ನು ಒಪ್ಪಿಕೊಂಡು ಮೋಸವಾಯಿತು, ಎಂಬ ಪಶ್ಚಾತ್ತಾಪ ಕೇಂದ್ರ ನಾಯಕರಲ್ಲೀಗ ನಿಜಕ್ಕೂ ಮೂಡಿರಬಹುದು. ದೀರ್ಘಾವಧಿಯಿಂದ ಕಟ್ಟಿಕೊಂಡಿರುವ ಮತ್ತೀಗಲೂ ಒಪ್ಪಿಕೊಂಡಿರುವ ವಿಷಯವೆಂಬುದಲ್ಲವಾಗಿದ್ದರೆ,—'ಭಾಷಾನ್ವಯವಾಗಿ ಪ್ರಾಂತ್ಯರಚನೆಯೆಂಬುದಿಲ್ಲ' ಎಂದು ಕೇಂದ್ರ ನಾಯಕರು ಹೇಳಿ ಬಿಡುತಿದ್ದರು. ಇನ್ನು ಹಾಗೆ ಹೇಳಲಾಗುವುದು ಅಸಾಧ್ಯವಾದರೂ ಅದನ್ನು ಮಾಡುವ ಸಂದರ್ಭ ಚಿರಕಾಲದ ವರೆಗೂ ಮುಂದೆ ಮುಂದೆ ಹೋಗಲು ಸಾಧ್ಯವಿದೆ. ಆದ್ದರಿಂದ ಭಾಷಾನ್ವಯ ಭಾಗಗಳವರೆಲ್ಲರೂ ಗಾಢ ಯೋಚನೆಗೊಳಗಾಗಬೇಕಾದ ಸಂದರ್ಭವಿದು. ಪ್ರತಿಯೊಂದು ಭಾಷಾ ಭಾಗಗಳವರೂ ಪ್ರಥಮತಃ ತಮ್ಮೊಳಗಿನ ವಿವಾದಗಳನ್ನು ತೀರ್ಮಾನಿಸಿಕೊಂಡು ತಮ್ಮ ಸ್ವಭಾಷಾಪ್ರಾಂತ್ಯದ ಸ್ಪಷ್ಟ ಯೋಜನೆಯನ್ನು ತಯಾರಿಸಿಕೊಳ್ಳಬೇಕು; ಆ ಮೇಲೆ ನೆರೆಯ ಭಾಷಾ ಭಾಗಗಳವರೆಲ್ಲರೊಟ್ಟಾಗಿ, ತಮ್ಮೊಳಗೇನೇ ಸರಹದ್ದು ತೀರ್ಮಾನಗಳನ್ನು ಮಾಡಿಕೊಳ್ಳಬೇಕು. ಜತೆಯಲ್ಲೇ ಆರ್ಥಿಕ ಭದ್ರತೆಯ ಯೋಜನೆಗಳನ್ನೂ ರೂಪಿಸಿಕೊಳ್ಳಬೇಕು. ಈ ಸರ್ವಸಮ್ಮತ ಹಾಗೂ ಸೌಹಾರ್ದಪೂರ್ಣ ಯೋಜನೆಗಳನ್ನು ಕೇಂದ್ರ ನಾಯಕರ ಮುಂದಿಡಬೇಕು. ಅವುಗಳನ್ನೊಪ್ಪಿಕೊಳ್ಳುವುದೊಂದರ ವಿನಹ ಬೇರಾವ ಕೆಲಸವೂ ಕೇಂದ್ರ ನಾಯಕರಿಗೆ ಭಾಷಾನ್ವಯ ಪ್ರಾಂತ್ಯರಚನೆಯ ಮಟ್ಟಿಗಿಲ್ಲವೆಂದಾಗಬೇಕು. ಹೀಗಾಗದೆ ಹೋದರೆ ಭಾಷಾವಾರು ಪ್ರಾಂತ್ಯದ ಪ್ರಶ್ನೆಯು ಬುಡಕ್ಕೇನೇ ಕೊಡಲಿ ಬೀಳುವ ಸ್ಪಷ್ಟವಾಯ ಕಾಣುತ್ತಿದೆ!

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya.

ಋತುಸ್ರಾವ ನಿಂತಿತು
'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ: ರೂ 3-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ. 8-[ವಿ. ಪಿ. ಹಸ್ತರವಾನೆ ಪ್ರತ್ಯೇಕ.]
MRS. D. DEVEE, P. DB. (N. J.)
Tollygunge CALCUTTA.
ಸ್ಟಾಕಿಸ್ಟರು: ಕಲ್ಯಾಣ ಕಂಪೆನಿ, ಮಂಗಳೂರು

# ಅಟಂ ಯುಗದಿಂದ— ಹೈಡ್ರೋಜನ್ ಯುಗಕ್ಕೆ!

ಪ್ರಾಪಂಚಿಕ ರಂಗದಲ್ಲಿ, ಎಲ್ಲೆಲ್ಲೂ ವಿಶೇಷ ರೂಪದ ಕಾವು ತಾಗಿದ ಅನುಭವ ಕಳೆದ ದಿನಗಳಲ್ಲಾಗಿದೆ. ಮಾನವ ಜನಾಂಗದ ಹೃದಯದಲ್ಲಿ ಹಾಹಾಕಾರ ರೂಪದ ಪ್ರತಿಧ್ವನಿಯನ್ನೆಬ್ಬಿಸುತ್ತಾ ಮುಂದೆ ಬಂದಿರುವ ಸ್ವರವೆಂದರೆ ಹೈಡ್ರೋಜನ್ (ಜಲಜನಕ ವಾಯು) ಬಾಂಬಿನದು. ಇದು ನಿಜಕ್ಕೂ ವಿನಾಶಕೋಪಕರಣಗಳೆಲ್ಲವನ್ನೂ ಮೀರಿಕ್ಕಿರುವ ಪ್ರಳಯ ಚೆಂಡು! ಅಟಂಬಾಂಬಿನ ನಿಯಂತ್ರಣ ಅಥವಾ ನಿರ್ಮೂಲನಪದ್ಧತಿಯ ಮಾತುಕತೆಗಳು ವಾದ ರಂಗದಲ್ಲಿ ಕೇಳಿ ಬರುತ್ತಿರುವಾಗಲೇ, ಅದಕ್ಕೂ ಸಹಸ್ರ ಪಾಲು ಹೆಚ್ಚಿನದಾದ ಹೈಡ್ರೋಜನ್ ಬಾಂಬಿನ ತಯಾರಿ ಕಾರ್ಯತಃ ನಡೆಯುತ್ತಿದೆಯೆನ್ನುವಾಗ ಆ ಕಡೆಯ ಪ್ರಮುಖ ರಾಷ್ಟ್ರಗಳ ಮಾತು ಕೃತಿಗಳಲ್ಲಿರುವ ವ್ಯತ್ಯಾಸ ಮನದಟ್ಟಾಗದಿರದು. ಅಂತೆಯೇ ಇಡೀ ಪ್ರಪಂಚವನ್ನು ಧೂಳು ಧೂಸರಗೊಳಿಸಿಬಿಡುವ ಅನಾಹುತವೊಂದು ಭವಿಷ್ಯ ಪರದೆಯೆಡೆಯಿಂದ ಇಣುಕುತ್ತಿರುವ ಭೀಕರ ದೃಶ್ಯವೂ ಇಲ್ಲದೆ

ಪ್ರಜಾರಾಜ್ಯವಾಗಿ ಮಾರ್ಪಟ್ಟ ಭಾರತದ ಆದಿಯ ದಿನಗಳಲ್ಲಿ, ಅದರ ಪಾಲಿಗೆ ಪಾಕಿಸ್ತಾನ್ ಜನನದಾರಭ್ಯ ಉಳಿದುಕೊಂಡಿರುವ ಕೆಲವು ವಿವಾದಗಳು ಇನ್ನಷ್ಟು ದೊಡ್ಡಾಕಾರಗೊಂಡಿವೆ.

ಬರ್ಲಿನ್ ಜಗಳದ ಪುನರುತ್ಥಾನ, ಮತ್ತಿತರ ಹಳೇ ಘರ್ಷಣೆಗಳ ವಿಕಾಸ ಮುಂತಾದವುಗಳಿಂದ . ಜಾಗತಿಕ ಸ್ಥಿತಿ ಮತ್ತಷ್ಟು ಕಳತೆಗೊಂಡಿದೆ ಎಂಬುದು ಸ್ಪಷ್ಟ.

## ಹೈಡ್ರೋಜನ್ ಬಾಂಬು

ಅಮೆರಿಕಾಧ್ಯಕ್ಷ ಟ್ರೂಮೇನರು ಕೊಟ್ಟ 'ಹೈಡ್ರೋಜನ್ ಬಾಂಬು' ತಯಾರಿಯ ಆಜ್ಞೆಯು ಜಾಗತಿಕರಂಗದಲ್ಲಿ ಒಂದು ಮಹಾ ಸ್ಫೋಟವನ್ನೆಬ್ಬಿಸಿ, ಗಲಿಬಿಲಿ ನಿರ್ಮಿಸಿದೆ. ಅಟಂ ಬಾಂಬಿಗಿಂತ ಸಾವಿರ ಪಾಲು ಹೆಚ್ಚು ವಿನಾಶ ಶಕ್ತಿಯುದಾಗುವ ಹೈಡ್ರೋಜನ್ ಬಾಂಬನ್ನು ತಯಾರಿಸುವುದು ಆಗತ್ಯವೋ ಅಲ್ಲವೋ ಎಂಬ ಕುರಿತು ಅಮೇರಿಕನ್ ಮುತ್ಸದ್ದಿಗಳ ಕೂಟವೊಂದು ಕಳೆದ ನಾಲ್ಕು ತಿಂಗಳುಗಳಲ್ಲಿ ಗುಪ್ತ ಪರ್ಯಾಲೋಚನೆಗಳನ್ನು ನಡೆಸಿದ್ದಿತು. ಈ ಚರ್ಚಾಂತ್ಯದಲ್ಲಿ ಅಧ್ಯಕ್ಷ ಟ್ರೂಮೇನರು ಅದನ್ನು ತಯಾರಿಸಲೇಬೇಕೆಂಬ ನಿರ್ಧಾರಾಜ್ಞೆ ಹೊರಡಿಸಿದರು. “ಯಾವುದೇ ಸಂಭಾವ್ಯ ಆಕ್ರಮಣದ ವಿರುದ್ಧ ನನ್ನ ರಾಷ್ಟ್ರವು ತನ್ನನ್ನು ತಾನು ರಕ್ಷಿಸಿಕೊಳ್ಳಲು ಸಮರ್ಥವಾಗುವಂತೆ ನೋಡುವುದು ಸಶಸ್ತ್ರ ಸೇನೆಗಳ ಸರ್ವಸೇನಾಧಿಯಾಗಿರುವ ನನ್ನ ಕರ್ತವ್ಯಾಂಶವಾಗಿದೆ. ತದನುಸಾರವಾಗಿ ಹೈಡ್ರೋಜನ್ ಅಥವಾ ಮಹಾನ್ ಬಾಂಬೆಂದು ಕರೆಯಲ್ಪಡುವುದರ ಸಮೇತ ಎಲ್ಲಾ ವಿಧದ 'ಅಟಮ್' ಉಪಕರಣಗಳ ತಯಾರೀ ಕೆಲಸವನ್ನು ಸಾಗಿಸುತ್ತಾ ಹೋಗಬೇಕೆಂದು ನಾನು ಅಟಮಿಕ್ ಎನರ್ಜಿ ಕಮಿಶನಿಗೆ ನಿರ್ದೇಶಿಸಿದ್ದೇನೆ” ಎಂದು ಟ್ರೂಮೇನರ ಹೇಳಿಕೆಯಾಗಿದೆ. ರಶ್ಯವು ಈ ಬಾಂಬನ್ನು ತಯಾರಿಸುತ್ತಿದೆ ಎಂದು ನಂಬಲೆಡೆ ದೊರೆತಿದೆ. ಇಷ್ಟರವರೆಗೆ ಎಲ್ಲಿಯೂ ಒಂದು 'ಹೈಡ್ರೋಜನ್ ಬಾಂಬು' ತಯಾರಾಗಿಲ್ಲವೆಂಬುದು ನಿಜ. ಈ ವರ್ಷಾಂತ್ಯದೊಳಗೆ ಲೋಕದ ಒಂದೆರಡು ಶಸ್ತ್ರಾಗಾರಗಳು ಜಲಜನಕ ವಾಯು ಬಾಂಬನ್ನು ತುಂಬಿಕೊಂಡಿರುವಂತಾಗುವದೆಂಬ ನಿರೀಕ್ಷೆಯಿದೆ. ಪ್ರತ್ಯಕ್ಷ ಪ್ರಳಯ ಚೆಂಡೆಂದು ಈ ತನಕ ಅತಿ ಹೆಚ್ಚಿನ ಭಯಾಶ್ಚರ್ಯಗಳನ್ನು ನಿರ್ಮಿಸಿದ್ದ ಅಟಂಬಾಂಬಿಗಿಂತ ಸಾವಿರ ಪಾಲು ಹೆಚ್ಚು ಧ್ವಂಸ ಬಲವುಳ್ಳದ್ದು 'ಹೈಡ್ರೋಜನ್ ಬಾಂಬು' ಎಂದ ಮೇಲೆ ಬೇರೆ ವರ್ಣನೆ ಅನಗತ್ಯ. ಇದೊಂದು ಬಾಂಬಿನ ತಯಾರಿಗೆ 100 ಮಿಲಿಯದಿಂದ 4000 ಮಿಲಿಯ ಡಾಲರುಗಳ ವರೆಗೆ ವೆಚ್ಚತಾಗಬಹುದಂತೆ. ಈ ಬಾಂಬು 100 ಚದರ ಮೈಲಿಗಿಂತಲೂ ವಿಸ್ತಾರವಾದ ಪ್ರದೇಶವನ್ನು ಅದರೊಳಗಿರುವ ಎಲ್ಲವುಗಳೊಂದಿಗೆ ಭಸ್ಮ ಮಾಡಿ ಬಿಡಬಲ್ಲುದು. ಜಪಾನಿನ ಹಿರೋಶಿಮಾದ ಮೇಲೆ ಲೋಕ ಚರಿತ್ರೆಯಲ್ಲೇ ಪ್ರಥಮ ಬಾರಿ ಬಿದ್ದ ಅಟಂ ಬಾಂಬು 42,000 ಜನರನ್ನು ಕೊಂದು, ಬೇರೆ 40,000 ಮಂದಿಯನ್ನು ಅಂಗಹೀನರನ್ನಾಗಿ ಮಾಡಿದ್ದಿತು. ಅದಕ್ಕೂ ಸಹಸ್ರ ಪಾಲು ಹೆಚ್ಚು ಧ್ವಂಸ ಬಲವುಳ್ಳ ಹೈಡ್ರೋಜನ್ ಬಾಂಬು ಬಿದ್ದಲ್ಲಿ ಹೇಗಾದೀತೆಂಬುದನ್ನು ಊಹಿಸುವಾಗ ರೋಮಾಂಚವಾಗುತ್ತಿದೆ. ಅಟಮ್ ಶಕ್ತಿಯು ಕೇವಲ ವಿನಾಶ ಕಾರ್ಯಕ್ಕಲ್ಲ— ಅದರಿಂದ ವಿಧಾಯಕ ಕಾರ್ಯ ಕೂಡಾ ಸಾಧ್ಯವಿದೆ, ಎಂಬ ನೆನಪನ್ನು ಮುಂದೊಡ್ಡಿ ಅಟಂ ಶಕ್ತಿಗಾಧಾರ ಕೊಡಲಾಗುತ್ತಿದೆ ಆದರೇ ಹೈಡ್ರೋಜನ್ ಶಕ್ತಿಯು ಧ್ವಂಸಕ್ಕಲ್ಲದೆ ಬೇರಾವುದಕ್ಕೂ ಉಪಯೋಗವಾಗುವಂತಹದಲ್ಲ. ಅದರಲ್ಲೂ, ಕ್ಷಣ ಕಾಲದೊಳಗೆ ಲಕ್ಷಾವಧಿ ಮಂದಿಯನ್ನು ಮತ್ತು ಮೈಲುಗಟ್ಟಲೆ ಸ್ಥಳವನ್ನು ಸುಟ್ಟು ಬಿಡುವ ಈ ಅಪಾರ ಶಕ್ತಿಗೆ ಸೇನೆ ಅಥವಾ ಸೇನಾ ಠಾಣ್ಯಗಳನ್ನಷ್ಟೇ ಗುರಿ ಮಾಡಿದರೆ ಅಲ್ಪೋಪಯೋಗ ಪಡೆದಂತಾಗುವುದರಿಂದ ಲಕ್ಷಗಟ್ಟಲೆ ನಿರಪರಾಧಿ ಜನರು ತುಂಬಿರುವ ನೆಲೆಯನ್ನೇ ಗುರಿಮಾಡಿ, ಅದರ ಪೂರ್ಣೋಪಯೋಗ ಪಡೆಯಬಹುದೆಂದು ನಿರೀಕ್ಷಿಸಬೇಕು. ಇಂತಹ ಧ್ವಂಸೋಪಕರಣವನ್ನು ತಯಾರು ಮಾಡುತ್ತಿರುವವರಲ್ಲಿ ಲೋಕ ಶಾಂತಿಯ ಬಯಕೆ ಅಥವಾ ಅದರ ನಿರೀಕ್ಷೆಯಿದ್ದೀತೆಂದು ನೆನಸುವುದು ಕೇವಲ ಭ್ರಾಂತಿಯೇ ಸರಿ.

## ಬ್ರಿಟಿಷ್ ಚುನಾವಣೆ

ಇದೇ ತಿಂಗಳ ತಾ. 23ಕ್ಕೆ ನಡೆಯಲಿರುವ ಬ್ರಿಟನಿನ ಮಹಾ ಚುನಾವಣೆಯ ಸ್ಪರ್ಧೆ ಗೊಂದಲವೀಗ ಭರದಿಂದ ನಡೆದಿದೆ. ಸದ್ಯ ಆಡಳಿತೆಯಲ್ಲಿರುವ ಕೂಲಿಗಾರ ಪಕ್ಷ, ಚರ್ಚಿಲ್ಲರ ಕನ್ಸರ್ವೇಟಿವ್ ಪಕ್ಷ, ಲಿಬರಲ್ ಪಕ್ಷ, ಸೋಶಿಯಲಿಸ್ಟ್ ಪಕ್ಷ, ಕಮ್ಯೂನಿಸ್ಟ್ ಪಕ್ಷ, ಸ್ವತಂತ್ರರು ಈ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದಾರೆ. ಹುರಿಯಾಳುಗಳಷ್ಟೇ ಸಂಗತಿ ಜ್ಞಾನವಿರುವ ಬ್ರಿಟನಿನ ಮತದಾರರ ನಡುವೆ ಚುನಾವಣಾ ಪ್ರಚಾರ ಕಾರ್ಯಗಳು ಭರದಿಂದ ನಡೆಯುತ್ತವೆ. “ಕೂಲಿಗಾರ ಪಕ್ಷವೇ ಪುನಃ ಅಧಿಕಾರಕ್ಕೆ ಬರುವುದು. ಕೂಲಿಗಾರ ಆಡಳಿತೆಯಲ್ಲಾದ ಭಾರತ ಮತ್ತು ಪಾಕಿಸ್ತಾನಗಳನ್ನು ಅವುಗಳ ಜನತೆಗೊಪ್ಪಿಸಿಕೊಟ್ಟ ವ್ಯವಸ್ಥೆ ಮತ್ತು ಮಾರ್ಶಲ್ ಯೋಜನೆಯ ವ್ಯವಸ್ಥೆಗಳು ಜನಪ್ರಿಯತೆ ಗಳಿಸಿವೆ. ಪೂರ್ಣ ಉದ್ಯೋಗವೇ ಈ ಬಾರಿಯ ನಮ್ಮ ಮುಖ್ಯ ಚುನಾವಣಾ ಸೂತ್ರ. ಕೂಲಿಗಾರ ಆಳ್ವಿಕೆಯ ಅವಧಿಯಲ್ಲಾದ ಕಾರ್ಯಗಳನ್ನು ಯುದ್ಧ ಪೂರ್ವದ ಅವಧಿಯಲ್ಲಾಗಿದ್ದ ಕೆಲಸಗಳೊಡನೆ ಹೋಲಿಸಿ ನೋಡಿದರೆ ನಮ್ಮಾಡಳಿತೆಯ ಉಪಯುಕ್ತತೆ ಮನದಟ್ಟಾಗ ವದು. ಚರ್ಚಿಲ್ಲರು ಯುದ್ಧಾವಧಿಯ ಆಡಳಿತೆಯಿಂದ ಚರಿತ್ರೆಯಲ್ಲೊಂದು ಸ್ಥಾನ ಗಳಿಸಿದ್ದಾರೆ. ಆದರೆ ಆ ಮೇಲಿನ ಅವರ ಅಪ್ರಾಗತಿಕತನವು ಜನತೆಗೊಗ್ಗದು.” ಎಂದು ಬ್ರಿಟನಿನ ಪ್ರಧಾನ ಮಂತ್ರಿ ಹಾಗೂ ಕೂಲಿಗಾರಪಕ್ಷದ ನಾಯಕ ಮಿ ಅಟ್ಲೀಯವರಂದಿದ್ದಾರೆ. ಈ ಬಾರಿಯ ಚುನಾವಣೆಯು, ಮುಖ್ಯವಾಗಿ ಕೂಲಿಗಾ ಪಕ್ಷವುಮತ್ತದರ ಹಿಂಬಾಲಕರ ಸಮತಾವಾ ವರ್ಗ ಮತ್ತು ಕನ್ಸರ್ವೇಟಿವ್ ಪಕ್ಷ ತ್ತದರ ಹಿಂಬಾಲಕರ ಸಮತಾವಾದ ರೋಧೀ ವರ್ಗಗಳೊಳಗಿನದಾಗುವದೆಂ ನಿರೀಕ್ಷೆ ಆದಿಭಾಗದಲ್ಲಿದ್ದಿತು. ಆದ ನಿರೀಕ್ಷೆಗೆ ವಿರುದ್ಧವಾಗಿ ಇವೆರಡು ವರ್ಗ ಗಳ ಮಧ್ಯವರ್ತಿ ಲಿಬರಲ್ ಪಕ್ಷ 400 ಮಂದಿ ಉಮೇದ್ವಾರಿಗಳೀಗ ಚು ನಾವಣೆಗಿಳಿದಿರುವುದರಿಂದ, ಏಕಾಕಿಯಾ ಸರಕಾರ ನಿರ್ವಹಿಸಲಾಗುವಂತಹ ಪ್ರ ಲಬಹುಮತವು ಯಾವ ಒಂದು ಪಕ್ಷಕೂ ದೊರೆಯಲಾರದೇನೋ ಎಂಬ ಸ ದೇಹವು ಸ್ಥಿತಿ ನಿರೀಕ್ಷಕರಲ್ಲೆದ್ದಿದೆ. ಸಮಿ ಶ್ರ ಸರಕಾರ ರಚಿಸಿಕೊಳ್ಳುವದು ತಮ ಸಮ್ಮತವಲ್ಲವೆಂದು ಕೂಲಿಗಾರ ಪಕ್ಷ ಕನ್ಸರ್ವೇಟಿವ್ ಪಕ್ಷವೆಂದೂ ಅಭಿಪ್ರಾ ಯ ಸೂಚಿಸಿವೆ ಸಾಮ್ರಾಜ್ಯದ ಮೂಲ ಧಾರವಾಗಿದ್ದ ಭಾರತವನ್ನು ಅವಸರವಸ ದಿಂದ ಸ್ವತಂತ್ರಗೊಳಿಸಿ ಬ್ರಿಟಿಷ್ ಸ ಮ್ರಾಜ್ಯವನ್ನೇ ಬರ್ಖಾಸ್ತು ಪಡಿಸಿ ಕೂಲಿಗಾರ ಪಕ್ಷದ ಕಡೆಗೆ ತಮ್ಮ ಹೊ ಗಾರಿಕೆಯರಿತಿರುವ ಇಂಗ್ಲಿಷ್ ಮತದಾ ರಿಗೇನೂ ಅಸಮಾಧಾನವಿಲ್ಲವೆಂಬು ಸ್ಪಷ್ಟವಾಗಿದೆ. ಎಲ್ಲಾ ಪಕ್ಷಗಳಿಂತಲ ಹೆಚ್ಚಿನ ವಿಜಯ ಭರವಸೆ ಕೂಲಿಗಾರ ಕ್ಷಕ್ಕಿದೆ. ಭಾರತವು ‘ರಿಪಬ್ಲಿಕ್’ ಆ ತಿಂಗಳಾಗುವುದರೊಳಗೆ ಭಾರತಕ್ಕೆ ರಾಜ್ಯ ಬಿಟ್ಟುಕೊಟ್ಟಿದ್ದ ಬ್ರಿಟನಿನ ಕೂ ಲಿಗಾರ ಪಕ್ಷವು ಪರೀಕ್ಷೆಗೀಡಾಗಿರು ದರಿಂದ ಫಲಿತಾಂಶವೇನಾಗಬಹುದೆಂ ದನ್ನು ಭಾರತೀಯರೂ ಸ್ವಾಭಾವಿಕ ಕುತೂಹಲದೊಡನೆ ನಿರೀಕ್ಷಿಸುತಿದ್ದಾರೆ.

## ಇತರ ಆಂದೋಲನಗಳು

ಜರ್ಮನಿಯ ರಾಜಧಾನಿ ಬರ್ಲಿನಿ ಲ್ಲಿ ರಶ್ಯ ಮತ್ತು ಅಮೇರಿಕ, ಬ್ರಿಟನ





# ಕೆನರಾ ಬ್ಯಾಂಕ್, ಲಿಮಿಟೆಡ್

(ಸ್ಥಾಪನೆ ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಭಾರತದಲ್ಲಿ ಸಾಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ೧,೦೦೦ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೫೦ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ.

| | | | |
|---|---|---|---|
| ೩ ತಿಂಗಳು | ... ... | ನೂರಕ್ಕೆ ವರ್ಷಕ್ಕೆ | ೨। |
| ೪ ರಿಂದ ೫ ತಿಂಗಳು | ... ... | ,, ,, | ೨॥ |
| ೬ ರಿಂದ ೭ ತಿಂಗಳು | ... ... | ,, ,, | ೨॥। |

ರೂ. ೧,೦೦೦ಕ್ಕೆ ಕಡಿಮೆಯಲ್ಲದ ರೂ. ೧೦,೦೦೦ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದು ಕೊಳ್ಳಬಹುದು.

ಮಂಗಳೂರು ಶಾಖೆಗಳು

(1) ಬಂದರ ರೋಡ್; (2) ಡೊಂಗರಕೇರಿ,

ಇತರ ಶಾಖೆಗಳು: ಕಾರ್ಕಳ, ಬಂಟವಾಳ, ಮುಲ್ಕಿ, ಕುಂದಾಪುರ, ಉಡುಪಿ, ಗಂಗೊಳ್ಳಿ, ಪುತ್ತೂರು, ಕಾಸರಗೋಡು, ಬೊಂಬಾಯಿ, ಇತ್ಯಾದಿ ಇತ್ಯಾದಿ.

**CANARA BANK, LIMITED**

**(Estd 1906)**

# ಭಾರತ-ಪಾಕಿಸ್ತಾನ್ ಅಂತ್ಯರಹಿತ ವಿವಾದ

ಫ್ರಾನ್ಸ್‌ಗಳೊಳಗೆ ಪುನಃ ವಿವಾದವೆದ್ದಿದೆ. ಪಾಶ್ಚಾತ್ಯ ರಾಷ್ಟ್ರಗಳ ಕ್ಷೇತ್ರದಿಂದ ಬರ್ಲಿನಿಗಿರುವ ರಸ್ತೆಯ ಚಲನವಲನಗಳ ಮೇಲೆ ರಶ್ಯವು ನಿರ್ಬಂಧಗಳನ್ನು ಹೇರಿದ್ದಿತು. ಅದಕ್ಕಾಗಿ ಪಾಶ್ಚಾತ್ಯ ತ್ರಿರಾಷ್ಟ್ರಗಳು ರಶ್ಯಕ್ಕೆ ನಿಷೇಧ ಸೂಚಿಸಿದ್ದುವು. ಈ ನಿಷೇಧ ಸೂಚನೆಯನ್ನು ಬರ್ಲಿನಿನ ರಶ್ಯನ್ ಸೇನಾನಿ ನಿರಾಕರಿಸಿದ್ದಾನೆ.

ಇತ್ತೀಚೆಗೆ ಸ್ವತಂತ್ರಗೊಂಡ ಇಂಡೋನೇಶಿಯದ ಪಶ್ಚಿಮ ಜಾವಾ ವಲಯದಲ್ಲಿ ಗೊಂದಲಗಳೆದ್ದಿವೆ. ಈ ಗೊಂದಲ ನಿರ್ಮೂಲನದಲ್ಲಿ ಜಾವಾ ರಿಪಬ್ಲಿಕ್ ಸರಕಾರದೊಡನೆ ತಾವು ಸಹಕರಿಸುವೆವೆಂದು ಡಚ್ಚರು ಅಧ್ಯಕ್ಷ ಮಹಮ್ಮದ್ ಹಟ್ಟಾರಿಗೆ ಆಶ್ವಾಸನೆಯಿತ್ತಿದ್ದಾರೆ.

ಚೈನವು ಕಮ್ಯೂನಿಸ್ಟ್ ಆದರೂ ಜಾಗತಿಕ ಸಂಘದ ಭದ್ರತಾ ಕೌನ್ಸಿಲಿನಲ್ಲಿ ಹಳೇ ರಾಷ್ಟ್ರೀಯ ಸರಕಾರದ ಪ್ರತಿನಿಧಿಯೇ ಚೈನೀ ಸದಸ್ಯನಾಗಿ ಉಳಿದುಕೊಂಡಿದ್ದಾನೆ. ತನ್ನನ್ನು ಭದ್ರತಾ ಕೌನ್ಸಿಲಿನಿಂದ ಹೊರತಳ್ಳದಂತೆ ತಾನು ಚೈನಕ್ಕಿರುವ "ವೆಟೋ" ಅಧಿಕಾರವನ್ನು ಪ್ರಯೋಗಿಸುವುದಾಗಿ ಅವನ ಸೂಚನೆಯಿದೆ.

ಇಂಡೋಚೈನದ ಸಂಬಂಧದಲ್ಲಿ ರಶ್ಯ ಮತ್ತು ಫ್ರಾನ್ಸ್‌ಗಳೊಳಗೆ ತೀವ್ರ ಮತಭೇದವುಂಟಾಗಿದೆ. ಫ್ರಾನ್ಸು ಮೋಸ್ಕೋದಲ್ಲಿರುವ ತನ್ನ ರಾಯಭಾರಿಯನ್ನು ಹಿಂದೆ ಕರೆಯಿಸಿಕೊಳ್ಳುವ ಸಂಭವವಿದೆ. ಇಂಡೋಚೈನದ ಹೋ ಚೀ ಮಿನ್ಹ್, ಇವರ ಕಮ್ಯೂನಿಸ್ಟ್ ಸರಕಾರಕ್ಕೆ ರಶ್ಯವು ಮನ್ನಣೆ ಕೊಟ್ಟುದೇ ಫ್ರಾನ್ಸಿನ ಸಿಟ್ಟಿಗೆ ಕಾರಣ.

ಇತ್ತ, ದಕ್ಷಿಣ ಭಾರತದಲ್ಲಿರುವ ಫ್ರೆಂಚ್ ವಸಾಹತುಗಳ ಭವಿಷ್ಯವನ್ನು ಅಲ್ಲಿಯ ಜನಮತಾನುಸಾರವಾಗಿ ನಿರ್ಧರಿಸಬೇಕೆಂದೊಪ್ಪಿ, ಆ ಜನಮತ ಸಂಗ್ರಹವು ಎಲ್ಲೆಡೆಯವರಿಗೂ ಸಮಾಧಾನಕರವಾಗುವಂತೆ ಪರಸ್ಪರ ಒಪ್ಪಿಗೆಯಿಂದ ವರ್ತಿಸುವಂತೆ ಸಗುವ ಕೆಲವು ಸೂತ್ರಗಳುಳ್ಳ ಭಾರತ-ಫ್ರಾನ್ಸ್ ಜತೆ ಜಾಹೀರುನಾಮೆಯು 1948ನೇ ಜೂನಿನಲ್ಲಾಗಿದ್ದಿತು. ಆದರೆ ಮೇಲೆ ಫ್ರೆಂಚ್ ಅಧಿಕಾರಿಗಳು ಭಾರತ ಸರಕಾರದ ಅಭಿಮತವನ್ನು ಅಲಕ್ಷಿಸಿ ಸ್ವೇಚ್ಛೆಯಿಂದ ಕಾರ್ಯವಾಡುತ್ತಾ ಹೋಗಿದ್ದಾರೆ. ಮತಸಂಗ್ರಹ ಕಾರ್ಯ ಸಂಬಂಧದ ನಿಷ್ಪಕ್ಷಪಾತೀ ಪರಿಶೀಲಕರು ಬಂದ ಮೇಲೆಯೇ ಫ್ರೆಂಚ್ ವಸಾಹತುಗಳ ಮತದಾರಪಟ್ಟಿಯ ದುರಸ್ತಿ ಕಾರ್ಯ ಕೈಕೊಳ್ಳತಕ್ಕದ್ದೆಂದು ಭಾರತ ಸರಕಾರವು ಮೇಲಿಂದ ಮೇಲೆ ಒತ್ತಾಯಿಸಿದ್ದರೂ, ಫ್ರೆಂಚರದಕ್ಕೆ ಕಿವಿಕೊಡದೆ ತಮ್ಮಿಚ್ಛೆಯಂತೆ ಅದನ್ನೀಗ ಪ್ರಕಲ್ಲೇ ಮಾಡಹತ್ತಿದ್ದಾರೆ. ಫ್ರೆಂಚ್ ಅಧಿಕಾರಿಗಳು ನಡೆಸುತ್ತಿರುವ ಜನಮತ ಸಂಗ್ರಹ ಸಂಬಂಧದ ಪೂರ್ವ ಕಾರ್ಯಗಳ ಮೇಲಿಂದ ಸ್ವತಂತ್ರ ಹಾಗೂ ನಿಷ್ಪಕ್ಷಪಾತೀ ಜನಮತ ಪ್ರದರ್ಶನ ನಡೆಯುವುದು ಅಸಾಧ್ಯವೆಂದೂ 1948ನೇ ಜೂನ್ ಒಪ್ಪಂದದಲ್ಲಿರುವ ಶರ್ತಗಳನ್ನು ಪಾಲಿಸಲೇಬೇಕೆಂದೂ ಈಗ ಭಾರತ ಸರಕಾರವು ಫ್ರೆಂಚ್ ಸರಕಾರಕ್ಕೆ ಸ್ಪಷ್ಟವಾಗಿ ತಿಳಿಸಿರುವುದೆಂಬ ವಾರ್ತೆಯಿದೆ.

## ಭಾರತ-ಪಾಕಿಸ್ತಾನ್

ಸ್ವಾತಂತ್ರ್ಯೋತ್ತರ ಅನ್ಯ ರಾಜಕೀಯ ವಿವಾದಗಳೆಲ್ಲವನ್ನೂ ಶ್ಲಾಘನೀಯ ರೀತಿಯಿಂದ ತೀರ್ಮಾನಿಸಿಕೊಂಡಿರುವ ಭಾರತದ ಪಾಲಿಗೆ ಅಂದಿನಿಂದೀವರೆಗೂ ಬಿಡಿಸಲಾಗದ ಕಗ್ಗಂಟಾಗಿರುವುದೆಂದರೆ ಪಾಕಿಸ್ತಾನದ ಸಂಬಂಧವೊಂದೇ. ಕಾಶ್ಮೀರದ ಕಾಳಗ-ಗಡಿ ಸಂಬಂಧದ ವಿವಾದ-ವ್ಯಾಪಾರ ಬಿಕ್ಕಟ್ಟು-ಪೂರ್ವ ಬಂಗಾಳದಿಂದ ಹಿಂದುಗಳನ್ನೋಡಿಸುವ ಅನಾಚಾರ-ಇತ್ಯಾದಿ ಹಲವು ವಿಧಾನಗಳಿಂದ ಪಾಕಿಸ್ತಾನವು ಭಾರತವನ್ನು ಅವಿಶ್ರಾಂತವಾಗಿ ಕೆಣಕುತ್ತಾ ಬಂದಿದೆ. ಈ ಪೈಕಿ ಭಾರತ-ಪಾಕಿಸ್ತಾನಗಳ ಗಡಿ ಸಂಬಂಧವಾಗಿ ಎದ್ದಿದ್ದ ನಾಲ್ಕು ವಿವಾದಗಳನ್ನು 1948ನೇ ದಶಂಬರ್ 14ರಲ್ಲಿ ಭಾರತ-ಪಾಕಿಸ್ತಾನಗಳೊಳಗಾಗಿದ್ದ ಒಂದು ಒಡಂಬಡಿಕೆಗನುಸಾರವಾಗಿ ನ್ಯಾಯಾಧೀಶ ಮಂಡಲಿಗೊಪ್ಪಿಸಲಾಗಿದ್ದಿತು. ಸ್ವೀಡನ್ ಸುಪ್ರೀಮು ಕೋರ್ಟಿನ ಮಾಜೀ ಜಡ್ಜ ಜಸ್ಟೀಸ್ ಅಲ್ಗೋಟ್ ಬಾಗ್ಗೆ ಅಧ್ಯಕ್ಷರಾಗಿ, ಭಾರತದ ಕಡೆಯಿಂದ ನಿವೃತ್ತ ಮದ್ರಾಸ್ ಹೈಕೋರ್ಟು ಜಡ್ಜ ಶ್ರೀ ಚಂದ್ರಶೇಖರ ಅಯ್ಯರೂ ಪಾಕಿಸ್ತಾನದ ಕಡೆಯಿಂದ ಪೂರ್ವ ಬಂಗಾಳ ಹೈಕೋರ್ಟು ಜಡ್ಜ ಮಿ. ಶಹಾಬುದ್ದೀನರೂ ಮಿಕ್ಕ ನ್ಯಾಯಾಧೀಶರಾಗಿ ಇದ್ದ ಭಾರತ-ಪಾಕಿಸ್ತಾನ ಗಡಿ ನ್ಯಾಯಾಧೀಶ ಮಂಡಳಿಯ ತೀರ್ಮಾನವೀಗ ಹೊರಬಿದ್ದಿದೆ. ನಾಲ್ಕು ವಿವಾದಗಳ ಪೈಕಿ ಎರಡು ವಿವಾದಗಳು ಪೂರ್ವ ಮತ್ತು ಪಶ್ಚಿಮ ಬಂಗಾಳಗಳ ಗಡಿಗಳಿಗೆ ಸಂಬಂಧಿಸಿದವುಗಳು. ಉಳಿದೆರಡು ಪೂರ್ವ ಬಂಗಾಳ ಮತ್ತು ಅಸ್ಸಾಮಿನ ಗಡಿಗೆ ಸಂಬಂಧಪಟ್ಟವುಗಳು. ರಾಷ್ಟ್ರ ವಿಭಜನೆಯ ಕಾಲದಲ್ಲಿ ಸರ್ ರೇಡ್‌ಕ್ಲೀಫರು ಕೊಟ್ಟಿದ್ದ ಎವಾರ್ಡಿದ್ದರೂ ಈ ಜಗಳಗಳೆದ್ದಿದ್ದುವು. ಬಾಗ್ಗೇ ಮಂಡಲಿಯೀಗ ಕೊಟ್ಟಿರುವ ತೀರ್ಮಾನಗಳ ಕುರಿತು ಸ್ಥೂಲ ವಿಮರ್ಶೆಯಿಂದ ಹೇಳುವುದಾದರೆ ಆ ಪೈಕಿ ಮೂರು ತೀರ್ಮಾನಗಳು ಹೆಚ್ಚಿನಂಶ ಭಾರತಕ್ಕನುಕೂಲವಾಗಿಯೂ ಒಂದು ತೀರ್ಮಾನವು ಪಾಕಿಸ್ತಾನಕ್ಕನುಕೂಲವಾಗಿಯೂ ಕಾಣುತ್ತಿವೆ. ಬಾಗ್ಗೇ ನ್ಯಾಯಮಂಡಲಿಯು ಎರಡೂ ಸರಕಾರಗಳ ಸಮ್ಮತಿ ಪ್ರಕಾರ ರಚನೆಗೊಂಡುದಿರುವುದರಿಂದ ಅದರ ತೀರ್ಪನ್ನು ಅಂಗೀಕರಿಸಿಕೊಳ್ಳಲು ಭಾರತ, ಪಾಕಿಸ್ತಾನಗಳೆರಡೂ ಬದ್ಧವಿವೆ.

ರಾಷ್ಟ್ರ ವಿಭಜನಾ ಕಾಲದಲ್ಲಿ, ಮತ್ತದಕ್ಕೂ ಮೊದಲಿನ ಮುಸ್ಲಿಂ ಲೀಗ್ 'ಪ್ರತ್ಯಕ್ಷ ಚರಣೆ'ಯ ವೇಳೆ, ಇದ್ದ ಮನೋವೃತ್ತಿಯು ಪೂರ್ವ ಪಾಕಿಸ್ತಾನದಲ್ಲಿನ್ನೂ ಮಾಯವಾಗಿಲ್ಲವೆಂಬಂತಹ ದುರ್ಘಟನೆಗಳು ಅಲ್ಲಿ ನಡೆದಿವೆ. ಪೂರ್ವ ಬಂಗಾಳದ ಖುಲ್ನಾ ಜಿಲ್ಲೆಯ ಬಾಗೆರ್‌ಹಾಟ್ ಸಬ್ ಡಿವಿಜನ್ ಮತ್ತು ಬಾರಿಸಾಲಿನಲ್ಲಿ ಹಿಂದುಗಳ ಮೇಲೆ ಅಮಾನುಷ ಅತ್ಯಾಚಾರ ನಡೆದುದರ ಪರಿಣಾಮವಾಗಿ ಆ ಸ್ಥಳಗಳಿಂದ ಹಿಂದುಗಳು ಹಿಂಡುಗಟ್ಟಿ ಭಾರತದ ಪಶ್ಚಿಮ ಬಂಗಾಳಕ್ಕೋಡಿಬರುತಿದ್ದಾರೆ. ಈ ಕುರಿತು ಪೂರ್ವ ಬಂಗಾಳ ಸರಕಾರವು ಒಂದು ಹೇಳಿಕೆ ಜಾಹೀರು ಮಾಡುತ್ತಾ ಪೂರ್ವ ಬಂಗಾಳ ವಲಯಗಳಲ್ಲಿ ಹಿಂದುಗಳು ದುರವಸ್ಥೆಗೀಡಾಗಿ ಭಾರತಕ್ಕೋಡುತಿದ್ದಾರೆಂಬುದನ್ನೇ ಅಲ್ಲಗಳೆದಿದೆ. ಮಾತ್ರವಲ್ಲ, ಭಾರತದಿಂದಲೇ ಪೂರ್ವ ಬಂಗಾಳಕ್ಕೆ ಮುಸಲ್ಮಾನರು ಓಡಿ ಬರುತಿದ್ದಾರೆಂದೂ, ಮುರ್ಶಿದಾಬಾದ್ ಮತ್ತು 24 ಪರಗಣಾಗಳ ನಿರಾಶ್ರಿತ ಮುಸ್ಲಿಮರ ದೊಡ್ಡ ಪ್ರವಾಹವು ಪೂರ್ವ ಬಂಗಾಳದತ್ತ ನುಗ್ಗುತ್ತಿದೆಯೆಂದೂ ಪೂರ್ವ ಪಾಕಿಸ್ತಾನ್ ಸರಕಾರದ ಅಂಬೋಣ. ಈ ಹೇಳಿಕೆಯ ಕುರಿತು ಸ್ಪಷ್ಟ ತರ್ಕಾಹ್ವಾನ ಕೊಡುತ್ತಾ ಪಶ್ಚಿಮ ಬಂಗಾಳದ ಪ್ರಧಾನ ಮಂತ್ರಿ ಡಾ| ಬಿ. ಸಿ. ರೋಯಿಯವರು ಪೂರ್ವ ಪಾಕಿಸ್ತಾನ್ ಸರಕಾರವು ತನ್ನ ವಾದಗಳಿಗೆ ಆಧಾರ ಕೊಡಬೇಕೆಂದು ಕರೆದಿದ್ದಾರೆ. ಕಳೆದ ಮೂರು ವಾರಗಳಲ್ಲಿ 13,000ಕ್ಕೂ ಮಿಕ್ಕಿದ ಹಿಂದುಗಳು ಪೂರ್ವ ಬಂಗಾಳದಿಂದ ಪಶ್ಚಿಮ ಬಂಗಾಳಕ್ಕೋಡಿ ಬಂದಿದ್ದು, ಅವರ ಖಾನೇಶುಮಾರಿ ತಮ್ಮಲ್ಲಿದೆಯೆಂದು ಡಾ. ರೋಯಿಯವರು ಖಚಿತ ಪಡಿಸಿದ್ದಾರೆ. ಈ ಮಾದರಿಯ ಜಾತಿದ್ವೇಷವು ಒಂದೆಡೆ ತೋರಿಬರುವಾಗ ಅದರ ಪ್ರತಿಛಾಯೆಯು ಇದಿರುಕಡೆಯಲ್ಲೂ ಬಿದ್ದು ಪರಿಸ್ಥಿತಿ ವಿಷಮಗೊಳ್ಳುವ ಅಪಾಯವಿದೆ. ಬಾಗೆರ್‌ಹಟ್ ಸಬ್ ಡಿವಿಜನಿನಲ್ಲಿ ಅಲ್ಪ ಸಂಖ್ಯಾತ ಸಮಾಜದವರಿಗಾದ ಪ್ರಾಣಹಾನಿ, ಸೊತ್ತು ಸೂರೆ ಮತ್ತು ಜುಲುಮೆಯ ಮತಾಂತರಗಳ ಸಂಬಂಧವಾಗಿ ಭಾರತಸರಕಾರವು ಪಾಕಿಸ್ತಾನ್ ಸರಕಾರಕ್ಕೆ ಬಲವಾದ ನಿಷೇಧ ಸೂಚನೆ ಮಾಡಿದೆ.

ಭಾರತ-ಪಾಕಿಸ್ತಾನಗಳೊಳಗಿನ ವ್ಯಾಪಾರ ಬಿಕ್ಕಟ್ಟು ಈ ವರೆಗೂ ಬಿಡಿಸಲ್ಪಡದೆ ಅಲ್ಲೇ ಕೊಳೆಯುತ್ತಿದೆ. ಹಿಂದಿನ ವಾರ ಪಾಕಿಸ್ತಾನದ ಅರ್ಥಮಂತ್ರಿ ಮಿ. ಗುಲಾಮ್ ಮಹಮ್ಮದರು ನವ ದಿಲ್ಲಿಗೆ ಬಂದು ವ್ಯಾಪಾರ ಸಂಬಂಧದ ಮಾತುಕತೆ ನಡೆಸಿ ಹೋಗಿದ್ದರು. ಅದರ ಬೆನ್ನಲ್ಲೇ ಭಾರತ ಮತ್ತು ಪಾಕಿಸ್ತಾನ್ ಸರಕಾರಗಳೊಳಗೆ ಪತ್ರ ವ್ಯವಹಾರಗಳಾರಂಭಿಸಿವೆ. ಆ ಮೂಲಕ ವಿಚಾರ ಸ್ಪಷ್ಟೀಕರಣವಾಗಿ, ಸಂಧಾನ ಸಾಧ್ಯತೆ ಕಂಡುಬಂದರೆ ಇಕ್ಕಡೆಯ ಮಂತ್ರೀ ಮಟ್ಟದ ಸಮ್ಮೇಳನಗಳಾಗಬಹುದೆಂಬ ನಿರೀಕ್ಷೆಯಿದೆ. ಇತ್ತ ಭಾರತದ ಹಕ್ಕಿನವಿದ್ದು, ಪಾಕಿಸ್ತಾನವು ಕ್ರಮವಿರುದ್ಧವಾಗಿ ತಡೆಗಟ್ಟಿದ್ದ ನಾರುಗಳನ್ನು ಪಾಕಿಸ್ತಾನವು ಈಗ ಕೂಡಾ ತ್ವರೆಯಲ್ಲಿ ಬಿಡುಗಡೆ ಮಾಡದೆ ವಿಳಂಬಿಸುತ್ತಿದೆ.

ಅಲ್ಲಿ, ಜಾಗತಿಕ ಸಂಘದ ಭದ್ರತಾ ಕೌನ್ಸಿಲಿನಲ್ಲಿ ಕಾಶ್ಮೀರದ ಪ್ರಶ್ನೆಯು ಇದೇ ತಾ. 7ರಲ್ಲಿ ಪುನಃ ಚರ್ಚೆಗೆತ್ತಲ್ಪಟ್ಟಿದೆಯಾದರೂ ಅದಾವುದಾದರೊಂದು ತೀರ್ಮಾನಕ್ಕೆ ಬರಬಹುದೆಂಬ ಕುರಿತು ಯಾವ ವಿಧದ ನಿರೀಕ್ಷೆಯೂ ಅಲ್ಲಿಯ ಯಾವನೊಬ್ಬ ಸದಸ್ಯನಲ್ಲಿಯೂ ಇಲ್ಲ. ಅಂತಹ ಸಂದಿಗ್ಧಾವಸ್ಥೆಯಲ್ಲಿ ಕಾಶ್ಮೀರ ವಿವಾದ ಸಿಲುಕಿಕೊಂಡಿದೆ. ಕಳೆದ ದಶಂಬರ 17ನೇ ತಾರೀಕಿನಿಂದ ಈ ಪ್ರಶ್ನೆಯು ಹಲವು ಬಾರಿ ಭದ್ರತಾ ಕೌನ್ಸಿಲಿನ ಕಾರ್ಯಕ್ರಮ ಪಟ್ಟಿಯಲ್ಲಿ ಮೂಡಿದ್ದಿತಾದರೂ ವಿವಾದ ಮೂಲವನ್ನು ಹಿಡಿದುಕೊಳ್ಳಲಿಕ್ಕಾಗದೆ ಹಾಗೆಯೇ ಹಿಂದೆ ಬೀಳುತ್ತಾ ಬಂದಿದೆ. ರಶ್ಯವು ಭದ್ರತಾ ಕೌನ್ಸಿಲನ್ನೇ ಈಗ ಬಹಿಷ್ಕರಿಸಿರುವುದರಿಂದ ಮಿಕ್ಕ ಪ್ರಶ್ನೆಗಳಂತೆಯೇ ಕಾಶ್ಮೀರದ ಪ್ರಶ್ನೆಯ ಕುರಿತೂ ಸ್ವಾಭಿಪ್ರಾಯ ಮಾಡಿಲ್ಲ. ರಾಷ್ಟ್ರೀಯ ಚೈನದ ಪ್ರತಿನಿಧಿಯು ಭದ್ರತಾ ಕೌನ್ಸಿಲಿನಲ್ಲಿರುವ ವರೆಗೆ ತಾನು ಅದರ ಯಾವ ಕಾರ್ಯಕಲಾಪಗಳಲ್ಲೂ ಭಾಗಿಯಾಗುವಂತಿಲ್ಲ, ಮತ್ತು ಯಾವ ತೀರ್ಮಾನವನ್ನೂ ಮನ್ನಿಸುವಂತಿಲ್ಲವೆಂದು ರಶ್ಯವು ದೂರ ನಿಂತಿದೆ.

## ನೆಹರೂ ಪಟೇಲ್ ಸಂದೇಶ

ರಿಪಬ್ಲಿಕ್ ಭಾರತ ಪಾರ್ಲಿಮೆಂಟಿನ ಸರ್ವ ಪ್ರಥಮ ಅಧಿವೇಶನದಲ್ಲಿ ಕ್ರಮಪ್ರಕಾರ ಅಧ್ಯಕ್ಷ ಭಾಷಣವಾಗಿ, ಆ ಭಾ

(೬ನೇ ಪುಟ ನೋಡಿರಿ)

**On this Memorable day**

Of the 26th of January in the year 1950 of the inauguration of the Indian Republic, we have the pleasure to announce the birth of our

**Vijaya Cash Certificates**

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices

Head Office:—**Kadri Road, Mangalore.**

Branches:- City-Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara.

**B. Manjaya Hegde.**
Advocate & President, District Board, S. Kanara.
CHAIRMAN
**VIJAYA BANK, LTD.,**

THE
Canara Banking Corporation Ltd.
(Incorporated in India)
Estd: 1906.
HEAD OFFICE: UDIPI, S. I.

SEASON DEPOSITS

for Rs. 5,000/- and over in multiples of Rs. 1,000/- maturing within 30-9-1950 are now accepted at all offices of the Bank at the following rates:-

| | | |
|---|---|---|
| 3 months | .... ... | 2¼% p. a. |
| 4 to 5 ,, | .... .... | 2½% p. a. |
| 6 to 9 ,, | .... .... | 2¾% p. a. |

ಗುರುವಾರ ಉಡುಪಿ ೯-೨-೧೯೫೦

# ಲೋಕಶಾಂತಿ?

ಸಾಂಕೇತಿಕವಾಗಿ ಪ್ರಪಂಚದ ಎಲ್ಲಾ ರಾಷ್ಟ್ರಗಳೂ ಈಗ ರಾಜಕೀಯ ಸ್ವಾತಂತ್ರ್ಯ ಗಳಿಸಿವೆ. ಕೆಲವು ಅಪವಾದಗಳಿರಬಹುದು. ಶ್ವಾಯಿ ಲಿ, ತಪ್ಪುಗಿದ್ದಲಿ–ತಕ್ಷೀರು ಮಾಡಿ ಶಿಕ್ಷೆಗೊಳಗಾದವರಿಗೆ ಸ್ವಾತಂತ್ರ್ಯವಿಲ್ಲವೆಂಬ ತತ್ವವು ಜರ್ಮನಿ, ಜಪಾನಗಳಂತಹ ರಾಷ್ಟ್ರಗಳ ಮೇಲೂ ಈಗ ಹೇರಲ್ಪಟ್ಟಿರಬಹುದು. ಆದರೂ ಯಾವ ಕಾರಣಕ್ಕಾಗಿಯಾದರೂ ಒಂದು ದೇಶದ ಮೇಲೆ ಮತ್ತೊಂದು ದೇಶದ ಅಧಿಕಾರವೆಂಬುದು ನ್ಯಾಯಕ್ಕೆ, ಕ್ರಮಕ್ಕೆ, ಶಾಸನಕ್ಕೆ ವಿರುದ್ಧವೆಂದು ಗಣಿಸಲ್ಪಟ್ಟು, ಸ್ವಾಧೀನ ವಾತಾವರಣವು ಇಂದು ಲೋಕವ್ಯಾಪಿಯಾಗಿದೆ. ಇಂತಹ ಸ್ವತಂತ್ರ ಜಗತ್ತು ಈ ದಿನ ಸುಖ, ಶಾಂತಿಯಲ್ಲಿಲ್ಲ; ನಾಳೆಯಾದರೂ ಶಾಂತಿ ದೊರಕೀತೆಂಬ ಭರವಸೆ ಮೂಡುವದಿಲ್ಲ. ಬದಲಿಗೆ ಕಳೆದ ಕಾಲು ಶತಮಾನದೊಳಗೆ ಎರಡು ಮಹಾಯುದ್ಧಗಳನ್ನು ಅನುಭವಿಸಿದ್ದ ಪ್ರಪಂಚವು ಮೂರನೆಯದೊಂದನ್ನು ನಿರೀಕ್ಷಿಸುತ್ತಿರುವಷ್ಟು ಆತುರದಿಂದ ಬೇರಾವುದನ್ನೂ ಕಾಯುತ್ತಿಲ್ಲ. ಗತಕಾಲಗಳಲ್ಲಿ ನಿತ್ಯಜೀವನವಾಗಿದ್ದ ಯುದ್ಧದ ಲಾಲಸೆಯು, ದೀರ್ಘಾಭ್ಯಾಸಬಲದಿಂದ ಪ್ರಪಂಚದ ರಕ್ತಗತವಾಗಿರುವದೋ ಎಂಬಂತೆ ಕಾಣುತ್ತಿದೆ.

ಪ್ರಥಮ ಜಾಗತಿಕ ಯುದ್ಧ ಮುಗಿದೊಡನೆ ಇನ್ನು ಮುಂದೆ ಯುದ್ಧವಿಲ್ಲದಂತೆ ಮಾಡಬೇಕೆಂಬ ಪ್ರಯತ್ನಗಳು ನಡೆದಿದ್ದವು; ಇದಕ್ಕಾಗಿ 'ಲೀಗ್ ಓಫ್ ನೇಶನ್ಸ್' ಸ್ಥಾಪಿಸಲ್ಪಟ್ಟಿತು. ಆ ಶಾಂತಿಯತ್ನವೇ ಎರಡನೇ ಲೋಕಯುದ್ಧದ ಕಿಡಿಗೆ ಗಾಳಿಯಾಗಿ ಪರಿಣಮಿಸಿದ್ದಿತೆಂಬ ಸ್ಮರಣೆ ಈಗಲೂ ಉಳಿದಿದೆ. ದ್ವಿತೀಯ ಲೋಕಯುದ್ಧದ ಮುಕ್ತಾಯದೊಡನೆ ಯಥಾಪ್ರಕಾರ ಪ್ರಾರಂಭಿಸಿದ ಶಾಂತಿ ಪ್ರಯತ್ನ ಈಗಲೂ ನಡೆದಿದೆ. 'ಸಂಯುಕ್ತ ರಾಷ್ಟ್ರಕೂಟ' ಸ್ಥಾಪಿಸಲ್ಪಟ್ಟು ಕೆಲಸಮಾಡುತ್ತಿದೆ. ಪ್ರಥಮ ಮತ್ತು ದ್ವಿತೀಯ ಯುದ್ಧೋತ್ತರ ಕಾಲಗಳೊಳಗಿನ ವ್ಯತ್ಯಾಸವನ್ನು ಬಿಟ್ಟರೆ, ಆ ಯುದ್ಧಾನಂತರ ನಡೆದಿದ್ದ, ಮತಾರತಮ್ಯವೇನೂ ಕಾಣುವದಿಲ್ಲ. ಕೊನೆಯ ಪರಿಣಾಮ ಕೂಡಾ ಒಂದಲ್ಲೊಂದು ದಿನ ಹಾಗೆಯೇ ಆಗಬಹುದೆಂದು ನಿರೀಕ್ಷಿಸಲಡ್ಡಿಯಿಲ್ಲ. ಹಾಗಾದರೇನು? ವಿನಾಶಕಾರಿ ಹೋರಾಟ-ಹೋರಾಟದ ಬೆನ್ನಲ್ಲೇ ಶಾಂತಿ ಸಾಧನೆಯ ಕಪಟ ನಾಟಕ-ಪುನಃ ಯಥಾಪ್ರಕಾರ–ಈ ಚಕ್ರವನ್ನು ಉರುಳಿಸುತ್ತಾ ಹೋಗುವುದೊಂದೇ ಪ್ರಪಂಚಕ್ಕೆ ತಿಳಿದಿರುವ ವಿದ್ಯೆಯೆ? ಈ ಕ್ರಮಾನುಗತವಾಗಿ ಲೋಕವಿಂದು ಮೂರನೇ ಮಹಾ ಯುದ್ಧದ ಹೊಸ್ತಿಲಲ್ಲಿ ನಿಂತಿರುವುದೇ? ಹಾಗಿಲ್ಲ–ಇನ್ನೊಂದು ಯುದ್ಧವಾಗಲಾರದೆಂಬ ವಿಶ್ವಾಸವನ್ನು ಬೆಳಗಿಸುವ ಆಶಾಕಿರಣವು ಯಾವ ಕಡೆಯಿಂದಲೂ ಬೀಳದಿರುವಾಗ ಬೇರೇನನ್ನು ಊಹಿಸಲು ಸಾಧ್ಯವಿದೆ?

ನಿಜಕ್ಕೂ ಈ ವರೆಗೆ ಜಗತ್ತಿನ ಮುಂಭಾಗದಲ್ಲಿರುವ ರಾಷ್ಟ್ರಗಳು ಮತ್ತೊಂದು ಮಹಾಘರ್ಷಣೆಯನ್ನೇ ಕನವರಿಸುತ್ತಿವೆ. ಯುದ್ಧವೇ ಸುಖದಾಯಿ, ಎಂಬ ಭ್ರಮೆಯಿಂದ ಆ ಕಡೆಗಾಕರ್ಷಿಸಲ್ಪಟ್ಟವರಾರೂ ಇರಲಾರರು. ಆದರೆ ತಮ್ಮ ಕಾರ್ಯಸಾಧನೆಗೆ ಅನಿವಾರ್ಯವೆನ್ನಿಸಿದಾಗ ಯುದ್ಧಕ್ಕೆ ತಯಾರಿರಬೇಕು–ವಿರುದ್ಧಗಾಮಿಗಳ ತೇಜೋವಧೆ ಮಾಡಲು ಯುದ್ಧವೊಂದೇ ಉಪಾಯವೆಂದಾದರೆ ಅದಕ್ಕೂ ಸೈ!–ಎಂಬ ಭಾವನೆಯಿಂದ ಎಲ್ಲರೂ ಯುದ್ಧೋದ್ಯಮ ನಿರತರಾಗಿದ್ದಾರೆ. ಈ ಕನಸಿನ ಫಲವನ್ನು ಗಳಿಸಿಕೊಳ್ಳಬೇಕೆಂಬುದಕ್ಕಾಗಿ ಆಗುತ್ತಿರುವ ಪ್ರಯತ್ನದಂತಹದು, ಪ್ರಚಲಿತ ಸ್ಥಿತಿ ಸುಧಾರಣೆಗಾಗಿ ನಡೆಯುತ್ತಿಲ್ಲ. 'ಯುದ್ಧ ಸಂಭವಿಸಿದರೆ' ಎಂಬ ಸಂದೇಹವಷ್ಟೇ ಮೊಳೆತಲ್ಲ- ಯುದ್ಧ ಖಂಡಿತವೆಂಬ ನಿಶ್ಚಿತಾಭಿಪ್ರಾಯದಿಂದೆಂಬಂತೆ, ಇಂದು ಯುದ್ಧ ಸಿದ್ಧತೆಗಳು ನಡೆದಿವೆ. ಆ ಸಿದ್ಧತೆಗಳ ಮೇಲಿಂದ ಭಾವೀ ಸಂಭವಗಳನ್ನು ಚಿತ್ರಿಸಿಕೊಳ್ಳುವಾಗ ಮೈ ಜುಮ್ಮೆನ್ನುತ್ತಿದೆ. ಆಧುನಿಕ ಜಗತ್ತಿಗೆ ಶಸ್ತ್ರಾಸ್ತ್ರಗಳ ಹೋರಾಟಗಳನ್ನು ಕೇಳಿಯೂ, ಸಾಮಾನ್ಯ ಬೊಂಬುಗಳ ಎಸೆದಾಟಗಳನ್ನು ನೋಡಿಯೂ ಗೊತ್ತು. ಆದರೆ ಕಳೆದ ಮಹಾಯುದ್ಧವು 'ಆಟಂ ಬೋಂಬ್'ನಂತಹ ಅಸಾಮಾನ್ಯ ಧ್ವಂಸಾಯುಧದ ಪರಿಚಯ ಮಾಡಿಕೊಟ್ಟೇ ಮುಗಿದಿದ್ದಿತು. ಈಗ ಆಟಂ ಬೋಂಬಿಗಿಂತ ಸಹಸ್ರ ಪಾಲು ಅಧಿಕ ವಿನಾಶಕಾರಿ 'ಹೈಡ್ರೋಜೆನ್ ಬೋಂಬು' ಮುಂದೆ ಬಂದಿದೆ. ಈ ಪ್ರಳಯ ಪ್ರಗತಿಯ ಕುರಿತು ಏನ

ನಿರವಲಂಬ ಪ್ರಶ್ನೆಯನ್ನು ಇಂದೇ ಸವನೆ ಪ್ರಕೃತಿ ಮಹಾಪುರುಷರೆಡಕ್ಕಲ್ಲದೆ, ಬೇರಾವ ಉಪಯೋಗಕ್ಕೂ ಬೀಳದ ಉಪಕರಣವಿದು. ಇಂತಹುದರ ತಯಾರಿ ಅಗತ್ಯವೆನ್ನಿಸಿರುವ ಇಂದಿನ ವಾತಾವರಣದಲ್ಲಿ ಎಂತಹ ಭೀಕರತೆ ಸುರುಗಿಕೊಂಡಿರಬೇಕು–ಮಾನುಷತ್ವ ಅಥವಾ ಮಾನವ ಪ್ರಾಣವೆಂಬುದು ಯಾವ ಬೆಲೆಯೂ ಇಲ್ಲದ್ದೆಂಬಂತೆ ಲಕ್ಷಾವಧಿ ಮಂದಿಯನ್ನು ಕ್ಷಣ ಮಾತ್ರದಲ್ಲಿ ನಿರ್ಮೂಲಿಸಿಬಿಡುವ ಈ ಆಯುಧವನ್ನು ಕೈಕೊಳ್ಳುವವರ ಹೃದಯವೆಂಥ ಹದಿರಬೇಕು– ಎಂಬುದನ್ನು ಸ್ಮರಿಸಿದರೆ ಸಾಕು, ವಿಕ್ಟೈಲ್ಲಾ ಮಾತು, ಬೋಧೆಗಳ ನೆನಪೂ ಮಾಯವಾಗುತ್ತಿದೆ; ಇಂಥವರ ಬಾಯಿ ಸ್ಪರ್ಶಗೊಂಡು 'ಲೋಕಶಾಂತಿ' ಮಂತ್ರವು ಅಪವಿತ್ರವಾಯಿತೆಂಬ ಜಿಗುಪ್ಸೆ ಮೊಳೆಯುತ್ತಿದೆ. ಪರಿಸ್ಥಿತಿ ಹೀಗಿರುವಾಗ ಪ್ರಪಂಚದಲ್ಲಿ ಶಾಂತಿ, ಸೌಹಾರ್ದತೆಗಳು ಸ್ಥಾಪನೆಗೊಳ್ಳುವುದಾದರೂ ಹೇಗೆ ಮತ್ತು ಯಾವಾಗ?

ಯಥಾರ್ಥ ಶಾಂತಿ ಪ್ರೇಮಿಗಳನ್ನು ಆತುರಕ್ಕೀಡು ಮಾಡಿರುವ ಪ್ರಶ್ನೆಯೊಂದೇ– 'ಸಮರ ಸಂಭವಿಸಿದರೆ' ಎಂಬ ನಿರೀಕ್ಷೆಯಿಂದ ಹೈಡ್ರೋಜೆನ್ ಬೋಂಬು ತಯಾರಿ ವರೆಗೂ ಮುಂದೊತ್ತಿರುವವರು, ಯುದ್ಧದ ಮೂಲ ಕಾರಣಗಳನ್ನು ನಿವಾರಿಸಿಕೊಳ್ಳುವ ಕಡೆಗೆ ಹೆಜ್ಜೆಯಿಡುತ್ತಿಲ್ಲವೇಕೆ ಎಂಬುದೇ. 'ಲೋಕಬಾಂಧವ್ಯ' 'ಪ್ರಾಪಂಚಿಕ ಶಾಂತಿಯಾತುರ' ಮುಂತಾದ ವಿಶಾಲ ಧೋರಣೆಗಳ ಮಾತು ಹಾಗಿರಲಿ– ಕೇವಲ ನ್ಯಾಯನಿಷ್ಠೆಯೊಂದಿದ್ದು, ಬೇರಾವುದಕ್ಕಿಂತಹ ಧಕ್ಕೆ ಬಿದ್ದರೂ ನ್ಯಾಯವಾಧರಿಸಲ್ಪಡಬೇಕು ಎಂಬ ಸಾಮಾನ್ಯ ತತ್ವವು ಎಲ್ಲರಿಂದಲೂ ಮನ್ನಿಸಲ್ಪಟ್ಟರೆ ಇಂದಿನ ವಿವಾದ, ಪೈಪೋಟಿಗಳೆಲ್ಲವೂ ತಾವಾಗಿ ಅಂತರ್ಧಾನಗೊಂಡಾವು. ನ್ಯಾಯಬದ್ಧ ತೀರ್ಮಾನಕ್ಕೆಟಕದ ವಿವಾದಗಳಾವುವೂ ಹಿಟ್ಲರ್- ಬ್ರಿಟನ್ ಸ್ಪರ್ಧೆಯ ಆ ಕಾಲದಿಂದಾರಂಭಿಸಿ, ರಶ್ಯಾ--ಅಮೇರಿಕ ಮೇಲಾಟದ ಈ ಕಾಲದ ವರೆಗೂ ಇಲ್ಲವೇ ಇಲ್ಲ. ನ್ಯಾಯಕ್ಕಾಗಿ ಸ್ವಾರ್ಥವನ್ನು ಬಿಡಲಾಗದ ದೆಸೆಯಿಂದಲೇ ಅಂದು ನಾಜೀ ಯುದ್ಧ ಹುಟ್ಟಿದ್ದರೆ, ಇಂದು 'ಹೈಡ್ರೋಜೆನ್ ಬೋಂಬು ಯುದ್ಧ'ವನ್ನು ಹುಟ್ಟಿಸುವ ಸಾಹಸ ನಡೆದಿದೆ. ಪ್ರತ್ಯಕ್ಷ ಪ್ರಳಯವನ್ನೇ ನಿರ್ಮಿಸಿಯಾದರೂ ಸಾಧಿಸಲು ಕಾವಣಿಸುವ ಸ್ವಾರ್ಥಗಳಾದರೂ ನಿಜಕ್ಕೂ ಅಷ್ಟು ಅಮೂಲ್ಯವಾದವುಗಳೋ, ಅವಶ್ಯಕವಿರುವವೋ, ಎಂಬುದನ್ನು ವಿಚಾರಿಸಬೇಕು. ಇಂದು ಯಾವ ಕಾರಣಗಳಿಗಾಗಿ ಕೆಲವು ರಾಷ್ಟ್ರಗಳ ಮುಖಂಡರಿಗೆ ಯುದ್ಧದ ಕನಸು ಬೀಳುತ್ತಿದೆಯೋ ಆ ಕಾರಣಗಳು ಸಾಮಾನ್ಯ ಜನತೆಯ ಹಿತದೃಷ್ಟಿಯಿಂದ ನಿಜವಾದ ಕಾರಣಗಳಲ್ಲವೇ ಅಲ್ಲ. ಆಳುವ ವರ್ಗದವರಿಗೆ, ಮತ್ತು ಆಳುವ ವರ್ಗವನ್ನಾಡಿಸುವ ವರ್ಗದವರಿಗೆ ಮಾತ್ರ ಬೇಕಾಗಿರುವ ಸಂಗತಿಗಳವು. ಈ ವರ್ಗಗಳವರು ಅಖಿಲ ಜಗತ್ತಿನ ಮಾನವ ಜನಾಂಗದ ತೀರಾ ಅಲ್ಪಸಂಖ್ಯಾಕರು. ಇಂಥವರ ಸ್ವಾರ್ಥ ಸಾಧನೆಗಾಗಿ ನಡೆಯುವ ಯುದ್ಧದ ಹಾನಿಗಳನ್ನನುಭವಿಸುವವರು ಮಾತ್ರ ಜನಸಾಮಾನ್ಯರೇ. ಹೀಗಾಗಿ ಜನತೆಯ ದೃಷ್ಟಿಯಿಂದ, [illegible]

ತರಕ್ಕಾಮಂತ್ರಣ ಕೊಡುವಂತೆಯೇ ಸರಿ. ಇದನ್ನು ತಡೆಗಟ್ಟಬೇಕಾದರೆ ಎಲ್ಲೆಲ್ಲೂ ಸಾಮಾನ್ಯ ಜನತೆಯ ಸಂಕಲ್ಪವೇ ಮೇಲಾಗಬೇಕು; ಜನಮತದ ಸ್ಪಷ್ಟ ರೂಪ ತೋರಿ ಬಂದು ಅದಕ್ಕೆ ಮನ್ನಣೆ ದೊರೆಯಬೇಕು. ಒಂದಲ್ಲೊಂದು ರೀತಿಯಿಂದ ಜನ ಪ್ರಾತಿನಿಧ್ಯದ ಅಧಿಕಾರ ಮತ್ತು ಜನತೆಯ ಹೆಸರಿನಿಂದಲೇ ಕಾರ್ಯಭಾರ ನಿರ್ವಹಿಸುತ್ತಿರುವವರೇ ಇಂದು ಯುದ್ಧ ಸ್ವಪ್ನ ಕಾಣುತ್ತಿರುವವರೆಂದ ಮೇಲೆ ಅವರಿಗೆ ವಿರುದ್ಧವಾಗಿ ಜನಮ[ತ] ಪ್ರಕಾಶಗೊಳ್ಳುವದಕ್ಕೆ ಅವಕಾಶ ಕ[...]ಮೆ. ಆದರೂ ಪ್ರತಿನಿಧಿ ಸ್ಥಾನದಲ್ಲಿರು[...]ವರ ಮನೋವೃತ್ತಿಯನ್ನು ಬದಲಾಯಿ[ಸ]ಲು ಜನತೆಗೆ ಸಾಧ್ಯವಿದೆ; ಅಂತೆಯೇ ರಾಷ್ಟ್ರದ ಹಾಗೂ ಲೋಕದ ಮಾನವ[ಜ]ನಾಂಗದ ಕಲ್ಯಾಣ ಸಾಧನೆಯ ದೃ[ಷ್ಟಿ]ಯಿಂದ ಯುದ್ಧಮೂಲವನ್ನೇ ಕತ್ತ[ರಿಸಿ]ಕೊಳ್ಳಲು ಯುದ್ಧಾಸಕ್ತ ರಾಷ್ಟ್ರ ನಾ[ಯ]ಕರುಗಳಿಗೂ ಸಾಧ್ಯವಿದೆ. ಶಾಂತಿಸಾ[ಧನೆ]ಯ ವ್ಯವಹಾರ್ಯ ವಿಧಾನವೆಂದರೆ, [...]ದ್ಧದತ್ತ ಒಯ್ಯಬಹುದೆಂಬಂತೆ ತೋ[ರು]ತ್ತಿರುವ ವಿವಾದಗಳನ್ನು ನಿಷ್ಪಕ್ಷಪಾತ ತೀರ್ಮಾನಕ್ಕೊಪ್ಪಿಸಿಕೊಡುವುದು. [...]ತಹ ನಿರ್ಮಲ ಮನಸ್ಸಿನ ನ್ಯಾಯಕ[ರ್ತ]ಧಿಕರು ರಾಜಕಾರಣಿಗಳಲ್ಲಿ, ನ್ಯಾಯಾ[ಧೀ]ಶ ವರ್ಗದಲ್ಲಿ ಅಥವಾ ವಿಜ್ಞಾನಿ, ಸಾ[ಹಿತಿ] ಮುಂತಾದ ವರ್ಗಗಳವರಲ್ಲಿ ದೆ[...]ಯಾದಿರಲಾರರು. ವಿವಾದ ಸಂಬಂಧ ಕಟ್ಟಿಕೊಂಡಿರುವವರಿಂದ ತುಂಬಿರುವ 'ಸಂಯುಕ್ತ ರಾಷ್ಟ್ರಗಳ [ಕೂ]ಟ'ದಂತಹದರಿಂದ ಆಗಲಾರದ ಶಾ[ಂತಿ] ಸಾಧನೆಯು ಈ ನಿರ್ಲಿಪ್ತ ಮನ[ಸ್ಕ] ನ್ಯಾಯಕರ್ತರಿಂದ ಆಗಬಹುದು. ಅ[...]ವರ ತೀರ್ಮಾನವನ್ನು ಮರುಮಾತಿ[ಲ್ಲದೆ] ಶಿರಸಾವಹಿಸಿಕೊಳ್ಳುವ ಕರ್ತವ್ಯಕ್ಕೆ ಸಂ[ಬಂ]ಧಪಟ್ಟವರು ಮುಂದಾಗಿ ಕಟ್ಟುಬೀ[ಳುವ]ದೊಂದೇ ಇಲ್ಲಿ ಮುಖ್ಯ. ಈ ವಿಧಾನದ [...]ಭಾವನೆ, ಧೋರಣೆ, ಅಂತರಂಗ ಬ[ಹಿರಂ]ಗ ವ್ಯವಹಾರ, ಇತ್ಯಾದಿಗಳ ಸಂಬಂ[ಧದ] ಎಲ್ಲಾ ಜಗಳಗಳನ್ನೂ ತೀರ್ಮಾನಿಸಿ[ಕೊ]ಳ್ಳುವ ಒಂದು ವ್ಯವಸ್ಥೆ ಬಾರದಿದ್ದರೆ [ಅ]ಥವಾ ಬೇರಾವುದೇ ರೀತಿಯ ಯಥಾ[ರ್ಥ] ಶಾಂತಿ ಪ್ರಯತ್ನ ನಡೆಯದಿದ್ದರೆ, [...]ಕವು ಹಿಂದೆಂದೂ ಅನುಭವಿಸದಂತ[ಹ ಅ]ತ್ಯಂತ ಭೀಕರ ಅನಾಹುತಕ್ಕೀಡಾ[ಗುವ] ಕಾಲ ಮುಂದಿದೆ ಎನ್ನಬೇಕು.

"ಲೋಕದಲ್ಲಿ ಏನಾದರೂ ಶಿಷ್ಟಾ[ಚಾ]ರವುಳಿಯಬೇಕೆಂದಿದೆಯೋ, ಹಾಗ[ಾದರೆ] ನೀವು ಈ ಹೈಡ್ರೋಜೆನ್ ಬೋಂ[ಬಿಗೆ] ಅಂತ್ಯಪಡಿಸಿಕೊಳ್ಳುವುದು ವಾಸಿ. ಈ[...]ರತು ಬೇರೆ ಹಾದಿ ನಮಗಿಲ್ಲ. ಹೈಡ್ರೋಜೆ[ನ್] ಬೋಂಬನ್ನುಪಯೋಗಿಸುವುದು ಮೇಲೂ ಏನಾದರೂ ಶಿಷ್ಟಾಚಾರ[ವನ್ನು] ನಿರೀಕ್ಷಿಸುವುದು, ಇವೆರಡನ್ನು ಮಿ[ಳಿ]ಳಿಸಲು ಸಾಧ್ಯವಿಲ್ಲ" ಎಂದು ಭಾ[ರತದ] ಮಹಾಪ್ರಧಾನಿಗಳು ಇದೇ ತಾ. 6[...]ತ್ರಿಕಾ ಕೂಟದ ಮುಂದೆ ಹೇಳಿದ್ದ[...] ನೀತಿವಾಕ್ಯದ ಉತ್ತರಾರ್ಧವಾಗಿ[...]ದೋ ನ್ಯಾಯಬದ್ಧ ತೀರ್ಮಾ[ನ] ಶೋಧನೆ ಮತ್ತು ಅಂಗೀಕಾರಕ್ಕೆ [...]ರಾಗಬೇಕು. ಇಲ್ಲವೇ ಲೋಕಶಾಂ[ತಿ] ಕನಸಬಿಡಬೇಕು. ಅದನ್ನು ನಿರಾಕರಿ[ಸುವುದ]ನ್ನು ಪಠಿಸುವದಕ್ಕರ್ಥವಿಲ್ಲ" ಎಂದ[ು ನಾವು] ಹೇಳಬೇಕಾಗಿದೆ.

# ದಕ್ಷಿಣಾಫ್ರಿಕದ ಮೇಲಿದ್ದ ವ್ಯಾಪಾರ ಬಹಿಷ್ಕಾರವನ್ನು ಪಾಕಿಸ್ತಾನವು ರದ್ದುಪಡಿಸಿತು!

(೫ನೇ ಪುಟದಿಂದ ಮುಂದುವರಿದುದು)

ಷಣದ ಕುರಿತು ಪಾರ್ಲಿಮೆಂಟ್ ಚರ್ಚೆ ನಡೆಸಿದಾಗ ಮುಖ್ಯತಃ ಭಾಗದಲ್ಲಿ ಪ್ರಜಾರಾಜ್ಯ ರಥದ ಎರಡು ಶ್ವೇತಾಶ್ವಗಳಂತಿರುವ ನೆಹರು ವಲ್ಲಭಭಾಯಿಗಳತ್ತ ಭಾಷಣಗಳು ವಿಚಾರಣೀಯುವಿವೆ. ರಾಷ್ಟ್ರವು ಈ ಪ್ರಾಮುಖ್ಯ ಸಂದರ್ಭದಲ್ಲಿ ತನಗೆ ತನ್ನೆರಡು ನಾಯಕರ ಬೋಧನೆಗಳೇನೆಂಬ ಕಡೆಗೆ ಲಕ್ಷ್ಯ ಕೊಡುವುದಗತ್ಯವಿರುವುದರಿಂದ ಅವರಿಬ್ಬರ ಕೆಲವು ಮಾತುಗಳನ್ನು ಇಲ್ಲಿ ಕೊಡಲಾಗಿದೆ. ಪಾರ್ಲಿಮೆಂಟಿನ ಚರ್ಚಾಂತ್ಯದಲ್ಲಿ ಉತ್ತರ ರೂಪವಾಗಿ ಕೊಟ್ಟ ಭಾಷಣದಲ್ಲಿ ಪಂಡಿತಜೀಯುಂದಿದ್ದರು: "ಪೂರ್ಣ ಶಕ್ತಿ, ಸಾಮರ್ಥ್ಯ ಆಶೆ ಮತ್ತು ನಿಷ್ಠೆಯೊಂದಿಗೆ, ಮತ್ತದೇ ಕಾಲದಲ್ಲಿ ತನ್ನನ್ನಿದಿಂಸಿರುವ ಅಗಾಧ ಸಮಸ್ಯೆಗಳೊಂದಿಗೆ ರಿಪಬ್ಲಿಕ್ ಆರಂಭಿಸಿದೆ. ಈ ಸಮಸ್ಯೆಗಳನ್ನರ್ಥ ಮಾಡಿಕೊಂಡು ಏಕಾಗ್ರ ಪ್ರಯತ್ನ ಮತ್ತು ನಿಷ್ಠೆಯ ಸ್ಫೂರ್ತಿ ವಹಿಸಿ, ನಮ್ಮನ್ನೇ ನಾವು ತುಂಬಿಸಿಕೊಳ್ಳುತ್ತೇವಾದರೆ ವಿಜಯದ ಕಡೆಗೆ ನಾವು ಮುಂದೊತ್ತಬಲ್ಲೆವೆಂಬ ಕುರಿತು ನನಗೆ ಖಾತ್ರಿಯಿದೆ; ಹಿಂದೂ ಮಹಾಸಭೆಯಂತಹ ಜಾತೀಯತಾ ಸಂಘ ಸಂಸ್ಥೆಗಳು ಖಂಡನೀಯುವಿವೆ. ಪಾಕಿಸ್ತಾನ್ ಸಂಬಂಧದಲ್ಲಿ ಅವರು ಹೇಳಿರುವ ಕೆಲವು ಸಂಗತಿಗಳು ಪರಮಾವಧಿ ತಿಳಿಗೇಡಿತನದ್ದಿವೆ; ಕುಟಿಲ ಬುದ್ಧಿಯಲ್ಲಿ ಮೊಳೆತವುಗಳಿವೆ. ಒಂದೆಡೆ ನಾವು ಸಶಕ್ತರಾಗಿ, ದೃಢಧೋರಣೆಯುವರಾಗಿ ಮಿಲಿಟರಿ ಅಥವಾ ಇತರ ವಿಧಾನಗಳಲ್ಲಿ ಸಿದ್ಧತೆಯುಳ್ಳವರಾಗಿದ್ದು, ಏನೇ ಬಂದರೂ ನಾವು ತಪ್ಪೆಂದು ಭಾವಿಸಿದುದನ್ನು ಎಂದೂ ಅಂಗೀಕರಿಸಿಕೊಳ್ಳದಂತಿರಬೇಕಾದರೂ, ಇನ್ನೊಂದೆಡೆ ನಾವು ಸಹನೆಯುವರು ಹಾಗೂ ಮಿತವಾದಿಗಳು ಮತ್ತು ಮೈತ್ರೀ ಭಾವನೆಯುವರಾಗಿರಬೇಕೆಂದು ನನಗೆ ಮನವರಿಕೆಯಾಗಿದೆ. ಹೇಗಿದ್ದರೂ ಒಂದಲ್ಲೊಂದು ಕಾಲದಲ್ಲಿ ಭಾರತ ಮತ್ತು ಪಾಕಿಸ್ತಾನಗಳಲ್ಲಿರುವ ಅಪಾರ ಸಂಖ್ಯೆಯ ಜನರು ಪರಸ್ಪರ ಸಹಕರಿಸಿಕೊಂಡು ಸ್ನೇಹಾಚಾರದಿಂದಿರಲು ಬದ್ಧರಿದ್ದಾರೆ".

ಆ ಮೊದಲಿನೊಂದು ಸಂದರ್ಭದಲ್ಲಿ ಪಾರ್ಲಿಮೆಂಟಿನಲ್ಲಿ ಬಂದ ಪ್ರಶ್ನೆಯೊಂದಕ್ಕುತ್ತರ ಕೊಡುತ್ತಾ ಪ್ರಧಾನ ಮಂತ್ರಿಗಳು "ಕಾಶ್ಮೀರ ವಿವಾದದ ತೀರ್ಮಾನಕ್ಕಾಗಿ ಯುದ್ಧವನ್ನೇ ವಾದಿಸಿ ಪಾಕಿಸ್ತಾನದಲ್ಲಾಗುತ್ತಿರುವ ಕೆಲವು ಬೇಜವಾಬ್ದಾರೀ ಹೇಳಿಕೆಗಳನ್ನು" ಖಂಡಿಸಿದ್ದರು.

ಪಾರ್ಲಿಮೆಂಟಿನ ಚರ್ಚಾಂತ್ಯದಲ್ಲಿ 'ಸರಕಾರವು ಭಂಡವಾಳಶಾಹಿಗಳ ಮನ ವೊಲಿಸಲು ನೋಡುತ್ತಿದೆ' ಎಂಬ ಆರೋಪಕ್ಕೆ ಉತ್ತರ ಕೊಡುತ್ತಾ ಸರ್ದಾರ್ ಪಟೇಲರಂದಿದ್ದರು: "ಕಳೆದ ಎರಡು ವರುಷಗಳಲ್ಲಿ ಕೇಂದ್ರ ಮತ್ತು ಪ್ರಾಂತ್ಯಗಳಲ್ಲಿ ನಾವು ಮುಂದೊಡ್ಡಿದ್ದ ಕೆಲಸಗಾರರ ಸಂಬಂಧದ ಶಾಸನಗಳನ್ನು ಪರಿಶೀಲಿಸಿರಿ. ಇದಕ್ಕೆ ಸಂಗಟ್ಟುವಂತಹುದನ್ನು ನೀವು ಬೇರೆಲ್ಲಿಯಾದರೂ ಕಂಡು ಹಿಡಿಯಬಲ್ಲಿರಾ? ಕೆಲಸಗಾರರಿಗೆ ಸಾಧ್ಯವಿದ್ದಷ್ಟು ಸೌಕರ್ಯ ದೊರೆಯುವಂತೆ ಮಾಡಲು ನಾವು ನಮಗೆ ಸಾಧ್ಯವಿದ್ದ ಎಲ್ಲಾ ಪ್ರಯತ್ನಗಳನ್ನೂ ಮಾಡಿದ್ದೇವೆ. ನಾವೀಗ ಒಂದು ಬಿಕ್ಕಟ್ಟಿನ ಅವಧಿಗೆ ಬಂದಿದ್ದೇವೆ. ಆಹಾರ, ಉದ್ದಿಮೇ ಉತ್ಪನ್ನಗಳನ್ನು ಹೆಚ್ಚಿಸಿಕೊಳ್ಳದಿದ್ದರೆ ನಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲಾಗದಂತಹ ಸ್ಥಿತಿ ಬಂದಿದೆ. ಸಮಾಜದ ಎಲ್ಲಾ ವಿಭಾಗಗಳೂ ಸಹಕರಿಸಲಾಗುವಂತಹ ವಿಧಾನಗಳಿಗೆ ನಮ್ಮ ಧೋರಣೆಗಳನ್ನು ಸರಿಹೊಂದಿಸಿಕೊಳ್ಳಬೇಕಾದ ಕಾಲವೀಗ ಬಂದಿದೆ. ಎಲ್ಲೆಲ್ಲೂ ಗೊಂದಲಗಳನ್ನೆಬ್ಬಿಸುತ್ತಾ ಹೋಗುವ ಸಮತಾವಾದಿಗಳ ಧೋರಣೆಯಿಂದ ಆ ಪಕ್ಷದ ಸ್ಥಿತಿ ಸುಧಾರಿಸುವಂತಿಲ್ಲ. ಆ ಪಕ್ಷವು ಒಂದು ಆರೋಗ್ಯದಾಯೀ ಇದಿರುವಾದಿ ಪಕ್ಷವಾಗಿ ರೂಪುಗೊಳ್ಳಬೇಕೆಂದು ನಾವಿಚ್ಛಿಸುತ್ತೇವೆ."

## ಅಧ್ಯಕ್ಷರ ಭಾಷಣ

ರಿಪಬ್ಲಿಕ್ ಭಾರತ ಪಾರ್ಲಿಮೆಂಟಿನ ಪ್ರಥಮ ಅಧಿವೇಶನಾರಂಭ ಮುಹೂರ್ತದಲ್ಲಿ ತಾ. 31ರಲ್ಲಿ ಕ್ರಮಪ್ರಕಾರ ಅಧ್ಯಕ್ಷ ರಾಜೇಂದ್ರ ಪ್ರಸಾದರ ಭಾಷಣವಾಯಿತು. ಬ್ರಿಟಿಷ್ ಪಾರ್ಲಿಮೆಂಟಿನ ಆರಂಭದಲ್ಲಿ ಸರಕಾರೀ ಧೋರಣೆಯನ್ನು ನಿರೂಪಿಸುವ ರಾಜಭಾಷಣ ನಡೆಯುವ ಪದ್ಧತಿಯಂತೆ, ಭಾರತಾಧ್ಯಕ್ಷರ ಭಾಷಣವೂ ಸರಕಾರೀ ಧೋರಣೆಯ ಯಥಾರ್ಥ ಪ್ರತಿಬಿಂಬವಾಗಿದ್ದಿತು. ನಿಯಮ ಪ್ರಕಾರ ಆ ಭಾಷಣದ ಮೇಲೆ ಚರ್ಚೆ ನಡೆದು ಅಧ್ಯಕ್ಷ ಭಾಷಣದಲ್ಲಿ ಬಂದಿದ್ದ ಸರಕಾರೀ ವಿಧಾನಗಳನ್ನು ಒಪ್ಪಿಕೊಳ್ಳುವ ಸಮ್ಮತಿ ಕೂಡಾ ಕೊನೆಗೆ ಪಾರ್ಲಿಮೆಂಟಿನಲ್ಲಾಗಿದ್ದಿತು. ಈ ಮೊದಲು ಹಲವು ಬಾರಿ ಖಚಿತವಾಗಿದ್ದ ಮಾದರಿಯಲ್ಲೇ ಭಾರತಾಧ್ಯಕ್ಷ ಭಾಷಣದಲ್ಲಿಯೂ ಭಾರತ ಸರಕಾರದ ಶಾಂತಿ ಪ್ರೇಮ ಮತ್ತು ದೃಢ, ಗಂಭೀರ ಧೋರಣೆಗಳು ಪಡಿಮೂಡಿದ್ದುವು. "ಲೋಕದ ಎಲ್ಲಾ ರಾಷ್ಟ್ರಗಳೊಡನೆ ಶಾಂತಿ ಹಾಗೂ ಸ್ನೇಹಾಚಾರವುಳಿಸಿಕೊಳ್ಳಬೇಕು. ಮತ್ತು ಸಾಧ್ಯವಿದ್ದ ಎಲ್ಲಾ ವಿಧಾನಗಳಿಂದಲೂ ಲೋಕ ಶಾಂತಿಗೆ ನೆರವಾಗಬೇಕು, ಎಂಬುದೇ ನನ್ನ ಸರಕಾರದ ದೃಢ ಧೋರಣೆ. ರಿಪಬ್ಲಿಕ್ ಭಾರತಕ್ಕೆ ಇತರ ರಾಷ್ಟ್ರಗಳೊಂದಿಗೆ ಪರಂಪರಾಗತ ದ್ವೇಷವಾಗಲೀ ಸಂಪ್ರದಾಯಾನುಗುಣ ಪ್ರತಿ ಸ್ಪರ್ಧೆಯಾಗಲೀ ಇಲ್ಲ. ನನ್ನ ಸರಕಾರವಾದರೋ ಲೋಕದಲ್ಲಿ ಶಾಂತಿ ಸ್ಥಾಪಿಸುವ ಕಡೆಗೆ ಮತ್ತು ಯಾವುದೇ ರಾಷ್ಟ್ರದ ವಿರೋಧಗಳಿಸುವ ಯಾವುದೇ ಸಂಬಂಧವನ್ನು ಕಟ್ಟಿಕೊಳ್ಳದ ಕಡೆಗೇನೆ ತನ್ನ ಧೋರಣೆಯನ್ನು ಮುಂದೊತ್ತಲಿಚ್ಛಿಸುತ್ತದೆ." ಎನ್ನುತ್ತಾ ಅಧ್ಯಕ್ಷರು, ಪಾಕಿಸ್ತಾನವು ಭಾರತದ 'ಯುದ್ಧವಿಲ್ಲ' ಕೊಡುಗೆಯನ್ನು ಅಂಗೀಕರಿಸಿ ಎರಡು ರಾಷ್ಟ್ರಗಳೊಳಗಿನ ದುರ್ದೈವೀ ಘರ್ಷಣೆಯನ್ನು ಕಡಿಮೆಮಾಡಲು ನೆರವಾಗಬೇಕೆಂದು ಕೇಳಿಕೊಂಡಿದ್ದಾರೆ. ಕಾಶ್ಮೀರದಲ್ಲಿ ಜನತೆಯ ಸ್ವತಂತ್ರ ಮತಪ್ರದರ್ಶನಕ್ಕನುಕೂಲವಾದ ವಾತಾವರಣ ನಿರ್ಮಾಣಗೊಳ್ಳುವ ವರೆಗೆ ಮತ್ತು ಈ ಕಷ್ಟದಾಯೀ ಸಮಸ್ಯೆಯ ಕುರಿತು ಸಮಾಧಾನಕರ ತೀರ್ಮಾನ ದೊರೆಯುವ ವರೆಗೆ ಆಕ್ರಮಣದಿದಿರಲ್ಲಿ ಆ ಸಂಸ್ಥಾನ ಮತ್ತದರ ಜನತೆಯನ್ನು ರಕ್ಷಿಸುವ ತನ್ನ ಕರ್ತವ್ಯವನ್ನು ಭಾರತವು ನೆರವೇರಿಸುವದೆಂದು ಅಧ್ಯಕ್ಷರಂದಿದ್ದಾರೆ.

ಪ್ರಜಾರಾಜ್ಯ ಭಾರತಾಧ್ಯಕ್ಷರು ಪಾರ್ಲಿಮೆಂಟಿನಲ್ಲಿತ್ತ ಭಾಷಣವು ಸರಕಾರೀ ಧೋರಣೆ ನಿರೂಪಿಸುವಂತಹದಿದ್ದರೆ, ಜನತೆಯ ಕರ್ತವ್ಯವನ್ನು ತಿಳಿಸುವ ಮತ್ತೊಂದು ಭಾಷಣವು ಕಳೆದ ವಾರ ಅಧ್ಯಕ್ಷರಿಂದಾಗಿದೆ. ಇದೇ ತಾ. 5ರಲ್ಲಿ ಡಿಲ್ಲಿ ನಗರ ಸಭೆಯುವರು ಪ್ರಜಾ ರಾಜ್ಯ ಭಾರತದ ಪ್ರಥಮಾಧ್ಯಕ್ಷನಿಗೆ ಏರ್ಪಡಿಸಿದ್ದ ಸ್ವಾಗತ ಸಮಾರಂಭವೊಂದಕ್ಕೆ ಅಧ್ಯಕ್ಷರಾಗಮಿಸಿದ ಮೆರವಣಿಗೆಯು ಅತ್ಯಂತ ವೈಭವಪೂರ್ಣವಾಗಿದ್ದಿತು. ಅಲ್ಲಿ ಅಧ್ಯಕ್ಷರಂದರು:— "ಈ ದಿನ ನಾವು ಸ್ವತಂತ್ರರು. ನಮ್ಮ ಅದೃಷ್ಟವನ್ನು ನಿರ್ಧರಿಸಿಕೊಳ್ಳತಕ್ಕವರು ನಾವೇ. ಅದನ್ನು ಸದ್ವಿನಿಯೋಗ ಅಥವಾ ದುರ್ವ್ಯಯಗೊಳಿಸುವದೀಗ ನಮ್ಮನ್ನೇ ಕೂಡಿದೆ. ರಾಜ್ಯ ಘಟನೆಯಲ್ಲಿ ಕೋಟಿಗಟ್ಲೆ ಜನ ಪ್ರಬುದ್ಧರಿಗೆ ವೋಟಿನ ಹಕ್ಕು ಕೊಡಲ್ಪಟ್ಟಿದೆ. ಬಡವ ಶ್ರೀಮಂತರೆನ್ನದೆ, 21 ವರುಷಕ್ಕೆ ಮೇಲ್ಪಟ್ಟ ಪ್ರತಿಯೊಬ್ಬ ಸ್ತ್ರೀ ಪುರುಷನಿಗೂ ವೋಟು ಕೊಡುವ ಹಕ್ಕಿದೆ. ಜನತೆಯು ನ್ಯಾಯಬದ್ಧವಾಗಿ ಮ[...] ದೂರದೃಷ್ಟಿಯಿಂದ ಉಪಯೋಗಿಸಬೇ[...]ದ ಪವಿತ್ರ ಹಕ್ಕಿದು. ಚುನಾವಣೆಗೆ ನಿ[...]ವ ಉಮೇದ್ವಾರಗಳ ಮೇಲೂ ಈ ಮ[...]ಕ ದೊಡ್ಡ ಜವಾಬ್ದಾರಿ ಬಿದ್ದಿದೆ. ರಾಷ್ಟ್ರ[...] ಯಥಾರ್ಥ ಪ್ರತಿನಿಧಿಗಳಾಗುವ ಯೋ[...]ತೆ ತಮ್ಮಲ್ಲಿದೆಂಬುದನ್ನವರು ಸಿದ್ಧಮಾ[...]ತೋರಿಸಬೇಕಾಗಿದೆ. ಸ್ವಾರ್ಥಕ್ಕಿಂ[...] ಸೇವೆಯನ್ನು ಮೇಲಾಗಿ ಗಣಿಸಿ, ಈ ತ[...]ಕ್ಕಾಗಿ ಕಾರ್ಯ ತಲ್ಲೀನತೆಗೊಳ್ಳುವವ[...] ಮಾತ್ರ ಜನತಾ ಸೇವೆ ಸಲ್ಲಿಸಬಲ್ಲರು. [...]ಮ್ಮ ಭಾವೀ ಪ್ರತಿನಿಧಿಗಳನ್ನು ಚುನಾ[...]ಸಿಕೊಳ್ಳುವಾಗ ಈ ತತ್ವವನ್ನು ಕ[...] ಮುಂದಿಟ್ಟುಕೊಳ್ಳುವುದು ಜನತೆಯ ಕ[...]ವ್ಯ. ಸ್ವಾತಂತ್ರ್ಯದ ಅನುಕೂಲತೆಗಳು [...]ರ್ವಜನರಿಗಾಗಿ ಉಪಯೋಗಿಸಲ್ಪಡಬೇ[...] ಹೊರತು ಕೆಲವೇ ಮಂದಿಗಾಗಿ ಅ[...] ಶ್ರೀಮಂತರನ್ನು ಮತ್ತ[...] ಶ್ರೀಮಂತರನ್ನಾಗಿ, ಬಡ[...]ರನ್ನು ತೀರಾ ಬಡವರನ್ನಾಗಿ ಮಾಡು[...] ಧೋರಣೆ ನಮ್ಮ ಮುಂದಿರಕೂಡದು. [...]ಲ್ಪಾಭಿಲಾಷೆಗಳನ್ನು ಬದಿಗೊತ್ತಿ ಪರಸ್ಪ[...] ಭ್ರಾತೃಭಾವ, ಸೌಹಾರ್ದತೆ ಮತ್ತು ಸ[...]ಕಾರ ವರ್ತನೆ ಕೈಕೊಳ್ಳಬೇಕು. ದಾ[...]ದ್ರ್ಯ ನಿರ್ಮೂಲನಮಾಡಿ, ಜನತೆಯ [...]ವನ ಮಟ್ಟವನ್ನೇರಿಸುವುದಕ್ಕಾಗಿ ಜ[...]ಬ್ದಾರಿ ವಹಿಸಿರುವ ಈ ಕಾಲದಲ್ಲಿ ಹೀಗಿ[...] ಬೇಕಾದುದು ಅಗತ್ಯ"

## ಪಾಕಿಸ್ತಾನ್-ದ. ಆಫ್ರಿಕಾ

ದಕ್ಷಿಣಾಫ್ರಿಕದಲ್ಲಿರುವ ಭಾರತ-ಪಾ[...]ಕಿಸ್ತಾನ್ ಜನರ ಮೇಲೆ ಅಲ್ಲಿಯ ಸರ[...]ರವು ಮಾಡುತ್ತಿರುವ ಅಮಾನುಷ ಅತ್ಯಾ[...]ಚಾರಗಳ ಪ್ರತೀಕಾರಾತ್ಮಕವಾಗಿ ನಾಲ[...] ವರುಷಗಳ ಮೊದಲು ಭಾರತವು ಹಾಕಿ[...] ವ್ಯಾಪಾರ ಬಹಿಷ್ಕಾರವನ್ನು ಇದೇ ಫೆ[...]ವರಿ ತಾ. 6ರಿಂದ ಪಾಕಿಸ್ತಾನವು ರದ್ದು[...]ಡಿಸಿಕೊಂಡಿದೆ. ಭಾರತವು ತನ್ನ ಮಟ್ಟಿ[...] ಈ ಬಹಿಷ್ಕಾರವನ್ನು ಯಥಾಪ್ರಕಾರವು[...] ದೊತ್ತಲಿದೆ. ಕೆಲವು ವರುಷಗಳ ಮೊದ[...] ಕೇಂದ್ರ ಎಸೆಂಬ್ಲಿಯಲ್ಲಿ ಸರ್. ಮಹಮ್ಮ[...]ಯಾಕೂಬರಾಡಿದ್ದರು: "ನಾ[...] ಮರಣಶಯ್ಯೆಯಲ್ಲಿ ನುಲಗಿರುವಾಗ, ಯ[...]ರಾದರೂ ಬಂದು ದಕ್ಷಿಣಾಫ್ರಿಕದ ಡಾಕ್ಟ[...]ನೊಬ್ಬನು ನಿಮ್ಮ ಪ್ರಾಣವುಳಿಸಬಲ್ಲನೆಂ[...] ತಿಳಿಸಿದರೆ ನಿಸ್ಸಂದೇಹವಾಗಿಯೂ ನಾ[...] ಡಾಕ್ಟರನನ್ನು ಕರೆಯಲು ನಿರಾಕರಿಸು[...]ದೇನು!" ದಕ್ಷಿಣಾಫ್ರಿಕದಲ್ಲಿ ಭಾರತೀಯ[...] ಪಾಕಿಸ್ತಾನಿಗಳ ಮೇಲೆ ಹಿಂದಿನಂತೆಯ[...] ಈಗಲೂ ಅತ್ಯಾಚಾರಗಳು ನಡೆದವೆ. [...]ದರೂ ಪಾಕಿಸ್ತಾನವು ಈ ವರೆಗೆ ಆ ರಾ[...]ಷ್ಟ್ರದ ಮೇಲಿದ್ದ ವ್ಯಾಪಾರಬಹಿಷ್ಕಾರವನ್ನು ರದ್ದುಪಡಿಸಿಕೊಂಡು ವ್ಯಾಪಾರ ಸಂಬಂ[...]ವನ್ನಾರಂಭಿಸಿದೆ.


Notice (ನೋಟೀಸು)

The Pangal Nayak Bank Limited

Katapadi, S. K.

ದಿ. ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್, ಕಟಪಾಡಿ. ದ. ಕ.

ಈ ಕೆಳಗೆ ಹೆಸರು ಕಾಣಿಸಿದ ಅಸಾಮಿಗೆ ಕೊಟ್ಟ ರಿಜಿಸ್ಟ್ರಿ ನೋಟೀಸನ್ನು ವಾಪಾಸು ಮಾಡಿರುವುದರಿಂದ ಸದ್ರಿ ಅಸಾಮಿಯು ಬೇಂಕಿನಿಂದ ಪಡೆದ ಲೋನಿನಲ್ಲಿ ಈಡಿರುವ ಚಿನ್ನಾಭರಣಗಳನ್ನು ಇದೇ ತಿಂಗಳ ತಾರೀಕು 16ರೊಳಗೆ ಹಣ ವಾಪತಿಮಾಡಿ ಬಿಡಿಸಿಕೊಂಡು ಹೋಗದಿದ್ದಲ್ಲಿ, ಸದ್ರಿ ಲೋನಿನಲ್ಲಿರುವ ಚಿನ್ನಾಭರಣಗಳನ್ನು ಇದೇ ತಿಂಗಳ ತಾರೀಕು 18ನೇ ಶನಿವಾರ ದಿವಸ ಬೆಳಿಗ್ಗೆ ಗಂಟೆ 9-30ಕ್ಕೆ ಅಥವಾ ಬೇಂಕಿಗೆ ಯುಕ್ತ ತೋರುವ ಇತರ ದಿವಸಗಳಲ್ಲಿ ಪುನಃ ನೋಟೀಸು ಕೊಡದೇನೇ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುದು. ತಿಳಿದಿರಲಿ.

| ಲೋನು ನಂಬ್ರ | ಹೆಸರು ಮತ್ತು ವಿಳಾಸ. | ಅಸಲು |
|---|---|---|
| 110/48 | ಶೇಕ್ ಹುಸೈನ್, ಹಾಜಿ ಅದಮರ ಮಗ, ಏಣಗುಡ್ಡೆ ಗ್ರಾಮ, ಕಟಪಾಡಿ ದ. ಕ. | Rs. 930/- |

Office of the Bank Katapadi S. K. 3rd February 1950. } P. S. Nayak, Agent.



### ದ. ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘ, ಮಂಗಳೂರು

ನಮ್ಮ ಸಂಘದ ವಾರ್ಷಿಕ ಮಹಾಸಭೆಯು ತಾ. 19-2-1950ನೇ ಆದಿತ್ಯವಾರ ಮಧ್ಯಾಹ್ನ ಘಂಟೆ 4ಕ್ಕೆ ಶ್ರೀ। ಮಂಗಲಪಾಡಿ ಅಪ್ಪಣ್ಣ ಶೆಟ್ಟಿ ಇವರ ಅಧ್ಯಕ್ಷತೆಯಲ್ಲಿ ಮಂಗಳೂರು ಲಾಲ್‌ಬಾಗಿನಲ್ಲಿರುವ ಶ್ರೀ ರಾಮಕೃಷ್ಣ ವಿದ್ಯಾರ್ಥಿನಿ ಭವನದಲ್ಲಿ ಜರಗುವುದಾಗಿ ನಿಶ್ಚಯಿಸಿರುವುದರಿಂದ ತಾವು ದಯವಿಟ್ಟು ಸಭೆಗೆ ಬರಬೇಕಾಗಿ ಪ್ರಾರ್ಥಿಸುತ್ತೇನೆ.

ಕೆ. ಸದಾನಂದ ಹೆಗ್ಗಡೆ, ಎಡ್ವಕೇಟ್
ಕಾರ್ಯದರ್ಶಿ.
ಮಂಗಳೂರು. ತಾ। 1-2-50

THE
Canara Banking Corporation Ltd.
(Incorporated in India)
Estd: 1906.
HEAD OFFICE: UDIPI, S. I.

SEASON DEPOSITS

for Rs. 5,000/- and over in multiples of Rs. 1,000/- maturing within 30-9-1950 are now accepted at all offices of the Bank at the following rates:-

| | | |
|---|---|---|
| 3 months | .... ... | 2¼% p. a. |
| 4 to 5 ,, | .... .... | 2½% p. a. |
| 6 to 9 ,, | .... .... | 2¾% p. a. |


ಗುರುವಾರ ಉಡುಪಿ ೯-೨-೧೯೫೦

# ಲೋಕಶಾಂತಿ?

ಸಾರ್ವತ್ರಿಕವಾಗಿ ಪ್ರಪಂಚದ ಎಲ್ಲಾ ರಾಷ್ಟ್ರಗಳೂ ಈಗ ರಾಜಕೀಯ ಸ್ವಾತಂತ್ರ್ಯ ಗಳಿಸಿವೆ. ಕೆಲವು ಅಪವಾದಗಳಿರಬಹುದು. ಇಟಲಿ, ಜಪ್ಪಾನಿಗಳಿ—ತಪ್ಪೇರು ಮಾಡಿ ಶಿಕ್ಷೆಗೊಳಗಾದವರಿಗೆ ಸ್ವಾತಂತ್ರ್ಯವಿಲ್ಲವೆಂಬ ತತ್ವವು ಜರ್ಮನಿ, ಜಪಾನುಗಳಂತಹ ರಾಷ್ಟ್ರಗಳ ಮೇಲೂ ಈಗ ಹೇರಲ್ಪಟ್ಟಿರಬಹುದು. ಆದರೂ ಯಾವ ಕಾರಣಕ್ಕಾಗಿಯಾದರೂ ಒಂದು ದೇಶದ ಮೇಲೆ ಮತ್ತೊಂದು ದೇಶದ ಅಧಿಕಾರವೆಂಬುದು ನ್ಯಾಯಕ್ಕೆ, ಕ್ರಮಕ್ಕೆ ಮತ್ತು ಶಾಸನಕ್ಕೆ ವಿರುದ್ಧವೆಂದು ಗಣಿಸಲ್ಪಟ್ಟು, ಸ್ವಾಧಿಕಾರ ವಾತಾವರಣವು ಇಂದು ಲೋಕವ್ಯಾಪಿಯಾಗಿದೆ. ಇಂತಹ ಸ್ವತಂತ್ರ ಜಗತ್ತು ಈ ದಿನ ಸುಖ, ಶಾಂತಿಯಲ್ಲಿಲ್ಲ; ನಾಳೆಯಾದರೂ ಶಾಂತಿ ದೊರಕೀತೆಂಬ ಭರವಸೆ ಮೂಡುವದಿಲ್ಲ. ಬದಲಿಗೆ ಕಳೆದ ಕಾಲು ಶತಮಾನದೊಳಗೆ ಎರಡು ಮಹಾಯುದ್ಧಗಳನ್ನು ಅನುಭವಿಸಿದ್ದ ಪ್ರಪಂಚವು ಮೂರನೆಯದೊಂದನ್ನು ನಿರೀಕ್ಷಿಸುತ್ತಿರುವಷ್ಟು ಆತುರದಿಂದ ಬೇರಾವುದನ್ನೂ ಕಾಯುತ್ತಿಲ್ಲ. ಗತಕಾಲಗಳಲ್ಲಿ ನಿತ್ಯಜೀವನವಾಗಿದ್ದ ಯುದ್ಧದ ಲಾಲಸೆಯು, ದೀರ್ಘಾಭ್ಯಾಸಬಲದಿಂದ ಪ್ರಪಂಚದ ರಕ್ತಗತವಾಗಿರುವದೋ ಎಂಬಂತೆ ಕಾಣುತ್ತಿದೆ.

ಪ್ರಥಮ ಜಾಗತಿಕ ಯುದ್ಧ ಮುಗಿದೊಡನೆ ಇನ್ನು ಮುಂದೆ ಯುದ್ಧವಿಲ್ಲದಂತೆ ಮಾಡಬೇಕೆಂಬ ಪ್ರಯತ್ನಗಳು ನಡೆದಿದ್ದುವು; ಅದಕ್ಕಾಗಿ 'ಲೀಗ್ ಓಫ್ ನೇಶನ್ಸ್' ಸ್ಥಾಪಿಸಲ್ಪಟ್ಟಿತು. ಆ ಶಾಂತಿಯತ್ನವೇ ಒಡನೆ ಲೋಕಯುದ್ಧದ ಕಿಡಿಗೆ ಗಾಳಿಯಾಗಿ ಪರಿಣಮಿಸಿದ್ದಿತೆಂಬ ಸ್ಮರಣೆ ಈಗಲೂ ಉಳಿದಿದೆ. ದ್ವಿತೀಯ ಲೋಕಯುದ್ಧದ ಮುಕ್ತಾಯದೊಡನೆ ಯಥಾಪ್ರಕಾರ ಪ್ರಾರಂಭಿಸಿದ ಶಾಂತಿ ಪ್ರಯತ್ನ ಈಗಲೂ ನಡೆದಿದೆ. 'ಸಂಯುಕ್ತ ರಾಷ್ಟ್ರ ಕೂಟ' ಸ್ಥಾಪಿಸಲ್ಪಟ್ಟು ಕೆಲಸಮಾಡುತ್ತಿದೆ. ಪ್ರಥಮ ಮತ್ತು ದ್ವಿತೀಯ ಯುದ್ಧೋತ್ತರ ಕಾಲಗಳೊಳಗಿನ ವ್ಯತ್ಯಾಸವನ್ನು ಬಿಟ್ಟರೆ, ಆ ಯುದ್ಧಾನಂತರ ನಡೆದಿದ್ದ, ಮತ್ತು ಈ ಯುದ್ಧಾನಂತರ ನಡೆಯುತ್ತಿರುವ ಲೋಕಶಾಂತಿ ಪ್ರಯತ್ನಗಳೊಳಗೆ ತಾರತಮ್ಯವೇನೂ ಕಾಣುವದಿಲ್ಲ. ಕೊನೆಯ ಪರಿಣಾಮ ಕೂಡಾ ಒಂದಲ್ಲೊಂದು ದಿನ ಹಾಗೆಯೇ ಆಗಬಹುದೆಂದು ನಿರೀಕ್ಷಿಸಲಡ್ಡಿಯಿಲ್ಲ. ಹಾಗಾದರೇನು? ವಿನಾಶಕಾರಿ ಹೋರಾಟ-ಹೋರಾಟದ ಬೆನ್ನಲ್ಲೇ ಶಾಂತಿ ಸಾಧನೆಯ ಕಪಟ ನಾಟಕ-ಪುನಃ ಯಥಾಪ್ರಕಾರ—ಈ ಚಕ್ರವನ್ನು ಉರುಳಿಸುತ್ತಾ ಹೋಗುವುದೊಂದೇ ಪ್ರಪಂಚಕ್ಕೆ ತಿಳಿದಿರುವ ವಿದ್ಯೆಯೆ? ಈ ಕ್ರಮಾನುಗತವಾಗಿ ಲೋಕವಿಂದು ಮೂರನೇ ಮಹಾ ಯುದ್ಧದ ಹೊಸ್ತಿಲಲ್ಲಿ ನಿಂತಿರುವುದೇ? ಹಾಗಿಲ್ಲ—ಇನ್ನೊಂದು ಯುದ್ಧವಾಗಲಾರದೆಂಬ ವಿಶ್ವಾಸವನ್ನು ಬೆಳಗಿಸುವ ಆಶಾಕಿರಣವು ಯಾವ ಕಡೆಯಿಂದಲೂ ಬೀಳದಿರುವಾಗ ಬೇರೇನನ್ನು ಊಹಿಸಲು ಸಾಧ್ಯವಿದೆ?

ನಿಜಕ್ಕೂ ಈ ವರೆಗೆ ಜಗತ್ತಿನ ಮುಂಭಾಗದಲ್ಲಿರುವ ರಾಷ್ಟ್ರಗಳು ಮತ್ತೊಂದು ಮಹಾಘರ್ಷಣೆಯನ್ನೇ ಕನವರಿಸುತ್ತಿವೆ. ಯುದ್ಧವೇ ಸುಖದಾಯಿ, ಎಂಬ ಭ್ರಮೆಯಿಂದ ಆ ಕಡೆಗಾಕರ್ಷಿಸಲ್ಪಟ್ಟವರಾರೂ ಇರಲಾರರು. ಆದರೆ ತಮ್ಮ ಕಾರ್ಯಸಾಧನೆಗೆ ಅನಿವಾರ್ಯವೆನ್ನಿಸಿದಾಗ ಯುದ್ಧಕ್ಕೆ ತಯಾರಿರಬೇಕು—ವಿರುದ್ಧಗಾಮಿಗಳ ತೇಜೋವಧೆ ಮಾಡಲು ಯುದ್ಧವೊಂದೇ ಉಪಾಯವೆಂದಾದರೆ ಅದಕ್ಕೂ ಸೈ!—ಎಂಬ ಭಾವನೆಯಿಂದ ಎಲ್ಲರೂ ಯುದ್ಧೋದ್ಯಮ ನಿರತರಾಗಿದ್ದಾರೆ. ಈ ಕನಸಿನ ಫಲವನ್ನು ಗಳಿಸಿಕೊಳ್ಳಬೇಕೆಂಬುದಕ್ಕಾಗಿ ಆಗುತ್ತಿರುವ ಪ್ರಯತ್ನದಂತಹದು ಪ್ರಚಲಿತ ಸ್ಥಿತಿ ಸುಧಾರಣೆಗಾಗಿ ನಡೆಯುತ್ತಿಲ್ಲ. 'ಯುದ್ಧ ಸಂಭವಿಸಿದರೆ' ಎಂಬ ಸಂದೇಹವಷ್ಟೇ ಮೊಳೆತಿಲ್ಲ-ಯುದ್ಧ ಖಂಡಿತವೆಂಬ ನಿಶ್ಚಿತಾಭಿಪ್ರಾಯದಿಂದೆಂಬಂತೆ, ಇಂದು ಯುದ್ಧ ಸಿದ್ಧತೆಗಳು ನಡೆದಿವೆ. ಆ ಸಿದ್ಧತೆಗಳ ಮೇಲಿಂದ ಭಾವೀ ಸಂಭವಗಳನ್ನು ಚಿತ್ರಿಸಿಕೊಳ್ಳುವಾಗ ಮೈ ಜುಮ್ಮೆನ್ನುತ್ತಿದೆ. ಆಧುನಿಕ ಜಗತ್ತಿಗೆ ಶಸ್ತ್ರಾಸ್ತ್ರಗಳ ಹೋರಾಟಗಳನ್ನು ಕೇಳಿಯೂ, ಸಾಮಾನ್ಯ ಬೊಂಬುಗಳ ಎಸೆದಾಟಗಳನ್ನು ನೋಡಿಯೂ ಗೊತ್ತು. ಆದರೆ ಕಳೆದ ಮಹಾಯುದ್ಧವು 'ಆಟಂ ಬೋಂಬ್'ನಂತಹ ಅಸಾಮಾನ್ಯ ಧ್ವಂಸಾಯುಧದ ಪರಿಚಯ ಮಾಡಿಕೊಟ್ಟೇ ಮುಗಿದಿದ್ದಿತು. ಈಗ ಆಟಂ ಬೋಂಬಿಗಿಂತ ಸಹಸ್ರ ಪಾಲು ಅಧಿಕ ವಿನಾಶಕಾರಿ 'ಹೈಡ್ರೋಜೆನ್ ಬೋಂಬು' ಮುಂದೆ ಬಂದಿದೆ. ಈ ಪ್ರಳಯ ಪ್ರಗತಿಯ ಕುರಿತು ಏನನ್ನಬೇಕೋ ತೋಚುವದಿಲ್ಲ. ಕೇವಲ ವಿನಾಶಕ್ಕಲ್ಲದೆ, ಅದರಲ್ಲೂ ಮಿತಿಯಾವಧಿ [illegible] ಜನರನ್ನು ಒಂದೇ ಸಮನೆ ಧ್ವಂಸಮಾಡುವುದಕ್ಕಲ್ಲದೆ, ಬೇರಾವ ಉಪಯೋಗಕ್ಕೂ ಬೀಳದ ಉಪಕರಣವಿದು. ಇಂತಹವರ ತಯಾರಿ ಅಗತ್ಯವೆನ್ನಿಸಿರುವ ಇಂದಿನ ವಾತಾವರಣದಲ್ಲಿ ಎಂತಹ ಭೀಕರತೆ ಹುದುಗಿಕೊಂಡಿರಬೇಕು—ಮಾನುಷತ್ವ ಅಥವಾ ಮಾನವ ಪ್ರಾಣವೆಂಬುದು ಯಾವ ಬೆಲೆಯೂ ಇಲ್ಲದ್ದೆಂಬಂತೆ ಲಕ್ಷಾವಧಿ ಮಂದಿಯನ್ನು ಕ್ಷಣ ಮಾತ್ರದಲ್ಲಿ ನಿರ್ಮೂಲಿಸಿಬಿಡುವ ಈ ಆಯುಧವನ್ನು ಕೈಕೊಳ್ಳುವವರ ಹೃದಯವೆಂತಹದಿರಬೇಕು— ಎಂಬುದನ್ನು ಸ್ಮರಿಸಿದರೆ ಸಾಕು, ಮಿಕ್ಕೆಲ್ಲಾ ಮಾತು, ಬೋಧೆಗಳ ನೆನಪೂ ಮಾಯವಾಗುತ್ತಿದೆ; ಇಂಥವರ ಬಾಯಿ ಸ್ಪರ್ಶಗೊಂಡು 'ಲೋಕಶಾಂತಿ' ಮಂತ್ರವು ಅಪವಿತ್ರವಾಯಿತೆಂಬ ಜಿಗುಪ್ಸೆ ಮೊಳೆಯುತ್ತಿದೆ. ಪರಿಸ್ಥಿತಿ ಹೀಗಿರುವಾಗ ಪ್ರಪಂಚದಲ್ಲಿ ಶಾಂತಿ, ಸೌಹಾರ್ದತೆಗಳು ಸ್ಥಾಪನೆಗೊಳ್ಳುವುದಾದರೂ ಹೇಗೆ ಮತ್ತು ಯಾವಾಗ?

ಯಥಾರ್ಥ ಶಾಂತಿ ಪ್ರೇಮಿಗಳನ್ನು ಆತುರಕ್ಕೀಡು ಮಾಡಿರುವ ಪ್ರಶ್ನೆಯೊಂದೇ— 'ಸಮರ ಸಂಭವಿಸಿದರೆ' ಎಂಬ ನಿರೀಕ್ಷೆಯಿಂದ ಹೈಡ್ರೋಜೆನ್ ಬೋಂಬು ತಯಾರಿ ವರೆಗೂ ಮುಂದೊತ್ತಿರುವವರು, ಯುದ್ಧದ ಮೂಲ ಕಾರಣಗಳನ್ನು ನಿವಾರಿಸಿಕೊಳ್ಳುವ ಕಡೆಗೆ ಹೆಜ್ಜೆಯಿಡುತ್ತಿಲ್ಲವೇಕೆ ಎಂಬುದೇ. 'ಲೋಕಬಾಂಧವ್ಯ' 'ಪ್ರಾಪಂಚಿಕ ಶಾಂತಿಯಾತುರ' ಮುಂತಾದ ವಿಶಾಲ ಧೋರಣೆಗಳ ಮಾತು ಹಾಗಿರಲಿ— ಕೇವಲ ನ್ಯಾಯನಿಷ್ಠೆಯೊಂದಿದ್ದು, ಬೇರಾವುದಕ್ಕಿಂತಹ ಧಕ್ಕೆ ಬಿದ್ದರೂ ನ್ಯಾಯವಾದರಿಸಲ್ಪಡಬೇಕು ಎಂಬ ಸಾಮಾನ್ಯ ತತ್ವವು ಎಲ್ಲರಿಂದಲೂ ಮನ್ನಿಸಲ್ಪಟ್ಟರೆ ಇಂದಿನ ವಿವಾದ, ಪೈಪೋಟಿಗಳೆಲ್ಲವೂ ತಾವಾಗಿ ಅಂತರ್ಧಾನಗೊಂಡಾವು. ನ್ಯಾಯಬದ್ಧ ತೀರ್ಮಾನಕ್ಕೆಟುಕದ ವಿವಾದಗಳಾವುವೂ ಹಿಟ್ಲರ್- ಬ್ರಿಟನ್ ಸ್ಪರ್ಧೆಯ ಆ ಕಾಲದಿಂದಾರಂಭಿಸಿ, ರಶ್ಯಾ--ಅಮೇರಿಕ ಮೇಲಾಟದ ಈ ಕಾಲದ ವರೆಗೂ ಇಲ್ಲವೇ ಇಲ್ಲ. ನ್ಯಾಯಕ್ಕಾಗಿ ಸ್ವಾರ್ಥವನ್ನು ಬಿಡಲಾಗದ ದೆಸೆಯಿಂದಲೇ ಅಂದು ನಾಜೀ ಯುದ್ಧ ಹುಟ್ಟಿದ್ದರೆ, ಇಂದು 'ಹೈಡ್ರೋಜೆನ್ ಬೋಂಬು ಯುದ್ಧ'ವನ್ನು ಹುಟ್ಟಿಸುವ ಸಾಹಸ ನಡೆದಿದೆ. ಪ್ರತ್ಯಕ್ಷ ಪ್ರಳಯವನ್ನೇ ನಿರ್ಮಿಸಿಯಾದರೂ ಸಾಧಿಸಲು ಹವಣಿಸುವ ಸ್ವಾರ್ಥಗಳಾದರೂ ನಿಜಕ್ಕೂ ಅಷ್ಟು ಅಮೂಲ್ಯವಾದವುಗಳೋ, ಅವಶ್ಯಕವಿರುವವೋ, ಎಂಬುದನ್ನು ವಿಚಾರಿಸಬೇಕು. ಇಂದು ಯಾವ ಕಾರಣಗಳಿಗಾಗಿ ಕೆಲವು ರಾಷ್ಟ್ರಗಳ ಮುಖಂಡರಿಗೆ ಯುದ್ಧದ ಕನಸು ಬೀಳುತ್ತಿದೆಯೋ ಆ ಕಾರಣಗಳು ಸಾಮಾನ್ಯ ಜನತೆಯ ಹಿತದೃಷ್ಟಿಯಿಂದ ನಿಜವಾದ ಕಾರಣಗಳಲ್ಲವೇ ಅಲ್ಲ. ಆಳುವ ವರ್ಗದವರಿಗೆ, ಮತ್ತು ಆಳುವ ವರ್ಗವನ್ನಾಡಿಸುವ ವರ್ಗದವರಿಗೆ ಮಾತ್ರ ಬೇಕಾಗಿರುವ ಸಂಗತಿಗಳವು. ಈ ವರ್ಗಗಳವರು ಅಖಿಲ ಜಗತ್ತಿನ ಮಾನವ ಜನಾಂಗದ ತೀರಾ ಅಲ್ಪಸಂಖ್ಯಾಕರು. ಇಂಥವರ ಸ್ವಾರ್ಥ ಸಾಧನೆಗಾಗಿ ನಡೆಯುವ ಯುದ್ಧದ ಹಾನಿಗಳನ್ನನುಭವಿಸುವವರು ಮಾತ್ರ ಜನಸಾಮಾನ್ಯರೇ. ಹೀಗಾಗಿ ಜನತೆಯ ದೃಷ್ಟಿಯಿಂದ, ಇಂದಿನ ಯುದ್ಧ ಸಿದ್ಧತೆಗಳು ಮತ್ತು ಪ್ರಚಾರಗಳೆಂದರೆ, ಅನಗತ್ಯವಾಗಿ ದಂಡಾಂತರಕ್ಕಾಮಂತ್ರಣ ಕೊಡುವಂತೆಯೇ ಸರಿ! ಇದನ್ನು ತಡೆಗಟ್ಟಬೇಕಾದರೆ ಎಲ್ಲೆಲ್ಲೂ ಸಾಮಾನ್ಯ ಜನತೆಯ ಸಂಕಲ್ಪವೇ ಮೇಲಾಗಬೇಕು; ಜನಮತದ ಸ್ಪಷ್ಟ ರೂಪ ತೋರಿ ಬಂದು ಅದಕ್ಕೆ ಮನ್ನಣೆ ದೊರೆಯಬೇಕು. ಒಂದಲ್ಲೊಂದು ರೀತಿಯಿಂದ ಜನ ಪ್ರಾತಿನಿಧ್ಯದ ಅಧಿಕಾರ ಮತ್ತು ಜನತೆಯ ಹೆಸರಿನಿಂದಲೇ ಕಾರ್ಯಭಾರ ನಿರ್ವಹಿಸುತ್ತಿರುವವರೇ ಇಂದು ಯುದ್ಧಸ್ವಪ್ನ ಕಾಣುತ್ತಿರುವವರಿಂದ ಮೇಲೆ, ಅವರಿಗೆ ವಿರುದ್ಧವಾಗಿ ಜನಮತ ಪ್ರಕಾಶಗೊಳ್ಳುವದಕ್ಕೆ ಅವಕಾಶ ಕಡಿಮೆ. ಆದರೂ ಪ್ರತಿನಿಧಿ ಸ್ಥಾನದಲ್ಲಿರುವವರ ಮನೋವೃತ್ತಿಯನ್ನು ಬದಲಾಯಿಸಲು ಜನತೆಗೆ ಸಾಧ್ಯವಿದೆ; ಅಂತೆಯೇ ಸ್ವರಾಷ್ಟ್ರದ ಹಾಗೂ ಲೋಕದ ಮಾನವ ಜನಾಂಗದ ಕಲ್ಯಾಣ ಸಾಧನೆಯ ದೃಷ್ಟಿಯಿಂದ ಯುದ್ಧಮೂಲವನ್ನೇ ಕತ್ತರಿಸಿಕೊಳ್ಳಲು ಯುದ್ಧಾಸಕ್ತ ರಾಷ್ಟ್ರ ನಾಯಕರುಗಳಿಗೂ ಸಾಧ್ಯವಿದೆ. ಶಾಂತಿಸಾಧನೆಯ ವ್ಯವಹಾರ್ಯ ವಿಧಾನವೆಂದರೆ, ಯುದ್ಧದತ್ತ ಒಯ್ಯಬಹುದೆಂಬಂತೆ ತೋರುತ್ತಿರುವ ವಿವಾದಗಳನ್ನು ನಿಷ್ಪಕ್ಷಪಾತಿಗಳ ತೀರ್ಮಾನಕ್ಕೊಪ್ಪಿಸಿಕೊಡುವುದು. ಅಂತಹ ನಿರ್ಮಲ ಮನಸ್ಸಿನ ನ್ಯಾಯಶೋಧಕರು ರಾಜಕಾರಣಿಗಳಲ್ಲಿ, ನ್ಯಾಯಾಧೀಶ ವರ್ಗದಲ್ಲಿ ಅಥವಾ ವಿಜ್ಞಾನಿ, ಸಾಹಿತಿ ಮುಂತಾದ ವರ್ಗಗಳವರಲ್ಲಿ ದೊರೆಯದಿರಲಾರರು. ವಿವಾದಗಳ ಸಂಬಂಧ ಕಟ್ಟಿಕೊಂಡಿರುವವರಿಂದಲೇ ತುಂಬಿರುವ 'ಸಂಯುಕ್ತ ರಾಷ್ಟ್ರಗಳ ಸಂಘ'ದಂತಹದರಿಂದ ಆಗಲಾರದ ಶಾಂತಿ ಸಾಧನೆಯು ಈ ನಿರ್ಲಿಪ್ತ ಮನಸ್ಸಿನ ನ್ಯಾಯಕರ್ತರಿಂದ ಆಗಬಹುದು. ಅಂಥವರ ತೀರ್ಮಾನವನ್ನು ಮರುಮಾತಿಲ್ಲದೆ, ಶಿರಸಾವಹಿಸಿಕೊಳ್ಳುವ ಶರ್ತಕ್ಕೆ ಸಂಬಂಧಪಟ್ಟವರು ಮುಂದಾಗಿ ಕಟ್ಟುಬೀಳುವುದೊಂದೇ ಇಲ್ಲಿ ಮುಖ್ಯ. ಈ ವಿಧಾನದಿಂದ ಭಾವನೆ, ಧೋರಣೆ, ಅಂತರಂಗ ಬಹಿರಂಗ ವ್ಯವಹಾರ, ಇತ್ಯಾದಿಗಳ ಸಂಬಂಧದ ಎಲ್ಲಾ ಜಗಳಗಳನ್ನು ತೀರ್ಮಾನಿಸಿಕೊಳ್ಳುವ ಒಂದು ವ್ಯವಸ್ಥೆ ಬಾರದಿದ್ದರೆ, ಅಥವಾ ಬೇರಾವುದೇ ರೀತಿಯ ಯಥಾರ್ಥ ಶಾಂತಿ ಪ್ರಯತ್ನ ನಡೆಯದಿದ್ದರೆ, ಲೋಕವು ಹಿಂದೆಂದೂ ಅನುಭವಿಸದೆಂತಹ ಅತ್ಯಂತ ಭೀಕರ ಅನಾಹುತಕ್ಕೀಡಾಗುವ ಕಾಲ ಮುಂದಿದೆ ಎನ್ನಬೇಕು.

"ಲೋಕದಲ್ಲಿ ಏನಾದರೂ ಶಿಷ್ಟಾಚಾರವುಳಿಯಬೇಕೆಂದಿದೆಯೋ, ಹಾಗಾದರೆ ನೀವು ಈ ಹೈಡ್ರೋಜೆನ್ ಬೋಂಬನ್ನು ಅಂತ್ಯಪಡಿಸಿಕೊಳ್ಳುವುದು ವಾಸಿ. ಈ ಹೊರತು ಬೇರೆ ಹಾದಿ ನಿಮಗಿಲ್ಲ. ಹೈಡ್ರೋಜನ್ ಬೋಂಬನ್ನುಪಯೋಗಿಸುವುದು, ಅನಂತರವೂ ಏನಾದರೂ ಶಿಷ್ಟಾಚಾರವನ್ನು ನಿರೀಕ್ಷಿಸುವುದು, ಇವೆರಡನ್ನು ಮಿಶ್ರಗೊಳಿಸಲು ಸಾಧ್ಯವಿಲ್ಲ" ಎಂದು ಭಾರತದ ಮಹಾಪ್ರಧಾನಿಗಳು ಇದೇ ತಾ. 6ರಲ್ಲಿ ಪತ್ರಿಕಾ ಕೂಟದ ಮುಂದೆ ಹೇಳಿದ್ದಾರೆ. ಈ ನೀತಿವಾಕ್ಯದ ಉತ್ತರಾರ್ಧವಾಗಿ "ಒಂದೋ ನ್ಯಾಯಬದ್ಧ ತೀರ್ಮಾನಗಳ ಶೋಧನೆ ಮತ್ತು ಅಂಗೀಕಾರಕ್ಕೆ ತಯಾರಾಗಬೇಕು. ಇಲ್ಲವೇ ಲೋಕಶಾಂತಿ ಪತನಪಡಬೇಕು. ಅದನ್ನು ನಿರಾಕರಿಸಿ ಇದನ್ನು ಪಡೆಯುವದಕ್ಕರ್ಥವಿಲ್ಲ" ಎಂದು ಸ್ಪಷ್ಟ ಹೇಳಬೇಕಾಗಿದೆ.

# ದಕ್ಷಿಣಾಫ್ರಿಕದ ಮೇಲಿದ್ದ ವ್ಯಾಪಾರ ಬಹಿಷ್ಕಾರವನ್ನು ಪಾಕಿಸ್ತಾನವು ರದ್ದುಪಡಿಸಿತು!

(೫ನೇ ಪುಟದಿಂದ ಮುಂದುವರಿದುದು)

ಷಣದ ಕುರಿತು ಪಾರ್ಲಿಮೆಂಟ್ ಚರ್ಚೆ ನಡೆಸಿದಾಗ ಮುಕ್ತಾಯ ಭಾಗದಲ್ಲಿ ಪ್ರಜಾರಾಜ್ಯ ರಥದ ಎರಡು ಶ್ವೇತಾಶ್ವಗಳಂತಿರುವ ನೆಹರು ವಲ್ಲಭಭಾಯಿಗಳಿತ್ತ ಭಾಷಣಗಳು ವಿಚಾರಣೀಯವಿವೆ. ರಾಷ್ಟ್ರವು ಈ ಪ್ರಮುಖ್ಯ ಸಂದರ್ಭದಲ್ಲಿ ತನಗೆ ತನ್ನೆರಡು ನಾಯಕರ ಬೋಧನೆಗಳೇನೆಂಬ ಕಡೆಗೆ ಲಕ್ಷ್ಯ ಕೊಡುವುದಗತ್ಯವಿರುವುದರಿಂದ ಅವರಿಬ್ಬರ ಕೆಲವು ಮಾತುಗಳನ್ನು ಇಲ್ಲಿ ಕೊಡಲಾಗಿದೆ. ಪಾರ್ಲಿಮೆಂಟಿನ ಚರ್ಚಾಂತ್ಯದಲ್ಲಿ ಉತ್ತರ ರೂಪವಾಗಿ ಕೊಟ್ಟ ಭಾಷಣದಲ್ಲಿ ಪಂಡಿತಜೀಯಂದಿದ್ದರು: "ಪೂರ್ಣ ಶಕ್ತಿ, ಸಾಮರ್ಥ್ಯ ಆಶೆ ಮತ್ತು ನಿಷ್ಠೆಯೊಂದಿಗೆ, ಮತ್ತದೇ ಕಾಲದಲ್ಲಿ ತನ್ನನ್ನಿದಿರಿಸಿರುವ ಅಗಾಧ ಸಮಸ್ಯೆಗಳೊಂದಿಗೆ ರಿಪಬ್ಲಿಕ್ ಆರಂಭಿಸಿದೆ. ಈ ಸಮಸ್ಯೆಗಳನ್ನರ್ಥ ಮಾಡಿಕೊಂಡು ಏಕಾಗ್ರ ಪ್ರಯತ್ನ ಮತ್ತು ನಿಷ್ಠೆಯ ಸ್ಫೂರ್ತಿ ವಹಿಸಿ, ನಮ್ಮನ್ನೇ ನಾವು ತುಂಬಿಸಿಕೊಳ್ಳುತ್ತೇವಾದರೆ ವಿಜಯದ ಕಡೆಗೆ ನಾವು ಮುಂದೊತ್ತಬಲ್ಲೆವೆಂಬ ಕುರಿತು ನನಗೆ ಖಾತ್ರಿಯಿದೆ; ಹಿಂದೂ ಮಹಾಸಭೆಯಂತಹ ಜಾತೀಯತಾ ಸಂಘ ಸಂಸ್ಥೆಗಳು ಖಂಡನೀಯವಿವೆ. ಪಾಕಿಸ್ತಾನ್ ಸಂಬಂಧದಲ್ಲಿ ಅವರು ಹೇಳಿರುವ ಕೆಲವು ಸಂಗತಿಗಳು ಪರಮಾವಧಿ ತಿಳಿಗೇಡಿತನದ್ದಿವೆ; ಕುಟಿಲ ಬುದ್ಧಿಯಲ್ಲಿ ಮೊಳೆತವುಗಳಿವೆ. ಒಂದೆಡೆ ನಾವು ಸಶಕ್ತರಾಗಿ, ದೃಢಧೋರಣೆಯವರಾಗಿ ಮಿಲಿಟರಿ ಅಥವಾ ಇತರ ವಿಧಾನಗಳಲ್ಲಿ ಸಿದ್ಧತೆಯುಳ್ಳವರಾಗಿದ್ದು, ಏನೇ ಬಂದರೂ ನಾವು ತಪ್ಪೆಂದು ಭಾವಿಸಿದುದನ್ನು ಎಂದೂ ಅಂಗೀಕರಿಸಿಕೊಳ್ಳದಂತಿರಬೇಕಾದರೂ, ಇನ್ನೊಂದೆಡೆ ನಾವು ಸಹನೆಯವರು ಹಾಗೂ ಮಿತವಾದಿಗಳು ಮತ್ತು ಮೈತ್ರೀ ಭಾವನೆಯವರಾಗಿರಬೇಕೆಂದು ನನಗೆ ಮನವರಿಕೆಯಾಗಿದೆ. ಹೇಗಿದ್ದರೂ ಒಂದಲ್ಲೊಂದು ಕಾಲದಲ್ಲಿ ಭಾರತ ಮತ್ತು ಪಾಕಿಸ್ತಾನಗಳಲ್ಲಿರುವ ಅಪಾರ ಸಂಖ್ಯೆಯ ಜನರು ಪರಸ್ಪರ ಸಹಕರಿಸಿಕೊಂಡು ಸ್ನೇಹಾಚಾರದಿಂದಿರಲು ಬದ್ಧರಿದ್ದಾರೆ".

ಆ ಮೊದಲಿನೊಂದು ಸಂದರ್ಭದಲ್ಲಿ ಪಾರ್ಲಿಮೆಂಟಿನಲ್ಲಿ ಬಂದ ಪ್ರಶ್ನೆಯೊಂದಕ್ಕುತ್ತರ ಕೊಡುತ್ತಾ ಪ್ರಧಾನ ಮಂತ್ರಿಗಳು "ಕಾಶ್ಮೀರ ವಿವಾದದ ತೀರ್ಮಾನಕ್ಕಾಗಿ ಯುದ್ಧವನ್ನೇ ಸಾಧಿಸಿ ಪಾಕಿಸ್ತಾನದಲ್ಲಾಗುತ್ತಿರುವ ಕೆಲವು ಬೇಜವಾಬ್ದಾರೀ ಹೇಳಿಕೆಗಳನ್ನು" ಖಂಡಿಸಿದ್ದರು.

ಪಾರ್ಲಿಮೆಂಟಿನ ಚರ್ಚಾಂತ್ಯದಲ್ಲಿ 'ಸರಕಾರವು ಬಂಡವಾಳಶಾಹಿಗಳ ಮನವೊಲಿಸಲು ನೋಡುತ್ತಿದೆ' ಎಂಬ ಆರೋಪಕ್ಕೆ ಉತ್ತರ ಕೊಡುತ್ತಾ ಸರ್ದಾರ್ ಪಟೇಲರಂದಿದ್ದರು: "ಕಳೆದ ಎರಡು ವರುಷಗಳಲ್ಲಿ ಕೇಂದ್ರ ಮತ್ತು ಪ್ರಾಂತ್ಯಗಳಲ್ಲಿ ನಾವು ಮುಂದೊಡ್ಡಿಪ್ಪ ಕೆಲಸಗಾರರ ಸಂಬಂಧದ ಶಾಸನಗಳನ್ನು ಪರಿಶೀಲಿಸಿರಿ. ಇದಕ್ಕೆ ಸಂಗಟ್ಟುವಂತಹದನ್ನು ನೀವು ಬೇರೆಲ್ಲಿಯಾದರೂ ಕಂಡು ಹಿಡಿಯಬಲ್ಲಿರಾ? ಕೆಲಸಗಾರರಿಗೆ ಸಾಧ್ಯವಿದ್ದಷ್ಟು ನಮಗೆ ಸಾಧ್ಯವಿದ್ದ ಎಲ್ಲಾ ಪ್ರಯತ್ನಗಳನ್ನೂ ಮಾಡಿದ್ದೇವೆ. ನಾವೀಗ ಒಂದು ಬಿಕ್ಕಟ್ಟಿನ ಅವಧಿಗೆ ಬಂದಿದ್ದೇವೆ. ಆಹಾರ, ಉದ್ದಿಮೇ ಉತ್ಪನ್ನಗಳನ್ನು ಹೆಚ್ಚಿಸಿಕೊಳ್ಳದಿದ್ದರೆ ನಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲಾಗದಂತಹ ಸ್ಥಿತಿ ಬಂದಿದೆ. ಸಮಾಜದ ಎಲ್ಲಾ ವಿಭಾಗಗಳೂ ಸಹಕರಿಸಲಾಗುವಂತಹ ವಿಧಾನಗಳಿಗೆ ನಮ್ಮ ಧೋರಣೆಗಳನ್ನು ಸರಿಹೊಂದಿಸಿಕೊಳ್ಳಬೇಕಾದ ಕಾಲವೀಗ ಬಂದಿದೆ. ಎಲ್ಲೆಲ್ಲೂ ಗೊಂದಲಗಳನ್ನೆಬ್ಬಿಸುತ್ತಾ ಹೋಗುವ ಸಮತಾವಾದಿಗಳ ಧೋರಣೆಯಿಂದ ಆ ಪಕ್ಷದ ಸ್ಥಿತಿ ಸುಧಾರಿಸುವಂತಿಲ್ಲ. ಆ ಪಕ್ಷವು ಒಂದು ಆರೋಗ್ಯದಾಯೀ ಇದಿರುವಾದಿ ಪಕ್ಷವಾಗಿ ರೂಪುಗೊಳ್ಳಬೇಕೆಂದು ನಾವಿಚ್ಛಿಸುತ್ತೇವೆ."

## ಅಧ್ಯಕ್ಷರ ಭಾಷಣ

ರಿಪಬ್ಲಿಕ್ ಭಾರತ ಪಾರ್ಲಿಮೆಂಟಿನ ಪ್ರಥಮ ಅಧಿವೇಶನಾರಂಭ ಮುಹೂರ್ತದಲ್ಲಿ ತಾ. 31ರಲ್ಲಿ ಕ್ರಮಪ್ರಕಾರ ಅಧ್ಯಕ್ಷ ರಾಜೇಂದ್ರ ಪ್ರಸಾದರ ಭಾಷಣವಾಯಿತು. ಬ್ರಿಟಿಷ್ ಪಾರ್ಲಿಮೆಂಟಿನ ಆರಂಭದಲ್ಲಿ ಸರಕಾರೀ ಧೋರಣೆಯನ್ನು ನಿರೂಪಿಸುವ ರಾಜಭಾಷಣ ನಡೆಯುವ ಪದ್ಧತಿಯಂತೆ, ಭಾರತಾಧ್ಯಕ್ಷರ ಭಾಷಣವೂ ಸರಕಾರೀ ಧೋರಣೆಯ ಯಥಾರ್ಥ ಪ್ರತಿಬಿಂಬವಾಗಿದ್ದಿತು. ನಿಯಮ ಪ್ರಕಾರ ಆ ಭಾಷಣದ ಮೇಲೆ ಚರ್ಚೆ ನಡೆದು ಅಧ್ಯಕ್ಷ ಭಾಷಣದಲ್ಲಿ ಬಂದಿದ್ದ ಸರಕಾರೀ ವಿಧಾನಗಳನ್ನು ಒಪ್ಪಿಕೊಳ್ಳುವ ಸಮ್ಮತಿ ಕೂಡಾ ಕೊನೆಗೆ ಪಾರ್ಲಿಮೆಂಟಿನಲ್ಲಾಗಿದ್ದಿತು. ಈ ಮೊದಲು ಹಲವು ಬಾರಿ ಖಚಿತವಾಗಿದ್ದ ಮಾದರಿಯಲ್ಲೇ ಭಾರತಾಧ್ಯಕ್ಷ ಭಾಷಣದಲ್ಲಿಯೂ ಭಾರತ ಸರಕಾರದ ಶಾಂತಿ ಪ್ರೇಮ ಮತ್ತು ದೃಢ, ಗಂಭೀರ ಧೋರಣೆಗಳು ಪಡಿಮೂಡಿದ್ದುವು. "ಲೋಕದ ಎಲ್ಲಾ ರಾಷ್ಟ್ರಗಳೊಡನೆ ಶಾಂತಿ ಹಾಗೂ ಸ್ನೇಹಾಚಾರವುಳಿಸಿಕೊಳ್ಳಬೇಕು. ಮತ್ತು ಸಾಧ್ಯವಿದ್ದ ಎಲ್ಲಾ ವಿಧಾನಗಳಿಂದಲೂ ಲೋಕ ಶಾಂತಿಗೆ ನೆರವಾಗಬೇಕು, ಎಂಬುದೇ ನನ್ನ ಸರಕಾರದ ದೃಢ ಧೋರಣೆ. ರಿಪಬ್ಲಿಕ್ ಭಾರತಕ್ಕೆ ಇತರ ರಾಷ್ಟ್ರಗಳೊಂದಿಗೆ ಪರಂಪರಾಗತ ದ್ವೇಷವಾಗಲೀ ಸಂಪ್ರದಾಯಾನುಗುಣ ಪ್ರತಿ ಸ್ಪರ್ಧೆಯಾಗಲೀ ಇಲ್ಲ. ನನ್ನ ಸರಕಾರವಾದರೋ ಲೋಕದಲ್ಲಿ ಶಾಂತಿ ಸ್ಥಾಪಿಸುವ ಕಡೆಗೆ ಮತ್ತು ಯಾವುದೇ ರಾಷ್ಟ್ರದ ವಿರೋಧಗಳಿಸುವ ಯಾವುದೇ ಸಂಬಂಧವನ್ನು ಕಟ್ಟಿಕೊಳ್ಳದ ಕಡೆಗೇನೆ ತನ್ನ ಧೋರಣೆಯನ್ನು ಮುಂದೊತ್ತಲಿಚ್ಛಿಸುತ್ತದೆ." ಎನ್ನುತ್ತಾ ಅಧ್ಯಕ್ಷರು, ಪಾಕಿಸ್ತಾನವು ಭಾರತದ 'ಯುದ್ಧವಿಲ್ಲ' ಕೊಡುಗೆಯನ್ನು ಅಂಗೀಕರಿಸಿ ಎರಡು ರಾಷ್ಟ್ರಗಳೊಳಗಿನ ದುರ್ದೈವೀ ಘರ್ಷಣೆಯನ್ನು ಕಡಿಮೆಮಾಡಲು ನೆರವಾಗಬೇಕೆಂದು ಕೇಳಿಕೊಂಡಿದ್ದಾರೆ. ಕಾಶ್ಮೀರದಲ್ಲಿ ಜನತೆಯ ಸ್ವತಂತ್ರ ಮತಪ್ರದರ್ಶನಕ್ಕನುಕೂಲವಾದ ವಾತಾವರಣ ನಿರ್ಮಾಣಗೊಳ್ಳುವ ವರೆಗೆ ಮತ್ತು ಈ ಕಷ್ಟದಾಯೀ ಸಮಸ್ಯೆಯ ಕುರಿತು ಸಮಾಧಾನಕರ ತೀರ್ಮಾನ ದೊರೆಯುವ ವರೆಗೆ ಆಕ್ರಮಣದಿದಿರಲ್ಲಿ ಆ ಸಂಸ್ಥಾನ ಮತ್ತದರ ಜನತೆಯನ್ನು ರಕ್ಷಿಸುವ ತನ್ನ ಕರ್ತವ್ಯವನ್ನು ಭಾರತವು ನೆರವೇರಿಸುವದೆಂದು ಅಧ್ಯಕ್ಷರಂದಿದ್ದಾರೆ.

ಪ್ರಜಾರಾಜ್ಯ ಭಾರತಾಧ್ಯಕ್ಷರು ಪಾರ್ಲಿಮೆಂಟಿನಲ್ಲಿತ್ತ ಭಾಷಣವು ಸರಕಾರೀ ಧೋರಣೆ ನಿರೂಪಿಸುವಂತಹದಿದ್ದರೆ, ಜನತೆಯ ಕರ್ತವ್ಯವನ್ನು ತಿಳಿಸುವ ಮತ್ತೊಂದು ಭಾಷಣವು ಕಳೆದ ವಾರ ಅಧ್ಯಕ್ಷರಿಂದಾಗಿದೆ. ಇದೇ ತಾ. ೭ರಲ್ಲಿ ಡಿಲ್ಲಿ ನಗರ ಸಭೆಯವರು ಪ್ರಜಾ ರಾಜ್ಯ ಭಾರತದ ಪ್ರಥಮಾಧ್ಯಕ್ಷನಿಗೆ ಏರ್ಪಡಿಸಿದ್ದ ಸ್ವಾಗತ ಸಮಾರಂಭವೊಂದಕ್ಕೆ ಅಧ್ಯಕ್ಷರಾಗಮಿಸಿದ ಮೆರವಣಿಗೆಯು ಅತ್ಯಂತ ವೈಭವಪೂರ್ಣವಾಗಿದ್ದಿತು. ಅಲ್ಲಿ ಅಧ್ಯಕ್ಷರಂದರು:— "ಈ ದಿನ ನಾವು ಸ್ವತಂತ್ರರು. ನಮ್ಮ ಅದೃಷ್ಟವನ್ನು ನಿರ್ಧರಿಸಿಕೊಳ್ಳತಕ್ಕವರು ನಾವೇ. ಅದನ್ನು ಸದ್ವಿನಿಯೋಗ ಅಥವಾ ದುರ್ವ್ಯಯಗೊಳಿಸುವದೀಗ ನಮ್ಮನ್ನೇ ಕೂಡಿದೆ. ರಾಜ್ಯ ಘಟನೆಯಲ್ಲಿ ಕೋಟಿಗಟ್ಲೆ ಜನ ಪ್ರಬುದ್ಧರಿಗೆ ವೋಟಿನ ಹಕ್ಕು ಕೊಡಲ್ಪಟ್ಟಿದೆ. ಬಡವ ಶ್ರೀಮಂತರೆನ್ನದೆ, 21 ವರುಷಕ್ಕೆ ಮೇಲ್ಪಟ್ಟ ಪ್ರತಿಯೊಬ್ಬ ಸ್ತ್ರೀ ಪುರುಷನಿಗೂ ವೋಟು ಕೊಡುವ ಹಕ್ಕಿದೆ. ಜನತೆಯು ನ್ಯಾಯಬದ್ಧವಾಗಿ ಮತ್ತು ದೂರದೃಷ್ಟಿಯಿಂದ ಉಪಯೋಗಿಸಬೇಕಾದ ಪವಿತ್ರ ಹಕ್ಕಿದು. ಚುನಾವಣೆಗೆ ನಿಲ್ಲುವ ಉಮೇದ್ವಾರರ ಮೇಲೂ ಈ ಮೂಲಕ ದೊಡ್ಡ ಜವಾಬ್ದಾರಿ ಬಿದ್ದಿದೆ. ರಾಷ್ಟ್ರದ ಯಥಾರ್ಥ ಪ್ರತಿನಿಧಿಗಳಾಗುವ ಯೋಗ್ಯತೆ ತಮ್ಮದೆಂಬುದನ್ನವರು ಸಿದ್ಧಮಾಡಿ ತೋರಿಸಬೇಕಾಗಿದೆ. ಸ್ವಾರ್ಥಕ್ಕಿಂತ ಸೇವೆಯನ್ನು ಮೇಲಾಗಿ ಗಣಿಸಿ, ಈ ತತ್ವಕ್ಕಾಗಿ ಕಾರ್ಯ ತಲ್ಲೀನತೆಗೊಳ್ಳುವವರು ಮಾತ್ರ ಜನತಾ ಸೇವೆ ಸಲ್ಲಿಸಬಲ್ಲರು. ತಮ್ಮ ಭಾವೀ ಪ್ರತಿನಿಧಿಗಳನ್ನು ಚುನಾಯಿಸಿಕೊಳ್ಳುವಾಗ ಈ ತತ್ವವನ್ನು ಕಣ್ಣ ಮುಂದಿಟ್ಟುಕೊಳ್ಳುವುದು ಜನತೆಯ ಕರ್ತವ್ಯ. ಸ್ವಾತಂತ್ರ್ಯದ ಅನುಕೂಲತೆಗಳು ಸರ್ವಜನರಿಗಾಗಿ ಉಪಯೋಗಿಸಲ್ಪಡಬೇಕೇ ಹೊರತು ಕೆಲವೇ ಮಂದಿಗಾಗಿ ಅಲ್ಲ. ಶ್ರೀಮಂತರನ್ನು ಮತ್ತಷ್ಟು ಶ್ರೀಮಂತರನ್ನಾಗಿ, ಬಡವರನ್ನು ತೀರಾ ಬಡವರನ್ನಾಗಿ ಮಾಡುವ ಧೋರಣೆ ನಮ್ಮ ಮುಂದಿರಕೂಡದು. ಆಲ್ಪಾಭಿಲಾಷೆಗಳನ್ನು ಬದಿಗೊತ್ತಿ ಪರಸ್ಪರ ಭ್ರಾತೃಭಾವ, ಸೌಹಾರ್ದತೆ ಮತ್ತು ಸಹಕಾರ ವರ್ತನೆ ಕೈಕೊಳ್ಳಬೇಕು. ದಾರಿದ್ರ್ಯ ನಿರ್ಮೂಲನಮಾಡಿ, ಜನತೆಯ ಜೀವನ ಮಟ್ಟವನ್ನೇರಿಸುವುದಕ್ಕಾಗಿ ಜವಾಬ್ದಾರಿ ವಹಿಸಿರುವ ಈ ಕಾಲದಲ್ಲಿ ಹೀಗಿರಬೇಕಾದುದು ಅಗತ್ಯ"

## ಪಾಕಿಸ್ತಾನ್-ದ. ಆಫ್ರಿಕಾ

ದಕ್ಷಿಣಾಫ್ರಿಕದಲ್ಲಿರುವ ಭಾರತ-ಪಾಕಿಸ್ತಾನ್ ಜನರ ಮೇಲೆ ಅಲ್ಲಿಯ ಸರಕಾರವು ಮಾಡುತ್ತಿರುವ ಅಮಾನುಷ ಅತ್ಯಾಚಾರಗಳ ಪ್ರತೀಕಾರಾತ್ಮಕವಾಗಿ ನಾಲ್ಕು ವರುಷಗಳ ಮೊದಲು ಭಾರತವು ಹಾಕಿದ್ದ ವ್ಯಾಪಾರ ಬಹಿಷ್ಕಾರವನ್ನು ಇದೇ ಫೆಬ್ರವರಿ ತಾ. ೬ರಿಂದ ಪಾಕಿಸ್ತಾನವು ರದ್ದುಪಡಿಸಿಕೊಂಡಿದೆ. ಭಾರತವು ತನ್ನ ಮಟ್ಟಿಗೆ ಈ ಬಹಿಷ್ಕಾರವನ್ನು ಯಥಾಪ್ರಕಾರವಮುಂದೊತ್ತಲಿದೆ. ಕೆಲವು ವರುಷಗಳ ಮೊದಲು ಕೇಂದ್ರ ಎಸೆಂಬ್ಲಿಯಲ್ಲಿ ಸರ್. ಮುಹಮ್ಮದ್ ಯಾಕೂಬರಾಡಿದ್ದರು: "ನಾನು ಮರಣಶಯ್ಯೆಯಲ್ಲಿ ಮಲಗಿರುವಾಗ, ಯಾರಾದರೂ ಬಂದು ದಕ್ಷಿಣಾಫ್ರಿಕದ ಡಾಕ್ಟರನೊಬ್ಬನು ನಿಮ್ಮ ಪ್ರಾಣವುಳಿಸಬಲ್ಲನೆಂದು ತಿಳಿಸಿದರೆ ನಿಸ್ಸಂದೇಹವಾಗಿಯೂ ನಾನಾ ಡಾಕ್ಟರನನ್ನು ಕರೆಯಲು ನಿರಾಕರಿಸುವುದೇ ಸರಿ!" ದಕ್ಷಿಣಾಫ್ರಿಕದಲ್ಲಿ ಭಾರತೀಯ, ಪಾಕಿಸ್ತಾನಿಗಳ ಮೇಲೆ ಹಿಂದಿನಂತೆಯೇ ಈಗಲೂ ಅತ್ಯಾಚಾರಗಳು ನಡೆದಿವೆ. ಆದರೂ ಪಾಕಿಸ್ತಾನವು ಈ ವರೆಗೆ ಆ ರಾಷ್ಟ್ರದ ಮೇಲಿದ್ದ ವ್ಯಾಪಾರ ಬಹಿಷ್ಕಾರವನ್ನು ರದ್ದುಪಡಿಸಿಕೊಂಡು ವ್ಯಾಪಾರ ಸಂಬಂಧವನ್ನಾರಂಭಿಸಿದೆ.

---

## ದ. ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘ, ಮಂಗಳೂರು

ನಮ್ಮ ಸಂಘದ ವಾರ್ಷಿಕ ಮಹಾಸಭೆಯು ತಾ. 19-2-1950ನೇ ಆದಿತ್ಯವಾರ ಮಧ್ಯಾಹ್ನ ಘಂಟೆ 4ಕ್ಕೆ ಶ್ರೀ ಮಂಗಲಪಾದಿ ತ್ಯಾಂಪಣ್ಣ ಶೆಟ್ಟಿ ಇವರ ಅಧ್ಯಕ್ಷತೆಯಲ್ಲಿ ಮಂಗಳೂರು ಲಾಲ್‌ಬಾಗಿನಲ್ಲಿರುವ ಶ್ರೀ ರಾಮಕೃಷ್ಣ ವಿದ್ಯಾರ್ಥಿನಿ ಭವನದಲ್ಲಿ ಜರಗುವದಾಗಿ ನಿಶ್ಚಯಿಸಿರುವುದರಿಂದ ತಾವು ದಯವಿಟ್ಟು ಸಭೆಗೆ ಬರಬೇಕಾಗಿ ಪ್ರಾರ್ಥಿಸುತ್ತೇನೆ.

ಕೆ. ಸದಾನಂದ ಹೆಗ್ಗಡೆ, ಎಡ್ವಕೇಟ್,
ಕಾರ್ಯದರ್ಶಿ.
ಮಂಗಳೂರು. ತಾ. [illegible]

---


**Notice (ನೋಟೀಸು)**

## The Pangal Nayak Bank Limited

**Katapadi, S. K.**

**ದಿ. ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್, ಕಟಪಾಡಿ. ದ. ಕ.**

ಈ ಕೆಳಗೆ ಹೆಸರು ಕಾಣಿಸಿದ ಆಸಾಮಿಗೆ ಕೊಟ್ಟ ರಜಿಸ್ಟ್ರಿ ನೋಟೀಸನ್ನು ವಾಪಾಸು ಮಾಡಿರುವುದರಿಂದ ಸದ್ರಿ ಆಸಾಮಿಯು ಬೇಂಕಿನಿಂದ ಪಡೆದ ಲೋನಿನಲ್ಲಿ ಈಡಿರುವ ಚಿನ್ನಾಭರಣಗಳನ್ನು ಇದೇ ತಿಂಗಳ ತಾರೀಕು 16ರೊಳಗೆ ಹಣ ವಾಪತಿಮಾಡಿ ಬಿಡಿಸಿಕೊಂಡು ಹೋಗದಿದ್ದಲ್ಲಿ, ಸದ್ರಿ ಲೋನಿನಲ್ಲಿರುವ ಚಿನ್ನಾಭರಣಗಳನ್ನು ಇದೇ ತಿಂಗಳ ತಾರೀಕು 18ನೇ ಶನಿವಾರ ದಿವಸ ಬೆಳಿಗ್ಗೆ ಗಂಟೆ 9-30ಕ್ಕೆ ಅಥವಾ ಬೇಂಕಿಗೆ ಯುಕ್ತ ತೋರುವ ಇತರ ದಿವಸಗಳಲ್ಲಿ ಪುನಃ ನೋಟೀಸು ಕೊಡದೇನೇ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುದು. ತಿಳಿದಿರಲಿ.

| ಲೋನು ನಂಬ್ರ | ಹೆಸರು ಮತ್ತು ವಿಳಾಸ. | ಅಸಲು |
|---|---|---|
| 110/48 | ಶೇಕ್ ಹುಸ್ಸೈನ್, ಹಾಜಿ ಆದಮಾರ ಮಗ, ಏಣಗುಡ್ಡೆ ಗ್ರಾಮ, ಕಟಪಾಡಿ ದ. ಕ. | Rs. 930/- |

Office of the Bank Katapadi S. K.
3rd February 1950.

P. S. Nayak,
Agent.

## ಪ್ರಕಟಣೆ

ಉಡುಪಿ ತಾಲೂಕು ಕೊಡವೂರು ಗ್ರಾಮದಲ್ಲಿರುವ ಕಾಡಿದಿ ಪೂಜಾರ್ತಿ ಮಗಳು ದುಗ್ಗಿ ಪೂಜಾರ್ತಿಯು ಸರ್ವರಿಗೂ ಈ ಮೂಲಕ ತಿಳಿಸುವುದೇನೆಂದರೆ.-ಕೊಡವೂರು ಗ್ರಾಮದ ಸ. ನಂ. 202-6 ಬಾಗ್ಯಾತು ಸೆಂಟ್ಸು 16ನ್ನು 27-8-'28ನೆ ಮೂಲಗೇಣಿ ಚೀಟು ಮೂಲಕ ಗಡಿಯಾದ ದಾಸಪ್ಪಯ್ಯನವರಿಂದ ನನ್ನ ಸ್ವಂತದ ಬಗ್ಗೆ ಮೂಲಗೇಣಿಗೆ ಪಡೆದು ನನ್ನ ಸ್ವಂತ ದುಡಿತದಿಂದ ಅದರಲ್ಲಿ ಕಟ್ಟಡ ವಗ್ಯೆರೆ ಕಟ್ಟಿಸಿ ತೆಂಗು ವಗ್ಯೆರೆ ಸಸಿಗಳನ್ನು ನಟ್ಟು ಬೆಳೆಯಿಸಿ ಹೇರಳ ಕೃತಾದಿಗಳನ್ನು ಮಾಡಿಸಿ, ಆ ಆಸ್ತಿಯನ್ನು ಆ ಬಾಗ್ಯಾತು ಈ ತನಕವೂ ನಾನು ಸಂಪೂರ್ಣ ಸ್ವಾಧೀನಗಾರಳಾಗಿ ನನ್ನೊಬ್ಬಳ ಸಂಪೂರ್ಣ ಹಕ್ಕಿನಿಂದ ಅನುಭವಿಸುತ್ತಲಿದ್ದೇನೆ. ತಾ. 15-12-'30ರಲ್ಲಿ ಸದರೀ ಆಸ್ತಿಯನ್ನು ನನ್ನ ಮಗಳು ಅಕ್ಕು ಪೂಜಾರ್ತಿಗೆ ಪರಾಭಾರೆ ಮಾಡಿದ್ದೆಂಬ ವಾಚಕಗಳುಳ್ಳ ಪತ್ರವನ್ನೊಂದು ನಾನು ಕಾರಣಾಂತರದಿಂದ ಬರೆದಿಟ್ಟಿದ್ದೆನಾದರೂ ಕೇವಲ ಬಿನಾಮೆಯಾಗಿ ಬರೆಯಲ್ಪಟ್ಟಿದ್ದ ಆದು ಪರಾಭಾರೆಸಾಧನವೆಂತ ತೋರುವ ಉದ್ದಿಶ್ಯ ಬರೆಯಲ್ಪಟ್ಟ ಬರೆ ಸಾಂಪ್ರದಾಯಿಕ (Formal recitals) ವಾಚಕಗಳುಳ್ಳದ್ದಲ್ಲದೆ ಆ ಪತ್ರವು ವ ಆಪರವಾಚಕಗಳುಸಹಜ್ಯಾರಿಸಬೇಕೆಂಬ ಉದ್ದಿಶ್ಯ ಬರೆಯಲ್ಪಟ್ಟವುಗಳಲ್ಲ. ಆ ಪತ್ರವು ಜ್ಯಾರಿಗೆ ಬಂದದ್ದಿಲ್ಲ-ವ-ಜ್ಯಾರಿಗೆ ಬರತಕ್ಕದ್ದೂ ಅಲ್ಲ. ಆದು ಪ್ರತಿಫಲದ್ದಲ್ಲ. ಅದರಲ್ಲಿ ಕಾಣಿಸಿದ ಪ್ರತಿಫಲದ ವಾಚಕಗಳು ಸಹ ನಿಯಮಾನುಸಾರ (Formal recitals) ವಾಪವುಗಳು. ಆ ಮೂಲಗೇಣಿಯ ಬಾಬ್ತು ಈ ತನಕದ ಪೂರ್ಣ ಗೇಣಿಗಳನ್ನೂ ನಾನೇ ಸಲ್ಲಿಸಿದ್ದಾಗಿರುತ್ತದೆ. ಹೀಗಿರುತ್ತಾ ಸದರೀ ಅಕ್ಕು ಪೂಜಾರ್ತಿಯು ಸುಮಾರು ಮೂರು ತಿಂಗಳ ಹಿಂದೆ ನನ್ನ ಮನೆಗೆ ಬಂದು ನನಗೆ ತಿಳಿಯದಂತೆ ನನ್ನ ಮನೆಯಲ್ಲಿದ್ದ ಅಸಲು ಮೂಲಗೇಣಿ ಚೀಟನ್ನೂ ಮೇಲೆ ಪ್ರಸ್ತಾಪಿಸಿದ ಬಿನಾಮೆ ಪರಾಭಾರೆ ಸಾಧನವನ್ನೂ ಕೈಗೆಸಿಕ್ಕಿದ ಕೆಲವು ಗೇಣಿಪಾವತಿ ರಶೀದಿಗಳನ್ನೂ ವಂಚನೆಯಿಂದ ಕೊಂಡುಹೋಗಿರುತ್ತಾಳಲ್ಲದೆ ನನ್ನ ದ್ವೇಷಿಗಳ ದುರ್ಬೋಧನೆಗೆ ಕಿವಿಗೊಟ್ಟು ಅಕ್ರಮ ಲಾಭಹೊಂದಬೇಕೆಂಬ ಕೆಟ್ಟ ಇರಾದೆಯಿಂದ ಅವಳು ಕೊಂಡುಹೋದ ಮೇಲೆ ನಮೂದಿಸಿದ್ದ ರಿಕಾರ್ಡುಗಳನ್ನು ಗಿರಾಕಿಗಳಿಗೆ ತೋರಿಸಿ ಸದರೀ ಆಸ್ತಿಯು ತನ್ನ ಹಕ್ಕಿನದ್ದಾಗಿಯೂ ಅದನ್ನು ತಾನು ಪರಾಧೀನ ಮಾಡುತ್ತಾಳಾಗಿಯೂ ಹೇಳುತ್ತಿದ್ದಾಳಾಗಿ ತಿಳಿದುಬರುತ್ತದೆ. ಸದ್ರಿ ಆಸ್ತಿಯಲ್ಲಿ ಆ ಅಕ್ಕು ಪೂಜಾರ್ತಿಗೆ ಯಾವುದೆ ವಿಧದ ಹಕ್ಕು ಸಂಬಂಧಗಳಿರುವುದಿಲ್ಲ ಅವಳು ತೋರಿಸುವ ಪರಾಭಾರೆ ಸಾಧನವು ಮೇಲೆ ಪ್ರಸ್ತಾಪಿಸಿದಂತೆ ಬಿನಾಮೆಯಾಗಿ ಬರೆದದಲ್ಪಟ್ಟದ್ದು. ಆ ಬಿನಾಮೆ ಪತ್ರದ ಆಧಾರದಿಂದ ಅವಳು ಹೇಳಿಕೊಳ್ಳಬಹುದಾದ ಅಸಿಂಧುವಾದ ಹಕ್ಕು ಸಂಬಂಧ ಸಹ ನನ್ನ ವಿರೋಧಾನುಭೋಗದಿಂದ ಹ್ಯಾಗೂ ನಾಶವಾಗಿಯದೆ. ಸದರೀ ರಿಕಾರ್ಡುಗಳನ್ನು ನನಗೆ ವಾಪಾಸು ತಂದುಕೊಡಬೇಕಾಗಿ ಗ್ರಹಸ್ಥರ ಸಮಕ್ಷಮ ಸದ್ರಿ ಅಕ್ಕು ಪೂಜಾರ್ತಿಯ ಕೂಡೆ ನಾನು ಹೇಳಿದ್ದಲ್ಲದೆ ಈ ಎಲ್ಲಾ ಸಂಗ್ತಿಗಳನ್ನು ವಿಶದೀಕರಿಸಿ ವಕಾಲ್ತು ನೋಟೀಸನ್ನು ಸಹ ಕೊಟ್ಟಿರುತ್ತೇನೆ ಆದುದರಿಂದ ಸದ್ರಿ ಆಸ್ತಿಯ ಕುರಿತು ಯಾವುದೆ ವಿಧದ ಜವಾಬ್ದಾರಿ ಪತ್ರಗಳನ್ನಾಗಲೀ ಪರಾಭಾರೆ ಪತ್ರಗಳನ್ನಾಗಲೀ ಇವ್ಯಾವುದೆ ಸಾಧನಗಳನ್ನಾಗಲೀ ಸದ್ರಿ ಅಕ್ಕು ಪೂಜಾರ್ತಿಯಿಂದ ಯಾರೂ ಬರೆಯಿಸಿಕೊಳ್ಳಕೂಡದೆಂತಲೂ ಇದಕ್ಕೆ ವ್ಯತಿರಿಕ್ತವಾಗಿ ಬರೆಯಿಸಿಕೊಂಡ್ರೆ ಆದರಿಂದ ಏನೂ ಪ್ರಯೋಜನ ಸಿಗಲಾರದೆಂತಲೂ, ಅಂಥವುಗಳಿಂದ ಸದ್ರಿ ಆಸ್ತಿಯಲ್ಲಿಯ ನನ್ನ ಹಕ್ಕಿಗೆ ಯಾವ ಬಾಧಕವೂ ಬರಲಾರದೆಂತಲೂ ಈ ಮೂಲಕ ಎಲ್ಲರಿಗೂ ಪ್ರಕಟಪಡಿಸಿರುತ್ತೇನೆ.

||| ಈ ಗೆರೆ ವ ಎಡಗೈ ಹೆಬ್ಬೆಟ್ಟಿನ ಗುರ್ತು

ದುಗ್ಗಿ ಪೂಜಾರ್ತಿ ರುಜು.

ಕೊಡವೂರು, ತಾ. 2-2-1950.

---

### ಉಡುಪಿ

**ತೆರಿಗೆದಾರರ ಸಭೆ**– ಸೆಂಟ್ರಲ್ ವಾರ್ಡಿನ ತೆರಿಗೆದಾರರ ಸಭೆಯು ಕಳೆದ ವಾರ ಶ್ರೀ ವಿ. ಆರ್. ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು, ಟೌನ್ ಪ್ಲಾನಿಂಗ್ ಯೋಜನೆಗೆ ಸಂಬಂಧಪಟ್ಟ ಈ ವಾರ್ಡಿನ ತೆರಿಗೆದಾರರಿಗೆ ಆದ ಕಷ್ಟನಷ್ಟಗಳನ್ನು ವಿವರಿಸಿ ಶ್ರೀ ಯು. ಕೇಶವ ಪ್ರಭುಗಳು ಭಾಷಣವಿತ್ತರು. ಹಾಜರಿದ್ದ ವಾರ್ಡ್ ಕೌನ್ಸಿಲರ್ ಶ್ರೀ ಕೆ. ಕೆ. ಪೈಗಳು ತೆರಿಗೆದಾರರನ್ನುದ್ದೇಶಿಸಿ ಮಾತನಾಡುತ್ತಾ ಅನ್ಯಾಯ ಹೊಂದಿದವರು ಕಮಿಶನರರಿಗೆ ರಿವಿಜನ್ ಅರ್ಜಿ ಮಾಡುವುದಲ್ಲದೆ ನಂತರ ಕೌನ್ಸಿಲಿಗೆ ಅಪೀಲು ಸಹ ಮಾಡಲು ಶಕ್ಯವಿದೆ ಎಂದರು.

**ಶಾಲಾ ವರ್ಧಂತಿ:** ಉಡುಪಿ ಕ್ರಿಶ್ಚಿಯನ್ ಹೈಸ್ಕೂಲಿನ ಶಾಲಾ ವರ್ಧಂತಿಯು ಇದೇ ತಾ. 5ರಲ್ಲು ಸಂಜೆ ಶ್ರೀ ಎಚ್. ಸುಂದರ ರಾವ್, ಪ್ರಿನ್ಸಿಪಾಲ್. ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜು, ಅವರ ಅಧ್ಯಕ್ಷತೆಯಲ್ಲಿ ಜರಗಿತು, ಪ್ರಾರ್ಥನೆಯಾದ ಬಳಿಕ ಹೆಡ್ಮಾಸ್ತರ್ ಶ್ರೀ ಎನ್. ಮತಾಯಸರು ಶಾಲಾವರದಿಯನ್ನು ಓದುತ್ತಾ ಉಪಾಧ್ಯಾಯರ, ಹೆತ್ತವರ, ಹಾಗೂ ಸಾರ್ವಜನಿಕರ ಜವಾಬ್ದಾರಿ ಮೊದಲಾದುವನ್ನು ವಿವರಿಸಿದರು. ಪಾರಿತೋಷಕ ವಿತರಣೆ, ಸಭಾಧ್ಯಕ್ಷರ ಭಾಷಣ, ವಿವಿಧ ವಿನೋದಾವಳಿಗಳೊಂದಿಗೆ ಶಾಲಾ ವರ್ಧಂತಿ ಸಮಾರಂಭವು ಕೊನೆಗೊಂಡಿತು.

**ಬೋರ್ಡ್ ಹೈಸ್ಕೂಲಿನ** 'ಬಾಲ ಸಾಹಿತ್ಯ ಸಮಿತಿ'ಯವರು ಪರ್ಯಾಯ ಪ್ರದರ್ಶನದಲ್ಲಿ ಪ್ರಥಮ ತರಗತಿ ಸರ್ಟಿಫಿಕೇಟು ಪಡೆಕೊಂಡ ಸಂತೋಷಾರ್ಥವಾಗಿ ಕಳೆದ ತಾ. 31ರಲ್ಲಿ ಅಧ್ಯಾಪಕರಿಗೆಲ್ಲರಿಗೂ ಚಹಾ ಸತ್ಕಾರ ಕೂಟವೇರ್ಪಡಿಸಿದ್ದರು.

**ಪ್ರಜಾರಾಜ್ಯ** ದಿನಾಚರಣೆಯ ಸಂಬಂಧ ಕಳೆದ ತಾ 26ರಲ್ಲಿ ಉಡುಪಿ ಆರ್. ಯಸ್. ಯಸ್. ನವರ ಸಾರ್ವಜನಿಕ ಸಭೆಯು ವಕೀಲ್ ಶ್ರೀ. ಬಿ. ವಾಸುದೇವರಾಯರ ಅಧ್ಯಕ್ಷತೆಯಲ್ಲಿ ನಡೆದು ಭಾಷಣಗಳಾಗಿದ್ದುವು.

**ಮುಷ್ಕರ ಸಂಬಂಧ ಸಾರ್ವಜನಿಕ ಸಭೆ**–ಬಸ್ ಕಲಸಗಾರರ ಬೋನಸ್ ಸಂಬಂಧದ ಎವಾರ್ಡಿನಂತೆ ಬಸ್ ಮ್ಹಾಲಕರು ವರ್ತಿಸದಿರುವುದರಿಂದ ಮುಷ್ಕರ ನೋಟೀಸು ಕೊಡುವ ಪ್ರಸಂಗವಾಗಿರುವಂತೆ, ಇದೇ ತಾ. 8ನೇ ಅಪರಾಹ್ನ ಬಸ್ ಸ್ಟೇಂಡ್ ಬಳಿ ಉಡುಪಿ ಸಮತಾವಾದಿ ಪಕ್ಷದ ಆಶ್ರಯದಲ್ಲಿ ಸಾರ್ವಜನಿಕ ಸಭೆಸೇರಿ, ಕೆಲಸಗಾರರ ನ್ಯಾಯಬದ್ಧ ಬೇಡಿಕೆಗಳ ಕುರಿತು ಭಾಷಣಗಳಾದುವು.

---

**ಪುತ್ತೂರು**– ಇದೇ ತಾ. 3 ಲ್ಲು ವಯಸ್ಕರ ಶಿಕ್ಷಣ ಸಪ್ತಾಹವು ಪುತ್ತೂರಿನಲ್ಲಿ ಪ್ರಾರಂಭವಾಯಿತು. ಅಂದು ಬೆಳಿಗ್ಗೆ ದೇವಾಲಯ, ಇಗರ್ಜಿ, ಮಸೀದಿಗಳಲ್ಲಿ ಸಪ್ತಾಹ ಯಶಸ್ವಿ ಬಗ್ಗೆ ಪ್ರಾರ್ಥನೆಗಳಾದುವು ರೆವಿನ್ಯೂ ಡಿವಿಜನಲ್ ಆಫೀಸರರು ಸಪ್ತಾಹದ ಉದ್ಘಾಟನೆ ಮಾಡುತ್ತಾ ಅದರ ಮಹತ್ವವನ್ನು ವಿವರಿಸಿದರು. ಸಂಜೆ ಶ್ರೀ ಕೆ. ಎನ್. ಮಲ್ಯರು ಸಪ್ತಾಹ ವಸ್ತು ಪ್ರದರ್ಶನವನ್ನು ತೆರೆದರು. ಸೈಂಟ್ ವಿಕ್ಟರ್ ಹೈಸ್ಕೂಲಿನಲ್ಲಿಯೂ ಸಪ್ತಾಹ ಸಮಾರಂಭವು ಇಲ್ಲಿಯ ಡಿಸ್ಟ್ರಿಕ್ಟ್ ಮುನ್ಸಿಫ್ ಶ್ರೀ ಇ. ಗೊನ್‌ಸಾಲಿಸ್ ಅವರ ಅಧ್ಯಕ್ಷತೆಯಲ್ಲಿ ಜರಗಿ ಕಾಲೋಚಿತ ಭಾಷಣಗಳಾದುವು.

---

### ಮಂಗಳೂರು

**ವರ್ಧಂತಿ** ಮಂಗಳೂರಿನ ಸರಕಾರಿ ಟ್ರೈನಿಂಗ್ ಶಾಲೆಯ ವರ್ಧಂತಿಯು ಕಳೆದ ತಾ. 28ರಲ್ಲು ಶ್ರೀ ಬಿ ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಕೆ. ವಾಮನ, ಅವರು ಸ್ವಸ್ತಿವಾಚನ ಮಾಡಿದ ನಂತರ ಕನ್ನಡ, ತುಳು ನಾಟಕಗಳಾದುವು. ಮರುದಿನ ಪ್ರಸಿದ್ಧ ಅರ್ಥಧಾರಿಗಳ ಕೂಡುವಿಕೆಯಿಂದ ಯಕ್ಷಗಾನ ಕಾಲಕ್ಷೇಪ ಜರಗಿತು

**ವಾರ್ಷಿಕೋತ್ಸವ** ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ವಾರ್ಷಿಕೋತ್ಸವವು ಜಿಲ್ಲಾ ಕಲೆಕ್ಟರ್ ಜನಾಬ್ ಸಯ್ಯದ್ ಆಹಮ್ಮದ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಆನಂದ ಸೆಟ್ಟರು ಸ್ವಾಗತವಿತ್ತ ನಂತರ ಶ್ರೀ ಜನಾರ್ಧನ ಭಂಡಾರಿಗಳು ವರದಿಯನ್ನೋದಿದರು. ಡಾ. ಕೆ. ಬಿ. ಸೆಟ್ಟರ ಸ್ತುತಿ ವಚನಕ್ಕೆ ಶ್ರೀ ಕೆ. ಜಗನ್ನಾಥ ಸೆಟ್ಟರು ಉತ್ತರವಿತ್ತರು. ಅಧ್ಯಕ್ಷರ ಭಾಷಣಾನಂತರ ವಿವಿಧ ವಿನೋದಗಳಾದುವು.

---

**ಸರ್ವೋದಯ ದಿನ** ಬಾಪೂಜಿಯವರು ಅನುಸರಿಸಿದ ದಿನಾಚರಣೆಯು ಕಳೆದ ತಾ 30ರಲ್ಲು ಸೂತ್ರಯಜ್ಞ ಇತ್ಯಾದಿ ಕಾರ್ಯಕ್ರಮಗಳಿಂದ ಆಚರಿಸಲ್ಪಟ್ಟಿತು. ಆ ದಿನ ಸಂಜೆ ಕೇಂದ್ರ ಮೈದಾನಿನಲ್ಲಿ ಜರಗಿದ ಸಾರ್ವಜನಿಕ ಸಭೆಯ ಅಧ್ಯಕ್ಷಸ್ಥಾನವನ್ನು ಡಾ। ನಾಗಪ್ಪ ಆಳ್ವರು ವಹಿಸಿದ್ದರು. ಶ್ರೀಗಳಾದ ಕೆ. ಕೆ. ಸೆಟ್ಟಿ, ಹಿ. ರಾಮರಾಯ ಮಲ್ಯರ ಭಾಷಣಗಳಾದುವು.

**ನಗರ ಸಭೆ** ಕಳೆದ ತಾ. 28ರಲ್ಲು ಶ್ರೀ. ಎಲ್. ಸಿ. ಪಾಯಿಸರ ಅಧ್ಯಕ್ಷತೆಯಲ್ಲಿ ಮಂಗಳೂರು ನಗರಸಭೆಯು ಜರಗಿತು. ಕೇಂದ್ರ ಮೈದಾನಿನಲ್ಲಿ ಕ್ರಿಕೆಟ್ ಆಟದ ರಂಗವೊಂದನ್ನು ರಚಿಸಲು ರೂಪಾಯಿ31930/ ಮತ್ತು 2100/- ಮಂಜೂರು ಮಾಡಲಾಯಿತು. ವಯಸ್ಕರ ಶಿಕ್ಷಣ ಸಪ್ತಾಹಕ್ಕೆ ರೂ. 50/- ಮಂಜೂರು ಮಾಡಲಾಯಿತು.

---

**ಬೊಂಬಾಯಿ ಪದ್ಮಶಾಲಿ ಸಮಾಜ** ಸೇವಾ ಸಂಘ, ಇದರ 14ನೇ ವಾರ್ಷಿಕೋತ್ಸವವು ಕಳೆದತಾ.29ನೆಆದಿತ್ಯವಾರ ಅಪರಾಹ್ನ ಗಂಟೆ2ಕ್ಕೆ ಸರಿಯಾಗಿ 'ಮಹಾವಿಷ್ಣು'ಬಿಲ್ಡಿಂಗ್‌ನಲ್ಲಿ ಶ್ರೀ ಎ.ಬಿ.ಶೆಟ್ಟಿಗಾರರವರ ಅಧ್ಯಕ್ಷತೆಯಲ್ಲಿ ಜರಗಿ, 1950ನೇ ಇಸವಿಯ ಕಾರ್ಯಾಡಳಿತೆಗೆ ಈ ಕೆಳಗಿನವರನ್ನು ಆರಿಸಲಾಯಿತು.

ಶ್ರೀಗಳಾದ ಜನಾರ್ಧನ್ ಬಿ. ಶೆಟ್ಟಿಗಾರ್, ಅಧ್ಯಕ್ಷರು., ಎ. ಬಿ. ಶೆಟ್ಟಿಗಾರ್, ಗೌರವ ಕಾರ್ಯದರ್ಶಿ., ಕೆ. ಸಿ. ಶೆಟ್ಟಿಗಾರ್, ಗೌರವ ಕೋಶಾಧಿಕಾರಿ, ಸಂಜೀವ ಶೆಟ್ಟಿಗಾರ್ ಅನಂತು ಶೆಟ್ಟಿಗಾರ್, ವೆಂಕಟೇಶ ಶೆಟ್ಟಿಗಾರ್, ವನ್ನಯ ಶೆಟ್ಟಿಗಾರ್, ರಾಮಕೃಷ್ಣ ಶೆಟ್ಟಿಗಾರ್, ಲಕ್ಷ್ಮಣ್ ಶೆಟ್ಟಿಗಾರ್, ರುಕ್ಕಯ ಶೆಟ್ಟಿಗಾರ್, ಅಪ್ಪ ಶೆಟ್ಟಿಗಾರ್, ಸೇಮಯ ಶೆಟ್ಟಿಗಾರ್,ಕಮಿಟಿ ಸದಸ್ಯರು.

---

### ನೋಟೀಸು.

ಕಟಪಾಡಿ S. V. S. ಹಳೇ ವಿದ್ಯಾರ್ಥಿ ಸಂಘದ ವಾರ್ಷಿಕ ಮಹಾಸಭೆಯು ಇದೇ ತಿಂಗಳ ತಾರೀಕು 26ನೇ ಆದಿತ್ಯವಾರ ಪೂರ್ವಾಹ್ನ ಘಂಟೆ 10ಕ್ಕೆ ಸರಿಯಾಗಿ ಶಾಲಾವಠಾರದಲ್ಲಿ ಜರಗಲಿಕ್ಕಿರುವುದು. ಸಂಘದ ಸದಸ್ಯರೆಲ್ಲರೂ ಸಭೆಗೆ ತಪ್ಪದೆ ಹಾಜರಾಗಬೇಕಾಗಿ ವಿನಂತಿ.

ಸಂಘದ ವರ್ಧಂತಿ ಉತ್ಸವ-ನಾಟಕ ವಗ್ಯೆರೆಗಳೂ ಜರಗಲಿಕ್ಕಿರುವುದರಿಂದ ಎಲ್ಲಾ ಕಲಾಭಿಮಾನಿ,ಹಳೇವಿದ್ಯಾರ್ಥಿಗಳು ತನುಮನಧನಗಳಿಂದ ಪ್ರೋತ್ಸಾಹವಿತ್ತು ಕಾರ್ಯಕ್ರಮಗಳಲ್ಲಿ ಸಹಭಾಗಿಗಳಾಗಬೇಕಾಗಿ ಕೇಳಿಕೊಳ್ಳುತ್ತೇವೆ

ತಾ. 5-2-50. ಜೊಯಿಂಟ್ ಸೆಕ್ರೆಟರಿ.

---

### ಪ್ರಕಟಣೆ

ಮಂಗಳೂರು ತಾಲ್ಲೂಕು ತೋಕೂರು ಗ್ರಾಮದಲ್ಲಿರುವ ದೇವರಾಜ ಹೆಗ್ಡೆರ ಮಗ ನಭಿರಾಜನು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದರೆ: —

ನನ್ನ ತಾಯಿ ಪಾಪೇಡಿಗುತ್ತು ದೇಜುಶೆಟ್ಟಿ ಮಗಳು ಪುಟ್ಟಮ್ಮನವರು ಈಗ ಕೆಲವು ಸಮಯದಿಂದ ಚಿತ್ತಭ್ರಾಂತರಾಗಿರುತ್ತಾರೆ. ಅವರ ಭಾಗದ ಯಾವತ್ತೂ ಆಸ್ತಿಗಳ ಆಡಳಿತೆಯನ್ನು ಅವರ ನಂತ್ರ ಭಾಗದಲ್ಲಿ ಹಿರೇ ಮೆಂಬರನಾದ ನಾನು ಈಗ ನೋಡಿಕೊಂಡು ಸದ್ರಿ ಪುಟ್ಟಮ್ಮನ ಸಮೇತ ಭಾಗದ ಎಲ್ಲಾ ಮೆಂಬರರ ಜೀವನವನ್ನು ನಡಿಸಿ ಬರುತ್ತೇನೆ. ನಮ್ಮ ಭಾಗದ ಹಿರಿಯರಾರೆಂಬ ಕಾರಣದಿಂದ ಅವರ ಚಿತ್ತಭ್ರಮೆಯ ಸ್ಥಿತಿಯನ್ನು ದುರುಪಯೋಗ ಪಡಿಸಿಕೊಂಡು ಅವರಿಂದ ಯಾವುದಾದರೂ ರಿಕಾರ್ಡುಗಳನ್ನು ಮಾಡಿಕೊಂಡಾಗ್ಯೂ ಅವುಗಳು ಸ್ವತಃ ಯಾ ಅಸಿಂಧು ಆಗಿದ್ದು ನಮ್ಮ ಭಾಗದ ಸೊತ್ತುಗಳಿಗೆ ಯಾ ಹಕ್ಕುಗಳಿಗೆ ವ್ಯತಿರಿಕ್ತವಾಗಿ ಬಾಧಿಸಲಾರವು; ತಿಳಿದಿರಲಿ.

**B. Nabhiraja Hegde.**

Tokur, Date 30-1-1950

---


ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ತರ್ಕ ಮಾಡಿ ತಲೆಬಿಸಿ ಮಾಡಿಕೊಳ್ಳುವುದಕ್ಕಿಂತ ಶರ್ತವಿಲ್ಲದೆ ನಕ್ಕು ನಕ್ಕು ಹೊಟ್ಟೆ ಬಿಕ್ಕಿಯಾಗುವುದು ಪರಮೋತ್ತಮ

ಇದೇ ನಿಮ್ಮ ಅದೃಷ್ಟತಾರೆ.

ಕಿಸ್ಮತ್-ಕಾ-ಸಿತಾರಾ

ಅಮಿರ್ ಕರ್ನಾಟಕಿ, ಪ್ರಕಾಶ್, ರಾಫಿಕ್ ಮತ್ತು ಅನ್ಸಾರಿ.

ತಾರೀಕು 7—2—50

ಬರುವ ಚಿತ್ರ, ಬಾಂಬೇ ಟಾಕೀಸಿನವರ

ನತೀಜ

ರೆಹನಾ, ಯಾಕೂಬ್, ಶಾಮಿ ಮನ್.




Approved firm by the Govt. of Mysore Certificated by the Agent of the Govt. of Cylone & Indian,

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿ ಯಾ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ,

ರಥಬೀದಿ, ಉಡುಪಿ.

## ದ. ಕನ್ನಡ

**ಹೆರ್ಗ**–ಇಲ್ಲಿಯ ದುರ್ಗಾಪರಮೇಶ್ವರಿ ದೇವಸ್ಥಾನದ ರಥೋತ್ಸವವು ಇದೇ ತಾ. 5ರಲ್ಲಿ ವಿಜೃಂಭಣೆಯಿಂದ ಜರಗಿತು. ಅದರ ಬೆನ್ನಲ್ಲೇ ಮಾಮೂಲು ಪ್ರಕಾರ ಜರಗತಕ್ಕ


# 4 ಬೆಲೆ ಸುಲಭವಾದ ಚಹಾಗಳು

## ಉತ್ತಮ ರೀತಿಯ ಚಹಾ ತಯಾರಿಕೆಗಾರರಿಂದ

ಹೆಚ್ಚು ಬೆಲೆಯ ಚಹಾವನ್ನು ಕೊಳ್ಳಲಾಗದ ಜನಗಳು ಸ್ಟೇನ್ಸ್ ಅಗ್ಗವಾದ ಚಹಾವನ್ನು ಬಯಸುತ್ತಾರೆ. ಅವುಗಳು ವೈಟ್ ಎನ್‌ಸೈನ್, ಪೀಕೊ ಡಸ್ಟ್, ಬೇಬಿ ಬ್ರಾಂಡ್ ಮತ್ತು ಲೀಫ್ ಟೀ; ಸುಪ್ರಸಿದ್ಧ ಸ್ಟೇನ್ಸ್‌ರವರ ಎಲ್ಲಾ ಅನುಭವವೂ ಅವುಗಳ ತಯಾರಿಕೆಯಲ್ಲಿ ಉಪಯೋಗಿಸಲ್ಪಡುತ್ತಿಯಾಗಿ, ನೀವು ಯಾವುದನ್ನೇ ಚುನಾಯಿಸಿದರೂ, ನಿಮ್ಮ ಹಣದ ನೈಜ ಬೆಲೆಯನ್ನು ಕೊಡುತ್ತದೆ.




ದಕ್ಷಿಣದ ಆಯ್ಕೆ

**Stanes** ಸ್ಟೇನ್ಸ್ ಚಹಾಗಳು

**ದಿ ಯುನೈಟೆಡ್ ಕೊಫಿ ಸಪ್ಲೈ ಕೊ., ಲಿಮಿಟೆಡ್.**

ಕೊಯಿಮುತ್ತೂರು, ದಕ್ಷಿಣ ಇಂಡಿಯಾ.

ದಕ್ಷಿಣ ಕನ್ನಡದ ಏಜಂಟರು:

**ಶ್ರೀ. ಎಮ್. ಎನ್. ವಿ. ಕಾಮತ್,**

**ಮರ್ಚಂಟ್, ಬಂದರ್, ಮಂಗಳೂರು.**


ಕೋಳೀ ಸೋಡ್ತಿ ಅಂಕವು ಊರವರ ಆಲೋಚಿತ ಸ್ಫೂರ್ತಿಯಿಂದ ಈ ಬಾರಿ ನಿಲ್ಲಿಸಲ್ಪಟ್ಟದು ಇತರ ಗ್ರಾಮಗಳವರಿಗೊಂದು ಮಾದರಿಯಾಗಿದೆ.

**ಶಿಲಾರು**–ಇದೇ ತಾ. 2ರಲ್ಲಿ ಕಂಬಿದಬೆಟ್ಟು ಜಾರಂಧಾಯ ದೈವಸ್ಥಾನಕ್ಕೆ ಶ್ರೀ. ಪಿ. ಸೂರು ಸೆಟ್ಟರು ರಜತ ಮುಖವೊಪ್ಪಿಸಿ ವಿಶೇಷ ನೇಮ ಜರಗಿಸಿದರು.

**ಶಿರ್ವ**–ಜನವರಿ ತಾ. 26ರಲ್ಲಿ ಪ್ರಜಾರಾಜ್ಯೋದ್ಘಾಟನಾ ಸಂಬಂಧದ ಮೆರವಣಿಗೆ, ಸಭೆ, ಭಾಷಣ, ತಿಂಡಿ ವಿತರಣೆ ಇತ್ಯಾದಿಗಳಾದುವು.

**ಬಸ್ರೂರು**–ಕಳೆದ ತಾ. 26ರಲ್ಲು ಪ್ರಜಾರಾಜ್ಯ ಉದ್ಘಾಟನಾ ಸಂಬಂಧ ಗುಡ್ಡೆ ಶಾಲಾ ವಠಾರದಿಂದ ಪ್ರಭಾತಫೇರಿ ಹೊರಟು ಗಾಂಧಿ ಮೈದಾನಕ್ಕೆ ಬಂದು ರಾಷ್ಟ್ರಧ್ವಜಾರೋಹಣ ನಡೆಯಿತು. ಸಂಜೆ ಪುರಮೆರವಣಿಗೆಯಾದ ನಂತರ ಶ್ರೀ ಕೊಳ್ಕೆಬೈಲು ಸೂರಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿ ಶ್ರೀಗಳಾದ ಕೆ. ಎನ್. ರಾವ್, ರಾಮಣ್ಣ ಸೆಟ್ಟಿ ಮೊದಲಾದವರ ಭಾಷಣಗಳಾದುವು. ಶಾಲಾ ಮಕ್ಕಳಿಗೆ ತಿಂಡಿ ಹಂಚಲಾಯಿತು.

ತಾ. 30ರಲ್ಲು ಸರ್ವೋದಯ ದಿನಾಚರಣೆಯು ಸಹ ಯಶಸ್ವಿಯಾಗಿ ಜರಗಿತು. ಗಡ್ಡವಿರುವ ತ್ರಿವರ್ಣದ ಹೆಣ್ಣು ಆಡೊಂದು ತನ್ನ ಮರಿಯೊಂದಿಗೆ ಭಾಗವಹಿಸಿತ್ತಂತೆ.

**ಕುಂದಾಪುರ**–ಪ್ರಜಾಪ್ರಭುತ್ವ ದಿನಾಚರಣೆಯು ಕಳೆದ ತಾ 26ರಲ್ಲು ಕಾಂಗ್ರೆಸ್ ಕಮಿಟಿ ಆಶ್ರಯದಲ್ಲಿ ಯಶಸ್ವಿಯಾಗಿ ಜರಗಿತು. ಅಂದು ಬೆಳಿಗ್ಗೆ ಗಾಂಧಿ ಮೈದಾನಿನಲ್ಲಿ ರೆವಿನ್ಯೂ ಡಿವಿಜನಲ್ ಆಫೀಸರರಿಂದ ಧ್ವಜಾರೋಹಣವಾಗಿ ಪೋಲೀಸ್, ಪ್ರೊಹಿಬಿಶನ್ ಗಾರ್ಡ್ಸ್, ಶಾಲಾಮಕ್ಕಳ ಪರೇಡ್ ನಡೆಯಿತು. ಸಂಜೆ ಸ್ಥಳೀಯ ಪಂಚಾಯತ ಬೋರ್ಡಿನ ಲೆಖ್ಖದಿಂದ ಶಾಲಾಮಕ್ಕಳಿಗೆ ತಿಂಡಿ ಹಂಚಲ್ಪಟ್ಟ ನಂತರ ಮೆರವಣಿಗೆಯಾಗಿ ಸಾರ್ವಜನಿಕ ಸಭೆಯು ಶ್ರೀ ಬಿ. ಎಮ್. ಹೊಳ್ಳರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎಮ್. ಎಮ್. ಹೆಗ್ಡೆ, ಕೆ. ಶಂಕರಸೆಟ್ಟಿ, ಆರ್. ಎಸ್. ಸುಬ್ರಮಣ್ಯಂ, ವಿ. ಎಮ್. ಹೊಳ್ಳ ಮೊದಲಾದವರು ಭಾಷಣ ಮಾಡಿದರು. ರಾತ್ರಿ ಪೇಟೆ ರಥಬೀದಿಯಲ್ಲಿ ದೀಪಾಲಂಕಾರಗಳಾದುವು.

ಕಳೆದ ತಾ. 30ರಲ್ಲು ಕುಂದಾಪುರದಲ್ಲಿ ಗಾಂಧಿಜೀಯ ಪುಣ್ಯದಿನವು ಸಾಂಗವಾಗಿ ಆಚರಿಸಲಾಯಿತು. ಬೆಳಿಗ್ಗೆ ಪಡೀರಹೋಬಳಿ ಹರಿಜನಕೊಲನಿ ಸಂದರ್ಶನ, ಸಂಜೆ ಶ್ರೀ ವೈ. ಎಮ್. ಸೆಟ್ಟರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಭಾಷಣಗಳಾದುವು.

**ಕುಂಜಾಲು**– ಕಳೆದ ತಾ. 26ರಲ್ಲು ಜಾನಪದರಾಜ್ಯ ಉದಯ ದಿನಾಚರಣೆಯು ಪಂಚಾಯತ ಬೋರ್ಡಿನ, ಊರವರ ಒಮ್ಮತದ ಸಹಕಾರದಿಂದ ವಿಜೃಂಭಣೆಯಿಂದ ಜರಗಿತು. ರಾಷ್ಟ್ರಧ್ವಜಾರೋಹಣ, ವಂದನೆ, ಮಕ್ಕಳಿಗೆ ತಿಂಡಿಹಂಚೋಣ, ಭಜನೆ, ಗಾಯನ, ಮೆರವಣಿಗೆ, ಸಭೆ, ಭಾಷಣ, ಜಾತಿಮತ ಭೇದವಿಲ್ಲದ ಸಹಪಂಕ್ತಿ ಭೋಜನ ಮೊದಲಾದ ಕಾರ್ಯಕ್ರಮಗಳಾದುವು.

**ಉಪ್ಪೂರು**:– ಕಳೆದ ತಾ. 26ಲ್ಲು, ಪ್ರಜಾಪ್ರಭುತ್ವ ದಿನಾಚರಣೆಯು ಶ್ರೀ. ಮಂಜುನಾಥ ಕಲ್ಕೂರರವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಆಚರಿಸಲ್ಪಟ್ಟಿತು. ಸಾರ್ವಜನಿಕ ಸಭೆಯಲ್ಲಿ ಪ್ರಥಮ ಉಪ್ಪು ಹಂಚಿ, ಮಹಾತ್ಮರ ಉಪ್ಪಿನ ಸತ್ಯಾಗ್ರಹ ಮೊದಲಾದ ವಿಷಯಗಳಲ್ಲಿ ಭಾಷಣಗಳಾದುವು. ಶಾಲಾಮಕ್ಕಳಿಗೆ ವಿವಿಧ ತಿಂಡಿತಿನಸುಗಳು ಮಹಾಜನರಿಂದ ಕೊಡಲಾದುವು.

ತಾ 30ರ ಸರ್ವೋದಯ ದಿನಾಚರಣೆಯು, ಶ್ರೀ. ಯು. ಕೆ. ಕೃಷ್ಣಯ್ಯಸೆಟ್ಟಿ ಅಧ್ಯಕ್ಷತೆಯಲ್ಲಿ ನೆರವೇರಿತು.

**ಬೈಲೂರು**: ಕಾರ್ಕಳ ತಾಲೂಕು ಬೈಲೂರು ಕೇಂದ್ರವನ್ನು ದ. ಕ. ಜಿಲ್ಲಾ ಬೋರ್ಡು ಪ್ರೆಸಿಡೆಂಟ್ ಶ್ರೀ ಬಿ. ಮಂಜಯ್ಯ ಹೆಗ್ಡೆರು ಕಳೆದ ತಾ 30ರಲ್ಲು ಸಂದರ್ಶಿಸಿ ಅಲ್ಲಿಯ ಗಾಂಧಿಸ್ಮಾರಕ ಕ್ಲಬ್ಬಿನ ಶಂಕುಸ್ಥಾಪನಾ ಕಾರ್ಯವನ್ನು ಸಾಂಗಗೊಳಿಸಿದರು. ಮಾತ್ರವಲ್ಲದೆ ಅಲ್ಲಿಯ ಹಾಯರ್ ಎಲಿಮೆಂಟರಿ ಶಾಲೆಯನ್ನು ಸಂದರ್ಶಿಸಿ ಆ ಶಾಲೆಯ ಕುಂದುಕೊರತೆಗಳನ್ನು ಪರಿಶೀಲಿಸಿದರು. ಶಾಲಾ ವಿಸ್ತರಣ ಕಮಿಟಿಯ ಕಡೆಯಿಂದ ಶ್ರೀ ಕೆ. ಎಸ್. ಹೆಗ್ಡೆಯವರು ಕೊಟ್ಟ ರೂಪಾಯಿ 1850|ರ ಚೆಂಕ್ ಡ್ರಾಫ್ಟನ್ನು ಸ್ವೀಕರಿಸಿ ಊರವರ ಆಭಾರವನ್ನು ಮನ್ನಿಸಿ ಆ ವಿದ್ಯಾಭಿಮಾನವು ಇತರ ನೆರೆ ಗ್ರಾಮಗಳಿಗೆ ಅನುಕರಣೀಯವೆಂದರು. ಶಾಲಾ ವಠಾರದಲ್ಲಿ ಶಾಲಾ ಮಕ್ಕಳ ಪ್ರಯೋಜನಾರ್ಥವಾಗಿ ತನ್ನ ಖರ್ಚಿನಿಂದ ಒಂದು ಬಾವಿಯನ್ನು ಕಟ್ಟಿಸಿ ಕೊಡುವೆನಾಗಿ ಜಾಹೀರು ಮಾಡಿದ ಶ್ರೀ ಭವಾನಿರಾಯರ ಸತ್ಕಾರ್ಯವನ್ನು ಅಭಿನಂದಿಸಿದರು. ಬೋರ್ಡು ಮಂಜೂರಾತಿ ನಿರೀಕ್ಷಣೆಗೊಳಪಟ್ಟು ಶ್ರೀ ಹೆಗ್ಡೆಯವರು ಶ್ರೀ ರಾಯರಿಗೆ ಕಾರ್ಯಾರಂಭಿಸಲು ಅನುಮತಿಯನ್ನು ಕೂಡಲೇ ಕೊಟ್ಟರು. ಮಾತ್ರವಲ್ಲದೆ ಬೈಲೂರು ಗ್ರಾಮಸ್ಥರ ವಿದ್ಯಾಭಿಮಾನವನ್ನು ಕಂಡು ಮನಸೋತರು.

**ನಿಡಂಬೂರು**– ಪಂಚಾಯತ ಬೋರ್ಡಿನ ಕಡೆಯಿಂದ ಕಳೆದ ತಾ. 26 ಮತ್ತು 27 ರಲ್ಲು ರಿಪಬ್ಲಿಕ್ ದಿನಾಚರಣೆಯು ಯಶಸ್ವಿಯಾಗಿ ಜರಗಿತು. ಬೆಳಿಗ್ಗೆ ಧ್ವಜಾರೋಹಣ, ಸಂಜೆ ಮೆರವಣಿಗೆ, ಕಡೆಕಾರು ಮೈದಾನಿನಲ್ಲಿ ಶ್ರೀ ಎನ್. ರಾಜಗೋಪಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಮಹಾಜನಸಭೆ, ಶ್ರೀಗಳಾದ ಡಾ| ಅಚ್ಚಣ್ಣ ಸೆಟ್ಟಿ, ಹಿರಿಯಣ್ಣ ಸೆಟ್ಟಿ ಮೊದಲಾದವರ ಭಾಷಣ, ಶಾಲಾಮಕ್ಕಳಿಗೆ ತಿಂಡಿ ಹಂಚೋಣ ಮೊದಲಾದ ಕಾರ್ಯಕ್ರಮಗಳಾದುವು.

ಕಳೆದ ತಾ. 28ರಲ್ಲು ನಡೆಯಬೇಕಾಗಿದ್ದ ಬಂಕೇರಕಟ್ಟ ಖಾರಿಯ ಮತ್ತು ಕಡೇಕಾರು, ಕಿನ್ನಿಮೂಲ್ಕಿ ಮೀನುಮಾರ್ಕೆಟುಗಳ ಏಲಂ ಬಿಡ್ಡರುಗಳ ಅಭಾವದಿಂದ ಜರಗಲಿಲ್ಲವೆಂದೂ ಇದೇ ಫೆಬ್ರವರಿ ತಾ 25ರಲ್ಲು ಸಂಜೆ 5ಗಂಟೆಗೆ ಸರಿಯಾಗಿ ಏಲಂ ಟೆಂಡರುಗಳು ಪ್ರೆಸಿಡೆಂಟರಿಂದಲೇ ಪರಿಶೀಲಿಸಲಾಗುವುದೆಂದೂ ಪ್ರೆಸಿಡೆಂಟರು ತಿಳಿಸುತ್ತಾರೆ.

**ನಿಂಜೂರು**— ಶ್ರೀ ವಿವೇಕಾನಂದ ಸೇವಾಸಂಘದ ವಿಶೇಷ ಸಭೆಯು ಕಳೆದ ತಾ. 29ರಲ್ಲು ಶ್ರೀ ಎನ್. ಶ್ಯಾಮಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಹಿತಚಿಂತಕರಾಗಿದ್ದ ಶ್ರೀಯುತ ಎನ್. ಜೋಗಪ್ಪ ಸೆಟ್ಟಿ ಮತ್ತು ಎನ್. ನಂದ್ಯಪ್ಪ ಸೆಟ್ಟರ ನಿಧನದ ಬಗ್ಗೆ ಸಂತಾಪಸೂಚಿಸುವ ನಿರ್ಣಯಗಳಾದುವು.

**ಶೋಚನೀಯ ನಿಧನ**–ಪ್ರುಧ್ವಿ ಇನ್ಶೂರೆನ್ಸ್ ಕಂಪೆನಿಯ ಮಂಗಳೂರು ಶಾಖೆಯ ಬ್ರಾಂಚ್ ಮೆನೇಜರರಾಗಿದ್ದ ಶ್ರೀ ಎಚ್. ನಂದ್ಯಪ್ಪ ಸೆಟ್ಟರು ಕಳೆದ ತಾ. 30 ರಲ್ಲು ರಾತ್ರಿ ಚಿದಂಬರಂ ಜನರಲ್ ಆಸ್ಪತ್ರೆಯಲ್ಲಿ ದೈವಾಧೀನರಾದರೆಂದು ತಿಳಿಸಲು ತುಂಬಾ ವಿಷಾದವೆನಿಸುತ್ತದೆ. ಮೃತರ ಪತ್ನೀಪುತ್ರರಿಗುಂಟಾದ ದುಃಖದಲ್ಲಿ ಸಹಸಂತಾಪವನ್ನು ಸೂಚಿಸಿ ದಿವಂಗತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವೆವು.

**ಮುಂಡ್ಕೂರು**–ಕಳೆದ ತಾ. 30ರಲ್ಲು ಮೂಲ್ಕಿ ಹರಿಜನ ಸೇವಾಸಂಘದ ಆಶ್ರಯದಲ್ಲಿ ಹರಿಜನ ದಿನಾಚರಣೆಯು ಮುಂಡ್ಕೂರು ಕೇಂದ್ರದಲ್ಲಿ ಜರಗಿತು. ಹರಿಜನರು ಭಜನೆ ಮಾಡುತ್ತಾ ಮೆರವಣಿಗೆಯಿಂದ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನಕ್ಕೆ ಬಂದು ಶ್ರೀಮುಡಿ ಗಂಧಪ್ರಸಾದವನ್ನು ಸ್ವೀಕರಿಸಿದರು. ಕೊನೆಗೆ ಮಂಗಳೂರು ಡಿವಿಜನಲ್ ಆಫೀಸರ್ ಶ್ರೀ ಯು. ಪರಶುರಾಮನಾಯಕ್ ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿ ಶ್ರೀಗಳಾದ ಸುಬ್ಬಚಂಪ, ಕೃಷ್ಣಸೆಟ್ಟಿ ಮೊದಲಾದವರ ಸಾಲೋಚಿತ ಭಾಷಣಗಳಾದುವು. ಶ್ರೀ ಎಮ್. ಆರ್. ಪೂಂಜರು ಧನ್ಯವಾದಗಳನ್ನರ್ಪಿಸಿದರು.

---

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 599/49.

ಮೈದಿನ್ ಸಾಹೇಬ — ವಾದಿರು

ಹಳೆಯಮ್ಮ ಸಹಾ — ಪ್ರತಿವಾದಿರು.

4. ಸೀತಾರಾಮ. ಚಿನ್ನ ಸ್ವಾಮಿ ಮಗ, ಶಿವಮೊಗ್ಗ ಡಿಸ್ಟ್ರಿಕ್ಟ್ ಕಸಬೆಯಲ್ಲಿರುವವ.

ಸದ್ರಿ ವಾದಿರು ಜಾಹೀರು ಮಾಡಿಕೊಳ್ಳುವದೇನೆಂದ್ರೆ.

ವಾದಿಗೆ ಪ್ರತಿವಾದಿರಿಂದ ಬರಾ ಮೂಲಗೇಣಿ ಬಾಬ್ತು ರೂ. 162|4 ಕ್ಕಿನ್ನು ಬಲ ಮಾಡಿಕೊಳ್ಳುವರೆ ಮಾಡಿದ ದಾವೆಯು ತಾ. 25-2-50ಕ್ಕೆ ಅಖೈರೆ ತಕ್ಸೀರಿಗೆ ಯಿಡೋಣಾಗಿಯದೆ. ಆ ಕುರಿತು ನಿಮ್ಮದೇನಾದ್ರೂ ಉದಾರಣೆ ಇದ್ರೆ ಸದ್ರಿ ದಿವ್ಸ ಹಗಲು 11 ಗಂಟೆಗೆ ಸ್ವತಹಾ ಯ ವಕೀಲರ ದ್ವಾರಾ ಮೇಲ್ಕಂಡ ಕೋರ್ಟ ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಪಡಿಸೋಣಾಗುವದೆಂಬ ಸಂಗ್ತಿ ಈ ಮೂಲ್ಕ ತಿಳಿಯಪಡ್ಸಿದೆ.

**G Sanjiwa Rao,**
Vakil.

Kundapur, Date 4-2-50.

---

### ಏಲಂ ನೋಟೀಸು

ಕಾರ್ಕಳ ತಾಲೂಕು ಕಣಜಾರು ಗ್ರಾಮದಲ್ಲಿರುವ ಉಡುಪಿ ಶ್ರೀ ಅದಮಾರು ಮಠದ ಕಾಳೀಯ ಮರ್ದನ ಶ್ರೀಕೃಷ್ಣದೇವರ ಹೆಸರಲ್ಲಿ ಬೇರೇಜಾದ ಬಾಬ್ತು ಈ ಕೆಳಗೆ ವಿವರಿಸಿದ ಸ್ಥಳದಲ್ಲಿರುವ ಕಿರ್ಕಾಂಬೋಗಿ ಹಗ್ಗೆರೆ ಮರಮಟ್ಟುಗಳನ್ನು ಇದೇ ಬರುವ ತಾ. 1-3-50ನೆ ಬುಧವಾರ ದಿನಸಾಯಂಕಾಲ ಘಂಟೆ3-30ಕ್ಕೆ ಉಡುಪಿ ಶ್ರೀಅದಮಾರುಮಠದಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸೋಣಾಗುತ್ತದೆ. ಖರೀದುವಾರರು ಸದ್ರಿ ಸಮಯ ಬರಬೇಕಾಗಿ ಅಪೇಕ್ಷಿಸುತ್ತೇವೆ. ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬಂದು ವಿಚಾರಿಸಬಹುದು.

ಸ್ಥಳದ ವಿವರ

| ಸ. ನಂ. | ಸ. ಡಿ. ನಂ. | ಕಿಸಂ. | ವಿಸ್ತೀರ್ಣ |
|---|---|---|---|
| 221 | 2 | ಪುಂಜ | 8-25 |

FOR SRI ADMAR MUTT.

**P. Shripathi Rao.**
*Agent*


# ಕುಲವಿಲ್ಲದ ಹೆಣ್ಣು

(ಸರಸ ಸಾಮಾಜಿಕ ಕಾದಂಬರಿ)

ಬರೆದವರು:—ಪಿ. ವೆಂಕೋಬಾಚಾರ್ಯ, ಬಿ.ಎ.ಬಿ.ಟಿ.

ದೇವದಾಸಿ ಕುಲದ ಉದ್ಧಾರವೇ ಮುಖ್ಯ ಕಥಾವಸ್ತು.

ಕುಸುಮಳು ವೇಶ್ಯಾಪುತ್ರಿಯಾದರೂ ಅವಳು ವೇಶ್ಯೆಯಲ್ಲ! ಅವಳ ಕತೆ ಹೇಗೆ ಸಾಗಿದೆ ಎಂದು ಓದಿಯೇ ತಿಳಿಯಿರಿ.

ದಪ್ಪ ಪುಸ್ತಕ ಬೆಲೆ ರೂ. 1—0—0

ಪ್ರತಿಗಳು, ಅಂತರಂಗ ಕಾರ್ಯಾಲಯ, ಉಡುಪಿ,

ನವಯುಗ ಪ್ರೆಸ್, ಉಡುಪಿ ಇಲ್ಲಿ ದೊರೆಯುತ್ತವೆ.

ಜನವರಿ ತಾ. 26ರಂದು ಜಾರಿಗೆ ಬಂದ ನಮ್ಮ ರಾಜಶಾಸನವು ಹುಟ್ಟಿಕೊಂಡಿದೆ. ಲೋಕದ ಯಾವ ಕಡೆಯಲ್ಲಿಯೂ ಯಾವ ಕಾಲದಲ್ಲೂ ಇಂಥಾ ಘಟನೆಯು ನಡೆದದ್ದು ಚರಿತ್ರೆಯಲ್ಲಿ ಕಾಣುವದಿಲ್ಲ. ಈ ಶಾಸನವು 8 ಅಧ್ಯಾಯಗಳಾಗಿ ಒಟ್ಟು 395 ಆರ್ಟಿಕಲ್ಸುಗಳಿಂದ ಕೂಡಿದೆ. ಇದನ್ನು ತಯಾರಿಸಲು ಘಟನಾಸಮಿತಿಯವರಿಗೆ ಸುಮಾರು 3 ವರುಷಗಳು ಬೇಕಾಗಿವೆ. ಸಮಿತಿಯವರು ಈ ಬಗ್ಗೆ 11 ಸಲ ಸಭೆಸೇರಿರುವರು. 165 ದಿವ್ಸಗಳನ್ನು ಇದರ ಬಗ್ಗಾಗಿ ಉಪಯೋಗಿಸಿರುವರು. ಇದಕ್ಕೆ ಸುಮಾರು 7635 ತಿದ್ದುಪಡಿ ಠರಾವುಗಳು ಬಂದಿದ್ದುವು. ಆ ಪೈಕಿ ಸುಮಾರು 2473 ಠರಾವುಗಳು ಚರ್ಚಿಸಲ್ಪಟ್ಟವೆ. ಇದಕ್ಕೆ ಒಟ್ಟು 64,00,000 ಅರವತ್ತನಾಲ್ಕು ಲಕ್ಷ ರೂಪಾಯಿ ಖರ್ಚಾಗಿದೆಯಂತೆ. ಈ ಶಾಸನವನ್ನು ಸಮಿತಿಯವರು ತಯಾರಿಸುವ ಸಮಯ ಆಗಾಗ ಪ್ರೇಕ್ಷಕರಾಗಿ ಬಂದ ಒಟ್ಟು ಜನಸಂಖ್ಯೆಯು 53,000ಕ್ಕೆ ಮೀರಿದೆಯಂತೆ. ಇದರ ಪೂರ್ಣ ವಿಚಾರವನ್ನು ಬರೆದಿಡಲು 20-34" ಸೈಜಿನ ಫೂಲ್‌ಸ್ಕೇಪ್ ಕಾಗ್ದಗಳು ಸುಮಾರು 20,00,000 ತಾವುಗಳು ಬೇಕಂತೆ. ಆ ಕಾಗ್ದಗಳನ್ನು ಒಂದರ ಮೇಲೊಂದನ್ನು ಇಡಲು ಸುಮಾರು 200 ಗಜ ಎತ್ತರವಾಗುವದಂತೆ. ಈ ಶಾಸನವು ಸುಮಾರು 320 ಮಿಲಿಯ ಜನರಿಗೆ ಲಗಾವಾಗುವದು. ಇದರಲ್ಲಿ ಸುಮಾರು 160 ಮಿಲಿಯಕ್ಕೂ ಮಿಕ್ಕಿದ ಜನರು ಮತದಾರರಾಗುವರು. ಈ ಶಾಸನದ ಪ್ರಕಾರ ಸುಮಾರು 4000 ಚುನಾವಣಾ ಸ್ಥಾನಗಳಲ್ಲಿ 4500 ಮೆಂಬರರು ಚುನಾಯಿತರಾಗಬೇಕಾಗುತ್ತದೆ. ಆ ಪೈಕಿ 3800 ಮೆಂಬರರು ಪ್ರಾಂತಗಳ ಎಸೆಂಬ್ಲಿ ಕೌನ್ಸಿಲುಗಳ ಬಗ್ಗೂ ಉಳಿದವರ ಪೈಕಿ 500 ಮೆಂಬರರು ಕೇಂದ್ರ ಎಸೆಂಬ್ಲಿಯ ಬಗ್ಗೂ 220 ಜನರು ಕೇಂದ್ರ ಕೌನ್ಸಿಲಿನ ಬಗ್ಗೂ ಆಗಿರುವರು.

ಸಮಿತಿಯವರು ಈ ಶಾಸನವನ್ನು ತಯಾರಿಸುವಾಗ ಅನ್ಯ ದೇಶದ ಪ್ರಮುಖರ ಸಹಾಯವನ್ನು ಕೋರದೆ ನಮ್ಮ ಪ್ರತಿನಿಧಿಗಳಿಂದಲೇ ನಮಗಾಗುವ ಶಾಸನವನ್ನು ತಯಾರಿಸಿದರು. ಇದರಲ್ಲಿ ನಮಗೆ ಬೇಕಾದ ರಾಜಕೀಯ ಅನುಕೂಲತೆಗಳಿರುವವು. ಪ್ರತಿಯೊಬ್ಬ ಪ್ರಾಯಸ್ಥ ಮೆಂಬರನಿಗೂ ರಾಜ್ಯದ ಕಾರಭಾರಿನಲ್ಲಿ ಕೈಹಾಕುವ ಅಧಿಕಾರ ಮಾತ್ರವಲ್ಲ, ಕಾರ್ಯಭಾರದಲ್ಲಿ ಯಾವ ಕೆಲಸಕ್ಕೂ ಯೋಗ್ಯತೆ ಇರುವದಾದರೆ ಅರ್ಹನಾಗುತ್ತಾನೆ. ಪ್ರತಿಯೊಂದು ರಾಜ್ಯಾಂಗರಚನೆಯಲ್ಲಿ ಮೂರು ಅಂಗಗಳು ಅಥವಾ ಭಾಗಗಳಿರುವವು. 1

## ಪ್ರಕಟಣೆ

ತಾ. 12—1—50ರಲ್ಲಿ 'ಪ್ರಜಾವಾಣಿ' ಪತ್ರಿಕೆಯಲ್ಲಿ ಬಂದಿದ್ದ "ಉಡ್ಪಿ ಪರ್ಯಾಯಕ್ಕೆ ಬರುವ ಪ್ರಯಾಣಿಕರಿಗೆ ಎಚ್ಚರಿಕೆ" ಎಂಬ ಲೇಖನವನ್ನು ಕಂಡು ತುಂಬಾ ಬೇಸರವಾಗುತ್ತದೆ. ಉಡ್ಪಿಯಲ್ಲಿ ಬರೇ ಮೂರು ಟಾಕ್ಸಿ ಗಾಡಿಗಳು ಇರುತ್ತಾ 'ಉಡ್ಪಿ ಟಾಕ್ಸಿಯವರು' ಎಂಬದಾಗಿ ಬರೆದದ್ದು ತುಂಬಾ ಅನ್ಯಾಯವೆಂಬದಾಗಿ ನಾನು ತಿಳಿಸುತ್ತೇನೆ. ಉಡ್ಪಿಯಲ್ಲಿ ಬರೇ ಮೂರು ಟಾಕ್ಸಿಗಳಿದ್ದರೂ ಸಹ, ಸಂಪಾದಕರು ಟಾಕ್ಸಿಯವನ ಹೆಸರು ಯಾ ಟಾಕ್ಸಿಯ ನಂಬ್ರ ಬರಿಯದೆ ಇದ್ದುದರಿಂದ, ಮರ್ಯಾದೆಯಿಂದ ಟಾಕ್ಸಿ ನಡಿಸುವವರಿಗೂ ಒಂದು ವಿಧದ ಕುಂದು ತರುವಂತೆ ಕಾಣುತ್ತದೆ.

ಆದ್ದರಿಂದ ಅಂಥಾ ಹೀನ ಕೃತ್ಯ ಮಾಡಿದವನು ಯಾರೆಂಬದಾಗಿ ತಿಳಿಸಬೇಕಾಗಿ ಅಪೇಕ್ಷಿಸುತ್ತೇನೆ. ತಿಳಿಸಲು ಅಸಾಧ್ಯವಾದರೆ ಇನ್ನು ಮುಂದೆ ಯಾವ ಹೆಸರೂ ಇಲ್ಲದ ವರ್ತಮಾನವನ್ನು ಕೇಳಿ ಮರ್ಯಾದೆಯಿಂದ ಕೆಲಸ ಮಾಡುವವರನ್ನು ಅಪಮಾನಕ್ಕೀಡುಮಾಡುವ ಆಲೋಚನೆಯನ್ನಾದರೂ ದಯಮಾಡಿ ಸಂಪಾದಕರು ಬಿಡಬೇಕಾಗಿ ಅಪೇಕ್ಷಿಸುತ್ತೇನೆ.

K. ಗೋಪಾಲ ಶೆಟ್ಟಿ,
ಟೇಕ್ಸಿ MDX. 1307.

## ನಮ್ಮ ಶಾಸನೋಕ್ತಿಯ ಸ್ವತಂತ್ರ ಹಕ್ಕು ಮತ್ತು ಕರ್ತವ್ಯ

ಲೇಖಕ:--ಶ್ರೀ. ಕೆ. [illegible] ಶೆಟ್ಟಿ, ಬಿ. ಎ.

ಆಡಳಿತಮಂಡಳಿ (Executive) 2 ಶಾಸನ ಭಾಗ (Legislature) 3 ನ್ಯಾಯಭಾಗ (Judiciary). ಇವುಗಳಲ್ಲಿ ಮೊದಲು ಹೇಳಿದ 1 ಮತ್ತು 2ನೇ ಭಾಗಗಳು (ಅಂದರೆ 3 ಅಂಗಗಳು) ನೇರಾ ಅಥವಾ ರೂಪಾಂತರದಿಂದ ಚುನಾಯಿತರಾಗತಕ್ಕವರಾದ್ದರಿಂದ ಈ ಮೂರು ಅಂಗಗಳ ಪೈಕಿ 3ನೇ ಅಂಶ ನಮ್ಮಿಂದಲೇ ಚುನಾಯಿತರಾದ್ದರಿಂದ ನಮ್ಮ ಅಧಿಕಾರದೊಳಗಿರುವವರು ಅಥವಾ ನಮಗೆ ಜವಾಬ್ದಾರರಾಗಿರುವವರು. 21 ವರುಷ ಪ್ರಾಯವಾದ ಪ್ರತಿಯೊಬ್ಬ ಹೆಂಗಸಿಗೂ ಗಂಡಸಿಗೂ ಓಟು ಇರುವುದರಿಂದ ಆಡಳಿತೆ ಮಂಡಳಿ ಮತ್ತು ಶಾಸನಸಭೆಯು ಪ್ರಜಾಪ್ರಭುತ್ವಕ್ಕೆ ಒಳಪಟ್ಟಿರುವದು. 3ನೇ ಭಾಗವು ಪ್ರಜಾಪ್ರಭುತ್ವಕ್ಕೆ ಹೊರಪಟ್ಟದ್ದೆಂತ ಭಾವಿಸಬಾರದು. ನಮ್ಮ ಹಿತದೃಷ್ಟಿಯಿಂದಲೇ ಅದನ್ನು ಯಾರ ಅಧಿಕಾರದೊಳಗೆ ಅಂದರೆ ಹಂಗಿನೊಳಗೆ ಇಡಲಿಲ್ಲ. ಅವರನ್ನು ಸ್ವತಂತ್ರ ಭಾಗವೆಂಬುದಾಗಿ ನಾವೇ ಮಾಡಿದ್ದಾಗಿದೆ, ಎಲ್ಲರಿಗೂ ಒಂದೇ ತರದ ನ್ಯಾಯ ತೀರ್ಮಾನವಾಗಬೇಕಾದರೆ ಹೀಗೆ ಮಾಡಲೇ ಬೇಕಾಗಿದೆ. ಆದರೆ ಈ ಮೂರನೇ ಭಾಗದ ಸ್ಥಾನಕ್ಕೆ ಬೇಕಾದ ಯೋಗ್ಯತೆ ಯಾ ಅನುಕೂಲತೆ ಇರುವದಾದರೆ ಪ್ರತಿಯೊಬ್ಬನಿಗೂ ಈ ಸ್ಥಾನವನ್ನು ಹೊಂದಲು ಅರ್ಹತೆ ಉಂಟು. ಇನ್ನು ನಮ್ಮ ಸರಕಾರದ ನೌಕರಿಯ ಬಗ್ಗೆ ಸಹಾ ಯೋಗ್ಯತೆ ಇರುವದಾದರೆ ಯಾವ ವ್ಯಕ್ತಿಗೂ ಪ್ರತಿಬಂಧಕವಿಲ್ಲ. ಈ ಎಲ್ಲಾ ಕಾರಣಗಳಿಂದ ನಾವು ತಿಳಿಯಬೇಕಾದುದೇನೆಂದರೆ ನಮ್ಮ ಸರಕಾರದ ತಳಹದಿಯು ನಮ್ಮಲ್ಲಿರುವದು. ಆಡಳಿತೆಯ ಮಂಡಳಿಯು ಸ್ವೇಚ್ಛೆಯಂತೆ ನಡೆದರೆ, ದುರ್ವ್ಯಯ ಮಾಡಿದರೆ, ಎಸೆಂಬ್ಲಿಯವರು ಸರಿಯಾದ ವಿಚಾರ ತೆಗೆದುಕೊಳ್ಳುವರೆ ತಪ್ಪಿದಲ್ಲಿ ಇವರೆಲ್ಲರನ್ನೂ ಕೇಳುವ ಅಧಿಕಾರವು ನಮಗಿರುವದು. ಮತ್ತು ಮುಂದೆ ಬರುವ ಚುನಾವಣೆ ಕಾಲದಲ್ಲಿ ತಪ್ಪಿತಸ್ಥರಿಗೆ ಚೆನ್ನಾಗಿ ಬುದ್ಧಿ ಕಲಿಸಬಹುದು. ಚುನಾಯಿತರಾದ ಮೆಂಬರರ ತಪ್ಪು ನಮ್ಮದೇ ಆಗುವದು. ನಾವು ನಮ್ಮನ್ನೇ ದೂರಬೇಕೇ ಹೊರತು ಅನ್ಯರನ್ನು ಈ ವರೆಗೆ ದೂರಿದಂತೆ ಇನ್ನು ಮುಂದೆ ಆಗದು. ಒಳ್ಳೇದು ಕೆಟ್ಟದ್ದು ನಮ್ಮ ಕೈಯಲ್ಲೇ ಇದೆ.

ನಮ್ಮ ಶಾಸನದ ಮೇರೆಗೆ ನಮಗೆ ಕೆಲವು ಹಕ್ಕುಗಳು ಬಂದಿವೆಯಾದರೂ ಅವುಗಳ ಒಟ್ಟಿಗೆ ಕೆಲವು ಜವಾಬ್ದಾರಿಕೆಗಳು ಸಹಾ ಅಂಟಿಕೊಂಡೇ ಇವೆ ಎಂಬುದನ್ನು ತಿಳಿಯಲೇ ಬೇಕು. ಜವಾಬ್ದಾರಿಕೆಯಿಲ್ಲದ ಹಕ್ಕಿಗೆ ಬೇಜವಾಬ್ದಾರಿ ಹಕ್ಕು ಎನ್ನುತ್ತಾರೆ. ಅಂಥಾ ಹಕ್ಕಿಗೆ ಮಾನ್ಯತೆ ಇಲ್ಲ. ಬೇಜವಾಬ್ದಾರೀ ಹಕ್ಕುಗಳು ನಮಗೂ ನಮ್ಮ ಸಮಾಜಕ್ಕೂ ಹಿತಕರವಲ್ಲ. ಪ್ರತಿ ಒಂದು ಹಕ್ಕು ಕರ್ತವ್ಯಪರವಾದದ್ದು. ಶಾಲೆಗಳು ಬೇಕೆಂತ ನಾವು ಕೂಗೆಬ್ಬಿಸುವೆವು. ಆದರೆ ಮಕ್ಕಳನ್ನು ಶಾಲೆಗೆ ಕಳುಹಿಸಿ ವಿದ್ಯಾಭ್ಯಾಸ ಮಾಡಿಸುವ ಜವಾಬ್ದಾರಿಕೆಯು ನಮ್ಮನ್ನು ಹೊಂದಿದೆ. ಓಟಿನ ಹಕ್ಕು ನಮಗೆ ಕೊಟ್ಟಿದ್ದಾರೆ ಹಾಗೆಯೇ ಅದನ್ನು ಉಪಯೋಗಿಸುವ ಜವಾಬ್ದಾರಿಕೆಯು ನಮ್ಮ ಮೇಲಿದೆ. ಕೆಲಸ ಕೊಡಬೇಕೆಂಬ ಬೊಬ್ಬೆ ಕೇಳುತ್ತದೆ. ಹಾಗೆಯೇ ಸುಮ್ಮನೆ ಉಂಡು ತಿರುಗದೆ ದುಡಿದು ತಿನ್ನುವ ಜವಾಬ್ದಾರಿಕೆಯೂ ನಮ್ಮ ಮೇಲಿದೆ.

ನಮಗೆ ಸಿಕ್ಕಿದ ಓಟಿನ ಹಕ್ಕನ್ನು ನಾವು ಸರಿಯಾಗಿ ಉಪಯೋಗಿಸದೆ ಇರುವದಾದರೆ ಹೇಡಿಯ ಕೈಯಲ್ಲಿ ಬ್ರಹ್ಮಾಸ್ತ್ರವನ್ನು ಕೊಟ್ಟಂತೆಯೇ ಸರಿ. ಅಥವಾ ಈ ಹಕ್ಕನ್ನು ನಾವು ಇತರರ ದುಬೋಧನೆಗೆ ಅಥವಾ ಒಳಸಂಚಿಗೆ ಸೇರಿದ ಇನ್ನಿತರ ರೂಪದಿಂದ ದುರುಪಯೋಗಮಾಡಿದರೆ ಭಸ್ಮಾಸುರನಿಗೆ ಉರಿಹಸ್ತ ಸಿಕ್ಕಿದಂತಾಗುವದು. ನಮ್ಮ ಮುಂದಿನ ಆಗುಹೋಗುಗಳೆಲ್ಲಾ ನಮಗಿರುವ ಓಟನ್ನು ಹೊಂದಿರುವುದರಿಂದ ಇದು ಬಹಳ ಬೆಲೆಯುಳ್ಳದ್ದು ಎಂಬುದನ್ನು ನಾವು ಮರೆಯಲೇ ಬಾರದು. ಪ್ರಜಾಮತ ಸರಕಾರವಿರುವ ಯುರೋಪು ಮತ್ತು ಅಮೇರಿಕ ದೇಶಗಳಲ್ಲಿ ಪ್ರಾಯಸ್ಥರೆಲ್ಲರಿಗೂ ಓಟು ಇರುವದಾದರೂ ಅಲ್ಲಿರುವ ಜನರು ವಿದ್ಯಾವಂತರು; ಅದರ ಜವಾಬ್ದಾರಿಕೆಗಳೇನೆಂಬುದನ್ನು ಚೆನ್ನಾಗಿ ತಿಳಿದಿರುವರು, ಮತಗಣನೆಯ ಸಮಯ ಬಹು ದೂರದಿಂದ ಬಂದು ತಮ್ಮ ಕರ್ತವ್ಯವನ್ನು ಪರಿಪಾಲಿಸುವರು. ಆಸ್ಟ್ರೇಲಿಯಾ ಮತ್ತು ಸ್ವಿಜರ್‌ಲೇಂಡು ಈ ಎರಡು ದೇಶಗಳಲ್ಲಿ ಚುನಾವಣೆಯ ಸಮಯ ಓಟು ಕೊಡದ ಮತದಾರರನ್ನು ಟೀಕಿಸುವದಲ್ಲದೆ ಶಿಕ್ಷೆ ವಿಧಿಸುವ ಕಾನೂನು ಸಹಾ ಜಾರಿಯಲ್ಲಿದೆ. ನಮ್ಮ ಜನರು ಅವಿದ್ಯಾವಂತರು, ಪ್ರಜಾಮತಸರಕಾರದ ಅರಿವಿಲ್ಲದವರು, ಇನ್ನು ಅನೇಕರು ಪರರ ಹಂಗಿಗರಾದ್ದರಿಂದ ಈ ಕುರಿತು ಹಲವು ರಾಜಕೀಯ ತಜ್ಞರು ಸಂದೇಹ ಸೂಚಿಸಿರುವರು. ಆದರೆ ಮತದಾರರು ಬಹು ಸಂಖ್ಯೆಯಲ್ಲಿರುವುದರಿಂದ ಹಣಬಲದಿಂದ ಅಥವಾ ಇನ್ನಿತರ ದುರ್ದಾರಿಯಿಂದ ಮೆಂಬರರು ಚುನಾಯಿತರಾಗಲು ಇದರಿಂದ ಕಷ್ಟವಾದೀತು. ಪ್ರಜಾಮತ ಸರಕಾರಕ್ಕೆ ಬೆಂಬಲವೇ ಮತದಾರರು. ಅವರು ತಮ್ಮ ಕೆಲಸವನ್ನು ಸರಿಯಾಗಿ ಪೂರೈಸದೆ ಇರುವಲ್ಲಿ ಕಾವಲುಗಾರರು ಕೋಟೆಯ ಬಾಗಿಲಲ್ಲಿ ನಿದ್ದೆಮಾಡಿದಂತೆಯೇ ಸರಿ. ಇವರಿಗೂ ಸೈನ್ಯ ಬಿಟ್ಟು ವೈರಿಸೈನ್ಯ ಸೇರಿದವರಿಗೂ ಏನೂ ವ್ಯತ್ಯಾಸವಿಲ್ಲ. ಓಟರರು ತಮ್ಮ ಕರ್ತವ್ಯವನ್ನು ಪೂರೈಸುವರೆ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸಂಗತಿಗಳನ್ನು ತಿಳಿದುಕೊಳ್ಳಬೇಕು. ವಿದ್ಯಾವಂತರು ಪುಸ್ತಕಗಳನ್ನು ವರ್ತಮಾನ ಪತ್ರಿಕೆಗಳನ್ನು ಓದಿ ತಿಳಿದುಕೊಳ್ಳುತ್ತಾರೆ. ಆದರೆ ನಮ್ಮಲ್ಲಿ ಹೆಚ್ಚಿನ ಜನರು ಅವಿದ್ಯಾವಂತರು. ಇವರು ಹೇಗೆ ಇದನ್ನೆಲ್ಲಾ ತಿಳಿಯುವದು? ಈ ಬಗ್ಗೆ ವಿದ್ಯಾವಂತರು ಸಂಸ್ಥೆ ಸಂಘಗಳನ್ನು ಅಲ್ಲಲ್ಲಿ ಸ್ಥಾಪಿಸಿ, ಜನರಿಗೆ ಪ್ರಚಾರ ಮಾಡಬೇಕು. ನಮ್ಮ ಸ್ವಾತಂತ್ರ್ಯವು ಸ್ಥಿರವಾಗಿ ನಿಲ್ಲಬೇಕಾದರೆ ನಾವು ಯಾವಾಗಲೂ ಜಾಗರೂಕರಾಗಿರಬೇಕು. (The price of Liberty is eternal vigilance) ಸ್ವತಂತ್ರ ಸಿಕ್ಕಿಯದೆಂದು ಸುಮ್ಮನಾದರೆ ಕರ್ಪೂರ ರೂಪದ ಸರ್ವಾಧಿಕಾರವು ತಲೆ ಎತ್ತಿ ನಮ್ಮನ್ನು ಬಗ್ಗು ಬಡೆದೀತು. ನಾವು ನಮ್ಮ ಸ್ವಾರ್ಥವನ್ನು ಬಿಟ್ಟು ಸಾರ್ವಜನಿಕ ವಿಚಾರದಲ್ಲಿ ತಲೆಹಾಕಿ ಕೆಲಸಮಾಡಬೇಕು.

ನಮ್ಮ ದೇಶದಲ್ಲಿ ಈಗ ಒಂದೇ ರಾಜಕೀಯ ಪಕ್ಷ ಇರುವದು. ಪ್ರಜಾಪ್ರಭುತ್ವದ ಬೆಳವಣಿಗೆಗೆ ಹೀಗಿರುವದು ಚಲೋದಲ್ಲ. ಸ್ವತಂತ್ರವನ್ನು ಪಡೆಯಬೇಕಾದರೆ ಹೀಗೆ ಇದ್ದದ್ದು ಸರಿ. ಆಗ ಸ್ವತಂತ್ರದ ಹೋರಾಟ ಒಂದೇ ಆದ್ದರಿಂದ ಒಂದೇ ಪಾರ್ಟಿ ಬೇಕಾಗಿತ್ತು. ಈಗ ಸರ್ವ ವಿಚಾರದಲ್ಲೂ ವಿಮರ್ಶೆಯಾಗಬೇಕಾದ್ದರಿಂದ ಶಿಸ್ತಿಗೆ ಒಳಪಟ್ಟಿರುವ ಒಂದೇ ಪಾರ್ಟಿಯಿಂದ ಸರಿಯಾಗಿ ವಿಮರ್ಶೆಯಿಂದ ತೀರ್ಮಾನವಾಗುವದು ಅಸಾಧ್ಯ. ಆದ್ದರಿಂದ ಇನ್ನು ಒಂದೆರಡು ಪಾರ್ಟಿಗಳು ಆಗತ್ಯ. ಈಗ ಎಷ್ಟೋ ಪಂಗಡಗಳು ಇವೆ. ಅವುಗಳಿಂದ ದೇಶಕ್ಕೆ ಕೆಟ್ಟದ್ದೇ ಹೊರತು ಒಳ್ಳೆಲ್ಲ. ನಿಜವಾದ ತತ್ವಗಳನ್ನು ಆಧಾರವಾಗಿಟ್ಟುಕೊಂಡ ಕಾಯಿದಶೀರ ಪಾರ್ಟಿಗಳು ಬೇಕಾಗಿವೆ. ಅಂಥವುಗಳಲ್ಲಿ ಜನರಿಗೆ ವಿಶ್ವಾಸ ಹುಟ್ಟುತ್ತದೆ. ಹೀಗೆ ಬೇರೆಬೇರೆ ಪಾರ್ಟಿಗಳಿರುವುದರಿಂದ ಒಳ್ಳೇದು ಮತ್ತು ಕೆಟ್ಟದ್ದು ವಿಮರ್ಶಿಸುವರೆ ಸಹಾಯವಾಗುತ್ತದೆ. ಪಾರ್ಟಿಗಳು ಉಪನ್ಯಾಸ ಮೂಲಕ ತಮ್ಮ ಕಡೆಯವರಿಗೆ ಬೋಧಪರವಾದ ಉಪನ್ಯಾಸಗಳನ್ನು ಕೊಡುತ್ತಾರೆ; ಚುನಾವಣೆಯ ಕಾಲದಲ್ಲಿ ಮೂಲೆಮೂಲೆಯಲ್ಲಿರುವ ಓಟರರನ್ನು ಕಂಡುತಂದು ಓಟು ಕೊಡಿಸುವರು. ಅನೇಕ ಕಡೆಗಳಲ್ಲಿ ಪ್ರಾಯಸ್ಥರ ಶಾಲೆಯನ್ನು ತೆರೆದು ವಿದ್ಯೆ ಕಲಿಸುವರು. ಮತದಾರರು ಓಟುಗಳನ್ನು ದುರುಪಯೋಗ ಮಾಡದಂತೆ ಜಾಗರೂಕರಾಗಿ ಸರಿದಾರಿಗೆ ತರುವರು. ತಪ್ಪುಗಳನ್ನು ಕಂಡುಹಿಡಿದು ಬಯಲಿಗೆ ತರುವ ಇನ್ನೊಂದು ಪಾರ್ಟಿಯು ಇಲ್ಲದಿರುವಲ್ಲಿ ಪಾರ್ಟಿಯ ಮೆಂಬರರು ತಮ್ಮ ತಮ್ಮೊಳಗೆ ಜಗಳವಾಡುವದಲ್ಲದೆ ಪಾರ್ಟಿಯೊಳಗೆ ದ್ವಿಪಕ್ಷಗಳಾಗಿ ಪಾರ್ಟಿಯ ಐಕ್ಯತೆಯನ್ನೇ ಹಾಳುಮಾಡುತ್ತಾರೆ.

## ನೋಟೀಸು

ಕಾಸ್ರಗೋಡು ಡಿ. ಮು. ಕೋರ್ಟಿನಲ್ಲಿ.

R. E. P. No. 274/1949.

ಮೊಯ್ದು ಬ್ಯಾರಿ ಕೂಡಾ — ಅರ್ಜಿದಾರ್ರು

ಮತ್ತು

ವೆಂಕಟರಾವ್ — ರೆಸ್ಪಾಂಡೆಂಟ.

ಇವರೊಳಗೆ.

೧ನೇ ಅರ್ಜಿದಾರರ ಕಡೆ ನೋಟೀಸು,

ಅರ್ಜಿದಾರರಿಗೆ ರೆಸ್ಪಾಂಡೆಂಟನಿಂದ ಬರಬೇಕಾದ ಕೋರ್ಟು ಖರ್ಚು ರೂಪಾಯಿ 29-14-0 ನ್ನು ಬರಮಾಡಿಕೊಳ್ಳುವರೆ ದಾಖಲ್ಲ ಮಾಡಿದ ಮೇಲ್ಕಂಡ ಅಮಲುಜಾರಿಯು ತಾರೀಕು 17-2-'50ಕ್ಕೆ ತನಿಖೆ ಯಿಟ್ಟಿರುವ ಸಂಗ್ತಿ ಈ ಮೂಲಕ ತಿಳಿಸೋಣಾಗಿಯದೆ.

**B Padmanab,**
Advocate for Petitioners.
Kasaragod, 1-2-1950.


BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD.



Highly perfumed and medicated, worth using daily by one and all; keeps hair black and relieves head-ache etc.

TRADE MARK

Manufactured by:-
**Swadeshi Oushadhi Bhandara** (Regd.)
KUNJAL P. O. Brahmavar, S. K.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'
ಕಾಸರಗೋಡು
ಇವರ ತಯಾರಿಕೆಗಳನ್ನು ವಿಚಾರಿಸಿರಿ.

ಮಾನವ ಜನಾಂಗವೆಲ್ಲವೂ ಇಷ್ಟೇಕೆ ಹೋರಾಟ ನಡೆಸಿದೆ, ದೇಶಗಳು ಪರಸ್ಪರರ ಮೇಲೆ ಆಕ್ರಮಣವನ್ನೇಕೆ ಮಾಡಬಯಸುತ್ತಿವೆ ಎಂಬ ಹಲವಾರು ಪ್ರಶ್ನೆಗಳಿಗೆ "ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ" ಎಂದು ಸಹಜವಾಗಿ ಉತ್ತರ ಹೇಳಬಹುದು. ಸುಖದಿಂದ ಹೊಟ್ಟೆ ಹೊರೆಯಬೇಕೆಂದು ಮಾನವನು ತನ್ನದಾದ ಒಂದು ಪ್ರಪಂಚವನ್ನು ನಿರ್ಮಿಸಿಕೊಂಡು, ಅದರೊಳಗೆ ಸಿಲುಕಿ ಅನೇಕಾನೇಕ ಕಷ್ಟನಷ್ಟಗಳನ್ನು ಸಹಿಸಿ, ಕಡೆಗೆ ನಿಜಸುಖ ಸಿಗದೆ ನಿರಾಶನಾಗಿ "ಪ್ರಪಂಚ ತ್ಯಾಗದಿಂದ ಮೋಕ್ಷ" ವೆಂಬ ಮಾತಿನ ಕಡೆಗೆ ಹೊರಳಿ ಬರುತ್ತಾನೆ. ಈ ಹೋರಾಟದಲ್ಲಿಯೂ ಕೂಡ ಹೊಟ್ಟೆಯು ಅವನನ್ನು ಸುಮ್ಮನೆ ಬಿಡುವದೇ? ಗಡ್ಡೆ ಗೆಣಸನ್ನಾದರೂ ತಿನ್ನಲಿಕ್ಕೆ ಹಚ್ಚುತ್ತದೆ. ಮರಣ ಹೊಂದಿದಾಗಲೇ ಹೊಟ್ಟೆಯ ಕಾಟ ತಪ್ಪುವದೇ ಹೊರತು ಜೀವಿಸಿರುವಾಗ ಎಂದಿಗೂ ಬಿಡದು. ಅನ್ನದ ತರುವಾಯ ಎರಡನೆಯ ಅನಿವಾರ್ಯ ಪ್ರಶ್ನೆ ಬಟ್ಟೆಯದು. ಲಜ್ಜೆಗೆ ಹೆದರಿ ಒಂದು ಲಂಗೋಟಿಯನ್ನಾದರೂ ಹಾಕಲೇ ಬೇಕು ಮನುಷ್ಯನಾದವನು. ಹೀಗಿರುವಾಗ ಅವುಗಳ ಪೂರೈಕೆಗಾಗಿ ಮಾನವನು ಪರರ ಮೇಲೆ ಆಕ್ರಮಣ ಮಾಡಬಯಸುವದು ಸಹಜ.

ಸದ್ಯಕ್ಕೆ ನಮ್ಮ ದೇಶವಾದರೂ ಎದುರಿಸಬೇಕಾಗಿರುವ ಕಠಿಣ ಸಮಸ್ಯೆಗಳೆಂದರೆ ಆಹಾರ-ವಸ್ತ್ರಗಳದೇ ಆಗಿವೆ. ಸಸ್ಯಶ್ಯಾಮಲವಾದ ಭೂಭಾಗವೀಗ ತನ್ನ ಮಕ್ಕಳಿಗೆ ಅರೆಹೊಟ್ಟೆಯುಂಡಿರಲು ಬೋಧಿಸಬೇಕಾಗಿದೆ. ಅಧಿಕ ಆಹಾರಧಾನ್ಯ ಬೆಳೆಯುವ ಆಂದೋಲನವನ್ನು ಹೂಡಬೇಕಾಗಿದೆ. ಇಂಥ ಪ್ರಶ್ನೆಗಳು ನಮ್ಮ ದೇಶಕ್ಕೆ ಮಾತ್ರವಲ್ಲ; ಇನ್ನೂ ಹಲಕೆಲವು ದೇಶಗಳಿಗೂ ಈ ಕಷ್ಟ ಬಂದಿದೆಯೆಂಬುವು ಎಲ್ಲರಿಗೂ ಗೊತ್ತಿದ್ದ ಮಾತಾಗಿದೆ. ಈ ಪ್ರಶ್ನೆಗಳು ಕೆಲವೇ ದೇಶಗಳಿಗೇಕೆ ಆವರಿಸಿವೆಯೆಂದರೆ ಮಾನವನ ಸಂಗ್ರಹ ಪ್ರವೃತ್ತಿಯ ಅತಿರೇಕದಿಂದ ಮತ್ತು ಕೆಲವರ ಸ್ವಾತಂತ್ರ್ಯಹರಣದಿಂದ ಎಂದು ಹೇಳಿದರೆ ತಪ್ಪಲ್ಲ. ರಶಿಯಾ ಅಮೇರಿಕೆಗಳಂಥ ಪ್ರಬಲ ರಾಷ್ಟ್ರಗಳು ತಮ್ಮ ಧಾನ್ಯಗಳನ್ನು ಪರದೇಶಗಳಿಗೆ ಕಳಿಸದೆ ಸಂಗ್ರಹ ಮಾಡುತ್ತಿವೆ. ಕೊರತೆಯುಳ್ಳ ದೇಶಗಳು ಹೋಗಿ ಕೈಯೊಡ್ಡಿದರೆ ಆ ದೇಶಗಳ ಸ್ವಾತಂತ್ರ್ಯವನ್ನು ಹರಣ ಮಾಡುವಂತಹ ಕ

# ಹೊಟ್ಟೆ - ಬಟ್ಟೆ

ಲೇಖಕರು: - ಶ್ರೀ. ನೊರಬ ರಂಗರಾಯರು.

ರಾರುಗಳನ್ನು ಹಾಕಿ ಕೊಡಲೊಪ್ಪುವವು. ಆದುದರಿಂದ ಈ ಯಾಚಕ ವೃತ್ತಿಯನ್ನು ತಪ್ಪಿಸುವುದಕ್ಕಾಗಿ ಭಾರತವನ್ನು ಅನ್ನ ಸ್ವಾವಲಂಬಿಯಾಗಿ ಮಾಡುವುದಕ್ಕೆ ನಾಯಕರು ಪಣ ಗುತ್ತಿದ್ದಾರೆ. ಬ್ರಿಟಿಷರ ವಶದಲ್ಲಿ ಭಾರತವಿದ್ದಾಗ ದೇಶದ ಒಕ್ಕಲುತನಕ್ಕೆ ನಿಜವಾಗಿ ಪೋಷಣೆ ಕೊಡದೆ ಬೆಳೆದು ಬಂದ ಧಾನ್ಯಗಳನ್ನು ತಮ್ಮ ದೇಶಕ್ಕೆ ಒಯ್ಯುತ್ತಿದ್ದರು. ಇದರ ಪರಿಣಾಮವಾಗಿ ಭಾರತದ ಆಹಾರದ ಪರಿಸ್ಥಿತಿಯು ದಿನದಿನಕ್ಕೆ ಕೆಡುತ್ತ ಬಂದು ಈಗ ನಾವು ಸ್ವತಂತ್ರವಾದರೂ ತಿನ್ನಲು ಅಶನವಿಲ್ಲದೆ ಬಳಲುವ ಪ್ರಸಂಗ ಬಂದಿದೆ. ಕೃಷಿಪ್ರಧಾನವಾದ ನಮ್ಮ ದೇಶವು ಜಗತ್ತಿನಲ್ಲಿಯ ಆಹಾರದ ಕೊರತೆಯ ಕೆಲವಂಶವನ್ನಾದರೂ ತುಂಬಿಕೊಡುವ ಸಾಮರ್ಥ್ಯವುಳ್ಳಂತಹುದು. ಆದರೆ ಈಗ ತಾನೇ ಹರವರಿದುದು ದೇಹಿ ಎಂದು ಕೈಯೊಡ್ಡುವ ಸ್ಥಿತಿ ಅದಕ್ಕೆ ಪ್ರಾಪ್ತವಾಗಿದೆ. ಇದರ ಕಾರಣವೆಂದರೆ, ಸತತ ಇನ್ನೂರು ವರುಷ ಪರದಾಸ್ಯವು ಹಿಂಡಿ ಹಿಪ್ಪೆ ಮಾಡಿದ್ದೆಂಬುದು ಸ್ಪಷ್ಟವಿದೆ. ದೇಶಗಳು ಸ್ವಾತಂತ್ರ್ಯಹರಣದಿಂದ ಬಡವಾಗುವವು. ಹೀಗೆ ಒಂದು ಕಡೆ ಹಸಿವೆ ಹಿಂಗದಷ್ಟು ಕೊರತೆ, ಇನ್ನೊಂದು ಕಡೆ ಹೊಟ್ಟೆತುಂಬಿ ಹೆಚ್ಚಾಗುವಷ್ಟು. ಜಗತ್ತಿನ ಅಶಾಂತಿಯ ಮೂಲ. ಇದನ್ನರಿತೇ


"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:- ಆಯುರ್ವೇದ ಭೂಷಣ ಯಂ. ಸಿ. ಶಾಸ್ತ್ರೀ,

ಇವರ

ನವಜೀವಾತು

ಎಂಬ

ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ— ಡಾ| ಯ.ಂ. ಸಿ. ಶಾಸ್ತ್ರೀ, ಯಲ್. ಐ.

ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಸ್ಟಾಕಿಸ್ಟರು:— ಡಾ| ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.



ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

**For up-to-date Lodging & Boarding**

**ROYAL MAHAL,**

UDIPI, S. Kanara.



*For Life Assurance*

CONSULT

**THE NEW GUARDIAN OF INDIA**

LIFE ASSURANCE Co. LTD.

(Established: 1934)

Chairman: ri. M. C. T. M. Chi dambaram Chettyar.

A Policy in this progressive Life Office is a good investment; its Agency is a valuable business connection.

MANGALORE BRANCH: K. S. R. Road, Hampankatta, Mangalore.

HEAD OFFICE: United India Life Building, MADRAS


ಪಂಡಿತ ಜವಾಹರಲಾಲರು ಜಾಗತಿಕ ಶಾಂತಿಯನ್ನು ಸಾಧಿಸುವದರ ಸಲುವಾಗಿ ಪರದೇಶ ಪ್ರವಾಸವನ್ನು ಕೈಕೊಂಡು, ಅವರು ಶಾಂತಿಯ ಮೂಲವಾದ ಸತ್ಯ ಅಹಿಂಸೆಗಳ ತತ್ವವನ್ನು ಅಮೇರಿಕೆಯಲ್ಲಿ ಪ್ರಚುರಗಡಿಸಿದ್ದು. ಶಾಂತಿ ಭಂಗದ ಮೂಲವಾದ ಅಣುಶಕ್ತಿ ನಿಯಂತ್ರಣ ಮಾಡಲೇಬೇಕೆಂದು ಹೇಳುವ ಮಾತಿನ ಸತ್ಯತೆಯಾದರೂ ಇದೇ ಅಲ್ಲವೇ?

ಬಟ್ಟೆಯು ಸರ್ವಸಾಮಾನ್ಯವಾಗಿ ಮಾನವನಿಗೆ ಬೇಕೇಬೇಕಾಗುವದು. ಆದುದರಿಂದ ಬಟ್ಟೆಯ ತಯಾರಿಕೆಯನ್ನು ಪ್ರತಿಯೊಬ್ಬರೂ ಮಾಡಲೇಬೇಕಾಗಿ ಬಂದಿದೆ. ಒಳ್ಳೆಯ ಹತ್ತಿಯನ್ನು ಸಾಕಷ್ಟು ಬೆಳೆಯುವ ಸ್ವತಂತ್ರ ದೇಶವು ಬಟ್ಟೆಗಾಗಿ ಅನ್ಯರ ಮೋರೆ ನೋಡುವದು ಲಾಂಛನಾಸ್ಪದವೇ ಸರಿ. ಆದುದರಿಂದಲೇ ಮಹಾತ್ಮರು ಎಂದಿನಿಂದಲೂ ಹೇಳುತ್ತ ಬಂದ ವಸ್ತ್ರ ಸ್ವಾವಲಂಬನದ ಬಗ್ಗೆ ಈಗ ಪ್ರಯೋಗ ಪ್ರಯತ್ನಗಳನ್ನು ನಡೆಸಿದೆ. ವಸ್ತ್ರ ಸ್ವಾವಲಂಬನ ಕೇಂದ್ರಗಳು ಆ ಪ್ರಯತ್ನದ ಫಲ. ಪ್ರತಿಯೊಬ್ಬ ಭಾರತೀಯನೂ ತಾನು ಬೆಳೆದ ಹತ್ತಿಯಿಂದ ನೂಲನ್ನು ತಯಾರಿಸಿ ಅರಿವೆಯನ್ನು ಮಾಡಿಕೊಂಡು ಧರಿಸಬೇಕೆಂದು ವಸ್ತ್ರ ಸ್ವಾವಲಂಬನ ಕೇಂದ್ರಗಳು ಹೇಳುತ್ತಿವೆ. ಅಲ್ಲದೆ ಅವು ಈಗ ಕಾರ್ಯ ಪ್ರವೃತ್ತವಾಗಿವೆ. ಮತ್ತು ಅವುಗಳ ಕಾರ್ಯವು ಒಳ್ಳೇ ಯಶಸ್ವಿಯಾಗಿ ಸಾಗಿವೆಯೆಂದು ಅನುಭವದಿಂದ ಕಂಡುಬಂದಿದೆ. ಈ ಸ್ವಾವಲಂಬನ ತತ್ವದ ತಳಹದಿಯ ಮೇಲೆ ಯೋಜಿಸಲ್ಪಟ್ಟ ವರ್ಧಾ ರಾಷ್ಟ್ರೀಯ ಶಿಕ್ಷಣ ಕ್ರಮವನ್ನು ಎಲ್ಲ ಪ್ರಾಥಮಿಕ ಶಾಲೆಗಳಿಗೂ ಕಡ್ಡಾಯವಾಗಿ ಅನ್ವಯಿಸಿದ್ದು ನಮ್ಮೆಲ್ಲರಿಗೂ ಆನಂದದ ಸಂಗತಿ. ಈ ಯೋಜನೆಯಿಂದ ಪ್ರತಿಯೊಬ್ಬ ಭಾರತೀಯನೂ ತನ್ನ ಅರಿವೆಯನ್ನು ಸ್ವತಃ ತಯಾರಿಸಿಕೊಳ್ಳುವಷ್ಟು ಶಕ್ತಿವಂತನಾಗುವನೆಂಬುದೀಗ ಪೂರಾ ಮನದಟ್ಟಾಗಿದೆ.

ಎಲ್ಲ ಕೊರತೆಗಳಿಗಿಂತ ಅನ್ನವಸ್ತ್ರಗಳ ಕೊರತೆಯೇ ದೇಶಕ್ಕೆ ಹೆಚ್ಚು ಭಯಂಕರವಾದದ್ದು. ಇವುಗಳಿಗಾಗಿ ಅನ್ಯ ಜನರಿಗೆ ಬಾಯಿ ತೆರೆಯುವ ಸ್ಥಿತಿಯೆಂದರೆ, ಒಂದಿಲ್ಲೊಂದು ಬಗೆಯ ದಾಸ್ಯಕ್ಕೆ ಔತಣಕೊಟ್ಟಂತೆ. ಆದ್ದರಿಂದಲೇ ಪಂಡಿತ ಜವಾಹರಲಾಲರು ಹೊಟ್ಟೆಗೆ ಅನ್ನವಿಲ್ಲದೆ ಹೊದ್ದುಕೊಳ್ಳಲು ಬಟ್ಟೆಯಿಲ್ಲದೆ ನಾವೆಂದಿಗೂ ಸುಸ್ಥಿತಿಗೆ ಬರಲಾರೆವು, ಮತ್ತು ಸ್ವಾತಂತ್ರ್ಯರಕ್ಷಣೆ ಮಾಡಲಾರೆವು ಎಂದು ಮೇಲಿಂದ ಮೇಲೆ ಹೇಳುವದು. ನಾವು ಕಷ್ಟಪಟ್ಟು ಗಳಿಸಿಕೊಂಡ ಸ್ವಾತಂತ್ರ್ಯದ ಸುಖವನ್ನು ಚಿರಕಾಲ ಅನುಭವಿಸಬೇಕಾದರೆ, ಅನ್ನವಸ್ತ್ರಗಳ ಸ್ವಾವಲಂಬನೆಯ ಯೋಜನೆ ಯಶಸ್ವಿಯಾಗುವಂತೆ ಪ್ರಜೆಗಳೆಲ್ಲರೂ ನಮ್ಮ ರಾಷ್ಟ್ರನಾಯಕರೊಡನೆ ಮನಃಪೂರ್ವಕವಾಗಿ ಸಹಕರಿಸಲಿಕ್ಕೆ ಬೇಕು.

(ಜ. ಕ.)

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

R. E. P. 371/49.

S. C. 138/47.

ಶ್ರೀ ಭವಾನಿಶಂಕರ ದೇವರ ಭಂಡಾರ—

ಅರ್ಜಿದಾರ.

ವಾಸಿ ಬ್ಯಾ ಯಾನೆ ಲಕ್ಷ್ಮೀದೇವಿ ಬ್ಯಾಹಾ —ಎದ್ರಿರು.

1. ಭವಾನಿಬ್ಯಾ ಯಾನೆ ಲಕ್ಷ್ಮೀದೇವಿ ಬ್ಯಾ. ಕೋಸಕೋಟೆ ನರಸಿಂಗರಾಯರ ಹೆಂಡ್ತಿ, ಜೂರು ಗ್ರಾಮ,

2. ಗಿರಿಜಾ ಬ್ಯಾ-ಮಡಿಮಹ್ ಪದ್ಮನಾಭಯ್ಯನ ಹೆಂಡ್ತಿ.

3. ಶಾಂತಾ ಬ್ಯಾ – ರಾಮಕೃಷ್ಣರಾಯರ ಹೆಂಡ್ತಿ, ಉಡ್ಪಿ ಕಸ್ಬಾ,

ಅರ್ಜಿದಾರನ ಕಡೆಯಿಂದ ಈ ಮೂಲಕ ತಿಳಿಯಪಡಿಸುವದೇನೆಂದ್ರೆ:—

ಸದ್ರಿ ಅಮ್ಲುಜಾರಿಯಲ್ಲಿ ಎದ್ರಿರ ಬಾಬ್ತು ಮೂಲಗೇಣಿ ಆಸ್ತಿಯನ್ನು ಲೈಲಾಂ ಮಾಡುವಗೋಸ್ಕರ ಜಪ್ತಿ ಮಾಡ್ಸಿಯದೆ. ಅದು ತಾ. 21-2-50ಕ್ಕೆ ಆಖೈರಿ ತನ್ಖಿಗೆ ಯಿಟ್ಟದೆ. ಕುರಿತು ನಿಮ್ಮದೇನಾದ್ರು ಆಕ್ಷೇಪವಿದ್ರೆ ಸದ್ರಿ ದಿವ್ಸ ಹಗ್ಲು 11 ಗಂಟೆಗೆ ಸ್ವತಹಾ ವ ವಕೀಲರ ದ್ವಾರಾ ಹಾಜ್ರಾಗಿ ಜಾಹೀರುಮಾಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜರಿನಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿದೆ.

ತಾರೀಕು 2—2—50.

**G. Sanjiva Rao,** Vakil.

## ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ.

S. C. No. 349/1949

ಪೋಕರ್ ಬ್ಯಾರಿ —ವಾದಿ.

ಮತ್ತು

ಜ್ವರಪ್ಪಾ —ಪ್ರತಿವಾದಿ.

ಇವರೊಳಗೆ

ಸದ್ರಿ ವ್ಯಾಜ್ಯದ ವಾದಿಯ ಕಡೆ ನೋಟೀಸು:

ಪ್ರತಿವಾದಿಯು ವಾದೀಗೆ ಬರಕೊಟ್ಟ ಡಿಮಾಂಡ ಪ್ರೊಮಿಸರಿ ನೋಟು ಪ್ರಕಾರ ಬರತಕ್ಕ ಅಸಲು, ಬಡ್ಡಿ ಕೂಡಾ ರೂಪಾಯಿ 146-6-0ನ್ನು ಬರಮಾಡಿಕೊಳ್ಳುವರೆ ದಾಖಲುಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಕು 16-2-1950ಕ್ಕೆ ತನ್ಖಿಗೆ ಯಿಟ್ಟಿರುವದ್ರಿಂದ ಆ ದಿವ್ಸ ಹಾಜ್ರಾಗದಿದ್ರೆ ಎಕ್ಸಪಾರ್ಟಿಯಾಗಿ ತೀರ್ಮಾನಿಸಲಾಗುವದೆಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿಯದೆ.

**K. P. V. B. Ejman,**

ವಾದಿಯ ಕಡೆ ಎಡ್ವಕೇಟ್.

Kasaragod, 1-2-1950

ದಿನ ಬಾಳಬೇಕೆಂಬ ಬಯಕೆ ಎಷ್ಟು ! ಹಸ್ತಸಾಮುದ್ರಿಕನ ಮುಂ ಕೆ ದಾಗ ನೀವು ಮೊದಲು ಹಾಕುವೆ ಎಂದರೆ- 'ನಾನು ಎಷ್ಟು ವರ್ಷ ಬಾ ?', ಇದೀಗ ಹುಟ್ಟಿದ ಮಗುವಿನ ಕುಂ ಹಾಕುವವನೂ ಈ ಪ್ರಶ್ನೆಗೇ ಉತ್ತರ ಡುವನು. ಎಷ್ಟೋ ಜನರಂತೂ ಯುವಾಗಬೇಕೆಂದು ಒಂದಿಲ್ಲೊಂದು ಯಿಂದ ಯೋಚಿಸುತ್ತಿರುವರು.

ರ್ಘಾಯುಷ್ಯದ ರಹಸ್ಯವು ಕೀರ ಸಾಮಾ ಂಗತಿಗಳಲ್ಲಿಯೂ ಹುದುಗಿದೆ. ಆದರೆ ಉಪಾಯಗಳಲ್ಲಿ ಎಂತಹ ವಿರೋಧ, ಧ್ಯ! ಅಂತೇ ಯಾವನಾದರೊಬ್ಬ ್ಯಂಸನು ನಿಶ್ಚಿತ ಸೂತ್ರ ಕಂಡು ಹಿಡಿ ು ಅಸಮರ್ಥನಾಗಿರುವನೆಂದು ಹೇಳ ು. ಏನೇ ಆಗಲಿ, ಇಂತಹ ಅಸಂಖ್ಯ ಾಯಗಳು ನವೀನವೆನಿಸುವವಲ್ಲದೆ ಮಟ್ಟಿಗೆ ಮನರಂಜನೆ ಉಂಟು ಮಾಡು

ಇನ್ನೆ ಮೊನ್ನೆ ವರ್ತಮಾನಪತ್ರದಲ್ಲಿ ದ ಒಂದು ವಿಚಿತ್ರ ಸಂಗತಿ ನೆನಪಿಗೆ ವದು. ಬ್ರಹ್ಮದೇಶದಲ್ಲಿ ಒಬ್ಬನು ೧೧೯ ರ್ ಬಾಳಿ ಸತ್ತನಂತೆ. ಅವನ ಏಳನೇ ತಿಗೆ ಆಗ ೮೫ ವರ್ಷಗಳು. ಮಕ್ಕಳು ಮ್ಮಕ್ಕಳು ಒಟ್ಟು ೩೭! ತೀರ ಸಾತ್ವಿಕ ನವವನದು. ತಪ್ಪಿಯಾದರೂ ಬಾಯಿ ರೆ ಹಚ್ಚಿದವನಲ್ಲ. ಇಷ್ಟರ ಮೇಲಿಂದ ಬ್ರಹ್ಮಚಾರಿಗಳು ತೀವ್ರ ಸಾಯುವರು; ಸಲ ಲಗ್ನವಾದವರು ಹೆಚ್ಚು ವರ್ಷ ಕುವರು ಎಂದು ಅವಸರ ಅವಸರ ಿ ಕಹಾಕಲಾಗದು.

ಊಟದ ನಿಯಂತ್ರಣ, ಸಾಧ್ಯವಿದ್ದಷ್ಟು ಮ ದುಶ್ಚಟಗಳು—ಇವೇ ದೀರ್ಘವಧಿ ನ ಸೂತ್ರಗಳೆಂಬಲ್ಲಿ ತಥ್ಯವಿದೆ. ಈಗ ವರ್ಷದವನಾದ ಬರ್ನರ್ಡ ಶಾ ಎಂಬ ಸ್ಥ ಆಯರಿಶ್ ನಾಟಕಕಾರನದೂ ಇದೇ ಾರ. ಮಾಂಸ ಮುಟ್ಟಕೂಡದು, ಮಾ ಪೇಯ ಅನವಶ್ಯಕ, ವೈದ್ಯರೆಂದರೆ ಗೇನ ಗಳೆಯದಂತೆ ಇರುವದು—ಇವೇ ಅವನ ಪದೇಶಾಮೃತದ ಪ್ರಮುಖ ಅಂಗಗಳು ಾನವನು ೩೦೦ ವರ್ಷ ಬಾಳಲು ಸಾಧ್ಯ ; ಎಂದು ಶಾನ ವಿಶ್ವಾಸ! ಸ್ವತಃ ತನಗಾದ ಭಗವಂತನು ಉದ್ದಂಡ ಆಯುಷ್ಯ ಯಪಾಲಿಸಲಿ ಎಂದು ಉತ್ಕಟ ಅಭಿಲಾಷೆ. ಹಾತ್ಮಾ ಗಾಂಧಿಯವರ ಉಪದೇಶವಾದ ಸಮಾನ್ಯವಾಗಿ ಇದೇ ಮಾದರಿಯದಾ ಡ್ಡಿತು, ಆತಿ ಮಿತಿಯಿಂದ ಅವರ ಊಟ ಧ್ಯದಲ್ಲಿ ಕಿಂಚಿತ್ ಶ್ರದ್ಧೆ ಇಲ್ಲ. ಅವರಿಗೆ ೫ ವರ್ಷ ಬಾಳುವ ಅಪೇಕ್ಷೆ ಇದ್ದಿತು. ಹುತರವಾಗಿ ಅವರ ಉಪವಾಸಾದಿ ವ್ರತ

# ದೀರ್ಘಾಯುಷ್ಯದ ಗುಟ್ಟು

ಶ್ರೀ ಎನ್. ಎಸ್. ಗದಗಕರ, ಬಿ.ಎ.

ಗಳೇ ಹೊಸ ಚೈತನ್ಯ ಹುಟ್ಟಿಸಿರಲು ಸಾಕು. ತಮ್ಮ ಸಾಹಸಿ ಪ್ರಯೋಗಗಳಿಂದ ಅವರು ಸಾವನ್ನು ವಿಡಂಬನೆಗೆ ಈಡು ಮಾಡಿದ್ದರು. ವೈದ್ಯರಿಗೂ ಇದೆಲ್ಲ ರಹಸ್ಯಾತ್ಮಕವೆನಿಸಿದ್ದೀತು! ಆದರೆ ಎಷ್ಟು ಜನರಿಗೆ ಇಂತಹ ಮಹಾನು ಭಾವರ ಜೀವನ ಕ್ರಮ ಒಗ್ಗೀತು ಎಂದು ಹೇಳುವದು ಕಠಿಣವೇ. ಅಮೇರಿಕೆಯ ಸುಪ್ರಸಿದ್ಧ ಪತ್ರಿಕಾ ವ್ಯವಸಾಯಿಗಳಾದ ಲುಯಿ ಫಿಶರರು ಒಮ್ಮೆ ಸೇವಾಗ್ರಾಮಕ್ಕೆ ಹೋಗಿ ಮಹಾತ್ಮಾಜಿಯವರ ಅತಿಥಿಗಳಾಗಿ ಉಳಿದಿದ್ದರು. ಪ್ರತಿದಿನ ಮುಂಜಾವು ಸಂಜೆಗೆ ಫಿಶರರಿಗೆ ಅದೇ ಕಾಯಿಪಲ್ಯೆ, ಮಸಾಲೆಯ ವಸ್ತುಗಳು ಊಟದಲ್ಲಿ! ಅವರಿಗೆ ಬೇಜಾರ ಬಂದಿತು. ಪಲ್ಯೆ ಆರೋಗ್ಯಕ್ಕೆ ಅತ್ಯುತ್ತಮವೆಂದು ಮಹಾತ್ಮಾಜಿಯವರು ಹೇಳುತ್ತಿದ್ದರೂ ಫಿಶರರು ನುಡಿದುದು ಹೀಗೆ "ಮಹಾತ್ಮಾಜಿ, ನಿಮ್ಮದು ಆದರ್ಶ ಜೀವನ. ಪ್ರಸಿದ್ಧ ರಾಜಕಾರಣಿಗಳೂ ಮುಖಂಡರೂ ನೀವು ಅಹುದು. ಆದರೆ ದಯವಿಟ್ಟು ಕ್ಷಮಿಸಿರಿ. ಆಹಾರ ವಿಷಯದಲ್ಲಿ ನಿಮ್ಮ ರೀತಿ ನನಗೆ ಸರಿ ಎನಿಸದು."

ಬಳ್ಳೊಳ್ಳಿ, ಉಳ್ಳಾಗಡ್ಡೆ ದೀರ್ಘಾಯುಷ್ಯಕ್ಕೆ ಸಾಧನೆಗಳೆಂದು ಹಲವರ ಅಭಿಪ್ರಾಯ. ಮೆಕ್ಸಿಕೋದ ಒಬ್ಬ ಸ್ತ್ರೀ ಇವುಗಳಿಂದಲೇ ೧೨೦ ವರ್ಷ ಬಾಳಿದಳಂತೆ! ಆದರೆ ಬಹು ಜನರಿಗೆ ಇವುಗಳ ವಾಸನೆ ಸರಿ ಹೋಗುವದಿಲ್ಲ. ಮುಸೋಲಿನಿಗೆ ಬಳ್ಳೊಳ್ಳಿಗಳಲ್ಲಿ ವಿಶ್ವಾಸ. ಅವನು ದಿನಾಲು ಊಟದಲ್ಲಿ ಹೆಚ್ಚಾಗಿ ಅವನ್ನೆ ಉಪಯೋಗಿಸುತ್ತಿದ್ದನೆಂದು ಕೇಳುವೆವು.

ಅಮೇರಿಕೆಯ ಕುಬೇರನಾದ ರಾಕ್‌ಫೆಲರ ೯೭ ವರ್ಷದವನಾದೊಡನೆ ಸತ್ತನು. ಅವನಿಗೆ ಅಗಲೂ ಒಂದು ಹುಳುಕು ಹಲ್ಲು ಇದ್ದಿಲ್ಲವಂತೆ. ಚಹಾ ಕಾಫಿ ಎಂದರೆ ಅವನಿಗೆ ಬದ್ಧ ದ್ವೇಷ. ಆದರೆ ಎರಡು ಊಟದ ಮಧ್ಯಂತರದಲ್ಲಿ ಯಥೇಚ್ಛ ಕಿತ್ತಳೆ ಹಣ್ಣಿನ ರಸ ಸೇವಿಸುತ್ತಿದ್ದನು. ಅವನದು ಅತಿ ಶಾಂತ ಮನಸ್ಸು. ಹಗಲು ಸ್ವಲ್ಪ ನಿದ್ರೆ. ಎಂದೂ ಸಿಡುಕು ಸ್ವಭಾವ ತಲೆದೋರದಿದ್ದುದು ನಿಜವಾಗಿಯೂ ಆಶ್ಚರ್ಯಕಾರಕ. ಸಿಟ್ಟು ಸಿಡುವುಗಳಿಂದಲೇ ಆಯುಷ್ಯದ ವಿನಾಶ ಎಂದು ಗಾಂಧೀಜಿಯವರು ನುಡಿಯುತ್ತಿದ್ದುದು ಗಮನಾರ್ಹವಾದುದು.

ಜಗತ್ತಿನ ಹೆಸರಾದ ಜನರ ಜೀವನವನ್ನು ಸೂಕ್ಷ್ಮವಾಗಿ ನಿರುಕಿಸಿದರೆ, ಒಮ್ಮೊಮ್ಮೆ ಚಟಗಳು ಇರಬೇಕೋ ಇರಬಾರದೋ ಎನ್ನುವಲ್ಲಿ ಸಂಶಯ ತಟ್ಟುವಂತಿದೆ. ಅವರ ಅಭಿಪ್ರಾಯಗಳಲ್ಲಿ ತಾಳಮೇಳಗಳಿಲ್ಲ. ಒಮ್ಮೆ ವಿನ್ಸಟನ್ ಚರ್ಚಿಲ್‌ನು ಫೀಲ್ಡ ಮಾರ್ಶಲ್ ಮಾಂಟ್ಗೊಮೇರಿಯೊಡನೆ ಮಾತಾಡುವಾಗ "ನಿನ್ನ ಆರೋಗ್ಯದ ಗುಟ್ಟೇನು?" ಎಂದು ಕೇಳಿದನು. ಫೀಲ್ಡ ಮಾರ್ಶಲ್ ಉತ್ತರಿಸಿದುದು ಹೀಗೆ—"ನಾನು ನಸುಕಿನಲ್ಲೆದ್ದು ನಿಯಮಿತ ವ್ಯಾಯಾಮ ಮಾಡುತ್ತೇನೆ. ಸೇದುವದು ಹಾಗೂ ಕುಡಿಯುವದು ಕೇಳಬಾರದು. ಅಂತೇ ನನಗೆ ದೈಹಿಕ ತೊಂದರೆಗಳು ರಡಿಮೆ." ಚರ್ಚಿಲ್‌ನು ಮಾರುತ್ತರವಿತ್ತುದು ಹೀಗೆ—"ನಾನು ಏಳುವದು ಅತಿ ತಡ. ವ್ಯಾಯಾಮದ ಸೋಂಕಿಲ್ಲ. ಕುಡಿಯುವದು ಸೇದುವದು ಬೇಕಾದಷ್ಟಿದೆ. ಆದರೂ ನಿನಗಿಂತಲೂ ನಾನು ನಿರೋಗಿಯಾಗಿರುವೆ." ನಿಜವಾಗಿ ನೋಡಿದರೆ ಚರ್ಚಿಲ್‌ನು ಹೀಗೆ ಹೇಳುವಾಗ ಸುಳ್ಳಿಗೆ ಮೊರೆ ಹೋಗಿಲ್ಲ. ಸೇದುವದು ಕುಡಿಯುವದು ಅವನಿಗೆ ಇದ್ದೇ ಇದ್ದವು. ಎಲ್ಲಕ್ಕಿಂತ ಹೆಚ್ಚಿನದೆಂದರೆ ಅವನಿಗೆ ಅಖಂಡವಾಗಿ ದುಡಿಯುವ ಚಟವು ಒಂದು!

ಜರ್ಮನ್‌ರ ದೃಷ್ಟಿಯಿಂದ ದೀರ್ಘಾಯುಷ್ಯದ ರಹಸ್ಯವು ವಿವಾಹ ಮತ್ತು ಉದ್ಯಮ[...] ಗಳಲ್ಲಿ ಹುದುಗಿದೆ. ಆದರೂ ಬಹುದಿನ ಬ[ಾಳ]ಿದರೆ ಸೋಮಾರಿತನ ಬರುವದೆಂದು ಉ[...] ದಾಹರಿಸಬಹುದು. ಗ್ರೇಟಬ್ರಿಟನ್ನಿನ ಹಳ್ಳಿಗಳಲ್ಲಿ ಕೆಲವು ಜನರು ಅತ್ಯಾಶ್ಚರ್ಯವೆನಿಸ[ುವ]ಷ್ಟು ಕಾಲ ಬದುಕುವವರಿದ್ದಾರೆ. ಆ ಜನ[ರು] ಅತಿ ಸೋಮಾರಿಗಳು. ಅಲ್ಲಿ ಯಾ[ವ] ಗಾಡಿ ನಿಲ್ಲುವದಿಲ್ಲ. ವಾರಕ್ಕೊಮ್ಮೆ ಬಸು ಒಂದು ಮಾತ್ರ ಹೋಗವದು.

ನೂರು ಕಾಲ ಬಾಳಿದ ಬಿಡಿಗಿಡ್ಡದ ತುಕ[...] ಮನುಷ್ಯನೊಬ್ಬನು ತಣ್ಣೀರಿನ ಉಪಾಯ ಕಂಡುಹಿಡಿದಿದ್ದನು. ವಾಯುಸೇವನೆಗಾ[ಗಿ] ಹೊರಡುವ ಮೊದಲು ಒರತಿಯ ನೀರು ಕ[ು]ಡಿಯುವದು ಅವನ ರೂಢಿ. ಅದರ ಮ[ೂ]ಲಕ ಅವನಿಗೆ ಎಂದೂ ಕಾಯಿಲೆ ಬರಲಿಲ್ಲ. ಎರಡು ಸಲ ತಲೆನೋವು ಮಾತ್ರ ಎದ್ದಿತ್ತಂತೆ, ಅದಾದರೂ ಕಡಿಮೆಯಾದುದು ಹೇ[ಗೆ] ಗೊತ್ತೆ? ಮತ್ತೆ ನಿರರ್ಗಳವಾಗಿ ತಣ್ಣೀರ ಕುಡಿದಾಗ!

ಇಲ್ಲಿಯ ವರೆಗೆ ಮುಖ್ಯವಾಗಿ ಎಲ್ಲ ಜನರಿ[ಗೆ] ಎಲ್ಲ ಕಾಲಗಳಲ್ಲಿ, ಎಲ್ಲ ದೇಶಗಳಲ್ಲಿ ದೀರ್ಘಾಯುಷ್ಯಕ್ಕೆ ಉಪಯುಕ್ತವೆನಿಸುವ ಕೆಲಸ[ೂ]ತ್ರಗಳು ಗೊತ್ತಾದುದು ಸರಿ. ಆದರೆ ಎಷ್ಟು ಜನರಿಗೆ ದೀರ್ಘಾಯುಷ್ಯದ ಮಮತೆ ಇ[ರು]ವದೋ! ಒಟ್ಟು ಹಾಗೆ ಮಾಡಬಾರದು, ಹೀ[ಗೆ] ಗೆ ಮಾಡಬಾರದು ಎಂಬ ಕಟ್ಟಳೆ ಅತಿಯ[ಾ]ದಲ್ಲಿ ಜೀವನ ವಿರಸವಾಗಿ ಪರಿಣಮಿಸುವ[ು]ದರಲ್ಲಿ ಸಂಶಯವಿಲ್ಲ.

[ಒಂದು ಆಂಗ್ಲ ಲೇಖನದ ಆಧಾರದಿಂದ

—'ಸಂಜೀವನ


— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪ್ರತ್ಯೆ:—ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತು ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಬಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ　 ನಂಜುಡೇಸ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಹಾಸ ಕೆನುಸ್ಟ್, ಹಾವೇರಿ ಬ್ಯಾಡಗಿ



ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉದುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ.　　 ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:- ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಸ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ.



ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಘಾಯಗಳು, ಬಾತುಕೊಳ್ಳುವುದು, ಕವಿಷಮುಂತಾದವು, ಪಕ್ಷವಾತ, ಮೊಡಿಮೆ ಮೊದಲಾದ ಎಲ್ಲಾ ರೋಗಳಿಗೂ ಸಿದ್ಧೌಷಧ.

REGD

ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.



ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

**The Moolky Bank Ltd.,**

**Moolky, S. K.**

Regd. No. M. 3618

Estd: 1921 ಸ್ಥಾಪನೆ

30ನೇ ವರ್ಷ
16—2—1950

LICENCE No. 31
Licensed to Post
without Prepayment

FOUNDER:
Sri. A. B. Shetty
Minister for Agriculture
& Veterinary

# ನವಯುಗ

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30
ವಾರ 25

NAVAYUGA WEEKLY Post Box No. 22 UDIPI, S. K.

Vol 30
No. 25

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟಿನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

ತ್ರಿಸತ್ತು ಏಳದಂತೆ ತಡೆಗಟ್ಟಿದವರ ...ಹದು ಸಹಕಾರವಾದರೂ ಗೋಚರಿಸಿತ್ತೆ ...ರಡು; ಆದರೆ ಬಂದಾಪತ್ತನ್ನು ಶಮನ... ನೆರವಾದವರ ಕಿಂಚಿತ್ ಉಪಕಾರ ... ಕೂಡಾ ಸ್ಮರಿಸಲ್ಪಡುವುದು. ಇದೀಗ ...ಲೋಕವಾಡಿಕೆ.

ತಪ್ಪಿಹೋದ ಕಂಬಿಯನ್ನು ರೈಲುಗಾಡಿ ಬರುವ ಮೊದಲೇ ಜೋಡಿಸಿಟ್ಟು ಅ...ಪಹುತವನ್ನು ತಪ್ಪಿಸಿದವರ ಸತ್ಕಾರ್ಯ ... ಅಗೋಚರವಾಗಿಯೇ ಉಳಿಯುವು...; ರೈಲು ಅಪಘಾತಕ್ಕೀಡಾದವರಿಗೆ ಸ...ಹಾಯ ಸಲ್ಲಿಸಿದವರ ಉಪಕಾರವಾದರೋ ...ಹುವ ಎಲ್ಲರಿಂದ ಸ್ಮರಿಸಲ್ಪಡುವದು.

ಆರೋಗ್ಯ ಕೆಡದಂತೆ ಮಾಡಿದ ನೀರು, ...ವೆ, ಆಹಾರಗಳಾಗಲಿ ಪೋಷಾಕರಾಗ..., ಬಂದ ರೋಗವನ್ನು ಗುಣಪಡಿಸುವ ...ಷಧಗಳಂತೆ ಮತ್ತು ಡಾಕ್ಟರರಂತೆ ಉ...ಕಾರಿಗಳಾಗಿ ಕಾಣುವಂತಿಲ್ಲ

ಒಕ್ಕಲಿನ ಸ್ಥಿತಿ ಕೆಡದಂತೆ ನೋಡಿದ ...ನಿಯ ಸದ್ವರ್ತನೆಯು ಸ್ವಾಭಾವಿಕವ...ಸವಾಗ ವಿಪರೀತ ಗೇಣಿ ಹೊರಿಸಿದ್ದ... ಕೆಲವಂಶ ಮಾಫಿಮಾಡಿದ ಅಥವಾ ...ವಿೀ ಸುಲಿಗೆಯ ನೋಟದಿಂದ ಸಾಲ ...ಟ್ಟ ಧನಿಯ ಕೃತ್ಯ ಮಾತ್ರ ಉಪಕಾರ...ನ್ನಿಸುತ್ತದೆ.

ಸ್ವಭಾವತಃ ಶಾಂತ ವ್ಯವಹಾರದವನ...ನಯ ವರ್ತನೆಗಳಿಗೆ ಯಾವ ಬೆಲೆ ...ಣ ಬಾರದಿರುವಾಗ, ಸದಾ ಪುಂಡನಿ... ಸಂದರ್ಭವಶಾತ್ ಶಾಂತ ಧೋರಣೆ ...ಹಿಡಿದವನ ವರ್ತನೆಗೆ ವಿಶೇಷ ಮನ್ನಣೆ ...ರೆಯುತ್ತದೆ.

ಜಗಳವೇ ಇಲ್ಲದಂತೆ ವಾತಾವರಣವ...ನ್ನು ತಿಳಿಗೊಳಿಸಿದವನ ಕಾರ್ಯಕ್ಕೆ ಮಹ... ದೊರೆಯದು; ಜಗಳ ಬೆಳೆದು ಮುಖ...ವರೆಗೆ ಬಂದ ಕೈಯನ್ನೊಮ್ಮೆ ಹಿಂತ...ದವನ ಕೆಲಸ ಮಾತ್ರ ದೊಡ್ಡದೆನ್ನಿಸು...ದು.

ಜನಜೀವನದ ಪ್ರತಿಯೊಂದು ವ್ಯವ...ಹಾರದಲ್ಲಿಯುವಂತೆ ರಾಜಕೀಯ ಆಗು...ಹೋಗುಗಳಲ್ಲೂ ಈ ತಾರತಮ್ಯವಿದ್ದೇ ದೆ.

ಗಾಂಧಿಜೀಗೆ ದಗೆದ ಅವಮಾನವನ್ನೇ ...ಹರು, ವಲ್ಲಭಾಯಿಗಳಂಥವರ ಮಟ್ಟಿ...ಗೆ ಯೋಚಿಸಿದ್ದ ವಿರಬಹುದು; ಆದರೆ ...ಗಿ ಹೋದ ಆ ಪ್ರಮಾದದ ಕಡೆಗೆ ಲ... ಬಿದ್ದಂತೆ ತಪ್ಪಿ ಹೋದ ಈ ಪ್ರಮಾ...ದ ಕಡೆಗೆ ಜನತೆಯ ಗಮನ ಬೀಳ

## ಸಹಜವಾಗಿ ಹೀಗಿದೆ:-

ಮುಸ್ಲಿಮರು ಸಮಾಜವಾರಾಗಿ ಪಾಕಿಸ್ತಾನ್ ಆಂದೋಲನವೆಬ್ಬಿಸಿದ್ದ ಮಾದರಿಯಲ್ಲಿ, ಅನ್ಯ ರೂಪದಿಂದಾದರೂ ಕ್ರೈಸ್ತರೇ ಮೊದಲಾದ ಇತರ ಸಮಾಜಗಳವರೂ ಚಳವಳಿಸಬಹುದಿದ್ದಿತು. ಆದರೆ ನಡೆದು ಹೋದ ಮುಸ್ಲಿಂ ಪ್ರತ್ಯೇಕಾಂದೋಲನಕ್ಕೆ ದೊರೆತ ಮಾನ್ಯತೆಯ ಪರಿಮಾಣಾನುಸಾರವಾಗಿ ನಡೆಯದೇನೇ ಇರವ ಇತರ ಸಮಾಜಗಳವರ ಆಂತರಿಕಾಂದೋಲನಗಳು ಗಣಿಸಲ್ಪಟ್ಟಿಲ್ಲ.

'ಕರ್ನಾಟಕ ಪ್ರಾಂತ್ಯರಚನೆಗಾಗಿ ರಾಜೀನಾಮೆ'ಯೆಂಬ ಪ್ರತ್ಯೇಕ ಚರಣೆಗೆ ಮುಂದಾದವರ ಸಾಹಸವು ಮಾತ್ರ ಮನಸ್ಸಿಗೆ ನಾಟಿರುವಂತೆ, ಕರ್ನಾಟಕ ಪ್ರಾಂತರಚನೆಗಾಗಿ ದೀರ್ಘಾವಧಿಯಿಂದ ಅವಿಶ್ರಾಂತವಾಗಿ ಶ್ರಮಿಸುತ್ತಾ ಬಂದಿರುವವರ ಸೇವೆ ಮನಮುಟ್ಟಿಲ್ಲ

ಯಾವುದಾದರೊಂದು ಉದ್ದೇಶ ಸಾಧನೆಗಾಗಿ 'ಅನ್ನ ಸತ್ಯಾಗ್ರಹ' ಎಂಬ ಹೆಸರು ಹಾಕಿಕೊಂಡು ಒಂದೆರಡು ಹೊತ್ತಿನ ಆಹಾರತ್ಯಾಗ ಮಾಡಿದರೆ ದೇಶ ತುಂಬಾ ಪ್ರಚಾರವಾಗುತ್ತಿರುವಾಗ ಬಡತನದ ದೆಸೆಯಿಂದ ದಿನಗಟ್ಟಲೆ ಉಪವಾಸ ಬೀಳುತ್ತಿರುವವನನ್ನು ಕೇಳುವವರಿಲ್ಲ.

ಪೇಟೆ, ಪಟ್ಟಣಗಳಲ್ಲಿ ಬಹಿರಂಗ ಭಾಷಣ, ಘೋಷಣೆ, ಪತ್ರಿಕಾ ವಾಗ್ಝರಿಗಳ ಮೂಲಕ 'ದೇಶಸೇವೆ' ಮಾಡುತ್ತಿರುವವರಿಗೆ ದೊರೆಯುವ ಕೀರ್ತಿಯ ಹತ್ತನೇ ಒಂದಂಶದಷ್ಟಾದರೂ ಹಳ್ಳಿ ಮೂಲೆಗಳಲ್ಲಿ ಮೌನವಾಗಿ ವಿಧಾಯಕ ಕಾರ್ಯ ನಡೆಸುತ್ತಿರುವವರಿಗೆ ದೊರೆಯುವುದಿಲ್ಲ.

ಚಪಲೆ, ಚಂಚಲೆಯಾಗಿ ಜನಪ್ರಿಯೆಯಾಗಿರುವವಳಿಗೆ ಸಮಾಜದಲ್ಲಿ ದೊರೆಯುವ ಸ್ಥಾನಮಾನವು ಪತಿವ್ರತೆ ನಿಷ್ಠೆಯಿಂದಿರುವವಳಿಗೆ ದೊರೆಯುತ್ತಿಲ್ಲ.

ಪರಊರಿಗೆ ಹೋಗಿದ್ದು, ಎಂದಾದರೊಮ್ಮೆ ತಾಯಿ ತೀರಾಗಿ ಬರುವವನಿಗೆ ಮನೆಯಲ್ಲಿ ದೊರೆಯುವಂತಹ ಸತ್ಕಾರ, ಸಂಭಾವನೆಗಳು ಮನೆಯಲ್ಲೇ ಇದ್ದು ಮೌನವಾಗಿ ಅಹರ್ನಿಶಿ ದುಡಿದು ನಿಜಕ್ಕೂ ಮನೆಯನ್ನು ಉಳಿಸಿದವನಿಗೆ ಎಂದೂ ದೊರೆಯುವಂತಿಲ್ಲ.

ಕೊನೆಯ ಭಾಗದಲ್ಲಿ ಬ್ರಿಟಿಷರು ಸ್ವಾತಂತ್ರ್ಯವನ್ನು ಬಿಟ್ಟುಕೊಡಲು ಮುಂದಾಗುವ ಬದಲಿಗೆ ಪ್ರತ್ಯಕ್ಷ ಹೋರಾಟ ಮಧ್ಯದಲ್ಲಿ ಇದನ್ನು ಅವರ ಕೈಯಿಂದ ಕಸಕೊಳ್ಳುತ್ತಿದ್ದರೆ, ಇದೇ ಸ್ವಾತಂತ್ರ್ಯಕ್ಕೆ ಇಂದು ದೊರೆತಿರುವ ಬೆಲೆಗಿಂತ ಹತ್ತು ಪಾಲು ಹೆಚ್ಚು ಬೆಲೆ ದೊರೆಯುತಿತ್ತು.

ಸರ್ದಾರ್ ವಲ್ಲಭಾಯಿಗಳು ಚಾತುರ್ಯ, ಕಾರ್ಯಶಕ್ತಿ ಮತ್ತು ಸರ್ವ ವಿಧದ ಪ್ರಭಾವ ಬೀರಿ ಶಾಸನಬದ್ಧವಾಗಿ 500ಕ್ಕೂ ಮಿಕ್ಕಿದ ಸಂಸ್ಥಾನಗಳಿಗೆ ಮುಗುದಾಣ ಸಿಕ್ಕಿಸಿದ ಇಷ್ಟು ದೊಡ್ಡ ಕೆಲಸಕ್ಕೆ ಇಂದು ದೊರೆತಿರುವ ಪ್ರಾಮುಖ್ಯತೆಯ ಹತ್ತು ಪಾಲಷ್ಟು ರಕ್ತಮಯೀ ಕ್ರಾಂತಿಯಿಂದ ಒಂದೇ ಒಂದು ಸಂಸ್ಥಾನವನ್ನು ಬಗ್ಗಿಸುತಿದ್ದರದಕ್ಕೆ ದೊರೆಯುತಿತ್ತು. ಹೈದರಾಬಾದಿನ ಮಾತಂತಿರಲಿ— ಖಾಡಾಖಾಡಿ ಆಚರಣೆಯ ಮೂಲಕ ವಶವಾದ ಚಿಕ್ಕ ಸಂಸ್ಥಾನ ಜುನಗಾಡಿನ ಹೆಸರು ಗದ್ದಲವಿಲ್ಲದೆ ಬಗ್ಗಿದ ದೊಡ್ಡ ಸಂಸ್ಥಾನಗಳಿಗಿಂತ ಹೆಚ್ಚು ಪ್ರಚಾರದಲ್ಲಿರುವುದನ್ನು ನೋಡಬಹುದು.

ಬಾಬು ರಾಜೇಂದ್ರ ಪ್ರಸಾದರ ಗುಣ ನಡತೆಗಳಲ್ಲಿ ಅಂದು ಮತ್ತಿಂದಿಗಾವ ವ್ಯತ್ಯಾಸವೂ ಆಗಿಲ್ಲವಾದರೂ ಅಧ್ಯಕ್ಷಗಾದಿಗೇರಿದಮೇಲೆ ಆ ಕಡೆಗೆ ಬಿದ್ದಷ್ಟು ಪ್ರಕಾಶ ಮೊದಲು ಬಿದ್ದುದಿಲ್ಲ. ಜನರಲ್ ಚೌಧರಿಯವರಂತಹ ಬೇರೆ ಸೇನಾನಿಗಳು ಭಾರತ ಸೇನೆಯಲ್ಲಿರುವರಾದರೂ ಹೈದರಾಬಾದ್ ಸುಯೋಗ ದೊರೆತ ಚೌಧರಿಯವರನ್ನರಿತಂತೆ ಜನತೆಯು ಮಿಕ್ಕವರನ್ನರಿತಿಲ್ಲ.

ಆತ್ಮಸಂಯಮನದ ಮಟ್ಟಿಗೆ ಅಸಾಮಾನ್ಯರಾದ ಋಷಿಮುನಿಗಳು ನಮ್ಮೀ ದೇಶದಲ್ಲಿ ಪೂರ್ವಕಾಲದಲ್ಲಿ ಇದ್ದರು; ಈಗಲೂ ಇದ್ದಿರಬಹುದು. ಆದರೆ ಆತ್ಮಶಕ್ತೀ ಪ್ರಭಾವವನ್ನು ಸಾರ್ವಜನಿಕ ರಂಗಕ್ಕೆ ಮುಂದೊಡ್ಡಿದ ಗಾಂಧಿಜೀ ಗಳಿಸಿದಂತಹ ಕೀರ್ತಿಯನ್ನು ಅವರಾರೂ ಗಳಿಸಿಲ್ಲ.

ಲೋಕದ ಹಾಗೂ ನಮ್ಮ ಕೇಂದ್ರ ಮತ್ತು ಪ್ರಾಂತಿಕ ಸರಕಾರೀ ಕಾರ್ಯಾಲಯಗಳಿಂದಾರಂಭಿಸಿ, ಜನತೆಯ ನಡುವಿನ ಪ್ರತಿಯೊಂದು ದೊಡ್ಡ, ಸಣ್ಣ ಕಾರ್ಯಗಳಲ್ಲೂ ನಿಜವಾದ ಕಾರ್ಯಕರ್ತರು, ವ್ಯವಸ್ಥಾಪಕರು, ಚಿಂತಕರಾದ ಮೌನಜೀವಿಗಳು ಪ್ರತ್ಯೇಕವೇ—ಅ ಸಂಬಂಧದ ಕೀರ್ತಿ ಮತ್ತು ಲಾಭ ಗಳಿಸುವವರು ಬೇರೆಯೇ.

ಅಗ್ರಗಣ್ಯ ಸುಂದರಿಯರೆಂದು ಲೋಕವ್ಯಾಪಿ ಕೀರ್ತಿಗಳಿಸಿದವರಿಗಿಂತ ಎಷ್ಟೋ ಹೆಚ್ಚಿನ ಸೌಂದರ್ಯವತಿಯರು ಅಜ್ಞಾತರಾಗಿ ಹಳ್ಳಿ ಮೂಲೆಗಳಲ್ಲಿ ಉಳಿದುಕೊಂಡಿರಬಹುದು. ಸಾಹಿತ್ಯ, ಸಂಗೀತ, ಚಿತ್ರ ಮುಂತಾದ ಕಲೆಗಳಲ್ಲಿಯೂ ವಿಜ್ಞಾನ, ಶಿಕ್ಷಣ, ವೈದ್ಯಕೀಯ ಮತ್ತಿತರ ವಿಧಾನಗಳಲ್ಲೂ ಇಂದು ಹೆಸರುಗೊಂಡವರಿಗಿಂತ ಎಷ್ಟೋ ಪಾಲು ಅಧಿಕರಾಗಿರುವ

"ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

## ಗೀತೆಯ ಕೈಗನ್ನಡಿ

( ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು—ದಿ| ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಮಾತುಗಳ ರೂಪದಲ್ಲಿಳಿದ ಛಟ್ಟಿಯಾಗಿ ಎದ್ದು ಕಾಣುವುದು.

**400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.**

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್, ಉಡುಪಿ, ದ. ಕನ್ನಡ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

[೧ನೇ ಪುಟದಿಂದ ಮುಂದುವರಿದುದು]

ವರು ಅಜ್ಞಾತರಾಗಿ ಉಳಿದುಕೊಂಡಿರಬಹುದು.

ಹೀಗಿದೆ ಪ್ರಪಂಚ; ಪ್ರತ್ಯಕ್ಷ ಪರಿಚಯವಾಗದೆ ಯಾವುದೂ ಪ್ರಭಾವ ಬೀರದು. ಜನತೆಯ ಪರಿಚಯಜ್ಞಾನ ಹೆಚ್ಚುತ್ತಾ ಹೋದಂತೆ, ಅಂತರಿಕ ಅವ್ಯಕ್ತ ವಿಷಯಗಳೂ ಮನಮುಟ್ಟುತ್ತಾ ಹೋಗಿ, ಇಂದಿನ ಬಹಿರಂಗ ನೋಟವು ಆಂತರಿಕ ನೋಟದ ವರೆಗೂ ವ್ಯಾಪಿಸಬೇಕಲ್ಲದೆ ಅನ್ಯೋಪಾಯವಿಲ್ಲ.

ಲೋಕ ಮತ್ತು ಲೌಕಿಕ ವಿಷಯಗಳು ಅಗಾಧವಿವೆ; ಅಪಾರವಿವೆ. ಆ ಪೈಕಿ ನಾವು ತಿಳುವಳಿಕೆಗೆ ಬಂದಷ್ಟನ್ನೇ ತಿಳಿದುಕೊಳ್ಳುತ್ತೇವೆ. ಎಲ್ಲವನ್ನು, ಅಥವಾ ಸಾಧ್ಯವಿದ್ದಷ್ಟು ಹೆಚ್ಚಿನದನ್ನು ತಿಳಿದುಕೊಳ್ಳುವ ಮೂಲಕವೇ ಪೂರ್ಣತೆಯತ್ತ ಸಾಗಬೇಕು ಹೊರತು, ಇರುವುದೆಲ್ಲವನ್ನೂ ಅರಿಯದಿರುವುದೇ ಅಪರಾಧವೆಂದು ಗಣಿಸಲಾಗದು. ಸಮುದ್ರದೊಳಗೆ ಚಿಪ್ಪುಗಳಲ್ಲಿ ಎಂತಹ ಅಮೂಲ್ಯ ರತ್ನಗಳಿದ್ದಿರಬಹುದೋ- ಆದರೆ ನಾವು ನಮಗೆ ಕಂಡುಬರುವವುಗಳಿಗೆ ಮಾತ್ರ ಬೆಲೆ ಕಟ್ಟಬಲ್ಲೆವು.

ಸಾಮಾನ್ಯ ಬೋಂಬಿನ ಪ್ರಯೋಗ ನಡೆಯುತ್ತಿದ್ದು, ಅದೇ ಅತ್ಯುಗ್ರ ವಿನಾಶೋಪಕರಣವೆಂಬ ಭಾವನೆಯಿರುವಾಗಲೇ ಅಟಂ ಬೋಂಬು ಲೋಕಗರ್ಭದ ಕ್ಷಿಪ್ತತ , ಅದು ತೋರಿಬಂದು, ಮಹೋನ್ನತ ಧ್ವಂಸಾಯುಧವೆಂದು ಗಣಿಸಲ್ಪಡುತ್ತಿದ್ದಾಗಲೂ ಹೈಡ್ರೋಜೆನ್ ಬೋಂಬು ಪ್ರಪಂಚಗರ್ಭದಲ್ಲಡಗಿತ್ತು. ಇಂದು ಅದರ ಪರಿಚಯವೂ ಆಗಿ ಅದೇ ಪರಮಾವಧಿ ಉಗ್ರಾಯುಧವೆಂದು ಗಣಿಸಲ್ಪಡುತ್ತಿದೆಯಾದರೂ ಲೋಕಗರ್ಭದಲ್ಲಿ ಇದನ್ನೂ ಮಿಕ್ಕಿದುದಾವುದು ತುಂಬಿದೆಯೋ ಯಾರು ಬಲ್ಲರು?

ಯಾವದೇ ವಿಷಯ, ಕಾರ್ಯ, ಕೃತಿ, ಶಕ್ತಿ, ಯೋಗ್ಯತೆ, ಪ್ರತಿಭೆ, ಪ್ರಭಾವವಾದರೂ ಪ್ರತ್ಯಕ್ಷ ಪರಿಚಯಮಾಡಿಕೊಟ್ಟೇ ಅಸ್ತಿತ್ವ ಪ್ರಕಟಿಸಿಕೊಳ್ಳಬೇಕು. ಬೀಗಮುದ್ರೆಯೊಳಗಿನ ನಿಧಿಯು ಅಡಚಣೆಗೊದಗದು. ಅಂತೆಯೇ ಜನತಾ ಶಕ್ತಿ ಕೂಡಾ. ಜನತೆಯ ಸಾಮೂಹಿಕ ಶಕ್ತಿಯು ಅಗಾಧವಿರಬಹುದು; ಅಜೇಯವಿರಬಹುದು. ಆದರದು ಸಂಘಟನಾ ರೂಪದಿಂದ ಪ್ರತ್ಯಕ್ಷ ತೋರಬಾರದಿದ್ದರೆ ಸಹಜವಾಗಿ ಯಾರ ಲಕ್ಷ್ಯಕ್ಕೂ ಬೀಳದೆ, ಯಾವ ಕಾರ್ಯಕ್ಕೂ ಒದಗದೆ ಹೋಗಬಹುದು.

ಇಂದು ಜನಸಾಮಾನ್ಯರ ಹಿತಸಂಬಂಧಗಳು ಮತ್ತು ಪ್ರತ್ಯಕ್ಷ ಜನತೆಯು ಕಡೆಗಣಿಸಲ್ಪಡುತ್ತಿದೆಯಾದರೆ, ಸಾಮಾನ್ಯ ಜನರ ಇಂದಿನ ಸ್ಥಿತಿಯಲ್ಲಿ ಅದು ಸ್ವಾಭಾವಿಕ. ಜನಜಾಗೃತಿಗೊಂಡು, ಸಂಘಟನೆಗೊಂಡು ಮುಂದಾಗಲಿ!

ಎಲ್ಲಾ ತರದ ಶಾಸ್ತ್ರೀಯ
ಆಯುರ್ವೇದ ಔಷಧಗಳಿಗೆ
'ಮಹಾಜನ'
ಕಾಸರಗೋಡು
ಇವರ ತಯಾರಿಕೆಗಳನ್ನು .
[illegible]

# ಬ್ರಿಟಿಷ್ ಚುನಾವಣೆ-

ಬರುವ ಫೆಬ್ರುವರಿ ೨೩, ೧೯೫೦ರಲ್ಲಿ ಬ್ರಿಟನಿನ [illegible] ಚುನಾವಣೆ ನಡೆಯಲಿದೆ. ಬ್ರಿಟನ್ ಈ ಜಗತ್ತಿನಲ್ಲಿ ಪ್ರಮುಖವಾದೊಂದು ರಾಷ್ಟ್ರ. ದಲ್ಲಿ ನಡೆಯುವ ಚುನಾವಣೆಯಾದರೂ ಇಡೀ ಲೋಕದ ಲಕ್ಷ್ಯವನ್ನು ಸಹಜವಾಗಿ ಸೆಳೆಯುತ್ತಿದೆ; ಅದರಲ್ಲೂ ಲೋಕವ್ಯವಹಾರರಂಗದಲ್ಲಿ ಮುಖ್ಯ ಪಾತ್ರ ನಿರ್ವಹಿಸುವ ಅಮೇರಿಕ, ಬ್ರಿಟನುಗಳಲ್ಲಿ ನಡೆಯುವ ಚುನಾವಣೆಗಳ ಕಡೆಗೆ ಮತ್ತು ರಶ್ಯದಲ್ಲಿ ನಡೆವ ಯಾವುದೇ ವಿಧದ ಅಧಿಕಾರ ಬದಲಾವಣೆಗಳ ಕಡೆಗೆ ಪ್ರಪಂಚದ ವಿಶೇಷ ಲಕ್ಷ್ಯಬೀಳಬೇಕಾದುದು ಸ್ವಾಭಾವಿಕ.

## ಭಾರತಕ್ಕಿದು ಅಗಣ್ಯ

ಭಾರತವಂತೂ ಇಂಗ್ಲಾಂಡಿನ ಈ ಬಾರಿಯ ಚುನಾವಣೆಯ ಕಡೆಗೆ ನವೀನಾಸಕ್ತಿಯಿಂದ ನೋಡುತ್ತಿದೆ. ಇಲ್ಲಿ ಬ್ರಿಟಿಷ್ ಆಡಳಿತೆಯಿದ್ದಾಗ ಬ್ರಿಟನಿನಲ್ಲಿ ನಡೆಯುತ್ತಿದ್ದ ಚುನಾವಣೆಗಳ ಪ್ರತ್ಯಕ್ಷ ಪರಿಣಾಮವು ಇಲ್ಲಿಯ ಆಳ್ವಿಕೆಯ ಮೇಲಾಗುತಿತ್ತು. ಅಲ್ಲಿ ಬಹುಮತ ಪಡೆದು ಅಧಿಕಾರಕ್ಕೆ ಬರುವ ಪಕ್ಷದ ಕೈಗೇನೇ ಇಲ್ಲಿಯ ಆಡಳಿತೆಯ ಮೂಲ ಸೂತ್ರ ಹೋಗುತಿತ್ತು. ಭಾರತವು ಸ್ವತಂತ್ರವಾಗುವ ವರೆಗೆ, ಬ್ರಿಟಿಷ್ ಮತದಾರರ ಅಭಿಮತವೇ ಭಾರತದ ಸರಕಾರೀ ಕಟ್ಟಡದ ಅಸ್ತಿವಾರವಾಗಿದ್ದಿತು. ಇಂಗ್ಲಾಂಡಿನ ವೋಟರರಿಂದ ಬಹುಮತ ಪಡೆದು ಸರಕಾರ ಕಟ್ಟಿಕೊಳ್ಳುವ ಪಕ್ಷವು ಭಾರತದ ಕಡೆಗಿನ ಧೋರಣೆಯುಳ್ಳದ್ದು ಎಂಬುದನ್ನು ಚರ್ಚಿಸುವ ಚಟವು ಆ ಕಾಲದಲ್ಲಿ ನಮ್ಮಲ್ಲಿಯ ರಾಜಕಾರಣಿಗಳಲ್ಲಿರುತಿದ್ದರೂ ಭಾರತೀಯ ಜನಸಾಮಾನ್ಯರಿಗೆಂತೂ ಅದರಲ್ಲಿರುವ ಪ್ರಾಮುಖ್ಯತೆ ತಿಳಿದಿರಲಿಲ್ಲ; ಗಾಂಧೀ ಯುಗದ ಸ್ವಾತಂತ್ರ್ಯ ಚಳವಳಿಯ ಕರ್ತರು, ಇಂಗ್ಲಾಂಡಿನ ಅಧಿಕಾರ ರಚನೆಗಾವ ಮಹತ್ವವನ್ನೂ ಕೊಡದೆ ಉದ್ದೇಶಪೂರ್ವಕವಾಗಿ ಅದನ್ನು ತಾತ್ಸಾರಮಾಡುತಿದ್ದರು. "ಭಾರತಕ್ಕೆ ಸ್ವಾತಂತ್ರ್ಯದಾನ ಮಾಡುವ ಮಟ್ಟಿಗೆ ಬ್ರಿಟನಿನ ಎಲ್ಲಾ ಪಕ್ಷಗಳೂ ಒಂದೇ. ಭಾರತವು ಸ್ವಪ್ರಯತ್ನದಿಂದ ಸ್ವಾತಂತ್ರ್ಯ ಸ್ಥಾಪಿಸಿಕೊಳ್ಳಬೇಕಲ್ಲದೆ, ಬ್ರಿಟಿಷರ ಕೈಕಾಯಕೂಡದು" ಎಂಬ ಭಾವನೆಯು ಗಾಂಧಿಜೀಯ ಸ್ವಾವಲಂಬನಾತತ್ವ ಪ್ರಭಾವದಿಂದ ಸರ್ವವ್ಯಾಪಿಯಾಗಿದ್ದಿತು. ಬ್ರಿಟನಿನ ಅಧಿಕಾರ ಪರದೆಯನ್ನು ಭಾರತದಿಂದ ಒಮ್ಮೆಗೇ ಎಳೆದುಕೊಂಡ ಕೂಲಿಗಾರ ಸರಕಾರವು ಗೆದ್ದು ಬಂದ 1945ರ ಬ್ರಿಟಿಷ್ ಚುನಾವಣೆಯ ಕಡೆಗೂ ಭಾರತದಲ್ಲಿ ಸರ್ವಸಾಮಾನ್ಯವಾಗಿ ಇಂತಹ ತಾತ್ಸಾರ ಬುದ್ಧಿಯೇ ಪ್ರದರ್ಶಿಸಲ್ಪಟ್ಟಿದ್ದಿತು. ಕೂಲಿಗಾರ ಸರಕಾರ ರಚನೆಗೊಂಡ ಮೇಲಾದರೂ ಅದೇ ರೀತಿ, ಅಕಸ್ಮಾತ್ತಾಗಿ ಭಾರತದಿಂದ ಕೈ ತೆಗೆದೀತೆಂದು ನಿರೀಕ್ಷಿಸಿದವರಿರಲಿಲ್ಲ. ಕೂಲಿಗಾರ ಪಕ್ಷದ ಚುನಾವಣಾ ಘೋಷಣೆಯಲ್ಲಿ ಭಾರತ ಸ್ವಾತಂತ್ರ್ಯದಾನದ ಯೋಜನೆಯು ಅವ್ಯಕ್ತಾಕಾರದಿಂದ ಹುದುಗಿಕೊಂಡಿದ್ದಿತೇ ಹೊರತು ಸ್ಪಷ್ಟವಾಗಿ ತೋರಿಬಂದಿರಲಿಲ್ಲ. ಆದರೆ ಕೂಲಿಗಾರ ಪಕ್ಷವು ಬಹುಮತ ಪಡೆದು, ಅಟ್ಲೀಯವರು ಸರಕಾರ ರಚಿಸಿಕೊಂಡೊಡನೆಯೇ ಭಾರತದ ಬಂಧವಿಮೋಚನೆಯ ಹಂಚಿಕೆಗಳನ್ನು ಯೋಚಿಸಹತ್ತಿದರು; ಭಾರತೀಯ ನಾಯಕರನ್ನು ಸಂಧಿಸಲಾರಂಭಿಸಿದರು. ಯುದ್ಧಾವಧಿಯ ಚರ್ಚಿಲ್ ಸರಕಾರವಾದರೋ, ಯುದ್ಧಾವಶ್ಯಕತೆಯ ಮೇಲಿಂದ ಭಾರತದೊಡನೆ ಸಂಧಾನ ಸಾಧಿಸಲು ಸರ್. ಕ್ರಿಪ್ಸರನ್ನು ಬೀಳ್ಕೊಟ್ಟದ್ದಿತೆಂಬುದೇನೋ ನಿಜ. ಆದರೆ ಹರಿದು ಹೋದ ಬ್ರಿಟಿಷ್—ಭಾರತಗಳೊಳಗಿನ ಸಂಬಂಧಕ್ಕೊಂದು ತಾತ್ಕಾಲಿಕ ತೇಪೆಹಚ್ಚಿಕೊಳ್ಳಬೇಕೆಂದು ಚರ್ಚಿಲ್ ಸರಕಾರವು ನಡೆಸಿದ್ದ ಪ್ರಯತ್ನ ಮತ್ತು ಭಾರತೀಯರಿಚ್ಛಿಸುವ ಸ್ವಾತಂತ್ರ್ಯವನ್ನು ಭಾರತೀಯರಿಗೆ ಕೊಟ್ಟುಬಿಡಬೇಕೆಂದು ಅಟ್ಲೀ ಸರಕಾರವು ನಡೆಸಿದ ಸಾಹಸಗಳೊಳಗೆ ಮಹದಂತರವಿದ್ದಿತು. ಇಂಗ್ಲಾಂಡಿನಲ್ಲಿ ಯಾವ ಸರಕಾರವಿರುತಿದ್ದರೂ ಗಾಂಧಿಜೀಯ ನಾಯಕತ್ವದಲ್ಲಿ ಭಾರತದಲ್ಲುಂಟಾಗಿದ್ದ ಸ್ವಾತಂತ್ರ್ಯದಾಹಕ್ಕೆದಿರಾಗಿ, ಯುದ್ಧೋತ್ತರ ಪರಿಸ್ಥಿತಿಯಲ್ಲಿ ಭಾರತವನ್ನು ಮತ್ತೂ ಹಿಡಿದುಕೊಂಡು ನಿಲ್ಲಲು ಸಾಧ್ಯವಿರಲಿಲ್ಲವೆಂಬುದೇನೋ ನಿಜ. ಆದರೂ ಆ ಅವಧಿಯಲ್ಲಿ, ಕೂಲಿಗಾರ ಸರಕಾರದ ಬದಲಿಗೆ ಚರ್ಚಿಲ್ಲರ ಕನ್ಸರ್ವೇಟಿವ್ ಸರಕಾರವಿರುತಿದ್ದರೆ, ಈ ಮಾದರಿಯ ಪೂರ್ಣ ಸ್ವಾತಂತ್ರ್ಯವು ಇಷ್ಟೊಂದು ತ್ವರೆಯಲ್ಲಿ ಭಾರತಕ್ಕೆ ವರ್ಗಾಯಿಸಲ್ಪಡುತ್ತಿರಲಿಲ್ಲವೆಂಬುದು ನಿರ್ವಿವಾದ. "ಬ್ರಿಟನಿನಲ್ಲಿ ಯಾವ ಪಕ್ಷವು ಅಧಿಕಾರಕ್ಕೆ, ಬಂದರೂ ಭಾರತದ ಮಟ್ಟಿಗೆ ವ್ಯತ್ಯಾಸವಿಲ್ಲ" ಎಂದು ಭಾರತೀಯರಲ್ಲಿ ಹರಡಿದ್ದ ಅಪನಂಬಿಕೆಯನ್ನು ಕೊನೆಗಾದರೂ ನಿವಾರಿಸಿದ ಕೀರ್ತಿಯು ಕೂಲಿಗಾರ ಸರಕಾರದ್ದಿದೆ. ಹೀಗಿದ್ದರೂ ಬ್ರಿಟನು-ಭಾರತಗಳೊಳಗಿನ ಸಂಬಂಧದ ಒಂದು ವೈಶಿಷ್ಟ್ಯವೆನ್ನಲಾಗುವಂತೆ ಭಾರತವು ಯಾವ ಕಾಲದಲ್ಲೂ ಬ್ರಿಟಿಷ್ ಚುನಾವಣೆಗಳ ಕಡೆಗೆ ಲಕ್ಷ್ಯವಿಡದಂತಾಗಿದೆ. ಬಂಧಿತ ಭಾರತವು ಸ್ವಾಭಿಮಾನದಿಂದ ಆ ಕಡೆಗೆ ಅಸಡ್ಡೆ ಪ್ರದರ್ಶಿಸಿದ್ದಿತು; ಸ್ವತಂತ್ರ ಭಾರತಕ್ಕೆ ಅದನ್ನು ಗಣಿಸುವ ಆವಶ್ಯಕತೆಯೇ ಇಲ್ಲ!

## ಈ ಬಾರಿಯ ಆಸಕ್ತಿ

ಹೀಗಿದ್ದರೂ ಈ ಬಾರಿಯ ಬ್ರಿಟಿಷ್ ಚುನಾವಣೆಯನ್ನು ಭಾರತವು ಒಂದು ವಿಶೇಷಾಸಕ್ತಿಯಿಂದ ಕಾಯುತ್ತಿದೆ. ಒಂದು ಪ್ರಮುಖ ರಾಷ್ಟ್ರದ ಚುನಾವಣಾ ಫಲಿತಾಂಶದ ಛಾಯೆಯು ಒಂದಲ್ಲೊಂದು ರೀತಿಯಿಂದ ಇಡೀ ಪ್ರಪಂಚದ ಮೇಲೆ ಬೀಳಲು ಬದ್ಧವಿರುವಾಗ ಭಾರತವು ಅದಕ್ಕಪವಾದವಾಗುವಂತಿಲ್ಲ. ಮೇಲಾಗಿ ತನ್ನ ಪಾಲಿನ ವಸ್ತುವನ್ನು ತನ್ನ ಕೈಗೊಪ್ಪಿಸಿದ ಮಿತ್ರನು, ಅದರ ಬೆನ್ನಲ್ಲೇ ಇದಿರುವಾದಿಗಳೊಡನೆ ಇಂತಹ ಕೊಡುಗೇ ಸಂಬಂಧದ ಅಧಿಕಾರಕ್ಕಾಗಿ ಸ್ಪರ್ಧಿಸಬೇಕಾಗಿ ಬಂದಿರುವಾಗ, ಆ ತನ್ನ ಮಿತ್ರನಿಗಾವ ಗತಿಯೊದಗುವದೋ ಎಂಬ ಆತುರದಿಂದ ಭಾರತವು, ಬ್ರಿಟನಿನ ಕೂಲಿಗಾರ ಪಕ್ಷದ ಚುನಾವಣಾ ಹೋರಾಟವನ್ನು ನಿರೀಕ್ಷಿಸಬೇಕಾಗಿದೆ. ವಸ್ತುತಃ ಬ್ರಿಟನಿನಲ್ಲಿ ಈ ಬಾರಿ ಯಾವ ಪಕ್ಷವು ಮೇಲಾದರೂ ತನ್ನ ಸಂಬಂಧದ ಮಟ್ಟಿಗೇನಾದರೂ ಗಡಿಬಿಡಿಯದ್ದೀತೇ ಎಂದು ಅಮೇರಿಕ, ರಶ್ಯಾ ಚೈನಗಳಿಗಿಂತ ಹೆಚ್ಚಿಗೆ ಭಾರತವು ಹೆದರುವ ಅಂಶವಿಲ್ಲ. ಪರಸ್ಪರ ಸ್ನೇಹ ಸಂಬಂಧವನ್ನು ವರ್ಧಿಸಬಹುದೋ ಕುಗ್ಗಿಸಬಹುದೋ ಎಂಬುದಕ್ಕಿಂತ ಹೆಚ್ಚಿನ ಆತುರದಿಂದ ಒಂದು ಸ್ವತಂತ್ರ ರಾಷ್ಟ್ರದಲ್ಲಾಗುವ ಬದಲಾವಣೆಯ ಕಡೆಗೆ ಮಾತ್ರೊಂ

THE BOMBAY LIFE ASSURANCE COMPANY, LTD.
ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್
(ಸ್ಥಾಪನೆ: 1908)
ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.
ಪ್ರಧಾನ ಏಜಂಟರು:
ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ ಉಡುಪಿ.
ಇವರ ಶಾಖಾ ಕಚೇರಿಗಳು:-
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.
ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ
ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು
ಸಲ್ಲಿಸುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.
ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
[illegible] ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಋತುಸ್ರಾವ ನಿಂತಿತು
'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹಕೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ; ರೂ 3-; ಸ್ಪೆಶ್ಯಲ್ ರೂ. 5; ಅಧಿಕಾಧಿಕ ಸ್ಪೆಶ್ಯಲ್ ರೂ. 8- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]
Mrs. D. DEVEE, F. DS. (N. J.)
Tollygunge CALCUTTA
[illegible]

# —ಆದರ ಒಳನೋಟ.

ಸ್ವತಂತ್ರ ರಾಷ್ಟ್ರವು ನೋಡುವಂತಿಲ್ಲ. ಎಂದು ಮಾತಿದೆ. ಭಾರತವೀಗಲೂ ಕಾಮನ್‌ವೆಲ್ತ್ ರಾಷ್ಟ್ರಕೂಟದ ಸದಸ್ಯನಾಗಿ ಇ ಬ್ರಿಟಿಷ್ ಕಾಮನ್‌ವೆಲ್ತಿನಲ್ಲಿ ಬ್ರಿಟನಿಗಿ ಮೇಲ್ಮೆಯನ್ನು ವಜಾಪಡಿಸಿ, ಸರ್ವ ಮಾನ ಮಟ್ಟವನ್ನು ನಿರ್ಮಿಸಿದ್ದ ಕೂ ಗಾರ ಪಕ್ಷವೇ ಪುನಃ ಅಧಿಕಾರಕ್ಕೆ ಬ ವುದು ಸಲುಗೆಯ ಹಾಗೂ ಆತ್ಮೀಯ ವಹಾರದ ದೃಷ್ಟಿಯಿಂದ ಕಾಮನ್ ಲ್ತಿನ ಇತರ ಸದಸ್ಯ ರಾಷ್ಟ್ರಗಳಂತೆಯೇ ಭಾರತಕ್ಕೂ ಲೇಸು ಅನ್ನಿಸಬಹುದು. ದರೆ, ಕಾಮನ್‌ವೆಲ್ತ್ ಸಂಬಂಧವು ಗಮವಾಗಿ ಸಾಗಬೇಕಾದರೆ, ಈ ಕ ಕೂಲಿಗಾರ ಪಕ್ಷವು ತೋ ರುವ ಸೌಹಾರ್ದತೆ ಮತ್ತು ಸಮಾನ ಭಾವನೆಯನ್ನೇ ಬ್ರಿಟನಿನಲ್ಲಿ ಅಧಿಕಾ ಕ್ಕೇರುವ ಯಾವ ಪಕ್ಷವಾದರೂ ತೋ ಸಲೇ ಬೇಕಾಗಿದೆ ಆದ್ದರಿಂದ ಇಂಗ್ಲಾಂ ನ ಈ ಬಾರಿಯ ಚುನಾವಣೆಯ ಫಲಿ ಂಶ ಹೇಗಾದರೂ, ಅದರ ಪರಿಣಾಮ ಗಿ ಭಾರತದ ಒಳ-ಹೊರ ವ್ಯವಸ್ಥೆಗಳ ಯಾವ ಬದಲಾವಣೆಯೂ ಆಗುವುದ ಂಭವ. ವ್ಯವಹಾರ ವಿಧಾನ ಮಾ ಟಗಳ ಹೊಸ ಅನುಭವವು ಇತರ ಷ್ಟ್ರಗಳಂತೆಯೇ ಭಾರತಕ್ಕೂ ಆಗುವಂ ದೀತು; ಅಷ್ಟೇ. ಭಾರತವು ಆಸಕ್ತಿ ಂದ ಪರೀಕ್ಷಿಸಬೇಕಾದ ಒಂದಂಶವು ಸಲದ ಚುನಾವಣೆಯಲ್ಲಿರಬೇಕಿದ್ದಿ ; ಮಿಕ್ಕ ಯಾವ ಪಕ್ಷವಾದರೂ ಇ ಟ್ಟಂದು ತೀವ್ರಗತಿಯಲ್ಲಿ ಮಾಡುತ್ತಿರ ಲ್ಲವಾದ ಭಾರತ ಸ್ವಾತಂತ್ರ್ಯದಾನವ ನ್ನು ಕೂಲಿಗಾರ ಪಕ್ಷವು ಮಾಡಿ ಬ್ರಿಟ ಸಾಮ್ರಾಜ್ಯವನ್ನು ಬರ್ಖಾಸ್ತು ಡಿಸಿರುವಾಗ, ಇದನ್ನೇ ಕೂಲಿಗಾರ ಕ್ಷದಿಂದಾದ ಮಹಾ ಅನ್ಯಾಯ ಎಂದು ಬ್ರಿಟಿಷ್ ಮತದಾರರ ಮುಂ ಡೆಯಲ್ಲಿ ಚರ್ಚಿಲ್ ಪಕ್ಷೀಯರು ಡಂ ರ ಸಾರುತಿದ್ದರೆ, ಈ ಪರೀಕ್ಷೆಯಲ್ಲಿ ಟ್ಲೆ ಪಕ್ಷ ಗೆಲ್ಲುವುದೋ ಸೋಲುವು ದೋ ಎಂಬುದನ್ನು ನೋಡುವ ಕೆಲಸ ಉಳಿದಿದ್ದಿತು. ಆದರೆ ಆ ಪರೀಕ್ಷೆಯಲ್ಲಿ ಕೂಲಿಗಾರ ಪಕ್ಷವು ಇಷ್ಟರಲ್ಲೇ ಜಯಿಸಿ ರುವುದು ಗಣ್ಯ ವಿಷಯ. ತನ್ನೆರಡು ಮಹಾ ಸತ್ಕಾರ್ಯಗಳೆಂದು ಕೂಲಿಗಾರ ಪಕ್ಷವೇ ಚುನಾವಣಾರಂಗದಲ್ಲಿ ಬಾರಿಸು ವ ಡಂಗುರವೆಂದರೆ, ಮೊದಲನೆಯ ಗಿ ಭಾರತ ಮತ್ತು ಪಾಕಿಸ್ತಾನಗಳ ನ್ನು ಅವುಗಳ ಜನತೆಗೆ ಒಪ್ಪಿಸಿ ಕೊಟ್ಟು ; ಎರಡನೆಯದಾಗಿ ಮಾರ್ಶಲ್ ಯೋ ನೆ "ನಾನು ಬ್ರಿಟಿಷ್ ಸಿಂಹಾಸನ ನ್ನು ಬರ್ಖಾಸ್ತು ಪಡಿಸಲು ಪೀಠವೇ ಲ್ಲ" ಎಂದು ತನ್ನ ಅಧಿಕಾರ ಕಾಲದಲ್ಲಿ ಡಿಕೊಟ್ಟಿಕೊಂಡಿದ್ದ ಚರ್ಚಿಲ್ಲರಾದರೂ ಕೂಲಿಗಾರ ಪಕ್ಷವು ಅಂತಹ ದ್ರೋಹಿ ಕ್ಷ" ಎಂದು ಬ್ರಿಟಿಷ್ ಮತದಾರರಿಗೆ ಹೇಳಲು ಈಗ ಎದೆ ಗಾಂದಿಲ್ಲ. ಆದ್ದರಿಂದ ಭಾರತವನ್ನು ಬಿಟ್ಟುಕೊಟ್ಟುದು ಇಂಗ್ಲಾಂಡಿನ ಸರ್ವರ ಮೆಚ್ಚುಗೆಗೊಳಗಾದ ವಿಷಯವೆಂಬುದು ಸ್ಪಷ್ಟ. ಬ್ರಿಟಿಷ್ ಚುನಾವಣೆ ಕುರಿತು ಭಾರತಕ್ಕೆ ಈಗ ಇರುವ ಆ ಸಕ್ತಿಯೆಂದರೆ, ಸ್ವಹಿತಚಿಂತನೆಯೊಂದಿಗೆ ತನ್ನ ಹಿತವನ್ನೂ ಸಾಧಿಸಿದ್ದ ಕೂಲಿಗಾರ ಪಕ್ಷದ ಅದೃಷ್ಟ ಹೇಗಾಗಬಹುದು, ಎಂಬುದೊಂದೇ; ಮಿತ್ರರ ಕಡೆಗಿನ ಹಿತಾಕಾಂಕ್ಷೆ ಮಾತ್ರ. ಭಾರತವು ಹೃತ್ಪೂರ್ವಕವಾಗಿ ಕೂಲಿಗಾರ ಪಕ್ಷದ ವಿಜಯ ಹಾರೈಸುತ್ತಿದೆ.

## ಯಾರು ಗೆಲ್ಲಬಹುದು?

ಇಂದಿಗೆ ಸರೀ ಒಂದು ವಾರದಲ್ಲಿ ನಡೆಯಲಿರುವ ಬ್ರಿಟಿಷ್ ಚುನಾವಣೆಯಲ್ಲಿ ಯಾವ ಪಕ್ಷವುಗೆದ್ದು ಬರಬಹುದು, ಎಂಬುದನ್ನು ಸ್ಪಷ್ಟವಾಗಿ ಊಹಿಸುವುದು ಅಸಾಧ್ಯ. ಎಚ್ಚತ್ತ ಮತದಾರ ವರ್ಗದ ತೀರ್ಮಾನವು ಹೀಗೇನೇ ಆದೀತೆಂದು ಖಂಡಿತ ಹೇಳಲು ಬರುವುದಿಲ್ಲ. ಹಿಂದಿನ ಚುನಾವಣೆಗಳ ವೇಳೆ ಅಂತಹ ಅಂದಾಜನ್ನು ಕಟ್ಟುವ ದ್ಯೂತಸ್ಫೂರ್ತಿ ಕಂಡು ಬರುತ್ತಿತ್ತು; ಆದರೆ ಕಳೆದ ಒಂದೆರಡು ಚುನಾವಣೆಗಳು ಅಂತಹ ಅಂದಾಜುಗಳನ್ನು ಪೂರ್ಣ ಹುಸಿಗೊಳಿಸಿದುದರಿಂದ, ಈ ಬಾರಿಯ ಬ್ರಿಟಿಷ್ ಚುನಾವಣೆಯ ಕುರಿತು ಅಂದಾಜುಗಾರರು ಶಂಕಿಸುತ್ತಿರುವಂತೆ ಕಾಣುತ್ತಿದೆ. ಯುದ್ಧಾಪಾಯದಿಂದ ಇಂಗ್ಲಾಂಡನ್ನು ಪಾರು ಮಾಡಿದ್ದ ಚರ್ಚಿಲ್ಲರು ಆ ಬೆನ್ನಲ್ಲೇ ತನ್ನ ಪಕ್ಷವನ್ನು ಕಟ್ಟಿಕೊಂಡು 1945ರ ಚುನಾವಣಾ ರಂಗಕ್ಕೆ ಧುಮುಕಿದಾಗ, ಅವರ ಇದಿರು ಬಿದ್ದ ಕೂಲಿಗಾರ ಪಕ್ಷಕ್ಕೆ ವಿಜಯವೆಂಬುದು ನೂರಕ್ಕೆ ಎರಡರಷ್ಟೇ ಸಂಭವನೀಯವೆಂದು ಆಗ ಅಂದಾಜು ಕಟ್ಟಲಾಗಿದ್ದಿತು. ಆದರೂ ಕೂಲಿಗಾರ ಪಕ್ಷವು ಪ್ರಬಲ ಬಹುಮತದಿಂದ ಗೆದ್ದು ಬಂದು ಆಶ್ಚರ್ಯ ನಿರ್ಮಿಸದಿರಲಿಲ್ಲ. ಅಂತೆಯೇ 1948ರಲ್ಲಿ ನಡೆದ ಅಮೆರಿಕದ ಅಧ್ಯಕ್ಷ ಚುನಾವಣೆಯು ಎಲ್ಲರ ಅಂದಾಜುಗಳನ್ನೂ ವಿನಾ ಕಾರಣ ಹುಸಿಗೊಳಿಸಿ ಮಹದಾಶ್ಚರ್ಯವನ್ನು ನಿರ್ಮಿಸಿದ್ದಿತು. ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸುತಿದ್ದ ಟ್ರೂಮೇನ್ ಮತ್ತು ಡಿವೆಯರ ಪೈಕಿ, ಟ್ರೂಮೇನಂಗೆ 1, ಡಿವೆಯರಿಗೆ 15, ಈ ಪ್ರಕಾರ ಜಯವೆಂದು ಅಮೆರಿಕದ ಎಲ್ಲಾ ಅಂದಾಜುಗಾರರು ಮುಂದಾಗಿ ಸ್ಪಷ್ಟ ಸಾರಿದ್ದರು. ಆದರೇನಾಯಿತೋ ಯಾರು ಬಲ್ಲ-ಎಲ್ಲರ ನಿರೀಕ್ಷೆಯನ್ನೂ ಹುಸಿಗೊಳಿಸಿ ಟ್ರೂಮೇನರೇ ಮತ್ತೊಮ್ಮೆ ಆರಿಸಲ್ಪಟ್ಟರು. ಹೀಗೆ ಮೇಲಿಂದ ಮೇಲೆ ಅಂದಾಜು ಭಂಗವಾದುದರಿಂದ ಈ ಬಾರಿಯ ಬ್ರಿಟಿಷ್ ಚುನಾವಣೆಯ ಕುರಿತು ಅಂತಹ ಸ್ಪಷ್ಟ ಘೋಷಣೆಗಳ್ಯಾವುದರಿಂದಲೂ ಕೇಳಿ ಬರುತ್ತಿಲ್ಲ. ತಾ 23ರ ಮತದ ಪೆಟ್ಟಿಗೆಗಳನ್ನೊಡೆಯುವಾಗ ಯಾವ ಪಕ್ಷದ ವಿಜಯಚೀಟು ಮೇಲೆ ಬಿದ್ದರೂ ಆ ಪಕ್ಷವು ಹಿಂದೆ ಮುಂದೆ ನೋಡಿಕೊಂಡೇ ಸರಕಾರ ನಡೆಸುವಷ್ಟು ಬಲಶಾಲಿಯಾದೀತ್ಯ ಹೊರತು, ಸುರಕ್ಷಿತತಾ ಭಾವನೆಯಿಂದ ಮುಂದೊತ್ತುವಷ್ಟು ಬಹುಬಲ ಗಳಿಸಲಾರದೆಂದು ಹೆಚ್ಚಿನ ದೂರದರ್ಶಿಗಳ ಅಭಿಪ್ರಾಯವಿದೆ. ಏರುತಗ್ಗುಗಳ ಸರಿಯಾದ ತುಲನೆಯಿಂದ ಪುನಃ ಕೂಲಿಗಾರ ಪಕ್ಷವೇ ಅಧಿಕಾರಕ್ಕೆ ಬರಬಹುದೆಂಬ ಆಶೆಗವಕಾಶವಿದೆ. ಈಗ ಅಲ್ಲಿಯ ಚುನಾವಣಾರಂಗದಲ್ಲಿ ಕಾದಾಟದಲ್ಲಿರುವ ಮುಖ್ಯ ಪಕ್ಷಗಳು ನಾಲ್ಕು—ಲೇಬರ್, ಕನ್ಸರ್ವೇಟಿವ್, ಲಿಬರಲ್, ಕಮ್ಯೂನಿಸ್ಟ್. ಪಾರ್ಲಿಮೆಂಟಿನ 625 ಸ್ಥಾನಗಳಿಗೆ ಈ ಪಕ್ಷಗಳ ಒಟ್ಟು 1700 ಹುರಿಯಾಳುಗಳು ಸ್ಪರ್ಧಿಸುತಿದ್ದಾರೆ. ಈ ಪೈಕಿ 400 ಮಂದಿ ಲಿಬರಲ್ ಪಕ್ಷೀಯರು. 100 ಮಂದಿ ಕಮ್ಯೂನಿಸ್ಟರು. ಬೇರೆ ಅಗಣ್ಯ ಅಲ್ಪ ಸಂಖ್ಯೆಗಳನ್ನು ಬಿಟ್ಟರೆ ಉಳಿದವರೆಲ್ಲರೂ ಮಿ ಆಟ್ಲೆಯವರ ಲೇಬರ್ ಮತ್ತು ಮಿ. ಚರ್ಚಿಲ್ಲರ ಕನ್ಸರ್ವೇಟಿವ್ ಪಕ್ಷಕ್ಕೆ ಸೇರಿದವರೇ. ಲಿಬರಲ್ ಪಕ್ಷವು ಇಷ್ಟು ಸ್ಥಾನಗಳಿಗೆ ಸ್ಪರ್ಧಿಸಬಹುದೆಂಬ ನಿರೀಕ್ಷೆಯು ಆದಿ ಭಾಗದಲ್ಲಿರಲಿಲ್ಲವಾದ್ದರಿಂದ, ಅದು ಏಕಾಏಕಿ 400 ಮಂದಿ ಉಮೇದ್ವಾರಿಗಳನ್ನು ಮುಂದೊಡ್ಡಿದುದು ಸೋಜಿಗವನ್ನು ನಿರ್ಮಿಸಿದಂತೆಯೇ ಚುನಾವಣಾ ಸ್ವರೂಪವನ್ನೂ ಬದಲಾಯಿಸಿದೆ. ಹೇಗಿದ್ದರೂ ಅಧಿಕಾರಕ್ಕೆ ಬರುವ ಆಶೆಯು ಆಟ್ಲೆ ಮತ್ತು ಚರ್ಚಿಲ್ ಪಕ್ಷಗಳೆರಡಕ್ಕೆ ಹೊರತು ಮೂರನೆಯದಕ್ಕಿಲ್ಲ. ಇವೆರಡರ ಪೈಕಿ ಯಾವುದು ಮುಂದಾಗಬಹುದು, ಎಂಬ ಅಂದಾಜು ಕಟ್ಟಲು ಎರಡನ್ನೂ ತಕ್ಕಡಿಯಲ್ಲಿಡುವಾಗ ಕೂಲಿಗಾರ ಪಕ್ಷದ ಕಡೆಯೇ ತುಸು ತಗ್ಗುತ್ತಿದೆ. ಕೂಲಿಗಾರ ಪಕ್ಷದ ನಾಯಕ ಮಿ. ಕ್ಲೆಮೆಂಟ್ ಆಟ್ಲೆಗಳು ಶಾಂತಿ ಕಾಲಕ್ಕೆ ಹೇಳಿಸಿದ ಗುಣ ಯೋಗ್ಯತೆಗಳುಳ್ಳವರು. ಯುದ್ಧ ಕಾಲದಲ್ಲಿ ಚರ್ಚಿಲ್ ನಾಯಕತ್ವವನ್ನು ಬಯಸಿದಷ್ಟೇ ಆತುರದಿಂದ ಶಾಂತ ಕಾಲದಲ್ಲಿ ಬ್ರಿಟಿಷ್ ಜನತೆಯು ಆಟ್ಲೆ ಧುರೀಣತ್ವವನ್ನು ಬಯಸುವುದು ಅನಿವಾರ್ಯವೆನ್ನಬಹುದು. ಇನ್ನು ಅವರ ಮಂಡಲಿಯ ಮಂತ್ರಿಗಳೆಲ್ಲರೂ ಸಮರ್ಥ ವ್ಯಕ್ತಿಗಳೇ; ಅದ್ಭುತ ಪ್ರದರ್ಶಿಸಿ ಬ್ರಿಟಿಷ್ ಜನಮತವನ್ನೊಲಿಸಿಕೊಂಡವರೇ. ಯಾವುದೇ ಕಾರಣದಿಂದ ಲೇಬರ್ ಪಕ್ಷದ ಧುರೀಣತ್ವವು ಆಟ್ಲೆಯವರ ಹೆಗಲಿನಿಂದ ಜಾರಬೇಕಾಗಿ ಬಂದಲ್ಲಿ, ಅಷ್ಟೇ ಪ್ರಭಾವದಿಂದ ಅದನ್ನು ನಿರ್ವಹಿಸಬಲ್ಲವರು ಆ ಪಕ್ಷದ ಮುಂದಾಳು ಗುಂಪಿನಲ್ಲಿದ್ದಾರೆ. ನಾಯಕ ಯೋಗ್ಯತೆಗಳುಳ್ಳವರು ಒಂದುಗೂಡಿರುವ ಒಂದು ಪಕ್ಷವಿಂದು ಬ್ರಿಟನಿನಲ್ಲಿರುವುದಾದರೆ, ಅದು ಕೂಲಿಗಾರ ಪಕ್ಷವೇ. ಇದೇ ನೋಟವನ್ನು ಕನ್ಸರ್ವೇಟಿವ್ ಪಕ್ಷದ ಕಡೆಗೆ ಬೀರುವಾಗ ಇಂತಹ ಸಮೃದ್ಧಿ ದೃಶ್ಯ ಅಲ್ಲಿ ಗೋಚರಿಸುವುದಿಲ್ಲ. ಚರ್ಚಿಲ್ ನಾಯಕತ್ವವೇನೋ ಒಂದು ದೃಷ್ಟಿಯಿಂದ ಅಸಾಮಾನ್ಯವಾದುದು. ಚರಿತ್ರೆಯಲ್ಲಿ ನಿಲ್ಲುವ ಆಧುನಿಕ ಮಹಾಪುರುಷರ ಹೆಸರುಗಳ ಪೈಕಿ ಚರ್ಚಿಲ್ಲರದೊಂದು; ಇದನ್ನು ಆಟ್ಲೆಗಳೇ ನಿಸ್ಸಂಕೋಚವಾಗಿ ಒಪ್ಪಿಕೊಂಡಿದ್ದಾರೆ. ಆದರೆ ಹೋರಾಟರಂಗಕ್ಕಾದ ಖಡ್ಗವೇ ಆ ಯುದ್ಧದ ಘಾಯಗಳ ಮೇಲಿನ ಶಸ್ತ್ರಕ್ರಿಯೆಯ ಉಪಕರಣವೂ ಆಗಲಾರದೆಂಬುದನ್ನು ಬ್ರಿಟಿಷ್ ಮತದಾರರು ಬಲ್ಲರು. ಈ ತಾರತಮ್ಯವವರಿಗೆ ಚೆ


**On this Memorable day**

Of the 26th of January in the year 1950 of the inauguration of the Indian Republic, we have the pleasure to announce the birth of our

**Vijaya Cash Certificates**

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices.

Head Office:—**Kadri Road, Mangalore.**

Branches:- City-Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara.

**B. Manjaya Hegde.**

Advocate & President, District Board, S. Kanara.

CHAIRMAN

VIJAYA BANK, LTD.



*Nambiar's*

**ARYA VAIDYA SALA**

**UDIPI**

*Ideal House for Ayurvedic Treatment.*

T. N. Kelu Nambiar,
Vaidya.



**ಅಮೃತಾಂಜನ**

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.




REGD

ಪುಳುಕಡ್ಡಿ ಮುದ್ದು ನಮ್ಮಲ್ಲಿ ಸಿಕ್ಕುತ್ತದೆ.

**ಅಮೃತಾಂಜನ ಲಿಮಿಟೆಡ್**

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ನ್ನಾಗಿ ತಿಳಿದಿದ್ದಿರಬಹುದು. ಯುದ್ಧ ಮುಗಿದ ಬೆನ್ನಲ್ಲಿ ನಡೆದ ೧೯೪೫ರ ಚುನಾವಣೆಯಲ್ಲೇ ವ್ಯಕ್ತವಾಗಿದ್ದಿತು. ಇಂತಹ ತೇಜಃಪುಂಜ ನಾಯಕತ್ವವಿದ್ದರೂ, ಅದಕ್ಕನುಗುಣವಾದ ಸಹಾಯಕ ನಾಯಕ ವರ್ಗವು ಕನ್ಸರ್ವೇಟಿವ್ ಪಕ್ಷದಲ್ಲಿಲ್ಲ. ಚರ್ಚಿಲ್ಲರ ನಂತರ ಅಲ್ಲಿ ತೋರಿಬರುವವರೆಂದರೆ ಅಂತೋನಿ ಈಡೆನ್, ಒಲಿವರ್ ಸ್ಟ್ಯಾನ್ಲೆ, ಇವರಿಬ್ಬರು. ಆದರೆ 75 ವರುಷ ಪ್ರಾಯದ ಚರ್ಚಿಲ್ಲರ ಸ್ಥಾನಕ್ಕೆ ಬಂದು, ಅಷ್ಟೇ ತೂಕದವರಾಗಿ ತೋರಿಬರಲು ಇವರಿಬ್ಬರಿಂದಲೂ ಸಾಧ್ಯವಿಲ್ಲ. ಮಿಕ್ಕವರಂತೂ ನಗಣ್ಯರೇ. ಅಪ್ರಾಗತಿಕರ ಘೋರನೆಯ ದೆಸೆಯಿಂದಲೇ ಲೋಕದ ಎಲ್ಲೆಲ್ಲೂ ಕಮ್ಯೂನಿಸ್ಟ್ ಪ್ರಭಾವ ವ್ಯಾಪಿಸಿರುವಾಗ, ಈಗಲೂ ಅಪ್ರಾಗತಿಕರ ಆಳ್ವಿಕೆಗೊಳಗಾಗುವುದು ಕಾಲೋಚಿತವಾಗಲಾರದೆಂಬ ಜ್ಞಾನ ಬ್ರಿಟಿಷ್ ಜನತೆಗಿದ್ದಿರಬಹುದು. ಈ ರೀತಿ ಚರ್ಚಿಲ್ ಪಕ್ಷವು ಸ್ವತಃ ಅಯೋಗ್ಯವೆನ್ನಿಸಿರುವಾಗ, ಇದಿರುಗಡೆಯಲ್ಲಿ ಇದಕ್ಕಿಂತಲೂ ಹೆಚ್ಚಿನ ಅಯೋಗ್ಯತೆಯು ತೋರಿ ಬಂದರೆ ಮಾತ್ರ ಕನ್ಸರ್ವೇಟಿವ್ ಪಕ್ಷ ವಿಜಯದಾಶೆ ಕಟ್ಟಿಕೊಳ್ಳಬಹುದು. ಕಳೆದೈದು ವರುಷಗಳ ಆಡಳಿತೆಯಲ್ಲಿ ಬ್ರಿಟನಿನ ಕೂಲಿಗಾರ ಪಕ್ಷವು, ಭಾರತದ ಕಾಂಗ್ರೆಸ್ ಪಕ್ಷದಂತೆಯೇ ಜನತೆಯಲ್ಲಿ ಹಲವು ವಿಧದ ಸಿಂತೆಗಳನ್ನು ನಿರ್ಮಿಸಿದೆ, ಎಂಬುವನ್ನೊಪ್ಪದೇಕು? ತನ್ನ ಸಮತಾವಾದಿ ಧೋರಣೆಗನುಸಾರವಾಗಿ ಅವಸರವಸರದಿಂದ ಹಲವು ಉದ್ಯಮಗಳ ರಾಷ್ಟ್ರೀಕರಣ ಮಾಡಿದ ಲೇಬರ್ ಸರಕಾರವು ಕಬ್ಬಿಣದ ಕಡಲೆಯನ್ನು ಬಾಯಿಗೆ ಹಾಕಿಕೊಂಡವನಂತೆ ಜನತೆಗೆ ತೋರುತ್ತಿದೆ. ಇದ್ದಲು ಮತ್ತು ರೈಲ್ವೆಗಳ ರಾಷ್ಟ್ರೀಕರಣವು ಸಂಭವಗೊಂಡ ಅನುಭವವು ಜನತೆಗಾಗಿದೆ. ಮೇಲಾಗಿಯು, ಜೀವನದ ಸಿದ್ಧ ಸಂಬಂಧ ಘೋರಣೆಯು ದುರ್ಲಭವಾದುದೆಂಬ ಚಿಂತೆ ಸರ್ವತ್ರ ವ್ಯಾಪಿಸಿದೆ. ಕೂಲಿಗಾರ ಪಕ್ಷದೊಳಗೂ ಈ ಕುರಿತು ಅತೃಪ್ತಿಯಿದೆ, ಎಂಬುದನ್ನು ಮರೆಯಲಾಗುವದಿಲ್ಲ. ಈ ರೀತಿ ದೇಶದ ಒಳವ್ಯವಸ್ಥೆ, ಹೊರ ಸಂಬಂಧ, ಇವೆರಡರ ಮಟ್ಟಿಗೂ ಕೂಲಿಗಾರ ಸರಕಾರದ ಇದುವರೆಗಿನ ಕಾರ್ಯಗಳು ಅಸಮಾಧಾನಕರವಿವೆ. ಈ ಅತೃಪ್ತಿ ಮತ್ತು ಕನ್ಸರ್ವೇಟಿವ್ ಪಕ್ಷದ ಅಯೋಗ್ಯತೆ- ಇವೆರಡರ ಮಧ್ಯೆ ಯಾವುದು ವಾಸಿ, ಎಂದೇ ಬ್ರಿಟಿಷ್ ಜನತೆಯು ತೀರ್ಪ ಮಾಡಬೇಕಾಗಿ ಬಂದಿದೆ. ಯೋಗ್ಯತೆಯಲ್ಲಿ ಯಾರು ಮೇಲು ಎಂಬುದರ ಬದಲಿಗೆ, ಅಯೋಗ್ಯತೆಯಲ್ಲಿ ಯಾರು ಕಡಿಮೆ, ಎಂಬುದನ್ನೇ ತುಲನೆ ಮಾಡಿ ಬ್ರಿಟಿಷ್ ಮತದಾರರು ತೀರ್ಮಾನ ಕೊಡಬೇಕಾಗಿದೆ. ಕಳೆದ ಮಹಾ ಚುನಾವಣೆಯ ಅನಿರೀಕ್ಷಿತ ಪರಾಭವದ ನಂತರ ಕನ್ಸರ್ವೇಟಿವ್ ಪಕ್ಷವು ವಿಶೇಷ ರೀತಿಯಿಂದ ಸಂಘಟನೆ ಮತ್ತು ಶುದ್ಧೀಕರಣಗೊಂಡಿದೆ. 1945ರ ಆ ಚುನಾವಣೆಯ ನಂತರ, ಈವರೆಗೆ ನಡೆದ ಪಾರ್ಲಿಮೆಂಟ್ ಉಪ ಚುನಾವಣೆಗಳೆಲ್ಲವುಗಳಲ್ಲೂ ಕೂಲಿಗಾರ ಪಕ್ಷೀಯರೇ ಗೆದ್ದು ಬಂದಿದ್ದಾರೆ; ಆದರೆ ಪ್ರತಿಯೊಂದು ಮುನ್ಸಿಪಲ್ ಚುನಾವಣೆಗಳಲ್ಲೂ ಕನ್ಸರ್ವೇಟಿವ್ ಪಕ್ಷೀಯರಿದಿರು ಪ್ರಬಲ ಅಪಜಯಕ್ಕೀಡಾಗಿದ್ದಾರೆ. ಹೀಗಾಗಿ ಈ ಒರೆಗಲ್ಲಿನಲ್ಲಿಯೂ ಸರಿಯಾದ ಪರೀಕ್ಷೆಯಾಗುವದಿಲ್ಲ.

## ಮತದಾರರ ಮಾದರಿ

ಇನ್ನೊಂದು ವಾರದಲ್ಲಿ ನಡೆಯುವ ಬ್ರಿಟಿಷ್ ಚುನಾವಣೆಯ ಫಲಿತಾಂಶ ಹೇಗಾದರೂ, ಅದರಿಂದ ಕಲಿಯಬೇಕಾದ ಪಾಠವು ಭಾರತಕ್ಕಿರಬಹುದೇ ಹೊರತು ಹೆಚ್ಚಿನದೊದಗದು. ಆದರೆ ಹೊಸತಾಗಿ ಪ್ರಜಾರಾಜ್ಯವಾಗಿರುವ, ಮತ್ತು ಸದ್ಯದಲ್ಲೇ ಮಹಾಚುನಾವಣೆ ನಡೆಸಲಿರುವ ಸ್ವತಂತ್ರ ಭಾರತವು ಅಲ್ಲಿಯ ಚುನಾವಣಾ ರೀತಿನೀತಿಗಳಿಂದಲೂ ಕಲಿತುಕೊಳ್ಳಬೇಕಾದ ಅಂಶಗಳಿವೆ. ಕೆಲವು ಶತಮಾನಗಳಲ್ಲೇ ಲೋಕದ ಗಣ್ಯ ಭಾಗದ ಜನತೆಯ ಅದೃಷ್ಟಕ್ಕೆ ಬಗಾವಾಗುವ ಮತ್ತು ಪತ್ರವನ್ನು ಪೆಟ್ಟಿಗೆಯೊಳಗೆ ತುರುಕಿಸುತ್ತಾ ಬಂದಿದ್ದ ಕೈ ಬ್ರಿಟಿಷ್ ಮತದಾರನದು. ಅವನ ಜ್ಞಾನ ಮತ್ತು ಅನುಭವ ಹೆಚ್ಚಿನದು. ಆದ್ದರಿಂದಲೇ ಎಂತಹ ದುಷ್ಕಾಲ ಮತ್ತು ವಿಶೇಷ ಸನ್ನಿವೇಶಗಳನ್ನಾದರೂ ಪ್ರಜಾಸತ್ತಾ ಪದ್ಧತಿಗಳನ್ನು ಅನುಸರಿಸಿಯೇ ಇದಿರಿಸಿ ಗೆಲ್ಲಲು ಬ್ರಿಟನಿಗೆ ಸಾಧ್ಯವಾಗಿದ್ದಿತು. ಬ್ರಿಟಿಷ್ ಮತದಾರರಲ್ಲಿ ರಾಜಕೀಯ ಜಾಗ್ರತಿ ಮತ್ತು ತಿಳುವಳಿಕೆ ಪರಿಪೂರ್ಣವಿದ್ದರೂ, ನಿತ್ಯಜೀವನದಲ್ಲಿ ಅಲ್ಲಿಯ ಜನಸಾಮಾನ್ಯರೂ ಮಿಕ್ಕವರಂತೆಯೇ ಮನೋವೃತ್ತಿಯನ್ನಲ್ಲದೆ ರಾಜಕೀಯ ಮನೋವೃತ್ತಿಯನ್ನು ಕಟ್ಟಿಕೊಂಡಿಲ್ಲ. ಕಳೆದ ಹತ್ತು ವರುಷಗಳಿಂದ ತುಣುಕು ಚೂರುಗಳಷ್ಟೇ ಇದ್ದಿರುವ ತನ್ನ ಅಡುಗೆ ಭಂಡಾರವನ್ನು ತುಂಬಿಸುವವರಾರಹುದೇ ಎಂದಲ್ಲದೆ, ಭಾರತಕ್ಕೆ ಸ್ವತಂತ್ರ ಕೊಟ್ಟವರಾರು, ಇನ್ನೊಂದು ಯುದ್ಧ ಗೆಲ್ಲುವವರಾರು, ಎಂದು ಬ್ರಿಟಿಷ್ ಮತದಾರನು ಈ ಕಾಲದಲ್ಲಿ ಶೋಧಿಸುವಂತಿಲ್ಲ. ಪ್ರಕೃತ ಪ್ರತಿಯೊಂದು ರಾಷ್ಟ್ರದ ಪಾಲಿಗೂ ಪ್ರಾಮುಖ್ಯ ಪ್ರಶ್ನೆಯಾಗಿರುವ ಆಹಾರ ಮತ್ತು ನಿತ್ಯ ಜೀವನ ಸ್ಥಿತಿಯ ಕಡೆಗೆ, ಎಂತಹ ಜಾಗೃತ ಮತದಾರನಾದರೂ ಪ್ರಥಮ ಲಕ್ಷ್ಯ ಕೊಡಬೇಕಾದುದು ಸ್ವಾಭಾವಿಕವೇ. ಈ ಕಾಲದಲ್ಲಿ ರಾಜಕೀಯಾರಾಧನೆಗಿಂತ ಮೊದಲು ಉದರ ಪೂಜೆ! ಆದರಲ್ಲಿಯೂ ಕಾಲ- ಕಾರ್ಯ ನಿರ್ಮಾಣಗಳ ತರಗತಿ ವಿಂಗಡಿಸಿ ನೋಡಿಕೊಳ್ಳಲು ಬ್ರಿಟಿಷ್ ಮತದಾರನಿಗೆ ಗೊತ್ತಿದೆ. ತಮ್ಮ ಮುಂದಿರುವ ವಿವಿಧ ಚುನಾವಣಾ ಘೋಷಣೆಗಳ ಪೈಕಿ ಈ ಸ್ಥಿತಿ ಸುಧಾರಣೆಗೆ ವಿಶೇಷ ಅನುಕೂಲವಾಗುವಂತಹದಾವುದು, ಎಂಬುದನ್ನು ಪತ್ತೆಹಚ್ಚುವಷ್ಟು ವಿಮರ್ಶಾತ್ಮಕ ಬುದ್ಧಿ ಬ್ರಿಟಿಷ್ ಮತದಾರನಲ್ಲಿದೆ. ಆ ಮೇಲೆ ಈಗ ಇದಿರು ಬಂದಿರುವ ಹೈಡ್ರೋಜನ್ ಬೋಂಬಿನಿಂದಾರಂಭಿಸಿ ಪ್ರತಿಯೊಂದು ವಿಷಯವನ್ನೂ ತಿಳಿದುಕೊಂಡೇ ಬ್ರಿಟಿಷ್ ಮತದಾರನು ಮತದಾನ ಕೇಂದ್ರದತ್ತ ಮುಖ ಮಾಡುತ್ತಾನೆ. ಅವನ ಮನಸ್ಸಿನಲ್ಲೇನಿದೆ, ಎಂಬುದನ್ನು ಉಮೇದ್ವಾರರು ಅರಿಯಲಾರರು. ಅಲ್ಲಿ ತನ್ನ ಪಕ್ಷದ ಪರವಾಗಿ, ತನ್ನ ಪರವಾಗಿ ತುಂಬಿಸಬೇಕಾದ್ದನ್ನೆಲ್ಲಾ ಪ್ರಚಾರ ಮೂಲಕ ಅತ ತುಂಬಿಸಿದ್ದಾನೆ; ಆದರೆ ತನ್ನ ಇದಿರಾಳಿ ಕೂಡಾ ಹಾಗೆಯೇ ಮಾಡಿದ್ದಾನೆಂಬುದು ಅವನಿಗೆ ಗೊತ್ತಿದೆ. ಹೀಗೆ ಎಲ್ಲಾ ವಾದವನ್ನೂ ಗ್ರಹಿಸಿಕೊಂಡ ಮತದಾರನ ಮನಸ್ಸು ಯಾವ ತೀರ್ಮಾನವನ್ನು ಹೇರಬಹುದು ಎಂಬುದು ತಿಳಿಯದು. ಬ್ರಿಟಿಷ್ ಮತದಾರನೆಂಬ ನ್ಯಾಯಾಧೀಶನಿದಿರು ತಂತಮ್ಮ ಪಕ್ಷದ ಪರವಾಗಿ ತಂತಮ್ಮ ಪ್ರತಿಭೆಯನ್ನೆಲ್ಲಾ ಉಪಯೋಗಿಸಿ ವಾದಿಸಿ, ತೀರ್ಪು ಹೇಗಾಗುವುದೋ ಎಂದು ಆತುರದಿಂದ ಕಾಯುವ ವಕೀಲರಂತಿರುತ್ತಾರೆ ವಿವಿಧ ಪಕ್ಷೀಯ ಉಮೇದ್ವಾರರು. ಬ್ರಿಟಿಷ್ ಮತದಾರನಂತೆ ಈ ತೀರ್ಮಾನಕರ್ತ ಸ್ಥಾನವನ್ನೇ ತಾನೂ ವಹಿಸಬೇಕೆಂದು ಭಾರತೀಯ ಮತದಾರನು ಅರಿಯಬೇಕು; ನಿರ್ಧರಿಸಬೇಕು. ಯಾವುದೇ ವಿಧದ ಹಂಗು, ದಾಕ್ಷಿಣ್ಯ, ಸಂಕುಚಿತ ಅಭಿಮಾನ, ಪ್ರಭಾವಗಳಿಗೊಳಗಾಗುವ ದೌರ್ಬಲ್ಯವು ಮತಾಧಿಕಾರವಿರುವವನಿಗೆ ಹೇಳಿಸದು. ಅವನು ತೀರ್ಮಾನ ಕೊಡುವವನಿದ್ದಾನೆ ಹೊರತು, ಯಾರ ಯಾವ ವಿಧದ ತೀರ್ಮಾನಗಳಿಗೂ ಕಟ್ಟು ಬೀಳತಕ್ಕವನಲ್ಲ. ಇಂತಹ ಒಂದು ಮಾದರಿ ಇಂದು ಇಂಗ್ಲಾಂಡಿನಲ್ಲಿ ಕಂಡು ಬರುತ್ತಿದೆ. ಬ್ರಿಟನಿನ ವೇಷ ಭೂಷಣ, ಮರ್ಜಿ, ಭಾಷೆಗಳನ್ನು ಅಂಗೀಕರಿಸಿಕೊಳ್ಳುವ ಅಭ್ಯಾಸವು ಭಾರತದಲ್ಲಿ ಸಾಕಷ್ಟಿದೆ ತಮಗೆ ಅಷ್ಟೊಂದು ಒಗ್ಗದ ವಿಷಯಗಳಲ್ಲಿ ಮಾತ್ರ ಹೀಗೇಕೆ? ಮತದಾರನ ಹೊಣೆಗಾರಿಕೆಯನ್ನರಿತುಕೊಳ್ಳುವ ಮಟ್ಟಿಗೂ ನಾವು ಬ್ರಿಟಿಷ್ ಮತದಾರನನ್ನು ಅನುಕರಿಸಿದರಾಗದೆ? ಅವರೇನೂ ಪೂರ್ಣತೆ ಪಡೆದಿಲ್ಲ; ಆದರೂ ಇಲ್ಲಿಯ ಮತದಾರರಷ್ಟು ಅಪೂರ್ಣರಲ್ಲ. ಆದ್ದರಿಂದ ಪ್ರಥಮ ಹೆಜ್ಜೆಯಲ್ಲಿ ಬ್ರಿಟಿಷ್ ಮತದಾರರ ಸಂಗತಿಗಾದರೂ ಹಿಂದೇ ಮತದಾರರು ಏರುವುದು ಆಗತ್ಯ.

THE
Canara Industrial & Banking Syndicate Ltd.
Head Office

NOTICE

The Register of Members and Transfer Books of the Bank will remain closed from the 25th February 1950 to 25th March 1950, both days inclusive.

(By Order)

UDIPI
10th Feb. 1950

K. V. Shenoy,
Secretary.

ಶರೀರದಲ್ಲಿಯ ಅಸಹ್ಯ ಉಷ್ಣತೆಯನ್ನು ಇದರಿಂದಲೇ ತೆಗೆದು ಹಾಕಿರಿ

PEARL'S
Kadha
PURE HERBAL TONIC

ತಿಳಿಕಾದು ಶರೀರದ ಒಳಗಿನ ಮತ್ತು ಹೊರಗಿನ ಉರುವನ್ನು ತೆಗೆದು ಹಾಕಿ ಪ್ರಕೃತಿಯನ್ನು ತಂಪಾಗಿಡುವದು, ಅಪಚನ ಅಜೀರ್ಣವನ್ನು ಸರಿಪಡಿಸುವದು, ಶಾರೀರಿಕ ಮತ್ತು ಮಾನಸಿಕ ಶಕ್ತಿಯನ್ನು ಬೆಳೆಸುವದು, ಧಾತು ಸ್ಥಾನದಲ್ಲಿಯ ಉಷ್ಣತೆಯನ್ನು ಹೋಗಲಾಡಿಸಿ ಪುಷ್ಟಿಕರ ಮಾಡುವದು

ನಿಮ್ಮ ಹತ್ತಿರದ ಕೆಮಿಸ್ಟರ ಕಡೆಯಿಂದ ಇಂದೇ ಒಂದು ಬಾಟಲಿಯನ್ನು ತಂದು ಸೇವಿಸಲು ಪ್ರಾರಂಭಿಸಿರಿ

ಪರ್ಲ ಎಂಡ್ ಕಂಪನಿ
ಮುಂಬಯಿ ೨

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣ ಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬ್ರೆಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding
ROYAL MAHAL,
UDIPI, S. Kanara.

ಭಾರದ್ವಾಜರ
ಇಂಗ್ಲಿಷ್ × ಇಂಗ್ಲಿಷ್ × ಕನ್ನಡ
ಡಿಕ್ಸನರಿಗಳು
ದೊರೆಯುತ್ತವೆ.
ಬೆಲೆ ರೂ. 5 0 0
ಸಿರಿಗನ್ನಡ ಅರ್ಥಕೋಶ 4 8 0
ನವಯುಗ ಪ್ರೆಸ್, ಉಡುಪಿ.
ಅಥವಾ
ನವಯುಗ ಆಫೀಸು, ಉಡುಪಿ.

# ಜಾಗತಿಕ ಸ್ಥಿತಿಗತಿ-ಭಾರತದ ವಿದ್ಯಮಾನ

ಜಾಗತಿಕ ಸ್ಥಿತಿಗತಿಗಳು ಯಥಾ ಪ್ರಕಾರ ಸಾಗಿವೆ. ಅತ್ತ ರಶ್ಯಾ ಮತ್ತು ಅಮೆರಿಕ, ಬ್ರಿಟನುಗಳೊಳಗಿನ ಸಂಬಂಧ, ಇತ್ತ ಭಾರತ ಮತ್ತು ಪಾಕಿಸ್ತಾನಗಳೊಳ ಸಂಬಂಧ ಇನ್ನಷ್ಟು ಕೆಟ್ಟಿದೆ. ಒಟ್ಟಿನ ಮೇಲೆ ಪ್ರಪಂಚದ ಗಮನವು ವಿನಾಶಕ ವಿಧಾನಗಳತ್ತ ಬಿದ್ದಷ್ಟು ವಿಧಾಯಕ ರೀತಿ ನೀತಿಗಳ ಕಡೆಗೆ ಬಿದ್ದಿಲ್ಲ.

## ಮಹಾ ಸ್ಪರ್ಧೆ

ಹಿಂದೊಮ್ಮೆ ದೀರ್ಘಾವಧಿಯಲ್ಲಿದ್ದು ಕಟ್ಟಕಡೆಗೆ ಅಮೆರಿಕ, ಬ್ರಿಟನ್, ಫ್ರಾನ್ಸ್ ಮತ್ತು ರಶ್ಯಗಳೊಳಗಾಗಿದ್ದ ಪ್ಯಾರಿಸ್ ಒಡಂಬಡಿಕೆಯಂತೆ ರದ್ದಾಗಿದ್ದ ಬರ್ಲಿನ್ ದಿಗ್ಬಂಧನವು ಪುನಃ ಹೇರಲ್ಪಡುವ ಸಂಭವವಿದೆ. ಪ್ಯಾರಿಸ್ ಒಪ್ಪಂದದ ಶರ್ತಗಳಿಗೆ ವಿರುದ್ಧವಾಗಿ ತಮ್ಮ ಕ್ಷೇತ್ರದ ಮೇಲೆ ವ್ಯಾಪಾರ ಬಹಿಷ್ಕಾರ ಹಾಕಿದ್ದಾರೆಂದು ಪಾಶ್ಚಾತ್ಯ ರಾಷ್ಟ್ರಗಳು ರಶ್ಯವನ್ನೂ ರಶ್ಯವು ಪಾಶ್ಚಾತ್ಯ ರಾಷ್ಟ್ರಗಳನ್ನೂ ಏಕ ಪ್ರಕಾರ ಆರೋಪಿಸುತ್ತಿವೆ. ತಮ್ಮ ಪಾಲಿನ ಪಶ್ಚಿಮ ಜರ್ಮನಿ ವಲಯಕ್ಕೆ ಯಾವ ತುಣುಕ ಲೋಹಗಳೂ ಸಾಗದಂತೆ ಸೋವಿಯೆಟ್ ಅಧಿಕಾರಿಗಳು ಬಹಿಷ್ಕಾರ ಹೇರಿದ್ದಾರೆಂದು ಅಮೆರಿಕ, ಬ್ರಿಟನ್, ಫ್ರಾನ್ಸ್ ಅಧಿಕಾರಿಗಳ ಆಕ್ಷೇಪ. ಇಂತಹ ಪರಿಸ್ಥಿತಿಯನ್ನು ಸಹಿಸಿಕೊಂಡಿರಲು ತಾವು ತಯಾರಿಲ್ಲವೆಂಬ ಖಂಡತುಂಡ ಪತ್ರ ಪಾಶ್ಚಾತ್ಯ ಸರಕಾರೀ ಅಧಿಕಾರಿಗಳಿಂದ ಸೋವಿಯೆಟ್ ಅಧಿಕಾರಿಗಳಿಗೆ ಹೋಗಿದೆ. ಪಶ್ಚಿಮ ಜರ್ಮನಿಯಿಂದ ಪೂರ್ವ ಜರ್ಮನಿಗೆ ಉಕ್ಕು ರವಾನೆಯಾಗದಂತೆ ಪ್ರತಿಬಂಧಿಸಿ, ಅಮೆರಿಕವು ದಿಗ್ಬಂಧನವನ್ನಾರಂಭಿಸಿದೆಯೆಂದೂ, ಆದರೂ ತಾವು ಬೇರೆ ಕಡೆಯಿಂದ ಉಕ್ಕನ್ನು ತರಿಸಿಕೊಳ್ಳುವೆವಾದ್ದರಿಂದ ಪೂರ್ವ ಜರ್ಮನಿಯ ಕಾರ್ಖಾನೆಗಳು ಒಂದೇ ಒಂದು ದಿನವಾದರೂ ಕಾರ್ಯ ನಿಲ್ಲಿಸಲಾರವೆಂದೂ ರಶ್ಯನ್ ಅಧಿಕಾರಿಗಳ ಘರ್ಜನೆ. ಈ ಆರೋಪ, ಪ್ರತ್ಯಾರೋಪಗಳು ಬೆಳೆದು ಪುನಃ ಬರ್ಲಿನ್ ಘರ್ಷಣೆಯೇಳಬಹುದೇ? ಎರಡನೇ ಬಾರಿ ಏಳುವ ಆ ಕಚ್ಚಾಟವು ಹೋರಾಟವಾಗಿ ಪರಿಣಮಿಸಬಹುದೇ? ಎಂಬ ಆತುರವೇಳುತ್ತಿದೆ. ಅತ್ತ ಅಮೆರಿಕದಲ್ಲಿ ರಶ್ಯವು ತಮ್ಮ ಮೇಲೆ ಆಕಸ್ಮಿಕ ಧಾಳಿ ನಡೆಸಬಹುದೆಂಬ ಬಿಸಿ ಸುದ್ದಿ ಪ್ರಚಾರದಲ್ಲಿದೆ. ಯಾವ ಆಧಾರದಿಂದಲೋ, ಅಮೆರಿಕದ ಪತ್ರಿಕೆಗಳು, ರೇಡಿಯೋ ಮತ್ತಿತರ ಪ್ರಚಾರ ಸಾಧನಗಳು ಏಕ ಪ್ರಕಾರ ಅಮೇರಿಕದಲ್ಲಿ ಹಬ್ಬಿರುವ 'ರಶ್ಯವು ನಡೆಸಲಿರುವ ಆಕಸ್ಮಿಕ ಧಾಳಿ'ಯ ವಾರ್ತೆಗಳನ್ನು ಸಾರುತ್ತಿವೆ. ಇಂತಹ ವಾತಾವರಣದಲ್ಲಿ ಲೋಕದ ಶಾಶ್ವತ ಶಾಂತಿ ಬಿಡಿ ಮಾತಂತಿರಲಿ, ತಾತ್ಕಾಲಿಕ ಶಾಂತಿಯ ಭರವಸೆಯನ್ನಾದರೂ ಹೇಗೆ ಇಟ್ಟುಕೊಳ್ಳಬೇಕು?

ಹೈಡ್ರೋಜಿನ್ ಮಹಾಬೋಂಬಿನ ನವೋತ ಆಟಮ್ ಶಕ್ತಿಯ ನಿಯಂತ್ರಣದ ಕುರಿತು ಅಮೆರಿಕದ ಹಿಂದಿನ ಧೋರಣೆಯೇ ಅಚಲವಾಗಿರುವುದೆಂದೂ ಆಟಂ ಶಕ್ತಿಯ ಅಂತರ್ರಾಷ್ಟ್ರೀಯ ನಿಯಂತ್ರಣ ಮತ್ತು ನಿಶ್ಶಸ್ತ್ರೀಕರಣದ ಸೂಚನೆಯನ್ನು ಅಮೆರಿಕದ ಪ್ರತಿನಿಧಿ ಬರೂಚರು ಈ ಮೊದಲೇ ಸಂಯುಕ್ತರಾಷ್ಟ್ರ ಸಂಘದ ಮುಂದಿಟ್ಟಿದ್ದು ತಾವದಕ್ಕೆ ಎಂದೆಂದಿಗೂ ತಯಾರೆಂದೂ ಅಧ್ಯಕ್ಷ ಟ್ರುಮೇನರಂದಿದ್ದಾರೆ. ಅಮೇರಿಕದ ಗೃಹಕಾರ್ಯದರ್ಶಿ ಮಿ. ಡೀನ್ ಆಚ್‌ಸೆನರು, ರಶ್ಯದೊಡನೊಂದು ಒಪ್ಪಂದ ಮಾಡಿಕೊಳ್ಳುವುದರಲ್ಲಿರುವ ಕಷ್ಟಗಳನ್ನು ವಿವರಿಸುತ್ತಾ ಸಾಕಷ್ಟು ಶಕ್ತಿಯಬಂಟೆಂದು ತೋರಿಸಿಕೊಳ್ಳದೆ ರಶ್ಯದೊಡನೆ ಮಾಡಿಕೊಳ್ಳುವ ಒಡಂಬಡಿಕೆಗೆ ಬೆಲೆಬರಲಾರದೆಂದೊಸಾರಿದ್ದಾರು. ಆಟಂ ಶಕ್ತಿನಿಯಂತ್ರಣದ ಕುರಿತಾದ ಒಪ್ಪಂದಕ್ಕಾಗಿ ಅಮೆರಿಕವು ಯೋಗ್ಯ ಕಾಲ ಬಂದಾಗ ರಶ್ಯವನ್ನು ಸಂಧಿಸಲಿರುವುದೆಂದು ಅಮೆರಿಕದ ಸೆನೇಟರ್ ಟೋಮ್ ಕೆನ್ನೆಲಿಯವರ ಅಬೋಣ. ಅಂತೂ ರಶ್ಯಾ-ಅಮೆರಿಕಗಳೊಳಗಿರುವ ಪರಸ್ಪರ ಅವಿಶ್ವಾಸ, ದ್ವೇಷಾಸೂಯೆಗಳ ದೆಸೆಯಿಂದ ಶಾಂತಿಸಾಧನಾ ಪ್ರಯತ್ನವು ಪೂರ್ಣ ಮಾಯವಾಗಿದೆ; ಲೋಕಾಪಾಯು ಚಿಹ್ನ ದಿನದಿಂದ ದಿನಕ್ಕೆ ಸ್ಪಷ್ಟವಾಗುತ್ತಾ ಬಂದಿದೆ.

ಭದ್ರತಾ ಕೌನ್ಸಿಲಿನಲ್ಲಿ ಚಿಯಾಂಗ್ ಸರಕಾರದ ಪ್ರತಿನಿಧಿಯೇ ಇನ್ನೂ ಸ್ಥಾನಾಪನ್ನನಾಗಿರುವ ವರೆಗೆ ಅದರ ಕಾರ್ಯಕಲಾಪಗಳನ್ನು ಬಹಿಷ್ಕರಿಸುವೆನೆಂಬ ಶಪಥವನ್ನು ರಶ್ಯಾ ತೊಟ್ಟಿದ್ದರೆ, ಆ ಪ್ರತಿನಿಧಿಯನ್ನು ಸ್ಥಾನಭ್ರಷ್ಟಮಾಡುವ ಯಾವ ಸೂಚನೆಯನ್ನಾದರೂ ತಾನು ವಿರೋಧಿಸುವೆನೆಂದು ಅಮೇರಿಕ ಸಾರಿದೆ. ಇಂಗ್ಲಾಂಡಿನ ವಿಜ್ಞಾನಿ ಡಾ. ಕ್ಲಾಸ್ ಫ್ಯುಚ್ಸ್ ಎಂಬವರು ಪ್ರಾಮುಖ್ಯ ಆಟಂ ಗುಟ್ಟುಗಳನ್ನು ರಶ್ಯಕ್ಕೆ ಕೊಟ್ಟರೆಂಬ ಅಪಾದನೆಯಿಂದ ಕ್ರಿಮಿನಲ್ ಕೋರ್ಟಿನ ವಿಚಾರಣೆಗೊಳಗಾಗಿದ್ದಾರೆ ಇಂತಹ ದ್ವೇಷ, ಸ್ಪರ್ಧೆ, ಸಂಚು ಹಂಚಿಕೆಗಳಿಂದ ವಾತಾವರಣ ಕುದಿಯುತ್ತಿದೆ.

## ಭಾರತ- ಹೊರಸಂಬಂಧ

ಪಾಕಿಸ್ತಾನ್ ಸಂಬಂಧದ ವಿವಾದಗಳನ್ನು ಬಿಟ್ಟರೆ ಭಾರತವು ಇತ್ಯರ್ಥಿಸಿಕೊಳ್ಳಬೇಕಾಗಿರುವ ಪ್ರತ್ಯಕ್ಷ ವಿದೇಶೀ ವಹಿವಾಟೆಂದರೆ, ಭಾರತದಲ್ಲಿನ್ನೂ ಕೆಲವೆಡೆ ಉಳಿದಿರುವ ವಿದೇಶೀ ಮೇಲಧಿಕಾರಿಗಳ ಸಂಬಂಧವು. ಆ ಪ್ರಕಾರ ದಕ್ಷಿಣಭಾರತದಲ್ಲಿರುವ ಫ್ರೆಂಚ ವಸಾಹತುಗಳ ಭವಿಷ್ಯವನ್ನು ಸಂಬಂಧಪಟ್ಟ ಕ್ಷೇತ್ರಗಳ ಜನಮತದಂತೆ ತೀರ್ಮಾನಿಸಿಕೊಳ್ಳಬೇಕೆಂಬ ಫ್ರಾನ್ಸ್ ಮತ್ತು ಭಾರತ ಸರಕಾರಗಳೊಳಗೊಂದು ಒಡಂಬಡಿಕೆ ಈ ಮೊದಲಾಗಿದ್ದಿತು. ಆ ಮತ ಸಂಗ್ರಹ ಸಂಬಂಧದ ಶರ್ತಗಳನ್ನು ಮೀರಿಯೇ ಫ್ರೆಂಚ್ ಅಧಿಕಾರಿಗಳು ವರ್ತಿಸುತ್ತಾ ಬಂದುದರಿಂದ ಭಾರತ ಸರಕಾರವು ತನ್ನ ನಿಷೇಧಗಳನ್ನು ಫ್ರಾನ್ಸ್ ಸರಕಾರಕ್ಕೆ ಕಳುಹಿದ್ದಿತು. ತತ್ಪರಿಣಾಮವಾಗಿ ಫ್ರಾನ್ಸ್ ಸರಕಾರವೀಗ ದಕ್ಷಿಣ ಭಾರತದಲ್ಲಿರುವ ತನ್ನ ವಸಾಹತುಗಳ ಜನಮತ ಸಂಗ್ರಹವನ್ನು ಅನಿಶ್ಚಿತಾವಧಿಗೆ ಹಿಂದೆ ಹಾಕಿದೆ. ಪೂರ್ವ ನಿಶ್ಚಯದಂತೆ ಬರುವ ಮಾರ್ಚಿ ಎರಡನೇ ವಾರದಲ್ಲಿ ಈ ಜನಮತ ಸಂಗ್ರಹ ನಡೆಯಬೇಕಿದ್ದಿತು. ಅದೀಗ ಹಿಂದೆ ಹಾಕಲ್ಪಟ್ಟಿರುವುದರಿಂದ ಮುಂದೇನು, ಎಂಬ ಪ್ರಶ್ನೆಯೆದ್ದಿದೆ. ಮತ ಸಂಗ್ರಹದ ಗೊಡವೆಯನ್ನೇ ಬಿಟ್ಟು ಭಾರತ ನಾಯಕರೊಡನೆ ಸಂಧಾನ ಮಾತುಕತೆ ಕೂಡಿಯೇ ಈ ಪ್ರಶ್ನೆಯನ್ನು ತೀರ್ಮಾನಿಸಿಕೊಳ್ಳುವ ಆಶೆಯು ಫ್ರೆಂಚ್ ಸರಕಾರದ್ದೆಂಬ ಸೂಚನೆಯಿದೆ. ಆದರೆ ಉತ್ತರ ಭಾರತದಲ್ಲಿದ್ದ ಫ್ರೆಂಚ್ ವಸಾಹತು ಚಂದ್ರನಾಗೋರಿನಲ್ಲಿ ಈ ಮೊದಲೇ ಜನಮತ ಸಂಗ್ರಹವಾಗಿ, ಅದು ಭಾರತಕ್ಕೆ ಸೇರಬೇಕೆಂಬ ಸ್ಪಷ್ಟ ತೀರ್ಮಾನ ದೊರೆತಿದ್ದರೂ, ಅದಕ್ಕೆ ಸಂಬಂಧಿಸಿದ ಮಾತುಕತೆಗಳ ನೆವದಿಂದ ಫ್ರೆಂಚರು ಇದು ವರೆಗೂ ಅದನ್ನು ಬಿಟ್ಟು ಕೊಡದೆ ಕಾಲಹರಣ ಮಾಡುತಿದ್ದಾರೆ. ಸಮಯ ನುಂಗುವ ತಮ್ಮೀ ಸ್ವಭಾವವನ್ನೇ ದ. ಭಾರತದ ವಸಾಹತುಗಳ ಮಟ್ಟಿಗೂ ಮುಂದೊಡ್ಡುವ ಆಶೆ ಫ್ರೆಂಚರದಿರಬಹುದು. ಆದರೆ ಭಾರತ ಸರಕಾರವು ಅಂತಹ ಕಾಲಹರಣವನ್ನಿನ್ನು ಸಹಿಸಲಾರದಾದ್ದರಿಂದ • ಕೂಡಲೇ ಆ ಸಂಬಂಧದ ತೀರ್ಮಾನವಾಗಬೇಕೆಂದು ಒತ್ತಾಯಿಸುವುದರಲ್ಲಿದೆ.

ಅತ್ತ ದಕ್ಷಿಣಾಫ್ರಿಕದಲ್ಲಿ ಭಾರತೀಯರು, ಪಾಕಿಸ್ತಾನಿಗಳೇ ಮುಂತಾದ ಕರಿಜನಾಂಗದವರಿಗಾಗುತ್ತಿರುವ ಅನ್ಯಾಯಗಳ ಕುರಿತು ಚರ್ಚಿಸಲು ದಕ್ಷಿಣಾಫ್ರಿಕ-ಭಾರತ-ಪಾಕಿಸ್ತಾನ್ ಈ ಮೂರು ಸರಕಾರಗಳ ಪ್ರತಿನಿಧೀ ಸಮ್ಮೇಳನವೊಂದು ದಕ್ಷಿಣಾಫ್ರಿಕದ ಕೇಪ್ ಟೌನಿನಲ್ಲಿ ಸೇರಿದ್ದಿತು. ಒಂದು ವಾರಗಳ ಮಾತುಕತೆಯ ಪರಿಣಾಮವಾಗಿ ಈ ತ್ರಿರಾಷ್ಟ್ರಗಳ ದುಂಡು ಮೇಜು ಸಮ್ಮೇಳನವೊಂದನ್ನು ನಡೆಸುವ ಕುರಿತೊಂದು ಒಮ್ಮತವಾಗಿದೆ ಎಂದು ನಂಬಲಾಗಿದೆ. ಆ ಕುರಿತು ಅಧಿಕೃತ ಪ್ರಕಟಣೆಯೊಂದು ಸದ್ಯದಲ್ಲೇ ಹೊರಬೀಳಲಿದ್ದು ಆ ವರೆಗೆ ಎಲ್ಲವನ್ನೂ ಅತ್ಯಂತ ಗುಪ್ತವಾಗಿ ಇಡಲಾಗಿದೆ.

## ಭಾರತ—ಪಾಕಿಸ್ತಾನ

ಇತ್ತ ದುರದೃಷ್ಟವಶಾತ್ ಭಾರತ-ಪಾಕಿಸ್ತಾನಗಳೊಳಗಿನ ಹಳೇ ವಿವಾದಗಳು ಹೊಸ ಹೊಸ ಚಿಗುರು ಬಿಡುತ್ತಲೇ ಹೋಗಿವೆ.

ಕಳೆದ ವಾರ ಲೇಕ್ ಸಕ್ಸೆಸಿನಲ್ಲಿ ಭದ್ರತಾ ಕೌನ್ಸಿಲು ಸೇರಿ ಪಾಕಿಸ್ತಾನದ ಪ್ರತಿನಿಧಿ ಸರ್. ಝಫರುಲ್ಲಾಖಾನರ ಮತ್ತು ಭಾರತದ ಪ್ರತಿನಿಧಿ ಸರ್. ಬೆನಗಲ್ ನರಸಿಂಗರಾಯರ ತರ್ಕ ಪೂರ್ಣ ಭಾಷಣಗಳನ್ನು ಪೂರ್ತಿ ನಾಲ್ಕು ದಿನ ಕೇಳಿದ್ದಿತು. ಸರ್. ಝಫರುಲ್ಲರೊಬ್ಬರೇ ಮೂರು ದಿನಗಳಲ್ಲಿ ಎಂಟುತಾಸು ಮಾತಾಡಿದ್ದರು. ಸರ್ ಬಿ. ಎನ್. ರಾಯರು ಪಾಕಿಸ್ತಾನದ ಆಕ್ರಮಣ ಕಾರ್ಯವನ್ನು ಮನಮುಟ್ಟುವಂತೆ ಚಿತ್ರಿಸುತ್ತಾ ತನ್ನ ವಾದ ಸಮರ್ಥನೆಗಾಗಿ, ಪಾಕಿಸ್ತಾನದ ಸರ್ವ ಸೇನಾನಿಯಾಗಿರುವ ಸರ್. ಡೊಗ್ಲಾಸ್ ಗ್ರೇಸಿಯವರು ಪಾಕಿಸ್ತಾನ್ ಸರಕಾರಕ್ಕೆ ಮಾಡಿಕೊಂಡಿದ್ದ ಸೇನಾ ಸ್ಥಿತಿ ನಿವೇದನೆಯ ದಾಖಲೆಯನ್ನು ಮುಂದಿಟ್ಟಿದ್ದರು. ಆದಿಕಾಲದಿಂದಲೂ ಕಾಶ್ಮೀರಪಢಾಳಿಗಾರ ಗುಟ್ಟಾಗಾಡು ಜನರಿಗೆ ಪಾಕಿಸ್ತಾನವು ಸಹಾಯ ಕೊಡುತಿತ್ತೆಂಬುದು ಆದರಿಂದ ಖಚಿತವಾಗುತಿತ್ತಲ್ಲದೆ 'ಇನ್ನೂ ಹೆಚ್ಚಿನ ಪ್ರತ್ಯಕ್ಷ ಸಹಾಯ ಕೊಡಬೇಕು" ಎಂದು ಸರ್. ಗ್ರೇಸಿಯವರು ಕೇಳಿಕೊಂಡಿದ್ದುದೂ ತಿಳಿದು ಬಂತು. 'ಆದರಿದು ಭದ್ರತಾ ಕೌನ್ಸಿಲಿನ 1948ನೇ ಅಗೋಸ್ತು 13ರ ಮತ್ತು 1947ನೇ ಜನವರಿ 5ರ ನಿರ್ಣಯಗಳಿಗಿಂತ ಮೊದಲಿನ ವಿಷಯವಾಗಿದೆ-ಅದರ ತಪ್ಪು, ಸರಿ ಹೇಗಿದ್ದರೂ ಆ ಸ್ಥಿತಿಯನ್ನು ಭಾರತ ಪಾಕಿಸ್ತಾನಗಳು ಈ ಮೊದಲೇ ಒಪ್ಪಿಕೊಂಡಾಗಿದೆಯಾದ್ದರಿಂದ ಈಗ ಅದು ಚರ್ಚಾತೀತವಾದುದು. ಈ ಮೊದಲೊಮ್ಮೆ ಭಾರತ ಪಾಕಿಸ್ತಾನಗಳು ಒಮ್ಮತಕ್ಕೆ ಬಂದಿದ್ದ ಶರ್ತಗಳೇನೆಂಬುದನ್ನು ಶೋಧಿಸಿ, ಅವುಗಳನ್ನಾಧರಿಸಿ ಮುಂದೊತ್ತಬೇಕಾದುದೊಂದೇ ಈಗಿನ ಕರ್ತವ್ಯ' ಎಂದು ಸರ್. ಝಫರುಲ್ಲಾರ ವಾದ. ಇಕ್ಕಡೆಯ ಈ ವಾದಗಳನ್ನು ಕೇಳಿಕೊಂಡ ಮೇಲೆ ಭದ್ರತಾ ಕೌನ್ಸಿಲಿನ ಅಧ್ಯಕ್ಷರು ಮುಂದಿನ ಸಭೆಯ ದಿನ ನಿಶ್ಚೈಸದೇನೇ ಕೌನ್ಸಿಲ್ ಸಭೆಯನ್ನು ಮುಂದುವರಿಸಿಟ್ಟರು. ನಾಲ್ಕು ದಿನಗಳಲ್ಲಿ ಇಕ್ಕಡೆಯ ವಕೀಲರ ಚಾತುರ್ಯಪೂರ್ಣ ವಾದಗಳನ್ನು ಕೇಳಿದರೂ ಭದ್ರತಾ ಕೌನ್ಸಿಲ್ ಸದಸ್ಯರಿಗೆ ಕಾಶ್ಮೀರ ಸಮಸ್ಯೆಯು ಅರ್ಥವೇ ತಲೆಗೆ ಹೊಕ್ಕಿಲ್ಲವಂತೆ. ಆ ಸಂಬಂಧವಾಗಿ ಒಂದು ಠರಾವನ್ನು ಮುಂತರಲು ಯಾರಿಗೂ ಸಾಧ್ಯವಾಗಲಿಲ್ಲ. ಅದಕ್ಕಾಗಿ ಇಕ್ಕಡೆಯವಾದಗಳ ಪರಿಶೀಲನೆಗಾಗಿ ಸದಸ್ಯರಿಗೆ ಕೊನೆಯ ಪಕ್ಷ ಒಂದು ವಾರದ ಅವಧಿಯನ್ನಾದರೂ ತಾನು ಕೊಡುತ್ತೇನೆಂದು ಅಧ್ಯಕ್ಷರಂದಿದ್ದಾರೆ.

ಭಾರತ-ಪಾಕಿಸ್ತಾನಗಳೊಳಗಿನ ವ್ಯಾಪಾರ ಸಂಬಂಧದ ಬಿಕ್ಕಟ್ಟು ಈ ವರೆಗೆ ಇದ್ದಂತೆ ಕೊಳೆಯುತ್ತಿದೆಯಾದರೂ ಆ ಸಂಬಂಧವಾಗಿ ಈ ತಿಂಗಳಾಂತ್ಯದಲ್ಲಿ ಭಾರತ-ಪಾಕಿಸ್ತಾನಗಳ ಸಮ್ಮೇಳನವೊಂದು ನವದಿಲ್ಲಿಯಲ್ಲಿ ಜರಗಲಿದೆಯೆಂದು ತಿಳಿದು ಬರುತ್ತದೆ. ಭಾರತವು ನಾಣ್ಯದ ಮೌಲ್ಯವಿಚ್ಛೇದನೆ ಮಾಡಿಕೊಂಡಂದಿನಿಂದೀವರೆಗಿನ ನಾಲ್ಕು ತಿಂಗಳಿಗೂ ಮಿಕ್ಕಿದ ಅವಧಿಯಲ್ಲಿ ಭಾರತ-ಪಾಕಿಸ್ತಾನಗಳೊಳಗಿನ ಕೊಡಕೊಂಡುವು ಹೆಚ್ಚಿನಂಶ ನಿಂತು ಹೋಗಿ ಪಾಕಿಸ್ತಾನದ ಆರ್ಥಿಕ ಸ್ಥಿತಿ ಅಡಿ ಮೇಲಾಗ ಹತ್ತಿದೆ. ಅಭಿಮಾನ ಬಿಡಲೊಪ್ಪದೆ ಪಾಕಿಸ್ತಾನ್ ಸರಕಾರವು ಎಷ್ಟೇ ಗುಟ್ಟು

(೯ನೇ ಪುಟ ನೋಡಿರಿ)

THE
Canara Banking Corporation Ltd.
(Incorporated in India with Limited Liability.)
Estd: 1906
ANNOUNCEMENT
A Branch of the Bank will shortly be opened
at
PONAMPET (SOUTH COORG).
ಬ್ಯಾಂಕಿನ ಒಂದು ಶಾಖೆಯು ಸದ್ಯದಲ್ಲಿಯೇ
ಪೊನ್ನಂಪೇಟೆ (ದಕ್ಷಿಣ ಕೊಡಗು)
ಯಲ್ಲಿ ತೆರೆಯಲಾಗುವುದು.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್,
ಸ್ಥಾಪನೆ: 1906

ಗುರುವಾರ ಉಡುಪಿ ೧೬-೨-೧೯೫೦

# ಈ ದುರಾಗ್ರಹ ಬೇಕೆ?

ಕರ್ನಾಟಕ ಪ್ರಾಂತ್ಯ ರಚನೆಯ ಪ್ರಶ್ನೆಯನ್ನು ಪರಿಶೀಲಿಸಲು ಇದೇ ತಾ. 9 ಮತ್ತು 10ರಲ್ಲಿ ಹಾವೇರಿಯಲ್ಲಿ ಸೇರಿದ್ದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಸಭೆಯು ಮಾಡಿಕೊಂಡ ನಿರ್ಣಯದ ಸಾರಾಂಶ ಹೀಗಿದೆ:-'ರಾಜೀನಾಮೆಯ ಕಾಲ ಬಂದಿದೆ ಎಂದು ಈ ಮೊದಲು ಕ. ಪ್ರಾ. ಕಾಂ. ಕೌನ್ಸಿಲು ಮಾಡಿದ್ದ ನಿರ್ಣಯವು ಕ್ರಮಬದ್ಧವಿದ್ದು ಈ ಸಮಿತಿಯು ಅದನ್ನು ಹೃತ್ಪೂರ್ವಕವಾಗಿ ಅನುಮೋದಿಸುತ್ತದಲ್ಲದೆ, ಅದಕ್ಕನುಸಾರವಾಗಿ ರಾಜೀನಾಮೆ ಕೊಡಲು ಮುಂದಾದ ಸದಸ್ಯರನ್ನು ಅಭಿನಂದಿಸುತ್ತದೆ-ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ತನ್ನ ನಿರ್ಣಯದ ಮೂಲಕ ಕರ್ನಾಟಕ ಪ್ರಾಂತ್ಯ ರಚನೆ ಮಾಡದಿರುವ ಮತ್ತು ಕುರಿತು ಕೊಟ್ಟಿರುವ ಕಾರಣಗಳಿಗೂ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕೌನ್ಸಿಲ್ ಹಾಗೂ ರಾಜೀನಾಮೆ ಕೊಡಲು ಮುಂದಾದ ಸದಸ್ಯರನ್ನು ಹೀಗಳೆದುದಕ್ಕೂ ಈ ಸಮಿತಿಯು ತನ್ನ ನಾಮಂಜೂರಾತಿ ಹಾಗೂ ಅಸಮ್ಮತಿಯನ್ನು ಸೂಚಿಸುತ್ತದೆ-ಅತಿ ಬೇಗನೇ ಆಗಬೇಕಾಗಿರುವ ಕರ್ನಾಟಕ ಪ್ರಾಂತ್ಯದ ಪ್ರಶ್ನೆಯು ಕನ್ನಡಿಗರ ಜೀವನ ಮರಣದ ಪ್ರಶ್ನೆಯಾಗಿದೆಯೆಂದೂ ಈ ಸಮಿತಿಯು ತನ್ನ ಸರ್ವಶಕ್ತಿಯಿಂದ ಮತ್ತೊಮ್ಮೆ ಒತ್ತಿ ಹೇಳುತ್ತದಲ್ಲದೆ, ಕರ್ನಾಟಕ ಮತ್ತಿತರ ದಕ್ಷಿಣ ಭಾರತ ಭಾಷಾವಾರು ಪ್ರಾಂತ್ಯಗಳ ರಚನೆಗೆ ಅಗತ್ಯವುಳ್ಳ ಕಾರ್ಯಕ್ರಮಗಳನ್ನು ಕೂಡಲೇ ಕೈಕೊಂಡು ಪ್ರಾಂತ್ಯರಚನೆ ಮಾಡಿಕೊಡದಿದ್ದರೆ, ಈ ಭಾಗಗಳಲ್ಲಿ ಪ್ರಜಾಸತ್ತಾ ಸರಕಾರ ಬಾಳಲಾಗಲಾರದೆಂದೂ, ಇಲ್ಲಿಯವರೆಗೆ ಯೋಗ್ಯ ಹಾಗೂ ಸುಭದ್ರ ಸರಕಾರವನ್ನು ನಿರಾಕರಿಸಿದಂತಾಗುವದೆಂದೂ ಈ ಸಮಿತಿಯು ಕಾರ್ಯಕಾರೀ ಸಮಿತಿಗೆ ಅತ್ಯಂತ ಸ್ಪಷ್ಟವಾಗಿ ತಿಳಿಸಲಿಚ್ಛಿಸುತ್ತದೆ- ಬರುವ ಚುನಾವಣಾ ನಂತರ ಹೊಸ ಶಾಸನ ಸಭೆಗಳೊಂದಿಗೇನೇ ಹೊಸ ಪ್ರಾಂತ್ಯಗಳು ಅಸ್ತಿತ್ವಕ್ಕೆ ಬಂದು ಜಾರಿಯಲ್ಲಿಲ್ಲಾಗುವಂತೆ, ಆಂಧ್ರ ಮತ್ತಿತರ ಭಾಗಗಳ ನಡುವಿನ ಕನ್ನಡ ಗಡಿಗಳನ್ನು ನಿಶ್ಚೈಸುವ ನ್ಯಾಯ ಮಂಡಲಿ ಅಥವಾ ಮಂಡಲಿಗಳನ್ನು ಕೂಡಲೇ ರಚಿಸತಕ್ಕದೆಂದು ಈ ಸಮಿತಿಯು ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಮತ್ತು ಭಾರತ ಸರಕಾರವನ್ನು ವಿನಂತಿಸಿಕೊಳ್ಳುತ್ತದೆ-ಮೈಸೂರಿನಷ್ಟೆ ಸಂಬಂಧವಾಗಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ತಳೆದಿರುವ ಅಭಿಪ್ರಾಯವನ್ನು ಈ ಸಮಿತಿಯೊಪ್ಪುವದಿಲ್ಲ. ಜೋಡಿಸಲ್ಪಟ್ಟ ಇತರ ಸಂಸ್ಥಾನಗಳಲ್ಲಿದ್ದ ಜನಮತಕ್ಕಿಂತ ಹೆಚ್ಚು ಖಚಿತವಾಗಿ ಮೈಸೂರು ಜನಮತವು ಮಿಕ್ಕ ಕರ್ನಾಟಕ ಭಾಗಗಳೊಂದಿಗೆ ಜೋಡಣೆಗೊಳ್ಳುವದಕ್ಕೆ ಅನುಕೂಲವಿದೆಯೆಂಬುದು ಸ್ಪಷ್ಟ. ಆದ್ದರಿಂದ ಮೈಸೂರು ಸಮ್ಮಿಳಿತ ಪ್ರಾಂತ್ಯ ರಚನೆ ಮಾಡುವ ಮಸೂದೆಯೊಂದನ್ನು ರಾಜ್ಯ ಶಾಸನದ 3ನೇ ಕಲಮಿನನ್ವಯ ಕೂಡಲೇ ಪಾರ್ಲಿಮೆಂಟಿನ ಮುಂತಂದು, ಮೈಸೂರು ಶಾಸನ ಸಭೆಯ ಅನುಮತಿ ಕೇಳಬೇಕೆಂದು ಈ ಸಮಿತಿಯು ಭಾರತ ಸರಕಾರವನ್ನು ವಿನಂತಿಸುತ್ತದೆ. ಮೈಸೂರು ಕಾಂಗ್ರೆಸು ಕರ್ನಾಟಕ ಪ್ರಾಂತ್ಯ ರಚನೆಗೆ ಸದಾ ಅನುಕೂಲವಿದೆ; ಮೈಸೂರು ಶಾಸನ ಸಭೆಯು ತನ್ನ ಸಮ್ಮತಿ ಸೂಚನೆಯ ಮೂಲಕ ಈ ವಿಷಯವನ್ನು ಸುಗಮಗೊಳಿಸಬಲ್ಲುದು. ಬೊಂಬಾಯಿ ಮತ್ತು ಮದ್ರಾಸ್ ಶಾಸನ ಸಭೆಗಳು ಈ ಮೊದಲೇ ಮೇಲಿಂದಮೇಲೆ ಕರ್ನಾಟಕ ಪ್ರಾಂತ್ಯರಚನೆಗೊಪ್ಪಿಗೆ ಸೂಚಿಸಿವೆ. ಇದಿಷ್ಟು ಸಾಕಾಗದಿದ್ದರೆ ಮುಂಬರುವ ಚುನಾವಣೆಯ ಪ್ರಶ್ನೆಯಾಗಿ ಈ ವಿಷಯವನ್ನು ಮುಂದಿಟ್ಟು ಜನಮತವನ್ನು ಸ್ಪಷ್ಟ ತಿಳಿಯಬಹುದೆಂದು ಈ ಸಮಿತಿಯು ಕಾರ್ಯಕಾರೀ ಸಮಿತಿ ಮತ್ತು ಕಾಂಗ್ರೆಸ್ ಪಾರ್ಲಿಮೆಂಟರೀ ಬೋರ್ಡನ್ನು ವಿಜ್ಞಾಪಿಸಿಕೊಳ್ಳುತ್ತದೆ— ಹೈದರಾಬಾದನ್ನು ಭಾಷಾವಾರಾಗಿ ವಿಂಗಡಿಸತಕ್ಕದ್ದೆಂದು ಆಂಧ್ರಪ್ರಾಂತಿಕ ಸಮಿತಿಯಂತೆಯೇ ಈ ಸಮಿತಿಯೂ ಅಭಿಪ್ರಾಯಪಡುತ್ತದಲ್ಲದೆ ಹೈದರಾಬಾದ್ ಸಂಸ್ಥಾನವನ್ನು ಭಾಷಾವಾರಾಗಿ ವಿಂಗಡಿಸಿ ಹಾಕಲು ಮತಕೊಡಬೇಕೆಂದು ಹೈದರಾಬಾದ್ ಘಟನಾಸಮಿತಿ ಸದಸ್ಯರನ್ನು ಈ ಸಮಿತಿಯು ಕೇಳಿಕೊಳ್ಳುತ್ತದೆ— ಮೇಲ್ಗಡೆ ಸೂಚಿಸಿರುವ ಕಾರ್ಯಕ್ರಮಗಳಿಗೆ ತಕ್ಕಂತೆ, ಶಾಸನಸಭಾ ಸದಸ್ಯರ ರಾಜೀನಾಮೆಯ ಪ್ರಶ್ನೆಯನ್ನು ಪ್ರಕೃತ ಬಿಟ್ಟುಬಿಡಲಾಗಿದೆ. ಯಾಕೆಂದರೆ ಇದನ್ನು, ಅಥವಾ ಇಂತಹ ಇತರ ಯಾವುದೇ ಹೆಜ್ಜೆಯನ್ನು ಯೋಗ್ಯ ಹಾಗೂ ಒಪ್ಪೇ ಸಂದರ್ಭ ನೋಡಿ ಯಾವಾಗಲೂ ಕೈಕೊಳ್ಳಬಹುದು. ಪ್ರಾಂತ್ಯ ರಚನೆಯ ಅತ್ಯಾವಶ್ಯಕತೆಯ ಕುರಿತು ಈ ಸಮಿತಿಗಿರುವ ಆತುರವು ಅಪರಿಮಿತವಾಗಿ ಹೆಚ್ಚಾದರೂ ಕಾಂಗ್ರೆಸ್ ಹೈಕಮಾಂಡಿನ ಕಾರ್ಯಕಾರೀ ಸಮಿತಿ ಅಥವಾ ಕರ್ನಾಟಕದ ಜನತೆಯೆಂದಿಗೂ ಭಾವಿಸಬಾರದು. ಹೊಸ ಚುನಾವಣೆಗಳಿಗೆ ಸಾಕಷ್ಟು ಮುಂಚಿತವಾಗಿ ಕರ್ನಾಟಕ ಪ್ರಾಂತ್ಯ ರಚನಾ ಸಂಬಂಧದ ಸ್ಪಷ್ಟ ಹಾಗೂ ಪ್ರತ್ಯಕ್ಷ ಕಾರ್ಯಗಳನ್ನು ಕಾಂಗ್ರೆಸ್ ಕೈಕೊಳ್ಳದೆ ಹೋದರೆ, ಕರ್ನಾಟಕದ ಜನತೆಯು ಆ ಮೇಲೂ ಕಾಂಗ್ರೆಸಿನ ಮೇಲೆ ಯಾವ ವಿಶ್ವಾಸವನ್ನೂ ಇಡದಂತಾಗುವದೆಂದು ಈ ಸಮಿತಿಯು ತನ್ನ ಸ್ಪಷ್ಟ ಅಭಿಪ್ರಾಯವನ್ನು ಮತ್ತೊಮ್ಮೆ ಸಾರುತ್ತದೆ.'

ಮೇಲಿನ ನಿರ್ಣಯದ ಆಕಾರವು ಶಾಲೋಚಿತವಾದುದೇ. ಆದರೆ ಅದರ ಕರ್ಕಶ ಧ್ವನಿ ಮತ್ತು ಉಗ್ರ ಭಾವನೆಯಿಂದ ಏನು ಪ್ರಯೋಜನವೋ ಅರ್ಥವಾಗುವದಿಲ್ಲ! ರಾಜೀನಾಮೆಗಳನ್ನು ಆಹ್ವಾನಿಸುವ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕೌನ್ಸಿಲಿನ ನಿರ್ಣಯವು, ಆ ಸಂದರ್ಭದಲ್ಲೂ ಅಚಾತುರ್ಯದ್ದಾಗಿದ್ದಿತು. ಈಗಲಂತೂ ಸ್ಥಿತಿ ಬದಲಾವಣೆಯಾಗಿರುವುದರಿಂದ ಅದು ಅಸ್ತಿತ್ವವನ್ನೇ ಕಳಕೊಂಡಿದೆ. ಶವವಾದ ಆ ನಿರ್ಣಯವನ್ನು ಹಾವೇರಿಯ ಕಾಂಗ್ರೆಸ್ ಸಮಿತಿ ಸಭೆಯು, ಹೂಳಿ ಬಿಟ್ಟುದು ಸ್ವಾಭಾವಿಕ. ಮಹಾ ಚುನಾವಣೆಯ ಮೊದಲೇ ಕರ್ನಾಟಕ ಪ್ರಾಂತ್ಯಕ್ಕೆ ಅಸ್ತಿವಾರ ಬೀಳಬೇಕು—ಹೈದರಾಬಾದು ಸಂಸ್ಥಾನವು ಭಾಷಾವಾರಾಗಿ ವಿಂಗಡಿಸಲ್ಪಡಬೇಕು, ಎಂದು ಬಯಸುವುದೇನೂ ತಪ್ಪಲ್ಲ. ಆದರೆ ಮೈಸೂರವರು ಇಷ್ಟರಲ್ಲೇ ಏಕೀಕರಣಕ್ಕೆ ಒಪ್ಪಿದ್ದಾರೆನ್ನುವ-ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ನಿರ್ಣಯದ ಕಠೋರತೆಗಾಗಿ ಪ್ರತ್ಯುಗ್ರ ಭಾವನೆ ಪ್ರದರ್ಶಿಸುವ-ವಾಯಿದೆ ತಪ್ಪಿದರೆ ಕಾಂಗ್ರೆಸಿನ ಮೇಲೇನೇ ಅವಿಶ್ವಾಸವೆನ್ನುವ-ಸಂದರ್ಭ ಬಂದರೆ ರಾಜೀನಾಮೆ ಮತ್ತಿಂತಹ ಇತರ ಕಾರ್ಯಕ್ರಮವೆಂದು ಬೆದರಿಸುವ-ಅತಿಶಯೋಕ್ತಿ, ಅಧಿಕ ಪ್ರಸಂಗ, ಉಗ್ರಘೋರಣೆಗಳು ಕರ್ನಾಟಕ ಪ್ರಾಂತಿಕ ಕಾಂಗ್ರೆಸಿನಂತಹ ಕಾಂಗ್ರೆಸಿನ ಉಪಾಂಗಕ್ಕೆ ಹೇಳಿಸಿದವುಗಳೆ? ರಾಜೀನಾಮೆ ಸಂಬಂಧದ ಕರ್ನಾಟಕ ಕಾಂಗ್ರೆಸ್ ಕೌನ್ಸಿಲಿನ ನಿರ್ಣಯದ ಕುರಿತು ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಪ್ರದರ್ಶಿಸಿದ ಕಠೋರತೆ ಹೆಚ್ಚಾಯಿತೆಂದು ನಾವಾ ಸಂದರ್ಭದಲ್ಲೇ ಹೇಳಿದ್ದೆವು. ಆದರೂ ಕಾಂಗ್ರೆಸ್ ಮಹಾಧಿವೇಶನದ ಒಂದು ನಿರ್ಣಯದಂತೆ ಆಗುತ್ತಾ, ಹೋಗುತ್ತಿದ್ದ ಭಾಷಾವಾರು ಪ್ರಾಂತ್ಯ ರಚನಾ ಸಂಬಂಧದ ಕಾರ್ಯ ವಿಧಾನಗಳ ಕುರಿತು, ಕಾಂಗ್ರೆಸಿನ ಒಳಸಮಿತಿಯೇ ನಿಷೇಧ ಪ್ರದರ್ಶನಕ್ಕೆ ಮುಂದಾದಾಗ ಸಂಸ್ಥೆಯ ಶಿಸ್ತು ಮತ್ತು ಘನತೆಯನ್ನು ರಕ್ಷಿಸುವ ಹೊಣೆ ಹೊತ್ತಿರುವ ಕಾರ್ಯಕಾರೀ ಸಮಿತಿಯು ಕೆಂಡದುದು ಸಕಾರಣವಾದುದೇ. ಅದೇ ರೀತಿ ಕರ್ನಾಟಕ ಪ್ರಾಂತ್ಯರಚನಾ ಪ್ರಶ್ನೆಗೊದಗಿದ ದುರದೃಷ್ಟದಿಂದ ಕನ್ನಡಿಗರ ಮನಸ್ಸು ಕ್ಷೋಭೆಗೊಳ್ಳುವುದು ಕೂಡಾ ಸಹಜವೇ- ಆದರಲ್ಲಿ ನ್ಯಾಯ ಮತ್ತು ಕ್ರಮ ಹೇಗಿದೆ, ಎಂಬುದನ್ನು ನೋಡುವ ಅಂಶವು ಎಲ್ಲರ ಪಾಲಿಗೂ ಇದೆ. ಅದರಲ್ಲೂ ಕರ್ನಾಟಕ ಪ್ರಾಂತಿಕ ಕಾಂಗ್ರೆಸಿನಂತಹ ಕಾಂಗ್ರೆಸ್ ಉಪಾಂಗವು ಸರ್ವ ಪ್ರಥಮವಾಗಿ ತನ್ನ ಇರಸ್ತಿಕೆಯನ್ನು ಅರ್ಥಾತ್ ಕಾಂಗ್ರೆಸ್ ಧೋರಣೆ, ನಿಯಮ, ನಿಬಂಧನೆಗಳನ್ನು ಉಳಿಸಿಕೊಂಡು ಆ ಮೇಲೆಯೇ ಕರ್ನಾಟಕತ್ವವನ್ನು ದಕ್ಕಿಸಿಕೊಳ್ಳಬೇಕಾಗಿದೆ. ಆದರೆ ಕರ್ನಾಟಕದ ಕಾಂಗ್ರೆಸಿನ ಈ ಮೊದಲಿನ ರಾಜೀನಾಮೆ ಸಂಬಂಧ ನಿರ್ಣಯದ ಸ್ವರೂಪವೇ ಈ ಮೂಲಕರ್ತವ್ಯವನ್ನು ಕಡೆಗಣಿಸಿದ್ದರೆ, ಈ ಬಾರಿಯ ಹಾವೇರಿ ನಿರ್ಣಯದ ಅಂತರ್ಯವು ಅದೇ ತಪ್ಪನ್ನು ಮಾಡಿದೆ. ಜನವರಿ 26ರೊಳಗೆ ಭಾಷಾವಾರು ಪ್ರಾಂತ್ಯಕ್ಕಸ್ತಿವಾರ ಬೀಳಬೇಕಾಗಿದ್ದರೆ ಕೇಂದ್ರ ನಾಯಕರ ಸಮ್ಮತಿಯ ಆವಶ್ಯಕತೆಯಿದ್ದಂತೆಯೇ, ಹೊಸ ಶಾಸನ ಪ್ರಕಾರ ಸಂಬಂಧಪಟ್ಟ ಪ್ರಾಂತಿಕ ಶಾಸನ ಸಭೆಗಳ ನಿರ್ಣಯದ ಮೂಲಕ ಅದು ರೂಪುಗೊಳ್ಳಬೇಕಾದರೂ ಕೇಂದ್ರ ನಾಯಕರ ಪ್ರೇರಣೆ ಅಗತ್ಯವಿದೆ. ಕೇಂದ್ರ ನಾಯಕರು ಅಪರಾಧಿಗಳಿರುವುದರಿಂದ ಅವರನ್ನು ತಿದ್ದಿಯೇ ಕೆಲಸ ಮಾಡಿಸಿಕೊಳ್ಳಬೇಕೆಂಬಂತೆ— ಕಾಂಗ್ರೆಸ್ ಅಧಿನಾಯಕ ಮಂಡಲಿಯೊಡನೆ ಹೋರಾಡಿಯೇ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯು ಸ್ವಪ್ರಾಂತ್ಯ ಸಾಧಿಸಿಕೊಳ್ಳುವುದೆಂಬಂತೆ— ಬೆದರಿಸುವ ಮಾತುಗಳುಳ್ಳ ನಿರ್ಧಾರವನ್ನು ಹಾವೇರಿ ಸಭೆ ಮಾಡಿದುದು ಕೆಲಸಕ್ಕೆ ಹೇಗೆ ಅನುಕೂಲವೋ ತಿಳಿಯದು. ಕನ್ನಡಿಗರು ಕೇಳಿಕೊಂಡಂತೆ ಕಾಂಗ್ರೆಸ್ ಅಧಿನಾಯಕರು ವರ್ತಿಸದ ಒಂದು ಅಪರಾಧ ತೋರಿಬರುತ್ತಿದೆಯಲ್ಲದೆ, ಭಾಷಾವಾರು ಪ್ರಾಂತ್ಯ ರಚನಾ ಸಂಬಂಧವಾಗಿ ಕಾಂಗ್ರೆಸ್ ಸಂಸ್ಥೆಯು ವಹಿಸಿದ್ದ ಧೋರಣೆ ಮತ್ತು ರೀತಿನೀತಿಗಳಿಗೆ ವ್ಯತಿರಿಕ್ತವಾಗಿ ಆಚರಿಸಿದ ತಪ್ಪುವುದೂ ಅವರಿಂದಾಗಿಲ್ಲ. ಪ್ರಾಂತ್ಯ ರಚನಾ ಸಂಬಂಧವಾಗಿ ಕರ್ನಾಟಕದ ಕಾಂಗ್ರೆಸಿಗರು ಹೇಳಿದಂತೆ ನಡೆಯಲು ಕಾಂಗ್ರೆಸ್ ಅಧಿನಾಯಕರಿಂದಾಗಿಲ್ಲ-ಅಧಿನಾಯಕರು ಸೂಚಿಸಿದಂತೆ ವರ್ತಿಸಲು ಕಾಂಗ್ರೆಸ್ ಕನ್ನಡಿಗರಿಂದಲೂ ಆಗಿಲ್ಲ. ಇಲ್ಲಿ ಹೇಳಿಕೆ ಕೇಳಿಕೆಗಳ ಮಾತು ಹೇಗಿದ್ದರೂ ಆಜ್ಞೆ ಮತ್ತು ನಿರ್ಧಾರಗಳ ಮಟ್ಟಿಗೆ ಕೆಳ ಸಮಿತಿಗಳು ಮೂಲ ಸಮಿತಿಯ ಇಚ್ಛಾಧೀನವಾಗಿರಬೇಕೇ ಹೊರತು ತದ್ವಿರುದ್ಧವಾಗಕೂಡದು. ಹೀಗಿದ್ದೂ ಕರ್ನಾಟಕದ ಕಾಂಗ್ರೆಸಿಗರು ಅಧಿನಾಯಕ ಮಂಡಲಿಯೆದಿರು ಸಡ್ಡು ಹೊಡೆದ ಸಪ್ಪಳ ಹಾವೇರಿಯಲ್ಲಾಗಿದೆ. ಹಾವೇರಿಯ ನಿರ್ಣಯ ಮತ್ತು ಅಲ್ಲಿ ನಡೆದ ಚರ್ಚೆಗಳ ಮೇಲಿಂದ ನಮ್ಮ ಪ್ರಾಂತಿಕ ಕಾಂಗ್ರೆಸ್ ಸಮಿತಿಗೆ ದೇಶನಾಯಕರ ಇದಿರಾಗಿ ಒಂದು ಪಂಥ ಗೆಲ್ಲಬೇಕೆಂಬ ಹಠವಿರುವಷ್ಟು ಪ್ರಾಂತ್ಯ ರಚಿಸಿಕೊಳ್ಳಬೇಕೆಂಬ ಆತುರವಿಲ್ಲವೆಂಬಂತೆ ಕಾಣುತ್ತಿದೆ. ಇನ್ನಾದರೂ ಪ್ರಾಂತ್ಯರಚನೆಯಾಗಬೇಕಾದರೆ ಕೇಂದ್ರ ನಾಯಕರ ಸಹಕಾರ ಬೇಕೇ ಬೇಕು ಆ ಸಹಕಾರವನ್ನು ಒಲಿಸಿ ಪಡೆಯುವ ಬದಲಿಗೆ ಬೆದರಿಸಿ ಪಡೆಯಬಲ್ಲೆವೆಂಬ ಧೈರ್ಯವು ಕಾಂಗ್ರೆಸ್ ಕನ್ನಡಿಗರಿಗೆ ಹೇಗೆ ಮೂಡಿತೋ! ಕರ್ನಾಟಕ ಪ್ರಾಂತ್ಯ ರಚನೆಯ ಪ್ರಶ್ನೆಯು ಇಂತಹ ಕೆಲವು ಅತಿರೇಕಾಭಿಮಾನಿಗಳ ಹಸ್ತದಿಂದ ಈ ರೀತಿ ಅಪಘಾತದ ಈ ದುಡುಕಿನಿಂದಲೇ ಮುಂದೊತ್ತಲ್ಪಡುತ್ತಿರುವುದು ಶೋಚನೀಯ. ಕಾರ್ಯಕ್ಕನುಕೂಲವಾಗುವಂತೆ ಈ ದೊರಗುತನವು ಮುಂದಿನ ವ್ಯವಹಾರಗಳಲ್ಲಾದರೂ ನಯಗೊಳ್ಳುವದು ಅಗತ್ಯವಲ್ಲವೆ?

# ಪಾಕಿಸ್ತಾನ್ ಕೃತ್ಯ ಪಾಕಿಸ್ತಾನಕ್ಕೇನೇ ಬಿಸಿ ಮುಟ್ಟಿಸಿತೆ?

(೫ನೇ ಪುಟದಿಂದ ಮುಂದುವರಿದುದು)

ಮಾಡಿದರೂ ಒಳಗಿನ ಆರ್ಥಿಕ ವೇದನೆಯು ಅದಕ್ಕೀಗ ಅಸಹ್ಯವಾಗಿರುವುದರಿಂದ ಅದೀಗ ಬಾರಿ ಒಂದು ಒಪ್ಪಂದಕ್ಕೆ ಬರುವ ಸಂಭವವಿದೆ. ಭಾರತ ಪಾಕಿಸ್ತಾನಗಳೊಳಗೆ ವ್ಯಾಪಾರ ಯುದ್ಧಾರಂಭವಾದಂದಿನಿಂದ, ಭಾರತವು ತಾನು ಅಲ್ಲಿಗೆ ರಫ್ತು ಮಾಡುತ್ತಿದ್ದ ಇದ್ದಲು, ಅರಿವೆ, ಮುಂತಾದುವುಗಳನ್ನು ನಿಲ್ಲಿಸಿದ್ದಿತು. ಅಲ್ಲಿಂದಾಮದು ಪಡಿಸಿಕೊಳ್ಳುತಿದ್ದ ನಾರು, ತೊಗಲು, ಅಡಿಕೆ, ಹತ್ತೀಬೀಜ ಮುಂತಾದುವುಗಳಿಗೆ ಬಹಿಷ್ಕಾರ ಹಾಕಿದ್ದಿತು. ತತ್ಪರಿಣಾಮವಾಗಿ ಪಾಕಿಸ್ತಾನದೊಳಗಡೆ ಉಳಿದುಹೋದ ನಾರು ಮೊದಲಾದುವುಗಳ ಬೆಲೆ ತೀರ್ವತಗ್ಗಿದೆ. ಭಾರತ ಸರಕಾರವು ಕಟ್ಟಿದ್ದ ಧಾರಣೆಗಿಂತಲೂ ಪಾಕಿಸ್ತಾನದಲ್ಲಿ ಆದರ ನಾರಿನ ಬೆಲೆ ಕೆಳಗಿಳಿದಿದೆ. ಪೂರ್ವ ಬಂಗಾಳದಲ್ಲಿ ಉತ್ಪನ್ನವಾಗಿರುವ ಸುಮಾರು 55 ಲಕ್ಷ ಬೇಲು ನಾರುಗಳ ಪೈಕಿ, ಅಂದಾಜು ರೂ. 50 ಕೋಟಿ ಬೆಲೆಬಾಳುವ 30 ಲಕ್ಷ ಬೇಲುಗಳಷ್ಟು ನಾರು, ಅಲ್ಲೇ ಬಿದ್ದುಕೊಂಡು ನಾರುತ್ತಿದೆ. ಇತ್ತ ನಾರಿನ ಸಂಬಂಧವಾಗಿ ಪಾಕಿಸ್ತಾನದ ಹಂಗೇ ಮುಂದಕ್ಕಿರಬಾರದೆಂದು ಈವರುಷವೇ ಹೊಸತಾಗಿ 4 ಲಕ್ಷ ಎಕ್ರೆ ಸ್ಥಳಗಳಲ್ಲಿ ನಾರು ಬೆಳೆಸುವಯೋಜನೆಯನ್ನು ಭಾರತ ಸರಕಾರ ಕೈಕೊಂಡಿರುವಾಗ, ಅಲ್ಲಿ ಪಾಕಿಸ್ತಾನ್ ಸರಕಾರವು ನಾರು ಬೆಳೆಸುವ ಕ್ಷೇತ್ರವನ್ನು ೩ನೇ ಅಂಶದಷ್ಟು ಕಡಿಮೆ ಮಾಡಿಕೊಳ್ಳಬೇಕೆಂದು ತನ್ನಲ್ಲಿಯ ನಾರು ಬೇಸಾಯಗಾರರಿಗೆ ಸೂಚಿಸಿದೆ. ಇದ್ದಲಿನ ಅಭಾವದಿಂದ ಪೂರ್ವ ಬಂಗಾಳದ ಆಡಳಿತೆಯೇ ಗಡಬಡಿಸಹತ್ತಿದೆಯಲ್ಲದೆ, ಅರಿವೆ ಮೊದಲಾದ ಆವಶ್ಯಕ ವಸ್ತುಗಳ ಬೆಲೆ ಬಹಳ ಏರಿದೆ. ಇವೆಲ್ಲಾ ಅಡಿಪೇಲುಗಳ ದೆಸೆಯಿಂದಾಗಿ ಪಾಕಿಸ್ತಾನ್ ಸರಕಾರದ ಆಯುವ್ಯಯ ಪಟ್ಟಿಯು ನಿಶ್ಚಿತಾವಧಿಗೆ ಒಂದು ತಿಂಗಳು ತಡವಾಗಿ ಮುಂದೆ ಬರಬೇಕಾದ ಅಂಗಣೆಯೊದಗಿದೆ. ಅಂತೂ, ಹೆಗ್ಗಳಿಕೆಯಿಂದ ಮೌನವಾಗಿ ಉದರ ಯಾತನೆಯನ್ನನುಭವಿಸುತ್ತಿರುವ ಪಾಕಿಸ್ತಾನವು, ಮಾನಚ್ಯುತಿಯಾಗದಂತೆ ಕೆಲವು ನಟನೆಯೊಂದಿಗೆ, ಭಾರತದೊಡನೊಂದು ವ್ಯಾಪಾರ ಒಪ್ಪಂದಕ್ಕೆ ಮುಂದಾಗಬಹುದೆಂದು ನಿರೀಕ್ಷಿಸಲಾಗಿದೆ.

ಪಾಕಿಸ್ತಾನದಲ್ಲಿರುವ 895 ಹಿಂದೂ ಮತ್ತು ಸಿಖ್ ದೇವಾಲಯಗಳು ಅಪವಿತ್ರಗೊಳಿಸಲ್ಪಟ್ಟಿರುವ ಕುರಿತು ಭಾರತ ಸರಕಾರವು ಪಾಕಿಸ್ತಾನ್ ಸರಕಾರಕ್ಕೆ ನಿಷೇಧ ಸೂಚನೆ ಕಳುಹಿದ್ದು, ಅದಕ್ಕೆ ಪಾಕಿಸ್ತಾನ್ ಸರಕಾರದ ಉತ್ತರವೇ ಬಂದಿಲ್ಲವೆಂದು ತಿಳಿದುಬರುತ್ತದೆ. ಆದರೆ ಈ ಆರೋಪಗಳು ನಿರಾಧಾರವಾದವುಗಳೆಂದು ಪಾಕಿಸ್ತಾನ್ ಸರಕಾರದ ಪತ್ರಿಕಾ ಹೇಳಿಕೆಯಿದೆ. ಕರಾಚಿಯಲ್ಲಿರುವ ಸಿಖ್ ಗುರುದ್ವಾರವೊಂದನ್ನು ಮುಸ್ಲಿಂ ಲೀಗ್ ಸ್ವಯಂಸೇವಕ ಶಿಬಿರವಾಗಿ ಮಾಡಿಕೊಂಡಿದ್ದಾರಂತೆ.

### ಬಂಗಾಳದ ಗಲಭೆ

ಪಾಕಿಸ್ತಾನದ ಪೂರ್ವ ಬಂಗಾಳದ ಒಂದೆರಡು ಜಿಲ್ಲೆಗಳಲ್ಲಿ ಹಿಂದುಗಳ ಮೇಲಾದ ಕೊಲೆ, ಸುಲಿಗೆ, ಬಲಾತ್ಕಾರದ ಮತಾಂತರ ಮತ್ತಿತರ ಅತ್ಯಾಚಾರಗಳನ್ನು ಸಹಿಸಲಾರದೆ ಅಲ್ಲಿಯ ಹಿಂದುಗಳು ಸಹಸ್ರಗಟ್ಟಲೆ ಪಶ್ಚಿಮ ಬಂಗಾಳಕ್ಕೋಡಿ ಬಂದುದೇ ಮೊದಲಾದ ಅಸಹ್ಯ ದುರ್ಘಟನೆಗಳು ಭಾರತದ ಪಶ್ಚಿಮ ಬಂಗಾಳದಲ್ಲಿಯೂ ತಮ್ಮ ಕರಿಛಾಯೆಯನ್ನು ಹರಡಿದುದು ಅತ್ಯಂತ ಶೋಚನೀಯವಿದೆ. ಕೆಲವು ದಿವಸಗಳ ಮೊದಲು ಪಶ್ಚಿಮ ಬಂಗಾಳದ ಮುರ್ಶಿದಾಬಾದ್ ಜಿಲ್ಲೆಯಲ್ಲಿ ಜಾತೀಯ ಗೊಂದಲವೆದ್ದೊಡನೆಯೇ ಅದನ್ನು ನಿಲ್ಲಿಸಿ ಬಿಡಲಾಗಿದ್ದಿತು. ಆದರೆ ಪೂರ್ವ ಬಂಗಾಳದಿಂದ ಓಡಿ ಬಂದ ನಿರಾಶ್ರಿತರ ಹೃದ್ರಾವಕ ಕಥೆಗಳನ್ನು ಕೇಳಿದ ಪಶ್ಚಿಮ ಬಂಗಾಳಿಗಳ ರಕ್ತ ಕುದಿದು ಕಲ್ಕತ್ತದಲ್ಲಿ ಇದೇ ತಾ. 9, 10ರಲ್ಲಿ ಗೊಂದಲವೆದ್ದಿತು. ಕಲ್ಕತ್ತದ ಕೆಲನೆಡೆಗಳಲ್ಲಿ ಹೊಡೆತ, ತಿವಿತ, ಮನೆ ಸುಲಿಗೆ, ಬೆಂಕಿ ಹಚ್ಚುವದೇ ಮೊದಲಾದ ವಿನಾಶ ಕಾರ್ಯಗಳಾರಂಭವಾದುವು. ತಾ. 10ರಲ್ಲಿ ಪೋಲೀಸರು ಸುಮಾರು ಹನ್ನೆರಡು ಸಲ ಗುಂಡು ಹಾರಿಸಿ, ಸುಮಾರು 50 ಮಂದಿ ಜಖಂಗೊಂಡುದಲ್ಲದೆ ಮೂರು ನಾಲ್ಕುಮಂದಿ ಆಸ್ಪತ್ರೆಯಲ್ಲಿ ಮಡಿದರು. ಕಲ್ಕತ್ತದ ಎರಡು ಮೂರು ಕ್ಷೇತ್ರಗಳಲ್ಲಿ ಕರ್ಫ್ಯೂ ಜ್ಯಾರಿಯಾಗಿತ್ತು. ಪಂಡಿತ ಜವಾಹಿರಲಾಲರು ಪೂರ್ವ ಬಂಗಾಳದಲ್ಲಿ ಆಗುತ್ತಿರುವ ಅತ್ಯಾಚಾರ ಮತ್ತು ಅದರ ಪ್ರತಿಕ್ರಿಯೆಯಾಗಿ ಪಶ್ಚಿಮ ಬಂಗಾಳದಲ್ಲಿ ನಡೆದ ದುರ್ಘಟನೆಗಳ ಕುರಿತು ಗಾಢ ಆತುರ ವ್ಯಕ್ತಪಡಿಸಿ, "ಏನೇ ಆದರೂ ನಾವು ಜಾತೀಯತಾ ಉದ್ರೇಕ ಮತ್ತು ಪ್ರತೀಕಾರೋನ್ಮತ್ತತೆಗೆ ಬಲಿ ಬೀಳಬಾರದು" ಎಂದು ಪಶ್ಚಿಮ ಬಂಗಾಳಿಗಳಿಗೆ ಆಗ್ರಹದ ವಿನಂತಿ ಮಾಡಿಕೊಂಡಿದ್ದರು. ಸರ್ದಾರ್ ವಲ್ಲಭಭಾಯಿಗಳೂ ಅದೇ ವಿಜ್ಞಾಪನೆ ಮಾಡಿಕೊಂಡು, ಶಾಂತಿವ್ಯವಸ್ಥೆ ಮತ್ತು ಯೋಗ್ಯ ತೀರ್ಮಾನ ಮಾಡುವಂತೆ ಸರಕಾರಕ್ಕೆ ನೆರವಾಗಬೇಕೆಂದು ಕೇಳಿಕೊಂಡಿದ್ದರು. ಕಲ್ಕತ್ತದಲ್ಲಿರುವ ಮಿ ಫಜಲುಲ್ ಹಕ್ಕರು, ಪೂರ್ವ ಬಂಗಾಳದಲ್ಲಿರುವ ಮುಸಲ್ಮಾನರು ಗುಳ್ಳೆ ಸುದ್ದಿಗಳನ್ನು ನಂಬದೆ ಪಶ್ಚಿಮ ಬಂಗಾಳ ಸರಕಾರವು ನಿರಾಶ್ರಿತರ ಯೋಗ್ಯ ವ್ಯವಸ್ಥೆ ಮಾಡುತ್ತಿದೆಯೆಂದು ತಿಳಿದಿರಬೇಕೆಂದೂ ಪಶ್ಚಿಮ ಬಂಗಾಳದ ಮುಸಲ್ಮಾನರ ಹಿತದೃಷ್ಟಿಯಿಂದ ಶಾಂತಚಿತ್ತ ವಹಿಸಬೇಕೆಂದೂ ಪಾಕಿಸ್ತಾನ್ ಮುಸ್ಲಿಮರನ್ನು ವಿನಂತಿಸಿಕೊಂಡಿದ್ದಾರೆ; ಗಲಭೆ ಸ್ಥಳಗಳಿಂದ ಓಡಿಬಂದಿರುವ ನಿರಾಶ್ರಿತರಿಗೆ ಆಶ್ರಯವೀಯುವುದಕ್ಕಾಗಿ ಪಶ್ಚಿಮ ಬಂಗಾಳ ಸರಕಾರವು ಕಲ್ಕತ್ತದ ಕೆಲವು ಶಾಲಾ ಕಟ್ಟಡ ಮತ್ತು ಖಾಸಗೀ ಮನೆಗಳನ್ನು ಸ್ವಾಧೀನ ಪಡಿಸಿಕೊಂಡು ಆಹಾರ, ವಸ್ತ್ರ, ಹಾಲು ಇತ್ಯಾದಿಗಳನ್ನು ಸರಬರಾಯಿ ಮಾಡುತ್ತಿದೆ. ಇಕ್ಕಡೆಯ ಜಾತೀಯ ಗಲಭೆಗಳ ಪರ್ಯಾಲೋಚನೆಗಾಗಿ ತಾ 11ರಲ್ಲಿ ಪಶ್ಚಿಮ ಮತ್ತು ಪೂರ್ವ ಬಂಗಾಳದ ಸರಕಾರಗಳ ಚೀಫ್ ಸೆಕ್ರೆಟರಿಗಳ ಜತೆ ಸಮ್ಮೇಲನವು ಢಾಕ್ಕಾದಲ್ಲಿ ಸೇರಿ ಶಮನೋಪಾಯ ಕೈಕೊಳ್ಳುವ ನಿರ್ಧಾರಗಳಾಗಿವೆ. ಕಲ್ಕತ್ತದ ಪರಿಸ್ಥಿತಿ ಈಗ ಪೂರ್ಣ ಶಾಂತವಾಗಿದೆ.

### ಮದ್ರಾಸಿನಲ್ಲಿ

ಶಾಸನ ಸಭೆಗಳ ಪ್ರತಿಯೊಂದು ಅಧಿವೇಶನಾರಂಭದಲ್ಲಿ ಗವರ್ನರರು ಎರಡೂ ನ್ಯಾಯವಿಧಾಯಕ ಸಭೆಗಳ ಸಂಯುಕ್ತ ಸಭೆಯಲ್ಲಿ ಭಾಷಣ ಮಾಡತಕ್ಕದ್ದೆಂಬ ನವ ಶಾಸನದ ನಿಯಮ ಪ್ರಕಾರ ಇದೇ ತಾ. 11ರಲ್ಲಿ ಮದ್ರಾಸ್ ಗವರ್ನರ್ ಭಾವನಗರದ ಮಹಾರಾಜರು ಮದ್ರಾಸ್ ಎಸೆಂಬ್ಲಿ ಮತ್ತು ಕೌನ್ಸಿಲುಗಳ ಜತೆ ಸಭೆಯಲ್ಲಿ ಸರಕಾರೀ ಕಾರ್ಯಕ್ರಮಗಳನ್ನು ನಿರೂಪಿಸಿ ಭಾಷಣವಿತ್ತರು. ಕ್ರಮ ಪ್ರಕಾರ ಗವರ್ನರರ ಭಾಷಣದ ಮೇಲೆ ಎಸೆಂಬ್ಲಿಯಲ್ಲಿ ತಾ. 13ರಿಂದ ಎರಡು ದಿನ ಚರ್ಚೆ ನಡೆಯಿತು.

ಮದ್ರಾಸ್ ಪ್ರಾಂತ್ಯವು ಈ ವರುಷ ಹೆಚ್ಚಿನ ಆಹಾರಾಭಾವಕ್ಕೀಡಾಗುವ ಅಪಾಯ ಕಾಣುತ್ತಿದೆ. ಆಂಧ್ರದಲ್ಲಾದ ಬಿರುಗಾಳಿ ಅನಾಹುತ, ತಮಿಳುನಾಡಿನ ಕೆಲವು ಜಿಲ್ಲೆಗಳಲ್ಲಿದ್ದ ಮಳೆಯ ಅಭಾವ ಮುಂತಾದ ವಿವಿಧ ತೊಂದರೆಗಳಿಂದ ಪ್ರಾಂತ್ಯದ ಆಹಾರ ಪರಿಸ್ಥಿತಿ ಈ ಬಾರಿ ಇನ್ನಷ್ಟು ಕೆಟ್ಟುಹೋಗಿದೆ. ದಕ್ಷಿಣ ಕನ್ನಡದಂತಹ ಜಿಲ್ಲೆಗಳಲ್ಲಿಯೂ ಈ ವರುಷದ ಬೆಳೆ ಉತ್ತಮವಿರಲಿಲ್ಲ. ನಿರೀಕ್ಷಿಸಿದಷ್ಟು ಧಾನ್ಯ ಸಂಗ್ರಹವಾಗಿಲ್ಲವೆಂದು ತಿಳಿದು ಬಂದಿದೆ. ಆದ್ದರಿಂದ ಪೂರ್ವ ನಿಶ್ಚಯಕ್ಕಿಂತ 6 ಲಕ್ಷ ಟನ್ ಹೆಚ್ಚಿಗೆ ಧಾನ್ಯವನ್ನು ತಮ್ಮಲ್ಲಿಗೆ ರವಾನಿಸಬೇಕೆಂದು ಮದ್ರಾಸ್ ಸರಕಾರವು ಕೇಂದ್ರ ಸರಕಾರವನ್ನು ಕೇಳಿಕೊಂಡಿದೆ. ಪಾರ್ಲಿಮೆಂಟಿನಲ್ಲಿ ಆಹಾರ ಪರಿಸ್ಥಿತಿಯನ್ನು ವಿವರಿಸುತ್ತಾ ಭಾರತ ಸರಕಾರದ ಆಹಾರ ಮಂತ್ರಿ ಶ್ರೀ ಜೈರಾಮದಾಸ ದೌಲತರಾಮರು, ಮದ್ರಾಸಿಗೆ ಸಹಾಯವಾಗಿ ತಮ್ಮಿಂದ ಸಾಧ್ಯವಿದ್ದಷ್ಟನ್ನು ಮಾಡುವೆವೆಂದು ಹೇಳಿದ್ದಾರೆ. ಈ ವಾರದಲ್ಲಿ ಮದ್ರಾಸಿನಲ್ಲಿ ಸೇರಿದ ತಮಿಳುನಾಡು ರಾಜಕೀಯ ಸಮ್ಮೇಳನವು ತಮಿಳುನಾಡಿನ ಕೆಲವು ಜಿಲ್ಲೆಗಳಲ್ಲಿರುವ ಬರಗಾಲ ಸ್ಥಿತಿಯ ಕುರಿತು ಆತುರ ಸೂಚಿಸಿ, ಪರಿಹಾರ ವ್ಯವಸ್ಥೆಗಳನ್ನು ಕೈಕೊಳ್ಳಬೇಕೆಂಬ ನಿರ್ಣಯ ಮಾಡಿದೆ. ಮದ್ರಾಸ್ ಸರಕಾರವು ಅಧಿಕಾಹಾರೋತ್ಪನ್ನ ಮತ್ತು ಅಧಿಕ ಸಂಗ್ರಹ ಕಾರ್ಯಗಳನ್ನು ಭರದಿಂದ ಕೈಕೊಂಡಿದೆ.

ಸರಕಾರ ನಿರ್ದೇಶಾನುಸಾರವಾಗಿ ಕಳೆದ ವಾರದಿಂದ ಮದ್ರಾಸು ಪ್ರಾಂತ್ಯದ ಎಲ್ಲೆಡೆಯಲ್ಲಿಯೂ ಪ್ರಾಯಸ್ಥರ ಶಿಕ್ಷಣ ಕಾರ್ಯ ಆರಂಭಿಸಿದೆ.

ಇದೇ ತಾ. 11ರಲ್ಲಿ ಮದ್ರಾಸಿನ ತಮಿಳುನಾಡು ರಾಜಕೀಯ ಸಮ್ಮೇಳನವನ್ನು ಕಾಶ್ಮೀರದ ಪ್ರಧಾನಮಂತ್ರಿ ಶೇಕ್ ಅಬ್ದುಲ್ಲಾರು ಉದ್ಘಾಟಿಸುತ್ತಾ ಉಜ್ವಲ ಭಾಷಣವಿತ್ತಿದ್ದರು: "ಕಾಶ್ಮೀರದಲ್ಲಿ ಈಗ ಆಕ್ರಮಣಗಾರರು ಹಿಡಿದುಕೊಂಡಿರುವ ಸ್ಥಳಗಳು ಅಲ್ಲಿಯ ಶಾಸನಬದ್ಧ ಸರಕಾರಕ್ಕೆ ಮರಳಿ ವಶವಾಗಿಕೊಳ್ಳದೆ ಕಾಶ್ಮೀರದ ಜನತೆಯು ಜನಮತ ಸಂಗ್ರಹದಲ್ಲಿ ಭಾಗವಹಿಸುವಂತಿಲ್ಲ. ಸಂಸ್ಥಾನದ ಸುಮಾರು ಅರೆವಾಸಿ ಸ್ಥಳವನ್ನು ಪಾಕಿಸ್ತಾನದ ಸೇನೆ ಆಕ್ರಮಿಸಿಕೊಂಡಿರುವಾಗ, ಪಾಕಿಸ್ತಾನವು 'ಸ್ವತಂತ್ರ ಹಾಗೂ ನಿಷ್ಪಕ್ಷಪಾತಿ ಚುನಾವಣೆ'ಯ ಮಧುರಾಲಾಪ ಮಾಡುತ್ತಿರುವುದು ಹಿಟ್ಲರ್ ಶಾಹೀ ಹಂಚಿಕೆಯೇ ಸರಿ. ಪಾಕಿಸ್ತಾನದ ಕೈಯಿಂದ ವಿಶೇಷ ದುಃಖ ಮತ್ತು ಕಷ್ಟಗಳನ್ನು ಅನುಭವಿಸಿಬಲ್ಲ ನಮ್ಮ ಮೇಲೆ ಪಾಕಿಸ್ತಾನವು ಒತ್ತಾಯದಿಂದ ಜನಮತ ಸಂಗ್ರಹವನ್ನು ಹುರುಕಿಸುವೆನೆಂದರೆ ನಡೆಯದು" ಎನ್ನುತ್ತಾ, ಮದ್ರಾಸ್ ನಾಯಕರು ಕಾಶ್ಮೀರದ ಸಮಸ್ಯೆಗಳ ಕಡೆಗೆ ಪ್ರದರ್ಶಿಸಿರುವ ವಿಶೇಷಾಸಕ್ತಿಯನ್ನು ಶೇಕ್ ಅಬ್ದುಲ್ಲಾರು ಶ್ಲಾಘಿಸಿದರು. "ದೇಶ ವಿಭಜನಾ ನಂತರ ಆಚೆ ಕಡೆಯಲ್ಲಿ ಒಂದು ರೀತಿಯ ಕೃತಕ ಭಾವನೆ ವ್ಯಾಪಿಸಿಕೊಂಡಿದೆ. ನಮ್ಮ ಸ್ವಂತ ಜನರಿಂದು ಭಾಗ ಕೂಡಾ ಅದರ ವರ್ಚಸ್ಸಿಗೊಳಗಾಗಿರುವುದನ್ನು ಕಾಣುವಾಗ ವೇದನೆಯನ್ನಿಸುತ್ತಿದೆ. ಧರ್ಮವನ್ನಾಧರಿಸಿ ಭಾರತದ ವಿಭಜನೆಯಾಯಿತೆಂದೂ ತದನುಸಾರವಾಗಿ ಪಾಕಿಸ್ತಾನವು ಮುಸ್ಲಿಂ ರಾಷ್ಟ್ರವಾಗಿರುವಾಗ ಭಾರತವು ಹಿಂದೂ ಹಿತಸಾಧನೆಗಾಗಿ ಕಾದಿಡಲ್ಪಟ್ಟಿದೆಯೆಂದೂ ಕೆಲವರ ಭಾವನೆಯಿದೆ. ಇದು ನಮ್ಮ ರಾಷ್ಟ್ರೀಯ ಚಳವಳ, ನಮ್ಮ ತತ್ವ ಹಾಗೂ ನಮ್ಮ ಘಟನೆಗೆ ವಿರುದ್ಧವಾದುದು. ಆದ್ದರಿಂದ ಈ ಭ್ರಮೆಯನ್ನು ಪ್ರತಿಭಟಿಸಿ ನಿರ್ಮೂಲಿಸಬೇಕಾದುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ. ಭಾರತವು ಧರ್ಮವಾರಾಗಿ ವಿಂಗಡಿಸಲ್ಪಡದೆ, ಎರಡು ಮುಖ್ಯ ರಾಜಕೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗುಗಳೊಳಗೆ ಆಯಾಯ ಪಕ್ಷಕ್ಕೆ ವಿಶೇಷ ಬೆಂಬಲವಿದ್ದ ಸ್ಥಳಾನ್ವಯವಾಗಿ ಪಾಲಾಗಿದ್ದಿತೆಂದು ನಾನು ಈ ಮೊದಲು ಸಾರಿ ಸಾರಿ ಹೇಳಿದ್ದುದನ್ನೇ ಪುನರುಚ್ಚರಿಸುತ್ತೇನೆ. ಹೀಗಲ್ಲದೆ, ವಿಭಜನೆಯು ಧರ್ಮವಾರಾಗಿ ಆದುದಾಗಿದ್ದರೆ, ಈಗ ಭಾರತದ ನಾಗರಿಕರಾಗಿ ಇಲ್ಲೇ ಉಳಿದುಕೊಂಡಿರುವ 40 ಮಿಲಿಯ ಮುಸಲ್ಮಾನರನ್ನು ಅವರು ಹಿಂದೂ ರಾಜ್ಯದಲ್ಲಿ ಬಿಡುತ್ತಿರಲಿಲ್ಲ. ಇಲ್ಲಿ ನಮ್ಮಲ್ಲಿ ರಾಷ್ಟ್ರಪಿತ ಗಾಂಧಿಜೀಯಿಂದ ಉಳಿಸಲ್ಪಟ್ಟು ಬೆಳೆಸಲ್ಪಟ್ಟ ರಾಷ್ಟ್ರೀಯ ಕಾಂಗ್ರೆಸಿನ ಜಾತ್ಯಾತೀತ ಕ್ರಮವಿಧಾನಗಳು ವಿಕಾರತೆಯನ್ನು ಭೇದಿಸಿ ಬಂದುಳಿದುಕೊಂಡಿವೆ. ಗಾಂಧಿಜೀ ಅತಿಮಾನುಷ ಶಕ್ತಿಯಿಂದ ಜಾತೀಯತೆಯನ್ನು ವಿರೋಧಿಸಿದುದಲ್ಲದೆ ಅದರ ನಿರ್ಮೂಲನಕ್ಕಾಗಿ ತನ್ನ ಪ್ರಾಣವನ್ನೇ ಬಲಿ ತೆತ್ತರು. ನಮ್ಮ ಘಟನೆಯಲ್ಲಿರುವಂತೆ ನಾವು ಭಾರತದಲ್ಲಿ ಜಾತ್ಯಾತೀತ ಪ್ರಜಾಸತ್ತೆಯನ್ನು ಸ್ಥಾಪಿಸಲು ಕಟಿ ಬಿಗಿದಿರುವೆವು; ನಮ್ಮ ರಾಜಕೀಯ ಹಾಗೂ ಸಾಮಾಜಿಕ ಜೀವನದಲ್ಲಿ ಧಾರ್ಮಿಕ ಮತ್ತು ಜಾತೀವಾರು ಭೇದಗಳು ಇನ್ನಿಲ್ಲವೆಂದಾಗಿವೆ. ಕಾಶ್ಮೀರದಲ್ಲಿ ನಮ್ಮ ದೃಷ್ಟಿಕೋನವೂ ಇದೇ; ಸರ್ವಸಾಮಾನ್ಯವಾಗಿ ಈ ಪ್ರಾಂತ್ಯದ ದೃಷ್ಟಿ ಕೋನವೂ ಇದೇ ಎಂಬುದನ್ನು ತಿಳಿಯಲು ನನಗೆ ಆನಂದವಾಗುತ್ತಿದೆ" ಎಂದರು ಶೇಕ್ ಅಬ್ದುಲ್ಲಾ. ತಮಿಳುನಾಡು ಪ್ರಾಂತಿಕ ರಾಜಕೀಯ ಸಮ್ಮೇಳನವು ಶ್ರೀ ಅಣ್ಣಾಮಲಾಯಿ ಪಿಳ್ಳೆಯವರ ಅಧ್ಯಕ್ಷತೆಯಲ್ಲಿ ಆರಂಭಿಸಿ, ಮದ್ರಾಸ್ ನಗರದ ಬೇಡಿಕೆಯನ್ನು ಆಂಧ್ರರು ಸಂಪೂರ್ಣವಾಗಿ ಬಿಡಬೇಕೆಂದು ಠರಾಯಿಸಿದೆ.

## ಮಂಗಳೂರು

**ಸಕ್ಕರೆಯ ಚಿಲ್ಲರೆ ಧಾರಣೆ** ದಕ್ಷಿಣ ಕನ್ನಡ ಜಿಲ್ಲೆಯ ಬೇರೆಬೇರೆ ಕೇಂದ್ರಗಳಲ್ಲಿ ಸಕ್ಕರೆಯನ್ನು ಚಿಲ್ಲರೆಯಾಗಿ ಮಾರುವ ದರವನ್ನು ಈ ಕೆಳಗಿನಂತೆ ಜಿಲ್ಲಾ ಕಲೆಕ್ಟರರು ನಿರ್ಧರಿಸಿರುವರು:—

40 ತೊಲೆಗಳ ಬಾಲ್ಟ ಒಂದರ ದರವು ಹೀಗಿದೆ. ಮಂಗಳೂರು 0-7-2, ಬಂಟ್ವಾಳ, ಕಾಸರಗೋಡು, ಮಂಜೇಶ್ವರ, ಕುಂಬಳೆ ಮತ್ತು ಮೂಡಬಿದ್ರೆ 0 7 3; ಪುತ್ತೂರು, ಬೆಳ್ತಂಗಡಿ, ಉಡುಪಿ, ಮತ್ತು ಕಾರ್ಕಳ 0-7-4; ಕುಂದಾಪುರ 0-7-5.

**ಆಕ್ಕಿ ಭತ್ತ ಒಪ್ಪಿಸುವ ಅವಧಿ**— ದ. ಕ. ಜಿಲ್ಲಾ ಕಲೆಕ್ಟರರ ಹುಕುಂ ಮೇರೆಗೆ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಎರಡನೆ ಬೆಳೆಯ ಭತ್ತ ವ ಅಕ್ಕಿಯನ್ನು ಸರಕಾರಕ್ಕೆ ಯಾ ಸರಕಾರದಿಂದ ಅಧಿಕಾರ ಪಟ್ಟವರಿಗೆ ಒಪ್ಪಿಸುವ ದಿನಗಳನ್ನು ಈ ಕೆಳಗೆ ನಮೂದಿಸಲಾಗಿದೆ.

ಭತ್ತ:-ಕೆಳಗೆ ಹೆಸರು ಕಾಣಿಸಿದ ಪುತ್ತೂರು ತಾಲೂಕಿನ ಗ್ರಾಮಗಳ ವಿನಹ ಉಳಿದ ಎಲ್ಲಾ ತಾಲೂಕುಗಳವರು ಒಂದೇ ಕಂತಿನಲ್ಲಿ ತಾ. 28-2-50ರೊಳಗೆ.

ವಿನಾಯತಿ ಗ್ರಾಮಗಳು:-ಪುತ್ತೂರು ತಾಲೂಕಿನ 1 ಪೆರಿಯಡ್ಕ ಪಲ್ಲತಡ್ಕ 2 ಕೊಲ್ಲಾಮೊಗರೆ 3 ಕಲ್ಮಕರ 4 ಸುಬ್ರಹ್ಮಣ್ಯ 5 ಇನಾಕಿಡು 6 ಬಾಳ್ಗೋಡು 7 ಎಣೆಕಾಲು 8 ಬಳಿಪ-ಈ ಗ್ರಾಮಗಳವರು ತಾ. 5-5-50ರೊಳಗೆ ಒಂದೇ ಕಂತಿನಲ್ಲಿ ಒಪ್ಪಿಸತಕ್ಕದ್ದು.

ಅಕ್ಕಿ:- ಪುತ್ತೂರು ತಾಲೂಕಿನ ಮೇಲೆ ಹೆಸರು ಕಾಣಿಸಿದ ಗ್ರಾಮಗಳ ವಿನಹ ಉಳಿದ ಇಡೀ ಜಿಲ್ಲೆಯವರು ತಾ. 15-3-50ರೊಳಗೆ ಒಂದೇ ಕಂತಿನಲ್ಲಿ ಒಪ್ಪಿಸತಕ್ಕದ್ದು. ವಿಯಾಯತಿಯ ಎಂಟು ಗ್ರಾಮದವರು ಒಂದೇ ಕಂತಿನಲ್ಲಿ ತಾ. 15 5-50 ರೊಳಗೆ ಒಪ್ಪಿಸತಕ್ಕದ್ದು.

**ಜಿಲ್ಲಾ ಆಹಾರ ಸಮಿತಿ ಸಭೆಯು** ಇದೇ ತಿಂಗಳ ತಾ. 24ನೆ ಗುರುವಾರ 4 ಕಾಸಿಗೆ ಜಿಲ್ಲಾ ಕಲೆಕ್ಟರರ ಆಫೀಸಿನಲ್ಲಿ ಜರಗಲಿದೆ ಸದಸ್ಯರೆಲ್ಲರೂ ಸಭೆಗೆ ಸಕಾಲದಲ್ಲಿ ಹಾಜರಾಗುವಂತೆ ಈ ಮೂಲಕ ಕೇಳಿಕೊಳ್ಳಲಾಗಿದೆ.

**ಮೋಟಾರ್ಸು ಕೆಲಸಗಾರರ ಮುಷ್ಕರ** ಇದೇ ತಾ ೧೦ರಲ್ಲು ಫೆಲಿಕ್ಸ್ ಪೈ ಬಜಾರಿನಲ್ಲಿ ಜರಗಿದ ಕೆನರಾ ಮೋಟಾರ್ ವರ್ಕರ್ಸ್ ಯೂನಿಯನ್ನಿನ ಮಹಾಸಭೆಯಲ್ಲಿ ಇದೇ 22ನೆ ತಾರೀಕಿನಿಂದ ಮುಷ್ಕರ ಹೂಡುವುದಾಗಿ ಸರ್ವಾನುಮತದಿಂದ ನಿರ್ಧಾರವಾಗಿದೆ.

**ಶ್ರೀಮತಿ ಉಮಾಬಾಯಿ ಕುಂದಾಪುರ**—ಕರ್ನಾಟಕ ಪ್ರಾಂತಿಕ ಕಸ್ತೂರಿಬಾ ಸಮಿತಿ ಪ್ರತಿನಿಧಿಯಾದ ಶ್ರೀಮತಿ ಉಮಾಬಾಯಿ ಕುಂದಾಪುರ, ಅವರು ಇದೇ ತಾ 9ರಿಂದ ಮಂ ಗಳೂರಿಗೆ ಬಂದಿದ್ದು ತಾ. 24ರ ತನಕ ಜಿಲ್ಲಾ ಪ್ರವಾಸವನ್ನು ಕೈಕೊಳ್ಳುವರಾಗಿ ಗೊತ್ತಾಗಿದೆ.

**ವಯಸ್ಕರ ಶಿಕ್ಷಣ ಸಪ್ತಾಹವು**- ಮಂಗಳೂರಲ್ಲಿ ಇದೇ ತಾ 3ರಿಂದ 6ರ ತನಕ ವಿವಿಧ ಕಾರ್ಯಕ್ರಮಗಳಿಂದ ಸಾಂಗವಾಗಿ ಜರಗಿತು. ಸೈಲಾಗ್ರಿಸ್ ಹೈಸ್ಕೂಲ್ ವಠಾರದಲ್ಲಿ ಜಿಲ್ಲಾ ಕಲೆಕ್ಟರ್ ಜನಾಬ್ ಸಯ್ಯದ್ ಅಹಮ್ಮದ್, ಅವರು ವಸ್ತು ಪ್ರದರ್ಶನವೊಂದನ್ನು ತೆರೆದರು. ಜಿಲ್ಲಾ ವಿದ್ಯಾಧಿಕಾರಿ ಶ್ರೀ ಎಚ್. ರಾಮರಾಯರು ವಯಸ್ಕರ ಶಿಕ್ಷಣದ ಕುರಿತು ಮಾತನಾಡಿದರು. ಕೇಂದ್ರ ಮೈದಾನಿನಲ್ಲಿ ಜರಗಿದ ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಬೋರ್ಡಿನ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಗಡೆ ವಹಿಸಿದ್ದರು. ಶ್ರೀಗಳಾದ ಕೆ. ಗಿರಿಧರರಾವ್, ಎಚ್. ರಾಮರಾಯ ಮಲ್ಯ, ಎಸ್. ಮುಕುಂದ ರಾವ್, ಅಪ್ಪಯ್ಯ ಬೇಲಗದ್ದೆ, ಕೃಷ್ಣಾಚಾರ್, ಪಿ. ಆರ್. ಆರ್. ಪೂಂಜ, ಎಸ್. ಎಸ್. ಕಿಲ್ಲೆ, ಡಾ। ಕೆ. ನಾಗಪ್ಪ ಆಳ್ವ ಮೊದಲಾದವರು ಈ ಸಪ್ತಾಹದಲ್ಲಿ ವಿಶೇಷ ಭಾಗವಹಿಸಿದ್ದರು.

**ಕೋರಂ ಇಲ್ಲ**–ಇದೇ ತಾ. 8ರಲ್ಲು ಜರಗಬೇಕಾಗಿದ್ದ ಮಂಗಳೂರು ನಗರ ಸಭೆಯು 'ಕೋರಂ' ಇಲ್ಲದೆ ಮುಂದೆ ಬಿತ್ತು. ಅಧ್ಯಕ್ಷ ಉಪಾಧ್ಯಕ್ಷರಲ್ಲದೆ ನಾಲ್ಕು ಮಂದಿ ಸದಸ್ಯರು ಮಾತ್ರ ಹಾಜರಿದ್ದರು ಸೋಮವಾರ ಶನಿವಾರ ದಿವಸಗಳಲ್ಲಿ ಜರಗುವ ನಗರ ಸಭೆಯು ಬುಧವಾರಕ್ಕೆ ಬದಲಿಸ ಲ್ಪಡಬೇಕೆಂಬುದೇ ಕಮಿಷ್ನರ್ ಬಹುಮತದ ಗೈರುಹಾಜರಿಯ ಹಿಂದಿನ ಕಾರಣವಂತೆ.

**ದಕ್ಷಿಣ ಕನ್ನಡ ವಿದ್ಯಾರ್ಥಿ ಭವನದ ವಿದ್ಯಾರ್ಥಿ ಸಭೆಯ ವಾರ್ಷಿ**ಕೋತ್ಸವವು ಇದೇ ತಾ. 5ರಲ್ಲು ಶ್ರೀ ಕೆ. ರಾಮಚಂದ್ರ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ವೈ. ಮಹಾಲಿಂಗಭಟ್ಟರ ಸ್ವಾಗತಭಾಷಣ, ನರಸಿಂಹ ಪೊಳ್ಯರ ಸ್ವಸ್ತಿ ವಾಚನಗಳಾದ ನಂತರ ಶ್ರೀಗಳಾದ ಸಿ.ವ್ಯಾಸರಾವ್, ಕೆ. ಎಸ್. ಅಡಿಗ, ಪಿ. ರಾಮಚಂದ್ರ ರಾವ್, ರೆ। ಫಾ। ಜೆ. ಸಿಕ್ವೇರಾ ಮೊದಲಾದವರ ಸಂದರ್ಭೋಚಿತ ಭಾಷಣಗಳಾದುವು.

## ಉಡುಪಿ

ಮುನಿಸಿಪಲ್ ಕೌನ್ಸಿಲು ಸಭೆಯು ತಾ. 11ರಲ್ಲು ಚೆಯರ್‌ಮೆನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಬುನಾದಿ ಶಿಕ್ಷಣ ಯೋಜನೆಯ ಪರಿಶೀಲನೆಯನ್ನು ಮುಂದಿನ ಸಭೆಗೆ ಬಾಕಿಯಿಡಲಾಯಿತು. ಮುನಿಸಿಪಲ್ ಮೈನ್ ಶಾಲೆಯಲ್ಲಿ ಈಗ ನಡೆಯುತ್ತಿರುವ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿಗೆ ಸ್ಥಳದ ವಿಸ್ತರದ ಅಗತ್ಯ ಬಿದ್ದುದರಿಂದ ಶಾಲಾ ಕಟ್ಟಡದ ತೆಂಕಣ ಬದಿಯಲ್ಲಿ ಒಂದು ಕ್ಲಾಸು ರೂಮನ್ನು ಕಾಲೇಜು ಟ್ರಸ್ಟ್ ಖರ್ಚಿನಿಂದ ಕಟ್ಟಲು ಅನುಮತಿ ಕೊಡಲಾಯಿತು. ಶಿವಳ್ಳಿ ಗ್ರಾಮದ ಸರ್ವೆ ನಂಬ್ರ 156/33ನೆ ಸ್ಥಳವನ್ನು ಪರಾಧೀನ ಮಾಡುವ ವಿಷಯದಲ್ಲಿ ಕೌನ್ಸಿಲಿನ ಆಕ್ಷೇಪವಿದೆ ಎಂದು ಉಡುಪಿ ತಹಶಿಲ್ದಾರರಿಗೆ ತಿಳಿಸಬೇಕೆಂದಾಯಿತು. ಅಜ್ಜರಕಾಡಿನ ಅಶೋಕ ಸ್ತಂಭದ ಪಕ್ಕಗಳಲ್ಲಿ ಎರಡು ಮರ್ಕರಿ ದೀಪಗಳನ್ನಿರಿಸುವರೆ ಎರಡು ಕಂಬಗಳ ಸಹಾಯ ಹಾಗೂ ದೀಪ ಉರಿಸುವ ಖರ್ಚನ್ನು ಕೌನ್ಸಿಲು ವಹಿಸಬೇಕೆಂದು ಬರೆದ ಶ್ರೀ ಎಮ್. ವಿಠಲ ಕಾಮತರ ವಿನಂತಿಯನ್ನು ಮನ್ನಿಸಲಾಯಿತು. ಮುನಿಸಿಪಲ್ ನೋರ್ತ್ ಶಾಲೆಯಲ್ಲಿ ವಯಸ್ಕರ ಶಿಕ್ಷಣ ಕ್ಲಾಸನ್ನು ತೆರೆಯುವರೆ ಕೌನ್ಸಿಲಿನ ಒಪ್ಪಿಗೆ ದೊರೆಯಿತು.

**ಸೆಂಟ್ರಲ್ ವಾರ್ಡಿನ ತೆರಿಗೆದಾರರ ಸಭೆಯು** ಇದೇ ತಾ. 13ರಲ್ಲು ಸಂಜೆ ಎಡ್ವಕೇಟ್ ಶ್ರೀ.ಬಿ.ವಾಸುದೇವರಾಯರ ಅಧ್ಯಕ್ಷತೆಯಲ್ಲಿ ಅಂಜುಮನ್ ಕ್ಲಬ್ಬಿನಲ್ಲಿ ಜರಗಿತು. ಈ ವಾರ್ಡಿನಲ್ಲಿ ಟೌನ್ ಪ್ಲಾನಿಂಗ್ ಯೋಜನೆಯು ಪ್ರಾರಂಭವಾಗಿದ್ದು ಈಗಾಗಲೇ ಆ ಬಾಬ್ತು ತೆರಿಗೆ ವಸೂಲಿ ಡಿಮಾಂಡು ನೋಟೀಸು ಜ್ಯಾರಿಯಾಗಿರುವುದರಿಂದ ತೆರಿಗೆದಾರರಿಗೆ ಉಂಟಾಗುವ ಅಸಹ್ಯ ನಷ್ಟ, ಕಷ್ಟಗಳ ಕುರಿತು ತುಂಬಾ ಚರ್ಚೆ ನಡೆಯಿತು. ಆಸ್ತಿಯ ಮೌಲ್ಯ ಮತ್ತು ತೆರಿಗೆ ಪೇರಿದ ಮಿತಿಯು ಮಹಾಪ್ರಮಾಣದಲ್ಲಿರುವುದರಿಂದ ತೆರಿಗೆದಾರರಿಗೆ ಮಹದನ್ಯಾಯವಾಗಿರುವುದರಿಂದ ಅದರ ಇಳಿಮುಖದ ಬಗ್ಗೆ ತಕ್ಕ ಕಾರ್ಯವನ್ನು ಕೈಕೊಳ್ಳುವರೆ ಕಾರ್ಯಸಮಿತಿಯೊಂದು ರಚಿಸಲಾಯಿತು. ಈ ಸಮಿತಿಯಲ್ಲಿ ಶ್ರೀಗಳಾದ ವಿ. ಆರ್. ಕಾಮತ್, ಕೆ. ಸದಾನಂದಕಾಮತ್, ಶಿರಾಲಿ ಮಂಗೇಶರಾವ್, ಅಜೀಜ್ ಅಹಮ್ಮದ್, ಅಬ್ದುಲ್ ಮಂಜಿಲ್, ಉಮ್ಮರ್ ಬಾಪು, ಕಾನ್ಸರ್ಡ್ ಮಂಗೇಶರಾವ್, ಡಾ। ಕೆ. ಎನ್. ಸುವರ್ಣ, ಶಿವರಾಯ ಶೇಟ್ ಮತ್ತು ಟಿ. ದೇವಣ್ಣ ಮಂಗೇಶ ಶೆಣೈ ಯವರಿರುವರು.

## ಆನೆಯು ಸಿಟ್ಟು!

ಒಂದು ಮೆರವಣಿಗೆ ವಿಜೃಂಭಣೆಗಾಗಿ ಆಮಂತ್ರಿಸಲ್ಪಟ್ಟು ಇದೇ ತಾ. 12ರಲ್ಲಿ ಕಾರ್ಕಳಕ್ಕೆ ಹೋಗಿದ್ದ ಉಡುಪಿಯ ಶ್ರೀ ಅದಮಾರು ಮಠದ ಆನೆಯು ಅಲ್ಲಿ ಯಾವ ಕಾರಣದಿಂದಲೋ ಸಿಟ್ಟುಗೊಂಡು ಮಾವುತನನ್ನು ಕೊಂದು ಹಾಕಿದ ಶೋಚನೀಯ ವಾರ್ತೆ ಬಂದಿದೆ-ಆನೆಯು ಬೇರೆ ವಿಶೇಷ ಉನ್ಮತ್ತತೆಯನ್ನೇನೂ ಪ್ರದರ್ಶಿಸಿಲ್ಲವಾದರೂ ಆ ಭಾಗದಲ್ಲಿ ಸ್ವಾಭಾವಿಕ ಅಪಾಯ ಭೀತಿ ವ್ಯಾಪಿಸಿ, ರಿಜರ್ವ್ ಪೋಲಿಸ್ ಮತ್ತು ಸಾಮಾನ್ಯ ಪೋಲೀಸರ ವಿಶೇಷ ಪಹರೆಯಿದ್ದಿತೆಂದೂ, ಸಂಬಂಧಪಟ್ಟ ಅಧಿಕಾರಿಗಳ ಅಜ್ಞಾನುಸಾರ ತಾ. 14ರಲ್ಲಿ ಅದಕ್ಕೆ ಗುಂಡು ಹಾರಿಸಲ್ಪಟ್ಟು ಜಯವಾಗಿದೆಯೆಂದೂ ವಾರ್ತೆಯಿದೆ. ಪದ್ಧತಿಪ್ರಕಾರ ಈ ಕುರಿತು ನಾನಾ ವಿಧದ ಸುದ್ದಿಗಳು ಮತ್ತು ಊಹಾಪೋಹೆಗಳು ಎಲ್ಲೆಡೆ ವ್ಯಾಪಿಸಿಕೊಂಡಿವೆ. ಮಾವುತನನ್ನು ಕೊಂದ ಆನೆಯು ಪಹೋಟಿಗೊಳಗಾಗದೆ ಇದೇ ತಾ. 15ರ ವರೆಗೆ ಕಾರ್ಕಳದಲ್ಲೇ ಇದ್ದು ಜನರ ಕುತೂಹಲವನ್ನು ಕೆರಳಿಸುವುದು ಕಂಡುಬರುತ್ತಿದೆ.


## NOTICE

Is hereby given that the right of collecting fees in the Ml. markets, Cart stands, Jatka stand, Mutton stalls, and slaughter house for the year 50-51 will be sold by public auction by the commissioner Udidi Mlty. on Monday the 20th Feb. 50 at 3-0 P.M. in the Municipal office, Udipi. The sale is subject to the rules inforce.

Further particulars or information may be obtained from the Municipal Office Udipi, on all working days during office hours.

ಈ ಮೂಲಕ ತಿಳಿಯಪಡಿಸುವುದೇನೆಂದರೆ.-

1950-51ನೇ ವರ್ಷದಲ್ಲಿ ಉಡುಪಿ ಮುನಿಸಿಪಾಲಿಟಿಯ ಆಡಳಿತಕ್ಕೆ ಒಳಪಟ್ಟ ಮಾರ್ಕೆಟು, ಗಾಡಿಚೌಕ, ಜಟ್ಕಾಚೌಕ, ಮಟನ್ ಸ್ಟ್ರೋಲ್ಸ್ ಮತ್ತು ವಧಾಗೃಹ ಇವುಗಳಲ್ಲಿ ವರಿ ವಸೂಲು ಮಾಡುವ ಹಕ್ಕನ್ನು ಮುನಿಸಿಪಲ್ ಕಮಿಷನರ್‌ರವರು ತಾ. 20-2-50ನೇ ಸೋಮವಾರ ಅಪರಾಹ್ನ ಗಂಟೆ 3ಕ್ಕೆ ಮುನಿಸಿಪಲ್ ಆಫೀಸಿನಲ್ಲಿ ಈ ಕುರಿತು ಜ್ಯಾರಿಯಲ್ಲಿರತಕ್ಕ ನಿಯಮಗಳಿಗನುಸಾರವಾಗಿ ಬಹಿರಂಗವಾಗಿ ಏಲಂ ಮೂಲಕ ಮಾರಾಟ ಮಾಡುವರು.

ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಆಫೀಸು ಸಮಯ ಮುನಿಸಿಪಲ್ ಆಫೀಸಿಗೆ ಬಂದು ತಿಳಿದುಕೊಳ್ಳಬಹುದು.

ಮುನಿಸಿಪಲ್ ಆಫೀಸು,
ಉಡುಪಿ.
ತಾ. 13-2-50.

**V. Balagangadharan,**
Commissioner.



**14—2—1950**ರಿಂದ ಇಂಗ್ಲಿಷ್ ಸಾಹಸ ಚಿತ್ರ

# ಲೈಟಿನಿಂಗ್ ಟೆರರ್

ಅನಂತರ:—

**ತಕರಾರ್, ಹುಮಾ ಸವಾರ್, ಗುಂಜಾನ್, ಲೀಲಾ ರತ್ನರೇಖಾ ಇತ್ಯಾದಿ**

**ಶ್ರೀ ರಾಮಕೃಷ್ಣಥಿಯೇಟರ್ ಲಿಮಿಟೆಡ್, ಉಡುಪಿ.**



## Notificaton

Sealed quotations will be received by the Commissioner, upto 4 P. M. on 23-2-50 for the Supply of ADVequipment with 5.000 X 19 ADV tyres and Tubes required for a hand cart.

Further particulars, if any, may be obtained from the Municipal Office during Office hours on working days.

Municipal Office, UDIPI
Dated: 10-2-1950.
KMR/A. 11. 2.

Sd. **V. Balagangadharan,**
Commissioner



**ಓದಲೇ ಬೇಕಾದ ಪುಸ್ತಕಗಳು**

ಶ್ರೀ. ಕೆ. ಕೆ. ಶೆಟ್ಟರ

ಪ್ರೇಮ ವಿಜಯ
(ಸಾಮಾಜಿಕ ನಾಟಕ)
**ಬೆಲೆ ರೂ 1—0—0**

ವ್ಯಭಿಚಾರಿಣಿ ಯಾರು
(ಸಾಮಾಜಿಕ ನಾಟಕ)
**ಬೆಲೆ ರೂ 1—0—0**

ವಿವಿಧ ಕತೆಗಾರರ
ಪ್ರೇಮ ಪ್ರವಾಹ
(ಕಥಾ ಸಂಕಲನ)
**ಬೆಲೆ ರೂ 0—8—0**

**ನವಭಾರತ ಬುಕ್ ಡಿಪ್ಪೊ, ಉಡುಪಿ.**



**'ಅಂತರಂಗ'ಕ್ಕೆ**

6 ರೂಪಾಯಿ

ಚಂದಾ ಕೊಟ್ಟು

**ಒಂದೇ ವರ್ಷದಲ್ಲಿ**

**50** ಪುಸ್ತಕಗಳನ್ನು ಪಡೆಯಿರಿ.

**'ಅಂತರಂಗ' ಉಡುಪಿ.**

## ದ- ಕನ್ನಡ

**ಉದ್ಯಾವರ**—ತಾ. 11ರಲ್ಲಿ ಸೈಂಟ್ ಫ್ರಾನ್ಸಿಸ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿಯೂ ತಾ.12ಕ್ಕೆ ಬಾಸೆಲ್‌ಮಿಶ್ಯನ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿಯೂ ಸಾರ್ವಜನಿಕ ಸಭೆ ಮತ್ತಿತರ ಕಾರ್ಯಕ್ರಮಗಳ ಮೂಲಕ ಶಿಶುಸಪ್ತಾಹವಾಚರಿಸಲ್ಪಟ್ಟಿತು.

**ಹೆರ್ಗ**—ಈ ಗ್ರಾಮದ ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದ ಇದಿರು ಜಾತ್ರೆಯ ನಂತರ ಮಾಮೂಲು ಪ್ರಕಾರ ಜರಗತಕ್ಕ ಕೋಳಿ ಸೋಡ್ತಿ ಅಂಕವು ಈ ಬಾರಿ ನಿಲ್ಲಿಸಲ್ಪಟ್ಟಿದೆ, ಎಂದು ಕಳೆದ ವಾರದ ನವಯುಗದಲ್ಲಿ ಪ್ರಕಟವಾದ ವಾರ್ತೆಯು ತಪ್ಪೆಂದೂ, ಕೋಳಿ ಸೋಡ್ತಿ ಅಂಕವು ಮಾಮೂಲು ಪ್ರಕಾರ ನಡೆದಿತ್ತೆಂದೂ ಓರ್ವ ಮಹನೀಯರು ಬರೆಯುತ್ತಾರೆ.

**ಕುಂಬಳೆ ಫಿರ್ಕಾಭಿವೃದ್ಧಿ**—ಪೆರ್ಲ ಗ್ರಾಮಸೇವಾಸಂಘದ ನೇತೃತ್ವದಲ್ಲಿ ರಚನಾತ್ಮಕ ಕಾರ್ಯಕರ್ತರ ಒಂದು ಶಿಬಿರವು ಅಡ್ಕನಡ್ಕದಲ್ಲಿ ತಾ. 20 ಮತ್ತು 30ಕ್ಕೆ ಜರಗಿತ್ತು. ಉಕ್ಕಿನಡ್ಕದ ಮಿತ್ರಮಂಡಳಿಯ ಆಶ್ರಯದಲ್ಲಿ ವಯಸ್ಕರ ಶಿಕ್ಷಣಶಾಲೆಯು ತೆರೆಯಲ್ಪಟ್ಟಿತು. ಯಾಂತ್ರಿಕ ಸಹಾಯದಿಂದ 4 ಎಕ್ರೆ ಇಳಿಜಾರು ಪ್ರದೇಶವು ಕೃಷಿಯೋಗ್ಯವಾಗಿ ಮಾಡಲಾಯಿತು.

**ಇನ್ನಂಜೆ**—ಇಲ್ಲಿಯ ಶ್ರೀ ಎಸ್. ವಿ. ಎಚ್. ಹೈಸ್ಕೂಲಿನ ವರ್ಧಂತ್ಯುತ್ಸವವು ಇದೇ ತಾ. 4ರಲ್ಲು ಉಡುಪಿಯ ಡಾ। ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಈ ಶಾಲೆಯ ಹಳೆವಿದ್ಯಾರ್ಥಿ ಸಂಘ ಮತ್ತು ಗ್ರಾಮಸೇವಾ ಸಮಿತಿಗಳ ಸಂಯುಕ್ತ ವಾರ್ಷಿಕೋತ್ಸವವು ತಾ. 5ರಲ್ಲು ಶಿವವಿಹಾರದ ಉದ್ಘಾಟನಾ ಸಮಾರಂಭದೊಂದಿಗೆ ಶ್ರೀ ಶಂಕರ್ಲು ಗಣಪಯ್ಯ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

**ಅಲೆವೂರು** – ಇಲ್ಲಿಯ ಸುಬೋಧಿನಿ ಹಾ। ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ಇದೇ ತಾ. 12ರಲ್ಲು ಸೀನಿಯರ್ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಎಚ್. ಸಂಜೀವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಅಂದು ಬೆಳಗ್ಗೆ ಧ್ವಜವಂದನೆ, ಪ್ರಭಾತಫೇರಿಗಳಾದುವು ಪಂಚಾಯತ ಬೋರ್ಡಿನ ಲೆಕ್ಕದಿಂದ ಶಿಶು ಆರೋಗ್ಯ ಸಪ್ತಾಹವು ಜರಗಿ ಯೋಗ್ಯ ಮಕ್ಕಳಿಗೆ ಬಹುಮಾನ ಹಂಚಲಾಯಿತು, ಸಂಜೆ ಹೆತ್ತವರ ಕೂಟ, ಶಾಲಾ ಮಕ್ಕಳಿಗೆ ತಿಂಡಿ ಹಂಚೋಣ, ಪಾರಿತೋಷ ವಿತರಣೆ, ನಾಟಕಾಭಿನಯಂಗಳಾದ ನಂತರ ಶಾಲಾಮೆನೇಜರ್ ಶ್ರೀ ಎಮ್. ಅಚ್ಚಣ್ಣ ಸೆಟ್ಟರು ಧನ್ಯವಾದಗಳನ್ನರ್ಪಿಸಿದರು.

**ಬನ್ನಾಡಿ**: ಸ್ಥಳೀಯ ಪಂಚಾಯತ ಬೋರ್ಡಿನವರು ಊರವರ ಮತ್ತು ಶಾಲೆಯ ಸಹಕಾರದಿಂದ ಇದೇ ತಾ. 10 ಮತ್ತು 11ರಂದು ಆರೋಗ್ಯ ಮತ್ತು ಶಿಶು ಸಪ್ತಾಹವನ್ನು, ಪಂದ್ಯಾಟ ಸ್ಪರ್ಧೆಗಳು, ಮೆರವಣಿಗೆ, ಧ್ವಜವಂದನೆ, ಆರೋಗ್ಯ ಬೋಧಕವಾದ ವಿವಿಧ ವಿನೋದಪೂರಿತ ಚಟುವಟಿಕೆಗಳು, ಶಿಶು ಪ್ರದರ್ಶನ, ಸಾರ್ವಜನಿಕ ಸಭೆ, ಬೋಧಪ್ರದವಾದ ಭಾಷಣಗಳು, ಬಹುಮಾನ ವಿತರಣ, ಸಿಹಿತಿಂಡಿ ಹಂಚೋಣ, ಮುಂತಾದ ಹತ್ತು ಹಲವು ಕಾರ್ಯಕ್ರಮಗಳಿಂದ ಶ್ರೀಮಾನ್ ಡಾ। ಕಲ್ಕೂರ ಅವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಆಚರಿಸಿದರು.

**ಆಜೆಕಾರು**: ಪಂಚಾಯ್ತಿ ಬೋರ್ಡು ವತಿಯಿಂದ ಸ್ಥಳೀಯ ಹಾಯರ್ ಎಲಿಮೆಂಟರಿ ಶಾಲಾ ವಠಾರದಲ್ಲಿ ಆರೋಗ್ಯ ಸಪ್ತಾಹವು ತಾ. 11ರಲ್ಲು ಡಾ। ಯು. ಕೃಷ್ಣನವರ ನೇತೃತ್ವದಲ್ಲಿ ಜರಗಿ, ಮೆರವಣಿಗೆ ವಿವಿಧ ವಿನೋದಗಳು, ಭಾಷಣ, ಶಿಶು ಪ್ರದರ್ಶನ, ಇನಾಂ ಹಂಚೋಣ ಮುಂತಾದ ಕಾರ್ಯಕ್ರಮಗಳು ಯಶಸ್ವಿಯಾಗಿ ನೆರವೇರಿದವು.

**ಪಣಂಬೂರು**-ಸೌತ್ ಇಂಡಿಯನ್ ಎಕ್ಸ್ಟ್ರಾಡಿಪಾರ್ಟ್‌ಮೆಂಟಲ್ ಪೋಸ್ಟಲ್ ಅಫೀಶಿಯಲ್ಸ್ ಯೂನಿಯನ್, ಶ್ರೀಕೃಷ್ಣಪುರಂ, ಸೌತ್ ಮಲಬಾರ್, ಎಂಬ ಸಂಸ್ಥೆಯು ಆ ಸಂಸ್ಥೆಯ ಮೆಂಬರರುಗಳ ಪರವಾಗಿ ಸರಕಾರದೊಡನೆ ಯಾವುದೇ ತರದ ವ್ಯವಹಾರ ನಡೆಸುವರೆ ಅಧಿಕೃತಗೊಳಿಸಲ್ಪಟ್ಟಿವೆಯೆಂದು ಡೆಪ್ಯುಟಿ ಡಾಯ್ರೆಕ್ಟರ್ ಜನರಲ್‌ರವರಿಂದ ಅಜ್ಞೆ ಬಂದಿದೆ ಎಂದು ತಿಳಿಸುತ್ತುಂಬಾ ಸಂತೋಷಪಡುತ್ತೇವೆ. ಆದುದರಿಂದ ನಮ್ಮ ಜಿಲ್ಲೆಯ ಎಲ್ಲಾ ಎಕ್ಸ್ಟ್ರಾ ಡಿಪಾರ್ಟ್‌ಮೆಂಟಲ್ ಸ್ಟಾಫಿನವರು ಇನ್ನಾದರೂ ಸದರಿ ಸಂಘದ ಮೆಂಬರರಾಗಿ ಸೇರಿ, ಈ ಜಿಲ್ಲೆಯಲ್ಲಿ ಅದರದೊಂದು ಶಾಖೆಯನ್ನು ತೆರೆಯುವರೆ ಪ್ರೋತ್ಸಾಹಿಸಿ ತನ್ಮೂಲಕ ಸಂಘವನ್ನು ಇನ್ನಷ್ಟು ಬಲಪಡಿಸಿ ನಮ್ಮ ಕಷ್ಟ ನಿವಾರಣೆಯ ದಾರಿ ನಾವೇ ನೋಡಿಕೊಳ್ಳಬೇಕಾಗಿಯೂ, ಮೆಂಬರರಾಗಲಿಚ್ಚಿಸುವವರು ಸದ್ರಿ ಸಂಘದ ಈ ಜಿಲ್ಲೆಯ ಆರ್ಗನೈಸರ್, ಪಣಂಬೂರು ಬ್ರಾಂಚ್ ಪೋಸ್ಟುಮಾಸ್ಟರ್ ಶ್ರೀ. ಪಿ. ರಾಮರಾಯರಿಗೆ ಬರೆಯಬೇಕಾಗಿಯೂ ಆತಿಸಲಾಗಿದೆ.

**ಪಳ್ಳಿ**—ತಾ. 10-2-1950ರಲ್ಲಿ ಶಿಶು ಸಪ್ತಾಹವು ಶಾಲಾ ಬಾಲಕರ ಮೆರವಣಿಗೆ, ಬಾಲಕರಿಗೆ ತಿಂಡಿ ಹಂಚೋಣ, ಪರೇಲ್ ಸಂಕಪ್ಪ ಸೆಗ್ಡೇರ ಅಧ್ಯಕ್ಷತೆಯಲ್ಲಿ ಸಭೆ ಮೊದಲಾದ ಕಾರ್ಯಕ್ರಮಗಳಿಂದ ಜರಗಿತು. ಶ್ರೀ. ಪಿ. ವಾಸುದೇವ ಪೈಗಳ ಭಾಷಣವಿತ್ತು.

**ಪಾದೂರು**: ಇದೇ ತಾ. 12ರಲ್ಲು ಶಿಶುಸಪ್ತಾಹ ದಿನಾಚರಣೆಯು ಪಾದೂರು ಪಂಚಾಯತ ಬೋರ್ಡಿನ, ಊರವರ, ಪಾದೂರು ಶಾಲಾ ಉಪಾಧ್ಯಾಯ ಉಪಾಧ್ಯಾಯಿನಿಯರ ಮತ್ತು ಮಕ್ಕಳ ಸಹಕಾರದಿಂದ ಯಶಸ್ವಿಯಾಗಿ ಜರಗಿತು. ಸಂಜೆ ಮೆರವಣಿಗೆ ಪಂಚಾಯತ ಬೋರ್ಡು ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಮಹಾಜನ ಸಭೆ, ಭಾಷಣ, ತಿಂಡಿ ಹಂಚೋಣ ಬಡಮಕ್ಕಳಿಗೆ ಅಂಗಿ, ಟೊಪ್ಪಿ ವಿತರಣೆ ಮೊದಲಾದ ಕಾರ್ಯಕ್ರಮಗಳಾದುವು.

**ಮುಂಡ್ಕೂರು**—ಇಲ್ಲಿನ ಶ್ರೀ ದುರ್ಗಾ ಪರಮೇಶ್ವರಿ ದೇವಳದ ವರ್ಷಾವಧಿ ಉತ್ಸವವು ತಾ. ೧೩-೨-೫೦ನೇ ಕುಂಭ ಸಂಕ್ರಮಣ ದಿನ ಧ್ವಜಾರೋಹಣವಾಗಿ ತಾ ೧೭-೨-೫೦ ನೇ ಶುಕ್ರವಾರ ರಥೋತ್ಸವವು ಜರಗಿ ಮರುದಿನ ಅವಭೃತ ಉತ್ಸವದೊಂದಿಗೆ ಮುಕ್ತಾಯವಾಗುವುದು.

**ಮಜೂರು ಕರಂದಾಡಿ**— ಶ್ರೀರಾಮ ಪ್ರಾಥಮಿಕ ಶಾಲೆಯಲ್ಲಿ ಇದೇ ತಾ. 6ರಿಂದ 12ರ ವರೆಗೆ ಶಿಶುಸಪ್ತಾಹ ಸಮಾರಂಭವನ್ನು ಆಚರಿಸುತ್ತಾ ಬಂದು 12ನೇ ಆದಿತ್ಯವಾರ ಸಂಜೆ ಶ್ರೀ ಕಾರ್ನಾಡು ಗುರುದತ್ತರಾವ್, ಹಿಂದಿಪ್ರಚಾರಕ ಇವರ ಅಧ್ಯಕ್ಷತೆಯಲ್ಲಿ ಕಡೆ ದಿನದ ಸಪ್ತಾಹವನ್ನು ವಿಜೃಂಭಣೆಯಿಂದ ಜರಗಿಸಲಾಯಿತು. ಮಕ್ಕಳ ವಿನೋದಾವಳಿ, ಪಂದ್ಯಾಟ, ತಿಂಡಿ ಹಂಚುವುದು, ಬಹುಮಾನ ವಿತರಣೆ ಇತ್ಯಾದಿ ಕಾರ್ಯಗಳು ಜರಗಿದವು ಜನಗಣದೊಂದಿಗೆ ಸಭೆಯು ಮುಕ್ತಾಯವಾಯ್ತು.

· **ಮಣಿಪಾಲ**-ಇದೇ ತಾ 6ರಲ್ಲು ವಯಸ್ಕರ ಶಿಕ್ಷಣ ಸಪ್ತಾಹದ ಪ್ರಚಾರ ಕಾರ್ಯವು ಶ್ರೀ. ಪ್ರಸಾದ ಜತ್ತನ್ನರ ಅಧ್ಯಕ್ಷತೆಯಲ್ಲಿ ಜರಗಿತು. ಅಂತೆಯೇ ಶಿಶು ಸಪ್ತಾಹ ಸಮಾರಂಭವು ತಾ 10ರಲ್ಲು ಡಾ। ಕೆ. ಎಚ್. ಐತಾಳರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು.

### ತಿದ್ದುಪಡಿ

ನಮ್ಮ ಕಳದ ತಾ. 9ರ ಸಂಚಿಕೆಯಲ್ಲಿ ಪ್ರಕಟವಾದ ಕೊಡವೂರು ಮರ್ಗಿ ಪೂಜಾರಿಯ ಪ್ರಕಟಣೆಯ 33ನೆ ಪಂಕ್ತಿಯಲ್ಲಿ 'ಮೂರು' ಎಂತ ತಪ್ಪಾಗಿ ಅಚ್ಚಾದುದನ್ನು 'ಒಂದು' ಎಂತ ದುರುಸ್ತಿಗೊಳಿಸಿ ಓದಬೇಕಾಗಿ ವಿನಂತಿ. ಸಂ ನ.


**The Maharashtra Apex Bank Limited,**

Head Office

——oOo——

**NOTICE**

The Register of Members and Transfer Books of the Bank will remain closed from 18th March, 1950 to 16th April, 1950 both days inclusive.

(By order)

UDIPI,
11th February, 1950

U. A. Pai.
Managing Director.



# ಕುಲವಿಲ್ಲದ ಹೆಣ್ಣು

(ಸರಸ ಸಾಮಾಜಿಕ ಕಾದಂಬರಿ)

ಬರೆದವರು:— ಪಿ ವೆಂಕೋಬಾಚಾರ್ಯ, ಬಿ.ಎ.ಬಿ.ಟಿ.

ದೇವದಾಸಿ ಕುಲದ ಉದ್ಧಾರವೇ ಮುಖ್ಯ ಕಥಾವಸ್ತು-

**ಕುಸುಮಳು ವೇಶ್ಯಾವೃತ್ತಿಯಾದರೂ ಅವಳು ವೇಶ್ಯೆಯಲ್ಲ!**

**ಅವಳ ಕತೆ ಹೇಗೆ ಸಾಗಿದೆ ಎಂದು ಓದಿಯೇ ತಿಳಿಯಿರಿ.**

ದಪ್ಪ ಪುಸ್ತಕ ಬೆಲೆ ರೂ. 1—0—0

ಪ್ರತಿಗಳು, ಅಂತರಂಗ ಕಾರ್ಯಾಲಯ, ಉಡುಪಿ, ನವಯುಗ ಪ್ರೆಸ್, ಉಡುಪಿ ಅಥವಾ ನವಭಾರತ ಬುಕ್ ಡಿಪೊ, ಉಡುಪಿ ಇಲ್ಲಿ ದೊರೆಯುತ್ತವೆ.



ಜೀವವಿಮೆಗಾಗಿ

**ವಿಚಾರಿಸಿರಿ**

# ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ

ಲೈಫ್ ಇನ್ಶ್ಯೂರೆನ್ಸ್ ಕೊ, ಲಿಮಿಟೆಡ್,

(ಸ್ಥಾಪನೆ 1934)

**ಚೆಯರ್‌ಮೆನ್: ಶ್ರೀ. ಎಮ್ ಸಿಟಿ ಎಮ್. ಚಿದಂಬರಮ್ ಚೆಟ್ಟಿಯಾರ್**

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೋಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,
ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ:
"ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್ ಪೋಸ್ಟು ಬಾಕ್ಸ್ ನಂಬ್ರ 142
ಮದ್ರಾಸು



**ಬೆಳೆ ಕಾಗದ! ನಾಜೂಕಿನ ಬೈಂಡು!**

# 1950ನೇ ಇಸವಿಯ

# ಪಾಕೆಟ್ ಡೈರಿಗಳು

| | | |
|---|---|---|
| ದೊಡ್ಡದು | (ಕೆಲಿಕೊ ಬೈಂಡ್) | 1-12-0 |
| ,, | (ಸಾದಾ) | 1-8-0 |
| ಸಣ್ಣದು | (ಕೆಲಿಕೊ) | 1-4-0 |
| ,, | (ಸಾದಾ) | 0-12-0 |

(ಟಪ್ಪಾಲು ಖರ್ಚು ಪ್ರತ್ಯೇಕ.)

ಸಿಗುವ ಸ್ಥಳಗಳು:-

**ನವಭಾರತ ಬುಕ್ ಡಿಪೊ, ಉಡುಪಿ.**

**ನವಯುಗ ಪ್ರೆಸ್, ಉಡುಪಿ.**





ಶ್ರೀ ಕೆ. ರಙ್ಕೆಲ್ ಶ್ರೀನಿವಾಸರಾ ಯರ

# 'ಸುಲಭದಲ್ಲಿ ಇಂಗ್ಲಿಷ್'

(ENGLISH MADE EASY)

ಮನೆಯಲ್ಲಿ ಸೀಘ್ರವಾಗಿ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.

ಬೆಲೆ: ೧—೮—೦

ಡಾಕ್ಟರ್ ಕೆ. ರಙ್ಕೆಲ್ ವೆಂಕಟ್ರಾಯರ

# 'ಮನೆ ಮದ್ದು'

(HOME REMEDIES)

೨೦೦ ಕಾಹಿಲೆಗಳಿಗೆ ಮನೆಯಲ್ಲೇ ಮಾಡಿಕೊಳ್ಳಬಹುದಾದ ೧೦೦೦ ಮದ್ದುಗಳ ವಿವರವಿರುವ ಪುಸ್ತಕ. ಬೆಲೆ: ರೂ, ೨

ಪ್ರತಿಗಳು ನಿಮ್ಮೂರ ಪುಸ್ತಕವ್ಯಾಪಾರಿಗಳಲ್ಲಿ ಸಿಗದಿದ್ದರೆ ಬರೆಯಿರಿ-

ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗ ಪ್ರೆಸ್, ಉಡುಪಿ.

**ಬಾರಕೂರು**— ಇಲ್ಲಿಯ ನೇಶನಲ್ ಹೈಸ್ಕೂಲಿನ ಹಳೆವಿದ್ಯಾರ್ಥಿಗಳ ಸಭೆಯೊಂದು ಈಚೆಗೆ ಜರಗಿ ಹಳೆವಿದ್ಯಾರ್ಥಿ ಸಂಘವೊಂದು ಸ್ಥಾಪಿಸಲಾಯಿತು. ಶಾಲಾ ಮುಖ್ಯೋಪಾಧ್ಯಾಯರು ಸಂಘದ ಅಧ್ಯಕ್ಷರಾಗೂ ಖಜಾನ್ಚಿಯರಾಗಿಯೂ ಶ್ರೀಗಳಾದ ಎಚ್. ಬಿ. ನಾರಾಯಣಸೆಟ್ಟಿ ಮತ್ತು ಯು. ಪ್ರಭಾಕರನಾಯ್ಕರು ಜತೆಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

**ಕಾಸರಗೋಡು** ವಯಸ್ಕರ ಶಿಕ್ಷಣ ಸಪ್ತಾಹವು ಸ್ಥಳೀಯ ಶಾಲಾ ವಿಧ್ಯಾರ್ಥಿಗಳ ಜಯಘೋಷಯುಕ್ತವಾದ ಮೆರವಣಿಗೆಯಿಂದ ಪ್ರಾರಂಭವಾಯಿತು. ಸಾರ್ವಜನಿಕ ಸಭೆಯು ಪುತ್ತೂರು ರೆವಿನ್ಯೂ ಡಿವಿಜನಲ್ ಆಫಿಸರ್ ಶ್ರೀ ಯಚ್. ನರಸಿಂಹ, ಅವರ ಅಧ್ಯಕ್ಷತೆಯಲ್ಲಿ ಜರಗಿ ಹಲವರ ಶಾಲೋಚಿತ ಭಾಷಣಗಳಾದುವು.

**ಪುತ್ತೂರು** ಇಲ್ಲಿಯ ವಯಸ್ಕರ ಶಿಕ್ಷಣ ಸಪ್ತಾಹವು ಇದೇ ತಾ 3 ರಿಂದ 7 ರವರ ವಿವಿಧ ಕಾರ್ಯಕ್ರಮಗಳಿಂದ ಸಾಂಗವಾಗಿ ನಡೆಗಿತು, ಸಾಧಾರಣ ಐದು ಸಾವಿರ ಪುಸ್ತಕಗಳು 'ವಯಸ್ಕರ ಶಿಕ್ಷಣದ ಮೊದಲ ಎರಡು ಪಾಠಗಳ'ಮೇಲೆ ಛಾಪಿಸಲ್ಪಟ್ಟು ಪುಕ್ಕಟೆ ಹಂಚಲಾದುವು. ಬೋರ್ಡು ಹೈಸ್ಕೂಲು ಮತ್ತು ಸೈಂಟ್ ಪಿಕ್ಟರ್ಸ್ ಹೈಸ್ಕೂಲು ಸ್ವಯಂಸೇವಕ, ಸೇವಿಕೆಯರು ಮುಖ್ಯಾತ್ರವಹಿಸಿ ಸಪ್ತಾಹದ ಯಶಸ್ಸಿಗೆ ನೆರವಾಗಿದ್ದರು.

**ಕಾಶಿಮಠದ** ಶ್ರೀ ಸುಧೀಂದ್ರ ತೀರ್ಥಸ್ವಾಮಿಗಳವರು ತಾ 7 ರಲ್ಲು ಸಂಜೆ ಪುತ್ತೂರಿಗೆ ಆಗಮಿಸಿದಾಗ ಸಮಾಜದ ಶಿಷ್ಯ ವೃಂದವು ಸಂಭ್ರಮದ ಸ್ವಾಗತವಿತ್ತು ಮೆರವಣಿಗೆಯೊಂದಿಗೆ ಶ್ರೀ ವೆಂಕಟ್ರಮಣ ದೇವಸ್ಥಾನಕ್ಕೆ ಕರಕೊಂಡು ಹೋಗಿ ಅಲ್ಲಿ ಪಾದ ಪೂಜಾದಿ ಕಾರ್ಯಕ್ರಮಗಳಾದುವು.

**ಬೈಡೂರು** ತಾ 10 ರಲ್ಲು ಇಲ್ಲಿಯ ಬಿ ಇ. ಯಮ್, ಹಾ.ಎ. ಶಾಲೆಯ ಶಿಶು ಸಪ್ತಾಹವು ಬಹಳ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಅಂದು ಬೆಳಿಗ್ಗೆ ಶಾಲಾ ಮಕ್ಕಳ ಮತ್ತು ಊರವರ ಮೆರವಣಿಗೆಯಾದ ನಂತರ ಶ್ರೀ ಎಸ್. ಪದ್ಮನಾಭ ಶೆಟ್ಟರು ರಾಷ್ಟ್ರಧ್ವಜಾರೋಹಣ ಮಾಡಿದರು. ಮಧ್ಯಾಹ್ನ ಮಕ್ಕಳಿಗೆ ತಿಂಡಿ ಹಂಚಲಾದ ನಂತರ ಶ್ರೀ. ಎ. ಕೃಷ್ಣಯ್ಯ ಹೆಗ್ಡೆರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿ ಹೆಲ್ತ್ ಇನ್ಸ್‌ಪೆಕ್ಟರ್ ಶ್ರೀ ವೇಣುಗೋಪಾಲರಾಯರ ಭಾಷಣವಾಯಿತು.

ಇದೇ ಕಳೆದ ತಾ 26 ರಲ್ಲಿ ಪ್ರಜಾರಾಜ್ಯ ದಿನಾಚರಣೆಯು ಆಚರಿಸಲ್ಪಟ್ಟಿತು. ಬೆಳಿಗ್ಗೆ ಮೆರವಣಿಗೆಯೂ, ಧ್ವಜವಂದನೆಗಳೂ ಆದುವು. ಸಂಜೆ, ಮೆರವಣಿಗೆ ಹಾಗೂ ಶ್ರೀ A.K ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಭೆಯೂ ಆಯಿತು. ಹಲವರ ಭಾಷಣಗಳಾದುವು.

---

## ಸ್ವೀಕಾರ—ವಿಮರ್ಶೆ

೧ ಶಿಲ್ಪಿ (ಕಿರುಕತೆಗಳ ಸಂಗ್ರಹ)

ಲೇಖಕರು: ಶ್ರೀ ಅ. ನ. ಕೃಷ್ಣರಾಯರು. ಪ್ರಕಾಶಕರು: ಆನಂದ ಬ್ರದರ್ಸ್, ಬೆಂಗಳೂರು ೨. ಬೆಲೆ ರೂ. ೧-೪-೦

ಕರ್ನಾಟಕದ ಸುಪ್ರಸಿದ್ಧ ಸಾಹಿತಿಗಳಾದ ಶ್ರೀಮಾನ್ ಅ. ನ. ಕೃಷ್ಣರಾಯರು ಈ ಆರು ಕತೆಗಳನ್ನ ಬರೆದಿದಾರೆಂದು ಆಸ್ಥೆಯಿಂದ ಓದಿದರೆ ತುಂಬ ನಿರಾಶೆಯಾಗುತ್ತದೆ. ಸೌಂದರ್ಯ, ಕಲೆ, ಆಧ್ಯಾತ್ಮಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಈ ಆರು ಕತೆಗಳನ್ನು ಹೆಣೆದರೂ ಹಿನ್ನೆಲೆಯಸಿದ್ಧಿ ಇಲ್ಲಿಯಾಗಲಿಲ್ಲ. 'ಶಿಲ್ಪಿ'ಯ ಶೈಲಿಯಲ್ಲಿ ಅ. ನ. ಕೃ.ರವರ ಮೋಹ ಕತೆಯಿದ್ದರೂ ಕತೆಯಲ್ಲಿನಾವೀನ್ಯತೆಯಿಲ್ಲ. 'ಒಂದು ಸಂಜೆ' ಬರೀ ಒಂದು ಸನ್ನಿವೇಶ. ಅದು ಎಷ್ಟಕ್ಕೂ ಕತೆಗಳ ಸಾಲಲ್ಲಿ ನಿಲ್ಲದು. 'ಬೀದಿಯ ಹೆಣ್ಣು' 'ತಿಳಿವು ಮೂಡಿತು' ಈ ಕತೆಗಳ ಕೆಲವು ಸನ್ನಿವೇಶಗಳು ಹೃದಯವನ್ನು ಕಲುಕುತ್ತವೆ. ಉಳಿದವುಗಳು ಕತೆಗಾಗಿ ಬರೆದವೋ? ಎಂದೂ ಭಾಸವಾಗುತ್ತವೆ. ಅ. ನ. ಕೃ ರವರ ನಿರರ್ಗಳವಾದ-ಆತ್ಮೀಯವಾದ ಮಾತಿನ ಬಣ್ಣನೆಯನ್ನು ಇಲ್ಲಿ ಕಾಣಲಾರೆವು! ಕತೆಗಳಲ್ಲಿ ವಾಸ್ತವತೆಯಾಗಲೀ-ತಾಂತ್ರಿಕತೆಯಾಗಲೀ ಕಂಡು ಬರದೇ ಇದ್ದುದರಿಂದ ಅಷ್ಟೊಂದು ಮನಸ್ಸಿಗೆ ಹಿಡಿಸುವುದಿಲ್ಲ. ಅಂತೂ ಓದಬಹುದಾದ ಕತೆಗಳು!

೨. Speeches by Netaji Subhas Chandra Bose. (English)

ಪ್ರಕಾಶಕರು: ಅಜಾದ್ ಪಬ್ಲಿಕೇಶನ್. ಮಾರಾಟಗಾರರು: ಆತ್ರೇಯ ಜನರಲ್ ಏಜನ್ಸಿ 34. ನರಸಿಂಹರಾಜಾ ರೋಡ್, ಬೆಂಗಳೂರು 2. ಬೆಲೆ ೧೨ ಆಣೆ.

ಭಾರತದ ವೀರ ಸುಪುತ್ರರಾದ ನೇತಾಜಿ ಸುಭಾಸ್‌ಚಂದ್ರ ಬೋಸರ ಇಪ್ಪತ್ತೊಂಬತ್ತು ರಾಜಕೀಯ ಭಾಷಣಗಳನ್ನು ಒಂದು ಕಟ್ಟಾಗಿ ಇಂಗ್ಲಿಷಿನಲ್ಲಿ ಇಲ್ಲಿ ಕೊಡಲಾಗಿದೆ. ಈ ಭಾಷಣಗಳು ಅರುವತ್ತು ಸಾವಿರ ಭಾರತದ ವೀರ ಯುವಕ, ಯುವತಿ(I. N. A.)ಯರ ಮುಂದೆ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ನವಚೈತನ್ಯವನ್ನು ಕೊಟ್ಟು ಮುಂದುವರಿಸಲು ಕೊಟ್ಟ ವೀರ ಸಂದೇಶಗಳಿವು! ದೇಶದ ಸ್ವಾತಂತ್ರ್ಯಕ್ಕೆ ಗಾಂಧೀಜೀ ಎಷ್ಟು ಕಾರಣವೋ ನೇತಾಜಿ ಕೂಡಾ ಅಷ್ಟೇ ಕಾರಣವೆನ್ನುವದನ್ನು ನಾವು ಮರೆಯದಿರೋಣ! 60 ಸಾವಿರಜನ ವೀರರು ಜಾತಿಮತ ಭೇದವಿಲ್ಲದೆ ಒಂದು ಕಡೆ ಸೇರಿ ಏಕಾಭಿಪ್ರಾಯದಿಂದ ದೇಶದ ದಾಸ್ಯವನ್ನು ಕಿತ್ತೊಗೆಯಲು ಪಣತೊಟ್ಟದ್ದು ನೋಡಿ ಬ್ರಿಟಿಷರು ಎದೆಗುಂದಿದರು ಎನ್ನುವುದನ್ನು ನಾವು ಮರೆಯಬಾರದು! ಅಂತರ್ರಾಷ್ಟ್ರೀಯ ಸಂಘಟನೆ-ತ್ಯಾಗ-ಸೇವೆ'ಗಳ ಸಂದೇಶವನ್ನು ಸಾರುವ ಸಂದೇಶಗಳಿವು! ಪ್ರತಿಯೊಂದು ಭಾಷಣವೂ ಹೃದಯಂಗಮವೂ, ಪರಿಣಾಮಕಾರಿಯೂ ಆಗಿರುತ್ತದೆ. ಪೆಜ್ಜೆಪೆಜ್ಜೆಗೂ ದೇಶಾಭಿಮಾನದ ಉತ್ಸುಕತೆ-ಸ್ವಾತಂತ್ರ್ಯಪ್ರಾಪ್ತಿಯ ಕಾತರತೆ ನೇತಾಜಿಯ ವೀರವಾಣಿಯಲ್ಲಿ ಪ್ರಜ್ವಲಿಸುತ್ತದೆ. ದೇಶದ ಜನರ ಹೃದಯದಲ್ಲಿ ನೆಲೆನಿಂತು ಚಿರಸ್ಮರಣೀಯನಾದ ಈತನ ಕೊನೆಯ ವಾಣಿ ಎಷ್ಟು ಸತ್ಯವಾದುದು? 1945ರಲ್ಲಿ ನೇತಾಜಿ "......To do all in my power to serve the interests of 38 crores of my countrymen and fight for their liberation, I appeal to you, in concusion, to cherish the same optimisim as myself and to believe, like myself, that the darkest hour always preceeds the dawn. India shall be free and before long" ಭವಿಷ್ಯ ನುಡಿದರು. ಆದರೆ ಈ ಕಾರಣ ಪುರುಷನ ಕನಸು ನೆನಸಾಗುವಾಗ ಅತನನ್ನು ಕಾಣುವ ಭಾಗ್ಯವನ್ನು ಭಾರತವು ಕಳೆದುಕೊಂಡಿತು! ಇಂತಹ ಅಮೂಲ್ಯವಾದ ಭಾಷಣಗಳನ್ನು ಒಂದೆಡೆ ಕೂಡಿಸಿ ಕೇವಲ ಹನ್ನೆರಡಾಣೆಗೆ ಜನತೆಗೆ ನೀಡಿದ ಆಜಾದ್ ಪಬ್ಲಿಕೇಶನ್‌ನವರು ಅಭಿನಂದನಾರ್ಹರು. ಪ್ರತಿಯೊಬ್ಬರೂ ಇದರ ಲಾಭವನ್ನು ಪಡೆಯಲೆಂದು ಆಶಿಸುತ್ತೇವೆ.

—ಎಸ್ವೆಲ್.

---


ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. E. P. 632/49
O. S. 545/46

ಅರ್ಜಿದಾರ—ರಾಮಯ್ಯ ಮೇಸ್ತ್ರಿ.

ಎದ್ರಿರು— ಮಂಜುನಾಥ ಮೇಸ್ತ್ರಿ ಸಹಾ.

3 ಶೇಷಪ್ಪ ಮೇಸ್ತ್ರಿ-ನಾಗಪ್ಪ ಮೇಸ್ತ್ರಿನ ಮಗ, ಗುಜ್ಜಾಡಿಗ್ರಾಮ,

5 ಕ್ಷವರಿಕ ಸೀನ-ನಾಗಿ ಪೆಂಗ್ಸಿನ ಮಗ, ಕೋಣಿ ಗ್ರಾಮ.

ಅರ್ಜಿದಾರನ ಕಡೆಯಿಂದ ಈ ಮೂಲಕ ಜಾಹೀರು ಮಾಡಿಕೊಳ್ಳುವದೇನೆಂದ್ರೆ—

ಸದ್ರಿ ಅಮ್ಲ ಜಾರಿಯಲ್ಲಿ ಎದ್ರಿರ ಬಾಬ್ತು ಮೂಲಗೇಣಿ ಆಸ್ತಿ ಲೈಲಾಂ ಮಾಡಿಸುವಗೋಸ್ಕರ ಅರ್ಜಿದಾರನು ಹಾಜ್ರಪಡ್ಸಿದ ಇಸ್ತಿಹಾರಿನ ಶರ್ತ ನಿರ್ಣಯಿಸಲಿಕ್ಕೂ ಸದ್ರಿ ಲೈಲಾಂ ಕಾಲದಲ್ಲಿ ವಾರು ಕರಿಯಲಿಕ್ಕೆ ಕೊಟ್ಟ R. E. A. 92/50ನೇ ಅರ್ಜಿಯು ತಾ. 27-2-50ಕ್ಕೆ ತನ್ಖೆಗೆಯಿಟ್ಟಿದೆ. ಆ ಕುರಿತು ನಿಮ್ಮದೇನಾದ್ರೂ ಆಕ್ಷೇಪವಿದ್ರೆ ಸದ್ರಿ ದಿವ್ಸ ಮೇಲ್ಕಂಡ ಕೋರ್ಟು ಮುಂದೆ ಹಗ್ಲು 11 ಗಂಟೆಗೆ ಸ್ವತಹಾ ವ ವಕೀಲರ ದ್ವಾರಾ ಹಾಜ್ರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಈ ಮೂಲಕ ತಿಳಿಯಪಡ್ಸಿದೆ.

**G. Sanjiva Rao,**
Vakil.

Kundapur }
Date 8-2-50 }



ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ.

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟು ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲೆ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಶೂಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಬಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ.



— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಳಿತಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ— ಚನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ಕಮಲಾಪುರ, ರಾಮದುರ್ಗ, ಹಾವೇರಿ, ಬ್ಯಾಡಗಿ



*Notice*

ಉಡುಪಿ ಡಿ. ಮು ಕೋರ್ಟಿನಲ್ಲಿ

S. C. No. 568/1949

ಶ್ರೀನಿವಾಸಭಟ್ಟ —ವಾದಿ.

ಮತ್ತು

ಲಕ್ಷ್ಮೀನಾರಾಯಣಾಚಾರ್ಯ, ವೆಂಕಟ್ರಮಣಾಚಾರ್ಯರ ಮಗ, ಉಡುಪಿತಾಲೂಕು ಪುತ್ತೂರು ಗ್ರಾಮ —ಪ್ರತಿವಾದಿ.

ಯಿವರೊಳಗೆ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನೆಂದ್ರೆ—

ವಾದಿಯಿಂದ ಪ್ರತಿವಾದಿಯು ಅತನ ಕುಟುಂಬಾರ್ಥವಾದ ಗರಜಿನ ಉದ್ದಿಶ್ಯ ತಾ. 9-12-46ರಲ್ಲು ರುಪ್ಯಾ 150- ನ್ನು ಸಾಲವಾಗಿ ಪಡೆದು ಆ ಬಗ್ಗೆ ಬರಕೊಟ್ಟ ಡಿಮಾಂಡ್ ನೋಟಿನ ಬಾಬ್ತು ಬರತಕ್ಕ ಅಸಲು ಬಡ್ಡಿ ಅವಜನ್ನು ವಸಲು ಪಡಿಯುವರೆ ವಾದಿಯು ದಾಖ್ಲೆ ಮಾಡಿರುವ ಮೇಲ್ಕಂಡ ವ್ಯಾಜ್ಯವು ತಾ. 3-3-50ಕ್ಕೆ ಯಿಟ್ಟಿರುತ್ತದೆ. ಪ್ರತಿವಾದಿಗೆ ಈ ಕುರಿತು ಏನಾದರೂ ಉದಹರಿಸುವದಿದ್ದಲ್ಲಿ ಸದ್ರಿ ತಾ.3-3-50ನೇ ದಿವ್ಸ ಬೆಳಗ್ಗೆ 10ಘಂಟೆಗೆ ಈ ಕೋರ್ಟಿನ ಮುಂದೆ ಸ್ವತಹಾ ವ ವಕೀಲರ ಮುಖಾಂತರ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರುಹಾಜರಿಯಿಂದ ಸದ್ರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದು.

**P. V. Achar,**
Vakil for Plaintiff.

ಮೊಕ್ಕಾಂ ಉಡ್ಪಿ }
ತಾ. 10-2-1950 }



ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

# ವ್ಯವಹಾರಿಕ ವೇದಾಂತಿ-ಗಾಂಧೀಜಿ.

ಲೇಖಕರು:—ಶ್ರೀ. ಪರ್ಯ ಲಕ್ಷ್ಮೀನಾರಾಯಣ ಆಳ್ವ.

ವ್ಯವಹಾರದೊಡನೆ ವೇದಾಂತ ಎಂದೊಡನೆ ನಾವು ಬಹಳ ಗಲಿಬಿಲಿಯಾಗುತ್ತೇವೆ. ವ್ಯವಹಾರಕ್ಕೂ ವೇದಾಂತಕ್ಕೂ ಎಲ್ಲಿಯ ಗಂಟು, ಎಲ್ಲಿಯ ನಂಟು ಎಂದು ಆಶ್ಚರ್ಯಪಡುತ್ತೇವೆ. ಆದರೆ ನಿಜವಾಗಿ ನೋಡಿದರೆ ವ್ಯವಹಾರಕ್ಕೂ ವೇದಾಂತಕ್ಕೂ ಬಿಡಿಸಲಾರದ ನಂಟಿತನವಿದೆ. ವೇದಾಂತವಿಲ್ಲದೆ ವ್ಯವಹಾರವಿಲ್ಲ, ವ್ಯವಹಾರವಿಲ್ಲದೆ ವೇದಾಂತವಿಲ್ಲ. ಅವು ಒಂದೊಂದೇ ಎಂದೂ ಪೂರ್ಣವಲ್ಲ. ವೇದಾಂತ ವಿರಹಿತ ವ್ಯವಹಾರಪಶುಗಳ ವರ್ತನೆ, ಮಾನವ ನಡವಳಿಕೆಯಲ್ಲ. ಇದನ್ನೇ ಮಹಾತ್ಮಾ ಗಾಂಧಿಯವರು ಸಾರಿ ಹೇಳಿದರು ಮತ್ತು ತಮ್ಮ ಇಡೀ ಜೀವನದಲ್ಲಿ ಆಚರಿಸಿ ತೋರಿಸಿದರು. ಅವರ ಇಡೀ ಜೀವನವು ವ್ಯವಹಾರ ವೇದಾಂತಗಳ ಸುಂದರ ಸಮನ್ವಯ ಕ್ಷೇತ್ರವಾಗಿತ್ತು.

ಈ ಜಗತ್ತಿನಲ್ಲಿ ಮೂರು ರೀತಿಯ ಜನರಿರುತ್ತಾರೆ. ಮೊದಲನೇ ವರ್ಗದವರು ಅತ್ಯುನ್ನತ ಸಾಧ್ಯವನ್ನಿಟ್ಟುಕೊಂಡು ಅದನ್ನು ಸೇರಲು ಪವಿತ್ರ ಸಾಧನಗಳನ್ನು ಬಳಸಿಕೊಂಡು ಜೀವನಯಾತ್ರೆ ನಡೆಸುತ್ತಿರುವವರು. ಇವರು ಸತ್ವಗುಣ ಪ್ರಧಾನ ಜೀವಿಗಳು; ವೇದಾಂತಿಗಳು. ಮಾನವತ್ವದಿಂದ ದೇವತ್ವದೆಡೆಗೆ ನಡೆಯುತ್ತಿದವರು. ಮಾನವ ಇತಿಹಾಸವನ್ನು ಅವಲೋಕಿಸಿದರೆ ಇಂತಹರು ನಮಗೆ ಬೆರಳಲ್ಲಿ ಎಣಿಸುವಷ್ಟೇ ಮಂದಿ ದೊರಕುತ್ತಾರೆ. ಎರಡನೇ ವರ್ಗದವರು ಉನ್ನತ ಸಾಧ್ಯವನ್ನಿಟ್ಟುಕೊಂಡು ಸಾಧನವನ್ನು ಕಾಲಕ್ಕೆ ಸರಿಯಾಗಿ ಬದಲಾಯಿಸಿಕೊಳ್ಳುತ್ತಾರೆ. ಆಗ ನ್ಯಾಯಾನ್ಯಾಯ ಸತ್ಯಾಸತ್ಯತೆಯ ಕಡೆಗೆ ದೃಷ್ಟಿ ಹಾಯಿಸುವುದಿಲ್ಲ. ಇವರು ರಜೋಗುಣ ಪ್ರಧಾನ ಜೀವಿಗಳು. ಪಶುತ್ವದಿಂದ ಮಾನವತ್ವದೆಡೆಗೆ ಕಾಲು ಹಾಕಿದವರು. ಇಂತಹವರು ಸಹ ಕಾಣಸಿಗುವುದು ಕಡಿಮೆಯೆಂದೇ ಹೇಳಬೇಕು. ಮೂರನೇ ವರ್ಗದವರಿಗೆ ಸಾಧ್ಯ ಸಾಧನಗಳ ಪರಿವೆಯೆ ಇರುವುದಿಲ್ಲ. ಅವರಿಗೆ ಅರಿವಿರುವುದು ಬರಿ ಸ್ವಾರ್ಥದ್ದು. ಅದನ್ನು ಸಾಧಿಸಿ ಕೊಳ್ಳುವುದಕ್ಕಾಗಿ ಅವರು ನೀತಿ ಧರ್ಮಗಳನ್ನು ಅನ್ಯಾಯದ ಅಗ್ನಿ ಕುಂಡದಲ್ಲಿ ಹೋಮಿಸುತ್ತಾ ನಡೆಯುತ್ತಿರುತ್ತಾರೆ. ಇವರು ತಮೋಗುಣ ಪ್ರಧಾನ ಜೀವಿಗಳು. ಕ್ರೂರ ಜಂತುಗಳ ವರ್ಗಕ್ಕೆ ಸೇರಿದವರು. ಲೋಕದಲ್ಲಿ ನಮಗೆ ಕಾಣಸಿಗುವ ಹೆಚ್ಚಿನ ಮಂದಿ ಇಂತಹರೇ. ಗಾಂಧೀಜಿ ಇದರಲ್ಲಿ ಮೊದಲನೇ ವರ್ಗಕ್ಕೆ ಸೇರಿದವರು; ವೇದಾಂತಿಗಳು. ಆದರೆ ಅವರು ಅಷ್ಟೇ ವ್ಯವಹಾರಿಗಳು ಕೂಡಾ ಆಗಿದ್ದರು.

ಅನಾದಿ ಕಾಲದಿಂದ ಇಂದಿನ ವರೆಗೆ ಮೊದಲನೇ ವರ್ಗಕ್ಕೆ ಸೇರಿದ ಮಹಾಜೀವಿಗಳ ಉಪದೇಶ ಮತ್ತು ನಡತೆ ಜನರ ಮನಸ್ಸಿನ ಮೇಲೆ ಯಾವ ಪರಿಣಾಮವನ್ನುಂಟು ಮಾಡಿತು ಎಂಬುದನ್ನು ಸೂಕ್ಷ್ಮ ದೃಷ್ಟಿಯಿಂದ ಪರಿಶೀಲಿಸಿದರೆ, ಆ ಮಹಾ ಜೀವಿಗಳನ್ನು ಜನ ವೇದಾಂತಿಗಳೆಂದೇ ತಿಳಿದರು ಎಂಬುದು ಕಂಡು ಬರುವುದು. ಅಲ್ಲದೆ ಆ ಮಹಾಜೀವಿಗಳ ಉಪದೇಶಗಳಿಗನುಸಾರವಾಗಿ ನಡೆಯುವುದು ಸಾಮಾನ್ಯ ವ್ಯಕ್ತಿಗಳಿಂದ ಸಾಗಲಾರದ ವಿಷಯ; ಆದರಲ್ಲೂ ಹೆಂಡಿರು ಮಕ್ಕಳನ್ನೊಳಗೊಂಡು ಸಂಸಾರ ಜೀವಿಯಾಗಿರುವವರಿಗೆ ನೆನಸಲಾರದ ಹಾದಿ ಎಂಬ ಭಾವನೆ ಜನರಲ್ಲಿ ನೆಲಸಿತ್ತು. ಆದುದರಿಂದ ಜನತೆ ಆ ಮಹಾ ಜೀವಿಗಳ ಉಪದೇಶ ಮತ್ತು ಜೀವನಗಳಿಂದ ಹೆಚ್ಚಿನ ಪ್ರಯೋಜನವನ್ನು ಪಡೆಯಲಿಲ್ಲ. ಆ ಮಹಾ ಜೀವಿಗಳ ಜೀವನದ ಸುತ್ತಲೂ ಪವಾಡಗಳ ಕಂತೆಯನ್ನೇ ರಾಶಿ ಹಾಕಿ ಅವರನ್ನು ದೇವರ ಸ್ಥಾನಕ್ಕೆ ಏರಿಸಿ, ಗುಡಿಕಟ್ಟಿ ಪೂಜಿಸತೊಡಗಿತು. ಆಗ ಅವರ ತತ್ವಗಳಿಗೂ ಸಮಾಧಿಯಾಯಿತು. ಅಂದರೆ ಅಂತಹ ಮಹಾಜೀವಿಗಳು ಪೂಜ್ಯರೇ ಹೊರತು ಅನುಕರಣೀಯರಲ್ಲವೆಂಬ ಅಂಧಶ್ರದ್ಧೆ ಜನರಲ್ಲಿ ಮನೆ ಮಾಡಿತು. ಜನ ಸಾಮಾನ್ಯರು, ಸಂಸಾರಿಗಳಾಗಿಯೇ ಆ ಮಹಾಜೀವಿಗಳು ತುಳಿದ ಹಾದಿಯಲ್ಲಿ ನಡೆಯಬಹುದು ಎಂದರೆ ಸಾಮಾನ್ಯರೂ ವ್ಯವಹಾರದಲ್ಲಿದ್ದುಕೊಂಡೇ ವೇದಾಂತವನ್ನು ಅನುಸಂಸಬಹುದು, ಅವು ಒಂದಕ್ಕೊಂದು ಪೂರಕಗಳಾಗಿವೆ ಎಂದು ಆಚರಿಸಿ ತೋರಿಸಿದ ಶ್ರೇಯಸ್ಸು ಮಹಾತ್ಮಾ ಗಾಂಧಿಯವರದು. ಅರ್ಥ ನೀತಿಗೆ ಹೊಂದದ ಧರ್ಮ ಧರ್ಮವಲ್ಲ. ಗಾಂಧೀಜಿ 'ಧರ್ಮದಲ್ಲಿ ಅರ್ಥವಿರುವಂತೆ ಅರ್ಥದಲ್ಲಿಯೂ ಧರ್ಮವಿರಬೇಕು' ಎಂದರು. ಅವರು ಎಲ್ಲಕ್ಕೂ ಹೆಚ್ಚಿನ ಅರ್ಥವೇ (ಪರಮ+ಅರ್ಥ) ಪರಮಾರ್ಥವು ಎಂಬ ಸತ್ಯವನ್ನು ಸಾಧಿಸಿ ಸಫಲರಾದರು. ಗೀತೆ ನುಡಿದಂತೆ ಅವರು ನಡೆದರು. ಗೀತೆಯ ಎರಡನೇ ಅಧ್ಯಾಯದ ಸ್ಥಿತ ಪ್ರಜ್ಞನ ಲಕ್ಷಣಗಳನ್ನು ಅರಿತು ಅರಗಿಸಿ ಬಾಳಿನಲ್ಲಿ ಇಳಿಸಿಕೊಂಡಿದ್ದರು ಗಾಂಧೀಜಿ. ಅವರ ಜೀವನವನ್ನು ಅರಿತುಕೊಂಡರೆ, ಗೀತೆಯನ್ನು ತಿಳಿದಂತೆಯೇ ಸರಿ. ಸಂಸಾರಿಗಳಾಗಿ ಸಮಾಜದ ಮಧ್ಯದಲ್ಲಿ ಬಾಳಿ ಇಡೀ ದೇಶದ ರಾಜಕೀಯದ ನೊಗವನ್ನು ಕತ್ತಿನಲ್ಲಿ ಹೊತ್ತು ಕೊಂಡೇ ವೇದಾಂತಿಯಾಗಿ ಬಾಳಿದರು ಬಾಪು. ಅಂತಹ ಒಂದು ಪವಿತ್ರ ಆದರ್ಶ ಬಾಳು ಅವರದು.

ಸಾಧಾರಣ ಮೂವತ್ತೈದು ವರ್ಷಗಳಿಂದ ಗಾಂಧೀಜಿಯವರನ್ನು ಬಿಟ್ಟರೆ ಭಾರತದ ರಾಜಕೀಯವಿರಲಿಲ್ಲ. ದೇಶದ ರಾಜಕೀಯಕ್ಕೆ ಸಂಬಂಧಪಟ್ಟ ಹುಲ್ಲುಕಡ್ಡಿ ಕೂಡಾ ಅವರ ಹೇಳಿಕೆ ಇಲ್ಲದೆ ಅಲ್ಲಾಡುತ್ತಿರಲಿಲ್ಲ. ಇಂದೂ ಅನೇಕ ಪಾಶ್ಚಾತ್ಯರು, ಏಕೆ ಕೆಲ ಪೌರ್ವಾತ್ಯರು ಕೂಡ ಗಾಂಧೀಜಿಯವರನ್ನು 'ಒಬ್ಬ ಚತುರ ರಾಜಕಾರಣಿ" ಎಂದೇ ತಿಳಿಯುತ್ತಾರೆ. ಎಷ್ಟೊ ಮಂದಿ ಅವರನ್ನು 'ಒಬ್ಬ ಧೂರ್ತ ದೂರದರ್ಶಿ' ಎಂದು ಭಾವಿಸುತ್ತಾರೆ. ಹಲವಾರು ಮಂದಿ 'ಇಕ್ಕಟ್ಟಿನ ಸಂದರ್ಭದಲ್ಲಿ ಬಿಕ್ಕಟ್ಟನ್ನುಂಟು ಮಾಡಿ ಕಾರ್ಯ ಸಾಧಿಸಿ ಕೊಳ್ಳಬಲ್ಲ ಜಾಣ; ಸಂದರ್ಭ ಸಾಧಕ' ಎಂದು ಬಗೆಯುತ್ತಾರೆ. ಮೇಲಿನ ಹೇಳಿಕೆಗಳ ಅರ್ಥ ಏನೇ ಇರಲಿ, ನಮಗೆ ಇದರಿಂದ ಗಾಂಧೀಜಿಯವರು 'ವೇದಾಂತ ವೇದಾಂತ" ವೆಂದು ಗಾಳಿಗೋಪುರ ಕಟ್ಟುವ ಕನಸುಗಾರ ಮಾತ್ರವಲ್ಲ, ಒಬ್ಬ ಚತುರ ವ್ಯವಹಾರಿ ಕೂಡಾ ಆಗಿದ್ದರೆಂಬುದು ನಿಶ್ಚಿತವಾಗಿ ತಿಳಿದು ಬರುತ್ತದೆ. ಆದರೆ ಅವರು ವ್ಯವಹಾರಿಗಿಂತಲೂ ಹೆಚ್ಚಾಗಿ ವೇದಾಂತಿಗಳಾಗಿದ್ದರು. ಅವರೇ ಒಮ್ಮೆ ಹೇಳಿದ್ದರು, "ನಾನು ಮಾಡುವ ಪ್ರತಿಯೊಂದು ಕೆಲಸವೂ ಮೋಕ್ಷಕ್ಕೆ ಸಾಗುವ ಸಾಧನ" ಎಂದು. ಅವರನ್ನು 'ಧರ್ಮಗುರು" ಎಂದು ತಿಳಿದವರಿದ್ದಾರೆ. 'ಸರ್ವಧರ್ಮ ಸಮನ್ವಯಾಚಾರ್ಯ' ಎಂದು ಬಗೆದವರಿದ್ದಾರೆ. 'ಕರ್ಮಯೋಗಿ' ಎಂದು ನೆನೆದವರಿದ್ದಾರೆ. 'ವಿಭೂತಿ ಪುರುಷ' ಎಂದು ಭಾವಿಸಿದವರಿದ್ದಾರೆ. ಗಾಂಧೀಜಿಯವರೆದುರು ಕೆಲಸದ ಪರ್ವತವೇ ರಾಶಿ ಬಿದ್ದಿದ್ದರೂ ಅವರು ನಿತ್ಯ ಪ್ರಾರ್ಥನೆಯನ್ನು ಎಂದೂ ಬಿಟ್ಟಿದ್ದಿಲ್ಲ; ದಿನಕ್ಕೆರಡು ಹೊತ್ತು ಪ್ರಾರ್ಥನೆಯನ್ನು ಮಾಡಿಯೇ ತೀರುತಿದ್ದರು.

"ಪ್ರಾರ್ಥನೆ ನನ್ನ ಆತ್ಮನ ಆಹಾರ" ಎಂದಿದ್ದಾರೆ ಅವರು. "ಅನೀತಿಯ ಹಾದಿಯಿಂದ ಹಿಂದೂಸ್ಥಾನಕ್ಕೆ ಸ್ವರಾಜ್ಯ ಸಿಗುವದಿದ್ದರೆ ಅದನ್ನು ಬೇಡವೆಂದು ದೂರಿಕರಿಸಿ ಬಿಟ್ಟೇನು" ಎಂದು ಘೋಷಿಸಿದ್ದಾರೆ ಅವರೊಮ್ಮೆ. ವ್ಯಕ್ತಿಯ ಜೀವನದಂತೆಯೇ ರಾಷ್ಟ್ರದ ಜೀವನವೂ ನೈತಿಕ ತಳಗಟ್ಟಿನ ಮೇಲೆ ಕಟ್ಟಲ್ಪಡಬೇಕು, ಇಲ್ಲದಿದ್ದರೆ ಅದು ಅರಾಜಕವಾದೀತು ಎಂದ, ಅವರ ನಿಶ್ಚಿತ ಅಭಿಪ್ರಾಯ. "ನನಗೆ ದೇವರನ್ನು ಕಾಣಬೇಕೆಂಬ ಆಶೆಯಿದೆ. ಆದರೆ ಅದು ಸತ್ಯದ ಹಾದಿಯಿಂದ ನಡೆದು; ಅಸತ್ಯದಹಾದಿಯಿಂದ ಅದು ದೊರಕುವದಿದ್ದರೂ ನನಗೆ ಬೇಡ" ಎಂದರು ಅವರೊಮ್ಮೆ. ಅವರ ಜೀವಮಾನದ ಕಡೆಯ ದೃಶ್ಯಗಳಲ್ಲಿ ಅವರು ರಾಮನಾಮವನ್ನು ಜಪಿಸದಿದ್ದ ಒಂದು ಕ್ಷಣವಾದರೂ ಇತ್ತೇ ಎಂಬುದು ಸಂಶಯ. ಅವರ ಜೀವನದ ಅಂತಿಮಕ್ಷಣವೂ ಆ ಪವಿತ್ರನಾಮದಿಂದ ಪುನೀತವಾಯಿತು. ಪ್ರತಿಯೊಂದು ಕೆಲಸದ ಸಫಲಾಸಫಲತೆಯ ಬಗ್ಗೆ ಅವರು ದೇವರ ಮೇಲೆಯೇ ಭರವಸೆ ಇಡುತ್ತಿದ್ದರು. ರಾಜಕೀಯ, ಖಾದಿ, ಹರಿಜನ ಸೇವೆ ಇವೆಲ್ಲವೂ ಅವರಿಗೆ ಮೋಕ್ಷದ ಸಾಧನಗಳು. ಒಮ್ಮೆ ಅವರು ನುಡಿದಿದ್ದರು. "ನನಗೆ ಭೆಟ್ಟಿಯಾದ ಧಾರ್ಮಿಕ ಪುರುಷರಲ್ಲಿ ಬಹುಶಃ ಎಲ್ಲರೂ ವೇಷಧಾರೀ ರಾಜಕಾರಣಿಗಳು; ನಾನು ರಾಜಕಾರಣೀ ಪುರುಷನ ವೇಷತೊಟ್ಟಿದ್ದರೂ ನಿಜವಾಗಿ ಅಂತರಂಗದಲ್ಲಿ ಧಾರ್ಮಿಕ ವೃತ್ತಿಯವನು" ಎಂದು. ಈ ಒಂದೇ ಒಂದುಮಾತು ಸಾಕು ಅವರ ಜೀವನದ ಬಗ್ಗೆ ನಮಗೆ ಅರಿವು ಮಾಡಿಕೊಡಲು. ಅವರು ನೀತಿಬಾಹಿರ ವ್ಯವಹಾರಿಯೂ ಅಲ್ಲ; ಗೊಡ್ಡು ವೇದಾಂತಿಯೂ ಅಲ್ಲ. ಅವೆರಡೂ ಅವರ ಜೀವನದಲ್ಲಿ ಓತಪ್ರೋತವಾಗಿ ನವೀನ ರೀತಿಯಿಂದ ಕಂಗೊಳಿಸುತ್ತಿದ್ದುವು; ಮಾದರಿಯಾಗಿ ಮೆರೆಯುತ್ತಿದ್ದುವು. ಅವರ ವ್ಯವಹಾರಿಕ ಸೇವೆ ದರಿದ್ರನಾರಾಯಣನದು. ವೇದಾಂತಿಕ ಸೇವೆ ಸತ್ಯನಾರಾಯಣನದು. ಆದರೆ ಒಂದರಲ್ಲೇ ಇನ್ನೊಂದನ್ನೂ ಸೇರಿಸಿ ನಡೆಯಿಸ ಬಲ್ಲ ದಿವ್ಯ ಶಕ್ತಿ ಅವರಲ್ಲಿತ್ತು.

ಸತ್ಯ, ಅಹಿಂಸೆ, ಪ್ರೇಮ ಮೊದಲಾದ ನೈತಿಕ ತತ್ವಗಳ ತಳಗಟ್ಟಿನ ಮೇಲೆ ತನ್ನ ಬಾಳುವೆ ಮಂದಿರವನ್ನು ಕಟ್ಟದ ಮಾನವ ಮಾನವನಲ್ಲ; ಪಶು. ಇಂದಿನ ನಾಗರೀಕತೆ ಮಾನವನನ್ನು ಅಧಃಪತನದತ್ತ ಎಳೆದೊಯ್ಯುತ್ತಿದೆ. ಅದರಲ್ಲಿ ನೀತಿ, ಧರ್ಮಗಳಿಗೆ ಇಂಬಿಲ್ಲ; ಸತ್ಯ, ಪ್ರೇಮಗಳಿಗೆ ಎಡೆಯಿಲ್ಲ. ಇದರಲ್ಲಿ ಒಂದು ತರದ ಪೈಶಾಚಿಕ ಪಿಪಾಸೆ ಮಾತ್ರ ತುಂಬಿರುತ್ತದೆ. ಮನುಷ್ಯನು ದೈವತ್ವಕ್ಕೆ ಏರಬೇಕಾಗಿದ್ದರೆ ಸಾಧುಸಾಧನಗಳನ್ನು ಬಳಸದೆ ನಿರ್ವಾಹವಿಲ್ಲ. ಇಂದು ನಾಗರೀಕರೆನಿಸಿಕೊಳ್ಳುವ ಹೆಚ್ಚಿನ ಮಂದಿಯ ಗುರಿ ಮತ್ತು ಆಶೆಗಳನ್ನು ನೋಡಿದರೆ ಅವು ಮಾನವತ್ವಕ್ಕೇ ಲಾಂಛನಾಸ್ಪದವಾಗಿವೆ. ಸಮಾಜದಲ್ಲಿ ಗಣ್ಯಸ್ಥಾನ, ಐಶ್ವರ್ಯ, ರೂಪವತಿ ಪತ್ನಿ (ಯಾರೂಪಯು ಕಪತಿ) ಆಧುನಿಕ ಸೌಕರ್ಯಗಳು, ಸರಿ, ಇಷ್ಟರಲ್ಲೇ ಮುಗಿಯುತ್ತದೆ. ಇಷ್ಟನ್ನು ಸಾಧಿಸಿಕೊಳ್ಳಲು ಅವರು ಯಾವ ವಕ್ರ ಮಾರ್ಗವನ್ನು ಕ್ರಮಿಸಲೂ ಸಿದ್ಧರೇ! ಮಾನವನ ಸಾಧ್ಯ, ಸಾಧನಗಳು ಇಷ್ಟರಲ್ಲೇ ಮುಗಿದು ಹೋಗುವದಿದ್ದರೆ ಅದು ಆತನ ನೈತಿಕ ಬೆಳವಣಿಗೆಯ ಮಟ್ಟವನ್ನು ತೋರಿಸುತ್ತದೆ, ಅಷ್ಟೇ! ಅವನು ಇನ್ನೂ ಪಶು ಮಟ್ಟವನ್ನು ಬಿಟ್ಟಿಲ್ಲ ಎಂದು ತಿಳಿಸುತ್ತದೆ. ನಮ್ಮ ಈ ನೈತಿಕ ದಿವಾಳಿತನವನ್ನು ಕಂಡೇ ಮಹಾತ್ಮರು ನಮ್ಮೆದುರು ಉನ್ನತ ಗುರಿ ಮತ್ತು ಉತ್ತಮ ಮಾರ್ಗಗಳನ್ನಿಟ್ಟರು.

ಪ್ರತಿಯೊಬ್ಬನ ಎದುರು ಎರಡು ಹಾದಿಗಳು ತೆರೆದಿರುತ್ತವೆ. ಒಂದು ಶ್ರೇಯೋಮಾರ್ಗ, ಇನ್ನೊಂದು ಪ್ರೇಯೋಮಾರ್ಗ. ಒಂದು ಮಾನವನನ್ನು ಉನ್ನತಿಯೆಡೆಗೆ ನಡೆಯಿಸುತ್ತದೆ, ಇನ್ನೊಂದು ಅವನತಿಯೆಡೆಗೆ. ಆತನಿಗೆ ಮೊದಮೊದಲು ಪ್ರೇಯೋಮಾರ್ಗವು ಸುಗಮ ಮತ್ತು ಸುಖದಾಯಿಯಾಗಿ ಕಾಣುತ್ತದೆ. ಆದರೆ ಆ ಹಾದಿಯಿಂದ ಮುಂದೆ ಮುಂದೆ ನಡೆದಂತೆಲ್ಲ ಉಂಟಾಗುವ ದಾಹ, ವೇದನೆ, ಕಷ್ಟಗಳು ಎಷ್ಟೆಂಬುದು ಅನುಭವಿಸಿದವನಿಗೆ ಮಾತ್ರ ಗೊತ್ತು. ಕಡೆಗೆ ಆ ಹಾದಿಯನ್ನು ಅತೃಪ್ತಿಯ ಕತ್ತಲೆಯೇ ಮುಸುಕಿರುವುದು ಕಂಡುಬರುತ್ತದೆ. ದುಃಖವೇ ಮೂರ್ತಿಭವಿಸಿ ತನ್ನ ಕೋರೆ ಹಲ್ಲುಗಳನ್ನು ತೆರೆದು ನಮ್ಮೊಡನೆ ಸೆಣಸಾಟಕ್ಕೆ ಕಾದು ನಿಂತಿರುತ್ತದೆ ಅಲ್ಲಿ! ಒಟ್ಟಿನ ಮೇಲೆ ಆ ಹಾದಿಯಿಂದ ಸಾಗುವದೆಂದರೆ ಉನ್ಮತ್ತ ಇಂದ್ರಿಯಗಳ ಬೆನ್ನುಹಿಡಿಯ ಹೊರಡುವುದು. ಇಂದ್ರಿಯಗಳ ಆಶೆಯನ್ನು ಪೂರೈಸ ಹೊರಟು ಕ್ಷಣಕ್ಷಣವೂ ಬಲಿಯುತ್ತಿರುವ ಆಶೆಯ ಬಲೆಯಲ್ಲಿ ಬಿದ್ದು, ಬಿಡಿಸಿಕೊಳ್ಳಲಾರದೆ ಹುಳುವಿನಂತೆ ಒದ್ದಾಡುತ್ತಿರುವುದು. ಶ್ರೇಯೋಮಾರ್ಗದಲ್ಲಿ ಇಂದ್ರಿಯಗಳು ವ್ಯಕ್ತಿಯ ಅಂಕೆಯಲ್ಲಿರುತ್ತವೆ. ಅವು ಸಿಕ್ಕಿದಷ್ಟರಲ್ಲೇ ತೃಪ್ತಿಹೊಂದುತ್ತಿರುತ್ತವೆ. ಈ ಮಾರ್ಗದಿಂದ ನಡೆವಾಗ ವ್ಯಕ್ತಿ ಸದಾ ಸುಖಿಯಾಗಿರುತ್ತಾನೆ. ವ್ಯಕ್ತಿಯ ಮನದಲ್ಲಿ ಆತ್ಮಿಕ ಉನ್ನತಿಯ ಆಕಾಂಕ್ಷೆಯೊಡನೆ "ದಿವ್ಯ" ಅವರ್ಣನೀಯ ಆನಂದವೊಂದು ತುಂಬಿ ತುಳುಕುತ್ತಿರುತ್ತದೆ. ಈ ಮಾರ್ಗದಿಂದ ನಡೆವ ವ್ಯಕ್ತಿ ವ್ಯವಹಾರಿಕ ಕ್ಷೇತ್ರದಲ್ಲಿ ಏನೊಂದೂ ಚ್ಯುತಿ ಇಲ್ಲದೆ ಕೆಲಸ ಮಾಡುತ್ತಿರಬಲ್ಲನು. ಆದರೆ ಆ ವ್ಯವಹಾರಿಕ ಕರ್ಮಗಳಲ್ಲಿ ವೇದಾಂತವು ಹಾಸುಹೊಕ್ಕಾಗಿರುತ್ತದೆ. ಇಂತಹ ವ್ಯಕ್ತಿಯ ಕರ್ಮಗಳು ಆತನನ್ನೂ ಮೇಲಕ್ಕೆತ್ತುತ್ತವೆ. ಲೋಕಕ್ಕೂ ಕಲ್ಯಾಣಕಾರಿಯಾಗಿರುತ್ತವೆ. ಇಂತಹನೇ ವ್ಯವಹಾರಿಕ ವೇದಾಂತಿ. ಗಾಂಧೀಜಿ ಇಂತಹ ಪುಣ್ಯಜೀವಿ.

ರಾಜಕಾರಣ, ಆತ್ಮಕಾರಣ, ಸಂಸ್ಕೃತಿ—ಇವು ಮೂರು ಏಕಾಭಿನ್ನವಾಗಿವೆ ಎಂದು ಸಾರಿ, ಪ್ರಯೋಗಿಸಿ, ತೋರಿಸಿದರು ಗಾಂಧೀಜಿ. ವ್ಯವಹಾರಿಕ ವೇದಾಂತಿಯಾಗಿ ಬಾಳಿದರು.

## Notice

**ಉಡ್ಪಿ ಡಿ. ಮು. ಕೋರ್ಟಿನಲ್ಲಿ**

S. C. No. 557 of 1949

ಕೆ. ವೆಂಕಟ್ರಮಣ ಭಟ್ಟ, ವಿಷ್ಣುಮೂರ್ತಿ ಭಟ್ರಮಗ Proprietor Royal Mahal Udipi. —ವಾದಿ.

ಮತ್ತು

A. S. Vittal Shetty, nephew of Ajiri Mahalinga shetty, Distributor of Sudha Paramaceutical Works, Ahammadbad, having his permanent residence at Ajiri Village, Coondapoor Taluk. —ಪ್ರತಿವಾದಿ.

ಯಿವರೊಳಗೆ

ಮೇಲ್ಕಂಡ ಪ್ರತಿವಾದಿಗೆ ಯಿದರ ಮೂಲಕ ತಿಳಿಯಪಡಿಸುವದೇನೆಂದ್ರೆ—

ವಾದಿಯು ಪ್ರತಿವಾದಿಯ ಮೇಲೆ ಪ್ಲೇಂಟು ನಿವೃತ್ತಿಗೋಸ್ಕರ ದಾಖಲುಮಾಡಿದ ಮೇಲ್ಕಂಡ ನಂಬ್ರವು ತಾರೀಕು 3-3-1950ಕ್ಕೆ ತನ್ನಿಗೆ ಯಿಡೋಣಾಗಿಯದೆ. ಸದ್ರಿ ದಾವೆಯಲ್ಲಿ ಪ್ರತಿವಾದಿಯು ಉದಹರಿಸತಕ್ಕಧಿದ್ರೆ ಸದ್ರಿ ದಿವಸ ಹಗಲು 10ಗಂಟೆಗೆ ಮೇಲ್ಕಂಡ ಕೋರ್ಟ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು, ತಪ್ಪಿದರೆ ಸದ್ರಿ ದಾವೆಯು ಯೇಕಪಕ್ಷವಾಗಿ ತೀರ್ಮಾನಿಸಲ್ಪಡುತ್ತದೆಯೆಂಬ ಸಂಗ್ತಿ ಯಿದ ಮೂಲ್ಕ ಕೋರ್ಟ ಹುಕುಂ ಪ್ರಕಾರ ತಿಳಿಸೋಣಾಗುತ್ತದೆ

**K. J Ballal,**
Vakil for Plaintiff.

Udipi
Dated 6-2-1950



Approved firm by the Govt. of Mysore Certificated by the Agent of the Govt. of Cylone & Indiao.

# ರಿಪಬ್ಲಿಕ್ ಭಾರತದ ಮೊದಲನೆಯ ದೀಕ್ಷೆ

ಬರೆದವರು, —ಶ್ರೀ. ಜಿ. ಬಿ. ಶೆಟ್ಟಿ, ಎಡ್ವಕೇಟ್, ಮಂಗಳೂರು.

ರಿಪಬ್ಲಿಕ್ ಭಾರತದ ಮೊದಲನೆಯ ಅಧ್ಯಕ್ಷ ಬಾಬು ರಾಜೇಂದ್ರಪ್ರಸಾದ್, ಹಿಂದೂಸ್ಥಾನದ ಕೊನೆಯ ಗವರ್ನರ್ ಜನರಲ್ ಶ್ರೀ ಸಿ. ರಾಜಗೋಪಾಲಾಚಾರ್ಯ, ಭಾರತದ ಪ್ರಧಾನಮಂತ್ರಿ ಮಾನ್ಯ ಪಂಡಿತ ಜವಾಹರಲಾಲ ನೆಹರು ಮತ್ತು ಇನ್ನಿತರ ಹಿಂದೂಸ್ಥಾನದ ಅನೇಕ ಗಣನೀಯ ಮುಂದಾಳುಗಳು, ಭಾರತದ ಹೊಸಘಟನೆಯನ್ನು ಸುರಕ್ಷಿತವಾಗಿ ನಡೆಸಿಕೊಂಡು ಬರುವರೆ ಘನವಾದ ನಡತೆಯ, ಗಂಭೀರ ಹೃದಯಗಳಾದ ಸ್ತ್ರೀಪುರುಷರು ಬೇಕಾಗಿದ್ದಾರೆ, ಎಂದು ಒತ್ತಿ ಒತ್ತಿ ಹೇಳುತ್ತಿದ್ದಾರೆ. ಪ್ರಾಯಶಃ ದೇಶದ ಜನರು ಇಂದಿನ ಸ್ಥಿತಿಯಲ್ಲಿ ನಡತೆಯ ಕಡೆಗೆ ಬೆಲೆಕೊಡದೆ ವರ್ತಿಸುವುದರಿಂದಲೋ, ಅಥವಾ ಹೊಸ ಘಟನೆಯನ್ನು ನಡೆಸಿಕೊಂಡು ಬರುವಲ್ಲಿ ದುರಭಿಪ್ರಾಯಗಳಾಗಿದ್ದು, ಸ್ವಾರ್ಥಪೀಡಿತರಾದ ಜನರಿಗೆ ಅವಕಾಶ ದೊರೆತಲ್ಲಿ ಹೊಸ ಘಟನೆಯ ಮೇರೆಗಿನ ರಾಜ್ಯಭಾರಕ್ರಮದಿಂದ ಜನತೆಗೆ ಹಾನಿಯು ಒದಗಬಹುದು ಎಂಬ ಭೀತಿಯಿಂದಲೋ, ಅಥವಾ ದೇಶದ ಘಟನೆಯು ಎಷ್ಟೇ ಒಳ್ಳೆಯದಿರಲಿ, ಅದನ್ನು ನಡಿಸಿಕೊಂಡು ಬರತಕ್ಕ ವ್ಯಕ್ತಿಗಳು ಉತ್ತಮ ಧ್ಯೇಯಿಗಳು ಮತ್ತು ಗುಣಶಾಲಿಗಳು ದೊರಕದೆ ಹೋದಲ್ಲಿ, ನಾವೇ ನಿರ್ಮಿಸಿದ ಸ್ವತಂತ್ರಘಟನೆ ಎಂಬ ಒಂದು ಮಾತಿನಿಂದ ಮಾತ್ರ ನಮಗೆ ಪ್ರಯೋಜನ ದೊರಕಲಾರದು, ಎಂಬ ಒಂದು ಸಂದೇಹದಿಂದಲೋ ಈ ಮಹಾಪುರುಷರಿಗೆ ಸರಕಾರವನ್ನು ನಡಿಸಲು ಮುಂದಾಳುಗಳಾಗಿ ಬರುವವರು ಉತ್ತಮ ನಡತೆಯ, ನಿಸ್ವಾರ್ಥ ಸ್ತ್ರೀಪುರುಷರಿರಬೇಕೆಂಬುದನ್ನು ಒತ್ತಿ ಹೇಳುವ ಆವಶ್ಯಕತೆ ತೋರಿ ಬಂದಿರುತ್ತದೆ. ಅಂದರೆ ನಮ್ಮ ಸರಕಾರವನ್ನು ನಡಿಸಲು ಮುಂದಾಳುಗಳಾಗಿ ಹೋಗುವವರೂ ನಮ್ಮ ಸರಕಾರದ ಯಾವುದೇ ರೀತಿಯ ಹುದ್ದೆಯ ನೌಕರಿಗೆ ಬರುವ ಜನರೂ ವಿಶಾಲಹೃದಯಿಗಳಿದ್ದು, ವಿನಯ ಗುಣಸಂಪನ್ನರಿದ್ದರೆ ದೇಶಕ್ಕೆ ಕಲ್ಯಾಣ, ಶಾಂತಿ ಒದಗುವುದು ಮತ್ತು ಈಗಿನ ಗೊಂದಲಗಳಿಂದ ಬೇಗನೇ ನಿವೃತ್ತಿಯನ್ನು ಹೊಂದಬಹುದುಎಂದು ಅವರ ಅಭಿಪ್ರಾಯವಿರುತ್ತದೆ.

ಕಳೆದ ತಾ. 26 ಮತ್ತು 27ನೇ ದಿನಗಳಲ್ಲಿ ಭಾರತದ ಮೂಲೆ ಮೂಲೆಗಳಿಂದಲೂ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆದ ಉತ್ಸಾಹದ ಕೂಗು ಕೋಲಾಹಲಗಳು ಕೇಳಬರುತ್ತಿವೆ. ಇಂತಹ ಉತ್ಸಾಹ ಕೋಲಾಹಲಗಳಿಂದ ಮಾತ್ರ ಭಾರತಕ್ಕೆ ನಿಜವಾದ ಲಾಭ ಬರುತ್ತದೆ ಎನ್ನಬರುವುದಿಲ್ಲ. ಭಾರತದ ಸ್ವತಂತ್ರ ರಿಪಬ್ಲಿಕ್ ಉದಯವಾಗುವ ಈ ಸಮಯದಲ್ಲಿ ಜನತೆಯ ಪ್ರಥಮ ದೀಕ್ಷೆಯು, ತಾವು ನಡತೆಯ ಕಡೆಗೇನೇ ಆಸಕ್ತಿ ಕೊಡುವೆವು ವಿನಹಾ, ಸಂಪತ್ತು ಮತ್ತು ಸ್ಥಾನಗಳ ಯಾವ ರೀತಿಯ ಪ್ರೇರೇಪಣೆಯಿಂದಲೂ ಅನ್ಯಥಾ ವರ್ತಿಸೆವು: ನಾವು ಕಳುಹಿಸುವ ಮುಂದಾಳುಗಳು ಮತ್ತು ನಮ್ಮ ಸಾರ್ವಜನಿಕ ಕೆಲಸಗಾರರು ಗುಣನಡತೆಯ ಜನರಿದ್ದು, ಗಂಭೀರ ವರ್ತನೆಯವರಿದ್ದರೇನೇ ನಾವು ಸಹಿಸೇವು ವಿನಹಾ ಅಯೋಗ್ಯ ಪ್ರತಿನಿಧಿಗಳಿಗಾಗಲೀ, ಅಯೋಗ್ಯ ಸರಕಾರೀ ಹುದ್ದೇದಾರರ ವರ್ತನೆಗಳಿಗಾಗಲೀ ಅವಕಾಶಕೊಡುವಂತಿಲ್ಲ ಎಂಬ ಕಠಿಣ ಪ್ರತಿಜ್ಞೆಯನ್ನು ತೆಗೆದುಕೊಂಡು ಪಾಲಿಸಿಕೊಡುವುದು ಆವಶ್ಯವಿರುತ್ತದೆ.

ನಡತೆಯನ್ನು ಹುಡುಕಿ ತೆಗೆಯುವುದು ಹೇಗೆ ಎಂಬ ಒಂದು ಪ್ರಶ್ನೆಯೂ ಬರಬಹುದು. ನಡತೆಯ ವಿಷಯ ಭಾಷಣ ಕೊಡುವುದರಿಂದಾಗಲೀ, ಬರೆಯುವುದರಿಂದಲಾಗಲೀ ಒಬ್ಬ ವ್ಯಕ್ತಿಯ ನಡತೆಯ ವಿಷಯ ಕಂಡು ಬರತಕ್ಕದ್ದಲ್ಲ. ನಡತೆಯುಳ್ಳ ವ್ಯಕ್ತಿಯು ತನ್ನ ಪ್ರದರ್ಶನಕ್ಕೆ ಬಯಸುವುದಿಲ್ಲ. ವಿಪರೀತ ಪ್ರಚಾರ ಪ್ರದರ್ಶನಕ್ಕೆ ಬಯಸುವ ಮನುಷ್ಯನು ಜನರ ಮನಸ್ಸನ್ನು ಒಮ್ಮೆಗೇ ಸೂರೆಗೊಳ್ಳಬಹುದಾದರೂ, ಅಲ್ಲಿ ನಡತೆಯು ಉಂಟೋ ಎಂಬ ಕುರಿತು ಬಹಳ ಸಂದೇಹ. ಅಲ್ಲಿ ನಾವು ಬಹು ವಿಧದಿಂದ ಪರೀಕ್ಷಿಸಿ ನೋಡತಕ್ಕದ್ದು. ಕೇವಲ ಹೆಸರಿಗಾಗಿ ಪ್ರಚಾರ ಪ್ರದರ್ಶನಗಳನ್ನು ಬಯಸಿ ಮುಂದಾಳುಗಳೆಂದು ಹೇಳುವ ಮತ್ತು ಹೇಳಿಸುವ ಜನರ ಸಂಖ್ಯೆಯು ಹಳ್ಳಿಹಳ್ಳಿಗಳಲ್ಲಿಯೂ ಪೇಟೆಪಟ್ಟಣಗಳಲ್ಲಿಯೂ ಜಾಸ್ತಿಯಾಗುತ್ತಾ ಬರುತ್ತಿದೆ. ಇಂತಹ ಹೆಸರಿಗಾಗಿ ದೀರ್ಘವಾಗಿ ಆಲೋಚಿಸದೆ ಏನಾದರೊಂದು ಅಭಿಪ್ರಾಯವನ್ನು ಜನಸಾಮಾನ್ಯರಲ್ಲಿ ಹಾಕಿಬಿಟ್ಟು ಅದನ್ನು ಪ್ರಚಾರಿಸಿ ಹೋಗುವುದು ಈಗಿನ Cheap Lendershipನ (ಸುಲಭ ಮುಂದಾಳುತನದ) ಪ್ರಥಮ ಸಾಧನ. ಇಂತಹ ಮುಂದಾಳುತನಕ್ಕೆ ಭಾರತೀಯರಾದ ನಾವು, ನಮ್ಮ ನಮ್ಮ ಪ್ರತಿನಿಧಿಯವರು ಎಂಬ ಸಬಬಿನ ಮೇಲೆ ಎಡೆಕೊಡುವುದಿಲ್ಲವೆಂಬ ದೀಕ್ಷೆಯನ್ನು ನಾವು ಮಾಡಿ ಅನುಸರಿಸಿದರೆ ಮಾತ್ರ ಹೆಚ್ಚು ಮಟ್ಟಿನ ಹುಚ್ಚು ಅಭಿಪ್ರಾಯಗಳು ತಲೆಯಡಗಿಸಿ, ದೇಶಕ್ಕೆ ಶಾಂತಿ ದೊರಕೀತು.

ನಡತೆಗೆ ಪ್ರಾಬಲ್ಯ ಬಂದು ಜನತೆಗೆ ನಡತೆಯ ಮೇಲೆಯೇ ಆಸಕ್ತಿ ಬರಬೇಕಾದರೆ ಸಮಾಜವು ನಡತೆಗೆ ಸ್ವಾಭಿಮಾನ ಮತ್ತು ಪ್ರೋತ್ಸಾಹವನ್ನು ನೀಡಬೇಕು. ಅಧಿಕಾರ ಅಥವಾ ಸ್ಥಾನ, ಸಂಪತ್ತಿನ ಕಡೆಗೆ ನಮ್ಮ ಜನರ ದೃಷ್ಟಿಯು ಸ್ವಾರ್ಥಾಪೇಕ್ಷೆಯಿಂದ ಹೋಗುವ ಬದಲು, ಉತ್ತಮ ನಡತೆಯ ವ್ಯಕ್ತಿಯನ್ನು ಮೊದಲಾಗಿ ಮನ್ನಿಸುವ ಹೊಸ ಪದ್ಧತಿಯನ್ನು ಅನುಸರಿಸಿದರೇನೇ, ನಡತೆಗೆ ಬೆಳೆಯಲು ಸಾಧ್ಯವಿದೆ ವಿನಹಾ ಇಂದಿನ ವಾತಾವರಣದಲ್ಲಿ ಅನ್ಯಥಾ ಸಾಧ್ಯವಿಲ್ಲ.

ಅಯೋಗ್ಯ ರೀತಿಯ ವರ್ತನೆಗೆ ಹೇಸುವ, ಸಂದರ್ಭಬಂದಂತೆ ಕುಣಿಯಲು ತಯಾರಿಲ್ಲದ, ಮನಃಸಾಕ್ಷಿಗನುಸರಿಸಿ ಹೋಗುವ ವ್ಯಕ್ತಿಯು ವಿವಿಧ ಕಷ್ಟಕ್ಕೆ ತುತ್ತಾಗುತ್ತಾನೆ. ಅವನು ಪಾಪದವ, ಪ್ರಯೋಜನವಿಲ್ಲದವನೆಂದು ನಿರುತ್ಸಾಹ ಹುಟ್ಟಿಸುವ ಸಮಾಜದ ಟೀಕೆ ಜನತೆಯ ಬೆಳವಣಿಗೆಯನ್ನು ಕುಗ್ಗಿಸುವುದಿದ್ದು ಬಹಳ ಕೆಟ್ಟದ್ದಿರುತ್ತದೆ. ಅವನ ಆರ್ಥಿಕ ಬೆಳವಣಿಗೆಗೆ ಗುಣನಡತೆಯು ಬೇಕಿಲ್ಲ. ಈ ಗುಣನಡತೆ ಮತ್ತು ಮನಃಸಾಕ್ಷಿಯನ್ನು ಬಿಟ್ಟರೆ ಮಾತ್ರ ಇಂದಿನ ಸಮಾಜ ಪದ್ಧತಿಗಳಲ್ಲಿ ಓರ್ವ ವ್ಯಕ್ತಿಯು ಸಂಪತ್ತು, ಸ್ಥಾನಮಾನವನ್ನು ಪಡೆಯಬಹುದು ಎಂಬಂತೆ ತೋರುತ್ತದೆ. ದೇಶಕ್ಕೆ ಕಲ್ಯಾಣವಾಗಬೇಕಾದರೆ ಸಮಾಜದ ಈ ದೃಷ್ಟಿಯು ತೊಲಗಲೇ ಬೇಕು. ಮನುಷ್ಯನ ಧ್ಯೇಯ, ಗುಣನಡತೆಯನ್ನು ಆತನ ಆಚಾರ ವಿಚಾರಗಳಿಂದ ತಿಳಿದುಕೊಂಡು ಮನುಷ್ಯನು ತನ್ನ ಗುಣನಡತೆಯ ಉತ್ತಮ ಸಿದ್ಧಾಂತಗಳಿಂದಾಗಿ ಇಂದಿನ ಸಮಾಜದಲ್ಲಿ ತನ್ನ ಬೆಳವಣಿಗೆಗೆ ಅವಕಾಶಸಿಕ್ಕದೆ ಸಂಕಷ್ಟಪಡುತ್ತಿದ್ದಾನಾದರೆ, ಅಂತಹ ಕಷ್ಟಗಳಿಂದ ಅವನನ್ನು ಉಚಿತ ಸಹಾಯವಿತ್ತು ಪಾರುಮಾಡಿ, ಅವನಿಗೆ ಮುಂದಾಳಾಗಿ ಬರುವ ಉತ್ಸಾಹ ಇಲ್ಲದಿದ್ದರೂ ನೀನೇ ನಮ್ಮ ಪ್ರತಿನಿಧಿಯಾಗಿ ಬರಬೇಕು ಎಂದು ಒತ್ತಾಯಪಡಿಸುವುದು ಜನರ ಕರ್ತವ್ಯವಿದೆ. ಇಂತಹ ಆರಿಸುವಿಕೆಯಲ್ಲಿ ಜಾತಿ, ನೀತಿಯ ಪ್ರಶ್ನೆಯಿಲ್ಲ. ಊರು ನಾಡು ಎಂಬ ಭೇದವಿಲ್ಲ ಈ ರೀತಿಯ ಹೊಸ ವರ್ತನೆಯನ್ನು ಪಂಡಿತ ಜವಾಹರಲಾಲರೇ ಮೊದಲಾದ ಮುಖಂಡರು ಉತ್ತಮ ನಡತೆಯ ಮುಂದಾಳುಗಳು ಬೇಕಾಗಿದ್ದಾರೆ ಎಂಬ ಕೋರಿಕೆಗಳಿಂದ ಬಯಸುತ್ತಿದ್ದಾರೆ.

## ಪ್ರದರ್ಶನದ ಸಿದ್ಧತೆ

ಧಾರವಾಡ ಜಿಲ್ಲಾ ಲೋಕಲ್ ಬೋರ್ಡ ಪರವಾಗಿ ನಡೆಯಲಿರುವ ಈ ಪ್ರದರ್ಶನವು ಇದೇ ತಿಂಗಳ ರವಿವಾರ ೧೯ನೇ ದಿನಾಂಕ ಬೆಳಿಗ್ಗೆ ೯ಗಂಟೆಗೆ ಧಾರವಾಡದಲ್ಲಿಯ ಸರಕಾರೀ ಹೆಣ್ಣುಮಕ್ಕಳ ಮಾಧ್ಯಮಿಕ ಶಾಲೆಯ ಆಟದ ಬೈಲಿನಲ್ಲಿ ಪ್ರಾರಂಭವಾಗಲಿದೆ, ಮುಂಬೈಯ ಸುಪ್ರಸಿದ್ಧ ಅರ್ಥಶಾಸ್ತ್ರಜ್ಞರೂ, ಒಳ್ಳೇ ವಾಗ್ಮಿಗಳೂ ಮತ್ತು ಇಂಡಿಯನ್ ಟ್ಯಾರಿಫ್ ಬೋರ್ಡ್ದ ಅಧ್ಯಕ್ಷರೂ ಆದ ಶ್ರೀ ಗಗನವಿಹಾರಿ ಮೇಥಾ ಅವರು ಪ್ರದರ್ಶನವನ್ನು ಉದ್ಘಾಟಿಸಲು ಒಪ್ಪಿಕೊಂಡಿದ್ದಾರೆ.

ಪ್ರದರ್ಶನದ ಸಿದ್ಧತೆಗಳು ಭರದಿಂದ ಸಾಗಿವೆ. ಪೆಂಡಾಲು ಕಟ್ಟುವ ಕಾರ್ಯವು ಪ್ರಾರಂಭವಾಗಿದೆ. ಕರ್ನಾಟಕದ ಸುಪ್ರಸಿದ್ಧ ಕಲಾವಂತರಿಗೆ ಹೆಬ್ಬಾಗಿಲವನ್ನು ಮಾಡಲು ಬಿನ್ನವಿಸಲಾಗಿದೆ. ಇದೇ ೧೫ನೇ ದಿನಾಂಕದೊಳಗೆ ಇದೆಲ್ಲ ಸಿದ್ಧವಾಗುವದು. ಸ್ಟಾಲುಗಳ ಬೇಡಿಕೆಯು ವಿಪರೀತ ಬೆಳೆಯುತ್ತಿದೆ

ಪ್ರದರ್ಶನದ ಅವಧಿಯಲ್ಲಿ ದಿನಾಲು ಎರಡು ತಾಸು ಮನರಂಜಕ ಕಾರ್ಯಕ್ರಮಗಳು ಜರುಗಲಿವೆ. ಮೂರು ನಾಲ್ಕು ನಾಟಕಗಳು ಜರುಗಲಿದ್ದು ಅವುಗಳಲ್ಲಿ ಕರ್ನಾಟಕದ ಕವಿ ಶ್ರೀ ಬೇಂದ್ರೆ, ನಾಟಕಕಾರ ಆದ್ಯ ರಂಗಾಚಾರ್ಯ, ನಟಭೂಷಣ ಬಸವರಾಜ ಮನಸೂರ, ಖ್ಯಾತಿವಂತ ನೃತ್ಯಕಾರ ಶ್ರೀನಿವಾಸ ಕುಲಕರ್ಣಿ ಇವರಿಗೆ ಭಾಗವಹಿಸಲು ಬಿನ್ನವಿಸಿದ್ದು ಬಹುತರ ಎಲ್ಲರೂ ಒಪ್ಪಿಕೊಂಡಿದ್ದಾರೆ.

ಪ್ರದರ್ಶನದ ಸಮಯಕ್ಕೆ ೨೫-೨-೫೦ನೇ ದಿನಾಂಕ ಜಿಲ್ಲಾ ರೈತ ಪರಿಷತ್ತು ಜರುಗಲಿದೆ ಇದರ ಉದ್ಘಾಟನೆಮಾಡಲು ಮುಂಬೈ ಉಪಮಂತ್ರಿ ಶ್ರೀ ಪಾಟೀಲ ಕಲ್ಲನಗೌಡರೂ, ಅಧ್ಯಕ್ಷರಾಗಲು ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಸಮಿತಿಯ ಪ್ರಧಾನ ಕಾರ್ಯದರ್ಶಿ ಶ್ರೀ ವೆಂಕಟೇಶ ಮಾಗಡಿ ಅವರೂ ದಯವಿಟ್ಟು ಒಪ್ಪಿಕೊಂಡಿದ್ದಾರೆ. ಅದೇ ಸಮಯಕ್ಕೆ ಸುಮಾರು ೨೬ನೇ ದಿನಾಂಕ ಅಖಿಲ ಕರ್ನಾಟಕ ಮುದ್ರಕರ ಪರಿಷತ್ತು ಜರುಗಲಿದ್ದು ಕರ್ನಾಟಕದ ಖ್ಯಾತಿವಂತ ಸಂಪಾದಕರಾದ ಶ್ರೀ ಮೊಹರೆ ಹಣಮಂತರಾಯರು ಅಧ್ಯಕ್ಷರಾಗಲು ಒಪ್ಪಿಕೊಂಡಿದ್ದಾರೆ.

ಈ ಪ್ರದರ್ಶನವನ್ನು ಲಾಭಮಾಡಿಕೊಳ್ಳಲು ಏರ್ಪಡಿಸಿಲ್ಲ. ಆದರೆ ಕರ್ನಾಟಕದೊಳ-ಹೊರಗಿನ ಸ್ವದೇಶೀ ಉದ್ಯೋಗ ಧಂದೆಗಳಿಗೆ ಉತ್ತೇಜನಕೊಡುವ ಉದ್ದೇಶದಿಂದ ಏರ್ಪಡಿಸಲಾಗಿದ್ದು ಕರ್ನಾಟಕದ ಜನತೆಯು ಸಹಕರಿಸಬೇಕಾಗಿ ನಮ್ಮ ಆಗ್ರಹದ ಬಿನ್ನಹ.

ಶ್ರೀ. ಹುಕ್ಕೇರಿಕರ,
ಸ್ವಾಗತಾಧ್ಯಕ್ಷ
ಪ್ರದರ್ಶನ ಸಮಿತಿ, ಧಾರವಾಡ.

ಧಾರವಾಡ ೯-೨-೫೦


"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ಸಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಥಾಕಿಸ್ಟರು:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.



BUY INDIAN! ENCOURAGE INDIAN INDUSTRY!
ಆಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD.

Highly perfumed and medicated, worth using daily by one and all, keeps hair black and relieves head-ache etc.

TRADE MARK

Manufactured by:-
Swadeshi Oushadhi Bhandara (Regd.)
KUNJAL P. O. Brahmavar, S. K.



ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.


EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618

Estd. 1921 ಸ್ಥಾಪನೆ

30ನೇ ವರ್ಷ
23—2—1950

**LICENCE No. 31**
Licensed to Post
without Prepayment

FOUNDER:
Sri. A. B. Shetty
Minister for Agriculture
& Veterinary

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30
ವಾರ ೨೬

# NAVAYUGA WEEKLY UDIPI, S. K.
Post Box No. 22

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol 30
No. 26

## 'ದೂರದ ಬೆಟ್ಟ ನುಣ್ಣಗೆ'-

ಫಲಾನುಭೋಗಕ್ಕಿಂತ ಪ್ರಯತ್ನ ಸುಖಕರ; ಅನುಭವಿಸುವದರಲ್ಲಿರುವುದಕ್ಕಿಂತ ಆಶಿಸುವುದರಲ್ಲಿರುವ ಸವಿ ಹೆಚ್ಚಿಗೆ. ಪ್ರತ್ಯಕ್ಷ ಸವಿಯುವಾಗ ದೊರೆಯದ ಸುಖ, ಅದರ ಸ್ಮರಣೆಯಲ್ಲಿರುತ್ತದೆ. ಯಾವುದೇ ಬಯಕೆ, ಭಾಗ್ಯ, ಸುಖಗಳಾದರೂ ಹೀಗೆಯೇ ಎನ್ನಬಹುದು.

ಒಂದು ಬಯಕೆ ಸಿದ್ಧಿಸದೆ, ಚಿರಕಾಲವೂ ಬಯಕೆಯಾಗಿಯೇ ಉಳಿದುಕೊಳ್ಳಬೇಕೆಂದು ಹೇಳುವ ಧೈರ್ಯ ಯಾರಿಗೂ ಬಾರದು. ಹಾಗನ್ನುವವ ಭ್ರಾಂತನೆನ್ನಿಸಿಯಾನು. ಕನಸಿನ ರಾಜ್ಯದಲ್ಲಲ್ಲದೆ ವಾಸ್ತವಿಕ ಪ್ರಪಂಚದಲ್ಲಿ ಜೀವಿಸಲು ಅಯೋಗ್ಯನೆನ್ನಿಸಿಯಾನು. ಆದರೂ 'ದೂರದ ಬೆಟ್ಟ ನುಣ್ಣಗೆ' ಎಂಬ ಮಾತು ಎಲ್ಲಾ ವಿಷಯಗಳ ಮಟ್ಟಿಗೂ ಸತ್ಯ. ದೂರದ ಗುರಿಯಾಗಿರುವಾಗ ರಮ್ಯವಾಗಿ ಕಾಣಿಸುತಿದ್ದವುಗಳು ಪ್ರತ್ಯಕ್ಷ ಸಿದ್ಧಿಸಿದಾಗ ನೀರಸವಾಗಿ ತೋರಿ, 'ಇಲ್ಲಿ ಬಂದು ಕಾಣುವುದಕ್ಕಿಂತ ದೂರದಿಂದ ನೋಡುವುದೇ ಉತ್ತಮವಿತ್ತು' ಎಂಬ ಒಳ ಕುದಿಯೊಂದನ್ನು ನಿರ್ಮಿಸುತ್ತವೆ. ನಮ್ಮ ಇಂದಿನ ಸ್ಥಿತಿಗತಿಗಳು ಇಂತಹ ಪೂರ್ವಸ್ಮರಣೆಗಳಿಗಾಸ್ಪದವಿತ್ತಿವೆ.

ದೀರ್ಘ ಕಾಲದಿಂದ ಆಶೆಯಾಗಿ ಇದ್ದುದು ಪ್ರತ್ಯಕ್ಷ ಸ್ಥಿತಿಯಾಗಿ ಮೂಡಿದಾಗ, ಅದರ ಇಂದಿನ ಅನುಭೋಗಕ್ಕಿಂತ ಹಿಂದಿನ ಆಶೆಯೇ ಹಿತಕರವೆಂಬ ಭಾವನೆ ಹುಟ್ಟುವುದೆಂದರದು ವಿಲಕ್ಷಣವಾಗಿ ತೋರಬಹುದು—ಆದರೂ ಸತ್ಯ. ಪ್ರಚಲಿತ ಪರಿಸ್ಥಿತಿಯ ಕಡೆಗೆ ಒಳನೋಟ ಬೀರಿದರೆ, ಒಂದರ ಬಳಿಕೊಂದರಂತೆ ಇದಕ್ಕೆ ನಿದರ್ಶನಗಳು ದೊರೆಯುತ್ತಾ ಹೋಗಬಹುದು.

ಭಾರತ ಮಹಾ ಪ್ರಧಾನಿ ಪಂಡಿತ ನೆಹರುಗಳತ್ತ ನೋಡೋಣ. ಅವರು ತಾನು ಪ್ರಬುದ್ಧನಾದ ನಂತರದ ಇಡೀ ಆಯುಷ್ಯವನ್ನು ಯಾವ ಗುರಿ ಸಾಧನೆಗಾಗಿ ವ್ಯಯಿಸಿದ್ದರೋ ಆ ಪೂರ್ಣ ಸ್ವಾತಂತ್ರ್ಯದ ಮುಖ್ಯ ಚಾಲಕನ ಸ್ಥಾನದಲ್ಲಿ ಈಗ ಇದ್ದಾರೆ. ಸ್ವತಃ ಹೋರಾಡಿ ಗಳಿಸಿದ ಒಂದು ರಾಜ್ಯದ ಕಿರೀಟಧಾರಿಯಾಗುವ ಇಂತಹ ಭಾಗ್ಯವು ಚರಿತ್ರೆಯಲ್ಲಿ ಕೆಲವೇ ಮಂದಿಗೆ ಮಾತ್ರ ದೊರೆತಿದ್ದಿತು. ಆದರೂ ಇಂದಿನಂತೆ ಸ್ವಾತಂತ್ರ್ಯದ ಹೊಣೆ ನಿರ್ವಹಿಸುವುದರಲ್ಲಿರುವ ಅಸಹ್ಯ ಕಷ್ಟಕ್ಕಿಂತ ಹಿಂದಿನಂತೆ ಸ್ವಾತಂತ್ರ್ಯದ ಹೋರಾಟ ಮುಂದೊತ್ತುವುದರಲ್ಲಿರುವ ಆಕರ್ಷಣೀಯ ಹುರುಪು ಲೇಸು ಎಂಬ ಭಾವನೆ ಪಂಡಿತರ ಹೃದಯದೊಂದು ಮೂಲೆಯಲ್ಲಾದರೂ ಮೂಡಿರಬಹುದು. ಎಲ್ಲವನ್ನೂ ಆಳುವ ಸ್ವತಂತ್ರ ಪ್ರಧಾನಿತ್ವಕ್ಕಿಂತ ಎಲ್ಲರನ್ನೂ ಆಕರ್ಷಿಸುವ ಸ್ವಾತಂತ್ರ್ಯ ಸೇನಾನಿತ್ವ ಮೇಲು — ಸ್ವತಂತ್ರಾಡಳಿತೆಗಿಂತ, ಸ್ವಾತಂತ್ರ್ಯದ ಆಶೆ ಮನೋಹರ—ಎಂಬ ಅನುಭವ ಅವರಿಗಾಗಿರಬಹುದು.

ಆಡಳಿತೆ ನಿರ್ವಹಿಸುವ ಸುಯೋಗ ದೊರೆತು ಜನತೆಯಿಂದ ಕಠಿಣ ಪರೀಕ್ಷೆಗೊಳಗಾಗಿರುವ ಇಂದಿನ ಸುಖಕ್ಕಿಂತ ಆಂದೋಲನವೆಬ್ಬಿಸುವ ಸಂದರ್ಭ ದೊರೆತು ಜನತೆಯು ಗೌರವಾದರಗಳಗೊಳಗಾಗಿದ್ದ ಅಂದಿನ ಕಷ್ಟವಾಸಿ, ಎಂದು ಕಾಂಗ್ರೆಸಿಗರೆಲ್ಲರಿಗೂ ಈಗ ಅನ್ನಿಸಿರಬೇಕು.

"ಅವರು ತಿರುಗಿಸುತ್ತಿರುವುದು ತಪ್ಪು; ಅದನ್ನು ಸರಿಯಾಗಿ ಪ್ರಯೋಗಿಸತಕ್ಕವರು ನಾವು" ಎಂದು ಬ್ರಿಟಿಷರ ಕೈಯಿಂದ ರಾಜದಂಡವನ್ನು ಕಸಕೊಂಡು ಉಪಯೋಗಿಸಿ 'ಪೆಟ್ಟಾಯಿತು!' ಎಂಬ ಬೊಬ್ಬೆಗಳನ್ನು ಹಲವರಿಂದ ಕೇಳುವ ಈ ಯೋಗಕ್ಕಿಂತ ದಂಡಧಾರಿ ಬ್ರಿಟಿಷರ ಹಿಡಿತಹೊಡೆತಗಳ ತಪ್ಪನ್ನು ತೋರಿಸಿಕೊಡುತ್ತಾ ನಿಲ್ಲುವ ಆ ಭಾಗ್ಯ ಮೋಹಕವೆಂದು ಈಗ ನೆನಪಾಗುತ್ತಿರಬಹುದು.

ಪಾಕಿಸ್ಥಾನ್ ಆಡಳಿತೆಯಲ್ಲಿ ತಾವೇ ಅನುಭೋಗಿಸಬೇಕಾಗಿರುವ ಕಷ್ಟ, ನಷ್ಟ, ಅಡಚಣೆ, ಆಪತ್ತುಗಳೆಲ್ಲವನ್ನು ಪಾಕಿಸ್ಥಾನ್ ಆಂದೋಲನದಲ್ಲಿ ಇದಿರುವಾದಿಗಳಿಗೇನೇ ಒದಗಿಸುವ ಭಾಗ್ಯ ತಮ್ಮದಾಗಿತ್ತಲ್ಲಾ, ಎಂಬ ಹಳೇ ಪ್ರಭಾವದ ನೆನಪು ಈಗ ಪಾಕಿಸ್ಥಾನ್ ನಾಯಕರನ್ನು ಚುಚ್ಚುತ್ತಿರಬಹುದು.

ಕಾಂಗ್ರೆಸಿನ ಪ್ರತಿಯೊಂದು ಹೆಜ್ಜೆಗೂ ಅಡ್ಡ ಹೆಜ್ಜೆ ಹಾಕುತ್ತಾ, ಕಾಂಗ್ರೆಸು ಸ್ವೀಕರಿಸಿಕೊಂಡುದನ್ನೆಲ್ಲಾ ನಿರಾಕರಿಸುವುದೊಂದನ್ನೇ ಧೋರಣೆಯಾಗಿ ಇಟ್ಟುಕೊಳ್ಳುತ್ತಾ, ಆ ಕಾಲದಲ್ಲಿ ತಮ್ಮ ಜನರ ನಡುವೆ ಗಳಿಸಿದ್ದ ವರ್ಚಸ್ಸನ್ನು ಈ ಕಾಲದಲ್ಲಿ ಕಾಂಗ್ರೆಸ್ ಆಳ್ವಿಕೆಗೆ ಸಂಪೂರ್ಣವಾಗಿ ಆಳಿತೋರಿಸುವ ಮೂಲಕ ಉಳಿಸಿಕೊಳ್ಳುವೆವೆಂದರಾಗದೆ, ಪಾಕಿಸ್ಥಾನ್ ಆಡಳಿತೆಗಾರ ಲೀಗ್ ನಾಯಕರಿಗೆ ಇಂದಿನ ಅಧಿಕಾರಕ್ಕಿಂತ ಅಂದಿನ ಪ್ರತೀಕಾರ ಸುಖ ಮೇಲೆಂದು ಅನ್ನಿಸುತ್ತಿರಬಹುದು.

ಮಹಾತ್ಮಾಜೀಯ ಹೋರಾಟ ಯುಗ ಮತ್ತು ಅವರ ನೇತೃತ್ವದಲ್ಲಿ ಅನುಯಾಯಿ ಧುರೀಣರಾಗಿ ಜನಮನಾಕರ್ಷಿಸಿ ಬಾಳುವ ಯೋಗ ತಮಗೀಗಲೂ ಇರಬೇಕಿತ್ತೆಂದು ಇಲ್ಲಿ ಕಾಂಗ್ರೆಸ್ ನಾಯಕರಿಗನ್ನಿಸಿರಬಹುದಾದರೆ, ಲೀಗಿನ ಹೋರಾಟಯುಗದಲ್ಲಿ ಮತ್ತು ಖಾಯಿದೇ ಆಝಮ್ ಜಿನ್ನರ ಹಿಂಬಾಲಕರಾಗಿಯೇ ತಾವೀಗಲೂ ಇರಬೇಕಿದ್ದಿತೆಂದು ಅಲ್ಲಿ ಲೀಗ್ ನಾಯಕರಿಗೂ ಅನ್ನಿಸಬೇಕು.

ಜನತೆಗಾದರೂ ಹಾಗೇನೇ—ಸ್ವಾತಂತ್ರ್ಯಯುಗದೊಳಗೆ ಪ್ರವೇಶಿಸಿ, ಇಂದು ಉಣ್ಣುತ್ತಿರುವ ಸಿಹಿ ಕಹಿಗಳಿಗಿಂತ, ಈ ಸ್ವಾತಂತ್ರ್ಯಯುಗ ಮುಟ್ಟಬೇಕೆಂದು ಪ್ರಯತ್ನಿಸಿ, ಎದ್ದು ಬಿದ್ದು ಪಡುತ್ತಿದ್ದ ಅಂದಿನ ಹಿಗ್ಗುವಿಕೆ ಮತ್ತು ಕುಗ್ಗುವಿಕೆಗಳೇ ಆಕರ್ಷಣೀಯವೆಂದು ತೋರುತ್ತಿರಬಹುದು.

ಇದೇ ಪರಿಸ್ಥಿತಿಯನ್ನು ತಿರುಗಿಸಿ ನೋಡಿದರೂ ಹೀಗೆಯೇ! ಪ್ರತ್ಯಕ್ಷ ಸ್ವಾತಂತ್ರ್ಯದ ಭೋಗದಲ್ಲಿರುವ ಈ ಕಾಲದಲ್ಲಿ, ನಾವೀ ಸ್ವಾತಂತ್ರ್ಯಕ್ಕಾಗಿ ಕೊಟ್ಟಿದ್ದ ಆ ಕಾಲದ ಹೋರಾಟಗಳ ಸ್ಮರಣೆಯು ಅಭಿಮಾನಕರವಾಗಿ, ಸುಖದಾಯಿಯಾಗಿ ತೋರುತ್ತಿರುವಂತೆ, ಆ ಹೋರಾಟ ಮಧ್ಯದಲ್ಲಿ ಆ ಕಾಲದಲ್ಲಿ ತೋರದುದಿಲ್ಲ 'ದೂರದ ಬೆಟ್ಟ ನುಣ್ಣಗೆ' ಎಂಬಂತೆಯೇ, ಆ ಹೋರಾಟದ ಕಷ್ಟನಷ್ಟಗಳು ಇಂದಿನಷ್ಟು ದೂರದಿಂದ ಕಾಣುವಾಗ ಮಾತ್ರ ಮನೋಹರವಾಗಿ ಕಾಣುತ್ತಿವೆ.

ಮಾತು, ರಾಜಕೀಯ, ಸಾರ್ವಜನಿಕ ಜೀವನಗಳ ಮಟ್ಟಿಗೆ ಹೇಗೋ ಖಾಸಗೀ ಜೀವನದಲ್ಲೂ ಹಾಗೆಯೇ—ಅತಿ ದೂರದಲ್ಲಿದ್ದರೇನೇ ಆಕರ್ಷಣೆ.

ಅವಿವಾಹಿತರು ವಿವಾಹ ಸುಖಕ್ಕಾಗಿ ಹಾತೊರೆಯುತ್ತಿರುವುದನ್ನೂ, ಆ ಕುರಿತು ನಾನಾ ವಿಧದ ಸುಖ ಕಲ್ಪನೆಗಳನ್ನು ಕಟ್ಟಿಕೊಳ್ಳುತ್ತಿರುವುದನ್ನೂ ಕಾಣುತ್ತಿದ್ದೇವೆ. ತದ್ವಿರುದ್ಧವಾಗಿ ವಿವಾಹಿತರು, ಬಿಡಿಸಿಕೊಳ್ಳಲಾರದ ಸ್ನೇಹಬಂಧನವೊಂದರಲ್ಲಿದ್ದರೂ, ತಮ್ಮ ಅವಿವಾಹಿತ ಜೀವನ ಕಾಲದ ಸ್ವಾತಂತ್ರ್ಯ ಸುಖಗಳನ್ನು ಅಭಿಮಾನ ಮತ್ತು ಆಶೆಯೊಡನೆ ಸ್ಮರಿಸುತ್ತಿರುವುದನ್ನೂ ಕಾಣುತ್ತೇವೆ.

ಮುಂದೆ ದೊಡ್ಡ ಹುದ್ದೆ ಗಳಿಸಿ, ಜನತೆಯ ನಡುವೆ ಅಧಿಕಾರ ಮತ್ತು ಪ್ರಭಾವ ಬೀರುವ ಭಾವೀ ಜೀವನದ ಸುಕಲ್ಪನೆ ಕಟ್ಟಿಕೊಂಡು, ಆ ಸುಖಸಾಧನೆಗಾಗಿ ತಾವಿಂದಿನ ನಿಯಮ, ನಿರ್ಬಂಧ, ಶ್ರಮ ಸಹನೆಗೊಳಗಾಗಬೇಕೆಂದು ಕಾಲೇಜು ವಿದ್ಯಾರ್ಥಿಯ ಭಾವನೆ. ಆದರೆ ವಿದ್ಯಾರ್ಥಿದಸೆ ಮುಗಿದು ಉದ್ಯೋಗಾರಂಭ ಪ್ರಾರಂಭವಾದ ವೇಳೆ ಅಲ್ಲಿಂದ ತನ್ನ ಹಿಂದಿನ ವಿದ್ಯಾರ್ಥಿಜೀವನದಲ್ಲಿದ್ದ ಸುಖ, ಸ್ವಾತಂತ್ರ್ಯ, ಚಿಂತಾರಹಿತ ಹೃದಯ, ಆಶೋತ್ಸಾಹಗಳ ಗತ ವೈಭವವನ್ನು ಸ್ಮರಿಸದವರಿಲ್ಲ. ಅಭ್ಯಾಸಿಯು ಉದ್ಯೋಗ ಸುಖವನ್ನೂ ಉದ್ಯೋಗಿಯು ಅಭ್ಯಾಸ ಸುಖವನ್ನೂ ಬಯಸುತ್ತಾನೆ.

**THE UNITED KARNATAK INSURANCE COMPANY, LTD., DHARWAR.**
Established 1929.

Offers their valuable service to the public of India in making their sweet home, always happy.
For good investments and valuable connections, please consult us

ಪ್ರೇಮಿಗಳು ಪರಸ್ಪರರೊಂದಿಗೆ ಕೂಡಿ ಸಾಧನೆಯಲ್ಲಿರುವಾಗ ಒಬ್ಬರಿಗೊಬ್ಬರು ಮೋಹಕರಾಗಿ, ಆಕರ್ಷಣೀಯರಾಗಿ ತೋರಿದಷ್ಟು ಅವರ ಬಯಕೆ ಸಿದ್ಧಿಸಿದ ಮೇಲೆ ತೋರುವುದಿಲ್ಲ. ಮನುಷ್ಯನ ಬಯಕೆಯು ಯಾವುದೇ ಒಂದು ಗಡಿ, ಅಥವಾ ಗುರಿಯಲ್ಲಿ ತೃಪ್ತಿಗೊಳ್ಳದೆ ಬಯಕೆಯಾಗಿಯೇ ಉಳಿದಿರುತ್ತದೆ; ಬೇಟೆಯಲ್ಲಿರುವ ಸುಖವು ಕೂಟದಲ್ಲಿಲ್ಲವಾದ್ದರಿಂದ ಯಾವ ಸಿದ್ಧಿಯಲ್ಲೂ ನಿಲ್ಲದೆ ಮನಸ್ಸು ಹಿಂದೆ ಅಥವಾ ಮುಂದೆ ಓಡುತ್ತಲೇ ಇರುತ್ತದೆ.

ಹೀಗೆ ಹಿಂದೆ ಅಥವಾ ಮುಂದೆ ನೋಡುವುದರಲ್ಲೇ ಇದೆ ದೌರ್ಬಲ್ಯ ಅಥವಾ ಪ್ರಾಬಲ್ಯದ ಲಕ್ಷಣ. ಸಾರ್ವಜನಿಕ ಮತ್ತು ಖಾಸಗೀ ಜೀವನದಲ್ಲಿ ಬಯಕೆಯ ಮುಖವನ್ನು ಹಿಂಗಡೆಗೆ ತಿರುಗಿಸದೆ ಮುಂಗಡೆಗೆ ಮಾಡಿ ಬಿಡುವುದರಲ್ಲೇ ಸಾರ್ಥಕತೆಯಿದೆ.

ಸ್ವಾತಂತ್ರ್ಯ ಸಾಧನೆಯ ಕಾಲದಲ್ಲಿ ದೂರ ನೋಟಕ್ಕೆ ತೋರುತ್ತಿದ್ದ ರಮಣೀಯತೆಯು ನಿಜ ಸ್ವಾತಂತ್ರ್ಯದಲ್ಲಿಲ್ಲವೆಂದಾದರೆ, ಇಲ್ಲಿಂದಲೂ ಮುಂಗಡೆ ದೂರದಲ್ಲಿ ಆ ರಮಣೀಯತೆ ಇರಬೇಕೆಂದು ನೋಟವನ್ನು ಮುಂದಕ್ಕೋಡಿಸಬೇಕೇ ಹೊರತು ಹಿಂದಕ್ಕಲ್ಲ. ಹೋರಾಟದ ದೃಷ್ಟಿಗೆ ತೋರಿದ್ದ ಪೂರ್ಣತೆಯ ಕಡೆಗೆ ಈ ಸ್ವಾತಂತ್ರ್ಯವನ್ನೊಯ್ಯುವ ಹೋರಾಟ ದೃಷ್ಟಿಯನ್ನೇ ಇಲ್ಲಿಯೂ ಇಟ್ಟುಕೊಂಡು ಇಲ್ಲಿಂದ ಮುಂದೊತ್ತಲಾರಂಭಿಸಬೇಕೇ ಹೊರತು, ಈ ನೋಟವು ಹಿಂದಿನ ಆನೆಲೆಯಲ್ಲಿ ಮಾತ್ರ ಸಾಧ್ಯವೆಂದು ಅಂದಿನ ಸುಖಕ್ಕಾಗಿ ಹಿಂದೆ ನೋಡಬಾರದು ಅರ್ಥಾತ್ ಸ್ವಾತಂತ್ರ್ಯ ಪೂರ್ವದ ಹೋರಾಟ ಗುಣವನ್ನು ಸ್ವಾತಂತ್ರ್ಯ ಪೂರ್ಣತೆಗಾಗಿ, ಅದಕ್ಕನುಗುಣವಾಗಿ ಇನ್ನು ತೋರಿಸಬೇಕು.

ಇದೇ ನೀತಿಯ ಮತ್ತೊಂದು ಬದಿಯೇ ಆಚೇಬದಿಯ ಪಾಕಿಸ್ತಾನಿಗಳಿಗೂ ಅನ್ವಯಿಸುತ್ತದೆ. ಅವರೂ, ತಾವು ಬಯಸಿದ್ದನ್ನು ಗಳಿಸಿದ್ದರೂ ಬಯಕೆ ಹಿಮ್ಮೊಗವಾಗಿ ನಿಲ್ಲುವ ಪರಿಸ್ಥಿತಿಯೀಗ ಇರುವುದಾದರೆ, ಅದರ ಮೊಗವನ್ನು ಮುಂಗಡೆಗೆ ತಿರುಗಿಸಿ ನೋಡಿಕೊಳ್ಳಬೇಕು. ಪಾಕಿಸ್ತಾನ್ ಸುಖಸಂಪೂರ್ಣತೆಗಾಗಿ ತಾವು ಮುಂದೇನು ಮಾಡಬೇಕೆಂಬುದನ್ನು, ನೋಟದಲ್ಲಿರುವ ದೋಷಗಳನ್ನು ನಿವಾರಿಸಿಕೊಂಡೇ ನೋಡಿ, ಅದಕ್ಕನುಗುಣವಾಗಿ ವರ್ತಿಸಿದರಾಯಿತು.

ಸ್ವಾತಂತ್ರ್ಯ ಭಾರತದ ಕ್ಷೇತ್ರದಲ್ಲೀಗ ರಾಜ್ಯ ಶಾಸನ ಪ್ರಾಪ್ತಿಗೆ ಒಂದು ತಿಂಗಳು ತುಂಬುತ್ತಿದೆ. ಈ ಅವಧಿಯಲ್ಲಿ ಯಾವ ಬದಲಾವಣೆಯೂ ತೋರಿಬಂದಿಲ್ಲ; ಜನವರಿ 26 ಮತ್ತು 27ರಲ್ಲಿ ನಡೆದ ವಿಶೇಷ ಉತ್ಸವಗಳ ಸುಖಸ್ಮರಣೆಯ ಹೊರತು ಜನತೆಯ ಪಾಲಿಗೀಗ ಬೇರೇನೂ ಉಳಿದಿಲ್ಲ. ಇದು ಸ್ವಾಭಾವಿಕ. ಜನವರಿ 26ರಲ್ಲಿ ಅಸ್ತಿತ್ವಕ್ಕೆ ಬಂದಿದ್ದುದು ಶಾಶ್ವತ ರೂಪೀ ರಾಜ್ಯಾಂಗ ಶಾಸನ ಹೊರತು ತಾತ್ಕಾಲಿಕ ಶಮನೋಪಾಯಗಳಲ್ಲ. ಇದರ ಪರಿಣಾಮಗಳನ್ನು ಎಂದೂ ಕಾಣಬಹುದು—ಇಂದೇ ಕಾಣಬೇಕೆಂದಿಲ್ಲ; ಕೂಡಲೇ ಕಾಣಲಾಗುವಂತೆಯೂ ಇಲ್ಲ, ಆದ್ದರಿಂದ ಸುಮಾರು ಒಂದು ತಿಂಗಳಿಂದ ಅಸ್ತಿತ್ವದಲ್ಲಿರುವ ಹೊಸ ವಿಧಾನದಿಂದ ಆದುದೇನು, ಎಂಬ ಪ್ರಶ್ನೆಯನ್ನು ಕೂಡಾ ಈಗ ಎತ್ತುವದು ಅಸ್ವಾಭಾವಿಕ.

---

ಎಲ್ಲವೂ ಹೀಗೇನೇ, ವಿದ್ಯಾರ್ಥಿ—ನೌಕರಿ ಜೀವನ, ಅವಿವಾಹಿತ–ವಿವಾಹಿತ ಜೀವನ, ಮತ್ತಿತರ ಸಹಜ ಬದಲಾವಣೆಗಳೆಲ್ಲದರಲ್ಲೂ ಹಳೇ ಕಾಲದ ಯೋಗ್ಯತೆ, ಸದವಕಾಶಗಳನ್ನು ಈ ಕಾಲದ ಅರ್ಹತೆ, ಅನುಕೂಲತೆಗಳೊಂದಿಗೆ ಕೂಡಿಸಿಕೊಂಡು ಭವಿಷತ್ಕಾಲದ ಭದ್ರತೆ, ಉಜ್ವಲತೆಗಾಗಿ ಅವುಗಳನ್ನು ವಿನಿಯೋಗಿಸುವುದೊಂದೇ ಎಲ್ಲರ ಪಾಲಿನ ಕರ್ತವ್ಯ.

ಆಕರ್ಷಣೆ ವಿನಹ ಪುರುಷಾರ್ಥ ಸಾಧನೆಯ ಮಹತ್ವಾಕಾಂಕ್ಷೆ ಮೂಡದು; ಅಂತಹ ಬಯಕೆ ವಿನಹ ಯಾವುದೇ ವಿಧದ ಪ್ರಗತಿ ಸಾಧಿಸದು. ಆದ್ದರಿಂದ ನಾವಿಟ್ಟುಕೊಳ್ಳುವ ಗುರಿಯನ್ನು ಪ್ರತ್ಯಕ್ಷ ಮುಟ್ಟುವಾಗ ನಾವಾ ಕುರಿತು ಕಲ್ಪಿಸಿ ಕೊಂಡಿದ್ದ ರೂಪ ಕೆಟ್ಟು ಹೋಗಿದ್ದರೆ, ಅದಕ್ಕೆ ಸರಿಯಾದ ರೂಪುಕೊಡುವ ಹೊಸಕಲ್ಪನೆ ಕಟ್ಟಿಕೊಳ್ಳಬೇಕೇ ಹೊರತು ನಿರಾಶೆಗೀಡಾಗಿ ಹಿಂದೆ ನೋಡುವುದಲ್ಲ. ಈ ನೀತಿಯು ನಮ್ಮ ವ್ಯಕ್ತಿಗತ, ಕೌಟುಂಬಿಕ, ಸಾಮಾಜಿಕ ಜೀವನದಿಂದಾರಂಭಿಸಿ, ಕಾಂಗ್ರೆಸ್ ಅಧಿಕತೆಯ ವರೆಗೂ ಎಲ್ಲಾ ವಿಭಾಗ ವಿಧಾನಗಳಿಗೂ ಏಕಪ್ರಕಾರ ಬದ್ಧೀಕರಿಸುತ್ತದೆ.

---

# ಪ್ರಚಲಿತ ಸ್ಥಿತಿಯಲ್ಲಿ ಯೋಚನಾರ್ಹ ವಿಷಯ.

### ಹೇಗೆ ಸಾಗುತ್ತಿದೆ?

ಹೊಸ ವಿಧಾನದ ಫಲವೆಲ್ಲಿದೆ, ಎಂದು ಹುಡುಕುವ ಕಾಲ ಇದಲ್ಲವಾದರೂ ಈ ಬೆಳೆಯ ಮೊಳಕೆ ಹೇಗಿದೆ ಎಂಬುದನ್ನು ನೋಡುವ ಕಾಲ ಇದೇ. ಜನಸಾಮಾನ್ಯರ ದೃಷ್ಟಿಗೆ ಆ ಮೊಳಕೆಯೇ ಅಗೋಚರ. 1947ನೇ ಆಗೋಸ್ತು ಜನತೆಯ ನಿತ್ಯ ಜೀವನವನ್ನು ಮಾರ್ಪಡಿಸಿರಲಿಲ್ಲ; 1950ನೇ ಜನವರಿ 26 ಬಂದೂ ಅದನ್ನು ಮಾಡಿಲ್ಲ. ಎಲ್ಲವೂ ಇದ್ದಂತಿದೆ. ತಲೇ ಮೇಲಿನ ರಾಜಕೀಯ ಬದಲಾವಣೆಗಳ ನೋಟವಿಲ್ಲದವರ ಪಾಲಿಗೆ, ಕಾಲಡಿಯ ಸ್ಥಿತಿಗತಿಗಳೆಲ್ಲವೂ ಈ ದಿನದ ವರೆಗೂ ಬಹುತೇಕವಾಗಿ ಬ್ರಿಟಿಷರಾಳಿಕೆಯ ಕಾಲದವುಗಳೇ. ಈ ದೃಶ್ಯದ ಮೇಲಿಂದ ಇಷ್ಟನ್ನು ಹೇಳಬಹುದು:— ಮೇಲ್ಗಡೆ ನಿಂತಿರುವ ಭವ್ಯಾಧಿಕಾರವು, ಜನತೆಯ ನಡುವೆ ಬೇರೂರಿಲ್ಲವೆಂಬುದು ನಿಜವಾದರೂ ಎಂತಹ ಬಿರುಗಾಳಿಗೂ ಹಾರಿಹೋಗುವಂತಹದಲ್ಲವೆಂಬುದೂ ನಿಜ. ಅದಂದು ಕೆಳಗೂ ವ್ಯಾಪಿಸದೆ ಚಿರಕಾಲವೂ ಅಲ್ಲಿಯೇ ಹಾಗೆಯೇ ನಿಂತುಬಿಟ್ಟರೆ, ಈ ವರೆಗೂ ಅದರ ಆಕರ್ಷಣೆಗೆ ಕಾರಣವಾಗಿರುವ ಹೊಸತನ ಮಾಸುತ್ತಾ ಹೋದಂತೆ, ಸಂಬಂಧ ದೂರವಾಗುತ್ತಾ ಹೋಗಿ ಅದು ಜನತೆಗೆ ಪರಕೀಯವಾಗುವ ಅಪಾಯವಿದೆ. ಆದ್ದರಿಂದ ಸ್ವಾತಂತ್ರ್ಯ ಮತ್ತು ಜನರಾಜ್ಯ ಬಂದಂತೆ, ಅವು ಅಂಶ ಪ್ರಕಾರವಾದರೂ ಜನತೆಯ ನಡುವೆ ಅಸ್ತಿತ್ವ ದೊರಕಿಸಿಕೊಂಡು ತೋರಿ ಬರಬೇಕು. ಹಾಗೆ ತೋರಿ ಬರುವುದು ಈಗ ಏನೂ ಸಾಲದು. ಈಗಿನ ಪರಿಸ್ಥಿತಿಯ ಮೇಲಿಂದ ಸ್ವತಂತ್ರ ರಾಜ್ಯ ಶಾಸನ ಜಾರಿಗೆ ಬಂದ ಅನುಭವವು ಜನತೆಗಾಗಬೇಕು ಬಹುಶಃ ಮುಂದಿನ ಮಹಾ ಚುನಾವಣೆಯಲ್ಲಿಯೇ. ಆಗ ಚುನಾವಣೆಯ ಮಟ್ಟಿಗೆ ಹೊಸಕ್ರಮ ವಿಧಾನಗಳು ಬಂದಿವೆ, ಎಂಬೊಂದು ವಿಷಯವಾದರೂ ಎಲ್ಲರಿಗೂ ಮಂದಟ್ಟಾಗಬಹುದು. ಇದು ಅನಿವಾರ್ಯವಾಗಿ, ಸ್ವತಂತ್ರ ಶಾಸನದ ಒಂದಂಗವು ಸಂದರ್ಭಾನುಸಾರವಾಗಿ ಆಗ ಪ್ರಕಾಶಗೊಳ್ಳುತ್ತದೆ. ಅದೇ ರೀತಿ ಇಂದು ಅಸ್ತಿತ್ವದಲ್ಲಿರುವ ಅದರ ಎಲ್ಲಾ ಅಂಗೋಪಾಂಗಗಳೂ ಎಲ್ಲರ ಗಮನಕ್ಕೂ ಸರಿಯಾಗಿ ಬರಬೇಕಾದುದು ಅಗತ್ಯವಲ್ಲವೆ? ಆದರೆ ಬಂದಿಲ್ಲ. ಜನತೆಗೇನೆ ತುದಿಯ ಸಾರ್ವಭೌಮಾಧಿಕಾರ ಬಂದಿರುವುದಾದರೂ ಸಾರ್ವಭೌಮಾಧಿಕಾರೀ ಹಿಂದೀ ಜನಸಾಮಾನ್ಯರಿಗೆ ಇದು ತಿಳಿದಿದೆಯೆ? ಅಧಿಕಾರ ಮತ್ತು ಅದಕ್ಕನುಗುಣವಾದ ಯೋಗ್ಯತೆಯ ಸರ್ವ ಸಾಮಾನ್ಯ ಮಾತು ಹಾಗಿರಲಿ, ಆ ಶಾಸನದ ಒಂದು ಅಂಶ ಮಾತ್ರವನ್ನು ಎತ್ತಿಕೊಂಡು ನೋಡೋಣ. ಕಾನೂನು ಪ್ರಕಾರ ಜಾತಿ ಮತ ಭೇದವಿಲ್ಲದೆ ಭಾರತೀಯ ನಾಗರಿಕರೆಲ್ಲರೂ ಸಮಸಮಾನ ಹಕ್ಕುಬಾಧ್ಯಸ್ಥರಾಗಿದ್ದಾರೆ. ಇಂತಹದೊಂದು ನಮ್ಮಲ್ಲಿದೆ, ಎಂಬ ಅನುಭವ ನಮಗೆ ಹೇಗಾಗಬೇಕು? ತಾನು ಮೇಲ್ಪಟ್ಟದವನೆಂದು ಭಾವಿಸಿದವನೊಬ್ಬನಿಂದ, ಹೀನವಾಗಿ ಕಾಣಲ್ಪಟ್ಟ ಬಡಪಾಯಿಯೊಬ್ಬನು ನ್ಯಾಯ ಸಂಪಾದನೆಗಾಗಿ ಕೋರ್ಟು ಹತ್ತಿದಾಗ ಈ ಸರ್ವಸಮಾನತಾ ಹಕ್ಕಿನ ಪರಿಚಯವಾಗುತ್ತದೇನೊ! ಆದರೆ ಅಂತಹ ಬಡಪಾಯಿಯು ಕಾನೂನಿನ ಆಶ್ರಯ ಹೊಂದದಂತೆ ಮಾಡುವ — ಯಾಕೆ? — ಆ ಮೇಲ್ಪಟ್ಟದವನನ್ನಿಸಿದವನಿಂದ ತನಗಾದುದು ಅನ್ಯಾಯವೆಂಬ ಭಾವನೆಯೇ ಅವನಲ್ಲಿ ಹುಟ್ಟದಂತೆ ಮಾಡುವ ಪರಿಸ್ಥಿತಿ ಇಂದಿನದು; ಪಾರಂಪರ್ಯವಾಗಿ ನಡೆದುಕೊಂಡು ಬಂದುದಿದು. ಈ ಪೂರ್ವಾರ್ಜಿತ ಸ್ಥಿತಿಯಿಂದ ಜನತೆಯನ್ನು ಒಂದೇ ಸಮನೆ ತನ್ನ ಕಡೆಗೆಳೆದುಕೊಳ್ಳಲು ನವರಾಜ್ಯಶಾಸನ ರಂಗಕ್ಕೆ ಸಾಧ್ಯವಿಲ್ಲ. ಜನತೆಯಾದರೂ ಥಟ್ಟನೇ ಅತ್ತಿಂದಿತ್ತ ನೆಗೆಯುವುದೂ ಅಸ್ವಾಭಾವಿಕ. ಇದನ್ನೂ ಹಿಸಿಯೇ ಎಂಬಂತೆ ಪರಂಪರಾಗತ ಪ್ರಚಲಿತ ಸ್ಥಿತಿಗಿಂತ ರಾಜ್ಯ ಶಾಸನಾಧರಿತ ನವಸ್ಥಿತಿಯು ಪೂರ್ಣ ಪ್ರತ್ಯೇಕ ಆಗಿರದಂತೆ ಶಾಸನ ನಿರ್ಮಾಪಕರು ಸಾಕಷ್ಟು ಜಾಗ್ರತೆವಹಿಸಿದ್ದಾರೆಂಬುದು ಸ್ಪಷ್ಟವಿದೆ. ಆದರೂ ಆಗಲೇ ಬೇಕಾದ ಕೆಲವು ಸುಧಾರಣೆ ಅಥವಾ ಬದಲಾವಣೆಗಳನ್ನು ರಾಜ್ಯಶಾಸನದಲ್ಲಿ ಮಾಡಿಸಲಾಗಿದೆ; ಅವು ಕೂಡಾ ವಸ್ತುತಃ ಜನತೆಯ ನಡುವೆ ಮೂಡಿಲ್ಲ. ಮಿಕ್ಕ ಮೇಲು–ಕೀಳು ಸ್ಥಿತಿಯನ್ನಡಗಿಸುವ ಮಾತಂತಿರಲಿ. ಜಾತಿ ಮತ ಸಂಬಂಧದ ಅಸ್ಪೃಶ್ಯತೆಯನ್ನು ನವಶಾಸನವು ಕಾನೂನು ಬಾಹಿರಗೊಳಿಸಿದೆಯಷ್ಟೆ? ಈ ಶಾಸನ ಜಾರಿಯಲ್ಲಿ ಬಂದಂದಿನಿಂದ, ಆ ದೆಸೆಯಿಂದಾಗಿ ಸ್ಪೃಶ್ಯಾಸ್ಪೃಶ್ಯ ಭೇದವು ತೊಲಗಿದುದೇನಾದರೂ ಇದೆಯೆ? ನಿಜಕ್ಕೂ ಅಂತಹದೇನೂ ಜನಜೀವನದಲ್ಲಿ ಕಂಡು ಬಂದಿಲ್ಲ ಅಂದಮೇಲೆ ಶಾಸನವನ್ನು ಅಥವಾ ಶಾಸನಾಧಿಕಾರಿಗಳನ್ನು ದೂರೋಣವೆ? ಶಾಸನ ಶಂಕಿಸದೆ ಬಂದಿ

---


ಬಿಳಿ ಕಾಗದ!, ನಾಜೂಕಿನ ಬೈಂಡು!

## 1950ನೇ ಇಸವಿಯ

## ಪಾಕೆಟ್ ಡೈರಿಗಳು

| | | |
|---|---|---|
| ದೊಡ್ಡದು | (ಕೆಲಿಕೊ ಬೈಂಡ್) | 1-12-0 |
| ,, | (ಸಾದಾ) | 1-8-0 |
| ಸಣ್ಣದು | (ಕೆಲಿಕೊ) | 1-4-0 |
| ,, | (ಸಾದಾ) | 0-12-0 |

(ಟಪ್ಪಾಲು ಖರ್ಚು ಪ್ರತ್ಯೇಕ.)

ಸಿಗುವ ಸ್ಥಳಗಳು:—

**ನವಭಾರತ ಬುಕ್ ಡಿಪೊ, ಉಡುಪಿ.**

**ನವಯುಗ ಪ್ರೆಸ್, ಉಡುಪಿ.**



# ಕೆನರಾ ಬ್ಯಾಂಕ್, ಲಿಮಿಟೆಡ್

(ಸ್ಥಾಪನೆ ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಭಾರತದಲ್ಲಿ ಸಾಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯೂ ಅದಕ್ಕೆ ಮೇಲ್ಪಟ್ಟು ೧,೦೦೦ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೫೦ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ.

| | | | |
|---|---|---|---|
| ೩ ತಿಂಗಳು | ... ... | ನೂರಕ್ಕೆ ವರ್ಷಕ್ಕೆ | ೨। |
| ೪ ರಿಂದ ೫ ತಿಂಗಳು | ... ... | ,, ,, | ೨॥ |
| ೬ ರಿಂದ ೯ ತಿಂಗಳು | ... ... | ,, ,, | ೨॥। |

ರೂ. ೧,೦೦೦ಕ್ಕೆ ಕಡಿಮೆಯಲ್ಲದ ರೂ. ೧೦,೦೦೦ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದು ಕೊಳ್ಳಬಹುದು.

ಮಂಗಳೂರು ಶಾಖೆಗಳು

(1) ಬಂದರ ರೋಡ್; (2) ಡೊಂಗರಕೇರಿ,

ಇತರ ಶಾಖೆಗಳು; ಕಾರ್ಕಳ, ಬಂಟವಾಳ, ಮುಲ್ಕಿ, ಕುಂದಾಪುರ, ಉಡುಪಿ, ಗಂಗೊಳ್ಳಿ, ಪುತ್ತೂರು, ಕಾಸರಗೋಡು, ಬೊಂಬಾಯಿ, ಇತ್ಯಾದಿ ಇತ್ಯಾದಿ.

**CANARA BANK, LIMITED**

**(Estd 1906)**

# ಇಂದಿನ ನಾಯಕತ್ವವೇ ಇನ್ನೂ ಕೆಲಕಾಲ ಬೇಕು.

ದ್ದ; ಆ ಶಾಸನಕ್ಕೆ ವಿರುದ್ಧವಾದುದೇನಾದರೂ ಪ್ರತ್ಯಕ್ಷ ಗಮನಕ್ಕೆ ತಂದ್ದಲ್ಲಿ, ತಕ್ಕ ಕಾರ್ಯ ಕೈಕೊಳ್ಳಲು ಶಾಸನಕರ್ತರು ಉತ್ಸಾಹದಿಂದ ಸಿದ್ಧರಿದ್ದಾರೆ. ಆದರೂ ಅದು ಮತ್ತು ಅವರು ಇದ್ದಂತೆಯೇ ಅಸ್ಪೃಶ್ಯತಾ ವಿಧಾನವುಳಿದಿದೆ. ಜನತೆಯ ಬುದ್ಧಿ ಬದಲಾವಣೆ ಶಾಸನದಿಂದಾಗದು; ಜನತೆಯ ಬುದ್ಧಿ ಬದಲಾಗದೆ ಸ್ಥಿತಿ ಬದಲಾಯಿಸದು. ಆರ್ಥಿಕ ರಂಗದಲ್ಲಿ ಕಾನೂನು ಮೂಲಕ ಮಾಡಬಹುದಾದ ಹೊಸ ನಿರ್ಮಾಣವನ್ನು ನಿತ್ಯ ವ್ಯವಹಾರ ರಂಗದಲ್ಲಿ ಮಾಡಲಾಗುವದಿಲ್ಲವೆಂಬುದಕ್ಕೆ ಇದೊಂದು ನಿದರ್ಶನ. ಜನಮತ ಬದಲಾವಣೆಯ ಮೂಲಕವೇ ಸುಧಾರಣೆಯೆಂದು ಗಾಂಧಿಜೀ ತನ್ನ ಯಾವ ಹೆಜ್ಜೆಗಾದರೂ ಶಾಸನರಂಗದತ್ತ ನೋಡದೆ ಜನತಾರಂಗದತ್ತ ನೋಡುತ್ತಿದ್ದುದು ಇದಕ್ಕಾಗಿಯೇ.

## ನಾಯಕರ ಕುರಿತೇನು?

ಜನತೆಯಲ್ಲಿರುವ ದೋಷ, ದೌರ್ಬಲ್ಯಗಳ ದೆಸೆಯಿಂದ ಇದ್ದಂತೆಯೇ ಉಳಿದುಕೊಂಡಿರುವ ಸ್ಥಿತಿಗತಿಗಳ ಮಾತಂತಿರಲಿ—ಅವು ಮುಖ್ಯವಾಗಿ ಸಾಮಾಜಿಕ ಅಸ್ತವ್ಯಸ್ತತೆಗಳಾಗಿದ್ದು, ಪಾರಂಪರ್ಯವಾಗಿ ಅನುಭೋಗಿಸುತ್ತಾ ಬಂದವುಗಳಾದ್ದರಿಂದ ಸಹಜ ಪದ್ಧತಿಗಳಾಗಿ ಮನ್ನಣೆ ಪಡೆದವುಗಳೇ. ಅಸ್ಪೃಶ್ಯತೆಯು ಮಹಾ ಅನ್ಯಾಯವೆಂದು ಗಾಂಧಿಜೀ ಸಾರುತ್ತಿ, ಅವರ ಅನುಯಾಯಿಗಳೆಲ್ಲರೂ ಅದನ್ನೇ ಘೋಷಿಸುತ್ತಾ ಬರುವ ವರೆಗೆ ತಮ್ಮ ಮತ್ತು ಮೇಲ್ಜಾತಿಯವರ ಕೀಳು-ಮೇಲು ಸಂಬಂಧವು ಅನ್ಯಾಯದ್ದೆಂಬ ತಿಳುವಳಿಕೆ ಅಸ್ಪೃಶ್ಯರಿಗಾಗಿರಲಿಲ್ಲ; ಈಗ ಕೂಡಾ ಅದು ಸಾಕಷ್ಟಾಗಿಲ್ಲ. ಕಾನೂನು ಮತ್ತು ಸುಧಾರಕ ವರ್ಗವು ಅಸ್ಪೃಶ್ಯತೆಯನ್ನು ಅನ್ಯಾಯವೆಂದು ತೀರ್ಮಾನಿಸಿರುವ ಈ ಕಾಲದಲ್ಲಾದರೂ ಅದಕ್ಕೀಡಾಗಿರುವ ಅಸ್ಪೃಶ್ಯ ವರ್ಗದವರಲ್ಲಿ ಅತ್ಯಧಿಕ ಸಂಖ್ಯಾಕರಿಗೆ ಅದರ ನೋವೇನೂ ಇಲ್ಲ. ಆ ನೋವನ್ನು ನಿರ್ಮಿಸಿ, ಜಾಗ್ರತೆ ಹುಟ್ಟಿಸೋಣವೆಂದು ಹೋದವರಿಗೆ, ಅವರು ತಮ್ಮ ಉದರಾಗ್ನಿಯ ಬಿಸಿಯನ್ನೇ ತೋರಿಸಿ, "ಇದನ್ನು ಶಮನಿಸಿ ಬಿಡಿ" ಎಂದು ಬೇರೆ ಕೆಲಸವನ್ನೇ ಕೊಟ್ಟಾರು. ಇಂತಹ ಸ್ಥಿತಿಯಲ್ಲಿ 'ಅಸ್ಪೃಶ್ಯತಾ ನಿವಾರಣಾ' ಚಳವಳದಲ್ಲಿ ಒಂದು ರೀತಿಯ ಕೃತಕತೆಯೇ ತೋರಿಬರುತ್ತಿದೆ. ಅಸ್ಪೃಶ್ಯರ ಸಮೇತ ಬಡಜನವರ್ಗದ ಆರ್ಥಿಕ ಸ್ಥಿತಿ ಸುಧಾರಿಸುವ ಮಾತೇ ಇಂದು ಸರ್ವಜನ ಪ್ರಿಯವಾದುದು; ಕಾಲೋಚಿತವಾದುದು. ಆದ್ದರಿಂದಲೇ ಕಮ್ಯೂನಿಸ್ಟರು, ಸೋಶಿಯಾಲಿಸ್ಟರಂತಹವರು 'ಅಸ್ಪೃಶ್ಯತಾ ನಿವಾರಣೆ'ಯಂತಹ ಪಾಪ ನಿವಾರಣೆಯ ಕಡೆಗೆ ಗಮನ ಕೊಡದೆ, ಬಡತನದ ಶಾಪನಿವಾರಣೆಯನ್ನೇ ಸರ್ವಸ್ವವೆಂದು ಭಾವಿಸಿದ್ದಾರೆ. ಈ ಪ್ರಾಮುಖ್ಯ ಪ್ರಶ್ನೆಯನ್ನು ಬಗೆಹರಿಸಲು ನವರಾಜ್ಯ ಶಾಸನವಾಗಲೀ ರಾಷ್ಟ್ರನಾಯಕರಾಗಲೀ ಮುಂದೆ ಬಂದಿರುವುದೆಲ್ಲಿ ಮತ್ತು ಹೇಗೆ, ಎಂಬ ವಿಚಾರವೇ ಇಲ್ಲಿ ಮುಖ್ಯವಾದುದು ಜನತೆಗೇನೇ ಮೂಲ ಹೊಣೆಗಾರಿಕೆಯನ್ನಿತ್ತಿರುವ, ರಾಜ್ಯಶಾಸನದ ಸ್ವಂತ ಉತ್ತರ ಹೊರಡುವಂತಿದ್ದರೆ "ಎಲ್ಲವೂ ನಿಮ್ಮದೇ; ಜನತೆಯದೇ. ನನ್ನನ್ನು ಬೇಕಾದಂತೆ ಬಳಸಿಕೊಂಡು ಬೇಕಾದುದನ್ನು ಮಾಡಿಕೊಳ್ಳಿ" ಎಂಬ ಜನಾಧೀನತಾಧ್ವನಿ ಕೇಳಿಬಂದೀತು. ಹಾಗೆ ಶಾಸನವನ್ನು ಬಳಸಿಕೊಳ್ಳುವ ಗುಣ ಯೋಗ್ಯತೆ, ಮತ್ತು ಪೂರ್ಣಾವಕಾಶಗಳು ಜನತೆಗೊದಗುವ ವರೆಗೆ ಈ ವಿಭಾಗವನ್ನು ಬಾಕಿ ಬಿಡೋಣ. ಸ್ವತಂತ್ರ ರಾಜ್ಯಶಾಸನಾನ್ವಯ ಅಧಿಕಾರ ನಿರ್ವಹಿಸುತ್ತಿರುವ ರಾಷ್ಟ್ರನಾಯಕರು ಆ ಶಾಸನದನ್ವಯ ಮೂಲಾಧಿಕಾರಿಗಳಾಗಿರುವ ಜನಸಾಮಾನ್ಯರ ಆರ್ಥಿಕ ಸ್ಥಿತಿ ಸುಧಾರಣೆಗಾಗಿ ಮಾಡಿರುವದೇನು? ಮಾಡುವಂತಿರುವದೇನ? ಎಂಬುದರ ಕಡೆಗೆ ನೋಡೋಣ. ಅವರು ಆರ್ಥಿಕ ಸ್ಥಿತಿಯ ಪ್ರಚಲಿತ ತಳಗಟ್ಟನ್ನು ಅಡಿಮೇಲು ಮಾಡಿ ಹೊಸತನ್ನು ಹಾಕಲು ನಿಜಕ್ಕೂ ಸಿದ್ಧರಿಲ್ಲ; ಬ್ರಿಟಿಷ್ ಕ್ರಮಗಳನ್ನು ಸಮೂಲವಾಗಿ ಹೂಳಿಯೇ ಹೊಸ ರಾಜ್ಯಾಂಗ ನಿರ್ಮಿಸಿಕೊಳ್ಳುವಷ್ಟು ದಾಕ್ಷಿಣ್ಯ ಬಿಡಲಾರದೆ, ಅದರಿಂದ ಹೆಚ್ಚಿನಂಶವನ್ನು ಆಯ್ದುಕೊಂಡೇ ತಮ್ಮದನ್ನು ರಚಿಸಿಕೊಂಡವರಿವರು ತಮ್ಮನ್ನು ನೋಯಿಸಿರುವ, ಇನ್ನೂ ನೋಯಿಸಬಹುದೆಂಬ ಹೆದರಿಕೆಯಿರುವ ದುರ್ಘಟನೆಗಳೂ ದುಸ್ಸಂಗತಿಗಳೂ ಬಹಳವಿರುವಾಗ ತಾವು ಪರಿಸ್ಥಿತಿಯನ್ನು ನೋಯಿಸುವ ಅಪಾಯಕರ ಪಡಬಾರದೆಂದು ರಾಷ್ಟ್ರನಾಯಕರು ಅತಿರೇಕ ಜಾಗ್ರತೆ ವಹಿಸಿದಂತಿದೆ. ಪ್ರಚಲಿತ ಸ್ಥಿತಿಯನ್ನು ನೋಯಿಸದಿರುವುದೂ ಇಂದಿನ ಶ್ರೀಮಂತ ವರ್ಗವನ್ನು ನೋಯಿಸದಿರುವುದೂ ಒಂದೇ. ಆದ್ದರಿಂದ ಇಂದಿನ ಸರಕಾರವು ಬಂಡವಾಳದಾರರ ಪಕ್ಷಪಾತಿಯೆಂಬ ಆರೋಪಕ್ಕೊಳಗಾಗಿದೆ. ಈ ಅಪವಾದನೆಯು ಕಮ್ಯೂನಿಸ್ಟರಂತಹ ಅನ್ಯಾಸಕ್ತ ಕಠೋರ ಘೋಷಣೆಯವರ ಬಹಿರಂಗವಾದ ರೂಪದಿಂದ ತೋರಿಬರುತ್ತಿದ್ದರೆ, ನ್ಯಾಯಪಕ್ಷಪಾತಿ ಚಿಂತಕರನ್ನು ಯೋಚನೆಗೀಡು ಮಾಡಿದೆ. ಇನ್ನು ಹದಿನೈದು ವರುಷಗಳ ವರೆಗಾದರೂ ಇಂದಿನ ಆರ್ಥಿಕ ವ್ಯವಸ್ಥೆಯ ಆಸ್ತಿವಾರವನ್ನು ಇದ್ದಂತಿಟ್ಟು, ಉದ್ದಿಮೆದಾರರನ್ನು ಪ್ರೋತ್ಸಾಹಿಸಿ, ಕೆಲಸಗಾರರ ಮುಷ್ಕರ ಇತ್ಯಾದಿಗಳನ್ನು ಪ್ರತಿಬಂಧಿಸಿ, ದೇಶದ ಉತ್ಪನ್ನವನ್ನು ಹೆಚ್ಚಿಸುವ ಕಡೆಗೇನೇ ಸರ್ವ ಲಕ್ಷ್ಯ ಕೊಡಬೇಕೆಂದು ಸರಕಾರದ ಘೋಷಣೆ. ಉದ್ಯಮಗಳ ರಾಷ್ಟ್ರೀಕರಣವಾಗಲೀ, ಕೆಲಸಗಾರರ ಹಕ್ಕು ಸಾಧನೆಗಳಿಗಾಗಿ ನಡೆಯುವ ಸಂಪುಗಳನ್ನು ಸಹಿಸುವದಾಗಲೀ ಸರಕಾರದಿಂದಾಗುವಂತಿಲ್ಲ. ರಾಷ್ಟ್ರದ ಸಂಪತ್ತು, ಸಲಕರಣೆಗಳು ಅಭಿವೃದ್ಧಿಗೊಳ್ಳಬೇಕೆಂಬ ಏಕೋದ್ದೇಶದಿಂದ ಈಗಿನ ವ್ಯವಸ್ಥೆಯನ್ನೇ ಇನ್ನೂ ಕೆಲವು ವರುಷಗಳ ವರೆಗಿಟ್ಟು, ಕಾರ್ಖಾನೆ ಮಾಲಕರುಗಳ ಕೆಲಸ ಮಾಡಿಸುವ ಮತ್ತು ಉತ್ಪತ್ತಿ ಹೆಚ್ಚಿಸುವ ಶಕ್ತಿಯನ್ನು ಇನ್ನಷ್ಟು ಪ್ರೋತ್ಸಾಹಿಸುತ್ತಾ ಹೋಗುವದೆಂದರೆ ಆ ಮಾಲಕವರ್ಗವನ್ನು ಮತ್ತಷ್ಟು ಶ್ರೀಮಂತರನ್ನಾಗಿ ಬೆಳೆಸುವುದೊಂದೇ ಅರ್ಥ. ಮಾಲಕವರ್ಗವು ಮಿತಿಮೀರಿ ಲಾಭ ಹೊಡೆಯದಂತೆ ಕರಶೇರಿಗೆ ಹಾಗೂ ನಿಯಂತ್ರಣಗಳನ್ನು ಹೇರಲು ನಮ್ಮ ಸರಕಾರಕ್ಕೆ ತಿಳಿದಿರುವುದೇನೋ ನಿಜ. ಆದರೆ ಉತ್ಪನ್ನಾಭಿವೃದ್ಧಿಯನ್ನೇ ಮುಖ್ಯ ಧ್ಯೇಯವಾಗಿಟ್ಟುಕೊಂಡಿರುವ ಸರಕಾರಕ್ಕೆ ತನ್ನ ಯಾವುದೇ ವರ್ತನೆಯು ಉತ್ಪಾದನಾ ಮಾಲಕ ವರ್ಗದಲ್ಲಿ ಅತೃಪ್ತಿಯನ್ನು ನಿರ್ಮಿಸಿ, ಅವರ ಉತ್ಪಾದನಾ ಹೆಚ್ಚಳದ ಉತ್ಸಾಹ ಕುಗ್ಗುವಂತೆ ಮಾಡಬಹುದೆಂಬ ಭಯಮೂಡಿತೆಂದರೆ, ಆದೆಂದಿಗೂ ಅಂತಹ ವರ್ತನೆಯನ್ನು ಕೈಕೊಳ್ಳುವಂತಿಲ್ಲ. ವ್ಯಾಪಾರೋದ್ಯಮ ವಹಿವಾಟುಗಳ ಮಟ್ಟಿಗೆ ಸರಕಾರೀ ತಜ್ಞರ ಚಾತುರ್ಯಕ್ಕೆಟಕದ ಉಪಾಯಮಾರ್ಗ ಅವರ ಬುದ್ಧಿಗೆ ತೋರಿಸಬಲ್ಲ ಬಂಡವಾಳಗಾರ ವರ್ಗವು ಸರಕಾರದ ಯಾವುದೇ ತೆರಿಗೆ ಅಥವಾ ನಿಯಂತ್ರಣವನ್ನು ವಂಚಿಸಿ ತಮ್ಮ ಲಾಭ ಸಾಧಿಸಿಕೊಳ್ಳಬಲ್ಲುದು. ಮಾಲಕರ ಈ ದುಶ್ಚೇಷ್ಟೆಗಳು ತಿಳಿದುಬಂದರೂ ಕೂಡಾ, ಸರಕಾರಕ್ಕೆ ಇವರನ್ನು ಮಮತೆಯ ಮಗುವಿನಂತೆ ಆಡಿಸಿ ಕೆಲಸಮಾಡಿಸಿಕೊಳ್ಳುವ ಆವಶ್ಯಕತೆಯಿರುವುದರಿಂದ ಎಲ್ಲವನ್ನೂ ಸಹಿಸಿಕೊಳ್ಳಬೇಕಾದೀತು. ಈ ರೀತಿ ರಾಷ್ಟ್ರದ ಉತ್ಪನ್ನ ಹೆಚ್ಚಿಸಿ, ಅದನ್ನು ಸಂಪತ್ಸಮೃದ್ಧಿ ಶಾಲಿಯಾಗಿ ಮಾಡಬೇಕೆಂಬ ಸರಕಾರದ ಘೋಷಣೆಯು ಶ್ರೀಮಂತ ವರ್ಗಕ್ಕೆ ಪ್ರೋತ್ಸಾಹಕಾರಿಯೆಂಬುದು ನಿರ್ವಿವಾದ. ಇದೇ ಘೋಷಣೆಗಾಗಿ ಕೆಲಸಗಾರ ವರ್ಗವನ್ನೂ ಸಮಾಧಾನದಿಂದಿರಿಸುವುದು ಸರಕಾರದ ಕರ್ತವ್ಯವಾಗುತ್ತದಾದರೂ, ಆ ಕೆಲಸಗಾರ ವರ್ಗದ ಅಸಮಾಧಾನ ಪ್ರದರ್ಶಕ ಮುಷ್ಕರ ಮುಂತಾದುವುಗಳನ್ನು ಹತ್ತಿಕ್ಕುವ ಶಾಸನಬಲವದಕ್ಕಿರುವುದರಿಂದ, ಆ ಮೂಲಕ ಕೆಲಸ ಹಾಳಾಗಲು ಅದು ಬಿಡುವಂತಿಲ್ಲ. ಆದರೆ ಮಾಲಕ ವರ್ಗದ ಅತೃಪ್ತಿಯು ಮುಷ್ಕರದಂತಹ ಸಾಮೂಹಿಕ ಪ್ರದರ್ಶನ ರೂಪದಿಂದ ತೋರಿ ಬಾರದೆ ಗುಪ್ತವಾಗಿಯಾಗಿ ಅಪಾಯವನ್ನೊಡ್ಡುವಂತಹದಿರುವುದರಿಂದ, ಅವರನ್ನು ಸಮಾಧಾನದಿಂದಿರಿಸುವುದೊಂದೇ ಉಪಾಯ. ಈ ರೀತಿ ಪ್ರಚಲಿತ ಸ್ಥಿತಿಯನ್ನಾಧರಿಸಿ ಅಧಿಕೋತ್ಪನ್ನಗೊಳಿಸುವ ಸರಕಾರದ ಘೋಷಣೆಗೆ ಬಂಡವಾಳದಾರ ಪಕ್ಷಪಾತತನದ ಆರೋಪ ತಟ್ಟಿರುವುದು ಸಕಾರಣವಾಗಿಯೇ. ಇನ್ನು, ಕಮ್ಯೂನಿಸ್ಟರಂತಹ ವಿರುದ್ಧಗಾಮಿಗಳನ್ನು ಕಠೋರವಾಗಿ ದಮನಿಸುತ್ತಿರುವ ರೀತಿ- ವ್ಯಕ್ತಿಸ್ವಾತಂತ್ರ್ಯವನ್ನು ಅಪಹರಿಸಿದಂತಾಗಿರುವ ವಿಧಾನ- ಭಾಷಾವಾರು ಪ್ರಾಂತ್ಯ ರಚನೆಯ ಕುರಿತು ಹಾಕಿರುವ ನಿಯಂತ್ರಣಗಳು- ಇತ್ಯಾದಿ, ಇತ್ಯಾದಿಗಳಿಂದ ಇಂದಿನ ಸರಕಾರದ ಘೋಷಣೆ, ಕಾರ್ಯಕ್ರಮಗಳು ದೂರುದೂಷಣೆಗಳಿಗೀಡಾಗಿವೆ. ಆಹಾರ ಸ್ಥಿತಿ ಸುಧಾರಿಸದೆ ಹಾಳಾಗುತ್ತಾ ಬಂದಿರುವದರಿಂದ ಎದ್ದಿರುವ ಅತೃಪ್ತಿಯಂತೂ ಎಲ್ಲಕ್ಕಿಂತ ಹೆಚ್ಚಿನದು. ಇನ್ನು ಸರಕಾರೀ ನೌಕರವರ್ಗದಿಂದಾರಂಭಿಸಿ, ಯಾವ ವಿಭಾಗದಲ್ಲಾದರೂ ಬ್ರಿಟಿಷ್ ಆಡಳಿತೆಯ ಕಾಲದಲ್ಲಿದ್ದುದಕ್ಕಿಂತ ಹೆಚ್ಚಿನ ಸುಧಾರಣೆಯಾದುದು ಜನತೆಯ ಲಕ್ಷ್ಯಕ್ಕೆ ಬಂದಿಲ್ಲ.




Approved firm by the Govt. of Mysore
Certificated by the Agent of the Govt. of Cylone & Indian.

**On this Memorable day**

Of the 26th of January in the year 1950 of the inauguration of the Indian Republic, we have the pleasure to announce the birth of our

**Vijaya Cash Certificates**

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices.

Head Office:—**Kadri Road, Mangalore.**

Branches:- City-Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara.

**B. Manjaya Hegde.**
Advocate & President, District Board, S. Kanara.
CHAIRMAN
VIJAYA BANK LTD.

**ಮುಲ್ಕಿ ಬೇಂಕ್,**
ಲಿಮಿಟೆಡ್, ಮುಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

**The Moolky Bank Ltd.,**
**Moolky, S. K.**

## ಆ ಕಡೆಗೆ ಅತೃಪ್ತಿಯೆ?

ಹೀಗೆ ಬಹುಮುಖ ಅಸಮಾಧಾನವನ್ನು ನಿರ್ವಹಿಸಿರುವ ಇಂದಿನ ರಾಷ್ಟ್ರನಾಯಕತನವನ್ನು ಮಜಾವಡಿಸಿಕೊಳ್ಳುವುದು ಜನತೆಯ ಕರ್ತವ್ಯವಾಗಿದೆಯೇ, ಎಂಬುದನ್ನು ಈಗ ವಿಚಾರಿಸಬೇಕು. ರಾಷ್ಟ್ರದ ಸ್ವಾತಂತ್ರ್ಯ ಹೋರಾಟದಲ್ಲಿ ಅಗ್ರ ಭಾಗ ವಹಿಸಿದ್ದ ನಾಯಕರೇ ಇಂದು ಆ ಸ್ವತಂತ್ರಾಡಳಿತೆ ನಿರ್ವಹಿಸುತ್ತಿದ್ದಾರೆ. ಮೇಲಾಗಿ ಸಮತಾವಾದಿ ನೆಹರು ಸರಕಾರದ ಪ್ರಮುಖ ಸೂತ್ರಧಾರಿಯಾಗಿದ್ದಾರೆ. ಇಂಥವರ ಸರಕಾರವು ಜನಸಾಮಾನ್ಯರ ಹಿತಸಂಬಂಧಗಳಿಗಿಂತ ಹೆಚ್ಚಾಗಿ, ಶ್ರೀಮಂತ ವರ್ಗದ ಲಾಭ ಸಾಧಿಸಿಕೊಡುವ ಧೋರಣೆಯನ್ನೇ ವಹಿಸಿರುವುದಾದರೆ ಕಾರಣವೇನು? ಈ ಮೊದಲು ಜನತಾ ಪಕ್ಷಪಾತಿಗಳೆಂದು ಪ್ರಸಿದ್ಧರಾದವರು ಅಧಿಕಾರಸ್ಥಾನಕ್ಕೇರಿದೊಡನೆ ಶ್ರೀಮಂತ ಪಕ್ಷಪಾತಿಗಳಾಗಿ ಹೋದರೆ? ಅಥವಾ ಸಾಮಾನ್ಯ ಜನತೆಯೇ ಮುಖ್ಯಾಂಗವಾಗಿರುವ ಇಡೀ ರಾಷ್ಟ್ರದ ಹಿತದೃಷ್ಟಿಯಿಂದ ಅವರಿಗೀ ಧೋರಣೆ ಅನಿವಾರ್ಯ ಅನ್ನಿಸಿರಬಹುದೆ? ನಿರ್ವಿಕಾರ ಬುದ್ಧಿಯಿಂದ ವಿಚಾರಿಸಬೇಕಾದ ಪ್ರಶ್ನೆಗಳಿವು. ಇಂದು ಲೋಕದಲ್ಲಿ ಆರ್ಥಿಕ ಅಡಚಣೆಗಳಿಗೆ ಸಿಲುಕಿರದ ರಾಷ್ಟ್ರವೇ ಇಲ್ಲ. ಕೂಲಿಗಾರ ಸರಕಾರದ ಆಡಳಿತೆಯಲ್ಲಿರುವ ಬ್ರಿಟನಿನ ಜನಸಾಮಾನ್ಯರು ಭಾರತೀಯರಿಗಿಂತಲೂ ಹೆಚ್ಚಿನ ದೈನಂದಿನ ತೊಂದರೆಗಳಲ್ಲಿ ಸಿಲುಕಿಕೊಂಡಿದ್ದಾರೆಂಬುದನ್ನು ಮರೆಯಬಾರದು. ನಮ್ಮಲ್ಲಿಯ ಇಂದಿನ ಆಹಾರಾಭಾವ ಪದ್ಧತಿಯು ಯಾವ ಸರಕಾರದ ನಿರ್ಮಾಣವೂ ಅಲ್ಲ; ಅದು ಯುದ್ಧದ ಪರಿಣಾಮ. ಯುದ್ಧ ಪೂರ್ವದಲ್ಲಿಯೂ ಭಾರತದ ಆಹಾರೋತ್ಪನ್ನ ಭಾರತಕ್ಕೆ ಸಾಕಾಗುತ್ತಿರಲಿಲ್ಲ; ಆದರೆ ಆ ಕಾಲದಲ್ಲಿ ಬರ್ಮ ಮೊದಲಾದ ಕಡೆಗಳಿಂದ ಸರಾಗವಾಗಿ ಅಕ್ಕಿ ಆಮದಾಗುತ್ತಿದ್ದುದರಿಂದ ಅಭಾವದ ಅನುಭವವಾಗಿರಲಿಲ್ಲ. ಯುದ್ಧಾವಧಿಯಲ್ಲಿ ನಿಂತು ಹೋದ ಆ ಆಮದು ಪಥವು ಈ ವರೆಗೂ ಸರಿಯಾಗಿ ತೆರೆಯಲ್ಪಟ್ಟಿಲ್ಲ. ಜನಸಂಖ್ಯೆಯ ಹೆಚ್ಚಳ, ಪ್ರಕೃತಿ ಜನ್ಯ ಆಘಾತ ಮೊದಲಾದ ಕಾರಣಗಳಿಂದ ಇಲ್ಲಿ ಸಾಕಷ್ಟು ಆಹಾರ ಬೆಳೆಸಿಕೊಳ್ಳಲೀ ವರೆಗಾಗಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಪ್ರಕೃತದ ಅಭಾವ ಸ್ಥಿತಿಗನುಸಾರವಾಗಿ ಆಹಾರ ನಿಯಂತ್ರಣ ಹಾಕಿಕೊಂಡು, ಆಹಾರ ಸ್ವಾವಲಂಬನೆಗಾಗಿ ಅವಧಿ ನಿಶ್ಚೈಸಿ ಸರ್ವಶಕ್ತಿಯಿಂದ ಪ್ರಯತ್ನಿಸುವದೇ ಯೋಗ್ಯ ಸರಕಾರವೊಂದರ ಕರ್ತವ್ಯವಾಗಿದೆ. ಆ ಯೋಗ್ಯತೆಯನ್ನು ನಮ್ಮ ಇಂದಿನ ಸರಕಾರ ಪ್ರದರ್ಶಿಸುತ್ತಿದೆ. ಸರ್ವರನ್ನು ನೋಯಿಸುತ್ತಿರುವ ಆ ಪತ್ರ ಅಚ್ಚರಿಕೆಗಳು ಕಾಲಾನುಗುಣವಾದವುಗಳಿವೆ; ಅನಿವಾರ್ಯವಿವೆ, ಇನ್ನು ವ್ಯಕ್ತಿ ಸ್ವಾತಂತ್ರ್ಯದ ಹೆಸರಿನಿಂದ ಕಮ್ಯೂನಿಸ್ಟ್ ಚಟುವಟಿಕೆಗಳಂತಹ ಅನ್ಯಾಸಕ್ತ, ವಿಧ್ವಂಸಕ ಚಟುವಟಿಕೆಗಳನ್ನು ಯಾವದೇ ಸನ್ಯಾಸೀ ಸರಕಾರ ಕೂಡಾ ಸಹಿಸುವಂತಿಲ್ಲ. ಆರ್ಥಿಕ ಸ್ಥಿತಿಯ ಅಸ್ತಿವಾರವನ್ನೇ ಬದಲಾಯಿಸಲು ಎದೆಗೊಳ್ಳದೆ, ಪ್ರಚಲಿತ ಶ್ರೀಮಂತ ವರ್ಗದ ಬೆನ್ನು ತಟ್ಟುವಂತಿರುವ ಸರಕಾರದ ಧೋರಣೆ ಮಾತ್ರ ಮೇಲಿಂದ ಮೇಲೆ ಪ್ರಶ್ನಿಸಲ್ಪಡುವಂತಹದೇ. ಈ ಧೋರಣೆಗೆ ಅನುಮೋದನೆಯಾಗಿ ದೊರೆಯುವ ಕಾರಣಗಳಿಗಿಂತ ಹೆಚ್ಚಿನವು ಆಕ್ಷೇಪವಾಗಿ ಮಂಡಿ ಬರಬಹುದು. ಆದರಲ್ಲಿ ಜನಸಾಮಾನ್ಯರ ಹಿತಸಾಧನೆಯ ಕಡೆಗೆ ಅಸಡ್ಡೆಯಾಗಲೀ ಆಕ್ಷೇಪವಾಗಲೀ ನೆಹರೂ ಸರಕಾರಕ್ಕಿರಬಹುದೆಂಬ ಸಂದೇಹ ಮೂಡಲು ಅವಕಾಶವಿಲ್ಲ. ಹೊಸತಾಗಿ ಸ್ವತಂತ್ರಗೊಂಡ ರಾಷ್ಟ್ರದಲ್ಲಿ ಕೂಡಲೇ ಹೆಚ್ಚಬೇಕಾದ ಉತ್ಪನ್ನಗಳ ಗಳಿಕೆಗೆ ಪ್ರಚಲಿತ ಸ್ಥಿತಿಯನ್ನು ಧರಿಸುವುದೊಂದೇ ಹಾದಿಯೆಂದು ರಾಷ್ಟ್ರನಾಯಕರಿಗೆ ಮನವರಿಕೆಯಾಗಿರಬೇಕು. ರಾಷ್ಟ್ರವಿಂದು ಒಳಗಿನ ಮತ್ತು ಹೊರಗಿನ ಹಲವು ಕಠಿಣ ಸಮಸ್ಯೆಗಳನ್ನೆದುರಿಸಿರುವಾಗ ಕ್ರಾಂತಿಕಾರೀ ರೀತಿಯಿಂದ ಆರ್ಥಿಕ ಅಡಿಮೇಲನ್ನು ಮಾಡಿಕೊಂಡು, ನವರಚನೆಯ ಒದ್ದಾಟದಲ್ಲೇ ಸಿಲುಕಿಕೊಳ್ಳುವುದು ಅಪಾಯಕರವೆಂಬ ಹೆದರಿಕೆ ಸರಕಾರೀ ನಾಯಕರಿಗೆ ಬಡಿದಿರಬೇಕು. ಈ ಭಯವು ಸಕಾರಣವಾಗಿಯೋ, ನಿಷ್ಕಾರಣವಾಗಿಯೋ, ಎಂಬುದು ಚರ್ಚಾಸ್ಪದ ವಿಷಯ. ನಿಷ್ಕಾರಣವಾದುದೆನ್ನುವ ನಿರ್ಮಲ ಬುದ್ಧಿಯವರೇ ಆದರೂ, ಈ ಮಟ್ಟಿಗೆ ಸರಕಾರದ ತೀರ್ಮಾನ ತಪ್ಪೆಂದು ಹೇಳಿಯಾರು ಹೊರತು ಉದ್ದೇಶವೇ ಕೆಟ್ಟದ್ದೆನ್ನಲಾರರು. ಮೇಲಾಗಿ ಇನ್ನೂ ಅಲ್ಪಾವಧಿ ವರೆಗೆ ಸಹಿಸಿಕೊಂಡು ನಿಲ್ಲಲಾಗದ ವಿಷಯ ಇದಲ್ಲ. ಹೊಸ ಶಾಸನದನ್ವಯ ಚುನಾವಣೆಗಳಾಗಿ ಹೊಸ ಸರಕಾರ ರಚನೆಗೊಂಡಿಲ್ಲ. ಅದಕ್ಕಿನ್ನೂ ತಡವಾಗಬೇಕಾದುದು ಅನಿವಾರ್ಯ. ಯಾವದೇ ರೀತಿಯ ಕ್ರಾಂತಿಕಾರೀ ಬದಲಾವಣೆಗಾದರೂ ಆ ವರೆಗೆ ಕಾಯಬೇಕಾದುದು ಅಗತ್ಯ. ನೇರಾಗಿ ಜನತೆಯಿಂದ ಆರಿಸಲ್ಪಡುವ ಸರಕಾರವೇ ಚುನಾವಣಾಕಾರೀ ಪ್ರಾಮುಖ್ಯ [illegible] ಗಳ ಆ ವರೆಗೆ ಆಡಳಿತೆ [illegible] ಇಂದಿನ ಸರಕಾರವನ್ನು [illegible] ಕೇವಲ 'ಜೋಪಾನಸಾ ಸರಕಾರ'ವೆಂದು ಕಟ್ಟಿಕೊಳ್ಳಬೇಕು. ಸದ್ಯದ ಅಪಾಯಾತಂಕಗಳನ್ನು ನಿವಾರಿಸಿ, ಮುಂದಿನ ಶಾಶ್ವತ ಅಭಿವೃದ್ಧಿ ಸಾಧನೆಗನುಕೂಲವಾಗುವಂತೆ ರಾಷ್ಟ್ರರಂಗವನ್ನಿದು ಜೋಪಾನವಾಗಿ ಮಾಡಿರುವುದೇ, ಇಲ್ಲವೇ, ಎಂಬೊಂದೇ ಒರೆಗಲ್ಲಿನಿಂದ ಇಂದಿನ ಸರಕಾರವನ್ನು ಪರೀಕ್ಷಿಸಬೇಕು. ಈ ಪರೀಕ್ಷೆಯಲ್ಲಿ ನೆಹರೂ ಸರಕಾರವು ಪೂರ್ಣ ವಿಜಯಿಯಾಗುತ್ತಿದೆ, ಆದ್ದರಿಂದ ಹೊಸ ಸಂಕಾರ ರಚನೆಯಾಗುವ ವರೆಗೆ ಇಂದಿನ ಸರಕಾರವೇ ಬಾಳಬೇಕೆಂಬುದು ಆಕ್ಷೇಪಾತೀತ; ಸಂದೇಹಾತೀತ.

## ನಾಯಕತ್ವದ ಯೋಗ್ಯತೆ

ಹಿಂದೀ ಜನತೆಯಲ್ಲಿ ಹೊಣೆ ನಿರ್ವಹಣಾ ಯೋಗ್ಯತೆಗಳು ಸಾಕಷ್ಟು ತೋರಿಬರುವ ವರೆಗೆ, ಇಂದಿನ ರಾಷ್ಟ್ರನಾಯಕತ್ವವೇ ಉಳಿಯಬೇಕಾದುದು ಅತ್ಯಗತ್ಯವೆಂಬುದಕ್ಕೆ ಜೀವಂತ ಕಾರಣಗಳಿವೆ. ಲೋಕದ ಮತ್ತು ಭಾರತದ ಸ್ಥಿತಿಗತಿಗಳನ್ನು ಆಳವಾಗಿ ಅಭ್ಯಸಿಸುವವರಿಗೆ ಕೂಡಲೇ ಮುಂದಟ್ಟಾಗುತ್ತಿರುವ ವಿಷಯವೆಂದರೆ ಕಮ್ಯೂನಿಸ್ಟ್ ಅಪಾಯ. ದೇಶದ ಹಾಗೂ ದೇಶೀ ಜನತೆಯ ಹಿತದೃಷ್ಟಿಯನ್ನಿಟ್ಟುಕೊಂಡ, ಒಳಗಡೆಯಿಂದ ಆರ್ಥಿಕ, ಸಾಮಾಜಿಕ ಸಮಾನತೆ ಸ್ಥಾಪಿಸುವ ಸಮತಾವಾದಕ್ಕೂ, ಲಕ್ಷ್ಯದತ್ತ ಮುಖ ಚಾಚಿ, ಲೋಕವನ್ನೇ ರಂಗವಾಗಿ ಮಾಡಿ ನಿಂತು, ವಿಧ್ವಂಸಕ ರೀತಿಯಿಂದ ಅರಾಜಕತೆ ನಿರ್ಮಿಸಿ ಸ್ಥಾಪಿಸಲ್ಪಡುವ ಕಮ್ಯೂನಿಸಮಿಗೂ ವ್ಯತ್ಯಾಸವಿದೆ; ಪರಸ್ಪರ ವಿರೋಧವಿದೆ. ಮೊದಲನೆಯದು ಅಗತ್ಯ; ಎರಡನೆಯದು ಅಪಾಯ. ಭಾರತದಲ್ಲಿ ಇಂತಹ ಅಪಾಯ ಬೆಳೆಯದಂತೆ ಮಾಡಿದ ಶ್ರೇಯಸ್ಸು ನಿಜಕ್ಕೂ ಇಂದಿನ ನೆಹರೂ ಸರಕಾರದ್ದು. ಶಾಸನ ಮೂಲಕ ದಬಾಯಿಸಲ್ಪಟ್ಟ ಮಾತ್ರಕ್ಕೆ ಕಮ್ಯೂನಿಸ್ಟ್ ಹಾವಳಿ ನೆಲಕಚ್ಚಲ್ಪಟ್ಟಿತೆಂದು ಭಾವಿಸಬಾರದು. ಬಡತನದ ಪೀಡೆಗಳಿಂದ ಕುದಿಯುತ್ತಿರುವ ಸಾಮಾನ್ಯ ಜನಮತವೇ ಕಮ್ಯೂನಿಸಮಿನ ನಿಜವಾದ ರಂಗ. ಸದ್ಯದ ದುಸ್ಥಿತಿಯಲ್ಲಿ ಅಂತಹ ರಂಗವು ಇಲ್ಲಿ ಪೂರ್ಣ ತಯಾರಾಗಿರುವಾಗ, ಕಮ್ಯೂನಿಸ್ಟರದನ್ನು ಎಷ್ಟೊಂದು ಸುಲಭದಲ್ಲಿ ವಶಪಡಿಸಿಕೊಳ್ಳುತ್ತಿದ್ದರೆಂಬುದನ್ನು ಊಹಿಸಬೇಕು. ಕಮ್ಯೂನಿಸ್ಟ್ ಕೆಲಸಗಾರರೆಲ್ಲರನ್ನು ಬಂಧಿಸಿಟ್ಟು, ಅವರ ಚಳವಳಿಗಳ ಮೇಲೆ ಕಣ್ಣು ಮುಚ್ಚಿ ನೋಡದೆ ಕಾನೂನು ಗದೆ ಬೀಸಿ, ಸರಕಾರವು ಆ ಅಪಾಯವನ್ನು ತಪ್ಪಿಸಿಬಿಟ್ಟಿತೆಂಬ ಊಹೆ ಮುಕ್ಕಾಲು ಪಾಲು ಸುಳ್ಳು. ಕಷ್ಟನಷ್ಟಗಳ ಬೇಗೆಯು ಕಮ್ಯೂನಿಸಮನ್ನು ಎಳೆದುಕೊಳ್ಳುವ ಸ್ವಾಭಾವಿಕ ಆಕರ್ಷಣೆಯು ಇಲ್ಲಿಯೂ ಇರುತ್ತಿದ್ದರೆ ಒಬ್ಬ ಕಮ್ಯೂನಿಸ್ಟನು ಅಂತರ್ಧಾನನಾಗುವಾಗ, ಅವನ ಸ್ಥಾನದಲ್ಲಿ ಹತ್ತು ಮಂದಿ ಹೊಸಬರು ಹುಟ್ಟಿಕೊಳ್ಳುತ್ತಿದ್ದರು. ಕ್ರಮಶಃ ಬಡಜನ ವರ್ಗವೇ ಕಮ್ಯೂನಿಸ್ಟ್ ಆಗಿ ಮಾರ್ಪಡುತ್ತಿತ್ತು. ಆದರೆ ಕಮ್ಯೂನಿಸ್ಟ್ ಆಂದೋಲನಕ್ಕಿಂತ ಹೆಚ್ಚಿನ ಆಕರ್ಷಣೆಯು ನೆಹರೂ ನಾಯಕತ್ವದಲ್ಲಿರುವುದರಿಂದ ಜನಸಾಮಾನ್ಯರು, ತಮ್ಮ ಆಶೆ, ಭರವಸೆಗಳೆಲ್ಲವನ್ನೂ ಈ ಕಡೆಗೇನೇ ತಾಗಿಸಿಬಿಟ್ಟು ಸಹಿಸಿಕೊಂಡಿದ್ದಾರೆ. ಭಾರತವೀ ಕಾಲದಲ್ಲೂ ಚೈನವನ್ನು ಅನುಕರಿಸದಿರುವುದಾದರೆ— ಅಸ್ಮದ ಬೇರಾವುದೇ ರಾಷ್ಟ್ರದಲ್ಲಿರುವದಕ್ಕಿಂತ ಭಾರತದಲ್ಲಿ ಕಮ್ಯೂನಿಸ್ಟ್ ಅಪಾಯ 'ಭೀತಿ ಕಡಿಮೆಯಿರುವುದಾದರೆ— ಅದಕ್ಕೆ ವ್ಯವಹಾರೀ ಸಮತಾವಾದಿ ನೆಹರೂ ನಾಯಕತ್ವವೇ ಕಾರಣ. ಭಾರತಕ್ಕಿಂದು ಅಖಂಡತ್ವದ ಆವಶ್ಯಕತೆಯಿದೆ; ಆದರ ನವಶಾಸನದ ಆಕಾರ ಮತ್ತು ಅರ್ಥಗಳೆಲ್ಲವೂ ಅಖಂಡ ರಾಷ್ಟ್ರೀಯತೆಯನ್ನು ಪೋಷಿಸುತ್ತವೆ; ಪೋಷಿಸುತ್ತಿವೆ. ಹೀಗಿದ್ದರೂ ರಾಷ್ಟ್ರದೊಳಗಡೆಯಲ್ಲಿರುವ ಸಂಕುಚಿತಾಭಿಮಾನಗಳು ಅಗಣಿತ; ಪ್ರಾಂತ್ಯಾಭಿಮಾನ, ಜಾತ್ಯಭಿಮಾನ, ಧಾರ್ಮಿಕ ಭಾವನೆ, ಮತ್ತಿತರ ಸಂಕುಚಿತ ಅಭಿಮಾನ ಅಭಿಲಾಷೆ ನೂರಾರು; ಸಾವಿರಾರು. ಇವೆಲ್ಲವೂ ತಂತಮ್ಮ ಕ್ಷೇತ್ರದಲ್ಲಿ ಐಕ್ಯಲ್ಲಾ ಶಕ್ತಿಗಳಿಗಿಂತ ಪ್ರಬಲವಾದವುಗಳೇ. ನೆಹರು, ವಲ್ಲಭಭಾಯಿಗಳಂತಹ ಅಖಿಲ ರಾಷ್ಟ್ರದ ಸಮಾನ ಹಾಗೂ ಸಂಪೂರ್ಣ ಗೌರವಪಾತ್ರ ನಾಯಕತ್ವವೇ ಇವೆಲ್ಲಾ ಹಳ್ಳಕೊಳ್ಳಗಳನ್ನೂ ತುಂಬಿಸಿ ಎಲ್ಲವುಗಳ ಮೇಲೆ ಏಕಪ್ರಕಾರ ರಾಷ್ಟ್ರೀಯತಾ ಪ್ರವಾಹವನ್ನು ಹರಿಯಿಸುವ ಸೆಳೆತ. ನೆಹರು, ವಲ್ಲಭಭಾಯಿಗಳಂತಹ ನಾಯಕರಿಬ್ಬರಿದ್ದುದರಿಂದಲೇ ಅಖಿಲ ರಾಷ್ಟ್ರೀಯ ನಾಯಕತ್ವ ಸಾಧ್ಯವೆಂದಾಗಿದೆ- ಧರ್ಮಾಭಿಮಾನ, ಜಾತ್ಯಾಭಿಮಾನಗಳನ್ನು ತೀರಾ ಅಲ್ಪವಾಗಿ ಮಾಡಿಟ್ಟಿರುವ ಪ್ರಚಂಡ ರಾಷ್ಟ್ರಾಭಿಮಾನಕ್ಕೊಂದು ನೆಲೆ ದೊರೆತಿದೆ; ಪ್ರಾಂತ್ಯಾಭಿಮಾನವು ಒಂದಂಶ ಮಾತ್ರವೆಂದು ತಿಳಿಯಲಾಗುವ ರಾಷ್ಟ್ರಾಭಿಮಾನದ ಪೂರ್ಣರೂಪ ಅಲ್ಲಿ ಕಂಡು ಬರುವಂತಾಗಿದೆ. ಈ ನಾಯಕತ್ವದಂ


## ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.



**The Bombay Steam Navigation Co., Ltd**

ದಿ ಬಾಂಬೆ ಸ್ಟೀಮ್ ನೇವಿಗೇಶನ್ ಕಂ., ಲಿ

ಪೆಸೆಂಜರರ ಅನುಕೂಲತೆಯ ಬಗ್ಗೆ ಸ್ಟೀಮರ್ ಚಾರ್ಜು ಇಳಿಸಲ್ಪಟ್ಟಿದೆ.

ಮಲ್ಪೆಯಿಂದ ಈ ಕೆಳಗಿನ ಬಂದರುಗಳಿಗೆ—

| | ಕೆಬಿನ್ | ಅಪ್ಪರ್ ಕ್ಲಾಸ್ | ಲೋವರ್ ಕ್ಲಾಸ್ |
|---|---|---|---|
| ಬೊಂಬಾಯಿ | 61/8 | 30/12 | 20/8 |
| ಮರ್ಮುಗೋವ | 44/4 | 22/2 | 14/12 |
| ಕಾರವಾರ | 29/4 | 14/10 | 9/12 |
| ತದಡಿ (ಗೋಕರ್ಣ) | 21/6 | 10/12 | 7/2 |
| ಕುಮಟ | 15/12 | 7/14 | 5/4 |
| ಬಟ್ಕಳ | 8/4 | 4/2 | 2/12 |
| ಮಂಗಳೂರು | 7/8 | 3/12 | 2/8 |

ಹೆಚ್ಚಿನ ಮಾಹಿತಿಗೆ

ದಿ ಬೊಂಬಾಯಿ ಸ್ಟೀಮ್ ನೇವಿಗೇಶನ್ ಕಂ. ಲಿ. ಮಲ್ಪೆ

ಇವರ ಆಫೀಸಿನಲ್ಲಿ ವಿಚಾರಿಸಿರಿ. Phone No. 31



## ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹೊಟ್ಟೆಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ: ರೂ 3-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ. 8- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

**Mrs. D. DEVEE,** F. 08. (N. J.)
Tollygunge CALCUTTA.

ಸ್ಟಾಕಿಸ್ಟರು: ಕಮಾಕಂಪೆನಿ, ಮಂಗಳೂರು

# ಜಾಗತಿಕ ಸ್ಥಿತಿಗತಿ

ಪ್ರಾಪಂಚಿಕ ಸ್ಥಿತಿಗತಿಗಳೆಲ್ಲವೂ ಕಳೆದ ದಿನಗಳಲ್ಲಿ ಅಪ್ರಿಯ ಸರಹದ್ದಿನತ್ತ ತೀವ್ರಗತಿಯಿಂದ ಧಾವಿಸಿವೆ. ರಾಷ್ಟ್ರ-ರಾಷ್ಟ್ರಗಳೊಳಗಿನ ಸಂಬಂಧವು ಎಲ್ಲೆಲ್ಲಿ ಕೆಟ್ಟಿದ್ದಿತೋ ಅಲ್ಲೆಲ್ಲಾ ಕಳೆದ ದಿನಗಳಲ್ಲಿ ಮತ್ತಷ್ಟು ಕಳತೆಯ ಸ್ಥಿತಿ ಮೂಡಿದುದು ಕಂಡು ಬರುತ್ತಿದೆ. ಹೈಡ್ರೋಜನ್ ಬೋಂಬಿನ ಪ್ರಸ್ತಾವನೆಯು ಮೊದಲೇ ಬಿಸಿಯೇರಿದ ವಾತಾವರಣಕ್ಕೆ ಮತ್ತಷ್ಟು ಕಾವು ಕೊಟ್ಟು, ಕದಡಿದ ಮೆದುಳು ಕುದಿಯುವಂತೆ ಮಾಡಿದೆ. ಎಲ್ಲೆಲ್ಲೂ ಇದೇ ಸ್ಥಿತಿ.

## ಸಂಧಾನ | ವಿವಾದ

ಬ್ರಿಟನಿನ ಮಹಾ ಚುನಾವಣಾ ಹೋರಾಟದ ನಡುವೆ, ತನ್ನ ಪಕ್ಷಕ್ಕೆ ವಿಜಯ ದೊರಕಿಸಿ ಕೊಡುವ ವಿಶೇಷ ಬೋಂಬೆಂಬ ನಂಬಿಕೆಯಿಂದ ಕನ್ಸರ್ವೇಟಿವ್ ಪಕ್ಷದ ನಾಯಕ ಸುಪ್ರಸಿದ್ಧ ಚರ್ಚಿಲ್ಲರು ಮಾತಿನ ಮುದ್ದೆಯೊಂದನ್ನು ಸ್ಫೋಟಗೊಳಿಸಿದ್ದಾರೆ. "ನಾನು ಗೆದ್ದರೆ ಇಂದಿನ ಥಂಡಾ ಯುದ್ಧವನ್ನು ಮುಗಿಸಿ ಬಿಡಲು ನೇರಾಗಿ ಸ್ಟಾಲಿನರ ಭೇಟಿ ಮಾಡುವೆ"ನೆಂಬುದೇ ಚರ್ಚಿಲ್ಲರೆಸೆದ ವಾಗ್ಬಾಣ. "ಫೆಬ್ರವರಿ 23ರ ಚುನಾವಣೆಯ ಫಲಿತಾಂಶವಾಗಿ ನಾನು ಮತ್ತೊಮ್ಮೆ ಇಂಗ್ಲಾಂಡಿನ ಮುಖ್ಯ ಮಂತ್ರಿಯಾದರೆ, ಇಂದಿನ ಥಂಡಾ ಸಮರವನ್ನು ಮುಗಿಸುವ ಪ್ರಯತ್ನಕ್ಕಾಗಿ ಸ್ವತಃ ಸ್ಟಾಲಿನರನ್ನು ಭೇಟಿ ಮಾಡಲಿದ್ದೇನೆ. ಸೋವಿಯೆಟ್ ರಶ್ಯೆಯೊಡನೆ ಅತ್ಯಂತ ಮೇಲ್ಮಟ್ಟದ ಮತ್ತೊಂದು ಸಂಭಾಷಣೆ ನಡೆಸುವ ಯೋಚನೆ ಮಾಡದಿರಲು ನನಗೀಗ ಸಾಧ್ಯವಿಲ್ಲ. ಎರಡು ಜಗತ್ತುಗಳು ಪರಸ್ಪರ ಸ್ನೇಹಾಚಾರದಿಂದಲ್ಲವಾದರೆ, ಕೊನೆಯ ಪಕ್ಷ ಥಂಡಾ ಯುದ್ಧದ ದ್ವೇಷ ಭಾವನೆಯಾದರೂ ಇಲ್ಲದೆ ತಂತಮ್ಮ ಜೀವನವನ್ನು ಸಾಗಿಸುವಂತೆ ಮಾಡುವದಕ್ಕಾಗಿ ಈ ಪರಮಾವಧಿ ಪ್ರಯತ್ನ ಮಾಡಬೇಕೆಂದು ನನ್ನ ಮನಸ್ಸಿಗೆ ನಾಟಿದೆ" ಎಂದಿದ್ದರು ಚರ್ಚಿಲ್. ಸದ್ಯ ಸ್ಥಿತಿಯಲ್ಲಿ ಚರ್ಚಿಲ್ಲರ ಈ ಮಾತಿಗೆ ವಿಶೇಷ ಬೆಲೆಯಿದೆ ಎಂದು ಕಾಣುತ್ತಿದೆ. ಆದ್ದರಿಂದಲೇ ಅದನ್ನೊಂದು ಚುನಾವಣಾ ಬಡಾಯಿಯೆಂದು ಗಾಳಿಗೆ ಹಾರಿಸಿ ಬಿಡದೆ, ಸಂಬಂಧಪಟ್ಟವರು ಅದನ್ನೆತ್ತಿಕೊಂಡು ಗುಣಾವಗುಣಗಳ ವಿಮರ್ಶೆ ಮಾಡಲಾರಂಭಿಸಿದ್ದಾರೆ. ಚರ್ಚಿಲ್ಲರ ಹೇಳಿಕೆಯನ್ನು ಕೇಳಿದೊಡನೆಯೇ "ಚರ್ಚಿಲ್ಲರಂತಹ ಭೇಟಿಗಳಲ್ಲಿ ರಶ್ಯದಿಂದ ಕೊಡಲ್ಪಡುವ ಆಶ್ವಾಸನೆ ಯಾವುದೂ ಪಾಲಿಸಲ್ಪಡುವುದೆಂಬ ನಂಬಿಕೆ ನನಗಿಲ್ಲ" ಎಂದು ಅಮೆರಿಕಾಧ್ಯಕ್ಷ ಟ್ರುಮೇನರಂದಿದ್ದಾರೆ. ಇತ್ತ ಬ್ರಿಟನಿನಲ್ಲಂತೂ ಈ ಪ್ರಶ್ನೆಯನ್ನೆತ್ತಿಕೊಂಡು ಕೂಲಿಗಾರ ಪಕ್ಷದ ನಾಯಕ ಮತ್ತು ಇಂದಿನ ಪ್ರಧಾನಿ ಅಟ್ಲಿ ಮತ್ತು ಚರ್ಚಿಲ್ಲರೊಳಗೆ ಚುನಾವಣಾರಂಗದಲ್ಲಿ ವಾಗ್ಯುದ್ಧ ನಡೆದಿದೆ. ಮಿ. ಅಟ್ಲಿಗಳು ಅಂತಹ ಕ್ರಮವನ್ನು ಕೈಕೊಳ್ಳುವ ಕರ್ತವ್ಯವು ಸಂಯುಕ್ತ ರಾಷ್ಟ್ರಸಂಘದ್ದೆನ್ನುತ್ತಾ, ತಾನು ಪ್ರಧಾನಿಯಾದೊಡನೆಯೇ ಆ ಕುರಿತು ಮಾಡಿದ್ದ ಪ್ರಯತ್ನಗಳನ್ನು ವಿವರಿಸಿದ್ದಾರೆ. ಮಿ. ಚರ್ಚಿಲ್ಲರು ತನ್ನ ಮೂಲ ಸೂಚನೆಯನ್ನೇ ಪುನರುಚ್ಚರಿಸಿ, ರಶ್ಯದೊಡನೆ ಅತಿ ಮೇಲ್ಮಟ್ಟದ ಮಾತುಕತೆ ಹೂಡುವ ಪ್ರಶ್ನೆಯು ಪ್ರಾಯಶಃ ಇಡೀ ಪ್ರಪಂಚದ ಜೀವನ್ಮರಣದ ಪ್ರಶ್ನೆಯೆಂದು ಮತ್ತಷ್ಟು ಒತ್ತಿ ಹೇಳಿದ್ದಾರೆ. ಇದನ್ನು ಉತ್ತರಿಸುತ್ತಾ ಮಿ. ಅಟ್ಲೀಗಳಂದಿದ್ದಾರೆ: "ರಾಷ್ಟ್ರಸಮೂಹದಲ್ಲಿ ಸರಿಸಮಾನತೆಯಿಂದ ರಶ್ಯಾದೊಡನೆ ಸಹಕರಿಸಲು ನಾವು ಸದಾಕಾಲ ಸಿದ್ಧರಿದ್ದೇವೆ. ಆದರೂ ಅಸಹಕಾರವೆಂಬುದು ಸಮಾನ ಶರ್ತಗಳನ್ನಾಧರಿಸಿರಬೇಕು. ನಾವು ಮೇಲಧಿಕಾರಕ್ಕೆ ತಲೆಬಾಗಲಾರೆವು. ಪರಕೀಯರ ಸಂಕಲ್ಪಾನುಸಾರವಾಗಿ ನಾವು ನಮ್ಮ ಜೀವನ ವಿಧಾನವನ್ನು ಬದಲಾಯಿಸಿಕೊಳ್ಳಲಾರೆವು." ಲೋಕಶಾಂತಿ ಸ್ಥಾಪನೆಗಾಗಿ, ಇಕ್ಕಡೆಯ ಮುಖ್ಯ ರಾಷ್ಟ್ರಗಳವರು ಪರಸ್ಪರ ಸಂಧಾನ ಮೂಲಕ ಒಂದಾಗಬೇಕಾದುದು ಅತ್ಯಗತ್ಯವೆಂಬ ಆತುರವು ಪ್ರತಿಯೊಂದು ದೇಶದ ಜನಸಾಮಾನ್ಯರದಾಗಿದೆ, ಎಂಬುದನ್ನು ಚುನಾವಣಾ ಕಾಲದ ಇಂತಹ ತರ್ಕಗಳು ತೋರಿಸಿಕೊಡುತ್ತಿವೆ.

## ಮೇಲಾಟ-ಘರ್ಷಣೆ

ಎರಡು ತಿಂಗಳ ಗುಪ್ತ ಸಂಧಾನ ಮಾತುಕತೆಗಳ ನಂತರ ಸೋವಿಯೆಟ್ ರಶ್ಯಾ ಮತ್ತು ಕಮ್ಯೂನಿಸ್ಟ್ ಚೈನಾಗಳ ಒಂದು ಒಪ್ಪಂದ ಕರಾರಿಗೆ ಇದೇ ತಾ. 14ರಲ್ಲಿ ಇಕ್ಕಡೆಯ ವಿದೇಶ ಮಂತ್ರಿಗಳ ಸಹಿಬಿದ್ದಿದೆ. ಈ ಒಡಂಬಡಿಕೆಯು 30 ವರುಷಗಳ ವಾಯಿದೆಯದಿದೆ. 1954ನೇ ಇಸವಿಯಿಂದ ಹತ್ತು ವರುಷಗಳ ವರೆಗೆ ಕಂತಿನಿಂದ ಸಲ್ಲಾಯಿಸುವಂತೆ ಸಾಲಗಳನ್ನು ರಶ್ಯವು ಚೈನಕ್ಕೆ ಕೊಡಲಿದೆ. ಇದುವರೆಗೆ ರಶ್ಯವು ಚೈನದ ಒಂದೆರಡು ಬಂದರಗಳಲ್ಲಿ ಇರಿಸಿದ್ದ ಸೇನೆ ಮತ್ತು ಅಧಿಕಾರವನ್ನು ಇನ್ನು ಹಿಂದೆಗೆದುಕೊಳ್ಳಲಿದೆ. ಕಮ್ಯೂನಿಸ್ಟ್ ರಾಷ್ಟ್ರಗಳಾದ ರಶ್ಯಾ ಮತ್ತು ಇಂದಿನ ಚೈನಗಳು ಆತ್ಮೀಯ ಬಂಧುಗಳೆಂಬುದು ತಿಳಿದಿದ್ದರೂ ಇಂದಿನ ಪ್ರತ್ಯಕ್ಷ ಕಟ್ಟುಗಳಿಂದ ಅವು ಬಿಗಿಯಲ್ಪಟ್ಟದು ಪ್ರಾಮುಖ್ಯ ಸಂಗತಿ. ಲೋಕದ ಜನತೆಯ ಕಾಲಂಶವು ಈ ಮೂಲಕ ಒಂದುಗೂಡಿದಂತಾಗಿದೆ. ತನ್ನ ರಾಷ್ಟ್ರ ಮತ್ತು ರಶ್ಯದೊಳಗಿನ ಐಕ್ಯತೆಯು ಇಡೀ ಮಾನವ ಜನಾಂಗದ ಭವಿಷ್ಯಕ್ಕೇನೇ ಲಗಾಮಾಗುವಷ್ಟು ಬಲಶಾಲಿಯಾದುದೆಂದೂ ಚೈನಾ ಮತ್ತು ರಶ್ಯಾಗಳೊಳಗಿನ ಬಾಂಧವ್ಯವು ವರ್ಣನಾತೀತವೆಂದೂ ಚೈನದ ಕಮ್ಯೂನಿಸ್ಟ್ ನಾಯಕ ಮಾವೋ ಟ್ಸೇಟುಂಗ್ ಅಂದಿದ್ದಾನೆ.

ಅತ್ತ ಅಮೇರಿಕದಿಂದ ಆಗ್ನೇಯ ಏಶ್ಯಾಕ್ಕೆ ಆರ್ಥಿಕ ಸಹಾಯ ವ್ಯವಸ್ಥೆಗಳನ್ನು ರೂಪಿಸಲು ಇಕ್ಕಡೆಯ ಪ್ರತಿನಿಧಿಗಳ ಸಮ್ಮೇಲನ ಬೇಂಗ್‌ಕೋಕಿನಲ್ಲಿ ಮೂರು ದಿನಗಳವರೆಗೆ ಜರಗಿ ತಕ್ಕ ವ್ಯವಸ್ಥೆಗಳಾಗಿವೆ. ಆಗ್ನೇಯ ಏಶ್ಯಾದ ರಾಷ್ಟ್ರಗಳು ಕಮ್ಯೂನಿಸ್ಟ್ ಕಂಟಕಗಳನ್ನು ಜಯಶೀಲವಾಗಿ ಪ್ರತಿಭಟಿಸಲಾಗುವಂತೆ ಅಮೇರಿಕದ ಶಸ್ತ್ರ ಸಹಾಯಕೊಡುವ ಯೋಜನೆಗಳಾಗಿವೆ.

ದಕ್ಷಿಣಾಫ್ರಿಕದ ಜೋಹನ್ನಸ್‌ಬರ್ಗ್ ನಗರ ಮತ್ತದರ ಆಸುಪಾಸುಗಳಲ್ಲಿ ಭಾರತೀಯರೇ ಮೊದಲಾದ ಕರಿ ವರ್ಣೀಯರ ವಿರುದ್ಧವಾಗಿ ಆಫ್ರಿಕಾನರು ಅಸಾಧಾರಣ ರೀತಿಯ ಗಲಭೆಯೆಬ್ಬಿಸಿ, ಕೊಲೆ, ಹೊಡೆತ ಮತ್ತು ಮನೆಮಾರುಗಳ ಸುಲಿಗೆ ನಡೆಸಿದ್ದಾರೆ. ತತ್ಪರಿಣಾಮವಾಗಿ, ಮೊದಲೇ ದುರವಸ್ಥೆಗೀಡಾಗಿದ್ದ ಅಲ್ಲಿಯ ಭಾರತೀಯರೀಗ ಪ್ರತ್ಯಕ್ಷ ನರಕ ಕುಂಡಕ್ಕೇನೇ ತಳ್ಳಲ್ಪಟ್ಟಂತಾಗಿದ್ದಾರೆ. ಯೂರೋಪೇತರರಿಗೂ ದಕ್ಷಿಣಾಫ್ರಿಕದ ಪೂರ್ಣ ನಾಗರಿಕ ಹಕ್ಕುಗಳನ್ನು ಕೊಡಬೇಕೆಂದು ದಕ್ಷಿಣಾಫ್ರಿಕದ ಪಾರ್ಲಿಮೆಂಟಿನ ಮುಂದೆ ಬಂದಿದ್ದ ತಿದ್ದುಪಡಿ ಸೂಚನೆಯೊಂದು "ಹಾಗೆ ಮಾಡಿದರೆ ದಕ್ಷಿಣಾಫ್ರಿಕದ ಯುರೋಪು ಜನಾಂಗದ ಸಾವು ಘಂಟೆಯನ್ನು ಬಾರಿಸಿದಂತೆಯೇ ಸರಿ" ಎಂಬ ಕಾರಣದಿಂದ ನಿರಾಕರಿಸಲ್ಪಟ್ಟಿದೆ.

ಬ್ರಿಟನಿನಲ್ಲಿ ಚುನಾವಣಾ ಗೊಂದಲವು ಪರಮಾವಧಿ ಉತ್ಸಾಹ, ಆವೇಶ, ಬಹುಮುಖೀ ಪ್ರಚಾರಗಳ ರೂಪದಿಂದ ನಡೆದಿದೆ. ಚರ್ಚಿಲ್ಲರು ಸತ್ತರೆಂಬಂತಹ ಕೃತಕ ಹಾಗೂ ವಿಶೇಷ ರೀತಿಯ ಸುದ್ದೀಗೊಂದಲಗಳಿಗೂ ಕೊರತೆಯಿಲ್ಲ.

## ಭಾರತ—ಪಾಕಿಸ್ತಾನ

ಇತ್ತ ಸ್ವಾತಂತ್ರ್ಯನಂತರದ ಅಸಾಮಾನ್ಯ ದುರ್ಘಟನೆಯೆನ್ನಲಾಗುವಂತೆ ಭಾರತ ಪಾಕಿಸ್ತಾನಗಳ ಸಂಬಂಧದಲ್ಲಿ ಹಳೇ ರೋಗವು ಪುನಃ ತೋರಿ ಬಂದುದು ಎಲ್ಲಕ್ಕಿಂತ ಹೆಚ್ಚು ಶೋಚನೀಯ. ಪೂರ್ವ ಪಾಕಿಸ್ತಾನದಿಂದ ಹಿಂದುಗಳನ್ನು ನಿಯೋಜಿತ ರೀತಿಯಿಂದ ದೊಡ್ಡ ಪರಿಮಾಣದಲ್ಲಿ ಓಡಿಸಲಾರಂಭಿಸಿರುವುದರಿಂದ, ತತ್ಪರಿಣಾಮವಾಗಿ ಪಶ್ಚಿಮ ಬಂಗಾಳದ ಕಲ್ಕತ್ತದಂತಹ ಸ್ಥಳದಲ್ಲೆದ್ದ ಗಲಭೆಯನ್ನು ಸರಕಾರವು ಕೂಡಲೇ ನಿಲ್ಲಿಸಬಟ್ಟಿದ್ದಿತು. ಕಳೆದ ವಾರವೇ ಪ್ರಕಟಿಸಿದ್ದಂತೆ ಕಲ್ಕತ್ತವೀಗ ಪೂರ್ಣ ಶಾಂತವಾಗಿದೆ. ನೆಹರು ಮತ್ತು ಅಜಾದರಿಗೆ ಬಂದಿದ್ದ ಕರೆಯನ್ನು ಮನ್ನಿಸಿ ಮೌಲಾನಾ ಅಬ್ದುಲ್ ಕಲಾಮ್ ಅಜಾದರು ಕಲ್ಕತ್ತೆಗೆ ಹೋಗಿ ಪರಿಸ್ಥಿತಿಯನ್ನು ಪ್ರತ್ಯಕ್ಷ ಪರಿಶೀಲಿಸಿದ್ದಾರೆ. ಪಶ್ಚಿಮ ಬಂಗಾಳ ಸರಕಾರವು ನಿರಾಶ್ರಿತರಿಗೆ ಸರ್ವ ವಿಧದ ಸಹಾಯವೀಯುತ್ತಿದೆಯೆಂದೂ, ಪ್ರಾಣ ಸೊತ್ತುಗಳ ರಕ್ಷಣೆಯ ಪೂರ್ಣ ಆಶ್ವಾಸನವನ್ನು ಸರಕಾರವು

(೭ನೇ ಪುಟ ನೋಡಿರಿ)

---

ತಹ ಕೇಂದ್ರ ಗೂಟ ತಪ್ಪಿದ ಮರುದಿನ, ಅದಕ್ಕೀಗ ಸಿಕ್ಕಿಕೊಂಡಿರುವ ಹಗ್ಗಗಳೆಲ್ಲವೂ ಜಾರಿ ಹೋಗಿ ಚೆಲ್ಲಾಪಿಲ್ಲಿಯಾಗುವ ಭೀತಿಯುಳಿದಿದೆ. ಸೂರ್ಯ ಪ್ರಕಾಶ ಅಡಗಿದಾಗ, ನಕ್ಷತ್ರಗಳ ಮಿಣುಕಾಟ ತೋರಿ ಬರುವಂತೆ, ಅಖಿಲ ರಾಷ್ಟ್ರದ ಮೇಲೆ ಪ್ರಭೆ ಚೆಲ್ಲುತ್ತಿರುವ ಇಂದಿನ ಕೇಂದ್ರ ನಾಯಕತ್ವ ಮಾಯವಾದರೆ ಅಲ್ಲಲ್ಲಿಯ ಪ್ರಾಂತಿಕ ಧುರೀಣತ್ವ, ಜಾತೀಯ ಮುಂದಾಳುತನ, ಪಕ್ಷ ಪಂಗಡವಾರು ಪುಡಾರಿತ್ವ ಮಾತ್ರ ತೋರಿಬರಬಹುದು. ರಾಷ್ಟ್ರದ ಐಕ್ಯತೆ, ಅಖಂಡತೆ ಭಂಗವಾಗಬಹುದು. ಜನತೆಯಲ್ಲಿ ಸ್ವಜ್ಞಾನ ಪ್ರಕಾಶ ಹುಟ್ಟಿಕೊಳ್ಳುವ ವರೆಗೆ, ಯಾವ ವಿಧದ ಪ್ರಗತಿ ಸಾಧನೆಗಾದರೂ ಅವಶ್ಯವಾಗಿ ಬೇಕಾಗಿರುವ ಈ ಸರ್ವಮಾನ್ಯ ರಾಷ್ಟ್ರೀಯ ಮುಂದಾಳುತ್ವವಿರಲೇಬೇಕು. ನೆಹರೂ, ವಲ್ಲಭಾಯಿಗಳೇನೂ ಶಾಶ್ವತ ಜೀವಿಗಳಲ್ಲವೆಂಬ ನಿರೀಕ್ಷೆಯಿರುವಂತೆ ಭಾರತೀಯ ಜನಸಾಮಾನ್ಯರ ಅಯೋಗ್ಯತೆ, ಅಜ್ಞಾನಗಳೂ ಶಾಶ್ವತವಲ್ಲವೆಂಬ ಆಶೆಯೂ ಇದೆ. ಆದ್ದರಿಂದ ಜನಸಾಮಾನ್ಯರು ಇತ್ತ ಸಿದ್ಧರಾಗುತ್ತಾ ಹೋಗಬೇಕು—ಅತ್ತ ರಾಷ್ಟ್ರನಾಯಕರು ಪ್ರಚಲಿತ ಸಮಸ್ಯೆಗಳನ್ನು ಗೆಲ್ಲುತ್ತಾ, ಅಳಿಸುತ್ತಾ ಬರಬೇಕು. ಜನತೆಯು ಸುದೃಢ ಆಧಾರಸ್ತಂಭವಾಗಿ ಮೇಲೇರುವ ಕಾಲ ಬಂದಾಗಲೇ, ಆ ತನಕ ಆಡಳಿತ ಚಪ್ಪರವನ್ನು ಮೇಲ್ಗಡೆಯಿಂದಲೇ ಎತ್ತಿ ಹಿಡಿದು ನಿಲ್ಲಿಸಿರುವ ನಾಯಕಗೂಟವು ಬೇಕಾದರೆ ತಪ್ಪಲಿ—ಮಾಡು ಸಂಪೂರ್ಣವಾಗಿ ಸ್ತಂಭಗಳ ಮೇಲೇನೇ ನಿಲ್ಲಲಿ. ಈ ಅವಸ್ಥಾಂತರವು ಮುಂಬರುವ ಮಹಾಚುನಾವಣೆಯಲ್ಲೇ ನಡೆಯಲಿ. ಅಷ್ಟರ ವರೆಗುಳಿದಿರುವ ಅವಧಿಯನ್ನು ಜನತೆಯು ಹೊಣೆ ನಿರ್ವಹಣಾ ಯೋಗ್ಯತೆ ಗಳಿಸುವುದರಲ್ಲೂ, ನಾಯಕರು ಸದ್ಯದ ಸಮಸ್ಯೆಗಳೆಲ್ಲವನ್ನು ತೀರ್ಮಾನಿಸಿ, ಮುಂದಿನವರ ಭಾರವನ್ನು ಕಡಿಮೆಮಾಡುವುದರಲ್ಲೂ ವಿನಿಯೋಗಿಸಲಿ. ಬೇರಾವ ಆತುರ, ಗೊಂದಲ, ಆಲಸ್ಯ, ಅಡ್ಡಿಗಳೂ ತೋರಿಬಾರದೆ ಎಲ್ಲವೂ ವ್ಯವಸ್ಥೆಯಿಂದ ಆ ಮಹಾ ಪರ್ಯಾಯದತ್ತ ಸಾಗಲಿ.

---


ದಿ ಕರ್ನಾಟಕ ಫ್ರೆಂಡ್ಸ್ ಯೂನಿಯನ್, ಮುಂಬಯಿ

ಇವರು

ಬಾರ್ಕೂರು ಬಿಲ್ಲವರ ಚಾರಿಟಿ ಸಂಘ, ಮುಂಬಯಿ (ವಿದ್ಯಾಶಾಖೆ)

ಇವರ ಸಹಾಯಾರ್ಥವಾಗಿ

ತಾ. 17—3—1950ನೇ ಶುಕ್ರವಾರ ರಾತ್ರಿ ಘಂಟೆ 8-30ಕ್ಕೆ

ಕಲ್ಬಾದೇವಿಯ ಭಾಂಗವಾಡಿ ಥಿಯೇಟರಿನಲ್ಲಿ

**ಕಬೀರ ದಾಸ**

ಎಂಬ ಭಕ್ತಿರಸ ಪ್ರಧಾನವಾದ ನಾಟಕವನ್ನು ಪ್ರದರ್ಶಿಸಲಿರುವರು.

ಮುಂಬಯಿಯ ಕನ್ನಡ ಮಹಾಜನರು ವಿದ್ಯಾಪ್ರಸಾರತೆಯ

ಈ ದಿವ್ಯ ಕಾರ್ಯಕ್ಕೆ ಕೊಡುಗೈಯ ಪ್ರೋತ್ಸಾಹವೀಯಬೇಕಾಗಿ

ಸವಿನಯ ನಿವೇದನೆ.

THE
Canara Banking Corporation Ltd.
(Incorporated in India with Limited Liability)
Estd: 1906
ANNOUNCEMENT
A Branch of the Bank will shortly be opened
at
PONAMPET (SOUTH COORG).
ಬ್ಯಾಂಕಿನ ಒಂದು ಶಾಖೆಯು ಸದ್ಯದಲ್ಲಿಯೇ
ಪೊನ್ನಂಪೇಟೆ (ದಕ್ಷಿಣ ಕೊಡಗು)
ಯಲ್ಲಿ ತೆರೆಯಲಾಗುವುದು.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ ಲಿಮಿಟೆಡ್,
ಸ್ಥಾಪನೆ: 1906

ಗುರುವಾರ ಉಡುಪಿ ೧೬-೨-೧೯೫೦

# ಕಾಂಗ್ರೆಸಿನ ದುರಸ್ತಿ

ಮುಖ್ಯವಾಗಿ ಕಾಂಗ್ರೆಸ್ ಘಟನೆಯಲ್ಲೊಂದು ತಿದ್ದುಪಡಿ ಮಾಡುವುದಕ್ಕಾಗಿ ಮತ್ತು ಜನತಾ ಸಂಪರ್ಕ ಕಾರ್ಯಕ್ರಮಗಳನ್ನು ರೂಪಿಸುವುದಕ್ಕಾಗಿ ನವದೆಹಲಿಯಲ್ಲಿ ಇದೇ ತಾ. 16 ಮತ್ತು 17ರಲ್ಲಿ ಸೇರಿದ ಕಾಂಗ್ರೆಸ್ ಕಾರ್ಯಕಾರೀ ಹಾಗೂ 18 ಮತ್ತು 19ರಲ್ಲಿ ಸೇರಿದ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆಗಳ ನಿರ್ಣಯಗಳು ಕಾಲೋಚಿತವಿವೆ; ಪ್ರಾಮುಖ್ಯವಿವೆ. ಮುಂದಿನ ಕಾಂಗ್ರೆಸ್ ಅಧಿವೇಶನ ಸೇರುವ ವರೆಗಿನ ಅವಧಿಯಲ್ಲಿ ಕಾಂಗ್ರೆಸಿನ ಸಕ್ರಿಯ ಸದಸ್ಯರಿಗೆ ಕಾಂಗ್ರೆಸ್ ಚುನಾವಣೆಗಳಲ್ಲಿ ಮತಾಧಿಕಾರವಿಲ್ಲವೆಂದು ತೀರ್ಮಾನಿಸಿದುದೇ ಕಾಂಗ್ರೆಸ್ ಘಟನೆಯಲ್ಲಿ ಮಾಡಿಕೊಂಡ ಬದಲಾವಣೆ. ಕಾಲೋಚಿತವಾಗಿ ಪ್ರಾಯಸ್ಥರೆಲ್ಲರಿಗೂ ಮತಾಧಿಕಾರವಿತ್ತಿರುವ ನವರಾಜ್ಯ ಶಾಸನದಂತೆಯೇ ಪ್ರಾಯಪ್ರಬುದ್ಧರೆಲ್ಲರನ್ನೂ ಕಾಂಗ್ರೆಸ್ ಪ್ರಾಥಮಿಕ ಸದಸ್ಯರಾಗಿ ಮಾಡಿ, ಹಾಗೆ ವಿಸ್ತಾರ ಹೊಂದುವ ಸಂಸ್ಥೆಯ ಕಾರ್ಯದ ಬಿಗುಹು ತಪ್ಪದಂತೆ ಮಾಡುವುದಕ್ಕಾಗಿ ಗಾಂಧೀ ತತ್ವನಿಷ್ಠರಾದ ಕೆಲವೇ ಮಂದಿಯನ್ನು ಸಕ್ರಿಯ ಸದಸ್ಯರಾಗಿ ಸೇರಿಸಿ, ಅವರಿಗೆ ಮತಾಧಿಕಾರವೀಯುವ ನಿಬಂಧನೆಯು ಕಾಂಗ್ರೆಸಿನ ಮೂಲ ಘಟನೆಯಲ್ಲಿದ್ದಿತು. ಆದರೆ ಸದುದ್ದೇಶವು ಈ ವರ್ಗದ ಸದಸ್ಯರನ್ನು ಸೇರಿಸುವ ವಿಧಾನದಲ್ಲೇ ವಿಫಲಗೊಂಡು, ಅದು ಕಾಂಗ್ರೆಸಿನೊಳಗಿನ ಮತ್ತೊಂದು ಮಹಾ ವಂಚಕತನಕ್ಕೆ ಕಾರಣವಾಯಿತೆಂಬುದು ಖಚಿತವಾಗಿದೆ. ಕಾಂಗ್ರೆಸ್ ಘಟನೆಯನ್ವಯ ಪ್ರಥಮತಃ ವೋಟಿನ ಹಕ್ಕು ಕೊಡಲ್ಪಡುವಾಗ ದೃಷ್ಟಿಪಥದಲ್ಲಿಟ್ಟುಕೊಂಡಿದ್ದ ಕಾಂಗ್ರೆಸಿನ ತತ್ವಾನುಗುಣ ಕ್ರಿಯೆಗಳನ್ನು ತಮ್ಮ ನಿತ್ಯಜೀವನದಲ್ಲಿ ಅಂಗೀಕರಿಸಿರುವ ಸಕ್ರಿಯ ಸದಸ್ಯರು ನಾಲ್ಕಾರು ಮಂದಿಯಿರುವ ಒಂದು ಜಿಲ್ಲೆಯು ಅವರಿಂದಲೇ ಉತ್ತಮ ಜಿಲ್ಲೆಯೆನ್ನಿಸುತಿತ್ತು; ಅದರಿಂದ ಕಾಂಗ್ರೆಸಿನಲ್ಲಿ ಇಂತಹ ಯಥಾರ್ಥ ವಿಧಾಯಕ ಕಾರ್ಯಕರ್ತರ ಅಭಾವವು ಎಲ್ಲೆಲ್ಲೂ ಇರುವುದರಿಂದಾಗಿಯೇ ಕಾಂಗ್ರೆಸ್ ಈಗಿನ ಕೆಳಮಟ್ಟಕ್ಕಿಳಿಯಬೇಕಾಯಿತೆಂಬುದು ಸ್ವತಃಸಿದ್ಧ. ಹೀಗಿದ್ದು ಸಕ್ರಿಯ ಸದಸ್ಯತ್ವಕ್ಕಾಗಿ ಒಂದೇ ಜಿಲ್ಲೆಯಿಂದ 400,000 ಅರ್ಜಿಗಳು ಬಂದಿದ್ದುವೆಂದ ಮೇಲೆ, ಈ ವಿಧಾನ ಕೂಡ ವಿಘ್ನೇಶ್ವರನನ್ನು ನಿರ್ಮಿಸಲು ತೊಡಗಿ ಕಗ್ಗಣಾಕಾರವನ್ನು ಕಡೆದಂತಾಯಿತು; ಕಾಂಗ್ರೆಸ್ ಸಂಸ್ಥೆಯಲ್ಲಿ ಯಥಾರ್ಥ ಕಾರ್ಯಭಾಗ ತೋರಿಬರಬೇಕೆಂಬ ಉದ್ದೇಶದಿಂದ ಮುಂದೆ ಬಂದ ಈ ನಿಯಮವನ್ನು ಹಿಡಿದುಕೊಳ್ಳಲು ಅಸಂಖ್ಯಾತ ವಂಚನಾ ಕೈಗಳು ಮುಂದಾದುದು ತೋರಿ ಬಂತು. ಆದ್ದರಿಂದ ಈ ಸಕ್ರಿಯ ಸದಸ್ಯ ವರ್ಗಕ್ಕೆ ಮತಾಧಿಕಾರವೆಂದಿಗೂ ಇಲ್ಲವೆಂಬ ತಿದ್ದುಪಡಿಯನ್ನು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಮುಂದಿಟ್ಟಿದ್ದರೂ ಆ ಕುರಿತು ಅ. ಭಾ. ಕಾಂ. ಸಮಿತಿ ಸಭೆಯಲ್ಲಿ ಭಿನ್ನಾಭಿಪ್ರಾಯಗಳೆದ್ದು ಕೊನೆಗೆ ಮುಂಬರುವ ಅಧಿವೇಶನದ ವರೆಗೆ ಈ ವರ್ಗದ ಸದಸ್ಯರಿಗೆ ಮತಾಧಿಕಾರವಿಲ್ಲವೆಂಬ ತೀರ್ಮಾನವಾಗಿದೆ. ಇಂತಹ ಶುದ್ಧೀಕರಣಗಳಿಂದ ಕಾಂಗ್ರೆಸಿನೊಳಗಿನ ಕೊಳಕಾಗಲೀ ಪೂರ್ಣ ಮಾಯವಾಗಬಹುದೆಂದು ನಿರೀಕ್ಷಿಸಲಾಗುವದಿಲ್ಲ. ಆದರೆ, ಕಾಂಗ್ರೆಸಿನ ಅಧಿಕಾರಸ್ಥಾನಗಳ ಸಂಪಾದನೆಗಾಗಿಯೇ ಅಂತಹ ಕೃತಕ ವೋಟುಗಳು ನಿರ್ಮಾಣಗೊಂಡಿದ್ದುವೆನ್ನುವಾಗ, ಕಾಂಗ್ರೆಸಿಗರೀಗ ಇಳಿದಿರುವ ಮಟ್ಟವಾವುದು, ಎಂಬುದನ್ನು ಸುಲಭದಲ್ಲಿ ಊಹಿಸಬಹುದು. ಈ ಸಂಬಂಧದ ನಿರ್ಣಯದ ಚರ್ಚೆಯ ವೇಳೆ ಪಂಡಿತ ನೆಹರುರವರು ಈ ಕೆಳಗಿನ ಮಾತುಗಳಿಂದ ಕಾಂಗ್ರೆಸಿಗರ ಕಣ್ಣನ್ನು ತೆರೆಯಿಸಲು ಮತ್ತೊಮ್ಮೆ ಪ್ರಯತ್ನಿಸಿದ್ದರು. "ಇಡೀ ಪ್ರಪಂಚವೀಗ ಬದಲಾಗಿದೆ; ಕಾಂಗ್ರೆಸ್ ಮಾತ್ರ ತನ್ನ ಹಳೇ ಠೇಂಕಾರವನ್ನೇ ಕಟ್ಟಿಕೊಂಡಿದ್ದರಾಗದು. ಹೊಸ ರಕ್ತದ ಅಗತ್ಯವಿದೆ; ಅದು ಹೊಸ ಚುನಾವಣೆಯ ಮೂಲಕವೇ ಒದಗಬೇಕು. ಯುವಕರು ಒಳಗೆ ಪ್ರವೇಶಿಸಲಾಗುವಂತೆ ಕಾಂಗ್ರೆಸ್ ಸಂಸ್ಥೆಯು ಬಾಗಿಲನ್ನು ತೆರೆದಿಡುವ ಆವಶ್ಯಕತೆಯಿದೆ. ಭಾರತದಲ್ಲಷ್ಟೇ ಅಲ್ಲ – ಅಖಿಲ ಏಷ್ಯಾದ ಮಾರ್ಪಟ್ಟ ಸ್ಥಿತಿಗತಿಗನುಗುಣವಾಗಿ ಕಾಂಗ್ರೆಸು ಮುಂದೊತ್ತಬೇಕಾಗಿದೆ. ಆಧುನಿಕ ಪ್ರಪಂಚದಲ್ಲಿ ಎಂಟು ವರುಷಗಳು ಐವತ್ತು ವರುಷಗಳಿಗೆ ಸಮಾನ; ಅದಿಷ್ಟೊಂದು ತೀವ್ರಗತಿಯಿಂದ ಬದಲಾಯಿಸುತ್ತಿದೆ. ಏಷ್ಯಾದಲ್ಲೀಗ ಹೊಸ ಸಾಮಾಜಿಕ ಶಕ್ತಿಗಳು ತಲೆಯೆತ್ತುತ್ತಿವೆ. ವಸ್ತುಸ್ಥಿತಿಗಳ ಕಡೆಗಿನ ವಿದ್ಯುತ್ ನೋಟವಿಲ್ಲದೆ ಹೋದರೆ ರಾಷ್ಟ್ರದ ಮಾತು ಹಾಗಿರಲಿ, ಕಾಂಗ್ರೆಸ್ ಸಂಸ್ಥೆಯನ್ನು ಕೂಡಾ ನಾವು ನಡೆಸಿಕೊಂಡು ಹೋಗಲಾರೆವು. ರಾಜಕೀಯ ಸಂಸ್ಥೆಯಾಗಿರುವ ಕಾಂಗ್ರೆಸ್ಸಿಗೆ ರಾಷ್ಟ್ರದ ರಾಜಕೀಯ ಆಗುಹೋಗುಗಳ ಹಿಡಿತವಿರತಕ್ಕದ್ದೆಂಬುದನ್ನು ಮರೆಯಬಾರದು. ಅಂತೆಯೇ ಮುಂಬರುವ ಸಾರ್ವತ್ರಿಕ ಚುನಾವಣೆಗಳ ಕಡೆಗೂ ಕಾಂಗ್ರೆಸಿಗರ ಕಣ್ಣಿರಬೇಕು. ಮುಂದಿನ ಚುನಾವಣೆಗಳ ಪರಿಣಾಮವೇನಾಗಬಹುದೆಂಬುವನ್ನೂ ಹೇಳಲಾರರು. ನಾನಾ ಕುರಿತು ಯಾವ ಚಿಂತೆಯನ್ನೂ ಕಟ್ಟಿಕೊಂಡಿಲ್ಲ. ಎಲ್ಲಾ ವಿಷಯಗಳೂ ಕಾಂಗ್ರೆಸು ಸಂದರ್ಭವನ್ನು ಹಿಡಿಯುವುದನ್ನೇ ಅವಲಂಬಿಸಿವೆ. ಚುನಾವಣಾ ವೇಳೆ ವಿವಿಧ ತಾತ್ವಿಕ ವಿಜ್ಞಾಪನೆಗಳು ಜನತೆಯ ಮುಂದೆ ಬರಲಿವೆ; ಭಿನ್ನ ಭಿನ್ನ ಯೋಜನಾ ಮುಖಗಳು ತಮ್ಮಾಟವಾಡಲಿವೆ. ಆದ್ದರಿಂದ ಜನತೆಯ ಮನಸ್ಸನ್ನರಿತುಕೊಳ್ಳುವುದು ಮತ್ತು ಜನಮತ ಸಂಬಂಧವಿಟ್ಟುಕೊಳ್ಳುವುದು ಕಾಂಗ್ರೆಸಿಗರ ಕರ್ತವ್ಯವಿದೆ. ಕೆಲವೆಡೆಗಳಿಂದ ನನಗೆ ಬಂದಿರುವ ವರದಿ ಪ್ರಕಾರ ಆ ಭಾಗದ ಕಮ್ಯೂನಿಸ್ಟ್ ಕೆಲಸಗಾರರು ವಾರಕ್ಕೊಂದು ಬಾರಿ ಸಭೆ ಸೇರುತ್ತಿದ್ದಾರಾದರೆ, ಸಮಾಜವಾದಿಗಳು ಹದಿನೈದು ದಿನಕ್ಕೊಮ್ಮೆ ಕೂಡುತಿದ್ದಾರೆ. ಅಂತೆಯೇ ಇತರ ಪಕ್ಷೀಯರೂ ಅನುಕ್ರಮವಾಗಿ ಸಭೆ ಸೇರುತಿದ್ದಾರಾದರೂ ಕಾಂಗ್ರೆಸಿಗರು ಕಳೆದ ಒಂದೂವರೆ ವರುಷಗಳಿಂದ ಒಮ್ಮೆಯೂ ಸೇರಿದ್ದಿಲ್ಲವಂತೆ. ಇಂತಹ ದೂರುಗಳು ಕಳೆದ ಬಾರಿಯ ಸಭೆಯ ಮುಂದೆಯೂ ಬಂದಿದ್ದುವು. ತಾವು ಕೆಲಸ ಮಾಡಿದ್ದೇವೆಂದು ಕಾಂಗ್ರೆಸಿಗರು ಸಾರುತಿದ್ದರೆಂದರೂ, ಯಥಾರ್ಥವಾಗಿ ಕೆಲಸವೇನೂ ನಡೆದಿಲ್ಲ. ಅವರ ಹೆಚ್ಚಿನ ಸಮಯವು ಸಣ್ಣ ಪುಟ್ಟ ಕಿರುಕುಳಗಳಲ್ಲಿಯೋ ಪಂಗಡವಾರು ರಾಜಕಾರಣಗಳಲ್ಲಿಯೋ ವ್ಯಯವಾಗುತ್ತಿದೆ. ಕಾಂಗ್ರೆಸು ಪ್ರಾಮುಖ್ಯ ಸಚೇತನವುಳ್ಳ ಸಂಸ್ಥೆಯಾದುದು ಇಂತಹ ವಿಧಾನಗಳಿಂದಲ್ಲ. ಇವು ಕಾಂಗ್ರೆಸ್ ಸಂಸ್ಥೆಯ ಬೇರನ್ನೇ ಒಣಗಿಸುತ್ತಿವೆ. ಕಾಂಗ್ರೆಸಿಗರೀಗ ಒಂದು ಸ್ತಬ್ಧ ಮನೋವೃತ್ತಿಯನ್ನು ಬೆಳೆಸಿಕೊಳ್ಳುತ್ತಿದ್ದಾರೆ. ಆದ್ದರಿಂದ ಕಾಂಗ್ರೆಸ್ ಚುನಾವಣೆಗಳನ್ನು ನಡೆಸಲು ಇನ್ನು ತಡಮಾಡಬಾರದು. ಎರಡು ವಿಷಯಗಳು ಅತ್ಯಗತ್ಯವೆಂದು ನನಗನ್ನಿಸಿವೆ. ಅವೆಂದರೆ ಬರುವ ಜೂನಿನೊಳಗೆ ಕಾಂಗ್ರೆಸ್ ಚುನಾವಣೆಗಳನ್ನು ನಡೆಸುವುದು. ಮತ್ತಾ ಮೇಲಿನ ಒಂದು ವರುಷದೊಳಗೆ ಸಾರ್ವತ್ರಿಕ ಚುನಾವಣೆಗಳನ್ನು ನಡೆಸುವುದು".

ಮೇಲಿನ ಮಾತುಗಳಲ್ಲಿ ಕಾಂಗ್ರೆಸಿಗರ ಇಂದಿನ ಮನೋವೃತ್ತಿಯ ಚಿತ್ರ ಮೂಡಿ ತೋರಿದೆ; ಆಧುನಿಕ ಜಗತ್ತು, ಕಾಲ ಮತ್ತು ಭಾವೀ ಚುನಾವಣೆಗಳಿಗೆ ಹೇಳಿಸದ ದೌರ್ಬಲ್ಯವು ಕಾಂಗ್ರೆಸಿಗರಲ್ಲಿದೆ ಎಂಬ ಎಚ್ಚರಿಕೆ ಬಂದಿದೆ. ಭಾರತದ ಯಾವುದೇ ಕಡೆಯ ಕಾಂಗ್ರೆಸಿಗರ ಈ ದಿನದ ಗುಣ ನಡತೆಗಳ ಪರಿಚಯವುಳ್ಳ ಯಾರಿಗಾದರೂ ನೆಹರುಗಳ ಈ ವಿಮರ್ಶೆಯಲ್ಲಿರುವ ಚಿಕಿತ್ಸಕ ಗುಣಗಳು ಮನ ಮುಟ್ಟದಿರಲಾರವು. ಕಾಂಗ್ರೆಸಿನ ಸ್ಥಿತಿ ಇಂದು ಹಾಗಾಗಿದೆ. ಇದನ್ನರಿತೇ ನವದೆಹಲಿಯ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸಭೆಯು, ಜನಜೀವನ ಮಟ್ಟವನ್ನು ಮೇಲೇರಿಸುವ ಅಲ್ಪಾವಧಿ ಹಾಗೂ ದೀರ್ಘಾವಧಿ ಯೋಜನೆಗಳನ್ನು ತಯಾರಿಸುವರೆ ಸಮಿತಿಯೊಂದನ್ನು ನೇಮಿಸಿದೆ. ಉತ್ತರ ಪ್ರದೇಶ (ಸಂಯುಕ್ತ ಪ್ರಾಂತ್ಯ)ದ ಪ್ರಧಾನ ಮಂತ್ರಿ ಪಂಡಿತ ಗೋವಿಂದ ವಲ್ಲಭ ಪಂತರು ಅಧ್ಯಕ್ಷರಾಗಿ, ಭಾರತ ಸರಕಾರದ ಕೂಲಿಗಾರ ಮಂತ್ರಿ ಶ್ರೀ ಜಗಜ್ಜೀವನ ರಾಮ್, ಬೊಂಬಾಯಿಯ ಕೂಲಿಗಾರ ಮಂತ್ರಿ ಶ್ರೀ ಗುಲ್ಜಾರಿಲಾಲ್ ನಂದಾ, ಹಿಂದೀ ರಾಷ್ಟ್ರೀಯ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಕಾರ್ಯದರ್ಶಿ ಶ್ರೀ ಖಂಡೂಭಾಯಿ ದೇಸಾಯಿ, ಪ್ರೊಫೆಸರ್ ಎನ್. ಜಿ. ರಂಗ ಮತ್ತು ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಶಂಕರರಾವ್ ದೇವೊ ಸದಸರಾಗಿ ಇರುವ ಐದು ಮಂದಿಯ ಸಮಿತಿಯಿದು. ಈ ಸಮಿತಿಯು ಮುಂದಿನ ಹನ್ನೆರಡು ತಿಂಗಳುಗಳ ಕಾರ್ಯಕ್ರಮಗಳಾಗಿ ಕೈಕೊಳ್ಳುವಂತೆ ಜನತೆಯ ದೈನಂದಿನ ಕಷ್ಟ, ತೊಡಕು, ಅಭಾವಗಳ ನಿವಾರಣೆಯ ಅಲ್ಪಾವಧಿ ಯೋಜನೆಗಳನ್ನೂ, ಪ್ರಾಯಶಃ ಸರ್ವೋದಯ ಸೂತ್ರಗಳಿಗನುಸಾರವಾಗಿ ರಾಜಕೀಯ, ಸಾಮಾಜಿಕ, ಆರ್ಥಿಕ ವಿಧಾನಗಳಿಗೆ ಲಗಾವಾಗುವ ಮತ್ತು ಮುಂದಿನ ಚುನಾವಣಾ ಘೋಷಣೆಯಲ್ಲಿ ಅಡಕವಾಗುವಂತಹ ದೀರ್ಘಾವಧಿ ಕಾರ್ಯಕ್ರಮಗಳನ್ನೂ ಒಂದು ತಿಂಗಳೊಳಗೆ ತಯಾರಿಸಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಗೊಪ್ಪಿಸಬೇಕೆಂದಾಗಿದೆ. ಕಾಂಗ್ರೆಸ್ ಇಂತಹ ನಿಶ್ಚಯಾತ್ಮಕ ಹೆಜ್ಜೆಯಿಡಲು ಮುಂದಾದುದು ಸಮಾಧಾನದ ವಿಷಯವೆಂದು ಬೇರೆ ಹೇಳಬೇಕಾಗಿಲ್ಲ. ಭಾವೀ ಚುನಾವಣೆಯ ಕಡೆಗೆ ಒಂದು ದೃಷ್ಟಿಯನ್ನಿಟ್ಟೇ ಜನತಾ ಸಂಪರ್ಕದ ಕಡೆಗೆ ಈ ದೃಷ್ಟಿಯನ್ನು ಬೀರಲಾಗಿದೆ ಎಂಬುದು ನಿಜವಾದರೂ, ಒಂದು ಸತ್ಪ್ರಯತ್ನವು ಎಂದೂ ಆಗದಿರುವುದಕ್ಕಿಂತ ಯಾವ ಕಾರಣಕ್ಕಾಗಿಯಾದರೂ ಆಗುವುದು ವಿಹಿತ. ಕೊನೆಯ ಪಕ್ಷ ಬರುವ ಚುನಾವಣೆಯೊಂದರಲ್ಲಾದರೂ ಕಾಂಗ್ರೆಸ್ಸೇ ಗೆಲ್ಲಬಹುದೆಂಬ ನಂಬಿಕೆಯು ಸರ್ವಸಾಮಾನ್ಯವಾಗಿದೆ; ಸಕಾರಣವಿದ್ದಿದೆ. ಆದರೆ ಕಾಂಗ್ರೆಸ್ ಸರಕಾರಗಳ ಹಾಗೂ ಕಾಂಗ್ರೆಸ್ ಕಾರ್ಯಕರ್ತರ ವರ್ತನೆಗಳ ಕಡೆಗೆ ಜನತಾ ಅತೃಪ್ತಿಯು ನಿಧಾನವಾಗಿ ಬೆಳೆಯುತ್ತಾ ಬರುತ್ತಿದೆ, ಎಂಬುದನ್ನು ಮರೆಯಬಾರದು. ಈ ಅತೃಪ್ತಿಯು ಬರುವ ಚುನಾವಣೆಯಲ್ಲಿ ಕಾಂಗ್ರೆಸಿಗೆ ಪರಾಭವನ್ನೊಡ್ಡುವಷ್ಟು ಬೆಳೆಯಲಾರದೆ ಹೋದರೂ, ಈ ವರೆಗಿನಂತಹ ಪ್ರಚಂಡ ಬಹುಮತವು ಮುಂದಿನ ಸರದಿಯಲ್ಲೂ ಕಾಂಗ್ರೆಸಿಗೆ ದೊರಕೀತೆಂಬ ಭರವಸೆ ಮೂಡುವುದಿಲ್ಲ. ಹೀಗೆ ಕುಗ್ಗುವ ಪರಿಮಾಣಾನುಸಾರವಾಗಿ ಕಾಂಗ್ರೆಸಿಗರ ಠೇಂಕಾರವೂ ಕುಗ್ಗಲೇಬೇಕಾಗುತ್ತದೆ. ತಾಗಿ ಬಾಗುವುದಕ್ಕಿಂತ ಮುಂದಾಗಿ ಬಾಗುವುದು ಲೇಸು. ಕೇವಲ ಚುನಾವಣೆಗಾಗಿಯೇ ಆದರೂ ಕಾಂಗ್ರೆಸಿಗರೆಲ್ಲರೂ ಸಕಾಲದಲ್ಲಿ–ಈಗಲೇ–ಕಣ್ತೆರೆದು ಸಾರ್ವಜನಿಕರ ಸುಖದುಃಖಗಳನ್ನು ಮನಸ್ಸಿಗೆ ಹಚ್ಚಿಕೊಂಡು, ಯಥಾರ್ಥ ಜನಸೇವಾ ಕಾರ್ಯಗಳಲ್ಲಿ ನಿರತರಾಗುವರೆಂದು ನಿರೀಕ್ಷಿಸಬೇಕಾಗಿದೆ. ಅಂತಹ ಯೋಗ್ಯ ಕಾರ್ಯಕ್ರಮಗಳು ಪಂಚಸದಸ್ಯ ಸಮಿತಿಯಿಂದ ತಯಾರಾಗಿ, ಇವುಗಳ ಪಾಲನೆಯ ಕಠಿಣ ಕರ್ತವ್ಯ ಮತ್ತು ಪ್ರೇರಣೆಗಳೊಂದಿಗೆ ಕಾಂಗ್ರೆಸ್ ಸಂಸ್ಥೆಯು ತನ್ನ ಕಾರ್ಯಕರ್ತರ ಮೂಲಕ ಇವುಗಳನ್ನು ರಂಗಕ್ಕಿಳಿಸುವುದೆಂದು ನಿರೀಕ್ಷಿಸುತ್ತೇವೆ.

(೧ನೇ ಪುಟದಿಂದ ಮುಂದುವರಿದುದು)

ಕೊಡುತ್ತಿದೆಯಾದ್ದರಿಂದ ಇನ್ನು ಯಾರೂ ಏನೊಂದೂ ಭಯಪಡುವ ಅಗತ್ಯವಿಲ್ಲವೆಂದೂ ಮೌಲಾನಾ ಅಜಾದರು ಸಾರಿದ್ದಾರೆ. ಕಲ್ಕತ್ತೆಯ ಸಾರ್ವಜನಿಕರು ಈ ಗೊಂದಲದಲ್ಲಿ ಭಾಗವಹಿಸದೆ, ಕೆಲವು ಸಂದರ್ಭಗಳಲ್ಲಿ ಪುಂಡರನ್ನು ದಂಡಿಸಿ ಅಲ್ಪಸಂಖ್ಯಾಕ ಮುಸ್ಲಿಮರಿಗೆ ನೆರವಾದುದಿದೆಯೆಂದೂ ಮೌಲಾನಾ ಅಜಾದರು ಸ್ಪಷ್ಟಪಡಿಸಿದ್ದಾರೆ. ನಿರಾಶ್ರಿತರ ಸಂಖ್ಯೆ ದೊಡ್ಡದಿದ್ದು, ಸೊತ್ತು ನಾಶಗಳು ಬಹಳ ನಡೆದಿವೆಯಾದರೂ ಪ್ರಾಣಹಾನಿಯಾದುದು ತುಲನಾತ್ಮಕವಾಗಿ ಕಡಿಮೆಯಾದ್ದರಿಂದ, ಬೆದರಿಕೆ ಬೀರಿ ಜನರನ್ನು ಅವರ ಮನೆಯಿಂದೋಡಿಸುವದೇ ಪುಂಡರ ಉದ್ದೇಶವಾಗಿತ್ತೆಂದು ಮೌಲಾನರೆಂದಿದ್ದಾರೆ. ನಿರಾಶ್ರಿತ ಶಿಬಿರಗಳನ್ನು ಸಂದರ್ಶಿಸಿ ಎಲ್ಲರಿಗೂ ಭರವಸೆ ಹೇಳಿದ್ದಾರೆ.

ಇನ್ನೊಂದು ನಿಷ್ಠೆಯಿಂದ ಮತ್ತು ನಿಷ್ಠುರ ರೀತಿಯಿಂದ ಭಾರತದೊಳಗಡೆ ಶಾಂತಿಪಾಲನೆ ಹಾಗೂ ಅಲ್ಪಸಂಖ್ಯಾಕರ ರಕ್ಷಣಾ ವ್ಯವಸ್ಥೆ ನಡೆದಿರುವಾಗ, ಪಾಕಿಸ್ತಾನದಿಂದ ಈಗಲೂ ಹೃದ್ರಾವಕ ವಾರ್ತೆಗಳು ಬರುತ್ತಲೇ ಇವೆ. ಪಾಕಿಸ್ತಾನ್ ಬಂಗಾಳದ ಚಿತ್ತಗಾಂಗ್, ನವಖಾಲಿ, ಬ್ರಹ್ಮನ್‌ಬಾರಿಯಾ, ಡಾಕ್ಕಾ ಮತ್ತಿತರ ಕ್ಷೇತ್ರಗಳಿಂದ ಹಿಂದೂ ನಿರಾಶ್ರಿತರು ಪ್ರತಿದಿನವೂ ಹಿಂಡುಹಿಂಡಾಗಿ ಭಾರತದ ಬಂಗಾಳಕ್ಕೋಡಿ ಬರುತ್ತಿದ್ದಾರೆ; ಅಲ್ಲಿ ಹಿಂದುಗಳ ಮೇಲಾಗಿರುವ ಮತ್ತು ಆಗುತ್ತಿರುವ ಅಮಾನುಷ ಅತ್ಯಾಚಾರಗಳ ಹೃದ್ರಾವಕ ವಾರ್ತೆಗಳನ್ನು ಹರಡುತಿದ್ದಾರೆ. ಪೂರ್ವ ಬಂಗಾಳದಿಂದ ಬರುವ ಹಿಂದೂ ನಿರಾಶ್ರಿತರನ್ನು ಕಾಯುತ್ತಾ ಕಲ್ಕತ್ತೆಯ ವಿಮಾನ ಮತ್ತು ರೈಲ್ವೇ ನಿಲ್ದಾಣಗಳಲ್ಲಿ ಕಾತರಾವೇಗಪೂರ್ಣ ಜನತೆ ಹಿಂಡುಗಟ್ಟಿ ನಿಂತಿರುವ ದೃಶ್ಯ ಅಲ್ಲಿ ಪ್ರತಿದಿನ ಕಂಡು ಬರುತ್ತಿದೆ. ಪಾಕಿಸ್ತಾನದಿಂದ ಬರುವ ವಿಮಾನಗಳಲ್ಲೆಲ್ಲಾ ನಿರಾಶ್ರಿತರೇ ತುಂಬಿ ಬರುತ್ತಿರುವಾಗ ರೈಲುಗಳೆಲ್ಲವೂ ಬಹುತೇಕವಾಗಿ ಖಾಲಿಯಾಗಿಯೇ ಬರುತ್ತಿವೆ. ಹಿಂದೂ ನಿರಾಶ್ರಿತರನ್ನು ತುಂಬಿಕೊಂಡು ಭಾರತಕ್ಕಾಗಿ ಹೊರಟ ರೈಲು ಬಂಡಿಗಳ ಮೇಲೆ ರಸ್ತೇ ಬದಿ ಸ್ಟೇಶನುಗಳಲ್ಲಿ ಧಾಳಿ ನಡೆದಿರುವುದೇ ಇದಕ್ಕೆ ಕಾರಣವೆಂದು ನಂಬಲಾಗಿದೆ. ಪತ್ರಿಕಾ ವಾರ್ತೆಗಳಿದ್ದರೂ ಪ್ರತ್ಯಕ್ಷ ಪೂರ್ವ ಬಂಗಾಳದ ಸರಕಾರವು ಪಶ್ಚಿಮ ಬಂಗಾಳದ ಸರಕಾರಕ್ಕೆ ಈ ಕುರಿತು ಯಾವ ಸುದ್ದಿಯನ್ನೂ ಕಳುಹಿಸುತ್ತಿಲ್ಲ. ಇವೆರಡು ಸರಕಾರಗಳ ಮುಖ್ಯ ಕಾರ್ಯದರ್ಶಿಗಳು ಇತ್ತೀಚೆಗೆ ಮಾಡಿಕೊಂಡ ಒಂದು ಒಪ್ಪಂದಾನುಸಾರ ಎರಡೂ ಪ್ರಾಂತ್ಯಗಳಲ್ಲಿ ಜಾತೀಯ ದೊಂಬಿಗಳ ಸರಕಾರೀ ಸುದ್ದಿಗಳನ್ನು ಹೊರತು ಬೇರೆ ಸುದ್ದಿಗಳನ್ನು ಪ್ರಕಟಿಸಬಾರದೆಂದೂ, ಆದರೆ ಒಂದು ಸರಕಾರವು ತನ್ನಲ್ಲಿಯ ಘಟನೆಯ ಪೂರ್ಣ ವಾರ್ತೆಯನ್ನು ಮತ್ತೊಂದು ಸರಕಾರಕ್ಕೆ ಕೊಡಬೇಕೆಂದೂ ಇದೆ. ಆದರೆ ಪೂರ್ವ ಪಾಕಿಸ್ತಾನ ಸರಕಾರ ತನ್ನ ಪದ್ಧತಿ ಪ್ರಕಾರ ಈ ಮಟ್ಟಿಗೂ ಶರ್ತಭಂಗ ಮಾಡಿದೆ. ಅತ್ತ ಅಸ್ಸಾಮ್ ಪ್ರಾಂತ್ಯದೊಳಗೆ ಯಾವುದೋ ಗುಪ್ತ ರಾಜಕೀಯೋದ್ದೇಶ ಸಾಧನೆಗಾಗಿ ಪಾಕಿಸ್ತಾನದ ಮುಸ್ಲಿಮರು ಸಹಸ್ರ ಸಂಖ್ಯೆಯಲ್ಲಿ ನುಗ್ಗಿ ಬಂದು ಬೆರೆತುಕೊಂಡಿದ್ದಾರೆ. ಪೂರ್ವ ಬಂಗಾಳದಿಂದ ಎಲ್ಲಾ ಹಿಂದುಗಳನ್ನೂ ಹೊರಗಟ್ಟಿ ಬಿಡಬೇಕೆಂದು ಸಂಘಟನಾಪೂರ್ವಕ ನಡೆದಿರುವ ಅತ್ಯಾಚಾರ ಮತ್ತು ಅಸ್ಸಾಮಿನೊಳಗೆ ಗುಪ್ತೋದ್ದೇಶದಿಂದ ಪರಕೀಯ ಮುಸ್ಲಿಮರ ಪ್ರವೇಶವಾಗಿರುವ ವಿಚಾರಗಳನ್ನು ತಾ. 19ರಲ್ಲಿ ಗುಪ್ತ ಸಭೆ ಸೇರಿ ಅ. ಭಾ. ಕಾಂಗ್ರೆಸ್ ಸಮಿತಿ ಪರ್ಯಾಲೋಚಿಸಿದೆ. "ಪೂರ್ವಬಂಗಾಳದ ದುರಂತದ ಕುರಿತು ಸರಕಾರವೇನೂ ನಿದ್ರೆಯಿಂದಿಲ್ಲ; ಪರಿಸ್ಥಿತಿಯು ಅದರ ಕೈಯೊಳ ಸೇರಿದೆ. ಜನರೆಷ್ಟಕ್ಕೂ ಪ್ರತೀಕಾರಕ್ಕೆಳಸದೆ ಆ ಸಂಬಂಧದ ಕಾರ್ಯವನ್ನು ಸಂಪೂರ್ಣವಾಗಿ ಸರಕಾರದ ಪಾಲಿಗೇನೇ ಬಿಡಬೇಕು"ಎಂದು ಪಂಡಿತ ನೆಹರುಗಳು ಆ ಸಭೆಯಲ್ಲಿ ಕೇಳಿಕೊಂಡರು.

## ಮದ್ರಾಸಿನ ಸ್ಥಿತಿ

ಈ ವರುಷ ಭಾರತದ ಎಲ್ಲಾ ಸಂಸ್ಥಾನಗಳಿಗಿಂತ ಹೆಚ್ಚಿನ ಆಹಾರಾಭಾವಕ್ಕೀಡಾಗಿರುವ ಭಾಗವೆಂದರೆ ಮದ್ರಾಸ್ ಸಂಸ್ಥಾನ. ಆದ್ದರಿಂದ ಮದ್ರಾಸ್ ಸರಕಾರದ ವಿಶೇಷ ಬೇಡಿಕೆಗನುಸಾರವಾಗಿ ಈ ಪ್ರಾಂತ್ಯಕ್ಕೆ ಸಲಾಯಿಸುವ 300,000 ಟನ್ ಧಾನ್ಯಗಳ ಪಾಲನ್ನು ಹೆಚ್ಚಿಸುವ ಆಲೋಚನೆಯನ್ನು ಕೇಂದ್ರ ಸರಕಾರ ಮಾಡುತ್ತಿದೆ. ಈ ಕುರಿತು ಪಾರ್ಲಿಮೆಂಟನಲ್ಲಿ ವಿವರ ಕೊಡುತ್ತಾ ಭಾರತ ಸರಕಾರದ ಆಹಾರ ಮಂತ್ರಿ ಶ್ರೀ. ಜೈರಾಮದಾಸ ದೌಲತರಂದರು: "1948ರಲ್ಲಿ ಮಾಡಿದಂತೆಯೇ ಈ ಬಾರಿಯೂ ಮದ್ರಾಸ್ ಸಂಸ್ಥಾನದ ಕಷ್ಟಗಳನ್ನು ಕಡೆಹಾಯುತ್ತೇವೆಂಬ ನಿರೀಕ್ಷೆ ನಮಗಿದೆ. ಪ್ರಕೃತ ಮದ್ರಾಸಿನಲ್ಲಿ ಆಹಾರ ಬರಗಾಲದ ಪ್ರಶ್ನೆಯಿಲ್ಲ. ಹೇರಳ ಸಂಗ್ರಹಗಳಿವೆ. ಮದ್ರಾಸಿಗೆ 100,000 ಟನ್ ಧಾನ್ಯಗಳನ್ನು ಸಾಗಿಸಿಕೊಡುವ ವ್ಯವಸ್ಥೆಗಳಾಗುತ್ತಿವೆ. 1951 ರಿಂದ ಭಾರತವು ಆಹಾರ ಸ್ವಾವಲಂಬಿಯಾಗುವ ಸ್ಪಷ್ಟ ಭರವಸೆಯಿದೆ. ಮುಂದಿನ ವರುಷದ ವಿವಿಧ ರೀತಿಯ ಅಧಿಕಾಹಾರೋತ್ಪನ್ನ ಯೋಜನೆಗಳಿಗಾಗಿ 15 ಕೋಟಿ ರೂ.ಗಳಷ್ಟನ್ನು ಮೀಸಲಿಡಲಾಗಿದೆ"

ಮದ್ರಾಸಿನ ಕೆಲವು ಮಂತ್ರಿಗಳ ಮೇಲೆ ಶ್ರೀ. ಟಿ. ಪ್ರಕಾಶಮರೇ ಮೊದಲಾದವರಿಂದಾಗಿದ್ದ ಆರೋಪಗಳ ತನಿಖೆಗಾಗಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ನೇಮಿಸಿದ್ದ ಬಾಬು ರಾಜೇಂದ್ರ ಪ್ರಸಾದ, ಪಂಡಿತ ಜವಾಹಿರಲಾಲ ನೆಹರು, ಸರ್ದಾರ್ ವಲ್ಲಭಾಯಿಗಳ ಸಮಿತಿಯು ಆರೋಪಗಳ ಸಂಬಂಧ, ವರದಿಯನ್ನು ಮದ್ರಾಸ್ ಪ್ರಧಾನಮಂತ್ರಿಗಳಿಂದಪಡೆಕೊಂಡು ಪರಿಶೀಲಿಸಿ, ಈ ವಿಷಯವನ್ನು ಇಲ್ಲಿಗೇ ಮುಕ್ತಾಯಗೊಳಿಸಬೇಕೆಂದು ಶಿಫಾರಸು ಮಾಡಿದೆ. ಎಲ್ಲವುಗಳ ಕೂಲಂಕುಶ ಪರಿಶೀಲನೆಯಿಂದ ಈ ಕುರಿತು ಮುಂದಿನ ಯಾವ ವಿಚಾರಣೆಯ ಅಗತ್ಯವೂ ಕಾಣುವದಿಲ್ಲವೆಂದು ಸಮಿತಿಯು ತೀರ್ಮಾನ ಪರ್ಮಿಟ್‌ಗಳನ್ನು ಕೊಡುವುದೇ ಮೊದಲಾದ ವಿಷಯಗಳಲ್ಲಿ ಮಂತ್ರಿಗಳಿಗೆ ಕೆಲವು ಸೂಚನೆ ಮತ್ತು ಸಲಹೆಗಳನ್ನು ಸಮಿತಿ ಸದಸ್ಯರಿತ್ತಿದ್ದಾರೆ. ದೀರ್ಘಾವಧಿಯಿಂದ ನಾರುತ್ತಿದ್ದ ಒಂದು ಪ್ರಕರಣವು ಇಲ್ಲಿಗೆ ಮುಗಿದಂತಾಯಿತು.

# ಶರಚ್ಚಂದ್ರ ಬೋಸ್ ವಿಧಿವಶವಾದರು.



ನೇತಾಜೀ ಸುಭಾಸರ ಅಣ್ಣ, ಸುಪ್ರಸಿದ್ಧ ದೇಶಭಕ್ತ ಶ್ರೀ ಶರತ್‌ಚಂದ್ರ ಬೋಸರು ತಾ. 20ನೇ ಸೋಮವಾರ ರಾತ್ರಿ ಸುಮಾರು 11½ ತಾಸಿಗೆ ಕಲ್ಕತ್ತೆಯ ತನ್ನ ಮನೆಯಲ್ಲಿ ಹೃದಯಸ್ತಂಭನಗೊಂಡು ಇಹಯಾತ್ರೆ ಮುಗಿಸಿದುದು ವಿಷಾದಕರ. ಬ್ಯಾರಿಸ್ಟರ್ ಆಗಿದ್ದರೂ ರಾಷ್ಟ್ರದ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿ ಜೈಲುವಾಸ, ಕಷ್ಟನಷ್ಟಗಳನ್ನನುಭವಿಸಿ, ಕೊನೆಯ ವರೆಗೆ ಅವಿಶ್ರಾಂತವಾಗಿ ದುಡಿಯುತ್ತಾ ಬಂದಿದ್ದ ಮೇಲ್ಪಂಕ್ತಿಯ ನಾಯಕ ಶ್ರೀ ಶರಚ್ಚಂದ್ರ ಬೋಸರು ಶರತ್‌ಚಂದ್ರರ ಅದಮ್ಯ ಸ್ಫೂರ್ತಿ, ಎದೆಗಾರಿಕೆ, ಮುಂದಾಳುತನ, ಇವು ಬಂಗಾಳದಲ್ಲಿ ಮಾತ್ರವಲ್ಲ, ಅಖಿಲ ಭಾರತದಲ್ಲೇ ವಿಶೇಷ ಗೌರವಾದರಗಳನ್ನು ಗಳಿಸಿದ್ದುವು. ಕಾಂಗ್ರೆಸ್ ಅಧಿನಾಯಕರೊಂದಿಗೆ ಆಗಾಗ ತೀಕ್ಷ್ಣ ಭಿನ್ನಾಭಿಪ್ರಾಯ ಪಡುವ ಬೋಸ್ ಸಹೋದರರ ಪ್ರವೃತ್ತ್ಯನುಸಾರವಾಗಿ ಶ್ರೀ ಶರತ್‌ಚಂದ್ರ ಬೋಸರು ಕೊನೆಯ ಹಂತದಲ್ಲಿ ಕಾಂಗ್ರೆಸ್ ನಾಯಕತ್ವ ಮತ್ತು ಕಾಂಗ್ರೆಸ್ ಸರಕಾರಗಳ ಕಠಿಣ ಟೀಕಾಕಾರರಾಗಿದ್ದರೂ ಇವರ ತ್ಯಾಗ, ಸೇವೆ ಮತ್ತು ದೇಶಸೇವಾ ಸ್ಫೂರ್ತಿಯ ಕುರಿತು ಭಿನ್ನಾಭಿಪ್ರಾಯವಿಲ್ಲ. ಅವರು ಇತ್ತೀಚೆಗೆ "ಸೋಶಿಯಲಿಸ್ಟ್ ರಿಪಬ್ಲಿಕ್" ಹೊಸ ಪಕ್ಷವನ್ನು ಸ್ಥಾಪಿಸಿಕೊಂಡಿದ್ದರು; ಈ ಪಕ್ಷದ ವತಿಯಿಂದ ಕಳೆದ ಬಾರಿಯ ಕಲ್ಕತ್ತಾ ಉಪಚುನಾವಣೆಯಲ್ಲಿ ಕಾಂಗ್ರೆಸ್ ಉಮೇದ್ವಾರಿಯನ್ನು ಸ್ಪರ್ಧಿಸಿ, ಪ್ರಚಂಡ ಪರಾಭವವನ್ನೊಡ್ಡಿ ಅಖಿಲ ರಾಷ್ಟ್ರದ ಲಕ್ಷ್ಯವನ್ನು ನವೀನ ರೀತಿಯಿಂದ ಆಕರ್ಷಿಸಿದ್ದರು. ಬಂಗಾಳಿಗಳ ಹೃದಯಾಧಿಕಾರಿಯಾಗಿದ್ದ ಶ್ರೀ ಶರಚ್ಚಂದ್ರರ ಶವಸಂಸ್ಕಾರವು ತಾ. 21ರಲ್ಲಿ ಕಲ್ಕತ್ತೆಯಲ್ಲಿ ನಡೆದಾಗ ಶವ ಮೆರವಣಿಗೆಗೆ ಸುಮಾರು 3 ಲಕ್ಷ ಮಂದಿ ಸೇರಿದ್ದರು. ವಾರ್ತೆ ಕೇಳಿದೊಡನೆ ಪಾರ್ಲಿಮೆಂಟಿನಲ್ಲಿ ಮೌನ ಪ್ರಾರ್ಥನೆ, ದುಃಖಸೂಚಕ ನಿರ್ಣಯಗಳಾದುವು. ಆ ಸಂದರ್ಭದಲ್ಲಿ ಪ್ರಧಾನಿ ನೆ[illegible] ಮತ್ತು ಪಾರ್ಲಿಮೆಂಟ್ ಅಧ್ಯಕ್ಷರು ತಮ್ಮನ್ನಗಲಿದ ಈ ದೇಶಭಕ್ತ ಬಂಧುವಿನ ಗುಣಕಥನ ಮಾಡಿದರು. ಎಲ್ಲಾ ಧುರೀಣರಿಂದಲೂ ಎಲ್ಲೆಲ್ಲೂ ದುಃಖಸೂಚನೆಗಳಾಗುತ್ತಿವೆ. ದೇಶಭಕ್ತ ಮಣಿಮಾಲೆಯಿಂದ ಮತ್ತೊಂದು ಉಜ್ವಲ ರತ್ನ ಉದುರಿಹೋಯಿತು!

## ಬಸ್ ಕೆಲಸಗಾರರ ಮುಷ್ಕರ

ಸರಕಾರೀ ನೇಮಿತ ಜಡ್ಜರ 'ಎವಾರ್ಡ್'ಗನುಗುಣವಾದ ನ್ಯಾಯ ಕೂಡಾ ತಮಗೆ ದೊರೆಯದ ಕಾರಣಕ್ಕಾಗಿ ಪೂರ್ವ ನಿಶ್ಚಯದಂತೆ ಇದೇ ತಾ 22ರಲ್ಲಿ ದಕ್ಷಿಣ ಕನ್ನಡದ ಬಸ್ ಕೆಲಸಗಾರರ ಮುಷ್ಕರನಾರಂಭಿಸಿದೆ. ಉಡುಪಿಯಲ್ಲಿ ಆ ದಿನ ಅತಿ ಮುಂಜಾನೆಯಿಂದಲೇ ಸಂಪುಗಾರ ಕೆಲಸಗಾರರು ಶಾಂತ ಪಹರೆ ಆರಂಭಿಸಿದ್ದರು. ಪ್ರಥಮತಃ ಗಂಭೀರವಾಗಿದ್ದ ವಾತಾವರಣವು ನಾಲ್ಕೈದು ಮಂದಿ ಡ್ರೈವರರು ಅನುಕ್ರಮವಾಗಿ ಕೆಲಸಕ್ಕಾಗಿಗಳಾದ ದೆಸೆಯಿಂದ ಅಸ್ತವ್ಯಸ್ತವಾಗಿ ಉಡುಪಿಯ ಮುಷ್ಕರ ಪ್ರಭಾವ ಆದಿಭಾಗದಲ್ಲೇ ಕುಗ್ಗಿತೆನ್ನಬಹುದು, ಮಂಗಳೂರು ಮತ್ತಿತರ ಕಡೆಗಳಿಂದ ಸರಿಯಾದ ವಾರ್ತೆ ಈ ತನಕ ಬಂದಿಲ್ಲವಾದರೂ ಎಲ್ಲೆಲ್ಲೂ ಸಂಪು ನಡೆದಂತಿದೆ. ಬೊಂಬಾಯಿ ಕಾರ್ಪೊರೇಶನಿನ ಸದಸ್ಯ ಹಾಗೂ ಸಮತಾವಾದಿ ಕಾರ್ಯಕರ್ತ ಶ್ರೀ ಪಿ. ವಿ. ಶೆಟ್ಟಿ ಮತ್ತು ಇಬ್ಬರು ಸಂಪುಗಾರ ಡ್ರೈವರರು ತಾ. 22ನೇ ಮುಂಜಾನೆ ಉಡುಪಿ ಬಸ್ ಸ್ಟೇಂಡಿನ ಬಳಿ ದಸ್ತಗಿರಿಯಾದರೆಂದು ತಿಳಿದುಬಂದಿದೆ. ಸಂಘ ಸಂಘಟನೆಯಲ್ಲಿದ್ದ ದೋಷಗಳ ಪರಿಣಾಮವಾಗಿ ಮುಷ್ಕರವು ಸಡಿಲುಗೊಳ್ಳುವ ಲಕ್ಷಣಗಳು ಕಂಡುಬರುತ್ತಿವೆಯಾದರೂ ಇಂದಿನ ಪರಿಸ್ಥಿತಿ ಶೋಚನೀಯವೆನ್ನದೆ ನಿರ್ವಾಹವಿಲ್ಲ. ಈ ವಿವಾದಕ್ಕೆ ಸಂಬಂಧಪಟ್ಟ 'ಎವಾರ್ಡ್'ಗೆ ಎರಡು ಕಡೆಯವರೂ ಬೇರೆ ಬೇರೆ ಅರ್ಥವನ್ನೇ ಕಟ್ಟಬಹುದು. ಆದರೆ ಮಾಲಕ-ಮಜೂರ ವಿವಾದಗಳು ಕಮ್ಯೂನಿಸ್ಟ್ ವಿಧಾನಗಳಿಗೇರದೆ 'ರಾಜೀ ತೀರ್ಮಾನ'ಗಳತ್ತ ಸಾಗಬೇಕೆಂಬ ಕಾಂಗ್ರೆಸ್ ತತ್ವವಾದರೂ ಇಲ್ಲಿ ಪಾಲಿಸಲ್ಪಡಬೇಕಿದ್ದಿತು. ಅಂತಹ ರಾಜೀ 'ಎವಾರ್ಡ್'ನ ಶರ್ತಗಳ ಕುರಿತೇ ಭಿನ್ನಭಿನ್ನ ಅರ್ಥಗಳಿದ್ದರೆ ಅವುಗಳ ಸ್ಪಷ್ಟೀಕರಣವನ್ನು ಮೂರನೆಯವರಿಂದ ಮಾಡಿಸಿಕೊಂಡು ನಿಜಾರ್ಥದಂತೆ ವರ್ತಿಸಲು ಇಕ್ಕಡೆಯವರೂ ಬದ್ಧರಿರಬೇಕು. ಆದರೂ ಹಾಗಿಲ್ಲವೇಕೆ? ಕಾಂಗ್ರೆಸಿಗರಂತಹ ಮಧ್ಯಸ್ಥರಾದರೂ ಈ ನೀತಿಗನುಸಾರವಾಗಿ ಸಂಬಂಧಪಟ್ಟ ಪಕ್ಷಗಳ ನಡುವೆ ಬರಲಿಲ್ಲವೇಕೆ? 'ಎವಾರ್ಡ್'ಗಳಿಗೂ ಇದೇ ಅದೃಷ್ಟವೆಂದಾದರೆ, ನಮ್ಮಲ್ಲಿಯ ಮಾಲಕ-ಮಜೂರ ವಿವಾದಗಳ ತೀರ್ಮಾನಕ್ಕೆ ಬೇರೆ ವಿಧಾನವೇನಿದೆ? ಇಂತಹ ನಿಸ್ಸಹಾಯಕತೆಯು ಕಮ್ಯೂನಿಸ್ಟ್ ಕ್ರಮಗಳತ್ತ ತಳ್ಳುವ ಅಪಾಯವನ್ನಿನ್ನು ಕಾಂಗ್ರೆಸಿಗರು, ಹಾಗೂ ಸಾರ್ವಜನಿಕರೆಲ್ಲರೂ ಉಪೇಕ್ಷಿಸಬಾರದ ವಿಷಯವಿದು.

ಮಮತೆಯಿಂದ ಮಹಿಳೆಯರನ್ನು ಸುಳ್ಳಕೆಡುರು ಮುಟ್ಟಿ ಪಿವರೆ ಮರುಕ್ಷಣವೇ ಮನೆ ಮನೆ ಸುದ್ದಿ. ಇದರ ನೀತಿಯೇ

ಗುಂಜಾನ್

ನಳಿನಿ ಜಯವಂತ, ತ್ರಿಲೋಕ ಕಾಪೂರ್, ಜೇವಿಡ್, ವೀನಾ ಕುಮಾರಿ, ಪಾಂಡೆ, ಪೂರ್ಣಿಮಾ ಚೌಧುರಿ, ಮೊದಲಾದವರು.

ತಾರೀಕು 23—2—50ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಬರುವ ಚಿತ್ರ— ರಕ್ತರೇಖಾ (ತೆಲುಗು)

## ಮಂಗಳೂರು

ಅಖಿಲ ಭಾರತ ಚರಖಾ ಸಂಘದ ಕೇಂದ್ರ ಪ್ರತಿನಿಧಿಗಳು-ಪ್ರಮುಖರಾದ ಶ್ರೀ ಎಸ್. ಆರ್. ಸೋಹಾನಿ ಮತ್ತು ಆ ಸಂಘದ ಪತ್ರ ಖಾತೆಯ ಮುಖ್ಯ ಕಾರ್ಯಕರ್ತರು ಕೂಡಾ ಮಂಗಳೂರಿಗೆ ಬಂದಿದ್ದು ತಾ. 14ರ ಸಂಜೆ ಕೋಳ ಸೇವಾ ಸಂಘದ ಕಚೇರಿಯಲ್ಲಿ ಇಲ್ಲಿಯ ಖಾದಿ ಪ್ರೇಮಿಗಳ ಸಭೆಯಲ್ಲಿ ಕತಾಯಿ ಮಂಡಲಗಳ ಕುರಿತು ಮಾತು ಕಥೆ ನಡೆಸಿದರು. ಗ್ರಾಮ ಉದ್ಯೋಗ ಸಂಘದ ಕಾರ್ಯದರ್ಶಿ ಶ್ರೀ ಎಚ್. ನಾರಾಯಣರಾಯರು ಕತಾಯಿಕ್ರಮ ಪ್ರದರ್ಶಿಸಿದರು.

**ಶಿಬಂದಿಗೆ ಬೋನಸ್ಸು**— ಈಚೆಗೆ ಶ್ರೀ ಜೆ. ಬಿ. ಮಹಾದೂರರವರ ಅಧ್ಯಕ್ಷತೆಯಲ್ಲಿ ಜರಗಿದ ಮಂಗಳೂರು ನೇಕಾರರ ಪ್ರೊಡಕ್ಷನ್ ಮತ್ತು ಸೇಲ್ ಸೊಸೈಟಿಯ ಮಹಾಸಭೆಯಲ್ಲಿ ಶಿಬಂದಿಗೆ ಒಂದು ತಿಂಗಳ ಸಂಬಳದಷ್ಟು ಬೋನಸ್ ಕೊಡಬೇಕೆಂದು ನಿರ್ಣಯವಾಯಿತು.

**ಹಾಕಿಪಂದ್ಯಾಟ**— ಮುನಿಸಿಪಲ್ ಹಾಕಿಪಂದ್ಯಾಟದ ಕೊನೆಯಆಟದಲ್ಲಿ ಸ್ಯಾಂಟ್ ಎಲೋಸಿಯಸ್ ಕಾಲೇಜು ಮತ್ತು ಪೋಲೀಸ XI ಎರಡೂ ಒಂದೊಂದು ಗೋಲುಹಾಕಿದ ಕಾರಣ ಇನ್ನೊಮ್ಮೆ ಆಡಬೇಕಾಗಿ ಬಂತು.

---

## ಪ್ರಕಟಣೆ

ಉಡುಪಿ ತಾಲೂಕು ನಂಬ್ರ 76ನೇ ಬಡಗಬೆಟ್ಟು ಗ್ರಾಮದಲ್ಲಿರುವ ಬಾಬಂಣ ಶೇರೆಗಾರನ ಅಳಿಯ 1ನೇ ಅನಂತ ಶೆರೆಗಾರ, ಯೂತನ ಹೆಂಡತಿ 2ನೇ ಅಕ್ಕು ಶೆರೆಗಾರ್ತಿ ಕೂಡಾ 2ಜನರು ತಿಳಿಸುವುದೇನೆಂದರೆ:—

ನಮಗೆ ಕಟ್ಟೋಣದ ಕೆಲಸದ ಬಗ್ಗೆ ಸಿಮೆಂಟು ಬೇಕಾಗಿದ್ದುದರಿಂದ ನಮ್ಮಲ್ಲಿ ಕೆಲಸ ಮಾಡುತ್ತಿದ್ದ ಸದರಿ ಗ್ರಾಮದ ಬೆಟ್ಟಾಡಿಯಲ್ಲಿ ಎವ ಗೋವಿಂದ ಪೂಜಾರಿ ಅಳಿಯ ನರ್ಸ ಪೂಜಾರಿಯು ಕಳೆದ 1949ನೇ ಇಸವಿ ದಶಂಬರ ತಿಂಗಳಲ್ಲಿ ಸಿಮೆಂಟು ಬಗ್ಗೆ ಅರ್ಜಿಗೆಂತ ನಮ್ಮನ್ನು ನಂಬಿಸಿ ನಮ್ಮ ಪೈಕಿ 1ನೇಯವರ ಎಡಹೆಬ್ಬೆಟ್ಟು ವ 2ನೇಯವರ ಎಡಗೈಯ ಕೋರ್ಟೆಟ್ಟು ಗುರ್ತನ್ನೂ ಖಾಲಿ ಕಾಗದದಲ್ಲಿ ಪಡಕೊಂಡು ಹೋಗಿರುತ್ತಾನೆ. ಬಹಳ ಸಮಯವಾದರೂ ನಮಗೆ ಸಿಮೆಂಟು ಪರ್ಮಿಟು ಬಾರದೆಯಿದ್ದುದರಿಂದ ಆತನ ಕೂಡೆ ವಿಚಾರಿಸಿದ್ದಲ್ಲಿ ಆತನು ಸಮರ್ಪಕವಾದ ಜವಾಬು ಕೊಡದೆಯಿರುವುದರಿಂದಲೂ, ನಮ್ಮ ಕೈವೊಹರು ಯಿರುವ ಕಾಗದಗಳನ್ನು ನಮಗೆ ವಾಪಸ್ ಕೊಡದೆ ಯಿರುವುದರಿಂದಲೂ ನಾವು ಆತನಿಗೆ (ನರ್ಸ ಪೂಜಾರಿಗೆ) ತಾ. 12-2-50ರಲ್ಲು ತಕ್ಕ ನಿವೃತ್ತಿ ಕೇಳಿ ರಜಿಸ್ತ್ರಿ ನೋಟೀಸು ಕೊಟ್ಟಿದ್ದೇವೆ.

ನಮ್ಮಿಂದ ಯಾರಿಗೂ ಯಾವ ರೀತಿಯಿಂದಲೂ ಎಷ್ಟನ್ನಾದರೂ ಸಾಲಗಳು ಸಲುವಂತಾದ್ದಿಲ್ಲ. ನಮ್ಮ ಹಕ್ಕಿನ ಆಸ್ತಿಯ ಬಾಬಿನಲ್ಲಿ ನಾವು ಯೀ ವರೆಗೂ ನಮ್ಮನ್ನು ಬದ್ಧೀಕರಿಸತಕ್ಕ ಯಾವ ತರದ ದಸ್ತಾವೇಜುಗಳನ್ನೂ ಬರಕೊಡಲಿಲ್ಲ. ಸದ್ರಿ ನರ್ಸ ಪೂಜಾರಿಗೆ ನಮ್ಮಿಂದ ಸಲತಕ್ಕ ಯಾವತ್ತೂ ಕೂಲಿ ಆತಗೆ ಸಂದದೆ. ಆದ್ದರಿಂದ ನಮ್ಮ ಕೈವೊಹರು ಇರುವ ಸದ್ರಿ ಖಾಲಿಕಾಗದಗಳನ್ನು ಸದರಿ ನರ್ಸಪೂಜಾರಿಯು ಯಾವರೀತಿಯಿಂದ ದುರುಪಯೋಗಪಡಿಸಿ ನಮ್ಮನ್ನು ಹಾನಿಗೆ ಗುರಿಮಾಡಬಹುದೆಂತ ಎಣಿಸಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಸದರಿ ಕಾಗದಗಳಲ್ಲಿ ನಮ್ಮನ್ನು ಬದ್ಧೀಕರಿಸುವ ಯಾವರೀತಿಯ ದಾಖಲೆಗಳನ್ನು ಉಂಟು ಮಾಡಿದರೂ ಅವುಗಳು ನಮ್ಮನ್ನು ಎಷ್ಟು ಮಾತ್ರಕ್ಕೂ ಬದ್ಧೀಕರಿಸಲಾರವು ಎಂತ ನಾವು ಈ ಮೂಲಕ ಸಾರ್ವಜನಿಕರನ್ನು ಎಚ್ಚರಿಸುತ್ತೇವೆ.

L. T. of Anantha Seregara
L. T. of Akku seregarthi
Udipi, 20-2-50

---

ಕಳೆದ ವಾರ ಮಂಗಳೂರು ಗವರ್ನಮೆಂಟ್ ಟ್ರೇನಿಂಗ್ ಕಾಲೇಜು ಅಧ್ಯಾಪಕ ಶ್ರೀ ಎಸ್. ಡಿ. ಲೋಬೋ ಅವರು ಮಂಗಳೂರು ರೇಂಜಿನ ಡೆಪ್ಯುಟಿ ಇನ್ಸ್ಪೆಕ್ಟರರಾಗಿ ನೇಮಕ ಹೊಂದಿರುವರು.

**ಹೊಸ ಚುನಾವಣೆಗೆ ಅಪ್ಪಣೆ**— ದ. ಕ. ಜಿಲ್ಲಾ ಬೋರ್ಡಿನ ವಿಟ್ಲದ ಸದಸ್ಯತನವನ್ನು ಚುನಾವಣಾ ಕಮಿಶನರ್ ಶ್ರೀ ಕೆ. ಆರ್. ಕೃಷ್ಣಯ್ಯ ಚೆಟ್ಟಿಯಾರರು ತೆಗೆದುಹಾಕಿ, ಆ ಸರ್ಕಲಿನಲ್ಲಿ ಹೊಸ ಚುನಾವಣೆಯಾಗಬೇಕೆಂದು ಅಪ್ಪಣೆ ಮಾಡಿರುವರು. ಶ್ರೀ ಸೆಟ್ಟರು ಕಾಂಗ್ರೆಸ್ ಕಡೆಯಿಂದ ಆರಿಸಲ್ಪಟ್ಟವರು.

**ಹೊಸ್ಟೆಲ್ ಯೂನಿಯನ್ ಸೋಶಿಯಲ್**- ಸ್ಯಾಂಟ್ ಎಲೋಸಿಯಸ್ ಕಾಲೇಜು ಬೋರ್ಡಿಂಗ್ ಹೌಸಿನ ವಾರ್ಷಿಕ ದಿನಾಚರಣೆಯು ರೆ. ಐ ಫೆರ್ನಾಂಡೀಸರ ಅಧ್ಯಕ್ಷತೆಯಲ್ಲಿ ಜರಗಿತು.

**ಕಾಲೇಜು ಯೂನಿಯನ್ ಸತ್ಕಾರ ಸಮಾರಂಭ**— ತಾ 14ರಲ್ಲು ಸಂಜೆ ಶ್ರೀ ಸಿ. ಜೆ. ಕಾಲ್ಸನರ ಅಧ್ಯಕ್ಷತೆಯಲ್ಲಿ ಎಲೋಸಿಯಸ್ ಕಾಲೇಜಿನ ಯೂನಿಯನ್ ಸತ್ಕಾರ ಸಮಾರಂಭ ಜರಗಿತು. ಯೂನಿಯನ್ ಅಧ್ಯಕ್ಷ ಶ್ರೀ ಸಿರಿಲ್ ಸೆಬೆಸ್ಟಿನರಿಂದ ಸ್ವಾಗತವಾದ ಬಳಿಕ ಕಾರ್ಯದರ್ಶಿ ಶ್ರೀ. ಕೆ. ಪಿ. ಕೃಷ್ಣಸೆಟ್ಟರು ವರದಿ ವಾಚನ ಮಾಡಿದರು. ನಂತರ ಶ್ರೀಗಳಾದ ಪಿ. ಸೇತುಮಾಧವ ರಾವ್, ವಿ. ಎಸ್. ವಿಶ್ವನಾಥನ್, ಪಿ. ರಾಘವನ್ ಇವರ ಸ್ವಸ್ತಿವಾಚನಗಳಿಗೆ ಶ್ರೀಗಳಾದಸ್ಪೇನಿಸ್ ಲಾಸ್ ಡಯಾಸ್, ರೆ। ಫಾ। ಇ ಜೇಕ್ಸ್ (ಪ್ರಿನ್ಸಿಪಾಲ್), ಬರ್ಟ್ರಾಂ ಡಿ। ಸಿಲ್ವ ಇವರು ಉತ್ತರವಿತ್ತರು.

**ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ವಿಶೇಷ ಮಹಾಸಭೆಯು** ತಾ. 12ರಲ್ಲು ಸಂಜೆ ಕಾಂಗ್ರೆಸ್ ಕಚೇರಿಯಲ್ಲಿ ಕೂಡಿ ಎರಡು ದಿನಗಳಲ್ಲೂ ಸಾಗಿ, ಈಚೆಗೆ ಅಧ್ಯಕ್ಷರಿಗೂ ಕಾರ್ಯದರ್ಶಿಗಳಿಗೂ ಉಂಟಾದ ಘರ್ಷಣೆಯ ವಿಚಾರವನ್ನು ಚರ್ಚಿಸಲಾಯಿತು.

ಪ್ರಧಾನ ಕಾರ್ಯದರ್ಶಿ ಶ್ರೀ ಕೆ. ಕೆ. ಸೆಟ್ಟರ ಮೇಲೆ ಅಧ್ಯಕ್ಷರಾದ ಶ್ರೀ ಮಾಂಗಾಳ ಲಕ್ಷ್ಮೀನಾರಾಯಣ ನಾಯಕರು ಮಾಡಿದ ಕೆಲವೊಂದು ಆರೋಪವನ್ನೂ ಅದಕ್ಕೆ ಕಾರ್ಯದರ್ಶಿಗಳಿತ್ತ ಉತ್ತರವನ್ನೂ ಕುರಿತು ಈ ಸಭೆಯು ದೀರ್ಘ ಚರ್ಚೆ ನಡೆಸಿತಾದರೂ ಯಾವ ತೀರ್ಮಾನಗಳೂ ಆಗಲಿಲ್ಲ. ಕೊನೆಗೆ ಈ ಕುರಿತು ಕೂಲಂಕುಶ ವಿಚಾರ ಮಾಡಿ ವರದಿ ಮಾಡಲೆಂದು ಒಂದು ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯಲ್ಲಿ ಶ್ರೀಗಳಾದ ಕೆ. ಆರ್. ಕಾರಂತ, ಬಿ. ಎಸ್. ಕಕ್ಕಿಲ್ಲಾಯ, ಯು. ವೇಣುಗೋಪಾಲ ನಾಯರ್, ಕೆ. ತಿಮ್ಮಪ್ಪ ಸೆಟ್ಟಿ, ವಿ. ಎಸ್. ಕುಡ್ವ ಇವರಿಷ್ಟು ಮಂದಿ ಇದ್ದಾರೆ. ಶ್ರೀ ಕುಡ್ವರು ಈ ಸಮಿತಿಯ ಕನ್ವೀನರಾಗಿದ್ದಾರೆ.

ಜಿಲ್ಲಾ ಕಾಂಗ್ರೆಸ್ ಸಮಿತಿಯ ಪುನರ್ರಚನೆಯಾಗಬೇಕೆಂಬ ವಿಚಾರದಲ್ಲಿ ಚರ್ಚೆಯಾಗುವ ಕಾಲಕ್ಕೆ, ಕೆ. ಪಿ. ಸಿ. ಸಿ. ಕಾರ್ಯದರ್ಶಿ ಶ್ರೀ ಮಾಗಡಿಯವರ ತಂತಿಯೊಂದು ಬಂದಿತು. ಆ ತಂತಿಯಲ್ಲಿ ಕಮಿಟಿಯನ್ನು ಪುನರ್ರಚಿಸುವ ಪ್ರಮೇಯವಿಲ್ಲವೆಂಬ ಮತ್ತು ಹಾಗೆ ಮಾಡುವುದಾದರೆ ಅದು ಅವಿಶ್ವಾಸ ಠರಾವನ್ನು ಸ್ವೀಕರಿಸಿದಂತಾಗುತ್ತದೆಂಬ ಅಭಿಪ್ರಾಯವಿದ್ದುದರಿಂದ ಕೆ. ಪಿ. ಸಿ. ಸಿ. ಕಾರ್ಯದರ್ಶಿಗಳು ಬಂದು ತನಿಕೆ ನಡೆಸುವ ತನಕ ಅಧ್ಯಕ್ಷರು, ಕಾರ್ಯದರ್ಶಿ, ಜತೆ ಕಾರ್ಯದರ್ಶಿ, ಕೋಶಾಧಿಕಾರಿ ಮತ್ತು ಶ್ರೀ ಕೆ. ತಿಮ್ಮಪ್ಪ ಸೆಟ್ಟಿ ಇವರು ಜಿಲ್ಲೆಯಲ್ಲಿ ಕಾಂಗ್ರೆಸಿನ ಕಾರ್ಯಕ್ರಮ ಮುನ್ನಡೆಸಬೇಕೆಂದೂ ಗೊತ್ತಾಯಿತು. ಈ ಮಧ್ಯೆ ಅಧ್ಯಕ್ಷರು ತಮ್ಮದೊಂದು ರಾಜಿನಾಮೆಯನ್ನು ಸಭೆಯ ಮುಂದಿಟ್ಟರು. ಅದರ ಚರ್ಚೆಯಾಗುತ್ತಿರುವಾಗಲೇ ಶ್ರೀ. ಮಾಗಡಿಯವರ ತಂತಿಯಿಂದಾಗಿ ಅವರೂ ತನ್ನ ರಾಜಿನಾಮೆಯನ್ನು ಹಿಂತೆಗೆದುಕೊಂಡರು.

ಈ ಸಭೆಯಲ್ಲಿ ಶ್ರೀ ವಿ. ಎಸ್. ಕುಡ್ವರು ಕಟ್ಪಾಡಿಯಿಂದ ಜಿಲ್ಲಾ ಕಮಿಟಿಗೆ ಸದಸ್ಯರಾ… ಬಂದ ವಿಚಾರದಲ್ಲೂ ಆಕ್ಷೇಪ ಬಂದು ಆ ಕು… ರಿತು ಕೆ. ಪಿ. ಸಿ. ಸಿ. ಯ ಆಜ್ಞೆ ಬರುವ ವರೆ… ಅವರನ್ನು ಸದಸ್ಯರನ್ನಾಗಿಯೇ ಪರಿಗಣಿಸುವ ತೀರ್ಮಾನವು ಅಧ್ಯಕ್ಷರಿಂದಾಯಿತು.

ಕೊನೆಯ ದಿನದ ಸಭೆಯಾರಂಭವಾಗುವ ಮೊದಲೇ ಇತ್ತಂಡದಲ್ಲೂ ಉದ್ವೇಗವುಂಟಾಗಿತ್ತು. ವಿವಿಧಘೋಷಗಳ ಪತ್ರಗಳನ್ನು ಕಾಂಗ್ರೆಸ್ ಕಚೇರಿಯ ಗೋಡೆಗೆ ಅಂಟಿಸಲಾಗಿತ್ತು. ಬಹಳ ಮಂದಿ ನಿರೀಕ್ಷಕರೂ ನೆರೆದಿದ್ದರು. ಸಭೆಯಾಗುತ್ತಿದ್ದಾಗ ಕಲ್ಲುಗಳೂ ಬಿದ್ದುವೆಂದು ಹೇಳಲಾಗಿದೆ. ಶ್ರೀ ವಿ. ಎಸ್. ಕುಡ್ವರು ಸಭೆಯಿಂದ ಹೊರಟು ಬರುವಾಗ ಅವ… ವಿರೋಧ ಘೋಷಗಳಾದುವೆಂದೂ ತಿಳಿದು ಬರುತ್ತದೆ. ಅಂತೂ ಕಾಂಗ್ರೆಸ್ ಕಚೇರಿಯ… ದೀಗ ಮುರಿದ ವಾರ್ತೆಯಿಂದ ಜಿಲ್ಲಾ ಕಾಂಗ್ರೆಸ್ ಕಮಿಟಿಯೊಳಗೊಂದು ಮಹಾ ಸ್ಫೋಟನವಾಗುತ್ತದೆಂಬ ಊಹಾಪೋಹಗಳಿದ್ದದ್ದು, ಅವು ಸದ್ಯಕ್ಕೊಮ್ಮೆ ಅಡಗಿದಂತಾದುವು.

## ಉಡುಪಿ

ತಾ 18ರಲ್ಲು ನಡೆದ ಸೌತ್ ಕೆನರಾ ಡಿಸ್ಟ್ರಿಕ್ಟ್ ಗ್ರಿಗ್ ಮೆಮೋರಿಯಲ್ ಸ್ಪರ್ಧೆಯಲ್ಲಿ ಸ್ಥಳೀಯ ಕ್ರಿಶ್ಚಿಯನ್ ಹ್ಯಾಸ್ಕೂಲಿನ ವಿದ್ಯಾರ್ಥಿ ಜೊಸೆಫ್ ಕೌಂಡಿನ್ಯ ಎಂಬವರು … ಯ ಶಾಲಿಗಳಾಗಿರುವರು.

ಆದೇ ದಿನ ಬೆಳಗ್ಗೆ ಉಡುಪಿ ಡಿವಿಜನಿನ ಕುಂದಾಪುರ ಬೋರ್ಡು ಹ್ಯಾಸ್ಕೂಲಿಗೂ, ಮಂಗಳೂರು ಡಿವಿಜನಿನ ಮಿಶನ್ ಹ್ಯಾಸ್ಕೂಲಿಗೂ ನಡೆದ ಡಿಸ್ಟ್ರಿಕ್ಟ್ ವ್ಹೋಲಿಬಾಲ್ ಪಂದ್ಯಾಟದಲ್ಲಿ ಉಡ್ಪಿ ಡಿವಿಜನಿನ ಬೋರ್ಡು ಹ್ಯಾಸ್ಕೂಲ್ ವಿಜಯಶಾಲಿಯಾದುದು ಉಡುಪಿ ಡಿವಿಜನಿಗೊಂದು ಗೌರವ.

"ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

# ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು—ದಿ। ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಮಾತುಗಳ ರೂಪದಲ್ಲೀದ ಛಟ್ಟಿಯಾಗಿ ಎದ್ದು ಕಾಣುವುದು.

**400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.**

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

**ನವಯುಗ ಪ್ರೆಸ್, ಉಡುಪಿ, ದ. ಕನ್ನಡ.**

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

*For Life Assurance*

CONSULT

**THE NEW GUARDIAN OF INDIA**
LIFE ASSURANCE Co. LTD.
(Established, 1934)

Chairman: ri. M. C. T. M. Chidambaram Chettyar.

A Policy in this progressive Life Office is a good investment; its Agency is a valuable business connection.

MANGALORE BRANCH:
K. S. R. Road,
Hampankatta, Mangalore.

HEAD OFFICE:
United India Life Building,
MADRAS



ಶ್ರೀ ಕೊರಡ್ಕಲ್ ಶ್ರೀನಿವಾಸರಾಯರ

'ಸುಲಭದಲ್ಲಿ ಇಂಗ್ಲಿಷ್'
(ENGLISH MADE EASY)
ಮನೆಯಲ್ಲಿ ನೀವಾಗಿ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.
ಬೆಲೆ: ೧—೮—೦
ನವಯುಗ ಪ್ರೆಸ್, ಉಡುಪಿ.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'
ಕಾಸರಗೋಡು

ಇವರ ತಯಾರಿಕೆಗಳನ್ನು ವಿಚಾರಿಸಿರಿ.

## ದ. ಕನ್ನಡ

**ಪಾಂಬೂರು**— ಬೆಳ್ಳೆ, ಪಾಂಬೂರು, ...ಶಾಲಾ ಹೆತ್ತವರ ಸಭೆ ಮತ್ತು ಶಿಶು ಸಪ್ತಾಹವು ಸದ್ರಿ ಶಾಲೆಯಲ್ಲಿ ಶ್ರೀ ಯಂ. ...ರಾನರ ಅಧ್ಯಕ್ಷತೆಯಲ್ಲಿ ತಾ. 12-2-50 ಸಂಜೆ ವಿದ್ಯಾರ್ಥಿಗಳ, ಹಳೆ ವಿದ್ಯಾರ್ಥಿ...ರ ಮತ್ತು ಗ್ರಾಮಸ್ಥರ ಕೂಡುವಿಕೆಯಿಂ...ಅತಿ ಯಶಸ್ವಿಯಾಗಿ ಜನರಗಿತು.

**ಫರಂಗಿಪೇಟೆ**— ವಯಸ್ಕರ ಶಿಕ್ಷಣ ಸಪ್ತಾಹವು ಇಲ್ಲಿಯ ವಯಸ್ಕರ ಕ್ಲಬ್‌ನಲ್ಲಿ ...ತಾ. 3-2-50ರಿಂದ ತಾ. 7-2-50ರ ತನಕ ...ನಡೆಗಿತು. ತಾ. 7-2-50ರಂದು ಸಾರ್ವಜನಿಕ ಸಭೆ ಸೇರಿ 'ವಯಸ್ಕರ ಶಿಕ್ಷಣದ ಅವಶ್ಯಕತೆ,' 'ಇದರಲ್ಲಿ ವಿದ್ಯಾವಂತರ ಕರ್ತವ್ಯ', ...ಅಂಕ್ಷರತೆಯಿಂದಾಗಿ ಇಂದು ಪಡುವ ಕಷ್ಟ...ಳು' ಮೊದಲಾದವುಗಳ ಕುರಿತು ಶ್ರೀ ಕೆ. ... ಉಪಾಧ್ಯಾಯ, ಎ. ಗುರುಪ್ಪ ಶೆಟ್ಟಿ, ... ರಾಘವೇಂದ್ರ ಹೆಗ್ಡೆ ಮೊದಲಾದವರ ಭಾಷಣಗಳಾದ ಬಳಿಕ ಶ್ರೀ ಮಲ್ಪೆ ರಾಮದಾಸ ...ಮಗರಿಂದ 'ಭಕ್ತ ಕುಚೇಲ' ಎಂಬ ಕಥಾ...ಗದ ಹರಿಕಥಾಶ್ರವಣವಾದ ಬಳಿಕ ಶ್ರೀ ... ನಾರಾಯಣ ಹೆಗ್ಡೆಯವರಿಂದ ಧನ್ಯವಾದ ...ರ್ಪಣೆಯಾದ ಬಳಿಕ ಮಂಗಳ ಗೀತೆಯೊಂ...ಗೆ ಸಭಾಂತ್ಯವಾಯಿತು.

**ಸಾಂತೂರು ಕೊಪ್ಲ**- ಇದೇ ತಾ. ...2-50ರಲ್ಲು ಸಾಂತೂರು ಕೊಪ್ಲ ಬೋ...ಶಾಲೆಯ ಶಿಶು ಸಪ್ತಾಹ ಸಭೆಯು ಶ್ರೀ ...ಮತ ಸಾಹುಕಾರ ಆನಂದ ಕಮ್ತಿಯವರ ...ಧ್ಯಕ್ಷತೆಯಲ್ಲಿ ಜರಗಿತು. ಮಕ್ಕಳು ವಿವಿಧ ...ರೋಗ್ಯ ನಾಟಕ, ಯಕ್ಷಗಾನ ಮುಂತಾದ ಚಟುವಟಿಕೆಗಳನ್ನು ಪ್ರದರ್ಶಿಸಿದ ...ತರು ...ಯು ಶ್ರೀ S. N. Prabhu ಗಳು ಶ್ರೀ ...ಶ್ವನಾಥ ಭಟ್ಟರು ಆರೋಗ್ಯ ಸೂ... ...ರಿತು ಭಾಷಣವಿತ್ತರು, ... ...ಶಿಶುಗಳಿಗೆ ಬಹುಮಾನ ವಿತರಣೆ ನಡೆ... ಆರೋಗ್ಯ ಗೀತೆಗಳೊಡನೆ ಮೆರವಣಿಗೆ ...ಸಿದು ಸಭೆಯು ಉಪಹಾರ ಕೊಟ್ಟದ ನಂ...ರ ಮುಕ್ತಾಯವಾಯಿತು.

**ಉಳ್ಳಾಲ**—ಬಡಾ ಪಂಚಾಯತ ...ರ್ಡಿನ ಕಡೆಯಿಂದ ಕಳೆದ ತಾ. 26 ...ಲ್ಲಿ ಜಾನಪದ ರಾಷ್ಟ್ರ ಉದಯ ದಿನಾಚರ...ಣೆಯು ಯಶಸ್ವಿಯಾಗಿ ಜರಗಿತು. ಬೆಳಿಗ್ಗೆ ...ಜಾರೋಹಣ, ಸಂಜೆ ಮೆರವಣಿಗೆ, ಗ್ರಾಮ ಶಾಲಾ ಮಕ್ಕಳಿಗೆ ತಿಂಡಿ ಹಂಚೋಣ ...ದಲಾದ ಕಾರ್ಯಕ್ರಮಗಳಾದವು.

ಆರೋಗ್ಯ ಶಿಶು ಸಪ್ತಾಹದ ದಿನಾಚರಣೆ...ಯು ಇದೇ ತಾ. 11ರಲ್ಲು ಪಂಚಾಯತ ...ರ್ಡಿನ ಊರವರ ಒಮ್ಮತದ ಸಹ...ರದಿಂದ ಗ್ರಾಮದ ಬಾಲ ಬಾಲಕಿಯರ ಮೆರವಣಿಗೆ ಆಗಿ ಬಡಾ ಪಂಚಾಯತ ಬೋರ್ಡ್ ಪ್ರೆಸಿಡೆಂಟ್ ಶ್ರೀ ಎಸ್. ಮುದ್ದು ಸೆಟ್ಟರವರ ಅಧ್ಯಕ್ಷತೆಯಲ್ಲಿ, ಮಹಾಜನರ ಭಾಷಣ, ಮಕ್ಕಳ ವಿವಿಧ ವಿನೋದಾವಳಿಗಳು, ಚಿಕ್ಕ ಮಕ್ಕಳ ಆರೋಗ್ಯ ಪರಿಶೀಲನೆ, ಇನಾಂ ಹಂಚೋಣ ಮತ್ತು ತಿಂಡಿ ಹಂಚೋಣ ಮೊದಲಾದ ಕಾರ್ಯಕ್ರಮಗಳು ಅದನಂತರ ಮಂಗಲ ಗೀತೆಯೊಂದಿಗೆ ಸಭೆ ಮುಕ್ತಾಯವಾಯ್ತು.

**ಕುಂಬಳೆ**—ಕರ್ನಾಟಕ ಪ್ರಾಂತಿಕ ಕಸ್ತೂರಿಬಾ ಕೇಂದ್ರಗಳ ಮೇಲು ತನಿಖೆಯವರಾದ ಶ್ರೀಮತಿ ಉಮಾಬಾಯಿ ಕುಂದಾಪೂರ್ಕರರು ತಾ. 12ರಂದು ಮೈಪಾಡಿ ಕೇಂದ್ರದ ಎರಡನೇ ವಾರ್ಷಿಕ ಸಭೆಯಲ್ಲಿ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಮೂಲ ಶಿಕ್ಷಣ ತರಬೇತು ಶಾಲಾ ಮುಖ್ಯೋಪಾಧ್ಯಾಯರುಗಳಾದ ಶ್ರೀ ರಾಮಕೃಷ್ಣ ಶೆಟ್ಟರು ಭಾಷಣವಿತ್ತರು. ವಸ್ತು ಪ್ರದರ್ಶನ, ಮಕ್ಕಳಿಗೆ ಬಹುಮಾನ ವಿತರಣೆ ಕೂಡಾ ನಡೆಯಲಾಗಿದೆ.

13ರಂದು ಬಂಬ್ರಾಣದಲ್ಲಿ ಶ್ರೀ ಕೆ. ಎಂ. ಬಾಬು ಶೆಟ್ಟರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಶ್ರೀಮತಿ ಉಮಾಬಾಯಿಯವರು ಭಾಷಣವಿತ್ತರು. ಶ್ರೀಮತಿ ಲೀಲಾಬಾಯಿ ಏಕಾಂಬರ ರಾಯರು ಅವರೊಟ್ಟಿಗಿದ್ದರು.

**ಉದ್ಯಾವರ**—ಇದೇ ತಾ. 18ನೇ ರಾತ್ರಿ ಉದಿಯಾವರ ಶ್ರೀ ಕರಿಯ ಪೂಜಾರಿಯ ವ್ಯವಸ್ಥಾಪಕತ್ವದಲ್ಲಿ ಶ್ರೀ ಕೊಳಲು ಆನಂದರಾಯರ ಕೊಳಲು ಕಚೇರಿ ಮತ್ತು ಶ್ರೀ ಕಿನ್ನಿಮೂಲ್ಕಿ ಅನಂತಪದ್ಮನಾಭ ಭಟ್ಟರ ಹರಿಕಥೆ ನಡೆಯಿತು. ಶ್ರೀ ಟಿ. ಸಂಜೀವ ಪೈಗಳ ಸಂದರ್ಭೋಚಿತ ಭಾಷಣ ಮತ್ತು ವರ ಹಸ್ತದಿಂದ ಬಹುಮಾನ ವಿತರಣೆ ಆಯಿತು.

**ಮೂಲ್ಕಿ**- ಶ್ರೀ ದುರ್ಗಾಪರಮೇಶ್ವರಿ ಬಪ್ಪನಾಡು ದೇವಸ್ಥಾನದಲ್ಲಿ ವರ್ಷಾವಧಿ ಉತ್ಸವವು ಎಪ್ರಿಲ್ ಒಂದರಿಂದ ಒಂಭತ್ತರ ತನಕ ಜರಗುವುದು. ರಥೋತ್ಸವ ನಿಮಿತ್ತ ಬಹು ಖರ್ಚುಮಾಡಿ ಮಜನೆ ಸುಡುವ ಕ್ರಮದ ಬದಲಾಗಿ ವಿಚಾರಪೂರಿತ ಗಹನ ವಿಷಯಗಳಲ್ಲಿ ಭಾಷಣ, ವಸ್ತು ಪ್ರದರ್ಶನಾದಿಗಳ ಸ್ತುತ್ಯ ಏರ್ಪಾಡು ಮಾಡಲಾಗಿದೆ.

## ನೋಟೀಸು

ಉಡ್ಪಿ ಡಿ. ಮು. ಕೋರ್ಟಿನಲ್ಲಿ.

O. P. 10/50.

ಸೋಫಿಯಾ ಕರ್ಕಡ. ಕೂಡಾ 11 ಜನರು. ...ರ ಕರ್ಕಡರ ವಿಧವೆ ಮತ್ತು ಮಕ್ಕಳು ...ಡ್ಪಿ ಕಸ್ಬೆಯಲ್ಲಿರುವವರು—

1—ಅರ್ಜಿದಾರರು.

1ನೇ ಅರ್ಜಿದಾರರ ಗಂಡ ವ ಮಕ್ಕ ಅರ್ಜಿ...ರರ ತಂದೆ ಈಗ ಮೃತಪಟ್ಟಿರುವ ತೆದೋರ ಕರ್ಕಡರಿಗೆ ಬರತಕ್ಕ ಉಡ್ಪಿ. ಡಿ. ಮು. ಕೋರ್ಟು ಸ್ಮಾಲ ನಂಬ್ರ 398/46ನೇ ಡಿಕ್ರಿ...ವ ಯಾತರ ಸಾಲ ವಸೂಲಿ ಕುರಿತು ತ...ಗೆ ವಂದು ವಾರೀಸು ಸರ್ಟಿಫಿಕೇಟು ಕೊ...ಕಾಗಿ ಕೇಳಿ ಕೊಟ್ಟ ಅರ್ಜಿಯು ತಾ. ...3-50ಕ್ಕೆ ತನ್ಕಿಗೆ ಇಟ್ಟಿರುವದರಿಂದ ಲ...ತು ಆಕ್ಷೇಪವುಳ್ಳವರು ಸದ್ರಿ ಕೋರ್ಟು...ಂದ ಸದ್ರಿ ತಾ. 15-3-50ಕ್ಕೆ ಹಗಲು ...ಟೆ 10ಕ್ಕೆ ಹಾಜರಾಗಿ ತಮ್ಮ ಆಕ್ಷೇಪಗ...ನ್ನು ಜಾಹೀರು ಮಾಡಬೇಕಾಗಿ ಈ ಮೂಡ ಸರ್ವ ಜನರಿಗೆ ತಿಳಿಸಲಾಗುತ್ತದೆ.—

(By order of court)

...dipi } **K. Vittal Nayak**
...-2—50 } Vakil for petitioner

## Notice

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. P. 7/1950

ಅರ್ಜಿದಾರಳು—ರುಕ್ಮಿಣಿ ಸೆಡ್ತಿ.

ಎದ್ರಿರು —1 ಅಕ್ಕಮ್ಮ ಸೆಡ್ತಿ,

2 ಮಾಬ್ಲ ಸೆಟ್ಟಿ.

ಉಪ್ಪಿನಕುದ್ರು ತಾಲ್ಲೂಕು ಬಾಳ್ಕುದ್ರು ಗ್ರಾಮದ ಕೆಳಾಮನೆಯಲ್ಲಿರುವ ರುಕ್ಮಿಣಿ ಸೆಡ್ತಿ ಮಗಳು ವ ಕೃಷ್ಣಪ್ಪ ಹೆಗ್ಡೆ ಹೆಂಡ್ತಿ ಅಕ್ಕಮ್ಮ ಸೆಡ್ತಿ 1. ಹನೆಹಳ್ಳಿ ಗ್ರಾಮದ ನಡುಮನೆ ಮಂಜಯ್ಯ ಸೆಟ್ರ ಅಳಿಯ ಮಾಬ್ಲ ಸೆಟ್ಟಿ 1 ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—.

ಅರ್ಜಿದಾರಳ ಮಗ ವ ಎದ್ರಿರ ಸಹೋದರ ನಾರಾಯಣಸೆಟ್ಟಿ ಎಂಬವನು ಎಂಪಾಯರ್ ಆಫ್ ಇಂಡಿಯಾ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ ಇದ್ರಲ್ಲಿ ಪೊಲಿಸಿ ನಂಬ್ರ 236434ನೇಗೆ ಇನ್ಶ್ಯೂರ್ ಮಾಡಿದ ರೂ. 1000-0-0ನ್ನು ಕಂಪೆನಿಯಿಂದ ಪಡಕೊಳ್ಳುವರೆ ಅರ್ಜಿದಾರಳ ಹೆಸರಿಗೆ ವಾರಿಸು ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರಳು ದಾಖಿಲ್ಲು ಮಾಡಿದ ಮೇಲಿನ ಅರ್ಜಿಯು ತಾರೀಕು 3-3-50ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ಕಿಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಮೇಲಿನ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ಎಂಬ ಸಂಗ್ತಿ ಈ ಮೂಲಕ ತಿಳಿಯಪಡ್ಸಿರುತ್ತದೆ.

**N. S. Parameshwariah,**
Advocate for Petr.
Date 15-2-50 Coondapoor.

## Notificaton

Sealed tenders will be received by the undersigned upto 3 O P. M. on 28-2-50 for ordinary (kerosene) and petromax street lighting for the year 1950-51.

Any particulars as to the conditions of contract etc. may be obtained from the Municipal Office during office hours on working days

Municipal Office, UDIPI } Sd. **V. Balagangadharan,**
Dated: 10-2-1950. } Commissioner.


"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ಸಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೂಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಸುಲಭವಾಗಿರುವುದು.

ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ

ಹೆಚ್ಚಿನ ಮಾಹಿತಿಗೆ—ಡಾ| ಯಂ. ಸಿ. ಶಾಸ್ತ್ರೀ, ಯಲ್. ಐ
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಪಾಕಿಸ್ಟರು:—ಡಾ| ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.



— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಳಿಶೇಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

**ಪಥ್ಯ**:—ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು, ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ— ಕಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಂಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ...



ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ಕೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು, ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧಪಾವು ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ. ಗದಗ.

# ಮೂವತ್ತಮೂರನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಸೋಲಾಪುರ

## ಅದರ ಅಧ್ಯಕ್ಷ ಶ್ರೀ. ಎಂ. ಆರ್. ಶ್ರೀನಿವಾಸಮೂರ್ತಿಗಳ ಭಾಷಣದ ಭಾಗ.

ಈಗ ಭಾರತಖಂಡಕ್ಕೆ ಸಂಪೂರ್ಣ ಸ್ವಾತಂತ್ರ್ಯ ಬಂದಿದೆ. ಶ್ರೀಮಾನನಿಸ್ತು ಸ್ವಾತಂತ್ರವಾಗಿ ದ. ಭಾರತೀಯರಾದ ನಾವೆಲ್ಲ ವಿಶ್ವದ ಪ್ರಮುಖ ರಾಷ್ಟ್ರಂಗಗಳ ಮಧ್ಯೆ ತಲೆಯೆತ್ತಿಕೊಂಡು ನಿಲ್ಲುವ ಸ್ಥಿತಿಗೇರಿದ್ದೇವೆ. ಬಹುಕಾಲದಿಂದ ನಿರ್ಬಂಧನೆ ಹೊಂದಿದ ಜನಜೀವನ ಈಗ ವಿಶಾಲವಾಗಿದೆ, ವಿಶ್ವಸಂಪರ್ಕವನ್ನು ಪಡೆದಿದೆ. ಸ್ವಾತಂತ್ರ್ಯದ ಹುರುಪಿನ ವಾತಾವರಣ ಜನಜೀವನದ ಮೇಲೆ ಪ್ರಭಾವವನ್ನು ಬೀರುವುದು ಸ್ವಾಭಾವಿಕ. ಆ ಜನಜೀವನವನ್ನು ಚಿತ್ರಿಸುವ ಸಾಹಿತ್ಯಕರ್ಮದಲ್ಲಿ ಆ ಪ್ರಭಾವ ಕಂಡುಬರುವುದೂ ಸ್ವಾಭಾವಿಕ. ಸಾಹಿತ್ಯವೂ ವಾತಾವರಣವೂ ಪರಸ್ಪರವಾಗಿ ಕ್ರಿಯೆ ಪ್ರತಿಕ್ರಿಯೆಗಳಿಂದ ಪರಿಣಾಮ ಹೊಂದುವುದು ಒಂದು ಸ್ವತಸ್ಸಿದ್ಧ ಪ್ರಮಾಣ. ನಮ್ಮ ಕನ್ನಡಿಗರೊಬ್ಬರು ಈ ದಿನದಲ್ಲಿ ಕೇಂದ್ರ ಸರ್ಕಾರದ ವಾರ್ತಾ ಪ್ರಸರಣ ಶಾಖೆಯ ಮಂತ್ರಿಗಳು; ನಮ್ಮ ಕನ್ನಡಿಗರೊಬ್ಬರು ಈ ದಿನದಲ್ಲಿ ಭರತಖಂಡದ ಪ್ರಧಾನ ಸೇನಾನಾಯಕರು; ನಮ್ಮ ಕನ್ನಡಿಗರೊಬ್ಬರು ಈ ದಿನದಲ್ಲಿ ಭರತಖಂಡದ ಆಯವ್ಯಯಗಳ ಪ್ರಧಾನ ಸಂಶೋಧಕರು; ಕನ್ನಡಿಗರೊಬ್ಬರು ಕೇಂದ್ರ ಸರ್ಕಾರದ ದೇಶಪಾಲನೆಯ ಇಲಾಖೆಯ ಕಾರ್ಯದರ್ಶಿಗಳು; ನಮ್ಮ ಕನ್ನಡಿಗರು ಈ ದಿನದಲ್ಲಿ ವಿಶ್ವಸಂಸ್ಥೆಗಳಲ್ಲಿ ಭರತಖಂಡದ ನಿಯೋಗಿಗಳು. ರಾಷ್ಟ್ರವ್ಯವಹಾರಗಳಲ್ಲಿ ಕನ್ನಡಿಗರು ವಹಿಸಬಹುದಾದ ಪಾತ್ರ ಅಲ್ಪವೇನಲ್ಲ ಎಂಬುದನ್ನು ಮೇಲಿನ ಕೆಲವು ಉದಾಹರಣೆಗಳೇ ತೋರಿಸಿಕೊಡುತ್ತವೆ. ಹೀಗೆ ನಾನಾ ಕ್ಷೇತ್ರಗಳಲ್ಲಿ ಕಾರ್ಯನಿರ್ವಾಹ ಮಾಡುವವನ ಅನುಭವಜ್ಞಾನಗಳು ಮಹತ್ತರವಾದುವು, ವ್ಯಾಪಕವಾದುವು. ಅಂತಹ ಅನುಭವಜ್ಞಾನಗಳಿಂದ ಪ್ರತಿಭಾವಂತ ಸಾಹಿತ್ಯ, ಬಹುಮುಖವಾದ ನಾನಾರೂಪಗಳ ಸಾಹಿತ್ಯ ಮುಂದೆ ಸೃಷ್ಟಿಯಾಗುತ್ತದೆ. ಇಂದು ನಾವು ಸ್ವಾತಂತ್ರ್ಯಸೂರ್ಯೋದಯದ ಸ್ವರ್ಣಕಿರಣ ವೃಷ್ಟಿಯಾಗುತ್ತಿರುವುದನ್ನು ನೋಡುತ್ತಿರುವಂತೆಯೇ ಭಾವೀಸಾಹಿತ್ಯ ಸ್ವರ್ಣಯುಗದ ರುಕ್ಮರುಚಿಗಳನ್ನೂ ಮುಂದೆ ನೋಡುವವರಾಗುತ್ತೇವೆ. ನಮಗೆ ಒಳ್ಳೆಯ ಸಾಹಿತ್ಯ ಬೇಕು. ಪ್ರೌಢ ಪಾಠಶಾಲೆಗಳಲ್ಲಿಯೂ ವಿಶ್ವವಿದ್ಯಾನಿಲಯಗಳಲ್ಲಿಯೂ ಬೋಧಕರು ಈಗ ಸೃಷ್ಟಿಮಾಡುತ್ತಿರುವ ಸಾಹಿತ್ಯ ಸಾಲದು. ಆ ಬೋಧಕ ಕವಿಗಳನ್ನು ನಾನೇನೂ ಅಲ್ಲಗಳೆಯುವುದಿಲ್ಲ. ಆದರೆ ಬೋಧಕವೃಂದದವರು ರಚಿಸುವ ಸಾಹಿತ್ಯಕ್ಕಿಂತ ಜನತೆಯ ಮಧ್ಯದಲ್ಲಿ ಜನಿಸಿದ ಶುದ್ಧ ಕವಿಗಳ ಶುದ್ಧ ಸಾಹಿತ್ಯ ನಮಗೆ ಹೆಚ್ಚಾಗಿ ಬೇಕು; ರಾಜಕೀಯಾದಿ ವಿವಿಧ ಕ್ಷೇತ್ರಗಳಲ್ಲಿ ಪರಿಣತರಾದವರ ಜ್ಞಾನಸಾಹಿತ್ಯ ನಮಗೆ ಹೆಚ್ಚಾಗಿ ಬೇಕು. ಭರತಖಂಡದ ನಾನಾ ಪ್ರಾಂತ ಭಾಷಾಸಾಹಿತ್ಯಗಳನ್ನು ಮೀರಿಸುವ, ಪ್ರಪಂಚದ ಸಾಹಿತ್ಯಗಳಲ್ಲಿ ಗಣ್ಯ ಸ್ಥಾನವನ್ನು ಪಡೆಯಲರ್ಹವಾದ ಕನ್ನಡ ಸಾಹಿತ್ಯ ನಮಗೆ ಬೇಕು.

ನಮಗೆ ಈಗ ಜ್ಞಾನಸಾಹಿತ್ಯ ಹೆಚ್ಚು ಆವಶ್ಯಕವಾಗಿದೆ. ನಮ್ಮ ಭಾಷೆ ಉಳಿಯಬೇಕಾದರೆ ಬೆಳೆಯಬೇಕಾದರೆ, ನಮ್ಮ ಜನ ಬದುಕಬೇಕಾದರೆ ಬಾಳಬೇಕಾದರೆ ಕನ್ನಡದಲ್ಲಿ ಜ್ಞಾನ ಪ್ರಚಾರವಾಗಬೇಕು, ಕನ್ನಡದಲ್ಲಿ ಜ್ಞಾನಸಾಹಿತ್ಯ ಬೆಳೆಯಬೇಕು. ಈ ಸಾಹಿತ್ಯದ ದಾರಿದ್ರ್ಯವನ್ನು ತೊಲಗಲಾಡಿಸಬೇಕಾದುದು ನಮ್ಮ ಪದವೀಧರರ ಮುಖ್ಯ ಕರ್ತವ್ಯ. ಆದರೆ ಶಾಸ್ತ್ರಜ್ಞಾನವಿರುವ ಪದವೀಧರರಿಗೆ ಭಾಷಾಜ್ಞಾನ ತಕ್ಕಷ್ಟಿಲ್ಲ; ಭಾಷಾಜ್ಞಾನವಿರುವ ಪದವೀಧರರಿಗೆ ಶಾಸ್ತ್ರಜ್ಞಾನ ತಕ್ಕಷ್ಟಿಲ್ಲ. ನಮ್ಮ ಶಿಕ್ಷಣ ಪದ್ಧತಿಯಲ್ಲಿ ಕಂಡುಬರುತ್ತಿರುವ ಮುಖ್ಯವಾದ ದೋಷವೇ ಇದು. ಶುದ್ಧ ಸಾಹಿತ್ಯಾಭಿವೃದ್ಧಿಯ ದೃಷ್ಟಿಯಿಂದಲೂ ಜ್ಞಾನ ಸಾಹಿತ್ಯಾಭಿವೃದ್ಧಿಯ ದೃಷ್ಟಿಯಿಂದಲೂ ಈ ದೋಷ ನಿವಾರಣೆಯಾಗಬೇಕಾಗಿದೆ. ನಮ್ಮ ಶಿಕ್ಷಣ ಪದ್ಧತಿಯಲ್ಲಿ ಕನ್ನಡವೇ ಎಲ್ಲ ದರ್ಜೆಗಳಲ್ಲಿಯೂ ಪ್ರಥಮ ಭಾಷೆಯಾಗಿರುವಂತೆಯೂ ಕನ್ನಡವೇ ಬೋಧಕ ಭಾಷೆಯಾಗಿರುವಂತೆಯೂ ಸುಧಾರಣೆಯಾಗಬೇಕು. ಭರತಖಂಡದ ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿಯೂ ಏಕರೂಪದ ಶಿಕ್ಷಣವಿರಬೇಕೆಂದೂ ಈಗ ಇಂಗ್ಲಿಷ್ ಭಾಷೆಗಿರುವ ಸ್ಥಾನವನ್ನು ಹಿಂದೀ ಭಾಷೆಗೆ ಕೊಡಬೇಕೆಂದೂ ವಾದಿಸುವವರು ಇಲ್ಲದೇ ಹೋಗಿಲ್ಲ. ಆದ್ದರಿಂದ ಕನ್ನಡಕ್ಕೆ ಕನ್ನಡ ನಾಡಿನ ವಿಶ್ವವಿದ್ಯಾನಿಲಯಗಳಲ್ಲಿ ಯಾವ ಸ್ಥಾನ ದೊರೆಯಬಹುದೆಂಬುದನ್ನು ಈಗಲೇ ನಾವು ಹೇಳುವ ಸ್ಥಿತಿಯಲ್ಲಿಲ್ಲ. ರಾಜಕೀಯ ಮುಖಂಡರು ಕೊಡುವ ಭರವಸೆಗಳೂ ಭಾಷೆಗಳೂ ನಮ್ಮ ದೌರ್ಭಾಗ್ಯಕ್ಕೆ ಜಲ ಲಿಪಿಗಳಾಗಿವೆ. ನಾಳೆ ನಾವು ರಾಷ್ಟ್ರದ್ರೋಹಿಗಳೆಂದೂ ಐಕಮತ್ಯ ವಿನಾಶಕರೆಂದೂ ಅವಿವೇಕಿಗಳೆಂದೂ ಗಣ್ಯರಾಗುತ್ತೇವೆ. ಆದರೆ ಕನ್ನಡದ ಭದ್ರತೆಗೆ ಕುಂದುಕ ತರುವ ಯಾವ ಸಂಚನ್ನೇ ಆಗಲಿ, ಯಾವ ನಿರೂಪವನ್ನೇ ಆಗಲಿ, ನಾವು ಸರ್ವಾತ್ಮನಾ ಸಂಪೂರ್ಣ ಶಕ್ತಿಯಿಂದ ಪ್ರತಿಭಟಿಸಬೇಕೆಂದು ನಾನು ಹೇಳುತ್ತೇನೆ. ತಿಮಿತಿಮಿಂಗಿಲ ನ್ಯಾಯವೆನ್ನುವುದು ಜಲಚರಗಳಲ್ಲಿ ಮಾತ್ರವಲ್ಲ, ಭೂಚರರಲ್ಲಿಯೂ ಕಂಡುಬರುತ್ತದೆ. ಸಾರ್ವಭೌಮಾಧಿಕಾರ ದಾಹವೆನ್ನುವುದು ರಾಜಕೀಯ ಕ್ಷೇತ್ರದಲ್ಲಿ ಮಾತ್ರವಲ್ಲ, ಭಾಷಾ ಕ್ಷೇತ್ರದಲ್ಲಿಯೂ ಕಂಡುಬರುತ್ತದೆ. ಆದ್ದರಿಂದ ಎಚ್ಚರಿಕೆ! ಎಚ್ಚರಿಕೆ! ಎಚ್ಚರಿಕೆ! ಎಂದು ಒತ್ತಿ ಒತ್ತಿ ಹೇಳುತ್ತೇನೆ. ಕನ್ನಡ ನಮಗೆ ಆಡಳಿತ ಭಾಷೆಯಾಗಬೇಕು; ಕನ್ನಡ ನಮ್ಮ ಶಾಸನ ಸಭೆಗಳ ಭಾಷೆಯಾಗಬೇಕು; ಕನ್ನಡ ನಮ್ಮ ನ್ಯಾಯಸ್ಥಾನಗಳ ವ್ಯವಹಾರ ಭಾಷೆಯಾಗಬೇಕು. ಆ ನೆಲೆಯಿಂದ ನಾವು ಒಂದಂಗುಲವೂ ಹಿಮ್ಮೆಟ್ಟಕೂಡದು.

ನಮ್ಮ ಪ್ರಾಂತ್ಯದಲ್ಲಂತೂ ಪೌರಸಭಾ ಸದಸ್ಯರಿಂದ ಹಿಡಿದು ಶಾಸನ ಸಭಾಸದಸ್ಯರವರೆಗೆ, ಕಡೆಗೆ ಮಂತ್ರಿ ಸಂಪುಟದ ಸದಸ್ಯರವರೆಗೆ ಕನ್ನಡ ಸಾಹಿತ್ಯದ ಪರಿಚಯವಿರುವವರೂ, ಕನ್ನಡ ಸಾಹಿತ್ಯದಲ್ಲಿ ಅಭಿರುಚಿ ಇರುವವರೂ, ಕನ್ನಡ ಸಾಹಿತ್ಯಾಭಿವೃದ್ಧಿಯಲ್ಲಿ ಆಸಕ್ತಿಯುಳ್ಳವರೂ ತೀರ ವಿರಳ. ಒಂದು ಸಾಹಿತ್ಯ ವಿಚಾರದಲ್ಲಿ, ಒಬ್ಬ ಕನ್ನಡ ಕವಿಯ ವಿಚಾರದಲ್ಲಿ, ಉಪನ್ಯಾಸಕರಾಗಿಯೋ ಅಧ್ಯಕ್ಷರಾಗಿಯೋ ಒಂದು ಉಪಯುಕ್ತ ಭಾಷಣವನ್ನು ಮಾಡಬಲ್ಲ ರಾಜಕೀಯಜ್ಞರನ್ನು ಹಗಲಿನಲ್ಲಿ ಪಂಜು ಹಿಡಿದುಕೊಂಡು ಹುಡುಕಬೇಕಾಗಿದೆ. ಸತ್ಯ, ಅಹಿಂಸೆ, ಗಾಂಧೀ ತತ್ತ್ವಗಳು, ಎಂದು ಮುಂತಾಗಿ ಪಲ್ಲವಿಗಳನ್ನು ಹೇಳುತ್ತ ಗಾಂಧಿ ಚೌಕದಲ್ಲಿಯೋ ಸಂತೆಮಾಳದಲ್ಲಿಯೋ ಆವೇಶ ಭಾಷಣಗಳನ್ನು ಮಾಡುವಷ್ಟು ಕನ್ನಡದ ತಿಳಿವಳಿಕೆ ಆ ದೇಶೋದ್ಧಾರಕರಿಗಿದೆ. ಕನ್ನಡ ಸಾಹಿತ್ಯದಲ್ಲಿ ಇಂಥ ಪುಂತಕಾಯಿಗಳಾಗಿರುವವರನ್ನು ತಮ್ಮ ಪ್ರತಿನಿಧಿಗಳೆಂದು ಕನ್ನಡ ಜನ ಆರಿಸಿ ವರಿಸಿ ಸಭೆಗಳಿಗೆ ಕಳಿಸಿಕೊಡುತ್ತಿದ್ದಾರೆ! ಅವರಿಂದ ಕನ್ನಡ ಉದ್ಧಾರವಾಗುತ್ತದೆಯೇ? ಉದ್ಧಾರವಾಗುವುದೆಂದು ನಿರೀಕ್ಷಿಸುವ ನಮ್ಮಂತಹ ಪೆದ್ದರು ಬೇರೆ ಎಲ್ಲಿಯೂ ದೊರೆಯಲಾರರು. ಮುಂದೆ ಯಾವ ರಾಜಕೀಯ ಪಟುಗಳೇ ಆಗಲಿ, ನಿಮ್ಮ ಓಟುಗಳಿಗಾಗಿ ನಿಮ್ಮ ಬಳಿಗೆ ಬಂದಾಗ ಕನ್ನಡ ಸಾಹಿತ್ಯವೇನಾದರೂ ತಿಳಿದಿದೆಯೇ ಎಂಬುದನ್ನು ಮೊದಲು ಪರೀಕ್ಷೆಮಾಡಿ; ಕನ್ನಡ ಪುಸ್ತಕಗಳ ಭಂಡಾರವನ್ನೇನಾದರೂ ಮನೆಯಲ್ಲಿಟ್ಟುಕೊಂಡಿದ್ದಾರೆಯೇ ಎಂದು ಕೇಳಿ ತಿಳಿದುಕೊಳ್ಳಿ. ಇಬ್ಬರು ಕನ್ನಡ ಕವಿಗಳ ವಿಚಾರವೂ ಅವರಿಗೆ ತಿಳಿದಿಲ್ಲದಿದ್ದರೆ, ಇನ್ನೂರು ಪುಸ್ತಕಗಳ ಭಂಡಾರವಾದರೂ ಅವರ ಮನೆಯಲ್ಲಿಲ್ಲದಿದ್ದರೆ ಅವರಿಗೆ ಬಹಿಷ್ಕಾರಹಾಕಿ; ಹತ್ತಿರ ಸೇರಿಸಬೇಡಿ.

ದೇಶಸೇವೆಗಾಗಿ ಟೊಂಕಕಟ್ಟಿ ನಿಂತಿರುತ್ತೇವೆಂದೂ ಜನತೆಯ ಸೇವೆಗಾಗಿ ಆಯುಸ್ಸನ್ನೇ ಮುಡಿಪಾಗಿಟ್ಟಿರುತ್ತೇವೆಂದೂ ಹೇಳಿಕೊಳ್ಳುವ ಮಾನ್ಯ ರಾಜಕೀಯಜ್ಞರಲ್ಲಿ ನನ್ನದೊಂದು ಅರಿಕೆ; ಆಡಳಿತ ನಡೆಸುವ ಮಂತ್ರಿಗಳಲ್ಲಿ ನನ್ನದೊಂದು ಅರಿಕೆ; ಆಡಳಿತದ ಯಂತ್ರದಲ್ಲಿ ಜವಾಬ್ದಾರಿ ವಹಿಸಿ ಕಾರ್ಯನಿರ್ವಾಹ ಮಾಡುತ್ತಿರುವ ಎಲ್ಲ ಇಲಾಖಾಧಿಕಾರಿಗಳಲ್ಲಿ ನನ್ನದೊಂದು ಅರಿಕೆ: ಜನಸಾಮಾನ್ಯರೊಡನೆ ನಿತ್ಯವೂ ವ್ಯವಹರಿಸಬೇಕಾದ ನಿಮಗೆ ಸಾಹಿತ್ಯದಿಂದ ಒದಗುವ ಒಂದು ಸಂಸ್ಕಾರವಿಲ್ಲದೆ ಮನಸ್ಸು ಜಡ್ಡುಹಿಡಿದು ಹೋದರೆ ದೇಶಕ್ಕೆ ನಷ್ಟವಲ್ಲವೇ? ನಮ್ಮ ಸಾರಸ್ವತ ಸಂಪತ್ತು ಏನು? ನಮ್ಮ ಸಂಸ್ಕೃತಿಯ ಸಂಪತ್ತು ಏನು? ಜನತಾಭಿಪ್ರಾಯ ಸಾಹಿತ್ಯದಲ್ಲಿ ಹೇಗೆ ರೂಪಗೊಳ್ಳುತ್ತಿದೆ? ಎಂಬುದನ್ನೆಲ್ಲ ನೀವೂ ಚೆನ್ನಾಗಿ ತಿಳಿದುಕೊಂಡು ಜನರಲ್ಲಿಯೂ ಪ್ರಚಾರ ಮಾಡುತ್ತ ಬರುವುದು ನಿಮ್ಮ ಕರ್ತವ್ಯವಲ್ಲವೇ? ಅದು ಜನತೆಯ ಸೇವೆಯಲ್ಲವೇ? ಪ್ರಾಚೀನ ಕವಿಗಳ ಮತ್ತು ಆಧುನಿಕ ಕವಿಗಳ ಸಾರವತ್ತಾದ ಸೂಕ್ತಿಗಳನ್ನು ಸಮಯೋಚಿತವಾಗಿಬಳಸುವ ಶಕ್ತಿ ನಿಮಗಿರುವುದು ಒಳ್ಳೆಯದಲ್ಲವೇ? ದಿಗ್ವಿಜಯಕ್ಕಾಗಿ ಸೈನ್ಯಸಮೇತನಾಗಿ ಹೊಂಟ ಅಲೆಕ್ಸಾಂಡರ್ ಮಹಾಶಯನು ಇಲಿಯಡ್ ಮಹಾಕಾವ್ಯದ ಪ್ರತಿಯೊಂದನ್ನು ತಲೆದಿಂಬಿನ ಕೆಳಗೆ ಇಟ್ಟುಕೊಂಡೇ ಇರುತ್ತಿದ್ದನಂತೆ. ಯುದ್ಧ ಭೂಮಿಯಲ್ಲಿದ್ದರೂ ಅವಕಾಶಮಾಡಿಕೊಂಡು ಆ ಮಹಾಕಾವ್ಯವನ್ನು ಆಗಾಗ ಓದುತ್ತಿದ್ದನಂತೆ! ಅವನು ಸಾಧಿಸಿದ್ದಕ್ಕಿಂತ ಹೆಚ್ಚಾಗಿ ನೀವೇನು ಸಾಧಿಸಬಲ್ಲಿರಿ? ಆದ್ದರಿಂದ ಕನ್ನಡ ಸಾಹಿತ್ಯದಲ್ಲಿ ವಿಶ್ವಾಸವಿಡಿ; ನಿಮ್ಮ ನಿತ್ಯ ಕಾರ್ಯಕ್ರಮಗಳ, ಚಟುವಟಿಕೆಗಳ ಮಧ್ಯದಲ್ಲಿ ಸಾಹಿತ್ಯವ್ಯಾಸಂಗಕ್ಕೂ ಸ್ವಲ್ಪ ಕಾಲವನ್ನು ವಿನಿಯೋಗಿಸಿ: ಸಾಹಿತ್ಯ ಗೋಷ್ಠಿಗಳಲ್ಲಿ ಸಾಹಿತ್ಯೋಪನ್ಯಾಸಗ... ಆಗಾಗ ಭಾಗವಹಿಸುತ್ತಾ ಇರಿ; ನಿಮ್ಮ ನಿ... ಮನೆಗಳಲ್ಲಿ ಮತ್ತು ನಿಮ್ಮ ನಿಮ್ಮ ಕಚೇ... ಳಲ್ಲಿ ಕನ್ನಡ ಗ್ರಂಥಗಳ ಭಂಡಾರವನ್ನು... ಟ್ಟುಕೊಳ್ಳಿ. ಪಾಠಶಾಲೆಗಳಲ್ಲಿ ಪುಸ್ತಕ ಭಂ... ಡಾರಗಳಿರುವಂತೆ ಎಲ್ಲ ಕಚೇರಿಗಳಲ್ಲಿ... ಅವು ಇರಬೇಕು; ಪ್ರತಿಯೊಂದು ಪು... ಭಂಡಾರಕ್ಕೂ ವರ್ಷಕ್ಕೆ ಕನಿಷ್ಠಪಕ್ಷ ಐವ... ರೂಪಾಯಿಗಳ ಬೆಲೆಯ ಪುಸ್ತಕಗಳ... ಕೊಂಡು ಸೇರಿಸಿ ಬೆಳಸುತ್ತ ಹೋಗಿ.

ಹೀಗೆ ನಮ್ಮ ಪ್ರಾಂತ ಭಾಷೆಯಾದ ... ದಕ್ಕೆ ಪ್ರಾಶಸ್ತ್ಯವನ್ನು ಕೊಟ್ಟು ಅದನ್ನು... ಳಸಿಕೊಳ್ಳುವ ಪ್ರಯತ್ನಗಳನ್ನು ನಾವು... ಗೊಳ್ಳುವುದಾದರೂ ನೆರೆಹೊರೆಯವರೊ... ಸೌಹಾರ್ದದಿಂದಿರಬೇಕೆಂಬುದೇ ನಮ್ಮ... ಆಶೆ. ನಮಗೆ ಅವರೊಡನೆ ಕಾದಾಡಬೇ... ಬ ಹಟವಿಲ್ಲ; ಅವರ ಭಾಷೆಗಳನ್ನು ಅಭ... ಮಾಡಬಾರದೆಂಬ ಶಪಥವಿಲ್ಲ. ಮುಖ್ಯ... ನಾವು ಗಮನಿಸಬೇಕಾದದ್ದು: ಭಾರತೀ... ಲ್ಲ ಒಂದು ಜನ, ಒಂದು ಜನಾಂಗ; ಭಾ... ಭೇದಗಳಿದ್ದರೂ ಸಂಸ್ಕೃತಿ ಭೇದಗಳೇ... ಇಲ್ಲ; ಭಾಷಾವಾರು ಪ್ರಾಂತಗಳು ಏರ್ಪ... ವುದೆಂದರೆ ಪಾಕಿಸ್ತಾನ್ ರಾಷ್ಟ್ರಗಳು ... ಟ್ಟವೆಂದು ಅರ್ಥವಲ್ಲ. ಆಡಳಿತ ಸೌಕ... ಕ್ಕಾಗಿ, ಆಯಾ ಅಂಗಗಳ ದತ್ತ ಸ್ವಾತಂ... ದಲ್ಲಿ ಪರಿಪುಷ್ಟಿ ಪಡೆಯುವುದಕ್ಕಾಗಿ ... ರಚನೆಯಾಗತಕ್ಕವು. ಈಗಲೂ ವ್ಯಾಪಾ... ದಿ ವ್ಯವಹಾರಗಳಿಗೆ ಕನ್ನಡಿಗರೂ ನೆರೆ... ನಾಡುಗಳವರೂ ಕಲೆಯುತ್ತಿದ್ದಾರೆ; ... ಹಾದಿ ಬಾಂಧವ್ಯಗಳನ್ನು ಪರಸ್ಪರವಾಗಿ ... ಸುತ್ತಿದ್ದಾರೆ. ಮುಂದೆಯೂ ಇಂತಹ ಬಾ... ವ್ಯಗಳಿಗೆ ಭಾಷೆ ಅಡ್ಡಿಯಾಗಬಾರದು. ... ರಿಂದಲೇ ನಾವು ಕೂಪಕೂರ್ಮಗಳಂತಾ... ಇತರ ಭಾಷಾ ಸಾಹಿತ್ಯಗಳ ಪರಿಚಯವ... ಧಾರಾಳವಾಗಿ ಮಾಡಿಕೊಳ್ಳಬೇಕು; ನ... ಭಾಷಾ ಸಾಹಿತ್ಯಗಳ ಪರಿಚಯವನ್ನು ನೆರೆ... ವರಿಗೂ ಮಾಡಿಸಬೇಕು. ಜನಸಾಮಾ... ಮಟ್ಟದಲ್ಲಿ ಇದು ಕೈಗೂಡುವಂತಾಗಬೇ... ದು ನಾನು ಹೇಳುತ್ತೇನೆ. ಹಿಂದಿ, ಬಂ... ಳಿ, ಮರಾಟಿ, ತೆಲುಗು ಮ... ತಮಿಳುಗಳಿಂದ ಭಾಷಾಂತರ... ಕನ್ನಡಕ್ಕೆ ಗ್ರಂಥಪ್ರವಾಹಗಳು ಹರಿದು... ದಿವೆ, ಹರಿದು ಬರುತ್ತಲೂ ಇವೆ. ಈ ಪ್ರ... ಹಗಳಿಗೆ ಸ್ವಾಗತವುಂಟು. ಆದರೆ ಕನ್ನಡದಿ... ಅನ್ಯ ಭಾಷೆಗಳಿಗೂ ಭಾಷಾಂತರವಾಗಿ ಪ... ಮುಖವಾಗಿ ಪ್ರವಾಹಗಳು ಹೊರಡುತ್ತಿ... ವುದು ಮಾತ್ರ ಕಂಡುಬರುತ್ತಿಲ್ಲ. ಆಮದಿ... ತ ರಫ್ತು ಹೆಚ್ಚಾದರೆ ದೇಶದ ಸಂಪತ್ತು ... ಯುವುದೆಂಬ ಆರ್ಥಿಕ ನೀತಿಯನ್ನು ಜ್ಞಾ... ಕದಲ್ಲಿಟ್ಟುಕೊಳ್ಳೋಣ. ನಮ್ಮ ಕನ್ನಡ ... ಥಗಳು ಹೆಚ್ಚು ಸಂಖ್ಯೆಯಲ್ಲಿ ಹೊರಗೆ ... ಕೆಗೆ ಬಂದಾಗ ಮಾತ್ರ ಕನ್ನಡ ಗಣ್ಯ... ಭಾಷೆ, ಕನ್ನಡ ಸಾಹಿತ್ಯ ಗಣ್ಯವಾದ ಸಾಹಿ... ಎಂದು ಮರ್ಯಾದೆ ದೊರೆತೀತು. ಕ... ನಾಡು ಪ್ರತಿವರ್ಷವೂ ಆಂಧ್ರಪ್ರಾಂತ, ... ಳುನಾಡು, ಮಹಾರಾಷ್ಟ್ರ ಮೊದಲ... ಪ್ರಾಂತಗಳ ಪಟ್ಟಣಗಳಿಗೆ ನಮ್ಮ ಸಾಹಿತಿ... ನ್ನೂ ವಿದ್ವಜ್ಜನರನ್ನೂ ಸಾಹಿತ್ಯ ನಿಯೋ... ಳನ್ನಾಗಿ ಕಳಿಸಿಕೊಟ್ಟು ಆಯಾ ಪ್ರಾಂತ... ರಿಗೆ ಆಯಾ ಪ್ರಾಂತ ಭಾಷೆಯಲ್ಲಿಯೇ ... ಮ್ಮ ಸಾಹಿತ್ಯದ ವಿಷಯದಲ್ಲಿ ಭಾಷಣ... ನ್ನೇರ್ಪಡಿಸಬೇಕು. ಹಾಗೆಯೇ ನೆರೆ... ಪ್ರಾಂತಗಳಿಂದಲೂ ನಿಯೋಗಗಳನ್ನು ... ಡ ನಾಡಿಗೆ ಬರಮಾಡಿಕೊಳ್ಳಬೇಕು. ಈ ... ಲಸವನ್ನು ನಮ್ಮ ವಿಶ್ವವಿದ್ಯಾನಿಲಯಗ... ಕನ್ನಡ ಸಾಹಿತ್ಯ ಪರಿಷತ್ತೂ ಕರ್ನಾಟಕ ವಿದ್ಯಾವರ್ಧಕ ಸಂಘವೂ ಪರಸ್ಪರ ವಿಚಾರ ವಿನಿಮಯ ಮಾಡಿಕೊಂಡು ಒಂದು ಗೊತ್ತಾ... ಕಾರ್ಯಕ್ರಮದಂತೆ ನೆರವೇರಿಸುವು... ಬೇಕು.


ಶರೀರದಲ್ಲಿಯ ಅಸಹ್ಯ ಉಷ್ಣತೆಯನ್ನು ಇದರಿಂದಲೇ ತೆಗೆದು ಹಾಕಿರಿ

PEARL Kadha PURE HERBAL TONIC

ತಲೆಕಾದಾ ಶರೀರದ ಒಳಗಿನ ಮತ್ತು ಹೊರಗಿನ ಉರುವನ್ನು ತೆಗೆದು ಹಾಕಿ ಶಕ್ತಿಯನ್ನು ತಂಪಾಗಿಡುವದು ಅಪಚನ ಅಜೀರ್ಣವನ್ನು ಸರಿಪಡಿಸುವದು, ಶಾರೀರಿಕ ಮತ್ತು ಮಾನಸಿಕ ಶಕ್ತಿಯನ್ನು ಬೆಳಸುವದು. ಧಾತು ಸ್ಥಾನದಲ್ಲಿಯ ಉಷ್ಣತೆಯನ್ನು ಹೋಗಲಾಡಿಸಿ ಪುಷ್ಟಿಕರ ಮಾಡುವದು

ನಿಮ್ಮ ಹತ್ತಿರದ ಕೆಮಿಸ್ಟರ ಕಡೆಯಿಂದ ಇಂದೇ ಒಂದು ಬಾಟಲಿಯನ್ನು ತಂದು ಸೇವಿಸಲು ಪ್ರಾರಂಭಿಸಿರಿ

ಪರ್ಲ ಎಂಡ್ ಕಂಪನಿ
ಮುಂಬಯಿ ೨.



Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya.

ಸಾಮಾನ್ಯವಾಗಿ ಎಲ್ಲ ಕರ್ಣಾಟಕ ಸಂಘಗಳೂ ವ್ಯವಸ್ಥಿತ ಕ್ರಮದಲ್ಲಿ ಮಾಡಬೇಕಾದ ಕಾರ್ಯಗಳನ್ನು ಮುಂದೆ ತಿಳಿಸಿದೆ:— [i] ವಾರದಲ್ಲಿ ಒಂದು ಗೊತ್ತಾದ ದಿನ-ಶನಿವಾರ ಅಥವಾ ಭಾನುವಾರ-ಸಾಯಂಕಾಲ ಸಭೆ ಸೇರುವುದು. ಕಾವ್ಯವಾಚನ, ಉಪನ್ಯಾಸ, ಚರ್ಚೆ-ಇವುಗಳನ್ನು ನಡೆಸುವುದು. ಹೀಗೆ ತಪ್ಪದೆ ಪ್ರತಿ ವಾರದಲ್ಲೂ ನಡೆಸಬೇಕು. [ii] ಪತ್ರಿಕೆಗಳಲ್ಲಿ ಬಂದಿರುವ ಸ್ವದೇಶದ ಮತ್ತು ಪರದೇಶಗಳ ಸುದ್ದಿಗಳನ್ನು ಕ್ರೋಢೀಕರಿಸಿ ಜನರಿಗೆ ತಿಳಿಸುವುದು. [iii] ಗಮಕ ಶಿಕ್ಷಣ, ನಾಟಕ ಪ್ರದರ್ಶನ, ಯಕ್ಷಗಾನ ಮತ್ತು ಲಾವಣಿಗಳ ಹಾಡುಗಾರಿಕೆ, ಕೀರ್ತನೆಗಳ ಹಾಡುಗಾರಿಕೆ-ಇವನ್ನು ಏರ್ಪಡಿಸುವುದು. [iv] ನಾಡ ಹಬ್ಬವನ್ನೂ ಪೂರ್ವಕವಿಗಳಸ್ಮಾರಕೋತ್ಸವಗಳನ್ನೂ ಆಚರಿಸುವುದು. [v] ಹಿಂದಿನ ಗ್ರಂಥಗಳನ್ನು ಕುರಿತು ಮತ್ತು ಈಗಿನ ಗ್ರಂಥಗಳನ್ನು ಕುರಿತು ವ್ಯಾಸಂಗ ಗೋಷ್ಠಿಗಳನ್ನು ನಡೆಸುವುದು. ಸಾಹಿತ್ಯದ ಬಗ್ಗೆ ಮೇಲ್ಪಟ್ಟದಲ್ಲಿ ಚರ್ಚೆಗಳನ್ನು ಮಾಡಿ ಜನಾಭಿಪ್ರಾಯವನ್ನು ರೂಢಿಸುವುದು, ರೂಪಿಸುವುದು. [vi] ಗ್ರಾಮಗಳಿಗೆ ಗಮಕಿಗಳನ್ನೂ ಉಪನ್ಯಾಸಕರನ್ನೂ ಕಳಿಸಿಕೊಟ್ಟು ಜ್ಞಾನಪ್ರಚಾರ ಮಾಡುವುದು. [vii] ವಿದ್ಯಾರ್ಥಿಗಳಿಗೂ ವಿದ್ಯಾರ್ಥಿನಿಯರಿಗೂ ದರ್ಜೆಗಳಿಗೆ ತಕ್ಕಂತೆ ಭಾಷಣ ಸ್ಪರ್ಧೆ, ಪ್ರಬಂಧ ಸ್ಪರ್ಧೆ ಮೊದಲಾದವನ್ನು ಏರ್ಪಡಿಸಿ ಬಹುಮಾನಗಳನ್ನು ಕೊಡುವುದು. [viii] ವಾಚನಾಲಯಗಳನ್ನು ಪುಸ್ತಕ ಭಂಡಾರಗಳನ್ನೂ ನಡೆಸುವುದು. [ix] ವಯಸ್ಕರ ಶಿಕ್ಷಣದ ತರಗತಿಗಳನ್ನೂ ತೆರೆಯುವುದು. [v] ಸ್ಥಳದ ಸಾಹಿತಿಗಳಿಗೆ ಸಹಾಯ ಮತ್ತು ಪ್ರೋತ್ಸಾಹಗಳನ್ನು ಕೊಡುವುದು.

ನಮ್ಮಲ್ಲಿ ಒಳ್ಳೆಯ ಸಾಹಿತ್ಯ-ಮುಖ್ಯವಾಗಿ ಜ್ಞಾನಸಾಹಿತ್ಯ-ಬೆಳೆಯಬೇಕಾದರೆ ನಾಡಿನಲ್ಲಿ ಗ್ರಂಥ ಪ್ರಕಾಶಕರು ಹೆಚ್ಚಾಗಬೇಕು; ಗ್ರಂಥಕರ್ತರಿಗೆ ನ್ಯಾಯವಾದ ಪ್ರಮಾಣದಲ್ಲಿ ಸಂಭಾವನೆ ದೊರೆಯಬೇಕು. ಗ್ರಂಥಗಳು ಮಾರಾಟವಾಗದಿದ್ದರೆ ಲೇಖಕರಿಗೂ ಪ್ರಕಾಶಕರಿಗೂ ಉತ್ತೇಜನವಿರುವುದಿಲ್ಲ. ನಮ್ಮ ನಾಡಿನಲ್ಲಿ ಅಕ್ಷರಸ್ಥರ ಸಂಖ್ಯೆ ಬಹಳ ಕಡಿಮೆ, ಅವರಲ್ಲಿ ಸಾಹಿತ್ಯಾಭಿರುಚಿಯುಳ್ಳವರು ಇನ್ನೂ ಕಡಮೆ; ಸಾಹಿತ್ಯಾಭಿರುಚಿಯಿದ್ದರೂ ಗ್ರಂಥಗಳನ್ನು ಕೊಂಡು ಓದುವವರಾಗಲಿ, ಪುಸ್ತಕ ಭಂಡಾರಗಳನ್ನು ಮನೆಗಳಲ್ಲಿ ಇಟ್ಟುಕೊಳ್ಳುವವರಾಗಲಿ ಹೆಚ್ಚು ಮಂದಿ ಇಲ್ಲ. ಪ್ರಸಿದ್ಧ ಲೇಖಕರ ಕೃತಿಗಳೇ ಪಠ್ಯಪುಸ್ತಕವಾದ ಹೊರತು ಬೇಗ ಮಾರಾಟವಾಗುವುದಿಲ್ಲ. ಸಾಮಾನ್ಯರ ವಿಚಾರವನ್ನು ಹೇಳಬೇಕಾದ್ದೇನು! ಪ್ರಕಾಶಕರಿಗೂ ತೊಂದರೆಗಳು ಹಲವಾರು ಇವೆ: ಗ್ರಂಥಕರ್ತರಾದರೋ ತಾವು ದಿವ್ಯವಾದ ಗ್ರಂಥವನ್ನು ಬರೆದು ಕನ್ನಡ ಲೋಕವನ್ನೇ ಉದ್ಧಾರ ಮಾಡಿರುವುದಾಗಿ ಸ್ವಾಭಿಮಾನ ಮತ್ತು ಹೆಮ್ಮೆ. ತಮ್ಮ ದಿವ್ಯಕೃತಿಯಿಂದ ಪ್ರಕಾಶಕರು ಅಪಾರವಾದ ಲಾಭಮಾಡಿಕೊಳ್ಳುತ್ತಾರೆಂದೂ ತಮಗೆ ಅತ್ಯಲ್ಪ ಪ್ರಮಾಣದ ಸಂಭಾವನೆಯನ್ನು ಆರು ತಿಂಗಳಿಗೊಮ್ಮೆ ಕೈಗೆ ಹತ್ತದಂತೆ ಬಾಯಿಗೆ ಬಂದಂತೆ ಕೊಡುತ್ತಾರೆಂದೂ ಗೊಣಗಾಟ! ರೇಗಾಟ! ಇಂತಹ ಅತಿ ಕಾರ್ಪಣ್ಯದ ಅತಿ ನಿಷ್ಪಂದ ಪ್ರಪಂಚದಲ್ಲಿ ಗ್ರಂಥಕರ್ತರೂ ಪ್ರಕಾಶಕರೂ ಒದ್ದಾಡುತ್ತಿದ್ದಾರೆ. ನೂರು ನೂರೈವತ್ತು ಪುಟಗಳ ಸಣಕಲು ಬಡಕಲು ಪುಸ್ತಕಗಳು ಪ್ರಕಟವಾಗಬೇಕಾದರೆ ಇಷ್ಟೊಂದು ಪೇಚಾಟವಿರುವಲ್ಲಿ, ಐನೂರು ಸಾವಿರ ಪುಟಗಳ ವ್ಯಾಪ್ತಿ ತುಂಬಿಕೊಂಡ ದಪ್ಪರಟ್ಟಿನ ಗ್ರಂಥಗಳು ಹೊರಬೀಳುವುದು ಹೇಗೆ? ಅವುಗಳಿಗೆ ಗ್ರಾಹಕರೆಲ್ಲಿ? ಪ್ರಕಾಶಕರೆಲ್ಲಿ? ಜ್ಞಾನ ಸಾಹಿತ್ಯ ಕ್ಷೇತ್ರದಲ್ಲಿ ನಡೆಯಬೇಕಾದ ಕೆಲಸ ಅಪಾರವಾಗಿದೆ. ಶುದ್ಧ ಸಾಹಿತ್ಯ ಕ್ಷೇತ್ರದಲ್ಲಿಯೂ ನಾವು ಈಗೀಗ ಅಂಬೆಗಾಲಿಡುತ್ತಿದ್ದೇವೆ. ಒಬ್ಬೊಬ್ಬ ಕವಿಯ ಸಂಪೂರ್ಣ ಲೇಖನಗಳನ್ನು ಒಂದು ಸಂಪುಟದಲ್ಲಿಯೋ ಹಲವು ಸಂಪುಟಗಳಲ್ಲಿಯೋ ಸುಂದರ ಚಿತ್ರಗಳನ್ನು ಸೇರಿಸಿ ಪ್ರಕಟಿಸಬೇಕಾದರೆ ನಮಗೆ ದ್ರವ್ಯವೆಲ್ಲಿ? ಪ್ರಕಾಶಕರೆಲ್ಲಿ? ನಮ್ಮಲ್ಲಿ ಲಕ್ಷಾಂತರ ರೂಪಾಯಿಗಳ ಬಂಡವಾಳಹಾಕಿ ವ್ಯಾಪಾರ ನಡೆಸುವ ಪ್ರಕಾಶಕರೂ ಸಂಸ್ಥೆಗಳೂ ನೂರಾರು ಬೇಕು. ಸಾವಿರಾರು ಪುಟಗಳ ಗ್ರಂಥಗಳನ್ನು ಅಂದವಾದ ವರ್ಣರಂಜಿತ ಚಿತ್ರಗಳಿಂದ ತುಂಬಿ ಲೀಲಾಜಾಲವಾಗಿ ಪ್ರಕಾಶಪಡಿಸುವ, ಸಾವಿರಾರು ರೂಪಾಯಿಗಳನ್ನು ಮುಕ್ತಹಸ್ತದಿಂದ ಗ್ರಂಥಕರ್ತರಿಗೆ ಸಂಭಾವನೆಯಾಗಿ ಕೊಡಬಲ್ಲ ಉದಾರ ಶ್ರೀಮಂತ ಪ್ರಕಾಶಕರು ಬೇಕಾಗಿದ್ದಾರೆ. ಕನ್ನಡಿಗರು ಬಂಡವಾಳಗಳನ್ನು ಶೇಖರಿಸಿ ಸಹಕಾರ ಸಂಘಗಳಂತೆ, ಕೂಡು ಬಂಡವಾಳ ಸಂಸ್ಥೆಗಳಂತೆ, ಕಂಪೆನಿಗಳಂತೆ ಪುಸ್ತಕದ ಮಳಿಗೆಗಳನ್ನು ತೆರೆಯಬೇಕಾಗಿದೆ.

ನಮ್ಮ ಕನ್ನಡ ನಾಡಿನ ವೀರಯುವಕರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಯುವಕಪರಿಷತ್ತುಗಳನ್ನೂ ಯುವಕಸಂಘಗಳನ್ನೂ ಮಾಡಿಕೊಂಡು ಪ್ರಾಯಸ್ಥರಾಗಿ ಹುರುಪುಳ್ಳವರಾಗಿ ದೇಶಸೇವಾದೀಕ್ಷಿತರಾಗಿ ಧೈರ್ಯೋತ್ಸಾಹಪೂರ್ಣರಾಗಿ ಕಾರ್ಯತತ್ಪರರಾಗಬಲ್ಲ ವೀರ ಯುವಕರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ವಾಚಕಲೋಕ ವಿಸ್ತಾರವಾದಹೊರತು ಕನ್ನಡ ಏಳಿಗೆ ಹೊಂದುವುದಿಲ್ಲ. ಹೀಗೆ ವಿಸ್ತಾರಪಡಿಸುವ ಜವಾಬ್ದಾರಿ ನಿಮಗೆ ಸೇರಿದ್ದು. ನಮ್ಮ ಆರ್ಥಿಕ ಸ್ಥಿತಿ ಚೆನ್ನಾಗಿಲ್ಲ. ಪಾಶ್ಚಾತ್ಯರೊಡನೆ ಹೋಲಿಸಿ ನೋಡಿದರೆ ನಾವು ಬಹಳ ಬಡವರು. ಎಂಬುದನ್ನೆಲ್ಲ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇರುವ ಹಣ ದುರ್ವಿನಿಯೋಗವಾಗುತ್ತಿಲ್ಲವೆಂದು ಮಾತ್ರ ನಾನು ಒಪ್ಪಿಕೊಳ್ಳುವುದಿಲ್ಲ. ನಿಮ್ಮ ಧೂಮಪಾನ ಅಂಗರಾಗ ಕೇಶಪ್ರಸಾದನಗಳಿಗೆ ವ್ಯಯಮಾಡುವ ಹಣದಲ್ಲಿ ಕಾಲುಭಾಗ, ಕಡೆಗೆ ಹತ್ತರಲ್ಲೊಂದು ಭಾಗವನ್ನು ಕನ್ನಡ ಪುಸ್ತಕಗಳನ್ನು ಕೊಂಡುಕೊಳ್ಳುವುದಕ್ಕೆ ವಿನಿಯೋಗಿಸಿ; ನಿಮ್ಮ ಕಾಫಿಕ್ಲಬ್ಬು ಸಿನೀಮಾವ್ಯಾಮೋಹಗಳಿಗಾಗಿಯೂ ನಟನಟಿಯರ ಭಾವಚಿತ್ರಸಂಗ್ರಹಕ್ಕಾಗಿಯೂ ವ್ಯಯಮಾಡುವ ಹಣದಲ್ಲಿ ಸ್ವಲ್ಪಭಾಗವನ್ನು ಕನ್ನಡದ ಪುಸ್ತಕಗಳಿಗಾಗಿ ವಿನಿಯೋಗಿಸಿ; ವಿವಾಹಕಾಲದಲ್ಲಿ ಮಾನವರಿಂದ ಹಲವು ಉಡುಗೊರೆಗಳನ್ನು ತೆಗೆದುಕೊಳ್ಳುವಾಗ ಒಂದುನೂರು ರೂಪಾಯಿಗಳ ಬೆಲೆಯ ಕನ್ನಡ ಪುಸ್ತಕಗಳನ್ನು ರಿಸ್ಟ್‌ವಾಚಿಗೆ ಬದಲಾಗಿ ಸ್ವೀಕರಿಸುವ ಸಂಕಲ್ಪವನ್ನು ಮಾಡಿಕೊಳ್ಳಿ; ನಿಮ್ಮ ಮೆಚ್ಚಿನ ಸ್ನೇಹಿತರಿಗೆ ಉಡುಗೊರೆಗಳನ್ನು ಕೊಡಬೇಕಾದರೆ ಕನ್ನಡ ಪುಸ್ತಕಗಳನ್ನು ಮೆಚ್ಚುಗಳಾಗಿ ಕೊಡಿರಿ; ಸ್ನೇಹಿತರ ಮನೆಗಳಿಗೆ ಹೋದಾಗ ಒಂದು ಕನ್ನಡ ಪುಸ್ತಕ ಕಣ್ಣಿಗೆ ಬಿದ್ದರೆ ಎರವಲು ಕೇಳಿ ಆತ್ಮಗೌರವವನ್ನು ಕೆಡಿಸಿಕೊಳ್ಳದೆ ಪೇಟೆಯಲ್ಲಿ ಸ್ವಂತಕ್ಕೆ ಕೊಂಡು ಆತ್ಮಗೌರವವನ್ನುಳಿಸಿಕೊಂಡು ಓದಿ ಸಂತೋಷಪಡಿ; ನಿಮ್ಮ ಮನೆಗಳಲ್ಲಿ ಚಿಕ್ಕಪುಸ್ತಕ ಭಂಡಾರಗಳನ್ನಿಟ್ಟುಕೊಂಡು ಬೆಳಸುತ್ತ ಹೋಗಿ.

ನಮ್ಮ ವರ್ತಮಾನ ಪತ್ರಿಕೆಗಳ ಬಗ್ಗೆ ಎರಡು ಮಾತು. ಅವು ಸಾಹಿತ್ಯಾಭಿವೃದ್ಧಿಗಾಗಿ ಬಹಳ ಸಹಾಯಮಾಡುತ್ತಿವೆ ಎಂಬುದನ್ನು ಕೃತಜ್ಞತಾಪೂರ್ವಕವಾಗಿ ನಾನು ಒಪ್ಪಿಕೊಳ್ಳುತ್ತೇನೆ. ಕರ್ಣಾಟಕಸಂಘಗಳ ಮತ್ತು ಸಾಹಿತ್ಯ ಸಂಸ್ಥೆಗಳ ಕಾರ್ಯಕಲಾಪಗಳನ್ನು ಕಾರ್ಪಣ್ಯ ತೋರಿಸದೆ ಅವು ಪ್ರಕಟಿಸಿ ಜನಗಳಿಗೆ ತಿಳುವಳಿಕೆಯನ್ನು ಕೊಡುತ್ತಾ ಇವೆ. ಸಣ್ಣ ಕಥೆಗಳನ್ನೂ ಗ್ರಂಥ ವಿಮರ್ಶೆಗಳನ್ನೂ ಯಥಾಶಕ್ತಿ ಪ್ರಕಟಿಸಿ ಗ್ರಂಥಕರ್ತರಿಗೆ ಪ್ರೋತ್ಸಾಹವನ್ನು ಕೊಡುತ್ತಾ ಇವೆ. ಹಲವು ಪತ್ರಿಕೆಗಳಲ್ಲಿ ಅಗ್ರಲೇಖನಗಳ ಶೈಲಿ ಮೇಲ್ಪಟ್ಟದ್ದಾಗಿದೆ; ಕೆಲವು ಪತ್ರಿಕೆಗಳಲ್ಲಿ ಬರುವ 'ನಗರ ಸಂಚಾರಿಯ ಡೈರಿ' ಮೊದಲಾದ ಲೇಖನಗಳು ಹಾಸ್ಯಗರ್ಭಿತವಾಗಿ ಸಾಹಿತ್ಯದಲ್ಲಿ ವಿದೂಷಕ ಸಂಪತ್ತಿಯ ಒಂದು ನೂತನ ಶಾಖೆಯನ್ನು ಸ್ಥಾಪಿಸಿವೆ. ಆದರೆ ಕೆಲವು ಪತ್ರಿಕೆಗಳು ಕೇವಲ ಮಾರಾಟದ ದೃಷ್ಟಿಯಿಂದ ಅನುಚಿತ ಕಥೆಗಳನ್ನೂ ಅನುಚಿತ ಚಿತ್ರಗಳನ್ನೂ ಇತರ ವಿಷಯಗಳನ್ನೂ ಪ್ರಕಟಿಸಿ ಜನರ ಅಭಿರುಚಿಯನ್ನು ಕೆಡಿಸುತ್ತಾ ಬಂದಿವೆಯೆಂದೂ ವ್ಯಥೆಯಿಂದ ಹೇಳಬೇಕಾಗಿದೆ. ಉನ್ನತವಾದ ಧ್ಯೇಯಗಳನ್ನಿಟ್ಟುಕೊಂಡು ಉನ್ನತ ರೀತಿಯಲ್ಲಿ ಪತ್ರಿಕಾ ವ್ಯವಸಾಯವನ್ನು ನಡೆಸುವುದು, ಜನತೆಯ ದೃಷ್ಟಿಯಿಂದ ಶ್ರೇಯಸ್ಕರ. ಪತ್ರಿಕೆಗಳವರು ಪತ್ರಿಕೋದ್ಯೋಗಿಗಳ ಸಂಗಡವೊಂದನ್ನು ಬೆಳೆಸಿರುವಂತೆ ಸಾಹಿತ್ಯೋಪಜೀವಿಗಳ ಸಂಗಡವೊಂದನ್ನೂ ಬೆಳೆಸಬೇಕೆಂದು ಕೋರುತ್ತೇನೆ. ಈಗ ಗ್ರಂಥ ವಿಮರ್ಶನ ಕಾರ್ಯವನ್ನು ಬಹುಮಟ್ಟಿಗೆ ಸಂಪಾದಕ ಮಂಡಲಿಯ ಪತ್ರಿಕೋದ್ಯೋಗಿಗಳೇ ಮಾಡುತ್ತಿದ್ದಾರೆಂದು ನನ್ನ ಭಾವನೆ. ಇದು ತಪ್ಪಾಗಿರಬಹುದು. ಪತ್ರಿಕೋದ್ಯೋಗಿಗಳು ಸಾಹಿತಿಗಳಲ್ಲವೆಂದಲ್ಲ, ಅವರು ಗ್ರಂಥ ವಿಮರ್ಶೆಮಾಡಬಾರದೆಂದಲ್ಲ. ಆದರೂ ಪ್ರಥಮತಃ ಅವರು ಪತ್ರಿಕೋದ್ಯೋಗಿಗಳು. ಪ್ರಸಿದ್ಧರಾದ ಸಾಹಿತಿಗಳೂ ಪ್ರಸಿದ್ಧರಾದ ಪಂಡಿತರೂ ಗ್ರಂಥ ವಿಮರ್ಶೆಮಾಡುವುದು ಒಳ್ಳೆಯದು; ಮತ್ತು ಅಂಥವರು ತಮ್ಮ ಪತ್ರಿಕೆಗಳಲ್ಲಿ ಗ್ರಂಥ ವಿಮರ್ಶೆಮಾಡುತ್ತಾರೆಂದು ಬಹಿರಂಗವಾಗಿಯೇ ಹೇಳಬಹುದೆಂದು ನನ್ನ ಅಭಿಪ್ರಾಯ. ಒಂದೊಂದು ಪತ್ರಿಕೆಗೂ ಗೊತ್ತಾದ ಹಿರಿಯ ಪಂಡಿತರು ವಿಮರ್ಶಕರಾಗಿದ್ದರೆ ವಿಮರ್ಶೆಗೂ ಬೆಲೆಬರುತ್ತದೆ, ಪತ್ರಿಕೆಗಳ ಗೌರವವೂ ಹೆಚ್ಚುತ್ತದೆ.

ಎರಡನೆಯದಾಗಿ, ಒಂದು ಸಾಹಿತ್ಯದ ವಿಚಾರ, ವಿದ್ಯಾಭ್ಯಾಸದ ವಿಚಾರ, ರಾಜಕೀಯ, ಆರ್ಥಿಕ, ಸಾಮಾಜಿಕ ಮೊದಲಾದ ವಿಚಾರಗಳು-ಇವುಗಳ ಮೇಲೆ ನುರಿತ ಪಂಡಿತರಿಂದ ಲೇಖನ ಮಾಲೆಗಳನ್ನು ಬರೆಸುವುದು ಒಳ್ಳೆಯದು. ಇದನ್ನೂ ಕೂಡ ಬಿಟ್ಟಿಯಾಗಿ ಸೇವೆಯನ್ನು ಕೈಕೊಳ್ಳಬೇಡಿ, ಉದಾರವಾಗಿ ಸಂಭಾವನೆಯನ್ನು ಲೇಖಕರಿಗೆ ಕೊಡಿ. ಇವುಗಳಿಂದ ಸಮಾಜದಲ್ಲಿ ಸಾಹಿತ್ಯೋಪಜೀವಿಗಳ ಸಂಗಡವೊಂದು ತಲೆಯೆತ್ತುತ್ತದೆ; ಪ್ರತಿಭಾವಂತ ಸಾಹಿತಿಗಳು ಪ್ರಕಾಶಕ್ಕೆ ಬರುತ್ತಾರೆ. ಉಪಯುಕ್ತವಾದ ಲೇಖನಗಳನ್ನೂ ಪ್ರಸಿದ್ಧರಾದ ಲೇಖಕರನ್ನೂ ದೊರಕಿಸಿಕೊಂಡರೆ ಪತ್ರಿಕೆಗಳ ಪ್ರಭಾವ ಹೆಚ್ಚುತ್ತದೆಯಷ್ಟೆ.

ಪರಿಷತ್ತು ಈಗ ಸುಮಾರು ಮುವ್ವತ್ತನಾಲ್ಕು ವರ್ಷಗಳಿಂದ ಕೆಲಸ ಮಾಡಿಕೊಂಡು ಬಂದಿರುವ ಸಂಸ್ಥೆ. ಈ ದೀರ್ಘಾವಧಿಯಲ್ಲಿ ಅದರ ಶಕ್ತಿ, ಸಂಪತ್ತು ಮತ್ತು ಪ್ರಭಾವ ಎಷ್ಟರಮಟ್ಟಿಗೆ ಬೆಳೆಯಬೇಕೆಂದು ಆಶಿಸಿದ್ದೆವೋ ಅಷ್ಟೊಂದು ಬೆಳೆದಿಲ್ಲ. ಮೊದಲಿನಿಂದಲೂ ಅದಕ್ಕೆ ಧನಬಲ ಮತ್ತು ಜನಬಲಗಳ ಕೊರತೆ ಇದ್ದೇ ಇದೆ. ಮೊದಲಿನಿಂದಲೂ ಆಕ್ಷೇಪಕರು ಇದ್ದೇ ಇದ್ದಾರೆ; ಅದನ್ನು ಟೀಕಿಸುತ್ತಲೇ ಬಂದಿದ್ದಾರೆ. ನಮಗೂ ಪರಿಷತ್ತಿನ ಬಗ್ಗೆ ಅಸಂತುಷ್ಟಿಯಿದೆ. 'ಅಸಂತೋಷಃ ಶ್ರಿಯೋ ಮೂಲಂ' 'ವೈದವರೆನ್ನ ಬಂಧುಗಳೆಂಬೆ' ಎಂದು ಸಮಾಧಾನ ತಂದುಕೊಳ್ಳುತ್ತೇವೆ. ಆದರೆ ಸದಸ್ಯರ ಸಂಖ್ಯೆಗಿಂತ ಆಕ್ಷೇಪಕರ ಸಂಖ್ಯೆ ಹೆಚ್ಚಾಗಿದ್ದರೆ ಫಲವೇನು? ಅರ್ಥಸಹಾಯಕ್ಕೆ ಬದಲು ನಿರರ್ಥಕ ಸಲಹೆಗಳನ್ನು ಕೊಟ್ಟರೆ ಲಾಭವೇನು? ಪರಿಷತ್ತು ಮಾಡಬೇಕಾದ ಕೆಲಸಗಳು ಬಹಳನಾಗಿವೆ, ನಿಜ. ಕನ್ನಡ ನಾಡಿನ ಮೂಲೆ ಮೂಲೆಗಳಿಂದ ಕನ್ನಡದ ಮುಂದಾಳುಗಳು ಬೆಂಗಳೂರಿನಲ್ಲಿ ಸೇರಿ ಪರಿಷತ್ತನ್ನು ಸ್ಥಾಪಿಸಿದರು. ಅದರ ಸದಸ್ಯರು ಕನ್ನಡ ನಾಡಿನ ಎಲ್ಲ ಕಡೆಗಳಲ್ಲೂ ಇದ್ದಾರೆ. ಅದರ ಆಡಳಿತದಲ್ಲಿ ಎಲ್ಲ ಭಾಗಗಳ ಪ್ರತಿನಿಧಿಗಳೂ ಸೇರಿದ್ದಾರೆ. ಈ ದೃಷ್ಟಿಯಿಂದ ಅದು ಕರ್ಣಾಟಕದ ಏಕೈಕ ಪ್ರತಿನಿಧಿ ಸಂಸ್ಥೆ. ಆದರೆ ಪರಿಷತ್ತಿನ ಕಟ್ಟಡ ಮತ್ತು ಕಚೇರಿ ಇರುವುದು ಬೆಂಗಳೂರಿನಲ್ಲಿ! ಆ ಕಟ್ಟಡಕ್ಕಾಗಿ ಸುಮಾರು ಇಪ್ಪತ್ತು ಸಾವಿರ ರೂಪಾಯಿಗಳ ಸಹಾಯ ದ್ರವ್ಯವನ್ನು ಮೈಸೂರು ಸರ್ಕಾರದವರು ಹಿಂದೆ ಕೊಟ್ಟ ಕಾರಣಕ್ಕಾಗಿ ಪ್ರತಿ ವರ್ಷವೂ ಅದರ ಬಡ್ಡಿಯನ್ನುವಂತೆ ಮೂರು ಸಾವಿರ ರೂಪಾಯಿಗಳ ವರ್ಷಾಶನವನ್ನು-ಬೇಕಾದ ಸಹಾಯ ದ್ರವ್ಯವೆಂದು ಕರೆಯೋಣ-ತೆರುತ್ತ ಆ ಸಂಸ್ಥೆಯನ್ನು ಜೀವಂತವಾಗಿ ಉಳಿಸಿದ್ದಾರೆ. ಅವರು ಏನಾದರೂ ನೆಪ ಹೇಳಿ ಈ ದಿನ ಆ ಸಹಾಯವನ್ನು ನಿಲ್ಲಿಸಿದರೆ ನಾಳೆಯೇ ಪರಿಷತ್ತು ಸಾಯುತ್ತದೆ. ಪರಿಷತ್ತು ಎಲ್ಲ ಪ್ರಾಂತಗಳಲ್ಲಿರುವ ಕನ್ನಡಿಗರಿಗೂ ಸೇರಿದ್ದು; ಅದರ ಪೋಷಣೆ ರಕ್ಷಣೆ ಎಲ್ಲ ಕನ್ನಡಿಗರಿಗೂ ಸೇರಿದ್ದು-ಎಂದು ಜಾಗಟೆಯನ್ನು ಬಾರಿಸಿ ಬಾರಿಸಿ ಹೇಳುತ್ತಿದ್ದೇವೆ. ಬೊಂಬಾಯಿ, ಮದರಾಸ್ ಮತ್ತು ಹೈದರಾಬಾದ್ ಸರ್ಕಾರಗಳಿಗೆ ಸಹಾಯಕ್ಕಾಗಿ ಸೆರಗೊಡ್ಡಿದ್ದೇವೆ. ಕವಡೆಯಷ್ಟು ಸಹಾಯವನ್ನು ಅವರು ಕರುಣಿಸಿಲ್ಲ. ಆಯಾ ಪ್ರಾಂತಗಳಲ್ಲಿರುವ ಕನ್ನಡಿಗರು ಆಯಾ ಸರ್ಕಾರಗಳ ಅಲಕ್ಷ್ಯವನ್ನೂ ತಿರಸ್ಕಾರ ಬುದ್ಧಿಯನ್ನೂ ಸೇರಿಸಿಕೊಂಡಿರುವುದು ನನಗೆ ಸಖೇದಾಶ್ಚರ್ಯವನ್ನುಂಟುಮಾಡುತ್ತದೆ. ಎರಡನೆಯದಾಗಿ, ಪರಿಷತ್ತಿನ ಸದಸ್ಯರಾಗಿರಲು ಆತ್ಮ ಸಂತೋಷದಿಂದಲೋ ಪರ ಪ್ರೇರಣೆಯಿಂದಲೋ ಒಪ್ಪಿಕೊಂಡು ಅದಕ್ಕೆ ಸೇರಿದವರಲ್ಲಿ ಹಲವರು ತಮ್ಮ ಚಂದಾ ಬಾಕಿಗಳನ್ನು ಸಲ್ಲಿಸುವುದಿಲ್ಲ. ಅವರು ನಿಲ್ಲಿಸಿಕೊಂಡಿರುವ ಸುಮಾರು ಐದು ಸಾವಿರ ರೂಪಾಯಿಗಳಷ್ಟು ಬಾಕಿಯನ್ನು ಶೀಘ್ರದಲ್ಲಿಯೇ ಸಲಿಸಿಬಿಟ್ಟರೆ ಹತ್ತು ಸಾವಿರ ರೂಪಾಯಿಗಳಷ್ಟು ಕೆಲಸವನ್ನು ಪರಿಷತ್ತು ಮಾಡಬಹುದು.

ಇಂತಹ ದುಃಸ್ಥಿತಿ ನಮ್ಮನ್ನು ಆವರಿಸಿಕೊಂಡಿದೆ. ನಮ್ಮನ್ನು ಟೀಕಿಸುವವರಲ್ಲಿ ಬಹು ಮಂದಿ ರಾಜಕೀಯದ ಗಾಳಿಗೆ ಸಿಕ್ಕಿರುವ ಉತ್ಸಾಹಶಾಲಿಗಳಾದ ಅನನುಭಾವಿಗಳಾದ ಪಾಂಡಿತ್ಯ ಪ್ರತಿಭೆಗಳಿಲ್ಲದ ತರುಣರು. ಕೆಲಸ ಮಾಡುವುದಕ್ಕೆ ಇಷ್ಟವುಳ್ಳವರು, ನೆರವಾಗುವುದಕ್ಕೆ ತವಕ ಪಡುತ್ತಿರುವವರು ಅಗತ್ಯವಾಗಿ ಪರಿಷತ್ತಿಗೆ ಬರಲಿ, ಪರಿಷತ್ತಿನ ಕೆಲಸಗಳಲ್ಲಿ ಭಾಗವಹಿಸಲಿ, ಕೀರ್ತಿಯನ್ನು ಗಳಿಸಲಿ. ಪರಿಷತ್ತು ಮಾಡಬಹುದಾದ ಕೆಲಸಗಳಿಗೆ ಹಲವು ಕಾರಣಗಳಿಂದ ಒಂದು ಮಿತಿಯುಂಟು, ಆ ಮಿತಿಯನ್ನು ಮೀರಿ ಅದು ಕೆಲಸ ಮಾಡಲಾರದು. ಪ್ರತ್ಯಕ್ಷವಾಗಿ ರಾಜಕೀಯದಲ್ಲಿ ಅದು ಕೈಹಾಕಲಾರದು. ಅದು ಉಪಕಾರಗಳನ್ನು ಕೃತಜ್ಞತೆಯಿಂದ ಸ್ಮರಿಸದೆ ಕೈಬಿಡಲಾರದು. ಆದ್ದರಿಂದ ಪರಿಷತ್ತಿನಿಂದ ಏನನ್ನು ನಿರೀಕ್ಷಿಸಬಹುದು ಎಂಬುದನ್ನು ತಿಳಿದುಕೊಂಡು ಟೀಕಿಸುವುದು ಮೇಲು; ಟೀಕಿಸದೆ ಧನಸಹಾಯ ಮಾಡುವುದು ಇನ್ನೂ ಮೇಲು; ಪರಿಷತ್ತಿನ ಹಲವು ಕಾರ್ಯ ಕ್ಷೇತ್ರಗಳಲ್ಲಿ ಪ್ರತ್ಯಕ್ಷವಾಗಿ ನೆರವಾಗುವುದು ಮತ್ತೂ ಮೇಲು. ಪರಿಷತ್ತು ಬೇರೆಯಲ್ಲ ಕನ್ನಡ ಜನ ಬೇರೆಯಲ್ಲ. ಪರಿಷತ್ತು ಕನ್ನಡಿಗರ, ಅವರ ಸಾಹಿತ್ಯ ಸಂಸ್ಕೃತಿಗಳ ಅವರ ಬದುಕಿನ ಬಾಳಿನ ಪ್ರತೀಕ; ಕನ್ನಡಿಗರ ಆರಾಧನ ಮಂದಿರ. ಕನ್ನಡ ಮಾತೆ ತನ್ನ ಮಕ್ಕಳನ್ನು ಪ್ರೇಮದೃಷ್ಟಿಯಿಂದ ಆದರಿಸುತ್ತಾಳೆ. ಅವರ ಅಭ್ಯುದಯವನ್ನೇ ಹಾರೈಸುತ್ತಾಳೆ ಮಕ್ಕಳು ಕಣ್ಣುಬಿಟ್ಟು ನೋಡಲಿ! ತಾಯಿಯ ಆಶೀರ್ವಾದಕ್ಕೆ ಪಾತ್ರರಾಗಲಿ!

ಅಮೃತಾಂಜನ
ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಘಾಯಗಳು, ಬಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ಮೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

REGD
ಹುಳುಕಡ್ಡಿ ಮದ್ದು, ನಮ್ಮಲ್ಲಿ ಸಿಕ್ಕುತ್ತದೆ
ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ಮಹಿಳಾ ಪ್ರಪಂಚ

## ಕೈದೋಟ

### ಸುಶಿಕ್ಷಿತ ನಾರಿಯರಿಗೆ ಹೊಸದೊಂದು ಸ್ಫೂರ್ತಿ

ಲೇಖಕಿ:—ಶ್ರೀಮತಿ ಜಯಲಕ್ಷ್ಮಿ ಆರ್. ಶ್ರೀನಿವಾಸನ್.

ಪೂಜ್ಯ ಮಹಾತ್ಮಾಜಿಯವರ ಮತ್ತು ಅವರ ಅನುಯಾಯಿಗಳಾದ ಉತ್ತಮೋತ್ತಮ ದೇಶಭಕ್ತರುಗಳ ಕೃಪೆಯಿಂದ ನಮ್ಮ ನೆಚ್ಚಿನ ನಾಡಿಗೆ ಸ್ವಾತಂತ್ರ್ಯ ಲಭಿಸಿದೆ. ಆ ಸ್ವಾತಂತ್ರ್ಯದೇವಿಯನ್ನು ಒಲಿಸಿಕೊಳ್ಳಲು ಈ ವರೆಗೆ ಅನೇಕಾನೇಕ ಕಷ್ಟಗಳನ್ನು ಅನುಭವಿಸಿ ಅನೇಕ ವೀರ ತ್ಯಾಗಗಳನ್ನು ಮಾಡಬೇಕಾಯಿತು. ಇನ್ನು ಆ ತರಹದ ಶ್ರಮವಾವುದೂ ನಮಗಿಲ್ಲದಿದ್ದರೂ ರಚನಾತ್ಮಕ ಕೆಲಸಗಳನ್ನು ಕೈಗೊಂಡು ನಮ್ಮ ನಾಡ ಸಂಪತ್ತನ್ನೂ ಸಂಸ್ಕೃತಿಯನ್ನೂ ಹೆಚ್ಚಿಸಿ, ನಮ್ಮ ನಾಡು ಪ್ರಪಂಚದ ಇತರ ದೇಶಗಳಿಗೆ ಆದರ್ಶ ಪ್ರಾಯವಾಗುವಂತೆ ಮಾಡುವುದು ನಮ್ಮ ಕರ್ತವ್ಯ. ಈ ಅಪಾರವಾದ ಹೊಣೆಯನ್ನು ನಾಡ ಸ್ತ್ರೀಪುರುಷರಾದಿಯಾಗಿ ಪ್ರತಿಯೊಬ್ಬ ಪ್ರಜೆಯೂ ಕೂಡ ವಹಿಸಿ, ಅವರವರ ಪಾಲಿನ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕಾಗಿದೆ. ಸ್ವತಂತ್ರ ಭಾರತದ ಉಪ ಮಹಾ ಪ್ರಧಾನರಾದ ಸರದಾರ ವಲ್ಲಭಾಯಿ ಪಟೇಲರು ಹೇಳಿದಂತೆ ಮಾತು ಕಡಿಮೆ ಮಾಡಿ, ಕೆಲಸದಲ್ಲಿ ನಿರತರಾಗಿ ನಾಡ ಸಂಪದಭಿವೃದ್ಧಿ ಕಾರ್ಯದಲ್ಲಿ ಸುಶಿಕ್ಷಿತ ನಾರಿಯರು ಪಾತ್ರ ವಹಿಸಬೇಕಾಗಿದೆ.

ಸ್ವತಂತ್ರ ಭಾರತದಲ್ಲೀಗ ನಾರಿಯರ ಪಾತ್ರ ಬಹಳ ಜವಾಬ್ದಾರಿಯುತವಾದದ್ದು. ತತ್ಸಮಯದ ಸುಶಿಕ್ಷಿತ ಮಹಿಳೆಯರು ತಂತಮ್ಮ ಅಭಿಪ್ರಾಯಗಳನ್ನು ದಯವಿಟ್ಟು ತಿದ್ದಿಕೊಂಡು ಸುಶಿಕ್ಷಿತರಲ್ಲದ ಸಹೋದರಿಯರನ್ನೂ ಆದರ್ಶ ಮಾರ್ಗಕ್ಕೆ ಕರೆದೊಯ್ದು ನಾಡ ರಚನಾತ್ಮಕ ಕಾರ್ಯದಲ್ಲಿ ಟೊಂಕ ಕಟ್ಟಿಕೊಂಡು ನಿಲ್ಲಬೇಕಾದ ಕಾಲವಿದು. ಎಲ್ಲೆಲ್ಲೂ ಆಹಾರ ಅಭಾವವು ತಲೆದೋರಿ ನಾಡಿಗೆ ನಾಡೇ ಕಂಗೆಟ್ಟಿದೆ, ಯಾವ ಸರಕಾರವನ್ನೇ ನೋಡಿ-"ಹೆಚ್ಚು ಆಹಾರ ಬೆಳೆಯಿರಿ. ಹೆಚ್ಚು ಆಹಾರ ಬೆಳೆಯಿರಿ" ಎಂಬ ವೇದ ಮಂತ್ರವನ್ನು ಉಚ್ಚರಿಸುತ್ತಿದೆ. ಭೂಮಾತೆ ನೀಡುವ ಪ್ರತಿಯೊಂದು ಕಾಳೂ ಸಹ ಸುವರ್ಣದಷ್ಟು-ಬೆಲೆ ಹೊಂದಿದೆ. ಗಂಡಸರು ಬೆಳೆಯುತ್ತಾರೆ, ಸಂಪಾದಿಸುತ್ತಾರೆ. ಮನೆಗೆ ಧಾನ್ಯ ತಂದು ಹಾಕುತ್ತಾರೆ. ಆ ಆಹಾರ ಸಾಮಗ್ರಿಗಳನ್ನು ಒಪ್ಪವಾಗಿ ಕಾಪಾಡಿ ಮಿತವಾಗಿ ಉಪಯೋಗಿಸಿ, ಪಕ್ವ ಮಾಡಿ ಬಡಿಸುವವರು ಯಾರು? ಗೃಹಿಣಿ! ಆಹಾರ ಬೆಳೆದು ಹಂಚಿಬಿಟ್ಟರೆ ಆಯಿತೆ? ಅದನ್ನು ಮಂದು ಪೆಚ್ಚುಮಾಡದೆ ಮಿತವಾಗಿ ಉಪಯೋಗಿಸಿ ಸಕಲರಿಗೂ ಕಾಣುವಂತೆ ಮಾಡುವ ಚಾಕಚಕ್ಯತೆ ಅನ್ನಪೂರ್ಣೆ ಅವತಾರವಾದ ಗೃಹಿಣಿಗಲ್ಲವೇ ಇರಬೇಕು? ಅಂತಹ ಗೃಹಿಣಿಯಾದವಳು ಸುಶಿಕ್ಷಿತ ಮಹಿಳೆಯಾದರಂತೂ ಆಕೆಯ ಜಾಣ್ಮೆಯನ್ನು, ಆಹಾರವನ್ನು ಮಿತವಾಗಿ ಉಪಯೋಗಿಸುವುದರಲ್ಲಿ, ಉಪಯೋಗಿಸಿ, ಹೆಚ್ಚು ಆಹಾರ ಬೆಳೆಸುವ ಯೋಜನೆಗೆ ತನ್ನ ಕೈಲಾದ ಸೇವೆ ಸಲ್ಲಿಸಿ ತನ್ನ ಶಿಕ್ಷಣವನ್ನು ಸದುಪಯೋಗ ಪಡಿಸಿಕೊಳ್ಳಲು ಇದೇ ತಕ್ಕ ಸಮಯ. ಗೃಹಿಣಿಯರು ತಮ್ಮ ಬಿಡುವು ಕಾಲವನ್ನು ವ್ಯರ್ಥವಾಗಿ ಹಾಳು ಮಾಡದೆ ಅದನ್ನು ಒಳ್ಳೆಯ ಕಾರ್ಯಕ್ಕಾಗಿ ವಿನಿಯೋಗಿಸಬೇಕು.

ದಿನವಹಿ ಸಂಜೆ ಒಂದು ಘಂಟೆಯ ಕಾಲ ನಿಮ್ಮ ನಿಮ್ಮ ಮನೆಯ ಅಂಗಳದಲ್ಲಿ ತೋಟದ ಕೆಲಸಕ್ಕೆಂದು ಪ್ರಯತ್ನಮಾಡಿ, ಸಾಕು. ಗಣ್ಯ ರಾಜಾಜಿಯವರು ಅಂದಂತೆ ಭೂಮಾತೆ ಕರುಣಾಮಯಿ. ನಿಮ್ಮಗಳ ಅಲ್ಪ ಶ್ರಮಕ್ಕೂ ಸಹ ಹತ್ತರಷ್ಟು ಪ್ರತಿಫಲ ನೀಡುವಳು. ನೀವು ಮಾಡಬೇಕಾದುದು ಇಷ್ಟೇ. ನೆಲವನ್ನು ಅಗೆಯಿಸಿ; ಕಲ್ಲು, ಹೆಂಟೆಗಳಿಲ್ಲದೆ ಪಾತಿಗಳನ್ನು ಒಪ್ಪಮಾಡಿ ಒಂದಿಷ್ಟು ಗೊಬ್ಬರ ಒದಗಿಸಿ ಬೀಜ ಬಿತ್ತಿರಿ. ಕ್ರಮವಾಗಿ ನೀರೆರೆಯುತ್ತ ಬಂದರೆ ಸಾಕು. ಆಯಾ ತರಕಾರಿಗಳಿಗೆ ಅನುಗುಣವಾಗಿ ನೀವು ಬಿತ್ತಿದ ಬೀಜ ಕಾಲಕ್ಕನುಸಾರವಾಗಿ ನಿಮಗೆ ಕೈತುಂಬ ಪ್ರತಿಫಲ ನೀಡುತ್ತದೆ.

o oo o

ಕನ್ನಡನಾಡಿನಂತಹ ಫಲವತ್ತಾದ ನಾಡಿನಲ್ಲಿ ನಾವಿರುವುದು ನಮ್ಮ ಭಾಗ್ಯ. ನಮ್ಮ ನಮ್ಮ ಮನೆಯ ಅಂಗಳದಲ್ಲಿ ನಮ್ಮ ನಮ್ಮ ಕುಂಟುಂಬ ಕಾಣುವಷ್ಟು ತರಕಾರೀ ಬೆಳೆದು ಕೊಂಡರೂ ಕೂಡ ಸಾಕು. ಪೇಟೆಯಿಂದ ಒಂದಕ್ಕೆ ಹತ್ತರಷ್ಟು ಬೆಲೆಕೊಟ್ಟು ತರಕಾರೀ ತಂದು ಪಕ್ವಮಾಡಿದರೂ ಮನೆಯಲ್ಲಿ ಎಲ್ಲರಿಗೂ ಬಡಿಸಲು ಸಾಕೂ ಸಾಲದೆ ಹೋಗುತ್ತದೆ. ಮನೆಯಲ್ಲಿ ಬೆಳೆದ ಹೊಚ್ಚ ಹೊಸ ತರಕಾರಿಯೆಂದರೆ ಅದೇ ಒಂದು ಅಪೂರ್ವ ರುಚಿ, ಅಮೃತಮಯ. ದಂಡಿಯಾಗಿ ಎಲ್ಲರಿಗೂ ಬಡಿಸಿ ನಾವೂ ಊಟಮಾಡಿ ತಣಿಯಬಹುದು. ತನ್ಮೂಲಕ ತರಕಾರಿಯನ್ನು ಧಾರಾಳವಾಗಿ ಉಪಯೋಗಿಸುವುದರಿಂದ ರೇಷನ್ ಧಾನ್ಯವೂ ಉಳಿಯುತ್ತದೆ."ಹನಿಗೂಡಿದರೆ ಹಳ್ಳ". ಪ್ರತಿಯೊಬ್ಬ ಮಹಿಳೆಯೂ ತನ್ನ ಮನೆಯ ಕೈದೋಟದ ಬೆಳವಣಿಗೆಯಲ್ಲಿ ಶ್ರದ್ಧೆ ವಹಿಸುವುದರಿಂದ ಕ್ರಮೇಣ ದೇಶದ ಆಹಾರ ಅಭಾವದ ಸಮಸ್ಯೆಯನ್ನು ಬಗೆಹರಿಸುವ ಪುಣ್ಯ ಕಟ್ಟಿಕೊಳ್ಳುವಳು.

ತೋಟದ ಕೆಲಸವನ್ನು ವಿರಾಮ ಕಾಲದಲ್ಲಿ ಕೈಗೊಳ್ಳುವುದರಿಂದ ಕಾಲದ ಸದುಪಯೋಗವೂ ಆಯಿತು. ದೇಹಕ್ಕೂ ಒಳ್ಳೆಯ ವ್ಯಾಯಾಮ ನಿರ್ಮಲವಾದ ಗಾಳೀ ಸೇವನೆ. ಅಷ್ಟು ಮಾತ್ರವಲ್ಲದೆ ತೋಟದ ಮೇಲಿನ ಮಮತೆಯಿಂದ ಮುಂಜಾನೆ ಎದ್ದು ತೋಟವನ್ನು ಬಳಸಿಬ ಬೇಕೆಂಬ ಆಕ್ಕರೆ ಹುಟ್ಟುತ್ತದೆ. ತನ್ಮೂಲಕ ವರ್ಣರಂಜಿತ ಪಕ್ಷಿಗಳನ್ನೂ ಅವುಗಳ ಇಂಪುಗಾನವನ್ನೂ ನೋಡಿಯೂ ಕೇಳಿಯೂ ಅನುಭವಿಸುವ ಸುಯೋಗವೂ ದೊರಕುತ್ತದೆ.

ಸಾಧಾರಣವಾಗಿ ಮನೆಯ ಕೈದೋಟಗಳಲ್ಲಿ ಅತಿ ಸುಲಭವಾಗಿಯೂ, ಅತ್ಯಂತ ಶ್ರಮವಿಲ್ಲದೆಯೂ ಪೈರಾಗುವ ತರಕಾರಿ ಗಿಡಗಳೆಂದರೆ ತಿಂಗಳ ಹುರುಳೀ, ಮೂಲಂಗಿ, ಬೆಂಡೆ, ಗೋವರ್ಧನಕಾಯಿ, ಸೀಮೇಬದನೆ, ಚಪ್ಪರದವರೇ, ಕುಂಬಳ, ಪಡವಲ, ಸೊಪ್ಪು ಪಗ್ಯೆರೆ, ಟೊಮೇಟೋ ಇತ್ಯಾದಿ, ಇತ್ಯಾದಿ. ತೋಟದ ಕೆಲಸಕ್ಕೆ ನಿಮಗೆ ಬೇಕಾದ ಮುಖ್ಯ ಸಲಕರಣೆಗಳೆಂದರೆ ಒಂದು ಪಿಕಾಸಿ, ಒಂದು ಗುದ್ದಲಿ ಎರಡು ನೀರಿನ ಬಿಂದಿಗೆಗಳು. ಒಂದು Water-cane ಇಷ್ಟಿದ್ದರೆ ಸಾಕು. ನೆಲವನ್ನು ಮೊಳದುದ್ದ ಆಳವಾಗಿ ಅಗೆದು ಕಲ್ಲುಗಳನ್ನು ಆರಿಸಿ ಬಿಸುಟು ಹೆಂಟೆಗಳನ್ನು ಒಡೆದು ಪುಡಿಮಾಡಿ ಒಂದಿಷ್ಟು ಕೆಮ್ಮಣ್ಣು, ಮರಳು, ಮತ್ತು ಗೊಬ್ಬರ ಬೆರಸಿ ಒಪ್ಪಮಾಡಿ ಪಾತಿಕಟ್ಟಿ ಬೀಜ ಬಿತ್ತಿದರೆ ರಿಂ. ಕ್ರಮವಾಗಿ ದಿನಕ್ಕೊಂದು ಸಲ, (ಸಂಜೆಯ ಹೊತ್ತೇ ಚೆನ್ನ) ನೀರೆರೆಯುತ್ತ ಬನ್ನಿ; ಮಳೆ ಬಿದ್ದರೆ, ಆ ತೇವ ಒಣಗುವವರೆಗೆ ನೀರೆರೆಯಬಾರದು. ಗಿಡದ ಬೇರಿಗೆ ಘಾಯವಾಗದಂತೆ ಪದೇ ಪದೇ ಸೆತ್ತೆಗಳನ್ನು ಕಿತ್ತುಸೆದು ಪಾತಿಯನ್ನು ಉಪಾಯವಾಗಿ ಕೆದಕಿಬಿಟ್ಟರೆ ಸಾಕು. ಒಂದು ಹಿಡಿ ತಿಂಗಳ ಹುರುಳೀ ಬೀಜ ಬಿತ್ತಿದಿರೆನ್ನಿ. ತಿಂಗಳ ಒಳಗಾಗಿಯೇ ಒಂದು ವೀಸೆ ಹುರುಳೀಕಾಯಿ ನಿಮಗೆ ಪ್ರತಿಫಲ ದೊರಕುವುದು. ಒಂದು ಸಲ ಪೈರಾಗಿ ಮುಗಿದ ಪಾತಿಯನ್ನು ಕೊನೆಯ ಪಕ್ಷ ಒಂದು ತಿಂಗಳು ಬಂಜರು ಬಿಡಬೇಕು. ಪಕ್ಕದಲ್ಲಿ ಮತ್ತೊಂದು ಪಾತಿಯನ್ನು ತಯಾರಿಸಿಕೊಂಡರೆ ಉತ್ತಮ ತಿಂಗಳ ಬಳಿಕ ಪುನಃ ಮೊದಲ ಪಾತಿಯನ್ನೇ ಒಪ್ಪ ಮಾಡಿ ಬೀಜ ಬಿತ್ತಬಹುದು.

o oo o

ಚಕ್ಕೋತನ, ದಂಟು, ಇಂತಹ ಬಹಳ ಸಣ್ಣ ಬೀಜಗಳನ್ನು ಜೊತೆಗಿಷ್ಟು ಮರಳು ಬೆರೆಸಿ ಪಾತಿಗಳಲ್ಲಿ ಎರಚಿ ಬಿತ್ತಬೇಕು. ಸಸಿಯು ಎರಡೆಲೆಗಳು ಬಿಟ್ಟಾಕ್ಷಣ ನಾವು ಪಾತಿಯನ್ನು ಗಮನಿಸಿ ಒತ್ತಾಗಿರುವ ಕಡೆ ಒಂದೆರಡು ಸಸಿಗಳನ್ನು ಕಿತ್ತು ಹಾಕಿ ಇತರ ಸಸಿಗಳಿಗೆ ಸೌಕರ್ಯ ಕಲ್ಪಿಸಿಕೊಡಬೇಕು.

ಟೊಮೇಟೋ, ಎಲೆಕೋಸು, ಬದನೆಕಾಯಿ, ಮೆಣಸಿನಕಾಯಿ, ಇಂತಹ ಜಾತಿಯ ಗಿಡಗಳನ್ನು ಮೊಟ್ಟಮೊದಲು ಒಂದು ಕುಂಡದಲ್ಲಿ ಹುಟ್ಟುಹೊಯ್ದು, ಸಸಿ ನಾಲ್ಕಾರು ಎಲೆಗಳು ಒಡೆದ ಬಳಿಕ, ಅಗೆದು ಗೊಬ್ಬರ ಬೆರೆಸಿ ಸಾಲುಗಟ್ಟಿ ತಯಾರಾಗಿ ಇರಿಸಿರುವ ಪಾತಿಗಳಲ್ಲಿ ಒಂದಡಿ ದೂರ ಒಂದರಂತೆ ನಾಟೀ ನೆಡಬೇಕು. ಸಸಿಗೆ ಘಾಯವಾಗದಂತೆ ಬಹಳ ಎಚ್ಚರಿಕೆಯಿಂದ ಕುಂಡದಿಂದ ತೆಗೆದು ನೆಡಬೇಕು. ಇದಕ್ಕೆ ಆಂಗ್ಲೇಯದಲ್ಲಿ Trans planting ಅನ್ನುವರು.

ಚಪ್ಪರದವರೇ, ಪಡವಲ, ಹೀರೇ, ಹಾಗಲ, ಡಬ್ಬಲ್ ಬೀನ್ಸ್, ಸೀಮೇ ಬದನೆ, ಇಂತಹ ಬಳ್ಳೀ ಗಿಡಗಳನ್ನು ಬೆಳೆಸುವುದು ಬಹಳ ಸುಲಭ. ಅಚ್ಚುಕಟ್ಟಾಗಿ ಚಪ್ಪರ, ಹಾಚಪ್ಪರಕ್ಕೆ ಎರಡು ಪಾತಿಗಳಂತೆ, ಪಾತಿ ಎರಡು ಮೂರು ಬೀಜಗಳಂತೆ ಬಿತ್ತಿದ ಸಾಕು. ಒಂದೊಂದು ಜಾತಿಯ ಬಳ್ಳಿಗೂ ಪ್ರತ್ಯೇಕವಾದ ಚಪ್ಪರವೇ ಚೆನ್ನ. ಇಂತಹ ಬಳ್ಳಿಗಳಿಗೆ ಬಹಳಶ್ರಮ ವಹಿಸಬೇಕಾಗಿಯೂ ಇಲ್ಲ. ಬೀಜ ನೆಡುವುದಕ್ಕೆ ಮೊದಲು ಕೆಮ್ಮಣ್ಣು ಮರಳು ಗೊಬ್ಬರ ಬೆರೆಸಿ, ಚೆನ್ನಾಗಿ ಅಗೆದು ಪಾತಿಮಾಡಿ ಬಳಿಕ ಬೀಜ ನೆಡಬೇಕು. ಸಸಿ ಬಳ್ಳಿ ಬಿಟ್ಟ ಬಳಿಕ ಒಂದು ಸಲ ಗೊಬ್ಬರ ಕಟ್ಟುವುದು ಒಳ್ಳೆಯದು.

ತರಕಾರೀ ಗಿಡಗಳಿಗೆ ಬೂದಿ ಬೆರೆತ ದನ ಗೊಬ್ಬರ ಬಹಳ ಒಳ್ಳೆಯದು. ಕುರಿ ಗೊಬ್ಬರ ಹಾಕಿದರೂ ಚನ್ನಾಗಿ ಬೆಳೆಯುವುವೆ. ಆದರೆ ಹೂ ಗಿಡಗಳಿಗೆ ಕುದುರೆ ಗೊಬ್ಬರವೇ ಉತ್ತಮವು.

ತರಕಾರೀ ಬೆಳೆಗಳಲ್ಲಿ ಮಳೆಗಾಲದ ಬೆಳೆ, ಛಳಿಗಾಲದ ಬೆಳೆ, ಬೇಸಿಗೆಯ ಬೆಳೆ ಎಂದು ಮೂರು ವಿಭಾಗ ಮಾಡಬಹುದು. ಆದರೆ ಮನೆಯ ಕೈದೋಟಕ್ಕೆ ಇಷ್ಟೆಲ್ಲ ವಿವರ ತಿಳಿದಿರಬೇಕಾಗಿಲ್ಲ. ಕ್ರಮೇಣ ನಮ್ಮ ನಮ್ಮ ಅನುಭವ ಎಷ್ಟೋ ಬೆಳೆಯಬಹುದು

ಇನ್ನೊಂದು ಮುಖ್ಯ ವಿಷಯವೆಂದರೆ ಪಾತಿಗಳಲ್ಲಿ ಇರುವೆಯ ಕಾಟವೂ, ಗೆದ್ದಲು ಕಾಟವೂ ಹೆಚ್ಚದಂತೆ ನೋಡಿಕೊಳ್ಳುವುದು. ಎಲ್ಲಾದರೊಂದು ಇರುವೆಯ ಹುತ್ತ ಕಾಣಿಸಿಕೊಂಡರೂ ಕೂಡ ಅದನ್ನು ಅಗೆದು ಕೆಡವಿ ಬೂದಿ ಎರಚಿ ತಳ್ಳಿಗೆ Pheny solution ಮಾಡಿ ಎರಚಿ ಇರುವೆ ಗೂಡನ್ನು ಶಮನಮಾಡಬೇಕು. ಅಥವಾ napth aline ಗೋಲಿಗಳನ್ನು ಪುಡಿಮಾಡಿ ತಳ್ಳಿಗೆ ಎರಚಿದರೂ ಆಯಿತು. ಇದು ಬಹಳ ದುಬಾರಿ ನನ್ನನ್ನು ಕೇಳಿದರೆ ಬೂದಿಯೇ ಸಾಕು.

ತರಕಾರೀ ತೋಟದ ಜೊತೆಗೆ ಹೂದೋಟವನ್ನೂ ಬೆಳೆಸಬಹುದು. ಹೂದೋಟ ಬೆಳೆಸುವುದರಲ್ಲಿ ಮತ್ತಿಷ್ಟು ಉತ್ಸಾಹವೂ ಸಮ್ಮಸ್ಸೂ ಹೆಚ್ಚದೆ ಇರಲಾರದು.

[ಮೈಸೂರು ಆಕಾಶವಾಣಿಯಲ್ಲಿ ಪ್ರಸಾರವಾದ ಭಾಷಣದಿಂದ.]

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಸುಚಿ ಹೇಳಬೇಕೇ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD.

Highly perfumed and medicated, worth using daily by one and all, keeps hair black and relieves head-ache etc.

TRADE MARK

Manufactured by:-

Swadeshi Oushadhi Bhandara (Regd-)

KUNJAL P. O. Brahmavar, S. K.

Edited, Printed & Published by K. B. Shetty at the Navayuga Press Udipi, S. India.

Regd. No. M. 3618 Estd: 1921 ಸ್ಥಾಪನೆ 30ನೇ ವರ್ಷ 2-3-1950

LICENCE No. 31
Licensed to Post without Prepayment

FOUNDER:
Sri. A. B. Shetty
Minister for Agriculture & Veterinary

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ವರ್ಷ 30 ವಾರ ೨೭ | NAVAYUGA WEEKLY Post Box No. 22 UDIPI, S. K. | Vol 30 No. 27

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

# ಅತಿಕಷ್ಟ-ಆದರೂ ಅನಿವಾರ್ಯ

ಪ್ರಪಂಚದಲ್ಲಿ ಯಾವುದೂ ಚಿರಂಜೀವಿಯಲ್ಲ; ಶಾಶ್ವತವಲ್ಲ. ಪ್ರತಿಯೊಂದಕ್ಕೂ ಹುಟ್ಟು ಸಾವು ಇದ್ದೇ ಇದೆ. ನಶಿಸುತ್ತಾ ನಿರ್ಮಿಸುತ್ತಾ ಲೋಕ ಚಾಲಿಸಲ್ಲಿದೆ. ಈ ಸ್ವಾಭಾವಿಕ ಹುಟ್ಟು ಸಾವುಗಳು ಕ್ರಮ ತಪ್ಪದೆ, ಕಾಲ ತಪ್ಪದೆ ನಡೆದರೇನೇ ವ್ಯವಸ್ಥೆ-ಅಲ್ಲವಾದರೆ ಅವ್ಯವಸ್ಥೆ.

ಮನುಷ್ಯ, ಮತ್ತಿತರ ಜೀವಿಗಳು ಹಾಗೂ ವಸ್ತುಗಳಂತೆಯೇ ಸ್ಥಿತಿಗತಿ, ಮೇಲ್ಲಿನ ಕೀಳ್ತನ, ಘನತೆ ಹೀನತೆಗಳಗೂ ಜನನ ಮರಣಗಳಿವೆ. ಮರಣವು ಅತ್ಯಂತ ದುಃಖದಾಯಿ -ಆದರೆ ಅನಿವಾರ್ಯ. ಆತ್ಮೀಯರ, ಆಪ್ತರ ಮರಣವೆಷ್ಟಕ್ಕೂ ಬೇಕಾಗಿಲ್ಲ; ಆದರದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ.

ಇಂತಹ ಅನಿವಾರ್ಯ ಆಪತ್ತುಗಳ ವೇಳೆ ಸಂದರ್ಭೋಚಿತ ಎದೆಗಾರಿಕೆ ಮತ್ತು ವರ್ತನೆ ಪ್ರದರ್ಶಿಸುವವರೇ ಯೋಗ್ಯರು; ತದ್ವಿರುದ್ಧವಾಗಿ ತಮ್ಮ ಆತ್ಮೀಯರ ಅಥವಾ ತಮಗತ್ಯಂತ ಪ್ರಿಯವಾಗಿದ್ದವುಗಳ ಶವವನ್ನೂ ಅಪ್ಪಿಕೊಳ್ಳುವಂತಹ ಗಲಿಬಿಲಿ ಪ್ರದರ್ಶಿಸುವವರು ಅಯೋಗ್ಯರು. ಈ ನೀತಿಯು ಎಲ್ಲಾ ಸಾವು ಸಂದರ್ಭಗಳಿಗೂ ಅನ್ವಯಿಸುತ್ತದೆ. ಆದ್ದರಿಂದಲೇ ಧೀರಾಂತ್ಯ, ಯೋಗ್ಯ ಮರಣ, ಉತ್ತಮ ಸಾವುಗಳಿರುವಂತೆಯೇ ಅಪಮೃತ್ಯು, ಅಶ್ಲೀಲ ಮುಕ್ತಾಯ, ಹೇಸಿಕೆ ಮರಣಗಳೂ ಇವೆ.

ಅಂತ್ಯವು ಅನಿವಾರ್ಯವೆಂದಾದ ಮೇಲೆ, ಆ ಸಂಬಂಧದ ಯಾತನೆ, ದುಃಖ, ದೌರ್ಬಲ್ಯಗಳೇಳದಂತೆ ಮಾಡುವದಕ್ಕಾಗಿ ಧೀರ ಮುಕ್ತಾಯ ಹೊಂದಿಸುವುದೇ ಯೋಗ್ಯ. ಅಹಿಂಸಾಚಾರ್ಯ ಮಹಾತ್ಮಾಜಿಯಾದರೂ ತನ್ನಾತ್ಮೀಯದ ಒಂದು ಕರುವು ಅವಸಾನ ಕಾಲದ ಅಸಹ್ಯ ಯಾತನೆಯನ್ನನುಭವಿಸುತಿದ್ದಾಗ, ಅದರ ನೋವು ನಿವಾರಣೆಗಾಗಿ 'ಇಂಜೆಕ್ಶನ್' ಕೊಡಿಸಿ ಕೊಲ್ಲಿಸಿದ್ದ ನೆನಪು ಹೆಚ್ಚಿನವರಿಗಿರಬಹುದು. ಸಾವು ಸನ್ನಿಹಿತವಾಗಿದ್ದರೂ ಪ್ರಾಣ ಬಿಡಲೊಲ್ಲದೆ ಒದ್ದಾಡುತ್ತಿರುವ ಪ್ರತಿಷ್ಠೆ, ದುರಭಿಮಾನಗಳೆಲ್ಲವುಗಳ ಜೀವವನ್ನೂ ಇದೇ ರೀತಿ ತೆಗೆದುಬಿಡುವುದು ವಿಹಿತ.

ಅತ್ಯಂತ ಪ್ರಭಾವಶಾಲಿಯಾಗಿ, ಹಿಕ ಪ್ರಕಾರ ಎರಡು ಶತಮಾನಗಳಲ್ಲಿ ಭಾರತದಲ್ಲಿದ್ದ ಬ್ರಿಟಿಷ್ ಆಡಳಿತೆಯನ್ನು ಅಂತ್ಯಪಡಿಸಿಕೊಳ್ಳುವುದು ಇಂಗ್ಲಾಂಡಿನ ಕೂಲಿಗಾರ ಸರಕಾರಕ್ಕೇನೂ ಸಂತೋಷದ ವಿಷಯವಾಗಿರಲಿಲ್ಲ. ಆದರೆ ಅಂತ್ಯವು ಖಂಡಿತವೆಂದಾದ ಮೇಲೆ, ಮತ್ತೂ ನರಳುತ್ತಾ ಬಿದ್ದುಕೊಂಡಿರುವುದು ಸಲ್ಲದೆಂದೇ ಅವರದನ್ನು ಸ್ವತಃ ಮುಗಿಸಿಕೊಂಡರು. ಕಾಲೋಚಿತ ಎದೆಗಾರಿಕೆ ಮತ್ತು ಸದ್ವರ್ತನೆಯನ್ನು ಪ್ರದರ್ಶಿಸಿದರು.

ಇಡೀ ಪ್ರಪಂಚವನ್ನು ನಡುಗಿಸಿದ್ದ ಹಿಟ್ಲರ್ ಕೊನೆಗೆ ಯುದ್ಧ ನಿಲ್ಲಿಸಿ, ಆತ್ಮಹತ್ಯೆ ಮಾಡಿಕೊಂಡುದು ಹೇಡಿಯಾಗಿ ಅಲ್ಲ ಮುಕ್ತಾಯವು ಅನಿವಾರ್ಯವನ್ನಿಸಿದಾಗ ತನ್ನ ಅದುವರೆಗಿನ ಶೂರ ವರ್ತನೆಗಳಿಗುಚಿತವಾದ ಧೀರಾಂತ್ಯವನ್ನು ಆತ ತನಗೆ ತಾನೇ ತಂದುಕೊಂಡ

ಮಾನುಷತ್ವವು ಸಂಪೂರ್ಣ ಮಾಯವಾಗಿ ನರಭಕ್ಷಕತ್ವ ವ್ಯಾಪಿಸಿದ್ದ ಜಾತೀಯ ಗೊಂದಲದ ವಾತಾವರಣದಲ್ಲಿ ನವಾಖಾಲಿಯಂತಹ ಸ್ಮಶಾನಭೂಮಿಯಲ್ಲಿ ಅಥವಾ ನವಧಿಲ್ಲಿಯಂತಹ್ಹ ಭೈರವ ರಂಗದಲ್ಲಿ ತನ್ನನ್ನು ಸಾವು ಇದಿರಿಸಬಹುದೆಂಬ ನಿರೀಕ್ಷೆ ಗಾಂಧಿಜೀಗಿದ್ದಿರಬಹುದು. ಆದರೆ ರೋಗರುಜೆಗಳಿಗೆ ತುತ್ತಾಗಿ ನರಳಿ ನಶಿಸುವ ಆ ದೇಹವು ತನ್ನ ಧ್ಯೇಯ ಸಾಧನೆಯಲ್ಲಿ ಧೀರಾಂತ್ಯಗೊಂಡರದು ಮತ್ತಷ್ಟು ಹಿತಕರವೆಂಬುದರಿಂದಲೇ ಮಹಾತ್ಮರು ಅಪಾಯವಿದ್ದಲ್ಲಿಗೇ ನುಗ್ಗಿ ಮರಣವನ್ನು ಸ್ವಾಗತಿಸಿಕೊಂಡರು.

ಭಾರತದ ಆಶ್ರಿತರಾಜರುಗಳನ್ನೇ ನೋಡೋಣ. ತಮ್ಮ ಸಂಸ್ಥಾನದೊಳಗಡೆ ತಾವೇ ತಾವಾಗಿ ವಂಶಪರಂಪರೆಯಿಂದ ಮೆರೆದಾಡಿಕೊಂಡಿದ್ದು ಅಖಿಲ ರಾಷ್ಟ್ರೀಯತೆಯ ಕಡೆಗೆ ಗಮನವನ್ನೇ ಕೊಡದಿದ್ದ ಹಿಂದೀ ಆಶ್ರಿತರಾಜರಿಗೆ, ತಮ್ಮ ವಂಶಾನುಗತ ಪ್ರತಿಷ್ಠೆಯನ್ನು ಅಂತ್ಯಪಡಿಸಿಕೊಂಡು ಭಾರತ ಕೇಂದ್ರದೊಂದಿಗೆ ಜೋಡಣೆಗೊಳ್ಳುವ ಉತ್ಸಾಹಾನಂದಗಳೇನೂ ಇರಲಿಲ್ಲ. ಆದರೆ ತಮ್ಮೀ ಅಭಿಮಾನವನ್ನು ತಾವಾಗಿ ಹೊಳಕೊಂಡಾಯಿತು — ಇಲ್ಲವಾದರೆ ಅದನ್ನು ತುಳಿದು ನೆಲಸಮ ಮಾಡುವವರಿದ್ದಾರೆ, ಎಂಬುದು ಮುಂದಟ್ಟಿದೊಡನೆ, ಈ ಅನಿವಾರ್ಯ ಮುಕ್ತಾಯವನ್ನು ಆಹ್ವಾನಿಸಿಕೊಳ್ಳಲು ಅವರು ಸ್ವತಃ ಮುಂದಾದರು.

ಖಂಡಿತವೆಂದಾದ ಅವಸಾನವನ್ನು ಇಚ್ಛಾಪೂರ್ವಕ ಹಾಗೂ ಎದೆಗಾರಿಕೆಯಿಂದ ಸ್ವಾಗತಿಸಿಕೊಂಡು, ಆ ಮೂಲಕವೇ ಚರಿತ್ರಾರ್ಹರನ್ನಿಸಿದವರ ದಾಖಲೆಗಳು ಬೇಕಾದಷ್ಟಿವೆ. ಆದರೂ ಈ ಮೇಲ್ಪಂಕ್ತಿಯನ್ನನುಕರಿಸುವ ಯೋಗ್ಯತೆಯಿಲ್ಲದೆ, ಸಾವು ಹೇಡಿಗಳಾಗಿ ಅನಗತ್ಯ ಸಂಕಟಗಳಿಗೀಡಾಗಿರುವ ದುಶ್ಶಕ್ತಿಗಳೋ, ಪ್ರತಿಷ್ಠೆ, ಅಹಂಕಾರಗಳೋ ನಮ್ಮ ಇಂದಿನ ಜನಜೀವನದಲ್ಲಿ ಬೇಕಾದಷ್ಟು ಕಾಣಸಿಗುತ್ತಿವೆ. ದಕ್ಷಿಣ ಕನ್ನಡದಲ್ಲಿ ಈಗ ನಡೆದಿರುವ ಮೋಟಾರು ಮುಷ್ಕರದತ್ತ ನೋಡಿದರೆ ಒಂದು ಜೀವಂತ ನಿದರ್ಶನ ಅಲ್ಲಿದೆ.

ಪದ್ಧತಿಗೆ ವಿರುದ್ಧವಾಗಿ—ಇದುವರೆಗಿನ ಮಾಲಕ ಮಜೂರ ಸಂಬಂಧ ಸ್ಥಿತಿಗೆ ವ್ಯತಿರಿಕ್ತವಾಗಿ— ತಾವು ತಮ್ಮ ಅಭಿಮಾನ ಮತ್ತು ಪ್ರತಿಷ್ಠೆಯನ್ನು ಮುಗಿಸಿಕೊಂಡು, ಸಂಧಾನಕ್ಕಿಳಿಯುವ ವಿನಯಶೀಲರಾಗುವುದು ಹೇಗೆಂಬ ಸಂಕಟವು ಎರಡೂ ಕಡೆಯವರದಾದ್ದರಿಂದಲೇ ಈ ವಿವಾದವು ಈ ರೀತಿ ಕೊಳೆಯುತ್ತಿದೆ ಎನ್ನಬಹುದು.

ಮುಕುಟಗಳಡಿಯ ರಾಜಶಾಹಿ, ಮುಂಡಾಸುಗಳಡಿಯ ಜಮೀನ್ದಾರೀ ಠೇಂಕಾರಗಳನ್ನು ಹಾರಿಸಿಬಿಟ್ಟ ಕಾಲಾನುಗುಣ ಬಿರುಗಾಳಿಯು ಮಿಕ್ಕ ಒಡೆತನಗಳ ಹೆಮ್ಮೆಯನ್ನೇನೂ ತಂಗಾಳಿಯಾಗಿ ಸ್ಪರ್ಶಿಸುವಂತಿಲ್ಲ. ಇಂದಿನ ಸಮಾನತಾಯುಗವು ಧನಿತ್ವವನ್ನು ಮುಗಿಸುತ್ತಾ ಮೂಡುತ್ತಿದೆ. ಆದ್ದರಿಂದ ಮಾಲಕತ್ವದ ಒಣಾಭಿಮಾನವು ಕಾಲಹಸ್ತದಿಂದ ಕಿತ್ತೆಸೆಯಲ್ಪಡುವ ನೋವು ತಮಗಾಗದಂತೆ ಮಾಲಕರಾದವರು ಸ್ವಹಸ್ತದಿಂದ ಅದನ್ನು ತೆಗೆದೆಸೆಯುವುದು ಹಿತಕರ.

ಅಂತೆಯೇ ಧನಿತನದ ಒಣಾಭಿಮಾನವನ್ನು ಪದಚ್ಯುತಗೊಳಿಸಿ, ಆ ಸ್ಥಾನವನ್ನು ಮಜೂರಾಂದೋಲನದ ದುರಭಿಮಾನವು ಏರುವುದು ಕೂಡಾ ಸೊಗಸಲ್ಲ. ಸರ್ವಸಮಾನತೆಗೆ ಅದರಂತೆ ಇದೂ ಹಾನಿಕರವೆಂಬುದನ್ನು ಮರೆಯಬಾರದು. ಇವೆರಡೂ ಅಂತ್ಯಗೊಳ್ಳಬೇಕಾದ ಕಾಲವಿದು. ಸಂಬಂಧಪಟ್ಟ ಇಕ್ಕಡೆಯವರೂ ಈ ಸಂದರ್ಭೋಚಿತ ಮುಕ್ತಾಯವನ್ನು ಇಕ್ಕಡೆಯಿಂದ ತಾವಾಗಿ ಸಾಧಿಸಿಕೊಳ್ಳಬೇಕಾದುದು ಅಗತ್ಯ.

ಮಾಲಕರ ಅನ್ಯಾಯ ಅಥವಾ ಅಂಕುಶರಹಿತ ವರ್ತನೆ—ಮಜೂರ ನಿರ್ಮಿತ ಅವ್ಯವಸ್ಥೆ ಅಥವಾ ಅನಾಯಕತ್ವ—ಎರಡಕ್ಕೂ ಇಲ್ಲ, ಈ ಕಾಲದಲ್ಲಿ ಬಾಳುವೆಯಿಲ್ಲ. ನ್ಯಾಯ, ವ್ಯವಸ್ಥೆ ಮತ್ತು ಶಾಂತಿ ಬಾಳಬೇಕಾದ ಸ್ಥಿತಿ ಇಂದಿನದು. ವಸ್ತುಸ್ಥಿತಿಗನುಗುಣವಾಗಿ ಸಾಯಬೇಕಾದುದನ್ನು ಕೊಂದು ಹಾಕಿ, ಬಾಳಬೇಕಾದುದನ್ನೇ ರಕ್ಷಿಸುತಿದ್ದರೆ—ತದ್ವಿರುದ್ಧ ಲೋಪದೋಷಗಳು ಯಾವ ಕಡೆಯಿಂದಲೂ ಆಗದಿರುತಿದ್ದವೆ-ದಕ್ಷಿಣಕನ್ನಡದ ಬಸ್ ಮು

"ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

## ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು-ದಿ। ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಮಾತುಗಳ ರೂಪದಲ್ಲಿ ಭಟ್ಟಿಯಾಗಿ ಎದ್ದು ಕಾಣುವುದು.

**400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.**

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

**ನವಯುಗ ಪ್ರೆಸ್, ಉಡುಪಿ, ದ. ಕನ್ನಡ.**

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

ಷ್ಕರಗಳಂತಹವು ಹುಟ್ಟುತ್ತಿದ್ದುವೆ? ಹುಟ್ಟಬೇಕೆಂದಿದೆಯೆ?

'ರಾಜಾ ಪ್ರತ್ಯಕ್ಷ ದೇವತಾ' ಎಂದಿದ್ದ ಕಾಲ ಹೋಗಿ, ರಾಜರಿಂದಿರು ಪ್ರತ್ಯೇಕ ಬೇಡಿಕೆಗಳನ್ನಿಟ್ಟು ಕಸಗೊಳ್ಳುವ ಕಾಲ ಬಂದಾಗಿದೆ. ಈ ಸಮಾನತಾ ನಿರ್ಮಾಣ ಯುಗದಲ್ಲಿ ಎತ್ತರದ ಗೋಡೆಗಳು ಮುಂದಾಗಿ ಕೆಡಹಲ್ಪಟ್ಟರೂ ಅನುಕ್ರಮವಾಗಿ ಇದೇ ಅದೃಷ್ಟವು ತುಸು ತಗ್ಗಾದ ಪಾಗಾರ, ದಿನ್ನೆಗಳಿಗೂ ಒದಗಲೇಬೇಕು. ರಾಜರಿಗೆ, ಜಮೀನ್ದಾರರಿಗೆ ಒದಗಿದ ಗತಿಯೇ ಮಾಲಕರಿಗೆ, ಶ್ರೀಮಂತರಿಗೆ, ವರ್ಗದಾರರಿಗೆ ಕಟ್ಟಿಟ್ಟದ್ದಿದೆ. ಅಂದಮೇಲೆ ಮೇಲಿನ ರಾಜರು, ಜಮೀನ್ದಾರರು, ತಮ್ಮ ಸರದಿ ಬರುತ್ತದೆನ್ನುವಾಗ ತೋರಿಸಿದ್ದಂತಹ ಕಾಲಾನುಗುಣ ವರ್ತನೆಯನ್ನಾದರೂ, ತಮ್ಮ ಸರದಿ ಬರುತ್ತಿದೆ ಎನ್ನುವಾಗಲೇ ಮಾಲಕರು, ಶ್ರೀಮಂತರೇ ಮೊದಲಾದವರು ತೋರಿಸುವುದು ಬೇಡವೆ? ಇದು ಅತ್ಯಂತ ಕಷ್ಟದ್ದಾದರೂ ಅನಿವಾರ್ಯ ತಾನೆ?

ಯಾವುದೇ ಒಂದು ವರ್ಗದ ಮಜೂರರಾದರೂ ಸರಿಯೇ—ಕೇವಲ ತಮ್ಮ ಒಂದು ವರ್ಗದ ತಾತ್ಕಾಲಿಕ ಬೇಡಿಕೆಗಳು ಸರ್ವ ಸಮಾನತೆಯನ್ನು ಸಾಧಿಸಲಾರವೆಂಬುದನ್ನು ಅವರು ತಿಳಿದಿರಬಹುದು. ಅಂದ ಮೇಲೆ ಇಂತಹ ತಾತ್ಕಾಲಿಕ ವಿವಾದಗಳ ತೀರ್ಮಾನಗಳು ತಮಗೆಷ್ಟೊಂದು ಅನುಕೂಲವಾಗಿ ಪರಿಣಮಿಸಿದರೂ ಅವೂ ತಾತ್ಕಾಲಿಕವಾದವುಗಳೇ ಇರುವುದರಿಂದ, ಈ ಅಲ್ಪ ವಿಜಯಕ್ಕಾಗಿ ಅತಿರೇಕ ಸಾಹಸ ಮತ್ತು ಮಿತಿಮೀರಿದ ಛಲ ಪ್ರದರ್ಶಿಸುವುದರಿಂದ ನಾಳೆ ತೊಂದರೆಗಳೇಳಲಾರವೇ ಎಂಬ ದೂರದೃಷ್ಟಿಯನ್ನಿಟ್ಟುಕೊಂಡಿರಬೇಕು. ಸದ್ಯದ ನ್ಯಾಯವೊಂದರ ಸಾಧನೆಗೆ ಎಷ್ಟು ಮತ್ತು ಎಲ್ಲಿ ಪರಾಕ್ರಮ ತೋರಿಸಬೇಕೋ ಅಷ್ಟೇ ಮತ್ತು ಅಲ್ಲಿ ಮಾತ್ರ ತೋರಿಸಿ, ಸಂದರ್ಭ ದೊರೆತೊಡನೆ ಶಾಂತಿ ಪಾಲನೆಗೆ ಅನುಕೂಲವಾಗಬೇಕು. ಇದು ಕೂಡಾ ಅತಿ ಕಷ್ಟದ ವಿಧಾನ — ಆದರೆ ಅನಿವಾರ್ಯ. ಸ್ವತಃ ತಮ್ಮಲ್ಲಿರುವ ಅನಗತ್ಯವಾದ ವಿಷಯಗಳನ್ನು ನಿಸ್ಸಂಕೋಚವಾಗಿ ಅಲ್ಲಲ್ಲೇ ನಿರ್ಮೂಲಿಸಿಕೊಳ್ಳದೆ ಹೋದರೆ, ಒಂದು ವಿವಾದವು ಹೊಸ ಹೊಸ ಜಗಳಗಳನ್ನು ಮರಿಯಿಡುತ್ತಾ ಹೋಗಬಹುದು. ಈ ಘರ್ಷಣೆಗಳ ಪೈಕಿ ಒಂದರಲ್ಲಿ ಗೆದ್ದವರೇ ಎಲ್ಲದರಲ್ಲೂ ಗೆಲ್ಲುವರೆಂಬ ನಂಬಿಕೆಯಿಲ್ಲ.

ಯಾರು ಏನೆಂದರೂ, ಏನೇ ಮಾಡಿದರೂ ಕಾಲ ಮುಂದೆ ಹಾರುತ್ತಿದೆ ಹೊರತು ಹಿಂದೆ ಜಾರುತ್ತಿಲ್ಲ. ಇಂದು ಸಮಾನತೆಯು ಅಂಶಮಾತ್ರ ಬಂದಿದೆಯಾದರೆ ನಾಳೆ ಅದು ಪೂರ್ಣಗೊಳ್ಳಲಿದೆ ಹೊರತು ಮೂಡಿದ ಅಂಶವೂ ಮಾಯವಾಗುವ ಸಂಭವ ಇಲ್ಲವೇ ಇಲ್ಲ. ಈ ಸಮಾನತೆಯು ಆರ್ಥಿಕ, ಸಾಮಾಜಿಕ, ಕ್ಷೇತ್ರಗಳಂತೆಯೇ ಬುದ್ಧಿ, ಸಂಸ್ಕಾರ, ಯೋಗ್ಯತೆ, ಗುಣವತ್ತೆಗಳಲ್ಲೂ ಮೂಡಬೇಕಾಗಿದೆ. ಎಷ್ಟೇ ಕಷ್ಟವಾದರೂ ಕಾಲಾನುಗುಣವಾಗಿ ಅನಿವಾರ್ಯವೆಂಬುದರಿಂದ, ಅಂತಹ ಸಮಾನತಾ ಸಾಧನೆಗೆ ವ್ಯತಿರಿಕ್ತವಾದ ಅಂಶಗಳು ತಮ್ಮಲ್ಲೇನಿವೆ, ಎಂಬುದನ್ನು ಪ್ರತಿಯೊಂದು ಪಕ್ಷದವರೂ, ಪ್ರತಿಯೊಬ್ಬರೂ ಗ್ರಹಿಸಿಕೊಂಡು ಅವುಗಳನ್ನು ಅಂತ್ಯಪಡಿಸಿಕೊಂಡರಾಯಿತು.

ನಮ್ಮ ಸಾರ್ವಜನಿಕ ಜೀವನದಿಂದಾರಂಭಿಸಿ, ಖಾಸಗೀ ಜೀವನದ ವರೆಗಿನ ಎಲ್ಲಾ ರಂಗಗಳಲ್ಲೂ ಮುಖ್ಯ ತೊಡಕಾಗಿ ನಿಂತಿರುವುದೇನೆಂದರೆ ಮರಣಪಕ್ವಗೊಂಡಿರುವ ಸಂಗತಿಗಳನ್ನಾದರೂ ಸಾಯಲು ಬಿಡದೆ ನರಳಿಸುವ ಮತ್ತಾಮೇಲೆ ಶವವನ್ನೂ ಅಪ್ಪಿ ಹಿಡಿದುಕೊಳ್ಳುವ ಅಭ್ಯಾಸ. ಉಚಿತ ಮತ್ತು ಸ್ವಾಭಾವಿಕ ಸಾವುಗಳಿಗಾಗಿ ಹಿಗ್ಗುವ ಗುಣ ಬರಲಿ!

[illegible]

# ದ. ಕ. ಜಿಲ್ಲೆಯ ಬಸ್ ಕೆಲಸಗಾರರ ಮುಷ್ಕರ

['ರಸ್ತೆ ಸಂಚಾರಿ'ಯಿಂದ]

ಮಧ್ಯಸ್ಥಗಾರ ನ್ಯಾಯಾಧೀಶರ ತೀರ್ಮಾನಾನುಸಾರವಾದ ಸಂಬಳ, ಬೋನಸ್, ಇತ್ಯಾದಿಗಳನ್ನು ಮಾಲಕರು ಕೊಡಲಿಲ್ಲವೆಂಬ ಕಾರಣದಿಂದ 'ಕೆನರಾ ಮೋಟಾರ್ ವರ್ಕರ್ಸ್ ಯೂನಿಯನ್'ನವರು ಕ್ರಮಬದ್ಧ ನೋಟೀಸು ಕೊಟ್ಟು ಇದೇ ತಾ. 22ನೇ ಬುಧವಾರ ಇಡೀ ಜಿಲ್ಲೆಯಲ್ಲಿ ಆರಂಭಿಸಿದ್ದ ಬಸ್ ಕೆಲಸಗಾರರ ಮುಷ್ಕರವು ಈ ಲೇಖನವನ್ನು ಬರೆಯುವ (ತಾ. 27ನೇ ಸೋಮವಾರ) ದಿನದ ವರೆಗೂ ಏಕಪ್ರಕಾರ ಸಾಗಿದೆ. ಮುಷ್ಕರದ ಆರಂಭ ದಿನದಲ್ಲಿ ಕೆಲವು ಬಸ್ಸುಗಳು ಓಡಾಡುವುದನ್ನು ಕಂಡು, ಅರ್ಧಾಕಾರದಿಂದ ಜನಿಸಿದ ಕೂಸಿದು ಬಹಳ ದಿನ ಬಾಳುವಂತಹದಲ್ಲವೆಂದೂ, ಹುಟ್ಟಿದೊಡನೆಯೇ ಸಾಯಲಾರಂಭಿಸುವದೆಂದೂ ಹೆಚ್ಚಿನವರ ನಿರೀಕ್ಷೆಯಿದ್ದಿತು. ಆದರದು ಮರುದಿನವೇ ಹುರಿಗೊಂಡು, ಅಂದಿನಿಂದ ಈ ವರೆಗೆ ಬಸ್ ಕೆಲಸಗಾರರ ಮುಷ್ಕರವು ಪೂರ್ಣರೂಪದಿಂದ ಸಾಗಿದೆ; ಇಡೀ ಜಿಲ್ಲೆಯ ಸಂದು ಮೂಲೆಗಳಲ್ಲೂ ಇದರ ಪ್ರಭಾವ ಬಿದ್ದಿದೆ. ಇಂತಹ ಜಿಲ್ಲಾವ್ಯಾಪಿ, ಪರಿಣಾಮಕಾರಿ, ಹಾಗೂ ಜಯಶೀಲ ಮುಷ್ಕರವು ಈ ವರೆಗೆ ಈ ಜಿಲ್ಲೆಯಲ್ಲಾದುದಿಲ್ಲ.

## ಮುಷ್ಕರ ಪ್ರಭಾವ

ಬೀಡಿ ಕೆಲಸಗಾರರ ಮುಷ್ಕರ, ಹಂಚು ಕೆಲಸಗಾರರ ಮುಷ್ಕರಗಳಂತಹ ಸಂದು ಮೂಲೆಯ, ಸಣ್ಣ ಪುಟ್ಟ ಮುಷ್ಕರಗಳು ಈ ಮೊದಲು ದಕ್ಷಿಣ ಕನ್ನಡದಲ್ಲಾಗಿದ್ದುವು. ಅವುಗಳೆಲ್ಲವೂ ಬಹುತೇಕವಾಗಿ ಕಮ್ಯೂನಿಸ್ಟರಿಂದ ಪ್ರೇರಿಸಲ್ಪಟ್ಟದ್ದು, ಅಪೂರ್ಣವಾಗಿದ್ದುವು; ಹೆಚ್ಚಿನಂಶ ಪರಾಭವಗೊಂಡಿದ್ದುವು. ಅವು ಸಾರ್ವಜನಿಕರಿಂದ ಅಪಹಾಸ್ಯವನ್ನಲ್ಲದೆ ಆದರವನ್ನುಗಳಿಸಿದುದಿಲ್ಲ. ಜಿಲ್ಲೆಯ ಒಂದಲ್ಲೊಂದು ಮೂಲೆಯಲ್ಲಿ, ಸಾರ್ವಜನಿಕರ ನಿತ್ಯಜೀವನದಲ್ಲಿ ಅನುಭವಕ್ಕೆ ಬಾರದಂತಹ ಅಗಣ್ಯ ವಿಷಯಗಳಿಗಾಗಿ, ಅರ್ಧನರ್ಧ ರೂಪದಿಂದ ನಡೆದಂತಹ ಆ ಅಪ್ರಾಮುಖ್ಯ ಮುಷ್ಕರಗಳು ಅಂತಹ ದುರದೃಷ್ಟಗಳಿಗೀಡಾದುದರಲ್ಲಿ ಸೋಜಿಗವೇನೂ ಇಲ್ಲ. ಆದರೆ 'ಸೋಶಿಯಲಿಸ್ಟ'ರ ಚಾಲಕತ್ವದಲ್ಲಿ ಈಗ ನಡೆದಿರುವ ಮೋಟಾರು ಮುಷ್ಕರವು ಇಡೀ ಜಿಲ್ಲೆಯ ಪ್ರತಿಯೊಂದೆಡೆಯ ಜನರ ದೈನಂದಿನ ಜೀವನದಲ್ಲಿ ಪ್ರತ್ಯಕ್ಷಾನುಭವಕ್ಕೆ ಬರುವಂತಹದಿದೆ; ಬಂದಿದೆ. ಈ ಮುಷ್ಕರಭಾಗಿಗಳಾಗಿರುವ ಕೆಲಸಗಾರರ ಸಂಖ್ಯೆಯು ಈ ಮೊದಲಿನ ಕೆಲವು ಸಂಪುಗಳಲ್ಲಿದ್ದ ಮಜೂರರ ಸಂಖ್ಯೆಗಿಂತ ಹೆಚ್ಚಾಗಿರಲಾರದೇನೋ. ಆದರೆ ಇಂದಿನ ಸಂಪುಗಾರರು ಜಿಲ್ಲೆಯ ಎಲ್ಲಾ ಆಯಕಟ್ಟು ಸ್ಥಳಗಳಲ್ಲೂ ಹರಡಿದ್ದಾರೆ; ಜಿಲ್ಲೆಯ ನರನಾಡಿಗಳಂತಿರುವ ರಸ್ತೆಗಳ ಸಂಚಾರವಹಿವಾಟಿನ ಕೆಲಸ ಬಿಟ್ಟು ನಿಂತಿದ್ದಾರೆ. ತಾಸುಗಳ ಅವಧಿಯೊಳಗೆ ಜನರನ್ನು ಜಿಲ್ಲೆಯ ಒಂದು ಮೂಲೆಯಿಂದ ಮತ್ತೊಂದು ಮೂಲೆಗೊಯ್ದು ಬಿಡುತ್ತಿದ್ದವರು ಸ್ತಬ್ಧರಾದುದರಿಂದ ಜಿಲ್ಲೆಯ ಜನರೂ ಅಲ್ಲಲ್ಲೇ ಸ್ತಬ್ಧರಾಗಿ 'ಇದೇನು ಬಂತು!' ಎಂದು ಸಹಜವಾಗಿ ದಿಗಿಲು ಮತ್ತು ಕುತೂಹಲಕ್ಕೀಡಾಗಿದ್ದಾರೆ. ಬೀಡೀ ಮುಷ್ಕರ, ಹಂಚು ಮುಷ್ಕರದಂಥವುಗಳು ಜಿಲ್ಲಾ ದೇಹದ ಬೆರಳ ಸಂದುಗಳಲ್ಲೆದ್ದ ತುರಿಕಜ್ಜಿಯಂತಿದ್ದರೆ, ಇಂದಿನ ಬಸ್ ಮುಷ್ಕರವು ನಾಡೀ ಚಲನೆಯೇ ನಿಂತಂತಿದೆ. ದಕ್ಷಿಣಕನ್ನಡದ ಕಾಫೀ ಹೊಟೇಲುಗಳೆಲ್ಲವೂ ಒಂದೇ ಸವನೆ ಮುಚ್ಚಲ್ಪಟ್ಟು ಐದಾರು ದಿನಗಳ ವರೆಗೂ ಅವು ಹೊಗೆಯೆಬ್ಬಿಸದೆ ಉಳಿದುಕೊಂಡರೆ ಇಲ್ಲಿಯ ಹಳ್ಳೀ ಮೂಲೆಗಳವರೆಗೂ ಅದರ ನೋವು ಬಡಿದೀತು; ಅದಕ್ಕೆರಡನೆಯದೇ ಬಸ್ ಇಲ್ಲದ ಸಂಕಟ. ದ. ಕ. ಜಿಲ್ಲೆಯ ಪ್ರತಿಯೊಂದು ಹಳ್ಳಿಯ ಒಬ್ಬೊಬ್ಬರಾದರೂ ಪ್ರತಿ ದಿನ ಬಸ್ ಹತ್ತದಿಲ್ಲ. ಹಾಗೆ ಒಂದು ಗ್ರಾಮದಿಂದ ಬಸ್ಸೇರುವ ಇಬ್ಬರು, ಆ ದಿನದ ಮಟ್ಟಿಗೆ ಆ ಗ್ರಾಮದ ಪ್ರಾಮುಖ್ಯ ವಾರ್ತಾವಾಹಕರು; ಮಿಕ್ಕವರಿಗಿಂತ ಹೆಚ್ಚಾಗಿ ಗ್ರಾಮಸ್ಥರ ಲಕ್ಷ್ಯವನ್ನೆಳೆಯುವವರು. ಹೀಗಾಗಿ ಬಸ್ ಪ್ರಯಾಣವೆಂಬುದು ಸಂದು ಮೂಲೆ ಸಮೇತ ಇಡೀ ದಕ್ಷಿಣಕನ್ನಡ ಜಿಲ್ಲೆಯ ನಿತ್ಯಾಹ್ನಿಕವಾಗಿರುವ ವಿಷಯ. ಇಂತಹ ಆಚರಣೆಗೆ ಭಂಗಬಂದಾಗ, ಸಂಗತಿ ಪ್ರಾಮುಖ್ಯದ್ದಾಗಿ ಎಲ್ಲರ ಮನಸ್ಸಿಗೂ ನಾಟಿತು. ಮುಷ್ಕರವು ಜಿಲ್ಲೆಯ ಜನತೆಯ ಹೃದಯದಲ್ಲೊಂದು ಸ್ಥಾನಗಳಿಸಿತು. ಇಂತಹ ಪ್ರಾಮುಖ್ಯ ಸಂಪನ್ನು ಸಂಘಟಿಸುವುದರಲ್ಲಾದರೂ ಮಿಕ್ಕ ಸಂಪುಗಳ ಸಂಘಟನೆಯಲ್ಲಿರುವ ಪ್ರಯಾಸವಿರಲಿಲ್ಲವೆನ್ನಬಹುದು. ದಕ್ಷಿಣ ಕನ್ನಡದ ಬಸ್ ಸರ್ವಿಸುಗಳನ್ನು ನಡೆಸುತ್ತಿರುವ ಏಕಮಾತ್ರ ಸಂಸ್ಥೆ 'ಕಂಬೈಂಡ್ ಬುಕ್ಕಿಂಗ್ ಸರ್ವಿಸ್'ನ ಕೈಕೆಳಗೆ ಒಟ್ಟಿಗೆ ಎಷ್ಟು ಡ್ರೈವರರಿದ್ದಾರೆಂಬ ಸರಿಯಾದ ಅಂಕೆ ಗೊತ್ತಿಲ್ಲವಾದರೂ ಅದು ನೂರರ ಆಚೆ ಈಚೆ ಇರಬಹುದು. ಬಸ್ ಕಂಪೆನಿಗಳ 'ವರ್ಕ್ ಶೋಪ್' ಮತ್ತಿತರ ಉಪಾಂಗಗಳಲ್ಲಿ ದುಡಿಯುವವರ ಸಂಖ್ಯೆ ಹೆಚ್ಚಿರಬಹುದಾದರೂ, ಅದೇನೂ ಬೀಡೀ ಕೆಲಸಗಾರರ ಸಂಖ್ಯೆಯಷ್ಟು ಅಥವಾ ಇತರ ಕೆಲಸಗಾರ ವರ್ಗದಷ್ಟಾಗದು. ಅಂತೂ ಇಲ್ಲಿರುವುದು ಕೆಲವೇ ಮಂದಿಯನ್ನು ಒಮ್ಮತಗೊಳಿಸುವ ಕೆಲಸ. ಆ ಪೈಕಿ ಸುಮಾರು ನೂರರಷ್ಟಿರುವ ಡ್ರೈವರು ಮುಷ್ಕರ ಹೂಡಿದರಾಯಿತು- ಮನಸಿದ್ದರೂ ಇಲ್ಲದಿದ್ದರೂ, ಕ್ಲೀನರ್ ಕಂಡಕ್ಟರು, ಟಿಕೇಟು ಕೊಡುವ ಕ್ಲಾರ್ಕರು ಮಾತ್ರ ಕೆಲಸ ಮಾಡಲಾರರು. ಅವರೆಲ್ಲರೂ ಪ್ರಯಾಣಿಕರಂತೆ ಅನಿವಾರ್ಯವಾಗಿ ಸ್ತಬ್ಧರಾಗಬೇಕಾಗುವದು. ಇಷ್ಟಾದರೆ ಸಾಕು—ಎಂತಹ ಪ್ರಚಾರ ಡಂಗುರದಿಂದಲೂ ಆಗದ ಪರಿಣಾಮವು ದಿನಕ್ಕೆರಡು ಮೂರು ಸಲದಿಂದಾರಂಭಿಸಿ, ಹತ್ತಿಪ್ಪತ್ತು ಬಾರಿ ಜನರನ್ನು ಹೊತ್ತು ತರುತ್ತಿದ್ದ ಬಸ್ಸುಗಳಲ್ಲಿ ಯಾವುದೂ ಒಂದು ಬಾರಿಯೂ ಘೊಂಕಾರವೆಬ್ಬಿಸದಿರುವುದರಿಂದ ಆಗುತ್ತದೆ; ಇಂದಿಗೆ ನಾಲ್ಕಾರು ದಿನಗಳಿಂದಾಗಿದೆ. ಮೇಲಾಗಿ ಜಿಲ್ಲೆಯ ಬಸ್ ಕಂಪೆನೀ ಮಾಲಕರು ಮಿಕ್ಕೆಡೆಯ ಬಂಡವಾಳಗಾರರೊಡನೆ ತುಲನೆ ಮಾಡುವಾಗ ಹೇಗೆ ಕಂಡರೂ, ಜಿಲ್ಲೆಯ ಜನತೆಯ ನಡುವಿನ ಮೇಲ್ವರ್ಗದ ಶ್ರೀಮಂತರೇ. ಇವರು ಜನಸಾಮಾನ್ಯರ ಸಾಮಾನ್ಯ ಚಟುವಟಿಕೆಗಳಿಗೆಟಕದವರು. ಆದರೆ ಡ್ರೈವರರೇ ಮೊದಲಾದ ಬಸ್ ಕೆಲಸ


THE BOMBAY LIFE ASSURANCE COMPANY, LTD.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ
ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು
ಸಲ್ಲಿಸುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಗಾರರು ಜನರಿಗೆ ನಿತ್ಯ ಪರಿಚಿತರು; ಸಲುಗೆಯ ಕೂಡಾಟದವರು. ಸ್ನೇಹಾಚಾರಗಳಂತೆಯೇ ಜನರ ದೂರು ದೂಷಣೆಗಳೂ ಇವರ ಕಡೆಗಿರಬಹುದು. ಆದರೂ ನಿತ್ಯ ಸಂಚಯ ಮತ್ತು 'ಏಕ ದೋಣೀ ಪಯಣ'ದ ಸಂಗಾತಿತನ ಡ್ರೈವರಿಗೂ ಸಾರ್ವಜನಿಕರಿಗೂ ಇದ್ದದ್ದೇ. ಹೀಗಾಗಿ ಬಸ್ ಮಾಲಕರು ತಮಗಿಟಕದ 'ದೊಡ್ಡ ಮನುಷ್ಯ'ರಾಗಿ ಜನರಿಗೆ ತೋರಿದರೆ, ಬಸ್ ಕೆಲಸಗಾರರು ತಮ್ಮ ನಡುವಿನ ತಮ್ಮವರಾಗಿ ತೋರಿದರು. ಆ ಪರಕೀಯರೊಡನೆ ಈ ಸ್ವಕೀಯರು ಹೂಡುವ ಮೇಲಾಟದಲ್ಲಿ—ಆ ದೊಡ್ಡವರೊಡನೆ ಈ ಶ್ರಮಜೀವಿಗಳು ನಡೆಸುವ ಘರ್ಷಣೆಯಲ್ಲಿ—ಸಾರ್ವಜನಿಕರು ತಮ್ಮವರ ಹಾಗೂ ಬಡವರ ಪಕ್ಷವಹಿಸಿದರು. ದಕ್ಷಿಣ ಕನ್ನಡದ ಬಸ್ ಮುಷ್ಕರವು ಇಷ್ಟೊಂದು ಪರಿಪೂರ್ಣವಾಗಲು— ಜನತೆಯ ಸಹಾನುಭೂತಿ ಗಳಿಸಲು-ಕಾರಣವಿದೇ.

## ಬೇಡಿಕೆಯ ನ್ಯಾಯ

ಸಮತಾವಾದಿಗಳ ಚಾಲಕತ್ವದಲ್ಲಿರುವ ಇಂದಿನ ಮುಷ್ಕರಕ್ಕೆ ಕಾರಣವಾದ ಬೇಡಿಕೆಗಳಾದರೂ ಅನ್ಯಾಯ ಹಾಗೂ ಅತಿರೇಕಗಳಾಗಿ ಕಾಣುವದಿಲ್ಲ. ಕಮ್ಯೂನಿಸ್ಟರಂತೆ ಸ್ಥಿತಿಗತಿಗಳ ಅಳತೆ ಮತ್ತು ಹಣಕಾಸುಗಳ ಲೆಕ್ಕಾಚಾರಗಳನ್ನು ತಾವೇ ಹಾಕಿಕೊಂಡು, ತಮಗೆ ಸಲಬೇಕಾದ ಪಾಲನ್ನು ಸ್ವತಃ ನಿರ್ಧರಿಸಿಕೊಂಡು ಅಷ್ಟು "ಸಿಕ್ಕಲೇ ಬೇಕು" ಎಂದು ಮುಷ್ಕರ ಹೂಡಿದ್ದವರು ಇಂದಿನ ಬಸ್ ಕೆಲಸಗಾರರಲ್ಲ. ಇವರು ಸರಕಾರೀ ನೇಮಿತ ಜಡ್ಜರೊಬ್ಬರ 'ಎವಾರ್ಡಿ'ನ ಕಡೆಗೆ ಕೈತೋರಿಸಿ ಅದು ಜಾರಿಗೆ ಬರಬೇಕು" ಎಂದು ಕೇಳುತ್ತಿದ್ದಾರೆ. ಅದನ್ನು ಜಾರಿಗೆ ತರುವುದಕ್ಕಾಗಿ ಸಂಪು ಹೂಡಿದ್ದಾರೆ. ಆ ಜಡ್ಜರಾದರೋ ಬಸ್ ಕಂಪೆನಿಗಳ ಮಾಲಕ-ಮಜೂರರ ಹೇಳಿಕೆ ಬೇಡಿಕೆಗಳಂತೆ ಆಯವ್ಯಯಗಳನ್ನುಕೂಡಾ ಸರಿಯಾಗಿ ನೋಡಿಕೊಂಡೇ ತೀರ್ಪು ಕೊಟ್ಟವರು. ವಿವಾದಕ್ಕೆ ಸಂಬಂಧಿಸಿದ ಎರಡು ಪಕ್ಷಗಳಲ್ಲೊಂದರ ಕಡೆಗೆ ವಾಲುವವರು ನ್ಯಾಯಾಧೀಶರಲ್ಲ- ವಿವಾದಕ್ಕೆ ಸಂಬಂಧಿಸಿದ ವಿಷಯಗಳನ್ನು ತಕ್ಕಡಿಯಲ್ಲಿಟ್ಟು ತಟ್ಟೆಯತ್ತ ವಾಲುತ್ತಿದೆ, ಮತ್ತೆಷ್ಟು ಎಂಬುದನ್ನು ನೋಡಿಯೇ ಅವರು ತೀರ್ಮಾನಿಸಬೇಕು. ತಮ್ಮ ತೀರ್ಮಾನಗಳನ್ನು ಜೀವಗೊಳಿಸುವದಕ್ಕಾಗಿ ಸಂಪು ಹೂಡುವ ಸಂಪ್ರದಾಯವೇನಾದರೂ ಜಡ್ಜ ವರ್ಗದಲ್ಲಿರುತಿದ್ದರೆ, ಈ ಎವಾರ್ಡನ್ನಿತ್ತ ಜಡ್ಜರು ಮಾಡುತಿದ್ದ ಕೆಲಸವನ್ನೇ ಇಂದು ಬಸ್ ಕೆಲಸಗಾರರು ಕೈಕೊಂಡಿದ್ದಾರೆ. ಸಂಬಂಧಪಟ್ಟ ಎವಾರ್ಡಿನ ಕುರಿತು ಮಾಲಕರ ಭಿನ್ನಾಭಿಪ್ರಾಯಗಳಿರಬಹುದು. ಅವರದಕ್ಕೆ ಕಟ್ಟಿರುವ ಅನ್ಯಾರ್ಥಗಳೆಂಬುದನ್ನು ಈ ಸಂದರ್ಭದಲ್ಲಿ ಮರೆಯಲಾಗುವದಿಲ್ಲ. ಆದರೇ ಆಕ್ಷೇಪಗಳು ಸರಿಯೇ ತಪ್ಪೋ ಎಂದು ವಿಚಾರಿಸುವದಲ್ಲ, ಅವು ನಿಜವಾದ ಕಾರಣಗಳೇ, ಕೇವಲ ನೆವನಗಳೋ ಎಂದು ವಿಮರ್ಶಿಸಿ ನೋಡುವ ಅಂಶವಿದೆ. ಮಾಲಕರ ಮುಖ್ಯ ವಾದಗಳು ಕಿಹವಿದ್ದರೂ "ಪ್ರಯಾಣ ಟಿಕೇಟು ದರವನ್ನು ಏರಿಸಲು ಸರಕಾರವು ಅನುಮತಿ ಕೊಟ್ಟರೆ, ಎವಾರ್ಡಿನ ವಾಯಿದೆ ಹೋದರೂ ಎವಾರ್ಡಿನಲ್ಲಿ ಸೂಚಿಸಿರುವ ಮಜೂರಿಯ ವೇತನಗಳನ್ನು ನಿಮಗೆ ತೆರಲು ನಾವು ಸಿದ್ಧರಿದ್ದೇವೆ. ಸರಕಾರದಿಂದ ಅಂತಹ ಅನುಮತಿ ದೊರಕಿಸಿಕೊಳ್ಳಲು ನೀವೂ ನಾವು ಒಟ್ಟಾಗಿ ಪ್ರಯತ್ನಿಸೋಣ" ಎಂದು ಅವರು ಮಜೂರರಿಗೆ ಕೊಡುತ್ತಿರುವ ಬೋಧನೆಯೊಂದೇ ಯಥಾರ್ಥವಾದುದು. ಈ ಉಪದೇಶಕ್ಕನುಸಾರವಾಗಿ "ಮುನಾಫೆಯಿದ್ದರೆ, ಕೆಲಸಗಾರರಿಗೆ ಈ ರೀತಿ ಸಂಬಳ, ತುಟ್ಟಿಭತ್ತೆ, ಬೋನಸು ಕೊಡಬೇಕು; ಇಲ್ಲವಾದರಿಲ್ಲ'ವೆಂಬುದೇ ಆ ಎವಾರ್ಡಿನ ಅರ್ಥ — ಅಂತಹ ಮುನಾಫೆಯು ಬಸ್ಸು ಕಂಪೆನಿಗಳಿಗೆ ಈಗ ಇಲ್ಲವಾದ್ದರಿಂದ ಟಿಕೇಟಿನ ಮೈಲು ಧಾರಣೆಯನ್ನು ಏರಿಸಲು ಸಮ್ಮತಿಸುವ ಮೂಲಕವೇ ಸರಕಾರವು ತನ್ನ ಜಡ್ಜರ ಎವಾರ್ಡನ್ನು ಜಾರಿಗೆ ತರಲು ಅನುಕೂಲಮಾಡಿಕೊಡಬಹುದು" ಎಂದಾಗುತ್ತದೆ. ಆದರೆ ಜಡ್ಜರೊಬ್ಬರು ಪ್ರಚಲಿತ ಧಾರಣೆಯ ಪ್ರಕಾರ ಉತ್ಪನ್ನವೆಷ್ಟಿದೆ ಮತ್ತು ವೆಚ್ಚವೆಷ್ಟಿದೆ ಎಂಬುದನ್ನು ತುಲನೆ ಮಾಡಿ, ಆ ಲೆಕ್ಕಾಚಾರವನ್ನಾಧರಿಸಿಯೇ 'ಎವಾರ್ಡು' ಕೊಟ್ಟಿರುವಾಗ, ಆ ಅವಧಿಯ ವರೆಗಿನ ಅಂಶಗಳನ್ನು 'ಟಿಕೇಟು ಧಾರಣೆಯೇರಿಸದೆ ಕೊಡಲಾಗುವದಿಲ್ಲ' ಎಂದು ಹೇಳಲು ಸಾಧ್ಯವಿಲ್ಲ. ಅದರೆ ಆ ಮೇಲೂ ಜಾರಿಯಲ್ಲಿರಬೇಕಾದ ಸಂಬಳಾಧಿಕ್ಯ ಮೊದಲಾದುವುಗಳ ಮಟ್ಟಿಗೆ, ಎವಾರ್ಡು ಕೊಡಲ್ಪಟ್ಟನಂತರ ತಮ್ಮ ವೆಚ್ಚದ ಅಂಶ ಬಹಳವಾಗಿ ಹೆಚ್ಚಿದೆಯೆಂಬ ಕಾರಣದಿಂದ ಮಾಲಕರು ಆಕ್ಷೇಪಿಸಬಹುದು. ಅಂತಹ ಆಕ್ಷೇಪವು ಸಿಂಧುವಾಗಬೇಕಾದರೂ ಎವಾರ್ಡಿನ ನಂತರದ ಆಯ—ವ್ಯಯಗಳ ಪರಿಶೀಲನೆಯಾಗಿ, ಅದು ನ್ಯಾಯವಾದುದೆಂಬ ತೀರ್ಮಾನವಾಗಿಕೊಳ್ಳಬೇಕು. ಅಂತೂ ಮೈಲು ಧಾರಣೆ ಹೆಚ್ಚಿಸಬೇಕೆಂಬ ಬೇಡಿಕೆಯು ಇನ್ನೊಂದು ವಿಚಾರಣೆ, ಮತ್ತೊಂದು ತೀರ್ಮಾನಕ್ಕೊಳಗಾಗಬೇಕಾದ ವಿಷಯವೇ ಹೊರತು, ಪ್ರಚಲಿತ ಎವಾರ್ಡಿಗೆ ಸಂಬಂಧಿಸಿದ್ದಲ್ಲ. ಈ ಕಾಲದಲ್ಲಿ ಈಗಿನ ಎವಾರ್ಡಿನಂತಾಗಬೇಕು ಎಂದು ಕೆಲಸಗಾರರು ಬೇಡುವದೇನೂ ತಪ್ಪಲ್ಲ.

## ಆದರೂ ಹೀಗೇಕೆ?

ಸಂಗತಿ ಚಿತ್ರವೀರೀತಿ ಸ್ಪಷ್ಟವಾಗಿ ಕಣ್ಣ ಮುಂದಿದೆ. ಹೀಗಲ್ಲದೆ, ಎವಾರ್ಡಿನ ಸಂಬಂಧದ ಬೇರೆ ಒಳ ವಿವಾದಗಳೇನಾದರೂ ಇರುತ್ತಿದ್ದರೆ ಬಸ್ ಕಂಪೆನಿಗಳ ಮಾಲಕರು "ಎವಾರ್ಡೇನೂ ಕೆಲಸಗಾರರು ಹೇಳುವಂತಿಲ್ಲ; ಅದು ಹೀಗಿದೆ...." ಎಂಬ ಪ್ರತಿವಾದ ಹೂಡಿ, ಆ ಸಂಬಂಧದ ಸ್ಪಷ್ಟೀಕರಣವನ್ನು ಸರಕಾರದಿಂದಾಗಲೀ, ಮೂರನೆಯವರಿಂದಾಗಲೀ ಪಡಕೊಳ್ಳೋಣವೆಂದು ಇದಿರುವಾದಿಗಳನ್ನು ಆಹ್ವಾನಿಸುತಿದ್ದರು. ಹಾಗೇನೂ ಮಾಡದೆ, ಮಾಲಕರು ಮೈಲು ದರವೇರಿಸುವ ಅನುಮತಿಗಾಗಿ ಸರಕಾರದೊಡನೆ ಪತ್ರವ್ಯವಹಾರ ನಡೆಸಿದುದಷ್ಟೇ ಕಂಡುಬರುತ್ತದೆ. ತಾವು ಸರಕಾರದೊಡನೆ ವಾದಿಸಿ ಪಡಕೊಳ್ಳಲಾರದೆ ಹೋದ ದರಾಧಿಕ್ಯಾನುಕೂಲತೆಯನ್ನು, ಮುಷ್ಕರದಿಂದ ತಮ್ಮ ನಿಸ್ಸಹಾಯಕತೆಯನ್ನು ಪ್ರದರ್ಶಿಸುವ ಮೂಲಕವಾದರೂ ಪಡಕೊಳ್ಳೋಣವೆಂಬ ದೂರದೃಷ್ಟಿಯಿಂದಲೇ ಮಾಲಕರೀ ಮುಷ್ಕರವನ್ನು ಹುಟ್ಟಿ ಬೆಳೆಯಲು ಬಿಟ್ಟಿರಬಹುದೆಂಬ ಸಂದೇಹ ಮೂಡುತ್ತಿದೆ. ಇಂದಿಗೆ ಆರು ದಿನಗಳಿಂದ ಇಡೀ ಜಿಲ್ಲೆಯಲ್ಲಿ ನಿಂತುಹೋಗಿರುವ ಬಸ್ ಚಲಾವಣೆಯಿಂದ ಸಂಬಂಧಪಟ್ಟ ಕಂಪೆನಿಗಳಿಗಾಗಿಂಬಹುದಾದ ಒಟ್ಟು ನಷ್ಟವು ಎವಾರ್ಡಿಗನುಗುಣವಾದ ಸಂದಾಯಕ್ಕೆ ಬೇಕಾಗುವ ಮೊತ್ತದೊಂದು ಗಣ್ಯ ಭಾಗದಷ್ಟಾಗದೆ? ಈ ಸಂಪು ಇನ್ನೂ ಕೆಲಕಾಲ ಬೆಳೆದರೆ ಆ ನಷ್ಟವು ಎವಾರ್ಡಿನ ಪೂರ್ಣ ಮೊತ್ತದಷ್ಟಾಗುವಂತಿಲ್ಲವೆ? ಮುಷ್ಕರವನ್ನೀ ರೀತಿ ಜಯಶೀಲವಾಗಿ ಸಾಗಿಸುತ್ತಿರುವ ಮಜೂರರು, ಕೊನೆಯ ಸಂಧಾನ ಶರ್ತಗಳಲ್ಲಿ ಮುಷ್ಕರಾವಧಿಯ ಸಂಬಳದ ಬೇಡಿಕೆಯಂಥವುಗಳನ್ನು ಮುಂದಿಡುವುದಂತೂ ಖಂಡಿತ. ಮೈಲು ಧಾರಣೆಯೇರಿಸಲಾಗುವದೆಂಬ ಭಾವೀ ಲಾಭದೃಷ್ಟಿಯಿಂದಲ್ಲದೆ ಬಸ್ ಕಂಪೆನಿಗಳ ಒಡೆಯರು ಇವೆಲ್ಲಾ ನಷ್ಟಗಳನ್ನು ಯಾಕಾಗಿ ಸಹಿಸಿಕೊಳ್ಳುವರೋ? ಮುಷ್ಕರಕ್ಕಿಳಿದ ತಮ್ಮ ಕೆಲಸಗಾರರ ಮೇಲಿನ ಹಠಸಾಧನೆಗಾಗಿಯೇ ಎನ್ನುವುದಕ್ಕಿಂತ, ಭಾವೀ ಸೌಕರ್ಯಕ್ಕಾಗಿ ಎಂದು ಊಹಿಸುವುದೇ ಸರಿಯೆಂದು ತೋರುತ್ತಿದೆ. ತಮಗೆ ಅಧಿಕ ವೇತನ ದೊರೆಯಬೇಕೆನ್ನುವಾಗ, ತತ್ಪರಿಣಾಮವಾಗಿ ಸಾರ್ವಜನಿಕರ ಮೇಲೆ ಹೆಚ್ಚಿನ ದರ ಬೀಳಬಾರದೆಂಬ ಹಠವು ಸಂಪುಗಾರರದಿರಲಾರದು. ಇಂದು ದರ ಹೆಚ್ಚಳಕ್ಕಾಗಿ ಬಸ್ ಮಾಲಕರು ಆತುರಿಸುತ್ತಿರುವಷ್ಟು ಮಜೂರರು ಉಮೇದುಗೊಂಡಿಲ್ಲವೆಂಬುದು ಸಹಜವಾದರೂ, ಒಂದೇ ಕಡೆಯ ಅಡಿ ಮೇಲು ಭಾಗಿಗಳಾಗಿರುವ ತಮ್ಮೊಳಗಿನ ವಿವಾದವನ್ನು ಮೂರನೆಯವರಾದ ಸಾರ್ವಜನಿಕರ ಮೇಲೆ ದರ ಹೇರಿ ತೀರ್ಮಾನಿಸುವ ಕುರಿತು ಇವರಾಕ್ಷೇಪಿಸುವಂತಿಲ್ಲ. ಹಾಗೆ 'ಮೈಲೇಜ್' ಏರಿ, ಆ ಮೂಲಕ ಮಜೂರರಿಗೆ ಎವಾರ್ಡಿನನ್ವಯ ವೇತನ ತೆರುವಂತಾದರೆ ಬಸ್ ಮಾಲಕ, ಮಜೂರರಿಬ್ಬರೂ ಆರ್ಥಿಕ ದೃಷ್ಟಿಯಿಂದ ಒಮ್ಮೆ ಗೆದ್ದಂತಾಗುವುದು. ಏನೇ ಬಂದರೂ ಮುಷ್ಕರ ಹೂಡಲಾರದ ಸಾರ್ವಜನಿಕರು ಮಾತ್ರ ಸೋತಂತಾಗುವುದು; ಆದಕ್ಕೂ ಮುಂದಾಗಿ ಈ ತರಹ ಮೈಲೇಜ್ ಏರಿಸಲು ಅನುಮತಿ ನಿರಾಕರಿಸಿರುವ ಸರಕಾರವು ಪರಾಭವಗೊಂಡಂತಾಗುವದು. ಬಸ್ ಟಿಕೇಟು ಆಫೀಸುಗಳಲ್ಲಿ ಕಂಡು ಬರುತ್ತಿದ್ದ ಜನದೊತ್ತಡದಿಂದಾಗಿ ವೈರಾಗ್ಯಕ್ಕೀಡಾದ ಸಾರ್ವಜನಿಕರಲ್ಲೂ ಹಲವರಿಗೆ ಮೈಲಿಗೊಂದು ಪಾವಾಣೆಯಂತೆ ಟಿಕೇಟು ಏರುವುದೂ ತಪ್ಪಲ್ಲವೆಂದೇ ತೋರೀತು. ಆದರೆ, ನಮ್ಮಲ್ಲಿ ವಿಲಾಸಕ್ಕಾಗಿ ಪ್ರಯಾಣ ಮಾಡುವವರು ಬಹಳ ಕಡಿಮೆ. ಪೂರ್ವಕಾಲದಲ್ಲಿ ಹರದಾರಿಗಟ್ಲೆ ಕಾಲ್ನಡೆಯಲ್ಲಿ ಹೋಗುತಿದ್ದ ಬಡವನಾದರೂ ಇಂದು ಎರಡು ಮೈಲು ಪಯಣಕ್ಕೆ ಬಸ್ಸನ್ನು ಕಾಯುತ್ತಾನಾದರೆ, ಅದು ಅರೆಹೊಟ್ಟೆಯಿಂದ ನಡೆಯಲಾರದ ಸಂಕಟಕ್ಕಾಗಿ ಮತ್ತು ಅವಸರದ ಕಾರ್ಯಕ್ಕಾಗಿ ಹೊರತು ಠೀವಿಗಾಗಿ ಅಲ್ಲ. ನಮ್ಮಲ್ಲಿ ಜನ ಸಂಖ್ಯೆ ಮತ್ತು ಜನತೆಯ ಪ್ರಯಾಣಾವಶ್ಯಕತೆ ಹೆಚ್ಚಿದ ಪರಿಮಾಣದಲ್ಲೇ ಬಸ್ ಸರ್ವೀಸುಗಳ ಸಂಖ್ಯೆಯೇನೂ ಹೆಚ್ಚಾಗಿಲ್ಲ. ಇವೆಲ್ಲಾ ಕಾರಣಗಳಿಂದಾಗಿ ಬಸ್ ಪ್ರಯಾಣಿಕರ ನೂಕಾಟ ನುಗ್ಗಾಟಗಳಿದ್ದ ಮಾತ್ರಕ್ಕೆ, ಟಿಕೇಟು ಧಾರಣೆಯನ್ನೇರಿಸಬಹುದೆಂದು ಕಲ್ಪಿಸಿ, ಇಷ್ಟರಲ್ಲೇ ಮಿತಿಮೀರಿರುವ ಸಾರ್ವಜನಿಕ ಅಡಚಣೆಗಳನ್ನು ಮತ್ತೊಂದಂಶ ಹೆಚ್ಚಿಸುವುದು ನ್ಯಾಯವಾಗಲಾರದು. ಮೂರನೆಯವನ ಮೇಲೆ ಬೀಳುವ ಸಂದರ್ಭ ಸಾಧಿಸಿಕೊಳ್ಳುವುದಕ್ಕಾಗಿ ಕೃತಕ ಜಗಳ ಮಾಡಿಕೊಳ್ಳುವ ಅಣ್ಣತಮ್ಮಂದಿರ ನೋಟವೇ ಇಂದಿನ ಬಸ್ ಮಾಲಕ- ಮಜೂರ ವಿವಾದದಲ್ಲಿದ್ದರೆ, ಮೂರನೆಯವರಾದ ಸಾರ್ವಜನಿಕರ ಪರವಾಗಿ ಸರಕಾರವು ಅಗತ್ಯವುಳ್ಳ ಜಾಗ್ರತೆ ವಹಿಸಲೇಬೇಕು. ಇಂದಿನ ಮುಷ್ಕರದಲ್ಲಿ ಅನ್ಯಾಯ ಮಾತ್ರ ಸೋಲಲಿ; ಮುಷ್ಕರದ ಇತ್ತಂಡವೂ ಗೆದ್ದು, ಸಾರ್ವಜನಿಕರು ಮಾತ್ರ ಸೋತು 'ಇಬ್ಬರ ನ್ಯಾಯ— ಮೂರನೆಯವನಿಗೆ ಫಾಯ.' ಎಂಬ ಹೊಸ ಗಾದೆಯು ನಿರ್ಮಾಣವಾಗುವದು ಬೇಡ!

## ಸರಕಾರವೇನಂತೆ?

ಮುಷ್ಕರಾವಧಿಯ ಶಾಂತಿ ಮತ್ತು ಕಾನೂನು, ವ್ಯವಸ್ಥೆಗಳ ಪಾಲನೆಗಾಗಿ ನಡೆದಿರುವ ಪೋಲಿಸು ಬಂದೋಬಸ್ತುಗಳ ಕುರಿತು ಎರಡೂ ಕಡೆಯವರ ದೂರು ದೂಷಣೆಗಳು ಕೇಳಬರುತ್ತಿವೆಯಾದರೂ ಕ್ಷೇತ್ರಗಾವಲಿನ ಮಟ್ಟಿಗೆ ಇಡೀ ಜಿಲ್ಲೆಯಲ್ಲಿ ಸರ್ವ ಸಾಮಾನ್ಯತಃ ಸಮಾಧಾನಕರ ರೀತಿಯಿಂದಲೇ ಪೋಲೀಸರು ತಮ್ಮ ಕರ್ತವ್ಯ ನಿರ್ವಹಿಸಿದ್ದಾರೆ, ಎನ್ನಬಹುದು. ಹೋರಾಟ ನಿರತ ಪಕ್ಷಗಳವರ ಸ್ವಹಿತ


**On this Memorable day**

Of the 26th of January in the year 1950 of the inauguration of the Indian Republic, we have the pleasure to announce the birth of our

**Vijaya Cash Certificates**

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices.

Head Office:—**Kadri Road, Mangalore.**

Branches:- City-Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara.

**B. Manjaya Hegde.**
Advocate & President, District Board, S. Kanara.
CHAIRMAN
VIJAYA BANK, LTD.,

ದೃಷ್ಟಿಗೆ, ಜೋಡಿಸಿಟ್ಟ ರಂಗವಾದ ರಸ್ತೆಗೆ ಹಾಕಿರುವ ಕಲ್ಲು. ಕೆಂಭ್ಯ ಕಂಗಳು ಕೆಲವು ಸಂದರ್ಭಾನುಸಾರ ತಪಾಗಿ ಅನ್ಯಾಯ ಮಾಡಿದಂತೆ ತೋರಬಹುದು; ಆದರೆ ಎಲ್ಲವನ್ನೂ ತುಲನೆ ಮಾಡಿ ನೋಡುವ ನ್ಯಾಯವಾದಿ ಸಾರ್ವಜನಿಕರ ದೃಷ್ಟಿಗೆ ಕಾಯಿದೇರಕ್ಷಕ ಪೋಲಿಸರಿಂದ ನಡೆದ ಗಣ್ಯ ಅನ್ಯಾಯಾತಿರೇಕಾಸದ್ದೆಗಳೇನೂ ಕಂಡು ಬಂದಿಲ್ಲ. ಈ ಮುಷ್ಕರದ ಕಡೆಗಿನ ಸರಕಾರೀ ಮನೋವೃತ್ತಿಮಾತ್ರ ಸಮಂಜಸವಾಗಿ ಕಾಣುವದಿಲ್ಲ. ಪ್ರತ್ಯಕ್ಷವಾಗಿ ಕಾನೂನಿಗಡ್ಡ ಬಾರದ ಕಾರ್ಯಕರ್ತರ ಸಮೇತ ಇಡೀ ಜಿಲ್ಲೆಯ ಮುಷ್ಕರ ಚಾಲಕರಲ್ಲಿ ಹೆಚ್ಚಿನವರನ್ನು ಇಷ್ಟರಲ್ಲೇ ದಸ್ತಗಿರಿ ಮಾಡಿಡಲಾಗಿದೆ; ಹೀಗೆ ಬಂಧಿಸಲ್ಪಟ್ಟವರ ಸಂಖ್ಯೆ 200ಕ್ಕೂ ಮಿಕ್ಕಿರಬಹುದು. ಕೇವಲ ಶಾಂತಿ, ವ್ಯವಸ್ಥೆಗಳ ಪಾಲನೆಗಾಗಿ ಇರದೆ, ಮುಷ್ಕರದ ಆಧಾರವನ್ನೇ ತಪ್ಪಿಸುವಂತಹದಿರಬಹುದೇ ಎಂಬ ಸಂದೇಹವು ಈ ಸಾಮೂಹಿಕ ದಸ್ತಗಿರೀ ನೋಟದಿಂದ ಏಳುತ್ತಿದೆ. ಹೀಗೇಕೆ? ಸರಕಾರೀ ನೇಮಿತ ನ್ಯಾಯಾಧೀಶರ ಎವಾರ್ಡಿನ ಅಸ್ತಿತ್ವಕ್ಕಾಗಿ ಹೂಡಲ್ಪಟ್ಟಿರುವ ಸಂಪು ಕಾಯಿದೇವಿರುದ್ಧವಲ್ಲವಷ್ಟೆ? 'ಅಪಾಯ ನಿರೀಕ್ಷೆ'ಯಿಂದ ಮುಂದಾಗಿ ಪ್ರತಿಬಂಧಕೋಪಾಯಗಳನ್ನು ಕೈಕೊಳ್ಳುವ ಕರ್ತವ್ಯವು ಸರಕಾರದ್ದಿದೆಯಾದರೂ, ಯಾರೂ ಬಯಸದ ಮತ್ತು ಸರಿಯಾದ ಆಧಾರವಿಲ್ಲದ ಭಾವೀ ಗಂಡಾಂತರವನ್ನು ಸರಕಾರವಾದರೂ ನಿರೀಕ್ಷಿಸಬೇಕೆಂದಿಲ್ಲ ತಾನೆ? ಇತ್ತ ಸಂಪುಗಾರ ಮಜೂರರ ಕಡೆಗೆ, ಯಾವ ಕಾರಣಕ್ಕಾಗಿಯಾದರೂ ಸರಕಾರವಿಂತಹ ನಿಷ್ಠುರ ಧೋರಣೆ ವಹಿಸಿರುವುದು ಕಂಡು ಬರುತ್ತಿರುವಾಗ ಅತ್ತ ಬಸ್ಸುಗಳನ್ನು ಚಾಲಿನಲ್ಲಿಡುವ ತಮ್ಮ ಕರ್ತವ್ಯಗಳನ್ನು ಮಾಡದಿರುವ ಬಸ್ ಕಂಪೆನಿಗಳ ಒಡೆಯರ ಕಡೆಗೆ ಸರಕಾರದ ವಿಶೇಷ ರಿಯಾಯತಿ ಇರಬಹುದೇ, ಎಂಬ ಸಂದೇಹ ಮೂಡುತ್ತಿದೆ. ಬಸ್ ಕಂಪೆನಿಗಳ ಶಾಸನಾನ್ವಯ ನಿಯಮ ನಿಬಂಧನೆಗಳು ಹೇಗಿವೆ, ಎಂಬ ಸೂಕ್ಷ್ಮ ಹಾಗೂ ಸರಿಯಾದ ಪರಿಚಯವಿಲ್ಲದೆ, ಬೇರೇನನ್ನು ಹೇಳಲಾಗದಿದ್ದರೂ ಆ ಕಂಪೆನಿಗಳವರು ಕಳೆದಾರು ದಿನಗಳಿಂದ ತಮ್ಮ ಕರ್ತವ್ಯ ಭ್ರಷ್ಟರಾಗಿದ್ದಾರೆಂಬುದು ಸ್ಪಷ್ಟವಾಗಿರುವ ವಿಷಯ. ದೀರ್ಘಾವಧಿಯ ಸೂಚನೆ ಮತ್ತು ಕ್ರಮಬದ್ಧ ಅವಧಿಯ ಅಧಿಕೃತ ನೋಟೀಸು ಕೊಟ್ಟೇ ನಡೆದಿರುವ ಈ ಮುಷ್ಕರದ ದಿನಗಳು ಬಸ್ ಮಾಲಕರ ಪಾಲಿಗೆ ಆಕಸ್ಮಿಕ ಅಪಾಯದ ದಿನಗಳೇನೂ ಅಲ್ಲ. ಒಂದಲ್ಲೊಂದು ರೀತಿಯಿಂದ ತಮ್ಮ ಹೊಣೆಗಾರಿಕೆಯನ್ನು ಅವರೀ ಅವಧಿಯಲ್ಲಿ ನಿರ್ವಹಿಸಲೇ ಬೇಕಿದ್ದಿತು. ಅದರವರು ತಪ್ಪಿದ್ದಾರೆ ಈ ತಪ್ಪಿಗೆ ಸರಕಾರವು ಮಾಡುವ ಪ್ರಾಯಶ್ಚಿತ್ತವೇನು? ಅದು ಹೇಳುವದೇನು? "ಸರಕಾರೀ ಎವಾರ್ಡಿನ ಸಂಬಂಧವಾಗಿಯೂ ಮುಷ್ಕರ ಹೂಡುವ ಅಡಚಣೆ ಬೀಳವವರೆಗೂ ಸರಕಾರವು ಸುಮ್ಮನಿರುದೆಂದರೇನು? ಈಗ ಐದಾರು ದಿನಗಳಿಂದ ಇಡೀ ಜಿಲ್ಲೆಯ ಪ್ರಯಾಣ ಸೌಕರ್ಯವು ನಿಂತು ಹೋಗಿರುವಾಗ ಸರಕಾರವು ಆ ಕಡೆಗೆ ಕಣ್ಣು ಮುಚ್ಚಿಕೊಂಡಿರುವುದೇಕೆ?" ಎಂಬ ಪ್ರಶ್ನೆಗಳು ತೆಂಕು ದಕ್ಷಿಣಕನ್ನಡದ ಸಾಮಾನ್ಯ ಹಳ್ಳಿಗರ ಬಾಯಿಯಲ್ಲಿ ಕೂಡಾ ನಲಿದಾಡುತ್ತಿವೆ. ಸರಕಾರೀ ಜಡ್ಜರ ರಾಜೀ ಎವಾರ್ಡಿಗೂ ಸರಕಾರೀ ಕಾನೂನಿಗೂ ಇರುವ ವ್ಯತ್ಯಾಸವು ಹೆಚ್ಚಿನವರಿಗೆ ತಿಳಿಯುವಂತಹದಲ್ಲ. ಸರಕಾರವು ನ್ಯಾಯೋಚಿತವಾಗಿ ತನ್ನ ಪಾಲಿನದಿರುವ ಕರ್ತವ್ಯ ಮಾಡುತಿದ್ದರೆ, ಈ ವ್ಯತ್ಯಾಸದ ಪರಿಚಯವನ್ನು ಸಾರ್ವಜನಿಕರಿಗೆ ಮಾಡಿಕೊಡುವ ಅಗತ್ಯ ಕೂಡಾ ಇಲ್ಲ. ಶಾಸನವಿಲ್ಲದಿದ್ದರೇನಾಯಿತು— ಮಾಲಕ ಮಜೂರ ವಿವಾದವು ಅನಪೇಕ್ಷಿತ ಮಟ್ಟಕ್ಕೇರಬಾರದೆಂದೇ ನಿಷ್ಪಕ್ಷಪಾತವಾಗಿ ಕೊಡಲ್ಪಟ್ಟಿರುವ 'ಎವಾರ್ಡ'ನ್ನು ಜಾರಿಯಲ್ಲಿ ತರಲು ತನ್ನ ಸರ್ವಶಕ್ತಿಯಿಂದ ಪ್ರಯತ್ನಿಸಬೇಕಾದುದು ಸರಕಾರದ ಕರ್ತವ್ಯವಲ್ಲವೆ? ಇಂತಹ ನ್ಯಾಯ ರಕ್ಷಣಾ ಕರ್ತವ್ಯವನ್ನೂ 'ಅಧಿಕಪ್ರಸಂಗ'ದ ವರ್ಗಕ್ಕೆ ಸೇರಿಸಿ ಶಾಸನವಾಗಿರುವುದನ್ನು ನಿರ್ವಹಿಸುವುದಷ್ಟೇ ತನ್ನ ಕರ್ತವ್ಯವೆಂದು ಸರಕಾರವು ಭಾವಿಸಿದೆಯಾದರೆ, ಬಸ್ ಚಲಾವಣಾ ವ್ಯವಸ್ಥೆಗಳಿಗೆ ಸಂಬಂಧಿಸಿದ ಕಾನೂನುಗಳಿಗೆ ದ.ಕ. ಬಸ್ ಕಂಪೆನೀ ಮಾಲಕರಿಂದ ಈ ಬಾರಿ ಏನಾದರೂ ಭಂಗ ಬಂದಿದ್ದರೆ, ಅದಕ್ಕಾದರೂ ಶಾಸನಬದ್ಧ ಪ್ರಾಯಶ್ಚಿತ್ತಗಳನ್ನು ಸರಕಾರವು ನಿರ್ದಾಕ್ಷಿಣ್ಯವಾಗಿ ಮಾಡುದಿದೆಯೆ? ಇಲ್ಲವೆಂದರೆ ಯಾಕಿಲ್ಲ? ಇಡೀ ಜಿಲ್ಲೆಯ ವಿವಿಧ ಮೋಟಾರು ಕಂಪೆನಿಗಳು 'ಕಂಬ್ಯೆಂಡ್' ಆಗಿ ಒಂದೇ ಮೇಲ್ವಿಚಾರಣೆಯಲ್ಲಿರುವ ದೆಸೆಯಿಂದ, ಈ ಒಕ್ಕೂಟದೊಳಗಿನ ಕೆಲವು ಕಂಪೆನಿಗಳವರು ಎವಾರ್ಡಿನನ್ವಯದ ಕೊಡುಗೆಗೆ ತಯಾರಿದ್ದರೂ ಇತರರ ಆಕ್ಷೇಪವಿರುವುದರಿಂದ ಕಂಬ್ಯೆಂಡ್ ಏಕಕಂಠದಿಂದ ನಕಾರಾತ್ಮಕ ಸ್ವರವೊಂದೇ ಹೊರಡಬೇಕಾಯಿತೆಂಬ ವಾರ್ತೆಗಳು ಕೇಳಿ ಬರುತ್ತಿವೆ. ಈ ಏಕ ಕೂಟದ ಬೇರೆ ಬೇರೆ ಕಂಪೆನಿಗಳು ತಂತಮ್ಮ ಮಜೂರರಿಗೆ ಕೊಡುವ ಸಂಬಳ ಧಾರಣೆಯಲ್ಲಿಯೂ ವ್ಯತ್ಯಾಸಗಳಿವೆ. ಇಂತಹ ಭಿನ್ನತೆಗಳನ್ನು ಸಹಿಸಿಕೊಂಡಾದರೂ ಜಿಲ್ಲೆಯ ಚಲನವಲನಗಳನ್ನು ಸ್ತಬ್ಧಗೊಳಿಸುವ ಮಟ್ಟಿಗೆ ಏಕ ಧೋರಣೆ ವಹಿಸಿ ಒಟ್ಟಿಗಿರಬೇಕೆಂಬ ಆತುರವು ಇವೆಲ್ಲ ಬಸ್ ಕಂಪೆನಿಗಳಿಗಿರಬಹುದು. ಆದರೆ, ಇಂದಿನ ಸ್ಥಿತಿಯಲ್ಲಿ ಸಾರ್ವಜನಿಕರ ದೃಷ್ಟಿಗೆ ಈ ಒಕ್ಕೂಟವೇ ಒಂದು ತೊಡಕಾಗಿ ತೋರುತ್ತಿದೆ. ಇಂತಹ ವಿಶೇಷ ವಿದ್ಯಮಾನದಲ್ಲಿ ಸರಕಾರವಾದರೂ ಈ ಜತೆಯಾಡಳಿತೆಯ ಪೂರ್ವಾಪರಗಳ ವಿಚಾರ ವಿಮರ್ಶೆ ನಡಿಸಿ, ಸಾಧ್ಯವಿದ್ದರೆ ಇದ್ದಂತೆಯೇ—ಇಲ್ಲವಾದರೆ ಆ ಜತೆಯನ್ನು ವಿಂಗಡಿಸಿಯಾಕೆಯಾದರೂ—ಅದೂ ಅಸಾಧ್ಯವೆಂದಾದರೆ ಹೊಸ ಕಂಪೆನಿಗಳಿಗವಕಾಶಕೊಡುವ ಮೂಲಕ ಜಿಲ್ಲೆಯಲ್ಲಿ ಈ "ಕಂಬ್ಯೆಂಡಿ"ಗಿರುವ ಅದ್ವಿತೀಯ ಬಸ್ ಚಲಾವಣಾ ಅಧಿಕಾರವನ್ನು ತಪ್ಪಿಸಿ—ಜಿಲ್ಲೆಯ ಪ್ರಯಾಣ ಸೌಕರ್ಯವನ್ನು ಸುಗಮ ಹಾಗೂ ನಿರಾತಂಕ ಗೊಳಿಸುವುದು ಅಗತ್ಯವಲ್ಲವೆ? ಸರಕಾರವೇನು ಮಾಡುವುದು ಎಂದು ದ. ಕ. ಜಿಲ್ಲೆಯ ಸಾರ್ವಜನಿಕರೆಲ್ಲರೂ ಆತುರಾಗ್ರಹದಿಂದ ಈಗ ನಿರೀಕ್ಷಿಸುತ್ತಿದ್ದಾರೆಂಬುದನ್ನು ಸರಕಾರವು ಲಕ್ಷ್ಯದಲ್ಲಿಡಬೇಕು.

## ಕಾಂಗ್ರೆಸಿನ ಪರಾಭವ

ಇಂದು ಮುಷ್ಕರದಲ್ಲಿರುವ ಬಸ್ ಕೆಲಸಗಾರರಿಗೆ ಎವಾರ್ಡಿನನ್ವಯದ ಹೆಚ್ಚಿಗೆ ಹಣ ಮಾತ್ರ ಬೇಕಾಗಿದೆ ಹೊರತು, ಮಾಲಕರೆದುರು ಒಂದು ಪಂಥ ಗೆಲ್ಲಬೇಕೆಂಬ ಹಠವಾಗಲೀ, ಆ ಕಡೆಗಾವುದೇ ವಿಧದ ದ್ವೇಷಾಸೂಯೆಗಳಾಗಲೀ ಇಲ್ಲವೆಂಬುದು ಖಂಡಿತ. ಈ ದೃಷ್ಟಿಯಿಂದ, ಅವರೀ ಮುಷ್ಕರವನ್ನು ವಿಜಯಾಂತ್ಯಗೊಳಿಸಿಕೊಂಡು, ಮುಷ್ಕರಾವಧಿಯ ಸಂಬಳ ಮತ್ತು ಪರಿಹಾರ ಸಮೇತ ಮೂಲ ಬೇಡಿಕೆಗಳೆಲ್ಲವನ್ನು ಸಂಪೂರ್ಣವಾಗಿ ಪಡೆಕೊಂಡರೂ ಅವರು ಶಾಶ್ವತವಾಗಿ ಗೆದ್ದರೆನ್ನಲಾಗುವದಿಲ್ಲ. ಈಗ ಸಾಂಘಿಕವಾಗಿ ಹೋರಾಟ ಗೆದ್ದರೂ ತತ್ಪರಿಣಾಮವಾಗಿ ಮುಂದಿನ ದೈನಂದಿನ ಜೀವನದಲ್ಲಿ ಬಿಡಿಬಿಡಿಯಾಗಿ ಎಂತಹ ಆಪತ್ತು ಅನಾನುಕೂಲತೆಗಳಿಗೀಡಾಗಬೇಕಾಗುವುದೋ ಊಹಿಸುವುದಸಾಧ್ಯ. ಒಕ್ಕಟ್ಟಾಗಿದ್ದ ನಾಲ್ಕು ದನಗಳಿದಿರು ಸೋತ ಹುಲಿ, ಅವು ಚದರಿದಾಗ ಒಂದೊಂದರ ಮೇಲೆಯೇ ಬೀಳುತ್ತಾ ಬಂದ ಕಥೆ ಬಾಲಕರಿಗೂ ಕಲಿಸಲ್ಪಡುತಿದೆ! ಭವಿಷ್ಯದ ಮಾತು ಹಾಗಿರಲಿ-ಪ್ರಚಲಿತ ಆಪತ್ತನ್ನು ಜಯಶೀಲವಾಗಿ ಇದಿರಿಸಬಲ್ಲವರು ಭಾವೀ ಆಪತ್ತುಗಳನ್ನೂ ಹೋರಾಡಿ ಗೆದ್ದಾರೆಂದೇ ಕಟ್ಟಿಕೊಳ್ಳೋಣ. ಹೇಗಿದ್ದರೂ ಈ ವಿವಾದವು ಇಂದಿನ ಮಟ್ಟಕ್ಕೇರದೆ ಮೂಲದಲ್ಲೇ ನ್ಯಾಯಪ್ರಕಾರ ತೀರ್ಮಾನಿಸಲ್ಪಡುವುದು ಸಂಬಂಧಪಟ್ಟ ಇಕ್ಕಡೆಯವರಿಗೂ ಹಿತಕರವಿದ್ದಿತೆಂಬುದು ನಿಸ್ಸಂದೇಹ. ಸಾರ್ವಜನಿಕರಿಗಾಗುತ್ತಿರುವ ಅಡಚಣೆಗಳು ಕೂಡಾ ಆ ಮೂಲಕ ತಪ್ಪುತಿದ್ದುವು; ಎವಾರ್ಡಿನ ನಂತರ ಜಗಳವಿಲ್ಲವೆಂದಾಗಿ ಸರಕಾರದ ಪ್ರತಿಷ್ಠೆಯೂ ಹೆಚ್ಚುತಿತ್ತು. ಆದರೆ ಈ ಉತ್ತಮೋಪಾಯವನ್ನು ಯಾರು ಕೈಕೊಳ್ಳಬೇಕಿದ್ದಿತು? ನಿಜಕ್ಕೂ ಕಾಂಗ್ರೆಸಿಗರು. ಕಾಂಗ್ರೆಸ್ ಸರಕಾರ—ಕಾಂಗ್ರೆಸಿಗರ ಪ್ರಭಾವ—ಇರುವ ಕಾಲವಿದು. ಕಾಂಗ್ರೆಸ್ ಸರಕಾರದ ಜಡ್ಜರೊಬ್ಬರ ತೀರ್ಮಾನಕ್ಕೆ—ಧನಿ ಮಜೂರ ವಿವಾದಗಳು ಮುಷ್ಕರ ರೂಪ ತಾಳದೆ ರಾಜೀ ಇತ್ಯರ್ಥಗೊಳ್ಳಬೇಕೆಂಬ ಧೋರಣೆಗೆ—ಸಂಬಂಧಿಸಿದ ವಿವಾದವಿದು. ಆದರೂ ಕಾಂಗ್ರೆಸಿನದಾದ ಈ ವಿಷಯದ ಮಟ್ಟಿಗೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕಾಂಗ್ರೆಸಿಗರೇ ಇಲ್ಲವೆನ್ನುವಂತಾಯಿತು! ಆದರ ಗೊಡವೆಗೆ ಹೋದವರಿಲ್ಲ. ಸಿ. ಪಿ. ಸಿ. ಬಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರಾಗಿರುವವರನ್ನು ದ. ಕ ಜಿಲ್ಲಾ ಕಾಂಗ್ರೆಸ್ ಕಮಿಟಿಯು ತನ್ನ ಆಪತ್ಕಾಲಗಳಲ್ಲಿ ಆಮಂತ್ರಿಸಿ ತನ್ನವರನ್ನಾಗಿ ಮಾಡಿಕೊಳ್ಳುತ್ತಿದೆ. ಇಂತಹ ಅಮೂಲ್ಯ ಸಹಾಯ ಸೌಕರ್ಯಗಳಿಗಾಗಿಯೇ ಸಿ. ಪಿ. ಸಿ.ಯ ಎಮ್. ಡಿ.ಯವರು ಇತ್ತೀಚೆಗೆ ಜಿಲ್ಲಾ ಕಾಂಗ್ರೆಸ್ ಕಮಿಟಿಗಾರಿಸಲ್ಪಟ್ಟಿದ್ದಾರೆ; ಆದರ ಕಾಲಾನುಗುಣ ಪ್ರಮುಖ ಸಮಿತಿಯೊಂದರ ಕನ್ವೀನರ್ ಆಗಿದ್ದಾರೆ. ಹನುಮಾನ್ ಬಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರಾಗಿರುವವರು ಜಿಲ್ಲಾ ಬೋರ್ಡಿನ ಕಾಂಗ್ರೆಸ್ ಸದಸ್ಯ, ಹಾಗೂ ಕಾಂಗ್ರೆಸ್ ಚಳವಳದಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸಿದವರು. ಜಿಲ್ಲೆಯ ಬಸ್ ಕಂಪೆನೀ ಒಡೆಯರೊಡನೆ ತಮಗಿರುವ ಇಂತಹ ಆತ್ಮೀಯತೆಯನ್ನು ಉಪಯೋಗಿಸಿಕೊಂಡು, ಜಿಲ್ಲಾ ಕಾಂಗ್ರೆಸಿಗರು ಮೋಟಾರ್ ಎವಾರ್ಡು ಸಂಬಂಧದ ಈ ವಿವಾದವನ್ನು ಮೂಲದಲ್ಲೇ ತೀರ್ಮಾನಿಸಬಾರದಿತ್ತೆ? ಅಥವಾ ಮುಷ್ಕರಾನಂತರವಾದರೂ ಆ ಕೆಲಸಕ್ಕಿಳಿಯಬಾರದಿತ್ತೆ? ಪ್ರಾಯಶಃ ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಬೀಗಮುದ್ರೆ ಹಾಕುವ, ತೆಗೆಯುವ ಗದ್ದಲದಲ್ಲೇ ಲೀನವಾದ ನಮ್ಮ ಕಾಂಗ್ರೆಸ್ ಧುರೀಣರ ಲಕ್ಷ್ಯವು, ಬಸ್‌ಗಳಿಗೆ ಬೀಳುವ ಬೀಗಮುದ್ರೆಗಳ ಕಡೆಗೆ ಹೋಗಲೇ ಇಲ್ಲವೇನೋ! ಇದೀಗ ಕಾಂಗ್ರೆಸಿನ ಸ್ಥಿತಿ! ಕಾಂಗ್ರೆಸಿಗರ ಈ ಸ್ಥಿತಿಮತಿಯಿಂದಾಗಿಯೇ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಸಮತಾವಾದಿಗಳು ಒಂದು ಅಪೂರ್ವ ಸುಯೋಗವನ್ನು ದೊರಕಿಸಿಕೊಂಡರು. ಮೊದಮೊದಲು ರೈತರ, ಶ್ರಮಜೀವಿಗಳ ಹೆಸರಿನಿಂದ ಸಭೆ, ಭಾಷಣಗಳನ್ನಷ್ಟೇ ಜರಗಿಸುತಿದ್ದು, ಆ ಮೇಲೆ ಕಳೆದ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಕೆಲವು ಸ್ಥಾನಗಳಿಗೆ ಸ್ಪರ್ಧಿಸಿ, ಎಲ್ಲದರಲ್ಲೂ ಸೋತು, ಈ ವರೆಗೂ ಸಾರ್ವಜನಿಕ ಜೀವನದಲ್ಲಿ ಗಣ್ಯಸ್ಥಾನ ಗಳಿಸಿಕೊಳ್ಳಲಾರದೆ ಹಿಂದೆ ಬಿದ್ದಿದ್ದ ದ. ಕ. ಜಿಲ್ಲೆಯ ಕೆಲವೇ ಮಂದಿ ಸಮತಾವಾದಿಗಳು ಈಗಿನ ಜಯಶೀಲ ಬಸ್ ಮುಷ್ಕರದ ಮೂಲಕ ಜಿಲ್ಲಾವ್ಯಾಪಿ ಗೌರವಸ್ಥಾನಗಳಿಸಿಕೊಂಡರು. ಅವರು ಒಮ್ಮೆಗೇ ಎಷ್ಟು ದೂರ ಮುಂದೆ ಬಂದರೋ ಕಾಂಗ್ರೆಸಿಗರು ಅಷ್ಟೇ ದೂರ ಹಿಂದೂಡಲ್ಪಟ್ಟರು. ಈ ಸುದೀರ್ಘ ಲೇಖನದಲ್ಲಿ ಈ ಮೊದಲೇ ವಿವರಿಸಿರುವ ಅಂಶಗಳ ಮೇಲಿಂದ, ಈಗಿನ ಮುಷ್ಕರವು ಹೇಗೆ ಮುಕ್ತಾಯಗೊಂಡರೂ ವ್ಯಾಪಾರೋದ್ಯಮ ಮತ್ತು ದಿನಹಂಣದ ಧ್ಯೇಯ ಮಾತ್ರವಿರುವ ಮಾಲಕರು ಮತ್ತು ಮಜೂರರು, ಎರಡು ಕಡೆಯವರೂ ಒಂದಲ್ಲೊಂದು ರೀತಿಯಿಂದ ಸೋತಂತೆಯೇ ಸರಿ. ಇನ್ನೀ ಮುಷ್ಕರವು ಹೇಗೆ ಸಮಾಪ್ತಿಗೊಂಡರೂ ಇಷ್ಟರಲ್ಲೇ ಗೆದ್ದವರೆಂದರೆ ಸಮತಾವಾದಿಗಳು ಮಾತ್ರ. ನವಚೇತನ ಗಳಿಸಿಕೊಂಡ ಈ ಸಮತಾವಾದಿ ಬಂಧುಗಳು ಧನಿ—ಒಕ್ಕಲು ಮತ್ತಿತರ ಮಾಲಕ-ಮಜೂರ ವರ್ಗಗಳ ಸಂಬಂಧ ಕ್ಷೇತ್ರದಲ್ಲಿ ಮತ್ತು ಭಾವೀ ಚುನಾವಣೆಯಲ್ಲಿ ವಹಿಸಬಹುದಾದ ಪಾತ್ರಗಳೆಂತಹವು ಮತ್ತೆಷ್ಟು ಎಂಬುದನ್ನು ಇಂದಿನ ಅವರ ಸ್ಥಾನ ಮಹಾತ್ಮೆಯನ್ನಾಧರಿಸಿ ಎಲ್ಲರೂ—ಮುಖ್ಯವಾಗಿ ಕಾಂಗ್ರೆಸಿಗರು—ಊಹಿಸಿಕೊಳ್ಳಲಿ. ಈ ರೀತಿ ಹೊಸತಾಗಿ ಘನಸ್ಥಾನ ಗಳಿಸಿಕೊಂಡ ದ.ಕ. ಜಿಲ್ಲೆಯ ಸಮತಾವಾದಿ ಬಂಧುಗಳಿಗೆ ಅಭಿವಂದನೆಗಳು.


**ಮುಲ್ಕಿ ಬೇಂಕ್,**

ಲಿಮಿಟೆಡ್, ಮುಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

**The Moolky Bank Ltd.,**

**Moolky, S. K.**

# ಬ್ರಿಟಿಷ್ ಚುನಾವಣೆ-ಕೂಲಿಗಾರ ಪಕ್ಷಕ್ಕೆ ಅಲ್ಪ ಬಹುಮತ.

ಗುರುವಾರ ದಿನ 23-2-50ರಲ್ಲಿ ಬ್ರಿಟಿಷ್ ಪಾರ್ಲಿಮೆಂಟಿನ ಮಹಾ ಚುನಾವಣೆ ನಡೆದು ತಾ. 24ರಲ್ಲೇ ಫಲಿತಾಂಶ ಪ್ರಕಟವಾಯಿತು. ಕಳದೈದು ವರುಷಗಳಲ್ಲಿ ಇಂಗ್ಲಾಂಡನ್ನು ಆಳಿ ಆ ಅವಧಿಯಲ್ಲೇ ಭಾರತ, ಪಾಕಿಸ್ತಾನ್, ಬರ್ಮ, ಸಿಲೋನು ಗಳಿಗೆ ಸ್ವಾತಂತ್ರ್ಯದಾನ ಮಾಡಿದ್ದ ಬ್ರಿಟಿಷ್ ಕೂಲಿಕಾರ ಪಕ್ಷವು ಇಕ್ಕಟ್ಟಿನ ಬಹುಮತ ಪಡೆದು ಮುಂದಿನ ಐದು ವರುಷಗಳ ಅವಧಿಯ ಆಡಳಿತೆಯ ಹಕ್ಕನ್ನು ಗಳಿಸಿಕೊಂಡಿತು. ಚುನಾವಣೆಯ ಫಲಿತಾಂಶ ಹೀಗಿದೆ:- ಲೇಬರ್ ಪಕ್ಷ 315 ಸ್ಥಾನಗಳು; ಕನ್ಸರ್ವೇಟಿವ್ ಅಥವಾ ಟೋರಿ ಪಕ್ಷ ಮತ್ತು ಅದರ ಹಿಂಬಾಲಕರು 294 ಸ್ಥಾನಗಳು; ಲಿಬರಲ್ ಪಕ್ಷ 9 ಸ್ಥಾನಗಳು; ಐರಿಶ್ ರಾಷ್ಟ್ರೀಯ ಪಕ್ಷ. 2 ಸ್ಥಾನಗಳು. ಕೂಲಿಗಾರ ಪಕ್ಷವು ಏಕಾಕಿಯಾಗಿ ಸರಕಾರ ನಡೆಸುವ ನಿರ್ಧಾರ ಮಾಡಿದೆ.

## ಚರಿತ್ರಾರ್ಹ ಚುನಾವಣೆ

ಫೆಬ್ರವರಿ23ರಲ್ಲಿ ಇಂಗ್ಲಾಂಡಿನಲ್ಲಿ ನಡೆದ ಚುನಾವಣೆಯು ಚರಿತ್ರಾರ್ಹವಾದುದು, ಚಿರಸ್ಮರಣೀಯವಾದುದು. ಮಿ. ಆಟ್ಲಿಯವರ ಕೂಲಿಗಾರ ಪಕ್ಷ ಹಾಗೂ ಮಿ. ಚರ್ಚಿಲ್ಲರ ಕನ್ಸರ್ವೇಟಿವ್ ಪಕ್ಷಗಳು ಆದಿಯಿಂದ ಅಂತ್ಯದ ವರೆಗೂ ಬಹುತೇಕವಾಗಿ ಸಮಬಲವಾಗಿದ್ದು ಮತ ಸಂಗ್ರಹ ಯುದ್ಧದಲ್ಲಿ ಜಿದ್ದಾಜಿದ್ದಿ ಹೋರಾಟ ಕೊಟ್ಟದ್ದವು, ಕೊನೆಯ ವರೆಗೂ ಜಯಮಾಲೆ ಯಾವ ಪಕ್ಷದ ಕೊರಳಿಗೆಂಬ ಅಂದಾಜು ಯಾರಿಗೂ ಸಿಕ್ಕಿರಲಿಲ್ಲ. ಈಗಲಾದರೂ ಸರಿಯೇ, ಕೂಲಿಗಾರ ಪಕ್ಷವು ಕೇವಲ ಅಲ್ಪ ಮತಗಳಿಂದ ಗೆದ್ದು ಬಂದಿರುವುದರಿಂದ ಇವೆರಡು ಪಕ್ಷಗಳು ಬಹುತೇಕವಾಗಿ ಸರಿಸಮವಾಗಿವೆ. ಇಷ್ಟೊಂದು ಇಕ್ಕಟ್ಟಿನ ಬಹುಮತದ ಆಳ್ವಿಕೆಯು ಇಪ್ಪತ್ತನೇ ಶತಮಾನದಲ್ಲೇ ಬೇರೊಂದಿಲ್ಲವಂತೆ. ಈ ಮಾದರಿಯ ನಾಮಮಾತ್ರ ಬಹುಮತದ ಬಲವು, ಎಡಬಲ ನೋಡದೆ ನಿಶ್ಶಂಕೆಯಿಂದ ಹೆಜ್ಜೆಯಿಡುವ ಧೈರ್ಯವನ್ನು ಸರಕಾರಕ್ಕೀಯುವಂತಿಲ್ಲ. ಇಂತಹ ಸರಕಾರ ಎಷ್ಟು ಕಾಲ ಬಾಳಬಲ್ಲುದೆಂದು ಹೇಳಲಾಗುವದಿಲ್ಲ. ಆದ್ದರಿಂದ ಬರುವ ಎಪ್ರಿಲಿಗೆ ಆಯವ್ಯಯದ ಪಟ್ಟಿಯು ತಯಾರಿ ಮತ್ತು ಮಂಜೂರಾತಿ ಆದೊಡನೆಯೇ ಈ ಪಾರ್ಲಿಮೆಂಟನ್ನು ಬರ್ಖಾಸ್ತುಪಡಿಸಿ ಹೊಸ ಚುನಾವಣೆ ನಡೆಸಬೇಕೆಂಬ ಕೂಗು ಚುನಾವಣಾ ಫಲಿತಾಂಶದೊಂದಿಗೇನೇ ಬ್ರಿಟನಿನಲ್ಲೆದ್ದಿತ್ತು. ಆದರೆ ಕ್ರಮಶಃ ಆ ಸ್ವರವಡಗುತ್ತಾ ಹೋಗಿ ಸದ್ಯಕ್ಕೆ ಇನ್ನೊಂದು ಚುನಾವಣೆಯಿಲ್ಲವೆಂಬುದೀಗ ಖಚಿತವಾಗಿದೆ. ಏಕೆಂದರೂ ಕೂಲಿಗಾರ ಪಕ್ಷಕ್ಕೆ ತನ್ನ ಇದಿರುವಾದಿ ಟೋರಿ ಪಕ್ಷಕ್ಕಿಂತ 21 ವೋಟುಗಳು ಹೆಚ್ಚಿಗೆ ದೊರೆತಿವೆ. ಉಳಿದ ಎಲ್ಲಾ ಪಕ್ಷಗಳೂ ಒಂದಾಗಿ ಲೇಬರ್ ಪಕ್ಷವನ್ನು ವಿರೋಧಿಸುವಂತೆ ಗಣನೆಮಾಡಿದರೂ ಲೇಬರ್ ಪಕ್ಷಕ್ಕೆ 10 ಬಹುಮತವಿದ್ದೇ ಇದೆ. ಅಂದರೆ 620 ಮಂದಿಯುಳ್ಳ ಪಾರ್ಲಿಮೆಂಟಿನ ಎರಡು ಪಾಳಯಗಳ ಪೈಕಿ ಒಂದಕ್ಕಿಂತ ಇನ್ನೊಂದರಲ್ಲಿ ಕೇವಲ ಹತ್ತು ಮಂದಿ ಮಾತ್ರ ಹೆಚ್ಚಿಗಿರುವ ಸಮಾನ ಸ್ಥಿತಿಯೇ ಹೊರತು ಹೆಚ್ಚೇನೂ ಅಲ್ಲ. ಯಾವುದೇ ಕಾರಣದಿಂದ ಸರಕಾರೀ ಕಡೆಯ 315 ಸದಸ್ಯರಲ್ಲಿ 6 ಮಂದಿ ಅಲ್ಲಿಂದ ಕದಲಿದರಾಯಿತು: ಅಷ್ಟರಿಂದಲೇ ಇದಿರು ಪಾಳಯವು 2 ಬಹುಮತಗಳ ಮೇಲ್ಗೈಯಾಗಬಹುದು. ಮೇಲಾಗಿ ನಮ್ಮಲ್ಲಿಯ ಎಂ. ಎಲ್. ಎ.ಗಳಂತೆಯೇ ಇಂಗ್ಲೆಂಡಿನ ಎಂ. ಪಿ.ಗಳೆಲ್ಲರೂ ಎಲ್ಲಾ ಸಭೆಗಳಿಗೂ ತಪ್ಪದೆ ಹಾಜರಾಗುವವರೇನೂ ಅಲ್ಲ. ಕೂಲಿಗಾರ ಪಕ್ಷದ ಆರೆಮಾಸಿಯಷ್ಟು ಗೈರುಹಾಜರಿದ್ದು ಕನ್ಸರ್ವೇಟಿವ್ ಪಕ್ಷದ ಮೂರನೇ ಒಂದಂಶದಷ್ಟೇ ಮೆಂಬರು ಗೈರುಹಾಜರಿರುವ ಕಾಮನ್ಸ್ ಅಧಿವೇಶನವೊಂದರಲ್ಲಿ ಸರಕಾರದ ಪ್ರಾಮುಖ್ಯ ಕಾರ್ಯವೊಂದಕ್ಕೆ ಸಂಬಂಧಿಸಿದ ಸೂಚನೆ ಮುಂದೆ ಬಂದರೆ ಅದು ಪರಾಭವಗೊಳ್ಳಬಹುದು:— ಹಾಗೆ ಸರಕಾರೀ ಧೋರಣೆಗಾಗುವ ಸೋಲು, ಸರಕಾರದ ಮೇಲಿನ ಅವಿಶ್ವಾಸ ಸೂಚನೆಯ ಅರ್ಥಕೊಡುವುದರಿಂದ ಅಷ್ಟರಿಂದಲೇ ಸರಕಾರವು ರಾಜೀ ಕೊಡಬೇಕಾದೀತು. ಹೀಗಾಗಿ ಎಷ್ಟೇ ಆತ್ಮವಿಶ್ವಾಸ ವಹಿಸಿದರೂ ಆಟ್ಲೀ ಸರಕಾರದ ಭವಿಷ್ಯವು ಕಳೆದ ಬಾರಿಯ ಚುನಾವಣಾ ನಂತರವಿದ್ದಷ್ಟು ಭದ್ರವಾಗಿಲ್ಲ.

## ಇಕ್ಕಟ್ಟಿಗೇನು ಕಾರಣ?

ಈ ಬಾರಿಯ ಬ್ರಿಟಿಷ್ ಚುನಾವಣೆಯ ಫಲಿತಾಂಶವನ್ನು ಮುಂದಾಗಿ ಊಹಿಸಲು ಹೆಚ್ಚಿನವರಿಂದಾಗಿರಲಿಲ್ಲ; ಯಾವ ಪಕ್ಷವೇ ಗದ್ದರೂ ಅಸಹಾಯ ಶೂರರಾಗಿ ಆಳಲಾಗುವ ಪ್ರಬಲ ಬಹುಮತ ದೊರೆಯಲಾರದೆಂಬುದನ್ನು ಸುವಿಚಾರಿಗಳು ನಿರೀಕ್ಷಿಸಿದ್ದರು. ಆದರೀ ವ್ಯತ್ಯಾಸವು ಇಷ್ಟು ಇಕ್ಕಟ್ಟಿನದಾಗಬಹುದೆಂದು ಯಾರೂ ನೆನಸಿರಲಿಲ್ಲ. ಈ ಆಶ್ಚರ್ಯಕರ ಫಲಿತಾಂಶದಿಂದ ಇಕ್ಕಡೆಯವರೂ ನಿರಾಶೆಗೊಂಡಿರುವರಾದರೂ ಸೋತ ಚರ್ಚಿಲ್ ಪಕ್ಷೀಯರಿಗಿಂತ ಗೆದ್ದ ಲೇಬರ್ ಪಕ್ಷೀಯರಲ್ಲಿ ವ್ಯಾಪಿಸಿರುವ ಜಿಗುಪ್ಸೆ, ನಿರಾಶೆಗಳೇ ಅಧಿಕ. ಇಂತಹ ಬಹುಮತವನ್ನಾಧರಿಸಿ ಹೊಣೆ ನಿರ್ವಹಿಸುವುದಕ್ಕಿಂತ, ಆ ದುರ್ಬಲಾಧಿಕಾರವನ್ನು ವಿರೋಧಿಸಿ ನಿಲ್ಲುವ ಪ್ರಯೋಗವೇ ದೊಡ್ಡದೆನ್ನಬಹುದು. ಕಳೆದ ಬಾರಿಯ ಚುನಾವಣೆಯಲ್ಲಿ ಕನ್ಸರ್ವೇಟಿವ್ ಪಕ್ಷಕ್ಕಿಂತ 150 ಹೆಚ್ಚು ಸ್ಥಾನಗಳನ್ನು ಗಳಿಸಿಕೊಂಡಿದ್ದ ಕೂಲಿಗಾರ ಪಕ್ಷವು ಈ ಬಾರಿ ಕೇವಲ 21 ಸ್ಥಾನಗಳನ್ನಷ್ಟೇ ಹೆಚ್ಚಿಗೆ ಪಡೆದಿದೆ. ಕಳದೈದು ವರುಷಗಳಲ್ಲಿ ಕೂಲಿಗಾರರ ಪಕ್ಷದ ವರ್ಚಸ್ಸು ಮತ್ತು ಆಕರ್ಷಣೆ ಕುಗ್ಗುತ್ತಾ ಬಂದಂತೆ ಟೋರಿ ಪಕ್ಷದ ಜನಪ್ರಿಯತೆ ಏರುತ್ತಾ ಬಂದಿತ್ತೆಂಬುದು ಇದರಿಂದ ಸ್ಪಷ್ಟ. ಮಧ್ಯದಲ್ಲಿ ಲಿಬರಲ್ ಪಕ್ಷವೊಂದು ಕಾಲಡಿಯ ಬಳ್ಳಿಯಂತೆ ಈ ಚುನಾವಣೆಯಲ್ಲಿ ಅಡ್ಡಬಂದು ತಮ್ಮನ್ನಾತಂಕಿಸದಿರುತ್ತಿದ್ದರೆ ತಮಗೀ ಇಕ್ಕಟ್ಟಿನ ಪರಾಭವ ಕೂಡಾ ತಪ್ಪುತಿತ್ತೆಂದು ಚರ್ಚಿಲ್ ಪಕ್ಷೀಯರ ಅಂಬೋಣವಿದೆ. ಬ್ರಿಟನಿನ ಲೇಬರ್ ಪಕ್ಷವು ಭಾರತದ ಕಾಂಗ್ರೆಸ್ ಪಕ್ಷದಂತೆ ಕಳದೈದು ವರುಷಗಳಲ್ಲಿ ತನ್ನ ಜನಪ್ರಿಯತೆಯನ್ನು ಬಹಳವಾಗಿ ಕಳಕೊಂಡಿದೆ, ಎಂಬುದನ್ನು ಚುನಾವಣಾ ಪರಿಣಾಮವು ತೋರಿಸುತ್ತಿರುವಂತೆಯೇ, ಸದ್ಯ ಭಾರತೀಯರಿಗೆ ಕಾಂಗ್ರೆಸಿರುವಂತೆ, ಲೇಬರ್ ಪಕ್ಷಕ್ಕಿಂತ ಉತ್ತಮವಾದ ಬೇರೊಂದು ಪಕ್ಷವು ಬ್ರಿಟಿಷ್ - ಮತದಾರರಿಗೆ ತೋರಿಬಾರದೆ, ಆದಕ್ಕೆ ಅಲ್ಪ ಬಹುಮತದೊರೆತಂತಿದೆ. ಸಂಧಿಗ್ಧ ಪರಿಸ್ಥಿತಿಯ ಚಿತ್ರ ಈ ಚುನಾವಣೆಯ ಮೂಲಕವಾಗಿ ಮೂಡಿರುವುದೇ ಹೊರತು ಮತದಾರರ ತೀರ್ಮಾನವೇನೂ ಸಂಧಿಗ್ಧವಾಗಿಲ್ಲ; ಅಪೂರ್ಣವಾದುದಲ್ಲ. ಬ್ರಿಟಿಷ್ ಮತದಾರರ ಪೈಕಿ ಸೇಕಡಾ 85ಕ್ಕೂ ಮಿಕ್ಕಿದವರು ಈ ಚುನಾವಣೆಯಲ್ಲಿ ಮತಕೊಟ್ಟಿದ್ದರು; ವಿವಿಧ ಪಕ್ಷಗಳ ಧ್ಯೇಯ, ಧೋರಣೆಗಳನ್ನು ಸರಿಯಾಗಿ ಅರಿತುಕೊಂಡೇ ಮತದಾನ ಮಾಡಿದ್ದರು. ಆದರೂ ಪರಿಸ್ಥಿತಿಯಂತಹದಾದ್ದರಿಂದಲೇ ಪರಿಣಾಮವು ಹೀಗಾಯಿತು.

## ಕಲಿಯತಕ್ಕ ಪಾಠ

ಬ್ರಿಟಿಷ್ ಚುನಾವಣೆಯು ಕೆಲವು ಪಾಠಗಳನ್ನು ಮುಂದಿಟ್ಟು ಮಾಡಿದೆ. ಆ ಪೈಕಿ ಮುಖ್ಯವಾದುದೆಂದರೆ ಕಮ್ಯೂನಿಸ್ಟರ ಅತಿರೇಕ ಮತ್ತು ಲಿಬರಲ್ ಪಕ್ಷೀಯರ ಅಸ್ಪಷ್ಟತೆ ಇವೆರಡೂ ಬ್ರಿಟಿಷ್ ಜನತೆಯ ಸ್ಪಷ್ಟ ಧಿಕ್ಕಾರಕ್ಕೊಳಗಾದುದು. ಕಮ್ಯೂನಿಸ್ಟರು ಈ ಚುನಾವಣೆಯ ಫಲಿತಾಂಶವಾಗಿ ಪೂರ್ಣ ಅದೃಶ್ಯರಾಗಿದ್ದಾರೆ. ಆ ಪಕ್ಷಕ್ಕೆ ದೊರೆತ ಒಟ್ಟು ಮತಗಳೆಂದರೆ ಬಹುತೇಕವಾಗಿ ಬ್ರಿಟಿಷ್ ಕಮ್ಯೂನಿಸ್ಟ್ ಪಕ್ಷದ ಸದಸ್ಯರ ಒಟ್ಟು ಸಂಖ್ಯೆಯಷ್ಟೇ ಇರುವ 91,000 ಮಾತ್ರ. ಕೊನೆಯ ಅಂಕದಲ್ಲಿ ಅನಿರೀಕ್ಷಿತ ಗದ್ದಲವನ್ನು ಪ್ರದರ್ಶಿಸಿದ್ದ ಲಿಬರಲ್ ಪಕ್ಷಕ್ಕೊಂದು ಸ್ಪಷ್ಟ ಧೋರಣೆ, ನಿಶ್ಚಿತ ಕಾರ್ಯಕ್ರಮಗಳಿಲ್ಲದ ದೆಸೆಯಿಂದ ಅದಕ್ಕೆ ದೊರೆತುದು ಕೇವಲ 9 ಸ್ಥಾನಗಳು. ಈ ಚುನಾವಣೆಯಲ್ಲಿ ಕೂಲಿಗಾರ ಪಕ್ಷಕ್ಕೆ ಜುಮ್ಲಾ 130 ಲಕ್ಷ, ಟೋರಿ ಪಕ್ಷಕ್ಕೆ 125 ಲಕ್ಷ, ಲಿಬರಲ್ ಪಕ್ಷಕ್ಕೆ 5 ಲಕ್ಷ ಮತಗಳು ದೊರೆತಿದ್ದವು. ಲಿಬರಲ್ ಪಕ್ಷದ 211 ಉಮೇದ್ವಾರಿಗಳು 8ನೇ ಅಂಶದಷ್ಟು ಮತವನ್ನು ಕೂಡಾ ಸಂಪಾದಿಸಿಕೊಳ್ಳಲಾರದೆ ತಮ್ಮ ಭದ್ರತಾ ಹಣ ಕಳಕೊಂಡಿದ್ದರು. ಈ ಪೈಕಿ 200 ಮಂದಿ ತಮ್ಮ ಭದ್ರತೆಯ ಕುರಿತು 'ಲ್ಲೊಯ್ಡ್ಸ್'ನಲ್ಲಿ ಇನ್ಶ್ಯೂರ್ ಮಾಡಿದ್ದುದರಿಂದ, ಉಮೇದ್ವಾರಿಯೊಬ್ಬನ 150 ಪೌಂಡುಗಳ ಭದ್ರತಾ ಹಣ ಪ್ರಕಾರ ಲಿಬರಲ್ ಪಕ್ಷೀಯ ಉಮೇದ್ವಾರಿಗಳು ಕಳಕೊಂಡ ಭದ್ರತಾ ಮೊತ್ತದ ಪೈಕಿ 30,000 ಪೌಂಡು ಅವರಿಗೆ ಮರಳಿ ದೊರೆವಂತಾಗಿದೆ.

ಕಳೆದ ತನ್ನ ಐದು ವರುಷಗಳ ಆಡಳಿತೆಯಲ್ಲಿ ಕೂಲಿಗಾರ ಪಕ್ಷವು ಬ್ರಿಟನಿನ ಕಾಲಂಶ ಉದ್ಯಮಗಳನ್ನು ರಾಷ್ಟ್ರೀಕರಣಗೊಳಿಸಿದ್ದಿತು. ಸರ್ವರಿಗೂ ಉದ್ಯೋಗವನ್ನು ದೊರಕಿಸಿ ಕೊಟ್ಟದ್ದಿತಲ್ಲದೆ, ಆಹಾರ ವಸ್ತುಗಳ ಧಾರಣೆ ತಗ್ಗಿಸಿ, ರಫ್ತು ವಹಿವಾಟುಗಳನ್ನು ಹೆಚ್ಚಿಸಿದ್ದಿತು; ಇದೇ ವಿಧಾನದಿಂದ ಮುಂದಿನ ಆಡಳಿತಾವಧಿಯಲ್ಲೂ ಮುಂದೊತ್ತುವ ಸಂಕಲ್ಪವು ಕೂಲಿಗಾರ ಪಕ್ಷದ್ದಿದೆ. ಕನ್ಸರ್ವೇಟಿವ್ ಪಕ್ಷವು ಚುನಾವಣಾ ಕಾಲದಲ್ಲಿ ಮುಂದಿಟ್ಟದ್ದ ಘೋಷಣೆಗಳೆಂದರೆ, ಕೂಲಿಗಾರ ಸರಕಾರದ ದೌರ್ಬಲ್ಯಗಳಿಂದಾಗಿ ರಾಷ್ಟ್ರದ ಉತ್ಪನ್ನ ಹೆಚ್ಚದಂತಾಗಿದೆ. ಮೂಲನಿಯಂತ್ರಣಗಳನ್ನು ರದ್ದು ಪಡಿಸದೇನೇ ತಾವು ರಾಷ್ಟ್ರವನ್ನು ಪ್ರಗತಿ ಪಥದತ್ತ ನಡೆಸುವೆವು-ಎಂಬುದೇ. ಆಹಾರದ ಪ್ರಶ್ನೆಯೇ ಮುಖ್ಯವಾಗಿದ್ದ ಈ ಬಾರಿಯ ಚುನಾವಣೆಯಲ್ಲಿ ಎರಡನೆಯದಾಗಿ, ಈ ಹೈಡ್ರೋಜೆನ್ ಬೋಂಬು ಯುಗದ ಪರದೇಶ ಸಂಬಂಧವೇ ಪ್ರಾಮುಖ್ಯತೆ ಪಡೆದಿದ್ದಿತು. ಕೂಲಿಗಾರ ಸರಕಾರದ ವಿದೇಶ ಸಂಬಂಧ ಧೋರಣೆಯು ತೀರಾ ದುರ್ಬಲವಾದುದೆಂದು ಸರ್ವತ್ರ ಟೀಕಿಸಲ್ಪಡುತ್ತಿದ್ದಾಗ, ಸಂಧಾನಕ್ಕಾಗಿ ಸ್ಟಾಲಿನರ ಪ್ರತ್ಯಕ್ಷ ಭೇಟಿ ಪಡೆಯುವ ಚರ್ಚಿಲ್ಲರ ವಾದವು ಜನಪ್ರಿಯತೆ ಗಳಿಸಿದ್ದಿತು. ಇವೆಲ್ಲಾ ತೂಕ, ತುಲನೆಗಳ ಪರಿಣಾಮವಾಗಿ ಚುನಾವಣಾ ಫಲಿತಾಂಶ ಇಕ್ಕಟ್ಟಿನದಾಯಿತು.

ಕೊನೆಯ ಪಕ್ಷ 1952ರ ವರೆಗಾದರೂ ಇಂಗ್ಲಾಂಡನ್ನಾಳಿಯೇ ತೀರಬೇಕೆಂಬ ಸಂಕಲ್ಪ ಕೂಲಿಗಾರ ಪಕ್ಷದ್ದಿದೆ. ಅದಕ್ಕನುಸಾರವಾಗಿ ಅವರು ಅತ್ಯಂತ ಜಾಗರೂಕತೆಯಿಂದ ಹೆಜ್ಜೆಯಿಡಲಿದ್ದಾರೆ. ನವೀನ ಕೂಲಿಗಾರ ಮಂತ್ರಿಮಂಡಲಿಯ ಹೆಸರು ಇಷ್ಟರಲ್ಲೇ ಪ್ರಕಟವಾಗಲಿದೆ.


ಕನ್ನಡಿಗರೆಲ್ಲರ ಕಣ್ಮನ ಸೆಳೆದು ಪ್ರಸಿದ್ಧವಾದ

**ಮಧುವನ**

ಅಖಿಲ ಕರ್ನಾಟಕದ ಪ್ರತಿನಿಧಿಕ ಕಥಾಸಂಕಲನ

**25 ಕತೆಗಳು** **ಬೆಲೆ ರೂ 3 0 0**

ಸಿಗುವ ಸ್ಥಳಗಳು:-

1 ಕಿರಿಯರ ಪ್ರಪಂಚ, ಉಡುಪಿ
2 ನವಭಾರತ ಬುಕ್ ಡಿಪೊ, ಉಡುಪಿ
3 ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

THE
Canara Banking Corporation Ltd.
(Incorporated in India with Limited Liability)
Estd: 1906.
ANNOUNCEMENT
A Branch of the Bank will shortly be opened
at
PONAMPET (SOUTH COORG).
ಬ್ಯಾಂಕಿನ ಒಂದು ಶಾಖೆಯು ಶೀಘ್ರದಲ್ಲಿಯೇ
ಪೊನ್ನಂಪೇಟೆ (ದಕ್ಷಿಣ ಕೊಡಗು)
ಯಲ್ಲಿ ತೆರೆಯಲಾಗುವುದು
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್,
ಸ್ಥಾಪನೆ: 1906

ಗುರುವಾರ ಉಡುಪಿ ೨-೩-೧೯೫೦

# ಈ ಗಂಡಾಂತರಕ್ಕೇನು?

ಪೂರ್ವ ಪಾಕಿಸ್ತಾನ (ಪೂರ್ವ ಬಂಗಾಳ)ದಲ್ಲಿ, ಕಳೆದ ಕೆಲಕಾಲದಿಂದ ಹಿಂದುಗಳ ಮೇಲೆ ನಡೆದಿರುವ ಅತ್ಯಾಚಾರಗಳು ಶ್ರವಣ ಮಾತ್ರದಿಂದ ಹೃದಯ ಕರಗಿಸುವಂತಹವಿವೆ. ಕೇವಲ ಪ್ರಾಣದಾಸೆಯಿಂದ ಸಹಸ್ರ ಸಂಖ್ಯೆಯಲ್ಲಿ ಪೂರ್ವ ಬಂಗಾಳದಿಂದ ಪಶ್ಚಿಮ ಬಂಗಾಳಕ್ಕೋಡಿಬರುತ್ತಿರುವ ಹಿಂದುಗಳ ಹೃದ್ರಾವಕ ದುಸ್ಥಿತಿಯು ಗಾಳಿತಾಗಿ ಕಲ್ಕತ್ತದಂತಹ ಕೆಲವೆಡೆಗಳಲ್ಲಿ ಉರಿಯೆದ್ದುದು ಸ್ವಾಭಾವಿಕ. ಆದರದನ್ನು ಪಶ್ಚಿಮ ಬಂಗಾಳದ ಸರಕಾರವು ಕಠೋರ ರೀತಿಯಿಂದ ಆದಿ ಭಾಗದಲ್ಲೇ ನಂದಿಸಿಬಿಟ್ಟಿದೆ; ಈ ರೀತಿ ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕಲ್ಪಟ್ಟ ಭಾರತೀಯರ ಉದ್ವೇಗವು ತಾ. 25ರ ಕಲ್ಕತ್ತಾ ಹರತಾಳ, ನಿಷೇಧ ಮೆರವಣಿಗೆ, ಗುಂಡೇಟು, ಕೆಲವರ ಮರಣ ಮತ್ತು ಜಖಮುಗಳ ರೂಪದಿಂದ ಪ್ರದರ್ಶಿಸಲ್ಪಟ್ಟಿತು. ಈ ಬಾರಿಯ ಪಾಕಿಸ್ತಾನ್ ದುರಂತಗಳಿಗೆ ಸಾಟಿಯಾಗಬಲ್ಲ ದಾವುದೂ ಭಾರತದಲ್ಲಿ ನಡೆದಿಲ್ಲ. ಪಾಕಿಸ್ತಾನ್ ಬಂಗಾಳದ ಹೆಚ್ಚಿನ ಎಲ್ಲ ನಗರಗಳಲ್ಲೂ ಹಿಂದುಗಳನ್ನು ಕೊಂದು, ಸುಲಿದು, ಬಡೆದೋಡಿಸುವ ಅತ್ಯಾಚಾರಗಳು ಉದ್ದೇಶ ಪೂರ್ವಕವಾಗಿ, ಹಾಗೂ ಸಂಘಟನೆಯಿಂದ ನಡೆದಿರುವವೆಂದು ತಿಳಿದು ಬರುತ್ತದೆ. ಅವುಗಳಲ್ಲಿ ಢಾಕ್ಕ ನಗರವೊಂದರಲ್ಲೇ 600ಕ್ಕೆ ಮಿಕ್ಕಿ 1000ದ ವರೆಗೆ ಹಿಂದುಗಳು ಸತ್ತಿರಬೇಕೆಂದು ಮಹಾ ಪ್ರಧಾನಿ ಪಂಡಿತ ನೆಹರುಗಳು ಪಾರ್ಲಿಮೆಂಟಿನಲ್ಲಂದಿದ್ದರು. ಫೆಬ್ರುವರಿ ತಾ. 12ರಿಂದ ತಾ. 21ರ ವರೆಗಿನ ಅವಧಿಯಲ್ಲಿ 19500 ಮುಸ್ಲಿಮೇತರರು ಪೂರ್ವ ಪಾಕಿಸ್ತಾನದಿಂದ ಪಶ್ಚಿಮ ಬಂಗಾಳಕ್ಕೋಡಿ ಬಂದಿದ್ದರೆಂದೂ ಇದೇ ಅವಧಿಯಲ್ಲಿ ಇಲ್ಲಿಂದ ಅಲ್ಲಿಗೆ ಹೋಗಿರುವ ಮುಸ್ಲಿಮರ ಸಂಖ್ಯೆ 5100 ಎಂದೂ ಪಂಡಿತಜೀ ತಿಳಿಸಿದ್ದಾರೆ. “ಪೂರ್ವ ಬಂಗಾಳದಲ್ಲಿ ಅಲ್ಪ ಸಂಖ್ಯಾಕ ಸಮಾಜದವರಿಗಾಗಿರುವ ಹಾನಿಯ ವಿವರವನ್ನು ಪಡೆಯಲು ಪಾಕಿಸ್ತಾನ್ ಸರಕಾರ ನಿರಾಕರಿಸಿದುದು ಮಾತ್ರವಲ್ಲ; ಅತ್ಯಧಿಕ ಸಂಖ್ಯೆಯ ಹಿಂದುಗಳ ಮೇಲೆ ಪಾಶವಿಕ ಅತ್ಯಾಚಾರ ನಡೆದಿರುವ ಸುದ್ದಿ ಬಂದಿರುವ ಬಾರಿಸಾಲಿನಂತಹ ಸ್ಥಳಗಳನ್ನು ಸಂದರ್ಶಿಸುವ ಅವಕಾಶವನ್ನು ಕೂಡಾ ಭಾರತದ ಡೆಪ್ಯುಟಿ ಹೈಕಮಿಶನರರಿಗೆ ಕೊಡಲೊಪ್ಪಲಿಲ್ಲ. ಢಾಕ್ಕಾದಲ್ಲಿ ಪ್ರಶಾಂತಿಕ ಸ್ಥಿತಿಯಲ್ಲಿ ಮಲಗಿದ್ದ ಹಿಂದುಗಳಿಗೆ ಹೋಗಲಿಕ್ಕಿದ್ದ ವೈದ್ಯಕೀಯ ಸಹಾಯಕ್ಕೂ ಅನುಮತಿ ಕೊಡದ ಅತ್ಯಂತ ಅಮಾನುಷ ವರ್ತನೆಯನ್ನು ಪಾಕಿಸ್ತಾನ್ ಸರಕಾರವು ಕೈಕೊಂಡಿದೆ ಪೂರ್ವ ಬಂಗಾಳದಲ್ಲಿ ನಡೆದಿರುವ ದುರಂತವು, ಕಲ್ಕತ್ತಾ ಅಥವಾ ಪಶ್ಚಿಮ ಬಂಗಾಳದ ಇತರ ಒಂದೆರಡು ಕಡೆಗಳಲ್ಲಿ ನಡೆದವುಗಳಿಗಿಂತ ಹೆಚ್ಚು ಭೀಕರವಾದುದಿದೆ. ಅದರ ತುಲನೆಗೆ ಇದು ಬಾರದು. ಅಲ್ಪಸ್ವಲ್ಪ ಸುದ್ದಿಗಳ ಹೊರತು ಸರಿಯಾದ ವಾರ್ತೆಯೇ ಪೂರ್ವ ಬಂಗಾಳದಿಂದ ಹೊರಡದಂತೆ ಅಲ್ಲೊಂದು ‘ಕಬ್ಬಿಣದ ಪರದೆ’ಯಂತಹ ಪ್ರತಿಬಂಧವಿದೆ. ಪೂರ್ವ ಬಂಗಾಳದ ಹಲವು ಭಾಗಗಳಲ್ಲಿ ಗಣ್ಯ ಪರಿಮಾಣದಲ್ಲಿ ದುರಂತಗಳಾದುವು ಪಾಕಿಸ್ತಾನದಲ್ಲಿರುವ ಅಲ್ಪ ಸಂಖ್ಯಾಕ ಸಮಾಜದ ಸರ್ವರಲ್ಲವಾದರೂ ಅತಿ ದೊಡ್ಡ ಸಂಖ್ಯೆಯವರು ಸುರಕ್ಷಿತತೆಯ ಆಶೆಯೆಲ್ಲವನ್ನೂ ಕಳಕೊಂಡು ಭೀತಿ ಮತ್ತು ದಿಗಿಲು ಬಡಿದೇ ಜೀವ ಹಿಡಿದುಕೊಂಡಿದ್ದಾರೆ” ಎಂದು ಪಂಡಿತ ನೆಹರುಗಳು ಸ್ಥಿತಿಚಿತ್ರವನ್ನು ಫೆಬ್ರುವರಿ ತಾ. 23ರಲ್ಲಿ ಪಾರ್ಲಿಮೆಂಟಿನ ಮುಂದಿಟ್ಟಿದ್ದರು. ಇಂತಹ ಅಸಾಮಾನ್ಯ ಆಪತ್ಕಾಲದಲ್ಲಿ ಸರಕಾರದ ಧೋರಣೆಯೇನಿದೆ– ಜನತೆ ಹೇಗಿರಬೇಕು– ಎಂಬುದನ್ನು ಪಂಡಿತ ನೆಹರುಗಳು ಮತ್ತೊಮ್ಮೆ ತೋರಿಸಿಕೊಟ್ಟಿದ್ದಾರೆ: “ನಮಗೆ ಈ ರಾಷ್ಟ್ರದಲ್ಲಿ ಮತ್ತು ಪಾಕಿಸ್ತಾನದೊಂದಿಗೆ ಶಾಂತಿ ಬೇಕಾಗಿದೆ. ನಾನಿದನ್ನು ಹಲವು ಬಾರಿ ಮುಂದಿಟ್ಟಿದ್ದೇನೆ ಆದರೆ ಆಳಕ್ಕೂ ಬೇರೂರಿರುವ ಹೇತುಗಳುಳ್ಳ ಈ ಗಲಭೆ, ಘರ್ಷಣೆಗಳು ಮುಂದುವರಿಯುತ್ತಾ ಹೋಗುವಾಗ, ಕೆಲವು ಹುರುಳಿಲ್ಲದ ವ್ಯವಸ್ಥೆಗಳಿಂದೇನೂ ಶಾಂತಿ ಮತ್ತು ಸೌಹಾರ್ದತೆ ಮೂಡುವಂತಿಲ್ಲ. ಸತ್ಯಸ್ಥಿತಿಯನ್ನು ಶೋಧಿಸಿಕೊಳ್ಳಲು ಎರಡೂ ರಾಷ್ಟ್ರಗಳ ಜತೆಕಮಿಶನೊಂದನ್ನು ನೇಮಿಸಿಕೊಳ್ಳೋಣ, ಅಥವಾ ಪೀಡಿತ ಸ್ಥಳಗಳನ್ನು ಇಕ್ಕಡೆಯ ಪ್ರಧಾನ ಮಂತ್ರಿಗಳೂ ಜತೆಯಲ್ಲಿ ಸಂಚರಿಸೋಣವೆಂದು ಭಾರತ ಸರಕಾರವು ಮುಂದಿಟ್ಟ ಸೂಚನೆಗಳನ್ನು ಪಾಕಿಸ್ತಾನ್ ಪ್ರಧಾನಿಗಳು ನಿರಾಕರಿಸಿದ್ದಾರೆ. ನಾವು ಸೂಚಿಸಿದ ವಿಧಾನಗಳು ಅಂಗೀಕರಿಸಲ್ಪಡಲಿಲ್ಲವೆಂದಾದ ಮೇಲೆ ನಾವು ಬೇರೆ ಕ್ರಮಗಳನ್ನು ಜರೂರು ಕೈಕೊಳ್ಳಬೇಕಾಗಿದೆ. ಪಾಕಿಸ್ತಾನದಲ್ಲಿ ಜಾತೀಯ ದುರಂತಗಳು ನಡೆದರೆ, ಅವು ನಮ್ಮ ರಾಷ್ಟ್ರದ ಜನತೆಯ ಮೇಲೂ ಪರಿಣಾಮ ಬೀರುತ್ತವೆ. ಈ ಕುರಿತು ನಾವು ನಿರಾಸಕ್ತರಾಗಿರಲು ಸಾಧ್ಯವಿಲ್ಲ. ತಮ್ಮ ಸ್ವಂತ ನಾಗರಿಕರಿಗೆ ಶಾಂತಿ ಮತ್ತು ಸುರಕ್ಷಿತತೆಯನ್ನು ಈಯಲು ತಮ್ಮಿಂದ ಸಾಧ್ಯವಾಗದೆ ಹೋದರೆ, ಪರಿಣಾಮವೇನಾಗಬಹುದೆಂಬ ಕುರಿತು ಗಂಭೀರಾಲೋಚನೆ ಮಾಡಬೇಕಾದುದು ಈಗ ಪಾಕಿಸ್ತಾನವೇ. ಜನರನ್ನು ಪರಸ್ಪರ ಬದಲಾಯಿಸಿಕೊಳ್ಳುವ ಲಘು ಸೂಚನೆಗಳು ಪೂರ್ಣ ಅವ್ಯವಹಾರ್ಯವಿವೆ. ಯಾರೇ ಇದ್ದರೂ ತಂತಮ್ಮ ಜನತೆಯಲ್ಲಿ ಭದ್ರತೆ ಮತ್ತು ಭರವಸೆಯನ್ನು ನಿರ್ಮಿಸುವ ಶಕ್ತಿ ಮತ್ತು ಯೋಗ್ಯತೆಗಳು ಭಾರತ ಮತ್ತು ಪಾಕಿಸ್ತಾನ ಎರಡಕ್ಕೂ ಇರಬೇಕು. ತನ್ನ ಕ್ಷೇತ್ರದೊಳಗೆ ಹೊರಗಿನವರ ಪ್ರವೇಶವಾಗುವದನ್ನು ಭಾರತ ಸರಕಾರವು ಅಂದಿನಿಂದೀ ವರೆಗೂ ಭೀಗಳೆದಿದೆ; ಇನ್ನೂ ಹಾಗೆಯೇ. ಆದರೆ ಭಯಪೀಡಿತ ಜನರು ಇಲ್ಲಿ ಬಂದು ಆಶ್ರಯ ಬೇಡುವಾಗ ನಾವು ಅವರಿಗೆ ‘ಇಲ್ಲ’ ಎನ್ನಲಾರೆವು; ಅಥವಾ ಅವಶ್ಯಕತೆಯುಳ್ಳ ಸಹಾಯ ಕೊಡಲು ನಿರಾಕರಿಸಲಾರೆವು. ಬಿಕ್ಕಟ್ಟಿನ ಈ ಭೀಕರ ಅವಧಿಯಲ್ಲಿ ಪೂರ್ಣ ವ್ಯವಸ್ಥೆ ಮತ್ತು ಭದ್ರತೆ ಇಲ್ಲಿರಬೇಕಾದುದು ಅಗತ್ಯವೆಂಬುದನ್ನು ಭಾರತೀಯರು ಮನವರಿಕೆ ಮಾಡಿಕೊಂಡಿರಬೇಕೆಂದು ವಿಜ್ಞಾಪಿಸಿಕೊಳ್ಳುತ್ತೇನೆ. ಅತ್ಯಂತ ಗಂಭೀರ ಪರಿಸ್ಥಿತಿಯಿದಾದ್ದರಿಂದಲೇ ನಾವು ಶಾಂತ ಹಾಗೂ ದೃಢ ನಿರ್ಧಾರದಿಂದಿರಬೇಕಾಗಿದೆ. ಅನುಚಿತ ಹಾಗೂ ಅಪಾಯಕರ ಲಘುಮಾತು ಮತ್ತು ಸಡಿಲು ವರ್ತನೆಗಳನ್ನು ಬಿಡಬೇಕಾಗಿದೆ”. ಪಂಡಿತಜೀಯ ಮಾತುಗಳಲ್ಲಿ ಸಂದರ್ಭೋಚಿತ ಹಾಗೂ ಮುಂದಿನ ಕೆಲಸದ ಸೀರಿ ಕಾರ್ಯಪಥದ ತೂಕವಿರುವುದರಿಂದ ಸರ್ವರೂ ಈ ಉಪದೇಶಗಳ ಕಡೆಗೆ ಪೂರ್ಣ ಲಕ್ಷ್ಯ ಕೊಡಬೇಕಾಗಿದೆ.

ಈಗ, ಮತ್ತಿನ್ನೂ ಹೀಗಾದರೆ ಹೇಗೆ, ಎಂಬ ಚಿಂತೆಯು ಈ ಸಂದರ್ಭದಲ್ಲಿ ಭಾರತೀಯರೆಲ್ಲರಲ್ಲೂ ಮೂಡುವುದು ಸಹಜವಾದುದೇ. ಅಖಂಡ ಭಾರತದಲ್ಲಿ ಪ್ರತ್ಯೇಕ ಪಾಲು ಪಡೆದು ದೂರ ಹೋಗಬೇಕೆಂಬ ಉದ್ದೇಶದಿಂದ ಆ ಕಾಲದಲ್ಲಿ ಮುಸ್ಲಿಂ ಲೀಗಿನವರು ಎಬ್ಬಿಸಿದ್ದ ಜಾತೀಯ ಗೊಂದಲಗಳಂತಹ ದುಷ್ಕೃತ್ಯಗಳನ್ನೇ ಆ ಪಾಲು ಪಡೆಕೊಂಡಾಗಿರುತ್ತಿರುವ ಈ ಕಾಲದಲ್ಲೂ ಅವರೆಬ್ಬಿಸುವದೆಂದರೆ ಅವರಿಗಿನ್ನೇನು ಬೇಕಾಗಿದೆ? ಎಂಬ ಪ್ರಶ್ನೆಯೇಳುತ್ತಿದೆ. ಇದೇ ಪ್ರಶ್ನೆಯ ಇನ್ನೊಂದು ಬದಿಯೆಂಬಂತೆ, ಯಾವ ಜಾತೀಯತಾ ಗಲಭೆ ತಪ್ಪಬೇಕೆಂದು ಪಾಕಿಸ್ತಾನ ಕೊಡಲ್ಪಟ್ಟಿತೋ ಆ ಗಲಭೆಯು ಈಗಲೂ ನಡೆಯುವುದೆಂದರೆ ರಾಷ್ಟ್ರವನ್ನು ತುಂಡರಿಸಿ ದೊರೆತ ಭಾಗ್ಯವೇನು? ಎಂಬ ಸಂತಾಪವೂ ಏಳುತ್ತಿದೆ. ಪಾಕಿಸ್ತಾನದಲ್ಲಿ ಈಗ ನಡೆಯುತ್ತಿರುವ ಹಿಂದೂ ಮರ್ದನವು ‘ಕೆಲವು ಗುಂಡರ’ ಕೃತ್ಯವೇನೂ ಆಗಿರದೆ ವ್ಯವಸ್ಥಿತ ಹಂಚಿಕೆಯದೆಂಬುದು ಸ್ಪಷ್ಟ. ಪಾಕಿಸ್ತಾನವಾದೊಡನೆಯೇ ಗಡಿನಾಡು ಪ್ರಾಂತ್ಯ ಮತ್ತು ಪಂಜಾಬುಗಳಿಂದ, ಆ ವೇಳೆ ಸಿಂಧ್ ಪ್ರಾಂತ್ಯದಿಂದ ಹಿಂದುಗಳನ್ನು ಬಡಿದೋಡಿಸಲಾಗಿದ್ದಿತು; ಆ ಮೂಲಕ ಪಾಕಿಸ್ತಾನ್ ಮೂಲ ನೆಲೆ ಅಥವಾ ಪಶ್ಚಿಮ ಪಾಕಿಸ್ತಾನದಿಂದ ಹಿಂದುಗಳೆಲ್ಲರನ್ನೂ ಓಡಿಸಿ, ಅದಿಷ್ಟರಲ್ಲೇ ಶುದ್ಧ ಮುಸ್ಲಿಂ ಕ್ಷೇತ್ರವಾಗಿ ಉಳಿದಿದೆ. ಪೂರ್ವ ಪಾಕಿಸ್ತಾನ್ ಅಥವಾ ಪೂರ್ವ ಬಂಗಾಳದಲ್ಲಿ ಉಳಿದುಕೊಂಡಿದ್ದ ಹಿಂದುಗಳನ್ನು ಓಡಿಸುವ ಸರದಿ ಈಗ ಆರಂಭಿಸಿದೆ. ಅಂತೂ ಜಾತೀಯತಾ ದುಸ್ಫೂರ್ತಿಯ ತಳಗಟ್ಟಿನಲ್ಲಿದ್ದಿರುವ ಪಾಕಿಸ್ತಾನವು-ಜಾತೀಯ ರಾಜ್ಯವಾಗಿರುವ ಪಾಕಿಸ್ತಾನವು-ತನ್ನೀ ಹುಟ್ಟುಗುಣ ಮತ್ತು ಜೀವಾಳಕ್ಕನುಸಾರವಾಗಿ ಮುಸ್ಲಿಮೇತರರೆಲ್ಲರನ್ನೂ ಹೊರ ಹಾಕಿ ಶುದ್ಧ ಮುಸ್ಲಿಂ ರಾಷ್ಟ್ರವಾಗಿ ಉಳಿದುಕೊಳ್ಳುವ ಯೋಜನೆಯನ್ನು ಜಾರಿಗೆ ತರುತ್ತಿರಬೇಕು. ಇತ್ತ ಭಾರತವಾದರೋ ಜಾತ್ಯಾತೀತ ಜನತಾ ರಾಷ್ಟ್ರ. ಮುಸ್ಲಿಮೇತರರನ್ನು ಓಡಿಸುವುದು ಪಾಕಿಸ್ತಾನದ ರಾಷ್ಟ್ರಧರ್ಮವಾಗಿದ್ದರೆ, ಯಾವ ಜಾತಿಭೇದವೂ ಇಲ್ಲದೆ ಎಲ್ಲರನ್ನೂ ಸಮಾನತೆಯಿಂದ ಕಂಡು ತನ್ನಲ್ಲಿರಿಸಿಕೊಳ್ಳುವುದು ರಿಪಬ್ಲಿಕ್ ಭಾರತ ರಾಜ್ಯ ಧರ್ಮ. ಈ ತತ್ವಾನುಸಾರವಾಗಿ, ಪಾಕಿಸ್ತಾನದಿಂದೋಡಿ ಬರುತ್ತಿರುವ ಹಿಂದುಗಳು ಪಾಕಿಸ್ತಾನೀ ಪ್ರಜೆಗಳಾಗಿರುವುದರಿಂದ, ಅವರ ಸಂಬಂಧವೇ ತಮಗಿಲ್ಲವೆಂದು ಭಾವಿಸಿ, ಅವರಿತ್ತ ಕಾಲಿಡದಂತೆ ತಡೆಗಟ್ಟಲು ಭಾರತ ಸರಕಾರಕ್ಕೆ ಮನಸ್ಸು ಬಂದೀತೆ? ರಾಷ್ಟ್ರಸ್ವಾತಂತ್ರ್ಯಕ್ಕಾಗಿ ಸಮಾನ ಕಷ್ಟನಷ್ಟಗಳನ್ನನುಭವಿಸಿದ್ದು, ಅನ್ಯರ ಮಾಪದ ಫಲವಾಗಿ ನಡೆದ ವಿಭಜನೆಯಲ್ಲಿ ಆ ಕಡೆಯಲ್ಲುಳಿದುಕೊಳ್ಳುವ ನಂಕಶಿಕ್ಷೆಗೆ ದೂಡಲ್ಪಟ್ಟ ಈ ನಿಸ್ಸಹಾಯಕ ಸ್ವಬಂಧುಗಳ ಕಡೆಗೆ ಭ್ರಾಂತವಂತಹ ಕ್ರೌರ್ಯವನ್ನು ತೋರಿಸುವುದಾದರೂ ಹೇಗೆ? ಅತ್ತ ಪಾಕಿಸ್ತಾನದಿಂದ ಬರುತ್ತಿರುವ ಹಿಂದುಗಳಿಗೆ ಪ್ರತಿಯಾಗಿ, ಇಲ್ಲಿಯ ಮುಸ್ಲಿಮರನ್ನು ಅಲ್ಲಿಗೆ ರವಾನಿಸಲು ಭಾರತದ ಜಾತ್ಯಾತೀತ ತತ್ವವೊಪ್ಪುವದಿಲ್ಲ; ಇತ್ತ ಅಲ್ಲಿಂದ ಬರುತ್ತಿರುವ ಹಿಂದುಗಳೆದುರು ಬಾಗಿಲು ಮುಚ್ಚಿ ಬಿಡಲು ಮಾನುಷತ್ವ ಕೇಳುವುದಿಲ್ಲ. ಹಾಗಾದರೇನು? ಇಲ್ಲಿಯ ಮುಸ್ಲಿಮರನ್ನು ಇರಿಸಿಕೊಂಡು, ಅಲ್ಲಿಯ ಹಿಂದುಗಳೆಲ್ಲರನ್ನೂ ಬರಿಮೈಯಿಂದ ತರಿಸಿಕೊಂಡು, ಭಾರತವು ಆರ್ಥಿಕ ದಿವಾಳಿ ಹೊಂದಬೇಕೆ? ನಿಜಕ್ಕೂ ಹೃದ್ರಾವಕಸ್ಥಿತಿಯಿದು! ಇಂತಹ ಸ್ಥಿತಿಯಲ್ಲಿ ತಮ್ಮ ಸರ್ವಸ್ವವನ್ನೂ ಅಲ್ಲೇ ಬಿಟ್ಟು, ಪೂರ್ವ ಪಾಕಿಸ್ತಾನದಿಂದೋಡಿ ಬರುತ್ತಿರುವ ಹಿಂದುಗಳ ಪಾಲಿನ ಭೂಭಾಗವನ್ನು ಪಾಕಿಸ್ತಾನದಿಂದ ಪಡಕೊಳ್ಳುವದು– ಅದು ಬೇರೆ ವಿಧಾನದಿಂದ ಅಸಾಧ್ಯವಾದರೆ ಕಸಗೊಳ್ಳುವುದು– ಭಾರತ ಸರಕಾರದ ಕರ್ತವ್ಯವಲ್ಲವೆ? ಪೂರ್ವಾಪರ ವಿಚಾರ, ಸುತ್ತಮುತ್ತಲಿನ ನೋಟ, ಮತ್ತಿತರ ಸಂಗತಿಗಳೊಂದಿಗೆ ಭಾರತ ನಾಯಕರು ಈ ಕುರಿತು ಯೋಗ್ಯ ತೀರ್ಮಾನಕ್ಕೆ ಬರಬಹುದೆಂದು ನಿರೀಕ್ಷಿಸೋಣ. ಆ ಹೊಣೆಯನ್ನು ಸಂಪೂರ್ಣವಾಗಿ ಸರಕಾರದ ಪಾಲಿಗೇನೇ ಬಿಟ್ಟು, ಅದರ ಆಜ್ಞಾನುಸಾರವಾಗಿ ಎಂತಹ ಸಂದರ್ಭವನ್ನಾದರೂ ಎದುರಿಸಲು ತಯಾರಿರುವುದು ತಮ್ಮ ಕರ್ತವ್ಯವೆಂದು ಜನತೆ ತಿಳಿದಿರಲಿ.

ಪ್ರಪಂಚ ರಥವು ಪ್ರಮಾದವಶಾತ್ ಅಥವಾ ಆಕಸ್ಮಿಕವಾಗಿ ಅಡ್ಡ ಹಾದಿಯನ್ನೇನೂ ಹಿಡಿದಿಲ್ಲ, ಉದ್ದೇಶಪೂರ್ವಕ ಹಾಗೂ ನಿಶ್ಚಿತ ಗತಿಯಿಂದ ಅತ್ತ ಸಾಗುತ್ತಿದೆ, ಎಂದು ಶಾಂತಿ ಪ್ರೇಮಿಗಳೆಲ್ಲರಿಗೂ ಸರಿಯಾಗಿ ಮನದಟ್ಟಾಗುವ ರೀತಿಯಲ್ಲಿ ಜಾಗತಿಕ ಘಟನೆಗಳು ಏಕಪ್ರಕಾರ ಸಾಗುತ್ತಿವೆ. ಇಂತಹ ದುರ್ಗತಿಗಿಳಿದಿರುವ ಇಡೀ ಪ್ರಪಂಚದ ಮುಖವನ್ನು ಬದಲಾಯಿಸಬಲ್ಲ ಕೈ ಯಾವುದು, ಎಂಬುದು ಪ್ರಾಯಶಃ ಯಾರ ಶೋಧನೆಗೂ ದೊರೆತಿಲ್ಲ. ಲಾಭ ಮತ್ತು ಸ್ಥಾನಮಾನಗಳಿಗಾಗಿ ಸ್ಪರ್ಧಿಸಿಕೊಳ್ಳುವ ದ್ವೇಷಾಸೂಯೆ, ಪರಸ್ಪರ ಅವಿಶ್ವಾಸ ಮತ್ತು ಸಂಶಯ ಮನೋವೃತ್ತಿ ಮುಂತಾದುವುಗಳೇ ಇಂದಿನ ಲೌಕಿಕ ರಾಜಕಾರಣದ ಘರ್ಷಣೆಗಳಿಗೂ ಹೇತುವಾಗಿರುವುದರಿಂದ ಪ್ರತಿಯೊಂದು ರಾಷ್ಟ್ರದ ನಾಯಕರಿಗೂ ಗಾಂಧೀಜೀಯ ತತ್ವಾನುಸಾರವಾದ ಆತ್ಮಶುದ್ಧೀ ತಲಬೇತಿಯನ್ನು ಕೊಡುವುದೇ ಇದಕ್ಕಿರುವ ಪರಿಹಾರೋಪಾಯವೇನೋ ಅನ್ನಿಸುತ್ತದೆ!

# ಪ್ರಾಪಂಚಿಕ ಸ್ಥಿತಿಗತಿ

## ಅಂತರ್ರಾಷ್ಟ್ರೀಯ

ಚೈನದ ಮೂಲ ಭೂಮಿಯು ಸಂಪೂರ್ಣವಾಗಿ ಕಮ್ಯೂನಿಸ್ಟರ ಹಸ್ತಗತವಾದ ಮೇಲೆ, ಚಿಯಾಂಗ್ ರಾಷ್ಟ್ರೀಯ ಸರಕಾರದ ನಿಲ್ದಾಣ ಕ್ಷೇತ್ರವಾಗಿ ಉಳಿದುಕೊಂಡಿರುವುದೆಂದರೆ ಫೋರ್ಮೋಸಾ ದ್ವೀಪ ಮಾತ್ರ. ಅಂತೆಯೇ ಚೈನದಲ್ಲಿ ಅಂತರಾಷ್ಟ್ರೀಯ ನೆಲೆಯಾಗಿ ಉಳಿದಿರುವ ಹೋಂಗ್‌ಕೋಂಗ್. ಈ ಪೈಕಿ ಫೋರ್ಮೋಸವನ್ನು ವಶಪಡಿಸಿಕೊಳ್ಳುವ ಇಚ್ಛೆಯಿಂದ ಅದಕ್ಕೆ 200 ಮೈಲು ದೂರದ ಹಾಮೋವಾ ದ್ವೀಪವನ್ನು ಅತಿ ಸಾಹಸದಿಂದ ಕೆಂಪು ಸೇನೆ ವಶಪಡಿಸಿಕೊಂಡಿದೆ. ಇತ್ತ ಹೋಂಗ್‌ಕೋಂಗಿನ ಬ್ರಿಟಿಷ್ ಕ್ಷೇತ್ರದ 50 ಗಜ ಸಮೀಪದವರೆಗೂ ಕಮ್ಯೂನಿಸ್ಟ್ ವಿಮಾನಗಳು ಧಾಳಿ ಹಾರಾಟ ನಡೆಸುತ್ತಿವೆಯೆಂದು ಬ್ರಿಟಿಷ್ ಮೆಶಿನ್‌ಗನ್ನುಗಳೂ ಸಿಡಿದ ವಾರ್ತೆಯಿದೆ. ಹೋಂಗ್‌ಕೋಂಗ್ ಗಡಿಯಿಂದ ಕ್ಯಾಂಟನ್ ವರೆಗೆ ಚಿಯಾಂಗ್ ರಾಷ್ಟ್ರೀಯ ಸರಕಾರದ ಬೋಂಬು ಧಾಳಿಗಳೂ ನಡೆದಿವೆ. ಕೇಂಟನಿನ ಜನರು ಓಡುತ್ತಿದ್ದಾರೆ.

ಮಲಯದಲ್ಲಿ ಕಮ್ಯೂನಿಸ್ಟರ ವಿರುದ್ಧ ಬ್ರಿಟಿಷ್ ಸೇನೆಗಳು ಸರ್ವಸಿದ್ಧತೆಯ ಪ್ರಚಂಡ ಹೊಸ ಧಾಳಿಯನ್ನಾರಂಭಿಸಿವೆ.

ಆಗ್ನೇಯ ಏಸ್ಯಾಕ್ಕೆ ಆರ್ಥಿಕ ಸಹಾಯ ಸಲ್ಲಿಸುವ ಕುರಿತು ಪ್ರತ್ಯಕ್ಷ ಪರಿಶೀಲಿಸಲು ಹೊರಟಿರುವ ಅಮೆರಿಕದ ನಿಯೋಗವು ವಿಯೆಟ್‌ನಾಮಿಗೆ ಬರಲಿದೆ. ಅಲ್ಲಿಯ ಬಾವೊದಾಯಿ ಸರಕಾರಕ್ಕೆ ಅಮೆರಿಕದ ಬೆಂಬಲವಿದೆ.

ಸೋಫಿಯಾದಲ್ಲಿದ್ದ ಅಮೇರಿಕನ್ ಮಂತ್ರಿಗಳ ಕುರಿತು ಬಲ್ಗೇರಿಯಾ ಸರಕಾರವು ಹೂಡಿದ್ದ ಆಕ್ಷೇಪಗಳನ್ನು ಪ್ರತಿಭಟಿಸಿ, ಅಮೆರಿಕ ಸರಕಾರವು ಬಲ್ಗೇರಿಯದೊಡನೆ ಸಂಬಂಧವನ್ನೇ ಕಡಿದುಕೊಂಡು ಅಲ್ಲಿದ್ದ ತನ್ನ ರಾಯಭಾರಿಯನ್ನು ಹಿಂದೆ ಕರೆಸಿದೆ.

## ಭಾರತದಲ್ಲಿ

ಭಾರತದ ಪಾಲಿನ ಇಂದಿನ ಪ್ರಮುಖ ಪ್ರಶ್ನೆಯಾಗಿರುವ ಕಾಶ್ಮೀರ ವಿವಾದದ ಸಂಬಂಧವಾಗಿ ಹೊಸ ಸೂಚನೆಯೊಂದು ಭದ್ರತಾ ಕೌನ್ಸಿಲಿನಲ್ಲಿ ಫೆಬ್ರವರಿ ತಾ. 24ರಲ್ಲಿ ಮುಂದೆ ಬಂದಿದ್ದು ಚರ್ಚೆಯಲ್ಲಿದೆ. ಈ ಮೊದಲಿನ ಕಾಶ್ಮೀರ ಕಮಿಶನನ್ನು ರದ್ದುಪಡಿಸಿ, ಅದರ ಸ್ಥಾನಕ್ಕೆ ಮತ್ತು ದರ ಅಧಿಕಾರ ಮತ್ತು ಹೊಣೆಗಾರಿಕೆಗಳನ್ನು ಕೊಟ್ಟು ಸಂಯುಕ್ತ ರಾಷ್ಟ್ರಸಂಘದ ಓರ್ವ ಪ್ರತಿನಿಧಿಯನ್ನು ನೇಮಿಸಬೇಕೆಂಬುದೇ ಈ ಹೊಸ ಸೂಚನೆಯ ಸಾರ. ಇದರ ನಿರ್ಮಾಣಕ್ಕೆ ಬ್ರಿಟಿಷ್ ಸರಕಾರದ ಪ್ರೇರಣೆಯೇ ಮೂಲವೆಂದು ತಿಳಿದುಬರುತ್ತದೆ. ರಾಷ್ಟ್ರದ ಪಾಲಿನ ಪ್ರಾಮುಖ್ಯ ಪ್ರಶ್ನೆಯಾದ ಕಾಶ್ಮೀರ ವಿವಾದವನ್ನು ಓರ್ವ ಮಧ್ಯಸ್ಥಗಾರನ ಇಚ್ಛಾಧೀನಗೊಳಿಸಲು ತಾವೆಂದೂ ತಯಾರಿಲ್ಲವೆಂದು ಭಾರತ ಸರಕಾರವು ಮೇಲಿಂದ ಮೇಲೆ ಹೇಳಿರುವುದಾದರೂ ಅದೇ ಸೂಚನೆ ಹೊಸ ರೂಪದಿಂದೀಗ ಮುಂದೆ ಬಂದಂತಾಯಿತು. ಪಾಕಿಸ್ತಾನದ ಮನವೊಲಿಸುವ ಉದ್ದೇಶವು ಬ್ರಿಟನ್ ಮೊದಲಾದ ರಾಷ್ಟ್ರಗಳದ್ದಿರುವುದರಿಂದಲೇ ಇಂತಹದನ್ನು ತಯಾರಿಸಲಾಯಿತೆಂದು ಊಹಿಸಲಾಗಿದೆ.

ಭಾರತ ಮತ್ತು ನೇಪಾಳಗಳೊಳಗಿನ ಮೈತ್ರಿ ಮತ್ತು ರಕ್ಷಣಾ ಒಡಂಬಡಿಕೆಗಳಿಗಾಗಿ ನೇಪಾಳದ ಪ್ರಧಾನ ಮಂತ್ರಿಗಳು ಕಳೆದ ವಾರ ನವದೆಹಲಿಗಾಗಮಿಸಿ ಆತ್ಮೀಯದರದ ಹಾಗೂ ಅತಿ ವಿಜೃಂಭಣೆಯ ಸ್ವಾಗತಾದರಗಳನ್ನು ಪಡೆದಿದ್ದರು. ಸವಿವರ ಮಾತುಕತೆಗಳ ನಂತರ ಇವೆರಡು ರಾಷ್ಟ್ರಗಳೊಳಗೊಂದು ಒಡಂಬಡಿಕೆ ಕರಾರು ತಯಾರಾಗಿದೆಯೆಂದೂ ತನ್ನ ಸರಕಾರದ ಅನುಮತಿ ಪಡೆದು ಕೊಳ್ಳುವುದಕ್ಕಾಗಿ ನೇಪಾಳದ ಪ್ರಧಾನಿಗಳದನ್ನೀಗ ಒಯ್ದಿರುವರೆಂದೂ ಪ್ರಕಟವಾಗಿದೆ. ಈ ಒಪ್ಪಂದಕ್ಕೆ ಸದ್ಯದಲ್ಲೇ ಇತ್ಯಾದಿಯ ಸರಕಾರಗಳ ಸಹಿ ಬೀಳಲಿದೆ.

ಭಾರತ ಪಾರ್ಲಿಮೆಂಟಿನಲ್ಲಿ 'ಕಮ್ಯೂನಿಸ್ಟ್ ಕಂಟಕದಿಂದ ಭಾರತದ ಪ್ರಜಾಸತ್ತಾಂಗಗಳನ್ನು ರಕ್ಷಿಸಿಕೊಳ್ಳುವ' ಉದ್ದೇಶದಿಂದ ಸರ್ದಾರ್ ಪಟೇಲರಿಂದ ತರಲ್ಪಟ್ಟಿದ್ದ "ಪ್ರತಿಬಂಧಕ ಸ್ಥಾನಬದ್ಧತಾ ಮಸೂದೆ" ಮಂಜೂರಾಗಿದೆ. ಈ ನವ ಶಾಸನದನ್ವಯ ಅಗತ್ಯವೆಂದು ತೋರಿದರೆ ಯಾರನ್ನೇ ಆದರೂ ಮೂರು ತಿಂಗಳುಗಳಿಗೂ ಮಿಕ್ಕಿ ಸ್ಥಾನಬದ್ಧತೆಯಲ್ಲಿಡುವ ಅಧಿಕಾರವು ಕೇಂದ್ರ ಮತ್ತು ಸಂಸ್ಥಾನದ ಸರಕಾರಗಳಿಗೆ ದೊರೆತಿದೆ.

## ಮದ್ರಾಸ್ ಆಯವ್ಯಯ

1950-51ನೇ ವರುಷದ ಮದ್ರಾಸ್ ಪ್ರಾಂತ್ಯದ ಆಯವ್ಯಯ ಪಟ್ಟಿಯನ್ನು ಫೆಬ್ರವರಿ ತಾ. 27ರಲ್ಲಿ ಅರ್ಥ ಮಂತ್ರಿ ಶ್ರೀ ಬಿ. ಗೋಪಾಲ ರೆಡ್ಡಿಗಳು ಮದ್ರಾಸ್ ಎಸೆಂಬ್ಲಿಯ ಮುಂದೆ ಮಂಡಿಸಿದ್ದಾರೆ. ಇದು ಹೊಸ ಘಟನೆಯ ನಂತರದ ಪ್ರಥಮ ಬಜೆಟ್ ಮತ್ತು ಶ್ರೀ. ಗೋಪಾಲ ರೆಡ್ಡಿಗಳಿಂದ ಮುಂದೆ ಬಂದ ಮೂರನೇ ಬಜೆಟು. ಈ ಅಂದಾಜು ಆಯವ್ಯಯ ಪಟ್ಟಿಯಲ್ಲಿ ಉತ್ಪನ್ನವು ರೂ. 55.21 ಕೋಟಿ ಮತ್ತು ಖರ್ಚು ರೂ. 55.57 ಕೋಟಿ ಕಾಣಿಸಲ್ಪಟ್ಟಿದೆ. ಇದರ ಹಿಂದಿನ ಒತ್ತು ವರುಷದ ತಿದ್ದಿದ ಬಜೆಟು 56.91 ಕೋಟಿ ರೂ. ಆಯ, 56.38 ಕೋಟಿ ರೂ. ವ್ಯಯಗಳುಳ್ಳದಾಗಿತ್ತು. ಈ ಬಾರಿಯ ಪಟ್ಟಿಯಲ್ಲಿ 36 ಲಕ್ಷ ರೂಪಾಯಿಗಳ ಸಣ್ಣ ಕೊರತೆ ಕಂಡು ಬರುತ್ತಿದೆ. ಹೊಸದಾಗಿ ಮದ್ರಾಸ್ ಪ್ರಾಂತ್ಯದೊಂದಿಗೆ ಮಿಲನಗೊಂಡಿರುವ ಪುದುಕೋಟೆ, ಬಂಗನಪಲ್ಲಿ, ಮತ್ತು ಸಂಡೂರು ಸಂಸ್ಥಾನಗಳ ಬಾಬ್ತಿನ ಕೊರತೆಯೇ ಇಷ್ಟಿರುವುದರಿಂದ ಕೇಂದ್ರ ಸರಕಾರವು ಈ ಹಣವನ್ನು ಕೊಟ್ಟರೆ ಈ ಬಾರಿಯ ಕೊರತೆ ತುಂಬುತ್ತದಾದ್ದರಿಂದ ಅದನ್ನು ಹಾಗೆಯೇ ಇರಗೊಡಿಸಲಾಗಿದೆ. ಹೊಸ ಆಯವ್ಯಯ ಪಟ್ಟಿಯಲ್ಲಿ ಯಾವ ಹೊಸ ತೆರಿಗೆಯನ್ನೂ ಸೂಚಿಸಿಲ್ಲ. ಅಂತೆಯೇ ಇರುವ ಕರಕಂದಾಯಗಳಲ್ಲಾವುದನ್ನೂ ತಗ್ಗಿಸಿಲ್ಲ. ದುಃಸ್ಥಿತಿಗೊಳಗಾದ ಜಿಲ್ಲೆಗಳ ಮಟ್ಟಿಗೆ ಪ್ರಚಲಿತ ವರುಷ 70 ಲಕ್ಷ ರೂ. ತೀರ್ವೆಯನ್ನು ಮಾಫಿಮಾಡಲಾಗಿದೆಯಲ್ಲದೆ, ಇನ್ನೂ 24 ಲಕ್ಷ ರೂ.ಗಳನ್ನು ಮಾಫಿಬಿಡುವ ನಿರ್ಧಾರವಿದೆ. ಒಟ್ಟಿನ ಮೇಲೆ ಪ್ರಗತಿಶೀಲ ಹಾಗೂ ಸಮಾಧಾನಕರ ಆಯವ್ಯಯ ಪಟ್ಟಿಯಿದೆಂದು ಅರ್ಥಮಂತ್ರಿಗಳ ಹೇಳಿಕೆ.

## ಉಡುಪಿ

### ದ. ಕ. ಮೋಟಾರು ಮುಷ್ಕರ

ಈ ಸಂಬಂಧದಲ್ಲಿ ಒಂದು ಒಡಂಬಡಿಕೆಯಾಯಿತೆಂದು ಇದೇ ತಾ. 1ರಲ್ಲಿ ವಾರ್ತೆ ಬಂದಿದೆಯಾದರೂ ಈ ತನಕ ಯಾವುದೂ ಸ್ಪಷ್ಟವಾಗಿ ತಿಳಿದುಬಂದಿಲ್ಲ.

ಮುನಿಸಿಪಲ್ ಸಭೆಯು ಕಳೆದ ತಾ. 25ರಲ್ಲು ಚೆಯರ್‌ಮೆನ್ ಶ್ರೀ. ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ನೆರೆಯಿತು. ಖಾಲಿ ಸ್ಥಳದ ಮೇಲೆ ವಸೂಲು ಮಾಡಿದ ತೆರಿಗೆಯನ್ನು ಪುನಃ ಸಂಬಂಧಪಟ್ಟವರಿಗೆ ವಾಪಾಸು ಕೊಡಬಹುದಾಗಿ ಬಂದ ಸರಕಾರದ ಪತ್ರದ ಕುರಿತು ತುಂಬಾ ಚರ್ಚೆನಡೆದು ಕೊನೆಗೆ ವಾಪಾಸು ಕೊಡಬಹುದೆಂದಾಯಿತು. ಮುನಿಸಿಪಲ್ ಬಸ್ ಸ್ಟೇಂಡಿನಲ್ಲಿ ಪಬ್ಲಿಕ್ ಟೇಂಕ್ ಪಾಯಿಖಾನೆ ಮತ್ತು ಮೂತ್ರದೊಡ್ಡಿಯನ್ನು ಕಟ್ಟುವರೆ ಖರ್ಚು ಸೆಂಕ್ಷನ್ ಮಾಡಲಾಯಿತು. ಸೆಂಟ್ರಲ್ ವಾರ್ಡಿನ ಟೌನ್ ಪ್ಲಾನಿಂಗ್ ಯೋಜನೆಗೆ ಸಂಬಂಧಿಸಿದ ಅಪೀಲು ಅರ್ಜಿಗಳ ತೀರ್ಮಾನವು ಕೌನ್ಸಿಲಿನಲ್ಲೇ ಆಗಬೇಕೆಂಬ ಶ್ರೀ. ಮಂಜುನಾಥ ರಾಯರ ನಿರ್ಣಯ ಪಾಸಾಯಿತು.

**ಓನರರಿ ಅಸಿಸ್ಟಾಂಟ್ ಸರ್ಜನ**ರಾಗಿ ಡಾ. ಪಿ. ಆರ್. ನಾಯಕ್, ಎಂ. ಬಿ., ಬಿ. ಎಸ್. ಇವರು ಸ್ಥಳೀಯ ಆಸ್ಪತ್ರೆಗೆ ತರುಗಿ 5 ವರ್ಷಗಳ ವರೆಗೆ ನೇಮಕ ಹೊಂದಿರುವರೆಂದು ತಿಳಿದು ಬರುತ್ತದೆ.

**ಉತ್ತಮ ಗ್ರಂಥಕ್ಕೆ ಸಂಭಾವನೆ**— ಉಡುಪಿಯ ಬೋರ್ಡ್ ಹ್ಯಾಸ್ಕೂಲಿನ ಅಧ್ಯಾಪಕರಾದ ಶ್ರೀ ಕೆ. ವಿಟ್ಠಲ ಶೆಣೈ, ಬಿ. ಎ., ಎಲ್. ಟಿ.ಯವರು ಬರೆದ "ಮುಂದಿನ ಜನಾಂಗ"ವೆಂಬ ಮಕ್ಕಳ ಮನೋವಿಜ್ಞಾನದ ಕುರಿತಾದ ಗ್ರಂಥಕ್ಕೆ ತಮ್ಮ ಮೆಚ್ಚುಗೆಯನ್ನು ಪ್ರದರ್ಶಿಸಿ ಮದರಾಸು ಸ್ಕೂಲ್ ಬುಕ್ ಮತ್ತು ಲಿಟರೇಚರ್ ಸೊಸೈಟಿಯವರು ೫೦ ರೂ. ಸಂಭಾವನೆಯಿತ್ತು ಪ್ರೋತ್ಸಾಹಿಸಿರುವರೆಂದು ತಿಳಿಯುತ್ತೇವೆ. ಶ್ರೀಯುತ ಶೆಣೈಯವರಿಗೆ ನಮ್ಮ ಹಾರ್ದಿಕ ಅಭಿನಂದನೆಗಳು.

**ಎಮ್. ಜಿ ಎಮ್ ಕಾಲೇಜಿನ** ಕನ್ನಡ ಸಂಘದ ಪ್ರಥಮ ವಾರ್ಷಿಕೋತ್ಸವವು ಕಳೆದ ತಾ. 26ರಲ್ಲು ಪ್ರಿನ್ಸಿಪಾಲ್ ಶ್ರೀ. ಎಚ್. ಸುಂದರರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ಶ್ರೀ. ಪಿ ನಾರಾಯಣ ಅಯ್ಯಂಗಾರರಿಂದ ಸ್ವಾಗತ, ಕಾರ್ಯದರ್ಶಿ ಶ್ರೀ. ವೈ. ಶಿವಣ್ಣ ಹೆಗ್ಡೆರಿಂದ ವಂದಿ ವಾಚನಗಳಾದ ನಂತರ ಶ್ರೀ. ಪಿ ಎಸ್. ತಿಮ್ಮಪ್ಪ ಸೆಟ್ಟರು ಸಭಾರಂಭ ಭಾಷಣ ಮಾಡಿ, ಗಾಂಧೀಜಿಯವರ ಆದರ್ಶ ಧ್ಯೇಯಗಳನ್ನು ಕಾಲೇಜು ವಿದ್ಯಾರ್ಥಿಗಳು ಅನುಸರಿಸಿ ಜೀವನದಲ್ಲಿ ಪಾಲಿಸಬೇಕಾಗಿದೆ ಎಂದರು. ಪ್ರಾಥಶಿಕ್ಷಣ ಪಡೆದ ಕೆಲವು ವಿದ್ಯಾರ್ಥಿಗಳಾದರೂ ಗ್ರಾಮಾಂತರಕ್ಕೆ ಹೋಗಿ ಅಲ್ಲಿ ಹಳ್ಳಿಗಳ ಕಾರ್ಯದಲ್ಲಿ ಆಸಕ್ತರಾಗಬೇಕಾಗಿದೆ ಎಂದು ಸೂಚಿಸಿದರು. ಅಧ್ಯಕ್ಷರ ಭಾಷಣ, ಸಂಗೀತ, ನಾಟಕಾಭಿನಯಗಳೊಂದಿಗೆ ಸಭಾರಂಭವು ಕೊನೆಗೊಂಡಿತು.

### ನೋಟಿಸ್

ಉಡ್ಪಿತಾಲ್ಲೂಕು ಮೂಡುತೋನ್ಸೆಗ್ರಾಮದ ನೇಜಾರಿನಲ್ಲಿರುವ ಹಸನ್ ಸಾಹೇಬರ ಮಗ ಇಬ್ರಾಹಿಂ ಸಾಹೇಬನು ಈ ಮೂಲಕ ಸಮಸ್ತ ಜನರಿಗೆ ತಿಳಿಸುವದೇನೆಂದರೆ:

ಉಡ್ಪಿತಾಲ್ಲೂಕು ಮೂಡುತೋನ್ಸೆಗ್ರಾಮದ ಸ. ನಂ. 1/11 ಬಾಗಾಯ್ತು-ಪೈಕಿ-ಪಡುಬದಿ ಸೆಂಟ್ಸು ಏಳು-ವಿಸ್ತೀರ್ಣದ ಸ್ಥಳವು ನನ್ನ ಸಹೋದರಿ ಬೀಬಿಯ ಮೂಲಗೇಣಿ ಹಕ್ಕಿನದ್ದಾಗಿದ್ದು, ಈಗ ಸುಮಾರು 15 ವರ್ಷಗಳಿಂದಲೂ ಸದ್ರಿ ಆಸ್ತಿಯನ್ನು ಸ್ವಾಧೀನಗಾರನಾಗಿದ್ದ ನಾನು ಅವಳ ನಂತ್ರದ ಹಕ್ಕುದಾರನಾಗಿ-ನನ್ನಲ್ಲಿ ಸದ್ರಿ ಆಸ್ತಿಮೇಲಣ ಹಕ್ಕನ್ನು ಸ್ಥಾಪಿಸಿಕೊಂಡಿರುತ್ತೇನೆ. ಈ ಬಾಬಿನಲ್ಲಿಯಾರಿಗ್ಯಾದರೂ ಆಕ್ಷೇಪಣೆ ಇದ್ದಲ್ಲಿ ಅಂತವರು ಇಂದಿನಿಂದ ಒಂದು ತಿಂಗಳ ಒಳಗೆ ತಕ್ಕಸ್ಥಾನದಲ್ಲಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಸದ್ರಿ ಸ್ಥಳವು ನನ್ನ ಹಕ್ಕಿನದ್ದೆಂಬ ಧೋರಣೆ ಮೇಲೆ ನಾನು ಅದನ್ನು ಅನುಭವಿಸಿಕೊಂಡು ಬರುತ್ತೇನೆ. ನಂತ್ರ ಸದ್ರಿ ಆಸ್ತಿಯಲ್ಲಿ ನನ್ನ ಮೂಲಗೇಣಿಹಕ್ಕಿಗೆ ವಿರೋಧವಾಗಿ ಇನ್ನಾರಿಗಾದರೂ ಎಷ್ಟನ್ನಾದರೂ ಹಕ್ಕು ಸಂಬಂಧವಿರುವುದಿಲ್ಲ.

ಉಡ್ಪಿ } ಇಬ್ರಾಹಿಂ ಸಾಹೇಬ
ತಾ 1-3-50 } ರುಜು.

ತಾರೀಕು 2—3—50ರಿಂದ.
ಕಾನನ್ ಬಾಲಾ ನಟಿಸಿರುವ
**ತುಮ್ ಔರ್ ಮೈ**
ಬರುವ ಚಿತ್ರ—ಕನ್ನಡ ಚಿತ್ರರತ್ನ
**ಭಾರತಿ**
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

## ಮಂಗಳೂರು

**ಸಂತಾಪ ಸೂಚಕ ನಿರ್ಣಯ**— ಕಳೆದ ತಾ. 23ರಲ್ಲಿ ಸೇರಿದ ದ. ಕ. ಜಿಲ್ಲಾ ವಿದ್ಯಾರ್ಥಿ ಯೂನಿಯನ್ನಿನ ಕಾರ್ಯಕಾರೀ ಸಮಿತಿಯ ಸಭೆಯಲ್ಲಿ ಶ್ರೀ ಶರತ್‌ಚಂದ್ರ ಬೋಸರ ನಿಧನದ ಬಗ್ಗೆ ಸಂತಾಪಸೂಚಕ ನಿರ್ಣಯವಾಯಿತು.

**ದ. ಕ. ಜಿಲ್ಲಾ ವಿದ್ಯಾರ್ಥಿ ಸಮ್ಮೇಳನವು** ಜಿಲ್ಲಾ ವಿದ್ಯಾರ್ಥಿ ಕಾಂಗ್ರೆಸಿನ ಆಶ್ರಯದಲ್ಲಿ ಕಳೆದ ತಾ. 19ರಲ್ಲಿ ಸೆಂಟ್ರಲ್ ಕೋಓಪರೇಟಿವ್ ಬೇಂಕ್ ಕಟ್ಟಡದಲ್ಲಿ ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಮ್ಮೇಳನದಲ್ಲಿ ವಿದ್ಯಾರ್ಥಿ ಕಾಂಗ್ರೆಸಿನ ಹೊಸ ಘಟನೆಯನ್ನು ಸ್ವೀಕರಿಸಲಾಯಿತು. ಹೊಸ ಘಟನೆಯಲ್ಲಿ ಹೆಸರನ್ನು 'ದಕ್ಷಿಣ ಕನ್ನಡ ವಿದ್ಯಾರ್ಥಿ ಯೂನಿಯನ್' ಎಂದು ಮಾರ್ಪಡಿಸಲಾಯಿತು.

ಕರ್ನಾಟಕ ಪ್ರಾಂತರಚನೆಯ ಕಾವೇರಿಯ ಕೆ. ಪಿ. ಪಿ. ಸಿ. ಸಭೆಯಲ್ಲಿ ಸ್ವೀಕೃತವಾದ ಗೊತ್ತುವಳಿಯನ್ನು ಖಂಡಿಸುವ, ಸೇಲಮ್ ಜೈಲಿನ ದುರಂತವನ್ನು ಖಂಡಿಸಿ ನಿಷ್ಪಕ್ಷಪಾತ ವಿಚಾರಣೆಯಾಗಬೇಕೆನ್ನುವ, ಶಾಲಾ ಕಾಲೇಜುಗಳಲ್ಲಿ ಜಾತಿಯನ್ನು ಹೊಂದಿಕೊಂಡು ಪ್ರವೇಶಕೊಡುವ ಮದ್ರಾಸ್ ಸರಕಾರದ ನೀತಿಯನ್ನು ಖಂಡಿಸುವ ನಿರ್ಣಯವು ಪ್ರತಿನಿಧಿಗಳ ಸಭೆಯಲ್ಲಿ ಅಂಗೀಕರಿಸಲಾಯಿತು. ಬಹಿರಂಗ ಅಧಿವೇಶನವು ಸಂಜೆ ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾಗತ ಸಮಿತಿಯ ಅಧ್ಯಕ್ಷ ಜನಾಬ್ ಎಸ್. ಎಮ್. ಹಾದಿಯವರು ಅಧ್ಯಕ್ಷರನ್ನೂ ನೆರೆದ ಸಭಿಕರನ್ನೂ ಸ್ವಾಗತಿಸಿದರು. ಶ್ರೀ ನವೀನಚಂದ್ರಪಾಲರು ಸಮ್ಮೇಳನವನ್ನು ಉದ್ಘಾಟಿಸುತ್ತ, ವಿದ್ಯಾರ್ಥಿ ಕಾಂಗ್ರೆಸ್ ಪುನರ್ಘಟಿತವಾದುದಕ್ಕೆ ಸಂತೋಷ ವ್ಯಕ್ತಪಡಿಸುತ್ತಾ, ಈ ಸಂಸ್ಥೆಯು ಯಾವುದೇ ಪಕ್ಷಕ್ಕೆ ಬಲಿಬೀಳದೆ ಸ್ವತಂತ್ರ ಸಂಸ್ಥೆಯಾಗಿ ಬಾಳಲೆಂದು ಆಶಿಸಿದರು. ಶ್ರೀ ಕಾರಂತರು ತಮ್ಮ ಅಧ್ಯಕ್ಷ ಭಾಷಣದಲ್ಲಿ ವಿದ್ಯಾರ್ಥಿಗಳು ರಾಜಕೀಯವನ್ನು ಅಭ್ಯಸಿಸದೆ ರಾಜಕೀಯಕ್ರಿಯೆಯ ಬಗದೆಂದೂ ಮನುಷ್ಯನಿಗೆ ಹಕ್ಕು ವಿದ್ಯಾರ್ಥಿಗಳಿಗಿದ್ದರೂ ಪ್ರತಿಯೊಂದು ವಿಚಾರದಲ್ಲೂ ಅದನ್ನು ಉಪಯೋಗಿಸಬಾರದೆಂದೂ ಹೇಳಿದರು. ಭಾಷಾವಾರು ಪ್ರಾಂತರಚನೆಯ ಕುರಿತು ಮಾತನಾಡುತ್ತಾ ಅವರು ದಕ್ಷಿಣ ಹಿಂದೂಸ್ಥಾನವು ಭಾಷಾವಾರು ತತ್ವದಂತೆ ವಿಭಜಿಸಲ್ಪಡದಿದ್ದರೆ ಪ್ರಜಾಪ್ರಭುತ್ವವು ಯಶಸ್ವಿಯಾಗದೆಂದೂ ಹೇಳಿದರು.

**ಎಲೋಸಿಯಸ್ ಕಾಲೇಜಿನ ಕನ್ನಡ ಸಂಘದ ವಾರ್ಷಿಕೋತ್ಸವವು** ಶ್ರೀ ಕಡೆಂಗೋಡ್ಲು ಶಂಕರಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಕನ್ನಡ ಸಂಘದ ಅಧ್ಯಕ್ಷ ಶ್ರೀ ಜಿ. ಕೆ. ಭಟ್ಟರು ಸ್ವಾಗತ ಭಾಷಣ ಮಾಡಿದ ಮೇಲೆ ಶ್ರೀಗಳಾದ ಕೆ. ಎಲ್. ಎನ್. ರಾವ್ ಮತ್ತು ಕದ್ರಿ ಶ್ರೀನಿವಾಸರಾಯರು ಕಾಲೋಚಿತ ಭಾಷಣ ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಪ್ರಗತಿಪರ ಸಾಹಿತ್ಯದ ಕುರಿತು ಸವಿಸ್ತಾರವಾಗಿ ಮಾತನಾಡಿದ್ದಲ್ಲದೆ ಶ್ರೀ ಮುಳಿಯ ತಿಮ್ಮಪ್ಪಯ್ಯನವರ ನಿಧನದಿಂದ ಕನ್ನಡಕ್ಕಾದ ನಷ್ಟವನ್ನು ತಿಳಿಸಿದರು. ಶ್ರೀ ಶ್ರೀನಿವಾಸ ಉಡುಪರ ಕಾವ್ಯವಾಚನಾದಿಗಳಿಂದ ಸಮಾರಂಭ ಕೊನೆಗೊಂಡಿತು.

**ರುಜಾರಿಯೋ ಹೈಸ್ಕೂಲಿನ ವರ್ಧಂತಿಯೂ** ಬಹುಮಾನ ವಿತರಣೆಯೂ ಈಚೆಗೆ ರೆ। ಫಾ। ಎಡ್ವರ್ಡ್ ಎಸ್. ಜೆ. ಅವರ ಅಧ್ಯಕ್ಷತೆಯಲ್ಲಿ ಜರಗಿತು.

**ಆಯುರ್ವೇದ ರೆವಿನ್ಯೂ ಬೋರ್ಡಿನ** ಹೊಸ ಹುಕುಮಿನ ಮೇರೆಗೆ ಕಲೆಕ್ಟರರು, ವೈದ್ಯಶಾಲೆ ಸೆಂಟ್ರಲ್ ಬೋರ್ಡಿನಿಂದ ಮಾನ್ಯವಾಗಿಲ್ಲವೆಂಬ ಕಾರಣದಿಂದ 79 ವೈದ್ಯರ ಫಾರ್ಮಸಿ ಲೈಸೆನ್ಸುಗಳನ್ನು ಇದೇ ತಾ. 1ರಿಂದ ರದ್ದುಗೊಳಿಸಿದ್ದಾರೆ. ದಿನೇ ದಿನೇ ಏರುತ್ತಿರುವ ಕಚ್ಚಾ ಔಷಧಿಗಳ ಬೆಲೆ ಮತ್ತು ಸರಕಾರವು ಹೇರುತ್ತಿರುವ ಹೊಸ ಹೊಸ ಕಟ್ಟುನಿಟ್ಟುಗಳಿಂದಾಗಿ ದೇಶೀಯ ವೈದ್ಯವೂ ಪರದೇಶೀ ವೈದ್ಯದಂತೆ ಜನಸಾಮಾನ್ಯರಿಗೆ ಎಟುಕದಂತಾಗದಿದ್ದರೆ ಸಾಕು.

**ವ್ಯವಸಾಯ ಕ್ಷೇತ್ರ** ಮಂಗಳೂರಲ್ಲಿ ವ್ಯವಸಾಯ ಕ್ಷೇತ್ರವನ್ನು ಆರಂಭಿಸಲು ಸರಕಾರವು ನಿಶ್ಚಯಿಸಿದೆ. ಒಳ್ಳೆ ಜಾತಿಯ ಭತ್ತದ ಬೀಜ ಸರಬರಾಯಿ ಮಾಡುವುದೂ, ವಿವಿಧ ವ್ಯವಸಾಯಕ ಸಮಸ್ಯೆಗಳನ್ನು ಬಗೆಹರಿಸಲು ಯತ್ನಿಸುವುದೂ ಈ ಕ್ಷೇತ್ರದ ಉದ್ದೇಶ.

**ರೈತರಿಗೆ ಪಂಪು ಸೆಟ್.** ಮದ್ರಾಸು ಸಂಸ್ಥಾನದಲ್ಲಿ ಸಾಗುವಳಿಯನ್ನು ಹೆಚ್ಚಿಸಲು ಪ್ರೋತ್ಸಾಹಿಸುವಂತೆ ಬೇಸಾಯಗಾರರು ಕೃಷಿಗಾಗಿ ಉಪಯೋಗಿಸುತ್ತಿರುವ ಖಾಸಗಿ ಪಂಪು ಸೆಟ್ಟುಗಳನ್ನು ಧರ್ಮಾರ್ಥವಾಗಿ ದುರುಸ್ತಿಗೊಳಿಸಿಕೊಡಲು ಸರಕಾರವು ವ್ಯವಸಾಯ ಇಲಾಖೆಗೆ ಅಪ್ಪಣೆ ಕೊಟ್ಟಿದೆ. ರೈತರು ದುರಸ್ತಿಗೆ ಬೇಕಾದ ಕೆಲಸದ ಜನ ಹಾಗೂ ಸಾಮಾಗ್ರಿಗಳನ್ನು ಒದಗಿಸತಕ್ಕದ್ದು. ಇದಕ್ಕೆ ಬೇಕಾದ ಅರ್ಜಿಗಳನ್ನು ತಂತಮ್ಮ ಜಿಲ್ಲೆಗಳ ಎಗ್ರಿಕಲ್ಚರಲ್ ಅಫೀಸರರಿಗೆ ಮಾಡಬೇಕು.

**ಬೇಸಾಯದ ನೀರಾವರಿಗಾಗಿ ದೊರೆ**ಯುತ್ತಿರುವ ಪಂಪುಗಳ ಉಪಯೋಗಕ್ಕೆ ಪೆಟ್ರೋಲ್ ಸರಿಯಾಗಿ ಸಿಗುತ್ತಿರುವುದಿಲ್ಲ ಎಂಬ ದೂರು ಕೇಳಿಬರುತ್ತಿದೆ. ಈ ಕುರಿತು ರೆವಿನ್ಯೂ ಬೋರ್ಡಿನವರು, ಪಂಪು ಸೆಟ್ಟುಗಳನ್ನು ಕೃಷಿ ಇಲಾಖೆಯಿಂದ ಬಾಡಿಗೆಗಾಗಲೀ ಬೇರೆ ವಿಧದಿಂದಾಗಲೀ ಪಡೆಕೊಂಡೊಡನೆಯೇ ರೈತರು ಜಿಲ್ಲಾ ಕೃಷಿ ಅಧಿಕಾರಿಗಳ ಮೂಲಕ ಪೆಟ್ರೋಲಿಗೆ ಅರ್ಜಿ ಬರೆಯಬೇಕು. ಹಾಗೆ ಮಾಡಿದರೆ ಜಿಲ್ಲಾ ಕೃಷಿ ಅಧಿಕಾರಿಗಳೇ ಅವರ ಶಿಫಾರಸಿನೊಡನೆ ಆ ಅರ್ಜಿಯನ್ನು ಪ್ರಾಂತೀಯ ಪೆಟ್ರೋಲ್ ರೇಶನ್ ಆಫೀಸರರಿಗೆ ಕಳುಹಿಸುವರು. ಹೀಗೆ ಮಾಡಿದರೆ ಪರ್ಮಿಟು ಬೇಗನೆ ಸಿಕ್ಕುವುದು ಎಂದು ಸೂಚಿಸಿರುವರು.

**ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಬದಲಾವಣೆ 1944ನೇ ಇಸವಿ** ಮೊದಲ್ಗೊಂಡು ಎಲ್ಲಾ ಗೇಣಿಯ ಒಕ್ಕಲಿನ ಉಳಿತಾಯವೆಂದು ಎಣಿಸಲ್ಪಟ್ಟು ಅದನ್ನು ಅಧಿಕಾರಿಗಳು ರಿಕ್ವಿಜಿಶನ್ ಮಾಡುವ ಪದ್ಧತಿಯು ಈ ಜಿಲ್ಲೆಯಲ್ಲಿ ಈ ವರೆಗೆ ಜ್ಯಾರಿಯಲ್ಲಿತ್ತು. ಧನಿಯ ಸಮ್ಮತಿಯಿದ್ದರೂ ಕೂಡಾ ಒಕ್ಕಲಿಗೆ ಗೇಣಿ ಅಂಶದ ಅಕ್ಕಿಯನ್ನು ಉಪಯೋಗಿಸುವ ಹಕ್ಕು ಇರಲಿಲ್ಲ. ಆದರೆ ಈಗ ಈ ಕಾನೂನನ್ನು ಬದಲಾಯಿಸಿರುವರು ಮತ್ತು ಈ ಹೊಸ ಪದ್ಧತಿಯು ಈ ವರ್ಷದ ಸುಗ್ಗಿ ಬೆಳೆಯಿಂದಲೇ ಜ್ಯಾರಿಗೆ ಬರುವುದು.

ಧನಿಗೆ ಆವಶ್ಯವಿರುವಷ್ಟರ ಮಟ್ಟಿಗೆ ಗೇಣಿಯನ್ನು ವಸೂಲು ಮಾಡಲು ಇನ್ನು ಮುಂದೆ ಕೂಡಾ ಪರ್ಮಿಟು ಕೊಡಲಾಗುವುದು. ಧನಿಗೆ ಪರ್ಮಿಟು ಪ್ರಕಾರ ಕೊಟ್ಟು ಗೇಣಿಯ ಅಂಶದಲ್ಲಿ ಅಕ್ಕಿ ಯಾ ಭತ್ತ ಉಳಿದರೆ ಆ ಅಂಶವನ್ನು ಒಕ್ಕಲಿಗ ತನ್ನ ಊಟಕ್ಕೆ ದಿನ ಒಂದರ ಒಂದೂ ಕಾಲು ಪಾವು ಅಕ್ಕಿಯ ದರದಲ್ಲಿ ಉಪಯೋಗಿಸಬಹುದು. ಹಾಗೆ ಕಳೆದುಳಿಯುವುದು ಮಾತ್ರ ಉಳಿತಾಯ.

## ದ. ಕ. ಜಿಲ್ಲೆಯಲ್ಲಿ ಮೋಟಾರ್ ಕೆಲಸಗಾರರ ಮುಷ್ಕರ

ದಕ್ಷಿಣ ಕನ್ನಡ ಜಿಲ್ಲಾ 'ಕೆನರಾ ಮೋಟಾರ್ ಕೆಲಸಗಾರರ ಯೂನಿಯನ್' ಕರೆಯಿಂದ ಜಿಲ್ಲೆಯ ಕೆಲಸಗಾರರು ಕಳೆದ ತಾ. 22ರಲ್ಲಿ ಮುಷ್ಕರ ಪ್ರಾರಂಭಿಸಿದರು. ಮಂಗಳೂರಲ್ಲಿ ಅಂದು ಬೆಳಗ್ಗೆ ಯಾವ ಬಸ್ಸುಗಳೂ ಹೊರಡಲಿಲ್ಲ. ಶಂಕರವಿಠಲ ಮೋಟಾರ್ ಗೆರೇಜಿನ ಬಳಿ ಕೆಲವರನ್ನು ಆತಂಕಪಡಿಸಿದರೆಂದು ಬಂಧಿಸಲಾಯಿತು. ಉಡುಪಿಯಲ್ಲೂ ತದ್ರೀತಿ ಬಸ್ ಸ್ಟೇಂಡಿನ ಬಳಿಯಿಂದ ಕೆಲವು ಬಸ್ಸುಗಳು ಹೊರಡುವ ವೇಳೆ ಆತಂಕಿಸಿದರೆಂದು ಮೂವರನ್ನು ದಸ್ತಗಿರಿ ಮಾಡಲಾಯಿತು. ಮಂಗಳೂರಲ್ಲಿ ಮೊದಲದಿನ ಒಟ್ಟು 107 ಮಂದಿಯನ್ನು ಬಂಧಿಸಲಾಗಿದೆ. ಸೋಶಿಯಲಿಸ್ಟ್ ಪಕ್ಷದ ಡಾ। ಸಂಜೀವನಾಥ ಮತ್ತು ಮಜೂರ ಮುಖಂಡ ಶ್ರೀ ಪಿ. ಡಿ. ಮೆಲ್ಲೋ ರವರೂ ಬಂಧನಕ್ಕೊಳಗಾಗಿದ್ದಾರೆ.

ತಾ 23ರಲ್ಲಿ ಮಂಗಳೂರಲ್ಲೂ ಉಡುಪಿ, ಕುಂದಾಪುರ, ಕಾರ್ಕಳ ಡಿವಿಜನಿನಲ್ಲೂ 144ನೆ ಸೆಕ್ಷನ್ ಆಯಾಯ ಅಧಿಕಾರಿಗಳಿಂದ ಜ್ಯಾರಿ ಮಾಡಲ್ಪಟ್ಟು ಮುಷ್ಕರಕ್ಕೆ ಸಂಬಂಧಪಟ್ಟ ಸಭೆ, ಮೆರವಣಿಗೆ ಇತ್ಯಾದಿ ಚಟುವಟಿಕೆಗಳನ್ನು ನಿಷೇಧಿಸಲಾಯಿತು. ಉಡುಪಿಯಲ್ಲಿ ಒಟ್ಟು 42 ಜನರ ಬಂಧನವಾಗಿದೆ. ಶ್ರೀಗಳಾದ ವಿ. ವಿ. ಶೆಣೈ, ಎನ್. ವಿಠಲದಾಸ್ ಮತ್ತು ಆರ್. ಮಾರ್ಟಿಸ್‌ರವರು ಸಹ ದಸ್ತಗಿರಿ ಮಾಡಲ್ಪಟ್ಟು ರಿಮಾಂಡಿನಲ್ಲಿರುವರು. ಬಸ್ಸು ಸರ್ವಿಸು ನಿಂತುದುದರಿಂದ ಜನತೆಗೆ ತುಂಬಾ ಕಷ್ಟವಾಗಿದೆ. ತಾ. 28ರಿಂದ ಉಡುಪಿಯಲ್ಲಿ ಸಿಟಿ ಸರ್ವಿಸ್ ಪ್ರಾರಂಭವಾಗಿದೆ. ಬಸ್ಸುಗಳೂ ಓಡಾಡಲಾರಂಭಿಸಿವೆ. ಈ ಓಡಾಟಕ್ಕೆ ಸರಕಾರೀ ಮೆಹನತ್ತೇ ಕಾರಣವೆಂದು ತಿಳಿದುಬರುತ್ತದೆ. ಪೋಲೀಸು ಬಂದೋಬಸ್ತು ಚೆನ್ನಾಗಿದೆ.

**ಜಿಲ್ಲೆಯ ಆಹಾರ ಪರಿಸ್ಥಿತಿಯ** ಕುರಿತು ಕಳೆದ ತಾ. 23ರಲ್ಲಿ ಜಿಲ್ಲಾ ಕಲೆಕ್ಟರರು ಮಂಗಳೂರು ಪತ್ರಿಕೋದ್ಯೋಗಿಗಳೊಡನೆ ವಿಚಾರ ವಿನಿಮಯ ಮಾಡುತ್ತಾ ಸ್ವಯಂಪ್ರೇರಣೆಯಿಂದ ನಾಕ್ಕೊಂದೂಟ ಬಿಡುವ ಚಳವಳಿಯಲ್ಲಿ ಮಹಾಜನರು ಸಹಭಾಗಿಗಳಾಗುವ ಆವಶ್ಯಕತೆಯನ್ನು ಸೂಚಿಸಿದರು. ಆರೋಗ್ಯ ದೃಷ್ಟಿಯಿಂದಲೂ ಒಂದೂಟ ಬಿಡುವುದು ಶ್ರೇಯಸ್ಕರವೆಂದರು.

**ನಮ್ಮ ಜಿಲ್ಲೆಯಿಂದ 5 ಸಾವಿರ** ಟನ್‌ಗಳಷ್ಟು ಅಕ್ಕಿಯನ್ನು ಈ ಮೊದಲು ಬೇರೆ ಜಿಲ್ಲೆಗೆ ರೆವಿನ್ಯೂ ಬೋರ್ಡಿನ ಸೂಚನೆ ಮೇರೆಗೆ ಕಳುಹಿಸಿ ಕೊಡಲಾಗಿತ್ತು. ಸದ್ಯ ಜಿಲ್ಲೆಯ ಸಂಗ್ರಹವು ಬರಿದಾಗುತ್ತಿರುವುದರಿಂದ 5 ಸಾವಿರ ಟನ್ ಅಕ್ಕಿಯನ್ನು ಕೂಡಲೇ ಕಳುಹಿಸಿ ಕೊಡಬೇಕೆಂದು ರೆವಿನ್ಯೂ ಬೋರ್ಡಿಗೆ ತಿಳಿಸಿದೆಯಾಗಿಯೂ ಜಿಲ್ಲಾ ಕಲೆಕ್ಟರರು ವಿವರಿಸಿದರು.

**ಆಂಧ್ರ ಬಿರುಗಾಳಿ ಸಂತ್ರಸ್ತ** ನಿಧಿಗೆ ನಮ್ಮ ಜಿಲ್ಲೆಯಲ್ಲಿ ರೂ. 13,000 ಸಂಗ್ರಹವಾಗಿದೆ.

**ಗ್ರಾಮ ಪುನರುಜ್ಜೀವನ**— ಗ್ರಾಮಾಂತರಗಳಲ್ಲಿ ರಸ್ತೆಗಳ ಸುಧಾರಣೆ, ಉತ್ತಮ ನೀರಿನ ಸರಬರಾಯಿ ಮೊದಲಾದ ಅನುಕೂಲತೆಗಳನ್ನೊದಗಿಸುವುದಕ್ಕಾಗಿ ಜಿಲ್ಲೆಗೊಬ್ಬ ಸುಪರ್‌ವೈಜರರನ್ನು ನೇಮಿಸಲಾಗಿದೆ. ಶ್ರೀ ಎಸ್. ಜಗದ್ರಕ್ಷಕನ್ ಎಂಬವರು ನಮ್ಮ ಜಿಲ್ಲೆಯ ಈ ವಿಭಾಗದ ಸುಪರ್‌ವೈಜರರು. ಇವರು ಪಂಚವಾರ್ಷಿಕ ಯೋಜನೆಯೊಂದನ್ನು ಸಿದ್ಧಪಡಿಸಿದ್ದಾರೆ. ಉತ್ತಮ ನೀರಿನ ಸರಬರಾಯಿಗಾಗಿ ಹಲವು ಬಾವಿಗಳನ್ನು ತೋಡಿಸುವ ಯೋಜನೆ ಇದರಲ್ಲಿದೆ. ಇವುಗಳಲ್ಲಿ ರೂಪಾಯಿ 84,000/- ವೆಚ್ಚದಿಂದ 50 ಬಾವಿಗಳನ್ನು ತೋಡಿಸಲು ಇಷ್ಟರಲ್ಲೆ ಅನುಮತಿ ದೊರೆತಿದೆ.

**ಸಕ್ಕರೆ**— ಮಾರ್ಚಿ 1ರಿಂದ ತಿಂಗಳಿಗೆ 2,200 ಚೀಲ ಸಕ್ಕರೆಯನ್ನು ನಮ್ಮ ಜಿಲ್ಲೆಯಲ್ಲಿ ಹಂಚುವ ವ್ಯವಸ್ಥೆ ಮಾಡಲಾಗುವದೆಂದೂ ಜಿಲ್ಲಾ ಕಲೆಕ್ಟರರು ಹೇಳಿದರು. ಕ್ರಮಬದ್ಧವಾದ ಹಸುಗೆ ಪದ್ಧತಿ ಜಾರಿಯಲ್ಲಿರುವ ಮಂಗಳೂರು, ಉಡುಪಿ ಮತ್ತು ಕಾಸರಗೋಡು ನಗರಗಳಲ್ಲಿ ಆಯಾ ಹಸುಗೆ ಅಧಿಕಾರಿಗಳ ಮೂಲಕವೂ ಇತರೆಡೆಗಳಲ್ಲಿ ತಹಶಿಲ್ದಾರರ ಮೂಲಕವೂ ವಿತರಣೆ ನಡೆಯುವುದು.


ಬಿಳಿ ಕಾಗದ! ನಾಜೂಕಿನ ಬೈಂಡು!

**1950ನೇ ಇಸವಿಯ**

**ಪಾಕೆಟ್ ಡೈರಿಗಳು**

| | | |
|---|---|---|
| ದೊಡ್ಡದು | [ಕೆಲಿಕೊ ಬೈಂಡ್] | 1-12-0 |
| ,, | [ಸಾದಾ] | 1-8-0 |
| ಸಣ್ಣದು | [ಕೆಲಿಕೊ] | 1-4-0 |
| ,, | [ಸಾದಾ] | 0-12-0 |

(ಟಪ್ಪಾಲು ಖರ್ಚು ಪ್ರತ್ಯೇಕ.)

ಸಿಗುವ ಸ್ಥಳಗಳು:—

**ನವಭಾರತ ಬುಕ್ ಡಿಪ್ಪೊ, ಉಡುಪಿ.**

**ನವಯುಗ ಪ್ರೆಸ್, ಉಡುಪಿ.**

# ಕುಲವಿಲ್ಲದ ಹೆಣ್ಣು

(ಸರಸ ಸಾಮಾಜಿಕ ಕಾದಂಬರಿ)

ಬರೆದವರು:— ಪಿ **ವೆಂಕೋಬಾಚಾರ್ಯ**, ಬಿ ಎ ಬಿ.ಟಿ.

ದೇವದಾಸಿ ಕುಲದ ಉದ್ಧಾರವೇ ಮುಖ್ಯ ಕಥಾವಸ್ತು-

**ಕುಸುಮಳು ವೇಶ್ಯಾಪುತ್ರಿಯಾದರೂ ಅವಳು ವೇಶ್ಯೆಯಲ್ಲ!**

**ಅವಳ ಕತೆ ಹೇಗೆ ಸಾಗಿದೆ ಎಂದು ಓದಿಯೇ ತಿಳಿಯಿರಿ.**

ದಪ್ಪ ಪುಸ್ತಕ ಬೆಲೆ ರೂ **1-0-0**

ಪ್ರತಿಗಳು, ಅಂತರಂಗ ಕಾರ್ಯಾಲಯ, ಉಡುಪಿ, ನವಯುಗ ಪ್ರೆಸ್, ಉಡುಪಿ ಅಥವಾ ನವಭಾರತ ಬುಕ್ ಡಿಪ್ಪೊ, ಉಡುಪಿ ಇಲ್ಲಿ ದೊರೆಯುತ್ತವೆ.

ಡಾಕ್ಟರ್ ಕೊರಡ್ಕಲ್ ವೆಂಕಟರಾಯರ

## 'ಮನೆ ಮದ್ದು'

(HOME REMEDIES)

೨೦೦ ಕಾಹಿಲೆಗಳಿಗೆ ಮನೆಯಲ್ಲೇ ಮಾಡಿಕೊಳ್ಳಬಹುದಾದ ೧೦೦೦ ಮದ್ದುಗಳ ವಿವರವಿರುವ ಪುಸ್ತಕ. ಬೆಲೆ: ರೂ. ೨



ಶ್ರೀ ಕೊರಡ್ಕಲ್ ಶ್ರೀನಿವಾಸರಾಯರ

## 'ಸುಲಭದಲ್ಲಿ ಇಂಗ್ಲಿಷ್'

(ENGLISH MADE EASY)

ಮನೆಯಲ್ಲಿ ನೀವಾಗಿ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.

ಬೆಲೆ: ೧-೮-೦

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಬರೆಯಿರಿ—

**ನವಭಾರತ ಪುಸ್ತಕ ಭಂಡಾರ, ಉಡುಪಿ**

**ನವಯುಗ ಪ್ರೆಸ್, ಉಡುಪಿ.**

## ...ಮಗೆ ಬಂದ ಪತ್ರ

...ಎರಡನೇ ಬೆಳೆಯ ಅಕ್ಕಿ ವ, ಬತ್ತವನ್ನು ...ರಿಗೆ ಒಪ್ಪಿಸುವ ಅವಧಿಯು ಪುತ್ತೂರು ...ಲೂಕಿನ ಕೆಳಗೆ ಕಾಣಿಸಿದ 8 ಗ್ರಾಮಗಳ ...ರತಾಗಿ ಇಡೀ ಜಿಲ್ಲೆಯಲ್ಲಿ ಬತ್ತವಾದರೆ ... 28-2-50ರ ಒಳಗೂ, ಅಕ್ಕಿಯಾದರೆ ...-3-50ರ ವಳಗೂ ಒಂದೇ ಕಂತಿನಲ್ಲಿ ಒ...ಸತಕ್ಕದ್ದು ಎಂಬುದನ್ನು ಕೇಳಿ ಪ್ರತಿಯೊ... ಹಳ್ಳಿಯ ಕೃಷಿಕನೂ ಆಶ್ಚರ್ಯ ಪಡದಿ...ರಾರನು. ಪುತ್ತೂರು ತಾಲೂಕಿನ ಹರಹರಾ...ಶಿತಡ್ಕ, ಕೊಲ್ಲಾಮೊಗರೆ, ಕಲ್ಮಕರ, ಸು...ಹ್ಮಣ್ಯ, ಇನಾಕಿಲು, ಬಾಲ್ಗೋಡು, ಎಡ...ಲು, ಬಿಳಿಯೆಲೆ. ಈ ಎಂಟು ಗ್ರಾಮಗಳ ...ರಿಂತಾಗಿ ಮೂಡುಪ್ರಾಂತ್ಯದ ಇನ್ನೂ ತುಂ... ಗ್ರಾಮಗಳಲ್ಲಿ ಎರಡನೇ ಬೆಳೆಯ ಕಟಾ... ಸಂಪೂರ್ಣವಾಗಲು ಇನ್ನೂ ಒಂದು ತಿಂ...ಳು ಬೇಕಾಗುತ್ತದೆ. ಹೀಗಿರುವಲ್ಲಿ ಈ ವ... ವಂದೇ ಕಂತಿನಲ್ಲಿ ಒಪ್ಪಿಸತಕ್ಕದ್ದೆಂಬ ...ಕುಂ ಬಗ್ಗಿದವನಿಗೊಂದು ಗುದ್ದು ಜಾಸ್ತಿ ...ಬ ಹಳ್ಳಿಯ ಗಾದೆಗೆ ಸರಿಬಂತು. ಇಲ್ಲವಾ... ಅಕ್ಕಿ ವ, ಬತ್ತ ಬಿಟ್ಟು ಬೇರೆಲ್ಲಾ ಜೀವ...ವಶ್ಯಕ ಸಾಮಗ್ರಿಗಳ ಬೆಲೆಯೂ ಮಿ...ರಿರುವ ಈ ಸಂದರ್ಭದಲ್ಲಿ ಮುಡಿ ಒಂದ...ಕಾಲ್ವಾಣೆ ಎಂಟಾಣೆಯೂ ಕಂತಿನಿಂದಾಗಿ ...ನಿಗೆ ದಂಡನೆಯೇ ಎಂದರೆ "ಅಧಿಕಾ...ರ ಬೆಳೆಯಿಸಿರಿ" ಎಂಬ ನಾಡ ನಾಯಕರ ...ಗೆ "ಬೇರೇನನ್ನಾದರೂ ಮಾಡು; ಕೃಷಿ ..." ಎಂದು ಉತ್ತರಿಸಬೇಕಲ್ಲಿಸುತ್ತದೆ.

...ಧಿಕಾರಿಗಳು ಅಪ್ಪಣೆ ಹೊರಿಸುವಾಗ ...ಗಳ ಮೂಲೆ ತನಕ ತಮ್ಮ ದೃಷ್ಟಿಯ...ನ್ನು ಪಸರಿಸುತಿದ್ದರೆ ನಾಡಿನ ಬೆನ್ನೆಲು...ವು ಮಹಾಮಂತ್ರಿಗಳಿಂದ ಹೊಗಳಿಸಿ...ಂಡ ಬಡ ಕೃಷಿಕರಿಗೆ ಈ ಮಾತು ನಿಜ ...ಒದಗುತ್ತಿರಲಿಲ್ಲ.

...ಮೊದಲು ಕಂತು ಪ್ರಕಾರ ಅಕ್ಕಿ ಬತ್ತ ...ಸುವಾಗಲೂ ತುಂಬಾ ಕಷ್ಟನಷ್ಟ ಪಡು... ಬಡ ರೈತರಿಗೆ ಈ ಬಾರಿಯ ಒಂದೇ ...ನಲ್ಲಿ ಹಳ್ಳಿಗಳ ಡಿಪೋಗಳಿಗೆ ಅ ಮ್ಹಾ...ಳಿಗೆ ಸಾಗಿಸಲು ನಿಜಕ್ಕೂ ಅಸಾಧ್ಯ. ...ರಿಂದ ಸಮ್ಮಂಧಪಟ್ಟ ಅಧಿಕಾರಿಗಳು ... ಬತ್ತ ಒಪ್ಪಿಸುವ ಅವಧಿಯನ್ನು ಈ ...ಲಿನಂತೆಯೇ ಕಂತುಗಳ ಪ್ರಕಾರ ಒ...ವಂತೆ ಹುಕುಂ ಬದಲಾಯಿಸಿದರೆ ಒ...ಟ್ಟರಿದ್ದು ಬೇಸಾಯ ಮಾಡುವ ಬಡವ...ತುಂಬಾ ಉಪಕಾರವಾದೀತು.

—ಇತೀ, ಹಳ್ಳಿಗನೋರ್ವ

### ನೋಟೀಸು

...ಕ್ಷಿಣ ಕನ್ನಡಾ ಜಿಲ್ಲೆಯಲ್ಲಿ ಹಾಲು ಅಭಿ...ಗಾಗಿ ಒಳ್ಳೆ ಜಾತಿಯ ಕೆಲವು ಗಂಡು ...ಗಳು ಉಚಿತವಾಗಿ ಕೊಡಲ್ಪಡುವುವು. ...ಳನ್ನು ಸರ್ಕಾರಿ ನಿಬಂಧನೆಗಳನ್ನು ಅ...ಸಿ ಪೋಷಣೆಮಾಡಿ ಊರಿನ ಹೆಣ್ಣು ...ಗಳಿಗೆ ಉಪಯೋಗಿಸತಕ್ಕದ್ದು. ...ಸುಗಳನ್ನು ಪಡೆಯಲು ಇಚ್ಛೆಯುಳ್ಳವ... ಕೆಳಗಿನ ವಿಳಾಸಕ್ಕೆ ಬರೆಯಬಹುದು.

**S. A. Sastri,**
ಡಿಸ್ಟ್ರಿಕ್ಟ್ ವೆಟರ್ನರಿ ಆಫೀಸರ್,
ಮಂಗಳೂರು.


## ವಿವಿಧ ಪಾತ್ರೆಗಳು

ಯಾವತ್ತೂ ಪಿಥದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಅಗಿ ಚಿಲ್ಲರೆಯಾಗಿಯೂ ದೊರೆಯುತ್ತವೆ.

**ಅಲ್ವಂಜೆ ವ್ಯಾಸಾಚಾರ್ಯ,**
ರಥಬೀದಿ, ಉಡುಪಿ.


## ದಕ್ಷಿಣ ಕನ್ನಡ

**ಕೆಡಂದಲೆ—** ನಮ್ಮ ಗ್ರಾಮದಲ್ಲಿ ಕೆಲವು ಸಮಯದಿಂದ ಏಳೆಂಟು ಜಾನುವಾರುಗಳನ್ನು ಕೊಂದು ರೈತರಿಗೆ ಉಪದ್ರಕೊಡುತಿದ್ದ ಒಂದು ಹೆಬ್ಬುಲಿಯನ್ನು ಕಡಂದಲೆ ಬೋರ್ಡು ಹಾ। ಎಲಿಮೆಂಟರಿ ಶಾಲಾ ಉಪಾಧ್ಯಾಯ ಶ್ರೀ ಬಿ. ಜೋಗಿ ಶೆಟ್ರು ಕೊಂದಿರುವುದು ಸ್ತುತ್ಯ.

**ಕಟಪಾಡಿ—** ಎಸ್. ವಿ ಎಸ್. ಹೈಸ್ಕೂಲಿನ ವರ್ಧಂತ್ಯುತ್ಸವವು ತಾ. 25-2-50 ರಂದು ಉಡುಪಿಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾವ್, ಎಮ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಮ್ಯಾ. ಶಿವಣ್ಣ ಹೆಗ್ಡೆರು ಶಾಲಾ ಸ್ವಸ್ತಿವಾಚನವನ್ನು ಮಾಡಿದರು. ಶಾಲಾ ಮುಖ್ಯ ಅಧ್ಯಾಪಕ ಹಾಗೂ ಕರೆಸ್ಪೊಂಡೆಂಟರಾಗಿರುವ ಶ್ರೀ ಪಿ. ರಾಮದಾಸನಾಯಕ್, ಬಿ. ಎ., ಎಲ್. ಟಿ. ಅವರಿಂದ ಶಾಲಾ ವರದಿವಾಚನವಾದ ಬಳಿಕ ಆಟ ಪಾಠಗಳಲ್ಲಿ ಗೆದ್ದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆಯಾಯಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶೈಶವಾವಸ್ಥೆಯಲ್ಲಿರುವ ಈ ಶಾಲೆಯ ಚಟುವಟಿಕೆಗಳನ್ನೂ ಸರಕಾರಿ ಪರೀಕ್ಷೆಯ ಉತ್ತಮ ಫಲಿತಾಂಶಗಳನ್ನೂ ಶ್ಲಾಘಿಸಿ, ಊರವರು ಈ ಸಂಸ್ಥೆಗೆ ಸ್ವಂತ ಕಟ್ಟಡ ನಿರ್ಮಿಸಿಕೊಳ್ಳಲು ಸಹಕರಿಸಬೇಕೆಂದೂ, ಬಿನ್ನವಿಸಿ ವಿದ್ಯಾರ್ಥಿಗಳಿಗೂ ಹೆತ್ತವರಿಗೂ ಹಲವು ಹಿತಸೂಚನೆಗಳನ್ನಿತ್ತರು. ಶ್ರೀ ಕೆ ಆರ್. ಶೆಣೈಯವರಿಂದ ಧನ್ಯವಾದಾರ್ಪಣೆಯಾದ ಬಳಿಕ ಶಾಲಾ ಬಾಲಕ ಬಾಲಿಕೆಯರಿಂದ ನಾಟಕ, ನರ್ತನಗಳೇ ಮೊದಲಾದ ವಿವಿಧ ವಿನೋದಾವಳಿಗಳು ಜರಗಿದುವು. ವಿರಾಮದ ಬಳಿಕ ಶಾಲಾ ಅಧ್ಯಾಪಕನ್ನ ಮಂಡಲಿಯವರಿಂದ "ಬಹದ್ದೂರ್ ಗಂಡ" ಎಂಬ ಸಾಮಾಜಿಕ ನಾಟಕ ಪ್ರದರ್ಶನವಾಗಿ ಸಮಾರಂಭವು ಕೊನೆಗೊಂಡಿತು. ಅದೇ ದಿನ ಮುಂಜಾನೆ ಶಾಲಾ ಮಕ್ಕಳಿಗೆ ತಿಂಡಿ-ತೀರ್ಥಗಳನ್ನೀಯುವ ಸಮಾರಂಭವೂ ವೇಷಹಲ್ಲಟ ಸ್ಪರ್ಧೆಯೂ ಜರಗಿದ್ದುವು. ಸಮಾರಂಭಕ್ಕೆ ಜನರು ಕಿಕ್ಕಿರಿದು ನೆರೆದಿದ್ದರು.

ಮರುದಿನ ಇಲ್ಲಿಯ ಎಸ್. ವಿ. ಎಸ್. ಹಾ। ಪ್ರಾ। ಶಾಲೆಯ ವರ್ಧಂತ್ಯುತ್ಸವವು ಶ್ರೀ ಟಿ. ಅನಂತ ಪೈ, B. Com. ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಶ್ರೀ ಪಿ. ವಿಠಲ ಶೆಣೈಯವರು ಶಾಲಾಭ್ಯುದಯವನ್ನು ಕೋರಿ ಸ್ವಸ್ತಿವಾಚನವನ್ನು ಮಾಡಿದರು. ಶಾಲಾ ಮುಖ್ಯ ಅಧ್ಯಾಪಕ ಶ್ರೀ ಯು. ಆರ್. ಮಯ್ಯರು ಶಾಲಾ ವರದಿಯನ್ನು ಓದಿದ ಬಳಿಕ ವಿದ್ಯಾರ್ಥಿಗಳಿಗೆ ಪಾರಿತೋಷಿಕ ವಿತರಣೆಯಾಯಿತು. ಅಧ್ಯಕ್ಷರು ಈ ಶಾಲೆಯ ಚಟುವಟಿಕೆಗಳನ್ನೂ ವಿದ್ಯಾಪ್ರಪಂಚದಲ್ಲಿ ಇದು ಗಳಿಸಿರುವ ಸ್ಥಾನವನ್ನೂ ಕೊಂಡಾಡಿದುದಲ್ಲದೆ ಇಂತಹ ಇನ್ನೂ ಹೆಚ್ಚಿನ ಶಾಲೆಗಳ ಅವಶ್ಯಕತೆಯನ್ನು ವಿವರಿಸಿ ಬೋಧಪ್ರದವಾದ ಭಾಷಣವನ್ನಿತ್ತರು. ಶಾಲಾ ಮುಖ್ಯ ಅಧ್ಯಾಪಕರಿಂದ ವಂದನಾರ್ಪಣೆಯಾದ ಬಳಿಕ ಶಾಲಾ ಬಾಲಕಿಯರಿಂದ ಪಾದುಕಾಪಟ್ಟಾಭಿಷೇಕವೆಂಬ ಸಂಗೀತ ನಾಟಕವೂ, ಬಾಲಕರಿಂದ ಯಕ್ಷಗಾನ ಪ್ರದರ್ಶನವೂ ಜರಗಿ ಸಭಾಂತ್ಯವಾಯಿತು.

**ಮರ್ಣೆ—** ಎಯ್ಡೆಡ್ ಎಲಿಮೆಂಟರಿ ಶಾಲೆಯಲ್ಲಿ ಇದೇ ತಾ. 21ರಲ್ಲು ಹೆತ್ತವರ ಕೂಟದ ಮಹಾಸಭೆಯು ಉಡ್ಪಿ ನೋರ್ತ್ ರೇಂಜ್ ಶಾಲೆಗಳ ಡಿಪ್ಯುಟಿ ಇನ್ಸ್ಪೆಕ್ಟರ್ ಶ್ರೀ ಎನ್. ಸುಂದರರಾವ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮಕ್ಕಳಿಂದ 'ಜರಾಸಂಧ ವಧೆ' ಯೆಂಬ ನಾಟಕವೂ, ಇತರ ಹಲವು ವಿನೋದಾವಳಿಗಳೂ ಪ್ರದರ್ಶಿಸಲ್ಪಟ್ಟವು. ಶ್ರೀಗಳಾದ ಕೆ. ದಾಮೋದರ ನಾಯಕ್, ಯಮ್. ಗೋವಿಂದ ಶೆಟ್ಟಿ, ಕೆ. ಕೇಶವ ನಾಯಕ್, ಯಮ್. ಶಿವರಾಯ ಶೆಟ್ಟಿ ಮೊದಲಾದವರು ತಮ್ಮ ಸದಭಿಪ್ರಾಯಗಳನ್ನಿತ್ತ ನಂತರ ಅಧ್ಯಕ್ಷರು ಶಾಲಾ ಅಭಿವೃದ್ಧಿಯನ್ನು ಕೋರಿ ಭಾಷಣವನ್ನಿತ್ತರು. ಶಾಲಾ ಮುಖ್ಯೋಪಾಧ್ಯಾಯರಿಂದ ಧನ್ಯವಾದಗಳಾಗಿ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

**ಉದ್ಯಾವರ-** ಸೆಂಟ್ ಎಫ್. ಎಕ್ಸ್ ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತಿಯು ತಾ. 19-2-1950 ರಂದು ಉಡ್ಪಿ ನೋರ್ತ್ ರೇಂಜಿನ ಶಾಲೆಗಳ ಡಿ। ಇನ್ಸ್ಪೆಕ್ಟರ್ ಶ್ರೀ ಯಚ್. ಸಂಜೀವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪೂರ್ವಾಹ್ನ ಉದ್ಯಾವರ ಶ್ಯಾನುಭಾಗ್ ಶ್ರೀ. ಸಂಜೀವರಾಯರಿಂದ ಧ್ವಜಾರೋಹಣ, ವಿದ್ಯಾರ್ಥಿಗಳ ಪಂದ್ಯಾಟ, ತಿಂಡಿ ಪಂಚೋಣ ಮೊದಲಾದ ಕಾರ್ಯಕ್ರಮಗಳಿದ್ದುವು. ಮುಖ್ಯ ಅಧ್ಯಾಪಕ ಶ್ರೀ ಸಿಲ್ವೆಸ್ಟರ್ ಫೆರ್ನಾಂಡಿಸರು ವರದಿವಾಚನ ಮಾಡುತ್ತಾ ಶಾಲೆಯಲ್ಲಿರುವ ಜಾತೀಯತಾ ನಿರ್ಬಂಧವನ್ನು ತೆಗೆದುಹಾಕುವ ಕುರಿತಾದ ಊರವರ ಮನವಿ ಹಾಗೂ ಸರಕಾರದ ಧೋರಣೆಗೆ ತಮ್ಮ ಸಮ್ಮತಿಸೂಚಿಸಿದರು. ಶ್ರೀ ವಾಸುದೇವ ಶೆಣೈ, ಶ್ರೀ ಶೀನಪ್ಪಸೆಟ್ಟರ ಭಾಷಣವಾಗಿ, ಪರೀಲ್ ಶ್ರೀ ಭಾಸ್ಕರಸೆಟ್ಟರು ಭಾಷಣವೀಯುತ್ತಾ ಶಾಲಾ ಮುಖ್ಯ ಅಧ್ಯಾಪಕ ಶ್ರೀ ಸಿಲ್ವೆಸ್ಟರ್ ಫೆರ್ನಾಂಡಿಸರಿಗೆ ಚಿನ್ನದ ಪದಕವೊಂದನ್ನು ಅಧ್ಯಕ್ಷರಿಂದ ಕೊಡಿಸಿದರು. ಶಾಲಾ ಮಕ್ಕಳಿಗೆ ಇನಾಮು ಹಂಚೋಣವಾದ ಬಳಿಕ ಅಧ್ಯಕ್ಷರು ಮಾತನಾಡುತ್ತಾ ಜಾತೀಯತಾ ನಿರ್ಬಂಧವನ್ನು ಬರುವ ಮೇ ತಿಂಗಳೊಳಗೆ ತೆಗೆದುಹಾಕಬಹುದೆಂಬ ಭರವಸೆಯನ್ನಿತ್ತಿದ್ದರು. ಲೇಜಿಮ್, ಕುಮ್ಮಿ ಮೊದಲಾದ ವಿವಿಧ ವಿನೋದಾವಳಿಗಳಲ್ಲದೆ ಶ್ರೀ ದಾಂತಿ ವಿರಚಿತ '1950' ಎಂಬ ಸಾಮಾಜಿಕ ನಾಟಕವು ಶಾಲಾ ಬಾಲಕರಿಂದ ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿತು. ಶ್ರೀ 'ದಾಂತಿ'ಯವರಿಗೆ ವರ್ಧಂತ್ಯುತ್ಸವ ಸಮಿತಿಯವರ ಬೆಳ್ಳಿಯ ಕಪ್ಪು ಅಧ್ಯಕ್ಷರ ಹಸ್ತದಿಂದ ಕೊಡಲ್ಪಟ್ಟಿತು.

**ಪಾದೂರು ಕಳತೂರು-** ಶಿರ್ವ ಹಿಂದೂ ಹೈಸ್ಕೂಲಿನ ಕರೆಸ್ಪೊಂಡೆಂಟ್ ಶ್ರೀ ಯಸ್. ಮುದ್ದು ಸೆಟ್ಟರು ಗ್ರಾಮ ಸೌಕರ್ಯಾಭಿವೃದ್ಧಿಗಾಗಿ ಸ್ವಯಂ ಸಾಹಸದಿಂದ ಪ್ರಾಮುಖ್ಯ ಒಳರಸ್ತೆಗಳಾದ ಅಟ್ಟಿಂಜೆ ರಸ್ತೆಯನ್ನು ದುರಸ್ತಿಪಡಿಸಿ, ಪಾದೂರು ಕಳತೂರು ರಸ್ತೇ ನಿರ್ಮಾಣಕ್ಕೆ ತೊಡಗಿರುವುದು ಗ್ರಾಮ ಪ್ರಮುಖರೆಲ್ಲರಗೊಂದು ಮೇಲ್ಪಂಕ್ತಿಯಂತಿದೆ.

**ಶಿರ್ವ-ಮಟ್ಟಾರು** ಅರಂತಡೆ ಶ್ರೀ ಲಿಂಗಮ್ಮ ಹೆಗ್ಗಡ್ತಿಯರು (ಕೋಟಿ ಬೀಡು ಚಂದಯ್ಯ ಶೆಟ್ಟರ ವಿಧವೆ) ಇದೇ ತಾರೀಕು 20-2-50ನೇ ಸೋಮವಾರ ರಾತ್ರಿ ತನ್ನ 80ರ ಪಕ್ವ ವಯಸ್ಸಿನಲ್ಲಿ ದಿವಂಗತರಾದರು. ಹೆಗ್ಗಡ್ತಿಯರು ಜನ್ಮತಃ ಸಾತ್ವಿಕ ಪ್ರಕೃತಿಯವರಿದ್ದರು, ಅಸಾಧಾರಣ ಸಹನೆ ಹಾಗೂ ಸಾಧು ಸ್ವಭಾವದಿಂದ ಅವಿರೋಧಿಯಾಗಿದ್ದರು. ಅವರ ಪೂರ್ಣ ಆಯುಸ್ಸವು ಹಿಂದೂ ಸ್ತ್ರೀ ಸಹಜ ವಿನಯಶೀಲತೆಯಿಂದ ಸಾರ್ಥಕವಾಗಿದ್ದಿತು. ಗೃಹಿಣೀಜೀವನ, ಕುಟುಂಬ ಹಿರಿತನ ಮೊದಲಾದ ಅವಸ್ಥಾಂತರಗಳಲ್ಲವನ್ನೂ ಶಾಂತಿ, ಸೌಮ್ಯತೆ, ಸೌಹಾರ್ದತೆಗಳಿಂದಲೇ ದಾಟಿ ತದನುಗುಣವಾದ ನೆಮ್ಮದಿಯಿಂದ ಸುಖಾಂತ್ಯಗೊಂಡರು. ಅವರ ಆತ್ಮಕ್ಕೆ ಶಾಂತಿಯಿರಲಿ.

### ಪ್ರಕಟಣೆ

ಉಡ್ಪಿ ತಾಲೂಕು ಬೈಕಾಡಿ ಗ್ರಾಮದಲ್ಲಿರುವ ರಾಯ ಯಾನೆ ಗಸ್ಪಾರ್ ಡಿ'ಸೋಜರ ಮಗ ಸಬಸ್ಟಿಯನ್ ಡಿ'ಸೋಜನು ಈ ಮೂಲಕ ಪ್ರಕಟಪಡಿಸುವುದೇನೆಂದರೆ:—

ಕಳೆದ ತಾ. 18-10-1949ರ ವರೆಗೆ ನಾನು "Sabastin D souza" ಎಂತ ಇಂಗ್ಲಿಷಿನಲ್ಲಿ ದಸ್ಕತು ಮಾಡುತ್ತಾ ಬರುತ್ತಿದ್ದೆನು. ತಾ. 19-10-1949ರ ಬಳಿಕ್ಕಾಗಿ ನಾನು "ಸಬಸ್ಟಿಯನ್ ಡಿ ಸೋಜನ ರುಜು" ಎಂತ ಕನ್ನಡದಲ್ಲಿ ದಸ್ಕತು ಮಾಡುತ್ತಾ ಬಂದಿದ್ದೇನಾಗಿಯೂ, ಇನ್ನು ಮುಂದೆಯೂ ಕಾಯಂ ಆಗಿ ಆ ರೀತಿ ಕನ್ನಡದಲ್ಲಿಯೇ ಮಾತ್ರ ದಸ್ಕತು ಮಾಡುತ್ತೇನೆಂಬಾಗಿಯೂ ಈ ಮೂಲಕ ಪ್ರಕಟಪಡಿಸುತ್ತೇನೆ.

ಸಬಸ್ಟಿಯನ್ ಡಿ ಸೋಜನ ರುಜು.

ಬೈಕಾಡಿ
ತಾ. 27-2-50


## ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

**೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ**

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟಿ ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧಶೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹು. ಬ್ಬಳ್ಳಿ ಫಾರ್ಮಸಿ ಬಾಗಲಕೋಟಿ:-ಬಾಗಲಕೋಟಿ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
**ಆಯುರ್ವೇದ ಔಷಧಾಲಯ. ಗದಗ.**

ಶರೀರದ ಒಳಗಿನ ಮತ್ತು ಹೊರಗಿನ ಉಷ್ಣತೆಯನ್ನು ತೆಗೆದು ಹಾಕಿ ಪ್ರಕೃತಿಯನ್ನು ತಂಪಾಗಿಡುವುದು, ಅಪಚನ ಅಜೀರ್ಣವನ್ನು ಸರಿಪಡಿಸುವುದು, ಶಾರೀರಿಕ ಮತ್ತು ಮಾನಸಿಕ ಶಕ್ತಿಯನ್ನು ಬೆಳೆಸುವುದು ಧಾತು ಸ್ಥಾನದಲ್ಲಿಯ ಉಷ್ಣತೆಯನ್ನು ಹೋಗಲಾಡಿಸಿ ಪುಷ್ಟಿಕರ ಮಾಡುವುದು

ನಿಮ್ಮ ಹತ್ತಿರದ ಕೆಮಿಸ್ಟರ ಕಡೆಯಿಂದ ಇಂದೇ ಒಂದು ಬಾಟಲಿಯನ್ನು ತಂದು ಸೇವಿಸಲು ಪ್ರಾರಂಭಿಸಿರಿ

ಪರ್ಲ ಎಂಡ್ ಕಂಪನಿ
ಮುಂಬಯಿ ೨

# ವ್ಯಕ್ತಿ ಗೌರವ

ಲೇಖಕರು:—ಶ್ರೀ. 'ಗಣೇಶ' ಮಡಿಕೇರಿ

ಮನುಷ್ಯನಿಗೆ ಜೀವನಕ್ಕೆ ಅತ್ಯಾವಶ್ಯಕವಾದ ಗಾಳಿ, ನೀರು, ಆಹಾರ, ಬಟ್ಟೆಯಷ್ಟೇ ಬಿಟ್ಟರೆ ಆತನು ಹೆಚ್ಚಾಗಿ ಆಶಿಸುವುದು ದುಡ್ಡು. ಈ ಹಣ ಸಂಪಾದನೆಗಾಗಿ-ಸರ್ವಸಂಗ ಪರಿತ್ಯಾಗ ಮಾಡಿದ ನಿಜ ಯೋಗಿಗಳನ್ನು ಬಿಟ್ಟು-ಎಲ್ಲರೂ ಪ್ರಯತ್ನಿಸುತ್ತಾರೆ. ಇದನ್ನು ಸಾಧಿಸುವ ಮಾರ್ಗ ಒಂದೇ ಅಲ್ಲ. ಶಾರೀರಿಕ ಶ್ರಮದಿಂದ ಶ್ರಮಿಸಿ ಸಂಪಾದಿಸುವವರಿದ್ದಾರೆ. ಮೆದುಳಿನ ಉಪಯೋಗದಿಂದ ಸಂಪಾದಿಸುವವರಿದ್ದಾರೆ. ಇನ್ನೊಬ್ಬರಿಗೆ ಮೋಸ ಮಾಡುವವರಿದ್ದಾರೆ. ಕದಿಯುವವರಿದ್ದಾರೆ, ಭಿಕ್ಷೆ ಎತ್ತಿ ದುಡ್ಡು ಸಂಪಾದಿಸುವವರೂ ಇದ್ದಾರೆ. ಇದರ ಸಂಪಾದನೆಗೆ ಪ್ರತಿಯೊಬ್ಬನೂ ಒಂದೊಂದು ಮಾರ್ಗವನ್ನು ಹುಡುಕಿ ತೆಗೆಯುತ್ತಾನೆ. ನನ್ನನ್ನು ಈ ಲೇಖನ ಬರೆಯಲು ಪ್ರೇರೇಪಿಸಿದ ಅಂಶವಿನ ಹಿನ್ನೆಲೆಯಲ್ಲಿ ಸಂಪಾದನೆಯ ಆಶೆ ಇದೆ. ಹಣ ಸಂಪಾದನೆಯ ನಂತರ ಮನುಷ್ಯನು ಆಶಿಸುವುದು ಗೌರವ. ಈ ಗೌರವವನ್ನು ಗಳಿಸಿಕೊಳ್ಳುವ ಬಗೆ ಹೇಗೆ ಎಂಬುದನ್ನು ವಿಚಾರಿಸುವದು ಇದರ ಉದ್ದೇಶ.

ಮನುಷ್ಯನು ಅತೃಪ್ತ ಜೀವಿ. ಯಾವುದರಿಂದಲೂ ಆತನಿಗೆ ತೃಪ್ತಿ ಇಲ್ಲ. ಬಡವನಾಗಿ ಹುಟ್ಟಿದ ಆತನು ಪ್ರಥಮತಃ ಹೊಟ್ಟೆಗೆ ಅನ್ನವನ್ನೂ ಮೈಗೆ ಬಟ್ಟೆಯನ್ನೂ ಆಶಿಸುತ್ತಾನೆ. ಇವು ದೊರೆತ ಮೇಲೆ ಕೈಯಲ್ಲಿ ನಾಲ್ಕು ಕಾಸಾಗಬೇಕೆಂದು ಬಯಸುತ್ತಾನೆ, ಕೈಯಲ್ಲಿ ನಾಲ್ಕು ಕಾಸಾದನಂತರ ಸಮಾಜದಲ್ಲಿ ಒಂದು ಗೌರವ ಸ್ಥಾನ ಪಡೆಯಬೇಕೆಂದು ಯತ್ನಿಸುತ್ತಾನೆ. ಅದಕ್ಕಾಗಿಯೇ ಜಿಲ್ಲಾ ಬೋರ್ಡಿಗೋ ಶಾಸನ ಸಭೆಗೋ ನಿಂತು ಮುಂದಾಳೆನಿಸಲು ಪ್ರಯತ್ನಿಸುತ್ತಾನೆ. ಈ ರೀತಿ ಕ್ರಮಶಃ ಮುಂದುವರಿದು ದೇಶದ ನಾಯಕನೆನಿಸಿದ ಮನುಷ್ಯನಿಗೆ ಗೌರವ ಬಂದಂತಾಯಿತೇ? ಮನುಷ್ಯನ ವ್ಯಕ್ತಿಗತ ಗೌರವಕ್ಕೂ, ಆತನ ಹಣ, ಅಧಿಕಾರ, ಪರಂಪರೆಗೂ ಸಂಬಂಧವಿದೆಯೋ?

ಮನುಷ್ಯನಿಗೆ ವ್ಯಕ್ತಿಗತ ಗಾಂಭೀರ್ಯ ಬೇಕು. ಆ ವ್ಯಕ್ತಿಗೌರವವಿರುವ ಮನುಷ್ಯನು ಜಗತ್ತನ್ನೇ ಆಲ್ಲಾಡಿಸಬಲ್ಲ. ಆತನ ಮುಂದೆ ಶತ್ರುಗಳೂ ಮಿತ್ರರಾಗುವರು. ಕಳ್ಳನೂ ಸತ್ಯ ನುಡಿಯುವನು. ಕೊಲೆಗಡುಕನೂ ಕೈಸಾಗದಾಗುವನು, ಹಾಗಾದರೆ ಈ ವ್ಯಕ್ತಿಗತ ಗಾಂಭೀರ್ಯದೆಂದರೇನು?

ಇದು ಇಂಥಾದ್ದೇ ಎಂದು ನಾಲ್ಕು ಅಕ್ಷರಗಳಲ್ಲಿ ಅದನ್ನು ವರ್ಣಿಸಿ ಬರೆಯಲಾಗುವುದಿಲ್ಲ. ಅದು ಭೌತಿಕವಾದುದೂ ಅಲ್ಲ; ಶಾರೀರಕವಾದುದೂ ಅಲ್ಲ. ಆತ್ಮದ ಅಂತರಾಳದಲ್ಲಿ ಹುಟ್ಟಿ ವಿಕಸಿತಗೊಂಡು ಶರೀರದ ಪ್ರತಿ ಕಾರ್ಯಗಳಲ್ಲೂ ಪ್ರತಿಬಿಂಬಿಸುವ ಚೇತನವದು. ಅದನ್ನು ಕಣ್ಣಿನಿಂದ ನೋಡಲಾಗದಿದ್ದರೂ ಕೃತಿಯಲ್ಲಿ ಗುರ್ತಿಸಬಹುದು. ಜಡವಾಗಿ ತೋರುವ ತಂತಿಯೊಳಗೆ ವಿದ್ಯುತ್ ಅಡಗಿದ್ದು ಬೆಳಕು ಕೊಡುವಂತೆ ಅಗೋಚರವಾಗಿ ಅಡಗಿದ್ದು ಕೃತಿಯಲ್ಲಿ ನಡೆಯಲ್ಲಿ ಹೊಸ ವಾತಾವರಣವನ್ನು ಕಲ್ಪಿಸಿ ಜಗವನ್ನೇ ಈ ವ್ಯಕ್ತಿ ಗೌರವ ಗೆಲ್ಲುವದು!

ವ್ಯಕ್ತಿತ್ವವನ್ನು ಅನೇಕರು ಭೌತಿಕವಾಗಿ ವರ್ಣಿಸುತ್ತಾರೆ. ಬಾಹ್ಯವಾದ ಈ ವಿಶೇಷಣಗಳೇ ವ್ಯಕ್ತಿತ್ವವೆಂದು ಭಾವಿಸುವವರಿದ್ದಾರೆ. ದೃಢವಾದ, ಎತ್ತರವಾದ ಸುಂದರ ಶರೀರ, ಸುಂದರ ಮುಖ, ಉತ್ತಮವಾದ ಉಡಿಗೆ ತೊಡಿಗೆಗಳು, ಬೆಲೆ ಬಾಳುವ ಆಭರಣಗಳು, ಹೆಸರಿನ ಜೊತೆಗೆ ನಾಲ್ಕು ವಿದ್ಯಾಲಯಗಳ ಡಿಗ್ರಿಗಳು ಇದ್ದರೆ ಮನುಷ್ಯನಿಗೆ ಎಂಥಾ ವ್ಯಕ್ತಿತ್ವವಿದೆಯೆಂದು ಹೇಳುವವರಿದ್ದಾರೆ. ಅವರ ದೃಷ್ಟಿಯಲ್ಲಿ ಅಂಥಾ ಮನುಷ್ಯನು ನಾಗರಿಕ, ಮುಂದಾಳು, ಸರ್ವಸ್ವ- ಆದರೆ ಮನುಷ್ಯನ ಗೌರವ ವ್ಯಕ್ತಿತ್ವಗಳು ಆತನ ಶಾರೀರಕ ಬಲ ಯಾ ಸೌಂದರ್ಯ, ಉಡಿಗೆಗಳ ಮೌಲ್ಯ ಮತ್ತು ವೈಶಿಷ್ಟ್ಯಗಳಲ್ಲ. ಗಾಳಿ ತುಂಬಿದ ಬಲೂನು ಯಾವ ರೀತಿ ಎತ್ತರಕ್ಕೆ ಹಾರುತ್ತದೋ ಅದೇ ರೀತಿ ಆತ್ಮದ ಗೌರವ ಗಾಂಭೀರ್ಯವಿಲ್ಲದ ವ್ಯಕ್ತಿ ಕೇವಲ ಉಡಿಗೆ ತೊಡಿಗೆ, ಸೌಂದರ್ಯಗಳಿಂದ ಗೌರವದ ವ್ಯಕ್ತಿಯಾಗಲಾರ.

ಶಾರೀರಕ ಶಕ್ತಿ ಗೌರವದ ಚಿಹ್ನೆಯಾದರೆ ಮೈಯಲ್ಲಿ ಮಣಗಟ್ಟಲೆ ಮಾಂಸ ಬೆಳೆಸಿಕೊಂಡ ಜಟ್ಟಿಗಳು ಮಹಾ ಗೌರವದ ವ್ಯಕ್ತಿಗಳಾಗುತ್ತಿದ್ದರು. ಸೌಂದರ್ಯವು ವ್ಯಕ್ತಿಯ ಗೌರವ ಮತ್ತು ವ್ಯಕ್ತಿತ್ವವನ್ನು ಹೆಚ್ಚಿಸಬಲ್ಲುದಾಗಿದ್ದರೆ ಸುಂದರರೆಲ್ಲರೂ ಗೌರವಾನ್ವಿತರಾಗುತ್ತಿದ್ದರು. ಬಹುಶಃ ಹೆಚ್ಚಿನ ಸಂಖ್ಯೆಯ ಹೆಂಗಸರು ಆದರ್ಶರೆನಿಸುತ್ತಿದ್ದರು. ಉಡುಪು, ಹೊರಗಿನ ಬಣ್ಣ, ಬೆಲೆಬಾಳುವ ಆಭರಣಗಳು ವ್ಯಕ್ತಿತ್ವವನ್ನು ಹೆಚ್ಚಿಸುತ್ತಿದ್ದರೆ ಸಿರಿವಂತರೆಲ್ಲಾ ಘನವಂತರೆನಿಸುತ್ತಿದ್ದರು. ಆದರೆ ಪರಿಸ್ಥಿತಿ ಹಾಗಿಲ್ಲ. ಅತ್ಯುತ್ತಮ ಉಡುಪಿನಿಂದ ಬೀದಿ ಬೀದಿ ಮೆರೆಯುವವರಲ್ಲಿ ಈ ಗೌರವ ಯಾ ವ್ಯಕ್ತಿತ್ವವಿಲ್ಲ. ಸಿರಿವಂತರು, ರಾಜ ಮಹಾರಾಜರೆನಿಸಿದವರಲ್ಲೂ ಈ ಗೌರವವಿಲ್ಲ!

ಬದಲು ಯೋಗ್ಯ ಉಡುಪಿಲ್ಲದ ಸರಳ ವ್ಯಕ್ತಿಯ ಕೆಲವರಲ್ಲಿ ಇದು ತೋರಿಬರುತ್ತದೆ. ಶಾರೀರಕ ಬಲದಲ್ಲಿಯೂ, ಸೌಂದರ್ಯದಲ್ಲಿಯೂ ಲೆಕ್ಕಕ್ಕಿಲ್ಲದವರಲ್ಲಿ ಇದು ಕಂಗೊಳಿಸುತ್ತದೆ. ಗ್ರೀಸ್ ದೇಶದ ಸೊಕ್ರಟೀಸನು ಆತನ ಇಡೀ ದೇಶದ ಜನರಲ್ಲಿ ಅತ್ಯಂತ ವಿಕೃತ ರೂಪಿನವನು. ಆದರೆ ಆತನ ವ್ಯಕ್ತಿಗತ ಗಾಂಭೀರ್ಯಕ್ಕೆ ರಾಜ ಮಹಾರಾಜರೂ ಶಿರಬಾಗುತ್ತಿದ್ದರು! ಆತನ ವಾಕ್ಯಗಳು ಇಂದು ಕೂಡ ವೇದವಾಕ್ಯಗಳಂತೆ. ದೂರದ ಮಾತೇಕೆ? ನಮ್ಮ ದೇಶದ ಮಹಾ ನಾಯಕನಾದ ಮಹಾತ್ಮಾ ಗಾಂಧಿಯವರನ್ನೇ ತೆಗೆದು ಕೊಂಡರೆ ಅವರ ಶರೀರದಲ್ಲಿ ಒಂದು ಹಿಡಿ ಮಾಂಸವಿರಲಿಲ್ಲ. ಅವರ ಶಾರೀರಕ ಸೌಂದರ್ಯವೂ ಹೇಳಿಕೊಳ್ಳುವಂತಿರಲಿಲ್ಲ. ನಿರ್ಬಲರಾಗಿ, ನಡೆವುದೇ ಪ್ರಯಾಸವಾಗಿದ್ದರೂ ಅವರ ವ್ಯಕ್ತಿ ಗಾಂಭೀರ್ಯವೆಂತಹದು! ಅವರ ಶಿರಬಾಗಿದ ಕಡೆ ಸಹಸ್ರಾರು ಶಿರಗಳು ಬಾಗುತ್ತಿದ್ದವು. ಅವರು ಕೈ ಎತ್ತಿದ ಕಡೆ ಲಕ್ಷಾಂತರ ಕೈಗಳು ಧಾವಿಸುತ್ತಿದ್ದವು. ಅವರ ಕಾಲು ಮೆಟ್ಟಿದುದೇ ಪುಣ್ಯಕ್ಷೇತ್ರವಾಯಿತು. ಅವರ ಮಾತೇ ಭಾರತೀಯರ ಮಂಗಳಗಾನವಾಯಿತು. ಹಾಗಾದರೆ ವ್ಯಕ್ತಿತ್ವ ಎಲ್ಲಿಂದ ಮತ್ತು ಹೇಗೆ?

ಅತೀ ಉನ್ನತ ಮಟ್ಟಕ್ಕೆ ಅಭಿವೃದ್ಧಿಗೊಂಡ ಮಾನಸಿಕ ಮತ್ತು ಆತ್ಮಿಕ ಗುಣಗಳು ಈ ವ್ಯಕ್ತಿ ಗೌರವದ ಮಹಾ ಗೋಪುರಕ್ಕೆ ಸಹಾಯಕವಾದ ಅಸ್ತಿಭಾರ. ಮನುಷ್ಯನು ನಡೆಯುವ ನಡಿಗೆ, ಸಾಮಾನ್ಯವಾಗಿ ಆತನು ನೋಡುವ ದೃಷ್ಟಿ, ಆತನ ಮಾತಿನ ರೀತಿ, ಸಮಾಜದಲ್ಲಿಯ ಆತನ ನಡತೆ, ಇವೆಲ್ಲವೂ ಕೂಡ ಆತನ ಮನಸ್ಸಿನಲ್ಲಿಯೂ ಹೃದಯದಲ್ಲಿಯೂ ಯಾವ ರೀತಿಯ ಭಾವನೆ ಇದೆ ಎಂಬುದನ್ನು ಪ್ರತಿಬಿಂಬಿಸುತ್ತವೆ. ಈ ಭಾವನೆಗನುಗುಣವಾಗಿಯೇ ಆತನು ಜನರಿಂದ ಓಲೈಸಲ್ಪಡುತ್ತಾನೆ. ಇಲ್ಲವೇ ತಿರಸ್ಕರಿಸಲ್ಪಡುತ್ತಾನೆ. ಒಬ್ಬನು ಅತೀ ಮೇಧಾವಿ ಇದ್ದು ಯಾವಾಗಲೂ ಉದಾತ್ತವಾದ ಭಾವನೆಗಳಲ್ಲಿ ಮಗ್ನನಾಗಿ ಅತೀ ಎತ್ತರದ ಮಟ್ಟದಲ್ಲಿದ್ದರೆ ಆತನು ತನ್ನ ಸುತ್ತು ಒಂದು ಪವಿತ್ರ ಹಾಗೂ ನಿಷ್ಕಲ್ಮಷ ವಾತಾವರಣವನ್ನು ಕಲ್ಪಿಸಿಕೊಳ್ಳುತ್ತಾನೆ. ಈ ವಾತಾವರಣವು ಹತ್ತಿರ ಬಂದವರನ್ನು ಆಕರ್ಷಿಸುವದು. ಆಕರ್ಷಿಸಲ್ಪಟ್ಟವರು ಒಳಗಿನ ಪವಿತ್ರತೆಯನ್ನು ಕಂಡು ಮೆಚ್ಚುವರು.

ಇಂಥಾ ಗೌರವವನ್ನು ವ್ಯಕ್ತಿಯು ಹೆಚ್ಚಿಸಿಕೊಳ್ಳುವದು ಸಾಧ್ಯವೆ? ವ್ಯಾಯಾಮದಿಂದ ಶರೀರದ ಸ್ನಾಯುಗಳನ್ನು ಹೆಚ್ಚಿಸಿಕೊಂಡಂತೆ ಇದನ್ನು ಬಹುಶಃ ಹೆಚ್ಚಿಸಿಕೊಳ್ಳಲು ಸಾಧ್ಯವಾಗದಿರಬಹುದು. ಈ ಗೌರವವನ್ನು ಬೆಳೆಸಿ ವ್ಯಕ್ತಿತ್ವವನ್ನು ರೂಪಿಸಲು ಯಾವ ದೇಶ ನಿಯಮವಿರಲಾರದು. ಯಾವ ನೇಮ ನಿಯಮವಿದ್ದರೆ ಅದು ಯಾಂತ್ರಿಕವಾಗಿ ಕ್ರಮಶಃ ಶಿಥಿಲಗೊಳ್ಳುವದು. ಆದರೆ ಆ ಶಕ್ತಿಯನ್ನು ಪಡೆಯಿಸಿಕೊಳ್ಳುವದು ಪ್ರತಿಯೊಬ್ಬನಿಗೆ ಸಾಧ್ಯವಿದೆ. ಮನಸ್ಸು, ಹೃದಯ, ಆತ್ಮಗಳ ಪಾವಿತ್ರ್ಯವೇ ಇದರ ತಳಹದಿ. ಆರೋಗ್ಯಕರ ಮತ್ತು ಅವಿರೋಧಕ ವ್ಯಕ್ತಿತ್ವವು ದೊರೆಯಬೇಕಾದರೆ ಈ ಆಂತರಿಕ ಪಾವಿತ್ರ್ಯವಿಲ್ಲದೆ ನಡೆಯದು. ನಮ್ಮ ಭಾವನೆಗಳು, ಕೃತಿಗಳು, ನಡೆನುಡಿಗಳು, ನೀತಿರೀತಿಗಳಿಗನುಗುಣ ಮೇಲ್ಪಟ್ಟವಾಗಿದ್ದರೆ ಅವುಗಳನ್ನೊಳಗೊಂಡಿರುವ ವ್ಯಕ್ತಿಯೂ ಮೇಲ್ಪಟ್ಟಕ್ಕೇರಲೇ ಬೇಕು. ನಮ್ಮ ಗುಣ, ನೀತಿಗಳಲ್ಲಿ, ಮಾತು ನಡೆಗಳಲ್ಲಿ ಕಲಂಕವಿಲ್ಲದೆ ಅವು ಬೆಳಗುತ್ತಿದ್ದರೆ ಅವುಗಳಿಂದ ಕೂಡಿದ ವ್ಯಕ್ತಿಯೂ ತೇಜಸ್ಸಿನಿಂದ ಬೆಳಗುವನು.

ನಾವು ಅನೇಕರನ್ನು ನೋಡಿದ್ದೇವೆ. ಯಾವ ಭೌತಿಕ ದೃಷ್ಟಿಯಿಂದಲೂ ಅವರಿಗೆ ನ್ಯೂನತೆ ಇಲ್ಲ. ಆರೋಗ್ಯವಿದೆ, ದುಡ್ಡಿದೆ, ಸುಖಸಂಸಾರವಿದೆ. ಆದರೂ ಅವರ ಮುಖಾಕೃತಿ ಯಾವಾಗಲೂ ಉದ್ದವೇ! ನಗುವಿನ ಹೊನಲು ಹರಿಯದು. ಕಣ್ಣಿನಲ್ಲಿ ಮಿಂಚು ಹೊಳೆಯದು. ಅನಾಸಕ್ತಿಯ ಕಾವಳ ಎದ್ದು ತೋರುವದು. ಇದಕ್ಕೆ ಕಾರಣ ಅವರ ಶಾರೀರಿಕ ಸುಖ ಸೌಲಭ್ಯಗಳೊಡನೆ ಅವರ ಆತ್ಮಿಕ ಗುಣಗಣಗಳು ಬೆಳೆಯದುದೇ ಆಗಿದೆ. ಸದುಪಯೋಗ ಮಾಡಲು ತಿಳಿಯದವನ ಕೈಯ ಧನದಿಂದ ಗಂಡಾಂತರವೇ ಹೆಚ್ಚು. ಶರೀರ ಮತ್ತು ಆತ್ಮಗಳು ಒಂದಕ್ಕೊಂದು ಮಿಲನವಾಗಿರಬೇಕು. ಶರೀರಕ್ಕೆ ಯೋಗ್ಯ ಆಹಾರ ಕೊಟ್ಟು ಪೋಷಿಸುವಂತೆಯೇ ಆತ್ಮದ ಕನ್ನಡಿಯು ಶುಭ್ರವಾಗಿರುವಂತೆ ಎಚ್ಚರಿಕೆ ವಹಿಸಬೇಕು. ಶರೀರದೊಂದಿಗೆ ಹೃದಯದ ಮಿಲನವಿರಬೇಕು. ಅರ್ಥಾತ್ ಪವಿತ್ರ ಹೃದಯ ಇಚ್ಛಿಸಿದುದೇ ಭಾವಿಸಲ್ಪಡಬೇಕು. ಆ ಭಾವನೆಯನ್ನೇ ಶರೀರವು ಕಾವ್ಯರೂಪದಲ್ಲಿ ತರಬೇಕು. ಈ ಕಾಯ ವಾಚಾ ಮನಸುಗಳ ಸಮ್ಮಿಲನವೇ ವ್ಯಕ್ತಿಯ ಗೌರವದ ಮೂಲ.

ಆನಂದವು ಮುಖ ಕನ್ನಡಿಯನ್ನು ತೊಳೆದು ಶುಭ್ರವಾಗಿ ಬೆಳಗಿಸುವ ಅಮೂಲ್ಯ ವಸ್ತು. ಸುಂದರ ಭುವನ ಮೋಹಕ ಮುಖಾರವಿಂದವಿದ್ದರೆ ಸಾಲದು. ಪವಿತ್ರವಾದ ಹೃದಯ ಬತ್ತಿಯ ಬೆಳಕು ಈ ಸುಂದರ ಮುಖಪಟದಲ್ಲಿ ಪ್ರತಿಬಿಂಬಿತವಾಗಬೇಕು. ಅನೇಕರಲ್ಲಿ ಸುಂದರ ಆಕಾರವಿದೆ. ಸೌಂದರ್ಯವಿದೆ. ಆದರೆ ಈ ತೇಜಸ್ಸಿಲ್ಲ. ಕಾರಣ ಅವರು ಬತ್ತಿ ಇಲ್ಲದ ದೀಪದಂತೆ! ಯಾರೂ ಅದರ ಹತ್ತಿರ ಸುಳಿಯರು! ಪವಿತ್ರ ಆತ್ಮದ ಪ್ರೇಮದ ಹಣತೆ ಮುಖದಲ್ಲಿ ಅಪೂರ್ವ ಬೆಳಕನ್ನು ಚೆಲ್ಲಿದರೆ ಆ ಮುಖವು ಕುರೂಪವಾಗಿದ್ದರೂ ಜನರನ್ನು ಸೆಳೆಯುವದು. ಜನತೆ ಅದರ ಗೌರವವನ್ನರಿತು ವಂದಿಸುವದು. 'ಕಷ್ಟದಲ್ಲಿ, ಸುಖದಲ್ಲಿ ವ್ಯತ್ಯಾಸವಿಲ್ಲದೆ, ಸ್ವಾರ್ಥದ ಕಲಂಕದಿಂದ, ಮೋಹದ ಜಾಲದಿಂದ ನಿರ್ಲಿಪ್ತವಾದ ಪ್ರೇಮವು ಸೂಸುತ್ತಿದ್ದರೆ ಅದಕ್ಕೆ ಎಣೆಯು ಜಗತ್ತಿನಲ್ಲಿಲ್ಲ'ವೆನ್ನುವ ಮಾತು ಸಹಜ.

ಎರಡು ವಿಧದ ಜನರು ಈ ಗೌರವದ ಮಾರ್ಗವನ್ನು ಅನುಸರಿಸಲಾರರು. ಪ್ರತಿಯೊಂದು ಕೆಲಸ ಮತ್ತು ವಸ್ತುವಿನ ನ್ಯೂನತೆಯನ್ನು ಹುಡುಕುವವರು ಒಂದು ಪಂಗಡ! ಇವರ ದೃಷ್ಟಿ ಆಕಾಶದ ಮೂಲೆಯಲ್ಲಿರುವ ಕಪ್ಪಿನಿಂದ ಮೋಡದೆಡೆ. ದಿವ್ಯ ಪ್ರಕಾಶದಿಂದ ಮೆರೆಯುವ ಸೂರ್ಯನನ್ನು ನೋಡಿ ಆನಂದಿಸುವ ಭಾಗ್ಯ ಇವರಿಗಿಲ್ಲ. ಅವರ ತತ್ವದಂತೆ ಜಗತ್ತಿನಲ್ಲಿರುವ ಪ್ರತಿಯೊಬ್ಬನೂ ತಮ್ಮ ವಿರೋಧಿ. ನೀತಿ ನಡತೆ ಎಲ್ಲಿಯೂ ಇಲ್ಲ. ಎಲ್ಲರೂ ತಮ್ಮ ಮೇಲೆ ಕತ್ತಿ ಕಟ್ಟಲಿರುವವರೇ! ಎರಡನೆಯ ಪಂಗಡದವರ ಜೀವನ ಮೇದ ಕಬ್ಬಿನ ಸಿಪ್ಪೆಯಂತೆ! ಜೀವನದಲ್ಲಿ ನೀರಸ. ಅನಾಸಕ್ತಿ. ಜಡತೆಯೇ ಶಾಂತಿಯೆಂದೂ ಕೈಸಾಗದಿರುವದೇ ಅನಾಸಕ್ತಿಯೆಂದೂ ಭಾವಿಸುವವರು! ಇವರಿಗೆ ಲೋಕವೇ ಅರ್ಥರಹಿತವಾದುದು.

ಜೀವನವು ಒಂದು ಪ್ರಯೋಗ. ಆ ಪ್ರಯೋಗ ಶಾಲೆಯಲ್ಲಿ ಕಷ್ಟ ಸುಖಗಳ ಪುಟಕ್ಕಿಟ್ಟು ಪರಿಶುದ್ಧ ಆತ್ಮವನ್ನು ಬೆಳಗಬಲ್ಲವನೇ ಗೌರವಾನ್ವಿತನಾಗುವನಲ್ಲದೆ ಸುಖಸಂಪತ್ತುಗಳಿಂದ ತುಕ್ಕು ಹಿಡಿದು ಮೂಲೆ ಸೇರುವವನಲ್ಲ. ಆತ್ಮದ ಬೆಳಕಿನಲ್ಲಿ ಕಲ್ಮಷಗಳ ಹೋಮವಾಗಿ ತೇಜಃಪುಂಜವಾದ ಅಂತರ್ಜ್ಯೋತಿಯು ಶರೀರವನ್ನು ಬೆಳಗಬೇಕು. ಹಾಗೆ ಬೆಳಗುತ್ತಿದ್ದರೆ ಚಳಿಯಿಂದ ನಡುಗುವವರೆಲ್ಲರೂ ಚಳಿಕಾಯಿಸಲು ಹತ್ತಿರ ಬರುತ್ತಾರೆ. ತಮ್ಮ ಶರೀರಕ್ಕೆ ಕಾವಿತ್ತು ಚೇತನ ಕೂಡಿಸಿದ ಬೆಳಕನ್ನು ಹೊಗಳಿ ಪ್ರಾರ್ಥಿಸುತ್ತಾರೆ.

ಈ ಗುಂಗೆ ಸೇರಲು ಜೀವನ ಸರಳವಾಗಬೇಕು. ಹೊನ್ನು, ಘನತೆ, ಪ್ರತಿಷ್ಠೆಗಳ ಭಾರ ಹೊತ್ತವನು ದೂರ ನಡೆಯಲಾರ! ಪ್ರತಿದಿನವೂ ಜೀವನದ ಕಡೇ ದಿನವೆಂಬಂತೆ ಜೀವಿಸಬೇಕು. ಸುತ್ತು ಮುತ್ತಿರುವವರೆಲ್ಲರ ಆನಂದಕ್ಕೆ ಕಾರಣವಾದ ಜೀವನವಾಗಬೇಕು. ಈ ಮಾರ್ಗವೇ ವ್ಯಕ್ತಿಯ ಗೌರವದ ಮಾರ್ಗ; ಮನುಷ್ಯನ ಗುಣದ ಅಮೂಲ್ಯ ರತ್ನ ಕೃತಜ್ಞತೆ. ಕೃತಜ್ಞತೆ, ವಿನಯಗುಣಗಳು ಯಾರನ್ನೂ ಘನತೆಗೇರಿಸದೆ ಬಿಟ್ಟಿಲ್ಲ.

(ಕೊಡಗು)


ಜೀವವಿಮೆಗಾಗಿ

ವಿಚಾರಿಸಿರಿ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ
ಲೈಫ್ ಇನ್ಶ್ಯೂರೆನ್ಸ್ ಕೊ, ಲಿಮಿಟೆಡ್.

(ಸ್ಥಾಪನೆ: 1934)

ಚೆಯರ್‌ಮೆನ್: ಶ್ರೀ. ಎಮ್. ಸಿಟಿ. ಎಮ್. ಚಿದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,
ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ:
"ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್ ಪೋಸ್ಟು ಬಾಕ್ಸ್ ನಂಬ್ರ 142
ಮದ್ರಾಸು.

# ಸ್ವಲ್ಪ ಬದಲಾಯಿಸಬೇಕು. ಸಿ. ಎಚ್. ಶೆಟ್ಟಿ.

ಇದೇ ಕಳೆದ ಜನವರಿ ತಾರೀಕು 26ರಂದು ಘೋಷಿಸಲ್ಪಟ್ಟ ನಮ್ಮ ರಾಜ್ಯಶಾಸನವು ಸಾರ್ವಭೌಮ ಪ್ರಭುತ್ವದ ಧ್ಯೇಯದಿಂದ ತಯಾರಾಗಿರುವದು. ನಮ್ಮಲ್ಲಿ ಈ ಮಾದರಿಯ ಗವರ್ನಮೆಂಟು ರೂಢಿಯಲ್ಲಿಲ್ಲದ ಕಾರಣ ಇದರ ಅನುಭವವು ಹೊಸತು. ಈ ಶಾಸನವನ್ನು ಕಾರ್ಯರೂಪದಲ್ಲಿ ಸರಿಯಾಗಿ ಆಚರಿಸದಿರುವದಾದರೆ, ಇದು ಸತ್ತು ಹುಟ್ಟಿದ ಮಗುವಿನಂತೆಯೂ ಪುಸ್ತಕದ ಬದನೆಕಾಯಿಯಂತೆಯೂ ಆಗಬಹುದು. ಇದನ್ನು ಜಯಶೀಲವಾಗಿ ಸಾಧಿಸಲು ನಮ್ಮ ದಿನನಿತ್ಯದ ನಡೆ ನಡಾವಳಿಗಳಲ್ಲಿ ನಮ್ಮ ಹಿತಾಹಿತ ಭಾವನೆಗಳಲ್ಲಿ ಮತ್ತು ನಮ್ಮ ರೀತಿನೀತಿಗಳಲ್ಲಿ ಸಹಾ ನಮ್ಮ ದೃಷ್ಟಿಕೋನವನ್ನೇ ಕೆಲವು ಮಟ್ಟಿಗೆ ಬದಲಾಯಿಸುವದು ವ ರೂಪಾಂತರಿಸುವದು ಅತಿ ಅಗತ್ಯ. ಅವುಗಳ ಪೈಕಿ ಕೆಲವನ್ನು ಇಲ್ಲಿ ಎತ್ತಿ ಹೇಳಿಯದೆ.

ನಮ್ಮ ರಾಜ್ಯಶಾಸನದ ಮೇರೆಗೆ ನಮಗೆ ಬಲವಾದ ಎರಡು ಹಕ್ಕುಗಳಿವೆ. ಗವರ್ನಮೆಂಟನ್ನು ಅಂದರೆ ಮಂತ್ರಿ ಮಂಡಳಿಯನ್ನು ಬದಲಾಯಿಸುವದು. 2. ಶಾಸನವನ್ನೇ ದುರಸ್ತಿ ಮಾಡುವದು ಅಥವಾ ತಿದ್ದುಪಡಿಸುವದು. ಇದರಲ್ಲಿ ಒಂದನೆಯದಾದ ಮಂತ್ರಿಗಳನ್ನು ಬದಲಾಯಿಸುವರೆ ಎರಡು ದಾರಿಗಳಿವೆ, ಒಂದು ಶಾಂತ ರೀತಿಯಿಂದ ಪಾರ್ಲಿಮೆಂಟರಿ ಶಾಸನಗಳಂತೆ;ಇನ್ನೊಂದು ಕ್ರಾಂತಿಯ ಮೂಲಕ. ನಮ್ಮ ಮಂತ್ರಿಗಳು ಸ್ವೇಚ್ಛೆಯಿಂದ ವರ್ತಿಸಿದರೆ ಅಥವಾ ತಪ್ಪು ದಾರಿಯು ನಡೆದರೆ ಎಸೆಂಬ್ಲಿಯಲ್ಲಿರುವ ನಮ್ಮ ಪ್ರತಿನಿಧಿಗಳು ಅವರನ್ನು ಸರಿದಾರಿಗೆ ತರುವರು. ಒಂದು ವೇಳೆ ಮಂತ್ರಿಗಳ ವರ್ತನೆಯು ಸಹಿಸಲಾರದಷ್ಟು ಅತಿರೇಕವಾದರೆ ಎಸೆಂಬ್ಲಿಯು ತಮ್ಮ ವಿರೋಧವನ್ನು ಸೂಚಿಸುವದರೆ ಅಪನಂಬಿಕೆಯ ಠರಾವು ತಂದು ಅವುಗಳನ್ನು ತಳ್ಳಿಹಾಕಿ ಬೇರೆ ಮಂತ್ರಿ ಮಂಡಲವನ್ನು ರಚಿಸುವರು. ಅಥವಾ ಚುನಾಯಿತರು ಎಸೆಂಬ್ಲಿ ಇಂಥ ಸಂಗತಿಗಳಲ್ಲಿ ಹೆಚ್ಚು ನಿಗಾತೆಗೆದುಕೊಳ್ಳದೆ ಇದ್ದರೆ, ನಾವು ಮುಂಬರುವ ಚುನಾವಣೆಯ ಸಮಯದ ವರೆಗೆ ಕಾದು ಆ ಸಮಯ ಅಂಥವರನ್ನೆಲ್ಲಾ ಹೊರಹಾಕಿ ಅವರ ಸ್ಥಾನಕ್ಕೆ ಬೇರೆ ಪ್ರತಿನಿಧಿಗಳನ್ನು ಚುನಾಯಿಸುವೆವು. ಇದಕ್ಕೆ "ಪಾರ್ಲಿಮೆಂಟರಿ ರಿವಾಜು" ಎನ್ನುತ್ತಾರೆ. ಕ್ರಾಂತಿಯ ರೂಪದಿಂದ ಗವರ್ನಮೆಂಟನ್ನು ಬದಲಾಯಿಸುವದು ಇನ್ನೊಂದು ಕ್ರಮ. ಇದರ ಪ್ರಕಾರ ಅಂದರೆ ತಾತ್ಕಾಲಿಕ ಸರಕಾರಕ್ಕೆ ವಿರೋಧ ಚಳವಳ ಹೂಡಿ ಅಸಹಕಾರ ತೋರಿ ನಾನಾ ತರದ ಆತಂಕಗಳನ್ನು ತಂದೊಡ್ಡಿ ಕ್ರಮವಾದ ಕಾಯಿದೇಶೀರ ಸರಕಾರ ನಡೆಸದಂತೆ ಮಾಡುವದಾಗಿದೆ. ನಾಗರಿಕತೆಯಲ್ಲಿ ಮುಂದುವರಿದ ಜನರು ಮತ್ತು ಪ್ರಜಾಕೀಯ ಸರಕಾರದಲ್ಲಿ ವಿಶ್ವಾಸವಿರುವವರು ಇದರಲ್ಲಿ ಪ್ರಥಮ ದಾರಿಯನ್ನೇ ಮುಟ್ಟಿ ನಡೆಯುವರು.

ಆದರೆ ಇತ್ತೀಚೆಗೆ ನಮ್ಮ ಮತ್ತು ನೆರೆಕರೆ ಇನ್ನಿತರ ದೇಶಗಳಲ್ಲಿ ತಲೆದೋರಿರುವ ಘಟನೆಗಳನ್ನು ಮನವರಿಕೆಗೆ ತಂದುಕೊಂಡರೆ ಅವುಗಳು ಶಾಂತ ಸ್ವಭಾವದ್ದಂತೂ ಅಲ್ಲ; ಕ್ರಾಂತಿರೂಪದ್ದೂ ಅಲ್ಲ. ಬೋಂಬು ಎಸೆಯುವದು, ಈಟಿಗಳಿಂದ ಇರಿಯುವದು, ಕಲ್ಲೆಸೆಯುವುದು, ಮನೆಮಾರುಗಳಿಗೆ ಬೆಂಕಿ ಹಚ್ಚುವದು, ನಿರಪರಾಧಿಗಳಾದ ನಾಗರಿಕರ ಜೀವಹಿಂಸೆ ಚಿತ್ರಹಿಂಸೆ ಮಾಡುವದು, ಇದಕ್ಕೆಲ್ಲಾ ಕ್ರಾಂತಿ ಎನ್ನಲಾಗುವದಿಲ್ಲ. ಇದು ಅವಿವೇಕತ್ವ, ಅನ್ಯಾಯಕತ್ವ ಮತ್ತು ಅರಾಜಕತ್ವ ಎಂದು ಹೇಳಲ್ಪಡುವದು. ಇದರಿಂದ ಶಾಂತಿಭಂಗವಾಗುವದು ಮಾತ್ರವಲ್ಲ, ಸಮಾಜದ ತಳಹದಿಯ ಅಡಿಗಲ್ಲನ್ನೇ ಕಿತ್ತೊಗೆದಂತಾಗುವದು. ಆರ್ಥಿಕ, ಸಾಮಾಜಿಕ, ರಾಜಕೀಯ ತತ್ವಗಳನ್ನನುಸರಿಸಿ ನಡೆಯುವವರು ಹೀಗೆ ಮಾಡಲಾರರು.

ಈ ಶಾಸನವು ನಮ್ಮ ಪ್ರತಿನಿಧಿಗಳಿಂದ ತಯಾರಾದದ್ದು. ಇದಕ್ಕಾಗಿ ಪರದೇಶೀಯರ ಸಹಾಯವನ್ನು ಎಳ್ಳಷ್ಟೂ ಪಡೆಯಲಿಲ್ಲ. ಆದರೆ ಲೋಕದ ಇತರ ಕಡೆಯ ಪ್ರಜಾಮತ ಸರಕಾರಗಳ ರೀತಿಗಳನ್ನು ಪರಿಶೀಲಿಸಿ ವಿಚಾರ ವಿನಿಮಯ ಮಾಡಿ ತಯಾರಿಸಿದ್ದಾದ್ದರಿಂದ ಇದು ನಮ್ಮ ಈಗಿನ ಜನಾಂಗದ ಪ್ರತಿಬಿಂಬವಾಗಿದೆ. ಈ ಶಾಸನದಲ್ಲಿ ಏನಾದರೂ ಕುಂದುಕೊರತೆಗಳು ತೋರಿಬಂದರೆ ನಾವು ನಮ್ಮ ಪ್ರತಿನಿಧಿಗಳ ಸಭೆಯಲ್ಲಿ ⅔ನೇ ಅಂಶದ ಬಹುಮತದಿಂದ ಅಂಥ ನ್ಯೂನತೆಗಳನ್ನು ತಿದ್ದಿ ದುರಸ್ತಿಮಾಡುವ ಅಧಿಕಾರವುಳ್ಳವರಾಗಿದ್ದೇವೆ

ನಮ್ಮಲ್ಲಿ ಕ್ರಾಂತಿಯುಂಟಾಗಿ ಪರರಾಷ್ಟ್ರದ ಆಡಳಿತೆಯನ್ನು ಕಿತ್ತೊಗೆಯಲಾಗಿದೆಯಾದರೂ ನಮ್ಮ ದೃಷ್ಟಿಕೋನವು ಮಾತ್ರ ಬದಲಾದಂತೆ ತೋರುವದಿಲ್ಲ ಹಿಂದಿನ ಪದ್ಧತಿ, ರೀತಿ ನೀತಿಗಳನ್ನು ನಾವು ಇನ್ನೂ ತ್ಯಜಿಸಲಿಲ್ಲ ಸರ್ವ ವಿಚಾರಗಳಲ್ಲಿಯೂ ನಮ್ಮ ಅಳತೆಯ ಮಟ್ಟವು ಮೊದಲಿನಂತೆಯೇ ಇದೆ. ಇದಕ್ಕೆ ನಮ್ಮಲ್ಲಿರುವ ಎರಡು ನ್ಯೂನತೆಗಳೇ ಕಾರಣ. ಒಂದನೆಯದಾಗಿ ನಾವು ಹಿಂದಿನ ಕ್ರಮ ಮತ್ತು ಆಚರಣೆಗೇ ಅಂಟಿಕೊಂಡು, ಅದನ್ನು ಬದಲಾಯಿಸುವ ಕುರಿತು ಅಸಡ್ಡೆ ಮತ್ತು ನಕಾರಾತ್ಮಕ ಹಟಮಾರಿತನ ತೋರುತ್ತಿರುವೆವು. ಎರಡನೆಯದಾಗಿ ಮುಂದೆ ಯಾವ ರೀತಿಯಲ್ಲಿ ನಡೆಯಬೇಕೆಂಬುದರ ಕುರಿತು ವಿಚಾರಹೀನರಾಗಿರುವೆವು. ಬ್ರಿಟಿಷರ ಆಡಳಿತೆ ಕಾಲದಲ್ಲಿ ನಾವು ಗುಲಾಮರ ಹಾಗೆ ಸಂಪಾದನೆಯ ಆಶೆಯಿಂದ ನೌಕರಿಗಾಗಿ ಹಾತೊರೆಯುತ್ತಿದ್ದೆವು. ಆಗ ಆಫೀಸರರೆಂದರೆ ಪರ ಸೇವಕರು ಮತ್ತು ಪರಕೀಯರೆಂಬ ಭಾವನೆಯೂ ನಮ್ಮಲ್ಲಿಯೇ ಬೇರೂರಿದ್ದಿತು. ಆ ಪ್ರೇತವು ಈಗಲೂ ನೆರಳಿನಂತೆ ನಮ್ಮನ್ನು ಹಿಂಬಾಲಿಸುತ್ತಿದೆ. ಈಗ ನೌಕರಿ ಎಂಬುದು ನಿಜವಾದ ದೇಶಸೇವೆ ಎಂಬ ಭಾವನೆಯು ನಮ್ಮಲ್ಲಿ ಹುಟ್ಟಬೇಕಾಗಿದೆ. ಸೈನ್ಯ ಮತ್ತು ಪೋಲೀಸು ಪಡೆಗಳನ್ನು ದೇಶದ ವಿರೋಧಿಗಳು, ಘಾತುಕರು ಎಂಬ ವಕ್ರದೃಷ್ಟಿಯಿಂದ ಆಗ ನೋಡಲು ಕಾರಣಗಳಿದ್ದರೂ ಈಗ ಹಾಗೆಣಿಸುವುದರಲ್ಲಿ ಅರ್ಥವಿಲ್ಲ. ಪೋಲೀಸರು ಶಾಂತಿರಕ್ಷಣೆಗಾಗಿ ಅಥವಾ ದೇಶದ ಹಿತದೃಷ್ಟಿಯಿಂದ ಕಾನೂನು ರಕ್ಷಣಾ ಕೆಲಸಮಾಡಿದರೆ ಅಥವಾ ಅವರ ಅಂಗರಕ್ಷಣೆ ಬಗ್ಗಾಗಿ ಏನಾದರೂ ಮಾಡಿದರೆ ನಾವು ಅಂಥ ಕೃತ್ಯಗಳನ್ನು ಮೊದಲಿನಂತೆ ಕ್ರೂರವಾಗಿ ಖಂಡಿಸುವುದಲ್ಲದೆ ಸರಕಾರವನ್ನೂ ದೂರುವದನ್ನು ಬಿಟ್ಟಿಲ್ಲ.

ನಮ್ಮ ಮೂಲಭೂತ ಹಕ್ಕನ್ನು ಶಾಸನದಲ್ಲಿ ಸ್ಥಿರಗೊಳಿಸಿ ವ್ಯಕ್ತಿತ್ವಕ್ಕೆ ಪ್ರಾಮುಖ್ಯತೆಕೊಟ್ಟಿರುವಾಗ ನಾವು ಸತ್ಯಾಗ್ರಹ, ಸಂಪು ಹೂಡುವುದರಲ್ಲಿ ಅರ್ಥವಿಲ್ಲ. ಒಂದು ಕಾಲದಲ್ಲಿ ಇವೆಲ್ಲಾ ಬೇಕಿದ್ದುವು. ಈಗಲೂ ನಾವು ನಮ್ಮ ಸರಕಾರಕ್ಕೆ ವಿರೋಧವಾಗಿ ನಡೆದು ಕಾನೂನು ಉಲ್ಲಂಘಿಸಿದರದು ಅರಾಜಕತೆಯನ್ನು ತರುವ ಪ್ರಸಂಗ. ಹೀಗಾಗಲು ಬಿಟ್ಟರೆ ನಾವೇ ಅನಾಚಾರಕ್ಕೆ ಬಲಿಕೊಟ್ಟಂತಾಗುತ್ತದೆ. ದೇಶರಕ್ಷಣೆ ಮತ್ತು ಶಾಂತಿಸ್ಥಾಪನೆಯನ್ನು ಜನರ ಬೆಂಬಲವಿಲ್ಲದೆ ಯಾವ ಸರಕಾರವೂ ಮಾಡಲಾರದು. ನಮ್ಮ ದೇಶದಲ್ಲಿ ಇಂಡಸ್ಟ್ರಿಗಳು (ಗಿರಣಿ ಕಾರ್ಖಾನೆಗಳು) ಇನ್ನೂ ಶಿಶುತನದಲ್ಲೇ ಇವೆ. ಅವುಗಳು ವೃದ್ಧಿಯಾಗಬೇಕಾದರೆ ಶ್ರೀಮಂತರ ಸಹಾಯ ಬೇಕು. ಈಗಲೇ ಅವುಗಳನ್ನು ಸರಕಾರದ ಆಡಳಿತಕ್ಕೆ ತಂದಲ್ಲಿ ಶಿಶುಹತ್ಯೆ ಮಾಡಿದಂತಾಗಬಹುದು. ಇಂಡಸ್ಟ್ರಿಗಳ ಬೆಳವಣಿಗೆ ಬಗ್ಗೆ ಹಣವಂತರು ಮುಂದೆ ಬರಲಾರರು. ಇಂಡಸ್ಟ್ರಿಗಳಲ್ಲಿ ಕಿಕ್ಕಾಟ ಜಿಜ್ಞಾಸೆಗಳು ಬಂದರೆ ಅದರ ತೀರ್ಮಾನದ ಬಗ್ಗೆ ನ್ಯಾಯವಾದ ಏರ್ಪಾಡು ಕಾನೂನಿನಂತೆ ಮಾಡುವಾಗ ಮುಷ್ಕರ ಹೂಡಿದರೆ ಬಲತ್ಕಾರ ನಡೆಸಿದಂತೆಯೇ ಸರಿ. ಇದೇ ರೀತಿ ಹಿಂದಿನ ಬೇಕಾಯಿದೇಶೀರ ಮನೋವೃತ್ತಿಯನ್ನೇ ಅನುಸರಿಸಿದರೆ ವ್ಯಕ್ತಿತ್ವದ ಹಕ್ಕನ್ನು ದುರುಪಯೋಗ ಮಾಡಿದಂತಾಗುತ್ತದೆ.

ಈಗ ನಾವು ರಾಜಕೀಯ ಸ್ವಾತಂತ್ರ್ಯವನ್ನು ಪಡೆದಿದ್ದೇವೆ. ಇದು ನೆಲೆಯಾಗಿ ನಿಲ್ಲಬೇಕಾದರೆ ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯವನ್ನು ಪಡೆಯಬೇಕು. ಬಡವರೂ ಶ್ರೀಮಂತರೂ, ಉತ್ತಮರೂ ಹೀನರೂ, ನಾನಾ ಜಾತಿ, ನಾನಾ ಧರ್ಮದವರೂ ನಮ್ಮಲ್ಲಿರುವರು ಇವರೆಲ್ಲರನ್ನು ಸುಧಾರಿಸಿ ಕೆಳತರಗತಿಯವರನ್ನು ಸಿರ್ಗತಿಕರನ್ನು ಏಳಿಗೆಗೆ ತರಬೇಕೆಂದು ನಮ್ಮ ಸರಕಾರವು ಸಮತಾವಾದದ ದಾರಿಯನ್ನು ಹಿಡಿದಿರುವಾಗ ಬಿಕ್ಕಟ್ಟು ತಂದೊಡ್ಡುವದು ಕೇವಲ ತಪ್ಪು.

ನಾವು ಇನ್ನು ಮುಂದೆ ಯಾವ ತರದ ಚಳವಳ ಹೂಡುವದಾದರೂ ಕಾಯಿದೇ ರೀತಿಯಂತೆ ಪಾರ್ಲಿಮೆಂಟರಿ ಪದ್ಧತಿ ಆಚರಿಸಬೇಕು. ಶಾಸನವು ಯಾವ ರೂಪದ್ದಾದರೂ ಅದನ್ನು ಕಾರ್ಯರೂಪದಲ್ಲಿ ಆಚರಿಸಿ ಉಪಯೋಗಿಸುವ ರೀತಿಗಳಿಗೆ ಹೊಂದಿಕೊಂಡು ದೇಶಸೇವೆಯಲ್ಲಿ ನುರಿತ ನಿಸ್ವಾರ್ಥಿಗಳನ್ನು ಮುಂದಾಳಾಗಿಟ್ಟು ಹಿಂಬಾಲಿಸಬೇಕು. ಮುಂದಾಳುಗಳಿಗೆ ತೋರಿಸುವ ಭಕ್ತಿಯು ಬರೇ ಕುರುಡುಭಕ್ತಿಯಾಗಬಾರದು. ನಮ್ಮ ವ್ಯಕ್ತಿತ್ವವನ್ನು ಕಳಕೊಂಡು ಕುರಿಗಳಂತೆ ಹಿಂಬಾಲಿಸಿ ಗುಲಾಮರಾಗಬಾರದು. ಅರ್ಥವಿಲ್ಲದ ಅತಿರೇಕ ಭಕ್ತಿಯನ್ನು ತೋರಿಸಿದರೆ ಮುಂದಾಳುಗಳನ್ನು ನಿರಾಧಿಕಾರಿಗಳಾಗಿ ಮಾಡಿದಂತಾಗುವುದು. ಮುಖ್ಯಸ್ಥರು ನಮ್ಮನ್ನು ಅಡ್ಡದಾರಿಗೆ ಎಳೆಯುತ್ತಾರೆಂದು ಅರಿವಾದೊಡನೆಯೇ ನಾವು ಅವರನ್ನು ಸ್ಥಾನಚ್ಯುತರನ್ನಾಗಿ ಮಾಡಿ ಬೇರೆಯವರನ್ನು ಆರಿಸಬಹುದು. ಸೈನ್ಯಕ್ಕೆ ದಳನಾಯಿ ಹೇಗೋ ಹಾಗೆಯೇ ರಾಷ್ಟ್ರಕ್ಕೆ ಮುಂದಾಳು ಬೇಕು.

ನಮ್ಮಲ್ಲಿ ಜಾತಿಮತ ಭೇದಗಳು ಸಾಕಷ್ಟಿವೆ. ಅದು ಸಾಲದೆ ಇತ್ತೀಚೆಗೆ ತತ್ವಗಳ ಭೇದಗಳನ್ನು ಆಚರಿಸಲಾರಂಭಿಸಿದ್ದೇವೆ. ಈ ಪೈಕಿ ಒಂದನೆಯದಕ್ಕಿಂತ ಎರಡನೆಯದು ವಾಸಿ, ಆದರೂ ತತ್ವಗಳಿಗೆ ಅಂಟಿಕೊಂಡು ಎಲ್ಲದಕ್ಕಿಂತಲೂ ತತ್ವಗಳೇ ಮೇಲೆಂದು ಹಟಮಾರಿತನ ತೋರುವದು ತಪ್ಪು. ತತ್ವಗಳನ್ನು ದೇಶದ ಹಿತದೃಷ್ಟಿಯಿಂದ ಆಚರಿಸಬೇಕೇ ಹೊರತು ತತ್ವಗಳಿಗೆ ಪ್ರಾಮುಖ್ಯತೆ ಕೊಡಬಾರದು.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಇಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

**ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಷ್ಟ ಚಾರ್ಜು ೧೨ ಆಣೆ.**

**ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ**

**ಆಯುರ್ವೇದ ಔಷಧಾಲಯ, ಗದಗ-ಸಿಟಿ.**

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ ವಿಜಾಪುರ—
ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಂಡೇಶ್ವರ ಮೂರ್ತಿ ದಾವಣಗೇರಿ
ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲದಾಸ, ಕೆಮಿಸ್ಟ್, ಶಾಮೇರು ಬ್ಯಾಡಿಗಿ

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
**ನವಜೀವಾತು**
ಎಂಬ
**ಸೂತಿಕಾ ರಸಾಯನ**

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ| ಯಂ. ಸಿ. ಶಾಸ್ತ್ರೀ, ಯಲ್. ಐ.
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಥಾಪಿಕಸ್ಟರು:—ಡಾ| ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.




roved firm by the Govt. of Mysore
tificated by the Agent of the Govt of
ore & Indian.

ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವರ್ಗದಾರರಿಗೆ—ಶಾಲೆಗಳಿಗೆ—
ಬೇಕಾಗುವ ರಿಜಿಸ್ಟ್ರಿಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳೂ, ಎಕೌಂಟ್
ಪುಸ್ತಕಗಳೂ ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ಕೃಷಿ ಪ್ರಪಂಚ

# ಹಸಿಹುಲ್ಲು ದಾಸ್ತಾನು (Ensilage)

ನಮ್ಮ ಸಂಸ್ಥಾನದ ಜಾನುವಾರುಗಳಿಗೆ ವರ್ಷವಿಡೀ ಹಸಿಹುಲ್ಲು ಅಥವಾ ಇತರ ಹಸಿಮೇವುಗಳು ದೊರೆಯುವುದಿಲ್ಲ. ಆದುದರಿಂದ ಧಾರಾಳವಾಗಿ ದೊರೆಯುವ ಸಮಯದಲ್ಲಿ ಅವನ್ನು ಕೂಡಿಸಿ, ಕೆಡದಂತೆ ದಾಸ್ತಾನಿಟ್ಟರೆ, ಮುಂದೆ ಬೇಸಗೆ ಕಾಲದಲ್ಲಿ ದನಕರುಗಳಿಗೆ, ಮುಖ್ಯವಾಗಿ ಹಾಲು ಕರೆಯುವ ಹಸುಗಳಿಗೆ ಉಪಯೋಗಿಸಲು ತುಂಬಾ ಅನುಕೂಲವಾಗುತ್ತದೆ. ಈ ರೀತಿ ಹಸಿಹುಲ್ಲನ್ನು ಹೊಂಡಗಳಲ್ಲಿ ಅಥವಾ ಗೂಡುಗಳಲ್ಲಿ ಶೇಖರಿಸಿ ಕೆಡದಂತೆ ಕೆಲವು ತಿಂಗಳುಗಳ ವರೆಗೆ ಇಡಬಹುದು. ಈ ರೀತಿ ಕೆಡದಂತಿರಿಸುವ ಕ್ರಮಕ್ಕೆ ಎನ್‌ಸೈಲೇಜ್ [Ensilage] ಎಂದು ಕರೆಯುತ್ತಾರೆ. ಈ ರೀತಿ ಇರಿಸಿದ ಹುಲ್ಲಿಗೆ ಸೈಲೇಜ್ [Silage] ಎಂದು ಹೆಸರು. ಒಣಗಿಸಿ ಹುಲ್ಲು ಮಾಡುವುದಕ್ಕಿಂತ "ಸೈಲೇಜ್" ಮಾಡುವುದಕ್ಕೆ ಖರ್ಚು ಕಡಮೆ. ಇದು ಒಣ ಹುಲ್ಲಿನಂತೆ ಬೆಂಕಿಯಿಂದ ಸುಟ್ಟು ಹೋಗುವ, ಇಲ್ಲವೇ ಕಳ್ಳರು ಕದ್ದುಕೊಳ್ಳುವ ಭಯವಿಲ್ಲ. ಸ್ಥಳ ಕೂಡ ಕಡಮೆಯಾಗುವುದಿಲ್ಲ. ಈ ಹುಲ್ಲು ದನಕರುಗಳಿಗೆ ತಿನ್ನಲು ರುಚಿಯಾಗಿರುತ್ತದೆ, ಜೀರ್ಣವಾಗುವುದು ಬೇಗ.

ಹುಲ್ಲು ಹೆಚ್ಚಾಗಿ ಬೆಳೆದಿರುವ ಸಮಯದಲ್ಲಿ ಈ ರೀತಿ ಹುಲ್ಲು ಶೇಖರಿಸಿ ದಾಸ್ತಾನಿಡಬಹುದು. ಆದರೆ ಹೊಂಡದಲ್ಲಿ ಹಾಕಿಡುವಾಗ ಮಳೆ ಬಂದು ಒಳಗೆ ನೀರು ನಿಲ್ಲಬಾರದು. ಕೆಲವು ಜಾತಿಯ ಹುಲ್ಲುಗಳನ್ನು ದನಗಳು ತಿನ್ನುವುದಿಲ್ಲ. ಇಂತಹ ಹುಲ್ಲುಗಳನ್ನು ಸೈಲೇಜ್ ಮಾಡಿದರೆ ತಿನ್ನಲಿಕ್ಕೆ ಒಳ್ಳೇದಾಗುತ್ತವೆ. ಹುಲ್ಲು ಚೆನ್ನಾಗಿ ಬೆಳೆದು ಒಣಗುವುದಕ್ಕಿಂತ ಮುಂಚೆಯೇ ತೆಗೆಯಬೇಕು. ಒಣಗಿ ಹೋಗಿದ್ದರೆ ಹೊಂಡದಲ್ಲಿ ಹಾಕಿ ಸ್ವಲ್ಪ ನೀರು ಚಿಮುಕಿಸಬಹುದು.

ಹಸಿಹುಲ್ಲು, ಹಸಿ ಜೋಳದ ಸಸಿ, ಬಟಾಣಿಯ ಪೈರು, ಗಿನಿ ಅಥವಾ ಆನೆಹುಲ್ಲು, ಸೂರ್ಯಕಾಂತಿಯ ಗಿಡ ಇತ್ಯಾದಿಗಳನ್ನು ಸೈಲೇಜಾಗಿ ಮಾಡಬಹುದು. ಜೋಳದ ಪೈರು ಅತಿ ಒಳ್ಳೇದು. ಹೊಸೂರಿನ ಜಾನುವಾರು ಕ್ಷೇತ್ರದಲ್ಲಿ ಜೋಳ, ಬಟಾಣಿ, ಸೂರ್ಯಕಾಂತಿ ಸಸಿಗಳಿಂದ ಮಿಶ್ರಮಾಡಿ ತಯಾರಿಸಿದ ಸೈಲೇಜ್ ಪ್ರಾಣಿಗಳಿಗೆ ಅತಿ ಉಪಯೋಗಕಾರಿಯಾಗಿ ಕಂಡು ಬಂದಿದೆ. ಸೂರ್ಯಕಾಂತಿಯಲ್ಲಿ ಹೆಚ್ಚಿನ ಪೈರಾಗುವುದರಿಂದ ಅವುಗಳನ್ನು ಹೂಬಿಡುವಾಗಲೇ ಕತ್ತರಿಸಬೇಕು.

ಗದ್ದೆಗಳ ಮೂಲೆಯಲ್ಲಿಯೇ ಹೊಂಡ ಮಾಡುವುದು ಉತ್ತಮ. ಹುಲ್ಲು ಸಾಗಿಸುವ ತೊಂದರೆ ಕಡಮೆಯಾಗುತ್ತದೆ. ಆದರೆ ಈ ಸ್ಥಳವು ಉಳಿದ ಸ್ಥಳದಿಂದ ಸ್ವಲ್ಪ ಎತ್ತರವಾಗಿರದಿದ್ದರೆ ಮಳೆ ಜೋರಾಗಿ ಬಂದಾಗ ನೀರು ಇದರೊಳಕ್ಕೆ ಬೀಳಬಹುದು. ಈ ಹುಲ್ಲನ್ನು ಹೊಸೂರಿನಲ್ಲಿ 10 ತಿಂಗಳ ವರೆಗೆ ದಾಸ್ತಾನಿಟ್ಟಿದ್ದರೂ ಏನೂ ಹಾಳಾಗಲಿಲ್ಲ. ಇಂಗ್ಲೇಂಡಿನಲ್ಲಿ 2 ವರ್ಷಗಳ ನಂತರ ತೆಗೆದಾಗಲೂ ಅದು ಒಳ್ಳೆಯ ಸ್ಥಿತಿಯಲ್ಲಿತ್ತು.

ಹೊಂಡಗಳು ಚಚ್ಚೌಕವಾಗಿಯಾಗಲೀ ಉರುಟಾಗಿಯಾಗಲೀ ಇರಬಹುದು. ಆದರೆ ಚಚ್ಚೌಕವಾಗಿದ್ದರೆ ಒಳ್ಳೇದು. ಹುಲ್ಲನ್ನು ತುಂಡಾಗಿಸದೆ ಹಾಗೆಯೇ ಹಾಕಬಹುದು. ಹೊಂಡವು ಬಹಳ ಆಳವಾಗಿರಕೂಡದು. ಹೆಚ್ಚು ಆಳವಿದ್ದರೆ ಅಡಿಯಲ್ಲಿ ತೇವವಿರುತ್ತದಲ್ಲದೆ, ಅನಂತರ ತೆಗೆಯುವುದಕ್ಕೂ ಕಷ್ಟ. ಹೊಂಡಕ್ಕೆ ಸಿಮೆಂಟ್ ಅಥವಾ ಗಾರೆಗಳಿಂದ ಮುಚ್ಚುವ ಅಗತ್ಯವಿಲ್ಲ. ಹಸಿ ಹುಲ್ಲನ್ನು ಹಾಕಿ ಮುಚ್ಚಿದನಂತರ ಅದರ ಅಡಿಯಲ್ಲಿ ನಿಲ್ಲುವ ನೀರನ್ನು ಭೂಮಿಯು ಎಳೆಕೊಳ್ಳುತ್ತದೆ. ಅದರ ಬದಿಗಳಿಂದ ಮಣ್ಣು ಜರಿದು ಹೊಂಡದೊಳಗೆ ಬೀಳದಂತಾಗಬೇಕು. ಮಣ್ಣು ಗಟ್ಟಿ ಇಲ್ಲದಿದ್ದರೆ ಬದಿಗಳಿಗೆ ದಪ್ಪವಾದ ಸರಿಗೆ ಬಲೆ ಅಥವಾ ಇತರ ಸಾಮಾಗ್ರಿಗಳನ್ನಿಡಬಹುದು.

ಹುಲ್ಲು ಮತ್ತು ಇತರ ಪೈರುಗಳನ್ನು ಹೂಬಿಡಲಿಕ್ಕೆ ಪ್ರಾರಂಭಿಸುವಾಗ ಕತ್ತರಿಸಬೇಕು. ಜೋಳದ ಪೈರನ್ನು ಬೀಜ ಆಗಲಿಕ್ಕೆ ಶುರುವಾಗುವಾಗ ತೆಗೆಯಬೇಕು. ಹುಲ್ಲು ಹಸಿಯಾಗಿರುವಾಗಲೇ ಹೊಂಡದಲ್ಲಿ ಹಾಕದಿದ್ದರೆ, ಅದರಲ್ಲಿರುವ ನೀರು ಬತ್ತಿ ಹೋಗುತ್ತದೆ. ಹುಲ್ಲು-ವಾ-ಪೈರು ಹೆಚ್ಚು ಬೆಳೆದಿದ್ದರೆ ಹೊಂಡದಲ್ಲಿ ಹಾಕುವಾಗ ನೀರು ಬೆರೆಸಬೇಕು. ಅಥವಾ ನೀರು ಹೆಚ್ಚಿರುವ ಇತರ ಹುಲ್ಲನ್ನು ಮಿಶ್ರಮಾಡಬೇಕು. ಹೊಂಡದಲ್ಲಿ ಹುಲ್ಲನ್ನು ಚೆನ್ನಾಗಿ ಅಮುಕಿಸಿಡುವಂತೆ ಎತ್ತುಗಳನ್ನು ಸಹ ತಂದು ತುಳಿಸಬಹುದು. ಸುತ್ತಲೂ ಬದಿಯಲ್ಲಿರುವ ಹುಲ್ಲು ಚೆನ್ನಾಗಿ ಅಮುಕಿರಬೇಕು. ಹುಲ್ಲನ್ನು ತುಂಡು ತುಂಡು ಮಾಡಿ ಹಾಕಿದರೆ ಒಳ್ಳೇದು. ಆದರೆ ಅಗತ್ಯವಲ್ಲ. ಹೊಂಡವನ್ನು ತುಂಬಿಸಿ, ಅಮುಕಿಸಿ, ನೆಲದ ಮಟ್ಟದಿಂದ 2-ವಾ-3 ಅಡಿ ಎತ್ತರದ ವರೆಗೆ ಏರಿಸಬೇಕು.

## ಹೊಂಡ ಮುಚ್ಚುವ ಕ್ರಮ

ಹೊಂಡವು ತುಂಬಿದನಂತರ ಸುತ್ತಲಿರುವ ಮಣ್ಣನ್ನು ಅದರ ಬಾಯಿಯ ಸುತ್ತಲೂ ಗೋಡೆಯಂತೆ ಕಟ್ಟಿಕಟ್ಟಿದರೆ ಮೇಲೆ ನಿಂತಿರುವ ಹುಲ್ಲು ಜಾರಿ ಹೋಗುವುದಿಲ್ಲ. ಈ ಕಟ್ಟೆ 2-3 ಅಡಿ ಅಗಲವಿದ್ದು ಗಾಳಿ ನೀರು ಒಳಹೋಗದಂತಾಗಬೇಕು. ಅನಂತರ ಹುಲ್ಲಿನ ಮೇಲೆ ಒಂದು ಅಡಿ ದಪ್ಪವಾಗಿ ಮಣ್ಣು ಹರಡಬೇಕು. ಮಧ್ಯದಲ್ಲಿ ಹೆಚ್ಚು ಎತ್ತರವಾಗಿ ಹಾಕಿ ನೀರು ಮೇಲೆ ನಿಲ್ಲಲು ಅಸ್ಪದವಿರಕೂಡದು. ನೆಲದಲ್ಲಿ ಒಡಕು ವಾ ಗುಂಡಿಗಳಾಗಕೂಡದು. ಕೂಡಲೇ ಸರಿಪಡಿಸಬೇಕು. ಹೊಂಡದಲ್ಲಿರುವ ಹುಲ್ಲು ಸಮಯ ಹೋದ ಹಾಗೆಯೇ ತಗ್ಗುತ್ತಾ ಬರುತ್ತದೆ. ಆಗ ನೀರು ವಾ ಗಾಳಿ ಸಂದುಗಳ ಮುಖಾಂತರ ಒಳ ಹೋಗದಂತೆ ನೋಡಿಕೊಳ್ಳಬೇಕು. ಹೊಂಡದ ಸುತ್ತು ಕಟ್ಟೆಯ ಹೊರಬದಿಯಲ್ಲಿ ಚರಂಡಿ ಮಾಡಿದರೆ ಮಳೆ ನೀರು ಸುಲಭವಾಗಿ ಹರಿದು ಹೋಗುತ್ತದೆ.

ಬೇಸಿಗೆ ಕಾಲದಲ್ಲಿ ದನಗಳಿಗೆ ಹಸಿ ಹುಲ್ಲು ದೊರೆಯದಿರುವಾಗ ಹೊಂಡವನ್ನು ತೆರೆಯಬಹುದು. ಒಂದು ಗಜ ಅಗಲದಲ್ಲಿ ಮಾತ್ರ ತೆಗೆದು ಉಳಿದ ಅಂಶವನ್ನು ಹಾಗೆಯೇ ಇಟ್ಟರೆ, ಒಣಗಿ ನಷ್ಟವಾಗುವುದಿಲ್ಲ.

ಸೈಲೇಜನ್ನು ಹಾಲು ಕರೆಯುವ ಹಸುಗಳಿಗೂ ಒಂದು ವರ್ಷಕ್ಕೆ ಮೇಲ್ಪಟ್ಟ ಪ್ರಾಯದ ಕರುಗಳಿಗೂ ಕೆಲಸಮಾಡುವ ಎತ್ತುಗಳಿಗೂ ಕೊಡಬಹುದು. ಮೊದಮೊದಲು ಅಭ್ಯಾಸವಿಲ್ಲದೆ ತಿನ್ನುವುದಿಲ್ಲ. ಆದುದರಿಂದ ಒಣ ಹುಲ್ಲಿನೊಂದಿಗೆ ಮಿಶ್ರಮಾಡಿಕೊಡಬೇಕು. ಒಂದು ವಾರದ ವರೆಗೆ ಸ್ವಲ್ಪ ಸ್ವಲ್ಪವೇ ಕೊಡುತ್ತಾ ಬಂದರೆ, ದನಗಳು ರುಚಿ ಹಿಡಿದುಕೊಳ್ಳುತ್ತವೆ. ಹಾಲು ಕರೆಯುವ ಹಸುಗಳಿಗೂ ಕೆಲಸ ಮಾಡುವ ಎತ್ತುಗಳಿಗೂ 30-40 ಪೌಂಡುಗಳಷ್ಟು ಕೊಡಬಹುದು. ಹಾಲಿನ ಪ್ರಮಾಣವೂ ಹೆಚ್ಚುತ್ತದೆ. ಬಾಯಿ ಹುಣ್ಣು, ಕಾಲು ಜ್ವರದಿಂದಿರುವ ಪ್ರಾಣಿಗಳಿಗೆ ಇದು ಉತ್ತಮ ಆಹಾರ.

ತುಂಬಾ ಗೊಬ್ಬರ ಹಾಕಿ ಬೆಳೆಸಿದ ಪೈರು ಹದವಿಲ್ಲದೆ ಬೆಳೆದು ದೊಡ್ಡದಾಗಿರುವುದರಿಂದ ಸಣ್ಣ ಕಟ್ಟುಗಳಾಗಿ ಕಟ್ಟಿ 10-12 ಗಂಟೆಯ ವರೆಗೆ ಹೊಂಡದ ಹೊರಗೆ ಇಟ್ಟಿರಬೇಕು. ಆಗ ಹೆಚ್ಚಿಗಿರುವ ನೀರು ಬತ್ತಿ ಹೋಗುತ್ತದೆ.

[ಮು. ಸ]


ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ಬಾತುಕೊಳ್ಳುವುದು, ಚೇಳವಿಷ ಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

REGD

ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

Nambiar's

ARYA VAIDYA SALA

UDIPI

*Ideal House for Ayurvedic Treatment.*

T. N. Kelu Nambiar,

*Vaidya.*

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರ ವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD



Highly perfumed and medicated, worth using daily by one and all, keeps hair black and relieves headache etc.

TRADE MARK

Manufactured by:-

Swadeshi Oushadhi Bhandara (Regd.)

KUNJAL P.O. Brahmavar, S.K.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನು ವಿಚಾರಿಸಿರಿ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುತ್ತದು, ಹೊಟ್ಟೆಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ; ರೂ 3-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ. 8- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

Mrs. D. DEVEE, F. D8. (N. J.)
Tollygunge CALCUTTA.

ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು


EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 3618

Estd: 1921 ಸ್ಥಾಪನೆ

9-3-1950

LICENCE No. 31
Licensed to Post
without Prepayment

FOUNDER:
Sri. A. B. Shetty
Minister for Agriculture
& Veterinary

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30 ವಾರ ೨೮

# NAVAYUGA WEEKLY UDIPI, S.K.

Post Box No. 22

Vol 30 No. 28

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

## ಗುಣಾವಗುಣಗಳ ಬಜೆಟ್!

ಕೇಂದ್ರ ಹಾಗೂ ಪ್ರಾಂತಿಕ ಸರಕಾರಗಳು ತಂತಮ್ಮ ಆಯವ್ಯಯ ಮುಂಗಡ ಪತ್ರವನ್ನು ಮಂಡಿಸುತ್ತಿರುವ ಕಾಲವಿದು. ಮುಂದಿನ ವರುಷದ ಉತ್ಪನ್ನವೆಷ್ಟು ಮತ್ತು ವೆಚ್ಚವೆಷ್ಟು ಎಂಬುದನ್ನು ಸವಿವರವಾಗಿ ಅಂದಾಜು ಕಟ್ಟಿ, ಚರ್ಚೆಗಿಟ್ಟು ನಿರ್ಧಾರಕ್ಕೆ ಬರುವ ಅವಧಿಯಿದು. ಯಾವುದೇ ರಂಗದ, ಯಾವುದೇ ವಿಧಾನದ ವ್ಯವಸ್ಥೆಯಾದರೂ ಸರಿಯೇ—ಆಯ-ವ್ಯಯ, ಲಾಭ ನಷ್ಟ, ಮೇಲು ಕೀಳು, ಹಿತಾಹಿತ, ಸರಿ ತಪ್ಪುಗಳ ಅಂದಾಜನ್ನು ತಿಳಿದು ಸಾಗಿದರೇನೇ ಸಫಲವಾದೀತು; ಅಂತಹ ನಿಶ್ಚಯ ಗತಿಯಿಲ್ಲದೆ, ಮನ ಬಂದಂತೆ ಯದ್ವಾತದ್ವಾ ಹೆಜ್ಜೆಯಿಡುತ್ತಾ ಹೋದರದು ನಿರರ್ಥಕವಾದೀತು.

ಇಡೀ ರಾಷ್ಟ್ರದ ಆಡಳಿತೆ ನಿರ್ವಹಿಸುತ್ತಿರುವ ಕೇಂದ್ರ ಸರಕಾರದವರು ತಮ್ಮ ಪಾಲಿನದಾಗಿರುವ ಖಾತೆಗಳ-ಪ್ರಾಂತ್ಯದಾಡಳಿತೆ ವಹಿಸಿರುವ ಪ್ರತಿಯೊಂದು ಪ್ರಾಂತಿಕ ಸರಕಾರವು ತಂತಮ್ಮ ಪ್ರಾಂತ್ಯಕ್ಕೆ ಸಂಬಂಧಿಸಿರುವ ಇಲಾಖೆಗಳ— ಹುಟ್ಟು ಮತ್ತು ವೆಚ್ಚಗಳ ಅಂಕೆ ಸಂಖ್ಯೆಗಳನ್ನು ಮುಂದಾಗಿ ನಿರ್ಧರಿಸಿಕೊಳ್ಳುವಂತೆಯೇ ಜಿಲ್ಲಾ ಬೋರ್ಡು, ನಗರ ಸಭೆಗಳಂತಹ ಸ್ಥಳೀಯ ಸಂಸ್ಥೆಗಳೂ ತಂತಮ್ಮ ಕ್ಷೇತ್ರದ ಮಟ್ಟಿಗೆ ಇಂತಹ ಅಂದಾಜು ಪತ್ರಿಕೆಗಳನ್ನು ತಯಾರಿಸಿಕೊಳ್ಳುತ್ತಿವೆ. ಬೇಂಕು ಮುಂತಾದ ಹಣಕಾಸು ವಹಿವಾಟು ಸಂಸ್ಥೆಗಳೂ ವಿವಿಧ ರೀತಿಯ ಸಾರ್ವಜನಿಕ ಕಾರ್ಯಾಸಕ್ತ ಸಂಘಸಂಸ್ಥೆಗಳೂ ಅಂದಾಜು ಕಟ್ಟಿಕೊಂಡೇ ಕಾರ್ಯಕ್ಕಿಳಿಯುವ ಕ್ರಮವಿದೆ.

ಗುರಿ, ಧೋರಣೆ, ಶಿಸ್ತು, ನಿಯಮಗಳು ಸರಕಾರಗಳ ಮತ್ತು ಸಾರ್ವಜನಿಕ ಕಾರ್ಯರಂಗಗಳಲ್ಲಿ ಹೇಗೆ ಅಗತ್ಯವೋ ಹಾಗೆಯೇ ಖಾಸಗೀ ಹಣ, ಗುಣ, ನಡತೆಗಳ ಮಟ್ಟಿಗೂ ಅತ್ಯಗತ್ಯ. ಆಯವ್ಯಯಗಳಂತೆಯೇ ಗುಣಾವಗುಣಗಳ ತುಲನೆಯೂ ಬೇಕೇಬೇಕು. ಗುಣ ನಡತೆಗಳಿಂದಾಗಲೀ, ದುಡ್ಡಿನಿಂದಾಗಲೀ 'ದೊಡ್ಡವರು' ಅನ್ನಿಸಿರುವ ಪ್ರತಿಯೊಬ್ಬರೂ 'ಬಜೆಟ್' ನೋಡಿಕೊಂಡೇ ಕೆಲಸ ಮಾಡುವವರೆಂಬುದನ್ನು ಮರೆಯಬಾರದು. ಇಂತಹ ಆಯವ್ಯಯದ ಅಂದಾಜು ಕಟ್ಟದಿದ್ದರೆ ಅಥವಾ ಅಂದಾಜು ತಪ್ಪಿದರೆ ಸರಕಾರ ಮತ್ತು ಸಂಘಸಂಸ್ಥೆಗಳಂತೆಯೇ ವ್ಯಕ್ತಿಗಳೂ ಪತನ ಹೊಂದುವರು; ಜೀವನದಲ್ಲಿ ಸೋಲನ್ನನುಭವಗೊಳ್ಳುವರು. ಹಣಕಾಸಿನಂತೆಯೇ ಗುಣ ನಡತೆಗಳ ಮಟ್ಟಿಗೂ ಇದೇ ಮಾತು.

ವರುಷಂಪ್ರತಿ ಮುಂದಿನ ವರುಷದ ಹಣಕಾಸಿನ 'ಬಜೆಟ್' ತಯಾರಿಸುವ ಸರಕಾರೀ ಸಂಪ್ರದಾಯವಿರುವಂತೆಯೇ, ಗುಣಾವಗುಣಗಳ ಬಜೆಟ್ ಸಿದ್ಧಪಡಿಸಿ, ಮುಂದಿಡುವ ಕ್ರಮವೂ ಇರಬೇಕಾದುದು ಅಗತ್ಯವೆಂದು ಕಾಣುತ್ತಿದೆ. ಆದರೀ ಪದ್ಧತಿ ಲೋಕದಲ್ಲೆಲ್ಲಿಯೂ ಇಲ್ಲ. ಸರಕಾರೀ ಆಯವು ಜನತೆಯಿಂದಲೇ ಆಗಬೇಕು; ಅದು ಜನತೆಯ ನಡುವಿನಲ್ಲೇ ವ್ಯಯವಾಗಬೇಕು. ಅಂತೆಯೇ ಜನತೆಯ ಶಕ್ತಿ — ದೌರ್ಬಲ್ಯ, ಗುಣ — ದೋಷಗಳೇ ಸರಕಾರದ ಬಲಾಬಲಗಳು. ಇಂತಹ ಬಲಾಬಲಗಳನ್ನು ತುಲನೆ ಮಾಡಿ ಜನತೆಯ ಮುಂದಿಡುವ ಸಂದರ್ಭವು ರಾಷ್ಟ್ರಾಧಿಕಾರಿಗಳ ಪಾಲಿಗೆ ಆಗಾಗ ಬರುತ್ತಿದೆ; ಅನಿರೀಕ್ಷಿತವಾಗಿ ಅಸಾಮಾನ್ಯ ಸಂದರ್ಭ, ಸನ್ನಿವೇಶಗಳನ್ನು ಸ್ಫೋಟಗೊಳಿಸುವ ಈ ಯುಗದಲ್ಲಿ ಜನಮನೋವೃತ್ತಿಯು ಇಡೀ ವರುಷ ಏಕಪ್ರಕಾರವಿರಬೇಕೆಂದು ಅಂದಾಜು ಕಟ್ಟದರದು ತಪ್ಪಾಗದು. ಯುದ್ಧದಂತಹ ವಿಶೇಷ ಸಂದರ್ಭಗಳು ಆಕಸ್ಮಿಕ ಎದ್ದರೆ ಹಣಕಾಸಿನ ಅಂದಾಜು ಕೂಡಾ ತೀವ್ರ ಬದಲಾವಣೆಗೊಳ್ಳಲೇಬೇಕು. ಹೀಗಿರುವಾಗ, ಆಯವ್ಯಯ ಅಂದಾಜು ಕಟ್ಟಿಯಂತೆಯೇ ಪ್ರತಿಯೊಂದು ರಾಷ್ಟ್ರದ ಸರಕಾರವೂ, ಜನತೆಯ ಗುಣಾವಗುಣಗಳ ಅಧಿಕೃತ ಬಜೆಟನ್ನು ವರುಷಕ್ಕೊಮ್ಮೆ ತಯಾರಿಸಿಕೊಳ್ಳುವುದು ಅಗತ್ಯವೆನ್ನಿಸುತ್ತಿದೆ.

ಈ ಅಂದಾಜನ್ನು ನಾವು ಸ್ವತಃ ಕಟ್ಟುವುದಾದರೆ ಭಾರತ ರಾಷ್ಟ್ರ ಹಾಗೂ ಜನತೆಯ ಗುಣಾವಗುಣಗಳ ಪಟ್ಟಿಯು ಪ್ರಕೃತ ಈ ಕೆಳಗಿನಂತಿದೆ.

**ಗುಣಗಳ ತಖ್ತೆ:—**

ವಿಶಾಲ ಭಾರತದ ಆ ಮೂಲೆಯಿಂದೀ ಮೂಲೆಯ ವರೆಗೂ ಏಕಪ್ರಕಾರ ಜನತೆಯ ವಿಶ್ವಾಸಕ್ಕೆ ಪಾತ್ರವಾದ ಮತ್ತು, ಬಹು ವಿಧದ ಪಕ್ಷ, ಪಂಗಡಗಳ ಎಳೆದಾಟವಿರುವಲ್ಲಿ ಉಚಿತ ಮಾರ್ಗಾವಲಂಬಿಯಾಗಿರುವ ನಾಯಕತ್ವವು ಇಂದು ರಾಷ್ಟ್ರಕ್ಕಿದೆ.

ಎಂತಹ ಕಷ್ಟ, ನಷ್ಟ, ದುರಭಿಪ್ರಾಯ, ವಿಮರ್ಶೆ, ನಿಂದೆಗಳಿದ್ದರೂ ಕಾರ್ಯತಃ ರಾಷ್ಟ್ರನಾಯಕತ್ವದ ಮೇಲೆ ಭರವಸೆಯಿಟ್ಟು, ನಾಯಕರ ಮಾತಿನಂತೆ ವರ್ತಿಸುವ ವಿಧೇಯತೆ ಮತ್ತು ನಿಷ್ಠೆ ಜನತೆಯಲ್ಲಿದೆ.

ಇಂದು ಆಡಳಿತೆ ನಡೆಸುತ್ತಿರುವ ಪಕ್ಷದ ಕಡೆಗೆ ಎಷ್ಟೊಂದು ಅತೃಪ್ತಿಯಿದ್ದರೂ ಪ್ರಕೃತ ಅದಕ್ಕಿಂತ ಉತ್ತಮವಾದ ಇನ್ನೊಂದು ಪಕ್ಷವು ತಮ್ಮ ನಡುವೆ ದೇರೆ ಇಲ್ಲವೆಂಬುದನ್ನು ತಿಳಿದುಕೊಳ್ಳುವಷ್ಟು ತುಲನಾತ್ಮಕ ಬುದ್ಧಿ ಜನತೆಯಲ್ಲಿದೆ.

ಸ್ವಭಾಷಾ ಪ್ರಾಂತ್ಯ ರಚನೆ, ಸ್ವಜಾತೀ ಉದ್ಧಾರ, ಸ್ವಹಿತ ಸಾಧನೆಗಳ ಮಟ್ಟಿಗೆ ಎಷ್ಟೊಂದು ಅಡ್ಡಿ, ಆತಂಕಗಳೊದಗಿದರೂ ಈ ಅಡಚಣೆಗಳ ನೆವನದಿಂದ ಕೆಲವರು ಎಂತಹ ಉದ್ರೇಕ ನಿರ್ಮಾಣಕ್ಕೆ ಪ್ರಯತ್ನಿಸಿದರೂ, ರಾಷ್ಟ್ರಹಿತದೃಷ್ಟಿಯಿಂದ ಎಲ್ಲವನ್ನೂ ಸಹಿಸಿಕೊಂಡು ಶಾಂತರಾಗಿರುವ ಗುಣ ಜನಸಾಮಾನ್ಯರಲ್ಲಿದೆ.

ಹೈದರಾಬಾದ್ ಮೇಲಣ ಪ್ರಭಾವಶಾಲೀ ಆಚರಣೆ ಸಮೇತ ಸಂಸ್ಥಾನಗಳೆಲ್ಲವನ್ನೂ ಹಾದಿಗೆ ತಂದ ರೀತಿ—ಕಾಲಂಶ ಪಾಕಿಸ್ತಾನ್ ಭಾಗ ಕಳೆದುಹೋದರೂ ಉಳಿದ ವಿಸ್ತಾರ ಭಾಗವು ಅಖಂಡಾಕಾರಗೊಂಡು ಶಾಸನಾನ್ವಯ ಪ್ರಗತಿ ಮತ್ತು ಭದ್ರತೆ ಸಂಪಾದಿಸಿಕೊಂಡ ವಿಧಾನ—ಅಂತರಾಷ್ಟ್ರೀಯ ರಂಗದಲ್ಲಿ ಗಳಿಸಿಕೊಂಡ ವರ್ಚಸ್ಸು ಮೊದಲಾದವುಗಳಿಂದ ಜನತೆಯಲ್ಲಿ ಹೆಗ್ಗಳಿಕೆ ಹಾಗೂ ಆತ್ಮ ವಿಶ್ವಾಸ ನೆಲಸಿದೆ.

ಹೊಟ್ಟೆ ಮತ್ತು ಮನಸ್ಸು, ಎರಡನ್ನೂ ಆಗತ್ಯ ಬೀಳುವಷ್ಟು ಕಾಲದ ವರೆಗೆ, ಮತ್ತು ಪರಮಾವಧಿ ಬಿಗಿ ಹಿಡಿದುಕೊಳ್ಳಲು ಗೊತ್ತಿರುವಂತೆಯೇ ಸಂದರ್ಭ ಬಂದಾಗ ಅವನ್ನು ಸಾಕಷ್ಟು ಉಬ್ಬಿಸಿ, ಎಬ್ಬಿಸಿ ನಿಲ್ಲಿಸಲಿಕ್ಕೂ ಜನತೆಗೆ ತಿಳಿದಿದೆ.

ಸ್ವಾತಂತ್ರ್ಯಕ್ಕಾಗಿ ಹೋರಾಟಕೊಟ್ಟು ಆ ಮೂಲಕ ಸಾರ್ವಜನಿಕರ ಸಂಪರ್ಕ ಬೆಳೆಸಿದ್ದ ಪಕ್ಷವೇ ಸ್ವತಂತ್ರಾಡಳಿತೆಯನ್ನು ನಿರ್ವಹಿಸುತ್ತಿರುವುದರಿಂದ ಎಂತಹ ದೋಷಗಳಿದ್ದರೂ ಜನತೆಗೆ ಆಡಳಿತೆಯೊಡನೆ ಆತ್ಮೀಯತಾ ಭಾವನೆ ತುಂಬಿಕೊಂಡಿದೆ.

ಸಾಕಷ್ಟು ಬುದ್ಧಿ ಸಂಸ್ಕಾರಗೊಳ್ಳದಿದ್ದರೂ ಇಂತಹ ಅಪೂರ್ಣಾವಸ್ಥೆಯನ್ನೇ ಪರಿಪೂರ್ಣತ್ವವೆಂದು ಭಾವಿಸುವ ಅಹಂಕಾರವನ್ನೇನೂ ಕಟ್ಟಿಕೊಳ್ಳದೆ, ಕಲಿಸುವವರಿದ್ದರೆ ಜನತೆ ಕಲಿತುಕೊಳ್ಳಲು ತಯಾರಿದೆ.

**ಅವಗುಣಗಳ ತಖ್ತೆ:—**

ಅಖಿಲ ಭಾರತೀಯ ಜನತೆಯ ಪೂರ್ಣ ವಿಶ್ವಾಸ ತಮ್ಮ ಮೇಲಿದೆ, ಎಂಬುದರಿಂದ ಧೋರಣೆ ನಿರ್ವಹಣದಲ್ಲಿ ರಾಷ್ಟ್ರ ನಾಯಕರು ಸಾಕಷ್ಟು ಜಾಗರೂಕತೆ ವಹಿಸಿರುವರಾದರೂ, 'ತಾತ್ರ ಮಾಡಿದ್ದೇ ಸರಿ' ಎಂಬಂತಹ ಹಠಮಾರಿತನವು ನಾಯಕರಲ್ಲಿ ವ್ಯಾಪಿಸಿಕೊಂಡಿದೆ.

ನಾಯಕಾನುವರ್ತನೆಯು ಅಗತ್ಯವುಳ್ಳ ಪರಿಮಾಣಕ್ಕೂ ಮಿಕ್ಕಿರುವುದರಿಂದ ಹಿತಾಹಿತಗಳನ್ನು ತುಲನೆಮಾಡಿ ರಾಷ್ಟ್ರನಾಯಕರಿಗಗತ್ಯವುಳ್ಳ ಪ್ರೇರಣೆ ಅಥವಾ ಸೂಚನೆ ಕೊಡುವ

THE UNITED KARNATAK INSURANCE COMPANY, LTD., DHARWAR.

Established: 1929.

Offers their valuable service to the public of India in making their sweet home, always happy.
For good investments and valuable connections, please consult us

ಯೋಗ್ಯತೆಯು ಜನತೆಯಲ್ಲಿ ನಾಕಷ್ಟು ಕಂಡು ಬರುತ್ತಿಲ್ಲ.

ವಿಜಯ ಮತ್ತು ಮಹತ್ವಾಕಾಂಕ್ಷೆಗಳಿಗಾಗಿ ಮಿತಿ ತಪ್ಪಿ ಹಿಗ್ಗಿ ಹೆಗ್ಗಳಿಕೆಪಡುವ ಗುಣವೂ ತೊಡಕು, ಕೊರತೆಗಳಿಗಾಗಿ ಅಂದಾಜು ತಪ್ಪಿ ಕುಗ್ಗುವ ಸ್ವಭಾವವೂ ಜನರಲ್ಲಿ ಕಂಡು ಬರುತ್ತಿದೆ.

ಮಾತುಗಾರಿಕೆ, ತಾತ್ಕಾಲಿಕ ಲೇಪದಂತಹ ಅತಿ ಪ್ರಚಾರ, ಅತಿಶಯೋಕ್ತಿ, ಅತಿರಂಜನೆಗಳ ಪುಟ್ಟಾಟವು ನಾಯಕರಿಂದಾರಂಭಿಸಿ, ಸಾಮಾನ್ಯರ ವರೆಗೆ ಸರ್ವತ್ರ ವ್ಯಾಪಿಸಿಕೊಂಡಿದೆ. ನುಡಿಗಾರಿಕೆ ಅಭಿವೃದ್ಧಿಗೊಂಡಷ್ಟು ಕಾರ್ಯಪಟುತ್ವ ಬೆಳೆದಿಲ್ಲ. ಎಲ್ಲವನ್ನೂ ಮೇಲಿಂದ ಮೇಲೆ ನೋಡುವ ಮತ್ತು ವರ್ಣಿಸುವ ಚಟವೇ ಸರ್ವವ್ಯಾಪಿಯಾಗಿದೆ ಹೊರತು ಗಾಢಾಭ್ಯಾಸ, ಸೂಕ್ಷ್ಮಪರಿಚಯ, ಸ್ಥಿತಿಗತಿಗಳ ಸತ್ಯಜ್ಞಾನ ಸಾಕಷ್ಟು ತೋರಿಬರುತ್ತಿಲ್ಲ.

ನಾಯಕರ ಮತ್ತು ಬೋಧಕರ ಸಂಖ್ಯೆ ಹೆಚ್ಚಾಗಿದೆ; ಅನುಯಾಯಿಗಳು ಮತ್ತು ಆಚರಣೆಯವರು ಕಡಿಮೆಯಾಗುತಿದ್ದಾರೆ.

ರಾಜಕೀಯ ಸ್ವಾತಂತ್ರ್ಯ ದೊರೆತೊಡನೆ, ತಾವು ಕೊನೆಯ ಮಹಡಿಯೇರಿದಂತಾಯಿತೆಂಬ ಭಾವನೆಯಿಂದ, ಅಲ್ಲಿ ತಂತಮ್ಮ ಸುಖಾನುಕೂಲತೆಗಳನ್ನು ನೋಡಿಕೊಳ್ಳುವದೊಂದೇ ಈಗಿನ ತಮ್ಮ ಕರ್ತವ್ಯವೆಂಬ ಭಾವನೆಯು ಪ್ರತಿಯೊಂದು ಪಕ್ಷ, ಸಂಗಡ, ಗುಂಪು, ವ್ಯಕ್ತಿಯಲ್ಲಿಯೂ ವ್ಯಾಪಿಸಿಕೊಂಡಿದೆ

ಸರಕಾರ ನಿರ್ವಹಿಸುತ್ತಿರುವ ಮತ್ತು ಅಖಿಲ ರಾಷ್ಟ್ರದ ಮುಖ್ಯ ರಾಜಕೀಯ ಪಕ್ಷವಿದ್ದು ಅತ್ಯಧಿಕ ಜನರ ಬೆಂಬಲವಿರುವ ಕಾಂಗ್ರೆಸ್ ಪಕ್ಷಗಳೊಳಗಡೆ, ಹಾಗೂ ಸರ್ವ ಸಾಮಾನ್ಯ ಕಾಂಗ್ರೆಸ್ ಕ್ಷೇತ್ರದಲ್ಲಿ ಎಲ್ಲೆಲ್ಲಿಯೂ ದ್ವೇಷಾಸೂಯೆ, ಸ್ವಾರ್ಥಪೂರಿತ ಮೇಲಾಟ, ಅದೂರ ನೋಟವೇ ಹರಡಿಕೊಂಡಿದೆ.

ಹಿಂದಿನ ಶತಮಾನದ ಕಟ್ಟುಗ್ರ ಧರ್ಮಾಭಿಮಾನವನ್ನು ಪುನರುತ್ಥಾನಿಸುವ ಪಕ್ಷಗಳಿರುವಂತೆಯೇ, ಅನ್ಯ ರಾಷ್ಟ್ರೀಯ ರಾಜಕಾರಣವನ್ನು ಇಲ್ಲಿ ತುರುಕಿಸಲು ಹವಣಿಸುವ ಪಕ್ಷಗಳೂ ಇವೆ. ಈ ಕಾಲ ಮತ್ತೀ ದೇಶದ ಇಚ್ಛೆಯನ್ನೇ ಅವಹೇಳನಕ್ಕೀಡುಮಾಡುತ್ತಿರುವ ಈ ಪ್ರತಿಗಾಮೀ, ಅತಿಗಾಮೀ ಶಕ್ತಿಗಳು ಎಂತಹ ಪ್ರತಿಕೂಲ ವಾತಾವರಣದಲ್ಲಾದರೂ ಮುನ್ನುಗ್ಗುವ ಉರುಡಾಟ ನಡೆಸುತ್ತಲೇ ಇವೆ.

ಜನತಾ ರಾಜ್ಯದಲ್ಲಿ ಯಾವ ಕಾರ್ಯವಾದರೂ ಜನತೆಯಿಂದ ನಿರ್ದೇಶಿಸಲ್ಪಡುವ, ಪ್ರೇರೇಪಿಸಲ್ಪಡುವ, ತಿದ್ದಲ್ಪಡುವ ನಿದರ್ಶನ ಕಂಡು ಬರುತ್ತಿಲ್ಲ. ಆಗಾಗ, ಅಲ್ಲಲ್ಲಿ, ಆದೂ ಬಹುಮುಖಿಯಾಗಿ ಚೇತನ ಕಂಡುಬರುತ್ತಿದೆಯಾದರೂ ಒಟ್ಟಿನ ಮೇಲೆ ಜನ ಮನೋವೃತ್ತಿ ಜಡವಾಗಿದೆ.

ಶಾಸನಭಂಗ, ಸತ್ಯಾಗ್ರಹ, ಸ್ವಾತಂತ್ರ್ಯ ಹೋರಾಟ, ಮುಂತಾದ ವಿಧಾನಗಳು ಅವಧಿ ಮೀರಿಯೂ ಅಲ್ಲಲ್ಲಿ ಉಳಿದುಕೊಂಡಿವೆ.

ರಾಷ್ಟ್ರ ರಕ್ಷಣೆ, ಆಹಾರೋದ್ಯಮ ಸ್ವಾವಲಂಬನಗಳ ಮಟ್ಟಿಗೆ ವಸ್ತುತಃ ನಾವು ಹೇಗಿದ್ದೇವೆ—ನಮ್ಮೊಡನೆ ಅಂತರ್ಗಾಮೀ ಸಂಬಂಧವುಳ್ಳ ಸುತ್ತಮುತ್ತಲಿನ ಆಗು ಹೋಗುಗಳು ಸ್ವಭಾವತಃ ಎಂತಹ [illegible] ಭವಿಷ್ಯಗರ್ಭದಲ್ಲಿ ದೇಶವು [illegible]—ಎಂಬ ಜ್ಞಾನ ಅಥವಾ ಕಲ್ಪನೆ ಜನತೆಗಿಲ್ಲ.

**ಕೊರತೆಯ ಅಂಶ:-**

ಮೇಲ್ಗಡೆ ನಮೂದಿಸಿರುವ ಗುಣಾವಗುಣಗಳ ಆಯವ್ಯಯ ತಖ್ತೆಗಳ ಮೇಲಿಂದ ಭಾರತೀಯ ಜನತೆಯ ಯೋಗ್ಯತೆಯನ್ನು ವಜಾ ತೆಗೆದು ಕೆಲವಂಶ ಅಯೋಗ್ಯತೆಯೇ ಹೆಚ್ಚಾಗುಳಿಯಬಹುದೆಂದು ಅಂದಾಜು ಕಟ್ಟಬಹುದು. ಪ್ರಚಲಿತ ಸ್ಥಿತಿಯ ಆಧಾರದಂತೆ ಮುಂದಿನ ಅವಧಿಯಲ್ಲಿ ಆಯಕ್ಕಿಂತ ವ್ಯಯವೇ ಅಧಿಕವಾಗಿ ಕೆಲವಂಶ ಕೊರತೆ ಕಂಡು ಬರುತ್ತಿದೆ.

ರಾಷ್ಟ್ರನಾಯಕರಲ್ಲಿರುವ ಯೋಗ್ಯತೆ ಮತ್ತು ಕಾರ್ಯ ತತ್ಪರತೆಯನ್ನು ಅವರ ನಿರಂಕುಶ ಮನೋವೃತ್ತಿ ಮೀರಲಾರದೆಂಬುದು ನಿಜವಾದರೂ ಇದರೊಡನೆ ಹೋಲಿಸಬೇಕಾದ ಜನಸಾಮಾನ್ಯರ ಅನುಕರಣ ಬುದ್ಧಿಯು ವಿಚಾರ ವಿಮರ್ಶೆಗಳಿಲ್ಲದ ನಿರ್ಜೀವ ಅಂಧಾನುಕರಣೆಯಾಗಿರುವುದರಿಂದ ಈಭಾಗದಲ್ಲಿ ಉಳಿತಾಯಕ್ಕಿಂತ ಕೊರತೆಯೇ ಹೆಚ್ಚಿಗೆ ಕಾಣುತ್ತಿದೆ.

ರಾಷ್ಟ್ರದ ಸ್ವಾತಂತ್ರ್ಯ, ಸ್ವತಂತ್ರಾಡಳಿತೆಯು ಸಾಧಿಸಿದ ಮಹತ್ಕಾರ್ಯಗಳೇ ಮೊದಲಾದವುಗಳ ಕುರಿತು ಜನಸಾಮಾನ್ಯರಲ್ಲಿರುವ ಅಭಿಮಾನ,ಹೆಗ್ಗಳಿಕೆಗಳಿಗಿಂತ ಹೆಚ್ಚಾಗಿ ಅನುದಿನದ ಹಾಗೂ ಅಲ್ಪಾಭಿರುಚಿಗಳಿಗೆ ತಾಗುವ ಅಡ್ಡಿ, ಅಡಚಣೆಗಳಿಂದ ಸಾಮಾನ್ಯ ಜನತೆಯು ನಿರಾಶೆ, ಜಿಗುಪ್ಸೆಪಡುತ್ತಿರುವುದರಿಂದ ಇಲ್ಲಿಯೂ ಕೊರತೆಯೇ ಕಾಣುತ್ತದೆ.

ನಾಯಕ ನಿರ್ದೇಶಾನುಸಾರವಾಗಿ ಅಥವಾ ಸಂದರ್ಭೋಚಿತವಾಗಿ ಎದ್ದು ನಿಲ್ಲುವ ಶಕ್ತಿ ಯೋಗ್ಯತೆಗಳು ಜನರಲ್ಲಿರುವವಾದರೂ, ಅವರಿಗದನ್ನು ಸರಿಯಾಗಿ ಕಲಿಸುವವರು, ಮತ್ತವರನ್ನೆಬ್ಬಿಸಬಲ್ಲವರ ಸಂಖ್ಯೆ ಸಾಕಷ್ಟು ತೋರಿ ಬರುತ್ತಿಲ್ಲವಾದ್ದರಿಂದ ಜನತೆಯ ಸುಪ್ತ ಶಕ್ತಿಯು ಬಳಸಲಾಗದ "ರಿಝರ್ವ್ ನಿಧಿ"ಯಾಗಿಯೇ ಈ ಅವಧಿಯಲ್ಲಿ ಉಳಿದುಕೊಳ್ಳುವಂತಹದಾಗಿ ತೋರುತ್ತಿದೆ.

ರಾಜಕೀಯತಃ ಇದು ವರೆಗೆ ಗಳಿಸಿಕೊಂಡುದಕ್ಕಿಂತ ಹೆಚ್ಚಿನದನ್ನು ಆರ್ಥಿಕ, ಸಾಮಾಜಿಕ, ಬೌದ್ಧಿಕ,ಸಾಂಸ್ಕೃತಿಕ ರಂಗಗಳಲ್ಲಿ ಇನ್ನು ಮುಂದೆ ಸಂಪಾದಿಸಿಕೊಳ್ಳಲಿಕ್ಕಿರುವುದರಿಂದಲೂ, ರಾಜಕೀಯದಲ್ಲಾದರೂ ಕ್ಷಿಪ್ರ ಭವಿಷ್ಯದಲ್ಲೇ ವಿಶೇಷ ವಿದ್ಯಮಾನಗಳೇಳುವ ಸಂಭವಗಳಿರುವುದರಿಂದಲೂ, ಸ್ವರಾಜ್ಯೋತ್ತರ ವಿರಾಮಾಸಕ್ತ ಜಡ ಬುದ್ಧಿಯು ಇಂದಿನ ಕೊರತೆಯ ಅತಿ ದೊಡ್ಡ ಅಂಶವಾಗಿದೆ.

ಈ ರೀತಿ ಗುಣಾವಗುಣಗಳ ಈ ಬಾರಿಯ ಆಯವ್ಯಯ ಪಟ್ಟಿಯು ಕೊರತೆಯ ಬಜೆಟ್ ಆಗಿ ಕಾಣುತ್ತಿದೆ.ಆದರೂ ರಿಜರ್ವ್ ನಿಧಿಗಳೆಲ್ಲವನ್ನೂ ಉಪಯೋಗಿಸಿಕೊಂಡು ಕಚ್ಚಾ ಗುಣಗಳನ್ನು ಪಕ್ವಗೊಳಿಸಿ ಬಳಕೆಗೆ ತಂದು ಈ ಅವಧಿಯ ಆಯವ್ಯಯ ತಖ್ತೆಗಳನ್ನೇ ಹೆಚ್ಚು ಕಡಿಮೆಮಾಡಿ, ಬಜೆಟ್ ಉಳಿತಾಯವನ್ನು ಈ ಬಾರಿಯೇ ಸಾಧಿಸಲು ಸಾಧ್ಯವಿದೆ.

# ಸೋವಿಯೆಟ್ ರಶ್ಯಕ್ಕೆ—

**ಅಮೆರಿಕದ ವಿದೇಶ ಸಂಬಂಧ ಖಾತೆಯ ಹಿರಿಯ ಹಾಗೂ ಅಮೆರಿಕನ್ 'ಯುದ್ಧೋನ್ಮತ್ತತೆ'ಯ ಕುರಿತು ಅತಿರೇಕ ಪ್ರಚಾರ ನಡೆದಿರುವ ಈ ಅನುವಾದಿಸಿ**

ಸೋವಿಯೆಟ್ ಯೂನಿಯನಿನ ಕಡೆಗೆ ಅಮೇರಿಕದ ಧೋರಣೆಯೇನು, ಮತ್ತು ನಮ್ಮ ಕಡೆಗೆ ರಶ್ಯದ ಯಥಾರ್ಥ ನೋಟವಾವುದು ಎಂಬ ಕುರಿತು ಈ ದಿನ ವಿಶೇಷ ಯೋಚನಾಗೊಂದಲ ವ್ಯಾಪಿಸಿಕೊಂಡಿದೆ. 'ಪ್ರತಿಬಂಧಕ ಯುದ್ಧ' 'ಘರ್ಷಣೆಯ ಅನಿವಾರ್ಯತೆ' 'ಯುದ್ಧೋನ್ಮತ್ತ ಸಾಮ್ರಾಜ್ಯವಾದಿಗಳು' ಮುಂತಾದುವುಗಳ ಮೇಲೆ ಸಮುದ್ರದೆರಡೂ ಬದಿಗಳಲ್ಲಿ ಲಗು ಮಾತುಗಳು ಎತ್ತೆತ್ತಲೂ ಹರಡಿಕೊಂಡಿವೆ. ನಾವೀಗ ಐದುಮೂಲಭೂತ ಪ್ರಶ್ನೆಗಳನ್ನು ಕೇಳಿಕೊಂಡು ನಾವೇ ಉತ್ತರಿಸಿಕೊಳ್ಳೋಣ; ಮತ್ತು ಇಷ್ಟೆಲ್ಲಾ ಯುದ್ಧ ಮಾತುಕತೆಗಳಿಗೆ ಸಾಕಷ್ಟು ಸ್ಪಷ್ಟವಾದ ಉತ್ತರವನ್ನವು ಕೊಡಲಾರವೇ ಎಂಬುದನ್ನೊಮ್ಮೆ ನೋಡೋಣ

**ರಶ್ಯನರ ಯುದ್ಧ ಹಂಚಿಕೆ?**

ನಮ್ಮ ಮೇಲೆ ಯುದ್ಧ ಹೂಡುವ ಹಂಚಿಕೆಯಲ್ಲಿ ರಶ್ಯನರಿರುವರೆ? ಈ ಪ್ರಶ್ನೆಗೆ ಖಚಿತವಾದ ಉತ್ತರವನ್ನು ಕೊಡಬಲ್ಲವರು ಸ್ವತಃ ರಶ್ಯನ್ ನಾಯಕರು ಎಂಬುದೇನೋ ಸಹಜ. ಆದರೆ ಈ ಕೆಳಗಿನ ಸ್ಥಿತಿಗತಿಗಳು ಸ್ಮರಣೆಗರ್ಹವಿವೆ. ಲೆನಿನರು ಹೀಗೆ ಬರೆದಿದ್ದರೆಂಬುದು ನಿಜವೇ: "ಸಾಮ್ರಾಜ್ಯಶಾಹೀ ರಾಷ್ಟ್ರಗಳ ಜತೆಗೂಡಿಕೊಂಡೇ ಸೋವಿಯೆಟ್ ರಿಪಬ್ಲಿಕ್ ದೀರ್ಘಾವಧಿ ಅಸ್ತಿತ್ವದಲ್ಲಿರಬಹುದೆಂಬುದು ಯೋಚಿಸಲಾಗದ ವಿಷಯ. ಅಂತ್ಯದಲ್ಲಿ ಒಂದಲ್ಲದಿದ್ದರಿನ್ನೊಂದು ಗೆಲ್ಲಲೇಬೇಕು. ಮತ್ತಾ ಅಂತ್ಯ ಬರುವುದರೊಳಗೆ ಸೋವಿಯೆಟ್ ರಿಪಬ್ಲಿಕ್ ಮತ್ತಿತರ ಸಾಮ್ರಾಜ್ಯಶಾಹಿ ರಾಷ್ಟ್ರಗಳೊಳಗೆ ಮೇಲಿಂದ ಮೇಲೆ ಭೀಕರ ಘರ್ಷಣೆಗಳಾಗುತ್ತಾ ಹೋಗುವುದು ಅನಿವಾರ್ಯ"—ಇದೇ ಈಗಲೂ ಕಮ್ಯೂನಿಸ ತತ್ವವಾಗಿ ಉಳಿದುಕೊಂಡಿದೆ.

ಆದರೆ ಪ್ರಚಲಿತ ಸ್ಟಾಲಿನ್ ತತ್ವ ಯುದ್ಧವನ್ನು ಅಪೇಕ್ಷಿಸುವಂತಹದಿ ತದ್ವಿರುದ್ಧವಾಗಿ, ಭಂಡವಾಳಶಾಹಿ ದಲ್ಲಿ ಸೇರಿಕೊಂಡಿದೆಯೆಂದು ಕಮ್ಯೂನಿಸ್ಟರು ನಂಬಿರುವ ಒಳಗಡೆಯ ಅಸ್ವಸ್ಥತೆಗಳ ಪರಿಣಾಮವಾಗಿ ಭಂಡವಾಳಶಾಹಿಯು ಬಹುಶೀಘ್ರವಾಗಿ ಸ್ವಂತ ಭ ಇತ್ಯಾದಿಗಳಿಂದಲೇ ಕ್ರಮಶಃ ಕುಸಿಬೀಳಲಿದೆ ಎಂಬುದನ್ನು ಅದು ಬೋ ಸುತ್ತಿದೆ. ಅವರು ಭಂಡವಾಳಶಾಹಿತ್ವ ಪತನ ನೋಡುತಿದ್ದಾರೆ; ಮತ್ತು ಸಮ ವಾದ ಜನನ ಕಾಲದಲ್ಲಿ 'ಮಿಡ್‌ವೈಫ್ ಸಹಾಯವನ್ನಷ್ಟೇ ಸಲ್ಲಿಸುತಿದ್ದಾರೆ. ಇ ಮುಖ್ಯವಾಗಿ ಆಯಾಯ ರಾಷ್ಟ್ರೀ ಕಮ್ಯೂನಿಸ್ಟರ ಕೆಲಸವಾಗಿದೆಯಲ್ಲ ಸೋವಿಯೆಟ್ ಕೆಂಪು ಸೇನೆಯದ್ದಾ ವೆಂಬುದೇ ಅವರ ತತ್ವವಿರಬೇಕೆಂ ತೋರುತ್ತಿದೆ. ಸೋವಿಯೆಟ್ ಯೂನಿ ನಿನ ಸಶಸ್ತ್ರ ಸೈನಿಕರು ಪ್ರತ್ಯಕ್ಷ ಸೇ ಚಲನೆಯಿಂದ ಎಲ್ಲೆಡೆಯು ಭಂಡವಾ ಶಾಹಿತ್ವವನ್ನು ನಿರ್ಮೂಲಿಸಿ ಬಿಡುವ ಮಾತಂತಹದಾವುದೂ ಸ್ಟಾಲಿನ್ ತ ದಲ್ಲಿಲ್ಲ. ಇಂತಹ ಧಾಳಿಯಿಲ್ಲದೆ ಹೋ ರೆ ಭಂಡವಾಳಶಾಹಿತ್ವವೆಂಬುದು ಮಾ ಕಃ ಭದ್ರವಾಗಿದ್ದು, ತನ್ನೊಳಗಿನ ಭಿ ಭಿನ್ನತೆಗಳಿಗೆ ಶಾಶ್ವತವಾಗಿ ತೇಪೆ ಹ ಕೊಂಡು ಸುರಕ್ಷಿತವಾಗಿ ಬಾಳಬಲ್ಲುದೆಂ ಕಮ್ಯೂನಿಸ್ಟ್ ಮನೋವೃತ್ತಿಯಿದ ಮೇಲಿನ ವಾದವು ಅತಾರ್ಕಿಕ ಹಾ ಅನುಚಿತವಾಗಿ ತೋರಬಹುದು. ಆದ ಉತ್ತಮೋತ್ತಮ ಮಾರ್ಕ್ಸ್‌ವಾದಿ ನಂಬಿಕೆಯಿರುವುದು ಸತ್ಯಕ್ಕೂ ಹೀಗೆಯೆ. ತತ್ವದ ಮಟ್ಟಿಗೆ ಹೀಗಾಯಿತು. ರಶ್ ಸಂಪ್ರದಾಯ ಹೇಗಿದೆ? ಈ ವಸ್ತುಸ್ಥಿ ಯನ್ನು ಕಡೆಗಣಿಸಲಾಗುವದಿಲ್ಲ. ಯ ಕೆಂದರೆ, ಕಮ್ಯೂನಿಸಮ್ ರಶ್ಯವನ್ನು ಬ ಲಾಯಿಸಿದುದಕ್ಕಿಂತಲೂ ಹೆಚ್ಚಾಗಿ ವು ಕಮ್ಯೂನಿಸಮನ್ನು ಬದಲಾಯಿಸಿ ಎಂಬುದು ರಶ್ಯವನ್ನು ಬಲ್ಲ ಪ್ರತಿಯೊ ನಿಗೂ ಖಚಿತವಿದೆ.


# ಕೆನರಾ ಬ್ಯಾಂಕ್, ಲಿಮಿಟೆಡ್

(ಸ್ಥಾಪನೆ ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಭಾರತದಲ್ಲಿ ಸಾಂಘೀಕರಿಸಿದ್ದು)

**ಮುದ್ದತಿ ಠೇವುಗಳು**

ರೂ. ೧೦,೦೦೦ ಯೂ ಅದಕ್ಕೆ ಮೇಲ್ಪಟ್ಟು ೧,೦೦೦ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೫೦ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ.

೩ ತಿಂಗಳು ... ... ನೂರಕ್ಕೆ ವರ್ಷಕ್ಕೆ ೨।
೪ ರಿಂದ ೫ ತಿಂಗಳು ... ... ,, ,, ೨।।
೬ ರಿಂದ ೯ ತಿಂಗಳು ... ... ,, ,, ೨।।।

ರೂ. ೧,೦೦೦ಕ್ಕೆ ಕಡಿಮೆಯಲ್ಲದ ರೂ. ೧೦,೦೦೦ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದು ಕೊಳ್ಳಬಹುದು.

ಮಂಗಳೂರು ಶಾಖೆಗಳು

[1] ಬಂದರ ರೋಡ್; [2] ಡೊಂಗರಕೇರಿ,

ಇತರ ಶಾಖೆಗಳು: ಕಾರ್ಕಳ, ಬಂಟವಾಳ, ಮುಲ್ಕಿ, ಕುಂದಾಪುರ, ಉಡುಪಿ, ಗಂಗೊಳ್ಳಿ, ಪುತ್ತೂರು, ಕಾಸರಗೋಡು, ಬೊಂಬಾಯಿ, ಇತ್ಯಾದಿ ಇತ್ಯಾದಿ.

**CANARA BANK, LIMITED**

**(Estd 1906)**

# ನಿಜಕ್ಕೂ ಯುದ್ಧ ಬೇಕಾಗಿದೆಯೆ?–

**ರಾಷ್ಟ್ರ ಖಾತೆಯ ಯೋಜನಾ ಮಂಡಳಿಯ ಪ್ರಮುಖ ಜೆ. ಎಫ್. ಕೆನ್ನಾನ್, ಇವರ ಲೇಖನವಿದು. 'ರಶ್ಯದ ಕಾಲದಲ್ಲಿ, ಅಮೆರಿಕದ ತಜ್ಞ ಅಧಿಕಾರಿಯೊಬ್ಬನ ಈ ಸುವಿಚಾರೀ ತರ್ಕವು ಮನನಾರ್ಹವೆಂಬುದರಿಂದ ಇಲ್ಲಿ ಕೊಡಲಾಗಿದೆ.**

## ವಿಸ್ತರಣೆಯ ಐತಿಹ್ಯ

ಭೂವಿಸ್ತರಣೆಯ ಸುದೀರ್ಘ ಚರಿತ್ರೆ ರಶ್ಯಕ್ಕಿದೆ. ಆದರೆ ಸರ್ವ ಸಾಮಾನ್ಯವಾ[ಗಿ] ನಿಧಾನದ ಹಾಗೂ ಅತಿ ಜಾಗರೂಕತೆಯ ವಿಸ್ತರಣೆಯದು. ಅನಗತ್ಯ ಅಪಾಯ ...ದಗದ ಯೋಗ್ಯ ಸಂದರ್ಭಗಳಿಗಾಗಿ ಸ...ನೆಯಿಂದ ಕಾದು, ಗಡಿಗಳನ್ನು ವಿಸ್ತರಿ...ಕೊಂಡ ವಿಧಾನವದು. ಈ ಮಾತಿಗೆ ಫಿ...ನ್ನಿಶ್ ಯುದ್ಧದಂತಹ ಕೆಲವು ಸ್ಪಷ್ಟ ಅ...ಪವಾದಗಳಿದ್ದರೆ, ಅವು ತಪ್ಪು ಲೆಕ್ಕಾಚಾ...ರಗಳ ಪರಿಣಾಮವೆಂಬಂತೆ ಕಾಣುತ್ತಿವೆ. ...ನಮ್ಮದು ವಿಸ್ತಾರ ಭೂವಲಯವಾಗಿರುವ ...ಸೆಯಿಂದಲೂ, ಸ್ವಂತ ಭೂಸ್ಥಿತಿ ಸ್ವಭಾ...ವದಿಂದಾಗಿಯೂ ರಶ್ಯನರು ಭೂಮ...ಹೋವೃತ್ತಿಯವರಿದ್ದಾರೆ. ಈ ಮನೋವೃತ್ತಿಯು, ಅವರನ್ನು ತಮ್ಮೊಳಗಿನ ...ಡಿಗಳನ್ನೂ ಕ್ಷೇತ್ರಗಳನ್ನೂ ಗಟ್ಟಿ ಅಂ...ಕೊಂಡಿರುವಂತೆ ಮಾಡಿದೆ. ...ಮರ್ಜ್ಞ ...ಯಲ್ಲಿ ಮತ್ತು ಆರ್ಥಿಕವಾಗಿ ಹಿಂದೆಬಿದ್ದಿ...ರುವ ಅವರ ಸ್ಥಿತಿಯು, ಸರ್ವಸಾಧಾರಣ...ವಾಗಿ ದೂರ ಕ್ಷೇತ್ರಕ್ಕೆ ಹಾರುವ ಸಾಹಸ...ದಿಂದ ಅವರನ್ನು ಹೊರತು ಪಡಿಸುತ್ತಿದೆ. ...ರಶ್ಯನ್ ಸಾಮ್ರಾಜ್ಯಾಭಿಹಿತ್ವವೆಂಬುದು, ರ...ಶ್ಯರಾಜ್ಯದ ಜೀರ್ಣಾವಯವಗಳಿಗೆ ಸರಿ...ಯವಷ್ಟೇ ಪರಿಮಾಣದಲ್ಲಿ ಲಕ್ಷ್ಯಪೂರ್ವಕ...ವಾಗಿ ಸ್ವಲ್ಪ ಸ್ವಲ್ಪವೇ ಜಗಿದು ತಿನ್ನುವ ...ಧಾನದಲ್ಲಿದೆ. ಸದ್ಯದ ಪೂರ್ವ ಯು...ರೋಪು ಗೊಂಬೆ ರಾಷ್ಟ್ರಗಳನ್ನು ಕಟ್ಟಿ...ಕೊಂಡ ಅದರ ಅನುಭವದ ಮೇಲಿಂದ, ಈ ...ಸಟ್ಟಿಗೆ ರಶ್ಯವು ಸುರಕ್ಷಿತವಾಗಿ ಜಗಿಯ...ಬಹುದಷ್ಟನ್ನು ಕಚ್ಚಿಕೊಂಡಂತಿದೆ. ತಕ್ಷಣಾವವಾದ ಅರಕ್ಷಿತತೆಯು ಈ ಹೊ...ನ್ನಲ್ಲಿ ಇನ್ನಷ್ಟು ದೊಡ್ಡ ಮತ್ತುಗಳ ಬಾಯಿ ಹಾಕುವ ಯೋಚನೆ ಮಾಡುವ ಬದಲಿಗೆ, ಕ್ರೆಮ್ಲಿನು ವಿಶೇಷ ಜಾಗರೂಕತೆಯಿಂದಿರುವಂತೆ ಮಾಡಿದೆ. ಕೊನೆಯ...ದಾಗಿ, ತಮ್ಮ ಆಂತರಿಕ ಹಿತಸಾಧನೆಗಾಗಿ ...ಕಾಲದಲ್ಲೊಂದು ಜಾಗತಿಕ ಯುದ್ಧವನ್ನು ರಶ್ಯನ್ ನಾಯಕರು ಅಪೇಕ್ಷಿಸಲು ...ಕಾರಣವಿದೆಯೇ ಎಂಬ ಪ್ರಶ್ನೆಯನ್ನು ...ಈಗ ನಾವೇ ಕೇಳಿಕೊಳ್ಳಬೇಕಾಗಿದೆ. ...ಸೋವಿಯೆಟ್ ಯೂನಿಯನ್ ಭಾಗವಹಿ...ಸಿದ್ದ ಒಂದು ಮಹಾಯುದ್ಧವು ಮುಗಿದು ಇ...ನ್ನೂ ಐದು ವರುಷ ಕಳೆದಿಲ್ಲ. ರಶ್ಯನರ ...ಪಾಲಿಗೆ ಆ ಯುದ್ಧವು ಭೀಕರ ಅಸಹ್ಯ ...ಹಾಗೂ ನಾಶಕಾರಿಯಿದ್ದಿತು. ವ್ಯವಸ್ಥಿತ ಅಭಿವೃದ್ಧಿ ಕಾರ್ಯ ನಡೆದಿದೆಯಾದರೂ, ಕಳೆದ ಯುದ್ಧದಲ್ಲಾಗಿದ್ದ ಮನುಷ್ಯ ಮತ್ತು ಸೊತ್ತು ಜಖಮುಗಳೆಲ್ಲವೂ ಪೂರ್ಣಗುಣ ಹೊಂದಬೇಕಾದರೆ ಹಲವು ವರುಷಗಳು ಕಳೆಯಬೇಕು. ಯುದ್ಧ ಹಾನಿಗಳನ್ನು ದುರಸ್ತಿ ಪಡಿಸಿಕೊಳ್ಳುವದರೊಂದಿಗೆ, ರಶ್ಯವನ್ನು ಬಲಶಾಲಿ ಹಾಗೂ ಪೂರ್ಣರೂಪಿ ಉದ್ದಿಮೆ ರಾಷ್ಟ್ರವಾಗಿ ಮಾರ್ಪಡಿಸುವ ಕಾರ್ಯಕ್ರಮವನ್ನು ಅಸ್ತಿತ್ವದಲ್ಲಿ ತರಲು ರಶ್ಯನ್ ಆಡಳಿತೆಯು ತನ್ನ ಸರ್ವಶಕ್ತ್ಯಾಗ್ರಹದಿಂದ ನಿರತವಾಗಿದೆ. ಈ ಕಾರ್ಯಕ್ರಮದ ಕೆಲವು ಮೂಲಾಂಗಗಳು ಪೂರ್ಣಗೊಳ್ಳಬೇಕಾದರೂ ಹಲವು ವರುಷಗಳೇ ಬೇಕಾಗಬಹುದು. ಎರಡನೇ ಜಾಗತಿಕ ಯುದ್ಧವು ಈ ಕಾರ್ಯ ಯೋಜನೆಯನ್ನು ಹತ್ತು ವರುಷಗಳ ತನಕ ಹಿಂದೆ ಹಾಕಿತು. ಇನ್ನೊಂದು ಯುದ್ಧವು ಮತ್ತೊಮ್ಮೆ ದೊಡ್ಡ ತಡೆಯನ್ನು ತಂದೊಡ್ಡದಿರಲಾರದು.

ಈ ರೀತಿ, ತತ್ವ, ಸಂಪ್ರದಾಯ ಮತ್ತು ವ್ಯವಹಾರ್ಯ ವಸ್ತುಸ್ಥಿತಿಯ ಹಿನ್ನೆಲೆಯ ನೋಟದ ಮೇಲಿಂದ ಸ್ಥಿತಿ ಚಿತ್ರವೀರೀತಿ ಕಾಣಿಸುತ್ತಿದೆ: ನಮ್ಮ ಪತನವು ಸ್ವಾಗತಾರ್ಹವೆಂದು ರಶ್ಯನ್ ನಾಯಕರು ನಂಬುತ್ತಾರೆ. ಅದನ್ನು ತ್ವರ್ಯಗೊಳಿಸಲು ಸಾಧ್ಯವಿರುವುದೆಲ್ಲವನ್ನೂ ಅವರು ಮಾಡಬಲ್ಲರು. ಆದರೆ ಯಾವುದೇ ಒಂದು ಮಹಾಯುದ್ಧದ ಮೂಲಕ, ಜಾಗತಿಕ ಕಮ್ಯೂನಿಸಮ್‌ನ ಭದ್ರತಾ ಕೋಟೆಯಾಗಿರುವ ರಶ್ಯಕ್ಕೆ ಅಪಾಯ ತಂದುಕೊಳ್ಳಲು ಅವರೆಂದಿಗೂ ಇಚ್ಛಿಸುವಂತಿಲ್ಲ. ಇನ್ನೊಂದು ಜಾಗತಿಕ ಯುದ್ಧವು ಅಂತಹ ಅಪಾಯಗಳನ್ನೊಡ್ಡುವುದು ಖಚಿತವಿರುವ ಈ ವಿದ್ಯಮಾನಗಳ ಮೇಲಿಂದ, ಪಶ್ಚಿಮ ಜಗತ್ತಿನ ಮೇಲೆ ಕ್ಷಿಪ್ರದಲ್ಲೊಂದು ಸೇನಾ ಹೊಡೆತ ಕೊಡುವ ತಯಾರಿಯನ್ನು ರಶ್ಯನರು ಮಾಡುತ್ತಿರಬಹುದೆಂಬುದು ತೀರಾ ತಪ್ಪಾದ ಮಾತು.

## ಆಟಂ ಬೋಂಬು

ರಶ್ಯನರ ಆಟಮ್ ಆಯುಧಗಳ ರಚನೆಯು ಈ ಪರಿಸ್ಥಿತಿಯ ಮೇಲೆ ಎಂತಹ ಪರಿಣಾಮ ಬೀರಬಲ್ಲುದು? ಈ ದಿನ ದೊರಕುತ್ತಿರುವ ರುಜುವಾತುಗಳ ಮೇಲಿಂದ, ರಶ್ಯನರ ಆಟಮ್ ಬೋಂಬು ಅದರ ಮೇಲೆ ವಿಶೇಷ ಪರಿಣಾಮ ಮಾಡುವಂತಿಲ್ಲ. ಆ ಬೋಂಬು ಬಹಳ ತೊಡಕಿನದಿದೆ; ಅತೀ ವೆಚ್ಚದ್ದಿದೆ; ಅದರ ನಿರ್ಮಾಣವು ಪ್ರಯಾಸದ್ದಿದೆ. ಬೋಂಬು ರಚನೆಗಗತ್ಯವುಳ್ಳ ಕಚ್ಚಾ ಮಾಲುಗಳು ಈಗ ಕೂಡಾ ಸುಲಭದಲ್ಲಿ ಬರುವಂಥವುಗಳಲ್ಲ. ಸೇನಾ ಪ್ರತಿಪುಟನೆಯನ್ನು ಪ್ರಥಮ ನೋಟದಲ್ಲೇ ನುಚ್ಚುನುರಿ ಮಾಡುವಷ್ಟು ಬೋಂಬುಗಳನ್ನು ಸುರಿಸಿ, ಧಾಳಿಗಾರನ ಶರಣಾಧೀನವಾಗಿ ಸಂಧಾನ ಅಪೇಕ್ಷಿಸುವ ಅನಿವಾರ್ಯ ಸ್ಥಿತಿಯನ್ನು ಸಂಬಂಧಪಟ್ಟ ಸರಕಾರಕ್ಕೆ ತಂದೊಡ್ಡಲಾಗದಿದ್ದರೆ, ಒಂದು ದೊಡ್ಡ ಉದ್ದಿಮೆ ರಾಷ್ಟ್ರವನ್ನು ಆಟಂ ಒಂದೇ ಗೆದ್ದುಕೊಡಲಾರದು. ಕೇವಲ ಪ್ರತಿಭಟನೆಯನ್ನು ಹುಡಿಗುಟ್ಟುವ ಕಾರ್ಯವಾದರೂ ಗುರಿತಪ್ಪದೆ ಹಾಕುವ ಒಂದೇ ಬೋಂಬಿನಿಂದೇನೂ ಆಗದು; ಅದಕ್ಕೂ ಹಲವು ಬೋಂಬುಗಳ ಅಗತ್ಯವಿದೆ. ಅಮೇರಿಕದ ಮೇಲೆ ಇಂತಹ ಪರಿಣಾಮ ಮಾಡಬಲ್ಲಷ್ಟು ಸಂಖ್ಯೆಯಲ್ಲಿ ರಶ್ಯದೊಡನೀಗ ಆಟಂ ಬೋಂಬುಗಳು ಮತ್ತವನ್ನು ಹೊತ್ತು ಹಾರಬಲ್ಲ ವಿಮಾನಗಳಿರುವ ಲಕ್ಷಣಗಳಾವುವೂ ತೋರಿಬರುತ್ತಿಲ್ಲ. "ಆಟಂ ಬೋಂಬು ಎಂಬುದು ಅದರ ಕುರಿತು ಕೆಲವು ರಾಜಕಾರಣಿಗಳ ಭಾವನೆಯಲ್ಲಿರುವಷ್ಟು ಭೀಕರವಾದ ಒಂದು ಶಕ್ತಿಯಿದೆಯೆಂದು ನಾನು ನಂಬುವದಿಲ್ಲ. ದುರ್ಬಲ ನರ ಕುಸಿಯುವಂತೆ ಮಾಡುವ ಉದ್ದೇಶವು ಆಟಂ ಬೋಂಬುಗಳದಿದೆ; ಆದರವು ಯುದ್ಧದ ಫಲಿತಾಂಶ ನಿರ್ಧರಿಸಲಾರವು" ಎಂದು ಸ್ಟಾಲಿನರು 1946ರಲ್ಲಿ ಅಂದಿದ್ದರು. ಸೋವಿಯೆಟ್ ನಾಯಕರು ಈ ಅಭಿಪ್ರಾಯವನ್ನೀಗ ಬದಲಾಯಿಸಿದ್ದಾರೆ, ಎಂದು ನಂಬಲು ಕಾರಣವಿಲ್ಲ.

## ಪ್ರತೀಕಾರ ನಿರೀಕ್ಷೆ

ಮೇಲಾಗಿ, ಒಬ್ಬ ಧಾಳಿಗಾರನು ತನ್ನ ಮೇಲಾಗುವ ಪ್ರತೀಕಾರದ ವಿದ್ಯಮಾನಗಳನ್ನೂ ಗಣನೆಗೆ ತಂದುಕೊಳ್ಳಲಿಕ್ಕಿದೆ. ನಿಮ್ಮ ಇದಿರುವಾದಿಯೊಡನೆಯೂ ಬೋಂಬು ಮತ್ತದರ ವಿತರಣಾ ವ್ಯವಸ್ಥೆಯಿರುವಾಗ, ಅವನ ಮೇಲೆ ನೀವೇನೇನನ್ನು ಮಾಡಬಲ್ಲಿರೆಂಬುದನ್ನಷ್ಟೇ ನೋಡಿಕೊಂಡರೆ ಸಾಲದು–ಅವನು ನಿಮ್ಮ ಮೇಲೆ ಏನೇನು ಮಾಡಬಲ್ಲನೆಂಬುದನ್ನು ಕೂಡಾ ನೆನಸಿಕೊಳ್ಳಲಿಕ್ಕಿದೆ. ಕೇವಲ ಒಂದು ಬೋಂಬು, ಒಂದು ಮಹಾ ಉದ್ದಿಮೇ ರಾಷ್ಟ್ರವನ್ನು ಬಗ್ಗುಬಡಿಯಲು ಸಾಕಾಗದು; ಆದರೆ, ಒಂದು ನಗರ ನಾಶಿಗಳ ಸಂಪ್ರದಾಯ ಹಾಗೂ ಹೃದಯದಲ್ಲಿ ಅಮೂಲ್ಯತೆ ಗಳಿಸಿರುವ ಭೂಸ್ಮಾರಕಗಳನ್ನು ಮತ್ತು ಗುಡಿಗೋಪುರಗಳನ್ನು ಧ್ವಂಸ ಮಾಡಿ ಬಿಡಲು ಒಂದೇ ಒಂದು ಬೋಂಬು ಸಾಕಾಗಬಹುದು; ರಾಷ್ಟ್ರದ ಪಾಲಿನ ಯಾರ ಪ್ರಾಮುಖ್ಯತೆಯು ವಾಸ್ತವಿಕ ಅಳತೆಗೆ ನಿಲುಕುವಂತಹದಲ್ಲವೋ, ಆ ವ್ಯಕ್ತಿಗಳ ಮಾತನ್ನಿಲ್ಲಿ ಬಿಟ್ಟುಬಿಡೋಣ. ಓರ್ವ ಅತಿಗರ್ವಿ ಆಕ್ರಮಣಗಾರನಿಂದ, ಆಕಸ್ಮಿಕವಾಗಿ ಬೀಳುವ ಹೊಡೆತಗಳನ್ನು ಸಹಿಸಿಕೊಳ್ಳಿರೆಂದು ಪಾಪದ ಜನರನ್ನು ಬೋಧಿಸುವುದು ಅದೊಂದು ರೀತಿ; ತಮ್ಮ ಸ್ವಂತ ಸರಕಾರವು ಉದ್ದೇಶಪೂರ್ವಕ ಕಟ್ಟಿಕೊಂಡ ಧೋರಣೆಯೊಂದರ ಸತಾರ್ಕಿಕ ಹಾಗೂ ನಿರೀಕ್ಷಿತ ಪ್ರತಿಫಲವಾಗಿ ದೊರೆಯುವ ಅದನ್ನು ಸಹಿಸಿಕೊಳ್ಳಿರೆಂದು ಜನರನ್ನು ಕೇಳಿಕೊಳ್ಳುವುದು ಮತ್ತೊಂದು ವಿಧಾನ. ಗತಕಾಲದ ಆಕ್ರಮಣಗಳಲ್ಲಿ, ತಮ್ಮ ಕೃತ್ಯದಿಂದ ತುಲನಾತ್ಮಕವಾಗಿ ತಮ್ಮ ರಾಷ್ಟ್ರಕ್ಕಂತಹ ಹಾನಿಯೇನೂ ಆಗಲಾರದೆಂಬ ಆಶೆಯನ್ನು ಕಟ್ಟಿಕೊಂಡೇ ಆಕ್ರಮಣಗಾರರು ಮುಂದೊತ್ತಿದ್ದರು. ಅಂದಿನ ಆಯುಧಗಳ ಮೇಲಿಂದ ನಿಮ್ಮ ಸ್ವಯಂಉತ್ಕೃಷ್ಟತಾ ಭಾವನೆಯಂತಹದಿದ್ದರೆ, ಈ ಆಶೆ ಮೊಳೆಯುವುದು ಮಾರ್ಮಿಕವಾಗಿ ಸಾಧ್ಯವಿದ್ದಿತು. ಈ ದಿನವಾದರೋ, ನೀವು ನಿಮ್ಮ ವೈರಿಯ ನಾಗರಿಕ ಉದ್ಯಮಗಳ ಮೇಲೆ ಬೋಂಬು ಗುರಿಯಿಡಬಲ್ಲಿರಾದರೆ, ನಿಮ್ಮ ಇದಿರುವಾದಿಯೊಡನೆಯೂ ಆಟಂಬೋಂಬುಗಳು ಮತ್ತವುಗಳನ್ನು ಸಾಗಿಸುವ ವಿಮಾನಗಳು ಇದ್ದಲ್ಲಿ ಈ ಆಶೆಯು ತೀರಾ ಮಸಕಾಗುತ್ತದೆ. ನೀವು ನಿಮ್ಮ ಪ್ರತಿಸ್ಪರ್ಧಿಗೆ ಭೀಕರ ಜಖಮ್ ಮಾಡಬಹುದು; ನಿಮ್ಮಲ್ಲಿ ಬೋಂಬುಗಳೂ, ಅವುಗಳ ವಿತರಣಾ ವಿಮಾನಗಳೂ ಸಾಕಷ್ಟಿದ್ದ ಪಕ್ಷದಲ್ಲಿ, ಆಗೊಮ್ಮೆ ವಿರೋಧಿಯ ದೊಡ್ಡ ಪರಿಮಾಣದ ಸುಸಂಘಟಿತ ಪ್ರತಿಭಟನೆಯನ್ನು ಕೂಡಾ ಬಗ್ಗುಬಡಿಯಬಲ್ಲಿರಿ. ಆದರೆ, ಜಖಮ್ ಪ್ರತೀಕಾರಕ್ಕಾಗಿ ಆತನ ಕೇವಲ ಎರಡು ಮೂರು ಬೋಂಬು ವಿಮಾನಗಳಿಗೆ ನಿಮ್ಮ ಸ್ವಂತ ಭೂಮಿಯ ಮೇಲೆ ಧಾಳಿಯಿಡಲು ಸಾಧ್ಯವಾದರೆ ಸಾಕು. ವಿಜಯಗಳ ಯಾವುದೇ ವರದಿಯಾದರೂ ನಿಮ್ಮ ರಾಷ್ಟ್ರದ ಜನರಲ್ಲಿ ಅತಿ ಹೆಚ್ಚಿನವರ ಪಾಲಿಗೆ ತೀರಾ ಟೊಳ್ಳು ಪರಿಹಾಸ್ಯವಾಗಿ ತೋರುವಂತೆ, ಅವು ಮಾಡಬಲ್ಲವು. ಇವೆಲ್ಲಾ ವಿಚಾರಗಳನ್ನು ನಾವೀಗ ಕ್ರೆಮ್ಲಿನ್ ನಾಯಕರ ಉದ್ದೇಶ ಮತ್ತು ಮನೋವೃತ್ತಿಗೆ ಲಗ್ತೀಕರಿಸಿ ನೋಡಿಕೊಳ್ಳೋಣ.

## ಕ್ರೆಮ್ಲಿನ್ ಪ್ರತಿಕ್ರಿಯೆ

ಅಂತಹ ಪ್ರತೀಕಾರದ ಕುರಿತು ಸೋವಿಯೆಟ್ ಪ್ರತಿಕ್ರಿಯಾ ಭಾವನೆ ಹೇಗಿರಬಹುದೆಂಬುದನ್ನು ಊಹಿಸಲು ಕಷ್ಟವಿಲ್ಲ. ಅತಿ ಪುರಾತನ ಸಾಂಸ್ಕೃತಿಕ ಸ್ಮಾರಕ ಚಿಹ್ನೆಗಳು ಮತ್ತು ಆಧುನಿಕ ಉದ್ಯಮ


"ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"–(ವರಾಹ ಪುರಾಣ)

**ಗೀತೆಯ ಕೈಗನ್ನಡಿ**

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು–ದಿ। ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವನ್ನು ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಮಾತುಗಳ ರೂಪದಲ್ಲಿಳಿದ ಛಟ್ಟಿಯಾಗಿ ಎದ್ದು ಕಾಣುವುದು.

**400ಕ್ಕೂ ಮಿಕ್ಕ ಪುಟಗಳು!   ಬೆಲೆ 0–12–0.**

ಒಂದು ರೂಪಾಯಿಯನ್ನು ಕಳುಹಿಸಿದವರ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:–

**ನವಯುಗ ಪ್ರೆಸ್, ಉಡುಪಿ, ದ. ಕನ್ನಡ.**

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

# ಅಮೇರಿಕ ರಶ್ಯಾ ವೈಷಮ್ಯ ತೀವ್ರ ಬೆಳವಣಿಗೆಯಲ್ಲಿದೆ!

ಗಳು ಜನರಿಗೆ ಅತಿ ಶ್ರೇಷ್ಠನವಾಗಿ ತೋರಿದ ನಿದರ್ಶನವುಳ್ಳ ದೃಷ್ಟಾಂತವಿಲ್ಲವೇ ಇಲ್ಲ. ಸಾಂಸ್ಕೃತಿಕ ಸ್ಮಾರಕಗಳಲ್ಲಿರುವುದು ಕೆಲವು ಮಾತ್ರ ಅವುಗಳಾದರೋ ರಶ್ಯನ್ ಜನತೆಯ ಆತ್ಮದ ವ್ಯಸನ, ಕಷ್ಟ, ದುಃಖಗಳ ಮೂಲಕ ಗೆದ್ದುಕೊಂಡ ಸಾಂಸ್ಕೃತಿಕ ಸಂಕೇತಗಳದ್ದು, ಗಾಢವಾದ ಮತ್ತು ಸಾರ್ವತ್ರಿಕವಾದ ಗೌರವಾದರಗಳನ್ನು ಗಳಿಸಿವೆ. ಆಧುನಿಕ ಉದ್ಯಮ ಕಾರ್ಖಾನೆಗಳಾದರೂ ಬಹು ಪ್ರಯಾಸದಿಂದ ಸಾಧಿಸಲ್ಪಟ್ಟವುಗಳೇ. ಅವುಗಳಲ್ಲಿ ಹೆಚ್ಚಿನವು ಯೋಗ್ಯತೆಯಲ್ಲಿ ನಮ್ಮ ಸ್ವಂತದವುಗಳೊಡನೆ ತುಲನೆಗೆ ನಿಲ್ಲುವಂಥವುಗಳಲ್ಲವೇನೋ ನಿಜ. ಆದರೆ ಅತ್ಯಧಿಕ ರಶ್ಯನ್ ಜನರ ಪಾಲಿಗವು, ಕಮ್ಯೂನಿಸ್ಟ್ ಆಡಳಿತೆಯ ಕಡೆಗಿನ ಅವರ ಧೋರಣೆ ಹೇಗಿದ್ದರೂ, ರಶ್ಯವನ್ನು ದುರ್ಗತಿಯಿಂದ ಪಾರುಮಾಡುವ ಮುಖ್ಯ ರಸ್ತೆಯಂತೆ ಕಾಣುತ್ತಿವೆ. ಸ್ವತಃ ರಶ್ಯನ್ ಕಮ್ಯೂನಿಸ್ಟರ ಪಾಲಿಗಂತೂ ಇವು ಅತ್ಯುತ್ತಮ ಬಹುಮಾನಗಳು ಮತ್ತು ಇಷ್ಟಾರ್ಥಸಿದ್ಧಿಗಳು. ಸುವಿಚಾರಿ ಕಮ್ಯೂನಿಸ್ಟರುಗಳು ಈ ಕಾರಣದಿಂದಾಗಿಯೇ ಕೊನೆಯ ಪಕ್ಷ ಒಂದು ತಲೆಮಾರಿನ ಕ್ಷೇಮ ಚಿಂತನೆ ಮತ್ತು ಸ್ವಾತಂತ್ರ್ಯದ ಬಲಿದಾನವಾಯಿತು, ಎಂದು ಹಿಂದಿನ ಹಾನಿಯ ಕುರಿತು ಗ್ರಹಿಸಿದ್ದರಲ್ಲಿ ಹೇಳಿಯಾರು. ಈ ಮಾನಸಿಕ ಅಮೂಲ್ಯತೆಗಳು ಎರಡನೇ ಜಾಗತಿಕ ಯುದ್ಧದಲ್ಲಿ ಭೀಕರ ಹೊಡೆತಕ್ಕೀಡಾದುದನ್ನು ನಾವಿಷ್ಟರಲ್ಲೇ ಕಂಡಿದ್ದೇವೆ. ಇಂತಹ ಸ್ಥಿತಿಯಲ್ಲೇ, ರಶ್ಯದ ನಗರಗಳ ಮತ್ತು ಉದ್ಯಮಗಳ ದೊಡ್ಡ ಪರಿಮಾಣದ ಧ್ವಂಸವು ಮತ್ತೊಮ್ಮೆ ನಡೆಯುವಂತಾದರೆ ಅಲ್ಲಿಯ ಆಡಳಿತೆ ಮತ್ತು ಜನತೆ ಇಬ್ಬರ ದೃಷ್ಟಿಯಿಂದಲೂ ಅದೊಂದು ದೊಡ್ಡ ದುರಂತವೇ ಆದೀತು. ಮಾನವಪ್ರಾಣಾಮೂಲ್ಯತೆಯ ಉಲ್ಲೇಖ ಇಲ್ಲಿ ಬೇಡ. ಪ್ರಜಾಪ್ರಭುತ್ವದಂತೆಯೇ ಸರ್ವಾಧಿಕಾರದಲ್ಲೂ ಜನಶಕ್ತಿಯೇ ಸಾರ ಮೂಲವಾಗಿರುವುದರಿಂದ ಕ್ರೆಮ್ಲಿನ್ ಕೂಡಾ ಈ ಕುರಿತು ಉಚಿತಾಭಿಪ್ರಾಯದಿಂದಿರಲಾರದು. ಕ್ರೆಮ್ಲಿನಿನಲ್ಲಿರುವವರು ದೊರೆಗಳು ಮನುಷ್ಯರಿರುವುದರಿಂದ, ಅವರು ಆಟಮಿಕ್ ಧ್ವಂಸಗಳನ್ನು ಗಣ್ಯ ಮಾಡಲಾರರು, ಎಂಬಂತಹ ಅಭಿಪ್ರಾಯದಲ್ಲಿ ರಶ್ಯದ ಯಥಾಸ್ಥಿತಿಯ ಕುರಿತಿರುವ ಅಜ್ಞಾನವೇ ಪ್ರತಿಬಿಂಬಿಸುತ್ತಿದೆ. ವಸ್ತುತಃ ಆಟಮ್ ಆಕ್ರಮಣವೆಂಬುದು ರಶ್ಯನರ ಪಾಲಿಗೆ ಅಪೂರ್ಣ ಹಾಗೂ ಅಪಾಯಕರ ಎಚ್ಚರಿಕೆಯಾಗಿದೆ, ಕೆಲವು ತಾತ್ಕಾಲಿ


## ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

**The Moolky Bank Ltd.,**
**Moolky, S K**


ಶೈತ್ಯಗತಿಕರಣಗಳಲ್ಲಿ ಆಪ್ರಿಕಾ-ರಶ್ಯಾಗಳೊಳಗಿನ ಶೀತಶಸ್ತ್ರ ಪ್ರಯೋಗಗಳ ರಭಸ ಕಳೆದ ದಿನಗಳಲ್ಲಿ ವಿಶೇಷ ಹೆಚ್ಚಿದುದು ಕಂಡುಬಂದಿದೆ ಭಾರತ-ಪಾಕಿಸ್ತಾನಗಳೊಳಗಿನ ಘರ್ಷಣೆಯಂತೂ ಪರಮಾವಧಿಗೆ ಮುಟ್ಟಿದೆ. ಪಾಕಿಸ್ತಾನ್ ರಚನೆಯೊಂದಿಗೆ ಉಳಿದುಕೊಂಡು ಬೆಳೆಯುತ್ತಾ ಬಂದಿದ್ದ ಇವೆರಡು ರಾಷ್ಟ್ರಗಳ ವೈಶಮ್ಯವು ಹಿಂದೆಂದೂ ಬೆಳೆಯದ ಪರಿಮಾಣದಲ್ಲಿ ಈಗ ಬೆಳೆದಿದೆ, ಮುಂದೇನು, ಎಂಬ ಆತುರದ ಪ್ರಶ್ನೆಯನ್ನೆಬ್ಬಿಸಿದೆ. ಅಂತೂ ಎಲ್ಲೆಡೆಯ ಪರಸ್ಪರ ವಿರೋಧೀ ರಾಷ್ಟ್ರಗಳು ಈಗ ಘರ್ಷಣಾಗಡಿಗೆ ಸಮೀಪಿಸಿರುವ ನೋಟ ಕಂಡುಬರುತ್ತಿದೆ.

### ರಶ್ಯಾ-ಅಮೇರಿಕಾ

'ಆಟಂಯುಗದಲ್ಲಿ ರಶ್ಯಾ ಅಮೇರಿಕಗಳ ಯುದ್ಧರೇಖಾರ'ವೇ ಇಂದು ಪ್ರಪಂಚ

ಕಾನುಕೂಲ ಪರಿಣಾಮಗಳನ್ನು ಅದು ಮಾಡಬಹುದು; ಆದರೆ ಗಣ್ಯ ಅಪಾಯಗಳನ್ನೂ ಅದು ತಂದೊಡ್ಡಲಿದೆ. ಸ್ವತಃ ತನ್ನಿಂದ ಮುಗಿಸಲಾರದ ಒಂದು ಯುದ್ಧವನ್ನು ಅದು ಆರಂಭಿಸಿ ಬಿಡುವುದು. ಮುಕ್ತಾಯಗೊಳಿಸಲು ತಮ್ಮಿಂದಾಗದಂತಹ ವಿಷಯಗಳನ್ನು ಪ್ರಾರಂಭಿಸುವವರಿಗೆ-ವಿಶೇಷವಾಗಿ, ಉತ್ತರ ಅಮೆರಿಕ ವಲಯದ ಪ್ರಾಮುಖ್ಯ ಸೇನಾ ಉದ್ಯಮಗಳನ್ನು ಶಾಶ್ವತವಾಗಿ ಸ್ತಬ್ಧಗೊಳಿಸುವ ವಿಧಾನಗಳನ್ನು ಕಂಡುಕೊಳ್ಳದೇನೇ ಯುರೋಪನ್ನು ಗೆಲ್ಲಬೇಕೆಂದು ಬಯಸುವವರಿಗೆ—ಕಳೆದ ಎರಡು ಲೋಕ ಯುದ್ಧಗಳು ಒಳ್ಳೇ ಪಾಠಗಳಾಗಿ ನಿಂತಿವೆ. ಆಟಮ್ ಜಗತ್ತಿನಲ್ಲಿ ಜನತೆಯ ಭ್ರಾಮಕ ಗ್ರಹಿಕೆಗಳಲ್ಲಿ ಮಾತ್ರವೇ ಸಾರ್ವತ್ರಿಕ ಯುದ್ಧಸಾಧ್ಯತೆ ಹುದುಗಿದೆ. ಆದರೆ ಆ ಸಂಭವನೀಯತೆಯು ಹಿಂದಿಗಿಂತಲೂ ಈ ದಿನ ಕಡಿಮೆಯಾಗಿ ತೋರುತ್ತಿದೆ. ಕಾರಣವೆಂದರೆ ಅದು ಆತ್ಮಹತ್ಯಾಕಾರಿಯೆಂಬುದೀಗ ಅಧಿಕಾಧಿಕ ಮಂದಟ್ಟಾಗಿದೆ ಹಿಟ್ಲರ್ ಅಥವಾ ಜಪಾನಿಗಳಿಗಿಂತ ಭಿನ್ನರಾದ ಕ್ರೆಮ್ಲಿನ್ ನಾಯಕರು ಆತ್ಮಹತ್ಯಾ ಸಂಕಲ್ಪವುಳ್ಳವರೇನೂ ಅಲ್ಲ.

ದ ಅಪಾಯವಾಗಿ ನಿಂತಿದೆ; ಬಿಡಿಸಲಾರದ ಒಗಟಾಗಿದೆ; ಪ್ರತಿಯೊಂದು ರಂಗದಲ್ಲೂ ವ್ಯಕ್ತಾವ್ಯಕ್ತ ಪರಿಣಾಮಗಳನ್ನು ಬೀರುತ್ತಿದೆ, ತಾನು ಅಧಿಕಾರಕ್ಕೆ ಬಂದರೆ ಲೋಕ ಶಾಂತಿ ಸಾಧನೆಯ ಪರಮಾವಧಿ ಪ್ರಯತ್ನಕ್ಕಾಗಿ ನೇರಾಗಿ ಸ್ಟಾಲಿನರ ಭೇಟಿಗೆ ಹೋಗುವೆನೆಂದು ಚುನಾವಣಾ ಪ್ರಚಾರದ ವೇಳೆ ಹೇಳಿ ಚರ್ಚಿಲ್ಲರೊಂದು ಆಕರ್ಷಣೆಯನ್ನು ನಿರ್ಮಿಸಿದ್ದರು. ಆದರೆ, ಅಂತಹ ಸರ್ವ ಪ್ರಥಮ ಸ್ಥಾನದಲ್ಲಿರುವ ಅಮೇರಿಕಾಧ್ಯಕ್ಷ ಟ್ರುಮೇನರು ತಾನು ಸಂಧಾನಾರ್ಥಿಯಾಗಿ ಮೋಸ್ಕೋವಿಗೆಂದಿಗೂ ಹೋಗುವಂತಿಲ್ಲವೆಂದೂ ಸ್ಟಾಲಿನರೇ ಅಮೇರಿಕಕ್ಕೆ ಬರುವದಾದರೆ ಸಂತೋಷವೆಂದೂ ಹೇಳಿದ್ದಾರೆ.

ಬ್ರಿಟನು ಮತ್ತು ಅಮೇರಿಕಗಳ ಆಟಂ ಸಂಬಂಧದ ಗುಟ್ಟುಗಳನ್ನ ರಶ್ಯಕ್ಕೆ ಕೊಟ್ಟರೆಂಬ ಅಪಾದನೆಯ ಮೇಲೆ ಲಂಡನಿನ ಪ್ರಸಿದ್ಧ ವೈಜ್ಞಾನಿಕ ಡಾ. ಕ್ಲಾವುಸ್ ಫುಚ್ಸ್ ಇವರಿಗೆ 14 ವರುಷಗಳ ಸಜೆಯಾಗಿದೆ 1942ರಿಂದ ಇದುವರೆಗೆ ನಾಲ್ಕು ಬಾರಿ ತಾನು ಪ್ರಾಮುಖ್ಯ ಗುಪ್ತ ವಾರ್ತೆಗಳನ್ನ ರಶ್ಯಕ್ಕೊಪ್ಪಿಸಿದುದು ಹೌದೆಂದು ಡಾ| ಫುಚ್ಸ್ ವಿಚಾರಣೆಯಲ್ಲಿ ಒಪ್ಪಿಕೊಂಡಿದ್ದರು. ಇದು ಮಿತ್ರ ರಾಷ್ಟ್ರೀಯರೆಲ್ಲರನ್ನೂ ದಿಗಿಲುಗೊಳಿಸಿದೆ. ಬ್ರಿಟನ್, ಅಮೇರಿಕಗಳು ತಮ್ಮ ರಕ್ಷಣಾ ವ್ಯವಸ್ಥೆಗಳನ್ನೇ ಬದಲಾಯಿಸಿಕೊಳ್ಳಬೇಕಾದ ಅವಶ್ಯಕತೆಯೊದಗಿದಂತಿದೆ ಈ ದೆಸೆಯಿಂದ ಆಟಂಸಂಶೋಧನಾ ಗುಟ್ಟುಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವುದಕ್ಕಾಗಿ ಲಂಡನಿನಲ್ಲಿ ಜರಗಿದ್ದ ಬ್ರಿಟನ್, ಅಮೇರಿಕ ಮತ್ತು ಕೆನಡಾಗಳ ಮಾತುಕತೆಗಳು ಅನಿಶ್ಚಿತಾವಧಿಯ ವರೆಗೆ ಮುಂದುಮಂದಿವೆ.

ರಶ್ಯದ ಬಲ ದಿನದಿಂದ ದಿನಕ್ಕೆ ಬೆಳೆಯುತ್ತಿದೆಯೆಂದೂ ಅದು ಅಮೇರಿಕದ ಮೇಲೆ ಆಕಸ್ಮಿಕ ಧಾಳಿಯಿಡಬಹುದೆಂದೂ ಅಮೇರಿಕದಲ್ಲಿ ಭೀತಿ ವ್ಯಾಪಿಸುತ್ತ ಹೋಗುತ್ತಿದೆ. ಅಮೇರಿಕ ವಿಮಾನ ದಳದ ಕಾರ್ಯದರ್ಶಿ ಡಬ್ಲ್ಯು ಸ್ಟಾಡ್ ಸಿಮಿಂಗ್ಟನರು, ತತ್ಸಂಬಂಧದ ಅಧಿಕೃತ ವಿಚಾರಣಾ ಸಮಿತಿಯೊಂದರ ಮುಂದೆ ಹೇಳಿಕೆ ಕೊಡುತ್ತಾ "ಕ್ಷಿಪ್ರದಲ್ಲೇ ಅಮೇರಿಕದ ಮೇಲೆ ಗಣನೀಯ ಬಲಪೂರ್ವಕ ಆಟಂ ಧಾಳಿಯೊಂದನ್ನು ನಡೆಸಲು ಸೋವಿಯಟ್ ರಶ್ಯವು ಸಮರ್ಥವಾದೀತು. ಅಮೇರಿಕದ ಯಾವ ಭಾಗಕ್ಕಾದರೂ ಒಂದು ಆಟಂ ಬೋಂಬನ್ನು ಕೊಂಡೊಯ್ದು ಹಾಕಿ ಸ್ವಗೃಹಕ್ಕೆ ಮರಳುವಷ್ಟು ಬಲಶಾಲಿ ವಿಮಾನ ದಳವು ರಶ್ಯಕ್ಕಿದೆ. ಒಂದೆರಡು ವಿಭಾಗಗಳ ಹೊರತು ಮಿಕ್ಕೆಲ್ಲಾ ವಿಧಾನಗಳಲ್ಲೂ ರಶ್ಯದ ವಿಮಾನ ತಯಾರಿಯು ನಮ್ಮ ರಾಷ್ಟ್ರದ ತಯಾರಿಗಿಂತ ಬಹಳ ಹೆಚ್ಚಿನದಿದೆ"ಎಂದು ಎಚ್ಚರಿಸಿದ್ದರು ಇದೇ ರೀತಿ ಇತರ ಅಮೇರಿಕನ್ ಅಧಿಕಾರಿಗಳೂ ರಶ್ಯದ ಶಕ್ತಿಸಾಮರ್ಥ್ಯಗಳ ಕುರಿತು ಅಮೇರಿಕವನ್ನು ಎಚ್ಚರಿಸಲು ಮರೆತಿಲ್ಲ.

ಈ ಅಮೇರಿಕಾ-ರಶ್ಯ ಘರ್ಷಣೆಯ ಪ್ರತಿಛಾಯೆಯು ಲೋಕದ ಪ್ರತಿಯೊಂದು ವಿದ್ಯಮಾನದಲ್ಲೂ ಪಡಿಮೂಡುತ್ತಿದೆ. ರಶ್ಯದ ಅನುಯಾಯಿ ಝೆಕೊಸ್ಲೋವೇಕಿಯದಲ್ಲಿರುವ ಎಲ್ಲಾ ಅಮೇರಿಕನ್ ಮಿಶ್ಯನರಿಗಳೂ ಕ್ಷಿಪ್ರದಲ್ಲೇ ಜೆಕೊಸ್ಲೋವೇಕಿಯವನ್ನು ಬಿಟ್ಟು ಹೋಗತಕ್ಕದ್ದೆಂದು ಅಲ್ಲಿಯ ಸರಕಾರದಿಂದ ಅಲ್ಲಿರುವ ಅಮೇರಿಕ ರಾಯಭಾರಿ ಕಚೇರಿಗೆ ಸೂಚನೆ ಬಂದಿದೆ, ಬಾಲ್ಕನಿನ ರಶ್ಯಾನುಯಾಯಿ ರಾಷ್ಟ್ರಗಳಾದ ಬಲ್ಗೇರಿಯ, ಹಂಗೇರಿ, ರುಮೇನೀಯಗಳು ಶಾಂತಿ ಕರಾರಿನ ಮಾನವೀಯ ಹಕ್ಕು ರಕ್ಷ


### ಪ್ರಕಟಣೆ

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವದೇನೆಂದರೆ:—

ಪಕಾರ್ಳ ಪಂಚಾಯತ ಬೋರ್ಡಿನ ವಾರಸಂತೆ, ದಿನವಹಿ ಮೀನು ಮಾರ್ಕೆಟು ಮುಕ್ಕಗಾದಿ ಬಾಕಗಳಲ್ಲಿ 1950ನೇ ಎಪ್ರೀಲು ತಾರೀಕು 1ರಿಂದ 1951ನೇ ಮಾರ್ಚ 31ರ ವರೇಗೆ ಪೂರ್ತಿ ಒಂದು ವರ್ಷದಲ್ಲಿ ಸುಂಕ ವಸೂಲುಮಾಡುವ ಹಕ್ಕನ್ನು ಪ್ರತ್ಯಪ್ರತ್ಯೇಕವಾಗಿ ಬೋರ್ಡು ಅಫೀಸಿನಲ್ಲಿ ಇದೇ ಮಾರ್ಚ ತಾರೀಕು 17ನೇ ಶುಕ್ರವಾರ ಸಾಯಂಕಾಲ ಗಂಟೆ 3 ಕ್ಕೆ ಪ್ರಾರಂಭವಾಗಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಸದ್ರಿ ದಿನ ಸಾಯಂಕಾಲ ಗಂಟೆ 4-30 ರಿಂದ ಯಾ ತದನಂತರ ಬೋರ್ಡಿನ ಹಳೆಯ ಹಾರೆ, ಪಿಕ್ಕಾಸು ಮತ್ತು ಖಾಲಿ ಡಬ್ಬಿಗಳನ್ನು ಸಹಾ ಏಲಂ ಮಾಡಲಾಗುವುದು.

ಹೆಚ್ಚಿನ ಏಲಂ ಶರ್ತ ವ ನಿಬಂಧನೆಯ ಮಾಹಿತಿ ಬಗ್ಗೆ ಬೋರ್ಡು ಅಫೀಸಿನಲ್ಲಿ ನೋಟೀಸು ಬೋರ್ಡಿನಲ್ಲಿ ಹಾಕಿರುವ ವಿವರವಾದ ಆಯಾಯ ಪ್ರಕಟಣೆಯನ್ನು ನೋಡಿ ಯಾ ಮುಖತಃ ವಿಚಾರಿಸಿ ತಿಳಿಯಬಹುದು.

**S ಹಿರಿಯಣ್ಣ ಹೆಗ್ಡೆ**
ಪ್ರೆಸಿಡೆಂಟ್.

ಪಂಚಾಯತ ಬೋರ್ಡು ಅಫೀಸು, ಪಕಾರ್ಳ.
ತಾರೀಕು 4-3-1950



# The Southern India Apex Bank Ltd.

HEAD OFFICE. **KALSANK, UDIPI.**

**NOTICE**

*is hereby given that the Register of Members and Transfer books of the Bank will remain closed from 17-3-1950 to 13-4-1950, both days inclusive.*

(By order of the Board)

Registered office of the Bank,
Kalsank, Udipi, 4-3-1950.

**K K PAI,**
*Managing Director.*

# ಭಾರತ ಪಾಕಿಸ್ತಾನ್ ಘರ್ಷಣೆ ಪರಮಾವಧಿ ಮಟ್ಟಕ್ಕೇರಿದೆ!

ನಿರ್ಣಯವನ್ನು ಪಾಲಿಸಿಲ್ಲವೆಂದು ಅಮೆರಿಕ, ಇಂಗ್ಲಾಂಡುಗಳು ಅಂತರ್‌ರಾಷ್ಟ್ರೀಯ ನ್ಯಾಯಾಲಯದ ಮುಂದೆ ದೂರು ತಂದಿವೆ. ಕಮ್ಯೂನಿಸ್ಟ್ ಚೈನಕ್ಕೆ ಅಮೆರಿಕವು ಇನ್ನೂ ಮನ್ನಣೆಕೊಡದಿರುವಾಗ, ರಶ್ಯಾ ಮತ್ತು ಕಮ್ಯೂನಿಸ್ಟ್ ಚೈನಗಳೊಳಗಾಗಿರುವ ಒಪ್ಪಂದದಲ್ಲಿ 5,000000 ಚೀನೀ ಕೂಲಿಗಾರರನ್ನು ರಶ್ಯಕ್ಕೆ ಕಳುಹಿಕೊಡುವ ಗುಪ್ತ ಶರ್ತವೂ ಅಡಕವಾಗಿದೆ ಎಂಬ ಮಾತು ಕೇಳಿಬರುತ್ತಿದೆ. ಚಿಯಾಂಗ್ ಕೈಶೇಕರು ಪುನಃ ರಾಷ್ಟ್ರೀಯ ಸರಕಾರದ ಅಧ್ಯಕ್ಷತೆ ವಹಿಸಿದ್ದು, ಕಮ್ಯೂನಿಸ್ಟರಿದಿರು ವಿಜಯ ಸಾಧಿಸುವ ವರೆಗೂ ಹೋರಾಡುವ ಶಪಥ ಧರಿಸಿದ್ದಾರೆ.

## ರಶ್ಯ ಮತ್ತು ಭಾರತ

ಅಮೇರಿಕ–ರಶ್ಯ ಪಾಳೆಯಗಳ ಪೈಕಿ ಯಾವುದಕ್ಕೂ ಸೇರದೆ ತಟಸ್ಥವಾಗಿರಬೇಕೆಂಬ ಭಾರತದ ಧೋರಣೆಯು ಸಮರ್ಪಕವಾಗಿದ್ದು, ಕೊನೆಯ ಪಕ್ಷ ಆ ಎರಡು ರಾಷ್ಟ್ರಗಳ ವಿನಹ ಲೋಕದ ಮಿಕ್ಕೆಲ್ಲಾ ರಾಷ್ಟ್ರಗಳೂ ಭಾರತದ ಧೋರಣೆಯನ್ನೇ ವಹಿಸಿದರೆ, ಇನ್ನೊಂದು ಗಂಡಾಂತರವನ್ನು ನಿವಾರಿಸಬಹುದೆಂಬುದು ನಿಜ. ಆದರೆ ಸದ್ಯಸ್ಥಿತಿಯಲ್ಲಿ ಇದು ಹೇಗೆ ಸಾಧ್ಯವೋ ಗೊತ್ತಾಗುವದಿಲ್ಲ. ಇಂದು ಭಾರತ ಸಮೇತ ಲೋಕದ ಪ್ರತಿಯೊಂದು ರಾಷ್ಟ್ರದಲ್ಲೂ ರಶ್ಯದ ಕಮ್ಯೂನಿಸಮ್ ಕಾಲುಚಾಚಿದೆ. ಅಂತೆಯೇ ಪ್ರತ್ಯಕ್ಷ ಸೋವಿಯೆಟ್ ನೊಗಕ್ಕೆ ಹೆಗಲೊಡ್ಡದ ಎಲ್ಲಾ ರಾಷ್ಟ್ರಗಳಿಗೂ ಅಮೆರಿಕವು ಆರ್ಥಿಕ ಸಹಾಯ, ಮತ್ತು ಒಪ್ಪಂದ ಕರಾರುಗಳ ಮೂಲಕ ಮೂಗುದಾಣ ಹಾಕುತ್ತಾ ಬಂದಿದೆ. ಇಂತಹ ಪರಿಸ್ಥಿತಿಯಲ್ಲಿ ಹೋರಾಟವೆದ್ದರೆ, ಎರಡರ ಪೈಕಿ ಒಂದು ಪಕ್ಷಕ್ಕೆ ಪಾಲಾಗದೆ ಮೂರನೆಯದಾಗಿ ದೂರ ನಿಂತಿರಲು ಯಾವ ರಾಷ್ಟ್ರಕ್ಕಾದರೂ ಸಾಧ್ಯವಾಗುವದು ಕಷ್ಟ. ಪ್ರತ್ಯಕ್ಷ ಯುದ್ಧ ಭಾಗಿತ್ವದ ಮಟ್ಟಿಗೆ ಒಂದುವೇಳೆ ಸಾಧ್ಯವಾದರೂ ಯುದ್ಧೋತ್ತರ ಪರಿಣಾಮಗಳಿಂದ ತಪ್ಪಿಸಿಕೊಳ್ಳಲು ಎಂದಿಗೂ ಸಾಧ್ಯವಾಗದು. ಇಂತಹ ಸ್ಥಿತಿಯಲ್ಲಿ ಭವಿಷ್ಯ ಗರ್ಭದಲ್ಲಿ ಭಾರತದ ಪಾಲಿನದೇನು ಕಾದಿದೆಯೋ ಊಹಿಸುವದಸಾಧ್ಯ. ನೆಹರೂ ನಾಯಕತ್ವದ ದೆಸೆಯಿಂದ ಏಶ್ಯಾದ ಮಿಕ್ಕ ರಾಷ್ಟ್ರಗಳಷ್ಟರ ಮಟ್ಟಿಗೆ ಕಮ್ಯೂನಿಸ್ಟ್ ಪ್ರಭಾವವು ಭಾರತದಲ್ಲಿಲ್ಲವಾದರೂ, ಇಂದಿನ ತುಟ್ಟಿ ಮತ್ತು ಅಭಾವ ಯುಗವು ಕಮ್ಯೂನಿಸ್ಟ್ ಚಳವಳಿಕ್ಕೆ ಹೇಳಿಸಿದ ಕಾಲವೆಂಬುದನ್ನೂ ತತ್ಪರಿಣಾಮವಾಗಿ ಅವರ ವಾದಗಳ ಕಡೆಗೆ ಜನರ ಸಹಾನುಭೂತಿ ಹೆಚ್ಚುತ್ತಿದೆಯೆಂಬುದನ್ನೂ, ಭಾರತದ ಕಮ್ಯೂನಿಸ್ಟ್ ಹಾವಳಿ ನಾಶವಾಗದೆ ಕೇವಲ ತಲೆ ಮರೆಸಿಕೊಂಡಿದೆಯೆಂಬುದನ್ನೂ ಮರೆಯಬಾರದು. ರಶ್ಯಾ ಮತ್ತು ಭಾರತಗಳೊಳಗಿನ ಸಂಬಂಧಗಳಲ್ಲಿ ಎತ್ತಿ ಹೇಳತಕ್ಕ ಮಾಧುರ್ಯವಾಗಲೀ! ಕಠೋರತೆಯಾಗಲೀ ಇಲ್ಲ. ಆದರೆ ಪಂಡಿತ ನೆಹರೂಗಳ ಲಂಡನ್ ಮತ್ತು ಅಮೆರಿಕಾ ಸಂಚಾರಗಳ ವೇಳೆ ರಶ್ಯನ್ ಸರಕಾರೀ ಪತ್ರಿಕೆಗಳು ಭಾರತ ಸರಕಾರದ ಧೋರಣೆಯನ್ನು ಕಟುವಾಗಿ ಟೀಕಿಸಿದ್ದುವು; ಅತ್ತ ಅಥಿತಿಯಾಗಿ ಹೋಗಿದ್ದ ನೆಹರೂಗಳು ತನ್ನ ಖಂಡತುಂಡ ತಾಟಸ್ಥ್ಯ ಧೋರಣೆಯನ್ನು ಸಾರಿ, ಅಮೆರಿಕದಲ್ಲಿ ಗುಪ್ತ ಅಸಮಾಧಾನವನ್ನು ನಿರ್ಮಿಸಿದ್ದರೆಂಬುದನ್ನು ಮರೆಯಬಾರದು. ಭಾರತವು ಆಗ್ನೇಯ ಏಶ್ಯಾ ಒಪ್ಪಂದ ಅಥವಾ ಶಾಂತ ಸಮುದ್ರ ಒಪ್ಪಂದವಾವುದರಲ್ಲೂ ಸೇರಿಕೊಳ್ಳುವಂತಿಲ್ಲವೆಂದು ಪಂಡಿತ ನೆಹರೂಗಳು ಮೊನ್ನೆ ತಾನೆ ಪಾರ್ಲಿಮೆಂಟಿನಲ್ಲಿ ಮತ್ತೊಮ್ಮೆ ಸಾರಿದ್ದಾರೆ. ಭಾರತದ ನೋಟವೀ ರೀತಿ ವೇಲ್ಗಡೆಗಾಗಿರುವಾಗ ಕೆಳಗಡೆ ಅದರ ಸುತ್ತಮುತ್ತ ಕಮ್ಯೂನಿಸಮ್ ವ್ಯಾಪಿಸಿಕೊಂಡು ಬಂದಿದೆ. ಯುರೋಪಿನ ಪ್ರಶ್ನೆಗಳನ್ನು ಅಭ್ಯಾಸಿಸಲು ನೇಮಿಸಲ್ಪಟ್ಟಿದ್ದ ಅಂತರ್‌ರಾಷ್ಟ್ರೀಯ ಸಮಿತಿಯೊಂದರ ಈ ಕೆಳಗಿನ ಅಭಿಪ್ರಾಯಗಳು ವಿಚಾರಣೀಯವಿವೆ:- "ಲೋಕ ಗೆಲ್ಲುವ ತನ್ನ ಹಂಚಿಕೆಗಳಿಗನುಸಾರವಾಗಿ ಸೋವಿಯೆಟ್ ರಶ್ಯವು ಬರ್ಮ ಮತ್ತು ಸಯಾಮುಗಳ ಮೇಲೆಯೇ ತನ್ನ ಮುಖ್ಯ ಹಾಗೂ ಅತಿ ಹೆಚ್ಚಿನ ಪ್ರಯತ್ನಗಳನ್ನು ಪ್ರಚಲಿತ ಭವಿಷ್ಯದಲ್ಲಿ ನಡೆಸಲಿದೆ. ಚೀನ ಮೋಸ್ಕೋ ಮತ್ತು ಚೈನೀ ಕಮ್ಯೂನಿಸ್ಟರು ನಿರ್ಧರಿಸಿಕೊಂಡಿರುವ ಯೋಜನೆಯಿದು ಎಂಬುದೇ ಕೀರಾ ಇತ್ತೀಚೆಗೆ ಬಂದಿರುವ ವಾರ್ತೆ. ಭಾರತದೊಂದಿಗೆ ಏಕ ಸರಹದ್ದಿರುವ ಟಿಬೇಟನ್ನು ಆಕ್ರಮಿಸಿಕೊಳ್ಳುವ ತಯಾರಿಯನ್ನೂ ಕಮ್ಯೂನಿಸ್ಟ್ ಸೇನೆಗಳು ಮಾಡುತ್ತಿವೆ. ಅಂತೂ ಭಾಗಶಃ ಹೆಚ್ಚು ಹೆಚ್ಚಾಗಿ ಕಂಟಕಗಳಿಗೊಳಗಾಗುತ್ತಾ ಬರುತ್ತಿದೆ. ಇನ್ನು ಒಂದು ಅಥವಾ ಎರಡು ವರುಷಗಳೊಳಗೆ ದಕ್ಷಿಣ ಏಶ್ಯಾದ ಇತರ ರಾಷ್ಟ್ರಗಳನ್ನೂ ಕಬಳಿಸಿಕೊಳ್ಳುವದರಲ್ಲಿ ರಶ್ಯವು ಜಯಶೀಲವಾದರೆ, ಭೂಗೋಳದ ಸುಮಾರು ಅರ್ಧಾಂಶ ಜನತೆಯನ್ನು ಕಮ್ಯೂನಿಸಮ್ ಆಕ್ರಮಿಸಿಕೊಂಡಂತಾಗುವದು. ದಕ್ಷಿಣ ಏಶ್ಯದ ಸೋವಿಯೆಟ್ ವಿಧಾನಗಳಲ್ಲಿ, ಆಯಾಯ ರಾಷ್ಟ್ರದೊಳಗಡೆ 'ವಿಮೋಚನಾ ಸೇನೆ'ಗಳನ್ನು ರಚಿಸುವದು, ಸರಹದ್ದು ಸಂಬಂಧವಿರುವ ಇಂಡೋ ಚೈನಾ, ಸಯಾಮ್, ಬರ್ಮ ದಂತಹ ರಾಷ್ಟ್ರಗಳೊಳಗೆ ಕೆಂಪು ಚೈನದಿಂದ ಗೊರಿಲ್ಲಾ ದಳಗಳನ್ನು ನುಗ್ಗಿಸುವುದೇ ಮುಂತಾದವುಗಳು ಅಡಕವಾಗಿವೆ. ಇಂಡೋನೇಶ್ಯವೊಂದು ಒಳಗಡೆಯ ಅಥವಾ ಹೊರಗಡೆಯ ಹೊಡೆತದಿಂದ ಕಮ್ಯೂನಿಸ್ಟರ ವಶವಾದರಾಯಿತು– ಆ ಮೇಲೆ ಅದರ ನೆರೆಕರೆಯ ರಾಷ್ಟ್ರಗಳೆಲ್ಲವೂ ಕ್ಷಿಪ್ರಗತಿಯಿಂದ ಕಮ್ಯೂನಿಸ್ಟ್ ಛತ್ರದಡಿಗೆ ಸೇರಿಹೋಗುವುದು ಖಚಿತವೆನ್ನಿಸುತ್ತದೆ. ಬರ್ಮಾ ಮತ್ತು ಸಯಾಮುಗಳು ಕಮ್ಯೂನಿಸ್ಟ್ ಹಸ್ತಗತವಾದರೆ, ಇಂಡೋಚೈನದ ರಕ್ಷಣಾ ಸೇನೆಗಳು ಎರಡು ಗಡಿಗಳಿಗೆ ಹಂಚಿ ಬೀಳಬೇಕಾಗುವುದರಿಂದ ಅದು ಹಿಂಗಡೆಯಿಂದಲೇ ಆ ಕಡೆಗಳೆಯಲ್ಪಡುವದು ಸಂಭವನೀಯ. ಬರ್ಮ ಮತ್ತು ಸಯಾಮ್ ಸರಕಾರಗಳಿಗಾದರೋ ಸಶಕ್ತ ಕಮ್ಯೂನಿಸ್ಟ್ ಆಕ್ರಮಣವನ್ನು ಪ್ರತಿಭಟಿಸುವ ಯೋಗ್ಯತೆಯು ಸದ್ಯಕ್ಕಿಲ್ಲವೆನ್ನಬಹುದು. ಏನೇ ಹೇಳಿದರೂ, ಸ್ವತಃ ಭಾರತವೇ ಹೆಚ್ಚೆಚ್ಚಾಗಿ ಕಮ್ಯೂನಿಸ್ಟ್ ಚಟುವಟಿಕೆಗಳಿಂದ ಆತಂಕಿಸಲ್ಪಡುತ್ತಾ ಬರುತ್ತಿದೆ. ಈಗ ಟಿಬೇಟನ್ನು ಆಕ್ರಮಿಸಿಕೊಳ್ಳುವ ಸಿದ್ಧತೆಯುಳ್ಳರುವ ಕಮ್ಯೂನಿಸ್ಟ್ ಚೈನವು ಆ ಕೆಲಸವನ್ನು ಮುಗಿಸಿಕೊಂಡು ಭಾರತದೊಂದಿಗೆ ಸಮಾನ ಸರಹದ್ದನ್ನು ಸಂಪಾದಿಸಿಕೊಳ್ಳುವಂತಾಗುವ ಇನ್ನು ಕೆಲವೇ ತಿಂಗಳುಗಳಲ್ಲಿ ಈ ಗಂಡಾಂತರವು ಮತ್ತಷ್ಟು ದೊಡ್ಡದಾಗಲಿದೆ. ಸಂಗತಿ ಹೀಗಿರುವಾಗ, ದಕ್ಷಿಣ ಏಶ್ಯಾ ರಾಷ್ಟ್ರಗಳನ್ನು ಕಮ್ಯೂನಿಸಮಿನಿಂದ ರಕ್ಷಿಸಿಕೊಳ್ಳಲು ಆರ್ಥಿಕ, ಸಾಮಾಜಿಕ ಸ್ಥಿತಿಗಳನ್ನು ಸುಧಾರಿಸುವ ಸಿಲೋನಿನ್ ಕಾಮನ್‌ವೆಲ್ತ್ ರಾಷ್ಟ್ರ ಸಮ್ಮೇಳನದ ಯೋಜನೆಯು ನಿರರ್ಥಕವೇ ಸರಿ. ಹೇಗೆಂದರೆ ಈ ಸ್ಥಿತಿ ಸುಧಾರಣೆಗೆ ಹಲವು ವರುಷಗಳು ಹಿಡಿಯಬಹುದು; ಆದರೆ ರಾಷ್ಟ್ರಗಳನ್ನು ಗೆದ್ದುಕೊಳ್ಳುವ ಕಮ್ಯೂನಿಸ್ಟ್ ಪ್ರಯತ್ನವು ಕ್ಷಿಪ್ರ ಭವಿಷ್ಯದಲ್ಲೇ ನಡೆಯಲಿದೆ. ಪ್ರಜಾಸತ್ತಾ ರಾಷ್ಟ್ರಗಳ ಏಸ್ಕೃತ ಸೇನಾಬೆಂಬಲವನ್ನೊಳಗೊಂಡ ಪೂರ್ಣ ಒಮ್ಮತದ ಕಾರ್ಯಾಚರಣೆಯು ಕೂಡಲೇ ಈ ರಾಷ್ಟ್ರಗಳಿಗೆ ಬೆಂಬಲವಾಗಿ ನಿಂತರೆ ಮಾತ್ರ ಫಲ ಬಂದೀತು."

## ಭಾರತ— ಪಾಕಿಸ್ತಾನ

ಭಾರತದ ಸಮೀಪ ಭವಿಷ್ಯವು ಇನ್ನೂ ಕಠೋರ ಸ್ವರೂಪದ್ದಾಗಿ ಕಾಣುತ್ತಿರುವಾಗ, ಅದರ ಪ್ರಚಲಿತ ನೆರೆ ರಾಷ್ಟ್ರ ಸಂಬಂಧವಂತೂ ಇನ್ನರಲ್ಲೇ ಮಹತ್ತಾದ ಕಂಟಕವಾಗಿ ಪರಿಣಮಿಸಿದೆ. ಪಾಕಿಸ್ತಾನ್ ಉಪಟಳಕ್ಕಾವ ಪರಿಹಾರವೆಂಬುದಾಗಿಯೂ ಹೊಳೆಯದಂತಿದೆ. ಆದಿಯಿಂದೀ ವರೆಗೂ ಕೇಳಿಯುತ್ತಾ ಬಂದಿರುವ ಕಾಶ್ಮೀರ ಕಾಳಗವಾದರೋ ಅಮೆರಿಕ, ರಶ್ಯಗಳ ಗುಪ್ತ ಕೈವಾಡಗಳಿಗವಕಾಶ ಕೊಡಲಾರದೆಂಬ ಭರವಸೆ ಕಾಣುವದಿಲ್ಲ. ಫೆಬ್ರವರಿ ತಿಂಗಳಾರಂಭದಲ್ಲಿ ಭದ್ರತಾ ಕೌನ್ಸಿಲಿನಲ್ಲಿ ಚರ್ಚಿಸಲ್ಪಟ್ಟು ಮುಂದುವರಿಸಲ್ಪಟ್ಟಿದ್ದ ಕಾಶ್ಮೀರ ವಿವಾದ ಸಂಬಂಧದ ಜತೆ ಸೂಚನೆಯು ಇದೇ ತಾ. 7ರಲ್ಲು ಭದ್ರತಾ ಕೌನ್ಸಿಲ್ ಸಭೆಯಲ್ಲಿ ಪುನಃ ಪರ್ಯಾಲೋಚನೆಗೆ ಬಂದಿದೆ.

ಇತ್ತ ಪೂರ್ವ ಪಾಕಿಸ್ತಾನದಿಂದ ಹಿಂದುಗಳ ಮೇಲೆ ಅಮಾನುಷ ರೀತಿಯ ಕೊಲೆ, ದರೋಡೆಗಳನ್ನು ನಡೆಸಿ, ಪಾಶವಿಕ ರೀತಿಯಿಂದ ಹಿಂಸಿಸಿ, ಓಡಿಸುವ ಅತ್ಯಾಚಾರವು ಅತಿ ದೊಡ್ಡ ಪರಿಮಾಣದಲ್ಲಿ ಹೃದ್ರಾವಕ ರೀತಿಯಿಂದ ನಡೆದಿದೆ. ಕಳೆದ ದಶಂಬರ 30ರಿಂದ ಫೆಬ್ರವರಿ ಅಂತ್ಯದ ವರೆಗಿನ ಎರಡೇ ತಿಂಗಳುಗಳಲ್ಲಿ 50,000 ನಿರಾಶ್ರಿತರು ಪೂರ್ವ ಬಂಗಾಳದಿಂದ ಪಶ್ಚಿಮ ಬಂಗಾಳಕ್ಕೋಡಿಬಂದಿರುವ ಲೆಕ್ಕ ದೊರೆತಿದೆ. ಫೆಬ್ರವರಿ 28ರಲ್ಲಿ ನಿರಾಶ್ರಿತರನ್ನು ತುಂಬಿಸಿಕೊಂಡು ಕಲ್ಕತ್ತೆಗೆ ಹೊರಟಿದ್ದ ಟ್ರೈನಿನ ಮೇಲೆ ಪೂರ್ವ ಪಾಕಿಸ್ತಾನದ ರಾಜಬಾರಿ ಎಂಬಲ್ಲಿ ಶಸ್ತ್ರಧಾರಿ ಪುಂಡರ ತಂಡ ಮುತ್ತಿಗೆ ಹಾಕಿ ಹಲವರನ್ನು ಕೊಂದು, ಬಹಳ ಮಂದಿಯನ್ನು ಜಖಂಗೊಳಿಸಿದ್ದರು. ಹಿಂದೂ ಸ್ತ್ರೀಯರನ್ನೂ ಎಳೆದುಕೊಂಡೊಯ್ದಿರುವರೆಂದು ತಿಳಿದು ಬಂದಿದೆ. ಪಾಕಿಸ್ತಾನ ಬಿಟ್ಟೋಡಿದಂತೆ ಸಹಸ್ರಾರು ಹಿಂದುಗಳನ್ನು ಕಡಿದಟ್ಟಿರುವ—ರೈಲಿನಿಂದ ನಿರಾಶ್ರಿತರನ್ನು ಅಲ್ಲಲ್ಲಿ ಇಳಿಸಿ ದಿಗ್ಬಂಧನಗೊಳಿಸುತ್ತಿರುವ—ಶೋಚನೀಯ ವಾರ್ತೆಗಳೂ ಬರುತ್ತಿವೆ. ಬಾಕರ್‌ಗಂಜ್ ಜಿಲ್ಲೆಯೊಂದರ ಕೆಲವು ಸ್ಥಳ

(ಮುಂದೆ ಪುಟ ನೋಡಿ)


**On this Memorable day**

Of the 26th of January in the year 1950 of the inauguration of the Indian Republic, we have the pleasure to announce the birth of our

**Vijaya Cash Certificates**

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices

Head Office:—**Kadri Road, Mangalore.**

Branches:- City-Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara.

**B. Manjaya Hegde.**

Advocate & President, District Board, S. Kanara.

CHAIRMAN

VIJAYA BANK, LTD.,



*Nambiar's*

**ARYA VAIDYA SALA**

UDIPI

*Ideal House for Ayurvedic Treatment.*

T. K. Kelu Nambiar,

*Vaidya.*

THE
Canara Banking Corporation Ltd.
(Incorporated in India with Limited Liability.)
Estd: 1906.
ANNOUNCEMENT
A Branch of the Bank will shortly be opened
at
PONAMPET (SOUTH COORG).
ಬ್ಯಾಂಕಿನ ಒಂದು ಶಾಖೆಯು ಸದ್ಯದಲ್ಲಿಯೇ
ಪೊನ್ನಂಪೇಟೆ (ದಕ್ಷಿಣ ಕೊಡಗು)
ಯಲ್ಲಿ ತೆರೆಯಲಾಗುವುದು.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್,
ಸ್ಥಾಪನೆ: 1906

## ಮೋಟಾರು ಮುಷ್ಕರ ಸಮಾಪ್ತಿ ಪಾಠಗಳು

ಫೆಬ್ರವರಿ ತಾ. 22ರಲ್ಲಿ ಆರಂಭವಾಗಿ ಮಾರ್ಚ ತಾ. 2ರ ವರೆಗಿನ 9 ದಿನಗಳ ವರೆಗೆ ಪರಿಣಾಮಕಾರಿಯಾಗಿ ಸಾಗಿದ್ದ ದಕ್ಷಿಣ ಕನ್ನಡ ಜಿಲ್ಲಾ ಬಸ್ ಕೆಲಸಗಾರರ ಮುಷ್ಕರವು ಅಲ್ಲಿಗೇ ಮುಗಿದು, ತಾ. 3 ರಿಂದ ಯಥಾಪ್ರಕಾರ ಬಸ್ಸುಗಳೆಲ್ಲವೂ ಚಾಲಿನಲ್ಲಿವೆ. ಈ ಮುಷ್ಕರದ ಕಾರಣ ಮತ್ತು ಪ್ರಭಾವವು ಸಾರ್ವಜನಿಕರಿಗೆ ಮನವರಿಕೆಯಾದಷ್ಟು, ತೊಡಗಿದ ಮುಷ್ಕರ ಅಂತ್ಯಗೊಂಡುದು ಹೇಗೆ ಎಂಬ ಸಂಗತಿ ಗೊತ್ತಾಗಿಲ್ಲ ಇದೊಂದು ಈ ಮುಷ್ಕರದ ವೈಶಿಷ್ಟ್ಯ!

ಮುಷ್ಕರಾವಧಿಯ ಕೊನೆಯ ಭಾಗದಲ್ಲಿ ಮಂಗಳೂರಿಗೆ ಬಂದಿದ್ದ ಪೋಲೀಸ್ ಡಿ. ಐ. ಜಿ. ಯವರ ಸ್ಪಷ್ಟಾಭಿಪ್ರಾಯಗಳ ಪರಿಣಾಮವಾಗಿ— ಎವಾರ್ಡ್ ಸಂಬಂಧದ ಬೇಡಿಕೆಗಳನ್ನು ಒಂದು ತಿಂಗಳೊಳಗೆ ಇತ್ಯರ್ಥಿಸುವೆವೆಂದು ಜಿಲ್ಲಾ ಕಲೆಕ್ಟರ್ ಮತ್ತು ಶ್ರೀ ಕೆ ಆರ್. ಕಾರಂತ ಎಂ. ಎಲ್. ಎ. ಡಾ| ಯು. ಪಿ. ಮಲ್ಯ, ಎಂ ಎಲ್. ಎ. ಇವರು ಕೊಟ್ಟ ಆಶ್ವಾಸನೆಯಿಂದಾಗಿ — ಮುಷ್ಕರ ಮುಕ್ತಾಯಗೊಂಡಿತೆಂಬ ಸುದ್ದಿಯಿದೆ. ಆದರೆ ಯಾವ ತೀರ್ಮಾನವೂ ಲಿಪಿಬದ್ಧವಾಗಿ ಆದಂತಿಲ್ಲ; ಸಂಬಂಧಪಟ್ಟ ಯಾವ ಕಡೆಯಿಂದಲೂ ಸ್ಪಷ್ಟ ಹೇಳಿಕೆಯಿಲ್ಲ. ಸಂಘ ನಾಯಕರು ಹಲವರು ಇನ್ನೂ ಬಂಧನದಲ್ಲೇ ಉಳಿದುಕೊಂಡಿರುವುದು ಕಂಡುಬರುತ್ತಿದೆ.

ಒಟ್ಟಿನ ಮೇಲೆ ಕೆಲವು ದಿನ ಜಯಶೀಲವಾಗಿ ನಡೆದಿದ್ದ ಮುಷ್ಕರವು ಸ್ಪಷ್ಟವಾದ ಯಾವ ಗುರಿಯನ್ನೂ ಮುಟ್ಟದೆ—ಆದೇಶ ಮುಕ್ತಾಯಗೊಂಡಿತೋ, ಒಳಗಡೆಯಿಂದ ಕುಸಿದು ಬಿತ್ತೋ ಎಂಬ ಅಂದಾಜನ್ನೂ ಕೊಡದೆ ಮುಗಿದು ಹೋಯಿತು. ಇಂತಹ ಅಂತ್ಯದ ಮೂಲಕ ಗೆದ್ದವರು ಬಸ್ ಮಾಲಕರೇ ಹೊರತು ಮಜೂರರಲ್ಲ. ತತ್ಪರಿಣಾಮವಾಗಿ ಇನ್ನೊಂದು ತಿಂಗಳೊಳಗೆ ಆಗಲಿದೆ ಎಂದು ಕೇಳಬರುತ್ತಿರುವ ವ್ಯವಸ್ಥೆಯೆಂದರೆ, ಒಂದೋ ಪ್ರಯಾಣಿಕ ಟಿಕೇಟುದರ ಹೆಚ್ಚಿಸಿ ಬಸ್ ಕೆಲಸಗಾರರಿಗೆ ಎವಾರ್ಡಿನನ್ವಯದ ಬಟವಾಡೆ—ಇಲ್ಲವೇ ಆ ಬಟವಾಡೆಗೇನೇ ಅರ್ಧ ಚಂದ್ರ ಅಥವಾ ಮುಕ್ಕಾಲು ಚಂದ್ರ, ಪೂರ್ಣ ಚಂದ್ರ ಪ್ರಯೋಗ ಮಾತ್ರ.

ಈ ಮುಷ್ಕರದಿಂದ ಕಲಿಯಬೇಕಾದ ಪಾಠಗಳಿವೆ. ಇದನ್ನಾರಂಭಿಸಿದ್ದು ದ. 'ಕೆನರಾ ಮೋಟಾರ್ ಕೆಲಸಗಾರರ ಯೂನಿಯನು' ಇದನ್ನು ಮುಗಿಸಿಕೊಂಡುದು, 'ದ. ಕ. ಆಟೋಮೋಬೈಲ್ಸ್ ಕೆಲಸಗಾರ ಯೂನಿಯನು'. ಇವೆರಡೂ ಬಸ್ ಕೆಲಸಗಾರರ ಸಂಘಗಳೇ. ಮುಷ್ಕರ ಸೃಷ್ಟಿಕರ್ತ ಮೊದಲನೇ ಯೂನಿಯನ್ ಸಮತಾವಾದಿಗಳ ಚಾಲಕತ್ವದಲ್ಲೂ, ಅದರ ಲಯಕರ್ತ ಎರಡನೇ ಯೂನಿಯನ್ ಕಾಂಗ್ರೆಸಿಗರ ಕೈಯಲ್ಲೂ ಇರುವಂತಿದೆ. ಪ್ರಕೃತ ಈ ಎರಡು ಪಕ್ಷಗಳೊಳಗಿರುವ ಸಂಬಂಧಕ್ಕನುಸಾರವಾಗಿ ಮೊದಲನೆಯದು ಹುಟ್ಟಿಸಿದುದನ್ನು ಎರಡನೆಯದು ಕೊಂದು ಹಾಕಿತು! ಆದರೆ, ಇವೆರಡು ಪಕ್ಷಗಳ ಕೈಯ್ಯ ಉಪಕರಣವಾಗಿ ಬಳಸಲ್ಪಟ್ಟ ಬಸ್ ಮಜೂರರಿಂದು, ನಾಳೆಯ ಗತಿ ಏನೆಂದು

---

ಗುರುವಾರ ಉಡುಪಿ ೯-೩-೧೯೫೦

## ಎರಡು ಕಂಟಕಗಳು

ಎಂದಿನಿಂದಲೂ ಭಾರತದ ಪ್ರಗತಿಗಾತಂಕರವಾಗಿ ಉಳಿದುಕೊಂಡಿರುವ ಮುಖ್ಯ ಕಂಟಕಗಳೆಂದರೆ ಜಾತೀಯತೆ ಮತ್ತು ದಾರಿದ್ರ್ಯ. ಇವುಗಳೇ ಈಗ ಒಳಗಿನ ಸ್ಥಿತಿ ಮತ್ತು ಹೊರಗಿನ ಸಂಬಂಧವೆರಡರ ಮೂಲಕವೂ ಮಹಾ ಗಂಡಾಂತರಗಳಾಗಿ ಬೆಳೆದು ಜನತಾರಾಜ್ಯ ಭಾರತದ ಪಾಲಿನ ಅವಸರದ ಮತ್ತು ಅಭೇದ್ಯ ಸಮಸ್ಯೆಗಳಾಗಿ ನಿಂತಿವೆ. ಪಾಕಿಸ್ತಾನವನ್ನು ನಿರ್ಮಿಸಿದ್ದ ಜಾತೀಯತೆಯು ಈಗ ಅಲ್ಲಿಂದ ಕರಾಳ ವಿಷವನ್ನೀ ಕಡೆಗೆ ಕಾರುತ್ತಿದೆ; ಹಲವು ದೌರ್ಬಲ್ಯ ಮತ್ತು ಕೊರತೆಗಳನ್ನು ನಿರ್ಮಿಸಿರುವ ನಿಸ್ಸಹಾಯಕ ದರಿದ್ರಾವಸ್ಥೆಯು ಕಮ್ಯೂನಿಸಮ್ ಉರಿಗೆ ಒಳಗಡೆಯಲ್ಲಿ ಸುತ್ತಮುತ್ತಲಿಂದಲೂ ಊದುಗಾಳಿಯಾಗಿ ಪರಿಣಮಿಸಿದೆ. ಇವೆರಡು ದುರ್ಲಕ್ಷಣಗಳೂ ದೇಶದೊಳಗಡೆಯಲ್ಲಿ ದೌರ್ಬಲ್ಯ ನಿರ್ಮಿಸುವಂತಹವಿರುವಂತೆಯೇ, ಹೊರಗಿನ ಆಕ್ರಮಣವನ್ನೂ ಆಮಂತ್ರಿಸುವಂತಹವಿವೆ ಎಂಬುದನ್ನು ಮರೆಯಬಾರದು.

ಪೂರ್ವ ಪಾಕಿಸ್ತಾನದಲ್ಲಿ ಮುಸ್ಲಿಮೇತರ ಸಮಾಜಗಳವರ ಮೇಲಾಗುತ್ತಿರುವ ಅಮಾನುಷ ಅತ್ಯಾಚಾರಗಳು, ಮತ್ತು ಸಂಬಂಧವಾಗಿ ಪಾಕಿಸ್ತಾನ್ ಸರಕಾರವು ಪಠಿಸಿರುವ ವಂಚಕ ಘೋಷಣೆಯು ಭಾರತದ ಜನತೆಯ ರಕ್ತವನ್ನು ಕುದಿಸಿರುವಂತೆಯೇ ಸರಕಾರೀ ನಾಯಕರನ್ನೂ ಗಾಢ ಚಿಂತನೆಗೀಡು ಮಾಡಿದೆ. ನಾವು ಕಳೆದವಾರ ಹೇಳಿರುವಂತೆ ಇವೆರಡು ರಾಷ್ಟ್ರಗಳ ಭಿನ್ನ ಮನೋವೃತ್ತಿ ಮತ್ತು ಸ್ಥಿತಿಗತಿ ವಿರೋಧಾಭಾಸಗಳಿಂದಾಗಿ ಪಾಕಿಸ್ತಾನ್ ರೋಗಕ್ಕೆ 'ಶಸ್ತ್ರಕ್ರಿಯೆ'ಯ ಹೊರತು ಬೇರೆ ಚಿಕಿತ್ಸೆಯಾವುದೂ ಸದ್ಯಕ್ಕೆ ತಾಗುವಂತಿಲ್ಲ. ಪಾಕಿಸ್ತಾನ್ ಪಾಲು ವಿಗಂಡಿಸಿ ಹಾಕಿದುದರಿಂದ ನವ ಭಾರತ ರಚನೆಗೆ ಅನುಕೂಲತೆಯೊದಗಿದ ಪ್ರಯೋಜನವೊಂದು ಕಾಣುತ್ತಿದೆಯಾದರೂ ಪಾಕಿಸ್ತಾನ್ ಸ್ಥಾಪನೆಯ ಉದ್ದೇಶವು ಪೂರ್ಣ ಸಂಭವಗೊಂಡಿದೆ ಎಂಬುದು ಸ್ಪಷ್ಟ. ಪಾಲುಕೊಟ್ಟ ಮೇಲಾದರೂ ಪಾಕಿಸ್ತಾನಿಗಳ ಗಂಡಾಂತರ ತಪ್ಪಲೊಲ್ಲದು—ತನ್ನ ಪಾಲಿನ ಕರ್ತವ್ಯ ಮಾಡಿಕೊಂಡು ತನ್ನ ವ್ಯಕ್ತಿರುವ ನೆಮ್ಮದಿಯನ್ನು ಭಾರತಕ್ಕವರು ದಯಪಾಲಿಸಲಾರರು—ಇದು ಅಂದಿನಂತೆಯೇ ಇಂದು ಮತ್ತೆಂದೆಂದಿಗೂ — ಎಂಬುದು ಸ್ಪಷ್ಟವಾಗಿರುವಾಗ, ಪಾಕಿಸ್ತಾನವನ್ನೇ ತನ್ನ ಇರಸ್ತಿಕೆಗೊಂದು ಅಪಾಯವೆಂದು ಭಾರತವು ಗಣಿಸದೆ ಬೇರೇನು ಮಾಡಬೇಕೋ ಹೊಳೆಯುವುದಿಲ್ಲ. ಭಾರತೀಯ ಜನತೆಯ ಸಹನೆ ಅಮಿತವಾದುದು; ಇಂದಿನ ಅಸಹ್ಯ ಸಂಕಟ, ಅಪಮಾನಗಳನ್ನು ಸಹಿಸಿಕೊಳ್ಳಬೇಕೆಂದು ನಾಯಕರೆಲ್ಲ ತನಕ ಬೋಧಿಸುತ್ತಾ ಹೋದರೂ ಜನತೆ 'ಸೈ'ಗೊಡುವುದೇ ಸರಿ; ಸೈಗುಟ್ಟಲೇಬೇಕು. ಆದರೀ ಸಹನೆಗೆ ಎಂದಾದರೊಂದು ದಿನ ಬೆಲೆಬರುವ ಭರವಸೆ ಬೇಕು. ಪಾಕಿಸ್ತಾನದಿಂದ ಅದು ದೊರಕೀತೆಂಬ ಆಶೆಯನ್ನಿನ್ನೂ ಕಟ್ಟಿಕೊಳ್ಳುವುದಾದರೆ, ಅದೊಂದು ಹುಚ್ಚಾಟವಲ್ಲದೆ ಬೇರಲ್ಲ. ಅತ್ಯಾಚಾರಗಳ ಕಡೆಗಿನ ಸಹನೆಯ ಅಭಾವವೇನೂ ಭಾರತದಲ್ಲಿಲ್ಲ; ಶಕ್ತಿಯ ಅಭಾವ ಕೂಡಾ ಇರಲಾರದು. ಇದಿರುಗಡೆಯ ಆ ಅತ್ಯಾಚಾರ ಮತ್ತು ಒಳಗಡೆಯ ಈ ಯೋಗ್ಯತೆಗಳ ಸರಿಯಾದ ತೂಕವರಿತಿರುವ ಭಾರತ ನಾಯಕರು ಮಾತ್ರ ಈ ಕುರಿತು ಅಗತ್ಯವುಳ್ಳ ಕಾರ್ಯ ಕೈಕೊಳ್ಳಲೇ ಬೇಕು. ಸರಕಾರೀ ಕಾರ್ಯ ಪರೀಕ್ಷೆಯಿಂದಲೇ ಜನತೆಯಂತಹ ಸಹನೆ ತೋರಿಸುತ್ತಿರುವಾಗ, ಅಗತ್ಯವುಳ್ಳ ಕಾರ್ಯವಾಗದಿದ್ದರೆ ಈ ಸಹನೆಯು ಹೇಡಿತನವೆನ್ನಿಸೀತು. ಭಾರತವು ಅಂತಹ ಹೇಯ ದರ್ಜೆಗಿಳಿಯುವಂತಾದರೆ ನ್ಯಾಯ, ರಾಷ್ಟ್ರಹಿತ, ಮಾನುಷತ್ವ ಇವೆಲ್ಲಕ್ಕೂ ದೊಡ್ಡ ಧಕ್ಕೆ ಬಿದ್ದಂತಾಗುವದು. ಆದ್ದರಿಂದ ಈ ಕುರಿತು ಭಾರತದ ಜನತೆಯು ತಮ್ಮ ನಾಯಕರ ಅಪೇಕ್ಷಾನುಸಾರ ಶಾಂತ, ಸ್ಥಿರ ಚಿತ್ತದಿಂದಿರಬೇಕಾದಂತೆಯೇ, ರಾಷ್ಟ್ರನಾಯಕರು ಆ ಕಂಟಕ ನಿವಾರಣೆಯ ಕಾರ್ಯವನ್ನು ಕೂಡಲೇ ಕೈಕೊಳ್ಳಬೇಕಾದುದೂ ಅಗತ್ಯವೆಂಬುದನ್ನು ಒತ್ತಿ ಹೇಳಬೇಕಾಗಿದೆ.

ಇನ್ನೊಂದು ಗಂಡಾಂತರವಾಗಿರುವ ಕಮ್ಯೂನಿಸಮ್ ವ್ಯಾಪನೆಯ ಕುರಿತು ಯಾರಲ್ಲೂ ಭಿನ್ನಾಭಿಪ್ರಾಯಗಳಿರಲಾರವೆಂದು ನಂಬುತ್ತೇವೆ. ಭಾರತದಲ್ಲೀಗ ಹಲವು ಪಕ್ಷ ಪಂಗಡಗಳಿರಬಹುದು; ಆದರೆ ತಮ್ಮ ಪಾಲಿನ ಸುಸಂದರ್ಭವು ತಮಗೆ ಎಟಕದ ರೀತಿಯಲ್ಲಿ ಬಲವಾಗಿ ಒತ್ತಿಡಲ್ಪಟ್ಟಿರುವ ಪಕ್ಷವೆಂದರೆ ಕಮ್ಯೂನಿಸ್ಟ್‌ಪಕ್ಷವೆಂಬುದನ್ನು ಮರೆಯಬಾರದು. ಕಮ್ಯೂನಿಸ್ಟ್ ಚಳವಳಗಾರರು ಇಂದು ಸ್ವತಂತ್ರಾನುಕೂಲತೆಯಿಂದಿರುತ್ತಿದ್ದರೆ, ಜನಸಾಮಾನ್ಯರ ನಿತ್ಯಜೀವನ ಸಂಕಷ್ಟಗಳು ಪರಮಾವಧಿಗೇರಿರುವ ಈ ಕಾಲವನ್ನು ಬ

ವರು ತಮ್ಮ ಅನುಕೂಲತೆಗಾಗಿ ಹೇಗೆ ಉಪಯೋಗಿಸಿಕೊಳ್ಳುತ್ತಿದ್ದರು ಮತ್ತು ಎಂತಹ ವಿಜಯ ಗಳಿಸುತ್ತಿದ್ದರು ಎಂಬುದನ್ನೊಮ್ಮೆ ಊಹಿಸಿಕೊಳ್ಳಬೇಕು. ರಕ್ತದ ಆನುಕರಣೆ ಮತ್ತು ಹಿಂಸಾಚರಣೆಗಳಲ್ಲವಾದರೆ, ಭಾರತೀಯ ಕಮ್ಯೂನಿಸ್ಟರನ್ನು ದ್ವೇಷಿಸುವ ಮತ್ತು ದಮನಿಸುವ ಅಗತ್ಯ ಬೀಳುತ್ತಿರಲಿಲ್ಲ. ಕಮ್ಯೂನಿಸ್ಟರ ಗುರಿಯಾಗಿರುವ ಸಮಾನತೆಗೂ ರಾಷ್ಟ್ರೀಯ ಸಮತಾವಾದಿಗಳ ದೃಷ್ಟಿಪಥದಲ್ಲಿರುವ ಸಮತೆಗೂ ವ್ಯತ್ಯಾಸಗಳಿವೆಯಾದರೂ ಭಾರತದ ಆರ್ಥಿಕ ಸಾಮಾಜಿಕ ಸ್ಥಿತಿಯು ಮೂಲತಃ ಬದಲಾಗಲೇ ಬೇಕೆಂಬ ಕುರಿತು ವಿವಾದವಿಲ್ಲ. ಜನಸಾಮಾನ್ಯರ ಬಡತನ, ಮತ್ತಿಂದಿನ ದುಸ್ಥಿತಿಯಿಂದಾಗಿ ಇಂತಹ ಬದಲಾವಣೆಯ ಬಾಯಾರಿಕೆಯು ಈಗ ಬಲಗೊಂಡಿದೆ. ರಾಷ್ಟ್ರೀಯ ಹಿತ, ಸಂಸ್ಕೃತಿ ಮತ್ತು ಮನೋವೃತ್ತಿಗನುಗುಣವಾದ ಸಮಾನತಾ ಸಂಸ್ಥಾಪನೆಯ ಮೂಲಕ ಈ ಬಾಯಾರಿಕೆಯನ್ನು ಶಮನಿಸದಿದ್ದರೆ, ಅದು ಕಮ್ಯೂನಿಸಮ್ ಕಷಾಯ ಪಾನಕ್ಕೆ ಮುಂದಾಗುವ ಅಪಾಯವಿದ್ದೇ ಇದೆ. ಇಂತಹ ಅಪಾಯದಿದಿರಿನಲ್ಲೂ ರಾಷ್ಟ್ರದ ವಿವಿಧ ವರ್ಗದ ಶ್ರೀಮಂತರು, ಮಾಲಕರು, ಧನಿಗಳೇ ಮೊದಲಾದವರು ದೂರದೃಷ್ಟಿಯಿಲ್ಲದೆ ತಮ್ಮ ಪರಂಪರಾಗತ ಸ್ವಾರ್ಥ, ದರ್ಪಗಳಿಗೇನೇ ಗಚ್ಚು ಅಂಟಿಕೊಂಡು ಕಮ್ಯೂನಿಸಮಿಗವಕಾಶ ಮಾಡಿಕೊಡುತ್ತಿರುವ ಶೋಚನೀಯ ದೃಶ್ಯ ಎಲ್ಲೆಲ್ಲೂ ಕಂಡು ಬರುತ್ತಿದೆ. ಅತ್ತ ಚೈನವನ್ನು ಗೆದ್ದುಕೊಂಡ ಕಮ್ಯೂನಿಸ್ಟರು, ಅಂತಹ ಪ್ರಯಾಸವೇನೂ ಇಲ್ಲದೆ ಸದ್ಯದಲ್ಲೇ ಬರ್ಮಾ, ಸಯಾಮು, ಟಿಬೇಟುಗಳನ್ನಾಕ್ರಮಿಸಿಕೊಂಡು, ಭಾರತದ ಗಡಿಗೆ ಬಂದು ಬಡಿಯಲಿದ್ದಾರೆ, ಎಂಬುದನ್ನು ನಿರೀಕ್ಷಿಸಬೇಕು. ಆ ಸಪ್ಪಳ ಬಂದು ಸೇರಿ, ಒಳಗಡೆ ಸದ್ಯ ಅಸ್ಪಷ್ಟತೆಗಳಿದಿರುವ ಹಿಂದೀ ಕಮ್ಯೂನಿಸ್ಟ್ ಗದ್ದಲವು ಸಹಜವಾಗಿ ಬೆಳೆಯಲಿದೆ ಎಂಬುದನ್ನೂ ಊಹಿಸಬೇಕು. ಅಂತಹ ಕಾಲ ದೂರವಿಲ್ಲವೆಂಬುದನ್ನು ಮನಗಾಣಿಸುವ ಚಿಹ್ನೆಗಳು ಸ್ಪಷ್ಟವಿರುವಂತೆಯೇ ನ್ಯಾಯೋಚಿತ ಸಮಾನತಾ ವಾತಾವರಣವೊಂದೇ ಮೇಲಿನ ಗಂಡಾಂತರವನ್ನು ವಿಸರ್ಜಿಸಿಕೊಳ್ಳಬಲ್ಲುದೆಂಬುದೂ ಖಚಿತವಿದೆ. ಆದರೂ ನಮ್ಮಲ್ಲಿಯ ಧನಿ, ಮಾಲೀ ವರ್ಗದವರು ಮಜೂರ, ಒಕ್ಕಲುಗಳೇ ಮೊದಲಾದ ಶ್ರಮಜೀವಿ ಜನಸಾಮಾನ್ಯ ನ್ಯಾಯಬದ್ಧ ಹಾಗೂ ಕಾಲೋಚಿತ ಬೇಡಿಕೆಗಳನ್ನೂ ಕಡೆಗಣಿಸುವ ಹಟಗನ್ನಾಡಿ ಶುದ್ಧ ವಾತಾವರಣ ನಿರ್ಮಾಣಕ್ಕೆ ಅಡ್ಡ ಬರುತ್ತಿದ್ದರೆ; ಕಮ್ಯೂನಿಸಮ್ ಗಂಡಾಂತರವನ್ನೇ ಆಹ್ವಾನಿಸುತ್ತಿದ್ದಾರೆ. ಒಂದಿಷ್ಟು ದೂರ ದೃಷ್ಟಿಯಿರುತ್ತಿದ್ದರೆ, ತಮ್ಮ ಪಾಲಿಗೆ ಅನಿವಾರ್ಯವಾಗಿರುವ ಆವಶ್ಯಕವನ್ನು ಕಡಿಮೆ ಮಾಡಿಕೊಳ್ಳುವ ದೃಷ್ಟಿಯಿಂದಾದರೂ ಭಾರತದ ಶ್ರೀಮಂತ ವರ್ಗವು ಬುದ್ಧಿ ಬದಲಾಯಿಸಿಕೊಂಡು ನ್ಯಾಯಪಾಲನೆಗೆ ನೆರವಾಗುತಿತ್ತು; ಈ ಬದಲಾವಣೆಯು ಅತ್ಯಗತ್ಯ ಮತ್ತು ಅನಿವಾರ್ಯವೆಂಬುದನ್ನು ಅವರೆಷ್ಟು ಬೇಗ ತಿಳಿದುಕೊಳ್ಳುವರೋ ಅಷ್ಟು ಹಿತಕರವೆಂದು ಸಾರಿ ಹೇಳುತ್ತೇವೆ.

ಯೂನಿಯನುಗಳ ತಾರತಮ್ಯ ಜ್ಞಾನವಾಗಲೀ, ಅನಿಶ್ಚಿತಾವಧಿಯ ವರೆಗೆ ಮುಷ್ಕರವನ್ನು ಮುಂದೊತ್ತುವ ಅನಾಕೂಲತೆಗಳಾಗಲೀ ಸಂಪೂರ್ಣಗಿರಲಿಲ್ಲ, ಅವುಗಳನ್ನೊದಗಿಸುವ ವ್ಯವಸ್ಥೆ ಮಾಡಿದವರಲ್ಲ.

ಈ ಪರಿಸ್ಥಿತಿಯ ಮೇಲಿಂದ ಮಜೂರ ಸಂಘಗಳು ಯಾವ ರಾಜಕೀಯ ಪಕ್ಷದ ಸೂತ್ರಕ್ಕೂ ಸಿಕ್ಕಿಕೊಳ್ಳದೆ ಕೇವಲ ಮಜೂರ ಸಂಘಗಳಾಗಿ ಉಳಿದುಕೊಳ್ಳುವುದು ಅಸಾಧ್ಯವೆ? ಮತ್ತು ಅಗತ್ಯವಲ್ಲವೆ? ಎಂಬ ಪ್ರಶ್ನೆಯೇಳುತ್ತಿದೆ. ಬಸ್ ಮುಷ್ಕರ ಮತ್ತದರ ಮುಕ್ತಾಯ ಸಂಬಂಧದ ತಪ್ಪು ಯಾರದು, ದ್ರೋಹ ಯಾರದು, ಎಂಬ ವಿಮರ್ಶೆ ಇನ್ನು ಅನಗತ್ಯ. ಇಲ್ಲಿ ಮುಖ್ಯವಾಗಿರಬೇಕಾದುದು ಮಜೂರ ಹಿತಸಾಧನೆಯೆಂಬುದನ್ನು ಗಮನಿಸಿ, ಅವರಿಗೆ ನ್ಯಾಯವನ್ನು ದೊರಕಿಸಿಕೊಡುವ ಕಡೆಗೆ ಇಕ್ಕಡೆಯವರ ಪೂರ್ಣ ಲಕ್ಷ್ಯವೂ ಇನ್ನು ಬೀಳಬೇಕು. ಹಾಗಾದಲ್ಲಿ ಎರಡು ಯೂನಿಯನುಗಳೂ — ಇಕ್ಕಡೆಯ ಯಾತ್ರಚಾಲಕರೂ — ಗೆದ್ದಂತಾಗುವುದು. ಇಲ್ಲವಾದರೆ ಬಸ್ ಮಾಲಕರು ಮಾತ್ರ ಗೆದ್ದು ಮಜೂರ ದ್ವಿದಳಗಳೂ ಸೋತಂತಾಗುವುದು.

ಆ ಮೂರು ಪಂಗಡಿಗರೂ ಗೆದ್ದು ಸಾರ್ವಜನಿಕರು ಮಾತ್ರ ಸೋಲುವಂತಾಗುವ ಮತ್ತೊಂದು ಸಂಭವವು ಎಲ್ಲಕ್ಕಿಂತ ಹೆಚ್ಚಿಗಿದೆ. ಅದೆಂದರೆ ಟಿಕೇಟು ಧಾರಣೆಯ ಹೆಚ್ಚಳ ಈ ಕುರಿತು ಅಧಿಕಾರಿಗಳು ಜಾಗ್ರತೆ ವಹಿಸಬೇಕು.

ಮುಷ್ಕರ ಸಂಬಂಧದ ಅಶಾಭಂಗ, ಹೊಣೆತ್ತು, ಅಡಚಣೆಗಳನ್ನು ಈಗ ಅನುಭವಿಸುತ್ತಿರಬಹುದಾದ ಬಸ್ ಕೆಲಸಗಾರ ಬಂಧುಗಳು, ಕಲಿಯಲಿಕ್ಕಿನ್ನೇನಿದೆ? ಅನ್ಯೋದ್ದೇಶವು ರಾಜಕೀಯಪಕ್ಷವಾವುದಕ್ಕಾದರೂಗಂಟು ಹಾಕಿಕೊಂಡರೆ ತಮಗಾಗುವ ಗತಿಯಾವುದು-ತಮ್ಮ ಒಂದೇ ವರ್ಗಕ್ಕೆ ಎರಡು ಸಂಘಗಳಿದ್ದರೆ, ಅವುಗಳನ್ನು ಪರಸ್ಪರ ಹೋರೀಕಾಳಗಕ್ಕೆ ಬಿಟ್ಟು, ಹೆದೆಕ್ಕೆ ತಂದು, ಪುನಃ ತಮ್ಮ ಗಾಡಿಗೇನೇ ಎಳೆದುಕೊಳ್ಳಲು ಮಾಲಕ ವರ್ಗಕ್ಕೆ ಸವ್ಯಸಾಚಿಯಲ್ಲಿ ಹೇಗೆ ಸಾಧ್ಯವಿದೆ-ಎಂಬ ಕುರಿತು ಮಜೂರರು ಸರಿಯಾಗಿ ಆತ್ಮ ವಿಮರ್ಶೆ ಮಾಡಿಕೊಳ್ಳಲಿ.

# ಪೂರ್ವ ಪಾಕಿಸ್ತಾನದಲ್ಲಿ ಹಿಂದುಗಳ ಮರ್ದನ!

(೧ನೇ ಪುಟದಿಂದ ಮುಂದುವರಿದುದು)

ಗಳಲ್ಲಿ ದೊಡ್ಡ ಪರಿಮಾಣದಲ್ಲಿ ಹಿಂದೂ ಸ್ತ್ರೀಯರ ಮಾನಾಪಹಾರಗಳಾದ ಲಕ್ಷಣ ತಿಳಿಸುವ ವಾರ್ತೆಗಳಿವೆ. ಪ್ರತಿಯೊಂದರಲ್ಲಿ ಸರ್ವಸಾಧಾರಣ 300 ಪ್ರಯಾಣಿಕರನ್ನು ತುಂಬಿಕೊಳ್ಳುವ 14 ವಿಮಾನಸರ್ವಿಸುಗಳು ಢಾಕ್ಕಾದಿಂದ ಕಲ್ಕತ್ತೆಗೆ ಹಿಂದುಗಳನ್ನೊಯ್ಯಲು ಹಾರಾಡುತ್ತಿವೆ ಸಹಸ್ರಾರು ಮಂದಿ ರೈಲು ಮತ್ತು ಸ್ಟೀಮರುಗಳ ಮೂಲಕವೂ ಬರುತ್ತಿದ್ದಾರೆ. ಈಗೀಗ ಆಗುತ್ತಿರುವ ರೈಲು ಧಾಳಿಗಳಿಂದಾಗಿ ರೈಲ್ವೇ ಪಯಣ ಕೂಡಾ ಪಾಕಿಸ್ತಾನ್ ನಿರಾಶ್ರಿತ ಹಿಂದುಗಳಿಗೆ ಯಮಲೋಕ ಪಯಣದಂತಾಗಿದೆ. ಸರಕಾರೀ ನಿರಾಶ್ರಿತ ಶಿಬಿರಗಳಲ್ಲಿರುವ ಸುಮಾರು 800 ಮಂದಿಗಳಲ್ಲದೆ, ಮಿಕ್ಕ ಸಹಸ್ರಾರು ನಿರಾಶ್ರಿತರಿಗೆ ಪೂರ್ವ ಬಂಗಾಳ ಸರಕಾರವು ಲೇಶವನ್ನು ಕೂಡಾ ಕೊಡುತ್ತಿಲ್ಲವೆಂದು ತಿಳಿದು ಬರಿದಿದೆ. ನಿರಾಶ್ರಿತ ರೈಲು ಧಾಳಿಯ ಸಂಬಂಧದ ಪಾಕಿಸ್ತಾನ್ ಸರಕಾರದ ಅಧಿಕೃತ ಹೇಳಿಕೆಯನ್ನು ನೋಡುವಾಗಲೂ ಬರ್ಬರ ರೀತಿಯ ಕೊಲೆ, ಸುಲಿಗೆ, ಅತ್ಯಾಚಾರಗಳು ಜೀವದಾಸೆಯಿಂದೋಡುವ ಹಿಂದುಗಳ ಮೇಲೆ ನಡೆದಿತ್ತೆಂದು ತಿಳಿದು ಬರುತ್ತದೆ.

## ಪಾಕಿಸ್ತಾನ್ ದುರ್ಬುದ್ಧಿ

ಹಿಂದಿನ ವಾರ ಪಂಡಿತ ನೆಹರುಗಳು ಪಾರ್ಲಿಮೆಂಟಿನಲ್ಲಿತ್ತ ಹೇಳಿಕೆಗೆ ಉತ್ತರವೆಂಬಂತೆ, ಪಾಕಿಸ್ತಾನ್ ಪ್ರಧಾನ ಮಂತ್ರಿ ಮಿ. ಲಿಯಾಕತ್ ಆಲೀಖಾನರು, ಕಳೆದೆರಡು ವರುಷಗಳ ನಂತರ ಇದೇ ಪ್ರಥಮ ಬಾರಿಯಾಗಿ ಪತ್ರಿಕಾ ಪ್ರತಿನಿಧಿಗಳ ಮುಂದೊಂದು ಹೇಳಿಕೆ ಕೊಡುತ್ತಾ 'ನಾವು ಸೂಚಿಸಿದ ವಿಧಾನಗಳು ಮಾನ್ಯವಾಗಲಿಲ್ಲವೆಂದ ಮೇಲೆ ನಾವು ಅಗತ್ಯವುಳ್ಳ ಇತರ ವಿಧಾನಗಳನ್ನು ಕೈಕೊಳ್ಳಬೇಕಾಗುವದು' ಎಂದ ಪಂಡಿತ ನೆಹರುಗಳ ಮಾತಿಗೆ, ಯುದ್ಧಾಪೇಕ್ಷೆಯೆಂಬ ಅರ್ಥ ಕಟ್ಟಿ, 'ಪಾಕಿಸ್ತಾನವು ಹೋರಾಟಕ್ಕೆ ಪೂರ್ಣ ತಯಾರಿದೆ' ಎಂದು ಕೊಡೆತಪ್ಪರಿಸಿಕೊಂಡಿದ್ದಾರೆ. ಇದೇ ತಾ. 3ನೇ ರಾತ್ರಿ ಪಂಡಿತ ನೆಹರುಗಳು ರಾಷ್ಟ್ರಕ್ಕೆ ಆಕಾಶವಾಣಿ ಭಾಷಣ ವೀಯುತ್ತಾ "ಬಂಗಾಳದ ಸದ್ಯಸ್ಥಿತಿಯು ಇನ್ನಿಷ್ಟಕ್ಕೂ ತಡವಾಗಲು ಬರುವಂತಹದಲ್ಲ; ಅದನ್ನು ಇದ್ದಂತೆ ಬಿಟ್ಟು ಬಿಡಲು ಸಾಧ್ಯವಿಲ್ಲ. ಶಾಂತಿಯೆಂಬುದಿಲ್ಲದಿರುವಾಗ, ಮತ್ತು ಯುದ್ಧಕ್ಕಿಂತಲೂ ಹೇಯವಾದೊಂದು ಸ್ಥಿತಿಸನ್ನಿಹಿತವಾಗಿರುವಾಗ, ಹಾಗೂ ಜನರು ಭೀಕರ ಬರ್ಬರತೆಯ ಕಡೆಗೆ ಧಾವಿಸುತ್ತಿರುವಾಗ, ಶಾಂತಿಯ ಕೇವಲ ಟೊಳ್ಳು ಮಾತುಗಳನ್ನಾಡುವದೆಂದರೆ, ವಸ್ತುಸ್ಥಿತಿಯ ಕಡೆಗೆ ಕಣ್ಣು ಮುಚ್ಚಿಕೊಂಡಂತೆಯೇ ಸರಿ". ಎಂದಿದ್ದಾರೆ.

ಇಲ್ಲಿ ಹೀಗಿರುವಾಗ, ಅಲ್ಲಿ ಮುಸ್ಲಿಮೇತರರ ಪಾಲಿಗೆ, ಅಖಿಲ ಪಾಕಿಸ್ತಾನವು ರಕ್ತದಾಹಿ ರಾಜ್ಯವಾಗಿದೆ, ಅಲ್ಲಿಯ ಒಬ್ಬೊಬ್ಬ ಅಧಿಕಾರಿಯೂ ಒಬ್ಬೊಬ್ಬ ಕಾಸಿಮ್ ರಜ್ವಿಯಾಗಿದ್ದಾನೆ, ಎಂಬಂತೆ ತೋರುತ್ತಿದೆ. ಪೂರ್ವ ಬಂಗಾಳದ ಅತ್ಯಾಚಾರವು ಸರ್ವವ್ಯಾಪಿಯಾಗುವ ಮೊದಲು, ಅದನ್ನು ಪ್ರೇರೇಪಿಸಿ ಅಲ್ಲಿಯ ಪೂರ್ವ ದಿನಾಜ್‌ಪುರದ ಜಿಲ್ಲಾ ಮೆಜಿಸ್ಟ್ರೇಟನ್ನೊದ್ದ ಭಾಷಣವೊಂದರ ನಿದರ್ಶನವೇ ಸಾಕು. ಫೆಬ್ರುವರಿ ಜಾತ್ರೆಯಲ್ಲಿ ಈ ಜಿಲ್ಲಾ ಮೆಜಿಸ್ಟ್ರೇಟ್ ಜನಾಬ್ ಪಾನವುಲ್ಲಾ ಅಹಮ್ಮದನು ಫೆಬ್ರುವರಿ ೫ರಲ್ಲಿ ಭಾಷಣವೀಯುತ್ತಾ ಮುಸ್ಲಿಮರನ್ನುದ್ದೇಶಿಸಿ ಹೇಳಿದ್ದನು: "ಇಂದು ಅಥವಾ ನಾಳೆ ಪ್ರತೀಕಾರವನ್ನು ಸಾಧಿಸಲು ಮುಸಲ್ಮಾನರು ತಯಾರಾಗಬೇಕು. ಹಿಂದೂ ಕಾಫರರಿಂದ, ನಾವು ಯಾವ ಭೂಮಿಯಿಂದ ಓಡಿಸಲ್ಪಟ್ಟೆವೋ ಆ ಭೂಮಿಯನ್ನು ಪುನಃ ಗೆದ್ದು ಕೊಳ್ಳಬೇಕು. ಬಿಹಾರಿನ ಗಲಭೆ ಮತ್ತು ಕಲ್ಕತ್ತಾ ಗೊಂದಲಗಳಿಗೆ ಪ್ರತೀಕಾರ ಮಾಡುವೆನೆಂದು ಕೊರಾನ್ ಮುಟ್ಟಿ ಪ್ರತಿಜ್ಞೆ ಮಾಡಿರಿ. ಶ್ರೀಮಂತ ಮುಸ್ಲಿಮರು ಈ ಕಾರ್ಯಕ್ಕಾಗಿ ಶಸ್ತ್ರಾಸ್ತ್ರಗಳನ್ನು ಸರಬರಾಯಿ ಮಾಡಲಿ. ಲೈಸನ್ಸನ್ನು ಬೇಕಾದಷ್ಟು ನಾವು ಕೊಡುವೆವು" ಈ ಪ್ರೇರಣಾ ನಂತರವೇ ಆ ಭಾಗದಲ್ಲಿ ಗಲಭೆ ದಾವಾಗ್ನಿ ವ್ಯಾಪಿಸಿಕೊಂಡಿತೆಂಬುದನ್ನು ಮರೆಯಬಾರದು. ಇದೇ ಜಿಲ್ಲಾಧಿಕಾರಿಯು ಆ ಜಿಲ್ಲೆಯ ಹಿಂದುಗಳ ಒಂದು ಸಭೆಕೂಡಿಸಿ ಹೇಳಿದ್ದ; "ಭಾರತವು ನಮಗೆ ಕಳ್ಳರನ್ನಲ್ಲದೆ ಕಳುಹಿಸುತ್ತಿಲ್ಲ; ಶಾಸ್ತ್ರೀಯವನ್ನು ಕೊಡುವುದಿಲ್ಲ. ಯುದ್ಧವೇಳುವ ಸಂದರ್ಭದಲ್ಲಿ ಹಿಂದೂ ಸಂಘಗಳು ಹೇಗೆ ವರ್ತಿಸುವರೆಂಬುದನ್ನೀಗ ನನಗೆ ತಿಳಿಯಬೇಕಾಗಿದೆ. ಅಲ್ಲಾ-ಹೋ-ಅಕ್ಬರ್ ಘೋಷಣೆದೊಂದಿಗೆ ಅವರು ಮುಸ್ಲಿಮರನ್ನು ಕೂಡಿಕೊಳ್ಳಬೇಕು ಇಲ್ಲವಾದರೆ ಅವರೆಲ್ಲರನ್ನೂ ಜೈಲಿಗಟ್ಟಲಾಗುವದು. ಈ ಕುರಿತು ಬೇರೆ ಹಾದಿಯೇ ಇಲ್ಲ. ಸರಕಾರವು ಬೇರಾವುದಕ್ಕೂ ಕಿವಿಕೊಡುವಂತಿಲ್ಲ"

ಪಾಕಿಸ್ತಾನ್ ಪತ್ರಿಕೆಗಳು ಕಲ್ಕತ್ತೆಯ ಗೊಂದಲದ ಕುರಿತು ಅತಿಶಯೋಕ್ತಿಯ ಸುಳ್ಳು ಪ್ರಚಾರಕ್ಕಿಳಿದಿವೆ. ಅದನ್ನು ಪಾಕಿಸ್ತಾನ್ ಪ್ರಧಾನಿ ಮಿ. ಲಿಯಾಕತ್ ಅಲೀಖಾನರೇ ಪಂಡಿತ ನೆಹರುಗಳಿಗೆ ಬರೆದ ಪತ್ರದಲ್ಲಿ ಒಪ್ಪಿಕೊಂಡಿದ್ದಾರೆ. ಪಂಡಿತ ನೆಹರುಗಳು ತಾ. 6ರಲ್ಲಿ ಕಲ್ಕತ್ತೆಗೆ ಬಂದು ಮೂರು ದಿನ ಎಲ್ಲವನ್ನೂ ಸ್ವತಃ ನೋಡಲಿದ್ದಾರೆ. ಪೂರ್ವ ಬಂಗಾಳದಿಂದ ಸರಿಯಾದ ವಾರ್ತೆ ಹೊರಬೀಳದಂತೆ ಲೀಗ್ ಸರಕಾರವು ಅಡ್ಡಗೋಡೆಯೇರಿಸಿಕೊಂಡಿದೆ. ಪೂರ್ವ ಬಂಗಾಳದಿಂದೋಡಿ ಬರುವ ನಿರಾಶ್ರಿತರ ಮೇಲೆ ನಡೆಸುವ ಕ್ರೂರ ವರ್ತನೆಗಳಿಗಾಗಿ ಭಾರತ ಸರಕಾರವು ಪಾಕಿಸ್ತಾನ್ ಸರಕಾರಕ್ಕೆ ತೀವ್ರ ನಿಷೇಧ ಸೂಚನೆ ಕಳುಹಿಸಿದೆ.

ಇತ್ತ ಹೈದರಾಬಾದಿನ ರಜ್ವೀ ಪ್ರಭಾವ ಕಾಲದ ಪ್ರಧಾನ ಮಂತ್ರಿ ಮಿ. ಲಾಯಿಕ್ ಅಲಿಗಳು 1948ನೇ ಸೆಪ್ಟೆಂಬರದ ಪೋಲೀಸ್ ಕ್ರಿಯೆಯಾರಭ್ಯ ಅಲ್ಲಿಯ ಬೇಗಂ ಪೇಟೆಯ ತನ್ನ ಮನೆಯಲ್ಲಿ ನಿರ್ಬಂಧನದಲ್ಲಿದ್ದವರು ತಾ. 6ನೇ ಅಪರಾಹ್ನ ಅಲ್ಲಿಂದ ತಲೆತಪ್ಪಿಸಿಕೊಂಡಿದ್ದಾರೆ. ಪೋಲೀಸರು ಬೇಗಂಪೇಟೆಯನ್ನೇ ಮುತ್ತಿಗೆ ಹಾಕಿ ಶೋಧನೆಯಲ್ಲಿದ್ದಾರೆ.

ಒಳಸಂಚುಗಾರರು ಕಂಬಿತಪ್ಪಿಸಿ ಹಾಕಿದ್ದುದರಿಂದ ಕಲ್ಕತ್ತಾ ಮೈಲ್ ರೈಲ್ವೇ ಗಾಡಿಯು ಇದೇ ತಾ. 3ನೇ ರಾತ್ರಿ ಸುಲೂರುಪೇಟ್ ಸ್ಟೇಶನಿನಲ್ಲಿ ದೊಡ್ಡ ಅಪಘಡಕ್ಕೀಡಾಗಿ ಇಬ್ಬರು ಮಹಿಳೆಯರ ಸಮೇತ 6 ಮಂದಿ ಮಡಿದು 85 ಮಂದಿ ಗಾಯಗೊಂಡರು. ಈ ಸಂಬಂಧದ ಶೋಧನೆ ನಡೆದಿದೆ.

ಭಾರತ ಪಾರ್ಲಿಮೆಂಟಿನಲ್ಲಿ ಆಯವ್ಯಯ ಪಟ್ಟಿ ಚರ್ಚೆಗೆ ಬಂದಿದೆ. ಮದ್ರಾಸ್ ಎಸೆಂಬ್ಲಿಯಲ್ಲಿ ಪ್ರಾಂತಿಕ ಬಜೆಟ್ ಚರ್ಚೆ ನಡೆದು ಮುಗಿಯಿತು.

## ಪ್ರಕಟಣೆ

ದಕ್ಷಿಣ ಕನ್ನಡಾ ಕಾಸ್ರಗೋಡು
ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ
O. S. No. 55/1950

ಅಬುಬಕರ ಬ್ಯಾರಿ, ಚಾಲೆ ಮಹಮ್ಮದ ಹಾಜಾರ್ರ ಮಗ, ಕೊಡ್ಲು ಗ್ರಾಮದ ಚೂರಿಯಂಬಲ್ಲಿರುವವ— ವಾದಿ,

ಮತ್ತು

1. ಬಿ. ಕೇಶವ ರಾವ್, ಗಣಪತಿ ರಾಯರ ಮಗ 2. ಬಿ. ಗೋವಿಂದ ರಾವ್, ಬೀಕ್ಣ ರಾಮಕೃಷ್ಣರಾಯರ ಮಗ-ಹೊಸದುರ್ಗ ಕಸಬಾದಲ್ಲಿರುವವರು—ಪ್ರತಿವಾದಿಗಳು.

ಸದ್ರಿ ವ್ಯಾಜ್ಯದ ವಾದಿಯು ಕಡೆಯಿಂದ ಯಿ ಮೂಲಕ ಯಲ್ಲಾ ಜನರಿಗೆ ತಿಳಿಸುವದ್ದುವದೇನೆಂದರೆ:—

ವಾದಿಯೂ 2ನೇ ಪ್ರತಿವಾದಿ ಕೂಡಾ 7 ಜನರ ಮೇಲೆ ಮಾಡಿದ ಮೇಲ್ಕಂಡ ಕೋರ್ಟು O. S. No. 29/1948ನೇ ವ್ಯಾಜ್ಯದಲ್ಲಿ ಜಜಮೆಂಟಿಗೆ ಮುಂಚೆ R. I. A. No. 165/48ನೇ ಅರ್ಜಿ ಮೂಲ್ಕ 2ನೇ ಪ್ರತಿವಾದಿ ಜಾಬ್ತು ಸ್ಥಿರಾಸ್ತಿ ಜಪ್ತು ಮಾಡಿಸಿದಲ್ಲಿ 2ನೇ ಪ್ರತಿವಾದಿಯು 1ನೇ ಪ್ರತಿವಾದಿಯ ಪೆಸರಲ್ಲಿ ಸಾಲಗಾರ್ರಿಗೆ ನೋಟ ಕೊಡುವ ಯಲ್ಲಾಧೆಯಿಂದ ಮಾಡಿಟ್ಟ ತಾರೀಕು 17-1-47ನೇ ವಳಸಂಚಿನ ಮೋಸದ ಕ್ರಯಚೀಟಿನ ಆಧಾರದ ಮೇಲೆ 1ನೇ ಪ್ರತಿವಾದಿಯು ಕೊಟ್ಟ R. I. A. ನಂಬ್ರ 401/1948ನೇ ಜಂಘೃತ ಅರ್ಜಿ ಮೇಲೆ ತಾರೀಕು 11-4 1949ರಲ್ಲಿ ಅತನ ಗುಣಕ್ಕಾದ ತೀರ್ಪು ವಾದೀಗೆ ಯಾ ಸದ್ರಿ ವ್ಯಾಜ್ಯದಲ್ಲಿ ವಾದಿಯ ಗಿರಾಕ್ಕಾದ ಡಿಕ್ರಿ ಸಾಲಕ್ಕೆ ಬಾಧಿತಕ್ಕದ್ದೆಂದೆಂತೆ ರಿಕ್ಲೆಕೇಶನ್ ಬಗ್ಗೆ ವಾದಿಯು ಅತನ ಸ್ವಂತ ನೆಲೆಯಲ್ಲಿಯೂ 2ನೇ ಪ್ರತಿವಾದಿಗೆ ಪೇರೆ ಸಾಲಗಾರ್ರ ಯಿದ್ದವರಿದ್ದ್ ಅಂತಾ ಸಾಲಗಾರ್ರಗೋಸ್ಕರ ಅವರ ಪ್ರತಿನಿಧಿ ನೆಲೆಯಲ್ಲಿ ಕೂಡಾ ಮೇಲ್ಕಂಡ ವ್ಯಾಜ್ಯ ಮಾಡಿದ್ದಲ್ಲದೆ ಆ ಕುರಿತು ಓರ್ಡರ 1 ರೂಲು 8ನೇ ಪ್ರಕಾರ ಅರ್ಜಿಕೊಟ್ಟು ಸದ್ರಿ ಕೇಶನ್ ಮುಖಾಂತ್ರ ಕೋರ್ಟು ಪರ್ಮಿಶನ್ ಬಗ್ಗೆ ಕೂಡಾ ಈ ಕಾರಾ ಆಗಿರುತ್ತದೆ. ಆದ್ದರಿಂದ 2ನೇ ಪ್ರತಿವಾದೀಯು ಸಾಲಗಾರ್ರು ಯಾರಾದ್ರು ಯಿದ್ದದ್ದಾದ್ರೆ ಅಂಥವರು ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಮೇಲ್ಕಂಡ ವ್ಯಾಜ್ಯದಲ್ಲಿ ಸೇರಿ ಅವರವರ ಸಾಲಗಳ ಕುರಿತು ಉದಿತ್ತುಕೊಳ್ಳತಕ್ಕದ್ದು ಯಂಬ ಸಂಗ್ತಿ ಈ ಮೂಲಕ ಯಲ್ಲಾ ಜನರಿಗೆ ತಿಳಿಯಪಡಿಸಿಯದೆ.

Sd B. S. Kakkilaya,
Advocate for Plaintiff
Kasaragod, 3-3-1950.

## ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿ. ಕಾಪು.

### ನೋಟೀಸು

ಈ ಮೂಲಕ ತಿಳಿಯಪಡಿಸುವುದೇನೆಂದರೆ ಈ ಕೆಳಗೆ ಹೆಸರು ಕಾಣಿಸಿದವರು ಈ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡದೆ ಅಸಲು ವ ಬಡ್ಡಿ ಬಾಕಿಮಾಡಿಕೊಂಡಿರುತ್ತಾರೆ. ರಿಜಿಸ್ಟ್ರಿ ನೋಟೀಸು ಕೊಟ್ಟಾಗ್ಯೂ ಕೂಡಾ ಅವರನ್ನು ಗೊತ್ತು ಹಚ್ಚಲು ಆಗದಿರುವುದರಿಂದ ಸದ್ರಿ ನಗನ್ನು ಬ್ಯಾಂಕಿನ ಆಫೀಸಿನಲ್ಲಿ ತಾ. 25-3-1950ನೇ ಶನಿವಾರ ಅಪರಾಹ್ನ ಗಂಟೆ 3ಕ್ಕೆ ಬಹಿರಂಗವಾಗಿ ಏಲಂ ಮಾಡಲಾಗುತ್ತದೆ. ಸದ್ರಿ ಏಲಂ ತಾರೀಕನ್ನು ಬ್ಯಾಂಕಿಗೆ ಯುಕ್ತವಾಗಿ ಕಂಡಲ್ಲಿ ಮುಂದುವರಿಸಲಾದೀತು. ತಿಳಿದಿರಲಿ.

| ತಾರೀಕು | ಲೋನು ನಂಬ್ರ | ಸಾಲಪಡೆಕೊಂಡವರ ಹೆಸರು ಮತ್ತು ವಿಳಾಸ | ಅಸಲು ಮೊಬಲಗು ರೂ. | ಅ. | ಪೈ |
|---|---|---|---|---|---|
| -1-47 | 1/17 | ಶ್ರೀನಿವಾಸ ರಾವ್, ರಾಮರಾಯರ ಮಗ, ಮಜೂರು, ಕಾಪು. | 450 | 0 | 0 |

ಆಫೀಸು: ಕಾಪು
ತಾರೀಕು 3-3-1950

ಎನ್. ವಿ. ಕಾಮತ್
ಏಜಂಟ್.

## ಉಡುಪಿ

ಪ್ರ. ತೆರಿಗೆದಾರರ ಸಭೆ- ಟೌನ್‌ಪ್ಲಾನಿಂಗ್ ಸ್ಕೀಮು ಜ್ಯಾರಿಯಲ್ಲಿರುವ ಸೆಂಟ್ರಲ್ ವಾರ್ಡಿನ ತೆರಿಗೆದಾರರ ಸಭೆಯು ತಾ.(೯ರಲ್ಲು ಡಾ। ಪಿ. ಜಿ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. 'ಬೆಟರ್‌ಮೆಂಟ್' ಎತ್ತುವಳಿಯ ನೋಟೀಸುಗಳು ಈಗಾಗಲೇ ಮುನಿಸಿಪಲ್ ಕಮಿಶನರರಿಂದ ಹೊರಟಿದ್ದು ಅದರಲ್ಲಿ ಸೂಚಿಸಿದ ಟೀಕ್ಸನ್ನು ಬಡ ತೆರಿಗೆದಾರರು ಕೊಡಲು ಅಸಾಧ್ಯವಾದುದರಿಂದ ಆ ಕುರಿತು ಮುನಿಸಿಪಲ್ ಚೆಯರ್‌ಮೆನ್ ಮತ್ತು ಮೆಂಬರರೊಡನೆ ವಿಚಾರ ವಿನಿಮಯ ಮಾಡುವರೆ ಒಂದು ಸಭೆಯನ್ನು ಬೇಗನೆ ಕರೆಯಬೇಕೆಂದು ನಿಶ್ಚಯಿಸಲಾಯಿತು. ಸಭೆಯ ತಾರೀಕು ಇತ್ಯಾದಿ ವಿಷಯಗಳನ್ನು ಸಂಬಂಧಪಟ್ಟವರೊಡನೆ ತಿಳಿದು ನಿಶ್ಚಯಿಸುವರೆ ಶ್ರೀಗಳಾದ ಆರ್. ಎಮ್. ಕಾರ್ನಾಡ್ ಮತ್ತು ವಿ. ಆರ್. ಕಾಮತರಿಗೆ ಅಧಿಕಾರವೀಯಲಾಯಿತು.

**ಸಕ್ಕರೆ-** ಕಾರ್ಡುಗಳಲ್ಲಿ ಸೂಚಿಸಿದುದರ ಅರ್ಧಾಂಶ ಕಾರ್ಡುದಾರರಿಗೆ ವಿತರಣೆಯಾಗುತ್ತಿದೆ. ಕಳೆದ ತಿಂಗಳಲ್ಲಿ ಸಿಕ್ಕದಿದ್ದವರಿಗೆಲ್ಲಾ ಈ ಬಾರಿ ಸಿಕ್ಕಿತೆನ್ನಲಾಗುವುದಿಲ್ಲ. ಬೆಲ್ಲವನ್ನು ಉಪಯೋಗಿಸುವ ಎಂದರೆ ಅದಕ್ಕೆ ಮಿತಿಮೀರಿದ ಕ್ರಯ.

**ತಾಲೂಕು ಆಹಾರ ಸಮಿತಿ** ಸಭೆಯು ಕಳೆದ ತಾ. 25ರಲ್ಲು ಡೆಪ್ಯೂಟಿ ಕಲೆಕ್ಟರ್ ಜನಾಬ್ ಅಬ್ದುಲ್ ರಹಿಮಾನರ ಅಧ್ಯಕ್ಷತೆಯಲ್ಲಿ ಜರಗಿತು, ಈ ತಾಲೂಕಿಗೆ ಗೋಧಿ ಸರಬರಾಯಿ ಆಗಬೇಕು. ಬೆಲ್ಲದ ಕ್ರಯವನ್ನು ಕಡಿಮೆ ಮಾಡಬೇಕು ಎಂಬಿತ್ಯಾದಿ ನಿರ್ಣಯಗಳಾಗಿ ಅವನ್ನು ಕಾರ್ಯರೂಪಕ್ಕೆ ತರುವಂತೆ ಜಿಲ್ಲಾ ಕಲೆಕ್ಟರರನ್ನು ವಿನಂತಿಸಲಾಯಿತು.

**ಮಾನಪತ್ರ:-** ಕಳೆದ ತಾ. 26ರಲ್ಲು ಶ್ರೀ ಶೀರೂರು ಮಠದ ಮುಂಭಾಗದಲ್ಲಿ ಶ್ರೀ ಧರ್ಮಸ್ಥಳ ಬಯಲಾಟ ಮೇಳದವರು 'ಬ್ರಹ್ಮಕಪಾಲ' ಎಂಬ ಯಕ್ಷಗಾನ ಆಟವನ್ನಾಡಿದರು. ಶ್ರೀ ಶೀರೂರು ಮಠದ ಶ್ರೀ ಲಕ್ಷ್ಮೀಂದ್ರ ತೀರ್ಥ ಸ್ವಾಮಿಗಳವರು ಉತ್ತಮ ನಟರಾದ ಶ್ರೀ ವಿಠಲಶಾಸ್ತ್ರಿಗಳಿಗೆ ಮಾನಪತ್ರವನ್ನು ಕೊಟ್ಟು ಆಶೀರ್ವದಿಸಿದರು

**ಮೋಟಾರ್ ಮುಷ್ಕರ** ಈಗ ಶಾಂತವಾಗಿದೆ, ಬಸ್ಸುಗಳು ಯಥಾಪ್ರಕಾರ ಓಡಾಡುತ್ತಿವೆ

**ಸರಕಾರಿ ಟ್ರೈನಿಂಗ್ ಶಾಲೆಯ** ವಾರ್ಷಿಕೋತ್ಸವವು ಕಳೆದ ತಾ. 25ರಲ್ಲು ಶ್ರೀ. ಎಸ್. ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು. ಮರುದಿನ ಹಳೆ ವಿದ್ಯಾರ್ಥಿ ಸಂಘದ ಕೂಟವೂ ವಿವಿಧ ವಿನೋದಾವಳಿಗಳೂ ಆದುವು.

## ದ. ಕನ್ನಡ

ಹೆಗ್ಗುಂಜೆ ಗ್ರಾಮದ ಶ್ರೀ ದಕ್ಷಿಣಾಮೂರ್ತಿ ದುರ್ಗಾಪರಮೇಶ್ವರಿ ಎಲಿಮೆಂಟರಿ ಶಾಲೆಯನ್ನು ಹಾಯರ್ ಎಲಿಮೆಂಟರಿ ಶಾಲೆಯನ್ನಾಗಿ ಏರ್ಪಡಿಸುವ ಕುರಿತು ಈ ಹಿಂದೆ ಸಂಬಂಧಪಟ್ಟ ಅಧಿಕಾರಿಗಳಿಗೆ ಪರ್ಮಿಶನ್ ಬಗ್ಗೆ ಬರೆದುಕೊಂಡಂತೆ, ಸದ್ರಿ ಶಾಲೆಗೆ ಸಂಬಂಧಪಟ್ಟ ಸ್ಥಳೀಯ ಜನರು ಸೇರಿ ತುಂಬಾ ಪ್ರೋತ್ಸಾಹದಿಂದ ಅದಷ್ಟು ಬೇಗನೆ ಕಟ್ಟಡವನ್ನು ಜರಗಿಸುವ ಕುರಿತಾಗಿ ಉಮೇದಿನಿಂದ ಕೆಲಸ ಮಾಡುತ್ತಿರುವರೆಂಬ ಸಂಗತಿ ತಿಳಿದುಬರುತ್ತದೆ. ಅಲ್ಲದೆ ಆಸುಪಾಸಿನ ಗ್ರಾಮದ ಜನರ ಬೆಂಬಲವೂ ಇದೆ ಎಂಬುದಾಗಿ ತಿಳಿದುಬಂದಿರುತ್ತದೆ.

### ಕುಂಬಳೆ

ಹರಿಜನ್ ದಿನಾಚರಣೆ ಸಂಬಂಧವಾಗಿ ತಾ ೨೭ರಂದು ಅಪರಾಹ್ನ ಇಲ್ಲಿನ ಹರಿಜನ್ ವೆಲ್ಫೇರ್ ಶಾಲೆಯಲ್ಲಿ ಪುತ್ತೂರು ಆರ್. ಡಿ. ಒ. ಶ್ರೀ. ಎಚ್. ನರಸಿಂಹನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಶ್ರೀಯುತರಾದ ಪಿ. ಸಿ. ಭಂಡಾರಿ, ಬಿ ದೇವಪ್ಪ ಆಳ್ವ, ಸುರೇಂದ್ರನಾಥ್ ಕೂಡಾ ಭಾಷಣವಿತ್ತರು. ಬಹುಮಾನ ವಿತರಣ ಕಾರ್ಯದಲ್ಲಿ ಮೂವರಿಗೆ ಬಹುಮಾನ ಕೊಡಲಾಯ್ತು. ಶ್ರೀ. ಶಿವರಾಮ ಗೌಡ, ಬಿ. ಎ. ಎಲ್. ಟಿ. ಯವರು ವಂದನಾರ್ಪಣೆ ಮಾಡಿದರು.

ಅಂಗಡಿಮೊಗರು ಎಚ್. ಇ. ಶಾಲಾ ವರ್ಧಂತ್ಯುತ್ಸವವು ತಾ ೨೭ರಂದು ಜನಾಬ್, ಎಚ್. ಎಚ್. ರಂನಾದ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂಬಂಧ ಧ್ವಜಾರೋಹಣವನ್ನು ಶ್ರೀಯುತ ಬಾಯಾರು ಜಗನ್ನಾಥ ಶೆಟ್ಟಿಯವರು ನೆರವೇರಿಸಿದರು. ಶ್ರೀ ನಾಗಪ್ಪರವರ ಮೂಡಿತ್ತಾಯರು ವರದಿಯೋದಿದರು. ಶ್ರೀಯುತರಾದ ಪಿ. ಜಗನ್ನಾಥ ಶೆಟ್ಟಿ, ಪಿನ್. ಅಬ್ದುಲ್ಲಾ, ಇವರು ಭಾಷಣ ಕೊಟ್ಟರು. ಅಭಿವೃದ್ಧಿ, ಪಂದ್ಯಾಟ ಮುಂತಾದ ಕಾರ್ಯಕ್ರಮಗಳ ಬಹುಮಾನಗಳನ್ನು ಅಧ್ಯಕ್ಷರು ಹಂಚಿದರು. ರಾತ್ರಿ 'ಬಾಳಿನ ಗೋಳು' ಎಂಬ ನಾಟಕವನ್ನು ಶಾಲಾ ಮಕ್ಕಳು ಅಭಿನಯಿಸಿದರು.

ಮಾಯಿಪಾಡಿಯ ಸರಕಾರಿ ಬುನಾದಿ ಶಿಕ್ಷಣ ತರಬೇತು ಶಾಲೆಯ ವರ್ಧಂತ್ಯುತ್ಸವವು ತಾ.1ರಂದು ಜಿಲ್ಲಾ ಬೋರ್ಡು ಮೆಂಬರರೂ ಕಾಸರಗೋಡು ಸರ್ಕಲ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷರೂ ಆದ ಶ್ರೀ. ಎಂ. ಉಮೇಶರಾಯರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನಡೆಯಿತು. ಶ್ರೀಯುತ ರಾಮಕೃಷ್ಣ ಶೆಟ್ಟರು (ಮುಖ್ಯೋಪಾಧ್ಯಾಯರು) ವರದಿ ಓದಿದರು ಬಹುಮಾನ ವಿತರಣೆ, ಕನ್ನಡ, ತುಳು, ನಾಟಕ ಕೂಡಾ ಇತ್ತು. ಈ ಸಂಬಂಧವಾಗಿ ತಾ. 27ರಂದು ವಸ್ತು ಪ್ರದರ್ಶನವನ್ನು ನಡೆಯಿಸಿರುವರು, ಇದರ ಉದ್ಘಾಟನೆಯನ್ನು ಡಾಕ್ಟರ್ ಪಿ. ಎಸ್. ಶಾಸ್ತ್ರಿಯವರು ನಡೆಸಿದರು.

**ಸೆಡೂರು:—** ಶ್ರೀ ಅನಂತಪದ್ಮನಾಭ ದೇವಸ್ಥಾನದ ಮಾಮೂಲ್ ಉತ್ಸವಗಳು ಇದೇ ತಾ. 12-3-50ರಿಂದ 19-3-50ರ ವರೆಗೆ ನೆರವೇರುವವು. ತಾ. 16-3-50ನೇ ಗುರುವಾರ ಶ್ರೀ ಮನ್ಮಹಾರಥೋತ್ಸವ ಜರಗುವದು. ಸದ್ರಿ ದೇವಸ್ಥಾನದ ಇಂಟೆರೀಮ್ ಎಕ್ಸಿಕ್ಯೂಟಿವ್ ಆಫೀಸರ್ ಶ್ರೀ. ಎ. ಕೃಷ್ಣಯ್ಯ ಹೆಗ್ಡೆಯವರು ಸರ್ವರಿಗೂ ಸ್ವಾಗತ ಕೋರುತ್ತಾರೆ.

## ಪ್ರಕಟಣೆ

ತೋನ್ಸೆ ಪಂಚಾಯತ ಬೋರ್ಡು

ಈ ಬೋರ್ಡು ವ್ಯವಹಾರ ಕ್ಷೇತ್ರಕ್ಕೆ ಒಳಪಟ್ಟ ಕೆಮ್ಮಣ್ಣು ಹಪ್ತೆವಾರು ಸಂತೆ, ದಿನಚರ್ಯದ ಮೀನುಮಾರ್ಕೆಟು ಮತ್ತು ಪಡುಕುದ್ರು ಪಾರಿಯಲ್ಲಿ ಕೂಡಾ 1950ನೆ ಇಸವಿ ಎಪ್ರಿಲ್ ತಾರೀಕು 1ರಿಂದ 1951ನೆ ಇಸವಿ ಮಾರ್ಚ ತಿಂಗಳ ತಾರೀಕು 31ರ ವರೆಗೆ ವಸೂಲು ಮಾಡುವ ಸ್ವತಂತ್ರವನ್ನು ಇದೇ ಮಾರ್ಚ ತಿಂಗಳ ತಾರೀಕು 16ನೆ ಗುರುವಾರ ಸಾಯಂಕಾಲ ಘಂಟೆ 4ಕ್ಕೆ ಕೆಮ್ಮಣ್ಣು ಹಾಯರ್ ಎಲಿಮೆಂಟರಿ ಶಾಲಾ ಕಟ್ಟಡದಲ್ಲಿ ಪ್ರತ್ಯ ಪ್ರತ್ಯೇಕ ಬಹಿರಂಗವಾಗಿ ಏಲಂ ಮಾಡಲಾಗುವದು, ಏಲಮಿನ ಶರತ ವಗೈರೆ ಇತರ ವಿವರಗಳನ್ನು ಸದರಿ ಬೋರ್ಡು ಆಫೀಸಿನಲ್ಲಿ ತಿಳಿದುಕೊಳ್ಳಬಹುದು ಎಂತ ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸಲಾಗುತ್ತದೆ.

**ಪಡುಕುದ್ರು ವೆಂಕಟಕೃಷ್ಣರಾವ್,**
ಪ್ರೆಸಿಡೆಂಟ್,
ತೋನ್ಸೆ ಪಂಚಾಯತ ಬೋರ್ಡು.

ಪಡುತೋನ್ಸೆ 7-3-1950

## ಪ್ರಕಟಣೆ

ಉಡುಪಿ ತಾಲ್ಲೂಕು ಶಿವಳ್ಳಿ ಗ್ರಾಮದ ದೊಡ್ಡಣಗುಡ್ಡೆಯಲ್ಲಿರುವ ಮಾಜಿ ಕೋರ್ಟು ಫಿರ್ಯಾದಾರ್ ಅಬ್ದುಲ್ ವಹಾಬ್ ಸಾಹೇಬರ ಮಗ, ಉಡುಪಿ ಡಿ. ಮುನ್ಸಿ ಕೋರ್ಟು ಪ್ರೋಸೆಸ್ ಸರ್ವರ್ ಅಬ್ದುಲ್ ಸತ್ತಾರ್ ಸಾಹೇಬನು ಈ ಮೂಲಕ ಸರ್ವ ಜನರಿಗೆ ತಿಳಿಸುವುದೇನೆಂದ್ರೆ:—

ನನ್ನ ತಂದೆ ಮೇಲ್ಕಂಡ ಅಬ್ದುಲ್ ವಹಾಬ್ ಸಾಹೇಬರಿಗೆ ನಾನು ಮತ್ತು ನನ್ನ ತಂಮ ಅಬ್ದುಲ್ ಗಫೂರ್ ಸಾಹೇಬ ಕೂಡಾ 2ಗಂಡು ಮಕ್ಕಳು ಮತ್ತು ನನ್ನ ತಂಗಿಯಂದಿರು ಯಿಬ್ಬರು ಕೂಡಾ ನಾಲ್ಕು ಜನ ಮಕ್ಕಳು. ಯಿತ್ತಲಾಗಿ 15 ದಿನಗಳಿಂದ ನನ್ನ ತಂದೆಗೆ ಬುದ್ಧಿ ಸ್ವಾಧೀನವಿಲ್ಲದೆ ಬೇರೆಯವರು ನನ್ನ ತಂದೆಯವರಿಂದ ನಮ್ಮ ಬಾಬ್ತು ಆಸ್ತಿ ಕ್ರಯ, ಡಿ, ನೋಟು ಬರಿಸಿಕೊಳ್ಳುವುದು ಮುಂತಾದ ದಸ್ತಾವೇಜುಗಳನ್ನು ಬರಿಸಿಕೊಳ್ಳುವ ಯಿರಾದೆಯಲ್ಲಿರುತ್ತಾರಾಗಿ ನಾನು ತಿಳಿಯುತ್ತೇನೆ. ಆದ್ದರಿಂದ ನನ್ನ ಅನುಮತಿ ವಿನಹಾ ಯಾರಾದ್ರು ನಮ್ಮ ತಂದೆಯವರಿಂದ ನಮ್ಮ ಆಸ್ತಿ ಕ್ರಯ, ಮೋಡು ಮುಂತಾದ್ದನ್ನು ಮಾಡಿಕೊಂಡ್ರೆ ಅದು ಸಿಂಧುವಾಗತಕ್ಕದ್ದಲ್ಲ. ಅಲ್ಲದೆ ಬೇರೆ ಕಡೆಯಿಂದ ಅವರ ಬಾಬ್ತು ಹಣ ಕೂಡಾ ಪಡೆಯುವರೆ ನನ್ನ ತಂದೆಯವರು ಸದ್ಯಕ್ಕೆ ಅರ್ಹರಲ್ಲ. ನಮ್ಮ ಕುಟುಂಬಕ್ಕೆ ಯಾವತರದ ಸಾಲವೂ ಯಿರುವದಿಲ್ಲ.

**Abdul Sathar.**

ಉಡುಪಿ, ತಾ. 5-3-50


ಬರುವ ಚಿತ್ರ

**ವೆಲ್ಲಿ ನಕ್ಷತ್ರಂ**

ಮಲೆಯಾಳಿನಲ್ಲಿ

ನಂತರ

**"ಚಂದ್ರಲೇಖಾ"**

**ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.**

**ಮಾರಾಟಕ್ಕಿದೆ**

ಚಲೋ ಬಂಗ್ಲೆ—ಮೂರು ಎಕ್ರೆ ಸ್ಥಳ ಸಹಿತ.

ಆರೋಗ್ಯಕ್ಕೆ ಅಪ್ರತಿಮ ಸ್ಥಳ.

ಮಂಗ್ಳೂರು ಶಹರ್ ಕಂಕನಾಡಿಯಲ್ಲಿರುವ ಗೋರಿಗುಡ್ಡೆಯಲ್ಲಿ

ಆಸ್ಪತ್ರೆ, ಶಾಲೆ, ಮಿಲ್ಸ್ ವ ಕಾರ್ಖಾನೆಗೆ

ಅತ್ಯುತ್ತಮವಾದ ಸ್ಥಳ.

ಕ್ರಯ—ರೂ. 75,000 ಯಾ ಸ್ವಲ್ಪ ಹೆಚ್ಚು ಕಡಿಮೆ

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬೇಗನೇ ಬರಿಯಬಹುದು.

X

C/o **SARVODAYA,**
*Mangalore*

**ಕುಲವಿಲ್ಲದ ಹೆಣ್ಣು**

(ಸರಸ ಸಾಮಾಜಿಕ ಕಾದಂಬರಿ)

ಬರೆದವರು:—ಪಿ **ವೆಂಕೋಬಾಚಾರ್ಯ**, ಬಿ.ಎ.ಬಿ.ಟಿ.

ದೇವದಾಸಿ ಕುಲದ ಉದ್ಧಾರವೇ ಮುಖ್ಯ ಕಥಾವಸ್ತು.

ಕುಸುಮಳು ವೇಶ್ಯಾಪುತ್ರಿಯಾದರೂ ಅವಳು ವೇಶ್ಯೆಯಲ್ಲ!

ಅವಳ ಕತೆ ಹೇಗೆ ಸಾಗಿದೆ ಎಂದು ಓದಿಯೇ ತಿಳಿಯಿರಿ.

ದಪ್ಪ ಪುಸ್ತಕ ಬೆಲೆ ರೂ **1-0-0**

ಪ್ರತಿಗಳು, ಅಂತರಂಗ ಕಾರ್ಯಾಲಯ, ಉಡುಪಿ, ನವಯುಗ ಪ್ರೆಸ್, ಉಡುಪಿ ಅಥವಾ ನವಭಾರತ ಬುಕ್ ಡಿಪ್ಪೊ, ಉಡುಪಿ ಇಲ್ಲಿ ದೊರೆಯುತ್ತವೆ,



ಶ್ರೀ ಕೊರಡ್ಕಲ್ ಶ್ರೀನಿವಾಸರಾಯರ

**'ಸುಲಭದಲ್ಲಿ ಇಂಗ್ಲಿಷ್'**

(ENGLISH MADE EASY)

ಮನೆಯಲ್ಲಿ ಸ್ವತಃ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.

ಬೆಲೆ: ೧—೮—೦

ಡಾಕ್ಟರ್ ಕೊರಡ್ಕಲ್ ವೆಂಕಟ್ರಾಯರ

**'ಮನೆ ಮದ್ದು'**

(HOME REMEDIES)

೨೦೦ ಕಾಹಿಲೆಗಳಿಗೆ ಮನೆಯಲ್ಲೇ ಮಾಡಿಕೊಳ್ಳಬಹುದಾದ ೧೦೦೦ ಮದ್ದುಗಳ ವಿವರವಿರುವ ಪುಸ್ತಕ. ಬೆಲೆ: ರೂ. ೨

ಪ್ರತಿಗಳು ಶಿಮ್ಯೂರ ಪುಸ್ತಕವ್ಯಾಪಾರಿಗಳಲ್ಲಿ ಸಿಗದಿದ್ದರೆ ಬರೆಯಿರಿ-

**ನವಭಾರತ ಪುಸ್ತಕ ಭಂಡಾರ**
**ಉಡುಪಿ**

**ನವಯುಗ ಪ್ರೆಸ್, ಉಡುಪಿ**

## ಮಂಗಳೂರು

**ಜಿಲ್ಲಾ ಆಹಾರ ಸಮಿತಿ ಸಭೆಯು** ಕಳೆದ ತಾ. 24ರಲ್ಲು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ತಾ 18-2-50ರಲ್ಲು ಜಿಲ್ಲೆಯಲ್ಲಿದ್ದ ಆಹಾರ ಸಂಗ್ರಹವನ್ನು ಸಪ್ಲೈ ಆಫೀಸರರು ವಿವರಿಸಿದರು. ಅಕ್ಕಿ 763 ಟನ್; ಗೋಧಿ 13 ಟನ್; ಮಿಲ್ಲೊ 1 ಟನ್; ಮೈದಾ 156ಟನ್; ರಾಗಿ 1 ಟನ್ ಇದು ಎಂಟು ವಾರಗಳ ತನಕ ಸಾಕಾಗಬಹುದು. ಮೇ ತಿಂಗಳ ಅನಂತರ ಹೊರಗಿನಿಂದ ಬರಬಹುದಾದ ಸಂಗ್ರಹವನ್ನೆ ಆಧರಿಸಬೇಕಾಗುವದು.

ಸಕ್ಕರೆಯ ಅಭಾವ ಹಾಗೂ ಬೆಲ್ಲದ ಬೆಲೆ ಏರಿಕೆಯಾಗಿ ಏರುತ್ತಿರುವ ಕುರಿತಾಗಿ ಶ್ರೀ ಕೆ. ಎಸ್. ಕಾರಂತರು ಸಮಿತಿಗೆ ಬರೆದಿದ್ದ ಪತ್ರವನ್ನು ಓದಲಾಯಿತು. ಸಕ್ಕರೆಯ ಮೇಲಿನ ನಿಯಂತ್ರಣವನ್ನು ತೆಗೆದುಹಾಕಬೇಕೆಂದು ಸ ಶ್ರೀ ಕಾರಂತರು ಸೂಚಿಸಿದ್ದರು. ಕಲೆಕ್ಟರರು ಈ ಕುರಿತು ಮಾತನಾಡುತ್ತಾ ಮಾರ್ಚ ತಿಂಗಳಿಂದ ಕ್ರಮಬದ್ಧ ಪಡಿತರ ಇರುವಲ್ಲೆಲ್ಲ ವ್ಯಕ್ತಿಯೊಬ್ಬನಿಗೆ ವಾರಕ್ಕೆ 5 ತೊಲೆ [ತಿಂಗಳ ಉತ್ಪನ್ನವು ರೂ. 100ಕ್ಕೆ ಮಿಕ್ಕಿದವರಿಗೆ 8 ತೊಲೆ]ಯಂತೆ ಹಂಚುವ ವ್ಯವಸ್ಥೆಯಾಗುವುದೆಂದರು. ಸಕ್ಕರೆ ನಿಯಂತ್ರಣವನ್ನು ತೆಗೆದು ಹಾಕದಿರಲು ಸಮಿತಿಯು ನಿರ್ಣಯಿಸಿತು

1947 ರಿಂದ 1949ರ ವರೆಗೆ ಜಿಲ್ಲೆಯ ಬೆಳೆಯ ಪ್ರಮಾಣ, ಹೊರಗೆ ಕಳುಹಿಸಲ್ಪಡುತ್ತಿರುವ ಮಿತಿ ಮೊದಲಾದ ಅಂಕೆ ಸಂಖ್ಯೆಗಳನ್ನು ಸಪ್ಲೈ ಆಫೀಸರು ಸಮಿತಿಯ ಮುಂದಿಟ್ಟರು.

ಸಕ್ಕರೆಯ ಅಭಾವವೆ ಬೆಲ್ಲದ ಬೆಲೆ ಏರಲು ಮುಖ್ಯ ಕಾರಣವಾಯಿತೆಂದರು.

ಹೊಸದುರ್ಗ ಸಬ್ ತಾಲೂಕಿನಲ್ಲಿ ಆಹಾರ ಅಭಾವವಿದೆ ಎಂದು ಮದ್ರಾಸಿನ ಆಂಗ್ಲ ದೈನಿಕ ಒಂದರಲ್ಲಿ ಬಂದ ವರದಿಯು ಸರಿಯಾದುದಲ್ಲವೆಂದೂ ವಿವರಿಸಲಾಯಿತು.

**ಹಾಲು ಅಭಿವೃದ್ಧಿಗಾಗಿ** ದ. ಕ. ಜಿಲ್ಲೆಯಲ್ಲಿ ಒಳ್ಳೆ ಜಾತಿಯ ಕೆಲವು ಗಂಡು ಆಡುಗಳು ಉಚಿತವಾಗಿ ಕೊಡಲ್ಪಡುವವು. ಇವುಗಳನ್ನು ಸರಕಾರಿ ನಿಬಂಧನೆಗಳಿಗೆ ಅನುಸರಿಸಿ ಪೋಷಣೆ ಮಾಡಿ ಊರಿನ ಹೆಣ್ಣು ಆಡುಗಳಿಗೆ ಉಪಯೋಗಿಸತಕ್ಕದ್ದು. ಆಡುಗಳನ್ನು ಪಡೆಯಲು ಇಚ್ಛಿಸುವವರು ಜಿಲ್ಲಾ ವೆಟರ್ನರಿ ಆಫೀಸರ್, ಮಂಗಳೂರು ಅವರಿಗೆ ಬರೆಕೊಳ್ಳಬಹುದು.

**ಸಹಾನುಭೂತಿ ಮುಷ್ಕರ**– ಜಿಲ್ಲೆಯ ಮೋಟಾರ್ ಕೆಲಸಗಾರರ ಮುಷ್ಕರಕ್ಕೆ ಸಹಾನುಭೂತಿ ತೋರಿಸುವುದಕ್ಕಾಗಿ ಕಳೆದ ತಾ. 27ರಲ್ಲು ಮಂಗಳೂರಿನ ಬಂದರದ ಕೆಲಸಗಾರರೂ, ಹಂಚಿನ ಕಾರ್ಖಾನೆಯ ಮಜೂರರೂ, ಪ್ರೆಸ್ ಮಜೂರರೂ, ತೋಟಗಳೂ ಕೆಲಸ ನಿಲ್ಲಿಸಿ ಒಂದು ದಿನ ಮುಷ್ಕರ ಹೂಡಿದ್ದರು.

**ಮಂಗಳೂರು ನಗರಸಭೆಯು**– ಕಳೆದ ತಾ. 25ರಲ್ಲಿ ಜರಗಿದಾಗ ಜಾಡಮಾಲಿಗಳು ಮತ್ತು ತೋಟಗಳು ಕೊಟ್ಟ ಕೇಳಿಕೆಗಳನ್ನು ವಿಮರ್ಶಿಸಿ ಉಪ ಸಮಿತಿಯಿತ್ತ ವರದಿಯಂತೆ ಅವರಿಗೆ ಸರಾಸರಿ ತಿಂಗಳೊಂದರ ಮೂರು ರೂಪಾಯಿ ಹೆಚ್ಚಿಸುವ ತೀರ್ಮಾನವಾಯಿತು. ಖದ್ದರ್ ವಸ್ತ್ರ ಸಾಕಷ್ಟು ಸಿಗದಿರುವುದರಿಂದಲೂ, ಸಿಗುವ ಖದ್ದರ್ ಬೆಲೆಯು ವಿಪರೀತವಿರುವುದರಿಂದಲೂ, ಮುನಿಸಿಪಲ್ ಕೆಲಸಗಾರರಿಗೆ ಸಮ ವಸ್ತ್ರಗಳ ಬಗ್ಗೆ ಮಿಲ್ ಬಟ್ಟೆ ಕೊಡಲು ಒಪ್ಪಿಗೆ ಕೊಡಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ನಿರ್ಣಯವಾಯಿತು. ಸಾರ್ವಜನಿಕ ಆರೋಗ್ಯ ಖಾತೆಯ ಡ್ರೈವರರ ಸಂಬಳ ಏರಿಸಬೇಕೆಂಬ ಸೂಚನೆಯನ್ನು ನಿರಾಕರಿಸಿ ಬಂದ ಸರಕಾರದ ಹುಕುಮನ್ನು ರಿಕಾರ್ಡು ಮಾಡಲಾಯಿತು. ಮುನಿಸಿಪಲ್ ನೌಕರರಿಗೆ 1950ನೆ ಎಪ್ರಿಲಿನಿಂದ ಇನ್ನೊಂದು ವರ್ಷ ಕೂಡಾ ಮನೆ ಬಾಡಿಗೆ ಕೊಡುವುದೆಂದು ತೀರ್ಮಾನವಾಯಿತು. ಹ್ಯಾವೇಖಾತೆಯ ಕೈಕೆಳಗಿರುವ ನಗರದ ರಸ್ತೆಗೆ ಅವರು ದಾಮರು ಹಾಕಬೇಕೆಂದು ಅವರನ್ನು ಕೇಳಿಕೊಳ್ಳುವ ನಿರ್ಣಯವಾಯಿತು. ಮಣ್ಣಗುಡ್ಡೆ ಶಾಲೆಯಲ್ಲಿ ಒಂದು ವಾಚನಾಲಯವನ್ನು ತೆರೆಯಬೇಕೆಂದು ನಿಶ್ಚಯವಾಯಿತು. 1950-51ರಲ್ಲಿ ರಸ್ತೆ ದುರುಸ್ತಿ ಬಗ್ಗೆ ರೂ. 83,350/–ಮಂಜೂರಾಯಿತು.

**ಸುಗ್ಗಿ ಬೆಳೆಯ ಅಕ್ಕಿ ಭತ್ತವನ್ನು** ಸ್ಟೋರಿಗೊಪ್ಪಿಸುವ ಕೊನೆಯ ಅವಧಿಯನ್ನು ಜಿಲ್ಲಾ ಕಲೆಕ್ಟರರು ಈ ರೀತಿ ಪ್ರಕಟಿಸಿರುತ್ತಾರೆ.

1 ಮಂಗಳೂರು, ಉಡುಪಿ ಮತ್ತು ಕಾಸರಗೋಡಿನ ಅಧ್ಯಂತ ತಾಲೂಕು, ಕುಂದಾಪುರ ತಾಲೂಕಿನ ಕುಂದಾಪುರ ಫಿರ್ಕ, ಕಾರ್ಕಳ ತಾಲೂಕಿನ ವೇಣೂರು ಫಿರ್ಕ ಮತ್ತು ಅಜೆಕಾರು ಫಿರ್ಕ[ಮೂಡ್ರ, ಹಿರ್ಗಾನ ಮತ್ತು ಎರ್ಲಪಾಡಿ ಗ್ರಾಮಗಳನ್ನು ಬಿಟ್ಟು]; ಪುತ್ತೂರು ತಾಲೂಕಿನ ಪುತ್ತೂರು, ವಿಟ್ಲ ಮತ್ತು ಬೆಳ್ತಂಗಡಿ ಫಿರ್ಕಗಳಲ್ಲಿ ಭತ್ತವಾದರೆ 15-3-50 ರೊಳಗೆ ಒಂದೇ ಕಂತಿನಲ್ಲಿ. ಅಕ್ಕಿಯಾದರೆ ತಾ. 31-3-50ರೊಳಗೆ ಒಂದೇ ಕಂತಿನಲ್ಲಿ.

2 ಕುಂದಾಪುರ ತಾಲೂಕಿನ ವಂಡ್ಸೆ ಮತ್ತು ಬೈಂದೂರು ಫಿರ್ಕಗಳಲ್ಲಿ; ಪುತ್ತೂರು ತಾಲೂಕಿನ ಉಪ್ಪಿನಂಗಡಿ, ಕೊಕ್ಕಡ, ಮತ್ತು ಸುಳ್ಯ ಫಿರ್ಕಗಳಲ್ಲಿ ಕೆಳಗಿನ ಗ್ರಾಮಗಳನ್ನು ಬಿಟ್ಟು ಉಳಿದ ಭಾಗಗಳಲ್ಲಿ ಭತ್ತವಾದರೆ ತಾ. 31-3-50ರೊಳಗೆ ಒಂದೇ ಕಂತಿನಲ್ಲಿ. ಅಕ್ಕಿಯಾದರೆ ತಾ. 15 5-50ರೊಳಗೆ ಒಂದೇ ಕಂತಿನಲ್ಲಿ.

3 ಪುತ್ತೂರು ತಾಲೂಕಿನ ಹರಿಹರ ಪಳ್ಳತಡ್ಕ, ಕೊಲ್ಲಮೊಗ್ರು, ಕಲ್ಮಕರ್, ಸುಬ್ರಹ್ಮಣ್ಯ, ಐನಕಿದು, ಬಳ್ಪ, ಏನೆಕಲ್ಲು, ಬಿಳಿನೆಲೆ, ಕೇಂಬಾರ್, ಐತೂರು, ರೆಂಜಿಲಾಡಿ, ನೂಜಿಬಾಳ್ತಿಲ, ನೆಕ್ಕಿಲಾಡಿ, ಬಂಟ್ರ, ಕೋಡಿಂಬಳ, ಶಿರಾಡಿ, ಕೊಣಾಜೆ, ಶಿಬಾಜೆ, ಶಿರಿಬಾಗಿಲು, ಶಿಶಿಲ, ಪುದುವೆಟ್ಟು, ಮುಲ್ಕಿ ವಂತಿಗೆ ಮತ್ತು ನಿತ್ತಬಾಗಿಲು–ಭತ್ತವಾದರೆ ತಾ. 1-4-50ರೊಳಗೆ ಒಂದೇ ಕಂತಿನಲ್ಲಿ ಅಕ್ಕಿಯಾದರೆ ತಾ. 15-4-50ರೊಳಗೆ ಒಂದೇ ಕಂತಿನಲ್ಲಿ.

ಮೇಲಿನ ಮಾಯಿದೆ ದಾಟಿ ಒಂದು ವಾರದ ತನಕ ಭತ್ತ ಮುಡಿಗೆ ಎರಡಾಣೆ ಹಾಗೂ ಅಕ್ಕಿ ಮುಡಿಗೆ ನಾಲ್ಕಾಣೆ ಕಡಿತದಲ್ಲಿ ಸ್ವೀಕರಿಸಲಾಗುವುದು. ಅನಂತರ ಭತ್ತ, ಅಕ್ಕಿ ಮುಡಿಗೆ ಅನುಕ್ರಮವಾಗಿ ನಾಲ್ಕಾಣೆ ಹಾಗೂ ಎಂಟಾಣೆ ಕಡಿತ ಮಾಡಲಾಗುವುದು.

**ಸಕ್ಕರೆ ಧಾರಣೆ**–ದ. ಕ. ಜಿಲ್ಲಾ ಕಲೆಕ್ಟರರು ಸಕ್ಕರೆಯನ್ನು ಈ ಕೆಳಗಿನ ದರದಂತೆ ಮಾರಲು ಆಜ್ಞೆ ವಿಧಿಸಿರುವರು: ಮಂಗಳೂರು, ಬಂಟ್ವಾಳ, ಮಂಜೇಶ್ವರ, ಕುಂಬಳೆ ಮತ್ತು ಮೂಡಬಿದ್ರೆ 0-7-2; ಹೊಸದುರ್ಗ, ಪುತ್ತೂರು, ಬೆಳ್ತಂಗಡಿ ಮತ್ತು ಕಾರ್ಕಳ 0-7-3; ಉಡುಪಿ 0-7-4. ಕುಂದಾಪುರ 0-7-5. ಈ ಬೆಲೆಯು 40 ತೊಲೆಗಳ ಒಂದು ರಾತ್ತಲಿನದ್ದಾಗಿರುತ್ತದೆ.

**ರಾಜಕೀಯ ಸಂತ್ರಸ್ತರಿಗೆ ಭೂದಾನ**–ಉಡುಪಿ ತಾಲೂಕು (ಗುಂಡ್ಮಿ ಗ್ರಾಮ) ಶ್ರೀಗಳಾದ ಎಮ್. ಪಿ. ನರಸಿಂಹ ಹೊಳ್ಳ, ಬಿ. ಸಂಜೀವ ಸೆಟ್ಟಿ–ಪ್ರತಿಯೊಬ್ಬರಿಗೆ 4 ಎಕ್ರೆ 11 ಸೆಂಟ್ಸು ಪ್ರಕಾರ.

ಕಾರ್ಕಳ ತಾಲೂಕು:-[ಪ್ರಾಂತ್ಯ ಗ್ರಾಮ] ಶ್ರೀಗಳಾದ ನರಸಿಂಗರಾವ್, ಆನಂದರಾವ್, ಎಮ್. ರಮಾನಾಥ ಶೆಣೈ, ಮತ್ತು ಅಮ್ಮಣ್ಣ ಮ್ಯಾಲಿ. ಪ್ರತಿಯೊಬ್ಬರಿಗೆ 5ಎಕ್ರೆ 41 ಸೆಂಟ್ಸು ಶ್ರೀ ಅಚ್ಯುತ ಶೆಣೈಯವರಿಗೆ 5 ಎಕ್ರೆ. ಶ್ರೀ ಕೆ. ಲೋಹಿದಾಸ 6 ಎಕ್ರೆ 41 ಸೆಂಟ್ಸು.

ಪಾಣೆಮಂಗಳೂರು:- ಶ್ರೀ ಎನ್. ಕೇಶವ ಕೊಗ್ಗ ಕುಡುವ 73 ಸೆಂಟ್ಸು.

ಪುತ್ತೂರು:- [ಸಂಪಾಜೆ ಗ್ರಾಮ] ಶ್ರೀ ಗೋವಿಂದ ಭಂಡಾರಿ 5 ಎಕ್ರೆ 23 ಸೆಂಟ್ಸು.

ಕಾಸರಗೋಡು:- [ಚರ್ಮತ್ತೂರು] ಶ್ರೀ. ಪೊಕ್ಕನ್ ಕೃಷ್ಣ 6 ಎಕ್ರೆ 14 ಸೆಂಟ್ಸು.

ಮಂಗಳೂರು:- [ಅಡ್ಯಪಾಡಿಗ್ರಾಮ] ಶ್ರೀಗಳಾದ ಬಿ. ಟಿ. ರೈ ಮತ್ತು ಪದ್ಮನಾಭ ಆಳ್ವ 14 ಎಕ್ರೆ 60 ಸೆಂಟ್ಸು ಸಮಪಾಲು.

### ನೋಟಿಸು

ಮೂಲಕ ತಿಳಿಯಪಡಿಸುವುದೇನೆಂದರೆ:– 1950-51ನೇ ವರ್ಷದಲ್ಲಿ ಕಟಪಾಡಿ ಪಂಚಾಯತ ಬೋರ್ಡಿನ ಆಡಳಿತಕ್ಕೆ ಒಳಪಟ್ಟ ಮಾರ್ಕೆಟು, ಇಳಿಯುವ ಸ್ಥಳ (Jetty), ಪೇಟ್ಟು, ಕಡವು, ಇವುಗಳಲ್ಲಿ ಮರಿವಸೂಲು ಮಾಡುವ ಹಕ್ಕನ್ನು ಪಂಚಾಯತ ಬೋರ್ಡ ಪ್ರೆಸಿಡೆಂಟರು ತಾ. 13-3-50ನೇ ಸೋಮವಾರ ಅಪರಾಹ್ನ ಘಂಟೆ 3ಕ್ಕೆ ಪಂಚಾಯತ ಬೋರ್ಡು ಆಫೀಸಿನಲ್ಲಿ: ಆ ಕುರಿತು ಕ್ರಿಯಲ್ಲಿರತಕ್ಕ ನಿಯಮಗಳಿಗನುಸಾರವಾಗಿ ಬಹಿರಂಗವಾಗಿ ಏಲಂ ಮೂಲಕ ಮಾರಾಟ ಮಾಡುವರು.

ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಆಫೀಸು ಸಮಯ ಪಂಚಾಯತ ಬೋರ್ಡು ಆಫೀಸಿನಲ್ಲಿ ಒಂದು ತಿಳಿದುಕೊಳ್ಳಬಹುದು

**P. Venkatraya Nayak,**
President

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಪುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

**For up-to-date Lodging & Boarding**

ROYAL MAHAL,

UDIPI, S. Kanara.

*For Life Assurance*

CONSULT

THE NEW GUARDIAN OF INDIA
LIFE ASSURANCE Co. LTD.,
(Established 1934)

Chairman: ri. M. C. T. M Chidambaram Chettyar

A Policy in this progressive Life Office is a good investment; its Agency is a valuable business connection

MANGALORE BRANCH:
K. S. R. Road,
Hampankatta, Mangalore.

HEAD OFFICE:
United India Life Building,
MADRAS


ಪಂಚಾಯತ ಬೋರ್ಡು,
ಗ್ರಾಮ ಕಮಿಟಿ, ಶಾಲಾ ಕಾಲೇಜು
ಮೊದಲಾದುವುಗಳ

## ಲೈಬ್ರೆರಿಗಳಿಗೆ

ಬೇಕಾಗುವ ಕರ್ನಾಟಕದ ಎಲ್ಲಾ ಭಾಗಗಳ ಕನ್ನಡ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ವಿಚಾರಿಸಿರಿ:—
ನವಭಾರತ ಪುಸ್ತಕ ಭಂಡಾರ,
ಉಡುಪಿ ಅಥವಾ
ನವಯುಗ ಪ್ರೆಸ್, ಉಡುಪಿ.





Approved firm by the Govt. of Mysore Certificated by the Agent of the Govt of Cylone & Indian

ಮಹಿಳಾ ಪ್ರಪಂಚ

# ಸ್ವತಂತ್ರ ಭಾರತದಲ್ಲಿ ಮಹಿಳೆಯರು

ಲೇಖಕ:- ಶ್ರೀ. ಪಿ ಯರ್ ಲಕ್ಷ್ಮೀನಾರಾಯಣ ಆಳ್ವ.

ಯೋಗಿಗಳು ಪ್ರೇಮವೇ ದೇವರು, ದೇವರೇ ಪ್ರೇಮ ಎನ್ನುತ್ತಾರೆ. ನಿಜವಾಗಿಯೂ ಇದಕ್ಕಿಂತ ಚೆನ್ನಾದ ದೇವರ ಚಿತ್ರ ಬೇರಿಲ್ಲ. ಮಾನವರ ಚೈತನ್ಯ ಪೂರ್ಣ ಅಂತರಂಗಗಳ ಪರಸ್ಪರ ಮಿಳಿತವೇ ಪ್ರೇಮ. ಆದರೆ ಅಲ್ಲೇ ಅದರ ಪರಿಸಮಾಪ್ತಿಯಲ್ಲ. ಜಗತ್ತಿನ ಜಡ ಅಣುಗಳಲ್ಲಿ ಅಡಗಿರುವ ಪರಸ್ಪರ ಆಕರ್ಷಣೆ ಅದೂ ಪ್ರೇಮದ ಒಂದು ಸೂಕ್ಷ್ಮರೂಪ. ಹೀಗೆ ಇಡೀ ಜಗತ್ತೇ ಪ್ರೇಮದಿಂದ ಆವೃತವಾಗಿದೆ ಮತ್ತು ಅದರಿಂದಲೇ ತನ್ನ ಅಸ್ತಿತ್ವವನ್ನಿಟ್ಟುಕೊಂಡಿದೆ. ಪ್ರೇಮದ ವಿರಾಟ್‌ರೂಪವನ್ನು ಪ್ರತ್ಯಕ್ಷ ಮಾಡಿಕೊಳ್ಳಬೇಕಾದರೆ ತ್ಯಾಗ ಒಂದೇ ಹಾದಿ. ಈ ಹಿರಿಗುಣವು ಭಾರತದ ಜನತೆಯ ಸಾಮಾನ್ಯ ಗುಣವಾಗಿದ್ದ ಕಾಲವೊಂದಿತ್ತು. ಆದರೆ ಇಂದದು ಕಣ್ಮರೆಯಾಗುತ್ತಿದೆ. ಇಂದು ಅದನ್ನು ಅಲ್ಪಸ್ವಲ್ಪವಾದರೂ ಕಾಣಬೇಕಾದರೆ ನಾವು ಮಹಿಳೆಯರ ಕಡೆಗೆ ದೃಷ್ಟಿಸದೆ ನಿರ್ವಾಹವಿಲ್ಲ. ಮಹಿಳೆಯರೇ ನಾಡಿನ ಸಂಸ್ಕೃತಿಯ ಪ್ರತೀಕ. ಪುರುಷರು ತಮ್ಮ ದೈನಂದಿನದ ವ್ಯವಹಾರದಲ್ಲಿ ಮುಳುಗಿ ಮಾನವ ಸಹಜ ಗುಣಗಳಾದ ತ್ಯಾಗ, ಪ್ರೇಮಗಳನ್ನು ಮರೆತು ಕೃತಕ ಗುಣಗಳನ್ನು ಅಳವಡಿಸಿಕೊಳ್ಳುತ್ತಾರೆ ಎಂಬುದಕ್ಕಿಂತ ಅವರಲ್ಲಿ ಈ ಕೃತಕ ಗುಣಗಳು ಸೇರಿಕೊಳ್ಳುತ್ತವೆ ಎಂಬುದು ಹೆಚ್ಚು ಸತ್ಯ. ಪ್ರತಿಯೊಂದು ವ್ಯಕ್ತಿಗೂ ತಾನೋರ್ವ ಸಜ್ಜನನಾಗಿ ಬಾಳಬೇಕೆಂಬ ಬಯಕೆಯಿದೆ. ಆದರೆ ಆ ಬಯಕೆಯನ್ನು ಕಾರ್ಯರಂಗಕ್ಕೆ ತರಲು ಹಲವಾರು ವ್ಯಾವಹಾರಿಕ ಆಡೆತಡೆಗಳಿರುತ್ತವೆ. ಆದ್ದರಿಂದ ನಿತ್ಯ ವ್ಯವಹಾರ ಜೀವಿಯಾದ ಪುರುಷ ತನ್ನ ನೈಜ ಗುಣವನ್ನು ತೊರೆದು ಪರಿಸ್ಥಿತಿಯ ಸೆಳವಿನಲ್ಲಿ ತೇಲತೊಡಗಿ ಇಲ್ಲಸಲ್ಲದ ಕೊಳೆ ಪಾಪಗಳಿಂದ ಮುಚ್ಚಿ ಹೋಗಿದ್ದಾನೆ. ಆದರೆ ಮಹಿಳೆಯರು ಮಾತ್ರ ತಮ್ಮ ಅಂತರಂಗದ ಗುಪ್ತಸ್ಥಳದಲ್ಲಿ ಆ ಹಿರಿಗುಣಗಳನ್ನು ಇಟ್ಟುಕೊಂಡು ರಕ್ಷಿಸುತ್ತಾ ಬಂದಿದ್ದಾರೆ. ಇನ್ನು ಮುಂದಾದರೂ ಅದು ಉಳಿಯುವದಿದ್ದರೆ ಅವರಿಂದಲೇ. ಆದ್ದರಿಂದಲೇ ಆ ಹಿರಿಗುಣಗಳನ್ನು ಕಾಯ್ದುಕೊಳ್ಳುವದಕ್ಕೋಸ್ಕರ ಸ್ವತಂತ್ರ ಭಾರತದಲ್ಲಿ ಮಹಿಳೆಯರ ಸ್ಥಾನವು ಉತ್ತಮ ಮತ್ತು ಉನ್ನತ ಮಟ್ಟದಲ್ಲಿರಬೇಕಾಗಿದೆ. ಈ ದಿಸೆಯಲ್ಲಿ ಸರಕಾರದ ಕೆಲಸವೇನೋ ಬಹಳದೆ. ಆದರೆ ಅದು ಪ್ರಾಮುಖ್ಯವಲ್ಲ. ಇದರಲ್ಲಿ ಹೆಚ್ಚಿನ ಕೆಲಸ ಗಂಡಸರದಿದೆ. ಆದರೆ ಎಲ್ಲಕ್ಕಿಂತ ಹೆಚ್ಚಿನ ಹೊಣೆ ಮಹಿಳೆಯರ ಮೇಲೆಯೇ ಇದೆ.

ಬಹಳ ಹಿಂದಿನಿಂದಲೂ ಪುರುಷವರ್ಗ ಮಹಿಳೆಯರ ಮೇಲೆ ತನ್ನ ಅಧಿಕಾರವನ್ನು ಚಲಾಯಿಸುತ್ತಾ ಬಂದಿದೆ. ಈ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕಾಗಿ ಬಹಳ ಉಪಾಯಗಳನ್ನು ಕೂಡಾ ಮಾಡಿದೆ. ಶಾಸ್ತ್ರ ಪುರಾಣಗಳಲ್ಲಿ ಮಹಿಳೆಯರ ಹಕ್ಕನ್ನು ಕಸಕೊಳ್ಳುವ ನಿಬಂಧನೆಗಳು ಅಲ್ಲಲ್ಲಿ ಉಲ್ಲೇಖಿಸಲ್ಪಟ್ಟಿವೆ. ಇಂದು ಪ್ರತಿವ್ರತೆಯರೆಂದು ಆದರಿಸಲ್ಪಡುತ್ತಿರುವ ಅಹಲ್ಯೆ, ದಮಯಂತಿ, ಮಂಡೋದರಿ, ಸೀತಾ, ದ್ರೌಪದಿ ಮೊದಲಾದ ಮಹಿಳೆಯರಿಲ್ಲೂ ತಮ್ಮ ಗಂಡಂದಿರ ಹುಚ್ಚು ಒಡೆತವನ್ನು ತಿಂದರೇ, ಗಂಡಸಿನ ಹುಚ್ಚು ಸೆಗ್ಗಳಿಕೆಗೆ ತಮ್ಮನ್ನು ಮಾರಿಕೊಂಡವರೇ, ಅಲ್ಲದೆ ಸೂತ್ರಕಾರರು, ಆಚಾರ್ಯರು ಹೆಂಗಸರ ಮೇಲೆ ಹೇರಿದ ಕಟ್ಟುಕಟ್ಟಳೆಗಳ ನೊಗವನ್ನು ಆತ್ಮಸಂತೋಷದಿಂದ ಹೊತ್ತವರೇ. ಆ ಮಹಿಳೆಯರು ಧರ್ಮದ, ಶಾಸ್ತ್ರದ ಹೆಸರಿನಲ್ಲಿ ಮಹಿಳೆಯರ ಮೇಲೆ ಹೇರಿದ್ದ ಅನ್ಯಾಯಗಳ ವಿರುದ್ಧ ಕೊಟ್ಟಿಗೆದ್ದು, ಪ್ರತಿಭಟಿಸುತ್ತಿದ್ದಲ್ಲಿ ಅವರು ಪತಿವ್ರತೆಯರೆಂದು ಗಣಿಸಲ್ಪಡುತ್ತಿದ್ದರೋ ಇಲ್ಲವೋ ಎಂಬುದು ಸಂಶಯಾಸ್ಪದವಾದ ವಿಷಯ. ಅಂದರೆ ಪುರುಷರು ಹೆಂಗಸರನ್ನು ತಮ್ಮ ಅಧಿಕಾರದ ಕೆಳಗೆ ಇಟ್ಟುಕೊಳ್ಳುವುದಕ್ಕಾಗಿ, ಬಲವನ್ನು ಉಪಯೋಗಿಸುವುದರ ಜೊತೆಗೆ ವೇದ್ಯಗಳ ಮೂಲಾಂತರ ತಿಳಿಸಿ, ಪುರಾಣಗಳಲ್ಲಿ ಒತ್ತಿಹೇಳಿ ತಮ್ಮ ಕೆಲಸವನ್ನು ಸುಲಭ ಮಾಡಿಕೊಂಡರು. ಆಗಿನ ಕಾಲದ ಸಂಸ್ಕಾರಗಳ ವಿಷಯ ಕೇಳಬೇಡವಷ್ಟೆ—ಅದು ಗಂಡಸಿನದೆಂದಮೇಲೆ. ಮತ್ತೆ ಅರಸನಿಗೆ ತಿಳಿಸಿ ಹೇಳುವ ಮಂದಿ ಅವೇ ಆಚಾರ್ಯವೃಂದ! ಹೀಗೆ ಬಹುಕಾಲದ ಹಿಂದಿನಿಂದಲೇ ಗಂಡಸು ಹೆಂಗಸಿನ ಹಕ್ಕನ್ನೆಲ್ಲ ಕಸಕೊಂಡು ಆಕೆಯನ್ನು ಒಂದು ನಿರ್ಜೀವ ವಸ್ತುವಿನಂತೆ ನೋಡುತ್ತಾ ಬಂದಿದ್ದಾನೆ; ಮೂಕ ಪ್ರಾಣಿಯಂತೆ ನಡೆಸಿಕೊಂಡು ಬಂದಿದ್ದಾನೆ.

ಯಾವ ಬಸಿರಿನಿಂದ ಹೊರಬಂದು ಗಂಡು "ಗಂಡಾಗಿ" ಮೆರದನೋ ಅದನ್ನೇ ದಾಸಿ, ರಾಕ್ಷಸಿ, ಘಾತಕಿ, ಕಂಟಕಿ ಎಂದು ತುಚ್ಛ ಮಾಡಿ ಕರೆದನು. ಮಾತ್ರವಲ್ಲ,ತನ್ನ ಮನೋದುರ್ಬಲತೆಯಿಂದಾದ ಮತ್ತು ಆಗುತ್ತಿರುವ ತಪ್ಪಿನಿಂದ ನುಣುಚಿಕೊಳ್ಳುವುದಕ್ಕಾಗಿ ಸ್ತ್ರೀಯನ್ನು ಮಾಯೆ, ಕಾಮವಸ್ತು ಎಂದು ಜರೆದನು. ಮತ್ತು ಅದರಿಂದ ಉಂಟಾಗುವ ಹೊಣೆಯಿಂದ ತಲೆ ತಪ್ಪಿಸಿಕೊಳ್ಳುವುದಕ್ಕಾಗಿ ಆಕೆಯನ್ನು ಮಕ್ಕಳನ್ನು ಹೆರುವ ಯಂತ್ರ ಎಂದು ಬೈದು ಭಂಗಿಸಿದನು. ಯಾರು ಅತನನ್ನು ಹತ್ತು ತಿಂಗಳು ಬಸಿರಿನಲ್ಲಿ ಹೊತ್ತು ಆ ಮೇಲೆ ಹೆತ್ತು ನಂತರ ತುತ್ತುತುತ್ತಾಗಿ ಅನ್ನವನ್ನಿತ್ತು ಸಾಕಿ ಸಲಹಿದರೊ ಅಂತಹರನ್ನು ಆತನಿಂದು ಯಾವ ಮಟ್ಟಕ್ಕೆ ತಳ್ಳಿದ್ದಾನೆ ಎಂಬುದನ್ನು ನಿಷ್ಪಕ್ಷಪಾತದೃಷ್ಟಿಯಿಂದ ನಿರೀಕ್ಷಿಸಿಕೊಂಡರೆ ಆತನಿಗೆ ಆತನ ಮೇಲೆಯೇ ಜಿಗುಪ್ಸೆ ಹುಟ್ಟದಿರದು.

ಗಂಡಸು ಇಲ್ಲಿ ಆಲೋಚಿಸಬೇಕಾದ ಹಲವಾರು ವಿಚಾರಗಳಿವೆ. ಮೊದಲನೆಯದಾಗಿ ಆತ ಸಂಸಾರ ಜೀವಿ ಆತನ ಜೀವನವು ಸುಖಮಯವಾಗಬೇಕಾದರೆ ಆತನು ಸಂಸಾರದಲ್ಲಿ ತನ್ನ ಜೊತೆಗಾತಿಗೆ ಸಮಾನ ಸ್ಥಾನವನ್ನು ನೀಡದೆ ನಿರ್ವಾಹವಿಲ್ಲ. ಮನುಷ್ಯ ಒಂದು ಯಂತ್ರವಲ್ಲ. ಆತನ ಕ್ರಿಯೆಗಳು ಯಾಂತ್ರಿಕವಲ್ಲ. ಆತನಲ್ಲಿ ಹೃದಯವಿದೆ ಅದು ತನ್ನ ಸುತ್ತುಮುತ್ತ ಒಂದು ಮಧುರ ವಾತಾವರಣ ಉಂಟಾಗಬೇಕೆಂದು ಬಯಸುತ್ತದೆ. ಅಂತಹ ಒಂದು ವಾತಾವರಣವು ಆತನ ಜೀವನದುದ್ದಕ್ಕೂ ಮೇಳವಿಸಬೇಕಾದರೆ ಜೊತೆಗಾತಿಯ ನೆರವಿಲ್ಲದೆ ಅಸಾಧ್ಯ ಎಂಬುದು ಸರ್ವವಿದಿತ. ಜೊತೆಗಾತಿಯ ಹೃದಯ ಈತನ ರಾಗಕ್ಕೆ ಸರಿಯಾಗಿ ಶ್ರುತಿಗೊಡಬೇಕಾದರೆ ಗಂಡು ಹೆಣ್ಣಿನ ಸಂಬಂಧ ಸೇವ್ಯ, ಸೇವಕವಾಗುವ ಬದಲು ಸಮಾನತಾಭಾವದ್ದಾಗದೆ ನಿರ್ವಾಹವಿಲ್ಲ. ಆದ್ದರಿಂದಲೇ ಗಂಡು ತನ್ನ ಜೀವನ ಕುಸುಮಕ್ಕೆ ಮಧುರತೆಯ ಪರಿಮಳವನ್ನು [illegible] ಚಿಕೊಳ್ಳಬೇಕಾದರೆ ಹೆಂಗಸಿಗೆ ಸ್ವಾತಂ[illegible] ಕೊಟ್ಟೇ ತೀರಬೇಕಾಗಿದೆ. ಮಾತ್ರವಲ್ಲ, ಸನಿಯದ ಜೀವವೊಂದು ಸದಾ ಬಂಧನ[illegible] ಕೊಳೆಯುತ್ತಿರುವುದನ್ನು ನಿಜವಾದ ಮಾ[illegible] ಹೃದಯ ಎಂದಿಗೂ ಸಹಿಸಲಾರದು.

ಇಂದು ನಾವು ಪಾಶ್ಚಾತ್ಯ ರಾಷ್ಟ್ರಗಳಲ್ಲಿ[illegible] ಹಿಳೆಯರ ಪ್ರಗತಿಯನ್ನು ಕಾಣುತ್ತಿದ್ದೆ[illegible] ಅದು ರಾಜಕೀಯದ ಡೊಂಬರಾಟ ಹೊ[illegible] ಬೇರಲ್ಲ. ಈ ದಾರಿಯನ್ನು ಭಾರತೀಯ[illegible] ಹಿಳೆಯರು ಹಿಡಿದರೆ ಅದು ವಿನಾಶಕ್ಕೆ [illegible] ಣವಾದೀತು. ನಮಗೆ—ಭಾರತೀಯರಿಗೆ[illegible] ಷ್ಟ ಸಂಸ್ಕೃತಿಯೊಂದಿದೆ. ಅದು ಅಮರವಾ[illegible] ದು ಮತ್ತು ಅತುಲನೀಯವಾದುದು, ಮಾ[illegible] ವಲ್ಲ, ಶಾಂತಿದಾಯಕವಾದುದು. ಅಂ[illegible] ಸಂಸ್ಕೃತಿಯನ್ನು ಇಂದಿನ ಕೃತಕ ವಾತಾ[illegible] ಣಕ್ಕೆ ಮಾರಿಬಿಡುವ ಬುದ್ಧಿ ನಮ್ಮ ಮ[illegible] ಯರಿಗೆ ಬಾರದಿರಲಿ. ದೇಶದ ರಾಜಕೀಯ[illegible] ಮಹಿಳೆಯರು ಪ್ರವೇಶಿಸದಿರಲಿ ಎಂದು [illegible] ರ ಅರ್ಥವಲ್ಲ. ಆದರೆ ಇದೇ ಅವರ ಅಂತಿ[illegible] ಗುರಿಯಲ್ಲ, ಅದಕ್ಕಿಂತಲೂ ಗುರುತರವ[illegible] ಹೊಣೆ ಅವರ ಮೇಲಿದೆ ಎಂಬ ಅರಿವು ಅ[illegible] ಳೆಯರಿಗಿರಬೇಕಾಗಿದೆ. ಸಮಾಜವನ್ನು [illegible] ತಿಯ ಮಡಿಲಲ್ಲಿ ಹಾಕಿ, ಮಧುರ ಆತ್ಮಾ[illegible] ದ ಗೀತೆಯ ಜೋಗುಳ ಹಾಡಿ ನಿಶ್ಚಿಷ್ಟ[illegible] ಖನಿದ್ರೆಯನ್ನು ತಂದೊಗಿಸಲು ತಮ್ಮ [illegible] ಮಲ ಹೃದಯವೇ ಬೇಕಾಗಿದೆ. ಅದಕ್ಕಾ[illegible] ಮ್ಮ ಮನಸ್ಸನ್ನು ನಿರ್ಮಲವಾಗಿರಿಸಿಕೊ[illegible] ಬೇಕೆಂಬ ಅರಿವು ಮಹಿಳೆಯರ ಸ್ಮೃತಿಪ[illegible] ದಿಂದ ಅಳಿಯದಿರಲಿ. ಅವರು ತಮ್ಮ ಆತ[illegible] ಆತ್ಮತೇಜಸ್ಸಿನಿಂದ ಗಾಂಧಿ, ನೆಹರುಗಳ[illegible] ಹ ವೀರಪುತ್ರರನ್ನು ನಾಡಿಗೆ ಕಾಣಿಕೆಯ[illegible] ನೀಡಲಿ.

ಇಂದು ನಮ್ಮ ರಾಷ್ಟ್ರೀಯ ಸರಕಾರ [illegible] ಹಿಳೆಯರಿಗೆ ಹಕ್ಕುಗಳನ್ನು ನೀಡಲು ಬೇ[illegible] ದನ್ನು ಕಾಯಿದೆಗಳನ್ನು ಪಾಸುಮಾಡುತ್ತಿ[illegible] ಅಲ್ಲದೆ ಮಹಿಳೆಯರ ಉನ್ನತಿಯ ಬಗ್ಗೆ[illegible] ನೇಕ ಸವಲತ್ತುಗಳನ್ನು ನೀಡುತ್ತಿದೆ. ಆ[illegible] ಇಷ್ಟರಿಂದಲೇ ಮಹಿಳೆಯರ ಉನ್ನತಿಯಾ[illegible] ತ್ತದೆ ಎಂದು ಯಾರಾದರೂ ಭಾವಿಸಿದರೆ ಅ[illegible] ಮೂರ್ಖತನವಾದೀತು. ಅಂತಹ ಕಾಯಿ[illegible] ಗಳು ಕಾರ್ಯಕಾರಿಯಾಗುವಂತೆ ಮಾಡ[illegible] ಗಂಡಸು ಹೆಂಗಸು ಸೌಹಾರ್ದವನಡಿ[illegible] ಕೂಡಿಕೊಂಡು ಪ್ರಯತ್ನಿಸಬೇಕು.

ಒಂದು ದೃಷ್ಟಿಯಿಂದ ಕಾಯಿದೆಗಳು [illegible] ಡು ಹೆಣ್ಣಿನ ನಡುವಿನ ಸೌಹಾರ್ದ ಬಾ[illegible] ತಡೆಯನ್ನೊಡ್ಡುವ ಸಂಭವವಿದೆ. ಅವರೀ[illegible] ರೂ ಸಹಕರಿಸಿಕೊಳ್ಳದೆ ಕಾಯಿದೆಯ [illegible] ಹೊಂದಿಕೊಂಡು ತಮ್ಮ ಹಕ್ಕಿಗಾಗಿ ಹೆ[illegible] ದಾಡತೊಡಗಿದರೆ ಜೀವನವೇ ಕುರುಕ್ಷೇ[illegible] ವಾಗಿ ಪರಿಣಮಿಸೀತು. ಜೀವನವು ವಿರ[illegible] ಮರಳುಗಾಡಲ್ಲ, ಸಮರಸದ ವೃಂದಾವ[illegible] ಗಂಡು ಹೆಣ್ಣಿನ ಸಮರಸವೇ ನಾಡಿಗೆ ಅಕ[illegible] ಬೆಳಕನ್ನು ನೀಡಬಲ್ಲುದು. ಗಂಡು ಹೆ[illegible] ಒಬ್ಬರನ್ನೊಬ್ಬರು ಅರಿತುಕೊಳ್ಳಬೇಕು [illegible] ತ್ತು ಒಬ್ಬರಿಗೊಬ್ಬರು ಪೂರಕರಾಗಿ ಬಾಳ[illegible] ಕು ಇಲ್ಲಿ ಕಾಯಿದೆ ಮುಖ್ಯವಲ್ಲ. ತಿಳಿ[illegible] ಮನಸ್ಸು ಮುಖ್ಯ. ಅದರಿಂದ ಹೊ[illegible] ಮ್ಮುವ ಪ್ರೇಮ ಮುಖ್ಯ. ಗಂಡುಹೆಣ್ಣ[illegible] ಪರಸ್ಪರ ತಿಳಿವು, ಪೂರಕತೆ ಮತ್ತು ಪ್ರೇ[illegible] ಗಳೇ ನಾಡಿಗೆ ಉತ್ತಮ ಭವಿಷ್ಯತ್ತನ್ನು[illegible] ಬಲ್ಲವು.


## ಏಲಂ ನೋಟೀಸು

### THE Karnataka Bank, Ltd Udipi.

### ದಿ ಕರ್ಣಾಟಕ ಬೇಂಕ್, ಲಿಮಿಟೆಡ್ ಉಡುಪಿ.

ಈ ಮೂಲಕ ಸರ್ವರಿಗೂ ತಿಳಿಯಪಡಿಸುವದೇನೆಂದರೆ- ಈ ಕೆಳಗೆ ಹೆಸರು ಕಾಣಿಸಿದವರು ಸದರೀ ಬೇಂಕಿನಿಂದ ಚಿನ್ನಾಭರಣಗಳ ಆಡವಿನ ಮೇಲೆ ಪಡೆದ ಸಾಲಗಳ ಮೊಬಲಗನ್ನಾಗಲೀ, ಬಡ್ಡಿಯನ್ನಾಗಲೀ, ವಾಯಿದೆಗೆ ಕೊಡದಿದ್ದುದರಿಂದ, ಸದ್ರಿಯವರಿಗೆ ಕ್ರಮದಂತೆ ರಿಜಿಸ್ಟ್ರಿ ನೋಟೀಸುಗಳನ್ನು ಕೊಟ್ಟಾಗ್ಯೂ ಕೂಡ ಪಾವತಿ ಮಾಡದಿದ್ದುದರಿಂದ ಬೇಂಕಿಗೆ ಬರತಕ್ಕ ಅಸ್ಲು ಬಡ್ಡಿ ಐವೇಜು ಮತ್ತು ಖರ್ಚು ವಗೈರೆಯನ್ನು ಇದೇ ತಾ. 16-3-1950ನೇ ಗುರು...ರ ಬೇಂಕಿಗೆ ಪಾವತಿಮಾಡಿ ಈಡಿಟ್ಟ ಆಭರಣಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ್ದಲ್ಲಿ ಸದರೀ ಆಭರಣಗಳನ್ನು ತಾ-21-3-1950ನೇ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಸರಿಯಾಗಿ ಬೇಂಕಿನ ಅಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು. ಅಗತ್ಯಬಿದ್ದಲ್ಲಿ ಏಲಂ ಮಾಡುವ ತಾರೀಕನ್ನು ಮುಂದರಿಸಲಾಗುವುದು. ತಿಳಿದಿರುವದು.

| ಜಂಜಪ್ರಿ. ನಂಬ್ರ | ಲೋನಿನ ನಂಬ್ರ | ಅಸಾಮಿಗಳ ಹೆಸರು ಮತ್ತು ವಿಳಾಸ | ಬೇಂಕಿಗೆ ಬರತಕ್ಕ ಮೊಬಲಗು. |
|---|---|---|---|
| 1 | 32/47 | ನಾಗಪ್ಪ ಶೇಟ್, ಗುರುಶೇಟರ ಮಗ, ತೆಂಕಪೇಟೆ, ಉಡುಪಿ. ದ. ಕ. | ಅಸ್ಲು ರುಪಾಯಿ 125- ಮತ್ತು ಇದರ ಮೇಲಣ ತಾ.21 7-47 ರಿಂದ ಸೇಕಡಾ 7೦ ಸಲೆಯಲ್ಲಿ ವಸೂಲು ವರೆಗಿನ ಬಡ್ಡಿ. |
| 2 | 315/47 | ಬಿ. ಶ್ರೀನಿವಾಸಭಟ್ಟ, ನರಸಿಂಹ ಭಟ್ಟರವರ ಮಗ, ಬೈಲೂರು. ಉಡುಪಿ, ದ. ಕ. | ಅಸ್ಲು ರುಪಾಯಿ 50- ಮತ್ತು ಇದರ ಮೇಲಣ ತಾ.10 7-47 ರಿಂದ ಸೇಕ. ೬೪೦ ಸಲೆಯಲ್ಲಿ ವಸೂಲು ವರೆಗಿನ ಬಡ್ಡಿ- |
| 3 | 355/47 | ಬಿ. ಭುಜಂಗಹೆಗ್ಡೆ, ಎ. ಎಮ್. ತಿಮ್ಮಪ್ಪ ಹೆಗ್ಡೆಯವರ ಮಗ, ಜವುಳಿಸಾಹುಕಾರ, ಕಾರ್ಕಳ, ಮುನಿಸಿಪಾಲ್ ರೋಡ್, ದ. ಕ. | ಅಸ್ಲು ರುಪಾಯಿ 75- ಮತ್ತು ಇದರ ಮೇಲಣ ತಾ.28 7-48 ರಿಂದ ಸೇಕಡಾ 7೦ ಸಲೆಯಲ್ಲಿ ವಸೂಲು ವರೆಗಿನ ಬಡ್ಡಿ- |
| 4 | 357/47 | ಬಿ. ಶ್ರೀನಿವಾಸ ಭಟ್ಟ, ನರಸಿಂಹಭಟ್ಟರ ಮಗ, ಬೈಲೂರು, ಉಡುಪಿ, ದ. ಕ. | ಅಸ್ಲು ರುಪಾಯಿ 50- ಮತ್ತು ಇದರ ಮೇಲಣ ತಾ.30-7.47 ರಿಂದ ಸೇಕಡಾ ೬೦ ಸಲೆಯಲ್ಲಿ ವಸೂಲು ವರೆಗಿನ ಬಡ್ಡಿ- |
| 5 | 222/48 | ಬಿ. ಭುಜಂಗಹೆಗ್ಡೆ, ಎ. ಎಮ್. ತಿಮ್ಮಪ್ಪ ಹೆಗ್ಡೆಯವರ ಮಗ, ಜವುಳಿಸಾಹುಕಾರ, ಕಾರ್ಕಳ, ಮುನಿಸಿಪಾಲ್ ರೋಡ್, ದ. ಕ. | ಅಸ್ಲು ರುಪಾಯಿ 260- ಮತ್ತು ಇದರ ಮೇಲಣ ತಾ. 4-5.48 ರಿಂದ ಸೇಕಡಾ 6½ ರ ಸಲೆಯಲ್ಲಿ ವಸೂಲು ವರೆಗಿನ ಬಡ್ಡಿ- |

ಬೇಂಕಿನ ಅಫೀಸು
ತೆಂಕಪೇಟೆ, ಉಡುಪಿ. ದ. ಕ.
ತಾರೀಕು 2-3-1950

P. Madhava Rao,
Agent.



ಎಲ್ಲಾ ತರದ ಶಾಸ್ತ್ರೀಯ
ಆಯುರ್ವೇದ ಔಷಧಗಳಿ[illegible]
'ಮಹಾಜನ'
ಕಾಸರಗೋಡು
ಇವರ ತಯಾರಿಕೆಗಳನ್ನು
ವಿಚಾರಿಸಿರಿ.

# ★ ಹೋಳೀ ಹುಣ್ಣಿಮೆ ★

**("If Winter Comes can Spring be far behind")**

ಲೇಖಕ:—ರಾ. ಬಾ ಲ.

ವರ್ಷಾನುವರ್ಷ ಅನೇಕ ಹುಣ್ಣಿಮೆಗಳು ಬರುತ್ತಿವೆ, ಹೋಗುತ್ತಿವೆ. ಅವುಗಳ ಅರಿವು ಕೂಡ ಅನೇಕರಿಗೆ ಇರುವದಿಲ್ಲ. ಆದರೆ ಚಳಿಗಾಲ ಮುಗಿದು ವಸಂತಮಾಸ ಕಾಲಿಟ್ಟೊಡನೆ ಭಾರತ ಹುಣ್ಣಿಮೆ ಮತ್ತು ಹೋಳಿಹುಣ್ಣಿಮೆಗಳು ಬರುತ್ತವೆ. ಭೂದೇವಿಯು ಎಲ್ಲೆಡೆಯೂ ಹೊಸ ಪೈರುಗಳಿಂದ ಹಚ್ಚಸೀರೆಯುಟ್ಟಂತೆ ಕಾಣುವ ಸೊಗಸಿನ ಸೌಂದರ್ಯದ ಹೊಸ ಕಾಲವದು. ಒಕ್ಕಲಿಗರು ತಮ್ಮ ದುಡಿತಕ್ಕೆ ತಕ್ಕ ಪ್ರತಿಫಲ ದೊರೆಯಿತೆಂದು ಹಿಗ್ಗಿ ರಾಶಿಮಾಡಿ ಹೊಸ ಕಾಳಿನ ಅಡಿಗೆಯನ್ನು ತಮಗಿಂತ ಹೆಚ್ಚು ಕಷ್ಟಪಟ್ಟ ಅಚ್ಚುಮೆಚ್ಚಿನ ಅನ್ನದೇವನಂತಿರುವ ಬಸವಣ್ಣನಿಗೆ ನೈವೇದ್ಯಮಾಡಿ ಪೂಜಿಸಿ ತಮ್ಮ ಎಲ್ಲ ಎತ್ತುಗಳಿಗೂ ಆದರದಿಂದ ಪೂಜೆಮಾಡಿ ತಿನ್ನಲಿಕ್ಕೆ ಬೇಕಾದಷ್ಟು ಕೊಟ್ಟು, ತಾವು ತೋಟದಲ್ಲಿಯಾಗಲೀ ಹೊಲದಲ್ಲಾಗಲೀ ಮಡದಿ ಮಕ್ಕಳೊಂದಿಗೆ ಅಕ್ಕರದಿಂದ ಊಟಮಾಡುವ ಕಾಲವದು. ನಿರಭ್ರವಾದ ಪ್ರಶಾಂತ ಆಕಾಶ. ಆಕಾಶದಲ್ಲೆಲ್ಲ ತನ್ನ ಅಮೃತ ಕಿರಣಗಳೊಂದಿಗೆ ಹೊಳೆಯುತ್ತಿರುವ ಚಂದ್ರಮನು. ಭೂಭಾಗದಲ್ಲಿ ಅವರ್ಣನೀಯ ಸೃಷ್ಟಿಸೌಂದರ್ಯ. ಮುದಿ ಎಲೆಗಳು ಉದುರಿ ಹಸುರೆಲೆಗಳು ಬಂದು ಮುದಿ ಎಲೆಗಳನ್ನು ಅಣಕಿಸುವ ಕಾಲ. ಇಂಥ ಸಮಯದಲ್ಲಿ ಚಂದ್ರಮನು ತನ್ನ ಅಮೃತ ಕಿರಣಗಳನ್ನು ಚೆಲ್ಲಿ ಪ್ರಕಾಶಿಸುವಾಗಿನ ಸೊಬಗನು ಎಂತಹದು ಎಂದು ಬಣ್ಣಿಸಿ ಹೇಳಬೇಕೆ! ಅನುಭವಿಸಬೇಕು.

ಭಾರತದಲ್ಲಿ ಈ ಹಬ್ಬವು ಎಲ್ಲೆಡೆಯಲ್ಲಿ ಆಚರಿಸಲ್ಪಡುತ್ತಿದ್ದರೂ ಇದಕ್ಕೆ ಬೇರೆ ಬೇರೆ ನಾಡುಗಳಲ್ಲಿ ಬೇರೆ ಬೇರೆ ಹೆಸರುಗಳುಂಟು. ಇದಕ್ಕೆ ಸಂಬಂಧಪಟ್ಟ ಕಥೆಗಳು ಕೂಡ ಭಿನ್ನವಾಗಿವೆ. ಮಹಾರಾಷ್ಟ್ರದಲ್ಲಿ ಈ ಹಬ್ಬಕ್ಕೆ 'ಶಿಮ್ಗಾ'ಎಂದು ಕರೆಯುವದುಂಟು. ಬಂಗಾಲದಲ್ಲಿ ಇದಕ್ಕೆ 'ಡೋಲಜಾತ್ರೆ' ಅಥವಾ 'ಉಯ್ಯಾಲೆಹಬ್ಬ' ಎಂದು ಕರೆಯುವದುಂಟು. ಮಥುರಾದಲ್ಲಿ ರಾಕ್ಷಸಿಯಾದ ಪೂತನಿಯ ಸಂಹಾರದ ದಿನವೆಂದು ಆಚರಿಸಿ ಅಂದು ಶ್ರೀಕೃಷ್ಣನ ರಾಸಕ್ರೀಡೆಯ ಆಟದಂತೆ ಓಕುಳಿಯನ್ನು ಎಲ್ಲರ ಮೇಲೂ ಎರಚುವರು.

### ಹೋಳಿಕಾ ರಾಕ್ಷಸಿಯ ದಹನ.

ಈ ಹಬ್ಬಕ್ಕೆ ಹೋಳಿಹಬ್ಬ ಅನ್ನಲು ಕಾರಣವೇನು ಎಂಬುದು ಸೋಜಿಗದ ಸಂಗತಿಯಾಗಿದೆ. ಆದರೂ ಇದಕ್ಕೆ ಸಂಬಂಧಪಟ್ಟ ಕಥೆಯು ಈ ರೀತಿಯಾಗಿದೆ. ಹಿರಣ್ಯಕಶ್ಯಪುವಿಗೆ ಹೋಳಿಕಾ ಎಂಬ ತಂಗಿ ಇದ್ದಳಂತೆ. ಇವಳು ಅಗ್ನಿಯಿಂದ ಸುಡದಹಾಗೆ ಈಶ್ವರನಿಂದ ವರಪಡೆದಿದ್ದಳು. ತನ್ನ ಅಣ್ಣನಿಗೆ ಇವಳು ದುರ್ಬೋಧನೆ ಮಾಡಿ ತಾನು ಪ್ರಲ್ಹಾದನನ್ನು ತೊಡೆಯ ಮೇಲೆ ಕೂಡಿಸಿಕೊಂಡಾಗ ಬೆಂಕಿ ಹಾಕಲು ಹೇಳಿದ್ದಳು. ಆದರೆ ಅವಳು ಒಬ್ಬಳೇ ಇದ್ದಾಗ ಅಗ್ನಿ ಸ್ಪರ್ಶವಾದರೆ ಸುಟ್ಟು ಹೋಗುವದಿಲ್ಲವಾಗಿ ಈಶ್ವರನಿಂದ ವರವಿತ್ತು. ಇವಳು ತಪ್ಪು ಅರ್ಥಮಾಡಿಕೊಂಡು ಪ್ರಲ್ಹಾದನೊಡನೆ ಬೆಂಕಿ ಹೊತ್ತಿಸಿಕೊಂಡಿದ್ದರಿಂದ ತನ್ನ ಮೃತ್ಯುವನ್ನು ತಾನೇ ಕರೆದ ಹಾಗಾಯಿತು.

### ಹೊಯ್ಕೊಳ್ಳುವಬೇಕೆ?

ಈ ಹೋಳಿಕೆಯ ವಿಷಯವಾಗಿ ಇನ್ನೊಂದು ಕಥೆಯೂ ಇದೆ. ಈ ರಾಕ್ಷಸಿಯು ಪ್ರತಿನಿತ್ಯ ಸಣ್ಣ ಮಕ್ಕಳನ್ನು ತಿನ್ನುತ್ತಿದ್ದಳಂತೆ. ದ್ವಾರಕೆಯ ಜನರೆಲ್ಲ ಈ ದೂರನ್ನು ಕೃಷ್ಣನಿಗೆ ಹೇಳಿದರು. ಕೃಷ್ಣನು ಬಾಲಕನ ವೇಷವನ್ನು ತಾಳಿದನಂತೆ. ಎಂದಿನಂತೆ ಹೋಳಿಕೆಯು ಬಾಲಕನ ರೂಪದಲ್ಲಿದ್ದ ಕೃಷ್ಣನನ್ನು ನುಂಗಲು ಪ್ರಯತ್ನಿಸಿದಳು. ಕೃಷ್ಣನು ಚಾಣಾಕ್ಷರೀತಿಯಿಂದ ರಾಕ್ಷಸಿಯನ್ನು ಸೀಳಿಕೊಂದನು. ದ್ವಾರಕಾ ಪಟ್ಟಣದವರು ಅಂದು ಆನಂದದಿಂದ ಶ್ರೀಕೃಷ್ಣನನ್ನು ಸ್ತುತಿಸಿದರು. ಬಾಲಕರೆಲ್ಲರೂ ಕುಳ್ಳುಕಟ್ಟಿಗೆಗಳನ್ನು ಸಿದ್ಧಪಡಿಸಿ ರಾಕ್ಷಸಿಯ ಶವವನ್ನು ಅದರ ಮೇಲೆ ಇರಿಸಿ ಬೆಂಕಿಕೊಟ್ಟು ಆನಂದ ಚಕ್ಷುಗಳಿಂದ ನೋಡುತ್ತ ಕುಣಿದಾಡ ಹತ್ತಿದರು. ಆನಂದದ ಅತಿರೇಕವು ಶಂಖನಾದದಲ್ಲಿ ಪರಿಣಮಿಸಿತು.

ಈ ದುಷ್ಟ ರಾಕ್ಷಸಿ ಹೋಳಿಕೆ ಭಸ್ಮವಾದ ಸಂತೋಷಾರ್ಥವಾಗಿ ಹೋಳಿ ಹುಣ್ಣಿಮೆಯನ್ನು ಆಚರಿಸುವರೆಂದು ಹೇಳುವ ವಾಡಿಕೆಯುಂಟು. ಹೋಳಿಕೆಯ ದಹನವಾದ ನಂತರ ಆ ಭಸ್ಮವನ್ನು ಎಲ್ಲರೂ ಮೈಮೇಲೆ ಎರಚಿಕೊಳ್ಳುವರು. ಇದರಿಂದ ಒಳ್ಳೆಯದಾಗುವದೆಂದು ಕೆಲವರ ನಂಬಿಕೆ. ಹೀಗೆ ಇಂದು ಈ ಹಬ್ಬವನ್ನು ಆಚರಿಸುವಾಗ ಹೋಳಿಕೆಯ ಪ್ರತಿಮೆಯನ್ನಾಗಲೀ ಅಥವಾ ಅವಳ ಸಂಕೇತವೆಂದು ಯಾವದಾದರೊಂದು ವಸ್ತುವನ್ನಾಗಲಿ ನಿಲ್ಲಿಸಿ ಅದಕ್ಕೆ ಬೆಂಕಿಹಚ್ಚಿ ರಾಕ್ಷಸಿಯು ಸತ್ತದಿವಸವೆಂದು ಆನಂದದಿಂದ ಬೊಬ್ಬೆಕುಟ್ಟಿ ಹಲಿಗೆ ಬಾರಿಸುವದುಂಟು. ಹೀಗೆ ಒಂದು ದೃಷ್ಟಿಯಲ್ಲಿ ಇದೊಂದು ಆನಂದದ ಗಳಿಗೆಯ ಹಬ್ಬವೆಂದರೆ ತಪ್ಪಾಗಲಿಕ್ಕಿಲ್ಲ.

### ಪಾರ್ವತೀ ಪರಮೇಶ್ವರರ ಮದುವೆ

ಪ್ರಪಂಚದ ಮಾತಾಪಿತೃಗಳೆನಿಸಿದ ಪಾರ್ವತೀ ಪರಮೇಶ್ವರರ ಮದುವೆಯ ಪೂರ್ವಸಿದ್ಧತೆ ಕಾಮದಹನದ ಪ್ರಸಂಗ. ಈ ಕಥೆಯನ್ನು ಕಾವ್ಯವಾಣಿಯಿಂದ ಮೊದಲು ಹಾಡಿದವನು ಅಮರ ಕವಿ ಕಾಳಿದಾಸನು. ಈ ಕಥೆಯನ್ನು ಅನಾದಿ ಕಾಲದಿಂದ ಜನರು ಕೇಳುತ್ತ ಬಂದಿರಬೇಕು. ಅದನ್ನೆ ಕಾಳಿದಾಸನು ಮೂಲವಾಗಿಟ್ಟುಕೊಂಡು ಕುಮಾರಸಂಭವವನ್ನು ರಚಿಸಿರಬಹುದು. ಬಹುತರ ಎಲ್ಲ ಪುರಾಣಗಳು ಕಾಳಿದಾಸನಿಂದ ಈಚೆಯವೆಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಮನ್ಮಥನ ವಿಷಯದಲ್ಲಾಗಲೀ ಪಾರ್ವತೀ ಪರಮೇಶ್ವರರ ವಿವಾಹದ ವಿಷಯದಲ್ಲಾಗಲೀ ಕಥೆಯು ಹೆಚ್ಚು ಕಡಿಮೆ ಒಂದೇ ಇದ್ದರೂ ಹೇಳುವ ರೀತಿ ಮಾತ್ರ ಬೇರೆ ಬೇರೆಯಾಗಿದೆ. ಪಾರ್ವತೀ ಪರಮೇಶ್ವರರ ಅಥವಾ ಷಣ್ಮುಖನ ಜನನದ ಅವಶ್ಯಕತೆಯ ಪೂರ್ವಪೀಠಿಕೆಯು ಇಂತಿದೆ:

ದಕ್ಷಪ್ರಜಾಪತಿಯು ತನ್ನ ಹೆಣ್ಣುಮಕ್ಕಳಲ್ಲಿ ಒಬ್ಬಳಾದ ಸತೀದೇವಿಯನ್ನು ಶಿವನಿಗೆ ಮದುವೆಮಾಡಿ ಕೊಟ್ಟಿದ್ದನು. ದೇವಸಭೆಯಲ್ಲಿ ಅಳಿಯನಾದ ಶಿವನು ತನಗೆ ಮರ್ಯಾದೆ ಮಾಡಲಿಲ್ಲವೆಂದು ದಕ್ಷನು ಶಿವನನ್ನು ಹಳಿದು ನಿರೀಶ್ವರ ಯಾಗ ಮಾಡತೊಡಗಿದ. ಸತೀದೇವಿಗೆ ಆಮಂತ್ರಣವಿರದಿದ್ದರೂ ತನ್ನ ತಂದೆಯ ಮನೆಯೆಂಬ ಭಾವನೆಯಿಂದ ಅಲ್ಲಿಗೆ ಬಂದಳು. ಯಾಗಶಾಲೆಯಲ್ಲಿ ಶಿವನಿಗೆ ಅರ್ಘ್ಯ ಕೊಡುವ ಹೊತ್ತಿನಲ್ಲಿ ದಕ್ಷನು ಅದನ್ನು ನಿಲ್ಲಿಸಿದನು. ತನಗಾದ ಅಪಮಾನವನ್ನೂ ತನ್ನ ಪತಿಗಾದ ಅಪಮಾನವನ್ನೂ ತಾಳಲಾರದೆ ಸತೀದೇವಿಯು ಯೋಗಾಗ್ನಿಯಲ್ಲಿ ದೇಹತ್ಯಾಗ ಮಾಡಿದಳು. ಶಿವನು ಈ ಸಮಾಚಾರವನ್ನು ಕೇಳಿ ವೀರಭದ್ರನ ಮೂಲಕ ದಕ್ಷಯಜ್ಞವನ್ನು ಧ್ವಂಸಮಾಡಿಸಿ ಅವನ ಕುತ್ತಿಗೆಯನ್ನು ಕತ್ತರಿಸಿ ಯಜ್ಞಕುಂಡದಲ್ಲಿ ಬಿಸುಟಬಿಟ್ಟ. ದೇವತೆಗಳು ಮೊರೆಇಡಲು ಶಿವನು ಕರುಣೆಯಿಂದ ಟಗರಿನ ಕುತ್ತಿಗೆಯನ್ನು ತರಿಸಿ ದಕ್ಷನ ಮುಂಡಕ್ಕೆ ಜೋಡಿಸಿ ಅವನನ್ನು ಬದುಕಿಸಿದ. ಸತೀದೇವಿಯು ಯಜ್ಞಕುಂಡದಲ್ಲಿ ಆಹುತಿಯಾಗಿ ತಿರುಗಿ ಪಾರ್ವತೀ ಎಂಬ ಹೆಸರಿನಿಂದ ಗಿರಿರಾಜನ ಮಡದಿಯಾದ ಮೇನಾದೇವಿಯ ಹೊಟ್ಟೆಯಲ್ಲಿ ಹುಟ್ಟಿದಳು. ಇತ್ತ ಶಿವನು ಸತೀದೇವಿಯ ವಿಯೋಗದ ನಂತರ ಎಲ್ಲವನ್ನೂ ತೊರೆದು ಘೋರ ಸಮಾಧಿಗ್ರಸ್ತನಾಗಿ ಕೈಲಾಸ ಪರ್ವತದಲ್ಲಿ ಕುಳಿತುಬಿಟ್ಟ.

### ತಾರಕಾಸುರನ ವಧೆ

ಇತ್ತ ತಾರಕಾಸುರನೆಂಬ ರಾಕ್ಷಸನು ಪರಾಕ್ರಮದಿಂದ ತ್ರಿಭುವನವನ್ನು ಗೆದ್ದು ದೇವತೆಗಳಿಗೆ ತೊಂದರೆ ಕೊಡಹತ್ತಿದ್ದ. ಅವನು ತಪಸ್ಸು ಮಾಡಿ ಯಾರಿಂದಲೂ ಅಂದರೆ ಅಲ್ಲಿಯವರೆಗೆ ಇದ್ದ ಐದು ಮುಖದ ಯಾವ ವ್ಯಕ್ತಿಯಿಂದಲೂ ಹತನಾಗದ ಹಾಗೆ, ಬ್ರಹ್ಮನಿಂದ ವರ ಪಡೆದುಕೊಂಡಿದ್ದ. ದೇವತೆಗಳೆಲ್ಲರೂ ಇವನ ತೊಂದರೆಯನ್ನು ಸಹಿಸಲಾರದೆ ಬ್ರಹ್ಮನಿಗೆ ಬೇಡಿಕೊಂಡರು. ಬ್ರಹ್ಮನು ವಿ

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

**ಪಥ್ಯ:**—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

**ಆಯುರ್ವೇದ ಔಷಧಾಲಯ, ಗದಗ-ಸಿಟಿ.**

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಹಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ಕಮಲಪ್ಪಾ, ಕೆಮಿಸ್ಟ, ಹಾವೇರಿ, ಬ್ಯಾಡಗಿ

**ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ**

**೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ**

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಗಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

**ಆಯುರ್ವೇದ ಔಷಧಾಲಯ. ಗದಗ.**

### ನೋಟೀಸು

ಶಿರ್ವಾ ಪಂಚಾಯತ ಬೋರ್ಡ ಪ್ರೆಸಿಡೆಂಟರಿಂದ:—

ಎಲ್ಲಾ ಜನರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ:—

ನಮ್ಮ ಶಿರ್ವಾ ಪಂಚಾಯತ ಬೋರ್ಡ ಅಧಿಕಾರಕ್ಕೆ ಒಳಪಟ್ಟ ಮಂಚಕಲ್ಲು ವಾರಸಂತೆ ಮಾರ್ಕೆಟಿನಲ್ಲಿಯೂ, ದಿನಚರಿ ಮಾರ್ಕೆಟಿನಲ್ಲಿಯೂ 1950-'51ನೇ ವರ್ಷಕ್ಕೆ ಅಂದರೆ 1-4-'50ರಿಂದ 31-3-51ರ ವರೆಗೆ ವಸೂಲು ಮಾಡುವ ಹಕ್ಕನ್ನೂ, ಲೈಸನ್ಸ ಪಡೆದ ಕೋಣೆಗಳನ್ನು 1-4-'50ರಿಂದ ಮೂರು ವರುಷದ ವ್ಯಾಪಾರ ಮಾಡುವ ಹಕ್ಕನ್ನು ಬಾಡಿಗೆಗಾಗಿಯೂ ತಾ. 16-3-'50ನೇ ಗುರುವಾರ ಸಾಯಂಕಾಲ ಗಂಟೆ 3ಕ್ಕೆ ಪಂಚಾಯತ ಬೋರ್ಡು ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡೋಣಾಗುವುದು. ಇತರ ಎಲ್ಲಾ ಶರ್ತಗಳನ್ನು ಪಂಚಾಯತ ಬೋರ್ಡು ಆಫೀಸಿನಲ್ಲಿ ತಿಳಿಯಬಹುದು.

(sd) **S. Annaya Hegde,**
President, Panchayat Board,
Shirva, S. K.

Shirva
1-3-'50.

**ಅಮೃತಾಂಜನ**

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

REGD

ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ

**ಅಮೃತಾಂಜನ ಲಿಮಿಟೆಡ್**

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಚಾರಮಾಡಿ ಶಿವನಿಂದ ಜನಿಸಿದ 'ಕುಮಾರ' (ಷಣ್ಮುಖ)ನ ಹೊರತು ತಾರಕಾಸುರನನ್ನು ಗೆಲ್ಲುವದು ಅಸಾಧ್ಯವಾದುದರಿಂದ ಶಿವನ ತಪಸ್ಸನ್ನು ಕೆಡಿಸಿ ಅವನನ್ನು ಪಾರ್ವತಿಯೊಡನೆ ಕೂಡಿಸುವದೊಂದೇ ಉಪಾಯವೆಂದು ಸೂಚಿಸಿದ. ದೇವತೆಗಳೆಲ್ಲರೂ ವಿಚಾರಮಾಡಿ ಈ ಕೆಲಸಕ್ಕೆ ಮನ್ಮಥನೇ ಯೋಗ್ಯನೆಂದು ಅವನನ್ನು ಕರೆಕಳುಹಿದರು.

ಇತ್ತ ಪಾರ್ವತಿಯು ಮೇನಾದೇವಿಯಿಂದ ಜನಿಸಿ ಕ್ರಮೇಣ ಪ್ರೌಢಾವಸ್ಥೆಯನ್ನು ಹೊಂದುವಳು. ಅವಳ ವಿವಾಹದ ವಿಷಯವಾಗಿ ಮಾತುಕತೆ ನಡೆದು ನಾರದನನ್ನು ವಿಚಾರಿಸಲು ನಾರದನು ಶಿವನೇ ಈಕೆಗೆ ತಕ್ಕ ವರನೆಂದು ಹೇಳಿ ಅವನೆಡೆಗೆ ಆಕೆಯನ್ನು ಕಳುಹಿಸಲಿಕ್ಕೆ ಹೇಳುವನು. ಪಾರ್ವತಿಗೆ ಪೂರ್ವಜನ್ಮದ ಜ್ಞಾನೋದಯದಿಂದ ಶಿವನನ್ನೇ ಮದುವೆಯಾಗಬೇಕೆಂದು ಇಚ್ಛೆಪಟ್ಟು ಕೈಲಾಸ ಪರ್ವತಕ್ಕೆ ಹೋಗುವಳು. ಶಿವನನ್ನು ನಿತ್ಯಲೂ ಆರಾಧಿಸುತ್ತ ಕಾಲ ಕಳೆಯುವಳು.

### ಕಾಮಬಾಣ

ಹೀಗಿರುವಾಗ ದೇವೇಂದ್ರನ ಅಪ್ಪಣೆಯ ಮೇರೆಗೆ ಕಾಮನು ಶಿವನ ತಪೋಭಂಗ ಮಾಡಲು ಬಂದು ತನ್ನ ಕುಸುಮಾಯುಧಗಳ ವೃಷ್ಟಿ ಸುರಿಸುವನು. ಶಿವನು ಜಾಗೃತನಾಗಿ ಅನುರಾಗದಿಂದ ಪಾರ್ವತಿಯೆಡೆಗೆ ನೋಡುವನು. ಕ್ಷಣದಲ್ಲಿಯೇ ಈ ಬದಲಾವಣೆಗೆ ಕಾರಣರಾರೆಂದು ಜ್ಞಾನದೃಷ್ಟಿಯಿಂದ ನೋಡಿ ತನ್ನ ಮೂರನೆಯ ಕಣ್ಣು ತೆರೆದು ಕಾಮನನ್ನು ಸುಟ್ಟುಬಿಡುವನು. ಮತ್ತು ಅಲ್ಲಿಂದ ಹೋಗಿಬಿಡುವನು. ಮುಂದೆ ಪಾರ್ವತಿಯು ಕಠೋರ ತಪಶ್ಚರ್ಯವನ್ನು ಆಚರಿಸಿ ಶಿವನು ಮೆಚ್ಚುವಂತೆ ಮಾಡುವಳು. ಕೊನೆಗೆ ಪಾರ್ವತೀ ಪರಮೇಶ್ವರರ ವಿವಾಹವಾಗುವದು. ಆಗ ಪಾರ್ವತಿಯು ತಾನು ಕಾಮನ ಹೆಂಡತಿಗೆ ವಚನ ಕೊಟ್ಟ ಪ್ರಕಾರ ಕಾಮನಿಗೆ ಜೀವದಾನ ಮಾಡಬೇಕೆಂದು ಬಿನ್ನವಿಸುವಳು. ಶಿವನು ಮನ್ನಣೆಯಿತ್ತು ಜೀವದಾನ ಮಾಡುವನು. ಆದರೆ ಅವನು ಅನಂಗನಾಗಿಯೇ ಉಳಿಯುವನು. ಮುಂದೆ ಷಣ್ಮುಖನ ಜನನವಾದ ನಂತರ ತಾರಕಾಸುರನು ಹತನಾಗುವನು.

ಕಾಮನ ಪ್ರಯತ್ನವಿರದಿದ್ದರೆ ಈ ಕಠಿಣ ಪ್ರಶ್ನೆಯನ್ನು ಬಿಡಿಸುವದೇ ಅಸಾಧ್ಯವಾಗಿತ್ತು. ಕಾಮನಿಗೆ ಎಲ್ಲ ದೇವತೆಗಳೂ ದೇವೇಂದ್ರನೂ ಬೇಡಿಕೊಂಡರು. ಶಿವನ ತಪೋಭಂಗ ಮಾಡುವದು ಅಂಗಜನಾದ ಕಾಮನಿಗೂ ಸಾಧ್ಯವಿಲ್ಲವೆಂಬ ಮಾತು ಗೊತ್ತಿತ್ತು. ಆದ್ದರಿಂದ ಅದೊಂದು ಕೆಲಸವನ್ನು ಬಿಟ್ಟು ಮತ್ತಾವುದನ್ನಾದರೂ ಮಾಡುವೆನೆಂದು ಸ್ಪಷ್ಟವಾಗಿ ತಿಳಿಸಿಬಿಟ್ಟ. ಕಾಮನಿಗೆ ಇದು ಸಣ್ಣ ವಿಷಯ ಎಂದು ಅಹಂಕಾರವಿತ್ತು. ಆದ್ದರಿಂದ ಅವನು ಗರ್ವದಿಂದ ಹೋದ. ಮತ್ತು ತನ್ನ ನಾಶಕ್ಕೆ ತಾನೇ ಕಾರಣನಾದ ಎಂದೂ ಕಾಮನನ್ನು ಒಬ್ಬ ಅಭಿಮಾನಿ ಎಂದೂ ಚಿತ್ರಿಸಿದ್ದೂ ಉಂಟು. ಸಾಮಾನ್ಯವಾಗಿ ಜನರಲ್ಲಿ ಇಂದಿಗೂ ಕಾಮನ ವಿಷಯಕ್ಕೆ ಅದೇ ಅಭಿಪ್ರಾಯವನ್ನು ತಾಳಿದ್ದಾರೆ. ಹರಿಹರನು 'ಗಿರಿಜಾ ಕಲ್ಯಾಣದಲ್ಲಿ' ಕಾಮನು ಒಬ್ಬ ಮಹಾತ್ಯಾಗಿ, ಸಿಗ್ಗೆ, ನಿಜ ಪ್ರೇಮದಿಂದಲೇ ಸಿಲುಕಾಗಿ ತನ್ನ ಆತ್ಮಾರ್ಪಣ ಮಾಡಲು ಮುಂದೆ ಬಂದವನು ಎಂದು ಸ್ಪಷ್ಟ ಹೇಳಿದ್ದಾನೆ. ದೇವೇಂದ್ರನು ಕಾಮನಿಗೆ ತಾನು ಶಿವನ ತಪೋಭಂಗದ ಕಾರ್ಯವನ್ನು ಕೈಕೊಳ್ಳಬೇಕೆಂದು ಹೇಳಿದಾಕ್ಷಣವೇ ಮನ್ಮಥನು ಅದು ತನ್ನ ಸರ್ವನಾಶವೆಂದು ಅರಿಯುತ್ತಾನೆ ಮತ್ತು

"ಹರಿಯಲ್ಲಿಗೆ ತಮಮಂ ಕೇ।
ಸರಿಯಲ್ಲಿಗೆ ಕರಿಯನಭ್ರಶಿಖಿಯಲ್ಲಿಗೆ ಕೇ॥
ಉರಗನನಟ್ಟುವ ತೆರದಿಂ।
ಹರನಲ್ಲಿಗೆ ತಂದೆ ಕಳಿಪುವರೆ ನೀವೆನ್ನಂ॥"

ಎಂದು ಪ್ರಶ್ನೆ ಮಾಡುತ್ತಾನೆ. ಆ ಮೇಲೆ ಕಾಮನಿಗೆ ಭೀಹಾಕಿ ನಿನ್ನ ಸೌಖ್ಯವನ್ನಷ್ಟೇ ನೀನು ನೋಡುತ್ತಿ. ತ್ರಿಲೋಕವು ನಾಶವಾಗುತ್ತಿರುವಾಗ ನಿನ್ನ ಪ್ರಾಣದ ಸಲುವಾಗಿ ಇಷ್ಟು ಬೆಲೆ ಕೊಡಬೇಕೇ "ನಿನ್ನಿಂದ ಸಕಲ ಜನಂ ಸುಖದಿಂದಿರ್ಪೊಡೆ ಹರಣದೊಂದು ಹುರುಳೇನದುವರೆ" ಎಂದು ಮರು ಸವಾಲು ಹಾಕುತ್ತಾನೆ. ಮನಸ್ಸು ಗಟ್ಟಿಮಾಡಿ ಕಾಮನು **"ಇಂದು ನೂರುತೀನಿತ್ತೆಂದು"** ಎಡಗೈಯಲ್ಲಿ ಜೀವ ಹಿಡಿದು ಕಾರ್ಯವನ್ನು ಕೈಕೊಳ್ಳಲು ಸಿದ್ಧನಾಗುತ್ತಾನೆ ಕಾಮನು ತನ್ನ ಸುಪ್ರಸಿದ್ಧ ಚತುರಂಗ ಬಲವನ್ನೂ ಮಂತ್ರಿ ಸೇನಾನಾಯಕರಾದ ವಸಂತಚಂದ್ರಮರನ್ನೂ ಬರಮಾಡಿಕೊಳ್ಳುವನು ಅವರೆಲ್ಲರೂ ಶಿವನಲ್ಲಿ ತಂತಮ್ಮ ಪರಾಕ್ರಮವನ್ನು ತೋರಿಸಿ ಆತನಲ್ಲಿ ಗೆಲುವದು ಸಂದೇಹ ಬೇಡ ಎಂದು ಎದೆ ತಟ್ಟಿ ಹೇಳುವರು. ಹೀಗೆ ಕಾಮನು ತನ್ನ ಪರಿವಾರದೊಡನೆ ಬರುತ್ತಿರಲು ಆತನ ಬರವಿನಿಂದ ಶಿವನ ತಪೋವನದ ಪಶುಪಕ್ಷಿಗಳಲ್ಲಿಯೂ ಪರಿವಾರದಲ್ಲಿಯೂ ಕಾಮ ಸಂಚಾರವಾಗುತ್ತದೆ. ಈ ಪರಿವರ್ತನವನ್ನು ಕಂಡು ಶಿವನ ಸಂಬಳಿಗೆಯ ಆಳಾದ ನಂದೀಶ್ವರನು ಕೆರಳಿ ಸುಮ್ಮನೆ ಒಮ್ಮೆ ನೋಡಲು ಕಾಮನೂ ಅವನ ಪರಿವಾರವೂ ಎತ್ತ ಓಡಿ ಹೋದರೋ ತಿಳಿಯದಾಯಿತು. ಕಾಮನು ಎದೆಗುಂದುವನು. ಈ ಹೊತ್ತಿಗೆ ಸರಿಯಾಗಿ ಪಾರ್ವತೀದೇವಿಯು ಹೂಗಳೊಂದಿಗೆ ಹೊಸ ಆನಂದದಿಂದ ಎಂದಿನಂತೆ ಶಿವಪೂಜೆಗೆ ಬರುವದನ್ನು ಕಂಡು ಯೋಗ್ಯ ಸಮಯವೆಂದೆಣಿಸಿ ಶಿವನ ಮೇಲೆ 'ಉನ್ಮಾದನ'ನೆಂಬ ಒಂದು ಬಾಣವನ್ನು ಬಿಡುವನು. ಅದು ಶಿವನನ್ನು ಮುಟ್ಟಲಾರದೆ ಹಿಂತಿರುಗಿ ಬರುವದನ್ನು ಕಂಡು ಮದನ, ಮೋಹನ, ಸಂತಾಪ, ವಶೀಕರಣ ಎಂಬ ಹೆಚ್ಚಿನ ಉಗ್ರ ಬಾಣಗಳನ್ನು ಬಿಡುವನು. ಅವೆಲ್ಲವುಗಳು ನಿರುಪಯೋಗವಾಗುವವು. ಈ ವಿಚಿತ್ರ-ಸಂಗತಿಯನ್ನು ನೋಡುತ್ತಿದ್ದ ನಾರದನು "ಎತ್ತಣ ಕಾಮ, ಎತ್ತಣ ಶಿವ, ಎತ್ತಣ ಬಾಣ" ಎಂದು ಮದನನನ್ನು ಅಣಕವಾಡುವನು. ಈ ವೇಳೆಗೆ ಸರಿಯಾಗಿ ಪಾರ್ವತಿಯು ಶಿವನನ್ನು ನಟ್ಟ ದೃಷ್ಟಿಯಿಂದ ನೋಡುತ್ತಿರುವದನ್ನು ಕಂಡು ಕಾಮನು ಹುರುಪುಗೊಂಡು ತನ್ನ ಐದೂ ಅಂಬುಗಳನ್ನು ಒಮ್ಮೆಲೆ ಶಿವನ ಮೇಲೆ ಬಿಡುವನು.

ಶಿವನು ಕಣ್ತೆರೆದು ಪಾರ್ವತಿಯನ್ನು ವಿಹ್ವಲಚಿತ್ತನಾಗಿ ನೋಡುವನು. ಕೂಡಲೆ ಈ ಸ್ಥಿತಿಗೆ ಕಾರಣವೇನೆಂದು ಹುಡುಕುತ್ತ ಎಡಗಡೆ ನಿಂತಿದ್ದ ಕಾಮನನ್ನು ನಸುಗೋಪದಿಂದ ನೋಡಲು ಆತನ ಹಣೆಗಣ್ಣುರಿಯಿಂದ ಕಾಮನು ಬೆಂದುಹೋಗುವನು. ಕೂಡಲೆ ಅವನ ಭಸ್ಮವನ್ನು ಮೈಗೆ ಸವರಿಕೊಂಡು ಪಾರ್ವತಿಯನ್ನು ಗಣಿಸದೆ ಅಂತರ್ಧಾನನಾಗುವನು.

ಈ ರೀತಿಯಿಂದ ನೋಡಲಾಗಿ ಬಲಿದಾನ ಮಾಡಿದ ಕಾಮನು ತ್ಯಾಗ ಮೂರ್ತಿಯಾಗಿದ್ದಾನೆ. ಒಂದು ಉಚ್ಚ ಧ್ಯೇಯವನ್ನಿಟ್ಟುಕೊಂಡು ಅದರ ಸಲುವಾಗಿ ಹೆಣಗಾಡುವವರು ಕಾಮನಿಂದ ಪಾಠ ಕಲಿಯಬೇಕು. ಪ್ರಪಂಚದ ಹಿತದ ಸಲುವಾಗಿ ತನ್ನ ಹಿತವನ್ನು ಬಿಟ್ಟು ಕೊಟ್ಟು ಮೃತ್ಯುವಿನ ದವಡೆಯಲ್ಲಿ ನುಗ್ಗಿದ ಕಾಮನು ಸಾಮಾನ್ಯನಲ್ಲ. ಅಂತಲೇ ಅವನು ಕೀರ್ತಿಶೇಷನಾಗಿ ಉಳಿದಿದ್ದಾನೆ.

### ತಾತ್ವಿಕ ವಿಚಾರ

ತಾತ್ವಿಕ ದೃಷ್ಟಿಯಿಂದ ನೋಡಲಾಗಿ ಕಾಮನ ಹಬ್ಬದ ಮಹತ್ವವು ಇನ್ನೂ ಹೆಚ್ಚಿನ. ಪರಮಾತ್ಮನು ಲೋಕ ಸೃಷ್ಟಿಗಾಗಿ ಇಬ್ಭಾಗವಾದನು. ಅವನ ಒಂದು ಭಾಗವು ನರ; ಇನ್ನೊಂದು ನಾರಿ. ಈ ಅರ್ಧನಾರೀಶ್ವರನ ರೂಪವೇ ಲೌಕಿಕ ಅರ್ಥದಲ್ಲಿ ಪಾರ್ವತೀ ಪರಮೇಶ್ವರರು. ಅವರ ಮಿಲನವು ಸ್ವಾಭಾವಿಕವು. ಇಲ್ಲಿ ಕಾಮನು ಸಹಾಯಕನಾದನು. ಆದರೆ ಈ ಅನುರಾಗವು ದೇವ-ಭಕ್ತರ ಸಂಬಂಧವೆಂಬುದನ್ನು ಮರೆಯತಕ್ಕದ್ದಲ್ಲ. ರಾಜಸ ಪ್ರೇಮ ಬಿಟ್ಟು ಸಾತ್ವಿಕ ಪ್ರೇಮದಿಂದ ಗೌರಿಯು ಹರನೊಡನೆ ಕೂಡಿದಳು. ಸಾತ್ವಿಕ ಭಕ್ತಿಯಿಂದ ಯಾವ ಜೀವವಾದರೂ ಶಿವನೊಡನೆ ಸಾಮರಸ್ಯವನ್ನು ಪಡೆಯಬಹುದು. ಹೀಗೆ ಅಹಿತಕ್ಕೆ ಕಾರಣವಾದ ಕಾಮನನ್ನು ತ್ಯಜಿಸಿ ಪ್ರೇಮವನ್ನು ಬೆಳೆಸಬೇಕು. ವಿಶೇಷವಾಗಿ ಕಾಮನ ಕೂರಂಬುಗಳಿಗೆ ಗುರಿಯಾಗುವ ಮುನಿಜನರು ಈ ವಸಂತಮಾಸದಲ್ಲಿ ಹೆಚ್ಚಾದ ಕಾಮನ ಆಟ್ಟಳಿಯನ್ನು ತಡೆಯಬೇಕಾಗುತ್ತದೆ. ಹೀಗೆ ಮುನಿಗಳು ಕಾಮನನ್ನು ಸುಡುವ ಕಾಲವಿದು.

ಅದೇನೇ ಇರಲಿ, ಇಂದು ಕಾಮದಹನದ ಹಬ್ಬವೆಂದರೆ ಅವನ ಪ್ರತಿಮೆಯನ್ನು ಕೂಡಿಸಿ ಐದು ದಿನಗಳ ನಂತರ ಸುಟ್ಟು ಶಂಖವಾದ್ಯ ಮಾಡುವ ಪರಿಪಾಠ ಬಂದಿದೆ. ಲೋಕಹಿತದ ಸಲುವಾಗಿ ಆತ್ಮಾರ್ಪಣಮಾಡಿದ ಕಾಮನನ್ನು ಸುಟ್ಟನಂತರ ಆನಂದೋತ್ಸಾಹಗಳಿಂದ ಶಂಖವಾದ್ಯವನ್ನು ಮಾಡುವ ಈ ಪರಿಪಾಠವು ಎಷ್ಟರಮಟ್ಟಿಗೆ ಒಳ್ಳೇದು ಎಂಬುದನ್ನು ವಿಚಾರಿಸುವ ಮಾತಾಗಿದೆ.

ಮೊನ್ನೆ ಮೊನ್ನೆಯವರೆಗೆ ಕಾಮ ದಹನದ ಹಬ್ಬವೆಂದರೆ ಇದೊಂದು ಊರ ಶಾಂತಿಭಂಗದ ಹಬ್ಬವಾಗಿತ್ತು. ಪ್ರತಿಜಾತಿಯವರು ತಮ್ಮ ಜಾತಿಯ ಕಾಮನೆಂದು ಕೂಡಿಸಿ ಕಾಲು ಕೆದರಿ ಮತ್ತೊಬ್ಬರ ಕೂಡೆ ಜಗಳಾಡಿ ತಮ್ಮ ಈರ್ಷೆಯನ್ನು ತೀರಿಸಿಕೊಳ್ಳುವ ನಿಮಿತ್ತದ ಹಬ್ಬವಾಗಿತ್ತು. ಈ ಹಬ್ಬದಲ್ಲಿ ಏನು ಮಾಡಿದರೂ ನಡೆಯುತ್ತಿದೆ ಎಂದು ಸೊಗಸಾಕಿ ಸಲ್ಲದ ಕಾರ್ಯಗಳನ್ನು ಮಾಡುತ್ತ ಬಂದಿದ್ದಾರೆ ಇಂದು ಸುದೈವದಿಂದ ಸರಕಾರವು ಕೆಲವು ಕಟ್ಟುನಿಟ್ಟುಗಳನ್ನು ಹಾಕಿದೆ. ಈ ಹಬ್ಬದ ನಿಜವಾದ ಅರ್ಥವನ್ನು ತಿಳಿದುಕೊಂಡು ಅದಕ್ಕೆ ತಕ್ಕಂತೆ ಆಚರಿಸುವದರಲ್ಲಿ ಶ್ರೇಯಸ್ಸಿದೆ. ಗಂಡಸರ ಹಬ್ಬವೆಂದರೆ ಈ ಹಬ್ಬವೆಂದು ಹೇಳುವದೂ ಉಂಟು. ಒಂದು ದೃಷ್ಟಿಯಿಂದ ನೋಡಿದರೆ ರಾಷ್ಟ್ರವು ಹೆಮ್ಮೆಪಡುವ ಬೆಡಗಿನ ಹಬ್ಬಗಳಲ್ಲಿ ಇದೊಂದು "ಹೋಳಿಯಾಡದಿದ್ದರೆ ಹೋಳಿಗೆ ತಿನ್ನಬಾರದೇ?" ಎಂದ್ಯಾಗಾದೆಮಾತುಂಟು. "ಹೊಯ್ಕೊಂಡ ಬಾಯಿಗೆ ಹೋಳಿಗೆ ತುಪ್ಪ" ಎಂಬ ನಾಣ್ಣುಡಿಯೂ ಕೆಲವೆಡೆ ಉಂಟು. ಹೋಳಿಗೆಯನ್ನು ತಿನ್ನಬೇಕು ಮತ್ತೊಬ್ಬರನ್ನು ಹೊಯ್ದು ಹೋಳಿಗೆಯಂತೆ ಮಾಡಬಾರದು.

(ಕ. ನ್ಯೆ)


BUY INDIAN! ENCOURAGE INDIAN INDUSTRY!

ಆಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD

Highly perfumed and medicated, worth using daily by one and all, keeps hair black and relieves head-ache etc.

TRADE MARK

Manufactured by:-

Swadeshi Oushadhi Bhandara (Regd.)

KUNJAL P. O. Brahmavar, S. K.



"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:- ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ, ಇವರ

ನವಜೀವಾತು ಎಂಬ ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೂಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ! ಯಂ. ಸಿ. ಶಾಸ್ತ್ರೀ, ಯಲ್. ಐ. ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಸ್ವಾಕಿಸ್ಟರು:—ಡಾ॥ ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.



ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹಠತಪ್ಪಿ ಋತುಸ್ರಾವವಾಗುವುದು. ಹಠೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ-ಬೆಲೆ; ರೂ 3-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

MRS. P. DEVEE, F. DS. (N. J.)
Tollygunge CALCUTTA,

ಸ್ವಾಕಿಸ್ಟರು: ಶಹಾಕಂಪೆನಿ, ಮಂಗಳೂರು.



ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.


EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd No. M 3618 | Estd. 1921 ಸ್ಥಾಪನೆ | 16—3—1950

LICENCE No. 31
Licensed to Post
without Prepayment

FOUNDER:
Sri. A. B. Shetty
Minister for Agriculture
& Veterinary

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30 ವಾರ ೨೯ | NAVAYUGA WEEKLY Post Box No. 22 UDIPI, S. K. | Vol 30 No. 29

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

# ಆತ್ಮಕ್ಕೆ ಶಾಂತಿ-ಎಲ್ಲಿದೆ?

ಸತ್ತವರ ಆತ್ಮಶಾಂತಿಗಾಗಿ ಪ್ರಾರ್ಥಿಸುವ ಮತ್ತು ವಿಧಿವಿಧಾನಗಳನ್ನು ಆಚರಿಸುವ ಸಂಪ್ರದಾಯವು ಪ್ರಾಯಶಃ ಲೋಕದ ಎಲ್ಲೆಡೆಯೂ ಎಲ್ಲಾ ಜನಾಂಗಗಳಲ್ಲೂ ಇದೆ. ಒಂದು ಜೀವವು ಇರುವಾಗ ಅದರ ಆಶೆ, ಬಯಕೆಗಳಾವುವಿದ್ದವೋ, ಅವುಗಳನ್ನು ಪೂರೈಸುವ ಮೂಲಕವೇ ಆ ಆತ್ಮಕ್ಕೆ ಶಾಂತಿಯನ್ನು ದೊರಕಿಸಿಕೊಡಬೇಕೆಂಬ ಭಾವನೆ ಸರ್ವಸಾಮಾನ್ಯವಾಗಿದೆ.

'ರಾಷ್ಟ್ರಪಿತನ ಆತ್ಮದ ಪ್ರೀತ್ಯರ್ಥವಾಗಿ' 'ಮಹಾತ್ಮಾಜೀ ಸ್ಮಾರಕವಾಗಿ' ಇಂದು ಭಾರತದಲ್ಲಿ ಎಲ್ಲೆಲ್ಲಿಯೂ ಸಣ್ಣದೊಡ್ಡ ಕ್ರಿಯೆ, ಕೃತಿ, ಪ್ರಾರ್ಥನೆ ಇತ್ಯಾದಿಗಳು ಕಂಡುಬರುತ್ತಿವೆ. ದಿವಂಗತ ದೇಶಭಕ್ತರೆಲ್ಲರಿಗೂ, ಅವರವರ ಯೋಗ್ಯತಾನುಸಾರವಾಗಿ ಆತ್ಮ ಶಾಂತಿ ಪ್ರಾರ್ಥನೆಗಳೋ, ಸ್ಮಾರಕಗಳೋ ಆಗಿವೆ. ಪತ್ರಿಕೆಯವರಂತೂ ಪರಲೋಕ ಸೇರಿದ '....ರ ಆತ್ಮಕ್ಕೆ ಶಾಂತಿಯನ್ನ' ಕೋರಿದಷ್ಟು ಅಂತಃಕರಣಪೂರ್ವಕ ಹಾಗೂ ಅಧಿಕ ಸಂಖ್ಯೆಯಲ್ಲಿ, ಈ ಲೋಕದಲ್ಲಿರುವವರಿಗಾಗಿ ಯಾವುದನ್ನೂ ಎಂದೂ ಬಯಸಿದ್ದಿಲ್ಲ. ಒಂದು ಕ್ಷಣ ಕಾಲದ ಶಾಂತಿಯಾದರೂ, ಯಾವೆಡೆಯಿಂದಲೂ ದೊರೆಯದಿದ್ದ ಒಂದು ಜೀವಕ್ಕೆ ಕೂಡಾ, ಸತ್ತೊಡನೆಯೇ ಶಾಂತಿಕೋರುವ ಹಿತೇಚ್ಛುಗಳು ಬಹಳ ಮಂದಿ ಮುಂದೆ ಬರುತ್ತಾರೆ.

ಜೀವಿತಕಾಲದಲ್ಲಿ ಕಡು ವೈರವಿದ್ದರೆ, ಅಂಥವರು ಸಂಬಂಧಿಕ ಸತ್ತೇ ಆ ಸಂಬಂಧವನ್ನು ಊರ್ಜಿತಕ್ಕೆ ತರಬೇಕಾಗುತ್ತದೆ. ಸತ್ತವರ ಕುರಿತಿದ್ದ ಎಲ್ಲಾ ವೈರಗಳನ್ನೂ ಬಿಟ್ಟು, ಅವರ ಆತ್ಮಶಾಂತಿಗಾಗಿ ನಡೆಯುವ ಉತ್ತರ ಕ್ರಿಯೆಗಳಲ್ಲಿ ಸಂಬಂಧಿಕರು ಭಾಗವಹಿಸುವುದಿದೆ. ಅಂತೂ ನಮ್ಮ ನಡುವೆ ಬಾಳಿಕೊಂಡಿರುವ ಇಡೀ ಮನುಷ್ಯನಿಗೆ ದೊರೆಯುವ ಶಾಂತಿಗಿಂತ ಅವನ 'ಆತ್ಮಕ್ಕೆ' ದೊರೆಯುವ ಶಾಂತಿ ಎಷ್ಟೋ ಹೆಚ್ಚಿಗೆ. ಜೀವದಲ್ಲಿರುವಾಗ ಸ್ವಂತ ಪ್ರಯತ್ನದಿಂದ ಸಾಧಿಸಿಕೊಳ್ಳಲಾರದ ಇಷ್ಟಾರ್ಥಗಳೆಲ್ಲವನ್ನೂ, ಒಬ್ಬನು ಸತ್ತ ಮೇಲೆ, ದುಃಖ ಸೂಚಕರ ಹಾರೈಕೆಗಳ ಮೂಲಕ ಗಳಿಸಿಕೊಳ್ಳಬಹುದು.

ಕುಟುಂಬಜೀವಿ, ಇಲ್ಲವೇ ಸಣ್ಣ ಪುಟ್ಟ ಕ್ಷೇತ್ರಜೀವಿಗಳಾಗಿದ್ದು ಇಹಯಾತ್ರೆ ಮುಗಿಸಿಕೊಂಡ ಆತ್ಮಗಳಿಗೆಲ್ಲಾ ಎಷ್ಟೆಷ್ಟು ಪರಿಮಾಣದಲ್ಲಿ ಎಂತೆಂತಹ ಶಾಂತಿ ...ಲ್ಲ. ಸಾರ್ವಜನಿಕ ನಾಯಕ ಹಾಗೂ ಸಾಮೂಹಿಕ ಜೀವಿಗಳಾಗಿದ್ದ ಕೆಲವು ಆತ್ಮಗಳಿಗಾದರೂ, ಅವುಗಳ ಇಷ್ಟಾರ್ಥ ಸಿದ್ಧಿಯ ಮೂಲಕ ಶಾಂತಿ ದೊರೆತಿರಬಹುದೆ? ಆ ಆತ್ಮಗಳು ಈಗ ಹೇಗಿರಬಹುದೋ? ನೋಡೋಣ.

ಭಾರತದ ಸ್ವರಾಜ್ಯ ಮಂತ್ರವನ್ನು ಪ್ರಥಮತಃ ಪಠಿಸಿದ್ದ ದಾದಾಭಾಯಿ ನೌರೋಜಿಗಳ ಆತ್ಮವೊಂದು ಈಗ ಪೂರ್ಣಶಾಂತಿಯಿಂದಿರಬೇಕಿದ್ದಿತು. ಆದರೆ ಆ ಕಾಲದಲ್ಲಿ ಅವರು ಬಯಸಿದ್ದ ಸ್ವರಾಜ್ಯದ ಕಲ್ಪನೆಯೂ ಇಂದಿನ ಸ್ವರಾಜ್ಯದಲ್ಲಿಲ್ಲವೇ ಇಲ್ಲವಾದ್ದರಿಂದಲೂ, ಅತ್ಯಂತ ಮಧ್ಯಪ್ರಾಯದಲ್ಲಿ ಆ ಆತ್ಮವು ಹೊರಟುಹೋಗಿ ಈಗ ಎಷ್ಟೋ ವರುಷಗಳು ಕಳೆದಿರುವುದರಿಂದಲೂ ಶಾಂತಿ, ಅಥವಾ ಅಶಾಂತಿ ಯಾವುದನ್ನೂ ಅನುಭವಿಸಲಾಗದಷ್ಟು ನೌರೋಜಿ ಆತ್ಮವೀಗ ಮಸಕು ಮಸಕಾಗಿರಬೇಕು.

"ಸ್ವರಾಜ್ಯವು ತನ್ನ ಜನ್ಮಸಿದ್ಧ ಹಕ್ಕು" ಎಂಬ ಬಯಕೆ ಘರ್ಜನೆ ಕೊಟ್ಟಿದ್ದ ಲೋಕಮಾನ್ಯ ತಿಲಕರ ಆತ್ಮವೀಗ "ಸ್ವರಾಜ್ಯವು ನನ್ನ ಮರಣೋತ್ತರ ಕಾಲದ ಹಕ್ಕು!" ಎಂದು ಕೂಗುತ್ತಿರಬಹುದೇ ಹೊರತು ಶಾಂತಿಯಿಂದ ಸುಮ್ಮಗಿರಲು ಎಡೆಯಿಲ್ಲ.

'ಹೋಂ ರೂಲು'ಯಾನೆ ಗೃಹಾಡಳಿತೆಯ ಚಳವಳದ ಮೂಲನಾಯಕಿ ಅನ್ನಿಬೆಸೆಂಟರ ಆತ್ಮವು ಈಗಿನ ಹೋಂರೂಲ್ ಆಳಿಕೆಯ ಅವಧಿಯಲ್ಲಿ ಅರ್ಧದಲ್ಲೇ ಆಯುಷ್ಯ ಮುಗಿಸಿಕೊಂಡು ಬರುತ್ತಿರುವ ಸಹಸ್ರಾರು ಆತ್ಮಗಳ ಕಣ್ಣು ತಪ್ಪಿಸಿಕೊಳ್ಳಲಿಕ್ಕಾಗಿ ಅಡ್ಡಾಡುತ್ತಿರಬಹುದೇ ಹೊರತು ಒಂದೆಡೆ ಶಾಂತಿಯಿಂದಿರಲಾರದು.

ಸ್ವರಾಜ್ಯ ಪಕ್ಷದ ಮೂಲಕ ಕಾಂಗ್ರೆಸ್ ಶಾಸನಾ ಸಭಾ ಪಕ್ಷ ಸ್ಥಾಪನೆಗೆ ಮೂಲಕಾರಣ ಪುರುಷರಾಗಿದ್ದ ದೇಶಬಂಧು ಚಿತ್ತರಂಜನದಾಸರ ಆತ್ಮವು, ಇಂದು ಕಾಂಗ್ರೆಸ್ ಪಕ್ಷಗಳೊಳಗೆ ವ್ಯಾಪಿಸಿಕೊಂಡಿರುವ ಹುಳುಕುಗಳಿಂದಾಗಿ ತೀರಾ ಅಶಾಂತಿಯಿಂದಿದ್ದಿರಬಹುದು. ಉದರಶೂಲೆಗೀಡಾಗಿರಬಹುದೇನೊ!

ಬ್ರಿಟಿಷ್ ಸಾಮ್ರಾಜ್ಯವಾದಿಗಳ ಕಣ್ಣು ತೆರೆಯಿಸುವುದಕ್ಕಾಗಿ ಎಸೆಂಬ್ಲಿ ಭವನಕ್ಕೆ ಬೋಂಬೊಗೆದ ಮತ್ತು ಬ್ರಿಟಿಷ್ ಸಾಮ್ರಾಜ್ಯವನ್ನು ಅಡಿಮೇಲು ಮಾಡಿ ಹಾಕುವುದಕ್ಕಾಗಿ ಕ್ರಾಂತಿ ಒಳಸಂಚುಗಳನ್ನು ನಡೆಸಿದ ಭಗತ್‌ಸಿಂಗ್ ಕ್ರಾಂತಿವೀರನ ಆತ್ಮವೋ? ಈಗ ಭಾರತದಲ್ಲಿ ತನ್ನವರು ಪಾಪದ ಹಾದಿಹೋಕರ ಮೇಲೆ ಬೋಂಬು, ಎಸಿಡುಗಳನ್ನು ಚೆಲ್ಲುವ ಪರಾಕ್ರಮವನ್ನೂ ನಿರಪರಾಧಿ ಪ್ರಯಾಣಿಕರನ್ನು ಕೊಲ್ಲಲು ರೈಲ ಕಂಬಿ ತಪ್ಪಿಸುವ ಒಳಸಂಚನ್ನೂ ನಡೆಸುತ್ತಿರುವುದನ್ನು ಕಂಡು ಸಂತಾಪ, ಜಿಗುಪ್ಸೆಗಳಿಂದ ಕಂಪಿಸುತ್ತಿರಬಹುದೇ ಹೊರತು ಶಾಂತಿಯಿಂದಿರಲಾರದು.

"ನಾಲ್ಕಾಣೆ ಕೊಡಿಸಿ ಕೊಡದಿದ್ದರೆ ಉಪವಾಸ ಮುಷ್ಕರ" ಎಂಬ ಈಗಿನವರ ದೆಸೆಯಿಂದಾಗಿ, ಪರಕೀಯಾಡಳಿತೆಯಿದ್ದಿರು ಭಿನಷ್ಠೇಯ ಸಾಧನೆಗಾಗಿ, ಜೈಲಿನಲ್ಲಿ 60 ದಿನಗಳಿಗೂ ಮಿಕ್ಕಿ ಉಪವಾಸ ಕುಳಿತು, ವೀರಸ್ವರ್ಗಕ್ಕೇರಿದ್ದ ಜತೀಂದ್ರನಾಥ ದಾಸರ ಆತ್ಮವೀಗ ಹಸಿವುಪೀಡೆಗೊಳಗಾಗಿರಬಹದು; ಶಾಂತಿಯಿಂದಿರಲಾರದು.

ಗುಲಾಮ ರಾಷ್ಟ್ರದಲ್ಲಿ ಹಾದಿ ತೋರಿಸುವವರಿಲ್ಲದೆ, ಒದ್ದಾಡುತ್ತಿದ್ದ ಸ್ವದೇಶ ಬಂಧುಗಳಿಗೆ ನಾಯಕತ್ವವನ್ನೊದಗಿಸಿ ಕೊಟ್ಟು ಸಮಾಧಾನದಿಂದಿರಬಹುದಾಗಿದ್ದ ವಿವಿಧ ವರ್ಗದ ನಾಯಕರ ಆತ್ಮಗಳೀಗ, ತನ್ನಿಂತಾನೇ ಮೇಲ್ಪಂಗ್ತಿಯು ಪ್ರತಿಯೊಬ್ಬನಲ್ಲೂ ನಾಯಕತ್ವಕ್ಕೇರಬೇಕೆಂಬ ಹುಚ್ಚನ್ನೇ ನಿರ್ಮಿಸಿರುವ ವಿಪರೀತ ಪರಿಣಾಮ ಕೊಟ್ಟಿರುವುದನ್ನು ಕಂಡು ಚಡಪಡಿಸುತ್ತಿರಬಹುದೇ ಹೊರತು ಶಾಂತಿಯಿಂದಿರಲಾರವು.

"ಪಾಕಿಸ್ತಾನದ ಅಲ್ಪಸಂಖ್ಯಾತ ಸಮಾಜಗಳವರಲ್ಲಿ ಭರವಸೆ ನಿರ್ಮಿಸುವುದಕ್ಕಾಗಿ, ಮುಂದಿನ ನನ್ನ ಆಯುಷ್ಯವನ್ನು ಪಾಕಿಸ್ತಾನದಲ್ಲೇ ಕಳೆಯಬೇಕೆಂಬ ಬಯಕೆಯಿದೆ" ಎಂದು ತನ್ನ ಮರಣದ ಸ್ವಲ್ಪ ಕಾಲಕ್ಕೆ ಮೊದಲು ಆಶಿಸಿದ್ದ ಗಾಂಧಿಜೀಯ ಆತ್ಮವೀಗ, ಮುಸ್ಲಿಮೇತರರ ಮರ್ದನ ನಡೆದಿರುವ ಪೂರ್ವ ಬಂಗಾಳಕ್ಕೋಡಿ ಬರುವ ಹಾದಿಯಲ್ಲಿದೆಯೇನೊ! ಎಂದಿಗೂ ಶಾಂತಿಯಿಂದಿರಲಾರದು.

ಆ ಮೊದಲಾದರೂ ತನ್ನ ತತ್ವಬೋಧನೆಗಳು ಮತ್ತು ತನ್ನ ವಿಧಾಯಕ ಕಾರ್ಯಗಳು ಎಲ್ಲಿ ಹೋದವು,ಎಂಬ ಶೋಧನೆಯಲ್ಲಿ ಮಹಾತ್ಮಾಜೀಯವರ ಆತ್ಮವು ಅಡ್ಡಾಡುತ್ತಿದ್ದಿರಬೇಕು ಹೊರತು,ಶಾಂತ ಸ್ವಸ್ಥವಾಗಿ ಇದ್ದಿರಲಾರದು.

'ಪಾಕಿಸ್ತಾನ'ದ ಮೂಲಮಂತ್ರ ಹಾಡಿದ್ದ ಕವಿ ಇಕ್ಬಾಲರ ಆತ್ಮವಾದರೋ, ಭಾರತ ಸ್ವಾತಂತ್ರ್ಯ ಮಂತ್ರದ ಪ್ರಥಮ ಪ್ರವಾದಿ ದಾದಾಭಾಯಿ ನೌರೋಜಿಗಳ ಸವೆದ ಆತ್ಮದ ಸ್ವರೂಪವೇ ಬಂದು ತಾನೆಲ್ಲಿ, ತಾನು ಸೂಚಿಸಿದ್ದ ಪಾಕಿಸ್ತಾನವೆಲ್ಲಿ ಎಂಬ

"ಬೇರೆ ಶಾಸ್ತ್ರಗಳನ್ನೆಷ್ಟೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

## ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು—ದಿ| ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯು ಮಾತುಗಳ ರೂಪದಲ್ಲಿಳಿದ ಛಟ್ಟೆಯಾಗಿ ಎದ್ದು ಕಾಣುವುದು.

400ಕ್ಕೂ ಮಿಕ್ಕಿ ಪುಟಗಳು! ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್, ಉಡುಪಿ, ದ. ಕನ್ನಡ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ

ಗುರುತೇ ಹತ್ತದೆ ಶಾಂತಿಯೋ ಅಶಾಂತಿಯೋ ಎಂದು ಹೇಳಲಿಕ್ಕಾಗದ ಸ್ಥಿತಿಯಲ್ಲೇ ಅದೀಗ ಇದ್ದಿರಬೇಕು.

ಪಾಕಿಸ್ತಾನ್ ಜನಕ ಮಿ. ಜಿನ್ನರ ಆತ್ಮಕ್ಕಂತೂ ತನ್ನೀ ಕೂಸಿಗೆ, ಜನ್ಮದೋಷದಿಂದಾಗಿ ಜನನದೊಂದಿಗೇನೆ ತಾಗಿಕೊಂಡು ಬೆಳೆದು ಬಂದಿರುವ ಅಪಾಯಕರ ಬಾಲಗ್ರಹವನ್ನು ಕಂಡು ಎದೆ ಹಾರುತ್ತಿರಬಹುದು; ಕೈಕಾಲು ಕಂಪಿಸುತ್ತಿರಬಹುದು ಹೊರತು ಅದು ಸರ್ವಥಾ ಶಾಂತಿಯಿಂದಿರಲಾರದು.

ಪಾಕಿಸ್ತಾನವನ್ನು ಹುಟ್ಟಿಸುವ ಕವಾಯತನಲ್ಲದೆ, ಅದನ್ನು ರಕ್ಷಿಸುವ ವಿಧಾನವನ್ನು ತಾನು ಕಲಿಸದೆ ಬಂದುಬಿಟ್ಟೆನಲ್ಲಾ! ಎಂಬ ಪಶ್ಚಾತ್ತಾಪದಿಂದ ಕುದಿಯುತ್ತಲೇ ಇದ್ದಿರಬಹುದಾದ ಮಿ. ಜಿನ್ನರ ಆತ್ಮಕ್ಕೀಗ, ಆ ತಾಪ ನಿವಾರಣೆ ಮತ್ತು ಶಾಂತಿ ಸಂಪಾದನೆಗಾಗಿ, ತಾನು ಭೂಲೋಕದಲ್ಲಿ ಬಾರಿ ಬಾರಿಗೂ ಧಿಕ್ಕರಿಸಿದ್ದ ಗಾಂಧೀ ಸಂಧಾನದ ಆಶೆ ಪ್ರಜ್ವಲಿಸಿ, ಅದೂ ಮಹಾತ್ಮರ ಆತ್ಮದ ಬೆನ್ನು ಹಿಡಿದು ಬಂಗಾಳದತ್ತ ಹೊರಟಿರಬೇಕು.

ದೇಶ ವಿಭಜನೆ ಮತ್ತಾ ಸಂಬಂಧದ ಜಾತೀಯ ಗಲಭೆಗಳಿಗೆ ಬಲಿಬಿದ್ದು ಪಾಕಿಸ್ಥಾನದಲ್ಲೇ ಜನುಮಯಾಗಿರಬಹುದಾದ ಹಿಂದು ಹಿಂದು ಆತ್ಮಗಳು, ಈಗ ತಮ್ಮಂತೆಯೇ ಅರ್ಧಮಾರ್ಗದಲ್ಲಿ ಹೋಗುತ್ತಿರುವವರ ಕಡೆಗೆ ನೋಡಿ "ಬೇಡ, ಬೇಡ; ಇನ್ನೂ ಬಂಬೇಡಿ; ಎಷ್ಟು ಕಷ್ಟ ಬರಬೇಡಿ" ಎಂದು ಭಾರತ ಪಾಕಿಸ್ತಾನಗಳ ಕಡೆಗೆ ಬೊಟ್ಟು ಹಾಕುತ್ತಿರಬಹುದೇ ಹೊರತು ಶಾಂತಿಯಿಂದಿರಲಾರವು.

ದಾರಿದ್ರ್ಯ, ಹಸಿವು, ರೋಗ ರುಜಿನಗಳಿಗೆ ತುತ್ತಾಗಿ ಹೊರಟು ಹೋಗಿರುವ ಅಧಿಕ ಸಂಖ್ಯೆಯ ಆತ್ಮಗಳಂತೂ, ಸ್ವತಃ ತಮ್ಮ ಯಾತನೆಗಿಂತ ಹೆಚ್ಚಾಗಿ ಆ ಯಾತನೆಗಳನ್ನು ಅನುಭವಿಸುತ್ತಾ ಇನ್ನೂ ಭೂಲೋಕದಲ್ಲಿ ಉಳಿದುಕೊಂಡಿರುವ ತಮ್ಮ ವರ್ಗದವರಿಗಾಗಿ ಏಕಪ್ರಕಾರ ಅಳುತ್ತಿರಬಹುದೇ ಹೊರತು ಶಾಂತಿಯಿಂದಿರಲು ಸಾಧ್ಯವೇ ಇಲ್ಲ.

ಈ ರೀತಿ ಯಾವುದೇ ವರ್ಗದ ಆತ್ಮವೆಂಬುದೊಂದಿರುವ ಯಾವ ಆತ್ಮಗಳ ಇಷ್ಟಾರ್ಥಸಾಧನಾ ಸಿದ್ಧಿಸುವ ಬದಲಿಗೆ, ಪ್ರತಿಕೂಲ ವಿದ್ಯಮಾನಗಳೇ ಈಗ ನಿರ್ಮಾಣಗೊಂಡಿರುವುದರಿಂದ ಅವೆಲ್ಲವೂ ಈಗ ಅಶಾಂತಿಯಲ್ಲೇ ಇದ್ದಿರಬೇಕು; ಅಸ್ಥಿರವಾಗಿರಬೇಕು. ಆದರೆ ಆತ್ಮವೆಂಬುದೇ ಇಲ್ಲದ ಕೆಲವು ಆತ್ಮಗಳಿಗೀಗ ನಿಜಕ್ಕೂ ಶಾಂತಿಯಿರಬಹುದೇನೋ. ನಿದರ್ಶನಕ್ಕಾಗಿ:-

ಆತ್ಮರಹಿತ ಯಂತ್ರವಾಗಿದ್ದ ನಾಜೀಶಾಹಿಯು ತನ್ನ ಪಾಲಿನ ಪೂರ್ಣ ಪ್ರಭಾವವನ್ನು ಉಪಯೋಗಿಸಿ, ತನ್ನಿಂದೆಷ್ಟು ಸಾಧ್ಯವೋ ಅಷ್ಟೆಲ್ಲವನ್ನು ಮಾಡಿಯೇ ಮುಕ್ತಾಯಗೊಂಡದ್ದಿರುವುದರಿಂದಲೂ, ತಾನು ಕೊನೆಗಾಲದಲ್ಲಿ ಹೇಳಿದ್ದ ಮತ್ತು ಅಪೇಕ್ಷಿಸಿದ್ದ "ನಮ್ಮ ಗತಿ ಹೇಗಾದರೂ ಸೋವಿಯೆಟ್ ರಶ್ಯವು ಇಂಗ್ಲಾಂಡು, ಅಮೇರಿಕ ಮೊದಲಾದ ರಾಷ್ಟ್ರಗಳಿಗೆ ಬುದ್ಧಿ ಕಲಿಸುವ ಕಾಲ ಬರುವದಂತೂ ಖಂಡಿತ" ಎಂಬ ಮಾತು ಅಕ್ಷರಶಃ ಸತ್ಯವಾಗುವ ಕಾಲ ಸಮೀಪಿಸಿರುವುದರಿಂದಲೂ ಹಿಟ್ಲರನ ಆತ್ಮವೀಗ ಶಾಂತಿಯಿಂದಿರಬಹುದು. ಮುಸಲಿನಿಯ ಆತ್ಮ ಅಲ್ಲಿಯೂ ಅದರ ಜತೆಗೂಡಿರಬಹುದು

ಇದಕ್ಕಿಂತ ಹೆಚ್ಚಿಗೆ ಇಡೀ ಲೋಕದಲ್ಲೇ ಇನ್ನೊಬ್ಬರಿಂದಾಗದು, ಮತ್ತು ಇದಕ್ಕಿಂತ ಹೆಚ್ಚಿನದನ್ನು ಬಯಸುವುದೂ ತನ್ನಿಂದ ಅಸಾಧ್ಯ, ಎಂಬುದರಿಂದ ನಾತೂರಾಮಗೋಡ್ಸೆಯ ಆತ್ಮರಹಿತ ಆತ್ಮವೂ ಶಾಂತಿಯಿಂದಿರಬಹುದು.

ರೈಲುಕಂಬಿ ತಪ್ಪಿಸುವುದು, ಸಾಮೂಹಿಕ ಕೊಲೆ ದರೋಡೆಗಳನ್ನು ನಡೆಸುವುದೇ ಮುಂತಾದ ಕೃತ್ಯಗಳನ್ನು ಮಾಡಿ, ಪ್ರಾಯಶ್ಚಿತ್ತರೂಪದ ಅಥವಾ ಸ್ವಾಭಾವಿಕ ಅಂತ್ಯ ಪಡೆದವರ ಶಿಲಾತ್ಮಗಳು, ಹಲವರನ್ನು ಮುಂದಾಗಿ ಕಳುಹಿಸಿ ಕೊನೆಗೆ ತಾವು ಬಂದವರೆಂಬ ಸಮಾಧಾನದಿಂದ ಶಾಂತಿಗೊಂಡಿರಬಹುದು.

ಲಾಯಕ್ ಅಲಿಯ 'ಆತ್ಮ'ವಾಗುವಾಗ ತಾನು, ಆಡಳಿತೆಯಿಂದಾರಂಭಿಸಿ ಖಾಸಗೀ ಆಚರಣೆಯ ವರೆಗೂ, ನ್ಯಾಯ, ನಾಗರೀಕತೆ ಮತ್ತು ಕಾವಲುಗಾರರೆಲ್ಲನ್ನೂ ಎಲ್ಲವನ್ನೂ ಏಕಪ್ರಕಾರ ವಂಚಿಸಿ, ದಗಾಖೋರತನದ ಸರ್ವಾಂಗಗಳನ್ನೂ ಪೂರ್ಣ ವಿನಿಯೋಗಿಸಿ ಬಂದವನೆಂಬ ಕೃತಕೃತ್ಯತೆಯಿಂದ ಶಾಂತಿಹೊಂದಬಹುದು.

ಆತ್ಮಗಳ ಶಾಂತಿ ಅಶಾಂತಿ ಸ್ಥಿತಿಗತಿಗಳ ಸೂಕ್ಷ್ಮ ಪರಿಶೀಲನಾ ನಂತರ ಉದ್ಗರಿಸಬೇಕಾಗುತ್ತದೆ—'ನ್ಯಾಯನೀತಿಗಳ ಆತ್ಮಕ್ಕೆ ಶಾಂತಿಯಿರಲಿ'!

---

# ಪಾಕಿಸ್ತಾನ್ ಅನ್ಯಾಯಕ್ಕಿದಿರಾಗಿ—

## ದೇಶನಾಯಕರ ದೃಷ್ಟಿಪಥದಲ್ಲಿರುವ ವಿಚಾರಗಳು.

ಭಾರತ ಮತ್ತು ಪಾಕಿಸ್ತಾನಗಳೊಳಗಿನ ಸಂಬಂಧವು ಪರಮಾವಧಿ ವಿಷಮಗೊಂಡಿದೆ; ಪಾಕಿಸ್ತಾನದೊಳಗಿರುವ ಹಿಂದುಗಳನ್ನು ಅಲ್ಲಿಯವರು ಚಿತ್ರಹಿಂಸೆಗೊಳಪಡಿಸಿ ಓಡಿಸುತ್ತಿದ್ದಾರೆ; ಇದಕ್ಕೆ ಪ್ರತಿಯಾಗಿ ಭಾರತದಲ್ಲಿರುವ ಮುಸ್ಲಿಮರನ್ನು ಆ ಕಡೆಗೆ ರವಾನಿಸುವ ವ್ಯವಸ್ಥೆಯನ್ನಾಗಲೀ, ಪಾಕಿಸ್ತಾನದ ಅತ್ಯಾಚಾರಗಳಿಗೆ ಪ್ರತೀಕಾರವನ್ನಾಗಲೀ ಭಾರತ ಸರಕಾರ ಕೈಕೊಂಡಿಲ್ಲ; ಮಾತ್ರವಲ್ಲ, ಇಲ್ಲಿರುವ ಮುಸ್ಲಿಮರಿಗಾವ ಹಾನಿಯೂ ಆಗದಂತೆ ವಿಶೇಷ ಜಾಗರೂಕತೆ ಮತ್ತು ಕಟ್ಟುನಿಟ್ಟಿನ ರಕ್ಷಣೋಪಾಯಗಳನ್ನು ಕೈಕೊಂಡಿದೆ; ಆ ಕಾಲದ ಅಖಂಡ ಭಾರತದ ಮುಸ್ಲಿಂ ಲೀಗ್ ಗೊಂದಲಗಳಿದಿರು ಕಾಂಗ್ರೆಸ್ ನಾಯಕರು ವಿನಯ ಪ್ರದರ್ಶಿಸಿದ್ದಂತೆ, ಈಗಲೂ ಪಾಕಿಸ್ತಾನ್ ಅತ್ಯಾಚಾರಗಳಿದಿರು ಸಾಧುಸ್ವಭಾವವನ್ನೇ ತೋರಿಸುವ ಹೇಡಿಗಳಂತಿದ್ದಾರೆ—ಮುಂತಾದ ಭಾವನೆಗಳು ಇಂದು ಭಾರತೀಯ ಜನಸಾಮಾನ್ಯರಲ್ಲಿ ಸಹಜವಾಗಿ ವ್ಯಾಪಿಸಿಕೊಂಡಿವೆ. ಪಾಕಿಸ್ತಾನ್ ಕ್ರೂರ ವರ್ತನೆಗಳಿಗಾಗಿ ಉಗ್ರ ದ್ವೇಷ ಮತ್ತು ಪ್ರತೀಕಾರ ಭಾವನೆ ಮೊಳೆತಿರುವಂತೆಯೇ ಈ ಸಂಬಂಧದ ಭಾರತ ಸರಕಾರೀ ಧೋರಣೆಯ ಕಡೆಗೆ ಕನಿಕರ, ಅಸಮಾಧಾನ ಮತ್ತು ಜಿಗುಪ್ಸೆಯೂ ಸಾರ್ವಜನಿಕರಲ್ಲಿ ಹಂಚಿದೆ, ಎಂಬುದು ಸ್ಪಷ್ಟವಿದೆ. ಸದ್ಯಸ್ಥಿತಿಯಲ್ಲಿ ಹೀಗಾಗುವದು ಸ್ವಾಭಾವಿಕ. ಆದರೂ ತೊಗಟೆ ಮತ್ತು ತಿರುಳೊಳಗೆ ವ್ಯತ್ಯಾಸವಿದೆ; ಪ್ರತಿ ವ್ಯಕ್ತಿಯ ಬಾಹ್ಯ ಪ್ರದರ್ಶನ ಮತ್ತು ಅಂತರಂಗದೊಳಗೆ ತಾರತಮ್ಯವಿರುವದಿದೆ. ಅಂತೆಯೇ ಒಂದು ರಾಷ್ಟ್ರೀಯ ಸಮಸ್ಯೆ, ಸಂಕಟ, ಅಥವಾ ವಿವಾದದ ಬಾಹ್ಯಸ್ವರೂಪಕ್ಕಿಂತ ನಿಜಸ್ಥಿತಿ ಕೆಲವಂಶ ಭಿನ್ನವಾಗಿರಬಹುದು. ಅದ್ದರಿಂದ ಮೇಲ್ನೋಟ ಮಾತ್ರದಿಂದ ಮಾಡುವ ನಿರ್ಧಾರವು ತಪ್ಪಾಗುವ ಸಂಭವವಿದೆ. ಯಾವುದನ್ನೇ ಆದರೂ ಆಳವಾಗಿ ನೋಡಿಕೊಂಡು, ಅದರ ಗುಣದೋಷಗಳನ್ನು ತುಲನೆಮಾಡಿಕೊಂಡೇ ಸರಿಯಾದ ತೀರ್ಮಾನಕ್ಕೆ ಬರಬೇಕಾಗಿದೆ. ಇಂದಿನ ಭಾರತ-ಪಾಕಿಸ್ತಾನ್ ವಿವಾದದಲ್ಲಾದರೂ ಸಾರ್ವಜನಿಕರು ಗಾಢಚಿಂತನೆ ಮಾಡಬೇಕಾದ ಅಂಶಗಳಿರುವುದರಿಂದ ಅವುಗಳಲ್ಲಿ ಕೆಲವನ್ನಿಲ್ಲಿ ನೆನಪು ಮಾಡಿಕೊಡಲಾಗಿದೆ.

### ಸ್ಥಿತಿಚಿತ್ರ

ಅಖಂಡವಾಗಿದ್ದ ಭಾರತವನ್ನು ಭಾರತ ಮತ್ತು ಪಾಕಿಸ್ತಾನವಾಗಿ ವಿಂಗಡಿಸಿಕೊಂಡುದು, ಕೇವಲ ಮುಸ್ಲಿಂ ಲೀಗಿನವರ ಬಯಕೆಯನ್ನೀಡೇರಿಸಿ ಕೊಡುವ ಮೂಲಕ ಅವರ ತಂಟೆ ನಿವಾರಿಸಿಕೊಳ್ಳುವದಕ್ಕಾಗಿ ಹೊರತು ಬೇರಾವುದಕ್ಕೂ ಅಲ್ಲ. ಈ ತಂಟೆತಗಾದೆ ತಪ್ಪಿದುದರಿಂದಲೇ, ಕಾಲಂಶ ಕಳೆದುಳಿದಿರುವ ಇಂದಿನ ಭಾರತಕ್ಕೆ ಸಶಕ್ತ ಕೇಂದ್ರವುಳ್ಳ ನವರಾಜ್ಯಾಂಗ ವಿಧಾನಗಳನ್ನು ತಯಾರಿಸಿಕೊಳ್ಳಲು ಸಾಧ್ಯವಾಯಿತು. ಬದಲಿಗೆ, ಮುಸ್ಲಿಂ ಲೀಗಿನವರು ಭೂತುಂಡೊಂದನ್ನು ಬಿಟ್ಟು ಬೇರೇನನ್ನು ಕೇಳಿದರೂ ಕೊಡುತ್ತಾ ಹೋಗುವ ಮೂಲಕ ಅವರನ್ನೀ ಕಾಲದಲ್ಲೂ ಕೂಡಿಕೊಂಡಿರುತ್ತಿದ್ದರೆ, ಇಂದಿನ ನವರಾಜ್ಯ ಶಾಸನ ತಯಾರಿ ಅಸಾಧ್ಯವಾಗುತ್ತಿತ್ತು. ಪ್ರತ್ಯೇಕ ಮತದಾನ ಪದ್ಧತಿಯನ್ನು ರದ್ದುಪಡಿಸುವ ಕನಸು ಕಾಣುವದೂ ಕಷ್ಟವಾಗುತಿತ್ತು, ಹೈದರಾಬಾದ್ ಮತ್ತಿತರ ಸಂಸ್ಥಾನಗಳನ್ನು ಹಾದಿಗೆ ತರಲು ಅವರು ಅಡ್ಡ ಬರುತಿದ್ದರು. ಸಂಸ್ಥಾನಗಳಲ್ಲಿ ಹೆಚ್ಚಿನವುಗಳನ್ನು ತಮ್ಮ ಪಕ್ಷಕ್ಕೊಲಿಸಿಕೊಂಡು ಅಖಂಡ ಭಾರತದಲ್ಲಿ ಲೀಗ್ ಸಂಸ್ಥಾನೀ ಸಮ್ಮಿಶ್ರ ಪಕ್ಷವೇ ಪ್ರಬಲ ಪಕ್ಷವಾಗುತಿತ್ತು. ರಾಷ್ಟ್ರಜೀವನದ ಪ್ರತಿಯೊಂದು ರಂಗದಲ್ಲೂ ಗಲಭೆ, ಅಸ್ಥಿರತೆ, ಅಪೂರ್ಣತೆ ವ್ಯಾಪಿಸಿಕೊಳ್ಳುತಿತ್ತು. ಕೊನೆಗಾದರೂ ಇಂದಿನ ಪಾಕಿಸ್ತಾನಕ್ಕಿಂತ ದೊಡ್ಡ ಭಾಗವನ್ನು ಬಿಟ್ಟುಕೊಟ್ಟೇ ಮಿಕ್ಕೆಡೆಯ ಶಾಂತಿ, ವ್ಯವಸ್ಥೆ ಕಾಪಾಡಿಕೊಳ್ಳಬೇಕಿದ್ದಿತು.

ಬ್ರಿಟಿಷ್ ಆಡಳಿತೆ ಕಾಲದಲ್ಲಿ ಮುಸ್ಲಿಂ ಸಮಾಜಕ್ಕೆ ಎಂತಹ ರಿಯಾಯತಿ ಶಾಸನವಿದ್ದರೂ ಬ್ರಿಟಿಷರು ದೇಶ ವಿಭಜನಾ ಸೂಚನೆ ಮುಂದಿಡದೆ, ರಾಷ್ಟ್ರವನ್ನು ಇದ್ದಂತಿರಗೊಡಿಸಿ, ಸ್ವಾತಂತ್ರ್ಯ ಬಿಟ್ಟು ಹೋಗುತಿದ್ದರೆ, ಆ ಮೇಲೆ ಅಧಿಕಾರ ಬಲದಿಂದ ಲೀಗ್ ಗೊಂದಲವನ್ನಡಗಿಸಿ ಬಿಡಬಹುದಿದ್ದಿತು—ದೇಶ ವಿಭಜನೆ ಮಾಡದೇನೇ ಮುಸ್ಲಿಂ ಲೀಗ್ ಆತಂಕಗಳನ್ನು ನಿರ್ಮೂಲಿಸುವ ಅವಕಾಶ ದೊರೆಯುತಿದ್ದಿತು—ಎಂದು ವಾದಿಸುವವರಿರಬಹುದು. ಆದರೆ, ಸ್ವಾತಂತ್ರ್ಯ ಹೋರಾಟವನ್ನು ಕೊನೆಯ ಗಡಿಮುಟ್ಟಿಸಿ ಆ ಮೂಲಕವೇ ನಾವು ಗೆದ್ದುಕೊಂಡ ಸ್ವಾತಂತ್ರ್ಯ ಇಂದಿನದಲ್ಲ—ಆ ಹಾದಿಯ ಕೆಲವು ಭಾಗದವರೆಗೆ ಬ್ರಿಟಿಷರು ಮುಂದೊತ್ತಿ ಬಂದು ಇಂದಿನ ಸ್ವಾತಂತ್ರ್ಯವನ್ನು ಕೊಡುವಾಗ, ಅವರು ಅವರೇ ಅನುಸರಿಸಿದ್ದ ಅಲ್ಪಸಂಖ್ಯಾಕ ಜಾತೀಯ ರಕ್ಷಣಾ ವಿಧಾನಗಳನ್ನು ಕೊನೆಗಾಲದಲ್ಲ ಬದಲಾಯಿಸಬಹುದಿತ್ತೆಂದು ನಿರೀಕ್ಷಿಸುವುದು ಅಸ್ವಾಭಾವಿಕ. ತಮ್ಮ ರಾಜ್ಯಶಾಸನ ವಿಧಾನಗಳಂತೆಯೇ ಭಾರತದ ಆಕಾರವನ್ನೂ ಮುಟ್ಟದೇನೇ, ಇದ್ದಂತಿಟ್ಟು ಬ್ರಿಟಿಷರು ಹೋಗುತ್ತಿದ್ದರೂ ಕೆಲವೊಂದು ಖಾತೆಗಳ ಮೇಲಿನ ಹಕ್ಕು ಹೊರತು ಮಿಕ್ಕೆಲ್ಲಾ ಅಧಿಕಾರಗಳೂ ಪ್ರಾಂತ್ಯಗಳಿಗೇನೇ ಇದ್ದ ಆಗಿನ ರಾಜ್ಯಶಾಸನಾನುಸಾರವಾಗಿ, ಈಗ ಪಾಕಿಸ್ತಾನವಾಗಿರುವ ಪ್ರಾಂತ್ಯಗಳಲ್ಲಿ ಮುಸ್ಲಿಂ ಬಹುಸಂಖ್ಯೆಯವ


**THE BOMBAY LIFE ASSURANCE COMPANY, LTD.**

ದಿ ಬೊಂಬೆ ಲ್ಯಾಫ್ ಎಶ್ಶೂರೆನ್ಸ್ ಕೊ. ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

**ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ ಉಡುಪಿ.**

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೇಂದ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ
ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು
ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

# ಭಾರತವು ಮಾಡಬೇಕಾದುದೇನು?

## ಜನತೆಯು ಅಗತ್ಯ ಗಮನಿಸಬೇಕಾದ ಅಂಶಗಳು,

...ಂದ ಅದು ಅಲ್ಪಾವಧಿಯಲ್ಲೇ ...ಗಿನದಕ್ಕಿಂತ ದೊಡ್ಡ ಪಾಕಿಸ್ತಾನವಾಗಿ ...ಪ್ಪುಗೊಳ್ಳುತಿತ್ತೆಂಬುದು ಖಂಡಿತ. ...ತೂ, ಮುಸ್ಲಿಂ ಲೀಗು ಮುಸಲ್ಮಾನರಿ... ತಲೆ ಕೆಡಿಸಿ ಬಿಟ್ಟ ಮೇಲೆ, ಅದರ ಪ್ರ...ಸ್ವಲರೂಪೀ ಅಪಾಯವನ್ನು ಸಾಧ್ಯವಿ...ಷ್ಟು ಕಡಿಮೆಮಾಡಿಕೊಳ್ಳಬಹುದಾಗಿದ್ದ ...ಕವಾತ್ರ ಉಪಾಯವೆಂದರೆ ಪ್ರಚಲಿತ ...ಕಿಸ್ತಾನ ವ್ಯವಸ್ಥೆಯೇ. ಇದಕ್ಕೆ ಬದಲು ...ರೇನು ಮಾಡುತಿದ್ದರೂ ಜಾತೀಯ ...ಗೊಂದಲಗಳು, ರಾಜ್ಯಕಚನೆಗಾತಂ...ಗಳು, ಮತ್ತದೇ ರೀತಿ ಪಾಕಿಸ್ತಾನದ ವಿ...ಸ್ತಾರ, ಬೆಳೆಯುತಿದ್ದುವಲ್ಲದೆ ಬೇರೇನೂ ...ಗುತ್ತಿರಲಿಲ್ಲವೆಂಬುದನ್ನು ಸ್ಪಷ್ಟ ತಿಳಿದ...ಬೇಕು.

...ರಾಷ್ಟ್ರದ ಅಖಂಡತಾ ಸ್ವರೂಪವು ಮು...ಮರ ಸಮ್ಮತಿಯದಾಗಿರುತ್ತಿದ್ದರೆ, ರಾ... ದೇಹವು ಪೂರ್ಣಾರೋಗ್ಯದಿಂದ ಇ...ರುತಾಗುತಿತ್ತು. ಆಗಲೂ ಅಂಗ ವಿಚ್ಛೇ...ನ ಮಾಡುತಿದ್ದವರು ನಿಜಕ್ಕೂ ಕೊಲೆ...ಪಾತಕಿಗಳಾಗುತಿದ್ದರು. ಆದರೆ ದೇಹದಒಂ... ಅಂಗವು ಪಾಕಿಸ್ತಾನ್ ರೋಗದಿಂದ ...ರ್ಣ ಕೊಳೆತು ಯಾವ ಚಿಕಿತ್ಸೆಯೂ ...ಡಿಯದೆ ಹೋದ ಮೇಲೆ, ಆ ವಿಷವು ...ರ್ವಾಂಗ ವ್ಯಾಪಿಸಿ, ಅಂತ್ಯವೊದಗದಂತೆ ...ಶಸ್ತ್ರಕ್ರಿಯೆಯ ಮೂಲಕ ಕೊಳೆತಭಾಗವ...ನ್ನು ಕತ್ತರಿಸಿಕೊಂಡುದು ನಿಜಕ್ಕೂ ಹಿತ...ವಾಯಿತು. ಕೊಳೆತಾಂಗವನ್ನು ಕೂಡಾ ...ತ್ತರಿಸಿಕೊಳ್ಳಬಾರದಿತ್ತೆಂದಾಗಲೀ, ಕಡಿ...ದು ಹೋದ ಆ ತುಂಡನ್ನು ಪುನಃ ದೇಹ...ದೊಂದಿಗೆ ಹೊಲಿದುಕೊಳ್ಳಬೇಕೆಂದಾಗ...ಲೀ, ಮೂಲರೂಪ ವ್ಯಾಮೋಹದಿಂದ ...ಗಲೂ ವಾದಿಸುವವರಿದ್ದರೆ, ಅಂಥವರ...ನ್ನು ಹುಚ್ಚರ ಪಂಗ್ತಿ ಸೇರಿಸಲು ಬೇರೆ ವ...ಕ್ಷೆ ಬೇಕೆಂದಿಲ್ಲ.

ಆದ್ದರಿಂದ ಪಾಕಿಸ್ತಾನ್ ಸ್ಥಾಪನೆ ...ಂತೂ ಅನಿವಾರ್ಯವಾಗಿತ್ತು; ಪರಿಸ್ಥಿ...ಯ ಮೂಲಕ ಅಗತ್ಯವೆನ್ನಿಸಿದ್ದಿತು. ...ನ್ನು ಮುಂದಾದರೂ ಸರಿಯೇ— ...ಪಾಕಿಸ್ತಾನಿಗಳ ಮನೋವೃತ್ತಿ ...ಗಿನಂತಿರುವ ವರೆಗೆ ...ಪಾಕಿಸ್ತಾನವನ್ನು ಪುನಃ ಕೂಡಿಕೊ...ಬೇಕೆಂದು ಭಾರತವು ಅಪೇಕ್ಷಿಸುವ ...ಮಾತಂತಿರಲಿ, ಪಂಡಿತನೆಹರುಗಳೆಂದಿರು...ತೆ ಸ್ವತಃ ಪಾಕಿಸ್ತಾನವೇ ಬೇಡಿದರೂ ...ಅಂತವದನ್ನು ಸೇರಿಸಿಕೊಳ್ಳಕೂಡದು. ...ಣ್ಣು ಮುಚ್ಚಿಸಿಕೊಂಡರೆ ಬಪ್ಪ ಬೆಳೆದಂ...ಗದು—ಕೊಳಕು ಸ್ಥಿತಿಮತಿಗಳ ಪಾಕಿ...ಸ್ಥಾನವನ್ನು ಹಚ್ಚಿಕೊಂಡರೆ ರಾಷ್ಟ್ರ ವಿ...ಚ್ಛಿದ್ರಗೊಳ್ಳದು. ಆದ್ದರಿಂದ ರಾಷ್ಟ್ರೀಯ ...ಖಂಡತೆಯ ಮರು ಸಂಪಾದನೆಯ ಪ್ರ...ಯೇ ಇಲ್ಲೀಗ ರದ್ದಾಗಿದೆ.

ಈಗ ಎದ್ದಿರುವ ಪ್ರಶ್ನೆ ಬೇರೆಯೇ. ಅ... ಪಾಕಿಸ್ತಾನವನ್ನು ಕೂಡಿಕೊಳ್ಳುವ ...ಪ್ರಶ್ನೆಯಲ್ಲ—ಪಾಕಿಸ್ತಾನವನ್ನು ಒತ್ತಿಡ...ಬೇಕಾದ ಗರ್ಜ. ಕತ್ತರಿಸಿ ಹಾಕಿಕೊಂ...ಡ್ಡು, ಅದೀಗ ನಮ್ಮ ಪಾಲಿಗೆ ಮಗ್ಗುಲ... ಸಮ. ಅದರಂತು ರಾವಣನ ಹಸ್ತದಂ... ಅಲ್ಲಿಂದಲೂ ಹಾರಿ ಹಾರಿ ನಮ್ಮ ಎ...ದೆಗೀಗ ಬಡಿಯುತ್ತಿದೆ. ಈ ಎದೇ ತಾಡನವನ್ನು ತಪ್ಪಿಸಿಕೊಳ್ಳಲು ಅದನ್ನು ಜಜ್ಜಿ ಹಾಕಿ ಹಾರಾಟಕ್ಕೇಳದಂತೆ ಮಾಡಬೇಕಾದುದು ಈಗ ಭಾರತದ ಕರ್ತವ್ಯವೆಂಬುದು ಸ್ಪಷ್ಟ.

### ನಾಯಕರ ದೃಷ್ಟಿಪಥದಲ್ಲಿ-

ಪಾಕಿಸ್ತಾನದ ಈಗಿನ ಅತ್ಯಾಚಾರ ಮತ್ತಿತರ ಶಾಶ್ವತ ಅನ್ಯಾಯಗಳಿಗಾಗಿ, ಸ್ವರಕ್ಷಣಾ ದೃಷ್ಟಿಯಿಂದಲೇ ಅದರ ಸೊಕ್ಕನ್ನಿಳಿಸಬೇಕಾದುದು ಭಾರತದ ಕರ್ತವ್ಯವಾಗಿರುವಾಗ ಭಾರತ ನಾಯಕರೇಕೆ ಆ ಕುರಿತು ತೀವ್ರ ಕಾರ್ಯ ಕೈಕೊಂಡಿಲ್ಲ, ಎಂಬ ಸವಾಲು ಎದ್ದಿರುವದು ಸಹಜವೇ. ನಮ್ಮ ನಾಯಕರೇನೂ ಕಣ್ಣು ಕೂರುತ್ತಿಲ್ಲ; ಎದೆಗೆಟ್ಟಿಲ್ಲ. ಅನ್ಯಾಯದಿದಿರಲ್ಲಿ ಆ ತಿರೀಗ ಕೆರಳುವವರೇ ಇಂದು ನಮ್ಮ ನಾಯಕ ಸ್ಥಾನದಲ್ಲಿದ್ದಾರೆ. ಆದರೂ ಜನಸಾಮಾನ್ಯರು ಬಿಶಿಸುವಷ್ಟು ಅವಸರದಿಂದ ಅವರು ಕಾರ್ಯಪ್ರವೃತ್ತರಾಗಿಲ್ಲವೆಂದಾದರೆ, ಜನಸಾಮಾನ್ಯರ ಊಹೆಗೆ ನಿಲುಕದ ಬಲವಾದ ಕಾರಣಗಳೂ ನಾಯಕರ ದೃಷ್ಟಿಪಥದಲ್ಲಿರಲೇ ಬೇಕು. ಆ ಕಾರಣಗಳಾವುವು? ಬಿಚ್ಚು ಮನಸ್ಸು ಮತ್ತು ಸೂಕ್ಷ್ಮಾವಲೋಕನದಿಂದ ಪರಿಶೀಲಿಸೋಣ.

ಪೂರ್ವ ಬಂಗಾಳದಿಂದ ಹಿಂದುಗಳನ್ನು ಕೊಂದು, ಸುಲಿದು, ಬಡಿದೋಡಿಸುತ್ತಿರುವ ಪಾಕಿಸ್ತಾನದ ಅತ್ಯಾಚಾರಗಳಿಗೆ ಭಾರತ ಸರಕಾರವಾವ ಪ್ರತೀಕಾರ ಮಾಡಬೇಕಿದ್ದಿತು? 'ಖಡ್ಗಕ್ಕೆದಿರು ಖಡ್ಗ' ಎಂಬ ಧೋರಣೆಯಂತೆ 'ಮುಸ್ಲಿಮರೋಡಿಸಿದುದಕ್ಕೆ ಮುಸ್ಲಿಮರನ್ನೋಡಿಸುವುದು' ಕೂಡಲೇ ಹೊಳೆಯುವ ಪ್ರತೀಕಾರ ವಿಧಾನ. ಒಂದೋ ಭಾರತದ ಬಹುಸಂಖ್ಯಾಕ ಸಾಮಾಜಿಕರು, ಇಲ್ಲಿರುವ ಅಲ್ಪಸಂಖ್ಯಾಕ ಮುಸ್ಲಿಮರ ಜೀವನವು ಅಸಹ್ಯವಾಗಿ, ಇಲ್ಲಿಂದವರು ಓಡಿ ಹೋಗುವಂತೆ ಮಾಡಲು ಸರಕಾರವು ಎಡೆಕೊಡಬೇಕು; ಅಥವಾ ಶಾಸನಾನುಬದ್ಧವಾಗಿ ಅಲ್ಲಿಂದ ಬಂದ ನಿರಾಶ್ರಿತ ಹಿಂದುಗಳಷ್ಟೇ ಸಂಖ್ಯೆಯ ಮುಸ್ಲಿಮರನ್ನು ಇಲ್ಲಿಂದ ಎಬ್ಬಿಸಿ, ಅತ್ತ ರವಾನಿಸಿಬಿಡಬೇಕು

ಆದರೆ ಈ ವಿಧಾನದಲ್ಲಿ ಹೆಗ್ಗಳಿಕೆ ಅಥವಾ ಪೌರುಷವೇನಾದರೂ ಇರುವ ಮಾತಂತಿರಲಿ— ಮಾನುಷತ್ವವಾದರೂ ಇದೆಯೆ? ಪ್ರಜಾಸತ್ತಾನ್ವಯದ ಬಹುಸಂಖ್ಯಾಕರ ಆಡಳಿತೆಯ ಅಡಿಯಲ್ಲಿ, ಬಹುಸಂಖ್ಯಾಕ ಸಮಾಜಕರ ಎಡೆಯೆಡೆಯಲ್ಲಿ ಅಲ್ಪಸಂಖ್ಯಾಕರಾಗಿ ಉಳಿದುಕೊಂಡಿರುವವರನ್ನು ಬಡಿದು ಅಥವಾ ಬಲಾತ್ಕಾರದಿಂದ ಓಡಿಸುವುದರಲ್ಲಿ ಕಾಡು ಮೃಗತ್ವವೊಂದಲ್ಲದೆ ಬೇರಾವ ಲಕ್ಷಣವಿದೆ? ಪಾಕಿಸ್ತಾನವು ಆ ದರ್ಜೆಗಿಳಿಯಿತಾದ್ದರಿಂದ ಭಾರತವೂ ಅದೇ ಮೃಗಮಟ್ಟಕ್ಕಿಳಿಯಬೇಕೆಂದು ಹಿಂದಿನಿಂದ ದೂಡುವ ಯಾವ ಕ್ರಿಯ್ಯಾದರೂ ಅದು ಪಾಪೀ ಕ್ರಿಯ್ಯೇ ಸರಿ!

ಮೇಲಾಗಿ ಭಾರತವು ತನ್ನ ಸ್ಥಾನವನ್ನು ಮೇಲ್ದರ್ಜೆಗೇರಿಸಿ, ಇಟ್ಟುಕೊಂಡಾಗಿದೆ; ಅದು ಜಾತ್ಯಾತೀತ ಜನತಾ ರಾಜ್ಯವಾಗಿದೆ. ಇಂತಹ ರಾಜ್ಯದಲ್ಲಿ ಜಾತಿಯನ್ನಾಧರಿಸಿ ಯಾರನ್ನೇ ಆದರೂ ಹೊರಗಟ್ಟಿದರೆ, ಅದು ತನ್ನನ್ನು ತಾನೇ ಇರಿದುಕೊಂಡಂತಾಗುವುದು; ತನ್ನ 'ಲೌಕಿಕ' ಸ್ವರೂಪವನ್ನೇ ಅದು ಕುರೂಪಗೊಳಿಸಿಕೊಂಡಂತಾಗುವದು. ಪಾಕಿಸ್ತಾನವಾದರೋ 'ಮುಸ್ಲಿಂ ರಾಷ್ಟ್ರ'; ಮುಸ್ಲಿಮೇತರರನ್ನು ಪರಕೀಯರೆಂದು ಭಾವಿಸಿ, ಮರ್ದಿಸಿ, ಮನೆಬಿಡಿಸುವ ಕಠೋರತೆಯು ಅದರ ಸ್ವಭಾವದಂತೆಯೇ ರಾಷ್ಟ್ರೀಯತೆಗೂ ಹೇಳಿಸಿದ್ದೇ. ಈ ರೀತಿ ಮುಸ್ಲಿಂ ಪಾಕಿಸ್ತಾನಕ್ಕೆ ಅಲ್ಲಿಂದ ಹಿಂದುಗಳನ್ನೋಡಿಸುವುದು ಸರ್ವ ದೃಷ್ಟಿಯಿಂದಲೂ ಸಮರ್ಥಕವೆನ್ನಿಸಿರುವಂತೆಯೇ ಜನತಾರಾಜ್ಯ ಭಾರತದ ಪಾಲಿಗೆ ಮುಸ್ಲಿಮರನ್ನು ಸಮಾನತೆಯಿಂದ ಕಂಡು ಇಟ್ಟುಕೊಳ್ಳುವುದೂ ಸರ್ವಸಮಂಜಸವಾಗಿದೆ.

ಇಕ್ಕಡೆಯವರ ಈ ಮೂಲ ತತ್ವಾವಶ್ಯತೆಗಳ ಪೈಕಿ ಒಂದನ್ನು ಮತ್ತೊಂದು ಹಿಡಿದು ನುಂಗುವಂತಹದಿದೆ. ಕಣ್ಣು ಕುಕ್ಕುವ ಪಾಕಿಸ್ತಾನ್ ಧೋರಣೆಯದಿರಲ್ಲಿ, ಕಳೆಸವರುವ ಭಾರತ ಧೋರಣೆಯು ಪರಾಭವಗೊಳ್ಳುವಂತಹದಿದೆ. ಆ ಕಾಲದ ಕಾಂಗ್ರೆಸ್—ಲೀಗು ಚಳವಳಿಗಾರ ಇತ್ತಂಡಗಳು ಈ ಕಾಲದಲ್ಲಿ ಭಾರತ-ಪಾಕಿಸ್ತಾನ್ ಸರಕಾರಗಳಾಗಿ ಮಾರ್ಪಟ್ಟರೂ ಅಂದಿನಿಂದಿಂದು ವರೆಗೆ ಏಕಪ್ರಕಾರ ಈ ಕಡೆಯ ವಿನಯಶೀಲತೆಯನ್ನು ಆ ಕಡೆಯ ಕಠೋರತೆ ಕಬಳಿಸುತ್ತಾ ಬಂದಿದೆ. ಇದೊಂದನ್ನು ಬಿಟ್ಟರೆ ಬೇರಾವುದರಲ್ಲೂ ಭಾರತದ ಮೇಲ್ಗೈ ಪಾಕಿಸ್ತಾನವಲ್ಲ; ಹಾಗಾಗಲು ಸಾಧ್ಯವೇ ಇಲ್ಲ. ಇದೊಂದನ್ನು ಬಿಟ್ಟರೆ ಮಿಕ್ಕೆಲ್ಲದರಲ್ಲೂ ಈ ಕಡೆಯವರನ್ನು ಅಣಕಿಸುವುದೊಂದನ್ನಲ್ಲದೆ ಬೇರೇನನ್ನೂ ಆ ಕಡೆಯವರು ಮಾಡಿದ್ದಿಲ್ಲ!

ಆದರೆ ಅಂದಿನಿಂದಿದು ವರೆಗೂ ಪಾಕಿಸ್ತಾನಿಗಳನ್ನು ತಿದ್ದುವ ಪ್ರಯತ್ನವನ್ನಲ್ಲದೆ, ಅಣಕಿಸುವ ಹವ್ಯಾಸಕ್ಕೆ ಹೋಗದಿರುವ ಭಾರತೀಯರು ಅಲ್ಪಸಂಖ್ಯಾಕರ ಮೇಲಿನ ಅತ್ಯಾಚಾರವೊಂದರ ಮಟ್ಟಿಗೆ ಅವರನ್ನು ಅಣಕಿಸಹೋಗುವರೆ? ಹೋಗಲಾರರು; ಹೋಗಕೂಡದು. ಆದರೆ ಅಂದಿನಿಂದಿದು ವರೆಗೂ ಅವರ ಕಠೋರತೆಗೆ ಬಲಿ ಕೊಡುತ್ತಾ ಬಂದಿರುವ ತಮ್ಮ ನಮ್ರತೆಯನ್ನು ತಪ್ಪಿಸಿಕೊಳ್ಳುವ ಕೆಲಸವಾದರೂ ಭಾರತದಿಂದ ಈಗ ಅಗತ್ಯ ಆಗಬೇಕಾಗಿದೆ. ಅದು ಹೇಗೆ ಸಾಧ್ಯ, ಎಂಬುದನ್ನೀಗ ನೋಡಬೇಕಾಯಿತು.

ಭಾರತದಲ್ಲಿರುವ ಮುಸ್ಲಿಮರು ಭಾರತೀಯರೇ ಇರುವುದರಿಂದ, ಅವರನ್ನಿಲ್ಲಿಂದ ಓಡಿಸಲಾಗುವದಿಲ್ಲ. ಈ ಜಾತ್ಯಾತೀತ ರಾಷ್ಟ್ರೀಯತೆಗನುಸಾರವಾಗಿ ಪಾಕಿಸ್ತಾನದಲ್ಲಿರುವ ಹಿಂದುಗಳು ಪಾಕಿಸ್ತಾನಿಗಳೇ ಇರುವುದರಿಂದ ಅಲ್ಲಿಂದೋಡಿಬರುವ ಆ ವಿದೇಶಿಯರನ್ನು ಇಲ್ಲಿ ಪ್ರವೇಶಿಸಲು ಭಾರತ ಸರಕಾರವು ಬಿಡಬಾರದೆನ್ನೋಣವೆ? ಶಾಂತಂ ಪಾಪಂ! ಇಲ್ಲಿಯ ಮುಸ್ಲಿಮರಿದ್ದಂತಿರಲಿ; ಇಲ್ಲಿಯ ಹಿಂದುಗಳೆಲ್ಲರೂ ಮನೆ ಬಿಟ್ಟು ಇಲ್ಲಿಗೆ ಬಂದುಬಿಡಲಿ; ಎಲ್ಲರನ್ನೂ ಸುಧಾರಿಸಿ ಬಿಡೋಣವೆ? ಮನಸ್ಸನ್ನಷ್ಟು ದೊಡ್ಡದುಮಾಡಿದಷ್ಟು ಸುಲಭದಲ್ಲಿ ದೇಶದ ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿಪಡಿಸಿಕೊಂಡು, ಎಲ್ಲರಿಗೂ ಅನುಕೂಲ ಮಾಡಿಕೊಡಲು ಸಾಧ್ಯವಿದ್ದರಾಗುತಿತ್ತು; ಆದರೆ ಸಾಧ್ಯವಿಲ್ಲ! ಹಾಗೆ ಮಾಡಿದಲ್ಲಿ, ಪಾಕಿಸ್ತಾನದ ಪಾಪದ ಹೊರೆಯನ್ನೂ, ಅದರ ಕಲಂಕ ವೆಚ್ಚ ಭಾರವನ್ನೂ ತಾನು ಹೊತ್ತುಕೊಂಡು, ಅಲ್ಲೇ ಕುಸಿದು ಪಾಕಿಸ್ತಾನವನ್ನು ಸ್ವಂತ ಕೈಯಿಂದ ತನ್ನ ಮೈ ಮೇಲೇರಿಸಿ, ತಾನದರ ಕಾಲಡಿಗೆ ಸ್ವಬುದ್ಧಿಯಿಂದ ಭಾರತವು ಬಿದ್ದಂತಾಗುವುದು. ಒಂದು ರಾಷ್ಟ್ರ ಹೀಗೆ ಮಾಡಬಲ್ಲುದೆ? ಅಸಾಧ್ಯ! ಅಸಹಾಸ್ಯಕರ!! ಆತ್ಮಹತ್ಯಾ ಸಮಾನ!!!

ಹಾಗಾದರೆ ಬೇರೆ ಹಾದಿಯಾವುದಿದೆ? ತನ್ನ ಮೇಲೆ ಪ್ರತ್ಯಕ್ಷ ದುಷ್ಪರಿಣಾಮ ಬೀರುತ್ತಿರುವ ಪಾಪಾಚರಣೆಗಳನ್ನು ಕೈಕೊಂಡಿರುವ ನೆರೆಯ ರಾಷ್ಟ್ರವನ್ನು ತಿದ್ದಲು ಅದರ ಮೇಲೆ ಧಾಳಿಯಿಡಬೇಕಾಗಬಂತು, ಈ ಕರ್ತವ್ಯವನ್ನು ಮೃದು ವಿಧಾನದಿಂದ ಕೈಕೊಳ್ಳುವುದೆಂದರೆ, ಪಾಕಿಸ್ತಾನದಿಂದ ಭಾರತಕ್ಕೋಡಿಸಿರುವ ಹಿಂದುಗಳ ಪಾಲು ನೋಡಿ, ಅಷ್ಟಂಶವನ್ನು ಕೂಡಲೇ ಭಾರತಕ್ಕೆ ಬಿಟ್ಟುಕೊಡತಕ್ಕದೆಂದು ಪಾಕಿಸ್ತಾನದೊಂದಿಗೆ ಕೇಳಿ, ವಾದ ಹೂಡಿ, ಹೋರಾಡಲೇಬೇಕಾದೀತು. ಆ ಕರ್ತವ್ಯವನ್ನು ಕೆ

**On this Memorable day**

Of the 26th of January in the year 1950 of the inauguration of the Indian Republic, we have the pleasure to announce the birth of our

**Vijaya Cash Certificates**

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices.

*Head Office:*—**Kadri Road, Mangalore.**

Branches:- City-Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara.

**B. Manjaya Hegde.**

Advocate & President, District Board, S. Kanara.

CHAIRMAN

VIJAYA BANK, LTD.

ಯಿಲ್ಲ; ಭಾರತ ಸಂಯುಕ್ತರು ಶೀಘ್ರದಿ ಯುವಂತೆ ಅತಿಸೂಕ್ಷ್ಮವಾಗಿ ಬಾಕಿ— ಭಾಗೇಕೆ, ಎಂಬುದೇ ಈಗ ಹಲವರ ಪ್ರಶ್ನೆಯಾಗಿದೆ

ಮೇಲಿನ ವಾದ,ಮತ್ತದಕ್ಕನುಗುಣವಾಗಿ ಪಾಠ, ಎರಡನ್ನೂ ಒಟ್ಟೊಟ್ಟಿಗಿಡುತ್ತಾ ಭಾರತವು ಪಾಕಿಸ್ತಾನದ ಮುಂಗಡೆಯಿಂದೊಳಗಡೆವರೆಗೂ ಹೋಗಬೇಕಾದ ವಿಧಾನವಿದು; ಹೈದರಾಬಾದಿಗೆ ಮಾಡಿದ್ದನ್ನೇ ಪೂರ್ವ ಬಂಗಾಳಕ್ಕೆ ಮಾಡಬೇಕಾಗಿರುವ ಸನ್ನಿವೇಶವಿದು. ಇಲ್ಲಿ ದೂರದ ಮತ್ತು ಸುತ್ತುಮುತ್ತಲಿನ ದೃಷ್ಟಿಯು ಭಾರತಕ್ಕಿರಬೇಕಾದುದು ಅಗತ್ಯ. ಭಾರತನಾಯಕರಾದರೋ ಈಗ ಆ ನೋಟದಲ್ಲಿದ್ದಾರೆ ಹೊರತು ಕಣ್ಣುಮುಚ್ಚಿಕೊಂಡಿಲ್ಲ.

ಅವರನೋಟಕ್ಕೀಗ ತೋರುತ್ತಿರಬಹುದಾದ ವಿಷಯಗಳಿವು:- ಪಾಕಿಸ್ತಾನದ ಮೇಲೆ ತಾವು ಬಿದ್ದಾಗ, ರಾಷ್ಟ್ರರಾಷ್ಟ್ರಗಳೊಳಗಿನ ಘರ್ಷಣೆಯನ್ನು ತಪ್ಪಿಸುವುದಕ್ಕಾಗಿ ಇರುವ ಸಂಯುಕ್ತ ರಾಷ್ಟ್ರಸಂಘದ ಭದ್ರತಾ ಕೌನ್ಸಿಲು ಮಧ್ಯೆ ಕೈಹಾಕದೆ ಸುಮ್ಮಗಿರುವಂತಿಲ್ಲ. ದೂರದ ರಾಷ್ಟ್ರಗಳ ಸ್ಥಿತಿಗತಿ ಮತ್ತು ಮನೋವೃತ್ತಿಗಳ ಯಥಾರ್ಥ ಪರಿಚಯವಿಲ್ಲದೆ, ತಮ್ಮ ನಿಯಮಾವಳಿ ಗ್ರಂಥದ ಪುಟ ಮಗುಚಿ ನೋಡಿಯೇ ಅಲ್ಲಿಯ ವಿವಾದಗಳಿಗೆ ಅರ್ಥಕಟ್ಟುತ್ತಿರುವ ಭದ್ರತಾ ಕೌನ್ಸಿಲಿನವರ ಯೋಗ್ಯತೆಯು ಕಾಶ್ಮೀರ ವಿವಾದದ ವಿಚಾರಣೆಯಲ್ಲಿ ಬೆಳಕು ಕಂಡಿದೆ. ಅವರ ತೀರ್ಮಾನಗಳನ್ನು ಕಡೆಗಣಿಸಿ, ತಮ್ಮ ಮನಸ್ಸಾಕ್ಷಿಗನುಸಾರವಾಗಿ ವರ್ತಿಸೋಣವೆಂದರೆ ಲೋಕಮತವು ತಮ್ಮನ್ನು—ನ್ಯಾಯಸಾಧನೆಗೆಂದು ಇಷ್ಟನ್ನೂ ಸಹಿಸಿಕೊಂಡ ತಮ್ಮನ್ನೇ— 'ಅನ್ಯಾಯಗಾರರು' ಎಂದು ಕೈತೋರಿಸುವ ಸಂಭವವಿದೆ. ಮೇಲಾಗಿ ಭಾರತ ಮತ್ತು ಪಾಕಿಸ್ತಾನಗಳೆರಡೂ 'ಕಾಮನ್‌ವೆಲ್ತ್ ಕೂಟ'ದ ಸದಸ್ಯ ರಾಷ್ಟ್ರಗಳಾಗಿರುವ ಸ್ವತಂತ್ರ ರಾಷ್ಟ್ರಗಳಿರುವುದರಿಂದ ಒಂದು ಗುಂಪಿನ ಪೈಕಿ ಇಬ್ಬರು ಹೊಡೆದಾಡಿಕೊಳ್ಳುವಾಗ,ಮಿಕ್ಕವರು ಅದರ ಮಧ್ಯೆ ಬಾರದೆ ನಿಲ್ಲುವಂತಿಲ್ಲ. ಹೈದರಾಬಾದ್ ಪೋಲೀಸ್ ಕ್ರಿಯೆಯ ಮಟ್ಟಿಗೆ ಈ ರೀತಿ ಮೂರನೆಯವರ ಪಾಲು ನೋಡುವ ಕೆಲಸವಿರಲಿಲ್ಲ. ಹೀಗಾಗಿ ಪಾಕಿಸ್ತಾನದ ದುರ್ಬುದ್ಧಿ ಕಳಚಿ ಬೀಳುವ ವರೆಗೂ ತಾಡನ ಕೊಡೋಣವೆಂದರೆ ತಮ್ಮ ಕೈತಡೆಯುವವರಿದ್ದೇ ಇದ್ದಾರಾದ್ದರಿಂದ, ತಾವೇ ಮುಂದಾಗಿ ಸಾಕಷ್ಟು ಹೊತ್ತು ಕೈತಡೆದು ನಿಲ್ಲುವದು ವಿಹಿತವೆಂದು ಭಾರತ ನಾಯಕರು ಕಾಯುತ್ತಿರಬೇಕು.

ಕ್ರಮ, ಕಾಯಿದೆಗಳನ್ನು ನೋಡಿಯೇ ತಪ್ಪು ಸರಿಗಳನ್ನುಹೇಳುತ್ತಿರುವ ಭದ್ರತಾ ಕೌನ್ಸಿಲು 'ತನ್ನಷ್ಟಕ್ಕೆ ತಾನೇ ಹಿಂದೂಗಳನ್ನು ಹೊಡೆದೋಡಿಸಿದ ಪಾಕಿಸ್ತಾನದ ಹಿಂಸಾಕೃತ್ಯಗಳ ಪ್ರಶ್ನೆಯೇ ಬೇರೆ; ಭಾರತವು ಅದರ ಮೇಲೆ ಧಾಳಿ ನಡೆಸಿದುದು ತಪ್ಪು' ಎಂದು ತೀರ್ಮಾನ ಕೊಡುವದು ಸಂಭವನೀಯ. ಆದ್ದರಿಂದ ಪಾಕಿಸ್ತಾನವೇ 'ನಮ್ಮ ಗಡಿಯೊಳಗೆ ನುಗ್ಗಿ ಬಂದು, ನಮ್ಮ ಇರುವಿಕೆಗೆ ಅಪಾಯವೊಡ್ಡಿದ್ದರಿಂದ ನಾವು ಸ್ವರಕ್ಷಣೆಗಾಗಿ ಅದರ ಮೇಲೆ ಬೀಳಬೇಕಾಯಿತು.' ಎಂದು ಕಾರಣ ಕೊಡುವ ಸಂದರ್ಭ ಭಾರತಕ್ಕೆ ದೊರಕಿದರೆ ಉತ್ತಮ. ಅಸ್ಸಾಮಿನ ಗಡಿಯಲ್ಲಿ ಪಾಕಿಸ್ತಾನಿಗಳು ನಡೆಸಿರುವ ವಿಶೇಷಾಚರಣೆಗಳು ಅಂತಹ ಸಂದರ್ಭವನ್ನು ಒದಗಿಸುವಂತಹವಿವೆಯಾದ್ದರಿಂದ ಕಾಲ ಸಮೀಪಿಸುತ್ತಿರಬಹುದು. ನಾಯಕರದನ್ನು ನಿರೀಕ್ಷಿಸಿ ನಿಂತಿರಬಹುದು.

ಜನತೆಯಲ್ಲಿ ಆವೇಶವೆದ್ದಷ್ಟೇ ಸುಲಭದಲ್ಲಿ ಒಂದು ಯುದ್ಧವನ್ನೆಬ್ಬಿಸುವ ನಾಯಕರಾವ ರಾಷ್ಟ್ರಕ್ಕಾದರೂ ಇದ್ದರೆ, ಆ ರಾಷ್ಟ್ರದ ಅವಸ್ಥೆ ಅಷ್ಟಕ್ಕೇ ಮುಗಿದಂತೆಯೇ ಸರಿ! ಪರಸ್ಪರ ಕೆಂಗಣ್ಣಿಕೆಗಳಷ್ಟೇ ನಡೆದರೂ ಯುದ್ಧಕ್ಕಿಳಿಯಲು ಹಿಂಜರಿಯುತ್ತಿರುವ ರಶ್ಯಾ-ಅಮೇರಿಕಗಳ ಇಂದಿನ ಸ್ಥಿತಿಯ ಮೇಲಿಂದಾದರೂ ಯುದ್ಧವೇನೂ ಮಕ್ಕಳಾಟವಲ್ಲವೆಂಬುದನ್ನು ತಿಳಿದಿರಬೇಕು. ತಮ್ಮ ಮತ್ತು ತಮ್ಮಿದಿರು ಕಡೆಯವರ ಬಲಾಬಲ ಮತ್ತು ಅನುಕೂಲತೆ ಅನಾನುಕೂಲತೆಗಳೆಲ್ಲವನ್ನೂ ತುಲನೆ ಮಾಡಿಕೊಂಡು, ಎಲ್ಲಾ ಸಂಭವಗಳಿಗೂ ಹೊಂದಿಕೆಯಾಗಬಲ್ಲ ಯೋಜನೆಗಳನ್ನು ಮುಂದಾಗಿ ತಯಾರಿಸಿಟ್ಟುಕೊಂಡೇ ಯುದ್ಧಕ್ಕೇಳಬೇಕು. ಭಾರತ—ಪಾಕಿಸ್ತಾನಗಳೊಳಗೆ ಯುದ್ಧವೇ ಆದರೆ ಆ ರಂಗವು ಲೋಕದ ಎರಡು ಪಾಳಯಗಳನ್ನೂ ಆಕರ್ಷಿಸಿಕೊಳ್ಳುವ ಸಂಭವವಿದೆ. ಹೀಗಿರುವಾಗ ಕೊನೆಯ ಲೆಕ್ಕಹಾಕುವಾಗ ಕೇವಲ ಪಾಕಿಸ್ತಾನವೊಂದರ ಬಲಾಬಲವನ್ನೇ ನೋಡಿಕೊಳ್ಳದೆ, ಅದರ ಭಾವೀ ಸಂಬಂಧಿಕರಾರಾಗಬಹುದು, ಮತ್ತವರೆಂಥವರು, ಎಂಬ ಅಂದಾಜನ್ನು ಮುಂದಾಗಿ ಕಟ್ಟಿಕೊಳ್ಳಬೇಕಾಗಿದೆ.

ಮೇಲಾಗಿ ಯುದ್ಧನಿರತ ರಾಷ್ಟ್ರವೊಂದು ಒಳಗಡೆಯಲ್ಲಿ ಸಮೃದ್ಧ, ಅಭೇದ್ಯ ಹಾಗೂ ಏಕಮುಖಿಯಾಗಿರಬೇಕಾದುದು ಎಲ್ಲಕ್ಕಿಂತ ಮುಖ್ಯವೆಂಬುದನ್ನು ಲಕ್ಷ್ಯಿಸಬೇಕು. ಇಸ್ಲಾಮ್ ರಾಷ್ಟ್ರ ಪಾಕಿಸ್ತಾನದೊಡನಾಗುವ ಯುದ್ಧದ ಕಡೆಗೆ, ಭಾರತದೊಳಗಡೆಯಲ್ಲಿರುವ ಸುಮಾರು 6 ಕೋಟಿ ಮುಸ್ಲಿಮರ ಮನೋವೃತ್ತಿ ಹೇಗಿದ್ದೀತು, ಎಂಬುದನ್ನು ಸರ್ವ ಪ್ರಥಮವಾಗಿ ಲಕ್ಷ್ಯಿಸಬೇಕಾಗಿದೆ. ಭಾರತದ ಮೇಲೆ ಬೀಳುವ ಇಚ್ಛೆಯಿರುವುದರಿಂದಲೇ ಪಾಕಿಸ್ತಾನಿಗಳು ಮುಂಜಾಗರೂಕತೆವಹಿಸಿ, ತಮ್ಮೊಳಗಡೆಯ 'ಹಿಂದೂ ಕಂಟಕ'ವನ್ನು ಝಾಡಿಸಿಕೊಳ್ಳುವುದಕ್ಕಾಗಿ ಪೂರ್ವ ಬಂಗಾಳದಲ್ಲಿ ಅಂತಹ ಅತ್ಯಾಚಾರ ನಡೆಸುತ್ತಿರಬಹುದೇ, ಎಂಬ ಸಂದೇಹವೇಳುತ್ತಿದೆ. ಮುಸ್ಲಿಮರಿಗೆರಡನೆಯದಾಗಿ, ಕಮ್ಯೂನಿಸ್ಟರ ಕಡೆಗೆ ನೋಡಲಿಕ್ಕಿದೆ. ಇಂದಿನ ಸರಕಾರವನ್ನು ಅಡಿಮೇಲು ಮಾಡಿ ಹಾಕುವ ಗುರಿಯಿಟ್ಟುಕೊಂಡಿರುವ ಕಮ್ಯೂನಿಸ್ಟರು, ಸರಕಾರವು ಪರರಾಷ್ಟ್ರದೊಡನೆ ಸಮರ ನಿರತವಾಗುವ ಸಂದರ್ಭವನ್ನು ತಮ್ಮ ಅನುಕೂಲತೆಗಾಗಿ ಸರ್ವಶಕ್ತಿಯಿಂದ ಉಪಯೋಗಿಸಿಕೊಳ್ಳುವ ಅಪಾಯವಿದ್ದೇ ಇದೆ. ಸಮತಾವಾದಿಗಳಂತಹ ರಾಷ್ಟ್ರಪ್ರೇಮಿಗಳು ದೇಶದ ಈ ಜೀವನ ಮರಣದ ಪ್ರಶ್ನೆಯ ಸಂದರ್ಭದಲ್ಲಿ ಸರಕಾರಕ್ಕೆ ಪೂರ್ಣ ಬೆಂಬಲವಾಗಬಹುದಾದರೂ ಅನ್ಯೋದ್ದೇಶವುಳ್ಳ ದೇಶದ್ರೋಹಿ ಪಕ್ಷಗಳ ಅಡ್ಡಗಾಲಿಡುವ ಪ್ರಯತ್ನ ನಡೆಸದಿರಲಾರವು. 'ಇಸ್ಲಾಂ ಅಪಾಯದಲ್ಲಿದೆ' ಎಂಬ ಕೂಗು ಕೇಳಿದೊಡನೆ ಎಲ್ಲವನ್ನೂ ಮರೆತು ಸೂಡಿಕಟ್ಟುವ ಜನಾಂಗವನ್ನಾಳುತ್ತಿರುವ ಪಾಕಿಸ್ತಾನ್ ನಾಯಕರಿಗೆ ಇಂತಹ ಆತಂಕವಿಲ್ಲವೆಂಬುದು ನೆನಪಿರಲಿ.

ರಾಷ್ಟ್ರದೊಳಗಡೆ ಆಹಾರಾಭಾವವಿರುವ ಕಾಲವಿದು. ರಾಷ್ಟ್ರದ ಉತ್ಪನ್ನವನ್ನು ಹೆಚ್ಚಿಸಿಕೊಳ್ಳಲು ಸರ್ವ ಲಕ್ಷ್ಯ ಕೊಡಬೇಕಾಗಿರುವ ಅವಧಿಯಿದು. ಈ ಸಂದರ್ಭದಲ್ಲೇ ರಾಷ್ಟ್ರವು ತನ್ನ ಸರ್ವ ಲಕ್ಷ್ಯ, ಶಕ್ತಿ, ಶ್ರಮ ಮತ್ತು ಅನುಕೂಲತೆಗಳನ್ನು ಯುದ್ಧದತ್ತ ಹರಿಸಬೇಕಾಗಿ ಬಂದರೆ ಆಹಾರಧಾನ್ಯಗಳ ಚಲನವಲನಕ್ಕೂ, ಅಧಿಕಾಹಾರಮತ್ತು ಕಾರ್ಖಾನೆಗಳ ಉತ್ಪನ್ನಗಳಿಗೂ ಎಂತಹ ಧಕ್ಕೆ ಬಿದ್ದು, ಎಂತಹ ಅಸಾಮಾನ್ಯ ಸ್ಥಿತಿಯುಂಟಾದೀತೆಂಬುದನ್ನೂ ಊಹಿಸಿಕೊಳ್ಳಲಿಕ್ಕಿದೆ.

ನಮ್ಮ ರಾಷ್ಟ್ರನಾಯಕರು ಯುದ್ಧವನ್ನು ತಪ್ಪಿಸಲಾಗುವ ಸರ್ವ ಪ್ರಯತ್ನಗಳನ್ನೂ ಮಾಡಿ, ಸಾಧ್ಯವಿದ್ದಷ್ಟು ಕಾಲ ಸಹಿಸಿ ನ್ಯಾಯ, ಶಾಂತಿ ಮತ್ತು ಇರುವಿಕೆಗಾಗಿ ಯುದ್ಧದ ಹೊರತು ಬೇರೆ ಹಾದಿಯೇ ಇಲ್ಲವೆಂದು ಪೂರ್ಣ ಖಚಿತವಾದ ಮೇಲೆಯೇ ಆ ಕೊನೆಯ ಕಮನಕ್ಕೆ ಕೈಹಚ್ಚುವವರು.

ಇವೆಲ್ಲಾ ಕಾರಣ ಮತ್ತು ವಿದ್ಯಮಾನಗಳ ತುಲನೆ, ಶೋಧನೆ, ಚಿಂತನೆಗಳಲ್ಲೇ ನಮ್ಮ ರಾಷ್ಟ್ರನಾಯಕರೀಗ ಇದ್ದಿರಬೇಕು. ಎಂದೂ ಪಶ್ಚಾತ್ತಾಪಪಡಲಾಗದ ರೀತಿಯಲ್ಲಿ ಅವರೀಕುರಿತು ನಿರ್ಧಾರಕ್ಕೆ ಬಂದು ಕಾರ್ಯ ಕೈಕೊಂಡು, ಸಾಧಿಸಿಯಾರು; ಈ ಮಟ್ಟಿಗೆ ಜನತೆಯು ಪೂರ್ಣ ಭರವಸೆಯಿಂದಿರಬೇಕು.

## ಜನತೆಯ ಕರ್ತವ್ಯ

ನಾಯಕರು ತಪ್ಪಿ ಬೀಳಲಾರರೆಂಬುದನ್ನು ಖಂಡಿತ ಮಾಡಿಕೊಂಡು, ಸಾರ್ವಜನಿಕರೀಗ ಆ ಕಡೆಗಿನ ತಮ್ಮ ಶೋಧನಾತ್ಮಕ ದೃಷ್ಟಿಯನ್ನು ಸ್ವತಃ ತಮ್ಮ ಕಡೆಗೇನೇ ಹೊರಳಿಸಿಕೊಂಡು, ತಮ್ಮಲ್ಲಿರುವ ಲೋಪದೋಷಗಳನ್ನು ತಿದ್ದಿಕೊ... ಎಂತಹ ಸಂದರ್ಭವೊದಗಿದರೂ ... ದಿರಿಸುವ ಧೈರ್ಯ, ಸಾಹಸ, ಶಿಸ್ತು ... ಯಮಗಳನ್ನು ತಮ್ಮಲ್ಲಿ ಆವಾಹನೆ ... ಡಿಕೊಂಡು ತಯಾರಿರಬೇಕು.

ಗಳಿಸಿಕೊಂಡ ಸ್ವಾತಂತ್ರ್ಯವೆಷ... ಮೂಲ್ಯವಾದುದೆಂಬುದನ್ನೂ, ... ಧ್ಯೇಯ, ಧೋರಣೆಯೆಂತಹದಿದ್ದ... ದರ ಸಾಧನೆಗೆ ಈ ಸ್ವಾತಂತ್ರ್ಯವಿರ... ದುದು ಮೂಲ ಅಗತ್ಯವೆಂಬುದನ್ನೂ ... ತಹ ರಾಷ್ಟ್ರೀಯ ವಿಪತ್ತು ... ದು ಪಕ್ಷಕ್ಕೆ ಅಥವಾ ಧೋರಣೆಗೆ ... ಧಿಸಿರದೆ, ಇಡೀ ರಾಷ್ಟ್ರದ ಪ್ರತಿಯೊ... ದೈನಂದಿನ ಜೀವನಕ್ಕೇನೇ ಲಗಾ... ವಂತಹದೆಂಬುದನ್ನೂ ಪ್ರತಿಯೊ... ಗ್ರಹಿಸಿಕೊಂಡು, ಮಿಕ್ಕೆಲ್ಲವನ್ನೂ ... ಸ್ವಾತಂತ್ರ್ಯ ರಕ್ಷಣೆಗಾಗಿ ತನ್ನ ಸ... ದೊಡನೆ ಪ್ರಾಣವನ್ನು ಮುಡಿಪಾಗಿ... ಲ್ಲುವದು ಪ್ರತಿಯೊಬ್ಬನ ಪಾಲಿಗೆ ಬ...

ಸಾವು— ಬದುಕಿನ ಸವ... ರುವ ಈ ಪರಮಾವಧಿಯಲ್ಲಿ ಭಾರ... ಷ್ಟ್ರಕ್ಕೆ ಎಳ್ಳಷ್ಟು ದ್ರೋಹಪ್ರ... ಗಬಲ್ಲ ಕೃತಿ, ಮಾತು, ಭಾವನೆ, ... ಲ್ಲಿ ಕಂಡು ಬಂದರೂ ಆತನನ್ನು ಮ... ರಾಧಿಯಾಗಿ ಗಣಿಸಿ ಶಿಕ್ಷಿಸಲು ... ಯಬಾರದು.

ಭಾರತದೊಳಗಿರುವ ಮುಸ್ಲಿ... ತಮ್ಮ ಸ್ವಭಾವಬದ್ಧ ... ಕಾಲಾನುಗತ 'ಪಾಕಿಸ್ತಾನ್' ಮ... ಯನ್ನು ಮರೆಮಾಡಿಕೊಳ್ಳುವದಷ್ಟೆ... ಲ್ಲ—ಸಮೂಲವಾಗಿ ನಾಶಮಾ... ಡು, ರಾಷ್ಟ್ರರಕ್ಷಣೆಯ ಮಟ್ಟಿಗೆ ... ಭಾರತೀಯರಲ್ಲದೆ ಬೇರಾರೂ ಅಲ್ಲ... ದನ್ನು ಮನಸ್ಸಾಕ್ಷಿಯಾಗಿ ಮಾಡಿ... ಬೇಕು. ಮುಸ್ಲಿಮೇತರರು ತಮ್ಮ... ಶಬಂಧು ಮುಸ್ಲಿಮರನ್ನು ಕಾಯಾ... ಚಾ ಮನಸಾ ತಮ್ಮವರೆಂದೇ ಕಟ್ಟಿ... ಬೇಕು—ಅವರ ಕಡೆಗೆ ವಿನೋದ... ಯಾದರೂ, ಹಿಂಗಡೆಯಲ್ಲಾದರೂ ... ಕಿಸ್ತಾನದವರು' ಎಂಬ ಸಂಬೋ... ಕೂಡಾ ಇರಕೂಡದು

ಭಾರತದಲ್ಲಿರುವವರೆಲ್ಲರೂ ಏಕ... ದಿಂದ—ಪೂರ್ಣ ಲಕ್ಷ್ಯ, ಶಕ್ತ್ಯ... ಲತೆಗಳೊಂದಿಗೆ—ಎಲ್ಲಿಯೂ ಯ... ನ್ನೂ ಬಾಕಿ ಬಿಡದೆ—ತಮ್ಮನ್ನು ... ರಾಷ್ಟ್ರಾರ್ಪಣೆ ಮಾಡಿಕೊಂಡು, ... ಸಂದರ್ಭದಲ್ಲಿ, ಎಂತಹ ಆಚರಣೆ... ಯಾರಾಗಿ ನಿಲ್ಲಲಿ. ಹಾಗಿದ್ದರೆ ಇಡಿ... ರಾಷ್ಟ್ರದ ಮತ್ತು ಪ್ರತ್ಯಪ್ರತ್ಯೇಕವಾ... ತಿಯೊಬ್ಬನ ಭವಿಷ್ಯವೂ ಉಜ್ವಲ... ವುದು; ಸುಭದ್ರವಾಗುವುದು; ಪ್ರ... ಮಿ ಮತ್ತು ಚಿರಂಜೀವಿಯಾಗುವುದ...


ಎಲ್ಲಾ ತರದ ಶಾಸ್ತ್ರೀಯ
ಆಯುರ್ವೇದ ಔಷಧಗಳಿಗೆ
'ಮಹಾಜನ'
ಕಾಸರಗೋಡು
ಇವರ ತಯಾರಿಕೆಗಳನ್ನು
ವಿಚಾರಿಸಿರಿ.

*Nambiar's*
**ARYA VAIDYA SALA**
**UDIPI**
*Ideal House for Ayurvedic Treatment.*
T. N. Kelu Nambiar,
Vaidya.

ಮೂಲ್ಕಿ ಬೇಂಕ್
ಲಿಮಿಟೆಡ್, ಮೂಲ್ಕಿ.
1921ರಲ್ಲಿ ಸ್ಥಾಪಿತವಾಗಿ ... ವರುಷಗಳಿಂದ ಊರ ಜನರ ಹಿ...ಕ್ಕಾಗಿ ಡಿಪೋಸಿಟ್ ಹಣಕ್ಕೆ ನ...ಯವಾದ ಬಡ್ಡಿಯಿಂದಲೂ, ಸಾ...ದ ಹಣಕ್ಕೆ ಅತೀ ಕಡಿಮೆ ದ... ಬಡ್ಡಿಯಿಂದಲೂ ಜನ ಹಿತಸಾ...ನೆಯನ್ನು ಮಾಡುತ್ತಿರುವುದು.
**The Moolky Bank Ltd**
**Moolky, S. K.**

# ಲಾಯಕ್ ಆಲೀ ಪಲಾಯನ ಕಥೆ!

ಕಳೆದ ವಾರ ಪ್ರಕಟವಾದಂತೆ, ರಝಾಕಾರ್ ಹಾವಳಿ ಕಾಲದಲ್ಲಿ ಹೈದರಾಬಾದಿನ ಮುಖ್ಯ ಮಂತ್ರಿಯಾಗಿದ್ದು ಭಾರತ ಸರಕಾರದ ಪೋಲಿಸ್ ಕ್ರಿಯೆ ಯಶಸ್ವಿಯಾದೊಡನೆಯೇ ತನ್ನ ಮಂಡಳಿಯ ಇತರ ಮಂತ್ರಿಗಳೊಂದಿಗೆ ಮನೆ ಬಂಧನದಲ್ಲಿದ್ದ ಮೀರ್. ಲಾಯಕ್ ಆಲಿಯು ಬಂಧನದಿಂದ ಕಾಣೆಯಾಗಿರುವುದು ಮಾರ್ಚ ತಾ ೬ರಲ್ಲಿ ತಿಳಿದು ಬಂತು; ಎಂತಹ ಶೋಧ ನಡೆದರೂ ಅವರ ಪತ್ತೆಯಾಗಿಲ್ಲ. ಲಾಯಕ್ ಆಲಿ, ಹೈದರಾಬಾದನ್ನಷ್ಟೇ ಅಲ್ಲ, ಭಾರತದ ಗಡಿಯನ್ನೂ ಇಷ್ಟರಲ್ಲೇ ದಾಟಿ ಕರಾಚಿ ಸೇರಿ ಆಗಿದೆ– ಇಲ್ಲಿ ಮಾಯವಾಗಿದ ಅವರು ಸದ್ಯದಲ್ಲೇ ಯುರೋಪು ರಾಷ್ಟ್ರವೊಂದರಲ್ಲಿ ತಲೆಯೆತ್ತಲಿದ್ದಾರೆ, ಎಂದೀಗ ಸಾಧಾರಣವಾಗಿ ಊಹಿಸಲಾಗಿದೆ.

## ಮನೆನಿರ್ಬಂಧದಲ್ಲಿ

ಮೀರ್ ಲಾಯಕ್ ಆಲಿ, ಹೈದರಾಬಾದಿನ ಅಗ್ರಗಣ್ಯ ವ್ಯಾಪಾರಿ; ಜನ್ಮರ ಒಲವು ಸಂಪಾದಿಸಿದ್ದ ಜನ. ಹೈದರಾಬಾದಿನಲ್ಲಿ ರಝಾಕಾರ್ ಹಾವಳಿ ವ್ಯಾಪಿಸಿ, ರಜ್ವಿಯ ಅನುಗ್ರಹ ಸಂಪಾದಿಸದ ಯಾವ ಸರಕಾರವೂ ಇಲ್ಲಿ ಬಾಳಲಾರದೆಂಬುದು ಖಚಿತವಾದಾಗ ರಝಾಕಾರರ ಜನ್ಮದಾತ ಸಂಸ್ಥೆ ಇತ್ತೆಹಾದ್–ಉಲ್–ಮುಸ್ಲಿಮೀನಿನ ಸೂಚನೆಯಂತೆ ಮೀರ್ ಲಾಯಕ್ ಆಲಿ ಪ್ರಧಾನ ಮಂತ್ರಿತ್ವ ವಹಿಸಿದ್ದರು. ಅಧಿಕಾರ ಸ್ವೀಕರಿಸಿದೊಡನೆಯೇ ರಝಾಕಾರ ಪ್ರಾಬಲ್ಯಕ್ಕೆ ಪೂರ್ಣ ನೆರವಾಗಿದ್ದರು; ಅದಕ್ಕಾಗಿ ಸಮಯ ಸಂಪಾದಿಸಿಕೊಳ್ಳಲು ಸಂಸ್ಥಾನದ ನೆವ ಕಟ್ಟಿಕೊಂಡು ಹಲವು ಬಾರಿ ಡಿಲ್ಲಿಗೂ ಓಡಾಡಿದ್ದರು. ಭಾರತ ಸರಕಾರವು ಪೋಲಿಸ್ ಕ್ರಿಯೆ ಕೈಕೊಂಡು ಐದೇ ದಿನಗಳೊಳಗೆ ಲಾಯಕ್ ಆಲೀ ರಜ್ವಿ ಅವತಾರಗಳನ್ನು ಮುಗಿಸಿದೊಡನೆ ತನ್ನ ಮಂತ್ರಿ ಸ್ಥಾನಕ್ಕೆ ರಾಜೀನಾಮೆಯಿತ್ತ ಮೀರ್ ಲಾಯಕ್ ಆಲಿಗಳು ಮತ್ತು ಅವರ ಮಂತ್ರಿ ಮಂಡಳಿಯ ಸದಸ್ಯರಾದ ನವಾಬ್ ಫಾರೂಖುಲ್ ನವಾಜ್ ಜುಂಗ್, ಮೀರ್ ಅಬ್ದುಲ್ ರಾವೂಫ್, ಅಬ್ದುಲ್ ರಹೀಮ್, ಅಬ್ದುಲ್ ಹಮೀದ್ ಖಾನ್, ಪಿಂಗಳೆ ವೆಂಕಟರಾಮ ರೆಡ್ಡಿ, ಮೋಹನ್‌ಲಾಲ್ ಯೂವಿನ್ ಝುಬೇರಿ, ಬಿ. ಯಸ್. ವೆಂಕಟರಾವ್, ಇಂತಹವರು ಮನೆಯಲ್ಲೇ 1948ನೇ ಸೆಪ್ಟೆಂಬರ್ 18ರಿಂದ ದಿಗ್ಬಂಧನದಲ್ಲಿರಿಸಲ್ಪಟ್ಟರು. ಲಾಯಕ್ ಆಲಿಯು ಹೈದರಾಬಾದಿನ ಬೇಗಂಪುರದಲ್ಲಿರುವ ತನ್ನ ಭವ್ಯ ಬಂಗಲೆಯಲ್ಲೇ ಕಾವಲಿನಲ್ಲಿದ್ದರು. ಆ ಮನೆಯಲ್ಲಿದ್ದವರೆಂದರೆ ಲಾಯಕ್ ಆಲಿ, ಅವರ ಪತ್ನಿ, ಓರ್ವ ಮಗ ಮತ್ತು 5 ಮಂದಿ ಹೆಣ್ಮಕ್ಕಳು. ಹಿರಿಯ ಮಗಳು 24 ವರುಷದವಳು, 9 ವರುಷ ಪ್ರಾಯದ ಮಗ. ಮತ್ತಿಬ್ಬರು ಹೆಮ್ಮಕ್ಕಳು ಅಲ್ಲಿಯೇ ಶಾಲೆಗೆ ಹೋಗುತ್ತಿದ್ದರು. ಕೆಲ ಮಂದಿ ಸೇವಕ ಸೇವಕಿಯರೂ ಇದ್ದರು. ಹೊರ ವಲಯದ ಕಬ್ಬಿಣದ ಗೇಟುಗಳ ಬದಿ ಒಂದೊಂದು ಸಲಕ್ಕೆಂಟು ಮಂದಿಯಂತೆ ಉತ್ತರ ಪ್ರದೇಶದ ಸಶಸ್ತ್ರ ಪಹರೇಗಾರರು ನಿಂತಿರುವುದೇ ಆ ಮನೆಗಿದ್ದ ಕಾವಲು; ಪರ್ದಾ ಸ್ತ್ರೀಯರ ಜಡ್ತಿಗೆಂದು ಓರ್ವ ಮಹಿಳಾ ಕಾವಲಗಾತಿಯೂ ಇದ್ದಳು. ಈ ಕಾವಲುಗಾರ ದಳವು ವಾರಕ್ಕೆರಡಾವರ್ತಿ ಸೋಮವಾರ ಮತ್ತು ಗುರುವಾರ ಬದಲಾಗುತ್ತಿತ್ತು. ಲಾಯಕ್ ಆಲಿಯ ಬಂಗಲೆಯಿದಿರುಗಡೆಯಲ್ಲೇ ಹೈದರಾಬಾದ್ ಪೋಲೀಸ್ ಇನ್ಸ್‌ಪೆಕ್ಟರ್ ಜೆಟ್ಲೆಯವರ ಬಂಗಲೆಯಿದೆ. ಮನೆಯಲ್ಲಿರುವವರ್ಯಾವ್ಯಕೆ ಸಂಚಾರ ನಿರ್ಬಂಧವಿದ್ದರೂ ಲಾಯಕ್ ಆಲಿಗಳಿಗೆ ಮಾತ್ರ. ಅವರು ಅನುದಿನ ಸಂಜೆ ಮುಂಜಾನೆ ತನ್ನ ಹೂದೋಟದಲ್ಲಿ ತಿರುಗಾಡುವ ಸಂಪ್ರದಾಯವಿತ್ತು. ಇದು ಪೋಲೀಸ್ ಐ ಜಿ. ಬಂಗಲೆಗೆ ತೋರುತಿತ್ತು. ಸುಮಾರು 10 ದಿನಗಳಿಂದ ಅವರ ಸಂಚಾರ ಕಂಡು ಬಂದಿರಲಿಲ್ಲವಂತೆ. ಕಾರಣ ವಿಚಾರಿಸುವಾಗ ಮೈಯಲ್ಲಿ ಸ್ವಸ್ಥವಿಲ್ಲವೆಂದು ಕೇಳಿ ಬಂದಿದ್ದಿತು. ಊರ ವ್ಯಾಪಾರಿಗಳು, ಪರ್ದಾ ಸ್ತ್ರೀಯರೇ ಮೊದಲಾದ ಸಂದರ್ಶಕರು ಹೋಗಿ ಬರುವದಕ್ಕೇನೂ ಅಲ್ಲಿ ನಿರ್ಬಂಧವಿರಲಿಲ್ಲವಂತೆ

## ಪಲಾಯನ ಹಂಚಿಕೆ

ಇದೇ ತಾ. 6ಕ್ಕೆ ಕಾವಲಿನ ಒಂದು ದಳ ಹೋಗಿ ಮತ್ತೊಂದು ದಳ ಕಾರ್ಯ ಕೈಕೊಳ್ಳುವ ಸರದಿ. ಹಾಗೆ ಜವಾಬ್ದಾರಿ ವಹಿಸಿಕೊಳ್ಳುವ ಮೊದಲು ಮನೆಯೊಳಗಿನ ಲಾಯಕ್ ಆಲಿಯನ್ನು ಕಣ್ಣಾರೆ ಕಾಣಬೇಕೆಂದು ಹೊಸ ಕಾವಲುಗಾರರು ಅಪೇಕ್ಷಿಸಿದರು. ಒಳಗೆ ಹೋಗಿ ನೋಡುವಾಗ ಎಲ್ಲವೂ ಖಾಲಿ! ಕೂಡಲೇ ಸುದ್ದಿ ಹೋಯಿತು. ಎಲ್ಲಾ ವಿಧಾನದಲ್ಲೂ ಇಂಚಿಂಚು ಶೋಧನೆಗಳಿಗಾರಂಭವಾಯಿತು. ಇತ್ತ ಬೊಂಬಾಯಿ, ಮದ್ರಾಸ್, ಮಧ್ಯ ಪ್ರಾಂತ್ಯ, ಮೈಸೂರು ಸಂಸ್ಥಾನಗಳಲ್ಲಿ ಕೂಡಾ ಎಚ್ಚರಿಕೆ ವಹಿಸಲಾಯಿತು. ಗೋವೆಗೆ ಹೋದರೆಂದೋ, ಪಾಕಿಸ್ತಾನಕ್ಕೋಡಿದರೆಂದೋ, ವಿಮಾನ ಹತ್ತಿದರೆಂದೋ, ಇನ್ನೇನೇನೋ ವಾರ್ತೆ ಗಾಳಿ ಎಲ್ಲೆಲ್ಲೂ ಬೀಸಹತ್ತಿತು. ಭಾರತೀಯರ ಅಭಿಮಾನದ ಮೇಲಂತೂ ಲಾಯಕ್ ಆಲೀ ಪಲಾಯನಾ ವಾರ್ತೆಯು ಸಿಡಿಲಾಗಿ ಎರಗಿತೆನ್ನಬಹುದು. ನಿಜಕ್ಕೂ ಭಾರತವು ಸ್ವವಿಮರ್ಶೆ ಮಾಡಿಕೊಳ್ಳಬೇಕಾದ ಮತ್ತು ತುಸು ಲಜ್ಜಿಸಬೇಕಾದ ಘಟನೆಯಿದು. ಸುಪ್ರಸಿದ್ಧ ವ್ಯಾಪಾರಿಯಿದ್ದು, ಕರಾಳ ವಿಷ ತುಂಬಿದ ಮೃದು ಮಾತು ಹಾರಿಸುವುದರಲ್ಲಿ ಚತುರನೆಂದು ಹೈದರಾಬಾದ್ ಸಂಸ್ಥಾನ ಪ್ರಯತ್ನ ಕಾಲದಲ್ಲೇ ಪರಿಚಿತರಾಗಿರುವ ಲಾಯಕ್ ಆಲಿಯ ಪಲಾಯನ ಕುತಂತ್ರದ ಕಥೆ ಸ್ವಾರಸ್ಯವಿದೆ. ಅವರ ಮನೆ ಸೇವಕರಲ್ಲಿರೂ ಒಂದಲ್ಲೊಂದು ಕಾರಣದಿಂದ ಮೊದಲೇ ಹೋಗಿದ್ದರು. ಲಾಯಕ್ ಆಲೀ ಮಕ್ಕಳು ಒಂದು ಮದುವೆಗೆಂದು ತಾ 3ರಲ್ಲಿ ಮನೆ ಬಿಟ್ಟವರು ಆ ಮೇಲೆ ಮರಳಲಿಲ್ಲ; ಬೇಗಮ್ ಲಾಯಕ್ ಆಲಿಯೂ ಅದೇ ದಿನ ಅದೇ ಮದುವೆಗೆಂದು ಹೋಗಿದ್ದರೂ ಸಂಜೆ ಮನೆಗೆ ಕಾರಿನಲ್ಲಿ ಮರಳಿದ್ದರು. ಮರು ದಿನ ಮುಂಜಾನೆ ಹಸರು ಪರದೆ ಮುಚ್ಚಿದ ಕಾರಿನಲ್ಲಿ ಕುಳಿತು ಲಾಯಕ್ ಆಲಿ ಗಂಡ ಹೆಂಡಿರಿಬ್ಬರೂ ಪರಾರಿಯಾಗಿರಬೇಕೆಂಬುದೇ ಈಗ ನಂಬಲ್ಪಟ್ಟಿರುವ ವಾರ್ತೆ; ಆ ಕಾರು ಕೂಡಾ ಆ ದಿನ ಮರಳಿ ಬಂದಿದ್ದಿತು. ಅದು ಹೋದಾಗ ಮತ್ತು ಬಂದಾಗ, ಅದನ್ನು ಜಡ್ತಿ ಮಾಡಿ ನೋಡಬೇಕಾಗಿದ್ದ ಸ್ತ್ರೀ ಕಾವಲುಗಾರಳೇನು ಮಾಡಿದ್ದಳೆಂಬ ಸತ್ಯಸ್ಥಿತಿ ಗೊತ್ತಾಗಿಲ್ಲ. ಹೈದರಾಬಾದ್ ಅಧಿಕಾರಿಗಳಿಗೆ ಲಾಯಕ್ ಆಲಿ ಪಲಾಯನದ ಪೂರ್ಣ ವಿವರವೀಗ ದೊರೆತಿದೆ ಎಂದು ಪ್ರಕಟವಾಗಿದೆ; ಆದರಲ್ಲೊಂದು ದೊಡ್ಡ ಒಳಸಂಚಿದೆ ಎಂದು ನಂಬಲಾಗಿದೆ. ಈ ಪರಾರಿ ಪ್ರವೀಣ ಬಂಗಲೆಯಿಂದ ತಪ್ಪಿಸಿಕೊಂಡ ವೇಳೆ ಬೇರಾವ ವಿಶಿಷ್ಟ ವಾಹನವನ್ನೂ ಉಪಯೋಗಿಸದೆ ಸಾಮಾನ್ಯ ಪ್ರಯಾಣಿಕರ ಬಸ್ಸು ಮತ್ತು ರೈಲಿನಲ್ಲೇ ಸವಾರಿ ಮಾಡಿಬಿಟ್ಟಿದೆಂದು ತಿಳಿದುಬಂದಿದೆ ಲಾಯಕ್ ಆಲಿ ಕುಟುಂಬದ ಪರದಾ ಸ್ತ್ರೀಯರ ಜಡ್ತಿಗಾಗಿ ನೇಮಿಸಲ್ಪಟ್ಟಿದ್ದ ಸ್ತ್ರೀ ಪಹರೆಗಾತಿಯೇ ದುರುದ್ದೇಶಪೂರ್ವಕ ಅಥವಾ ಅಜ್ಞಾನವಶಾತ್ ಈ ಪಲಾಯನಕ್ಕೆ ಕಾರಣಳಾದಳೆಂದು ಊಹಿಸಬಹುದು.

## ಪಹರೆ ಸಡಿಲಾಗಿತ್ತೆ?

ಕುತಂತ್ರಿ ಲಾಯಕ್ ಆಲೀ ದೀರ್ಘಾವಧಿಯಿಂದ ಪರಾರಿ ಹಂಚಿಕೆ ಹೂಡಿದ್ದು, ಆ ಕಾರ್ಯದಲ್ಲಿ ಆತನಿಗೆ ಹೊರಗಿನ ಸಹಾಯ ದೊರೆತಿತ್ತೆಂಬುದೇನೋ ಖಚಿತವಾಗಿದೆ ಆದರೀ ಒಳಸಂಚು ವಿಜಯಿಯಾಗಲು ಅನುಕೂಲವಾಗುವಷ್ಟು ಕಾವಲು ತನೆ ಸಡಿಲಾಗಿತ್ತೆಂಬ ದೂರು ಸರ್ವಸಾಮಾನ್ಯವಾಗಿ ಎದ್ದಿದೆ. ಪಲಾಯನ ವಾರ್ತೆ ತಿಳಿದು ಬಂದೊಡನೆಯೇ, ಆ ತನಕ ಮನೆ ಬಂದೋಬಸ್ತಿನಲ್ಲೇ ಇದ್ದ ಲಾಯಕ್ ಆಲಿ ಮಂತ್ರಿಮಂಡಲಿಯ ಉಳಿದೆಂಟು ಮಂದಿಯನ್ನೂ ಸೆಂಟ್ರಲ್ ಜೈಲು ಸೇರಿಸಿದ್ದಾರೆ. ಆಲೀ ಮನೆಯ ಕಾವಲುಗಾರರು ಮತ್ತು ಕಾವಲುಗಾತಿ ಪೋಲೀಸರನ್ನು ಕೈದು ಮಾಡಿಟ್ಟಿದ್ದಾರೆ. ಲಾಯಕ್ ಆಲಿ ತಂಗಿ ಪತಿ ಹತ್ತಿರದ ಸಂಬಂಧಿಕರು, ಆಪ್ತೇಷ್ಟರೆಲ್ಲರೂ ದಸ್ತಗಿರಿಯಾಗಿದ್ದಾರೆ. ಹೀಗೆ ಬಂಧಿಸಲ್ಪಟ್ಟವರಲ್ಲಿ ಮಾಜೀ ಮತ್ತು ಪ್ರಚಲಿತ ಮುಖ್ಯಾಧಿಕಾರಿಗಳೂ ಕೆಲವರಿದ್ದಾರೆ. ಹೈದರಾಬಾದ್ ಪೋಲೀಸ್ ಕ್ರಿಯೆಯ ವೇಳೆ ಹೈದರಾಬಾದ್ ಸೇನಾಧಿಕಾರಿಯಾಗಿದ್ದ ಎಲ್. ಎಡ್ರೂಸರೂ ದಿಗ್ಬಂಧಿತರಾಗಿದ್ದಾರೆ. ಶೋಧನಾ ಕಾರ್ಯದಲ್ಲಿ ಹೈದರಾಬಾದ್ ಸರಕಾರಕ್ಕೆ ಸಲಹೆ ಸಹಾಯ ಕೊಡಲು ಭಾರತ ಸರಕಾರವು ತನ್ನ ಶೋಧನಾತಜ್ಞ ವಿಭಾಗದ ಡೆಪ್ಯುಟಿ ಡೈರೆಕ್ಟರ್ ಎಮ್. ಎಸ್. ಮಾಲಿಕರನ್ನು ಕೂಡಲೇ ಹೈದರಾಬಾದಿಗೆ ಕಳುಹಿಸಿದ್ದಿತು. ಆದರೆ ಇಷ್ಟಲ್ಲಾ ಆಗುವ ಮೊದಲೇ ಕೆಲಸ ಮಿಂಚಿ ಹೋಗಿದ್ದಿತೆನ್ನಬಹುದು. ಲಾಯಕ್ ಆಲಿ ಪಲಾಯನದ ಕುರಿತು ತಾ. 7ರಲ್ಲಿ ಭಾರತ ಪಾರ್ಲಿಮೆಂಟಿನಲ್ಲಿ ಪ್ರಶ್ನೆಗಳ ಸುರಿಮಳೆಯಾಗಿ, ನಿಲುವಳಿ ಸೂಚನೆ ಕೂಡಾ ಮುಂದೆ ಬಂದಿದೆ. ಸಂಸ್ಥಾನದೊಳಗಿನ ಪ್ರಶ್ನೆಯಾದ ಬಂಧನ ಗೃಹದ ಪ್ರಮಾದಕ್ಕೆ ಸಂಸ್ಥಾನೀ ಸರಕಾರವೇ ಹೊಣೆ ಹೊರತು ಕೇಂದ್ರ ಸರಕಾರವಲ್ಲವೆಂದು ಸರ್ದಾರ್ ಪಟೇಲರ ವಾದ; ಹೈದರಾಬಾದಿನಲ್ಲೀಗ ಪ್ರಜಾಪ್ರತಿನಿಧಿ ಸಭೆಯೇ ಇಲ್ಲದಿರುವುದರಿಂದ ಕೇಂದ್ರ ಪಾರ್ಲಿಮೆಂಟಿಗೇನೇ ಅದರ ಮೇಲಧಿಕಾರವೆಂದು ಹಲವು ಸದಸ್ಯರ ಪ್ರತಿವಾದ ಈ ವಿವಾದವು ಇದೇ ತಾ. 14ರಲ್ಲಿ ಪುನಃ ಚರ್ಚಿಸಲ್ಪಡುತ್ತಿದೆ. ಸಂಸ್ಥಾನ ಮತ್ತು ಕೇಂದ್ರ ಸಂಬಂಧ ಹೇಗಿದ್ದರೂ ಹೈದರಾಬಾದ್ ಅಜಾಗ್ರತೆಯಿಂದ ಅಪಮಾನಕರ ಪ್ರಸಂಗವೊಂದು ನಡೆದು ಹೋದುದಂತೂ ಖಂಡಿತ. ಹೈದರಾಬಾದಿನ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಜೆಟ್ಲೆಯವರು ಅಸಮರ್ಥರಾಗಿರುವುದರಿಂದ ಬೇರೊಬ್ಬನನ್ನು ತಮಗೆ ಎರವಲಿಗೆ ಕೊಡಬೇಕೆಂದು

(೯ನೇ ಪುಟ ನೋಡಿರಿ)

## "ಮನೆಮದ್ದು"ಗೆ ಸಂಭಾವನೆ
### ಮದ್ರಾಸು ಸರಕಾರದಿಂದ

ಕನ್ನಡ ನಾಡಿನಲ್ಲಿ ಅತ್ಯಂತ ಜನಪ್ರಿಯವೂ, ಸುಪ್ರಖ್ಯಾತವೂ, ಅತ್ಯುಪಯೋಗಿಯೂ ಆದ ಡಾ। ಕೊರಡ್ಕಲ್ಲರ 'ಮನೆ ಮದ್ದು' ಎಂಬ ಗೃಹವೈದ್ಯ ಪುಸ್ತಕಕ್ಕೆ ಮದ್ರಾಸು ಸರಕಾರವು ರೂ. ೨೫೦ ಸಂಭಾವನೆಯಾಗಿ ಕೊಟ್ಟು ಗೌರವಿಸಿಯದೆ. ಇದೇ ಪುಸ್ತಕಕ್ಕೆ ಕಳೆದ ವರ್ಷ "ಸ್ಕೂಲ್ ಬುಕ್ಸ್ ಅಂಡ್ ಲಿಟರೇಚರ್ ಸೊಸೈಟಿ, ಮದ್ರಾಸು" "ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ" ಇವರಿಂದಲೂ ಬೇರೆ ಎರಡು ಸಂಭಾವನೆಗಳು ದೊರೆತಿವೆ. ಇಂತಹ ಅಮೂಲ್ಯ ಕೃತಿಯನ್ನು ಬರೆದು ಬಹುಮಾನಿತರಾದ ಡಾ। ಕೊರಡ್ಕಲ್ಲರಿಗೆ ನಮ್ಮ ಹಾರ್ದಿಕ ಅಭಿವಂದನೆಗಳು.

The Pangal Nayak Bank Limited
(Incorporated in 1920)

NOTICE under Section 37 of the Indian Companies Act, 1913 as amended by Act XXII of 1936

It is hereby notified that the Registers of members and of transfers of shares of the above Bank will be closed during the period from Friday the 24th instant to Thursday the 6th April 1950, both days inclusive.

By order of the Board.

Registered Office, UDIPI
14th March 1950.

P. Lakshman Nayak,
Secretary & Treasurer.

THE
Canara Banking Corporation Ltd.
(Incorporated in India with Limited Liability.)
Estd: 1906.
ANNOUNCEMENT
A Branch of the Bank will shortly be opened
at
PONAMPET (SOUTH COORG).
ಬ್ಯಾಂಕಿನ ಒಂದು ಶಾಖೆಯು ಸದ್ಯದಲ್ಲಿಯೇ
ಪೊನ್ನಂಪೇಟೆ (ದಕ್ಷಿಣ ಕೊಡಗು)
ಯಲ್ಲಿ ತೆರೆಯಲಾಗುವುದು.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್,
ಸ್ಥಾಪನೆ: 1906

ಗುರುವಾರ ಉಡುಪಿ ೧೬-೩-೧೯೫೦

## ಭಾರತದ 'ಬಜೆಟ್'

ಭಾರತ ಸರಕಾರದ ಅರ್ಥಸಚಿವ ಡಾ| ಜೋನ್ ಮಥಾಯಿಗಳಿಂದ ಫೆಬ್ರವರಿ ತಾ. 28ರಲ್ಲಿ ಪಾರ್ಲಿಮೆಂಟಿನ ಮುಂದಿಡಲ್ಪಟ್ಟು, ಚರ್ಚಿಸಲ್ಪಡುತ್ತಿರುವ 1950–51 ನೇ ವರುಷದ ಮುಂಗಡ ಪತ್ರದ ಕುರಿತು ಸವಿವರ ಪರಿಶೀಲನೆಗೆ ಇಲ್ಲಿ ಎಡೆಯಿಲ್ಲ. ಆದಂದು 'ಜನತಾ ರಾಜ್ಯ ಭಾರತ'ದ ಪ್ರಥಮ ಅಂದಾಜು ಆಯವ್ಯಯ ಪಟ್ಟಿ; ಅದರ ನೋಟವೇಗಿದೆ ಎಂಬುದರ ಕಡೆಗೆ ಲಕ್ಷ್ಯಕೊಡಬೇಕಾದುದು ಅಗತ್ಯ. ಭಾರತ ಸರಕಾರದ ಮಿಕ್ಕ ಆರ್ಥಿಕ, ಸಾಮಾಜಿಕ ಧೋರಣೆಗಳಂತೆಯೇ ಈ ಮುಂಗಡ ಪತ್ರಿಕೆಯೂ ಜನತೆಯಲ್ಲಿ ಬಹು ಸಂಖ್ಯಾಕರನ್ನು ನಿರುತ್ಸಾಹಗೊಳಿಸುವಂತಹದಿದೆ. ಸ್ವತಂತ್ರ್ಯಗಳಿತೆಯು ಪೂರ್ಣ ಬಲಿತ ನಂತರ ಬರುವ ಫಲವಾಗಿ ತಮ್ಮ ಹಿತಸಾಧನೆಯಾಗಬೇಕಲ್ಲದೆ ಸದ್ಯಕ್ಕಿಲ್ಲವೆಂಬ ನಿರಾಶೆಯನ್ನು, ಜನಸಾಮಾನ್ಯರಲ್ಲಿ-ಜನತೆಯ ಕೆಳ ಮಧ್ಯಮ ವರ್ಗ ಮತ್ತು ಬಡ ವರ್ಗದಲ್ಲಿ—ಈ 'ಬಜೆಟ್' ನಿರ್ಮಿಸಿದೆ; ನಮ್ಮ ರಾಷ್ಟ್ರ ನಾಯಕರ ಕೆಲವು ಮಾತು ಕೃತಿಗಳು ಮತ್ತು ರಾಷ್ಟ್ರದೊಳಗಿನ ಆಗುಹೋಗುಗಳು ತೊಡುತ್ತಿರುವ ನಿರಾಶಾ ಸೂಚನೆಯನ್ನೇ ಇದು ಬಲವಾಗಿ ಅನುಮೋದಿಸಿದೆ. ವ್ಯಾಪಾರೋದ್ಯಮಿ ಶ್ರೀಮಂತ ವರ್ಗಕ್ಕೆ ಕೆಲವು ತೆರಿಗೆ ವಿನಾಯತಿಗಳ ಮೂಲಕ ಪ್ರೋತ್ಸಾಹ ದೊರೆತಿರುವಾಗ, ಜನಸಾಮಾನ್ಯರಿಗಾಗುವ ಯಾವ ರಿಯಾಯತಿಯೂ ಈ ಮುಂಗಡ ಪತ್ರದಲ್ಲಿಲ್ಲ. ತೆರಿಗೆ ವಿನಾಯತಿಗಳನ್ನು ಹೊಂದಿದ ಮಾಲಕ ವರ್ಗವು ಅವಶ್ಯಕ ವಸ್ತುಗಳ ಉತ್ಪಾದನೆಯನ್ನು ಹೆಚ್ಚಿಸಿ, ಅವುಗಳ ಬೆಲೆಯು ತಗ್ಗುವಂತಾಗಿ ಆ ಮೂಲಕ ಎಲ್ಲರಿಗೂ ಪ್ರಯೋಜನವಾಗುವದೆಂಬ ನಿರೀಕ್ಷೆಯೊಂದಲ್ಲದೆ ಕೆಳಪಟ್ಟದ ಸಾರ್ವಜನಿಕರಿಗೆ ಬೇರೇನೂ ದೊರೆತಿಲ್ಲ. ಜನತಾ ರಾಜ್ಯ ಭಾರತದ ಪ್ರಥಮ ಆಯುವ್ಯಯ ಪಟ್ಟಿಯೇ ಜನಸಾಮಾನ್ಯರ ಹಿತವನ್ನು ಇಷ್ಟು ದೂರದಲ್ಲಿಟ್ಟುಬಿಟ್ಟುದು ಸಲ್ಲಕ್ಷಣವಲ್ಲ.

ಪ್ರಚಲಿತ ಕರ ತೆರಿಗೆಗಳನ್ನು ಆಧರಿಸಿ, ಭಾವೀ ಆರ್ಥಿಕ ವರುಷದ ಅಂದಾಜು ಉತ್ಪನ್ನವು ರೂ. 347·5 ಕೋಟಿಯಿದ್ದು ವ್ಯಯವು 337·88 ಕೋಟಿಗಳಿವೆ. ಈ ರೀತಿ ಉಳಿತಾಯವಾಗುವ 9.62 ಕೋಟಿ ರೂ.ಗಳು 'ಬಿಸಿನೆಸ್ ಪ್ರೊಫಿಟ್ ಟೇಕ್ಸ್' ರದ್ದತಿ, ಇನ್ಕಮ್ ಟೇಕ್ಸಿನ ಪರಮಾವಧಿಯನ್ನು 5 ಆಣೆಯಿಂದ 4 ಆಣೆಗಿಳಿಸಿದುದೇ ಮೊದಲಾದ ಕಡಿತಗಳಿಂದ ಕಡಿದು ಹೋಗಿ ರೂ. 1 31 ಕೋಟಿ ಮಾತ್ರ ಐನ್ ಮುನಾಫೆಯಾಗುವದೆಂದು ಅಂದಾಜು ಕಟ್ಟಲಾಗಿದೆ. ರಕ್ಷಣಾ ದಳಗಳ ವೆಚ್ಚವು 168·1 ಕೋಟಿಯಿದ್ದು ಪ್ರಚಲಿತ ವರುಷಕ್ಕಿಂತ ಕೇವಲ 2 ಕೋಟಿ ರೂಪಾಯಿಗಳನ್ನಿಲ್ಲಿ ಕಡಿಮೆ ಮಾಡಲಾಗಿದೆ. ಕಾಶ್ಮೀರ ಯುದ್ಧ ಮತ್ತಿತರ ಅಪಾಯಗಳ ನಿರೀಕ್ಷೆಯಿರುವದರಿಂದ ಸೇನಾ ವೆಚ್ಚವನ್ನು ಅಪೇಕ್ಷಿಸಿದಷ್ಟು ತಗ್ಗಿಸಿಕೊಳ್ಳಲಾಗಲಿಲ್ಲ. ಸ್ಥಳೀಯ ಬಟವಾಡೆಯ ಕವರು ಮತ್ತು ಕಾರ್ಡುಗಳ ಬೆಲೆಯನ್ನು ಮತ್ತು ಟೆಲಿಗ್ರಾಂ ಧಾರಣೆಯನ್ನು ಕಡಿಮೆ ಮಾಡಲಾಗಿದೆ. ಯಾವ ಹೊಸ ಕರ ತೆರಿಗೆಗಳನ್ನೂ ಹೇರದೆ, ವ್ಯಾಪಾರೀ ವರ್ಗಕ್ಕೆ ಗಣ್ಯ ತೆರಿಗೆ ರಿಯಾಯತಿಗಳನ್ನು ಕೊಟ್ಟಿರುವುದೇ ಮುಂದಿನ ವರುಷದ ಆಯ ವ್ಯಯ ಪಟ್ಟಿಯ ವೈಶಿಷ್ಟ್ಯ. ತುಟ್ಟಿ ಮತ್ತು ಅಭಾವದ ಈ ಕಾಲದಲ್ಲಿ ಅವಶ್ಯಕ ವಸ್ತುಗಳು ಎಲ್ಲರಿಗೂ ಅಗ್ಗ ಬೆಲೆಗೆ ದೊರೆಯುವ ಫಲಬಡಬೇಕೆಂದೇ, ಅವುಗಳ ಉತ್ಪಾದನೆಯ ಬುಡಕ್ಕಿಂತಹ ರಿಯಾಯತೀ ನೀರೆರೆಯುತ್ತೇವೆಂದು ಅರ್ಥ ಮಂತ್ರಿಗಳಂದಿದ್ದಾರೆ. "ಈಗ ದೊರೆತಿರುವ ನವ ಸುಯೋಗಗಳನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬಲ್ಲೆವಾದರೆ ನಮಗೆ ಉಜ್ವಲ ಭವಿಷ್ಯ ಕಾದಿದೆ. ನಮ್ಮ ಯಜಮಾನರಿಗೆ ಬುದ್ಧಿ ಕಲಿಸುತ್ತಾ, ನಮ್ಮ ಕರ್ತವ್ಯ ಮಾಡುತ್ತಾ ಹೋಗೋಣ" ಎಂದು ಇದೇ ತಾ 12ರಲ್ಲಿ ನವದೆಹಲಿಯ 'ಚೇಂಬರ್ಸ್ ಓಫ್ ಕಾಮರ್ಸ್'ನ ವಾರ್ಷಿಕಾಧಿವೇಶನದಲ್ಲಿ ಮಾತಾಡುತ್ತಾ, ಭಾರತದ ಪ್ರಸಿದ್ಧ ಭಂಡವಾಳಗಾರ ಶ್ರೀ. ಜಿ. ಡಿ. ಬಿರ್ಲರಂದಿದ್ದಾರೆ. ಬಡ ಜನವರ್ಗದ ಪ್ರತಿನಿಧಿಯೊಬ್ಬನು ಇಂತಹ ಉತ್ಸಾಹಪೂರಿತ ಉದ್ಗಾರವನ್ನೆತ್ತಲಾರದೆ, ಬಲವಾದ ನಿಟ್ಟುಸಿರನ್ನೇ ಬಿಡುವಂತೆ ಮಾಡಿದೆ ಈ ಬಾರಿಯ ಮುಂಗಡ ಪತ್ರ. ಭಾವೀ ಸುಖದ ನಿರೀಕ್ಷೆ ಮಾತ್ರದಿಂದ ಸಹಿಸಿಕೊಳ್ಳುವುದಸಾಧ್ಯವಾಗಿರುವಷ್ಟು ಅಸಹ್ಯ ಅಡಚಣೆಗಳೊಳಗೆ ಮಧ್ಯಮ ಮತ್ತು ಕೆಳವರ್ಗದ ಜನರಿಂಗ ಸಿಕ್ಕಿಕೊಂಡಿದ್ದಾರೆ. ಅಂಥವರಿಗೆ ಕ್ಷಿಪ್ರರಕ್ಷಣೆಯೀಯುವಂತಹದಾವುದೂ ಈ ಬಾರಿಯ ಬಜೆಟಿನಲ್ಲಿಲ್ಲದಿರುವುದು ಶೋಚನೀಯ. "ಅತಿ ಪ್ರಖರಣೆಯ ಶಮನಾರ್ಥವಾಗಿ ಸರಕಾರವು ಕೈಕೊಂಡಿರುವ ಹಂಚಿಕೆಗಳು ಫಲಕಾರಿಯಾಗಿ, ಮುಂದಿನ ವರುಷ ಸುಖಕರ ಚಿತ್ರವನ್ನು ಮುಂದಿಡಲು ನನ್ನಿಂದ ಸಾಧ್ಯವಾಗುವದೆಂದು ನಂಬುತ್ತೇನೆ" ಎಂದು ಡಾ. ಜೋನ್ ಮಥಾಯಿಗಳು ಕಳೆದ ಬಾರಿಯ ಬಜೆಟ್ ಭಾಷಣದಲ್ಲಿ ಹೇಳಿದ್ದ ಮಾತು ಸತ್ಯವಾಗಲಿಲ್ಲ. ಆಶೆ, ಭರವಸೆಗಳನ್ನು ಈ ವರುಷವೂ ಉಚ್ಚರಿಸುವುದು ಮಾತ್ರ ಅವರಿಗೆ ಸಾಧ್ಯವಾಗಿದೆ. ಭಾರತ ಜನತಾ ರಾಜ್ಯದ ಪ್ರಥಮ ಮುಂಗಡ ಪತ್ರಿಕೆಯ ರೂಪರೇಖೆಯಂತೂ ಅಸಮಾಧಾನಕರವಿದೆ; ತನ್ನ ಗುರಿ ಸೇರುವ ಮಟ್ಟಿಗಾದರೂ ಅದು ಸಾರ್ಥಕಗೊಳ್ಳಲಿ, ಎಂದೀಗ ಹಾರೈಸಬೇಕಾಗಿದೆ.

---

# ಲಾಯಕ್ ಅಲೀ ಪಲಾಯನ ಕಥೆ!

(೫ನೇ ಪುಟದಿಂದ ಮುಂದುವರಿದುದು)

ಹೈದರಾಬಾದ್ ಸರಕಾರವು ಭಾರತ ಸರಕಾರವನ್ನು ಕಮ್ಯೂನಿಸ್ಟ್ ಗಲಭೆಯ ಸಂಬಂಧವಾಗಿ, ಆ ಮೊದಲೇ ಕೇಳಿಕೊಂಡಿದ್ದರೂ ಅಧಿಕಾರಿಗಳ ಅಭಾವದ ದೆಸೆಯಿಂದ, ಭಾರತ ಸರಕಾರಕ್ಕೆ ಹೊಸಬರನ್ನು ಕಳುಹಿಕೊಡಲಾಗಲಿಲ್ಲವಂತೆ. ಮೇಲಧಿಕಾರಿಗಳ ಅನುಮತಿ ಕೇಳದೇನೇ ಚೆಟ್ಲಿಯವರು ಈ ಮೊದಲೊಮ್ಮೆ ಅಮೇರಿಕದ ಪತ್ರಿಕಾಪ್ರತಿನಿಧಿಯೊಬ್ಬನೊಡನೆ ಮಾತನಾಡಲು ಲಾಯಕ್ ಅಲಿಗೆ ಅವಕಾಶ ಕೊಟ್ಟಿದ್ದರೆಂದು ವಾರ್ತೆಯಿದೆ. ಅಪರಾಧಿ ಅಲಿಯನ್ನು ಕಾಯುವ ಸಂಬಂಧವಾಗಿ, ಪಹರೇ ಪೋಲೀಸರು ಅಪೇಕ್ಷಿಸಿದ್ದ ಸ್ವಾತಂತ್ರ್ಯವನ್ನು ಅವರಿಗೀಯುತಿದ್ದರೆ, ಲಾಯಕ್ ಅಲಿ ತಪ್ಪಿಸಿಕೊಳ್ಳಲವಕಾಶವಾದ ಗುಟ್ಟಿದ್ದಿಲ್ಲವೆನ್ನಬಹುದು. ಲಾಯಕ್ ಅಲಿ ಮತ್ತವನ ಮಂತ್ರಿಗಳೆಲ್ಲರನ್ನೂ ಒಂದೇ ಕಡೆ ಕೂಡಿಸಿಡಬೇಕೆಂದು ಎಷ್ಟೋ ಸಮಯಕ್ಕೆ ಮೊದಲೇ ಪೋಲೀಸರು ಕೇಳಿಕೊಂಡಿದ್ದರೂ ಅವರ ವಿಜ್ಞಾಪನೆಗೆ ಬೆಲೆ ಬಂದಿರಲಿಲ್ಲ. ಕಣ್ಣಿಡುವುದು ಅಸಾಧ್ಯವಾಗುವ ರೀತಿಯಲ್ಲಿ ಅವರೆಲ್ಲರನ್ನೂ ಪ್ರತ್ಯಪ್ರತ್ಯೇಕವಾಗಿ ತಂತಮ್ಮ ಕುಟುಂಬದೊಂದಿಗೆ ಸ್ವಂತ ಮನೆಯಲ್ಲಿ ವಾಸಿಸಿಕೊಂಡಿರಲು ಬಿಡಲಾಗಿತ್ತು. ಕೆಲಸಮಯಕ್ಕೆ ಮೊದಲು ಒಂದು ಸ್ಟೆನ್ ಗನ್ ಕಳವಾದ ದೆಸೆಯಿಂದ, ಆತನ ಕರರ್ಮುಕಾರ್ ಮಂತ್ರಿಗಳ ಮನೇ ಪಹರೆಗಿದ್ದ ಹೈದರಾಬಾದ್ ಪೋಲೀಸರನ್ನು ರದ್ದುಪಡಿಸಿ, ಭಾರತೀಯ ಪೋಲಿಸರನ್ನು ನೇಮಿಸಲಾಗಿತ್ತು. ಲಾಯಕ್ ಅಲಿ ಮನೆಯ ಕಾವಲುಗಾರ ಪೋಲೀಸರು, ಪ್ರತಿ ದಿನ ಸಂಜೆ ಮುಂಜಾನೆ ಅಲಿಯು ಮನೆಯ ಮೇಲಂತಸ್ತಿಗೆ ಬಂದು ತಮಗೆ ಕಾಣಿಸಿಕೊಳ್ಳಬೇಕೆಂದು ಒತ್ತಾಯ ಪೂರ್ವಕ ಕೇಳಿಕೊಂಡಿದ್ದರು, ಈ ಆಜ್ಞೆಯನ್ನು ಲಾಯಕ್ ಅಲಿಗೆ ತಿಳಿಸಿದಾಗ, ತಾನೀರೀತಿ ಪೋಲೀಸರಿದಿರು ಮಣಿದು ತನ್ನನ್ನು ತಾನೇ ಅವಮಾನಿಸಿಕೊಳುವುದಕ್ಕಿಂತ, ಏನು ಬಂದರೂ ಅನುಭವಿಸಿಯೇ ತೀರುವೆನೆಂದು, ಪೋಲೀಸರಿಗೆ ಪ್ರತ್ಯಕ್ಷನಾಗಲು ನಿರಾಕರಿಸಿ ಬಿಟ್ಟ. ಅಷ್ಟರಿಂದಲೇ ಆ ಆಜ್ಞೆ ರದ್ದಾಗಿದ್ದಿತು. ಆ ಮೇಲೆ ಲಾಯಕ್ ಅಲಿ ತೋಟ ಸಂಚಾರದಲ್ಲಿರುವಾಗ, ಆಗೊಮ್ಮೆ ಈಗೊಮ್ಮೆ ನೋಡುವದೊಂದಲ್ಲದೆ ಕಾವಲುಗಾರರಿಗೆ ಬೇರೇನು ಮಾಡುವ ಅವಕಾಶವಿರಲಿಲ್ಲ. ತನ್ನ ಮನೆಯೊಳಗೆ ಪಹರೆಗಾರರೆಂದಿಗೂ ಪ್ರವೇಶಿಸಕೂಡದು. ಅವರು ಗೇಟಿನ ಹೊರಗೆ ಮಾತ್ರವಿರಬೇಕು— ಎಂದು ಲಾಯಕ್ ಅಲಿ ಹಠ ಹಿಡಿದು ಅದರಲ್ಲೂ ಗೆದ್ದಿದ್ದ. ಒಂದು ಬಾರಿ ಲಾಯಕ್ ಅಲಿ ಮಕ್ಕಳು ಶಾಲೆಗೆ ಹೊರಟಿದ್ದಾಗ ಅವರ ಕಾರನ್ನು ಶೋಧಿಸಲು ಕಾವಲುಗಾರರು ಬಂದಾಗ ಲಾಯಕ್ ಅಲಿ ಅದನ್ನು ತೀವ್ರವಾಗಿ ಪ್ರತಿಭಟಿಸಿದ್ದರಿಂದ ಪೋಲೀಸರು ಹಿಂದೆಗೆಯಬೇಕಾಯಿತು. ಅಲಿ ಪರಾರಿಯು ಪತ್ತೆಯಾದ ಮಾರ್ಚ 6ನೇ ತಾರೀಕಿನಲ್ಲಿ ಹೊಸತಾಗಿ ಪಹರೆ ಹೊಣೆ ಹೊತ್ತು ಪ್ರಾತಃ 10 ಘಂಟೆಗೆ ಬಂದಿದ್ದ ಪೋಲಿಸ್ ಹವಿಲ್ದಾರನು ಮೊದಲಿದ್ದ ಹವಿಲ್ದಾರನೊಡನೆ ಮನೆಯಲ್ಲಿಲ್ಲವೂ ಸರಿಯಾಗಿದೆಯೋ ಎಂದು ವಿಚಾರಿಸಿದ. "ಹೌದು" ಎಂಬ ಉತ್ತರ ಬಂತು. ಆತ ಸ್ತ್ರೀಕಾವಲುಗಾತಿಯನ್ನು ಪ್ರಶ್ನಿಸಿದ "ಅಲೀ ಸಾಹೇಬರ ಮಕ್ಕಳು ಒಂದು ಮದುವೆಗೆ ಹೋಗಿದ್ದಾರೆ; ಸಾಹೇಬರು ಒಳಗೆ ಮಲಗಿದ್ದಾರೆ" ಎಂದಳು ಆಕೆ. ಆದರೆ ಸಂಯುಕ್ತ ಪ್ರಾಂತ್ಯದ ಆ ಸೂಕ್ಷ್ಮ ಬುದ್ಧಿಯ ಹವಿಲ್ದಾರನಿಗೆ, ಮನೆಯಲ್ಲಾವ ಚಲನವಲನವೂ ಇಲ್ಲವೇಕೆ ಎಂಬ ಸಂಶಯ ಬಂದು, ಓವರ್ ಸಿ.ಐ.ಡಿಯನ್ನು ಕರೆದುಕೊಂಡು ಆತ ಮನೆಯೊಳಗೆ ಹೊಕ್ಕ. ಅಲ್ಲಿಯಾರೂ ಇರಲಿಲ್ಲ. ಮಂಚದಲ್ಲಾರೋ ಸ್ವಸ್ಥ ಮಲಗಿದ್ದಂತೆ ತೋರಿತು. ಅದಕ್ಕೆ ಹಾಕಿದ್ದ ಮುಸುಕನ್ನು ಎತ್ತುವಾಗ ಅಡಿಯಲ್ಲಿದ್ದುದು ದೊಡ್ಡದೊಂದು ದಿಂಬು! ಒಮ್ಮೆಗೇ ದಿಗಿಲು ವ್ಯಾಪಿಸಿ, ಅಲ್ಲಿಂದಲೇ ಲಾಯಕ್ ಅಲಿಯ ಶೋಧನೆಗಾರಂಭ. 'ಕೆಟ್ಟ ಮೇಲೆ ಬುದ್ಧಿ' ಯೆಂಬಂತೆ ಈಗ ಎಲ್ಲರ ದಸ್ತಗಿರಿಯೂ ನಡೆದಿದೆ. ನಿಜಾಮರ ಅಪೇಕ್ಷೆಯಂತೆಯೇ ಅವರ ನಿವಾಸ 'ಕಿಂಗ್‌ಕೋಠಿ' ಅರಮನೆಯ ಬಂದೋಬಸ್ತನ್ನು ಬಲಪಡಿಸಲಾಗಿದೆ. ಅಂಗುಲಂಗುಲ ಶೋಧನೆಗಳಾಗಿವೆ. ಲೋಂಡಾ ಎಂಬಲ್ಲಿ ಲಾಯಕ್ ಅಲಿಯಂತೆ ತೋರುತ್ತಾನೆ-ಹೋಟೆಲಿನಲ್ಲಿ ಇಂಗ್ಲಿಷ್ ಮಾತಾಡಿದ-ಎಂಬಿಷ್ಟರಿಂದಲೇ ವ್ಯಾಪಾರಿ ಸಾಹೇಬನೊಬ್ಬನನ್ನು ಬಂಧಿಸಿಕೊ[illegible]ಗಿ ಬಿಟ್ಟುಬಿಡಬೇಕಾಯಿತು. ಹಕ್ಕಿ ಹಾರಿಹೋದ ಮೇಲೆ ತರಗೆಲೆ ಬಿಡದೆ ಮಗುಚಿ ನೋಡುವವರು, ಆ ಮೊದಲು ಹಕ್ಕಿಗೂಡಿನ ಬಾಗಿಲನ್ನೆಷ್ಟು ಸಡಿಲುಮಾಡಿಟ್ಟಿದ್ದರೆಂಬುದನ್ನು ನೆನಸಿಕೊಳ್ಳಬೇಕು. ಹೀಗೆ ನುಸುಳಿಕೊಳ್ಳುವ ಘನಕಳ್ಳನನ್ನೂ ಹೈದರಾಬಾದ್ ಅಧಿಕಾರಿಗಳು ಎಷ್ಟೊಂದು ಗೌರವದಿಂದ ಕಂಡು, ಎಂತಹ ಸ್ವಾತಂತ್ರ್ಯ ಕೊಟ್ಟಿದ್ದರೆಂದು ಜ್ಞಾಪಿಸಬೇಕು. ಅವನ ಆಜ್ಞಾಧೀನರಾಗಿ ವರ್ತಿಸಬೇಕಾದ ಎಂಟು ಮಂದಿ ಕಾವಲು ಜನರನ್ನು ಇಟ್ಟುಬಿಡುವುದೇ ನಾವು ಕೇಳಿರುವ 'ಲಾಯಕ್ ಅಲೀ ದಿಗ್ಬಂಧನ' ವೆಂದಾದರೆ, ಆ ಬಂಧನ ಭಾಗ್ಯ ಯಾರಿಗೆ ಬೇಕಾಗಿಲ್ಲ! ಲಾಯಕ್ ಅಲಿ ಪರಾರಿಯಾದುದರಲ್ಲಿ ಸೋಜಿಗವೇನಿದೆ? ಓಡಿ ಹೋಗುವ ಮೊದಲೇ ತನ್ನ ಪತ್ನಿಯ ಮೂಲಕ

ತನ್ನ ಆಸ್ತಿಗಳಲ್ಲಿ ಹೆಚ್ಚಿನವನ್ನು ಲಾಯಿಕ್ ಆಲಿ ವಿಕ್ರಯಿಸಿದ್ದನೆಂದೂ ತಿಳಿದು ಬಂದಿದೆ.

## ಎಚ್ಚರಗೊಳಿಸಿದ ಚಾಟಿಯೇಟು!

ಮೀರ್ ಲಾಯಿಕ್ ಅಲಿ ಪಲಾಯನಕ್ಕೆ ಹೈದರಾಬಾದ್ ಸರಕಾರದ ಸಡಿಲು ವರ್ತನೆ ಕಾರಣವೆಂಬುದೇನೋ ಖಂಡಿತ; ಆದಂದು ನಮ್ಮ ಹೈದರಾಬಾದ್. ಆದ್ದರಿಂದ ಈ ಅಪಮಾನವೂ ಅಖಿಲ ಭಾರತದ್ದೇ. ಕರ್ತವ್ಯಪಾಲನೆಯನ್ನು ವ್ಯಕ್ತಿ ಗೌರವಕ್ಕೆ ಒಲಿಕೊಡುವ ದುರಭ್ಯಾಸವು ನಮ್ಮ ಆಡಳಿತೆಗೆ ಕೂಡಾ ಅಂಟಿರುವ ರೋಗವೆಂಬುದನ್ನು ಇದರಿಂದ ಅರಿಯಬಹುದು. ಸ್ವರಾಜ್ಯಾಡಳಿತೆಯಲ್ಲಿ—ಇದರಲ್ಲೂ ಸಂಸ್ಥಾನಗಳ ಒಳಗಡೆ—ಸರ್ವಸಾಮಾನ್ಯವಾಗಿ, ಸರಕಾರೀ ನೌಕರರ ವರ್ತನೆ ಅತೀವ ಸಡಿಲಾಗಿದೆ ಎಂದು ಒತ್ತಿ ಒತ್ತಿ ಹೇಳಬೇಕಾಗಿದೆ. ಇಲ್ಲವಾದರೆ ರಜ್ವೀ ಖಡ್ಗದ ಹಿಡಿಯಾಗಿದ್ದ ಮೀರ್ ಲಾಯಿಕ್ ಅಲಿಗೆ ಅಂತಹ ಸ್ವಾತಂತ್ರ್ಯ ಕೊಡುವ ಧೈರ್ಯ ಮತ್ತು ನಂಬಿಕೆ ಹೈದರಾಬಾದ್ ಅಧಿಕಾರಿಗಳಿಗೆ ಹೇಗೆ ಒದಗಬೇಕು? ತಲೆಗೆ ತಾಗಿದ ಮೇಲೆ ಕೆತ್ತು ಹಾಕಿ ಕೊಳ್ಳುವುದಕ್ಕಿಂತ ಮುಂದಾಗಿ ತೆಗೆದೊಗೆದುಕೊಳ್ಳುವದು ವಿಹಿತವೆಂಬ ಎಚ್ಚರಿಕೆಯಿಲ್ಲದೆ, ಸ್ವರಾಜ್ಯಾಧಿಕಾರದ ನೌಕರ ಯಂತ್ರದಲ್ಲಿ ಇಂದು ಎಲ್ಲೆಲ್ಲಿ ಎಂತೆಂತಹ ತಪ್ಪು, ಪ್ರಮಾದ ಮತ್ತು ವಂಚನೆಗಳು ಆಗುತ್ತಿರಬಹುದೋ! ಲಾಯಿಕ್ ಅಲಿಯನ್ನು ಅಧಿಕಾರಿಗಳು ಇಟ್ಟ ಸ್ಥಿತಿಯಲ್ಲಿ ಆತನಿಗೆ ತಲೆ ತಪ್ಪಿಸಿಕೊಳ್ಳಲು ಕಷ್ಟವೇನೂ ಇರಲಿಲ್ಲ. ಹಲವು ಮಂದಿ ಕಮ್ಯೂನಿಷ್ಟರು, ಕ್ರಿಮಿನಲ್ ಕೈದಿಗಳು, ಆರೋಪಿಗಳು ಈಗಲೂ ತಲೆ ಮರೆಸಿಕೊಂಡಿದ್ದಾರೆ. ರೈಲಿನಲ್ಲಿ, ಪೋಲಿಸ್ ಪಹರೆಯಲ್ಲಿ ಹಗಲಿನಲ್ಲೇ ನುಸುಳಿಕೊಂಡ ದ. ಕ. ಜಿಲ್ಲೆಯ ಕಮ್ಯೂನಿಸ್ಟ್ ಚಳವಳಗಾರ ಶ್ರೀ ಯಸ್. ಯನ್. ಹೊಳ್ಳರ ಪತ್ತೆಯಿನ್ನೂ ಆಗಿಲ್ಲ. ಅಂದ ಮೇಲೆ ಪಹರೆ ಜಾಗರೂಕತೆಗಿಂತ ಲಾಯಿಕ್ ಅಲಿಯ ಸಂಭಾವಿತತನದ ಮೇಲಿನ ನಂಬಿಕೆಯನ್ನೇ ಹೆಚ್ಚಾಗಿ ಇಟ್ಟಿದ್ದ ಹೈದರಾಬಾದ್ ಅಧಿಕಾರಿಗಳಿಂದ, ಆತ ನುಸುಳಿಕೊಂಡುದರಲ್ಲಿ ಅದ್ಭುತವೇನೂ ಇಲ್ಲ. ಆದರೆ ಲಾಯಿಕ್ ಆಲಿ ಮಟ್ಟದ ರಾಜ್ಯಸೂತ್ರಧಾರಿಯೊಬ್ಬನು ಹೀಗೆ ತಪ್ಪಿಸಿಕೊಂಡನೆಂದರೆ ಆ ಸಂಸ್ಥಾನದ್ದಷ್ಟೇ ಅಲ್ಲ, ಅಖಿಲ ರಾಷ್ಟ್ರದ ಕಾನೂನು ವ್ಯವಸ್ಥೆಗಳ ಪಾಲನಾ ಯೋಗ್ಯತೆಗೇನೇ ದೊಡ್ಡ ಸವಾಲು ಛಡಾಯಿಸಿದಂತೆ! ಇದೇ ಲಾಯಿಕ್ ಆಲಿಯ ಆಡಳಿತೆಯಲ್ಲಿ ವೈಮಾನಿಕ ಸಿಡ್ನಿ ಕಾಟನ್ ಭಾರತ ಸರಕಾರದ ಕಾನೂನು ಮುರಿದು ಎರಡೆರಡು ಬಾರಿ ಕಳ್ಳಂತ [illegible] ಹೊಡೆದಿದ್ದ; ಗುಪ್ತ ಪೋಲೀಸರು [illegible] ಸಭೆಯಲ್ಲೇ ರಾಷ್ಟ್ರಪಿತನ ಎದೆಯನ್ನು ರಿವಾಲ್ವರ್ ಗುಂಡು ಭೇದಿಸಿದ್ದಿ. ಹೈದರಾಬಾದಿನ ಹಲವು ಘಾತುಕರು ಮತ್ತು ದೊಡ್ಡ ದೊಡ್ಡ ದ್ರೋಹಿ ಅಧಿಕಾರಿಗಳು, ರಜ್ವೀ ಪಕ್ಷ ಮುಂತಾದವರಿಗೂ ಪಾಕಿಸ್ಥಾನಕ್ಕೋಡುವ ಅನುಕೂಲತೆ ದೊರೆತಿದ್ದಿತ; ಈಗ ಲಾಯಿಕ್ ಆಲಿಯೇ ಪರಾರಿಯಾಗಿದ್ದಾನೆ. ಇವೆಲ್ಲವೂ ಏನನ್ನು ಕಲಿಸುತ್ತವೆ? ಆ ಪಾಠವನ್ನು ನಮ್ಮ ಕೇಂದ್ರದವರೂ ಪ್ರಾಂತ್ಯಾಧಿಕಾರಿಗಳೆಲ್ಲರೂ ಕಲಿತುಕೊಳ್ಳಬೇಕು. ಈ ಪಾಠ ಕಲಿಸಿದುದಕ್ಕಿಂತ ಹೆಚ್ಚಿನದಾವುದೂ ಸರ್ದಾರ ಲಾಯಿಕ್ ಅಲಿಯಿಂದಾಗುವ ಭಯವಿಲ್ಲ. ಮುಣುಗು ಹಾಕಿದ ಈ ಸಬ್ ಮೆರೀನ್ ಇನ್ನೆಲ್ಲಿಯೋ ತಲೆಯೆತ್ತಲಿ - ಆತ ರಾಷ್ಟ್ರ ಸಂಘದ ಸಭೆಯಲ್ಲೇ ಹಾಜರಾಗಲಿ, ಎಂತಹ ಅವಕಾಶ ಮತ್ತು ಅಧಿಕಾರ ಸಂಪಾದಿಸಿಕೊಂಡು ಎಷ್ಟೇ ಅದ್ಭುತ ಪ್ರಚಾರವನ್ನು ಬೇಕಾದರೂ ಮಾಡಲಿ; ಭ್ರಾಂತಕ್ಕವುಗಳಿಂದ ಏನೂ ಆಗದು. ಅಲಕ್ಷ್ಸಿಸಿ ಬಿಡಲಾಗದ ಅಂಶಗಳೇನಾದರೂ ಅವುಗಳಲ್ಲಿ ಕಂಡು ಬಂದರೆ ಕೂಡಲೇ ಹಚ್ಚಲಾಗುವ ಮದ್ದು ಭಾರತ ಸರಕಾರದೊಡನಿದೆ. ಆದರೆ, ಆತನಿಗೆ ತಪ್ಪಿಸಿಕೊಳ್ಳಲವಕಾಶ ದೊರಕಿಸಿಕೊಟ್ಟಂತಹ ತಮ್ಮ ದೋಷ, ದೌರ್ಬಲ್ಯಗಳೆಲ್ಲವನ್ನೂ ಭಾರತದ ಎಲ್ಲಾ ಸರಕಾರಗಳು ಮತ್ತು ಅಧಿಕಾರಿಗಳು ನಿವಾರಿಸಿಕೊಂಡು, ಇನ್ನು ಮುಂದಾವ ರಂಗದಲ್ಲೂ ಇಂತಹ ಪ್ರಮಾದವಾವುದೂ ನಡೆಯದಿರಬೇಕಾದುದೊಂದೇ ಇಲ್ಲಿ ಮುಖ್ಯ.

## ಮೋಟಾರು ಎವಾರ್ಡು— ಸರಕಾರೀ ಧೋರಣೆ

ಮದ್ರಾಸ್ ಎಸೆಂಬ್ಲಿಯಲ್ಲಿ ಬಜೆಟ್ ಚರ್ಚೆಯ ವೇಳೆ ಶ್ರೀ ಕೆ. ಆರ್. ಕಾರಂತರು ದಕ್ಷಿಣ ಕನ್ನಡದ ಮೋಟಾರು ಕೆಲಸಗಾರರ ಇತ್ತೀಚೆಗಿನ ಮುಷ್ಕರಕ್ಕೆ ಹೇತುವಾದ 'ಎವಾರ್ಡ'ನ್ನು ಜಾರಿಗೆ ತಾರದಿದ್ದ ಮದ್ರಾಸು ಮಂತ್ರಿಗಳ ಧೋರಣೆ, ವರ್ತನೆಗಳನ್ನು ಬಲವಾಗಿ ಟೀಕಿಸಿ ಭಾಷಣವಿತ್ತಿದ್ದರು. ಇದೇ ತಾ. 13ರಲ್ಲಿ ಬಜೆಟಿನನ್ವಯ ಕೂಲಿಗಾರ ಸಂಬಂಧ ವೆಚ್ಚದ ಗ್ರಾಂಟು ಮಂಜೂರಾತಿಯ ವೇಳೆ ಮದ್ರಾಸಿನ ರೆವಿನ್ಯೂ ಮಂತ್ರಿ ಶ್ರೀ ಎಚ್. ಸೀತಾರಾಮರೆಡ್ಡಿಗಳು 'ಮೋಟಾರು ಎವಾರ್ಡು ಸಂಬಂಧದ ಸರಕಾರೀ ಧೋರಣೆ ಯೇನೆಂಬುದನ್ನು ಈ ರೀತಿ ತಿಳಿಸಿದ್ದಾರೆ:— "ಈ ಮೋಟಾರು ಎವಾರ್ಡಿನ ಚರಿತ್ರೆ ಮತ್ತದರ ಅಸ್ತಿತ್ವದ ಸಂಗತಿ ಸ್ವಾರಸ್ಯದ್ದಿದೆ. ಚುಟುಕಿನಲ್ಲಿ ಹೇಳುವುದಾದರೆ, ಆ ಎವಾರ್ಡು ಪಾಸಾದ ಮೇಲೆ, ಅದು ಬದ್ಧೀಕರಿಸತಕ್ಕದ್ದಲ್ಲವೆಂಬ ಒಂದು ತೀರ್ಪು ಹೈಕೋರ್ಟಿನಿಂದಾಗಿದ್ದಿತು. ಹೀಗಾಗಿ ಕಾನೂನನ್ನು ತಿದ್ದುಪಡಿ ಮಾಡಬೇಕಾಗಿ ಬಂತು; ಮತ್ತಾ ತಿದ್ದುಪಡಿ ಆಕ್ಟಿಗನುಸಾರವಾಗಿ ಎವಾರ್ಡಿನ ಮಾಯಿದೆಯನ್ನು ಒಂದು ವರುಷ ಹೆಚ್ಚಿಸಲಾಯಿತು. ಈ ಅಲ್ಪಾವಧಿಯೊಳಗೇನೇ ಎವಾರ್ಡು ಜಾರಿಗೆ ಬರುವಂತೆ ಮಾಡಬೇಕೆಂದು ಸರಕಾರವು ತನ್ನಿಂದ ಸಾಧ್ಯವಿರುವ ಪ್ರಯತ್ನವೆಲ್ಲವನ್ನೂ ಮಾಡುತ್ತಿದೆ. ಮಲಬಾರಿನಲ್ಲಿ ಇದನ್ನು ಜಾರಿಗೆ ತರಲು ಹವಣಿಸಿದಾಗ ಬಸ್ ಮಾಲಕರು ಕೆಲವರು ಕೋರ್ಟಿನಿಂದ 'ಇಂಜಂಕ್ಷನ್' ಪಡಕೊಂಡರು. ಹೀಗಾಗಿ ಈ ಎವಾರ್ಡನ್ನು ಜ್ಯಾರಿಯಲ್ಲಿ ತರುವ ಸರಕಾರೀ ಅಧಿಕಾರಿಗಳಿಗೆ ಅನಣಿತ ತೊಡಕುಗಳು ಇದಿರಾಗಿವೆ. ಚಾಲಕರಿಗೆ ಕೊಡಲ್ಪಟ್ಟಿರುವ ಲೈಸನ್ಸುಗಳನ್ನು ರದ್ದುಪಡಿಸಬೇಕೆಂದು ಓರ್ವ ಸದಸ್ಯರ ಸೂಚನೆಯಾಗಿದೆ. ಹಾಗೆ ಮಾಡುವದು ಯಾವ ಸರಕಾರಕ್ಕಾದರೂ ನ್ಯಾಯವಾದ ವಿಧಾನವೆಂದು ನನಗನ್ನಿಸುವುದಿಲ್ಲ. ಕಾನೂನಿನಲ್ಲಿ ನಮೂದಿಸಿರುವ ವಿಧಾನವನ್ನೇ ಅನುಸರಿಸಬೇಕಲ್ಲದೆ, ಕೆಲವೊಂದು ಸಂಗತಿಗಾಗಿ ಕಾಯಿದೆ ಮೀರಿ ಹೆಜ್ಜೆಯಿಡುವುದು ತರವಲ್ಲ. 'ಉದ್ದಿಮೇ ವಿವಾದ ಕಾನೂನ'ನ್ನು ಜ್ಯಾರಿಗೆ ತರುವ ಅಧಿಕಾರಗಳು ಸರಕಾರಕ್ಕಿದ್ದೇ ಇರುವಾಗ ಆ ಹಾದಿ ಬಿಟ್ಟು ಹೋಗುವುದು ತಪ್ಪಾಗುವುದು. ಸಂಬಂಧಪಟ್ಟ ಖಾತೆಯು ಈ ಕಡೆಗೀಗ ವಿಶೇಷ ಲಕ್ಷ್ಯ ಕೊಡುತ್ತಿದೆ; ಪರಿಸ್ಥಿತಿಯನ್ನು ಸಂಪೂರ್ಣವಾಗಿ ಅರಿತುಕೊಳ್ಳುವದಕ್ಕಾಗಿ ಒಬ್ಬ ಸ್ಪೆಶ್ಯಲ್ ಆಫೀಸರರು ಇಡೀ ಪ್ರಶ್ನೆಯನ್ನೇ ಪರ್ಯಾಲೋಚಿಸುತಿದ್ದಾರೆ. ಎವಾರ್ಡು ಪಾಸಾದ ನಂತರ ಪೆಟ್ರೋಲಿನ ಬೆಲೆ ಹೆಚ್ಚಿದುದೇ ಮೊದಲಾದ ಕೆಲವು ಸಂಕಷ್ಟಗಳುಂಟಾಗಿವೆ ಎಂಬ ಕುರಿತು ಸಂಬಂಧಪಟ್ಟ ಸಂಚಾಲಕರಿಂದಲೂ ನಮಗೆ ಮನವಿಗಳು ಬಂದಿವೆ. ದಕ್ಷಿಣ ಕನ್ನಡದ ಮಜೂರರು ಮತ್ತು ಮಾಲಕರಿಬ್ಬರ ಪ್ರತಿನಿಧಿಗಳೊಡನೆಯೂ ಈ ಕುರಿತು ಚರ್ಚಿಸುವ ಸಂದರ್ಭವು ನನಗಿತ್ತೀಚೆಗೆ ಒದಗಿದ್ದಿತು. ಕೆಲವೊಂದು ವಿಷಯಗಳ ಕುರಿತು ಅವರೊಳಗೊಮ್ಮತವಿರುವುದು ಕಂಡುಬಂತು. ಟಿಕೇಟು ಧಾರಣೆ ಹೆಚ್ಚಳದ ಸಂಬಂಧದ ಪ್ರಶ್ನೆಯನ್ನವರು ಸಂಚಾರ ಪಹಿವಾಟು ಖಾತೆಯ ಸಚಿವರ ಗಮನಕ್ಕೆ ತಂದಿದ್ದರು. ಸಂಚಾರೀ ಸಾರ್ವಜನಿಕರ ಮೇಲೆ ಅದರಿಂದಾಗುವ ಪರಿಣಾಮದೊಂದಿಗೆ ಈ ಪ್ರಶ್ನೆಯನ್ನು ಪುನರಾಲೋಚಿಸಲಾಗುವದು. ಸಂಗತಿಯ ಕಡೆಗೆ ಸರಕಾರದ ಲಕ್ಷ್ಯ ಬಿದ್ದಿದೆ ಎಂದು ಆಶ್ವಾಸನೆ ಕೊಡುತ್ತೇನೆ".

## ಉಡುಪಿ

### ವಾರ್ಷಿಕೋತ್ಸವ ಸಮಾರಂಭ

ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನ ಲೋಜಿಕ್ ಮತ್ತು ಕಾಲೇಜು ಯೂನಿಯನ್ನುಗಳ ವಾರ್ಷಿಕೋತ್ಸವಗಳು ಇದೇ ತಾ. 8ರಲ್ಲು ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾಯರ ಅಧ್ಯಕ್ಷತೆಯಲ್ಲಿ ಜರಗಿದವು. ಶ್ರೀಗಳಾದ ಯು. ಸದಾಶಿವ ಸೆಟ್ಟಿ ಮತ್ತು ಕುಮಾರಿ ನಿರ್ಮಲ ಪೈಗಳು ಲೋಜಿಕ್ ಮತ್ತು ಯೂನಿಯನ್ನಿನ ವರದಿಗಳನ್ನೋದಿದರು. ಎರಡೂ ಸಂಘಗಳ ವರ್ಷಾಂತ್ಯ ಭಾಷಣವನ್ನು ಉಡುಪಿ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲ್ ದಾ। ಬಿ ಎನ್. ಕೃಷ್ಣಮೂರ್ತಿ ಶರ್ಮಾ ಅವರು ಮಾಡಿದರು. ಶ್ರೀ ಟಿ. ವಿ. ರಾಯರು ಧನ್ಯವಾದಗಳನ್ನರ್ಪಿಸಿದರು.

**ಕಾಲೇಜು ವರ್ಧಂತಿ** — ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನ ವರ್ಧಂತಿ ಸಮಾರಂಭವು ಇದೇ ತಾ. 12ರಲ್ಲು ಶ್ರೀ ಬಿ. ವೈಕುಂಠಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾಯರು ಸ್ವಾಗತ ಭಾಷಣಮಾಡಿ ಕಾಲೇಜು ವರದಿಯನ್ನೋದಿದರು. ಬಳಿಕ ಆಟಪಾಟಗಳಲ್ಲಿ ಗೆದ್ದವರಿಗೆ ಬಹುಮಾನ ಹಂಚಿ ಅಧ್ಯಕ್ಷರು ಮಾತನಾಡುತ್ತಾ ಕಾಲೇಜು ವಿದ್ಯಾರ್ಥಿಗಳು ಕಾಲೇಜಿಗೆ ಯಶಸ್ಸನ್ನು ತರುವಂತಹ ರೀತಿಯಲ್ಲಿ ವರ್ತಿಸಿ ಕಾಲೇಜಿನ ಹೆಸರು ಚಿರ[illegible]ವಾಗುವಂತೆ ಪ್ರಯತ್ನಿಸಬೇಕೆಂದರು. ಮಾಧವಪೈಗಳು ಧನ್ಯವಾದಗಳನ್ನ[illegible] ತ್ತಾ ಮಹಾಜನರು ಈ ಸಂಸ್ಥೆಗೆ ಉ[illegible] ಮನಸ್ಸಿನಿಂದ ನೆರವಾಗಬೇಕಾಗಿ ವಿನ[illegible]ದರು. ವಿದ್ಯಾರ್ಥಿ ವಿದ್ಯಾರ್ಥಿನಿಯರಿಂ[illegible] ಟಕಾಭಿನಯಗಳಾದ ಬಳಿಕ ವರ್ಧಂತಿ [illegible]ಗೊಂಡಿತು.

**ಯೋಗ್ಯ ಇಲೆಕ್ಟ್ರಿಕ್ಸ್ ಸರ[illegible]ಯಿ ಬೇಡಿಕೆ:** ಈಗ ಉಡುಪಿಯ[illegible]ವ 'ಇಲೆಕ್ಟ್ರಿಕ್ಸ್ ಪವರ್ ಹೌಸಿನ ಹಳೆ [illegible] ನುಗಳಿಂದ ನಾಗರೀಕರಿಗೆ ಸಾಕಷ್ಟು ಪ್ರ[illegible]ಣದಲ್ಲಿ ಯೋಗ್ಯ ಇಲೆಕ್ಟ್ರಿಕ್ಸ್ ಸರಬರ[illegible]ಯಾಗದಿರುವುದರಿಂದ ಮದ್ರಾಸ್ ಸರ[illegible]ವು ಒಂದೇ ಈ ಕಂಪೆನಿಯನ್ನು ಸ್ವಾಧೀ[illegible]ಡಿಸಿಕೊಳ್ಳಬೇಕು. ಇಲ್ಲವೆ ಹೊಸ ಎಂ[illegible]ಗಳನ್ನು ಒದಗಿಸಿಕೊಟ್ಟು ಜನತೆಗೆ ಯ[illegible] ವಿದ್ಯುತ್ ದೊರೆಯುವಂತೆ ಮಾಡಬ[illegible] ಎಂಬರ್ಥವುಳ್ಳ ನಿರ್ಣಯವು ತಾ. 10 [illegible] ಕಾಂಗ್ರೆಸ್ ಕಮಿಟಿ ಕಚೇರಿಯಲ್ಲಿ ಜ[illegible] ಸಭೆಯಲ್ಲಿ ಆಯಿತು. ಸಭಾಧ್ಯಕ್ಷತೆಯ[illegible] ಶ್ರೀ. ಟಿ. ಎ. ಪೈಗಳು ವಹಿಸಿದ್ದರು.

**ಮುನಿಸಿಪಲ್ ಮೀಟಿಂಗು:** 11ರಲ್ಲು ಸಂಜೆ ಶ್ರೀಮತಿ ಲೀಲಾಬಾಯಿ[illegible] ಮತರ ಅಧ್ಯಕ್ಷತೆಯಲ್ಲಿ ಜರಗಿತು. ಮ[illegible]ಸಿಪಲ್ ಕ್ಷೇತ್ರದಲ್ಲಿ ಖಡ್ಡಾಯ ಶಿಕ್ಷಣ [illegible] ಜನೆಯ ಕಾರ್ಯಕ್ರಮವು ಬೇಡವೆಂದು [illegible]ಧಾರವಾಯಿತು. ಸರಕಾರವು ಗೋ ಆ[illegible] ಯನ್ನು ಸ್ಥಾಪಿಸುವಲ್ಲಿ ಒಂದು ಸಾವಿರ ಪಾಯಿ ಧನಸಹಾಯ ಕೊಡಬಹುದ[illegible]ಯಿತು. ಕೌನ್ಸಿಲಿನ ಕೈಕೆಳಗೆ ಹೆಲ್ತ್ ಇ[illegible] ಪೆಕ್ಟರರಾಗಿದ್ದ ದಿವಂಗತ ಕೃಷ್ಣರಾಯ[illegible] ಬ್ಬು ಜಪ್ತಿ ಮಾಡಲಾದ ರೂಪಾಯಿ 25[illegible] ಅವರ ಹೆಂಡತಿಗೆ ವಾಪಾಸು ಕೊಡಲು [illegible]ಧ್ಯವಿಲ್ಲವೆಂಬ ಬಗ್ಗೆ ವಿಷಾದ ಸೂಚಿಸ[illegible]ಯಿತು.

---

**ಶಿರ್ವ**— ನಡಿಬೆಟ್ಟು ಅಚ್ಚಣ್ಣ [illegible]ಯರು ಇದೇ ತಾ. 11ರಲ್ಲಿ ತನ್ನ 65ನೇ ವ[illegible]ಸ್ಸಿನಲ್ಲಿ ದಿವಂಗತರಾದರೆನ್ನಲು ವಿಷಾದಿ[illegible]ತ್ತೇವೆ. ಪ್ರಸಿದ್ಧ ನಡಿಬೆಟ್ಟು ಕುಟುಂಬದ [illegible]ಯರಲ್ಲೊಬ್ಬನಾಗಿದ್ದು ಚತುರ ಮತ್ತು [illegible]ತ ಪ್ರಕೃತಿಯವರಿದ್ದ ಹೆಗ್ಡೆಯರನ್ನು ಕೆಲ[illegible]ಲದಿಂದ ಪೀಡಿಸುತ್ತಿದ್ದ ಅನಾರೋಗ್ಯವು [illegible]ರ ಇಹಯಾತ್ರೆಯನ್ನು ಕೊನೆಗೊಳಿಸಿತು. [illegible]ವರ ಆತ್ಮಕ್ಕೆ ಶಾಂತಿಯನ್ನು ಕೋರಿ ಸಂ[illegible]ಧಿಕರಿಗೆ ಸಹಾನುತಾಪ ಸೂಚಿಸುತ್ತೇವೆ.

---

### Notice

In the Court of the Distric[t] Munsiff of Udipi.

S. C. 39/19[illegible]

Between
Boniface Lasrado—Plainti[ff]
and
Francis Volvera-Defendant

To the defendant S/o Abraham Volvera, residing in th[e] house of Thomas Volvera, 2 Vallabhai Road, opposite Marke[t] Vile-Parle, Bombay

The afore said suit filed against you for recovery o[f] amount due by you under a demand promissory note executed by you in favour of the plff. on 6-3-47 for Rs. 100-0-0 is posted for final disposal in the afore said court on 8-4-50; and that you are hereby required to appear and put in your defence if any, before the said court on the said date at 11 A. M. failing which the said suit will be heard and decided exparte that day.

(By order of the Court.)

K. Vittal Nayak
Vakil for Plff.

Udipi 14-3-50

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ-
ನಡಿಯುವ ಚಿತ್ರ
ವೆಲ್ಲಿನಕ್ಷತ್ರಂ
(ಮಲೆಯಾಳಿನಲ್ಲಿ)
ಬರುವ ಚಿತ್ರ ಜುಪಿಟರ್‌ನವರ
ರಾಜಕುಮಾರಿ (ತಮಿಳು)
ಕೆ. ಮಾಲತಿ, ಎಮ್. ಜಿ ರಾಮಚಂದ್ರನ್, ಬಾಲಯ್ಯ ಪುಳಿಮುಟ್ಟಿ

## ಉಡುಪಿ ಸೆಂಟ್ರಲ್ ವಾರ್ಡಿನಲ್ಲಿ ‘ಬೆಟರ್‌ಮೆಂಟ್’ ಟೇಕ್ಸ್ ಎಬ್ಬಿಸಿರುವ ಹಾಹಾಕಾರ!

ಉಡುಪಿ ಮುನ್ಸಿಪಾಲಿಟಿಯವರು ‘ಸೆಂಟ್ರಲ್ ವಾರ್ಡಿ’ನವರ ಮೇಲೆ ಹೇರಲು ಹೊರಟಿರುವ ‘ಬೆಟರ್‌ಮೆಂಟ್ ಟೇಕ್ಸ್’ ಈ ವಾರ್ಡಿನ ಸ್ಥಳವಂದಿಗರಲ್ಲಿ ವಿಶೇಷ ದಿಗಿಲನ್ನು ನಿರ್ಮಿಸಿದೆ. ಪದ್ಧತಿಪ್ರಕಾರ 1943ನೇ ಇಸವಿಯಲ್ಲೇ ನಿಯೋಜಿಸಲ್ಪಟ್ಟದ್ದು, ಈಗ ಜಾರಿಗೆ ಬರಹತ್ತಿರುವ ಯೋಜನೆಯಿದು ಎಂದು ತಿಳಿದುಬರುತ್ತದೆ. ಆ ವಾರ್ಡಿನ ಸ್ಥಳ, ಮನೆಗಳ ಸಂಬಂಧವಾಗಿ ಬಂದಿರುವ ನೋಟೀಸಿನಲ್ಲಿ ನಮೂದಿಸಿರುವ ತೆರಿಗೆಗಳ ಮೊತ್ತಗಳನ್ನು ಸಂಬಂಧಪಟ್ಟ ಸ್ಥಳ,ಮನೆಗಳನ್ನು ಮಾರಿಯೇ ತುಂಬಿಸಬೇಕಲ್ಲದೆ ಅನ್ಯಥಾ ಅಸಾಧ್ಯವೆಂಬ ಸಂತಾಪವು ಸರ್ವಸಾಮಾನ್ಯವಾಗಿದೆ- ಇದೆಂತಹ ದುಃಖದಾಯೀ ಘಟನೆಯೆಂದು ಬೇರೆ ಹೇಳಬೇಕಾಗಿಲ್ಲ. ಯಾವ ವಾದವಿವಾದಗಳಿದ್ದರೂ ಮುನ್ಸಿಪಾಲಿಟಿಯವರು ಕ್ರಮನಿಯಮಗಳಿಗನುಸಾರವಾಗಿ ಮತ್ತು ತಮಗಿರುವ ಅಧಿಕಾರಕ್ಕನುಗುಣವಾಗಿಯೇ ಬೆಟರ್‌ಮೆಂಟ್‌ಟೇಕ್ಸ್ ನೋಟೀಸುಗಳನ್ನು ಹೊರಡಿಸಿರಬೇಕು. ಆ ಸಂಬಂಧದ ಕ್ರಮಕಾನೂನುಗಳ ಸವಿವರ ವಿಮರ್ಶೆ ಇಲ್ಲಿ ಅನಗತ್ಯ. ಆದರೆ ಪ್ರಸ್ತುತ ತೆರುತ್ತಾ ಬರಬೇಕಾದ ಈ ತೆರಿಗೆಯ ಭಾರವು ಸೆಂಟ್ರಲ್ ವಾರ್ಡಿನವರನ್ನು ನೆಲಸಮ ಮಾಡುವಂತಹದೆಂಬ ಕುರಿತು ಪ್ರತಿವಾದವಿಲ್ಲ. ನೋಟೀಸಿನಲ್ಲಿ ನಮೂದಿಸಲ್ಪಟ್ಟಿರುವ ಮೊತ್ತಗಳು ಅಪ್ಪೀಲಿನಲ್ಲಿ ಕೆಲವಂಶ ಕಡಿಮೆ ಮಾಡಲ್ಪಡುವದು ಸ್ವಾಭಾವಿಕ. ಆದರೆ ಈ ತೆರಿಗೆಯ ತಳಗಟ್ಟೇ ಅಂದಾಜುತಪ್ಪಿ ಅತ್ಯಗಲವಾಗಿ ಬಿದ್ದಿರುವಾಗ, ಅದನ್ನು ಇದ್ದಂತಿಟ್ಟು ಎಂತಹ ದುರಸ್ತಿ ಕೈಕೊಂಡರೂ ಅದರ ಮೂಲಾಕಾರ ಪೂರ್ಣಬದಲಾಗುವುದು ಅಸಂಭವ. ಒಂದು ಸಂಗತಿಯು ಸಂಪೂರ್ಣ ಅನ್ಯಾಯಪೂರ್ಣವಾದ ಮೇಲೆ ಅದನ್ನು ಪೂರ್ಣವಾಗಿ ನಿವಾರಿಸಿಕೊಳ್ಳಬೇಕೇ ಹೊರತು ಅಂಶ ಮಾತ್ರ ಕಡಿಮೆ ಮಾಡಿಕೊಂಡಲ್ಲಿ ಉಳಿಯುವ ದೆಚ್ಚನಂಶ ಅನ್ಯಾಯವಂತೂ ಆಗಿಯೇ ಹೋಗುವದು. ಅಂದರೆ ‘ಬೆಟರ್‌ಮೆಂಟ್’ ತೆರಿಗೆಯ ಮೂಲ ಅಂದಾಜೇ ತೀರಾ ಅಸಹ್ಯ ಮತ್ತು ಅಪರಿಮಿತವಿರುವಾಗ ಅಪ್ಪೀಲಿನಲ್ಲಿ ಅದು ಕೆಲವಂಶ ಕಡಿಮೆಯಾದರೂ ತೆರಿಗೆದಾರರಿಗೆ ಉಳಿಗಾಲವಿಲ್ಲವೆಂಬುದು ಖಂಡಿತ. ಈ ರೀತಿ ಉಡುಪಿ ಸೆಂಟ್ರಲ್ ವಾರ್ಡಿನ ಸ್ಥಳವಂದಿಗರ ಅಸ್ತಿತ್ವಕ್ಕೇನೇ ಬಡಿದಿರುವ ಈ ಗಂಡಾಂತರದ ಕುರಿತು ನಗರಸಭಾ ಸದಸ್ಯರು ಸಹಾನುಭೂತಿ ತೋರಿಸದೆ, ಸಂಕಷ್ಟದ ಪರಿಚಯವೇ ಇಲ್ಲದವರಂತೆ ವರ್ತಿಸುತ್ತಿದ್ದಾರೆ,ಎಂಬ ದೂರುಗಳು ಕೇಳಿಬರುತ್ತಿವೆ. ‘ಬೆಟರ್‌ಮೆಂಟ್ ಯೋಜನೆ’ಯು ನಗರಸಭೆಗಳ ಪಾಲಿಗಿದ್ದದ್ದೇ. ಆದರೆ ಯಾವದೇ ಕ್ರಮ,ಯೋಜನೆಅಥವಾ ಶಾಸನವೇ ಇರಲಿ;ಅದರಮುಖ್ಯಗುರಿಮತ್ತು ಉದ್ದೇಶವೆಂದರೆ,ಜನಹಿತಸಾಧನೆಯೊಂದೆ.ಆದ್ದರಿಂದ ಸಂಬಂಧಪಟ್ಟ ಜನರ ಹಿತಕ್ಕೆ ಮಾತ್ರವಲ್ಲ, ಇರಸ್ತಿಕೆಗೇನೇ ಗಂಡಾಂತರಪ್ರಾಯವಾಗಬಲ್ಲ ಈ ವಿಧಾನವನ್ನು, ಬೇರಾವ ಕಾರಣಕ್ಕಾಗಿಯಾದರೂ ಮುಂದೊಡ್ಡದೆ ಬಾಕಿಯಿಡುವುದು ನಗರಸಭೆಯಂತಹ ಜನಪ್ರತಿನಿಧಿ ಸಂಸ್ಥೆಯ ಆದ್ಯ ಕರ್ತವ್ಯವಿದೆ ಜೀವನವೆಚ್ಚವು ಬಹಳವಾಗಿ ಏರಿ, ಹಣದ ವಹಿವಾಟು ಕುಗ್ಗುತ್ತಾ ಬಂದಿರುವ ಕಾಲವಿದು. ಯುದ್ಧ ಮತ್ತು ಯುದ್ಧೋತ್ತರ ಕಾಲಗಳಲ್ಲಿ ಜನಸಾಮಾನ್ಯರ ಪಾಲಿಗೆ ಈಗಿನಷ್ಟು ಆರ್ಥಿಕ ಮುಗ್ಗಟ್ಟಿನ ಬೇರೆ ಅವಧಿಯಿರಲಿಲ್ಲವೆಂಬುದು ಸರ್ವರ ಅನುಭವಕ್ಕೆ ಬಂದಿರುವ ವಿಷಯ. ನಗರಾಭಿವೃದ್ಧಿ ಅಗತ್ಯವೇನೋ ನಿಜ-ಆದರೆ ಜನರ ಉಸಿರುಕಟ್ಟಿಸಿ ಊರ ಸೌಂದರ್ಯ ಹೆಚ್ಚಿಸುವುದಲ್ಲ. ಯುದ್ಧದ ಮೊದಲಿನ ಕಾಲಗಳಲ್ಲಿ “ನಮ್ಮ ಜನರು ಹೆಚ್ಚೆಚ್ಚು ಪೌಷ್ಟಿಕ ಆಹಾರಗಳನ್ನು ಸೇವಿಸಬೇಕು” ಎಂಬ ಪ್ರಚಾರ ಎಲ್ಲರಿಂದಲೂ ನಡೆದಿದ್ದಿತು; ಆದರೆ ಈಗಿನ ಆಹಾರಾಭಾವ ಯುಗದಲ್ಲಿ, ಜನರು ಜೀವ ಹಿಡಿದುಕೊಂಡಿರುವಷ್ಟೇ ಹಸುಗೆ ದೊರೆಯುತ್ತಿದೆಯಲ್ಲದೆ, ಪುಷ್ಟಿದಾಯಕ ಆಧಿಕಾಹಾರ ಸೇವಿಸಬೇಕೆಂಬ ಬೋಧನೆ ಕೊಡುವವರಾರೂ ಇಲ್ಲ. ಕಾಲಸ್ಥಿತಿಯ ಮೇಲಿಂದ ಹೀಗಾಗುವುದು ಅನಿವಾರ್ಯವಾಯಿತು ಅಂತೆಯೇ ನಗರಾಭಿವೃದ್ಧಿ ಅಗತ್ಯವಾದರೂ, ಜನರು ಆರ್ಥಿಕ ಮುಗ್ಗಟ್ಟಿನಲ್ಲಿರುವ ಈ ಕಾಲದಲ್ಲಿ ಆ ಯೋಜನೆಯನ್ನು ನಗರ ಸಭೆಯವರು ಬಾಕಿ ಬಿಡಬೇಕಾದುದು ಅಗತ್ಯವಿದೆ. ನಗರ ಸಭೆಗೆ ಹಾಗೆ ಮಾಡುವ ಅಧಿಕಾರಾವಕಾಶಗಳಿಲ್ಲವೆಂದಾದರೆ, ಪ್ರಾಂತಿಕ ಸರಕಾರವು ಅಂತಹ ಅವಕಾಶವನ್ನು ಒದಗಿಸಿ ಕೊಡಲೇಬೇಕೆಂದು ಜನರ ಅಗ್ರಹದ ಬೇಡಿಕೆಯಿದೆ.

## ಸಾರರ ಸ್ವೀಕಾರ

### ನಿರೆಡುಸೊಡು ವರ್ಷದ ಕ್ಯಾಲೆಂಡರ್

1900ರಿಂದ 2099ನೆ ವರ್ಷದ ವರೆಗಿನ ಯಾವ ತಿಂಗಳ ಯಾವ ತಾರೀಖು ಯಾವ ದಿನಆಗುವುದೆಂದು ಸರಿಯಾಗಿ ತೋರಿಸಬಲ್ಲ ಕ್ಯಾಲೇಂಡರು ನಮ್ಮ ಹಸ್ತಗತವಾಗಿದೆ. 11"x10" ಸ್ಯಾಜಿನಲ್ಲಿ ಉತ್ತಮ ರಟ್ಟು ಕಾಗದದಲ್ಲಿ ಅಚ್ಚಾಗಿದ್ದು, ಚನ್ನಡಿಹಾಕಿ ಇಟ್ಟುಕೊಳ್ಳಲು ಅನುಕೂಲವಾಗಿದೆ-

ಕ್ಯಾಲೆಂಡರ್ 1ರ ಕ್ರಯ. ರೂಪಾಯಿ 1- - ಸಿಗುವಸ್ಥಳ:-ಎಮ್.ಬಿ ಪಿ ವೈದ್ಯಾರ್ ರೈಲ್ವೆಸ್ಟೇಶನ್ ಬಳಿ ಮಂಗಳೂರು.

**ಬಸ್ರೂರು**–ಬಸ್ರೂರು ಹಿಂದೂ ಎಯ್ಡೆಡ್ ಹಾಯರ್ ಎಲಿಮೆಂಟರಿ ಶಾಲಾ ವರ್ಧಂತ್ಯುತ್ಸವ ಮತ್ತು ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವಗಳು ತಾ. 5-3-'50ರಲ್ಲಿ ಜಿಲ್ಲಾ ಬೋರ್ಡಿನ | ಉಪಾಧ್ಯಕ್ಷರಾದ ಶ್ರೀ. ‘ಡೇನಿಸ್ ಪಿಂಟೊ’ ಇವರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟವು. ಪೂರ್ವಾಹ್ನ ಘಂಟೆ 10ಕ್ಕೆ ಹಳೆ ವಿದ್ಯಾರ್ಥಿಗಳ ಸತ್ಕಾರ ಕೂಟ, ಭಾಷಣ,ಅಪರಾಹ್ನ ಘಂಟೆ 4 30ರಿಂದ ಮುಖ್ಯೋಪಾಧ್ಯಾಯರ ವರದಿವಾಚನ, ಜಿಲ್ಲಾ ಬೋರ್ಡಿನ ಮೆಂಬರ ಹಾಗೂ ಹಳೆ ವಿದ್ಯಾರ್ಥಿಯಾದ ಶ್ರೀಕೊಳ್ಕೆಬೈಲು ಸೂರಪ್ಪ ಶೆಟ್ಟಿ ಇವರ ಸ್ವಸ್ತಿವಾಚನ, ಬಹುಮಾನ ವಿತರಣೆಯಾದ ತರುವಾಯ ಸಭಿಕರಲ್ಲಿ ಶ್ರೀH.ಕೊಟ್ಯಣ್ಣ ಶೆಟ್ಟಿ ಮತ್ತು ಶ್ರೀ. ಬಿ. ರಾಜೀವ ಶೆಟ್ಟಿ B A- B- L. ಇವರು ಸಂದರ್ಭೋಚಿತ ಭಾಷಣ ಮಾಡಿದರು. ಬಳಿಕ ಅಧ್ಯಕ್ಷರು ಶಾಲಾ ಏಳ್ಗೆಯ ಕುರಿತು ಕೆಲವು ಹಿತೋಕ್ತಿಗಳನ್ನಾಡಿದ ತರುವಾಯ ಶಾಲಾ ಬಾಲಕ ಬಾಲಕಿಯರಿಂದ ಹಾಗೂ ಹಳೆ ವಿದ್ಯಾರ್ಥಿಗಳಿಂದ ನಾಟಕಗಳೂ, ಯಕ್ಷಗಾನ, ಮೋಹಿನಿಯರ ನೃತ್ಯ ಇತ್ಯಾದಿ ವಿವಿಧವಿನೋದಾವಳಿಗಳೂಪ್ರದರ್ಶಿಸಲ್ಪಟ್ಟು, ರಾಷ್ಟ್ರಗೀತೆಯೊಂದಿಗೆ ಆಂದಿನ ಸಮಾರಂಭವು ಯಶಸ್ವಿಯಾಗಿ ಕೊನೆಗೊಂಡಿತು.

### ಸಕ್ಕರೆ ಧಾರಣೆ

ಮಂಗಳೂರಲ್ಲಿ ಸೆಲ್ಸ್‌ಟೇಕ್ಸ್ ಸಹಿತ ಗೋಣಿಗೆರಕುಂದರ-94 8-3ಸೇಲ್ಸ್‌ಟೇಕ್ಸ್ ಸಹಿತ 40ತೊಲೆಗಳ ರಾತ್ತಿಗೆ ಚಿಲ್ಲರೆದರ ಮಂಗಳೂರು, ಬಂಟ್ವಾಳ, ಮಂಜೇಶ್ವರ ಕುಂಬಳೆ, ಮತ್ತು ಮೂಡಬಿದ್ರೆ 0-7-2 ಪುತ್ತೂರು, ಬೆಳ್ತಂಗಡಿ, ಕಾರ್ಕಳ, ಕಾಸರಗೋಡು, ಕಾಂಞಂಗಾಡದಲ್ಲಿ 0-7-3, ಉಡುಪಿಯಲ್ಲಿ 0-7-4. ಕುಂದಾಪುರದಲ್ಲಿ 0-7-5

**ಉದ್ಯಾವರ**– ಕಳೆದ ತಾ 25ರಂದು ಉದ್ಯಾವರ ಸೆಂಟರಿನ ಮಕ್ಕಳ ಆಟದ ಹಬ್ಬವು ಡಾ| ಡಬ್ಲ್ಯು. ಎ. ಸುಚಿತ್ರ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಎಚ್. ಸಂಜೀವರಾವ್ ಮೊದಲಾದವರು ಸಾಲೋಚಿತ ಮಾತುಗಳನ್ನಾಡಿದರು. ವಿವಿಧ ಕಾರ್ಯಕ್ರಮಗಳಿಂದ ಸಭೆಯು ಕೊನೆಗೊಂಡಿತು.

**ವೈಪಾಡಿ**:- ಸ ಕ ೦ ಬುನಾದಿ ಶಿಕ್ಷಣ ವಿದ್ಯಾಲಯದ ವರ್ಧಂತ್ಯುತ್ಸವ ತಾ 27-2-50 ರಿಂದ 1-3-50ರ ವರೆಗೆ ನಡೆದುವು. ಪ್ರಥಮ ದಿನ ಪ್ರದರ್ಶನದ ಉದ್ಘಾಟನವು ಪೆರ್ಡೂರ ಡಾ.ಪಿ.ಎಸ್. ಶಾಸ್ತ್ರಿಯವರಿಂದ ಮಾಡಲ್ಪಟ್ಟಿತು. ರಾತ್ರಿ ಹಿಂದಿ ನಾಟಕ ಮತ್ತು ವಿವಿಧ ವಿನೋದಾವಳಿಗಳು ನಡೆದವು. ಮರುದಿನ ವೀರದಳ ದಿನವಾಗಿತ್ತು. ಪ್ರಾತಃ ಕಾಲಸೂರ್ಯೋದಯಕ್ಕೆ ಇಂಜಿನಿಯರಿಂಗ್ ಇಲಾಖೆ ಸುಪರ್‌ವೈಸರ್ ಶ್ರೀಯುತ ಭಗವಾನ್ ದಾಸ್ ರೈಗಳಿಂದ ಧ್ವಜಾರೋಹಣ ಮಾಡಲ್ಪಟ್ಟಿತು. ಶಾಲಾ ಮುಖ್ಯೋಪಾಧ್ಯಾಯರಿಂದ ಕಬ್ ಮಾಸ್ತರ್ ತರಬೇತಿಯ ಪ್ರಮಾಣ ಪತ್ರಗಳು ವಿತರಣೆ ಮಾಡಲ್ಪಟ್ಟವು. ಸಂಜೆ ಆಸುಪಾಸಿನ ಶಾಲಾ ಮಕ್ಕಳಿಗೆ ಆಟ ಉಪಹಾರಗಳಿದ್ದುವು. ... ತರ ಛದ್ಮವೇಷ ವಿನೋದವಿತ್ತು. ... ಅವರೋಹಣ ನಂತರ ರಾತ್ರಿ ಶಿಬಿರಾಗ್ನಿ, ಯಕ್ಷಗಾನ ಮತ್ತು ಇತರ ವಿನೋದಾವಳಿಗಳಾದುವು. ಕಡೆಯ ದಿನ ಊರವರ ಆಟಗಳಿದ್ದುವು. ಸಂಜೆ ಕಾರ್ಯಕ್ರಮವು ಶ್ರೀಯುತ ಉಮೇಶ ರಾವ್ B. A. B. L. ರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾರ್ಥನೆ, ಶಾಲಾಭ್ಯುದಯ ಭಾಷಣ, ವರದಿವಾಚನ, ಪ್ರಶಸ್ತಿ ಪತ್ರ ಹಂಚೋಣ, ಅಧ್ಯಕ್ಷರ ಭಾಷಣಗಳಾದ ಮೇಲೆ ಕನ್ನಡ ತುಳುನಾಟಕಗಳು ವಿವಿಧವಿನೋದಾವಳಿಗಳೂ ಜರಗಿ ಜನ... ದೊಂದಿಗೆ ಕಾರ್ಯಕಲಾಪಗಳು ಮುಕ್ತಾಯವಾದುವು.

**ಬಾರಕೂರು**— ಇಲ್ಲಿಯ ಮಹತೋಭಾರ ಕೋಟೆಕೇರಿ ಶ್ರೀ ಪಂಚಲಿಂಗೇಶ್ವರ ದೇವಸ್ಥಾನದಲ್ಲಿ ವರ್ಷಂಪ್ರತಿ ನಡೆಯುವ ... ಮನ್ಮಹಾಂಥೋತ್ಸವವು ಇದೇ ತಾ.21ರಿಂದ ತಾ.28ರ ತನಕ ವಿವಿಧಕಾರ್ಯಕ್ರಮಗಳಿಂದ ಜರಗುವುದು.

### ಟೆಂಡರ್ ನೋಟೀಸು

ಉಡುಪಿ ಮುನಿಸಿಪಾಲಿಟಿಯ 1950-51ನೇ ವರ್ಷದಲ್ಲಿ ರಸ್ತೆ ದುರಸ್ತಿ ಕಾಮಗಾರಿಗಳ ಬಗ್ಗೆ ಟೆಂಡರುಗಳನ್ನು ಇದೆ 1950ನೇ ಇಸವಿ ಮಾರ್ಚ ತಿಂಗಳ 29ನೇ ಬುಧವಾರ ಅಪರಾಹ್ನ ನಾಲ್ಕು ತಾಸಿನ ತನಕ ಸ್ವೀಕರಿಸೋಣಾಗುವುವು. ಹೆಚ್ಚಿನ ಮಾಹಿತಿ ಅಗತ್ಯವಿದ್ದಲ್ಲಿ ಆಫೀಸು ಇರುವ ಎಲ್ಲಾ ದಿನಗಳಲ್ಲಿ ಆಫೀಸು ಸಮಯ ಮುನಿಸಿಪಲ್ ಆಫೀಸಿನಲ್ಲಿ ಸ್ವತಹಾ ಹಾಜರಾಗಿ ಪಡೆಯಬಹುದು.

| ಕಾಮಗಾರಿ ಹೆಸರು | ಅಂದಾಜು ಪಟ್ಟಿಯ ಮೊಬಲಗು | ಟೆಂಡರ್ ಬಗ್ಗೆ ಇಡಬೇಕಾದ ಠೇವಣಾತಿ ಐವೇಜು |
|---|---|---|
| ಟೌನ್ ರಸ್ತೆ ಮೂಡು ಬ್ಲೋಕ್. | ರೂ. 8850 | ರೂ 445 |
| ಡಿ ಪಡು ಬ್ಲೋಕ್. | ರೂ. 6060 | ರೂ. 305 |

ಉಡುಪಿ ಮುನಿಸಿಪಲ್ ಆಫೀಸು,
ತಾ 14—3—1950.

V. Balagangadharan,
ಕಮಿಶ್ನರ್.




ಶ್ರೀ ಕೊರಡ್ಕಲ್ ಶ್ರೀನಿವಾಸರಾಯರ

‘ಸುಲಭದಲ್ಲಿ ಇಂಗ್ಲಿಷ್’
(ENGLISH MADE EASY)
ಮನೆಯಲ್ಲಿ ನೀವಾಗಿ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.
ಬೆಲೆ: ೧-೮-೦

ಮದ್ರಾಸು ಸರಕಾರದಿಂದ ಈಗತಾನೇ ಸಂಭಾವನೆ ಪಡೆದ
ಡಾಕ್ಟರ್ ಕೊರಡ್ಕಲ್ ವೆಂಕಟ್ರಾಯರ
‘ಮನೆ ಮದ್ದು’
(HOME REMEDIES)
೨೦೦ ರಾಶಿಗಳಿಗೆ ಮನೆಯಲ್ಲೇ ಮಾಡಿಕೊಳ್ಳಬಹುದಾದ ೧೦೦೦ ಮದ್ದುಗಳ ವಿವರವಿರುವ ಪುಸ್ತಕ. ಬೆಲೆ: ರೂ. ೨
ಪ್ರತಿಗಳು ನಿಮ್ಮೂರ ಪುಸ್ತಕವ್ಯಾಪಾರಿಗಳಲ್ಲಿ ಸಿಗದಿದ್ದರೆ ಬರೆಯಿರಿ-
**ನವಭಾರತ ಪುಸ್ತಕ ಭಂಡಾರ, ಉಡುಪಿ.**
**ನವಯುಗ ಪ್ರೆಸ್, ಉಡುಪಿ**

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ
# ರಾಯಲ್ ಮಹಾಲಿನಲ್ಲಿ
**ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!**
**ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!**
ಶಿವು ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ,ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೇ?
**ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.**

**For up-to-date Lodging & Boarding**
**ROYAL MAHAL,**
**UDIPI, S. Kanara.**


### ಪ್ರಕಟಣೆ

ಉಡುಪಿ ಕ್ರಿಶ್ಚನ್ ಹೈಸ್ಕೂಲಿನ ಹಳೆ ವಿದ್ಯಾರ್ಥಿ ಸಂಘದ ನಿಯಮಾವಳಿಯು ಅದಕ್ಕಾಗಿ ನೇಮಿಸಿದ ಸಮಿತಿಯಿಂದ ತಯಾರಿಸಲ್ಪಟ್ಟು, ಅದರ ಮಂಜೂರಾತಿಯ ಬಗ್ಗೆ ... ಲಿಯಹಳೆ ವಿದ್ಯಾರ್ಥಿಗಳೆಲ್ಲ ಶಾಲೆಯಲ್ಲಿ ... ವಾರ ತಾ. 25-3-50ರಲ್ಲಿ ಸಾಯಂಕಾಲ 5-30ಕ್ಕೆ ಕೂಡಬೇಕಾಗಿ ವಿನಂತಿ.

**U. P. Shenoi**, Conven[er]

## ನಮಗೆ ಬಂದ ಪತ್ರ

**ಪೆರ್ಡೂರು**— ಇಲ್ಲಿ ಸರಕಾರದವರು ಮದ್ಯಪಾನ ನಿರೋಧದ ಕಾನೂನನ್ನು ಜ್ಯಾರಿಗೆ ತಂದನಂತರವೂ ಕೆಲವರು ಗೂಢವಾಗಿ ಸರಾಯಿಯನ್ನು ತಯಾರಿಸಿ ತಾವು ಉಪಯೋಗಿಸುವುದಲ್ಲದೆ ಬೇರೆಯವರಿಗೂ ಮಾರುತ್ತಿರುವರೆಂಬ ಸಂದೇಹದ ಮೇರೆಗೆ ಉಡುಪಿ ಸರ್ಕಲಿನ ಡಿಪ್ಯುಟಿ ಪ್ರೊಹಿಬಿಶನ್ ಆಫೀಸರರಾದ ಶ್ರೀಯುತ. ಎಚ್. ಶೇಷಗಿರಿರಾಯರು ತಮ್ಮ ಸಿಬಂಧಿಯೊಡನೆ ತಾ. 9-3-50 ನೇದಿನ ಇಲ್ಲಿಗೆ ಗುಪ್ತವಾಗಿ ಬಂದುದಲ್ಲದೆ ಸಂಶಯಾಸ್ಪದವಾದ ಸ್ಥಳಗಳನ್ನೆಲ್ಲಾ ಸಂದರ್ಶಿಸಿ ಸಂಶಯಕ್ಕೊಳಗಾದ ಜನರ ಮನೆ ಮತ್ತು ಮಠಾರಗಳನ್ನು ಪರೀಕ್ಷಿಸಿ, ದುರವಗಾಹಗಳಾದ ಕಾಡುಗುಡ್ಡಗಳಲ್ಲಿಯ ಗುಪ್ತ ಸ್ಥಳಗಳನ್ನು ಕೂಡಾ ಅತ್ಯಂತ ಶ್ರಮವಹಿಸಿ ಶೋಧಿಸಿದುದು ಸ್ತುತ್ಯಾರ್ಹವಾಗಿದೆ. ಇದರಿಂದಾಗಿ ಇಲ್ಲಿಯ ಹಳ್ಳಿಗಾಡಿನ ಜನರಲ್ಲಿ ಭಯವೂ ಜಾಗ್ರತಿಯೂ, ಕಾನೂನಿನ ಅರಿವೂ ಉಂಟಾಗಿರುವುದೆಂಬುದು ಅತಿ ಸಂತೋಷಕರ. ಇದೀಗ ಗೇರುಹಣ್ಣುಗಳು ಆಗುವ ಸಮಯವಾದುದರಿಂದಲೂ ಜಾತ್ರೆಯು ಸಮೀಪಿಸಿದುದರಿಂದಲೂ ಸರಾಯಿ ತಯಾರಿಕೆಯು ಭರದಿಂದ ಸಾಗುವ ಸಂದರ್ಭವನ್ನರಿತು, ಶ್ರೀಯುತರು ಈ ಊರಿಗೆ ಚಿತ್ತೈಸಿ ಮೇಲಿನ ಕಾರ್ಯವನ್ನೆಸಗಿದುದರಿಂದ ಸರಾಯಿ ತಯಾರಿಕೆಗೆ ಬಲವಾದ ತಡೆಯುಂಟಾಗಿ ಈ ಗ್ರಾಮದ ಜನರಿಗೆ ಮಹೋಪಕಾರವಾಯಿತು.

## *Notice.*

**ಉಡುಪಿ ಡಿ ಮು. ಕೋರ್ಟಿನಲ್ಲಿ**

O. S. No. 20 of 1950
R. I. A. No. 280/50

...ೀನಪ್ಪ ಸೇರ್ವೆಗಾರ, ಹಂದಾಡಿ ಮೋಕ್ತೇಸರ, ಟ್ರಿ ಮೊಮ್ಮಗ, ಉಡುಪಿ ತಾಲ್ಲೂಕು ಹಂದಾಡಿ ಗ್ರಾಮದಲ್ಲಿಯಿರುವವ —ವಾದಿ.

ಮತ್ತು

...ರಪಿನ್ ಬಾಯಿ ಕೂಡಾ —ಪ್ರತಿವಾದಿರು. ಯಿವರೊಳಗೆ

2ನೇ ಪ್ರತಿವಾದಿ: ರೀತಾಬಾಯಿ. 5ನೇ ಪ್ರತಿವಾದಿ: ಮುಗ್ಗಿಬಾಯಿ—ಅಂಜಲಿಸ್ತ ಸಿಲುವರ ಮಕ್ಕಳು. ಉಡುಪಿತಾಲ್ಲೂಕು ವಾರಂಬಳ್ಳಿ ಗ್ರಾಮದಲ್ಲಿಯಿರುವವರು. ಪ್ರತಿವಾದಿರು. ಸದ್ರಿ 2 & 5ನೇ ಪ್ರತಿವಾದಿಂಗೆ ಯಿಮೂಲಕ ತಿಳಿಯಪಡಿಸುವದೇನೆಂದ್ರೆ— ವಾದಿಯು ಪ್ರತಿವಾದಿಯರ ಮೇಲೆ ಪ್ಲೇಂ... ನಿವೃತ್ತಿಗೋಸ್ಕರ ದಾಖಲು ಮಾಡಿದ ...ಲ್ಲಂಡ ನಂಬ್ರವು ತಾರೀಕು 29-3-1950 ತಸ್ಸಿಗೆ ಯಿಡೋಣಾಗಿಯದೆ. ಸದ್ರಿ ದಾವೆಲ್ಲಿ 2 ಮತ್ತು 5ನೇ ಪ್ರತಿವಾದಿರಾದ ನೀ... ಉದಹರಿಸತಕ್ಕದಿದ್ರೆ ಸದ್ರಿ ದಿವಸ ಹಗ 10ಗಂಟೆಗೆ ಮೇಲ್ಕಂಡ ಕೋರ್ಟಿಗೆ ಸ್ವಂ... ಖಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕ... ತಪ್ಪಿದರೆ ಸದ್ರಿ ದಾವೆಯು ಯೇಕ... ವಾಗಿ ತೀರ್ಮಾನಿಸಲ್ಪಡುವದೆಂಬ ಸಂಗಿ... ಮೂಲಕ ಕೋರ್ಟು ಹುಕ್ಮಂ ಪ್ರಕಾ... ಳಿಸೋಣಾಗಿಯದೆ.

K. J. Ballal, B.A. LL.B.,
Vakil for Plaintiff.

...ipi Dated 11-3-50




...oved firm by the Govt. of Mysore
...ficated by the Agent of the Govt. of
...e & Indian.

## ದ. ಕನ್ನಡ

**ಹಿರಿಯಡಕ**—ಇಲ್ಲಿಯ ಆರ್ಯ ಸಮಾಜದ 15ನೇ ವಾರ್ಷಿಕೋತ್ಸವವು ತಾ.4ನೇ ಶನಿವಾರ ಶ್ರೀ. ಡಾ|| ಯು. ಕೃಷ್ಣ ಬಿ. ಐ. ಇವರ ಅಧ್ಯಕ್ಷತೆಯಲ್ಲಿಯೂ ತಾ.5ನೇ ರವಿವಾರ ಶ್ರೀ ರಘುನಾಥ ಹೆಗ್ಗಡೆ ಎಮ್. ಎ. ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿಯೂ ನೆರವೇರಿತು. ಕಾರ್ಯಕ್ರಮದಂತೆ ಎರಡೂ ದಿವಸ ಪ್ರಾತಃ ಕಾಲಗಳಲ್ಲಿ ಯಜ್ಞ ಮತ್ತು ವೇದೋಪದೇಶ. ಅಪರಾಹ್ನಗಳಲ್ಲಿ ವೈದಿಕ ಭಜನೆ ಮತ್ತು ಭಾಷಣ ಇತ್ಯಾದಿಗಳಿದ್ದುವು. ಶ್ರೀಯುತರುಗಳಾದ ಮಂಜುನಾಥಜೀ ಶಾಸ್ತ್ರಿ, ಸಿದ್ಧಾಂತ ಭೂಷಣ, ಸ್ವಾಮಿ ಸದಾನಂದ ಸರಸ್ವತಿ, ಬಸ್ತಿ ದಾಸಪ್ಪ ಶೆಟ್ಟಿ, ಕೇಶವ ರಾವ ಚಂದ್ರ ಶೆಟ್ಟಿ, ಮುದ್ರಾಡಿ ಕೃಷ್ಣಯ್ಯ ಸೆಟ್ಟಿ, ಡಿ. ಬೋಮೆಂಬರ್. ಎ. ಲಕ್ಷ್ಮೀನಾರಾಯಣ ಆಳ್ವ ಶ್ರೀಮತಿ ಸುನೀತೀ ದೇವಿ ಮೊದಲಾದವರೆಲ್ಲ ನೆರೆದಸಭಿಕರಿಗೆ ವೇದದ ಆಧಾರ ಕೊಟ್ಟು ಮಾನವ ಜಾತಿಯ ಮುಖ್ಯ ಕರ್ತವ್ಯವನ್ನು ಹೇಳಿದರು. ಸ್ವಾಮಿ ದಯಾನಂದ ಸರಸ್ವತಿಯವರು ಇಡೀ ಪ್ರಪಂಚಕ್ಕೇನೆ ಮಾಡಿರುವ ಮಹತ್ತಾದ ಉಪಕಾರ, ಅವರ ತ್ಯಾಗ ಗುಣ, ಸಹನಾಶಕ್ತಿ ಇವೆಲ್ಲವನ್ನು ಮುಂದಟ್ಟಾಗಿ ಹೇಳಿ, ವೇದವೇ ನಮಗೆಲ್ಲಿಯೂ ಜೀವನದ ಮಾರ್ಗವನ್ನು ತೋರಿಸುವುದೆಂದು ಭಾಷಣ ಮಾಡುತ್ತಾ ನೆರೆದ ಜನರೆಲ್ಲರಿಗೂ ಸತ್ಯವನ್ನು ತಿಳಿಸಿದರು. ಅಧ್ಯಕ್ಷರು ತನ್ನ ಭಾಷಣದಲ್ಲಿ ಆರ್ಯಸಮಾಜವು ಒಂದು ಜಾತಿ ಅಥವಾ ಮತವಲ್ಲ. ಪ್ರಪಂಚದ ಪ್ರತಿಯೊಬ್ಬ ಮಾನವನೂ ತನ್ನಲ್ಲಿರುವ ಕುರುಡು ವಿಶ್ವಾಸ, ಅಂಧ ಶ್ರದ್ಧೆಗಳನ್ನು ದೂರೀಕರಿಸಿ ಸತ್ಯದ ದಾರಿಯನ್ನು ತೋರಿಸುವ ಮಹಾ ಸಂಸ್ಥೆ ಯಿದು. ವೇದವು ಸರ್ವರ ಸೊತ್ತು. ಎಲ್ಲರೂ ಅದರ ಅಭ್ಯಾಸ ಮಾಡಬೇಕು. ಆರ್ಯಸಮಾಜವು ತನ್ನ ಶ್ರೇಷ್ಠ ಧ್ಯೇಯವನ್ನು ಹಿಡಿದು ಭರದಿಂದ ಭಾರತವಲ್ಲ ಹರಡಿ ಬೆಳಗಲಿ ಎಂದರು. ಧನ್ಯವಾದಗಳನ್ನು ಅರ್ಪಿಸಿದ ಬಳಿಕ ಶಾಂತಿಪಾಠದೊಂದಿಗೆ ಸಭಾಂತ್ಯವಾಯಿತು.

**ಕಾಸರಗೋಡು**—ಕಳದ ತಾ. 26ರಲ್ಲು ಕಾಸರಗೋಡು ತಾಲೂಕಿನ ನೆಟ್ಟಣಿಗೆ, ಬೆಳ್ಳೂರು ಮತ್ತು ಆಮೂರು ಗ್ರಾಮಸ್ಥರು ಬೆಳ್ಳೂರು ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಮಾಲಂಕಿ ಶ್ರೀ ಶಂಕರ ಕಡಂಬಳಿತ್ತಾಯರ ಅಧ್ಯಕ್ಷತೆಯಲ್ಲಿ ಸಭೆಸೇರಿ ಬೆಳ್ಳೂರು ಬೋರ್ಡು ಎಲಿಮೆಂಟರಿ ಶಾಲೆಯನ್ನು ಹಾಯರ್ ಎಲಿಮೆಂಟರಿ ಶಾಲೆಯಾಗಿ ಬರುವ ಜೂನಿನಿಂದಲೇ ಮಾಡಬೇಕಾಗಿ ಜಿಲ್ಲಾ ಬೋರ್ಡಿನ ಅಧ್ಯಕ್ಷರನ್ನು ಕೇಳಿಕೊಳ್ಳಲಾಯಿತು. ಈ ಬಗ್ಗೆ ಬೇಕಾದ ಕಟ್ಟೋಣ, ಸಯನ್ಸ್ ಸಲಕರಣೆಗಳನ್ನು ಮೇಲೆ ನಮೂದಿಸಿದ ಗ್ರಾಮಸ್ಥರು ಧರ್ಮಾರ್ಥವಾಗಿ ಒದಗಿಸಿಕೊಡುವಂತೆ ವಾಗ್ದಾನ ಮಾಡಲಾಯಿತು.

**ಕಡ್ಡಾಯ ಶಿಕ್ಷಣ ಅನ್ವೇಷಣ ಸಮಿತಿ**— ಗುಂಬಳೆ ಕಡ್ಡಾಯ ಶಿಕ್ಷಣ ಅನ್ವೇಷಣ ಸಮಿತಿಯು ಇದೇ ತಾ. 10ರ 3 ದಿನಗಳ ತನಕ ಕುಂಬಳೆ, ಮೊಗ್ರಾಲು, ನೂಜಿಬೈಲು ಕೇಂದ್ರಗಳಲ್ಲಿ ಕುಂಬಳೆ ಶ್ರೇಣಿಯ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಎಮ್. ಶಿವರಾಮ ಗೌಡರ ನೇತೃತ್ವದಲ್ಲಿ ಸೇರಿ ಶಿಕ್ಷಣಕ್ಕೆ ಮಕ್ಕಳನ್ನು ಕಳುಹಿಸದಿರುವ ರಕ್ಷಕರ ವಿಚಾರಣೆ ನಡೆಸಲಾಯಿತು.

**ಹೆಜಮಾಡಿ**—ಬೋರ್ಡ ಹಾಯರ್ ಎಲಿಮೆಂಟರಿ ಶಾಲಾ ವರ್ಧಂತ್ಯುತ್ಸವವು ಇದೇ ಕಳದ ತಾರೀಕು 5-3-50ನೇ ಆದಿತ್ಯವಾರ ದಿನ ಶ್ರೀ ಕೆ. ಬಿ. ಜಿನರಾಜ ಹೆಗ್ಡೆ B. A. B. L. ಎಡ್ವಕೇಟ್ ಮಂಗಳೂರು ಇವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು. ಶಾಲಾ ಹೊಸ ಕಟ್ಟಡದ ಪ್ರವೇಶೋತ್ಸವವು ಶ್ರೀ ಬಿ. ಮಂಜಯ್ಯ ಹೆಗ್ಡೆ B. A. B. L. ಎಡ್ವಕೇಟ್ ಮಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಪ್ರೆಸಿಡೆಂಟ್ ಇವರಿಂದಲೂ, ಸದ್ರಿ ಶಾಲಾ ನಾಟಕ ಮಂದಿರದ ಹೊಸ ಪರದೆಗಳ ಉದ್ಘಾಟನಾ ಸಮಾರಂಭವು ಶ್ರೀ ವೈ. ಗೋಪಾಲ್ B. A. L. T. ಡಿಪ್ಯುಟಿ ಇನ್ಸ್‌ಪೆಕ್ಟರ್ ಓಫ್ ಸ್ಕೂಲ್ಸ್ ಮಂಗಳೂರು ರೇಂಜ್ ಇವರಿಂದಲೂ ಜರಗಿಸಲ್ಪಟ್ಟಿತು. ಶಾಲಾ ನಾಟಕ ಮಂದಿರದ ಉಪಯೋಗಕ್ಕಾಗಿ ಹೊಸತಾಗಿ ಶ್ರೀ ಶಂಕರರಾವ್, ಹಾರ್ಮೋನಿಯಮ್ ನಿರ್ಮಾಪಕ, ಇವರಿಂದ ರಚಿಸಲ್ಪಟ್ಟ ಲೆಗ್ ಹಾರ್ಮೋನಿಯಮ್ ಒಂದನ್ನು ಶಾಲೆಗೆ ಅರ್ಪಿಸಿದರು. ಏಳು ಸಾವಿರಕ್ಕೂ ಮಿಕ್ಕಿದ ಪ್ರೇಕ್ಷಕರು ಸಭೆಯಲ್ಲಿ ನೆರೆದಿದ್ದರು. ಸಭಿಕರ ಅನುಕೂಲತೆಯ ಬಗ್ಗೆ ಆಕಾಶವಾಣಿಯ ಏರ್ಪಾಡು ಮಾಡಲ್ಪಟ್ಟಿತ್ತು. ಜಿಲ್ಲಾ ಬೋರ್ಡ ಅಧ್ಯಕ್ಷರ ಮತ್ತು ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರವರುಗಳ ಸಂದರ್ಭೋಚಿತ ಭಾಷಣಗಳಾದ ನಂತರ ಮೂಲ್ಕಿ ಕೇಂದ್ರದ ಜಿಲ್ಲಾ ಬೋರ್ಡ ಸದಸ್ಯರಾದ ಡಾಕ್ಟರ್ S. ಚಂಪನವರು ಮತ್ತು ಮೂಲ್ಕಿ ಹೈಸ್ಕೂಲಿನ ಕನ್ನಡ ಪಂಡಿತರಾದ ಶ್ರೀ ವೈ. ಕಾಳು ಸೆಟ್ಟಿ ಚಲೋ ಅಭಿಪ್ರಾಯಗಳನ್ನು ಸಭೆಯ ಮುಂದಿಟ್ಟರು. ನಂತರ ಸಭಾಧ್ಯಕ್ಷರು ಈ ಶಾಲೆಯು 1011 ಮಕ್ಕಳಿಂದಲೂ 30 ಮಂದಿ ಉಪಾಧ್ಯಾಯ ಉಪಾಧ್ಯಾಯನಿಯರಿಂದಲೂ ಕೂಡಿದ್ದು ಇಡೀ ಜಿಲ್ಲೆಯಲ್ಲಿ ಪ್ರಥಮ ಶ್ರೇಣಿಯ ಹಾಯರ್ ಎಲಿಮೆಂಟರಿ ಶಾಲೆಯಾಗಿ ಮೆರೆದಾಡುತ್ತಿರುವದು. ಇಲ್ಲಿಯ ಇಂದಿನ ವ್ಯವಸ್ಥೆ ಮತ್ತು ಕೂಡಿದ ಪ್ರೇಕ್ಷಕವರ್ಗದಿಂದಲೇ ವ್ಯಕ್ತವಾಗುತ್ತದೆ. ಈ ಶಾಲೆಯನ್ನು ಈ ಮಟ್ಟಕ್ಕೆ ಏರಿಸಲು ಅವಿಶ್ರಾಂತವಾಗಿ ಪ್ರಯತ್ನಿಸಿದ ಇಲ್ಲಿಯ ಮುಖ್ಯ ಅಧ್ಯಾಪಕ ಶ್ರೀ ಪಿ. ಮಹಾಲಿಂಗ ಶೆಟ್ಟರಿಗೆ ಮತ್ತು ಅವರ ಸಹಾಯಕರಿಗೂ, ಸ್ಕೂಲ್ಡೇ ಕಮಿಟಿಯ ಅಧ್ಯಕ್ಷ ಪಟೇಲ್ ನಾರಾಯಣ ಶೆಟ್ಟರಿಗೂ, ಶಾಲಾಭವನ ವಿಸ್ತರಣೆ ಸಮಿತಿಗೂ ಮತ್ತು ಈ ಗ್ರಾಮ ಸಮಸ್ತರಿಗೂ ನಾನು ಅಭಾರಿಯಾಗಿರುವೆನು. ಅವರ ಪ್ರಯತ್ನವು ಫಲಕಾರಿಯಾಗಿಯೂ ಆದರ್ಶಪ್ರಾಯವಾಗಿಯೂ ಇದೆ ಎಂಬಿತ್ಯಾದಿ ಹಲವು ಬೋಧಪರವಾದ ಮಾತುಗಳನ್ನು ಹೇಳಿ, ಈ ಸಂಸ್ಥೆಯು ಇನ್ನು ಮುಂದಕ್ಕೂ ಪ್ರಥಮ ಶ್ರೇಣಿಯ ವಿದ್ಯಾಸಂಸ್ಥೆಯಾಗಿ ಮೆರೆಯುತ್ತಾ ಉಳಿದವುಗಳಿಗೆ ಆದರ್ಶವಾಗಿರಲೆಂದು ಹಾರೈಸಿ ತನ್ನ ಭಾಷಣವನ್ನು ಅಂತ್ಯಗೊಳಿಸಿದರು.

ನಂತರ ಶಾಲಾ ಬಾಲಕಿಯರಿಂದ "ಶಾಂತಿ ವೃತ್ತದ ಮಹಿಮೆ" ಎಂಬ ಕನ್ನಡ ಸಂಗೀತ ನಾಟಕವೂ, ಸ್ಕೂಟುದಳದಿಂದ "ದಲಾಲಿಪ್ಪ" ಎಂಬ ತುಳು ಪ್ರಹಸನವೂ, ಶಿಕ್ಷಕರಿಂದ "ವೀರ ಅಭಿಮನ್ಯು" ಎಂಬ ಗಾನ ನಾಟಕವೂ ಚಲೋ ರೀತಿಯಿಂದ ನಡೆಸಲ್ಪಟ್ಟು ಮಂಗಳಗೀತೆಯೊಂದಿಗೆ ಸಭಾಂತ್ಯವಾಯಿತು.


### ಮಾರಾಟಕ್ಕಿದೆ

**ಚಲೋ ಬಂಗ್ಲೆ—ಮೂರು ಎಕ್ರೆ ಸ್ಥಳ ಸಹಿತ.**
**ಆರೋಗ್ಯಕ್ಕೆ ಅಪ್ರತಿಮ ಸ್ಥಳ.**
ಮಂಗ್ಳೂರು ಶಹರ್ ಕಂಕನಾಡಿಯಲ್ಲಿರುವ ಗೋರಿಗುಡ್ಡೆಯಲ್ಲಿ
**ಆಸ್ಪತ್ರೆ, ಶಾಲೆ, ಮಿಲ್ಸ್ ವ ಕಾರ್ಖಾನೆಗೆ**
**ಅತ್ಯುತ್ತಮವಾದ ಸ್ಥಳ.**
ಕ್ರಯ—ರೂ. 75,000 ಯಾ ಸ್ವಲ್ಪ ಹೆಚ್ಚು ಕಡಿಮೆ.
ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬೇಗನೇ ಬರೆಯಬಹುದು.

X
C/o SARVODAYA,
Mangalore

## ಅವುಗಳು ಬಹಳ ಪ್ರಖ್ಯಾತಿ ಹೊಂದಿದ




ಸ್ಟೇನ್ಸ್ ಈ 4 ತರದ ಮಿಶ್ರಣಗಳನ್ನು ತಯಾರಿಸುತ್ತಾರೆ— ವೈಟ್ ಎನ್‌ಸೈನ್, ಪೀಕೊ ಡಸ್ಟ್, ಬೇಬಿ ಬ್ರಾಂಡ್ ಮತ್ತು ಲೀಫ್ ಟಿ,- ಇವುಗಳು ಹೆಚ್ಚಿನ ಬೆಲೆಯುಳ್ಳ ಇತರ ಚಹಾಗಳನ್ನು ಕೊಳ್ಳಲಾರದ ಜನರಿಗಾಗಿಯೇ. ಈ ನಾಲ್ಕು ಉತ್ತಮ ಗುಣ ಮತ್ತು ಸುಗಂಧಯುತವಾಗಿದ್ದು, ಸ್ಟೇನ್ಸ್ ಹೆಸರನ್ನು ಹಿಂದೂಸ್ಥಾನದಲ್ಲೆಲ್ಲಾ ಪ್ರಖ್ಯಾತಿಪಡಿಸಿವೆ.

THE PICK OF THE SOUTH

ದಕ್ಷಿಣದ ಆಯ್ಕೆ:— ಸ್ಟೇನ್ಸ್ ಪೀಕೊ ಸೂಚಾಂಗ್ ಬ್ರೋಕನ್ ಆರೆಂಜ್ ಪೀಕೊ, ಮತ್ತು ಡಸ್ಟ್ ಚಹಾಗಳನ್ನು 20 ಮತ್ತು 40 ರಾತಲು ಪೆಟ್ಟಿಗೆಗಳಲ್ಲೂ, ಚಿಲ್ಲರೆಯಾಗಿಯೂ, ಹೋಟೆಲು ಮಾಲಿಕರಿಗೂ, ಮಾರಾಟಗಾರರಿಗೂ, ಒದಗಿಸುತ್ತಾರೆ.

**Slanes**

**ಸ್ಟೇನ್ಸ್ ಚಹಾಗಳು**
**ಯುನೈಟೆಡ್ ಕೊಫಿ ಸಪ್ಲೈ ಕೊ, ಲಿಮಿಟೆಡ್,**
ಕೊಯಮುತ್ತೂರು, ದಕ್ಷಿಣ ಇಂಡಿಯಾ
ದಕ್ಷಿಣ ಕನ್ನಡದ ಏಜಂಟರು:
ಎಸ್. ಎನ್. ವಿ ಕಾಮತ್,
ಮರ್ಚಂಟ್, ಬಂದರ್, ಮಂಗಳೂರು.

ಇಲ್ಲಿ ಕೂಲೀಕಾರರು ಯಾ ಮಜೂರರು ಎಂಬ ಪದವನ್ನು ಉಪಯೋಗಿಸದೆ "ಕಾರ್ಮಿಕ" ಎಂಬ ಪದವನ್ನು ಉದ್ದೇಶಪೂರ್ವಕವಾಗಿಯೇ ಬಳಸಲಾಗಿದೆ. ಕೂಲೀಕಾರ ಮತ್ತು ಮಜೂರ ಶಬ್ದಗಳ ಅರ್ಥವು ಹಣಕ್ಕಾಗಿ ದುಡಿಯುವವ ಎಂದಾಗುತ್ತದೆ. ಆದರೆ ಕಾರ್ಮಿಕ ಎಂಬ ಪದವು ಕರ್ಮಕ್ಕಾಗಿ ದುಡಿಯುವವ ಎಂಬ ಒಳದನಿಯನ್ನು ಹೊರಡಿಸುತ್ತದೆ. ಮನಶ್ಶಾಸ್ತ್ರದ ಪ್ರಕಾರ ಮಾನವನ ಹೆಸರು ಆತನ ಮನಸ್ಸಿನ ಮೇಲೆ ಬಹಳ ಪರಿಣಾಮವನ್ನುಂಟು ಮಾಡುತ್ತದೆ. ಆದ್ದರಿಂದ ಕೂಲೀಕಾರ ಯಾ ಮಜೂರ ಪದಗಳಿಂದ ಕರೆಯಲ್ಪಡುವವರ ಮನಸ್ಸು ತಾನೋರ್ವ ಜೀತದಾಳು, ಪರರ ಅಡಿಯಾಳು, ಸ್ವತಂತ್ರನಲ್ಲ ಎಂಬ ಭಾವನೆಗೆ ಅಂಟಿಕೊಳ್ಳಬಹುದು. ಆದರೆ ಕಾರ್ಮಿಕ ಎಂಬ ಪದದಿಂದ ಕರೆಯಲ್ಪಡುವವನ ಮನಸ್ಸಿನಲ್ಲಿ ತಾನೋರ್ವ ಸ್ವತಂತ್ರ ಜೀವಿ ಎಂಬ ಭಾವದೊಡನೆ ತನ್ನ ದುಡಿತದ ಹಿರಿಮೆಯೂ ಮೂಡಿ ಬಂದೀತು. ಕರ್ಮಪ್ರಧಾನ ಜೀವಿ ತಾನೆಂಬ ಭಾವ ಒಡಮೂಡೀತು. ಒಂದು ದೃಷ್ಟಿಯಿಂದ ಈ ಜಗತ್ತಿನಲ್ಲಿ ಯಾರೂ ಸ್ವತಂತ್ರರಿಲ್ಲ. ಎಲ್ಲರೂ ಒಬ್ಬನಲ್ಲ ಒಬ್ಬನ ಪ್ರತ್ಯಕ್ಷ ಯಾ ಅಪ್ರತ್ಯಕ್ಷ ಅಧಿಕಾರದ ಕೆಳಗಿರುತ್ತಾರೆ. ಹೀಗಿರುತ್ತಾ ನಾಡಿನ ನಾಡಿಯಾಗಿರುವ ಕಾರ್ಮಿಕರನ್ನು ಮಾತ್ರ ಆ ಭಾವನೆಗೆ ಅಂಟಿಸಿಬಿಡುವುದರಲ್ಲಿ ಹುರುಳಿಲ್ಲ, ಮಾತ್ರವಲ್ಲ ಕೆಡುಕಿದೆ. ಕಾರ್ಮಿಕರಲ್ಲಿ ತಾವು ಸ್ವತಂತ್ರರೆಂಬ ಭಾವನೆ ಮೂಡಿ ಬಂದರೇನೇ ಇಂದು ನಾಡಿನಲ್ಲಿ ಭೂತಾಕಾರವಾಗಿ ಬೆಳೆದಿರುವ ವರ್ಗಕಲಹ ನಾಶವಾದೀತು. ತಾವು ಸ್ವತಂತ್ರರೆಂದಾದೊಡನೆ ತಮ್ಮ ಕರ್ಮದ ಹಿರಿಮೆಯೂ ಕರ್ತವ್ಯದ ಅರಿವೂ ಅವರಿಗುಂಟಾದೀತು. ಇದು ಹಲವಾರು ಮಂದಿಗೆ ಆಶ್ಚರ್ಯವನ್ನುಂಟು ಮಾಡುವ ಭಾವನೆಯಾಗಿ ಕಂಡುಬಂದೀತು. ಆದರೆ ಪಾರತಂತ್ರ್ಯದ ಭಾವನೆಯೇ ದ್ವೇಷದ, ಕಲಹದ ಮೂಲ ಎಂದು ಬಲ್ಲವರಿಗೆ ಮೇಲಿನ ಮಾತಿನ ಅರ್ಥ ಕೂಡಲೇ ಮನದಟ್ಟಾದೀತು. ಆದ್ದರಿಂದಲೇ ಕಾರ್ಮಿಕರಲ್ಲಿ ತಾವು ಸ್ವತಂತ್ರರು ಎಂಬ ಭಾವನೆ ಹುಟ್ಟಬೇಕಾಗಿದೆ. ಅದಕ್ಕಾಗಿಯೇ ಅವರನ್ನಿಲ್ಲಿ, ಕರ್ಮಪ್ರಾಧಾನ್ಯವನ್ನು ಎತ್ತಿ ತೋರಿಸುವ ಕಾರ್ಮಿಕ ಶಬ್ದದಿಂದ ಕರೆಯಲಾಗಿದೆ.

ಮುಂದಿನ ವರ್ಷ ದೇಶದಾದ್ಯಂತ ಸಾರ್ವತ್ರಿಕ ಚುನಾವಣೆ ಜರಗಲಿದೆ. ಅದರಲ್ಲಿ ಪ್ರಾಯಪ್ರಬುದ್ಧರೆಲ್ಲರೂ ಮತಕೊಡಲು ಅರ್ಹರಾಗುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ದೇಶದ ರಾಜಕೀಯ ಪಂಗಡಗಳೆಲ್ಲವುಗಳ ಕಣ್ಣು ಬಹುಸಂಖ್ಯಾಕ ಕಾರ್ಮಿಕರ ಕಡೆಗೆ ಹೊರಳಿರುವುದರಲ್ಲಿ ಆಶ್ಚರ್ಯವಿಲ್ಲ. ಮುಂದಿನ ಚುನಾವಣೆಗಳ ಫಲಿತಾಂಶ ಕಾರ್ಮಿಕರ ಒಲವಿನ ಪಕ್ಷಕ್ಕೆ ಕಟ್ಟಿಟ್ಟಿದೆ. ಆದ್ದರಿಂದಲೇ

## ಕಾರ್ಮಿಕರೂ ಅವರ ಮುಂದಿರುವ ಸಮಸ್ಯೆಗಳೂ

ಲೇಖಕರು:— ಶ್ರೀ. ಮಿಯಾರ್ ಲಕ್ಷ್ಮೀನಾರಾಯಣ ಆಳ್ವ.

ರಾಜಕೀಯ ಪಕ್ಷಗಳೆಲ್ಲ ತಾನುಮುಂದು ತಾನುಮುಂದೆಂದು ಕಾರ್ಮಿಕರೆಡೆಗೆ ಹಾರಿ ಅವರನ್ನು ಒಲಿಸಹತ್ತಿವೆ. ಈ ಸಂದಿಗ್ಧ ಸನ್ನಿವೇಶದಲ್ಲಿ ಕಾರ್ಮಿಕರು ಆಲೋಚಿಸಬೇಕಾದ ವಿಷಯ ಬಹಳಿದೆ. ಈ ರಾಜಕೀಯ ಪಕ್ಷಗಳ ಡೊಂಬರಾಟ ತಮ್ಮ ಹಿತಕ್ಕಾಗಿಯೋ ಅಥವಾ ಆ ರಾಜಕೀಯ ಪಕ್ಷಗಳ ಪ್ರಾಬಲ್ಯಕ್ಕಾಗಿಯೋ ಎಂಬುದನ್ನು ವಿಮರ್ಶಿಸಿ ನೋಡಬೇಕಾಗಿದೆ. ಅದಿಲ್ಲದೆ ಕರೆದವರ ಬೆನ್ನಹಿಂದೆ ಓಡಹತ್ತಿದರೆ ಅವರು ತಮ್ಮನ್ನು ತಾವೇ ವಿಪತ್ತಿಗೆ ದೂಡಿಕೊಂಡತಾದೀತು.

ಒಂದು ದೇಶದ ಅಭಿವೃದ್ಧಿಯು ಆ ದೇಶದ ಜನಸಾಮಾನ್ಯರ ಉನ್ನತಿಯ ಮಟ್ಟವನ್ನು ಅವಲಂಬಿಸಿಕೊಂಡಿದೆ. ಆದ್ದರಿಂದಲೇ ಭಾರತವು ಅಭಿವೃದ್ಧಿಹೊಂದಬೇಕಾದರೆ ಜನಸಾಮಾನ್ಯರು ಉನ್ನತಿಹೊಂದದೆ ನಿರ್ವಾಹವಿಲ್ಲ. ಇಲ್ಲಿ ಉನ್ನತಿ ಎಂಬುದನ್ನು ಬರೇ ಅರ್ಥದಲ್ಲಿ ಮುಕ್ತಾಯಗೊಳಿಸುವುದರಲ್ಲಿಯೇ ಗುಡ್ಡದಂತಹ ತಪ್ಪು ಅಡಗಿದೆ. ಒಂದು ವ್ಯಕ್ತಿಯ ಉನ್ನತಿ ಅರ್ಥಿಕಕ್ಕಿಂತಲೂ ಹೆಚ್ಚಿಗೆ ವಿದ್ಯೆ ಮತ್ತು ನೀತಿಯ ಮೇಲೆ ಹೊಂದಿಕೊಂಡಿದೆ. ಇದನ್ನರಿಯದೆ ಕಾರ್ಮಿಕರು ಬಹಳ ಕಡೆ ಎಡವುತ್ತಾರೆ ಎಂಬುದನ್ನು ವಿಷಾದಪೂರ್ವಕವಾಗಿ ಹೇಳಬೇಕಾಗಿದೆ. ಕಾರ್ಮಿಕರನ್ನು ತಮ್ಮ ಪಕ್ಷದ ಪ್ರಾಬಲ್ಯಕ್ಕಾಗಿ ಹಿಡಕೊಂಡ ಮುಖಂಡರು ಆ ಹಾದಿಯಲ್ಲಿ ಅವರನ್ನು ಬೆಳಸುವ ಗೋಜಿಗೇ ಹೋಗುವುದಿಲ್ಲ ಮಾತ್ರವಲ್ಲ, ಅದನ್ನು ಬಿಡಿಸಿ ಕೂಡಾ ಹೇಳದೆ "ರೊಕ್ಕವೇ ನಿಮ್ಮ ಸರ್ವಸ್ವ" ಎಂದು ತಿಳಿಸಿ ತಪ್ಪು ಹಾದಿಗೆ ನೂಕುತ್ತಿದ್ದಾರೆ.

ಕಾರ್ಮಿಕರು ಯಾವುದೇ ಒಂದು ರಾಜಕೀಯ ಪಕ್ಷದ ಕೈಗೊಂಬೆಗಳಾಗಿರುವುದಕ್ಕಿಂತ ತಮ್ಮದೇ ಆದ ಸ್ವತಂತ್ರ ಸಂಸ್ಥೆಯೊಂದನ್ನು ಕಟ್ಟಿಕೊಂಡು ಮುಂದುವರಿಯುವುದರಲ್ಲಿ ಅವರ ಹಿತವಿದೆ. ಆ ಮೂಲಕ ಅವರು ತಮ್ಮ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ನೈತಿಕ ಉನ್ನತಿಯನ್ನು ಸಾಧಿಸಿಕೊಳ್ಳಬಹುದು. ಅವರಿಗೆ ರಾಜಕೀಯಕ್ಕೆ ಇಳಿವ ಬಯಕೆ ಇದ್ದರೂ ಈ ಸಂಸ್ಥೆಯ ಮೂಲಕವೇ ಇಂಗ್ಲೆಂಡಿನ ಲೇಬರ್ ಪಕ್ಷದಂತೆ ಅದನ್ನು ಸಾಧಿಸಿಕೊಳ್ಳಲು ಸಾಧ್ಯವಿದೆ. ಕಾರ್ಮಿಕರು ಯಾವುದೇ ಒಂದು ರಾಜಕೀಯ ಪಂಗಡಕ್ಕೆ ತಮ್ಮನ್ನು ಮಾರಿಕೊಂಡ ಕೂಡಲೇ ಉಳಿದ ರಾಜಕೀಯ ಪಕ್ಷಗಳಿಗೆ ಅವರನ್ನು ಎದುರಿಸುವ ಪ್ರಸಂಗ ತನ್ನಿಂದ ತಾನೇ ಬರುತ್ತದೆ. ಏಕೆಂದರೆ ಇಂದಿನ ರಾಜಕೀಯ ಕ್ಷೇತ್ರದಲ್ಲಿ ತಮ್ಮ ಪಕ್ಷದ ಸ್ವಾರ್ಥಕ್ಕಾಗಿ ಸತ್ಯವನ್ನು ಬಲಿಕೊಡುವ ಪ್ರವೃತ್ತಿಯೇ ಎದ್ದು ಕಾಣುತ್ತಿದೆ. ಆದ್ದರಿಂದಲೇ ಕಾರ್ಮಿಕರು ಯಾವುದೇ ಪಕ್ಷಗಳ ಮೂಲಕ ತಮ್ಮ ನ್ಯಾಯವಾದ ಬೇಡಿಕೆಗಳನ್ನೇ ಆದರೂ ಕೇಳಿದಾಗ ಉಳಿದ ಪಕ್ಷಗಳು ಅದನ್ನು ವಿರೋಧಿಸುತ್ತವೆ. ಈ ಕಟುಸತ್ಯವನ್ನು ಇಂದಿನ ರಾಜಕೀಯ ರಂಗದ ಪ್ರತಿಯೊಂದು ದೃಶ್ಯದಲ್ಲೂ ಕಾಣಬಹುದು.

ಕಾರ್ಮಿಕರು ಮತ್ತು ಬಂಡವಲುಗಾರರು ತಾವು ಪರಸ್ಪರ ವೈರಿಗಳೆಂದೇ ಭಾವಿಸಹತ್ತಿದ್ದಾರೆ. ಮಾತ್ರವಲ್ಲ ಇಂದು ಜನಕೂಡಾ ಅದೇ ಮನೋಭಾವದಲ್ಲಿ ತೇಲಿಹೋಗುತ್ತಿದ್ದಾರೆ. ಹೀಗೆ ಕಾರ್ಮಿಕರು ಮತ್ತು ಬಂಡವಲುಗಾರರು ಪರಸ್ಪರ ವೈರಿಗಳೆಂದು ಭಾವಿಸುವುದರಿಂದ ಇಬ್ಬರಿಗೂ ಸಮಾನ ಹಾನಿಯಿದೆ. ಮಾತ್ರವಲ್ಲ ದೇಶಕ್ಕೆ ಅದರಿಂದ ಅಪಾರ ನಷ್ಟವಿದೆ. ಒಂದು ಕಡೆಯಿಂದ ಕೆಲಸಗಾರರು ಸೋಮಾರಿಗಳಾಗಹತ್ತಿದ್ದರೆ ಇನ್ನೊಂದೆಡೆಯಿಂದ ಬಂಡವಲುಗಾರರು ಸಿಕ್ಕಿದ ಲಾಭವನ್ನೆಲ್ಲ ದಕ್ಕಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. ಇದರಿಂದಾಗಿ ದೇಶದ ಕೈಗಾರಿಕೆಗೆ ಧಕ್ಕೆತಗಲಿದೆ. ದೇಶದ ಪ್ರಗತಿ ಕುಂಠಿತವಾಗಿದೆ. ಬಂಡವಲುಗಾರರು ಮತ್ತು ಕಾರ್ಮಿಕರು ಪರಸ್ಪರ ಪ್ರೇಮದಿಂದ ಜತೆಗೂಡಿ ಪೂರಕರಾಗಿ ಬಾಳಿದರೆ, ಔದ್ಯೋಗಿಕ ಕ್ಷೇತ್ರದಲ್ಲಿಯೇ ಒಂದು ಅಪೂರ್ವ ಕ್ರಾಂತಿಯಾದೀತು. ಬಂಡವಾಲುಗಾರನು ಬಂಡವಲಿನ ಧರ್ಮದರ್ಶಿಯಂತೆ ವರ್ತಿಸಬೇಕಾಗಿದೆ. ಕಾರ್ಮಿಕನು ತನ್ನ ಕೆಲಸವನ್ನು ಕರ್ತವ್ಯ ದೃಷ್ಟಿಯಿಂದ ಮಾಡಬೇಕಾಗಿದೆ. ಇಂತಹ ಮನೋಭಾವ ಇಕ್ಕಡೆಗಳಲ್ಲೂ ಮೂಡಿ ಬಂದರೆ ಮಾತ್ರ ಕಾರ್ಮಿಕನ ಉನ್ನತಿ, ಬಂಡವಲುಗಾರನ ಹಿತ, ದೇಶದ ಪ್ರಗತಿ ಮೂರೂ ಜತೆಗೂಡಿ ಪಯಣ ಹೊರಟಾವು.

ಇಂದು ಕಾರ್ಮಿಕರನ್ನು ಅಡ್ಡಹಾದಿಗೆಳೆಯುವುದರಲ್ಲಿ ಬಂಡವಲುಗಾರರು ಬಹಳ ದೊಡ್ಡ ಪಾತ್ರವಹಿಸುತ್ತಿದ್ದಾರೆ. ಆದರೆ ಕಾರ್ಮಿಕರಿಗೆ ಹೊಡೆದ ಏಟು ಅಪ್ರತ್ಯಕ್ಷವಾಗಿ ತಮ್ಮ ಮೇಲೆಯೇ ಎಂದು ಅವರಿಗೆ ತಿಳಿಯಲು ಬಹಳ ಕಾಲ ಬೇಕಾಗಿಲ್ಲ. ತಮ್ಮಲ್ಲಿ ಹಗಲಿರುಳು ದುಡಿದು ಬೆವರಿಳಿಸುವ ಮಂದಿಯನ್ನು ಅವರು ಮಂದೆ ಎಂದೇ ಭಾವಿಸುತ್ತಾರೆ; ಮಾನವರೆಂದು ನೆನಸುತ್ತಿಲ್ಲ. ಅವರನ್ನು ಯಾಂತ್ರಿಕವಾಗಿ ದುಡಿಸಿ ತಮ್ಮ ಬಂಡವಳನ್ನು ಹೆಚ್ಚಿಸಿ ಕೊಳ್ಳುತ್ತಿದ್ದಾರೆ. ಕಾರ್ಮಿಕರ ದುಡಿತವೇ ತಮ್ಮ ಬಂಡವಲಿನ ಹೆಚ್ಚಳಕ್ಕೆ ಕಾರಣವೆಂಬುದನ್ನು ಬಗೆಯದೆ ಎಲ್ಲವನ್ನು ಮುಕ್ಕುವ ಪ್ರಯತ್ನ ಮಾಡುತ್ತಿದ್ದಾರೆ. ಕಾರ್ಮಿಕರು ತನ್ನವರು, ಅವರ ದುಡಿತ ತನ್ನ ಬಂಡವಲಿನಷ್ಟೇ ಏಕೆ, ಅದಕ್ಕಿಂತಲೂ ಹೆಚ್ಚಿಗೆ ಬಂಡವಲಿನ ಹೆಚ್ಚಳಕ್ಕೆ ಕಾರಣ ಎಂಬುದನ್ನು ತಿಳಿದು ಅವರ ದುಡಿತಕ್ಕೆ ಸಾಧ್ಯವಿದ್ದಷ್ಟು ಹೆಚ್ಚು ಪ್ರತಿಫಲವನ್ನಿತ್ತು ಪ್ರೀತಿಸುವ ಹೊಣೆ ಬಂಡವಲುಗಾರರದು. ಆ ಬಡ ದುಡಿವ ಜೀವಿಗಳನ್ನು, ಮಾನವರನ್ನು ಸಂತೈಸಿ, ಸುಖ ನೀಡ ಬೇಕೆಂದು ಬಗೆದು ಬಂಡವಲುಗಾರರು ಮುಂದುವರಿಯದಿದ್ದರೆ ತಮ್ಮ ನಾಶವನ್ನು ತಾವೇ ಕರಕೊಂಡಂತಾದೀತು.

ಇನ್ನು ಕಾರ್ಮಿಕರಾದರೋ ತಮ್ಮ ಕರ್ತವ್ಯವನ್ನು ಮರೆತು ಕಾಯಿದೆಗಳನ್ನೇ ಹೊಂದಿಕೊಂಡು ತಮ್ಮ ಹಕ್ಕನ್ನು ಮಾತ್ರ ಕೇಳಲು ಪ್ರಾರಂಭಿಸಿದ್ದಾರೆ. ಆದರೆ ಇದರಿಂದ ಅವರ ಹಿತವಾಗುವ ಬದಲು ಅಹಿತವೇ ಆದೀತು. ಬಂಡವಲುಗಾರನ ಬಂಡವಲು ತನ್ನ ದುಡಿತಕ್ಕೆ ಪ್ರತಿಫಲ ನೀಡುತ್ತಿದೆ ಎಂಬರಿವು ಅವರಿಗೆ ಸದಾ ಜ್ಞಾಪಕವಿರಬೇಕು. ತನ್ನನ್ನು ದುಡಿಸುವವನು ಮಾನವನು, ಆತನಿಗೆ ಹೃದಯವಿದೆ ಎಂಬುದನ್ನು ಮರೆತು ಬಹುಮತದ ಬಲದಿಂದ ಆತನನ್ನು ಅನ್ಯಾಯವಾಗಿ ಬಗ್ಗು ಬಡೆಯ ಹೊರಟರೆ ಮಾನವ್ಯದ ಕೊಲೆಯಾದೀತು. ಹೀಗೆಂದರೆ ತನಗೆ ಅನ್ಯಾಯವಾಗುವಾಗಲೂ ಕಾರ್ಮಿಕರು ಬೆಪ್ಪನೆ ಕುಳಿತಿರಬೇಕೆಂದು ಅರ್ಥವಲ್ಲ. ಅಂತಹ ಸಮಯದಲ್ಲಿ ವಿಧಾಯಕ ರೀತಿಯಿಂದ ಬಂಡವಲುಗಾರರೊಡನೆ ಹೆಣಗುವ ಹಕ್ಕು ಅವರಿಗೆ ಯಾವಾಗಲೂ ಇದೆ. ಆದರೆ ಅವರು ತಮ್ಮ ಕರ್ತವ್ಯವೆಸಗುವದರಲ್ಲಿ ಮಾತ್ರ ಎಂದೂ ಹಿಂದೆ ಬೀಳಬಾರದು.

ಕಾರ್ಮಿಕ ಮತ್ತು ಬಂಡವಲುಗಾರರ ಸಂಬಂಧವು ಗೌಳಿಗ ಮತ್ತು ದನದಂತಿರಬೇಕು. ಗೌಳಿಗ ದನವನ್ನು ಸಾಕುವುದಕ್ಕಾಗಿ ದಿನವೂ ಬೆವರಿಳಿಸಿ ದುಡಿಯುತ್ತಾನೆ. ಅದಕ್ಕೆ ಕಾಲಕಾಲಕ್ಕೆ ಹುಲ್ಲು ನೀರನ್ನು ಕೊಡುತ್ತಿರುತ್ತಾನೆ. ತನ್ನ ದನ ಎಂಬ ಅಭಿಮಾನದಿಂದ ಅದರ ರಕ್ಷಣೆಮಾಡುತ್ತಾನೆ. ಪ್ರತಿಫಲವಾಗಿ ಅದು ಆತನಿಗೆ ಹಾಲು ನೀಡುತ್ತದೆ; ಆತ ಹುಲ್ಲು ನೀರು ಕೊಟ್ಟರೆ ಅದು ಹಾಲುಕೊಡುತ್ತದೆ. ಅದೇ ಗೌಳಿಗ ಅದನ್ನು ಚೆನ್ನಾಗಿ ಸಾಕದಿದ್ದರೆ ಅದು ಚೆನ್ನಾಗಿ ಹಾಲು ಕೊಡುವುದಿಲ್ಲ. ಚೆನ್ನಾಗಿ ಸಾಕಿಯೂ ಅದು ಹಾಲುಕೊಡದಿದ್ದರೆ ಗೌಳಿಗ ಅದನ್ನು ತೊರೆದು ಬೇರೊಂದನ್ನು ಕೊಂಡುಕೊಳ್ಳುತ್ತಾನೆ. ಇದೇ ರೀತಿ ಕಾರ್ಮಿಕರು ಚೆನ್ನಾಗಿ ದುಡಿಯಬೇಕು, ಅದು ತನ್ನ ಕರ್ತವ್ಯವೆಂಬ ದೃಷ್ಟಿಯಿಂದ. ಬಂಡವಲುಗಾರರು ದುಡಿತದ ಬದಲು ಹಾಲಿನಂತೆ ಹಣವನ್ನು ನೀಡಬೇಕು; ಅದು ಪ್ರೇಮದಿಂದ. ಅದೇ ಅವರವರೊಳಗೆ ವಿರಸ ಬಂದರೆ ಎರಡೆಡೆಗೂ ನಷ್ಟವಿದೆ ಮತ್ತು ಕಷ್ಟಕೂಡ. ಕಾರ್ಮಿಕ ಚೆನ್ನಾಗಿ ದುಡಿಯದಿದ್ದರೆ ಮಾಲಕ ಹಣವನ್ನು ನ್ಯಾಯವಾದಷ್ಟು ಕೊಡಲಾರ. ಚೆನ್ನಾಗಿ ದುಡಿದೂ ಬಂಡವಲುಗಾರ ಹಣಕೊಡದಿದ್ದರೆ ಕಾರ್ಮಿಕ ಸಂಪು ಹೂಡಬಲ್ಲ. ಆದರೆ ಅಕಾಲದಲ್ಲಿ ಮತ್ತು ನಿಷ್ಕಾರಣವಾಗಿ ಹೊಣೆಗೇಡಿಗಳ ಮಾತು ಕೇಳಿ ಸಂಪು ಹೂಡುವುದೆಂದರೆ ಒಮ್ಮೆಲೇ ಐಶ್ವರ್ಯವಂತನಾಗಬೇಕೆಂದು ಬಗೆದು ದನದ ಕೆಚ್ಚಲು ಕೊಯ್ದ ಗೌಳಿಗನಂತಾಗುತ್ತದೆ.

ಇಂದು ನಾಡಿನ ಮುಂದೆ ಭೂತಾಕಾರವಾಗಿ ಬೆಳೆದು ನಿಂತಿರುವ ಈ ವರ್ಗಕಲಹವು ನಾಶವಾಗಿ ದೇಶವು ಪ್ರಗತಿಹೊಂದಬೇಕಾದರೆ ಕಾರ್ಮಿಕರು ಮತ್ತು ಬಂಡವಲುಗಾರರು ಪರಸ್ಪರ ಪ್ರೀತಿಸಿ, ಪೂರಕವಾಗಿ ಬಾಳುವುದೊಂದೇ ದಾರಿ.

ಶರೀರದಲ್ಲಿಯ ಅಸಹ್ಯ ಉಷ್ಣತೆಯನ್ನು ಇದರಿಂದಲೇ ತೆಗೆದು ಹಾಕಿರಿ



ಶರೀರದ ಒಳಗಿನ ಮತ್ತು ಹೊರಗಿನ ಉಷ್ಣವನ್ನು ತೆಗೆದು ಹಾಕಿ ಪ್ರಕೃತಿಯನ್ನು ತಂಪಾಗಿರಿಸುವುದು, ಅಪಚನ ಅಜೀರ್ಣವನ್ನು ಸರಿಪಡಿಸುವುದು, ಶಾರೀರಿಕ ಮತ್ತು ಮಾನಸಿಕ ಶಕ್ತಿಯನ್ನು ಬೆಳೆಸುವುದು ಧಾತು ಸ್ಥಾನ ಬಲ್ಲೆಯ ಉಷ್ಣತೆಯನ್ನು ಹೋಗಲಾಡಿಸಿ ಪುಷ್ಟಿಕರ ಮದ್ದು

ನಿಮ್ಮ ಹತ್ತಿರದ ಕೆಮಿಸ್ಟರ ಕಡೆಯಿಂದ ಇಂದೇ ಒಂದು ಬಾಟಲಿಯನ್ನು ತಂದು ಸೇವಿಸಲು ಪ್ರಾರಂಭಿಸಿರಿ

ಪರ್ಲ ಎಂಡ್ ಕಂಪನಿ
ಮುಂಬಯಿ ೨

ಜೀವವಿಮೆಗಾಗಿ

ವಿಚಾರಿಸಿರಿ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ
ಲೈಫ್ ಇನ್ಶ್ಯೂರೆನ್ಸ್ ಕೊ, ಲಿಮಿಟೆಡ್,

(ಸ್ಥಾಪನೆ: 1934)

ಚೆಯರ್‌ಮೆನ್: ಶ್ರೀ. ಎಮ್. ಸಿಟಿ. ಎಮ್. ಚಿದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,
ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ:
"ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್ ಪೋಸ್ಟು ಬಾಕ್ಸ್ ನಂಬ್ರ 142
ಮದ್ರಾಸು.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಲೇಖಾಂಕ ೧

# ರಾಜಕೀಯ ಪಕ್ಷಗಳು

ಲೇಖಕರು: ಶ್ರೀ. ಸಿ. ಎಚ್ ಶೆಟ್ಟಿ

ತಾ. ೯-೨-50ನೇ ನವಯುಗದ ಸಂಚಿಕೆಯಲ್ಲಿ ನಾನು ರಾಜಕೀಯ ಪಾರ್ಟಿಗಳ ವಿಷಯು ಸ್ವಲ್ಪಮಟ್ಟಿಗೆ ಸೂಚಿಸಿರುವೆನೇ ಹೊರತು ಅದರ ಮೂಲಾಧಾರ ತತ್ವ ಮತ್ತು ಗುಟ್ಟೇನೆಂಬುದರ ಕುರಿತು ವಿವರವಾಗಿ ಹೇಳಲಿಲ್ಲ. ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ತತ್ವಗಳನ್ನನುಸರಿಸಿ ಸ್ಥಾಪಿತವಾದ ಪಾರ್ಟಿಗಳಿಲ್ಲದಿರುವುದೇ ರಾಜಕೀಯ ರಂಗದಲ್ಲಿ ನಮ್ಮ ಮಂದಗತಿಗೆ ಮತ್ತು ನಾನಾ ಟ...ಯ ಬಿಕ್ಕಟ್ಟುಗಳಿಗೆ ಕಾರಣಗಳಾಗಿವೆಯೆಂದು ಹಲವು ತಜ್ಞರು ಅಭಿಪ್ರಾಯಪಟ್ಟಿರುವರು.

ಅಮೇರಿಕ ಇಂಗ್ಲಂಡು ಮುತ್ತಿತರ ದೇಶಗಳಲ್ಲಿರುವ ಪ್ರಜಾಮತ ಸರಕಾರಗಳನ್ನು ಮಾದರಿಯಾಗಿಟ್ಟುಕೊಂಡು ಅವುಗಳಲ್ಲಿ ಕಂಡುಬಂದ ಅನುಭವಗಳನ್ನು ಉಪಯೋಗಿಸಿ ನಮ್ಮ ಸರಕಾರದ ಆಡಳಿತೆಯ ಕ್ರಮವನ್ನು ಬ್ರಿಟಿಷರ ಪಾರ್ಲಿಮೆಂಟರಿ ಅಥವಾ ಕೆಬಿನೆಟ್ ಪದ್ಧತಿಯಂತೆ ಅನುಸರಿಸಿರುವೆವು. ಶಾಸನ ಸಭೆಯಲ್ಲಿ ಬಹು ಪಕ್ಷದ ಬೆಂಬಲವಿರುವ ಪಾರ್ಟಿಯ ಮುಖ್ಯಸ್ಥನು ತನ್ನ ಪಾರ್ಟಿಯಿಂದ ಕೆಲವರನ್ನು ಆರಿಸಿ ಒಂದು ಮಂತ್ರಿಮಂಡಲವನ್ನು ರಚಿಸುವನು. ಎಲ್ಲಾ ಮಂತ್ರಿಗಳೂ ಆತನಿಗೆ ಪ್ರತ್ಯೇಕ ಜವಾಬ್ದಾರರು. ಮಂತ್ರಿಮಂಡಲವು ಪಾರ್ಲಿಮೆಂಟಿಗೆ ಸಾಮೂಹಿಕ ಜವಾಬ್ದಾರಿಯಾಗಿರುವದು. ಮುಖ್ಯಮಂತ್ರಿಯು ರಾಜಿನಾಮೆ ಕೊಡುವ ಪ್ರಸಂಗ ಬಂದಲ್ಲಿ ಎಲ್ಲಾ ಮಂತ್ರಿಗಳೂ ರಾಜಿನಾಮೆ ಕೊಡಬೇಕಾಗುವದು. ಪ್ರತಿಯೊಬ್ಬ ಮಂತ್ರಿಯೂ ಅವನವನ ಡಿಪಾರ್ಟಮೆಂಟಿನ ಬಗ್ಗೆ ಜವಾಬ್ದಾರನು. ಸುಮಾರು 300 ವರುಷಗಳಿಂದ ಇಂಗ್ಲಂಡಿನಲ್ಲಿ ಈ ಪದ್ಧತಿಯು ನಡೆದುಬಂದು ಅಲ್ಲಿಯ ಜನರು ಈ ಕ್ರಮದ ಆಡಳಿತೆಯಲ್ಲಿ ಬಹಳ ತರಬೇತಿ ಹೊಂದಿರುವರು. ಅಲ್ಲಿ ಒಂದು ಪಾರ್ಟಿಯವರು ಆಡಳಿತೆ ನಡಸುವಾಗ ಮತ್ತೊಂದು ಪಾರ್ಟಿಯವರು ಅವರ ಕುಂದುಕೊರತೆಗಳನ್ನು ಬಯಲಿಗೆಳೆದು ವಿರೋಧ ಸೂಚಿಸುತ್ತಾ ಬಂದಿದ್ದಾರೆ. ನಾವು ಅದೇ ರೀತಿಯನ್ನನುಸರಿಸಿ ನಡೆಯುವದಾದ್ದರಿಂದ ಪಾರ್ಟಿಗಳ ಸಂಘಟನೆ ಮತ್ತು ಕಾರ್ಯಕಲಾಪಗಳ ಕುರಿತು ಚೆನ್ನಾಗಿ ಪರಿಚಯ ಮಾಡಿಕೊಳ್ಳದೆ ಬರೇ ನಕಲು ತೆಗೆದರೆ ಜೀವವಿಲ್ಲದ ಗೊಂಬೆಯ ಆಟವಾಡಿದಂತೆಯೇ. ಪ್ರಜಾಸತ್ತೆಯ ಸರಕಾರವಿರುವ ರಾಷ್ಟ್ರಗಳಲ್ಲಿ ಪಾರ್ಟಿಗಳು ಯಾವ ರೀತಿಯಲ್ಲಿರುವವೆಂಬುದನ್ನು ತಿಳಿದುಕೊಳ್ಳುವದು ಅವಶ್ಯವಾಗಿದೆ.

ಮಾನವರಲ್ಲಿ ಯಾವಾಗ ವಿರೋಧಾಭಿಪ್ರಾಯಗಳುಂಟಾದವೋ ಆಗಲೇ ಮತಭೇದಗಳುಂಟಾಗಿ ಪಾರ್ಟಿಗಳಾರಂಭವಾದವು. ಲೋಕೋ ಭಿನ್ನರುಚಿ ಎನ್ನುವರು. ನಮ್ಮ ಥ... ರಾಷ್ಟ್ರಗಳಲ್ಲಿ ಸಹಾ ಮತಭೇದಗಳಿರುವವು. ಇದಕ್ಕಾಗಿ ಒಂದು ಕಥೆಯನ್ನು ಸಹಾ ಹೇಳುವರು. ಪ್ರತಿಯೊಬ್ಬ ವ್ಯಕ್ತಿಯೂ ಮರಣವಾದೊಡನೆ ಆತನ ಜೀವಾತ್ಮನನ್ನು ಯಮನಾಲಯಕ್ಕೆ ಕೊಂಡುಹೋಗಿ ಯಮನ ಮುಂದೆ ತನ್ನಿ ನಡಸುವರಂತೆ. ಆಗ ಒಂದು ಕಡೆಯವರು ಆತನ ಒಳ್ಳೇ ಕೃತ್ಯಗಳನ್ನು ಎತ್ತಿ ಹೇಳುವರು. ಇನ್ನೊಂದು ಕಡೆಯವರು ಕೆಟ್ಟದ್ದನ್ನೇ ಹುಡುಕಿ ಹೇಳುವರು. ಯಮನು ಇವೆರಡು ಕಡೆಯವರ ವಾದಗಳನ್ನು ಕೇಳಿ ಸ್ವರ್ಗಕ್ಕೆ ಅಥವಾ ನರಕಕ್ಕೆ ಜೀವಾತ್ಮನನ್ನು ಕಳುಹಿಸುವನಂತೆ.

ಪ್ರಜಾಮತ ಸರಕಾರಕ್ಕಿಂತ ಪಾರ್ಟಿಭೇದವು ಹಿರಿದಾಗಿದೆ ಎಂದು ಸರ್ ಹೆನ್ರಿಮೇಯಿಗ್ ಮೊದಲಾದವರು ಹೇಳುವರು. ಆಸ್ಟ್ರೇಲಿಯದ ಆದಿವಾಸೀ ಪಂಗಡಗಳೊಳಗೆ (Tribes) ಜಗಳವಾದಾಗ ಒಂದು ಟೋಟಮ್ಮಿನವನು (Totem ಟೋಟಮ್ಮ ಎಂದರೆ ಟ್ರೈಬುಗಳ ಕುಲವನ್ನು ಗುರ್ತಿಸುವ ಗುರುಹು) ತನ್ನವರ ಸಹಾಯಾರ್ಥವಾಗಿ ಇನ್ನೊಂದು ಟೋಟಮ್ಮಿನವರೊಡನೆ ಜಗಳವಾಡುವರೆ ಆಸ್ಟ್ರೇಲಿಯ ದೇಶದ ಅರ್ಧ ಪ್ರದೇಶದ ವರೆಗೂ ಪ್ರಯಾಸಪಟ್ಟು ಪ್ರಯಾಣ ಬೆಳಸುವನಂತೆ, ಇದರಲ್ಲಿ ಮತಭೇದಗಳ ಚಿಹ್ನೆ ಕಂಡುಬಂದರೂ ನಿಜವಾದ ರಾಜಕೀಯ ಪಾರ್ಟಿಗಳು ತಯಾರಾದುದು ಪ್ರಜಾಪ್ರತಿನಿಧಿ ಸರಕಾರ ರೂಢಿಗೆ ಬಂದ ಮೇಲೆಯೇ ಎನ್ನಬೇಕಾಗಿದೆ. ಆಸ್ಟ್ರೇಲಿಯದ ಆದಿವಾಸಿಗಳಲ್ಲಿ ಕಂಡುಬಂದದ್ದು ಟ್ರೈಬುಗಳ ಅಂತಃಕಲಹದ ಮತಭೇದವೇ ಹೊರತು ರಾಜಕೀಯ ಪಾರ್ಟಿ ಭೇದಗಳಲ್ಲ.

ಪುರಾತನ ಕಾಲದಲ್ಲಿ ಗ್ರೀಕರು ತಮ್ಮ ಚಿಕ್ಕಪುಟ್ಟ ರಾಜ್ಯಗಳಾದ ಸಿಟಿ ಸ್ಟೇಟ್ಸ್ (City States) ನಲ್ಲಿ ಪ್ರಜಾಸತ್ತೆಯ ಸರಕಾರ ಸ್ಥಾಪಿಸಿದ್ದರು. ಆಗ ಅಲ್ಲಿ ಮತದಾರರ ಸಭೆಯನ್ನು ಕರೆದು ತಮ್ಮ ರಾಜ್ಯದ ಕಾರ್ಯಭಾರವನ್ನು ತಾವೇ ಸ್ವತಹಾ ನಡಸುತ್ತಿದ್ದರು. ಆಗ ರಾಜ್ಯವು ಸಣ್ಣದು, ವ್ಯವಹಾರವು ಬಹಳ ಕಡಮೆ ಮತ್ತು ಮತದಾರರ ಸಂಖ್ಯೆಯು ಸ್ವಲ್ಪವಾದ್ದರಿಂದ ಹಾಗೆ ನಡೆಯಲು ಅವರಿಗೆ ಅನುಕೂಲವಾಯಿತು. ಈಗಿನ ಕಾಲದ ಸಾವಿರ ಗಾವುದಗಳ ವರೆಗೂ ವಿಸ್ತೀರ್ಣವಿರುವ ಮಿಲಿಯಾಂತರ ಜನರಿರುವ ಮತ್ತು ಪ್ರಾಯಪ್ರಬುದ್ಧ ಸ್ತ್ರೀಪುರುಷರಿಗೆ ಓಟು ಇರುವ ದೊಡ್ಡದೊಡ್ಡ ರಾಜ್ಯಗಳಲ್ಲಿ ಗ್ರೀಕರ ಕಾಲದ ಕ್ರಮದಂತೆ ಸರಕಾರ ನಡಸುವದು ಕಷ್ಟ. ಸರಕಾರದ ವ್ಯವಹಾರವು ಮೊದಲಿಗಿಂತ ಸಾವಿರ ಪಾಲು ಜಾಸ್ತಿಯೂ ಆಗಿಯದೆ. ಮತದಾರರಲ್ಲನೇಕರು ರಾಷ್ಟ್ರದ ದೂರ ಪ್ರಾಂತದಲ್ಲಿರುವರು ಮತ್ತು ಸರ್ವ ಜನರ ವ್ಯವಹಾರ ಉದ್ಯೋಗ ತಾಪತ್ರಯಗಳೆಲ್ಲಾ ಮೊದಲಿಗಿಂತ ಶತಾಂಶ ಜಾಸ್ತಿಯಾಗಿರುವದರಿಂದ ಆಗ ನಡೆದ ರೀತಿಯಂತೆ ಈಗ ನಡೆಯುವದು ಸಾಧ್ಯವಿಲ್ಲ. ಆದ್ದರಿಂದ ಪ್ರಜಾಮತ ಸರಕಾರವೆಲ್ಲಿರುವದೋ ಅಲ್ಲಿ ಪ್ರಜಾಪ್ರತಿನಿಧಿ ಸರಕಾರವನ್ನು ಸ್ಥಾಪಿಸಿರುವರು.

ಮತದಾರರು ತಮ್ಮ ಓಟುಗಳನ್ನು ಸದುಪಯೋಗ ಮಾಡಿ ಯೋಗ್ಯ ಪ್ರತಿನಿಧಿಗಳನ್ನೇ ಆರಿಸುವಂತೆ ಸಹಾಯ ಮಾಡುವರೆ, ರಾಜಕೀಯ ವಿಚಾರದಲ್ಲಿ ತಕ್ಕ ಅನುಭವ ಕೊಡುವರೆ ಪಾರ್ಟಿಗಳು ಮತ್ತು ಪತ್ರಿಕೆಗಳು ಬೇಕಾಗಿವೆ. ಪತ್ರಿಕೆಗಳನ್ನು ಓದಲು ಅಭ್ಯಾಸ ಅಥವಾ ಸಮಯವಿಲ್ಲದವರಿಗೆ ಮತ್ತು ಓದುಬರಹವಿಲ್ಲದವರಿಗೆ ಅನುಭವ ಕೊಡುವರೆ ಪಾರ್ಟಿಗಳೇ ಬೇಕು. ಆಡಳಿತೆ ಮಂಡಳಿಯ ಜೀವಾವಧಿಯು ಶಾಸನ ಸಭೆಯ ಬೆಂಬಲ ಮತ್ತು ವಿಶ್ವಾಸ ಹೊಂದಿರುವದರಿಂದ ಆ ಸಭೆಯಲ್ಲಿ ಯಾವಾಗಲೂ ಬಹುಮತ ಬೇಕು. ಪಾರ್ಟಿಯು ಸರಿಯಾದ ಶಿಸ್ತಿಗೆ ಒಳಪಡದೆ ಒಮ್ಮತದಿಂದಿರುವಲ್ಲಿ ಮಂತ್ರಿಮಂಡಳವು ಕೆಸರಿನಲ್ಲಿ ನೆಟ್ಟ ಗೂಟದಂತೆ ಸ್ಥಿರವಾಗಿ ನಿಲ್ಲದು. ಅವರ ಠರಾವು, ಮಸೂದೆ ಮತ್ತು ಯೋಜನೆಗಳೆಲ್ಲಾ ನಿಶ್ಚಿತ ಧೋರಣೆಯಿಂದ ತಯಾರಾಗಲಾರವು.

ಪ್ರಜಾಪ್ರತಿನಿಧಿಗಳಿರುವ ಎಲ್ಲಾ ರಾಷ್ಟ್ರಗಳಲ್ಲೂ ಅಧಿಕಾರಿ ಪಾರ್ಟಿ (Party in Power) ಮತ್ತು ವಿರುದ್ಧ ಪಾರ್ಟಿ (Opposition Party) ಎಂಬ ಎರಡು ಪಾರ್ಟಿಗಳು ಶಾಸನ ಸಭೆಯಲ್ಲಿವೆ. ಇವುಗಳೊಳಗೆ ಪಾರ್ಟಿ ಪೊಲಿಸಿ ಮತ್ತು ಪ್ರೋಗ್ರಾಮುಗಳಲ್ಲಿ ಇರುವ ಭೇದಗಳೇ ಹೊರತು ಸರಕಾರದ ಮುಖ್ಯ ತತ್ವಗಳಲ್ಲಿ ಭಿನ್ನಾಭಿಪ್ರಾಯಗಳಿಲ್ಲ. ಸಭೆಯಲ್ಲಿ ಎಷ್ಟು ವಾಗ್ಯುದ್ಧಗಳು ನಡೆದರೂ ವ್ಯಕ್ತಿ ದ್ವೇಷಗಳೇನೂ ಇಲ್ಲ. ದೇಶದ ಆಡಳಿತೆ ಮತ್ತು ಅದಕ್ಕೆ ಆಧಾರವಾದ ರಾಜ್ಯ ಘಟನೆ, ದೇಶದ ರಕ್ಷಣೆ ಮತ್ತು ಶಾಂತಿ ಕಾಪಾಡುವ ವಿಷಯಗಳಲ್ಲಿ ಅವರೆಲ್ಲರೂ ಒಂದೇ ಅಭಿಪ್ರಾಯದವರಾಗಿರುತ್ತಾರೆ. ಯಾವ ಪಾರ್ಟಿಯು ಅಧಿಕಾರಕ್ಕೆ ಬಂದರೂ ದೇಶದ ಆಡಳಿತೆಯ ಕ್ರಮವನ್ನು ಅಡಿಮೇಲು ಮಾಡುವದಿಲ್ಲ. ರಾಷ್ಟ್ರಕ್ಕೆ ಅಪಘಡ ಬಂದಲ್ಲಿ ಎಲ್ಲಾ ಪಾರ್ಟಿಗಳೂ ಒಂದಾಗಿ ಎದುರಿಸುವರು. ಕೆಲವು ದೇಶಗಳಲ್ಲಿ ವಿರೋಧ ಪಾರ್ಟಿಯ ಲೀಡರ (Opposition Leader) ನಿಗೆ ಸಂಬಳವನ್ನು ನಿಶ್ಚಯಿಸಿರುವರು. ಬಜೆಟು ಪಾಸಾಗುವಾಗ ಮೆಂಬರರ ಓಟಿಗೆ ಅದು ಒಳಪಟ್ಟಿರುವದಿಲ್ಲವಾದ ಕಾರಣ ಸಭೆಯ ಮೆಂಬರರಿ


— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರಮೀಪಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ. ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ— ವಾಸಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಂಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಪುರ, ಕೆಮಿಸ್ಟ್, ಹಾವೇರಿ, ಬ್ಯಾಡಗಿ



**ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ**

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಗಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಕೊಲಿಕಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು:- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಂಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ.



**ಅಮೃತಾಂಜನ**

ತಲೆವೇದನೆ, ಶಿರೋವೇದನೆ, ಉಳುಕು ...ಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ...ವು, ಗಾಯಗಳು, ಬಾತುಕೊಳ್ಳುವುದು, ...ವಿಷಮುಂತಾದವು, ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.




REGD

...ಳುಕಡೆ ಮತ್ತು ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.


## ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ.

R. E. P. 523/49

C. M. ಕಾಮತ್ ಕೂಡಾ—ಅರ್ಜಿದಾರರು.

ಬೀಪಾತುಮ್ಮ ಕೂಡಾ—ರೆಸ್ಪೊಂಡೆಂಟ್ಸ.

1ನೇ ರೆಸ್ಪಾಂಡೆಂಟಳು, ಬೀಪಾತುಮ್ಮಹೆಂಗ್ಸಿಗೆ.

3ನೇ ರೆಸ್ಪಾಂಡೆಂಟಳು ಆಸಾಬಿಹೆಂಗ್ಸಿಗೆ.

4ನೇ ರೆಸ್ಪಾಂಡೆಂಟ ಹಸನ್ ಕುಟ್ಟಿಬ್ಯಾರಿಗೆ

ನಿಮ್ಮ ಮೇಲೆಮೇಲ್ಕಾಣ್ಸಿದ ಅರ್ಜಿದಾರರು ದಾಖಲ್ಲು ಮಾಡಿದ R. E. P. 523/49ನೇ ಅಮ್ಲಜ್ಯಾರಿಯು ಲೇಲಂ ಇಸ್ತಿಯಾರು ಶರ್ತ ಮಂಜೂರಾತಿ ಬಗ್ಗೆ ತಾ. 17-3-50ಕ್ಕೆ ಇಟ್ಟಿರುತ್ತದೆ. ಆ ದಿವಸ ಬೆಳಗ್ಗೆ 11 ಗಂಟೆಗೆ ನೀವಾಗಲೀ ವಕೀಲರ ಮುಖಾಂತ್ರವಾಗಲೀ ಹಾಜರಾಗದಿದ್ದ ಪಕ್ಷದಲ್ಲಿ ನಿಮ್ಮನ್ನು ಎಕ್ಸ ಪಾರ್ಟಿ ಮಾಡಲಾದೀತು ಎಂತ ಈ ಮೂಲಕ ತಿಳಿಸೋಣಾಗಿದೆ.

*(Sd)* **C. M Kamath,**

Ist Petitioner.

ಕಾಸರಗೋಡು 9-3-50

ಗೆ ಆತನ ಸಂಬಳದಲ್ಲಿ ಕಡಿತ ಮಾಡುವರೆ ಸಾಧ್ಯವಿಲ್ಲ. ವಿರೋಧ ಪಾರ್ಟಿಯ ಲೀಡರನ ಅಭಿಪ್ರಾಯದಂತೆ ಸರಕಾರದ ಪಾರ್ಟಿಯು ನಡೆಯುದಿದ್ದರೂ ಆತನ ಅಂಬೋಣಕ್ಕೆ ಮಾನ್ಯತೆ ಕೊಟ್ಟು ಪ್ರತಿಕೂಲವಾದ ಉತ್ತರ ಕೊಡುವರು. ವಿರೋಧ ಪಾರ್ಟಿಯು ಯಾವ ಕಾಲಕ್ಕೂ ಬಹುಮತ ಪಡೆದು ಅಧಿಕಾರ ಪಾರ್ಟಿಯಾಗುವ ಯೋಗವಿರುವುದರಿಂದ ಆತನಿಗೆ ಪ್ರಾಮುಖ್ಯತೆ ಇದೆ. ಲೋವೆಲ್ ಎಂಬ ಮಹಾ ಪ್ರಾಜ್ಞರೊಬ್ಬರು ಅಮೇರಿಕದಲ್ಲಿರುವ ಡೆಮೊಕ್ರೆಟಿಕ್ ಮತ್ತು ರಿಪಬ್ಲಿಕನ್ ಎಂಬ ಎರಡು ಪಾರ್ಟಿಗಳೊಳಗೆ ಹೆಚ್ಚಿನ ವ್ಯತ್ಯಾಸಗಳಿಲ್ಲವೆಂಬುದರ ಕುರಿತು ಹೀಗೆ ಬರೆದಿರುವರು:— "ಎರಡು ಪಾರ್ಟಿಗಳನ್ನು ಎರಡು ಖಾಲಿ ಬಾಟ್ಲಿಗಳಿಗೆ ಹೋಲಿಸಬಹುದು. ಯಾವ ಬಾಟ್ಲಿಗೂ ಯಾವ ವೈನು ಅಥವಾ ಬ್ರೇಂಡಿ ವ ಶರಾಬನ್ನು ತುಂಬಿಸಬಹುದು ಹಾಗೆ ಮಾಡುವಾಗ ಬಾಟ್ಲಿಗಳ ಮೇಲೆ ಹಚ್ಚಿದ ಲೇಬಲ್ಲುಗಳನ್ನು ಮಾತ್ರ ಬದಲಾಯಿಸದೆ ಇದ್ದರೆ ಸರಿ" ಎಂದು ಬರೆದಿರುವರು. ಆದ್ದರಿಂದ ದೊಡ್ಡದೊಡ್ಡ ಪಾರ್ಟಿಗಳಲ್ಲಿರುವ ಭೇದವು ಚರ್ಮ ದಪ್ಪವೇ ಸರಿ, ನಿಶಾನಿಗಳ ಭೇದವೇ ಮುಖ್ಯವೆಂಬಂತೆ ಕಾಣುತ್ತದೆ. ಎಷ್ಟೋ ಸಲ ಒಂದು ಪಾರ್ಟಿಯವರು ತಯಾರಿಸಲು ಹವಣಿಸಿದ ಮಸೂದೆಯನ್ನು ಇನ್ನೊಂದು ಪಾರ್ಟಿಯವರು ತಾವಾಗಿ ಮುಂಚಿತವಾಗಿ ತಂದು, ಪಾಸು ಮಾಡಿಸಿದ ಶಿಫಾರಸನ್ನು ತಮ್ಮ ಪಾಲಿಗೆ ಸಂಪಾದಿಸಿಕೊಂಡುದುಂಟು ಇಂಗ್ಲಂಡಿನಲ್ಲಿ ಒಂದು ಸಲ ಹೀಗೆಯೇ ಆದಾಗ ಪಾರ್ಲಿಮೆಂಟು ಸಭೆಯಲ್ಲಿ ಮಹಾ ವ್ಯಕ್ತಿಯೊಬ್ಬರು ಹೀಗೆಂದಿದ್ದರು:–"ಲಿಬರಲ್ ಪಾರ್ಟಿಯವರು ಬತ್ತಲೆಯಾಗಿ ಸ್ನಾನ ಮಾಡುತ್ತಿರುವ ಸಮಯ ನೋಡಿ ಕನ್ಸರ್‌ವೇಟಿವ್ ಪಾರ್ಟಿಯವರು ಅವರ ವಸ್ತ್ರವನ್ನು ಕದ್ದು ಓಡಿ ಹೋದರು!" ಪಾರ್ಟಿಗಳು ಹೆಚ್ಚು ಶಕ್ತಿ ಪಡೆಯಬೇಕಾದರೆ ಬಹು ಜನರ ಬೆಂಬಲ ಪಡೆಯಬೇಕು ಮತ್ತು ಮೆಂಬರರಲ್ಲಿ ಒಮ್ಮತವಿರಬೇಕು, ಮೆಂಬರರು ಸ್ವಲ್ಪ ನಮ್ರ ಸ್ವಭಾವದವರಾಗಬೇಕು, ಮತ್ತು ತಮ್ಮ ವ್ಯಕ್ತಿತ್ವವನ್ನೂ ಸ್ವಾಭಿಮಾನವನ್ನೂ ಹೆಚ್ಚು ಮುಂದೊತ್ತಬಾರದು. ಅನೇಕ ಪಾರ್ಟಿಗಳು ಇರುವದು ಅಷ್ಟೊಂದು ಒಳ್ಳೆತಲ್ಲ. ಹೆಚ್ಚಾಗಿದ್ದರೆ ಯಾವ ಪಾರ್ಟಿಗೂ ಹೆಚ್ಚು ಜನರ ಬೆಂಬಲ ಪಡೆಯಲು ಸಾಧ್ಯವಿಲ್ಲದೆ ಗುಂಪುಗಳಾಗಿ ಚಿಕ್ಕ ಚಿಕ್ಕ ಪಕ್ಷಗಳಾಗಿ ಸ್ಥಿರವಾದ ಮಂತ್ರಿ ಮಂಡಳ ರಚಿಸುವರೆ ಅವು ತಡೆಯಾಗುವವು. ಫ್ರೆಂಚ್ ಶಾಸನ ಸಭೆಯು ದುರ್ದೈವವಶಾತ್ ಯಾವಾಗಲೂ ಈ ರೋಗದಿಂದ ಪೀಡಿತವಾಗಿರುವದು. ಅಲ್ಲಿ ಕಳೆದ ಮಹಾಯುದ್ಧದ ನಂತರ ಸುಮಾರು ಹದಿನಾಲ್ಕು ಮಂತ್ರಿ ಮಂಡಳಗಳು ರಚಿಸಲ್ಪಟ್ಟು ಅಂತ್ಯವಾದುವು ಆ ಪೈಕಿ ಒಂದು ಮಂತ್ರಿ ಮಂಡಳಿಯು ಬರೇ ಎಪ್ಪತ್ತೆರಡು ಸಮಯ ಅಧಿಕಾರದಲ್ಲಿದ್ದಿತ್ತಂತೆ. ಹೀಗಿರುವಲ್ಲಿ ಶಾಶ್ವತ ಮತ್ತು ಸ್ಥಿರವಾದ ರಾಜಕಾರ್ಯವು ಎಂದೂ ಸಾಗದು. ಯಾವ ಕಾಲದಲ್ಲಿಯೂ ಹೆಚ್ಚು ಬೆಂಬಲವಿರುವ ಸ್ಥಿರವಾದ ಒಂದು ಪಾರ್ಟಿಯು ಪಕ್ಷಾಂತರ ಪಕ್ಷಿ ಪಲ್ಲಟೋಂ ಪನ್ನು ಕಂಡು ಬಂದದ್ದಿಲ್ಲ. ಈ ಗುಂಪುಗಳು ಎಷ್ಟೋ ಬಾರಿ ದೇಶದ ಹಿತಚಿಂತನೆಯನ್ನು ಲವಲೇಶವಾದರೂ ಎಣಿಕೆಗೆ ತಾರದೆ ತಮ್ಮ ಸ್ವಾರ್ಥವನ್ನು ಮುಂದಿಟ್ಟು ಮಂತ್ರಿ ಮಂಡಳಕ್ಕೆ ಕಾಲೂರಿ ನಿಲ್ಲಲು ಅವಕಾಶ ಕೊಡಲಿಲ್ಲ. ಈ ಕಾರಣಗಳಿಂದ ಫ್ರೆಂಚ್ ಎಸೆಂಬ್ಲಿಯಲ್ಲಿ ಯಾವಾಗಲೂ ಎರಡು ಮೂರು ಪಾರ್ಟಿಗಳಿಂದೊಡಗೂಡಿದ ಕೊಯಲೀಶನ್ [Coalition Cabinet] ಮಂತ್ರಿಮಂಡಲವನ್ನು ರಚಿಸಬೇಕಾಗುತ್ತದೆ. ಇದು ಆಗಾಗ ಮುರಿದು ಬೀಳುತ್ತಿತ್ತು. ಕೊಯಲೀಶನ್ನು ಎಂಬುದು ಹೇಸರ ಕತ್ತೆಯ ಹಾಗೆ. ಅದಕ್ಕೆ ಹುಟ್ಟಿನ ಗಾಂಭೀರ್ಯವು ಮೊದಲೇ ಇಲ್ಲ. ಸೋಟವಾದರೂ ಮುಂದಿನ ಶ್ರೇಯೋಭಿವೃದ್ಧಿಯ ಕಡೆಗಿಲ್ಲ ಪ್ರತಿಯೋರ್ವರಧಿಕನೂ ತಾನೇ ದಳವಾಯಿಯೆಂಬ ಒಣ ಗೌರವದಿಂದ ವರ್ತಿಸಿದರೆ ಯಾವ ಸೈನ್ಯವನ್ನೂ ಅಂಕೆಯಲ್ಲಿರಿಸಿಕೊಳ್ಳುವದು ಕಷ್ಟ ನಮ್ಮ ದೇಶದಲ್ಲಿ ಕಾಂಗ್ರೆಸಿಗೆ ಇದೇ ತರದ ವರ್ತನೆಯು ತಲೆದೋರಿದೆ.

ಬರೇ ಜನಬಲವನ್ನೇ ನೋಡಿ ಪಾರ್ಟಿಗಳಿಗೆ ಪ್ರಾಮುಖ್ಯತೆ ಕೊಡುವದು ಕೇವಲ ತಪ್ಪು. ಒಮ್ಮತದಿಂದ ಹಣತೊಟ್ಟು ಕಾರ್ಯಸಾಧಿಸಿ ದೊಡ್ಡ ಪಾರ್ಟಿಗಳನ್ನು ಹಲವು ಸಲ ಬದಿಗೊತ್ತಿದ ಸಣ್ಣ ಪಾರ್ಟಿಗಳು ಚರಿತ್ರೆಯಲ್ಲಿ ಕಂಡು ಬಂದಿವೆ. ಮುಸ್ಲಿಂ ಲೀಗು ಮುಂದೆ ಬಂದದ್ದು ಇದೇ ರೀತಿಯಿಂದ. ಹೀಗಾಗಿಯೇ ಕಳೆದ ವರುಷ ಬಂಗಾಳದಲ್ಲಿ ನಡೆದ ಉಪ ಚುನಾವಣೆಯಲ್ಲಿ [By election] ದಿವಂಗತ ಶರತ್ಚಂದ್ರ ಬೋಸರು ಕಾಂಗ್ರೆಸ್ಸಿಗೆ ವಿರೋಧ ನಿಂತು ಆರಿಸಿ ಬಂದದ್ದಾಗಿದೆ. ವಿಶೇಷ ಪ್ರಚಾರ, ಗದ್ದಲ, ಗಲಾಟೆ ಮಾಡಿದಾಕ್ಷಣ ಒಂದು ಪಾರ್ಟಿಗೆ ಜನರ ಸಂಪೂರ್ಣ ಬೆಂಬಲವಿದೆ ಎಂದು ನಾವು ಭಾವಿಸುವದು ಸಹಾ ತಪ್ಪು. ಹತ್ತರ ವಾಕ್ಯವು ದೇವರ ವಾಕ್ಯ [Vox Popali Vox Dei] ಎಂಬ ಭಾವನೆಯು ನಮ್ಮಲ್ಲಿರುವದಾದರೂ ಆ ವಾಕ್ಯವು ನಿಜವಾಗಿ ಹತ್ತರ ಅಭಿಪ್ರಾಯ ಹೌದೋ ಎಂಬುದನ್ನು ನಾವು ಮೊದಲಾಗಿ ತಿಳಿದುಕೊಳ್ಳಬೇಕು. ಒಂದೇ ಕೂಗೆಬ್ಬಿಸಿ ಬಲಾತ್ಕಾರದಿಂದ ತಮ್ಮ ಧ್ಯೇಯವನ್ನು ಮುಂದೊತ್ತುವವರಿಗೆ ಬೊಗಳುವ ಹಿಂಡು (Howling mob) ಎಂದು ಕರೆಯುವರು. ಪಾರ್ಟಿಗಳು ಬಲವಾಗಬೇಕಾದರೆ ದೇಶಸೇವೆಯಲ್ಲಿ ನುರಿತ ನಿರತರಾದ ಅಗ್ರಗಣ್ಯರನ್ನೂ ಸ್ವಾರ್ಥತ್ಯಾಗಿಗಳನ್ನೂ ಪ್ರಾಜ್ಞರನ್ನೂ ಒಳ್ಳೇ ಗುಣ ನಡತೆಯವರನ್ನೂ ಮುಂದಾಳುಗಳನ್ನಾಗಿ ಮಾಡಿಕೊಳ್ಳಬೇಕು.

ಇಂಥಾ ಪಾರ್ಟಿಗಳಿಗೆ ಸ್ಥಳೀಕ, ಪ್ರಾಂತಿಕ ಮತ್ತು ಕೇಂದ್ರ ಕಮಿಟಿಗಳ ಸಂಸ್ಥೆಗಳು ಬೇಕು. ಪ್ರತಿಯೊಂದು ಪಾರ್ಟಿಗೂ ಅವರವರ ಪತ್ರಿಕೆ ಫಂಡುಗಳು ಬೇಕು. ಅಲ್ಲಲ್ಲಿ ಮೆಂಬರರನ್ನು ಸೇರಿಸುವರೆ, ಪಾರ್ಟಿಯ ಸಭೆ ಕರೆಯುವರೆ ಮತ್ತು ಧ್ಯೇಯ, ಧೋರಣೆ, ಕಾರ್ಯಕ್ರಮಗಳನ್ನು ಪ್ರಚಾರ ಮಾಡುವರೆ ಒಂದು ಸ್ವಯಂಸೇವಕ ದಳವು ಬೇಕು ನಾಟಕದಲ್ಲಿ ಸೂತ್ರಧಾರನಿರುವಂತೆ, ಸರ್ಕಸಿನಲ್ಲಿ ರಿಂಗ್ ಮಾಸ್ಟರನಿರುವಂತೆ ಒಬ್ಬ ಹ್ವಿಪ್ (Whip) ಎಂಬವನುಬೇಕು. ಎಲ್ಲಾ ಮೆಂಬರರು ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುತ್ತಾರೋ, ಮುಖ್ಯವಾಗಿ ಡಿವಿಜನ್ ಸಮಯ ಮತಗಣನೆಯ ಬಗ್ಗೆ ಹಾಜರಿರುತ್ತಾರೋ ಪಾರ್ಟಿಯ ಶಿಸ್ತಿಗೆ ಸರಿಯಾಗಿ ನಡಕೊಳ್ಳುತ್ತಾರೋ ಇಲ್ಲವೋ ಎಂದು ನೋಡಿಕೊಳ್ಳುವದು ಈತನ ಕರ್ತವ್ಯವಾಗಿದೆ.

ಪ್ರಜಾಪ್ರತಿನಿಧಿ ಸರಕಾರವಿರುವಲ್ಲೆಲ್ಲಾ ಪಾರ್ಟಿಗಳು ಬೇಕಾಗಿವೆ ಎಂಬುದು ನಿಜವಾದರೂ ಅವುಗಳ ಗುಣದೋಷಗಳನ್ನು ತಿಳಿದುಕೊಳ್ಳಬೇಕಾಗಿದೆ. ಪಾರ್ಟಿಗಳಲ್ಲಿ ಕಂಡು ಬರುವ ನ್ಯೂನತೆಗಳಲ್ಲಿ ಮೊದಲನೆಯದಾಗಿ ಸ್ಪೋಯಿಲ್ಸ್ ಸಿಸ್ಟಂ (Spoils System) ಎಂಬುದು. ಅಮೇರಿಕದಲ್ಲಿ ಅಧಿಕಾರದಲ್ಲಿರುವ ಪಾರ್ಟಿಯವರು ಚುನಾವಣೆಯಲ್ಲಿ ಸೋತೊಡನೆಯೇ ಡಿಪಾರ್ಟುಮೆಂಟುಗಳ ಮುಖ್ಯಾಧಿಕಾರಿಗಳು ದೊಡ್ಡ ಹುದ್ದೆಯವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುವರು. ಅವರ ಬದಲಿಗೆ ಬೇರೆ ಜನರನ್ನು ವಿಜಯಿ ಪಾರ್ಟಿ ಕಡೆಯಿಂದ ನೇಮಿಸುವರು ಇದರಿಂದ ಏನೂ ಅನುಭವವಿಲ್ಲದವರನ್ನು ಅನುಭವಸ್ಥರ ಸ್ಥಾನಕ್ಕೇರಿಸಲು ಎಡೆಯಾಗುತ್ತದೆ. ಹಿಂದಿನ ಕಾಲದಲ್ಲಿ ಬಿಗಿದ ಸಾಮಾನ್ಯ ಕುದುರೆಗಳನ್ನು ಮುಂದೆ ತಂದಂತಾಗುತ್ತದೆ. ಇಂಗ್ಲಂಡಿನಲ್ಲಿ ಇದು ಇಷ್ಟರ ಮಟ್ಟಿಗೆ ಮುಂದುವರಿಯದಿದ್ದರೂ ವಸಾಹತುಗಳಿಗೆ ಗವರ್ನರರನ್ನು ನೇಮಿಸುವಾಗ, ವಿದ್ಯಾ ಖಾತೆ ಮತ್ತು ನ್ಯಾಯಖಾತೆಯ ಕೆಲವು ಸ್ಥಾನಗಳಿಗೆ ನೇಮಕ ಮಾಡುವಾಗ ಇದರಂತೆ ವರ್ತಿಸುವರು. ಇಂಗ್ಲಂಡು ಮತ್ತು ಫ್ರೆಂಚ್ ದೇಶಗಳಲ್ಲಿ ಬಿರುದಾವಳಿಗಳನ್ನು ಕೊಡುವ ಸಾಂಪ್ರದಾಯ ಉಂಟು. ಕಲಾವಿಶಾರದ ವಿಜ್ಞಾನಿಗಳಿಗೆ, ದೇಶ ಸೇವೆ ಸಮಾಜ ಸೇವೆ ಮಾಡಿದವರಿಗೆ ಇವುಗಳನ್ನು ಕಾದಿಡುವ ಬದಲಿಗೆ ಪಾರ್ಟಿ ಫಂಡಿಗೆ ಹಣ ಸಹಾಯ ಮಾಡಿದವರಿಗೆ ಇಲೆಕ್ಷನ್ ಸಮಯ ಸಹಾಯ ಮಾಡಿದವರಿಗೆ ಕೊಡುವ ರೂಢಿ ಉಂಟು. ಇದು ಒಂದು ತರದ ಲಂಚವೆ ರೂಪವಾಗಿ ತೋರುವದಾದ್ದರಿಂದ ಸ್ವಿಜರ್‌ಲೇಂಡು, ಕೆನಡಾ ಮತ್ತು ನಮ್ಮ ಭರತದೇಶದಲ್ಲಿ ಇದನ್ನು ರದ್ದುಗೊಳಿಸಿದ್ದಾರೆ. ಈ ದೇಶಗಳಲ್ಲಿ ಜನರ ವಿಶ್ವಾಸ, ಪ್ರೀತಿ ಮತ್ತು ಭಕ್ತಿಗಳೇ ದೇಶಸೇವೆ ಮಾಡಿದ ಜನರಿಗೆ ಸಿಕ್ಕತಕ್ಕ ಬಹುಮಾನಗಳಾಗಿವೆ.

(ಮುಂದುವರಿಯುವುದು.)


# ಕುಲವಿಲ್ಲದ ಹೆಣ್ಣು

(ಸರಸ ಸಾಮಾಜಿಕ ಕಾದಂಬರಿ)

ಬರೆದವರು:—ಪಿ. ವೆಂಕೋಬಾಚಾರ್ಯ, ಬಿ.ಎ.ಬಿ.ಟಿ

ದೇವದಾಸಿ ಕುಲದ ಉದ್ಧಾರವೇ ಮುಖ್ಯ ಕಥಾವಸ್ತು-

ಕುಸುಮಳು ವೇಶ್ಯಾಪುತ್ರಿಯಾದರೂ ಅವಳು ವೇಶ್ಯೆಯಲ್ಲ!

ಅವಳ ಕತೆ ಹೇಗೆ ಸಾಗಿದೆ ಎಂದು ಓದಿಯೇ ತಿಳಿಯಿರಿ.

ದಪ್ಪ ಪುಸ್ತಕ ಬೆಲೆ ರೂ. 1-0-0

ಪ್ರತಿಗಳು, ಅಂತರಂಗ ಕಾರ್ಯಾಲಯ, ಉಡುಪಿ, ನವಯುಗ ಪ್ರೆಸ್, ಉಡುಪಿ ಅಥವಾ ನವಭಾರತ ಬುಕ್ ಡಿಪೊ, ಉಡುಪಿ ಇಲ್ಲಿ ದೊರೆಯುತ್ತವೆ.

BUY INDIAN! ENCOURAGE INDIAN INDUSTRY!

ಆಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD

Highly perfumed and medicated, worth using daily by one and all, keeps hair black and relieves head-ache etc.

TRADE MARK

Manufactured by:-

Swadeshi Oushadhi Bhandara (Regd.)

KUNJAL P.O. Brahmavar, S.K.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ ವಿ ಶಾಸ್ತ್ರೀ,

ಇವರ

ನವಜೀವಾತು

ಎಂಬ

ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ

ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಸ್ಟಾಕಿಸ್ಟರು:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

## ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ– ಬೆಲೆ; ರೂ 3-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ. 8-[ವಿ. ಪಿ. ಹಸ್ಸಿರಡಾಣೆ ಪ್ರತ್ಯೇಕ.]

Mrs. D. DEVEE, F. DB. (N. J.)
Tollygunge CALCUTTA

ಸ್ಟಾಕಿಸ್ಟರು: ಕಹಾಳಂಪೆನಿ, ಮಂಗಳೂರು

Regd. No. M. 3618 | Estd: 1921 ಸ್ಥಾಪನೆ | 30ನೇ ವರ್ಷ 23-3-1950

LICENCE No. 31
Licensed to Post without Prepayment

FOUNDER:
Sri. A. B. Shetty
Minister for Agriculture & Veterinary

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ವರ್ಷ 30 ವಾರ ೩೦

# NAVAYUGA WEEKLY UDIPI, S. K.

Post Box No. 22

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol 30 No. 30

## ಎರಡರಲ್ಲೊಂದಿರಲಿ!

ಒಂದು ಸ್ಥಿತಿ, ವಸ್ತು, ವಿಷಯ, ಗುಣ ಯೋಗ್ಯತೆ ಯಾವುದೇ ಆದರೂ ಸಂದಿಗ್ಧವಾಗಿ, ಅರ್ಧವರ್ಧವಾಗಿ, ಅನಿಶ್ಚಿತಾವಸ್ಥೆಯಲ್ಲಿ ಇರುವುದಕ್ಕಿಂತ ಒಂದೋ ಹಾಗೆ, ಇಲ್ಲವೇ ಹೀಗೆ ಇರುವುದು ವಾಸಿ. ಒಂದೋ ಆಕಾಶದಲ್ಲಿ ಇಲ್ಲವೇ ಭೂಮಿಯಲ್ಲಿ ಇರಬೇಕು ಹೊರತು ತ್ರಿಶಂಕು ಸ್ಥಾನದಲ್ಲಿರಬಾರದು.

ಎಲ್ಲರೂ ಉನ್ನತಿಯನ್ನು ಅಪೇಕ್ಷಿಸುವವರೇ ಹೊರತು ಅವನತಿಯನ್ನು ಬಯಸುವವರಿಲ್ಲ. ಆದರೆ ಉನ್ನತಿಯು ಅಸಾಧ್ಯವಾದಾಗ, ಅವನತಿಯನ್ನು ಹೊಂದಬಾರದೆಂದು ಮಧ್ಯಾಂತರ ಭಾಗದಲ್ಲಿ ಉಳಿದುಕೊಂಡರೆ, ಶಾಶ್ವತ ಅವನತಿಯನ್ನು ಹೊಂದಿದಂತೆಯೇ ಹೊರತು ಬೇರಲ್ಲ. ಯಾವ ವಿಭಾಗದಲ್ಲೇ ಆದರೂ ತೀರಾ ಕೆಳಗೊತ್ತಲ್ಪಟ್ಟವನು, ಒಂದಲ್ಲೊಂದು ಕಾಲದಲ್ಲಿ ಮೇಲಕ್ಕೇರಿಯಾನೆಂಬ ಭರವಸೆಯಿದೆ; ಆದರೆ ನೆಲೆಯಿಲ್ಲದ ನೆಲೆ ಮಧ್ಯ ಸ್ಥಾನದಲ್ಲಿ ಉಳಿದುಕೊಂಡವನು ಮಾತ್ರ ಮೇಲೆ ಅಥವಾ ಕೆಳಗಾಗುವ ಆಶೆಯೊಂದೆಂದಿಗೂ ಇಲ್ಲದೆ ಚಿರಕಾಲವೂ ತ್ರಿಶಂಕುವಾಗಿಯೇ ಉಳಿಯಬೇಕಾಗುವುದು.

ಪುರುಷ ಅಥವಾ ಸ್ತ್ರೀ ಆಗಿರಬೇಕು; ನಪುಂಸಕನಾಗಿ ಇರಬಾರದು. ಹಣ್ಣಾಗಿರಬಹುದು, ಇಲ್ಲವೇ ಕಾಯಿಯಾಗಿರಬಹುದು; ಮುರುಟಿ, ಕೊಳೆತು ಹೋಗಬಾರದು.

ಜನತಾ ವರ್ಗಗಳ ತಾರತಮ್ಯ ನೋಡಿದರೂ ಮಧ್ಯಮಾವಸ್ಥೆ ಕಠಿಣವೆಂಬುದು ಮನದಟ್ಟಾಗದಿರದು. ಈ ಕಾಲದಲ್ಲಿ ಶ್ರೀಮಂತರೆಂತೂ ಸುಖಾನುಭವಿಗಳೇ; ಕೂಲಿಯಿಂದ ದಿನಹರಣ ಮಾಡುವ ತೀರಾ ಬಡವನ ಸ್ಥಿತಿ ಕೂಡಾ ಒಂದು ರೀತಿಯಿಂದ ಸಮಾಧಾನಕರವಿದೆ. ಬಾಳುವೆ ಅಸಹ್ಯವಾಗಿರುವವರೆಂದರೆ ಮಧ್ಯಮ ವರ್ಗದವರು ಇಂದು ಬಂಡವಾಳಶಾಹಿಗಳನ್ನು ದಮನಿಸಿ, ಶ್ರಮಜೀವಿಗಳ ಹಿತ ಸಾಧಿಸಬೇಕೆಂಬ ವಾದ ಕೇಳಬರುತ್ತಿರುವಷ್ಟು ಎಲ್ಲರಿಗಿಂತ ಹೆಚ್ಚಿನ ಸಂಕಷ್ಟದಲ್ಲಿರುವ ಮಧ್ಯಮ ವರ್ಗದವರ ಪರವಾಗಿ ವಾದಿಸುವವರು ಕೂಡಾ ಕಂಡುಬರುತ್ತಿಲ್ಲ. ಸಂದಿಗ್ಧಾವಸ್ಥೆಯಲ್ಲಿರುವ ನಿಸ್ಸಹಾಯಕತೆ ಅಂತಹದು. ಅತಿ ಮೇಲ್ಮಟ್ಟದ ಶ್ರೀಮಂತಿಕೆಯನ್ನು ತಗ್ಗಿಸಿ, ತೀರಾ ಕೆಳ ಮಟ್ಟದ ಬಡತನವನ್ನು ಏರಿಸಿ ಈ ಮಧ್ಯ ಮಟ್ಟಕ್ಕೆ ತಂದಾಗಲೇ ಈಗ ಪೂರ್ಣ ಖಾಲಿಯಾದಂತಿರುವ ಆ ನೆಲೆಯು ಸಮೃದ್ಧಿಗೊಂಡು ಸುಖದಾಯಿಯಾಗಬೇಕು.

ಸ್ಥಿತ್ಯಂತರಗಳಲ್ಲಾದರೂ ಹೀಗೇನೇ. ರಾಷ್ಟ್ರವು ಪರದಾಸ್ಯದಲ್ಲಿದ್ದಾಗ 'ನಮ್ಮ ಸ್ಥಿತಿ ಹೀಗಿದೆ' ಎಂಬ ಸ್ಪಷ್ಟ ತಿಳಿವಳಿಕೆ ಮತ್ತು ಸಂತಾಪ ಜನರಲ್ಲಿದ್ದಿತು; ರಾಷ್ಟ್ರವು ಸ್ವತಂತ್ರವಾದ ಮೇಲೆ 'ನಾವು ಹೀಗಾಗಿದ್ದೇವೆ' ಎಂಬ ಸ್ಪಷ್ಟ ಜ್ಞಾನ ಮತ್ತು ಸಂತೋಷ ಜನರಲ್ಲುಂಟಾಗಿದೆ. ಆದರೆ ಅಂದಿನ ಮತ್ತಿಂದಿನ ಕಾಲಗಳ ನಡುವೆ 'ನಡುಗಾಲ ಸಂಕಟ'ವೆಂಬುದಿದ್ದಾಗ ಇಂದೇನು, ಮುಂದೇನು, ಎಂಬ ಸ್ಪಷ್ಟ ಅಂದಾಜೇ ಜನರಿಗೆ ದೊರೆಯದೆ ಶಂಕೆ, ಸಂದೇಹಗಳನ್ನೇ ಕಟ್ಟಿಕೊಂಡಿರಬೇಕಾಗಿದ್ದಿತು.

ಯಾವ ರಾಷ್ಟ್ರ ನಾಯಕರನ್ನೇ ವಿಚಾರಿಸೋಣ; ಒಂದೋ ಯುದ್ಧ ಇಲ್ಲವೇ ಶಾಂತಿಯಿರುವುದು ವಾಸಿ ಹೊರತು ಅತ್ತ ಯುದ್ಧವೂ ಅಲ್ಲ, ಇತ್ತ ಶಾಂತಿಯೂ ಇಲ್ಲ, ಎಂಬಂತಹ ಇಂದಿನ ಪರಿಸ್ಥಿತಿ ಅಪೇಕ್ಷಣೀಯವೆಂದಾರೂ ಹೇಳಲಾರರು. ಸಂದಿಗ್ಧಾವಸ್ಥೆ—ತ್ರಿಶಂಕು ಸ್ಥಾನ—ಯಾರಿಗೂ ಯಾವುದಕ್ಕೂ ಬೇಡವಾಗಿರುವ ಸಂಗತಿ.

ಮನುಷ್ಯ ಸ್ವಭಾವ ಮತ್ತು ಯೋಗ್ಯತೆಗಳ ಮಟ್ಟಿಗೂ ಈ ತುಲನೆಯೇ ಅನ್ವಯಿಸುತ್ತದೆ. ಸಜ್ಜನ ಅಥವಾ ದುರ್ಜನನಾಗಬಹುದು. ಆದರೆ ಸಜ್ಜನನೋ ದುರ್ಜನನೋ ಎಂದು ಗೊತ್ತುಹಚ್ಚಲಾಗದಂಥವನ ಕೂಟ ಸಲ್ಲದು

ಕತ್ತಿ ಹಿಡಿಯುವವನಿದಿರು ಕತ್ತಿಯೊಡ್ಡಬಹುದು; ಕೈ ಕುಲುಕುವವನಿಗೆ ಹಸ್ತಲಾಘವ ಕೊಡಬಹುದು. ಆದರೆ ವ್ಯಾಘ್ರನಖವಿಟ್ಟುಕೊಂಡೇ ಆಲಿಂಗನ ಕೊಡುವವನೊಡನೆ ತತ್ಪ್ರತಿ ವ್ಯವಹಾರ ಹೂಡುವುದು ಸುಲಭವಲ್ಲ

ಲೇಖನ, ಭಾಷಣ, ಸಂಭಾಷಣೆ, ಇತ್ಯಾದಿ ಯಾವುದರಲ್ಲೇ ಇರಲಿ. ಸ್ಪಷ್ಟ ರೀತಿಯ ಶ್ಲಾಘನೆ ಅಥವಾ ನಿಂದೆ ಬಂದರೆ ಅರ್ಥ ಮಾಡಿಕೊಳ್ಳಬಲ್ಲರು. ಆದರೆ ನಿಂದಾಸ್ತುತಿ, ವ್ಯಂಗ್ಯ ಮಾತುಗಳನ್ನು ಅಷ್ಟು ಸುಲಭದಲ್ಲಿ ಗ್ರಹಿಸಿಕೊಳ್ಳಲಾರರು. ವ್ಯಂಗ್ಯ ಚಿತ್ರಗಳನ್ನು ಅರ್ಥ ಮಾಡಿಕೊಳ್ಳುವುದಕ್ಕೂ ಒಂದು ವಿಶಿಷ್ಟ ಜಾಣ್ಮೆ ಬೇಕಾಗುತ್ತದೆ.

ಜ್ಞಾನಿಯೊಡನೆ ವ್ಯವಹರಿಸುವುದು ಸುಖಕರ; ಅಜ್ಞಾನಿಯೊಡನೆ ವ್ಯವಹರಿಸುವುದು ಸುಲಭ ಆದರೆ ಅರೆಜ್ಞಾನಿಯೊಡನೆ ವ್ಯವಹರಿಸುವುದು ನಿಜಕ್ಕೂ ಅಸಾಧ್ಯ. ಅದೇ ರೀತಿ ಆಳು ಅಥವಾ ಒಡೆಯನ ಸ್ಥಾನ ಮಾನಗಳ ಅರ್ಥವಾದೀತು; ಆದರೆ 'ಆಳೊಡೆಯ' ಅಥವಾ ಆಳೋ ಒಡೆಯನೋ ಎಂಬ ನಿಶ್ಚಯವಿಲ್ಲದ ಕಡೆ ನಿಶ್ಚಿತ ಧೋರಣೆ ಹಿಡಿಸದು.

ಶಾಂತ ಪ್ರಕೃತಿಯವ ಉತ್ತಮ; ಆ ಮೇಲೆ ಸಿಟ್ಟಿನ ಸ್ವಭಾವದವ ಆಗಬಹುದು. ಆದರೆ ಒಳಗಡೆ ಸಿಟ್ಟು, ದ್ವೇಷಾಸೂಯೆಗಳನ್ನು ತುಂಬಿಸಿಕೊಂಡು ಶಾಂತ ಸ್ವಭಾವ ಪ್ರದರ್ಶಿಸುವವ ನಿಜಕ್ಕೂ ಅಪಾಯಕರ. ಯಾವುದರಲ್ಲೇ ಆದರೂ ಒಂದೋ ಕೆಳಗಿರಬೇಕು; ಇಲ್ಲವೇ ಮಹಡಿಯೇರಬೇಕು; ಮಹಡಿ ಹತ್ತುವ ಅಥವಾ ಇಳಿಯುವ ಮೆಟ್ಟಿಲನ್ನೇ ನೆಲೆಯಾಗಿ ಮಾಡಿಕೊಂಡು ಸರ್ವಥಾ ನಿಂತಿರಕೂಡದು.

ಆದ್ದರಿಂದ ಭಾರತೀಯ ಜನಸಾಮಾನ್ಯರಲ್ಲಿ ದೈನಂದಿನ ವ್ಯವಹಾರಗಳಿಂದಾರಂಭಿಸಿ, ರಾಜಕಾರಣದ ವರೆಗಿನ ಪ್ರತಿಯೊಂದು ರಂಗದಲ್ಲೂ ಪ್ರತಿಯೊಂದು ವಿಭಾಗದಲ್ಲೂ ಸರ್ವ ಪ್ರಥಮವಾಗಿ ಇರಬೇಕಾದುದೆಂದರೆ ಸ್ಪಷ್ಟವಿಧಾನ; ಯಾವುದರಲ್ಲೇ ಆದರೂ ಸ್ಪಷ್ಟತೆಯಿದ್ದ ನಂತರವೇ ಮೇಲುಕೀಳು, ಹಿತಾಹಿತ, ಉಚಿತಾನುಚಿತತೆಯ ತುಲನೆ.

ಸ್ಥಿತಿಗತಿಗಳ ಕುರಿತು 'ಅದೂ ಇದೂ ಎಲ್ಲವೂ' ಎಂಬಂತೆ ಎಲ್ಲರ ವಾದ, ವಾರ್ತೆಗಳನ್ನೂ ಕಟ್ಟಿಕೊಂಡು ಬುದ್ಧಿಯನ್ನು ಕಲಸು ಮೇಲೋಗರ ಮಾಡಿಕೊಂಡಿರಕೂಡದು. ಒಂದಲ್ಲೊಂದು ರೀತಿಯ ಸ್ಪಷ್ಟ ಸ್ಥಿತಿಚಿತ್ರವನ್ನು ಕಣ್ಣ ಮುಂದಿಟ್ಟುಕೊಂಡಿರಬೇಕು.

ಪಕ್ಷ, ಸಂಘಗಳಷ್ಟೇಕೆ ಅದಕ್ಕೊಮ್ಮೆ, ಇದಕ್ಕೊಮ್ಮೆ ನೇತಾಡಿಕೊಳ್ಳದೆ ಯಾವುದಾದರೊಂದನ್ನು ಅಥವಾ ಯಾವುದೂ ಒಗ್ಗದಾದರೆ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ನಿಶ್ಚೈಸಿಟ್ಟುಕೊಂಡಿರಬೇಕು. ಅದಕ್ಕೊಮ್ಮೆ, ಇದಕ್ಕೊಮ್ಮೆ ನೆಗೆಯಬಾರದೆಂಬ ತತ್ವವು ನಮ್ಮ ಉದ್ಯೋಗ, ವೃತ್ತಿ, ಮಾತುಕೃತಿ, ಭಾವನೆ, ಎಲ್ಲಕ್ಕೂ ಏಕಪ್ರಕಾರ ಅನ್ವಯಿಸುತ್ತದೆ. 'ಎರಡು ದೋಣಿಗಳಿಗೆ ಕಾಲಿಡಬಾರದು' ಎಂಬ ನಾಣ್ಣುಡಿ ಸರ್ವತ್ರ ಪ್ರಚಾರದಲ್ಲಿದೆ.

ಇಲ್ಲಿದ್ದುಕೊಂಡು ಈ ರಾಷ್ಟ್ರದ ಏಕನಿಷ್ಠೆಯಿಂದಿರುವವರೆಂತೂ ನಮ್ಮವರೇ; ಪಾಕಿಸ್ಥಾನದಲ್ಲಿದ್ದು ಎಂತಹ ಅಜ್ಞಾನದಿಂದಾದರೂ ಆ ರಾಷ್ಟ್ರದ ಮೇಲಿನ ಅಭಿಮಾನದಿಂದ ಭಾರತವನ್ನು ದ್ವೇಷಿಸುವವರಿದ್ದರೆ, ಅಂಥವರು ಪರಕೀಯರು. ಆದರೆ ಭಾರತದಲ್ಲೇ ಇದ್ದು, ಪಾಕಿಸ್ತಾನದ ಮೇಲಿನ ಮಮತೆಯಿಂದ ಗುಪ್ತ ದಗಾಖೋರತನ ಕೈಕೊಳ್ಳುವ ಸ್ವಕೀಯ ಘಾತುಕರು ಮಾತ್ರ ಪರಮಾವಧಿ ಶತ್ರುಗಳು; ಅಕ್ಷಮ್ಯ ಅಸಹ್ಯ ಅಪರಾಧಿಗಳು

ಹೊರಗಿನ ಆಕ್ರಮಣ, ಒಳಗಿನ ಅಭಾವ, ಎರಡೂ ಹೋರಾಡಿ ಗೆಲ್ಲಬೇಕಾದ ಅಪಾಯಗಳೆಂಬುದೇನೋ ನಿಜ; ಆದರೆ ಅವುಗಳೊಡನೆ ಹೂಡುವ ಹೋರಾಟದಲ್ಲಿ ಒಂದು [illegible]. ಹೊರಗಿನವರೋ ಒಳಗಿನವರೋ, ಗತಯುಗದವರೋ, ಈ ಯುಗದವರೋ ಎಂದು ಗೊತ್ತುಹಚ್ಚಲಾಗದಂತಿದ್ದು, ಹೊರಗಿನ ಆಕ್ರಮಣ ಮತ್ತು ಒಳಗಿನ ಅಭಾವಗಳ ನಿವಾರಣಾಕಾರ್ಯವನ್ನು ಆತಂಕಿಸುವ ಉದರಶೂಲೆಗೆ ಸಮಾನ

THE UNITED KARNATAK INSURANCE COMPANY, LTD., DHARWAR.
Established: 1929.

Offers their valuable service to the public of India in making their sweet home, always happy.
For good investments and valuable connections, please consult us.

# ಅಸಾಮಾನ್ಯ ಆಚರಣೆಗಳಿಂದ

ಲಾದವರು ಮಾತ್ರ ಆತ್ಮಹಾಯಕಾರಿಗಳು. ಇಂಥವರೊಡನೆ ಜಿಗುಪ್ಸೆ ಮತ್ತು ಸಂತಾಪ ಕಟ್ಟಿಕೊಂಡೇ ಹೋರಾಡಬೇಕಾಗುತ್ತದೆ.

ಯಾರು ಸುಖಿಯೆನ್ನುವಿರಿ? ಸ್ಥಿತಿಯೆಂತಹದಿದ್ದರೂ ನಿಶ್ಶಂಕೆ, ನಿರ್ಮಲ ಹೃದಯ, ನಿಶ್ಚಿತ ಧ್ಯೇಯ ಧೋರಣೆಯಿರುವವನೇ. ಯಾವುದು ಕಂಗಾಗ್ರಾಹ್ಯವೆನ್ನುವಿರಿ? ಪ್ರಿಯವಿರಲಿ, ಅಪ್ರಿಯವಿರಲಿ, ಮುಚ್ಚುಮರೆಯಾಗಲೀ ಕಳಂಕ ಅಥವಾ ಸಂದಿಗ್ಧತೆಯಾಗಲೀ ಇಲ್ಲದೆ ಸುಸ್ಪಷ್ಟವಿರುವ ವಿಷಯವೇ.

ಇಂತಹ ಸ್ಪಷ್ಟ ದರ್ಶನವಿಲ್ಲದ ದೆಸೆಯಿಂದಲೇ ಎಂತೆಂತಹ ಯೋಗ್ಯತೆಯುಳ್ಳವರಾದರೂ ಅಜ್ಞಾತರಾಗಿಯೇ ಉಳಿದಿದ್ದಾರೆ. ಇಂತಹ ಸ್ಪಷ್ಟ ಹೃದಯ ಮತ್ತು ಮೆದುಳಿನ ಅಭಾವದಿಂದಾಗಿಯೇ ಎಂತಹ ಶ್ರೀಮಂತರಾದರೂ ಅಸುಖಿಗಳಾಗಿದ್ದಾರೆ. ಹೀಗೆ ಸ್ಪಷ್ಟವಾಗಿ ಗೋಚರವಾಗದೇನೇ ಎಷ್ಟೆಷ್ಟೋ ಅಮೂಲ್ಯ ವಿಷಯಗಳು ಬೆಳಕಾಣದೆ ಹೋಗಿವೆ. ಆದರೆ ಜ್ಞಾನ, ಯೋಗ್ಯತೆ, ಐಶ್ವರ್ಯ ಕಡಿಮೆಯಿದ್ದರೂ ಸ್ಪಷ್ಟತೆಯೊಂದರ ಕಾರಣದಿಂದಲೇ ವಿಶೇಷ ಪ್ರಕಾಶಿಸುತ್ತಿರುವವರನ್ನು ಮತ್ತು ಸುಖಿಗಳಾಗಿರುವವರನ್ನು ಕಾಣಬಹುದು. ತೂಕ ಕಡಿಮೆಯಿದ್ದರೂ ಸ್ಪಷ್ಟತೆಯ ಒಂದೇ ಗುಣದಿಂದ, ಗಂಭೀರಾಸ್ಪಷ್ಟ ವಿಷಯಗಳಿಗಿಂತ ಹೆಚ್ಚಿಗೆ ಸರ್ವಮಾನ್ಯವಾಗಿರುವ ಸಂಗತಿಗಳನ್ನೂ ನೋಡುತ್ತಿದ್ದೇವೆ.

ಆದ್ದರಿಂದ ಮುಂದಾಗಿ ದೃಷ್ಟಿ ಸರಿಯಿರಲಿ, ಶುಭ್ರವಿರಲಿ; ಆ ಮೇಲೆಯೇ ಯಾವುದೇ ವಿಷಯ, ವಸ್ತು, ಮನುಷ್ಯ, ಸ್ಥಿತಿಗತಿಗಳ ಕಡೆಗೆ ನೋಟ. ಮನಸ್ಸು ಸ್ಥಿರವಾಗಿರಲಿ, ನಂತರವೇ ಯಾವುದಾದರೊಂದರ ಪರಾಮರ್ಶೆ. ತೂಗುವ ತೊಟ್ಟಿಲಿನಿಂದ ತೂಕ ಗೊತ್ತುಹಚ್ಚಲಾಗುವದಿಲ್ಲ. ಚಂಚಲ ಬುದ್ಧಿ, ಸಂಶಯಾತ್ಮಕ ಮನಸ್ಸು, ಸರಿಯಾದ ತೀರ್ಮಾನ ಕೊಡಲಾರವು. ಯೋಗ್ಯ ನಿರ್ಧಾರ ಮಾಡಲಾರದು. ಎಲ್ಲಕ್ಕೂ ದೃಢತೆ ಮುಖ್ಯ.

## ಪ್ರಕಟಣೆ

ದಕ್ಷಿಣ ಕನ್ನಡ ಜಿಲ್ಲಾ ಉಡುಪಿ ತಾಲೂಕು ಚೇರ್ಕಾಡಿ (?) ಗ್ರಾಮದ ಸರ್ವೆ ನಂಬರ 521 ನೇ ಮಂದಾರ್ತಿ ಶ್ರೀದುರ್ಗಾ ಪರಮೇಶ್ವರಿ ಅಮ್ಮನವರ ದೇವಸ್ಥಾನದ ಟ್ರಸ್ಟಿಗಳು ಜಾಹೀರ ಮಾಡುವದೇನಂದರೆ —

ಮೇಲ್ಕಂಡ ದೇವಸ್ಥಾನದ ಗರ್ಭಗೃಹದ ಜೀರ್ಣೋದ್ಧಾರ ಮಾಡಬೇಕಾಗಿ ನಿರ್ಣಯಿಸಿ, ಮಾನ್ಯ ಶ್ರೀ ಮದ್ರಾಸ H.R.E. ಬೋರ್ಡ ಕಮಿಶನರವರ ನಂಬ್ರ 4238 Dated 11-8-49ನೇ ಓರ್ಡರ ಹೊಂದಿ ಮಹಾಜನರ ಸಹಾಯವನ್ನು ಅಪೇಕ್ಷಿಸಿ ಊರು ಪರಊರುಗಳಿಗೆ ಟ್ರಸ್ಟಿಗಳು ಬರತಕ್ಕ ಪಂದ್ಯಾರೆ (?) ಕಾರಣ ಮಹಾಜನರು ಟ್ರಸ್ಟಿಗಳಾದ ನಮ್ಮ ಪೈಕಿ ಯಾರಾದರೂ ಬಂದಲ್ಲಿ ಸ್ವಹಸ್ತ ಪರಹಸ್ತಗಳಿಂದ ತಮ್ಮಿಂದ ಕೂಡಿದಷ್ಟು ಹೆಚ್ಚಿನ ಹಣವನ್ನು ಸಹಾಯ ನಿಧಿಯಾಗಿ ಒದಗಿಸಿ ಕೊಟ್ಟು ಶ್ರೀದೇವಿಯ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ವಿನಂತಿ.

ಮತ್ತು ದೇವಸ್ಥಾನದ ಮೊಹರೂ ಟ್ರಸ್ಟಿಗಳ ದಸ್ಕತೂ ಇರುವ ಡುಪ್ಲಿಕೇಟ ರಶೀದಿಯ ಹೊರತು ಹಣಗಳನ್ನು ಕೊಡಕೂಡದಾಗಿ ಈ ಮೂಲಕ ಜಾಹೀರುಮಾಡಿಕೊಂಡಿರುತ್ತೇವೆ.

ಶ್ರೀ ಶೇಷ ಹೆಗ್ಗಡೆ, ಮೆನೇಜಿಂಗ ಟ್ರಸ್ಟಿ
,, ರಾಮಣ್ಣ ಅಡಿಗ } ಜ್ಯೊಂಟ
,, A M ಶ್ರೀನಿವಾಸರಾವ್ } ಟ್ರಸ್ಟಿ
ಮಂದಾರ್ತಿ ದೇವಸ್ಥಾನ
ತಾರೀಕು 15-3-1950

ಶ್ರೇಷ್ಠರೆನಿಸಿದ ಯಾವುದೇ ಬಗೆಯ ಜನರ ಮುಖಂಡರನ್ನು ಅವಲೋಕಿಸಿದರೂ ಸರ್ವಸಾಮಾನ್ಯ ಸಾಧ್ಯತೆಗಳಿಗಿಂತ ವಿಶೇಷವಾದುದರ ಕಡೆಗೆ—ಸಾಮಾನ್ಯರಿಗಿಂತ ವಿಶೇಷ ವ್ಯಕ್ತಿತ್ವವುಳ್ಳವರ ಕಡೆಗೆ—ಅದು ಕೂಡಲೇ ಹರಿಯುತ್ತದೆಂದು ವ್ಯಕ್ತವಾಗುತ್ತಿದೆ. ಯೋಗ್ಯತಾಯೋಗ್ಯತೆ, ಉಚಿತಾನುಚಿತತೆಗಳ ತುಲನೆಯ ನಂತರವೇ ಒಂದು ಸಂಗತಿ ಅಥವಾ ಓರ್ವ ವ್ಯಕ್ತಿಗೆ ಜನಮತದಲ್ಲಿ ಪ್ರಾಮುಖ್ಯತೆ ದೊರೆಯುತ್ತದೆಂದು ಊಹಿಸುವುದು ತಪ್ಪು. ಯಾವ ವರ್ಗವೇ ಇರಲಿ, ಅದು 'ಸಾಮಾನ್ಯ'ವಲ್ಲ, ಅತಿ 'ಸಾಮಾನ್ಯ'ವಲ್ಲ, ಎಂದು ಸಾರ್ವಜನಿಕರಿಗೊಮ್ಮೆ ಹೊಳೆದರಾಯಿತು —ಆ ಕಡೆಗೆ ಜನಮತವು ಆಕರ್ಷಿಸಲ್ಪಡುತ್ತದೆ. ಇದು ಲೋಕರೂಢಿ. ಭಾರತದಲ್ಲಂತೂ ಈ ಅಸಾಮಾನ್ಯತೆಯ ಕಡೆಗೆ ಸೆಳೆಯಲ್ಪಡುವ ಅಭ್ಯಾಸ ಅತಿ ಪ್ರಬಲವಿದೆ.

oo oo oo

## ಕೆಲವು ನಿದರ್ಶನಗಳು.

ಸಾವು ಪ್ರತಿಯೊಬ್ಬನಿಗೂ ಇದ್ದದ್ದೇ. ಅದೆಂದು ಜೀವಮಾನದಲ್ಲಿ ಒಂದೇ ಬಾರಿ; ಅಸಾಮಾನ್ಯ ಆದ್ದರಿಂದ ಎಂಥವನಾದರೂ ಸತ್ತು ಸರ್ವರ ಲಕ್ಷ್ಯವನ್ನೆಳೆಯುತ್ತಾನೆ. ಮನುಷ್ಯರ ನಿತ್ಯಕರ್ಮಗಳು ಕೆಲವಿವೆ; ಪದ್ಧತಿ ಪ್ರಕಾರ ಎಂತಹ ಸಂದರ್ಭದಲ್ಲಿ ಹೇಗೆ ವರ್ತಿಸಬೇಕು, ಎಂಬ ಕುರಿತು ನಿಶ್ಚಯಿಸಲ್ಪಟ್ಟಿರುವ ವಿಧಿವಿಧಾನಗಳಿವೆ. ಮನುಷ್ಯರಲ್ಲಿ ಸಾಮಾನ್ಯತಃ ಇಷ್ಟೇ ಪರಿಮಾಣದ ಧೈರ್ಯ, ಶೌರ್ಯ, ಸಾಹಸ, ಸದ್ಗುಣಗಳಿವೆ, ಎಂಬೊಂದು ಸರ್ವಸಾಮಾನ್ಯ ಅಂದಾಜಿದೆ. ಈ ಅಂದಾಜು ಮಿಕ್ಕಿ ವರ್ತಿಸಲು ಯಾರು ಸಮರ್ಥರಾಗುತ್ತಾರೋ ಅವರು ಅತಿ ಮಾನುಷರಾಗಿ ತೋರಿ ಎಲ್ಲರ ಲಕ್ಷ್ಯವನ್ನು ಸೆಳೆದುಕೊಳ್ಳುತ್ತಾರೆ. ಇದಕ್ಕೆ ಎಂದೂ ಮರೆಯಲಾಗದ ನಿದರ್ಶನ ಮಹಾತ್ಮಾ ಗಾಂಧಿಯವರು ಮತ್ತು ಅವರ ಅನುಯಾಯಿ ದೇಶಭಕ್ತರುಗಳು. ಅವರು ಅಸಾಮಾನ್ಯ ಮಟ್ಟ ಮೀರಿದ ದೇಶಪ್ರೇಮ, ಸೇವಾ ಬುದ್ಧಿ, ತ್ಯಾಗ, ಸಹನೆ, ಧೈರ್ಯ, ಸಾಹಸಗಳನ್ನು ತೋರಿಸಿಯೇ ಅಂತಹ ವಿಶೇಷತೆಗಳಿಸಿಕೊಂಡರು. ಬಾಪೂಜಿಗೆ ಗುಂಡಿಡುವ ವರೆಗೆ ನಾಥೂರಾಮ ಗೋಡ್ಸೆಯು ಹೆಸರು ಹೊರಗಿನವರಿಗೆ ತಿಳಿದಿರಲಿಲ್ಲ; ಆದರೆ ಅತಿ ಸಾಮಾನ್ಯರಿಂದ ಕನಸಿನಲ್ಲಿ ಕಾಣುವುದು ಕೂಡಾ ಅಸಾಧ್ಯವಾಗುವಂತಹ ಹೀನಾವಧಿಯ ಅಧ್ಭುತಪೂಂದನ್ನು (?) ಸಾಧಿಸಿ ಇಡೀ ಪ್ರಪಂಚದ ಲಕ್ಷ್ಯವನ್ನು ತನ್ನೆಡೆಗೆಳೆದುಕೊಂಡ. ಭಾರತ ಸರಕಾರದ ದಿಗ್ಬಂಧನ ಕೋಟೆಯೊಳಗಿನ ಒಂದು ಬಿರುಕನ್ನು ಕಂಡುಕೊಂಡು ಕರಾಚಿಯಿಂದ ಹೈದರಾಬಾದಿಗೆ ಕಳ್ಳಹಾರಾಟ ನಡೆಸಿದ್ದ ಆಸ್ಟ್ರೇಲಿಯನ್ ವೈಮಾನಿಕ ಸಿಡ್ನೆ ಕಾಟನನು ಆ ಅಸಾಮಾನ್ಯ ವರ್ತನೆಯಿಂದಾಗಿಯೇ ಭಾರತೀಯರೆಲ್ಲರಿಗೂ ಪರಿಚಿತನಾದ! ರಘುರಾಂ ನಾಯಕ ಕಾಸಿಮ್ ರಜ್ವಿ ಕೂಡಾ ಹಾಗೆಯೆ. ಗತಚರಿತ್ರೆಯಲ್ಲಿ ಇಂತಹ ನಿದರ್ಶನಗಳು ಹಲವು ಕಂಡು ಬರುತ್ತಿವೆ. ತುಲನಾತ್ಮಕವಾಗಿ ವಿಮರ್ಶಿಸುವುದಾದರೆ ಸಾಮಾನ್ಯರ ಕೊಲೆಗಾರರಲ್ಲಿ, ಕಳ್ಳರಲ್ಲಿ, ದರೋಡೆಗಾರರ ನಾಯಕರಲ್ಲಿರಬೇಕಾದಷ್ಟೇ ಚಾತುರ್ಯ, ಕರಾಮತಿಗಳು ಈ ಅಸಾಮಾನ್ಯರ ವಿಶೇಷ ಕೃತಿಗಳಲ್ಲಿಯೂ ಸಾಕಾಗಬಹುದು. ಆದರೆ ಇವರ ಕೆಲಸ ಅಸಾಮಾನ್ಯವೆಂಬುದರಿಂದ ಅಂತಹ ಪ್ರಸಿದ್ಧಿ ಬಂದುಬಿಟ್ಟಿದೆ.

oo oo oo

## ದಿವಂಗತ ಸಚ್ಚಿದಾನಂದಸಿಂಹ

ಇಹಯಾತ್ರೆ ಮುಗಿಸಿಕೊಂಡ ಮೂಲಕ ಭಾರತೀಯರ ಲಕ್ಷ್ಯವನ್ನು ಇತ್ತೀಚೆಗೆಳೆದುಕೊಂಡ ವ್ಯಕ್ತಿ ಹಿರಿಯ ಸಚ್ಚಿದಾನಂದಸಿಂಹ. ಇದೇ ತಾ 6ರಲ್ಲಿ ಕೊನೆಯ ಉಸಿರೆಳೆಯುತ್ತಿರುವ ಹೊತ್ತಿಗೆ ಅವರು ತನ್ನ 80ನೇ ವಯಸ್ಸಿನಲ್ಲಿದ್ದರು. ಸಾಯುವ ಒಂದು ವಾರಕ್ಕೆ ಮೊದಲು ವಾರ್ತಾಪ್ರಸಾರಕ ಸಂಸ್ಥೆಯೊಂದರ ಪ್ರತಿನಿಧಿ (?) ವರ್ಗ ಬಾತ್ಮೀದಾರನು ಶ್ರೀ ಸಚ್ಚಿದಾನಂದ ಸಿಂಹರನ್ನು ಭೇಟಿ ಮಾಡಿ ಒಂದು ಲೇಖನ ಬರೆದುಕೊಡಬೇಕೆಂದು ಯಾಚಿಸಿದಾಗ ಅವರು ಹಿಂತನದ ನಗೆ ನಗುತ್ತಾ "ನಿಮ್ಮ ಅಪೇಕ್ಷೆಯನ್ನು ಈಡೇರಿಸಿ ಕೊಡಬೇಕೆಂದು ನನಗೆ ಆಶೆಯೇನೋ ಬಹಳ ಇದೆ. ಆದರೇ ಬಾರಿ ಹಾಗೆ ಮಾಡಲು ನಾನು ಉಳಿಯ ವೆನೆಂದು ನನಗನ್ನಿಸುವುದಿಲ್ಲ!" ಎಂದಿದ್ದರು. ಶ್ರೀ ಸಚ್ಚಿದಾನಂದ ಸಿಂಹರು, ಘಟನಾ ಸಮಿತಿಯ ಪ್ರಥಮ ಅಧ್ಯಕ್ಷರಾಗಿ ಕೆಲಸ ಮಾಡಿದ್ದರು. ಘಟನಾ ಸಮಿತಿ ನಿರ್ಮಾಣಗೊಂಡು ತನ್ನ ಕಾರ್ಯಾಧ್ಯಕ್ಷನನ್ನಾರಿಸಿ ಕೊಳ್ಳುವರೆಗೆ ಅದರ ಕಾರ್ಯ ನಿರ್ವಹಿಸಲು ತಾತ್ಕಾಲಿಕ ಅಧ್ಯಕ್ಷನನ್ನು ಆರಿಸಿಕೊಳ್ಳಬೇಕಿದ್ದಿತು. ಆಗ ಆ ಸ್ಥಾನವನ್ನು ವಹಿಸಿಕೊಳ್ಳಬಲ್ಲ ಹಿರಿಯ ಅನುಭವಿ ತಜ್ಞ ಪ(?)ಕಿ ಯಾರೆಂದು ಹುಡುಕುವ ಕೆಲಸ ಘಟನಾ ಸಮಿತಿ ಸದಸ್ಯರಿಗಿರಲಿಲ್ಲ. ಡಾ| ಸಚ್ಚಿದಾನಂದ ಸಿಂಹರನ್ನು ಸರ್ವಸಮ್ಮತಿಯಿಂದ ಆರಿಸಿಕೊಳ್ಳಲಾಗಿತ್ತು. ಅವರು ಮುಂದಾಳು: ಮುಂದಾಳುವಾಗಿದ್ದವರು. ಬ್ರಿಟಿಷರಿಂದ ಸಣ್ಣಪುಟ್ಟ ರಿಯಾಯತಿಗಳನ್ನು ಯಾಚಿಸುವ ಆ ಕಾಲದಿಂದಾರಂಭಿಸಿ, ಪೂರ್ಣಸ್ವಾತಂತ್ರ್ಯ ಪಡೆಕೊಂಡಿರುವ ಈ ಕಾಲದ ವರೆಗಿನ ಭಾರತ ರಾಜಕೀಯದಲ್ಲಿ ಕೈಯಾಡಿಸುತ್ತ ಬಂದವರು; ಅವರ ಸಾರ್ವಜನಿಕ ಜೀವನವು ಸುಮಾರು ಏಳವತ್ತು ವರುಷಗಳದ್ದು. ಹಳೆ ಕಾಲದ ಭಾರತ ಕೇಂದ್ರ ಲೆಜಿಸ್ಲೇಟಿವ್ ಎಸೆಂಬ್ಲಿಯ ಉಪಾಧ್ಯಕ್ಷತನ, ಕೇಂದ್ರ ಕೌನ್ಸಿಲಿನ ಅಧ್ಯಕ್ಷಗಿರಿ, ಬಿಹಾರ್ ಮತ್ತು ಒರಿಸ್ಸಾ ಪ್ರಾಂತ್ಯದ ಅರ್ಥ ಸಚಿವತ್ವ ಮುಂತಾದ ಹಲವು ಗೌರವಾರ್ಹ ಸ್ಥಾನಗಳನ್ನು ಭಾರತೀಯರ ಪೈಕಿ ಮೊದಲಾಗಿ ಡಾ| ಸಿಂಹರು ಸಂಪಾದಿಸಿದ್ದರು. ಆದಿಭಾಗದಲ್ಲ 'ಲೀಡರ್' ಪತ್ರಿಕೆಯ ಸಂಪಾದಕರಾಗಿದ್ದು, ಆ ಮೇಲೆ 'ಹಿಂದೂಸ್ತಾನ್ ರಿವ್ಯೂ' ಪತ್ರಿಕೆಯನ್ನು ಸ್ಥಾಪಿಸಿ ಕೊನೆಯ ವರೆಗೂ ಅದರ ಸಂಪಾದಕರಾಗಿದ್ದರು. ಘನಗಾಂಭೀರ ವ್ಯಕ್ತಿ, ಉಚ್ಚ ಮಟ್ಟದ ನಾಗರಿಕ, ಅಂತೆಯೇ ಪ್ರಸಿದ್ಧ ಲೇಖಕ ಮತ್ತು ವಾಗ್ಮಿಯಿದ್ದ ಡಾ| ಸಿಂಹರು ಆಯುಷ್ಯದ ಉತ್ತರ ಭಾಗದ ಅಂಚಿಗೆ ಬಂದ ವೇಳೆಯಂತೂ ತಾನು ಎಲ್ಲರ ಹಿರಿಯ ಮತ್ತು ಎಲ್ಲವನ್ನೂ ಕಂಡವನೆಂಬ ಆತ್ಮವಿಶ್ವಾಸದಿಂದ ವರ್ತಿಸಿ ತನ್ನ ಹಿರಿಮೆಯನ್ನು ಉಳಿಸಿಕೊಂಡಿದ್ದರು. ಸ್ವಭಾವತಃ ಮುಂದಾಗಿಯಿದ್ದ ಡಾ| ಸಚ್ಚಿದಾನಂದ ಸಿಂಹರು ವೃದ್ಧಾಪ್ಯದಿಂದಾಗಿ ಚಟುವಟಿಕೆ ಕಳೆಕೊಳ್ಳುತ್ತಾ ಬಂದಿದ್ದರೂ ಘಟನಾ ಸಮಿತಿಯ ಅದಿಮ ಅಧ್ಯಕ್ಷನಾಗಿ ಒಮ್ಮೆ ಬೆಳಕಿಗೆ ಬಿದ್ದಿದ್ದರು. ಆ ವೇಳೆಗೆ ಯುವಕರ ಕಳೆಚಿಗೊಂಡು ಜನಮನ ಸೆಳೆದಿದ್ದಾರೆ.

oo oo oo

**On this Memorable day**

Of the 26th of January in the year 1950 of the inauguration of the Indian Republic, we have the pleasure to announce the birth of our

**Vijaya Cash Certificates**

"Spend less and Save more" shall be the Motto of every Indian Citizen

Vijaya Cash Certificates are the safest and best media for a discriminating investor. They mature on the expiry of three years and carry interest at 4½%

Rules on application at any of our following Offices

Head Office:—**Kadri Road, Mangalore**

Branches - City Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara

**B Manjaya Hegde**
Advocate & President, District Board, S Kanara
CHAIRMAN
VIJAYA BANK, LTD.,

*Nambiar's*
**ARYA VAIDYA SALA**
**UDIPI**
*Ideal House for Ayurvedic Treatment.*
T. N. Kelu Nambiar,
*Vaidya.*

# ಪ್ರಸಿದ್ಧಿಗೆ ಬಂದ ಕೆಲವರು

## ಪರಾರಿ ಲಾಯಕ್ ಆಲಿ

ಮಾರ್ಚ್ ಪ್ರಥಮ ವಾರಾಂತ್ಯದಿಂದ ಈ ದಿನದ ವರೆಗೂ ಭಾರತೀಯರು ಎಲ್ಲಕ್ಕಿಂತ ಹೆಚ್ಚಾಗಿ ಪಠಿಸುತ್ತಿರುವ ಹೆಸರೆಂದರೆ 'ಲಾಯಕ್ ಆಲಿ'. ಇಲ್ಲಿಯು ಮಾರ್ಚ್ ತಿಂಗಳ ಪ್ರಸಿದ್ಧಿಯುಡುಗೊರೆ ಮೀರ್ ಲಾಯಕ್ ಆಲಿಗೇನೇ ಸಲ್ಲಬೇಕು. ಹೈದರಾಬಾದಿನಲ್ಲಿ ಮುಣುಗು ಹಾಕಿಬಿಟ್ಟನೆಂದು ಮಾರ್ಚ್ ತಾ. 6ರಲ್ಲಿ ಕೇಳಿ ಬಂದಿದ್ದರೆ ಕರಾಚಿಯಲ್ಲಿ ತಲೆಯೆತ್ತಿದನೆಂದು ಮಾರ್ಚ್ ತಾ 17ರಲ್ಲಿ ಈತನ ಸುಳಿವು ತಿಳಿದುಬಂತು. ಈತನೂ ಒಂದು ಅಸಾಮಾನ್ಯ ವರ್ತನೆಯ ಮೂಲಕವೇ ಈ ಬಾರಿ ಇಷ್ಟು ಪ್ರಸಿದ್ಧಿಗೆ ಬಂದ. ಸಾಹಸ ಮತ್ತು ಚಾತುರ್ಯ ಮೂಲಕ ತಲೆತಪ್ಪಿಸಿಕೊಂಡು ಜೀವಾವಧಿ ಅಡಗಿಕೊಂಡೇ ಇರುವವರ ನಿದರ್ಶನಗಳೇನೂ ನಮ್ಮಲ್ಲಿ ಕೊರತೆಯಿಲ್ಲ. ಅಂತಹ ಅಸಾಮಾನ್ಯರ ಪಂಗ್ತಿಗೆ ಲಾಯಕ್ ಆಲಿಯಂತಹ ಮನುಷ್ಯನೂ ಸೇರಿಕೊಂಡದ್ದು ಮತ್ತಷ್ಟು ವಿಶೇಷವಾದ್ದರಿಂದಲೇ ಈ ಘಟನೆಯು ಇಷ್ಟು ಆತುರಾಸಕ್ತಿಯನ್ನೆಬ್ಬಿಸಿದೆ. ಅವನ ಪಲಾಯನದ ಕುರಿತಿದ್ದ ಬಹುಮುಖ ಊಹಾಪೋಹೆಗಳು ಈ ಆತುರವನ್ನು ಮತ್ತಷ್ಟು ಹೆಚ್ಚಿಸಿ ಬಿಟ್ಟಿದ್ದವು. ಎಷ್ಟೇ ದೂರದಲ್ಲಿರಲಿ, ಅದು ತಮಗೆ ಪೂರ್ಣ ಅಪರಿಚಿತವಿರುವ ಒಂದು ರಂಗದಲ್ಲೇ ಇರಲಿ, ವಿಚಿತ್ರ ವಿದ್ಯಮಾನವೊಂದು ಸಂಭವಿಸಿತೆಂದಾದರೆ ಸರಿ—ತಾವು ಅಲ್ಲಿ ಸ್ವತಃ ಹಾಜರಿದ್ದವರಂತೆ ಆ ಕುರಿತು ಏನೇನೋ ವರ್ಣಿಸಿ ಕಲ್ಪನಾ ಕಂತೆಗಳನ್ನು ಹೆಣೆಯುವುದು ಜನಸಾಮಾನ್ಯರ ಸ್ವಭಾವ. ಅದಕ್ಕನುಗುಣವಾಗಿ ಭಾರತದ ಮೂಲೆ ಮೂಲೆಯ ಹೋಟೆಲು ಗುಡಿಸಲುಗಳಲ್ಲೂ ಲಾಯಕ್ ಆಲಿ ಪಲಾಯನದ ಪರಾಮರ್ಶೆ ನಡೆದಿದ್ದಿತೆನ್ನಬಹುದು. ಆದರೆ ಕಟ್ಟಕಡೆಯದಾಗಿ ತಿಳಿದು ಬಂದ ಸಾಧಾರ ವಾರ್ತೆಗನುಸಾರವಾದ ಒಂದು ಊಹೆಯನ್ನು ಕಟ್ಟಿದವರಾರೂ ಈ ಮೊದಲು ಇದ್ದಿಲ್ಲವೆನ್ನಬಹುದು. ಸರ್ವಸಾಮಾನ್ಯವಾಗಿದ್ದ ನಂಬಿಕೆಯೆಂದರೆ ಮಾರ್ಚ್ ತಾ. ೩ರಲ್ಲಿ ಲಾಯಕ್ ಆಲೀ ಮಕ್ಕಳು ಮಾತ್ರ ಮದುವೆಗೆಂದು ಮುಂದಾಗಿ ಹೋಗಿ ಅಲ್ಲಿಂದಲೇ ಅತ್ತ ಸಾಗಿದ್ದರು—೨ ದಿನ ಹೋಗಿದ್ದ ಬೇಗಮ್ ಲಾಯಕ್ ಆಲಿ ಅಂದೇ ಮರಳಿ ಬಂದಿದ್ದು ಮರುದಿನ ತಾ. 4ರಲ್ಲಿ ಗಂಡಹೆಂಡಿರಿಬ್ಬರೂ ಜತೆಯಲ್ಲಿ ರವಾನೆಯಾಗಿದ್ದರು—ಎಂಬುದೇ. ಆದರೆ ಭಾರತ ಸರಕಾರವು ಕಳುಹಿದ್ದ ಶೋಧನಾಧಿಕಾರಿಯಿಂದ ನಡೆದ ಗೂಢತನಿಖೆಯ ನಂತರ ತಿಳಿದು ಬಂದುದು ಹೀಗೆ: ಆಲೀ ಮಕ್ಕಳು ಮಾತ್ರ ಹೋದುದೆಂದು ಕೊನೆಯವರೆಗೂ ನಂಬಲ್ಪಟ್ಟಿದ್ದ ತಾ. ೩ರ ಕಾರಿನಲ್ಲೇ ಲಾಯಕ್ ಆಲಿ ಹುದುಗಿಕೊಂಡಿದ್ದ. ಒಂದೋ ಡ್ರೈವರನು ಕುಳಿತುಕೊಳ್ಳುವ ಆಸನದ ಅಡಿಯಲ್ಲಿ, ಅಡ್ಡಕ್ಕೆ ಮಲಗಿ, ಅಥವಾ ಸಾಮಾನು ಕಟ್ಟುವ ಕಾರಿನ ಹಿಂಬದಿಯಲ್ಲಿ ಹೊದಿಕೆಯೊಳಗೆ ಮುದ್ದೆಯಾಗಿ ಬಿದ್ದುಕೊಂಡು ಲಾಯಕ್ ಆಲೀ ಸಾಗಿಸಲ್ಪಟ್ಟಿದ್ದ. ಇತ್ತೀ ಪ್ರೇರಣೆ ಹುಟ್ಟುವ ಸಂಶಯ ಯಾರಲ್ಲೂ ಮೂಡಬಾರದೆಂಬುದಕ್ಕಾಗಿ ಆ ಕಾರಿಗೆ ಯಾವ ಪರದೆಯನ್ನೂ ಹಾಕಿರಲಿಲ್ಲವಂತೆ. ತಂದೆ ಮಕ್ಕಳು ಆ ದಿನ ಸಿಕಂದರಾಬಾದಿಗೆ ಹೋದರು. ಮರುದಿನ ಬೇಗಮ್ ಲಾಯಕ್ ಆಲಿ ನಿರಾತಂಕವಾಗಿ ಅಲ್ಲಿಗೆ ಹೋಗಿ ಅವರನ್ನು ಕೂಡಿಕೊಂಡಳು. ಅಲ್ಲಿಂದ ಎಲ್ಲರೂ ಒಟ್ಟಿಗೆ ರೈಲು ಹತ್ತಿ ಬೊಂಬಾಯಿಗೆ ಹೋದರು. ಲಾಯಕ್ ಆಲಿಯು 'ಮಹಮ್ಮದಾಲಿ' ಎಂದು ಹೆಸರು ಬದಲಾಯಿಸಿಕೊಂಡಿದ್ದ; ಅವನ ಹೆಂಡತಿ ಮಕ್ಕಳೂ ಹೆಸರಿನ ಮಟ್ಟಿಗೆ ಪುನರ್ಜನ್ಮ ಪಡೆದಿದ್ದರು. ಈ ನಾಮಾಂತರ ಕುಟುಂಬದ ಹೆಸರಿನಲ್ಲಿ ಪಾಕಿಸ್ತಾನ್ ಸರಕಾರದ ಪರ್ಮಿಟ್ ಕೂಡಾ ಇದ್ದುದರಿಂದ ಎಲ್ಲರೂ ಸೌಖ್ಯವಾಗಿ ಹಡಗ ಹತ್ತಿದರು. ತಾ. 16ರಲ್ಲಿ ಪಾಕಿಸ್ತಾನ್ ಸರಕಾರದ ವಿದೇಶ ಸಂಬಂಧ ಖಾತೆಯ ಒಂಭತ್ತೇ ಶಬ್ದಗಳ ಪ್ರಕಟಣೆಯೊಂದು ಕರಾಚಿಯಿಂದ ಹೊರಟಿತು: "ಮೀರ್ ಲಾಯಕ್ ಆಲಿ ಮತ್ತು ಅವನ ಕುಟುಂಬವು ಕರಾಚಿಗೆ ಬಂದು ಮುಟ್ಟಿದರು" ಎಂದಿಷ್ಟೇ ಅದು ಸಾರಿತು. ಅಂದೇ 'ಲಾಯಕ್ ಆಲಿ ಕರಾಚಿಯಲ್ಲಿದ್ದಾರೆ' ಎಂಬುದನ್ನು ಪಾಕಿಸ್ತಾನ್ ರೇಡಿಯೋ ಘೋಷಿಸಿತು. ಅದರ ಮರುದಿನದ ಒಂದು ಏಜನ್ಸೀ ವರದಿಯಿಂದಿತು: "ಕರಾಚಿಯ ಹವಾಮಾನವು ಲಾಯಕ್ ಆಲಿಗೆ ಒಡಿಸದಿರುವುದರಿಂದ ಅವರು ಮೊನ್ನೆ ಆರೋಗ್ಯಧಾಮವೊಂದಕ್ಕೆ ಹೋಗಿದ್ದಾರೆ. ಹದಿನೈದು ದಿನಗಳೊಳಗೆ ಕರಾಚಿಗೆ ಹಿಂದಿರುಗುವ ನಿರೀಕ್ಷೆಯಿದೆ." ಲಾಯಕ್ ಆಲಿ ಸರಕಾರದಲ್ಲಿ ಅರ್ಥ ಸಚಿವನಾಗಿದ್ದು ಹೈದರಾಬಾದ್ ಪೋಲಿಸ್ ಕ್ರಿಯೆಯ ಸ್ವಲ್ಪದಿನಕ್ಕೆ ಮೊದಲೇ ಕರಾಚಿಗೆ ಹೋಗಿ ಸೇರಿಕೊಂಡಿದ್ದ ನವಾಬ್ ಮೊಯಿನ್ ನವಾಜ್ ಝಂಗರೂ ಧ್ವನಿಯೆಬ್ಬಿಸಿ "ಮೀರ್ ಲಾಯಕ್ ಆಲಿಗಳು ಸುಕ್ಷೇಮವಾಗಿದ್ದಾರೆ, ಎಂದು ದೃಢಪಡಿಸುತ್ತೇನೆ" ಎಂದಿದ್ದಾರೆ. ಇದಿಷ್ಟು ತಾ. 16ರ ಕರಾಚಿ ವಾರ್ತೆಯಾದರೆ ತಾ 17ರಲ್ಲೇ ಕೇಳಿ ಬಂತು: "ಈ ದಿನ ಮೀರ್ ಲಾಯಕ್ ಆಲಿಗಳು ಕರಾಚಿಯಲ್ಲಿರುವ ಹೈದರಾಬಾದ್ ವಸಾಹತಿಗೆ ಭೇಟಿ ಕೊಟ್ಟು ಅಲ್ಲಿಯ ಮಸೀದಿಯಲ್ಲಿ ಶುಕ್ರವಾರದ ನಮಾಜು ಮಾಡಿದರು". ಸರ್. ಲ್ಯಾಕ್ ಆಲಿ ಮತ್ತವನ ಕುಟುಂಬವೀಗ ಕರಾಚಿಯಲ್ಲೇ ಇದ್ದಾರೆಂಬ ಭರವಸೆಯಿಂದ ಆಸಕ್ತಿಯಿದ್ದವರೆಲ್ಲರೂ ಕರಾಚಿಯ ಕಡೆಗೆ ಮುಖ ಮಾಡಿ "ಲ್ಯಾಕ್ ಆಲೀ ಝಿಂದಾಬಾದ್" ಘೋಷನೆಬ್ಬಿಸಲಡ್ಡಿಯಿಲ್ಲ. ಈ ಪರಾರೀ ಕೇಡಿ ಸದ್ಯದಲ್ಲೇ ಸಂಯುಕ್ತ ರಾಷ್ಟ್ರ ಸಂಘದ ಲೇಕ್ ಸಕ್ಸೆಸ್‌ಗಾಗಲೀ ಯುರೋಪಿನ ಯಾವುದೇ ರಾಷ್ಟ್ರಕ್ಕಾಗಲೀ ಹೋಗಬಹುದೆಂದು ನಿರೀಕ್ಷಿಸುವ ಆಗತ್ಯವೂ ಇಲ್ಲ. ಇಲ್ಲೀಗ ಒಂದು ಪ್ರಶ್ನೆ ಉದ್ಭವಿಸುತ್ತಿದೆ. ಮೀರ್ ಲಾಯಕ್ ಆಲಿ ಹೈದರಾಬಾದ್ ಸರಕಾರದ ಗೂಡಿನಿಂದ ಹಾರಿ ಹೋಗಿರುವ ಹಕ್ಕಿ; ಆದರ ನೊತ್ತು ತನ್ನೊಂದಿಗೆ ಹೈದರಾಬಾದನ್ನು ಜೋಡಿಸಿಕೊಂಡಿರುವ ಭಾರತವು ತಮ್ಮ ಕೈ ತಪ್ಪಿ ಹೋದ ವಸ್ತುವನ್ನು ಇಟ್ಟುಕೊಳ್ಳದೆ ತಮ್ಮದನ್ನು ತಮಗೊಪ್ಪಿಸಬೇಕೆಂದು ಪಾಕಿಸ್ತಾನ್ ಸರಕಾರವನ್ನು ಕೇಳಿದರೆ? ಪಾಕಿಸ್ತಾನವು ಬಿಟ್ಟುಕೊಡುವಂತಿಲ್ಲ. ಹೈದರಾಬಾದನ್ನು ಅನ್ಯಾಯವಾಗಿ ಭಾರತವು ಆಕ್ರಮಿಸಿಕೊಂಡಿದೆಯೆಂದೂ, ಹೈದರಾಬಾದಿನ ಮೇಲಣ ಆದರ ಸಂಬಂಧವನ್ನು ತಾನು ಒಪ್ಪಿಕೊಳ್ಳುವದಿಲ್ಲವೆಂದೂ ಪಾಕಿಸ್ತಾನ್ ಸರಕಾರದ ವಾದವಿದೆ. ಸರ್ ಝಫರುಲ್ಲಾ ಖಾನರು ಈ ಅಲಾಪವನ್ನೇ ವಿವಿಧ ಕೋಡಿ ಧಾಟಿಗಳಿಂದ ಭದ್ರತಾ ಕೌನ್ಸಿಲಿನಲ್ಲಿ ಎಬ್ಬಿಸಿದ್ದಾರೆ. ಈ ಕುರಿತೊಂದು ತೀರ್ಮಾನಕ್ಕೆ ಬರುವ ಆವಶ್ಯಕತೆಯನ್ನು ಕಾಣದೆ 'ಅದು ಸತ್ತು ಹೋಗಿರುವ ಪ್ರಶ್ನೆ' ಯೆಂಬ ಅಂತರ್ಯದಿಂದ ಭದ್ರತಾ ಕೌನ್ಸಿಲದನ್ನು ಮೂಲೆ ಪಾಲು ಮಾಡಿದ್ದಿತು. ಯಾರು ಕಿವಿ ಕೊಡದಿದ್ದರೂ ಪಾಕಿಸ್ತಾನದ ವಾದಕ್ಕೆ ಪಾಕಿಸ್ತಾನವೇ ಆಶ್ರಯವೆಂಬುದು ಸತ್ಯವಷ್ಟೆ? ಆದ್ದರಿಂದ "ಹೈದರಾಬಾದ್ ಭಾರತದ್ದಲ್ಲ; ಲಾಯಕ್ ಆಲಿಯು ಆದರ ಬಂಧಿಯಲ್ಲ"ವೆಂದು ಪಾಕಿಸ್ತಾನವು ಅವನನ್ನು ನಿಲ್ಲಿಸಿಕೊಳ್ಳುವುದು ಸ್ವಾಭಾವಿಕ. 21 ಗನ್ನುಗಳ ಗೌರವ ಮತ್ತು ಕರಾಚಿ ಬೀದಿಯಲ್ಲಿ ರಾಜ ಮೆರವಣಿಗೆಯಿಂದ ಪಾಕಿಸ್ತಾನ್ ಸರಕಾರವು ಮೀರ್ ಲಾಯಕ್ ಆಲಿಯನ್ನು ಮೆರೆಸಲಿಲ್ಲವೇಕೋ!

ಆಲೀ ಪಲಾಯನಸಂಬಂಧದ ತೀರ ಕಟ್ಟಕಡೆಯ ಸಾಧಾರ ವಾರ್ತೆಯಲ್ಲಿ ಮತ್ತಷ್ಟು ಹೊಸತನವಿದೆ; ಆ ಕಥೆ ಹೀಗಿದೆ: ಮೀರ್ ಲಾಯಕ್ ಆಲಿ ಪಲಾಯನ ಒಳಸಂಚಿಗೆ ಪಾಕಿಸ್ತಾನ್, ಬೊಂಬಾಯಿ ಮತ್ತು ಹೈದರಾಬಾದುಗಳು ಕ್ಷೇತ್ರಗಳಾಗಿದ್ದು, ಅದು ಸಾಕಷ್ಟು ಅವಧಿಯ ನಡೆದಿದ್ದಿತು. ಈಗ ಬಂಧಿಗಳಾಗಿರುವ ಲಾಯಕ್ ಆಲಿಯ ತಂಗಿ ಮತ್ತು ಕಾರ್ ಡ್ರೈವರು ಈ ಒಳಸಂಚು ನಾಟಕದ ಮುಖ್ಯ ಪಾತ್ರಧಾರಿಗಳಾಗಿದ್ದರು. ಕಾರಿನಲ್ಲಿ ಅಡಗಿಕೊಂಡು ದಿಗ್ಬಂಧವದಿಂದ ಪಾರಾದ ಲಾಯಕ್ ಆಲಿ ಗುಲ್ಬರ್ಗಿನಲ್ಲಿ ರೈಲು ಹತ್ತಿ ಬೊಂಬಾಯಿಯ ದಾದರ್ ಸ್ಟೇಶನಿನಲ್ಲಿಳಿದ. ಅಲ್ಲಿಂದ ಈಗ ದಸ್ತಗಿರಿಯಲ್ಲಿರುವ ವ್ಯಾಪಾರಿಯೊಬ್ಬನ ಕಾರನ್ನು ಹತ್ತಿ ಸಾಂತಾಕ್ರುಝ್ ವಿಮಾನ ಕಟ್ಟಣಕ್ಕೆ ಹೋಗಿ ಆಕಾಶ ಮೂಲಕ ಕರಾಚಿಗೆ ಹಾರಿಬಿಟ್ಟ. ಬೇಗಮ್ ಲಾಯಕ್ ಆಲಿಯು ಮಕ್ಕಳ ಸಮೇತ ಗಂಡನಿಗಿಂತ ಮೊದಲೇ ಬೊಂಬಾಯಿಗೆ ಬಂದು ಬೇರೆ ಹಾದಿಯಾಗಿ ಬೇರೊಂದು ವಿಮಾನ ಮೂಲಕ ಕರಾಚಿ ಮುಟ್ಟಿದಳು. ಲಾಯಕ್ ಆಲಿಯ ಇತರ ಸಂಬಂಧಿಕರು ಮತ್ತು ಇಬ್ಬರು ಸೇವಕಿಯರು ಮಾತ್ರ ಬೊಂಬಾಯೀ ಸ್ಟೀಮರಿನಲ್ಲಿ ಕರಾಚಿಗೆ ಹೋಗಿದ್ದರು. ಇನ್ನೂ ಇಂತಹ ಎಷ್ಟು ಕಥೆಗಳನ್ನು ಕೇಳಲಿಕ್ಕಿದೆಯೋ! ಅಂತೂ ಭಾರತ ಸರಕಾರವು ಕಳುಹಿದ್ದ ಶ್ರೀ. ಒ. ಸ್. ಮಾಲಿಕರ ಮೇಲ್ವಿಚಾರಣೆಯಲ್ಲಿ ನಡೆದ ಪರಾರೀ ಶೋಧನೆಗಳೆಲ್ಲಾ ಮುಗಿದು ಈ ಒಳಸಂಚಿನಲ್ಲಿ ಮಾಜೀ ಹೈದರಾಬಾದ್ ಸೇನಾನಿ ಎಲ್. ಎಡ್ರೂಸ್ ಸಹಿತ ಕೆಲವು ಅಧಿಕಾರಿಗಳ ಹಾಗೂ ಪ್ರಮುಖರ ಕೈಯಿತ್ತೆಂಬುದೀಗ ಬೆಳಕಿಗೆ ಬಂದಿದೆ. ಅವರೆಲ್ಲರ ವಿಚಾರಣೆಯೂ ಸದ್ಯದಲ್ಲೇ ಪ್ರಾರಂಭವಾಗಲಿದೆ.

೦೦ ೦೦ ೦೦

## ಉಪವಾಸಿ ಸಕ್ಸೇನಾ

ಗಾಂಧೀ ಯುಗದ ರಾಜಕೀಯದಲ್ಲಿ ಸತ್ಯಾಗ್ರಹ ನಿರ್ಮಿಸಿ, ಪ್ರಸಿದ್ಧಿ ದೊರಕಿಸಿಕೊಡುತ್ತಾ ಬಂದಿರುವ ಒಂದು ವಿಧಾನವೆಂದರೆ ಅನಶನವ್ರತ. ಯಾವುದಾದರೊಂದು ರಾಜಕೀಯ ಗುರಿ ಸಾಧನೆಗಾಗಿ 'ಜೀವಾವಧಿ ಉಪವಾಸ' ಹಿಡಿಯುವ ಚಟವು ಇಂದು ಅಲ್ಲಲ್ಲಿ ಕಂಡುಬರುತ್ತಿದೆ. ಅಂಚೆ, ತಂತೀ ಕೆಲಸಗಾರ ವಿಭಾಗವೊಂದಕ್ಕೆ ಮುಷ್ಕರಾವಧಿಯ ಸಂಬಳದ ಹಣವನ್ನು ಸರಕಾರದಿಂದ ದೊರಕಿಸಿಕೊಡದಿದ್ದದಕ್ಕಾಗಿ ಜೀವಾವಧಿ ಉಪವಾಸ ಹಿಡಿಯುವೆನೆಂದು ಜೈ ಪ್ರಕಾಶ್ ನಾರಾಯಣರು ಇತ್ತೀಚೆಗೊಮ್ಮೆ ನೋಟೀಸು ಕೊಟ್ಟು 'ಹಾಂ! ಏನದು?' ಎಂಬ ಆತುರವನ್ನು ನಿರ್ಮಿಸಿದ್ದರು. ಅದು ಕೇಂದ್ರ ಮಂತ್ರಿಗಳ ಹೇಳಿಕೆಯಿಂದ ಅಲ್ಲೇ ಶಮನವಾಯಿತು. ಈಗ ಮತ್ತೋರ್ವ ಸಮತಾವಾದಿ ಶ್ರೀ ಶಿಬನ್‌ಲಾಲ್ ಸಕ್ಸೇನರ ಪ್ರಾಣಾವಧಿ ಮುಷ್ಕರದ ಬಿಸಿ ತಾಗಿಸೆ ಉತ್ತರ ಪ್ರದೇಶ (ಸಂಯುಕ್ತ ಪ್ರಾಂತ್ಯ)ದ ಸರಕಾರವು ಮಜೂರರ ಕಡೆಗೆ ವಹಿಸಿದ ಘೋಷಣೆಯನ್ನು ಒದಲಾಯಿಸುವಂತೆ ಮಾಡಬೇಕೆಂದು ...


# ಕೆನರಾ ಬ್ಯಾಂಕ್, ಲಿಮಿಟೆಡ್

(ಸ್ಥಾಪನೆ ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಭಾರತದಲ್ಲಿ ಸಾಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯೂ ಅದಕ್ಕೆ ಮೇಲ್ಪಟ್ಟು ೧,೦೦೦ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೫೦ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ.

| | | |
|---|---|---|
| ೩ ತಿಂಗಳು ... ... | ನೂರಕ್ಕೆ ವರ್ಷಕ್ಕೆ | ೨ |
| ೪ ರಿಂದ ೫ ತಿಂಗಳು ... ... | ,, ,, | ೨॥ |
| ೬ ರಿಂದ ೯ ತಿಂಗಳು ... .. | ,, ,, | ೨॥। |

ರೂ. ೧,೦೦೦ಕ್ಕೆ ಕಡಿಮೆಯಿಲ್ಲದ ರೂ. ೧೦,೦೦೦ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದು ಕೊಳ್ಳಬಹುದು.

ಮಂಗಳೂರು ಶಾಖೆಗಳು

[1] ಬಂದರ ರೋಡ್; [2] ಡೊಂಗರಕೇರಿ,

ಇತರ ಶಾಖೆಗಳು: ಕಾರ್ಕಳ, ಬಂಟವಾಳ, ಮುಲ್ಕಿ, ಕುಂದಾಪುರ, ಉಡುಪಿ, ಗಂಗೊಳ್ಳಿ, ಪುತ್ತೂರು, ಕಾಸರಗೋಡು, ಬೊಂಬಾಯಿ, ಇತ್ಯಾದಿ ಇತ್ಯಾದಿ.

CANARA BANK, LIMITED

(Estd 1906)

ಲಕ್ನೋದಲ್ಲಿ ಉಪವಾಸ ಕುಳಿತು ಇದೇ ತಾ. 19ಕ್ಕೆ 30 ದಿನಗಳಾದುವು; ತಿಂಗಳು ತುಂಬಿತು. ಮಿಕ್ಕವರಂತೆ ಸ್ವತಃ ಸಕ್ಸೇನರ ಪಕ್ಷದವರೂ ಒತ್ತಾಯಿಸಿದರೂ ಅವರು ಉಪವಾಸ ಬಿಡಲೊಪ್ಪಲಿಲ್ಲ. ಈಗ ಅಖಿಲ ರಾಷ್ಟ್ರದ ಬೇರೆಬೇರೆ ಭಾಗಗಳ ಸಕ್ಸೇನಾ ಅನುಯಾಯಿಗಳು ಲಕ್ನೋವಿಗೆ ಹೋಗಿ "ಉಪವಾಸ ಬಿಟ್ಟು ಅನ್ಯೋಪಾಯಗಳಿಂದ ಮಜೂರ ಹಿತ ಸಾಧನಾ ಕಾರ್ಯ ಕೈಕೊಳ್ಳಬೇಕು. ಇಲ್ಲವಾದರೆ ನಿಮ್ಮೊಂದಿಗೇನೇ ನಾವೆಲ್ಲರೂ ಉಪವಾಸವೇ ಸರಿ!" ಎಂದು ಹಠ ತೊಟ್ಟು ಕುಳಿತುಕೊಳ್ಳಲಿದ್ದಾರೆ, ಎಂಬ ವಾರ್ತೆಯಿದೆ. ಸಕ್ಸೇನರು ಪರಮಾವಧಿ ನಿತ್ರಾಣಗೊಂಡಿದ್ದಾರೆಂದೂ ಅವರಿಗೆ ಉಸಿರಾಡುವದು ಕೂಡಾ ಅತೀವ ಕಷ್ಟವಾಗಿ ಪರಿಸ್ಥಿತಿಯು ಚಿಂತಾಜನಕವಾಗಿದೆಯೆಂದೂ ತಾ 17ರಲ್ಲೇ ವಾರ್ತೆಯಿದ್ದಿತು. ತನ್ನ ದೃಷ್ಟಿಪಥದಲ್ಲಿರುವ ಒಂದು ಸದ್ಗುರಿಯನ್ನು ಸಾಧಿಸಲು, ಸ್ವತಃ ತನ್ನ ದೇಹವನ್ನು ತೇದು ತೇದು ಮುಗಿಸಿಕೊಳ್ಳಲು ಮುಂದಾಗಿರುವ ಇಂತಹ ತಪಃಪ್ರಭಾವಿಗಳ ಆತ್ಮಬಲದಿದಿರು ಮಣಿಯಲೊಲ್ಲದ ತಲೆಯಿರಲಾರದು. ಆದರೆ ಸರಕಾರೀ ಘೋಷಣೆ ಮಾರ್ಪಟ್ಟದಂತಹ ರಾಜಕೀಯ ಸಿದ್ಧಿಯೊಂದಕ್ಕಾಗಿ ಓರ್ವ ವ್ಯಕ್ತಿಯು ಅನಶನ ಕೈಕೊಳ್ಳುವುದೆಂದರೆ ಏನರ್ಥವೋ, ಸಂಬಂಧ ಗೊತ್ತಾಗುವದಿಲ್ಲ. ನಿಜ; ರಾಜಕೀಯ ಗುರಿ ಸಾಧನೆಗಾಗಿ ಉಪವಾಸ ಹಿಡಿಯುವ ಅಭ್ಯಾಸವನ್ನು ಕಲಿಸಿದವರು—ಅದಕ್ಕೆ ಆಗಾಗ ಮೇಲ್ಪಂಕ್ತಿ ಹಾಕಿದ್ದವರು-ಗಾಂಧಿಜಿಯೇ. "ರಾಜಕೀಯಕ್ಕಾಗಿ ವ್ಯಕ್ತಿಗತ ಉಪವಾಸ ಮುಷ್ಕರ ಸಮಂಜಸವಲ್ಲ" ಎಂಬ ಟೀಕೆಯು ಗಾಂಧಿಜೀಯ ಮಟ್ಟಿಗೆ ಕೂಡಾ ಇದ್ದೇ ಇದ್ದಿತು. ಈ ಕುರಿತು ತರ್ಕಕ್ಕೆ ಕುಳಿತಲ್ಲಿ ಮಹಾತ್ಮಾಜೀ "ಆತ್ಮಾನಂದ ಸ್ವಾಮಿ" ಯಾಗಿ ತನ್ನ ಮಟ್ಟಿಗೆ ತಾನೆಂಬ ವಾದ ಹೂಡಿಯೇ ಇದಿರುವಾದಿಗಳ ಬಾಯಿ ಮುಚ್ಚಿಸುತಿದ್ದರು. ಹೊರತು ರಾಜಕಾರಣಿಯಾಗಿ ಅಲ್ಲ. ಹೇಗಿದ್ದರೂ, ಗಾಂಧಿಯವರು ವ್ಯಕ್ತಿಮಾನವನ್ನು ಮೀರಿ "ರಾಷ್ಟ್ರ ರೂಪಿ" ಯಾಗಿದ್ದ ಅನುಪಮ; ಆದ್ದರಿಂದ ಅವರ ಸ್ವಂತ ದೇಹ ದಂಡನೆ ಕೂಡಾ ರಾಷ್ಟ್ರೀಯ ಕಷ್ಟ ಸಹನೆಯ ಪರಿಣಾಮವನ್ನೇ ಕೊಡುತಿದ್ದಿತ. ಅಂತಹ ಮಟ್ಟಕ್ಕೇರದೆಯೂ ರಾಜಕೀಯತಃ ನಿಜಕ್ಕೂ ತಪ್ಪಾಗಿರುವ ಅವರ ವಿಧಾನವನ್ನೇ ಸಮತಾವಾದಿಗಳಂತಹ ಶುದ್ಧ ರಾಜಕಾರಣಿಗಳು ಅಂಗೀಕರಿಸಬೇಕೇಕೋ ಅರ್ಥವಾಗುವದಿಲ್ಲ. ಜನತೆಯ ಲಕ್ಷ್ಯವನ್ನು ಈ ಮೂಲಕ ವಿಶೇಷ ರೀತಿಯಿಂದೆಳೆದುಕೊಂಡುದಕ್ಕನುಗುಣವಾದ ಮಹತ್ವವಾವುದೂ ಸಕ್ಸೇನರ ಈ ತಪಸ್ಸಿನ ಹಿನ್ನೆಲೆಯಲ್ಲಿಲ್ಲ.

ooo

### ಕಾಲಾನುಗುಣ ಪ್ರಸಿದ್ಧರು

ಸಂದರ್ಭ ಪ್ರಾಮುಖ್ಯತೆಯ ದೆಸೆಯಿಂದ ಅಥವಾ ಸಾಮಾನ್ಯ ನೈತಿಕ ಬಲವನ್ನು ಅಸಾಮಾನ್ಯ ಸಂದರ್ಭದಲ್ಲಿ ತೋರಿಸಿದ ಕಾರಣದಿಂದ, ಹೆಸರುಗಳಿಸುವವರ ದೃಷ್ಟಾಂತಗಳಿಗೂ ಕೊರತೆಯಿಲ್ಲ. ಕಾಶ್ಮೀರದ ನಿಯೋಜಿತ ಜನಮತ ಸಂಗ್ರಹಾಧಿಕಾರಿಯಾಗಿ ಭದ್ರತಾ ಕೌನ್ಸಿಲಿನಿಂದ ನೇಮಿಸಲ್ಪಟ್ಟು ಬಳಿಕ ವರುಷವಿಡೀ ಆ ಸ್ಥಾನದಲ್ಲಿದ್ದು, ಏನೂ ಮಾಡದೆಯೂ ವರುಷಕ್ಕೆ 40,000 ಡಾಲರುಗಳಂತೆ ಸಂಬಳ ಪಡೆಯುತ್ತಿರುವ ಎಡ್ಮಿರಲ್ ನಿಮಿಟ್ಸ್‌ರ ಹೆಸರು ಪುನಃ ಕೇಳಿಬರುತ್ತಿದೆ. ಕಾಶ್ಮೀರ ಕಮಿಶನನ್ನು ರದ್ದುಗೊಳಿಸಿ, ಆ ಸ್ಥಾನವನ್ನು ಓರ್ವ ಮಧ್ಯಸ್ಥಗಾರನಿಗೊಪ್ಪಿಸಿ ಕೊಡಬೇಕೆಂಬ ಸೂಚನೆಗೀಗ ಭಾರತ ಸರಕಾರವೂ ಒಪ್ಪಿದೆ. ಅಂತಹ ಮಧ್ಯಸ್ಥಾಧಿಕಾರಿಯಾಗಿಯೂ ಎಡ್ಮಿರಲ್ ನಿಮಿಟ್ಸರನ್ನೇ ನೇಮಿಸಿದರಾಗದೇ ಎಂಬ ಪ್ರಶ್ನೆ ಬಂದು, ಭಾರತವದಕ್ಕೆ ವಿರೋಧ ಸೂಚಿಸಿ, ನಿಮಿಟ್ಸ್‌ನಾಮ ಈ ದೆಸೆಯಿಂದ ಪುನಃ ಧ್ವನಿಸಹತ್ತಿದೆ. ಸರ್ವಶ್ರುತ ಸತ್ಯವನ್ನಾಡುವ ಸಾಮಾನ್ಯ ನೈತಿಕ ಬಲ ಕೂಡಾ ಪೂರ್ಣ ಪ್ರತಿಕೂಲ ವಾತಾವರಣದಲ್ಲಿ ಅತಿವಿಶೇಷವನ್ನಿಸಿ ಗೌರವ ಗಳಿಸುತ್ತಿದೆ. ನಿದರ್ಶನಕ್ಕಾಗಿ ಪೂರ್ವ ಬಂಗಾಳ ಎಸೆಂಬ್ಲಿಯಲ್ಲಿ ಶ್ರೀಮತಿ ಅನ್ವಾರಾ ಖಾಟೂನ್ ಎಂಬ ಮುಸ್ಲಿಂ ಮಹಿಳೆಯು ಪ್ರದರ್ಶಿಸಿದ ಎದೆಗಾರಿಕೆಯನ್ನು ತೋರಿಸಬಹುದು. ಪೂರ್ವ ಬಂಗಾಳದಲ್ಲಿ ಹಿಂದುಗಳ ಮೇಲಾಗುತ್ತಿರುವ ಅಮಾನುಷ ಅತ್ಯಾಚಾರಗಳ ಭೀಕರತೆಯನ್ನು ಮರೆಮಾಚುವ ಹೇಳಿಕೆಯೊಂದನ್ನು ಅಲ್ಲಿಯ ಪ್ರಧಾನ ಮಂತ್ರಿ ಮಿ. ನುರುಲು ಅಮೀನರಿತ್ತಿದ್ದರು. ಈ ಸಂದರ್ಭದಲ್ಲಿ ಶ್ರೀಮತಿ ಖಾಟೂನರಿದ್ದು "ಢಾಕ್ಕದಲ್ಲಿ ಹಿಂದುಗಳ ಮೇಲೆ ಅತ್ಯಾಚಾರ ನಡೆಯುತಿದ್ದಾಗ ಪೋಲಿಸರೇಕೆ ತಟಸ್ಥ ಪ್ರೇಕ್ಷಕರಾಗಿ ಚಂದ ನೋಡಿದ್ದರೆಂಬುದನ್ನು ತಿಳಿಸಬೇಕು" ಎಂದು ಪಂಥಾಹ್ವಾನ ಕೊಟ್ಟರು. "ನಾಗರಿಕ ಪೋಷಾಕಿನಲ್ಲಿದ್ದ ಸಶಸ್ತ್ರ ಮುಸ್ಲಿಂ ದಳದ ಓರ್ವ ಅನ್ಸಾರನು ಓರ್ವ ಹಿಂದುವನ್ನು ಕೊಲ್ಲುತ್ತಿರುವದನ್ನು ಢಾಕ್ಕಾ ನಗರದಲ್ಲಿ ನಾನು ಕಣ್ಣಾರೆ ಕಂಡೆ. ಮಿರ್‌ಪುರ ಕ್ಷೇತ್ರದಲ್ಲಿ ಫೆಬ್ರುವರಿ ತಾ. 11ರಲ್ಲಿ ಸಮವಸ್ತ್ರ ಧಾರಿಗಳಾದ ಹಲವು ಮುಸ್ಲಿಮರು ಮೋಟಾರು ಸೈಕಲುಗಳಲ್ಲಿ ತಿರುಗುತ್ತಾ, ಹಿಂದುಗಳನ್ನು ಕೊಲ್ಲಬೇಕೆಂದೂ ಅವರ ಮನೆಗಳನ್ನು ಸುಟ್ಟು ಹಾಕಬೇಕೆಂದೂ ಮುಸಲ್ಮಾನರನ್ನು ಪ್ರೇರೇಪಿಸಿದ್ದರು. ಆ ಮರುದಿನವೇ ಅಲ್ಲಿ ಅವರ ಉಪದೇಶವು ಕಾರ್ಯತಃ ಜಾರಿಯಾಯಿತು" ಎಂದು ಈ ಮುಸ್ಲಿಂ ಮಹಿಳೆ ಖಂಡತುಂಡವಾಗಿ ಹೇಳಿದ್ದರು. ಕರಾಚಿಯ ಪಾಕಿಸ್ತಾನ್ ಪಾರ್ಲಿಮೆಂಟಿನಲ್ಲಿಯೂ ಬೇಗಮ್ ಶಯಿಸ್ತ ಸುಹ್ರವರ್ದಿ ಇಕ್ರಮುಲ್ಲಾ ಎಂಬ ಮುಸ್ಲಿಂ ಮಹಿಳೆಯು ಮಾನುಷತ್ವ ಹಿತ ಬಂಗಾಳ ಗಲಭೆಗಳಿಗಾಗಿ ಪಾಕಿಸ್ತಾನ್ ಸರಕಾರಕ್ಕೆ ಹಿತೋಪದೇಶ ಕೊಡುವ ನೈತಿಕ ಧೈರ್ಯ ತೋರಿಸಿದ್ದರು. ಇಂತಹ ಕಾಲೋಚಿತ ಎದೆಗಾರಿಕೆ, ಕೇವಲ ಮುಹೂರ್ತಾವಧಿಯ ಪಂಥ ಪೌರುಷ, ಅಸಾಮಾನ್ಯ ಮಾತು ಕೃತಿಗಳಿಂದ ಜನಮನವನ್ನು ಆಕರ್ಷಿಸಿಕೊಳ್ಳುವವರು ಅಲ್ಲಲ್ಲಿ ಕಾಣಸಿಗುತಿದ್ದಾರೆ. ನೀರಸ ಕತ್ತೆಯಾಯುಷ್ಯಕ್ಕಿಂತ ಸಾರ್ಥಕ ದಿನ ಜೀವನವೇ ಮೇಲು; ಬೂದಿಯ ರಾಶಿಗಿಂತ ಬೆಂಕಿಯ ಕಿಡಿ ಹೆಚ್ಚಿನದು! ನಿತ್ಯದ ಥಂಡಾ ಜೀವನವನ್ನು ದೀರ್ಘಾವಧಿ ಬಾಳುವುದಕ್ಕಿಂತ ಸಾಹಸದ ಸಾವು ಲೇಸು!

# ಜಾಗತಿಕ ರಂಗದ ವಿಹಾರ.

ಜಾಗತಿಕ ಆಗುಹೋಗುಗಳೆಲ್ಲವೂ ಬಹು ಮಟ್ಟಿಗೆ ಇದ್ದಂತಿವೆ; ಯುದ್ಧಾಂತ್ಯದಲ್ಲಿ ಉಳಿದು ಕೊಂಡು ಕಾಲಕ್ರಮೇಣ ಬೆಳೆಯುತ್ತಾ ಬಂದು, ಮೂರನೇ ಮಹಾಯುದ್ಧದತ್ತ ಕೊಂಡೊಯ್ಯುವಂತಹವೆಂಬ ಭೀತಿಯನ್ನು ದೊಡ್ಡ ಪರಿಮಾಣದಲ್ಲಿ ಹುಟ್ಟಿಸಿರುವ ಪರಸ್ಪರ ಅಪನಂಬಿಕೆ, ಮಿತಿಮೀರಿದ ಸ್ವಾರ್ಥ, ದ್ವೇಷಾಸೂಯೆಗಳು ಪ್ರಮುಖ ರಾಷ್ಟ್ರಗಳ ವರ್ತನೆಗಳಲ್ಲಿ ಮತ್ತಷ್ಟು ಸ್ಪಷ್ಟವಾಗಿ ತೋರಿ ಬಂದಿವೆ. ಲೋಕದ ಪಾಲಿಗೆ ಇದೇ ಶಾಶ್ವತವೆ? ಈ ದುಸ್ಥಿತಿಗೆ ಅಂತ್ಯವೆಲ್ಲಿ, ಹೇಗೆ, ಮತ್ತು ಯಾವಾಗ? ಎಂಬ ಪ್ರಶ್ನೆಗಳೂ ಹಾಗೆಯೇ ಉಳಿದುಕೊಂಡಿವೆ.

## ಪರದೇಶಗಳಲ್ಲಿ

ಕಳೆದ ಮಹಾಯುದ್ಧಾರಂಭಕ್ಕೂ ಕೆಲವು ವರುಷಗಳ ಹಿಂದಿನ ಕಾಲದಿಂದ ಕಠೋರ ಯುದ್ಧ ಪೀಡೆಯನ್ನು ಅನುಭವಿಸುತ್ತಾ ಬಂದಿದ್ದು ಈಗ ಕಮ್ಯೂನಿಸ್ಟ್ ಅಂಕಿತಕ್ಕೆ ಮುಟ್ಟಿರುವ ಚೈನದಲ್ಲಿ ಅತಿ ಭೀಕರ ಬರಗಾಲ ವ್ಯಾಪಿಸಿಕೊಂಡಿರುವ ವಾರ್ತೆಯಿದೆ. ಹಸಿವು ಪೀಡೆಯಿಂದ ಅಲ್ಲಿ ಇಷ್ಟರಲ್ಲೇ ಸಹಸ್ರಾರು ಮಂದಿ ಸತ್ತಿರುವುದಲ್ಲದೆ, ಮುಂದಿನ ಕಟಾವಿನೊಳಗೆ ಇನ್ನೆಷ್ಟು ಮಂದಿ ಸಾಯುವರೋ ಊಹಿಸುವದಸಾಧ್ಯವೆಂಬ ಹೃದ್ರಾವಕ ವಾರ್ತೆ ಕೇಳಿ ಬರುತ್ತಿದೆ. ಚೈನದ ಮಧ್ಯ ಮತ್ತು ಈಶಾನ್ಯ ವಲಯಗಳ ಮಿಲಿಯಾವಧಿ ಜನರು ಎಲೆ, ಬೇರು, ಹುಲ್ಲು, ಮಣ್ಣನ್ನು ಆಹಾರವಾಗಿ ಜಗಿದು ದಿನ ತೆಗೆಯುತಿದ್ದಾರಂತೆ. ಆಧುನಿಕ ಚೈನದ ಚರಿತ್ರೆಯಲ್ಲೇ ಇಷ್ಟು ದೊಡ್ಡ ಬರಗಾಲ ಇರಲಿಲ್ಲವೆನ್ನುತ್ತಾರೆ. ಅತ್ತ ಗತಕಾಲದ ರಾಷ್ಟ್ರೀಯ ಸರಕಾರದ ಅಳಿದುಳಿದಿರುವ ಶೇಷಾಂಶಗಳನ್ನೂ ಝಾಡಿಸಿಕೊಳ್ಳುವ ಕಮ್ಯೂನಿಸ್ಟ್ ಕಾರ್ಯಕ್ರಮ ನಡೆದೇ ಇದೆ. ಅಮೇರಿಕದ ಗೃಹಕಾರ್ಯದರ್ಶಿ ಡೀನ್ ಅಚೆಸನರು ಇತ್ತೀಚೆಗಿತ್ತ ಒಂದು ಭಾಷಣದಲ್ಲಿ "ಕಮ್ಯೂನಿಸ್ಟ್ ಚೈನವು ತನ್ನ ಗಡಿಯ ಹೊರಗಿನ ರಾಷ್ಟ್ರಗಳ ಮೇಲೇನಾದರೂ ಆಕ್ರಮಣ ಕೈಕೊಂಡರೆ ಅದಕ್ಕೂ ಅದರ ಮಿತ್ರರಾಷ್ಟ್ರಗಳಿಗೂ ಅಪಾಯ ಕಾದಿದೆ" ಎಂಬ ಅರ್ಥದ ಬೆದರಿಕೆ ಹಾಕಿದ್ದರು. ಚೈನೀ ಕಮ್ಯೂನಿಸ್ಟ್ ಸರಕಾರದ ವಿದೇಶ ಮಂತ್ರಿ ಚೋವು ಎನ್‌ಲಾಯಿಯವರು ಅದಕ್ಕೆ ಖಂಡತುಂಡ ಉತ್ತರವೀಯುತ್ತಾ "ಏಸ್ಯಾದ ಜನತೆಯ ಆಗುಹೋಗುಗಳೇನಿದ್ದರೂ, ಅವು ಸ್ವತಃ ಏಸ್ಯಾನರಿಂದಲೇ ತೀರ್ಮಾನಿಸಲ್ಪಡಬೇಕು. ಅಮೇರಿಕದ ಸಾಮ್ರಾಜ್ಯವಾದಿಗಳ ಕೈವಾಡವಿಲ್ಲಿ ಬೇಡ" ಎಂದಿದ್ದಾರೆ.

ಬೆಲ್ಜಿಯಮಿನಲ್ಲಿ ವಿಶೇಷ ರೀತಿಯ [illegible] ಗೊಂದಲವೊಂದು ವ್ಯಾಪಿಸಿಕೊಂಡ[illegible] ತತ್ಫಲವಾಗಿ ಅಲ್ಲಿದ್ದ ಕೆಥೋಲಿಕ್-ಲಿಬರಲ್ ಸಮ್ಮಿಶ್ರ ಸರಕಾರವು ರಾಜೀನಾಮೆ[illegible]ಯಿತ್ತಿದೆ. ಬೆಲ್ಜಿಯಮಿನಿಂದ ಹೊರಗಟ್ಟಲ್ಪಟ್ಟಿರುವ ರಾಜಾ ಲಿಯೋಪೋಲ್ಡನ[illegible] ಮರಳಿ ಆ ದೇಶಕ್ಕಾಮಂತ್ರಿಸಿಕೊಳ್ಳು[illegible] ಪ್ರಶ್ನೆಯೇ ಈ ಗೊಂದಲಗಳಿಗೆ ಕಾರಣ[illegible] ಮಾರ್ಚ ತಾ 12ರಲ್ಲಿ 'ಲಿಯೋಪೋಲ್ಡರು ಮರಳಿ ಬರಬೇಕೋ, ಬೇಡವೋ' ಎಂಬ ಕುರಿತು ಜನಮತ ಸಂಗ್ರಹಿಸಿದಾ[illegible] ಸೇಕಡಾ 57ರಷ್ಟು ಮತಗಳು ರಾಜರನ[illegible] ಪುನಃ ಕರಿಸಿಕೊಳ್ಳುವದಕ್ಕೆದೊರೆತಿದ್ದ[illegible] ತದ್ವಿರುದ್ಧವಾಗಿ "ಲಿಯೊಪೋಲ್ಡನನ[illegible] ತಡೆದಿಡಿ" ಎಂದು ಅನಿರೀಕ್ಷಿತ ಪ್ರಚಂ[illegible] ಮುಷ್ಕರವನ್ನು ಅಲ್ಲಿಯ ಮಜೂರ[illegible] ಹೂಡಿದರು. ಲಿಯೋಪೋಲ್ಡನನ[illegible] ಪುನಃ ಗಾದಿಗೇರಿಸಿಕೊಳ್ಳಬೇಕೆಂ[illegible] ಕೆಥೋಲಿಕ್ ಪಕ್ಷ ಮತ್ತು ಅದು ಕೂ[illegible]ದೆಂಬ ಲಿಬರಲ್ ಪಕ್ಷಗಳೊಳಗೆ ಎಳೆ[illegible]ಟವಾಗಿ ಅವೆರಡು ಪಕ್ಷಗಳ ಜತೆ ಸ[illegible]ರವೀಗ ರಾಜೀನಾಮೆ ಕೊಟ್ಟಿದೆ. ಜ[illegible]ಮತವು 57% ತನಗೆ ಅನುಕೂಲವಿದ್ದರ[illegible] ಬೆಲ್ಜಿಯಮಿನ ಪಾರ್ಲಿಮೆಂಟು ಈ ಕುರಿ[illegible] ನಿರ್ಧರಿಸದೆ ತಾನು ಅಲ್ಲಿಗೆ ಮರಳಲಾ[illegible]ನೆಂದು ಗಡಿಪಾರಿನಲ್ಲಿರುವ 49 ವರು[illegible]


## The Maharashtra Apex Bank Ltd.

UDIPI, S. INDIA.

NOTICE

Notice is hereby given to the Share-holders of the Bank that Sri Raghavendra S. Kini, a share-holder of the Bank, has given notice, pursuant to Section 144 (6) of the Indian Companies Act, of his intention to nominate at the General Meeting of the Bank to be held on Friday the 31st March. 1950 at 4.30 P. M. (1) Sri A. Umanath Rao, B. A., D. Econ., F. C. A., Chartered Accountant, Mangalore, and (2) Sri U. Varadaraj Nayak, B. A., A. C. A., Chartered Accountant, Mangalore, to the office of Auditors for the Bank for the year, 1950.

(By order)

UDIPI
17-3-50

U. A. Pai,
Managing Director.

# ಭಾರತ ಸೋಂಕಿರುವ ರಾಹು!

ಪ್ರಾಯದ ರಾಜಾ ಲಿಯೋಪೋಲ್ಡನಂತೆ, ಅವನನ್ನು ಆಹ್ವಾನಿಸುವ ಸೂಚನೆ ಮುಂತರಲು ಕೆಥೊಲಿಕ್ ಮಂತ್ರಿಗಳು ಹವಣಿಸಿದರು; ಲಿಬರಲ್ ಮಂತ್ರಿಗಳದನ್ನು ವಿರೋಧಿಸಿ ಬಿಕ್ಕಟ್ಟಿದ್ದು ಮಂತ್ರಿಮಂಡಲ ಒಡೆದು ಹೋಗಿ ಅಧಿಕಾರ ಬಿಟ್ಟಿತು.

ದಕ್ಷಿಣಾಫ್ರಿಕದ ಬಾಮಾನ್‌ಗ್ವಾಟೋ ಜನರ ಕೇಫ್ತಾನ್ ಹುದ್ದೆಯ ವಾರೀಸ್ದಾರ ಸೆರೆಟ್ಸೆ ಖಾಮಾನು ಆ ಜನಾಂಗದ ಸಂಪ್ರದಾಯ ವಿರುದ್ಧವಾಗಿ ಬ್ರಿಟಿಷ್ ಹುಡುಗಿಯೊಬ್ಬಳನ್ನು ಮದುವೆ ಮಾಡಿಕೊಂಡ ಕುರಿತು ಈಗ ಎದ್ದಿರುವ ವಿವಾದವು ವಿಶೇಷ ಸ್ವಾರಸ್ಯದ್ದಿದೆ. ಡ್ಯೂಕ್ ಓಫ್ ವಿಂಡ್ಸರರ ಕಿರೀಟ ತ್ಯಾಗಕ್ಕೆ ಹೇತುವಾದ ದಾಂಪತ್ಯ ಸಂಬಂಧವನ್ನೇ ನೆನಪಿಗೆ ತರುತ್ತಿದೆ. ದಕ್ಷಿಣಾಫ್ರಿಕದ ಬೆಚುವಾನಾಲೇಂಡ್ ಎಂಬ ಗುಡ್ಡ ವಲಯದ ಬಾಮಂಗ್‌ವಾಟೋ ಎಂಬ ಕಾಡು ಜನಾಂಗದ ಕೆಫ್ತಾನ ವಾರೀಸು ಹಕ್ಕನ್ನಾಧರಿಸಿ ನೇಮಿಸಲ್ಪಡುವ ಸಂಪ್ರದಾಯ. ಈಗ ಆ ಪದವಿಗೇರುವ ಹಕ್ಕುದಾರನೆಂದರೆ ಸೆರೆಟ್ಸೆಖಾಮಾ. ಈತ ಇಂಗ್ಲಾಂಡಿನಲ್ಲಿದ್ದು ಆಂಗ್ಲ ಶಿಕ್ಷಣ ಪಡೆದವ; 27 ವರುಷದ ಜವ್ವನಿಗ. ಲಂಡನಿನಲ್ಲೇ ರುತ್ ವಿಲಿಯಮ್ಸ್ ಎಂಬ ಬ್ರಿಟಿಷ್ ಯುವತಿಯನ್ನು ವಿವಾಹವಾಗಿದ್ದ. ತಮ್ಮ ಪಟ್ಟಾದಾರನು ಬಿಳಿ ಹುಡುಗಿಯನ್ನು ಮದುವೆಯಾಗುವುದು ಸಂಪ್ರದಾಯ ವಿರುದ್ಧವೆಂದು ಅವನ ಕೈಕೆಳಗಿನ ಅನಾಗರಿಕ ಜನರಲ್ಲೊಮ್ಮೆ ಮನೋಗೊಂದಲವೆದ್ದುದೇನೋ ನಿಜ. ರಾಜನ ಪತ್ನಿಯೇ ರಾಣಿ; ಪರಕೀಯ ಜನಾಂಗದ ಒಬ್ಬಳನ್ನು-ಟೈಪ್ ಹೊಡೆಯುತಿದ್ದ ಬಿಳಿಗೊಂಬೆಯನ್ನು-ತಾವು ರಾಣಿಯಾಗಿ ಗಣಿಸುವುದು ಅಸಾಧ್ಯವೆಂಬ ತಿರಸ್ಕಾರವು ಬಾಮಂಗ್‌ವಾಟೋ ಜನರಲ್ಲಿದ್ದಿತು. ಆದರೆ ಅದಕ್ಕಿಂತಲೂ ಹೆಚ್ಚಾಗಿ ಅನಾಗರಿಕ ಕಪ್ಪು ಮನುಷ್ಯನು ಬಿಳಿದೇವತೆಯ ಕೈ ಹಿಡಿಯುವುದೆಂದರೇನು, ಎಂಬ ಜಿಗುಪ್ಸೆ ಮತ್ತು ದ್ವೇಷಾಸೂಯೆಯು ವರ್ಣದ್ವೇಷಕ್ಕೆ ಹೆಸರಾಗಿರುವ ದಕ್ಷಿಣಾಫ್ರಿಕದ ಬಿಳಿ ಜನರಲ್ಲಿ ಹಬ್ಬಿದ್ದಿತು. ಮುಖ್ಯವಾಗಿ ಇದೇ ಕಾರಣದಿಂದ ಬ್ರಿಟನಿನಲ್ಲಿರುವ ಸೆರೆಟ್ಸೆಖಾಮಾ ಐದು ವರುಷಗಳ ತನಕ ತನ್ನ ದೇಶಕ್ಕೆ ಹಿಂತಿರುಗಬಾರದೆಂದು ಬ್ರಿಟಿಷ್ ಸರಕಾರ ನಿರ್ಬಂಧ ಹಾಕಿಬಿಟ್ಟಿತು. ಈ ಮೊದಲು ಅಲ್ಲಿ ಖಾಮನ ಮಾವ ಆಳುತಿದ್ದ; ಈಗ ಪೀಠ ಖಾಲಿಯಿದ್ದಿದೆ. ಅದರದರ ಹಕ್ಕುದಾರ ಖಾಮನಿಗೆ ಇಂಗ್ಲಾಂಡು ಬಿಡದ ನಿರ್ಬಂಧವಿದೆ. ಬಾಮಂಗ್‌ವಾಟೋ ಜನರು ರುತ್ ವಿಲಿಯಮ್ಸಳನ್ನು ತಮ್ಮ ರಾಣಿ ಮತ್ತವಳ ಮಗನನ್ನು ಮುಂದಿನ ಹಕ್ಕುದಾರನೆಂದೊಪ್ಪಿಕೊಂಡು, ಖಾಮನನ್ನು ಮರಳಿ ಸಂಪಾದಿಸಿಕೊಳ್ಳುವುದಕ್ಕಾಗಿ ಈಗ ಚಳವಳಿ ನಡೆಸುತ್ತಿರುವ ವಾರ್ತೆಯಿದೆ. ದಕ್ಷಿಣಾಫ್ರಿಕದ ಬಿಳಿ ಜನರ ವರ್ಣ ರೇಂಕಾರಕ್ಕೆ ಮಾನ್ಯತೆ ಕೊಟ್ಟು ಖಾಮನನ್ನು ದಿಗ್ಬಂಧಿಸಿಟ್ಟ ಬ್ರಿಟಿಷ್ ಕೂಲಿಗಾರ ಸರಕಾರದ ವರ್ತನೆಯು ಬಹುತೇಕವಾಗಿ ಪಾರ್ಲಿಮೆಂಟಿನ ಸರ್ವಪಕ್ಷೀಯರ ಟೀಕೆಗೊಳಗಾಗಿದೆ; ಪ್ರಗತಿಶೀಲರೆಲ್ಲರ ತೀವ್ರ ಖಂಡನೆಗೆ ಗುರಿಯಾಗಿದೆ. ಇವೆಲ್ಲಾ ಬಿಸಿತಾಗಿದುದರಿಂದ ಬ್ರಿಟಿಷ್ ಸರಕಾರವೀಗ, ಗರ್ಭಿಣಿಯಿರುವ ಖಾಮಾ ಪತ್ನಿಯು. ಹೆತ್ತನಂತರ ಪುನಃ ಮರಳುವಂತೆ ಮತ್ತು ತನ್ನ ಹಕ್ಕು ಸ್ಥಾಪನೆಯ ದಾವಾ ದಾಖಲಾತಿಗಗತ್ಯವುಳ್ಳ ದಾಖಲೆಗಳನ್ನು ಖಾಮಾ ಸಂಗ್ರಹಿಸಿಕೊಂಡು ಬರಲಾಗುವಂತೆ, ಆತನು ಸಪತ್ನೀಕನಾಗಿ ಬೆಚುವಾನಾಲೆಂಡಿಗೆ ಹೋಗಬಹುದೆಂದು ಅನುಮತಿಯಿತ್ತಿದೆ. ಮುಂದೇನಾಗುವುದೋ ನೋಡಲಿಕ್ಕಿದೆ.

ಜಾಗತಿಕ ಶಾಂತಿಗೀಗ ಮೂಲ ಹಾಗೂ ಮುಖ್ಯ ಕಂಟಕವಾಗಿರುವ ರಶ್ಯಾ–ಅಮೆರಿಕ ವಿವಾದ, ಹೈಡ್ರೋಜನ್ ಬೋಂಬು, ಇವುಗಳ ಸಂಬಂಧದ ಮಾತುಕತೆಗಳು ಯಥಾ ಪ್ರಕಾರ ಕೇಳಿಬರುತ್ತಿವೆ. ಕಳೆದ ದಿನಗಳಲ್ಲಿ ಇವುಗಳಿಗೊಂದು ಆಶಾ ಹೊದಿಕೆಯ ಅಲಂಕಾರ ನಡೆದಿತ್ತೆನ್ನಬಹುದು. ಸೋವಿಯೆಟ್ ರಶ್ಯದ ಉಪ ಪ್ರಧಾನ ಮಂತ್ರಿ ಮೊಲೆಂಕೋವರೊಂದು ಪ್ರಾಮುಖ್ಯ ಭಾಷಣವೀಯುತ್ತಾ ಇತ್ತೀಚೆಗಿನ ರಶ್ಯನ್ ಪದ್ಧತಿಗೆ ವಿರುದ್ಧವಾದ ಮಧುರ ಭಾವನೆ ಸೂಸುತ್ತಾ ಹೇಳಿದ್ದರು: "ಜಾಗತಿಕ ಶಾಂತಿತತ್ವದ ಕುರಿತು ವಿಶ್ವಾಸವುಳ್ಳ ಸೋವಿಯೆಟ್ ಯೂನಿಯನು ನಿಯೋಜಿತ ಶಾಂತಿಯ ಕಡೆಗಿನ ಪ್ರಯತ್ನವನ್ನಿನ್ನೂ ನಡೆಸದೆ ಬಿಡುವಂತಿಲ್ಲ; ಮತ್ತು ಇನ್ನೊಂದು ಹೊಸ ಯುದ್ಧವನ್ನು ತಪ್ಪಿಸುವುದಕ್ಕಾಗಿಯೂ ಇಡೀ ಪ್ರಪಂಚದ ಶಾಂತಿ ಕಾಪಾಡುವುದಕ್ಕಾಗಿಯೂ ಮುಂಬರುವ ಎಲ್ಲಾ ಯಥಾರ್ಥ ಯೋಜನೆ, ಹಂಚಿಕೆ, ಚಟುವಟಿಕೆಗಳಲ್ಲೂ ಪ್ರತ್ಯಕ್ಷ ಭಾಗಿಯಾಗಲು ತಯಾರಿದೆ". ರಶ್ಯ ಸರಕಾರದ ಮುಖಪತ್ರಿಕೆ 'ಪ್ರಾವ್ಡಾ' ಕೂಡಾ ಇದೇ ಸಂಧಾನದ ಸಿದ್ಧತೆಯನ್ನು ಸಾರಿದೆ. ಇದಕ್ಕೆ ಮರುಮಾತೆಂಬಂತೆ ಅಮೆರಿಕದ ಗೃಹ ಕಾರ್ಯದರ್ಶಿ ಡೀನ್ ಆಚೆಸನರೊಂದು ಭಾಷಣದಲ್ಲಂದಿದ್ದರು: "ಅಮೆರಿಕಕ್ಕೆ ಶಾಂತಿ ಬೇಕಾಗಿದೆ; ಆದರೆ ಎಷ್ಟೇ ಬೆಲೆಯನ್ನಾದರೂ ಕೊಟ್ಟು ಅಲ್ಲ. ರಶ್ಯದೊಡನೆ ಸಂಧಾನಕ್ಕೆ ತೊಡಗಲು ಅಮೆರಿಕವು ಸಿದ್ಧವಿದೆ. ಆದರೆ ಹೊಸ ಪರಾಭವಗಳಿಂದ ಪಡಿದಪ್ಪಳಿಸಲ್ಪಡುವಂತಹ ಕೃತಕ ಆಶೆಗಳನ್ನು ಎಬ್ಬಿಸಲು ಅದು ತಯಾರಿಲ್ಲ" ಎನ್ನುತ್ತಾ ಶಾಂತಿ ಪಾಲನೆಗಾಗಿ ರಶ್ಯವು ಕೈಕೊಳ್ಳಬೇಕಾದ ಏಳು ವಿಧಾನಗಳನ್ನು ಮುಂದಿಟ್ಟಿದ್ದಾರೆ. ಹೀಗೆ ರಶ್ಯಾ–ಅಮೆರಿಕಗಳೆರಡೂ ತಾವು ಸಂಧಾನ ನೊಗಕ್ಕೆ ಹೆಗಲೊಡ್ಡಲು ತಯಾರೆಂದು ತೋರಿಸಿಕೊಂಡರೂ 'ಯಥಾರ್ಥ ಪ್ರಯತ್ನ' ಎಂಬ ರಶ್ಯದ ಮತ್ತು 'ಎಂತಹ ಬೆಲೆಯನ್ನಾದರೂ ಕೊಟ್ಟಲ್ಲ' ಎಂಬ ಅಮೇರಿಕದ ವಾದಗಳೇ ಪರಸ್ಪರ ಅವಿಶ್ವಾಸದ ಆಟಂ ಬೋಂಬುಗಳಂತಿರುವುದರಿಂದ ಸಂಧಾನ ಸಾಧ್ಯತೆಯೇನೂ ಹಿಂದಿಗಿಂತ ಹೆಚ್ಚಾಗಿ ತೋರುವುದಿಲ್ಲ.

### ಭಾರತದಲ್ಲಿ

ಪೂರ್ವ ಪಾಕಿಸ್ತಾನದಿಂದ ಓಡಿ ಬಂದಿರುವ ಮತ್ತೀಗಲೂ ಬರುತ್ತಿರುವ ನಿರಾಶ್ರಿತ ಹಿಂದುಗಳ ರಕ್ಷಣಾ ವ್ಯವಸ್ಥೆ ಮತ್ತು ಪಾಕಿಸ್ತಾನದ ಪಾಪಾಚರಣೆಗೊಂದು ಪ್ರಾಯಶ್ಚಿತ್ತ ಶೋಧನೆ ಮಾಡುವುದೇ ಇಂದು ಭಾರತದ ದೃಷ್ಟಿಪಥದಲ್ಲಿರುವ ಮುಖ್ಯ ಸಮಸ್ಯೆ. ಬಜೆಟಿನನ್ವಯದ ವಿವಿಧ ಗ್ರಾಂಟುಗಳ ಮಂಜೂರಾತಿಯ ವೇಳೆ, ಸರಕಾರೀ ಧೋರಣೆಯ ಸರ್ವಸಾಮಾನ್ಯ ವಿಮರ್ಶೆ ನಡೆಯುವ ಸಂಪ್ರದಾಯಾನುಸಾರವಾಗಿ, ಈಗ ನಡೆಯುತ್ತಿರುವ ಭಾರತ ಪಾರ್ಲಿಮೆಂಟ್ ಚರ್ಚೆಗಳಲ್ಲಿ ಬಂಗಾಳ ನಿರಾಶ್ರಿತರ ಸಂಬಂಧವಾಗಿ ಕೆಲವು ಪ್ರಮುಖ ಹೇಳಿಕೆಗಳಾಗಿವೆ. ಭಾರತದ ವಿದೇಶ ಸಂಬಂಧ ಧೋರಣೆಯ ಚಿತ್ರವನ್ನು ಅಮೂಲಾಗ್ರವಾಗಿ ಮುಂದಿಡುತ್ತಾ ಪ್ರಧಾನಿ ಹಾಗೂ ವಿದೇಶ ಮಂತ್ರಿ ಪಂಡಿತ ಜವಾಹರಲಾಲರು ಪೂರ್ವ ಬಂಗಾಳವು ತಮ್ಮ ಕಡೆಗೆಸೆದಿರುವ ನಿರಾಶ್ರಿತ ಸಮಸ್ಯೆಯ ಕುರಿತು ಹೀಗೆಂದಿದ್ದಾರೆ: "ಪೂರ್ವ ಬಂಗಾಳದ ಅಲ್ಪಸಂಖ್ಯಾಕ ಸಮಾಜಗಳವರ ಸುರಕ್ಷಿತತೆಯ ಮಟ್ಟಿಗೆ, ಅವರು ನಿಜಕ್ಕೂ ನಮಗೆ ಸಂಬಂಧಿಸಿದವರು. ಅವರಿಗಲ್ಲಿ ಸುರಕ್ಷಿತತೆ ದೊರೆಯದೆ ಹೋದರೆ, ಅವರನ್ನು ಸುರಕ್ಷಿತರನ್ನಾಗಿಡುವ ಹಂಚಿಕೆಗಳನ್ನು ಹುಡುಕಲಾಗುವದು. ಎರಡು ರಾಷ್ಟ್ರಗಳೊಳಗೆ ಜನತಾ ಬದಲಾವಣೆ ಮಾಡಿಕೊಳ್ಳಬೇಕೆಂದಾಗಲೀ ಸಾಮೂಹಿಕ ಅದಲುಬದಲಾವಣೆಗಳನ್ನಾಗಲೀ ಸರಕಾರ ಬಯಸುವದಿಲ್ಲ. ಆದರದು ದ್ವಾರ ತೆರೆದಿಟ್ಟು ಇಲ್ಲಿಂದ ಹೋಗುವವರಿಗಾಗಲೀ, ಅಲ್ಲಿಂದ ಬರುವವರಿಗಾಗಲೀ ಅವಕಾಶ, ಅನುಕೂಲತೆಗಳನ್ನು ಒದಗಿಸಿಕೊಡುವುದು. ಮತ್ತಿಲ್ಲಿ ಬಂದವರಿಗೆ ಸಾಧ್ಯವಿದ್ದ ಸರ್ವಸಹಾಯವನ್ನೂ ಕೊಡುವುದು. ವಿದೇಶ ವಿಷಯಗಳ ಮಟ್ಟಿಗೆ ಎಲ್ಲಾ ಸಂದರ್ಭ, ಸನ್ನಿವೇಶಗಳಿಗೂ ತಕ್ಕಂತೆ ನಾವು ತಯಾರಾಗಿರಬೇಕಲ್ಲದೆ, ಅನಿವಾರ್ಯವೆನಿಸಿದ ಆಚರಣೆ ಕೈಕೊಳ್ಳಲು ಸಿದ್ಧರಿರಬೇಕು." ಇತ್ತೀಚೆಗಿನ ದಿನಗಳಲ್ಲಿ ಪೂರ್ವ ಬಂಗಾಳದಲ್ಲಿ ಹಿಂದುಗಳ ಸಾಮೂಹಿಕ ಕೊಲೆ, ದರೋಡೆಗಳಾದ ವಾರ್ತೆಗಳಿಲ್ಲವಾದರೂ ಅಲ್ಲಿಯ ಹಿಂದುಗಳು ಬಾಳುವೆಯ ಭರವಸೆಯನ್ನು ಸಂಪೂರ್ಣ ಕಳಕೊಂಡು ಚಡಪಡಿಸುತಿದ್ದಾರೆ, ಎಂಬುದಂತೂ ಖಂಡಿತ. ಮಾರ್ಚ ಮಧ್ಯ ಭಾಗದೊಳಗೆ ಪಾಕಿಸ್ತಾನದಿಂದೋಡಿಬಂದಿರುವ 20 ಲಕ್ಷಕ್ಕೂ ಮಿಕ್ಕಿದ ನಿರಾಶ್ರಿತರಿಗೆ ಭಾರತದ ಪಶ್ಚಿಮ ಬಂಗಾಳ, ಪಂಜಾಬು, ಪಾಟಿಯಾಲಾ ಯೂನಿಯನ್, ರಾಜಸ್ಥಾನ್, ಉತ್ತರ ಪ್ರದೇಶ, ಮಧ್ಯ ಪ್ರದೇಶ, ವಿಂಧ್ಯ ಪ್ರದೇಶ, ಭೋಪಾಲ, ಬೊಂಬಾಯಿ, ಸೌರಾಷ್ಟ್ರ, ದಿಲ್ಲಿ, ಅಜಮೀರ್, ಹಿಮಾಚಲ ಪ್ರದೇಶ ಮೊದಲಾದ ಭಾಗಗಳ ಹಳ್ಳೀ ವಲಯಗಳಲ್ಲಿ ಜೀವನ ವ್ಯವಸ್ಥೆಯನ್ನು ಇಷ್ಟರಲ್ಲೇ ಮಾಡಿಕೊಡಲಾಗಿದೆ. ಇವರು ಸುಮಾರು 4,12,000 ಕುಟುಂಬಗಳಿದ್ದು 4,200,000 ಎಕ್ರೆಗಳಷ್ಟು ಭೂಮಿಯೀಗ ಅವರೊಳಗೆ ವಿತರಣೆಯಾಗಿದೆ. ಇದೆಂದರೆ ಪಶ್ಚಿಮ ಬಂಗಾಳದ ಒಟ್ಟು ಸಾಗುವಳೀ ಭೂಮಿಯ ಸುಮಾರು ಆರಾಂಶವಾಗುತ್ತದೆ. ಬೀಜ, ಎತ್ತು, ಮತ್ತಿತರ ಬೇಸಾಯೋಪಕರಣಗಳನ್ನು ಕೊಂಡುಕೊಳ್ಳುವುದಕ್ಕಾಗಿ 1950ನೇ ಜನವರಿ ಅಂತ್ಯದೊಳಗೆ ಇವರಿಗೆ ಸಾಲವಾಗಿ ಕೊಟ್ಟ ಹಣವೇ ರೂ. 4.43 ಕೋಟಿಗಳಾಗಿವೆ. ರಕ್ಷಣೆ ಮತ್ತು ಪುನರ್ವ್ಯವಸ್ಥೆಗಳಿಗಾಗಿ 1950–51ನೇ ವರುಷದ ಬಜೆಟ್‌ನಲ್ಲಿ ರೂ. 20 ಕೋಟಿ ಇಡಲ್ಪಟ್ಟಿದೆ. "ಇಲ್ಲಿ ನೆಲೆನಿಲ್ಲಲಿಚ್ಛಿಸುವ ಪೂರ್ವ ಬಂಗಾಳದಿಂದ ಬಂದಿರುವ ನಿರಾಶ್ರಿತರಲ್ಲಿ ಒಬ್ಬನನ್ನು ಬಾಕಿ ಬಿಡದೆ ವ್ಯವಸ್ಥೆ ಮಾಡುವೆವೆಂದೂ, ಹಣದ ಅಭಾವವೇನೂ ಸರಕಾರದ ಈ ಕರ್ತವ್ಯ ನಿರ್ವಹಣವನ್ನು ಅಂಕಿಸುವಂತಿಲ್ಲವೆಂದೂ ಭರವಸೆ ಕೊಡುತ್ತೇನೆ" ಎಂದು ಪಾರ್ಲಿಮೆಂಟಿನಲ್ಲಿ ಸಂಚಾರ ವಹಿವಾಟು ಖಾತೆಯ ಮಂತ್ರಿ ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರರಂದಿದ್ದಾರೆ. ತಂತಮ್ಮ ರಾಷ್ಟ್ರದಲ್ಲಿರುವ ಅಲ್ಪಸಂಖ್ಯಾಕ ಸಮಾಜಗಳವರಿಗೆ ರಕ್ಷಣೆಯ ಭರವಸೆಯೀಯುವ ಭಾರತ–ಪಾಕಿಸ್ತಾನ್ ಜತೆ ಹೇಳಿಕೆಯೊಂದು ಹೊರಡುವದೆಂದು ಪ್ರಕಟವಾಗಿದ್ದಿತ; ಲೋರ್ಡ್ ಮೌಂಟ್‌ಬೇಟನರ ಕಾಲದಲ್ಲಿ ಜಾತೀಯ ಗೊಂದಲ ನಿವಾರಣೆಗಾಗಿ ಒಮ್ಮೆ ಇದೇ ಮಾದರಿಯ ಗಾಂಧೀ-ಜಿನ್ನಾ ಜತೆ ಹೇಳಿಕೆಯೊಂದು ಹೊರಟಿದ್ದರೂ ಅದರ ಬೆನ್ನಲ್ಲೇ ಜಾತೀಯ ಗಲಭೆಗಳು ಮತ್ತಷ್ಟು ಹೆಚ್ಚಿದುದರ ನೆನಪು ಬರುತ್ತದೆ. ಕೇವಲ ಹೇಳಿಕೆಯಿಂದ ಇಚ್ಛಿತ ಪರಿಣಾಮವಾಗದಿಲ್ಲವಾದರೂ ಆ ಜತೆ ಹೇಳಿಕೆ ಕೂಡ ಯಾವಾಗ ಹೊರಡುವದೆಂಬ ನಿಶ್ಚಯವಿನ್ನೂ ಇಲ್ಲ. ಅತ್ತ ಜೀವದಾಸೆಯಿಂದ ಪಾಕಿಸ್ತಾನ್ ಬಿಟ್ಟೋಡುವ ಹಿಂದುಗಳ ಪ್ರಬಲಾತಂಕ, ಹಾಗೂ ಅತ್ಯಾಚಾರಗಳಿಗೀಡಾಗುತ್ತಿರುವ ದುಃಖದಾಯೀ ವಾರ್ತೆಗಳು ಬರುತ್ತಲೇ ಇವೆ. ಇದೇ ತಾ. 17ರಲ್ಲಿ ಪೂರ್ವ ಬಂಗಾಳದ ಗಡಿಯೂರು ಮಾಕ್ಷಿತಾಲಾದಿಂದ ಪಶ್ಚಿಮ ಬಂಗಾಳದ ಸರಹದ್ದು ಬಾಲೂರು ಘಾಟಿಗೆ ದಾಟುತಿದ್ದ ಸರ್ವ

(೭ನೇ ಪುಟ ನೋಡಿರಿ)


## ಕುಲವಿಲ್ಲದ ಹೆಣ್ಣು

(ಸರಸ ಸಾಮಾಜಿಕ ಕಾದಂಬರಿ)

ಬರೆದವರು:—ಪಿ. ವೆಂಕೋಬಾಚಾರ್ಯ, ಬಿ.ಎ.ಬಿ.ಟಿ

ದೇವದಾಸಿ ಕುಲದ ಉದ್ಧಾರವೇ ಮುಖ್ಯ ಕಥಾವಸ್ತು.

ಕುಸುಮಳು ವೇಶ್ಯಾಪುತ್ರಿಯಾದರೂ ಅವಳು ವೇಶ್ಯೆಯಲ್ಲ!

ಅವಳ ಕತೆ ಹೇಗೆ ಸಾಗಿದೆ ಎಂದು ಓದಿಯೇ ತಿಳಿಯಿರಿ.

ದಪ್ಪ ಪುಸ್ತಕ ಬೆಲೆ ರೂ. 1–0–0

ಪ್ರತಿಗಳು, ಅಂತರಂಗ ಕಾರ್ಯಾಲಯ, ಉಡುಪಿ, ನವಯುಗ ಪ್ರೆಸ್, ಉಡುಪಿ ಅಥವಾ ನವಭಾರತ ಬುಕ್ ಡಿಪೊ, ಉಡುಪಿ, ಇಲ್ಲಿ ದೊರೆಯುತ್ತವೆ

THE
Canara Banking Corporation Ltd.
(Incorporated in India with Limited Liability)
Estd: 1906.
ANNOUNCEMENT
A Branch of the Bank will shortly be opened
at
PONAMPET (SOUTH COORG).
ಬ್ಯಾಂಕಿನ ಒಂದು ಶಾಖೆಯು ಸದ್ಯದಲ್ಲಿಯೇ
ಪೊನ್ನಂಪೇಟೆ (ದಕ್ಷಿಣ ಕೊಡಗು)
ಯಲ್ಲಿ ತೆರೆಯಲಾಗುವುದು.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್,
ಸ್ಥಾಪನೆ: 1906

ಗುರುವಾರ ಉಡುಪಿ ೨೩-೩-೧೯೫೦

# ಆಹಾರ ಸ್ವಾವಲಂಬನೆ

1951ನೇ ಇಸವಿಯೊಂದಿಗೇನೇ, ಭಾರತಕ್ಕೆ ಪರದೇಶಗಳಿಂದ ಆಹಾರ ಧಾನ್ಯಗಳನ್ನು ಆಮದು ಪಡಿಸಿಕೊಳ್ಳುವ ಕ್ರಮವು ಮುಕ್ತಾಯಗೊಳ್ಳಬೇಕೆಂಬುದು ಸರಕಾರದ ನಿಶ್ಚಿತ ಗುರಿ; ಅಚಲ ನಿರ್ಧಾರ. "ಆ ಅವಧಿಯ ನಂತರ ಇದ್ದ ಸ್ಥಿತಿಯಲ್ಲೇ ಹೇಗಾದರೂ ಸುಧಾರಿಸಿಕೊಳ್ಳುವದೊಂದೇ ಗತಿ ಹೊರತು ಹೊರಗಿನಿಂದ ಎಷ್ಟರಕ್ಕೂ ತರಿಸಿಕೊಳ್ಳವಂತಿಲ್ಲ" ಎಂದು ಪಂಡಿತ ಜವಾಹಿರಲಾಲರು ಮೇಲಿಂದ ಮೇಲೆ ಎಚ್ಚರಿಸುತ್ತಾ ಬಂದಿದ್ದಾರೆ. "ವ್ಯಕ್ತಿಶಃ ನನ್ನ ಅಭಿಪ್ರಾಯದಲ್ಲಿ ಈ ನಿಶ್ಚಿತಾವಧಿ ಕೂಡಾ ಹೆಚ್ಚಾಯಿತೆಂದೇ ಇದೆ ಎಂದೂ ಪಂಡಿತಜೀ ಹೇಳಿದುದಿದೆ. 1951ಕ್ಕೂ ಮೊದಲೇ ಭಾರತವು ಆಹಾರ ಸ್ವಾವಲಂಬಿಯಾಗಲು ಸಾಧ್ಯವಿದ್ದಿತೆಂಬ ಪ್ರಧಾನ ಮಂತ್ರಿಗಳ ಅಭಿಪ್ರಾಯಾನುಸಾರವಾಗಿ ಈ ವರುಷವೇ ನಾವಾ ಗಡಿಯನ್ನು ಸೇರಬಹುದಾಗಿದ್ದಿತೇನೊ. ಆದರೆ ವಸ್ತುಸ್ಥಿತಿಯು ನಿಜಕ್ಕೂ ಹಾಗಿದೆಯೆ? ಇನ್ನೂ ಹತ್ತಿರದ ಗುರಿಯಿಟ್ಟುಕೊಳ್ಳಬೇಕಿದ್ದಿತೆಂಬ ಮಾತು ಹಾಗಿರಲಿ—ಈಗ ದೃಷ್ಟಿಪಥದಲ್ಲಿರುವ ಸರಹದ್ದನ್ನಾದರೂ ನಾವು ಜಯಶೀಲರಾಗಿ ಸೇರಬಲ್ಲೆವೇ ಎಂಬ ಪ್ರಶ್ನೆಯೇಳುತ್ತಿದ. ನಾವೀಗ ನಿಶ್ಚಿತ ಗಡಿಗೆ ಬಹಳ ದೂರದಲ್ಲಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಅನುಭವದಿಂದ ಹೇಳುವದಾದರೆ, ಒಂದನೆಯದು ಕಳೆದು, ಎರಡನೇ ಬಾರಿ ಬರುವ ಮುಖ್ಯ ಬೆಳೆಯೇ ನಮ್ಮ ಅವಶ್ಯಕತೆಗಳೆಲ್ಲವನ್ನೂ ಪೂರೈಸುವಷ್ಟು ಸಮೃದ್ಧವಿರಬೇಕು. ಬತ್ತದ ಪೈರೆಂದರೆ ಜಾದೂ ನಿರ್ಮಿತ ಸಸಿಯಂತೆ ಇದ್ದಲ್ಲೇ ತೋರಿಬರುವಂತಹದಲ್ಲ—ಭೂಮಿ ಸ್ವತಂತ್ರವಾದ ಮಾತ್ರಕ್ಕೆ ನೆಲ ಹಸನಾಗದು—ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಜನತೆಯ ಜೀವನ ನಿರ್ವಹಣಕ್ಕೆ ಬಟ್ಟೆಗೆಷ್ಟು ಆಹಾರ ಧಾನ್ಯವಗತ್ಯವೋ ಅಷ್ಟನ್ನೂ ಕಷ್ಟಪಟ್ಟೇ ಇಲ್ಲಿ ನಿರ್ಮಿಸಿಕೊಳ್ಳಬೇಕು; ಒಂದೊಮ್ಮೆಗೆ ಹಾಗಾಗದೆ ಹೋದರೂ 'ಹೊರಗಿನ ಆಮದಿಲ್ಲ' ಎಂಬ ಶಪಥಕ್ಕೆ ಭಂಗಬಾರದೆಂದಾದರೆ ಎಷ್ಟೇ ಕಡಿಮೆಯಿದ್ದರೂ ಇಲ್ಲಿಯ ಉತ್ಪನ್ನದಲ್ಲಿ ಪಾಲಿಗೆ ಬಂದಷ್ಟನ್ನು ಉಂಡು ಜನತೆ ಸಮ್ಮಗಿರಲು ತಯಾರಿರಬೇಕು. ಒಂದೋ ಪ್ರತಿಜ್ಞಾಭಂಗ, ಇಲ್ಲವೇ ಇನ್ನೂ ಕಡಿಮೆ ಪರಿಮಾಣದ ಆಹಾರ—ಇವೆರಡರ ಪೈಕಿ ಯಾವುದನ್ನು ಸಹಿಸುವುದೂ ಅಸಾಧ್ಯ 'ಕಣಜ' 'ಸ್ವರ್ಣಭೂಮಿ' ಎಂದು ಹೆಸರಾಗಿರುವ ಭಾರತದಲ್ಲಿ, ಬೇಕಾಗುವಷ್ಟು ಆಹಾರ ಬೆಳೆಸಲೇ ಬೇಕೆಂಬ ಹಂಭವನ್ನು ಮೂರು ವರುಷಗಳಿಗೆ ಮುಂಚಿತವಾಗಿ ಸ್ವಂತ ಸರಕಾರವೇ ತೊಟ್ಟು ಪ್ರಯತ್ನಿಸಿಯೂ ಫಲಬಾರದೆಹೋಯಿತು, ಎಂದಾದರೆ ರಾಷ್ಟ್ರಕ್ಕಂತಹ ಅಪಜಯ ಮತ್ತು ಅಪಮಾನ ಬೇರೊಂದಿರಲಾರದು. ಬಯಸಿದಷ್ಟನ್ನು ಬೆಳೆಯಿಸಲಾಗದಿದ್ದರೂ ಪ್ರತಿಜ್ಞಾ ಪಾಲನೆಯಾಗಬೇಕೆಂದು, ಜನರ ಹಸುಗೇ ಪರಿಮಾಣವನ್ನು ಇನ್ನೂ ಕಡಿಮೆ ಮಾಡುವದೆಂದರಂತೂ ಉಪವಾಸ ಹಾಕಿ ಕೊಲ್ಲುವುದೆಂದೇ ಅರ್ಥ. ಆದ್ದರಿಂದ ಇವೆರಡೂ ಅಸಾಧ್ಯ. ಆದರೆ ಈ ದ್ವಿಮುಖೀ ಸಮಸ್ಯೆ ಹುಟ್ಟುವ ಸಂಭವವಿದೆಯೆ? ಹುಟ್ಟಬೇಕಂದಿದೆಯೆ? ಒಂದು ಮಹತ್ಸಾಧನೆಯ ನಡುವೆ ನಿರಾಶೆ ಸೂಚಿಸುವುದು ಹಿತಕರವಲ್ಲವೆಂಬುದು ನಿಜವಾದರೂ, ಇಂತಹ ಸಂದರ್ಭದಲ್ಲಿ ಆತ್ಮವಿಮರ್ಶೆ ಅತ್ಯಗತ್ಯವೆಂಬುದನ್ನು ಮರೆಯಬಾರದು. 1951ರೊಳಗೆ ರಾಷ್ಟ್ರವು ಆಹಾರ ಸ್ವಾವಲಂಬನಾ ಗುರಿ ಸೇರಬೇಕಾಗಿದೆ, ಎಂಬ ಜ್ಞಾಪಕದೊಡನೆ ನೋಡುವಾಗ ಈಗ ನಾವಾ ಕಡೆಗಿಡುತ್ತಿರುವ ಹೆಜ್ಜೆಯ ಗತಿಯೇನೂ ಸಾಲದಾದ್ದರಿಂದ, ಮೇಲ್ಗಡೆ ನಮೂದಿಸಿರುವ ಸಮಸ್ಯೆಯೇಳುವದು ಸಂಭವನೀಯ. ಆದರೆ ನಮ್ಮನ್ನಾ ಸರಹದ್ದಿಗೆ ಸಕಾಲದಲ್ಲಿ ಸೇರಿಸಬಲ್ಲ ಪೂರ್ಣಾನುಕೂಲತೆಗಳು ನಮ್ಮಿ ರಾಷ್ಟ್ರದಲ್ಲಿರುವುದರಿಂದ ಈ ಸಮಸ್ಯೆ ಹುಟ್ಟಬೇಕೆಂದಿಲ್ಲ. ಹಾಗಾದರೆ ಇಂದಿನ ಆಹಾರ ಸ್ವಾವಲಂಬನಾ ಪ್ರಯತ್ನದಲ್ಲಿರುವ ದೋಷವಾವುದು? ಆ ಪ್ರಯತ್ನವು ಪ್ರಚಾರ ರೂಪದಲ್ಲಿರುವಷ್ಟು ಕಾರ್ಯರೂಪದಲ್ಲಿಲ್ಲದಿರುವದು; ನಮ್ಮ ಸರಕಾರೀ ವಿಧಾನಗಳೆಲ್ಲವುಗಳಲ್ಲೂ ಕಂಡು ಬರುತ್ತಿರುವ ದೋಷವು ಇದೇ. ಆಹಾರಾಭಾವದ ಮೇಲೆ ಸಾರಿರುವ ಯುದ್ಧದ ರಣಡಂಗುರ ಕೇಳಿ ಬರುತ್ತಿರುವುದಕ್ಕನುಗುಣವಾದ ತಾಡನವೇನೂ ಈ ತನಕ ಆ ವೈರಿಯ ಮೇಲೆ ಪ್ರತ್ಯಕ್ಷ ಬಿದ್ದಿಲ್ಲವೆನ್ನಬಹುದು. ಯುದ್ಧನಾಯಕರು ಮರ್ಮವರಿತು ಹೋರಾಡುತ್ತಿರುವಂತೆ ಕಾಣುವದಿಲ್ಲ. ನೆಲ ಜಳ, ಅಂಕೆ ಸಂಖ್ಯೆಗಳ ಅಂದಾಜನ್ನು ಪ್ರಕಟಿಸಿದ್ದು, 'ಆಹಾರ ಸ್ವಾವಲಂಬನಾ' ಯೋಜನೆಯೊಂದನ್ನು ತಯಾರಿಸಿಕೊಂಡು ಕೇಂದ್ರ ಹಾಗೂ ಸಂಸ್ಥಾನಿಕ ಸರಕಾರಗಳು ಕೆಲಸಕ್ಕಿಳಿದಿವೆ. ಬ್ರೇಕ್ಟರುಗಳ ಮೂಲಕ, ನೀರಾವರಿ ಅನುಕೂಲತೆಗಳನ್ನೊದಗಿಸಿ ಕೊಟ್ಟು, ಹಡಿಲು ಭೂಮಿಗಳನ್ನು ಸಾಗುವಳಿ ಮಾಡಿಸುವ ಸಾಹಸಗಳೂ ನಡೆದಿವೆ. ಆದರೆ, ಈ ಇಡೀ ಚಿತ್ರವು ಎಂದಾದರೂ ಪ್ರತಿಫಲಪಡೆಯುವ 'ಆಹಾರಾಭಿವೃದ್ಧಿ ಪ್ರಯತ್ನ'ವಾಗಿ ತೋರುತ್ತಿದೆಯಲ್ಲದೆ ಬರುವ ವರುಷದೊಳಗೆ ಪೂರ್ಣಗೊಳ್ಳುವ 'ಆಹಾರ ಸ್ವಾವಲಂಬನಾ' ಕಾರ್ಯದಂತೆ ತೋರುವುದಿಲ್ಲ. ದೊಡ್ಡದೊಡ್ಡ ಯೋಜನೆಗಳು, ಮತ್ತು ಅತಿ ವೆಚ್ಚದ ಬೇಸಾಯ ವಿಧಾನಗಳು ಗುರಿ ಸಾಧಿಸಲಾಗುವಷ್ಟು ಕ್ಷಿಪ್ರ ಪರಿಣಾಮಕಾರಿಯಾಗಲಾರವು. 'ಬೇಸಾಯ ಬಲ್ಲವನ ಪಾಲಿಗೆ ಗದ್ದೆಯೊಳಗೊಂದು ಗದ್ದೆಯಿದೆ' ಎಂಬುದು ಹಳ್ಳೀ ವಾಡಿಕೆಯಲ್ಲಿರುವ ನಾಣ್ಣುಡಿ. ಸಾಕಷ್ಟು ಪ್ರೋತ್ಸಾಹಾನುಕೂಲತೆಗಳು ದೊರೆತರೆ ರೈತನು ಎರಡು ಪಾಲು ಬೆಳೆ ಹೆಚ್ಚು ತೆಗೆಯಬಲ್ಲನೆಂಬುದೇ ಇದರ ಅರ್ಥ. ಈ ಸತ್ಯವನ್ನಾಧರಿಸಿ ಈಗಿನಿಂದಲೇ ಆಹಾರ ಸ್ವಾವಲಂಬನಾ ಪ್ರಯತ್ನ ನಡೆಯುತ್ತಾ ಹೋದರೆ ನಿಶ್ಚಿತ ಗುರಿ ಮುಟ್ಟಲಡ್ಡಿಯಿಲ್ಲ. 'ಹೆಚ್ಚೆಚ್ಚು ಬೆಳೆಸಿರಿ' ಎಂದು ರೈತರಿಗನ್ನುವುದೂ 'ಹಚ್ಚೆಚ್ಚು ಸಂಪಾದಿಸಿರಿ' ಎಂದು ಮಜೂರರಿಗನ್ನುವದೂ ಒಂದೇ—ಅವರಿರುವುದೇ ಅದಕ್ಕಾಗಿ! ಅಂದ ಮೇಲೆ ಈ ಬೋಧನೆ ಅನಗತ್ಯ. ಯಂತ್ರೋಪಕರಣಗಳಿಂದ, ಅಧಿಕಾರಿಗಳ ನಿರ್ದೇಶಕತ್ವ ಅಥವಾ ಮಾಜೀ ಸೋಲ್ಜರರ ದುಡಿಮೆಯ ಪ್ರಯೋಗಗಳಿಂ-ದಉತ್ಪನ್ನ ಹೆಚ್ಚಿಸಲು ಹೊರಡುವುದೆಂದರೆ, ಹೆಚ್ಚು ಬೆಳಸಬೇಕಾದ ಗರ್ಜಿಯಿರುವ ಕಾಲದಲ್ಲಿ ಹೊಸಬರಿಗದನ್ನು ಕಲಿಸುವ ಮರ್ಜಿ ವಹಿಸಿದಂತೆಯೇ ಸರಿ! ಸಾಗುವಳಿ ಮತ್ತು ಸಾಗುವಳಿಯೋಗ್ಯ ಭೂಮಿಯ ಪ್ರತಿಯೊಂದಿಂಚಿನಿಂದಲೂ ಪೂರ್ಣ ಫಲತೆಗೆಯಬಲ್ಲವನೆಂದರೆ ಹುಟ್ಟು ಸಾಗುವಳಿಗಾರ ಮಾತ್ರ. ಅತ ಹಾಗೆ ಮಾಡಲಾಗುವಂತ ಅವನಲ್ಲಿ ಶಕ್ತ್ಯುತ್ಸಾಹಗಳನ್ನು ಪೂರ್ಣ ತುಂಬಿಸುವುದೇ ಇಲ್ಲಿ ಎಲ್ಲಕ್ಕಿಂತ ಮುಖ್ಯವಾಗಿ ಮತ್ತು ಅಗತ್ಯವಾಗಿ ಆಗಬೇಕಾದ ಕೆಲಸ. ಆದ್ದರಿಂದ ಅಧಿಕ ಆಹಾರೋತ್ಪಾದನಾ ಮುಖವು ಹಳ್ಳೀ ರೈತರ ಕಡೆಗೆ ತಿರುಗಬೇಕು; ಅವರ ಬೈಕಟ್ಟಿರುವ, ಚೇತನೋತ್ಸಾಹಗಳನ್ನು ಕುಂದಿಸಿರುವ, ಅಡ್ಡಿ ಆತಂಕಗಳೆಲ್ಲವನ್ನೂ ಮುಂದಾಗಿ ನಿವಾರಿಸಿಕೊಡಬೇಕು; ಬೀಜ, ಗೊಬ್ಬರ, ಸಣ್ಣಪುಟ್ಟ ನೀರಾವರಿ ಅನುಕೂಲತೆ, ಹಣ, ಇತ್ಯಾದಿ ಅಗತ್ಯವುಳ್ಳ ಎಲ್ಲಾ ಸಹಾಯಗಳನ್ನೂ ಸಾಗುವಳೀಗಾರರಿಗೆ ಸಕಾಲದಲ್ಲಿ ಒದಗಿಸಿಕೊಡಬೇಕು. ಈ ರೀತಿ ಮೂಲಕ್ಕೆ ನೀರೆರೆಯುವ ಬದಲಿಗೆ, ರೆಂಬೆಗಳಿಗೆ ಚಿಮುಕಿಸುವ ಹವ್ಯಾಸದಲ್ಲೇ ಸರಕಾರವು ಇದ್ದು ಬಿಟ್ಟರೆ ಆಹಾರ ಸ್ವಾವಲಂಬನಾಸಿದ್ಧಿಯು ಅತ್ಯಂತ ಕಷ್ಟದ್ದಾಗ್ಯವ ಸಂಭವವಿದೆ. ಸಾಗುವಳೀ ಕಾಲಕ್ಕೆ ಸಾಕಷ್ಟು ಮುಂಚಿತವಾಗಿಯೇ ರೈತರಿಗಗತ್ಯವುಳ್ಳ ಪ್ರೋತ್ಸಾಹ, ಸಹಾಯ, ಸಲಕರಣೆಗಳು ದೊರೆಯಬೇಕಾಗಿರುವುದರಿಂದ ಸರಕಾರವು ಈಗಲೇ ಇತ್ತ ಲಕ್ಷ್ಯ ಕೊಡುವದೆಂದು ನಂಬುತ್ತೇವೆ.

---

# ಮೋಟಾರು-

ದ. ಕ. ಜಿಲ್ಲಾ ಬಸ್ ಕೆಲಸಗಾರರ ಇತ್ತೀಚೆಗಿನ ಮುಷ್ಕರಾಂತ್ಯದಲ್ಲಿ ನಿರ್ಣಯಿಸಿದ್ದಂತೆ ಬಸ್ ಎವಾರ್ಡಿನ ಸಂಬಂಧವಾಗಿ ಮಾಲಕ ಮತ್ತು ಮಜೂರರೊಳಗೊಂದು ರಾಜೀತೀರ್ಮಾನವು ಇದೇ ತಾ. 15-3-1950ರಲ್ಲಿ ಆಗಿದೆ. ಈ ತೀರ್ಮಾನದ ಒಂದು ಶರ್ತದ ಕುರಿತೇ ತೀರ್ಮಾನ ಭಾಗಿಗಳಾಗಿದ್ದ ಇಕ್ಕಡೆಯವರೊಳಗೀಗ ವಾದವಿವಾದಗಳು ನಡೆದಿವೆಯಾದ್ದರಿಂದ, ತೀರ್ಪಿನ ನ್ಯಾಯಾನ್ಯಾಯ ಪರಿಶೀಲನೆಯನ್ನು ಪ್ರಕೃತ ಬಾಕಿಯಿಡಬೇಕಾಗಿದೆ. ಆದರಲ್ಲಿ ವಿಚಾರಿಸತಕ್ಕ ಬೇರೆ ಅಂಶಗಳಿವೆ.

ಎವಾರ್ಡು ಜಾರಿಯಲ್ಲಿ ಬರುವಂತ ಮಾಡಬೇಕೆಂದು ಜಿಲ್ಲಾವ್ಯಾಪೀ ಮುಷ್ಕರ ಹೂಡಿ ಅದನ್ನು ನಡೆಸಿದ್ದುದು, ಸಮತಾವಾದಿಗಳ ಕೈಯಲ್ಲಿರುವ 'ಕೆನರಾ ಬಸ್ ವರ್ಕರ್ಸ್ ಯೂನಿಯನು'. ಆ ಮುಷ್ಕರಾರಂಭವಾದ ಮೇಲೆ, ತಾವೂ ಅದರಲ್ಲಿ ಸೇರಿಕೊಳ್ಳುವೆವೆಂದು 15 ದಿನಗಳ ನೋಟೀಸು ಕೊಟ್ಟು, ಕೊಟ್ಟ ದಿನವೇ ಮುಷ್ಕರಕ್ಕಿಳಿದಿದ್ದ ಯೂನಿಯನೇ ಕಾಂಗ್ರೆಸಿಗರನ್ನು ಆಧರಿಸಿ ನಿಂತಂತಿರುವ 'ಒಟೋಮೊಬ್ಯಾಲ್ ವರ್ಕರ್ಸ್ ಯೂನಿಯನು'. ಒಂದು ತಿಂಗಳೊಳಗೆ ಎವಾರ್ಡ್ ಸಂಬಂಧದ ಇತ್ಯರ್ಥವಾಗುವದು, ಎಂಬ ಭರವಸೆ ಪಡೆದು ಮುಷ್ಕರವನ್ನು ವಾಪಾಸು ತೆಗೆದುಕೊಂಡುದೂ ಈ ಎರಡನೇ ಯೂನಿಯನೇ. ಈಗ ಆ ಒಂದು ತಿಂಗಳೊಳಗ ಮಾಲಕರೊಡನೆ ಒಂದು ಇತ್ಯರ್ಥಕ್ಕೆ ಬಂದದ್ದು ಕೂಡಾ ಈ ಸಂಘವೇ. ಅಂತೂ ಮುಷ್ಕರವನ್ನು ಹೂಡಿ ಒಂದು ವಾರಕ್ಕೂ ಮಿಕ್ಕಿ ಅದನ್ನು ಜಯಶೀಲವಾಗಿ ನಡೆಯಿಸಿದ್ದ ಮೊದಲನೆ ಸಂಘ 'ಕೆನರಾ ಮೋಟಾರ್ ವರ್ಕರ್ಸ್ ಯೂನಿಯನು' ಅಲ್ಲಿಂದಿಲ್ಲಿವರೆಗೂ ಈ 'ವ್ಯವಸ್ಥಾ ಚಿತ್ರ'ದಲ್ಲಿ ಕಾಣುವುದೇ ಇಲ್ಲ. ನೆಟ್ಟು ಬೆಳಸಿದವನೊಬ್ಬ—ಕೊಯ್ದವ ಮತ್ತೊಬ್ಬ- ಈ ಕೊಯ್ಲಾದರೂ ತನೆ ಪಕ್ವವಾದುದನ್ನು ಕಂಡೋ ಕಾಣದಯೋ ಹೇಳುವುದಸಾಧ್ಯ.

'ಕೆನರಾ ಸಂಘ'ವು ಈಗ 'ರಜಿಸ್ಟರ್ಡ್' ಆಗಿದೆಯಾದರೂ ಮುಷ್ಕರದ ಕಾಲದಲ್ಲಿ ಆಗಿರಲಿಲ್ಲವಂತೆ; 'ಒಟೋಮೊಬ್ಯಾಲ್' ಸಂಘವು ಮೊದಲೇ ರಜಿಸ್ಟರ್ ಆಗಿದ್ದುದರಿಂದ ಸರಕಾರೀ ಮಧ್ಯಸ್ಥಿಕೆಯ ಈ ವಿವಾದದಲ್ಲಿ ಇದನ್ನು ಮಾತ್ರ 'ಪಕ್ಷ'ವಾಗಿ ಕಟ್ಟಿಕೊಳ್ಳಲಾಯಿತೆಂಬ ಕಾರಣ ಕೇಳಿ ಬರುತ್ತಿದೆ.

ಆಗಲಿ; ಈ ಕ್ರಮಬದ್ಧ ಅಧಿಕಾರಿ 'ಒಟೋಮೊಬ್ಯಾಲ್' ಕೆಲಸಗಾರ ಸಂಘದ ಧೋರಣೆ, ವರ್ತನೆಗಳನ್ನೇ ವಿಚಾರಿಸೋಣ. ಕಳೆದ ಬಾರಿಯ ಮುಷ್ಕರದ ಮೂಲಕರ್ತ ಅದಾಗಿದ್ದಿತೆ? ಕೊನೆಗದು ಮುಷ್ಕರದಲ್ಲಿ ಸೇರಿಕೊಂಡುದಾದರೂ ಕ್ರಮಬದ್ಧವಾಗಿದ್ದಿತೆ? ಹೆಚ್ಚೆಂದರೆ 'ಒಟೋಮೊಬ್ಯಾಲ್' ಸಂಘವು ಮುಷ್ಕರದ ಸಹಭಾಗಿಯಾಗಿತ್ತೆಂದಲ್ಲದೆ, ಮುಷ್ಕರದ ಕರ್ತನಾಗಿತ್ತೆಂದು ಹೇಳಲಾಗುವದಿಲ್ಲ. ಅಂದಮೇಲೆ ಈ ಸಂಘವು ಯಾವ ವಿವಾದದಲ್ಲೊಂದು ಪಕ್ಷವಹಿಡಿದು ಸಂಧಾನಕ್ಕೆ ಮುಂದಾಯಿತೋ ಆ ವಿವಾ

# -ಎವಾರ್ಡಿನ ತೀರ್ಮಾನ ಸಮಸ್ಯೆ!

ದಕ್ಕೆ ರೂಪಕೊಟ್ಟಿದ್ದ 'ಕೆನರಾ ಮೋಟಾರು ಕೆಲಸಗಾರರ ಸಂಘ'ವನ್ನು ಈ ರೀತಿ ಹಿಂದೆ ಹಾಕಬಾರದಾಗಿದ್ದಿತು; ಮರೆತು ಬಿಡಬಾರದಿದ್ದಿತು. ಆ ಯೂನಿಯನು 'ರಿಜಿಸ್ಟರ್ಡೋ ಅನ್‌ರಿಜಿಸ್ಟರ್ಡೋ?' ಎಂಬ ಸವಾಲನ್ನು ಕಾನೂನು ರಕ್ಷಕ ಸರಕಾರ ಅಥವಾ ಕಾರಣ ಹುಡುಕುವ ಮಾಲಕ ವರ್ಗ ಮಾತ್ರ ಕೇಳಲಿ; ಎವಾರ್ಡೆಂಬುದು ಯಾವುದೊಂದು ಯೂನಿಯನಿನ ಕೊರಳಿಗೂ ಕಟ್ಟದೆ ಮಜೂರರಿಗೇನೇ ಸಂದಾಯವಾಗುವಂತಹದಿರುವುದರಿಂದ ಒಂದು ಯೂನಿಯನಿನ ಕಾನೂನುಬದ್ಧ ಸ್ಥಾನದ ಪ್ರಶ್ನೆಯು ಮತ್ತೊಂದು ಯೂನಿಯನಿಗಗತ್ಯವಿಲ್ಲ.

ಆದರೆ 'ಒಟೋಮೊಬೈಲ್ ವರ್ಕರ್ಸ್ ಯೂನಿಯನ್'ಗೆ 'ಕೆನರಾ ಮೋಟಾರು ವರ್ಕರ್ಸ್ ಯೂನಿಯನ್'ನ ಕೈಯ ಮುಷ್ಕರಾಯುಧವನ್ನು ಜತೆಯಾಗಿ ನಿಂತಲ್ಲಿಂದಲೇ ಜಾರಿಸಿ, ಆದರ ಮೂಲಕ ಸ್ವತಃ ತಾನೇ ಬಸ್ ಮಾಲಕರೊಡನೊಂದು ಕೋಲಾಟವಾಡೋಣವೆಂಬ ಹುಮ್ಮನಸ್ಸಿದ್ದಷ್ಟು ಬೇರೇನೂ ಇರಲಿಲ್ಲವೆಂದು ತೋರುತ್ತದೆ. ಈ ಕೋಲಾಟದಲ್ಲಿ, ಮಾಲಕರೇ ಅತಿ ಹೆಚ್ಚಿನ ಆಟ ಕೌಶಲ್ಯವನ್ನು ಪ್ರದರ್ಶಿಸಿ, ತನ್ನ ಕೈಗಂಟನ್ನು ತಪ್ಪಿಸಿಬಿಟ್ಟ ನೋವನ್ನು ಈಗ 'ಒಟೋಮೊಬೈಲ್' ಸಂಘ ಅನುಭವಿಸುತ್ತಿಲ್ಲವೇ? ಅದರ ಮನಸ್ಸಾಕ್ಷಿಗೇ ಬಿಡೋಣ.

ಸಂಘನಾಯಕ ಶ್ರೀ ಡಿ. ಮೆಲ್ಲೋರ ಸ್ಥಾನಬದ್ಧತೆ, ಇತರ ಕೆಲವರ ಮೇಲೆ ಬಾಕಿ ಇರುವ ವಿಚಾರಣೆ, ಇತ್ಯಾದಿಗಳು ಸರಕಾರೀ ಧೋರಣೆ ಮತ್ತು ಕಾನೂನಿಗೆ ಸಂಬಂಧಪಟ್ಟವುಗಳಾದ್ದರಿಂದ ಆ ವಿಷಯವನ್ನು ಇಲ್ಲಿ ಬಿಟ್ಟುಬಿಡೋಣ.

ಈಗ "ಎವಾರ್ಡ್" ಸಂಬಂಧವಾಗಿ ಉಳಿದಿರುವ ರಾಜೀ ತೀರ್ಮಾನದ ರೂಪರೇಖೆಯ ಕುರಿತೇ ಎರಡು ಮಾತು. ಎವಾರ್ಡಿನಲ್ಲಿ ನಮೂದಿಸಿರುವ ಮಾದರಿಯಲ್ಲಿ ಸಂಬಳ, ಬತ್ತೆ, ಹೆಚ್ಚು ಬತ್ತೆ, ಪೇಟೆಯಲ್ಲಿರುವವರಿಗೆ ಮನೆಬತ್ತೆ, ಸಮವಸ್ತ್ರ, ಮುಂತಾದುವುಗಳನ್ನು ತಾ. 1-3-50ರಿಂದಲೇ ಕೊಡಬೇಕೆಂದಾಗಿರುವ ಮಟ್ಟಿಗೆ ಈ ತೀರ್ಮಾನ ಸಮಾಧಾನಕರ, ರಾಜೀ ತೀರ್ಪು ಎಂದಾದ ಮೇಲೆ ಎವಾರ್ಡಿನ ಮಿಕ್ಕ ಭಾಗಗಳನ್ನು ಬಿಟ್ಟುಕೊಟ್ಟುದರಕ್ಕಾಗಿ ಅತೃಪ್ತಿ ಪಡಬೇಕೆಂದಿಲ್ಲ. ಆದರೆ ಈವಾಗ ಹೆಚ್ಚಿನವರಿಗೆ ತೋರುವ ಕೆಲವು ವರ್ಗದ ನೌಕರರನ್ನು ಬಸ್ ಕಂಪೆನಿಗಳವರು ಕೆಲಸದಿಂದ ತೆಗೆದುಹಾಕಬಹುದೆಂಬುದಕ್ಕೆ 'ಒಟೋಮೊಬೈಲ್' ಸಂಘದ ಕಾನೂನು ಸಲಹೆಗಾರರು ಒಪ್ಪಿಕೊಂಡದ್ದರಿಂದು ಮಾಲಕರ ಕಡೆಯ ವಾದವು ಎದ್ದದಷ್ಟೇ ಅಲ್ಲ-ಇಷ್ಟರಲ್ಲೇ ನೂರಾರು ಕೆಲಸಗಾರರು ಕತ್ತರಿಸಲ್ಪಟ್ಟಿದ್ದಾರೆ-ಇದರ ಅರ್ಥವೇನು?

"ನಾನು ಆ ಶರ್ತಕ್ಕೆ ಒಪ್ಪಿಲ್ಲ" ಎಂದು ಈ ಕೆಲಸಗಾರ ಸಂಘದ ಸಲಹೆಗಾರರ ವಾದವೇನೋ ಇದೆ. ಆದರೆ "ಅವರು ಒಪ್ಪಿದ್ದರು" ಎಂದು ಬಸ್ ಮಾಲಕರ ಪ್ರತಿನಿಧಿಗಳು ಒತ್ತಿಕೊಟ್ಟೇ ವಾದಿಸುತ್ತಿದ್ದಾರೆ. ಈ ಒಪ್ಪಿಗೇ ವಿವಾದದ ಸತ್ಯ ಶೋಧನೆಯ ಮಾತು ಹಾಗಿರಲಿ—ಬಸ್ ಕೆಲಸಗಾರರು ಹಲವರು ಡಿಸ್‌ಮಿಸ್ ಆಗಿರುವ ಈ ಕಾಲದಲ್ಲಿ, ಇಂತಹ ಅನ್ಯಾಯವೇಳದಂತಹ ಸ್ಪಷ್ಟ ಶರ್ತವನ್ನು ಕೆಲಸಗಾರರ ಪ್ರತಿನಿಧಿಯಾಗಿ ರಾಜೀ ವ್ಯವಸ್ಥೆಗೆ ಹೋಗಿದ್ದ ಮಹಾನುಭಾವರು ರಾಜೀ ತೀರ್ಮಾನದಲ್ಲಿ ಹಾಕಿಸಬೇಕೆಂದಿದ್ದಿತೆಂಬ ಆಗ್ರಹವೇಳುತ್ತಿದೆ ಹೊರತು "ಅವರು ಆಗಲೇ ಡಿಸ್‌ಮಿಸ್ ಶರ್ತಕ್ಕೊಪ್ಪಿದ್ದರೋ ಇಲ್ಲವೋ?" ಎಂಬ ಥಂಡಾ ವಿಚಾರಣೆಗವಕಾಶವಿಲ್ಲ. ಎವಾರ್ಡ್ ಸಂಬಂಧದ ಮಾಲಕ—ಮಜೂರ ವಿವಾದಕ್ಕೊಂದು ತೀರ್ಮಾನದ ಬೆನ್ನಲ್ಲೇ ಎಷ್ಟೋ ಮಂದಿ ಮಜೂರರ ಕೆಲಸ ಹೋಗಿರುವ ಒಂದು ಸಂಗತಿ ನಿಜ. ಯಾರು ಒಪ್ಪದಿದ್ದರೂ ಆ ತೀರ್ಪು ಈ ರದ್ದತಿಗೊಪ್ಪಿಗೆ ಕೊಟ್ಟಿರಬೇಕು; ಇಲ್ಲವೇ ಈ ಸಂದರ್ಭವನ್ನು ಊಹಿಸದೇನೇ ಮರೆತು ಬಿಟ್ಟಿರಬೇಕು.

ಆ ರಾಜೀ ತೀರ್ಪಿಗೂ ಈ ಮಜೂರರ ರದ್ದತಿಗೂ ಸಂಬಂಧವೇ ಇಲ್ಲವೆಂದರೂ, ಇದೊಂದು ಹೊಸಾಪತ್ತು ಬಸ್ ಮಜೂರ ವರ್ಗದ ಮೈ ಮೇಲೆ ಬಂತೆಂಬುದಂತೂ ಖಂಡಿತವಷ್ಟೆ? ಎವಾರ್ಡಿನನ್ವಯದ ಹೆಚ್ಚಿನಂಶಗಳು ಎಲ್ಲರಿಗೂ ದೊರೆಯದಿದ್ದ ಆ ಸಂಕಟಕ್ಕಿಂತ, ಕೆಲವರ ದಿನಹಣ ಮಾರ್ಗವೇ ತಪ್ಪಿ ಹೋದ ಈ ಸಂಕಷ್ಟವು ತುಲನಾತ್ಮಕವಾಗಿ ಹೆಚ್ಚಿನದಿದೆ. ಇನ್ನು ಇದರ ಪರಿಹಾರ ಹೇಗೆ? ಕಾವಲಿಯ ಬಿಸಿ ತಪ್ಪಿಸಿಕೊಳ್ಳಬೇಕೆಂದು ಒಲೆಗೆ ಹಾರಿದ ಗಾದೆಯಂತೆ, ಬಸ್ ಮಜೂರರು ಎವಾರ್ಡ್ ಸಂಬಂಧದ ಅನ್ಯಾಯ ನಿವಾರಣೆಗಾಗಿ ಸಂಪು ಹೂಡಿ, ಡಿಸ್‌ಮಿಸ್ ಸಂಬಂಧದ ಅನ್ಯಾಯಕ್ಕೆ ಬಲಿಬಿದ್ದಂತಾಗಲಿಲ್ಲವೆ?

ಇಂತಹ ಸ್ಥಿತಿಯಲ್ಲಿ ಬಸ್ ಕಂಪೆನಿಗಳವರಿಗಾದರೋ ಹೊಸತೇನು ಬಂತು? ಅವರು ಕೆಲಸಗಾರರ ಋಣವನ್ನೇ ಕೆಲಸಗಾರರ ನಡುವೆ ಪುನರ್ವರ್ತನೆ ಮಾಡಿದರಾಯಿತು ಹೊರತು, ಬಹುಶಃ ಬೊಕ್ಕಸದಿಂದ ತೆಗೆದು ಕೊಡುವಂತಾಗದು. ಮನೇ ಬಾಗಿಲು ತೋರಿಸಿ ಬೀಳ್ಕೊಟ್ಟ ಕೆಲಸಗಾರರ ಇಡೀ ಸಂಬಳವನ್ನು ಉಳಿದ ಎಲ್ಲರಿಗೂ ಅಂಶಾಂಶವಾಗಿ ಹಂಚಿ ಕೊಟ್ಟರಾಯಿತು! ತಮ್ಮ ಮುಷ್ಕರಾನಂತರ ದೊರೆತಿರುವ ಈ ಪ್ರತಿಫಲವು ಬಸ್ ಮಜೂರರಿಗೆ ಸಮಾಧಾನಕರವೆಂದಾದರೆ, ತಮ್ಮ ಪೈಕಿ ಒಡಕಲು ಸಸಿಗಳನ್ನು ಕಿತ್ತು ಪುಷ್ಟ ಸಸಿಗಳ ಬುಡಕ್ಕವುಗಳನ್ನು ಗೊಬ್ಬರವಾಗಿ ಮಾಲಕರು ಹಾಕಬೇಕೆಂದೇ ಅವರು ಆ ದಿನ ಮುಷ್ಕರ ಹೂಡಿದ್ದುದೆ? ಅಲ್ಲವಷ್ಟೆ? ಹಾಗಾದರೆ ಕೆಲಸಗಾರರು ಹೊಂತಕಲ್ಪಟ್ಟುದಕ್ಕೇನು?

ತೆಗೆದು ಹಾಕಲ್ಪಟ್ಟವರ ಮಜೂರೀ ಮೊತ್ತವು, ಎವಾರ್ಡಿನನ್ವಯದ ಈಗಿನ ಕೊಡುಗೆಗೆ ಕಡಿಮೆ ಬೀಳುತ್ತದಾದರೆ, ಈಗ ತಾನೇ ಬಸ್ ಪ್ರಯಾಣದ ಟಿಕೇಟು ಧಾರಣೆ ಕೂಡಾ ಏರಿದೆ. ಈ ತನಕ ಮೈಲಿಗೆ 6 ಪೈ ಇದ್ದ ಪ್ರಯಾಣದ ದರವು ಈಗ ಕರಾವಳಿ ರಸ್ತೆಗಳಲ್ಲಿ 7 ಪೈ, ಘಾಟೀ ರಸ್ತೆಗಳಲ್ಲಿ 9 ಪೈ, ಇತರ ಎಲ್ಲಾ ಕಡೆಗಳಲ್ಲಿ 7 ಪೈ, ಎಕ್ಸ್‌ಪ್ರೆಸ್ಸಿಗೆ ಈ ಧಾರಣೆಯ ಒಂದೂವರೆ ಪಾಲು, ಆಗಿದೆ. ಆದ್ದರಿಂದ ಜಿಲ್ಲೆ ತುಂಬಾ ಪ್ರಚಾರಗೊಂಡಲ ಪಡೆದಿದ್ದ ಬಸ್ ಎವಾರ್ಡ್ ಸಂಬಂಧದ ಈಗಿನ ತೀರ್ಮಾನಕ್ಕಾಗಿ ಬಸ್ ಕಂಪೆನಿಗಳವರ ಕಡೆಗೆ ಸಹಾನುಭೂತಿ ಸೂಚಿಸುವ ಅಗತ್ಯವೇನೂ ಇಲ್ಲ. ಮಜೂರರ ಕಡೆಗೆ ಸಂತಾಪ ಸೂಚನೆ ಮಾಡಲಿಕ್ಕಿದೆ; ಆದರೆ ಮಾಡುವವರಾರೂ!

ಸ್ವಾರ್ಥ, ಪ್ರತಿಷ್ಠೆ, ರಾಜಕೀಯ ದೃಷ್ಟಿ, ಪಕ್ಷ ಸ್ಪರ್ಧೆ, ಇತ್ಯಾದಿಗಳಿಗಾಗಿ ತಮ್ಮನ್ನು ಮೆಟ್ಟಿ ನಿಲ್ಲುವ ಮತ್ತು ತಮ್ಮನ್ನು ಕಟ್ಟಿಕೊಳ್ಳುವ ಎಲ್ಲರಿಂಗೂ ಏಕ ಪ್ರಕಾರ, ಕೆಲಸ ಕಳಕೊಂಡಿರುವ-ಕಷ್ಟ ನಷ್ಟಪರಾಭವಗಳಿಗೀಡಾಗಿರುವ-ಮಜೂರರ ಶಾಪ ತಟ್ಟದಿರದು!

ಇನ್ನೀ ಬಸ್ ಮಜೂರ-ಮಾಲಕ ವಿವಾದದಲ್ಲಿ ಸರಕಾರದ ಧೋರಣೆ, ವರ್ತನೆ ಹೇಗೆ ಎಂಬುದು ದಕ್ಷಿಣಕನ್ನಡದ ಮುಷ್ಕರ ಸಂಬಂಧದಲ್ಲಿ ಸಾಕಷ್ಟು ಸ್ಪಷ್ಟವಾಗಿದೆ. ಸಾಲದುದಕ್ಕೆ ಇದೇ ತಾ. 20ರಲ್ಲಿ ಮದ್ರಾಸ್ ಎಸೆಂಬ್ಲಿಯಲ್ಲಿ 'ಮೋಟಾರು ವಾಹನಗಳ ಶಾಸನ'ದ ಹೆಸರಿನಿಂದ ಬಜೆಟಿನಲ್ಲಿಯ ರೂ. 7,01,300ರ ಗ್ರಾಂಟು ಮಂಜೂರಾತಿಯ ಸೂಚನೆಯು ಸರಕಾರದಿಂದ ಮುಂದೆ ಬಂದಾಗ ಶ್ರೀ ಕೆ. ಆರ್. ಕಾರಂತರು ಮಾಡಿದ ಟೀಕೆ ಮತ್ತು ಅದಕ್ಕೆ ಮಂತ್ರಿ ಶ್ರೀ ಬಿ. ಗೋಪಾಲ ರೆಡ್ಡಿಗಳು ಕೊಟ್ಟ ಉತ್ತರವು ವಿಷಯವನ್ನು ಮತ್ತಷ್ಟು ಮುಂದಟ್ಟು ಮಾಡುವಂತಹುದಿದೆ:-

ಶ್ರೀ ಕಾರಂತರು:- "ಬಸ್ ಕೆಲಸಗಾರರ ಮುಷ್ಕರವನ್ನು ಮುರಿದುಹಾಕುವುದಕ್ಕಾಗಿ ದಕ್ಷಿಣ ಕನ್ನಡ ಜಿಲ್ಲೆಯ 200 ಅಥವಾ 300 ಮಂದಿ ಮಜೂರರನ್ನು ದಸ್ತಗಿರಿ ಮಾಡಲಾಗಿದ್ದಿತು. ಸಮತಾವಾದಿ ಪಕ್ಷದವನಿದ್ದು ಬೊಂಬಾಯಿಯಿಂದ ಬಂದಿದ್ದ ಒಬ್ಬನನ್ನು (ಶ್ರೀ ಡಿ. ಮೆಲ್ಲೊ) ಕೈದು ಮಾಡಿಕೊಂಡೊಯ್ದು ಆ ವೇಳೆ ಎರಡು ದಿನಗಳ ನಂತರ 'ಸಾರ್ವಜನಿಕ ಸ್ಥಿತಿ ಪಾಲನಾ ಕಾನೂನಿ'ನಂತೆ ಅವರ ಮೇಲೆ ಸ್ಥಾನಬದ್ಧತೆಯ ಆಜ್ಞೆ ಜಾರಿಯಾಯಿತು. ಒಂದು ಸಂಪನ್ನು ಸಂಘಟನೆಗೊಳಿಸಿದ ಮಾತ್ರಕ್ಕೆ ಜನರನ್ನು ಜೈಲಿಗಟ್ಟಿ ಸ್ಥಾನಬದ್ಧತೆಯಲ್ಲಿಡುವುದೆಂದಾದರೆ, ಸಂಗತಿಯೆಲ್ಲಿಗೆ ಬಂದೀತೋ ತಿಳಿಯುವುದಿಲ್ಲ. ಚುನಾವಣೆಯು ಸಮೀಪಿಸುತ್ತಿರುವುದರಿಂದ ಸರಕಾರದ ವಿರುದ್ಧ ಮಾತಾಡುವ ಪ್ರತಿಯೊಬ್ಬನನ್ನೂ ಜೈಲಿಗಟ್ಟಬಹುದು ಅಂತಹ ವಿಫಲನವು ಪುನರಾಗಗೊಳ್ಳುವ ಸಂದರ್ಭವೀಗ ತೀರಾ ಸಮೀಪಿಸಿರುವಂತೆ ಕಾಣುತ್ತದೆ" ಎಂದು ಟೀಕಿಸುತ್ತಾ 'ಇಂಡಸ್ಟ್ರಿಯಲ್ ಟ್ರಿಬ್ಯೂನಲಿನ ಎವಾರ್ಡನ್ನು ಜಾರಿಗೆ ತರುವರೆ ಸರಕಾರವು ಪ್ರಯತ್ನವನ್ನೂ ಮಾಡಿಲ್ಲವೆಂದೂ ದಕ್ಷಿಣ ಕನ್ನಡದ ಕೆಲವು ಬಸ್ ಮಾಲಕರು ಅದನ್ನು ಜಾರಿಗೆ ತರಲು ಒಪ್ಪಿದರೂ ತಮ್ಮ ಮಜೂರರ ಸಂಖ್ಯೆಯನ್ನು ತಗ್ಗಿಸಿಕೊಳ್ಳುತ್ತಿರುವರೆಂದೂ, ಕೇವಲ ಒಂದು ಕಂಪೆನಿಯು 200ಕ್ಕೂ ಮಿಕ್ಕಿದ ಕೆಲಸಗಾರರನ್ನು ತೆಗೆದುಹಾಕಿರುವುದೆಂದೂ ಹೇಳಿದರು. ಸರಕಾರದ ಸಹಾನುಭೂತಿಯು ಮಜೂರರ ಅಥವಾ ಸಾರ್ವಜನಿಕರ ಕಡೆಗಿರದೆ ಮಾಲಕರ ಕಡೆಗೇನೇ ಇರುವಂತಿದೆಯೆಂದರು. ಮಾಲಕರು ಎವಾರ್ಡನ್ನು ಜಾರಿಗೆ ತಾರದಿದ್ದರೂ ಟೇಕ್ಸ್ ಹೆಚ್ಚಿದ ನೆವನದಿಂದ ಟಿಕೇಟು ಧಾರಣೆಯೇರಿಸಲು ಸರಕಾರವು ಅನುಮತಿ ಕೊಟ್ಟಿದೆ. ಏರಿದ ತೆರಿಗೆ ರೂ. 300 ಆಗಿದ್ದರೆ ಟಿಕೇಟು ಧಾರಣೆಯೇರಿಸಿದುದರಿಂದ ಬಸ್ ಕಂಪೆನಿಗಳಿಗೆ ರೂ. 468 ದೊರೆಯುತ್ತಿದೆ. ದಕ್ಷಿಣ ಕನ್ನಡದಲ್ಲಿ ತುಂಬಿ ತುಳುಕದ ಬಸ್ಸುಗಳಿಲ್ಲವೆಂದರೂ ಕಂಪೆನಿಗಳು 'ತುತ್ತ ತುದಿಯ ಆರ್ಥಿಕ ದೃಷ್ಟಿ'ಯಿಂದ ಹೆಚ್ಚು ಸರ್ವಿಸುಗಳನ್ನು ಇಡುವದಿಲ್ಲ. ದಕ್ಷಿಣ ಕನ್ನಡದ ಕೆಲವು ಕಂಪೆನಿಗಳು ಸೇಕಡಾ 20ರಿಂದ 25ರಷ್ಟು ಮುನಾಫೆ ಹೊಡೆಯುತ್ತಿವೆ. ಅವರು ಲಾಭ ಹೊಂದಬಾರದು, ಯಾಕಾಗಬೇಕೆಂದು ನಾನನ್ನುವದಿಲ್ಲ. ಸೇಕಡಾ 6 ಅಥವಾ 10ರಷ್ಟೇ ಮುನಾಫೆ ಅವರಿಗಿರಲಿ; ಮಿಕ್ಕ ಅಂಶವು ಪ್ರಥಮತಃ ಕೆಲಸಗಾರರ ಸ್ಥಿತಿ ಸುಧಾರಣೆಗೆ ಹೋಗಲಿ" ಎಂದರು.

ಮಂತ್ರಿ ಶ್ರೀ ಬಿ. ಗೋಪಾಲ ರೆಡ್ಡಿಗಳು ಕೊಟ್ಟ ಉತ್ತರದ ಸಾರಾಂಶವಿಷ್ಟು:- "ಸರ್ವಿಸ್ ಬಸ್ಸುಗಳ ಸಂಖ್ಯೆ ಸಾಕಾಗುವದಿಲ್ಲವೆಂಬ ದೂರು ಕೇಳಬಂದಿದೆ. ಬಸ್ ಮತ್ತು ಲಾರಿಗಳ ಸಂಖ್ಯೆ ಹೆಚ್ಚಾಗಿ ತಮಗೆ ತೊಂದರೆಯಾಗುತ್ತದೆ ಎಂದು ರೈಲ್ವೇಗಳ ದೂರಿದೆ. ಇದನ್ನೂ ಸ್ಥಳೀಯ ಅನುಕೂಲತೆಯನ್ನೂ ಗಮನಿಸಿ, ಹೊಸ ಬಸ್ಸು ಅಥವಾ ಹೊಸ ರಸ್ತೆಗಳನ್ನು ತೆರೆಯುವ ಪರ್ಮಿಟುಗಳನ್ನು ಕೊಡುವ ವಿಚಾರ ಮಾಡಲಿದ್ದೇವೆ. ಶ್ರೀ ಕಾರಂತರೆಂದಂತೆ ಯಾವ ಬಸ್ ಕಂಪೆನಿಯೂ ಸೇ. 20 ಅಥವಾ 25ರಷ್ಟು ಲಾಭ ಸಂಪಾದಿಸಿತೆಂದು ನಾನು ನೆನಸುವದಿಲ್ಲ (ಆಗಲೇ ಶ್ರೀ ಕಾರಂತರೆದ್ದು-"ಒಂದು ಕಂಪೆನಿ ಪಾಲಕರು 1948-49ನೇ ವರುಷದಲ್ಲಿ 20% ಮತ್ತು 1947-48ನೇ ವರುಷದಲ್ಲಿ 25%ರಷ್ಟು ಲಾಭ ಹೊಡೆದಿದ್ದರು." ಅಂದರು. ಆಗ ಶ್ರೀ ರೆಡ್ಡಿಗಳು) ಈ ಸುದ್ದಿಯನ್ನು ಗ್ರಹಿಸಿಕೊಂಡಂತೆಯೇ ಸ್ಪಷ್ಟವಾಗಿ ಆ ಸಂಗತಿಯನ್ನು ತಿಳಿದುಕೊಳ್ಳುವ ಅಂಶವಿದೆ. ಆದರೆ ಬಸ್ಸುಗಳ ಮೇಲಿನ ತೆರಿಗೆ ಹೆಚ್ಚಿರುವಂತೆ ಪೆಟ್ರೋಲು, ಉಪಕರಣಗಳೇ ಮೊದಲಾದವುಗಳ ಬೆಲೆಯೂ ಸೇ. 90ರಷ್ಟು ಏರಿದೆ ಎಂಬುದನ್ನು ಮರೆಯಬಾರದು. ಘಾಟಿಯ ಒಂದು ಸಣ್ಣ ರಸ್ತೆಗೆ ಹೊರತು ಹೊಸ ಸರ್ವಿಸು ಅಥವಾ ರಸ್ತೆಯನ್ನು ತೆರೆಯುವರೆ ದಕ್ಷಿಣ ಕನ್ನಡದಿಂದ ಪರ್ಮಿಟು ಬೇಡಿಕೆ ಬಂದಷ್ಟಾವುದೂ ಇಲ್ಲ. ಎಂತಹ ಒತ್ತಡವೇ ಇರಲಿ, ಸಣ್ಣ ಆಕಾರ ಮತ್ತು ಕಡಿಮೆ ಜನಸಂಖ್ಯೆಯ ದಕ್ಷಿಣ ಕನ್ನಡಕ್ಕೆ ಈಗ ಅಲ್ಲಿರುವ ಸುಮಾರು 165 ಒಳ್ಳೇ ಬಸ್ಸುಗಳು ಸಾಕಾಗುವವೆಂದು ನನ್ನ ಅಭಿಮತ. [illegible]ಟರ್ ಅಸಮ್ಮತಿ ಸೂಚಿಸಿರುವ ಎವಾರ್ಡಿನ ಕಾಯಿದೆಯು ಇದೇ ಮೇ ತಿಂಗಳಿಗೆ ಮುಗಿಯಲಿರುವುದರಿಂದ ಆ ಮೇಲದನ್ನು ರದ್ದು ಮಾಡಲೋ ಹೇಗೆ ಎಂಬ ಸ್ಪಷ್ಟ ನಿರ್ಣಯ ಮಾಡುವೆವು"

---

ಅಲೆವೂರು:- ಶ್ರೀರಾಮ ಮಂದಿರದಲ್ಲಿ ಮಾಮೂಲಿನ ಶ್ರೀರಾಮೋತ್ಸವವು ತಾ. 27-3-50ರಿಂದ ತಾ. 3-4-50ರ ವರೆಗೆ ಜರಗಲಿದೆಯೆಂದೂ ಸರ್ವರಿಗೂ ಸ್ವಾಗತವಿದೆಯೆಂದೂ ಕಾರ್ಯದರ್ಶಿಯವರು ತಿಳಿಸುತ್ತಾರೆ.

## ಸ್ವೀಕಾರ

ಈ ಕೆಳಗಿನ ಪತ್ರಿಕೆಗಳ ಪ್ರಚಾರಾಭ್ಯುದಯ ದಿನಾಚರಣೆಯ ವಿಶೇಷ ಸಂಚಿಕೆಗಳನ್ನು ಆತ್ಮಾದರದಿಂದ ಸ್ವೀಕರಿಸಿದ್ದೇವೆ.

**ನುಡಿ:** 81390 ಅನಂತಭವನ, ಮಾತುಂಗ, ಮುಂಬಯಿ 19.

**ಬೆಳಕು:** ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ, ಕೃಷ್ಣಮೂರ್ತಿಪುರಂ, ಮೈಸೂರು.

**ಜಯಕರ್ನಾಟಕ:** ಧಾರವಾಡ.

**ಸಾಧನಾ:** 132 ಮುಕರಬ್ ಜಂಗ್ ಲೇನ್, ನಾಂಪಳ್ಳಿ ಹೈದರಾಬಾದು.

**ಸರ್ವೋದಯ:** ಹಂಪನಕಟ್ಟೆ, ಮಂಗಳೂರು.

**ನವಜ್ಯೋತಿ:** ನೆಹರೂಬಿಲ್ಡಿಂಗ್, ಶಿವಮೊಗ್ಗ.

**ಜಯಹಿಂದ್:** ಹುಬ್ಬಳ್ಳಿ.

**Divine life:** ಡಿವೈನ್ ಲೈಫ್ ಸೊಸೈಟಿ, ಋಷಿಕೇಶ, ಇದರ ಪರವಾಗಿ. ಶ್ರೀ. ಶಿವಪ್ರೇಮಂವರ ಸಂಪಾದಕತ್ವದಲ್ಲಿ ಹೊರಡುವ ಆಂಗ್ಲ ಮಾಸಪತ್ರಿಕೆ.

**ಕನ್ನಡ ಗುಡಿ:** ಶ್ರೀ. ವರದರಾಜ ಆದ್ಯರ ಸಂಪಾದಕತ್ವದಲ್ಲಿ 26 ಜುಬಿಲಿಯಾಲ್, ದೇಹಲಿ ಯುನಿವರ್ಸಿಟಿ, ಡೆಹಲಿ, ಇಲ್ಲಿಂದ ಹೊರಡುವ ತ್ರೈಮಾಸಿಕ ಪತ್ರಿಕೆ.

**ಸುಧಾಕರ:** ಶ್ರೀ. ಕಮಲದಾನಿ ಗುರುರಾಯರ ಸಂಪಾದಕತ್ವದಲ್ಲಿ ಹುಬ್ಬಳ್ಳಿಯಿಂದ ಹೊರಡುವ ಮಾಸಪತ್ರಿಕೆ.

**ಭಾರತೀ:** ಶ್ರೀ. ಕೆ. ಸಾವಿತ್ರಿಯವರ ಸಂಪಾದಕತ್ವದಲ್ಲಿ ಭಾರತೀ. ಪಬ್ಲಿಶಿಂಗ್ ಹೌಸ್, ಬೊಂಬೇ. 14. ಇಲ್ಲಿಂದ ಹೊರಡುವ ಸಣ್ಣ ಕಥೆಗಳ ಸಂಕಲನ ಪತ್ರಿಕೆ.

**ಸತ್ಯಮೇಲೆ ಶ್ರಾದ್ಧವೇಕೆ?:** ಲೇಖಕ: ಶ್ರೀ. ಬಿ. ಲಕ್ಷ್ಮಣಸೇನ ವಿದ್ಯಾರ್ಥಿ, ಮಂಗಳೂರು. ಬೆಲೆ 0-3-0.

**ವೈಷ್ಣವ ಜನತೋ:** ಅನುವಾದಕ ಶ್ರೀ. ಜ. ಬಿ. ಪೆರಾಡ್ಕರ ಮಂಗಳೂರು.

## ಉಡುಪಿ

ಶ್ರೀ ಕಾಶಿ ಮಠಾಧೀಶರ ಆಗಮನ— ಗೌಡಸಾರಸ್ವತ ಸಮಾಜದ ಧರ್ಮಾಧಿಕಾರಿಗಳಾದ ಶ್ರೀ ಸುಧೀಂದ್ರ ತೀರ್ಥ ಸ್ವಾಮಿಗಳವರು ಇದೇ ತಾ 20ರಲ್ಲು ರಾತ್ರಿ ಉಡುಪಿಗೆ ಆಗಮಿಸಿದರು. ಸಮಾಜದ ಕಡೆಯಿಂದ ಡಾ. ಎಸ್. ಆರ್. ಪೈ, ಶೀ. ಕೊಚ್ಚಿಕಾರ್ ಪದ್ಮನಾಭ ಪೈ, ಶ್ರೀ ಯು. ಕೇಶವ ಕಾಮತ್ ಮೊದಲಾದ ಹತ್ತು ಸಮಸ್ತರು ಕುಂಜಿಬೆಟ್ಟಿನಿಂದ ಸ್ವಾಮಿಗಳವರನ್ನು ಮೆರವಣಿಗೆಯಿಂದ ಶ್ರೀ ವೆಂಕಟರಮಣ ದೇವಸ್ಥಾನಕ್ಕೆ ಕರೆತಂದರು. ಸ್ವಾಮಿಗಳವರು ಕೆಲವೇ ದಿನಗಳ ಮಟ್ಟಿಗೆ ಉಡುಪಿಯಲ್ಲಿ ಮೊಕ್ಕಾಂ ಮಾಡಿರುವುದಾಗಿ ತಿಳಿದು ಬರುತ್ತದೆ.

**ಹಾರಾಟಾಧಿಕಾರಿ (F/o) ವಿ. ಪಿ. ಹೆಗ್ಡೆ**-ಭಾರತ ವಿಮಾನದಳದ F/o ವಿ. ಪಿ. ಹೆಗ್ಡೆಯವರು, ವಿಮಾನ ಚಾಲನಾ ಕೌಶಲ್ಯ ಮತ್ತು ಆಕಸ್ಮಿಕ ಜೀವಿತದ ಸಂಭವನೀಯತೆಯಾಗಿ ಬ್ರಿಟನಿನಲ್ಲಿ ಇತ್ತೀಚೆಗೆ ನಡೆದ ಸ್ಪರ್ಧೆಯಲ್ಲಿ ಗೆದ್ದು 'ಕ್ಲಾರ್ಕಸನ್ ಟ್ರೋಫಿ' (Clarkson trophy) ಯನ್ನು ಪಡೆಕೊಂಡಿದ್ದಾರೆ, ಎಲ್ಲಾ ವಿಧದ ವಿಮಾನ ಹಾರಾಟ ತರಬೇತಿ ಕೊಡುವ ಆರುತಿಂಗಳ ಅವಧಿಯ ಇಂಗ್ಲಾಂಡಿನ 'ಆರ್. ಎ. ಎಫ್. ಸೆಂಟ್ರಲ್ ಟ್ರೈನಿಂಗ್ ಸ್ಕೂಲ್'ನಲ್ಲಿ ತರಬೇತಿ ಪಡೆಯುತ್ತಿದ್ದಾಗಲೇ ಶ್ರೀ ಹೆಗ್ಡೆಯವರು ಈ ಅಪೂರ್ವ ಯೋಗ್ಯತೆ ಪ್ರದರ್ಶಿಸಿದರು. 'ಕ್ಲಾರ್ಕಸನ್ ಟ್ರೋಫಿ'ಯು ಕಾಮನ್‌ವೆಲ್ತ್ ರಾಷ್ಟ್ರಗಳ ವೈಮಾನಿಕರೆಲ್ಲರ ಹೆಬ್ಬಯಕೆಯಾಗಿರುವ ಘನ ಗೌರವ ಚಿಹ್ನೆ- ಈ 'ಬಾರಿ ಅದಕ್ಕಾಗಿ 60 ಮಂದಿ ಉಮೇದ್ವಾರಿಗಳು ಸ್ಪರ್ಧಿಸಿದ್ದರು. ಅದನ್ನು ಗೆದ್ದ ಶ್ರೀ-ವಿ. ಪಿ. ಹೆಗ್ಡೆಯವರು ಜಮ್ಮು ಮತ್ತು ಕಾಶ್ಮೀರ ಯುದ್ಧದಲ್ಲಿ ಸಾಹಸಮಯೀ ಸೇವೆ ಸಲ್ಲಿಸಿದ್ದಕ್ಕಾಗಿ ಭಾರತ ಸರಕಾರದ 'ವೀರ ಚಕ್ರ' ಬಹುಮಾನವನ್ನು ಈ ಮೊದಲೇ ಗಳಿಸಿದ್ದ 19 ಮಂದಿ ಹಿಂದೀ ವೈಮಾನಿಕರಲ್ಲೊಬ್ಬರು. 24 ವರುಷ ಪ್ರಾಯದ ಚತುರ ವೈಮಾನಿಕ ಶ್ರೀ ವಿ. ಪಿ. ಹೆಗ್ಡೆಯವರು ಉಡುಪಿ ತಾಲೂಕಿನವರು-ಉಡುಪಿಯ ಸುಪರಿಚಿತ ಕ್ರಿಕೆಟ್ ಆಟಗಾರ ಶ್ರೀ ವಿ. 'ವಾದಿ'ರಾಜಹೆಗ್ಡೆಯವರ ತಮ್ಮ, ಹಾಗೂ ವಕೀಲ್ ಶ್ರೀ ಬಿ. ಸೀನಪ್ಪ ಹೆಗ್ಡೆಯವರ ಭಾವನೆಂಟ. ಅಮೂಲ್ಯ ಗೌರವ ಗಳಿಸಿಕೊಂಡ ಈ ಕೈಚಳಕದ ವೈಮಾನಿಕನಿಗೆ ಅಭಿನಂದನೆಗಳು.

### ಜಿಲ್ಲಾ ಸಮಾಚಾರ

**ಫಲಿಮಾರು.**- ಫಲಿಮಾರು ಹೊಳೆಗೆ ಹಾಕುವ ಕಟ್ಟಕ್ಕೆ ಸಂಬಂಧಪಟ್ಟ ರೈತರ ಸಭೆಯು ಫಲಿಮಾರುಶಾಲೆಯ ಭವ್ಯನಾದ ಹೋಲಿನಲ್ಲಿ ತಾ 19-3 50ನೇ ರವಿವಾರ ಪೂರ್ವಾಹ್ನ 10 ಘಂಟೆಗೆ ಜರಗಿತು. ಸಭೆಗೆ ಕುಂದಾಪುರ ಡೆಪ್ಯೂಟಿಕಲೆಕ್ಟರರೂ, ಮಂಗಳೂರುಡೆಪ್ಯೂಟಿ ಕಲೆಕ್ಟರರೂ, ಮಂಗಳೂರು ಉಡುಪಿ ತಾಲೋಕುಗಳ ತಹಸಿಲ್‌ದಾರರುಗಳೂ, ಶ್ರೀ ಮೂಲ್ಕಿ ರಾಮಕೃಷ್ಣ ಪೂಂಜರೂ, ಡಾ. ಶ್ಯಾಮ ಸೆಟ್ಟರೂ ಆಗಮಿಸಿದರು. ಫಲಿಮಾರಿನಲ್ಲಿ ಹೊಳೆಗೆ ಸಿಮೆಂಟಿನ ಕಟ್ಟೆ ಕಟ್ಟುವ ಕುರಿತು ಸುದೀರ್ಘ ಚರ್ಚೆನಡೆದು ಮಾನ್ಯ ಸರಕಾರವು ತ್ವರಿತದಲ್ಲಿ ಕಟ್ಟದ ಕೆಲಸವನ್ನು ಪ್ರಾರಂಭಿಸಬೇಕೆಂದೂ, ಸಂಬಂಧಪಟ್ಟ ರೈತರು ನ್ಯಾಯವಾಗಿ ಹೊರಿಸಲ್ಪಡುವ ನೀರಾವರಿ ತೆರಿಗೆಯನ್ನು ಕೊಡಲು ಸಿದ್ಧರಿದ್ದಾರೆಂದೂ ಸರ್ವಾನುಮತದಿಂದ ನಿರ್ಣಯಿಸಲ್ಪಟ್ಟಿತು.

**ಕುಂಬಳೆ:** ನಮ್ಮ ಜಿಲ್ಲಾ ಕಲೆಕ್ಟರ್ ಜನಾಬ್ ಸಯ್ಯದ್ ಅಹ್ಮದ್ ಸಾಹೇಬ್ ಅವರು ತಾ. 12ರಂದು ಆರಿಕ್ಕಾಡಿ ಗ್ರಾಮದಲ್ಲಿ ಮಾಡುತ್ತಿರುವ ಗ್ರಾಮಾಭಿವೃದ್ಧಿ ಕೆಲಸಗಳನ್ನು ನೋಡಿರುವರು.

ಇಲ್ಲಿಂದ ವರ್ಗವಾಗಿ ಹೋಗುವ ರೆವಿನ್ಯೂ ಇನ್‌ಸ್ಪೆಕ್ಟರ್ ಶ್ರೀ ಟಿ ಎನ್. ಡಿಸೋಜ ಬಿ. ಎ. ಯವರಿಗೆ ಇಲ್ಲಿನವರ ಪರವಾಗಿ ತಾ. 12ರಂದು ರೆವರೆಂಡ್ ಫಾದರ್ ಎಡ್ವಾರ್ಡ್ ಸಾಲ್ಡಾನವರ ಅಧ್ಯಕ್ಷತೆಯಲ್ಲೂ ತಾ- 14ರಂದು ಗ್ರಾಮೋದ್ಯೋಗಸ್ಥರ ಪರವಾಗಿ ಜಿಲ್ಲಾ ಬೋರ್ಡು ಸದಸ್ಯ ಶ್ರೀ ದೇವಪ್ಪ ಆಳ್ವರ ಅಧ್ಯಕ್ಷತೆಯಲ್ಲೂ ಬೀಳ್ಕೊಡುವ ಸತ್ಕಾರ ಸಭೆಯು ಜರಗಿತು.

(೫ನೇ ಪುಟದಿಂದ ಮುಂದುವರಿದುದು)

ರು 5000 ಮಂದಿ ಸಾಂತಾಲ್ ನಿರಾಶ್ರಿತರನ್ನು ಪೂರ್ವ ಬಂಗಾಳದ ಪೋಲಿಸರೂ ಸಶಸ್ತ್ರ ಮುಸ್ಲಿಂ ಸ್ವಯಂಸೇವಕ ದಳ ಅನ್ಸಾರರೂ ಕೋಟೆಗಟ್ಟಿ ನಿಂತು ತಡೆದು ಗುಂಡು ಹಾರಿಸಿಕಡಿಮೆಯೆಂದರೂ ಮೂರು ಮಂದಿ ಸತ್ತು ಹಲವರು ಜಖಂಗೊಂಡರೆಂಬ ಸುದ್ದಿಯಿದೆ. ಆ ಯಮದೂತರ ಕಣ್ಣು ತಪ್ಪಿಸಿ ಭಾರತದ ಗಡಿಯೊಳಗೆ ನುಸುಳಿಕೊಂಡವರು ಒಂದು ಹೆಣವನ್ನೂ ಜಖಂಗೊಂಡ ಹಲವರನ್ನೂ ಇತ್ತ ತಂದಿದ್ದರು. ಪೂರ್ವ ಬಂಗಾಳದ ಖಿಲ್ನಿರಾ ಮತ್ತಿತರ ಹಳ್ಳಿಗಳಲ್ಲಿ ದಿಸೆಂಬರದಲ್ಲಿ ನಡೆದಿದ್ದ ಹಿಂದುಗಳ ಮೇಲಿನ ಅತ್ಯಾಚಾರದ ಸತ್ಯ ಶೋಧನೆಗಾಗಿ ಅಲ್ಲಿಯ ಜಿಲ್ಲಾ ಮೆಜಿಸ್ಟ್ರೇಟರು ಐವರು ಹಿಂದು ಮತ್ತು ಇಬ್ಬರುಮುಸ್ಲಿಂ ಸದಸ್ಯರಿದ್ದ ಸಮಿತಿಯೊಂದನ್ನು ನೇಮಿಸಿದ್ದರು. ಈ ಸಮಿತಿಯು ಸರಿಯಾದ ತನಿಖೆ ನಂತರ, ಭಾರತದ ಪತ್ರಿಕೆಗಳಲ್ಲಿ ಬಂದಿದ್ದ ಸುದ್ದಿಯನ್ನೇ ಹೋಲುವ ವರದಿಯೊಂದನ್ನೊಪ್ಪಿಸಿದ್ದಿತು. ಈಗ ಆ ಸಮಿತಿಯ 5 ಮಂದಿ ಹಿಂದೂ ಸದಸ್ಯರನ್ನೂ ದಸ್ತಗಿರಿ ಮಾಡಲಾಗಿದೆ. ಪ್ರಾಣಭೀತ ಹಿಂದುಗಳಿಗೆ ಆಶ್ರಯವಿತ್ತುದಕ್ಕಾಗಿ ದಯಾಳು ಮುಸ್ಲಿಮರ ಕೊಲೆಯಾದ ವಾರ್ತೆಗಳು ಕೂಡಾ ಕೇಳಿಬರುತ್ತಿವೆ ಪೂರ್ವ ಬಂಗಾಳದ ಸತ್ಯ ವಾರ್ತೆ ಯಾವುದೂ ಹೊರಬೀಳದಂತೆ ಅಲ್ಲಿಯ ಸರಕಾರ ಹೇರಿರುವ ಕಠೋರ ನಿರ್ಬಂಧಗಳಂತೂ ಈಗಲೂ ಇವೆ. ಆ ಕಡೆಯ ಅತ್ಯಾಚಾರಗಳಪ್ರತಿಕ್ರಿಯೆಯೋ ಎಂಬಂತೆ ಕಳೆದ ವಾರದಲ್ಲಿ ಬೊಂಬಾಯಿಯ ಕೆಲವೆಡೆ ಸಣ್ಣ ಪರಿಮಾಣದ ಜಾತೀಯ ಗಲಭೆ, ಚೂರೀ ಇರಿತಗಳಾಗಿದ್ದುವು ಆದರೆ ಸರಕಾರವು ಕರ್ಫ್ಯೂ ಆಜ್ಞೆ ಮತ್ತು ಕಠಿಣ ಬಂದೋಬಸ್ತನ್ನು ಕೈಕೊಂಡುದರಿಂದ ಅದಲ್ಲೇ ನಿಂತು ಹೋಗಿದೆ. ಪಾಕಿಸ್ತಾನದ ಇಂತಹ ಅತಿರೇಕಾಚರಣೆಯ ದಿಂದಲೂ ಭಾರತ ಸರಕಾರವು ಪ್ರದರ್ಶಿಸಿದ ಅಸಾಧಾರಣ ತಾಳ್ಮೆಯ ದೆಸೆಯಿಂದ ಪರಿಸ್ಥಿತಿಯು ಎಲ್ಲೆಲ್ಲೂ ಮತ್ತೊಮ್ಮೆ ಶಾಂತವಾಗುವ ಲಕ್ಷಣಗಳು ಕಾಣುತ್ತಿವೆ.


ನಮ್ಮ ಸ್ವಂತ ಸುದ್ದಿಗಾರರಿಂದ

**ಸುರಲೋಕದ ದೇವತೆಗಳು ನರಲೋಕದಲ್ಲಿ.**

ಯಾರಿಗೂ ತಿಳಿಯದಂತೆ ಮೊನ್ನೆಮೊನ್ನೆ ಇಂದ್ರನು ಬಂದು ಚಂದ್ರಲೇಖ ನೋಡಿದನಂತೆ.

ಇದು ಮಾತ್ರ ಗುಟ್ಟಾಗಿರಲಿ.

ಜೆಮಿನಿಯವರ **ಚಂದ್ರಲೇಖ** (ತಮಿಳು)

ಟಿ. ಆರ್. ರಾಜಕುಮಾರಿ, ಎಂ ಕೆ. ರಾಧ, ರಂಜನ್.

ತಾರೀಕು 24—3—1950 ರಿಂದ

**ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ-**

ಬರುವುದು

ಜೆಮಿನಿಯವರ **ಕಲ್ಪನಾ** (ಉದಯಶಂಕರ ಮತ್ತು ಪಾರ್ಟಿ)


## ದಿ ವಿಜಯಾ ಬೇಂಕ್ ಲಿಮಿಟೆಡ್, ಬೈಂದೂರು, ದ. ಕ.

### ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲವನ್ನು ರಜಿಸ್ಟ್ರಿ ನೋಟೀಸು ಕೊಟ್ಟರೂ, ಅಸಲ್ಲ-ವ-ಬಡ್ಡಿ ಯಾವುದನ್ನೂ ಈ ತನಕವೂ ಕೊಡದಿರುವುದರಿಂದ ಸದ್ರಿಯವರು ಈಡಿಟ್ಟಿರುವ ಚಿನ್ನಾಭರಣಗಳನ್ನು ಇದೇ ಎಪ್ರಿಲ್ ತಿಂಗಳ ತಾರೀಕು 15ನೇ ಶನಿವಾರ ಮಧ್ಯಾಹ್ನ ಗಂಟೆ 2-0ಕ್ಕೆ ಯಾ ಬೇಂಕಿಗೆ ಯುಕ್ತತೋರಿದ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ ಬಹಿರಂಗವಾಗಿ ಬೇಂಕಿನ ವಠಾರದಲ್ಲಿ ಹರಾಜು ಮಾಡಲಾದೀತು. ತಿಳಿದಿರಲಿ.

| ಸಾಲದ ನಂಬರು | ಹೆಸರು ಮತ್ತು ವಿಳಾಸ | ಅಸಲು ಮೊಬಲಗು |
|---|---|---|
| 443/6-7 | ಶ್ರೀ ಸೋಕನ ದುರ್ಗ, ಆಳಿವೆ ಕೋಡಿ ದಾರನ ಮಗ, ತಾರಾಪತಿ, ಪಡುವರಿ ಗ್ರಾಮ, ಬೈಂದೂರು. | 86-0-0 |
| 657/6-7 | ಶ್ರೀ ಯು. ಶ್ರೀನಿವಾಸ ಸೇಟ್, ರಘುನಾಥ ಸೇಟರ ಮಗ, ಉಪ್ಪುಂದ. | 5-0-0 |
| 832/6-7 | ಜನಾಬ್ ಅಬ್ಬಾಸ್ ಬ್ಯಾರಿ, ಶೇಕ್ ಬ್ಯಾರಿಯ ಮಗ, ಮಾವಡ ಬಾಬಾ ಸಾಹೇಬರ ಹಿತ್ತಲಲ್ಲಿರುವವರು, ಬೈಂದೂರು. | 5-0-0 |
| 885/6-7 | ಶ್ರೀ ಗುಡೆಮನೆ ಕೇರಯ್ಯ ಸೇರುಗಾರ, ನಾರಾಯಣ ಸೇರುಗಾರರ ಮಗ, ಮಯ್ಯಾಡಿ, ಬೈಂದೂರು. | 20-0-0 |
| 946/6-7 | ಶ್ರೀ ಕೊತ್ತಿ ಕೃಷ್ಣ ಸೇಟ್, ಸುಬ್ರಾಯಸೇಟರ ಮಗ, ಸೊನಗಾರಕೇರಿ, ಬೈಂದೂರು. | 12-0-0 |
| 1058/6-7 | ಶ್ರೀ ಜೋಗುಮನೆ ಗೋವಿಂದ, ಮಂಜನ ಆಳಿಯ, ಮಯ್ಯಾಡಿ, ಬೈಂದೂರು. | 80-0-0 |
| 129/7-8 | ಶ್ರೀ ಯು. ಬುದ್ಧಿವಂತಸೆಟ್ಟಿ, ಕುಪ್ಪಯ್ಯ ಸೆಟ್ಟರ ಆಳಿಯ, ಉಪ್ಪುಂದ. | 50-0-0 |
| 369/7-8 | ಜನಾಬ್ ಅಜ್ಮುದ್ದೀನ್ ಸಾಹೇಬ್, ಶಾಬು ಬುಡಾನ್ ಸಾಹೇಬರ ಮಗ, ಮುಸಲ್ಮಾನರ ಕೇರಿ, ಬೈಂದೂರು. | 15-0-0 |
| 630/7-8 | ಶ್ರೀ ಡೆವಿಡ್ ನಜ್ರತ್, ಬಾಲ್ತು ನಜ್ರತರ ಮಗ, ಕಲ್ಲಾಗ್ರಹಿತ್ಲು, ಪಡುವರಿ ಗ್ರಾಮ, ಬೈಂದೂರು. | 6-0-0 |

ಬೈಂದೂರು, 15-3-1950 — ಎಚ್. ರಾಜೀವ ಸೆಟ್ಟಿ, ಏಜಂಟ್.


ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

**'ಮಹಾಜನ'**

**ಕಾಸರಗೋಡು**

ಇವರ ತಯಾರಿಕೆಗಳನ್ನು ವಿಚಾರಿಸಿರಿ.



ಬಿಳಿ ಕಾಗದ! ನಾಜೂಕಿನ ಬೈಂಡು!

**1950ನೇ ಇಸವಿಯ**

**ಪಾಕೆಟ್ ಡೈರಿಗಳು**

ದೊಡ್ಡದು [ಕೆಲಿಕೊ ಬೈಂಡ್] 1-12-0
„ [ಸಾದಾ] 1-8-0
ಸಣ್ಣದು [ಕೆಲಿಕೊ] 1-4-0
„ [ಸಾದಾ] 0-12-0

(ಟಪ್ಪಾಲು ಖರ್ಚು ಪ್ರತ್ಯೇಕ.)

ಸಿಗುವ ಸ್ಥಳಗಳು:—

**ನವಭಾರತ ಬುಕ್ ಡಿಪೊ, ಉಡುಪಿ.**

**ನವಯುಗ ಪ್ರೆಸ್, ಉಡುಪಿ.**

## ಮಂಗಳೂರು

**ಬಟ್ಟೆ ಮತ್ತು ನೂಲು ನಿಯಂತ್ರಣಾಜ್ಞೆಗಳಂತೆ ಕೊಡಲಾಗುವ ಪರ್ಮಿಟುಗಳ ಅವಧಿಯು ತಾರೀಖು** ..-4-50ಕ್ಕೆ ಅಂತ್ಯವಾಗುವುದರಿಂದ, ಹೊಸ ಪರ್ಮಿಟುಗಳಿಗಾಗಿ ಅರ್ಜಿಗಳನ್ನೂ ಆ ಬಗ್ಗೆ ಸಲ್ಲತಕ್ಕ ಹಣವನ್ನೂ ಇದೇ ತಿಂಗಳ ತಾ..ರೊಳಗೆ ಕಳುಹಿಸತಕ್ಕದ್ದೆಂದು ಟೆಕ್ಸ್ಟೈಲ್ ಕಂಟ್ರೋಲ್ ಆಫೀಸರರ ಪ್ರಕಟಣೆ ಹೊರಟಿದೆ.

**ಸಂಗೀತಕಚೇರಿ:-** ಆಲ್ ಇಂಡಿಯಾ ರೇಡಿಯೋ ಗಾಯಕ ಮತ್ತು ದಿವಂಗತ ಸಂಗೀತ ರತ್ನ ಖಾನ್‌ಸಾಹೇಬ್ ಅಬ್ದುಲ್ ಕರೀಂ ಖಾನರವರ ಶಿಷ್ಯರಾದ ಕೊಲ್ಹಾಪುರದ ಶ್ರೀ ಶಂಕರಬಳವಂತ ಮಾನೆ ಇವರ ಸಂಗೀತ ಕಚೇರಿಯು ಕಳೆದ ತಾ 15ರಲ್ಲು ರಾತ್ರಿ ಶ್ರೀ ಎನ್. ಎಮ್. ಅಡ್ಯಂತಾಯರವರ ಅಧ್ಯಕ್ಷತೆಯಲ್ಲಿ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಜರಗಿತು.

**ಸತ್ಕಾರಕೂಟ:-** ಬೊಂಬಾಯಿಯ ಲಲಿತಕಲಾ ನಾಟಕ ಸಭೆಯ ಸ್ಥಾಪಕರಾದ ಶ್ರೀ ಬಿ. ಸುಂದರ ನಾಯ್ಕರಿಗೆ ಮಾಸ್ತರ್ ಸೇವಾಡಿಗಾರರ ಸಂಗೀತಶಾಲೆಯಲ್ಲಿ ಶ್ರೀ ಎಮ್. ಎ. ದೇವಾಡಿಗರ್ ಮತ್ತು ಶ್ರೀ ಮಂಜುನಾಥ ಕೃಪಾಪೋಷಿತ ನಾಟಕಸಭಾದವರು ಕಳೆದ ತಾ 14ರಲ್ಲು ರಾತ್ರಿ ಶ್ರೀ ಪಿ. ವಿ. ಬಾಳಿಗರ ಅಧ್ಯಕ್ಷತೆಯಲ್ಲಿ ಒಂದು ಸತ್ಕಾರ ಕೂಟವನ್ನಿತ್ತು ಗೌರವಿಸಿದರು. ಶ್ರೀ ನಾಯ್ಕರು ಬೊಂಬಾಯಿಯಲ್ಲಿ ನಾಟಕಕ್ಕಾಗಿ ದುಡಿದ ತಮ್ಮ ಹದಿನೈದು ವರ್ಷಗಳ ಅನುಭವವನ್ನು ವಿವರಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಬೊಂಬಾಯಿಯಲ್ಲಿಯ ಕನ್ನಡಿಗರು ಮಾಡುತ್ತಿರುವ ಕನ್ನಡಸೇವೆ ಮತ್ತು ಕಲಾಸೇವೆಯನ್ನು ಪ್ರಶಂಸಿಸಿದರು.

**ರೈಲುಸಮಯದಲ್ಲಿ ಬದಲಾವಣೆ:** ಇದೇ ತಾ 15ರಿಂದ ರೈಲುಸಮಯದಲ್ಲಿ ತುಸು ಬದಲಾವಣೆಗಳನ್ನು ಮಾಡಲಾಗಿದೆ. ಸಂಜೆ 4. 20ಕ್ಕೆ ಮಂಗಳೂರಿನಿಂದ ಹೊರಡುತ್ತಿದ್ದ 'ಮಲಬಾರ್ ಎಕ್ಸ್‌ಪ್ರೆಸ್'ನ್ನು ನಿಲ್ಲಿಸಿ ಅದರ ಬದಲು ಮೂರನೇ ತರಗತಿಯ ಪೆಸೆಂಜರೊಂದನ್ನು ಇಡಲಾಗಿದೆ. ಅದು ಶೋರನೂರ್ ವರೆಗೆ ಮಾತ್ರ ಹೋಗುವುದು. ಅಪರಾಹ್ನ 12 55ಕ್ಕೆ ಮಂಗಳೂರಿನಿಂದ ಹೊರಟು ಬೆಳಗ್ಗೆ 9. 25ಕ್ಕೆ ಇಲ್ಲಿಗೆ ಬರುವುದು. ಇತರ ಬಂಡಿಗಳ ವೇಳೆಯಲ್ಲಿ ವ್ಯತ್ಯಾಸವಿಲ್ಲ.

**ಮೋಟಾರು ಕೆಲಸಗಾರರ ಮುಷ್ಕರದ ಫಲ:—** ಫೆಬ್ರವರಿತಿಂಗಳಲ್ಲಿ ಮುಷ್ಕರದ ನೋಟೀಸನ್ನು ಹಿಂತೆಗೆದುಕೊಂಡ ದ. ಕ. ಜಿಲ್ಲಾ ಒಟೋಮೊಬ್ಯಾಲ್ ಕೆಲಸಗಾರ ಸಂಘದ ಸಲಹೆಗಾರ ಶ್ರೀ. ಬಿ. ಎಸ್. ಭಾಸ್ಕರ ರೈಗಳು ಈಚೆಗೆ ಮದ್ರಾಸಿಗೆ ಹೋಗಿ ಮಾನ್ಯ ಮಂತ್ರಿಗಳಾದ ಬಿ. ಗೋಪಾಲರೆಡ್ಡಿ, ಕೆ ಸೀತಾರಾಮರೆಡ್ಡಿ, ಎ. ಬಿ. ಶೆಟ್ಟಿ ಮತ್ತು ಸರಕಾರದ ಮುಖ್ಯ ಕಾರ್ಯದರ್ಶಿಗಳನ್ನು ಕಂಡು ಇಲ್ಲಿನ ಮೋಟಾರ್ ಕೆಲಸಗಾರರ ಪರಿಸ್ಥಿತಿಯನ್ನು ತಿಳಿಸಿ ಎವಾರ್ಡು ಕೊಡಿಸುವುದರ ಅಗತ್ಯವನ್ನವರಿಗೆ ತಿಳಿಸಿದರು. ಶ್ರೀ ಕೆ. ಆರ್. ಕಾರಂತರು ತಮ್ಮ ಭಾಷಣದಲ್ಲೂ ಈ ವಿಚಾರವನ್ನೇ ತೆಗೆದುಕೊಂಡರು. ಹೀಗಾಗಿ ಇದೇ ತಾ 14ರಲ್ಲು ಲೇಬರ್ ಕಮಿಶನರಾದ ಶ್ರೀ ಸಿ. ಜೆ. ರೆಡ್ಡಿಯವರು ಮಂಗಳೂರಿಗೆ ಬಂದು ಮರುದಿನ ಶ್ರೀಗಳಾದ ಕೆ. ಆರ್ ಕಾರಂತ, ಡಿ. ಮಂಜಯ್ಯ ಹೆಗ್ಡೆ, ಎಲ್. ಸಿ. ಪಾಯಿಸ್ ಮೊದಲಾದವರನ್ನೂ ಶ್ರೀಗಳಾದ ವಿ. ಎಸ್. ಕುಡ್ವಾ, ಎ. ರಾಮಮೋಹನರಾವ್, ಶಂಭಟ್ಟರು ಮೊದಲಾಗಿ ಎಲ್ಲಾ ಬಸ್ಸು ಮಾಲಿಕ ಪ್ರತಿನಿಧಿಗಳನ್ನೂ, ಒಟೋಮೊಬ್ಯಾಲ್ ಯೂನಿಯನ್ನ ಕಾರ್ಯದರ್ಶಿ ಶ್ರೀ ಅಪ್ಪು ಭವರನ್ನೂ ಕೂಡಿಸಿ ಎವಾರ್ಡಿನ ಕುರಿತು ಚರ್ಚಿಸಿದರು. ಚರ್ಚೆಯಲ್ಲಿ ಎವಾರ್ಡು ಕೊಡಲು ದರವನ್ನು ನ್ಯಾಯಾಲಿಗೆ ಬಂಧ ತ್ತು ಪೈ ಮಾಡಬೇಕೆಂದು ಮಾಲಿಕರು ವಾದಿಸಿದರು. ಆದರೆ ಶ್ರೀ ಕಾರಂತರೇ ಮೊದಲ ದ ಪ್ರತಿನಿಧಿಗಳು ಒಪ್ಪುವಂತಿಲ್ಲವೆಂಬುದನ್ನವರು ಸ್ಪಷ್ಟಪಡಿಸಿದಮೇಲೆ 1950ನೆ ಇಸವಿ ಮಾರ್ಚ ತಾ 1ರಿಂದ ಎವಾರ್ಡಿನ ಕೆಲವಂಶವನ್ನು ಜಾರಿಗೆ ತರುವ ಒಪ್ಪಂದವಾಯಿತು. ಈ ಒಪ್ಪಂದದಲ್ಲಿ ಯಾವ ಕಂಪೆನಿಯೂ ತನ್ನ ಕೆಲಸಗಾರರನ್ನು ಮುಷ್ಕರದ ಹೇತುವಿನಿಂದ ತೆಗೆಯಬಾರದೆಂದೂ, ಈಗಾಗಲೆ ತೆಗೆದವರನ್ನು ಪುನಃ ಸೇರಿಸಬೇಕೆಂದೂ ಶರ್ತಹಾಕಲಾಗಿದೆ ಎಂದಿದೆ ಕೆಲಸಗಾರರ ಕಡೆಯಿಂದ ಹೇಳಲಾಗಿದೆ. ಮುಷ್ಕರ ಕಾಲದಲ್ಲಿ ಬಂಧಿಸಲ್ಪಟ್ಟ ಕೆನರಾ ಮೋಟಾರ್ ಕೆಲಸಗಾರರ ಸಂಘದ ಕಾರ್ಯದರ್ಶಿ ಪಿ. ಡಿ. ಮೆಲ್ಲೋರವರನ್ನು ಸರಕಾರವು ಇತ್ತೀಚೆಗಿನ ಪ್ರತಿಬಂಧಕ ಕಾನೂನಿನನ್ವಯವಾಗಿ ದಿಗ್ಬಂಧನಕ್ಕೊಳಪಡಿಸಿ ಇದೇ ತಾ 14ರಲ್ಲು ವೆಲ್ಲೂರಿಗೆ ಕಳುಹಿಸಿದೆ. ಅದರೊಂದಿಗೆ ಬಂಧಿತರಾದ ಶ್ರೀ ಎನ್. ಎಮ್. ರಾಮಕೃಷ್ಣರಾಯರನ್ನು ಜಾಮೀನುಮೇಲೆ ಬಿಡಲಾಗಿದೆ. ಇವರೆಲ್ಲರ ವಿಚಾರಣೆಯು ಸದ್ಯ ಆಗಲಿದೆ.


"ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

**ಗೀತೆಯ ಕೈಗನ್ನಡಿ**

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು–ದಿ| ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯು ಮಾತುಗಳ ರೂಪದಲ್ಲಿಳಿದ ಛಟ್ಟೆಯಾಗಿ ಎದ್ದು ಕಾಣುವುದು.

**400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.**

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

**ನವಯುಗ ಪ್ರೆಸ್, ಉಡುಪಿ, ದ. ಕನ್ನಡ.**

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.



"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ, ಇವರ

**ನವಜೀವಾತು ಎಂಬ ಸೂತಿಕಾ ರಸಾಯನ**

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಸುಲಭವಾಗಿರುವುದು.



ಹೆಚ್ಚಿನ ಮಾಹಿತಿಗೆ—ಡಾ| ಯಂ. ಸಿ. ಶಾಸ್ತ್ರೀ, ಯಲ್. ಐ ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಸ್ಥಾನಿಕ ಸ್ವರು:—ಡಾ| ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.


### Notice

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

S. C. 23/50.

ವಾದಿ: ಅಣ್ಣಪ್ಪ ಶೆಟ್ಟಿ.
ಪ್ರತಿವಾದಿ: ಶಿವರಾಮ ಶೆಟ್ಟಿ.

ಉಡುಪಿ ತಾಲ್ಲೂಕು ಕಾಡೂರು ಗ್ರಾಮದ ಮುಂಡಾಡಿ ತೆಂಕುಬೆಟ್ಟುನಲ್ಲಿರುವ ಪುಟ್ಟಣ್ಣ ಶೆಟ್ಟರ ಅಳಿಯ ಶಿವರಾಮ ಶೆಟ್ಟಿ (ಪ್ರತಿವಾದಿ) ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಪ್ರತಿವಾದಿಯಿಂದ ವಾದಿಗೆ ಬರಾ ಆಗುವ ಹಣವನ್ನು ಬರಮಾಡಿಕೊಳ್ಳುವ ಬಗ್ಗೆ ವಾದಿ ಜರಗಿಸಿದ ಮೇಲಣ ದಾವೆ ತಾ. 10-4-50ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ಕೋರ್ಟು ಮುಂದೆ ಹಾಜರಾಗಿ ಸದ್ರಿ ತಾರೀಕಿನಲ್ಲಿ ಸ್ವತಹಾ ವಕೀಲರ ಮುಖಾಂತ್ರ ಉದಾಹರಣೆ ದಾಖಲು ಮಾಡತಕ್ಕದೆಂಬ ಸಂಗತಿ ನಿಮಗೆ ಈ ಮೂಲಕ ತಿಳಿಸಲಾಗಿದೆ.

By order of the court

**A. N Rao.**
Advocate for Plaintiff
Coondapoor 20—3—50.

### Notice

ದಕ್ಷಿಣಕನ್ನಡ ಜಿಲ್ಲಾ ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮ ನಂಬ್ರ 297/49.

ಮಾಣಿ ಅಂಮ ಕೂಡಾ —ವಾದಿಯರು.
ಮತ್ತು ನಾಯರ ಕೂಡಾ. ಪ್ರತಿವಾದಿಯರು.

21ನೇ ಪ್ರತಿವಾದಿ ಕೊಡೊತ ಕುಂಞಾರಾಮ ನಾಯರ, ಕುಂಞರಾಮನ ನಾಯರ ಅಳಿಯ, ಕಾಸರಗೋಡು ತಾಲೂಕು ಮಡಿಕ್ಕೈ ಗ್ರಾಮದ ಉಟಿಕಾನ ಎಂಬಲ್ಲಿ ಇರುವವಾ 23ನೇ ಪ್ರತಿವಾದಿಳು ಲಕ್ಷ್ಮಿ. ಮೊಳೊತ ಕುಂಞಂಬು ನಾಯರ ಮಗಳು ವ ಕಂಣನ ನಾಯರ ಹೆಂಡ್ತಿ. ಬೇಡಡ್ಕ ಗ್ರಾಮದ ಕುವಾರು ಎಂಬಲ್ಲಿರುವವಳು—ಇವರೀಗೆ.

ಮೇಲ್ಕಂಡ ವ್ಯಾಜ್ಯದ ವಾದಿಯರು ದಾವಾ ಆಸ್ತಿಗಳಲ್ಲಿ ತಮಗೆ ಸಿಕ್ಕತಕ್ಕ 18/31ನೇ ಅಂಶದ ಆಸ್ತಿಯನ್ನು ಪಾಲು ವಿಂಗಡಿಸಿ ಸ್ವಾಧೀನ ಕೊಡಿಸಬೇಕಾಗಿ ದಾಕಲು ಮಾಡಿದ ವ್ಯಾಜ್ಯವು ಇದೇ ಬರುವ ಎಪ್ರಿಲ್ ತಿಂಗಳ ತಾ. 8ಕ್ಕೆ ಇಟ್ಟಿರುವದರಿಂದ ಆ ಕುರಿತು ಆಕ್ಷೇಪ ಉಳ್ಳವರು ತಮ್ಮ ಉದಾಹರಣೆಯನ್ನು ಸದ್ರಿ ವ್ಯಾದೆಗೆ ಹಾಜ್ರುಪಡಿಸುವರೆ ತಪ್ಪಿದ್ದಲ್ಲಿ ಸದ್ರಿಯವರನ್ನು ಗೈರ ಹಾಜ್ರಿ ಎಂಬದಾಗಿ ಡಿಕ್ಲೇರ ಮಾಡಿ ಮೇಲ್ಕಂಡ ವ್ಯಾಜ್ಯವನ್ನು ತನಿಖೆಗೆ ಮುಂದರಿಸೋಣಾದೀತು.

**K. N. Kodoth.**
Advocate for Plff.
ತಾರೀಖು 17-3-50.





Approved firm by the Govt. of Mysore
Certificated by the Agent of the Govt' of

*For Life Assurance*

CONSULT

**THE NEW GUARDIAN OF INDIA**
LIFE ASSURANCE Co. LTD.
(Established 1934)

Chairman: **Sri. M. C T. M Chidambaram Chettyar.**

A Policy in this progressive Life Office is a good investment; its Agency is a valuable business connection.

MANGALORE BRANCH:
K. S. R. Road,
Hampankatta, Mangalore

HEAD OFFICE:
United India Life Building,
P B No 142, MADRAS.

**ಮೂಲ್ಕಿ ಬೇಂಕ್,**
ಲಿಮಿಟೆಡ್, ಮೂಲ್ಕಿ

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

**The Moolky Bank Ltd.,**
**Moolky, S K**

## ಮಂಗಳೂರು

**ದ. ಕ. ಜಿಲ್ಲಾ ವೈದ್ಯರ ಸಭೆಯು** ಇದೇ ತಾ 8ರಲ್ಲು ಶ್ರೀ. ಎಲ್. ಸಿ. ಪಾಯ ಸರ ಅಧ್ಯಕ್ಷತೆಯಲ್ಲಿ ಜರಗಿತು. ಸಭಿಕರಲ್ಲಿ ಹಲವರು ಸರಕಾರವು ದೇಶೀಯ ವೈದ್ಯಕ್ಕೆ ದಿನೇದಿನೇತಂದೊಡ್ಡುತ್ತಿರುವ ಕಷ್ಟಗಳನ್ನೂ ನಿಂನನಿರೋಧ ಕಾನೂನಿನಿಂದ ಆಯುರ್ವೇದದ ಅಸವಾರಿಷ್ಟಗಳನ್ನು ವೈದ್ಯರು ತಯಾರಿಸುವುದೇ ಅಸಾಧ್ಯವಾಗುತ್ತ ಬರುತ್ತಿದೆಯೆಂದೂ ಮಾತನಾಡಿದರು. ಶ್ರೀ ಯು. ಪಿ. ಮಲ್ಯರು ಸರಕಾರದ ಧೋರಣೆಯು ದೇಶೀಯ ವೈದ್ಯಕ್ಕೆ ಸಹಾಯಕರವಾಗಿದೆಯೇ ಹೊರತು ಅನ್ಯಥಾ ಇಲ್ಲವೆಂದೂ ವೈದ್ಯರಿಗೆ ನಿಜವಾಗಿ ಆಗುತ್ತಿರುವ ಅನ್ಯಾಯಗಳನ್ನು ಸರಿಪಡಿಸಲು ತಾವು ಸಿದ್ಧರಾಗಿದ್ದೇವೆಂದೂ ವಿವರಿಸಿದರು. ಅಧ್ಯಕ್ಷರು ತಾವು ಆಯುರ್ವೇದದಲ್ಲಿ ತುಂಬಾ ವಿಶ್ವಾಸವುಳ್ಳವರೆಂದೂ ತಮ್ಮಿಂದಾದಷ್ಟನ್ನೆಲ್ಲಾ ಮಾಡುವೆವೆಂದೂ ಭರವಸೆಯಿತ್ತರು. ಕೊನೆಗೆ ಆಸವಾರಿಷ್ಟಗಳನ್ನು ಮದ್ಯಪಾನ ನಿರೋಧ ಕಾನೂನಿನಿಂದ ವಿಶೇಷಿಸಗೊಳಿಸುವ ಠರಾವು ಪಾಸಾಯಿತು.

ಶ್ರೀ ಯು ಪಿ. ಮಲ್ಯರು ತಮ್ಮ ಭಾಷಣದಲ್ಲಿ ತಾವು ಆ ಠರಾವಿನಂತೆ ಹುಕುಂ ಕೊಡಿಸಲು ಮದ್ರಾಸಿನಲ್ಲಿ ಸಾಕಷ್ಟು ಪ್ರಯತ್ನಮಾಡಿ ಬಂದಿರುವೆನೆಂದು ಭರವಸೆಯಿತ್ತರು. ಧನ್ಯವಾದಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

**ಜಿಲ್ಲಾ ಇಂಜಿನಿಯರರ ಸಂಘ**— ಈಗ ಸ್ಥಾಪನೆಯಾಯಿತು. ಅದರ ಉದ್ಘಾಟನ ವಿಧಿಯನ್ನು ಮದ್ರಾಸು ಸರಕಾರದ ಮುಖ್ಯ ವಿದ್ಯುತ್ ಇಂಜಿನಿಯರ್ ಶ್ರೀ ಕೆ.ವಿ. ಕಾರಂತರು ಮಾಡಿದರು. ಸಭಾಧ್ಯಕ್ಷತೆಯನ್ನು ಶ್ರೀ ವಿ. ಎಸ್. ಕುದ್ವರು ವಹಿಸಿದ್ದರು. ಸಂಘದ ನಿಯಮಾವಳಿಯ ರಚನೆ ಬಗ್ಗೆ ಒಂದು ಸಮಿತಿಯ ನೇಮಕವಾಯಿತು.

**ಪ್ರಶಸ್ತಿ**—ಆಯುರ್ವೇದ, ಜ್ಯೋತಿಷ್ಯ ಮತ್ತು ತಂತ್ರಶಾಸ್ತ್ರಗಳಲ್ಲಿ ಪಾಂಡಿತ್ಯ ಹಾಗೂ ಪರಿಣತಿಗಳಿಗಾಗಿ ವೈದ್ಯಗುರು ಎಸ್. ಆರ್. ಭಟ್, ಮಂಗಳೂರು, ಇವರನ್ನು 'ನೈಟ್ ಕಮಾಂಡರ್ ಆಫ್ ದಿ ಆರ್ಡರ್' ಎಂಬ ಪ್ರಶಸ್ತಿಯಿಂದ ಇಟೆಲಿಯಾದಿ ಸೊಸೈಟಿ 'ಆರ್ಡರ್ ಆಫ್ ದಿ ಈಗಲ್ಸ್ ಎಸ್ಟೆ' ಎಂಬ ಸಂಸ್ಥೆ ಯು ಗೌರವಿಸಿರುತ್ತದೆ.

**ಬೆನಿಫಿಟ್ ಸರ್ಕಸ್:** ಇದೇ ತಾ. 13ರಲ್ಲು ಬಿಲ್ಲವ ಸಮಾಜದ ವಿದ್ಯಾನಿಧಿಯ ಸಹಾಯಾರ್ಥವಾಗಿ ಜ. ಎ. ಸರ್ಕಸಿನವರು ಕೊಟ್ಟ ಬೆನಿಫಿಟ್ ಸರ್ಕಸಿನ ಪ್ರದರ್ಶನವು ಮೊದಲನೆ ಪ್ರದರ್ಶನವಾಗಿ ಜರಗಿತು.

**ಶ್ರೀ ರಾಮ ಧರ್ಮ ವೈದ್ಯ ಶಾಲೆಯ ವಾರ್ಷಿಕ ಸಭೆಯು** ತಾ. 5ರಲ್ಲು ಡಾ। ಕೆ. ನಾಗಪ್ಪಾಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಆಸ್ಪತ್ರೆಯ ಸ್ಥಾಪಕರಾದ ಶ್ರೀ ಪಿ. ಕೆ. ತಿಮ್ಮಪ್ಪಯ್ಯನವರ ಗುಣಕಥನ ಮಾಡಿ ಅಧ್ಯಕ್ಷರು ಅವರ ಭಾವಚಿತ್ರ ಅನಾವರಣ ಮಾಡಿದರು. ವರ್ಷದಲ್ಲಿ ಸಾಧಾರಣ ಆರು ಸಾವಿರ ಜನರಿಗೆ ಧರ್ಮಾರ್ಥವಾಗಿ ಮದ್ದು ಕೊಡುವ ಈ ಸಂಸ್ಥೆಯನ್ನು ಹೊಗಳಿದ್ದಲ್ಲದೆ ಇದಕ್ಕೆ ಜಿಲ್ಲಾ ಬೋರ್ಡು ಮತ್ತು ಸರಕಾರವು ಧನ ಸಹಾಯ ಮಾಡುವ ಅಗತ್ಯವನ್ನೂ ವಿವರಿಸಿದರು. ಬಳಿಕ ಶ್ರೀಗಳಾದ ಹೆಬ್ಬಾರ, ದಾಮೋದರ ರಾವ್, ಆನಂದ ಕರುಣಾಕರನ್, ಡಿ ಮೋಹನ್ ರಾವ್ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು

**ಬೆಳಗಾವಿ**—ಅಖಿಲ ಕರ್ನಾಟಕ ಕಾಮರ್ಸ ವಿದ್ಯಾರ್ಥಿಗಳ ವಾರ್ಷಿಕ ಸಮ್ಮೇಳನವು ಇದೇ ತಾ. 14ರಲ್ಲಿ ಶ್ರೀ ಎಮ್. ಪಿ. ಪಾಟೀಲ, ಚೀಫ್ ಆಫೀಸರ್ ಡಿ ಎಲ್. ಬಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು ಡಾ। ಡಿ ಎಸ್. ಕರ್ಕಿ, ಪ್ರಾಧ್ಯಾಪಕ, ಲಿಂಗರಾಜ ಕಾಲೇಜು, ಅವರು ಉಪದೇಶಪರ ಭಾಷಣಮಾಡಿ ಪಾರಿತೋಷ ವಿತರಣೆಯನ್ನು ಮಾಡಿದರು. ವರದಿವಾಚನ, ಗಾಯನ,ವಿನೋದ ಹಾಗೂ ಏಕಾಂಕ ನಾಟಕ ಪ್ರದರ್ಶನಗಳೇ ಮೊದಲಾದ ಕಾರ್ಯಕ್ರಮಗಳಿಂದ ಸಮಾರಂಭವು ಕೊನೆಗೊಂಡಿತು

## ದ. ಕನ್ನಡ

**ಬಡಗಬೆಟ್ಟು**— ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ಇದೇ ತಾ. 10ರಲ್ಲು ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಎಚ್. ಸಂಜೀವರಾಯರ ಅಧ್ಯಕ್ಷತೆಯಲ್ಲಿ 'ಕುಶಲವ' ನಾಟಕ ಮೊದಲಾದ ಕಾರ್ಯಕ್ರಮಗಳಿಂದ ಸಾಂಗವಾಗಿ ಜರಗಿತು.

**ಕುಂಬಳೆ:** ಈ ಫಿರ್ಕದಲ್ಲಿ ಒಳ್ಳೆಯ ಅಡಿಗೆಗಳ ತರಗತಿ ಹೆಚ್ಚಿಸಲು 4 ಒಳ್ಳೆಯ ಗಂಡು ಅಡುಗೆಗಳನ್ನು ಕೊಟ್ಟಿದ್ದು, ಮೊಗ್ರಾಲ್, ಕೊಯಿಪ್ಪಾಡಿ, ಆರಿಕ್ಕಾಡಿ ಈ ಗ್ರಾಮಗಳಿಗೆ ಹಂಚಿಕೊಡಲಾಗಿದೆ. ಚಳ್ಳಂಗಯಂ ಎಯಿಡೆಡ್ ಶಾಲೆಯ ರಕ್ಷಕರ ಸಭೆಯು ತಾ. ಆರಂದು ಅಪರಾಹ್ನ ಶ್ರೀ ಎಂ. ಶಿವಂಪಾಮ ಗೌಡರ ಅಧ್ಯಕ್ಷತೆಯಲ್ಲಿ ಜರಗಿತು. ಮಸ್ತ ಮ್ಸ್. ಎಚ್. ಅಬ್ದುಲ್ ರಹಿಮಾನ್, ಶ್ರೀ. ಜಿ. ಜಗನ್ನಾಥ ಶೆಟ್ಟಿ ಇವರ ಭಾಷಣವಿತ್ತರು

**ಕೊಂಬಳೆ ಫಿರ್ಕಾದಲ್ಲಿ ಫೆಬ್ರವರಿ ತಿಂಗಳಲ್ಲಿ ನಡೆದ ಮುಖ್ಯ ಕೆಲಸ** ಗಳ ಸಾರಾಂಶ ಹೀಗಿದೆ:

1 ಒಂದು ಬಾವಿಯ ಕೆಲಸವು ಸಂಪೂರ್ಣವಾಯಿತು. 2 ವಯಸ್ಕರ ಶಿಕ್ಷಣ ಸಪ್ತಾಹವು ಆಚರಿಸಲ್ಪಟ್ಟಿತು ಎರಡು ವಯಸ್ಕರ ಶಿಕ್ಷಣ ಶಾಲೆಗಳನ್ನು ಅದೇ ಸಂದರ್ಭದಲ್ಲಿ ತೆರೆಯಲಾಯಿತು. 3 ಒಂದು ಉಪ ಪುಸ್ತಕಭಂಡಾರ ತೆರೆಯಲಾಯಿತು. 4. ರುಪಾಯಿ 104-1-9 ಬೆಲೆಬಾಳುವ 61 ಪುಸ್ತಕಗಳು ಲೈಬ್ರರಿಗೆ ಹೊಸತಾಗಿ ಪಡಕೊಳ್ಳಲಾದುವು 5 ಸಾಂಖ್ಯಾಜಿ ಗ್ರಾಮದಲ್ಲಿ ಮಲೇರಿಯಾ ನಿವಾರಣೆ ಡಿ. ಡಿ. ಟಿ. ಸ್ಪ್ರೇ ಮಾಡುವ ಕೆಲಸ ಮುಂದುವರಿಸಲ್ಪಟ್ಟಿತು. 6 ಕಲೆಕ್ಟರರ ಡಿಸ್ಟ್ರಿಕ್ಟ್ ಸಹಾಯಧನ ಪಡೆದು ಒಂದು ಶಾಲಾ ಕಟ್ಟಡವು ಕಟ್ಟಲ್ಪಟ್ಟಿತು 7 ಆರು ಸಿನಿಮಾ ಪ್ರದರ್ಶನಗಳು ಜರಗಿಸಲ್ಪಟ್ಟವು. 8 ಬೀಜದ ಹೋರಿಗಳನ್ನು ಕೊಂಡುಕೊಳ್ಳಲು ಜಾನುವಾರು ಅಭಿವೃದ್ಧಿ ಸಹಕಾರಿ ಸಂಘದವರು ರೂಪಾಯಿ 300/-ನ್ನು ಶೇಖರಿಸಿದ್ದಾರೆ

**ನಂದಳಿಕೆ:** ಇಲ್ಲಿಯ ಬೋರ್ಡು ಹಿ. ಎ. ಶಾಲೆಯ ವರ್ಧಂತಿ ಸಮಾರಂಭವು ಇದೇ ತಾ.11ರಲ್ಲು ಕಾರ್ಕಳ ತಹಶಿಲ್ದಾರ್ ಶ್ರೀ ಗಣಪತಿ ಕೆದಿಲಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ವರದಿ ವಾಚನ, ಇನಾಮು ಹಂಚೋಣ ಕಾರ್ಯಕ್ರಮಗಳಾದ ನಂತರ ಶ್ರೀ ಸಾಂತೂರು ನಾರಾಯಣ ಪ್ರಭುಗಳು ಶಾಲಾಭ್ಯುದಯ ಭಾಷಣ ಮಾಡಿದರು. ಶಾಲಾ ಮಕ್ಕಳ ವಿವಿಧ ವಿನೋದಾವಳಿಗಳಿಂದ ಸಭಾಂತ್ಯವಾಯಿತು.

**ಕಾಲಾವಧಿ ಉತ್ಸವ:** ನಂದಳಿಕೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಕಾಲಾವಧಿ ಉತ್ಸವವು ಎಪ್ರಿಲ್ ತಾ. 2ನೇ ಆದಿತ್ಯವಾರ ಜರಗಲಿರುವುದು. ಭಕ್ತಾದಿಗಳಿಗೆ ಸುಸ್ವಾಗತವಿದೆ ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

---


### ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಶೀತ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಚಾಚಿಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ತೊಡೆನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

REGD
ಹಳ್ಳಿ ಕಡೆಗಳಲ್ಲಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ
**ಅಮೃತಾಂಜನ ಲಿಮಿಟೆಡ್**
**ಮದರಾಸು.**
ಬೊಂಬಾಯಿ ಮತ್ತು ಕಲ್ಕತ್ತ.



## ವಿವಿಧ ಪಾತ್ರೆಗಳು

ಎಲ್ಲಾ ವಿತರ್‍ಹ ವಿಧದ ಬೆಳ್ಳಿ ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿ ಚಿಲ್ಲರೆಯಾಗಿಯೂ ದೊರೆಯುತ್ತವೆ.

**ಕಲ್ಯಾಂಜಿ ವ್ಯಾಸಾಚಾರ್ಯ,**
ರಥಬೀದಿ, ಉಡುಪಿ.



### ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

**೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ**

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,.... ಚಟ್ಟ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಬೇಧಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವೆ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣಿ ಬಿಡಬೇಕು.

ಬಾಟ್ಲಿ ಒಕ್ಕೆ ಕಿರೂ ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:—ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

**ಆಯುರ್ವೇದ ಔಷಧಾಲಯ. ಗದಗ.**



### — ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

**ಪಥ್ಯ:**—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

**ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ**

**ಆಯುರ್ವೇದ ಔಷಧಾಲಯ, ಗದಗ-ಸಿಟಿ.**

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ— ವಾನಪ್ಪ ಅಧ್ವರ್ಯ ಧಾರವಾಡಕರ ವಿಜಾಪೂರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಪುರ ಕೆಮಿಸ್ಟ, ಹಾವೇರಿ ಬ್ಯಾಡಿಗಿ


---

**ಪುತ್ತೂರು ಡಿ. ಮು. ಕೋರ್ಟಿನಲ್ಲಿ**

**O P. 12/50**

1 ನಾಗಪ್ಪಗೌಡ, ಕೆ. ಹೊನ್ನಪ್ಪಗೌಡರ ಮಗ, ಪ್ರಾಯ 19 ವರ್ಷ, 2 ವಾಮನ, ಪ್ರಾಯ ಸುಮಾರು 9ವರ್ಷ. 3 ಕುಂಞಣ, ಪ್ರಾಯ ಸುಮಾರು 6ವರ್ಷ, 4 ಚಿದಾನಂದ ಪ್ರಾಯ ಸುಮಾರು 2½ ವರ್ಷ. ನಂಬ್ರ 2 ರಿಂದ 4ನೇ ವರೆಗೆ ಮೈನರರು, ಕೆ. ಹೊನ್ನಪ್ಪಗೌಡರ ಮಕ್ಕಳು. ಗಾರ್ಡಿಯನ್ ತಾಯಿ 5ನೇ ಅರ್ಜಿದಾರಳು ಚನ್ನಮ್ಮ 5 ಚೆನ್ನಮ್ಮ, ಕೆ ಹೊನ್ನಪ್ಪಗೌಡರ ವಿಧವೆ, ಪ್ರಾಯ ಸುಮಾರು 35 ವರ್ಷ. 1ರಿಂದ 5ನೇ ವರೆಗಿನವರು ಪುತ್ತೂರು ತಾಲ್ಲೂಕು ಐವರ್ನಾಡು ಗ್ರಾಮದ ಕೀಲಾಡಿ ಎಂಬಲ್ಲಿ — ಅರ್ಜಿದಾರರು

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನಂದ್ರೆ—

ಪುತ್ತೂರು ತಾಲ್ಲೂಕು ಐವರ್ನಾಡು ಗ್ರಾಮದ ಕೀಲಾಡಿ ಎಂಬಲ್ಲಿರುವ ಮೃತ ಕೆ ಹೊನ್ನಪ್ಪ ಗೌಡರ ಬಾಬ್ತು The New Guardian of India Life Assurance Co Ltd., Policy No. 20249 ನೇಗೆ ಇರುವ ರೂಪಾಯಿ 1000/- ವನ್ನು ಪಡಕೊಳ್ಳುವರೆ ಸಕ್ಸೆಸನ್ ಸರ್ಟಿಫಿಕೇಟು ಕೊಡಿಸಬೇಕೆಂತ ಆತನ ವಾರಿಸ್ಸುದಾರರಾದ ಮೇಲ್ಕಂಡ ಅರ್ಜಿದಾರರು ಮೇಲಿನ ಅರ್ಜಿ ದಾಖಲು ಮಾಡಿರುತ್ತಾರೆ. ಸದ್ರಿ ಅರ್ಜಿಯು ತಾರೀಕು 27-3-1950ಕ್ಕೆ hearingಗೆ ಇಡಲ್ಪಟ್ಟಿರುವುದರಿಂದ ಅರ್ಜಿದಾರರಿಗೆ ಸಕ್ಸೆಸನ್ ಸರ್ಟಿಫಿಕೇಟು ಕೊಡುವಲ್ಲಿ ಯಾರಿಗಾದ್ರು ಆಕ್ಷೇಪಣೆಯಿದ್ದರೆ ಮೇಲ್ಕಂಡ ಕೋರ್ಟಿನಲ್ಲಿ ಸದ್ರಿ ದಿವಸ ಬೆಳಿಗ್ಗೆ 11ಗಂಟೆಗೆ ಹಾಜ್ರಾಗಿ ಉಪಹರಿಸಿಕೊಳ್ಳತಕ್ಕದ್ದೆಂತ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸೋಣಾಗಿದೆ.

**K. K. Rai,**
Advocate for Petitioners
ಪುತ್ತೂರು 11-3-50

# ಪ್ರಾಥಮಿಕ ಕಾಂಗ್ರೆಸ್ ಪಂಚಾಯತಿಗಳ ರಚನೆ ಹಾಗು ಅವುಗಳ ಚುನಾವಣೆ ನಿಯಮಗಳು

## ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಪ್ರಕಟಣೆ

೧) ಸುಮಾರು ೫೦೦೦ ಜನಸಂಖ್ಯೆಯು ಕ್ಷೇತ್ರಕ್ಕೆ ಒಂದರಂತೆ ಪ್ರಾಥಮಿಕ ಕಾಂಗ್ರೆಸ ಪಂಚಾಯತಿಗಳನ್ನು ರಚಿಸಲಾಗಿದೆ. ಇವುಗಳ ರಚನೆಯ ಕಾಲಕ್ಕೆ ಶಹರಗಳನ್ನು ಹಾಗು ಪಟ್ಟಣಗಳನ್ನು ಮುನಿಸಿಪಲ್ ವಾರ್ಡುವಾರ ಅಲ್ಲವೇ ಓಣಿಗಳ ವಾರ ವಿಭಾಗಿಸಲಾಗಿದೆ. ಇದರಂತೆಯೇ ದೊಡ್ಡ ದೊಡ್ಡ ಗ್ರಾಮಗಳನ್ನಾದರೂ ವಿಭಾಗಿಸಿದೆ. ಮತ್ತು ೫೦೦೦ಕ್ಕಿಂತ ಕಡಿಮೆ ಜನ ವಸತಿಯುಳ್ಳ ಗ್ರಾಮಗಳನ್ನು ಗುಂಪು ಮಾಡಿ ಸುಮಾರು ೫೦೦೦ ಜನಸಂಖ್ಯೆಯುಳ್ಳ ಪಂಚಾಯತಿಗಳನ್ನು ರಚಿಸಿದೆ.

೨) ೧ನೇ ನಿಯಮದನ್ವಯ ರಚಿಸಿದ ಪಂಚಾಯತಿಯಲ್ಲಿ ಕನಿಷ್ಠ ೨೫೦ ಪ್ರಾಥಮಿಕ ಸದಸ್ಯರು ಆಗಿದ್ದರೆ ಮಾತ್ರ ಪಂಚಾಯತಿಯು ಅಸ್ತಿತ್ವದಲ್ಲಿ ಬರುವದು; ಅಂದರೆ ಪಂಚಾಯತಿಯ ಸದಸ್ಯರನ್ನು ಅಥವಾ ಪಂಚರನ್ನು ಚುನಾಯಿಸಲಾಗುವದು. ಪ್ರಾಥಮಿಕ ಕಾಂಗ್ರೆಸ ಸಂಖ್ಯೆಯ ಪ್ರಮಾಣಕ್ಕನುಸರಿಸಿ ಪಂಚರ ಸ್ಥಳಗಳು ದೊರೆಯುವವು. ಅವುಗಳ ವಿವರವು ಕೆಳಗಿನಂತೆ ಇರುವದು.

| ಪಂಚಾಯತಿಯಲ್ಲಿ ಪ್ರಾಥಮಿಕ ಸದಸ್ಯರ ಸಂಖ್ಯೆ | | ಚುನಾಯಿಸಲಾಗುವ ಪಂಚರ ಸ್ಥಳಗಳು |
|---|---|---|
| ೨೫೦ | ಇದ್ದಲ್ಲಿ | ೩ |
| ೫೦೦ | ,, | ೩ |
| ೭೫೦ | ,, | ೩ |
| ೧೦೦೦ | ,, | ೪ |
| ೧೨೫೦ | ,, | ೫ |
| ೧೫೦೦ | ,, | ೬ |
| ೧೭೫೦ | ,, | ೭ |
| ೨೦೦೦ | ,, | ೮ |
| ೨೨೫೦ | ,, | ೯ |
| ೨೫೦೦ | ,, | ೧೦ |

ಯಾವದೇ ಕಾರಣದಿಂದ ಒಂದು ಪಂಚಾಯತಿಗೆ ೧೦ಕ್ಕಿಂತ ಹೆಚ್ಚು ಪಂಚರ ಸ್ಥಳಗಳು ದೊರೆಯಲಾರವು.

೭೫೦ಕ್ಕಿಂತ ಹೆಚ್ಚು ಪ್ರಾಥಮಿಕ ಸದಸ್ಯರುಳ್ಳ ಪಂಚಾಯತಿಯಲ್ಲಿ ೨೫೦ಕ್ಕೆ ಒಂದರಂತೆ ಪಂಚರ ಸ್ಥಳ ಹೆಚ್ಚಿಸುವಾಗ್ಗೆ ೧೨೫ ಹಾಗು ಅದಕ್ಕಿಂತ ಹೆಚ್ಚು ಸದಸ್ಯರು ಇದ್ದರೆ ಒಂದು ಸ್ಥಳ ದೊರೆಯುವದು. ಇದರಂತೆಯೇ ಹೆಚ್ಚಿಗೆ ದೊರೆಯುವ ಪಂಚರ ಸ್ಥಳಗಳನ್ನು ತುಂಬಬೇಕು. ಉದಾ:-೭೫೦ಕ್ಕೆ ೩ ಸ್ಥಳಗಳನ್ನು ಕೊಟ್ಟು ಹೆಚ್ಚಿನ ಒಂದು ಸ್ಥಳ ದೊರೆಯಬೇಕಾದರೆ ೮೭೫ರಿಂದ ೧೦೦೦ ದ ವರೆಗೆ ಸದಸ್ಯರಿದ್ದರೂ ಒಂದೇ ಸ್ಥಳ ದೊರೆಯುವದು.

೩) ಯಾವದಾದರೊಂದು ಪ್ರಾಥಮಿಕ ಕಾಂಗ್ರೆಸ ಪಂಚಾಯತಿಯಲ್ಲಿ ೨೫೦ಕ್ಕಿಂತ ಕಡಿಮೆ ಪ್ರಾಥಮಿಕ ಸದಸ್ಯರು ಆಗಿದ್ದಲ್ಲಿ ಆ ಪಂಚಾಯತಿಯನ್ನು ಅದೇ ತಾಲೂಕ ಅಥವಾ ತಹಸೀಲಿನ ಸಮೀಪದ ಹಾಗು ಹೊಂದಿದ ಪಂಚಾಯತಿಯಲ್ಲಿ ಸಮಾವೇಶ ಮಾಡಬೇಕು.

೪) ಪ್ರತಿಯೊಂದು ಪಂಚಾಯತಿಯಲ್ಲಿಯ ಪ್ರಾಥಮಿಕ ಸದಸ್ಯರ ಯಾದಿಯು ಜಿಲ್ಲಾ ಹಾಗು ತಾಲೂಕು ಕಾಂಗ್ರೆಸ್ ಸಮಿತಿಗಳಲ್ಲಿ ಮತ್ತು ಪ್ರಾಥಮಿಕ ಕಾಂಗ್ರೆಸ ಪಂಚಾಯತಿಯಲ್ಲಿ ಇರುವದು. ಈ ಯಾದಿಯಲ್ಲಿ ನಮೂದಾದ ಸದಸ್ಯರೇ ಪಂಚಾಯತಿಯ ಚುನಾವಣೆಯ ಮತದಾರರಾಗುವರು. ೫) ಪ್ರತಿಯೊಂದು ಪಂಚಾಯತಿಯಲ್ಲಿ ಸೇರ್ಪಡೆಯಾಗಿರುವ ಗ್ರಾಮಗಳ, ಮತದಾರರ ಹಾಗು ಜನಸಂಖ್ಯೆಗಳ ಮಾಹಿತಿಯನ್ನು ಜಿಲ್ಲಾ ಕಾಂಗ್ರೆಸ ಸಮಿತಿಗೆ ಪಂಚಾಯತಿಗಳ ಚುನಾವಣೆ ನಡೆಯಿಸುವ ಪೂರ್ವದಲ್ಲಿಯೇ ತಿಳಿಸಿ ಚುನಾವಣೆ ನಡೆಯಿಸಲು ಮಂಜೂರಿಯನ್ನು ಪಡೆದುಕೊಳ್ಳತಕ್ಕದ್ದು. ಇಂಥ ಮಂಜೂರಿಯನ್ನು ಪಡೆದುಕೊಳ್ಳದೆ, ಚುನಾವಣೆಯನ್ನು ನಡೆಯಿಸಲಾಗದು.

೬) ಪ್ರಾಂತೀಯ ಕ್ಷೇತ್ರದಲ್ಲಿ ನಿರ್ಮಿಸಲಾಗಿರುವ ಜಿಲ್ಲಾ ಕಾಂಗ್ರೆಸ ಸಮಿತಿಗೊಬ್ಬನಂತೆ ಜಿಲ್ಲಾ ರಿಟರ್ನಿಂಗ ಆಫೀಸರನನ್ನು ಪ್ರಾಂತೀಯ ಕಾಂಗ್ರೆಸ ಸಮಿತಿಯ ಕೌನ್ಸಿಲ್ ಇಲ್ಲವೇ ಅವರಿಂದ ಅಧಿಕಾರ ಪಡೆದುಕೊಂಡವರೇ ನೇಮಿಸುವರು. ಜಿಲ್ಲಾ ರಿಟರ್ನಿಂಗ ಆಫೀಸರನು ಈ ಜಿಲ್ಲೆಯಲ್ಲಿಯ ತಾಲೂಕ, ತಹಸೀಲ, ಮಹಾಲ ಅಥವಾ ಸರ್ಕಲಿಗೊಬ್ಬನಂತೆ ತಾಲೂಕಾ ಚುನಾವಣೆ ಅಧಿಕಾರಿಯನ್ನು ನೇಮಿಸುವನು. ಇವನು ತನ್ನ ಹದ್ದಿನಲ್ಲಿಯ ಪಂಚಾಯತಿಗಳ ಚುನಾವಣೆಗಳನ್ನು ನೇಮಿಸಿ ನಡೆಯಿಸುವನು.

ಜಿಲ್ಲಾ ರಿಟರ್ನಿಂಗ್ ಆಫೀಸರ ಹಾಗು ತಾಲೂಕು ಚುನಾವಣೆ ಅಧಿಕಾರಿಗಳ ಮತ್ತು ಪಂಚಾಯತಿಯ ಚುನಾವಣೆ ಅಧಿಕಾರಿಗಳ ನೇಮಣೂಕಿಗಳು ಲೇಖಿಯಲ್ಲಿಯೇ ಇರತಕ್ಕದ್ದು. ಈ ಅಧಿಕಾರಿಗಳಿಗೆ ಜಿಲ್ಲಾ ಹಾಗು ಅಧೀನ ಕಾಂಗ್ರೆಸ ಸಮಿತಿಗಳು ಸಹಾಯ ಹಾಗು ಸಹಕಾರ ಮಾಡಬೇಕು. ೭) ಪ್ರಾಥಮಿಕ ಕಾಂಗ್ರೆಸ ಪಂಚಾಯತಿಯ ಚುನಾವಣೆಗೆ ಉಮೇದುವಾರನಾಗುವವನು ಪ್ರಥಮತಃ ಅದೇ ಪಂಚಾಯತಿಯ ಹದ್ದಿನಲ್ಲಿ ವಾಸಿಸುವ ಅಧಿಕೃತ ಸದಸ್ಯನಿರಬೇಕು. ಮತ್ತು ಮತದಾರ ಯಾದಿಗಳು ಪ್ರಸಿದ್ಧವಾಗುವ ದಿನದ ಹಿಂದಿನ ಎರಡು ವರ್ಷಗಳಲ್ಲಿ ಕಳ್ಳವೇಟಿ, ಅನೀತಿ, ಲಂಚಗೊಳಿತನ ಮಾಡಿ ಇಲ್ಲವೆ ಪಾನನಿರೋಧ ಕಾಯಿದೆ ಮುರಿದು ಕೋರ್ಟಿನಿಂದ ಶಿಕ್ಷೆ ಹೊಂದಿರಬಾರದು. ೮) ಯಾವದೇ ಪಂಚಾಯತಿಯ ಹದ್ದಿನಲ್ಲಿ ತುಂಬತಕ್ಕ ಪಂಚರ ಸ್ಥಳಗಳಷ್ಟು ಅಧಿಕೃತ ಸದಸ್ಯರು ಇಲ್ಲದೇ ಇದ್ದಲ್ಲಿ ಆ ಪಂಚಾಯತಿಗೆ ಹೊಂದಿದ ಅದೇ ತಾಲೂಕಿನ ಅಥವ ಶಹರದ ಬೇರೆ ಪಂಚಾಯತಿಯ ಹದ್ದಿನಲ್ಲಿಯ ಅಧಿಕೃತ ಸದಸ್ಯರು ಕಡಿಮೆ ಬಿದ್ದ ಉಮೇದವಾರರ ಮಟ್ಟಿಗೆ ಅರ್ಜಿಗಳನ್ನು ಕೊಡಬಹುದು, ೯) ಪ್ರಾಂತೀಯ ಕಾಂಗ್ರೆಸ ಸಮಿತಿಯವರು ಕಾಂಗ್ರೆಸ್ ಪಂಚಾಯತಿ ಚುನಾವಣೆಗಳ ಬಗ್ಗೆ ಒಂದು ವೇಳಾಪತ್ರಿಕೆಯನ್ನು ಮಾಡುವರು. ಆ ಅವಧಿಯಲ್ಲಿ ಚುನಾವಣೆಗಳು ನಡೆಯುವವು. ೧೦) [ಅ] ಪ್ರತಿಯೊಂದು ಪಂಚಾಯತಿಯ ಚುನಾವಣೆ ಕಾರ್ಯಕ್ರಮವು ತಾಲೂಕಾ, ತಹಸೀಲ, ಮಹಾಲ, ಸರ್ಕಲ್ ಇಲ್ಲವೆ ಶಹರ ಕಾಂಗ್ರೆಸ ಕಮಿಟಿಯ ಕಚೇರಿಯಲ್ಲಿ ಪ್ರಸಿದ್ಧ ಮಾಡಲಾಗುವದು. ಈ ಕಾರ್ಯಕ್ರಮದಲ್ಲಿ [೧] ನಾಮಪತ್ರ ಕೊಡುವ ಹಾಗೂ ಪರಿಶೀಲನೆಯ ತಾರೀಖುಗಳು. [೨] ನಾಮಪತ್ರ ಪರಿಶೀಲನೆಯ ಪರಿಣಾಮವನ್ನು ಪ್ರಸಿದ್ಧ ಮಾಡುವ ತಾರೀಕು. [೩] ಅಪೀಲು ಮಾಡುವ ತಾರೀಖು. ಹಾಗು [೪] ಚುನಾವಣೆ ತಾರೀಖುಗಳನ್ನು ಕಾಣಿಸಬೇಕು. ೧೦) [ಬ] ಚುನಾವಣೆಯ ಕಾರ್ಯಕ್ರಮವನ್ನು ವರ್ತಮಾನ ಪತ್ರಗಳಲ್ಲಿ ಪ್ರಸಿದ್ಧ ಮಾಡಿ, ಡಂಗುರ ಸಾರಿಸಿ, ಇಲ್ಲವೇ ಹಸ್ತಪತ್ರಿಕೆಗಳನ್ನು ಹಂಚಿ-ಹೆಚ್ಚು ಜನರಿಗೆ ಗೊತ್ತಾಗುವಂತೆ ಜಾಹೀರ ಮಾಡಬೇಕು. ೧೧) ಚುನಾವಣೆಗೆ ನಿಲ್ಲುವ ಉಮೇದವಾರರು ಒಂದು ರೂಪಾಯಿ [೧-೦-೦] ಫೀಯನ್ನು ನಾಮಪತ್ರದೊಂದಿಗೆ ತುಂಬಬೇಕು ಮತ್ತು ನಾಮಪತ್ರವನ್ನು (ನಾಮಪತ್ರದ ನಮೂನೆಗಾಗಿ ಪರಿಶಿಷ್ಟ (೧) ನೋಡಿರಿ.) ಲೇಖಿಯಲ್ಲಿ ತಾಲೂಕು ಚುನಾವಣೆಯ ಅಧಿಕಾರಿಯ ಕಡೆಗೆ ಸಕಾಲದಲ್ಲಿ ಮುಟ್ಟಿಸಬೇಕು. ತಡವಾಗಿಬಂದ ನಾಮಪತ್ರಗಳು ನಿರಾಕರಿಸಲ್ಪಡುವವು. ತಾಲೂಕು ಚುನಾವಣೆಯ ಅಧಿಕಾರಿಯು ಗೊತ್ತುಮಾಡಿದ ಅವಧಿಯೊಳಗಾಗಿ ಬಂದ ನಾಮಪತ್ರಗಳ ಪರಿಶೀಲನೆ ಮಾಡಿ ಹಾಗು ಪರಿಶೀಲನೆಯ ಪರಿಣಾಮವನ್ನು ಪ್ರಸಿದ್ಧ ಮಾಡಿ ಪಂಚಾಯತಿಯ ಚುನಾವಣೆಯ ಅಧಿಕಾರಿಕಡೆಗೆ ಸ್ವೀಕೃತವಾದ ನಾಮಪತ್ರಗಳನ್ನು ಕೊಡುವನು. ನಿರಾಕರಿಸಲಾದ ಉಮೇದುವಾರರು ಜಿಲ್ಲಾ ಚುನಾವಣೆ ಅಧಿಕಾರಿಯ ಕಡೆಗೆ ಅಪೀಲು ಮಾಡಿಕೊಳ್ಳಬಹುದು.

೧೨) ಪಂಚಾಯತಿಯ ಚುನಾವಣೆ ಅಧಿಕಾರಿಯು ಗೊತ್ತುಪಡಿಸಿದ ತಾರೀಖು, ಸ್ಥಳ, ವೇಳೆಗಳಲ್ಲಿ ಪಂಚಾಯತಿಯ ಮತದಾರರ ಸಭೆಕೂಡಿಸಿ ಸಾಧಾರಣವಾಗಿ ಕೈಯೆತ್ತಿಸಿ, ಅವಶ್ಯವೆನಿಸಿದರೆ ಗುಪ್ತ ಮತದಾನ ಮಾಡಿಸಿ ಪಂಚರ ಚುನಾವಣೆ ನಡೆಸುವನು. ಚುನಾವಣೆಯ ತಾರೀಖು, ಸ್ಥಳ ಮತ್ತು ವೇಳೆಗಳನ್ನು ಪಂಚಾಯತಿಯ ಹದ್ದಿನಲ್ಲಿ ಪ್ರಸಿದ್ಧಿಸಬೇಕು. ಚುನಾವಣೆಯು ಪಂಚಾಯತಿಯ ಕಚೇರಿ ಇರುವ ಊರಲ್ಲಿಯೇ ನಡೆಯುವುದು. ಚುನಾವಣ ಅಧಿಕಾರಿಯೇ ಸಭೆಯ ಅಧ್ಯಕ್ಷನಾಗುವನು ೧೩) ಪಂಚಾಯತಿಯ ಚುನಾವಣ ಅಧಿಕಾರಿಯು ಚುನಾವಣೆಯ ಪರಿಣಾಮದ ವರದಿಯನ್ನು ಕೂಡಲೇ ತಾಲೂಕು ಚುನಾವಣೆ ಅಧಿಕಾರಿಯ ಕಡೆಗೆ ಕೊಡುವನು. ಈ ವರದಿಯಲ್ಲಿ ಪ್ರತಿಯೊಬ್ಬ ಉಮೇದುವಾರನು ದೊರಕಿಸಿದ ಮತಗಳ ಹಾಗು ಜಯ ಹೊಂದಿದ ಉಮೇದವಾರರ ಮಾಹಿತಿ ಕೊಡತಕ್ಕದ್ದು. ೧೪) ಈ ನಿಯಮಗಳಲ್ಲದೆ ಅವಶ್ಯವೆನಿಸುವ ಸೂಚನೆಗಳನ್ನು ಚುನಾವಣೆಯ ಸಂಬಂಧದಲ್ಲಿ ಮಾಡಲು ಕ. ಪ್ರಾಂ. ಕಾಂ ಸಮಿತಿಯ ಆಫೀಸಿನಿಂದ ತಿಳಿಸಲಾಗುವದು.

### ಪ್ರಕಟಣೆ

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ:—

ಉಡ್ಪಿ ತಾಲ್ಲೂಕು ಕಾಪು ಪಂಚ್ಯಾತ್ ಬೋರ್ಡಿನ ದಿನವಹಿ, ವ, ಹಪ್ತೆವಾರು ಮಾರ್ಕೆಟನಲ್ಲಿ 1950ನೇ ಎಪ್ರಿಲ್ 1ರಿಂದ 1951ನೇ ಮಾರ್ಚ ಆಖೈರು ವರೆಗೆ ವಸೂಲು ಮಾಡುವ ಹಕ್ಕು ವ ಸದ್ರಿ ಸಮಯದಲ್ಲಿ ಮಾರ್ಕೆಟು ಸ್ಟಾಲುಗಳನ್ನು ಉಪಯೋಗಿಸುವ ಹಕ್ಕು ಕೂಡಾ ಪ್ರತ್ಯ ಪ್ರತ್ಯೇಕವಾಗಿ ಕಾಪು ಪಂಚ್ಯಾತ್ ಬೋರ್ಡು ಆಫೀಸಿನಲ್ಲಿ ಇದೇ ಮಾರ್ಚ ತಿಂಗಳ ತಾರೀಕು 25 ನೇ ಶನಿವಾರ ಅಪರಾಹ್ನ ಗಂಟೆ 3ಕ್ಕೆ ಪ್ರಾರಂಭವಾಗಿ ಬಹಿರಂಗ ಏಲಂ ಮಾಡಲಾಗುವುದು.

ಏಲಂ ಶರ್ತಗಳನ್ನು ಪಂಚ್ಯಾತ್ ಬೋರ್ಡು ಆಫೀಸಿನ ನೋಟೀಸು ಬೋರ್ಡಿಗೆ ಅಂಟಿಸಿದ ವಿವರಣೆಯಲ್ಲಿ ಕಾಣಬಹುದು

**ಕಾಪು ಮಂಜುನಾಥ ಶೆಣೈ**
ಪ್ರೆಸಿಡೆಂಟ್, ಪಂಚ್ಯಾತ್‌ಬೋರ್ಡು, ಕಾಪು
ಕಾಪು 20—3—1950


ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

**ರಾಯಲ್ ಮಹಾಲಿನಲ್ಲಿ**

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding
**ROYALMAHAL,**
UDIPI, S. Kanara.



BUY INDIAN! ENCOURAGE INDIAN INDUSTRY!

**ಆಮಲಕೀ ತೈಲ AMALAKI HAIR OIL**

SOB

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD.

Highly perfumed and medicated, worth using daily by one and all, keeps hair black and relieves head-ache etc.

TRADE MARK

Manufactured by:-
**Swadeshi Oushadhi Bhandara** (Regd.)
KUNJAL P. O. Brahmavar, S. K.



### ಋತುಸ್ರಾವ ನಿಂತಿತು

ಕುಮಾರಿ ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ— ಬೆಲೆ; ರೂ 3-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ, 8- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

MRS. P. DEVEE, F. DS. (N. J.)
Tollygunge CALCUTTA.
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು



ಶರೀರದಲ್ಲಿಯ ಅಸಹ್ಯ ಉಷ್ಣತೆಯನ್ನು ಇದರಿಂದಲೇ ತೆಗೆದು ಹಾಕಿರಿ

ಕಷಾಯವು ಶರೀರದ ಒಳಗಿನ ಮತ್ತು ಹೊರಗಿನ ಉರಿಯನ್ನು ತೆಗೆದು ಹಾಕಿ ಪ್ರಕೃತಿಯನ್ನು ತಂಪಾಗಿಡುವದು, ಅಪಚನ ಅಜೀರ್ಣವನ್ನು ಸರಿಪಡಿಸುವದು, ಶಾರೀರಿಕ ಮತ್ತು ಮಾನಸಿಕ ಶಕ್ತಿಯನ್ನು ಬೆಳೆಸುವದು, ಧಾತು ಸ್ರಾವದಲ್ಲಿಯ ಉಷ್ಣತೆಯನ್ನು ಹೋಗಲಾಡಿಸಿ ಪುಷ್ಟಿಕರ ಮಾಡುವದು

ನಿಮ್ಮ ಹತ್ತಿರದ ಕೆಮಿಸ್ಟರ ಕಡೆಯಿಂದ ಇಂದೇ ಒಂದು ಬಾಟಲಿಯನ್ನು ತಂದು ಸೇವಿಸಲು ಪ್ರಾರಂಭಿಸಿರಿ.

**ಪರ್ಲ ಎಂಡ್ ಕಂಪನಿ**
ಮುಂಬಯಿ ೨೭

ಲೇಖನಾಂಕ ೩

# ರಾಜಕೀಯ ಪಕ್ಷಗಳು

ಲೇಖಕರು: ಶ್ರೀ. ಸಿ. ಎಚ್. ಶೆಟ್ಟಿ

ಪ್ರಜಾಪ್ರಭುತ್ವದ ಪಾರ್ಟಿ ಮೆಂಬರರಲ್ಲಿ ಟೊಳ್ಳು ವಿಶ್ವಾಸ ಹುಟ್ಟುತ್ತದೆಂತ ಕೆಲವರು ಅಭಿಪ್ರಾಯ ಪಡುವರು. ಪಾರ್ಟಿಗಳು ಮನೋರಂಜಕವಾದ ಯೋಜನೆಗಳನ್ನು ಜನರ ಮುಂದಿಡುವರು. ಇವುಗಳಲ್ಲಿ ಕೆಲವು ಪ್ರಚಾರಕ್ಕಾಗಿ ತಯಾರಾದವುಗಳೇ ಹೊರತು ಕಾರ್ಯರೂಪಕ್ಕೆ ಬರತಕ್ಕವುಗಳೇ ಅಲ್ಲ. ಲೋರ್ಡ್ ಬ್ರೈಸು ಎಂಬವರು ತಮ್ಮ 'ಮೋಡರ್ನ್ ಡೆಮೋಕ್ರೆಸಿ' ಎಂಬ ದೊಡ್ಡ ಪುಸ್ತಕದಲ್ಲಿ ಹೀಗೆ ಬರೆದರುವರು "ಸ್ಕೋಟಲೇಂಡು ಗಡಿನಾಡಿನ ಗುಡ್ಡಗಾಡಿನಲ್ಲಿ ಕುರಿಗಾವಲಿನವರು ಒಂದು ನಾಯಿಗೆ ಅಂಗ್ಲ ಭಾಷೆಯಲ್ಲೂ ಇನ್ನೊಂದಕ್ಕೆ ಗೇಲಿಕ್ ಭಾಷೆಯಲ್ಲೂ ಗದರಿಸಿ ಹೇಳುವಂತೆ ಪಾರ್ಟಿ ಮುಂದಾಳುಗಳು ಎರಡು ನಾಲಿಗೆಗಳಿಂದ ಮಾತನಾಡಬಲ್ಲರು." ಸರ್ವ ಜನರಿಗೂ ಮೆಚ್ಚುಗೆ ಆಗುವಂತೆ ಯಾವದಾದರೊಂದು ಸಬಬಿನ ಕುರಿತು ನಿಷ್ಪಕ್ಷಪಾತದಿಂದ ಪರಿಶೀಲಿಸಿ ತೀರ್ಮಾನಕ್ಕೆ ಬರಬೇಕೆಂತ ಬಹಳವಾಗಿ ಜನರಿಗೆ ಹೇಳುತ್ತಾ ಅಂತರಂಗದಲ್ಲಿ ತಮ್ಮ ಕಡೆಯವರಿಗೆ ಶಕ್ತಿ ಮೀರಿ ಕಾರ್ಯ ಸಾಧನೆ ಮಾಡಲು ಪ್ರೋತ್ಸಾಹಿಸುವರು. ಪಾರ್ಟಿ ಮುಖ್ಯಸ್ಥರು ಹೇಯವಾಗಿ ವರ್ತಿಸಿದರೆ, ಮತಧರ್ಮಗಳಿಂದ ಖಂಡಿಸಲ್ಪಡತಕ್ಕ ಅಹಿತ ನುಡಿಗಳನ್ನಾಡಿದರೆ, ಪಾರ್ಟಿ ಧ್ಯೇಯದ ದೃಷ್ಟಿಯಿಂದ ಮೆಂಬರರು ಹೊಗಳುವರು. ಕಳೆದ ಯುದ್ಧ ಕಾಲದಲ್ಲಿ ಬೈಬಲನ್ನು ಯುದ್ಧ ಪ್ರಚಾರ ಕಾರ್ಯಕ್ಕೆ ವಿರೋಧವಾಗಿ ಉಪಯೋಗಿಸಿದರೆ ಅದನ್ನು ಬಹಿಷ್ಕರಿಸಲಾದೀತೆಂದು ಒಬ್ಬ ಮಂತ್ರಿಯು ಇಂಗ್ಲೆಂಡಿನಲ್ಲಿ ಹೇಳಿರುವನು. ಪಾರ್ಟಿಗಳು ಹೆಚ್ಚಾಗಿ ರಿಂಗ್ ಮತ್ತು ಬೋಸ್ (Ring and the Boss) ಎಂಬ ಒಳ ಕೂಟದವರ ಅಧಿಕಾರದೊಳಗಿರುವವು. ಇವರು ಹಲವು ಸಮಯ ಸಮರ್ಥ ಮೆಂಬರರನ್ನು ಬಿಟ್ಟು ತಮಗೆ ಬೇಕಾದವರನ್ನು ಮುಂದೆ ತರುವರು. ಕೆಲವು ಕಡೆಗಳಲ್ಲಿ, ಮುಖ್ಯವಾಗಿ ಅಮೇರಿಕದಲ್ಲಿ ಗ್ರೇಫ್ಟ್ ಸಿಸ್ಟಂ (Graft system) ಎಂಬುದರಿಂದ ಕೆಡುಕುಂಟಾಗಿಯದೆ. ದೊಡ್ಡ ಗಿರಣಿಯ ಮಾಲಿಕರು, ಕಾಮಗಾರಿಕೆಗಳ ಮುಖ್ಯಸ್ಥರು ಇನ್ನಿತರ ಶ್ರೀಮಂತರು ಪಾರ್ಟಿಗಳಿಗೆ ಬೇಕಾದ ಸಹಾಯ ಮಾಡಿ ಇಲೆಕ್ಷನ್ ಸಮಯ ತಮ್ಮ ಕೆಲಸಕಾರ್ಯಗಳಿಗೆ ಬೇಕಾಗುವ ಜನರನ್ನು ನೋಮಿನೇಟು ಮಾಡಿಸಿ, ಇಲೆಕ್ಷನ್ನಿನಲ್ಲಿ ಜಯಶೀಲರಾಗಿ ಆರಿಸಿ ಬರುವಂತೆ ಮಾಡುವರು.

ಕೋಕಸ್ ಸಿಸ್ಟಂ (Caucus System) ಎಂಬ ಇನ್ನೊಂದು ತರಹದ ಆಚಾರವು ಕೆಲವು ಕಡೆ ತಲೆದೋರಿಯದೆ. ಶಾಸನಸಭೆಯ ಮೆಂಬರರು ತಮ್ಮ ಪಾರ್ಟಿಯ ಒಳಸಭೆಯಲ್ಲಿ ಪ್ರತಿಯೊಂದು ಸಬಬನ್ನೂ ಚರ್ಚಿಸಿ ತೀರ್ಮಾನಿಸಿಕೊಂಡು ಪಾರ್ಟಿಯ ಮೆಂಬರರೆಲ್ಲರೂ ಅಲ್ಲಿ ಆದ ತೀರ್ಮಾನಕ್ಕನುಸಾರವಾಗಿ ನಡೆಯುವ ಕ್ರಮವಿದು. ಇದರಲ್ಲಿ ಪ್ರತಿಯೊಬ್ಬರಿಗೂ ಪಕ್ಷದ ಸಭೆಯ ಮುಂದೆ ತಮ್ಮ ಅನುಭವವನ್ನು ಇಟ್ಟು ತನ್ನ ಮತಕ್ಕೆ ತರುವ ಹಕ್ಕು ಇರುವುದಾದರೂ ಒಂದು ಸಲ ತೀರ್ಮಾನವಾದರೆ, ಆತನು ಹಾಜರಿರಲಿ ಇಲ್ಲದಿರಲಿ ಅದರಂತೆಯೇ ನಡೆಯಬೇಕಾಗಿದೆ. ಇದರಿಂದ ವ್ಯಕ್ತಿತ್ವವನ್ನು ಕಳಕೊಂಡಂತಾಗುತ್ತದೆ.

ಫಿಲಿಬಸ್ಟರಿಂಗ್ ಮತ್ತು ಸ್ಟೋನ್‌ವಾಲಿಂಗ್ (Filibustering and Stone-walling) ಎಂಬ ಇನ್ನೊಂದು ನಮೂನೆಯು ಸಹಾ ಜ್ಯಾರಿಯಲ್ಲಿದೆ. ಸರಕಾರೀ ಪಾರ್ಟಿಯವರು ತಂದ ಠರಾವನ್ನು ಹೇಗಾದರೂ ಪಾಸಾಗದಂತೆ ಮಾಡುವ ದೃಷ್ಟಿಯಿಂದ ವಿರೋಧ ಪಾರ್ಟಿಯವರು ಒಬ್ಬನ ನಂತರ ಮತ್ತೊಬ್ಬರು ದಿವಸಗಟ್ಟಳೆ ಮಾತನಾಡುತ್ತಾ ಹೋಗುವದು. ಮಾತನಾಡುವರೆ ಸಾಕಷ್ಟು ವಿಷಯಗಳಿಲ್ಲದಿರುವಲ್ಲಿ ಭೂಲೋಕದ ಎಲ್ಲಾ ವಿಚಾರವನ್ನೂ ಇದಕ್ಕೆ ಜೋಡಿಸಿ ಮಾತನಾಡುವರು. ಈ ದುರಾಚಾರವನ್ನು ತಡೆಗಟ್ಟುವದಕ್ಕಾಗಿ "ಕ್ಲೋಜರ್" (closure) ಎಂಬ ಉಪಸಂಹಾರವನ್ನು ಕಂಡುಹಿಡಿದಿರುವರು. ಮೆಂಬರರು ಈ ರೀತಿ ಮಾಡುತ್ತಾರೆಂತ ತಿಳಿದೊಡನೆಯೇ ಕ್ಲೋಜರ್ ಠರಾವನ್ನು ಗವರ್ನಮೆಂಟು ಕಡೆಯಿಂದ ತರುವರು. ಅದು ಪಾಸಾದೊಡನೆಯೇ ಚರ್ಚೆಯು ಕೈದಾಗುವದು. ಪಾರ್ಲಿಮೆಂಟರಿ ಪದ್ಧತಿಯಂತೆ ಇನ್ನೊಂದು ಉಪಾಯವನ್ನು ಸಹಾ ಕಂಡುಹಿಡಿದಿರುವರು. ಯಾವ ಠರಾವಾದರೂ ಚರ್ಚೆಗೆ ಬರಬೇಕಾದರೆ ಮುಂಚಿತವಾಗಿ ಪ್ರತಿಯೊಬ್ಬ ಮೆಂಬರನೂ ತನ್ನ ಅಂಬೋಣವನ್ನು ನಿಶ್ಚಿತ ಸಮಯದೊಳಗೆ ಪೂರೈಸಬೇಕೆಂತ ನಿರ್ಣಯಿಸಿಬಿಡುವದು. ಇದಕ್ಕಿಂತ ಹೆಚ್ಚಿಗೆ ಸಮಯ ಮಾತನಾಡಲು ಸ್ಪೀಕರ (ಸಭಾಧ್ಯಕ್ಷ)ನು ಬಿಡುವದಿಲ್ಲ.

ಕೆಲವು ಕಡೆಗಳಲ್ಲಿ ಆಡಳಿತೆ ಮಂಡಳಿಯ ಮುಖ್ಯಸ್ಥನೊಬ್ಬನು, ಪಾರ್ಟಿಯ ಹೊರಗಿನ ಮುಖ್ಯಸ್ಥನು ಇನ್ನೊಬ್ಬನು, ಇದ್ದು ಇವರೊಳಗೆ ತಿಕ್ಕಾಟ ಬಂದು ನಾನಾ ತರದ ಭಿನ್ನಾಭಿಪ್ರಾಯಗಳಿಗೆ ಕಾರಣಗಳಾಗಿವೆ. ಇಂಗ್ಲೆಂಡಿನಲ್ಲಿ ಹೆರಲ್ಡ್ ಲಾಸ್ಕಿಯವರು ಲೇಬರ್ ಪಾರ್ಟಿಯ ಮುಖ್ಯಸ್ಥರು. ಆದರೆ ಪಾರ್ಲಿಮೆಂಟಿನಲ್ಲಿ ಅಟ್ಲಿಯವರು ಮುಖ್ಯಸ್ಥರು. ಲಾಸ್ಕಿಯವರು ಫ್ರಾನ್ಸು ಮತ್ತಿತರ ಕಡೆಗಳಲ್ಲಿ ಮಾಡಿದ ಕೆಲವು ಭಾಷಣಗಳಿಂದ ಟೋರಿ ಪಾರ್ಟಿಯವರು ಜಿಗುಪ್ಸೆಗೊಂಡು ಆಕ್ಷೇಪವೆತ್ತಿದರು. ಮಂತ್ರಿಮಂಡಳವು ಇರುವಾಗ ಆಡಳಿತೆಯಲ್ಲಿ ಹೊರಗಿನಿಂದ ಪಾರ್ಟಿ ಕೈವಾಡ ತುಂಬಾ ಇರುವದು ಸರಿಯಲ್ಲವೆಂದರು. ಪಾರ್ಲಿಮೆಂಟರಿ ಲೇಬರ್ ಪಾರ್ಟಿಯವರು ಈ ಆಕ್ಷೇಪಕ್ಕೆ ತಲೆ ಬಾಗಿದ ಕಾರಣ ಪ್ರೊ. ಲಾಸ್ಕಿಯವರು ರಾಜಿನಾಮೆ ಕೊಟ್ಟರು. ಕೌನ್ಸಿಲ್ಲಿನ ಒಳಗೂ ಹೊರಗೂ ಒಬ್ಬನೇ ಮುಖ್ಯಸ್ಥನಾದರೆ ಒಡಕು ಬರಲು ಎಡೆಯೇ ಇಲ್ಲ. ಮದ್ರಾಸು ಮತ್ತು ಕೆಲವು ಕಡೆಗಳಲ್ಲಿ ಪಾರ್ಲಿಮೆಂಟರಿ ಪಾರ್ಟಿಯ ಮುಖ್ಯಸ್ಥನನ್ನು ವರುಷಕ್ಕೊಮ್ಮೆ ಚುನಾಯಿಸುವ ಪದ್ಧತಿಯುಂಟು. ಇದರಿಂದ ಪ್ರತಿ ವರುಷದ ಅಂತ್ಯದಲ್ಲಿ ಮಂತ್ರಿಮಂಡಳವನ್ನು ಅಲುಗಾಡಿಸುವ ಗುಣ ಕೆಲವರಲ್ಲಿ ಉಕ್ಕಿ ಬರುತ್ತದೆ. ನಾವು ವರುಷಕ್ಕೊಮ್ಮೆ ನಂಬಿಗೆಯ ಠರಾವು ಪಾಸು ಮಾಡುತ್ತೇನೆ ಮತ್ತು ವರುಷಕ್ಕೆರಡು ಸಲ ಅಪನಂಬಿಕೆ ಠರಾವು ತರುತ್ತೇವೆಂತ ಸಿ. ಆರ್. ರೆಡ್ಡಿಯವರೊಮ್ಮೆ ಹೇಳಿರುವರು. ಪಾರ್ಟಿಯ ಅಧ್ಯಕ್ಷನ ಅವಧಿಯು ಶಾಸನ ಸಭೆಯ ಅವಧಿಯ ವರೆಗೆ ಇರುವದು ಒಳ್ಳೇದು.

ಪಾರ್ಟಿಗಳಿಂದ ಹಲವು ಪ್ರಯೋಜನಗಳಿವೆ. ಪ್ರಾಯಪ್ರಬುದ್ಧ ಸ್ತ್ರೀಪುರುಷರಿಗೆ ಓಟುಗಳಿರುವ ರಾಷ್ಟ್ರಗಳಲ್ಲಿ ಮತ್ತು ವಿಶಾಲವಾದ ರಾಷ್ಟ್ರಗಳಲ್ಲಿ ಓಟರರು ಬಹುದೂರ ಪ್ರಾಂತ್ಯಗಳಲ್ಲಿ ಸೇರಿರುವಲ್ಲಿ ಪಾರ್ಟಿಗಳು ಅತಿ ಅಗತ್ಯ. ಮೂಲೆಮೂಲೆಗಳಲ್ಲಿರುವ ಓಟರರಿಗೆ ರಾಜಕೀಯ ವಿಚಾರ ಪ್ರಚಾರ ಮಾಡಿ ಮತದಾರರಿಗೆ ಪ್ರತಿಯೊಂದು ಪ್ರಶ್ನೆಯ ಕುರಿತು ಅನುಭವ ಕೊಟ್ಟು ತರಬೇತಿ ಮಾಡಿ, ಚುನಾವಣೆಯ ಸಮಯ ಪ್ರಯತ್ನಪಟ್ಟು ಓಟು ಕೊಡುವಂತೆ ಮಾಡುವುದೇ ಈ ಪಾರ್ಟಿಗಳು. ಇವರು ಅವಿದ್ಯಾವಂತರಿಗೆ ರಾಜಕೀಯ ವಿಷಯದಲ್ಲಿ ಜ್ಞಾನ ವಿಕಾಸಗೊಳಿಸುವರು; ಓಟರರು ತಮ್ಮ ಮನಸ್ಸು ಬಂದಂತೆ ವಿಚಾರಶೂನ್ಯರಾಗಿ ವರ್ತಿಸಿದರೆ ಪ್ರಜಾಪ್ರತಿನಿಧಿ ಸರಕಾರವು ನಡೆಯುವದೇ ಕಷ್ಟ. ಯಾರಿಗೆ ಯಾವ ಬಾಬಿಗೆ ಓಟು ಕೊಡಬೇಕೆಂಬುದು ಜನರಿಗೆ ಗೊತ್ತಾಗುವದೇ ಪಾರ್ಟಿಗಳ ಪ್ರಚಾರದಿಂದಾಗಿದೆ. ತಮ್ಮ ಓಟು ಬಹು ಬೆಲೆಯುಳ್ಳದ್ದು, ಅದರ ಮಹತ್ವವೇನದೆ ಎಂಬುದರ ಅರಿವು ಓಟರರಿಗೆ ಬರುವುದೇ ಪಾರ್ಟಿಗಳಿಂದಾಗಿದೆ. ಕ್ಷಮಾಗತವಾದ ಪಾರ್ಟಿಗಳಿಲ್ಲದಿರುವಲ್ಲಿ ಓಟರರು ಎತ್ತಿದವರ ಕೈಕೂಸಾಗಿ ಪರರ ಹೇಳಿಕೆಯಿಂದ ಮೋಸಗೊಳಿಸಲ್ಪಟ್ಟು ಸ್ವಾರ್ಥಿಗಳನ್ನೂ ಗಾಳಿ ಬೀಸಿದತ್ತ ಕೊಡೆ ಹಿಡಿಯುವವರನ್ನೂ ಆರಿಸಿ ಪ್ರಜಾಪ್ರತಿನಿಧಿ ಸರಕಾರ ನಡೆಯುವದೇ ಕಷ್ಟವಾಗುವಂತೆ ಮಾಡುವರು. ಮಾತ್ರವಲ್ಲ, ದೇಶದಲ್ಲಿ ಸರ್ವಾಧಿಕಾರ ಸ್ಥಾಪನೆಯಾಗುವರೆ ಎಡೆಗೊಟ್ಟಾರು. ದೈನಂದಿನ ಆಡಳಿತೆಯ ವಿಚಾರದಲ್ಲಿ ಸವಾಲು ಕೇಳುವದು, ಸಾರ್ವಜನಿಕ ಪ್ರಯೋಜನಕ್ಕಾಗಿ ಚರ್ಚಿಸಿ ಕಾದಾಡುವದು, ಕಾನೂನಿನಲ್ಲಿರುವ ನ್ಯೂನತೆಗಳನ್ನು ತಿದ್ದುವದು, ದೇಶದ ಆಯವ್ಯಯ ಪರಿಶೀಲನೆ ಮಾಡುವದು, ಅಧಿಕಾರಿ ಪಾರ್ಟಿಯವರು ಸ್ವೇಚ್ಛೆಯಿಂದ ವರ್ತಿಸದಂತೆ ನೋಡಿಕೊಳ್ಳುವದು, ಜನರು ತಮ್ಮಲ್ಲಿಟ್ಟಿರುವ ವಿಶ್ವಾಸದ ಜವಾಬ್ದಾರಿಕೆಯನ್ನು ಅಕ್ಷರಶಃ ಪರಿಪಾಲಿಸುವದು, ಇವೇ ಮೊದಲಾದವುಗಳು ಪಾರ್ಟಿಗಳ ಕರ್ತವ್ಯವಾಗಿವೆ.

ನಮ್ಮ ದೇಶದಲ್ಲಿ ನಿಜವಾದ ರಾಜಕೀಯ ಪಾರ್ಟಿಯಿರುವದು ಒಂದೇ ಆಗಿಯದೆ. ಈ ದಿವಸ ಕಾಂಗ್ರೆಸ್ ಪಾರ್ಟಿಯೂ ಸರಕಾರವೂ ಒಂದೇ ಆಗಿರುವದು. ನಾವು ಪರರಾಷ್ಟ್ರದವರ ಆಡಳಿತೆಯಲ್ಲಿರುವಾಗ ಸ್ವಾತಂತ್ರ್ಯ ಪಡೆಯಲು ಹೋರಾಡುವ ಬಗ್ಗೆ ಒಮ್ಮತವಿರುವ ಒಂದೇ ಪಾರ್ಟಿಯು ಬೇಕಾಗಿತ್ತು. ಬೇರೆ ಪಾರ್ಟಿಗಳಿಗೆ ಆಗ ಎಡೆ ಇಲ್ಲ. ಯಾರು ಕಾಂಗ್ರೆಸ್ಸಿನೊಟ್ಟಿಗೆ ಸೇರಲಿಲ್ಲವೋ ಅವರೆಲ್ಲಾ ವಿರೋಧ ಪಾರ್ಟಿಗಳೆಂಬ ಭಾವನೆಯಾಗಿದೆ. ಪರರ ಆಳ್ವಿಕೆಯಲ್ಲಿರುವ ದೇಶಗಳಿಗೆ ಪಾರ್ಟಿಗಳ ಶ್ರೀಮಂತಿಕೆಯು ಬೇಡವೆಂತ ಲೋರ್ಡ್ ಬ್ರೈಸ್ ಎಂಬವರು ಅವರ 'ಮೋಡರ್ನ್ ಡೆಮೋಕ್ರೆಸಿ' ಎಂಬ ಪುಸ್ತಕದಲ್ಲಿ ಬರೆದಿರುವರು. ಆ ಕಾಲದಲ್ಲಿ ಲಿಬರಲ್ ಪಾರ್ಟಿ ಅಥವಾ ಮೊಡರೇಟ್ ಪಾರ್ಟಿ ಎಂಬುದೊಂದು ಇತ್ತು. ಅವರು ದೇಶ ಸೇವಾನಿರತರೇ ಆದರೂ ಅವರ ಪಾರ್ಲಿಮೆಂಟರಿ ರೀತಿಯನ್ನು ಕಂಡು ಕಾಂಗ್ರೆಸ್ಸಿಗರು ವಕ್ರ ದೃಷ್ಟಿಯಿಂದ ನೋಡಿದರು. ಅವರ ದೇಶಭಕ್ತಿಯನ್ನು ನೋಡಿ ಆಗಿನ ಸರಕಾರವು ಅವರನ್ನು ಅಪನಂಬಿಕೆಯಿಂದ ದೂರ ಮಾಡಿತು. ಹೀಗಾಗಿ ಗಬ್ಬಿಲದ ಗತಿ ಆ ಪಾರ್ಟಿಗೆ ಒಂದು ಮೂಲೆ ಹಿಡಿಯಿತು.

ಈಗ ನಮಗೆ ಸ್ವಾತಂತ್ರ್ಯ ಸಿಕ್ಕಿದೆ. ಒಂದೇ ಪಾರ್ಟಿಯ ಸರಕಾರ ನಡೆಯುವದು ಪ್ರಜಾಸತ್ತಾ ಸರಕಾರಕ್ಕೆ ಯೋಗ್ಯವಲ್ಲವೆಂತ ಹಲವರು ಅಭಿಪ್ರಾಯ ಪಡುವರು. ಆದರೆ ಇನ್ನೊಂದು ಪಾರ್ಟಿಯನ್ನು ಕೂಡಲೇ ರಚಿಸುವದು ಕಷ್ಟ. ಸ್ವಾತಂತ್ರ್ಯವು ಸಿಕ್ಕುತ್ತಲೇ ರಾಷ್ಟ್ರದಲ್ಲಿ ತುಂಬಾ ಒಡಕು, ಬಿಕ್ಕಟ್ಟು ವೈಷಮ್ಯ, ಅಂತಃಕಲಹವಿರುವುದರಿಂದ ಎರಡನೇ ಪಾರ್ಟಿ ಸಂಘಟಿಸಲು ಅವಕಾಶವೂ ಇಲ್ಲ. ಪಾರ್ಟಿ ಸ್ಪರ್ಧೆಗೆ ಇದು ಸಮಯವೂ ಅಲ್ಲ. ಸರಕಾರಕ್ಕೆ ಪ್ರೋತ್ಸಾಹ ಕೊಟ್ಟು ಸಹಾಯ ಮಾಡುವ ಸಮಯವೇ ಹೊರತು ಅಡ್ಡಗಾಲು ಹಾಕಿ ತಡೆಗಟ್ಟುವ ಸಮಯ ಇದಲ್ಲ. ರಾಷ್ಟ್ರದಲ್ಲಿ ಅಲ್ಲಲ್ಲಿ ಜನರು ಅತೃಪ್ತಿ ಸೂಚಿಸುತ್ತಿರುವರು. ಅಲ್ಲಲ್ಲಿ ವಿರೋಧಾಭಿಪ್ರಾಯವನ್ನು ಸ್ಪಷ್ಟವಾಗಿ ವ್ಯಕ್ತಗೊಳಿಸುವಷ್ಟು ಸಾಮರ್ಥ್ಯವಿಲ್ಲ. ಕಾಂಗ್ರೆಸ್ಸಿಗರಲ್ಲನೇಕ [illegible] ನ್ನ ಸರ್ವಸ್ವವನ್ನೂ ಕಳಕೊಂಡಿರುವರು. ಎಲ್ಲಾ ವಿಚಾರಗಳಲ್ಲಿ ಅನುಭವ, ದೇಶಹಿತ, ಸುಧಾರಣಾ ಬುದ್ಧಿಯುಳ್ಳ ಮುಂದಾಳುಗಳು ಕಾಂಗ್ರೆಸ್ಸಿನಲ್ಲಿ ಇದ್ದಾರೆ. ಮುಸ್ಲಿಮ್ ಲೀಗಿನ ಪರಿಚಯ ನಮಗೆ ಚೆನ್ನಾಗಿರುವದರಿಂದಲೂ ಮಹಾತ್ಮಾಜಿಯವರ ಜೀವದಾನದ ನೆನಪಾಗುವದಾದ್ದರಿಂದಲೂ ಕಾಂಗ್ರೆಸ್ಸಿಗೆ ಎದುರಾಡುವ ಹೊಸ ಪಾರ್ಟಿ ಕಟ್ಟಲು ಮನಸ್ಸು ಒಡಂಬಡುವದಿಲ್ಲ. ಮಾತ್ರವಲ್ಲ ಇನ್ನೊಂದು ಪಾರ್ಟಿಯು ಬೇಡವೇ ಬೇಡವೆನ್ನಿಸುತ್ತದೆ. ಬರೇ ವಿರೋಧಾಭಿಪ್ರಾಯವಿದ್ದರೆ ಸಾಲದು; ದೇಶದ ಉನ್ನತಿಗೆ ಕಾರಣವಾದ ಧೋರಣೆ ವಹಿಸಿ ಹೊಸ ಮಾದರಿಯ ಮುಂದಾಳುತನ ತೋರುವ ಯೋಗ್ಯ ಪಾರ್ಟಿಯು ಬೇಕಾಗಿದೆ.

ಇದರಿಂದ ನಾವು ವಿರೋಧಾಭಿಪ್ರಾಯಗಳನ್ನು ಸೂಚಿಸುವಷ್ಟು ಕಾರಣಗಳಿಲ್ಲವೆಂದಾಗಲೀ, ಇನ್ನೊಂದು ಪಾರ್ಟಿಯ ಅವಶ್ಯಕತೆಯಿಲ್ಲವೆಂದಾಗಲೀ ಭಾವಿಸಬಾರದು. ಎದುರಾಡುವ ಒಂದು ಪಾರ್ಟಿಯು ಯಾವಾಗಲೂ ಬೇಕು. ತತ್ಕಾಲಕ್ಕೆ ದೇಶದ ಆಡಳಿತೆ ಭಾರವನ್ನು ಹೊರುವ ಯೋಗ್ಯತೆ ಇರುವ ಇನ್ನೊಂದು ಪಾರ್ಟಿ ರಚಿಸುವದು ಕಷ್ಟ. ಆದರೆ ಸರಕಾರದ ಧೋರಣೆಯನ್ನು ವಿರೋಧಿಸಿ ತಡೆಗಟ್ಟಿ, ಕುಂದು ಕೊರತೆಗಳನ್ನು ಬಯಲಿಗೆಳೆದು ಎಚ್ಚರಿಸುವ ಇನ್ನೊಂದು ಪಾರ್ಟಿಯು ಅಗತ್ಯವಾಗಿ ಬೇಕಾಗಿದೆ.

ನಮ್ಮ ದೇಶದಲ್ಲಿ ಈಗಿರುವ ಪಾರ್ಟಿಗಳಲ್ಲಿ ಅಂಥಾ ಪಾರ್ಟಿಗಳ್ಯಾವವೂ ಕಂಡುಬರುವದಿಲ್ಲ. ಮಜೂರರು, ಸೋಶಿಯಲಿಸ್ಟರು ಮತ್ತು ಕಮ್ಯೂನಿಸ್ಟರು ವಗೈರೆಯವರು ಈ ವಿಷಯದಲ್ಲಿ ಹೆಚ್ಚಿನ ತರಬೇತಿ ಹೊಂದಲಿಲ್ಲ. ನಮ್ಮಲ್ಲಿ ಬೆಂಬಲಿಗರಿಲ್ಲದ ಪಾರ್ಟಿಗಳು ಮತ್ತು ಮುಂದಾಳುಗಳಿಲ್ಲದ ಪಾರ್ಟಿಗಳು ಎಷ್ಟೋ ಇವೆ. ಮಜೂರರು ತಮ್ಮ ಮುಂದಾಳುಗಳನ್ನಾಗಿ ಪರಕೀಯರನ್ನು ಇಟ್ಟುಕೊಂಡು ಪರರಾಷ್ಟ್ರದ ರೀತಿಯನ್ನೇ ಅನುಸರಿಸಿ ಅವರನ್ನೇ ಮಾದರಿಯಾಗಿಟ್ಟುಕೊಂಡು, ಅವರ ದಾರಿಯನ್ನೇ ಮೆಟ್ಟಿ ನಡೆಯುವರು. ಕಮ್ಯೂನಿಸ್ಟರು ಪರರಾಷ್ಟ್ರದವರ ಕೈಗೊಂಬೆಯಾಗಿ ಅವರ ಸೂತ್ರಗಳನ್ನೇ ಆಮದು ಮಾಡಿ ಅವರ ಪ್ರತಿಬಿಂಬದಂತೆ ವರ್ತಿಸುವರು. ವ್ಯಾಪಾರಸ್ಥರು ಶ್ರೀಮಂತರು ಪಾರ್ಟಿಯನ್ನು ಸ್ಥಾಪಿಸಿದರೆ ಅದು ಸ್ವಲ್ಪ ಜನರ ಸ್ವಾರ್ಥಕ್ಕಾಗಿ ಸಾಧಿಸಲ್ಪಡುವದು. ಈ ಎಲ್ಲಾ ಕಾರಣಗಳಿಂದ ಒಂದು 'ಒಪೊಸಿಶನ್' ಪಾರ್ಟಿಯು ತಯಾರಾಗುವದು ಸದ್ಯಕ್ಕೆ ಕಷ್ಟ. ಒಂದೇ ಪಾರ್ಟಿಯು ಇರುವದಾದರೂ ಚಿಂತೆ ಇಲ್ಲ, ಅವರಲ್ಲಿ ಐಕ್ಯತೆಯಿರಬೇಕು, ಇಲ್ಲವಾದರೆ ಅವರವರೊಳಗೆ ಕಲಹವುಂಟಾಗಿ ಪಾರ್ಟಿಯೊಳಗೆ ಗೊಂದಲೇಳುವದು. ಇದರಿಂದ ಪಾರ್ಟಿಯ ಐಕ್ಯತೆ ಹಾಳಾಗುವದು. ಶಾಸನವು ಯಾವರೂಪದ್ದಾದರೂ ಅದನ್ನು ಕಾರ್ಯರೂಪಕ್ಕೆ ತರುವದು ಪಾರ್ಟಿಗಳನ್ನು ಹೊಂದಿರುವದು. ನಾವು ಯುರೋಪು ಅಮೇರಿಕ ದೇಶಗಳಲ್ಲಿರುವ ಪಾರ್ಟಿಯ ಕ್ರಮಗಳನ್ನು ಆಚರಣೆಗೆ ತಂದಿದ್ದೇವೆ. ಆದರೆ ಅದನ್ನು ಸರಿಯಾಗಿ ಅನುಸರಿಸಿ ನಡೆಯುವದಿಲ್ಲ. ನಾವು ಪಾರ್ಟಿಯ ಮುಖ್ಯಸ್ಥರನ್ನು ಗ್ರಾಮಫೋನಿನ ಹಾಗೆ ಮಾಡುವದರಲ್ಲಿದ್ದೇವೆ. ಕೆಲವು ಪ್ರಾಂತಗಳಲ್ಲಿ ಪ್ರತಿಯೊಂದು ಠರಾವು ಮತ್ತು ಮಸೂದೆಯು ಪಾರ್ಟಿ "ಕೋಕಸ್ಸಿ"ನಲ್ಲಿ ಪ್ರಥಮ ತೀರ್ಮಾನವಾಗಿ ಕೌನ್ಸಿಲಿಗೆ ಬರುವದಾಗಿ ಮುಖ್ಯಸ್ಥರ ಕೈ ಕಟ್ಟುವದು ಸರಿಯಲ್ಲ. ಪಾರ್ಟಿಗಳು ಮುಖ್ಯವಾದ ಪೋಲಿಸಿ ಮತ್ತು ಪ್ರೋಗ್ರಾಮುಗಳನ್ನು ನೋಡಿಕೊಳ್ಳಬೇಕೇ ಹೊರತು ಆಡಳಿತೆಯಲ್ಲಿ ಕೈಹಾಕಬಾರದು.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 3618

Estd: 1921 ಸ್ಥಾಪನೆ

30ನೇ ಮಾರ್ಚ
30—3—1951

LICENCE No. 31
Licensed to Post
without Prepayment

FOUNDER
Sri. A. B. Shetty
Minister for Agriculture
& Veterinary

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30
ವಾರ ೩೧

NAVAYUGA WEEKLY UDIPI, S. K.
Post Box No. 22

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol 30
No. 31

# ತಪ್ಪು ಯಾರದು? ಆಗಬೇಕಾದುದೇನು?

ಸ್ವರಾಜ್ಯಾಡಳಿತೆಯ ಅಲ್ಪಾವಧಿಯಲ್ಲಿ ನವ ಜನಜೀವನ ಸುಧಾರಣೆಯು ಮಟ್ಟಿಗೆ ಅದರ ಮೇಲೆ ಸಾಮಾನ್ಯರ ದೂರು ದೂಷಣೆಗಳು ಬಡಿದಿರುವಷ್ಟು ಶ್ಲಾಘನೆ, ಶಿಫಾರಸುಗಳಾಗಿಲ್ಲವೆಂಬುದು ಖಂಡಿತ. ಈ ಮಾದರಿಯ ಜನತಾ ಅತೃಪ್ತಿಯು, ಭಾರತದಂತಹ ಜನತಾರಾಜ್ಯದಲ್ಲಿ ಪ್ರತ್ಯಕ್ಷ ಪರಿಮಾಣ ಬೀರುವಂತಹದೆಂಬುದನ್ನು ತಿಳಿದಿರಬೇಕು. ಮುಂದಿನ ಚುನಾವಣೆಯಲ್ಲೇ ಅದು ತೋರಿಬಂದೀತೆಂದು ನಿರೀಕ್ಷಿಸುವವರ ಸಂಖ್ಯೆ ಕಡಿಮೆಯಿಲ್ಲ.

"ಕಾಂಗ್ರೆಸ್ ಆಡಳಿತೆ ಸಾರ್ಥಕವಾಗಿಲ್ಲ" ಎಂಬ ಅಪವಾದವು, ತುಲನಾತ್ಮಕ ವಿಮರ್ಶೆಯ ನಂತರ ಹುಟ್ಟಿದ ತೀರ್ಮಾನವಾಗಿರುತ್ತಿದ್ದರೆ, ಅಂತಹ ಅಸಮರ್ಥ ಆಡಳಿತೆಯನ್ನು ಬರ್ಖಾಸ್ತು ಪಡಿಸಿಕೊಳ್ಳಲೇಬೇಕು. ಕಾಂಗ್ರೆಸು ಜನಸೇವಾ ಯೋಗ್ಯತೆಯ ಬಲದಿಂದಲೇ ಈ ವರೆಗೆ ಸ್ಥಾನಮಾನಗಳನ್ನು ಗಳಿಸಿಕೊಂಡಿದೆ; ಆ ಯೋಗ್ಯತೆಯೀಗ ಪೂರ್ಣ ಕಳೆದು ಹೋಗಿದೆ ಎಂಬುದು ಖಚಿತವಾದ ಮೇಲೂ, ಅದನ್ನೇರಿಸಿಟ್ಟುಕೊಂಡಿರಬೇಕೆಂಬ ಕರಾರೇನೂ ಇಲ್ಲ. ಜನತೆಗಾಗಿ ಪಕ್ಷ ಹೊರತು ಪಕ್ಷಕ್ಕಾಗಿ ಜನತೆಯಲ್ಲ.

ಆದರೆ ಕಾಂಗ್ರೆಸ್ ಆಡಳಿತೆಯ ಮೇಲಿನ ಇಂದಿನ ಆರೋಪಗಳು, ವಿಚಾರಶಕ್ತಿಯ ತಳದಲ್ಲಿ ಹುಟ್ಟಿದ ಫಲಗಳಾಗಿರದೆ, ಉದ್ವೇಗಾವೇಗ ತೆರೆಗಳು ಹಿಡಿಯಿಸಿದ ಹನಿಮುತ್ತುಗಳೇ ಆಗಿವೆ; ಇವೇನೂ ಪೋಣಿಸಿ ಧರಿಸಿಕೊಳ್ಳಲಾಗುವಂತಹವಲ್ಲ. ಇಂತಹ ಆರೋಪಗಳು ನ್ಯಾಯಬದ್ಧ ತೀರ್ಪುಗಳಾಗಲಾರವು.

ಸ್ವತಂತ್ರ ರಾಜ್ಯಭಾರವು ಪೂರ್ಣ ಸಫಲವಾಗಿಲ್ಲವೆಂಬುದು ನಿರ್ವಿವಾದ. ಕಾಂಗ್ರೆಸ್ ಆಡಳಿತೆಯಲ್ಲಿ ದೋಷಗಳಿವೆ—ಕಾಂಗ್ರೆಸಿಗರೀಗ ಹಾಳಾಗಿದ್ದಾರೆ—ಎಂಬುದೂ ನಿಜವೇ. ಆದರೆ ಜನಸಾಮಾನ್ಯರು ದೂರುತ್ತಿರುವುದೆಲ್ಲವೂ ಆರೋಪಾರ್ಹವಾದವುಗಳೇ ಅಲ್ಲ; ಇಂದಿನ ಆಡಳಿತೆಯ ಮೇಲೆ ಅಪವಾದವಿರುವಷ್ಟು, ಅದು ಅಪಜಯಗೊಂಡಿಲ್ಲ. ಜನಜೀವನದಲ್ಲಿರುವ ಈಗಿನ ಅನಾನುಕೂಲತೆ, ಅಡಚಣೆಗಳ ಹೆಚ್ಚಿನಂಶಕ್ಕೆ ಹೊಣೆ ಕಾಲಸ್ಥಿತಿ ಹೊರತು ಕಾಂಗ್ರೆಸ್ ಆಡಳಿತೆಯಲ್ಲ; ಪಾಕದಲ್ಲಿರುವಾಗ ಮಧ್ಯದಲ್ಲೇ ಸೌಟು ಹಾಕಿ 'ಬೇಳೆ ಬೇಯಲೊಲ್ಲದು' ಎನ್ನುವ ಅಜ್ಞಾನವೇ ಮಿಕ್ಕ ಆರೋಪಗಳಲ್ಲಿ ತುಂಬಿದೆ. ಇಡೀ ಪ್ರಪಂಚದ ಪಾಲಿನದಾಗಿರುವ ಈ ಕಳತೇ ಯುಗದಲ್ಲಿ ಹೊಣೆ ವಹಿಸಿ 2½ ವರುಷವಾಗುವದರೊಳಗೆ, ಕಾಂಗ್ರೆಸಿಗರಲ್ಲವಾದರೆ ಬೇರೊಂದು ಪಕ್ಷಕ್ಕೆ ಎಷ್ಟೆಲ್ಲಾ ಮಾಡಲು ಸಾಧ್ಯವಿದ್ದಿತೆಂಬ ತುಲನಾತ್ಮಕ ದೃಷ್ಟಿ ಇಲ್ಲಿರಬೇಕು.

"ಯಾಕೆ ಸಾಧ್ಯವಿಲ್ಲ? ಇಷ್ಟನ್ನೆಲ್ಲಾ ಮಾಡಬಹುದಿದ್ದಿತು……" ಎಂದು ಬೇರೆಬೇರೆ ವಿಧದ ರಮ್ಯ ಚಿತ್ರಗಳನ್ನು ಕಣ್ಣ ಮುಂದೆ ಹಿಡಿಯುವವರಿರಬಹುದು. ಆದರೆ ಅಂಥವರೆಲ್ಲರೂ, ತಂತಮ್ಮ ಒಂದೊಂದೇ ವಿಧಾನವನ್ನು 'ಸರ್ವ ವಿಧಾನ ಸಂಯುಕ್ತ' ರಾಷ್ಟ್ರದಲ್ಲಿ ಮೇಲೆತ್ತಿ ಪ್ರಯುಕ್ತಿಸುವವರೇ; ವಿವಿಧ ಅಂತಸ್ತು, ಗೋಡೆಗಳಿರುವ ರಾಷ್ಟ್ರ ಕಟ್ಟಡದಲ್ಲಿ, ತಮ್ಮದಾದ ಒಂದು ಭಾಗವನ್ನು ಏರಿಸಿಕೊಳ್ಳುವುದಕ್ಕಾಗಿ ಮಿಕ್ಕ ಗೋಡೆಗಳನ್ನು ಕೆಡಹಾಕಬೇಕು ಅಥವಾ ಮರೆತುಬಿಡಬೇಕು ಎನ್ನುವವರೇ. ಇದು 'ಉನ್ನತಿ'ಯಲ್ಲ; ಪ್ರಗತಿಯನ್ನಿಸದು; ಆದ್ದರಿಂದ ಎಲ್ಲ ಕಡೆಗೂ ದೃಷ್ಟಿಯಿಟ್ಟು, ಸಾವಧಾನದಿಂದಾದರೂ ಸರ್ವಾಂಗಗಳ ಸಮಾನ ಪುಷ್ಟಿಯನ್ನು ಸಾಧಿಸುವ ಕಾಂಗ್ರೆಸ್ ಆಡಳಿತೆಯೇ ಹಿತಕರ ಹೊರತು, ಕೇವಲ ಒಂದೇ ಗೋಡೆಯನ್ನು ಎತ್ತರಕ್ಕೇರಿಸಿ, ಮಿಕ್ಕ ಭಾಗಗಳನ್ನು ಹಾಳುಬಿಡುವ ಬೇರೆ ಯಾವ ಪಕ್ಷದ ಕ್ಷಿಪ್ರತೆಯೂ ಪ್ರಯೋಜನಕರವಲ್ಲ.

ಕಾಂಗ್ರೆಸಿಗರಲ್ಲಿ, ಕಾಂಗ್ರೆಸ್ ಆಡಳಿತೆಯಲ್ಲಿ, ದೋಷ, ದುರ್ಗುಣಗಳಿವೆ—ಇದಕ್ಕೆ ಕಾರಣ ಕಾಂಗ್ರೆಸು ಯಾತ ಪ್ರತಿನಿಧಿಯಾಗಿರುವುದೋ ಆ ಜನ ಸಾಮಾನ್ಯರಲ್ಲಿ ಅಂತಹ ದೋಷ, ದುರ್ಗುಣಗಳಿರುವುದೇ. ಅಂತೂ ಕಾಂಗ್ರೆಸು ಗುಣದೋಷವೆರಡರ ಮಟ್ಟಿಗೂ ಜನಪ್ರತಿನಿಧಿ ಸಂಸ್ಥೆ. ಮಿಕ್ಕ ಪಕ್ಷಗಳು ಈ ವರೆಗೆ ಅಂತಹ ಸ್ಥಾನಕ್ಕೆ ಬಂದಿಲ್ಲವೆಂಬುದನ್ನೂ, ಈ ಸ್ಥಾನ ಸಂಪಾದನಾ ಕೆಲಸವೇನೂ ಸಣ್ಣದಲ್ಲವೆಂಬುದನ್ನೂ ನೆನಪಿಡಬೇಕು. ಒಟ್ಟಿನ ಮೇಲೆ ಎಲ್ಲರಲ್ಲಿ, ಪ್ರತ್ಯಪ್ರತ್ಯೇಕವಾಗಿ ಜನತೆಯಲ್ಲಿ ಮತ್ತು ಜನತೆಯಿಂದಾದ ಕಾಂಗ್ರೆಸಿನಲ್ಲಿ ಈಗ ದೋಷಗಳು ಅಧಿಕಾಧಿಕವಾಗಿವೆ. ಇಲ್ಲಿಯ ಮತ್ತು ಅಲ್ಲಿಯ ಆ ಕೊರತೆಗಳನ್ನು ನಿವಾರಿಸಿಕೊಳ್ಳುವುದೊಂದೇ ಈಗ ಆಗಬೇಕಾಗಿರುವ ಕರ್ತವ್ಯ. ಬದಲಿಗೆ ದೋಷಗಳಿವೆ ಎಂಬುದರಿಂದ ಪಕ್ಷವನ್ನೇ ಬದಲಾಯಿಸಿಕೊಳ್ಳಲು ನೋಡುವದು ಬಲಗೈ ಹುಳುಕು ಬಿದ್ದಿತೆಂದು ಮುರಗೈಯನ್ನು ತೊಟ್ಟುಕೊಳ್ಳಲು ಹವಣಿಸುವಂತಾಗಬಹುದು!

ಈಗ ಇರುವ ದೋಷಗಳ ಶುದ್ಧೀಕರಣಕ್ಕಾಗಿ, ವಿಂಗಡಿಸಿ ನೋಡುವುದಾದರೆ, ಪ್ರತ್ಯೇಕವಾಗಿ ಕಾಂಗ್ರೆಸ್ ಆಡಳಿತೆಯಲ್ಲಿರುವುದಕ್ಕಿಂತಲೂ ಜನತೆಯಲ್ಲಿರುವ ಕುಂದು ಕೊರತೆಗಳೇ ಹೆಚ್ಚಿನವೆಂದು ಕಾಣುತ್ತದೆ. ಜನಮತವೊಮ್ಮೆ ಸುಧಾರಿಸಿತೆಂದರೆ, ಅದನ್ನಾಧರಿಸಿ ಇರಬೇಕಾದ ಆಡಳಿತಗಾರ ವರ್ಗ ತನ್ನಂತೆ ಸುಧಾರಣೆ ಹೊಂದುವುದು.

ಜನಮನದಲ್ಲಿರುವ ಕೊರತೆಗಳಾವುವು? ಹತ್ತು ಹಲವು! ಆ ಪೈಕಿ ಈ ಕಾಲದಲ್ಲಿ ಅತಿ ಹೆಚ್ಚಿನದಾಗಿ ತೋರುತ್ತಿರುವುದೆಂದರೆ, ಸಮೀಪವರ್ತಿಗಳನ್ನು ಮತ್ತವರ ಕಾರ್ಯಗಳನ್ನು ತಾತ್ಸಾರದಿಂದ ಕಾಣುವ ಹುಟ್ಟುಗುಣ.

ಈಗಿನ ಆಡಳಿತೆಗಾರರ ಕಡೆಗೆ ಸಾರ್ವಜನಿಕರಿಗಿರುವ ಸಡಿಲು ಸಲುಗೆಯೇ, ಇಂದಿನ ದೂರು ದೋಷಣೆಗಳಿಗೆ ಮೂಲ ಹೇತು. ಜನಸಾಮಾನ್ಯರೆಬ್ಬಿಸುತ್ತಿರುವ ಮುಖ್ಯ ಎರಡು ದೂರುಗಳನ್ನೇ ನಿದರ್ಶನಕ್ಕಾಗಿ ಎತ್ತಿಕೊಳ್ಳೋಣ. "ಕಾಂಗ್ರೆಸ್ ಆಡಳಿತೆಯಲ್ಲಿ ಜನಸಾಮಾನ್ಯರ ನಿತ್ಯ ಜೀವನ ಸಂಕಷ್ಟಗಳು ಹೆಚ್ಚಾಗಿವೆ" ಎಂಬುದು ಒಂದನೇ ಆರೋಪ. "ಕಾಂಗ್ರೆಸಿಗರು ಘೋಷಣೆ, ಭಾಷಣಗಳಲ್ಲಿ, ಶ್ರಮದಾನಗಳಲ್ಲಿ ತೋರಿಸಿರುವ ಕತ್ತರಲ್ಲೊಂದಂಶದಷ್ಟನ್ನಾದರೂ ಕಾರ್ಯತಃ ಮಾಡಿಲ್ಲ" ಎಂಬುದು ಮತ್ತೊಂದು ಅಪವಾದ.

ಮೇಲಿನ ಎರಡು ಆರೋಪಗಳಲ್ಲೂ ಕೆಲವಂಶ ಸತ್ಯವಿದ್ದರೆ, ಮಿಕ್ಕಂಶ ಅರ್ಧಸತ್ಯ, ಅಸತ್ಯಗಳೇ ತುಂಬಿವೆ. ಸ್ವಾತಂತ್ರ್ಯ ಬರುವದೆಂದರೆ, ಒಮ್ಮೆಗೇ ಸ್ವರ್ಗಲೋಕ ಇಳಿದು ಬರುವದೆಂಬಂತಹ ನಿರೀಕ್ಷೆಯಿದ್ದುದು ಮತ್ತು 'ನಮ್ಮವರ ಆಡಳಿತೆ' ಯೆಂಬುದರಿಂದ ಮಿತಿಮೀರಿದ ಸಲುಗೆಯಿಂದ ದೋಷಗಳನ್ನೇ ಹುಡುಕುವ ಚಟ ವ್ಯಾಪಿಸಿಕೊಂಡಿರುವುದೇ ಇಂತಹ ಸ್ಥಿತಿಗೆ ಕಾರಣ. ಹೇಗಲ್ಲವೇ ಎಂಬುದನ್ನು ತುಸು ವಿವರವಾಗಿ ಯೋಚಿಸೋಣ.

ಕಾಂಗ್ರೆಸ್ ಆಡಳಿತೆಯ ಕಾಲವೇ ಜನಸಾಮಾನ್ಯರ ಜೀವನ ಸಂಕಟ ಹೆಚ್ಚಿರುವ ಕಾಲವೆಂಬುದು ನಿಜ; ಅಂದರೆ ಕಾಲವೇ ಅಂತಹದು ಹೊರತು ಆಡಳಿತೆ ಅಂತಹದಲ್ಲ. ಈ ಕಾಲದಲ್ಲಿ ಯಾವ ಆಡಳಿತೆಯಿರುತ್ತಿದ್ದರೂ, ಲೋಕದಲ್ಲೇ ಕೊರತೆಯಿರುವ ಆಹಾರ ಧಾನ್ಯಗಳನ್ನು ಇಂದ್ರಜಾಲದಿಂದ ನಿರ್ಮಿಸಿಕೊಳ್ಳುವುದಕ್ಕಾಗಲೀ, ಪ್ರಪಂಚವ್ಯಾಪಿಯಿರುವ ಧಾರಣೇ

"ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

## ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು—ದಿ| ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಮಾತುಗಳ ರೂಪದಲ್ಲಿಳಿದ ಛಟ್ಟಿಯಾಗಿ ಎದ್ದು ಕಾಣುವುದು.

**400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.**

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು

ಪ್ರತಿಗಳು ಸಿಗುವ ಮುಖ್ಯ ಸ್ಥಳ.—

ನವಯುಗ ಪ್ರೆಸ್, ಉಡುಪಿ, ದ. ಕನ್ನಡ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

ಆಧಿಕ್ಯವನ್ನು ವಜ್ರಾಯುಧ ಪ್ರಯೋಗಿಸಿ ಕುಗ್ಗಿಸುವುದಾಗಲೀ ಆಗುತ್ತಿರಲಿಲ್ಲ, ಅಂದಮೇಲೆ ನೆಲಬಿಟ್ಟು ರಥ ನಡೆಸುವ ಚಮತ್ಕಾರವು ಕಾಂಗ್ರೆಸ್ ಆಡಳಿತೆಯಲ್ಲಿಲ್ಲವೆಂಬುದಕ್ಕೂ ದೂರುವುದು ತೀರಾ ಅಧಿಕಪ್ರಸಂಗ ವ್ಯವಹಾರೋಚಿತ ಟೀಕೆಯಿರಬಾರದೆಂದು ಇದರ ಅರ್ಥವಲ್ಲ.

'ಬ್ರಿಟಿಷ್ ಆಡಳಿತೆಯಿರುತ್ತಿದ್ದರೆ ಹೀಗಾಗುತ್ತಿರಲಿಲ್ಲ'ಎನ್ನುವವರು ಅವರ ಆಡಳಿತೆಯಿದ್ದ ಯುದ್ಧ ಕಾಲದ ಬಂಗಾಳದ ಸುಮಾರು 60 ಲಕ್ಷದಷ್ಟು ಜೀವಗಳ ಕರುಳು ಒಣಗಿಸಿ ಬಲಿ ಪಡೆದುಕೊಂಡಿದ್ದ ಆ ಭೀಕರ ಆಹಾರ ಬರಗಾಲದ ನೆನಪು ಮಾಡಿಕೊಳ್ಳಬೇಕು. ಅಂದಿನಂತೆ ಅಭಾವದ ಉರಿಯು ಒಂದೆಡೆಯಲ್ಲೇ ಜಮೆಗೊಂಡು ಪ್ರಾಣ ಬೇಯಿಸುವ ಬದಲಿಗೆ ಸರ್ವೆಡೆಗಳಿಗೆ ಸಮಾನವಾಗಿ ಚದರಿಸಲ್ಪಟ್ಟು ಶಖ ಕೊಡುವಂತೆ ಮಾಡಿರುವ ವ್ಯವಸ್ಥೆ ಇಂದಿನ ಆಡಳಿತೆಯದು.

ಬ್ರಿಟಿಷರೀಗ ಇಲ್ಲಿ ಇರದಿದ್ದರೂ ಅವರಲ್ಲಿ ಇಂಬೇಕೋ ಅಲ್ಲಿ ಇದ್ದಾರೆ–ಬ್ರಿಟನು ಇದೆ, ತಮ್ಮ ಸ್ವಂತ ರಾಜ್ಯದಲ್ಲಿ ಸಾಧಿಸಲಾಗದ ಮಹತ್ಸಾಧನೆ ಯಾವುದೂ ಪರ ರಾಜ್ಯ ಭಾರತದಲ್ಲಿ ಅವರಿಂದಾಗುತ್ತಿರಲಿಲ್ಲವೆಂಬುದು ನಿಜವಷ್ಟೆ? ಇಂದು ಇಂಗ್ಲಾಂಡಿನಲ್ಲಿರುವಂತಹ ಆರ್ಥಿಕ ಬಿಕ್ಕಟ್ಟು, ಜನಸಾಮಾನ್ಯರ ನಿತ್ಯಜೀವನ ಸಂಕಷ್ಟ, ಭಾರತದಲ್ಲಿಲ್ಲವೇ ಎಂಬುದನ್ನು ಜ್ಞಾಪಿಸಿಕೊಂಡರಾಯಿತು.

"ಘೋಷಣೆ, ಭಾಷಣ, ಕ್ರಮ, ಕಾನೂನುಗಳನ್ನು ಮಾಡಿದನ್ನು ಕಾರ್ಯಮಾಡುತ್ತಿಲ್ಲ" ಎಂಬ ಆರೋಪವಾದರೂ ಇಂದಿನ ಕಾಂಗ್ರೆಸ್ ಆಡಳಿತೆಗೆ ಮಾತ್ರ ಸಂಬಂಧಿಸಿದ್ದಲ್ಲ; ಲೋಕದ ಪ್ರತಿಯೊಂದು ರಾಷ್ಟ್ರದ ಆಡಳಿತೆಗೆ ಪ್ರತಿಯೊಬ್ಬ ವ್ಯಕ್ತಿಗೆ–ಪೌರಾಣಿಕ, ಚಾರಿತ್ರಿಕ ಕಾಲಗಳಿಂದಾರಂಭಿಸಿ ಈ ವರೆಗೂ ಏಕಪ್ರಕಾರ ಎಲ್ಲರಿಗೆ—ಅನ್ವಯಿಸುವಂತಹ ಆರೋಪವಿದು; ಲೋಕ ವಾಡಿಕೆ ಕಾಂಗ್ರೆಸ್ ಸರಕಾರವೊಂದು ಇದಕ್ಕಪವಾದವಾಗದ ಮಾತ್ರಕ್ಕೆ ಅದೇನೂ ಅಕ್ಷಮ್ಯ ಅಪರಾಧವಲ್ಲ.

ನಿಜ, ನಮ್ಮ ರಾಜ್ಯಶಾಸನದಲ್ಲಿ ಉಲ್ಲೇಖಿಸಲ್ಪಟ್ಟಿರುವ ಘನಧ್ಯೇಯ, ಧೋರಣೆಗಳು ಜನತಾರಂಗದಲ್ಲಿ ಪ್ರತ್ಯಕ್ಷ ಕಂಡು ಬರುತ್ತಿಲ್ಲ, ಜಾತ್ಯಾತೀತತೆ, ಅಸ್ಪರ್ಶತಾ ಉದ್ಧಾರ, ಸರ್ವ ಸಮಾನತೆಗಳು ಎಲ್ಲೆಲ್ಲೂ ಜಾರಿಯಲ್ಲಿಲ್ಲ; ಪಾನ ನಿಷೇಧವಾಗಿರುವಲ್ಲೆಲ್ಲಾ ಕಳ್ಳ ತಯಾರಿಗಳು ನಡೆಯುತ್ತಿವೆ, 'ಒಂದಕ್ಕೂ ತಲೆ ಬಾಡಿಲ್ಲ'ದ ನಿಯಮ ನಿಯಂತ್ರಣಗಳು, ಕ್ರಮ ಕಾನೂನುಗಳು, ಕರ ಕಂದಾಯಗಳು ಎಷ್ಟೋ ಜಾರಿಯಲ್ಲಿವೆಯಾದರೂ ಅವುಗಳ ಪಾಲನೆ ಸರಿಯಾಗಿ ನಡೆದಿಲ್ಲ, ರಾಷ್ಟ್ರ ನಾಯಕರು, 'ಜೀವನ ಸ್ಥಿತಿ ಸುಧಾರಣೆ' 'ಜನತೋದ್ಧಾರ' 'ಭದ್ರತೆ' 'ಪ್ರಗತಿ'ಯ ದೊಡ್ಡದೊಡ್ಡ ತತ್ವಗಳನ್ನು ಸಾರುತ್ತಿರುವರಾದರೂ ಜನತಾ ರಂಗದ ಅಂತಸ್ಸುಗಳು, ಅಡಿ ಮೇಲುಗಳೆಲ್ಲವೂ ಯಥಾಪ್ರಕಾರ ಇವೆ; ಒಟ್ಟಿನ ಮೇಲೆ ಬಾಯಿ ಮಾತ್ರ ಓಹಮಾಶಿಲಕ ನಡೆದಷ್ಟು ಕಾರ್ಯರೂಪದಲ್ಲಾಗುತ್ತಿಲ್ಲ.

ಆದರೆ, ಮಾತು ಅಕ್ಷರಶಃ ಫಲಿಸಿದ–ಕಾನೂನು 'ಕೊಮು' ತಪ್ಪದೆ ಜಾರಿಯಲ್ಲಿದ್ದ ಒಂದು ನಿದರ್ಶನ ಇಡೀ ಚರಿತ್ರೆಯಲ್ಲಿ ಮತ್ತು ಇಡೀ ಪ್ರಪಂಚದಲ್ಲಿ ಎಲ್ಲಿಯಾದರೂ ಇದೆಯೆ? ಕಾಣುವದಿಲ್ಲ! ಸಾರ್ವಜನಿಕರೆಲ್ಲರಲ್ಲಿ ವಂಶಪಾರಂಪರ್ಯವಾಗಿ ಪತ್ತೆ ಹಿಡಿದುಕೊಂಡಿರುವ ಸ್ವಭಾವಾಚರಣೆಗಳನ್ನು ಬದಲಾಯಿಸುವ ದೃಷ್ಟಿಯುಳ್ಳ 'ಅಸ್ಪರ್ಶತಾ ನಿವಾರಣೆ' 'ಸರ್ವ ಸಮಾನತೆ' 'ಪಾನ ನಿಷೇಧ'ದಂತಹ ಕ್ರಮ, ಕಾನೂನುಗಳಂತೂ ಎಲ್ಲೆಡೆಯಲ್ಲೂ ಏಕಪ್ರಕಾರ ಜಾರಿಯಲ್ಲಿರುವುದು ಅಸಾಧ್ಯವೇ ಸರಿ.

ಬ್ರಿಟಿಷ್ ಆಡಳಿತೆಯಿದ್ದ ಆ ಕಾಲದಲ್ಲೇ ಜಾರಿಗೆ ಬಂದಿದ್ದ ಬಾಲ್ಯ ವಿವಾಹ ಪ್ರತಿಬಂಧಕ 'ಶಾರದಾ ಕಾನೂನಿ'ನ ಗತಿಯೇನಾಗಿದೆ ಎಂಬುದನ್ನು ಸ್ಮರಿಸಿದರೆ ಸಾಕು; 'ಕಟ್ಟುಗ್ರ ಶಾಸನ ಕರ್ತ'ರೆಂದು ಹೆಸರಾಗಿದ್ದ ನಾಜಿಗಳಲ್ಲಿ, ಫೇಸಿಸ್ಟರಲ್ಲಿ ಎಂತಹ ಒಡಕುಗಳಿದ್ದುವೆಂಬುದನ್ನು ಜ್ಞಾಪಿಸಿಕೊಂಡರಾಯಿತು, ಶ್ರಮ ಜೀವಿಗಳ ರಾಜ್ಯ ಕಟ್ಟುವೆವೆನ್ನುವವರ ಮೇಲ್ಪಂಕ್ತಿಯಾಗಿರುವ ರಶ್ಯದಲ್ಲಿ ಕೆಲವು ಶ್ರಮ ಜೀವಿ ವರ್ಗಗಳು ಪಡುತ್ತಿರುವ ಕಷ್ಟಗಳ ಕುರಿತು ಕೇಳಿಬರುತ್ತಿರುವ ಕಥೆಗಳತ್ತ ಕಿವಿಗೊಟ್ಟರೆ ಸಾಕು. 'ನಿವೇದನ'ಯಲ್ಲಿರುವುದೆಲ್ಲವೂ ನಿಜಕ್ಕೂ ಎಲ್ಲಿಯೂ ಅಸ್ತಿತ್ವದಲ್ಲಿದ್ದಿರಲಾರದು!

ಅಂದಮೇಲೆ, ನಾವು ಅನುಕ್ರಮವಾಗಿ ನೋಡಬೇಕಾದುದಿಷ್ಟೆ:- ಮೊದಲನೆಯದಾಗಿ ಒಂದು ಘೋಷಣೆ, ಕ್ರಮ, ಅಥವಾ ಕಾನೂನು ಸರಿಯಾದುದೆ–ಸಮರ್ಪಕವೇ? ಎರಡನೆಯದಾಗಿ ಅದರ ಪಾಲನೆಯು ಮನಃಪೂರ್ವಕವಾಗಿ, ಸರಿಯಾದ ವಿಧಿ ವಿಧಾನಗಳಿಂದ, ಆಗುತ್ತಿದೆಯೆ? ಮೂರನೆಯದಾಗಿ ಇಷ್ಟೆಲ್ಲಾ ಇದ್ದೂ ಅದು ಸಾರ್ಥಕವಾಗಿಲ್ಲವೆಂದಾದರೆ ಬೇರೆ ಮಾಡಬೇಕಾದುದೇನು?

ಈ ಶೋಧನಾ ಸೂತ್ರಗಳನ್ವಯ ಪರೀಕ್ಷಿಸಿದರೆ, ಕಾಂಗ್ರೆಸಿನ ಕ್ರಮ ಕಾನೂನುಗಳು ಜನ ಹಿತಕಾರಿಗಳಿವೆ–ಅವುಗಳ ಪಾಲನಾ ಪ್ರಯತ್ನವು ಶಕ್ಯವಿದ್ದಷ್ಟು ಸರಿಯಾಗಿ ನಡೆದಿದೆ–ಆದರೂ ಅವು ಸಾಕಷ್ಟು ಜಯಶೀಲವಾಗಿಲ್ಲವಾದರೆ, ಎಲ್ಲಕ್ಕಿಂತ ಹೆಚ್ಚಿಗೆ ಜನತೆಯ ಅಜ್ಞಾನ, ಅಸಡ್ಡೆ, ಅವಿಕ ಪ್ರಸಂಗಗಳೇ ಅದಕ್ಕೆ ಕಾರಣ–ಎಂದು ಖಚಿತವಾಗುತ್ತದೆ.

'ಅಸ್ಪರ್ಶತೆ'ಯೆಂಬುದು ಈಗ ಕಾನೂನು ಪ್ರಕಾರ ಅಸ್ತಿತ್ವದಲ್ಲೇ ಇಲ್ಲ–ಆದರೂ ಅಸ್ಪರ್ಶರ ಕುರಿತ ಸೋಂಕಿನ ಮೂಢಭೀತಿ ಸ್ಪರ್ಶ ಜನರನ್ನು ಬಿಟ್ಟಿದೆಯೆ? ಹರಿಗೂ ಈ ಕಾನೂನಿನ ಶಿಕ್ಷೆ ಸಿಗುತ್ತಿಲ್ಲವೆ? ಪಾನ ನಿಷೇಧ ಕಾನೂನು ಜಾರಿಗೆ ಬರುವ ಮೊದಲಿನಿಂದಲೇ ಕೊಲೆ, ವಂಚನೆ, ಕಳ್ಳತನ, ವ್ಯಭಿಚಾರ, ಮುಂತಾದ ದುರಾಚಾರಗಳು ತಕ್ಸೀರುಗಳಾಗಿ ಗಣಿಸಲ್ಪಟ್ಟಿದ್ದರೂ ಮನುಷ್ಯ ಸ್ವಭಾವವಾಗಿ ಸೇರಿಕೊಂಡಿರುವ ಈ ದುಷ್ಕೃತ್ಯಗಳಲ್ಲಾವುದಾದರೂ ಈ ಕಾನೂನುಗಳಿವೆಯೆಂಬ ಕಾರಣದಿಂದ ಪೂರ್ಣ ನಿಂತು ಹೋಗಿವೆಯೆ? 'ಕಳ್ಳ ಸಂತೆ'ಯ ನಿರ್ಮೂಲನಾ ಶಾಸನಗಳಿದ್ದು, ಕಳ್ಳ ಸಂತೆಯನ್ನು ಸರ್ವರೂ ಬಹುಮುಖದಿಂದ ಖಂಡಿಸುತ್ತಿರುವಾಗಲೇ ಕಳ್ಳ ಸಂತೆ ವ್ಯಾಪಾರ ಮಾಡದವರು ಮತ್ತು ಅದರಲ್ಲಿ ಭಾಗ ವಹಿಸದವರೆಷ್ಟು ಮಂದಿ? ಪ್ರಕಾಶಕ್ಕೆ ಬಿದ್ದ ಅನ್ಯಾಯಗಳನ್ನು ದಂಡಿಸುವುದಕ್ಕಾಗಿ ಕಾನೂನು ಕಾಯಿದೆಗಳಿವೆ—ಅಂಥವುಗಳನ್ನು ಅಧಿಕಾರದಲ್ಲಿರುವವರು ನಿರ್ಮಿಸಿ, ವಿನಿಯೋಗಿಸಬೇಕು. ಪ್ರಕಾಶಕ್ಕೆ ಬೀಳದೆ ಹುದುಗಿಕೊಂಡಿದ್ದು ಗುಪ್ತ ಸಂಚಲನೆಯಲ್ಲಿರುವ ಅನ್ಯಾಯಗಳನ್ನು ನಿರ್ಮೂಲಿಸಲು, ಹೃದಯಶುದ್ಧಿ, ಸಾಮಾಜಿಕ ವ್ಯವಸ್ಥೆಗಳೇ ಬೇಕು—ಇವುಗಳು ಸ್ವತಃ ಸಾರ್ವಜನಿಕರಿಂದಾಗಬೇಕು. ತಂತಮ್ಮ ಕರ್ತವ್ಯ ಪಾಲನೆಯಲ್ಲಿ ಈ ಇಕ್ಕಡೆಯವರಪೈಕಿಯಾರು ಹಿಂದ ಬಿದ್ದಿರುವವರು? ನಿಜಕ್ಕೂ ಸರಕಾರಕ್ಕಿಂತ ಹೆಚ್ಚಿಗೆ ಜನತೆಯೇ! ಕಳ್ಳಸಂತೆ, ಕಳ್ಳಪಾನ ತಯಾರಿ, ಅಸ್ಪರ್ಶತೆ, ಮುಂತಾದ ಯಾವುದರಲ್ಲೇ ಆದರೂ ಸಾರ್ವಜನಿಕರು ತಮ್ಮ ಪಾಲಿನ ಕಾರ್ಯ ಮಾಡದಿರುವ ತಪ್ಪೇ ದೊಡ್ಡದೆಂಬುದು ಸ್ಪಷ್ಟ. ಸರಕಾರ ಅಥವಾ ಅಧಿಕಾರಿಗಳಿಂದಲೂ ತಪ್ಪುಗಳಾಗುತ್ತಿವೆಯಾದರೆ, ಅದಕ್ಕೆ ಅವಕಾಶವಾದಗಿಸಿ ಕೊಟ್ಟ ತಪ್ಪು ಕೂಡಾ ಸಾರ್ವಜನಿಕರದ್ದೇ!

ಅದ್ದರಿಂದ ಇಲ್ಲಿ ಮತ್ತೊಮ್ಮೆ ಹೇಳಬೇಕಾಗಿದೆ–ಜನತೆ ವಸ್ತುಸ್ಥಿತಿಯನ್ನು ಮತ್ತು ಸ್ವತಃ ತಮ್ಮನ್ನು ಅರಿತುಕೊಳ್ಳಬೇಕು, ಅರಿತು ವರ್ತಿಸಬೇಕು. ಇಷ್ಟಾದರೆ ಸರಿ, ಟೀಕೆ, ಅತೃಪ್ತಿ, ಸಡಿಲುತನ, ಸಂಧಿಗ್ಧತೆ, ಗೊಂದಲಗಳೇ ವ್ಯಾಪಿಸಿರುವ ಇಂದಿನ ವಾತಾವರಣವು ತಿಳಿಗೊಂಡು, ಅದೇ ಪ್ರಗತಿ ಸಾಧನೆಗೆ ಮತ್ತು ಭವಿಷ್ಯದ ಭದ್ರತೆಗೆ ಆಸ್ಪದವಾಗುವದು.

---


**THE BOMBAY LIFE ASSURANCE COMPANY, LTD.**

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

(ಸ್ಥಾಪನೆ 1908)

**ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.**

ಪ್ರಧಾನ ಏಜಂಟರು

**ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ ಉಡುಪಿ.**

ಇವರ ಶಾಖಾ ಕಛೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.


## ಸುಪ್ರಸಿದ್ಧ

ದಾವೆ, ಮೊಕದ್ದಮೆಗಳು ಜನರ ಪಾಲಿಗೆ ಅನಿವಾರ್ಯ ಆಪತ್ತುಗಳಾಗಿ ಒದಗುವವೆಂಬುದಕ್ಕಿಂತಲೂ ಅವು, ಜೂಜು, ದ್ಯೂತಗಳಲ್ಲಿರುವಂತಹ ಒಂದು ವಿಧದ ಮೋಹಕತೆಯನ್ನು ತುಂಬಿಕೊಂಡಿದ್ದು, ಆ ಮೂಲಕ ಜನ ಮನವನ್ನು ಆಕರ್ಷಿಸಿಕೊಳ್ಳುತ್ತಿವೆ ಎನ್ನುವುದೇ ಸರಿಯಾದುದು. ಕ್ರಿಮಿನಲ್ ಅಥವಾ ಸಿವಿಲ್ ವ್ಯಾಜ್ಯ ವ್ಯವಹಾರಗಳಿಲ್ಲದ ಜನ, ಊರು, ಅಥವಾ ಕ್ಷೇತ್ರವೆಂಬುದೇ ಇಲ್ಲವೆನ್ನಬಹುದು. ದಕ್ಷಿಣಕನ್ನಡದ ಹಳ್ಳಿಗಳಲ್ಲಂತೂ ಸಂಪತ್ತನ್ನು ಸೂರೆ ಮಾಡಿರುವ, ಮತ್ತು ಬಂಧ ವೈಮನಸ್ಯಗಳನ್ನು ವರ್ಧಿಸಿರುವ ಸಾಧನಗಳೆಂದರೆ ವ್ಯಾಜ್ಯ ಸಾಜ್ಯಗಳೇ. ಹಳ್ಳೀ ಶ್ರೀಮಂತಿಕೆಗಳಲ್ಲಿ ಹೆಚ್ಚಿನವು ಪೂರ್ವಾರ್ಜಿತಗಳು. ಅವುಗಳ ಸಂಪಾದನೆಗಾಗಿತ್ತವುಳ್ಳ ಶ್ರಮ, ಸಾಹಸ, ಜಾಗರೂಕತೆಗಳನ್ನು ಪ್ರದರ್ಶಿಸುವ ಕಷ್ಟ ಆ ಹಿರಿಯರ ಪಾಲಿಗಿದ್ದಿತು, ಅವರು ತಮ್ಮ ಜೀವಮಾನದ ಪ್ರತಿಯೊಂದು ದಿನವನ್ನೂ ಮೀಸಲಿಟ್ಟು ಈ ಸಂಪತ್ತು ಸಂಪಾದನೆಗಾಗಿಯೇ ವಿನಿಯೋಗಿಸಿ ಆತ್ಮಶಾಂತಿಯನ್ನೋ ಅಶಾಂತಿಯನ್ನೋ ಪಡೆದಿರಬೇಕು. "ಕೂಡ ಹಾಕಿದ ಪಾಪಪುಣ್ಯಗಳ ಹೊರತು ಆಸ್ತಿ, ಸೊತ್ತುಗಳೇನು ಹೋಗುವಾಗ ಬರುವವೆ?" ಎಂದು ಪ್ರಶ್ನಿಸದವರು ಹಳ್ಳಿಗರಲ್ಲಿಲ್ಲ. ಈ ಸಂಗತಿ ಸ್ಪಷ್ಟ ತಿಳಿದಿದ್ದರೂ ತಮ್ಮ ಸಂತಾನ ಪರಂಪರಗಳು ಉಳಿಯಬೇಕೆಂಬ ಜೀವನಾಕಾಂಕ್ಷೆಯಿಂದಲೇ ಅಂದಿನ ಹಿರಿಯರು ತಮ್ಮ ವಂಶಪಾರಂಪರ್ಯದ ಪಾಲಿನ ಎಲ್ಲಾ ಶ್ರಮವನ್ನೂ ತಾವೇ ವಹಿಸಿ, ಈಗಿನವರಿಗ ಆಸ್ತಿಪಾಸ್ತಿ, ನಿಧಿ ಸಂಪತ್ತುಗಳನ್ನು ಕೂಡಿಸಿಟ್ಟು ಹೋಗಿದ್ದಾರೆ. ಗಳಿಸುವ ನೋವಾವುದನ್ನೂ ಅರಿಯದ ಅವರ ಸಂತಾನಿಗರಲ್ಲಿ ಅವುಗಳನ್ನು ಬಳಸುವ ಲಾಲಸ ಮಾತ್ರ ಒಲವಾಗಿ, ಅವರು 'ಕಾಂಟ್ರಿ' 'ದರ್ಬಾರು'ಗಳಿಗ ತೊಡಗಿ, ವ್ಯಾಜ್ಯ ವ್ಯವಹಾರಗಳು ಹುಟ್ಟಿಕೊಂಡು ಪರಂಪರಾಗತ ಹಳ್ಳೀ ಆಸ್ತಿಪಾಸ್ತಿಗಳು ಈಗ ಕರಗುತ್ತಿವೆ. 'ವ್ಯಾಜ್ಯ ಕಲಿಗಾಲದ ವ್ಯಾಜ್ಯ' ಹೂಡುವವರಲ್ಲಿ, ಅದರ ಹಿಂದಿನ ಲಂಘನದ ಲಕ್ಷ್ಯ ... ದಕ್ಕೊಂಡು ವ್ಯಾಜ್ಯ ಸಾಜ್ಯಗಳಲ್ಲವೇ ಅಲ್ಲ. ಜಯ, ಮಾನ, ಪ್ರತಿಷ್ಠೆ ಮುಂತಾದುವುಗಳ ಸಂಪಾದನೆಗಾಗಿ — ಎಲ್ಲಕ್ಕಿಂತ ಹೆಚ್ಚಾಗಿ ಕಂಬಳ, ಅಂಕಗಳಲ್ಲಿರುವಂತಹ ಒಂದು ಸ್ಫೂರ್ತಿಮಯ ಕಲೆಯಿಂದಾಕರ್ಷಿಸಲ್ಪಟ್ಟ— ದಾವಾ ಹೋರಾಟಕ್ಕಿಳಿಯುವವರೇ ಹೆಚ್ಚಿಗೆ. ಒಂದು ವ್ಯಾಜ್ಯದಲ್ಲಿ ಕೇಳೋಣಾಗುವ ಖರ್ಚಿಗಿಂತ, ಆ ವ್ಯಾಜ್ಯ ಸಾಧನೆಯಲ್ಲಾಗುವ ವೆಚ್ಚವೇ ಹೆಚ್ಚಾಗಿರುವ ನಿದರ್ಶನಗಳು 'ದಾವಾ ಬಂತ್'ಯಲ್ಲಿ ಬೇಕಾದಷ್ಟು ದೊರೆಯುತ್ತವೆ. ಕೇವಲ ಆರ್ಥಿಕ ಲಾಭಕ್ಕಾಗಿ ಕೋರ್ಟು ವ್ಯವಹಾರಗಳಲ್ಲವೆಂಬುದನ್ನು ಪ್ರತಿಯೊಂದು ವ್ಯಾಜ್ಯವೂ ಮಂದಟ್ಟು ಮಾಡುತ್ತಿವೆ. "ನಿನ್ನ ಮನೆಗ ಸಿವಿಲ್ ವ್ಯಾಜ್ಯ ಬಂದುಬೀಳಲಿ!" ಎಂಬಷ್ಟು

# -ಮೊಕದ್ದಮೆಗಳು.

...ಡ್ಡ ಶಾಖ ಕೆಲವು ಊರುಗಳಲ್ಲಿ ಬೇರೆ. ತಪ್ಪಿಸಿಕೊಳ್ಳುವ ಶಾಂತ ವಿಧಾನ ಉಳಿದಿದ್ದಂತೆಯೇ ಕ್ರಿಮಿನಲ್ ಮೊಕದ್ದಮೆ ಅಥವಾ ಸಿವಿಲ್ ವ್ಯಾಜ್ಯಗಳಿಗೆ ತೊರೆಯುವ 'ಮೀಸೆ ಹೊತ್ತ ಗಂಡಸು' ...ಲ್ಲಿಯೂ ಕಾಣಸಿಗುತ್ತಿರುವಾಗ, ...ಜ್ಯವೂ ಒಂದು ಮೋಹಕ ...ಯೆಂದೇ ಒಪ್ಪಿಕೊಳ್ಳಬೇಕು. ಸಣ್ಣ ...ಡ್ಡ ಪರಿಮಾಣದಲ್ಲಿ ಪ್ರತಿಯೊಂದು ...ಸ್ತು ಮತ್ತು ಪ್ರತಿಯೊಬ್ಬನೂ ವ್ಯಾಜ್ಯದ ಉಪಾಸಕನಿದ್ದಾನೆ, ಎನ್ನಬಹು... ಒಂದಲ್ಲೊಂದು ರೂಪದ ವ್ಯವಹಾರ, ಮೊಕದ್ದಮೆಗಳು ಎಲ್ಲೆಡೆಯಲ್ಲೂ ...ಇವೆ. ಆ ಪೈಕಿ ಕೆಲವು ಅತ್ಯಾ...ರ್ಣೀಯವಿದ್ದು ವಿಶೇಷ ಹೆಸರು ಗಳಿ...ಸಿದೆ.

oo oo

ಕಳೆದ ಮಹಾಯುದ್ಧವು ಕೆಲವು ...ಕ ಪ್ರಾಮುಖ್ಯ ಮೊಕದ್ದಮೆಗಳನ್ನು ...ರ್ಜಸಿದ್ದಿತು. ಪ್ರಥಮ ಜಾಗತಿಕ ...ದ್ಧಾನಂತರ ಮೊಕದ್ದಮೇ ಪ್ರಭಾವ ...ನೂ ಕಂಡು ಬಂದಿರಲಿಲ್ಲ. ಒಂದನೇ ...ಹಾಯುದ್ಧದ ಮೂಲಪುರುಷ ...ರ್ಮನಿಯ ಕೈಸರನು ಕೊನೆಯ ಭಾಗ... ತಲೆ ತಪ್ಪಿಸಿಕೊಂಡು ಸ್ವಾಭಾ... ಸಾವು ಸೋಂಕುವ ವರೆಗೂ ...ರಾಷ್ಟ್ರವೊಂದರಲ್ಲಿ ಶಾಂತ ...ವನ ನಡೆಸಿದ್ದ. ಆದರೆ ಎರಡನೇ ...ಕ ಯುದ್ಧದ ಮಧ್ಯಾವಧಿಯಲ್ಲೇ ...ಯುದ್ಧಾಪರಾಧಿಗಳನ್ನು ವಿಚಾರಣೆ "ಮಾಡಲಾಗುವದು" ಎಂದು ಮಿತ್ರ...ಷ್ಟ್ರೀಯರು ಘೋಷಿಸಿದ್ದರು; ಈ ಘೋಷಣೆಯನ್ವಯ ಯುದ್ಧಾಪರಾಧಿ ನಾಜಿ ...ಯಕರುಗಳನ್ನು ಮತ್ತು ಜಪಾನೀ ...ದ್ಧನಾಯಕರನ್ನು ಬೇರೆ ಬೇರೆಯಾ... ಬೇರೆಬೇರೆ ಕಾಲ ಮತ್ತು ಸ್ಥಳಗಳಲ್ಲಿ ...ಡು ನ್ಯಾಯಾಧೀಶ ಮಂಡಲಿಗಳ ...ಂದೆ ಮಿತ್ರ ರಾಷ್ಟ್ರೀಯರು ವಿಚಾರಣೆ ...ಡೆಸಿದ್ದರು. ಅವೆಂಡು ವಿಚಾರಣೆಗಳು ...ತ್ತವುಗಳ ತೀರ್ಮಾನ ಜ್ಯಾರೀ ಘಟನೆ ... ಲೋಕವ್ಯಾಪೀ ಆಸಕ್ತಿಯನ್ನು ನಿ...ರ್ಮಿಸಿದ್ದುವು. ಈ ವಿಚಾರಣೆ-ಶಿಕ್ಷೆಗಳು ...ಸಂಚಿಕ ಚರಿತ್ರೆಯಲ್ಲೇ ಒಂದು ಸ್ಥಾ... ಗಳಿಸಿವೆ. ಬೇರೆ ಹಲವು ವಿಶೇಷ ರೀತಿ... ವಿಚಾರಣೆಗಳೂ ಮೊಕದ್ದಮೆಗಳೂ ...ದ ಮಹಾ ಯುದ್ಧದ ದೆಸೆಯಿಂದ ಹು...ದ್ದವು. ಅವುಗಳಲ್ಲಿ ನವದಿಲ್ಲಿಯ ...ಪು ಕೋಟೆ ಕೋರ್ಟಿನಲ್ಲಿ ನಡೆದಿದ್ದ ...ಝಾದ್ ಹಿಂದ್ ಫೌಜ್' ನಾಯಕರ ...ಚಾರಣೆ ಒಂದು. ನೇತಾಜೀ ...ನೆಸರ 'ಐ. ಎನ್. ಎ' ಯಾನೆ ...ಝಾದ್ ಹಿಂದ್ ಫೌಜ'ನ ಸೇನಾನಿ...ಗಳಿದ್ದು, ಯುದ್ಧಾಂತ್ಯದಲ್ಲಿ ಬ್ರಿಟಿಷರ ...ಸೆರೆ ಸಿಕ್ಕಿದ್ದವರ ಪೈಕಿ ಮೂವರನ್ನು ...ಷನವಾಜ್, ಧಿಲ್ಲನ್, ಸೈಗಾಲ್ ಇವರ... -ಕೆಂಪುಕೋಟೆಯಲ್ಲಿ ಸೇನಾ ಕೋ...ನ ತನಿಖೆಗೊಳಪಡಿಸಿದಾಗ ಭಾರತದ ...ಂತಹ ಉತ್ತುಕೋದ್ರೇಗವೆದ್ದಿದ್ದಿತೆಂಬ ...ಪು ಇನ್ನೂ ಬೇಗನೇ ಮಾಸಿ ಹೋಗಿ...ಲಾರದು. ಭುಲಾಭಾಯಿ ದೇಸಾಯಿಗಳ ವಾದಪ್ರತಿಭೆಯು ಜಗಜ್ಜಾಹೀರಾದುದು ಈ ಮೊಕದ್ದಮೆಯಲ್ಲಿಯೇ. ಭಾರತದ ರಾಜಕೀಯ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ವ್ಯವಹಾರಗಳ ಪೈಕಿ ಈ ಕೆಂಪು ಕೋಟೆ ವಿಚಾರಣೆಯೇ ಅತ್ಯಾಕರ್ಷಣೀಯವಾದುದು. ಅಂತೆಯೇ ಲೋಕಮಾನ್ಯ ತಿಲಕರಿಗೆ ರಾಜ ದ್ರೋಹಕ್ಕಾಗಿ ಆರು ವರುಷಗಳ ಸಜೆಯಾಗಿದ್ದ ವಿಚಾರಣೆ, ಮಹಾತ್ಮಾ ಗಾಂಧಿಯವರಿಗೆ ಅಸಹಕಾರ ಚಳವಳಕ್ಕಾಗಿ ಆರು ವರುಷ ಶಿಕ್ಷೆಯಾಗಿದ್ದ ವ್ಯವಹಾರ, ಇವೂ ಸ್ಮರಣೀಯವಿವೆ. ಗಾಂಧಿಜೀಯ ದೇಶವ್ಯಾಪೀ ಸ್ವಾತಂತ್ರ್ಯ ಹೋರಾಟಗಳ ಪೈಕಿ ಪ್ರಥಮದ್ದಾದ ಅಸಹಕಾರ ಚಳವಳದಲ್ಲಿ, ಆಗುತಿದ್ದ ಪ್ರತಿಯೊಬ್ಬ ದೇಶಭಕ್ತನ ಬಂಧನ ಮತ್ತು ವಿಚಾರಣೆಯೂ ದೇಶದಲ್ಲೆಲ್ಲಾ ಕುತೂಹಲ ಮತ್ತು ಸ್ಫೂರ್ತಿಯನ್ನು ಪುಟ ನೆಗೆಯಿಸುತ್ತಾ ಹೋಗಿದ್ದಿತು.

oo oo oo

ರಾಜಕೀಯವಲ್ಲದ ಪ್ರಸಿದ್ಧ 'ಕೇಸು'ಗಳೂ ಬಹಳವಿವೆ. ಒಂದು ಯುದ್ಧ ಮುಗಿದು ಮತ್ತೊಂದು ಯುದ್ಧ ಪ್ರಾರಂಭಿಸುವ ಮಧ್ಯಾವಧಿಯ ಧಂಡಾ ಕಾಲಗಳಲ್ಲಿ ಜನತೆಯಲ್ಲಿ ಹರಪು ಹುಟ್ಟಿಸುವವುಗಳೆಂದರೆ, ಇಂತಹ ಪುಟ್ಟ ಯುದ್ಧಗಳ ವಾರ್ತೆಗಳೇ. ಕಳೆದ ಮಹಾಯುದ್ಧಾರಂಭಕ್ಕೆ ಮೊದಲು ಅಮೇರಿಕದ ವಿಲಿಯಾಧೀಶರ ಮಕ್ಕಳನ್ನು ಅಪಹರಿಸಿ, ಹಣ ಸುಲಿಗೆ ಮಾಡುತಿದ್ದ ಗುಪ್ತಗಾಮೀ ಬಂಡಾಯಗಾರ ದಳಗಳ ಅದ್ಭುತ ಚಮತ್ಕಾರಗಳು, ಅವುಗಳ ಪತ್ತೇ ಸಾಹಸಗಳು, ವಿಚಾರಣೆಗಳು ರೋಮಾಂಚಕಾರಿಯಿದ್ದವು. ವಾರ್ತಾರಂಗದ ಮುಖ್ಯಾಕರ್ಷಣೆಗಳಾಗಿ ಹೆಣ್ಣು, ಹೊನ್ನು, ಮಣ್ಣು ಸಂಬಂಧದ ಅದ್ಭುತರಮ್ಯ ಮೊಕದ್ದಮೆಗಳ ವಾರ್ತೆಗಳು ಲೋಕವ್ಯಾಪಿಯಾಗುತಿದ್ದವು. ಭಾರತದಲ್ಲೂ 'ಭೋವಾಲ್ ಸನ್ಯಾಸೀ ದಾವೆ'ಯಂತಹ ಅತಿ ವಿಚಿತ್ರ ದಾವೆಯು ಸುಮಾರು ಆರೇಳು ವರುಷಗಳಲ್ಲಿ ಪ್ರಸಿದ್ಧವಾಗಿದ್ದಿತು. ತನ್ನಲ್ಲಿದ್ದ ಓರ್ವ ನರ್ತಕಿ 'ಮಮ್ತಾಜ್' ಎಂಬವಳನ್ನು ಇಟ್ಟುಕೊಂಡನೆಂಬುದಕ್ಕಾಗಿ, ಬೊಂಬಾಯಿಯ ಓರ್ವ ಶ್ರೀಮಂತ ಬಾವ್ಲಾನ ಕೊಲೆಗೆ ಕೈ ಹಾಕಿದ್ದರೆಂಬ ಆರೋಪದಿಂದ ಇಂದೋರಿನ ಈಗಿನ ಮಹಾರಾಜರ ತಂದೆಯನ್ನು ಸಿಂಹಾಸನದಿಂದ ಜಾರುವಂತೆ ಮಾಡಿದ್ದ 'ಬಾವ್ಲಾ ಕೊಲೆ ಮೊಕದ್ದಮೆ'ಯು ಆ ಕಾಲದಲ್ಲಿ ಬಹಳ ಪ್ರಚಾರದಲ್ಲಿದ್ದಿತು. ಪವಿಲು ನಟರಾದ ತ್ಯಾಗರಾಜ ಭಾಗವತರ್, ಎನ್. ಎಸ್. ಕೃಷ್ಣನರೇ ಮೊದಲಾದ ಪ್ರಸಿದ್ಧರು ಆರೋಪಿಗಳಾಗಿದ್ದ, 'ಲಕ್ಷ್ಮೀಕಾಂತನ್ ಕೊಲೆ ಮೊಕದ್ದಮೆ'ಯೂ ಇತ್ತೀಚೆಗಿನ ಪ್ರಸಿದ್ಧ ಮದ್ರಾಸ್ ಕೇಸು. ಕೊಲೆಯಾದ ಲಕ್ಷ್ಮೀಕಾಂತನ್ ಪತ್ರಿಕಾ ಸಂಪಾದಕನಾಗಿದ್ದು, ಅವನ ಲೇಖನಗಳೇ ಕೊಲೆಗೆ ಕಾರಣಗಳೆಂಬ ಆರೋಪವಿದ್ದುದರಿಂದಲೂ ಆರೋಪಿಗಳು ಹೆಸರಾಂತ ನಟರಾಗಿದ್ದುದರಿಂದಲೂ ಈ ವ್ಯವಹಾರವು ವಿಶೇಷ ಪ್ರಚಾರದಲ್ಲಿದ್ದಿತು. ಶ್ರೀ ಕೆ. ಎಮ್. ಮುನ್ಶಿಗಳಂತಹ ರಾಜಕಾರಣಿ ಕೂಡಾ ಆರೋಪಿಗಳ ಕಡೆಯಿಂದ ವಕೀಲರಾಗಿ ವಹಿಸಿದ್ದರು. ಮಹಿಳೆಯೊಬ್ಬಳ ಮಾನಭಂಗಕ್ಕಾಗಿ ಪ್ರಯತ್ನಿಸಿದ ಆರೋಪದಿಂದ ದಕ್ಷಿಣ ಭಾರತದ ಒಂದೆಡೆಯ ಮಠಾಧೀಶರೊಬ್ಬರ ಮೇಲೆ ಇತ್ತೀಚೆಗೆ ನಡೆಸಿದ್ದ ಕೇಸ—ಭಾರತ, ಕೊಚ್ಚಿ ಮತ್ತು ಆ ಕಾಲದ ಹೈದರಾಬಾದು ಗಳೊಳಗಿನ ಸಂಬಂಧಕ್ಕೆ ಲಗಾವಾಗದಂತಹದಿದ್ದು, ಕೊಚ್ಚಿಯ ಮಾಜೀ ಮಹಾರಾಜರ ವರ್ತನೆಗೆ ಮತ್ತು ಭಾರತ ರಾಜಕೀಯಕ್ಕೆ ಸಂಬಂಧಪಟ್ಟ 'ದಾಮೋದರನ್ ಮೊಕದ್ದಮೆ'ಯೆಂಬ ಹೆಸರಿನಿಂದ ಎರ್ನಾಕ್ಯುಲಮ್‌ನಲ್ಲಿ ಸ್ಪೆಶ್ಯಲ್ ನ್ಯಾಯಾಧೀಶ ಮಂಡಲಿಯ ಮುಂದೆ ಈಗ ತನಿಖೆ ನಡೆಯುತ್ತಿರುವ ಎಣ್ಣೇ ರಫ್ತು ಸಂಬಂಧದ ಮೊಕದ್ದಮೆ—ಇಂತಹ ಅತಿರಥರಾಯೀ ವ್ಯವಹಾರಗಳಿಗೆ ಈ ಭಾಗದಲ್ಲೂ ಕೊರತೆಯಿಲ್ಲ.

oo oo oo

ಸ್ವತಂತ್ರ ಭಾರತ ಮತ್ತು ಪಾಕಿಸ್ತಾನಗಳಲ್ಲಿ ರಾಜಕೀಯಕ್ಕೆ ಸಂಬಂಧಿಸಿದ ಕೆಲವು ಪ್ರಾಮುಖ್ಯ ಮೊಕದ್ದಮೆಗಳೂ ನಡೆದಿದ್ದುವು; ನಡೆದಿವೆ; ನಡೆಯಲಿವೆ. ಆ ಪೈಕಿ 'ಗಾಂಧೀ ಕೊಲೆ ಮೊಕದ್ದಮೆ'ಯು ಜನಮನದಲ್ಲೀಗಲೂ ಸರಿಯಾಗಿ ಮೆತ್ತಿಕೊಂಡಿರುವುದರಿಂದ, ಇಲ್ಲಿ ಅದರ ಪ್ರಸ್ತಾಪ ಅನಗತ್ಯ. ಭಾರತೀಯರಲ್ಲಿ ವಿಶೇಷ ಆಸಕ್ತಿಯನ್ನು ನಿರ್ಮಿಸಿದ್ದು, ವಿಚಾರಣೆಯಲ್ಲಿರುವ ಒಂದು ಅಪಾದನೆಯೆಂದರೆ ರಝಾಕಾರ್ ನಾಯಕ ಕಾಸಿಮ್ ರಜ್ವಿಯ ಮೇಲಿನದು. ಈ ಅಸಾಮಾನ್ಯ ಆರೋಪಿ, ತನ್ನ ಮೇಲಿನ ಅಪಾದನೆಗಳ ವಿರುದ್ಧ ವ್ಯವಹರಿಸುವದಕ್ಕಾಗಿ ಆದಿ ಭಾಗದಲ್ಲಿ ಕರಾಚಿಯಿಂದ ತನ್ನ ಬೇಗಮಳು ಕಳುಹಿದ್ದ ವಕೀಲರನ್ನಿಟ್ಟುಕೊಳ್ಳಲು ಒಪ್ಪಿಕೊಂಡಿದ್ದ. ಅದೀಗ ತನಗೆ ಯಾವ ವಕೀಲನೂ ಬೇಡವೆಂದೂ ತಾನೀ ವಿಚಾರಣೆಯಲ್ಲಿ ಭಾಗ ವಹಿಸುವುದೇ ಇಲ್ಲವೆಂದೂ ಈ ಮಟ್ಟಿಗೂ ಒಂದು ರೀತಿಯ ಬಹಿಷ್ಕಾರವನ್ನು ಹೂಡಿದಂತಿದೆ. ಸದ್ಯ ಹೈದರಾಬಾದಿನಲ್ಲಿ ಮತ್ತೊಂದು ಅತುಲ್ಯದಾಯೀ ವಿಚಾರಣೆ ಆರಂಭಿಸಿದೆ. ಅದು ದ್ಯು. ಕಾರ್ ಹೈದರಾಬಾದಿನ ಪ್ರಧಾನಮಂತ್ರಿಯಾಗಿದ್ದು, ಭಾರತದ ಪೋಲಿಸ್ ಕ್ರಿಯೆಯ ನಂತರ ಮನೇ ಬಂಧಿಯಾಗಿದ್ದಲ್ಲಿಂದಲೇ ತಲೆಮರೆಸಿಕೊಂಡು ಕರಾಚಿಗೋಡಿಹೋಗಿ, ಒಂದು ರೀತಿಯ ಗೊಂದಲ ನಿರ್ಮಿಸಿಬಿಟ್ಟಿರುವ ಮೀರ್ ಲಾಯಿಕ್ ಆಲಿಯ ಪಲಾಯನಕ್ಕೆ ಸಹಾಯ ಮಾಡಿದವರ ಕುರಿತು. ಹೈದರಾಬಾದ್ ಸಿಟಿ ಸಿವಿಲ್ ಕೋರ್ಟಿನ ಜಡ್ಜ್ ಶ್ರೀ ಎನ್. ಕುಮಾರಯ್ಯನವರು ಈ ವಿಚಾರಣೆಯ ಸ್ಪೆಶ್ಯಲ್ ಮೆಜಿಸ್ಟ್ರೇಟ್ ಆಗಿ ನೇಮಕಗೊಂಡಿದ್ದು, ಬರುವ ವಾರದಲ್ಲಿ ಹೈದರಾಬಾದಿನಲ್ಲೇ ವಿಚಾರಣೆ ಪ್ರಾರಂಭಿಸಲಿದೆ. ಆರೋಪಿಗಳೆಂದರೆ ಲಾಯಿಕ್ ಆಲಿಯ ತಂಗಿ ಖೌಸರ್ ಬೇಗಮ್, ಲಾಯಿಕ್ ಆಲಿಯ ಅಳಿಯ ನಜಿರುದ್ದೀನ್ ಮಹಮ್ಮದ್, ಮಹಮ್ಮದ್ ಇಬ್ರಾಹಿಮ್, ಬದ್ರುದ್ದೀನ್, ಮಹಮ್ಮದ್ ಹುಸ್ಸೇನ್, ಶೇಕ್ ಮಹಮ್ಮದ್, ಮೀರ್ ಫಸಾಹತ್ ಅಲಿ, ಮಹಮ್ಮದ್ ಅಬ್ದುಲ್ ಮೊಯಿನುದ್ದೀನ್, ಅಲಿ ಅಬ್ಬಾಸ್, ಅಬ್ದುಲ್ ಅಜೀಜ್, ಬಹದ್ದೂರುದ್ದೀನ್ ಸಯ್ಯದ್, ಮಹಮ್ಮದ್, ಮತ್ತು ಓರ್ವ ಅಬ್ಬೀ ಕಾವಲಗಾರ ಹಾಗೂ ಇತರರು; ಒಟ್ಟಿಗೆ 14 ಮಂದಿ. ಸ್ವಾರಸ್ಯವೆಂದರೆ ಲಾಯಿಕ್ ಅಲೀ ಅಳಿಯ ನಜಿರುದ್ದೀನ್ ಮಹಮ್ಮದನೇ 'ಸಾಕ್ಷ್ಯಸಾಕ್ಷಿ' ಯಾಗುವನೆಂದು ಮುಂದೆ ಬಂದಿದ್ದಾನಂತೆ. ಆರೋಪಿಗಳ ಮೇಲಿನ 'ಚಾರ್ಜ್‌ಶೀಟ್' ತಯಾರಾಗಿದೆ; ವಿಚಾರಣೆಗೆ ತೊಡಗುವುದೊಂದೇ ತಡ; ಈ ಮೂಲಕ ಕೆಲವು ತಮಾಷೆಗಳನ್ನು ಆಲಿಸಲಿಕ್ಕಿದೆ.

oo oo oo

ಪಾಕಿಸ್ತಾನವಾದರೂ ಇಂತಹ ರಾಜಕೀಯ ಮೊಕದ್ದಮೆಗಳಿಗೆ ಹೊರತಾಗಿಲ್ಲ. ಅದರ ನಾಲ್ಕು ಪ್ರಾಂತ್ಯಗಳ ಪೈಕಿ ಎರಡು ಪ್ರಾಂತ್ಯಗಳ ಪ್ರಧಾನ ಮುಖ್ಯ ಮಂತ್ರಿಗಳೇ ನ್ಯಾಯದಳಿತಕ್ಕೆ ಆರೋಪಿತರಾಗಿ, ಎದ್ದು ಹಾರಿಬಿಟ್ಟ ವಿಚಾರಣೆಯ ಗದ್ದಲಕ್ಕೊಳಪಟ್ಟಿವೆ. ಪಂಜಾಬಿನ ಪ್ರಧಾನ ಮಂತ್ರಿಯಾಗಿದ್ದ ಮಾಮ್ದೋತಿನ...


## On this Memorable day

Of the 26th of January in the year 1950 of the inauguration of the Indian Republic, we have the pleasure to announce the birth of our

## Vijaya Cash Certificates

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices.

Head Office:—**Kadri Road, Mangalore.**

Branches:- City-Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara.

**B. Manjaya Hegde.**
Advocate & President, District Board, S. Kanara.
CHAIRMAN
**VIJAYA BANK, LTD.**



### ಖಿಮುಕ್ತ ಸ್ರಾವ ನಿಂತಿತು

'ಕುಮಾರ' ಔಷಧಿಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹೊಟ್ಟೆನೋವು ನಿಲ್ಲುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾಧಾರಣ ಮಂದಿಗೆ ಶಾಸ್ತ್ರ ಗುಣವಾಗಿದೆ. ಬೆಲೆ: ರೂ 3-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ. ೮- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

MRS. D. DEVEE, F. DS. (N. J.)
Tollygunge CALCUTTA.
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

# ಬಂದರ ಸಮಿತಿಯೂ ಮಲ್ಪೆಯನ್ನು ಸೂಚಿಸಿದೆ-

...ನ್ ಇಫ್ತಿಕಾರ್ ಹುಸ್ಸೇನ್. ಇವರ ...ತ್ರಿಕದ ಈ ಮೊದಲೇ ರದ್ದಾಗಿ ದುರಾ...ತೆಯ 12 ಆರೋಪಗಳ ತನಿಖೆಗಾಗಿ ...ಶ್ಯಲ್ ನ್ಯಾಯಾಧೀಶ ಮಂಡಳಿಯೊಂ... ನೇಮಿಸಲ್ಪಟ್ಟಿದ್ದಿತು. ಆ ಪೈಕಿ ಮೂ... ಆರೋಪಗಳ ಮಟ್ಟಿಗೆ ಜಡ್ಜರಲ್ಲೇ ...ನ್ನಾಭಿಪ್ರಾಯ ಬಂದುದರಿಂದ ಮೂರನೆ ...ವಂ ಕೊನೆಯ ತೀರ್ಮಾನಕ್ಕಾಗಿ ಬಾ...ಡಲಾಗಿದೆ. ಮತ್ತೊಬ್ಬರೆಂದರೆ ಸಿಂ... ಪ್ರಾಂತ್ಯದ ಪ್ರಧಾನ ಮಂತ್ರಿಯಾಗಿದ್ದ ...ಮಿನಲ್ ದಾವಾ ಪ್ರಸಿದ್ಧ ಎಮ್. ಎ. ...ಹ್ರೋ-ಪಾಕಿಸ್ತಾನ್ ಸ್ಥಾಪನೆಯೊಂದಿಗೇ ...ಸಿಂಧ ಪ್ರಾಂತ್ಯದ ಪ್ರಧಾನಮಂತ್ರಿಯಾ...ದ್ದ ಖುಹ್ರೋರನ್ನು, ದುರಾಡಳಿತೆಯ ಆ...ರೋಪದಿಂದ 1948ನೇ ಎಪ್ರಿಲ್ 26ರಲ್ಲೇ ...ವರ್ನರರು ರದ್ದುಪಡಿಸಿದ್ದರು. ಆ ಮೇ... ಇವರ ಮೇಲಿನ ಆರೋಪಗಳನ್ನು ಸ್ಪೆ...ಶ್ಯಲ್ ನ್ಯಾಯಾಧೀಶ ಮಂಡಲಿ ತನಿಖೆ ...ಮಾಡಿದ್ದಿತು. ಅಷ್ಟರಲ್ಲಿ ಒಂದು ...ಕಿಸ್ತಾನ ಸನದ ಸ್ವಿಯ ಪಾಕಿ...ಸ್ತಾನದ ಗವರ್ನರ್ ಜನರಲರೊಂ...ದು ಆಜ್ಞೆ ಹೊರಡಿಸಿ 'ಖುಹ್ರೋ ಯಾ...ವುದೇ ಸಾರ್ವಜನಿಕ ಹುದ್ದೆಯಲ್ಲಿರುವುದ...ಕ್ಕೆ ಅಯೋಗ್ಯ,' ಎಂದು ವಿಧಿಸಿದ್ದರು. ...ಈ ಆಜ್ಞೆಯ ವಿರುದ್ಧವಾಗಿ ಖುಹ್ರೋ ...ಸಿಂಧ್ ಚೀಫ್ ಕೋರ್ಟಿನಲ್ಲಿ ದಾವೆ ತಂ...ದು, ಈಗ ಆ ಕೋರ್ಟು ಗವರ್ನರ್ ಜನ...ರಲ್ ಆಜ್ಞೆಯು ನಿಯಮವಿರುದ್ಧವೆಂದು ತೀರ್ಮಾನಿಸಿ, ಖುಹ್ರೋನಲ್ಲಿ ಯೋಗ್ಯತೆ...ಯನ್ನು ತುಂಬಿಸಿಕೊಟ್ಟಿದೆ. ಆ ಮೂಲಕ ...ಮಿ. ಖುಹ್ರೋ ಸಾರ್ವಜನಿಕ ಸ್ಥಾನಕ್ಕೆ ...ಹರ್ರೆಂದಾದುದರಿಂದ ಅವರು ಸಿಂಧ್ ಲೆಜಿ...ಸ್ಲೇಟಿವ್ ಎಸೆಂಬ್ಲಿ ಮತ್ತು ಪಾಕಿಸ್ತಾನ್ ...ಘಟನಾ ಸಮಿತಿಗೆ ಹಾಜರಾಗಹತ್ತಿದ್ದಾ...ರೆ. ಈ ಖುಹ್ರೋ, ಯುದ್ಧಾವಧಿಯಲ್ಲಿ ಸಿಂಧ್ ಪ್ರಧಾನ ಮಂತ್ರಿಯಾಗಿದ್ದ ರಾ...ಷ್ಟ್ರೀಯ ಮುಸ್ಲಿಂ ನಾಯಕ ಅಲ್ಲಾಭಕ್ಷರ ಕೊಲೆಯ ಪ್ರೇರೇಪಕನೆಂದು ದಸ್ತಗಿರಿ ಮಾಡಲ್ಪಟ್ಟು, ವಿಚಾರಣಾನಂತರ ಆತಿ ಸಾಹಸದಿಂದ ಆರೋಪ ಮುಕ್ತತೆ ಪಡೆದಿದ್ದವರು. ಸಿಂಧಿನ ಪ್ರಸಿದ್ಧ ಶ್ರೀಗೂ ಆದ್ದ ತ್ಯಂತ ವರ್ಚಸ್ಸುಳ್ಳ ಜಮೀನ್ದಾರ. ಈಗ ಪಾಕಿಸ್ತಾನದ ಗವರ್ನರ್ ಜನರಲರ ಆಜ್ಞೆಯ ವಿರುದ್ಧ ಹೋರಾಡಿಯೂ ಗೆದ್ದಿದ್ದಾರೆ!

ಅಂತೂ ಕ್ರಿಮಿನಲ್, ಸಿವಿಲ್ ವ್ಯವಹಾರಕ್ಕೆ ಕೂಡಾ ಒಂದು ಕಲೆ; ಚಾತುರ್ಯ, ಸಾಹಸಮಯೀ ಪಂಥ!


ಶರೀರದಲ್ಲಿಯ ಅಸಹ್ಯ ಉಷ್ಣತೆಯನ್ನು ಇದರಿಂದಲೇ ತೆಗೆದು ಹಾಕಿರಿ




ಶರೀರದ ಶರೀರದ ಒಳಗಿನ ಮತ್ತು ಹೊರಗಿನ ಉಷ್ಣವನ್ನು ತೆಗೆದು ಹಾಕಿ ಪ್ರಕೃತಿಯನ್ನು ತಂಪಾಗಿಡುವುದು, ಅವಯವ ಅಜೀರ್ಣವನ್ನು ಸಂಹರಿಸುವುದು, ಶಾರೀರಿಕ ಮತ್ತು ಮಾನಸಿಕ ಶಕ್ತಿಯನ್ನು ಬೆಳೆಸುವುದು, ಧಾತು ಸ್ಥಾನದಲ್ಲಿಯ ಉಷ್ಣತೆಯನ್ನು ಹೋಗಲಾಡಿಸಿ ಪುಷ್ಟಿಕರ ಮಾಡುವುದು

ನಿಮ್ಮ ಹತ್ತಿರದ ಕೆಮಿಸ್ಟರ ಕಡೆಯಿಂದ ಇಂದೇ ಒಂದು ಬಾಟಲಿಯನ್ನು ತಂದು ಸೇವಿಸಲು ಪ್ರಾರಂಭಿಸಿರಿ.

ಪರ್ಲ ಎಂಡ್ ಕಂಪನಿ
ಮುಂಬಯಿ ೨


**ಪ**ಶ್ಚಿಮ ಕರಾವಳಿಯಲ್ಲಿ ದಕ್ಷಿಣದ ಕೊಚ್ಚಿ-ಉತ್ತರದ ಮರ್ಮಗೋವಾ ಬಂದರುಗಳ ಮಧ್ಯದಲ್ಲೊಂದು ಹೊಸ ಪ್ರಬುದ್ಧ ಬಂದರವಾಗುವ ಕುರಿತು, ಈ ವಲಯದೊಳಗಿರುವ ಕಾರವಾರ, ಭಟ್ಕಳ, ಮಲ್ಪೆ, ಮಂಗಳೂರುಗಳು ದೀರ್ಘಾವಧಿಯಿಂದ ತೋರಿಸುತ್ತಾ ಬಂದಿದ್ದ ಉಮೇದ್ವಾರಿಕೆ, ಮಾಡಿದ್ದ ಪ್ರಯತ್ನಗಳು ಸರ್ವ ಶ್ರುತವವೆ. ಈ ಬಂದರ ಸ್ಥಳದ ಶೋಧನೆಗಾಗಿ ಭಾರತ ಸರಕಾರವು ನೇಮಿಸಿದ್ದ ಸಮಿತಿಯುಮಲ್ಪೆಯನ್ನೇ ಶಿಫಾರಸು ಮಾಡಿದೆ-ಆದರೆ ಭಾರತ ಸರಕಾರವು ನಮ್ಮ ಕ್ಕೀ ವಿಷಯವನ್ನು ಬಾಕಿ ಬಿಟ್ಟಿದೆ-ಎಂಬುದು ಈ ಮೊದಲೇ ತಿಳಿದು ಬಂದಿದ್ದಿತು. ಇದೇ ಮಾರ್ಚ ತಾ. 27ರಲ್ಲಿ ಭಾರತ ಸರಕಾರವು ಒಂದು ವಿಶೇಷ "ಗೆಝೆಟ್"ನ್ನು ಹೊರಡಿಸಿ, ಈ ಸಂಬಂಧದ ನಿರ್ಣಯವನ್ನು ಪ್ರಕಟಿಸಿದೆ. ಆ ಮೂಲಕ ಸ್ಪಷ್ಟವಾಗಿ ಮತ್ತು ಅಧಿಕೃತವಾಗಿ ತಿಳಿದುಬಂದಿರುವುದಿಷ್ಟು:—"ಪಶ್ಚಿಮ ಕರಾವಳಿಯ ಪ್ರಬುದ್ಧ ಬಂದರಾಭಿವೃದ್ಧಿ ಸಮಿತಿಯವರು ಮರ್ಮಗೋವಾ-ಕೊಚ್ಚಿ ಕರಾವಳಿಯಲ್ಲಿ ಮಲ್ಪೆಯನ್ನೇ ಪ್ರಬುದ್ಧ ಬಂದರವಾಗಿ ಅಭಿವೃದ್ಧಿ ಪಡಿಸಬೇಕೆಂದು ಶಿಫಾರಸು ಮಾಡಿ ವರದಿಯೊಪ್ಪಿಸಿದ್ದಾರೆ. ಆ ವರದಿಯಲ್ಲಿ ಮಲ್ಪೆಯ ಸಂಬಂಧದ ಪ್ರಸ್ಟ್ರಿಕರಣವು ಸಾಕಷ್ಟಿಲ್ಲದಿರುವುದನ್ನು ಗಮನಿಸಿಯೂ, ಪ್ರಚಲಿತ ಆರ್ಥಿಕ ಸಂಕುಚಿತತೆಯ ದೃಷ್ಟಿಯಿಂದಲೂ, ಒಂದು ಪ್ರಬುದ್ಧ ಬಂದರದ ಆವಶ್ಯಕತೆ, ಮತ್ತದರ ಸ್ಥಳನಿರ್ಣಯ ಸಂಬಂಧದ ಸಮಿತೀ ಶಿಫಾರಸುಗಳನ್ನು ಸದ್ಯಕ್ಕೆ ಬಾಕಿಯಿಡಬೇಕೆಂದು ಭಾರತ ಸರಕಾರವು ಯೋಚಿಸಿದೆ. ಈ ಯೋಜನೆಯನ್ನವಲಂಬಿಸಿದ ಹಣ ಕಾಸು ಮತ್ತು ಇಂಜಿನೀಯರಿಂಗ್ ವಿಧಾನಗಳನ್ನು ಇನ್ನಷ್ಟು ಹೆಚ್ಚು ಕೂಲಂಕುಶವಾಗಿ ಪರೀಕ್ಷಿಸುವ ಪ್ರಶ್ನೆಯನ್ನು ಆರ್ಥಿಕ ಸ್ಥಿತಿ ಸುಧಾರಿಸಿದಾಗ ಎತ್ತಿಕೊಳ್ಳಲಾಗುವದು"— ಈ ಅಧಿಕೃತ ಹೇಳಿಕೆಗನುಸಾರವಾಗಿ ಭಾರತ ಸರಕಾರವು ಪಶ್ಚಿಮ ಕರಾವಳಿಯಲ್ಲೊಂದು ಮಹಾಬಂದರ ನಿರ್ಮಿಸುವ ಕೆಲಸವನ್ನೇ ಸದ್ಯಕ್ಕೆ ಬಿಟ್ಟು ಬಿಟ್ಟಿದೆ, ಎಂಬುದು ಸ್ಪಷ್ಟ. ಇದಕ್ಕೆ ಮುಖ್ಯ ಕಾರಣ ಹಣಕಾಸಿನ ಕೊರತೆ. ಆ ಕೊರತೆಯ ನಿವಾರಣೆಯಾಗಿ ಪ್ರಬುದ್ಧ ಬಂದರ ರಚನೆಗೆ ಅನುಕೂಲವಾದೀತೆಂಬುವನ್ನು ಈಗ ಊಹಿಸುವುದು ಅಸಾಧ್ಯ. ಅಂತಹ ಸುಕಾಲಬಂದಾಗಲಾದರೂ 'ಬಂದರ ರಚನಾವಣೆ'ಯ ಸಂಬಂಧದ ಬೇರೆ ಕೆಲ ಸರ್ವೇನನ್ನೂ ಮಾಡದೆ, ಮಲ್ಪೆಯನ್ನೇ ಆರಿಸಿಕೊಂಡಾರೆಂಬ ಸ್ಪಷ್ಟ ಭರವಸೆ ಕೂಡಾ ಕಾಣುವುದಿಲ್ಲ. ಬಂದರ ರಚನಾ ಪ್ರಶ್ನೆಯನ್ನು ಬಾಕಿ ಬಿಡಲು ಸಮಿತೀ ವರದಿಯಲ್ಲಿ "ಮಲ್ಪೆಯ ಸಂಬಂಧದಲ್ಲಿ ಸಾಕಷ್ಟಿಲ್ಲ"ದಿರುವುದೂ ಒಂದು ಕಾರಣವೆಂದು ಸರಕಾರೀ ಪ್ರಕಟಣೆಯಲ್ಲಿ ಹೇಳಲಾಗಿದೆ. ಮಾತ್ರವಲ್ಲ, ಆರ್ಥಿಕ ಸ್ಥಿತಿ ಸುಧಾರಿಸಿದೊಡನೆ "ಈ ಯೋಜನೆಯ ಹಣ ಕಾಸು ಮತ್ತು ಇಂಜಿನೀಯರಿಂಗ್ ಸಂಬಂಧದ ಹೆಚ್ಚಿನ ಅಮೂಲಾಗ್ರ ಪರೀಕ್ಷೆ ನಡೆಸಲಾಗುವದು" ಎಂದೂ ಸರಕಾರೀ ಹೇಳಿಕೆಯಲ್ಲಿದೆ. ಆದ್ದರಿಂದ ಹಣದ ಕೊರತೆ ತೋರದ ಕಾಲಎಂದಾದರೂ ಬಂದರೆ, ಆಗ ಪಶ್ಚಿಮ ಕರಾವಳಿಯಲ್ಲಿ ಪ್ರಬುದ್ಧ ಬಂದರ ರಚಿಸುವ ಆಲೋಚನೆಮಾಡಬಹುದು. ಆ ಕಾಲ ಬರುವ ವರೆಗೆ ಈ ಕುರಿತು ಸಹಿಸಿ ಕೊಳ್ಳಲು ಸಾಧ್ಯವಿದೆ. ಅಂದರೆಕೊಚ್ಚಿ, ಮರ್ಮಗೋವಾಗಳ ನಡುವೆ ಎಂತಹ ಕಷ್ಟ ನಷ್ಟ ವಹಿಸಿಯಾದರೂ ಕೂಡಲೇ ಒಂದು ದೊಡ್ಡ ಬಂದರ ನಿರ್ಮಿಸುವಂತಹ ಗರ್ಜಯೇನೂ ಇಲ್ಲವೆಂಬುದು ಸ್ಪಷ್ಟ. ಬಂದರದ ಪ್ರತ್ಯಕ್ಷ ನಿರ್ಮಾಣ ಕಾರ್ಯ ಕೈತೊಡಗುವದಷ್ಟೇ ಬಾಕಿ-ಆದರ ಸ್ಥಳ ಶೋಧನೆಯ ಹಂತಲ್ಲೇ ಅಗ ಮುಗಿದಿದೆ ಯಾದ್ದರಿಂದ ಆ ಕಾಲ ಬರುವಾಗ ಇದೊಂದಂಶವಾದರೂ ಉಳಿದಿಲ್ಲವೆನ್ನೋಣವೆ? ಅದು ಕೂಡಾ ಬಾಕಿಯೇ ಇದೆ. ಎಲ್ಲವೂ ಪುನರ್ವಿಚಾರ ಹೊಂದಲಿವೆ. ಅಂತೂ, ಆ ಭಾವೀ ಅನುಕೂಲ ಸಮಯ'ದಲ್ಲಿ, ಹಿಂದೊಮ್ಮೆ ಪರಿಶೀಲನಾ ಸಮಿತಿಯಿಂದ ಶಿಫಾರಸು ಪಡೆದಿದ್ದ ಸ್ಥಳವೆಂಬುದಕ್ಕಾಗಿ ಮಲ್ಪೆಯ ಪರಿಶೀಲನೆ ಪ್ರಾಮುಖ್ಯದ್ದಾದೀತೇ ಹೊರತು, ವಿಚಾರಣೆ ವಿನಹ ಮಲ್ಪೆಯು ಅಂಗೀಕರಿಸಲ್ಪಡುವಂತಾಗದು. "ಬಂದರವಾಗುವದು" ಎಂಬ ಆಶೆ, ಸಿರೀಕ್ಷೆಗಳಿಂದ, ವಿವಿಧರೀತಿಯ ಭಾವಾಂದೋಲನಗಳಿಗೀಡಾಗಿರುವ ಈ ಭಾಗದ ಜನರು ಪ್ರಕೃತ ಮಲ್ಪೆ ಮಹಾ ಬಂದರದ ವಿಷಯವನ್ನೇ ಮೆದುಳಿನಿಂದೊಮ್ಮೆ ಹೊರದಬ್ಬಿಕೊಳ್ಳುವದುತ್ತಮ. ಮಲ್ಪೆಯ ಸಂದರ್ಭ ಮತ್ತೊಮ್ಮೆ ಬರಬಹುದು-ಆಗ ವಿಚಾರಿಸಿದರಾಯಿತು. ಈಗ ಆ ಸಂಬಂಧದ ಎಲ್ಲವೂ ಅಸ್ಪಷ್ಟವಿರುವುದರಿಂದ, ಇದಕ್ಕಿಂತ ಸವಿಸ್ತರದಲ್ಲಿ, ಹಾಗೂ ಸುಸ್ಪಷ್ಟವಾಗಿ ಇರುವ ಇತರ ಅವಶ್ಯ ವಿಷಯಗಳತ್ತ ಜನರುಗಮನ ಕೊಡುವುದು ವಿಹಿತ.

## ಬಂದರ ಸಮಿತಿ-ಪರಿಶೀಲನೆ

"ಪಶ್ಚಿಮ ಕರಾವಳಿ ಪ್ರಬುದ್ಧ ಬಂದರ ಅಭಿವೃದ್ಧಿ ಸಮಿತಿ"ಯು 1948ನೇ ಫೆಬ್ರುವರಿಯಲ್ಲಿ ಭಾರತ ಸರಕಾರದಿಂದ ನೇಮಿಸಲ್ಪಟ್ಟಿದ್ದಿತು. 1) ಪಶ್ಚಿಮದ ಕಾಥಿಯಾವಾರ್—ಕಚ್‌ಗಳ ನಡುವಿನ ಕರಾವಳಿಯಲ್ಲೊಂದು ಮಹಾ ಬಂದರ ರಚಿಸುವುದು ಆಗತ್ಯವೇ? ಅಗತ್ಯವಾದರೆ ಆದೆಲ್ಲಿ? 2) ಮರ್ಮಗೋವಾ—ಕೊಚ್ಚಿಗಳ ನಡುವಿನ ಕರಾವಳಿಯಲ್ಲೊಂದು ಮಹಾಬಂದರ ರಚನೆಯಾಗಬೇಕೆ? ಬೇಕಾದರೆ ಆದೆಲ್ಲಿ? 3) ಪ್ರಚಲಿತ ಬಂದರುಗಳ ಸಂಬಂಧದಲ್ಲಿ ಎಂತಹ ಸುಧಾರಣೆಗಳು ಅಗತ್ಯ?— ಎಂಬೀ ಮೂರು ವಿಷಯಗಳನ್ನು ಪರಿಶೀಲಿಸಿ ಶಿಫಾರಸುಗಳನ್ನು ಮಾಡಲು ಈ ಸಮಿತಿ ರಚನೆಗೊಂಡಿದ್ದಿತು. ಸಮಿತಿಗೆ ಶ್ರೀ ಕಸ್ತೂರಿಭಾಯಿ ಲಾಲ್‌ಭಾಯಿ ಅಧ್ಯಕ್ಷರಾಗಿದ್ದು, ಹಡಗು, ಬಂದರು, ರೈಲ್ವೇ ವಿಭಾಗಗಳ ಅಧಿಕಾರೀ ತಜ್ಞರು ಕೆಲವರು ಸದಸ್ಯರಿದ್ದರು. ಸಮಿತಿಯು ಪ್ರಥಮತಃ ಉತ್ತರ ಭಾಗದ ಬಂದರದ ಪ್ರಶ್ನೆಯನ್ನೆತ್ತಿಕೊಂಡಿತು; ಕಾಥಿಯಾವಾರದಿಂದ ಕಚ್ ವರೆಗಿನ ಕರಾವಳಿಯ ನಡುವೆ 'ಕಾಂಡ್ಲಾ'ವನ್ನು ಪ್ರಬುದ್ಧ ಬಂದರಾಗಿ ರಚಿಸಬೇಕೆಂದು ಶಿಫಾರಸು ಮಾಡಿದ್ದಿತು. ಅದನ್ನು ಭಾರತ ಸರಕಾರವು ಅಂಗೀಕರಿಸಿಕೊಂಡು ಕಾಂಡ್ಲಾ ಬಂದರ ರಚನೆಯ ಕಾರ್ಯವಿಷ್ಟರಲ್ಲೇ ಆರಂಭಿಸಿದೆ. ತನ್ನ ಪಾಲಿನ ಎರಡನೇ ತಾತ್ಪರ್ಯವಾಗಿ ಕೊಚ್ಚಿ—ಮರ್ಮಗೋವಾಗಳ ಮಧ್ಯದಲ್ಲಿ ಒಂದು ಪ್ರಬುದ್ಧ ಬಂದರ ರಚಿಸುವ ಆವಶ್ಯಕತೆಯಿದೆಯೆ? ಇದೆಯಾದರೆ ಸ್ಥಳವಾವುದು? ಎಂಬ ಪರಿಶೀಲನೆಯನ್ನೂ ಈ ಸಮಿತಿ ಸರಿಯಾಗಿ ಮಾಡಿದೆ. ಅದರ ಸದಸ್ಯರು ಈ ಭಾಗದ ಉದ್ದಕ್ಕೂ ಸ್ವತಃ ಸಂಚರಿಸಿ ಸ್ಥಳ ತನಿಖೆ ನಡೆಸಿದ್ದಲ್ಲದೆ, ಸಂಬಂಧ ಪಟ್ಟ ನಗರಗಳನ್ನೂ ಮನವಿಗಳನ್ನೂ ಪರಿಶೀಲಿಸಿದ್ದರು. ಕೊಚ್ಚಿ-ಗೋವಾಗಳ ನಡುವೆ ಹೊಸ ಬಂದರವು ಅಗತ್ಯವೇ ಎಂಬ ಪ್ರಥಮ ಪ್ರಶ್ನೆಯ ಪರಿಶೀಲನೆಯಲ್ಲಿ ಆ ಬಂದರಕ್ಕೆ ಸಂಬಂಧಿಸಿದ ಉತ್ತರ ಕನ್ನಡ, ದಕ್ಷಿಣ ಕನ್ನಡ, ಮಲಬಾರು ಮತ್ತು ಮೈಸೂರುಗಳ ಉತ್ಪಾದನೆ, ವಾರೋತ್ಪನ್ನ,ಆಮದುರಫ್ತುಗಳೆಲ್ಲವನ್ನೂ ಕೂಲಂಕುಶವಾಗಿ ವಿಮರ್ಶಿಸಿ ನೋಡಿದರು. ಈಗಿರುವಂತೆ ಬೊಂಬಾಯಿ, ಮರ್ಮಗೋವಾ ಮತ್ತು ಮದ್ರಾಸು ಬಂದರಗಳ ಮೂಲಕ ಸುಗಮ ವಹಿವಾಟು ಮಾಡಲಾಗದ ಸಾಮಾನುಗಳ ಮತ್ತು ಮೈಸೂರಿನ ಭದ್ರಾವತಿ ವಲಯ ಮುಂತಾದ ಕಡೆಗಳಲ್ಲಿ ಕ್ಷಿಪ್ರ ಪ್ರಗತಿಯಲ್ಲಿರುವ ಉದ್ದಿಮೇ ಉತ್ಪನ್ನಗಳ ಸಾಗೋಣದ


ಕನ್ನಡಿಗರೆಲ್ಲರ ಕಣ್ಮನ ಸೆಳೆದು ಪ್ರಸಿದ್ಧವಾದ

# ಮಧುವನ

ಅಖಿಲ ಕರ್ನಾಟಕದ ಪ್ರಾತಿನಿಧಿಕ ಕಥಾಸಂಕಲನ

25 ಕತೆಗಳು    ಬೆಲೆ ರೂ 3  0  0

ಸಿಗುವ ಸ್ಥಳಗಳು:-

1 ಕಿರಿಯರ ಪ್ರಪಂಚ, ಉಡುಪಿ
2 ನವಭಾರತ ಬುಕ್ ಡಿಪೊ, ಉಡುಪಿ
3 ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

# —ಆದರೂ ಸದ್ಯಕ್ಕೆ ಪ್ರಬುದ್ಧ ಬಂದರದ ರಚನೆಯಿಲ್ಲ!

ದಾಜು ಮೊತ್ತವು 1955ನೇ ಇಸವಿಯಲ್ಲಿ 5,14,000 ಟನ್ನುಗಳು ಮತ್ತು 1961ನೇ ಇಸವಿಯಲ್ಲಿ 6,64000 ಟನ್ನುಗಳು ಆಗಬಹುದೆಂದು ಸಮಿತಿಯ ಅಭಿಪ್ರಾಯ. ಆದ್ದರಿಂದ ಈ ಭಾಗದಲ್ಲಿ ಹೊಸ ಪ್ರಬುದ್ಧ ಬಂದರ ರಚನೆ ಅಗತ್ಯವೆಂದು ಅದು ಪ್ರಥಮತಃ ನಿರ್ಣಯಿಸಿತು. ಆ ಮೇಲೆ ಈ ಭಾಗದಲ್ಲಿ ಅದಕ್ಕೆ ಹೇಳಿಸಿದ ಸ್ಥಳವಾವುದು ಎಂಬುದರ ತುಲನಾತ್ಮಕ ಶೋಧನೆ ಮಾಡುತ್ತಾ "ಮಲ್ಪೆಯೇ ಸರಿ" ಎಂಬ ತೀರ್ಮಾನಕ್ಕೆ ಬಂತು.

## ಮಲ್ಪೆಯ ಯೋಗ್ಯತೆ

ಪ್ರಬುದ್ಧ ಬಂದರವಾಗಲು ಮಲ್ಪೆಯೇ ಯೋಗ್ಯವೆಂಬ ಶಿಫಾರಸು ಮಾಡುತ್ತಾ ಬಂದರ ಸಮಿತಿಯವರು ಮುಂದಿಟ್ಟಿರುವ ಮಲ್ಪೆಯ ಸ್ಥಿತಿಚಿತ್ರ ಹೀಗಿದೆ:— "ಮರ್ಮಗೋವಾದಿಂದ ದಕ್ಷಿಣಕ್ಕೆ 164 ಮೈಲು ದೂರದಲ್ಲಿದ್ದು, ಹೆಚ್ಚಿನ ಪ್ರಾಮುಖ್ಯತೆಯಿರದ ಮಲ್ಪೆಯು ಒಂದು ಸಣ್ಣ ಬಂದರ. ಇದು, ಉತ್ತರಗಡೆಯಲ್ಲಿ ಸಮುದ್ರವನ್ನು ಕೂಡುತ್ತಿರುವ ಒಂದು ಸಣ್ಣ ಹೊಳೆಯ ಮುಖವಲಯದಲ್ಲಿದೆ. ದಡಕ್ಕೆ ಸುಮಾರು ಒಂದು ಮೈಲು ದೂರ ಸಮುದ್ರದಲ್ಲಿ ಬಹುತೇಕವಾಗಿ ಕರಾವಳಿಗೆ ಸರೀ ಅಡ್ಡವಾಗಿ 'ಸ್ಟೆಂಟ್ ಮೇರೀಸ್ ದ್ವೀಪಗಳು' ಎಂದು ಕರೆಯಲ್ಪಡುವ ಕರಿ ಕಲ್ಲ ದ್ವೀಪಗಳ ಸಂಪಾಲೆ ಇಲ್ಲಿದೆ. ದಡದಿಂದ ಸ್ಟೆಂಟ್ ಮೇರೀಸ್ ದ್ವೀಪಗಳಿಗೆ ನೀರತಡೆಗಳನ್ನು ಹಾಕಿ, ಮತ್ತೀ ದ್ವೀಪಗಳನ್ನೂ ನೀರ ತಡೆಗಟ್ಟುಗಳಿಂದ ಜೋಡಿಸಿಕೊಂಡು ಆ ಮೂಲಕ, ದೊಡ್ಡ ಸುರಕ್ಷಿತ ರೇವನ್ನು ನಿರ್ಮಿಸಿಕೊಳ್ಳಲು ಸಾಧ್ಯವಿದೆ. ಆಳ ನೀರಿನ ಹೆಚ್ಚಿನಂಶ ರಕ್ಷಣೆಯು ಈ ದ್ವೀಪಗಳಿಂದಲೇ ದೊರೆಯುವುದರಿಂದ, ಹೆಚ್ಚಿನೆಡೆಯ ತಡೆಗಟ್ಟುಗಳನ್ನು ಆಳವಿಲ್ಲದ ನೀರಿಗೇನೇ ಹಾಕಿದರಾಯಿತು. ಮಲ್ಪೆಗಿರುವ ಸೌಕರ್ಯಗಳು ಚುಟುಕಿನಲ್ಲಿ ಹೀಗಿವೆ: 1. ದಡಕ್ಕೊಳ ಸಮುದ್ರದಲ್ಲಿರುವ ದ್ವೀಪಗಳು, ಒಂದು ಸುರಕ್ಷಿತ ಧಕ್ಕೆಯ ಮೂಲಾಕಾರದಲ್ಲಿವೆ; ಈ ದ್ವೀಪಗಳನ್ನು ಸಮುದ್ರ ದಡದೊಂದಿಗೆ ಜೋಡಿಸುವಲ್ಲಿ ಕೊರೆದು ಹೋಗದಂತೆ ಮರದದಿನ್ನೆಗಳನ್ನು ಹಾಕುವ ಅಗತ್ಯವಿದೆಯಾದರೂ, ಆಳ ನೀರಿನ ಹೆಚ್ಚಿನಂಶ ರಕ್ಷಣೆಯು ಪ್ರಕೃತಿದತ್ತವಾಗಿ ಅಲ್ಲಿದ್ದೇ ಇದೆ. 2. ಬಂಡೆಯನ್ನು ಸಂಧಿಸದೇನೇ ಆಳ ಸರಿಗೊಳಿಸಬಹುದೆಂಬುದು ನೆಲೋಪಭಾಗದ ತನಿಖೆಗಳಿಂದ ತಿಳಿದು ಬಂದಿದೆ. 3. ಸಮುದ್ರದಿಂದ ಸುಗಮ ಪ್ರವೇಶಕ್ಕನುಕೂಲವಾದ ದ್ವಾರ ಇದೆ. 4 ಒಂದು ಅತಿ ವಿಸ್ತೃತ ಬಂದರ ... ಸಾಕಾಗುವಷ್ಟು ಇಲ್ಲಿಯ ಧಕ್ಕೆಯು ...00 ಎಕ್ರೆಗಳಿಗೂ ಮಿಕ್ಕಿ ವಿಸ್ತಾರವುಳ್ಳದ್ದಾಗುವದು. 5. ಒಂದು ಸಣ್ಣ ಹೊ... ಮಾತ್ರ ಈ ರೇವಿನೊಳಗೆ ಪ್ರವೇಶಿಸುತ್ತದ್ದು, ಅದರ ಮುಖವನ್ನು ಸುಲಭದಲ್ಲಿ ...ರುಗಿಸಿ ಬಿಡಲು ಸಾಧ್ಯವಿದೆ. ಆದ್ದರಿಂದ ...ಳ ಸರಿಪಡಿಸುವ ಸಮಸ್ಯೆಯೊಂಬುದೇ ಇಲ್ಲ. 6. ಒಳಭಾಗದ ಪ್ರದೇಶಗಳ ಸಂಬಂಧದಲ್ಲಿ ಇಲ್ಲಿಯ ಭೌಗೋಳಿಕ ಸ್ಥಿತಿಯು ಅನುಕೂಲವಿದೆ. ಮಲ್ಪೆಯಿಂದ ಭದ್ರಾವತಿಗೆ ರೈಲ್ವೇ ರಸ್ತೆ ಜೋಡಿಸಲು ಮಂಗಳೂರಿಂದ ಭದ್ರಾವತಿಗಿರುವ ದೂರಕ್ಕಿಂತ 42 ಮೈಲುಗಳಷ್ಟು, ಮತ್ತು ಕಾರವಾರದಿಂದ ಅಲ್ಲಿಗಿರುವುದಕ್ಕಿಂತ 44 ಮೈಲುಗಳಷ್ಟು ಕಡಿಮೆ ದೂರವಿದೆ. 7. ಬಂದರ ಭೂಮಿಯಾಗಿ ಉಪಯೋಗಿಸಲಾಗುವ ಮತ್ತು ಹೊಸ ಉದ್ದಿಮೆಗಳನ್ನು ಆಕರ್ಷಿಸಿಕೊಳ್ಳುವ ವಿಸ್ತಾರ ಭೂಮಿಯ ಅನುಕೂಲತೆ ಇಲ್ಲಿದೆ. 8. ಹೈಡ್ರೋ ಎಲೆಕ್ಟ್ರಿಕ್ ಪವರ್ ದೊರೆಯುವ ಜೋಗಿಗೆ ಮಲ್ಪೆಯಿಂದಿರುವುದು 50 ಮೈಲು ಮಾತ್ರ. ಹೀಗೆಲ್ಲಾ ಇದ್ದರೂ, ಮಲ್ಪೆಗೆ ಪ್ರತಿಕೂಲವಾದ ಎರಡು ಸಂಗತಿಗಳಿವೆ. ಅವುಗಳೆಂದರೆ (ಎ) ಘಟ್ಟಗಳೊಂದಿಗೆ ಜೋಡಣೆಗೊಳಿಸಬೇಕಾದ ಹೊಸ ರೈಲ್ವೆಯ ಪ್ರತ್ಯೇಕ ವೆಚ್ಚ; ಇದು 298 ಲಕ್ಷ ರೂಪಾಯಿಗಳಾಗುವುದು. (ಬಿ) ಇಲ್ಲಿರುವ ಆಮದು ರಫ್ತು ವಹಿವಾಟುಗಳ ಟನ್ನುವಾರು ತೂಕವು ಮಂಗಳೂರಿಗಿಂತ, ವರ್ಷಾವಧಿ 77,000 ಟನ್ನುಗಳಷ್ಟು ಕಡಿಮೆಯೆಂದು ಅಂದಾಜಾಗಿದೆ. ಆದರೆ ಈ ಅನನುಕೂಲತೆಗಳನ್ನು ಮರೆ ಮಾಡುವಷ್ಟು—ಅದಲ್ಲದೆ ಇತರ ಎರಡು ಬಂದರಗಳ ಸ್ಥಿತಿಗತಿಗಳೊಡನೆ ತುಲನೆ ಮಾಡಿದರೆ—ಅತಿ ಹೆಚ್ಚಿನ ಅನುಕೂಲತೆಗಳು ಮಲ್ಪೆಯಲ್ಲಿವೆ. ಮಲ್ಪೆಯನ್ನು ಪ್ರಬುದ್ಧ ಬಂದರಾಗಿ ಸ್ಥಾಪಿಸಲು ಆಗಬೇಕಾದುದೆಂದರೆ:—ಭದ್ರಾವತಿಯನ್ನು ಸುತ್ತುವರಿದಿರುವ ಮೈಸೂರಿನ ಉದ್ದಿಮೇ ಜಿಲ್ಲೆಗಳೊಂದಿಗೆ ಜೋಡಣೆಗೊಳಿಸುವ ಒಂದು ರೈಲ್ವೇ ರಸ್ತೆ—ಮದ್ರಾಸಿನಿಂದ ಮಂಗಳೂರಿನ ವರೆಗಿರುವ ರೈಲ್ವೇ ಹಾದಿಯನ್ನು ಮಲ್ಪೆಯ ವರೆಗೆ ಕೊಂಡುಬರುವುದು. ಮಲ್ಪೆಯಲ್ಲೊಂದು ಮಹಾ ಬಂದರ ನಿರ್ಮಿಸುವುದರಿಂದ ಯಾವ ಪ್ರಸ್ತುತ ಬಂದರಗಳ ಆಮದು ರಫ್ತು ವಹಿವಾಟುಗಳ ಮೇಲೆ ಪರಿಣಾಮವಾಗಬಹುದೋ ಆ ಮದ್ರಾಸ್, ಕೊಚ್ಚಿ, ಮರ್ಮಗೋವಾಗಳ ಸುಧಾರಣಾ ಕಾರ್ಯಕ್ರಮಗಳನ್ನು, ಅನಗತ್ಯ ವೆಚ್ಚವಾಗದಂತೆ ನೋಡುವುದಕ್ಕಾಗಿ ಲಕ್ಷ್ಯಪೂರ್ವಕ ಮರು ತನಿಖೆ ನಡೆಸಬೇಕಾಗಿದೆ. ಮಲ್ಪೆ ಬಂದರ ನಿರ್ಮಾಣಕ್ಕೆ ಪ್ರಥಮಾಂಕದಲ್ಲಿ ಬೀಳುವ ವೆಚ್ಚ ಅಂದಾಜು ರೂ. ...50 ಲಕ್ಷ. ಹಡಗ ನಿಲ್ಲುವ ನಾಲ್ಕು ಆಳ ನೀರ ನೆಲೆಗಳ ಮತ್ತು ಇತರ ಅಂತಹ ಸಣ್ಣ ನೆಲೆಗಳ ನಿರ್ಮಾಣ—ಅಗತ್ಯವುಳ್ಳ ಮುಂಡಂಡೆಗಳ ಮತ್ತು ತಡೆಕಟ್ಟುಗಳ ರಚನೆ—ಸಮುದ್ರದಿಂದ ನೀರ ನೆಲೆಗಳಿಗೆ ಆಳ ಕಾಲುವೆಗಳ ನಿರ್ಮಾಣ—ಇತ್ಯಾದಿಗಳು ಇಷ್ಟು ವೆಚ್ಚದಿಂದಾಗುತ್ತವೆ."

ಪಶ್ಚಿಮ ಕರಾವಳೀ ಪ್ರಬುದ್ಧ ಬಂದರಾಭಿವೃದ್ಧಿ ಸಮಿತಿ ಸದಸ್ಯರ ಪೈಕಿ ಎಮ್. ಎಸ್. ಎಮ್. ರೈಲ್ವೆಯ ಜನರಲ್ ಮೆನೇಜರ್ ಮಿ. ರೀಡ್ ಇವರು ಮೇಲಿನ ಅಭಿಪ್ರಾಯಗಳಿಗೆ ತನ್ನ ಅಸಮ್ಮತಿ ಸೂಚಿಸಿದ್ದಾರೆ. ಅಂದಾಜು ಕಟ್ಟಿರುವ ಮೈಸೂರಿನ ಆಮದುರಫ್ತು 514,000 ಟನ್ನುಗಳು ಒಂದು ಹೊಸ ಮಹಾ ಬಂದರ ರಚನೆಗೆ ಸಾಕಾಗಲಾರದೆಂದು ಇವರ ಅಭಿಪ್ರಾಯ. ಸಮಿತಿಯ ಬಹುಸಂಖ್ಯಾಕ ಸದಸ್ಯರಾಧರಿಸಿರುವ ವಹಿವಾಟು ಸಂಬಂಧದ ಅಂಕೆಸಂಖ್ಯೆಗಳು ಸರಿಯೇ, ಎಂದು ಕೂಡಾ ಮಿ. ರೀಡರ ಪ್ರಶ್ನೆಯಿದೆ. ಭಾರತ ಸರಕಾರವು ಮಲ್ಪೆ ಸಂಬಂಧದ ಈ ಸಮಿತೀ ಶಿಫಾರಸಿನ ಕುರಿತು ಈಗ ಮಾಡಿರುವ ನಿರ್ಧಾರವನ್ನು ಕಾಣುವಾಗ, ಅದು, ಸಮಿತಿಯ ಬಹುಸಂಖ್ಯಾಕರ ಅಭಿಪ್ರಾಯಕ್ಕಿಂತ ಮಿ. ರೀಡ್ ಒಬ್ಬರ ಅಭಿಪ್ರಾಯವನ್ನೇ ಸದ್ಯಕ್ಕೊಮ್ಮೆ ಮಾನ್ಯಮಾಡಿದಂತೆ ತೋರುತ್ತದೆ.

## ಇತರ ಶಿಫಾರಸುಗಳು

ಬಂದರ ಸಂಬಂಧದ ಈ ಸಮಿತಿಯು ಮತ್ತೊಂದು ಪ್ರಾಮುಖ್ಯ ಶಿಫಾರಸನ್ನು ಮಾಡಿದೆ. ಉದ್ದಿಮೆ, ವ್ಯಾಪಾರ, ಸುಂಕ, ರೈಲ್ವೆ, ಸಾಗರೀಣ ವಹಿವಾಟು, ದೇಶರಕ್ಷಣೆ ಇತ್ಯಾದಿ ಎಲ್ಲಾ ಬಂದರ ವಿಷಯಗಳ ಸರಿಯಾದ ಜೋಡಣಾ ವ್ಯವಸ್ಥೆಗಾಗಿ ಕೇಂದ್ರ ಸರಕಾರದ ಆಶ್ರಯದಲ್ಲಿ 'ಕೇಂದ್ರ ಬಂದರ ಬೋರ್ಡು' ಒಂದನ್ನು ನಿರ್ಮಿಸಬೇಕೆಂಬುದೇ ಆ ನವೀನ ಸೂಚನೆ. ಈ ಬೋರ್ಡು ವಿವಿಧ ಬಂದರಗಳ ದೈನಂದಿನ ವಹಿವಾಟುಗಳಲ್ಲಿ ಕೈಹಾಕಬೇಕೆಂದಿಲ್ಲ; ಆದರೆ ಪ್ರಥಮದ್ದ ಪ್ರಬುದ್ಧ ಸರ್ವ ಬಂದರಗಳ ಸಮಾನಾಭಿವೃದ್ಧಿಯ ವಿಶಾಲ ಧೋರಣೆ ಮತ್ತು ಭಾರತದ ಇಡೀ ಕರಾವಳೀ ಸಂಬಂಧದ ಹೊಣೆಯು ಈ ಬೋರ್ಡಿನದಾಗಿರಬೇಕು, ಎಂದು ಸಮಿತಿಯ ಅಭಿಪ್ರಾಯ. ಸಣ್ಣ ಬಂದರಗಳ ಸುಧಾರಣಾ ಸಂಬಂಧವಾದ, ಮತ್ತಿತರ ಉಪಯುಕ್ತ ಸೂಚನೆಗಳನ್ನೂ ಈ ಸಮಿತಿಯು ಮಾಡಿದೆ. ಪಶ್ಚಿಮ ಕರಾವಳಿಯಲ್ಲಿ ಮಲ್ಪೆಯನ್ನೇ ಪ್ರಬುದ್ಧ ಬಂದರಾಗಿ ಕೂಡಲೇ ನಿರ್ಮಿಸತಕ್ಕದ್ದೆಂಬ ಶಿಫಾರಸೊಂದನ್ನು ಬಿಟ್ಟು ಉಳಿದ ಸೂಚನೆಗಳೆಲ್ಲವನ್ನೂ ಭಾರತ ಸರಕಾರವು ಅಂಗೀಕರಿಸಿಕೊಂಡಿದೆ.

## ಭಾವೀ ಸುಯೋಗ ಮಂಗಳೂರಿಗೆ?

"ಅನುಕೂಲ ಕಾಲ ಬಂದಾಗ ಇನ್ನೂ ಹೆಚ್ಚಿನ ಅಮೂಲಾಗ್ರ ಪರೀಕ್ಷೆ ನಡೆಯಿಸುವ ಮೂಲಕವೇ ಕೊಚ್ಚಿ—ಮರ್ಮಗೋವಾಗಳ ನಡುವಿನ ಪ್ರಬುದ್ಧ ಬಂದರ ಪ್ರಶ್ನೆಯನ್ನೆತ್ತಿಕೊಳ್ಳಲಾಗುವುದು" ಎನ್ನುತ್ತಾ ಮಲ್ಪೆಯ ಮೇಲಿನ ಶಿಫಾರಸನ್ನು ಹಿಂದೆ ಹಾಕಿ ಬಿಟ್ಟ ಕೇಂದ್ರ ಸರಕಾರದ ಹೇಳಿಕೆಯಲ್ಲಿ, ಒತ್ತಿಗೇನೆ ಬಂದಿದೆ: "ಈ ತನ್ಮಧ್ಯೆ ಮಂಗಳೂರಿನ ಮ್ಯಾನರ್ ಬಂದರವನ್ನು ಸುಧಾರಿಸುವ ಪ್ರಶ್ನೆಯ ಕಡೆಗೆ ಮದ್ರಾಸ್ ಸರಕಾರವು ವಿಶೇಷ ಲಕ್ಷ್ಯ ಕೊಡಲಿರುವುದು. ಮತ್ತು ಅಲ್ಲಿ ಕಾಲುವೆ ತೋಡಿ ಉಳಿಸಿಕೊಳ್ಳುವುದು ಶಕ್ಯವೋ ಅಲ್ಲವೋ? ಎಂಬುದನ್ನು ಗೊತ್ತುಹಚ್ಚಲು ಪೂನಾದ 'ಸೆಂಟ್ರೆಲ್ ವಾಟರ್ ಪವರ್ ಇರ್ರಿಗೇಶನ್ & ನೆವಿಗೇಶನ್ ರಿಸರ್ಚ್ ಸ್ಟೇಶನ್' ಇದರ ಮುಖಾಂತರ ಆಧುನಿಕ ಪ್ರಯೋಗಗಳನ್ನು ನಡೆಸಲಾಗುವದು". ಈ ಹೇಳಿಕೆಯ ಮೇಲಿಂದ ಭಾವೀ ಸಂಭವವನ್ನು ಊಹಿಸಬಹುದು. ಬಂದರ ಸಮಿತಿಯು ಶಿಫಾರಸು ಮಾಡಿದ್ದ ಮಲ್ಪೆಯನ್ನು ಪ್ರಕೃತ ತಡೆದಿಟ್ಟು, ಮುಂದಿನ ಕೂಲಂಕುಶ ವಿಚಾರಣೆಯ ಕಾಲ ಬರುವುದರೊಳಗೆ ಮಂಗಳೂರೇ ಪ್ರಬುದ್ಧ ಬಂದರವಾಗಲು ಹೆಚ್ಚು ಯೋಗ್ಯವೆನ್ನಿಸುವಂತೆ ಅದನ್ನು ಸುಧಾರಿಸಿಬಿಡುವ ಪ್ರಯತ್ನ ನಡೆಯಲಿದೆ. ಮಹಾಬಂದರವಾಗಲು ಮಂಗಳೂರಿಗಿರುವ ಮುಖ್ಯ ತಡೆಯೆಂದರೆ ಹಡಗಾಶ್ರಯವಾಗಬಲ್ಲ ಆಳನೀರ ನೆಲೆಯಿಲ್ಲದಿರುವುದೇ; ಮರಳುಸಂಕ್ಷೃತಿ ಹೊಯಿಗೆ ಬಂದು ಬೀಳುತ್ತಿರುವುದೇ. ಈ ದೋಷವು ನಿವಾರಣಾ ಸಾಧ್ಯವೋ ಎಂಬ ಪ್ರಯೋಗ ನಡೆಸುವ ಹೊಣೆಯನ್ನು ಮದ್ರಾಸ್ ಸರಕಾರವು ವಹಿಸಿಯೆಂದು ಖಚಿತವಾಗಿದೆ. ಮದ್ರಾಸ್ ಸರಕಾರವು ಈ ಮೊದಲೇ ಮಂಗಳೂರನ್ನು ಶಿಫಾರಸು ಮಾಡಿದ್ದು, ಮುಂದಿನ ಪರೀಕ್ಷೆಯಲ್ಲಿ ಮಂಗಳೂರೇ ಗೆಲ್ಲುವಂತೆ ಮಾಡಲು ಸಾಧ್ಯವಿದ್ದುದನ್ನೆಲ್ಲಾ ಅದು ಮಾಡಲಿದೆ ಎಂದೂಹಿಸಬಹುದು. ಕೇಂದ್ರ ಸರಕಾರದ ಒಲವು ಕೂಡಾ ಮಂಗಳೂರಿನ ಕಡೆಗೇನೇ ವಾಲಿದೆ ಎಂಬ ಸಂದೇಹವನ್ನು ಬಂದರ ಸಮಿತೀ ಶಿಫಾರಸಿನ ಕುರಿತು ಅದು ಹೊರಡಿಸಿರುವ ನಿರ್ಣಯಾತ್ಮಕ ಪ್ರಕಟಣೆಯು ನಿರ್ಮಿಸಿದೆ. ಸರಕಾರದ ದೃಷ್ಟಿಯನ್ನು ಕಡೆಗೆ ತಿರುಗಿಸುವ ಒಳ ಪ್ರಯತ್ನಗಳು ನವದೆಹಲಿಯಲ್ಲಿ ನಡೆದಿರಬೇಕು. ಆದರೂ, ಭಾವೀ ಆಗುಹೋಗುಗಳ ಕುರಿತು ಅನಗತ್ಯ ಊಹಾಪೋಹೆಗಳನ್ನು ಈಗ ಕಟ್ಟಿಕೊಳ್ಳಬೇಕೆಂದಿಲ್ಲ. ನ್ಯಾಯಪಾಲನೆಗಾಗಿ ಶ್ರಮಿಸಲಾಗುವ ಉಚಿತ ವಿಧಾನಗಳು ಎಲ್ಲರ ಪಾಲಿಗೂ ಇದ್ದೇ ಇವೆ. ಮಲ್ಪೆಯ ನಿಜ ಯೋಗ್ಯತೆಯು 'ಪಶ್ಚಿಮ ಕರಾವಳಿ ಪ್ರಬುದ್ಧ ಬಂದರಾಭಿವೃದ್ಧಿ ಸಮಿತಿ'ಯ ಶಿಫಾರಸುಗಳ ಮೂಲಕ ಎಲ್ಲರಿಗೂ ಒಮ್ಮೆ ಮುಂದಿಟ್ಟುದುದಕ್ಕಾಗಿ ಸಮಾಧಾನಪಡಬೇಕು. ಇದಕ್ಕಾಗಿ ವಿಶೇಷ ರೀತಿಯಿಂದ ದುಡಿದಿದ್ದ ಮಲ್ಪೆಯ ಬಂದರಾಭಿವೃದ್ಧಿ ಸಮಿತಿಯವರು ಅಭಿವಂದನೆಗರ್ಹರು.

ಪಂಚಾಯತ ಬೋರ್ಡು,
ಗ್ರಾಮ ಕಮಿಟಿ, ಶಾಲಾ ಕಾಲೇಜು
ಮೊದಲಾದುವುಗಳ
ಲೈಬ್ರೆರಿಗಳಿಗೆ
ಬೇಕಾಗುವ ಕರ್ನಾಟಕದ ಎಲ್ಲಾ ಭಾಗಗಳ ಕನ್ನಡ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.
ವಿಚಾರಿಸಿರಿ:—
ನವಭಾರತ ಪುಸ್ತಕ ಭಂಡಾರ,
ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

THE
Canara Banking Corporation Ltd.
(Incorporated in India with Limited Liability)
Estd: 1906.
ANNOUNCEMENT
A Branch of the Bank will shortly be opened
at
PONAMPET (SOUTH COORG).
ಬ್ಯಾಂಕಿನ ಒಂದು ಶಾಖೆಯು ಸದ್ಯದಲ್ಲಿಯೇ
ಪೊನ್ನಂಪೇಟೆ (ದಕ್ಷಿಣ ಕೊಡಗು)
ಯಲ್ಲಿ ತೆರೆಯಲಾಗುವುದು.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್,
ಸ್ಥಾಪನೆ: 1906

# ನವಯುಗ

ಗುರುವಾರ ಉಡುಪಿ ೩೦-೩ ೧೯೫೦

## ಬಂದರ ಪ್ರಶ್ನೆ

ಪಶ್ಚಿಮ ಕರಾವಳಿ ಪ್ರಬುದ್ಧ ಬಂದರ ಅಭಿವೃದ್ಧಿ ಸಮಿತಿಯು, ಮಲ್ಪೆಯೇ ಅಂತಹ ಪ್ರಬುದ್ಧ ಬಂದರವಾಗಲು ಯೋಗ್ಯವೆಂದು ಮಾಡಿರುವ ಶಿಫಾರಸು-ಸದ್ಯಕ್ಕೆ ಶಿಫಾರಸಿನಂತೆ ವರ್ತಿಸದೆ, ಅನುಕೂಲ ಕಾಲವೊದಗಿದಾಗ ಈ ಪ್ರಶ್ನೆಯನ್ನು ಇನ್ನಷ್ಟು ವಿವರವಾಗಿ ಪುನರಾಲೋಚಿಸಲಾಗುವದೆಂದು ಭಾರತ ಸರಕಾರವು ಮಾರ್ಚ್ ತಾ. 27ರಲ್ಲಿ ಹೊರಡಿಸಿರುವ ಪ್ರಕಟಣೆ-ಇವುಗಳ ಸಾರವು ಈ ಸಂಚಿಕೆಯ ಬೇರೊಂದೆಡೆಯಲ್ಲಿ ಬಂದಿದೆ ಆ ಕುರಿತು ನಾವಿಲ್ಲಿ ಹೆಚ್ಚಿನ ವಿಮರ್ಶೆಗೆ ಹೋಗುವದಿಲ್ಲ. ಒಂದು ಮಹಾ ಬಂದರಕ್ಕಾಗುವ ಸ್ಥಳವನ್ನು ಗೊತ್ತು ಹಚ್ಚುವದಾಗಲೀ, ಆದರ ರಚನಾ ವಿಧಾನಗಳನ್ನು ಸೂಚಿಸುವುದಾಗಲೀ ಸಾಮಾನ್ಯರಂತೆಯೇ ರಾಜಕಾರಣಿ ರಾಷ್ಟ್ರ ನಾಯಕರಿಗೂ ಎಟುಕದ ಸಂಗತಿ. ಸಂಬಂಧಪಟ್ಟ ವಿಷಯಗಳ ಸರಿಯಾದ ಜ್ಞಾನಾನುಭವವುಳ್ಳ ತಜ್ಞರೇ ಇಲ್ಲಿ ಮಾರ್ಗದರ್ಶಿಗಳಾಗಬೇಕು. ಆದ್ದರಿಂದಲೇ ಬಂದರ ಸಂಬಂಧದ ತಜ್ಞರ ಸಮಿತಿ ನಿರ್ಮಾಣವಾಗಿದ್ದಿತು. ಬಂದರ ನಿರ್ಮಾಣದಂತಹ ಪ್ರಶ್ನೆಯಲ್ಲಿ ಯಾವುದೇ ವಿಧದ ಪಕ್ಷ, ಪಂಗಡ ಸ್ವಾರ್ಥಕ್ಕಾಗಲೀ, ಸ್ಥಳೀಯ ಮೇಲಾಟಕ್ಕಾಗಲೀ ನ್ಯಾಯೋಚಿತ ಅವಕಾಶವಿಲ್ಲವೇ ಇಲ್ಲವಾದ್ದರಿಂದ, ಆ ಸಂಬಂಧದಲ್ಲಿ ತಜ್ಞರ ಶಿಫಾರಸುಗಳೇ ಮಾನ್ಯವಾಗಲು ಬದ್ಧವಿವೆ. ಭಾರತ ಸರಕಾರದ ರೈಲ್ವೇ ಮಂತ್ರಿ ಶ್ರೀ ಕೆ. ಸಂತಾನಮರು ಉಡುಪಿಗೆ ಬಂದಿದ್ದಾಗ, ಮಲ್ಪೆಯನ್ನು ಪ್ರಬುದ್ಧ ಬಂದರವಾಗಿ ನಿರ್ಮಿಸುವ ಕುರಿತು ಒಪ್ಪಿಸಲ್ಪಟ್ಟ ಮನವಿಗೆ ಕೊಟ್ಟ ಉತ್ತರದಲ್ಲಿ ಈ ಅಭಿಪ್ರಾಯವನ್ನೇ ಹೊರಗೆಡಹಿದ್ದರು. "ಬಂದರ ಸಂಬಂಧದ ಸಮಿತಿಯ ಶಿಫಾರಸುಗಳಂತೆ ವರ್ತಿಸುವದೊಂದೇ ನಮ್ಮ ಪಾಲಿನ ಕೆಲಸ ಹೊರತು ಈ ಸಂಬಂಧವಾಗಿ ನಾವು ಬೇರೆ ಮಾಡುವಂತಹದೇನೂ ಇಲ್ಲ" ಎಂದು ಅವರಂದಿದ್ದರು. ಆ ಮೇಲೆ ಉಡುಪಿಗೆ ಆಗಮಿಸಿದ್ದ ಕೇಂದ್ರ ಸರಕಾರದ ಸುದ್ದಿ ಮತ್ತು ಆಕಾಶವಾಣಿ ಖಾತೆಯ ಮಂತ್ರಿ ಶ್ರೀ ದಿವಾಕರರು ಕೂಡಾ ಶ್ರೀ ಸಂತಾನಮರ ಅಭಿಪ್ರಾಯವನ್ನೇ ಪುನರುಚ್ಚರಿಸಿದ್ದರು. ಆದರೆ ಭಾರತ ಸರಕಾರದ ಈಗಿನ ಹೇಳಿಕೆಯು ಆ ಇಬ್ಬರು ಮಂತ್ರಿಗಳ ಈ ಮೊದಲಿನ ಸ್ಪಷ್ಟಾಶ್ವಾಸನೆಗಳಿಗೆ ವ್ಯತಿರಿಕ್ತವಾಗಿರುವುದು ನಿಜಕ್ಕೂ ಆಶ್ಚರ್ಯಕರ. ಹಣದ ಅಡಚಣೆಯಿರುವುದರಿಂದ ಸಮಿತಿಯ ಶಿಫಾರಸುಗಳನ್ನು ಕೂಡಲೇ ಜಾರಿಗೆ ತರುವುದು ಅಸಾಧ್ಯವಾಗಿ ಸರಕಾರವು ಸದ್ಯಕ್ಕೆ ಯೋಜನೆಯನ್ನು ಹಿಂದೆ ಹಾಕಿದೆ, ಎಂದಿಷ್ಟೇ ಹೇಳುತ್ತಿದ್ದರೆ, ಆಕ್ಷೇಪವೇಳುತ್ತಿರಲಿಲ್ಲ. ಆದರೆ, ಅಂತಹ ಸಂದರ್ಭ ಬರುವಾಗ ಇನ್ನೂ ಹೆಚ್ಚಿನ ತನಿಖೆ ನಡೆಸುವ ಅಗತ್ಯವಿದೆಯೆಂದೂ, ಈ ಮಧ್ಯೆ ಮದ್ರಾಸ್ ಸರಕಾರವು ಮಂಗಳೂರು ಬಂದರದ ಕೊರತೆ ನಿವಾರಣೆಯ ಪ್ರಯೋಗ ಮಾಡಲಿದೆಯೆಂದೂ, ಸರಕಾರೀ ಹೇಳಿಕೆ ಸೂಚಿಸಿದೆ. ಇಲ್ಲಿ, ಸರಕಾರದ ಉದ್ದೇಶವನ್ನೇ ಪ್ರಶ್ನಿಸಬೇಕಾಗುತ್ತದೆ; ಬಂದರದ ಸ್ಥಳ ನಿರ್ಣಯದ ಕುರಿತು ಕ್ರಮಬದ್ಧ ಹಾಗೂ ನ್ಯಾಯೋಚಿತ ಸಮಿತೀ ಪರಿಶೀಲನೆಗಿಂತ ಭಿನ್ನವಾದ ಒಳ ಮಸಲತ್ತುಗಳು ನವದಿಲ್ಲಿಯ ಅಧಿಕಾರ ಕ್ಷೇತ್ರದಲ್ಲಿ ಮತ್ತು ಮದ್ರಾಸ್ ಸರಕಾರದ ಮೂಲಕ ನಡೆದಿದ್ದು, ಅವು ತಕ್ಕ ಮಟ್ಟಿಗೆ ಸಫಲವಾಗಿರಬೇಕು, ಎಂಬ ಸಂದೇಹವು ಸರಕಾರದ ಈ ಘೋಷಣೆಯಿಂದ ಮೂಡುತ್ತಿದೆ. ಸರಕಾರೀ ಪ್ರಕಟಣೆಯನ್ನುಸರಿಸುವಂತೆ 'ಸಮಿತೀ ವರದಿಯ ಶಿಫಾರಸುಗಳಲ್ಲಿ ಮಲ್ಪೆಯ ಕುರಿತು ಬಂದಿರುವುದು ಸಾಕಾಗದಾದ್ದರಿಂದ ಯೋಗ್ಯ ಕಾಲ ಬರುವಾಗ ಇನ್ನೂ ಹೆಚ್ಚಿನ ಪರೀಕ್ಷೆಗಳು ನಡೆಯುವವು' ಎಂದಾದರೆ, ಈಗಿನ ಸಮಿತಿಯು ತನ್ನ ಕೆಲಸವನ್ನು ಸರಿಯಾಗಿ ಮಾಡಿಲ್ಲವೆಂದರ್ಥವೆ? ಆ ಪರಿಶೀಲನಾ ಕಾರ್ಯವನ್ನು ಪೂರ್ಣಗೊಳಿಸಲು ಅಸಮರ್ಥವಿರುವ ಸಮಿತಿಯದು ಎಂದು ಯಾರೂ ಹೇಳಲಾರರು; ಸರಕಾರದ ಅಭಿಮತ ಕೂಡಾ ಅದಲ್ಲ. ಅಂದಮೇಲೆ ಇನ್ನಾವ ವಿಭಾಗದಲ್ಲಿ ಎಂತಹ ಪರೀಕ್ಷೆ ನಡೆಯಬೇಕೆಂದಿದ್ದರೂ, ಅದೆಲ್ಲವನ್ನೂ ಈ ಸಮಿತಿಯಿಂದಲೇ ಮಾಡಿಸಬಹುದಿದ್ದಿತು; ಈ ಮೂಲಕ ಸ್ಥಳ ಚುನಾವಣಾ ಕಾರ್ಯವನ್ನು ಪೂರೈಸಿಕೊಂಡು, ಬಂದರ ಸ್ಥಳವನ್ನು ಸ್ಪಷ್ಟವಾಗಿ ಗೊತ್ತು ಮಾಡಿಟ್ಟುಕೊಂಡು, ಮುಂದೆ ಯೋಗ್ಯ ಸಂದರ್ಭ ಒದಗಿದಾಗಲೇ ಕಾರ್ಯಕ್ಕೆ ಕೈಹಾಕ ಬಹುದಿದ್ದಿತು. ಹಾಗೇನೂ ಮಾಡದೆ, ಮಂಗಳೂರು ಬಂದರದ ದೋಷ ನಿವಾರಣಾ ಪ್ರಯೋಗವನ್ನು ಮಾಡಿ ಸಂಪೂರ್ಣ ಯಶಸ್ಸನ್ನು ನಿರ್ದೇಶಿಸಿದೆನ್ನುವ ಘೋಷಣೆ ಪ್ರತಿಬಿಂಬಿಸುತ್ತಿರುವ ಸರಕಾರದ ಪಕ್ಷಪಾತದ ಆರೋಪ ಹಟ್ಟಿದುದು ಅಸ್ವಾಭಾವಿಕವಲ್ಲ. ಉಮೇದ್ವಾರಗಳನ್ನು ಏಕಪ್ರಕಾರ ಪರೀಕ್ಷಿಸಿ, ಅವರಲ್ಲಿ ಕಂಡುಬಂದ ಯೋಗ್ಯತೆಗಳ ಮೇಲಿಂದ 'ಪಾಸು-ನಾಪಾಸು' ಮಾಡುವ ಬದಲಿಗೆ, ಓರ್ವನ ಮಟ್ಟಿಗೆ ಅಂತಹ ಯೋಗ್ಯತೆಯನ್ನು ತುಂಬಿಸಿ ಕೊಡಲು ತಾನೇ ಹವಣಿಸಿ, ಸ್ವತಃ ಉತ್ತೀರ್ಣತಾ ಯೋಗ್ಯತೆ ಪ್ರದರ್ಶಿಸಿದ ಮತ್ತೊಬ್ಬನನ್ನು ಆತನಕವೂ ತಡೆದಿಡುವ ಪಕ್ಷಪಾತಿ ಪರೀಕ್ಷಕನ ವರ್ತನೆಯಂತೆಯೇ ಭಾರತ ಸರಕಾರದ ವರ್ತನೆಯೂ ಪ್ರಶ್ನಿಸಲ್ಪಡುವಂತಹದಿದೆ. ಸರಕಾರೀ ಘೋಷಣೆಯ ಕುರಿತು ಜನತೆಯಲ್ಲಿ ಇಂತಹ ಭಾವನೆ ಹುಟ್ಟಲು ಅವಕಾಶವೊದಗಿಸಿಕೊಡುವುದು ಸದ್ಯ ಸ್ಥಿತಿಯಲ್ಲಿ ತೀರಾ ಶೋಚನೀಯವೆಂದು ಹೇಳದಿರಲಾರೆವು. ಬಂದರ ರಚನೆಯನ್ನು ಸುಗಮಗೊಳಿಸಬಹುದೆಂಬ ಆಶೆಗೆಡೆಯಿರುವ ಯಾವ ವಿಧಾನವನ್ನು ಬಾಕಿ ಬಿಡಬಾರದೆಂಬುದಕ್ಕಾಗಿಯೇ ಮಂಗಳೂರನ್ನು ಸುಧಾರಿಸಿ ನೋಡುವ ವರೆಗೆ, ಶಿಫಾರಸಾಗಿರುವ ಮಲ್ಪೆಯನ್ನು ಅವಮಾನಿಸಿಡುವ ಸಂಕಲ್ಪ ಸರಕಾರದ್ದಿರಬಹುದು. ಆದರೆ ಬಂದರ ಸಂಬಂಧದ ಪರಿಶೀಲನಾ ಸಮಿತಿಯು ಅಂತಹ ಸಂಭವವನ್ನು ಊಹಿಸದೇನೇ ತೀರ್ಮಾನಕ್ಕೆ ಬಂದಿದ್ದಿತೆ? ಮಂಗಳೂರು ಬಂದರದ ಯೋಗ್ಯತಾ ಹೆಚ್ಚಳದ ಪ್ರಯೋಗ ಮಾಡಲಿರುವಂತೆಯೇ ಮಲ್ಪೆ ಬಂದರದ ಕುರಿತು ಏನೂ ಮಾಡಿ ನೋಡಲಿಕ್ಕಿಲ್ಲವೇ? ಮಲ್ಪೆಯ ಸಂಬಂಧದ ಭಾರತ ಸರಕಾರದ ನಿರ್ಧಾರದ ಕುರಿತು ಈ ಭಾಗದ ಜನತೆಯಲ್ಲಿ ಇಂತಹ ಯೋಚನಾಂದೋಲನಗಳೆದ್ದು, ಅತೃಪ್ತಿ, ಅನುಮಾನಗಳುಂಟಾಗಿವೆ ಎಂಬುದನ್ನು ಇಲ್ಲಿ ಸ್ಪಷ್ಟವಾಗಿ ಹೇಳಬೇಕಾಗಿದೆ. ಈ ಸಂಬಂಧದ ಮದ್ರಾಸ್ ಸರಕಾರದ ಧೋರಣೆಯನ್ನೂ ಮರೆಯಲಾಗುವದಿಲ್ಲ. ತನ್ನ ಕ್ಷೇತ್ರದೊಳಗಿನ, ಮಂಗಳೂರು, ಮಲ್ಪೆ ಬಂದರಗಳೆರಡನ್ನೂ ಸಮಾನ ದೃಷ್ಟಿಯಿಂದ ಕಂಡು, ಯೋಗ್ಯತೆಯ ಆಧಾರದಿಂದ ಯಾವುದು ತಜ್ಞ ಸಮಿತಿಯ ಶಿಫಾರಸು ಹೊಂದುವುದೋ ಅದನ್ನೇ ಆಧರಿಸುವುದು ಪ್ರಾಂತಿಕ ಸರಕಾರದ ಕರ್ತವ್ಯವಿದ್ದಿತಾದರೂ ಮದ್ರಾಸ್ ಸರಕಾರವು ಈ ಮೊದಲೇ ಮಂಗಳೂರನ್ನು ಸೂಚಿಸಿದ್ದಿತೆಂದು ತಿಳಿದು ಬಂದಿದೆ. ಈಗಿನ ಪ್ರಕಟಣೆಯಂತೆ ಯೋಗ್ಯತಾಸ್ಥಾಪನೆಯಾದ ಮಲ್ಪೆಯನ್ನು ಮುಂದಕ್ಕಾದರೂ ಹಿಂದೆ ಹಾಕುವಂತೆ, ಮಂಗಳೂರನ್ನು ಸಜ್ಜುಗೊಳಿಸುವ ಪ್ರಯತ್ನವು ಇನ್ನು ಕೂಡಾ ಮದ್ರಾಸ್ ಸರಕಾರದಿಂದ ಆಗಲಿದೆ. ಇದು ನ್ಯಾಯವೆ? ಮದ್ರಾಸ್ ಸರಕಾರದ ಓರ್ವ ಮಂತ್ರಿಯಾಗಿರುವ ದಕ್ಷಿಣಕನ್ನಡದ ಪ್ರತಿನಿಧಿಯು, ಮಲ್ಪೆಯಿರುವ ಕುಂದಾಪುರ ಡಿವಿಜನಿನಿಂದ ಆರಿಸಲ್ಪಟ್ಟವರಾದರೂ ಅವರು ಮಂಗಳೂರವರಾದ್ದರಿಂದ, ತನ್ನೂರ ವ್ಯಾಮೋಹಕ್ಕೀಡಾಗಿ ತನ್ನ ಮತದಾರ ಕ್ಷೇತ್ರವನ್ನು ಮರೆತೇ ಬಿಟ್ಟರು, ಎಂಬ ಸಂತಾಪವು ಈ ಭಾಗದ ಜನತೆಯಲ್ಲಿ ಎದ್ದಿದೆ—ಎಂಬುದನ್ನೀ ಸಂದರ್ಭದಲ್ಲಿ ತಿಳಿಸದಿದ್ದರೆ ನಾವು ಕ

ತರ್ವ್ಯಚ್ಯುತರಾದಂತಾಗುವದು. ಸ್ಥ
ಳೀಯ ಸ್ವಾರ್ಥ ಅಥವಾ ಮೇಲಾಟ
ತೀರ್ಮಾನದ ವಾದಿಸುವ ಅಂಶವಾಗಲೀ
ವಶ್ಯಕತೆಯಾಗಲೀ ಇಲ್ಲಲ್ಲ. ಯಾವು
ಸ್ಪಷ್ಟವಾಗದೆ, ಎಲ್ಲವೂ ಬಾಕಿಯಿರುವ
ಕಲ್ಪನೆಯ ತೀರ್ಮಾನಗಳನ್ನು ಕಟ್ಟಿ
ಕ್ಕುವದೂ ಸರಿಯಲ್ಲ. ಆದರೆ ಸ್ಪಷ್ಟ ವಿ
ನದಿಂದ ಒಂದು ನ್ಯಾಯ ಪಾಲನೆಯಾ
ತ್ತದೆಯೇ ಎಂಬುದಿಷ್ಟೇ ಇಲ್ಲಿಯ ಪ್ರ
ಸಂಗತಿ ಈ ತನಕ ಕೈ ಮೀರಿ ಹೋ
ಗಿಲ್ಲ. ಆದ್ದರಿಂದ ಯಾವ ಕಾರಣಕ್ಕಾ
ಯಾದರೂ ಪಕ್ಷಪಾತ ನಡೆಯಿತೆಂಬ
ದೇಹವು ಜನತೆಯಲ್ಲಿ ಹುಟ್ಟದ ರೀತಿಯ
ಬಂದರ ರಚನಾ ಸಂಬಂಧದ ನಿಷ್ಕರ್ಷೆ
ನ್ಯಾಯವನ್ನೇ ಇನ್ನಾದರೂ ಸರಕಾರ
ಎತ್ತಿ ಹಿಡಿಯುವದೆಂದು ನಂಬುತ್ತೇವೆ.

## ಜಾಗತಿಕ

ಲೋಕದ ರಾಜಕೀಯ ಸ್ಥಿತಿ
ಳು, ಯಥಾಪ್ರಕಾರ ಎಡೆಯಿ
ಶಾಂತಿಯೊಸರನ್ನಷ್ಟೇ ಜಿನುಗಿಸ
ಹೆಚ್ಚಿನಂಶ ಘರ್ಷಣೆಗಳ ಗುಡ್ಡಗ
ಪ್ರದರ್ಶಿಸುತ್ತಾ ಸಾಗಿವೆ. ಕಳೆದ
ವಾರದ ಘಟನೆಗಳ ನೋಟವು, ಆ
ಲಿನ ಅವಧಿಯ ದೃಶ್ಯಕ್ಕಿಂತ ತುಸ
ಚ್ಚು ಮಧುರವಾಗಿ ಕಾಣುತ್ತಿದೆ.

### ದೇಶ-ದೇಶಗಳೊಳಗೆ

ರಶ್ಯಾ ಮತ್ತು ಅಮೇರಿಕಗಳೊ
ಅಥವಾ ಪೂರ್ವ--ಪಶ್ಚಿಮಗಳೊ
ವಿವಾದಗಳ ತೀರ್ಮಾನಕ್ಕಾಗಿ ಸಂಯ
ರಾಷ್ಟ್ರ ಸಂಘದ ಮುಖ್ಯ ಕಾರ್ಯ
ಜನರಲ್ ಟ್ರಿಗ್ರೀಲೀಯವರು ಭ
ಕೌನ್ಸಿಲಿನ ವಿಶೇಷ ಸಭೆ ಕರೆ
ಸೂಚನೆಯಿತ್ತಿದ್ದಾರೆ. ಈ ಸೂ
ಅಮೇರಿಕ ಮತ್ತು ರಶ್ಯವೆರಡೂ ಸ
ಸಿವೆ, ಎಂದು ತಿಳಿದುಬಂದಿದೆ.
ಕೌನ್ಸಿಲ್ ಸಭೆಯನ್ನನುಸರಿಸಿ, ವಿಜ
ಗಳ ಸಮ್ಮೇಳನವೊಂದು ನೆರೆಯಬ
ಆಟಂ ಬೋಂಬು ಮತ್ತಿತರ ಸಾಮೂ
ವಿಧ್ವಂಸಕೋಪಕರಣಗಳ ಲೋಕ
ಯಂತ್ರಣದ ಕುರಿತೆದ್ದಿರುವ ಬಿಕ್ಕಟ್ಟ
ಬಿಡಿಸಬೇಕು, ಎಂದು ಸಂಯುಕ್ತ ರಾ
ಸಂಘದ ಕಳೆದ ಮಹಾಧಿವೇಶನದ ಅ
ಜನರಲ್ ರೋಮುಲೋ ವೈಜ್ಞಾ
ರನ್ನು ಕೇಳಿಕೊಂಡಿದ್ದಾರೆ.

ವಿದೇಶಗಳಿಗೆ ಸಹಾಯವಾಗಿ, ಇನ
ದು ವರುಷ 'ಮಾರ್ಶಲ್ ಯೋಜನೆ'
ನ್ನು ಮುಂದೊತ್ತುವುದಕ್ಕಾಗಿ 3,
ಮಿಲಿಯ ಡೋಲರುಗಳ ಗ್ರಾಂಟು
ಜೂರಾತಿಯ ಸೂಚನೆಯನ್ನು ಅ
ಟ್ರುಮೇನರು ಅಮೇರಿಕದ ಕಾಂಗ್ರ
ಮುಂದಿಟ್ಟಿದ್ದಾರೆ. "ಈ ಪೂರ್ಣ
ತ್ತವನ್ನು ಮಂಜೂರು ಮಾಡುವ ಮ
ಕ ಶಾಂತಿ ಡಂಗುರ ಬಾರಿಸಿರಿ" ಎ
ಟ್ರುಮೇನರು ಕೇಳಿಕೊಂಡಿದ
ಆದರೆ ಇದಕ್ಕೆ ಕಡಿತ ಪ
ಚನೆಗಳು ಬಂದು ಕಾಂಗ್ರೆ
ನಲ್ಲಿ ತೀವ್ರ ಚರ್ಚೆಗಳಾಗಬಹುದೆಂದು
ರೀಕ್ಷಿಸಲಾಗಿದೆ

# ಭಾರತೀಯ ಸ್ಥಿತಿಗತಿ

ಚೈನಾದಲ್ಲಿ ರಾಷ್ಟ್ರೀಯ ಸೇನೆಯ ಗೊರಿಲ್ಲಾ ದಳಗಳು ಪೀಡೆಕೊಡುತ್ತಿರುವ ವಾರ್ತೆಗಳಿವೆಯಾದರೂ ಕೆಂಪು ಸೈನಿಕರು ಅವುಗಳನ್ನು ನಿರ್ಮೂಲಿಸುವ ಸಾಹಸ ಪ್ರದರ್ಶಿಸುತ್ತಿದ್ದಾರೆ. ಅದೆಲ್ಲಿಯ ಹೈದ್ರಾವದ ದುಸ್ಥಿತಿಯೆಂದರೆ ಈಗ ವ್ಯಾಪಿಸಿರುವ ಅತಿ ಭೀಕರ ಬರಗಾಲ. ಚೈನದ ಅಹಾರ ದುರ್ಭಿಕ್ಷೆಯು ಹೆಚ್ಚು ಕಡೆಗಳಿಗೆ ವ್ಯಾಪಿಸುತ್ತಾ ಅಧಿಕಾಧಿಕ ಜೀವಗಳನ್ನು ಬಲಿ ಪಡೆಯುತ್ತಿರುವ ವಾರ್ತೆಯಿದೆ. ಬರುವ ಜೂನು ತಿಂಗಳ ಬೆಳೆ ಕಟಾವಿನ ವರೆಗೆ ಅಹಾರ ಬರಗಾಲದಿಂದ 15 ಕೋಟಿಯಿಂದ 20 ಕೋಟಿ ಜನರ ವರೆಗೂ ಚೈನದಲ್ಲಿ ಸಾಯಬಹುದೆಂಬ ದಾರುಣ ವಾರ್ತೆ ಬಂದಿದೆ.

ಇಂಡೋಚೈನಾದ ಬಾವೋ ದಾಯೀ ಸರಕಾರದ ವಿರುದ್ಧವಾಗಿ ಕಮ್ಯೂನಿಸ್ಟ್ ಸ್ವರೂಪದ ಸಂಘಟಿತ ಬಂಡಾಯವೆದ್ದಿದ್ದು ಅದೀಗ ಪ್ರಬಲಿಸಿದೆ; ಕಲಕಾಲಕ್ಕೆ ಮೊದಲು ಚೈನದ ಚಿಯಾಂಗ್ ಸರಕಾರದ ವಿರುದ್ಧ ಕಮ್ಯೂನಿಸ್ಟ್ ಹೋರಾಟವಿದ್ದ ರೂಪಕ್ಕೇನೇ ಈ ಇಂಡೋಚೈನಾ ಘರ್ಷಣೆಯೇರುವುದಲ್ಲಿದೆ. ಅಲ್ಲಿಯ ಫ್ರೆಂಚ್ ಸೇನೆಗಳಿಗೆ ಸಹಾಯವಾಗಿ ಅಮೇರಿಕದ ಸೇನಾ ಸಹಾಯಗಳು ಹೋಗುತ್ತಿವೆ. ಈ ಒಳ ಕಂಟಕವನ್ನು ಸಮೂಲ ನಾಶ ಮಾಡಿ ಬಿಡಲು ಫ್ರೆಂಚರು ಕೊನೆಯ ಸಾಮೂಹಿಕ ಹೊಡೆತ ಕೊಡುವ ಸಿದ್ಧತೆ ನಡೆಸುತ್ತಿದ್ದಾರೆ. ಮಲಯದ ಕಮ್ಯೂನಿಸ್ಟ್ ಬಂಡಾಯವನ್ನು ನಾಶಮಾಡುವದಕ್ಕೂ ಇದೇ ರೀತಿ ಅಮೇರಿಕದ ಸಹಾಯ ಹೋಗಲಿದೆ, ಎಂದು ಪ್ರಕಟವಾಗಿದೆ.

ರಶ್ಯದೊಡನೆ ವೈಶಮ್ಯ ಕಟ್ಟಿಕೊಂಡಿರುವ ಮಾರ್ಶಲ್ ಟಿಟೋನ ಯುಗೊಸ್ಲೇವಿಯದಲ್ಲಿ ಮಾರ್ಚಿ ತಾ. 26ರಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಿತು. ಟಿಟೋನ ಪಕ್ಷಕ್ಕೆ ವಿರೋಧಪಕ್ಷವಿರಲಿಲ್ಲ ಅದರೂ ನಡೆದ ಜನಮತ ಸಂಗ್ರಹದಲ್ಲಿ ಟಿಟೋ ಸರಕಾರಕ್ಕೆ ಅತಿ ಹೆಚ್ಚಿನ ಮತ ದೊರಕಿತು, ರಶ್ಯದ ಸಂಬಂಧ ವಿಚ್ಛೇದನಕ್ಕೆ ಯುಗೋಸ್ಲೇವಿಯ ಜನತೆಯ ಅಧಿಕೃತ ಅನುಮೋದನೆ ದೊರೆತಂತಾಗಿದೆ.

ಜರ್ಮನಿಯ ರಾಜ್ಯಘಟನೆ ತಯಾರಿಸಿಕೊಳ್ಳುವ ಒಂದು ಘಟನಾ ಸಮಿತಿಯ ಚುನಾವಣೆಗಾಗಿ ಅಖಿಲ ಜರ್ಮನಿಯಲ್ಲಿ ಚುನಾವಣೆಗಳನ್ನು ನಡೆಸಬೇಕೆಂದು ಪಶ್ಚಿಮ ಜರ್ಮನಿಯ ಸರಕಾರವು ರಶ್ಯಾ, ಅಮೇರಿಕ, ಬ್ರಿಟನ್, ಫ್ರಾನ್ಸ್ ಸರಕಾರಗಳನ್ನು ವಿಜ್ಞಾಪಿಸಿಕೊಂಡಿದೆ.

ಬರ್ಮಾ ಸರಕಾರಕ್ಕೆ ಎರಡು ವರುಷಾವಧಿಗೆ ಒಟ್ಟು 6 ಮಿಲಿಯ ಪೌಂಡುಗಳ ಸಾಲವನ್ನು ಬ್ರಿಟನ್, ಭಾರತ, ಪಾಕಿಸ್ತಾನ್, ಆಸ್ಟ್ರೇಲಿಯ, ಸಿಲೋನ್ ರಾಷ್ಟ್ರಗಳು ಕೊಡಲಿವೆಯೆಂದು ಪ್ರಕಟವಾಗಿದೆ. ಆ ಪೈಕಿ ಬ್ರಿಟನು 3,750,000 ಪೌಂಡುಗಳನ್ನೂ ಭಾರತವು 1,000,000 ಪೌಂಡುಗಳನ್ನೂ ಕೊಡಲಿವೆ. ಪಾಕಿಸ್ತಾನ್, ಆಸ್ಟ್ರೇಲಿಯಗಳು ಪ್ರತಿಯೊಂದು 500,000 ಪೌಂಡುಗಳಂತೆ ಮತ್ತು ಸಿಲೋನು 250,000 ಪೌಂಡುಗಳನ್ನು ಕೊಡುವವು.

## ಭಾರತ-ಪಾಕಿಸ್ತಾನ

ಕಳೆದ ವಾರ ಪಾಕಿಸ್ತಾನ್ ಪ್ರಧಾನ ಮಂತ್ರಿ ಮಿ. ಲಿಯಾಕತ್ ಅಲೀಖಾನರು ಪೂರ್ವ ಬಂಗಾಳದ ಗಲಭೆ ಪೀಡಿತ ನಗರಗಳಿಗೆ ಭೇಟಿ ಕೊಟ್ಟಿದ್ದರು. ತನ್ನ ಪೂರ್ವ ಬಂಗಾಳದಲ್ಲಿ ಅಲ್ಪ ಸಂಖ್ಯಾಕ ಸಮಾಜಗಳವರಿಗಾಗಿರುವ ಅನ್ಯಾಯಗಳು ಲಜ್ಜಾಪಹವೆಂದೂ, ಸ್ವಹಿತ ದೃಷ್ಟಿಯಿಂದಲೇ ಪಾಕಿಸ್ತಾನಿಗಳು ಅಲ್ಪ ಸಂಖ್ಯಾಕರ ರಕ್ಷಣೆ ಮಾಡಬೇಕಾಗಿದೆಯೆಂದೂ ಅಲ್ಲಿಯವರಿಗೆ ಬೋಧಿಸಿದ್ದರು. ಭಾರತ ಮತ್ತು ಪಾಕಿಸ್ತಾನ್ ಸರಕಾರಗಳೆರಡೂ ತಂತಮ್ಮಲ್ಲಿಯ ಅಲ್ಪ ಸಂಖ್ಯಾಕ ಸಮಾಜಗಳವರಿಗೆ ಪೂರ್ಣ ರಕ್ಷಣೆಯೀಯುವಂತೆ ಮಾಡುವ ವ್ಯವಸ್ಥೆಗಾಗಿ ಪರಸ್ಪರ ವಿಚಾರ ವಿನಿಮಯಗಳು ನಡೆದಿವೆ.

ಪೂರ್ವ ಬಂಗಾಳದಿಂದೋಡಿ ಬಂದಿರುವ ಸಹಸ್ರಾವಧಿ ನಿರಾಶ್ರಿತರಿಗೆ ಉದ್ಯೋಗ, ನೆಲೆ, ಮತ್ತು ಜೀವನ ವ್ಯವಸ್ಥೆಗಳನ್ನು ಮಾಡಿಕೊಡುವ ಪ್ರಯತ್ನದಲ್ಲೀಗ ಭಾರತ ಸರಕಾರವು ನಿರತವಾಗಿದೆ. ವಿಭಜನೋತ್ತರ ಕಾಲದ ಜಾತೀಯ ಗೊಂದಲ ಪೀಡಿತ ನಿರಾಶ್ರಿತರ ಪುನರ್ವ್ಯವಸ್ಥೆಗಿದ್ದಂತಹ ಅಡಚಣೆಗಳಾವವೂ ಈ ಬಾರಿಯಿರದೆ ಕಾರ್ಯವು ತೃಪ್ತಿಕರವಾಗಿ ನಡೆದಿದೆ.

ಕಾಶ್ಮೀರ ವಿವಾದದ ಕುರಿತು, ಓರ್ವ ಮಧ್ಯಸ್ಥಗಾರನ ನೇಮಕಕ್ಕೀಗ ಭಾರತ, ಪಾಕಿಸ್ತಾನ ಎರಡೂ ಒಪ್ಪಿರುವುದರಿಂದ ಅಂತಹ ಮಧ್ಯಸ್ಥಗಾರನನ್ನು ಕಂಡು ಹಿಡಿಯುವ ಪ್ರಯತ್ನವೀಗ ಭದ್ರತಾ ಕೌನ್ಸಿಲ್ ವಲಯ ಲೇಕ್‌ಸಕ್ಸೆಸ್‌ನಲ್ಲಿ ನಡೆದಿದೆ.

ಭಾರತ ಮತ್ತು ಪಾಕಿಸ್ತಾನಗಳೊಳಗಿನ ವ್ಯಾಪಾರ ಬಿಕ್ಕಟ್ಟು, ನಾರು, ನೀರ ಸಂಬಂಧದ ವಿವಾದ, ಮತ್ತಿತರ ಪ್ರಮುಖ್ಯ ಜಗಳಗಳ ತೀರ್ಮಾನದ ಆಸಕ್ತಿಯು ಈಗ ಪಾಕಿಸ್ತಾನದಲ್ಲೂ ಮೊಳೆತಂತಿದೆ. ಇವೆಲ್ಲಾ ವಿವಾದಗಳ ಕುರಿತು ರಾಜೀ ಮಾತುಕತೆಗಳನ್ನು ನಡೆಸುವ ವ್ಯವಸ್ಥೆಗಳಾಗುತ್ತಿವೆ.

## ಭಾರತದಲ್ಲಿ—

ಭಾರತದ ಕಡೆಗೆ ಅಮೇರಿಕದ ಧೋರಣೆ ಯೇನಾಗಿರಬೇಕೆಂಬುದನ್ನು 'ಜಾಗತಿಕ ವಿದ್ಯಮಾನಗಳ ಭಾರತ ಕೌನ್ಸಿಲ್'ನ ಮುಂದೆ ತಾ. 27ರಲ್ಲಿತ್ತ ಭಾಷಣವೊಂದರಲ್ಲಿ, ಭಾರತದಲ್ಲಿರುವ ಅಮೇರಿಕನ್ ರಾಯಭಾರಿ ಮಿ. ಲೋಯಿ ಹೆಂಡರ್ಸನ್ ವಿವರಿಸಿದ್ದಾರೆ. ಭಾರತದೊಂದಿಗಿನ ಮೈತ್ರೀ ಸಂಬಂಧವನ್ನು ಅಮೇರಿಕವು ನೆನೆಗುದಿಗೆ ಹಾಕಲಾರದೆಂದೂ ಏಶ್ಯಾದ ರಾಷ್ಟ್ರಗಳು ತಮ್ಮ ರಾಜಕೀಯ ಸ್ವಾತಂತ್ರ್ಯ ಮತ್ತು ಭೂಹಕ್ಕುಗಳನ್ನು ಉಳಿಸಿಕೊಂಡು ಅಭಿವೃದ್ಧಿ ಹೊಂದಬೇಕೆಂಬುದೇ ಅಮೇರಿಕದ ಯಥಾರ್ಥ ಬಯಕೆಯೆಂದೂ ಸ್ಪಷ್ಟಪಡಿಸಿದ್ದಾರೆ.

ಭಾರತ ಪಾರ್ಲಿಮೆಂಟಿನಲ್ಲಿ ಆಯವ್ಯಯ ಸಂಬಂಧದ ಚರ್ಚೆಗಳಾಗಿ 'ಅರ್ಥಿಕ ಮಸೂದೆ'ಯನ್ನು ಪರಿಶೀಲನೆಗಾಗಿ ಸಿಲೆಕ್ಟ್ ಕಮಿಟಿಗೊಪ್ಪಿಸಲಾಗಿದೆ. ಆದಾಯತೆರಿಗೆ ವಿನಾಯತಿ ಮತ್ತಿತರ ವಿಭಾಗಗಳ ಮಟ್ಟಿಗೆ ಈ ಕಮಿಟಿಯು ಅರ್ಥಿಕ ಮಸೂದೆಯನ್ನು ಕೆಲಮಟ್ಟಿಗೆ ಬದಲಾಯಿಸಿದೆ ಎಂದು ತಿಳಿದುಬಂದಿದೆ. 'ಒಂದು ರೀತಿಯ ಕ್ರಿಮಿಗಳು ಅಥವಾ ಪ್ಲೇಗುಗಳಾಗಿರುವ ಕಳ್ಳಸಂತೇವಾಲರಿಗೆ ಮತ್ತು ತೆರಿಗೆ ವಂಚಕರಿಗೆ ಮರಣದಂಡನೆ ಅಥವಾ ಜೀವಾವಧಿ ಸಜೆ ವಿಧಿಸತಕ್ಕದ್ದು' ಎಂಬರ್ಥದ ಸೂಚನೆಯನ್ನು ಪ್ರೊ. ಕೆ. ಟಿ. ಶಾಹರು ಭಾರತ ಪಾರ್ಲಿಮೆಂಟಿನಲ್ಲಿ ತಂದಿದ್ದು, ತಾ. 25 ಮತ್ತು 27ರಲ್ಲಿ ಈ ಕುರಿತು ಸುದೀರ್ಘ ಚರ್ಚೆ ನಡೆದು ಕೊನೆಗೆ ಶಾಹರವರು ತಮ್ಮ ಸೂಚನೆಯನ್ನು ಹಿಂದೆಗೆದುಕೊಂಡರು.

ಸಂಯುಕ್ತ ಪ್ರಾಂತೀಕ ಸರಕಾರದ ಮಾಜೀ ಭೂಕರಣೆಯ ಸುಧಾರಣೆಗಾಗಿ ಪ್ರಾಣಾವಧಿ ಉಪವಾಸ ಹಿಡಿದಿದ್ದ ಶ್ರೀ ಶಿಬ್ಬನ್‌ಲಾಲ್ ಸಕ್ಸೇನರು ತಮ್ಮ ಬೇಡಿಕೆಗಳು ಮಾನ್ಯವಾದುವೆಂದು 30 ದಿನಗಳ ಉಪವಾಸಾನಂತರ ಕಳೆದ ವಾರ ಆಹಾರ ಸ್ವೀಕರಿಸಿದರು.

ಇದೇ ಎಪ್ರಿಲ್ ತಾ. 1ರಿಂದ ಭಾರತದ ಪೋಸ್ಟಾಫೀಸುಗಳೆಲ್ಲವೂ ಆದಿತ್ಯವಾರ ಪೂರ್ಣ ರಜೆ ಮಾಡಬೇಕೆಂದು ಸರಕಾರದ ಅಜ್ಞೆಯಾಗಿದೆ.

ಬ್ರಿಟನಿನ ಕೂಲಿಗಾರ ಪಕ್ಷದ ಅಧ್ಯಕ್ಷನಾಗಿದ್ದ, ಲೋಕ ಪ್ರಸಿದ್ಧ ಸಮತಾವಾದಿಯಾಗಿದ್ದ ಪ್ರೊ. ಲಾಸ್ಕಿಯವರು ಕಳೆದ ವಾರ ಇಂಗ್ಲೆಂಡಿನಲ್ಲಿ ನಿಧನಗೊಂಡರು. ಇವರು ಆದಿಭಾಗದಿಂದೀ ವರೆಗೂ ಭಾರತ ಸ್ವಾತಂತ್ರ್ಯವನ್ನೆತ್ತಿ ಹಿಡಿದು ಸ್ಪಷ್ಟವಾಗಿ ವಾದಿಸುತ್ತಾ ಬಂದಿದ್ದ ಬ್ರಿಟಿಷ್ ಪ್ರಮುಖರಲ್ಲಿ ಅಗ್ರಗಣ್ಯರು.

ಹೂಗ್ಲಿ ಜಿಲ್ಲೆಯಲ್ಲಿ ಕಲ್ಕತ್ತದೊತ್ತಿನ ವಲಯಗಳಲ್ಲಿ ಗಲಭೆಗಳಾಗುತ್ತಿರುವ ವಾರ್ತೆಯಿದೆ. 'ಬಂಗಾಳ ಚೇಂಬರ್ ಓಫ್ ಕಾಮರ್ಸ್'ನ ಅಧ್ಯಕ್ಷರೂ 'ಮೆಸರ್ಸ್ ಏಂಡ್ರ್ಯು ಯುಲೆ ಏಂಡ್ ಕಂಪನಿ'ಯ ಚೆಯರ್‌ಮೇನರೂ ಆದ ಮಿ. ಪಿ. ಎಲ್. ಕೇಮರೂನ್‌ರವರು ಇದೇ ತಾ. 26ರಲ್ಲಿ ಕಲ್ಕತ್ತಕ್ಕೆ 24 ಮೈಲು ದೂರದ ಬಾಂಡೆಲ್ ಎಂಬಲ್ಲಿ ತಿವಿಯಲ್ಪಟ್ಟು ಮಡಿದರು. ತಮ್ಮ ಕಂಪೆನಿಯ ನಾರು ಗಿರಣಿಗಳನ್ನು ಸಂದರ್ಶಿಸುವುದಕ್ಕಾಗಿ ಈ ಆಂಗ್ಲ ಮಹನೀಯರು ಕಾರಿನಲ್ಲಿ ಆ ಕಡೆಗೆ ಹೊರಟಿದ್ದರು; ಅಲ್ಲಿ ರೈಲ್ವೇ ಸ್ಟೇಶನ್ ಬಳಿ ಕೂಡಿದ್ದ ಗುಂಪು ಇವರ ಮುಸ್ಲಿಂ ಡ್ರೈವರನ ಕೊಲೆಗೆ ಯತ್ನಿಸಿದಾಗ ಇವರು ತಡೆದುದರಿಂದ ಇವರೂ ಆ ಡ್ರೈವರನೂ ತಿವಿಯಲ್ಪಟ್ಟು ಮಡಿದರೆಂದು ತಿಳಿದುಬರುತ್ತದೆ.

ಕಟಪಾಡಿ: ಸಜ್ಜನರಿದ್ದು ಸರ್ವಮಾನ್ಯರಾಗಿದ್ದ ಕಟಪಾಡಿ ಶ್ರೀ ಜೋಗಪ್ಪ ಶ್ಯಾನುಭೋಗರು ತಮ್ಮ 79ನೇ ವರ್ಷ ವಯಸ್ಸಿನಲ್ಲಿ ಇದೇ ತಾ. 28ನೇ ರಾಮನವಮಿಯಂದು ಪಂಚತ್ವವನ್ನೈದಿದರು.

## ಪ್ರಕಟಣೆ

ಕಾರ್ಕಳ ತಾಲೂಕು ಪಳ್ಳಿಗ್ರಾಮದ ಹೊಸಮನೆ ಸುಬ್ರಾಯಚಾರಿಯರ ಮಗ ರಾಘವೇಂದ್ರಾಚಾರ್ಯನಾದ ನಾನು ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವದೇನೆಂದ್ರೆ:-

ನನ್ನ ತಂದೆ ಸುಬ್ರಾಯಚಾರಿಯರೀಗೆ ಸುಮಾರು 6 ತಿಂಗಳ ಲಾಗಾಯ್ತು ಚಿತ್ತಕಾಮಲಿಕ್ಯಾಲಿಯಿದ್ದದ್ದು ಈಗ ವಿಶೇಷವಾಗಿದ್ದು ಬುದ್ಧಿ ಸ್ವಾಧೀನವಿಲ್ಲದೇ ಕಾಯಂ ಮನೆಯಲ್ಲಿ ವಾಸ್ತವಿಸಿಯಿರದೆ ಯಿಷ್ಟಬಂದ ಕಡೆಗೆ ತಿರುಗುತ್ತಾ ಯಿರುವದಲ್ಲದೆ ಸಾಲವಗೈರೆ ಮಾಡುತ್ತಿರಾಗಿ ವರ್ತಮಾನ ತಿಳಿಯುತ್ತೇನೆ. ನನ್ನ ಪಳ್ಳಿಗ್ರಾಮದ ಪಟ್ಟಾನಂಬ್ರ 81 ಮತ್ತು ನಿಂಜೂರುಗ್ರಾಮದ ಪಟ್ಟಾನಂಬ್ರ 82ರ ಆಸ್ತಿಗೆ ಈ ವರೇಗ ಸಾಲ ಯೇನೂ ಯಿರುವುದಿಲ್ಲ. ಯಿನ್ನು ಮುಂದೆ ನನ್ನ ತಂದೆಯಿಂದ ಯಾರಾದರೂ ದಿಮಾಂದನೋಟುಗಳೀ ಯಾ, ಅಡವು ದಸ್ತಾವೇಜು ಕ್ರಯ ಪತ್ರ ಇನ್ನಿತರ ಯಾವ ತರದ ಪರಿಶೀಲನ ಕೂಡಾ ಯಾರಾದರೂ ಮಾಡಿಕೊಂಡಲ್ಲಿ ಅಂಥಾ ಸಾಲವು ಸದ್ರಿ ಸ್ಥಿರ ಆಸ್ತಿಗಾಗಲೀ ವ ಚರಾಸ್ತಿಗಾಗಲೀ ನನಗಾಗಲೀ ಕೂಡಾ ಸಿಂಧು ಆಗತಕ್ಕದ್ದಲ್ಲವೆಂತ ಈ ಮೂಲಕ ತಿಳಿಯಪಡಿಸಿದ್ದೇನೆ.

**ಪಳ್ಳಿ ಸುಬ್ರಾಯಾಚಾರ್ಯರ ಮಗ ರಾಘವೇಂದ್ರಾಚಾರ್ಯ ರುಜು,**
ಪಳ್ಳಿ, ತಾರೀಕು 29-3-1950.


ಕೇಂದ್ರ ಸರಕಾರದಿಂದ ರಿಜಿಸ್ಟ್ರಿಸಲ್ಪಟ್ಟ ನಂ. 4672

**ರೂ. 24,000**

ಎಲ್ಲ ಸರಿಯಾದ 20 ಉತ್ತರಗಳಿಗೆ ಹಂಚಲಾಗುವುದು.

ರೂ. 1200/- ಎಲ್ಲ ಸರಿಯಾದ ಪ್ರತಿ ಉತ್ತರಕ್ಕೆ }
ರೂ. 100/- ಎರಡು ಸಾಲು ಸರಿ ಇರುವ ,, } ಗ್ಯಾರಂಟಿ ಇದೆ.
ರೂ. 20/- ಒಂದು ಸಾಲು ಸರಿ ಇರುವ ,, }

ಅತ್ಯಧಿಕ ಉತ್ತರ ಕಳುಹಿಸುವವರಿಗೆ ರೂ. **500** ಬಹುಮಾನದ ಗ್ಯಾರಂಟಿ ಇದೆ.

| | | | |
|---|---|---|---|
| | | | |
| | | | |
| | | | |

ಇಲ್ಲಿ ತೋರುವ ಚೌಕದಲ್ಲಿ 9ರಿಂದ 24ರ ವರೆಗಿನ ಅಂಕೆಗಳನ್ನು ಉದ್ದಕ್ಕೆ, ಅಡ್ಡಕ್ಕೆ ಅಥವಾ ಮೂಲೆಯಿಂದ ಮೂಲೆಗೆ ಕೂಡಿಸುವಾಗ ಉತ್ತರ 66 ಬರುವಂತೆ ತುಂಬಿಸಿರಿ. ಒಂದು ಅಂಕೆಯನ್ನು ಒಮ್ಮೆ ಮಾತ್ರ ಬರೆಯಬಹುದು.

ಟಪ್ಪಾಲಿಗೆ ಹಾಕುವ ಕೊನೆಯ ತಾ 10—4—1950
ಉತ್ತರ ತಾ. 17—4—1950.
ಪ್ರವೇಶ ಧನ. ಪ್ರತಿ ಉತ್ತರಕ್ಕೆ ರೂ. 1. 3 ಉತ್ತರಗಳಿಗೆ ರೂ. 2.
ಎಂಟು ಉತ್ತರಗಳಿಗೆ ರೂ. 4.

**ನಿಬಂಧನೆ:** ಮೇಲೆ ನಮೂದಿಸಿದ ದರದಲ್ಲಿ ಪ್ರವೇಶ ಧನದೊಂದಿಗೆ ಖಾಲಿ ಕಾಗದದಲ್ಲಿ ಎಷ್ಟೂ ಉತ್ತರ ಕಳುಹಬಹುದು. ಹಣವನ್ನು ಮನಿಯಾರ್ಡರ್ ಅಥವಾ ಕ್ರಾಸ್ ಮಾಡದ ಪೋಸ್ಟಲ್ ಆರ್ಡರ್ ಮೂಲಕ ದಿಲ್ಲಿಯ ಚಾಂದನಿ ಚೌಕ ಪೋಸ್ಟಾಫೀಸಿನಲ್ಲಿ ಸಿಗುವಂತೆ ಕಳುಹಿಸಬೇಕು. ರೂ. 1200 ಕನಿಷ್ಟ ಬಹುಮಾನವನ್ನು **ದೆಹಲಿಯ ಪ್ರಸಿದ್ಧ ಬೇಂಕೊಂದರಲ್ಲಿ** ಭದ್ರಿಸಿಟ್ಟಿರುತ್ತದೆ. ನಮ್ಮೊಡನೆ ಭದ್ರಿಸಲ್ಪಟ್ಟಿರುವ ಉತ್ತರಕ್ಕೆ ಸರಿ ಹೋಲುವವುಗಳು ಮಾತ್ರ ಸರಿಯಾದ ಉತ್ತರಗಳು. ಉತ್ತರದ ಫಲಿತಾಂಶ ಬೇಕಿದ್ದರೆ, ನಿಮ್ಮ ವಿಳಾಸ ಬರೆದು, ಸ್ಟಾಂಪು ಅಂಟಿಸಿದ ಲಕೋಟೆ ಕಳುಹಿಸಿರಿ. ವ್ಯವಸ್ಥಾಪಕರ ನಿರ್ಧಾರವೇ ಕೊನೆಯದು ಮತ್ತು ನ್ಯಾಯಬದ್ಧವಾದದ್ದು.

62 ಮೊತ್ತದ ಕಳೆದ ಬಾರಿಯ ಒಗಟಿನ ವಿವರ.

| | | | |
|---|---|---|---|
| 12 | 10 | 23 | 17 |
| 22 | 10 | 11 | 13 |
| 9 | 15 | 20 | 18 |
| 19 | 21 | 8 | 14 |

ನಿಮ್ಮ ಉತ್ತರ ಮತ್ತು ಪ್ರವೇಶಧನ ಇವರಿಗೆ ಕಳುಹಿಸಿರಿ.

THE ORGANIZER,
Red Fort Trading Co (4) Regd.
Katra Neel, DELHI.

### ಉಡುಪಿ

**ಉಡುಪಿ ಮುನಿಸಿಪಲ್ ಕೌನ್ಸಿಲಿನ** ಸಭೆಯು ತಾ. 25ರಲ್ಲು ಚೆಯರ್‌ಮೆನ್ ಶ್ರೀ. ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಸ್ಥಳೀಯ ಇಲೆಕ್ಟ್ರಿಕ್ ಪವರ್ ಹೌಸನ್ನು ಸರಕಾರವು ಕೊಂಡುಕೊಂಡು ಉತ್ತಮ ತರದ ವಿದ್ಯುತ್ ಜನತೆಗೆ ದೊರೆಯುವಂತಾಗಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ಶ್ರೀ ಯು. ವಾಸುದೇವ ಪ್ರಭುಗಳ ನಿರ್ಣಯವು ಪಾಸಾಯಿತು. ಮುನಿಸಿಪಲ್ ಲ್ಯಾಬ್ರರಿಗೆ ಪುಸ್ತಕಗಳನ್ನು ಕೊಂಡುಕೊಳ್ಳುವರೆ ಸರಕಾರವು ಗ್ರ್ಯಾಂಟು ಕೊಟ್ಟಷ್ಟೆ ರೂಪಾಯಿ ಒಂದು ನೂರ ಐವತ್ತು ಮಂಜೂರು ಮಾಡಲಾಯಿತು. ಚಿಟ್ಪಾಡಿ ಬೀಡಿನ ಗುಡ್ಡೆಯ ಸ್ಮಶಾನದಲ್ಲಿ ಇಲೆಕ್ಟ್ರಿಕ್ ದೀಪಗಳನ್ನು ಉರಿಸುವ ಬಗ್ಗೆ ಅರುವತ್ತು ರೂಪಾಯಿ ಸಂಕ್ಷನ್ ಮಾಡಲಾಯಿತು.

**ಶ್ರೀರಾಮೋತ್ಸವವು:** ಶೀರೂರು ಗ್ರಾಮದ ಆದಿಮಠದಲ್ಲಿ ಇದೇ ತಾ. 26 ರಿಂದ 28ರ ತನಕ ಶ್ರೀ ಶೀರೂರು ಮಠದ ಸ್ವಾಮಿಗಳವರಿಂದ ಸಂಭ್ರಮದಿಂದ ಆಚರಿಸಲಾಯಿತು. ಭಜನೆ, ಹರಿಕಥೆ, ಸಂಗೀತ, ಉತ್ಸವ ಮೊದಲಾದ ಕಾರ್ಯಕ್ರಮಗಳಿದ್ದವು. ಉಡುಪಿಯಲ್ಲಿಯು ಶ್ರೀ ಅನಂತೇಶ್ವರ ದೇವಸ್ಥಾನದಲ್ಲೂ ಬ್ರಾಹ್ಮಸಹೋದರರಿಂದ ರಾಮೋತ್ಸವವು ಆಚರಿಸಲಾಯಿತು.

ಸ್ಥಳೀಯ ಪೋಲೀಸ್ ಸ್ಟೇಶನಿನ ಕಾನ್‌ಸ್ಟೇಬಲ್ ಶ್ರೀನಿವಾಸ ಎಂಬವರು ಇದೇ ತಾ 22ರಲ್ಲು ತನ್ನ ನಿವಾಸದಲ್ಲಿ ಕುತ್ತಿಗೆಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡುದು ಆಕ್ಷೇಪವಿಷಾದವೆನಿಸುತ್ತದೆ. ಹೀಗೆ ಮಾಡಿಕೊಳ್ಳಲು ಬಲವಾದ ಕಾರಣವೇನೆಂದು ತಿಳಿಯಲಾಗುವುದಿಲ್ಲ.

---

### ಮಂಗಳೂರು

**ಸಂಗೀತ ಕಚೇರಿ:** ಕೊಲ್ಹಾಪುರದಿಂದ ಬಂದಿರುವ ಶ್ರೀ ಎಸ್. ಬಿ. ಮಾನೆ (ಖಾನ್ ಅಬ್ದುಲ್ ಕರೀಂ ಖಾನರ ಶಿಷ್ಯ) ಇವರ ತೃತೀಯ ಸಂಗೀತ ಕಚೇರಿಯು ಇದೇ ತಾ: 2-4-50ನೇ ರವಿವಾರ ಸಾಯಂಕಾಲ ಗಂಟೆ 6ಕ್ಕೆ ಮಂಗಳೂರು ಬಸವನ ಗುಡಿ ರಸ್ತೆಯಲ್ಲಿರುವ ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ ಜರಗುವುದು. ಇವರ ಸಂಗೀತ ಕಚೇರಿಗಳು ಉಡುಪಿ, ಪುತ್ತೂರು, ಕಾಸರಗೋಡುಗಳಲ್ಲೂ ಸದ್ಯವೇ ಜರಗಲಿವೆ ಎಂದು ತಿಳಿದು ಬರುತ್ತದೆ.

**ಮೂಲ್ಕಿ ಬಪ್ಪನಾಡು** 'ಶ್ರೀ ದುರ್ಗಾಪರಮೇಶ್ವರಿ' ದೇವಸ್ಥಾನ, ಮೂಲ್ಕಿ, ಇಲ್ಲಿಯ ಕಾಲಾವಧಿ ಧ್ವಜಾರೋಹಣವು ತಾ. 1-4-50ರಲ್ಲೂ ರಥೋತ್ಸವವು ತಾ. 8-4-50ರಲ್ಲೂ ಜರಗಲಿರುವುದು. ಕಳೆದ ವರ್ಷದಂತೆ ಈ ವರ್ಷ ಕೂಡಾ ಧ್ವಜಾರೋಹಣ ದಿನ ಲಾಗಾಯಿತು ರಥೋತ್ಸವದ ಮರುದಿನ ವರೆಗೆ ಆಕಾಶವಾಣಿ ಮೂಲಕ ಹಾಡು, ಮತ, ಧರ್ಮ ಬೋಧೆ ಕುರಿತಾದ ಭಾಷಣಗಳೂ ತಾ. 7, 8, 9ಕ್ಕೆ ಕೃಷಿ ಕೈಗಾರಿಕೆ, ಪಶು ಪ್ರದರ್ಶನ ಏರ್ಪಾಡೂ ಸಹ ಮಾಡಲಾಗಿದೆ.

**ಜಿಲ್ಲೆಯ ಸಿಡುಬಿನ ಪರಿಸ್ಥಿತಿ—** ದಿನಾಂಕ ೧೮-೩-೫೦ರಲ್ಲಿ ಅಂತ್ಯವಾಗುವ ವಾರದಲ್ಲಿ ಜಿಲ್ಲೆಯ ವಿವಿಧ ಆರೋಗ್ಯ ಕೇಂದ್ರಗಳಲ್ಲಿ ಸಿಡುಬಿನ ಹಾವಳಿಯು ಹೀಗಿದೆ:—ಬಂಟ್ವಾಳ—೮ ಮಂದಿಗೆ ತಗಲಿದ್ದು, ಒಂದು ಮರಣ; ಶುರುವಾದಂದಿನಿಂದ ಇಷ್ಟರವರೆಗೆ ಒಟ್ಟು ೧೪ ಮಂದಿಗೆ ತಾಗಿ, ೨ ಮರಣ; ಕುಂದಾಪುರ ಕೇಂದ್ರ—ಏನೂ ಇಲ್ಲ; ಹೊಸದುರ್ಗ—ಕಳೆದ ವಾರ ಹೊಸತಾಗಿ ಇಲ್ಲ; ಆ ಮೊದಲು ೩ ಮಂದಿಗೆ ಸುರುವಾಗಿ ೧ ಮರಣ; ಕಾರ್ಕಳ—ಕಳೆದ ವಾರ ಇಲ್ಲ; ಇಬ್ಬರಿಗೆ ಸುರುವಾಗಿ ಗುಣವಾಗಿದೆ. ಕಾಸರಗೋಡು—ಕಳೆದ ವಾರ ೬ ಮಂದಿಗೆ ಸುರುವಾಗಿತ್ತು; ಒಟ್ಟು ೧೨ ಮಂದಿಗೆ ಆಗಿ ೩ ಮರಣ; ಮಂಗಳೂರು ತಾಲೂಕು ಕೇಂದ್ರ (ಮುನಿಸಿಪಾಲಿಟಿ ಹೊರತು) ಕಳೆದ ವಾರ ಒಬ್ಬನಿಗೆ ಹೊಸದಾಗಿ ಸುರುವಾಗಿತ್ತು, ೨ ಮರಣಗಳೂ ಆಗಿದ್ದವು. ಒಟ್ಟು ೭೭ ಮಂದಿಗೆ ತಾಗಿ ೧೫ ಮರಣಗಳಾದುವು; ಪುತ್ತೂರು—ಕಳೆದ ವಾರ ಇಬ್ಬರಿಗೆ ಸುರುವಾಗಿತ್ತು. ೨ ಮರಣ ಆಗಿದ್ದುವು; ಒಟ್ಟು ೩೧ ಮಂದಿಗೆ ಆಗಿ ೯ ಮರಣಗಳು; ಉಡುಪಿ ತಾಲೂಕು (ಟೌನ್ ಬಿಟ್ಟು) ಕಳೆದ ವಾರ ಇಬ್ಬರಿಗೆ ಸುರುವಾಗಿತ್ತು; ಒಟ್ಟು ೬ ಮಂದಿಗೆ ಆಗಿ ೨ ಮರಣಗಳು.

ಸಿಡುಬು ಕಳೆದ ವಾರ ೧೯ ಮಂದಿಗೆ ಈ ಜಿಲ್ಲೆಯಲ್ಲಿ ತಗಲಿತು. ೫ ಮಂದಿ ಸತ್ತರು; ಇಷ್ಟರ ವರೆಗೆ ಒಟ್ಟು ೧೪೬ ಮಂದಿಗೆ ಆಗಿ ೩೨ ಮಂದಿ ಸತ್ತಿರುವರು. ಕಳೆದ ವಾರ ಹೊಸದಾಗಿ ೧೩ ಹಳ್ಳಿಗಳಿಗೆ ಈ ರೋಗವು ಹಬ್ಬಿದೆ ಎಂದು ಜಿಲ್ಲಾ ಆರೋಗ್ಯ ಖಾತೆಯಿಂದ ತಿಳಿದುಬಂದಿದೆ.

ಜಿಲ್ಲೆಯ ಹಳ್ಳಿಗಳಲ್ಲಿ ಮಾಲು ಹಾಕುವ ಕಾರ್ಯವು ನಡೆಯುತ್ತಿದೆ. ಒಟ್ಟು ೨೮ ಮಂದಿ (೨೦ ಕಾಯಂ ಮತ್ತು ೮ ಮಂದಿ ಹಂಗಾಮಿ) ಹೀಗೆ ಶೇಕಡಾವರು ಈ ಕೆಲಸಕ್ಕೋಸ್ಕರ ಸಜ್ಜುಗೊಳಿಸಲ್ಪಟ್ಟಿದ್ದಾರೆ.

**ಜಿಲ್ಲೆಯಲ್ಲಿ ಮಲೇರಿಯಾ ನಿವಾರಣೆ:** ಈ ಜಿಲ್ಲೆಯ ಪುತ್ತೂರು ಮತ್ತು ಕಾರ್ಕಳ ತಾಲೂಕಿನಲ್ಲಿ ಈಗ ಮದ್ರಾಸು ಸರಕಾರವು ಕೈಕೊಂಡಿರುವ ಮಲೇರಿಯಾ ನಿವಾರಣಾ ಕಾರ್ಯವನ್ನು ಪರಿಶೀಲಿಸುವ ಬಗ್ಗೆ ಮದ್ರಾಸು ಪ್ರಾಂತ್ಯದ ಆರೋಗ್ಯ ಖಾತೆಯ ಡ್ಯಾರೆಕ್ಟರ್ ಡಾ। ಆರ್. ಸುಬ್ರಹ್ಮಣ್ಯಂ ಅವರು ಮಲೇರಿಯಾ ವಿಭಾಗದ ಅಸಿಸ್ಟೆಂಟ್ ಡ್ಯಾರೆಕ್ಟರರೊಂದಿಗೆ ದಿನಾಂಕ ೨೧ರಂದು ಇಲ್ಲಿಗೆ ಬಂದಿದ್ದು, ತಾ. ೨೨, ೨೩ ಮತ್ತು ೨೪ರಲ್ಲಿ ಇಲ್ಲಿಯ ಜಿಲ್ಲಾ ಆರೋಗ್ಯಾಧಿಕಾರಿ ಡಾ। ಕೆ. ರಾಮಚಂದ್ರ ರಾಯರೊಂದಿಗೆ ಮಲೆನಾಡಿನ ಕೆಲವು ಕೇಂದ್ರಗಳನ್ನು ಸಂದರ್ಶಿಸಲು ಹೋಗಿರುತ್ತಾರೆ. ಇವರು ತಾ. ೨೫ರಂದು ಮದ್ರಾಸಿಗೆ ಹಿಂತೆರಳುವರು. ಈ ಮಲೇರಿಯಾ ನಿವಾರಣಾ ಕಾರ್ಯವನ್ನು ಇನ್ನೊಂದು ವರ್ಷಕ್ಕೆ ಮುಂದರಿಸುವಂತೆ ಸರಕಾರವು ನಿಶ್ಚಯಿಸಿದೆ. ಕಾರ್ಕಳ ತಾಲೂಕಿನ ಇನ್ನೂ ಕೆಲವು ಹಳ್ಳಿಗಳಲ್ಲಿ ಈ ವರ್ಷದಲ್ಲಿ ಈ ಯೋಜನೆಯನ್ನು ತೆಗೆದುಕೊಳ್ಳಲಾಗುತ್ತಿದೆಯೆಂದು ತಿಳಿದಿದೆ.

**ಮಾಡಿನ ಮೇಲೆ ಎಮ್ಮೆ**

ಮಂಗಳೂರಿನ ಫಳ್ನೀರಿನ ಪೋಸ್ಟಾಫೀಸಿನ ಬಳಿಯ ಒಂದು ಕಟ್ಟಿಗೆ ಡಿಪೋದ ಮಾಡಿನ ಮೇಲೆ ದಿನಾಂಕ ೧೮ರಂದು ಸಿಕ್ಕಿಬಿದ್ದಿತು. ಅಲ್ಲಿಯ ರಸ್ತೆಯು ಮನೆಗಳ ತಳಕ್ಕಿಂತ ೧೫ ಅಡಿ ಎತ್ತರವಿದ್ದು ಕಟ್ಟಿಗೆ ಡಿಪೋವಿನ ಮಾಡು ಮಾರ್ಗಕ್ಕೆ ಸರಿಯಾಗಿ ಸ್ವಲ್ಪವೇ ದೂರ ಇತ್ತು. ಎಮ್ಮೆಯು ಆಕಸ್ಮಾತ್ತಾಗಿ ಮಾಡಿನ ಮೇಲೆ ಹಾರಿ, ಹಂಚುಗಳು ಪುಡಿಯಾಗಿ ಅದರ ಕಾಲುಗಳು ಸಿಕ್ಕಿಕೊಂಡು ತುಂಬಾ ಗಾಸಿಯಾಯಿತು. ಈ ಸಂದರ್ಭದಲ್ಲಿ ಫಳ್ನೀರ್ ಪೋಸ್ಟ್‌ಮಾಸ್ಟರ್ ಶ್ರೀ ರಿಸ್ಪಿನ್ ಎಫ್. ಜೆ. ಫೆರ್ನಾಂಡೀಸ್, ಶ್ರೀ ನೋಯೆಲ್ ಮಥಾಯಸ್, ಇಲೆಕ್ಟ್ರಿಕ್ ಕಂಪೆನಿಯ ರೆಸಿಡೆಂಟ್ ಇಂಜಿನೀಯರ್ ಶ್ರೀ. ಎಚ್. ಕೃಷ್ಣಮೂರ್ತಿ (ಇವರು ಆ ದಾರಿಯಾಗಿ ಹೋಗುತ್ತಿದ್ದರು) ಇಲೆಕ್ಟ್ರಿಕ್ ಕಂಪೆನಿಯ ಕೆಲವು ಕೆಲಸಗಾರರು ಮತ್ತು ನೆರೆಕರೆಯವರು ಸೇರಿ ಆ ಎಮ್ಮೆಯನ್ನು ಕೆಳಗಿಳಿಸುವ ಪ್ರಯತ್ನ ನಡೆಸಿ ಅದನ್ನು ಬದುಕಿಸಿದರು.

**ಪ್ರೊಫೆಸರ್ ಬಿ. ಎಂ. ಟಿ. ರ ಯಾನ** ಸಹಕಾರ ಸಂಘ, ಮುಂಬಯಿ, ಅದರ ಸಂಚಾಲಕತ್ವದಲ್ಲಿ ನಡೆಯುವ ದಿ ಕರ್ನಾಟಕ ಫ್ರೀ ನ್ಯಾಟ್ಯಶಾಲಿನ ವರ್ಧಂತ್ಯುತ್ಸವವು ತಾ. 2-4-50ನೇ ಆದಿತ್ಯವಾರ ಅಪರಾಹ್ನ 3-30 ಗಂಟೆಗೆ ಸರ್ ಕವಾಸ್ಜಿ ಜಹಾಂಗೀರ್ ಸಾರ್ವಜನಿಕ ಸಭಾ ಸದನದಲ್ಲಿ ಕರ್ನಲ್ ವಿ. ಆರ್. ಮಿರಾಜ್‌ಕರ್, ಅವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

---

**ಶೋಚನೀಯ ವಿಯೋಗ—** ಮಂಗಳೂರಿನ ಪ್ರಸಿದ್ಧ ಆಡಿಟರ್ ಶ್ರೀ. ಪಿ. ಎಂ. ಹೆಗ್ಡೆಯವರ ಜ್ಯೇಷ್ಠ ಪುತ್ರ ಶ್ರೀ. ಯಸ್. ದಯಾನಂದ ಹೆಗ್ಡೆಯವರು ತನ್ನ 23ನೇ ಎಳೆ ವಯಸ್ಸಿನಲ್ಲಿ ಮಾರ್ಚ ತಾ. 22ರಲ್ಲಿ ಬೊಂಬಾಯಿಯಲ್ಲಿ ನಿಧನಗೊಂಡರೆನ್ನಲು ಅತ್ಯಂತ ವಿಷಾದಿಸುತ್ತೇವೆ. ಶ್ರೀ. ಯಸ್. ದಿ. ಹೆಗ್ಡೆಯವರು ಬಿ. ಎ. ಆಗಿ ಬೊಂಬಾಯಿಯಲ್ಲಿ 'ಎಸೋಸಿಯೇಟ್ ಓಫ್ ಚಾರ್ಟರ್ಡ್ ಎಕೌಂಟೆನ್ಟ್ಸ್' ತರಬೇತಿಯಲ್ಲಿದ್ದು, ನಾಲ್ಕು ವರುಷಾವಧಿಯ ಆ ಶಿಕ್ಷಣವನ್ನು ಸದ್ಯದಲ್ಲೇ ಪೂರ್ಣಗೊಳಿಸಲಿಕ್ಕಿದ್ದರು. ವಿದ್ಯಾರ್ಥಿ ಜೀವನ ಮತ್ತು ಎಳೇ ವಯಸ್ಸಿನಲ್ಲಿದ್ದರೂ ಶ್ರೀ ದಯಾನಂದ ಹೆಗ್ಡೆಯವರ ನಯವಿನಯ, ಸಾತ್ವಿಕ ಬುದ್ಧಿ, ಸೌಜನ್ಯತೆಗಳು ಸರ್ವರ ಪ್ರೀತ್ಯಾದರಗಳನ್ನು ಗಳಿಸಿದ್ದುವು. ಕುಟುಂಬಕ್ಕೆ ಆಶಾಕಿರಣ ಬೀರುತ್ತಿದ್ದ ಮತ್ತು ಉಜ್ವಲ ಭವಿಷ್ಯದ ಪ್ರಕಾಶವಿದ್ದ ಜೀವಜ್ಯೋತಿಯೊಂದು ಅದಿಭಾಗದಲ್ಲೇ ನಂದಿಹೋಯಿತು. ಆ ಆತ್ಮಕ್ಕೆ ಶಾಂತಿಯನ್ನು ಕೋರಿ, ಕುಟುಂಬದ ದುಃಖಗಳಲ್ಲೇ ಅತಿ ಹೆಚ್ಚಿನದನ್ನು ಬಹುವಾದ ಶೋಕಕ್ಕೀಡಾಗಿರುವ, ಅವರ ಜನನಿ ಜನಕ, ಸಹೋದರ ಸಹೋದರಿಯರು ಮತ್ತು ಬಂಧುಬಳಗದವರೊಂದಿಗೆ ಸಹ ಸಂತಾಪ ಪಡುತ್ತೇವೆ.

---


**South Kanara District Board**

Applications are invited till 30—4—1950 from persons who possess the qualifications prescribed in Rule 13 of Madras Educational Rules for appointment as graduate assistants [Maths, Science & Hist.] Phy. Training Instructor, Phy. Training Instructress and Drawing masters in Board Secondary Schools under this Board. Candidates should state their age, community, details of their qualifications and past experience if any.

B. Manjayya Hegde,
President,
District Board, S. Kanara.
S. K. Dt. Board Office.
Mangalore, 24-3-50.



ನಮ್ಮ ಸ್ವಂತ ಸುದ್ದಿ ಗಾರರಿಂದ

**ಸುರಲೋಕದ ದೇವತೆಗಳು ನರಲೋಕದಲ್ಲಿ**

ಯಾರಿಗೂ ತಿಳಿಯದಂತೆ ಮೊನ್ನೆಮೊನ್ನೆ ಇಂದ್ರನು ಬಂದು ಚಂದ್ರಲೇಖ ನೋಡಿದನಂತೆ.

ಇದು ಮಾತ್ರ ಗುಟ್ಟಾಗಿರಲಿ.

ಜೆಮಿನಿಯವರ **ಚಂದ್ರಲೇಖ** (ತಮಿಳು)

ಟಿ. ಆರ್. ರಾಜಕುಮಾರಿ, ಎಂ. ಕೆ. ರಾಧ, ರಂಜನ್.

ತಾರೀಕು 24—3—1950 ರಿಂದ

**ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.**

ಬರುವುದು

ಜೆಮಿನಿಯವರ **ಕಲ್ಪನಾ** (ಉದಯಶಂಕರ ಮತ್ತು ಪಾರ್ಟಿ)



# ಕುಲವಿಲ್ಲದ ಹೆಣ್ಣು

(ಸರಸ ಸಾಮಾಜಿಕ ಕಾದಂಬರಿ)

ಬರೆದವರು:—ಪಿ. ವೆಂಕೋಬಾಚಾರ್ಯ, ಬಿ.ಎ.ಬಿ.ಟಿ.

ದೇವದಾಸಿ ಕುಲದ ಉದ್ಧಾರವೇ ಮುಖ್ಯ ಕಥಾವಸ್ತು.

ಕುಸುಮಳು ವೇಶ್ಯಾಪುತ್ರಿಯಾದರೂ ಅವಳು ವೇಶ್ಯೆಯಲ್ಲ!

ಅವಳ ಕತೆ ಹೇಗೆ ಸಾಗಿದೆ ಎಂದು ಓದಿಯೇ ತಿಳಿಯಿರಿ.

ದಪ್ಪ ಪುಸ್ತಕ ಬೆಲೆ ರೂ. **1—0—0**

**ಪ್ರತಿಗಳು, ಅಂತರಂಗ ಕಾರ್ಯಾಲಯ, ಉಡುಪಿ, ನವಯುಗ ಪ್ರೆಸ್, ಉಡುಪಿ ಅಥವಾ ನವಭಾರತ ಬುಕ್ ಡಿಪೊ, ಉಡುಪಿ. ಇಲ್ಲಿ ದೊರೆಯುತ್ತವೆ**

ಶ್ರೀ ಕೊರಡ್ಕಲ್ ಶ್ರೀನಿವಾಸರಾಯರ

**'ಸುಲಭದಲ್ಲಿ ಇಂಗ್ಲಿಷ್'**
(ENGLISH MADE EASY)

ಮನೆಯಲ್ಲಿ ಸುಲಭವಾಗಿ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.

ಬೆಲೆ: ೧—೮—೦



**ಮದ್ರಾಸು ಸರಕಾರದಿಂದ ಈಗತಾನೇ ಸಂಭಾವನೆ ಪಡೆದ**

**ಡಾಕ್ಟರ್ ಕೊರಡ್ಕಲ್ ವೆಂಕಟ್ರಾಯ**

# 'ಮನೆ ಮದ್ದು'

(HOME REMEDIES)

೨೦೦ ಕಾಹಿಲೆಗಳಿಗೆ ಮನೆಯಲ್ಲೇ ಮಾಡಿಕೊಳ್ಳಬಹುದಾದ ೧೦೦೦ ಮದ್ದುಗಳ ವಿವರವುಳ್ಳ ಪುಸ್ತಕ. ಬೆಲೆ: ರೂ. ೨

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳ ಸಿಗದಿದ್ದರೆ ಬರೆಯಿರಿ—

**ನವಭಾರತ ಪುಸ್ತಕ ಭಂಡಾರ, ಉಡುಪಿ.**

**ನವಯುಗ ಪ್ರೆಸ್, ಉಡುಪಿ.**

## ...ಕಾರ—ವಿಮರ್ಶೆ

**ಭಾರತಿ** [ಸಣ್ಣ ಕತೆಗಳ ಸಂಕಲನ ...ಪತ್ರಿಕೆ.]

...ಪಾದಕರು: ಶ್ರೀ ಕೆ. ಸಾವಿತ್ರಿ. ವ್ಯವ...ಕರು: ಶ್ರೀ ವಿಠ್ಠಲ ಕುಲಕರ್ಣಿ, ಪ್ರಕಾ...: ಭಾರತೀ ಪ್ರಕಾಶನ ಮಂದಿರ, ದಾದ ಮುಂಬಯಿ 14. ವಾರ್ಷಿಕ ಚಂದಾ ರೂ. ...೦; ಬಿಡಿಪ್ರತಿ ಆರಾಣೆ.

...ನವರಿ ತಿಂಗಳ ಮೊದಲ ಸಂಚಿಕೆಯಾದ ...ಯಲ್ಲಿ ಆರು ಅನುವಾದಿತ ಕತೆಗಳೂ ...ಚಿತ್ರ ವಿಮರ್ಶೆ, ಮಕ್ಕಳ ಪುಟ, ನಗೆ ... ಮುಂತಾದುವುಗಳಿವೆ. ಸೀಮೋ...ಘನ, ಚಿತ್ರಕಾರನ ಅಂತರಂಗ, ಶಾಮಳಶಾ ... ವಿವಾಹ— ಈ ಮೂರು ಕತೆಗಳು ಉ...ವಾಗಿವೆ. ಮುಂಬಯಿಯ ಕನ್ನಡಿಗರ ...ನಿಧಿಯಾದ ಭಾರತಿಯು ಕನ್ನಡ ಕತೆ...ಗೊಂದು ಆದರ್ಶವಾಗಬಹುದೆಂದು ಊ...ಹಿಸುದಾಗಿದೆ. ಅನುವಾದಿತ ಕತೆಗಳೇ ...ಗಿದ್ದರೂ—ಅನುವಾದದಲ್ಲೂ ಅನುಭವಿ ...ಕ್ತಿಗಳ ಕೈವಾಡವಿದ್ದ ಹಾಗೆ ತೋರು... ಇದೇ ಬಗೆಯಲ್ಲಿ ಭಾರತಿಯು ಸ. ಚಾ...ರು ಮುಂದುವರಿದರೆ ಕನ್ನಡ ಜನದ ವಿ...ಸಕ್ಕೆ ಪಾತ್ರಳಾಗುವದರಲ್ಲೇನೂ ಸಂದೇಹ ... ಕನ್ನಡದ ಜನ ಭಾರತಿಯನ್ನು ಅದರ ...ವ ಬರಮಾಡಿಕೊಳ್ಳಲಿ.

**ಭಾವಚಿತ್ರ.** ಲೇಖಕರ : ಶ್ರೀ ಮು. ...ರಾಯಣ ಭಟ್ಟ; ಪ್ರೇಮನಿವಾಸ, ಸಾಗರ, ... ರೂ. ೧-೦-೦.

...ರಂಗನಾಥ ಹಳ್ಳಿಯಲ್ಲಿ ಬೆಳೆದ ಕನ್ಯೆಯು ... ಪ್ರೀತಿಸಿ ಮದುವೆಯಾಗುವ ಭರವಸೆ ...ಪ್ಪಿಟ್ಟುಕೊಂಡು ಹೆಚ್ಚಿನ ಓದಿಗಾಗಿ ಮುಂ...ಬಿಗೆ ಹೋಗುತ್ತಾನೆ. ಅಲ್ಲಿ ಹೇಮಲತೆ...ಯನ್ನು ಕಂಡು ಅವಳನ್ನು ವರಿಸಲು ಇಚ್ಛೆ...ಸುತ್ತಾನೆ. ತನ್ನ ಸೋದರಮಾವನ ಮಗ...ಳ ಪ್ರಮೀಳೆಯನ್ನು ತಿರಸ್ಕರಿಸುತ್ತಾನೆ. ...ತ್ತುಸಾವಿರ ಹಣ ಹೋಯಿತಲ್ಲಾ ಎಂದು ...ದ ಮಗನ ಮೇಲೆ ಸಿಟ್ಟಾಗುತ್ತಾನೆ- ಕೊ...ನೆ ಹೇಮಲತೆಯನ್ನು ಮದುವೆಯಾಗಿ ನಾ...ಲ್ಕು ದಿನ ಸಂಸಾರಸುಖವನ್ನು ಕಾಣುತ್ತಾನೆ. ...ಸರಿಯಾಗಿ ಹರಿವ ಬೇನೆಯಲ್ಲೇ ಹೇಮ...ಲತೆ ತೀರಿಹೋಗುತ್ತಾಳೆ. ಈ ನೋವಿನಿಂದ ...ರಂಗನಾಥ ಹುಚ್ಚನಾಗುತ್ತಾನೆ-

ಇಷ್ಟೇ ಕತೆ, ಹತ್ತಾರು ವರ್ಷಗಳಿಂದಲೂ ...ಹಿಮದ ಹಿಸರಲ್ಲಿ ಬರುವ ಅಸಹಜ ಕತೆಗಳ ವಸ್ತುವನ್ನೇ ಇಲ್ಲಿಯೂ ಕಾಣಬಹುದು. ತಾರಾನಾಥನಿಗೂ ಹೇಮಲತೆಗೂ ಬೆಳೆದ ಪ್ರೇಮದಲ್ಲಿ ಕೃತ್ರಿಮತೆ ತುಂಬಿದೆ. ಕತೆಯನ್ನು ಹೇಳುವ ಬಗೆಯಲ್ಲಿ ಹಳೆಯ ಸಾಂಪ್ರದಾಯಿಕ ಶೈಲಿಯೂ, ಉದಾಹರಣೆಯೂ ತಲೆಹಾಕಿ ಇನ್ನಷ್ಟು ಅಸ್ವಾಭಾವಿಕವಾಗಿ ತೋರುತ್ತದೆ. ಆದರ್ಶ ಪ್ರೇಮವೆಂದು ಸಾಧಿಸುವದಕ್ಕೋ ಏನೋ! ಕತೆಯ ನಡುವಿನಲ್ಲಿ ರಾಜಕೀಯ- ಆಧ್ಯಾತ್ಮಿಕ – ಆಂಗ್ಲ ಕವಿಗಳ ಮಾತು ಎಲ್ಲಾ ತುಂಬಿವೆ- ಒಂದಕ್ಕೂ ತಾಳಮೇಳವಿಲ್ಲ. ಒಟ್ಟಿಗೆ ಹೇಳುವುದಾದರೆ ಕತೆಗಾಗಿ ಬೆಳೆಸಿಕೊಂಡ ಕೆಲವು ಸನ್ನಿವೇಶವೆನಬಹುದು, ಅಷ್ಟೆ! ಇಲ್ಲಿ ಉದಾತ್ತವಾದ ಆದರ್ಶವೂ ಇಲ್ಲ—ಆತುರತೆಯೂ ಇಲ್ಲ; ಪ್ರೇಮವೂ ಇಲ್ಲ.

**೩. ವೈಷ್ಣವ ಜನತೋ:** [ಭಾರತದ ಪೂರ್ಣ ಸ್ವಾತಂತ್ರ್ಯದಿನದ ನೆನಪಿಗಾಗಿ ಬರೆದದ್ದು.] ಅನುವಾದಕ : ಜಿ. ಬಿ. ಪರ್ವತ್ಕರ್, ಮಂಗಳೂರು.

ಮಹಾತ್ಮಾ ಗಾಂಧಿಯವರ ಪ್ರೀತಿಯ 'ವೈಷ್ಣವ ಜನತೋ' ಪದ್ಯಕ್ಕೆ ಕನ್ನಡದಲ್ಲಿ ಅರ್ಥ ಬರೆಯಲಾಗಿದೆ. ಭಾವಗರ್ಭಿತವಾದ ಪದ್ಯವನ್ನು ಅನುವಾದಿಸಿ ಎಲ್ಲರೂ ಅರ್ಥಮಾಡಿಕೊಳ್ಳುವಂತೆ ಮಾಡಿರುವ ಈ ಕೆಲಸ ಸ್ತುತ್ಯಾರ್ಹವಾಗಿದೆ-

**೪. ಸತ್ತಮೇಲೆ ಶ್ರಾದ್ಧವೇಕೆ?** ಲೇಖಕರು: ಬಿ. ಲಕ್ಷ್ಮೀಕಾಂತದೇವ ವಿದ್ಯಾರ್ಥಿ, ಸದ್ಧರ್ಮ ಪ್ರಚಾರಕ ಗ್ರಂಥಮಾಲೆ, ಮಂಗಳೂರು.

ಸತ್ತಮೇಲೆ ಶ್ರಾದ್ಧವನ್ನೇಕೆ ಮಾಡಬೇಕೆಂಬುದರ ಕುರಿತಾಗಿ ವೇದ ಪುರಾಣಗಳಿಂದ ಉದಾಹರಿಸಿ ವ್ಯಾಖ್ಯಾನ ಬರೆದಿದ್ದಾರೆ.

—ಎಸ್ಸೆಲ್.

...ಸರಗೋಡು ಡಿ ಮು. ಕೋರ್ಟಿನಲ್ಲಿ.
R. E. A. No. 205/1950.
R. E. P. 736/1949.
...ಕೋಟಿ ಮಹಮ್ಮದ ಬ್ಯಾರಿ.-ಅರ್ಜಿದಾರ.
ಮತ್ತು
ಅಬ್ದುಲ್ಲ ಬ್ಯಾರಿ—ರೆಸ್ಪಾಂಡೆಂಟ.
ಮುಂತಾದವರೊಳಗೆ.

...ಸ್ಪಾಂಡೆಂಟ- ಮುಳಿಯಾರ II ನೇ ...ಮದ ಪಳಲಿಯಲ್ಲಿ ಮಿರುವ ಅಟಿಕರ ...ಬ್ದುಲ್ಲ ರಹಿಮಾನ ಬ್ಯಾರಿಗಳ ಮಗ ಅ...ಬ್ದುಲ್ಲ ಬ್ಯಾರಿಗೆ.

...ಮೇಲ್ಕಂಡ ಅಮಲ್ಜಾರಿಯಲ್ಲಿ ಅರ್ಜಿದಾರ ...ವಸೂಲಾಗತಕ್ಕ ಅಮಲ್ಜಾರಿ ಪ್ರಕಾರ ವ...ಸೂಲಾಗತಕ್ಕ ಅವೇಜನ್ನು ನಿಂಮ ಬಾಬ್ತು ...ಸ್ತಿಗಳನ್ನು ಜಪ್ತಿ ಮಾಡಿಸಿ ಅವೇಜು ...ಸೂಲು ಪಡಿಯುವರೆ ಸದ್ರಿ ಜಪ್ತಿಯ ಪ್ರೊ...ಬಿಟರಿ ಆರ್ಡರ್ ಜ್ಯಾರಿ ಕುರಿತು ಯಿದೇ ... 6-4-1950ಕ್ಕೆ ಅಮಲ್ಜಾರಿ ಸನ್ನಿ ಬಗ್ಗೆ ...ಟ್ಟಿರುವದರಿಂದ ಆ ದಿವ್ಸ ನೀವು ಖುದ್ದು ...ಆ ವಕೀಲದ್ವಾರ ಹಾಜ್ರಾಗುವರೆ ತಪ್ಪಿದ್ದ...ಲ್ಲಿ ನಿಮನ್ನು ಎಕ್ಸಪಾರ್ಟೆ ಮಾಡಲಾಗಿ ಆ ...ಪ್ಲಿಕೇಶನ ವ್ಯವಹರಣ ಮುಂದರಿಸಲಾಗುವ...ದೆ ಎಂಬ ಸಂಗ್ತಿ ಯೀ ಮೂಲಕ ಕೋರ್ಟಿ...ನ ಹುಕುಂ ಪ್ರಕಾರ ತಿಳಿಸೋಣಾಗಿಯದೆ.

**K. P. Anantha Rao.**
Advocate for Petitioner.
...asaragod, 26—3—50.

## ಮಂಗಳೂರು

### ಜಿಲ್ಲಾ ಬೋರ್ಡ್ ಸಭೆ

ದ. ಕ. ಜಿಲ್ಲಾ ಬೋರ್ಡಿನ ಸಭೆಯೊಂದು ಇತ್ತೀಚೆಗೆ ಸುಬ್ರಹ್ಮಣ್ಯದಲ್ಲಿ ಅಧ್ಯಕ್ಷರಾದ ಶ್ರೀ ಬಿ. ಮಂಜಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರುಗಿತು.

ಅದೇ ಸಂದರ್ಭದಲ್ಲಿ ನಡೆದ ಒಂದು ಅವಸರದ ಸಭೆಯಲ್ಲಿ ಫಸ್ಲಿ ೧೩೬೦ (೧೯೫೦-೫೧) ರಿಂದ ಭೂಕಂದಾಯದ ಪ್ರತಿ ರೂಪಾಯಿಯ ಮೇಲೆ ವಿದ್ಯಾ ಪ್ರಸಾರ ತೆರಿಗೆಯನ್ನು ೨೪ ಪೈಯಿಂದ 36 ಪೈಗೆ ಹೆಚ್ಚಿಸಬೇಕೆಂಬುದಾಗಿ ನಿರ್ಣಯವಾಯಿತು. ಆ ವರ್ಷದಲ್ಲಿ ಪ್ರಾಥಮಿಕ ವಿದ್ಯಾ ಪ್ರಸಾರದ ಬಗ್ಗೆ ಆದಾಯಕ್ಕಿಂತಲೂ ಹೆಚ್ಚು ಖರ್ಚಾಗುವುದರಿಂದ ಆದಾಯವನ್ನು ಸ್ವಲ್ಪ ಮಟ್ಟಿಗಾದರೂ ಹೆಚ್ಚಿಸಲು ಈ ತೆರಿಗೆಯನ್ನೇರಿಸುವಂತೆ ಸರಕಾರವು ಸೂಚಿಸಿತ್ತು.

ಅಂದು ನಡೆದ ಸಾಧಾರಣ ಸಭೆಯಲ್ಲಿ ಬೋರ್ಡಿನ ಕೆಳಗಿನ ಎಲ್ಲಾ ವರ್ಗದ ನೌಕರರಿಗೆ ಸರಕಾರೀ ಸ್ಕೇಲಿನಂತೆ ವೇತನವನ್ನು ಕೊಡಬೇಕೆಂಬ ಠರಾವು ಮಂಜೂರಾಯಿತು. ಕುಂದಾಪುರ ತಾಲೂಕಿನ ಪಾಂಗಾರ ಹೊಳೆ (ಉಪ್ಪುಂದ)ಗೆ ಕೂಡಲೇ ಸಂಕ ಕಟ್ಟುವ ಏರ್ಪಾಡು ಮಾಡಬೇಕೆಂದು ಸರಕಾರವನ್ನು ಕೇಳಿಕೊಳ್ಳಲಾಯಿತು. ಪ್ರತೀ ವರ್ಷ ಸುಬ್ರಹ್ಮಣ್ಯಕ್ಕೆ ತರಲ್ಪಡುವ ಜಾನುವಾರುಗಳಿಗೆ ಸಂತೆಗೆ ಬರುವ ಮೊದಲೇ ರಿಂಡರ್ ಪೆಸ್ಟ್ ನಿವಾರಣಾ ಇಂಜಕ್ಷನ್ ಕೊಡಿಸಬೇಕೆಂಬ ಠರಾವೂ ಮಂಜೂರಾಯಿತು.

ಮಂಗಳೂರು ಸರ್ಕಲಿನ ಸದಸ್ಯ ಶ್ರೀ ಬಿ. ಗಂಗಾಧರ ದಾಸ್ ಮತ್ತು ಮಂಜೇಶ್ವರದ ಸದಸ್ಯರಾದ ಶ್ರೀ ಎಂ. ತ್ಯಾಂಪಣ್ಣ ಶೆಟ್ಟಿ ಇವರಿಬ್ಬರೂ ಮೂರು ತಿಂಗಳೊಳಗೆ ಎರಡು ಸಭೆಗಳಿಗೆ ಗೈರುಹಾಜರಾದುದರಿಂದ ಇವರ ಮೆಂಬರಿಕೆ ರದ್ದಾಯಿತು. ಅರ್ಜಿ ಮಾಡಿಕೊಂಡ ಶ್ರೀ ತ್ಯಾಂಪಣ್ಣ ಶೆಟ್ರನ್ನು ಮಾತ್ರ ಬೋರ್ಡಿಗೆ ಪುನಃ ಸೇರಿಸಿಕೊಳ್ಳಲಾಯಿತು.

ಗಣರಾಜ್ಯ ದಿನಾಚರಣೆಯ ಸ್ಮರಣಾರ್ಥವಾಗಿ ಬೋರ್ಡಿನ ಮಂಗಳೂರಿನ ಸಿಬಂದಿಗೆ ಒಂದು ತಿಂಗಳ ಸಂಬಳವನ್ನು ಕಂತಿನಲ್ಲಿ ಮರುಪಾವತಿ ಮಾಡುವ ಶರ್ತದ ಮೇಲೆ ಸಾಲವಾಗಿ ಕೊಡಲಾಯಿತು. ತಾ. ೭-೨-೫೦ ರಿಂದ ಬೋರ್ಡ್ ಪೇದೆಗಳಿಗೆ ಸಂಬಳದಲ್ಲಿ ತಿಂಗಳಿಗೆ ರೂ. ೨ರ ಬಡ್ತಿ ಮಾಡಲಾಯಿತು.

ಜೋಗದಿಂದ ಈ ಜಿಲ್ಲೆಗೆ ವಿದ್ಯುತ್ ಸರಬರಾಯಿ ಮಾಡುವ ವ್ಯವಸ್ಥೆಯನ್ನು ಕೂಡಲೇ ಕೈಕೊಳ್ಳುವಂತೆ ಸರಕಾರವನ್ನು ಬೋರ್ಡ್ ಕೇಳಿತು.

ಕುಂದಾಪುರ ತಾಲೂಕಿನ ಅನಗಳ್ಳಿ ಗ್ರಾಮಸ್ಥರ ಮನವಿಯನ್ನು ಪರಿಶೀಲಿಸಿ, ಅನಗಳ್ಳಿಯನ್ನು ಹಾದು ಹೋಗುವ ಬಸ್ರೂರ್-ಕುಂದಾಪುರ ರಸ್ತೆಯ ನಿರ್ಮಾಣವನ್ನು ಸರಕಾರವು ೧೯೫೦-೫೧ರಲ್ಲಿ ತೆಗೆದುಕೊಂಡು, ಆ ಬಗ್ಗೆ ಬೇಕಾದ ರೂ. ೨೦,೦೦೦ವನ್ನು ಸಂಪೂರ್ಣ ಗ್ರಾಂಟಾಗಿ ಕೊಡಬೇಕೆಂದು ಬೋರ್ಡು ಸರಕಾರಕ್ಕೆ ಮನವಿ ಮಾಡಿತು.

ಗಣರಾಜ್ಯ ಘೋಷಣೆಯ ಸ್ಮಾರಕವಾಗಿ ಬೈಲೂರು ಬೋರ್ಡ್ ಪ್ರಾಥಮಿಕ ಶಾಲೆಯ ವರಾಂಡದಲ್ಲಿ ಒಂದು ಬಾವಿ ತೋಡಿಸಿ ಕೊಡುತ್ತೇನೆಂದು ತಿಳಿಸಿದ ಶ್ರೀ ಎನ್. ಭವಾನಿ ರಾಯರ ಉದಾರ ದಾನವನ್ನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲಾಯಿತು.

ಬಾಲಕ-ಬಾಲಕಿಯರ ಪ್ರಾಥಮಿಕ ಶಾಲೆಗಳು ಬೇರೆ ಬೇರೆ ಇದ್ದುದನ್ನು ಇನ್ನು ಮುಂದೆ ಪ್ರಾಥಮಿಕ ಶಾಲೆಗಳೆಂದು ಮಾತ್ರ ಕರೆಯಬೇಕೆಂಬ ಸೂಚನೆಗೆ ಒಪ್ಪಿಗೆ ಕೊಡಲಾಯಿತು. ಪಡುಬಿದ್ರಿ ಬಾಲಕರ ಶಾಲೆ ಮತ್ತು ಬಾಲಕಿಯರ ಶಾಲೆಗಳೆರಡನ್ನೂ ಒಂದುಗೂಡಿಸಿ ಪಡುಬಿದ್ರಿ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಾಗಿ ಮಾಡಬೇಕೆಂದಾಯಿತು.

ಕೊಡವೂರು ಬೋರ್ಡ್ ಶಾಲಾ ವಿಸ್ತರಣದ ಬಗ್ಗೆ ರೂ. ೧,೫೫೦ರ ಅಂದಾಜುಪಟ್ಟಿ ಮಂಜೂರಾಯಿತು. ಅದರ ಸದ್ಯಕ್ಕೆ ಸರಕಾರೀ ಗ್ರಾಂಟ್ ರೂ. ೬೦೦೦ ಮಾತ್ರ ಖರ್ಚು ಮಾಡುವುದೆಂದಾಯಿತು. ಪುಣಚ ಮೂಡು ಬೈಲು ಪಂಚಾಯತ್ ಶಾಲೆಯ ವಿಸ್ತರಣಕ್ಕೆ ರೂ. ೨೦೦೦, ಕರಂಜಾರ್ ಬೋರ್ಡ್ ಶಾಲೆಯ ರಿಪೇರಿ ಬಗ್ಗೆ ರೂ. ೨೬೦೦ ಮತ್ತು ಹಿರಿಯಡ್ಕ ಶಾಲೆಯ ಕಟ್ಟಡ ಸುಧಾರಣೆಗೆ ರೂ. ೫೫೫೦ ಮಂಜೂರಾದುವು.

ಸುಬ್ರಹ್ಮಣ್ಯ ಪಂಚಾಯತ್ ಶಾಲೆಯ ಆಡಳಿತೆಯನ್ನು ೧೯೫೦-೫೧ರಿಂದ ವಹಿಸಿಕೊಂಡು ಆದಷ್ಟು ಬೇಗನೆ ಅದನ್ನು ಹಾಯರ್ ಎಲಿಮೆಂಟರಿಯನ್ನಾಗಿ ಮಾಡಲು ಒಪ್ಪಿಕೊಂಡಿತು. ಗ್ರಾಮಸ್ಥರು ಕಟ್ಟಡ ಮತ್ತು ಎಲ್ಲಾ ಸಲಕರಣೆಗಳನ್ನು ಬೋರ್ಡಿಗೆ ದಾನಮಾಡಿದಲ್ಲಿ, ಪುತ್ತೂರು ತಾಲೂಕಿನ ಪಾಡಪ್ಪಾಡಿ ಮತ್ತು ಕಾಸರಗೋಡಿನ ಬೋವಿಕಾನದಲ್ಲಿ ಪ್ರಾಥಮಿಕ ಶಾಲೆಗಳನ್ನು ತೆರೆಯಲು ಆಕ್ಷೇಪವಿಲ್ಲವೆಂದಾಯಿತು.

ಕಾರ್ಕಳ ಬೋರ್ಡ್ ಹಾಸ್ಕೂಲಿನ ಕಟ್ಟಡವನ್ನೂ ಶಾಲಾ ಸಮಿತಿಯವರು ಮಾಡಿದ ದಾನವನ್ನೂ ಕೃತಜ್ಞತಾಪೂರ್ವಕ ಸ್ವೀಕರಿಸಿ, ಜಿಲ್ಲಾ ಬೋರ್ಡ್ ಆ ಕಟ್ಟಡವನ್ನು ಸಂಪೂರ್ಣಗೊಳಿಸಲು ಒಪ್ಪಿಕೊಂಡಿತು.

ಸುಳ್ಯದ ಊರಿನವರು ಕಟ್ಟಡ ಮತ್ತು ಎಲ್ಲಾ ಉಪಕರಣಗಳನ್ನು ಬೋರ್ಡಿಗೆ ದಾನ ಮಾಡಿದಲ್ಲಿ ಸುಳ್ಯದಲ್ಲೊಂದು ಹ್ಯಾಸ್ಕೂಲು ನಡೆಸಲು ಆಕ್ಷೇಪವಿಲ್ಲವೆಂದು ತಿಳಿಸಲಾಯಿತು. ಹಾಗೆಯೇ ಹಿರಿಯಡ್ಕದಲ್ಲೂ ಒಂದು ಹ್ಯಾಸ್ಕೂಲು ತೆರೆಯಬಹುದೆಂದೂ, ಊರವರು ಮೊದಲಾಗಿ ಕಟ್ಟಡದ ಬದಲು ರೂ. ೧೧,೦೦೦ ಠೇವಣಾತಿ ಮಾಡಿದಲ್ಲಿ ಶಾಲೆ ತೆರೆಯಬಹುದೆಂದೂ ನಿರ್ಣಯವಾಯಿತು.

ಮಲೇರಿಯಾ ನಿವಾರಣಾ ಕಾರ್ಯವನ್ನು ಮಾರ್ಚ ೩೧ರಿಂದ ಇನ್ನೊಂದು ವರ್ಷಕ್ಕೆ ಪುತ್ತೂರು, ಕಾರ್ಕಳ ತಾಲೂಕುಗಳಲ್ಲಿ ಮುಂದುವರಿಸಬೇಕೆಂಬ ಸೂಚನೆಯಿದೆ. ಆ ಬಗೆ ಬೋರ್ಡ್ ಹೆಚ್ಚೆಂದರೆ ರೂ. ೨೨,೦೦೦ವನ್ನು ತನ್ನ ಪಾಲಿನ ವಂತಿಗೆಯಾಗಿ ಕೊಡಲು ತಯಾರಿದೆ ಎಂದು ತಿಳಿಸಿ, ಅಷ್ಟನ್ನು ಮಂಜೂರು ಮಾಡಿತು.

ಪೆಂಡಾಲ ಗ್ರಾಮದ ಕಾದಾರ್ ಎಂಬಲ್ಲಿಯೂ ಮೂಗ್ರು ಗ್ರಾಮದ ಮೊಗರಡ್ಕದಲ್ಲಿಯೂ ಚರ್ವತ್ತೂರು ಎರಡನೇ ಗ್ರಾಮದ ಪುದುಕೆರೆಯಲ್ಲಿಯೂ ಕಡವುಗಳನ್ನು ತೆರೆಯಬೇಕೆಂದಾಯಿತು.

In the Court of the Principal subordinate Judge of South Kanara.
O. S. No. 5 of 50.
Between.

Laxminarayana Bhatta & another ... ... —Plffs.
and
1) Puttamma, 2) Muthu Shetty 3) Isara Shetty, 4) Sesi Shedthi ... ... —Defts.

To,
2nd. Defendant Muthushetty, younger brother of Puttamma, residing at Koikude village, Mangalore Taluk.

Notice is hereby given that the plaintiffs have instituted the above suit for possession mesne profits & for other necessary reliefs Notice of the 2nd. Defts. has been orderd to be served on him by substituted service and that the same stands posted to ...th June 1950. In default of your appearance on the above said date the suit will be heard and determined in your absence.

(By order of the Court)
M/s. P. Srinivas Rao, and S. Venkat Rao,
Advocates for Plffs.
Mangalore, March 25, 1950.


ಉಡುಪಿಗೆ ಹೋಗಬೇಕೇ! ಆದರೆ ಉಳಿದುಕೊಳ್ಳುವುದೆಲ್ಲಿ

# ರಾಯಲ್ ಮಹಾಲಿನಲ್ಲಿ

**ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣ ಮಠಕ್ಕೆ ದೂರವಿಲ್ಲ!**

**ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!**

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೇ?

ಪ್ರೊಪ್ರೈಟರ್:— ಕೆ. ವೆಂಕಟರಮಣಭಟ್.

**For up-to-date Lodging & Boarding**

**ROYAL MAHAL,**

**UDIPI,** S. Kanara.

ಮಹಿಳಾ ಪುಟ

# ಸ್ತ್ರೀ ಸೌಂದರ್ಯ ಹಾಗೂ ಜೀವನದಲ್ಲಿನ ಪಾತ್ರ

**ಬರೆದವರು: ಶ್ರೀಮತಿ ಎಸ್. ರತ್ನಮ್ಮ, ನಂಜನಗೂಡು.**

ಸ್ತ್ರೀ ಸೌಂದರ್ಯ ದೈವದತ್ತವಾದದ್ದು, ಅಂತರ ಸೌಂದರ್ಯ ಮಂಗಳ ಮನೋಹರವಾದದ್ದು. ರಮಣಿಯ ರೂಪವು ಹೊರಗಣ್ಣಿಗೆ ಕಾಣದು. ಅದ್ವೈತಾನಂದದ ಅಪರ ಸ್ವರೂಪ. ಆನಂದಮಯ ಕೋಶದಲ್ಲಿ ಸೌಂದರ್ಯವನ್ನು, ಸುಂದರ ವಸ್ತುವನ್ನು, ರಮಣೀಯತೆಯನ್ನು, ಅದರ ರೂಪುಗಳಿಂದ ವಿಂಗಡಿಸುವುದಕ್ಕಾಗದು. ಬಹುಶಃ ಅದರ ಅಂಶಗಳನ್ನು ಬೇರೆ ಸೌಂದರ್ಯದಾಯಕ ವಸ್ತುಗಳೊಂದಿಗೆ ಹೋಲಿಸಬಹುದೇ ಹೊರತು ಸಂಪೂರ್ಣವಾಗಿ ವಿವರಿಸಲಾಗುವುದಿಲ್ಲ. ಸೌಂದರ್ಯ ಹೊರಹೊಮ್ಮುವ ಕೆಲವು ಅಂಶಗಳನ್ನು ನಿವೇದಿಸಬಹುದು. ಅದರೂ ಸ್ತ್ರೀಯ ಸೌಂದರ್ಯ ಯಾವ ಕಲಾವಿದನ ಪಟ್ಟಿಯಲ್ಲಿಯೂ ಪ್ರತಿಬಿಂಬಿಸದ ಅಥವಾ, ಕಲಾವಿದರ ಎಲ್ಲಾ ಕೃತಿಗಳ ಸಾರವನ್ನೂ ಒಳಗೊಂಡ ಕಾವ್ಯ ಪ್ರತಿಭೆಯೊಂದಿಗೆ ಹೋಲಿಸಬಹುದಾದ ಒಂದು ಅಂತರ್ ಪ್ರಕಾಶನಾ ಶಕ್ತಿ. ಈ ಅಂತರಶಕ್ತಿಯ ಬಾಹ್ಯ ಚಲನೆಯೇ ಅವಳ ಜೀವನದಲ್ಲಿ ಅನುಭವಿಸುವ ಪಾತ್ರ. ದೇಹ ಸೌಂದರ್ಯವಿಲ್ಲದಿದ್ದರೂ, ಈ ಅಂತರ್ಗತವಾದ ಆತ್ಮ ಸೌಂದರ್ಯ ಹೆಗ್ಗಳವಾಗಿದ್ದಲ್ಲಿ ತನ್ನ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಬಲ್ಲಳು. ಈ ಆತ್ಮ ಸೌಂದರ್ಯದ ಸೋಪಾನದಿಂದಲೇ ಸ್ತ್ರೀ ಭೂ ಸ್ವರ್ಗವನ್ನು ನಿರ್ಮಿಸುವಳು. ಸ್ವಾರ್ಥತ್ಯಾಗ, ಆತ್ಮಯಜ್ಞ, ಪರಹಿತ, ಜ್ಞಾನೋಪಾಸನೆ, ಜಗತ್ ಶಾಂತಿ ಸ್ಥಾಪನೆಗಳೇ ಅವಳ ಸೌಂದರ್ಯದ ವ್ಯಕ್ತ ರೂಪಗಳು. ಧರ್ಮಾರ್ಥ ಕಾಮ ಮೋಕ್ಷಗಳಲ್ಲಿ ಸಹ ಭಾಗವನ್ನು ಪಡೆದು ಆತ್ಮೋನ್ನತಿಯ ದಿವ್ಯ ಸೋಪಾನ ಮಾರ್ಗದಲ್ಲಿ ಪುರುಷನನ್ನು ನಡೆಸುವುದೇ ಅವಳ ಧ್ಯೇಯ. ಇಂತಹ ಸ್ತ್ರೀ ನಿಜವಾಗಿಯೂ ಪ್ರಗತಿ ಸಾಧಕಳು.

'ಸ್ತ್ರೀ ರೂಪನೋ ರೂಪಮ್' ನವನವೋನ್ಮೇಷ ಶಾಲಿನಿಯಾದ ಕನ್ನಡಗಿತ್ತಿಯ ಆ ದಿವ್ಯ ಸೌಂದರ್ಯದಲ್ಲಿ ದೇಹಸೌಂದರ್ಯದ ವ್ಯಕ್ತ ಭಾಗವನ್ನು ಸಾಧಾರಣವಾಗಿ ಎಲ್ಲಾ ಪ್ರಾಚೀನ ಕಲಾವಿದರೂ ಚಿತ್ರಿಸಿರುವರು. ಆದರೆ ಪುರುಷನು ಸಹಚರಿಯಾಗಿ ಜೀವನದಲ್ಲಿ ಅನುಭವಿಸಿದ ಹೃದಯದ ಅವ್ಯಕ್ತ ಸೌಂದರ್ಯದ ಚಲನೆಯನ್ನು ವರ್ಣಿಸಲು ನಮ್ಮವರು ಹೆಚ್ಚು ಗಮನ ಕೊಟ್ಟಿಲ್ಲ. ಕಾರಣ ಅಂದಿನ ಪುರುಷರ ದೃಷ್ಟಿಯಲ್ಲಿ ಸ್ತ್ರೀ ಕೇವಲ ಮನಸೋಲ್ಲಾಸಿನಿ, ಮಹಾ ಸಾಮ್ರಾಟನ ಪತ್ನಿಯಾಗಿದ್ದರೂ ಸಾಹಿತ್ಯದ ದೃಷ್ಟಿಯಲ್ಲಿ ಅವಳು ಧರ್ಮದೇವತೆ ಜೀವನದ ಸಾರಥಿ ಅಲ್ಲ. ಈಗ ಲಬ್ಧವಾಗಿರುವ ನಮ್ಮ ಗ್ರಂಥಗಳ ವರ್ಣನೆಯಂತೆ, ಅಂದಿನ ಸ್ತ್ರೀ ಕೇವಲ ವಿಲಾಸಿನಿಯಾಗಿದ್ದಲ್ಲಿ ಕ್ಷಾತ್ರಯುಗದ ವೀರಧರ್ಮವೂ ಕಲಿತನವೂ ಮೂರ್ತೀಭವಿಸಲು ಸಾಧ್ಯವಾಗುತ್ತಿತ್ತೇ?

ಹತ್ತನೇ ಶತಮಾನದ, ಸ್ವರ್ಣಯುಗದ ಧೀಮಂತ ಸ್ತ್ರೀಯೊಬ್ಬಳ ಕಲಿತನದ ಚಿತ್ರವೊಂದನ್ನು ಕಾವ್ಯ ನಾಯಕಿಯಲ್ಲಿ ಸಮಾನಗೊಳಿಸಿ ಅಭೇದದಿಂದ ರೂಪಿಸಿದ ಸ್ತ್ರೀಯಿಂದಲೇ ರಚಿತವಾದ ಗ್ರಂಥವೋ ಅಥವಾ ಶಾಸನಗಳೋ ಸಿಕ್ಕಿದ್ದಲ್ಲಿ, ಅವಳ ಅವ್ಯಕ್ತ ಸೌಂದರ್ಯ ಮತ್ತು ಜೀವನದಲ್ಲಿನ ಪಾತ್ರಗಳನ್ನು ಸಂಪೂರ್ಣವಾಗಿ ವಿಮರ್ಶಿಸಬಹುದಾಗಿತ್ತು. ಆದರೆ ಈಗ ೧೩ನೇ ಶತಮಾನದವರೆಗಿನ ಚಂಪೂ ಗ್ರಂಥಗಳಲ್ಲಿ ಅಲ್ಲಲ್ಲಿ ಮಿಂಚಿದ ಅವ್ಯಕ್ತ ಸೌಂದರ್ಯದ ಬೆಳಕುಗಳನ್ನು ಒಟ್ಟುಗೂಡಿಸಿ ಬೆಳಗಿಸಬೇಕಾಗಿದೆ.

"ಆರಂಕುಸವಿಟ್ಟೊಡಂ ನೆನವುದೆನ್ನ ಮನಂ ಬನವಾಸಿ ದೇಶಮಂ" ಎಂದು ಪೂಜ್ಯ ಮಹಾಕವಿ ಪಂಪ ಹಾಡಲು ತಕ್ಕ ಸ್ಫೂರ್ತಿಯನ್ನಿತ್ತ ಬನವಾಸಿಯ ಪೆಣ್ ಜನದ ಸೌಂದರ್ಯ ವರ್ಣನಾತೀತವಾದುದು. ಅನನ್ಯವಾದುದು. ಪಂಪನು ಸ್ತ್ರೀ ರೂಪದ ಮೋಹಕತೆಯನ್ನು ಬಲ್ಲವನು. ಒಲುಮೆಯ ತಿರುಳನ್ನು ಕಂಡವನು. ಅವನ ಕಾವ್ಯದಲ್ಲಿ "ಸಾರಂ ಅನಂಗ ಜಂಗಮಂಕಾ ಲತಾಂಗಿಯರಿಂದಮಲ್ತೆ ಸಂಸಾರಂ" ಎಂಬ ವಾಕ್ಯ ಮಹಿಳಾಪಕ್ಷ ಗುರಿಯಾದ ಪಾಂಡು ಮಹಾರಾಜನ ಬಾಯಿಂದ ಹೊರಡುತ್ತದೆ. ಇದು ಕೇವಲ ಒಂದು ಪಾತ್ರದ ಉದ್ಗಾರ ಮಾತ್ರವಲ್ಲ. ಅಂದಿನ ಜನತೆಯನ್ನು ನೋಡಿ ಮಹಾಕವಿ ಚಿತ್ರಿಸಿದ ಜಗತ್ತತ್ವ.

ಪ್ರೇಮ ಸ್ವರ್ಗದಲ್ಲಿ ದಿವ್ಯ ಭೋಗವನ್ನು ಅನುಭವಿಸುತ್ತಿದ್ದರೂ ಪ್ರಣಯಿಯ ಅಗಲಿಕೆಯೊಂದು ಆ ಸ್ವರ್ಗ ಸುಖವನ್ನು ತಿರಸ್ಕರಿಸಿ ದೇಸಿಯಂತೆ ಅವನ ನೆಲೆಯನ್ನರಿಯಲು ಭೂಮಿಯಲ್ಲಿ ತಿರುಗಿ, ತನ್ನ ಪ್ರಾಣತ್ಯಾಗದಿಂದಲೇ ಮತ್ತೆ ಪ್ರಣಯಿಯನ್ನು ಸೇರಿದ ಆದಿ ಪುರಾಣದ ಸ್ವಯಂಪ್ರಭೆ ಕನ್ನಡಗಿತ್ತಿಯ ಪ್ರತಿಕೃತಿ ಜೀವನಕ್ಕೆ ಆದರ್ಶ. ಪ್ರಣಯಕ್ಕೆ ಮಹಾಕವಿ ನಿರ್ಮಿಸಿದ ಪ್ರತಿಮಾ ಕಲ್ಪಿತ ಸತ್ಯ, ಜನ್ಮ ಜನ್ಮಾಂತರಗಳ ಏಕ್ಯಗತ ಸಂಬಂಧ ಕನ್ನಡಗಿತ್ತಿಯ ಛಾಯಾನುವರ್ತಿತ್ವಕ್ಕೆ ನಿರ್ಮಿಸಿರುವ ಪತಿಮಾಸತ್ಯ. ಒಮ್ಮೆ ಪ್ರಣಯಿಯಾಗಿ, ಮತ್ತೊಮ್ಮೆ ಮಿತ್ರನಾಗಿ ಧರ್ಮಮಾರ್ಗದಲ್ಲಿ ಕೈ ಹಿಡಿದು ನಡೆಸಿ ಆತ್ಮನು ಮುಕ್ತನಾಗಿ ಕೇವಲ ಸತ್ಯವನ್ನರಿಯಲು ಆತ್ಮ ಸೋಪಾನವನ್ನು ನಿರ್ಮಿಸಿರುವ ಹಿಂದಿನ ಕನ್ನಡಗಿತ್ತಿಯ ಈ ಚಿತ್ರ ಪ್ರಕಾಶನ ರೀತಿ ಧನ್ಯವಾದುದು. ಅವಳ ಸೌಂದರ್ಯ ಕೇವಲ ವಿಲಾಸಮಯವಾದುದಲ್ಲ. ಸ್ತ್ರೀ ಅಂತರಂಗದಲ್ಲಿ ತಪಸ್ವಿನಿ. ಬಾಹ್ಯದಲ್ಲಿ ತೇಜಸ್ವಿನಿ. ಒಡನಾಟದಲ್ಲಿ ವಿಲಾಸಿನಿ. ಆದರೆ ಅವಳ ಸಿದ್ಧಿ ಮಾರ್ಗ ತೆರೆಯುವುದು ವೀರಜನನಿಯಾದಂದು. ವೀರಪುತ್ರನು ಜಗತ್ತನ್ನು ಜಯಿಸಿ ಮಹಾತ್ಮನಾದಂದು ಅವಳ ತಪಸ್ಸಿಗೆ ತಕ್ಕ ಮಹಾಫಲ ದೊರಕೀತು. ಅವಳ ಸೌಂದರ್ಯ ಪತಿಯನ್ನು ಮೋಹಗೊಳಿಸಲು ಹರಡಿದ ಸೌಂದರ್ಯ ಜಾಲ ಮಾತ್ರವಲ್ಲ; ಪುತ್ರನನ್ನು ಕಾವದ ಉರಿಬಿಸಿಲಿನಿಂದ ಕಾಪಾಡುವ ಶ್ವೇತಚ್ಛತ್ರ.

"ಮೊಗಮಂ ತಾವರೆ ಕಣ್ಣನು ತ್ಪರಿದಳಂ ಧಮ್ಮಿಲ್ಲಮಂ ಸೋಗೆ ಸೆಳ್ಳುಗುರಂ ಸೋಗೆ ಪುಟನಂಗಜನ ಬಿಲ್ ದಂತಾಳಿಯಂ ಮುತ್ತು ಕೈಮುಗಿದಾರಾಧಿಸಿ ಪೋಲಿಸ್ತವೆನ್ನದೆ ಸರೋಜಾತಾದಿ ನಿಸ್ಸಾರವಸ್ತುಗಳೊಳ್ ಪೋಲಿಸುವಂತುಟಾಂ ಮರುಳನೇ ರೂಪಂ ವಿಚಿತ್ರಾಂಗಿಯಾ"

ಇದು ಜನಜನನಿಯ ಎಂದರೆ ಲೋಕ ಪೂಜ್ಯನೊಬ್ಬನ ಜನನಿಯ ಅಲೌಕಿಕ ಅವ್ಯಕ್ತ, ಸೌಂದರ್ಯ ಈ ತಾಯಿಯ ಸೌಂದರ್ಯ ವ್ಯಕ್ತಿ ಪ್ರತಿಬಿಂಬವೆನಿಸಿದ ಮಗಜತ ಕಂದರ್ಪನಾಗಿ ನದೇವ ಚರೇತನ್ ಚರೇತನ್ ಎನಿಸಿದುದರಲ್ಲಿ ಸಂದೇಹವೇನು? ಇದು ಆ ಸ್ವರ್ಣಯುಗದ ಕನ್ನಡಗಿತ್ತಿಯೊಬ್ಬಳ ನಾಟ್ಯದ ಒಂದು ಅಂಶವನ್ನು ಪ್ರತಿಪಾದಿಸುವ ಕಲಾ ರೀತಿ.

ಸಂಸಾರ ಮಗ್ನವಾಗಿದ್ದ ಯುಗಪುರುಷನ ಮನಸ್ಸನ್ನು ಲೌಕಿಕ ಸುಖ ಮಗ್ನವಾದ ಮಹಾ ಜ್ಞಾನಿಯಾಗಿ ಕೇವಲ ಸತ್ಯವನ್ನು ದರ್ಶಿಸಲು ಸ್ತ್ರೀ ಸೌಂದರ್ಯ ಪ್ರೇರೇಪಿತ; ಭೋಗಶಿಖರವನೇರಿದ್ದ ಸಾಮ್ರಾಟನೊಬ್ಬನ ಐಹಿಕ ಸುಖದ ಕತ್ತಲೆಯನ್ನು ಕಳೆಯಲು ಅನಂತ ವಸ್ತು ಪ್ರಕಾಶವನ್ನು ನಿದರ್ಶಿಸಲು ಸ್ತ್ರೀ ಸೌಂದರ್ಯ ಎತ್ತಿದ ನೀಲಾಂಜನವಾಯಿತು. ಆದಿದೇವ ಪುರುದೇವನ ಆಸ್ಥಾನದಲ್ಲಿ ದೇವ ನರ್ತಕಿ ನೀಲಾಂಜನೆ ಜೀವನ ನಾಟ್ಯವನ್ನು ಅಭಿನಯಿಸಿದಳು. ಆ ಸುರಗಣಿಕೆಯ ನಾಟ್ಯವು ಪರಮಾತ್ಮನನ್ನು ರಂಜಿಸುತ್ತಿರಲು ಅಭಿನಯದ ಮಧ್ಯದಲ್ಲಿಯೇ ಅವಳ ಆಯುಸ್ಸು ಮುಗಿಯಲು ಸೌದಾಮಿನಿಯಂತೆ ರಂಗದಿಂದ ಅದೃಶ್ಯಳಾದಳು. ರಸಭಂಗ ಭಯದಿಂದ ಇಂದ್ರನು ಬೇರೊಂದು ಅದೇ ತರಹದ ವಸ್ತು ಪ್ರದರ್ಶನ ಸೃಷ್ಟಿಸಿ ನಾಟ್ಯವನ್ನು ಮುಂದುವರಿಸಿದನು. ಆದರೆ ನರ್ತಕಿಯ ಆಕಸ್ಮಿಕ ಮೃತ್ಯುವಿನಿಂದ ಎಚ್ಚತ್ತ ಆದಿದೇವನ ಮನಸ್ಸು ದೇಹಾನಿತ್ಯತೆಗೆ ಜಾಗ್ರತವಾಯಿತು. ಗಾಢ ವೈರಾಗ್ಯವು ಅವನ ಮನಸ್ಸಿನಲ್ಲಿ ನೆಲೆಗೊಂಡಿತು.

ಸ್ತ್ರೀಯ ಅವ್ಯಕ್ತ ಸೌಂದರ್ಯ ಪ್ರಕಾಶನ ಸರಿಯಾಗಿ ಹೊರಹೊಮ್ಮಿದ ಪಾತ್ರವಾಯಿತು. ಸ್ತ್ರೀ ಸೌಂದರ್ಯ ಪುರುಷನ ಯೋಗ ಮಾರ್ಗಕ್ಕೆ ದಾರಿ ತೋರಿದ ಹಣತೆ, ಬೆಟ್ಟವಾಯಿತು. ಅವಳ ಕಟಾಕ್ಷವೇ, ಜ್ಞಾನಾಂಜನದ ಸಲಾಕೆಯಾಯಿತು. ಆತ್ಮನ ಕಟ್ಟುಗಳನ್ನು ಕಿತ್ತೊಗೆಯಿತು.

ಧರ್ಮಪ್ರಸಾರಣೆಗಾಗಿ ರಾಜಪುತ್ರಿಯರು ವಿವಾಹವಿಮುಖರಾಗಿ ಮತಧರ್ಮವನ್ನು ಸ್ವೀಕರಿಸಿ ಮುಕ್ತಿ ಮಾರ್ಗವನ್ನು ಕಂಡರೆಂಬುವುದಕ್ಕೆ ಆದಿ ಪುರಾಣದ ಬ್ರಾಹ್ಮಿ ಸೌಂದರಿಯರನ್ನು ಕೇವಲ ಕಲ್ಪಿತ ಕಾವ್ಯ ಪ್ರತಿಮೆಗಳೆಂದು ಭಾವಿಸದೆ ಅಂದಿನ ಜನಾಂಗದಲ್ಲಿ ಅಲ್ಲಲ್ಲಿ ಕಂಡು ಬರುತ್ತಿದ್ದ ಮಿಂಚುಗಳನ್ನು ಒಟ್ಟುಗೂಡಿಸಿ ಕವಿ ಪ್ರತಿಬಿಂಬಿಸಿದ ತೇಜಃಪುಂಜಗಳೆಂದು ಭಾವಿಸಿದಲ್ಲಿ ಜನತೆಯ ಧರ್ಮ ಶೀಲತೆ ವ್ಯಕ್ತವಾಗುತ್ತದೆ.

ಆಕಾಲದಲ್ಲಿ ಅರಸನು ರಾಜ್ಯಭಾರವನ್ನು ತ್ಯಜಿಸಿ, ಶ್ರಮಣನಾಗಿ ಹೋಗಬಹುದೆಂದು ರಾಜಮಾತೆಯೊಬ್ಬಳು ಶಂಕಿಸಿ ಶ್ರಮಣನನ್ನು ರಾಜದರ್ಶನಕ್ಕೆ ಬಿಡದೆ ತಡೆಯುತ್ತಾಳೆ. ಆದರೆ ಅದೇ ತಾಯಿಯೇ ಮುಂದೆ ಮಗನು ಐಹಿಕ ಭೋಗ ಸುಖವನ್ನು ನಿಸ್ಸಾರ

ದನೆಂದು ತಿಳಿದಾಗ ತಾನೇ ಶ್ರಮಣ ದ[...] ವನ್ನು ತೋರಿಸುತ್ತಾಳೆ. ಪಂಪ ರಾಮ[...] ಣವು ಈ ಸನ್ನಿವೇಶಕ್ಕೆ ಕನ್ನಡ ತಾಯಿ[...] ಳ ಪಾತ್ರ ಪ್ರೇರಿತವಾಗಿರಬಹುದು. ಈ [...] ನ್ನಳ ಭವ್ಯ ಆತ್ಮವಿಕಾಸಕ್ಕೆ ಆಕಾಂಕ್ಷೆ[...] ದೇಹಧಾರಿಗಳಲ್ಲದಿದ್ದರೂ ತಮ್ಮ ಯೋ[...] ತಕ್ಕಂತೆ ಅಂತಃಪುರದ ಸುಂದರ ಸ್ತ್ರೀ[...] ಯರು ಜೀವನದಲ್ಲಿ ಪಾತ್ರವಹಿಸಿದ್ದಾರೆ.

ಕೇವಲ ಬಾಹ್ಯ ಉಪಚಾರ, ಉತ್ತೇ[...] ರಣರಂಗದಲ್ಲಿನ ಪ್ರಚೋದನೆಗಳಿಂದ[...] ತ್ರ [...] ಸ್ತ್ರೀ ಕವಿಯನ್ನು ಉತ್ತೇ[...] ಪಡಿಸಲಿಲ್ಲ. ಧನ ಸಹಾಯಮಾಡಿ[...] ಶಾಂತಿಗೆ ತಕ್ಕ ಸನ್ನಿವೇಶಗಳನ್ನು ಕಲ್ಪಿಸಿ[...] ನಿಶ್ಚಿಂತನಾಗಿ ಜಾಜ್ವ ಶಿಲ್ಪಗಳನ್ನು ಮ[...] ಕಾವ್ಯಲೋಕದಲ್ಲಿ ವಿಹರಿಸಿ ಮಹಾಕ[...] ವನ್ನು ಬರೆಯಲು ಅನುವಿತ್ತಿದಾಳೆ.

ಮಹಾನುಭಾವ ರನ್ನನಿಗೆ ಪ್ರೋತ್ಸಾ[...] ಮತ್ತು ರಾಜಾಶ್ರಯವು ಕವಿಸ್ಥಿಯಾಗಿದ[...] ಜೈನ ಧರ್ಮಕ್ಕೆ ಮಂಜು ಮುಸುಕಿದ್ದ [...] ಯದಲ್ಲಿ ದಾನ ಚಿಂತಾಮಣಿ ಅತ್ತಿಮ[...] ಯೆಂಬುವಳು ಕವಿ ಚಕ್ರವರ್ತಿಯಿಂದ[...] ತ ಪುರಾಣತಿಲಕವನ್ನು ಬರೆಸಿ [...] ಹೊಂಬೆಳಗಿನಿಂದ ಜೈನ ಧರ್ಮಕ್ಕೆ ಒದ[...] ಮಬ್ಬನ್ನು ಹೋಗಲಾಡಿಸಿದಳು.

ಸ್ತ್ರೀ ಆತ್ಮವಿಜಯದ ಪತಾಕೆ ಮ[...] ವಲ್ಲ, ಲೌಕಿಕ ಕೀರ್ತಿ ಕದನದಲ್ಲಿ ಪು[...] ಪ್ರತಾಪವನ್ನು ಪ್ರಚೋದಿಸಿದ ಒರೆಯ[...] ಖಡ್ಗವೂ ಹೌದು! ರಣರಂಗದಲ್ಲಿ ಸತ್ಯ[...] ಜ್ಞೆಯನ್ನು ಜ್ಞಾಪಿಸಿ ಒಂದಕ್ಕೆರಡ[...] ಹುಮ್ಮಸ್ಸನ್ನು ತುಂಬುತ್ತಾಳೆ. ಸ್ತ್ರೀ[...] ಪ್ರಚೋದಕ ವಾಣಿಯನ್ನು ಕೇಳಿದಲ್ಲಿ[...] ಯೂ, ಹುಲಿಯಾಗಬಹುದೆಂದ ಮೇಲೆ[...] ರಣವೀರರು ಅಂಕದ ಕಲಿಗಳಾಗಿ ನಿಭ[...] ಯಿಂದ ಒಡಲನ್ನು ತೃಣವಾಗಿ ಎಣಿಸಿ [...] ದ್ಧ ಮಾಡುತ್ತಿದ್ದುದರಲ್ಲಿ ಸಂದೇಹವೇನ[...]

ಹೊಯ್ಸಳ ಬಲ್ಲಾಳರ ಕಾಲದಲ್ಲಿ [...] ಪತ್ನಿಯರು ಮಾಂಡಲಿಕರಾಗಿ ರಾಜ್ಯವಾ[...] ತ್ತಿದ್ದುದಕ್ಕೆ ಉದಾಹರಣೆಗಳಿವೆ. ರುದ್ರ[...] ನ ಜಗನ್ನಾಥ ವಿಜಯದ ಮಂಗಳ ಶ್ಲೋ[...] ಒಂದರಲ್ಲಿ ರಾಣಿಯೊಬ್ಬಳ ನಾಟ್ಯವಣ[...] ಇದೆ. ಹಾಗೂ ವೀರನು ರಣರಂಗದಿಂದ ಸೋ[...] ತು ಹಿಂತಿರುಗಿದಲ್ಲಿ ಅವನ ಬಾಳ ಜ್ಯೋ[...] ತಿಮಾನದಿಂದ ಬಳೆ ತೊಡಿಸಿ, ಹಾಸ್ಯಮಾ[...] ಮತ್ತೆ ಅವನು ರಣರಂಗಕ್ಕೆ ತೆರಳುವ[...] ಮಾಡುತ್ತಿದ್ದಳು. ಹೇಡಿ ಗಂಡನೊಂ[...] ಬಾಳುವುದಕ್ಕಿಂತ ವೀರ ಸತಿಯಾಗಿ ಸ[...] ಮನ ಮಾಡುವುದು ಅವಳಿಗೆ ಹೆಚ್ಚು ಪ್ರಿ[...] ವಾಗಿತ್ತು. ರಣಧೀರನು ವೀರ ಸ್ವರ್ಗವ[...] ಡರಿದರೆ ಮತ್ತೆ ಅವನ ಸಂಗವನ್ನೇ ಪ[...] ಲು ಈ ಮಾನಸಿ ದೇಹವನ್ನು ಅಗ್ನಿಯ[...] ದಹಿಸಿ ದಿವ್ಯ ದೇಹಧಾರಿಯಾಗಿ ಹಿಂಬಾಲಿ[...] ತ್ತಿದ್ದಳು.

ಇಂತಹ ಪತಿವ್ರತೆಯರ ಸಾವಿರಾರು [...] ಸ್ತ್ರೀಕಲ್ಲುಗಳು ದೊರೆತಿವೆ. ನಮ್ಮ ನಾ[...] ಸ್ತ್ರೀ ಧರ್ಮಕ್ಕೆ ಅಂತರ್ ಸೌಂದರ್ಯದ ಪ[...] ನಿರೂಪಣೆಗೆ ಇದಕ್ಕಿಂತ ಹೆಚ್ಚಿನ ಸಾಕ್ಷಿಬೇಕೆ[...] ಜಯ ಮಹಾಸತಿ ಕನ್ನಡಿತಿ! (ಚಿತ್ರಗು[...]

---


ಜೀವವಿಮೆಗಾಗಿ

ವಿಚಾರಿಸಿರಿ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ

ಲೈಫ್ ಇನ್ಶ್ಯೂರೆನ್ಸ್ ಕೊ, ಲಿಮಿಟೆಡ್.

(ಸ್ಥಾಪನೆ: 1934)

ಚೆಯರ್‌ಮೆನ್: ಶ್ರೀ. ಎಮ್. ಸಿಟಿ. ಎಮ್. ಚಿದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,
ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ:
"ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್"-ಪೋಸ್ಟು ಬಾಕ್ಸ್ ನಂಬ್ರ 142
ಮದ್ರಾಸು.



ESTD. 192[...]

CROWN RUBBER STAMP Co.

MFRS OF RUBBER STAMPS & ENGRAVERS

BALMATTA ROAD MANGALORE

Approved firm by the Govt. of M[...]
Certificated by the Agent of the Go[...]
Cylone & Indian,

ಪ್ರಾಚೀನ ಕಾಲದಿಂದಲೂ ಹಿಂದೂ ವು ಆಕಳನ್ನು ಪೂಜಿಸುತ್ತಾ ಬಂದಿದೆ; ಮಾತೆಯೆಂದು ಗೌರವಿಸುತ್ತಾ ಬಂದಿ ಆಕಳು ದೇವರಿಗೆ ಪ್ರಿಯವಾದುದು ು ಹಿಂದುಗಳು ನಂಬುತ್ತಾರೆ. ಯೋಗಿ ನಾದ ಕೃಷ್ಣನು ತನ್ನ ಜೀವನದುದ್ದ ಗೋಸೇವೆಯನ್ನು ಮಾಡುತ್ತಾ ಬಂದಿ . ಆದ್ದರಿಂದಲೇ ಅವನಿಗೆ ಗೋಪಾಲ ೆಸರು ಬಂತು. ಆಕಳನ್ನು ಇನಿತು ವಿಸುವದರ, ಪೂಜಿಸುವದರ ಹಿನ್ನೆಲೆ ್ಲ ಅಡಗಿರುವ ಗುಟ್ಟೇನು?

ಂದು ದೇಶದ ಪ್ರಗತಿ ಆ ದೇಶದ ಜನರ ೀರಿಕ ದಾರ್ಢ್ಯ ಮತ್ತು ಬೌದ್ಧಿಕ ಉನ್ನ ಮೇಲೆ ಹೊಂದಿಕೊಂಡಿದೆ. ಇಲ್ಲಿ ಬೌ ಉನ್ನತಿ ಎಂಬುದು ಸಾತ್ವಿಕ ಬುದ್ಧಿ ನ್ನು ಕುರಿತಾಗಿ ಹೇಳಿದೆ. ಇಲ್ಲದೆ ಹೋ ಏನಾಗುತ್ತದೆ ಎಂಬುದನ್ನು ನಾವಿಂದು ಾತ್ಯ ರಾಷ್ಟ್ರಗಳೆಡೆಗೆ ನೋಡಿದರೆ ತಿಳಿ ಬಹುದು. “ಅಲ್ಲಿ ದೇವರ ರಾಜ್ಯ ಇಲ್ಲವೇ ಯನ್ ಧರ್ಮದ ಪ್ರಭಾವ ಎರಡೂ ಇ ಅಲ್ಲಿ ಸೈತಾನನ ತಾಂಡವ ನಡಿಯುತ್ತಿದೆ. ಸೈತಾನಿ ಸಂಸ್ಕೃತಿಯಿದೆ” (ಮಹಾತ್ಮಾ ಧಿಯವರು ಹೇಳಿದ ಮಾತು). ಇದಕ್ಕೆ ಣ ತಾಮಸ ಬುದ್ಧಿಯ ಬೆಳವಣಿಗೆ. ಸವನ ಮನೋರಚನೆಯು ಹೆಚ್ಚಿನ ಪಾ ಅತನ ಆಹಾರದ ಮೇಲೆಯೇ ಹೊಂದಿ ುಡಿದೆ ಎಂಬುದು ಸಾಮಾನ್ಯ ಸರ್ವರಿಗೂ ನ ವಿಚಾರ. ಹಾಗಾದರೆ ಮಾನವನ ಶಾ ಕ ಬೆಳವಣಿಗೆಯೂ ಸಾತ್ವಿಕ ಬುದ್ಧಿಯ ವಣಿಗೆಯೂ ಜತೆಗೂಡಿ ಮುಂದುವರಿ

# ನಮ್ಮ ದೇಶದ ಸಂಪತ್ತು-ಆಕಳು

ಲೇಖಕ:–ಶ್ರೀ. ಪಿರ್ಯಾ ಲಕ್ಷ್ಮೀನಾರಾಯಣ ಆಳ್ವ.

ಯಬೇಕಾದರೆ ಅತನ ಆಹಾರವು ಅವೆರಡ ನ್ನೂ ಬೆಳೆಯಿಸುವಂತಹ ಶಕ್ತಿಯುಳ್ಳದ್ದಿರ ಬೇಕು. ದನದ ಹಾಲು ಅಂತಹ ಆಹಾರಗ ಳಲ್ಲಿ ಅತ್ಯುತ್ಕೃಷ್ಟವಾದುದು. ದನದ ಹಾಲಿ ನಲ್ಲಿ ದೇಹವನ್ನು ಬೆಳೆಯಿಸುವ, ಸಾತ್ವಿಕ ಬು ದ್ಧಿಯನ್ನು ಹೆಚ್ಚಿಸುವ ಅಮೂಲ್ಯವಾದ ಗು ಣಗಳು ಅಡಗಿವೆ. ಆದ್ದರಿಂದಲೇ ಅಂತಹ ಆಹಾರ ವಸ್ತುವನ್ನು ನೀಡುವ ದನವನ್ನು ನ ಮ್ಮ ಪೂರ್ವಜರು ಚೆನ್ನಾಗಿ ಸಾಕಿ ಸಲಹಿ, ಅ ದರ ನಿಜವಾದ ಪ್ರಯೋಜನವನ್ನು ಪಡೆದು ಕೊಂಡರು. ಆ ಮೂಲಕ ತಮ್ಮನ್ನೂ ಬೆಳೆ ಯಿಸಿಕೊಂಡು ತಮ್ಮ ಸಂತಾನವನ್ನೂ ಉತ್ತ ಮಗೊಳಿಸಿದರು.

ಪ್ರಾಚೀನ ಕಾಲದಲ್ಲಿ ಭಾರತದ ಪ್ರತಿಯೊಂ ದು ಮನೆಯಲ್ಲಿಯೂ ಉತ್ತಮ ದನಗಳಿರು ತ್ತಿದ್ದವು. ಜನ ಅವುಗಳನ್ನು ಚೆನ್ನಾಗಿ ಸಾಕಿ ದಷ್ಟಪುಷ್ಟ ಮಾಡಿ, ಹೆಚ್ಚು ಹಾಲನ್ನು ಪಡೆ ದು ಉಪಯೋಗಿಸಿಕೊಳ್ಳುತ್ತಿದ್ದರು. ಮಾತ್ರ ವಲ್ಲ, ಅವುಗಳ ಗೊಬ್ಬರವನ್ನು ಉಪಯೋಗಿ ಸಿ, ನಮ್ಮ ಪೂರ್ವಜರು, ಉತ್ತಮ ಬೆಳೆಯ ನ್ನು ಬೆಳಸಿ ಮನೆತುಂಬ ದವಸ ಧಾನ್ಯಗಳ ನ್ನು ತುಂಬಿಡುತ್ತಿದ್ದರು. ಹೀಗೆ ಶಾರೀರಿಕ ಶಕ್ತಿ ಮತ್ತು ಬೌದ್ಧಿಕ ಬೆಳವಣಿಗೆಯ ಜೊ ತೆಗೆ ಹಸನಾದ ಬೆಳೆಯನ್ನು ಬೆಳೆಸಲು ಸಹ ಕಾರಿಯಾದ ಸಾರಯುಕ್ತ ಗೊಬ್ಬರವನ್ನು ಕೂಡಾ ನೀಡುವ ಆಕಳು ಮಾತೆಯಂತೆಯೇ ಪೂಜ್ಯನೀಯವಾದುದು ಎಂದು ಸಾರಿದರು ನಮ್ಮ ಪೂರ್ವಜರು. ಹೀಗೆ ಇನಿತು ಪ್ರಯೋ ಜನಕಾರಿಯಾದ ಆಕಳುಗಳನ್ನು ಸಾಕಿ ಸಲ ಹಬೇಕಾದ ನಮ್ಮ ಕರ್ತವ್ಯವು ನಮ್ಮ ಸ್ಮೃತಿ ಯಿಂದ ಅಳಿಸಿ ಹೋಗದಂತೆ ಪ್ರತಿ ವರು ಷವೂ ನಮ್ಮ ನೆನಪಿಗೆ ತರುವುದಕ್ಕಾಗಿ ವರು ಷಕ್ಕೊಮ್ಮೆ ಅವುಗಳನ್ನು ಪೂಜಿಸಬೇಕೆಂಬ ನಿಯಮವನ್ನು ಹಾಕಿದರು.

ನಮ್ಮ—ಹಿಂದೀಯರ ಒಂದು ಬಹು ದೊ ಡ್ಡ ದೋಷವೇ ಇಂದಿನ ನಮ್ಮ ಅವನತಿಗೆ ಕಾರಣ. ಯಾವುದೇ ಒಂದು ವಿಚಾರವ ನ್ನಾದರೂ ಮನಸ್ಸು ಒಪ್ಪಿದರೆ ಸರಿ, ವಿಮ ರ್ಶಿಸದೆ ಸ್ವೀಕರಿಸಿ ಬಿಡುತ್ತೇವೆ ನಾವು, ನಮ್ಮ ಮತಿಯನ್ನು ಧೃತಿಗೆ ತಲೆಬಾಗಿಸುತ್ತೇವೆ. ವಿಚಾರ ವಿಮರ್ಶೆಗಳ ಕುಂದಣದಲ್ಲಿ ಮನ ಸ್ಸನ್ನು ಕರಗಿಸಿ, ಕರಗಿಸಿ ಪುರಕೊಡುವ ಅ ಭ್ಯಾಸವನ್ನು ನಾವು ಎಂದೋ ತೊರೆದು ಬಿ ಟ್ಟಿದ್ದೇವೆ. ಆದ್ದರಿಂದಲೇ ಇಂದು ನಾವು ಯಾವುದೇ ಒಂದು ವಿಚಾರದ ತಿರುಳನ್ನು ತಿ ಳಿಯದೆ ಸಿಪ್ಪೆಯನ್ನೇ ಅಪ್ಪಿಕೊಳ್ಳುವ ಸ್ವಭಾ ವಕ್ಕೆ ಅಂಟಿಕೊಂಡಿದ್ದೇವೆ. ಈ ಹಾದಿಯ ನ್ನೇ ನಾವು ಆಕಳ ವಿಚಾರದಲ್ಲೂ ಹಿಡಿದಿ ದ್ದೇವೆ. “ಗೋವು ಮಾತೆಗೆ ಸಮಾನವಾದು ದು, ಅದು ಪೂಜ್ಯನೀಯವಾದುದು” ಎಂಬ ನಮ್ಮ ಪೂರ್ವಜರ ಮಾತಿನಲ್ಲಿ ಅಡಗಿರುವ ಸ ತ್ಯವನ್ನು ಅರಿಯದೆ (ಯಾ ಅರಿಯಲು ಕಷ್ಟ ಪಡದೆ) ಅದರ ಬಾಹ್ಯರೂಪವನ್ನೇ ಸತ್ಯವೆಂ ದು—ಸಿಪ್ಪೆಯನ್ನೇ ತಿರುಳೆಂದು—ಭ್ರಮಿಸಿ ನಾವು ಗೋವುಗಳನ್ನು ವರುಷಕ್ಕೊಮ್ಮೆ ಪೂ ಜಿಸುವ ಕಟ್ಟಳೆಯನ್ನು ಮಾತ್ರ ಆಚರಿಸು ತ್ತಾ ಬರುತ್ತಿದ್ದೇವೆ. ದೀಪಾವಳಿಯ ಸಮ ಯದಲ್ಲಿ, ಅಂದಿನ ವರೆಗೆ ಕಣ್ಣೆತ್ತಿ ಕೂಡಾ ನೋಡದ ಎಲುಬು ಚರ್ಮ ಮಾತ್ರವಾಗಿ ರುವ ಆಕಳುಗಳ ಮೈಗೆ ಎರಡೆರಡು ಕೊಡ ನೀರು ಹೊಯ್ದು, ಕುಂಕುಮ ಹಚ್ಚಿ, ಹೂ ಮಾಲೆ ಹಾಕಿ ಆರತಿ ಎತ್ತುತ್ತೇವೆ. ಸಾಕು! ಈ ಮಂಗಳಾರತಿ ನಮ್ಮ ಮೊಗಕ್ಕೆ! ನಮ್ಮ ಅರಿವುಗೇಡಿತನವನ್ನು ಲೋಕಕ್ಕೆ ಬೆಳಗಿ ತೋರಿಸಲಿಕ್ಕೆ! ಗೋವುಗಳನ್ನು ಚೆನ್ನಾಗಿ ಸಾ ಕುವ ಮೂಲಕ ಅವುಗಳನ್ನು ಪೂಜಿಸಿ, ಅ ವುಗಳಿಂದ ನಾವು ಪ್ರಯೋಜನವನ್ನು ಕೂ ಡಾ ಪಡೆದುಕೊಳ್ಳುವುದನ್ನು ತೊರೆದು ಆರ ತಿ ಬೆಳಗುವ ಮಹಾಕಾರ್ಯವನ್ನು ಮಾತ್ರ ನಾವು ಇಂದು ಉಳಿಸಿಕೊಂಡಿದ್ದೇವೆ.

ಮುಸಲ್ಮಾನ ಬಂಧುಗಳು ಹಸುವನ್ನು ಕೊಲ್ಲುವುದನ್ನು ಕಂಡರೆ ಉರಿದು ಬೀಳು ತ್ತಾರೆ ನಮ್ಮ ಹಿಂದೂ ಬಾಂಧವರು. ಈ ಕಾ ರಣದಿಂದಾಗಿಯೇ ಎಷ್ಟೋ ಜಗಳಗಳು ನಡೆ ದಿವೆ. ಹಸುರಕ್ತದ ಬದಲು ನರರಕ್ತ ಕೂ

## ನೋಟಿಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ.

O. S. No. 492/1947.

R. I. A. No. 2418/1949.

ಮಂಮಮ್ಮಂಜಿ ಯಾನೆ ಮುಹಮ್ಮದ ಬ್ಯಾರಿ ವಾದಿ—ಅರ್ಜಿದಾರ.

P. M. ಮೀನಾಕ್ಷಿ ಅಮ್ಮ ಸಹಾ. ಪ್ರತಿ ವಾದಿರು—ರೆಸ್ಪಾಂಡೆಂಟ್ರು.

(1) P. M. ಮೀನಾಕ್ಷಿ ಅಮ್ಮ. ನಾರಾ ಯಣಿ ಅಮ್ಮನ ಮಗಳು ವ, ಸ್ಟೇಶನ್‌ಮಾ ಸ್ಟರ ಸೋನಾದತ್ತ ಕೋರಾ ಎಂಬವರ ವಿಧ ವೆ. (2) ಸೌಮಿನಿ. (3) ಬಾಲಕೃಷ್ಣ. (4) ಶ್ರೀಧರನ್. (5) ವಿಡಿಯನ್. (6) ಚಂದ್ರ ಶೇಖರನ್. (7) ಶಾಂತಾ–1ನೇ ರೆಸ್ಪಾಂಡೆಂ ಟಳ ಮಕ್ಕಳು. 6-7ನೇಯವರು ಮ್ಯಾನರ ರು. ಕ್ಷೇಮಚಿಂತಕಳು ವ, ಗಾರ್ಡಿಯನ್ ತಾಯಿ 1ನೇ ರೆಸ್ಪಾಂಡೆಂಟಳು P. M. ಮೀ ನಾಕ್ಷಿ ಅಮ್ಮ. ಚಿರಕಲ್ ತಾಲೂಕು ಕಂ ಟೋನ್‌ಮೆಂಟ್ ದೇಶಂ ಪಾಯಕ್ಕಿಲ್ ಎಂಬ ಲ್ಲಿರುವವರು.

ಪ್ರಿಲಿಮಿನರಿ ಡಿಕ್ರಿಗೆ ಅನುಸರಿಸಿ ಫೈನಲ್ ಡಿಕ್ರಿ ಬಗ್ಗೆ ಅರ್ಜಿದಾರನು ದಾಖಲು ಮಾಡಿದ ಸದ್ರಿ ಅರ್ಜಿಯು ತಾರೀಕು 8-4-1950ಕ್ಕೆ ಇಟ್ಟಿರುವ ಸಂಗ್ತಿ ತಿಳಿಸೋಣಾಗಿಯದೆ.

Sd/ **P. Ahmad.**

Advocate for Petitioners.

ಕಾಸರಗೋಡು, 24-3-50.

## ಪ್ರಕಟಣೆ

ದಕ್ಷಿಣ ಕನ್ನಡ ಜಿಲ್ಲಾ ಉಡುಪಿ ತಾಲೂಕು ಂಜೆ ಗ್ರಾಮದ ಸ್ಥಾಪನಾ ನಂಬರ 521 ಮಂದಾರ್ತಿ ಶ್ರೀದುರ್ಗಾ ಪರಮೇಶ್ವರಿ ತ್ರವರ ದೇವಸ್ಥಾನದ ಟ್ರಸ್ಟಿಗಳು ಜಾ ರ ಮಾಡುವದೇನಂದರೆ:—

ಮೇಲ್ಕಂಡ ದೇವಸ್ಥಾನದ ಗರ್ಭಗೃಹದ ಜೀರ್ಣೋದ್ಧಾರ ಮಾಡಬೇಕಾಗಿ ನಿಶ್ಚಯಿಸಿ, ನ್ಯ ಶ್ರೀ ಮದ್ರಾಸ H.R.E. ಬೋರ್ಡ ಶನರವರ ನಂಬ್ರ 4238 Dated -8-49ನೇ ಓರ್ಡರ ಹೊಂದಿ ಮಹಾಜನ ಹಾಯವನ್ನು ಅಪೇಕ್ಷಿಸಿ ಊರು ಪರ ರುಗಳಿಗೆ ಟ್ರಸ್ಟಿಗಳು ಬರತಕ್ಕವರಿದ್ದಾರೆ. ರಿಣ ಮಹಾಜನರು ಟ್ರಸ್ಟಿಗಳಾದ ನಮ್ಮ ತಿ ಯಾರಾದರೂ ಬಂದಲ್ಲಿ ಸ್ವಹಸ್ತ ಪರ ಗಳಿಂದ ತಮ್ಮಿಂದ ಕೂಡಿದಷ್ಟು ಹೆಚ್ಚಿನ ವನ್ನು ಸಹಾಯ ನಿಧಿಯಾಗಿ ಒದಗಿಸಿ ಟ್ಟು ಶ್ರೀದೇವಿಯ ಕೃಪಾಕಟಾಕ್ಷಕ್ಕೆ ಪಾ ಾಗಬೇಕಾಗಿ ವಿನಂತಿ.

ಮತ್ತು ದೇವಸ್ಥಾನದ ಮೊಹರೂ ಟ್ರಸ್ಟಿ ದಸ್ಕತೂ ಇರುವ ಡುಪ್ಲಿಕೇಟ ರಶೀದಿಯ ರತು ಹಣಗಳನ್ನು ಕೊಡಕೂಡದಾಗಿ ಈ ಲಕ ಜಾಹೀರುಮಾಡಿಕೊಂಡಿರುತ್ತೇವೆ.

ರೇಷ ಹೆಗ್ಗಡೆ, ಮೆನೇಜಿಂಗ ಟ್ರಸ್ಟಿ

ರಾಮಣ್ಣ ಅಡಿಗ } ಜೊಂಟ
A. M. ಶ್ರೀನಿವಾಸರಾವ್ } ಟ್ರಸ್ಟಿ.

ಂದಾರ್ತಿ ದೇವಸ್ಥಾನ

ೀಕು 15-3-1950


## — ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿ ಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳ ಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

**ಪಥ್ಯ:**—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

**ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ**

**ಆಯುರ್ವೇದ ಔಷಧಾಲಯ, ಗದಗ-ಸಿಟಿ.**

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ಕಮಲಾಪುರ, ಕೆಮಿಸ್ಟ, ಹಾವೇರಿ, ಬ್ಯಾಡಗಿ

## ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

**೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ**

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿ ಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆ ಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:–ಬಾಗಲಕೋಟೆ ಫಾರ್ಮಸಿ, ಧಾರವಾಡ:–ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

**ಆಯುರ್ವೇದ ಔಷಧಾಲಯ. ಗದಗ.**

## ವಿವಿಧ ಪಾತ್ರೆಗಳು



ಯಾವತ್ತೂ ವಿಧ ದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗ ಳ ವಿವಿಧ ಪಾತ್ರೆ ಗಳೂ ಸಾಮಾನು ಗಳೂ ರಖಂ ಅಗ ಿ ಚಿಲ್ಲರೆಯಾಗಿಯೂ ದೊರೆಯುತ್ತವೆ.

**ಕಲ್ಯಾಂಜೆ ವ್ಯಾಸಾಚಾರ್ಯ,**

**ರಥಬೀದಿ, ಉಡುಪಿ.**

## ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಘಾಯಗಳು, ಬಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಳಿಗೂ ಸಿದ್ಧೌಷಧ.

REGD

ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

**ಅಮೃತಾಂಜನ ಲಿಮಿಟೆಡ**

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ದಾ ಹರಿದಿದೆ! ಆದರೆ ಗೋಪೂಜಕರಾದ ನಾವೇ ಅವುಗಳನ್ನು ಉಪವಾಸ ಹಾಕಿ, ಚಿತ್ರಹಿಂಸೆಯಿಂದ ಅವು ಸೊರಗಿಸೊರಗಿ ಸಾಯುತ್ತಿರುವಾಗ ನಮಗೇನೂ ದುಃಖವಾಗುವುದಿಲ್ಲ! ಬಡಕಲಾದ ಹಸುಗಳನ್ನು ನಾವೇ ನಾಲ್ಕು ಕಾಸಿನ ಆಶೆಗೆ ಮುಸಲ್ಮಾನ ಬಂಧುಗಳಿಗೆ ಮಾರಿ ಅವರ ಕಾಣದ ಕತ್ತಿಗೆ ಬಲಿ ಕೊಡುವಾಗ ನಮ್ಮ ಗೋಪೂಜಕರಿಗೆ ಅಸಹ್ಯ ಹುಟ್ಟುವುದಿಲ್ಲ. ಅಂತಹ ಕಾಲದಲ್ಲಿ ಆವರ ಕರುಣೆಯು ಕೊಳ ಹೇಗೆ ಬತ್ತಿರುತ್ತದೋ ದೇವರೇ ಬಲ್ಲ! ಎಂತಹ ಕರುಣಾಜನಕ ದೃಶ್ಯವಿದು! ಒಂದು ಕಡೆ ಪಶುಗಳನ್ನು ಕೊಲ್ಲುವವರೊಡನೆ ಯುದ್ಧ ಹೂಡುವುದು; ಇನ್ನೊಂದೆಡೆ ಅವುಗಳನ್ನು ಕೊಲ್ಲುವವರಿಗಿಂತಲೂ ನಿಷ್ಕರುಣೆಯಿಂದ ಚಿತ್ರಹಿಂಸೆಯಿಂದ ಕೊಲ್ಲುವುದು!

ಯಾವ ಹಳ್ಳಿಗಳಲ್ಲಿ "ಕಾಲ್ನಡೆಯೇ (ಜಾನುವಾರು) ನಿಜವಾದ ಸಂಪತ್ತು" ಎಂಬ ಭಾವನೆಯಿತ್ತೋ ಅಂತಹ ಹಳ್ಳಿಗಳಲ್ಲಿಂದು ಕಾಲ್ನಡೆಯೇ ಕಂಡುಬರುತ್ತಿಲ್ಲ. ಯಾವ ಹಳ್ಳಿಗಳಲ್ಲಿ "ಗೋವಿದ್ದರೆ ನೋವಿರೋದು" ಎಂಬ ಭಾವನೆ ಇತ್ತೋ ಅಂತಹ ಭಾವನೆಯೀಗ ಅಳಿದು ಅವರಲ್ಲಿ 'ಏನಿಲ್ಲದಿದ್ದರೂ ನಾವಿರಬಲ್ಲೆ'ವೆಂಬ ಭ್ರಾಂತಿ ಒಡಮೂಡಿದೆ. ನಮ್ಮ ಹಳ್ಳಿಗರು ಮೊದಲು (ಮಧ್ಯದ ಅಂಧಕಾರ ಯುಗದಲ್ಲಲ್ಲ) ತಮ್ಮಲ್ಲಿ ಬೇಕಾದಷ್ಟು ಹಸುಗಳನ್ನು ಸಾಕಿ ಸಲಹಿ ಆ ಹಾಲನ್ನು ಕುಡಿದು ದಷ್ಟಪುಷ್ಟವಾಗಿದ್ದರು. ಆದರೆ ಇಂದು ಎಲ್ಲಾ ತಿರುಗುಮುರುಗು. ಹಳ್ಳಿಗಳಲ್ಲಿ ಕಾಲ್ನಡೆಯೇ ಉಳಿದಿಲ್ಲ. ರೈತನ ಬಳಿ ಆತನ ಬೇಸಾಯಕ್ಕೆ ಬೇಕಾದುದಕ್ಕಿಂತಲೂ ಒಂದು ಜತೆ ಕಡಿಮೆ ಎತ್ತುಗಳಿವೆ; ಅವುಗಳ ಹೊರತು ಬೇರೆ ಕಾಲ್ನಡೆಗಳೇ ಇಲ್ಲ. ಅತನೊಡನೆ, ಸತ್ತೂ ದುರದೃಷ್ಟವಶಾತ್ ಉಳಿದಿದ್ದ ಕೆಲ ಕಾಲ್ನಡೆಗಳು ನಾಲ್ಕು ಕಾಸಿಗೆ ಆರು ಕಾಸಿಗೆ ಮುಸಲ್ಮಾನ ಬಂಧುಗಳ ಪಾಲಾಗುತ್ತಿವೆ; ಹಳ್ಳಿಯ ನಿಜವಾದ ಸಂಪತ್ತು ಶೂನ್ಯವಾಗತೊಡಗಿದೆ. ಹಟ್ಟಿಯಲ್ಲಿ ಕಾಲ್ನಡೆಯಿಲ್ಲ ಆದ್ದರಿಂದ ರೈತನಿಗೆ ಬೇಕಾದಷ್ಟು ಗೊಬ್ಬರ ಸಿಕ್ಕುತ್ತಿಲ್ಲ. ಪರಿಣಾಮವಾಗಿ ಬೆಳೆಯು ಫಲವತ್ತಾಗಿ ಬೆಳೆಯುತ್ತಿಲ್ಲ. ಆದರೆ ನಾವು ವಿಜ್ಞಾನ ಯುಗದ ಜಗಜಟ್ಟಿಗಳು! ಪ್ರಕೃತಿ ನಮ್ಮ ಕೈಯ ಮೇಲಿನ ನೆಲ್ಲಿಕಾಯಿ! ಎಲ್ಲವನ್ನೂ ಗೆದ್ದು ನಿಲ್ಲಬಲ್ಲ ಆಳುಗಳು ನಾವು!


ಎಲ್ಲಾ ತರದ ಶಾಸ್ತ್ರೀಯ
ಆಯುರ್ವೇದ ಔಷಧಗಳಿಗೆ
'ಮಹಾಜನ'
ಕಾಸರಗೋಡು
ಇವರ ತಯಾರಿಕೆಗಳನ್ನು
ವಿಚಾರಿಸಿರಿ.



ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.
1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.
The Moolky Bank Ltd.,
Moolky, S. K.


ಗೊಬ್ಬರ ಇಲ್ಲದಿದ್ದರೆ ನಮ್ಮ ಪತ್ತೆ ಸಿಕ್ಕಿಟು ಇದೆ, ಪ್ಲೋಸ್ಫೈಟು ಇದೆ; ಇನ್ನು ಸಿನಿ ಸೋ— ಏಟುಗಳಿವೆ ... ವೈಜ್ಞಾನಿಕ "...ಏಟು"ಗಳೇ ರೈತನ ಬೆನ್ನಿಗೆ ಏಟುಗಳಾಗ ಹತ್ತಿವೆ. ತನ್ನ ಕಾಲ್ನಡೆ, ತನ್ನ ಸೊಪ್ಪುಗಳಿಂದಲೇ ಅನಾಯಾಸವಾಗಿ ಉತ್ತಮ ಗೊಬ್ಬರ ಮಾಡಿ ಕೃಷಿ ಮಾಡುತ್ತಿದ್ದ ರೈತ ಹಣಕೊಟ್ಟು ಈ "—ಏಟು"ಗಳನ್ನು ಕೊಂಡುಕೊಂಡು ಎಷ್ಟು ಕಾಲ ಕೃಷಿಮಾಡಿಯಾನು? ಎಷ್ಟು ಕಾಲ ಬದುಕ್ಯಾನು? ಆತನ ಕೃಷಿಯಿಂದ ಬಂದ ಹಣವೆಲ್ಲ ಆ "—ಏಟು" ಗಳಿಗೆ ಸಲ್ಲಿಸುವುದಕ್ಕಾಗಿಯೇ ಸರಿಯಾದೀತು! ಇಲ್ಲಿ ನಾವು ವೈಜ್ಞಾನಿಕ ಗೊಬ್ಬರದ ದೂಷಣೆ ಮಾಡುತ್ತಿಲ್ಲ ರೈತನು ಸ್ವಾವಲಂಬಿಯಾಗಿ ತನ್ನ ಗೊಬ್ಬರವನ್ನು ತಾನೇ ಉತ್ಪತ್ತಿ ಮಾಡಿಕೊಂಡು ಬಾಳಬೇಕು ಎಂಬುದೇ ನಮ್ಮ ಆಶೆ. ಒಂದು ವೇಳೆ ತನ್ನ ಗೊಬ್ಬರ ಆತನಿಗೆ ಕಡಿಮೆಯಾದರೆ ಪೂರಕವಾಗಿ ಆತ ವೈಜ್ಞಾನಿಕ ಗೊಬ್ಬರಗಳನ್ನು ಉಪಯೋಗಿಸಬಹುದು. ಆದರೆ ವೈಜ್ಞಾನಿಕ ಗೊಬ್ಬರವನ್ನೇ ನಂಬಿ ನಡೆದರೆ ಆತ ಮುಗ್ಗರಿಸ್ಯಾನು. ಅಲ್ಲದೆ ಅವನ ಜೀವನದ ಜೀವಾಳವಾಗಿರುವ ಸ್ವಾವಲಂಬನ ಶಕ್ತಿಯು ಮಾಯವಾಗಿ ಆತ, ಆತನ ಸಂಸಾರ, ಜತೆಗೆ ದೇಶದ ಅಡಿಗಲ್ಲಾದ ಹಳ್ಳಿಗಳೇ ಪತನ ಹೊಂದಿಯಾವು. ಸ್ವಾವಲಂಬನವೇ ನಿಜವಾದ ಸ್ವಾತಂತ್ರ್ಯ!

ಹಳ್ಳಿಯ ಕೆಲ ಮನೆಗಳಲ್ಲಿ ... (ಪಂಕ್ತಿಗಳಲ್ಲಿ ಕೂಡಾ ... ) ಇನ್ನೂ ಗೋವನ್ನು ಸಾಕುತ್ತಿದ್ದಾರೆ. ಆದರೆ ಅದು ಹಾಲು ಕುಡಿಯಲಿಕ್ಕಾಗಿಯಲ್ಲ, ಹಾಲು ಮಾರಿ ಹಣ ಸಂಪಾದಿಸುವುದಕ್ಕಾಗಿ. (ಹಣ ಸಂಪಾದಿಸಿ?) ಆ ಜನಗಳು ಹಾಲನ್ನು ಹಿಂಡಿ ಮನೆಯಲ್ಲಿ ಮಕ್ಕಳಿಗೂ ಕೂಡಾ ಒಂದು ಬೊಟ್ಟೂ ಉಳಿಸಿಕೊಳ್ಳದೆ, ಹಣದಾಶೆಗಾಗಿ ಹೋಟೇಲುಗಳಿಗೆ (ಹೋಟೇಲು=ಆಧುನಿಕ ನಾಗರೀಕತೆಯ ಭೂತ; ಹಳ್ಳಿಯನ್ನು ಹಿಂಡಿ ಹಿಪ್ಪೆ ಮಾಡಲು ಕಳುಹಿಸಿದ ಒಂದು ಗಣ) ಮಾರುತ್ತಾರೆ. ಆದರೆ ಆ ಹಣವನ್ನು ತಾವು ಹೋಟೇಲುಗಳಿಗೆ ಹೋಗಿ ಚಾ ಕಾಫಿ ಕುಡಿದು, ಮಕ್ಕಳನ್ನೂ ಎತ್ತಿಕೊಂಡು ಹೋಗಿ ಕುಡಿಸಿ, ಪುನಹ ಹೋಟೇಲಿನ ಖಜಾನೆಗೇ ಸೇರಿಸುತ್ತಾರೆ. ಹೀಗೆ ಅಮೃತವನ್ನು ಮಾರಿ ವಿಷವನ್ನು ಪಾನ ಮಾಡುವುದು ಇಂದಿನ ನಾಗರಿಕ ಲೋಕದ ಒಂದು "ಫ್ಯಾಶನ್" ಆಗಿಬಿಟ್ಟಿದೆ. ಈ "ಫ್ಯಾಶನ"ನ್ನು ದೂಷಿಸಹೊರಟವ ಹುಚ್ಚನಾದಾನು! ಇರಲಿ. ಮೇಲೆ ಹೇಳಿದ ರೀತಿಯಲ್ಲಿ ಅಂದರೆ ಹಾಲು ಮಾರಿ ಬಂದ ಹಣವನ್ನು ಪುನಹ ಚಾ ಕುಡಿದು ಹೋಟೇಲಿಗೇ ಸೇರಿಸಿ ಬಿಡುವಂತಹ ಅನೇಕ ವಿಷಮ ಚಕ್ರಗಳಲ್ಲಿ ಸಿಲುಕಿ ಬಿಡಿಸಿಕೊಳ್ಳಲಾರದೆ, ಒಂದು ಕಾಲದಲ್ಲಿ ಸ್ವಾವಲಂಬಿ ಸ್ವಯಂಪೂರ್ಣಗಳಾಗಿದ್ದ ಹಳ್ಳಿಗಳಿಂ


Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya.



"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ
ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಥಾನಿಕರು:—ಡಾ। ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.



BUY INDIAN! ENCOURAGE INDIAN INDUSTRY!
ಅಮಲಕೀ ತೈಲ AMALAKI HAIR OIL
ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.
REGD.

Highly perfumed and medicated, worth using daily by one and all, keeps hair black and relieves head-ache etc.
TRADE MARK
Manufactured by:-
Swadeshi Oushadhi Bhandara (Regd.)
KUNJAL P. O. Brahmavar, S. K.


ಮ ನಿರ್ವೀರ್ಯವಾಗಿ, ನಿರ್ಬಲವಾಗಿ, ... ವಲಂಬಿಗಳಾಗಿ ಜೋಲು ಹೊಡೆಯುತ್ತಿವೆ! ಈ ದುರಂತ ಚಿತ್ರವನ್ನು ಕಂಡವ... ನ್ನು ಕಣ್ಣೀರು ಕರೆಯದಿರದು.

ನಮ್ಮ ಇಂದಿನ ಅರಿವುಗೇಡಿ ಅಲಸ... ಪ್ರಯೋಜನವನ್ನು ಪರಕೀಯರು ಚೆ... ಪಡೆಯುತ್ತಿದ್ದಾರೆ. ನಮ್ಮೊಡನೆ ಹಾ... ಕೊರತೆ ಇದ್ದುದರಿಂದ ಅವರು ಅಗ್ಗದ... ಲ್ಲಿ ಡಬ್ಬಿ ಹಾಲನ್ನು ಪೂರೈಸುತ್ತಿದ್ದಾರೆ... ವು ನೊಣಗಳಂತೆ ಅವುಗಳನ್ನು ಮುತ್ತಿ... ವೆ. ಪರಿಣಾಮವಾಗಿ ನಮ್ಮ ದೇಶದ ಸಂಪ... ನೀರಿನಂತೆ ಪರದೇಶಗಳಿಗೆ ಹರಿಯುತ್ತಿ... ಈಗೀಗ ಕೆಲ ಆಧುನಿಕ ತರುಣಿಯರು ... ಕ್ಕಳಿಗೆ ಮೊಲೆಹಾಲನ್ನು ಬಹು ಬೇಗನೆ ... ಲ್ಲಿಸಿ ಈ ಡಬ್ಬಿ ಹಾಲನ್ನು ಕೊಡಹತ್ತಿರು... ರಂತೆ. ಈ ಡಬ್ಬಿ ಹಾಲಿನಿಂದ ಬೆಳೆದು ಬ... ನಮ್ಮ ಮುಂದಿನ ಜನಾಂಗದ ಶಾರೀರಿಕ ... ಲವೆನಿತಿದ್ದೀತು? ಬೌದ್ಧಿಕ ಬೆಳವಣಿಗೆ ಎ... ದ್ದೀತು? ಒಟ್ಟಿನ ಮೇಲೆ "ನಾವು ಜಾಣ... ಪ್ರಗತಿಶೀಲರು! ನಮ್ಮ ಪೂರ್ವಜರು ... ರು" ಎಂಬ ಭಾವನೆ ನಮ್ಮಲ್ಲಿ ನೆಲೆಯೂ... ದೆ, ಇದು ನಮ್ಮ ಮೆದುಳಿಗೆ ಹಿಡಿದ ಒಂ... ಮಹಾರೋಗ.

ಆಧುನಿಕ ಮಹರ್ಷಿ ಮಹಾತ್ಮಾಗಾಂ... ಯವರು ಈ ದಿಸೆಯಲ್ಲಿ ಬಹಳ ದುಡಿ... ರು. ಅವರು ನಮ್ಮ ಪ್ರಾಚೀನರ ದೃಷ್ಟಿ... ನ್ನು ತಮ್ಮ ವಿವೇಕದ ಒರೆಗೆ ಒರೆದು ನೋ... ಡಿ ಸರಿಯೆಂದು ತಿಳಿದು ಪುಷ್ಟೀಕರಿಸಿದ... ರೆ. ಆಕಳಿನ ಪರವಾಗಿ ಅವರೊಮ್ಮೆ ಹೀ... ಹೇಳಿದರು: "ಮಾನವ ಕೋಟಿಯ ಕೆಳಗಿ... ಪ್ರಾಣಿಗಳಲ್ಲಿ ಆಕಳೆಂಬುದೇ ಅತ್ಯಂತ ಪು... ಪ್ರಾಣಿ. ಎಲ್ಲಾ ಮಾನವೇತರ ಪ್ರಾಣಿಗ... ಪರವಾಗಿ ಆಕಳು ಮಾನ... ನೊಡನೆ ನ್ಯಾಯಕ್ಕಾಗಿ ಮೊರೆಯಿಡುವುದು... ನನ್ನ ಮಟ್ಟಿಗೆ ಆಕಳು ಒಂದು ಕರು... ಕಾವ್ಯ. ನಾನು ಆಕಳನ್ನು ಪೂಜಿಸು... (ಪೋಷಿಸುವೆ) ಇಡೀ ಜಗತ್ತೇ ವಿರುದ್ಧ ನಿಂ... ರೂ ನಾ ಆ ಪೂಜೆಯನ್ನು ಸಮರ್ಥಿಸುವೆ.

ಇಂದು ದೇಶದ ಹಲವಾರು ಕಡೆಗಳ... ಗೋ ಸೇವಾ ಸಂಘಗಳು ತಲೆಯೆತ್ತಿವೆ... ಡಾಲ್ಮಿಯರಂತಹ ಕೋಟ್ಯಾಧೀಶ್ವರರೂ ಇಂ... ದು ಈ ಕೆಲಸಕ್ಕೆ ಕೈ ಹಾಕಿದ್ದಾರೆ. ಅದಕ್ಕೆ ಕಾರಣ ಮಹಾತ್ಮಾ ಗಾಂಧಿಯವರ ಅವಿರತ ಪ್ರಯತ್ನ. ಆದರೂ ಗೋ-ಸೇವೆಯು ಬಹಳ ವಳಿ ಅವರು ಆಶಿಸಿದಷ್ಟು ಬೆಳೆದಿಲ್ಲ. ಈಗ ಈ ದಿಸೆಯಲ್ಲಿ ಕೆಲಸ ಮಾಡುತ್ತಿರುವ ವ್ಯಕ್ತಿಗಳಲ್ಲಿ ಹೆಚ್ಚಿನವರು ಮಹಾತ್ಮಾಗಾಂಧಿಯವರ ಉದ್ದೇಶ ಮತ್ತು ಹಾದಿಯಲ್ಲಿ ನಡೆಯುತ್ತಿಲ್ಲ. ಕೆಲವೇ ಮಂದಿಯನ್ನು ಬಿಟ್ಟರೆ ಉಳಿದವರು ಇಂದಿನ ಪತ್ರಿಕೆಗಳ ಅಗ್ಗದ ಕೀರ್ತಿಗಾಗಿ ಕೆಲಸ ಮಾಡುತ್ತಿದ್ದಾರೆ. ಕೆಲ ಗೋಸೇವಾ ಸಂಘಗಳ ಕಾರ್ಯಾಲಯಗಳು ದೊಡ್ಡ ದೊಡ್ಡ ಶಹರುಗಳಲ್ಲಿಯೇ ಇವೆ ಎಂಬುದೇ ಮೇಲಿನ ಮಾತಿನ ಸತ್ಯತೆಯನ್ನು ಎತ್ತಿ ತೋರಿಸಬಲ್ಲುದು.

ಯಾವ ಪವಿತ್ರ ಉದ್ದೇಶವನ್ನಿಟ್ಟುಕೊಂಡು ನಮ್ಮ ಪೂರ್ವಜರು ಗೋವನ್ನು ಮಾತೆಯೆಂದು ಗೌರವಿಸಿ ಪೂಜಿಸಿದರೋ ಅದು ಈಗ ಮಣ್ಣುಗೂಡಿ ಅದರ ಗೋರಿಯ ಮೇಲೆ ಯಾವುದೋ ಒಂದು ಗಣವು ವಿಕಟಾಕಾರವಾಗಿ ನರ್ತಿಸುತ್ತಿದೆ!


ಭಾರದ್ವಾಜರ
ಇಂಗ್ಲಿಷ್ × ಇಂಗ್ಲಿಷ್ × ಕನ್ನಡ
ಡಿಕ್ಷ್‌ನರಿಗಳು
ದೊರೆಯುತ್ತವೆ.
ಬೆಲೆ ರೂ. 5 0 0
ಸಿರಿಗನ್ನಡ ಅರ್ಥಕೋಶ 4 8 0
ನವಯುಗ ಪ್ರೆಸ್, ಉಡುಪಿ.
ಅಥವಾ
ನವಯುಗ ಆಫೀಸು, ಉಡುಪಿ.


EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 3618

Estd: 1921 ಸ್ಥಾಪನೆ

30ನೇ ವರ್ಷ
6—4—1950

LICENCE No. 31
Licensed to Post without Prepayment

FOUNDER:
Sri. A. B. Shetty
Minister for Agriculture & Veterinary

ನವ ಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30 ವಾರ ೩೨

NAVAYUGA WEEKLY UDIPI, S. K.
Post Box No. 22

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol 30 No. 32

# ಇಂದಿನ ನಂ. 1ನೇ ವೈರಿ-ಆತ್ಮವಂಚನೆ!

ಸಂಶುದ್ಧತೆಯ ಹೆಸರಿನಿಂದ ಕಳಂಕ-ತ್ವದ ಸೋಗಿನಿಂದ ಸುಳ್ಳು—ನಾಗರಿಕತೆಯ ನಟನೆಯಿಂದ ಬರ್ಬರತೆ-ನಡೆಯುತ್ತಿರುವುದೇ ನಮ್ಮಲ್ಲಿ ಅಧಿಕವೆನ್ನಬಹುದು. ಮರ್ಯಾದೆ, ಮಹಾತ್ಮರ, ಸಭ್ಯತೆಯ, ಸದಾಚಾರದ, ಉಚ್ಚ ಧ್ಯೇಯ ಧೋರಣೆಗಳ ಹೆಸರಿನಿಂದ ನಡೆಯುತ್ತಿರುವಷ್ಟು ಅಕೃತ್ಯ, ಆತ್ಮವಂಚನೆ, ಅನಾಗರಿಕತೆ, ದುರಾಚಾರ, ಸಂಕುಚಿತ ಸ್ವಾರ್ಥ ಸ್ಪರ್ಧೆ, ಇತ್ಯಾದಿ ಇತ್ಯಾದಿ ಬೇರೆ ಯಾವ ವಿಧಾನವನ್ನಾಧರಿಸಿಯೂ ನಡೆಯುತ್ತಿಲ್ಲ.

ಸರ್ವ ರಕ್ಷಣೆ ಮತ್ತು ಸರ್ವ ಸಮಾನತೆಗಾಗಿ ಇರುವ ಮತ ಧರ್ಮಗಳ ಹೆಸರಿನಿಂದ ಬೇರಾವ ದೆಸೆಯಿಂದಲೂ ಆಗದಷ್ಟು ನರಹತ್ಯೆಗಳು, ಸುಲಿಗೆ, ಅತ್ಯಾಚಾರಗಳು ಇಂದು ಬಂಗಾಳದಂತಹ ಕಡೆಗಳಲ್ಲಾಗುತ್ತಿವೆ.

ಅಶಾಂತಿ, ದುರ್ಭಿಕ್ಷೆಗಳೇ ಕಾರಣವಾಗಿರುವ ಮಹಾ ಯುದ್ಧವು ಎರಡು ಬಾರಿ ನಡೆದಿದ್ದರೂ, ಮೂರನೇ ಮಹಾ ಪ್ರಳಯದ ಸಿದ್ಧತೆಯೀಗ ಭರದಿಂದ ನಡೆದಿರುವುದೂ "ಶಾಂತಿ, ಭದ್ರತೆಯ ಸ್ಥಾಪನೆಗಾಗಿ" ಎಂಬ ಬಿಲ್ಲೆ ಹಚ್ಚಿಕೊಂಡೇ.

ಆತ್ಮಬಲ ಮತ್ತು ಆತ್ಮಶುದ್ಧಿಯನ್ನೇ ಆಧರಿಸಿದ್ದ ಮಹಾತ್ಮಾಜೀಯ ಹೆಸರು ಹೇಳಿಕೊಂಡು ಈಗ ನಡೆದಿರುವಷ್ಟು ಸ್ವಪರಘಾತುಕ ಕಾರ್ಯಗಳು, ಆತ್ಮವಂಚಕ ಮಾತು ಕೃತಿಗಳು ಬೇರೆ ಯಾವ ವಿಧಾನವನ್ನಾಧರಿಸಿಯೂ ನಡೆದಿಲ್ಲವೆನ್ನಬಹುದು.

'ದೇವರ ಸಾಕ್ಷಿಯಾಗಿ ಸತ್ಯವನ್ನೇ ಹೇಳುವ' ಕೋರ್ಟುಗಳಲ್ಲಿ ಕೇಳಬರುತ್ತಿರುವಷ್ಟು ಅಸತ್ಯ ಮಾತು-ಕಥೆಗಳು ಪ್ರಾಯಶಃ ಬೇರೆ ಕಡೆ ದೊರೆಯಲಾರವು.

'ಬ್ರಹ್ಮಚಾರಿ' ಪಟ್ಟಕ್ಕೇರಿರುವಲ್ಲಿ ತೋರಿಬರುವಂತಹ ಸ್ತ್ರೀಲಂಪಟತನವನ್ನು ಸಾಮಾನ್ಯರಲ್ಲಿ ಕಾಣಲಾರೆವು.

ಪವಿತ್ರ ಜಲಗಳೆಂದು ಮಾನ್ಯವಾಗಿರುವ ಕೆರೆ ಸರೋವರಗಳ ನೀರಿನಲ್ಲಿರುವ ಕೊಳಕು ಬೇರೆಡೆಗಳಲ್ಲಿ ಕಂಡುಬರಲಾರದು. ಪುಣ್ಯ ಕ್ಷೇತ್ರಗಳೆಂದು ಹೆಸರಾಗಿರುವ ದೇವಾಲಯಗಳ ಸುತ್ತಮುತ್ತ ಇರುವಂತಹ ದುರ್ಗಂಧ ಇತರ ಭವನಗಳ ಪರಿಸರದಲ್ಲಿರುವುದು ಅಸಾಧ್ಯ.

ಯಾವನೊಬ್ಬನ ಜೀವನಾನುಭವವನ್ನೇ ಕೇಳಿದರೂ, ಆತ ಬಲಾತ್ಕಾರದಿಂದ ಸುಲಿಯಲ್ಪಟ್ಟುದಕ್ಕಿಂತ ಹೆಚ್ಚಾಗಿ, ವಿಶ್ವಾಸಕ್ಕೆ ಕಟ್ಟು-ಬಿದ್ದು, ನಂಬಿಕೆ ಕಟ್ಟು ಕಷ್ಟ ನಷ್ಟವನುಭವಿಸಿದುದೇ ಅಧಿಕವೆಂಬುದು ಖಚಿತವಾಗದಿರದು.

ಭಾರತದ ಚಾರಿತ್ರಿಕ ಮತ್ತು ಆಧುನಿಕ ಸ್ಥಿತಿಗತಿಗಳ ಮೇಲಿಂದ ಸ್ಪಷ್ಟವಾಗುತ್ತಿರುವದೆಂದರೆ, ಇಲ್ಲಿಯ ಒಳ ಗಂಡಾಂತರಗಳು, ದೌರ್ಬಲ್ಯಗಳು ಹಾಗೂ ಭಿನ್ನ ಭೇದಗಳು ತಂದೊಡ್ಡಿದಂತಹ ಹಾನಿ, ಪರಾಭವಗಳನ್ನು ಹೊರಗಿನ ಹೊಡೆತಗಳು ಎಂದೂ ಮಾಡಿದುದಿಲ್ಲ.

ಸ್ವಾತಂತ್ರ್ಯಾನಂತರ ಭಾರತದ ನಾಯಕರ ಪಾಲಿಗೆ ಅಡ್ಡಿ ಆತಂಕಗಳಾಗಿರುವುದು - ಪ್ರಗತಿಪಥದಲ್ಲಿ ಅಡ್ಡವಾಗಿ ನಿಂತಿರುವುದು—ಒಳಗಿನ ಅಸಹಕಾರ, ಅನಾಚಾರ, ಅತಿರೇಕಾಚರಣೆಗಳೇ ಹೊರತು ಹೊರಗಿನವರ ಕಿರುಕುಳಗಳಲ್ಲ.

ದೇಹಜನ್ಯ ರೋಗರುಜೆಗಳು ಮನುಷ್ಯರನ್ನು ಕೊಲ್ಲುತ್ತಿರುವಷ್ಟು ಸಂಖ್ಯೆಯಲ್ಲಿ ಪರಕೀಯ ಕತ್ತಿ, ಖಡ್ಗ, ಸಿಡಿಮದ್ದುಗಳು ಕೊಲ್ಲುತ್ತಿಲ್ಲ. ಮನುಷ್ಯ ಮಾತ್ರರನ್ನು ವಿಶೇಷವಾಗಿ ಕುಗ್ಗಿಸುತ್ತಿರುವುದೆಂದರೆ ಪರಪೀಡೆಗಳಿಗಿಂತ ಹೆಚ್ಚಿಗೆ ಮನೋಪೀಡೆಯೇ.

ಸಮಾಜದಲ್ಲಿ ಗಣ್ಯರಾಗಿರುವವರಿಂದ, ಸಭ್ಯರು ಹಾಗೂ ಮೇಲ್ಪಟ್ಟವರೆನ್ನಿಸುವವರಿಂದ, ಅಧಿಕಾರವುಳ್ಳವರಿಂದ ನಡೆದಿರುವಷ್ಟು ಕಳ್ಳಸಂತೆ, ದುರ್ವ್ಯವಹಾರ, ಲಂಚ ಸಂಚುಗಾರತನ ಮುಂತಾದುವುಗಳು ಕೆಳಮಟ್ಟದ ಜನರಿಂದ ನಡೆಯುತ್ತಿಲ್ಲ.

ತುಲನಾತ್ಮಕವಾಗಿ ನೋಡುವದಾದರೆ, ಶ್ರಮ ಜೀವಿಗಳ ಹಿತ ಸಾಧಕರೆಂಬ ಸೋಗು ಹಾಕಿಕೊಂಡ ಕೆಲವರಿಂದ ಶ್ರಮ ಜೀವಿಗಳಿಗಾಗಿರುವಷ್ಟು ಹಾನಿಯು ಧನಿಕ ವರ್ಗದಿಂದಾಗಿರಲಾರದೇನೊ!

ಜನರು ಅನಾಗರಿಕರಾಗಿದ್ದಾಗ ನಡೆಸುತ್ತಿದ್ದ ಹೋರಾಟಗಳಿಂದಾಗುತ್ತಿದ್ದುದಕ್ಕಿಂತ ಎಷ್ಟೋ ಪಾಲು ಹೆಚ್ಚಿನ ಪ್ರಾಣಹಾನಿಗಳು ಇಂದಿನ ನಾಗರಿಕ ಜನರ ಯುದ್ಧ ವಿಧಾನಗಳಿಂದಾಗುತ್ತಿವೆ. ಆ ಯುಗದ ಬರ್ಬರ ಜನರು ಮಾಡಲಳುಕುತ್ತಿದ್ದ ನಿರಪರಾಧೀ ನಿಶ್ಶಸ್ತ್ರ ಜನರ ಕೊಲೆಗಳನ್ನಾದರೂ ಇಂದಿನ ಸುಸಂಸ್ಕೃತ ನಾಗರಿಕ ಜನರು ನಿಶ್ಶಂಕೆಯಿಂದ ಸಾಮೂಹಿಕವಾಗಿ ನಡೆಸುತ್ತಿದ್ದಾರೆ.

ಇದೇ ರೀತಿ, ಜನ ಜೀವನದ ಯಾವ ವಿಭಾಗವನ್ನೇ ಎತ್ತಿಕೊಂಡರೂ ಪರಕೀಯ ಕೃತ್ಯಗಳಿಂದಾಗುವಂತಹ ಹಾನಿಗಿಂತ ಹೆಚ್ಚಿನದು ಸ್ವಕೀಯ ದೌರ್ಬಲ್ಯಗಳಿಂದ ಆಗುತ್ತಿರುವುದು ಕಂಡುಬರುತ್ತಿದೆ; ಬಾಹ್ಯ ವಿರೋಧಗಳಿಂದ ಆಗುತ್ತಿರುವ ತೊಂದರೆಗಳಿಗಿಂತ ಹೆಚ್ಚಿನದು ಆತ್ಮೀಯತಾ ಸೋಗಿನ ವಂಚನೆಗಳಿಂದ ಆಗುತ್ತಿದೆ; ಪ್ರತ್ಯಕ್ಷ ಅನಾಗರಿಕರಿಂದಾಗದಂತಹ ಕ್ರೂರಾಚರಣೆಗಳು, ನಾಗರಿಕತೆಯ ಸೋಗು ಹಾಕಿಕೊಂಡವರಿಂದಾಗುತ್ತಿವೆ.

ಆದ್ದರಿಂದಲೇ "ನಾನು ಒಳಗಿನ ಕಂಟಕಗಳಿಗೆ ಅಂಜುತ್ತೇನಲ್ಲದೆ ಹೊರಗಿನ ಧಾಳಿಗಲ್ಲ" ಎಂಬ ಪಂಡಿತ ಜವಾಹಿರರ ಮಾತಿನಿಂದಾರಂಭಿಸಿ, "ಪ್ರಥಮತಃ ನಿನ್ನನ್ನು ನೀನು ನೋಡಿಕೋ" ಎಂಬ ಸರ್ವ ಸಾಮಾನ್ಯ ನುಡಿಗಾರಿಕೆಯ ವರೆಗಿನ ಆತ್ಮಶುದ್ಧೀ ಉಪದೇಶವು ಕಾರ್ಯರೂಪ ಹೊಂದುವುದು ಅಗತ್ಯವಿದೆ. ಇಂತಹ ಸ್ವಸುಧಾರಣೆಯ ಆವಶ್ಯಕತೆ ಈ ದಿನ ಇರುವಷ್ಟು ಬೇರಾವ ಕಾಲದಲ್ಲೂ ಇರಲಿಲ್ಲ—ಬೇರಾವುದರಲ್ಲೂ ಇಲ್ಲವೆನ್ನಬಹುದು.

ಹೀಗಾಗಿ ಈ ಮೊದಲು ಬೇರೆ ವಿಧಾನದಿಂದ ಹೇಳಿದ್ದ 'ಆತ್ಮವಿಮರ್ಶೆ—ಶುದ್ಧೀಕರಣ'ದ ಸೊಲ್ಲನ್ನೇ ಮತ್ತೊಮ್ಮೆ ಹಾಡಬೇಕಾಗುತ್ತದೆ. ಪ್ರತಿಯೊಬ್ಬನೂ, 'ತಾನು ಹೇಗಿದ್ದೇನೆ—ಹೇಗಿರಬೇಕು?' ಎಂಬುದನ್ನು ತಿಳಿದುಕೊಂಡು ಹಾಗಾಗಲು ಸರ್ವ ಶಕ್ತಿಯಿಂದ ಪ್ರಯತ್ನಿಸಬೇಕಾದುದೊಂದೇ ಮುಖ್ಯ.

ಆಹಾರ ಪಸುಗೆಯ ಪರಿಮಾಣ ಕಡಿಮೆಯಾಯಿತೆಂದು ಸರಕಾರವನ್ನು ದೂರುವವರು, ಆಹಾರ ಧಾನ್ಯಗಳ ನಿಯಂತ್ರಣವನ್ನು ತಂದುದಷ್ಟೇ ಇಲ್ಲಿ ಸರಕಾರದ ಕೆಲಸ ಹೊರತು ಆಹಾರಾಭಾವವನ್ನು ನಿರ್ಮಿಸಿದುದೇ ಅದಲ್ಲವೆಂಬುದನ್ನು ತಿಳಿದುಕೊಂಡು, ಇಂತಹ ಆಹಾರಾಭಾವ ನಿರ್ಮಾಣದಲ್ಲಿ ತಂತಮ್ಮ ಪಾಲೆಷ್ಟು ಎಂಬುದನ್ನು ಪ್ರತಿಯೊಬ್ಬನೂ ವಿಚಾರಿಸಿ ನೋಡಿಕೊಳ್ಳಬೇಕು. ಇನ್ನೀ ಅಭಾವ ನಿವಾರಣೆಗೆ ತಾನೇನು ಮಾಡತಕ್ಕದ್ದೋ ಅದನ್ನು ತಪ್ಪದೆ ಮಾಡಬೇಕು.

ಅಲ್ಲಿ ಆಗುತ್ತಿರುವ ಜಾತೀಯ ಅತ್ಯಾಚಾರಗಳಿಗಾಗಿ ಪಾಕಿಸ್ತಾನದ ಮೇಲೆ ಇಷ್ಟು ದೂರದಲ್ಲಿದ್ದುಕೊಂಡು ವೃಥಾ ರೇಗುವದಕ್ಕಿಂತ, ಪಾಕಿಸ್ತಾನಿಗಳಲ್ಲಿರುವಂತಹ, ದುರ್ಭಾವನೆ, ದುರಾಚಾರಗಳ ಅಂಶ ಮಾತ್ರವಾದರೂ ತಮ್ಮಲ್ಲಿಯೂ ಇರಬಹುದೇ, ಎಂಬ ಆತ್ಮಶೋಧನೆ ಮಾಡಿಕೊಂಡು, ಅಂತಹದಿದ್ದರೆ ಮುಂದಾಗಿ ಅದನ್ನು ನಿವಾರಿಸಿಕೊಳ್ಳಬೇಕು.

ಅಧಿಕಾರಸ್ಥಾನದಲ್ಲಿ, ಅಥವಾ ಯಾವುದೇ ಜವಾಬ್ದಾರೀ ಸ್ಥಾನದಲ್ಲಿ ಇರುವವರು, ತಮ್ಮನ್ನು ಮಿಕ್ಕವರ ಸ್ಥಾನದಲ್ಲಿಯೂ, ಮಿಕ್ಕವರು ತಮ್ಮನ್ನು ಅಧಿಕಾರಿ ಅಥವಾ ಇತರ ಹೊಣೆಗಾರ ಸ್ಥಾನದಲ್ಲಿಯೂ ಇರಿಸಿ, ವಿಚಾರಿಸಿ ನೋಡಿಕೊಂಡ ನಂತರವೇ ಪರಸ್ಪರ ಟೀಕೆ, ವಿಮರ್ಶೆಗಳಿಗೆ ತೊಡಗಬೇಕು.

ಇತ್ಯಾದಿ, ಇತ್ಯಾದಿ, ಇತ್ಯಾದಿ.

THE UNITED KARNATAK INSURANCE COMPANY, LTD., DHARWAR.
Established: 1929.

Offers their valuable service to the public of India in making their sweet home, always happy.
For good investments and valuable connections, please consult us.

ತನ್ನಲ್ಲಿರುವ ದೋಷಗಳನ್ನು ಅರಿತುಕೊಂಡು ಅವುಗಳನ್ನು ಹತ್ತಿಕ್ಕಿಕೊಳ್ಳುವುದನ್ನೂ, ತನ್ನಲ್ಲಿರುವ ಗುಣಗಳನ್ನರಿತುಕೊಂಡು, ಅವುಗಳನ್ನು ಸರಿಯಾಗಿ ಪ್ರಯೋಗಕ್ಕೆ ಹಚ್ಚುವುದನ್ನೂ ಪ್ರತಿಯೊಬ್ಬನೂ ಪ್ರಥಮ ಕರ್ತವ್ಯವಾಗಿ ಮಾಡಿಕೊಳ್ಳಬೇಕು. ಅಂತೆಯೇ ಪರರ ಗುಣದೋಷಗಳ ಪೈಕಿ ಯಾವುದಾದರೊಂದನ್ನೇ ನೋಡುವ ಹವ್ಯಾಸವನ್ನು ಬಿಟ್ಟು ಎರಡರ ಕಡೆಗೂ ತುಲನಾತ್ಮಕ ದೃಷ್ಟಿಯಿರಬೇಕು.

ಸಾಮೂಹಿಕ ಸ್ವವಿಮರ್ಶೆ ಮಾಡುವದಾದರೆ, ಜನತೆಯಲ್ಲಿ ಸರ್ವ ಸಾಮಾನ್ಯವಾಗಿರುವ ಈ ಕೆಳಗಿನ ಮಾನಸಿಕ ಸ್ಥಿತಿಗತಿಗಳನ್ನರಿಯಬಹುದು–

ಯಾರು, ಬೇರಾವ ಕಾರ್ಯಕ್ಕೂ ಬೇಳುವವರಲ್ಲವೋ ಅಂಥವರೇ ಅಪ್ರಬುದ್ಧತೆಯ ಹಾಗೂ ಅತಿಶಯೋಕ್ತಿಯ ಪ್ರಚಾರಕರಾಗಿರುವರು. ಕಾರ್ಯಶಕ್ತಿ ಕಡಿಮೆಯಿರುವ ಪರಿಮಾಣದಲ್ಲಿ ಬಾಯಿಬಲ ಅಧಿಕವಿರುವ ನಿದರ್ಶನಗಳು ಎಲ್ಲೆಲ್ಲೂ ಕಂಡು ಬರುತ್ತಿವೆ.

ಯಾರಲ್ಲಿ ಸ್ವಂತ ವ್ಯಕ್ತಿತ್ವವೆಂಬುದಿಲ್ಲವೋ, ಅವರು ವ್ಯಕ್ತಿ ವೈಶಿಷ್ಟ್ಯವುಳ್ಳವರ ನಿಂದಕರಾಗಿರುತ್ತಾರೆ. ತನ್ನಲ್ಲಿ ಬೇರೇನಿಲ್ಲದಿದ್ದರೂ, ಬೇರೇನಾಗದಿದ್ದರೂ ತಾನು ಮೇಲಾಗಬೇಕು, ಎಂಬ ಭಾವನೆ ಮನುಷ್ಯ ಮಾತ್ರರಲ್ಲಿರುವಂತಹದೇ. ಹೀಗಾಗಿ ಯಾವ ರಂಗದಲ್ಲಾದರೂ ತಾನು ಸ್ವತಃ ಪ್ರಯತ್ನಿಸಿ ಮೇಲೇರುವುದಾಗದವರ ಮನಸ್ಸು, ಬೇರೆಯವರನ್ನು ತಗ್ಗಿಸಿ ತೋರಿಸಿ, ಆ ಮೂಲಕ ತಾನು ಮೇಲನ್ನಿಸಬೇಕೆಂದು ಹವಣಿಸುತ್ತದೆ.

ಯಾವುದು ಅಪೂರ್ವವೋ ಅದು ವಿಶೇಷ ಆಕರ್ಷಣೀಯವೆಂಬುದು ಸ್ವಾಭಾವಿಕತಾನೆ? ಒಂದು ವಿಷಯ ಅಥವಾ ಸ್ಥಿತಿಗತಿಯ ಗಾಢಜ್ಞಾನಾನುಭವವಾಗಲೀ ನಿತ್ಯ ಸಂಪರ್ಕವಾಗಲೀ ಇಲ್ಲದಿದ್ದರೆ, ಅದರ ಮೇಲ್ಮೈ ಸ್ಪರ್ಶ ಅಥವಾ ಪ್ರಥಮ ದರ್ಶನವು ವಿಶೇಷವಾಗಿ ತೋರಿ, ಅಯೋಗ್ಯ ಶ್ಲಾಘನೆ ಅಥವಾ ನಿಂದೆಯನ್ನು ಪಡೆಕೊಳ್ಳುತ್ತದೆ. ಸ್ವತಂತ್ರ ರಾಜ್ಯಭಾರದ ಆಗುಹೋಗುಗಳ ಕುರಿತು ಇಂದು ಕೇಳಿಬರುತ್ತಿರುವ ನಿಂದಾ ಸ್ತುತಿಗಳೆಲ್ಲವೂ ಹೆಚ್ಚಿನಂಶ ಇಂತಹವೇ.

ಹುಟ್ಟು ಪರಾವಲಂಬಿಯಾಗಿರುವವನಲ್ಲಿ ಸ್ವಂತ ವಿಚಾರ ಬುದ್ಧಿಯ ಉತ್ಪನ್ನಸಾಧ್ಯ; ಸ್ವಮತವೆಂಬುದೇ ಇಲ್ಲದವನ ಕೋಶದಲ್ಲಿ ಪರಮತ ಸಹಿಷ್ಣುತೆಯೆಂಬ ಸಂಗತಿಯೇ ಇರುವಂತಿಲ್ಲ. ತನ್ನನ್ನು ತಾನರಿಯದವನು, ಬೇರೆಯವರನ್ನು ಅಥವಾ ಬೇರಾವುದನ್ನು ಅರಿತುಕೊಂಡವನಂತೆ ತೋರಿಸಿದರೂ ವಸ್ತುತಃ ಆತ ಏನನ್ನೂ ಅರಿತಿರಲಾರ.

ಶ್ರೀಮಂತನ ಆಳಾಗಿ ನಿಲ್ಲುವ ಸುಯೋಗ ದೊರಕಿಸಿಕೊಂಡ ಬಡವನೊಬ್ಬನು, ತನ್ನಂತಹ ಇತರ ಬಡವರ ಕಡೆಗೆ ತೋರಿಸುವ ತಾತ್ಸಾರ, ಧಿಕ್ಕಾರಗಳನ್ನು ಸ್ವತಃ ಆ ಶ್ರೀಮಂತ ತೋರಿಸಲಾರ; ಓರ್ವ ಶ್ರೀಮಂತನಿಗೆ, ಮತ್ತೋರ್ವ ಶ್ರೀಮಂತನ ಕಡೆಗಿರುವ ದ್ವೇಷಾಸೂಯೆಗಳಂತಹವು ಆ ಶ್ರೀಮಂತರಿಂದ ಸುಲಿಯಲ್ಪಡುವ ಬಡವರಿಗೆ ಅವರ ಮೇಲಿರಲಾರವು. ವರ್ಗ ಕಲಹದ ಪ್ರಭಾವವೇರಿರುವ ಈ ಕಾಲದಲ್ಲಾದರೂ ಮೇಲಿನ ಮಾದರಿಯ 'ಸಮಾನಶತ್ರು' ಭಾವವು ನಮ್ಮ ಜನಜೀವನದ ಎಲ್ಲಾ ವಿಭಾಗಗಳಲ್ಲೂ ವ್ಯಾಪಿಸಿಕೊಂಡಿದೆ.

ಜನತೆಯ ನಿತ್ಯ ಜೀವನದಿಂದಾರಂಭಿಸಿ ರಾಜಕೀಯ ಆಗುಹೋಗುಗಳ ವರೆಗಿನ ಎಲ್ಲಾ ರಂಗಗಳಲ್ಲೂ ಇಂತಹ ಮಾನಸಿಕ ರೋಗಗಳ ಪ್ರಭಾವವೇ ಹೆಚ್ಚಾಗಿದೆ. ಇಂದಿನ ಜನಮತದ ತಳದಡಿಯ ಈ ಕಿಲುಬುಗಳನ್ನು ಕಳೆದುಕೊಳ್ಳದೆ, ಹೊರ ವೈಝುಳಿಕ ಮಾತ್ರದಿಂದ ಅದನ್ನು ಶುದ್ಧೀಕರಿಸಬಹುದೆಂದು ಭಾವಿಸಿ ಕೊಂಡರೆ ಭವಿಷ್ಯ ನೆಟ್ಟಗಾಗದು.

ಆದ್ದರಿಂದ ಎಲ್ಲಾ ವಿಧದ ಮನೋರೋಗ, ದೌರ್ಬಲ್ಯ, ಸಂಕುಚಿತತೆಗಳನ್ನು ನಿವಾರಿಸುವ ಉದಾತ್ತ ಕಾರ್ಯಗಳು ಮತ್ತು ಪ್ರಚಾರಗಳು ಆಗುತ್ತಾ ಹೋಗಬೇಕು. ಎಲ್ಲೆಲ್ಲೂ ಸ್ವತಃ ಆತ್ಮಶುದ್ಧಿ ಅಥವಾ ಮೂಲತಃ ಶುದ್ಧೀಕರಣ ಕಾರ್ಯ ಆಗಬೇಕು.

ಆ ವಿನಹ "ಜನಮತ" ವನ್ನಾಧರಿಸಿ ಏನೇ ನಡೆದರೂ, ಜನಮತದ ಬಲದಿಂದ ಎಂತಹ ವಿಜಯ ದೊರೆತರೂ ಅದೇ ಅಮೂಲ್ಯವೆನ್ನಲು ಬರುವದಿಲ್ಲ!

# ಬಂಗಾಳದ ದುರಂತ–

ಇಂದು ಭಾರತೀಯರೆಲ್ಲರಲ್ಲೂ ಉದ್ವೇಗಾತುರಗಳನ್ನು ನಿರ್ಮಿಸಿರುವ, ಮತ್ತು ನೆಹರು ಲಿಯಾಖತರೊಟ್ಟಾಗಿ ಯೋಚಿಸುವಂತೆ ಮಾಡಿರುವ ಪೂರ್ವ–ಪಶ್ಚಿಮ ಬಂಗಾಳಗಳ ದುರಂತವು ಯಾತನೆಯಂತೆಯೇ ವಿಶೇಷ ರೀತಿಯ ಚಿಂತನೆಗೂ ಅವಕಾಶವಿತ್ತಿದೆ. ಬಂಗಾಳದ ಘಟನೆಯು ಅಖಿಲಭಾರತೀಯರದು ಹೊರತು ಕೇವಲ ಬಂಗಾಳಿಗಳದಲ್ಲ. ಅದರದು ರಾಷ್ಟ್ರ ಭವನದೊಳಗಿನ ಕೋಣೆಗಳಲ್ಲೊಂದು–ಒಂದು ಕಾಲದಲ್ಲಿ ನಗನಾಣ್ಯಗಳ ದಾಸ್ತಾನಿದ್ದ ಆ ಕೋಣೆಯೀಗ ಕಸಕಡ್ಡಿಗಳಿಂದ ತುಂಬಿ ಹೋಗಿದೆ-ಎಂಬ ಸ್ಥಿತ್ಯಂತರದ ಸ್ಮರಣೆಯಾಗುತ್ತಿದೆ. ಬಂಗಾಳಾ ದುರಂತದಿಂದ ಕಲಿಯಬೇಕಾದ ಮುಖ್ಯ ಪಾಠಗಳೆರಡು: 1. ಯಾವ ವಿಧದ ಪ್ರಭಾವ ಅಥವಾ ಸೌಭಾಗ್ಯವಾದರೂ ಚಿರಕಾಲವಿರಲಾರದು; ಉನ್ನತಿ ಅವನತಿಗಳು ಪ್ರತಿಯೊಂದಕ್ಕೂ ಇದ್ದೇ ಇವೆ. 2. ಜಾತೀಯತಾ ದ್ವೇಷ ಸಂಜನವು ಕಠೋರ, ಕುರುಡು ವಿಷ ಬೇರೊಂದಿಲ್ಲೆಂದು: ಅದು ಹೆಚ್ಚಾಗಿ ನಿರಪರಾಧಿ ನಿಸ್ಸಹಾಯಕರನ್ನೇ ಬಲಿಗೊಳ್ಳುತ್ತದೆ.

## ಬಂಗಾಳದ ಪತನ

ಒಂದು ಕಾಲದಲ್ಲಿ ಇಡೀ ಭಾರತಕ್ಕೆ ಚೇತನ ರಸ ಹರಿಯಿಸುವ ಸ್ಫೂರ್ತಿ ಕೇಂದ್ರವಾಗಿದ್ದ ಬಂಗಾಳವು ಇಂದು, ಅದೇ ಕಾಲುವೆಗಳ ಮೂಲಕ ಕಣ್ಣೀರ ಪ್ರವಾಹ ರವಾನಿಸುವ ದುರಂತ ನೆಲೆಯಾಗುವ ದೌರ್ಭಾಗ್ಯಕ್ಕೀಡಾಗಿರುವದನ್ನು ಕಾಣುವಾಗ 'ಕಾಲ ಮಹಾತ್ಮೆ!' ಎಂದು ಉದ್ಗರಿಸಬೇಕಾಗುತ್ತದೆ ಠಾಗೋರರಂಥಹ ಲೋಕ ಕವಿಗಳಿಗೆ, ಪಿ. ಸಿ. ರೇಯಂತಹ ಲೋಕ ಪ್ರಸಿದ್ಧ ವಿಜ್ಞಾನಿಗಳಿಗೆ, ಅರವಿಂದ ಘೋಷರಂತಹ ಕ್ರಾಂತಿಕಾರೀ ತತ್ವವೇತ್ತರಿಗೆ, ಮತ್ತಂತೆಯೇ ಅತ್ಯಂತ ಪ್ರಭಾವಶಾಲೀಕ್ರಾಂತಿಕಾರರಿಗೆ, ರಾಜ ಕಾರಣಿಗಳಿಗೆ ಜನ್ಮವಿತ್ತಿದ್ದ ಪ್ರಾಂತ್ಯ ಬಂಗಾಳ, ನೇತಾಜೀ ಸುಭಾಸರಂಥವರನ್ನು ನೀಡಲು ಬಂಗಾಳಕ್ಕೆ ಮಾತ್ರ ಸಾಧ್ಯವಾಯಿತು. ರಾಷ್ಟ್ರೀಯತೆಯ ಮೂಲ ಪಾಠವು–ಸ್ವಾಭಿಮಾನದ ಪ್ರಥಮ ಪಂಕ್ತಿಯು–ಬರೆಯಲ್ಪಟ್ಟುದೇ ಬಂಗಾಳಾ ಹಲಗೆಯಲ್ಲಿ; ಲೋರ್ಡ್ ಕರ್ಝನರಾಳ್ವಿಕೆಯ ಆ ಕಾಲದಲ್ಲಿ, ತಮ್ಮ ಅನುಕೂಲಕ್ಕಾಗಿ ಅಖಂಡ ಬಂಗಾಳಾ ಪ್ರಾಂತ್ಯವನ್ನು ವಿಭಜಿಸಬೇಕೆಂದು ಬ್ರಿಟಿಷರು ಹವಣಿಸಿದಾಗಲೇ ತದ್ವಿರುದ್ಧವಾಗಿ ಪ್ರಚಂಡ 'ವಂಗಭಂಗ ಚಳವಳಿ"ಯೆದ್ದು, ಅದೇ ರಾಷ್ಟ್ರಾಭಿಮಾನದ ಮೂಲ ಬೀಜವಾಯಿತು. ಆ ಮೇಲೆ ರಾಷ್ಟ್ರದ ಬಂಧವಿಮೋಚನೆಗಾಗಿ ನಡೆದ ಪ್ರತಿಯೊಂದು ಸ್ವಾತಂತ್ರ್ಯ ಚಳವಳಿಯಲ್ಲೂ ಬಂಗಾಳವು ವಹಿಸಿದ್ದ ಭಾಗವು ಅತಿ ಹೆಚ್ಚಿನದು. ಸ್ವಾತಂತ್ರ್ಯಕ್ಕಾಗಿ ಮಾನವಾತೀತ ಅದ್ಭುತ ಸಾಹಸಗಳನ್ನು ಮಾಡಿದ್ದ ಹಲವು ಕ್ರಾಂತಿವೀರರನ್ನು ಪಡೆದಿದ್ದ ಕ್ಷೇತ್ರ ಬಂಗಾಳ. ರಾಷ್ಟ್ರದ ಸ್ವಾತಂತ್ರ್ಯ ಹೋರಾಟಗಳ ಪ್ರಥಮ ಶ್ರೇಣಿಯ ಸೇನಾನಿಗಳನ್ನು ಅಧಿಕ ಸಂಖ್ಯೆಯಲ್ಲಿ ಪಡೆದ ಪ್ರಥಮ ಸ್ಥಾನವು ಪ್ರಾಯಶಃ ಅಖಿಲ ಭಾರತದಲ್ಲಿ ಬಂಗಾಳಕ್ಕೇನೇ ಸಲ್ಲುತ್ತದೆ. ಅನುಕ್ರಮವಾಗಿ ಪ್ರಗತಿಯ ಮೆಟ್ಟಲುಗಳನ್ನೇರುತ್ತಾ ಬಂದಿದ್ದ ಬಂಗಾಳಕ್ಕೆ ಎಂತಹ ದುರ್ದೈವ ನೋಂಕಿತೋ–ಕಳೆದ ಮಹಾ ಯುದ್ಧಾವಧಿಯ ನಂತರ ಅದು ಕ್ರಮಶಃ ಅವನತಿಯ ಮೆಟ್ಟಲುಗಳಲ್ಲೇ ಇಳಿಯುತ್ತಾ ಬಂದು, ಈಗ ತೀರಾ ಕೆಳಗೆ ಬಿದ್ದಿದೆ! ಯುದ್ಧ ಕಾಲದಲ್ಲೇ ಅತಿ ಭೀಕರ ಆಹಾರ ಬರಗಾಲ ಬಂಗಾಳದಲ್ಲಿ ವ್ಯಾಪಿಸಿಕೊಂಡಿತು; 30 ಲಕ್ಷಕ್ಕೂ ಮಿಕ್ಕಿದಷ್ಟು ಜನ, ಅನ್ನ ದೇವನನ್ನು ಹಂಬಲಿಸುತ್ತಾ ಪ್ರಾಣ ಬಿಟ್ಟರು! ಯಾವ ನಗರದ ರಸ್ತೆಯಲ್ಲಿ ಅಷ್ಟು ಸಂಖ್ಯೆಯ ಹುಳಗಳನ್ನು ಕಾಣುವುದು ಕೂಡಾ ಅಸಾಧ್ಯವೋ ಅಂತಹ ಕಲ್ಕತ್ತಾ ರಸ್ತೆಗಳಲ್ಲಿ ನಿರಾಹಾರ ಮರಣಕ್ಕೀಡಾದ ಮಾನವರ ಶವಗಳು ಕಾಣಲು ಸಿಕ್ಕಿದುವು. ಆ ಮೇಲೆ ಕಲ್ಕತ್ತಾ, ನವಾಖಾಲಿಗಳಂತಹ ಸ್ಥಳಗಳಲ್ಲಿ ಮಹಾ ಕೊಲೆಗಳಾದುವು; ಬನ್ನಲ್ಲೇ ಬಂಗಾಳ ಎರಡು ತುಂಡಾಯಿತು. ಯಾವ ಏಕ ಬಂಗಾಳವನ್ನು ಎರಡು ಪ್ರಾಂತ್ಯಗಳಾಗಿ ವಿಂಗಡಿಸುವುದು ಅಕ್ಷಮ್ಯ ಅಪರಾಧವಾಗಿ ತೋರಿ, ಅದೇ ಪೀಠಿಕೆಯಾಗಿ ರಾಷ್ಟ್ರ ಸ್ವಾತಂತ್ರ್ಯ ಚಳವಳಿಗೆ ಮೂಲವಾಯಿತೋ, ಆ ಬಂಗಾಳವೇ ಅಂತಹ ಸ್ವಾತಂತ್ರ್ಯದೊಂದಿಗೆ ಎರಡು ರಾಷ್ಟ್ರವಾಗಿ ಆಚೆ, ಈಚೆಗೆ ಬಿತ್ತು! ಆ ಮೇಲೆ ಅಂದಿನಿಂದೀವರೆಗೂ ಜಾತೀಯ ಗಲಭೆಗಳು–ಕಮ್ಯೂನಿಸ್ಟ್ ಅನಾಹುತಗಳು–ಆರ್ಥಿಕ ಅನಾನುಕೂಲತೆಗಳು–ಆಳುವ ಪಕ್ಷದೊಳಗೇನೇ ಪಂಗಡ ಸ್ಪರ್ಧೆಗಳು–ಇತ್ಯಾದಿಗಳಿಂದ ಬಂಗಾಳ ಪೂರ್ಣ ಕುಸಿದು ಹೋಗಿದೆ. ಈಗಲಂತೂ ಮಿಕ್ಕೆಲ್ಲಾ ಕಡೆ ಶಾಂತವಾಗಿರುವಾಗ ಬಂಗಾಳದಲ್ಲಿ ಅಸಹ್ಯ ಜಾತೀಯ ಗೊಂದಲ ಪೀಡಿತ ನಿರಾಶ್ರಿತರ ಸಮಸ್ಯೆ! ಉನ್ನತೀ ಶಿಖರವನ್ನೇರಿದ್ದಂತೆಯೇ ಅವನತಿಯ ಬುಡಕ್ಕೆ ಪ್ಪಳಿಸಲ್ಪಟ್ಟ ಶೋಚನೀಯ ಸ್ಥಿತಿಯು ಇ


**ಅಮೃತಾಂಜನ**

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.




REGD

ಎಲ್ಲ ಅಂಗಡಿ|ಮದ್ದು|ಗಳಲ್ಲಿ ಸಿಕ್ಕುತ್ತದೆ.

**ಅಮೃತಾಂಜನ ಲಿಮಿಟೆಡ್**

**ಮದರಾಸು.**

**ಬೊಂಬಾಯಿ ಮತ್ತು ಕಲ್ಕತ್ತ.**



# ಕೆನರಾ ಬ್ಯಾಂಕ್, ಲಿಮಿಟೆಡ್

(ಸ್ಥಾಪನೆ ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಭಾರತದಲ್ಲಿ ಸಾಂಘೀಕರಿಸಿದ್ದು)

**ಮುದ್ದತಿ ಠೇವುಗಳು**

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ೧,೦೦೦ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೫೦ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ.

೩ ತಿಂಗಳು ... ... ನೂರಕ್ಕೆ ವರ್ಷಕ್ಕೆ ೨।

೪ ರಿಂದ ೫ ತಿಂಗಳು ... ... ,, ,, ೨॥

ರೂ. ೧,೦೦೦ಕ್ಕೆ ಕಡಿಮೆಯಿಲ್ಲದ ರೂ. ೧೦,೦೦೦ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದು ಕೊಳ್ಳಬಹುದು.

ಮಂಗಳೂರು ಶಾಖೆಗಳು

[1] ಬಂದರ ರೋಡ್; [2] ಡೊಂಗರಕೇರಿ,

ಇತರ ಶಾಖೆಗಳು: ಕಾರ್ಕಳ, ಬಂಟವಾಳ, ಮುಲ್ಕಿ, ಕುಂದಾಪುರ, ಉಡುಪಿ, ಗಂಗೊಳ್ಳಿ, ಪುತ್ತೂರು, ಕಾಸರಗೋಡು, ಬೊಂಬಾಯಿ, ಇತ್ಯಾದಿ ಇತ್ಯಾದಿ.

**CANARA BANK, LIMITED**
**(Estd 1906)**

# ಅದು ಕಲಿಸಿರುವ ಪಾಠ.

...ಕ್ಕಿಂತ ಹೆಚ್ಚಿನದೇನಿದ್ದೀತು! ಇಂತಹ ಪ್ರದರ್ಶನದಿದಿರು ಯಾವ ಸೌಭಾಗ್ಯವನ್ನಾದರೂ ಶಾಶ್ವತವೆಂದು ನಂಬಲು ಸಾಧ್ಯವೆ?

### ಬಂಗಾಳೀ ವೈಶಿಷ್ಟ್ಯ

ಈ ಸಂದರ್ಭದಲ್ಲಿ ವಿಶಿಷ್ಟ ಬಂಗಾಳೀ ಸ್ವಭಾವವನ್ನು ಮರೆಯಲಾಗುವದಿಲ್ಲ. 'ಬಂಗಾಳೀ ಸ್ವಾಭಿಮಾನ'ವೆಂಬುದು ಮುಖ್ಯ ಪ್ರಾಂತ್ಯಾಭಿಮಾನಗಳಿಗಿಂತ ಹೆಚ್ಚಿನದು. ಮುಸ್ಲಿಂ ಲೀಗು ನಿರ್ಮಿಸಿದ್ದ ಸಾರ್ವಜನಿಕ ದುರಭಿಮಾನವು ಮಿಕ್ಕೆಲ್ಲಾ ಅಭಿಮಾನಗಳ ಕೊಳ, ಸರೋವರಗಳನ್ನು ತುಂಬಿಸಿ ಮಹಾಪೂರವಾಗಿ ಹರಿದು ಹೋದ ಆ ಕಾಲವಾದುದರಿಂದಾಯಿತು—ಇಲ್ಲವಾದರೆ ಬೇರಾವ ಕಾರಣಕ್ಕಾಗಿಯಾದರೂ ಬಂಗಾಳವನ್ನು ವಿಭಜಿಸುವದು, ಬಂಗಾಳಿಗಳನ್ನು ವಿಂಗಡಿಸಿ ಹಾಕುವುದು, ಅಸಾಧ್ಯವಿದ್ದಿತು. ಇಂದಾದರೂ ಸಮಯೇ; ಭಾರತ ಪಾಕಿಸ್ತಾನಗಳ ಒಪ್ಪಿಗೆಯಿಂದ ಎರಡು ಬಂಗಾಳಗಳು ಒಂದಾಗುವದಾದರೆ ಇಕ್ಕಡೆಯ ಬಂಗಾಳಿಗಳೂ ವಿಶೇಷ ಸಂತೋಷಗೊಂಡಾರು. ಪಾಕಿಸ್ತಾನದ 'ರಾಷ್ಟ್ರಭಾಷಾ' ನಿರ್ಣಯದ ವೇಳೆ ಬಂಗಾಳಿಗೊಂದು ಸ್ಥಾನ ಸಂಪಾದಿಸಿಕೊಳ್ಳಲು ಪೂರ್ವ ಬಂಗಾಳದಲ್ಲಿದ್ದಿದ್ದ ಚಳವಳವನ್ನು ಜ್ಞಾಪಿಸಿಕೊಳ್ಳಬಹುದು. ಚರಿತ್ರಾರ್ಹ ಕಲ್ಕತ್ತಾ ಗಲಭೆಯ ವೇಳೆ ಬಂಗಾಳ ಸರಕಾರವನ್ನು ನಡೆಸಿದ್ದ ಸುಹ್ರವರ್ದಿಯವರು ಬಂಗಾಳಾ ವಿಭಜನೆಗೆ ಬದ್ಧ ವಿರೋಧವಿದ್ದರೆಂಬುದನ್ನೂ ಬಂಗಾಳದ ಏಕೀಕರಣವು ಈಗಲೂ ಅವರ ಆಂತರಿಕ ಬಯಕೆಯಾಗಿದ್ದು, ಪಾಕಿಸ್ತಾನ್ ಸರಕಾರೀ ಪಕ್ಷದ ವಿರುದ್ಧ ಪಕ್ಷ ಕಟ್ಟಲು ಅವರು ಹವಣಿಸುತ್ತಿರುವುದನ್ನೂ ಗಮನಿಸಬೇಕು. ಈ ರೀತಿ ರಾಷ್ಟ್ರ ವಿಭಜನೆಯು ಬಂಗಾಳಿಗಳ ಸ್ವಭಾವ ಮೂಲಕ್ಕೇನೇ ಬಲವಾದ ತಾಡನ ಕೊಟ್ಟಿತು; ಅಲ್ಲೊಂದು ಅಸ್ವಾಭಾವಿಕತೆಯನ್ನು ನಿರ್ಮಿಸಿಟ್ಟಿತು. ಎರಡನೆಯದಾಗಿ ಬಂಗಾಳಿಗಳು ಉಚ್ಚ ವರ್ಗದ ಅನುಯಾಯಿಗಳಲ್ಲ; ನಿಯಂತ್ರಣಕ್ಕೊಳಗಾಗದಿರುವುದೇ ಬಂಗಾಳೀ ಸ್ವಭಾವವೆನ್ನಬಹುದು. ಅವರು ಒಳ್ಳೇ ಎದೆಗಾರರು; ವಿಶೇಷ ಹಠವಾದಿಗಳು; 'ತನ್ನತನ'ವನ್ನು ಅತಿ ಮುಂಭಾಗಕ್ಕೆ ಚಾಚಿಕೊಂಡೇ ಇರುವವರು. ಇಂತಹ ಮರ್ಜಿಯ ಒಂದು ವಿಭಾಗಕ್ಕೆ ಅಥವಾ ಓರ್ವ ವ್ಯಕ್ತಿಗೆ ಹಕೋಟಿಯೊಗ್ಗುವಂತಿಲ್ಲ. ಸ್ವತಃ ತಮ್ಮ ವೈಶಿಷ್ಟ್ಯ ತೋರಿ ಬಾರದ ಯಾವ ವಿಧಾನವೂ ಅವರನ್ನು ಆಕರ್ಷಿಸುವಂತಿಲ್ಲ. ಇದಕ್ಕನುಸಾರವಾಗಿ ಇಂದಿನ ಸ್ವತಂತ್ರ ಪ್ರಣಾಳಿಕೆಯಲ್ಲಿ ಬಂಗಾಳಿಗಳನ್ನಾಕರ್ಷಿಸಿಕೊಳ್ಳುವ ಅಂಶ ಕಡಿಮೆಯಿದೆ. ಕೇಂದ್ರ ಸರಕಾರದಲ್ಲಿ ಅಖಿಲ ಬಂಗಾಳದ ಅನನ್ಯ ನಾಯಕನೊಬ್ಬ ಸೇರಿಕೊಂಡಿಲ್ಲ; ಅಂತಹ ನಾಯಕನು ಈ ದಿನ ಬಂಗಾಳದಲ್ಲೇ ಇಲ್ಲ. ಅದಿಲ್ಲದಿದ್ದರೂ ಬಂಗಾಳಿಗಳು ತಮ್ಮ ಪಾಲ್ಗೆ ಕಾವು ತೃಪ್ತಿಪಟ್ಟುಕೊಂಡಿರಬಹುದಿತ್ತೇನೋ? ಆದರೆ ಅಲ್ಲಿಯ ಸ್ಥಿತಿಗತಿಗಳಾವುವೂ ಸಮಾಧಾನಕರವಾಗಿಲ್ಲ. ಮೊದಲೇ ಯುದ್ಧೋತ್ತರ ಕಾಲದ ಕಷ್ಟಾಭಾವಗಳು—ಸಾಲದುದಕ್ಕೆ ಕಮ್ಯೂನಿಸ್ಟರಂತಹ ಪ್ರತಿಗಾಮಿಗಳ ಉಪಟಳಗಳು—ಮೇಲಾಗಿ ಆಡಳಿತೆ ನಿರ್ವಹಿಸುತ್ತಿರುವ ಕಾಂಗ್ರೆಸ್ ಪಕ್ಷದಲ್ಲೇ ಒಡಕುಗಳು—ಮುಂತಾದವುಗಳಿಂದ ಅಲ್ಲಿಯ ವಾತಾವರಣ ವಿಷಮವಾಗಿದೆ. ಅದಕ್ಕನುಸಾರವಾಗಿ ಬಂಗಾಳೀ ಮನಸ್ಸು ಕದಡಿಹೋಗಿದೆ. ಆಧಾರ, ಆಶೆ, ಆಕರ್ಷಣೆಯಾವುದೂ ಸಾಕಷ್ಟಿಲ್ಲದೆ ಬಂಗಾಳೀ ಹೃದಯ ಬಂಜರಾಗಿದೆ; ಕ್ರಾಂತಿ ಚಳವಳ ಕಾಲದಲ್ಲೇ ಸಸಿಯಾಗಿ ಮೊಳೆತಿದ್ದು, ಮುಸ್ಲಿಂ ಲೀಗ್ ರಕ್ತಾಂದೋಲನದ ದೆಸೆಯಿಂದ ವೃಕ್ಷವಾಗಿ ಬೆಳೆದಿದ್ದ, ಕೊಲೆಗಡುಕತನ ಮತ್ತು ಹೋರಾಟ ಸ್ವಭಾವಕ್ಕಂತೂ, ಆ ಮೇಲಿನ ಬಹುಮುಖೀ ಒಳಜಗಳಗಳು ನೀರು ಗೊಬ್ಬರಗಳಾಗಿ ಬೀಳುತ್ತಲೇ ಬಂದಿದ್ದುವು; ಇಂತಹ ಸ್ಥಿತಿಯಲ್ಲಿ ಪೂರ್ವ ಬಂಗಾಳವು ಅಮಾನುಷ ಅತ್ಯಾಚಾರಗಳನ್ನಾರಂಭಿಸಿದೊಡನೆ, ಆ ಬೆಂಕಿ ಪಶ್ಚಿಮ ಬಂಗಾಳದಲ್ಲೂ ಸುಲಭದಲ್ಲಿ ಹತ್ತಿಕೊಂಡಿತು. ಇದೀಗ ಬಂಗಾಳದ ಶೋಚನೀಯ ದುರ್ಗತಿ!

○○ ○○

ಸ್ವಮತೋಗ್ರ ಭಾವನೆ ಅಥವಾ ಪ್ರತೀಕಾರೋನ್ಮತ್ತತೆಯಿಂದ ಜಾತೀಯ ಗೊಂದಲಗಳನ್ನು ಎಬ್ಬಿಸುವವರು ತಮ್ಮ ವರ್ತನೆಯು ಒಂದು ರಾಷ್ಟ್ರಕ್ಕೆ, ನ್ಯಾಯ ನೀತಿಗೆ, ಮತ್ತು ಮಾನುಷತ್ವಕ್ಕೆ ಕುಠಾರಪ್ರಾಯವಾಗಿರುವದಷ್ಟೇ ಅಲ್ಲ—ಎಷ್ಟೋ ಸಂದರ್ಭಗಳಲ್ಲಿ ಹಂದಿಯೆಂದು ಭಾವಿಸಿ ತಾಂಡವ ಮುನಿಯನ್ನು ಹೊಡೆದು ಹಾಕಿದಂತಹ ಪ್ರಮಾದಗಳು ಕೂಡಾ ತಮ್ಮ 'ಪವಿತ್ರ ಹಸ್ತ'ದಿಂದ ನಡೆದುಹೋಗುತ್ತಿವೆ, ಎಂಬುದನ್ನು ತಿಳಿದುಕೊಳ್ಳುವಂತೆ ಮಾಡುವ ಪಾಠವೊಂದನ್ನು ಮೊನ್ನೆ ತಾನೇ ಬಂಗಾಳ ಕಲಿಸಿದೆ:- ಮಿ. ಎ. ಎಲ್. ಕೆಮರನ್ ಎಂಬ ಆಢ್ಯ ಆಂಗ್ಲ ಗೃಹಸ್ಥರೊಬ್ಬರ ಕೊಲೆಯ ಮೂಲಕ! ನಮಗೀಗ ಚಿರಪರಿಚಿತವಾಗಿರುವ ಕಾಡು ವರ್ತನೆಗಳನ್ನು ಬೇರಾವ ಹೆಸರಿನಿಂದಲೂ ಕರೆಯದೆ ಕೇವಲ 'ರಾಕ್ಷಸತ್ವ'ವೆಂದು ಕರೆಯಬೇಕೆಂಬುದನ್ನು ಈ ದುರ್ಘಟನೆ ಮತ್ತೊಮ್ಮೆ ಮಂದಟ್ಟು ಮಾಡಿದೆ. ಅದನ್ನು 'ಹಿಂದೂ ಮುಸ್ಲಿಂ ಜಾತೀಯ ಗೊಂದಲ'ವೆನ್ನೋಣವೆ? ಮೊನ್ನೆ ಕಲ್ಕತ್ತದ ಬಳಿ ಅದಕ್ಕೆ ಬಲಿ ಬಿದ್ದ ಕೆಮರನ್ ಇವೆರಡು ಜಾತಿಗೂ ಸೇರದ ಬಿಳಿ ಮನುಷ್ಯ. 'ಭಾರತ-ಪಾಕಿಸ್ತಾನ್ ಪ್ರತೀಕಾರ ಸ್ಪರ್ಧೆ'ಯೆನ್ನೋಣವೆ? ಆ ಸ್ಪರ್ಧೆಯಲ್ಲಿ ಸವೆದುಹೋದ ಕೆಮರನ್ ಬ್ರಿಟಿಷರವ. ಸಂಬಂಧವಿದ್ದವ—ಇಲ್ಲದವ, ಅಪರಾಧಿ—ನಿರಪರಾಧಿ, ಸಶಸ್ತ್ರ—ನಿಶ್ಶಸ್ತ್ರ ತಾರತಮ್ಯವಾವುದನ್ನೂ ನೋಡದೆ ಕೆಂಗಣ್ಣು ಕುರುಡುತನದಿಂದ ವಿನಾಶಕ್ಕೇಳುವದೊಂದಲ್ಲದೆ, ಬೇರಾವ ಅರ್ಥವೂ ಇಂತಹ ಗೊಂದಲಗಳಲ್ಲಿಲ್ಲವೆಂಬುದು ಇದರಿಂದ ಸುಸ್ಪಷ್ಟ. ಕೆಮರನ್ ಸಾಹೇಬರು ಬ್ರಿಟಿಷ್ ಸಂಭಾವಿತ. ಬಂಗಾಳದ 'ಚೇಂಬರ್ ಓಫ್ ಕಾಮರ್ಸ್'ನ ಅಧ್ಯಕ್ಷನಾಗಿದ್ದ ಪ್ರತಿಷ್ಠಾವಂತ; ಭಾರತ ನಾಯಕರ ಪರಿಚಿತ; ಆದ್ದರಿಂದ ಅವರ ಕೊಲೆಯು ಒಮ್ಮೆಗೇ ಎಲ್ಲರ ಕಣ್ಣನ್ನೂ ತೆರೆಯಿಸಿತು. ಇಷ್ಟೇ ನಿರಪರಾಧಿಗಳಿದ್ದು, ಇವರಿಗಿಂತಲೂ ಹೆಚ್ಚಿನ ನಿಸ್ಸಹಾಯಕತೆಯಿಂದ ಎಷ್ಟು ಮಂದಿ ಈ ಜಾತೀಯ ಗೊಂದಲಗಳಿಗೆ ಬಲಿಬಿದ್ದಿರಬಹುದೋ! ಯಾವ ಅಪರಾಧವನ್ನೂ ಕನವರಿಸದ ಪಾಪದ ಕುಟುಂಬಗಳೆಷ್ಟು ಹಾದಿ ಬೀದಿ ಪಾಲಾಗಿರುವವೊ! ಇಂತಹ ದುರಾಚಾರಗಳಲ್ಲೂ ಪೌರುಷವನ್ನು, ಆವಶ್ಯಕತೆಯನ್ನು ಕಾಣುವವರನ್ನು ಕೂಡಾ ಮನುಷ್ಯ ವರ್ಗಕ್ಕೆ ಸೇರಿಸಿಕೊಳ್ಳುವದು ಸಾಧ್ಯವೆ?

### ಕೆಮರನ್ ಕೊಲೆ.

ಬಂಗಾಳಾ 'ಚೇಂಬರ್ ಓಫ್ ಕಾಮರ್ಸ್'ನ ಅಧ್ಯಕ್ಷ ಮಿ. ಎ ಎಲ್. ಕೆಮರನ್ ಮಾರ್ಚಿ ತಾ 26ನೇ ಮುಂಜಾನೆ ಕಲ್ಕತ್ತದಿಂದ ಸುಮಾರು 24 ಮೈಲು ದೂರದಲ್ಲಿರುವ ಬಾಂಡೆಲ್ ಎಂಬಲ್ಲಿಗೆ ಕಾರು ಹತ್ತಿ ಹೊರಟಿದ್ದರು. ಕೆಮರನ್‌ರೇ ಚೆಯರ್‌ಮೇನ್ ಆಗಿರುವ 'ಮೆಸರ್ಸ್ ಏಂಡ್ರ್ಯೂ ಯೂಲೆ ಎಂಡ್ ಕೊ' ಅವರ ನಾರಿ ಗಿರಣಿಗಳನ್ನು ಸಂದರ್ಶಿಸುವದೇ ಈ ಸಂಚಾರದ ಉದ್ದೇಶವಾಗಿತ್ತು. ಕಾರಿನಲ್ಲಿ ಕೆಮರನ್ ಸಾಹೇಬರ ಮುಸ್ಲಿಂ ಸೇವಕ ಡ್ರೈವರನ ಬದಿಯಲ್ಲಿ ಮುಂಗಡೆಯ ಸೀಟಿನಲ್ಲಿ ಕುಳಿತಿದ್ದ. ಮಿ. ಕೆಮರನ್ ಹಿಂದಿನ ಸೀಟಿನಲ್ಲಿದ್ದರು. ಬಾಂಡೆಲ್ ರೈಲ್ವೇ ಸ್ಟೇಶನಿಗಿಂತ ತುಸುದೂರದಲ್ಲೇ ಸ್ತ್ರೀ ತಿರುಗುವಲ್ಲಿ, ಆಗ ತಾನೇ ರೈಲು ಬರುವ ಹೊತ್ತಾದುದರಿಂದ ಗೇಟಿನ ಬಳಿ ಕೆಮರನರ ಕಾರು ನಿಲ್ಲಬೇಕಾಯಿತ; ಅಲ್ಲೇ ನಿಂತಿದ್ದಿತು. ಅತ್ತ, ಆಗ ಬರುವ ರೈಲು ಗಾಡಿಯನ್ನು ತಡೆದು ನಿಲ್ಲಿಸಿ, ತಮ್ಮಾಟವಾಡಿಬಿಡಬೇಕೆಂಬ ಉದ್ದೇಶದಿಂದ ಅಲ್ಲೇ ಕೆಲವರು ಗುಂಪು ಕೂಡಿ ಕಾಯುತ್ತಿದ್ದರು. ತನ್ನ ಬಂಡೀ ಪ್ರಯಾಣಿಕರನ್ನು ಯಾವ ಅದೃಷ್ಟ ಕಾದಿದೆ ಎಂಬ ವಾಸನೆ ಹಿಡಿದ ರೈಲ್ವೇ ಡ್ರೈವರನು ಅಲ್ಲಿ ನಿಲ್ಲಿಸದೇನೇ ನೇರಾಗಿ ರೈಲನ್ನೋಡಿಸಿ ಬಿಟ್ಟ. ಈ ರೀತಿ ಹಂಚಿಕೆ ವಿಫಲಗೊಂಡ ಪುಂಡರ ತಂಡವು ಅತ್ತಿತ್ತ ನೋಡುವಾಗ, ಗೇಟಿನ ಬಳಿಯಲ್ಲಿ ನಿಂತಿರುವ ಕೆಮರನರ ಕಾರು ಕಣ್ಣಿಗೆ ಬಿತ್ತು. ಕೂಡಲೇ ಅವರು ಧಾವಿಸಿ ಬಂದು ಕಾರಿಗೆ ಮುತ್ತಿಗೆ ಹಾಕಿ ಮುಂಭಾಗದಲ್ಲಿ ಕುಳಿತಿದ್ದ ಮುಸ್ಲಿಂ ಸೇವಕನನ್ನು ಹೊರಗೆಳೆದು ಹೊಡೆಯ ಹತ್ತಿದರು. ಮಿ. ಕೆಮರನರು ತನ್ನ ಸೇವಕನ ಪ್ರಾಣರಕ್ಷಣೆಗಾಗಿ ಹೊರ ನೆಗೆದು, ಹೊಡೆಯುವವರೊಡನೆ ಅವನ ಪ್ರಾಣಯಾಚನೆಗಾಗಿ ವಾದಿಸುತಿದ್ದರು; ಅಗಲೇ ಹಿಂಗಡೆಯಿಂದ, ಬಲವಾದ ಒಂದು ಪೆಟ್ಟು ಕೆಮರನರ ತಲೆಯ ಮೇಲೆ ಬಿದ್ದುದರಿಂದ ಸಾಹೇಬರು ಅಲ್ಲಿಯೇ ಸತ್ತು ಬಿದ್ದರು. ಆ ಗುಂಪು, ಹಿಡಿದ ಮುಸ್ಲಿಂ ಸೇವಕನನ್ನು ಬಿಡದೆ ಥಳಿಸಿ ಕೊಂದು ಹಾಕಿತು. ಹೀಗೆ ಇಬ್ಬರನ್ನು ಮುಗಿಸಿದ ಮೇಲೆ ಡ್ರೈವರನ ಸರದಿಗಾರಂಭ. ಆತನನ್ನೆಳೆದು ಹೊಡೆಯ ಹತ್ತಿದೊಡನೆ ಅವ ಬೇಗ ಬೇಗನೇ ತನ್ನ ಹೆಸರು ಹೇಳಿದುದರಿಂದ ಅವನನ್ನು ಬಿಟ್ಟು ಆ ತಂಡ ಹೊರಟು ಹೋಯಿತು. ಬದುಕಿದೆ ಬಡಜೀವವೇ, ಎನ್ನುತ್ತಾ ಡ್ರೈವರನು ಸಮೀಪದ ಡನಲಪ್ ಫೇಕ್ಟರಿಗೋಡಿ, ಅಲ್ಲಿಂದ ಈ ವಾರ್ತೆಯನ್ನು ಕಲ್ಕತ್ತಾ ಪೋಲಿಸರಿಗೆ 'ಫೋನ್' ಮಾಡಿದ. ಬ್ರಿಟಿಷ್ ಡಿಪ್ಯೂಟಿ ಹ್ಯಾಕಮಿಶನರ್ ಮಿ. ಎಡಿಸನರನ್ನು ಕೂಡಿಕೊಂಡು ಪೋಲಿಸರು ಆ ಸ್ಥಳಕ್ಕೆ ಬಂದು ನೋಡುವಾಗ ಮಿ. ಕೆಮರನರ ಶವವು ಅಲ್ಲೇ ಖಾಲಿ ಕಾಲಿವೆಯಲ್ಲಿ ಬಿದ್ದಿತ್ತು! ಕೆಮರನ್ ಕೊಲೆಗಾಗಿ ಅಧ್ಯಕ್ಷ ಪ್ರಸಾದ್, ಪ್ರಧಾನಿ ನೆಹರು, ಉಪ ಪ್ರಧಾನಿ ಪಟೇಲ್ ಮತ್ತೆಲ್ಲಾ ಪ್ರಮುಖರೂ ತಮ್ಮ ತೀವ್ರ ಸಂತಾಪವನ್ನು ಸೂಚಿಸಿದ್ದಾರೆ. ಈ ಅಮಾನುಷ ಅತ್ಯಾಚಾರದ ನಿದರ್ಶನ ಕೊಟ್ಟು ಪ್ರತೀಕಾರೋನ್ಮತ್ತತೆಯು ಎಂತಹ ಅನಾಹುತಕಾರಿಯೆಂಬುದನ್ನು ರಾಷ್ಟ್ರ ನಾಯಕರು ಭಾರತ ಜನತೆಯ ಗಮನಕ್ಕೆ ತಂದಿದ್ದಾರೆ. ಏನೇ ಸಂಭವಿಸಿದರೂ, ಎಂತಹ ಬೆಲೆ ತೆತ್ತಾದರೂ ಭಾರತದೊಳಗೆ ಶಾಂತಿ ಸೌಹಾರ್ದತೆಯನ್ನು ಉಳಿಸಲೇ ಬೇಕೆಂದು ಒತ್ತಿ ಹೇಳಿದ್ದಾರೆ.

ಕಲ್ಕತ್ತದೊತ್ತಿನ ಹೌರಾದ ಕೆಲವು ಭಾಗಗಳಲ್ಲಿ ವಿಶೇಷ ರೀತಿಯ ಕೊಲೆ, ತಿವಿತಗಳು ನಡೆದಿದ್ದುದರಿಂದಲೂ, ಪೋಲೀಸರು ಮತ್ತು ಸೈನಿಕರು ಹಲವೆಡೆ ಗುಂಡು ಹಾರಿಸಿದರೂ ಜನತೆಯ ಕೆಲವು ಭಾಗಗಳಲ್ಲಿ ಹರಡಿರುವ ಒಳಸಂಚು ಮತ್ತು ಪ್ರತೀಕಾರೋನ್ಮತ್ತತೆಯು ದುರ್ದಮನೀಯವೆಂದು ತೋರಿ ಬರುವದರಿಂದಲೂ ಆ ಭಾಗಗಳ ಪೂರ್ಣಾಧಿಕಾರವನ್ನು ಸೇನೆಗಳಿಗೀಯಲಾಗಿದೆ. ಈಗ ಪರಿಸ್ಥಿತಿ ಶಾಂತವಾಗಿದೆ.

ಬಂಗಾಳದ ಇಂದಿನ ಈ ದುಸ್ಥಿತಿ, ದುರ್ಗತಿಗಳು ರಾಷ್ಟ್ರದ ಸರ್ವರ ಕಣ್ಣನ್ನೂ ತೆರೆಯಿಸಲಿ; ಸುವಿಚಾರ ಮೊಳೆಯಿಸಲಿ; ಸದ್ದಾರಿ ಹಿಡಿಸಲಿ. ಗತಕಾಲದಲ್ಲಿ ಮೇಲ್ಪಂಗ್ತಿಯಾಗುವ ಪ್ರತ್ಯಕ್ಷಾಚರಣೆಗಳ ಮೂಲಕ ಮುಂಭಾಗದಲ್ಲಿದ್ದ ಬಂಗಾಳಕ್ಕೆ, ಈ ಕಾಲದಲ್ಲಿ ಇಂತಹ ಕಹಿ ಅನುಭವಗಳ ಮೂಲಕ ಕಲಿಸಿಕೊಡುವ ಗುರುಸ್ಥಾನವಾದರೂ ಇರಲಿ!


## On this Memorable day

Of the 26th of January in the year 1950 of the inauguration of the Indian Republic, we have the pleasure to announce the birth of our

## Vijaya Cash Certificates

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4%.

Rules on application at any of our following Offices.

Head Office:—**Kadri Road, Mangalore.**

Branches:- City-Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara.

**B. Manjaya Hegde.**
Advocate & President, District Board, S. Kanara.
CHAIRMAN
VIJAYA BANK, LTD.,

# ಅಮೇರಿಕ-ಸೋವಿಯೆಟ್ ಮಾನಸಿಕ ಸಮರ

1950ನೇ ಇಸವಿಯು ಕಾಲಂಶ ಶತಕ ದಿರುವ ಅವಧಿಯಿದು; ಈ ಸಂದರ್ಭದಲ್ಲಿ ಲೋಕದ ಆಗುಹೋಗುಗಳ ಕಡೆಗೆ ದೃಷ್ಟಿ ಬೀರುವಾಗಲೂ ಯಥಾ ಪ್ರಕಾರ ಸ್ಥಾಯೀ ಮಬ್ಬು, ಸುತ್ತಮುತ್ತ ನಡುವೆ ಅಲ್ಲಲ್ಲಿ ಕೋಲ್ಮಿಂಚಿನಂತಹ ಪ್ರಕಾಶ, ಮಾತ್ರ ಕಂಡು ಬರುತ್ತಿದೆ. ಗಣ್ಯ ಬದಲಾವಣೆಯಾವುದೂ ಎಲ್ಲಿಯೂ ಗೋಚರಿಸುತ್ತಿಲ್ಲ. ಒಟ್ಟಿನ ವೇಳೆ, ಸಂದೇಹಾತೀತ ಶಾಂತಿಯು ಅಥವಾ ಸದ್ಯದಲ್ಲೇ ಇನ್ನೊಂದು ಮಹಾ ಹೋರಾಟದ ನಿರೀಕ್ಷೆಗಳಲ್ಲವುದಕ್ಕೂ ನಾಕಷ್ಟು ಆಧಾರ ಕೊಡದೆ ಪರಿಸ್ಥಿತಿಯು ಸಂದಿಗ್ಧವಾಗಿಯೇ ಉಳಿದು ಕೊಂಡಿದೆ. ಇಂತಹ ತ್ರಿಶಂಕುಸ್ಥಾನದಲ್ಲೇ ಲೋಕವೆಲ್ಲಿವರೆಗೆ ಉಳಿಯಬೇಕೋ ಹೇಳಬರುವದಿಲ್ಲ ಭಾರತದ ಸ್ಥಿತಿ ಕೂಡಾ ಇದಕ್ಕಪವಾದವಾಗಿಲ್ಲ

## ಅಂತರ್ದೇಶೀಯ ರಂಗ

ಚೈನದಲ್ಲೀಗ ಅತಿ ಭೀಕರ ಆಹಾರ ಬರಗಾಲದ ದುಸ್ಥಿತಿಯಿರುವಂತೆಯೇ, ಅದು ರಾಷ್ಟ್ರೀಯರ ಕೈಯಿಂದ ಕಮ್ಯೂನಿಸ್ಟರ ಹಸ್ತಕ್ಕೆ ಸೇರಿದ ಈ ಸಂಧಿಕಾಲಕ್ಕನುಗುಣವಾದ ವಿಶೇಷ ರೀತಿಯ ಆಗುಹೋಗುಗಳೂ ನಡೆದೇ ಇವೆ. ಕಮ್ಯೂನಿಸ್ಟ್ ಚೈನದಲ್ಲಿ ಬಿದ್ದಿರುವ ಅತಿ ಹೆಚ್ಚಿನ ತೆರಿಗೆಗಳು, ಕಡ್ಡಾಯದ ಸಾಲ ಮತ್ತು ನಿರುದ್ಯೋಗತನವನ್ನು ಸಹಿಸಲಾರದೆ ಜನರು ಹಿಂದುಗಟ್ಟಿ ಅಲ್ಲಿಂದ ಹೋಂಗ್‌ಕೋಂಗಿಗೆ ಓಡಿ ಬರುತ್ತಿದ್ದಾರೆಂದು ಪ್ರಕಟವಾಗಿದೆ. ಕಮ್ಯೂನಿಸ್ಟರ ಕಡೆಗೆ ತೀಕ್ಷ್ಣ ವಕ್ರ ದೃಷ್ಟಿಯಿರುವ ಆಂಗ್ಲೋ-ಅಮೇರಿಕನರ ಕಡೆಯಿಂದಾಗುತ್ತಿರುವ ಈ ಪ್ರಚಾರಗಳಲ್ಲಿ ಅತಿಶಯೋಕ್ತಿಯಿರಬಹುದಾದರೂ, ಸತ್ಯಾಂಶ ಹೆಚ್ಚಾಗಿ ಇಲ್ಲವೆಂದು ಹೇಳಬರುವದಿಲ್ಲ. ದೀರ್ಘಾವಧಿಯ ಹೋರಾಟ ಪೀಡೆಯಿಂದ ನುಚ್ಚುನೂರಾಗಿದ್ದ ಚೈನದಲ್ಲಿ ಅಧಿಕಾರ ಬದಲಾವಣೆಯಾಗಿರುವ ಈ ಕಾಲದಲ್ಲಿ ಅವ್ಯವಸ್ಥೆ, ಆರ್ಥಿಕ ಅಭಾವ, ಮತ್ತು ಆಹಾರ ಬರಗಾಲವುಂಟಾಗುವುದು ಸ್ವಾಭಾವಿಕ. ಇತ್ತೀಚೆಗೆ ಅವಸ್ಥಾಂತರ ಪಡೆದ ಭಾರತದಲ್ಲಿ ಕಂಡುಬರುವ ಕೆಲವೇ ಕೊರತೆಗಳಿಗಾಗಿ ಸ್ವತಂತ್ರಾಡಳಿತೆಯ ಮೇಲೆ ಅಸಹ್ಯ ಆರೋಪ ಹೊರಿಸುತ್ತಿರುವ ಕಮ್ಯೂನಿಸ್ಟರೂ ಅವರ ವಾದಗಳನ್ನು ನಂಬುವ ಇತರರೂ ಕಮ್ಯೂನಿಸ್ಟ್ ಚೈನದ ಇಂದಿನ ಪರಿಸ್ಥಿತಿಗಳಿಂದ ಕಣ್ಣು ತೆರೆಯಬೇಕಾಗಿದೆ. ಅತ್ತ ಚೈನದ ಸಿಂಕಿಯಾಂಗ್ ಪ್ರಾಂತ್ಯದ ಎಣ್ಣೆ ಮತ್ತು ಖನಿಜಗಳ ಸಂಬಂಧವಾಗಿ ಜತೆ ಕಂಪೆನಿಗಳನ್ನು ಸ್ಥಾಪಿಸಿ ನಡೆಯಿಸುವ ಒಪ್ಪಂದವೊಂದು ಚೈನಾ ಮತ್ತು ರಶ್ಯಗಳೊಳಗಾಗಿದ್ದು, ಈ ಮೂಲಕ ರಶ್ಯವು ಅತಿ ಹೆಚ್ಚಿನ ಎಣ್ಣೆ ಸೌಕರ್ಯವನ್ನು ಪಡೆದಿರುವುದಷ್ಟೇ ಅಲ್ಲ; ಚೈನದ ಸಾವನ್ನೇ ತಾನು ಹೀರಿಕೊಳ್ಳುವಂತಾಗಿದೆ. ಈ ಕಾರಣ, ಅಮೇರಿಕವು ವಿಶೇಷ ಆತಂಕಕ್ಕೀಡಾಗಿದೆ.

ಪೆಲಸ್ಟೈನಿನ ಯೆಹೂದೀ ಸರಕಾರದೊಡನೆ, ಅರಬ್ ಲೀಗಿಗೆ ಸೇರಿದ ಏಳು ಅರಬೀ ರಾಷ್ಟ್ರಗಳ ಪೈಕಿ ಯಾವುದೂ ಪ್ರತ್ಯೇಕ ಒಪ್ಪಂದ ಮಾಡಿಕೊಳ್ಳಬಾರದೆಂಬ ನಿರ್ಣಯವು ಅರಬ್ ಲೀಗಿನಲ್ಲಾಗಿದೆ. ಆ ಪೈಕಿ ಜೋರ್ಡನ್ ರಾಷ್ಟ್ರವು ಆದಿಭಾಗದಲ್ಲಿ ಈ ಒಪ್ಪಂದಕ್ಕನುಕೂಲವಿಂದೆ ಅರಬ್ ಲೀಗಿನ ಪ್ರಥಮ ಸಭೆಗಳಿಗೆ ಬಹಿಷ್ಕಾರ ಹಾಕಿದ್ದರೂ ಕೊನೆಗೆ ಅದೂ ನೊಗಕ್ಕೆ ಹೆಗಲೊಡ್ಡಿತು.

'ಉತ್ತರ ಅಟ್ಲಾಂಟಿಕ್ ಕೂಟ'ದ ಹನ್ನೆರಡು ರಾಷ್ಟ್ರಗಳ ಪೈಕಿ ಹನ್ನೊಂದರ ರಕ್ಷಣಾ ಮಂತ್ರಿಗಳ ಸಮ್ಮೇಳನವು ಅಮೇರಿಕದ ರಕ್ಷಣಾ ಕಾರ್ಯದರ್ಶಿಯವರ ನೇತೃತ್ವದಲ್ಲಿ ಹೇಗ್ಯೂನಲ್ಲಿ ಸೇರಿ 'ಸಾಮೂಹಿಕ ಸ್ವರಕ್ಷಣಾ' ಯೋಜನೆಯೊಂದನ್ನು ಸರ್ವಾನುಮತಿಯಿಂದ ತಯಾರಿಸಿಕೊಂಡಿವೆ. ಈ ಒಕ್ಕಟವು ರಶ್ಯಕ್ಕೆದಿರಾಗಿ ನಿರ್ಮಿಸಲ್ಪಟ್ಟಿರುವ ಸಂಘಟನೆಯಾಗಿದ್ದು, ಆದಿಯಿಂದಲೂ ಸೋವಿಯೆಟಿನ ಕಣ್ಣನ್ನು ಕುಕ್ಕುತ್ತಾ ಬಂದಿದೆ.

ಕಮ್ಯೂನಿಸಮ್ ಧಾಳಿಯನ್ನು ತಡೆಗಟ್ಟುವದಕ್ಕಾಗಿ ಆಗ್ನೇಯ ಏಸ್ಯಾದ ಇಂಡೋನೇಶಿಯಾ, ಇಂಡೋ-ಚೈನಾ ಥೈಲೆಂಡುಗಳಿಗೆ ಅಮೇರಿಕದ ಸೇನೋಪಕರಣಗಳನ್ನು ರವಾನಿಸುವ ಸೂಚನೆಗೆ ಅಧ್ಯಕ್ಷ ಟ್ರುಮೇನರು ಒಪ್ಪಿದ್ದಾರೆ. ಅಂಟ್ಲಾಂಟಿಕ್ ಒಪ್ಪಂದಾನುಸಾರವಾಗಿ ಅಮೇರಿಕದ ಶಸ್ತ್ರಾಸ್ತ್ರಗಳನ್ನು ತುಂಬಿಕೊಂಡ ಹಡಗುಗಳು ಇಟೆಲಿ ಮೊದಲಾದ ರಾಷ್ಟ್ರಗಳಿಗಂತೂ ಇಷ್ಟರಲ್ಲೇ ಹೋಗಿವೆ. ಅಮೇರಿಕದ ಸದ್ಯದ ಯೋಜನೆಯಂತೆ ಆಗ್ನೇಯ ಏಸ್ಯಕ್ಕೆ ಆರ್ಥಿಕ ಹಾಗೂ ಸೇನಾ ಸಹಾಯವಾಗಿ ಅಮೇರಿಕವು 139 ಮಿಲಿಯ ಡೋಲರುಗಳನ್ನು ಕೊಡಲಿದೆ. ಅಂತೆಯೇ ಫಿಲಿಪ್ಪಾಯಿನ್ಸ್, ಕೊರಿಯಾ, ಜಾಪಾನ್ ಮತ್ತು ಫೋರ್ಮೋಸಾದ ಚೀನೀ ರಾಷ್ಟ್ರೀಯ ಸರಕಾರಕ್ಕೆ 139 ಮಿಲಿಯ ಅಮೇರಿಕನ್ ಡೋಲರುಗಳು ವಿನಿಯೋಗಿಸಲಿವೆ. ಈ ರೀತಿ ಅಮೇರಿಕವು ಎಲ್ಲೆಡೆಯು ಕಮ್ಯೂನಿಸ್ಟ್ ಪ್ರತಿಬಂಧಕ ಕೋಟೆಗಳನ್ನೂ ಬಲಪಡಿಸುತ್ತಿದೆ.

ಅತ್ತ ಅಮೇರಿಕದ ಕೆಲವು ಸೆನೆಟ್ ಸದಸ್ಯರು ಟ್ರುಮೇನ್ ಧೋರಣೆಯ ಕುರಿತು ಭಿನ್ನಾಭಿಪ್ರಾಯವುಳ್ಳವರಿರುವುದು ಹಲವು ವಿಧಗಳಿಂದ ಸ್ಪಷ್ಟವಾಗಿದೆ. ಆ ಪೈಕಿ ಸೆನೆಟರ್ ಜೋಸೆಫ್ ಮೆಕಾರ್ಥಿಯವರಂತೂ "ಅಮೇರಿಕದ ಗೃಹ ಶಾಖೆಯಲ್ಲಿ ಹುದುಗಿ ಹೋಗಿರುವ ಕಮ್ಯೂನಿಸವೇ ಕ್ರೆಮ್ಲಿನ್ನಿನ ಅತಿ ದೊಡ್ಡ ಅನುಕೂಲತೆ" ಯೆಂದು ಆರೋಪಿಸಿದ್ದಾರೆ. ಅಧ್ಯಕ್ಷ ಟ್ರುಮೇನರು ಇಂತಹ ಟೀಕಾಕಾರ ಸೆನೆಟರರನ್ನು ತೀಕ್ಷ್ಣವಾಣಿಯಿಂದ ಖಂಡಿಸಿ 'ಕ್ರೆಮ್ಲಿನ್ನಿನ ಅತಿದೊಡ್ಡ ಸಂಪತ್ತುಗಳೆಂದರೆ ಇವರೇ' ಎಂದು ಮರುತ್ತಾರವನ್ನು ಕೊಟ್ಟಿದ್ದಾರೆ. ಅಮೇರಿಕದ ರಾಜಧಾನಿ ವಾಷಿಂಗ್ಟನಿನಲ್ಲಿರುವ ಕಮ್ಯೂನಿಸ್ಟ್ ರಾಷ್ಟ್ರಗಳ ರಾಯಭಾರೀ ಕಚೇರಿಗಳು ಒಳ ದಗಾಖೋರತನದ ಕೇಂದ್ರಗಳಾಗಿರುವವೆಂದೂ, ಅವುಗಳ ವಿರುದ್ಧ ಕಠಿಣ ರಕ್ಷಣಾ ಹಂಚಿಕೆಗಳನ್ನು ಕೈಕೊಳ್ಳಬೇಕೆಂದೂ ಅಮೇರಿಕದ ಪ್ರತಿನಿಧಿ ಸಭೆಯ 'ಅಮೇರಿಕೇತರ ಚಟುವಟಿಕೆ ಸಂಬಂಧದ ಸಮಿತಿ'ಯು ತನ್ನ ವರದಿಯಲ್ಲಿ ಒತ್ತಿ ಹೇಳಿದೆ.

ಕೇವಲ ಮೂರು ಬಹುಮತಗಳುಳ್ಳ ಬ್ರಿಟಿಷ್ ಕೂಲಿಗಾರ ಸರಕಾರವು ಪಾರ್ಲಿಮೆಂಟಿನಲ್ಲಿ ಬಲಾಬಲ ಪರೀಕ್ಷೆಯ ಸಂದರ್ಭ ಬರುವಾಗಲೆಲ್ಲಾ ಗಾಳಿಯಿದಿರ ದೀಪದಂತೆ ನಂದಿ ಹೋಗುವ ಭಯ ಬೀರುತ್ತಲೇ ಬಾಳುತ್ತಿದೆ. ಮಾರ್ಚ ತಾ. 29 ರಲ್ಲೊಮ್ಮೆ ಇಂತಹ ಸಂದರ್ಭ ಪೊದಗಿದ್ದಿತು. ಪೆಟ್ರೋಲು ಮತ್ತು ಕಲ್ಲಿದ್ದಲು ಸಂಬಂಧವಾಗಿ ಕಾಮನ್ಸ ಸಭೆಯಲ್ಲಿ ನಡೆದ ಚರ್ಚೆಗೆ ಸರಕಾರವು ಕೊಟ್ಟ ಉತ್ತರವು ಸಮರ್ಪಕವಲ್ಲವೆಂಬುದರಿಂದ ಚರ್ಚಿಲ್ ಪಕ್ಷೀಯರು ನಿಲುವಳಿ ಸೂಚನೆ ತಂದರು. ಈ ಸಂದರ್ಭದಲ್ಲಿ ಕೂಲಿಗಾರ ಪಕ್ಷದ 36 ಸದಸ್ಯರು ಅನುಮತಿ ವಿನಹಾ ಗೈರು ಹಾಜರಿದ್ದುದರಿಂದ ವಿರುದ್ಧ ಪಕ್ಷದ ಸೂಚನೆಗೆ 283 ಅನುಕೂಲ, 257 ಪ್ರತಿಕೂಲ ಮತಗಳು ದೊರೆತು 26 ಮತಗಳಿಂದ ಸರಕಾರ ಸೋತುಹೋಯಿತು. ಆದರಿದು ನಿರ್ಣಯಾತ್ಮಕ ಸೂಚನೆಯೇನೂ ಅಲ್ಲವಾದ್ದರಿಂದ ಇದಕ್ಕಾಗಿ ರಾಜೀನಾಮೆ ಕೊಡದೆ, ಯಥಾಪ್ರಕಾರ ಮುಂದೊತ್ತಬೇಕೆಂದು ಅಟ್ಲೀ ಸರಕಾರ ನಿರ್ಧರಿಸಿದೆ. ಮರುದಿನವೇ ಪಾರ್ಲಿಮೆಂಟಿನ ಲೋರ್ಡ್ಸ್ ಸಭೆಯಲ್ಲಿಯೂ ಇಂತಹ ಒಂದು ಅಪಜಯವು ಕೂಲಿಗಾರ ಸರಕಾರಕ್ಕಾಗಿದೆ. ಆದರೆ ಲೋರ್ಡ್ಸ್ ಸಭೆಯಲ್ಲಿ ಟೋರಿಗಳದೇ ಬಹುಮತವಿದ್ದು, ಅದಕ್ಕೆ ಸರಕಾರವನ್ನು ರದ್ದುಪಡಿಸುವ ಅಧಿಕಾರವೇನೂ ಇಲ್ಲವಾದ್ದರಿಂದ ಅದು ಗಣ್ಯವಲ್ಲ. ಹೀಗಿದ್ದರೂ ಕೇವಲ ತಿಂಗಳು ತುಂಬುತ್ತಾ ಬರುತ್ತಿರುವ ಅಟ್ಲೀ ಸರಕಾರವು ಇನ್ನೆಷ್ಟು ಕಾಲ ಬಾಳಬಹುದೆಂಬುದನ್ನು ವಾರ ಸಂಖ್ಯೆಯಿಂದ ಲೆಕ್ಕಿಸಬೇಕಾದ ಪರಿಸ್ಥಿತಿಯುಂಟಾಗಿದೆ.

ಫ್ರೆಂಚರ ಅಧೀನದಲ್ಲಿರುವ ಇಂಡೋ-ಚೈನಾದಲ್ಲಿ ಫ್ರೆಂಚ್ ವಿರುದ್ಧವಾಗಿ ಪ್ರಚಂಡ ವಿಯೆಟ್‌ಮಿನ್ ಹೋರಾಟ ನಡೆದಿದೆ. ವಿರೋಧೀ ಸೇನೆಗಳಿಗೆ ಕಮ್ಯೂನಿಸ್ಟ್ ಚೈನ ಅಥವಾ ಸಯಾಮಿನಿಂದ ಆಧುನಿಕ ಶಸ್ತ್ರೋಪಕರಣಗಳ ಸರಬರಾಯಿಯಾಗಿದೆಯೆಂದೂ ಕೊಚಿನ್ ಚೈನಾ ವಲಯದಲ್ಲಿ ನಡೆದ ಮೂರು ದಿನದ ಕಠೋರ ಕಾಳಗದಲ್ಲಿ ತಾವು ವೈರಿಗಳಿಗೆ ವಿಶೇಷ ಹಾನಿಯೊಡ್ಡಿರುವುದಾಗಿಯೂ ಫ್ರೆಂಚ್ ಪ್ರಕಟಣೆಯಿದೆ.

ಯುರೋಪಿಗೆ ಮಾರ್ಶಲ್ ಯೋಜನೆಯನ್ವಯದ ಮೂರನೇ ವರುಷದ ಸಹಾಯ ಮತ್ತು ಅನಭಿವೃದ್ಧಿ ರಾಷ್ಟ್ರಗಳಿಗಾಗಿ ಇರುವ ಅಧ್ಯಕ್ಷ ಟ್ರುಮೇನರ 'ಚತುರ್ಮುದ್ದೆ' ಸಹಾಯದ ಸಮೇತ ಭೌಗೋಲಿಕ ವಿದೇಶೀ ಸಹಾಯವೆಂದು ಅಮೇರಿಕದ 'ಪ್ರತಿನಿಧಿ ಸಭೆ'ಯು 3,102,450,000 ಡೋಲರುಗಳನ್ನು ನಿರ್ಧರಿಸಿದೆ. ಅಧ್ಯಕ್ಷ ಟ್ರುಮೇನರು ಕೇಳಿದ್ದ ಮೊತ್ತವು ಇದಕ್ಕಿಂತ ಹೆಚ್ಚಿಗಿದ್ದಿತು. ಪ್ರತಿನಿಧಿ ಸಭೆಯಲ್ಲಿ ಮಂಜೂರಾದ ಈ ನಿರ್ಧಾರವು ಇನ್ನು "ಸೆನೆಟ್" ಸಭೆಯ ಅನುಮತಿ ಪಡೆದು ಆ ಮೇಲೆ ಅಧ್ಯಕ್ಷರ ಸಹಿ ಪಡೆಯಬೇಕು. ತನ್ನಿಚ್ಛೆಯ ದುರಸ್ತಿಯನ್ನು ಅಪೇಕ್ಷಿಸಿ, ಈ ನಿರ್ಧಾರವನ್ನು ಪುನರಾಲೋಚನೆಗಾಗಿ ಮರಳಿಸುವ ವಿಶೇಷಾಧಿಕಾರವು ಅಮೇರಿಕಾಧ್ಯಕ್ಷರಿಗಿದೆ.

## ಭಾರತ ಸ್ಥಿತಿಗತಿ

ಎರಡು ಬಂಗಾಳಗಳ ಪ್ರಚಲಿತ ಗಲಭೆಯ ಕುರಿತು ಪರ್ಯಾಲೋಚಿಸಲು ನವದೆಹಲಿಯಲ್ಲಿ ನಡೆದಿರುವ ನೆಹರು—ಲಿಯಾಖತ್ ಮಾತುಕತೆಯೇ ಇಂದು ಎಲ್ಲರ ಲಕ್ಷ್ಯವನ್ನೆಳೆದಿರುವ ಪ್ರಾಮುಖ್ಯ ಘಟನೆ.

ಭಾರತೀಯ ವಿಮಾನ ಪಡೆಯ 17ನೇ ವರ್ಧಂತಿಯು ಇದೇ ಏಪ್ರಿಲ್ ತಾ. 1ಕ್ಕೆ ನವದೆಹಲಿಯಲ್ಲಿ ಮತ್ತು ರಾಷ್ಟ್ರದ ಇತರ


ಶರೀರದಲ್ಲಿಯ ಅಸಹ್ಯ ಉಷ್ಣತೆಯನ್ನು ಇದರಿಂದಲೇ ತೆಗೆದು ಹಾಕಿರಿ

ಕಢಾ ಇದು ಶರೀರದ ಒಳಗಿನ ಮತ್ತು ಹೊರಗಿನ ಉಷ್ಣವನ್ನು ತೆಗೆದು ಹಾಕಿ ಶ್ರೀತತಿಯನ್ನು ತಂದುಕೊಡುವದು, ಅಪಚನ ಅಸ್ವಾಸ್ಥ್ಯವನ್ನು ನಿವಾರಿಸುವದು, ಶಾರೀರಿಕ ಮತ್ತು ಮಾನಸಿಕ ಶಕ್ತಿಯನ್ನು ಬೆಳೆಸುವದು, ಧಾತು ಸ್ಥಾನದಲ್ಲಿಯ ಉಷ್ಣತೆಯನ್ನು ಹೋಗಲಾಡಿಸಿ ಪುಷ್ಟಿಕರ ಮಾಡುವದು

ನಿಮ್ಮ ಹತ್ತಿರದ ಕೆಮಿಸ್ಟರ ಕಡೆಯಿಂದ ಇಂದೇ ಒಂದು ಬಾಟಲಿಯನ್ನು ತಂದು ಸೇವಿಸಲು ಪ್ರಾರಂಭಿಸಿರಿ

ಪರ್ಲ ಎಂಡ್ ಕಂಪನಿ
ಮುಂಬಯಿ ೨.


## ಪ್ರಕಟಣೆ

ಬಿ. ಇ. ಯಂ. ಹಾಯರ್ ಎಲಿಮೆಂಟರಿ ಶಾಲಾ
ಹಳೆ ವಿದ್ಯಾರ್ಥಿಗಳ ಸಂಘ,
ಉದಿಯಾವರ.

ಹೊಸದಾಗಿ ಸ್ಥಾಪಿತವಾದ ಈ ಸಂಘಕ್ಕೆ ವಿದ್ಯಾಭಿಮಾನಿಗಳಾದ ಹಳೇ ವಿದ್ಯಾರ್ಥಿಗಳೂ ಇತರ ಮಹನೀಯರೂ ತಮ್ಮ ತನುಮನಧನ ಸಹಾಯವನ್ನು ನೀಡಬೇಕಾಗಿಯೂ ಧನ ಸಹಾಯವನ್ನು ಅಧ್ಯಕ್ಷರ ಹೆಸರಿಗೆ ಕಳುಹಿಸಿಕೊಡಬೇಕಾಗಿಯೂ ಅಪೇಕ್ಷಿಸುತ್ತೇವೆ.

ಪಟೇಲ್ ಯು. ಭಾಸ್ಕರ ಶೆಟ್ಟಿ, ಅಧ್ಯಕ್ಷ.

ಯು. ರಘುನಾಥ ಕಾಮತ್, ಕೋಶಾಧಿಕಾರಿ.

ಯು. ಸಂಜೀವರಾವ್, ಶ್ಯಾನುಭಾಗ, ನಾಮನ, ಉದ್ಯಾವರ } ಜತೆ ಕಾರ್ಯದರ್ಶಿಗಳು.

ವಿ. ಸೂ. ತಾ. 27-4-50ರ ಶಾಲಾ ವರ್ಧಂತ್ಯುತ್ಸವಕ್ಕೂ ತಾ. 29-4-50ರ ಹಳೆ ವಿದ್ಯಾರ್ಥಿಗಳ "ಮೀರಾಬಾಯಿ" ಎಂಬ ನಾಟಕಕ್ಕೂ ಸಂಘದ ದಿನಾಚರಣೆಗೂ ಬರಬೇಕಾಗಿ ಸವಿನಯ ಆಮಂತ್ರಣ.

# ಒಳಗಡೆ ಮುಂಗಡೆಯ ಭಾರತೀಯ ಸಮಸ್ಯೆ.

ಭಾಗಗಳಲ್ಲೆಲ್ಲಾ ಗಂಭೀರ ವಿಧಾನಗಳಿಂದ ಆಚರಿಸಲ್ಪಟ್ಟಿತು. ಈ ಶತಮಾನದ ಆದಿ ಭಾಗದಲ್ಲಿ ಆರಂಭಿಸಿದ್ದ ಜಾಗತಿಕ 'ವಿಮಾನ ಯುಗ'ದಲ್ಲಿ ಕಳೆದ 17 ವರುಷಗಳಿಗೆ ಮೊದಲು ಸ್ಥಾಪನೆಯಾಗಿದ್ದ ಐ. ಎ. ಎಫ್. ಇಷ್ಟರಲ್ಲೇ ಶ್ಲಾಘನೀಯ ಪ್ರಗತಿ ಮತ್ತು ಸಾಹಸ ದಾಖಲೆಗಳನ್ನು ನಿರ್ಮಿಸಿದೆ. ಕಳೆದ ಮಹಾಯುದ್ಧದ ಹಲವು ರಂಗಗಳಲ್ಲಿ ಅದು ತನ್ನ ಪ್ರಭಾವವನ್ನು ಪ್ರದರ್ಶಿಸಿ ಕೊಂಡಾಟಕ್ಕರ್ಹವಾಗಿದೆ ಈ ವರ್ಧಂತಿ ಮಹೋತ್ಸವದ ವೇಳೆ ಹಿಂದೀ ವೈಮಾನಿಕ ದಳದ ಅಮೋಘ ಕಾರ್ಯಕಲಾಪಗಳನ್ನು ಕೊಂಡಾಡಿ ಅಧ್ಯಕ್ಷ ಪ್ರಸಾದ್ ಮತ್ತು ರಕ್ಷಣಾ ಮಂತ್ರಿ ಸರ್ದಾರ್ ಬಲದೇವಸಿಂಗರು ಸಂದೇಶಗಳನ್ನು ಕಳುಹಿಸಿದ್ದರು.

ಇದೇ ಎಪ್ರಿಲ್ 1ನೇ ತಾರೀಕನ್ನು ಭಾರತ ಚರಿತ್ರೆಯಲ್ಲೇ ಅಪೂರ್ವ ದಿನವಾಗಿ ಮಾರ್ಪಡಿಸಿದ ವಿಶೇಷ ವ್ಯವಸ್ಥೆಯೊಂದು ಆ ದಿನ ನಡೆದಿದೆ. ಅಂದಿನಿಂದ ಅಖಿಲಭಾರತದ ಎಲ್ಲಾ ಸಂಸ್ಥಾನೀ ಸೇನೆಗಳ ಹತೋಟಿಯು ಸಂಪೂರ್ಣವಾಗಿ ಕೇಂದ್ರಾಡಳಿತೆಯ ಹಸ್ತಗತವಾಗಿದೆ. ಇಂತಹ ಸೇನಾ ಏಕೀಕರಣವು ಭಾರತದಲ್ಲಿ ಇದುವರೆಗಾದುದಿಲ್ಲ. ಇದೇ ತಾ. 1 ರಿಂದ ರಾಷ್ಟ್ರದೊಳಗಿನ ಎಲ್ಲಾ ಸಂಸ್ಥಾನೀ ಸೇನೆಗಳ ಹಣಕಾಸಿನ ಜವಾಬ್ದಾರಿ, ಅವುಗಳ ಸಂಘಟನೆ ಮತ್ತು ನಿರ್ದೇಶಕತ್ವದ ಹೊಣೆಯು ಕೇಂದ್ರ ಭಾರತದ್ದಾಗುವುದು. ಪ್ರಸ್ತುತ ಸಂಸ್ಥಾನೀ ಸೇನೆಗಳನ್ನು ಪುನರ್ಸಂಘಟನೆಗೊಳಿಸುವ ಕಾರ್ಯ ನಡೆದು, ಅದು ಪೂರ್ಣಗೊಂಡೊಡನೆಯೆ ಆ ಸೇನೆಗಳು ಹಿಂದೀ ಸೇನಾಂಗಗಳಿಗೆ ಜೋಡಣೆಗೊಂಡು ನಿರ್ಮಾಣ, ಸಂಬಳ, ಮಟ್ಟ ಇತ್ಯಾದಿ ಎಲ್ಲಾ ವಿಧಾನಗಳಲ್ಲೂ ಭಾರತೀಯ ಸೇನೆಯ ಸಮಾನತೆಗೇರುವವು.

ಹೈದರಾಬಾದ್ ಸಂಸ್ಥಾನದ ಮುಂಬರುವ ವರುಷದ ಆಯವ್ಯಯ ಅಂದಾಜು ಪಟ್ಟಿಯ ಸ್ವರೂಪ ಹೀಗಿದೆ:— ಆಯ ರೂ. 2,989,03 ಲಕ್ಷಗಳು; ವ್ಯಯ ರೂ. 3,001,44 ಲಕ್ಷಗಳು. ಈ ರೀತಿ 12 41 ಲಕ್ಷ ರೂಪಾಯಿಗಳ ಕೊರತೆ ಕಂಡು ಬಂದಿದೆ. ವೆಚ್ಚದ ಪೈಕಿ ನಿಜಾಮರ ಖಾಸಗೀ ನಿಧಿಯಾಗಿ 50 ಲಕ್ಷ ರೂ; ಅವರ ವಾರ್ಸ್-ಇ ಖಾನ್ ಉತ್ಪನ್ನವಾಗಿ 5 ಲಕ್ಷ ರೂ; ಮತ್ತಿತರ ಎಲ್ಲಾ ಕೊಡುಗೆಗಳು ಕೂಡಿ ಒಟ್ಟಿಗೆ ವರುಷಕ್ಕೆ 1 ಕೋಟಿ ರೂಪಾಯಿಗಳು ನಿಜಾಮರಿಗೆ ಸಲ್ಲುತ್ತವೆ. ನಿಜಾಮ್ ಕುವರರಿಬ್ಬರ ಖಾಸಗೀ ನೌಕರರಿಗಾಗಿ ಸಣ್ಣ ಮೊತ್ತವನ್ನು ತೆಗೆದಿಟ್ಟಿರುವುದನ್ನು ಬಿಟ್ಟರೆ ಅವರಿಗಾಗಿ ಅಥವಾ ನಿಜಾಮ್ ಮೊಮ್ಮಕ್ಕಳಿಬ್ಬರಿಗಾಗಿ ಬೇರಾವ ಸಂದಾಯವೂ ಇಲ್ಲ. ಇವರಿಗಾಗಿ ನಿಜಾಮರು ಮಾಡುತ್ತಿರುವ ಪ್ರತ್ಯೇಕ 'ಟ್ರಸ್ಟ್'ಗಳಿಂದಲೇ ಅವರ ವೆಚ್ಚವು ಹೋಗಬೇಕಾಗಿದೆ.

ಬೊಂಬಾಯಿ ಸರಕಾರವು ಇದೇ ಎಪ್ರಿಲ್ ತಾ. 1ರಿಂದ ಇಡೀ ಬೊಂಬಾಯಿ ಪ್ರಾಂತ್ಯದಲ್ಲಿ ಪೂರ್ಣ ಪಾನ ನಿಷೇಧವನ್ನು ಜಾರಿಗೆ ತಂದಿದೆ. ಮದ್ಯದಂಗಡಿಗಳೆಲ್ಲವೂ ಆ ದಿನವೇ ಮುಚ್ಚಲ್ಪಟ್ಟರೂ ಅಧಿಕೃತವಾಗಿ ಪ್ರಾಂತ್ಯದ ಪಾನನಿಷೇಧ ಜ್ಯಾರೀ ಸಮಾರಂಭವು ಇದೇ ತಾ. 6 ರಲ್ಲಿ ಅಧ್ಯಕ್ಷ ರಾಜೇಂದ್ರ ಪ್ರಸಾದರ ನೇತೃತ್ವದಲ್ಲಿ ಜರಗಲಿದೆ. ಅಂತಸ್ತುವಾರಾಗಿ ಪಾನಪ್ರತಿಬಂಧ ಮಾಡುವ ಚತುರ್ವಾರ್ಷಿಕ ಯೋಜನೆಯನ್ನು ಕೈಕೊಂಡಿದ್ದ ಬೊಂಬಾಯಿ ಸರಕಾರವು ಈಗ ತಾನೇ ಅದನ್ನು ಪೂರ್ಣಗೊಳಿಸಿಕೊಂಡು ಮದ್ರಾಸ್ ಪ್ರಾಂತ್ಯದ ಮಟ್ಟಕ್ಕೇನೇ ಬಂದಂತಾಯಿತು.

ಭಾರತ ಪಾರ್ಲಿಮೆಂಟಿನಲ್ಲಿ ಆಯ-ವ್ಯಯಗಳಿಗೆ ಸಂಬಂಧಿಸಿದ ಚರ್ಚೆಗಳು ಮತ್ತು ಗ್ರಾಂಟು ಮಂಜೂರಾತಿಗಳ್ ಸಾಂಗವಾಗಿ ನೆರವೇರಿದುವು. ಪರಿಶೀಲನಾ ಸಮಿತಿಯಿಂದ ದುರಸ್ತಿ ಮಾಡಲ್ಪಟ್ಟಂತೆ ಕರಕಂದಾಯಗಳ ಸಂಬಂಧದ 'ಆರ್ಥಿಕ ಮಸೂದೆ'ಯು ಪಾರ್ಲಿಮೆಂಟಿನಲ್ಲಿ ಮಂಜೂರಾಯಿತು. ಲಾಯಕ್‌ಆಲೀ ಪಲಾಯನದ ಸಂಬಂಧವಾಗಿ-ಪೂರ್ವ ಬಂಗಾಳದ ನಿರಾಶ್ರಿತ ಹಿಂದುಗಳ ವ್ಯವಸ್ಥೆಯ ಕುರಿತು—ಮತ್ತಿತರ ಪ್ರಾಮುಖ್ಯ ಆಗುಹೋಗುಗಳ ಕಡೆಗೆ ಪ್ರಕಾಶ ಚೆಲ್ಲುವ ಸಂದರ್ಭಗಳು ಈ ಬಾರಿಯ ಪಾರ್ಲಿಮೆಂಟ್ ಅಧಿವೇಶನದ ಪಾಲಿಗೊದಗಿದ್ದುವು. "ಹೈದರಾಬಾದ್ ಸರಕಾರದ ಕೈದಿಯಾಗಿದ್ದ ಮೀರ್ ಲಾಯಿಕ್ ಆಲಿಯನ್ನು ಹೈದರಾಬಾದ್ ಸರಕಾರ ಕ್ಕೊಪ್ಪಿಸಬೇಕೆಂದು ಪಾಕಿಸ್ತಾನ್ ಸರಕಾರದೊಡನೆ ಕೇಳಿಕೊಂಡಿರುವಿರಾ?" ಎಂಬ ಪ್ರಶ್ನೆಯು ಇದೇ ತಾ 31ರಲ್ಲಿ ಬಂದಾಗ "ಈ ವಿಷಯವು ಪರ್ಯಾಲೋಚನೆಯಲ್ಲಿದೆ" ಎಂದು ಸರ್ದಾರ್ ಪಟೇಲರು ಉತ್ತರವಿತ್ತಿದ್ದಾರೆ. ಈ ತನಕ ಅಂತಹ ಸೂಚನೆ ಹೋಗಿಲ್ಲವೆಂದೂ ತಿಳಿಸಿದ್ದಾರೆ. ಭಾರತದ ಮೇಲಾಗುತ್ತಿರುವ ವಿದೇಶೀ ಅಪಪ್ರಚಾರಗಳನ್ನು ಪ್ರತಿಭಟಿಸಲು ವಿದೇಶಗಳಲ್ಲಿರುವ ರಾಯಭಾರೀ ಕಚೇರಿಗಳ ಮೂಲಕ ಕೈಕೊಳ್ಳುತ್ತಿರುವ ವ್ಯವಸ್ಥೆಗಳ ಕಡೆಗೂ ಬೆಳಕು ಬಿದ್ದಿದೆ.

ಕಳೆದ ಮಾರ್ಚಿ ತಾ 1ರಲ್ಲಿ ರಾಜಸ್ಥಾನದ ಗಿರಾಜಾ ಎಂಬಲ್ಲಿ ಪೋಲೀಸ್ ಪಂಗಡವೊಂದರ ಮೇಲೆ ನಡೆದಿದ್ದ ಧಾಳಿಯು, 26 ಮಂದಿ ಕಮ್ಯೂನಿಸ್ಟ್ ಕೈದಿಗಳ ಮರಣದಲ್ಲಿ ಪರಿಣಮಿಸಿದ್ದ ಸೇಲಂ ಜೈಲು ಪ್ರಕರಣದಂತೆಯೇ ಅಸಾಮಾನ್ಯ ಘಟನೆಯಾಗಿತ್ತು. ಪಾರ್ಲಿಮೆಂಟಿನಲ್ಲಿ ಬಂದಿದ್ದ ಪ್ರಶ್ನೆಗುತ್ತರವಾಗಿ ಸರ್ದಾರ್ ಪಟೇಲರು ಆ ಕುರಿತು ಈ ರೀತಿ ಸಂಗತಿ ನಿವೇದನೆ ಮಾಡಿಕೊಂಡಿದ್ದರು:-ಕಾಯಿದೇ ವಿರುದ್ಧವಾಗಿ ಸುಮಾರು ಹತ್ತು ಸಾವಿರ ಮಂದಿಗೆ ಔತಣ ಸಮಾರಂಭ ನಡೆಯುತ್ತಿದೆ ಎಂಬ ವಾರ್ತೆ ಬಂದುದರಿಂದ ಅಧಿಕಾರಿಗಳು ಮತ್ತು ಪೋಲೀಸು ಪಂಗಡವು ಗಿರಾಜಾ ಹಳ್ಳಿಗೆ ಹೋಗಿದ್ದರು. ಅವರು ನಿಶ್ಚಿತ ಸ್ಥಳಕ್ಕೆ ಬಂದು ಅಲ್ಲಿಯ ಪಾಕ ಸಂಗ್ರಹಾಲಯದ ಪರಿಶೋಧನೆ ನಡಿಸಿ, ಅಲ್ಲಿಯೇ ಆ ಮಹಾ ಸಮಾರಾಧನೆಯ ಕರ್ತನೊಡನೆ ಸಂಬಂಧಪಟ್ಟ ವಿಷಯದ ಕುರಿತು ಚರ್ಚಿಸುತ್ತಾ ನಿಂತಿದ್ದರು. ಆಗಲೇ ಅವರ ಮೇಲೆ, 24 ಮಂದಿ ಅಧಿಕಾರಿಗಳು ಸತ್ತು ಹಲವರು ಜಖಂಗೊಳ್ಳುವ ವರೆಗೂ ಆಕಸ್ಮಿಕ ಧಾಳಿ ನಡೆದುಹೋಯಿತು. ಈ ಹೊಡೆತವಾದರೋ ಎಷ್ಟೊಂದು ಮಿಂಚು ವೇಗದಲ್ಲಿ ನಡೆದಿತ್ತೆಂದರೆ ಪೋಲೀಸರಿಗೆ ತಮ್ಮ ಕೋವಿಗಳನ್ನು ತುಂಬಿಸಿ, ಗುರಿಯೆತ್ತುವ ಅವಕಾಶ ಕೂಡಾ ದೊರೆಯಲಿಲ್ಲ. ಈ ಸಂಬಂಧವಾಗಿ 29 ಮಂದಿಯ ದಸ್ತಗಿರಿಯಾಗಿ, 63 ಮಂದಿ ಅಪರಾಧಿಗಳೆಂದು ಸಾರಲ್ಪಟ್ಟು ಅವರ ಆಸ್ತಿ ಸೊತ್ತುಗಳನ್ನು ಜಪ್ತಿ ಮಾಡಲಾಗಿದೆ. ಈ ದುರ್ಘಟನೆಯ ನಂತರದ ದುಷ್ಪರಿಣಾಮವಾಗಿ ಸುಮಾರು 30 ಹಳ್ಳಿಗಳು ಜನರಿಲ್ಲದೆ ಬಂಜರು ಬಿದ್ದು, ಈಗೀಗ ಅಲ್ಲಿಯ ಹಳ್ಳಿಗರು ಸ್ವಸ್ಥಾನ ಸೇರಹತ್ತಿದ್ದಾರೆ. ಮರಣಗೊಂಡ ಅಧಿಕಾರಿಗಳ ಸಂಬಂಧಿಕರಿಗೆ ಸರಕಾರದಿಂದ ಪರಿಹಾರ ದ್ರವ್ಯ ದೊರೆತಿದೆ. ರಾಷ್ಟ್ರದ ಇತರ ಕೆಲವೆಡೆಗಳಲ್ಲಿಯೂ ಕಮ್ಯೂನಿಸ್ಟರ ಕೈವಾಡ, ಮತ್ತಿತರ ಕಾರಣಗಳ ಕೊಲೆ, ದರೋಡೆಗಳಾದ ಬಿಡಿ ವಾರ್ತೆಗಳಿವೆ.

ಹಿಂದೂ ಮಹಾಸಭಾ ಅಧ್ಯಕ್ಷ ಡಾ ಖರೆ, ಸಂಘಟನಾ ಕಾರ್ಯದರ್ಶಿ ಶ್ರೀ ದೇಶಪಾಂಡೆ, ಡಾ| ಪರಚುರೆ, ಗಂಗಾಧರ್, ಯ.ಸ್. ಧಾಂಡಟೆ ಮೊದಲಾದ ಹಿಂದೂ ಸಭಾ ನಾಯಕರನ್ನು ಆಜ್ಞಾನುಸಾರ ಢಿಲ್ಲಿಯಿಂದ ಹೊರಗೆ ಗಡೀಪಾರು ಮಾಡಲಾಗಿದೆ. ಬೊಂಬಾಯಿ ಸರಕಾರವು ಶ್ರೀ ಸಾವರ್ಕರ್, ಭೋಪಟ್ಕರ್ ಮೊದಲಾದ ಹಿಂದೂ ನಾಯಕರ ಮೇಲೂ ಇದೇ ರೀತಿ ಗಡೀಪಾರು ಆಜ್ಞೆಯಿತ್ತಿದೆ.

ಯುದ್ಧದಂತಹ ವಿಶೇಷ ಸಂದರ್ಭಗಳೊದಗಿದರೆ ಮಾತ್ರ ತಾವು ಸಮ್ಮಿಶ್ರ ಸರಕಾರ ರಚನೆಯಲ್ಲಿ ಸೇರಿಕೊಳ್ಳುವೆವಲ್ಲದೆ ಸದ್ಯದ ನಿತ್ಯ ಸ್ಥಿತಿಯಲ್ಲಿ ಅಧಿಕಾರಭಾಗಿಗಳಾಗಲು ಸಿದ್ಧರಿಲ್ಲವೆಂದು ಸಮಾಜವಾದಿ ಪಕ್ಷದ ನಾಯಕ ಶ್ರೀ ಜೈಪ್ರಕಾಶ ನಾರಾಯಣರು ಸ್ಪಷ್ಟಪಡಿಸಿದ್ದಾರೆ.

## ಮದ್ರಾಸ್ ಸಂಸ್ಥಾನ

ಆಯವ್ಯಯ ಪಟ್ಟಿಯನ್ವಯ ವಿವಿಧ ಖಾತೆಗಳ ಗ್ರಾಂಟು ಮಂಜೂರಾತಿ—ಪ್ರತಿಯೊಂದು ವಿಭಾಗದ ಕುರಿತು ಸರಕಾರೀ ಧೋರಣೆ, ಕಾರ್ಯಕ್ರಮ, ರೀತಿ ನೀತಿಗಳ ವಿಮರ್ಶೆ ಮತ್ತು ಸರಕಾರದ ಉತ್ತರ. ಸಂಬಂಧಪಟ್ಟ ಸಮಿತಿಗಳ ಮತ್ತು ಇತರ ವ್ಯವಸ್ಥಾಸೂತ್ರಗಳ ರಚನೆ-ಇತ್ಯಾದಿಗಳಾಗಿ ಮದ್ರಾಸ್ ಲೆಜಿಸ್ಲೇಟಿವ್ ಎಸೆಂಬ್ಲಿಯ "ಬಜೆಟ್" ಅಧಿವೇಶನವು ಮಾರ್ಚಿ ತಾ. 31ರಲ್ಲಿ ಮುಕ್ತಾಯಗೊಂಡಿತು.

ಆಂಧ್ರದ ಬಿರುಗಾಳಿ ಅನಾಹುತ ಮತ್ತಿತರ ಕಡೆಗಳ ಮಳೆಯ ಅಸ್ವಸ್ಥತೆಯಿಂದ ಮದ್ರಾಸ್ ಪ್ರಾಂತ್ಯದ ಈ ವರುಷದ ಆಹಾರ ಧಾನ್ಯೋತ್ಪತ್ತಿ ಮತ್ತು ಧಾನ್ಯ ಸಂಗ್ರಹ ತೃಪ್ತಿಕರವಿಲ್ಲ. ಹೀಗಾಗಿ, ಈ ಬಾರಿ ಆಹಾರಾಭಾವವು ಮಿಕ್ಕೆಡೆಗಳಿಗಿಂತ ಮದ್ರಾಸ್ ಸಂಸ್ಥಾನದಲ್ಲೇ ಅಧಿಕವಾಗುವ ಸಂಭವವಿದೆ. ಈಗಾಗಲೇ ದಕ್ಷಿಣ ಕನ್ನಡದಂತಹ ಜಿಲ್ಲೆಗಳಲ್ಲಿ ಕೇವಲ ಅಲ್ಪಾವಧಿಯೊಳಗೆ ಮುಗಿದುಹೋಗುವಷ್ಟೇ ಧಾನ್ಯ ದಾಸ್ತಾನಿರುವ ವಾರ್ತೆಗಳಿದ್ದಿವೆ. ಆದರೂ ಸಾಧ್ಯವಿದ್ದಷ್ಟು ಹೆಚ್ಚು ಆಹಾರ ಧಾನ್ಯಗಳನ್ನು ಸಂಗ್ರಹಿಸಿಕೊಂಡು, ಕೇಂದ್ರದಿಂದ ಹೆಚ್ಚಿನ ಸರಬರಾಯಿ ಮಾಡಿಸಿಕೊಂಡು ಪ್ರಾಂತ್ಯದ ಆವಶ್ಯಕತೆಯನ್ನು ಪೂರೈಸುವ ಪರಿಣಾಮಕಾರೀ ಪ್ರಯತ್ನದಲ್ಲಿ ಸರಕಾರ ನಿರತವಾಗಿದೆ. 1949ನೇ ವರುಷದಲ್ಲಿ ಮದ್ರಾಸ್ ಸಂಸ್ಥಾನಕ್ಕೆ ಕೇಂದ್ರದಿಂದ 365,527 ಟನ್ನು ಆಹಾರ ಧಾನ್ಯಗಳು ಬಂದಿದ್ದುವು. ಈ ಪೈಕಿ 119,635 ಟನ್ನುಗಳಷ್ಟು ಅಕ್ಕಿ, 129,725 ಟನ್ನುಗಳು ಇತರ ಧಾನ್ಯಗಳು, 116,683 ಟನ್ನುಗಳಷ್ಟು ಗೋಧಿ ಮತ್ತು ಗೋಧೀ ವಸ್ತುಗಳಾಗಿದ್ದುವು. 1950ನೇ ವರುಷಕ್ಕಾಗಿ ಕೇಂದ್ರ ಸರಕಾರವು ಮದ್ರಾಸ್ ಸಂಸ್ಥಾನದ ಪಾಲಿಗೆ ತೆಗೆದಿಟ್ಟಿರುವುದೆಂದರೆ ಎಲ್ಲಾ ವಿಧದ ಧಾನ್ಯಗಳೂ ಸೇರಿ 3 ಲಕ್ಷ ಟನ್ನುಗಳು. ಸದ್ಯಸ್ಥಿತಿಯಲ್ಲಿ ಈ ಅಂಕವನ್ನು ಹೆಚ್ಚಿಸಲೇ ಬೇಕೆಂದು ಮದ್ರಾಸ್ ಸರಕಾರವು ಕೇಳಿಕೊಂಡಂತೆ ಅದನ್ನು ಹೆಚ್ಚಿಸುವ ಆಲೋಚನೆಯನ್ನೀಗ ಕೇಂದ್ರ ಸರಕಾರವು ಮಾಡುತ್ತದೆ.

1951ನೇ ಎಪ್ರಿಲ್ ಅಥವಾ ಮೇ ತಿಂಗಳಲ್ಲಿ ಸಾರ್ವತ್ರಿಕ ಮಹಾ ಚುನಾವಣೆ ನಡೆಯುವದೆಂದು ಈಗ ಬಹುಮಟ್ಟಿಗೆ ನಿಶ್ಚಯವಾಗಿದೆ.

"ಬೇರೆ ಶಾಸ್ತ್ರಗಳನ್ನೋದದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

**ಗೀತೆಯ ಕೈಗನ್ನಡಿ**

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು—ದಿ| ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಮಾತುಗಳ ರೂಪದಲ್ಲಿರದೆ ಥಟ್ಟನೆಯಾಗಿ ಎದ್ದು ಕಾಣುವುದು.

**400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.**

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್, ಉಡುಪಿ, ದ. ಕನ್ನಡ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

THE
Canara Banking Corporation Ltd
(Incorporated in India with Limited Liability)
Estd: 1906.
ANNOUNCEMENT
A Branch of the Bank will shortly be opened
at
PONAMPET (SOUTH COORG).
ಬ್ಯಾಂಕಿನ ಒಂದು ಶಾಖೆಯು ಸದ್ಯದಲ್ಲಿಯೇ
ಪೊನ್ನಂಪೇಟೆ (ದಕ್ಷಿಣ ಕೊಡಗು)
ಯಲ್ಲಿ ತೆರೆಯಲಾಗುವುದು.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೋರೇಶನ್ ಲಿಮಿಟೆಡ್,
ಸ್ಥಾಪನೆ: 1906

ನವಯುಗ

ಗುರುವಾರ ಉಡುಪಿ ೬-೪-೧೯೫೦

## ನೆಹರೂ-ಲಿಯಾಖತ್

ನವದೆಹಲಿಯಲ್ಲಿ ಇದೇ ತಾ 2ನೇ ಆದಿತ್ಯವಾರ ಆರಂಭಿಸಿ ಈತನಕ (ತಾ. ೫ನೇ ಬುಧವಾರ) ನಡೆದಿರುವ ನೆಹರೂ-ಲಿಯಾಖತ್ ಮಾತುಕತೆಗಳು ಜಯಶೀಲವಾಗಲಿ ಎಂದು ಹಾರೈಸುವುದೊಂದಲ್ಲದೆ, ಆ ಸಂಬಂಧವಾಗಿ ಪ್ರಕೃತ ಏನನ್ನೂ ಹೇಳಲು ಬರುವದಿಲ್ಲ. ಮೊದಲನೆಯದಾಗಿ ಈ ಪರ್ಯಾಲೋಚನೆಯು ಅತ್ಯಂತ ಗುಪ್ತವಾಗಿ ನಡೆದಿದೆ; ಎರಡನೆಯದಾಗಿ ಈ ಕುರಿತು ಊಹಾಪೋಹವೂ ಸಲ್ಲದೆಂದು ಸರಕಾರೀ ನಾಯಕರ ಅಪೇಕ್ಷೆಯಿದೆ; ಮೂರನೆಯದಾಗಿ ಈ ಮಾತುಕತೆಯ ಸಫಲತೆ-ವಿಫಲತೆ ಎರಡೂ ಸಮತೂಕದಲ್ಲಿರುವಂತೆ ಕಾಣುತ್ತಿದೆ. ಭಾರತ-ಪಾಕಿಸ್ತಾನ್ ಪ್ರಧಾನಿಗಳು ಈಗ ಚರ್ಚೆಗೆತ್ತಿಕೊಂಡಿರುವ ವಿಷಯದ ಸೂಕ್ಷ್ಮ ಪರಿಚಯವಾಗುವದಿಲ್ಲವಾದರೂ ಅದರ ಸ್ಥೂಲರೂಪ ದರ್ಶನದಿಂದಲೇ ಅದು ಜಾಹೀರು ವಿಜಯವನ್ನಷ್ಟೇ ಪಡೆದರೆ ಸಾಲದು-ಸಾರ್ವತ್ರಿಕ ಸತ್ಪರಿಣಾಮ ಬೀರುವಂತಹುದಾಗಬೇಕು ಎಂಬ ಆಶೆ ಮೊಳೆಯುತ್ತಿದೆ. ಇಂತಹ ವಿಶೇಷ ಸನ್ನಿವೇಶಕ್ಕನುಗುಣವಾಗಿ ಸರ್ವರೂ ಸಹನೆ ಮತ್ತು ಸಂಯಮದಿಂದಿರಬೇಕಾದುದು ಅಗತ್ಯ.

ಪಾಕಿಸ್ತಾನದ ಪೂರ್ವ ಬಂಗಾಳ ಮತ್ತು ಭಾರತದ ಪಶ್ಚಿಮ ಬಂಗಾಳ, ಇವೆರಡು ಕಡೆಗಳಲ್ಲೂ ಮೊನ್ನೆಯ ವರೆಗೂ ನಡೆದಿದ್ದ ಪಾಶವಿಕ ಜಾತೀಯ ಗೊಂದಲಗಳು—ತತ್ಪರಿಣಾಮವಾಗಿ ಎದ್ದಿರುವ ನಿರಾಶ್ರಿತ ಸಮಸ್ಯೆ—ಈ ನಿರಾಶ್ರಿತರ ಜೀವನ ವ್ಯವಸ್ಥೆ ಮತ್ತು ಅವರು ಬಿಟ್ಟುಬಂದಿರುವ ಆಸ್ತಿ, ಸೊತ್ತು, ಸಂಪತ್ತುಗಳ ವ್ಯವಸ್ಥೆ — ಮುಂತಾದುವುಗಳೇ ಪಂಡಿತ ಜವಾಹಿರಲಾಲ ನೆಹರು ಮತ್ತು ಮಿ. ಲಿಯಾಖತ್ ಅಲೀ ಖಾನರೊಳಗಿನ ಚರ್ಚೆಯ ಸಂಗತಿಗಳೆಂದು ಗೊತ್ತಾಗಿದೆ. ಮೇಲಿನ ಪ್ರಶ್ನೆಗಳ ರೂಪದ ವೇದನೆಗಳು ಭಾರತೀಯ ಜನಸಾಮಾನ್ಯರ ಸಹನೆಯನ್ನು ಕೂಡಾ ಹೇಗೆ ಬರಿದು ಮಾಡಿದ್ದವೆಂಬುದನ್ನು ಈ ಸಂದರ್ಭದಲ್ಲಿ ಬೇರೆ ಜ್ಞಾಪಿಸಬೇಕೆಂದಿಲ್ಲ. ಈಗ ಗೊಂದಲವೇನೋ ನಿಂತಂತಿದೆ. ಆದರೆ ಇಂದಿನ ಸ್ತಬ್ಧತೆಯನ್ನೇ ಶಾಶ್ವತ ಶಾಂತಿಯೆಂದು ಕಟ್ಟಿಕೊಳ್ಳಲಾಗುವದಿಲ್ಲವೆಂದು, ಗತಕಾಲದ ಅನುಭವವು ಚುಚ್ಚುತ್ತಿದ್ದರೆ, ಗೊಂದಲವಿಲ್ಲದಿದ್ದರೂ ಅದರ ಪ್ರತಿಫಲಗಳಾದ ಅಗಾಧ ಸಮಸ್ಯೆಗಳಂತೂ ಪ್ರತ್ಯಕ್ಷ ಕಣ್ಣು ಮುಂದಿವೆ. ದಿಲ್ಲೀ ಮಾತುಕತೆಯ ಪರಿಣಾಮವಾಗಿ, ಇಂದಿನ ಸಮಸ್ಯೆಗಳ ನಿವಾರಣಾ ವ್ಯವಸ್ಥೆಯಾಗುವುದರೊಂದಿಗೆ ಮುಂದೆಂದೂ ಅಂತಹ ದುರಂತವೇಳದಂತಹ ಶಾಶ್ವತ ಶಾಂತ ವಾತಾವರಣ ಸ್ಥಾಪಿಸಲ್ಪಡಬೇಕು. ಹಾಗಾಗಬೇಕಾದರೆ ಬಂಗಾಳೀ ಗೊಂದಲ ಮತ್ತು ನಿರಾಶ್ರಿತ ಸಮಸ್ಯೆಗೆ ಸಂಬಂಧಪಟ್ಟ ವಿವಾದಗಳು ಮಾತ್ರವಲ್ಲ; ಭಾರತ-ಪಾಕಿಸ್ತಾನಗಳೊಳಗಿರುವ ಇತರ ಎಲ್ಲಾ ವಿವಾದಗಳೂ ತೀರ್ಮಾನ ಹೊಂದುವ ಅಗತ್ಯವಿದೆ. ಪ್ರಧಾನಿಗಳಿಬ್ಬರ ಕೆಲವೇ ದಿನಗಳ ವಿಚಾರ ವಿನಿಮಯದಲ್ಲಿ ಇವೆಲ್ಲವುಗಳ ಪರಿಶೀಲನೆಯೂ ನಡೆದೀತೆ? ದಿಲ್ಲೀ ಸಂಭಾಷಣೆಯು ಇವೆಲ್ಲವನ್ನೂ ಕೊನೆಗಾಣಿಸೀತೇ? ಎಂಬ ಪ್ರಶ್ನೆಗಳೇಳುತ್ತವೆ. ಒಂದಕ್ಕೊಂದು ತಾಗಿಕೊಂಡೇ ಇರುವ ಈ ಎಲ್ಲಾ ವಿಷಯಗಳನ್ನೂ ತೀರ್ಮಾನಿಸಿಕೊಳ್ಳಲು ಎರಡು ರಾಷ್ಟ್ರಗಳ ಪ್ರಧಾನ ಮಂತ್ರಿಗಳಿಂದ ಒಂದೊಮ್ಮೆಗೆ ಸಾಧ್ಯವಾದೀತೆಂದು ಕಲ್ಪಿಸಿಕೊಂಡರೂ-ಸಾಧ್ಯವಾಗಲಿ ಎಂದು ಹಾರೈಸೋಣ-ಇದು ಕಾರ್ಯಕ್ಕೊಂದು ಪೀಠಿಕೆಯಾದೀತು ಹೊರತು ಅಷ್ಟರಿಂದಲೇ ಕೆಲಸ ಪೂರ್ಣಗೊಂಡಂತಾಗದು. ಭಾರತ ಮತ್ತು ಪಾಕಿಸ್ತಾನ್ ಸರಕಾರಗಳೊಳಗೆ ಒಮ್ಮತವಿಲ್ಲದಿರುವುದೊಂದೇ ಬಂಗಾಳದಲ್ಲಿ ನಡೆದಂತಹ ಅಮಾನುಷ ಅತ್ಯಾಚಾರಗಳಿಗೆ ಕಾರಣವಲ್ಲ; ಇದೊಂದೇ ಹೇತುವೆಂದಾದರೆ, ಈ ಸರಕಾರಗಳ ಪಾಲಿಗೆ ಬರುವ ಅಪವಾದ ಹೊರೆಯು ಅತಿ ದೊಡ್ಡದಾಗಬಹುದು! ನಾಗರಿಕ ಯುಗದ ಯಾವುದೇ ಸರಕಾರದ ಮಾತಂತಿರಲಿ-ಕೇವಲ ವನ್ಯ ಜಂತುಗಳು ಹೊರತು ಮನುಷ್ಯ ಮಾತ್ರರಾರೂ ಸಹಿಸದಂತಹ ಬರ್ಬರಾಚರಣೆಗಳನ್ನು ನೆರೆಯ ರಾಷ್ಟ್ರದ ಮೇಲಣ ದ್ವೇಷದಿಂದ ಈ ಸರಕಾರಗಳು ಸಹಿಸಿದ್ದುವೆಂಬ ಅರ್ಥ ಇಲ್ಲಿ ಮಾಡಬಹುದು! ಆದರೆ ವಸ್ತುಸ್ಥಿತಿ ನಿಜಕ್ಕೂ ಹಾಗಿಲ್ಲ; ಲೌಕಿಕವಾದೀ ಜನತಾರಾಜ್ಯಭಾರತದ ಸರಕಾರವು ತನ್ನಲ್ಲಿಯ ಜಾತೀಯತಾ ಗೊಂದಲವನ್ನು, ಮೂಲ ದ್ವೇಷ ಸಮೇತ ಕಿತ್ತೊಗೆಯಲು ಎಂತಹ ಭಗೀರಥ ಪ್ರಯತ್ನಗಳನ್ನು ನಡೆಸಿದೆ, ನಡೆಸುತ್ತಿದ್ದೆ ಎಂಬುದು ಸರ್ವವಿದಿತವಿದೆ. ಪಾಕಿಸ್ತಾನ್ ಸರಕಾರದ ವಿಚಾರದಲ್ಲಿ ಈ ಮಾತುಗಳನ್ನು ಅಪೇಕ್ಷಣೀಯವೆಂದು ಹೇಳಲು ಬರುವುದಿಲ್ಲ. ಅದ್ದರಿಂದ ಯಾವುದೇ ಸರಕಾರೀ ಧೋರಣೆಗಿಂತಲೂ, ಸರಕಾರಗಳ ನಿಸ್ಸಹಾಯಕತೆಯೇ ಆ ಗೊಂದಲಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿದೆ. ಜನತೆಯು ಸಾಮೂಹಿಕವಾಗಿ ದ್ವೇಷ, ರೋಷಗೊಂಡು ಸಾರ್ವತ್ರಿಕ ಅನಾಚಾರಕ್ಕೇಳುವಾಗ, ಅದನ್ನು ಹೋರಾಡಿ ನಿರ್ಮೂಲಿಸುವುದೊಂದಲ್ಲದೆ, ಅದು ಮೊಳೆಯದಂತೇನೇ ಮಾಡಬಲ್ಲ ಐಂದ್ರಜಾಲವು ಯಾವ ಸರಕಾರದ ಯಾವ ಕಾನೂನು, ವ್ಯವಸ್ಥೆಗಳಿಂದಲೂ ಸಾಧ್ಯವಾಗದ ಸಂಗತಿ. ಈ ದೃಷ್ಟಿಯಿಂದ ನೋಡುವಾಗ, ಅತ್ಯಾವಶ್ಯ ಪ್ರಥಮ ಕಾರ್ಯವಾಗಿರುವ ನೆಹರೂ-ಲಿಯಾಖತ್ ಸಂಧಾನ ಮಾತುಕತೆಯು ಜಯಶೀಲವಾಗಲಿ ಎಂದು ಹೃತ್ಪೂರ್ವಕವಾಗಿ ಹಾರೈಸುವಾಗಲೇ ಅದೇ ಸರ್ವಸ್ವವೆಂಬ ಭ್ರಮೆ ಪಡಬಾರದೆಂದು ಖಚಿತವಾಗುತ್ತಿದೆ. ದಿಲ್ಲಿಯ ಒಪ್ಪಂದ ಮಾತುಕತೆ ಪೂರ್ಣ ಫಲಿಸಿದರೂ, ಸಾಕಷ್ಟು ಫಲಿಸದೆ ಹೋದರೂ, ಇಕ್ಕಡೆಯ ನಾಯಕರೂ ತಂತಮ್ಮ ರಾಷ್ಟ್ರದ ಜನತೆಯ ಮನೋಗತಿಯನ್ನು ಆವಶ್ಯಕ ದರ್ಜೆಗೇರಿಸುವ ಸರ್ವಪ್ರಯತ್ನ ಮಾಡುವ ಶಪಥ ತೊಟ್ಟೇ ದಿಲ್ಲಿಯಲ್ಲಿ ಅಗಲಿದರಾದರೆ, ನಿಜಕ್ಕೂ ಸತ್ಪರಿಣಾಮವಾದೀತು. ಭಾರತ ಸರಕಾರವಂತೂ ಆ ಪ್ರಯತ್ನದಲ್ಲಿದೆ; ಅದರೂ ಅಧ್ಯಕ್ಷ ಪ್ರಸಾದ್ ಮತ್ತು ಪ್ರಧಾನಿ ನೆಹರುಗಳು ಜಾಹೀರಾಗಿ ಒಪ್ಪಿಕೊಂಡಂತೆ ಅವರು ಲಜ್ಜಿಸುವಂತಹ ದುಷ್ಕೃತ್ಯಗಳು ಭಾರತದಲ್ಲೂ ನಡದಿವೆಯೆಂಬುದನ್ನು ಮರೆಯಲಾಗುವದಿಲ್ಲ. ಅದ್ದರಿಂದ ಇಲ್ಲಿಯೂ ಅಂತಹ ಪ್ರಯತ್ನವು ವಿಶೇಷ ರೀತಿಯಿಂದ ನಡೆಯಬೇಕಾಗಿದೆ. ಪಾಕಿಸ್ತಾನವಂತೂ ಅದಕ್ಕಿಷ್ಟು ತಾನೇ ತೊಡಗಬೇಕು. ಮಿ. ಲಿಯಾಖತ್ ಆಲೀಖಾನರ ಇತ್ತೀಚೆಗಿನ ಹೇಳಿಕೆಗಳು ಮತ್ತು ಅವರ ದಿಲ್ಲೀ ಆಗಮನವು, ಅವರ ಹೃದಯವೂ ಸೌಹಾರ್ದತಾ ನಿರ್ಮಾಣದ ಕಡೆಗೆ ವಾಲಿದೆ ಎಂಬುದರ ಸೂಚನೆಗಳಾಗಿರುವುದರಿಂದ ಆಶೆಗವಕಾಶವಿದೆ. ಯಾವುದು ಹೇಗಾದರೂ ಜಾತೀಯ ಗೊಂದಲದಂತಹ ಅತಿ ಕ್ರೂರ, ಅತಿ ಹೇಯ, ಅಮಾನುಷ ಆಚರಣೆಗಳು ಯಾರಿಗೂ, ಯಾವುದಕ್ಕೂ, ಎಷ್ಟಕ್ಕೂ ಬೇಕಾದವುಗಳಲ್ಲವೆಂಬುದನ್ನು ಜನರು ಸ್ವತಃ ತಿಳಿದುಕೊಂಡು, ಅದಕ್ಕೆ ಹೇತುವಾಗಬಲ್ಲ ಕೃತಿ, ಮಾತು, ಭಾವನೆಗಳ ಮೂಲೋಚ್ಛಾಟನೆ ಮಾಡಿಕೊಂಡರಾಯಿತು:-ಬೇರಾವುದನ್ನೂ ಕಾಯಬೇಕೆಂದಿಲ್ಲ. ನೆಹರು-ಲಿಯಾಖತ್ ಮಾತುಕತೆಯು, ಕೊನೆಯ ಪಕ್ಷ ಇಂತಹ ಹೃದಯ ಶುದ್ಧಿಗನುಕೂಲವಾಗಬಲ್ಲ ವಾತಾವರಣವನ್ನಾದರೂ ನಿರ್ಮಿಸಿ ಹಾಕಲಿ, ಎಂದು ಹಾರೈಸುತ್ತೇವೆ. ಜನತೆ ಮತ್ತು ಎಲ್ಲಾ ಜನತಾ ಪ್ರಚಾರೋಪಕರಣಗಳೂ ಈ ನಿರ್ಮಲ ವಾತಾವರಣದ ನಿರ್ಮಾಣಕ್ಕೆ ಪೂರ್ಣ ನೆರವಾಗಲಿ—ಎಲ್ಲರ ನೆರವಿನಿಂದ, ಯಾವ ವಿಧದ ಪ್ರಗತಿಗಾದರೂ ಪ್ರಥಮಾವಶ್ಯವಿರುವ ಸುಸ್ಥಿತಿ ಸ್ಥಾಪನೆಗೊಳ್ಳಲಿ-ಎಂದು ಹೃತ್ಪೂರ್ವಕ ಆಶಿಸುತ್ತೇವೆ.

## ಪ್ರಕಾಶಮರ ಅಡ್ಡ ಹಾದಿ!

ಮದ್ರಾಸಿನ ಮಾಜೀ ಪ್ರಧಾನ ಮಂತ್ರಿ ಶ್ರೀ ಟಿ. ಪ್ರಕಾಶಮ್ ಮತ್ತು ಅವರ ಅನುಯಾಯಿಗಳು ಓಮಾಂದೂರು ಮಂತ್ರಿಯ ಕೆಲವು ಮಂತ್ರಿಗಳ ಮೇಲೆ ಮಾಡಿದ್ದ ಆರೋಪಗಳ ಸಂಬಂಧವಾಗಿ ದೀರ್ಘಾವಧಿಯಿಂದ ಮದ್ರಾಸ್ ರಾಜಕೀಯ ರಂಗದಲ್ಲಿ ಉಳಿದಿರುವ ವಿವಾದವು ಈಗ ಹೊಸ ರೂಪ ತಾಳಿದೆ.

ಈ ಅಪವಾದನೆಗಳ ಪರಿಶೀಲನೆಗಾಗಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ನೆಹರು-ವಲ್ಲಭಭಾಯಿ-ಪ್ರಸಾದ್ ತ್ರಿಮೂರ್ತಿ ಸಮಿತಿಯನ್ನು ನೇಮಿಸಿದ್ದು, ಈ ಸಮಿತಿಯು ಮದ್ರಾಸ್ ಮಂತ್ರಿಗಳಿಗೆ ಕೆಲವು ಸೂಚನೆಗಳನ್ನೀಯುತ್ತಾ 'ಈ ಆರೋಪಗಳ ಸಂಬಂಧದ ಎಲ್ಲಾ ವಿಧದ ವಹಿವಾಟುಗಳೂ ಇಲ್ಲಿಗೇ ಮುಗಿಯತಕ್ಕದ್ದು' ಎಂದು ತೀರ್ಮಾನಿಸಿದ್ದಿತು. ಈ ತೀರ್ಪಿನ ನಂತರ ಕಾಂಗ್ರೆಸ್ ರಂಗದಲ್ಲಿ ಈ ಸಂಬಂಧದ ವಾದವನ್ನೆಬ್ಬಿಸುವುದು ಅಕ್ರಮವೆಂಬುದು ಸ್ವತಃ ಸಿದ್ಧ.

ಹೀಗಾದ ಮೇಲೆ ಕೂಡಾ, ಕಾಂಗ್ರೆಸ ಅಧಿನಾಯಕರು ಮುಕ್ತಾಯಗೊಳಿಸಿದ್ದ ಆ 'ಮಂತ್ರಿಗಳ ಮೇಲಿನ ಅಪವಾದನೆಗಳು ಶೋಧನೆಯಾಗಬೇಕೆಂಬ ಸೂಚನೆಯನ್ನು ಶ್ರೀ ಟಿ. ಪ್ರಕಾಶಮರು ಮದ್ರಾಸ ಎಸೆಂಬ್ಲಿಯಲ್ಲಿ ತಂದಿದ್ದಾರೆ; ಮದ್ರಾಸ ಎಸೆಂಬ್ಲಿಯಲ್ಲಿ ತಾನು, ತನ್ನ 15 ಮಂದಿ ಅನುಯಾಯಿಗಳೊಂದಿಗೆ ಪ್ರತ್ಯೇಕ ಪಂಗಡವಾಗಿ, ಕಾಂಗ್ರೆಸ್ ಪಕ್ಷ ಬಿಟ್ಟು ಬೇರೆಯೇ ಕುಳಿತುಕೊಳ್ಳುತ್ತಿದ್ದಾರೆ. ಕಾಂಗ್ರೆಸ್ ಎಂ. ಎಲ್. ಎ.ಗಳಾಗಿರುವ ಈ 16 ಮಂದಿಯ ಇವೆರಡು ಕೃತ್ಯಗಳೂ ಕಾಂಗ್ರೆಸ್ ಶಿಸ್ತಿಗೆ ವಿರುದ್ಧವೆಂಬುದು ಸ್ಪಷ್ಟ.

ಮದ್ರಾಸ್ ಕಾಂಗ್ರೆಸ್ ಶಾಸನ ಸಭಾ ಸದಸ್ಯರ ಪಕ್ಷದ ಸಭೆಯಲ್ಲಿ ಪ್ರಕಾಶಂ ಗುಂಪಿನ ಅಕ್ರಮ ವರ್ತನೆಯು ಪರ್ಯಾಲೋಚನೆಯಾಗಿ, ಪಕ್ಷ ನಾಯಕರು ಏಪ್ರಿಲ್ 1ರೊಳಗೆ ಉದಾಹರಣೆ ಕೊಡತಕ್ಕದ್ದೆಂದು ಪ್ರಕಾಶಂ ಮತ್ತವರ ಅನುಯಾಯಿಗಳಿಗೆ ನೋಟೀಸು ಕೊಟ್ಟಿದ್ದಾರೆ. ಅಂತೆಯೇ ಕಾಂಗ್ರೆಸ್ ಪಾರ್ಲಿಮೆಂಟರೀ ಬೋರ್ಡಿನ ಪರವಾಗಿ ಕಾರ್ಯದರ್ಶಿ ಶ್ರೀ ಶಂಕರರಾವ್ ದೇವ್‌ರೋ ಅವರು, ಮೇಲಿನ 'ಎರಡು ಅಕ್ರಮಾಚರಣೆಗಳಿಗಾಗಿ ಶಿಸ್ತು ಜಾರಿಯೇಕೆ ಮಾಡಬಾರದೆಂಬುದಕ್ಕೆ ಏಪ್ರಿಲ್ 4ರೊಳಗೆ ಉದಾಹರಣೆ ಕೊಡಿರಿ' ಎಂದು ಶ್ರೀ ಟಿ. ಪ್ರಕಾಶಂ ಮತ್ತವರ ಅನುಯಾಯಿಗಳನ್ನು ಕೇಳಿದ್ದಾರೆ.

ಶ್ರೀ ಪ್ರಕಾಶಮರಿಂದ ಉತ್ತರಗಳೂ ಹೋಗಿವೆ. "ಮಂತ್ರಿಗಳ ವರ್ತನೆಯ ಕುರಿತು ವಿಚಾರಿಸುವ ಹಕ್ಕು ಯಾವ ಪಕ್ಷದವನಿದ್ದರೂ ಶಾಸನಸಭಾ ಸದಸ್ಯನಿಗಿರುವಂತಹದೇ. ಭಾರತದ ಪ್ರಜಾರಾಜ್ಯ ಘಟನೆಯು ಶಾಸನಸಭಾ ಸದಸ್ಯನಿಗೆ ಕೊಟ್ಟಿರುವ ಕೆಲವು ಮೂಲಭೂತ ಹಕ್ಕುಗಳ

...ಯಿಂದ ಹೊರಗಿನ ಒಂದು ಸಂಸ್ಥೆಗೆ ಶಾಸನ ಸಭೆಯೊಳಗಿನ ಸದಸ್ಯ ವರ್ತನೆಯಲ್ಲಿ ಕೈ ಹಾಕುವ ಅಧಿಕಾರವಿಲ್ಲ. ಶಿಸ್ತು ಭಂಗದ ವಿಚಾರಣೆಯನ್ನು ಪ್ರಥಮತಃ ಮಾಡಬೇಕಾಗಿರುವ ಮೂಲ ಕೋರ್ಟು ಮದ್ರಾಸ್ ಕಾಂಗ್ರೆಸ್ ಶಾಸನ ಸಭಾಪಕ್ಷ; ಆ ಪಕ್ಷವು ನಮಗೆ ಏಪ್ರಿಲ್ 14ರ ವರೆಗೆ ಕಾಯದೆ ಕೊಟ್ಟಿರುವಾಗ ಆ ಮೂಲ ವಿಚಾರಣೆ ಮುಗಿಯುವ ಮೊದಲು ಈ ವಿಷಯದಲ್ಲಿ ಕೈ ಹಾಕುವ ಅಧಿಕಾರವೇ ಇಲ್ಲದ ಅಪ್ಪೀಲು ಕೋರ್ಟಿಗಿರುವ ಪಾರ್ಲಿಮೆಂಟರಿ ಬೋರ್ಡು ಏಪ್ರಿಲ್ 4 ರೊಳಗೆ ನಮ್ಮಿಂದ ಉತ್ತರ ಕೇಳುವುದು ತಪ್ಪು" ಎಂಬುದೇ ಶ್ರೀ ಟಿ. ಪ್ರಕಾಶಮ್ ಉತ್ತರಗಳ ಸಾರ.

ನುರಿತ ಹಾಗೂ ಹಿರಿಯ ಕಾಂಗ್ರೆಸಿಗ ಶ್ರೀ ಪ್ರಕಾಶಮ್ ಈ ತರ್ಕಸರಣಿ ಮತ್ತು ಇಂದಿನ ವರ್ತನೆಗಳು ನಿಜಕ್ಕೂ ಶೋಚನೀಯವಾಗಿವೆ. ಆತ್ಮಸಂಯಮನ ಮತ್ತು ಪಕ್ಷಪ್ರೇಮವಿಲ್ಲದ ಹೋದರೆ, ಮನುಷ್ಯ ಎಂಥವನೇ ಇದ್ದರೂ ಇಚ್ಛಾಭಂಗವಾದಲ್ಲಿ ಹೇಗೆ ಹುಚ್ಚುವರ್ತನೆಗಿಳಿಯುತ್ತಾನೆಂಬುದಕ್ಕೆ ಶ್ರೀ ಪ್ರಕಾಶಮರೇ ಒಂದು ನಿದರ್ಶನ.

ಶಾಸನ ಸಭಾ ಸದಸ್ಯತ್ವದ ಮೇಲಿಂದ ಶ್ರೀ ಟಿ. ಪ್ರಕಾಶಮರಿಗೆ ಸ್ವೇಚ್ಛಾಧಿಕಾರ ಬರುವಂತೆಯೇ, ಕಾಂಗ್ರೆಸ್ ಸದಸ್ಯತ್ವದ ಮೇಲಿಂದ ಕಾಂಗ್ರೆಸಿನ ಶಿಸ್ತು, ನಿಯಮಗಳಿಗೊಳಗಾಗಲು ಅವರು ಋಣಬದ್ಧರಾಗಿದ್ದಾರೆ. ಶಾಸನ ಸಭಾವಿಧಿ-ನಿಯಮಗಳಾವುವೂ ಕಾಂಗ್ರೆಸ್ ಪಕ್ಷದ ವಿಧಿನಿಯಮಗಳನ್ನು ಉಜ್ಜ ಹಾಕುವಂತಹವಲ್ಲ. ಅಂದ ಮೇಲೆ ಕಾಂಗ್ರೆಸಿನ ಸದಸ್ಯತ್ವವನ್ನು ಬಿಡದೆ, ಬೇರಾವ ಸದಸ್ಯತ್ವದ ಹಕ್ಕಿನ ಮೇಲಿನಿಂದಲೂ ಕಾಂಗ್ರೆಸ್ ನಿಯಮಗಳಿಗೆ ವಿರುದ್ಧ ಹೋಗುವ ಅಧಿಕಾರ ಶ್ರೀ ಟಿ. ಪ್ರಕಾಶಮರಿಗಿಲ್ಲ. ಶಾಸನ ಸಭಾ ಸಂಬಂಧದ ಕಾಂಗ್ರೆಸ್ ಕಾರ್ಯಕಲಾಪದ ಸಂಪೂರ್ಣ ಮೇಲಧಿಕಾರವಿರುವ ಕಾಂಗ್ರೆಸ್ ಪಾರ್ಲಿಮೆಂಟರೀ ಬೋರ್ಡಿಗೆ, ಅವಶ್ಯಕತೆ ತೋರಿದಾಗ ತಪ್ಪು ನಿವಾರಣಾ ಕಾರ್ಯ ಕೈಕೊಳ್ಳುವ ಹಕ್ಕು ಇದ್ದೇ ಇದೆ. ಆದ್ದರಿಂದ ಈ ಕ್ರಮ ಕಾನೂನಿನ ದೃಷ್ಟಿಯಿಂದಲೂ ಶ್ರೀ ಪ್ರಕಾಶಮರು ತಪ್ಪಿಬಿದ್ದಿದ್ದಾರೆ.

ಎಲ್ಲಕ್ಕಿಂತ ಹೆಚ್ಚಾಗಿ, ಕಾಂಗ್ರೆಸಿಗರಲ್ಲಿ ಇಂದು ಬೆಳೆಯುತ್ತಿರುವ ಇಂತಹ ಲಘು ವರ್ತನೆಗಳಿಗಾಗಿ ವಿಷಾದಿಸಬೇಕಾಗಿದೆ. ತನ್ನ ವಾದ ಮತ್ತು ತನ್ನ ಹಟಕ್ಕೆ ಮಾನ್ಯತೆ ಕೊಡದಿದ್ದರೆ, ಅಂತಹ ಪಕ್ಷದ ಶಿಸ್ತು ನಿಯಮಗಳಿಗೆ ತಾನೂ ಮಾನ್ಯತೆ ಕೊಡಲಾರೆನೆಂದು ಜಂಡಿ ಹಿಡಿಯುವ ಸದಸ್ಯನನ್ನು ಯಾವ ಪಕ್ಷವೂ ಇಟ್ಟುಕೊಳ್ಳಬಾರದು. ಶ್ರೀ ಟಿ. ಪ್ರಕಾಶಮರಂತೂ ಕೇವಲ ಹಠ ಸಾಧನೆಗೆ ಹೊರಟಿದ್ದಾರೆ ಹೊರತು ಸತ್ಯಶೋಧನೆಗಲ್ಲವೆಂಬುದು ಅವರ ಇಂದಿನ ವಿಧಾನಗಳಿಂದಲೇ ಸ್ಪಷ್ಟವಿದೆ.

ಶ್ರೀ. ಟಿ. ಪ್ರಕಾಶಮ್ ಮತ್ತು ಅವರ ಅನುಯಾಯಿಗಳ ಮೇಲೆ ಕಾಂಗ್ರೆಸ್ ಶಿಸ್ತು ಜಾರಿಯಾಗಿ ಡಾ. ಖರೆಯಂಥವರ ಶಿಕ್ಷೆಯೇ ಇವರಿಗೂ ಕಾದಿಡಲ್ಪಟ್ಟಿದೆ ಎಂದು ನಿರೀಕ್ಷಿಸಬೇಕು.

---

# ನೆಹರೂ—ಲಿಯಾಖತ್ ಮಾತುಕತೆ

ಪಾಕಿಸ್ತಾನ್ ಪ್ರಧಾನಮಂತ್ರಿ, ಮಿ. ಲಿಯಾಖತ್ ಅಲೀಖಾನರು ಭಾರತದ ರಾಜಧಾನಿ ನವದಿಲ್ಲಿಗಾಗಮಿಸಿ ಭಾರತ ಪ್ರಧಾನಿ ಪಂಡಿತ ಜವಾಹಿರಲಾಲರೊಡನೆ ಭಾರತ-ಪಾಕಿಸ್ತಾನಗಳ ಅಲ್ಪಸಂಖ್ಯಾಕ ಸಮಾಜಗಳ ಸಂರಕ್ಷಣಾ ವ್ಯವಸ್ಥೆಯ ಮಾತುಕತೆಗೀಡಿದ್ದಾರೆ. ಸುಮಾರು ಎರಡೂವರೆ ವರುಷಗಳ ಮೊದಲು 'ಸ್ವದೇಶೀಬಂಧು'ಗಳಾಗಿದ್ದು ಸ್ವಾಧಿಕಾರ ಸ್ಥಾಪನೆಯ ಹೋರಾಟ ಕಾಲದಲ್ಲಂತೂ ಪ್ರತಿದಿನವೆಂಬಂತೆ ಒಬ್ಬರನ್ನೊಬ್ಬರು ಸಂಧಿಸುತ್ತಿದ್ದ ನೆಹರು ಲಿಯಾಖತರೀಗ ಎರಡು ರಾಷ್ಟ್ರಗಳ ನಾಯಕರಾಗಿ, ದೇಶ-ದೇಶಗಳೊಳಗಿನ ವಿಷಯದ ಚರ್ಚಾಕರ್ತರಾಗಿ ಅಪೂರ್ವ ಹಾಗೂ ಅಸಾಧಾರಣ ಭೇಟಿ ನಡೆಸುವಂತಾಯಿತು.

## ಭೇಟಿಯ ಹಿನ್ನೆಲೆ

ಕಳೆದ ಕೆಲವು ತಿಂಗಳುಗಳಲ್ಲಿ ಪೂರ್ವ ಬಂಗಾಳದಲ್ಲಿ ನಡೆದಿದ್ದ ಹಿಂದುಗಳ ಮೇಲಿನ ಅತ್ಯಾಚಾರ ಮತ್ತು ಅದರ ಪ್ರತಿಫಲವಾಗಿ ಪಶ್ಚಿಮ ಬಂಗಾಳದಲ್ಲೂ ಎದ್ದಿದ್ದ ಗೊಂದಲಗಳ ಶಮನಕ್ಕಾಗಿಯೂ, ಭಾವೀ ಸುವ್ಯವಸ್ಥೆಗಾಗಿಯೂ ತಾವಿಬ್ಬರೂ ಜತೆಗೂಡಿ ಎರಡೂ ಬಂಗಾಳಗಳ ಗೊಂದಲ ಪೀಡಿತ ಸ್ಥಳಗಳಿಗೆ ಭೇಟಿ ಕೊಡೋಣವೆಂಬ ಆಹ್ವಾನವನ್ನು ಪಂಡಿತ ನೆಹರುಗಳು ಕೆಲಕಾಲಕ್ಕೆ ಮೊದಲೇ ಮಿ. ಲಿಯಾಖತ್ ಅಲೀಖಾನರಿಗಿತ್ತಿದ್ದರು; ನಿಷ್ಪಕ್ಷಪಾತೀ ಪರಿಶೀಲನಾ ಮಂಡಲಿಯೊಂದನ್ನು ಎರಡೂ ರಾಷ್ಟ್ರಗಳ ಕಡೆಯಿಂದ ನೇಮಿಸುವ ಸೂಚನೆ ಕೂಡಾ ಇವರಿಂದ ಅವರಿಗೆ ಹೋಗಿದ್ದಿತು. ಆದರೆ "ಅಂತಹದರಿಂದ ಪ್ರಯೋಜನವಾಗದು" ಎಂದು ಮಿ. ಲಿಯಾಖತ್ ಅಲೀಖಾನರ ನಿರಾಕರಣೆ ಬಂದಿದ್ದಿತು. ಆ ಮೇಲೆ ಪಾಕಿಸ್ತಾನ್ ಪ್ರಧಾನಿಗಳು ಪೂರ್ವ ಬಂಗಾಳಕ್ಕೆ ಸ್ವತಃ ಬಂದು ಗಲಭೆಯ ನಿಜ ಸ್ವರೂಪವನ್ನು ಅರಿತುಕೊಂಡರು; ತಮ್ಮ ಅಭಿಮಾನ ಮತ್ತು ಅಸ್ತಿತ್ವಕ್ಕೇನೇ ಬಡಿದಿರುವ ಈ ಅಪಾಯ ನಿವಾರಣೆಯ ಹಾದಿ ಶೋಧನೆಗೆ ಭಾರತ ನಾಯಕರು ವಿಶೇಷ ಲಕ್ಷ್ಯ ಕೊಡ ಹತ್ತಿದುದನ್ನೂ ಮನಸ್ಸಿಗೆ ತಂದುಕೊಂಡರು. ಈ ನಡುವೆ ನೆಹರು-ಲಿಯಾಖತರೊಳಗೆ ಆ ಸಂಬಂಧದ ಪತ್ರ, ತಂತೀ ವ್ಯವಹಾರಗಳು ನಡೆದೇ ಇದ್ದುವು. ಕೊನೆಗೆ ಹೀಗೆ ವ್ಯವಹರಿಸುವ ಬದಲು ಮುಖತಃ ಮಾತಾಡುವದುತ್ತಮವಾದ್ದರಿಂದ 'ಸ್ವತಃ ಇಲ್ಲಿಗೆ ಬನ್ನಿ' ಎಂಬ ಆಮಂತ್ರಣಗಳು ಏಕಕಾಲದಲ್ಲಿ ನೆಹರುಗಳಿಂದ ಲಿಯಾಖತರಿಗೂ ಲಿಯಾಖತರಿಂದ ನೆಹರುಗಳಿಗೂ ಹೊರಟವು. 'ಸದ್ಯ ವಿಮಾನ ಸಂಚಾರ ಮಾಡಲಾರದ ನನ್ನ ಅನುಯಾಯಿಗಳನ್ನು ನಾನೀ ಮಾತುಕತೆಯ ವೇಳೆ ಕೂಡಿಕೊಂಡಿರಬೇಕಾಗಿರುವುದರಿಂದ ನೀವೇ ಇತ್ತ ಬರಬೇಕಾಗಲಿ," ಎಂಬ ಕೊನೆಯ ಪತ್ರ ಪಂಡಿತ ನೆಹರುಗಳಿಂದ ಹೋದೊಡನೆ ಮಿ. ಲಿಯಾಖತರೊಪ್ಪಿಕೊಂಡು ದಿಲ್ಲಿಗೆ ಹೊರಡುವ ನಿಶ್ಚಯ ಮಾಡಿದರು.

## ದಿಲ್ಲಿಗೆ ಆಗಮನ

ತಾ. 2ನೇ ಪೂರ್ವಾಹ್ನ, 11-35ಕ್ಕೆ ಸರಿಯಾಗಿ ಭಾರತ ಮತ್ತು ಪಾಕಿಸ್ತಾನ್ ರಾಷ್ಟ್ರ ಧ್ವಜಗಳು ಹಾರಾಡುತ್ತಿದ್ದ ಮಿ. ಲಿಯಾಖತರ ವಿಮಾನವು ನವದಿಲ್ಲಿಯ ಪಾಲಮ್ ನಿಲ್ದಾಣದಲ್ಲಿಳಿಯಿತು. ಪಂಡಿತ ನೆಹರುಗಳು ಕಾಲ ಘಂಟೆ ಮುಂಚಿತವಾಗಿ ಬಂದು ಅಲ್ಲಿ ಕಾದಿದ್ದರು. ವಿಮಾನ ನಿಲ್ದಾಣದಲ್ಲಿ ವಿಶೇಷ ರೀತಿಯ ಬಂದೋಬಸ್ತಿದ್ದಿತು. ಮಿ. ಲಿಯಾಖತ್ ಅಲೀಖಾನರೊಂದಿಗೆ ಪಾಕಿಸ್ತಾನ್ ಕಾರ್ಯದರ್ಶಿ ಮಿ. ಮುಹಮ್ಮದಾಲಿ, ವಿದೇಶ ಸಂಬಂಧ ಕಾರ್ಯದರ್ಶಿ ಮಿ. ಇಕ್ರಾಮುಲ್ಲಾ, ಸ್ಪೆಶ್ಯಲ್ ಡ್ಯೂಟಿಯ ಅಧಿಕಾರಿ ಮಿ. ಗುಲಾಮ್ ಮುಹಮ್ಮದ್, ಪಾಕಿಸ್ತಾನ್ ಪ್ರಧಾನಿಗಳ ರಾಜಕೀಯ ಕಾರ್ಯದರ್ಶಿ ಸಿದ್ದೀಖ್ ಅಲೀಖಾನರು ಬಂದಿದ್ದರು. ಮಿ. ಲಿಯಾಖತರು ವಿಮಾನದಿಂದ ಹೊರಗೆ ಕಾಲಿಟ್ಟೊಡನೆ ಪ್ರಥಮತಃ ಸ್ವಾಗತಿಸಿದವರೆಂದರೆ ಪಂಡಿತ ನೆಹರುಗಳು. ಅವರು ಮುಂದೆ ಬಂದು ಅತ್ಯಾನಂದದಿಂದ ತನ್ನ ಹಳೇ ಸಹವ್ಯಾಸಂಗಿಯ ಕೈ ಕುಲುಕಿ ಅಲ್ಲಿದ್ದವರ ಪರಿಚಯ ಸಂಭಾಷಣೆ ನಡೆಸಿದರು. ನಿಲ್ದಾಣದಲ್ಲಿ ಬ್ರಿಟನ್, ಕೆನಡಾ, ಆಸ್ಟ್ರೇಲಿಯಾ, ಸಿಲೋನು, ಪಾಕಿಸ್ತಾನಗಳ ಹೈಕಮಿಶನರುಗಳು ಪಾಕಿಸ್ತಾನ ಪ್ರಧಾನಿಯ ಸ್ವಾಗತಕ್ಕಾಗಿ ಕಾದಿದ್ದರು. ಭಾರತಾಧ್ಯಕ್ಷರ ಪ್ರತಿನಿಧಿಯಾಗಿ ಅವರ ಸೇನಾ ಕಾರ್ಯದರ್ಶಿ ಬಂದಿದ್ದರು. ಕಾರು ಹತ್ತುವ ಮೊದಲು, ಲಿಯಾಖತರನ್ನು ಪತ್ರಿಕಾ ಪ್ರತಿನಿಧಿಗಳ ತಂಡ ಮುತ್ತಿಗೆ ಹಾಕಿತು. ಹಿಂದಿನ ಕಾಲದಲ್ಲಿ ತನಗೆ ಸದಾ ಕಾಣಸಿಗುತ್ತಿದ್ದ ಆ ಹಳೇ ಮುಖಗಳನ್ನು ಕಂಡೊಡನೆ ಲಿಯಾಖತರು ಅತಿ ಸಂತೋಷದ ನಗೆ ಸೂಸುತ್ತಾ ತನ್ನ ಪ್ರಯಾಣದ ಕುರಿತು ಕೇಳಲ್ಪಟ್ಟ ಪ್ರಶ್ನೆಗಳಿಗೆ ಔಪಚಾರಿಕ ಉತ್ತರಗಳನ್ನಿತ್ತರು. ಸಿದ್ದೀಖ್ ಅಲೀಖಾನರಿಗಂತೂ ನಿಲ್ದಾಣದಲ್ಲಿ ನೆರೆದಿದ್ದ ತನ್ನ ಹಲವು ಹಳೇ ಸ್ನೇಹಿತರನ್ನು ಕಂಡು ಉಂಟಾದ ಹಿಗ್ಗು ಅಷ್ಟಿಷ್ಟಲ್ಲ. ಕಾರು ಹತ್ತುವ ವರೆಗೂ, ಮರಳಿ ಹಿಂಡನ್ನು ಸೇರಿಕೊಂಡ ಕರುವಿನಂತೆ ಅವರು ಕುಣಿದಾಡುತ್ತಿದ್ದುದು ಕಂಡುಬಂತು. ನಿಲ್ದಾಣದ ಆದರೋಪಚಾರಗಳು ಮುಗಿದೊಡನೆ ಪಂಡಿತ ನೆಹರುಗಳು ಲಿಯಾಖತರ ತೋಳನ್ನು ಹಿಡಿದುಕೊಂಡು, ಸರಕಾರೀ ಭವನದ ಕಾರು ಹತ್ತಿದರು. ಸರಕಾರೀ ಭವನದಲ್ಲಿ ಅಧ್ಯಕ್ಷ ರಾಜೇಂದ್ರ ಪ್ರಸಾದರು ತನ್ನ ಕೋಣೆಯಲ್ಲವರನ್ನು ಸ್ವಾಗತಿಸಿಕೊಂಡರು. ಆ ಮೇಲೆ ಪ್ರಸಾದ್, ನೆಹರು, ಲಿಯಾಖತರೊಳಗೆ ಕೆಲವೊತ್ತು ಗುಪ್ತ ಮಾತುಕತೆ ನಡೆಯಿತು. ಅಲ್ಲಿ ಉಪಾಹಾರವಾದ ಮೇಲೆ ಸರಕಾರೀ ಭವನದಲ್ಲಿ ಸನ್ಮಾನ್ಯ ಅತಿಥಿಗಳಿಗೆ ಮೀಸಲಿರುವ ವಿಭಾಗಕ್ಕೆ ಲಿಯಾಖತ್ ಮತ್ತವರ ಸಂಗಡಿಗರನ್ನು ಕರೆದೊಯ್ಯಲಾಯಿತು.

## ಆ ಮೇಲಿನ ಕಾರ್ಯಕಲಾಪ

ತಾ. 2ನೇ ಅಪರಾಹ್ನ ಮಿ. ಲಿಯಾಖತ್ ಅಲಿಗಳು ತನ್ನ ಸಂಗಡಿಗರೊಂದಿಗೆ ರಾಜಘಾಟಿಗೆ ಹೋಗಿ, ಅಲ್ಲಿರುವ ಗಾಂಧೀಜೀಯ ಸಮಾಧಿಗೆ ಎರಡು ಹೂದಂಡೆಗಳನ್ನು ಸಮರ್ಪಿಸಿ, ಎರಡು ಮಿನಿಟುಗಳ ಮೌನ ಪ್ರಾರ್ಥನೆ ನಡೆಸಿದರು. ಅವರ ಅನುಯಾಯೀ ಅಧಿಕಾರಿಗಳಿಂದಲೂ ರಾಷ್ಟ್ರಪಿತನ ಸಮಾಧಿಗೆ ಪುಷ್ಪ ದಂಡೆಗಳರ್ಪಿಸಲ್ಪಟ್ಟುವು. ಪಾಕಿಸ್ತಾನ್ ಪ್ರಧಾನಿಗೆ ಅವಕಾಶ ಕೊಡುವದಕ್ಕಾಗಿ ರಾಜಘಾಟಿನಲ್ಲಿ ನಿತ್ಯ ಪೂಜೆಗೆ ನೆರೆಯುತ್ತಿದ್ದ ಜನರನ್ನೆಲ್ಲಾ ಪೋಲೀಸು ಕೋಟೆಯ ದೂರ ಮಾಡಿದ್ದಿತು. ನೂಲುತ್ತಾ ಕುಳಿತಿದ್ದ ಗಾಂಧೀಶಿಷ್ಯರೊಬ್ಬರ ವಿನಹ ಸಮಾಧಿ ಬಳಿಯಲ್ಲಿ ಹೊರಗಿನ ಬೇರಾರೂ ಇರಲಿಲ್ಲ. ರಾಜಘಾಟಿನಿಂದ ಮರಳುವಾಗ, ಈಗ ಪಾಕಿಸ್ತಾನ್ ರಾಯಭಾರೀ ಕಛೇರಿಯಾಗಿರುವ ತನ್ನ ಹಿಂದಿನ ಮನೆಯಲ್ಲಿ ಮಿ. ಲಿಯಾಖತರು ಕೆಲ ಹೊತ್ತು ನಿಂತರು. ಪಾಕಿಸ್ತಾನ್ ಪ್ರಧಾನಿ ರಾಜಘಾಟಿಗೆ ಹೊರಡುವ ಮೊದಲೇ ಸರಕಾರೀ ಭವನದಲ್ಲಿ ನೆಹರೂ-ಲಿಯಾಖತರೊಳಗೆ 2 ತಾಸು 20 ಮಿನಿಟುಗಳ ಮಾತುಕತೆ ನಡೆದಿದ್ದಿತು. ಅದೇ ಹೊತ್ತಿನಲ್ಲಿ ಭಾರತ ಸರಕಾರದ ಮಹಾ ಕಾರ್ಯದರ್ಶಿ ಗಿರಿಜಾಶಂಕರ್ ಬಾಜಪೇಯಿ, ಸಹಾಯಕ ಕಾರ್ಯದರ್ಶಿ ಶ್ರೀ ಯಸ್. ದತ್ತ ಮತ್ತು ಪಾಕಿಸ್ತಾನದ ಮಿ. ಮಹಮ್ಮದಾಲಿ, ಮಿ. ಇಕ್ರಮುಲ್ಲರೊಳಗೆ ವಿಚಾರ ವಿನಿಮಯಗಳಾಗಿದ್ದುವು. ತಾ. 2ನೇ ರಾತ್ರೆ ಅಧ್ಯಕ್ಷ ಪ್ರಸಾದರು ಪಾಕಿಸ್ತಾನ್ ಪ್ರಧಾನಿಗಳಿಗೊಂದು ಔತಣ ಕೂಟವೇರ್ಪಡಿಸಿದ್ದರು.

ತಾ. 3ನೇ ಅಪರಾಹ್ನ ಸುಮಾರು 2 ತಾಸು ನೆಹರು-ಲಿಯಾಖತ್ ಮಾತುಕತೆಗಳು ನಡೆದುವು. ಮಂತ್ರಿಗಳ ಪೈಕಿ ವಲ್ಲಭಾಯಿ, ಗೋಪಾಲಸ್ವಾಮಿ ಅಯ್ಯಂಗಾರರು ಪಂಡಿತ ನೆಹರುಗಳ ಮುಖ್ಯ ಸಲಹೆಗಾರರಾಗಿದ್ದಾರೆ. ಆಗಾಗ ಅಧ್ಯಕ್ಷ ಪ್ರಸಾದರ ಸಮ್ಮುಖದಲ್ಲಿಯೂ ಹಾಜರಾಗುತ್ತಿದ್ದಾರೆ. ಎರಡೂ ಕಡೆಯ ಕಾರ್ಯದರ್ಶಿ ಗುಂಪುಗಳೊಳಗೂ ಮೇಲಿಂದ ಮೇಲೆ ವಿಚಾರ ವಿನಿಮಯ ಕೂಟಗಳು ನಡೆದಿವೆ. ಈ ಮಾತುಕತೆಯ ಆಗಮನ ನಿರ್ಗಮನ ಮತ್ತು ಕಾಲಾವಧಿಯ ಹೊರತು ಬೇರಾವ ಅಂಶವೂ ಹೊರಬೀಳದಂತೆ ಕಠಿಣ ಬಂದೋಬಸ್ತಿದೆ. ಪದ್ಧತಿಯಂತೆ ಮಧ್ಯೆ ಮಧ್ಯೆ ಹೊರಡುವ ಸರಕಾರೀ ಪ್ರಕಟಣೆ ಕೂಡಾ ಈ ತನಕ ಹೊರಬಿದ್ದುದಿಲ್ಲ. ಬ್ರಿಟನ್ ಮೊದಲಾದ ವಸಾಹತು ರಾಷ್ಟ್ರಗಳೂ ಅಮೆರಿಕವೂ ಈ ಕಡೆಗೆ ಆಶಾದೃಷ್ಟಿಯಿಂದ ನೋಡುತ್ತಿವೆ. ಮಾತುಕತೆಯಲ್ಲಿಯಾದರೂ ಮಧ್ಯ ಹರಿದು ಹೋಗುವ ಸಂದರ್ಭ ಬಂದರೆ, ಅಲ್ಲಿಯೇ ಪತ್ತೆ ಹಾಕಬಲ್ಲ ತಟಸ್ಥ ಹಿರಿಯ ಅನುಭವಿಯೊಬ್ಬನನ್ನು ಕೇವಲ ಸಲಹೆಗಾರನಾಗಿ ತಾನು ಕಳುಹಿಕೊಡುವೆನೆಂದು ಬ್ರಿಟಿಷ್ ಸರಕಾರವು ಮುಂದೆ ಬಂದಿದ್ದಿತೆಂದು ತಿಳಿದುಬಂದಿದೆ. ಆದರೆ ನೆಹರು ಲಿಯಾಖತರಿಗೆ ಅಂತಹ ಸಹಾಯವು ಅಗತ್ಯವೆಂದು ತೋರದಿರಬೇಕು. ಅಂತೂ ಅತ್ಯಂತ ಸೌಹಾರ್ದಪೂರ್ಣ ವಾತಾವರಣದಲ್ಲಿ, ನೆಹರೂ—ಲಿಯಾಖತ್ ಮಾತುಕತೆ ಸಾಗಿದೆ.

---

### ಉಡುಪಿ ಮಹಾಜನರ ಅವಗಾಹನೆ ಬಗ್ಗೆ ಶ್ರೀ. ಟಿ. ಎ. ಪೈಗಳ ವಿನಂತಿ

ಪೂರ್ವಬಂಗಾಳ ನಿರಾಶ್ರಿತರ ಸಹಾಯಾರ್ಥವಾಗಿ ಇದೇ ತಾ. 2ರಲ್ಲು ಅಜ್ಜರಕಾಡು ಗಾಂಧಿ ಮೈದಾನಿನಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ಅಂಗೀಕರಿಸಲಾದ ನಿರ್ಣಯದಂತೆ ನಿಧಿಸಂಗ್ರಹ ಕಮಿಟಿಯ ಸಭೆಯನ್ನು ಮರುದಿನ (ತಾ. 3ರಲ್ಲಿ) ಪೂರ್ವಾಹ್ನ 10 ತಾಸಿಗೆ ಕರೆಯಲಾಗಿತ್ತು. ಆದರೆ ವಕೀಲ್ ಶ್ರೀ ಎಮ್. ವಿಠಲ ಕಾಮತರೂ ನಾನೂ ಮಾತ್ರ ಈ ಸಭೆಗೆ ಹಾಜರಾಗಿದ್ದೆವು. ಆದುದರಿಂದ ಮಹಾಜನರು ಉದಾರ ಹಸ್ತದಿಂದ ಕೊಡುವ ಯಾವತ್ತೂ ಹಣಕಾಸು ಮತ್ತೂ ಬಟ್ಟೆಬರೆಗಳು ಇದೇ ತಾ. 15ರಲ್ಲಿ ಶ್ರೀ ರಾಮಕೃಷ್ಣ ಪುತ್ರನಿಗೆ ಕಳುಹಿಸಲಾಗುವುದು. ದಯಾಳು ಮಹಾಜನರು ತಂತಮ್ಮ ಸಹಾಯವನ್ನು ಈ ಕೆಳಗಿನ ವಿಳಾಸಕ್ಕೆ ದಯಮಾಡಿ ಕಳುಹಿಸಬೇಕಾಗಿ ವಿನಂತಿ.

ಟಿ. ಎ. ಪೈ.
ಮುಕುಂದ ನಿವಾಸ, ಉಡುಪಿ.

## ಬೊಂಬಾಯಿ

ಶ್ರೀ ರಜಕಸಂಘ, ಬೊಂಬಾಯಿ, ಈ ಸಂಸ್ಥೆಯ ಹದಿಮೂರನೆ ವಾರ್ಷಿಕ ಮಹಾಸಭೆಯು ಕಳೆದ ತಾ. 26ರಲ್ಲು ಸಂಘದ ಅಧ್ಯಕ್ಷ ಶ್ರೀ ಪೂವಪ್ಪ ಕೆ. ಕುಂದರ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಹಾಗೂ ಸಮಾಜದ ಉನ್ನತಿಯನ್ನು ಬಯಸಿ ಶ್ರೀಗಳಾದ ಎಮ್. ಡಿ. ಈಶ್ವರ್, ಕಾಳಪ್ಪ. ಎ. ಸಾಲಿಯಾನ್, ಚುಕುಡ ಬಿ. ಕುಂದರ್ ಮೊದಲಾದವರು ಕಾಲೋಚಿತ ಭಾಷಣವಿತ್ತರು. ಸಮಾಜ ಸುಧಾರಣೆಗಾಗಿ ಜಾತಿ ಬಾಂಧವರೆಲ್ಲರೂ ಸಹಕಾರ, ಸಹಾನುಭೂತಿಯನ್ನಿತ್ತು ಪ್ರೋತ್ಸಾಹಿಸಬೇಕಾಗಿ ಅಧ್ಯಕ್ಷರು ತನ್ನ ಭಾಷಣದಲ್ಲಿ ಹೇಳಿದರು.

ರಾಜಾಪುರ ಸಾರಸ್ವತ ಸಂಘ, ಮುಂಬಯಿ, ಇದರ ಸ್ಥಾಪನಾ ಸಮಾರಂಭವು ಕಳೆದ ತಾ. 15ರಲ್ಲು ಶ್ರೀ ಪುಟ್ಟ ಸೋಮಯ್ಯ ನಾಯಕ್ ಅವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಶ್ರೀಗಳಾದ ಎಸ್. ಎಸ್. ನಾಯಕ್, ಡಿ. ಡಿ. ಪ್ರಭು, ಎಸ್. ಆರ್. ಪ್ರಭು ಮೊದಲಾದವರು ಸಂಘದ ಶ್ರೇಯಸ್ಸನ್ನು ಕೋರಿ ಮಾತನಾಡಿದರು.

**ವರ್ಧಂತಿ ಸಮಾರಂಭ: ಚೈತನ್ಯ** ಪ್ರಭಾ ಮಂಡಲಿ, ಬೊಂಬಾಯಿ, ಇದರ ಸಂಸ್ಥಾಪಕರಾದ ಸ್ವಾಮಿ ಕೃಷ್ಣ ಚೈತನ್ಯರ ಎಪ್ಪತ್ತನೆ ಹುಟ್ಟು ಹಬ್ಬವು ಇದೇ ತಾ. 16ರಲ್ಲು ಮಂಡಲಿಯ ಕಡೆಯಿಂದ ಭಾಗೇಶ್ವರ ದತ್ತ ಮಂದಿರ, ಲೇಡಿ ಹಾರ್ಡಿಂಜ್ ರೋಡ್, ಮಾಹಿಮ್-ಅಲ್ಲಿ ನಡೆಯಲಿರುವುದು.

## ಮಂಗಳೂರು

### ಮಾಜಿ ಸೈನಿಕರಿಗೆ ಬಹುಮಾನ

ಕಳೆದ ಎರಡನೆಯ ಮಹಾ ಯುದ್ಧದಲ್ಲಿ ಸಾಹಸ ತೋರಿಸಿ ಸರಕಾರದ ಮೆಚ್ಚುಗೆಗೆ ಪಾತ್ರರಾದವರಿಗೆ ಬಹುಮಾನ ಪದಕಗಳನ್ನು ಕೊಟ್ಟು ಗೌರವಿಸುವ ಸಭೆಯೊಂದು ನಮ್ಮ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಸೇರಿತು. ಅದರಲ್ಲಿ ಸೈನಿಕ, ನಾವಿಕ ಮತ್ತು ವೈಮಾನಿಕ ದಳಗಳ ಪ್ರತಿನಿಧಿಗಳು ಹಾಜರಿದ್ದರು.

ಆ ಸಂದರ್ಭದಲ್ಲಿ ಇಲ್ಲಿ ಯುದ್ಧ ಪದಕಗಳನ್ನು ಪಡೆದವರು ಶ್ರೀಗಳಾದ ಸವಾರ್ ಚಂದು ನಾಯರ್, ಕೆ. ಕೊಗ್ಗ, ಕೆ. ಸೋಮಪ್ಪ, ಅಚ್ಚುತಾಚಾರಿ. ಎ. ಕೃಷ್ಣನ್ ನಾಯರ್ (ಇವರಿಗೆ ಯುದ್ಧ ಪದಕ ಮತ್ತು ಬರ್ಮಾ ಸ್ಟಾರ್.) ಸಿಲ್ವೆಸ್ಟರ್ ಡಿ'ಸೋಜ (ಇವರಿಗೆ ಅಪ್ರತಿಮ ಸಾಹಸ ತೋರಿಸಿದ ಬಗ್ಗೆ ಯುದ್ಧ ಪದಕ, ೧೯೩೯-೪೫ನೇ ಸ್ಟಾರ್ ಮತ್ತು ಆಫ್ರಿಕಾ ಸ್ಟಾರ್.)

ಇದ್ದ ಒಬ್ಬನೇ ಮಗನನ್ನು ಯುದ್ಧಕ್ಕೆ ಕಳುಹಿಸಿ ಅವನನ್ನು ಕಳಕೊಂಡು ಜೀವನಕ್ಕೂ ಗತಿಯಿಲ್ಲದೆ ಭಿಕ್ಷೆ ಬೇಡುತ್ತಿದ್ದ ಶ್ರೀಮತಿ ಮಾಧವಿ ಎಂಬವಳಿಗೆ ಸರಕಾರವು ಈ ವರೆಗೆ ಕೊಡದೆ ಬಾಕಿ ಉಳಿದಿದ್ದ ರೂ. ೮೫೫ನ್ನು ಕೊಟ್ಟುದಲ್ಲದೆ ಅವಳಿಗೆ ತಿಂಗಳೊಂದರ ರೂಪಾಯಿ ೧೫ರಂತೆ ಕೊಡಲು ಸರಕಾರವು ಅಪ್ಪಣೆ ದಯಪಾಲಿಸಿದೆಯಾಗಿ ಅವಳಿಗೆ ಸಂಬಂಧಪಟ್ಟ ಅಧಿಕಾರಿಗಳು ತಿಳಿಸಿದರು.

## ದಕ್ಷಿಣ ಕನ್ನಡ

**ಮುಂಡ್ಕೂರು**:- ಇಲ್ಲಿಯ ಶ್ರೀ ದುರ್ಗಾ ಪರಮೇಶ್ವರಿ ಎಲಿಮೆಂಟರಿ ಶಾಲಾ ಸಹಾಯಾರ್ಥವಾಗಿ ಸ್ಥಳೀಯ ನಾಟಕ ಪ್ರಿಯರು ಮತ್ತು ಸಾಲಿಗ್ರಾಮ ಯಕ್ಷಗಾನ ಕೂಟದವರು ಅನುಕ್ರಮವಾಗಿ ಇದೇ ತಾ. 8 ಮತ್ತು 10 ರಲ್ಲು ನಾಟಕ ಮತ್ತು ಯಕ್ಷಗಾನ ಕಾಲಕ್ಷೇಪಗಳನ್ನು ಮಾಡಲಿರುವರು. ವಿದ್ಯಾಭಿಮಾನಿಗಳು ಪ್ರೋತ್ಸಾಹಿಸಬೇಕಾಗಿ ಶಾಲಾ ಕಮಿಟಿಯ ಅಕ್ಕರೆಯ ವಿನಂತಿಯದೆ.

**ಬಾಳ್ಕುದ್ರು**— ಶ್ರೀ ನರಸಿಂಹ ಅಡಿಗಳಿಂದ ಸ್ಥಾಪಿಸಲ್ಪಟ್ಟ ಶ್ರೀರಾಮ ಮಂದಿರದಲ್ಲಿ ಕಳೆದ ತಾ. 21ರಿಂದ 28ರ ವರೆಗೆ ಶ್ರೀರಾಮ ಭಜನಾಸಪ್ತಾಹವು ಶ್ರೀ ಕೃಷ್ಣಮೂರ್ತಿ ಅಡಿಗಳ ನೇತೃತ್ವದಲ್ಲಿ ಸಾಂಗವಾಗಿ ಜರಗಿತು.

**ಮುಜೂರು ಕರಂದಾಡಿ**— ಕಳೆದ ತಾ. 28ರಲ್ಲು ಮುಜೂರು ಕರಂದಾಡಿ ಶಾಲೆಯ ವರ್ಧಂತ್ಯುತ್ಸವವು ಶ್ರೀ ಎಮ್. ಎಸ್. ಅನಂತಕೃಷ್ಣಾಚಾರ್, ಅವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನೆರವೇರಿತು. ತುಳು, ಕನ್ನಡ ನಾಟಕಾಭಿನಯಗಳೂ ಯಕ್ಷಗಾನ ನಟನೆಗಳೂ ಇದ್ದುವು.

**ಮುಡೆಂತ್ಯಾರ್**— ಇಲ್ಲಿಯ ಗಾರ್ಡಿಯನ್ ಪಿಂಜರ್ಸ್ ಶಾಲೆಯ ಸುಮಾರು 70 ಮಂದಿ ವಿದ್ಯಾರ್ಥಿಗಳು ಕಳೆದ ತಾ. 24ರಲ್ಲು ಜಮಾಲಾಬಾದ್ ಕೋಟೆ ಇತ್ಯಾದಿ ದೃಶ್ಯಗಳನ್ನು ನೋಡಲು ಹೋಗಿದ್ದರು. ನಡ ಗ್ರಾಮದ ಪಟೇಲ ಶ್ರೀ ಚಂದಯ್ಯ ಅಜ್ರಿ ಮೊದಲಾದವರು ಊಟೋಪಚಾರಗಳ ವ್ಯವಸ್ಥೆ ಮಾಡಿದ್ದರು.

**ಎಮ್ಮಾಳು**— ತೆಂಕ 'ಶ್ರೀನಾರ್ಲತ್ತಾಯ'ದೈವಮಂದಿರದಲ್ಲಿ ವರ್ಷಾವಧಿ ನಡೆಯುವ ಉತ್ಸವವು ಇದೇ ತಾ. 14ರಲ್ಲು ನಡೆಯಲಿರುವುದು. ಈ ಸಂದರ್ಭದಲ್ಲಿ ಅಂದು ಸಂಜೆ ಶ್ರೀ ಲಕ್ಷ್ಮಣದೇವ ವಿದ್ಯಾರ್ಥಿಯವರಿಂದ 'ಶ್ರೀರಾಮ ಪಾದುಕಾಪಟ್ಟಾಭಿಷೇಕ' ಹರಿಕೀರ್ತನೆಯೂ ರಾತ್ರಿ ಪ್ರಮುಖ ಅರ್ಥಧಾರಿಗಳಿಂದ ಯಕ್ಷಗಾನ ಕಾಲಕ್ಷೇಪವೂ ಜರಗಲಿರುವುವು.

**ಶ್ರೀ ಕ್ಷೇತ್ರ ಧರ್ಮಸ್ಥಳ**— ಧರ್ಮಸ್ಥಳ ಬೆಳ್ತಂಗಡಿ ತಾಲೂಕಿನ ... ಸಂಬಂಧಪಟ್ಟ ... ಕೆಲವು ದಿವಸಗಳಿಂದ ಕಾಣಸಿಗದೇ ಮಾಡಿದ ಘಟನೆಗಳು ಕಂಡುಬರುತ್ತವೆ. ಕೆಲವೆ ಹಿಂದೆ ಬೆಂಕಿಯಾಗುವುದು, ಪಾತ್ರೆ ಪಗಡಿ ಭಯಂಕರ ಶಬ್ದದಿಂದ ಹೊರಗೆ ಬಿದ್ದು ನುಚ್ಚು ನೂರಾಗುವುದು, ಅಕ್ಕಿ ಬೆಲ್ಲ ಎಣ್ಣೆ ಇತ್ಯಾದಿ ಸಾಮಾನುಗಳು ಮಾಯವಾಗಿ ದುರ್ಗಂಧ ವಸ್ತುಗಳು ಕಾಣಿಸುವ ವಿಚಿತ್ರವನ್ನು ಗ್ರಾಮಸ್ಥರು ಮತ್ತು ಪೋಲೀಸ್ ಅಧಿಕಾರಿಗಳು ನೋಡಿರುವರು. ಆರೂರುಗ್ರಾಮದ ಶ್ರೀ ಆರ್. ಎನ್. ಪಂಡಿತ ಪುಟ್ಟಣ್ಣಯ್ಯನವರು ಮಾಂತ್ರಿಕ ಮುಖಾಂತರ ಇಂತಹ ವಿಚಿತ್ರ ಘಟನೆಯನ್ನು ನಿಲ್ಲಿಸಿರುವುದು ಸತ್ಯವೆಂದು ಬಾತ್ಮಿದಾರರೊಬ್ಬರು ಬರೆಯುತ್ತಾರೆ.

ಇಲ್ಲಿಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ರಥೋತ್ಸವವು ಇದೇ ತಾ. 2ರಲ್ಲು ಪ್ರಾರಂಭವಾಗಿ ತಾ. 8ಕ್ಕೆ ಕೊನೆಗೊಳ್ಳುವುದು. ಭಕ್ತಾದಿಗಳಿಗೆ ಸ್ವಾಗತವಿದೆಯೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

**ಪೆರ್ಡೂರು**–ಇಲ್ಲಿ ದಿನೇದಿನೇ ಕಳ್ಳರ ಹಾವಳಿ ಜಾಸ್ತಿಯಾಗುತ್ತಿದೆಯೆಂದೂ ಸಂಬಂಧಪಟ್ಟ ಅಧಿಕಾರಿಗಳು ನಿಗಾ ಕೊಡಬೇಕೆಂದೂ ಬಾತ್ಮಿಯೊಂದು ಬಂದಿದೆ. ಸ್ಥಳಾಭಾವದಿಂದ ಪ್ರಕಟಿಸಲಾಗಲಿಲ್ಲ. (ಸಂ. ನ.)

**ಶಿರ್ವ**–ಸ್ಥಳೀಯ ಪಂಚಾಯತ ಬೋರ್ಡಿನ ಸಭೆಯೊಂದು ಕಳೆದ ತಾ. 31ರಲ್ಲು ಶ್ರೀ ಎಸ್. ಅಣ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ ಮಟ್ಟಾರು, ಮೂಡುಮಟ್ಟಾರು, ಕುತ್ಯಾರು ಮತ್ತು ಕೋಡು ತೋಡುಗಳಿಗೆ ಸಂಕ ಕಟ್ಟಿಸುವ, ಪನ್ನಿಮಾರು ಮತ್ತು ಜಪ್ಪಬೆಟ್ಟು ಬಳಿ ರಸ್ತೆಗಳಿಗೆ ಮೋರಿ ಕಟ್ಟಿಸುವ, ಬೇಸಾಯಗಾರರ ನೀರಿನ ಅನುಕೂಲತೆ ಬಗ್ಗೆ ಶಿರ್ವ ಗ್ರಾಮಕ್ಕೆ ಕೆಲವು ಪಂಪುಗಳನ್ನು ಒದಗಿಸುವಂತೆ ಸರಕಾರಕ್ಕೆ ಬರಕೊಳ್ಳುವ ನಿರ್ಣಯಗಳಾದುವು.

## ಉಡುಪಿ

**ಹರಿಜನ ದಿನಾಚರಣೆಯು** ಕಳೆದ ತಾ. 30ರಲ್ಲು ಪುತ್ತೂರು ಹರಿಜನ ಕೊಲನಿಯ ಸಮೀಪದಲ್ಲಿ ಉಡುಪಿ ತಾಲೂಕು ಜಿಲ್ಲಾ ಇನ್ಸ್‌ಪೆಕ್ಟರ್ ಶ್ರೀ ಪದ್ಮಶೇಖರ ಅಧ್ಯಕ್ಷತೆಯಲ್ಲಿ ಜರಗಿತು. ಗತಸಭೆಯ ವರದಿಯನ್ನು ಶ್ರೀ ಗೋವಿಂದ ಮಾಸ್ತರರು ಓದಿದ ಬಳಿಕ ಶ್ರೀ ಎಂ. ವಿ. ಹೆಗ್ಡೆಯವರು ಭಾಷಣವೀಯುತ್ತಾ ಸವರ್ಣ ಮತ್ತು ಅವರ್ಣ ಹಿಂದುಗಳ ಹೃದಯ ಬದಲಾವಣೆಯ ಅವಶ್ಯಕತೆಯನ್ನು ಹೇಳಿದರು. ನಂತರ ಹರಿಜನ ಮಾಸ್ತರರೇ ಮೊದಲಾದ ಕೆಲವರು ಮಾತನಾಡುತ್ತಾ ಹೋಟೆಲು ಪ್ರವೇಶ ಮೊದಲಾದ ಕಾರ್ಯಕ್ರಮಗಳಲ್ಲಿ ಹರಿಜನರಿಗಿರುವ ಆತಂಕ, ಅಡ್ಡಿಗಳನ್ನು ಜಾಹೀರು ಮಾಡಿದರು. ಹಾಜರಿದ್ದ ಪೋಲೀಸ್ ಅಧಿಕಾರಿಗಳು ಶ್ರೀ ಕೆ. ವಿ. ಮಲ್ಲಯ್ಯ ಮತ್ತು ಶ್ರೀ ಅನಂತರಾಮನ್ ಅವರು ಹರಿಜನ ಕಷ್ಟ ನಿವಾರಣೆಗೆ ತಾವು ಸಿದ್ಧರಿರುವೆವೆಂದು ಅಭಯ ವಚನಗಳನ್ನಿತ್ತರು. ಅಧ್ಯಕ್ಷರು ತನ್ನ ಭಾಷಣದಲ್ಲಿ ಹರಿಜನರಿಗೆ ಉಪಯುಕ್ತ ಸಲಹೆಗಳನ್ನಿತ್ತರು.

**ಮುನಿಸಿಪಲ್ ಸಭೆಯು** ಕಳೆದ ತಾ. 31 ರಲ್ಲು ವೈಸ್ ಚೆಯರ್‌ಮೆನ್ ಶ್ರೀ ಎ. ಬಿ. ಕೃಷ್ಣರಾಜರ ಅಧ್ಯಕ್ಷತೆಯಲ್ಲಿ ಜರಗಿತು. ಕೌನ್ಸಿಲಿನ ಚಾಲ್ತಿ ವರುಷದ ಬಜೇಟಿನ ಕುರಿತು ಸರಕಾರವು ಸೂಚಿಸಿದಂತೆ ಪ್ರಕೃತ ಕರಗೆ ಹೆಚ್ಚಿಸಲು ಕೌನ್ಸಿಲು ತಯಾರಿಲ್ಲವೆಂದೂ ಆಫೀಸು ಖರ್ಚನ್ನು ಕಡಿಮೆ ಮಾಡುವುದರ ಕುರಿತು ಲಕ್ಷ್ಯ ಕೊಡಲಾಗುವುದೆಂದೂ ನಿರ್ಧಾರ ವಾಯಿತು. ಮುನಿಸಿಪಲ್ ಶಿಶು ಪಾಲನಾ ಸೆಂಟರಿನಲ್ಲಿ ಬಡಮಕ್ಕಳಿಗೆ ಧರ್ಮಾರ್ಥ ಹಾಲನ್ನೀಯುವರೆ ರೂಪಾಯಿ 1075 - ಜಾಸ್ತಿ ಸೆಂಕ್ಷನ್ ಮಾಡಲಾಯಿತು.

**ಪೂರ್ವ ಬಂಗಾಲ ನಿರಾಶ್ರಿತರಿಗೆ ಸಹಾಯ ನೀಡುವರೆ**:–ಇದೇ ತಾ. 2 ರಲ್ಲು ಸಂಜೆ ಗಾಂಧಿ ಮೈದಾನಿನಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ಜರಗಿತು. ಅಧ್ಯಕ್ಷರ ಸಂದರ್ಭೋಚಿತ ಭಾಷಣವಾದ ಮೇಲೆ ಧರ್ಮದ ಹೆಸರಿನಿಂದಲಾಗಲೀ ಅಥವಾ ರಾಜಕೀಯ ಧ್ಯೇಯದ ಸೋಗಿನಲ್ಲಾಗಲೀ ಈವರೆಗೆ ಅಲ್ಲಲ್ಲಿ, ವಿಶೇಷತಃ ಪೂರ್ವ ಬಂಗಾಳದಲ್ಲಿ ನಡೆದ ಅಮಾನುಷ ಕೃತ್ಯಗಳನ್ನು ಖಂಡಿಸುವ, ನೆಹರೂ ಸರಕಾರಕ್ಕೆ ಬೆಂಬಲವೀಯುವ, ಸಂಕಷ್ಟಕ್ಕೀಡಾದವರಿಗೆ ಸಾರ್ವಜನಿಕರು ಉದಾರ ಹಸ್ತದಿಂದ ಸಹಾಯವೀಯಬೇಕೆಂದು ವಿನಂತಿಸುವ ನಿರ್ಣಯಗಳು ಶ್ರೀಗಳಾದ ಎಮ್. ವಿಠಲ ಕಾಮತ್, ಬಿ. ವಾಸುದೇವರಾವ್ ಮತ್ತು ಯು. ಗೋಪಾಲ ಪ್ರಭುಗಳ ಸೂಚನೆ ಅನುಮೋದನೆಗಳಿಂದ ಒಮ್ಮತದಿಂದ ಪಾಸಾದುವು. ಉಡುಪಿಯಲ್ಲಿ ಸಹಾಯ ಧನವನ್ನು ಸಂಗ್ರಹಿಸುವ ಸಮಿತಿ ನೇಮಿಸುವರೆ ಶ್ರೀಗಳಾದ ಟಿ. ಎ. ಪೈ, ಬಿ. ವಾಸುದೇವರಾವ್, ಕೆ. ವರದರಾಯ ಪೈ, ಯು. ಗೋಪಾಲ ಪ್ರಭುಗಳುಳ್ಳ ಕಮಿಟಿ ರಚನೆಯಾಯಿತು.

ಉಡುಪಿಯ ಜನಪ್ರಿಯ ಸಾರ್ವಜನಿಕ ಕೆಲಸಗಾರ ಶ್ರೀ. ಗೋಪೀನಾಥ ಭಂಡಾರಿಯವರ ಸಹಧರ್ಮಿಣಿಯು ಕಳೆದ ವಾರ ಪ್ರಸವಾನಂತರ ವಿಧಿವಶರಾದು ವಿಷಾದಕರವಿದೆ. ಮೃತರ ಆತ್ಮಕ್ಕೆ ಶಾಂತಿನ್ನು ಕೋರಿ ಪತ್ನಿವಿಯೋಗ ಶೋಕಕ್ಕೀಡಾದ ಶ್ರೀ ಭಂಡಾರಿಯವರಿಗೆ ಸಹಾನುಭೂತಿ ಸೂಚಿಸುತ್ತೇವೆ.


**ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.**

ನಮ್ಮ ಸ್ವಂತ ಸುದ್ದಿಗಾರರಿಂದ

**ಸುರಲೋಕದ ದೇವತೆಗಳು ನರಲೋಕದಲ್ಲಿ.**

ಯಾರಿಗೂ ತಿಳಿಯದಂತೆ ಮೊನ್ನೆಮೊನ್ನೆ ಇಂದ್ರನು ಬಂದು ಚಂದ್ರಲೇಖ ನೋಡಿದನಂತೆ.

**ಇದು ಮಾತ್ರ ಗುಟ್ಟಾಗಿರಲಿ**

ತಾರೀಕು 7—4—1950 ರಿಂದ **ಜೆಮಿನಿಯವರ**

3ನೇ ವಾರ **ಚಂದ್ರಲೇಖ** (ತಮಿಳು)

ಟಿ. ಆರ್. ರಾಜಕುಮಾರಿ, ಎಂ. ಕೆ. ರಾಧ, ರಂಜನ್.

ಜೆಮಿನಿಯವರ **ಕಲ್ಪನಾ** (ಉದಯಶಂಕರ ಮತ್ತು ಪಾರ್ಟಿ)



**ಬಿಳಿ ಕಾಗದ! ನಾಜೂಕಿನ ಬೈಂಡು!**

**1950ನೇ ಇಸವಿಯ**

**ಪಾಕೆಟ್ ಡೈರಿಗಳು**

| | | |
|---|---|---|
| ದೊಡ್ಡದು | [ಕೆಲಿಕೊ ಬೈಂಡ್] | 1-12-0 |
| ,, | [ಸಾದಾ] | 1-8-0 |
| ಸಣ್ಣದು | [ಕೆಲಿಕೊ] | 1-4-0 |
| ,, | [ಸಾದಾ] | 0-12-0 |

(ಟಪ್ಪಾಲು ಖರ್ಚು ಪ್ರತ್ಯೇಕ.)

ಸಿಗುವ ಸ್ಥಳಗಳು:-

**ನವಭಾರತ ಬುಕ್ ಡಿಪೊ, ಉಡುಪಿ.**

**ನವಯುಗ ಪ್ರೆಸ್, ಉಡುಪಿ.**



ಕನ್ನಡಿಗರೆಲ್ಲರ ಕಣ್ಣನ್ನ ಸೆಳೆದು ಪ್ರಸಿದ್ಧವಾದ

# ಮಧುವನ

ಅಖಿಲ ಕರ್ನಾಟಕದ ಪ್ರಾತಿನಿಧಿಕ ಕಥಾಸಂಕಲನ

**25 ಕತೆಗಳು** **ಬೆಲೆ ರೂ 3 0 0**

ಸಿಗುವ ಸ್ಥಳಗಳು:-

1 ಕಿರಿಯರ ಪ್ರಪಂಚ, ಉಡುಪಿ

2 ನವಭಾರತ ಬುಕ್ ಡಿಪೊ, ಉಡುಪಿ

3 ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.



**ಪಂಚಾಯತ ಬೋರ್ಡ್, ಗ್ರಾಮ ಕಮಿಟಿ, ಶಾಲಾ ಕೊಲೇಜು ಮೊದಲಾದುವುಗಳ**

**ಲೈಬ್ರೆರಿಗಳಿಗೆ**

ಬೇಕಾಗುವ ಕರ್ನಾಟಕದ ಎಲ್ಲಾ ಭಾಗಗಳ ಕನ್ನಡ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ವಿಚಾರಿಸಿರಿ:—

**ನವಭಾರತ ಪುಸ್ತಕ ಭಂಡಾರ,**

**ಉಡುಪಿ.** ಅಥವಾ

**ನವಯುಗ ಪ್ರೆಸ್, ಉಡುಪಿ.**

# ಜಿಲ್ಲಾ ವರ್ತಮಾನಗಳು

## ಮಂಗಳೂರು

### ಜಿಲ್ಲಾ ಆಹಾರ ಸಮಿತಿ ಸಭೆ

ತಾ. ೩೦ನೇ ದಿನ ಮಾನ್ಯ ಜಿಲ್ಲಾ ಕಲೆಕ್ಟರ ದೊರೆಗಳವರ ಅಧ್ಯಕ್ಷತೆಯಲ್ಲಿ ಸೇರಿತು. ಸಭೆಯಲ್ಲಿ ಜಿಲ್ಲಾ ಆಹಾರ ಸರಬರಾಯಿ ಆಫೀಸರರು ಜಿಲ್ಲೆಯ ಆಹಾರ ಪರಿಸ್ಥಿತಿಯನ್ನು ವಿವರಿಸಿದರು. ತಾರೀಕು ೨೫-೩-೫೦ರಲ್ಲಿ ಜಿಲ್ಲೆಯಲ್ಲಿ ೬೯೦೨ ಟನ್ ಅಕ್ಕಿ, ೨೫೦ ಟನ್ ಗೋಧಿ, ೭೬೪ ಟನ್ ಮೈದಾ, ೯೮.೬ ಟನ್ ಮಿಲೊ ದಾಸ್ತಾನಿದೆ. ಜಿಲ್ಲೆಯ ದಾಸ್ತಾನು ೬ ವಾರಗಳಿಗೆ ಸಾಕಷ್ಟಿದೆ ಎಂದು ಹೇಳಿದರು. ಈ ತಿಂಗಳಿಗೆ ೪೯೦೦ ಟನ್ ಅಕ್ಕಿಯೂ ಬರಲಿದೆ ಎಂದು ಹೇಳಿದರು.

ಶ್ರೀಮತಿ ಮೇರಿ ಬ್ರಿಟೊ ತನಗೆ ಯಾವಾಗಲೂ ಕೆಂಪು ಅಕ್ಕಿಯೇ ಸಿಕ್ಕುತ್ತದೆ, ಅದಷ್ಟು ಉತ್ತಮ (ಬಿಳಿ) ಅಕ್ಕಿಯನ್ನು ಹಂಚುವಂತೆ ಪ್ರಯತ್ನಿಸಬೇಕು, ಎಂದು ತಾನು ತಂದಿದ್ದ ಕಜೆ ಅಕ್ಕಿಯನ್ನು ಸಭೆಯಲ್ಲಿ ತೋರಿಸಿದರು. ಅವರಿಗೆ ಒಳ್ಳೆ ಅಕ್ಕಿ ಒದಗಿಸುವಂತೆ ಅಭಯ ಕೊಡಲಾಯ್ತು.

ಶ್ರೀ ಕೆ. ಆರ್. ಕಾರಂತರು ಹಳ್ಳಿಗಳಲ್ಲಿ ಸಕ್ಕರೆ ಹಂಚುವ ಕ್ರಮವನ್ನು ವ್ಯವಸ್ಥೆಗೊಳಿಸುವಂತೆ ವಾದಿಸಿದರು. ಅದಕ್ಕೆ ಸರಿಯಾದ ಕಾರ್ಯಕ್ರಮವನ್ನು ತಾನು ಕೈಕೊಳ್ಳುವೆನೆಂದು ಮಾನ್ಯ ಅಧ್ಯಕ್ಷರು ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅಲ್ಲದೆ ಹಳ್ಳಿಗಳಲ್ಲಿ ನಿಜವಾಗಿಯೂ ಯಾರಿಗೆ ಸಕ್ಕರೆ ಅಗತ್ಯವಿದೆಯೋ ಅವರಿಗೆ ಸಕ್ಕರೆಯನ್ನು ಕೊಡಿಸುವ ವ್ಯವಸ್ಥೆಯನ್ನು ಕೈಕೊಳ್ಳುವಂತೆ ಸಂಬಂಧಪಟ್ಟ ತಾಲೂಕು ತಹಶೀಲ್ದಾರರನ್ನು ಕೇಳಿಕೊಳ್ಳುವೆನೆಂದು ಅವರು ತಿಳಿಸಿದರು.

ಆ ಮೇಲೆ ಶ್ರೀ ಕಾರಂತರು ಅವಲಕ್ಕಿಯ ಮೇಲಿನ ನಿರ್ಬಂಧವನ್ನು ತೆಗೆಯುವ ಕುರಿತು ಮಾತನಾಡಿ ಅವಲಕ್ಕಿ ಎಲ್ಲೆಲ್ಲೂ ಪೇಟೆಯಲ್ಲಿ ಸಿಗುತ್ತಿದೆಯಾದರೂ ಅದರ ಮೇಲೆ ಇನ್ನೂ ನಿರ್ಬಂಧ ಇರುವುದು ಹಾಸ್ಯಾಸ್ಪದವೆಂದು ಹೇಳಿದರು. ಶ್ರೀ ಜಿನರಾಜ ಹೆಗ್ಡೆ, ಶ್ರೀ ಎಲ್. ಸಿ. ಪ್ಯಾಸ್, ಶ್ರೀ ಎಂ. ಶಿವರಾವ್, ಶ್ರೀ ಎಸ್. ಯು. ಪಿ. ನಾಯಕ್, ಶ್ರೀ ನರಸಿಂಹ ಮೊದಲಾದವರು ಸೂಚನೆಗೆ ಪರವಾಗಿಯೂ ವಿರೋಧವಾಗಿಯೂ ಮಾತನಾಡಿದರು. ಕೊನೆಗೆ ಶ್ರೀ ಕಾರಂತರು ಅವಲಕ್ಕಿಯು ರೇಶನ್ ಪದಾರ್ಥಗಳ ಜಾತಿಗೆ ಸೇರದುದರಿಂದ ಅದರ ಮೇಲಿನ ನಿರ್ಬಂಧವನ್ನು ತೆಗೆಯಬಹುದೆಂಬಾಶಯದ ಸೂಚನೆಯನ್ನು ಪುನಃ ಒತ್ತಿ ಹೇಳಲಾಗಿ ಮಾನ್ಯ ಅಧ್ಯಕ್ಷರು ಮತ್ತು ಜಿಲ್ಲಾ ಸರಬರಾಯಿ ಆಫೀಸರರು ತಮ್ಮ ಒಪ್ಪಿಗೆಯನ್ನಿತ್ತರು.

ಶ್ರೀ ಜಿನರಾಜ ಹೆಗ್ಡೆಯವರು ಧೂಮ್ರಪಾಲಿಕರಿಗೆ ಮತ್ತು ಒಕ್ಕಲುಗಳಿಗೆ ಅಕ್ಕಿ ಸಾಗಾಟ ಬಗ್ಗೆ ಪರ್ಮಿಟುಗಳನ್ನು ಕೊಡಲು ಅಧಿಕಾರಿವರ್ಗದವರು ಕೊಡುವ ಕಷ್ಟಗಳನ್ನೂ ಅದರಿಂದ ಎರಡೂ ಪಕ್ಷದವರಿಗೆ ಆಗುವ ಅನಾನುಕೂಲವನ್ನೂ ಸಭೆಗೆ ಪತ್ರ ಮೂಲಕ ತಿಳಿಸಿದ್ದು ಅದನ್ನು ಪುನಃ ಸವಿಸ್ತಾರವಾಗಿ ತಿಳಿಸಿದರು. ಇನ್ನು ಮುಂದೆ ಅಂತಹ ತೊಂದರೆಗಳು ಬಾರದಂತೆ ತಾವು ನೌಕರ ವರ್ಗವನ್ನು ಎಚ್ಚರಿಸುವೆವೆಂದು ಅಧ್ಯಕ್ಷರು ತಿಳಿಸಿದರು.

ಜಿಲ್ಲಾ ಆಹಾರೋತ್ಪತ್ತಿ ಸಭೆಯು ಜಿಲ್ಲಾ ಕಲೆಕ್ಟರ ದೊರೆಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಮಲೆನಾಡು ಪ್ರಾಂತವನ್ನು ಯಂತ್ರಗಳ ಮೂಲಕ ಸಾಗುವಳಿ ಮಾಡಿ ವರ್ಷ ಒಂದಕ್ಕೆ ಸುಮಾರು ೩೧,೦೦೦ ಟನ್ ಅಕ್ಕಿಯನ್ನು ಉತ್ಪಾದಿಸಬಹುದು. ಇದರಿಂದ ಆಹಾರ ಅಭಾವವು ನೀಗುವುದು. ಅಲ್ಲದೆ ಅದು ಇದು ಎಂದು ಬರೇ ಬಾಯಿಮಾತಿನಿಂದ ಏನಾದರೂ ಹೇಳಿ ಯಾವ ಪ್ರಯೋಜನವೂ ಆಗದು ಎಂದು ಶ್ರೀ ಹೆಗ್ಡೆಯವರು ಸಭೆಯ ಮುಂದೆ ತಮ್ಮ ಅಭಿಪ್ರಾಯವನ್ನಿತ್ತು ಉಳಿದ ಸದಸ್ಯರಿಗೆ ಅವರ ಸಲಹೆಗಳೇನಾದರೂ ಇದ್ದಲ್ಲಿ ಕೊಡಬಹುದು ಎಂದು ಸೂಚಿಸಿದರು.

ಜಿಲ್ಲಾ ಎಗ್ರಿಕಲ್ಚರಲ್ ಆಫೀಸರರು ಯಂತ್ರಗಳ ಮೂಲಕ ಸಾಗುವಳಿ ಮಾಡುವ ಅನಾನುಕೂಲತೆ, ಕೂಲಿಕಾರರ ತೊಂದರೆ ಇತ್ಯಾದಿಗಳನ್ನು ವಿವರಿಸಿದರು.

ಶ್ರೀ ಹೆಗ್ಡೆಯವರು ಅದಕ್ಕೆ ಸಮರ್ಪಕವಾದ ಉತ್ತರವನ್ನು ಕೊಟ್ಟ ಮೇಲೆ ಆ ಬಗ್ಗೆ ಕೆಲಸವನ್ನು ಆದಷ್ಟು ಬೇಗನೆ ಕೈಕೊಳ್ಳುವಂತೆ ೧೦ ಜನ ಸದಸ್ಯರಿರುವ ಒಂದು ಸಮಿತಿಯನ್ನು ನೇಮಿಸಲಾಯಿತು. ಜಿಲ್ಲಾ ಸರಬರಾಯಿ ಅಧಿಕಾರಿಗಳು ಅದರ ಸಂಚಾಲಕತ್ವವನ್ನು ವಹಿಸಿದರು. ಈ ಸಮಿತಿಯ ಪ್ರಥಮ ಸಭೆಯನ್ನು ತಾ. ೨೦-೪-೧೯೫೦ಕ್ಕೆ ಗಂಟೆ ೩ಕ್ಕೆ ಕರೆಯಲಾಯ್ತು.

ಆ ಮೇಲೆ ನಡೆದ ಪತ್ರಿಕಾ ಪ್ರತಿನಿಧಿಗಳ ಪರಿಷತ್ತಿನಲ್ಲಿ ಮಾನ್ಯ ಜಿಲ್ಲಾ ಕಲೆಕ್ಟರರು ಮಾತನಾಡುತ್ತಾ ಈ ಕೆಳಗಿನ ವಿಷಯಗಳನ್ನು ಹೇಳಿದರು. ಆಂಧ್ರ ಬರಗಾಲ ಸಂತ್ರಸ್ತರ ಜಿಲ್ಲಾ ನಿಧಿಗೆ ತಾ. ೧೫-೩-೫೦ರ ವರೆಗೆ ರೂಪಾಯಿ ೧೬,೫೩೭-೩-೮ ಜಮಾಯಿಸಲಾಯಿತು. ಇನ್ನೂ ಹೆಚ್ಚಿನ ನಿಧಿಯನ್ನು ಜಮೆ ಮಾಡುವ ಬಗ್ಗೆ ಪ್ರಯತ್ನಗಳು ನಡಿಯುತ್ತಿವೆ.

### ಮನೆಮಾರು ಕಳಕೊಂಡವರಿಗೆ ಸಹಾಯ.

ಕಳೆದ ಮಾರ್ಚ ತಿಂಗಳಲ್ಲಿ ಉಪ್ಪವಿಸಿದ ಬೆಂಕಿಯ ಪರಿಣಾಮವಾಗಿ ಹಲವು ಮನೆಮಾರುಗಳು ಸುಟ್ಟು ಹೋಗಿದ್ದವು. ಅವುಗಳಲ್ಲಿಯ ೧೦ ಜನರಿಗೆ ರೂಪಾಯಿ ೧೦ರಿಂದ ರೂಪಾಯಿ ೨೦ರ ವರೆಗೆ ಸಹಾಯ ಮಾಡಲು ಸನ್ಮಾನ್ಯ ಜಿಲ್ಲಾ ಕಲೆಕ್ಟರ ದೊರೆಗಳವರು ರೂಪಾಯಿ ೧೯೫ ಮಂಜೂರು ಮಾಡಿರುವರು.

### ಭೂಮಿಯನ್ನು ವಸತಿಯೋಗ್ಯ ಮಾಡುವ ಸಲಹಾ ಸಮಿತಿ ಸಭೆ

ಶ್ರೀ ಎಂ. ಶಿವರಾಯರ ಸಲಹೆಯ ಮೇರೆಗೆ ಏರ್ಪಡಿಸಲಾದ ಈ ಸಮಿತಿಯ ಪ್ರಥಮ ಸಭೆಯು ಮಾನ್ಯ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ತಾ. ೨೮-೩-೫೦ರಲ್ಲಿ ಜರಗಿತು. ಕೊಲ್ಲೂರದಲ್ಲಿ ವಸತಿಯಿಲ್ಲದೆ ಬಂಜರು ಬಿದ್ದ ಭೂಮಿಯನ್ನು ವಸತಿಯೋಗ್ಯವಾಗಿ ಮತ್ತು ಸಾಗುವಳಿ ಯೋಗ್ಯವಾಗಿ ಮಾಡುವ ಕುರಿತು ಸಹಕಾರ ಸಂಘದ ಮೂಲಕ ಒಂದು ನವೀನ ಕ್ರಮವನ್ನು ಅನುಸರಿಸಲಾಗುವುದು. ಈಗ ಅಲ್ಲಿ ಪಾಳಿ ಬಿದ್ದಿರುವ ಸುಮಾರು ೩೦೦ ಎಕ್ರೆ ಸ್ಥಳಕ್ಕೆ ಅರ್ಜಿಗಳನ್ನು ಡೆವಲಪ್‌ಮೆಂಟ್ ಆಫೀಸರರು ಸ್ವೀಕರಿಸುವರು. ಭೂಮಿಯನ್ನು ಹಂಚಿಯಾದ ಮೇಲೆ ಭೂಸುಧಾರಣೆಗೆ ಬೇಕಾದ ಎಲ್ಲಾ ಸಹಾಯವನ್ನೂ ಸರಕಾರವೇ ಮಾಡುವುದು.

### ಕೊಂಪೋಸ್ಟ್ ಗೊಬ್ಬರ ಸಲಹಾ ಸಮಿತಿ ಸಭೆ

ಈ ಸಭೆಯು ಮಾನ್ಯ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ತಾ. ೩೦—೩—೫೦ರಲ್ಲಿ ಜರಗಿತು.

ಈ ಸಭೆಗೆ ಮಾನ್ಯ ಜಿಲ್ಲಾ ಕಲೆಕ್ಟರರು ಅಧ್ಯಕ್ಷರಾಗಿ ಮಂಗಳೂರು ಮುನ್ಸಿಪಾಲಿಟಿ ಕಮಿಶನರು ಕಾರ್ಯದರ್ಶಿಗಳಾಗಿ, ಮಂಗಳೂರು ತಹಶಿಲ್ದಾರರು, ಎಗ್ರಿಕಲ್ಚರ್ ಡೆಮೊನ್‌ಸ್ಟ್ರೇಟರರು ಮಂಗಳೂರು, ಹೆಲ್ತ್ ಆಫೀಸರ್ ಮಂಗಳೂರು ಮುನ್ಸಿಪಾಲಿಟಿ, ಶ್ರೀ ಸಿ. ಎಲ್. ಲೋಬೊ. ವಕೀಲ್, ಮತ್ತು ಕೊಡ್ಯಾಲು ಗುತ್ತಿನ ಶ್ರೀ ಕೃಷ್ಣಯ್ಯ ಹೆಗ್ಡೆ ಇವರು ಸದಸ್ಯರಾಗಿರುವರು. ಈ ಸಭೆಯಲ್ಲಿ ಮಂಗಳೂರು ಮುನ್ಸಿಪಾಲಿಟಿ ತಯಾರಿಸಿದ ಕಂಪೋಸ್ಟ್ ಗೊಬ್ಬರನ್ನು ಯಾವ ರೀತಿಯಲ್ಲಿ ಜನಪ್ರಿಯವಾಗುವಂತೆ ಮಾಡುವುದು ಎಂಬುದನ್ನು ಚರ್ಚಿಸಲಾಯ್ತು.

ಕಳೆದ ಒಂದು ಪಕ್ಷದಲ್ಲಿ ನಮ್ಮ ಜಿಲ್ಲೆಯಲ್ಲಿ ಎರಡು ನೀರಾವರಿ ಕೆಲಸಗಳನ್ನು ಕೈಕೊಳ್ಳಲಾಯಿತು. ಒಂದನೆಯದು ಉಡ್ಪಿ ತಾಲೂಕಿನ ಏಣಗುಡ್ಡೆಯಲ್ಲಿರುವ ಒಂದು ಕೆರೆಯ ದುರಸ್ತಿ. ಇದರ ಖರ್ಚು ರೂಪಾಯಿ ೧೯೬೦/-. ಎರಡನೆಯದು ಉಡ್ಪಿ ತಾಲೂಕಿನ ಪಡುತೋನ್ಸೆ ಗ್ರಾಮದ್ದು. ಇದರ ಮಂಜೂರು ಖರ್ಚು ರೂಪಾಯಿ ೧,೫೦೦/-.

ಸರಕಾರಿ ಸ್ಥಳದಲ್ಲಿ ಕೃಷಿಯೋಗ್ಯವಾಗಿದ್ದು ನಾದುರಸ್ತಿ ಸ್ಥಿತಿಯಲ್ಲಿರುವ ಕೆರೆ, ಬಾವಿಗಳ ಕುರಿತು ಮಾನ್ಯ ಜಿಲ್ಲಾ ಕಲೆಕ್ಟರರ ಗಮನಕ್ಕೆ ತಂದಲ್ಲಿ ಅವರು ಅದನ್ನು ಕೂಡಲೇ ಸರಕಾರದ ಖರ್ಚಿನಲ್ಲೇ ದುರಸ್ತಿ ಮಾಡಿಸುವ ಏರ್ಪಾಡು ಮಾಡುವ ಭರವಸೆ ಇತ್ತಿರುವರು. ಆದುದರಿಂದ ಅಂತಹ ಯಾವದೊಂದು ಕೆರೆ ಯಾ, ಬಾವಿಯಿದ್ದಲ್ಲಿ ಅದನ್ನು ಆದಷ್ಟು ಶೀಘ್ರವಾಗಿ ಮಾನ್ಯ ಜಿಲ್ಲಾ ಕಲೆಕ್ಟರರ ಅವಗಾಹನೆಗೆ ತರುವರೆ ಈ ಮೂಲಕ ಅಪೇಕ್ಷಿಸಲಾಗಿಯದೆ.

### ಗದ್ದೆಗಳಿಗೆ ಗೊಬ್ಬರ

ಇತ್ತೀಚೆಗೆ ಕೃತಕ ಗೊಬ್ಬರಗಳನ್ನು ಉಪಯೋಗಿಸುವುದರಿಂದ ಗದ್ದೆಗಳು ಬೆಳೆಯನ್ನೇ ಕೊಡುವುದಿಲ್ಲವೆಂಬ ಕೂಗು ಕೇಳಿಬರುತ್ತದೆ. ಅದು ನಮ್ಮ ಅಜ್ಞಾನದಿಂದಾಗಿ ಅಲ್ಲದೆ ಅನ್ಯಥಾ ಅಲ್ಲ ಎಂಬುದು ತಿಳಿದಿರಲಿ. ವರ್ಷಂಪ್ರತಿ ಗದ್ದೆಗಳಿಗೆ ಗೊಬ್ಬರವನ್ನು ಹಾಕಿ ಅವುಗಳಿಂದ ಬೆಳೆತೆಗೆಯುತ್ತಾ ಇರುವ ನಮಗೆ ಒಂದು ವರ್ಷ ಗೊಬ್ಬರ ಹಾಕದೆ ಇದ್ದರೆ ಅದರಿಂದ ನಿಜವಾಗಿಯೂ ಬೆಳೆ ಕಡಿಮೆಯಾಗುವುದು. ನಮ್ಮ ಸಾದಾ ಗೊಬ್ಬರವನ್ನು ಉಪಯೋಗಿಸಿ ಬರುವ ಬೆಳೆಗಿಂತ ಕೃತಕ ಗೊಬ್ಬರದಿಂದ ಹೆಚ್ಚು ಬೆಳೆ ಬರುತ್ತಿದೆ ಎಂಬುದು ಅನುಭವದ ಮಾತು. ಆದರೆ ಗೊಬ್ಬರವನ್ನು ಮಾತ್ರ ಬಿಡದೆ ಪ್ರತೀ ವರ್ಷವೂ ಹಾಕುತ್ತಿರಬೇಕು.

### ರಾಜಕೀಯ ಸಂತ್ರಸ್ತರಿಗೆ ಭೂದಾನ

ತಾ. ೨೮-೩-೧೯೫೦ರಲ್ಲಿ ಸೇರಿದ ರಾಜಕೀಯ ಸಂತ್ರಸ್ತ ಭೂದಾನ ಸಮಿತಿಯ ಸಭೆಯಲ್ಲಿ ಕುಂದಾಪುರ ತಾಲೂಕಿನ ಶ್ರೀ. ಕೆ. ಎ. ಕಾರಂತರಿಗೆ ೭ ಎಕ್ರೆ ಪರಂಬೋಕು ಭೂಮಿ, ಉಡ್ಪಿ ತಾಲೂಕಿನ ಶ್ರೀ ಬಿ. ಸದಾಶಿವ ಹೆಗ್ಡೆಯವರಿಗೆ ೧೦ ಎಕ್ರೆ, ಮಂಗಳೂರು ತಾಲೂಕಿನ ಡಾ। ಕೋಚಣ್ಣ ಮಾರ್ಲ ಅವರಿಗೆ ೧೨ ಎಕ್ರೆ, ಕಾಸರಗೋಡು ತಾಲೂಕಿನ ಶ್ರೀ ಪಿ. ಆನಂದ ರಾವ್ ಇವರಿಗೆ ೯ ಎಕ್ರೆ ೭೮ ಸೆಂಟ್ಸ್, ಕುಂದಾಪುರ ತಾಲೂಕಿನ ಶ್ರೀ ಎಚ್. ಸರ್ವೋತ್ತಮ ಪೈ ಇವರಿಗೆ ೫ ಎಕ್ರೆ ೭೪ ಸೆಂಟ್ಸ್, ಕೊಳ್ಕೆಬೈಲು ಮಾಬಲ ಸೆಟ್ಟಿ ಇವರಿಗೆ ೮ ಎಕ್ರೆ ೯೮ ಸೆಂಟ್ಸ್, ಮತ್ತು ಮಂಗಳೂರಿನ ಶ್ರೀಮತಿ ಸುನಂದಾಬಾಯಿ ಇವರಿಗೆ ೯ ಎಕ್ರೆ ೩೮ ಸೆಂಟ್ಸ್ ಭೂಮಿಯನ್ನು ದಾನವಾಗಿ ಕೊಡಲಾಯಿತು.

### ರಾಗಿಯ ರಿಕ್ವಿಸಿಶನ್ ಇಲ್ಲ

ಒಣ ಮತ್ತು ಬಂಜರು ಭೂಮಿಯನ್ನು ಸಾಗುವಳಿ ಮಾಡಿ ಅದರಲ್ಲಿ ರಾಗಿ ಬೆಳೆಸಲಾದರೆ ಅಂತಹ ರಾಗಿಯನ್ನು ರಿಕ್ವಿಸಿಶನ್ ಮಾಡಲಾಗುವುದಿಲ್ಲವೆಂದು ಮಾನ್ಯ ಜಿಲ್ಲಾ ಕಲೆಕ್ಟರರು ಅಪ್ಪಣೆಕೊಟ್ಟಿರುವರು.


ಭಾರದ್ವಾಜರ
ಇಂಗ್ಲಿಷ್ × ಇಂಗ್ಲಿಷ್ × ಕನ್ನಡ
ಡಿಕ್ಷನರಿಗಳು
ದೊರೆಯುತ್ತವೆ.
ಬೆಲೆ . ರೂ. 5 0 0
ಸಿರಿಗನ್ನಡ ಅರ್ಥಕೋಶ 4 8 0
ನವಯುಗ ಪ್ರೆಸ್, ಉಡುಪಿ.
ಅಥವಾ
ನವಯುಗ ಆಫೀಸು, ಉಡುಪಿ.



Approved firm by the Govt. of Mysore. Certificated by the Agent of the Govt fo Cylone & I...

For Life Assurance
CONSULT
THE NEW GUARDIAN OF INDIA
LIFE ASSURANCE Co. LTD.,
(Established: 1934)
Chairman: Sri. M. C. T. M. Chidambaram Chettyar.
A Policy in this progressive Life Office is a good investment: its Agency is a valuable business connection.
MANGALORE BRANCH: K. S. R. Road, Hampankatta, Mangalore.
HEAD OFFICE: United India Life Building, P. B. No. 142 MADRAS.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನ್ಯಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಯಾಂಜಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.
1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.
The Moolky Bank Ltd.,
Moolky, S. K.

## ಡಾ| ಹರ್ಡೀಕರ ಷಷ್ಟ್ಯಬ್ದಿ ಮಹೋತ್ಸವ ಕೇಂದ್ರ ಸಮಿತಿ ಮುಂಬಯಿ ಇವರ ವಿಜ್ಞಾಪನೆ

ಭಾರತೀಯ ಸ್ವಯಂಸೇವಕ ಆಂದೋಲನದ ಜನಕರಾದ ಡಾ. ನಾರಾಯಣ ಸುಬ್ಬರಾವ ಹರ್ಡೀಕರ ಅವರಿಗೆ ಬರುವ ಮೇ ತಿಂಗಳಲ್ಲಿ ೬೦ ವರ್ಷ ತುಂಬುವವು. ಅವರ ನಾಯಕತ್ವದಲ್ಲಿ ರಾಷ್ಟ್ರೀಯ ಮಹಾಕಾರ್ಯದ ಪ್ರಾಥಮಿಕ ಶಿಕ್ಷಣ ಪಡೆದ ಅವರ ಅನೇಕ ಶಿಷ್ಯರು, ಅವರಲ್ಲಿ ಪ್ರೀತ್ಯಾದರಗಳುಳ್ಳ ಅಸಂಖ್ಯ ಆಪ್ತ ಮಿತ್ರರು ಈ ಅವರ ಜನ್ಮ ದಿನವನ್ನು ಆ ಮಹಾ ನಾಯಕನ ಘನತೆಗೊಪ್ಪುವಂತೆ ನೆರವೇರಿಸಲು ಆತುರರಾಗಿರುವಲ್ಲಿ ಆಶ್ಚರ್ಯವೇನು?

ಕರ್ನಾಟಕದೊಂದು ಮೂಲೆಯಿಂದ ಬಂದವರಾದರೂ ಡಾ. ಹರ್ಡೀಕರರು ರಾಷ್ಟ್ರೀಯ ಹೋರಾಟದ ಪ್ರಥಮ ರಂಗದಲ್ಲಿಯೇ ಮುಂದಾಳನ್ನು ಪ್ರವೇಶಿಸಿದರು. ಮುಂದೆ ವಿದ್ಯಾಭ್ಯಾಸಕ್ಕೆಂದು ಅವರು ಅಮೇರಿಕೆಗೆ ಹೋದರು. ಆಗ ಆ ದೇಶವು ಭಾರತದ ಮಿತ್ರದೇಶವಾಗಿದ್ದರೂ ಅಲ್ಲಿ ಪಂಜಾಬ ಕೇಸರಿ ಲಾಲಾ ಲಜಪತರಾಯರ ನಾಯಕತ್ವದಲ್ಲಿ ಭಾರತದ ಪರವಾಗಿ ಪ್ರಚಾರ ಕಾರ್ಯವನ್ನು ನಡೆಸಿದ್ದ ಯುವಕರ ತಂಡದಲ್ಲಿ ಸೇರಿ ಅವರ ಕಾರ್ಯವನ್ನು ಬಲಪಡಿಸಿದರು. ಅಮೇರಿಕೆಯಲ್ಲಿ ಹಿಂದೀ ಸ್ವಾತಂತ್ರ್ಯ ಸಂದೇಶವನ್ನು ಬೀರಿ ಅಲ್ಲಿ ಒಂದು ಪ್ರಭಾವೀ ಮಿತ್ರವರ್ಗವನ್ನು ನಿರ್ಮಾಣ ಮಾಡಿದಂಥ ಪಂಜಾಬ ಕೇಸರಿಯ ಅನುಯಾಯಿಗಳಲ್ಲಿ ಡಾ. ಹರ್ಡೀಕರರು ಅಗ್ರಗಣ್ಯರಾದರು.

ಸಂಯುಕ್ತ ಸಂಸ್ಥಾನಗಳಲ್ಲಿ ಬಹಳ ಕಷ್ಟದಿಂದ ಉಚ್ಚ ಶಿಕ್ಷಣವನ್ನು ಯಶಸ್ವಿಯಾಗಿ ಮುಗಿಸಿಕೊಂಡು ಡಾ ಹರ್ಡೀಕರರು ಮಾತೃಭೂಮಿಗೆ ಮರಳಿಬಂದರು. ಆಗ ಅವರು ಮನಸ್ಸುಮಾಡಿದ್ದರೆ ತಮ್ಮ ವ್ಯವಸಾಯದಲ್ಲಿಯೇ ಚೆನ್ನಾಗಿ ಹೆಸರು ಗಳಿಸಬಹುದಾಗಿತ್ತು. ಆದರೆ ಅವರ ವಿಚಾರವೇ ಬೇರೆಯಾಗಿತ್ತು. ದೇಶದಲ್ಲಿ ಆಗ ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ ಸಾಗಿದ್ದ ಸ್ವಾತಂತ್ರ್ಯದ ಆಂದೋಲನದಲ್ಲಿ ಅವರು ನುಗ್ಗಿಬಿಟ್ಟರು.

ಅಂದಿನಿಂದ ಇಲ್ಲಿಯ ವರೆಗೆ ಡಾಕ್ಟರ ಹರ್ಡೀಕರರು ರಾಷ್ಟ್ರದ ಸ್ವಾತಂತ್ರ್ಯ ಹೋರಾಟದಲ್ಲಿ ಮಾಡಿದ ಕಾರ್ಯವು ಭಾರತೀಯ ಇತಿಹಾಸವನ್ನು ಪರಿಶೀಲಿಸುವ ಪ್ರತಿಯೊಬ್ಬರಿಗೂ ಗೊತ್ತಿದ್ದ ಮಾತು. ಅಂದಿನ ಸಂಕಟಮಯ ಪರಿಸ್ಥಿತಿಯಲ್ಲಿ ಸ್ವಯಂಸೇವಕ ಸಂಘಟನೆಯ ವಿಷಯದಲ್ಲಿ ತಲೆ ಹಾಕಿ, ಅದಕ್ಕೆ ಮೂರ್ತಸ್ವರೂಪವನ್ನು ತಂದು ಕೊಟ್ಟವರು ಡಾ. ಹರ್ಡೀಕರರು. ಬಹಳವೇನು? ಡಾ. ಹರ್ಡೀಕರರಿಂದ ಪ್ರೇರಿತವಾದ ಹಿಂದುಸ್ತಾನೀ ಸೇವಾದಲವು ನಾಗಪುರ ಧ್ವಜ ಸತ್ಯಾಗ್ರಹ ಸಮಯಕ್ಕೇ ರೂಪಗೊಂಡಿತು. ಆಗ ರಾಷ್ಟ್ರದ ಮೂಲೆ ಮೂಲೆಗಳಿಂದಲೂ ಅಸಂಖ್ಯ ಸ್ವಯಂಸೇವಕರು ತಂಡ ತಂಡವಾಗಿ ಬಂಧನ ಸೆರೆಮನೆಗಳನ್ನು ಸ್ವಾಗತಿಸುತ್ತಿದ್ದರು. ಅದೊಂದು ಮಾದರಿಯ ಸಂಘಟಿತ ಆಂದೋಲನವಾಗಿದ್ದಿತು. ಇದೇ ಮಾದರಿಯ ಆಂದೋಲನವು ಮುಂದೆಯೂ ಸಂಘಟಿತವಾಗಿ ಹೆಚ್ಚು ಬಲಯುತವಾಗಿ ಸಾಗಬೇಕಿದ್ದರೆ ರಾಷ್ಟ್ರದ ಸ್ವಾತಂತ್ರ್ಯದ ಬಗ್ಗೆ ತ್ಯಾಗಮಾಡಲಿಚ್ಛಿಸುವಂಥ ಹಿಂದೀ ಯುವಕರಿಗೆ ಶಿಸ್ತು ಸಂಘಟನೆಗಳ ತರಬೇತಿಯು ತುಂಬ ಅವಶ್ಯಕವೆಂದೆನಿಸಿತು. ಅಮೇರಿಕನ್ ಯುವಕರ ಶಿಸ್ತಿನ ಕಾರ್ಯ ಪದ್ಧತಿಯ ಬಗ್ಗೆ ಗಾಢವಾಭಿಮಾನಗಳನ್ನು ತಾಳಿದ ಡಾ. ಹರ್ಡೀಕರರೂ ಆಗ ತಾನೇ ಅಲ್ಲಿಂದ ಮರಳಿಬಂದಿದ್ದರು. ಭಾರತೀಯ ಯುವಕ-ಯುವತಿಯರ ಶಿಸ್ತುಪೂರ್ಣವಾದ ಅಂಥದೊಂದು ಸಂಘಟನೆಯನ್ನು ಇಲ್ಲಿಯೂ ನಿರ್ಮಿಸಬೇಕೆಂದು ಅವರಿಗೆ ಕೂಡಲೆ ಹೊಳೆಯಿತು.

ನಾಗಪುರ ಸೆರೆಮನೆಯಿಂದ ಸತ್ಯಾಗ್ರಹಿಗಳ ಬಿಡುಗಡೆಯಾದೊಡನೆ ಡಾಕ್ಟರ ಹರ್ಡೀಕರರು ಈ ತಮ್ಮ ವಿಚಾರವನ್ನು ಕಾಂಗ್ರೆಸ್ಸ ನಾಯಕರೊಡನೆ ಚರ್ಚಿಸಿ ಅದರ ಆವಶ್ಯಕತೆಯನ್ನು ಅವರಿಗೆ ಬಿಂಬಿಸಲು ಕೂಡಲೆ ಮುಂದಾದರು. ಸಂಘಟನೆ, ಶಿಸ್ತು, ಮತ್ತು ತ್ಯಾಗ ಇವುಗಳಲ್ಲಿ ತರಬೇತಿಹೊಂದಿದ ತರುಣ ತರುಣಿಯರನ್ನೊಳಗೊಂಡ ಈ ಸಂಸ್ಥೆಯು ಕಾಂಗ್ರೆಸ್ಸಿನ ಒಂದು ಅಂಗವಾಗಬಹುದೆಂದೂ ಅವರೊಡನೆ ಚರ್ಚಿಸಿದರು. ಇದೇ ಹಿಂದುಸ್ಥಾನೀ ಸೇವಾದಲದ ಜನನ. ಮುಂದೆ ಅದು ಕೇವಲ ೫ ವರ್ಷಗಳಲ್ಲಿ ಇಡೀ ದೇಶದಲ್ಲೆಲ್ಲ ಪೇಶಾವರದಿಂದ ಕನ್ಯಾಕುಮಾರಿಯ ವರೆಗೆ ಅನೇಕ ಶಾಖೋಪಶಾಖೆಗಳುಳ್ಳ ಒಂದು ಪ್ರಚಂಡ ಸಂಘಟನೆಯಾಗಿಬಿಟ್ಟಿತು. ಸ್ತ್ರೀಯರು, ಪುರುಷರು, ಹುಡುಗರು, ಹುಡಿಗೆಯರು ಎಲ್ಲರೂ ಅಲ್ಲಲ್ಲಿ ಹಿಂದುಸ್ತಾನೀ ಸೇವಾದಲ ಸಂಘಟಕರಿಂದ ತರಬೇತಿ ಹೊಂದುತ್ತಿದ್ದರು. ಮುಂದಿನ ವಿವಿಧ ಹೋರಾಟದಲ್ಲಿ ಈ ಸ್ವಯಂಸೇವಕರು ತೋರಿದ ಶಿಸ್ತು ಹಾಗೂ ಮನೋದಾರ್ಢ್ಯಗಳು ಈ ಅವಿಚ್ಛಿನ್ನ ತರಬೇತಿಯ ಫಲವೆಂದು ನಿಃಸಂದೇಹವಾಗಿ ಹೇಳಬಹುದು.

ದೇಶದ ಸ್ವಾತಂತ್ರ್ಯ ಯುದ್ಧದಲ್ಲಿ ಡಾ. ಹರ್ಡೀಕರರು ಮತ್ತು ಅವರ ಪರಿಶ್ರಮದಿಂದ ಹುಟ್ಟಿದ ಹಿಂದುಸ್ಥಾನೀ ಸೇವಾದಲದ ಮ[illegible]ಳ ಶಿಕ್ಷಣಪಡೆದ ವೈಶಿಷ್ಟ್ಯಯುಕ್ತವಾ[illegible] ಸ್ವಯಂಸೇವಕರ ತಂಡಗಳು, ವಹಿಸಿದ [illegible]ರ್ಯದ ಪರಿಚಯವು, ಅದರಲ್ಲಿ ಅವ್ಯಾ[illegible]ವಾಗಿ ಭಾಗವಹಿಸಿದವರಿಗೆ ಸ್ಪಷ್ಟವಾಗಿ [illegible]ದೆ. ಆದರೆ ಡಾ. ಹರ್ಡೀಕರರು ದೇಶಕ್ಕಾ[illegible] ಸಲ್ಲಿಸಿದ ಸೇವೆಯ ಬಗ್ಗೆ ಪ್ರಸಿದ್ಧಿಯು [illegible]ರುವುದಿಲ್ಲ. ಅವರ ನಿಷ್ಕಾಮ ಸೇವೆಯ [illegible]ಗ್ಗೆ ಈ ಮಾತೇ ಬಲವಾದ ಸಾಕ್ಷಿಯಾಗಿ[illegible] ಅದೇ ಮಾತು, ಅವರಲ್ಲಿ ಆದರವುಳ್ಳವರೆ[illegible]ರೂ ಮುಂದೆ ಬಂದು ತಮ್ಮ ಪ್ರೀತಿ, ಕೃತ[illegible]ತೆ ಮತ್ತು ಪೂಜ್ಯ ಭಾವನೆಗಳನ್ನು ನ[illegible] ದೇಶದ ಉಚ್ಚಕೋಟಿಯ ವ್ಯಕ್ತಿಗೆ ಸಲ್ಲಿ[illegible]ವಂತೆ ಪ್ರಚೋದಿಸುತ್ತದೆ.

ಆದುದರಿಂದ ಮುಂಬರುವ ಮೇ ತಿಂ[illegible] ೭ನೆಯ ತಾರೀಖಿಗೆ ಅವರ ೬೧ನೆಯ [illegible] ದಿನವನ್ನು ನಮ್ಮ ರಾಷ್ಟ್ರೀಯ ಮುಖಂ[illegible] ಘನತೆಗೊಪ್ಪುವ ತೆರದಲ್ಲಿ ಆಚರಿಸಬೇ[illegible]ದು ಯೋಚಿಸಲಾಗಿದೆ. ಅಂದು ಇಡೀ ದ[illegible]ದಲ್ಲಿ ಸಭೆಗಳು, ಧ್ವಜವಂದನೆ, ಮೆರವ[illegible]ಗಳು ಉಚಿತ ರೀತಿಯಲ್ಲಿ ಸಾಗಬೇ[illegible] ಮುಖ್ಯ ಸಮಾರಂಭವು ಮುಂಬಯಿಯ[illegible]ಯೇ ಜರಗುವದಿದ್ದು ಆಗ ಡಾಕ್ಟರ ಹ[illegible]ಕರರಿಗೆ ಒಂದು ಗೌರವ ನಿಧಿಯನ್ನು [illegible]ಗೂ ಅಭಿನಂದನ ಗ್ರಂಥವನ್ನು ಅರ್ಪಿಸ[illegible]ದು ಗೊತ್ತಾಗಿದೆ.

ಡಾ. ಹರ್ಡೀಕರರ ಷಷ್ಟ್ಯಬ್ದಿಪೂರ್ತಿ[illegible] ಸಮಾರಂಭವು ಹುಬ್ಬಳ್ಳಿಯಲ್ಲಿಯೂ ಆಗ[illegible]ದಿದ್ದು ಅದಕ್ಕೆ ಸಂಬಂಧಪಟ್ಟ ಹಣವು [illegible]ಯೇ ಕಳುಹಿಸಲ್ಪಡುವುದು. ಅದಕ್ಕಾ[illegible] ಹಣವನ್ನು ಕಳಿಸುವವರು "ಡಾ. ಹರ್ಡೀ[illegible] ವಜ್ರಮಹೋತ್ಸವ ಸಮಿತಿ, ಜಯಹಿಂದ [illegible]ರ್ಯಾಲಯ ಕಿಲ್ಲೆ, ಹುಬ್ಬಳ್ಳಿ" ಈ ವಿ[illegible]ಕ್ಕೆ ಕಳಿಸುವ ಕೃಪೆಮಾಡಬೇಕು. ಹ[illegible] ದೊಡ್ಡದಿರಲಿ, ಸಣ್ಣದಿರಲಿ ಅತ್ಯಾದರ[illegible] ಸ್ವೀಕರಿಸಲ್ಪಡುವುದು. ಸುತ್ತು ಈ ಹ[illegible]ನ್ನು ಕೂಡಿಸಲು ಕೆಲವೇ ಅಧಿಕೃತ[illegible] ಖಾಸತ ಪುಸ್ತಕಗಳೊಡನೆ ಹಣಕೂಡಿ[illegible] ಬರುವರು. ಅವರು ಬಂದಾಗ ಸರ್ವ[illegible] ಸಹಾಯಮಾಡಬೇಕಾಗಿ ವಿನ್ನಪ.

### ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ.

ಕ್ರಮನಂಬ್ರ 49/1950

ಟಿ. ರಾಮಚಂದ್ರ ರಾವ್ —ವಾದಿ.

ಮತ್ತು

ಕೃಷ್ಣನ್ನಾಕ ಕೂಡಾ —ಪ್ರತಿವಾದಿರು.

ಇವರೊಳಗೆ

1ನೇ ಪ್ರತಿವಾದಿ-ಕೃಷ್ಣನ್ನಾಕ-ಸಂಗಡಗಾರ ಚೆನ್ನಯ್ಯನಾಕರ ಮಗ-ಮೂಡು ತೋನ್ಸೆ ಗ್ರಾಮದ ಮೂಡುಬೆಟ್ಟು.

ಸದರಿ 1ನೇ ಪ್ರತಿವಾದಿಗೆ—

ದಾವಾ ಆಸ್ತಿಯ ಮೂಲಗೇಣಿ ಬಾಬ್ತು 1ನೇ ಪ್ರತಿವಾದಿಯಿಂದ ವಾದಿಗೆ ಬಹಾ ಕಳದ ವ್ಯಯ ಸಂದರ ಲಾಗಾಯ್ತು ಸರ್ವಧಾರಿ ಸಂದರ ಅಂತ್ಯದ ವರೇಗಿನ ಗೇಣಿ ವ ಬಡ್ಡಿ ವಗೈರೆ ಬಗ್ಗೆ ರುಪಾಯಿ 162-10-11ಕ್ಕೆ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಸದರಿ ವ್ಯಾಜ್ಯವು ತಾರೀಕು 14-4-1950ಕ್ಕೆ ಪ್ರಥಮ ಶನಿಖಿ ಬಗ್ಗೆ ಇಡೋಣಾಗಿಯದೆ. ಅದಿನ್ನ 1ನೇ ಪ್ರತಿವಾದಿಯು ಸ್ವತಹಾ ಅಥವಾ ವಕೀಲರ ಮುಖಾಂತ್ರ ಕೋರ್ಟಿನ ಮುಂದೆ ಹಾಜರಾಗದೆಯಿದ್ರೆ 1ನೇ ಪ್ರತಿವಾದಿಯ ಗೈರ್ ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂದು ಈ ಮೂಲಕ ತಿಳಿಸೋಣಾಗಿಯದೆ.

**M. Damodar Kamath,**
Advocate for Plff.

ಉಡುಪಿ ದ. ಕನ್ನಡ
ತಾರೀಕು 1-4-1950


## — ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ಥ ಹೆಚ್ಚು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರಿಗೆಯಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೦ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

**ಆಯುರ್ವೇದ ಔಷಧಾಲಯ, ಗದಗ-ಸಿಟಿ.**

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ ವಿಜಾಪುರ— ಚನ್ನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್. ಅರ್ ಎಲ್ ಕಮಲಾಪುರ ಕೆಮಿಸ್ಟ, ಹಾವೇರಿ ಬ್ಯಾಡಗಿ

## ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

**೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ**

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉರುಕು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಭದಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದಿನ ದಿವಸ ಬೆಳಿಗ್ಗೆ ಒಂದೇ ಸಾರಿ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟಿ:-ಬಾಗಲಕೋಟಿ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

**ಆಯುರ್ವೇದ ಔಷಧಾಲಯ, ಗದಗ.**


### ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನ[illegible]

ಸ್ಮಾಲ್‌ನಂಬ್ರ 233/1[illegible]

R. E. P. 21/1[illegible]

ಮಂಮ್ಮುಂಞ ಯಾನೆ ಮಹಮ್ಮದ[illegible] —ವಾದಿ, ಅರ್ಜಿ[illegible]

ಮೊಯಿದಿನ್ ಕುಂಞ ಸಹಾ ,ಪ್ರತಿವಾದಿ[illegible]

1) ಮೊಯಿದಿನ್ ಕುಂಞಬ್ಯಾರಿ, (2) [illegible]ಲ್ಲಿ-ಹನ್ನನಾಲಿ ಮಮ್ಮದ ಬ್ಯಾರಿಗೆ ಬಿ[illegible]ಹುಮ್ಮನಲ್ಲಿ ಜನಿಸಿದ ಮಕ್ಕಳು. ಕಾಸರ[illegible]ದು ತಾಲೂಕು ತಳಂಗರೆ ಗ್ರಾಮದ[illegible]ವವರು.

ಸದ್ರಿ ಅಮ್ಲ್ಯಾಯಿಯಲ್ಲಿ ಪ್ರತಿವಾದಿ[illegible] ರಿಸ್ಪಾಂಡೆಂಟರ ಸ್ಥಿರಾಸ್ತಿಗಳು ಜಪ್ತಿ[illegible] ತಾ. 28-4-50ಕ್ಕೆ ಇಟ್ಟಿರುವ ಸಂಗ್ತಿ[illegible] ಸೋಣಾಗಿಯದೆ.

(*Sd*) **P. Ahmad**
Advocate for Petitio[illegible]

ಕಾಸರಗೋಡು 31-3-50


## ಋತುಃಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋ[illegible]ಗಿಸಿದರೆ ಹದತಪ್ಪ ಮುಟುಸ್ರಾವವಾಗಿ[illegible]ದು. ಹತೋಟಿಗೆ ಬರುವುದು. ಈ ಔ[illegible] ಸೇವನೆಯಿಂದ ತೀವ್ರ ಗುಣಹೊಂ[illegible]ಹುದು, ಯಾವ ಬಾಧಕವೂಯಿಲ್ಲ. [illegible]ರಾರು ಮಂದಿಗೆ ಖಾತ್ರಿ ಗುಣವಾ[illegible]ದಲೆ; ರೂ 3-; ಸ್ಪೆಶಲ್ ರೂ[illegible] ಅಧಿಕಾಧಿಕ ಸ್ಪೆಶಲ್ ರೂ 8-[ವಿ. ಹನ್ನೆರಡಾಣೆ ಪ್ರತ್ಯೇಕ.]

**Mrs. D. DEVEE**, F. DS. (N[illegible]
Tollygunge CALCUTTA.

ಸ್ಟಾಕಿಸ್ಟರು: ಶಹಾಕಂಪನಿ, ಮಂಗಳ[illegible]

# ಪೂರ್ವಕಾಲದಲ್ಲಿದ್ದ ನಮ್ಮ ಪ್ರಜಾಸಾಮ್ಯ ಸಂಸ್ಥೆಗಳು

(ಲೇಖಕರು:- ಕೊಪ್ಪದ ಶ್ರೀರಾಮಸ್ವಾಮಯ್ಯಂಗಾರ್ಯ)

ಒಂದುಸಲ ಮನುಷ್ಯ ಜೀವನ ಚರಿತ್ರೆಯಲ್ಲಿ ನಮ್ಮ ದೃಷ್ಟಿಯನ್ನು ಚೆನ್ನಾಗಿ ಹಿಂದಿನ ಕಾಲದ ಕಡೆಗೆ ಪ್ರಸರಿಸಿ ನೋಡಿದ್ದಾದರೆ ನಮಗೆ ಒಂದು ದಿವ್ಯವಾದ ಜ್ಯೋತಿಯು (ಬೆಳಕು) ದೃಗ್ಗೋಚರವಾಗುತ್ತದೆ. ಅದೇ ಇಂದಿನ ಪ್ರಜಾಪ್ರಭುತ್ವಾಚರಣೆಯ ಪ್ರಜಾಪ್ರಭುತ್ವಗಳು ಸರ್ವವ್ಯಾಪಕಗಳಾಗಿದ್ದ-ನಾವು ಅರಿತು ಕೊಳ್ಳಬೇಕಾದ-ಒಂದು ಪ್ರಾಮುಖ್ಯ ಸಂಸ್ಥೆಯಾಗಿರುತ್ತವೆ.

ಅಂದಿನ ಕಾಲದಲ್ಲಿ ಮನುಷ್ಯರ ಜೀವನಕ್ಕೆ ಪರಮಾವಧಿಯಾದ ವಿಜ್ಞಾನಕ್ಕೂ ರಾಜಕೀಯಗಳಿಗೂ ಸಂಬಂಧಿಸಿದ ಅಂಶಗಳೆಲ್ಲಾ ಈ ಬಗೆಯಾದ ಸಂಸ್ಥೆಗಳ ಮೂಲಕದಿಂದಲೇ ಪ್ರಜಾಸಾಮಾನ್ಯಕ್ಕೆ ಎಟಕುವವುಗಳಾಗಿದ್ದವು. ಇದೆಲ್ಲಾ ವೇದಕಾಲದ ಸ್ಥಿತಿಗತಿಗಳು.

ಈ ಸಮಿತಿಯಾದರೂ ಮೂರು ವರ್ಷಗಳಿಗೆ ಒಂದು ಸಲ ತಮ್ಮ ಪಾಲಕನನ್ನು (ಪ್ರೆಸಿಡೆಂಟನನ್ನು) ಆರಿಸಿ ಕೊಳ್ಳುತ್ತಿದ್ದಿತು. ಇದಕ್ಕೆ ದಾಖಲಾತಿಯಾಗಿ ಅಥರ್ವಣವೇದದೊಳಗಿನ-"ತ್ವಾಂವಿಶೋ ವೃಣತಾಂ." ೪, ೩, iii-ಈ ಪಂಗ್ತಿಯು ಕಂಡುಬರುತ್ತದೆ. "ನಿನ್ನನ್ನು ಪ್ರಜೆಗಳು ಆರಿಸಿಕೊಳ್ಳತಕ್ಕದ್ದು" ಎಂಬುದೇ ಇದರ ತಾತ್ಪರ್ಯ.

ಋಗ್ವೇದದಲ್ಲಿ ಈ ವಿಚಾರ -"ವಿಶಸ್ತ್ವಾಂ ಸರ್ವಾ ವಾಂಛಂತು," ೧೦, ೧೭೩. I ಈ ಪಂಗ್ತಿಯು ಗೋಚರಿಸುತ್ತದೆ. ಇದರ ಅರ್ಥವಾದರೂ ಮೇಲಿನದೇ- ಇಂತಹ ಪಂಗ್ತಿಗಳು ಇನ್ನೂ ಅನೇಕವಿರುತ್ತವೆ. ಅಂದಿನ ಈ ಬಗೆಯಾದ ಪ್ರಜಾಪಂಕ್ತಿಗೆ ಪ್ರವಾಸ ಶಿಕ್ಷೆಯನ್ನು ಅನುಭವಿಸಿ ಬಂದ ಅರಸನನ್ನು ಮತ್ತೆ ಆರಿಸಿಕೊಳ್ಳುವ ಹಕ್ಕು ಕೂಡಾ ಇದ್ದಿತು.

"ಸಮಾನೋ ಮಂತ್ರಸ್ಸಮಿತಿ ಸ್ಸಮಾನೀ" ಅಥರ್ವಣವೇದ ೬, ೬೪. "ಸಮಾನಂ ವ್ರತಂ ಸಹಚಿತ್ತ ಮೇಷಾಂ" ಋ. ವೇ. ೧೦, ೧೯೧, III. ಆಗಿನ ಸಮಿತಿಯು ಇರಬೇಕಾದ ಪದ್ಧತಿಯನ್ನು ಈ ಮಂತ್ರಗಳು ಈ ರೀತಿ ಆದೇಶಿಸುತ್ತಿರುವುವು, "ಸಮಿತಿಯಲ್ಲಿರುವ ಪ್ರಜೆಗಳೆಲ್ಲರೂ ಏಕಾಭಿಪ್ರಾಯದಿಂದ ಇರಬೇಕು". ಆ ಸಮಿತಿಯಲ್ಲಿ ಚರ್ಚೆಗೆ ಬಂದು ಯಾವುದೋ ಒಂದು ವಿಧದ ಆಕಾರವನ್ನು ಪಡೆಯಬಲ್ಲ ಅಂಶಗಳೆಲ್ಲಾ ಆ ಸಮಿತಿಯ ಕಾರ್ಯ ವಿಶೇಷಗಳಾಗಿದ್ದವು. ಆಗಲೂ ಕೂಡ ರಾಜಕೀಯಗಳೆಲ್ಲಾ ಇಂತಹ ಸಮಿತಿಗಳಲ್ಲಿಯೇ ಚರ್ಚಿಸಲ್ಪಡುತ್ತಾ ಇದ್ದುವೆಂಬ ಪರಮಾರ್ಥವು ಹೊರಬರುತ್ತದೆ.

ಅಂದಿನ ಕಾಲದಲ್ಲಿ ಸಮಿತಿಯ ಅಧ್ಯಕ್ಷನಾದ ಅರಸನು ಆ ಸಮಿತಿಯ ನಿರ್ಣೀತ ಕಾಲಗಳಲ್ಲಿ ಹಾಜರಾಗಿರುತ್ತಿದ್ದನು. ಅದೇ ಆತನ ಕರ್ತವ್ಯ ಕರ್ಮವಾಗಿತ್ತು. ಆ ರೀತಿ ಅಧ್ಯಕ್ಷನು ಸಮಿತಿಯಲ್ಲಿ ಹಾಜರಾಗದಿದ್ದರೆ ಅಂತಹವನು ಅಯೋಗ್ಯನಾಗಿ ಪರಿಗಣಿಸಲ್ಪಡುತ್ತಿದ್ದನು. ಋಗ್ವೇದದಲ್ಲಿಯ ಈ-"ರಾಜಾನಸತ್ಯಸ್ಸ-ಮಿತೀರಿಯಾನಃ" ೯೨. VI ಎಂಬುದು ಈ ವಿಷಯವನ್ನೇ ಉದ್ಘಾಟಿಸುತ್ತದೆ. ವೇದಕಾಲದ ದಿನದಲ್ಲಿ ಇದಕ್ಕೆ ಅನೇಕ ಉದಾಹರಣೆಗಳು ಹೊರತೋರಿಬರುತ್ತಿವೆ. ಛಾಂದೋಗ್ಯ ಉಪನಿಷತ್ತೇ ಒಂದು ದಾಖಲಾತಿಯಾಗಿರುತ್ತದೆ. ಶ್ವೇತಕೇತು-ಆರುಣೇಯ ಗೌತಮನು ತಾನು ಪಾಂಚಾಲದೇಶದ ಒಂದು ಸಮಿತಿಯನ್ನು ದರ್ಶಿಸಲು ಹೋಗಿದ್ದಾಗ್ಗೆ ಪ್ರವಾಹನ ಜೈವಲನೆಂಬ ಅಲ್ಲಿಯ ಅರಸನು ಆ ಸಮಿತಿಯಲ್ಲಿದ್ದಂತೆ ಮೇಲಿನ ಗ್ರಂಥವು ವ್ಯಕ್ತೀಕರಿಸುತ್ತಿದೆ.

ಇಂದಿನ ದಿನಗಳಂತೆಯೇ ಆಗಲೂ ಕೂಡಾ ಸಮಿತಿಗಳಲ್ಲಿ ವಕ್ತಾರರು (Speakers) ಇರುತ್ತಿದ್ದರು. ಸಮಯ ಬಂದಾಗಲೆಲ್ಲಾ ಆ ಸಮಿತಿಗಳು ಒಪ್ಪುವಂತೆ ಉಪನ್ಯಾಸ ಮಾಡುತ್ತಿದ್ದರು; ಆದರೆ ಈ ವಕ್ತಾರರು ಯಾರಿಂದಲಾಗಲಿ ಸೋಲಿಸಲ್ಪಡದಂತಹ ಕುಶಲಕಲಾಕೋವಿದರುಗಳಾದ ಚಾತುರ್ಯವಂತರಾಗಿದ್ದರು. ಅಂಥವರುಗಳಿಗೇ ಇಂತಹ ಪದವಿಯು ಲಭ್ಯವಾಗುತ್ತಿದ್ದಿತು. ಅಥರ್ವಣ ವೇದದಲ್ಲಿಯ – "ಯೇ ಸಂಗ್ರಾಮಾಸ್ಸಮಿತಿಯಸ್ತೇಷು ಚಾರುವದೇಮತೇ" ೭, ೧೨. I.: ೧೨. ೧. ೫೬-ಈ ಶ್ಲೋಕವು ಅದೇ ವಿಷಯವನ್ನು ಸೂಚಿಸುತ್ತದೆ. ಮೇಲ್ಕಂಡ ಉದಾಹರಿಸಲ್ಪಟ್ಟ ಶ್ವೇತಕೇತುವಿನ ಕಥೆಯಿಂದ ಆ ಸಮಿತಿಗಳಲ್ಲಿ ಬರಿಯ ರಾಜಕೀಯಗಳೇ ಅಲ್ಲದೆ ತದಿತರ ಚರ್ಚೆಗಳೂ ನಡೆಯುತ್ತಿದ್ದಂತೆ ತಿಳಿಯಬರುತ್ತದೆ.

ಶ್ವೇತ ಕೇತುವಾದರೂ ಒಬ್ಬ ಮಹಾ ಪಂಡಿತನಾಗಿದ್ದವನು, ಈತನಿಗೆ ೨೪ ವರ್ಷಗಳ ವಯಸ್ಸು ಬರುವ ಹೊತ್ತಿಗೇನೇ ಆತನು ವೇದಾಂತ ಶಾಸ್ತ್ರದಲ್ಲಿ ಉತ್ತಮ ಜ್ಞಾನಿಯಾದನು. ಈತನ ವಿದ್ಯಾರ್ಜನೆಯು ಮುಗಿಯುತ್ತಲೇ ಪಾಂಚಾಲ ಪರಿಷತ್ತಿಗೆ (ಬಹುಶ: ಅದು ಯೋಗ್ಯತಾ ಪತ್ರಿಕೆಗಳನ್ನು ಕೊಡುವ ಸಂಸ್ಥೆ) ಹೊರಟನು. ಆಗ ಅಲ್ಲಿ ಪಾಂಚಾಲ ಅಧಿಪತಿಯಾದ ಪ್ರವಾಹನ ಜೈವಲನು ಶ್ವೇತಕೇತುವಿಗೆ ಕೆಲವು ಪ್ರಶ್ನೆಗಳನ್ನು ಕೊಟ್ಟನು-ಪಾಪ! ಶ್ವೇತ ಕೇತುವು ಅವುಗಳಿಗೆ ಉತ್ತರ ಹೇಳದೆ ಹೋದನು. ಆಗಲಾ ಅರಸನು-"ಇಷ್ಟು ಮಾತ್ರ ಕೂಡಾ ತಿಳಿಯದವನಾದ ನೀನು ಪಂಡಿತನು ತಾನೆ ಹೇಗಾಗುತ್ತೀಯೆ?" ಎಂದು ಆತನನ್ನು ಒಂದು ಕೋಲಿನಿಂದ ಚುಚ್ಚಿದನು. ಈಗ ಆ ವಿಷಯವನ್ನು ಕುರಿತು ಚೆನ್ನಾಗಿ ಆಲೋಚಿಸಿ ನೋಡಿದ್ದಾದರೆ ಆ ಸಮಿತಿಗಳು ವಿದ್ಯಾರ್ಥಿಗಳಿಗೆ ಅವರವರ ಯೋಗ್ಯತಾಯೋಗ್ಯತೆಗಳನ್ನು ಅರಿತು ಡಿಗ್ರಿಗಳನ್ನು ಕೊಡುತ್ತಿರುವ ಇಂದಿನ ವಿಶ್ವವಿದ್ಯಾಲಯಗಳಂತಹ ಜಾತೀಯ ಸಾಹಿತ್ಯ ಪರಿಷತ್ತುಗಳಾಗಿ ಕೂಡಾ ವಿನಿಯೋಗಿಸಲ್ಪಡುತ್ತಾ ಇದ್ದವುಗಳೆಂದೂ, ಇಂದಿನ ಕಾಲದ ಮಾದರಿಯಾಗಿಯೇ ಅಂಥಾ ಸಂಸ್ಥೆಗಳಿಗೆ ಅಧ್ಯಕ್ಷನು (ಛಾನ್ಸಲರ್) ಅಲ್ಲಿಯ ಅರಸೇ ಆಗಿರುತ್ತಿದ್ದನೆಂದೂ, ಪ್ರಧಾನ ಪರೀಕ್ಷಾಧಿಕಾರತ್ವವು ಕೂಡಾ ಆತನಿಗೇನೆ ಇದ್ದಿತೆಂದೂ ಗೊತ್ತಾಗುತ್ತದೆ.

ಕೆಲವರು ಪಾಶ್ಚಾತ್ಯ ಪಂಡಿತರುಗಳು ಈ ಸಮಿತಿಯನ್ನು ಪೂರ್ವ ಕಾಲದಲ್ಲಿ ಯುರೋಪು ಖಂಡದಲ್ಲಿ ನೆಲೆಸಿದ್ದ ಸಮಿತಿಗಳೊಂದಿಗೆ ಹೋಲಿಸುತ್ತಾರೆ. ಆದರೆ ಅದೆಲ್ಲಾ ಅನುಚಿತವಾದದ್ದು. ವೇದ ಕಾಲದ ಸಮಿತಿಗಳು ದಿವ್ಯತಮ ನಾಗರೀಕತೆಯಿಂದ ತಲೆದೂಗುತ್ತಾ ಉತ್ತಮ ಅಭ್ಯುದಯ ಸಂಸ್ಥೆಗಳಾಗಿದ್ದವು.

ಯುರೋಪು ಖಂಡದೊಳಗಿನ ಜರ್ಮಾನಿಕ ಪ್ರಜಾಪರಿಷತ್ತುಗಳು ಭಾರತೀಯ ಪರಿಷತ್ತುಗಳ ಮಾದರಿಯಾಗಿದ್ದ ವಿದ್ಯಾಸಂಸ್ಥೆಗಳಲ್ಲ. ಅವುಗಳಲ್ಲಿ ಕೆಲವುಮಂದಿ ವಿದ್ಯಾವಂತರುಗಳು ಕೂಡ ಇರುತ್ತಿದ್ದರು. ಇಲ್ಲಿ ಆ ರೀತಿ ಇರಲಿಲ್ಲ. ಉತ್ತಮ ಕುಶಾಗ್ರಬುದ್ಧಿಗಳಾದ ಪಂಡಿತರುಗಳಿಂದಲೂ ರಾಜಕಾರ್ಯ ದುರಂಧರರುಗಳಿಂದಲೂ ಪರಿಷತ್ತು ಕೂಡಿದ್ದಿತು. ಈ ಎರಡಕ್ಕೂ ಹೋಲಿಕೆಯು ಎಲ್ಲಿ? ನರಕವು ಎಲ್ಲಿ- ದೇವಲೋಕವೆಲ್ಲಿ?

ಇನ್ನೊಂದು ವಿಷಯವೇನೆಂದರೆ-ಆ ಸಮಿತಿಗಳಿಗೆ ಅಧ್ಯಕ್ಷರು ಕೂಡಾ ಇದ್ದರು. ಈ ವಿಷಯವನ್ನು ಈ ೧೧೧. ೧೩.೪ ಪಾರಸ್ಕರ ಗೃಹ್ಯ ಸೂತ್ರವು ಸ್ಪಷ್ಟವಾಗಿ ವಿವರಿಸುತ್ತದೆ. ಆ ಸಭಾಪತಿಗೆ ಯಾರೂ ಅಲ್ಲವೆನ್ನುವಷ್ಟು ಶಕ್ತಿಯು ಇದ್ದಿತು.

ಆಗಿನ ಕಾಲದಲ್ಲಿ ಗ್ರಾಮಾಧಿಕಾರಿಗಳಿಗೆ ಗ್ರಾಮಣಿ ಎಂಬ ಪಾರಿಭಾಷಿಕ ಪದವು ವ್ಯವಹಾರದಲ್ಲಿದ್ದಿತು. ಅವರು ಗ್ರಾಮಗಳಿಗೆ ಬಹು ಮುಖ್ಯರಾಗಿದ್ದರು. ಆ ರಾಜ್ಯದ ಅರಸನ ಪಟ್ಟಾಭಿಷೇಕ ಸಮಯದಲ್ಲಿ ಗ್ರಾಮಗಳ ಪರವಾಗಿ ಪ್ರತಿನಿಧಿಗಳಾಗಿ ಆ ಗ್ರಾಮಣಿಗಳೇ ಹಾಜರಾಗುತ್ತಿದ್ದುದು ಒಂದು ವಿಶೇಷ ಆಚಾರ. ಅದೇ ರೀತಿ ವಾಣಿಜ್ಯ ವರ್ಗದ ಪ್ರತಿನಿಧಿಗಳು ಕೂಡಾ ಹಾಜರಾಗುತ್ತಿದ್ದುದು ವಾಡಿಕೆಯಾಗಿದ್ದಿತು. ಈಗ ಪ್ರಪಂಚದಲ್ಲೆಲ್ಲಾ ಜಾರಿಯಲ್ಲಿರುವ ಪ್ರಾತಿನಿಧ್ಯ ಪದ್ಧತಿಯನ್ನು ನಮ್ಮ ಮಾತೃಭೂಮಿಯು ಆ ವೇದಯುಗದಲ್ಲಿಯೇ ಆಕಳಿಸಿಕೊಂಡಿದ್ದಿತು. ಅಂದರೆ ಇದಕ್ಕೆಲ್ಲಾ ಜನ್ಮಸ್ಥಾನವು ಗೋರೂಪಧಾರಿಣಿಯಾದ ಭಾರತಭೂಮಿಯೇ.

ಅಂದಿನ ದಿನಗಳಲ್ಲಿ ಪ್ರತಿ ಗ್ರಾಮದಲ್ಲಿಯೂ ಒಂದೊಂದು ಪರಿಷತ್ತು ಇದ್ದಿತು. ಸ್ಥಳೀಯ ಆರ್ಥಿಕ,ಸಾಮಾಜಿಕ ನ್ಯಾಯಪರಿಪಾಲನೆ ಇವುಗಳೆಲ್ಲಾ ಈ ಪರಿಷತ್ತಿನಲ್ಲಿಯೇ ಪರಿಷ್ಕರಿಸಲ್ಪಡುತ್ತಿದ್ದಿತು. ಅಂಥವುಗಳೇ ಇಂದಿನ ಗ್ರಾಮ ಪಂಚಾಯಿತಿ ಸಂಸ್ಥೆಗಳು. ಈ ಗ್ರಾಮ ಪಂಚಾಯಿತಿಗಳೆಲ್ಲಾ ಅಂದಿನ ಕಾಲದ ತಲೆಮಾರಿನವುಗಳು.

ಸಾಧಾರಣವಾಗಿ ಗ್ರಾಮವಾಸಿಗಳಲ್ಲಿ ಹಿರೇಮಣಿಯಾದವನು ಗ್ರಾಮದ ಹೆಸರಿನಿಂದ ವ್ಯವಹರಿಸಲ್ಪಡುತ್ತಾ ಇದ್ದುದು ಕೂಡಾ ಅಂದಿನ ಕಾಲದ ಆಚಾರವು, ಅಂದರೆ ಮನಸಾ ಒಂದು ಗ್ರಾಮಕ್ಕೆ ಗ್ರಾಮಣಿಯಾಗಿ ನಿಯಮಿತನಾದ ವ್ಯಕ್ತಿಯ ಹೆಸರು ದೇವದತ್ತನಾದರೆ ಆ ಗ್ರಾಮವಾಸಿಗಳೆಲ್ಲರೂ ದೇವದತ್ತರೆಂದು ಕರೆಯಲ್ಪಡುತಿದ್ದರು. ಈ ವಿಷಯವು ಕಾಶಿಕಾವೃತ್ತಿಯಲ್ಲಿಯ-"ದೇವದತ್ತೋ ಗ್ರಾಮಣಿ ರೇಷಾಂತ ಇಮೇ ದೇವದತ್ತಕಾಃ" ೫,೩, ೧೧೨- ಎಂಬುದಾಗಿ ತಿಳಿಸಲಾಗಿದೆ.

ಕೇಂದ್ರ ಶಾಸನ ಸಭೆಯು ಒಂದು ಯುದ್ಧವನ್ನು ಪ್ರಕಟಿಸಲಿಕ್ಕಾದರೂ ಎದುರಾಳಿಯೊಂದಿಗೆ ಸಂಧಿ (ರಾಜೀ) ಮಾಡಿಕೊಳ್ಳಲಿಕ್ಕಾದರೂ ಗ್ರಾಮಪರಿಷತ್ತುಗಳ ಅನುಮತಿಯನ್ನು ಪಡೆಯಬೇಕಾಗಿದ್ದಿತು- ಈ ವಿಷಯವಾಗಿ ತೈತ್ತಿರೀಯ ಸಂಹಿತೆಯಲ್ಲಿಯ ii ೧. ೮. ೪. ಪಂಗ್ತಿಯು ತಿಳಿಸುತ್ತದೆ. ಪ್ರಜಾಪ್ರಭುತ್ವ ಸಂಸ್ಥೆಯಾದ ಆ ಸಮಿತಿಯ ನಿರ್ಮಾಣಕ್ಕೆ ಅಂದಿನ ದಿನಗಳಲ್ಲಿ ಕೇವಲ ಗ್ರಾಮಗಳೇ ಮುಖ್ಯಗಳಾದ ಅಸ್ತಿಭಾರಗಳೆಂಬ ತತ್ವವು ಈಗ ತಿಳಿಯಬರುತ್ತಿದೆ.

ಒಂದು ದೇಶಕ್ಕೆ ಹಳ್ಳಿಗಳು ಬುಡಸ್ವರೂಪಗಳೆಂಬುದು ಈಗ ಚೆನ್ನಾಗಿ ಹೊರಬಂದಿರುತ್ತದೆ. ಅದರಿಂದಲೇ ಗಾಂಧಿಜೀಯವರು ಎಲ್ಲೆಲ್ಲೂ ಗ್ರಾಮಾಭಿವೃದ್ಧಿಯ ಸಜೀವ ಕಾರ್ಯಾಚರಣೆಯು ಕಾರ್ಯವಾಗಬೇಕು ಎಂದು ಕೂಗಾಡುತ್ತಾ ಅದಕ್ಕಾಗಿ ಜೀವಾವಧಿ ಶ್ರಮಿಸುತ್ತಾ ಇದ್ದರು

ಯಾವ ಬಗೆಯ ಬಾಲಾರಿಷ್ಟಗಳನ್ನೂ ಗಂಡ ಗಂಡಾಂತರಗಳನ್ನೂ ಪರಿಕಿಸದೇನೆ ಸಂಪೂರ್ಣ ಆರೋಗ್ಯದಿಂದ ಶತಮಾನ-ಸಹಸ್ರಾರು ವರ್ಷಗಳ ಕಾಲ ನಿರಾತಂಕವಾಗಿ ಈ ಸಮಿತಿಯು ಭರತಖಂಡದಲ್ಲಿ ಸಂಚರಿಸಲ್ಪಟ್ಟಿತು. ಅಂದರೆ ವೇದಯುಗವೆಲ್ಲಾ ನಿರಾಕ್ಷೇಪವಾಗಿ ಪ್ರಕಾಶಿಸಿತೆಂಬುದೇ ಇದರ ಭಾವ,

ಈ ಸಮಿತಿಯು ಪ್ರಜಾಪತಿಯ ಕುಮರಿಯೆಂದು ಹೇಳಲಾಗಿದ್ದಿತು. ಆಗ ಪ್ರಜಾಪತಿಗೆ ಎಷ್ಟು ಆಯುರ್ದಾಯವೋ ಈಕೆಗೂ ಕೂಡ ಅಷ್ಟು ಪೂರ್ಣಾಯುಸ್ಸೇ ಎಂದು ನಮ್ಮ ವಾಚಕರು ನಿಸ್ಸಂಶಯವಾಗಿ ನಿರ್ಣಯಿಸಬಹುದಾಗಿದೆ.

ಜಾತಕ ಕಥೆಗಳ ಯುಗಾರಂಭದ ಹೊತ್ತಿಗೆ, ಅಂದರೆ ಕ್ರಿ. ಪೂ. ೬೦೦ನೇ ಇಸ್ವಿಯ ಹೊತ್ತಿಗೆ, ಈ ಸಮಿತಿಯು ವಿಶ್ರಾಂತಿ ಗೃಹಕ್ಕೆ ಸೇರಿಕೊಂಡಂತೆ ದಾಖಲಾತಿಗಳು ತಿಳಿಯಬರುತ್ತವೆ.

## ಪ್ರಕಟಣೆ

ದಕ್ಷಿಣ ಕನ್ನಡ ಜಿಲ್ಲಾ ಉಡುಪಿ ತಾಲೂಕು ಪೆಗ್ಗುಂಜೆ ಗ್ರಾಮದ ಸ್ಥಾಪನಾ ನಂಬರ 521 ನೇ ಮಂದಾರ್ತಿ ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ದೇವಸ್ಥಾನದ ಟ್ರಸ್ಟಿಗಳು ಜಾಹೀರ ಮಾಡುವದೇನಂದರೆ:—

ಮೇಲ್ಕಂಡ ದೇವಸ್ಥಾನದ ಗರ್ಭಗೃಹದ ಜೀರ್ಣೋದ್ಧಾರ ಮಾಡಬೇಕಾಗಿ ನಿಶ್ಚಯಿಸಿ, ಮಾನ್ಯ ಶ್ರೀ ಮದ್ರಾಸ H.R.E. ಬೋರ್ಡ ಕಮಿಶನರರವರ ನಂಬ್ರ 4238 Dated 11-8-49ನೇ ಓರ್ಡರ ಹೊಂದಿ ಮಹಾಜನರ ಸಹಾಯವನ್ನು ಅಪೇಕ್ಷಿಸಿ ಊರು ಪರಊರುಗಳಿಗೆ ಟ್ರಸ್ಟಿಗಳು ಬರತಕ್ಕವರಿದ್ದಾರೆ. ಕಾರಣ ಮಹಾಜನರು ಟ್ರಸ್ಟಿಗಳಾದ ನಮ್ಮ ಪೈಕಿ ಯಾರಾದರೂ ಬಂದಲ್ಲಿ ಸ್ವಹಸ್ತ ಪರಹಸ್ತಗಳಿಂದ ತಮ್ಮಿಂದ ಕೊಡಿದಷ್ಟು ಹೆಚ್ಚಿನ ಹಣವನ್ನು ಸಹಾಯ ನಿಧಿಯಾಗಿ ಒದಗಿಸಿ ಕೊಟ್ಟು ಶ್ರೀದೇವಿಯ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ವಿನಂತಿ.

ಮತ್ತು ದೇವಸ್ಥಾನದ ಮೊಹರೂ ಟ್ರಸ್ಟಿಗಳ ದಸ್ತತೂ ಇರುವ ಡುಪ್ಲಿಕೇಟ ರಶೀದಿಯ ಮೊರತು ಹಣಗಳನ್ನು ಕೊಡಕೂಡದಾಗಿ ಈ ಮೂಲಕ ಜಾಹೀರುಮಾಡಿಕೊಂಡಿರುತ್ತೇವೆ.

**ಶ್ರೀ ಶೇಷ ಹೆಗ್ಗಡೆ, ಮೆನೇಜಿಂಗ ಟ್ರಸ್ಟಿ**
**" ರಾಮಂಣ ಅಡಿಗ } ಜೋಂಟ**
**" A.M. ಶ್ರೀನಿವಾಸ ರಾವ್ } ಟ್ರಸ್ಟಿ.**
ಮಂದಾರ್ತಿ ದೇವಸ್ಥಾನ,
**ತಾರೀಕು 15-3-1950.**


*Nambiar's*

**ARYA VAIDYA SALA**

**UDIPI**

*Ideal House for Ayurvedic Treatment.*

T. N. Kelu Nambiar,
*Vaidya.*

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

# ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ,ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣಭಟ್.

For up-to-date Lodging & Boarding

**ROYAL MAHAL,**

**UDIPI, S. Kanara.**

# ವಿಚಾರ ಸ್ವಾತಂತ್ರ್ಯ

ಲೇ:— ಶ್ರೀ ಬಿ. ಡಿ. ಗಣಪತಿ.

ಪರದಾಸ್ಯತೆಯಿಂದಿರೆ ಸತ್ತಂತೆ ಕತ್ತಲು ಕವಿದಂತೆ. ಪರದಾಸ್ಯದಲ್ಲಿ ಸರ್ವದಿಶೆಯಲ್ಲೂ ಬಂಧನಗಳು ತುಂಬಿರುತ್ತವೆ. ಅಲ್ಲಿ ಆರ್ಥಿಕ ಸ್ವಾತಂತ್ರ್ಯವಿಲ್ಲ. ರಾಜಕೀಯ ಸ್ವಾತಂತ್ರ್ಯವಿಲ್ಲ. ಪ್ರಚಾರ ಸ್ವಾತಂತ್ರ್ಯವಿಲ್ಲ. ಕಡೆಗೆ ವಿಚಾರ ಸ್ವಾತಂತ್ರ್ಯವೂ ಇಲ್ಲದಾಗುತ್ತದೆ. ಭರತಖಂಡವು ಈ ಪರದಾಸ್ಯತೆಯಲ್ಲಿದ್ದು ಕಷ್ಟಪಟ್ಟಿತು. ಕಡೆಗೊಮ್ಮೆ ಮಹಾ ವಿಭೂತಿಗಳ ಪಥದರ್ಶನದಿಂದ ಭಾರತವು ಸ್ವತಂತ್ರನಾಯಿತು. ಸ್ವತಂತ್ರ ಭಾರತವು ಪ್ರಜಾ ಪ್ರಭುತ್ವ ರಾಷ್ಟ್ರವೆಂದೂ ಸಾರಲ್ಪಟ್ಟಿತು.

ನಮಗೆ ಇನ್ನೂ ಆರ್ಥಿಕ ಸ್ವಾತಂತ್ರ್ಯ ಬಂದಿಲ್ಲವೆಂಬುದು ನಿಜ. ಶತಮಾನಗಳ ಬ್ರಿಟಿಷ್ ಆಳಿಕೆಯ ಭಾರದಲ್ಲಿ ಹತ್ತಿಕ್ಕಲ್ಪಟ್ಟ ನಾವು ನೈಜಸ್ವಾತಂತ್ರ್ಯವನ್ನು ಕರಗತ ಮಾಡಿಕೊಳ್ಳಲು ಇನ್ನೂ ಸಮಯ ಬೇಕು. ಬೇರೊಂದು ಮಂದ ಭಾರದಲ್ಲಿ ಬಗ್ಗಿದ ಗಿಡವು ಮಂದ ಭಾರ ತೆಗೆದ ನಂತರವೂ ನೇರವಾಗಿ ಬೆಳೆಯಲು ಸಮಯ ತೆಗೆದುಕೊಳ್ಳುವದಿಲ್ಲವೇ? ಹಾಗೆಯೇ ಒತ್ತಿ ಹಿಡಿಯಲ್ಪಟ್ಟಿದ್ದ ಸ್ವಾತಂತ್ರ್ಯ ವೃಕ್ಷವು ಚಿಗುರಿ ಬೆಳೆಯಲು ಸಮಯ ಬೇಕು.

ಸ್ವಾತಂತ್ರ್ಯ ಬಂದೊಡನೆಯೇ ಸರ್ವವೂ ತನ್ನ ಬಾಗಿಲಿಗೆ ಬಂದು ಬೀಳಬೇಕೆಂಬ ಆಶಿಸುವವರು ಇನ್ನೂ ಇದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ಬಂದಾಕ್ಷಣ ಪೂರ್ಣಸದಲ್ಲಿ ಕಾಸು ಹುಟ್ಟಿಗದು; ಇಲ್ಲವೇ ಕಣಜದಲ್ಲಿ ಕಾಳು ತುಂಬದು. ಸೂರ್ಯನು ಪೂರ್ವ ದಿಕ್ಕಿನಲ್ಲಿ ಉದಯಿಸಿ ಇಡೀ ಜಗತ್ತಿಗೇ ಬೆಳಕಾದರೂ ಪ್ರತಿ ಮನೆಯ ಒಳಹೇಗೆ ಅದರಿಂದ ಬೆಳಕು ಹರಿದಂತೆ ಅದೇ ರೀತಿ ... ಪ್ರತ್ಯೇಕ ... ಭಾರತೀಯನ ಜೀವನ ಅದರಿಂದ ಪರಿಪೂರ್ಣವಾಗಿಲ್ಲದೆ ಉತ್ತಮಗೊಳ್ಳಲಾರದು. ಮನೆಯ ಒಳ ಉರಿಯಬೇಕಾದರೆ ಪ್ರತ್ಯೇಕ ಹಣತೆ ಹೇಗೆ ಪ್ರತಿ ಮನೆಗೆ ಅವಶ್ಯವೋ ಅದೇ ರೀತಿ ಸ್ವಾತಂತ್ರ್ಯವು ಅರ್ಥಪೂರ್ಣವಾಗಬೇಕಾದರೆ ಪ್ರತಿ ವ್ಯಕ್ತಿಯೂ ತನ್ನ ಪಾಲಿನ ಕರ್ತವ್ಯ ಮಾಡಬೇಕು.

ದೇಶವು ಸ್ವತಂತ್ರವಾಯಿತು ಎಂಬುದಕ್ಕೆ ಯೋಗ್ಯ ಅರ್ಥ ದೊರೆಯಬೇಕಾದರೆ ಪ್ರಜೆಗಳು ಸ್ವತಂತ್ರರಾಗಬೇಕು. ಗುಲಾಮಬುದ್ಧಿ, ಪರಾನುಕರಣೆ, ಸ್ವಾರ್ಥ, ಸಂಕೀರ್ಣತೆಗಳು ಪ್ರಜೆಗಳಲ್ಲಿದ್ದರೆ ಆ ದೇಶ ಸ್ವತಂತ್ರವೆನ್ನುವದು ಅಪಾರ್ಥವಾದೀತು. ಸ್ವತಂತ್ರ ಮನೋಭಾವನೆ ಪ್ರಜೆಗಳಿದ್ದರೆ ಇಂದಲ್ಲ; ನಾಳೆಯಾದರೂ ದೇಶವು ಉತ್ತುಂಗ ಶಿಖರಕ್ಕೇರಿ ಶೋಭಿಸದಿರದು. ಅದ್ದರಿಂದ ದೇಶದ ಘನತೆ ಹಿರಿಮೆಗಳು ಜನತೆಯ ಕೈಯಲ್ಲೇ ಇವೆ.

ಸ್ವತಂತ್ರ ದೇಶದ ಪ್ರಜೆಗಳಾದ ನಾವು ಜವಾಬ್ದಾರಿಯನ್ನರಿತು ದುಡಿಯಬೇಕು. ನಮ್ಮ ಆರ್ಥಿಕ ಸ್ವಾತಂತ್ರ್ಯವು ಭದ್ರ ತಳಹದಿಯಲ್ಲಿ ನಿಲ್ಲಬೇಕಾದರೆ ದುಡಿಯದೆ ಗತ್ಯಂತರವಿಲ್ಲ. ಆದರೆ ಇದು ಸಾವಧಾನದಿಂದ ಆದರೂ ದೇಶಕ್ಕೆ ಹೆಚ್ಚಿನ ತೊಂದರೆಯಿಲ್ಲ. ಆದರೆ ನಮ್ಮಲ್ಲಿ ವಿಚಾರ ಸ್ವಾತಂತ್ರ್ಯ ಮಾತ್ರ ಇಂದಿನಿಂದಲೇ ಬೇಕು. ನಮ್ಮ ಕುರುಡು ನಂಬುಗೆ, ಮೂಢ ಭಕ್ತಿಗಳನ್ನು ಬಿಡಬೇಕು. ಪ್ರತಿಯೊಂದನ್ನೂ ವಿಚಾರದ ವೇದಿಕೆಯಲ್ಲಿ ಪರಿಶೀಲಿಸಿ ಸತ್ಯವೆಂದು ತೋರಿದ್ದನ್ನು ಮಾಡಬೇಕು. ಈ ವಿಚಾರ ಸ್ವಾತಂತ್ರ್ಯವಿಲ್ಲದ ಜನರಿಗೆ ಯಾವ ಸ್ವಾತಂತ್ರ್ಯವಿದ್ದರೂ ಅವರು ಸ್ವತಂತ್ರರೆನಿಸರು. ಸ್ವತಂತ್ರನೆನಿಸಿದರೂ ಹೆಚ್ಚು ಕಾಲ ಅಸ್ತಿತ್ವವನ್ನು ಉಳಿಸಿಕೊಳ್ಳಲಾರರು.

ಬೇರಾವ ಮೂಢ ನಂಬಿಕೆಯಿಲ್ಲದಿದ್ದರೂ ಗಾಂಧೀಜಿ ಹಾಗೆ ಹೇಳಿದ್ದಾರೆ, ನೆಹರೂ ಹೀಗೆ ಹೇಳಿದ್ದಾರೆ ಎಂದು ಅದನ್ನು ವಿಚಾರ ಮಾಡದೆ ಒಪ್ಪುವ, ತಮ್ಮ ಭಾಷಣಗಳಲ್ಲಿ ಅವರು ಹೇಳಿದುದನ್ನು ತಮ್ಮ ಸಮರ್ಥನೆಗೆ ಉಪಯೋಗಿಸುವ ಬುದ್ಧಿ ನಮ್ಮಲ್ಲಿ ಬಹಳ. ನಮ್ಮ ಈ ನಂಬಿಕೆಗೆ ದ್ರೋಹವಾಗದ ರೀತಿಯಲ್ಲಿ ನೆಹರೂ ಪರೇಲಂಛರವರು ವರ್ತಿಸುತ್ತಿದ್ದಾರೆ ನಿಜ. ಆದರೆ ಉಳಿದವರ ಸ್ಥಿತಿ? ಆದ್ದರಿಂದ ನಿಜವಾದ ದೇಶದ ಪ್ರಜೆಯು ತನ್ನ ಅಭಿಪ್ರಾಯವನ್ನು ಈ ರೀತಿ ವ್ಯಕ್ತಿಗಳ ಅಭಿಪ್ರಾಯಕ್ಕೆ ಗಂಟು ಮಾಡಕೂಡದು. ನಿಜವಾದ ಪ್ರಜಾಪ್ರಭುತ್ವದಲ್ಲಿ ಪ್ರಜಾಮತವು ಸದಾಕಾಲ ವಿಚಾರ ಜಾಗೃತಿಯಲ್ಲಿರಬೇಕೇ ವಿನಹ ಎಂಥಾ ಬಲವಾದ ಗೂಟವಾದರೂ ತನ್ನನ್ನು ತಾನೇ ಅದಕ್ಕೆ ಕಟ್ಟಿ ಹಾಕಿಕೊಳ್ಳಬಾರದು. ಗೂಟಕ್ಕೆ ಕಟ್ಟಿದ ದನಕ್ಕೆ ಯಾವ ರೀತಿ ಪೂರ್ಣ ಸ್ವಾತಂತ್ರ್ಯವಿರದೋ ಅದೇ ರೀತಿ ಯಾವನೇ ಒಬ್ಬ ಮುಂದಾಳುವಿನ ಅಭಿಪ್ರಾಯವೇ ಸರಿ ಎಂಬ ವೀರ ಪೂಜೆಗೆ ಬಲಿಯಾದವರ ವಿಚಾರಧಾರೆಯೂ ವಿಕಾಸಗೊಳ್ಳಲು ಸಾಧ್ಯವಿಲ್ಲ. ನ್ಯಾಯ, ನೀತಿ, ಇವುಗಳು ಯಾವ ವ್ಯಕ್ತಿಗೂ ಮುಡಿಪಾದ ಪಕ್ಕಿನ ವಸ್ತುಗಳಲ್ಲ. ಬಡ ಭಿಕ್ಷುಕನ ಮಾತಿನಲ್ಲಿ ಸತ್ಯದ ಧ್ವನಿಗಳು ಹೊಳೆಯುವದನ್ನು ನಿಜವಾದ ವಿಚಾರ ಸ್ವಾತಂತ್ರ್ಯವಿರುವವನು ಕಾಣುವನು. ಆದ್ದರಿಂದ ಮುಂದಾಳುಗಳು ಹೇಳಿದ್ದಾರೆ ಎಂದು ತಮ್ಮ ವಿಚಾರ ವಾಹಿನಿಯನ್ನು ಹರಿಯಗೊಡದ ಮೂಢ ಭಕ್ತಿಯಿಂದ ಯಾರೂ ವರ್ತಿಸಬಾರದು. ಯಾರು ಏನೇ ಹೇಳಲಿ, ಕಡೆಗೆ ಬ್ರಹ್ಮನೇ ಬಂದು ಹೇಳಿದರೂ ಅವರು ಹೇಳಿದ ಮತವನ್ನು ಮತಿಯ ಒರೆಗಲ್ಲಿಗೆ ಹಚ್ಚಿ ಅದು ಯೋಗ್ಯವಾಗಿದ್ದರೆ ಮಾತ್ರ ಅಂಗೀಕರಿಸಬೇಕು.

ಜಗತ್ತಿನ ಯಾವ ಪ್ರಾಣಿಗಳಿಗೂ ವಿಚಾರ ಶಕ್ತಿ ಇಲ್ಲ. ಮನುಷ್ಯನೊಬ್ಬನಿಗೇ ಅದು ಕೊಡಲ್ಪಟ್ಟಿದೆ. ಈ ಬುದ್ಧಿಯನ್ನು ಮುಂದಾಳುಗಳೆನ್ನುವವರಿಗೆ ಮಾತ್ರ ದೇವರು ಕೊಟ್ಟಿಲ್ಲ; ಪ್ರತಿಯೊಬ್ಬ ವ್ಯಕ್ತಿಗೂ ಪ್ರತ್ಯೇಕ ತಲೆ ಇದೆ. ತಲೆಯಲ್ಲಿ ಮಿದುಳಿದೆ. ವಿಚಾರ ಮಾಡುವ ಶಕ್ತಿಯಿದೆ. ಈ ಶಕ್ತಿಯ ಸದುಪಯೋಗ ಮಾಡುವದರಲ್ಲಿಯೇ ಮಾನವನ ಘನತೆ ಇದೆ. ಇಂದು ಭಾರತಕ್ಕೆ ದೊರೆತಿರುವ ಪ್ರಜಾಪ್ರಭುತ್ವ ರಾಜ್ಯಾಡಳಿತದ ಉತ್ಕರ್ಷ ಯಾ ಅವನತಿಗಳು ಇದರ ಸದುಪಯೋಗದ ತಳಹದಿಯಲ್ಲೇ ನಿಂತಿವೆ.

ಪ್ರಕೃತ ಭರತ ಖಂಡವನ್ನು ಪರಿಶೀಲಿಸಿದರೆ ಈ ವಿಚಾರ ಸ್ವಾತಂತ್ರ್ಯವನ್ನು ಪಡೆದವರು ಅತಿ ವಿರಳವೆಂದು ವಿಷಾದದಿಂದ ಹೇಳಬೇಕಾಗಿದೆ. ಒಂದೋ ಮುಂದಾಳುಗಳ ವೀರ ಪೂಜೆಯಲ್ಲಿ, ಇಲ್ಲವೇ ಪಕ್ಷಗಳ ತತ್ತ್ವ ಸಾಧನೆಯಲ್ಲಿ ತಮ್ಮ ವಿಚಾರ ಶಕ್ತಿಯನ್ನು ಕಡೆಗಣಿಸಿ ಕುರುಡು ಬುದ್ಧಿಯಿಂದ ಕುರಿಗಳಂತೆ ವರ್ತಿಸುವ ಇವರನ್ನು ನೋಡಿದರೆ ಸ್ವಾತಂತ್ರ್ಯ ಎಲ್ಲಿ, ಯಾರಿಗೆ ಬಂದಿದೆಯೆಂದು ಪ್ರಶ್ನಿಸಬೇಕಾಗುವದು. ದೇಶದ ಆಧಿಕಾರ ನಡೆಸುವ ಕಾಂಗ್ರೆಸ್ ಪಕ್ಷದಲ್ಲಿ ಪ್ರತಿ ಪ್ರಾಂತದಲ್ಲೂ ಬಿರುಕುಗಳಿವೆ. ಇದರಿಂದಾಗಿ ಒಳಪಂಗಡಗಳುಂಟಾಗಿವೆ. ಈ ಒಡಕುಗಳು ವಿಚಾರದ ಜನತೆಯ ಹಿತದ ದೃಷ್ಟಿಯಿಂದ ಹುಟ್ಟಿದವಾಗಿರದೆ ದ್ವೇಷ, ಸ್ಪರ್ಧೆ, ಅಸೂಯೆ, ಸ್ವಾರ್ಥತೆಗಳಿಂದಲೇ ಜನಿಸಿದವಾಗಿವೆ. ವ್ಯಕ್ತಿ ಪ್ರಾಧಾನ್ಯತೆಯನ್ನು ಅತಿಗೊತ್ತಿ ಸಾರ್ವಜನಿಕ ಮನೋವೃತ್ತಿ ಮೇಲಾಗುತ್ತಿದ್ದರೆ ಸ್ಥಾನಕ್ಕಾಗಿ ಮೇಲಾಟವಾಗುತ್ತಿರಲೂ ಇಲ್ಲ; ಎಂದೂ ಒಂದುಗೂಡದ ಇಬ್ಭಾಗಗಳಾಗುತ್ತಿರಲೂ ಇಲ್ಲ. ಈ ಅನಿಷ್ಟ ಪರಂಪರೆಗೆ ವಿಚಾರ ಸ್ವಾತಂತ್ರ್ಯವಿಲ್ಲದ ಮುಂದಾಳುಗಳ ಹಾಗೂ ಅನುಯಾಯಿಗಳ ಕುರುಡು ಬುದ್ಧಿಯೇ ಕಾರಣ.

ತಮ್ಮ ಪಕ್ಷ ಏನು ಮಾಡಿದರೂ ಅದನ್ನು ನ್ಯಾಯದ ಒರೆಗಲ್ಲಿಗೆ ಹಚ್ಚಿ ಪರೀಕ್ಷಿಸದೆ ಅಂಥರಂತೆ ಅದೇ ಸತ್ಯವೆಂದು ಕಪಿಮುಷ್ಟಿ ಹಿಡಿದು ವರ್ತಿಸುವದು, ತಾವು ಮುಂದಾಳುಗಳೆಂದು ಒಪ್ಪಿದವರು ಹೇಳಿದುದೆಲ್ಲ ಸಿದ್ಧಾಂತವೆಂದು ನಂಬುವದು, ತಮ್ಮ ವಿರೋಧ ಪಕ್ಷದವರು ನ್ಯಾಯವನ್ನೇ ಹೇಳಿದರೂ ಕಿವಿಗೊಡದಿರುವದು, ಈ ರೀತಿಯ ವಿಚಾರ ಬುದ್ಧಿಯ ಹತ್ಯೆಯಿಂದ ಆಗುತ್ತಿರುವ ಹಾನಿಯನ್ನು ನೀಮಾತೀತವಾದುದು. ನಮ್ಮ ಜನಜೀವನದಲ್ಲಿ ಅಮೂಲಾಗ್ರವಾಗಿ ವ್ಯಕ್ತಿಪ್ರಭಾವ—ನಾಯಕಾರಾಧನೆ—ವಿಚಾರರಹಿತ ಅನುಯಾಯಿತ್ವ—ತುಂಬಿಹೋಗಿದೆ. ಪರದಾಸ್ಯದ ಕಾಲದಿಂದ ಇಂದಿನ ವರೆಗೂ ಉಳಿದುಕೊಂಡಿರುವ ಮನೋವೃತ್ತಿಯಿದು. ನಾಗರೀಕತೆ, ವಿಷಯಜ್ಞಾನಗಳು ಬೆಳೆದುಬಂದಂತೆ ಬುದ್ಧಿ ವಿಕಾಸಗೊಂಡು ದುರ್ನಾಯಕತ್ವದ ಆರಾಧನೆ ಅಗಬಾರದೆಂಬ ಬುದ್ಧಿ ಎಚ್ಚರಿಕೆ ಹೇಳುತ್ತಿದ್ದರೂ ಈ "ಪುಂಡು ನಾಯಕತ್ವ" ತಾನೇ ತಾನಾಗಿ ಹಬ್ಬಿದೆ. ಹಳ್ಳಿಯಿಂದ ಹಿಡಿದು ಡಿಲ್ಲಿಯ ವರೆಗೂ ಇದು ಇದೆ.

ಪ್ರಜಾರಾಜ್ಯೋದಯದೊಡನೆ ವ್ಯಕ್ತಿಸ್ವಭಾವಕ್ಕಾಧಾರವಾಗಿದ್ದ ವಾತಾವರಣ ಮಾಯವಾಗಿದೆ. ರಾಜರುಗಳ ಪ್ರತಾಪಯುಗವನ್ನು ಮುಗಿಸಿಯೇ ಈ ಪ್ರಜಾಯುಗವು ಬಂದಿದೆ. ಈ ಪ್ರಜಾಯುಗದಲ್ಲಿ ಗಾಂಧೀಜಿಯ ಪಂಥಾ ಅತಿಮಾನುಷ ಮಹಾತ್ಮರನ್ನು ನಿರ್ಮಿಸುವ ಅವಶ್ಯಕತೆ ಇಲ್ಲ. ಪ್ರಜಾರಾಜ್ಯದಲ್ಲಿ ಅಂಥವರು ಉದಯಿಸುವದೂ ಇಲ್ಲ. ವ್ಯಕ್ತಿ ಗಾಂಭೀರ್ಯ, ಘನತೆಗಳು ಸರ್ವಾಧಿಕಾರ ರಾಜ್ಯದಲ್ಲಿ. ಹಿಟ್ಲರನಂಥಾ ನಿರಂಕುಶ ವ್ಯಕ್ತಿಗಳಿಗೆ ರಿಪಬ್ಲಿಕ್ ಭಾರತದಲ್ಲಿ ಸ್ಥಳವಿಲ್ಲ ಸಹಜ. ಆದರೆ ಇಂದಿನ ಭಾರತ ಇನ್ನೂ ಯಥಾರ್ಥ ರಿಪಬ್ಲಿಕ್ ಭಾರತ ಆಗಿಲ್ಲ. ಆ ಕಾರಣವೇ ಇಂದಿನ ಭಾರತದಲ್ಲಿ ಎಲ್ಲೆಲ್ಲೂ ಮರಿಹಿಟ್ಲರುಗಳು ತುಂಬಿದ್ದಾರೆ. ಇಂಥಾ ಮರಿಹಿಟ್ಲರರನ್ನು ನಾಶಮಾಡುವ ವಾತಾವರಣ ಇಂದು ಭಾರತದಲ್ಲಿಲ್ಲ. ಇದಕ್ಕೆ ಕಾರಣ ಜನತೆಯಲ್ಲಿ ವಿಚಾರ ಸ್ವಾತಂತ್ರ್ಯವಿಲ್ಲದಿರುವದೇ ಆಗಿದೆ. ಏಕೆಂದರೆ ಜನಮತವೆಂಬುದು ಇಂದು ಪ್ರತಿ ವ್ಯಕ್ತಿಯ ಸ್ವತಂತ್ರ ಮನೋಭಾವದ ತಳಹದಿಯಲ್ಲಿ ನಿಂತಿರದೆ ಪಾರ್ಟಿ ಪಕ್ಷದ ಕೆಲವು ವ್ಯಕ್ತಿಗಳ ಕಾಲ ಕಂಕಣಕ್ಕೆ ಬಿಗಿಯಲ್ಪಟ್ಟಿದೆ. ಜನಮತದ ಹೆಸರಿನಿಂದ ನಡೆಯುವ ಈ ವ್ಯಕ್ತಿಗಳ ಆಟದಂತೆ ಜನತೆಯೂ ಕುಣಿಯುತ್ತಿದೆ!

ರಾಜರಾಹಿಯ ಕಾಲ ಕಳೆಯಿತು. ನಂತರ ಹೋರಾಟ ಯುಗ ಬಂತು. ಈ ಹೋರಾಟ ಯುಗದಲ್ಲಿ ವ್ಯಕ್ತಿಗತ ನುಹತ್ವಿಕೆ ಬೆಳೆಯಿತು. ಆ ನಂತರ ಪ್ರಜಾರಾಜ್ಯ ಬಂದಿದೆ. ಇದರಲ್ಲಿ ವ್ಯಕ್ತಿ ಮಹತ್ವಿಕೆ ಅಳಿಯುತ್ತಾ ಸಾಮೂಹಿಕ ಪ್ರಾಧಾನ್ಯತೆ ಬೆಳೆಯುತ್ತಾ ಹೋಗುವದು. ಅದ್ದರಿಂದ ಜನರೀಗಲೇ ಜಾಗ್ರತೆಗೊಂಡು ವಿಚಾರವಂತರಾದರೆ ಯಥಾರ್ಥ ಪ್ರಜಾರಾಜ್ಯದ ಉದಯ ಈಗಲೇ ಆಗುವದು. ಜನತೆ ಕಣ್ಣು ಮುಚ್ಚಿಕೊಂಡು ವ್ಯಕ್ತಿಪೂಜೆಯಲ್ಲಿ, ಪಾರ್ಟಿತತ್ವದಲ್ಲಿ ಕಾಲಹರಣ ಮಾಡಿದರೂ ನಮ್ಮ ಮಕ್ಕಳು ಮೊಮ್ಮಕ್ಕಳ ಕಾಲದಲ್ಲಾದರೂ ನಿಜವಾದ ಪ್ರಜಾರಾಜ್ಯ ಬಂದೇ ತೀರುವದು.

(—ಕೊಡಗು)

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ

ಹೆಚ್ಚಿನ ಮಾಹಿತಿಗೆ—ಡಾ॥ ಯಂ. ಸಿ. ಶಾಸ್ತ್ರೀ, ಯಲ್. ಐ.
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:—ಡಾ॥ ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

BUY INDIAN! ENCOURAGE INDIAN INDUSTRY!
ಅಮಲಕೀ ತೈಲ AMALAKI HAIR OIL
ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.
REGD.

Highly perfumed and medicated, worth using daily by one and all, keeps hair black and relieves head-ache etc.
TRADE MARK
Manufactured by:-
Swadeshi Oushadhi Bhandara (Regd.)
KUNJAL P. O. Brahmavar, S. K.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 3618 | Estd: 1921 ಸ್ಥಾಪನೆ | 30ನೇ ವರ್ಷ 13–4–1950

LICENCE No. 31
Licensed to Post
without Prepayment

FOUNDER:
Sri. A. B. Shetty
Minister for Agriculture
& Veterinary

ನವ ಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30 ವಾರ ೩೩ | NAVAYUGA WEEKLY Post Box No. 22 UDIPI, S. K. | Vol 30 No. 33
ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

# ಮರೆತು ಬಿಡಬೇಕಾದ ನೆನಪು ಇಡಬೇಕಾದ ವಿಚಾರಗಳು

ನಾವು ಮರೆತೇ ಬಿಡಬೇಕಾದ ಕೆಲವು ವಿಷಯಗಳನ್ನು ಮನೋರೋಗವಾಗಿ ತಾಗಿಸಿಕೊಳ್ಳುವುದರಿಂದಾಗಿ ಮತ್ತು ನೆನಪಿನಲ್ಲಿಡಬೇಕಾದ ಕೆಲವು ಸಂಗತಿಗಳನ್ನು ಮರೆತು ಬಿಡುವುದರಿಂದಾಗಿ, ಅನಪೇಕ್ಷಿತ ಅವನತಿಗಳೊದಗುವದಿದೆ; ಒದಗಿವೆ. ಆದ್ದರಿಂದ ಕಳೆದುಕೊಳ್ಳಬೇಕಾಗಿರುವ ಮತ್ತು ಕಟ್ಟಿಕೊಳ್ಳಬೇಕಾಗಿರುವ ಅನವಶ್ಯಾವಶ್ಯ ವಿಷಯಗಳ ತಾರತಮ್ಯವಿರಬೇಕಾದುದು ಅಗತ್ಯ.

ಸುಮಾರು ಎರಡು ಶತಮಾನಗಳಿಂದ ಭಾರತವನ್ನು ಆಳಿದ್ದರೆಂಬ ನೆನಪಿಟ್ಟುಕೊಂಡು ಬ್ರಿಟಿಷರಮೇಲೆ ಕಹಿಭಾವನೆ ಇಟ್ಟುಕೊಳ್ಳುವದಾದರೆ, ಬ್ರಿಟನನ್ನು ಕೆಲಕಾಲದ ವರೆಗಾದರೂ ಸುಲಿಯಬೇಕೆಂಬ ಛಲ ಭಾರತೀಯರಿಗೆ ಹುಟ್ಟಬೇಕು; ಆದರದು ಅವ್ಯವಹಾರ್ಯವಿರುವಂತೆಯೇ ಅನ್ಯಾಯವೂ ಇರುವುದರಿಂದ ಗತ ಸಂಬಂಧದ ಕಹಿ ಅನುಭವಗಳನ್ನೆಲ್ಲಾ ಮರೆತೇ ಬಿಡಬೇಕು. ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿ ದೊರೆತಿರುವ ಪ್ರಯೋಜನಕಾರಿ ಅನುಭವಗಳನ್ನು ಮಾತ್ರ ನೆನಪಿನಲ್ಲಿಡಬೇಕು.

ಕಾಂಗ್ರೆಸಿಗರಾದರೂ ಸರಿಯೇ; ರಾಷ್ಟ್ರ ಸ್ವಾತಂತ್ರ್ಯಕ್ಕಾಗಿ ತ್ಯಾಗ, ಸಾಹಸಗಳನ್ನು ಪ್ರದರ್ಶಿಸಿದವರು ತಾವೆಂಬ ಗತ ಕಾಲದ ಸ್ಮರಣೆಯು, ಒಣ ಹೆಮ್ಮೆಯು ಅಧಿಕಾರಕ್ಕೇರಿ ಬಂದಿರುವಾಗ ಅದನ್ನಿನ್ನೂ ಅಂಟಿಸಿಕೊಂಡಿರಬಾರದು; ಅದೇ ರೀತಿ, ಈ ಕಾಲದ ಕರ್ತವ್ಯಗಳನ್ನು ಮರೆತಿರಬಾರದು.

ಒಂದು ಕಾಲದಲ್ಲಿ ವಿಶೇಷ ಶ್ರೀಮಂತಿಕೆ ಮತ್ತು ದೊಡ್ಡ ಮನೆತನದ ಸ್ಥಾನಮಾನಗಳಿದ್ದು, ಈಗ ಅವೆಲ್ಲವನ್ನೂ ಕಳೆದುಕೊಂಡಿದ್ದರೂ ತಮ್ಮ ಗತ ವೈಭವದ ಠೇಂಕಾರವನ್ನೇ ಕಟ್ಟಿಕೊಂಡು, ವ್ಯವಹಾರಾತೀತರಾಗಿರುವವರನ್ನು ಕಾಣುತ್ತೇವೆ. ಇಂಥವರು ಕಾಲಾನುಗುಣಕಾರ್ಯಾಸಕ್ತಿಯನ್ನು ಕಳೆದುಕೊಂಡು ಅವಧಿ ಬಾಧೆ ತಟ್ಟಿರುವ ಒಣ ಠೀವಿಯನ್ನಷ್ಟೇ ಕಟ್ಟಿಕೊಂಡು ಹಿಂದೆ ಬೀಳುತಿದ್ದಾರೆ. ಈ ತ್ಯಾಗ–ಭೋಗಗಳ ವಿಷಯಗಳನ್ನು ಪರಸ್ಪರ ಬದಲಾಯಿಸಿಕೊಂಡರಾಯಿತು.

ಬಡತನದಲ್ಲಿದ್ದು ಶ್ರೀಮಂತಿಕೆಗೇರಿದವರಲ್ಲಾದರೋ ತಮ್ಮ ಹಿಂದಿನ ಸ್ಥಿತಿಗಂಧವು ಸ್ವನಿಕೃಷ್ಟತಾ ಭಾವನೆಯ ರೂಪಾಂತು, ಒಂದಲ್ಲೊಂದು ರೀತಿಯಿಂದ ತೋರಿಬರುವದಿದೆ. ತನ್ನ ಹಿಂದಿನ ದುಸ್ಥಿತಿಯು ಪ್ರಸಾದವಾಗಿ ದೊರೆತಿರುವ ಸಂಕುಚಿತ ಬುದ್ಧಿಯನ್ನು ಮರೆತೇ ಬಿಟ್ಟು, ಅಂದಿನ ಅನುಭವಗಳನ್ನಷ್ಟೇ ಆಮದುಪಡಿಸಿಟ್ಟುಕೊಂಡರಾಯಿತು.

ಜನಸಾಮಾನ್ಯರ ಮನೋವೃತ್ತಿಯನ್ನು ಅವಲೋಕಿಸಿದರೆ, ದೇಶದಲ್ಲಿ ಗತಕಾಲಗಳಿಂದಾರಂಭಿಸಿ ಈ ವರೆಗಾಗಿರುವ ಸ್ಥಿತಿಗತಿಗಳ ಸ್ಮರಣೆಯಿರುವಷ್ಟು ಇಂದು ಮುಂದಿನ ಸಂಭವಗಳ ಯೋಚನೆಯಿಲ್ಲವೆಂಬುದು ಸ್ಪಷ್ಟವಿದೆ. ಈ ವರೆಗಿನ ಘಟನೆಗಳಿಂದ ದೊರೆಯುವ ಬುದ್ಧಿವಾದವನ್ನಲ್ಲದೆ, ಬೇರೆಲ್ಲವನ್ನೂ ಮರೆತುಬಿಟ್ಟು, ಇನ್ನು ಮುಂದಿನವುಗಳ ಜ್ಞಾನ, ಚಿಂತನೆ ಮತ್ತು ನಿರೀಕ್ಷೆಯಿಂದಿರಬೇಕಾದುದು ಅಗತ್ಯ.

ಇಂದು ಒಬ್ಬನು ಹೊಣೆಯುಳ್ಳ ಘನಸ್ಥಾನಕ್ಕೇರಿರುವನಾದರೆ, ಆತನ ಪೂರ್ವಪರಿಚಿತರು ಅಂಥವನ ಈಗಿನ ಸ್ಥಾನೋಚಿತವಾದ ಜವಾಬ್ದಾರಿಗಳೇನೆಂಬುದನ್ನು ಗ್ರಹಿಸದೆ, ಅವನ ಹಿಂದಿನ ಸ್ಥಿತಿಗತಿಗಳ ಮಾನದಿಂದಲೇ ಅಳತೆಮಾಡುತ್ತಾರೆ. ಮರೆಯಬೇಕಾದುದರ ಸ್ಮರಣೆಯು, ಸ್ಮರಿಸಬೇಕಾದುದರ ಮರವೆಯು, ಅಪಂಥ ಈ ಮೂಲಕ ಆಗುತ್ತಿದೆ.

ಕಾಲಾಗುಣವಾಗಿ ಸರ್ವಸಾಮಾನ್ಯತಃ ಎಲ್ಲವುಗಳ ಬೆಲೆಯೂ ಈಗ ಏರಿರುವುದಾದರೂ, ತಮ್ಮ ಸ್ವಾರ್ಥ ಸಾಧಿಸುವ ಸಂದರ್ಭಗಳಲ್ಲಿ ಇಂದಿನ ನೀತಿ, ನಿಯಂತ್ರಣಗಳ ಗಡಿ ದಾಟಿಯೂ ವಿಶೇಷ ಬೆಲೆ ಪಡೆಕೊಳ್ಳುವವರನ್ನೂ, ಆದರೆ ತಾವು ಬೆಲೆ ತೆರಬೇಕಾಗುವ ಸಂದರ್ಭಗಳಲ್ಲಿ ಮಾತ್ರ ಹಳೇ ಕಾಲದ ಅಲ್ಪ ಮೌಲ್ಯಗಳನ್ನೀಗಲೂ ಜ್ಞಾಪಿಸಿ 'ಅಯ್ಯೋ' ಹಾಕುವವರನ್ನೂ ಎಲ್ಲೆಲ್ಲೂ ಕಾಣುತಿದ್ದೇವೆ. ನೆನಸಬೇಕಾದುದನ್ನು ಮರೆತು, ಮರೆಯಬೇಕಾದುದನ್ನು ನೆನಸುವ ವೈಪರೀತ್ಯದ ಮತ್ತೊಂದು ನಿದರ್ಶನವಿದು.

ತಾವು ಬೇರೆಯವರಿಗೆ ಮಾಡಿದ ಅಲ್ಪ ಉಪಕಾರಗಳನ್ನಾದರೂ ಮಹತ್ತಾಗಿ ಗಣಿಸಿ, ತಮಗೆ ಅನ್ಯರಿಂದಾಗಿದ್ದ ಮಹದುಪಕಾರಗಳನ್ನೂ ಮರೆತು ಬಿಡುವ ದ್ವಿಮುಖೀ ದುಸ್ವಭಾವವು ಹೆಚ್ಚಿನವರಲ್ಲೀಗ ಕಂಡುಬರುತ್ತಿದೆ ಇವೆರಡು ಪಕ್ಕದೀ ತೂಕವು ಪರಸ್ಪರ ಒದಲಾವಣೆಗೊಂಡರೆ ವ್ಯವಹಾರ ರಂಗದ ಸುಧಾರಣೆ ಅರ್ಧಾಂಶ ಆದಂತೆಯೇ.

ಒಬ್ಬನ ಮೇಲೆ ಜನತಾ ಸ್ವಭಾವವು ಚಿಗುರು ಮೊಳೆಯಿಸುವುದಕ್ಕಿಂತ ಹೆಚ್ಚಿಗೆ, ಉದುರಿ ಹೋಗಬೇಕಾದ ಒಣ ಎಲೆಗಳನ್ನೇ ತನ್ನಲ್ಲಿ ನೆಟ್ಟುಕೊಂಡಿರುವಂತೆ ಕಾಣುತ್ತಿದೆ. ಈ ಹಳೇ ಸ್ಥಿತಿ ಕಳೆದು, ಹೊಸತನ ಮೂಡಬೇಕಾದುದು ಅಗತ್ಯ.

ಯಾವ ಕೆಲಸಕ್ಕೂ ಬೇಳದ ಒಂದು ವಿಷಯವು ಯಾವ ಕಾಲದ್ದು ಅಥವಾ ಯಾರದ್ದೇ ಆಗಿರೂ ಅದರ ಗೊಡವೆಯನ್ನೇ ಹಚ್ಚಿಕೊಳ್ಳಬಾರದು. ಮುಂದೇನು, ತಾನಾರು ಮತ್ತು ತನ್ನ ಪಾಲಿನದಾವುದು ಎಂಬುದನ್ನು ಸರಿಯಾಗಿ ನೋಡಿಕೊಂಡು ಪೂರ್ಣ ಲಕ್ಷ್ಯವಿಡಬೇಕಾಗಿರುವಂತೆಯೇ, ಆ ಸರಹದ್ದಿನ ಹೊರಗಿನ ಎಲ್ಲವುಗಳನ್ನೂ ಮರೆತೇ ಬಿಡಬೇಕು.

ಈಗ ಮತ್ತು ಇನ್ನು ಮುಂದೆ ಭಾರತ-ಪಾಕಿಸ್ತಾನಗಳಿಗೆ ಲಗಾವಾಗುವಂತೆ ಇವೆರಡು ರಾಷ್ಟ್ರಗಳ ಪ್ರಧಾನಿಗಳು ಮಾಡಿಕೊಂಡಿರುವ ಒಪ್ಪಂದದ ಪಾಲನೆ ಹೇಗೆ ಎಂಬುದರ ಕಡೆಗೆ ಗಮನವಿರಬೇಕಲ್ಲದೆ, ಈ ಮೊದಲು ಭಾರತ–ಪಾಕಿಸ್ತಾನಗಳೊಳಗೆ ನಡೆದುದೇನು ಎಂಬುದನ್ನು ಸ್ಮರಿಸುತ್ತಾ ಹೋದರಾಗದು.

ಶಿವಾಜಿ, ಪ್ರತಾಪಸಿಂಗರ ಯುಗದಲ್ಲಿ ಅಥವಾ ಝೆಂಗಿಸ್‌ಖಾನ್, ಔರಂಗಜೇಬರ ಅವಧಿಯಲ್ಲಿ ಭಾರತವು ಹೇಗಿದ್ದಿತೆಂಬ ಗತವೈಭವವನ್ನು ಸ್ಮರಿಸುವ ಬದಲಿಗೆ, ಇಂದು ನಾಳೆಯ ನೆಹರೂ ಆಡಳಿತೆಯಲ್ಲಿ ಭಾರತವು ಹೇಗಿರಬೇಕೆಂಬುದನ್ನು ನೆನಸಬೇಕು; ಗುರಾಣಿ ಯುದ್ಧದ ಆ ಕಾಲವನ್ನು ಬಿಟ್ಟು ಹೈಡ್ರೋಜನ್ ಬಾಂಬಿನ ಈ ಯುಗಕ್ಕೆ ಬರಬೇಕು.

ಬ್ರಿಟಿಷರಾಡಳಿತೆಯ ಕಾಲದ ಭಾರತವು ಈಗಲೂ ಇದೆ ಎಂದು ಹೇಗೆ ನೆನಸಕೂಡದೋ ಅದೇ ರೀತಿ, ಆ ಕಾಲದ ಪಾಕಿಸ್ತಾನ್ ವಾದಿಗಳಾಗಿಯೇ ಇಲ್ಲೀಗಲೂ ಮುಸ್ಲಿಮರು ಉಳಿದುಕೊಂಡಿರುವರೆಂದು ಸ್ವತಃ ಮುಸ್ಲಿಮರೂ ಮುಸ್ಲಿಮೇತರರೂ ಸರ್ವಥಾ ನೆನಸಕೂಡದು. ಜಾತ್ಯಾತೀತ ಭಾರತದ ಜಾತ್ಯಾತೀತ ಪ್ರಜೆಗಳು ತಾವೆಂಬುದನ್ನು ಎಲ್ಲರೂ ತಿಳಿದಿರಬೇಕು.

ದೀರ್ಘಾವಧಿಯ ಗುಲಾಮಗಿರಿಯಿಂದಾಗಿ, ಬೇರೂರಿ ಹೋಗಿರುವ ಪರಾವಲಂಬನೆ, ಪರಾನುಕರಣೆಗಳನ್ನು ಪ್ರಯಾಸಪಟ್ಟಾದರೂ ಮರೆಯಬೇಕು-ಜನತಾರಾಜ್ಯದ ಜನತೆಗನುಗುಣವಾದ ಹೊಣೆಗಾರಿಕೆಗೆ

"ಬೇರೆ ಶಾಸ್ತ್ರಗಳನ್ನೋದದಿದ್ದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

## ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು–ದಿ| ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯು ಮಾತುಗಳ ರೂಪದಲ್ಲಿಳಿದ ಛಟ್ಟೆಯಾಗಿ ಎದ್ದು ಕಾಣುವುದು.

**400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.**

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್, ಉಡುಪಿ, ದ. ಕನ್ನಡ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

ತೀರ್ಮಾನಾತೀತ ವಿವಾದವೆಂಬುದಿಲ್ಲ; ಜಗಳದಿಂದ ನಿರ್ಣಯವು ವಿನಹ ನಿರ್ವಾಣವಾಗದು. ಈ ಎರಡು ಮೂಲ ತತ್ವಗಳನ್ನಾಧರಿಸಿ, ಎರಡು ದೇಶಗಳ ಇಬ್ಬರು ನಾಯಕರು ಒಮ್ಮತಗೊಂಡುದು ಶ್ಲಾಘನೀಯ.

ಳಪ್ಪರಿಯಬೇಕು. ಸ್ವಾತಂತ್ರ್ಯಂದೋಲನ ಕಾಲದ ಅಭ್ಯಾಸವಾಗಿರುವ ಸರಕಾರೀ ನಿಂದೆಯ ಹುರುಪನ್ನು ಒತ್ತಿಯೂ, ತುಲನಾತ್ಮಕ ವಿಚಾರಶಕ್ತಿಯನ್ನು ಎತ್ತಿಯೂ ಹಿಡಿದಿರಬೇಕು.

ಪರಂಪರಾಗತವಾಗಿ ಅಸ್ಪೃಶ್ಯರೆಂದೋ, ಅಸಮರ್ಥರೆಂದೋ, ಈ ವರೆಗೂ ದೂರವಿರಿಸಿದ್ದ ವರ್ಗಗಳಾವವು ಎಂಬುದನ್ನು ಗಣಿಸುವ ಬದಲಿಗೆ ಈ ಕಾಲದಲ್ಲಿ ತಾವು ದೂರಮಾಡಬೇಕಾದ ವರ್ತನೆಗಳಾವುವು ಎಂಬುದಕ್ಕಷ್ಟೇ ಲಕ್ಷ್ಯ ಕೊಡಬೇಕು.

ಒಂದು ಹೊಣೆಗಾರಿಕೆ ಅಥವಾ ಕಾರ್ಯ ಕೈಕೊಂಡವನು ಆ ಕಾರ್ಯಕ್ಕೆ ಸಂಬಂಧಿಸಿದ ನೀತಿ ನಿಯಮಗಳನ್ನಲ್ಲದೆ, ಸ್ವತಃ ತನಗೆ ಸಂಬಂಧಿಸಿದ ಜನ ಅಥವಾ ವಿಷಯವಾವುದನ್ನೂ ಸ್ಮರಿಸಕೂಡದು; ಅಂಥವನು ಕಾರ್ಯ ಸಂಬಂಧಿ ಹೊರತು ಅಲ್ಲಿಯೂ ತಮ್ಮ ಸಂಬಂಧಿಕನಲ್ಲವೆಂದು ಆ ಕಾರ್ಯಕರ್ತನ ಸಂಬಂಧಿಕರರಿತಿರಬೇಕು.

ಪರರ ದುರ್ಗುಣಗಳನ್ನು ಮರೆತೂ ಸುಗುಣಗಳನ್ನು ನೆನಸಲು-ತನ್ನ ನಿರಾಶೆ, ದೌರ್ಬಲ್ಯಗಳನ್ನು ಬಿಟ್ಟು ಆಶೆ, ಸಾಹಸಗಳನ್ನು ಅಳವಡಿಸಿಕೊಳ್ಳಲು—ಗತಕಾಲದತ್ತ ಬೆನ್ನು ಹಾಕಿ ಭವಿಷ್ಯದತ್ತ ಮುಖ ಮಾಡಲು—ಪ್ರತಿಯೊಬ್ಬನೂ ಪ್ರತಿಯೊಂದು ಸಂದರ್ಭದ ಮಟ್ಟಿಗೂ ಅಭ್ಯಾಸಿಸಬೇಕು.

ಜನ, ಜನಾಂಗ, ರಾಷ್ಟ್ರ ಯಾರೇ ಇರಲಿ-ಹಿಡಿಯಬೇಕಾದುದನ್ನು ಹಿಡಿದುಕೊಂಡು, ಬಿಡಬೇಕಾದುದನ್ನು ಸಕಾಲದಲ್ಲಿ ಬಿಟ್ಟು ಬಂದವರೇ ಮುಂದುವರಿದಿದ್ದಾರೆ; ತದ್ವಿರುದ್ಧ ವರ್ತಿಸುವವರೆಲ್ಲರೂ ಹಿಂದೆ ಬೀಳುತಿದ್ದಾರೆ.

ದೀರ್ಘಾವಧಿ ಭಾರತವನ್ನು ಹಿಡಿದುಕೊಂಡಿದ್ದ ಬ್ರಿಟಿಷರು, ಕಾಲ ಬಂದೊಡನೆ, ಆ ವರೆಗಿನದಾವುದನ್ನೂ ನೆನಸದೆ ಸಂತೋಷ ಪೂರ್ವಕನೇ ಅದನ್ನು ಬಿಟ್ಟು ಹೊರಟರು ಈ ಮೂಲಕ ಅಪಾಯಗಳಿಂದ ಪಾರಾದರು. ಆದರೆ ದೀರ್ಘಾವಧಿಯಿಂದಿದ್ದುದೆಂಬ ಕಾರಣದಿಂದ ತಮ್ಮ ಬಿರುದು, ಭಂಡವಾಳತನ, ಪದವಿ, ಅಧಿಕಾರ, ಸ್ಥಾನಮಾನಗಳನ್ನು ಬಿಡಲಾರದೆ ಒದ್ದಾಡಿ ಒದ್ದಾಡಿ ಪತನಗೊಳ್ಳುತ್ತಿರುವವರನ್ನು ನಮ್ಮ ನಡುವೆಯೇ ಕಾಣುತಿದ್ದೇವೆ.

ದೇಶಹಿತದೃಷ್ಟಿಯಿಂದ ತಮ್ಮ ಸ್ವಾರ್ಥ ಮತ್ತು ಶ್ರೀಮಂತಿಕೆಯನ್ನು ಮರೆತು ಜನತಾ ಸೇವೆಗಿಳಿದಿದ್ದ ಎಷ್ಟೋ ಮಂದಿ ಸಾರ್ಥಕ ಜೀವಿಗಳನ್ನು ಕಾಣುತ್ತಿದ್ದೇವೆ. ತದ್ವಿರುದ್ಧವಾಗಿ ಸ್ವಾರ್ಥ ದೃಷ್ಟಿಯಿಂದ ಅಹರ್ನಿಶಿ ದುಡಿದು ಕೂಡಿಸಿಟ್ಟವರ ಭಂಡಾರಗಳಿಗೆ ಕೂಡಾ ಅದೇ ದೇಶಹಿತ ದೃಷ್ಟಿಯಿಂದ ಕಾನೂನು ಮೂಲಕ ಅರ್ಧಚಂದ್ರ ಪ್ರಯೋಗವಾಗುತ್ತಿರುದನ್ನೂ ನೋಡುತಿದ್ದೇವೆ; ಇನ್ನೂ ಹೆಚ್ಚಿನದನ್ನು ಕಾಣಲಿದ್ದೇವೆ.

ಪಶ್ಚಾತ್ತಾಪದ ದುಃಖ ಮತ್ತು ಅಪಮಾನ್ಯಕ ಘಟನೆಗಳಿಗೀಡಾದರೂ, ಅವುಗಳನ್ನು ಮರೆತೇ ಬಿಟ್ಟು ಭರವಸೆಯ ಬಲದಿಂದ ಸುಖಿಗಳಾಗಿರುವ-ಅತ್ಯಲ್ಪ ದುಃಖ, ಸಂಕಟಗಳಿಗೀಡಾದರೂ, ಅವುಗಳನ್ನು ಮಿತಿ ಮೀರಿ ತಲೆಗೆ ಹಚ್ಚಿಕೊಳ್ಳುವ ದೆಸೆಯಿಂದ ಅಷ್ಟರಿಂದಲೇ ತೀರಾ ಅಸುಖಿಗಳಾಗಿರುವ—ಈ ಎರಡು ವರ್ಗದ ಸುಖಿ ದುಃಖಿಗಳು ಎಲ್ಲೆಲ್ಲೂ ಕಾಣಸಿಗುತ್ತಾರೆ.

ಮನುಷ್ಯನಿಗಿಂತ ಮೇಲಾದುದು ಈ ಪ್ರಪಂಚದಲ್ಲಿ ಮತ್ತೊಂದಿಲ್ಲ. ಅಂತಹ ಮನುಷ್ಯ ನಿರ್ಜೀವವಾದೊಡನೆ ಅತ್ಯಂತ ಪ್ರಿಯವಾಗಿದ್ದ ಆತನ ದೇಹವನ್ನು ಆದಷ್ಟು ಬೇಗನೇ ದಹನ ಅಥವಾ ದಫನ ಮಾಡಿ ಬಿಡಲು ಆತನ ಸಂಬಂಧಿಕರೇ ಆತುರಿಸುತ್ತಾರೆ. ಯಾವುದೊಂದು ವಿಷಯವಾದರೂ ಹೀಗೇನೇ—ಅದರಲ್ಲಿ ಜೀವವಿಲ್ಲ, ಅದಕ್ಕೆ ಇರಸ್ತಿಕೆಯಿಲ್ಲ, ಎಂದಾದೊಡನೆ ಅದನ್ನು ಅಳಿಸಿ ಬಿಡಬೇಕು; ಉಜ್ಜಿಕೊಳ್ಳಬೇಕು. ಹೂಳುವಂತಹದನ್ನು ಹೂತೇ, ನೆಡುವಂತಹದನ್ನು ನೆಡಬೇಕಾಗುತ್ತದೆ.

ಈ ತಾರತಮ್ಯವನ್ನರಿತು ವರ್ತಿಸುವುದಕ್ಕೇನೇ ಪ್ರಪಂಚದೊಡನೆ ಸಾಗುವದೆಂದರ್ಥ; ಅದೇ ಪ್ರಗತಿ.

---

# ನೆಹರೂ ಲಿಯಾಖತ್ ಮಾತುಕತೆ-

ಅಲ್ಪಸಂಖ್ಯಾತ ಸಮಾಜಗಳವರ ರಕ್ಷಣಾ ಸಂಬಂಧದ ಒಪ್ಪಂದವೊಂದು, ಒಂದು ವಾರದ ದಿಲ್ಲೀ ಮಾತುಕತೆಗಳ ಪರಿಣಾಮವಾಗಿ ಭಾರತ ಮತ್ತು ಪಾಕಿಸ್ತಾನ್ ಸರಕಾರಗಳೊಳಗಾಯಿತು. ಅದೇ ತಾ. 8ನೇ ಶನಿವಾರ ಅಪರಾಹ್ನ 2 ತಾಸಿನ ನಂತರ ಈ ಒಪ್ಪಂದಕ್ಕೆ ಭಾರತ-ಪಾಕಿಸ್ತಾನ್ ಪ್ರಧಾನಿಗಳಾದ ನೆಹರು-ಲಿಯಾಖತರ ಸಹಿ ಬಿತ್ತು. ಒಡಂಬಡಿಕೆಯು ತಾ 10ನೇ ಸೋಮವಾರ ಏಕಕಾಲದಲ್ಲಿ ಭಾರತದ ಪಾರ್ಲಿಮೆಂಟು ಮತ್ತು ಪಾಕಿಸ್ತಾನದ ಘಟನಾ ಸಮಿತಿಯ ಮುಂದೆ ಮಂಡಿಸಲ್ಪಡುವವರೆಗೂ ಅದರ ವಿವರ ಪ್ರಕಟಿಸಲ್ಪಡಲಿಲ್ಲ. ಎಪ್ರಿಲ್ ತಾ 2ನೇ ಆದಿತ್ಯವಾರ ಪೂರ್ವಾಹ್ನ 11-35ಕ್ಕೆ ನವದಿಲ್ಲಿಯ ಪಾಲಂ ವಿಮಾನ ನಿಲ್ದಾಣದಲ್ಲಿ ತನ್ನ ಅನುಯಾಯಿಗಳೊಂದಿಗೆ ಕಾಲೂರಿದ್ದ ಮಿ. ಲಿಯಾಖತ್ ಅಲೀಖಾನರು, ತಾ. 8ನೇ ಶನಿವಾರ ಅಪರಾಹ್ನ 3 ತಾಸಿಗೆ ಅದೇ ನಿಲ್ದಾಣದಲ್ಲಿ ಕರಾಚಿಗಾಗಿ ವಿಮಾನ ಹತ್ತಿದರು.

## ದಾಖಲೆ ನಿರ್ಮಿಸಿದ ವಾರ

ಭಾರತ ಪಾಕಿಸ್ತಾನ್ ಪ್ರಧಾನಿಗಳ ಒಪ್ಪಂದ ಮಾತುಕತೆ ನಡೆದಿದ್ದ ತಾ. 2ರಿಂದ 8ರವರೆಗಿನ ಒಂದು ವಾರವು ಇವೆರಡು ರಾಷ್ಟ್ರಗಳ ಚರಿತ್ರೆಯಲ್ಲೂ ಸ್ಥಾನ ಪಡೆಯುವಂತಹದಿದೆ. ಪಾಕಿಸ್ತಾನ್ ಜನನದ ನಂತರ ಇಂತಹ ಪ್ರಮುಖ ಸಂದರ್ಭವು ಭಾರತ-ಪಾಕಿಸ್ತಾನಗಳ ಮಟ್ಟಿಗೆ ಬೇರೆ ಒದಗಿದುದಿಲ್ಲ. ಒಪ್ಪಂದ ಮಾತುಕತೆಯ ಹಿನ್ನೆಲೆಯಂತೂ ಸುಪರಿಚಿತವಿದೆ. ದಿಲ್ಲಿಯ ಏಳು ದಿನಗಳ ಮಾತುಕತೆಗಳೂ ಅತ್ಯಂತ ಗುಪ್ತವಾಗಿ ನಡೆದು ಅದೆಯಂತೆಯೇ ಆತುರವನ್ನೂ ನಿರ್ಮಿಸಿದ್ದವು. ಈ ಮಾತುಕತೆಗಳಲ್ಲಿ ಇಕ್ಕಡೆಯ ಎರಡು ಬಾಯಿಗಳಾಗಿ, ಅಥವಾ ಕೊಟ್ಟು ಪಡೆಯುವ ಹಸ್ತಗಳಾಗಿ ನೆಹರು-ಲಿಯಾಖತರಿದ್ದರು; ಇವೆರಡು ತಲೆಗಳಿಗೆ ವಿಷಯ ಸಂಗ್ರಹ ಮಾಡಿಕೊಡಲು—ಇವೆರಡು ಕೈಗಳಿಗೆ ಆವಶ್ಯಕ ಉಪಕರಣಗಳನ್ನು ತಂದುಕೊಡಲು—ಇಕ್ಕಡೆಯ ಸಲಹೆಗಾರರು ಅಲ್ಲಿದ್ದರು. ನೆಹರುಗಳ ಕಡೆಯಿಂದ ಭಾರತ ಸರಕಾರದ ಸೆಕ್ರೆಟರಿ ಜನರಲ್ ಸರ್. ಗಿರಿಜಾಶಂಕರ್ ಬಾಜ್‌ಪಾಯಿ ಮತ್ತು ವಿದೇಶ ಸಂಬಂಧ ಖಾತೆಯ ಕಾರ್ಯದರ್ಶಿ ಶ್ರೀ ಎಮ್. ದತ್ತರಿದ್ದರು. ಲಿಯಾಖತರ ಕಡೆಯಿಂದ ಪಾಕಿಸ್ತಾನ್ ಸರಕಾರದ ಸೆಕ್ರೆಟರಿ ಜನರಲ್ ಮಿ. ಮಹಮ್ಮದಾಲಿ, ವಿದೇಶ ಸಂಬಂಧಖಾತೆಯ ಕಾರ್ಯದರ್ಶಿ ಮಿ. ಇಕ್ರಮುಲ್ಲ, ಸ್ಪೆಶ್ಯಲ್ ಡ್ಯೂಟಿ ಆಫೀಸರ್ ಮಿ. ಗುಲಾಮ್ ಮಹಮ್ಮದ್, ಪಾಕಿಸ್ತಾನ್ ಪ್ರಧಾನಿಯ ರಾಜಕೀಯ ಕಾರ್ಯದರ್ಶಿ ಮಿ. ಸಿದ್ದಿಕಿ ಅಲೀಖಾನ್ ಬಂದಿದ್ದರು. ಪೂರ್ವ ಬಂಗಾಳ ಸರಕಾರದ ಮುಖ್ಯ ಕಾರ್ಯದರ್ಶಿ ಮಿ. ಅಜೀಜ್ ಅಹಮ್ಮದರೂ ಅವರ ಜತೆಯಲ್ಲಿದ್ದರು. ಇಕ್ಕಡೆಯ ಈ ಕಾರ್ಯದರ್ಶಿಗಳೊಳಗೆ ಏಳು ದಿನಗಳಲ್ಲೂ ಮಾತುಕತೆಗಳು ನಡೆದಿದ್ದುವು. ವಿಷಯ ಮತ್ತು ಅಂಕೆ ಸಂಖ್ಯೆಗಳ ಮೂಲ ಪರಾಮರ್ಶೆ ನಡೆದುದು ಈ ಕಾರ್ಯದರ್ಶಿ ಮಟ್ಟದ ಸಂಭಾಷಣೆಗಳಲ್ಲೇ ಎನ್ನಬಹುದು; ತಂತಮ್ಮ ನಾಯಕರಿಗೆ ಅಗತ್ಯವುಳ್ಳ ಸಂಗತಿ ಜ್ಞಾನ ಮತ್ತು ಸಲಹೆಗಳನ್ನು ಒದಗಿಸಿ ಕೊಡುವ ಕೆಲಸವು ಆಯಾಯಾ ರಾಷ್ಟ್ರದ ಕಾರ್ಯದರ್ಶಿಗಳದಿದ್ದಿತು. ದಿಲ್ಲೀ ಮಾತುಕತೆಯ ನಿಜ ನಿಲ್ದಾಣವಾಗಿ ಕಾರ್ಯದರ್ಶೀ ಕೂಟವಿದ್ದರೆ, ಅದರ ಮೇಲಿನ ಧ್ವಜಸ್ತಂಭಗಳಾಗಿ ಪ್ರಧಾನಿದ್ವಯರಿದ್ದರೆನ್ನಬಹುದು. ಘೋಷಣೆ, ಭವನೆ ಮತ್ತು ಸಂಗತಿಗಳಿಗೆ ಕೊನೆಯ ನಿರ್ಣಯ ರೂಪ ಕೊಡುವುದಷ್ಟೇ ಪ್ರಧಾನಿಗಳ ಪಾಲಿನ ಕೆಲಸವಾಗಿದ್ದಿತು. ಇಲ್ಲಿಯೂ ಪಂಡಿತ ನೆಹರುಗಳ ತಲೆಯ ಅಕ್ಕಪಕ್ಕದಲ್ಲಿ ಸರ್ದಾರ್ ವಲ್ಲಭಾಯಿಗಳ ಮತ್ತು ಭಾರತ ಪಾಕಿಸ್ತಾನ್ ಸಂಬಂಧದ ಎಲ್ಲಾ ವಿಷಯಗಳ ಅಧಿಕಾರಿಯಾಗಿರುವ ಟ್ರಾನ್ಸ್‌ಪೋರ್ಟ್ ಮಂತ್ರಿ ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರರ ತಲೆಗಳೂ ಸೇರಿ ಸಿಂಹದತ್ತಾತ್ರೇಯಾವತಾರ ಅಲ್ಲಿ ಮೂಡಿದ್ದಿತು. ಅಧ್ಯಕ್ಷ ಪ್ರಸಾದರೂ ಇಲ್ಲಿ ಆಗಾಗ ಸಹಭಾಗಿಗಳಾಗುತ್ತಿದ್ದರು. ಪೂರ್ವ-ಪಶ್ಚಿಮ ಬಂಗಾಳಗಳ ಪ್ರಧಾನಿಗಳು ಮುಖ್ಯತಃ ತಮ್ಮ ಕ್ಷೇತ್ರಗಳಿಗೆ ಸಂಬಂಧಿಸುವ ಈ ಚರ್ಚೆಯಲ್ಲಿ ಭಾಗವಹಿಸಲು ಬರುವರೆಂಬ ನಿರೀಕ್ಷೆ ಆದಿಭಾಗದಲ್ಲಿದ್ದಿತಾದರೂ, ಅವರಿಲ್ಲ. ಮಿ. ಲಿಯಾಖತರಿಗೆ ತನ್ನ ಪಾಲಿನ ಬಂಗಾಳದ ಬಿಸಿಬಿಸಿ ಅನುಭವವನ್ನು ಕೊಡಲು ಪೂರ್ವ ಬಂಗಾಳ ಸರಕಾರದ ಕಾರ್ಯದರ್ಶಿ ಸಾಹೇಬರು ಅವರ ಜತೆಗೂಡಿ ಬಂದಿದ್ದರು. ಪಶ್ಚಿಮ ಬಂಗಾಳದ ಪ್ರಧಾನ ಮಂತ್ರಿ ಡಾ. ಬಿ. ಸಿ. ರೋಯಿಗಳು ದಿಲ್ಲೀ ಸಂಭಾಷಣೆಯ ಮೊದಲ ದಿನದ ವರೆಗೂ ನವದಿಲ್ಲಿಯಲ್ಲಿದ್ದವರಾದರೂ ಕಲ್ಕತ್ತದಲ್ಲಿ ತನ್ನನ್ನು ಕಾಯುತ್ತಿರುವ ಕೆಲಸಗಳೇ ಹೆಚ್ಚಿನವೆಂದು ತೋರಿ ಅವರು ಆ ಮೇಲೆ ಹೊರಟು ಹೋಗಿದ್ದರು. ಆಲೋಚನೆ ಕೊಡುವ ಮಟ್ಟಿಗೆ ಅನುಭವಮಾನದ ಶ್ರೀ ಸಿ. ರಾಜಗೋಪಾಲಾಚಾರಿಯವರು ಈ ಸಂಭಾಷಣೆಯ ವೇಳೆ ಹಾಜರಿರಲು ದಿಲ್ಲಿಗಾಮಂತ್ರಿಸಲ್ಪಟ್ಟಿದ್ದಾರೆಂಬ ವಾರ್ತೆಯಿದ್ದಿತಾದರೂ ಅವರು ಹೋಗಿರಲಿಲ್ಲ. ಮಂತ್ರಿಗಳ ಪೈಕಿ ಪಟೇಲ್, ಅಯ್ಯಂಗಾರರನ್ನು ಬಿಟ್ಟರೆ ಮಿಕ್ಕವರ ಕೂಡಾಟವು ಪಂಡಿತ ನೆಹರುಗಳಿಗಲ್ಲಿ ಹೆಚ್ಚಿರಲಿಲ್ಲ. ಅಂತೂ ಅತ್ಯಗತ್ಯವಿದ್ದ ಜನರ ಮತ್ತು ವಿಷಯಗಳ ಕೂಡುವಿಕೆಯಿಂದ ಶಕ್ಯವಿದ್ದಷ್ಟು ಆಳವಾದ ವಿಮರ್ಶೆಯೊಂದಿಗೆ ದಿಲ್ಲೀ ಸಂಧಾನ ಯತ್ನ ನಡೆದಿತ್ತು—ಯಾವುದು ಹೇಗಿದ್ದರೂ ಸೌಹಾರ್ದತಾ ಭಾವನೆಯ ಅಭಾವವಿರಲಿಲ್ಲವಾದ್ದರಿಂದ, ಅದು ಒಡಂಬಡಿಕೇ ಕಳಶವನ್ನೇರಿಸಿ ಕೊಂಡಿತು.

## ಏಳು ದಿನಗಳಲ್ಲೂ-

ದಿಲ್ಲೀ ಸಂಭಾಷಣಾ ಧ್ವಜದ ಆರೋಹಣ ತಾ. 2ರಲ್ಲಿ ಆಗಿದ್ದರೆ ಅವರೋಹಣ ತಾ. 8ರಲ್ಲಾಯಿತು. ಈ ಎರಡು ದಿನಗಳ ಸಮೇತ ಆ ಇಡೀ ಒಂದು ವಾರದಲ್ಲಿ ಪ್ರತಿದಿನವೂ ಮಂತ್ರಿಗಳೊಳಗೆ ಮತ್ತು ಕಾರ್ಯದರ್ಶಿಗಳೊಳಗೆ ಮಾತುಕತೆಗಳು ನಡೆದಿದ್ದು, ದಿನದಿಂದ ದಿನಕ್ಕೆ ಒಂದೊಂದೇ ಅಂತಸ್ತು ಮೇಲೇರುತ್ತಾ ಬಂದಿದ್ದಿತು.

**On this Memorable day**

Of the 26th of January in the year 1950 of the inauguration of the Indian Republic, we have the pleasure to announce the birth of our

**Vijaya Cash Certificates**

"Spend less and aSve more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices

Head Office:—**Kadri Road, Mangalore.**

Branches:- City-Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara.

**B. Manjaya Hegde.**

Advocate & President, District Board, S. Kanara.

CHAIRMAN

VIJAYA BANK, LTD.,

# -ಏಳು ದಿನಗಳ ವಿಜಯೀ ಮಂಥನ

ತಾ. 2ರಲ್ಲಿ ಮಿ| ಲಿಯಾಖತರು ನವದೆಹಲಿಯ ಸರಕಾರೀ ಭವನ ಪ್ರವೇಶಿಸಿದೊಡನೆಯೇ ಅಧ್ಯಕ್ಷ ಪ್ರಸಾದ್, ಪ್ರಧಾನಿ ನೆಹರು, ಪ್ರಧಾನಿ ಲಿಯಾಖತರೊಳಗೆ ಸ್ವಲ್ಪಹೊತ್ತು ಮಾತುಕತೆಗಳು ನಡೆದಿದ್ದುವು. ಆ ಮೇಲೆ, ರಾಜಘಾಟಿನ ಗಾಂಧೀಜೀ ಸಮಾಧಿಯ ಭೇಟಿಗೆ ಹೊರಡುವ ಮೊದಲು ಮಿ. ಲಿಯಾಖತ್ ಮತ್ತು ಪಂಡಿತ ನೆಹರುಗಳೊಳಗೆ ಲಿಯಾಖತ್ ನಿವಾಸದಲ್ಲಿ 2 ತಾಸು 20 ಮಿನಿಟುಗಳ ಸಂಭಾಷಣೆ ನಡೆಯಿತು. ಇದೇ ಹೊತ್ತಿನಲ್ಲಿ ಇಕ್ಕಡೆಯ ಕಾರ್ಯದರ್ಶಿಗಳ ಪ್ರತ್ಯೇಕ ಪರ್ಯಾಲೋಚನಾ ಕೂಟ ನಡೆದಿತ್ತು. ಅಂದು ರಾತ್ರಿ ಅಧ್ಯಕ್ಷ ಪ್ರಸಾದರಿಂದ ಔತಣ ಸತ್ಕಾರ ನಡೆಯಿತು.

ತಾ. 3ನೇ ಮುಂಜಾನೆ ಎರಡುರಾಷ್ಟ್ರಗಳ ಕಾರ್ಯದರ್ಶಿಗಳೊಳಗೆ ಭಾರತದ ವಿದೇಶ ಸಂಬಂಧ ಕಚೇರಿಯಲ್ಲಿ ಸುದೀರ್ಘ ಮಾತುಕತೆಗಳಾದುವು. ಅಪರಾಹ್ನದಲ್ಲೂ ಅವರ ಜತೆ ಮಾತುಕತೆಗಳದ್ದುವು. ಪ್ರಧಾನ ಮಂತ್ರಿಗಳಿಬ್ಬರೂ ಈ ದಿನ ಸುಮಾರು 2½ ತಾಸು ಪರ್ಯಾಲೋಚನೆ ನಡೆಸಿದರು. ಆ ಮೇಲೆ ಪಂಡಿತ ನೆಹರುಗಳು ತನ್ನ ಮಂತ್ರಿಮಂಡಲದ ಸಭೆ ಕರೆದು, ಮಾತುಕತೆಗಳ ಪರಿಚಯ ನಿವೇದನೆ ಮಾಡಿಕೊಂಡರು. ಅಂದು, ರಾತ್ರಿ 'ಸಂಭಾಷಣೆ ಪ್ರಗತಿಯಲ್ಲಿದೆ' ಎಂಬ ಅಂಶವುಳ್ಳ ನೆಹರು-ಲಿಯಾಖತ್ ಜತೆ ಪ್ರಕಟಣೆಯೊಂದು ನೆಹರೂ ಕಾರ್ಯಾಲಯದಿಂದ ಪ್ರಥಮ ಬಾರಿ ಹೊರಬಿತ್ತು. ಆ ರಾತ್ರಿ ಮಿಕ್ಕ ಭಾರತ ಮಂತ್ರಿಗಳ ಸಮೇತ ಪಾಕಿಸ್ತಾನ್ ಪ್ರಧಾನಿಗಳಿಗೆ ಪಂಡಿತ ನೆಹರುಗಳ ಔತಣ ಸತ್ಕಾರವಾಯಿತು.

ತಾ. 4ರಲ್ಲಿ ಮುಂಜಾನೆ ಯಥಾಪ್ರಕಾರ ಇಕ್ಕಡೆಯ ಕಾರ್ಯದರ್ಶಿಗಳ ವಿಚಾರ ವಿನಿಮಯ ಕೂಟ ನಡೆಯಿತು. ಅಂದು ಅಪರಾಹ್ನ ಪ್ರಧಾನಿಗಳ ಮಾತುಕತೆ ಪುನಃ ಕೆಲಕಾಲ ನಡೆಯಿತು. ಅಲ್ಪ ಸಂಖ್ಯಾಕರ ರಕ್ಷಣಾ ನಿರ್ಣಯಗಳನ್ನು ಕಾರ್ಯರೂಪಕ್ಕೆ ತರುವ ಒಂದು ಯಂತ್ರದ ರೂಪರೇಖೆ ಹೊಳೆದುದು ಈ ಸಂಭಾಷಣೆಯ ನಂತರವೇ. ಈ ದಿನವೂ ಲಿಯಾಖತರೊಡನೆ ಮಾತಾಡಿದ ಬೆನ್ನಲ್ಲೇ ಪಂಡಿತಜೀ ತನ್ನ ಮಂತ್ರಿ ಮಂಡಲಿಯ ಸಭೆಯ ಮುಂದೆ ಸ್ಥಿತಿನಿವೇದನೆ ಮಾಡಿಕೊಂಡರು. ಎರಡು ಪ್ರಮುಖ ಮುಸ್ಲಿಂ ಶಿಷ್ಟ ಮಂಡಲಿಗಳು ಮಿ. ಲಿಯಾಖತ್ ಅಲೀಖಾನರಿಗೆ ಭೇಟಿಕೊಟ್ಟು, ಎರಡು ರಾಷ್ಟ್ರಗಳೊಳಗೊಂದು ಒಡಂಬಡಿಕೆಯಾಗುವ ಅವಶ್ಯಕತೆಯನ್ನು ಮನಗಾಣಿಸಿ, ಕೆಲವು ಸೂತ್ರಗಳನ್ನು ಮುಂದಿಟ್ಟುವು. ಜಮಾಯತ್ ಉಲೇಮಾ-ಇ-ಹಿಂದ್ ಕಾರ್ಯದರ್ಶಿ ಮೌಲಾನಾ ಹಿಫ್ಝುರ್ ರಹಿಮಾನರ 8 ಸೂತ್ರಗಳುಳ್ಳ ಒಪ್ಪಂದ ಕಾರ್ಯಸೂಚಿಯೊಂದು ಈ ದಿನ ಬೆಳಕು ಕಂಡಿತು. ಇಂದು ಅಪರಾಹ್ನ ಅಧ್ಯಕ್ಷ ಪ್ರಸಾದರು ಮಿ. ಲಿಯಾಖತರನ್ನು ಬರಮಾಡಿಸಿಕೊಂಡು ಮುಕ್ಕಾಲು ತಾಸು ಮಾತನಾಡಿದ್ದರು. ಮರುದಿನ ಬೊಂಬಾಯಿಗೆ ಹೊರಡಲಿದ್ದ ಅಧ್ಯಕ್ಷರು ಔಪಚಾರಿಕವಾಗಿ ಈ ಸಂಭಾವನೆಯಿತ್ತರೆಂದು ತಿಳಿದು ಬರುತ್ತದೆ.

ತಾ. 5ನೇ ಮುಂಜಾನೆ ಪ್ರಧಾನಿ ನೆಹರು, ಪ್ರಧಾನಿ ಲಿಯಾಖತ್, ಉಪಪ್ರಧಾನಿ ಪಟೇಲರು ಒಟ್ಟಿಗೆ ಸರಕಾರೀ ಭವನದಲ್ಲಿ ಔತಣಮಾಡಿ, ಎರಡು ತಾಸುಗಳಿಗೂ ಮಿಕ್ಕಿ ವಿಚಾರ ವಿನಿಮಯ ನಡೆಸಿದರು. ಇಬ್ಬರು ಪ್ರತಿನಿಧಿಗಳ ಆ ಮಾತುಕತೆಗಳಲ್ಲಿ ಸರ್ದಾರ್ ಪಟೇಲರು ಪ್ರತ್ಯಕ್ಷ ಭಾಗವಹಿಸಿದುದು ಇದೇ ಮೊದಲ ಬಾರಿ. ಈ ಸಭೆಯಲ್ಲಿ ಎರಡು ರಾಷ್ಟ್ರಗಳ ಜತೆಹೇಳಿಕೆಯ ಮತ್ತು ಅದರ ಶರ್ತಗಳ ಪಾಲನೆಗಾಗಿ ಎರಡೂ ರಾಷ್ಟ್ರಗಳಲ್ಲಿ ರಚಿಸಲ್ಪಡಬೇಕಾದ ಕಮಿಶನುಗಳ ರೂಪರೇಖೆಯನ್ನೊಳಗೊಂಡ ಕರಡು ತಯಾರಿ ಕಾರ್ಯ ಪೂರ್ಣಗೊಂಡಿತು. ಅಂದು ಅಪರಾಹ್ನ ಪಾಕಿಸ್ತಾನೀ ಕಾರ್ಯದರ್ಶಿಗಳ ಮತ್ತು ಭಾರತ ಸರಕಾರದ ವ್ಯಾಪಾರ, ಹಣಕಾಸು, ಉದ್ದಿಮೆ ಮತ್ತು ಸರಬರಾಯಿ ಖಾತೆಯ ಕಾರ್ಯದರ್ಶಿಗಳ ಮಿಶ್ರ ಕೂಟ ಸೇರಿ ವಿಚಾರ ವಿನಿಮಯಗಳಾದುವು. ಎರಡು ರಾಷ್ಟ್ರಗಳೊಳಗಿನ ವ್ಯಾಪಾರ ವಹಿವಾಟುಗಳಿಗೆ ಸಂಬಂಧಿಸಿದ ಚರ್ಚೆಗಳು ಇಲ್ಲಿ ನಡೆದಿರಬೇಕು.

ತಾ. 6ರಲ್ಲಿಯೂ ಯಥಾಪ್ರಕಾರ ಎರಡೂ ಸರಕಾರಗಳ ಕಾರ್ಯದರ್ಶಿ ಮಂಡಲಿಯೊಳಗೆ ಚರ್ಚೆಗಳಾದುವಲ್ಲದೆ, ಪ್ರಧಾನಿಗಳಿಬ್ಬರ ಕೂಟವೂ 90 ಮಿನಿಟುಗಳ ವರೆಗೆ ನಡೆದ, ಹಿಂದಿನ ದಿನ ಆಕಾರ ಕೊಡಲ್ಪಟ್ಟಿದ್ದ ಕರಾರು ಕರಡಿನ ಕುರಿತು ಪುನರ್ವಿಮರ್ಶೆ ನಡೆಯಿತು.

ತಾ. 7ರಲ್ಲಿಪುನಃ ಎರಡೂ ಸರಕಾರಗಳ ಕಾರ್ಯದರ್ಶಿಗಳ ಸಮ್ಮೇಳನ ನಡೆಯಿತು. ಅಂದು ಅಪರಾಹ್ನಮತ್ತೊಮ್ಮೆ ಇಬ್ಬರು ಪ್ರಧಾನಿಗಳೊಟ್ಟಾಗಿ ಒಂದು ತಾಸು ಪರ್ಯಾಲೋಚನೆ ನಡಸಿದರು; ರಾತ್ರಿ ಊಟಕ್ಕೆ ಮೊದಲು ಮತ್ತೊಮ್ಮೆ ಅರ್ಧ ತಾಸುಗಳ ವಿಚಾರವಿನಿಮಯ ನಡೆಯಿತು; ಈ ಸಂದರ್ಭದಲ್ಲಿ ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರರೂ ಹಾಜರಿದ್ದರು. ಒಡಂಬಡಿಕೆಯ ಮೂಲಭೂತ ಸೂತ್ರಗಳ ಮಟ್ಟಿಗೆ ತಾ. 5ರ ಸಭೆಯಲ್ಲೇ ಒಮ್ಮತವಾಗಿದ್ದರೂ, ಆ ಮೇಲಿನ ದಿನಗಳಲ್ಲಿ ಅದನ್ನು ಕಾರ್ಯಕ್ಕಿಳಿಸುವ ವಿಧಾನಗಳ ಕುರಿತು ಮತ್ತು ಕರಾರಿನ ಒಕ್ಕಣೆಯ ಕುರಿತು ಸವಿವರ ವಿಮರ್ಶೆ ನಡೆದು ತತ್ಪರಿಣಾಮವಾಗಿ ಕರಡು ಪ್ರತಿಯಲ್ಲಿ ಕೆಲವು ಬದಲಾವಣೆಗಳಾದುವೆಂದು ತಿಳಿದುಬಂತು.

ತಾ. 8ನೇ ಪೂರ್ವಾಹ್ನ ನೆಹರು-ಲಿಯಾಖತರೊಳಗೆ 90ಮಿನಿಟುಗಳ ಮಾತುಕತೆ ನಡೆಯಿತು. ಅದು ಮುಗಿದೊಡನೆ ಮಿ. ಲಿಯಾಖತ್ ಅಲಿಖಾನರು, ಆಗ ತಾನೇ ಬೊಂಬಾಯಿಯಿಂದ ಮರಳಿದ್ದ ಅಧ್ಯಕ್ಷರ ಭೇಟಿ ಮಾಡಿದರು. ಏಳುದಿನಗಳ ವಿಚಾರ ಶರಧೀ ಮಂಥನದಿಂದೆದ್ದ ಅಮೃತ ಕಳಶವೆನ್ನಬಹುದಾದ ಭಾರತ ಪಾಕಿಸ್ತಾನ್ ಒಪ್ಪಂದ ಕರಾರೊಂದಕ್ಕೆ ಇಂದು ಅಪರಾಹ್ನ 2ತಾಸು ಕಳೆದೊಡನೆ ನೆಹರೂ ಲಿಯಾಖತರ ಸಹಿಬಿತ್ತು. ಎರಡೂ ರಾಷ್ಟ್ರಗಳ ಅಲ್ಪ ಸಂಖ್ಯಾಕರ ರಕ್ಷಣಾ ಸಂಬಂಧವಾಗಿ ಭಾರತ ಮತ್ತು ಪಾಕಿಸ್ತಾನಗಳು ಒಮ್ಮತದ ಕಾರ್ಯಕ್ರಮವೊಂದನ್ನು ಕೈಕೊಂಡಂತಾಯಿತು. ಸಹಿ ಬಿದ್ದೊಡನೆ 'ಒಪ್ಪಂದವಾಯಿತು' ಎಂಬುದನ್ನು ಸಾರುವ ಸರಕಾರೀ ಪ್ರಕಟಣೆಯೊಂದು ಹೊರಬಿತ್ತು:— 'ಭಾರತ ಮತ್ತು ಪಾಕಿಸ್ತಾನಗಳೊಳಗಿನ— ವಿಶೇಷತಃ ಪೂರ್ವ ಬಂಗಾಳ, ಪಶ್ಚಿಮ ಬಂಗಾಳ, ಅಸ್ಸಾಮ್ ಮತ್ತು ತ್ರಿಪುರಗಳ—ಅಲ್ಪ ಸಂಖ್ಯಾಕರ ಸಮಸ್ಯೆಗಳ ಪರಿಹಾರಕ್ಕಾಗಿ ಕೈಕೊಳ್ಳತಕ್ಕ ಹಂಚಿಕೆಗಳ ಕುರಿತು ಒಂದು ಒಡಂಬಡಿಕೆಯಾಯಿತು. ಎಪ್ರಿಲ್ 10ರಲ್ಲಿ ಇಲ್ಲಿ ಭಾರತ ಪಾರ್ಲಿಮೆಂಟಿನ, ಅಲ್ಲಿ ಪಾಕಿಸ್ತಾನ್ ಘಟನಾ ಸಮಿತಿಯ, ಮುಂದೆ ಏಕಕಾಲದಲ್ಲಿ ಈ ಕರಾರನ್ನು ಮಂಡಿಸಲಾಗುವದು. ಈ ಸಂಭಾಷಣೆಯು ಆಮೂಲಾಗ್ರವಾಗಿ ಸ್ನೇಹಮಯ ವಾತಾವರಣದಲ್ಲಿ, ಶಾಂತಿ ಸಾಧನೆಯ ಸಹಜಾಂತಃಕರಣದಿಂದ ನಡೆದಿದ್ದಿತು. ಒಪ್ಪಂದವು ತೃಪ್ತಿಕರವಾಗಿ ಜಾರಿಗೆ ಬರುವಂತೆ ನೋಡುವದಕ್ಕಾಗಿಯೂ, ಎರಡು ರಾಷ್ಟ್ರಗಳಿಗೆ ಸಂಬಂಧಿಸಿದ ಇತರ ಸಮಸ್ಯೆಗಳ ತೀರ್ಮಾನಕ್ಕಾಗಿಯೂ ಇಬ್ಬರು ಪ್ರಧಾನಿಗಳು ಇನ್ನೂ ಆಗಿಂದಾಗ್ಯೆ ಪರಸ್ಪರ ಭೇಟಿಯಾಗಲಿದ್ದಾರೆ'—ಎಂಬುದೇ ಪ್ರಕಟಣೆಯ ಸಾರ.

ಮುಂಗಡೆ ಅಡ್ಡ ಬರುವ ಆತಂಕಗಳೊಂದಿಗೆ ಅಡ್ಡಗಾಲಿಡುವ ಆಕ್ಷೇಪಗಾರರೂ ಇದ್ದರು; ಹಿಂಗಡೆ, ಹಿಂದಕ್ಕೆಳೆಯುವ ಘಟನೆಗಳು ಮತ್ತು ಕೈಗಳಿದ್ದುವು. ಆದರೂ ನೆಹರೂ ಲಿಯಾಖತರು ತಮ್ಮ ಪ್ರಯತ್ನದಲ್ಲಿ ವಿಜಯಿಗಳಾದರು. ಇಲ್ಲಿದೆ—ಈ ಇಬ್ಬರು ನಾಯಕರ ವಿಶೇಷ ಯೋಗ್ಯತೆ!

ತಾ 8ನೇ ಅಪರಾಹ್ನ 3 ತಾಸಿಗೆ ಮಿ. ಲಿಯಾಖತ್ ಅಲೀಖಾನರು ತನ್ನ ಅನುಯಾಯಿಗಳೊಂದಿಗೆ ನವದೆಹಲಿಯ ಪಾಲಮ್ ನಿಲ್ದಾಣದಲ್ಲಿ ವಿಮಾನ ಹತ್ತಿ ಕರಾಚಿಗೆ ಹೊರಟುಹೋದರು. ಅವರನ್ನು ಬೀಳ್ಕೊಳ್ಳಲು ಪಂಡಿತ ನೆಹರು, ಅಧ್ಯಕ್ಷರ ಮಿಲಿಟರಿ ಕಾರ್ಯದರ್ಶಿ ಮತ್ತಿತರ ಮೇಲಧಿಕಾರಿಗಳು, ಇಂಗ್ಲೆಂಡು, ಪಾಕಿಸ್ತಾನಗಳ ಹೈಕಮಿಶನರರೇ ಮೊದಲಾದವರು ನಿಲ್ದಾಣಕ್ಕೆ ಬಂದಿದ್ದರು. ನೆಹರುಗಳಿಗೆ ಹಸನ್ಮುಖದಿಂದ ಹಸ್ತಲಾಘವ ಕೊಡುವಾಗ "ನಿಮ್ಮನ್ನು ಮತ್ತೊಮ್ಮೆ ನೋಡುವ ಬಯಕೆಯಿದೆ; ಕರಾಚಿಗೆ ಬನ್ನಿ" ಎಂದರು ಲಿಯಾಖತ್. ಅವರು ಪತ್ರಿಕಾಪ್ರತಿನಿಧಿಗಳ ಪ್ರಶ್ನೆಗಳಿಗೆ ಹರ್ಷೋಲ್ಲಾಸದಿಂದ ಕುಶಲ ಉತ್ತರಗಳನ್ನಿತ್ತರು. "ಪುನಃ ಭಾರತಕ್ಕೆ ಬರಲಾಶಿಸುತ್ತೇನೆ; ದಿನ ಗೊತ್ತಿಲ್ಲ. ದಿಲ್ಲಿಯ ಹವಾಮಾನ ಮೆಚ್ಚಿದ್ದರಿಂದ ಇಷ್ಟು ದಿನಕಳೆದೆ. ನೆಹರುಗಳನ್ನು ಕರಾಚಿಗಾಮಂತ್ರಿಸಿದ್ದೇನೆ; ಅವರೊಪ್ಪಿದ್ದಾರೆ. ನಾವುಭೂಮಿಯ ಮೇಲಿನ ಎಲ್ಲಾ ವಿಷಯಗಳ ಕುರಿತೂ ಮಾತಾಡಿಕೊಂಡೆವು ನನ್ನನ್ನು ನೋಡಿದಾಗ ಸಮಾಧಾನಗೊಂಡವನಂತೆ ಕಾಣುವದಿಲ್ಲವೆ? ನನಗೆ ತೃಪ್ತಿಕರವಾಗದ ಒಡಂಬಡಿಕೆಯಲ್ಲಿ ಪಾಲುಗಾರನಾಗುವವನು ನಾನಲ್ಲ. ಎರಡೂ ಕಡೆಯಿಂದ ಸೌಹಾರ್ದತೆಯ ನಿಧಿಯೊಂದು ಜಮಾಯಿಸಲ್ಪಟ್ಟಿದೆ; ಇನ್ನದು ಹಾಳಾಗದಂತೆ ನೋಡುವದು ಪತ್ರಿಕೆಗಳ ಕೆಲಸ" ಎಂದಿದ್ದರು ಮಿ. ಲಿಯಾಖತ್. ಅವರು, ಬಂದ ಕೆಲಸ ಮಾಡಿಕೊಂಡು ಮರಳುವ ಕೃತಾರ್ಥನಾಗಿ ದಿಲ್ಲಿಬಿಟ್ಟರು.

## ಸಂತೋಷ ವಾರ್ತೆ

ನೆಹರೂ ಲಿಯಾಖತ್ ಒಪ್ಪಂದ ವಾರ್ತೆ ಕಿವಿಗೆ ಬಿದ್ದೇಳುವಾಗ, ಸ್ವವಾರ್ತೆಯ ಸುಖಾನುಭವವೊಮ್ಮೆ ಆಗುತ್ತದೆ. ಇಬ್ಬರು ನಾಯಕರ ಹೃದಯಾಂತರಾಳದಲ್ಲಿ ಹುದುಗಿದ್ದ ಶಾಂತಿ ಪ್ರೇಮ ಮತ್ತು ಉಚ್ಚ ಮಾನವೀಯತೆಗಳು ಮೇಲೆದ್ದು ಕಾರ್ಯ ಪ್ರವೃತ್ತವಾಗದಿರುತ್ತಿದ್ದರೆ, ಒಂದು ಒಡಂಬಡಿಕೆಯನ್ನು ಸ್ವಪ್ನದಂತಿರುವ ದುರ್ವಾತಾವರಣವು ವ್ಯಾಪಿಸಿಕೊಂಡಿದ್ದು, ಅದೇ ಕೊನೆಯ ಮಟ್ಟಕ್ಕೇರುತ್ತಿದ್ದಿತು. ಪೂರ್ವ ಬಂಗಾಳದಲ್ಲಿ ಮುಸ್ಲಿಮೇತರರ ಮೇಲೆ ಆಗುತ್ತಿದ್ದ ಅತ್ಯಾಚಾರಗಳು ಕೊನೆಯ ಅಂಕದಲ್ಲಿ ಭಾರತದ ಮನಸ್ಸನ್ನು ಎಷ್ಟೊಂದು ಕದಡಿದ್ದುವೆಂಬುದು ಸರ್ವರಿಗೂ ಮನದಟ್ಟಾಗಿರುವ ವೇದನೆ. ಒಂದು ಸಂಧಾನ, ಇಲ್ಲವೇ ಪ್ರತ್ಯಕ್ಷ ಘರ್ಷಣೆ ವಿನಹ ಇದ್ದಂತಿರಲಾಗದ ಪರಿಸ್ಥಿತಿ ನಿರ್ಮಾಣಗೊಂಡಿದ್ದಿತು. ಮಿ. ಲಿಯಾಖತ್ ಅಲೀಖಾನರು ಪಾಕಿಸ್ತಾನೀ ಸಂಪ್ರದಾಯ ವಿರುದ್ಧವಾಗಿ ಸದಾ

THE BOMBAY LIFE ASSURANCE COMPANY, LTD.
ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್
(ಸ್ಥಾಪನೆ: 1908)
ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭನನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು
ಪ್ರಧಾನ ಏಜಂಟರು:
ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ ಉಡುಪಿ.
ಇವರ ಶಾಖಾ ಕಚೇರಿಗಳು:-
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.
ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿವವರಾದ
ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು
ಸಲ್ಲಿಸಿದುತ್ತೇವೆಂಬುವೇ ನಮ್ಮ ಹೆಗ್ಗಳಿಕೆಯ ಮಾತು.
ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಭೌಗೋಳಿಕ ನಕಾಶೆ ಕೈಕೊಂಡು ಇವೆರ ಡರ ಪೈಕಿ ಯಾವುದೊಂದು ಪ್ರಜೆಗಳೇ ಕೈಕಡಿ ದಾವಂತೆ ಸಮಭಾಗಿಗಳಾಗಿ ಬಂದೀತು ನಿಜಕ್ಕೂ ಆಶ್ಚರ್ಯವಿದೆ. ಭಾರತ-ಪಾಕಿ ಸ್ತಾನಗಳೇನೂ ಪರಸ್ಪರ ಪರಕೀಯ ರಾ ಷ್ಟ್ರಗಳಲ್ಲ; ಚಿರಕಾಲದಿಂದ ಅಖಂಡ ವಾಗಿದ್ದು ಮೊನ್ನೆ ತಾನೇ ದ್ವಿದಳವಾದವು ಗಳು. ಮಾನುಷತ್ವಕ್ಕೇನೇ ಅಸಹ್ಯವಾ ಗುವ ಜಾತೀಯ ಅತ್ಯಾಚಾರಗಳು ನಡೆ ಯದಿದ್ದರೆ, ಈಗ ಒಬ್ಬರ ತಂಟೆಗಿನ್ನೊಬ್ಬ ರು ಹೋಗಬೇಕಾದ ಅವಶ್ಯಕತೆಯೇ ಇಲ್ಲ. ಇನೆರಡು ಹೋಳುಗಳನ್ನು ಈ ಕಾಲದಲ್ಲಿ ಕೃತಕ ರೀತಿಯಿಂದ ಪುನ: ಒಂದುಗೂಡಿ ಸಿಕೊಳ್ಳಬೇಕೆಂದು ಸುವಿಚಾರಿಗಳಾರೂ ಬಯಸುವದಿಲ್ಲ. ಆದ್ದರಿಂದ ಪ್ರತ್ಯೇಕ ಇವೆರಡು ರಾಷ್ಟ್ರಗಳೂ ತಂತಮ್ಮ ನೀತಿ ಮತ್ತು ತಂತಮ್ಮ ಸ್ಥಿತಿಯನ್ನು ನೋಡಿ ಕೊಂಡಿರುವ ವಾತಾವರಣವು ನಿರ್ಮಾಣ ಗೊಳ್ಳುವುದು ಅಪೇಕ್ಷಣೀಯವಲ್ಲವೆಂದಾ ರೂ ಹೇಳಲಾರರು. ಈ ರಾಷ್ಟ್ರಗಳ ನಾ ಯಕದ್ವಯ ನೆಹರೂ-ಲಿಯಾಖತರಾ ದರೂ ಒಬ್ಬರನ್ನೊಬ್ಬರರಿಯದವರಲ್ಲ; ಎ ರಡೂ ರಾಷ್ಟ್ರಗಳಜನರೂ ಈ ಇಬ್ಬರನ್ನೂ ಸರಿಯಾಗಿ ಅರಿತಿದ್ದಾರೆ. ಭಾರತಕ್ಕೆ ನೆಹ ರೂ, ಪಾಕಿಸ್ತಾನಕ್ಕೆ ಲಿಯಾಖತ್ ಸರ್ವ ಪ್ರಥಮ ಅಧಿಕಾರ ಚಾಲಕರಷ್ಟೇ ಅಲ್ಲ— ಅದ್ವಿತೀಯ ವಿಶ್ವಾಸೀ ನಾಯಕರೂ ಹೌ ದು. ಇವರಿಬ್ಬರಿಗೂ ಈ ಸ್ಥಾನಗಳನ್ನೊದ ಗಿಸಿಕೊಟ್ಟುದು ರಾಷ್ಟ್ರ ಸ್ವಾತಂತ್ರ್ಯಕ್ಕಾಗಿ ಮತ್ತು ಪಾಕಿಸ್ತಾನಕ್ಕಾಗಿ ಹಿಂದೆ ನಡೆ ದಿದ್ದ ಚಳವಳಗಳು ಮತ್ತು ತರ ವಿದ್ಯಮಾನ ಗಳಷ್ಟೇ ಅಲ್ಲ, ಸ್ವತಃ ಇವರ ವ್ಯಕ್ತಿತ್ವ ಮ ತ್ತು ಯೋಗ್ಯತೆಗಳು ಕೂಡಾ ಎಂಬುದು ಸ್ಪಷ್ಟ. ಇಕ್ಕಡೆಯ ಈ ನಾಯಕರುಗಳಲ್ಲಿ ತುಂಬಿರುವ ಮಾನವೀಯತೆ, ಉಚ್ಚ ನಾಗ ರೀಕತೆ, ವಿಚಾರಬುದ್ಧಿ ಮತ್ತು ಹೊಣೆ ಗಾರಿಕೆಗಳೆಂತಹವೆಂಬುದು ಇಲ್ಲೀ ಒಪ್ಪಂ

ದೇಶ್ವೆ ಮಾಖತರ ಸಂಕ್ಷಿಪ್ತ ವೃತ್ತಾಂತ ಫೆಬ್ರವರಿ ಓ ವಿನ. ಪೂರ್ವಬಂಗಾಳದ ಅತ್ಯಾಚಾರಗಳು ಶೀಘ್ರ ಅಶಕ್ಯವಾದಾಗ ಈ ಪುರಂದರನ್ನು ನಡಿಸಿಕೊಂಡು ಸುಮ್ಮಗಿರಲು ನಮ್ಮಿಂದ ಸಾಧ್ಯವಿಲ್ಲ. ಶಾಂತಿ ಮಂತ್ರ ಪಠಿಸುತ್ತಾ ಯುದ್ಧಕ್ಕಿಂತಲೂ ಭೀಕರವಾದ ಹೇಯ ಪರಿಸ್ಥಿತಿಯನ್ನು ಇರಗೊಡಿಸುವದಕ್ಕಿಂತ ಅಗತ್ಯಬೀಳುವ ಯಾವ ಕಾರ್ಯವನ್ನಾದ ರೂ ಕೈಕೊಳ್ಳುವದೇ ಸರಿ" ಎಂದು ನೆಹ ರು ಘರ್ಜಿಸಿದ್ದರು. "ನಮಗೆ ಯುದ್ಧಾ ಪೇಕ್ಷೆಯಿಲ್ಲ; ಆದರೆ ಯಾರಾದರೂ ನಮ್ಮ ಮೇಲೇರಿ ಬರುತ್ತಾರಾದರೆ ಕೈ ತೋರಿಸಿ ಬಿಡುತ್ತೇವೆ" ಎಂದು ಲಿಯಾಖತ್ ಪ್ರತಿ ಘರ್ಜನೆ ಕೊಟ್ಟಿದ್ದರು. ಇಂತಹ ಕಠೋ ರ ಸ್ವರಗಳನ್ನು ಹೊರಡಿಸಿದ, ಆವೆರಡು ಹೃದಯಗಳ ತಳದಲ್ಲೂ, ಮನುಷ್ಯ ಸಾಧ್ಯ ವಾದ ಸರ್ವ ಪ್ರಯತ್ನ ಮಾಡಿಯಾದರೂ ಅಂತಹ ದುಸ್ಸಂದರ್ಭವನ್ನು ತಪ್ಪಿಸಲೇ ಬೇಕೆಂಬ ಆತುರವು ಹುದುಗಿದ್ದಿತು; ಅವು ಗಳಿಂದ ನಿರ್ಮಲಾಂತರ್ಯಗಳು ಹೊ ರಚಿಮ್ಮಿ ಕೊಳೆ ಕಲ್ಮಷಗಳನ್ನು ಕೊಚ್ಚಿ ತೆಗೆಯುವ ಪ್ರವಾಹಗಳಾಗಿ ಹರಿದು,ಪರ ಸ್ಪರ ಸಂಗಮಗೊಂಡವು; ಒಂದು ಒಡಂ ಬಡಿಕೆಯಾಯಿತು. ತಮ್ಮನ್ನು ವಿಚಾರಿ ಸದೇನೇ ಪಾಕಿಸ್ತಾನ್ ಪ್ರಧಾನಿಯನ್ನು ಆಮಂತ್ರಿಸುವ ಸ್ವಾಧಿಕಾರವನ್ನು ಪಂಡಿತ ನೆಹರುಗಳು ಪ್ರದರ್ಶಿಸಿದ್ದರೆಂದೂ, ಭಾರ ತದೊಳಗಿನ ಅತ್ಯಾಚಾರಗಳನ್ನೇ ಅತಿ ಯಾಗಿ ವರ್ಣಿಸಿದ್ದರೆಂದೂ ನೆಹರೂ ಮಂ ತ್ರಿ ಮಂಡಲಿಯ ಗಡ್ಗಿಲ್, ಶ್ಯಾಮ ಪ್ರಸಾದ ಮುಖರ್ಜಿ, ನಿಯೋಗಿ, ಅಂಬೇ ಡ್ಕರ್, ಬಲದೇವ ಸಿಂಗರು ನಿಷೇಧ ಪ್ರ ದರ್ಶನಕ್ಕೆ ಮುಂದಾಗಿ, ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷದ ಸಭೆಯಲ್ಲಿಬಿಸಿಮಾತು ಗಳಾಗಿದ್ದುವೆಂಬ ಗಾಳೀ ವಾರ್ತೆಗಳಿವೆ: ಈ ಐವರು ಪ್ರತಿವಾದಿ ಮಂತ್ರಿಗಳ ರಾ ಜೀನಾಮೆಗಳೋ ನಿಷೇಧ ಪತ್ರಗಳೋ ಪ್ರಧಾನಿ ನೆಹರುಗಳಿಗೆ ಹೋಗಲಿದ್ದು, ಸರಕಾರದಲ್ಲಿ ಒಡಕುಂಟಾಗುವ ವಿಷಮ ಸ್ಥಿತಿಯೆದ್ದಾಗ ಸರ್ದಾರ್ ಪಟೇಲರು ಸ ಮಜಾಯಿಸಿದ್ದರೆಂಬಂತಹ ವದಂತಿಗಳು ಹರಡಿವೆ. ಶ್ರೀ ನಿಯೋಗಿ ಮತ್ತು ಡಾ| ಶ್ಯಾಮಪ್ರಸಾದ ಮುಖರ್ಜಿಯವರು ರಾಜಿ ನಾಮೆಯೊಪ್ಪಿಸಿದ್ದಾರೆಂಬ ಸುದ್ದಿ ಪ್ರ ಕಟವಾಗಿದೆ. ಸುಳಿದಾಟದಲ್ಲಿರುವ ಈ ಸುದ್ದಿಗಳಲ್ಲಿ ಹೆಚ್ಚು ಸತ್ಯಾಂಶಗಳಿರ ಬೇಕೆಂದು ಊಹಿಸಬಹುದು. ನೆಹರೂ ಹೃದಯದಷ್ಟು ವಿಶಾಲ

ವಿಶದ ದೂರ್ವ ಮಂತ್ರಿ ಹೃದಯಕ್ಕಾದರೂ ಪಾಕಿಸ್ತಾನದ ಹಿಂದಿನ ಆಚರಣೆಗಳನ್ನು ಅರಗಿಸಿಕೊಳ್ಳುವದು ಅಸಾಧ್ಯವಾದ್ದರಿಂದ ಇಂದಿನ ಸ್ವಲ್ಪದು ಧೋರಣೆಯು ಅವರಲ್ಲಿ ಸಹಜವಾಗಿ ಅತೃಪ್ತಿಯನ್ನು ನಿರ್ಮಿಸಿರಬಹುದೆಂದು! ಕಟ್ಟಿ ಕೊಳ್ಳಬಹುದು. ಆದರೆ ಯಾ ವ ಪ್ರಾಣ ಹಾನಿ, ಸೊತ್ತು ಹಾನಿ, ಮಾನ ಹಾನಿಗಳನ್ನು ಸಹಿಸಲಿಕ್ಕಾಗದೆ, ಜಾತೀ ಯ ಅತ್ಯಾಚಾರದ ಶಮನಾರ್ಥವಾಗಿ ಯುದ್ಧಕ್ಕೇಳಬೇಕೆಂಬ ಸ್ಫೂರ್ತಿಯೇಳು ತ್ತಿದೆಯೋ, ಅಂತಹ ಹಾನಿಗಳು ಇಂತಹ ಯುದ್ಧದ ದೆಸೆಯಿಂದ ಇನ್ನಷ್ಟು ದೊಡ್ಡ ಪರಿಮಾಣದಲ್ಲಿ ನಡೆಯುವವೆಂಬುದನ್ನು ಮರೆಯಬಾರದು. ಭಾರತ-ಪಾಕಿಸ್ತಾನ್ ಎರಡರ ಅಸ್ತಿತ್ವಕ್ಕೂ ಗಂಡಾಂತರವೊಡ್ಡ ಬಲ್ಲ ಅಪಾಯಗಳು ಲೋಕಗರ್ಭದಲ್ಲಿರ ಬಹುದೆಂಬುದೆಡೆಗೂ ನೋಡಿಕೊಳ್ಳಲಿಕ್ಕಿ ದೆ.ಹೀಗಿದ್ದರೂ;ನೆಹರುಗಳಂದಂತೆ ಯುದ್ಧ ಕ್ಕಿಂತಲೂ ಹೇಯವಾದ ಪರಿಸ್ಥಿತಿಯುಂ ಟಾದರೆ ಅದರ ನಿವಾರಣೆಗೆ ಅನಿವಾರ್ಯ ವಾಗುವ ಎಂತಹ ಕಾರ್ಯಕ್ಕಾದರೂ ಕೈ ಯಿಕ್ಕಬೇಕೆಂಬುದು ನಿಜ. ಆದರೆ ಅಂ ತಹ ಹೇಯ ವಾತಾವರಣವನ್ನು ಥಿಷ್ಟೀ ಒಪ್ಪಂದದಂತಹ ಶಾಂತ ವಿಧಾನಗಳಿಂದ ಲೇ ಶುದ್ಧೀಕರಿಸಲು ಸಾಧ್ಯವೆಂದಾದರೆ, ಹೀಗಾಗಬಾರದು ಎಂದು ಆಕ್ಷೇಪಿಸುವವ ರನ್ನು ನ್ಯಾಯವಾದಿಗಳೆನ್ನಲು ಬರುವದಿ ಲ್ಲ. ವೈಷಮ್ಯಪೂರಿತ ವಾತಾವರಣದಲ್ಲಿ ಸೌಹಾರ್ದತೆ ಸ್ಥಾಪಿಸುವುದು, ಕೊಳಚೆ ಕುಂಡದಲ್ಲಿ ಸುವಾಸನೆಯನ್ನೆಬ್ಬಿಸುವಷ್ಟೇ ಕಷ್ಟದ ಕೆಲಸವೆನ್ನಬೇಕಲ್ಲದೆ, ತಪ್ಪು ಕಾ ರ್ಯವೆಂದು ಹೇಳುವವರಿರಲಾರರು. ಇಂ ತಹ ಅತಿ ಪ್ರಯಾಸದ ಕಾರ್ಯವನ್ನಾದ ರೂ ಸಾಧಿಸುವ ಯೋಗ್ಯತೆಯು ನೆಹರೂ- ಲಿಯಾಖತರಲ್ಲಿದೆ. ಪಂಜಾಬು, ಬಂ ಗಾಳ ಮತ್ತು ದೇಶದ ಆದ್ಯಂತವೂ ಹಿಂ ದೂ ಮುಸ್ಲಿಂ ವೈಷಮ್ಯ ತುತ್ತತುದಿಗೇರಿ ದ್ದ ಹಿಂದಿನ ಕಾಲದಲ್ಲಿ ಕೂಡಾ, ಇಕ್ಕಡೆ ಯವರನ್ನೂ ನಿಷ್ಕಲ್ಮಷ ಸಮಭಾವದಿಂದ ಕಾಣಲು ಸಾಧ್ಯವಿದ್ದ ಧುರೀಣರೆಂದರೆ ಗಾಂಧೀ, ನೆಹರುಗಳಿಬ್ಬರೇ. ಆದ್ದರಿಂದ ಈ ಬಾರಿ ಪಂಡಿತಜೀ ಪ್ರದರ್ಶಿಸಿದ ವಿ ಶಾಲ ಹೃದಯವೇನೂ ಹೊಸತಲ್ಲ. ಆ ಕಡೆಯ ಮಿ. ಲಿಯಾಖತ್ ಅಲೀಖಾ ನರಾದರೋ ಮುಸ್ಲಿಂ ಲೀಗ್ ಚಳ ವಳದ ಆ ಕಾಲದಲ್ಲೂ 'ಸಂಧಿಸ ಬಹುದಾದ ಜನ'ಎಂದು ಪರಿಚಿತರಾದವ

ರು. ಸಂಧಾನಕ್ಕೆ ಹೇಳಿಸಿದ ಗುಣಗಳು ಮಿ. ಲಿಯಾಖತರಲ್ಲಿರುವಷ್ಟು ಮಿ. ಜಿನ್ನರ ಸಮೇತ ಬೇರಾವ ಲೀಗ್ ನಾಯ ಕನಲ್ಲೂ ಇಲ್ಲವೆಂಬ ಅನುಭವವು ಆಗಲೇ ಆಗಿದ್ದಿತು. ದೇಶ ವಿಭಜನೆಯ ಕೆಲವು ವರುಷಗಳಿಗೆ ಮೊದಲು ಕೇಂದ್ರ ಎಸೆಂಬ್ಲಿ ರಂಗದಲ್ಲಿ ಕಾಂಗ್ರೆಸ್ ಪಕ್ಷದ ನಾಯಕ ಭುಲಾಭಾಯಿ ದೇಸಾಯಿಗಳೊಂದಿಗೆ ಒಂ ದು ಒಡಂಬಡಿಕೆ ಮಾಡಿಕೊಂಡಿದ್ದವರು ಮಿ. ಲಿಯಾಖತರೇ. ಕಾಂಗ್ರೆಸ್-ಲೀಗು ನಡುವೆ ನಾಮಮಾತ್ರ ಒಪ್ಪಂದವಾದರೂ ಆದುದಿದ್ದರೆ, ಅದು ಆ ಪಕ್ಷದ ಲಿಯಾಖ ತರ ಮೂಲಕವೇ ಹೊರತು ಬೇರೊಬ್ಬ ರಿಂದಲ್ಲ. ಈ ಬಾರಿ ಪೂರ್ವ ಬಂಗಾಳ ದಲ್ಲಿ ಸ್ವತಃ ಸಂಚರಿಸಿ, ಮುಸ್ಲಿಮರು ಮಾಡಿದ್ದ ಅತ್ಯಾಚಾರಗಳನ್ನು ಪ್ರತ್ಯಕ್ಷ ಕಂಡ ಮಿ. ಲಿಯಾಖತ್‌ಅಲೀಖಾನರು ಅವುಗಳನ್ನು ಖಂಡತುಂಡ ಮಾತುಗಳಿಂದ ಖಂಡಿಸಿದ್ದರು; ಅದರ ತೀಕ್ಷ್ಣತೆಯು ಪಾಕಿಸ್ತಾನದ ಆಕಾಶವಾಣಿಗೇನೇ ಅಸಹ್ಯ ವಾಗಿ, ಆ ಹೇಳಿಕೆಯ ಬಹುಭಾಗವನ್ನು ಅದು ಘೋಷಿಸದೇನೇ ಬಿಟ್ಟಿದ್ದಿತು. ತ ಮ್ಮನ್ನೊಮ್ಮೆ ಹೊತು ಬಿಡುವಂತಹ ಕೂ ಳಕು ರಾಶಿಗಳನ್ನು ಪ್ರಚಲಿತ ವಾತಾವರಣ ವು ತಂದೊಡ್ಡಿದರೂ, ಎಲ್ಲಿಂದಲೂ ಶುಭ್ರ ಕಾಶದತ್ತ ನೋಡುವ ದೃಷ್ಟಿಯು ನೆಹರೂ- ಲಿಯಾಖತರಲ್ಲಿದೆ ಎಂಬುದು ಮತ್ತೊ ಮ್ಮೆ ಸ್ಪಷ್ಟವಾಗಿದೆ. ಇದು ಅಸಾಧ್ಯ, ಅವ್ಯವಹಾರ್ಯವೆಂದಲ್ಲದೆ ಅನ್ಯಾಯವೆಂ ದಾರೂ ಹೇಳಲಾರರು. ನ್ಯಾಯ ಮತ್ತು ಅಗತ್ಯವಿದ್ದರೂ ಅಸಾಧ್ಯವೆಂದಿದ್ದುದನ್ನು ಸಾಧ್ಯಗೊಳಿಸುವ ಉಚ್ಚಮಾನವೀಯ ಗುಣಯೋಗ್ಯತೆಗಳುಳ್ಳ ನಾಯಕರು ಭಾ ರತ ಮತ್ತು ಪಾಕಿಸ್ತಾನಕ್ಕಿರುವರೆಂಬುದ ಕ್ಕಾಗಿ ಸಂತೋಷಿಸಬೇಕು. ಇಂದಿನ ಲೋಕ ವಾತಾವರಣ ದೃಷ್ಟಿಯಿಂದಲೂ ಇವೆರಡು ರಾಷ್ಟ್ರಗಳು ಏಕಮತದಿಂದಿರ ಬೇಕಾದುದು ಅಗತ್ಯವೇ. ಇಂತಹ ಕಾಲ ದಲ್ಲಿ ನೆಹರು ಲಿಯಾಖತರಂತಹ ಯೋಗ್ಯ ಮುಂದಾಳುಗಳಿದ್ದಾರೆಂಬುದಕ್ಕಾಗಿ ಸಂ ಬಂಧಪಟ್ಟ ಜನತೆ ಭರವಸೆ ಮತ್ತು ಹೆ ಗ್ಗಳಿಕೆಯುಳ್ಳವರಿರಬಹುದು.

---

## ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

Sub Court S. C. S. No-12/1949

R. E. P. No. 57/1950

ವಾದಿಳು—ಲಿಲ್ಲಿ ಫೆರ್ನಾಂಡಿಸ್, ಜೋನ್ ಪೆ ರ್ನಾಂಡಿಸರವರ ಮಗಳು, ಮಂಗಳೂರು ತಾ ಲ್ಲೂಕು ಪದವು ಗ್ರಾಮದ ಕುಲ್ಶೇಕರ್ ಚರ್ಚ್ ಗೇಟ್ ಬಳಿಯಿರುವವಳು— ಅರ್ಜಿದಾರಳು.

ಮತ್ತು

ಬೊನವೆಂಚರ್ ಯಿಮಾನುವೇಲ ರಾಡ್ರಿಗ್ಸ್, ರುಜಾರಿ ರಾಡ್ರಿಗ್ಸನ ಮಗ, ಮಂಗಳೂರು ಶ ಹರ ಕದ್ರಿಯಲ್ಲಿರುವವ. —ಯದ್ರಿ.

ಮೇಲ್ಕಂಡ ಅಮಲ್ಜ್ಯಾರಿಯಲ್ಲಿ ನಿಮ್ಮ ಬಾ ಬ್ತು ಪಚ್ಚನಾಡು ಗ್ರಾಮದ ಮೂಲಗೇಣಿ ಪಕ್ಕಿನ ಆಸ್ತಿಯನ್ನು ಅರ್ಜಿದಾರಳು ಜಪ್ತು ಅಪೇಕ್ಷಿಸಿದ ಮೇರೆಗೆ ಸದರಿ ಆಸ್ತಿಯು ಜಪ್ತಿ ಯಾಗಿರುವುದರಿಂದ ಸದರಿ ಜಪ್ತಿಯ ಹುಕು ಮು ನಿಮ್ಮ ಮೇಲೆ ಜ್ಯಾರಿ ಮಾಡುವಂತೆ ಹು ಕುಮು ಆಗಿ, ಸದರಿ ಅಮಲ್ಜ್ಯಾರಿಯು ತಾರೀ ಕು 25-4-1950ಕ್ಕೆ ಯಿಟ್ಟಿರುವುದರಿಂದ ಸ ದರಿ ಜಪ್ತಿಯ ವಿಶಯದಲ್ಲಿ ನಿಮ್ಮ ಆಕ್ಷೇಪಣೆ ಯು ಯಿರುವಲ್ಲಿ ಅದನ್ನು ಸದರಿ ತಾರೀಕು 25-4-1950ರಲ್ಲು ಬೆಳಿಗ್ಗೆ 10 ಗಂಟೆಗೆ ಸರಿ ಯಾಗಿ ಮೇಲ್ಕಂಡ ಕೋರ್ಟಿನ ಮುಂದೆ ಹಾ ಜರು ಆಗಿ ಜ್ಯಾಹೀರು ಮಾಡಿಕೊಳ್ಳಬಹು ದೆಂಬ ಸಂಗತಿ ಯೀ ಮೂಲಕ ನಿಮಗೆ ತಿಳಿ ಯಪಡಿಸೋಣಾಗುತ್ತದೆ.

**A. N. S. Achar,**

Pleader for Petitioner.

Karkala

ತಾರೀಕು 4-4-50

---


ಕನ್ನಡಿಗರೆಲ್ಲರ ಕಣ್ಮನ ಸೆಳೆದು ಪ್ರಸಿದ್ಧವಾದ

# ಮಧುವನ

ಅಖಿಲ ಕರ್ನಾಟಕದ ಪ್ರಾತಿನಿಧಿಕ ಕಥಾಸಂಕಲನ

25 ಕತೆಗಳು ಬೆಲೆ ರೂ 3 0 0

ಸಿಗುವ ಸ್ಥಳಗಳು:-

1 ಕಿರಿಯರ ಪ್ರಪಂಚ, ಉಡುಪಿ
2 ನವಭಾರತ ಬುಕ್ ಡಿಪೊ, ಉಡುಪಿ
3 ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.


---

In the Court of the Subordinate Judge of South Kanara.

R. E. P. No. 337/49
in O. S. 142/47
R. E. A. 5150

Between
Kamala & others—Petitioners
Vs
Somakke & another—
—Respondents.

Take notice that the above named Petitioners have applied for sale of the immoveable properties belonging to you and fully described in the sale proclamation. You are hereby informed that the 28th day of June 1950 has been fixed for setting the terms of the sale proclamation of sale and also applied for permission to bid and setoff at the sale.

By order of the Court.

(Sd) **S. Venkat Rao,**

Vakil for Petitioners.

Mangalore 10-4-1950

ಕಳೆದ ದಿನಗಳ ಜಾಗತಿಕ ವಿದ್ಯಮಾನಗಳ ಕಡೆಗೆ ದೃಷ್ಟಿ ಬೀರುವಾಗ ಶಾಂತಿ ಅಥವಾ ಸಂಧಾನ ಸಾಧನೆಗಳ ಪ್ರಯತ್ನಗಳ ನೋಟವೇನೋ ಕಾಣಿಸುತ್ತಿದೆ; ಆದರೆ ಆ ಪ್ರಯತ್ನ ದೃಶ್ಯಗಳ ಒಳಗಡೆ ಯಥಾರ್ಥ ಶುದ್ಧ ಹೃದಯವಿರುವಂತೆ ತೋರುವುದಿಲ್ಲ. ಲೋಕದ ವಿವಿಧ ರಂಗಗಳ ಚಟುವಟಿಕೆಗಳಂತೆಯೇ ಭಾರತ ಸಂಬಂಧದ ಆಗುಹೋಗುಗಳಲ್ಲೂ ತೊಗಟೆ ರಮ್ಯತೆಯನ್ನು ತಿರುಳು ಸಮೃದ್ಧತೆ ಗೋಚರಿಸುವುದಿಲ್ಲವೆನ್ನಬಹುದು. ಅಂತೂ ಬೇರೆಯವರ ವೆಚ್ಚದಿಂದ ಶಾಂತಿಯನ್ನು ಪಡಕೊಳ್ಳುವ ಆತುರವು ಎಲ್ಲರಲ್ಲೂ ಇದೆಯಾದರೂ, ಸ್ವತಃ ಮೌಲ್ಯ ತೆರಲು ಯಾರಿರುವದು ಕಾಣಿಸುತ್ತಿಲ್ಲ!

# ಪ್ರಾಪಂಚಿಕ ಸ್ಥಿತಿಗತಿ

## ಜಾಗತಿಕ ರಂಗದಲ್ಲಿ

ಸಂಯುಕ್ತ ರಾಷ್ಟ್ರ ಸಂಘದ ಚತುರ್ಥ ಮಹಾಧಿವೇಶನದ ಅಧ್ಯಕ್ಷ ಜನರಲ್ ರೋಮೊಲೊ, ಅವರು ಇದೇ ತಾ. ೨ರಲ್ಲಿ ಲೋಕ ಶಾಂತಿಗಾಗಿ ಮತ್ತೊಮ್ಮೆ ವಿನಂತಿ ಮಾಡಿಕೊಂಡಿದ್ದಾರೆ. "ಇಂದಿನ ಘಂಡಾ ಸಮರವನ್ನು ನಿಲ್ಲಿಸಲು ಜಾಗತಿಕ ಮಹಾ ರಾಷ್ಟ್ರಗಳು ಮತ್ತೊಂದು ಹೊಸ ಮಹಾ ಪ್ರಯತ್ನವನ್ನು ಮಾಡಬೇಕು. ದೊಡ್ಡ ರಾಷ್ಟ್ರಗಳು ಶಾಂತಿಗಾಗಿ ಸಹಕರಿಸದಿದ್ದರೆ ನಮಗೆ ಶಾಂತಿ ದೊರೆಯದು. ಯುದ್ಧವನ್ನು ತಡೆಗಟ್ಟುವ ಅಥವಾ ಬೇಕಾಯದೇಶೀರಗೊಳಿಸುವ ಒಮ್ಮತಕ್ಕೆ ಅವು ಬರುವವರೆಗೂ ಇಂದಿನಂತೆಯೇ ನಾವು ಶಾಶ್ವತ ಅಪಾಯದ ನಡುವೆ ಬಾಳಬೇಕಾಗುವುದು. ಮಾನವ ಜನಾಂಗದ ಅತ್ಯಧಿಕ ಸಂಖ್ಯಾತರ ಬಯಕೆಯೇ ಇದಾಗಿದೆ. ಮನುಷ್ಯ ಜನಾಂಗಕ್ಕೆ ಈ ಕಾಲದಷ್ಟು ಬಲವಾಗಿ ಹಿಂದೆಂದೂ ಶಾಂತಿಯಾಶೆ ಮೂಡಿದ್ದಿಲ್ಲ" ಎಂದಿದ್ದಾರೆ ಜನರಲ್ ರೊಮೊಲೊ.

ಇಂಗ್ಲಾಂಡಿನ ಅತಿ ದೊಡ್ಡ ರಾಜಕೀಯ ಪಕ್ಷವಾಗಿದ್ದು, ಕೂಲಿಗಾರ ಪಕ್ಷದೊಡನೆ ಜೋಡಣೆಗೊಂಡಿರುವ 'ಸಹಕಾರೀ ಪಕ್ಷ"ದ ವಾರ್ಷಿಕಾಧಿವೇಶನವು ಲೋಕ ಶಾಂತಿ ಪ್ರಯತ್ನದಲ್ಲಿ ಬ್ರಿಟನೇ ಮೊದಲ ಹೆಜ್ಜೆಯಿಟ್ಟು ಸಾಗಬೇಕೆಂದು ಕೇಳಿಕೊಂಡಿದೆ. "ಜಾಗತಿಕ ನಿಶ್ಶಸ್ತ್ರೀಕರಣ ಮತ್ತು ಅಟಂ ಶಸ್ತ್ರಗಳ ನಿಷೇಧಕ್ಕಾಗಿ ಬ್ರಿಟಿಷ್ ಕೂಲಿಗಾರ ಸರಕಾರವು ಸಂಯುಕ್ತ ರಾಷ್ಟ್ರ ಸಂಘದ ಮುಂದೆ ಹೊಸ ಸೂಚನೆಗಳನ್ನಿಡಬೇಕು" ಎಂದು ಈ ಸಮ್ಮೇಳನವು ಠರಾಯಿಸಿದೆ.

ಮಲಯದಲ್ಲಿ ಉಗ್ರ ರೀತಿಯ ಒಳಸಂಗ್ರಾಮ ನಡೆದೇ ಇದೆ. ಅಲ್ಲಿಯ ತಮ್ಮ ವಿರೋಧಿಗಳನ್ನು ಸದೆಬಡಿಯಲು ಬ್ರಿಟಿಷರು ಇತರ ಕಾಮನ್‌ವೆಲ್ತ್ ರಾಷ್ಟ್ರಗಳ ಸಹಾಯವನ್ನು ಕೇಳಲಿದ್ದಾರೆಂಬುದು ಬ್ರಿಟಿಷ್ ಕಾಮನ್‌ವೆಲ್ತ್ ಕಾರ್ಯದರ್ಶಿಗಳ ಪಾರ್ಲಿಮೆಂಟಿನಲ್ಲಿತ್ತ ಹೇಳಿಕೆಯಿಂದ ವ್ಯಕ್ತವಾಗಿದೆ.

ಇಂಡೋನೇಶಿಯಲ್ಲಿ, ಕ್ಯಾಪ್ಟನ್ ಅಬ್ದುಲ್ ಅಝೀಝ್ ಎಂಬ ದಳನಾಯಕನು ತನ್ನ ಅನುಯಾಯಿಗಳೊಂದಿಗೆ ದಂಗೆಯೆದ್ದು ಸರಕಾರೀ ಸೇನೆಗಳನ್ನು ಸೋಲಿಸಿ ಪೂರ್ವ ಇಂಡೋನೇಶಿಯದ ರಾಜಧಾನಿ ಮಕಸ್ಸಾರನ್ನು ವಶಪಡಿಸಿಕೊಂಡಿದ್ದ. ದಂಗೆಯೆದ್ದ ಈ ಸೇನಾನಿಯು 48 ತಾಸುಗಳೊಳಗೆ ಜಕಾರ್ಟಾದಲ್ಲಿ ಹಾಜರಾಗಿ ತನ್ನ ದಗೆಗೆ ತಕ್ಕ ಪ್ರಾಯಶ್ಚಿತ್ತವನ್ನು ಅನುಭವಿಸಬೇಕೆಂದು ಇಂಡೋನೇಶಿಯ ಫೆಡರಲ್ ಸರಕಾರದ ಕಟ್ಟಾಜ್ಞೆಯು ತಾ. 7ನೇ ರಾತ್ರಿ ಹೋಗಿದೆ. ತಪ್ಪಿದಲ್ಲಿ ಈ ಕುರಿತು ಕಠಿಣ ಕಾರ್ಯಾಚರಣೆ ಕೈಕೊಳ್ಳಲು ಇಂಡೋನೇಶಿಯಾ ಸರಕಾರ ತಯಾರಾಗಿದೆ.

ಚೈನದೊತ್ತಿನ ಇಂಡೋ-ಚೈನದಲ್ಲಿ ಕಮ್ಯೂನಿಸ್ಟ್ ಚೈನದಿಂದ ಶಸ್ತ್ರ ಸಹಾಯ ಪಡೆಯುತ್ತಿರುವ ವೀಟ್‌ಮಿನ್ ಸೇನೆ ಮತ್ತು ಇಂಡೋಚೈನದ ಅಧಿಕಾರ ನಿರ್ವಹಿಸುತ್ತಿರುವ ಫ್ರೆಂಚ್ ಸೇನೆಗಳೊಳಗೆ ಕಳೆದ ಕೆಲಕಾಲದಿಂದ ಹೋರಾಟಗಳಾಗುತ್ತಲೇ ಇದ್ದು, ಫ್ರೆಂಚ್ ಸೇನೆಗಳೀಗ ಬಸವಳಿದ ಲಕ್ಷಣಗಳು ಕಾಣಿಸುತ್ತಿವೆ. ಫ್ರೆಂಚರು ಸೇನೋಪಕರಣಗಳ ಸಹಾಯಕ್ಕಾಗಿ ಇಂಗ್ಲಾಂಡು ಅಮೇರಿಕಗಳೊಡನೆ ಅವಸರದ ಮೊರೆಯಿಟ್ಟಿದ್ದಾರೆ. ರಾಜಧಾನಿ ಸೈಗೋನಿಗೆ 100 ಮೈಲು ದೂರದ ಹೊಳೆ ವಲಯದ ಅಯಕಟ್ಟು ಸ್ಥಳದ ಮೇಲೆ ವೀಟ್‌ಮಿನ್ ಸೇನೆಗಳ ಪ್ರಚಂಡ ಧಾಳಿ ನಡೆದು ಸಂಗ್ರಾಮವಾಗುತ್ತಿದೆ.

ಪೆಲಸ್ಟೈನ್ ಸಂಬಂಧದ ಅರಬ್-ಯೆಹೂದೀ ಜಗಳವೀಗ ಪುನಃ ಪ್ರಕಾಶಕ್ಕೆ ಬರಹತ್ತಿದೆ. ಸಂಯುಕ್ತ ರಾಷ್ಟ್ರ ಸಂಘವು ನೇಮಿಸಿದ "ಸಮಜಾಯಿಸುವ ಸಮಿತಿ"ಯವರ ಇದುವರೆಗಿನ ಯಾವ ರಾಜೀ ಪ್ರಯತ್ನವೂ ಜಯಶೀಲವಾಗಿಲ್ಲ. ಅಲ್ಲಿಯ ಪವಿತ್ರ ನಗರ ಜೆರುಸಲೇಮನ್ನು ಅಂತರ್ರಾಷ್ಟ್ರೀಯ ನಗರವಾಗಿ ಇಡಬೇಕೆಂಬ ಸಂಯುಕ್ತ ರಾಷ್ಟ್ರ ಸಂಘದ ಸೂಚನೆಗೆ ಅರಬರು ಕೆಲವು ಶರ್ತಗಳೊಂದಿಗೆ ಒಪ್ಪಿರುವರಾದರೂ ಯೆಹೂದಿಗಳ ಇಸ್ರಾಯೆಲ್ ಸರಕಾರವೊಪ್ಪುವಂತಿಲ್ಲ. 1947ರಲ್ಲಿ ಜಾಗತಿಕ ಸಂಘವು ಮಾಡಿದ್ದ ಪೆಲಸ್ಟೈನ್ ವಿಭಜನೆಯಲ್ಲಿದ್ದುದಕ್ಕಿಂತ ಹೆಚ್ಚು ಸ್ಥಳಗಳನ್ನು ಯೆಹೂದಿಗಳು ಆಕ್ರಮಿಸಿಕೊಂಡಿದ್ದಾರೆ. ಇವೆಲ್ಲಾ ಕಾರಣಗಳಿಂದಾಗಿ ಇಸ್ರಾಯೇಲ್ ಸರಕಾರದೊಡನೆ ಸಂಧಾನ ಮಾತುಕತೆ ನಿರರ್ಥಕವೆಂದೂ, 'ಸಮಜಾಯಿಸುವಿಕೆ ಸಮಿತಿ'ಯು ಮರಳಿ ಹೋಗುವದು ವಿಹಿತವೆಂದೂ ಅರಬ್ ರಾಷ್ಟ್ರಗಳಾದ ಸಿರಿಯ, ಇರಾಕ್ ಮತ್ತು ಲೆಬನಾನ್‌ಗಳ ಪ್ರಧಾನ ಮಂತ್ರಿಗಳು ಹೇಳಿಕೆಯಿತ್ತಿದ್ದಾರೆ. ಇಸ್ರಾಯೇಲಿನ ಮೇಲೆ ಆರ್ಥಿಕ ದಿಗ್ಬಂಧನವನ್ನು ಬಲಗೊಳಿಸುವ ಹಂಚಿಕೆಗಳನ್ನು ಅರಬೀ ರಾಷ್ಟ್ರಗಳು ಕೈಕೊಂಡಿವೆ.

ಜಪಾನಿನ ಆಕ್ರಮಣಾಡಳಿತೆಯನ್ನು ಮುಕ್ತಾಯಗೊಳಿಸಿ, ಶಾಂತ ಸಮುದ್ರದ ಇತರ ಮಿತ್ರ ರಾಷ್ಟ್ರಗಳೊಂದಿಗೆ ಜಪಾನಿನೊಡನೆ ಅಗತ್ಯವುಳ್ಳ ಒಂದು ಸಂಬಂಧ ಕರಾರನ್ನು ಮಾಡಿಕೊಳ್ಳುವ ಆಲೋಚನೆಯೀಗ ಅಮೇರಿಕದ ಸರಕಾರೀ ನಾಯಕರುಗಳಲ್ಲಿ ಮೊಳೆತಿದೆ. ಅಗತ್ಯಬಿದ್ದರೆ ರಶ್ಯವನ್ನು ಬಿಟ್ಟೇ ಈ ನವ ಸಂಬಂಧ ರಚಿಸಲಾಗುವದು. ಅಮೆರಿಕದ ಹಿತರಕ್ಷಣೆ, ಕಮ್ಯೂನಿಸ್ಟ್ ಅಪಾಯ ಪ್ರತಿಬಂಧ ಹಂಚಿಕೆ, ಮುಂತಾದುವುಗಳ ಸಂಬಂಧದ ಮುಂಜಾಗ್ರತೆಯನ್ನು ಈ ಸಂದರ್ಭದಲ್ಲಿ ವಹಿಸಲಾಗುವದು

ಇಟಲಿ ಮತ್ತು ಯುಗೋಸ್ಲೇವಿಯಾ ರಾಷ್ಟ್ರಗಳ ನಡುವೆ ಇದ್ದು, ಇಟಲಿಯ ಹಕ್ಕಿನದಿದ್ದರೂ ಪ್ರಕೃತ ಒಂದಂಶ ಬ್ರಿಟನ್, ಅಮೇರಿಕಗಳ ಮತ್ತೊಂದಂಶ ಯುಗೊಸ್ಲೇವಿಯದ ಸ್ವಾಧೀನವಿರುವ ಟ್ರೀಸ್ಟೆಯ ಸಂಬಂಧವಾಗಿ ಯುಗೋಸ್ಲೇವಿಯವು ತಮ್ಮೊಡನೊಂದು ಒಪ್ಪಂದಕ್ಕೆ ಬರಬೇಕೆಂದು ಇಟಲಿಯ ವಿದೇಶ ಮಂತ್ರಿ ಸ್ಫೋರ್ಝಾರವರು ಮಾರ್ಶಲ್ ಟಿಟೋರನ್ನು ಕೇಳಿಕೊಂಡಿದ್ದಾರೆ. ಇಟಲಿ-ಯುಗೊಸ್ಲೇವಿಯಗಳೊಳಗೆ ಈ ಸಂಬಂಧವಾಗಿ ಭಿನ್ನಾಭಿಪ್ರಾಯಗಳು ಕಂಡು ಬರುತ್ತಿವೆ.

## ಭಾರತದಲ್ಲಿ

ಮಾಲಕ-ಮಜೂರರೊಳಗಿನ ವಿವಾದಗಳಲ್ಲಿ ಸಂಬಂಧಪಟ್ಟವರು ಅಪೇಕ್ಷಿಸದಿದ್ದರೂ ಸರಕಾರವು ಕೈಹಾಕಿ ಅವುಗಳನ್ನು ಮಧ್ಯಸ್ಥಗಾರ ನ್ಯಾಯಾಲಯದ ತೀರ್ಮಾನಕ್ಕೊಪ್ಪಿಸುವುದೇ ಮೊದಲಾದ ಅಂಶಗಳುಳ್ಳ 'ಕೂಲಿಗಾರ ಸಂಬಂಧ ಮಸೂದೆ' ಮತ್ತು 'ಟ್ರೇಡ್ ಯೂನಿಯನುಗಳ ಮಸೂದೆ'ಗಳು ಭಾರತ ಪಾರ್ಲಿಮೆಂಟಿನ ಮುಂದೆ ಬಂದಿದ್ದು ಪರಿಶೀಲನಾ ಸಮಿತಿಗೊಪ್ಪಿಸಲ್ಪಟ್ಟಿದ್ದುವು. ಈ ಸಮಿತಿಯಿಂದ ವರದಿ ಮಾಡಲ್ಪಟ್ಟಂತೆ 'ಉದ್ದಿಮೆ ವಿವಾದಗಳ ಮಸೂದೆ'ಯು ಈಗ ಪಾರ್ಲಿಮೆಂಟಿನಲ್ಲಿ ಸವಿವರವಾಗಿ ಚರ್ಚಿಸಲ್ಪಡುತ್ತಿದೆ. ಮಜೂರ-ಮಾಲಕ ಸಂಬಂಧದ ವಿವಾದಗಳ ಕುರಿತು ಅಪ್ಪೀಲು ನ್ಯಾಯಾಲಯ ನೇಮಕ ಮತ್ತು ಅದರ ಅಧಿಕಾರ ವಿಧಾನಗಳೇ ಈ ಮಸೂದೆಯ ಮುಖ್ಯಾಂಗಗಳಿವೆ.

ಇಡೀ ಬೊಂಬಾಯಿ ಸಂಸ್ಥಾನದಲ್ಲಿ ಪೂರ್ಣ ಪಾನ ನಿಷೇಧ ಜಾರಿಯ ಉದ್ಘಾಟನೆಯನ್ನು ಭಾರತಾಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರು ಎಪ್ರಿಲ್ ತಾ. 6ರಲ್ಲಿ ನೆರವೇರಿಸಿದರು. ಅಂದು ಚೌಪಾತಿ ಸಮುದ್ರ ತೀರದಲ್ಲಿ ಸೇರಿದ ಸುಮಾರು ಒಂದು ಲಕ್ಷ ಜನರ ಸಭೆಯಲ್ಲಿ ಪಾನ ಪ್ರತಿಬಂಧ ಉದ್ಘಾಟನಾ ಭಾಷಣವೀಯುತ್ತಾ "ಬೊಂಬಾಯಿಯಲ್ಲಿ ಪಾನಪ್ರತಿಬಂಧವು ಸದಾಕಾಲಕ್ಕಾಗಿ ಜಾರಿಗೆ ಬಂತು. ಇನ್ನಿಲ್ಲಿ ಹಿಂದೆ ಹೆಜ್ಜೆಯಿಡುವ ಮಾತಿಲ್ಲ. ಭಾರತದ ಇತರ ಕಡೆಗಳಿಗೆ ಮಾತ್ರವಲ್ಲ, ಪಾಶ್ಚಾತ್ಯ ರಾಷ್ಟ್ರಗಳಿಗೂ ಒಂದು ಮಾದರಿಯನ್ನು ಬೊಂಬಾಯಿ ಸಂಸ್ಥಾನ ಹಾಕಿ ಕೊಡಬೇಕು. ಪಶ್ಚಿಮ ರಾಷ್ಟ್ರಗಳಲ್ಲಿ ಪರಾಭವಗೊಂಡಿದ್ದು, ಭಾರತದಲ್ಲಿ ಅಸಾಧ್ಯವೆಂದು ಗಣಿಸಲ್ಪಟ್ಟಿದ್ದ ಪಾನ ನಿಷೇಧವು ಇಲ್ಲೀಗ ನಿಜಕ್ಕೂ ವಸ್ತುಸ್ಥಿತಿಯಾಗಿ ನಿಂತಿದೆ. ಗಾಂಧೀಜೀಯ ಕನಸಿನ ನವಸಮಾಜದ ತಳಗಟ್ಟುಗಳಲ್ಲಿ ಪಾನ ನಿಷೇಧವೂ ಒಂದು. ಈ ಧೋರಣೆಯು ಬೊಂಬಾಯಿ ಸಂಸ್ಥಾನದ ಮಜೂರರಿಗೆ ಮತ್ತು ರೈತರಿಗೆ ಪ್ರಯೋಜನಕಾರಿಯಾಗಿ ಪರಿಣಮಿಸುವದೆಂದು ನನಗೆ ಮನವರಿಕೆಯಾಗಿದೆ". ಎಂದು ರಾಜೇಂದ್ರರಂದರು. ಬೊಂಬಾಯಿ ಸಂಸ್ಥಾನದ ಪೂರ್ಣ ಪಾನನಿಷೇಧವನ್ನು ಹರಸಿ, ಪ್ರೋತ್ಸಾಹಿಸಿ, ಶ್ಲಾಘಿಸಿ, ಎಲ್ಲಾ ರಾಷ್ಟ್ರ ಪ್ರಮುಖರೂ ಸಂದೇಶ ರವಾನಿಸಿದ್ದಾರೆ. ಮದ್ರಾಸಿನಂತೆಯೇ ಅದರೊತ್ತಿನ ಬೊಂಬಾಯಿಯೂ ಈಗ ಸಂಪೂರ್ಣ ಆರಿ, ಇವೆರಡು ಸಂಸ್ಥಾನಗಳ ಏಕ ಮಟ್ಟವು ಭಾರತ ನಕಾಶೆಯಲ್ಲಿ ಅಮಲು ರಹಿತ ವಿಸ್ತಾರ ಭಾಗವಾಗಿ ತೋರುತ್ತಿದೆ.

ಬೊಂಬಾಯಿ ಸರಕಾರವು 'ಪ್ರತಿಬಂಧಕ ಸ್ಥಾನಬದ್ಧತಾ ಶಾಸನ'ದನ್ವಯ ಹಿಂದೂ ಮಹಾ ಸಭಾ ನಾಯಕ ಶ್ರೀ ವಿ.ಡಿ. ಸಾವರ್ಕರರನ್ನು ಬಂಧಿಸಿ ಸ್ಥಾನಬದ್ಧತೆಯಲ್ಲಿರಿಸಿದೆ. ಅಂತೆಯೇ ಶಾಂತಾರಾಮ್, ಶಿವರಾಮ್ ಸಾವರ್ಕರ್, ಆರ್. ಆಗರ್ವಾಲ್, ಎಸ್. ಎಸ್ ಸಪ್ರೆ, ದೇವೋಧರ್, ಹೆಲೆಕರ್, ಅಂಭ್ಯಂಕರ್, ವಿ. ಪಿ. ನಾಯಕ್, ಎಸ್. ಎಮ್. ಮೂಟಿ, ಕೇಸ್ಕರ್, ಭೋರ್ಟ್ಕರ್, ಎಸ್. ಆರ್ ದಾತೆ, ಜಿ ಎಮ್ ನಲ್ವಡೆ, ಮೊದಲಾದವರು ದಿಗ್ಬಂಧನಕ್ಕೊಳಗಾಗಿದ್ದಾರೆ. ಅಖಿಲ ಭಾರತದ ಗಣ್ಯ ಹಿಂದೂ ಮಹಾ ಸಭಾ ಮುಂದಾಳುಗಳೆಲ್ಲರೂ ಈಗ ಬಂಧನದಲ್ಲಿದ್ದಾರೆನ್ನಬಹುದು.

ಈ ವರುಷದ ಕಾಂಗ್ರೆಸ್ ಮಹಾಧಿವೇಶನವನ್ನು ಜುಲಾಯಿ ಅಂತ್ಯಭಾಗದಲ್ಲಿ ಬೆಂಗಳೂರಿನಲ್ಲಿ ಜರಗಿಸಬೇಕೆಂದು ಇದೇ ೬ರಲ್ಲಿ ನವದಿಲ್ಲಿಯಲ್ಲಿ ಸೇರಿದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ನಿಶ್ಚೈಸಿದೆ. ಮದ್ರಾಸಿನ ಶ್ರೀ ಟಿ. ಪ್ರಕಾಶಮ್ ಮತ್ತು ಅವರ 15 ಮಂದಿ ಅನುಯಾಯಿಗಳ ಮೇಲೆ ಶಿಸ್ತು ಜಾರೀ ನೋಟೀಸು ಕೊಡಬೇಕೆಂದು ಕಾರ್ಯಕಾರೀ ಸಮಿತಿಯು ತೀರ್ಮಾನವಾಗಿದೆ. ಆ ಪೈಕಿ ಇಬ್ಬರು ಸದಸ್ಯರು ತಮ್ಮ ತಪ್ಪಿಗಾಗಿ ಪಶ್ಚಾತ್ತಾಪ ಸೂಚಿಸಿ ಕಾಂಗ್ರೆಸ್ ಆಜ್ಞಾಧೀನರಾಗಿರುವೆವೆಂದು ಪ್ರಾರ್ಥಿಸಿಕೊಂಡಿರುವರೆಂದು ತಿಳಿದು ಬಂದಿದೆ. ಬಂಗಾಳದ ಗಲಭೆಯ ದೆಸೆಯಿಂದ ಭಯ ಮತ್ತು ಉದ್ರೇಕ ಮಬ್ಬು ಕವಿದಿರುವ ವಾತಾವರಣವನ್ನು ಮತ್ತೂ ಕೆಡಿಸುವ ಯಾವದೇ ಶಬ್ದ ಅಥವಾ ಕೃತ್ಯವೂ ಯಾರೊಬ್ಬನಿಂದಲೂ ಆಗಬಾರದೆಂದೂ ಜಾತಿಮತಭೇದವಿಲ್ಲದೆ ಸರ್ವರಿಗೂ ಸಮಾನ ಹಾಗೂ ಪೂರ್ಣ ರಕ್ಷಣೆಯಿರುವ ಜಾತ್ಯಾತೀತ ರಾಷ್ಟ್ರದ ಕಾಂಗ್ರೆಸ್ ತತ್ವಗಳನ್ನು ನಿಷ್ಠೆಯಿಂದಂಗೀಕರಿಸುವ ಮೂಲಕವೇ ಈ ಸಮಸ್ಯೆ ನಿವಾರಣೆಗೊಳ್ಳಬೇಕೆಂದೂ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ತನ್ನ ಒಂದು ಠರಾವಿನ ಮೂಲಕ ಭಾರತೀಯರನ್ನು ಕೇಳಿಕೊಂಡಿದೆ

ಬಿಳಿ ಕಾಗದ! ನಾಜೂಕಿನ ಬೈಂಡು!

**1950ನೇ ಇಸವಿಯ ಪಾಕೆಟ್ ಡೈರಿಗಳು**

ದೊಡ್ಡದು [ಕೆಲಿಕೊ ಬೈಂಡ್] 1-12-0
,, [ಸಾದಾ] 1-8-0
ಸಣ್ಣದು [ಕೆಲಿಕೊ] 1-4-0
,, [ಸಾದಾ] 0-12-0
(ಟಪ್ಪಾಲು ಖರ್ಚು ಪ್ರತ್ಯೇಕ.)

ಸಿಗುವ ಸ್ಥಳಗಳು:—
**ನವಭಾರತ ಬುಕ್ ಡಿಪೊ, ಉಡುಪಿ**
**ನವಯುಗ ಪ್ರೆಸ್, ಉಡುಪಿ.**

THE
Canara Banking Corporation Ltd.
(Incorporated in India.)
Estd: 1906.
Head Office : UDIPI, (S. I.)

Capital Authorised .... .... .... Rs. 25,00,000
Capital Issued, Subscribed &
Paid up .... .... .... Rs. 20,00,000
Reserves .... ... .... Rs. 9,44,765

ಗುರುವಾರ ಉಡುಪಿ ೧೩-೪-೧೯೫೦

## ದಿಲ್ಲೀ ಒಪ್ಪಂದ

ನಾವು ಕಳೆದ ವಾರ ಆಶಿಸಿದ್ದ-ನಮ್ಮ ಕನಿಷ್ಠ ಬಯಕೆಯಾಗಿದ್ದ-ಅನುಕೂಲ ವಾತಾವರಣವನ್ನು ನಿರ್ಮಿಸುವಂತಹ ಒಂದು ಒಪ್ಪಂದವೇ ನೆಹರೂ ಲಿಯಾಖತರೊಳಗಾಯಿತೆಂದು ತಿಳಿಸುವ ಸುಯೋಗ ಈ ಬಾರಿ ನಮಗೊದಗಿದೆ. ಒಪ್ಪಂದದ ರೂಪರೇಖೆಯು ಈ ಸಂಚಿಕೆಯ ಬೇರೊಂದೆಡೆಯಲ್ಲಿ ಬಂದಿರುವುದರಿಂದ ಇಲ್ಲಿ ಅದರ ಸವಿವರ ವಿಮರ್ಶೆ ಮಾಡಲೆಳಸುವದಿಲ್ಲ. ಹಾಗೆ ಅಂಶಾಂಶವಾಗಿ ಪರಿಶೀಲಿಸಬೇಕಾದ ಹೊಸ ವಿಷಯ ಈ ಒಡಂಬಡಿಕೆಯಲ್ಲಿಲ್ಲ. ಎರಡೂ ರಾಷ್ಟ್ರಗಳು ತಂತಮ್ಮಲ್ಲಿಯ ಅಲ್ಪ ಸಂಖ್ಯಾಕ ಸಮಾಜಗಳವರಲ್ಲಿ ರಕ್ಷಣಾ ಭರವಸೆ ನಿರ್ಮಿಸುವ ಕಾರ್ಯ ಕೈಕೊಳ್ಳಬೇಕು-ಎರಡೂ ದೇಶಗಳ ಅಲ್ಪ ಸಂಖ್ಯಾಕರಿಗೂ ಪೂರ್ಣಪೌರತ್ವಬಾಧ್ಯತೆಗಳಿರಬೇಕು-ಅವರು ಸ್ವರಕ್ಷಣೆಗಾಗಿ ತಂತಮ್ಮ ಸರಕಾರಗಳ ಕಡೆಗೇನೇ ನೋಡಬೇಕು-ನಿರಾಶ್ರಿತರು ತಂತಮ್ಮ ಮೂಲ ಭೂಮಿಗೇನೇ ಮರಳುವಂತಹ ಅನುಕೂಲತೆಗಳನ್ನೂ ಅವಶ್ಯಕ ವಾತಾವರಣವನ್ನೂ ನಿರ್ಮಿಸಬೇಕು-ಮುಂತಾದ ಒಪ್ಪಂದ ಶರ್ತಗಳೆಲ್ಲವೂ ತೀರಾ ಹಳೆಯವುಗಳೇ; ಇಕ್ಕಡೆಯ ರಾಷ್ಟ್ರನಾಯಕರೂ ತಮ್ಮಷ್ಟಕ್ಕೆ ತಾವು ಕೆಲಕಾಲದಿಂದ ಹಾಡುತ್ತಾ ಬಂದಿದ್ದ ಸೊಲ್ಲುಗಳೇ. ಈ ಹಳೇ ಧಾಟಿಗಳನ್ನು ನೆಹರೂ-ಲಿಯಾಖರು ಒಟ್ಟಾಗಿ ಏಕ ಕಂಠದಿಂದ ಹಾಡಿದರೆಂಬುದೊಂದೇ ಇಲ್ಲಿ ಹೊಸತು. ಹೀಗಾಗಿ, ಇಕ್ಕಡೆಯ ಇಬ್ಬರು ನಾಯಕರು ಈ ಮಟ್ಟಿಗೆ ಬುಡದಿಂದ ತುದಿವರೆಗೂ ಒಂದುಗೂಡಿದ್ದರೆಂಬುದಕ್ಕಿರುವ ಪ್ರಾಮುಖ್ಯತೆ ಈ ಒಪ್ಪಂದದ ಬೇರಾವ ಭಾಗಕ್ಕೂ ಇಲ್ಲವೆನ್ನಬಹುದು. ಇಷ್ಟಕ್ಕಾಗಿ ವಿಶೇಷ ಸಂತೋಷಿಸಬೇಕೆಂದೇನು, ಎಂಬ ಪ್ರಶ್ನೆ ಹುಟ್ಟುವುದು ಸ್ವಾಭಾವಿಕ. ದಿಲ್ಲೀ ಮಾತುಕತೆಗಳ ಪೂರ್ವಸಿದ್ಧತೆಯ ಸಂಭ್ರಮ-ಅದಕ್ಕೆ ದೊರೆತಿದ್ದ ಪ್ರಚಾರ ಪ್ರಾಮುಖ್ಯತೆ-೮ ದಿನಗಳಲ್ಲಿ ಕಂಡು ಬಂದಿದ್ದ ಗಂಭೀರ ಗುಪ್ತತೆ-ಇವುಗಳೊಡನೆ ಒಪ್ಪಂದ ಕರಾರಿನ ಒಕ್ಕಣೆಗಳನ್ನು ತುಲನೆ ಮಾಡುವವರು 'ಇದೊಂದು ಪರ್ವತ ಪ್ರಸವ' ಎಂದೇ ತೀರ್ಮಾನಿಸಬಹುದು. ಮಾತುಕತೆಗಳು ನಡೆಯುತ್ತಿದ್ದ ಅವಧಿಯಲ್ಲೇ ಕೇಳಿ ಬಂದಿದ್ದ 'ಒಪ್ಪಂದ ಶರ್ತಗಳಿಗೆ ಕಾರ್ಯರೂಪ ಕೊಡುವ ಯಂತ್ರ' 'ಕಾರ್ಯ ಪ್ರಚೋದಕ ಕಮಿಶನು'ಗಳ ಹೆಸರುಗಳು ಇಂದಿನ ಕರಾರಿನಲ್ಲಿ ಉಲ್ಲೇಖಿಸಲ್ಪಟ್ಟಿವೆ. ಪೂರ್ವ ಬಂಗಾಳ, ಪಶ್ಚಿಮ ಬಂಗಾಳ, ಅಸ್ಸಾಮು ಮಂತ್ರಿ ಮಂಡಲಗಳಲ್ಲಿ ಆಯಾಯ ಭಾಗದ ಅಲ್ಪ ಸಂಖ್ಯಾಕರಿಗೂ ಒಂದೊಂದು ಸ್ಥಾನ ಕೊಡಬೇಕೆಂಬ ಶರ್ತವೂ ಅದರಲ್ಲಿ ಮೂಡಿದೆ. ಒಪ್ಪಂದ ಕರಾರು ಸಾಮಾನ್ಯ ಸ್ವರೂಪದ್ದಾಗಿ, ಅದು ಕೆಲವೆಡೆ ಅನಿರೀಕ್ಷಿತ ಆಕಾರ ಹೊಂದಲು ವಿಶೇಷಕಾರಣಗಳಿರಬಹುದು. ಹೇಗಿದ್ದರೂ ಇದಕ್ಕಿಂತ ಸ್ಪಷ್ಟಾಕಾರದ ಒಂದು ಕರಾರನ್ನು-ಇದರಲ್ಲಿರುವುದಕ್ಕಿಂತ ಹೆಚ್ಚು ಶರ್ತಗಳನ್ನು-ಯಾರೇಕೆ ಅಪೇಕ್ಷಿಸಬೇಕೋ ತಿಳಿಯದು. ಭಾರತ ಪಾಕಿಸ್ತಾನಗಳೊಳಗೆ ಹಾರ್ದಿಕ ಮೈತ್ರಿಯುಂಟಾಗಬೇಕಾದುದೊಂದೇ ಈಗಿನ ಅವಶ್ಯಕತೆ; ಅಂತಹ ಮೈತ್ರಿಯು ಶರ್ತಗಳನ್ನಾಧರಿಸಿ ನಿಲ್ಲುವಂತಹದಲ್ಲವೆಂಬುದು ಖಂಡಿತ. ಹೃದಯ ಬಾಂಧವ್ಯದ ತಳಹದಿಯ ಮೇಲೆ, ಕಾರ್ಯಕ್ರಮಗಳ ಅಂತಸ್ತುಗಳೇರಬೇಕೇ ಹೊರತು, ಈ ಅಂತಸ್ತುಗಳ ಮೇಲೆ ತಳಕಟ್ಟನ್ನು ಹಾಕಲು ಬರುವದಿಲ್ಲ. ದಿಲ್ಲೀ ಒಪ್ಪಂದವು ಅಂತಹ ಸೌಹಾರ್ದತೆಯ ಅಡಿಗಟ್ಟನ್ನು ಹಾಕಿದೆ; ಇದು ಶಾಶ್ವತವೋ ಅಲ್ಲವೋ ಎಂಬುದನ್ನು ಕಾಲವೇ ತೋರಿಸಿ ಕೊಡಬೇಕಲ್ಲದೆ, ಪ್ರಕೃತ ಯಾವ ಕಡೆಗಾದರೂ ಕೈ ತೋರಿಸುವ ಯೋಗ್ಯತೆ ಯಾರೊಬ್ಬನಿಗೂ ಇಲ್ಲ. ಇದು ಅಶಾಶ್ವತವೆಂಬ ಸಂದೇಹ ತುಂಬಿಕೊಂಡವರಾದರೂ, ಶಾಶ್ವತ ಅನ್ಯೋನ್ಯಾಯುಪಾಯಗಳನ್ನು ಸೂಚಿಸಲಾರರು. ಪರಕೀಯರಿಂದೋ ದುರ್ಜನರಿಂದೋ ಜನರ ಮೇಲೆ ಅವಿಶ್ವಾಸವುಟ್ಟಿಂತೆಯೋ ಅಶಾಶ್ವತವೆಂದೋ ಅಸ್ಪಷ್ಟವೆಂದೋ ಒಪ್ಪಂದಗಳ ಮೇಲೂ ಅಪನಂಬಿಕೆಯಿಡುವವರಿಂದ ಅಶಾಂತಿಯೊಂದರ ನಿರ್ಮಾಣ ಹೊರತು ಬೇರೇನೂ ಆಗುವಂತಿಲ್ಲ; ಯಾವುದೂ ಸಾಗುವಂತಿಲ್ಲ. ಬದಲಿಗೆ, ಯಾವ ಆಧಾರವಿಲ್ಲದೆಯೂ ದೃಢವಾಗಿ ನಿಲ್ಲಬಲ್ಲ ವಿಶ್ವಾಸದ ಬಲದಿಂದಲೇ ಕೆಲಸವಾಗುವದಿದೆ. ನೆಹರು ಲಿಯಾಖತ್ ಒಪ್ಪಂದವು ಬೇರೇನನ್ನಲ್ಲವಾದರೂ ಸದ್ಯಕ್ಕಿಂತಹ ಭರವಸೆಯನ್ನು ನಿರ್ಮಿಸಬಲ್ಲದು; ನಿರ್ಮಿಸಿದೆ. ಅದನ್ನು ಕಟ್ಟಿಕೊಂಡು, ಅದಕ್ಕನುಗುಣವಾದ ವರ್ತನೆಯನ್ನು ವಹಿಸುವದೊಂದೇ ಈಗ ಎಲ್ಲರ ಪಾಲಿನ ಕರ್ತವ್ಯ. ತಂತಮ್ಮಲ್ಲಿಯ ಅಲ್ಪಸಂಖ್ಯಾಕ ಸಮಾಜಗಳವರಿಗೆ ರಕ್ಷಣೆ ಮತ್ತು ನೆಮ್ಮದಿಯನ್ನೀಯುವ ಭರವಸೆಯನ್ನು ಇಕ್ಕಡೆಯವರೂ ಕೊಟ್ಟಿದ್ದಾರೆ. ಈ ಮೊದಲು ಅಂತಹ ಆಶ್ವಾಸನೆಗಳು ಪ್ರತ್ಯಪ್ರತ್ಯೇಕವಾಗಿ ಬಂದಿದ್ದರೆ, ದಿಲ್ಲೀ ಒಪ್ಪಂದದ ಮೂಲಕ ಅವು ಪ್ರತಿಜ್ಞೆಯ ರೂಪ ಧರಿಸಿದ ಪ್ರಗತಿಯಾದರೂ ಆಗಿದೆ. ಸಂಬಂಧಪಟ್ಟ ರಾಷ್ಟ್ರದ ಸರಕಾರಕ್ಕೆ ಮತ್ತು ಅದಕ್ಕಿಂತಲೂ ಹೆಚ್ಚಾಗಿ ಅಲ್ಲಿಯ ಜನತೆಗೆ ಮನಸ್ಸೊಂದಿದ್ದರೆ ಅಲ್ಪಸಂಖ್ಯಾಕರ ರಕ್ಷಣೆಯ ಮಾರ್ಗವೂ ಇದೆ; ಆ ಮನಸ್ಸೇ ಇಲ್ಲದಿದ್ದರೆ ಮಾರ್ಗತೋರಿಸಿಟ್ಟು ಪ್ರಯೋಜನವಂತೂ ಇಲ್ಲ; ಮನಸ್ಸಿದ್ದ ಮೇಲೆ, ಸ್ಪಷ್ಟ ಮಾರ್ಗಗಳನ್ನು ತೋರಿಸಿಲ್ಲವೆಂಬುದಕ್ಕಾಗಿ ಸಂತಾಪ ಪಡಬೇಕೆಂದೂ ಇಲ್ಲ. ದಿಲ್ಲಿ ಒಪ್ಪಂದವು ಇಕ್ಕಡೆಯವರಿಗೂ ಅಂತಹ ಮನಸ್ಸಿದೆ, ಎಂಬುದರ ಒಂದು ದಾಖಲೆ ಮಾತ್ರ; ಅದ್ದರಿಂದಲೇ ಅದು ಸಮಾಧಾನಕರ. ಈ ಒಪ್ಪಂದವನ್ನು ಕಾರ್ಯಕ್ಕಿಳಿಸುವ ವಿಶೇಷ ಯಂತ್ರಗಳ ರಚನೆಯ ಶರ್ತಗಳೇನೋ ಇವೆ. ಆದರೆ ಅದಕ್ಕಾಗಿ ಹಿಗ್ಗಲು ನಮ್ಮ ಮನಸ್ಸೊಪ್ಪುವದಿಲ್ಲ. ಆಯಾ ರಾಷ್ಟ್ರದ ಬಹುಸಂಖ್ಯಾಕ-ಅಲ್ಪಸಂಖ್ಯಾಕ ಸಮಾಜಗಳೆಂಬ ಭೇದವನ್ನಾಧರಿಸಿ ಪ್ರಾತಿನಿಧ್ಯಕೊಟ್ಟು ಅಂತಹ 'ಯಂತ್ರ'ಗಳ ರಚನೆ ಮಾಡುವುದರಲ್ಲಿ ಪಾಕಿಸ್ತಾನ್ ನಿರ್ಮಾಣ ಹೇತುವಾದ ಅಂದಿನ ಪ್ರತ್ಯೇಕ ಪ್ರಾತಿನಿಧ್ಯದ ಅಪಾಯವೇ ಕೆಲವಂಶ ಹುದುಗಿದೆ; ಜಾತ್ಯಾತೀತ ಭಾರತದ ಪಾಲಿಗೆ ಇದು ಎಷ್ಟಕ್ಕೂ ಹಿತಕರವಾಗದ ವಿಷಯವೆಂದು ನಮ್ಮ ಭಾವನೆ. ಭಾರತದ ಎರಡು ಸಂಸ್ಥಾನಗಳ ಮಂತ್ರಿಮಂಡಲಗಳಲ್ಲಿ ಅಲ್ಪಸಂಖ್ಯಾಕರಿಗೊಂದೊಂದು ಸ್ಥಾನಕೊಡಬೇಕೆನ್ನುವ-ಅಲ್ಪಸಂಖ್ಯಾಕ, ಬಹುಸಂಖ್ಯಾಕ ಭಿನ್ನ ಪ್ರಾತಿನಿಧ್ಯಗಳ ಕಮಿಶನುಗಳಾಗಬೇಕೆನ್ನುವ-ಶರ್ತಗಳೇ ದಿಲ್ಲೀ ಒಪ್ಪಂದದ ಕೊಳಕು ಭಾಗ, ದುರ್ಬಲಾಂಗಗಳೆಂದು ನಮಗನ್ನಿಸುತ್ತಿದೆ. ಹಿಂದಿನಂತೆಯೇ ಜಾತೀಯ ಗೊಂದಲಗಳ ವಿಷಪ್ರಸಾದವಾಗಿ, ಇದಕ್ಕಿಂತಲೂ ಹೆಚ್ಚಿನ ಜಾತೀಯ ಪ್ರಾತಿನಿಧ್ಯಮೀಯುವ ಆಪತ್ತು ಈ ಒಡಂಬಡಿಕೆಯ ಮೂಲಕ ಭಾರತದಪಾಲಿಗೊದಗಿದೆ. ಇದಕ್ಕಾಗಿ ಸಮಾಧಾನ ಪಡಬೇಕು. ಹೇಗಿದ್ದರೂ ಜನಪ್ರತಿನಿಧಿ ಸರಕಾರದ ನಾಯಕರು, ಸಂಬಂಧಪಟ್ಟ ಸರ್ವ ವಿಷಯಗಳಿಗೆ ಸರಿಯಾದ ಲಕ್ಷ್ಯಕೊಟ್ಟೇ ಈ ಒಪ್ಪಂದವನ್ನು ಮಾಡಿಕೊಂಡ ಮೇಲೆ, ಅದನ್ನು ಅಸ್ತಿತ್ವದಲ್ಲಿ ತರಲು ತ್ರಿಕರಣ ಪೂರ್ವಕವಾಗಿ ಪ್ರಯತ್ನಿಸುವುದು ತನ್ನ ಕರ್ತವ್ಯವೆಂಬುದನ್ನು ಪ್ರತಿಯೊಬ್ಬರೂ ಲಕ್ಷ್ಯದಲ್ಲಿಡಬೇಕು.

## ದ. ಕ. ಜಿಲ್ಲೆಯ ಇಂದಿನ ಪ್ರಶ್ನೆಗಳು

ಒಂದು ರಾಷ್ಟ್ರ, ಸಂಸ್ಥಾನ, ಜಿಲ್ಲೆ, ಊರು, ವ್ಯಕ್ತಿ ಸಂಬಂಧದ ವಿಶಿಷ್ಟ ಸಮಸ್ಯೆಗಳೋ ಪ್ರಶ್ನೆಗಳೋ ಇದ್ದೇ ಇರುತ್ತವೆ. ಈ ಕಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸಾರ್ವಜನಿಕ ರಂಗದಲ್ಲಿ ಕೇಳಿ ಬರುತ್ತಿರುವ ಪ್ರಶ್ನೆಗಳಿವು:-

ಕಳೆದವರುಷಕ್ಕಿಂತ ಈವರುಷ ಅಕ್ಕಿಯ ಧಾರಣೆಯು ಮತ್ತು ಅಭಾವ ಹೆಚ್ಚಿಗಿರುವುದರಿಂದ ಈ ಬರುವ ಮಳೆಗಾಲವನ್ನು ಕಳೆಯುವುದು ಹೇಗೆ?" ಎಂಬ ಆತುರದ ಪ್ರಶ್ನೆ ಎಲ್ಲೆಲ್ಲೂ ಕೇಳಿ ಬರುತ್ತಿದೆ.

ಹಣಕಾಸಿನ ಚಲಾವಣಾ ಭರವು ಬಹಳವಾಗಿ ತಗ್ಗಿರುವ ನಿತ್ಯಾನುಭವವು ಸರ್ವರಿಗೂ ಆಗುತ್ತಿದೆ. ಆದರೆ ಅದೇ ಪರಿಮಾಣದಲ್ಲಿ ಆವಶ್ಯಕ ಸಾಮಗ್ರಿಗಳ ಬೆಲೆಯಿಳಿಯುವ ಬದಲು ಏರುವುದರಿಂದಾಗಿ ಜೀವನ ಸಂಕಟದ ಪ್ರಶ್ನೆಗಳು ಎಲ್ಲೆಲ್ಲೂ ಎದ್ದಿವೆ.

ಇತ್ತೀಚೆಗಿನ ಒಪ್ಪಂದದ ಪರಿಣಾಮವಾಗಿ ಮೋಟಾರು ಕೆಲಸಗಾರ ವರ್ಗಕ್ಕೆ ಅನ್ಯಾಯವಾಗಿದೆ-ಅವರು ಸಂಕಟಕ್ಕೀಡಾಗಿದ್ದಾರೆ-ಎಂಬುದು ಎಲ್ಲರಿಗೂ ಮಂದಟ್ಟಾಗಿದೆ. ಹೇಗೇಕಾಯಿತು? ಇನ್ನೊಮ್ಮೆ ಮುಷ್ಕರವೆ? ತಾ. 11ರಲ್ಲೇ ಮುಷ್ಕರವೆಂದು ಪ್ರಕಟವಾಗಿತ್ತಲ್ಲ? ಮುಂತಾದ ಸವಾಲುಗಳು ಕೇಳಿಬರುತ್ತಿವೆ.

ಬೇರಾವ ಆಗತ್ಯವೂ ಇಲ್ಲದೆ, ಕೇವಲ ಉದಾರ ಮನಸ್ಸಿನಿಂದ ಮದ್ರಾಸ್ ಸರಕಾರವು ಕೈಕೊಂಡಿರುವ ರಾಜಕೀಯ ಸಂತ್ರಸ್ತರಿಗೆ ಭೂದಾನ ಮಾಡುವ ಕಾರ್ಯದಲ್ಲಾಗಿರುವ ವಿಳಂಬವು-ಸಂಬಂಧಪಟ್ಟವರಲ್ಲಿ ಬೇಸರವನ್ನು ನಿರ್ಮಿಸಿದೆ; ಈ ಕುರಿತು ನಿರಾಶೋದ್ಗಾರಗಳನ್ನು ಅಲ್ಲಲ್ಲಿ ಕೇಳಬಹುದು.

ಕಳ್ಳ ಪಾಸ ತಯಾರೀ ವಾರ್ತೆಗಳು ದಿನದಿನವೂ ಹೆಚ್ಚುಹೆಚ್ಚಾಗಿ ಕಿವಿಗೆ ಬೀಳುತ್ತಿವೆ.

ಮಲ್ಪೆ ಬಂದರದ ಕುರಿತು ಹೀಗೇಕಾಯಿತು? ಕೇಂದ್ರ ಸರಕಾರದಲ್ಲೂ ಹೋಲು ಕಿವಿಯವರಿದ್ದಾರೆಯೆ? ಎಂಬ ಸವಾಲುಗಳೂ ಕೇಳಿಬರುತ್ತಿವೆ.

ದಕ್ಷಿಣ ಕನ್ನಡದ ಪತ್ರಿಕಾ ವಾಚಕ ರಂಗದಲ್ಲಿ ಒಂದು ರೀತಿಯ ಆಸಕ್ತಿಯನ್ನು ನಿರ್ಮಿಸಿರುವ ವಿಷಯವೆಂದರೆ 'ಬಸ್ ಮುಷ್ಕರ' ಸಂಬಂಧವಾಗಿ ಶ್ರೀಗಳಾದ ಕಾರಂತ-ಶುಕ್ಲರೊಳಗೆ ನಡೆದಿರುವ ವಾಗ್ಯುದ್ಧ. ಜಿಲ್ಲೆಯ ಈ ಇಬ್ಬರು ಅಧ್ಯಮಹನೀಯರೊಳಗಿನ ವಾದಪ್ರತಿವಾದಗಳ ನ್ಯಾಯಾನ್ಯಾಯಾಂಶಗಳಿಗಿಂತಲೂ ಅವುಗಳಲ್ಲಿ ತೋರಿಬರುತ್ತಿರುವ ಅಭೇದ್ಯ 'ಹೋರಾಟ ಸ್ಫೂರ್ತಿ'ಯೇ ಜಿಲ್ಲೆಯ ಜನಮನವನ್ನು ವಿಶೇಷ ಆಕರ್ಷಿಸಿದೆ. ಮೇಲ್ಪಟ್ಟದ ಇಬ್ಬರು ಮಹನೀಯರು ಈ ಮಾದರಿಯ 'ವಾದಕುಸ್ತಿ' ಹಿಡಿಯುವ ದೃಶ್ಯವು ಜಿಲ್ಲೆಯ ಪಾಲಿಗೊಂದು ಅಪೂರ್ವ ಮನರಂಜನೆಯಾಗಿದೆ. ಯುದ್ಧಚಾಲಕರಾದ ಸೇನಾನಿಗಳಿಬ್ಬರು ರಣಕಣದ ಮುಂಗಡೆಗೆ ಬಂದು ಮುಖಾಮುಖಿ ಗುಂಡುಹಾರಿಸಿಕೊಳ್ಳುವ ದೃಶ್ಯ ಅಪೂರ್ವವಾದುದೇ. ಇಂತಹ ಸ್ಥಾನವು ಈ ವಾದಯೋಧರಿಗೆ ಕೀರ್ತಿದಾಯಕವೋ, ಅಪಕೀರ್ತಿದಾಯಕವೋ ಎಂಬ ಕುರಿತು ಕೂಡಾ ಭಿನ್ನಾಭಿಪ್ರಾಯಗಳಿರಬಹುದು!

# ನೆಹರು-ಲಿಯಾಖತ್ ಒಪ್ಪಂದ ಕರಾರು

ಇದೇ ತಾ. 10ನೇ ಸೋಮವಾರ ಪಂಡಿತ ಜವಾಹಿರಲಾಲ ನೆಹರುಗಳು ಭಾರತ ಪಾರ್ಲಿಮೆಂಟಿನಲ್ಲೂ, ಮಿ. ಲಿಯಾಖತ್ ಅಲೀಖಾನರು ಪಾಕಿಸ್ತಾನದ ಘಟನಾ ಸಮಿತಿಯಲ್ಲೂ ಭಾರತ-ಪಾಕಿಸ್ತಾನ್ ಸಂಬಂಧದ ನವದಿಲ್ಲಿ ಒಪ್ಪಂದ ಕರಾರನ್ನು ಮಂಡಿಸಿದರು. "ಭವಿಷ್ಯ ಕೃತ್ಯವನ್ನು ಮಾಡುವ ಪ್ರತಿಜ್ಞೆಯಿದು" ಎಂದು ನೆಹರುಗಳಲ್ಲಿ ಅಂತಃಕರಣ ಪೂರ್ವಕವಾಗಿ ನಿವೇದಿಸಿ ಕೊಂಡಂತೆಯೇ "ಈ ಒಪ್ಪಂದವನ್ನು ಸಂಪೂರ್ಣವಾಗಿ ಕಾರ್ಯಕ್ಕಿಳಿಸಬೇಕೆಂಬುದೇ ನನ್ನ ದೃಢ ಸಂಕಲ್ಪ" ಎಂದು ಮಿ. ಲಿಯಾಖತರು ಅಲ್ಲಿ ಜಾಹೀರು ಮಾಡಿದರು.

## ಒಡಂಬಡಿಕೆಯ ರೂಪರೇಖೆ

'ತಮ್ಮ ಅಮೂಲಾಗ್ರ ಕ್ಷೇತ್ರದ ಅಲ್ಪ ಸಂಖ್ಯಾತರಿಗೆ ಧರ್ಮವಾರು ಭೇದವಿಲ್ಲದೆ ಪೂರ್ಣ ಸಮಸಮ ನಾಗರಿಕ ಹಕ್ಕುಬಾಧ್ಯತೆಗಳನ್ನು-ಪ್ರಾಣ, ಸಂಸ್ಕೃತಿ, ಆಸ್ತಿ ಮತ್ತು ವ್ಯಕ್ತಿ ಮರ್ಯಾದೆಗಳ ಸಂಬಂಧದ ಪೂರ್ಣ ರಕ್ಷಣೆಯನ್ನು—ಕಾನೂನು ಮತ್ತು ನೀತಿ ನಿಯಮಗಳಿಗೊಳಪಟ್ಟು ಪ್ರತಿಯೊಂದು ರಾಷ್ಟ್ರದೊಳಗಡೆಯ ಪೂರ್ಣ ಸಂಚಾರ ಸ್ವಾತಂತ್ರ್ಯವನ್ನು ಮತ್ತು ಸ್ಥಳ ಸ್ವಾಧೀನತೆ, ಮಾತು, ಪ್ರಾರ್ಥನೆಗಳ ಸ್ವಾತಂತ್ರ್ಯವನ್ನು—ತಮ್ಮ ಪೈಕಿ ಪ್ರತಿಯೊಬ್ಬರೂ ನಿಶ್ಚಿತವಾಗಿ ಉಳಿಸತಕ್ಕದ್ದೆಂದು ಭಾರತ ಮತ್ತು ಪಾಕಿಸ್ತಾನ್ ಸರಕಾರಗಳು ಈ ಮೂಲಕ ಏಕನಿಷ್ಠೆಯಿಂದ ಒಪ್ಪಿಕೊಳ್ಳುತ್ತವೆ. ತಮ್ಮ ರಾಷ್ಟ್ರದ ಸಾರ್ವಜನಿಕ ಜೀವನದಲ್ಲಿ ಭಾಗವಹಿಸುವ, ರಾಜಕೀಯ ಅಥವಾ ಇತರ ಅಧಿಕಾರ ಸ್ಥಾನಗಳಿಗೇರುವ, ಸಿವಿಲ್ ಅಥವಾ ಸಶಸ್ತ್ರ ಸೇನಾ ದಳಗಳಲ್ಲಿ ಸೇರಿಕೊಳ್ಳುವ ಸಮಯೋಗಗಳು ಪ್ರತಿಯೊಂದು ರಾಷ್ಟ್ರದ ಬಹುಸಂಖ್ಯಾಕ ಸಮಾಜಗಳವರಷ್ಟೇ ಅಲ್ಲಿಯ ಅಲ್ಪಸಂಖ್ಯಾಕ ಸಮಾಜಗಳವರಿಗೂ ದೊರೆಯುವವು. ಈ ಹಕ್ಕು ಬಾಧ್ಯತೆಗಳು ಮೂಲಭೂತವಾದವುಗಳೆಂದೂ, ಅವುಗಳನ್ನು ಪರಿಣಾಮಕಾರಿಯಾಗಿ ಜಾರಿಯಲ್ಲಿಡುವೆವೆಂದೂ ಎರಡೂ ಸರಕಾರಗಳು ಜಾಹೀರ ಮಾಡುತ್ತಿವೆ. ಭಾರತದ ಘಟನೆ ಮೂಲಕವೇ ಈ ಹಕ್ಕುಗಳ ಭರವಸೆಯು ಎಲ್ಲಾ ಅಲ್ಪಸಂಖ್ಯಾತರಿಗೂ ಭಾರತದಲ್ಲಿ ಕೊಡಲ್ಪಟ್ಟಿದೆ ಎಂದು ಭಾರತದ ಪ್ರಧಾನಿಗಳು ತೋರಿಸಿದ್ದಾರೆ. ಪಾಕಿಸ್ತಾನ್ ಘಟನಾ ಸಮಿತಿಯು ಅಂಗೀಕರಿಸಿಕೊಂಡಿರುವ ಉದ್ದೇಶಾತ್ಮಕ ಠರಾವಿನಲ್ಲಿ ಈ ಸ್ವವಿಭಾಗಗಳು ಅಡಕವಾಗಿವೆ ಎಂದು ಪಾಕಿಸ್ತಾನ್ ಪ್ರಧಾನಿಗಳೂ ತೋರಿಸಿಕೊಟ್ಟಿದ್ದಾರೆ. ಯಾವ ಭೇದವೂ ಇಲ್ಲದೆ ತಮ್ಮ ರಾಷ್ಟ್ರೀಯರೆಲ್ಲರಿಗೂ ಈ ಪ್ರಜಾಸತ್ತಾತ್ಮಕ ಹಕ್ಕು ಬಾಧ್ಯತೆಗಳ ಅನುಭೋಗವು ಖಾತ್ರಿಯಾಗಬೇಕೆಂಬುದೇ ಎರಡೂ ಸರಕಾರಗಳ ಧೋರಣೆಯಾಗಿದೆ. ಅಲ್ಪ ಸಂಖ್ಯಾಕ ಸಮಾಜಗಳವರ ನಿಷ್ಠೆ, ವಿಧೇಯತೆಗಳು, ತಾವು ಯಾವ ರಾಷ್ಟ್ರದ ಪ್ರಜೆಗಳೋ ಆ ರಾಷ್ಟ್ರದ ಕಡೆಗೇನೇ ಇರಬೇಕೆಂದೂ ತಮ್ಮ ಕಷ್ಟಗಳ ನಿವಾರಣೆಗಾಗಿ ಅವರು ಸ್ವಂತ ರಾಷ್ಟ್ರದ ಸರಕಾರದತ್ತ ನೋಡಬೇಕೆಂದೂ ಎರಡೂ ಸರಕಾರಗಳು ಸ್ಪಷ್ಟ ಪಡಿಸುತ್ತವೆ

## ನಿರಾಶ್ರಿತರಿಗೆ ರಕ್ಷಣೆ

ಇತ್ತೀಚೆಗೆ ಜಾತೀಯ ಗೊಂದಲಗಳೆದ್ದಿದ್ದ ಪೂರ್ವ ಬಂಗಾಳ, ಪಶ್ಚಿಮ ಬಂಗಾಳ, ಅಸ್ಸಾಮ್ ಮತ್ತು ತ್ರಿಪುರಗಳ ನಿರಾಶ್ರಿತರ ಸಂಬಂಧವಾಗಿ:— ಸಂಚಾರ ಸ್ವಾತಂತ್ರ್ಯ ಮತ್ತು ಪ್ರಯಾಣಗಳಲ್ಲಿ ರಕ್ಷಣೆಯಿರಬೇಕು; ಸ್ವಂತ ಆಭರಣಗಳ ಸಮೇತ ಖಾಸಗೀ ಸೊತ್ತುಗಳನ್ನು, ಮನೇಸಾಮಾಗ್ರಿ ಇತ್ಯಾದಿ ಚರಸೊತ್ತುಗಳನ್ನು ತನಗೆ ಸಾಧ್ಯವಿದ್ದಷ್ಟು ಒಯ್ಯುವ ಹಕ್ಕು ಸ್ಥಳಾಂತರ ಹೊಂದುವ ನಿರಾಶ್ರಿತನಿಗಿರಬೇಕು, ಪ್ರತಿಯೊಬ್ಬ ಪ್ರಾಯಸ್ಥ ನಿರಾಶ್ರಿತನು ತನ್ನೊಂದಿಗೆ ರೂ. 150 ಮತ್ತು ಪ್ರತಿಯೊಂದು ಮಗುವು ರೂ 75 ನ್ನು ಕೊಂಡುಹೋಗಬಹುದು; ಕೊಂಡೊಯ್ಯಲಿಚ್ಛೆಯಿಲ್ಲದ ಸ್ಥಳಾಂತರಿಗನಿಗೆ ತನ್ನ ಹಣ-ಭರಣಗಳನ್ನು ಬೇಂಕಿನಲ್ಲಿಟ್ಟು ಹೋಗಿ ಅಗತ್ಯ ತೋರಿದಾಗ ತೆಗೆಯುವ ಹಕ್ಕು ಮತ್ತು ಅನುಕೂಲತೆಗಳಿರಬೇಕು. ಕಸ್ಟಮ್ ಆಫೀಸುಗಳಲ್ಲಿ ಇಂತಹ ನಾಗೋಣಗಳಿಗಾತಂಕವಿರದಂತೆ ನೋಡಲು ಮತ್ತೊಂದು ಸರಕಾರದ ಅಧಿಕಾರಿಗಳನ್ನು ಅಲ್ಲಿ ನೇಮಿಸಿರಬೇಕು. ತಾನು ಬಿಟ್ಟು ಹೋದ ಸ್ಥಿರಾಸ್ತಿಗಳ ಮೇಲಿನ ಅಧಿಕಾರವು ನಿರಾಶ್ರಿತನಿಗೆ ಅಬಾಧಿತವಾಗಿರಬೇಕು. ಅಂತಹ ನಿರಾಶ್ರಿತನು 1950ನೇ ದಶಂಬರ 31ರೊಳಗೆ ತನ್ನ ಸ್ವಂತ ಭೂಮಿಗೆ ಮರಳುತ್ತಾನಾದರೆ, ಆ ನಡುವೆ ಅವನ ಆಸ್ತಿಯಾರ ವಶದಲ್ಲಿದ್ದರೂ ಅದನ್ನು ತನಗೆ ಮರಳಿ ಒಪ್ಪಿಸತಕ್ಕದ್ದು; ಸ್ವಂತಾಸ್ತಿಗಾರ ಅಥವಾ ಗೇಣಿ ಒಕ್ಕಲು ಯಾರೇ ಆದರೂ ಹೀಗೇನೇ. ಹೀಗೆ ಭೂಮಿಯ ಮರುಸಂದಾಯ ಮಾಡಕೂಡದೆಂದು ಸರಕಾರಕ್ಕೆ ತೋರುವ ವಿಶೇಷ ಸಂದರ್ಭಗಳಲ್ಲಿ ಸರಕಾರವು ಈ ಕುರಿತು ಸಂಬಂಧಪಟ್ಟ ಅಲ್ಪ ಸಂಖ್ಯಾಕ ಕಮಿಶನಿನ ಸಲಹೆ ಪಡಕೊಳ್ಳಬೇಕು. ನಿಶ್ಚಿತಾವಧಿಯೊಳಗೆ ಮರಳುವವನಿಗೆ ತನ್ನ ಭೂಮಿ ಸುಗಮವಾಗಿ ಮರಳಿ ದೊರೆಯದಂತಾದಲ್ಲಿ ಸಂಬಂಧಪಟ್ಟ ಸರಕಾರವು ಅವನಿಗೆ ತಕ್ಕವ್ಯವಸ್ಥೆ ಮಾಡಿಕೊಡಬೇಕು. ಯಾರೇ ಆದರೂ ತಮ್ಮ ಮೂಲಭೂಮಿಗೆ ಮರಳಿ ಹೋಗಲಿಚ್ಛಿಸದಿದ್ದಲ್ಲಿ, ಅಲ್ಲಿರುವ ಅವನ ಸ್ಥಿರಾಸ್ತಿಗಳ ಮೇಲಿನ ಪೂರ್ಣಾಧಿಕಾರವು ಅವನದೇ ಆಗಿದ್ದು, ಅನ್ಯ ದೇಶದಲ್ಲಿದ್ದುಕೊಂಡು ಅದನ್ನು ಮಾರುವ ಅಥವಾ ಬೇಕಾದಂತೆ ವ್ಯವಸ್ಥೆಗೊಳಿಸುವ ಹಕ್ಕು ಅವನಿಗಿದೆ. ಅಂತಹದಾಗಿನ ಸಂದರ್ಭಗಳಲ್ಲಿ ಅಲ್ಪ ಸಂಖ್ಯಾಕ ಸಮಾಜಗಳ ಮೂವರು ಪ್ರತಿನಿಧಿಗಳಿದ್ದು ಸರಕಾರೀ ಪ್ರತಿನಿಧಿಯೊಬ್ಬನು ಅಧ್ಯಕ್ಷನಾಗಿರುವ ಸಮಿತಿಯೊಂದು ಅಂತಹ ಆಸ್ತಿಗಳ ಯಜಮಾನನ ಟ್ರಸ್ಟಿ ಸ್ಥಾನದಲ್ಲಿದ್ದು ನಿರ್ವಹಿಸಬೇಕು. ಇಂತಹ ಕಮಿಟಿಗಳನ್ನು ರಚಿಸಲು ಅಗತ್ಯವುಳ್ಳ ಶಾಸನಗಳನ್ನು ಪೂರ್ವ ಬಂಗಾಳ, ಪಶ್ಚಿಮ ಬಂಗಾಳ, ಅಸ್ಸಾಮ್, ತ್ರಿಪುರಗಳ ಸರಕಾರಗಳು ಮಾಡಿಕೊಳ್ಳತಕ್ಕದ್ದು. ಈ ಕಮಿಟಿಗಳ ಕಾರ್ಯ ನಿರ್ವಹಣಕ್ಕಗತ್ಯವುಳ್ಳ ನಿರ್ವಸಹಾಯ ಕೊಡುವಂತೆ ಜಿಲ್ಲಾಧಿಕಾರಿಗಳನ್ನು ಅಥವಾ ಇತರ ಅಧಿಕಾರಿಗಳನ್ನು ಸಂಬಂಧಪಟ್ಟ ಸರಕಾರಗಳು ನಿರ್ದೇಶಿಸಬೇಕು. ಈ ನಿಯಮಗಳು ಎರಡೂ ರಾಷ್ಟ್ರಗಳ ಯಾವ ಭಾಗದಲ್ಲೇ ಇರುವ ಎಲ್ಲಾ ನಿರಾಶ್ರಿತರ ಆಸ್ತಿ ಸೊತ್ತುಗಳ ಮಟ್ಟಿಗೂ ಲಗಾವಾಗುತ್ತವೆ

## ಗೊಂದಲ ನಿವಾರಣೆ

ಗೊಂದಲ ಪೀಡಿತ ಪೂರ್ವ, ಪಶ್ಚಿಮ ಬಂಗಾಳಗಳು, ಅಸ್ಸಾಮ್, ತ್ರಿಪುರಗಳಲ್ಲಿ ಪದಂ ಪುನರುತ್ಥಾನವಾದಂತೆ ನೋಡುವ ಸಂಬಂಧವಾಗಿ:-ಸಾಮಾನ್ಯ ಶಾಂತ ಸ್ಥಿತಿ ಉಳಿಯುವಂತೆಯೂ, ಗಲಭೆ ನಿರ್ಮಾಣವಾಗದಂತೆಯೂ ನೋಡಲು ಸಂಬಂಧಪಟ್ಟ ಸರಕಾರಗಳು ಅಗತ್ಯವುಳ್ಳ ಪ್ರಯತ್ನ ಮತ್ತು ಹಂಚಿಕೆಗಳನ್ನು ಕೈಕೊಳ್ಳಬೇಕು; ಅಪರಾಧಿಗಳೆಲ್ಲರನ್ನೂ ಶಿಕ್ಷೆಗೀಡುಮಾಡಬೇಕು. ಸಂದರ್ಭ ನೋಡಿಕೊಂಡು ಪುಂಡುಗಂಡಾಯ ಹೇರತಕ್ಕದ್ದು. ಅಗತ್ಯವಿದ್ದಲ್ಲಿ ಸ್ಪೆಶ್ಯಲ್ ಕೋರ್ಟುಗಳ ನೇಮಕವೂ ಆಗಬೇಕು. ಸಾಧ್ಯವಿದ್ದ ಎಲ್ಲಾ ಪ್ರಯತ್ನಗಳಿಂದಲೂ ಅಪಹೃತ ಸೊತ್ತುಗಳ ಮರುಸಂಪಾದನೆಯಾಗಬೇಕು. ಅಪಹೃತ ಸ್ತ್ರೀಯರ ಮರುಶೋಧನೆಗೆ ಸಹಾಯ ಮಾಡಲು ಅಲ್ಪಸಂಖ್ಯಾಕ ಸಮಾಜಗಳವರನ್ನೊಳಗೊಂಡ 'ಏಜೆನ್ಸಿ'ಯೊಂದನ್ನು ಕೂಡಲೇ ರಚಿಸಬೇಕು. ಬಲಾತ್ಕಾರದ ಮತಾಂತರಗಳಿಗೆ ಮನ್ನಣೆಯಿಲ್ಲ. ಗಲಭೆ ನಾಳವಧಿಯಲ್ಲಿ ನಡೆದ ಎಲ್ಲಾ ಮತಾಂತರಗಳನ್ನೂ ಜುಲುಮೆಯ ಮತಾಂತರಗಳೆಂದು ಗಣಿಸಲಾಗುವದು. ಆ ಜುಲುಮೆ ಮಾಡಿದವರನ್ನು ಶಿಕ್ಷೆಗೆ ಗುರಿಪಡಿಸಬೇಕು ಓರ್ವ ಹ್ಯಾಕೋರ್ಟು ಜಡ್ಜರ ಅಧ್ಯಕ್ಷತೆಯಲ್ಲಿ, ಅಲ್ಪಸಂಖ್ಯಾಕರಲ್ಲಿ ಭರವಸೆ ನಿರ್ಮಿಸುವ ಮಾದರಿಯ 'ಕಮಿಶನ' ಒಂದನ್ನು ಇತ್ತೀಚಿನ ಗಲಭೆಗಳ ವಿಚಾರಣೆ ಮತ್ತು ಶಿಫಾರಸುಗಳಿಗಾಗಿ ಕೂಡಲೇ ನೇಮಿಸತಕ್ಕದ್ದು. ಪತ್ರಿಕೆ, ರೇಡಿಯೋ, ಸಂಘ ಸಂಸ್ಥೆ, ಮುಂತಾದ ಯಾವುದೇ ವಿಧಾನದಿಂದ ಜಾತೀಯತಾ ಭಾವನೆಯನ್ನು ಉದ್ರೇಕಿಸುವ ಸುದ್ದಿ ಅಥವಾ ಅಭಿಪ್ರಾಯ ಕೊಡುವುದನ್ನು ಬಲವಾಗಿ ಪ್ರತಿಬಂಧಿಸತಕ್ಕದ್ದಲ್ಲದೆ, ಅಂತಹ ಅಪರಾಧಿಗಳನ್ನು ಕಠಿಣವಾಗಿ ಶಿಕ್ಷಿಸಬೇಕು. ಮತ್ತೊಂದು ರಾಷ್ಟ್ರದ ಭೂಸ್ವರೂಪದ ವಿರುದ್ಧವಾಗಿ ಅಥವಾ ಎರಡು ರಾಷ್ಟ್ರಗಳ ನಡುವೆ ಯುದ್ಧ ಪ್ರೇರೇಪಿಸುವ ಯಾವ ಪ್ರಚಾರವೂ ನಡೆಯದಂತೆ ನೋಡತಕ್ಕದ್ದಲ್ಲದೆ, ಅಂತಹ ಅಪರಾಧಿ ಸಂಸ್ಥೆ, ವ್ಯಕ್ತಿಗಳ ಮೇಲೆ, ಖಂಡ ತುಂಡ ಹಾಗೂ ಪರಿಣಾಮಕಾರಿ ಕಾರ್ಯಾಚರಣೆ ಕೈಕೊಳ್ಳಬೇಕು

## ವ್ಯವಸ್ಥಾಪನಾ ಯಂತ್ರ

ನಿರಾಶ್ರಿತರು ಸ್ವಸ್ಥಾನಗಳಿಗೆ ಮರಳುವಂತೆ ಅಲ್ಪ ಸಂಖ್ಯಾಕರಲ್ಲಿ ಭರವಸೆ ನಿರ್ಮಿಸುವುದಕ್ಕಾಗಿ, ಎರಡೂ ಕೇಂದ್ರ ಸರಕಾರಗಳಿಂದ ಇಬ್ಬರು ಮಂತ್ರಿಗಳು ನಿಯಮಿಸಲ್ಪಟ್ಟು ಅಗತ್ಯವುಳ್ಳಷ್ಟು ಕಾಲದವರೆಗೆ, ಗೊಂದಲಪೀಡಿತ ಸ್ಥಳಗಳಲ್ಲಿ ನಿಲ್ಲಲಿದ್ದಾರೆ. ಪೂರ್ವ ಬಂಗಾಳ, ಪಶ್ಚಿಮ ಬಂಗಾಳ, ಅಸ್ಸಾಮು ಮಂತ್ರಿಮಂಡಲಗಳಲ್ಲಿ ಅಲ್ಪಸಂಖ್ಯಾಕ ಸಮಾಜಗಳ ಒಬ್ಬೊಬ್ಬ ಪ್ರತಿನಿಧಿಯನ್ನು ಸೇರಿಸಿಕೊಳ್ಳಲಾಗುವದು. ಅಸ್ಸಾಮ್ ಮಂತ್ರಿಮಂಡಲಿಯಲ್ಲಿ ಈಗಲೇ ಅಲ್ಪಸಂಖ್ಯಾಕ ಪ್ರತಿನಿಧಿಯಿದ್ದಾರೆ. ಇತರ ಕಡೆಗಳ ನೇಮಕವು ಕೂಡಲೇ ಆಗಲಿದೆ. ಕೇಂದ್ರದ ಇಬ್ಬರು ಮಂತ್ರಿಗಳು ನೇಮಿಸಲ್ಪಡುವಂತೆಯೇ ಪೂರ್ವ ಬಂಗಾಳ, ಪಶ್ಚಿಮ ಬಂಗಾಳ ಮತ್ತು ಅಸ್ಸಾಮುಗಳಲ್ಲಿ ಪ್ರತಿಯೊಂದಕ್ಕೂ ಒಂದೊಂದು ಅಲ್ಪಸಂಖ್ಯಾಕರ ಕಮಿಶನುಗಳು ಆಯಾಯ ಶಾಸನ ಸಭೆಗಳ ಆಯಾ ಸಮಾಜದ ಪ್ರತಿನಿಧಿಗಳಿಂದ ಆರಿಸಲ್ಪಟ್ಟು ರಚಿಸಲ್ಪಡುವವು. ಭಾರತ ಪಾಕಿಸ್ತಾನಗಳ ನಿಯೋಜಿತ ಮಂತ್ರಿದ್ವಯರು ಈ ಕಮಿಶನುಗಳ ಯಾವುದೇ ಸಭೆಯಲ್ಲಿ ಬೇಕಾದಾಗ ಹಾಜರಿದ್ದು ಭಾಗವಹಿಸಬಲ್ಲರು. ಕಾರ್ಯ ನಿರ್ವಹಣಕ್ಕಾಗಿ ಇವರು ಅಪೇಕ್ಷಿಸಿದಾಗಲೆಲ್ಲಾ ಈ ಕಮಿಶನುಗಳ ಜತೆಸಭೆ ಸೇರತಕ್ಕದ್ದು. ಕಮಿಶನುಗಳು ತಮಗೆ ಅಗತ್ಯವುಳ್ಳ ನೌಕರರನ್ನು ನೇಮಿಸಿಕೊಂಡು, ಕಾರ್ಯಕ್ರಮ ಹಾಕಿಕೊಂಡು ಪ್ರತಿ ಜಿಲ್ಲೆಯ ಅಲ್ಪಸಂಖ್ಯಾಕರೊಡನೆ ಮತ್ತು ಸಂಬಂಧದ ಬೋರ್ಡುಗಳೊಡನೆ ಸಂಬಂಧವಿಟ್ಟುಕೊಂಡು ಕಾರ್ಯ ಸಾಗಿಸಬೇಕು. ಒಪ್ಪಂದ ಜಾರಿ ಸಂಬಂಧದ ಸ್ಥಿತಿಗತಿಗಳನ್ನೂ ಲೋಪದೋಷಗಳ ಸಂಬಂಧದ ವರದಿಗಳನ್ನೂ ಪರಿಹಾರೋಪಾಯಗಳನ್ನೂ ಸೂಚಿಸುವುದು—ಅಗತ್ಯವುಳ್ಳ ಕಾರ್ಯಕ್ರಮಗಳನ್ನು ಶಿಫಾರಸು ಮಾಡುವುದು:—ಈ ಕಮಿಶನುಗಳ ಕರ್ತವ್ಯ. ಈ ಶಿಫಾರಸುಗಳು ಕೇಂದ್ರ ಮಂತ್ರಿದ್ವಯರಿಂದ ಅನುಮೋದಿಸಲ್ಪಟ್ಟರೆ ತಕ್ಕ ಕಾರ್ಯ ಕೈಕೊಳ್ಳುವುದು ಸಂಬಂಧಪಟ್ಟ ಸರಕಾರಗಳ ಕರ್ತವ್ಯ. ನೇಮಿತ ಕೇಂದ್ರ ಮಂತ್ರಿದ್ವಯರೊಳಗೇನೇ ಭಿನ್ನಾಭಿಪ್ರಾಯ ಬಂದ ಸಂದರ್ಭದಲ್ಲಿ ಭಾರತ ಪಾಕಿಸ್ತಾನ್ ಪ್ರಧಾನ ಮಂತ್ರಿಗಳ ತೀರ್ಮಾನಕ್ಕೆ ವಿಷಯವನ್ನು ಒಪ್ಪಿಸತಕ್ಕದ್ದು. ತ್ರಿಪುರದ ಮಟ್ಟಿಗೆ ನೇಮಿತ ಕೇಂದ್ರಮಂತ್ರಿ ದ್ವಯರಿಗೇನೇ ಕಮಿಶನುಗಳ ಹೊಣೆಗಾರಿಕೆಯೊಪ್ಪಿಸಲ್ಪಟ್ಟಿದೆ.'

ಮೇಲಿನ ಶರ್ತಗಳುಳ್ಳ ಡೆಲ್ಲಿ ಕರಾರನ್ನು ಮನಃಪೂರ್ವಕ ಎತ್ತಿಹಿಡಿದು, ಅದರಂತೆ ವರ್ತಿಸಬೇಕೆಂದು ಪಂಡಿತ ನೆಹರುಗಳು ತಾ. 11ನೇ ರಾತ್ರಿ ರಾಷ್ಟ್ರವನ್ನು ಆಕಾಶವಾಣಿ ಭಾಷಣ ಮೂಲಕ ಕೇಳಿಕೊಂಡಿದ್ದಾರೆ.

---

## ಉಡುಪಿ

**ಸ್ಯೆಂಟ್ ಸಿಸಿಲೀಸ್ ಹ್ಯಾಸ್ಕೂಲಿನ ವರ್ಧಂತ್ಯುತ್ಸವವು** ಇದೇ ತಾ 11ನೇ ಅಪರಾಹ್ನ ಉಡುಪಿ ಮುನ್ಸಿಪಲ್ ಕಮಿಶನರ್ ಶ್ರೀ ವಿ. ಬಾಲಗಂಗಾಧರನ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕುಮಾರಿ ಅರವಿಂದಾದೇಯವರಿಂದ ವಂದಿವಾಚನವಾದ ಮೇಲೆ ಶ್ರೀಮತಿ ಬಾಲಗಂಗಾಧರನ್, ಅವರ ಹಸ್ತದಿಂದ ಬಹುಮಾನಗಳ ವಿತರಣೆಯಾಯಿತು. ವಿದ್ಯಾರ್ಥಿನಿಯರಿಂದ 'ಸಚ್ಚಾರಿತ್ರ್ಯ ವಿಜಯ' ಎಂಬ ಕನ್ನಡ ನಾಟಕ, 'Grand nieces From Town' ಎಂಬ ಇಂಗ್ಲಿಷ್ ನಾಟಕ, ಮತ್ತು ಇಂಗ್ಲಿಷ್, ಹಿಂದೀ ಸಾಮೂಹಿಕ ನೃತ್ಯಗಳು, ರಿಕಾರ್ಡ ನೃತ್ಯಗಳು ಮಿಶ್ರಿತರ ವಿವಿಧ ವಿನೋದಾವಳಿಗಳಾದುವು. ಅಧ್ಯಕ್ಷರು ತನ್ನ ಭಾಷಣದಲ್ಲಿ ಪ್ರಚಲಿತ ಸ್ಥಿತಿಗತಿಗಳನ್ನೆತ್ತಿಕೊಂಡು, ಸ್ಯೆಂಟ್ ಸಿಸಿಲೀಸ್ ಹ್ಯಾಸ್ಕೂಲಿನಿಂದ ಆಗುತ್ತಿರುವ ವಿದ್ಯಾದಾನ ಮಹತ್ಕಾರ್ಯವನ್ನೂ ಕಥೋಲಿಕ ಸಂಸ್ಥೆಗಳಿಂದ ಶಿಕ್ಷಣಕ್ಷೇತ್ರದಲ್ಲಾಗಿರುವ ಉಪಕಾರಗಳನ್ನೂ ಕೊಂಡಾಡಿದರು. ಜನಗಣಮನದೊಂದಿಗೆ ಸಮಾರಂಭ ಮುಗಿಯಿತು.

ಸಾದರ ಸ್ವೀಕಾರ—ಉಡುಪಿ ವೆಂಕಟ್ ಸ್ವಿಫ್ ಪ್ರೆಸ್, ಇವರ 1950ನೆ ಏಪ್ರಿಲ್ ತಿಂಗಳಿಂದ 1951ನೆ ಮಾರ್ಚ ತಿಂಗಳಿಗೆ ಅಂತ್ಯವಾಗುವ ಸಾಂವತ್ಸರಿಕ ಕ್ಯಾಲೆಂಡರನ್ನು ಆದರಪೂರ್ವಕ ಸ್ವೀಕರಿಸಿದ್ದೇವೆ.

## ದ. ಕನ್ನಡ

**ನೈಲಾಡಿ:-** ಶ್ರೀ. ಪ್ರಾಣಿಕಲ್ಲು ಜುಟ್ಟ ಕ್ಕ ವಾರಕ್ಕ ದೇವಸ್ಥಾನದಲ್ಲಿ ತಾ. 26-3-50 ನೇ ದಿನ ಇಲ್ಲಿ ವರ್ಷಂಪ್ರತಿ ನೆರವೇರುವ ಜಾತ್ರೆಯು ಶ್ರೀ ನೈಲಾಡಿ ಶೀನಪ್ಪಸೆಟ್ಟಿ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ನೆರವೇರಿತು.

**ಕುಂಬಳೆ:-** ಕಳೆದ ಮಾರ್ಚ್ ತಿಂಗಳಲ್ಲಿ ಕುಂಬಳೆ ಫಿರ್ಕಾದಲ್ಲಿ ಜರಗಿದ ಮುಖ್ಯ ಕೆಲಸಗಳ ಸಾರಾಂಶ.

1. ಎರಡು ಬಾವಿಗಳ ಕೆಲಸವು ಮುಗಿಸಲ್ಪಟ್ಟಿತು.

2. ಒಂದು ಮಾರ್ಗ, ಮೂರು ಕಾಲ್ನಡೆ ಸಂಕಗಳು, ಒಂದು ಕಲ್ವರ್ಟ್, ಒಂದು ಕಾಲುಹಾದಿ, ಒಂದು ಗಾಡಿಮಾರ್ಗ ಮತ್ತು ಒಂದು ರೇಡಿಯೋ ಪೆವಿಲಿಯನಿನ ಕೆಲಸವು ಮುಗಿಸಲ್ಪಟ್ಟಿತು. ಇವುಗಳ ಒಟ್ಟು ಖರ್ಚು ರೂ. 7464-14-0 ಸರಕಾರವು ಇವುಗಳಿಗೆ ರೂ. 3443-5-0 ಗ್ರೇಂಟು ಕೊಟ್ಟಿರುತ್ತದೆ. ಉಳಿದ ಖರ್ಚನ್ನು ಗ್ರಾಮಸ್ಥರೇ ವಹಿಸಿರುವರು.

3. ನೀರಾವರಿ ಕೆಲಸಕ್ಕೆ 3ಪಂಪುಗಳನ್ನು ಒದಗಿಸಿಕೊಟ್ಟಿದೆ.

4. ನಾಲ್ಕು ಬೀಜದ ಆಡುಗಳನ್ನು ಒದಗಿಸಿರುತ್ತದೆ.

5. ಪಂದ್ಯಾಟಗಳು ಮತ್ತು ಇತರ ರೀತಿಯ ವಿನೋದಾವಳಿಗಳು ಏರ್ಪಡಿಸಲ್ಪಟ್ಟವು.

6. ಇಚ್ಲಂಪಾಡಿ ಗ್ರಾಮದಲ್ಲಿ ಒಂದು ನೀರಾವರೀ ಕೆರೆಯ ದುರಸ್ತಿ ಮಾಡಲು ರೂ. 1500/- ಮಂಜೂರು ಮಾಡಲ್ಪಟ್ಟಿತು. ಇದರಲ್ಲಿ ರೂ. 400/-ನ್ನು ವರ್ಗದಾರರು ವಂತಿಗೆ ಹಾಕಿ ಕೊಡಲು ಒಪ್ಪಿರುವರು. 125ರೂ. ಈಗಾಗಲೆ ಸಂಗ್ರಹವಾಗಿದೆ.

7. ಉಜಾರುಳ್ವಾರ್ ಗ್ರಾಮದಲ್ಲಿ ನೆರೆ ಹಾವಳಿಯನ್ನು ತಡೆಯಲು ಪುರಾತನ ಕಾಲದಲ್ಲಿ ಕಟ್ಟಿಸಿ ಈಗ ಹಾಳಾಗಿರುವ ಒಂದು ಗೋಡೆಯನ್ನು ದುರಸ್ತಿಗೊಳಿಸಲು ಸರಕಾರವು ರೂ. 5000/- ಮಂಜೂರು ಮಾಡಿರುತ್ತದೆ. ಇದರಲ್ಲಿ 1250/-ಗ್ರಾಮಸ್ಥರೆ ಕೊಡತಕ್ಕದ್ದು. ಈ ಗೋಡೆಯನ್ನು ದುರಸ್ತಿ ಪಡಿಸಿದರೆ ಈಗ ಬಂಜರಾಗಿ ಹೋದ ಸಾಧಾರಣ 20ಎಕ್ರೆ ಗದ್ದೆಗಳಲ್ಲಿ ಪುನಃ ಸಾಗುವಳಿಯನ್ನು ಮಾಡಲು ಅನುಕೂಲವಿದೆ.

8. ನಾಲ್ಕು ವಯಸ್ಕರ ಶಿಕ್ಷಣ ಶಾಲೆಗಳು ಸ್ಥಾಪಿಸಲ್ಪಟ್ಟವು.

9. ಪೆರ್ವಾಳ್ ಗೋರಕ್ಷಾ ಸಹಕಾರ ಸಂಘದವರು ಒಂದು ಬೀಜದ ಹೋರಿ ಮತ್ತು ಒಂದು ಬೀಜದ ಕೋಣ ಕೊಂಡುಕೊಳ್ಳಲು ರೂ. 300/-ನ್ನು ಸಂಗ್ರಹಿಸಿದ್ದಾರೆ. ಹೀಗೆ ಒಟ್ಟು ಸಂಗ್ರಹಿಸಿದ ಹಣ 600/-. ಸರಕಾರದ 600ರೂ. ಗ್ರೇಂಟು ಕೂಡಿಸಿ ಒಟ್ಟು 1200ರೂ. ಗೆ ಹೋರಿ ಮತ್ತು ಕೋಣಗಳನ್ನು ತೆಗೆದುಕೊಳ್ಳಲು ಬೇಕಾದ ಏರ್ಪಾಡು ಮಾಡಲಾಗಿದೆ.

10. ಕುಂಬಳೆ ಗ್ರಾಮ ಸೇವಾಸಂಘಕ್ಕೆ ಒಂದು ಸಾರ್ವಜನಿಕ ಕಟ್ಟಡವನ್ನು ಕಟ್ಟಿಸಲು ಅರ್ಧ ಗ್ರೇಂಟಾಗಿ ರೂ. 1500/-ನ್ನು ಸರಕಾರವು ಮಂಜೂರು ಮಾಡಿರುತ್ತದೆ.

**ಕಟಪಾಡಿ:-** ಈ ಕೇಂದ್ರದ ಪ್ರಾಥಮಿಕ ಶಾಲಾ ಅಧ್ಯಾಪಕರ ಸಂಘದ ಆಶ್ರಯದಲ್ಲಿ ಎಸ್. ವಿ. ಎಸ್. ಹಾ. ಎ, ಏಣಗುಡ್ಡೆ ದುರ್ಗಾಪರಮೇಶ್ವರಿ, ಅಚ್ಚಡ ಬೋರ್ಡ್, ಪಾಂಗಾಳ ಹಿಂದೂ, ಗುಡ್ಡೆ ಬಿ. ಇ. ಎಮ್, ಮಟ್ಟು ಬೋರ್ಡ್, ಮಟ್ಟುಕೊಪ್ಲ, ಅಂಬಾಡಿ ಪಿ. ವಿ. ಎನ್, ಕಟಪಾಡಿ ಬೋರ್ಡ್ ಹಿಂದೂಸ್ಥಾನಿ ಶಾಲೆಗಳ ಕೂಡುವಿಕೆಯಿಂದ ಮಕ್ಕಳ ಆಟದ ಹಬ್ಬವು ದ. ಕ. ಜಿಲ್ಲಾ ವಿದ್ಯಾಧಿಕಾರಿ ಶ್ರೀ ಎಚ್. ರಾಮ ರಾವ್. ಎಮ್. ಎ. ಎಲ್. ಟಿ ಅವರ ಅಧ್ಯಕ್ಷತೆಯಲ್ಲಿ ತಾ. 8-4-50ರಂದು ಎಸ್. ವಿ. ಎಸ್. ಹೈಸ್ಕೂಲಿನ ಆಟದ ಬಯಲಲ್ಲಿ ಆಚರಿಸಲ್ಪಟ್ಟಿತು. ಈ ಶಾಲೆಗಳ ಸಾಧಾರಣ 300 ಮಂದಿ ಬಾಲಕ-ಬಾಲಕಿಯರು ಇದರಲ್ಲಿ ಭಾಗವಹಿಸಿದ್ದರು. ಪ್ರಾರ್ಥನೆ, ಅಧ್ಯಕ್ಷರಿಂದ ರಾಷ್ಟ್ರಧ್ವಜಾರೋಹಣ ಕಾರ್ಯಕ್ರಮಗಳಾಗಿ ಎಸ್. ವಿ. ಎಸ್. ಹಾ. ಎ. ಶಾಲಾಧ್ಯಾಪಕ ಶ್ರೀ ಕೆ. ರಾಮಚಂದ್ರ ಶೆಣೈಯವರ ನಿರ್ದೇಶಕತ್ವದಲ್ಲಿ ನೆರೆದ ಮಕ್ಕಳಿಂದ ವಿವಿಧ ಆಟಗಳ ಪ್ರದರ್ಶನವಾಯಿತು. ಮಕ್ಕಳಿಗೆ ತಿಂಡಿ ತೀರ್ಥ ಹಂಚೋಣಾದ ಬಳಿಕ ಶ್ರೀಗಳಾದ ಪಿ. ರಾಮದಾಸ ನಾಯಕ್ ಬಿ. ಎ. ಎಲ್. ಟಿ. ಮತ್ತು ಎಚ್. ಸಂಜೀವ ರಾವ್ ಬಿ. ಎ. ಎಲ್. ಟಿ. ಅವರು ಸಂದರ್ಭೋಚಿತ ಭಾಷಣಗಳನ್ನಿತ್ತರು. ಇಂತಹ ಸಮಾರಂಭಗಳ ಉದ್ದೇಶ, ಪ್ರಯೋಜನಗಳನ್ನು ವಿವರಿಸಿ ಅಧ್ಯಕ್ಷರ ಭಾಷಣವಾದ ಬಳಿಕ ಕೇಂದ್ರ ಸಂಘದ ಕಾರ್ಯದರ್ಶಿ ಶ್ರೀ ಯು. ಆರ್. ಮಯ್ಯರಿಂದ ಧನ್ಯವಾದ ಸಮರ್ಪಣೆಯಾಯಿತು. ಧ್ವಜಾವರೋಹಣ, ರಾಷ್ಟ್ರಗೀತೆಯೊಂದಿಗೆ ಸಮಾರಂಭ ಮುಕ್ತಾಯವಾಯಿತು.

ಇಲ್ಲಿಯ ಎಸ್. ವಿ. ಎಸ್. ಶಾಲೆಗಳ ವಿದ್ಯಾರ್ಥಿಗಳ ಸಾಹಿತ್ಯ ಭಂಡಾರವು ಸಹಕಾರಿ ಆಕ್ಟಿನನ್ವಯ ರಿಜಿಸ್ಟರು ಮಾಡಲ್ಪಟ್ಟಿದೆ. ಶ್ರೀಯುತರುಗಳಾದ ಪಿ. ರಾಮದಾಸ ನಾಯಕ್ (ಅಧ್ಯಕ್ಷ) ಪಿ. ದಯಾನಂದ ನಾಯಕ್ (ಉಪಾಧ್ಯಕ್ಷ) ಶ್ರೀ ಕೆ. ಆರ್. ಶೆಣೈ (ಕಾರ್ಯದರ್ಶಿ); ಯು. ಆರ್. ಮಯ್ಯ; ಕೆ. ಪಿ. ಮಲ್ಯ; ಎಮ್. ನಾರಾಯಣ ಭಟ್, ಮಾರ್ಷಲ್ ಅಲ್ಮೇಡ ಈ ಸಂಘದ ಪ್ರಥಮ ಡೈರೆಕ್ಟರರಾಗಿ ಚುನಾಯಿಸಲ್ಪಟ್ಟಿರುವರು.

**ರಾಮಕುಂಜ:-** ಇಲ್ಲಿಯ ಎಡ್ವರ್ಡ್ ಸಂಸ್ಕೃತ ಪಾಠಶಾಲೆಯಲ್ಲಿ ಕಳೆದ ತಾ. 27ರಿಂದ 5ದಿನಗಳಲ್ಲಿ ಶ್ರೀ ರಾಮನವಮಿ ಉತ್ಸವವು ಬಹು ವಿಜೃಂಭಣೆಯಿಂದ ಜರಗಿತು. ತಾ. 27ರಲ್ಲಿ ಏಕಾಹ ಭಜನೆ ಪ್ರಾರಂಭವಾಗಿ 28ನೇ ಬೆಳಿಗ್ಗೆ ಮಂಗಳವಾದ ನಂತರ ಶ್ರೀ ರಾಮದೇವರ ಉತ್ಸವ, ಸಂಜೆ ಶ್ರೀ ಎಸ್. ಶ್ರೀನಿವಾಸ ಶಾಸ್ತ್ರಿ ಮಹೋಪಾಧ್ಯಾಯ ಮತ್ತು ಶಿರೋಮಣಿ ಅವರ ಅಧ್ಯಕ್ಷತೆಯಲ್ಲಿ ಶಾಲೆಯ ಶ್ರೀರಾಮಕುಂಜೇಶ್ವರ ಭಜನಾ ಸಂಘದ ವರ್ಧಂತ್ಯುತ್ಸವ ಮುಗಿದು ಅಂದು ರಾತ್ರಿ ಇಲ್ಲಿಯ ನೆರೆಗ್ರಾಮ ಹಳೆನೇರೆಂಕಿಯ ಶ್ರೀ ಸತ್ಯನಾರಾಯಣ ಭಜನೆ ಸಂಘದ ಆಶ್ರಯದಲ್ಲಿ ಶ್ರೀ ರಾಘವಕೋಳ್ಪ ಇತ್ತಾಯರ ಹಾಡುಗಾರಿಕೆಯಿಂದ ಪಂಚವಟಿ ಯಕ್ಷಗಾನ ಕೂಟವು ಜರಗಿತು.

**ಕಾರ್ಕಳ:-** ಈ ಸೆಂಟರಿನ ಬಗ್ಗೆ ಮದ್ರಾಸು ಸರಕಾರದವರು ಹೊಸತಾಗಿ ಸಂಕ್ಷನ್ ಮಾಡಿದ ರೂರಲ್ ಆಸ್ಪತ್ರೆಯ ಕಟ್ಟಡದ ಬಗ್ಗೆ ಕಳೆದ ತಾ 28ರಲ್ಲಿ ಧರ್ಮಸ್ಥಳ ಮೇಳದವರು 'ಶ್ರೀ ಕೃಷ್ಣಲೀಲೆ' ಬಯಲಾಟವನ್ನು ಚಲೋದಾಗಿ ಅಭಿನಯಿಸಿದರು. ಟಿಕೇಟು ಮಾರಾಟದಿಂದ ಸಾಧಾರಣ ಎರಡುಸಾವಿರ ರೂಪಾಯಿಯಷ್ಟು ಜಮೆಯಾಗಲು ಸಹಕರಿಸಿದ ಸರ್ವರಿಗೂ ಬಿಲ್ಡಿಂಗ್ ಕಮಿಟಿಯ ಪರವಾಗಿ ಶ್ರೀ ಕೆ. ಸಂಜೀವ ಸೆಟ್ಟರು ಧನ್ಯವಾದಗಳನ್ನರ್ಪಿಸುತ್ತಾರೆ.

**ಹಂದಟ್ಟು:-** ಇಲ್ಲಿಯ ಸಹಕಾರಿ ಸಂಘದ ಸಾರ್ವಜನಿಕ ವಾಚನಾಲಯದ ವರ್ಧಂತ್ಯುತ್ಸವವು ಇದೇ ತಾ 15ನೆ ಶನಿವಾರ ಶ್ರೀ ಎಚ್. ರಾಮಕೃಷ್ಣರಾವ್ ಶಿವಮೊಗ್ಗಾ, ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದೆಂದೂ ಈ ಉತ್ಸವಕ್ಕೆ ಸರ್ವರಿಗೂ ಸುಸ್ವಾಗತವಿದೆಯೆಂದೂ ಕಾರ್ಯದರ್ಶಿಯವರು ತಿಳಿಸುತ್ತಾರೆ.

### ಕನ್ನಡ ಸಾಹಿತ್ಯ ಪರಿಷತ್ತಿನ ವಸಂತ ಸಾಹಿತ್ಯೋತ್ಸವ

ಬರುವ ಮೇ ತಿಂಗಳಲ್ಲಿ ೧ನೆಯ ತಾರೀಕು ಭಾನುವಾರದಿಂದ ೩೦ನೆಯ ತಾರೀಕು ಶನಿವಾರದ ವರೆಗೆ ಶ್ರೀ ಕೃಷ್ಣರಾಜೇಂದ್ರ ಪರಿಷನ್ಮಂದಿರ, ಚಾಮರಾಜಪೇಟೆ, ಬೆಂಗಳೂರು ಸಿಟಿ, ಇಲ್ಲಿ ಜರಗುವದು. ಆ ಉತ್ಸವದ ಭಾಗವಾಗಿ ಪ್ರಕೃತಿವಿಜ್ಞಾನ, ಸಮಾಜವಿಜ್ಞಾನ ಶಾಸ್ತ್ರಗಳು ಮೊದಲಾಗಿ ಸಾಂಪ್ರತ ಲೋಕಕ್ಕೆ ಉಪಯುಕ್ತಗಳಾದ ಅನೇಕ ವಿಚಾರಗಳನ್ನು ಕುರಿತ ಉಪನ್ಯಾಸಗಳೂ, ಕಾವ್ಯವಾಚನ, ಹರಿಕಥೆ, ಸಂಗೀತ, ವಿದ್ಯದ್ಗೋಷ್ಠಿ, ಕನ್ನಡ ಗ್ರಂಥ ಪ್ರದರ್ಶನ ಮೊದಲಾದ ಪ್ರಚಾರ ಕಾರ್ಯಗಳೂ, ವಿಜ್ಞಾನ ಶಾಲೆಗಳು, ಯಂತ್ರಕರ್ಮ ಶಾಲೆಗಳು ಮೊದಲಾದವುಗಳ ಸಂದರ್ಶನವೂ ನಡೆಯುತ್ತವೆ. ಸಹಭಾಗಿಗಳಾಗುವ ಮೂಲಕವೂ, ಎಲ್ಲ ಬಗೆಯ ಸಹಾಯಗಳನ್ನು ಸಲ್ಲಿಸುವ ಮೂಲಕವೂ ಸರ್ವರೂ ಈ ಉತ್ಸವಕ್ಕೆ ನೆರವಾಗಬೇಕೆಂದು ಸಂಬಂಧಪಟ್ಟವರ ವಿಜ್ಞಾಪನೆಯಿದೆ.

### ಕಲ್ಕತ್ತಾ ವಿಮಾನ ಅಪಘಾತದಲ್ಲಿ ಉಡುಪಿಯ ಒಬ್ಬರ ಮರಣ!

'ಡೆಕ್ಕಾನ್ ಏರ್‌ವೇಸ್'ನ ಡಕೋಟಾ ವಿಮಾನವೊಂದು ಇದೇ ತಾ. 5-4-50ನೇ ಮುಂಜಾನೆ ನಾಲ್ಕು ಗಂಟೆಗೆ ಕಲ್ಕತ್ತಾದ ಡಮ್‌ಡಮ್ ವಿಮಾನ ನಿಲ್ದಾಣಕ್ಕೆ ಸುಮಾರು 2 ಮೈಲು ದೂರದ ನೆರೆ ಪ್ರದೇಶದಲ್ಲಿ ಅಪಘಾತಕ್ಕೀಡಾಗಿ ಅದರಲ್ಲಿದ್ದ ಮೂರು ಮಂದಿ ವೈಮಾನಿಕರೂ ಮರಣಗೊಂಡರು. ಈ ದುಃಖವಾರ್ತೆ ದುರದೃಷ್ಟಕ್ಕೀಡಾದ ಮೂವರ ಪೈಕಿ ಉಡುಪಿಯ ನರಸಿಂಹ ಕಾಮತರ ಏಕಮಾತ್ರ ಪುತ್ರ ಶ್ರೀ. ಶ್ರೀನಿವಾಸ ನರಸಿಂಹ ಕಾಮತರು ಒಬ್ಬರು. ಕೇವಲ 23ವರುಷ ಪ್ರಾಯದ, ಶ್ರೀ ಶ್ರೀನಿವಾಸ ಕಾಮತರು ಈ ಪದದ ಆದಿಭಾಗದಲ್ಲೇ ಕಲ್ಕತ್ತೆಗೆ ಹೋಗಿ ಕೆಲ ಭಾರತ ಏರ್‌ವೇಸ್'ನಲ್ಲಿ ಕೆಲಸ ಮಾಡಿದರು. ಆ ಮೇಲೆ ಅವರನ್ನು ಬಿಟ್ಟು ಈ ಕ ಸೇರಿದ್ದರು. ಮೇಲಿನ ದುರ್ದೈವಿ ವಿಮಾನವು, ಕಲ್ಕತ್ತೆಯಿಂದ ಕೂಚ್ ಬಿಹಾ ಕೆಲವು ಕಬ್ಬಿಣ ಮತ್ತು ಉಕ್ಕಿನ ಸಾಮಾ ಗಳನ್ನೊಯ್ಯುವುದಕ್ಕಾಗಿ ಖಾಸಗೀ ಮಾ ಯರಿಂದ ಬಾಡಿಗೆಗೆ ಹಿಡಿಯಲ್ಪಟ್ಟಿದ್ದಿ ತುಂಬಿಸಿದ ಭಾರ ಹೆಚ್ಚಾದುದರಿಂದ, ನೆಲ ಬಿಟ್ಟೇರಿದ ಸ್ವಲ್ಪ ಹೊತ್ತಿನಲ್ಲೇ ವಿಮಾನದ ಜಿನುಗಳಲ್ಲೊಂದು ಹಾಳಾಯಿತು. ಸಾ ಕೇಪ್ಟನ್ ವೆಲ್ಲೇಸರು ಆ ಕೂಡಲೇ ಕೆಳಗಿ ಲು ಸಾಹಸಪಟ್ಟರಾದರೂ ಅದು ಸಫಲವಾ ದೆ ವಿಮಾನವು ಭತ್ತದ ಗದ್ದೆಗೆ ಹೋಗಿ ಬಿ ಹಾಗೆ ಬೀಳುವಾಗ ಕೆಲವು ತೆಂಗಿನ ಮರ ಗೂ ಅಲ್ಲೇ ಇದ್ದ ಸಾಗುವಳಿಗಾರರ ಕೆ ಗುಡಿಸಲುಗಳಿಗೂ ಬಡಿಯಿತು. ವಿಮಾನ ಲಭಾಗವು ಅಲ್ಲೇ ಕೆಳಗೆ ಬಿದ್ದಿದ್ದ ಅಲ್ಲದ ದ ಗೆಲ್ಲುಗಳಿಗೆ ಸಿಕ್ಕಿಕೊಂಡಿದ್ದುದು ಕೂ ಬಂತು. ವಿಮಾನದ ಎಡ ರೆಕ್ಕೆ ಮುತ್ತು ಲ ತುಂಡುತುಂಡಾಗಿತ್ತಲ್ಲದೆ ಇಡೀ ವಿಮಾ ಪೂರ್ಣ ಹುಡಿಯಾಗಿಂಲಿಲ್ಲ. ಆಪಘಾತದ ದ್ದಿ ಕಲ್ಕತ್ತೆಗೆ ಮುಟ್ಟಿದೊಡನೆಯೇ ಪೋ ಸ್ ಅಧಿಕಾರರು 'ಫಯರ್ ಇಂಜ ಸಮೇತ ಅಲ್ಲಿಗೆ ಧಾವಿಸಿದಾಗ, ಭಿನ್ನ ವಾಗಿದ್ದ ಮೂವರು ವೈಮಾನಿಕರ ದೇ ಳೂ ಅಲ್ಲಿಯ ನುಚ್ಚುನೂರುಗಳ ಅಡಿ ಬಿದ್ದಿರುವುದನ್ನು ಕಂಡರು. ಅಪಘಾತದ ದಿಗೇನೇ ಅವರೆಲ್ಲರ ಪ್ರಾಣವೂ ಹಾರಿಹೋ ದ್ದಿತೆಂದು ನಂಬಲಾಗಿದೆ. ಮರಣಗೊಂಡ ಳಿದಿಬ್ಬರೆಂದರೆ ಸುಮಾರು 33 ವರುಷ ಯದ ಸಾರಥಿ ಕೇಪ್ಟನ್ ಎಫ್. ಡಿ. ವೆ ಸ್; ಇವರು ಸ್ಕೋಟ್‌ಲೇಂಡಿನವರು. ಯಕ ಸಾರಥಿ ಸುಮಾರು 21 ವರುಷ ಯದ ಶ್ರೀ. ಕೆ. ಎಮ್. ಪಂಡಿತ್ ಇವರು ತಿರುವಾಂಕೂರಿನವರು.

ಕಾಮತರು ಅದರ ರೇಡಿಯೋ ಓಪ ರ್ ಆಗಿದ್ದರು. ಮೃತರ ಆತ್ಮಕ್ಕೆ ಶಾಂ ನ್ನು ಕೋರಿ, ಆಕಸ್ಮಿಕವಾದ ಅಪಘಾ ದುಃಖಿಕ್ಕೀಡಾಗಿರುವ ಅವರ ಸಂಬಂಧ ಸಹಾನುಭೂತಿ ಸೂಚಿಸುತ್ತೇವೆ.

### ಉಡುಪಿ

**ಅರುವತ್ತನೆ ಹುಟ್ಟು ಹಬ್ಬ:** ಕೃಷ್ಣ ಮಠದ ಪರ್ಯಾಯ ಪೀಠಸ್ಥ ಶ್ರೀ ಕಾಣೂರು ಮಠದ ಶ್ರೀ ವಿದ್ಯಾ ಪ್ರತೀರ್ಥ ಶ್ರೀ ಪಾದಂಗಳವರು ತಮ್ಮ ವತ್ತನೇ ಹುಟ್ಟು ಹಬ್ಬವನ್ನು ಇದೇ ತಾ ಲ್ಲು ಶ್ರೀ ಕೃಷ್ಣ ಮಠದಲ್ಲಿ ವಿಧಿಪೂ ಸಾಂಗವಾಗಿ ನೆರವೇರಿಸಿದರು.

**ಮುನಿಸಿಪಲ್ ಸಭೆಯು:—** ತಾ. 8ರಲ್ಲು ಸಂಜೆ ಪ್ರಾರಂಭವಾಗುವ ಶ್ರೀ ಎ. ಮಂಜುನಾಥರಾಯರು ಪೋ ಟ್ ಒಫ್ ಆರ್ಡರನ್ನು ಸೂಚಿಸಿ ಸಭೆ ಟ್ಟ ನೋಟೀಸಿನ ದೋಷಗಳನ್ನೆತ್ತಿ ನಾಡಿದರು. ಮುನಿಸಿಪಲ್ ವೈಸ್ ರ್‌ಮೆನ್‌ರಿಗೆ ತಾವು ಕಳೆದ 1947ನೇ ಯಲ್ಲಿಯೇ ಜನರಲ್ ಅಧಿಕಾರವನ ಟ್ಟಿರುವುದರಿಂದ ಅವರು ಸಹಿಹಾಕಿ ಟಿಂಗ್ ನೋಟೀಸು ಮಾನ್ಯವಾಗತ ದು ಅಧ್ಯಕ್ಷರು ರೂಲಿಂಗ್ ಕೊಟ್ಟರು. ಸಭಾಕಾರ್ಯ ಪ್ರಾರಂಭವಾಯಿತು.

ಸೆಂಟ್ರಲ್ ವಾರ್ಡಿನ ತೆರಿಗೆದಾರ ಗಿ ಶ್ರೀಗಳಾದ ವಿ. ಆರ್. ಕಾಮತ್ ಆರ್. ಎಮ್. ಕಾರ್ನಾಡು ಅವರು ರ್ ಮೆಂಬರರನ್ನು ಮುಖತಃ ಭೇಟಿ ಆ ವಾರ್ಡಿನ ಟೌನ್ ಪ್ಲಾನಿಂಗ್ ಯ ಸಂಕಷ್ಟಗಳನ್ನು ಹೇಳಿಕೊಂ ದ ತೆರಿಗೆದಾರರಿಂದ ಬಂದ ಅಪೀಲು ಣೆ ಟಾಕಿಯಿಡಲಾಯಿತು. ತೆರಿಗೆದಾ ಷ್ಟನಷ್ಟಗಳುಂಟಾಗದ ರೀತಿಯಲ್ಲಿ ಪ್ಲಾನಿಂಗ್ ಯೋಜನೆಯು ಮುಂ ವ ಸಾಧ್ಯಾಸಾಧ್ಯತೆಯನ್ನು ವರದಿ ವರೆ ಚಿಕ್ಕ ಸಮಿತಿಯ ರಚನೆ ಆದಿ


**ಮದ್ರಾಸು ಸರಕಾರದಿಂದ ಈಗತಾನೇ ಸಂಭಾವನೆ ಪಡೆದ**

**ಡಾಕ್ಟರ್ ಕೊರಡ್ಕಲ್ ವೆಂಕಟ್ರಾಯರ**

**'ಮನೆ ಮದ್ದು'**

(HOME REMEDIES)

೨೦೦ ರಾಷಿಲೆಗಳಿಗೆ ಮನೆಯಲ್ಲೇ ಮಾಡಿಕೊಳ್ಳಬಹುದಾದ ೧೦೦೦ ಮದ್ದುಗಳ ವಿವರ ವಿರುವ ಪುಸ್ತಕ. ಬೆಲೆ: ರೂ. ೨

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಬರೆಯಿರಿ-

**ನವಭಾರತ ಪುಸ್ತಕ ಭಂಡಾರ, ಉಡುಪಿ.**



# ಕುಲವಿಲ್ಲದ ಹೆಣ್ಣು

(ಸರಸ ಸಾಮಾಜಿಕ ಕಾದಂಬರಿ)

ಬರೆದವರು:—ಪಿ. ವೆಂಕೋಬಾಚಾರ್ಯ, ಬಿ.ಎ.ಬಿ.ಟಿ.

ದೇವದಾಸಿ ಕುಲದ ಉದ್ಧಾರವೇ ಮುಖ್ಯ ಕಥಾವಸ್ತು-

**ಕುಸುಮಳು ವೇಶ್ಯಾಪುತ್ರಿಯಾದರೂ ಅವಳು ವೇಶ್ಯೆಯಲ್ಲ!**

**ಅವಳ ಕಥೆ ಹೇಗೆ ಸಾಗಿದೆ ಎಂದು ಓದಿಯೇ ತಿಳಿಯಿರಿ.**

ದಪ್ಪ ಪುಸ್ತಕ ಬೆಲೆ ರೂ. 1-0-0

**ಪ್ರತಿಗಳು, ಅಂತರಂಗ ಕಾರ್ಯಾಲಯ, ಉಡುಪಿ, ನವಯುಗ ಪ್ರೆಸ್, ಉಡುಪಿ ಅಥವಾ ನವಭಾರತ ಬುಕ್ ಡಿಪೊ, ಉಡುಪಿ. ಇಲ್ಲಿ ದೊರೆಯುತ್ತವೆ**

# ಮಂಗಳೂರು ಜಿಲ್ಲಾ ಸಮಾಚಾರ

**ದಕ್ಷಿಣ ಕನ್ನಡ ಜಿಲ್ಲಾ ಅಧ್ಯಾಪಕ ಸಂಘದ ವಾರ್ಷಿಕ ಮಹಾಸಭೆ**ಯು ದಿನಾಂಕ ೨೮ರಂದು ಅಪರಾಹ್ನ ೧೨ ಗಂಟೆಗೆ ಮಂಗಳೂರಿನ ಮಿಲಾಗ್ರಿಸ್ ಹೈಸ್ಕೂಲಿನ ವಠಾರದಲ್ಲಿ ಸಂಘದ ಅಧ್ಯಕ್ಷರಾದ ರೆ| ಫಾ| ಸಿಕೇರರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಯು. ಶ್ರೀನಿವಾಸ ಕಿಣಿಯವರು ವರದಿಯನ್ನೂ ಲೆಕ್ಕಪತ್ರವನ್ನೂ ಒಪ್ಪಿಸಿದರು. ಈ ಸಂಘದ ಕೆಳಗೆ ಈಗ ೪೯ ಶಾಲಾ ಸಂಘಗಳಿವೆಯೆಂದೂ, ಎಂಟು ಸಂಘಗಳು ತಮ್ಮ ಸದಸ್ಯತನವನ್ನು ಕಳಕೊಂಡಿವೆಯೆಂದೂ ತಿಳಿಸಿದರಲ್ಲದೆ ಇಂದಿನ ಶಿಕ್ಷಣದ ಅವಲೋಕನ ಮಾಡುತ್ತಾ ಹೀಗೆ ಹೇಳಿದರು—

"ಕಳೆದ ಜನವರಿಯಿಂದ ನಮ್ಮ ದೇಶದಲ್ಲಿ ನವಯುಗವರಳಿ ಬಂದಿದೆ, ಆದರಿಂದಾಗಿ ನಮ್ಮ ಶಿಕ್ಷಣದಲ್ಲೂ ಸಮಾಜದಲ್ಲೂ ಹಲವು ಬದಲಾವಣೆಗಳಾಗಿವೆ. ಸರಕಾರವೀಗ ವಯಸ್ಕರ ಶಿಕ್ಷಣ ವಿಚಾರದಲ್ಲಿ ಆಸಕ್ತಿ ತೋರಿಸಿ, ಅದನ್ನು ಸಮಾಜ ಶಿಕ್ಷಣವೆಂದೂ ಕರೆದಿದ್ದಾರೆ ಇವುಗಳಿಂದಾಗಿ ಅಧ್ಯಾಪಕನ ಹೊಣೆ ಹೆಚ್ಚಾಗಿದೆ. ಆದರೆ ಆರ್ಥಿಕ ಮುಗ್ಗಟ್ಟಿನಲ್ಲಿ ಸಿಲುಕಿರುವ ಅವನನ್ನು ಹೊರ ತರುವ ವಿಚಾರದಲ್ಲಿ ಸರಕಾರವೇನೂ ಮಾಡಿದಂತೆ ತೋರುವುದಿಲ್ಲ. ಶಿಕ್ಷಣವು ಫಲದಾಯಕವಾಗಬೇಕಾದರೆ ಸರಕಾರವು ಈ ಕೆಳಗಿನ ವಿಚಾರಗಳನ್ನು ಕಾರ್ಯರೂಪಕ್ಕೆ ತರಬೇಕು

"ಖಾಸಗೀ ಮತ್ತು ಸರಕಾರಿ ಶಾಲೆಗಳ ಅಧ್ಯಾಪಕರೆಲ್ಲರಿಗೆ ಒಂದೇ ರೀತಿಯ ಸಂಬಳ ಮತ್ತಿತರ ಸೌಕರ್ಯವಿರಬೇಕು. ಸಂಬಳವನ್ನು ಕೇಂದ್ರ ಸರಕಾರದ ಸಂಬಳ ಸಮಿತಿಯ ವರದಿಯಂತೆ ಕೊಡಬೇಕು. ಒಂದೇ ರೀತಿಯ ಯೋಗ್ಯತೆಯವರಿಗೆ ಅಧ್ಯಾಪಕರಾಗಲೀ ಇತರರಾಗಲೀ ಒಂದೇ ರೀತಿಯ ಸಂಬಳ ಪದ್ಧತಿಯನ್ನೊಪ್ಪುವ ವರೆಗೆ ಉಪಾಧ್ಯಾಯರ ಮಕ್ಕಳಿಗೆ ಧರ್ಮಾರ್ಥ ಶಿಕ್ಷಣವೀಯಬೇಕು."

ಆ ಮೇಲೆ ಸಂಘದ ವರ್ಷವನ್ನು ಜನವರಿಯಿಂದ ಡಿಸೆಂಬರವೆಂದು ನಿರ್ಣಯಿಸುವ, ಕೌನ್ಸಿಲಿನ ಕೈಕೆಳಗೆ ಕಾರ್ಯ ಸಮಿತಿಯೊಂದನ್ನು ರಚಿಸುವ ತಿದ್ದುಪಡಿಗಳು ಸಂಘದ ನಿಯಮದಲ್ಲಿ ಆದುವು. ಅಲ್ಲದೆ ಸಂಘದ ಪ್ರಧಾನ ಕಾರ್ಯದರ್ಶಿಯೇ ಗಿಲ್ಡಿನ ಮುಖಪತ್ರವಾದ 'ವಿದ್ಯೋದಯ'ದ ಸಂಪಾದಕರಾಗಿಯೂ ಇನ್ನೊಬ್ಬರು ಉಪಸಂಪಾದಕರಾಗಿಯೂ ಇರಬೇಕೆಂಬ ನಿಯಮವು ಸ್ವೀಕೃತವಾಯಿತು. ಟೀಚರ್ಸ್ ಗಿಲ್ಡಿನ ಕೌನ್ಸಿಲಿನ ನಿಯಮಾವಳಿಯೊಂದಿಗೇ ಸೇರಿಸಬೇಕೆಂದು ನಿರ್ಣಯವಾಯಿತು.

ಆ ಮೇಲೆ ಈ ಕೆಳಗಿನ ಗೊತ್ತುವಳಿಗಳಾದುವು:-೧. ಸರಕಾರದ್ದಲ್ಲದ ಶಾಲೆಗಳಲ್ಲಿರುವ ಅಧ್ಯಾಪಕ ವರ್ಗಕ್ಕೆ ಖಡ್ಡಾಯವಾದ ಇನ್ಶೂರೆನ್ಸನ್ನು ಜಾರಿಗೆ ತರಬೇಕು. ಉಪಾಧ್ಯಾಯರು ಟಿ. ಪಿ ಫಂಡಿಗೆ ಸೇರುವಾಗಲೇ ಇದಕ್ಕೂ ಸೇರುವಂತಾಗಬೇಕು. ನೂರರ ವರೆಗಿನವರಿಗೆ ರೂ. ೧೦೦೦ಗಳ ಮತ್ತು ನೂರರ ಮೇಲಿನವರಿಗೆ ರೂ. ೨೦೦೦ಗಳ ಪೊಲಿಸಿ ಸಿಗಬೇಕು. ಈ ವಿಮೆಯ ಹಣವನ್ನು ಶಾಲೆಗಳನ್ನು ನಡೆಸುವವರೇ ತೆರಬೇಕು, ಅದಕ್ಕಾಗಿ ಸರಕಾರವೂ ಮೂರನೇ ಎರಡಂಶ ಗ್ರಾಂಟು ಕೊಡಬೇಕು. ೨. ಈ ಜಿಲ್ಲೆಯ ಖಾಸಗಿ ಎಲಿಮೆಂಟರೀ ಶಾಲೆಗಳಿಗೆ ದುರಸ್ತಿಯ ಗ್ರಾಂಟನ್ನು ಕೊಡಲಿಲ್ಲವೆಂದು ಕೇಳಿ ಈ ಸಭೆಯು ಬಹಳ ವಿಷಾದಗೊಂಡಿದೆ. ಅಲ್ಲದೆ ಅದನ್ನು ಕೊಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿಕೊಳ್ಳುತ್ತದೆ. ಈ ಗೊತ್ತುವಳಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೂ ದಕ್ಷಿಣಭಾರತ ಅಧ್ಯಾಪಕ ಸಂಘಕ್ಕೂ ಕಳುಹಿಸಬೇಕೆಂದೂ ತೀರ್ಮಾನವಾಯಿತು. ೩. ಇದೇ ೧೯೫೦ನೇ ಮಾರ್ಚಿಯಲ್ಲಿ ಆದ ಎಸ್. ಎಸ್. ಎಲ್. ಸಿ. ಪರೀಕ್ಷೆಯ ಪ್ರಶ್ನಾಪತ್ರಗಳ ಕುರಿತು ಮದ್ರಾಸಿನಲ್ಲಿ ಇದೇ ಮಾರ್ಚಿ ೨೬ರಂದು ಮುಖ್ಯೋಪಾಧ್ಯಾಯರ ಪರಿಷತ್ತಿನಲ್ಲಿ ಸ್ವೀಕೃತವಾದ ಗೊತ್ತುವಳಿಗಳನ್ನು ಈ ಸಭೆಯು ಒಪ್ಪುತ್ತದಲ್ಲದೆ, ಕನ್ನಡಕ್ಕೆ ಭಾಷಾಂತರಿಸುವಾಗ ಆದ ತಪ್ಪುಗಳಿಗೆ ತನ್ನ ನಿಷೇಧವನ್ನು ವ್ಯಕ್ತಪಡಿಸಲು ಬಯಸುತ್ತದೆ. ೪. ಡಿ. ಪಿ ಐ. ಆಫೀಸಿನಿಂದ ಬರುವ ಆಜ್ಞೆಗಳು ಶಾಲೆಗಳನ್ನು ಸೇರುವಾಗ ಆಗುವ ವಿಳಂಬವನ್ನೂ ಅದಕ್ಕಾಗಿ ಆಗುವ ಇತರ ಶಕ್ತಿ ವ್ಯಯವನ್ನೂ ಪರಿಶೀಲಿಸಿ ಕೆಳಗಿನ ಅಭಿಪ್ರಾಯಕ್ಕೆ ಬಂದಿದೆ. ಡಿ. ಪಿ. ಐ-ಗಳ ಎಲ್ಲಾ ಆಜ್ಞೆಗಳನ್ನೂ ಫೋರ್ಟ್ ಸೈಂಟ್ ಜೋರ್ಜ್ ಗಜೇಟಿನಲ್ಲಾಗಲೀ ಇತರ ಪತ್ರಿಕೆಯಲ್ಲಾಗಲೀ ನಿಯತಕಾಲಕ್ಕೆ ಸರಿಯಾಗಿ ಪ್ರಕಟಿಸಬೇಕು ಮತ್ತು ಅದಕ್ಕೆ ಜಿಲ್ಲಾ ಸೆಕೆಂಡರೀ ಶಾಲೆಗಳು ಚಂದಾ ತೆರುವಂತೆ ಮಾಡಬೇಕು. ೫. ಕೊನೆಯದಾಗಿ ಈ ಸಭೆಯು ಸಂಬಳದ ಕುರಿತು ಇತ್ತೀಚೆಗೆ ದಕ್ಷಿಣ ಭಾರತದ ಅಧ್ಯಾಪಕ ಸಂಘವು ಸ್ವೀಕರಿಸಿದ ಗೊತ್ತುವಳಿಗಳನ್ನು ಸಮರ್ಥಿಸುತ್ತದೆಯೆಂಬ ಠರಾವು ಮಂಜೂರಾಯಿತು.

ಆ ಬಳಿಕ ಹೊಸ ವರ್ಷದ ಚುನಾವಣೆಯಾಯಿತು. ಅಧ್ಯಕ್ಷ. ರೇ. ಫಾ. ಸಿಕೇರ; ಉಪಾಧ್ಯಕ್ಷರು:ರೆ. ಮದರ್ ಕ್ಲೇರಿಸಾ ಮತ್ತು ಶ್ರೀ ಎಂ. ಎಸ್. ಏಕಾಂಬರರಾವ್; ಪ್ರಧಾನ ಕಾರ್ಯದರ್ಶಿ: ಶ್ರೀ ಯು. ಶ್ರೀನಿವಾಸ ಕಿಣಿ, ಸೆಕೆಂಡರೀ ವಿಭಾಗದ ಕಾರ್ಯದರ್ಶಿ: ಶ್ರೀ ಕ್ಲೇರಾ ಮತ್ತು ಎಲಿಮೆಂಟರಿ ವಿಭಾಗದ ಕಾರ್ಯದರ್ಶಿ.ಶ್ರೀ ಬಿ.ವೆಂಕಟರಾವ್. 'ವಿದ್ಯೋದಯ'ದ ಸಂಪಾದಕ: ಶ್ರೀ ಎಸ್. ಮುಕುಂದ ರಾವ್.

**ದ.ಕ. 'ಮೋಟರ್ ಕೆಲಸಗಾರರು.**

ತಾ. ೩-೪-೧೯೫೦ರಂದು ಸಿ. ಪಿ: ಸಿ ಕಂಪೆನಿಯವರ ಕೆನರಾ ವರ್ಕ್‌ಶಾಪ್ಸ್, ಲಿಮಿಟೆಡ್‌ನ ಮರೋಳಿ ಗ್ಯಾರೇಜಿನಲ್ಲಿ ಏಳು ಮಂದಿ ಕೆಲಸಗಾರರನ್ನು ಮೆನೇಜಿಂಗ್ ಡೈರಕ್ಟರು ಸಸ್ಪೆಂಡ್ ಮಾಡಿದುದನ್ನು ವಿರೋಧಿಸಿ ಆ ಗ್ಯಾರೇಜಿನ ಕೆಲಸಗಾರರು ಅಂದು ತಮ್ಮ ಕೆಲಸದ ಉಪಕರಣಗಳನ್ನು ಕೆಳಗಿಟ್ಟು ಸಹೋದ್ಯೋಗಿಗಳನ್ನು ಕೆಲಸಕ್ಕೆ ಪುನಃ ಸೇರಿಸಿಕೊಳ್ಳುವ ವರೆಗೆ ತಾವು ಕೆಲಸ ಮಾಡುವುದಿಲ್ಲವೆಂದು ಹೇಳಿ ತಮ್ಮ ಸ್ಥಳಗಳಲ್ಲಿಯೇ ಕುಳಿತಿದ್ದರು. ಸಾಯಂಕಾಲ ಸುಮಾರು ೪ ಘಂಟೆಯ ಹೊತ್ತಿಗೆ ಮಂಗಳೂರಿನ ಪೋಲೀಸ್ ಸಬ್ ಇನ್ಸ್‌ಪೆಕ್ಟರರೊಬ್ಬರು ಕೆಲವು ಕಾನ್‌ಸ್ಟೇಬಲ್‌ಗಳೊಂದಿಗೆ ಗ್ಯಾರೇಜಿನೊಳಗೆ ಹೋಗಿ ೩೯ ಮಂದಿ ಕೆಲಸಗಾರರನ್ನು ಬಂಧಿಸಿ, ಪೋಲೀಸ್ ವ್ಯಾನ್‌ನೊಳಗೆ ತುಂಬಿಸಿಕೊಂಡು ಹೋಗಿರುತ್ತಾರೆ. ತಾ. ೪-೪-೧೯೫೦ರ ಬೆಳಿಗ್ಗೆ ಕೆನರಾ ವರ್ಕ್‌ಶಾಪ್ಸ್, ಲಿಮಿಟೆಡ್‌ನ ಸುಮಾರು ೪೦೦ ಮಂದಿ ಕೆಲಸಗಾರರುಳ್ಳ ಕೊಡಿಯಾಲಬೈಲ್ ಮತ್ತು ಮರೋಳಿ ಗ್ಯಾರೇಜುಗಳನ್ನು ಮಾಲಿಕರು ಮುಚ್ಚಿಬಿಟ್ಟಿರುತ್ತಾರೆ. ಇದು ಕೆಲಸಗಾರರು ಸಾರ್ವತ್ರಿಕ ಮುಷ್ಕರ ಹೂಡುವಂತೆ ಮೋಟರ್ ಮಾಲಿಕರು ಮತ್ತು ಸರಕಾರ ಕಾರ್ಮಿಕವರ್ಗಕ್ಕಿತ್ತ ಆಹ್ವಾನವಾಗಿದೆ—ಎಂದು ಕೆನರಾ ಮೋಟರ್ ವರ್ಕರ್ಸ್ ಯೂನಿಯನಿನ ಪ್ರಕಟಣೆಯೊಂದರಲ್ಲಿ ಸಾರಲಾಗಿದೆ.

**ಪ್ರತಿಬಂಧಕಾಜ್ಞೆ**—ತೆಲಂಗಾಣ ದಿನಾಚರಣೆಯು ದಿನಾಂಕ ೨ರಂದು ಆಚರಿಸಲ್ಪಡುವುದೆಂದು ವಾರ್ತೆಯಿತ್ತು. ಆದರೆ ಆ ಮೊದಲಿನ ದಿನದಿಂದಲೇ ಮಂಗಳೂರಲ್ಲಿ ಪೋಲೀಸ್ ಪ್ರತಿಬಂಧಕಾಜ್ಞೆಯು ೧೫ ದಿನಗಳ ವರೆಗೆ ಸಾರಲ್ಪಟ್ಟದ್ದರಿಂದ ಮೆರವಣಿಗೆ, ಸಭೆಗಳಾಗಲಿಲ್ಲ. ಸರಕಾರವನ್ನು ಖಂಡಿಸುವ ಬರೆಹಗಳೆಲ್ಲ ಗೋಡೆಗಳಿಗೆ ಹಚ್ಚಲ್ಪಟ್ಟಿದ್ದುವು. ಈ ಸಂಬಂಧವಾಗಿ ಶ್ರೀ ಎ. ಕೆ. ನಾರಾಯಣ ಮುಂತಾಗಿ ೬ ಮಂದಿಯ ಬಂಧನವಾಗಿ ಅವರಿಗೆ ೧೪ ದಿನಗಳ ರಿಮಾಂಡು ವಿಧಿಸಲಾಗಿದೆ.

**ಮುನ್ಸಿಪಲ್ ತೋಟಿಗಳ ನೋಟೀಸನ್ನು** ಪರಿಶೀಲಿಸಲು ಮುನ್ಸಿಪಲ್ ಕೌನ್ಸಿಲು ಸಭೆಯು ದಿನಾಂಕ ೪ರಂದು ಎಲ್. ಸಿ. ಪಾಯಿಸರ ಅಧ್ಯಕ್ಷತೆಯಲ್ಲಿ ಜರಗಿತು. ಮೊದಲು ಅಧ್ಯಕ್ಷರು ನಿಮ್ನ ವರ್ಗದ ನೌಕರರ ಕೇಳಿಕೆಗಳಿರುವ ನೋಟೀಸನ್ನು ಓದಿ ಹೇಳಿದರು. ಅವರ ಕೇಳಿಕೆಗಳಲ್ಲಿ ಕೆಲವೊಂದು ತೊಡಕುಗಳಿರುವುದನ್ನೂ ವಿವರಿಸಿದರು. ಬಳಿಕ ಕೌನ್ಸಿಲು ಅವರ ಕೇಳಿಕೆಗಳಲ್ಲಿ ಒಂದೊಂದನ್ನೇ ಪರಿಶೀಲಿಸಿ ಅವರಿಗೆ ೧೯೪೯-೫೦ನೇ ವರ್ಷಕ್ಕೆ ಪುರುಷರಾದರೆ ೨ ಚಡ್ಡಿ, ೨ ಶರ್ಟುಗಳನ್ನೂ ಸ್ತ್ರೀಯರಾದರೆ ೨ ಸೀರೆ, ೨ ಕುಪ್ಪಸಗಳನ್ನೂ ಕೊಡುವುದೆಂದು ತೀರ್ಮಾನಿಸಿದರು. ಮನೆಬಾಡಿಗೆಯಲ್ಲಿ ಚರ್ಚೆ ನಡೆದು ಅದನ್ನು ಕೊಡುವಂತೆಯೇ ಶಿಫಾರಸು ಮಾಡಲಾಯಿತು. ಅದರಂತೆ ಸಂಬಳದಲ್ಲೂ ೩ ರೂ. ಹೆಚ್ಚಿಸುವುದೆಂದು ತೀರ್ಮಾನವಾಯಿತು. ಈ ವಿಚಾರದಲ್ಲಿ ಸರಕಾರವನ್ನು ಒತ್ತಾಯಿಸಬೇಕೆಂದೂ ನಿರ್ಣಯವಾಯಿತು. ಉಳಿದ ಕೇಳಿಕೆಗಳನ್ನು ಪರಾಂಬರಿಸುವುದಕ್ಕೂ ಮಜೂರರಿಗೆ ತಕ್ಕ ಸಮಾಧಾನ ಹೇಳುವುದಕ್ಕೂ ಡಾ| ನಾಗಪ್ಪ ಆಳ್ವ, ಬಿ. ಎಸ್. ಭಾಸ್ಕರ ರೈ, ಎಸ್. ಗೋಪಾಲ ಸಾಲೆನ್ಸ, ಎಸ್. ಎಸ್. ಕಿಲ್ಲೆ, ಮೇರಿ ಬ್ರಿಟೋ, ಕಲ್ಯಾಣ ಸೆಟ್ಟಿ, ಕೆ. ಎಸ್. ಅಡಿಗ, ಪಿ. ಪಿ. ಡಿ'ಸೋಜ ಮತ್ತು ಅಧ್ಯಕ್ಷರಿಂದ ಕೂಡಿದ ಸಮಿತಿಯೊಂದನ್ನು ರಚಿಸಲಾಯಿತು. ಅಲ್ಲದೆ ದಿನಾಂಕ ೨೨ರಂದು ಇಲ್ಲಿಗೆ ಬರಲಿರುವ ಸಾರ್ವಜನಿಕ ಕಾರ್ಯಗಳಖಾತೆಯ ಮಂತ್ರಿ ಭಕ್ತವತ್ಸಲಂ ಅವರಿಗೊಂದು ಬಿನ್ನವತ್ತಳೆಯನ್ನು ಅರ್ಪಿಸುವುದೆಂದೂ ನಿರ್ಣಯವಾಯಿತು.





**ಪ್ರಕಟಣೆ**

ಬಿ. ಇ. ಯಂ. ಹಾಯರ್ ಎಲಿಮೆಂಟರಿ ಶಾಲಾ
ಹಳೆ ವಿದ್ಯಾರ್ಥಿಗಳ ಸಂಘ,
ಉದಿಯಾವರ.

ಹೊಸದಾಗಿ ಸ್ಥಾಪಿತವಾದ ಈ ಸಂಘಕ್ಕೆ ವಿದ್ಯಾಭಿಮಾನಿಗಳಾದ ಹಳೇ ವಿದ್ಯಾರ್ಥಿಗಳೂ ಇತರ ಮಹನೀಯರೂ ತಮ್ಮ ತನುಮನಧನ ಸಹಾಯವನ್ನು ನೀಡಬೇಕಾಗಿಯೂ ಧನ ಸಹಾಯವನ್ನು ಅಧ್ಯಕ್ಷರ ಹೆಸರಿಗೆ ಕಳುಹಿಸಿಕೊಡಬೇಕಾಗಿಯೂ ಅಪೇಕ್ಷಿಸುತ್ತೇವೆ.

ಪಟೇಲ್ ಯು. ಭಾಸ್ಕರ ಶೆಟ್ಟಿ, ಅಧ್ಯಕ್ಷ. — ಯು ರಮಾನಾಥ ಕಾಮತ್, ಕೋಶಾಧಿಕಾರಿ.

ಯು ಸಂಜೀವರಾವ್, ಶ್ಯಾನುಭಾಗ, ವಾಮನ, ಉದ್ಯಾವರ } ಜತೆ ಕಾರ್ಯದರ್ಶಿಗಳು.

ವಿ. ಸೂ ತಾ. 27-4-50ರ ಶಾಲಾ ವರ್ಧಂತ್ಯುತ್ಸವಕ್ಕೂ ತಾ. 29-4-50ರ ಹಳೆ ವಿದ್ಯಾರ್ಥಿಗಳ "ಮೀರಾಬಾಯಿ"ಎಂಬ ನಾಟಕಕ್ಕೂ ಸಂಘದ ದಿನಾಚರಣೆಗೂ ಬರಬೇಕಾಗಿ ಸವಿನಯ ಆಮಂತ್ರಣ.

**ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.**

ನಮ್ಮ ಸ್ವಂತ ಸುದ್ದಿಗಾರರಿಂದ
**ಸುರಲೋಕದ ದೇವತೆಗಳು ನರಲೋಕದಲ್ಲಿ.**
ಯಾರಿಗೂ ತಿಳಿಯದಂತೆ ಮೊನ್ನೆಮೊನ್ನೆ ಇಂದ್ರನು ಬಂದು ಚಂದ್ರಲೇಖ ನೋಡಿದನಂತೆ.
**ಇದು ಮಾತ್ರ ಗುಟ್ಟಾಗಿರಲಿ**

ತಾರೀಕು 14—4—1950 ರಿಂದ ಜೆಮಿನಿಯವರ

**4ನೇವಾರ ಚಂದ್ರಲೇಖ (ತಮಿಳು)**

**ಟಿ. ಆರ್ ರಾಜಕುಮಾರಿ, ಎಂ ಕೆ. ರಾಧ, ರಂಜನ್.**

ಬರುವ ಚಿತ್ರ— ಫಿಲ್ಮಿಸ್ತಾನದವರ **ಲೀಲಾ**
**ಶೋಭಾ, ಕಾನುರೆಲ್ಸ್ಯಾ, ವೀರಾ**

**ಪಂಚಾಯಿತ ಬೋರ್ಡು,
ಗ್ರಾಮ ಕಮಿಟಿ, ಶಾಲಾ ಕಾಲೇಜು
ಮೊದಲಾದುವುಗಳ**

# ಲೈಬ್ರೆರಿಗಳಿಗೆ

ಬೇಕಾಗುವ ಕರ್ನಾಟಕದ ಎಲ್ಲಾ ಭಾಗಗಳ ಕನ್ನಡ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.
ವಿಚಾರಿಸಿರಿ:—
**ನವಭಾರತ ಪುಸ್ತಕ ಭಂಡಾರ,
ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.**

# ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿ ಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
**ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.**

ಮಹಿಳಾ ಪ್ರಪಂಚ

# ಪ್ರಾಚೀನ ಕನ್ನಡ ಮಹಿಳೆಯ ಅಲಂಕಾರ

ಬರೆದವರು:— ಎಸ್. ರತ್ನಮ್ಮ, ನಂಜನಗೂಡು.

...ಂತರ್ಯ ಸೌಂದರ್ಯವನ್ನು ಬಾಹ್ಯ ಅಲಂಕಾರವು ಬಹಿರಂಗದಲ್ಲಿ ಪ್ರದರ್ಶಿಸುವುದು, ಉತ್ತೇಜಿಸುವುದು, ಸೊಗಸು ನೀಡುವುದು, ದೇಹ ಸೌಂದರ್ಯದ ಕುಂದು ಕೊರತೆಗಳನ್ನು ತಕ್ಕಮಟ್ಟಿಗೆ ಮುಚ್ಚುವುದು. ಸಮಾಜದಲ್ಲಿ ಗಣ್ಯಸ್ಥಾನ ಗಳಿಸಿಕೊಡಲು ಬಾಹ್ಯ ಅಲಂಕಾರಗಳೇ ಪ್ರಧಾನ. ಕಷ್ಟ ಸುಖಗಳ ಕಾಲದಲ್ಲಿ ಹಣದ ಪಾತ್ರವಹಿಸಿ ವಿನಿಯೋಗ್ಯ ಸಾಧನ ಅಮಂಗಳ ಪರಿಹಾರ, ಮುಖ್ಯವಾಗಿ ಸೌಂದರ್ಯೋತ್ತೇಜಕ.

ಪ್ರಾಚೀನ ಕನ್ನಡ ಮಹಿಳೆಯ ಬಾಹ್ಯ ಅಲಂಕಾರ ಸಾಧನಗಳೇನು, ಆ ಸೊಬಗಿನ ನೆಲೆಮನೆಯೆನಿಸಿದ ಅವಳಾವ ಬಗೆಯಲ್ಲಿ ಸಿಂಗರಿಸಿಕೊಳ್ಳುತ್ತಿದ್ದಳು, ಎಂದು ನಮ್ಮ ವಿಮರ್ಶಕ ದೃಷ್ಟಿಯನ್ನು ಸ್ವರ್ಣಯುಗದತ್ತ ಪ್ರಸರಿಸಿದಲ್ಲಿ, ನಮ್ಮ ಕಲಾವಿದರ ಮತ್ತು ಕವಿಗಳ ಕಲಾಭಂಡಾರಗಳನ್ನು ಇಣಿಕಿ ನೋಡಿದಲ್ಲಿ, ಕನ್ನಡ ಮಹಿಳೆಯ ದೇಹ ಶೃಂಗಾರದ ಸದ್ಯಸಾಧನಗಳ ವಿಶಾಲ ಪರಿಚಯವಾಗುವದು. ಎಲ್ಲ ಮಹಾಕಾವ್ಯಗಳ ಅಷ್ಟಾದಶವರ್ಣನೆಗಳ ವ್ಯಾಸಂಗಕ್ಕಿಂತ ಹೆಚ್ಚಾಗಿ ಗುಡಿಗುಹಾಲಯಗಳ ಸ್ತ್ರೀ ವಿಗ್ರಹಗಳನ್ನು ಸಂದರ್ಶಿಸಿ ಸ್ತ್ರೀ ಸೌಂದರ್ಯದ ಗುಣವನ್ನರಿಯಬಹುದು. ಆದರೆ ಸ್ತ್ರೀ ಸೌಂದರ್ಯವನ್ನರಿಯದ ನಿರಂಕುಶವೆಂಬ ಉದ್ದಂಡ ವೃತ್ತಿಯ ಮಹಾಕವಿಗಳ ಕಾಮುಕದೃಷ್ಟಿಯು ತಪ್ಪಾಯಿತು. ಮಹಾಕವಿಗಳ ಮರುಳು ದೃಷ್ಟಿಯಂತೆ ಕಲೆಯ ಹೆಸರಿನಲ್ಲಿ ಶಿಲ್ಪಿಗಳು ಕೆತ್ತಿರುವ ಮಹಾಸೌಂದರ್ಯವನ್ನು ಇಂದಿನ ಸ್ತ್ರೀಯು ದೈನಂದಿನ ವ್ಯವಹಾರ ರಂಗದಿಂದ ಬಹು ದೂರವಾದುದೆಂದೇ ಭಾವಿಸಿ ಕೃತಕತೆಯನ್ನು ದಾಟಿ ನೈಜ ಸ್ತ್ರೀ ಹೃದಯವನ್ನರಿತು ವಿಮರ್ಶಿಸೋಣ.

ದ್ರಾವಿಡ ರಕ್ತ ಸಂಬಂಧಿಯಾದ ಅಂದಿನ ಕನ್ನಡಗಿತ್ತಿ ಇಂದಿನಂತೆಯೇ ಸಾಧಾರಣವಾಗಿ ಸುಮನೋಹರ ಶ್ಯಾಮಲಾಂಗಿ. ಮೋಹಕತೆಯನ್ನು ಹುಟ್ಟಿಸುವ ಶ್ರೀ ಶ್ರೀಯುವರು ಹೇಳುವಂತೆ ಮುದ್ದಿಡುವ ಕಪ್ಪು. ಕೆಲವರು ಸ್ವಲ್ಪ ಗೌರಾಂಗಿಯರೂ ಹೌದು. ಪದ್ಮಮುಖಿ ಎಂದು ಸಾಧಾರಣವಾಗಿ ಕವಿಗಳು ವರ್ಣಿಸುವುದರಿಂದ ಅಪರೂಪವಾಗಿ ಪದ್ಮಾಂಗಿಯರೂ ಇದ್ದಿರಬಹುದು. ನಸುನೀಳವಾದ ಜಾಜಿಯ ಮೊಗ್ಗಿನಂತಹ ದೇಹಲತೆ, ಪ್ರಕಾಶಮಾನವಾದ ತೇಜಸ್ಸನ್ನು ಚೆಲ್ಲುವ ಕಣ್ಣು, ಮಮತೆಯ ಮೂರ್ತಿಮತ್ತಿದ ಹೃದಯ, ಒಲುಮೆ ನುಡಿಯೊಡತಿ, ನಸುನೀಳವಾದ ಗುಂಗುರು ಕೂದಲು. ಒಟ್ಟಿನಲ್ಲಿ ಕನ್ನಡಗಿತ್ತಿ ಸರ್ವಾಂಗ ಸುಂದರಿ. ಸ್ವಭಾವತಃ ರಸಿಕಳು. ಇಂತಹ ಸಿಂಗಾರದ ಗಿಣಿಗೆ ಶೃಂಗಾರವೇಕೆ? ಪಂಪನ ದ್ರೌಪದಿ ಶುದ್ಧ ಕನ್ನಡಗಿತ್ತಿ! ಅವಳನ್ನು ಮನಸ್ಸು ತಣಿಯುವಷ್ಟು ಸಿಂಗರಿಸಿ ಕೊನೆಗೆ "ಈ ತೊಡವುಗಳಿಂದೇನು? ಸಹಜ ಸೌಂದರ್ಯವೇ ಸಾಕು!" ಎಂದು ಉದ್ಗಾರ ತೆಗೆಯುವನು. ಕುಮಾರವ್ಯಾಸನೂ ದ್ರೌಪದಿಯ ಸೌಂದರ್ಯವನ್ನು ವರ್ಣಿಸಿ ಕೊನೆಗೆ ಸೌಂದರ್ಯಾಂಬುಧಿಯಲ್ಲಿ ಕವಿಯ ದೃಷ್ಟಿಗಳು ದಾರಿತಪ್ಪಿದುವೆಂದು ಹರಿಹರನು ತನ್ನ ಗಿರಿಜೆಯನ್ನು ಸರ್ವಾಭರಣಗಳಿಂದ ಶೃಂಗರಿಸಿದನು. ಜಗನ್ಮಾತೆಗೆ ಒಡವೆಗಳು ಬಂಧನ.

ವಜ್ರಕಂಪುಗಳನ್ನು ರಾಶಿ ಸುರಿದು ತೂಗುವ ಕಾಲ! ಜೋಳದಂತೆ ಮುತ್ತನ್ನು ಚೆಲ್ಲುವ ಸುಭಿಕ್ಷ! ಸರ್ವ ಋತುಗಳ ಪುಷ್ಪಸಂಕಲನವೆನ್ನಿಸುವ ನಂದನವನಗಳು! ಪನ್ನೀರಿನ ಕೊಳಗಳು, ತಣ್ಣೆಳಲ ಪುಳಿನ ಸ್ಥಳಗಳು ಪುತ್ರಪ್ರೇಮದಿಂದ ಸಾಕಿ ಸಲಹಿದ ಹರಿಣ ಸಮೂಹ! ಮಯೂರ ನರ್ತನ! ಗಿಳಿಯ ಮೆಲ್ಲುಲಿ! ಸಿಂಗರಿಸುವ ಸೈರಂಧ್ರಿಯರು! ಭೂಸ್ವರ್ಗವೆನಿಸುವ ರಾಜಪ್ರಾಸಾದ, ದುಃಖ, ಕಾರಿನ್ಯ, ಕ್ರೋಧ, ನೋವುಗಳ ಹೆಸರನ್ನರಿಯದ ಸಹಜ ಸುಕುಮಾರಿಯರು ಹತ್ತು ಹನ್ನೆರಡನೆಯ ಶತಮಾನಗಳ ಕಾವ್ಯವರ್ಣನೆಯ ಮುಖ್ಯಾಂಶಗಳಿವು. ಅಲಂಕರಿಸಿಕೊಳ್ಳಲು ಬೇಕಾದೆಷ್ಟು ಕಾಲ ಮತ್ತು ಅನುಕೂಲಗಳಿದ್ದಾಗ ಸ್ತ್ರೀಯಾಗಲೀ ಪುರುಷನಾಗಲೀ ಅಲಂಕರಿಸಿಕೊಳ್ಳುವುದು ಪ್ರಕೃತಿ ನಿಯಮದ ಪ್ರತಿಫಲ. ಜೋಡಿಗರ ಹುಚ್ಚು ಶೃಂಗಾರ ಜೀವನದ ತಿರುಳು.

ಕಸ್ತೂರಿಯು ಕರಗಿದ ಪುಷ್ಪ ಪರಾಗದಿಂದ ಸುವಾಸನಾಯುಕ್ತವಾದ ಶುದ್ಧ ಜಲದಲ್ಲಿ ಸ್ನಾನ ಚೂರ್ಣ, ಸೀಗೆಯ ಪುಡಿ ಮತ್ತು ಸುಗಂಧ ತೈಲಗಳನ್ನುಪಯೋಗಿಸಿ ಅಭ್ಯಂಗನ ಸ್ನಾನಮಾಡಿ, ಆಕೆ ಮುಖಕ್ಕೆ ಪುಷ್ಪಪರಾಗವನ್ನು ಇಂದಿನ ಪೌಡರಿನಂತೆ ಹಚ್ಚಿಕೊಳ್ಳುತ್ತಿದ್ದಳು. ಮುಖ್ಯವಾಗಿ ಕೇದಗೆಯ ಪರಾಗ, ಸಂಪಿಗೆಯ ಪರಾಗ, ಶಾವಂತಿಗೆ ಮತ್ತು ಪದ್ಮಪರಾಗಗಳು ಮುಖ ಸೌಂದರ್ಯದ ಚೂರ್ಣಗಳಾಗಿದ್ದುವು. ಇಂದಿನ ಸೀರೆಯಂತಹದೇ ನೆರಿಗೆಯನ್ನುಟ್ಟು ಮೈತುಂಬ ಸೆರಗು ಹೊದೆಯುತ್ತಿದ್ದಳು. ನವಿಲುಗರಿ ಕೆದರಿದಂತೆ ತೋರುವ ನೆಲಮುಟ್ಟಿ ಹರಿಯುವ ನೆರಿಗೆ. ವಿಜಯನಗರದ ಪ್ರಖ್ಯಾತ ಸಾಮ್ರಾಟ ಕೃಷ್ಣದೇವರಾಯನ ಪತ್ನಿಯರಾದ ಚಿನ್ನಾದೇವಿ, ತಿರುಮಲದೇವಿಯರ ಲೋಹ ಪ್ರತಿಮೆಗಳು ತಿರುಪತಿಯಲ್ಲಿ ಪ್ರತಿಷ್ಠಿಸಲ್ಪಟ್ಟಿವೆ. ಆ ಪ್ರತಿಮೆಗಳಿಗೆ ನೆರಿಗೆಯ ಸೀರೆಯನ್ನುಡಿಸಿ ಅರ್ಧ ತೋಳಿಗೆ ಕುಪ್ಪಸವನ್ನು ತೊಡಿಸಿದೆ. ಅದಕ್ಕಿಂತ ಹಿಂದಿನ ಉದಾಹರಣೆಯೆಂದರೆ ಬೇಲೂರಿನ ಹೊಯ್ಸಳ ಸಾಮ್ರಾಟ ವಿಷ್ಣುವರ್ಧನನ ವಿಗ್ರಹದೊಂದಿಗಿರುವ ಅವನ ಪತ್ನಿ ಶಾಂತಲಾದೇವಿಯ ವಿಗ್ರಹ. ನೆರಿಗೆಯ ಸೀರೆಯನ್ನುಟ್ಟು, ಕುಪ್ಪಸ ತೊಟ್ಟು ಮೇಲೊಂದು ಅಂಶುಕ ಹೊದೆದು ಗಂಭೀರವಾಗಿ ನಿಂತಿದೆ. ಮಹಾ ಶಿಲ್ಪಿಗಳ ಕಲಾಪೂರ್ಣ ಪ್ರತಿಮೆಗಳಂತಿಲ್ಲ. ಚಂಪೂ ಕಾವ್ಯಗಳಲ್ಲಿಯೂ ಸ್ತ್ರೀ ನೆರಿಗೆಯ ಸೀರೆಯನ್ನುಟ್ಟು, ಕುಪ್ಪಸವನ್ನು ತೊಟ್ಟು ಮೇಲೊಂದು, ಅಂಶುಕವೆಂಬ ಬಿಳಿಯ ಚಿನಾಂಬರವನ್ನು ಹೊದೆಯುತ್ತಿದ್ದಳೆಂದು ಹೇಳಿದೆ. ಈ ಅಂಶುಕದ ಅವಶೇಷ ಉಪಯೋಗವೇ ಇಂದು ಮದುವೆಯಲ್ಲಿ ಧಾರೆಯ ಸಂದರ್ಭದಲ್ಲಿ ವಧು ಹೊದೆಯುವ ಮೇಲುಹೊದಿಕೆ. ಕಣ್ಣಿಗೆ ಕಪ್ಪು ಹಚ್ಚುವುದು ಅಲಂಕಾರ ಮತ್ತು ಆರೋಗ್ಯ. ಉಗುರಿಗೆ ಗೋರಂಟಿಯ ಮತ್ತು ಪಾದರಸದ ಮಿಶ್ರಣದ ಬಣ್ಣವನ್ನೂ ಕಾಲಿಗೆ ಅರಗಿನ ರಸದ ಚಿತ್ತಾರವನ್ನೂ ಬರೆದುಕೊಳ್ಳುತ್ತಿದ್ದಳು. ಹುಬ್ಬು ತಿದ್ದುವುದು, ಮತ್ತು ಕೆನ್ನೆಯ ಕೂದಲನ್ನು ಮಕರಿಕೆಯ ಎಂದರೆ ಆನೆ ಸೊಂಡಿಲಿನ ಆಕಾರದಲ್ಲಿ, ಅಥವಾ ನಕ್ರ-ಮೊಸಳೆಯ ಆಕಾರದಲ್ಲಿ ತಿದ್ದಿಕೊಳ್ಳುವುದು, ಕುರುಳು ತಿದ್ದಿಕೊಳ್ಳುವುದು, ಅಥವಾ ಗುಂಗುರು ಕೂದಲಾಗಿದ್ದಲ್ಲಿ ತೊಂಡಲು, ಚುಲು... (tendrils)ಗಳಾಗಿ ತಿದ್ದುವುದು ಅವಳ ಮುಖ್ಯ ಶೃಂಗಾರ. ಕೆಲವೊಮ್ಮೆ ಕೇಶಸೌಂದರ್ಯದ ಉದ್ದೀಪನ ಕಾರ್ಯಗಳಾದ ಮಕರಿಕಾ ಪತ್ರ ರಚನೆ, ಲಲಾಟ-ಮಂದಾರ, ಮ...ಲಾಲಂಕಾರಗಳನ್ನು ನಲ್ಲರೇ ಕೈಗೊಳ್ಳುತ್ತಿದ್ದರೆಂದು ಸೊಗಸುಗಾರ ಪಂಪನ ಹೇಳಿಕೆ.

ಒಡವೆಗಳಿಂದ ಸಿಂಗರಿಸಿಕೊಳ್ಳುತ್ತಿದ್ದಂ...ಯೇ ವಸಂತ ಋತುವಿನಲ್ಲಿ ಹೂಗಳಿಂದ ಸಿಂಗರಿಸಿಕೊಳ್ಳುತ್ತಿದ್ದರು. ಮುಂಗುರುಳಿನ... ಮಂಧಾರ ಪುಷ್ಪದ ಬಾಸಿಂಗವನ್ನು ನಲ್ಲನೆ... ರಚಿಸುತ್ತಿದ್ದುದು ಅಂದಿನ ರಸಿಕತೆ. ಅ... ಋತುಗಳಿಗೂ ಅನುಗುಣವಾದ ರೀತಿಯ ...ಲಂಕಾರ, ಹನ್ನೆರಡು ತಿಂಗಳಿಗೂ ಪ್ರತ್ಯೇ... ಪ್ರತ್ಯೇಕ ಬಗೆಯ ಅಲಂಕಾರ, ಅಂದಿನ ...ಯುಕ್ತಿಕ ಅಭಿರುಚಿತ್ವಕ್ಕೆ ಸಾಕ್ಷಿ. ಹೆಚ್ಚೇ...ಪಾರ ತೊಡಿಗೆಯ ಹೆಸರು ಸುಮಾರು ...ತ್ತು ವರ್ಷಗಳ ಹಿಂದೆಯೂ ಕೇಳಿಬ...ತ್ತಿತ್ತು!

ಕೇಶ ಸಂಸ್ಕರಣದಲ್ಲಿ ಪ್ರಾಚೀನ ಕನ್ನ...ತ್ತಿಗಿದ್ದ ಅಭಿರುಚಿ ಸ್ತೋತ್ರಾರ್ಹವಾದು... ಕರ್ನಾಟಕದಲ್ಲಿಯ ಅತ್ಯಂತ ಪ್ರಾಚೀನ ...ವಾಲಯಗಳೆಂದು ನಿರ್ಣಯಿಸಲ್ಪಟ್ಟ ಪಟ್ಟ...ಕಲ್ಲಿನ ದೇವಾಲಯಗಳಲ್ಲಿ ಕೆಲವು ಸ್ತ್ರೀ...ಗ್ರಹಗಳಿಗೆ ಬೈತಲೆಯಲ್ಲಿಡೆ ಮೇಲೆತ್ತಿ ಬ... ನಡುನೆತ್ತಿಯ ವರೆಗೂ ವಿಸ್ತರಿಸಿದ ವೃತ್ತಾ...ರವಾದ ಇಂದಿನ ಬೈನಾ ಫ್ಯಾಷನ್ ಅ... ಹೋಲುವ ಹೆರಳುಗಳನ್ನು ಹಾಕಿದೆ.

---

## *Notice.*

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. C. 6/1950

ವಾದಿ— K. ಸೀತಾರಾಮಪ್ಪ.

ಪ್ರತಿವಾದಿ— ಶಿದ್ದ ಯಾನೆ ಕುಳ್ಳ ನ್ಯಾಕ.

ನಾಗೋಡಿ ಗ್ರಾಮದ ಹಾಲ್ಕನೆಯಲ್ಲಿರುವ ಬೋಳು ನ್ಯಾಕನ ಮಗ ಪ್ರತಿವಾದಿ ಶಿದ್ದ ಯಾನೆ ಕುಳ್ಳ ನ್ಯಾಕನಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಪ್ರತಿವಾದಿಯಿಂದ ವಾದಿಗೆ ಸರ್ವಜಿತು, ಸರ್ವಧಾರಿ ಸಂವತ್ಸರಗಳಿಗೆ ಬರತಕ್ಕ ಗೇಣಿ ಬಾಕಿಯನ್ನು ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾ. 21-4-1950ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ಖಿಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಆ ತಾರೀಕಿಗೆ ಮೇಲಿನ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ.

**N S. Parameshwariah,**
Advocate for Plff.

Coondapoor
Date 1-4-1950

---


## ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

**೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ**

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,.....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರಿ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿ‌ಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟಿ:—ಬಾಗಲಕೋಟಿ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ.



— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸನೀರಿನಲ್ಲಿ ಸೇವಿಸಬೇಕು.

**ಪಥ್ಯ:**—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ ವಿಜಾಪೂರ— ಶಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ಕಮಲಾಪುರ ,ಕೆಮಿಸ್ಟ, ಹಾವೇರಿ, ಬ್ಯಾಡಗಿ



ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ನೋವು,ಘಾಯಗಳು, ಬಾತುಕೊಳ್ಳುವು ಚೇಳವಿಷಮುಂತಾದವು, ಪಕ್ಷವಾತ,ಮೊ ಮೊದಲಾದ ಎಲ್ಲಾರೋಗಗಳಿಗೂ ಸಿದ್ಧ

REGD

ಹುಳುಕಡ್ಡಿ।ಮದ್ದು।ನಮ್ಮಲ್ಲಿ ಸಿಕ್ಕು

ಅಮೃತಾಂಜನ ಲಿಮಿಟೆ

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಮಾಡಿದಂತೆ ತೋರುವ, ರೋಲ್ ಮಾಡಿಟ್ಟಂತೆ ಕಾಣುವ, ಕೆಲವು ಗಂಟುಗಳನ್ನು ಅಲ್ಲಿ ಕಾಣಬಹುದು. ಆಗಲೂ ಸೂಜಿಯ ಆಕಾರದ ಹೇರ್ ಪಿನ್ನುಗಳಿದ್ದುವು. ಇಂದಿನವುಗಳಿಗಿಂತ ಅಂದವಾಗಿದ್ದು ತುದಿಯಲ್ಲಿ ಸಣ್ಣ ಸಣ್ಣ ನವಿಲುಗಳಿರುತ್ತಿದ್ದುವು. ಅವುಗಳ ಹೆಸರು, ಅಮರಿ ಕೋಪು ಚಕ್ಕಡ ಎಂದು. ಎರಡು ಜಡೆಗಳನ್ನು ಹೆಣೆದು ಮುಂಪಾರ್ಶ್ವಗಳಲ್ಲಿ ಬಿಟ್ಟು ಅವೆರಡನ್ನು ಕಳಿಗೆ ಕೂಡಿಸಿ, ಒಂದಾಗಿ ಹೆಣೆದು, ಕುಚ್ಚು ಹಾಕಿದ ರೀತಿಯಿದೆ. ವಾರೆ ತುರುಂಬು, ನಾಗರ ಹೆರಳು, ಮಕರ ಕುಂಡಲ, ಸಿಕ್ರನೇಣಿ, ಓರೆ ಬೈತಲೆ ಈ ವೈವಿಧ್ಯತೆಗಳನ್ನೆಲ್ಲ ಇಲ್ಲಿ ಕಾಣಬಹುದು. ಅಜಂತಾ ಚಿತ್ರಗಳಲ್ಲಿ ತೋರಿಸಿರುವ ವೈವಿಧ್ಯತೆಗಳನ್ನು ಗಮನಿಸಿದಲ್ಲಿ, ಕ್ರಿ. ಪೂ. ೩ನೆಯ ಶತಮಾನದಿಂದ, ಕ್ರಿ. ಪೂ. ೭-ಲನೆಯ ಶತಮಾನಗಳ ವರೆಗೆ ಪ್ರಚಾರದಲ್ಲಿದ್ದ ಪ್ರಾಚೀನ ಕನ್ನಡಿಗಿತ್ತಿಯ ಕೇಶಾಲಂಕಾರಗಳೇ, ಇಲ್ಲಿಗೆ ಬಂದಿದ್ದ ಪಾಶ್ಚಾತ್ಯ ಪ್ರವಾಸಿಗರ ಮೂಲಕ ಗ್ರೀಕ್ ಸಂಸ್ಕೃತಿಯೊಂದಿಗೆ ಬೆರೆತು ಕಾಲಕ್ರಮದಲ್ಲಿ ಫ್ರಾನ್ಸ್ ಇಂಗ್ಲೆಂಡ್ ಗಳಲ್ಲಿ ಹರಡಿ ರೂಪಾಂತರ ವೇಷಾಂತರ ಬದಲಾವಣೆಗಳನ್ನು ಹೊಂದಿ ನವೀನ ನಾಮಕರಣಗಳಿಂದ ಹೊಸ ಜನ್ಮತಾಳಿ, ಅದರಂತೆಯೇ ಚೈನಾ ಸಂಸ್ಕೃತಿಯಲ್ಲೊಂದಾಗಿ ಜಪಾನಿಗಳ ಜೀವನದಲ್ಲಿ ಬೆರೆತು ಮತ್ತೆ ಆಧುನಿಕ ಯುಗದಲ್ಲಿ ಪಾಶ್ಚಾತ್ಯ ನಟಿಯರ ಪ್ರಕಾಶನಶಕ್ತಿಯಿಂದ ಭಾರತ ರಜತ ಪರದೆಯ ಮೇಲೆ ವಿರಾಜಮಾನವಾಗಿ ರಾರಾಜಿಸುತ್ತ ಜನತೆಯ ಮೇಲೆ ಪ್ರಭಾವವನ್ನು ಬೀರುತ್ತಿದೆಯೆಂದು ನಿಸ್ಸಂದೇಹವಾಗಿ ಹೇಳಬಹುದು. ಅಷ್ಟೇಕೆ! ಮಹಾಕವಿ ಹರಿಹರನ ಗಿರಿಜೆ ಎರಡು ಜಡೆಗಳನ್ನು ಕಟ್ಟಿಕೊಂಡು ತಪಸ್ಸು ಮಾಡಿದಳಂತೆ! ಏಕವೇಣೀ ಬದ್ಧತೆಯು ವ್ಯಸನ ವೈರಾಗ್ಯ ಸೂಚಕವೆಂದು ಕವಿ ಕಾಳಿದಾಸನ ವರ್ಣನೆ. ಆ ಕೇಶಾಲಂಕಾರದ ಆಭರಣಗಳು ಬೈತಲೆಗೆ ಮುತ್ತಿನ ಎಕಧಾರೆ ಪೋಣಿಸಿದ ಪದಕವನ್ನುಳ್ಳ ಬೈತಲೆ ಬಟ್ಟು. ಅದರ ಕೆಳಗೆ ವಜ್ರ ಕಂಪಿನ ಹಣೆಬಟ್ಟು. ನಡ ಹಣೆಗೆ ಕಸ್ತೂರಿ ತಿಲಕ, ಅಥವಾ ಅರ್ಧ ಚಂದ್ರಾಕೃತಿಯ ಕುಂಕುಮದ ಬಟ್ಟು ಮತ್ತು ನಕ್ಷತ್ರವನ್ನು ಹೋಲುವ ಚಂದ್ರದ ಚುಕ್ಕಿ. ಮೂಗಿಗೆ ಮೂಗುಬಟ್ಟು ಅಥವಾ ಮೂಗುತಿ ಬುಲಾಕು, ಮುಸಲಮಾನ್ ಸಂಸ್ಕೃತಿಯ ಕಾಣಿಕೆ. ಮುಂದಲೆಯಿಂದ ಬೈತಲೆ ಬಟ್ಟಿಗೆ ತಗುಲಿ ಕಿವಿಯವರೆಗೂ ಎಳೆದು ಕಟ್ಟಿದ ಪಾನಬಟ್ಟು ಬೈತಲೆಯ ಎರಡು ಪಕ್ಕಗಳಲ್ಲಿ ಚಂದ್ರ, ಸೂರ್ಯ ಇವಿಲ್ಲದಿದ್ದಲ್ಲಿ ಮಲಕು ಎಂಬ ಪದ್ಮಾಕಾರದ ಹೂ. ಇದಕ್ಕೆ ತಗುಲಿದ ಕುಚ್ಚಿನ ಎಳೆಗಳ ಲಂಬಣ, ಹಿಂದಲೆಗೆ ಗಂಟು ಹಾಕಿದ್ದ ಪಕ್ಷದಲ್ಲಿ ಗಿಣಿಮುಡಿ, ರತ್ನಮುಡಿ, ಸೂರ್ಯಮುಡಿ, ಚಂದ್ರಮುಡಿ ಮತ್ತು ಹೂವಿನ ದಂಡೆ, ಜಡೆ, ಹಣವಲ್ಲಿ ಮೇಲ್ಮಲೆಗೆ ರಾಗಟೆ, ಅದರಿಂದ ಕೆಳಗೆ ಕ್ರಮವಾಗಿ ಕೇದಗೆ, ನಾಗಾಭರಣ, ಚೂಡಾಮಣಿ ಇಲ್ಲಿಂದ ಜಡೆಗೆ ಪ್ರಾರಂಭ. ಮಲ್ಲಿಗೆಯ ಜಡೆ, ತಾಳೆ ಜಡೆ, ಸುಗಂಧ ಪತ್ರಗಳ ಜಡೆ ಹೂಗಳ ವಿವಿಧ ಜಡೆಗಳು. ಮಧ್ಯದಲ್ಲಿ ಜಡೆಬಿಲ್ಲೆ, ತುದಿಯಲ್ಲಿ ಕುಚ್ಚು. ಅತಿ ಶ್ರೀಮಂತಿಕೆಯ ಗುರುತು. ಜಡೆಭಂಗಾರ ಕಿವಿಯಲ್ಲಿ. ಆಭರಣಗಳಲ್ಲಿ ಅತಿ ಮುಖ್ಯವಾದದ್ದು ಪ್ರಾಚೀನ ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟ ಮಂಗಳದ ಚಿಹ್ನೆಯಾದದ್ದು ಬುಗುಡಿ ಮತ್ತು ಓಲೆ ಜಳತ ರಿಬು, ಅನಂಗದ ಕಡ್ಡಿ, ಗುಡ್ಡಿಬಾವಲಿ, ಚಂದ್ರಮುರು, ತಾಲ್ಲಾಕು, ಕಡೆ ಸರಪಣಿ ಮತ್ತು ಈ ಒಡವೆಗಳಲ್ಲಿ ಕೆಲವನ್ನು ಎತ್ತಿ ನಿಲ್ಲಿಸುವ ಸರಪಣಿಗಳು. ವಿಶೇಷ ಸಂದರ್ಭವನ್ನು ಸೂಚಿಸುವ ಒಡವೆ ಕೀರ್ತಿ ಮುಖ ಇವು ಕಿವಿಯ ಆಭರಣಗಳು. ಕೈಯಲ್ಲಿ ಉಂಗುರ, ಮುದ್ರಿಕೆ, ಕಡಗ, ಗಾಜಿನ ಬಳೆಗಳು ಮಂಗಳ ಸೂಚಕಕ್ಕಾಗಿ ಹರಡಗುಂಡು. ಪಾಟಲಿ ಸಿಂಹಲಲಾಟ, ಕಂಕಣಗಳನ್ನು ಉಚಿತವರಿತು ಧರಿಸುತ್ತಿದ್ದರು. ಮೊಳಕೈ ಮೇಲಕ್ಕೆ ನಾಗಮುರಿಗೆ, ವಂಕಿ, ರಾಜ ಸಂಬಂಧ ಸೂಚಕ ಭುಜಕೀರ್ತಿ, ಇದಕ್ಕೂ ಲಂಬಣವುಂಟು.

ಆಧುನಿಕರ ಚೈನಾ ದ ಸ್ಥಾನ ವೈವಿಧ್ಯತೆಗಳು ಪ್ರಾಚೀನರಲ್ಲಿ ಗುರುತಿನಸರಕ್ಕೆ ದೊರೆತಿದ್ದವೆಂದು, ಅಜಂತ, ಬಾದಾಮಿ, ಪಟ್ಟದಕಲ್ಲುಗಳ ಶಿಲ್ಪದಿಂದ ಗೊತ್ತಾಗುತ್ತದೆ. ಶಿಲ್ಪಿ ಪಟಕುವರಿಯರೆಲ್ಲರೂ ಅಡ್ಡಿಕೆ, ಪದಕ, ತೋರಹಾರಗಳನ್ನು ಧರಿಸಿರುವುದು ಇದ್ದಾರೆ. ಮೇಲು ಕತ್ತಿಗೆ ಅಡ್ಡಿಗೆ, ಅದರಿಂದ ಕೆಳಕ್ಕೆ ಕ್ರಮವಾಗಿ ಮಲ್ಲಿಗೆ, ಮೊಗ್ಗಿನಸರ, ಬಂದಿ, ಅಸಲಿ, ಮಾಂಗಲ್ಯ, ಏಳೆಳೆ ಸರ ಮತ್ತು ಸರಿಗೆ ಪದಕ, ಶ್ರೀಮಂತರಾದವರು ಜೇವಾಳೆ, ಕಂಠಿ, ಚಂದ್ರಹಾರ, ಮುತ್ತು ಹವಳದ ಸರಗಳನ್ನು ಧರಿಸುತ್ತಿದ್ದರು.

ಸೊಂಟಕ್ಕೆ ಡಾಬು, ಪಟ್ಟಿ, ಮೇಖಲೆ ಶೃಂಖಲೆಗಳು, ಕಾಲಿನ ಒಡವೆಗಳು, ಕಾಲುಂಗುರ, ಮಂಗಳ ಸೂಚಕ, ಕಾಲುಬೆರಳುಗಳಿಗೆ ಕ್ರಮವಾಗಿ ಪಿಲ್ಲಿ ಕಾಲುಂಗುರ, ಕಿರುಪಿಲ್ಲಿ, ಚಿತ್ತಿಪಿಲ್ಲಿ, ಸುತ್ತು ಮಿಂಚು, ಇವೈದನ್ನೂ ಸೇರಿಸಿದ ಸರಪಣಿ, ಮುಂಗಾಲಿನ ಮೇಲೆ ಗಂಡಭೇರುಂಡವನ್ನೊಳಗೊಂಡು ಕಾಲಂದಿಗೆ ತಗಲುವುದು ಮೇಲಕ್ಕೆ ಕ್ರಮವಾಗಿ, ಗೆಜ್ಜೆ, ಪಾಡಗ, ಪೈಜಣ, ಗಗ್ಗರ, ಪೆಂಡೆ ಕಾಲು ಕಡಗಗಳನ್ನು, ಉಚಿತವರಿತು ಧರಿಸುತ್ತಿದ್ದರು. ಚಂದ್ರಗಾವಿ, ಪೀತಾಂಬರ, ಸಾವಾಳಿ, ಪಟ್ಟೆವಾಳಿ, ನಿಂಬಾವಳಿ ಸೀರೆಗಳನ್ನು, ವಿಶೇಷ ಸಂದರ್ಭದಲ್ಲಿ ಬಿಳಿಸೀರೆ, ಜವಾಹಿರಿ ಸೀರೆ ಕುಪ್ಪಸಗಳನ್ನು ಧರಿಸುತ್ತಿದ್ದರು. ಕನ್ನಡಗಿತ್ತಿಗೆ ತಲೆಯ ಮುಸುಕು ಇರಲಿಲ್ಲ. ಹಾಗೆ ಮುಸುಕು ಹಾಕಿದಲ್ಲಿ ಅಮಂಗಳ ಸೂಚಕ!

ಅಲಂಕಾರವೆಲ್ಲ ಪೂರೈಸಿದ ನಂತರ ದೃಷ್ಟಿಬಟ್ಟನ್ನಿಟ್ಟುಕೊಂಡು, ಆತ್ಮಾಧುನಿಕ ಪಾಶ್ಚಾತ್ಯ ಸಂಸ್ಕೃತಿಗೊಳಗಾದ ಮಹಿಳೆ ಕೈಯಲ್ಲಿ ನಾಯಿಯನ್ನು ಹಿಡಿದು ವಾಯು ಸೇವನಾರ್ಥವಾಗಿ ಹೊರಡುವಂತೆ, ಭುಜ ಅಥವಾ ಮುಂಗೈ ಮೇಲೆ ತಾನೇ ಸಾಕಿದ ಗಿಣಿಯನ್ನು ಕುಳ್ಳಿರಿಸಿಕೊಂಡು, ಅದರೊಂದಿಗೆ ಲಲ್ಲೆಯಿಂದ ಗಳಪುತ್ತ, ಉಪವನಕ್ಕೆ ಹೊರಡುತ್ತಿದ್ದಳು. ಮಾತನಾಡದ ನಾಯಿಯನ್ನು ಆದರಿಸುವ ನವೀನ ನಾಗರಿಕತೆಗಿಂತ 'ಭಾರತೀಯ ವೈಭವದ' ಗಿಣಿಯನ್ನು ನೆನೆದಲ್ಲಿ. ಕೆಲವೊಮ್ಮೆ ನಾಚಿಕೆಯಿಂದ ತಾನು ಹೇಳಲಾಗದ ಮಾತನ್ನು, ಸೇಡಿಗರಲ್ಲಿ ಸೂಚಿಸುವ ಗಿಣಿಯನ್ನು ಮುಂಗೈ ಮೇಲೆ ಕೂರಿಸಿಕೊಂಡು ಹೊರಡುವ ಕನ್ನಡಗಿತ್ತಿಯ ರಸಪೂರ್ಣ ರಸಿಕತೆ ನಿಶ್ಚಯವಾಗಿ ಮೆಚ್ಚತಕ್ಕದ್ದು. (ಚಿತ್ರಗುಪ್ತ)


## ನೋಟೀಸು.

ಕುಂದಾಪುರ ಡಿ. ಮು ಕೋರ್ಟಿನಲ್ಲಿ

O. S 25/1950

ವಾದಿ— ಗೋಪಾಲ ಶ್ಯಾನುಭಾಗ.
ಪ್ರತಿವಾದಿರು—ಸಾಬ್ರಾಯ ಉರಾಳ ಕೂಡಾ.

ಪ್ರತಿವಾದಿರು 6. ರಾಮಭಟ್ಟ, ನಾರಾಯಣ ಭಟ್ಟರ ಮಗ, ಉಡುಪಿ ತಾಲ್ಲೂಕು ಪಾರಂಪಳ್ಳಿ ಗ್ರಾಮ. ಇವರಿಗೆ—

ವಾದಿಯು ಪ್ರತಿವಾದಿರ ಮೇಲೆ ತಾರೀಕು 7-7-1939ರಲ್ಲು ಬರಕೊಟ್ಟ ಗೇಣಿ ಮೂದು ನಂಬ್ರ ಪ್ರಕಾರ ಬರತಕ್ಕ ಸರ್ವಜಿತು, ಸರ್ವಧಾರಿ, ವಿರೋಧಿ ಸಾಲುಗಳ ಗೇಣಿ ಬಗ್ಗೂ ಆಸ್ತಿ ಸ್ವಾಧೀನತೆ ಬಗ್ಗೂ ಕೂಡಾ ವಾದಿಯು ಸಬ್ರಿ ದಾವಾ ಮಾಡಿರುವುದರಿಂದ ಆ ಕುರಿತು ನಿಮ್ಮದೇನಾದ್ರೂ ಆಕ್ಷೇಪವಿದ್ದಲ್ಲಿ ತಾರೀಕು 14-4 1950ನೇ ದಿವಸ ಹಗಲು 11 ಗಂಟೆಗೆ ಯಿ ಕೋರ್ಟಿನ ಮುಂದೆ ಹಾಜ್ರು ಆಗಿ ಜ್ವಾಬು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟಿನ ಹುಕುಂ ಪ್ರಕಾರ ನಿಮಗೆ ಯಿ ಮೂಲಕ ತಿಳಿಸಲಾಗುತ್ತದೆ.

**K. Raghunatha Shenai,**
Pleader for Pltf.
Coondapoor
Date 24-3-1950






Approved firm by the Govt. of Mysore.
Certificated by the Agent of the Govt of Cylone & Indian



Nambiar's
# ARYA VAIDYA SALA
UDIPI
*Ideal House for Ayurvedic Treatment.*
T. N. Kelu Nambiar,
*Vaidya*



ಜೀವವಿಮೆಗಾಗಿ

ವಿಚಾರಿಸಿರಿ

## ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ
ಲೈಫ್ ಇನ್ಶೂರೆನ್ಸ್ ಕೊ., ಲಿಮಿಟೆಡ್.

(ಸ್ಥಾಪನೆ: 1934)

ಚೆಯರ್‌ಮೆನ್: ಶ್ರೀ. ಎಮ್. ಸಿಟಿ. ಎಮ್. ಚಿದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೋಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,
ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ:
"ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್" ಪೋಸ್ಟು ಬಾಕ್ಸ್ ನಂಬ್ರ 142
ಮದ್ರಾಸು



ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

## ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಸ್ವೆರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

**ROYAL MAHAL,**

UDIPI, S. Kanara.



## ನೋಟೀಸು.

ಕುಂದಾಪುರ ಡಿ ಮು. ಕೋರ್ಟಿನಲ್ಲಿ

S C No. 43/1950

ವಾದಿಳು— ಮುಕಾಂಬಿಕೆ ಅಮ್ಮ.
ಪ್ರತಿವಾದಿರು—ಮಂಜುನಾಥಮಯ್ಯ ಕೂಡಾ.

ಪ್ರತಿವಾದಿರು—1 ಮಂಜುನಾಥ ಮಯ್ಯ, ನೀರಮಕ್ಕಿ ನರಸಿಂಹ ಮಯ್ಯರ ಮಗ, ಉಡುಪಿ ತಾಲ್ಲೂಕು ಗಿಳಿಯಾರು ಗ್ರಾಮದ ಪರತಟ್ಟು. Post Kota.

2 ಪ್ಮ್ಯಾನರ ನರಸಿಂಹ ಮಯ್ಯ 8 ವರ್ಷ. ಶಂಕ್ರನಾರಾಯಣ ಮಯ್ಯರ ಮಗ, ಯೊಕನ ಗಾರ್ಡಿಯನ್ ಚಿಕ್ಕತಂದೆ ಮಂಜುನಾಥ ಮಯ್ಯ 1ನೇ ಪ್ರತಿವಾದಿ. ಉಡುಪಿ ತಾಲ್ಲೂಕು ಗಿಳಿಯಾರು ಗ್ರಾಮದ ಪರತಟ್ಟು. ಇವರಿಗೆ—

ವಾದಿಳಿಗೆ 1ನೇ ಪ್ರತಿವಾದಿ ಅಂಣ ನ, 2 ನೇ ಪ್ರತಿವಾದಿ ತಂದೆ ಶಂಕರನಾರಾಯಣ ಮಯ್ಯರು ತಾರೀಕು 24-1-1947ರಲ್ಲು ರೂಪಾಯಿ 121-4-0ಕ್ಕೆ ಬರಕೊಟ್ಟ ದಿವಹಾಂಡು ನೋಟಿನ ಹಣ ಬಡ್ಡಿ ಬಗ್ಗೆ ನಿಮ್ಮ ಮೇಲೆ ಸಬ್ರಿ ದಾವಾ ದಾಖಲು ಮಾಡಿರುವುದರಿಂದ ಆ ಕುರಿತು ನಿಮ್ಮದೇನಾದ್ರೂ ಆಕ್ಷೇಪವಿದ್ದಲ್ಲಿ ತಾ. 15-4-1950ನೇ ದಿವಸ ಹಗಲು 11ಗಂಟೆಗೆ ಯಿ ಕೋರ್ಟಿನ ಮುಂದೆ ಹಾಜ್ರು ಆಗಿ ಜ್ವಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟಿನ ಹುಕುಂ ಪ್ರಕಾರ ನಿಮಗೆ ಯಿ ಮೂಲಕ ತಿಳಿಸಲಾಗುತ್ತದೆ.

K. Raghunatha Shenai
Pleader for Plaintiff.
ಕುಂದಾಪುರ ತಾ. 24-3-1950.



## ಸಿಹಿಮೂತ್ರ ರೋಗಕ್ಕೆ ಚಿಕಿತ್ಸೆ

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದಿನೈದು ದಿವಸಗಳಲ್ಲಿ ಮೂತ್ರ ಸ್ವಾಭಾವಿಕ ಸ್ಥಿತಿಗೆ ಬರುವುದು. ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾಧಾರಣ ಮಂದಿಗೆ ಶಾಸ್ತ್ರಿ ಗುಣವಾಗದಿದ್ದಲ್ಲಿ; ರೂ 3-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ. 8- [ವಿ. ಪಿ. ಖರ್ಚು ಪ್ರತ್ಯೇಕ.]

MIS. P. DEVEE, F. DS. (N. J.)
Tollygunge CALCUTTA

ಸ್ಟಾಕಿಸ್ಟರು: ಕರಾವಳಿಸಿಸ್ಟರು, ಮಂಗಳೂರು

# ಗಾಂಧೀಜಿಗೆ ದ್ರೋಹ

ಲೇಖಕರು:– ಶ್ರೀ. ಕೆ. ಜಿ. ಮಶ್ರೂವಾಲಾ.

ಈಗೀಗ ಪ್ರತಿಯೊಬ್ಬರ ಮೇಲೆ 'ಗಾಂಧೀಜಿಗೆ ದ್ರೋಹ' ಬಗೆದ ಆರೋಪ ಹೊರಿಸುವುದನ್ನು ಕೇಳುತ್ತೇವೆ. ಈ ಪಾಪ ಇಷ್ಟೊಂದು ಪ್ರಚುರವಾಗಿರುವುದೇ ನಿಜವಾಗಿದ್ದರೆ ಅಂಥ ಪಾಪಿಗಳ ಕಡೆ ಬೊಟ್ಟು ತೋರಿಸುವ ಆವಶ್ಯಕತೆಯೇ ಇಲ್ಲ. ರೋಗಿಗಳ ಊರಲ್ಲಿ ರೋಗಿಗಳನ್ನು ಎಣಿಸುವುದಕ್ಕಿಂತ ಆರೋಗ್ಯವಂತರನ್ನು ಎಣಿಸುವುದೇ ಹೆಚ್ಚು ಸುಲಭ. ಅದೇ ನ್ಯಾಯದಿಂದ, ದ್ರೋಹಿಗಳನ್ನು ಹುಡುಕಿ ತೆಗೆಯುವುದಕ್ಕಿಂತ ಗಾಂಧೀಜಿಗೆ ನಿಷ್ಠರಾಗಿ ನಡೆಯುತ್ತಿರುವವರನ್ನು ಅರಸುತ್ತ ಹೋಗುವುದು ಹೆಚ್ಚು ಹಿತಕರವಾದೀತು. ನಿಜವಾಗಿಯೂ ನೂರಾರು ದ್ರೋಹಿಗಳ ನಡುವೆ ಗಾಂಧೀಜಿ ತೋರಿಸಿದ ದಾರಿಯಲ್ಲಿ ವಿನಯದಿಂದಲೂ ಭಕ್ತಿಯಿಂದಲೂ ನಡೆಯುತ್ತ, ಹೀಗೆ ಮಾಡುತ್ತಿರುವ ತಾವು ಏಕಾಕಿಗಳಾಗಿರುವೆವೋ, ತಮ್ಮೊಡನೆ ಬೇರೆ ಜನರೂ ಇರುವರೋ ಎಂಬ ಚಿಂತೆಯನ್ನೂ ಕೂಡ ಹಚ್ಚಿಕೊಳ್ಳದ ಕೆಲವರಾದರೂ ನಿಜಾನುಯಾಯಿಗಳು ಇದ್ದೇ ಇರಬೇಕು. ನಿಷ್ಠಾವಂತ ಗಸ್ತಿನ ಪೋಲಿಸನು ಇಡಿ ಜಗತ್ತೇ ನಿದ್ರಿಸುತ್ತಿರುವಾಗ ತಾನೊಬ್ಬನೇ ಏಕೆ ಎಚ್ಚತ್ತಿರಬೇಕೆಂದು ಚಿಂತಿಸುವನೇ? ಅಡವಿಯ ಹೂ ತನ್ನ ಸುಗಂಧವನ್ನು ಸವಿದು ಮೆಚ್ಚಲು ಯಾವ ದಾರಿಗನೂ ಇಲ್ಲದಿರುವಾಗ ತಾನೇಕೆ ಅರಳಿ ಗಾಳಿಯಲ್ಲಿ ವ್ಯರ್ಥವಾಗಿ ಕಂಪು ಹಬ್ಬಿಸಬೇಕೆಂದು ಬಗೆಯುವುದೆ? ಜಗತ್ತು ನಿಶ್ಚಿಂತೆಯಿಂದ ನಿದ್ರಿಸಲೆಂದೇ ತಾನು ಎಚ್ಚತ್ತಿರುವುದಾಗಿ ಗಸ್ತಿಯವನು ಭಾವಿಸುತ್ತಾನೆ. ಅವರು ನಿದ್ರಿಸಲು ಅಸಮರ್ಥರಾದರೆ ತನ್ನ ಗಸ್ತೇ ನಿಷ್ಫಲವಾಗುವುದು. ಅಂತೆಯೇ ಹೂವಿಗೂ ವಿಚಾರಶಕ್ತಿಯಿದ್ದಿದ್ದರೆ, ಅದು ಸುಗಂಧ ಬೀರುವುದೇ ತನ್ನ ಪುಣ್ಯ, ಅದನ್ನು ಯಾರಾದರೂ ಅನುಭವಿಸಿ ಮೆಚ್ಚಲಿ ಬಿಡಲಿ ತಾನೇಕೆ ತನ್ನ ಪುಣ್ಯ ಕಾರ್ಯವನ್ನು ತೊರೆಯಲಿ, ಎಂದು ಬಗೆಯಬಹುದು. ಈ ಭಾವದಿಂದಲೇ ನಿಷ್ಠಾವಂತರು ಗಾಂಧೀಜಿಯ ಮಾರ್ಗದಲ್ಲಿ ನಡೆಯುತ್ತಿರಬಹುದು. ಯಾರಿಗಾದರೂ ಇಂಥ ಒಬ್ಬರಾದರೂ ಸಿಕ್ಕಿದರೂ ಸಾಕು. ಸಾವಿರಾರು ಕೃತ್ರಿಮಾಭಿಮಾನಿಗಳನ್ನೂ ಮರೆತು ಆ ಒಬ್ಬರನ್ನು ತೋರಿಸಿಕೊಡುವುದೇ ದೊಡ್ಡ ಸೌಭಾಗ್ಯವೆಂದು ಬಗೆಯತಕ್ಕದ್ದು ಮತ್ತು ಅಂಥ ಸತ್ಯಸಂಧರನ್ನು ಮನಸಾ ಆದರಿಸತಕ್ಕದ್ದು. ಶೋಧಕರು ಈ ದೃಷ್ಟಿಯಿಂದ ಕಾರ್ಯ ಪ್ರವೃತ್ತರಾದರೆ ಅವರಿಗೆ ಕೆಲ ಆಶ್ಚರ್ಯಕರ ಅನುಭವಗಳೊದಗುವ ಸಂಭವವುಂಟು. ಒಮ್ಮೊಮ್ಮೆ ಅವರಿಗೆ ಒಂದಕ್ಕಿಂತ ಹೆಚ್ಚು ಸತ್ಯಸಂಧರು ದೊರಕಿದರೂ ದೊರಕಬಹುದು. ಅವರ ಶೋಧನಾ ದೃಷ್ಟಿಯಲ್ಲಿಯೂ ಆಕಸ್ಮಿಕವಾಗಿ ಬದಲಾವಣೆಯಾಗಲೂ ಬಹುದು. ಗಾಂಧೀ ಸಿದ್ಧಾಂತಗಳನ್ನು ಸರಿಯಾಗಿ ಅನುಸರಿಸದವರಲ್ಲಿರುವ ದೋಷಗಳನ್ನೇ ಹುಡುಕಿ ತೆಗೆಯುವ ಪ್ರವೃತ್ತಿ ಹಿಂಗಿ, ಈ ಮನುಷ್ಯ ನೂರಕ್ಕೆ ನೂರರಷ್ಟು ಗಾಂಧಿ ಮಾರ್ಗಿಯಾಗಿಲ್ಲದಿದ್ದರೂ ನೂರಕ್ಕೆ ತೊಂಭತ್ತು ಪಾಲು ಗಾಂಧೀ ಮಾರ್ಗಿಯಾಗಿದ್ದಾನೆ, ಈತ ನೂರಕ್ಕೆ ೭೦ ಗಾಂಧೀಮಾರ್ಗಿ, ಇವ ನೂರಕ್ಕೆ ೫೦ ಗಾಂಧೀ ಮಾರ್ಗಿಯೆಂದು ಕಾಣುವ ಬುದ್ಧಿ ಹುಟ್ಟೀತು. ಆಗ ಅವನು ಅನೇಕರನ್ನು 'ಪಾಸು' ಮಾಡಬಹುದು. ಅಲ್ಲದೆ ಜನರ ದೌರ್ಬಲ್ಯಗಳಿಗಾಗಿ ಅವರನ್ನು ತಿರಸ್ಕರಿಸುವ ಬದಲು ಅವರ ಪ್ರಯತ್ನಶೀಲತೆಗಾಗಿ ಸಂತೋಷಪಟ್ಟು ಅವರ ದೌರ್ಬಲ್ಯವನ್ನು ಸಮದೃಷ್ಟಿಯಿಂದ ನೋಡುವ ಪ್ರವೃತ್ತಿಯುಂಟಾಗಬಹುದು.

ಶುದ್ಧ ವಿವೇಕ ದೃಷ್ಟಿಯಿಂದ ನೋಡಿದರೆ ಆಶುದೋಷ ಮತ್ತು ಆಶುತೋಷ–ಎಂದರೆ ಬೇಗನೆ ಅಸಂತುಷ್ಟರಾಗುವ ಮತ್ತು ಬೇಗನೆ ಸಂತುಷ್ಟರಾಗುವ ಪ್ರವೃತ್ತಿಗಳೆರಡೂ ತಪ್ಪೇ ಸರಿ. ಆದರೂ ಆಶುದೋಷಕ್ಕಿಂತ ಆಶುತೋಷ ಸ್ವಭಾವವೇ ಲೇಸೆನ್ನಬಹುದು, ಏಕೆಂದರೆ ಆಶುತೋಷ ಸ್ವಭಾವಿ ತನ್ನ ಸುತ್ತಮುತ್ತಣ ಜಗತ್ತಿನ ಹೊಲಸುಗಳನ್ನು ತನ್ನತ್ತ ಸೆಳೆಯುವ ಬದಲು ಒಳಿತನ್ನೇ ಆಕರ್ಷಿಸುತ್ತಿರುತ್ತಾನೆ. ಗೊಬ್ಬರದ ರಾಶಿಯನ್ನು ಕೆದರುವ ಕೋಳಿ ಅದರಲ್ಲಿರುವ ಹುಳಹುಪ್ಪಡಿಗಳನ್ನು ಆರಿಸಿ ಹೊಟ್ಟೆ ಹೊರೆದುಕೊಳ್ಳುತ್ತದೆ. ಆದರೆ ಮದವೇರಿದ ಗೂಳಿ ಗೊಬ್ಬರವನ್ನು ಸಿಕ್ಕಾಪಟ್ಟೆ ಕೆದರಿ ಚೆಲ್ಲಿ ತನ್ನ ತಲೆ ಕೋಡು, ಕಾಲುಗಳನ್ನೆಲ್ಲ ಹೊಲಸು ಮಾಡಿಕೊಳ್ಳುತ್ತದೆ. ಹೊಲಸನ್ನು ತೊಳೆಯುವವನು ಅದರಲ್ಲಿ ಬೆಲೆ ಬಾಳುವ ಒಡವೆಗಳನ್ನು ಕಂಡು ಹಿಡಿಯುತ್ತಾನೆ ಆದರೆ ಅದನ್ನು ಹೊತ್ತು ಹಾಕುವವನು ಎಷ್ಟು ಮಣ ಹೊಲಸನ್ನು ಸಡಿಗೊಯ್ದು ಒಗೆಯಲಾಯಿತೆಂಬ ಲೆಕ್ಕವನ್ನೇ ನೋಡುತ್ತಾನೆ.

ಈ ವಿಷಯದಲ್ಲಿ ನನಗೆ ಸಂಬಂಧಪಟ್ಟಷ್ಟನ್ನೇ ಹೇಳಬೇಕಾದರೆ, ಎಷ್ಟೋ ಬಾರಿ ಕೆಲವರ ದೃಷ್ಟಿಯಲ್ಲಿ ಆಕ್ಷೇಪಾರ್ಹವೂ ಗಾಂಧೀ ದ್ರೋಹಾತ್ಮಕವೂ ಎನಿಸಿರಬಹುದಾದ ರೀತಿಯಲ್ಲಿ ನಾನು ನಡೆದುಕೊಂಡದ್ದುಂಟು. ನಡೆದದ್ದುಂಟೆಂದು ಒಪ್ಪಲು ಸಿದ್ಧನಾಗಿದ್ದೇನೆ. ಗಾಂಧೀಜಿ ಬದುಕಿದ್ದಾಗಲೂ ಅವರ ಪೂರ್ಣ ಅನುಯಾಯಿಯೆನಿಸುವ ಸೌಭಾಗ್ಯ ನನಗೆ ದೊರೆತಿರಲಿಲ್ಲ. ಅನೇಕ ವಿಷಯಗಳಲ್ಲಿ ನನಗೆ ಅವರ ವಿಚಾರಗಳು ತಡವಿಲ್ಲದೆ ಒಪ್ಪಿಗೆಯಾಗುತ್ತಿದ್ದವು; ಅವುಗಳನ್ನು ಕಾರ್ಯಕಾರಿಯಾಗಿ ಮಾಡುವಲ್ಲಿ ನಾನು ಯಥಾಶಕ್ತಿ ಹೆಣಗುತ್ತಲೂ ಇದ್ದೆ. ಆದರೆ ಕೆಲವು ವಿಷಯಗಳಲ್ಲಿ ನಾನು ಅವರನ್ನು ವಿರೋಧಿಸಿದ್ದು ಅಥವಾ ಬಹಳ ತಡಮಾಡಿ ಒಪ್ಪಿದ್ದು ಮತ್ತು ಅವರೆಗೆ ತಟಸ್ಥನಾಗಿದ್ದದ್ದೂ ಉಂಟು. ಇನ್ನು ಕೆಲ ವಿಷಯಗಳಲ್ಲಿ ಕೊನೆಯವರೆಗೂ ನಾನು 'ಅಜಾತ ಪ್ರತ್ಯಯ' ಅಂದರೆ ಮನವರಿಕೆಯಾಗದೆ ಅಸಮ್ಮತನಾಗಿಯೇ ಉಳಿದಿದ್ದೆ. ಸ್ವತಃ ಗಾಂಧೀಜಿಗೆ ನನ್ನ ಈ ಸ್ಥಿತಿ ಚೆನ್ನಾಗಿ ಗೊತ್ತಿದ್ದೂ ಅವರು ನನ್ನನ್ನು ಇದ್ದಕ್ಕಿದ್ದಂತೆ ಸ್ವೀಕರಿಸಿದ್ದರು. ಈ ಕಾರಣದಿಂದಲೇ ನಾನು 'ಹರಿಜನ' ಪತ್ರಿಕೆಗಳ ಹೊಣೆಯನ್ನು ವಹಿಸಿದಾಗ ಎಷ್ಟೋ ವಿಚಾರಗಳನ್ನು ನಾನು ಗಾಂಧಿಜೀಯಿಂದ ಪಡೆದಿದ್ದೇನೆ ಮತ್ತೆ ಕೆಲವನ್ನು ಅನ್ಯರಿಂದ ಪಡೆದಿದ್ದೇನೆ, ಬೇರೆ ಕೆಲವು ಸ್ವತಃ ನನ್ನಲ್ಲೇ ಉದ್ಭವಿಸಿದ್ದೂ ಇದೆಯೆಂಬಾಶಯದ ಮಾತುಗಳನ್ನು ನಾನು ಬರೆದುಕೊಂಡಿದ್ದೆ. ಈ ಎಲ್ಲ ವಿಚಾರಗಳೂ ನನ್ನ ಜೀವನದಲ್ಲಿ ಎರಕಗೊಂಡು ಬಿಟ್ಟಿವೆ. ಆದುದರಿಂದ ನಾನು ಯಾವುದಾದರೊಂದು ವಿಷಯವನ್ನು ಮಂಡಿಸುವಾಗ ಅದರ ಸಮರ್ಥನೆಗಾಗಿ ಪ್ರತಿಯೊಂದು ಸಂದರ್ಭದಲ್ಲಿಯೂ ಗಾಂಧಿಜಿಯ ಮಾತನ್ನೇ ಪ್ರಮಾಣತ್ವೇನ ಉದ್ಧರಿಸಲು ಸಮರ್ಥನಾಗಲಿಕ್ಕಿಲ್ಲ. ಅವನ್ನು 'ಗಾಂಧೀ ವಚನದ ಒರೆಗಲ್ಲ ಮೇಲಲ್ಲ, ಸತ್ಯ ಮತ್ತು ಅಹಿಂಸೆಗಳ ಒರೆಗಲ್ಲ ಮೇಲೆಯೇ ಒರೆದು ನೋಡತಕ್ಕದ್ದು.

ಅರ್ಧ ಶತಕದಷ್ಟು ಕಾಲದ ಸಾರ್ವಜನಿಕ ಸೇವೆಯಲ್ಲಿ ಗಾಂಧೀಜಿಯ ಜೀವನ ವಿಕಾಸಗೊಂಡಿತ್ತು. ಚಿಲ್ಲರೆ ಅಂಶಗಳಲ್ಲಿ ಅವರ ಅಭಿಪ್ರಾಯಗಳು ಮೇಲಿಂದ ಮೇಲೆ ಬದಲಾದವು. ವಿಕಾಸಪರನಾದ ಜೀವನದಲ್ಲಿ ಇಂಥ ಅಭಿಪ್ರಾಯ ಪರಿವರ್ತನ ಅನಿವಾರ್ಯವಾಗಿದೆ. ಆದುದರಿಂದ ವಿವರಗಳ ಮೇಲೆ ಅವರ ವಚನಗಳನ್ನು ಪ್ರಮಾಣವೆಂದು ಪರಿಗ್ರಹಿಸಲು ಸಾಧ್ಯವಿಲ್ಲ. ಆಚಾರ ವಿಚಾರಗಳ ಮೂಲ ತಳಹದಿಯೇ ಮುಖ್ಯ, ಅವುಗಳ್ ಸತ್ಯ, ಅಹಿಂಸೆ, ಸರ್ವ ಕ್ಷೇತ್ರಗಳಲ್ಲಿಯು ಸಂಯಮ ಮತ್ತು ನೈತಿಕ ಮತ್ತು ಆರ್ಥಿಕ ಹಿತಗಳಲ್ಲಿ ಸಂಘರ್ಷ ತೋರಿ ಬಂದಲ್ಲಿ ನೈತಿಕ ಹಿತವನ್ನೇ ಸ್ವೀಕರಿಸುವುದು, ಇವೇ ಮೂಲಭೂತ ವಿಷಯಗಳು.

## ಈಗಿನ ಫ್ಯಾಷನ್

ಗಾಂಧೀಜಿಗೆ ದ್ರೋಹ ಬಗೆಯುವ ಆರೋಪವನ್ನು ಹೊರಿಸುವುದೀಗ ಒಂದು ಫ್ಯಾಷನ್ನೇ ಆಗಿಬಿಟ್ಟಿದೆ. ಅದಕ್ಕೊಂದು ಕಾರಣವೂ ಇದೆ. ನಮ್ಮ ಅನೇಕ ಬಂಧುಗಳು 'ಗಾಂಧಿ' 'ಸರ್ವೋದಯ,' 'ಸತ್ಯ ಮತ್ತು ಅಹಿಂಸೆ' ಮೊದಲಾದ ಶಬ್ದಗಳನ್ನು ಸಿಕ್ಕಾಬಟ್ಟೆ ಉಪಯೋಗಿಸುವ ಒಂದು ರೀತಿಯನ್ನೇ ಕಲಿತು ಕೊಂಡಿದ್ದಾರೆ, ಆ ಶಬ್ದಗಳಿಗೆ ಏನೂ ಅರ್ಥವೇ ಇಲ್ಲ, ಅವು ಬರಿ "ಪಾದಪೂರಕ" ಶಬ್ದಗಳೆಂಬಂತೆ … ತನ್ನ ಪ್ರತಿಯೊಂದು ಭಾಷಣದಲ್ಲಿಯೂ "ನಮ್ಮ ಪಿತನ ಉಪದೇಶ" ಅಥವಾ 'ಕಟ್ಟಕಡೆಗೆ ಜಗತ್ತಿನ ಹಿತ ಗಾಂಧೀಜಿ ಹೇಳಿದ ಮಾರ್ಗವನ್ನನುಸರಿಸುವುದರಿಂದಲೇ ಆಗಬಲ್ಲುದು" ಎಂದು ಹೇಳದಿದ್ದರೆ ತನ್ನ ಭಾಷಣ ತಳಕಟ್ಟೇ ಬಲಗೊಳ್ಳದು. ಆದರಿಂದ ಜನರಿಗೆ ಮನವರಿಕೆಯಾಗದು ಎಂದು ಪ್ರತಿಯೊಬ್ಬ ಮುಂದಾಳೂ, ಮಂತ್ರಿಯೂ ಭಾವಿಸಿದಂತಿದೆ.

ಅಡಿಗಡಿಗೆ ರಾಷ್ಟ್ರಪಿತನ ಹೆಸರಿನ ಆಧಾರವನ್ನು ಉಪಯೋಗಿಸುವುದರ ಬದಲು ನಾವು ನಮ್ಮ ಹೃದಯದಲ್ಲಿನ ಪ್ರೇಮರೂಪ ಪರಮಾತ್ಮನ ಆಧಾರವನ್ನೇ ಉಪಯೋಗಿಸಿಕೊಂಡರೆ ಎಷ್ಟೋ ಒಳ್ಳಿತಾಗುತ್ತಿತ್ತು. ಏಕೆಂದರೆ ಗಾಂಧೀಜಿ ಏನೇ ಹೇಳಲಿ ಮಾಡಲಿ, ಅವೆಲ್ಲವೂ ಅವರ ಹೃದಯಸ್ಥವಾದ ಸತ್ಯಾನ್ವೇಷಣ ಪ್ರವೃತ್ತಿ ಮತ್ತು ಅಹಿಂಸೆಯಿಂದಲೇ ಉದ್ಭೂತವಾಗುತ್ತಿತ್ತು. ಆ ಮಹಾತ್ಮರು ನಮ್ಮ ಮಧ್ಯದಲ್ಲಿ ಇಂದು ಉಳಿದಿಲ್ಲವಾದರೂ ಅವರಿಗೆ ದಾರಿ ತೋರಿದ ಆ ಜ್ಯೋತಿ ಇಂದಿಗೂ ಇದ್ದೇ ಇದೆ. ಮತ್ತು ನಾವು ಅದರ ಬೆಳಕಿನಲ್ಲಿ ನಡೆಯಲಿಚ್ಛಿಸಿದರೆ ಅದು ಇಂದಿಗೂ ನಮಗೆ ದಾರಿ ತೋರಿಯೇ ತೀರುವುದು.

"ಹರಿಜನ"


BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD

Highly perfumed and medicated, worth using daily by one and all, keeps hair black and relieves head-ache etc.

TRADE MARK

Manufactured by:-

Swadeshi Oushadhi Bhandara (Regd.)

KUNJAL P. O. Brahmavar, S. K.



"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ, ಇವರ

ನವಜೀವಾತು ಎಂಬ ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಸುಲಭವಾಗಿರುವುದು.



ಹೆಚ್ಚಿನ ಮಾಹಿತಿಗೆ—ಡಾ| ಯಂ. ಸಿ. ಶಾಸ್ತ್ರೀ, ಯಲ್. ಐ

ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಸ್ವಾತಿಸ್ಟರು:—ಡಾ| ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.



ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd., Moolky, S. K.



ಭಾರದ್ವಾಜರ

ಇಂಗ್ಲಿಷ್ × ಇಂಗ್ಲಿಷ್ × ಕನ್ನಡ

ಡಿಕ್ಷನರಿಗಳು

ದೊರೆಯುತ್ತವೆ.

ಬೆಲೆ. ರೂ. 5 0 0

ಸಿಂಗನ್ನಡ ಅರ್ಥಕೋಶ 4 8 0

ನವಯುಗ ಪ್ರೆಸ್, ಉಡುಪಿ.

ನವಯುಗ ಆಫೀಸು, ಉಡುಪಿ.


EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 3618

Estd: 1921 ಸ್ಥಾಪನೆ

30ನೇ ವರ್ಷ
20—4—1950

LICENCE No. 31
Licensed to Post
without Prepayment

FOUNDER:
Sri. A. B. Shetty
Minister for Agriculture
& Veterinary

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30
ವಾರ ೩೪

NAVAYUGA WEEKLY UDIPI, S. K.
Post Box No. 22
ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol 30
No. 34

# ಅತಿಯಾಗಿರಕೂಡದು!

ಯಾವುದೇ ಇರಲಿ—ಅತಿರೇಕವಾಗಬಾರದು, ಮಿತಿಮೀರಬಾರದು, ಎಂಬುದು ಸರ್ವಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿರುವ ಪಾಠ; ಬಹುತೇಕವಾಗಿ ಸರ್ವರ ಸ್ವಾನುಭವದ ಮಾತು.

ಸಿಟ್ಟು, ಧೈರ್ಯ, ಸೌಜನ್ಯ, ಕಠೋರತೆ, ವಿನಯ, ಆತುರ, ನಿರಾಸಕ್ತಿ, ಆಸಕ್ತಿ, ಸಹನೆ, ಅಭಿಮಾನ, ಆತ್ಮವಿಶ್ವಾಸ, ಇತ್ಯಾದಿ ಒಳ್ಳೆಯದು—ಕೆಟ್ಟದೆಂಬ ಭೇದವಿಲ್ಲದೆ ಯಾವ ಗುಣವೇ ಆದರೂ ಮಿತಿ ತಪ್ಪಿದರೆ ಅದರಿಂದ ಹಾನಿಯೇ ಹೊರತು ಲೇಸಿಲ್ಲ. ಆವಶ್ಯಕತೆಗೆ ಮಿಕ್ಕಿದ 'ಒಳ್ಳೇತನ' ಕೂಡಾ ಕೆಟ್ಟತನವಾಗಿ ಪರಿಣಮಿಸುತ್ತದೆ; ದುಷ್ಪರಿಣಾಮಗಳನ್ನೀಯುತ್ತವೆ. ಎಷ್ಟೇ ರುಚಿಕರವಿದ್ದರೂ ಅಮಿತಾಹಾರವು ಅಜೀರ್ಣವನ್ನು ನಿರ್ಮಿಸುವುದು.—ಎಂತಹ ರಸವತ್ತಾದ ಮಾತುಗಾರಿಕೆಯಾದರೂ ಅವಧಿ ಮೀರಿ ಬೆಳೆದರೆ ನೀರಸವೆನ್ನಿಸುವುದು—ಅನುಭವಸಿದ್ಧ ಸಂಗತಿ.

ಯಾವ ವಿಧಾನ, ಅಥವಾ ವಿಭಾಗದಲ್ಲಾದರೂ ಸ್ವಂತಾತಿರೇಕದಿಂದ ಆಗುವ ಹಾನಿಯು ಪರಕೀಯ ಆತಂಕಗಳಿಂದಾಗುತ್ತಿಲ್ಲವೆನ್ನಬಹುದು. ವಿರೋಧದಿಂದ ಹಾಳಾಗುವುದಕ್ಕಿಂತ ಹೆಚ್ಚಾಗಿ, ಅತಿರೇಕಾಚರಣೆಗಳ ದೆಸೆಯಿಂದಲೇ ಕೆಲಸಗಳು ಕೆಡುತ್ತಿವೆ.

ದೈಹಿಕ ಸಂಬಂಧದ ಯಾವುದೇ ಆಚರಣೆಗಳು ಮಿತಿ ತಪ್ಪುವ ದೆಸೆಯಿಂದಾಗಿಯೇ ಉಂಟಾಗುವ ರೋಗರುಜೆಗಳಿಂದ ಜನರು ಸಾಯುತ್ತಿರುವಷ್ಟು ಸಂಖ್ಯೆಯಲ್ಲಿ ಯುದ್ಧಗಳಿಂದ ಅಥವಾ ಕೊಲೆಯಾಗಿ ಸಾಯುತ್ತಿಲ್ಲ.

ವಿಪರೀತ ಬುದ್ಧಿವಂತನ ಆಲೋಚನೆ ಕೇಳಿದರೆ, ಒಂದು ಕೆಲಸದಲ್ಲಿ ಒದಗುವಷ್ಟು ಕಷ್ಟನಷ್ಟಗಳು ಸಾಮಾನ್ಯ ಬುದ್ಧಿವಂತನ ಉಪದೇಶದಂತೆ ವರ್ತಿಸುವುದರಕ್ಕಿಲ್ಲವೆಂಬ ಅನುಭವವು ಹೆಚ್ಚಿನವರಿಗಿರಬಹುದು.

ಅತಿರೇಕ ಕೋಪಿಯೊಡನೆ ವ್ಯವಹರಿಸುವುದು ಎಷ್ಟು ಕಷ್ಟವೋ ಮಿತಿಮೀರಿದ ಸಾಧು ಸ್ವಭಾವಿಯೊಂದಿಗೆ ವ್ಯವಹರಿಸುವುದೂ ಅಷ್ಟೇ ಕಷ್ಟವೆಂಬುದು ಹಲವರಿಗೆ ಮಂದಟ್ಟಾಗಿರಬಹುದಾದ ವಿಷಯ.

ಹಿಟ್ಲರನಲ್ಲಿ ಅಭೇದ್ಯ ಆತ್ಮ ವಿಶ್ವಾಸವಿದ್ದಿತಾದರೂ ಅದು ಅತಿರೇಕವಾಗಿದ್ದುದರಿಂದ, ಅವನು ತನ್ನ ಶಕ್ತಿಯನ್ನು ಅಂದಾಜು ಮೀರಿಯೂ ಪ್ರಯೋಗಿಸಿ, ಅಧೋಗತಿಗೀಡಾದನೆಂಬುದು ಸರ್ವ ಶ್ರುತವಿದೆ.

ಬ್ರಿಟನಿನಂತಹ ದ್ವೀಪದ ಯೋಗ್ಯತೆಗೆ ಮೀರಿದ ಮತ್ತು ಕಾಲ ಮೀರಿದ ವಿಸ್ತಾರ ಸಾಮ್ರಾಜ್ಯವು ಇಂಗ್ಲೆಂಡಿಗಿದ್ದುದರಿಂದ ಕಳೆದ ಮಹಾ ಯುದ್ಧದ ಪರಿಣಾಮವಾಗಿ ಅದೆಲ್ಲವೂ ಬಖಾರ್ಸ್ತುಗೊಂಡಿತು.

ಎಂತಹ ಸ್ವಾರ್ಥಾಭಿಲಾಷಿಯಿದ್ದರೂ, ಕೆಲವಂಶವಾದರೂ ಕೊಟ್ಟು ಪಡೆಯುವ ಧೋರಣೆ ವಹಿಸದೆ ಅತಿರೇಕ ಸ್ವಾರ್ಥವೊಂದನ್ನೇ ಪ್ರದರ್ಶಿಸುವವನ ಸ್ವಾರ್ಥಸಾಧನೆ ಕೂಡಾ ಆಗುವಂತಿಲ್ಲ.

ಎಂತಹ ದಗಾಖೋರ ಮತ್ತು ಕ್ರೂರಿಯೇ ಇರಲಿ—ಆತ ತನ್ನ ಕಡೆಯ ಕೆಲವರ ಮಟ್ಟಿಗಾದರೂ ಉದಾರಿ, ಹಾಗೂ ಕರುಣೆಯಾಗಿರದಿದ್ದರೆ ಪ್ರಪಂಚದಲ್ಲೇ ಉಳಿದಿರಲಾರ.

ಅತಿರೇಕ ವಿನಯ, ವಿಧೇಯತೆ ಪ್ರದರ್ಶಿಸುವವನ ಅಂತರಾಳದಲ್ಲಿ ಏನೋ ವಂಚನೆ ಹುದುಗಿರಬೇಕೆಂಬ ಸಂದೇಹವು ಸ್ವಾಭಾವಿಕವಾಗಿ ಏಳುವದಿದೆ; ಮಿತ ತಪ್ಪಿ ಆಡಂಬರ ಪ್ರದರ್ಶಿಸುವವನು ಹುರುಳಿಲ್ಲದ ಮನುಷ್ಯ—ಸದಾ ಕಾಲ ಗದರಿಸುವವನ ಅಬ್ಬರವು ಅರ್ಥವಿಲ್ಲದ ಗುಲ್ಲು—ಯಾವಾಗಲೂ ಸಿಡುಕು ಮೋರೆಮಾಡಿಕೊಳ್ಳುವವನ ಮುಖವೇ ಹಾಗೆ— ಅನ್ನಿಸುವುದು ವಾಡಿಕೆಯಾಗಿದೆ.

ಅಧ್ಯಕ್ಷತೆ ಗಳಿಸಬೇಕೆಂದು ಮಿತಿಮೀರಿ ಅಭ್ಯಾಸವಾಡಿ ತಲೆಕೆಡು ಮಾಡಿಕೊಂಡು ಹುಚ್ಚರಾಗುವವರನ್ನು ಕಾಣುತ್ತೇವೆ.

ಅತಿರೇಕ ಕೊಂಡಾಟದಿಂದ ಸಾಕಿದ ಮಗುವಿನಲ್ಲಿ ದುಶ್ಚಾಳಿ ಬೆಳೆದು, ಯಾರೂ ಆದರಿಸದ ಮಟ್ಟಕ್ಕೆ ಅದರ ಬುದ್ಧಿಯಿಳಿವುದನ್ನು ನೋಡುತ್ತೇವೆ.

ಅತಿರೇಕ ಸಲುಗೆಯು ಅವಾಚ್ಯಮಾತುಗಳನ್ನು ಕೇಳಿಸುವದಿದೆ; ಅಪಮಾನಕ್ಕೀಡು ಮಾಡುವದಿದೆ—ಎಂಬ ಅನುಭವವು ಸರ್ವಸಾಮಾನ್ಯ ಎಲ್ಲರಿಗೂ ಇದ್ದಿರಬಹುದು.

ಮೊನ್ನೆ, ಹರಿದ್ವಾರದಲ್ಲಿ ನಡೆದ ಕುಂಭಮೇಳದ ಯಾತ್ರಿಕರು ಪುಣ್ಯಸಂಪಾದನೆಯ ಅತಿರೇಕಾತುರದಿಂದಾಗಿಯೇ ಸುಮಾರು 20 ಮಂದಿಯನ್ನು ತುಳಿದು ತುಳಿದು ಕೊಂದು, ಎಷ್ಟು ಪಾಪವನ್ನು ಕಟ್ಟಿಕೊಂಡರೆಂಬುದನ್ನು ನೋಡಬಹುದು.

ನಿಸ್ಸಹಾಯಕ ಮಜೂರ ವರ್ಗಕ್ಕೆ ನ್ಯಾಯವನ್ನು ಒದಗಿಸಿ ಕೊಡುವವರು ತಾವು ಎಂದು ಘೋಷಿಸುವ ಕಮ್ಯೂನಿಸ್ಟರು ಎಷ್ಟು ಮಂದಿ ನಿಸ್ಸಹಾಯಕ, ನಿರಪರಾಧಿಗಳ ಕೊಲೆಗೆ ಕಾರಣರಾಗುತ್ತಿದ್ದಾರೆಂಬುದಕ್ಕೆ ಇತ್ತೀಚೆಗಿನ ರೈಲು ಅಪಘಾತಗಳನ್ನು ಕಂಡರೆ ಸಾಕು.

ನಿಸ್ಸಹಾಯಕರ ರಕ್ಷಣೆ ಮತ್ತು ಸರ್ವ ಸಮಾನತೆಯನ್ನು ಬೋಧಿಸುವ ಧರ್ಮಗಳ ಮೇಲಿನ ಅಭಿಮಾನ ಕೂಡಾ ಅತಿರೇಕಾಕಾರ ತಾಳಿದರೆ ಎಷ್ಟು ಭೀಕರ ರೀತಿಯಿಂದ ನಿಸ್ಸಹಾಯಕರ ಕೊಲೆ, ಸುಲಿಗೆಗಳನ್ನೇ ಮಾಡಿಸುತ್ತದೆಯೆಂಬುದು ಅಂದಿನ ಮತ್ತೀ ಭಾರಿಯ ಪಂಜಾಬು, ಬಂಗಾಳಗಳ ದುರಂತಗಳಿಂದ ಸ್ಪಷ್ಟವಾಗುತ್ತಿದೆ.

ಓರ್ವ ವ್ಯಕ್ತಿಯ ಮೇಲೆ ಅತಿರೇಕ ವಿಶ್ವಾಸವಿಟ್ಟರೆ, ಅಂತಹ ವ್ಯಕ್ತಿ ಎಷ್ಟೇ ಸಮರ್ಥ ಮತ್ತು ಯೋಗ್ಯನಿದ್ದರೂ ಹೇಗೆ ಗಂಡಾಂತರವೊದಗುತ್ತದೆಂಬುದನ್ನು ಜರ್ಮನಿ ಹಿಟ್ಲರನಿಂದ, ಇಟಲಿ ಮುಸಲನಿಯಿಂದ, ಕಲಿತುಕೊಂಡು ಲೋಕಕ್ಕೂ ಕಲಿಸಿವೆ.

"ಅಬ್ಬಾ! ಮಹಾತ್ಮನಾಗುವುದು ಎಷ್ಟು ಅಪಾಯಕರ!" ಎಂದು ಜೋರ್ಜ್ ಬರ್ನಾರ್ಡ್ ಶಾ ಆ ಸಂದರ್ಭದಲ್ಲಿ ಉದ್ಗರಿಸಿದ್ದಂತೆ, ಮನುಷ್ಯನಾದವನು ವಿಶೇಷ ಉಚ್ಚ ಮಟ್ಟಕ್ಕೇರುವುದು ಕೂಡಾ ಎಂತಹ ದ್ವೇಷಕ್ಕೆ ಹೇತುವಾಗುತ್ತದೆಂಬುದನ್ನು ಮಹಾತ್ಮಾಜಿಯ ಮರಣದಿಂದ ಅರಿಯಬಹುದು.

ಅಂತೂ, ಆವಶ್ಯಕತೆಗೆ ಮಿಕ್ಕಿ 'ಅತಿ'ಯಾಗಿದ್ದರದು ಅಧೋಗತಿಯೇ ಹೊರತು ಪ್ರಗತಿಯಲ್ಲ. ಅತಿಶಯೋಕ್ತಿ, ಅತಿರೇಕಾಚರಣೆ, ಅತಿರೇಕ ಭಾವನೆ, ಎಲ್ಲವೂ ಅಪಾಯಕರ. "ಇತಿ ಮಿತಿಯಿರಲಿ!" ಎಂದು ಆ ಪಕ್ಷ—ಈ ಪಕ್ಷವೆನ್ನದೆ, ಅವರಿವರೆನ್ನದೆ, ಎಲ್ಲರನ್ನೂ ಕೇಳಿಕೊಳ್ಳುವ ಆವಶ್ಯಕತೆ ಈ ಕಾಲದಲ್ಲಿ ಕಂಡುಬರುತ್ತಿದೆ.

ಮಜೂರ ವರ್ಗವನ್ನುತ್ತಿರುವಂತೆ, ಮಾಲಕ ವರ್ಗ ಅಥವಾ ಶ್ರೀಮಂತ ವರ್ಗದವರ ಸ್ವಾರ್ಥಬುದ್ಧಿ, ವಂಚಕ ಮಾತುಕೃತಿಗಳು ಅತಿರೇಕವಾಗಿರುವವಾದರೆ, ಮಜೂರ ಪಕ್ಷದ ನಾಯಕರೆನ್ನಿಸುವವರ ಒರಟು ಬುದ್ಧಿ, ಅವಾಚ್ಯ ಮಾತುಗಳು ಕೂಡಾ ಅಸಹ್ಯವಾಗುತ್ತಿವೆ.

ಮಿಕ್ಕವರನ್ನುವಂತೆ ಕಾಂಗ್ರೆಸಿಗರಲ್ಲಿ ಆಲಸ್ಯ, ಸ್ವಾರ್ಥ, ಮೇಲಾಟಗಳು ಮಿತಿ ಮೀರಿರುವವಾದರೆ, ಮಿಕ್ಕವರೂ ಹದ ತಪ್ಪಿ ಟೀಕಿಸುವುದೊಂದನ್ನಲ್ಲದೆ, ಬೇರೇನನ್ನೂ ಮಾಡದ ಅಧಿಕಪ್ರಸಂಗಿಗಳಾಗಿರುವುದು ಕಾಣಿಸುತ್ತಿದೆ.

ನಮಗಿಂದು ದೊರೆತಿರುವ ಸ್ವಾತಂತ್ರ್ಯ ಮತ್ತದರ ಸಂಪಾದನೆಗಾಗಿ ನಾವು ಮಾಡಿದ್ದ ಗತಕಾಲದ ಸಾಹಸಗಳೇ ಮುಂತಾದುವುಗಳ ಕುರಿತು ಅತಿರೇಕ ಹೆಗ್ಗಳಿಕೆ ಮತ್ತು ಅತಿಶಯೋಕ್ತಿಯ ವರ್ಣನೆಗಳು ನಡೆದಿರುವುದರಿಂದಾಗಿಯೇ ಮಿತಿಮೀರಿದ ಆತ್ಮಸಮಾಧಾನ ಬೆಳೆದು, ಇಂದಿನ ಕರ್ತವ್ಯದ ಕಡೆಗೆ ಆಲಸ್ಯ ಹುಟ್ಟಿರುವುದು ಗೋಚರಿಸುತ್ತಿದೆ!

ನೆಹರೂ, ವಲ್ಲಭಭಾಯಿಗಳ ನಾಯಕತ್ವದ ಕಡೆಗೆ ಜನತೆಯಿರಿಸಿರುವ ವಿಶ್ವಾಸವು ಮಿತಿಮೀರಿತೆಂಬ ಟೀಕೆಗೆಡೆಯಿದೆಯಾದರೂ, ಜನತೆಯ ಬುದ್ಧಿ ಪರಾವಲಂಬನೆ

THE UNITED KARNATAK INSURANCE COMPANY, LTD., DHARWAR.
Established: 1929.

Offers their valuable service to the public of India in making their sweet home, always happy.
For good investments and valuable connections, please consult us.

ಯು ಮಿತಿಮೀರಿರುವುದರಿಂದಾಗಿ ಆ ಸಾಯಕತ್ವದ ಸ್ಥಾನದಲ್ಲಿ ಬೇರೆ ರೀತಿಯಿಂದ ಪ್ರತ್ಯಕ್ಷ ಜನಮತವನ್ನು ಎಣಿಸಿಕೊಳ್ಳುವ ಸಾಧ್ಯತೆ ಸದ್ಯಕ್ಕೆ ಕಾಣುವದಿಲ್ಲ.

ಅತಿರೇಕ ಧರ್ಮ ನಿಷ್ಠೆಯುವರು ಲೌಕಿಕ ವ್ಯವಹಾರಕ್ಕಾಗದಿರುವದನ್ನು—ಮಿತಿ ಮೀರಿ ಕಲಾರಾಧಕರಾಗಿರುವವರು ಸಾಮಾನ್ಯ ವ್ಯವಹಾರಕ್ಕೆಟಕದಿರುವುದನ್ನು—ಯಾವುದೊಂದು ಯೋಗ್ಯತೆಯಾದರೂ, ಅತಿ ಹೆಚ್ಚಾಗಿರುವುದರ ಪರಿಮಾಣದಲ್ಲೇ ಮಿಕ್ಕ ಯೋಗ್ಯತೆಗಳು ಕಡಿಮೆಯಿರುವ ನಿದರ್ಶನಗಳನ್ನು—ಕಾಣುತಿದ್ದೇವೆ.

ಲೋಕ, ದೇಶ, ಜನಾಂಗ, ಸಮಾಜ, ಜನ, ಇವೆಲ್ಲವುಗಳ ವಿವಿಧಾಂಗಗಳೊಳಗೆ ಪರಸ್ಪರ ಹೊಂದಿಕೆ ಮತ್ತು ಸಮತೂಕವಿರಲೇ ಬೇಕು. ಯಾವುದೇ ಒಂದು ಭಾಗವು, ಈ ಸಮಾನತೆ ಮೀರಿ ಅಭಿವೃದ್ಧಿಗೊಂಡರೆ, ಸಂಬಂಧಭಂಗವುಂಟಾಗಿ ಯಂತ್ರ ಹಾಳಾಗುವದಿದೆ. ಮಾತು, ಕೃತಿ, ಗುಣನಡತೆಗಳ ಮಟ್ಟಿಗೂ ಇದೇ ಮಾತು. ಅದ್ದರಿಂದಲೇ ಯಾವುದೂ ಮಿತಿಮೀರಿ ಇರಬಾರದು; ಅತಿಯಾಗ ಕೂಡದು.

ಯಾವುದೇ ಕ್ರಾಂತಿ ಅಥವಾ ಸ್ವಾರ್ಥ ಭ್ರಾಂತಿಯಿಂದ ಅತಿರೇಕಾಚರಣೆಗಿಳಿಯುವವರು ಸಂಬಂಧಿಸಿದ ಎಲ್ಲಾ ವಿಷಯಗಳನ್ನೂ ತುಲನೆಮಾಡಿ ನೋಡಿ ಕೊಳ್ಳಬೇಕೆನ್ನುವದು ಇಷ್ಟಕ್ಕಾಗಿಯೇ. ಭಾರತದ ಹಿಂದಿನ ಚರಿತ್ರೆ ಮತ್ತು ಪ್ರಚಲಿತ ಸ್ಥಿತಿಗತಿಗಳನ್ನು ಅವಲೋಕಿಸುವಾಗ, ಸ್ವತಃ ಇಲ್ಲಿಯ ಜನರ ಅತಿರೇಕಾಚರಣೆಗಳಿಂದ ಆಗಿರುವಷ್ಟು ಮತ್ತು ಆಗುತ್ತಿರುವಷ್ಟು ಹಾನಿಯು, ಹೊರಗಿನ ಹೊಡೆತಗಳಿಂದ ಆಗಿಲ್ಲ, ಆಗುತ್ತಿಲ್ಲ, ಆಗುವಂತಿಲ್ಲವೆಂಬುದು ಖಚಿತವಾಗುತ್ತಿದೆ.

ಅದ್ದರಿಂದ ಪ್ರತಿಯೊಂದರಲ್ಲೂ ತೌಲನಾತ್ಮಕ ಬುದ್ಧಿ ಯಿರಲಿ; ಸಂಯಮವಿರಲಿ; ತೂಗಿ ನೋಡಿ, ಯೋಚನೆ ಮಾಡಿ ಹೆಜ್ಜೆಯಿಡುವ ಅಭ್ಯಾಸ ಮೂಡಲಿ. ಯಾವುದಾದರೊಂದೇ ಅಂಗವು 'ಅನೀಕಾಲಿಕ' ಬೆಳವಣಿಗೆಗೊಳ್ಳುವ ಬದಲಿಗೆ ಸರ್ವಾಂಗ ಬೆಳವಣಿಗೆಯಿಂದ ಆರೋಗ್ಯಕರ ಪುಷ್ಟಿ ದೊರೆಯಲಿ.


## Notice.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

R. I. A. No. 53/50

in O. S. No. 118/49

ಬಿ. ಹಿರಿಯಣ್ಣ ಸೆಟ್ಟಿ—ಅರ್ಜಿದಾರ,(ವಾದಿ.)

ಮತ್ತು

ಪಿಜಿನ ಯಾನೆ ನಂದ್ಯಪ್ಪ ಸೆಟ್ಟಿ, ಆಚ್ಚಣ ಸೆಟ್ರ ಅಳಿಯ, ಕಾರ್ಕಳ ತಾಲ್ಕು ನಂದೊಳಿಕೆ ಗ್ರಾಮದಲ್ಲಿಯಿರುವವ. ಯೆದ್ರಿ,(ಪ್ರತಿವಾದಿ.)

ಯಿವರೊಳಗೆ

ಮೇಲ್ಕಂಡ ದಾವೆಯಲ್ಲಿ ಕೊಡೋಣಾದ ಪ್ರಿಲಿಮಿನರಿ ಡಿಕ್ರಿಯಲ್ಲಿ ನಿರ್ಧರಿಸಿದ ವಾಯಿದೆಗೆ ಯೆಷ್ಟನ್ನಾದರೂ ಆಯಿವೇಜುವಾದಿಗೆ ಪ್ರತಿವಾದಿಯು ಸ್ವಲು ಕೊಡದೆ ಯಿದ್ದುದರಿಂದ ಸದ್ರಿ ಪ್ರಿಲಿಮಿನರಿ ಡಿಕ್ರಿಯನ್ನು ಫೈನಲ್ ಮಾಡಬೇಕಾಗಿ ದಾಕಲುಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 5-6-50ಕ್ಕೆ ತನ್ನಿಗೆ ಯಿಡೋಣಾಗಿಯದೆ. ಆದುದರಿಂದ ಈ ಬಾಬಿನಲ್ಲಿ ನಿಮ್ಮ ಆಕ್ಷೇಪಣೆಯೇನಾದರೂ ಯಿದ್ದರೆ ಮೇಲ್ಕಂಡ ತಾ. 5-6-50ಕ್ಕೆ ಹಾಜರಾಗಿ ಜಾಹೀರು ಮಾಡಿಕೊಳ್ಳಲಿಕ್ಕೆ ತಪ್ಪಿದ ಸಂಗ್ತಿಯಲ್ಲಿ ಸದ್ರಿ ಅರ್ಜಿಯು ನಿಮ್ಮ ಯೆಕ್ಸಪಾರ್ಟಿಯಿಂದ ತೀರ್ಮಾನಿಸಲಾಗುವದು.

K. J. Ballal, B. A. LL.B.,
Vakil for Petitioner.

ತಾರೀಕು 14-4-50 ಉಡ್ಪಿ.


# ಭಾರತೀಯ ಧರ್ಮಾಭಿಮಾನ-

## ಕುಂಭಮೇಳ-ಸಾಂಬಶಿವಮ್-

ಎಲ್ಲಾ ವಿಧದ ಭಾರತೀಯ ಮನೋವೃತ್ತಿಗಳನ್ನೂ ಸರಿಸಮವಾಗಿ ಅಳೆಯಲಾಗುವ ಒಂದು ಮಾನವು ಪ್ರಕೃತ ನಮ್ಮಲ್ಲಿಲ್ಲವೆನ್ನಬಹುದು. ಸಂದರ್ಭಾನುಸಾರವಾಗಿ ಪ್ರಾಣ, ಮಾನ, ಸೊತ್ತುಗಳ ಎಷ್ಟೋ ಹಾನಿಗಳನ್ನು ನಾವು ಕಡೆಗಣಿಸಿ ಬಿಡುವಂತೆಯೇ ಕೇವಲ ಒಂದು ಪ್ರಾಣಕ್ಕಾಗಿ, ಭಾವನಾ ಮರ್ಯಾದೆಗಾಗಿ, ನಾಮಮಾತ್ರ ಘನತೆಗಳಿಗಾಗಿ ಅಸಾಮಾನ್ಯ ರೀತಿಯಿಂದ ಹೋರಾಡುವ ನಿದರ್ಶನಗಳೂ ಇವೆ. ಅಂಕೆಸಂಖ್ಯೆಗಳ ಮೇಲಿಂದ ಲಾಭ—ನಷ್ಟವನ್ನು ಗಣಿಸದೆ, ಅಭಿಮಾನದ ಮೇಲಿಂದ ಅಂತಹ ಲೆಕ್ಕಾಚಾರ ನೋಡುವುದೇ ನಮ್ಮ ವೈಶಿಷ್ಟ್ಯ. ಎಲ್ಲಾ ರಾಷ್ಟ್ರಗಳ ಮಟ್ಟಿಗೂ ಈ ಮಾತು ಅನ್ವಯಿಸುತ್ತದಾದರೂ ಭಾರತದಲ್ಲಿ ಇದು ಹೆಚ್ಚೆನ್ನಬಹುದು. ನಿದರ್ಶನಕ್ಕಾಗಿ ಇತ್ತೀಚೆಗಿನ ಹಾಗೂ ಪ್ರಚಲಿತ ಘಟನೆಗಳಲ್ಲ ಒಂದೆರಡನ್ನು ಇಲ್ಲಿ ಎತ್ತಿ ತೋರಿಸಲಾಗಿದೆ.

೦೦೦

### ಹರಿದ್ವಾರದ ಕುಂಭಮೇಳ

ಹನ್ನೆರಡು ವರುಷಗಳಿಗೊಮ್ಮೆ ಜರಗುವ ಕುಂಭಮೇಳ ಮಹಾಜಾತ್ರೆಯು ಇದೇ ತಾ. 13ರಲ್ಲಿ ಹರಿದ್ವಾರದಲ್ಲಿ ನೆರೆದಿದ್ದಾಗ ಜನರ ಕಾಲಡಿಗೆ ಸಿಕ್ಕಿ 20 ಮಂದಿ ನಜ್ಜುಗುಜ್ಜಾಗಿ ಅಲ್ಲೇ ಸತ್ತು, ಇನ್ನೆಷ್ಟೋ ಮಂದಿ ಗಾಯಗೊಂಡರೆಂಬ ವಾರ್ತೆ ಕೇಳಿ ಮೈ ಜುಮ್ಮೆನ್ನುತ್ತದೆ! ದುರಾಚರಣೆಗಿದ್ದ ಸಮೂಹಗಳ ಮೇಲೆ ಗುಂಡೆಸತಗಳಾಗಿ, ಕೆಲವು ಮಂದಿ ಸತ್ತು ಹಲವು ಮಂದಿ ಗಾಯಗೊಳ್ಳುವ ವಾರ್ತೆಗಳನ್ನೇನೋ ಸಾವಿರಾರು ಕಾಲದಲ್ಲಿ ದಿನಂಪ್ರತಿ ಕೇಳುವಂತಾಗಿದೆ. ಜಾತೀಯ ಗಲಭೆಗಳ ಮತ್ತು ಕಮ್ಯೂನಿಸ್ಟ್ ಆಚರಣೆಗಳ ಇತ್ತೀಚೆಗಿನ ದಿನಗಳಲ್ಲಂತೂ ಸಾಮೂಹಿಕ ಹೊಡೆತ, ಮರಣಗಳ ದೊಡ್ಡ ದೊಡ್ಡ ಸುದ್ದಿಗಳನ್ನೂ ಜೀರ್ಣಿಸಿಕೊಳ್ಳುವ ಅಭ್ಯಾಸ ಜನತೆಗಾಗಿದೆ. ಆದರೂ ಮೊನ್ನೆ ಹರಿದ್ವಾರದಲ್ಲಿ ಅನುದ್ದೇಶಪೂರ್ವಕ 20 ಮಂದಿಗೆ ಚಿತ್ರಹಿಂಸೆಯ ಸಜೀವ ಮರಣವನ್ನೊಡ್ಡಲಾಯಿತೆಂಬ ಸುದ್ದಿಯು ದಂಗುಬಡಿಸುವಂತಹದೇ. ಅಲ್ಲಿ ನೇರಿದ್ದ 10 ಲಕ್ಷಕ್ಕೂ ಮಿಕ್ಕಿದ ಜನರು ತಮ್ಮ ಪಾಪಗಳನ್ನು ತೊಳೆದುಕೊಳ್ಳಲು ಬಂದವರು. ಅಂಥವರು, ಹಸೀ ಜೀವಗಳನ್ನು ಕಾಲಡಿಗೆ ಹಾಕಿ ತುಳಿದು ಕೊಲ್ಲುವ ಪಾಪ ಕಟ್ಟಿಕೊಂಡರೆನ್ನುವಾಗ ಇದಕ್ಕಿಂತ ಹೆಚ್ಚಿನ ವಿಪರ್ಯಾಸ ಬೇರೇನಿದ್ದೀತು? ಈ ಪುಣ್ಯಾಕಾಂಕ್ಷಿಗಳ ಒತ್ತಡವಲ್ಲ, ಆ ಇಪ್ಪತ್ತು ಮಂದಿ ಪ್ರಾಣಾಕಾಂಕ್ಷಿಗಳನ್ನು ಕೇಳುವವರಿರಲಿಲ್ಲವೆಂದಾದ ಮೇಲೆ, ದೇಶಾಭಿಮಾನಿಗಳಗದ್ದಲಗಳೆಡೆಯಲ್ಲಿ ಬಡವರ ರೋದನಕ್ಕೆ ಕಿವಿಕೊಡುವವರಿಲ್ಲವೆಂದಾಗಿರುವ ಇಂದಿನ ಸ್ಥಿತಿಯಲ್ಲಿ ವಿಶೇಷವೇನಿದೆ? ಕುಂಭಮೇಳದಲ್ಲಾದ ಹಗಲ್ಗೊಲೆ—ಜಾಹೀರು ಸಂಹಾರ-ಯಾತನಾತ್ಮಕ ಮರಣವು ನಮ್ಮ ಜನರ ಮನೋಗತಿಯೆಂತಹದೆಂಬುದಕ್ಕೊಂದು ಕರಾಳ ನಿದರ್ಶನವಾಗಿದೆ. ಅಲ್ಲಿ ನೆರೆದಿದ್ದ ಪಾಪ ವಿಮೋಚನಾ ಪವಿತ್ರ ಸ್ನಾನಾಸಕ್ತರು, ಆಧುನಿಕ ಯುಗದಲ್ಲಿ ಉದ್ದೇಶ ಪೂರ್ವಕ ಯಾರೂ ಮಾಡಲೊಲ್ಲದಂತಹ ಕೃತ್ಯವನ್ನು ಕೇವಲ ಅಜಾಗರೂಕತೆಯಿಂದ ಮಾಡಿಬಿಟ್ಟರು—ಗುರಿ ಮತ್ತು ಘೋರಣೆಯೆಷ್ಟೇ ಉತ್ತಮವಿದ್ದರೂ ಅಸಡ್ಡೆ ಮತ್ತು ಅಜಾಗರೂಕತೆಯಿದ್ದಲ್ಲಿ ತತ್ಪ್ರತಿಕೂಲ ಪರಿಣಾಮಗಳೇ ನಡೆಯುವವೆಂಬುದಕ್ಕೆ ಇದೊಂದು ನಿದರ್ಶನ. ಈ ಪಾರದತ್ತ ಮುಖ್ಯವಾಗಿ ನಮ್ಮ ಸರಕಾರಗಳೂ, ಸಂಘ ಸಂಸ್ಥೆಗಳವರೂ ಗಮನವೀಯಬೇಕಾಗಿದೆ. ಶಿಸ್ತುನಿಷ್ಠೆ ಮತ್ತು ಹಿಂದು ಮುಂದಿನ ವಿಚಾರವಿಲ್ಲದೆ ಹೋದರೆ, ಉದ್ದೇಶವೆಷ್ಟೇ ಪವಿತ್ರವಿದ್ದರೂ, ಅದು ಅನಾಹುತಕಾರೀ ಪ್ರಮಾದಗಳನ್ನೇ ಹೇಗೆ ನಿರ್ಮಿಸುತ್ತದೆಂಬುದನ್ನು ಜನತೆಯೂ ಇದರಿಂದ ಕಲಿತುಕೊಳ್ಳಲಿಕ್ಕಿದೆ.

### ಕುಂಭಮೇಳ ಜಾತ್ರೆ

ಹನ್ನೆರಡು ವರುಷಗಳಿಗೊಮ್ಮೆ ಹರಿದ್ವಾರದಲ್ಲಿ ಜರಗುವ ಕುಂಭಮೇಳದ ಸರದಿಯು ಇದೇ ಎಪ್ರಿಲ್ ತಾ. 13ಕ್ಕಿದ್ದಿತು. ಸ್ವತಂತ್ರ ಭಾರತದಲ್ಲಿ ಪ್ರಥಮತಃ ನಡೆದ ಕುಂಭಮೇಳವೆಂದರೆ ಇದೇ. ಇದರ ವ್ಯವಸ್ಥಾ ವೆಚ್ಚವನ್ನು ಭಾರತ ಸರಕಾರವೇ ವಹಿಸಿದ್ದಿತು. ಅದೆಂದರೆ ಸುಮಾರು 36 ಲಕ್ಷ ರೂಪಾಯಿ. ಈ ಜಾತ್ರೆಗಾಗಿ 18 ವಯರ್‌ಲೆಸ್ ಸ್ಟೇಷನುಗಳು, 12 ಸಬ್ ಪೋಸ್ಟಾಫೀಸುಗಳು ಅಲ್ಲಿ ಹೊಸತಾಗಿ ತೆರೆಯಲ್ಪಟ್ಟಿದ್ದವು. ದಿನಕ್ಕೆ 600,000 ಕಾಗದಪತ್ರಗಳ ಮತ್ತು ಮಣಿಯಾರ್ಡರುಗಳ ವಿಲೇವಾರಿಗಳನ್ನು ಮತ್ತು 25 ಲಕ್ಷ ಶಬ್ದಗಳ ಟೆಲಿಗ್ರಾಮ್‌ಗಳನ್ನು ಹೊಸತಾಗಿ ನಡೆಸುವ ವ್ಯವಸ್ಥೆ ಅಲ್ಲಿ ಆಗಿದ್ದಿತಲ್ಲದೆ ವಿಶೇಷ ಟೆಲಿಫೋನ್ ವ್ಯವಸ್ಥೆಗಳೂ ಇದ್ದವು. ಎಲ್ಲಾ ದಿಕ್ಕುಗಳಿಂದಲೂ 20 ಸ್ಪೆಶ್ಯಲ್ ಟ್ರೈನುಗಳನ್ನು ಮತ್ತು ಬಸ್ ಸರ್ವಿಸುಗಳನ್ನು ಈ ಸಂದರ್ಭಕ್ಕಾಗಿಯೇ ಇಡಲಾಗಿದ್ದಿತು. ಅಲ್ಲಿಯ ಇಡೀ ಯಾತ್ರಾ ಸ್ಥಳವನ್ನು ಕ್ಷೇತ್ರವಾರಾಗಿ ವಿಂಗಡಿಸಿ, ಪ್ರತಿಯೊಂದು ಕ್ಷೇತ್ರವನ್ನು ಒಬ್ಬೊಬ್ಬ ಮೆಜಿಸ್ಟ್ರೇಟನ ಸ್ವಾಧೀನಕ್ಕೆ ಕೊಡಲಾಗಿದ್ದಿತು. ಆರು ಮಂದಿ ಸುಪರಿಂಟೆಂಡೆಂಟರ ಕೈಕೆಳಗೆ 4000 ಪೋಲೀಸರು ಅಲ್ಲಿ ವ್ಯವಸ್ಥಾಪಾಲನೆಗಿಡಲ್ಪಟ್ಟಿದ್ದರು. ಗಂಗಾ ನದಿಯಲ್ಲಿ ತಾತ್ಕಾಲಿಕ ಸೇತುವೆಗಳನ್ನು ಕಟ್ಟುವದಕ್ಕೂ, ಯಾತ್ರಾರ್ಥಿಗಳ ಗುಡಿಸಲು ನಿರ್ಮಾಣಕ್ಕಾಗಿಯೂ ಇಂಜಿನೀಯರರ ಸಮೇತ ಸೇನೆಗಳು ಇದ್ದವು. 10 ಲಕ್ಷಕ್ಕೂ ಮಿಕ್ಕಿದ ಯಾತ್ರಿಕರು ಅಲ್ಲಿ ನೆರೆದಿದ್ದರು. ದಕ್ಷಿಣ ಆಸ್ಟ್ರೇಲಿಯಾ, ಸಿಲೋನು, ದಕ್ಷಿಣಾಫ್ರಿಕ ಮೊದಲಾದ ದೇಶಗಳಿಂದಲೂ ಲೋಕದಲ್ಲೇ ಅಪೂರ್ವವಾದ ಈ ಜಾತ್ರೆಯ ದರ್ಶನಾಕಾಂಕ್ಷಿಗಳಾಗಿ ಕೆಲವರು ಬಂದಿದ್ದರು. ಭಾರತದ ಮೂಲೆ ಮೂಲೆಯಿಂದಲೂ ಜನ ಜಮೆಯಾಗಿದಿತು.

ಇದೇ ತಾ. 13ನೇ ಗುರುವಾರ, ಹಿಂದು ಮುಂದಿನ ರಾತ್ರಿಗಳ ಸಮೇತ ಹರಿದ್ವಾರದ ಆ ಪುಣ್ಯ ಸ್ಥಳದಲ್ಲಿ ಅತಿ ವಿಸ್ತಾರಕ್ಕೂ ಜನ ಸಂದಣಿ ಹೊರತು ಬೇರೇನೂ ಕಾಣುತ್ತಿರಲಿಲ್ಲ. ಇಷ್ಟು ಅಪಾರ ಜನ ಸಂದಣಿಯಲ್ಲಿ ಪ್ರತಿಯೊಬ್ಬನ ಲಕ್ಷ್ಯವೂ ಕೇಂದ್ರೀಕೃತವಾಗಿದ್ದುದೆಂದರೆ, ಅಲ್ಲಿಯ ಭಾಗೀರಥೀ ಹೊಳೆಯ 'ಹರ್ ಕೀ ಪೌರಿ' ಎಂದು ಕರೆಯಲ್ಪಡುವ ನೀರ ವಲಯದಲ್ಲಿ. ಈ ಸ್ಥಳದಲ್ಲಿ ಮುಣುಗುಹಾಕುವದೊಂದೇ ಯಾತ್ರಾರ್ಥಿಗಳ ಮುಖ್ಯ ಗುರಿ. ಅದಕ್ಕೆ ಬಂದು ಸೇರುವ ಹಾದಿಗಳೆಲ್ಲವೂ, ನಮ್ಮ ಪುಣ್ಯ ಸ್ಥಳಗಳ ವೈಶಿಷ್ಟ್ಯಾನುಸಾರವಾಗಿ ಇಕ್ಕಟ್ಟಿನವಿದೆ. ಈ ದೆಸೆಯಿಂದಾಗಿ ಒಂದಡ ಅನಾಹುತ ನಡೆದು ಹೋಯಿತು. ನೆರೆಯೂರುಗಳಿಂದ ರೈಲಿನಲ್ಲಿ ಬಂದಿದ್ದ ಯಾತ್ರಿಕರು ಸಮೀಪದ ರೈಲ್ವೇ ಸ್ಟೇಶನುಗಳಲ್ಲಿಳಿದವರೇ ಸ್ನಾನಘಟ್ಟ ಸೇರುವ ಆತುರಾವೇಗ ಕಟ್ಟಿಕೊಂಡು ಧಾವಿಸಿ ಬರುತ್ತಿದ್ದರು. ಯಾತ್ರಿಕರು ಹೋಗುವ ರಸ್ತೆಯಲ್ಲೆಂದು ಒಂದೆಡೆ ಹಾಕಿದ್ದ ಅಡ್ಡ ಬೇಲಿಯನ್ನು ಮುರಿದು, ಒಬ್ಬ ಡಿಪ್ಯುಟಿ ಸುಪರಿಂಟೆಂಡೆಂಟ್ ಮತ್ತು ಇಬ್ಬರು ಪೋಲೀಸರನ್ನು ಗಾಯಗೊಳಿಸಿ ಒಂದು ಗುಂಪು ಕೆರಳಿದ ಪ್ರವಾಹದಂತೆ ನುಗ್ಗಿ ಬಂತು. ಈ ತಂಡವನ್ನು ಇಷ್ಟೇ ಪ್ರಚಂಡವಾದ ಮ


**On this Memorable day**

Of the 26th of January in the year 1950 of the inauguration of the Indian Republic, we have the pleasure to announce the birth of our

**Vijaya Cash Certificates**

"Spend less and aSve more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices

Head Office:—**Kadri Road, Mangalore.**

Branches: City-Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara.

**B. Manjaya Hegde.**
Advocate & President, District Board, S. Kanara.
CHAIRMAN
VIJAYA BANK, LTD.

# -ದೇಶಾಭಿಮಾನ ಕಿಡಿಗಳು!

## -ರಮಣ ಮಹರ್ಷಿ-

ತ್ತೊಂದು ಗುಂಪು ಬಂದು ಕೂಡಿದಾಗ ಅಸಹ್ಯ ನೂಗ್ಗಾಟಗಳುಂಟಾಗಿ, ಆ ಒತ್ತಡದಲ್ಲಿ ಸಿಕ್ಕಿಕೊಂಡು 20ಜನರು ಅಲ್ಲೇ ಸತ್ತುಹೋದುದಲ್ಲದೆ, ಬೇರೆ 10 ಮಂದಿ ವಿಶೇಷ ಜಖಮಿಗೊಳಗಾದರು.

ತಾ. 13ರಂದು ಮಧ್ಯಾಹ್ನ, ಏಳು 'ಅಖಾಡ'ಗಳಡಿಯಲ್ಲಿ ಏಳು ವರ್ಗದ ಸಾಧುಗಳ ಪವಿತ್ರ ಮೆರವಣಿಗೆಯು ಸ್ನಾನಘಟ್ಟಕ್ಕೆ ಹೋಗುವ ಪ್ರೇಕ್ಷಣೀಯ ದೃಶ್ಯವಿದ್ದಿತು. ಕಿತ್ತಳೇ ಬಣ್ಣದ ನಿಲುವಂಗಿ ತೊಟ್ಟ ಸಪ್ತ ವರ್ಗದ ಸಾಧುಗಳು ಮೆರವಣಿಗೆಯಲ್ಲಿ ಸಂಭ್ರಮವಾಗಿ ಸಾಗಿದ್ದರೆ, ಅವರ ಮುಂಭಾಗದಲ್ಲಿ ಏಳೂವರ್ಗದ ಸಾಧುಗಳ ಏಳು ಧ್ವಜಗಳನ್ನು ಅತಿ ಶೃಂಗರಿತ ಪಾಲಕಿಯಲ್ಲಿ ಹೊತ್ತುಕೊಂಡು ಆನೆ ನಡೆದಿದ್ದಿತು. ಆ ಮೆರವಣಿಗೆಯಲ್ಲಿ ಪೂರ್ಣ ಬತ್ತಲೆಯಾದ 2000 ನಾಗಜನರನ್ನು ಕಂಡೊಡನೆ ಸಾಲುಗಟ್ಟಿ ನಿಂತು ನೋಡುತ್ತಿದ್ದ ಸ್ತ್ರೀಪುರುಷರು ಭಕ್ತಿಯಿಂದ ಬಾಗಿದರು. ಸಾಧುಗಳ ಮೆರವಣಿಗೆ, ಮತ್ತು ಪವಿತ್ರ ಸ್ನಾನಕಾಲಕ್ಕಾಗಿಯೇ ಅಂದು 6 ಘಂಟೆ ಹೊತ್ತು ಸಾರ್ವಜನಿಕರಿಗೆ ಸ್ನಾನ ಪ್ರವೇಶವಿರಲಿಲ್ಲ. ಲೋಕಾಪೂರ್ವ ಕುಂಭಮೇಳದಲ್ಲಿ ಕಾಣಲು ಸಿಗುವ ಅಸಾದೃಶ ನೋಟಗಳೆಂದರೆ ಈ ಮೆರವಣಿಗೆ ಮತ್ತು ಆ ಜನ ಸಮುದ್ರದ ದೃಶ್ಯಗಳೇ.

ಹರಿದ್ವಾರದ ಕುಂಭಮೇಳ ಸ್ನಾನದಷ್ಟು ದೊಡ್ಡ ಸ್ನಾನೋತ್ಸವವು ಇಡೀ ಪ್ರಪಂಚದಲ್ಲೇ ಬೇರೊಂದಿಲ್ಲ. ಮಿಲಿಯ ವರುಷಗಳಿಗೂ ಹಿಂದಿನ ಚರಿತ್ರೆಯು ಈ ಮೇಳಕ್ಕಿದೆ. ಈ ಸಂಬಂಧದ ಪುರಾಣ ಕಥೆ ಹೀಗಿದೆ:-ಕುಂಭವೆಂದರೆ ಮಡಕೆ ಅಥವಾ ಕಲಶ ತಾನೆ? ಸಮುದ್ರ ಮಥನದ ಪ್ರತಿಫಲವಾಗಿ ಹುಟ್ಟಿದ ಅಮೃತ ಕಲಶಕ್ಕಾಗಿ ದೇವಾಸುರರೊಳಗೆ ಮೇಲಾಟ ನಡೆಯಿತು; ಆ ಸ್ಪರ್ಧೆಯಲ್ಲಿ ದೇವತೆಗಳೇ ವಿಜಯಿಗಳಾದರು. ಅಂತಹ ಅಪೂರ್ವ ಜಯ ದೊರಕಿಸಿಕೊಂಡು ಸ್ವರ್ಗಕ್ಕೆ ಮರಳುವಾಗ ದೇವತೆಗಳು ಅಮರತ್ವಗಳಿಸಿಕೊಂಡ ವಿಜಯಾನಂದ ಭರದಲ್ಲಿ ಅಮೃತದ ಕೆಲವು ಬಿಂದುಗಳನ್ನು ಭೂಮಿಯ ನಾಲ್ಕು ಕಡೆಗಳಿಗೆ ಉದುರಿಸಿ ಹೋಗಿದ್ದರು. ಆ ಪೈಕಿ ಒಂದು ಸ್ಥಳ ಹರಿದ್ವಾರ; ಉಳಿದ ಮೂರು ಸ್ಥಳಗಳೆಂದರೆ ಅಲಹಾಬಾದ್, ನಾಸಿಕ ಮತ್ತು ಉಜ್ಜಯಿನಿ. ಹರಿದ್ವಾರದಂತೆಯೇ ಈ ಮೂರು ಸ್ಥಳಗಳಲ್ಲೂ ಹನ್ನೆರಡು ವರುಷಗಳಿಗೊಮ್ಮೆ ಕುಂಭಮೇಳ ಜರಗುತ್ತದೆ.

೦೦೦

### ಓರ್ವ ಸಾಂಬಶಿವಂ

ಮಲಯದಲ್ಲಿರುವ ಓರ್ವ ಭಾರತೀಯ ಸಾಂಬಶಿವಮನ ಪ್ರಾಣ ರಕ್ಷಣೆಗಾಗಿ ಭಾರತದ ಕಡೆಯಿಂದ ನಡೆದಿರುವ ಪ್ರಯತ್ನಗಳನ್ನು ಕಂಡು, ನಮ್ಮಲ್ಲಿ ಗುಂಡಿಗಾಹುತಿಯಾಗಿರುವ, ಬಂಧನಕ್ಕೊಳಗಾಗಿರುವ ಎಷ್ಟೋ ಮಂದಿ 'ಪರಾಕ್ರಮಿ'ಗಳ ಕಡೆಯಿಂದ ವಿಶೇಷ ರೀತಿಯ ಸವಾಲುಗಳು ಮುಂಬರುವ ಸಂಭವವಿದೆ. ರಾಷ್ಟ್ರ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದವರಿಗೆ ಗುಂಡು, ಲಾಠಿ, ಜೈಲುಗಳ ಸಂಭಾವನೆಗಳನ್ನಿತ್ತುದಕ್ಕಾಗಿ ಅಂದಿನ ಬ್ರಿಟಿಷ್ ಆಡಳಿತೆಯನ್ನು ಕಟುವಾಗಿ ಟೀಕಿಸುತ್ತಿದ್ದ ಕಾಂಗ್ರೆಸಿಗರ ಇಂದಿನ ಆಡಳಿತೆಯು ಅದನ್ನೇ ಮಾಡುತ್ತಿಲ್ಲವೇ? ಎಂಬ ಲಘು ಬುದ್ಧಿಯ ಪ್ರಶ್ನೆಗಳನ್ನು ಇಂದು ಎಲ್ಲೆಲ್ಲೂ ಕೇಳಬಹುದು. ಆದರೆ ಇವೆರಡರೊಳಗಿರುವ ತಾರತಮ್ಯವನ್ನು ಟೀಕಾಕಾರರು ಉದ್ದೇಶಪೂರ್ವಕ ಮರೆತು ಬಿಡುತ್ತಾರೆ. ಸರ್ವಜನ ಹಿತಸಾಧನೆಗಾಗಿ, ಘನೋದ್ದೇಶಕ್ಕಾಗಿ ಸಾಹಸ ಪ್ರದರ್ಶಿಸಿ, ದಂಡನೆಗೊಳಗಾಗುವವರ ಕಡೆಗೆ ಗೌರವ ಪ್ರದರ್ಶಿಸುತ್ತೇವಾದರೂ, ಸ್ವಾರ್ಥ ದೃಷ್ಟಿಯಿಂದ, ತುಚ್ಛ ಧ್ಯೇಯ ಕಟ್ಟಿಕೊಂಡು ಅದಕ್ಕೂ ಹೆಚ್ಚಿನ ಅದ್ಭುತ ಕಾರ್ಯ ಮಾಡುವವರನ್ನಾರೂ ಕೊಂಡಾಡುವಂತಿಲ್ಲ ಉದ್ದೇಶವಾವುದೆಂಬುದೇ ಇಲ್ಲಿ ಮುಖ್ಯವಾದುದು. ಸ್ವಾರ್ಥ ಬದ್ಧ ಸ್ವಾರ್ಥವೆಂಬುದು ಅಸ್ತಿತ್ವಕ್ಕುಂಟೆ ಕೊಂಡಿರುವ ಮತ್ತು ಇರಲೇಬೇಕಾದ ವಿಷಯ; ಒಂದು ರಾಷ್ಟ್ರ ಅಥವಾ ಜನತೆಗೆ ತಮಗಾಗಿ ಕಷ್ಟ, ನಷ್ಟ, ಮರಣಕ್ಕೀಡಾದವನ ಮೇಲೆ ಸಹಾನುಭೂತಿ ಮೊಳೆಯುವಷ್ಟು ಸ್ವಾರ್ಥವಿರಲೇ ಬೇಕಾದುದು ಅನಿವಾರ್ಯ. ತನಗಾಗಿ ಇಲ್ಲದವರನ್ನು ಕಡೆಗಣಿಸುವ-ತನ್ನ ವಿರೋಧಿಗಳಾಗಿ ಇರುವವರನ್ನು ವಿರೋಧಿಸುವ-ಬುದ್ಧಿ ಒಂದು ರಾಷ್ಟ್ರಕ್ಕಿರಬೇಕಾದುದೇ. ಈ ದೃಷ್ಟಿಯಿಂದ ರಾಷ್ಟ್ರ ಸ್ವಾತಂತ್ರ್ಯಕ್ಕಾಗಿ ಹೋರಾಡಿ ನೆಲಹಿಡಿದವರ ಕಡೆಗೆ ಪ್ರವಹಿಸಿದ್ದ ಜನತಾ ಗೌರವವು ರಾಷ್ಟ್ರ ವಿನಾಶಕ ಚಟುವಟಿಕೆಗಳಲ್ಲಿ ತೊಡಗಿ ದಂಡನೆಗಳಿಗೀಡಾದವರ ಕಡೆಗೆಂದಿಗೂ ಬರುವಂತಹದಲ್ಲವೆಂಬುದು ಸ್ವತಃಸಿದ್ಧ. ಮಲಯದ ಓರ್ವ ಭಾರತೀಯ ಸಾಂಬಶಿವಮ್‌ನ ಬಿಡುಗಡೆಗಾಗಿ ಭಾರತ ಸರಕಾರವು ಮಾಡುತ್ತಿರುವ ಪ್ರಯತ್ನಗಳನ್ನು ಕಂಡು, ಕಮ್ಯೂನಿಸ್ಟರಂತಹ ಅತ್ಯುಗ್ರ ಉಗ್ರಗಾಮಿಗಳು 'ಇಲ್ಲಿ ಸಹಸ್ರಾರು 'ಸಾಂಬಶಿವಮ್'ರನ್ನು ಕಠೋರವಾಗಿ ಮರ್ದಿಸುತ್ತಿರುವ ಈ ಸರಕಾರಕ್ಕೆ ಇಂತಹ ನಟನೆಯೇಕೆ'' ಎಂದು ಜರೆದಾಡಬಹುದು. ಆದರೆ ಮಲಯದ ಸಾಂಬಶಿವಮ್, ಭಾರತದ ಅಭಿಮಾನದೊಂದು ದ್ಯೋತಕವಾಗಿ ಅಲ್ಲಿದ್ದಾನೆ-ಆತನ ಆಚರಣೆಗೂ, ಅದಕ್ಕಾಗಿ ದೊರೆತಿರುವ ದಂಡನೆಗೂ ತಾಳಮೇಳ ಕೂಡುವದಿಲ್ಲ-ಇದು ರಾಷ್ಟ್ರೀಯ ಪ್ರಶ್ನೆಯಾಗಿರುವುದರಿಂದ ಹಿಂದೀ ಸರಕಾರದ ಈ ಪ್ರಯತ್ನಗಳು ಉಚಿತವಿವೆ; ಪಕ್ಷ ಪಂಗಡ ಭೇದವಿಲ್ಲದೆ ಭಾರತೀಯರೆಲ್ಲರಿಂದಲೂ ಕೃತಜ್ಞತೆ ಗಳಿಸುವಂತಹವಿವೆ, ಎಂಬುದನ್ನು ತಿಳಿದಿರಬೇಕು. ಹಿಟ್ಟು-ಬೂದಿ ವ್ಯತ್ಯಾಸವರಿಯದ ಮಂಕುತನವನ್ನು ಈ ಮಟ್ಟಿಗೆ ಕೂಡಾ ತೋರಿಸಬಾರದು.

#### ಸಾಂಬಶಿವಮ್ ಪ್ರಕರಣ

ಬ್ರಿಟಿಷರ ಆಡಳಿತೆಯಲ್ಲಿರುವ ಮಲಯದಲ್ಲಿ ಯುದ್ಧಾನಂತರ ಈ ವರೆಗೂ ಭೀಕರ ಸ್ವರೂಪದ ಕಮ್ಯೂನಿಸ್ಟ ಗೊಂದಲ ನಡೆದಿದೆ. ಈ ಗೊಂದಲಗಳ ನಿರ್ಮೂಲನಕ್ಕಾಗಿ ಅಲ್ಲಿ ಜ್ಯಾರಿಯಲ್ಲಿರುವ ಕಠೋರ ಶಾಸನಗಳು, ಈ ಸಂದೇಹಯುಗದಲ್ಲಿ ಪ್ರಾಯಶಃ ಬೇರೆಲ್ಲಿಯೂ ಇಲ್ಲ. ಅನಧಿಕೃತ ರಿವಾಲ್ವರ್ ಹಿಡಿದುಕೊಂಡವನಿಗೆ ಮರಣ ದಂಡನೆಯನ್ನೇ ವಿಧಿಸುವಂತಹ ಕಠೋರ ಶಾಸನ ಅಲ್ಲಿದೆ. ಸಾಂಬಶಿವಮ್ ಭಾರತೀಯ; ದಕ್ಷಿಣ ಭಾರತದ ಓರ್ವ ತರುಣ ಮಲಯದಲ್ಲಿದ್ದ ಆತ ಓರ್ವ ಟ್ರೇಡ್ ಯೂನಿಯನ್ ಕೆಲಸಗಾರನಾಗಿದ್ದ; ಮಜೂರ ಚಳವಳದ ಕಾರ್ಯಕರ್ತರಲ್ಲೊಬ್ಬನಾಗಿದ್ದ. ಒಂದು ಕಾಡಿನ ಬಳಿ, ಮರದಡಿ ಮಲಗಿದ್ದಾಗ, ಒಂದು ರಿವಾಲ್ವರ್ ಹಿಡಿದುಕೊಂಡಿದ್ದನೆಂಬ ಕಾರಣಕ್ಕಾಗಿ 1948ನೇ ಸೆಪ್ಟೆಂಬರಿನಲ್ಲಿ ಅವನ ದಸ್ತಗಿರಿಯಾಗಿದ್ದಿತು. ವಸ್ತುಸ್ಥಿತಿಯೆಂದರೆ ಕೈದು ಮಾಡುವಾಗ ಅವನ ಕೈಯಲ್ಲಿ ಆ ರಿವಾಲ್ವರಿರಲಿಲ್ಲ ಆದರೆ ಅವನ ರಿವಾಲ್ವರು, ಅವನ ಸಂಗಡಿಗರ ಕೈಯಲ್ಲಿ ದೊರೆಯಿತೆನ್ನುತ್ತಾರೆ. ಆದೇ ಅಪಾದನೆಗಾಗಿ ಅವನಿಗೆ ಮಲಯದ ಕೋರ್ಟ ಮರಣ ಶಿಕ್ಷೆಯನ್ನು ವಿಧಿಸಿದ್ದಿತು. ಈ ಕಠೋರ ವಾರ್ತೆ ಕೇಳಿ ಬಂದೊಡನೆಯೇ ಭಾರತದಲ್ಲಿ ಹಾಹಾಕಾರವೆದ್ದಿತ್ತು. ಮಲಯದಲ್ಲಿ ಭಾರತ ಸರಕಾರದ ಪ್ರತಿನಿಧಿಯಾಗಿರುವ ಮಿ ಜೋನ್ ಎ. ಥಿವಿಯವರು ಈ ಕುರಿತು ಮಾಡಿರುವ ಸಾಹಸವನ್ನು ಎಷ್ಟೂ ಕೊಂಡಾಡಬಹುದು. ಅಗತ್ಯವುಳ್ಳ ದಾಖಲೆಗಳೆಲ್ಲವನ್ನು ಥಿವಿಯವರು ಅತಿ ಪ್ರಯಾಸದಿಂದ ಸಂಗ್ರಹಿಸಿ, ಸಾಂಬಶಿವಮ್ ಕಡೆಯಿಂದ ಭಾರತ ಸರಕಾರದ ಪರವಾಗಿ ಪ್ರಿವ್ಹಿ ಕೌನ್ಸಿಲಿಗೆ ಅಪೀಲು ಮಾಡಿಸಿದರು. ಪ್ರಿವ್ಹಿ ಕೌನ್ಸಿಲು ಅವನ ಮೇಲಾಗಿದ್ದ ಮರಣ ಶಿಕ್ಷೆಯನ್ನು ಇತ್ತೀಚೆಗೆ ರದ್ದುಪಡಿಸಿ, ಬಿಡುಗಡೆಯ ತೀರ್ಮಾನ ಕೊಟ್ಟಿತು. ಆದರೆ ಪಾಶದ ಕೊಕ್ಕೆಯ ನೋಟ ಕಾಣುತ್ತಾ ಕಳೆದೆರಡು ವರುಷಗಳನ್ನು ಜೈಲಲ್ಲಿ ಕಳೆದಿದ್ದ ಸಾಂಬಶಿವಮ್ ಮೊನ್ನೆ ತಾನೇ ಹೊರಗೆ ಬಂದು ಕಾಲಾರ್ಧ ಘಂಟೆ ಕಳೆಯುವುದರೊಳಗೆ ಮಲಯ ಪೋಲೀಸರಿಂದ ವಿಶೇಷ ಶಾಸನದನ್ವಯ ಕೈದು ಮಾಡಲ್ಪಟ್ಟು ಪುನಃ ಸ್ಥಾನಬದ್ಧತೆಯಲ್ಲಿ ಇರಿಸಲ್ಪಟ್ಟಿದ್ದಾರೆ. ಕಮ್ಯೂನಿಸ್ಟರಿಗೂ ತನಗೂ ಯಾವ ಸಂಬಂಧವೂ ಇಲ್ಲವೆಂದೂ ತಾನು ಕೇವಲ ಟ್ರೇಡ್ ಯೂನಿಯನ್ ಕಲಸಗನೆಂದೂ ಸಾಂಬಶಿವಮ್ ಈ ಬಂಧನದಿಂದ ಬಿಟ್ಟಲ್ಲಿ ತಾನು ಕೂಡಲೇ ಭಾರತಕ್ಕೆ ಮರಳುವೆನಲ್ಲದೆ, ಅಲ್ಲಿ ಕೂಡಾ ಯಾವುದೇ ವಿನಾಶಾತ್ಮಕ ಚಟುವಟಿಕೆಯಲ್ಲೂ ಭಾಗವಹಿಸುವದಿಲ್ಲವೆಂದು ಆಶ್ವಾಸನೆ ಕೊಡಲು ಸಾಂಬಶಿವಮ್ ಸಿದ್ಧನಿದ್ದಾರೆ. ಇವೆಲ್ಲವನ್ನೂ ಮಿ. ಥಿವಿಯವರು ಮಲಯದ ಸರಕಾರದ ಮುಂದಿಟ್ಟು ಸಾಂಬಶಿವಮ್ ಬಿಡುಗಡೆಗಾಗಿ ವಿಶೇಷ ಪರಿಶ್ರಮ ವಹಿಸುತಿದ್ದಾರೆ. ಪರಿಣಾಮವೇನಾಗುವದೋ ನೋಡಲಿಕ್ಕಿದೆ.

೦೦೦

ಶ್ರೀ. ರಮಣಮಹರ್ಷಿ

ನವ ನಾಗರಿಕ ಯುಗದಲ್ಲೂ ಮಹಾತ್ಮರನ್ನು, ಮಹಾ ತಪಸ್ವಿಗಳನ್ನು, ಮನೋ ನಿಗ್ರಹ ಮತ್ತು ಆತ್ಮ ವಿಕಾಸದಿಂದ ಅನುಪಮರಾಗಿರುವವರನ್ನು ಕಾಣಲಾಗುವ ದೇಶವೆಂದರೆ ಭಾರತ. ಅಂತಶ್ಶುದ್ಧಿ ಮತ್ತು ಆತ್ಮ ಜ್ಞಾನಕ್ಕೆ ಭಾರತದ ಜನ ಜೀವನದಲ್ಲಿ ದೊರೆಯುವಷ್ಟು ಪ್ರಾಮುಖ್ಯತೆ ಪ್ರಪಂಚದ ಬೇರೆ ರಂಗದಲ್ಲಿ ದೊರೆಯುತ್ತಿಲ್ಲ. ಆದ್ದರಿಂದಲೇ ಮಹಾತ್ಮರು ಮತ್ತು ಮಹರ್ಷಿಗಳು ಈ ಯುಗದೆ


# ಕೆನರಾ ಬ್ಯಾಂಕ್, ಲಿಮಿಟೆಡ್

(ಸ್ಥಾಪನೆ ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಭಾರತದಲ್ಲಿ ಸಾಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯೂ ಅದಕ್ಕೆ ಮೇಲ್ಪಟ್ಟು ೧,೦೦೦ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೫೦ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇಡಿಗ ಸ್ವೀಕರಿಸಲಾಗುತ್ತದೆ.

೩ ತಿಂಗಳು . ... ನೂರಕ್ಕೆ ವರ್ಷಕ್ಕೆ ೨

೪ ರಿಂದ ೫ ತಿಂಗಳು .. .. ,, ,, ೨॥

ರೂ. ೧,೦೦೦ಕ್ಕೆ ಕಡಿಮೆಯಲ್ಲದ ರೂ. ೧೦,೦೦೦ ಕೆಳಗೆ ರೂ ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದು ಕೊಳ್ಳಬಹುದು.

ಮಂಗಳೂರು ಶಾಖೆಗಳು

[1] ಬಂದರ ರೋಡ್; [2] ಡೊಂಗರಕೇರಿ,

ಇತರ ಶಾಖೆಗಳು. ಕಾರ್ಕಳ, ಬಂಟವಾಳ, ಮುಲ್ಕಿ, ಕುಂದಾಪುರ, ಉಡುಪಿ, ಗಂಗೊಳ್ಳಿ, ಪುತ್ತೂರು, ಕಾಸರಗೋಡು, ಬೊಂಬಾಯಿ, ಇತ್ಯಾದಿ ಇತ್ಯಾದಿ

CANARA BANK, LIMITED
(Estd 1906)

ಲ್ಲೂ ಭಾರತದಲ್ಲಾಗಿದ್ದಾರೆ. ಇಂತಹ ಉಚ್ಚಾದರ್ಶಗಳಿರುವುದರಿಂದಾಗಿಯೇ, ಆವುಗಳ ಹೆಸರಿನಿಂದ ಅಕೃತ್ಯಗಳನ್ನು ನಡೆಸುವ ವಂಚಕರ ಸಂಖ್ಯೆಯೂ ನಮ್ಮಲ್ಲಿ ಹೆಚ್ಚಿದೆ ಎಂಬುದೇನೋ ನಿಜ. ಮಹಾತ್ಮರ ಹೆಸರಿನಿಂದ ರಾಜಕೀಯ ರಂಗದಲ್ಲಿ-ಮಹರ್ಷಿಗಳ ಹೆಸರಿನಿಂದ ಧಾರ್ಮಿಕ ಕ್ಷೇತ್ರದಲ್ಲಿ-ಎಷ್ಟೋ ಕೃತಕ ವೇಷಗಳು ಕಂಡುಬರುತ್ತವೆ. ಆದರೆ ಎಂತಹ ದುರುದ್ದೇಶಿ ಮತ್ತು ದುರ್ವಿಧಾನಿಗಳಿಗಾದರೂ, ಅನುಕರಣೆ ಮಾಡಲಾಗುವ 'ಆದರ್ಶ' ಜೀವಿಗಳು ಭಾರತದಲ್ಲಿರುವುದರಿಂದಲೇ ಈ ವಂಚಕಾನುಕರಣೆಗಳೂ ಇವೆ ಎಂಬುದನ್ನು ಮರೆಯಬಾರದು. ಎಲ್ಲದನ್ನೂ ಎಲ್ಲರನ್ನೂ ತಮ್ಮದೇ ಆದ 'ಸರ್ವಧಾಮಾನ್ಯ' ಮಟ್ಟದಿಂದ ಅಳೆದು, ಈ ಅಳತೆಗೆ ಮೀರಿದವರ ಮಹಾತ್ಮೆಯನ್ನು ಅಲ್ಲಗಳೆಯುವ ಅಜ್ಞಾನವನ್ನೇ 'ಸುಧಾರಿತ ಮನೋವೃತ್ತಿ'ಯೆಂದು ನೆನೆಸಿಕೊಳ್ಳುವವರು ನಮ್ಮಲ್ಲಿದ್ದಾರೆ. ಆದರೆ ಮನೋನಿಗ್ರಹ ಅಥವಾ 'ಆತ್ಮಸಂಯಮನ'ದ ಅಗತ್ಯವೆಂಬುದು ಸಾಮಾನ್ಯ ವ್ಯವಹಾರರಂಗದಲ್ಲಿದ್ದವರಿಗೂ ಮನವರಿಕೆಯಾಗುವ ಸಂಗತಿ ತಾನೆ? ಅದೇ ಸಂಯಮವನ್ನು - ತಪಸ್ಸನ್ನು-ಅಸಾಮಾನ್ಯರೀತಿಯಿಂದ ಬೆಳೆಸಿ ಉಚ್ಚತೆಗೇರುವುದು ಅಸಾಧ್ಯವೆಂದಾಗಲೀ, ಅವ್ಯವಹಾರ್ಯವೆಂದಾಗಲೀ ಭಾವಿಸುವುದು ತಪ್ಪು. ತನ್ನ ತಪೋಬಲದಿಂದ ಅಂತಹ ಅಸಾಮಾನ್ಯ ಉನ್ನತ ಮಟ್ಟಕ್ಕೇರಿದ್ದವರು ತಿರುವಣ್ಣಾಮಲೆಯ ಶ್ರೀ ರಮಣ ಮಹರ್ಷಿಗಳು. ಅವರು ಇದೇ ತಾ. 14ನೇ ರಾತ್ರಿ 8 47ಕ್ಕೆ ಈ ಲೋಕ ಬಿಟ್ಟರು; ವಿದೇಹ ಮುಕ್ತಿ ಪಡೆದರು. ಭಗವಾನ್ ಶ್ರೀ ರಮಣ ಮಹರ್ಷಿಗಳು ದೇಹತ್ಯಾಗ ಮಾಡುವ ಹೊತ್ತಿಗೆ ಸರಿಯಾಗಿ, ಬೇರೆ ರಾತ್ರಿಗಳಲ್ಲಿ ಕಂಡುಬಾರದಿದ್ದ ದೊಡ್ಡ ಪರಿಮಾಣದ ಅತ್ಯುಜ್ವಲ ಜ್ಯೋತಿಯೊಂದು ಉತ್ತರದಾಕಾಶದಲ್ಲಿ ಮೂಡಿದ್ದುದನ್ನು ಆಶ್ರಮವಾಸಿಗಳು ನೋಡಿದ್ದರು; ಮದ್ರಾಸ್ ನಗರದ ಹಲವರು ಕೂಡಾ ಕಂಡಿದ್ದರು. ಇದರ ಗುಟ್ಟೇನಿರಬಹುದು?

## ಮಹರ್ಷಿಯ ಆದಿ ಜೀವನ

ಶ್ರೀ ರಮಣಮಹರ್ಷಿಗಳ ಜನ್ಮ ಮಧುರೆಯಲ್ಲಿ 1879ನೇ ಡಿಸೆಂಬರ 30ರಲ್ಲಾಗಿತ್ತು; ಅವರ ಹುಟ್ಟು ಹೆಸರು 'ವೆಂಕಟರಮಣ' ಎಂದು. ಪಾಠಶಾಲೆಯಲ್ಲಿರುವಾಗಲೂ ವಿದ್ಯಾರ್ಥಿ ವೆಂಕಟರಮಣನ ಬುದ್ಧಿಯು ನಿಬಂಧಿತ [illegible] ಡೆ ಇದ್ದುದರಿಂದ ಪಾಠ ವಿಷಯಗಳ ಕಡೆಗೆ ನಿಪ್ರಿಯ ಲಕ್ಷ್ಯ ಇರುತ್ತಿದ್ದ. ವೆಂಕಟರಮಣನು 15 ವರುಷ ಪ್ರಾಯದವನಿರುವಾಗ ಯಾರೋ ಉಚ್ಚರಿಸಿದ "ಅರುಣಾಚಲ' ಹೆಸರು ಕಿವಿಗೆ ಬಿದ್ದೊಡನೆ ಆತನಲ್ಲಿ ವಿದ್ಯುತ್ ಸ್ಫೂರ್ತಿಯುಂಟಾಗಿತ್ತು. ಆ ವರೆಗೂ ಒಳಗಡೆ ತುಂಬಿಕೊಂಡು ಆಧಾರ ದೊರೆಯದೆ ನೇತಾಡಿಕೊಂಡಂತಿದ್ದ ಆಧ್ಯಾತ್ಮಿಕ ಸ್ಫುರಣೆಗೊಂದು ಗತಿದೊರೆತ ಅನುಭವವಾಗಿ ಸ್ಫೂರ್ತಿ ಪುಳಕವುಂಟಾಯಿತು. ಅಂದಿನಿಂದ ಸುಮಾರು ಐದು ತಿಂಗಳ ನಂತರವೇ ವೆಂಕಟರಮಣನು 'ಪೆರಿಯ ಪುರಾಣವ' ಓದಿ ನೋಡಿದುದು. ಆದರಲ್ಲಿ ಬಂದಿದ್ದ ಪುರಾಣಕಾಲದ ಮಹರ್ಷಿಗಳ ಜೀವನ ಪಾವಿತ್ರ್ಯವು ವೆಂಕಟರಮಣನ ಜೀವನ ಗುರಿಯನ್ನು ರೂಪಿಸಲು ನೆರವಾಯಿತು; ತಾನು ಮಹರ್ಷಿಯಾಗಬೇಕೆಂಬ ಆಶೆ ಮೊಳೆಯಿತು; ಅದು ಅವನ ಜೀವನ ಧ್ಯೇಯವಾಯಿತು. ಅಂದಿನಿಂದ ಶಾಲೆಯ ಗೂಡವನ್ನೇ ಬಿಟ್ಟ; ಮಧುರೆ ಮೀನಾಕ್ಷಿ ದೇವಾಲಯದ ಎರಡಲ್ಲಿ ಏಕಾಂತ ಸ್ಥಳ ಹುಡುಕಿ, ಅಂತಹ ಮೂಲೆ ಸ್ಥಳಗಳಲ್ಲಿ ಕುಳಿತುಕೊಂಡು, ಧ್ಯಾನಮಗ್ನತೆಯಲ್ಲಿ ಇದ್ದು ತಮ್ಮನ್ನು ತಾವೇ ಮರೆಯಲಾರಂಭಿಸಿದರು. ಆಧ್ಯಾತ್ಮಿಕತೆಯಲ್ಲೇ ತಲ್ಲೀನತೆ ಪಡೆದ ವೆಂಕಟರಮಣ ಆತ್ಮಜ್ಞಾನಿಯ ಮನೋಪಟಲದಲ್ಲಿ, ಅನಿವಾರ್ಯವಾಗಿರುವ ಮರಣದ ಪ್ರಶ್ನೆ ಮೂಡಿತು; ಮೃತ್ಯುವಿನ ಯಥಾರ್ಥ ಲಕ್ಷಣಗಳೇನು ಎಂಬ ಶೋಧನೆಯಲ್ಲಿ ಅವರು ಮನೋಮಂಥನ ನಡೆಸಹತ್ತಿದರು. ತತ್ಪರಿಣಾಮವಾಗಿ ಆತ್ಮದ ಅಮರತ್ವ-ಆತ್ಮ ಮತ್ತು ಪರಮಾತ್ಮನ ತಾದಾತ್ಮ್ಯ ಶಕ್ತಿ ಇವುಗಳ ಅರಿವು ಅವರಲ್ಲುಂಟಾಯಿತು. ತಾತ್ವಿಕವಾಗಿ ಈ ತಿಳುವಳಿಕೆ ಸಂಪಾದಿಸಿಕೊಂಡಿರುವವರು ಹಲವರಿರಬಹುದು. ಆದರೆ ಈ ಆತ್ಮಜ್ಞಾನಿಯಲ್ಲಿದು ಜೀವಂತ ಸ್ಫೂರ್ತಿಯಾಗಿ, ಜೀವಾಳವಾಗಿ, ನೆಲೆಗೊಂಡಿತು. ಇಂತಹ ಪ್ರಕಾಶ ದೀವಿಗೆಯಾಗಿ ಮಾರ್ಪಟ್ಟ ವೆಂಕಟರಮಣ ಋಷಿಯ ಹೃದಯವು, ತನ್ನ ಸ್ಥಾನವು ಬಾಲ್ಯದ ಮನೆಯಲ್ಲಲ್ಲ-ಶಾಂತಿ, ಪ್ರಕಾಶ ಮತ್ತು ಅಮೋಘತ್ವದ ಮಹಿಮೆಯ ನಡೆಯ ನೆಲೆ "ಅರುಣಾಚಲ"ದಲ್ಲಿ ಎಂದು ಹಾತೊರೆಯಹತ್ತಿತು. ಈ ರೀತಿ ಹೊಸಾವತಾರ ತಾಳುವಷ್ಟು ಬುದ್ಧಿ ಪಕ್ವಗೊಂಡಿರುವಾಗಲೇ – ವೆಂಕಟರಮಣನು ಒಳಗಡೆ ಮಹರ್ಷಿಯಾಗಿ ಮಾರ್ಪಟ್ಟಿರುವಾಗಲೇ-ಗತಕಾಲದಿಂದ ಬೇರ್ಪಟ್ಟು ಋಷಿ ಜೀವನ ನಡೆಸುವ ಸುಯೋಗವೊಂದು ಅವರಿಗೆ ಒದಗಿ ಬಂತು. ಒಂದು ದಿನ ಇವರ ಅಣ್ಣ ಆಗ V ಫೋರ್ಮಿನಲ್ಲಿದ್ದ ಇವರು ವಿದ್ಯಾಭ್ಯಾಸದ ಕಡೆಗೆ ತೋರಿಸುತ್ತಿರುವ ಅಸಡ್ಡೆಯನ್ನು ಸಹಿಸಲಾರದೆ, "ನಿನಗೆ ತಪಸ್ಸಿನಲ್ಲೇ ಮನಸ್ಸಿದ್ದಾದರೆ ನೀನು ಮನೆಯಲ್ಲೇಕೆ ಇರಬೇಕು?" ಎಂದು ಸ್ವಾಭಾವಿಕವಾಗಿ ಗದರಿಸಿಬಿಟ್ಟರು. ಶ್ರೀ ಅರುಣಾಚಲದಿಂದ ತಾನು ದೀರ್ಘಕಾಲದಿಂದ ನಿರೀಕ್ಷಿಸಿದ್ದ ಕರೆ ಈಗ ತಾನೇ ಬಂತೆಂಬುದೇ ಅಣ್ಣನ ಆ ಮಾತಿಗೆ ಇವರು ಕಟ್ಟಿದ ಅರ್ಥ! ಶಾಲಾ ಸಂಬಳ ತೆರಲು 5 ರೂಪಾಯಿ ಕೊಟ್ಟು ಹೋಗುವಂತೆ ಅಣ್ಣ ಹೇಳಿದ್ದರೆ, ಇವರು ಅಲ್ಲಿಂದ ಡಿಂಡಿವನಮ್‌ಗೆ ಹೋಗುವ ರೈಲ್ವೇ ಚಾರ್ಜು 3 ರೂಪಾಯಿಗಳನ್ನು ಮಾತ್ರ ಹಿಡಿದುಕೊಂಡು ಸ್ಟೇಶನಿನತ್ತ ಹೊರಟರು. ಇದು 1896ನೇ ಆಗೋಸ್ತು 29ರಲ್ಲಿ. ಇವರು ಹೊರಡುವಾಗ ರೈಲು ಬಿಡುವ ಹೊತ್ತಾಗಿ ಆಗಿತ್ತು-ಆದರೆ ಒಬ್ಬ ಮನುಷ್ಯನನ್ನು ಮಹರ್ಷಿ ಜೀವನ ಯಾತ್ರೆ ಮಾಡಿಸುವ ಪುಣ್ಯ ಆ ರೈಲಿನದೆಂಬಂತೆ, ಆ ದಿನ ರೈಲು ಹೊರಡುವದಕ್ಕೂ ತಡವಾಗಿದ್ದುದರಿಂದ ಅವರಿಗೆ ಬಂಡಿ ತಪ್ಪಿ ಹೋಗಲಿಲ್ಲ. ಬಾಲಕೃಷ್ಣನನ್ನೆತ್ತಿಕೊಂಡು ಸೆರೆಮನೆಯಿಂದ ಹೊರಟಿದ್ದ ವಸುದೇವನಿಗೊದಗಿದ್ದಂತಹ ಹಲವು ಆಶ್ಚರ್ಯಕರ ಅನುಕೂಲತೆಗಳು ತಾವಾಗಿ ಈ ಅನನುಭವೀ ಹುಡುಗನಿಗೊದಗಿ, ಸಪ್ಟೆಂಬರ್ ತಾ. 1ರಲ್ಲಿ ಇವರು ತಿರುವಣ್ಣಾಮಲೆಗೆ ಬಂದು ಮುಟ್ಟಿದರು-ಗುರಿ ಸೇರಿದರು. ಅಲ್ಲಿಯ ರೈಲ್ವೇ ಸ್ಟೇಶನಿನಿಂದ ನೇರಾಗಿ ದೇವಸ್ಥಾನಕ್ಕೇನೇ ಹೋದರು. ಅತಿ ಮುಂಜಾನೆ, ಆ ಕಾಲದಲ್ಲಿ ಹೋಗಿದ್ದರೂ ದೇವಸ್ಥಾನದ ಬಾಗಿಲುಗಳು ಅವರಿಗೆ ತೆರೆದಿಡಲ್ಪಟ್ಟದ್ದು. ಅಂದಿನಿಂದ ಕೊನೆಯ ವರೆಗೂ ಅವರಿದ್ದುದು ಅಣ್ಣಾಮಲೆಯಲ್ಲಿ. ಅಲ್ಲಿ ಹೋದವರೇ ಅವರು ಕಠಿಣ ತಪಸ್ಸನ್ನು ಕೈಕೊಂಡರು. ತನ್ನ ವೇಷ, ಭೂಷಣ ಮತ್ತು ದೇಹದ ಗೊಡವೆಯಿಲ್ಲದ ಈ ಕೊಂಡುಹುಡುಗನ ವರ್ತನೆಗಳು ಅಲ್ಲಿಯವರಿಗೆಲ್ಲಾ ವಿಲಕ್ಷಣವಾಗಿ ತೋರಿ, ಎಷ್ಟೋ ಅಸಹ್ಯ ತೊಡಕು ತೊಂದರೆಗಳೊದಗಿದವು. ಆದರೆ ಇವರು ಅಧುನಿಕ ಧ್ರುವನಾದುದರಿಂದಲೂ ತಪಸ್ಸನ್ನು ಭಂಗಿಸಿಕೊಳ್ಳಲಿಲ್ಲ. ತನಗೆ ಆಗುತ್ತಿರುವುದೇನು, ಎಂಬ ಕಡೆಗೆ ಅವರ ಲಕ್ಷ್ಯವೇ ಇರಲಿಲ್ಲ. ಅಸಹ್ಯ ದಬಾಯಿಸುವಿಕೆ, ಗೊಂದಲಗಳೆಲ್ಲವೂ ಇವರ ಅಭೇದ್ಯ ಶಾಂತ ಸ್ವಭಾವದಿದಿರಲ್ಲಿ ನಿರರ್ಥಕಗೊಂಡವು. ಒಂದು ಬಾರಿ ದೇವಾಲಯದ ನೆಲದಡಿ ಅಂಕಣದಲ್ಲಿ ದೇಹವಿಡೀ ಕ್ರಿಮಿಕೀಟಗಳಿಂದ ಆವರಿಸಲ್ಪಟ್ಟು ಘಾಯಗಳಿಂದ ರಕ್ತ ಸುರಿಯುತ್ತಿದ್ದರೂ, ಒಂದಿಷ್ಟು ಯಾತನೆ ಪಡದೆ ಧ್ಯಾನಮಗ್ನನಾಗಿದ್ದ ಮಹರ್ಷಿಯನ್ನು ಜನರು ಕಂಡಿದ್ದರು. ಈಗ, ಅದು 'ಪಾತಾಳ ಲಿಂಗ ದೇವಸ್ಥಾನ' ವಾಗಿ ಜೀರ್ಣೋದ್ಧಾರಗೊಳಿಸಲ್ಪಟ್ಟು, ಇತ್ತೀಚೆಗೆ ಶ್ರೀ ಸಿ.ರಾಜಗೋಪಾಲಾಚಾರಿಯರಿಂದ ಉದ್ಘಾಟಿಸಲ್ಪಟ್ಟಿತು. ಇಂತಹ ತಪೋನಿಷ್ಠೆಯನ್ನು ಪ್ರತ್ಯಕ್ಷ ಕಾಣುತ್ತಾ ಹೋದಂತೆ, ಇವರೊಬ್ಬ ಯಥಾರ್ಥ ತಪಸ್ವಿಯೆಂದು ಜನರು ಇವರನ್ನು ಗೌರವಿಸಹತ್ತಿದರು. ಅತ್ತ ತಮ್ಮ ಹುಡುಗನೆಲ್ಲಿ ಹೋಗಿಬಿಟ್ಟನೆಂದು ಹುಡುಕುತ್ತಿದ್ದ ತಾಯಿ ಮತ್ತು ಅಣ್ಣನಿಗೆ, ತಿರುವಣ್ಣಾಮಲೆಯಲ್ಲಿರುವ ಸುದ್ದಿ ತಿಳಿದೊಡನೆ, ಅವರಿಬ್ಬರೂ ಇಲ್ಲಿ ಬಂದು ಇವರನ್ನು ಮರಳಿ ಮನೆಗೆ ಕರೆದೊಯ್ಯಲು ನೋಡಿದರಾದರೂ ಇವರೊಪ್ಪಲಿಲ್ಲ. ಕಡೆಗೆ ಇವರ ತಾಯಿ ಪುನಃ ಈ ಆಶ್ರಮಕ್ಕೆ ಬಂದು ತನ್ನಾಯುಷ್ಯದ ಕೊನೆಯ ಕೆಲವು ವರುಷಗಳನ್ನು ಇಲ್ಲಿಯೇ ಕಳೆದಿದ್ದರು. ಸುಪ್ರಸಿದ್ಧ ಕವಿ ಮತ್ತು ವಿದ್ವಾಂಸ ಕಾವ್ಯಕಂಠ ಗಣಪತಿ ಶಾಸ್ತ್ರಿಗಳೊಮ್ಮೆ ಅಲ್ಲಿಗೆ ಬಂದಿದ್ದವರು, ಆ ಗವಿಯಲ್ಲಿದ್ದ ತಪಸ್ವಿಯನ್ನು ಕಂಡರು. ಇವರ ತಪಃಪ್ರಭಾವದ ಮಹತ್ವಿಕೆಯನ್ನರಿತು, ಇವರೊಬ್ಬ ಮಹರ್ಷಿಯೆಂದು ಜಗಜ್ಜಾಹೀರಾಗುವಂತೆ ಈ ಸಾಧುವಿನ ಕೀರ್ತಿ ಡುಂಗುರ ಬಾರಿಸಿದರು. "ಶ್ರೀ ರಮಣ ಮಹರ್ಷಿ" ಎಂದು ಹೆಸರಿಟ್ಟವರು ಕವಿ ಗಣಪತಿ ಶಾಸ್ತ್ರಿಗಳೇ.

## ಕೀರ್ತಿ ಮತ್ತು ನಿರ್ವಾಣ

ರಮಣಮಹರ್ಷಿಗಳ ಕೀರ್ತಿ ಭಾರತದಲ್ಲೆಲ್ಲಾ ಹಬ್ಬಿತು-ವಿದೇಶಗಳಿಗೂ ಮುಟ್ಟಿತು. ಪ್ರಾಪಂಚಿಕ ಕತ್ತಲೆಯಲ್ಲಿ ಸಿಲುಕಿಕೊಂಡು ಅಲೆದಾಡುತಿದ್ದ ಹೃದಯಗಳಿಗೆ ಶ್ರೀ ರಮಣಮಹರ್ಷಿಗಳು ಶಾಂತಿ ಮತ್ತು ಜ್ಞಾನದ ಜ್ಯೋತಿಯಾಗಿ ತೋರಿಬಂದರು. ಇವರ ದರ್ಶನ ಭಾಗ್ಯ ಮತ್ತು ಉಪದೇಶಾಶೀರ್ವಾದಗಳಿಗಾಗಿ ಜನರು ದಂಡುಗಟ್ಟಿ ಕೂಡಹತ್ತಿದ್ದರು. ನಗರದ ತುಸು ದೂರದಲ್ಲೇ 'ರಮಣಾಶ್ರಮ' ಕಟ್ಟಲ್ಪಟ್ಟಿತು. ದೇಶ, ವಿದೇಶಗಳ ಹಲವು ಶಿಷ್ಯರು ಈ ಆಶ್ರಮವಾಸಿಗಳಾದರು. ಕಳೆದ ೫೦ ವರುಷಗಳಿಗೂ ಮಿಕ್ಕಿದ ಅವಧಿಯಲ್ಲಿ ಪ್ರಪಂಚದ ಮೂಲೆ ಮೂಲೆಯ ಆತ್ಮವಿಕಾಸಾಕಾಂಕ್ಷಿಗಳೆಷ್ಟೋ ಮಂದಿ ಈ ಆಶ್ರಮಕ್ಕೆ ಭೇಟಿಕೊಟ್ಟಿದ್ದಾರೆ; ವಿವಿಧ ಕ್ಷೇತ್ರಗಳಲ್ಲಿ ದುಡಿಯುವ, ವಿವಿಧಾಭಿಪ್ರಾಯಗಳ ಬಹಳ ಮಂದಿ ಈ ಆತ್ಮವಿಕಾಸೀ ಮಹರ್ಷಿಯ ಅನುಭವ ಜ್ಯೋತಿಯನ್ನು ಹೊತ್ತಿಸಿಕೊಳ್ಳಲು "ರಮಣಾಶ್ರಮ"ಕ್ಕೆ ಬಂದು ಹೋಗಿದ್ದಾರೆ. 'ಭಗವಾನ್' ರಮಣ ಮಹರ್ಷಿಗಳು ರಾಜಕೀಯ ರಂಗದಿಂದ ದೂರವಿದ್ದರೂ, ಭಾರತದ ಸ್ವಾತಂತ್ರ್ಯ ಸಮರವನ್ನು ಆತ್ಮವಿಕಾಸ ಕಾರ್ಯದೊಂದು ಭಾಗವೆಂದು ಗಣಿಸಿದ್ದರು. ಕೆಲವು ವರುಷಗಳ ಪೂರ್ವದಲ್ಲಿ ಮೃತ ಸೇಟ್ ಜಮುನಾಲಾಲ್ ಬಜಾಜರೊಂದಿಗೆ ಡಾ. ರಾಜೇಂದ್ರ ಪ್ರಸಾದರು ಇಲ್ಲಿಗೆ ಬಂದು ಭಾರತ ಸ್ವಾತಂತ್ರ್ಯಾಂದೋಲನದ ಕುರಿತು ಮಹರ್ಷಿಯ ಅಭಿಪ್ರಾಯ ಕೇಳಿದ್ದಾಗ, ಸ್ವಾತಂತ್ರ್ಯಾಭಿಲಾಷೆಯು ಇರಬೇಕಾದುದೇ, ಎಂದೊಪ್ಪಿಕೊಂಡು ಶ್ರೀ ರಮಣ ಮಹರ್ಷಿಗಳೆಂದಿದ್ದರು: "ಈ ಗುರಿಯ ಕಡೆಗಿನ ಸುದೀರ್ಘ ಪ್ರತ್ಯಕ್ಷ ಕಾರ್ಯವು, ಕ್ರಮಾನುಗತವಾಗಿ ವ್ಯಕ್ತಿಯು ರಾಷ್ಟ್ರದೊಂದಿಗೆ ತಾದಾತ್ಮ್ಯಗೊಳ್ಳುವಂತೆ ದೃಷ್ಟಿಕೋನವನ್ನು ಕ್ರಮಶಃ ವಿಕಾಸಗೊಳಿಸುತ್ತಾ ಹೋಗುವದು. ವ್ಯಕ್ತಿಯು ಈ ರೀತಿ

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya.

# ಭಾರತ-ಪಾಕಿಸ್ತಾನ್ ಸುಸಂಬಂಧ

ಭಾರತ-ಪಾಕಿಸ್ತಾನಗಳ ಅಲ್ಪಸಂಖ್ಯಾಕರ ರಕ್ಷಣೆಯ ಸಂಬಂಧವಾಗಿ ನೆಹರೂ-ಲಿಯಾಖತ್ ಅಲೀಖಾನರೊಳಗೆ ಒಂದು ಒಪ್ಪಂದವಾದ ಬೆನ್ನಲ್ಲೇ ಕಾಶ್ಮೀರ ವಿವಾದದ ಮಧ್ಯಸ್ಥಗಾರನ ನೇಮಕದ ಕುರಿತೂ ಇವೆರಡು ರಾಷ್ಟ್ರಗಳು ಏಕಾಭಿಪ್ರಾಯಕ್ಕೆ ಬಂದ ಸುವಾರ್ತೆ ಪ್ರಕಟವಾಗಿದೆ. ಅಂತೂ, ಎಪ್ರಿಲ್ ತಿಂಗಳು ಬರುವ ವರೆಗೂ ಅಂತಸ್ತಂತನಾಗಿ ಅಧೋಗತಿಗಿಳಿಯುತ್ತಾ ಹೋಗಿದ್ದ ಭಾರತ-ಪಾಕಿಸ್ತಾನ್ ಸಂಬಂಧವು ಈ ತಿಂಗಳಾರಂಭದಿಂದ ಕ್ರಮಶಃ ಒಂದೊಂದಾಗಿ ಮೇಲಿನ ಮೆಟ್ಟಲುಗಳನ್ನೇ ಹತ್ತಲಾರಂಭಿಸುವ ಶುಭ ಚಿಹ್ನೆ ಕಾಣುತ್ತಿದೆ.

## ಮಧ್ಯಸ್ಥಗಾರ ಡಿಕ್ಸನ್

ಕಾಶ್ಮೀರ ವಿವಾದದ ಕುರಿತು ಭಾರತ-ಪಾಕಿಸ್ತಾನಗಳೊಳಗೆ ರಾಜೀ ಪಿತೂರಿಕೆ ನಿರ್ಮಿಸಲು ಭದ್ರತಾ ಕೌನ್ಸಿಲಿನಿಂದ ನೇಮಕವಾಗಿದ್ದ ಕಾಶ್ಮೀರ ಕಮಿಶನು ತನ್ನ ಪರಾಭವವನ್ನು ಒಪ್ಪಿಕೊಂಡ ಮೇಲೆ, ಅದನ್ನು ರದ್ದುಗೊಳಿಸಿ, ಅದರ ಸ್ಥಾನಕ್ಕೋರ್ವ ಮಧ್ಯಸ್ಥಗಾರನನ್ನು ನೇಮಿಸಬೇಕೆಂಬ ನಿರ್ಣಯವಾಗಿದ್ದಿತು. ಭಾರತ ಸರಕಾರವು ಕೊನೆಗೀ ಸೂಚನೆಗೊಪ್ಪಿಗೆ ಕೊಟ್ಟ ಮೇಲೂ ಉಭಯ ಪಕ್ಷಗಳಿಗೂ ಒಪ್ಪಿಗೆಯಾಗುವ ಓರ್ವ ಮಧ್ಯವರ್ತಿಯನ್ನು ಆರಿಸಿಕೊಳ್ಳಲಾಗದೆ ಭದ್ರತಾ ಕೌನ್ಸಿಲು ಒದ್ದಾಡಿಕೊಳ್ಳಬೇಕಾಗಿದ್ದಿತು. ಹಲವು ಹೆಸರುಗಳು ಸೂಚಿಸಲ್ಪಟ್ಟ ಮೇಲೆ ಕಟ್ಟಕಡೆಗೆ ಆಸ್ಟ್ರೇಲಿಯದ ಜ್ಯೂರಿಸ್ಟ್, 61 ವರುಷ ಪ್ರಾಯದ ಸರ್. ಓವೆನ್ ಡಿಕ್ಸನರ ನೇಮಕಕ್ಕೆ ಭಾರತ ಮತ್ತು ಪಾಕಿಸ್ತಾನ ಎರಡೂ ಒಪ್ಪಿಗೆಯನ್ನಿತ್ತಿವೆ. ಇನ್ನು ನಾಲ್ಕು ತಿಂಗಳೊಳಗೆ ಸರ್. ಡಿಕ್ಸನರು ಕಾಶ್ಮೀರ ಜಗಳ ತೀರ್ಮಾನದ ಪೂರ್ವರಂಗ ತಯಾರಿಸಲಿದ್ದಾರೆ. ಜಮ್ಮು ಮತ್ತು ಕಾಶ್ಮೀರದ ವಿವಾದ ಸ್ಥಳಗಳ ಸೇನಾ ಬರ್ಖಾಸ್ತು ಕಾರ್ಯಕ್ರಮದ ತನಿಖೆ ಮತ್ತು ತಯಾರಿ ನೋಡುವದು–ಜಗಳ ತೀರ್ಮಾನಕ್ಕಗತ್ಯವುಳ್ಳ ಸೂಚನೆಗಳನ್ನು ಭಾರತ, ಪಾಕಿಸ್ತಾನ ಮತ್ತು ಭದ್ರತಾ ಕೌನ್ಸಿಲಿಗೆ ಆಗಿಂದಾಗ ಕೊಡುವದು–ಹಿಂದಿನ ಕಾಶ್ಮೀರ ಕಮಿಶನಿಗಿದ್ದ ಎಲ್ಲಾ ಅಧಿಕಾರ ಮತ್ತು ಹೊಣೆಗಾರಿಕೆಗಳನ್ನು ವಹಿಸಿಕೊಳ್ಳುವದು–ನಿಯೋಜಿತ ಜನಮತ ಸಂಗ್ರಹಾಧಿಕಾರಿ ಎಡ್ಮಿರಲ್ ನಿಮಿಟ್ಸರು ತನ್ನ ಆಡಳಿತೆ ನಿರ್ವಹಿಸುವ ಸಮಯವನ್ನು ನಿಶ್ಚಯಿಸುವುದು ಮತ್ತದಕ್ಕೆ ರಂಗ ತಯಾರಿ ಮಾಡಿ ಕೊಡುವುದು–ಈ ಚತುರ್ಮುಖೀ ಸಾಹಸವು ಸರ್. ಡಿಕ್ಸನರಿಂದಾಗಬೇಕಾಗಿದೆ. ನೆಹರೂ-ಲಿಯಾಖತರು ಒಮ್ಮತಕ್ಕೆ ಬರಲಾರಂಭಿಸಿರುವ ಈ ಸುಕಾಲದಲ್ಲಿ ಈ ಮಧ್ಯಸ್ಥಗಾರರು ವಿಜಯಿಯಾದಾರೆಂಬ ಭರವಸೆಯಿರುವಾಗಲೇ ಅತ್ಯಂತ ಜಿಡುಕಿನಲ್ಲಿರುವ ಕಾಶ್ಮೀರ ವಿವಾದದ ತೀರ್ಮಾನವು ಬಹು ಪ್ರಯಾಸದ್ದೆಂಬುದನ್ನು ಮರೆಯಬಾರದು.

## ಸಂಧಾನಾನಂತರ

ಡಿಲ್ಲೀ ಒಪ್ಪಂದವು ಎರಡು ರಾಷ್ಟ್ರಗಳ ಮನೋಗತಿಯನ್ನೇ ಮಾರ್ಪಡಿಸಿಬಿಟ್ಟ ನಿದರ್ಶನಗಳು ಪ್ರಕೃತ ಗೋಚರಿಸುತ್ತಿವೆ. ಡಿಲ್ಲಿಯಿಂದ ಮರಳಿದ ಮಿ. ಲಿಯಾಖತ್ ಅಲೀಖಾನರು ಒಪ್ಪಂದವನ್ನು ಸಂಪೂರ್ಣ ಜ್ಯಾರಿಯಲ್ಲಿಡುವ ಕುರಿತು ನೆಹರೂಗಳಷ್ಟೇ ಆತುರ ಮತ್ತು ನಿರ್ಮಲಾಂತರಣದಿಂದ ಪಾಕಿಸ್ತಾನ್ ಘಟನಾಸಮಿತಿಯಲ್ಲೂ ಪತ್ರಿಕಾಪ್ರತಿನಿಧಿಗಳ ಮುಂದೂ ಸ್ಪಷ್ಟಾಶ್ವಾಸನೆಗಳನ್ನಿತ್ತಿದ್ದರು. ಪಾಕಿಸ್ತಾನ್ ಪ್ರಮುಖ ಪತ್ರಿಕೆ 'ಡಾನ್'ನೆಹರೂ-ಲಿಯಾಖತ್ ಒಪ್ಪಂದವನ್ನು ಎತ್ತಿಹಿಡಿದು ಕಹಿ ಸ್ಮರಣೆಗಳುಳ್ಳ ಗತ ಕಾಲದ ಸಂಬಂಧವನ್ನು ಪೂರ್ಣ ಕಡಿದುಕೊಂಡು ನವಯುಗವನ್ನಾರಂಭಿಸಬೇಕೆಂದು ಕೇಳಿಕೊಂಡಿದೆಯಲ್ಲದೆ, ಪಂಡಿತ ನೆಹರುಗಳಿಗೂ ಸರ್ದಾರ್ ವಲ್ಲಭಾಯಿಗಳಿಗೂ ಸುಸ್ವಾಗತ ಕೋರಿದೆಯನ್ನುತ್ತಾ ಇಬ್ಬರನ್ನೂ ಕರಾಚಿಗಾಮಂತ್ರಿಸಿದೆ. ಈ ಮೊದಲು ಅಲ್ಲಿ ರಣ ಕಹಳೆಯೂದುತಿದ್ದವರೆಲ್ಲರೂ ಈಗ ಮಧುರಾಲಾಪ ಹಾರಹತ್ತಿದ್ದಾರೆ. ಇತ್ತ ಭಾರತದಲ್ಲಾದರೋ ನಿತ್ಯದ ಶಾಂತತಾ ನಿರ್ಮಾಣ ಕಾರ್ಯವೀಗ ಇಮ್ಮಡಿ ಹುಮ್ಮಸಿನಿಂದ ಸಾಗಿದೆ. ಡಿಲ್ಲೀ ಒಡಂಬಡಿಕೆಯ ಕುರಿತು ಅರ್ಧಮರ್ಧ ಅತೃಪ್ತಿ ತೋರಬರುತ್ತಿರುವ ಮತ್ತು ಗೊಂದಲದ ಕೇಂದ್ರವಾಗಿರುವ ಕಲ್ಕತ್ತೆಯನ್ನು ಸುಸ್ಥಿತಿಗೆ ತರಲು ಸರ್ದಾರ್ ಪಟೇಲರು ಇದೇ ತಾ. 16ರಲ್ಲಿ ಕಲ್ಕತ್ತೆಗೆ ಹೋಗಿ ಮೂರು ದಿನ ಅಲ್ಲೇ ನಿಲ್ಲಲಿದ್ದಾರೆ. ಅನಾಹುತ ಪೀಡಿತ ಪೂರ್ವ ಬಂಗಾಳದವರಿರುವ ಶ್ರೀನಿಯೋಗಿ ಮತ್ತು ಬಂಗಾಳೀ ಡಾ| ಶ್ಯಾಮಪ್ರಸಾದ ಮುಖರ್ಜಿಯವರು ಭಾರತ ಕೇಂದ್ರ ಮಂತ್ರಿಮಂಡಲಿಯ ತಮ್ಮ ಸ್ಥಾನಗಳಿಗೆ ರಾಜೀನಾಮೆಯಿತ್ತಿರುವ ಪ್ರಕರಣ ಕಲಹನವೊಂದು ಇನ್ನೂ ಹಾಗೆಯೇ ಇದೆ. ಇವರ ಭಾವನೆಯು ಒಲವು ತನಗೆ ಮಂದಟ್ಟಾಗಿರುವುದಾದರೂ ಸದ್ಯಸ್ಥಿತಿ ಗಾಂಭೀರ್ಯವನ್ನು ಗಮನಿಸಿ, ಇವರು ತಮ್ಮ 'ರಾಜೀನಾಮೆಗಳನ್ನು ಹಿಂದೆಗೆದುಕೊಳ್ಳಬೇಕೆಂದು ಪಂಡಿತ ನೆಹರುಗಳು ಜಾಹೀರಾಗಿ ವಿಜ್ಞಾಪಿಸಿಕೊಂಡಿರುವರಾದರೂ ಈ ತನಕ ಅಂತಹದಾಗಿಲ್ಲ. ಮಿ. ಲಿಯಾಖತರು ಡಿಲ್ಲಿಯಲ್ಲಿದ್ದ ದಿನಗಳಲ್ಲೇ ಸಾವರ್ಕರ್, ಘೋಷಟ್ಟರ್. ಮೊದಲಾದ ಹಿಂದೂ ಮಹಾ ಸಭೆಯ ನಾಯಕರು ಮತ್ತು ಕಾರ್ಯಕರ್ತರುಗಳೆಲ್ಲರ ದಸ್ತಗಿರಿಯೂ ನಡೆದುದರಿಂದ ಹಲವು ವಿಧದ ಊಹಾಪೋಹೆಗಳೆದ್ದದ್ದುವು. "ಒಂದು ರಾಷ್ಟ್ರದ ಇರಸ್ತಿಕೆಯನ್ನು ಅವಮಾನ್ಯ ಮಾಡುವ ಮತ್ತು ಉಭಯ ರಾಷ್ಟ್ರಗಳೊಳಗೆ ಯುದ್ಧ ಪ್ರಚಾರ ಮಾಡುವ ವ್ಯಕ್ತಿ, ಸಂಸ್ಥೆಗಳ ಮೇಲೆ ಕಠಿಣ ಕಾರ್ಯಾಚರಣೆ ಕೈಕೊಳ್ಳತಕ್ಕದ್ದು" ಎಂಬೊಂದು ಶರ್ತವು ಡಿಲ್ಲೀ ಒಪ್ಪಂದ ಕರಾರಿನಲ್ಲಿ ಸ್ವಾಭಾವಿಕವಾಗಿ ಸೇರಿಕೊಂಡಿದೆ. ಆದರೆ ನೆಹರೂ-ಲಿಯಾಖತ್ ಮಾತುಕತೆಗಳಿಗೂ ಹಿಂದೂ ಮಹಾ ಸಭಾ ನಾಯಕರ ದಸ್ತಗಿರಿಗಳಿಗೂ ಯಾವ ಸಂಬಂಧವೂ ಇಲ್ಲವೆಂದೂ ಕೈದು ಮಾಡದಿರುತ್ತಿದ್ದರೆ ಅವರು ಡಿಲ್ಲಿಯಲ್ಲಿ ಗೊಂದಲ ನಿರ್ಮಿಸಲಿಕ್ಕಿದ್ದಾರೆಂದೂ ಸರ್ದಾರ್ ವಲ್ಲಭಾಯಿಗಳು ಸ್ಪಷ್ಟಪಡಿಸಿದ್ದಾರೆ. ಪಂಡಿತ ನೆಹರುಗಳ ಕೊಲೆಯ ಒಳಸಂಚೊಂದು ನಡೆದಿದ್ದಿತೆಂಬ ಕುರಿತು ಆತುರ ಜನಕ ಸುದ್ದಿಗಳಿಷ್ಟೇ ಕೇಳಿಬರುತ್ತವೆ. ಈ ಕುರಿತು ಪ್ರಶ್ನಿಸಲ್ಪಟ್ಟಾಗ ಪಂಡಿತ ನೆಹರುಗಳು "ಆವೇಗಭರದಲ್ಲಿ ನನ್ನನ್ನು ಹೊಡೆದುಹಾಕಲಿಚ್ಛಿಸುವವರು ಯಾರೂ ಇರಲಾರರೆಂದು ನಾನನ್ನಲಾರೆ. ಆದರೆ ಸರ್ವಸಾಮಾನ್ಯ ನನ್ನ ಹಿತದ "ಭಾವನೆಯಿಲ್ಲ" ಎಂದು ಅಭಿಪ್ರಾಯ ಕೊಂಗೆಡಹಿದ್ದರು. ಆದರೆ ಇತ್ತೀಚೆಗೆ ಪಂಡಿತಜೀಯ ಪೈಗಾವಲನ್ನು ಬಹಳವಾಗಿ ಹೆಚ್ಚಿಸಲಾಗಿದೆ. "ನನ್ನ ಮೇಲೆ ಬಿದ್ದಿರುವ ಈ ಪಹರೆಯು ನನ್ನ ಚಲನವಲನಗಳಿಗೆ ದೊಡ್ಡ ಆತಂಕವಾಗಿ ಪರಿಣಮಿಸಿದೆ. ಈ ಕುರಿತು ನಾನು ಗೃಹ ಮಂತ್ರಿಗಳಿಗೆ ನನ್ನ ನಿಷೇಧ ಸೂಚಕ ಪತ್ರ ಕಳುಹಿದ್ದೇನೆ" ಎಂದು ಪಂಡಿತ ನೆಹರುಗಳಂದಿದ್ದರು. ಅಂತೂ ಗಾಂಧೀಜಿಯ ಜೀವ ತೆಗೆದಂತೆಯೇ ಪಂಡಿತಜೀಗೂ ಗತಿ ಕಾಣಿಸಲು ಹೊಂಚುತ್ತಿರುವ ಮೃತ್ಯುಹಸ್ತಗಳಿವೆ, ಎಂಬುದು ಖಂಡಿತ.

## ಪಾಕಿಸ್ತಾನದ ಸ್ವರಕ್ಷಣಾತುರ!

ನೆಹರೂ-ಲಿಯಾಖತ್ ಒಪ್ಪಂದವು ಭಾರತ-ಪಾಕಿಸ್ತಾನಗಳ ಸಂಬಂಧದಲ್ಲೊಂದು ಹೊಸ ಯುಗವನ್ನಾರಂಭಿಸಿತೆಂಬ ಸೂಚನೆಯು ಬಹು ವಿಧದಿಂದ ತೋರಬರುತ್ತಿದೆ; ಎರಡೂ ರಾಷ್ಟ್ರಗಳ ವಾತಾವರಣವೀಗ ತಿಳಿಗೊಂಡಿದೆ. ಇಲ್ಲಿ, ತುಸು ಕೌತುಕಾನಂದಗಳ ಸಂಗತಿಯೆಂದರೆ ಪಾಕಿಸ್ತಾನದ ಬುದ್ಧಿ ಮಾರ್ಪಾಟಿವೇ. "ಯುದ್ಧವಿಲ್ಲವೆಂದು ಘೋಷಿಸುವಾ" "ಜತೆಯಾಗಿ ಸಂಚಾರ ಹೊರಡುವಾ" ಎಂದು ಪಂಡಿತ ನೆಹರೂಗಳು ಮೇಲಿಂದ ಮೇಲೆ ಕೊಟ್ಟ ಆಹ್ವಾನಗಳನ್ನು ತಿರಸ್ಕರಿಸಿದ್ದ ಮಿ. ಲಿಯಾಖತ್ ಅಲೀಖಾನರು ಪಕ್ಕನೇ ಧೋರಣೆ ಬದಲಾಯಿಸಿ, ಡಿಲ್ಲಿಗೆ ಬಂದುದು, ಪಾಕಿಸ್ತಾನದ ದೊರಗುತನವೆಲ್ಲವೂ ಒಮ್ಮೆಗೇ ಅಂತರ್ಧಾನಗೊಂಡುದು ಮೃದುತ್ವ ಮೂಡಿರುವುದು — ಆನಂದದಾಯಕವಿರುವಂತೆ ಆಲೋಚಿಸತಕ್ಕ ಘಟನೆಗಳೂ ಆಗಿವೆ. ಅಂತೆಯೇ ರಾಜಕೀಯ ಶರ್ತಗಳಾವುವೂ ಇರದೆ, ಕೇವಲ ನಿರಾಶ್ರಿತರ ಪ್ರಾಣ, ಆಸ್ತಿ, ಸೊತ್ತುಗಳ ರಕ್ಷಣಾ ವ್ಯವಸ್ಥೆಗಳಷ್ಟೇ ಯೋಜಿಸಲ್ಪಟ್ಟಿರುವ ಡಿಲ್ಲೀ ಒಪ್ಪಂದ ಕರಾರಿನ ಕುರಿತು, ಡಾ| ಮುಖರ್ಜಿ ಶ್ರೀ. ನಿಯೋಗಿಗಳಂಥವರು ಅಸಮಾಧಾನಪಡುವುದಕ್ಕೂ ವಿಶೇಷ ಕಾರಣಗಳಿರಬೇಕು. ಪಾಕಿಸ್ತಾನದಿಂದ ಭಾರತಕ್ಕೋಡಿ ಬಂದಿರುವ ನಿರಾಶ್ರಿತರೇ ಹೆಚ್ಚಿಗಿರುವಾಗ, ಈ ದೃಷ್ಟಿಯಿಂದ ಡಿಲ್ಲೀ ಒಪ್ಪಂದವು ಭಾರತಕ್ಕೆ ಲಾಭದಾಯಕವೇ ಹೊರತು ನಷ್ಟದಾಯಿಯಲ್ಲ. ಆದರೂ ಇಂತಹ ಲಾಭಕರ ಒಪ್ಪಂದವು ಹಿಂದೂ ಅಭಿಮಾನಿಗಳಲ್ಲಿ ಅತೃಪ್ತಿಯನ್ನು ನಿರ್ಮಿಸಲು ಕಾರಣ

---

ರಾಷ್ಟ್ರತಾದಾತ್ಮ್ಯತೆ ಹೊಂದುವದು ಅಪೇಕ್ಷಣೀಯವಿದೆ; ಈ ಕರ್ಮವು ನಿಷ್ಕಾಮ ಕರ್ಮವಾಗಿದೆ". ಹೊರಡಲೇಳುತ್ತಾ ಡಾ. ರಾಜೇಂದ್ರ ಪ್ರಸಾದರು "ನನ್ನನ್ನಿಲ್ಲಿಗೆ ಕಳುಹಿಕೊಟ್ಟವರು ಮಹಾತ್ಮಾಜೀ. ಅವರಲ್ಲಿಗೆ ನಾನು ಕೊಂಡು ಹೋಗಬಹುದಾದ ಸಂದೇಶವೇನಾದರೂ ಇದೆಯೇ?" ಎಂದು ಮಹರ್ಷಿಯನ್ನು ವಿಚಾರಿಸಿದಾಗ ಅವರೆಂದುದಿಷ್ಟೆ: "ಎರಡು ಹೃದಯಗಳೇ ಪರಸ್ಪರ ಮಾತಾಡಿಕೊಳ್ಳುತ್ತಿರುವಾಗ ಯಾವ ಸಂದೇಶದ ಅಗತ್ಯವೇನಿದೆ? ಯಾವ ಶಕ್ತಿ ಇಲ್ಲಿ ಕೆಲಸ ಮಾಡುತ್ತಿದೆಯೋ ಅದೇ ಶಕ್ತಿ ಅಲ್ಲಿಯೂ ಮಾಡುತ್ತಿದೆ".

ಲೌಕಿಕ, ದೈಹಿಕಾಸಕ್ತಿಯ ಅಣುಮಾತ್ರವೂ ಇರದೆ, ಕಾಯಾ, ವಾಚಾ, ಮನಸಾ ಅಗಾಧ ಅಧ್ಯಾತ್ಮಿಕತೆಯಲ್ಲಿ ತಲ್ಲೀನತೆಗೊಂಡ ತೇಜಃಪುಂಜವೇ ಶ್ರೀ ರಮಣ ಮಹರ್ಷಿ. ಅವರ ಪರಿಶುದ್ಧಾತ್ಮದ ಪ್ರಭಾವದ್ಯೋತಕ ಕಥೆಗಳು ಸರ್ವತ್ರ ಪ್ರಚಾರದಲ್ಲಿವೆ. ಪತ್ರಿಕೆಗಳು, ಗಾಢ ವಿಮರ್ಶಕರು, ಪ್ರಾಪಂಚಿಕಸಾರ ಸಂಶೋಧಕ ತಜ್ಞರೆಲ್ಲರು ಈ ಮಹಾ ತಪಸ್ವಿಯು ಅಮೋಘತೆಯಾದಿರು ತಲೆಬಾಗಿ ಕೊಂಡಾಡಿದ್ದಾರೆ.

ಕಳೆದ 14 ತಿಂಗಳುಗಳಿಂದ ಅವರ ಎಡ ತೋಳಿಗೆ 'ಕೇನ್ಸರ್" ರೋಗ ತಾಗಿದ್ದಿತು. ಅದಕ್ಕೆ ನಾಲ್ಕು ದೊಡ್ಡ ಓಪರೇಶನುಗಳಾದುವು. ಎಲ್ಲೋಪೆಥಿ, ಹೋಮಿಯೋಪೆಥಿ ಮತ್ತು ಆಯುರ್ವೇದದಲ್ಲಿ ತಜ್ಞರಾದ ಚಿಕಿತ್ಸಕರನೇಕರು ಇವರನ್ನು ಕಂಡಿದ್ದರು. ಈ ಕಠೋರ ರೋಗದ ಅಸಹ್ಯವೇದನೆಯನ್ನು ಇಷ್ಟು ದೀರ್ಘಾವಧಿ ಸಹಿಸ್ಕೊಂದು ಶಾಂತಚಿತ್ತದಿಂದ-ಏನೂ ಆಗಿಲ್ಲವೆಂಬಷ್ಟು ನಿರ್ವಿಕಾರತೆಯಿಂದ-ಸಹಿಸಿಕೊಳ್ಳಲು ಭಗವಾನ್ ರಮಣಮಹರ್ಷಿಯೊಬ್ಬನಿಗಲ್ಲದೆ, ಬೇರಾರಿಗೂ ಅಸಾಧ್ಯವೆಂದು ಅವರೆಲ್ಲರೂ ಬೆರಗಾಗಿ ಕೊಂಡಾಡಿದ್ದಾರೆ. ತಾ. 15ರಲ್ಲಿ ಅವರ ಕಾಯದ ಮಹಾ ಸಮಾಧಿ ನಡೆಯಿತು. ಆಧ್ಯಾತ್ಮಿಕ ಜಗತ್ತಿನ ಅತ್ಯುಜ್ವಲ ದೀಪವೊಂದು ತನ್ನ ಬುರುಡೆ ಬಿಟ್ಟು ಕೇವಲ ಬೆಳಕಾಗಿ ಉಳಿದು ಕೊಂಡಿತು!.

---

**ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.**

ನಮ್ಮ ಸ್ವಂತ ಸುದ್ದಿಗಾರರಿಂದ

**ಸುರಲೋಕದ ದೇವತೆಗಳು ನರಲೋಕದಲ್ಲಿ.**

ಯಾರಿಗೂ ತಿಳಿಯದಂತೆ ಮೊನ್ನೆಮೊನ್ನೆ ಇಂದ್ರನು ಬಂದು ಚಂದ್ರಲೇಖ ನೋಡಿದನಂತೆ.

**ಇದು ಮಾತ್ರ ಗುಟ್ಟಾಗಿರಲಿ.**

ತಾರೀಕು 14—4—1950 ರಿಂದ **ಜೆಮಿನಿಯವರ**

4ನೇವಾರ **ಚಂದ್ರಲೇಖ** (ತಮಿಳು)

ಟಿ. ಆರ್. ರಾಜಕುಮಾರಿ, ಎಂ. ಕೆ. ರಾಧ, ರಂಜನ್.

ಬರುವ ಚಿತ್ರ— ಫಿಲ್ಮಿಸ್ತಾನದವರ **ಲೀಲಾ**

**ಶೋಭಾ, ಕಾನುರ್ಕ್ಕೊ, ಮೀರಾ**

THE

Canara Banking Corporation Ltd.

(Incorporated in India.)

Estd: 1906.

Head Office : UDIPI, (S. I.)

| | |
|---|---|
| Capital Authorised .... .... .... | Rs. 25,00,000 |
| Capital Issued, Subscribed & Paid up .... .... .... | Rs. 20,00,000 |
| Reserves .... .... .... | Rs. 9,44,765 |

ಗುರುವಾರ ಉಡುಪಿ ೨೦-೪-೧೯೫೦

# ನಾಗರಿಕ ಹಕ್ಕು ರಕ್ಷಣೆ

ಇದೇ ತಾ. 15ರಲ್ಲಿ ಪಾಟ್ನಾದಲ್ಲಿ ಸೇರಿದ್ದ "ಅಖಿಲ ಭಾರತ ನಾಗರಿಕ ಹಕ್ಕುಗಳ ಸಭೆ"ಯ ಎರಡನೇ ಜಾಹೀರು ಅಧಿವೇಶನದಲ್ಲಿ ಅದರ ಉದ್ಘಾಟಕರಾಗಿ ಸಮಾಜವಾದಿ ನಾಯಕ ಶ್ರೀ ಜೈಪ್ರಕಾಶ ನಾರಾಯಣರು ಮತ್ತು ಅದರ ಅಧ್ಯಕ್ಷ ಸ್ಥಾನದಿಂದ ಬಂಗಾಳದ ಪ್ರಸಿದ್ಧ ಜ್ಯೂರಿಸ್ಟ್, ಹಾಗೂ ವಿದ್ಯಾತಜ್ಞ ಶ್ರೀ ಅತುಲ ಚಂದ್ರ ಗುಪ್ತರು ಆಡಿದ್ದ ಕೆಲವು ಮಾತುಗಳು ಹೃದಯವನ್ನು ಸ್ಪರ್ಶಿಸುವಂತಹವಿವೆ. ಎಲ್ಲೆಲ್ಲೂ ವಿಚಾರಣಾರಹಿತ ಸ್ಥಾನಬದ್ಧತೆಗಳು, ಪ್ರತಿಬಂಧಕಾಜ್ಞೆಗಳು, ಮತ್ತಿತರ ವ್ಯಕ್ತಿ ಸ್ವಾತಂತ್ರ್ಯ ಅಪಹಾರ ಆಚರಣೆಗಳು ರಂಗಬಂದಿರುವ ಈ ಕಾಲದಲ್ಲಿ ಜೈಪ್ರಕಾಶ್ ಗುಪ್ತರಂತಹ ಪ್ರತಿಷ್ಠಾವಂತ ಪ್ರತಿಭಾನ್ವಿತರ ಸಕಾರಣ ಟೀಕೆಗಳನ್ನು ಅಲ್ಲಗಳೆಯುವದೇನೂ ಸುಲಭವಲ್ಲ. ಅದರೆ, ಇವರಿಬ್ಬರೂ ಎತ್ತಿತೋರಿಸಿರುವ 'ನಾಗರಿಕ ಹಕ್ಕು'ಗಳಲ್ಲಿ ಯೋಚನಾ ಸ್ವಾತಂತ್ರ್ಯವೂ ಒಂದೆಂಬುದನ್ನೂ, ನ್ಯಾಯಾನ್ವೇಷಣೆಗಾಗಿ ಆಳವಾಗಿ ಯೋಚಿಸಿ ನೋಡತಕ್ಕ ಅಂಶಗಳು ಸ್ವತಃ ಇವರ ವಾದಗಳಲ್ಲಿವೆಯೆಂಬುದನ್ನೂ ಮರೆಯಲಾಗುವದಿಲ್ಲ.

"ನಾವು ರಾಷ್ಟ್ರದ ಭದ್ರತೆ, ಮತ್ತು ವ್ಯಕ್ತಿ ಸ್ವಾತಂತ್ರ್ಯ, ಇವೆರಡರ ಪೈಕಿ ಒಂದನ್ನು ಆರಿಸಿಕೊಳ್ಳಬೇಕಾಗಿ ಬಂದಿದೆ. ಈ ಪೈಕಿ ನಾವು ಮೊದಲನೆಯದನ್ನೇ ಎತ್ತಿಕೊಳ್ಳಬೇಕು'-ಎಂಬ ಪ್ರಧಾನ ಮಂತ್ರಿ ಪಂಡಿತ ಜವಾಹಿರಲಾಲರ ಮಾತು ಸರ್ವಾಧಿಕಾರಿಗಳ ಭಾಷೆಯೇ ಸರಿ. ಅಧಿಕಾರದಲ್ಲಿರುವವರು ಪ್ರಜಾಸತ್ತೆ, ಸ್ವಾತಂತ್ರ್ಯ ನಾಗರಿಕ ಹಕ್ಕುಗಳಿಗೆ ನಾಲಿಗೇ ಸೇವೆ ಸಲ್ಲಿಸುತ್ತಿರುವರಾದರೂ ತಾವು ಹೇಳುವುದರ ಅರ್ಥವೇ ಅವರಿಗೆ ಗೊತ್ತಿಲ್ಲ. ನಾಗರಿಕ ಹಕ್ಕುಗಳಿಗೆ ಮಹಾ ಅಪಾಯವಾಗಿ, ಕಾಂಗ್ರೆಸ್ ಪಕ್ಷವೇ ಸರಕಾರ, ಸರಕಾರವೇ ಕಾಂಗ್ರೆಸ್ ಪಕ್ಷವೆಂಬ ಭಾವನೆಯೀಗ ಬೆಳೆಯುತ್ತಾ ಬಂದಿದೆ. ರಾಜ್ಯಶಾಸನವು ಪ್ರಾಯಸ್ಥರಿಗೆಲ್ಲಾ ಮತಾಧಿಕಾರ ಕೊಟ್ಟಿದೆ ಯಾ. . . ಭಿನ್ನ ಭಿನ್ನ ಪಕ್ಷೀಯರಿಗೆ ಜನತೆಯನ್ನು ಸಂಧಿಸುವ ಅನುಕೂಲತೆಗಳು ಇಲ್ಲದಿರುವಾಗ, ಜನರು ಈ ಮತಾಧಿಕಾರವನ್ನು ಉಪಯೋಗಿಸುವುದಾದರೂ ಹೇಗೆಂಬುದೇ ತಿಳಿಯುವುದಿಲ್ಲ. ನಾಗರಿಕ ಹಕ್ಕುಗಳ ಕಾಲ್ಪನಿಕ ತತ್ವಗಳಂತೆ ವರ್ತಿಸುವ ಮೊದಲು ನವೋದಿತ ರಾಷ್ಟ್ರವನ್ನು ಸುಭದ್ರಪಡಿಸಿಕೊಳ್ಳಲಿಕ್ಕಿದೆ ಎಂಬುದು ಸರಕಾರದ ಮತ್ತೊಂದು ಅನುಕೂಲ ಶಾಸ್ತ್ರ. ಮಹಾತ್ಮಾ ಗಾಂಧಿಯವರ ಶಿಷ್ಯರು ಇಂತಹ ವಾದಗಳನ್ನು ಮುಂದಿಡುತ್ತಿರುವುದು ಆಶ್ಚರ್ಯಕರವೇ ಸರಿ. ಹಾಗಾದರೆ ನಾವು ನವಭಾರತವನ್ನು ಕಟ್ಟುವುದಾದರೂ ಯಾವುದನ್ನು ಆಧರಿಸಿಕೊಂಡು? ಕೇವಲ ಕಾನೂನು ಮತ್ತು ವ್ಯವಸ್ಥೆಗಳನ್ನು ಪಾಲಿಸಿದರಾಗದು—ಬ್ರಿಟಿಷರು ಕೂಡಾ ಕಾನೂನು, ವ್ಯವಸ್ಥೆಗಳನ್ನು ಉಳಿಸಿದ್ದರು!"—ಎಂದು ಶ್ರೀ ಜೈಪ್ರಕಾಶ್ ನಾರಾಯಣರು ಹಂಗಿಸಿದ್ದಾರೆ. ನಾಗರಿಕ ಹಕ್ಕಿನಂತಹ ಮೂಲಭೂತ ಪ್ರಶ್ನೆಯ ಕಡೆಗೆ ಜನರು ವಹಿಸಿರುವ ಆಲಸ್ಯ ಅಥವಾ ಅಸಡ್ಡೆಯೇ ಪ್ರಶಸ್ತ್ಯದ ಗಂಡಾಂತರವೆಂದೂ, ರಾಷ್ಟ್ರೀಯ ಸ್ವಾತಂತ್ರ್ಯ ಮತ್ತು ನಾಗರಿಕ ಹಕ್ಕುಬಾಧ್ಯತೆಗಳು ಒಂದೇ ಎಂಬ ಭ್ರಮೆಯನ್ನು ಬಿಟ್ಟು ಅವರಡೂ ಭಿನ್ನವಿಷಯಗಳೆಂಬುದನ್ನು ಅರಿತ ಬೇಕೆಂದೂ, ರಾಷ್ಟ್ರೀಯ ಸ್ವಾತಂತ್ರ್ಯವು ಸರ್ವಾಧಿಕಾರಿತ್ವದಡಿಯಲ್ಲೂ ಉಳಿದುಕೊಳ್ಳಬಲ್ಲುದಾದರೂ ನಾಗರಿಕ-ಸ್ವಾತಂತ್ರ್ಯವು ಉಳಿಯಲಾರದೆಂದೂ ಜೈಪ್ರಕಾಶರು ಚುಚ್ಚಿ ನುಡಿದಿದ್ದಾರೆ. ಪ್ರಚಲಿತಾಡಳಿತೆಯಲ್ಲಿ ವ್ಯಕ್ತಿಸ್ವಾತಂತ್ರ್ಯಕ್ಕೆ ಬೀಳುತ್ತಿರುವ ಗದಾಪ್ರಹಾರಗಳನ್ನು ವರ್ಣಿಸಿ, ಜನರು ಕಣ್ತೆರೆಯಬೇಕೆಂದು ಎಚ್ಚರಿಸಿದ್ದಾರೆ.

"ಎಷ್ಟೇ ದೋಷಗಳಿದ್ದರೂ ನಮ್ಮ ರಾಜ್ಯಘಟನೆಯ ಮೂಲಭೂತ ಹಕ್ಕುಗಳ ವಿಭಾಗದಲ್ಲಿ ನಮೂದಿಸಲ್ಪಟ್ಟಿರುವ ವ್ಯಕ್ತಿಸ್ವಾತಂತ್ರ್ಯ ರಕ್ಷಣಾ ಸೂತ್ರಗಳು ಉಚಿತವಾದವುಗಳಿವೆ; ಸಾಕಷ್ಟಿವೆ. ಆದರೆ ಈ ಘಟನೆಯನ್ನು ಎತ್ತಿ ಹಿಡಿಯುವ ದೃಢ ಪ್ರತಿಜ್ಞೆಯನ್ನು ನಾವು—ಭಾರತದ ಸಾಮಾನ್ಯ ಸ್ತ್ರೀಪುರುಷರು—ತೊಡದಿದ್ದರೆ ಜಡ್ಜರುಗಳು, ಅಧ್ಯಕ್ಷರು, ಗವರ್ನರರುಗಳು ಮತ್ತು ಮಂತ್ರಿಗಳು ತೊಟ್ಟ ಎಲ್ಲಾ ಪ್ರತಿಜ್ಞೆಗಳೂ ವ್ಯರ್ಥವೇ ಸರಿ. ಸ್ವತಂತ್ರ ಭಾರತವೀಗ ಅನಾಹುತದ ಕಡೆಗೆ ಧಾವಿಸುತ್ತಿರುವಂತೆ ಕಾಣುತ್ತಿದೆ. ಕೋರ್ಟಿನ ತನಿಖೆಗೊಳಗಾಗಬಲ್ಲ ಯಾವುದೇ ಅಪರಾಧಾರೋಪ ಅಥವಾ ವಿಚಾರಣೆಯಿಲ್ಲದೆ, ಸ್ತ್ರೀಪುರುಷರನ್ನು ಅಧಿಕ ಸಂಖ್ಯೆಯಲ್ಲಿ ಬಂದನಕ್ಕೊಳಪಡಿಸುತ್ತಿರುವ ಹೊಸ ಶಕೆ; ರಕ್ಷಣಾ ಶಾಸನಗಳು ಎಲ್ಲಾ ಪ್ರಾಂತ್ಯಗಳಲ್ಲೂ ತುಂಬಿಹೋಗಿವೆ. ರಾಷ್ಟ್ರದ ಭದ್ರತೆಯ ಹೆಸರಿನ ಕಾನೂನು ಪ್ರತಿಯೊಬ್ಬ ನಾಗರಿಕನ ಭದ್ರತೆಯನ್ನೂ ಅಭದ್ರಗೊಳಿಸಿದೆ. ರಾಷ್ಟ್ರದ ಜನತೆಯು ತಮ್ಮೊಂದಿಗೆ ಸಹಕರಿಸುತ್ತಿಲ್ಲವೆಂದು, ನಮ್ಮ ಆಡಳಿತಗಾರರು ಮತ್ತು ನಾಯಕರು ಮಾಡುತ್ತಿರುವ ಗೋಳಾಟವು ನಾಚಿಕೆಕರವಿದೆ. ಯಾತನಾತ್ಮಕವಿದೆ. ಸದ್ಯಸ್ಥಿತಿಯೆಂದರೆ ಉತ್ತಮ ಜೀವನ ಕಟ್ಟಿಕೊಳ್ಳುವ ಭವ್ಯರಾಷ್ಟ್ರ ನಿರ್ಮಾಣಕ್ಕಾಗುವ ಪ್ರಯತ್ನ ಕೈಗೊಳ್ಳುವಂತೆ ರಾಷ್ಟ್ರವನ್ನು ಹುರಿದುಂಬಿಸುವ ಕಾರ್ಯಕ್ಕೆ ರಾಷ್ಟ್ರ ನಾಯಕರು ತೀರಾ ಅಸಮರ್ಥರಾಗಿದ್ದಾರೆ. ಫಲದಾಯಕ ಕಾರ್ಯಗಳ ಕಡೆಗೆ ಈ ಉತ್ಸಾಹವನ್ನು ಕಾಲುವೆ ಕಟ್ಟಿ ಹರಿಯಿಸಲಾಗದೆ ಅವರು ಪರಾಭವಗೊಂಡಿದ್ದಾರೆ. ವಸ್ತುತಃ ವಿದೇಶೀ ಆಡಳಿತೆಯು ಬರ್ಖಾಸ್ತಾದೊಡನೆ ಎದ್ದಂತಹ ಜನತೋತ್ಸಾಹವನ್ನು ಕೊಲ್ಲುವುದರಲ್ಲೇ ಅವರು ಜಯಶೀಲರಾಗಿದ್ದಾರೆ—" ಎಂದು ಶ್ರೀ ಅತುಲ ಚಂದ್ರಗುಪ್ತರ ವಾಗ್ದಾನ.

ವಾಸ್ತವಿಕ ಸ್ಥಿತಿಗತಿಗಳ ಮೇಲ್ನೋಟ ಮಾತ್ರದಿಂದ ಮೇಲಿನ ಟೀಕೆಗಳು ಅತ್ಯಂತ ಸಮರ್ಪಕವಾದವುಗಳೆಂದು ಯಾರಾದರೂ ಅನ್ನಿಸಲೇಬೇಕು. ಆದರಿಲ್ಲಿ ರಕ್ಷಣೆ ಬೇಕಾದುದು 'ನಾಗರಿಕ ಹಕ್ಕು'ಗಳಿಗೆ ಹೊರತು 'ಅನಾಗರಿಕ ವರ್ತನೆ'ಗಳಿಗಲ್ಲ—'ವ್ಯಕ್ತಿ ಸ್ವಾತಂತ್ರ್ಯ'ಕ್ಕೆ ಮನ್ನಣೆಯಬೇಕೇ ಹೊರತು, ಅದರ ಹೆಸರಿನಿಂದ ಅಮಾನುಷ ಸ್ವೇಚ್ಛಾಚಾರಗಳಿಗೂ ಅವಕಾಶಗೊಡಕೂಡದು. ಈ ವ್ಯತ್ಯಾಸವನ್ನು ದೃಷ್ಟಿಪಥದಲ್ಲಿಟ್ಟುಕೊಂಡೇ ಇಂದಿನ ಆಡಳಿತಗಾರರು ಅಥವಾ ರಾಷ್ಟ್ರ ನಾಯಕರು ವರ್ತಿಸುತಿದ್ದಾರಲ್ಲದೆ ಮೂಲಭೂತ ನಾಗರಿಕಹಕ್ಕುಗಳನ್ನು ಹತ್ತಿಕ್ಕುವ ಇಚ್ಛೆ ಇವರಿಗಿಲ್ಲವೆಂದು ನಂಬಬಹುದು. ಆದರೂ ಇಂದಿನ ಆಡಳಿತೆಯಿಂದ ಯಾವ ಪ್ರಮಾದವೂ ಆಗಲ್ಲ—ನ್ಯಾಯಬದ್ಧ ವ್ಯಕ್ತಿ ಸ್ವಾತಂತ್ರ್ಯಕ್ಕೆ ಎಲ್ಲಿಯೂ ಧಕ್ಕೆ ಬಿದ್ದಿಲ್ಲ — ಎಂದು ಯಾರೂ ಹೇಳಲಾರರು. 'ನಾಗರಿಕ ಹಕ್ಕು ರಕ್ಷಣಾ' ನಿಲ್ದಾಣದಲ್ಲಿ ನಿಂತು ಕೊಂಡು ಜೈಪ್ರಕಾಶ್ ಮತ್ತು ಗುಪ್ತರು 'ಆಗುವದೆಲ್ಲವೂ ಅನ್ಯಾಯವೇ!' ಎಂಬ ಅರ್ಥ ಬರುವಂತೆ ಮಾತಾಡಿದಂತೆಯೇ 'ದೇಶ ಹಿತರಕ್ಷಣೆ'ಯ ಹೆಸರಿನಿಂದ ಸರಕಾರಗಳೂ ಎಷ್ಟೋ ತಪ್ಪುಗಳನ್ನು ಮಾಡಿರಬಹುದು. ಆದರೆ, ಇಲ್ಲಿ ಆವಶ್ಯಕತೆ-ಅತಿರೇಕಗಳನ್ನು ವಿಂಗಡಿಸಿ ತೋರಿಸುವ ತುಲನಾತ್ಮಕ ವಿಮರ್ಶೆ ಬೇಕೇ ಹೊರತು ಆಮೂಲಾಗ್ರ ಖಂಡನೆ ಸರಿಯಲ್ಲ. ಅಂತೆಯೇ, ಸರಕಾರವಾದರೋ ಈ ತಾರತಮ್ಯವನ್ನು ಸರಿಯಾಗಿ ನೋಡಿಕೊಂಡೇ ವರ್ತಿಸ ತಕ್ಕದೆಂದು ಬೇರೆ ಹೇಳಬೇಕಾಗಿಲ್ಲ. ಶಾಸನ ಮೂಲಕ ನಾಗರಿಕ ಹಕ್ಕುಗಳು ಭಂಗಿಸಲ್ಪಡುತ್ತಿರುವ ಅಪಾಯವೇನೂ ಅಷ್ಟೊಂದು ದೊಡ್ಡದಲ್ಲ—ಆದರೆ ಭಾರತೀಯ ಜನತೆಯಲ್ಲಿ ನಾಗರಿಕ ಯೋಗ್ಯತೆ, ಸಹತೆಗಳು ಸಾಕಷ್ಟು ಮೂಡದಿರುವ ಅಪಾಯ ಮಾತ್ರ ನಿಜಕ್ಕೂ ಹೆಚ್ಚಿನದು; 'ವ್ಯಕ್ತಿ ಸ್ವಾತಂತ್ರ್ಯಹರಣ'ದ ಘೋಷಣೆಗೆ ತನ್ನನ್ನು ಗುರಿಮಾಡುವ ಕೃತ್ಯಗಳನ್ನು ಸರಕಾರವು ಅನಿವಾರ್ಯವಾಗಿ ಕೈಕೊಳ್ಳಬೇಕಾಗುತ್ತಿರುವುದು ಜನತೆಯ ಮಟ್ಟ ಹೀಗಿರುವ ದೆಸೆಯಿಂದಲೇ. ಅದ್ದರಿಂದ ಈ ಕಾಲದಲ್ಲಿ, ಜನ ಮನೋಶುದ್ಧೀಕರಣದತ್ತ ಲಕ್ಷ್ಯ ಕೊಡಬೇಕಾದುದೊಂದೇ ಜೈಪ್ರಕಾಶರಂತಹ ಸಮತಾವಾದಿಗಳ ಪಾಲಿಗೆ ಬಂದಿರುವ ಮುಖ್ಯಕರ್ತವ್ಯವಲ್ಲವೆ? ಅವರು ಎತ್ತಿತೋರಿಸಿರುವ ಪ್ರಮಾದಗಳ ದುರಸ್ತಿಗಾಗಿ ಇನ್ನಾದರೂ ಸಮತಾವಾದಿಗಳು ಜನತಾರಂಗವನ್ನೇ ತಮ್ಮ ಕಾರ್ಯಕ್ಷೇತ್ರವಾಗಿ ಮಾಡಿಕೊಂಡು, ತದೇಕ ನಿಷ್ಠೆಯಿಂದ ದುಡಿಯುವರೆಂದು ನಿರೀಕ್ಷಿಸಬಹುದೆ?

(೫ನೇ ಪುಟದಿಂದ ಮುಂದುವರಿದುದು)

ವೇನು? ಶಾಂತ ವಿಧಾನವಾವುದೂ ಫಲಿಸದೆ ಹೋದರೆ ಪಾಕಿಸ್ತಾನದ ಪಾಪಗಳಿಗೆ ಪ್ರತ್ಯಕ್ಷ ಪ್ರಾಯಶ್ಚಿತ್ತ ಮಾಡುವ ದೃಢ ಯೋಜನೆಯನ್ನು ಆ ಉದ್ವೇಗದಾಯೀ ಸಂದರ್ಭದಲ್ಲಿ ಭಾರತ ಸರಕಾರವು ಮಾಡಿದ್ದಿರಬೇಕು. ಪಾಕಿಸ್ತಾನಕ್ಕೆ ಬುದ್ಧಿ ಕಲಿಸುವ ಆ ಸುವರ್ಣ ಸಂಧಿಯು ದಿಲ್ಲೀ ಒಪ್ಪಂದದಿಂದಾಗಿ ತಪ್ಪಿ ಹೋಯಿತಲ್ಲಾ, ಎಂಬ ಪಶ್ಚಾತ್ತಾಪವು ಹಿಂದೂ ನಾಯಕರಲ್ಲುಂಟಾಗಿರಬೇಕು. ತಮ್ಮ ಮೊಂಡು ವರ್ತನೆಯೇ ತಮಗೆ ಅಪಾಯವನ್ನು ತರುತ್ತಿದೆ, ಎಂಬುದು ಮುಂದಟ್ಟಾಗಿಯೇ ಪಾಕಿಸ್ತಾನ್ ನಾಯಕರು ಕೂಡಲೇ ಸಂಧಾನಕ್ಕೆ ಬಂದುದಾಗಿರಬೇಕು. ಈಗ ಪಾಕಿಸ್ತಾನದ ಕಡೆಯಿಂದ ಮತ್ತೊಂದು ವಿಶೇಷ ವಾರ್ತೆ ಬಂದಿದೆ. "ಪಾಕಿಸ್ತಾನದ ಸದ್ಯದ ಗಡಿಗಳನ್ನು ರಕ್ಷಿಸುವ ಜತಭಾರವನ್ನು ಕಾಮನ್‌ವೆಲ್ತ್ ರಾಷ್ಟ್ರಗಳು ಒಟ್ಟಾಗಿ ನಮಗೆ ಕೊಡಬೇಕು" ಎಂದು ಪಾಕಿಸ್ತಾನ್ ಸರಕಾರವು ಬ್ರಿಟಿಷ್ ಸರಕಾರದೊಡನೆ ಮಾತುಕತೆಗಳನ್ನು ನಡೆಸುತ್ತಿದೆ. ಈ ಸೂಚನೆಯು ಈ ಮೊದಲೇ ಹುಟ್ಟಿದುದಾಗಿದ್ದರೂ ದಿಲ್ಲೀ ಒಪ್ಪಂದಾನಂತರ ಈ ಕುರಿತು ವಿಶೇಷ ಆಲೋಚನೆ ನಡೆಯುತ್ತಿದೆ. ಪಾಕಿಸ್ತಾನದ ಪ್ರಮುಖ ಹಾಗೂ ವಿಸ್ತಾರವಾದ ಗಡಿಸಂಬಂಧವಿರುವುದು ಭಾರತದೊಂದಿಗೆ. ಗಡಿನಾಡು ಪ್ರಾಂತ್ಯದ ಗಡಿ ಸಂಬಂಧವಾಗಿ ಒತ್ತಿನ ಆಫ್ಘಾನಿಸ್ತಾನವು ಪಾಕಿಸ್ತಾನದೊಡನೆ ದೀರ್ಘ ವಿಧಯುದ್ಧ ನಡೆಸಿಕೊಂಡು ಬಂದಿದೆ. ಕಾಶ್ಮೀರದಲ್ಲಿ ರಕ್ತವು ಮೀಸೆ ಹೂಗಿಸಲಾಗುವ ಕರಹದ್ದದ. ಎರಡೂ ಮುಖ್ಯಗಳು ವರ್ಷಪೂರ್ಣ ಎಳೆ ಪಾಕಿಸ್ತಾನಕ್ಕೆ ತನ್ನ ಗಡಿಗಳಲ್ಲಿ 'ಗುಮ್ಮನ ಮರಿ' ಕಾಣಿಸುತ್ತಿರಬೇಕು. ಅದರ ಕಾಶ್ಮೀರ ವಿವಾದ ತೀರ್ಮಾನಗೊಳ್ಳದೆ ಪಾಕಿಸ್ತಾನದ ಗಡಿ ನಿರ್ಣಯವಾಗದು. ಭಾರತವೂ ಕಾಮನ್‌ವೆಲ್ತ್ ರಾಷ್ಟ್ರಗಳಲ್ಲೊಂದಾಗಿರುವಾಗ, ಗಡಿ ಸಂಬಂಧದ ಭಾರತ—ಪಾಕಿಸ್ತಾನ್ ಪ್ರಶ್ನೆಗಳೆಲ್ಲವೂ ಬಗೆಹರಿಯದೆ, ಭರವಸೆಕೊಡಲಾಗುವುದೂ ಸಾಧ್ಯವಿಲ್ಲ. ಹೇಗಿದ್ದರೂ ಪಾಕಿಸ್ತಾನಿಗಳ ಲಕ್ಷ್ಯವು ಅಧಿಕಪ್ರಸಂಗಗಳಿಗಿಂತ ಆತ್ಮರಕ್ಷಣೆಯ ಕಡೆಗೇನೇ ಈಗ ಬೀಳುತ್ತಿರುವುದು ಸ್ವಾಗತಾರ್ಹ ಸಂಗತಿ.

## ನೋಟೀಸು

ಚಂದಾ ಹಣವನ್ನು ಸಕಾಲದಲ್ಲಿ ಪಾವತಿ ಮಾಡದೆ ಬಾಕಿ ಮಾಡಿಕೊಂಡ ಚಂದಾದಾರರು ದಯಮಾಡಿ ಬೇಗನೆ ಚಂದಾ ಹಣವನ್ನು ರವಾನಿಸಬೇಕಾಗಿ ವಿನಂತಿ.

ಮೆನೇಜರ್.

# ವರುಷದೊಳಗಿನ-ಎರಡು ಗುರಿಗಳು

ಇನ್ನು ಒಂದು ವರುಷದೊಳಗೆ—1951 ನೇ ಇಸವಿಯೊಳಗೆ—ಭಾರತದ ಜನಸಾಮಾನ್ಯರು ಪ್ರತ್ಯಕ್ಷ ಭಾಗವಹಿಸಿಯೇ ಗಡಿಸೇರಿಸಬೇಕಾದ ಎರಡು ಮುಖ್ಯ ಸಂಗತಿಗಳು ಜರಗಲಿಕ್ಕಿವೆ. ಒಂದು ಸಾರ್ವತ್ರಿಕ ಮಹಾಚುನಾವಣೆ; ಮತ್ತೊಂದು ಆಹಾರ ಸ್ವಾವಲಂಬನೆ.

1951 ಮಧ್ಯ ಪೂರ್ವ ಭಾಗದಲ್ಲಿ ಹೊಸ ಘಟನೆಯನ್ವಯ ಪ್ರೌಢರ ಮತದಾನದಿಂದ, ಎಲ್ಲಾ ಪ್ರಾಂತಿಕ ಶಾಸನ ಸಭೆಗಳ ಮತ್ತು ಪಾರ್ಲಿಮೆಂಟಿನ ಚುನಾವಣೆಯಾಗುವದು. ಇದಕ್ಕಾಗಿ ಮತದಾರ ಪಟ್ಟಿ ತಯಾರೀ ಕಾರ್ಯವು ಈ ಮೊದಲೇ ಆರಂಭವಾಗಿದ್ದು, ಈಗ ಅದು ಬಹುಕೇಕವಾಗಿ ಪೂರ್ಣಗೊಳ್ಳುವುದರಲ್ಲಿದೆ. ಪಾರ್ಲಿಮೆಂಟು ಮತ್ತು ಪ್ರಾಂತಿಕ ಶಾಸನಸಭೆಗಳ ಸದಸ್ಯರ ಸಂಖ್ಯಾಮಾನ, ಮತದಾರ ಕ್ಷೇತ್ರಗಳು ಮತ್ತಿತರ ಆವಶ್ಯಕ ನಿಯಮ ನಿರ್ದೇಶಗಳನ್ನು ಒಳಗೊಂಡ ಚುನಾವಣಾ ಸಂಬಂಧದ ಮಸೂದೆಯು ಕಳೆದ ವಾರವೇ ಪಾರ್ಲಿಮೆಂಟಿನ ಮುಂದೆ ಬಂದಿದೆ.

ಮುಂದಿನ ಎಪ್ರಿಲ್ ಅಥವಾ ಮೇ ತಿಂಗಳಲ್ಲಿ, ಅರ್ಥಾತ್ ಇಂದಿಗೆ ಪೂರ್ಣ ಒಂದು ವರುಷವಾಗುವಾಗ, ಮಹಾ ಚುನಾವಣೆಗಳಾಗುವವೆಂಬುದು ಇಂದಿನ ನಿರೀಕ್ಷೆ; ಯುದ್ಧದಂತಹ ವಿಶೇಷ ಸಂದರ್ಭಗಳೊದಗದಿದ್ದಲ್ಲಿ, ನಿರ್ದಿಷ್ಟಾವಧಿಯಲ್ಲೇ ಚುನಾವಣೆ ಜರಗುವದು ಖಂಡಿತವೆನ್ನಬಹುದು. ಸ್ವತಂತ್ರ ಜನತಾ ರಾಜ್ಯ ಭಾರತದ ಪ್ರಥಮ ಮಹಾ ಚುನಾವಣೆಯ ಸಂಬಂಧವಾಗಿ, ಇಷ್ಟರಲ್ಲೇ ಯಾರ್ಯಾರ ತಲೆಯಲ್ಲಿ ಎಂತೆಂತಹ ಕಲ್ಪನೆಗಳು ಸುಳಿಯ ಹತ್ತಿರುವವೋ!

ಭಾವೀ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅದೃಷ್ಟ ಹೇಗೆ ನಿಂತೀತು, ಎಂಬ ಪ್ರಶ್ನೆಯಂತೂ ಈಗಲೇ ತುಸು ಬಲವಾಗಿ ಕೇಳಲ್ಪಡುತ್ತಿದೆ. ಕಾಂಗ್ರೆಸ್ ಆಡಳಿತೆಯಿಂದಾಗಿ ಎದ್ದಿರುವ ಅತೃಪ್ತಿಯು ದಸಯಿಂದಾಗಿ ಮುಂದಿನ ಚುನಾವಣೆಯಲ್ಲಿ ಖಂಡಿತವಾಗಿ ಮೇಲೆ ಬೀಳುವಂತಿಲ್ಲ, ಎಂಬ ಸ್ಪಷ್ಟ ತೀರ್ಮಾನಕ್ಕೆ ಬಂದಿರುವವರ ಸಂಖ್ಯೆಯೇನೂ ಕಡಿಮೆಯಿಲ್ಲ. ಆದರೆ ಇದು ಉದ್ವೇಗಾವೇಗಗಳ ಫಲರೂಪೀ ನಿರೀಕ್ಷೆ ಮಾತ್ರ ಹೊರತು, ಪರಿಸ್ಥಿತಿಯ ಸರಿಯಾದ ವಿಮರ್ಶೆಯ ನಂತರ ಹುಟ್ಟುವ ತೀರ್ಮಾನವಲ್ಲವೆಂಬುದು ಸ್ಪಷ್ಟವಿದೆ.

ಎಲ್ಲವನ್ನೂ ಸರಿಯಾಗಿ ತೂಗಿ ನೋಡುವಾಗ, ಹಿಂದಿನಷ್ಟು ಪ್ರಬಲ ಬಹುಮತದಿಂದಲ್ಲವಾದರೂ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವೇ ಗೆದ್ದು ಬರುವದು ಸಂಭವನೀಯವಾಗಿ ತೋರುತ್ತದೆ. ಕಾಂಗ್ರೆಸ್ಸಿನ ಇಂದಿನಷ್ಟೇ ನಿರ್ಜೀವಾವಸ್ಥೆಯಲ್ಲಿ ಇಲ್ಲ... [illegible] ದಿನ ಒಂದು ಚುನಾವಣೆಯ ಮಟ್ಟಿಗೆ ಅದರ ವಿಜಯದ 'ಗ್ಯಾರಂಟಿ' ಕೊಡಬಹುದು.

ಇದಕ್ಕೆ ಮುಖ್ಯಕಾರಣಗಳಿವು:—ಮೊದಲನೆಯದಾಗಿ ಕಾಂಗ್ರೆಸ್ ಆಡಳಿತೆಯಲ್ಲಿ ಮತ್ತು ಕಾಂಗ್ರೆಸಿನಲ್ಲಿ ಎಂತಹ ದೋಷ, ದೌರ್ಬಲ್ಯಗಳು ಕಂಡುಬಂದಿದ್ದರೂ, ಪರಿಚಯ, ಯೋಗ್ಯತೆಗಳಲ್ಲಿ ಕಾಂಗ್ರೆಸಿಗಿಂತ ಹೆಚ್ಚಿನದಾಗಲಿ, ಅಥವಾ ಕಾಂಗ್ರೆಸಿಗೆ ಸರಿಸಮವನ್ನಿಸುವ, ಇಲ್ಲವೇ ಕಾಂಗ್ರೆಸಿನ ಒತ್ತು, ಹಿಂಭಾಗದಲ್ಲಿ ನಿಲ್ಲಬಲ್ಲ ಬೇರೊಂದು ರಾಜಕೀಯ ಪಕ್ಷವೇ ಪ್ರಕೃತ ಭಾರತದಲ್ಲಿಲ್ಲ. ಎರಡನೆಯದಾಗಿ ಅಷ್ಟು ವರ್ಷಗಳ ಯಾತನೆಯಡಿಯಲ್ಲಿ ಕಾಂಗ್ರೆಸ್ ಆಡಳಿತೆಯನ್ನು ಎಷ್ಟೇ ಗೂ... ದೂ ಈ ಅನರ್ಥಗಳೆಲ್ಲವೂ ಕಾಂಗ್ರೆಸಿನ ನಿವಾರ್ಯಣಗಳೇನೂ ಆಗಿರದೆ, ವಿಶೇಷತಃ ಕಾಲದೋಷದಿಂದ ಹುಟ್ಟಿಕೊಂಡವುಗಳೆಂದು ಜನತೆಯ ಹೃದಯಾಂತರಾಳದಲ್ಲಿ ಅನುಭೂತಿಯೊಂದು ಹುದುಗಿಕೊಂಡಿದೆ. ಯಾರು ಅಧಿಕಾರದಲ್ಲಿದ್ದರೂ ಆಗುವ ದಿಸ್ಥಿ—ಇದಕ್ಕಿಂತಲೂ ಕಳಪೆಯೆಂಬ ಜ್ಞಾನೋಪದೇಶಗಳು ಟೀಕೆಗಳ ಬೆನ್ನು ಹಿಡಿದುಕೊಂಡು ಹೊರಡುತ್ತಿರುವುದನ್ನು ನೋಡಬಹುದು. ಮೂರನೆಯದಾಗಿ ಚುನಾವಣೆಯು ಸಮೀಪಿಸುತ್ತಿದೆನ್ನುವಾಗ ಕಾಂಗ್ರೆಸಿನ ಕಡೆಯಿಂದ ನಡೆಯಲಿರುವ ಪ್ರಚಾರವು, ಈ ವರೆಗೂ ಎಲ್ಲೆಲ್ಲೂ ಕೊಳಕು ಕೊಂಪೆ ಆಗಿ ಹರಡಿರುವ ದೂರು ಅಪವಾದನೆಗಳೆಲ್ಲವನ್ನೂ ಮಹಾ ಪ್ರವಾಹವಾಗಿ ಕೊಚ್ಚಿಕೊಂಡು ಹೋಗುವದೆಂಬುದನ್ನು ನಿರೀಕ್ಷಿಸಬೇಕು ನಹರ, ವಲ್ಲಭ ಯಿಗಳಂಥವರು ಎಂತಹ ಪ್ರಚಾರಕ್ಕಿಳಿದೆಂದರೆ, ಆದರಲ್ಲಾಗುವ ಪರಿಣಾಮಗಳನ್ನು ತಡೆಗಟ್ಟಬಲ್ಲ ಶಕ್ತಿಯಿಂದ ಭಾರತದಲ್ಲಿ ಬೇರಾರಿಗೂ ಯಾವುದಕ್ಕೂ ಇಲ್ಲವೆನ್ನಬಹುದು. ಚುನಾವಣಾ ಪ್ರಚಾರಕಲೆಯಲ್ಲಿ ಕಾಂಗ್ರೆಸಿಗರು ನಿಷ್ಣಾತರ ಮಟ್ಟ ಮೀರಿರೂ ಇಲ್ಲ; ಕಾಂಗ್ರೆಸಿಗರಿಗಿರುವ ಪ್ರಚಾರಾನುಕೂಲತೆಗಳು ಬೇರಾವ ಪಕ್ಷಕ್ಕೂ ಇಲ್ಲ.

ಹಿಂದಿನಾಚರಣೆಯ ಅಡ್ಡ ಹಾದಿಗಳಿಂದ ತಮ್ಮ ಕೈ ಬಾಯಿಗಳನ್ನು ತಾವೇ ಕಟ್ಟಿಹಾಕಿಕೊಳ್ಳುವ ಪ್ರಸಂಗವನ್ನು ಅಮೂಹಿಸಿದರು ಮಾಡದಿದ್ದರೆ, ಹಿಂದಿನ ಆಧಾರ... ಚುನಾವಣೆಯಲ್ಲಿ ಕಾಂಗ್ರೆಸಿಗರು ಅವರಿಗೆ ವಿಶೇಷ ಹೆದರವಂತಹ [illegible] ಇಂದು ಅಂತಹ [illegible] ತೆಯೇನಿಲ್ಲ.

ಎರಡು ಸ್ವಾತಂತ್ರ್ಯ ನಂತರ, ಇದುವರೆಗಿನ ಅವಧಿಯಲ್ಲಿ ಕಾಂಗ್ರೆಸಿನ ಪರ [illegible] ಮುಂಬರುವ ಚುನಾವಣೆಯಲ್ಲಿ ತೋರಬೇಕು; ಒಂದಿಷ್ಟು ಹಿಂದಿನ ಚುನಾವಣೆ ಕೆಲ್ಲದು ದೂರಕಿದ್ದಂತಹ ಪ್ರಚಂಡ ಬಹುಮತ ಹಿಂದಿನ ಚುನಾವಣೆಯಲ್ಲಿ ದೊರೆಯದೆ ಹೋಗಬಹುದು.

ಯಾವುದೇ ದರೊಂದು ಇದಿರು ಪಕ್ಷದವನಾಗಿ ನಿಂತು ಕಾಂಗ್ರೆಸ್ ಪಕ್ಷದವನನ್ನು ಸೋಲಿಸಲಾಗುವ ಸಂಯೋಗ ಬಹಳ ಕಡಿಮೆಯೆಂದು ತೋರುತ್ತಿದೆ. ಆದರೆ, ಯಾವ ಪಕ್ಷಕ್ಕೂ ಸೇರದೆ, ಜನಹಿತ ಸಾಧಕ ಧ್ಯೇಯ, ಧೋರಣೆಗಳನ್ನು ಸಾರುತ್ತಾ ಕಾಂಗ್ರೆಸಿಗರನ್ನು ಎದುರಿಸುವ 'ಸ್ವತಂತ್ರ'ರ ಅದೃಷ್ಟ ಒಳ್ಳೆಯದಾಗಬಹುದು. ರಾಜಕೀಯ ಪಕ್ಷಗಳ ಆವಶ್ಯಕತೆಯಿಲ್ಲದ ಜಿಲ್ಲಾ ಬೋರ್ಡು, ನಗರ ಸಭೆಗಳಂತಹ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಸ್ವತಂತ್ರ ಹುರಿಯಾಳುಗಳನ್ನು ಆರಿಸುವುದು ವಿಲಕ್ಷಣವಾಗಿ ತೋರುವುದಿಲ್ಲವಾದರೂ ರಾಜಕೀಯ ಪಕ್ಷ ಧರ್ಮವನ್ನೇ ಅವಲಂಬಿಸಿರುವ ಶಾಸನ ಸಭೆಗಳ ಮಟ್ಟಿಗೆ ಇಂತಹ ಕ್ರಿಕೆಟ್ ಸ್ವಾನುವೇನೇನೂ ಸಿಗಲಾರದು ಎದಿಲ್ಲ. ಸ್ವತಂತ್ರವಾಗಿ ನಿಲ್ಲಬಯಸುವವರು ಪ್ರತಿಷ್ಠಾವಂತರೇ—ಅಂತಹ ಪ್ರತಿಷ್ಠಾವಂತರಿಗೂ ಒಂದು ಜಿಲ್ಲೆ ಬೇಕೆನಿಸಿದರೆ, ಅವರು ತಾಗಿಸಿಕೊಳ್ಳುವುದು ಕಾಂಗ್ರೆಸ್ ಬಿಲ್ಲೆ ಮಾತ್ರ—ಆದ್ದರಿಂದ ಈ ವಿಧಾನವೂ ಕಾಂಗ್ರೆಸಿಗರಿಗೇ ಅನುಕೂಲವಾಗುವಂತಹದಿದೆ.

ಅಂತೂ, ಇದುವರೆಗಿನ ತುಲನಾತ್ಮಕ ಅಂದಾಜೆಂದರೆ, ಮುಂದಿನ ಮಹಾ ಚುನಾವಣೆಯಲ್ಲೂ ಮತ್ತೊಮ್ಮೆ ಕಾಂಗ್ರೆಸ್ಸೇ ಗೆಲ್ಲಬಹುದು. ಈ ವಿಜಯವೆಂಬುದು ಮಿಕ್ಕೆ ಪಕ್ಷಗಳೊಡನೆ ತುಲನೆಮಾಡುವ ಮಟ್ಟಿಗೆ ಮಾತ್ರ; ಗತಕಾಲದ ಕಾಂಗ್ರೆಸ್ ವಿಜಯಗಳೊಡನೆ, ಭಾವೀ ಚುನಾವಣಾ ವಿಜಯವನ್ನು ಹೋಲಿಸಿ ತೀರ್ಮಾನಿಸುವಾಗ ಕಾಂಗ್ರೆಸ್ ಸೋತಂತಾಗಬಹುದು.

ಆದರೆ, 'ಇನ್ನೂ ಒಂದು ವರುಷವಿರುವ ಕಾಲಗರ್ಭದಲ್ಲಿ ಏನೇನೆಲ್ಲಾ ಇವೆಯೋ ಯಾರುಬಲ್ಲರು?

ಒಂದು ವರುಷದೊಳಗಿನ ಮತ್ತೊಂದು ಮುಖ್ಯ ಸಂಗತಿ 'ಆಹಾರ ಸ್ವಾವಲಂಬನೆ' ಯ ಪ್ರತಿಜ್ಞೆ ಫಲಿಸೀತೇ ಎಂಬುದು ಇನ್ನೊಂದು ಮಹಾ ವಿಚಾರ.

ಈ ಗುರಿ ನಿಶ್ಚಿಸಲ್ಪಟ್ಟು, ಅದಕ್ಕನುಗುಣವಾದ ಯೋಜನೆ, ಯೋಜನೆಗಳ ಆರಂಭಿಸಿ ಎಷ್ಟೋ ಕಾಲವಾಗಿ ಒಂದೂವರೆ ವರುಷ ಕಳೆಯಿತು. ಈ ತನಕ ಸಾಗಿ ಬಂದ ರೀತಿಯಲ್ಲೇ ಕೂಡಿಯೂ ಹೆಜ್ಜೆಯೆಂದರೆ, ವಿಜಯದ ಸ್ಪಷ್ಟ ಭರವಸೆ ಕಾಣುವದಿಲ್ಲ.

ಅಧಿಕಾಹಾರೋತ್ಪಾದನೆಗಾಗಿ ಪ್ರಚಾರ ಮಾತ್ರವಲ್ಲ, ಪ್ರತ್ಯಕ್ಷ ಕಾರ್ಯಾಚರಣೆಗಳೂ ಕಂಡು ಬರುತ್ತಿವೆ. ಆದರೆನ್ನೂ ಮಾದಲು ಉದುರುವುದು ಎಷ್ಟೋ ಹೆಚ್ಚಿಗೆ—ಮಾಡಿರುವ ಮತ್ತು ಮಾಡಲಿಳಿದಿರುವ ಅಂಶ ಕಡಿಮೆ.

ಹೇಗಿದ್ದರೂ ಆಹಾರ ಸ್ವಾವಲಂಬನೆಯ ಸಿದ್ಧಿಗನುಗುಣವಾದ ಸಾಗುವಳ್ಳಿ ನೆಲ, ಜನ, ಜಲ, ಮತ್ತಿತರ ಅನುಕೂಲತೆಗಳೆಲ್ಲವೂ ಭಾರತದಲ್ಲಿವೆ; ಅವುಗಳನ್ನು ಸರಿಯಾಗಿ ಉಪಯೋಗಿಸಿ ಕೊಳ್ಳಲೂ ಈಗ ಉಳಿದಿರುವ ಅವಕಾಶವೂ ಸಾಕೆನ್ನಬಹುದು. ಆದ್ದರಿಂದ ಎಲ್ಲವೂ ಆದ್ದರಿಂದ ಎಲ್ಲವೂ ಆಗಬೇಕಾದುವಂತೆ ಆಗುತ್ತವಾದರೆ ಈ ಮಟ್ಟಿಗೆ ವಿಜಯ ಖಂಡಿತ.

ಮೇಲಿನ ಎರಡು ರಾಷ್ಟ್ರೀಯ ಮಹಾಯಜ್ಞಗಳ ಪೌರೋಹಿತ್ಯ ಮತ್ತು ಪೂರ್ಣ ಫಲದ ಸ್ವಾಹಾ ಜನತೆಯದೇ, ಎಂಬುದನ್ನು ಮರೆಯಬಾರದು. ಇನೆಂದರ ಮೂಲಕ ತಮ್ಮ ಮೇಲೆ ಬಿದ್ದಿರುವ ಹೊಣೆಗಾರಿಕೆ ಮತ್ತು ಕರ್ತವ್ಯ ಭಾರವನ್ನು ಅರಿತುಕೊಂಡು, ಸಾರ್ವಜನಿಕರು ಅವುಗಳನ್ನು ಜಯಶೀಲವಾಗಿ ನಿರ್ವಹಿಸಬೇಕಾದುದೇ ಇಲ್ಲಿ ಮುಖ್ಯ. ಇನ್ನು ಒಂದು ವರುಷವು ಆದರೆ ಈ ಎರಡು ಪರೀಕ್ಷೆಗಳಲ್ಲಿ ಭಾರತೀಯ ಜನತೆ ಪ್ರಥಮ ವರ್ಗದಲ್ಲಿ ಉತ್ತೀರ್ಣರಾಗುವರೋ—ಅಥವಾ ನಾಯೋಗ್ಯನೆನಿಸಿ, ಫೇಲರಾಗುವರೋ? [illegible]


**Wanted**

For the National High School Barkur (S. K.) from 1-6-50 Canarese knowing L. Ts or B. Ts (Mathematics & Science preferred) Scale Rs. 85-5-145+D. A.

Graduates may also apply. Pay Rs. 65+D. A.

Drawing Teacher-Scale Rs. 45-2-85+Dearness allowance at govt. rates.

Apply early to Correspondent
**National High School,**
Barkur, (S. K)

BARKUR 17-4-50



ಕನ್ನಡಿಗರೆಲ್ಲರ ಕಣ್ಮನ ಸೆಳೆದು ಪ್ರಸಿದ್ಧವಾದ

**ಮಧುವನ**

ಅಖಿಲ ಕರ್ನಾಟಕದ ಪ್ರಾತಿನಿಧಿಕ ಕಥಾಸಂಕಲನ

25 ಕತೆಗಳು — ಬೆಲೆ ರೂ 3 0 0

ಸಿಗುವ ಸ್ಥಳಗಳು:—

1 ಕಿರಿಯರ ಪ್ರಪಂಚ, ಉಡುಪಿ
2 ನವಭಾರತ ಬುಕ್ ಡಿಪೊ, ಉಡುಪಿ
3 ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.



ಪಂಚಾಯತ ಬೋರ್ಡು, ಗ್ರಾಮ ಕಮಿಟಿ, ಶಾಲಾ ಕಾಲೇಜು ಮೊದಲಾದುವುಗಳ

**ಲೈಬ್ರೆರಿಗಳಿಗೆ**

ಬೇಕಾಗುವ ಕರ್ನಾಟಕದ ಎಲ್ಲಾ ಭಾಗಗಳ ಕನ್ನಡ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ವಿಚಾರಿಸಿ:—

**ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ ನವಯುಗ ಪ್ರೆಸ್, ಉಡುಪಿ.**

## ಮಂಗಳೂರು

ಪತ್ತೆ ಇತ್ಯೈ ಕಂಕನಾಡಿ ಕೃಷ್ಣಲ ಮೋಟ ರ್ ಗ್ಯಾರೇಜಿನಲ್ಲಿ ವ್ಯವಸ್ಥಾಪಕನಾಗಿದ್ದ ಶ್ರೀ ಥೀ ಯ ಡೋರ್ ಕರ್ನಾಡ ಎಂಬ ಸುಮಾರು ೩೦ ವರ್ಷ ಪ್ರಾಯದ ಶವವು ದಿನಾಂಕ ೧೦ ರಂದು ಬೆಳಿಗ್ಗೆ ಇಲ್ಲಿಯ ಫಳ್ನೀರಿನ ಒಂದು ಬಾವಿಯಲ್ಲಿ ತೇಲಾಡುತ್ತಿದ್ದುದು ಕಂಡು ಬಂತು. ಇವರು ಸುಮಾರು ಸಮಯದಿಂದ ಕ್ಷಯರೋಗ ಪೀಡಿತರಾಗಿದ್ದು ಆತ್ಮಹತ್ಯೆ ಮಾಡಿಕೊಂಡರೆಂದು ತಿಳಿದಿದೆ.

ಸುಮಾರು ೪೫ ವರ್ಷ ಪ್ರಾಯದ ಬಂಟ್ಸ್ ಹಾಸ್ಟೆಲ್ ಬಳಿಯ ಸುಂದರೀಬಾಯಿ ಎಂಬ ಒಬ್ಬ ಹೆಂಗಸು ತಾ. ೫ರಂದು ತನ್ನ ಸೀರೆಗೆ ಬೆಂಕಿ ಇಟ್ಟುಕೊಂಡು ಮರುದಿನ ಸ್ಥಳೀಯ ಗೋಷನ್ ಆಸ್ಪತ್ರೆಯಲ್ಲಿ ಮೃತರಾದರೆಂದೂ ಇವರು ಕಠಿಣ ಉದರ ಶೂಲೆಯಿಂದ ನರಳುತ್ತಿದ್ದು ತಡೆಯಲಾಗದೆ ವಸ್ತ್ರಕ್ಕೆ ಬೆಂಕಿ ಕೊಟ್ಟುಕೊಂಡರೆಂದೂ ತಿಳಿದಿದೆ.

ಹೆಂಗುಸಿನ ಕೊಲೆ ಮಂಗಳೂರು ಪೇಟೆಗೆ ಆಗಾಗ್ಗೆ ಬಂದು ಚಿಲ್ಲರೆ ಬೆಲ್ಲ, ಕಾಯಿ ಪಲ್ಯ, ಅಕ್ಕಿ ಮೊದಲಾದ ಸಾಮಾನುಗಳನ್ನು ಮಾರಿ ಜೀವನ ನಡೆಸುತ್ತಿದ್ದ ಸುಮಾರು ೩೫ ವರ್ಷ ಪ್ರಾಯದ ಮೇರಿ ಮಾಸ್ ಎಂಬ ಬಜ್ಪೆ ಮೇರಿಮಜಲಿನ ಹೆಂಗುಸೊಂದು ಗುಡ್‌ಫ್ರೈಡೇಯಂದು ರಾತ್ರಿ ಮನೆಗೆ ಹಿಂ

### ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. No. 46/1950

ವಾದಿರು—ಶ್ಯಾಮರಾವ್ ಕೂಡಾ.

ಪ್ರತಿವಾದಿ— ಬಿ. ರಾಮರಾಯ ನ್ಯಾಕ, ಸೀತಾನ್ಯಾಕನವರ ಮಗ, ಕಚ್ಚೂರುಗ್ರಾಮದ ಬಾರ್ಕೂರು.

ಸದ್ರಿ ಪ್ರತಿವಾದಿಗೆ ಯೀ ಮೂಲ್ಯ ತಿಳಿಯ ಪಡಿಸುವ ಸಂಗ್ರೆ—

ಸದ್ರಿ ಪ್ರತಿವಾದಿಯು ತಾ. 19-5-1943 ರಂದು ಬರಕೊಟ್ಟ ಅಸಲಿ ಗೇಣಿ ಚೀಟಿ ಪ್ರಕಾರ ಒಹಾ ಗೇಣಿ ಬಾಕಿ ಬಗ್ಯೆ, ಅಸ್ಸಿಸ್ಮೆಂಟಿ ಒಗ್ಯೆ, ಖುಟ್ಟೆಳ್ಳಿ ಬಗ್ಯೆ ಸದರಿ ವಾದಿರು ಪ್ರತಿವಾದಿ ಮೇಲೆ ಸದ್ರಿ ದಾವಾ ಹಾಕಿರುವದ್ರಿಂದ ಆ ಕುರಿತು ನಿಮ್ಮ ದೇಸಿ ದಿದ್ರಿ ಉದಾಹರಣೆ ಇದ್ದಲ್ಲಿ ತಾರೀಖು 21-4-1950ನೇ ದಿವ್ಸ ಹಗಲು 11ಗಂಟೆಗೆ ಯೀ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು, ತಪ್ಪಿದಲ್ಲಿ ಯೇಕ ಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟು ಹುಕ್ಕುಂ ಪ್ರಕಾರ ಯೀ ಮೂಲ್ಯ ತಿಳಿಸೋಣಾಗುತ್ತದೆ.

**K. Raghunath Shenai,**

Pleader for Plaintiffs.

Coondapoor 7-4-1950


### ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

REGD

ಎಲ್ಲಾ ಅಂಗಡಿ ಪೇಟೆಗಳಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.


ಸಿರುಗುತ್ತಿದ್ದಾಗ ದಾರಿಯಲ್ಲಿ ಯಾರೋ ಅವಳನ್ನು ಕೊಲೆಮಾಡಲ್ಪಟ್ಟಳೆಂದೂ ನ ಶವ ಇವಳ ಕಾಲು ಪವನಿಸ ಒಂದ ತೋಗಾದ ಜ್ಯನಾ ಕೊಲೆಗಳು ಜೋಳ್ ನಗದಿ ಹಣವು ಕಾಣೆ ಯಾಗಿವೆ ಕೊಲೆಗಾರ ಇನ್ನೂ ಪತ್ತೆಯಾಗಿಲ್ಲ. ಪೋಲಿಸ್ ತನಿಖೆ ನಡೆಯುತ್ತಿದೆ

**ಹಿಂದೀ ಪ್ರಚಾರದ ವಿದ್ಯಾಲಯ:** ತಾ. ೨೫-೪-೫೦ರಿಂದ ಮಂಗಳೂರಿನಲ್ಲಿ ಹಿಂದೀ ವಿಶಾರದ ವಿದ್ಯಾಲಯವು ತೆರೆಯಲ್ಪಡುವುದು.

ಈ ವಿದ್ಯಾಲಯಕ್ಕೆ ಈ ಮೊದಲು 'ಪ್ರವೇಶಿಕಾ' ಪರೀಕ್ಷೆಗೆ ಕುಳಿತು ಅನುತ್ತೀರ್ಣರಾದವರನ್ನು, ಕಳೆದ ಫೆಬ್ರವರಿ 'ಪ್ರವೇಶಿಕಾ' ಪರೀಕ್ಷೆಗೆ ಕುಳಿತುಕೊಂಡವರನ್ನೂ ಎಸ್. ಎಸ್. ಎಲ್. ಸಿ ಮತ್ತು 'ರಾಷ್ಟ್ರಭಾಷಾ' ಪಾಸಾದವರನ್ನು ಸೇರಿಸಿಕೊಳ್ಳಲಾಗುವುದು. ಸೇರಲಿಚ್ಛಿಸುವ ವಿದ್ಯಾರ್ಥಿಗಳ ಪ್ರಾಯವು ೧೭ ವರ್ಷಕ್ಕೆ ಕಡಿಮೆಯಾಗಿರಬಾರದು. ಈ ಮೊದಲು 'ಪ್ರವೇಶಿಕಾ' ಪಾಸಾಗದವರು ಬರುವ ಆಗೋಸ್ತು ತಿಂಗಳ 'ಪ್ರವೇಶಿಕಾ' ಪರೀಕ್ಷೆಗೆ ಕುಳಿತುಕೊಳ್ಳಬೇಕಾಗುವುದು ಅದರಲ್ಲಿ ಪಾಸಾದವರು ಮಾತ್ರ ಬರುವ ೧೯೫೧ನೇ ಫೆಬ್ರವರಿ 'ವಿಶಾರದ' ಪರೀಕ್ಷೆಗೆ ಕುಳಿತುಕೊಳ್ಳಲು ಅರ್ಹರಾಗುವರು. ವಿದ್ಯಾಲಯಕ್ಕೆ ಸೇರಲಿಚ್ಛಿಸುವವರು ತಾ ೨೦ರ ಒಳಗತಲಪುವಂತೆ ತಮ್ಮ ಅರ್ಜಿಗಳನ್ನು ಕೆಳಗಿನ ವಿಳಾಸಕ್ಕೆ ಕಳುಹಿಸತಕ್ಕದ್ದು. ಅರ್ಜಿ ಫಾರ್ಮು ಗಳು ಕಾರ್ಯದರ್ಶಿ, ಮಂಗಳೂರು ಪ್ರಾದೇಶಿಕ ಹಿಂದುಸ್ಥಾನೀ ಪ್ರಚಾರ ಸಮಿತಿ, ಕೊಡಿಯಾಲಬೈಲು, ಮಂಗಳೂರು ಇಲ್ಲಿ ಸಿಕ್ಕುವುವು—ಎಂದು ಸಂಚಾಲಕರು ತಿಳಿಸುತ್ತಾರೆ.

## ಉಡುಪಿ

**ತಾಲೂಕು ಆಹಾರ ಸಮಿತಿ ಸಭೆಯು** ಕಳೆದ ಶನಿವಾರ ಸಂಜೆ ತಾಲೂಕು ಕಚೇರಿಯಲ್ಲಿ ಸಬ್ ಕಲೆಕ್ಟರ್ ಜನಾಬ್ ಎಸ್ ಅಬ್ದುಲ್ ರಹಿಮಾನ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಅವಲಕ್ಕಿ, ಅರಳು ತಯಾರಿಕೆ ಬಗ್ಗೆ ಜಾಸ್ತಿ ಭತ್ತ ಒದಗಿಸುವಂತೆ ಜಿಲ್ಲಾ ಕಲೆಕ್ಟರರನ್ನು ಕೇಳಿಕೊಳ್ಳುವ ನಿರ್ಣಯವಾಯಿತು.

**ಸ್ಕೂಲ್ ಡೇ ಸಮಾರಂಭ** ಪಣಿಯಾಡಿ ಎಲಿಮೆಂಟರಿ ಶಾಲೆಯ ವರ್ಧಂತಿ ಸಮಾರಂಭವು ಕಳೆದ ಆದಿತ್ಯವಾರ ಸಂಜೆ ಶ್ರೀ ಪೇಜಾವರ ಮಠದ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೆನೇಜರ್ ಶ್ರೀ ಕೆ. ಜಗನ್ನಾಥ ನಾಯ್ಕರು ಸ್ವಾಗತ ಭಾಷಣ ವಿತ್ತ ನಂತರ ಶಾಲಾ ಮುಖ್ಯೋಪಾಧ್ಯಾಯರು ವರದಿ ವಾಚನ ಮಾಡಿದರು. ಬಹುಮಾನ ವಿತರಣೆ, ಶಾಲಾ ಮಕ್ಕಳ ವಿವಿಧ ವಿನೋದಾವಳಿಗಳಾದ ನಂತರ ಸ್ಕೂಲ್ ಡೇ ಸಮಾರಂಭವು ಕೊನೆಗೊಂಡಿತು.

### ದಕ್ಷಿಣ ಕನ್ನಡ

ಪೆರ್ಡೂರು ೨-೪-೫೦ರಲ್ಲು ಉಡುಪಿ ತಾಲೂಕು ಮರಾಠೆ ಸಮಾಜದ ೩ನೇ ಸಭೆಯು ವಕೀಲ್. ಶ್ರೀ ಗೋಪಾಲಪ್ಪಗಳವರ ಕಟ್ಟಡದಲ್ಲಿ ಸ್ಥಳೀಯ ಬೋರ್ಡು ಶಾಲಾ ಅಧ್ಯಾಪಕರಾದ ಶ್ರೀ. ಎಚ್. ಹಿರಿಯಣ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಗೆ ಸುಮಾರು 250 ಮಂದಿ ಸಭಿಕರು ಹಾಜರಿದ್ದರು. ಈ ಸಮಾಜದ ಹಿಂದಿನ ಸ್ಥಿತಿಯನ್ನೂ, ಈಗಿನ ಸ್ಥಿತಿಯನ್ನೂ, ಇದರ ಸಂಘಟನೆಯ ದಾರಿಯನ್ನೂ ಕುರಿತು ಅಲೆವೂರು ವಾಸುದೇವ ಪ್ರಭುಗಳು ಮಾತನಾಡಿದ ಬಳಿಕ ಲೇಬರ್ ರವಿನ್ಯೂ ಇನೆಸ್ಪೆಕ್ಟರಾದ ಶ್ರೀ. ಮಹಾಬಲ ನಾಯಕ್ ಮತ್ತು ಪುತ್ತೂರು ಬೋರ್ಡ್ ಹೈಸ್ಕೂಲಿನ ಅಧ್ಯಾಪಕರಾದ ಶ್ರೀ. ಪಿ. ರಂಗ ನಾಯಕ್ ಇವರು ಮಾತನಾಡಿದರು, ಪುತ್ತೂರು ಮಹಾಸಭೆಯ ನಿರ್ಣಯವನ್ನು ಶ್ರೀ ರಂಗ ನಾಯಕರು ಓದಿ ಹೇಳಿದರು. ಉಡುಪಿಯಿಂದ ಜಿಲ್ಲಾ ಸಂಘದ ಆಡಳಿತ ಕಮಿಟಿಗೆ 4 ಮಂದಿ ಸದಸ್ಯರನ್ನು ಚುನಾಯಿಸಲಾಯಿತು. ತಾಲೂಕು ಸಬ್ ಕಮಿಟಿಗೆ ಪ್ರತ್ಯೇಕ 12 ಮಂದಿ ಸದಸ್ಯರ ಚುನಾವಣೆಯಾಯಿತು. ಅಧ್ಯಕ್ಷರು ಸಂದರ್ಭೋಚಿತ ಭಾಷಣ ಮಾಡಿದರು. ಸಭೆಯಲ್ಲಿ ಈ ಕೆಳಗಿನ ಗೊತ್ತುವಳಿಗಳು ಸ್ವೀಕರಿಸಲಾಯಿತು.

ಪೆರ್ಡೂರು ಗ್ರಾಮದ ಪರಿಸರದಲ್ಲಿ ಸುಮಾರು 200ಕ್ಕೂ ಮಿಕ್ಕಿದ ಮರಾಠಿ ಮಕ್ಕಳು ಅವಿದ್ಯಾವಂತರಾಗಿರುವುದರಿಂದ ಜಾತಿಯ ಉದ್ಧಾರದ ಬಗ್ಗೆ ಲೇಬರ್ ಡಿಪಾರ್ಟ್‌ಮೆಂಟಿನಿಂದ ಸಿಗತಕ್ಕ ಎಲ್ಲಾ ಸಹಾಯವನ್ನು ಪಡೆಯುವರೇ ಲೇಬರ್ ಡಿಪಾರ್ಟ್‌ಮೆಂಟಿನಿಂದ ಒಂದು ಹರಿಜನ ಉದ್ಧಾರಕ ಶಾಲೆಯೊಂದನ್ನು ತೆರೆಯುವಂತೆ ಸರಕಾರವನ್ನು ಕೇಳಿಕೊಳ್ಳುವುದು. ಧನ್ಯವಾದ ಸಮರ್ಪಣೆಯಾದ ನಂತರ ಅಂದಿನ ಸಭೆಯು ಮುಕ್ತಾಯ ಗೊಂಡಿತು.

ಸುಬ್ರಹ್ಮಣ್ಯ: ಇಲ್ಲಿಯ ಶ್ರೀ. ಸಂಪುಟ ನರಸಿಂಹಸ್ವಾಮಿ ಮಠದಲ್ಲಿ ನರಸಿಂಹ ಜಯಂತಿ ಮಹೋತ್ಸವವು ಇದೇ ತಾ. 29ರಲ್ಲು ಆರಂಭವಾಗಿ ಮೇ ತಿಂಗಳ ತಾ. 3ರಲ್ಲು ಅವಭೃತೋತ್ಸವ, ಸಂಗೀತ ಪೂಜಾದಿ ವಿವಿಧ ಕಾರ್ಯಕ್ರಮಗಳಿಂದ ಜರಗಲಿರುವುದು.

ಬೆಳ್ತಿಗೆ ಅಕ್ಕಿ ಈಗೀಗ ವಾರಗಳಿಂದ ಉಡುಪಿಯಲ್ಲಿ ಜನತೆಗೆ ಸಿಕ್ಕುವುದಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಬೇಗನೆ ವ್ಯವಸ್ಥೆ ಮಾಡಬೇಕಾಗಿದೆ. ಸೌರಮಾನ ಯುಗಾದಿ ದಿವಸ ಆನಂದ ಪಡುವ ಬದಲು ಎಷ್ಟೋ ಮಾತೃರು ಕಣ್ಣೀರು ಸುರಿಸುವ ಪ್ರಸಂಗ ಬಂದಿತ್ತು, ಸೀಮಾ ಅಂಗಡಿಗಳಲ್ಲಿ ಬೆಳ್ತಿಗೆ ಅಕ್ಕಿ ಯಿಲ್ಲದಿದ್ದುದರಿಂದ.


"ಬೇರೆ ಶಾಸ್ತ್ರಗಳನ್ನೆಷ್ಟೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

## ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು—ದಿ। ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವು ಮಾತುಗಾರಿಕೆಯ ಮಾತುಗಳ ರೂಪದಲ್ಲೀಗ ಛಟ್ಟಿಯಾಗಿ ಎದ್ದು ಕಾಣುವುದು.

**400ಕ್ಕೂ ಮಿಕ್ಕಿ ಪುಟಗಳು! ಬೆಲೆ 0—12—0.**

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

**ನವಯುಗ ಪ್ರೆಸ್, ಉಡುಪಿ, ದ. ಕನ್ನಡ.**

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.


ಅಜೆಕಾರು: ಇಲ್ಲಿಯ ಸಹಕಾರ ಸೊಸೈಟಿಯ ಮಹಾ ಸಭೆಯು ಇನ್ಸ್‌ಪೆಕ್ಟರ್ ಶ್ರೀ ಸಂಜೀವ ಆಚಾರ್ಯರ ಸಮಕ್ಷಮ ತಾ. 9-4-50ರಲ್ಲು ಜರಗಿ, 48-49ನೇ ಸಾಲಿನ ಪ್ರಗತಿಪರ ಆಡಿಟ್‌ರಿಪೋರ್ಟು ನಿಬಂಧನೆಗಳ ಕೆಲವಂಶ ತಿದ್ದುಪಡಿ, ಡೈರೆಕ್ಟರ ಚುನಾವಣೆ, ಶೇರುದಾರರ ಪಾಲು ಮುನಾಫ ಹಂಚೋಣ ಇತ್ಯಾದಿ ಕಾರ್ಯಕ್ರಮಗಳಿಂದ ನೆರವೇರಿತು.

ಕಳೆದ ವರ್ಷ ನೂತನವಾಗಿ ತೆರೆಯಲ್ಪಟ್ಟ ಸ್ಥಳೀಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲಾ ವೆತ್ತವರ ಸಭೆಯು ಕಾರ್ಕಳ ರೇಂಜಿನ ಶಾಲಾ ಡಿ. ಇ. ರಾದ ಶ್ರೀ. ಎಚ್. ಮುಕ, ಬಿ. ಎ. ಎಲ್. ಟಿಯವರ ಅಧ್ಯಕ್ಷತೆಯಲ್ಲಿ ಜರಗಿ, ಭಾಷಣ ಮತ್ತು ಮಕ್ಕಳ ವಿವಿಧ ವಿನೋದಾವಳಿಗಳು ಪ್ರದರ್ಶಿಸಲ್ಪಟ್ಟವು.

### ನೋಟೀಸು

ಉಡುಪಿ ಡಿ. ಮು ಕೋರ್ಟಿನಲ್ಲಿ

S. C. No 24/1950

ಅನಂತಪ್ಪ ಮ ಹೆಗಡೆ —ವಾದಿ.

ಮತ್ತು

ಕುಡ್ಪ ಮುಕಾರಿ, ಗುರುವ ಮುಕಾರಿ ಮಗ, ಉಡುಪಿ ತಾಲ್ಲೂಕು ಪುತ್ತೂರು ಗ್ರಾಮದಲ್ಲಿರುವವ —ಪ್ರತಿವಾದಿ.

ಇವರೊಳಗೆ

ಪ್ರತಿವಾದಿಯು ವಾದಿಗೆ ಬರಕೊಟ್ಟ ಟಮಾಂಡು ನೋಟು ಮೇರೆಗೆ ಪ್ರತಿವಾದಿಯಿಂದ ವಾದಿಗೆ ಬರಾ ಅಸಲು ಬಡ್ಡಿ ರೂಪಾಯಿ 50-12-0ನ್ನು ಬರಮಾಡಿಕೊಳ್ಳುವರೆ ವಾದಿ ದಾಕಲ್ಮಾಡಿದ ಮೇಲಿನ ದಾವೆಯು ತಾರೀಕು 21-4-1950ಕ್ಕೆ ತಖ್ತಗೆ ಯಿಟ್ಟಿದೆ, ಆ ಕುರಿತು ಆಕ್ಷೇಪಯಿದ್ರೆ ಸದ್ರಿದಿವ್ಸ 11 ಗಂಟೆಗೆ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

ಉಡುಪಿ
ತಾ. 15-4-50 } **B. S. Hegde,** ವಾದಿಕಡೆ ವಕೀಲ್

### Notice

ಉಡುಪಿ ಡಿ. ಮು. ಕೋರ್ಟಿನಲ್ಲಿ.

E. P. No. 111 of 1950

in

O. S. No. 418 of 47.

ಅಂಮಾಜಿ ಹೆಗ್ಗಡ್ತಿ ಕೂಡಾ. ಅರ್ಜಿದಾರರು

ಮತ್ತು

ಚಂದಯ್ಯ ಹೆಗ್ಗಡೆ, ಕೊಲ್ಲು ಹೆಗ್ಗಡ್ತಿಯರ ಮಗ—ಉಡುಪಿ ತಾಲ್ಲೂಕು ಕುಕ್ಕೆ ಹಳ್ಳಿ ಗ್ರಾಮದಲ್ಲಿ ಯಿರುವವ— ಯೆದ್ರಿ

ಯಿವರೊಡನೆ

ಯೀ ಕೋರ್ಟು O. S. No. 527 of 1942ನೇ ದಾವೆಯಲ್ಲಿ ಯೆದ್ರಿಯ ಕುಟುಂಬದ ಬಾಬ್ತು ಸ್ತಿರಾಸ್ತಿಗಳಿಗೆ ನೇಮಕ ಪಟ್ಟ ರಿಸೀವರರು ಕೋರ್ಟು ಡಿಪೋಜಿಟು ಮಾಡಿದ ಆಯಿವೇಜುಗಳನ್ನು ಮೇಲ್ಕಂಡ ಡಿಕ್ರಿಯ ಸಾಲಕ್ಕೆ ಅರ್ಜಿದಾರರು ಜಪ್ತಿ ಮಾಡಿಸಿರುವದರಿಂದ ಸದ್ರಿ ಆಯಿವೇಜು ಕೋರ್ಟಿನವರು ಮತ್ತೊಂದು ಹುಕುಂ ಕೊಡುವ ತನಕ ವಿಕ್ರಯದ ಮೂಲವಾಗಿ ದಾನದ ಮೂಲವಾಗಿ ಯಾ ಅನ್ಯಥಾ ಪರಭಾರೆ ಮಾಡಲು ಕೂಡದೆಂದು ಸದ್ರಿ ಯೆದ್ರಿಯಾದ ನೀವು ನಿರ್ಬಂಧವಾಗಿ ಆತಂಕಿಸಲ್ಪಡತಕ್ಕದ್ದು. ಮತ್ತು ಇದರಿಂದ ನೀವು ಆತಂಕಿಸಲ್ಪಟ್ಟಿದ್ದೀರಿ. ಮತ್ತು ಅದನ್ನು ಖರೀದಿ ಯಾ ದಾನದ ಮೂಲಕ ಯಾ ಅನ್ಯಥಾ ತೆಗೆದುಕೊಳ್ಳಕೂಡದೆಂದು ಯೆಲ್ಲವರೂ ಆತಂಕಿಸಲ್ಪಡತಕ್ಕದ್ದು ಮತ್ತು ಯಿದರಿಂದ ಆತಂಕಿಸಲ್ಪಟ್ಟಿರುತ್ತಾರೆಂತ್ಲೂ ವ, ಮೇಲ್ಕಂಡ ಅರ್ಜಿಯು ತಾ. 10-6-50 ಕ್ಕೆ ತಖ್ತಗೆ ಯಿಟ್ಟಿರುತ್ತದೆಂತ್ಲೂ ಈ ಮೂಲ್ಕ ತಿಳಿಸೋಣಾಗಿಯದೆ.

**K. J. Ballal.** B.A.,L.L.B.,

Vakil for Petitioner.

Udipi. Dated 17-4-50.

# ಮಂಗಳೂರು ಜಿಲ್ಲಾ ಸಮಾಚಾರ

**ರೈಲು ಸಮಯದಲ್ಲಿ:-** ಇದೇ ಎಪ್ರಿಲ್ ತಾ. ೧೫ರಿಂದ ಕೆಲವು ಬದಲಾವಣೆಗಳಾಗಿವೆ. ಮಂಗಳೂರು ಎಕ್ಸ್‌ಪ್ರೆಸ್ ಗಾಡಿಯು ಬೆಳಗ್ಗೆ ೮-೪೫ಕ್ಕೆ ಮಂಗಳೂರಿಂದ ಹೊರಟು ಸಂಜೆ ೫-೩೫ಕ್ಕೆ ಇಲ್ಲಿಗೆ ತಲಪುವುದು, ಮಲಬಾರ್ ಎಕ್ಸ್‌ಪ್ರೆಸ್ (ಇದು ಶೊರನೂರು ವರೆಗೆ ಮಾತ್ರ ಹೋಗುವುದು) ಅಪರಾಹ್ನ ೧-೫೫ಕ್ಕೆ ಹೊರಟು ಮಧ್ಯಾಹ್ನ ೧೨-೪೫ಕ್ಕೆ ಇಲ್ಲಿಗೆ ತಲಪುವುದು. ಜೋಲಾರ್ ಪೇಟೆ ಪೆಸೆಂಜರು ಸಾಯಂ,೬-೧೦ಕ್ಕೆ ಹೊರಟು ಬೆಳಗ್ಗೆ ೯-೧೫ಕ್ಕೆ ಇಲ್ಲಿಗೆ ತಲಪುವುದು. ಕಲ್ಲಿಕೋಟೆ ಪೆಸೆಂಜರು ಬೆಳಗ್ಗೆ ೧೦-೪೦ಕ್ಕೆ ಇಲ್ಲಿಂದ ಹೊರಟು ಸಂಜೆ ೩ ಗಂಟೆಗೆ ಇಲ್ಲಿಗೆ ತಲಪುವುದು, ಶೊರ್ನೂರು ಪೆಸೆಂಜರು ಬೆಳಗ್ಗೆ ೪ ಗಂಟೆಗೆ ಹೊರಟು ರಾತ್ರಿ ೧೦-೧೦ಕ್ಕೆ ಇಲ್ಲಿಗೆ ತಲಪುವುದು.

**ಜಿಲ್ಲಾ ಬೋರ್ಡಿನ ಸಭೆಯೊಂದು** ೨೭-೪ರಂದು ಮಂಗಳೂರಿನಲ್ಲಿ ಬೋರ್ಡ್ ಆಫೀಸಿನಲ್ಲಿ ಜರಗುವುದು

**ವಯಸ್ಕ ಸ್ತ್ರೀಯರ ವಿದ್ಯಾಭ್ಯಾಸ**ಕ್ಕಾಗಿ ಮಂಗಳೂರಿನ ಹೆಮ್ಮಕ್ಕಳ ಸೆಕೆಂಡರಿ ಟ್ರೈನಿಂಗ್ ಶಾಲೆಯಲ್ಲಿ ಶಿಕ್ಷಣ ಕೇಂದ್ರ ಒಂದು ತಾ. ೧೪ರಂದು ತೆರೆಯಲ್ಪಟ್ಟಿತು. ಜಿಲ್ಲಾ ಕಲೆಕ್ಟರರು ಅಧ್ಯಕ್ಷತೆ ವಹಿಸಿದ್ದರು, ಜಿಲ್ಲಾ ವಿದ್ಯಾಧಿಕಾರಿ ಶ್ರೀ ಎಚ್. ರಾಮರಾಯರು ಉದ್ಘಾಟನೆಯನ್ನು ನೆರವೇರಿಸಿದರು.

**ಜಿಲ್ಲೆಯ ಮೋಟಾರ್ ಕೆಲಸಗಾರರು** ಇನ್ನೊಂದು ಮುಷ್ಕರದ ತಯಾರಿ ನಡೆಸಿದ್ದಾರೆಂಬ ವಾರ್ತೆಯನ್ನೂ, ಕಳೆದ ಮುಷ್ಕರದಿಂದಾಗಿ ಕೆಲಸಗಾರರಲ್ಲಿ ಹಾಗೂ ಮಾಲಕರಲ್ಲಿ ಉಂಟಾದ ಮನಸ್ತಾಪಗಳನ್ನೂ, ಪರಿಶೀಲಿಸುವುದಕ್ಕಾಗಿ ದ. ಕ. ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ದಿನಾಂಕ ೬ರಂದು ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಕೆ. ಕೆ. ಶೆಟ್ಟಿಯವರೊಂದು ಮಹಾಜನರ ಸಭೆ ಕರೆದಿದ್ದರು. ಈ ಸಭೆಗೆ ಕೆಲಸಗಾರರ ಮತ್ತು ಮಾಲಿಕರ ಪ್ರತಿನಿಧಿಗಳಲ್ಲದೆ ಮಹಾಜನರ ಪ್ರತಿನಿಧಿಗಳೂ ಬಂದಿದ್ದರು.

ಸಭಾರಂಭದಲ್ಲಿ ವಕೀಲ್ ಶ್ರೀ. ಕೆ. ಆರ್. ಕಾರಂತರವರನ್ನು ಸಭಾಧ್ಯಕ್ಷರನ್ನಾಗಿ ಆರಿಸಲಾಯಿತು. ಆ ಮೇಲೆ ಶ್ರೀ. ಎಂ. ಎಸ್. ರಾಮಕೃಷ್ಣರಾಯರು ಕಳೆದ ಮುಷ್ಕರದ ಒಪ್ಪಂದದ ಬಳಿಕ ಒಪ್ಪಂದದ ಹೆಸರಿನಲ್ಲೇ ಕೆಲಸಗಾರರಿಗೆ ಅನ್ಯಾಯವಾಯಿತೆಂದು ಹೇಳಿ, ಕೆಲಸಗಾರರನ್ನು ಕೆಲಸಕ್ಕೆ ಸೇರಿಸುವಲ್ಲಿ ಆದ ವಿಳಂಬ, ಅದರಿಂದ ಮಜೂರರಿಗಾದ ತೊಂದರೆ, ಮುರೋಳಿ ವರ್ಕ್ ಶಾಪಿನಲ್ಲಿ ಕೆಲಸಗಾರರಿಗೆ ಹೊಡೆದ ವಿಚಾರ, ಇತ್ಯಾದಿಗಳನ್ನೂ ತಮ್ಮ ಕೇಳಿಕೆಗಳನ್ನೂ ಸಭೆಯ ಮುಂದಿಟ್ಟರು.

ಮಾಲಕರ ಪರವಾಗಿ ಶ್ರೀ ವಿ. ಎಸ್. ಕುಡ್ವರು ಮಾತನಾಡುತ್ತಾ ಮಾಲಕರ ವರ್ತನೆಯು ನ್ಯಾಯವೆಂದೂ, ಒಪ್ಪಂದಕ್ಕೆ ಅನುಗುಣವಾಗಿಯೇ ಆಗಿದೆಯೆಂದೂ ತಿಳಿಸಿ, ಮಜೂರರ ಕೇಳಿಕೆಗಳನ್ನು ಮಾನ್ಯ ಮಾಡುವುದು ಅಸಾಧ್ಯವೆಂದರು.

ಶ್ರೀಗಳಾದ ಕೆ. ಆರ್. ಕಾರಂತರು ಮತ್ತು ಕೆ. ಕೆ. ಶೆಟ್ಟಿಯವರು ಮಾಲಕರ ಮತ್ತು ಮಜೂರರ ದೋಷಗಳನ್ನೂ ಅವರು ಹೊಂದಿಕೊಂಡು ಮುನ್ನಡೆವ ಆವಶ್ಯಕತೆಯನ್ನೂ ತಿಳಿಸಿದರು. ಅಧ್ಯಕ್ಷರು ಕೂಡಾ ಮಜೂರರಲ್ಲಿ ತಪ್ಪಿದ್ದರೂ ಮಾಲಿಕರು ಕ್ಷಮಿಸಿ ಒಪ್ಪಂದದಿಂದಿರಬೇಕೆಂದು ಸೂಚಿಸಿದರು.

ಆದರೆ ಮಜೂರರ ಕೇಳಿಕೆಗಳನ್ನು ಮಾನ್ಯ ಮಾಡಲು ಮಾಲಕರಿಗೆ ಅಸಾಧ್ಯವಾದ್ದರಿಂದ ಈ ಸಭೆಯ ಫಲವಾಗಿ ರಚಿಸಲ್ಪಡಬೇಕಾಗಿದ್ದ ಸಮಿತಿಯು ರಚಿಸಲ್ಪಡದೆ, ಯಾವ ನಿರ್ಣಯವೂ ಆಗದೆ ಸಭೆಯು ಮುಕ್ತಾಯವಾಯಿತು.

**ಮಿಲಿಟರಿ ಟ್ರೈನಿಂಗ್ ಸೆಂಟರುಗಳಲ್ಲಿ** ಕ್ಲಾರ್ಕ್ ಮತ್ತು ಇತರ "ಟೆಕ್ನಿಕಲ್" ಉದ್ಯೋಗಗಳಿಗೆ II ಫೋರಮ್ ಕಲಿತ, ೧೭-೧೫ ವರ್ಷ ಪ್ರಾಯದ ಯುವಕರು ಮತ್ತು ಎಸ್. ಎಸ್. ಎಲ್. ಸಿ. ತೇರ್ಗಡೆ ಹೊಂದಿದ ಯುವಕರು ಕೂಡಾ ಬೇಕಾದ ಕಾರಣ ಈ ಜನಾವಣ ಬಗ್ಗೆ ಚೀಫ್ ರಿಕ್ರೂಟಿಂಗ್ ಆಫೀಸರರು ಮತ್ತು ಎಕ್ಸ್ಟ್ರಾ ಅಸಿಸ್ಟೆಂಟ್ ರಿಕ್ರೂಟಿಂಗ್ ಆಫೀಸರರು ಈ ಜಿಲ್ಲೆಯಲ್ಲಿ ಕೆಳಗೆ ಕಾಣಿಸಿದ ಸ್ಥಳಗಳಲ್ಲಿ ಮೊಕ್ಕಾಂ ಮಾಡುವರು. ಉಮೇದ್ವಾರರು ಈ ಆಫೀಸರರ ಮುಂದೆ ಹಾಜರಾಗಬಹುದಾಗಿದೆ

ತಾ. ೨೩-೪ ರಿಂದ ಮಡಿಕೇರಿಯಿಂದ ಮಂಗಳೂರಿಗೆ ಆಗಮಿಸಿ ೨೪ ೨೫ ಮಂಗಳೂರಿನಲ್ಲಿ ಮೊಕ್ಕಾಂ, ೨೬, ಉಡುಪಿ. ೨೭ ಪುತ್ತೂರಿನಲ್ಲಿ ಮೊಕ್ಕಾಂ

**ಪಾಕಿಸ್ತಾನದಿಂದ ಸ್ಥಾನಭ್ರಷ್ಟನಾ**ಗಿ ಬಂದಿದ್ದು ಮಂಗಳೂರಲ್ಲಿ ಸರಕಾರದಿಂದ ಸಾಲಪಡೆದು ಹಸುಗೆ ಅಂಗಡಿಯನ್ನು ತೆರೆದಿದ್ದ ಶರಣಾರ್ಥಿಯೊಬ್ಬನ ಮನೆಯಿಂದ ಆತನ ೧೩ ವರ್ಷದ ಮಗನೂ, ಹಣದ ಪೆಟ್ಟಿಗೆಯೊಂದೂ ಕಾಣೆಯಾದುದರಿಂದ ಆತನು ಪೋಲೀಸರಿಗೆ ತಿಳಿಸಲು, ಹುಡುಗನನ್ನು ಕಲ್ಲಿಕೋಟೆಯಲ್ಲಿ ಸೆರೆಹಿಡಿಯಲಾಯಿತು. ಆತನ ಬಳಿಯಲ್ಲಿ ಹಣವಿರಲಿಲ್ಲ.

**ವಸಂತೋತ್ಸವ:** ಮಂಗಳೂರಿನ ಬೆಸೆಂಟ್ ಬಾಲಿಕಾ ಪಾಠಶಾಲೆಯ ವಸಂತೋತ್ಸವವು ದಿನಾಂಕ ೯ರಂದು ಜಿಲ್ಲಾ ಕಲೆಕ್ಟರ್ ಜ| ಸಯ್ಯದ್ ಅಹಮ್ಮದರ ಅಧ್ಯಕ್ಷತೆಯಲ್ಲಿ ಜರಗಿತು. ಮೊದಲದಿನದ ಸಭೆಯಲ್ಲಿ ಕಲೆಕ್ಟರರು ಶಾಲೆಯ ಅಭಿವೃದ್ಧಿಯನ್ನೂ ಚಟುವಟಿಕೆಯನ್ನೂ ಶ್ಲಾಘಿಸಿ ಮಾತನಾಡಿದರು. ಎರಡೂ ದಿನಗಳಲ್ಲಿ ನರ್ತನ, ನಾಟಕಾದಿ ವಿನೋದಾವಳಿಗಳಾದುವು, 'ಜಾಂಬವತಿ ಕಲ್ಯಾಣ'ದ ಕಥಾ ವಸ್ತುವನ್ನು "ಅನಾರ್ಯ ನಥು"ವೆಂದು ಹೊಸ ರೀತಿಯಲ್ಲಿ ಬರೆದು ಅಭಿನಯಿಸಿದ್ದರು. ಕೃಷ್ಣ ಮತ್ತು ಜಾಂಬವಂತರ ಪಾತ್ರಗಳ ಅಭಿನಯ ಚೆನ್ನಾಗಿತ್ತು.

**ನೃತ್ಯ ಕಲಾಲಯಂ ಎಂಬ ನರ್ತನ** ಶಾಲೆಯೊಂದು ದಿನಾಂಕ ೧೧ರಂದು ಮಂಗಳೂರಿನ ಲಲಿತಕಲಾ ಕೇಂದ್ರದವರ ನೇತೃತ್ವದಲ್ಲಿ ಸ್ಥಾಪಿತವಾಗಿದೆ ಇದರ ನಾಟ್ಯಾಚಾರ್ಯರು ಶ್ರೀ ರಾಜನ್ ಅಯ್ಯರರು. ಪ್ರಾರಂಭದ ದಿನ ವೀಣಾವಾದನ, ಸಂಗೀತ, ನರ್ತನಾದಿ ಕಾರ್ಯಕ್ರಮಗಳಿದ್ದುವು ಶ್ರೀ ಬಿ. ವಿ. ಬಾಳಿಗ ಮತ್ತು ರಾಮರತ್ನಂರವರು ಕಲೆಯ ಕುರಿತು ಭಾಷಣವಿತ್ತರು.

**ಕೋರ್ಟು ರಜೆ:-** ಜಿಲ್ಲಾ ಜಡ್ಜರ ಕೋರ್ಟು, ಪ್ರಿನ್ಸಿಪಲ್ ಮತ್ತು ಎಡಿಶನಲ್ ಜಡ್ಜರ ಕೋರ್ಟುಗಳು ಎಪ್ರಿಲ್ ತಾ. ೧೦ನೇ ಸೋಮವಾರದಿಂದ ಜೂನ್ ತಾ. ೨೮ ವರೆಗೆ ಸೆಕೆಕಾಲದ ರಜೆ ಸಂಬಂಧ ಮುಚ್ಚಲಿತ್ತವೆ. ಜೂನ್ ೩ನೇ ಶನಿವಾರ ಪುನಃ ತೆರೆಯಲಾಗುವುದು. ಮುನ್ಸೀಫರ ಕೋರ್ಟು ಮಾತ್ರ ಎಪ್ರಿಲ್ ೨೯ಕ್ಕೆ ಮುಚ್ಚಲ್ಪಟ್ಟು ಜೂನ್ ೩ರಂದು ತೆರೆಯಲ್ಪಡುವುದು.

**ಮದ್ರಾಸ್ ಸರಕಾರದ ಫಿಶರ್ಯಾ**ಭಿವೃದ್ಧಿ ಯೋಜನೆಯನ್ನು ಮಂಜೇಶ್ವರ ಮತ್ತು ಮೂಲ್ಕಿಗಳಲ್ಲಿ ಬೇಗನೆ ಜಾರಿಗೆ ತರಲಾಗುವುದು.

---

## ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 290/42

R E.P. 120/49 R.E.A. 26/50

ವಾದಿಳು- ... ೧-ಲಕ್ಷ್ಮೀಬಾಯಿ

ಪ್ರತಿವಾದಿರು- ... ಸುಬ್ರಾಯಕಾಮತ್ ಕೂಡಾ,

ಪ್ರತಿವಾದಿರು-2 ಸಿದ್ದಾಪುರ ಶೇಷಗಿರಿ ಭಟ್ಟ, ಅನಂತಭಟ್ಟರ ಮಗ, ಸಾಗರ ಕಸಬಾ.

3 ಅನಂತಭಟ್ಟ ಸಿದ್ದಾಪುರ ಶೇಷಗಿರಿಭಟ್ಟರ ಮಗ, ಕುಂದಾಪುರ ತಾಲ್ಲೂಕು ಹೊಸಂಗಡಿ ಗ್ರಾಮ.

5 ಅಪ್ಪಾಯ ಯಾನೆ ಪದ್ಮನಾಭ ಪೈ, ಭಾಂಡ್ಯದ ರಾಮಣ್ಣ ಪೈಗಳ ಮಗ, ಕುಂದಾಪುರ ತಾಲ್ಲೂಕು ಹೊಸಂಗಡಿ ಗ್ರಾಮ.

ಇವರಿಗೆ-

ವಾದಿಳು ಮೇಲ್ಕಂಡ ಡಿಕ್ರಿ ಹಣ ವಸೂಲಿ ಬಗ್ಗೆ ಸ್ಥಿರಾಸ್ತಿ ಯೇಲಮ್ಮಿಗೆ ಅಪೇಕ್ಷಿಸಿ ಸದ್ರಿ ಅಮ್ಲಜ್ಯಾರಿ ದಾಖ್ಲು ಮಾಡಿರುತ್ತಾಳೆ. ಸದ್ರಿ ಆಸ್ತಿಯಾರಿನ ಶರ್ತ ನಿರ್ಣಯಿಸುವರೇಯೂ ಮತ್ತು ವಾದಿಳು ಯೇಲಮ್ಮಿಗೆ ನಿಲ್ಲುವರೇ ಕೊಟ್ಟು ಮೇಲ್ಕಂಡ ಅರ್ಜಿಯೂ ಕೂಡಾ ತಾ. 24-4-1950 ಇರುತ್ತದೆ. ಆ ದಿವಸ ನೀವು ತಪ್ಪದೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರು ಆಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಯೇಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸೋಣಾಗುತ್ತದೆ.

K. Raghunatha Shenai,
Pleader for Plaintiff·
Coondapoor 10-4-1950.

---


**ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ**

**೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ**

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುಷುಪ್ತಿ ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಝುಝು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಭಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವೆ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಸ್ವರ ವರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಪಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ.



**— ಮಕ್ಕಳನ್ನು ಹಡೆಯುವುದು ಸಾಕು —**

ಅಶಕ್ತ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ** ರೋಗ ಗ್ರಸ್ತ ಹೆಚ್ಚು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಪಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ವಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಸ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಬಿ ಎಲ್ ಕಮಲಾಪುರ, ಕೆಮಿಸ್ಟ, ಹಾವೇರಿ ಬ್ಯಾಡಗಿ


---

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ.

ಕ್ರಮನಂಬ್ರ 36/50

ಯಂ. ರಾಮಚಂದ್ರ ಭಾನುಭಾಗ-ನರ್ಸ್ಯ ಭಾನುಭಾಗರ ಮಗ, ವರ್ಗದಾರ,ಹೊಸಬೆಟ್ಟು ಗ್ರಾಮದಲ್ಲಿರುವವರು — ವಾದಿ.

ಮತ್ತು

ಕೆ. ವಿ. ಯಿಬ್ರಾಯಿನೆ ಬ್ಯಾರಿ, ಅಬ್ಬ ಯಾನೆ ಮೊಯಿದಿಂ ಕುಂಞಬ್ಯಾರಿ ಮಗ, ಹೊಸಬೆಟ್ಟು ಗ್ರಾಮದಲ್ಲಿರುವವ, —ಪ್ರತಿವಾದಿ.

ಯಿವರೊಳಗೆ

ಪ್ರತಿವಾದಿಯು ವಾದಿಗೆ ತಾ. 3-5-1948 ರಲ್ಲು ಬರಕೊಟ್ಟ ರಿಜಿಸ್ತ್ರಿ ಗೇಣಚೀಟು ಪ್ರಕಾರ ಪ್ರತಿವಾದಿಯಿಂದ ಬಹಾ ಗೇಣಬಾಕಿ ಆಸ್ತಿ ಸ್ವಾಧೀನತೆಗೂ ದಾಖ್ಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಕು 27-4-50ಕ್ಕೆ ಪ್ರತಿವಾದಿಯ ನೋಟಿಸಿನ ಬಗ್ಗೆ ಯಿಟ್ಟದಂತ ಈ ಮೂಲಕ ಆತನಿಗೆ ತಿಳಿಸೋಣಾಗಿಯದೆ.

(*Sd*) **K. Devadas Shenoy,**
ವಾದಿಕಡೆ ವಕೀಲ.

ಕಾಸರಗೋಡು 11-4-50


**ಮೂಲ್ಕಿ ಬೇಂಕ್,**

ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ ೨೯ ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

**The Moolky Bank Ltd.,**
**Moolky, S. K.**

# ದ. ಕ. ಜಿಲ್ಲೆಯಲ್ಲಿ ಮಾನ್ಯ ಮಂತ್ರಿಗಳಿಬ್ಬರು

## ಶ್ರೀ ಭಕ್ತವತ್ಸಲಂ, ಶ್ರೀ ಎ. ಬಿ. ಶೆಟ್ಟರ ಸಂಚಾರ ಕಾರ್ಯಕ್ರಮ.

ತಾ. ೨೨ನೇ ಶನಿವಾರ: ಸಂಜೆ ೫-೫೫ಕ್ಕೆ ಮಂಗಳೂರು ಎಕ್ಸ್‌ಪ್ರೆಸ್ ಮೂಲಕ ಆಗಮನ. ೬ರಿಂದ ೬.೩೦ರ ವರೆಗೆ ಕಟ್ಟೆಯಲ್ಲಿರುವ ಪ್ರವಾಸಿಕರ ಬಂಗ್ಲೆಯಲ್ಲಿ ಈಗ ಕಾರ್ಯಕಾರಿಯಾಗಿರುವ ಮತ್ತು ಶೋಧನೆಯಲ್ಲಿರುವ ಯೋಜನೆಗಳ ವಿಷಯದಲ್ಲಿ ಅಧಿಕಾರಿಗಳೊಡನೆ ಸಮ್ಮೇಳನ. ಸಂಜೆ ಏಳು ಗಂಟೆಗೆ ಕರ್ನಾಟಕ ಥಿಯೇಟರಿನ ಉದ್ಘಾಟನೆ.

ತಾ. ೨೩ನೇ ಆದಿತ್ಯವಾರ: ಬೆಳಿಗ್ಗೆ ೮.೩೦ಕ್ಕೆ ಮಂಗಳೂರು ಮುನ್ಸಿಪಲ್ ಆಫೀಸಿನಲ್ಲಿ ಬಿನ್ನವತ್ತಳೆ ಅರ್ಪಣೆ. ೯.೩೦ ಗಂಟೆಗೆ ಹಂಪನಕಟ್ಟೆಯಲ್ಲಿರುವ ಬಸ್ಸ್ಟೇಂಡನ್ನು ತೆರೆಯುವುದು. ೧೦ರಿಂದ ೧೧ ಗಂಟೆಯ ವರೆಗೆ ಡಿಸ್ಟ್ರಿಕ್ಟ್ ಬೋರ್ಡು ಸಭಾ ಭವನದಲ್ಲಿ ಜಿಲ್ಲಾ ಎಡ್ವಾನ್ಸ್‌ಮೆಂಟ್ ಬೋರ್ಡಿನ ಸಭೆ ೧೧ರಿಂದ ೧೨.೩೦ರ ವರೆಗೆ ಡಿಸ್ಟ್ರಿಕ್ಟ್ ಬೋರ್ಡು ಆಫೀಸಿನಲ್ಲಿ ಪ್ರಾತಿನಿಧ್ಯಗಳನ್ನು ಸ್ವೀಕರಿಸುವುದು. ಮಧ್ಯಾಹ್ನ ೧೨.೩೦ರಿಂದ ೨.೩೦ರ ವರೆಗೆ ಉಪಹಾರ ಮತ್ತು ವಿಶ್ರಾಂತಿ. ೨.೩೦ರಿಂದ ೪.೩೦ ಗಂಟೆ ವರೆಗೆ ಕಲೆಕ್ಟರರ ಕಛೇರಿಯಲ್ಲಿ ಜಿಲ್ಲಾ ಆಹಾರ ಉತ್ಪಾದನಾ ಸಮಿತಿಯ ಸಭೆ. ಸಂಜೆ ೪-೩೦ರಿಂದ ೫ ಗಂಟೆಯ ವರೆಗೆ ಬೆಂಚ್ ಕೋರ್ಟಿನಲ್ಲಿ ರೈತರ ಸಭೆ. ೫ ಗಂಟೆಗೆ ಬಂಟರ ಹಾಸ್ಟೇಲಿನಲ್ಲಿ ಚಹಾ ಸತ್ಕಾರ. ಸಂಜೆ ೬ರಿಂದ ೭ ಗಂಟೆಯ ತನಕ ಕಾಂಗ್ರೆಸ್ ಕಛೇರಿಯಲ್ಲಿ ಕಾಂಗ್ರೆಸ್ ಕೆಲಸಗಾರರ ಸಭೆ.

ತಾ. ೨೪ನೇ ಸೋಮವಾರ: ಬೆಳಿಗ್ಗೆ ೭.೩೦ ಗಂಟೆಗೆ ಕಂಕನಾಡಿಗೆ ಪ್ರಯಾಣ. ೮ರಿಂದ ೯ ಗಂಟೆಯ ತನಕ ಕಂಕನಾಡಿಯಲ್ಲಿರುವ ಭತ್ತದ ಕೇಂದ್ರ ಮತ್ತು ಹತ್ತಿ ಕೇಂದ್ರದಲ್ಲಿ. ೯.೩೦ ಗಂಟೆಗೆ ಕೂಳೂರಿಗೆ ಹೊರಟು ಅಲ್ಲಿ ಕೂಳೂರು ಸಂಕದ ಸ್ಥಳ ನಿರೀಕ್ಷಣೆ. ಆ ಮೇಲೆ ತಣ್ಣೀರು ಬಾವಿಯ ಬಳಿ ಗುರುಪುರ ನದಿಯ ಮೇಲೆ ಕಟ್ಟೆ ಹಾಕುವ ವಿಷಯ ತನಿಖೆ. ಅಲ್ಲಿಂದ ಹಿಂತಿರುಗಿ ವಿಶ್ರಾಂತಿ.

ಮಧ್ಯಾಹ್ನ ೩ ಗಂಟೆಯಿಂದ ೩.೪೫ರ ವರೆಗೆ ಕೆನರಾ ಚೇಂಬರ್ ಆಫ್ ಕೊಮರ್ಸ್ (ಜಿಲ್ಲಾ ವಾಣಿಜ್ಯ ಸಂಘ)ಗೆ ಭೇಟಿ. ಸಂಜೆ ೪ ಗಂಟೆಗೆ ಉಳ್ಳಾಳಕ್ಕೆ ಪ್ರಯಾಣ, ಉಳ್ಳಾಳ ಕಡವು ತಲಪಾಡಿ ಸಂಕದ ಸ್ಥಳಕ್ಕೆ ಸಂದರ್ಶನೆ. ಮತ್ತು ಮರುಪ್ರಯಾಣ. ಸಂಜೆ ೬ ಗಂಟೆಗೆ ಜಿಲ್ಲಾ ಬೋರ್ಡು ಆಫೀಸಿನಲ್ಲಿ ಕಾರ್ಯಕ್ರಮ ಮತ್ತು ಚಹಾ ಸತ್ಕಾರ.

ತಾ. ೨೫ನೇ ಮಂಗಳವಾರ: ಬೆಳಿಗ್ಗೆ ಪುತ್ತೂರಿಗೆ ಪ್ರಯಾಣ. ೧೦ರಿಂದ ೧೧ರ ವರೇಗೆ ಅಲ್ಲಿ ರೈತರ ಸಮ್ಮೇಳನ. ೧೧ ಗಂಟೆಗೆ ದರ್ಬೆ ಸುಬ್ರಮಣ್ಯ ಮೊದಲಾದ ಕಡೆಗಳಿಗೆ ಸಂದರ್ಶನ. ೩ ಗಂಟೆ ಸುಬ್ರಮಣ್ಯದಲ್ಲಿ ವಿಶ್ರಾಂತಿ. ಆ ಮೇಲೆ ಮಂಗಳೂರಿಗೆ ಬಳ್ಳಾರೆ ಮಾರ್ಗವಾಗಿ ಮರುಪ್ರಯಾಣ.

ತಾ. ೨೬ನೇ ಗುರುವಾರ: ಬೆಳಿಗ್ಗೆ ೭.೧೦ಕ್ಕೆ ಮಂಗಳೂರಿಂದ ಕಾರ್ಕಳಕ್ಕೆ ಪ್ರಯಾಣ. ೯ ಗಂಟೆಗೆ ಕಾರ್ಕಳಕ್ಕೆ ತಲಪುವುದು. ೯ರಿಂದ ೧೦ ಗಂಟೆಯ ತನಕ ಕಾರ್ಕಳದಲ್ಲಿ ಸಭೆ. ೧೦ ಗಂಟೆಗೆ ಸೋಮೇಶ್ವರ ಮಾರ್ಗವಾಗಿ ಕುಂದಾಪುರಕ್ಕೆ ಪ್ರಯಾಣ. ಪ್ರಯಾಣ ಕಾಲದಲ್ಲಿ ಹುರಿತನ ಕೆರೆ ಮತ್ತು ತಾಲೂಕಿನ ಕೆರೆಗಳ ಪರಿಶೀಲನೆ. ಮಧ್ಯಾಹ್ನ ೧೨.೩೦ಕ್ಕೆ ಕುಂದಾಪುರಕ್ಕೆ ಆಗಮನ. ೧೨.೩೦ರಿಂದ ಮಧ್ಯಾಹ್ನ ೩ ಗಂಟೆಯ ತನಕ ಉಪಹಾರ ಮತ್ತು ವಿಶ್ರಾಂತಿ, ಮಧ್ಯಾಹ್ನ ೩ ಗಂಟೆಯಿಂದ ೫ ಗಂಟೆಯ ತನಕ ಸಭೆ. ೫ ಗಂಟೆಗೆ ಬ್ರಹ್ಮಾವರದ ಮೂಲಕ ಉಡುಪಿಗೆ ಪ್ರಯಾಣ. ಸಂಜೆ ೫.೩೦ ಗಂಟೆಗೆ ಬಾಂತಾರ್ ಮದಗದ ಪರಿಶೀಲನೆ ೬.೪೫ಕ್ಕೆ ಉಡುಪಿಗೆ ತಲಪಿ, ಆ ದಿನ ಅಲ್ಲೇ ನಿಲ್ಲುವುದು.

ತಾ. ೨೭ನೇ ಗುರುವಾರ ಬೆಳಿಗ್ಗೆ ೯ರಿಂದ ೧೦ ಗಂಟೆಯ ತನಕ ಉಡುಪಿಯಲ್ಲಿ ರೈತರ ಸಭೆ. ೧೦ ಗಂಟೆಗೆ ಪಲಿಮಾರಿಗೆ ಪ್ರಯಾಣ. ೧೧ಕ್ಕೆ ಪಲಿಮಾರು ಅಣೆಕಟ್ಟಿನ ಸ್ಥಳ ನಿರೀಕ್ಷಣೆ, ಮಧ್ಯಾಹ್ನ ೧೨ ಗಂಟೆಗೆ ಮೂಲ್ಕಿಯಲ್ಲಿ ಆಗಮನ, ಆಹಾರ ಮತ್ತು ವಿಶ್ರಾಂತಿ ಮುಗಿಸಿ ಮಧ್ಯಾಹ್ನ ೩ ½ ಗಂಟೆಗೆ ಮೂಲ್ಕಿಯಿಂದ ಹೊರಟು ೪-೩೦ಕ್ಕೆ ರಾಷ್ಟ್ರ ಪದವಿಗೆ ಆಗಮನ, ಅಲ್ಲಿ ಗುರುಪುರ ಅಣೆಕಟ್ಟು ಯೋಜನೆಯ ಸ್ಥಳ ನಿರೀಕ್ಷಣೆ ರಾತ್ರಿ ೭ ಗಂಟೆಗೆ ಮಂಗಳೂರಿಗೆ ಹಿಂತಿರುಗುವುದು. ೮.೩೦ಕ್ಕೆ ರೋಟರಿ ಕ್ಲಬ್ಬಿನಲ್ಲಿ ಭೋಜನ ಸತ್ಕಾರ.

ತಾ. ೨೮-೪-೫೦ನೇ ಶುಕ್ರವಾರ ಮಂಗಳೂರಿಂದ ಮರು ಪ್ರಯಾಣ.

---

## ನೋಟೀಸು

### ಉಡುಪಿ ಡಿ ಮು. ಕೋರ್ಟಿನಲ್ಲಿ

### O. S. 36/1950

ವಿಷ್ಣುಮೂರ್ತಿ ಒಟ್ಟೆ —ವಾದಿ,

ಮತ್ತು

ಪಾರ್ವತಿ ಯಾನೆ ಲಕ್ಷ್ಮಿ ಅಮ್ಮ, ಸೀತಾರಾಮ ಕಲ್ಕೂರರ ವಿಧವೆ, ಉಡುಪಿ ತಾಲ್ಲೂಕು ಹನೆಹಳ್ಳಿ ಗ್ರಾಮ. —ಪ್ರತಿವಾದಿ,

ಇವರೊಳಗೆ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ:—

ತಾರೀಕು 30-6-1906ನೇ ರಿಜಿಸ್ಟ್ರಿ ವಿಭಾಗಪತ್ರ ಪ್ರಕಾರ ನಿಂಮ ಗಂಡ ಸೀತಾರಾಮ ಕಲ್ಕೂರ್ರ ಹಿತೆಯಿಂದ ರಾಮಕೃಷ್ಣ ಕಲ್ಕೂರ್ರ ಹೆಸರಿಗೆ ಹಿಪ ಭರ್ತಿ ಬಾಬ್ತು ಸಾಲಿಯಾನ ಕುಜ್ಜಿಗೆ ಹೊಳ್ಳಲು ಆಕ್ಕ ಕಳಸಿ ೩ರಂತೆ ಬರಬೇಕಾದ ಕಳದ ಕಾರಣ ಸಂವತ್ಸರದ ಬಾಗ್ಯಾತು ಸರ್ವಧಾರಿ ಸಂವತ್ಸರದ ವರೇಗಿನ ಕೊಡುವಿಕೆಯನ್ನು ಬರಮಾಡಿಕೊಳ್ಳುವರೆ ಸದ್ರಿ ರಾಮಕೃಷ್ಣ ಕಲ್ಕೂರರು ತಾರೀಕು 16-6-1944ರಲ್ಲಿ ಬರೆದಿಟ್ಟಿರುವ ವೀಲು ನಾಮೆ ಪ್ರಕಾರದ ಎಗ್ಜಿಕ್ಯೂಟರನಾದ ವಾದಿಯು ಮಾಡಿದ ಮೇಲ್ಕಂಡ ದಾವೆಯು ತಾರೀಕು 25-4-1950ಕ್ಕೆ ಇಟ್ಟಿದೆ. ಆ ಕುರಿತು ನಿಮಗೇನಾದರೂ ಉದಾಹರಿಸುವಂಥಾದ್ದು ಇದ್ದರೆ—ಆ ದಿವ್ಸ ಪೂರ್ವಾಹ್ನ ಗಂಟೆ 11ಕ್ಕೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳಬಹುದು. ತಪ್ಪಿದ್ದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

K. Ramakrishna Rao.
Vakil for Plaintiff.

Udipi Dated 15-4-1950

---


## ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.


---

## ಆರೋಗ್ಯ ಸಂಗ್ರಹ

### ವಿಷಮಜ್ವರಕ್ಕೆ ಉಪಾಯಗಳು

(ಕೆ. ಎಸ್. ಬಳ್ಳುಳ್ಳಾಯ)

ಈ ಕೆಳಗಿನ ಯಾವುದಾದರೊಂದು ಉಪಾಯದಿಂದ ವಿಷಮಜ್ವರ ಶಮನವಾಗುವುದು.

೧) ಗೂಗೆಯ ಬಲದ ರೆಕ್ಕೆಯನ್ನು ತುಂಡುಮಾಡಿ ಬಿಳಿದಾರದಿಂದ ಎಡದ ಕಿವಿಗೆ ಕಟ್ಟಿ ತೂಗಿಸಬೇಕು. (೨) ಒಂದು ಸಾವಿರ ಹಾಳಿಯಾರಲು(ಚಾಂಗೇರಿ)ಎಲೆಗಳನ್ನು ಹಾಕಿ ಗಂಜಿಮಾಡಿತುಪ್ಪ ಸೇರಿಸಿಕುಡಿಯಬೇಕು. ೩. ಉತ್ತರಣೆಯ ಬೇರನ್ನು ಮೌನದಿಂದ ಕಿತ್ತು ತಂದು ಏಳು ತುಂಡು ಕೆಂಪು ನೂಲಿನಿಂದ ಕಟ್ಟಿ ಟೊಂಕಕ್ಕೆ ತೂಗಾಡಿಸಬೇಕು. ೪. ಸಹದೇವಿ ಮೂಲವನ್ನು ಮೌನಾಚರಣೆಯಿಂದ ಕಿವಿಗೆ ಕಟ್ಟಿ ತೂಗಾಡಿಸಬೇಕು. ೫. ಕರಿಜೀರಿಗೆ ಚೂರ್ಣಮಾಡಿ ಬೆಲ್ಲದಲ್ಲಿ ಮಿಶ್ರಮಾಡಿ ಸೇವಿಸಬಹುದು. ೬. ಏಡಿಯ ಬಿಲದಿಂದ ಹೊರಗೆ ಹಾಕಿದ ಮಣ್ಣನ್ನು ತಿಲಕವಿಡುವುದು. ೭. ಬ್ರಹ್ಮದಂಡಿಯನ್ನು ಪುಷ್ಯಾ ನಕ್ಷತ್ರ ದಿನ ಕಿತ್ತು ಕೆಂಪುದಾರದಿಂದ ರೋಗಿಯ ಕೈಗೆ ಕಟ್ಟುವುದು. ೮. ಯಾವಬತ್ತ, ಅಳಲೆಸಿಪ್ಪೆ, ಬಜೆ, ಕಟುಕರೋಹಿಣಿ, ಬೇವಿನ ಎಲೆ, ಗುಗ್ಗುಲು, ಸಾಸುವೆ ಇವುಗಳನ್ನು ಜಜ್ಜಿ ಸ್ವಲ್ಪ ದನದ ತುಪ್ಪ ಮಿಶ್ರಮಾಡಿ ಧೂಪವನ್ನು ತಾಗಿಸುವುದು.

### ಮಕ್ಕಳಿಗೆ ಪ್ರಧಾನವಾದ ರೋಗ ಚಿಕಿತ್ಸೆ

೧. ಮಕ್ಕಳ ತಲೆ, ಬೆಂಗ್ಸೆ, ಅಂಗಾಲು ಯಾವಾಗಲೂ ಬಿಸಿಯಾಗಿರುವ ಒಂದು ರೋಗವಿದೆ. ಅದಕ್ಕೆ ೧ ತೊಲೆ ಗಂಧ ೧ ತೊಲೆ ನೆಲ್ಲಿಚಟ್ಟು ಚೆನ್ನಾಗಿ ದನದ ಹಾಲಿನಲ್ಲಿ ಅರೆದು ಲೇಪದ ಪಾಕಮಾಡಿ ತಲೆಗೆ ೨ ದಿನ ಹಾಕಿದರೆ ಅಂಗೈ ಅಂಗಾಲು ಕಲೆಬಿಸಿಯಾಗುವದು ನಿಲ್ಲುವದು. ತಲೆಯಲ್ಲಿ ೨೪ ಗಂಟೆ ತನಕ ಇರಬೇಕು. ಅನಂತರ ಮೀಯಿಸಬೇಕು. ೨. ತಲೆಯಲ್ಲಿ ಕುರುಗಳು ಆಗಿದ್ದರೆ ಅತ್ತಿಯ ಕ್ವಾ, ಎಳ್ಳು, ತುಂಬೆ ಹೂ, ಇವುಗಳನ್ನು ಒಂದೊಂದು ತೊಲೆ ಪ್ರಮಾಣ ೨ ಕುಡ್ತೆ ಹಾಲಿನಲ್ಲಿ ಹಾಕಿ ಚೆನ್ನಾಗಿ ಬೇಯಿಸಿ ಬತ್ತಿಸಿ ತಗೆದು ನುಣ್ಣಗೆ ಅರೆಯಬೇಕು. ಅನಂತರ ನೀರು ಬತ್ತಿದ ಬೆಣ್ಣೆ ಸೇರಿಸಿ ಕುರುಗಳಿಗೆ ಹಚ್ಚಿದರೆ ಶಮನವಾಗುತ್ತದೆ. ೩. ಜ್ಯೇಷ್ಠ ಮಧು, ಅಳಲೆಕ್ವಾ, ಕೆಂಪುಗಂಧ ಇವು ಒಂದೊಂದು ತೊಲ ಪ್ರಮಾಣ ೪॥ ಕುಡ್ತೆ ನೀರಲ್ಲಿ ಬೇಯಿಸಬೇಕು. ನೀರು ಬತ್ತಿದ ಅನಂತರ ಚೆನ್ನಾಗಿ ಅರೆದು ದನದ ತುಪ್ಪ ಮಿಶ್ರಮಾಡಿ ಹಚ್ಚಿದರೆ ಕುರುಗಳು ಶಮನವಾಗುವದು. ೪. ತಲೆಯಲ್ಲಿ ಕಜ್ಜಿಗಳು ಉಂಟಾದರೆ ಪಂಚವಳಿ ಮೀಳ್ಳದೆಲ, ತುಳಸಿ ಎಲೆ, ಗೃಹ ಧೂಮ (ಅಡಿಗೆ ಕೋಣೆಯಲ್ಲಿರುವ ಹೊಗೆಯಕರಿ), ಒಣಗಿದ ತೆಂಗಿನಕ್ವಾ ಎಣ್ಣೆಯಲ್ಲಿ ಹುರಿದು, ಕ್ಷಾಸವನ್ನು ಕೂಡ ಅರೆದು ಲೇಪದಂತೆ ಹಚ್ಚಿ ಒಂದು ಗಂಟೆ ಹೊತ್ತು ಇದ್ದು ಮೀಯಿಸಬೇಕು ನಂತರ ಆದರ ಹಸೆಯನ್ನು ಸವರಬೇಕು. ಮದ್ದುಗಳು ೪ ಅಣೆ ತೂಕದಂತೆ, ಎಣ್ಣೆ ಕುಡ್ತೆ ೨ರಂತೆ ಸೇರಿಸಬೇಕು. ೫. ಅಮೃತಬಳ್ಳಿರಸ, ಕದಿಕೆ ಹುಲ್ಲಿನ ರಸ, ಇವನ್ನು ಎಣ್ಣೆಯಷ್ಟು, ಜ್ಯೇಷ್ಠಮಧು, ಭದ್ರಮುಷ್ಟಿ, ಗಂಧ, ಬಜೆ ಇವು ಕುಡ್ತೆಗೆ ಅರ್ಧ ತೊಲೆಯಂತೆ ಸೇರಿಸಿ ಕಾಸಿದ ತೈಲ ಮಕ್ಕಳಿಗೆ ಉತ್ತಮವಾದದೆ. ೬. ಕಿವಿಯಲ್ಲಿ ಕುರ ಉಂಟಾದರೆ, ಮನೆಯಲ್ಲಿ ಮಣ್ಣಿನಿಂದ ಗೂಡುಕಟ್ಟುವ ತುಂಬಿಯ ಗೂಡು, ಅರತ್ತೆ (ರಾಸ್ನಾ) ಕುರಿ ಇವುಗಳನ್ನು ಸಮಪಾಲು ತೆಗೆದು ಕೊಂಡು ದನದ ಮಜ್ಜಿಗೆಯಲ್ಲಿ ಅರೆದು ಕಿವಿಯ ಸುತ್ತಲೂ ಲೇಪಿಸಿದರೆ ಗುಣವಾಗುವುದು ೭. ನಾಲ್ಕು ಮರದ ಅಂಕುರ (ಅತ್ತಿ, ಬನ್ನಿ, ಗೋಳಿ, ಅಶ್ವತ್ಥ) ಎಳ್ಳು, ಗರಿಕೆ ಹುಲ್ಲು, ತ್ರಿಫಲ (ಶಾಂತಿ, ಅಳಲೆ, ನೆಲ್ಲಿ), ಅರಸಿನ, ಬೇವಿನ ಎಲೆ, ಇವುಗಳನ್ನು ಸಮವಾಗಿ ತೆಗೆದುಕೊಂಡು ಮಜ್ಜಿಗೆಯಲ್ಲಿ ಬೇಯಿಸಿ ನೀರು ಬತ್ತಿದ ಅನಂತರ ಅರೆದು ನುಣ್ಣಗೆ ಮಾಡಿ ಲೇಪಿಸಿದರೆ ಕಿವಿಯಲ್ಲಿರುವ ಕುರುವು ಶಮನವಾಗುವುದು. 'ರಾಷ್ಟ್ರಬಂಧು'

---

## ಪ್ರಕಟಣೆ

ಬಿ. ಇ. ಯಂ ಹಾಯರ್ ಎಲಿಮೆಂಟರಿ ಶಾಲಾ ಹಳೆ ವಿದ್ಯಾರ್ಥಿಗಳ ಸಂಘ,
ಉದ್ಯಾವರ.

ಹೊಸದಾಗಿ ಸ್ಥಾಪಿತವಾದ ಈ ಸಂಘಕ್ಕೆ ವಿದ್ಯಾಭಿಮಾನಿಗಳಾದ ಹಳೇ ವಿದ್ಯಾರ್ಥಿಗಳೂ ಇತರ ಮಹನೀಯರೂ ತಮ್ಮ ತನುಮನಧನ ಸಹಾಯವನ್ನು ನೀಡಬೇಕಾಗಿಯೂ ಧನ ಸಹಾಯವನ್ನು ಅಧ್ಯಕ್ಷರ ಹೆಸರಿಗೆ ಕಳುಹಿಸಿಕೊಡಬೇಕಾಗಿಯೂ ಅಪೇಕ್ಷಿಸುತ್ತೇವೆ.

ಪಟೇಲ್ ಯು. ಭಾಸ್ಕರ ಶೆಟ್ಟಿ,
ಅಧ್ಯಕ್ಷ.

ಯು ರಮಾನಾಥ ಕಾಮತ್,
ಕೋಶಾಧಿಕಾರಿ.

ಯು. ಸಂಜೀವರಾವ್, ಶ್ಯಾನುಭಾಗ,
ನಾಮನ, ಉದ್ಯಾವರ } ಜತೆ ಕಾರ್ಯದರ್ಶಿಗಳು.

ವಿ. ಸೂ ತಾ. 27-4-50ರ ಶಾಲಾ ವರ್ಧಂತ್ಯುತ್ಸವಕ್ಕೂ ತಾ. 29-4-50ರ ಹಳೆ ವಿದ್ಯಾರ್ಥಿಗಳ "ಮೀರಾಬಾಯಿ" ಎಂಬ ನಾಟಕಕ್ಕೂ ಸಂಘದ ದಿನಾಚರಣೆಗೂ ಬರಬೇಕಾಗಿ ಸವಿನಯ ಆಮಂತ್ರಣ.

---


ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

# ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಶುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.






Approved firm by the Govt. of Mysore
Certificated by the Agent of the Govt of Cylone & Indian,

# ಇಂದಿನ ಜಗತ್ತು

('ಹರಿಜನ'ದಿಂದ)

ಇಂದಿನ ಜಗತ್ತಿನ ಮುಖ್ಯ ಸಮಸ್ಯೆಯೆಂದರೆ ಸರ್ವ ಜನರಿಗೂ ಕೆಲಸ, ಆಹಾರ, ಆಶ್ರಯ, ನ್ಯಾಯ ಮತ್ತು ಸ್ವಾತಂತ್ರ್ಯವನ್ನೊದಗಿಸಿಕೊಡುವುದಾಗಿದೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿಯ ಬಂಡವಳವಾದ ಮತ್ತು ಸರಕಾರಿ ಸಮಾಜವಾದಗಳಿಂದ ಈ ಸಮಸ್ಯೆಯು ಪರಿಹಾರವಾಗಿರುವುದಿಲ್ಲ. ಮತ್ತು ಪ್ರಜಾತಂತ್ರಗಳು ಒಳ್ಳೆ ಸಮಾಜರಚನೆಯನ್ನು ಮಾಡಲು ಸಮರ್ಥವಾಗದ್ದರಿಂದ ನಿರುದ್ಯೋಗಿ ಮತ್ತು ಹಸಿದ ಜನರು ಹತಾಶರಾಗಿ ತೀವ್ರಗಾಮಿಗಳು, ಕಮ್ಯೂನಿಸ್ಟರು ಆಗುತ್ತಾರೆ. ಇದರಿಂದ ಅವರು ಮೊದಲಿಗಿಂತ ಹೆಚ್ಚು ಗುಲಾಮರಾಗುವರಲ್ಲದೆ ಸ್ವತಂತ್ರರಾಗುವುದಿಲ್ಲ. ಆದರೆ ಅವರಿಗೆ ಮೊದಲೆ ಇದು ಗೊತ್ತಾಗುವುದಿಲ್ಲ.

ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಬಿಡಿಸುವುದರ ಮುಖ್ಯ ಕೀಲಿಕೈಯೆಂದರೆ ಹಣವು. ಇಂದು ಮತ್ತು ಇನ್ನು ಮುಂದೆಯೂ ಆರ್ಥಿಕ ವ್ಯವಸ್ಥೆಯಲ್ಲಿ ಮತ್ತು ರಚನೆಯಲ್ಲಿ ಮೂರು ಮುಖ್ಯ ದೋಷಗಳು ಕಂಡುಬರುತ್ತವೆ.

(೧) ಹಣದ ಅತಿಪ್ರಸರಣ ಮತ್ತು ವ್ಯತಿಪ್ರಸರಣವೆಂದರೆ ಧಾರಣೆಗಳ ಮಟ್ಟದಲ್ಲಿನ ವ್ಯತ್ಯಾಸವು; ಈ ಏರಿಳಿತಗಳಿಂದ ಹಣದ ಕೊಳ್ಳುವ ಶಕ್ತಿಯಲ್ಲಿ ಬದಲಾವಣೆಯಾಗುತ್ತದೆ. ಇದರಿಂದ ಯಾವಾಗಲೂ ದುರಂತ ಪರಿಣಾಮಗಳಾಗುವುದುಂಟು. ಕಳೆದ ಒಂದು ವರ್ಷದಿಂದ ಜಗತ್ತಿನಲ್ಲೆಲ್ಲ ಸರಕಾರೀ ಬ್ಯಾಂಕುಗಳು ಅತಿ ಪ್ರಸರಣವನ್ನು ವ್ಯತಿ ಪ್ರಸರಣದಿಂದ ನಿವಾರಿಸಲು ಪ್ರಯತ್ನಿಸಿದವೆಂದು ಹೇಳಲಾಗುತ್ತದೆ. ಭಾರತದಲ್ಲಿ ಮತ್ತು ಅಮೆರಿಕೆಯಲ್ಲಿ ಕೂಡ ಧಾರಣೆಗಳ ಮಟ್ಟವನ್ನಿಳಿಸಲು ಪ್ರಯತ್ನಿಸಲಾಯಿತು. ಕೆಳಗೆ ಉಲ್ಲೇಖಿಸಿದ ವಿಚಿತ್ರ ರೀತಿಯ ಪರಿಹಾರವಿದು.

ಮೋಟರೊಂದು ಒಬ್ಬ ಮನುಷ್ಯನ ಮೇಲೆ ಹಾಯ್ದು ಅವನನ್ನು ಗಾಯಗೊಳಿಸುತ್ತದೆ. "ಕೆಡಕಾಯಿತು, ಹೀಗಾಗಬಾರದಾಗಿತ್ತು, ಮತ್ತೆ ಸರಿಪಡಿಸಿ ಹಾನಿಯನ್ನು ತುಂಬಿಕೊಳ್ಳುವಾ" ಎಂದೆನ್ನುವರು. ನಾವು ಮತ್ತೊಮ್ಮೆ ಆ ಮನುಷ್ಯನ ಮೇಲೆ ಹಿಂದಿನಿಂದ ಮೋಟರು ಹಾಯಿಸುವಾ. ಹೀಗಾದರೆ ಈ ಅಪಘಾತವಾಗುವ ಮೊದಲು ಇದ್ದ ಸ್ಥಿತಿಗೇ ನಾವು ಬಂದು ಮುಟ್ಟುವೆವು, ನಾವು ಎಲ್ಲವನ್ನೂ ಸರಿಪಡಿಸಿದೆವು. 'ಎಲ್ಲವೂ ಈಗ ಒಳಿತಾಗಿದೆ" ಎಂದೂ ಎನ್ನುವರು.

ಅತಿಪ್ರಸರಣವು ಅಪಾಯಕರ, ವ್ಯತಿಪ್ರಸರಣವು ಅದಕ್ಕಿಂತ ಅಪಾಯಕರ, ಅರ್ಥಶಾಸ್ತ್ರಜ್ಞರು ಇದನ್ನೊಪ್ಪುವರು; ಆದರೆ ಅವರು ಈ ಚಿಕ್ಕ ವ್ಯತಿಪ್ರಸರಣವನ್ನು ಇಲ್ಲವೆ ಸರಿಪಡಿಸುವಿಕೆಯನ್ನು ಪುನಃ ಅತಿಪ್ರಸರಣವನ್ನುಂಟುಮಾಡುವ ಮೂರ್ಖತನವನ್ನು ಮಾಡುತ್ತಾರೆ. ಅದರ ದುಷ್ಪರಿಣಾಮಗಳು ಮೇಲಿನಂತೆಯೇ ಇವೆ. ಆದರಿಂದ ಬಳಕೆಯಲ್ಲಿ ಮಾಂದ್ಯವು,(ಅತ್ಯುತ್ಪಾದನೆಯಲ್ಲ) ನಿರುದ್ಯೋಗತೆ, ತೀವ್ರಗಾಮಿತ್ವ, ಕಮ್ಯೂನಿಜಂ, ಯುದ್ಧ ಮೊದಲಾದವುಗಳು ಉಂಟಾಗುತ್ತವೆ. ಆದುದರಿಂದ ಸದ್ಯದ ಮಟ್ಟದಲ್ಲಿ ಹಣದ ಬೆಲೆಯನ್ನು ಸ್ಥಿಮಿತಗೊಳಿಸಲು ಪ್ರತಿಯೊಂದು ದೇಶವು ಪ್ರಯತ್ನಿಸಲಿಕ್ಕೆ ಬೇಕು. ಧಾರಣೆಗಳ ಮಟ್ಟವು ಅನ್ಯೋನ್ಯಸಂಬದ್ಧವಾಗಿರುತ್ತವೆ. ಭಾರತದಲ್ಲಿ ಇಂದು ಧಾರಣೆಗಳು ಯುದ್ಧಪೂರ್ವ ಮಟ್ಟದ ೧೦೦ ಕ್ಕೆ ೪೦೦ ರಷ್ಟಿವೆ. ಆದರೆ ಕೂಲಿಗಳ ದರ ಮಾತ್ರ ೧೦೦ಕ್ಕೆ ೨೦೦ರಷ್ಟೇರಿವೆ. ಧಾರಣೆಗಳ ಮಟ್ಟವನ್ನು ಇಳಿಸಲು ನೀವು ಪ್ರಯತ್ನಿಸಿದರೆ ಪರಿಣಾಮವು ಸುಮಾರಾಗಿ ಇಂತಾಗಬಹುದು; ಧಾರಣೆಗಳು ೪೦೦ರಿಂದ ೩೦೦ ಕ್ಕಿಳಿಯಬಹುದು ಆದರ ಕೂಲಿಯ ದರವು ೧೦೦ ರಿಂದ ೧೫೦ ಕ್ಕಿಳಿಯುವದು. ಏಕೆಂದರೆ ನಿರುದ್ಯೋಗ ಹೆಚ್ಚಿ ಧಾರಣೆಗಳು ಇಳಿಯುವ ಮೊದಲೆ ಕೂಲಿಯ ದರವು ಇಳಿದು ಬಿಡುವಂತೆ ಒತ್ತಾಯ ಪಡಿಸುವದು. ಆದರೆ ತದ್ವಿರುದ್ಧವಾಗಿ ನಾವು ಧಾರಣೆಗಳ ಮಟ್ಟವನ್ನು ಸ್ಥಿರಗೊಳಿಸಿದರೆ ತನ್ಮೂಲಕ ಮತ್ತು ಇತರ ಸಾಧನಗಳ ಮೂಲಕ ಉತ್ಪಾದನೆಗೆ ಪ್ರೋತ್ಸಾಹನೆ ದೊರೆತು ಅದು ಹೆಚ್ಚುವುದು. ಅನಂತರ ಕೂಲಿಯ ದರ ಸಾವಕಾಶವಾಗಿ ಏರಿ ಕೊನೆಗೆ ಧಾರಣೆಗಳ ಅಬ್ಬರವನ್ನು ಕಡಮೆ ಮಾಡುವಷ್ಟರ ವರೆಗೆ ಏರುವದು. ಕೂಲಿ ಮತ್ತು ಧಾರಣೆಗಳನ್ನು ಅನ್ಯೋನ್ಯ ಸರಿಪಡಿಸುವ ಮಾರ್ಗವಿದೊಂದೇ ಆಗಿದೆ. ಆದುದರಿಂದ ಸರಕಾರವು ಮತ್ತು ರಿಝರ್ವ್ ಬ್ಯಾಂಕು, ಹಣದ ಬೆಲೆಯನ್ನು ಕಾಯಂ ಆಗಿ ಸ್ಥಿಮಿತಗೊಳಿಸಲಾಗಿದೆಯೆಂದು ಘೋಷಿಸಬೇಕು. ಇದರಿಂದ ಸುಭದ್ರ ಆರ್ಥಿಕ ಮತ್ತು ಸಾಮಾಜಿಕ ಭವಿಷ್ಯತ್ತಿನ ಅವಶ್ಯಕ ಹಣಕಾಸಿನ ಭದ್ರತೆಯ ತಳಹದಿಯನ್ನು ಹಾಕಿದಂತಾಗುವದು.

೨) ವಿನಿಮಯ ದರವು. ಜಗತ್ತಿನಲ್ಲೆಲ್ಲ ಅರ್ಥಶಾಸ್ತ್ರಜ್ಞರು ಮಾಡುವ ಎರಡನೇ ದೊಡ್ಡ ತಪ್ಪೆಂದರೆ ಇದು, ಅವರು ಕೃತಕ, ನೌಕರಶಾಹಿಯ ರೀತಿಯಲ್ಲಿ ವಿನಿಮಯ ದರವನ್ನು ಗೊತ್ತುಪಡಿಸುವರು ಮತ್ತು ತಕ್ಕವಿದ್ದಷ್ಟು ಅವಧಿಯ ವರೆಗೆ ಅದನ್ನು ಸ್ಥಿಮಿತವಾಗಿಡಲು ಪ್ರಯತ್ನಿಸುವರು. ಅವಶ್ಯವೆನಿಸಿದರೆ ಅವರು, ಧಾರಣೆಗಳ ಮಟ್ಟವನ್ನು ಬದಲಾಯಿಸಲು ಪ್ರಯತ್ನಿಸುವರು; ಪರದೇಶಗಳೊಡನೆ ವ್ಯಾಪಾರ ನಡೆಸಲು ಸಮರ್ಥವಾಗುವಂತೆ ಧಾರಣೆಗಳನ್ನಿಳಿಸುವರು. ಬಹಳ ಉಚ್ಛೃಂಖಲದ ಮತ್ತು ಘಾತಕ ಪ್ರಯತ್ನವಿದು. ರಾಷ್ಟ್ರೀಯ ದೃಷ್ಟಿಯಿಂದ ವಿಚಾರ ಮಾಡಿ ಯೋಗ್ಯ ಪರಿಹಾರೋಪಾಯ ಹುಡುಕುವದರ ಅವಶ್ಯಕತೆಯು ವ್ಯವಹಾರಜ್ಞರಿಗೆ ಎನಿಸುವದು.

ನಮ್ಮ ದೇಶದಲ್ಲಿ ಧಾರಣೆ ಮಟ್ಟವು ಸ್ಥಿಮಿತವಾಗಿರಬೇಕು. ಪರದೇಶಗಳ ನಾಣ್ಯಗಳ ವಿನಿಮಯ ದರವು ಅನಿರ್ಬಂಧವಾಗಿ ಉಳಿಯತಕ್ಕದ್ದು. ಅವಶ್ಯಕ ಸರಿಪಡಿಸುವಿಕೆಗಾಗಿ ವಿನಿಮಯ ದರವು ಹೆಚ್ಚುಕಡಮೆಯಾಗಬೇಕಲ್ಲದೆ ಧಾರಣೆಗಳ ಮಟ್ಟವು ಹೆಚ್ಚು ಕಡಮೆಯಾಗತಕ್ಕದ್ದಲ್ಲ. ನಾಣ್ಯಗಳ ಬೆಲೆಯು ಸ್ಥಿಮಿತದಲ್ಲಿದ್ದ ಯಾವದೇ ದೇಶದ ವಿನಿಮಯ ದರವು ಸುಸ್ಥಿರವಾಗುತ್ತ ಬಲವು ತೋರಿಸುವದು. ಮತ್ತು ಅವಶ್ಯಕ ಅಲ್ಪಸ್ವಲ್ಪ ಏರಿಳಿತಗಳಿಂದ ಆಯಾತ ಮತ್ತು ನಿರ್ಯಾತ ವ್ಯವಹಾರವನ್ನು ನೋಕರಶಾಹಿ ಮತ್ತು ಪರಿಣಾಮಕರವಲ್ಲದ ಘಾತಕ ಕೈವಾಡವಿಲ್ಲದೆ ಸುವ್ಯವಸ್ಥಿತಗೊಳಿಸಲು ಅನುಕೂಲವಾಗುವದು. ಚಂಚಲ ಚಲನಪದ್ಧತಿ ಮತ್ತು ಧಾರಣೆಗಳ ಮಟ್ಟವಿದ್ದ ದೇಶಗಳಲ್ಲಿ ವಿನಿಮಯದ ಅನಿರ್ಬಂಧವು ಆರ್ಥಿಕ ಪರಿಸ್ಥಿತಿಗೆ ತನ್ನಷ್ಟಕ್ಕೆ ತಾನೇ ಹೊಂದಿಕೊಳ್ಳುತ್ತವೆ.

ರಾಷ್ಟ್ರೀಯ ಚಲನ ಬ್ಯಾಂಕುಗಳು ಆರ್ಥಿಕ ಧೋರಣದಲ್ಲಿ ಈ ಎರಡು ಬದಲಾವಣೆಗಳನ್ನು ಕೂಡಲೆ ಮಾಡತಕ್ಕದ್ದು. ಉತ್ಪಾದನೆ ಮತ್ತು ವ್ಯವಹಾರವನ್ನು ಸುಭದ್ರಗೊಳಿಸಿ ಹಣವನ್ನು ಗಳಿಸಲು ಮತ್ತು ತೊಡಗಿಸಲು ಇವುಗಳಿಂದ ಬಹಳ ಸಹಾಯವಾಗಬಲ್ಲದು. ಪ್ರಾರಂಭಕ್ಕೆ ಇಷ್ಟೇ ಸಾಕು. ಆದರೆ ನೂರಾರು ವರ್ಷಗಳ ವರೆಗೆ ಸ್ಥಿಮಿತದಲ್ಲಿದ್ದ ಹಣದ ಬೆಲೆಯನ್ನು ಉಳಿಸಿಕೊಳ್ಳಬೇಕಾದರೆ ಮೂರನೆಯ ಮಹತ್ವದ ಸುಧಾರಣೆಯನ್ನು ಮಾಡಬೇಕಾದುದು ಅವಶ್ಯವಾಗಿದೆ.

೩) ಹಣವು ವಿನಿಮಯದ ಪರಿಪೂರ್ಣ ಸಾಧನವಾಗಬೇಕಾದರೆ ಸದಾ ಸ್ಥಿಮಿತ ಚಲಾವಣೆಯು ಅವಶ್ಯವಾಗಿದೆ. ಆರ್ಥಿಕ ಜೀವನದ ರಕ್ತನಾಳವಿದ್ದಂತಿದೆ ಹಣವು; ಹಣವನ್ನು ಸಂಗ್ರಹವಾಗಿ ಇಟ್ಟರೆ ಮತ್ತು ಅದು ಚಲಾವಣೆಯಲ್ಲಿ ಬರದಿದ್ದರೆ ಏನನ್ನಾದರೂ ಕೊಳ್ಳಲಿಕ್ಕೆ ಇಲ್ಲವೆ ಯಾವದಾದರೊಂದು ಉದ್ಯೋಗ ಧಂಧೆಯಲ್ಲಿ ತೊಡಗಿಸಲಿಕ್ಕೆ ಅದು ಸಿಕ್ಕದಿದ್ದರೆ ಆರ್ಥಿಕ ಜೀವನವು ಸುಭದ್ರವಾಗಿ ಉಳಿಯಲಾರದು.

ಮೇಲಿಂದಮೇಲೆ, ಸರ್ಕಾರೊಂದು ಸಲ ಎನ್ನಲಿ; ನೋಟುಗಳನ್ನು ಹಿಂದಕ್ಕೆ ತೆಗೆದುಕೊಂಡು, ಹೊಸದಾಗಿ ಹೊರಡಿಸಿದ ಹಣ ಮುಂದುಕೊಂಡು, ಹೊಸ ನೋಟುಗಳನು ವಿನಿಮಯವಾಗಿ ತಿರುಗಿ ಕೊಟ್ಟದ್ದಾದರೆ ಹಣವನ್ನು ಹುಗಿದಿಟ್ಟವರು, ಕಳ್ಳಪೇಟೆಯ ಲಾಭಬಡಕರು ಮತ್ತು ಅಭದ್ರ ಸಟ್ಟಾಬಾಜಿಯವರು ತಮ್ಮ ಹಿತದ ದೃಷ್ಟಿಯಿಂದಲೆ ಹಣವನ್ನು ಚಲಾವಣೆಯಲ್ಲಿ ಹಾಕಲೇ ಬೇಕಾಗುತ್ತದೆ. ಆರ್ಥಿಕ ವ್ಯವಹಾರದಲ್ಲಿ ಮತ್ತು ರಚನೆಯಲ್ಲಿ ಇವು ಕೆಲವು ಮಟ್ಟಿಗೆ ಕ್ರಾಂತಿಕಾರಕ ಬದಲಾವಣೆಯೆನಿಸಬಹುದು. ಹಣವು ಪೂರ್ಣವಾಗಿ ನಿಯಂತ್ರಣದಲ್ಲಿ ಬರುವುದು. ಇಂಥ ಅವಶ್ಯಕತೆಗಳಿಗೆ ಮತ್ತು ಪ್ರಸಂಗಗಳಿಗೆ ಮಾತ್ರವೇ ಅದು ನಿಜವಾದ ಸಾಧಕವಾಗಿ ಪರಿಣಮಿಸುವದು. ಪ್ರಾರಂಭದಲ್ಲಿ ಸ್ಥಿಮಿತ ಧಾರಣೆ ಮತ್ತು ಅನಿರ್ಬಂಧ ವಿನಿಮಯ ದರದಿಂದ ಸದ್ಯದ ದಿನಗಳಲ್ಲಿ ಹಣದ ವ್ಯವಹಾರದಲ್ಲಿ ಅವಶ್ಯಕ ಸುಧಾರಣೆಯಾಗಬಹುದು.

ಕ್ರಾಂತಿಕಾರಿಕ ಬದಲಾವಣೆ ಮತ್ತು ಯುದ್ಧದ ಗಂಡಾಂತರಗಳು, ಅಮೇರಿಕೆ ಮತ್ತು ರಶಿಯಾಗಳಲ್ಲಿ ನಡೆದ ಘರ್ಷಣೆಗಳು, ಆರ್ಥಿಕ ಮತ್ತು ಹಣಕಾಸಿನ ಸಮಸ್ಯೆಗಳ ಪರಿಹಾರವಾಗದಿದ್ದುದರ ಪರಿಣಾಮವಿದೆ. ನಿಜವಾಗಿ ಎಲ್ಲ ಜನರಿಗೆ ಕೆಲಸವನ್ನು, ಆಹಾರವನ್ನು ಮತ್ತು ಸ್ವಾತಂತ್ರ್ಯವನ್ನು ಎಂದು ಕೊಡಬಹುದೆಂಬ ಬಗ್ಗೆ ಯಾವದಾದರೊಂದು ದೇಶವು ಹೊಸ ವ್ಯಾವಹಾರಿಕ ಸೂಚನೆಯನ್ನು ಮಾಡಿದ್ದಾದರೆ ಹೊಸ ಧ್ಯೇಯ ಮತ್ತು ಸಂಭಾವ್ಯತೆಯುತ್ತ ರಾಜಕೀಯ ಲಕ್ಷ್ಯವು ಹೊರಳುವದು. ರಶಿಯ ಮತ್ತು ಅಮೇರಿಕೆ ಕೂಡ ಒಳ್ಳೆ ಆಶ್ಚರ್ಯದಿಂದ ಇತ್ತ ಗಮನಿಸುವವು.

ಕೊನೆಯದಾಗಿ ಹೊಸತೊಂದು ವಿಚಾರವು, ಬಂಡವಲಗಾರ ಮತ್ತು ಕಮ್ಯೂನಿಸ್ಟ ಎರಡೂ ರಾಷ್ಟ್ರಗಳಿಗೂ ಸಹಾಯ ಸಲ್ಲಿಸುವ ಮಾರ್ಗವು. ಮೇಲೆ ವಿವರಿಸಿದ ಯೋಜನೆಯು ಎರಡೂ ಕೋಟೆಗಳನ್ನು ಬಿಟ್ಟ ವ್ಯವಹಾರ್ಯ ಮಧ್ಯ ಮಾರ್ಗವು! ಅನೇಕ ದೇಶಗಳಲ್ಲಿ ಈ ಮಾರ್ಗದಲ್ಲಿ ಕಾರ್ಯಮಾಡುವ ಜನರಿರುವರು. ಸ್ವಿತ್ಸರ್ಲಂಡದಲ್ಲಿ ನನ್ನ ಮಿತ್ರರು ಪಾರ್ಲಿಮೆಂಟಿನ ಸದಸ್ಯರಾಗಿರುವರು. ಮತ್ತು ಸ್ವಿತ್ಸರ್ಲಂಡದ ಸರಕಾರದಲ್ಲಿ ಮತ್ತು ನ್ಯಾಶನಲ್ ಬ್ಯಾಂಕಿನಲ್ಲಿ ನಮ್ಮ ವರ್ಚಸ್ಸು ಚನ್ನಾಗಿದೆ. ಜರ್ಮನಿಯಲ್ಲಿ ಹಿಟ್ಲರನು ಈ ಬಗೆಯ ಆರ್ಥಿಕ ಸುಧಾರಣೆಯ ಚಳವಳಿಯನ್ನು ಹತ್ತಿಕ್ಕಿದ್ದರೂ ಅದು ಮತ್ತೆ ಬೆಳೆಯುತ್ತಿದೆ. ೧೯ ಡಿಸೆಂಬರ ೧೯೪೯ ರಂದು ಜಪಾನ ಪಾರ್ಲಿಮೆಂಟಿನ ಸದಸ್ಯರನ್ನು ಕುರಿತು ಈ ಸೂಚನೆಗಳ ಬಗ್ಗೆ ಭಾಷಣ ಮಾಡುವ ಸೌಭಾಗ್ಯ ನನಗೆ ದೊರೆತಿತ್ತು. ಧಾರಣೆಗಳ ಮಟ್ಟವನ್ನು ಅವರು ೧೦೦ಕ್ಕೆ ೭ರಷ್ಟು ಕಡಿಮೆ ಮಾಡಿದರು; ಪರಿಣಾಮವಾಗಿ ೬೦ಲಕ್ಷ ಜನ ನಿರುದ್ಯೋಗಿಗಳಾದರು. ಇದರಿಂದ ಕಮ್ಯೂನಿಜಂದ ಸುಗ್ಗಿ ನಡೆದಿದೆ. ಜರ್ಮನಿಯಲ್ಲಿ ೧೯೨೯ರಿಂದ ೧೯೩೩ರ ವರೆಗೆ ವ್ಯತಿಪ್ರಸರಣದಿಂದ ೭೦ಲಕ್ಷ ಜನ ನಿರುದ್ಯೋಗಿಗಳಾದರು. ಇದರಿಂದ ಹಿಟ್ಲರನು ಅಧಿಕಾರಕ್ಕೆ ಬಂದನು. ಅನಂತರ ಯುದ್ಧವು ಅನಿವಾರ್ಯವಾಯಿತು. ಆರ್ಥಿಕ ವ್ಯವಹಾರದಲ್ಲಿ ಅವ್ಯವಸ್ಥೆಯಾದರೆ ಇದೇ ಬಗೆಯ ಪರಿಣಾಮಗಳಾಗುವವು. ಯಾವದೊಂದು ದೇಶವು ಹೊಸ ಸೂಚನೆಗಳನ್ನು ಚರ್ಚಿಸಲು ಮುಂಬಂದರೆ ಜಗತ್ತಿನ ಅನೇಕ ಭಾಗಗಳಿಂದ ಅದಕ್ಕೆ ಸಹಾಯ ಸಿಕ್ಕುವದು.

ಭಾರತವಿಂದು ಸ್ವತಂತ್ರವಾಗಿದೆ. ಸರಕಾರದಲ್ಲಿ ಹೊಸ ಜನರಿರುವರು. ಅವರಿಗೆ ನಿನ್ನೆಯ ಕಲಸದ ತೊಡಕು ಇಲ್ಲ. ಘಾತಕ ಸಂಬಂಧಗಳೂ ಇಲ್ಲ. ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರ ಜೀವನ ಮತ್ತು ಬೋಧನೆಗೆ ಇದು ಅನುಗುಣವಾಗುವದು. ಯುದ್ಧ ಮತ್ತು ಹಿಂಸೆಯಿಂದ ನಿಜವಾದ ಪರಿಹಾರವೆಂದಿಗೂ ದೊರೆಯದು. ಸತ್ಯಾನ್ವೇಷಣ, ಕರುಣೆ, ತಿಳುವಳಿಕೆ ಮತ್ತು ದಯೆ ಇವು ಸದ್ಯದ ನಮ್ಮ ಪದ್ಧತಿಯಲ್ಲಿಯ ದೋಷಗಳನ್ನು ಕಂಡುಕೊಳ್ಳುವ ಸಾಧನಗಳು. ಹೊಸ ಮತ್ತು ಒಳ್ಳೆಯ ಸಮಾಜವನ್ನು ರಚಿಸಬಲ್ಲೆವು, ಜಗತ್ತಿನಲ್ಲಿ ಶಾಂತಿಯನ್ನುಂಟುಮಾಡಲು ನವ ಮತ್ತು ಸ್ವತಂತ್ರ ಭಾರತವು ಶಕ್ತಿ ಸಂಪನ್ನವಾಗುವದೆಂದು ನನಗೆ ಬಲವಾದ ಆಸೆಯಿದೆ.

ಮಾನವ ಜಾತಿಯಿಂದು ಕವಲು ದಾರಿಯಲ್ಲಿ ಬಂದು ನಿಂತಿದೆ. ಇಂದು ನವ ಭಾರತವು ಸ್ವಾತಂತ್ರ್ಯವನ್ನು ಪಡೆದಿದೆ. ಆದರಿಂದ ಭಾರತವು ಏನನ್ನು ಸಾಧಿಸಬಲ್ಲದು? ನ್ಯಾಯ ಮತ್ತು ಸ್ವಾತಂತ್ರ್ಯ ಭಾವನೆಯಿಂದ ಸಾಮಾಜಿಕ ಸಮಸ್ಯೆಗಳನ್ನು ಅದು ಬಿಡಿಸಿದರೆ ಚೀನದ ದಾರಿಯನ್ನು ಹಿಡಿಯಬೇಕಾಗುವದು. ಯಾದವಿಯುಂಟಾಗಿ ಸರ್ವಾಧಿಕಾರಿತ್ವ, ಕಮ್ಯೂನಿಜಂ ಮತ್ತು ಯುದ್ಧಕ್ಕೆ ಳಸುವದು. ಅದು ತನ್ನ ಈ ಭೀಕರವಾದ ಸಮಸ್ಯೆಗಳನ್ನು ಸತ್ಯ, ಸ್ವಾತಂತ್ರ್ಯ ಮತ್ತು ಸ್ವತಂತ್ರ ಆರ್ಥಿಕ ರಚನೆಯ ಮಾರ್ಗದಿಂದ ಪರಿಹರಿಸಿಕೊಳ್ಳಲು ಸಮರ್ಥವಾದರೆ ಜಗತ್ತನ್ನು ಶಾಂತಿಪಥಕ್ಕೆ ಒಯ್ಯಬಹುದು. ಇದೀಗ ನಮಗೆ ಸುಸಮಯ ದೊರೆತಿದ್ದು ತುಂಬ ಜವಾಬ್ದಾರಿಕೆ ನಮ್ಮ ಮೇಲೆ ಇದೆ."

—ಪಮೇರ ರ್ಬ್ಲ್ಯುಮ್ಸ್ಟರಮನ್

(ತಾ. ೭-೨-೧೯೫೦ ನೇ ದಿನ ಮಂಗಳವಾರ ಕಲಕತ್ತೆಯಲ್ಲಿ ರೋಟರಿ ಕ್ಲಬ್ಬಿನಲ್ಲಿ ಮಾಡಿದ ಭಾಷಣದ ಸಾರವಿದು.)

(ಕರ್ಮವೀರ)


## ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹೊಟ್ಟೆಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ-ಬೆಲೆ; ರೂ 3-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ. ಚಾರ್ಜು ಪ್ರತ್ಯೇಕ.]

MRS. D. DEVEE, F. DS. (N. J.)
Tollygunge CALCUTTA.

ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

For Life Assurance

CONSULT

THE NEW GUARDIAN OF INDIA
LIFE ASSURANCE Co. LTD.
(Established: 1934)

Chairman: Sri. M. C. T. M. Chidambaram Chattiyar.

A Policy in this progressive Life Office is a good investment; its Agency is a valuable business connection.

MANGALORE BRANCH:
K. S. R. Road,
Hampankatta, Mangalore.

HEAD OFFICE:
United India Life Building,
P. B. No. 142 MADRAS.

ಸ್ತ್ರೀಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ನನ್ನ ಭಗಿನಿಯರು ಇತರ ಯಾವ ದೇಶದಲ್ಲಿಯೂ, ಸ್ತ್ರೀಗೆ 'ಮಾತೃ' ಸ್ಥಾನವಾದ ಗೌರವ ಪ್ರೀತಿ, ಭಕ್ತಿಯ ಸರ್ವತತ್ವಪೂರಿತ ಸ್ಥಾನವು ಸಿಕ್ಕಿಲ್ಲವೆಂಬುದನ್ನು ಮರೆಯಬಾರದು! ಅದು ಸ್ತ್ರೀಶೀಲಕ್ಕೆ ಹೆಸರುವಾಸಿಯಾದ ಈ ನಮ್ಮ ಭಾರತ ದೇಶದಲ್ಲಿ ಮಾತ್ರ ರೂಢಿಯಲ್ಲಿದೆ. 'ನೋಡಿದರೆ ನೋಡು, ಮಾತಾಡು ತಾಯಿಯರೆಂದು' ಎಂದು ಪುರಂದರದಾಸರು ಸ್ತ್ರೀಯರ ಬಗ್ಗೆ ನವ ಸುಧಾರಣೆಗನುಗುಣವಾದ ಮನ್ನಣೆ ತೋರಿಸುತ್ತಿರುವ ನವ ತರುಣರಿಗೆ ಒತ್ತಿ ಹೇಳಿದ್ದಾರೆ. ಸಮಾಜದಲ್ಲಿ, ಏಕೆ ಇಡೀ ಮನುಷ್ಯ ವರ್ಗದಲ್ಲಿಯೇ ಉಚ್ಚ ಸ್ಥಾನವಾದ 'ಮಾತೃ' ಸ್ಥಾನವನ್ನು ಪಡೆದ ಸ್ತ್ರೀಯು ಯಾವ ರೀತಿಯಲ್ಲಿ ಇರಬೇಕು, ಯಾವ ಕರ್ತವ್ಯಪಾಲನೆ ಮಾಡುತ್ತಿರಬೇಕು ಎಂಬುದೇ ನನ್ನ ಈ ಲೇಖನದ ಉದ್ದೇಶವಾಗಿದೆ.

'ಗೃಹಿಣೀ ಗೃಹಮುಚ್ಯತೇ' ಎಂಬ ಹಿರಿಯ ವಚನವಿದೆ, ಅದು ಅಕ್ಷರಶಃ ಸತ್ಯ. ಆ ಒಂದು ಉಚ್ಚ ತತ್ವದ ಬಲದಿಂದಾಗಿಯೇ ಲೋಕದಲ್ಲಿ ಎಲ್ಲೂ ಕಂಡುಬಾರದಂತಹ ಶ್ರೇಷ್ಠ ತರದ ಕುಟುಂಬ ಜೀವನ(Family life)ವು ಸುಗಮವಾಗಿ ನಮ್ಮಲ್ಲಿ ಸುಸೂತ್ರವಾಗಿ ನಡೆಯುತ್ತಿದೆ ನಮ್ಮ 'ಮನೆ' ಆಂಗ್ಲೀಯರು ಹೇಳುತ್ತಿರುವ 'Home' ಎಂಬುದನ್ನು ಅನ್ವರ್ಥವನ್ನಾಗಿ ಮಾಡಿದೆ. ಕಾರಣ- ಮನೆಯನ್ನು ನಡಸುವ, ಮನೆಯ ಬಗ್ಗೆ ಶ್ರಮ ವಹಿಸುವ, ಮನೆಯ ಯಜಮಾನಿತಿಯೆಂದು ಮನೆಯ ಎಲ್ಲ ಜವಾಬ್ದಾರಿಯನ್ನೂ ವಹಿಸುವವಳು ಸ್ತ್ರೀ; ಪುರುಷನ ಸಹಧರ್ಮಿಣಿಯಾದ ಪತ್ನಿ! ಆದುದರಿಂದ ಪುರುಷನ ಬಲವೂ ಮನೆಯತ್ತ ಹೊರಳಿರುವುದು. ಎಷ್ಟೋ ಕುಟುಂಬಗಳ ಹಿರಿಮೆಯೂ ಹಿರಿಮೆಗೆ ಜವಾಬ್ದಾರಳೂ ಸ್ತ್ರೀಯಾಗಿರುತ್ತಾಳೆ. ಜವಾಬ್ದಾರಿಯ ಕೆಲಸ, ನೋಡಲು ಸುಲಭವೆಂದು ಕಂಡುಬಂದರೂ ಕಾರ್ಯತಃ ಆಚರಿಸಲು ಕಷ್ಟಸಾಧ್ಯವೇ ಸರಿ. ಅದರ ಅರ್ಥವನ್ನು ಗ್ರಹಿಸಿಕೊಂಡು ಶಿಸ್ತಿನಿಂದ ನಡೆಯುವುದಾದರೆ ಅದೇ ಸುಲಭವಾಗುವುದು. ಹೀಗೆ ಸ್ತ್ರೀಯ ಕರ್ತವ್ಯ ತನ್ನ ಮನೆಯಲ್ಲಿಯೇ ಅಡಕವಾಗಿದೆಯೆಂಬುದು ಸ್ಪಷ್ಟವಾದಂತಾಯಿತು. ಸ್ತ್ರೀಯು ಅಡಿಗೆಮನೆಗೆ ಭೂಷಣವಾಗಿ ಇರತಕ್ಕವಳೆಂಬುದನ್ನು ಒಪ್ಪಿದಂತಹ ಸಂಕುಚಿತ ಭಾವನೆಯು ಅದಲ್ಲ, ಬದಲಾಗಿ ಅದು ಮನೆಯ ಯಜಮಾನಗಿತ್ತಿಯೆಂತಿರುವ ವಿಶಾಲ ಭಾವನೆ.

ಒಂದು ಮನೆಯನ್ನು ನಡಸುವ ಸಂದರ್ಭದಲ್ಲಿ ಸ್ತ್ರೀಗೆ ಯಾವ್ಯಾವ ಕೆಲಸದಲ್ಲಿ ಭಾಗಿಯಾಗಬೇಕಾಗಿದೆಯೆಂದು ಮತ್ತು ಅದನ್ನು ಹೇಗೆ ಮಾಡುತ್ತಿರಬೇಕು ಅದರಿಂದಲೇ ಹೇಗೆ ಲೋಕಾನುಭವವನ್ನು ಪಡೆಯಬಹುದು ಎಂಬುದು ಚಿಂತಿಸತಕ್ಕದ್ದಾಗಿದೆ. ಮನುಷ್ಯನ ಜೀವಮಾನದಲ್ಲಿ ಬರುವಂತಹ ದೈವಿಕ, ನೈತಿಕ, ಸಾಮಾಜಿಕ, ಆರ್ಥಿಕ ವಿಷಯಗಳ ಅನುಭವವು ಚೆನ್ನಾಗಿಯಾಗುತ್ತದೆ, ಮಾತ್ರವಲ್ಲದೆ, ಅಲ್ಲಿಯೇ ತನ್ನ ರಾಜಕೀಯ ಅನುಭವವನ್ನು ಪಡೆಯಬಹುದಾಗಿದೆ.

ಪ್ರಾತಃಕಾಲದಲ್ಲಿ ಎದ್ದು, ಮನೆಯನ್ನು ಸಾರಿಸಿ, ಸ್ವಚ್ಛವಾಗಿರಿಸಿ, ಸುಂದರವಾಗುವಂತೆ ಇರಿಸಲು ದೈಹಿಕ ಜ್ಞಾನವೂ ಕಲೆಯ ಜ್ಞಾನವೂ ಬೇಕು, ಅಂತೆಯೆ, ಮನೆಯ ಮುಂದ ರಂಗವಲ್ಲಿ ಹಾಕುವ ಕ್ರಮವು ಪಾಡಿಕೆಯಲ್ಲಿದೆ, ಪ್ರಾತಃಕಾಲದ ಪ್ರಾರ್ಥನೆ ಅಥವಾ ತುಲಸೀ ಪೂಜೆಯಿಂದ ದೈವಿಕ ಜ್ಞಾನವೂ ಇರಬೇಕೆಂದರ್ಥವಾಗುತ್ತದೆ. ತದನಂತರ ತನ್ನ ಮನೆಯಲ್ಲಿರುವ ಬಂಧುಬಳಗದವರ ಬಗ್ಗೆ ಪಕ್ವಾನ್ನಗಳನ್ನು ತಯಾರಿಸುವುದರಿಂದ ದೇಹದ ಬೆಳವಣಿಗೆಗೆ ಬೇಕಾದ ಪಕ್ವಪದಾರ್ಥಗಳ ರುಚಿಕರವಾದ ವಸ್ತುಗಳನ್ನು ತಯಾರಿಸುವುದಕ್ಕೆ ಪಾಕಶಾಸ್ತ್ರದ ಅನುಭವವೂ ಬೇಕಾಗಿದೆ. ಅದಕ್ಕೆ ಬೇಕಾದ ಸಾಮಗ್ರಿಗಳನ್ನು ಒದಗಿಸುವುದರಿಂದ ವಸ್ತುಗಳ ಉಪಯೋಗ, ಅವುಗಳ ಮಿತಿ, ಅದಕ್ಕೆ ಬೇಕಾದ ದುಡ್ಡಿನ ಮಾಹಿತಿ—ಹೀಗೆ ಅರ್ಥಿಕಾನುಭವವೂ ಇರಬೇಕಾಗುತ್ತದೆ. ಮನೆಯ ಯಜಮಾನನ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಸಲಹೆಯನ್ನೂ ಕೊಡುವ ಸ್ವಂತಾನುಭವವು ಬರುತ್ತದೆ. ಒಂದು ಸಂದರ್ಭದಲ್ಲಿ ಮನೆಯ ಹೆಂಗಸು ಹೊರಗಾಗಿದ್ದಾಗ, ಮನೆಯ ಗಂಡಸರ ಅಡಿಗೆಯ ಕಾಲದಲ್ಲಿ ಖರ್ಚಾಗುವ ಸಾಮಗ್ರಿಗಳ ಅನುಭವವು ನನ್ನ ಭಗಿನಿಯರಲ್ಲಿ ಕೆಲವರಿಗಾದರೂ ಇದ್ದೀತು. ಇದರಿಂದ ವ್ಯಕ್ತವಾಗುತ್ತದೇನಂದರೆ Economy begins at home. ಅದರ ಅನುಭವವು ಮನೆಯ ಹೆಂಗಳೆಯರಿಗೆ ಬೇಕು.

ಮನೆಗೆ ಬರುವ ಸಂಬಂಧಿಕರನ್ನು, ಸ್ನೇಹಿತರನ್ನು ಅಥವಾ ಅತಿಥಿಗಳನ್ನು ಯಾವ ರೀತಿಯಲ್ಲಿ ನಡಸಿಕೊಂಡು ಹೋಗಬೇಕೆಂಬ ಲೌಕಿಕ ಅನುಭವವೂ ಬೇಕಾಗುತ್ತದೆ. ಇಲ್ಲಿ ಬೇರೆ ಬೇರೆ ರೀತಿಯ ಜನರನ್ನು ಹೇಗೆ ನೋಡಬೇಕು, ಯಾವ ರೀತಿಯಲ್ಲಿ ಆದರಿಸಬೇಕು ಎಂಬ ಜ್ಞಾನವೂ ಬೇಕು. ಆದರ ಸತ್ಕಾರದಲ್ಲಿ ಭೇದವಿಲ್ಲದ ಎಲ್ಲರನ್ನೂ ಸಮಾನ ದೃಷ್ಟಿಯಿಂದ ಕಾಣುವ ಆ ವಿಶಾಲ ಹೃದಯ ಬೇಕು.

ಲೋಕದ ಎಲ್ಲ ಜಗಳಗಳಿಗೂ ಸ್ತ್ರೀಯೇ ಕಾರಣಳೆಂಬ ಮಾತು ನಮಗೆ ಕಟ್ಟುತ್ತದಾದರೂ, ಅಂತಹ ಜಗಳಗಳಾಗದಂತೆ ಮೈತ್ರಿಯಿಂದ ಇರುವಂತಹ ವಾತಾವರಣವನ್ನೂ ಸ್ತ್ರೀಯೇ ತರುತ್ತಾಳೆ. ಹೀಗೆ ಮೈತ್ರಿಯಿಂದ ಇರಲು ಹೆಚ್ಚಿನ ನೈತಿಕ, ತಾತ್ವಿಕ ಜ್ಞಾನವೂ ಬೇಕಾಗುತ್ತದೆ, ಮಾತ್ರವಲ್ಲ, ತಾಳ್ಮೆಯೂ ಬೇಕು. ನೆರೆಮನೆಯಲ್ಲಿ ಮೈತ್ರಿಯಿಂದಲೂ ಸೌಹಾರ್ದದಿಂದಲೂ ಇರುವಂತಹ ಸ್ತ್ರೀಯೇ ಇದಕ್ಕೂ ಕಾರಣಳೆಂಬುದನ್ನು ಎಲ್ಲರೂ ಒಪ್ಪಬೇಕಾದ ಮಾತು. ಇಲ್ಲಿಯೇ ಸ್ತ್ರೀಗೆ ರಾಜಕೀಯ ನೈಪುಣ್ಯತೆಯ ಅನುಭವ ಬೇಕಾಗುತ್ತದೆ.

ಮನೆಯಲ್ಲಿ ಯಜಮಾನರು ಅಥವಾ ಯಾರೇ ಆದರೂ ತಪ್ಪುಹಾದಿ ಹಿಡಿಯುವ ಸಂದರ್ಭದಲ್ಲಿ, ತಾಳ್ಮೆಯಿಂದಲೂ ವಿನಯದಿಂದಲೂ ಸಮಯೋಚಿತ ರೀತಿಯಿಂದ ಆ ತಪ್ಪನ್ನು ತೋರಿಸಿ ಆ ಕಳಂಕವನ್ನು ಹೋಗಲಾಡಿಸುವ ಜವಾಬ್ದಾರಿಯು ಸ್ತ್ರೀಯಳದಾಗಿರುತ್ತದೆ. ಕಾಲ, ದೇಶ, ಪರಿಸ್ಥಿತಿಗಳಿಗನುಗುಣವಾಗಿ ಮನೆಯ ಗಂಡಸರನ್ನು ಹುರಿದುಂಬಿಸಿ ಕಾರ್ಯತತ್ಪರರನ್ನಾಗಿ ಮಾಡುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಇಂತಹ ಘನಕಾರ್ಯಗಳಲ್ಲಿ ಸ್ತ್ರೀಯು ಹೆಚ್ಚಿನ ಅನುಕೂಲಳೆಂಬುದು ಹಿಂದಿನ ಚಾರಿತ್ರಿಕ, ಪೌರಾಣಿಕ ಮತ್ತು ಇಂದಿನ ಅನೇಕ ದೃಷ್ಟಾಂತಗಳಿಂದ ವ್ಯಕ್ತವಾಗುತ್ತದೆ.

ಮನೆಯಲ್ಲಿ ಯಾರಾದರೂ ಕಾಹಿಲೆ ಬಿದ್ದಾಗ ಅವರ ಆರೈಕೆಯು ಅದಕ್ಕೆ ತಕ್ಕುದಾದ ಪ್ರಥಮಚಿಕಿತ್ಸಾಭಾರವು ಸ್ತ್ರೀಯದ್ದಾಗಿರುತ್ತದೆ. ಇದರಿಂದಾಗಿ ಚಿಕಿತ್ಸಾನುಭವವೂ ಬೇಕೆಂಬುದು ಸ್ಪಷ್ಟವಾಗುತ್ತದೆ ಇಂತಹ ಆರೈಕೆ, ಸಹಕಾರಗಳಲ್ಲಿ ಸ್ತ್ರೀಗಿರುವಷ್ಟು ತಾಳ್ಮೆಯು ಮತ್ತೊಬ್ಬರಿಗಿಲ್ಲ.

ಮಕ್ಕಳ ಪಾಲನೆಯು ಸ್ತ್ರೀಯ ಮುಖ್ಯ ಕರ್ತವ್ಯ. ಕಾರಣ—ಮಕ್ಕಳ ಪ್ರಥಮ ಪಾಠವು ಮನೆಯಲ್ಲಿ, ತಾಯಿಯ ಬಳಿಯಲ್ಲಿ; ತಾಯಿಯೇ ಪ್ರಥಮ ಗುರು. ಮಕ್ಕಳ ಶೀಲ ಸುಧಾರಣೆಗೆ ತಂದೆತಾಯಿಗಳು ಜೊತೆಯಾಗಿಯೇ ಕಾರಣರಾದರೂ, ತಾಯಿಯ ಪಾಲುಗಾರಿಕೆಯು ಹೆಚ್ಚಿನದು. ಕ್ರಮವಾದ ಆರೈಕೆಯಿಂದ ಪೌಷ್ಟಿಕ ಆಹಾರಗಳನ್ನು ಕೊಡುತ್ತ ಮಕ್ಕಳ ಬೆಳವಣಿಗೆಗೆ ಸಹಾಯಕಳಾಗಿ, ಮಕ್ಕಳು ಬೆಳೆಯುತ್ತ ಬಂದಂತೆ ಸದ್ಬೋಧಯುಕ್ತವಾದ ಮಾತುಗಳಿಂದಲೂ, ಧಾರ್ಮಿಕ, ದೈವಿಕ, ದೇಶಾಭಿಮಾನಯುಕ್ತ, ಸಮಾಜಾಭಿಮಾನಯುಕ್ತ ಕಥೆಗಳನ್ನು ಹೇಳುತ್ತ, ಅಂತಹ ದೃಷ್ಟಾಂತಗಳನ್ನು ನಿತ್ಯಜೀವನದಿಂದ ಎತ್ತಿ ತೋರಿಸುತ್ತ, ವಿಶಾಲಹೃದಯದರಿವನ್ನುಂಟುಮಾಡಿ ಪರರಿಗಾಗಿ ತಾನೆಂಬ ನಿಸ್ವಾರ್ಥಭಾವನೆಯು ಬೆಳೆಯುವಂತೆ, ಸದ್ಧರ್ಮಶೀಲರನ್ನಾಗಿ, ಸತ್ಯಮಾರ್ಯಯುಕ್ತರನ್ನಾಗಿ ನಿಜವಾಗಿ ವಿಶ್ವಕರ್ಮರನ್ನಾಗಿ ಮಾಡುವಂತೆ ಮಮತೆಯಿಂದ ನೋಡುತ್ತಿರುವುದು ಸ್ತ್ರೀಯ ಮಾತೃಸ್ಥಾನದ ಹಿರಿಮೆಯ ಮೊತ್ತಮೊದಲಿನ ಪಾತ್ರವಾಗಿದೆ. ಮಕ್ಕಳಲ್ಲಿ ಸ್ವಾಭಾವಿಕವಾಗಿ ನೆಲಸಿರುವ ಸಹ್ಯಶೀಲತೆ, ಸಮತಾಭಾವನೆಯನ್ನು ಜಾಗೃತಗೊಳಿಸಿ ಅಶ್ಲೀಲ ಚಾಳಿಗಳಿದ್ದರೆ ಅದರ ಕೆಡುಕನ್ನು ತೋರಿಸಿ, ಅವನ್ನು ಹೋಗಲಾಡಿಸಿ, ತಮ್ಮ ಮುಂದಿನ ಜೀವನದಲ್ಲಿ ಪ್ರಭೆಯನ್ನು ಬೀರುವಂತಹ ಸದ್ಬೋಧೆಯನ್ನು ಕೊಡುತ್ತಿರಬೇಕು ಬಾಲ್ಯಾರಭ್ಯ ಮಕ್ಕಳಲ್ಲಿ ಗಂಡಿಯರೆಂಬ ಭೇದವನ್ನುಂಟುಮಾಡುವಂತಹ ಬಾಲಚೇಷ್ಟೆಗಳನ್ನು ಎಚ್ಚರಿಸುವ ಮತ್ತು ಹಾಗೆ ಅವರ ಆ ಸಣ್ಣ ಪ್ರಾಯದಲ್ಲಿಯೇ ಹಿಂದೆಗೆದುಕೊಳ್ಳುವ ದುರಭ್ಯಾಸವನ್ನು ಬಿಟ್ಟುಬಿಡಬೇಕು. ಕಾರಣ—ಇದರಿಂದ ಮುಂದಿನ ಜೀವನದಲ್ಲಿ ಕೆಡುಕುಂಟಾಗಬಹುದು. ಶೀಲಕ್ಕೆ ಧಕ್ಕೆ ತಗಲಬಹುದು. ಮಕ್ಕಳ ಅಧೋಗತಿಗೆ ತಾಯಿಯೇ ಕಾರಣಳು. ತಾಯ್ತನದ ಜವಾಬ್ದಾರಿಯನ್ನು ನಾವು ಚನ್ನಾಗಿ ಅರಿತುಕೊಳ್ಳತಕ್ಕದ್ದು.

ಹೀಗೆ ವಿಚಾರಿಸುತ್ತ ಹೋದರೆ, ಭಗಿನಿಯರೆ, ನಮ್ಮಲ್ಲಿ ಎಷ್ಟು ಜವಾಬ್ದಾರಿಯಿದೆ? ಇದು ನಾವು ಎಷ್ಟು ಮಹತ್ವದ ಕಾರ್ಯತತ್ಪರರಾಗಬೇಕಾಗಿದೆ! ಎಂಬುದು ಉಚಿತವಾಗುತ್ತದೆ. ಹೀಗ ಈ ಕುಟುಂಬ ಜೀವನವನ್ನು ವಿಚಾರಯುಕ್ತವಾಗಿ ನಡಸುತ್ತಿರುವ ನಮ್ಮ ಹಿರಿಮೆಗೆ ಕುಂದೇ? ತುಚ್ಛವೇ? ಇದರಿಂದ ನಮ್ಮ ಸ್ವಾತಂತ್ರ್ಯವು ಕಳೆದುಹೋಗಿದೆಯೇ! ಇಲ್ಲದ ನಿಜವಾದ ಲೋಕಾನುಭವ' ಇದು ನಮ್ಮ ಆದ್ಯ ಕರ್ತವ್ಯವೆಂದು ಒಪ್ಪಲಾರಿರೇನು! ಇದು ನಮ್ಮ ಸ್ವಾತಂತ್ರ್ಯವನ್ನು ಕಿತ್ತಿಲ್ಲ, ಬದಲಾಗಿ ನಮ್ಮ ಪ್ರತಿಭೆಯನ್ನು ಹೆಚ್ಚಿಸಿದೆ. ಅದರಿಂದಲೇ ಹಿಂದಿನ ಮುನಿಗಳು 'ಪಿತೃಶತ ಗುಣಂ ಮಾತ್ರೀ' ಎಂದೂ, ಸ್ತ್ರೀ 'ಉಭಯ ಕುಲೋತ್ತಾರಿಣೀ' ಎಂದೂ ಮನ್ನಣೆಯನ್ನು ಕೊಟ್ಟಿದ್ದಾರೆ ಇದನ್ನು ಪಾಲಿಸುವುದೇ ನಮ್ಮ ಆದ್ಯ ಕರ್ತವ್ಯವೆಂದು ಮಾಡಾಗೋಣ!

ಭಗಿನಿಯರೆ, ಇದೇ ರೀತಿ ಪ್ರತಿಯೊಂದು ಮನೆಯೂ ಲೌಕಿಕ ಸ್ವರ್ಗವಾಗಿ ಪರಿಣಮಿಸಿದರೆ, ನಮ್ಮ ಸಮಾಜದ, ಜನಾಂಗದ, ದೇಶದ ಮಾತ್ರವಲ್ಲ, ಲೋಕದ ಕಲ್ಯಾಣವಾಗಿ ಸುಖಶಾಂತಿ ಸಾಮ್ರಾಜ್ಯವು ನೆಲಸುವುದರಲ್ಲಿ ಯಾವ ಸಂದೇಹವೂ ಇಲ್ಲ. ಆದುದರಿಂದ ನವ ನಾಗರಿಕತೆಯ ಲೌಕಿಕ ಆಡಂಬರದ ಸ್ತ್ರೀ ಸ್ವಾತಂತ್ರ್ಯದ ಹುಚ್ಚನ್ನು ಬಿಟ್ಟು, ನಮ್ಮ ಹಿರಿಯರು ಈ ಮೇಲೆ ಕಾಣಿಸಿದಂತೆ ಹಾಕಿಕೊಟ್ಟ ಮಾರ್ಗಗಾಮಿಗಳಾಗಿ, ಉಚ್ಚ ಕಾರ್ಯತತ್ಪರರಾಗಿ ಕರ್ತವ್ಯಪಾಲನೆ ಮಾಡುವಂತಹ ಸುವಿದ್ಯೆಯನ್ನು ಪಡೆದು ಮನೆಯ ರಾಣಿಯಾಗಿ ಲೋಕ ಕಲ್ಯಾಣದ, ಲೋಕ ಶಾಂತಿಯ ಸಾಮ್ರಾಜ್ಯೋತ್ಪಾದಕರಾಗಿ ಮೆರೆಯೋಣ. ಇದು ನಮ್ಮ ಆದ್ಯ ಕರ್ತವ್ಯ. (ಕ.ಗುಡಿ.)

---


"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ, ಇವರ

ನವಜೀವಾತು ಎಂಬ ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಸುಲಭವಾಗಿರುವುದು.



ಹೆಚ್ಚಿನ ಮಾಹಿತಿಗೆ—ಡಾ| ಯಂ. ಸಿ. ಶಾಸ್ತ್ರೀ, ಯಲ್. ಐ.

ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಸ್ಟಾಕಿಸ್ಟರು:—ಡಾ| ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.


---


BUY INDIAN! ENCOURAGE INDIAN INDUSTRY!

ಆಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD.

Highly perfumed and medicated, worth using daily by one and all, keeps hair black and relieves headache etc.

TRADE MARK

Manufactured by:-

Swadeshi Oushadhi Bhandara (Regd-)

KUNJAL P. O. Brahmavar, S. K.


EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 3618 | Estd. 1921 ಸ್ಥಾಪನೆ | 27-4-1950

LICENCE No. 31
Licensed to Post
without Prepayment

FOUNDER:
Sri. A. B. Shetty
Minister for Agriculture
& Veterinary

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30 ವಾರ 35

# NAVAYUGA WEEKLY UDIPI, S. K.

Post Box No. 22

Vol 30 No. 35

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

## ಈಗಿನ 'ಜನಮತ' ಎಂದರೇನು?

ರಾಜಕೀಯ ಜ್ಞಾನದ ಮಟ್ಟಿಗೆ, ಅಥವಾ ಸ್ವತಂತ್ರ ರಾಜ್ಯಭಾರ ನಿರ್ವಹಣದಲ್ಲಿ ಭಾರತೀಯ ಜನಸಾಮಾನ್ಯರು, ಇನ್ನೂ ಶಿಶುಸಮಾನರಿದ್ದಾರೆ; ಅವರಲ್ಲಿ ಅಜ್ಞಾನ, ಅರೆಜ್ಞಾನ, ಅಪಕ್ವತೆ, ಅಸಂಬದ್ಧತೆ, ಅತಿರೇಕ ವರ್ತನೆಗಳು ಮಿತಿಮೀರಿವೆ; ಎಂಬುದರ ಕಡೆಗೆ ಮೇಲಿಂದ ಮೇಲೆ ಪ್ರಕಾಶ ಬೀರಿ, ಬೇರೆ ಬೇರೆ ದಿಕ್ಕುಗಳಿಂದ ಮತ್ತು ವಿವಿಧ ವಿಭಾಗಗಳಿಂದ, ಈ ದುಸ್ಥಿತಿಯ ಸ್ಪಷ್ಟ ಚಿತ್ರವನ್ನು ಮುಂದಿಟ್ಟು ಜನಜಾಗ್ರತಿಯನ್ನು ಉಂಟು ಮಾಡುವ ಆವಶ್ಯಕತೆ ಇದ್ದೇ ಇದೆ.

'ರಾಜಕೀಯ ಶಿಶುಗಳು' ಎಂದ ಮೇಲೆ ಬಾಲ ಸ್ವಭಾವಾನುಸಾರ ರಮ್ಯಾಕಾರವೆಲ್ಲವನ್ನೂ ಮೆಚ್ಚುವ, ರೌದ್ರಾಕಾರವೆಲ್ಲಕ್ಕೂ ಬೆಚ್ಚುವ ಹವ್ಯಾಸವಿರಲೇ ಬೇಕು. ಹಿಂದೀ ಜನತೆಯಲ್ಲಿ ಈ ಸ್ವಭಾವವೇ ಕಂಡು ಬರುತ್ತಿದೆ.

ಕಾಂಗ್ರೆಸ್ ದೇಶಭಕ್ತರಾಗಿ– ಕಮ್ಯೂನಿಸ್ಟ್, ಸೋಶಿಯಾಲಿಸ್ಟ್ ಕಾಮ್ರೇಡರಾಗಿ– ಆರ್. ಯಸ್. ಯಸ್., ಹಿಂದೂ ಮಹಾಸಭಾ ಧರ್ಮವೀರರಾಗಿ– ಈಗ ಮೆರೆದಾಡುತ್ತಿರುವವರ ಚರಿತ್ರೆಯತ್ತ ನೋಡಿದರೆ ಹೆಚ್ಚಿನವರು, ಪೋಷಾಕು ಬದಲಾಯಿಸುವ ಮಾದರಿಯಲ್ಲೇ ಪಕ್ಷ ಬದಲಾಯಿಸಿಕೊಂಡವರೆಂಬುದು ಕಂಡುಬರುವುದು. ಇಂದಿನ ಪರಿವರ್ತನಾಯುಗದಲ್ಲಿ ಪಕ್ಷಾಂತರವು ಅಸ್ವಾಭಾವಿಕ ಅಥವಾ ಅಪರಾಧವೇನೂ ಅಲ್ಲ. ಆದರೆ ಧ್ಯೇಯ, ಘೋಷಣೆ, ತತ್ವ, ಕಾರ್ಯಕ್ರಮಗಳ ಸಮ್ಮತಿ, ಅಸಮ್ಮತಿಗಳನ್ನಾಧರಿಸಿಯೇ ಇಂತಹ ವರ್ಗಾವರ್ಗಿಗಳಾಗುವುದು ನ್ಯಾಯ ಹೊರತು ಅಕಾರಣವಾಗಿ ಅಥವಾ ವ್ಯಕ್ತಿಗತ ಕಾರಣಗಳಿಗಾಗಿ ಪಕ್ಷ ಬದಲಾವಣೆಯೆಂದರೆ ಅದೊಂದು ಹುಚ್ಚಾಟವೇ ಹೊರತು ಬೇರಲ್ಲ. ಕಂಡದ್ದನ್ನು ಮೋಹಿಸುವ ಚಂಚಲತೆಯೇ ಇಂತಹ ವರ್ತನೆಗಳಿಗೆ ಹೇತು.

ಬ್ರಿಟಿಷ್ ಆಡಳಿತೆ ಬಂದ ಮೇಲೆ ಇಂಗ್ಲಿಷ್ ಭಾಷೆ, ಬ್ರಿಟಿಷ್ ನಾಗರಿಕತೆ, ಮತ್ತು ಬ್ರಿಟಿಷರ ವೇಶಭೂಷಣ, ವರ್ತನೆಗಳು ಜನರನ್ನು ಸುಲಭದಲ್ಲಿ ಆಕರ್ಷಿಸಿಕೊಂಡುವು; ಆ ಮೇಲೆ ಗಾಂಧೀಯುಗ ಪ್ರಾರಂಭಿಸಿದೊಡನೆ, ಗಾಂಧೀ ವೇಷ ವರ್ತನೆಗಳು, ಒಂದು 'ಫೇಶನ್' ಆಗಿಯೇ ಕಾಣಿಸಿಕೊಂಡವು. ಈ ದಿನದ ವರೆಗೂ ಇವೆರಡು ಆಕರ್ಷಣೆಗಳ ಗಂಟಿಕೊಂಡಿರುವವರನ್ನು ಕಾಣುತಿದ್ದೇವೆ ಬ್ರಿಟಿಷ್ ಫೇಶನ್ ಅಥವಾ ಗಾಂಧೀ ಮರ್ಜಿಯನ್ನು ಎಲ್ಲಿ, ಯಾರು, ಎಷ್ಟರ ವರೆಗೆ ಅನುಕರಿಸುವದು ಯೋಗ್ಯವೆಂಬ ವಿಚಾರದತ್ತ ಹೆಚ್ಚಿನವರ ಲಕ್ಷ್ಯವೇ ಇಲ್ಲ.

ಗಾಂಧಿಜೀ 'ತಕ್ಲಿ' ತಿರುಗಿಸಲಾರಂಭಿಸಿದ ಆ ಕಾಲದಲ್ಲಿ ರಸ್ತೆಯ ಆ ಮೂಲೆಯಿಂದೀ ಮೂಲೆಯ ವರೆಗೆ, ಹಲವು ತಕ್ಲಿಗಳನ್ನು ಕಾಣಬಹುದಾಗಿದ್ದಿತು. ಪಂಡಿತ ಜವಾಹಿರಲಾಲರು 'ಎದೆಯಂಗಿ'ಯನ್ನು ಧರಿಸಲು ತೊಡಗಿದ ನಂತರ, ನೆಹರೂ ಹೃದಯವು ತಮಗೆ ಬರಬೇಕೆಂಬ ಅಥವಾ ಬಂದಿದೆ ಎಂಬುದನ್ನು ತೋರಿಸಬೇಕೆಂಬ ಲವಲವಿಕೆಯಿಂದ ದೇಶದ ಜನತೆಯಲ್ಲಿ ಬಹುಶಃ ಇಪ್ಪತ್ತೈದು ಮಂದಿಗೊಬ್ಬನಂತಾದರೂ ನೆಹರೂ ಎದೆಯಂಗಿ ತೊಡುತಿದ್ದಾರೆ. ಗಾಂಧೀ ಟೋಪಿಯ ಪ್ರಭಾವವಂತೂ ನಿತ್ಯದ ನಿದರ್ಶನ. ರಾಷ್ಟ್ರ ಧ್ವಜದ ತ್ರಿವರ್ಣಗಳ ಬದಿಯಂಚುಗಳುಳ್ಳ ಸೀರೆ, ರವಕೆಗಳು ಈಗಿನ 'ಫೇಶನ್' ಆಗಿವೆ. ಇನ್ನು ಅಶೋಕಚಕ್ರಾಕಾರದ ತಿಲಕವನ್ನು ತೊಡಲು ಪ್ರತಿಷ್ಠಾವಂತ ಮಹಿಳೆಯರಾರಂಭಿಸಿದರೆಂದರೆ, ಮತ್ತೆ ಕುಂಕುಮ ಬೊಟ್ಟಿನ ಬದಲು ಚಕ್ರಗೆರೆಗಳನ್ನೇ ಸುಮಂಗಲೆಯರ ಹಣೆಯಲ್ಲಿ ಕಾಣುವಂತಾಗಬಹುದು. ಇಂತಹ ವರ್ತನೆಗಳಲ್ಲಿ ಅಸ್ಥಿರ ಮೋಹದಿಂದ ಅನುಕರಣೆಮಾಡುವ ಭ್ರಮೆಯ ಹೊರತು, ಯಾವ ವಿಶೇಷ ಘನಸ್ಥಿಕೆಯೂ ಗೋಚರಿಸಲಾರದು.

ದೇವ ಚಿತ್ತವೃತ್ತಿಗಳಂತೆಯೇ ಗಾಂಧಿಜೀಯ ಮಾತುಕೃತಿಗಳೂ ಪ್ರಶ್ನಾತೀತ, ಪವಿತ್ರವೆಂದು ನಂಬಿದ್ದ ಹಲವರ ಹೃದಯಾಂತರಾಳದಲ್ಲಿ 'ಗೋಡ್ಸೆಯೊಬ್ಬ ವೀರ–ಅವನ ವಾದ, ವರ್ತನೆ ಮಹತ್ವದ್ದು' ಎಂಬ ಗೌರವ ಭಾವನೆ ಹುದುಗಿದೆಯೆಂಬುದನ್ನು ಹೆಚ್ಚಿನ ಶೋಧನೆಯಿಲ್ಲದೇನೇ ಕಂಡುಕೊಳ್ಳಬಹುದು. ಎಂತಹ ದುರ್ವಾಸನಾ ಗಾಳಿಯೆತ್ತ ಬೀಸಿದರೂ ಅತ್ತ ಮಾಲುವ ಬಳುಕಾಟವೇ ಜನತಾ ಮನೋವೃತ್ತಿಯೆಂಬುದಕ್ಕೆ ಇದಕ್ಕಿಂತ ಹೆಚ್ಚಿನ ನಿದರ್ಶನ ಬೇಕಾಗಿಲ್ಲ.

ಪಂಡಿತ ನೆಹರುಗಳು ಮಿ. ಲಿಯಾಖತ್ ಅಲೀಖಾನರೊಂದಿಗೆ ಮಾಡಿಕೊಂಡ ಒಪ್ಪಂದ, ಮತ್ತಾ ಸಂಬಂಧವಾಗಿ ಕೊಟ್ಟ ಹೇಳಿಕೆಗಳಿಗೆ 'ಸೈ' 'ಶಹಭಾಸ್!' ಕೊಡದವರಿಲ್ಲ; ಆದರೆ ಡಾ| ಶ್ಯಾಮ ಪ್ರಸಾದ್ ಮುಖರ್ಜಿಗಳು ಈ ಸಂಬಂಧದ ಕುರಿತು ಅತೃಪ್ತಿಗೊಂಡು ಕೊಟ್ಟಿರುವ ರಾಜೀನಾಮೆಯನ್ನು, ಮತ್ತದರ ಕಾರಣಗಳನ್ನು ವಿವರಿಸಿ ಅವರು ಪಾರ್ಲಿಮೆಂಟಿನಲ್ಲಿತ್ತ ಹೇಳಿಕೆಯನ್ನು ಕೊಂಡಾಡುವವರು ಕೂಡಾ ಬಹಳ ಮಂದಿ ಇದ್ದಾರೆ. ಅದೂ ಸರಿ, ಇದೂ ಸರಿ, ಆಕರ್ಷಕವಿರುವುದೆಲ್ಲವೂ ಅಮೂಲ್ಯ ಎಂದೇ ಭಾವನೆ!

"ಪಾಕಿಸ್ತಾನದಲ್ಲಿ ಮುಸ್ಲಿಮೇತರ ಮೇಲೆ ಪಾಶವಿಕ ಅತ್ಯಾಚಾರ ನಡೆಯುತ್ತಿದೆ; ಸರ್ವ ನಾಶವಾಗುತ್ತಿದೆ" ಎಂಬ ವಾರ್ತೆ ಬಂದುದೇ ತಡ–ಅದು ಜೊಡ್ಡಿ, ಹಾಹಾಕಾರವಾಗಿ ಎಲ್ಲೆಲ್ಲೂ ಧ್ವನಿ, ಮಾರ್ದನಿ ಕೊಡಹತ್ತಿತು. ಬೆನ್ನಲ್ಲೇ "ಅಲ್ಲಿಯೂ ಆಗಿದೆ–ಇಲ್ಲಿಯೂ ಆಗಿದೆ; ಅಲ್ಲಿಂದಲ್ಲಿಗೆ ಪಲಾಯಿಸಿಕೊಳ್ಳೋಣ" ಎಂಬ ವಾದ ಮುಂದೆ ಬಂತು– ಈಗ ಎಲ್ಲರೂ ಅದನ್ನೇ ಪರಿಸಹತ್ತಿದ್ದಾರೆ. ಆದುದೆಷ್ಟು, ತಾವು ಅರಿತುದೆಷ್ಟು, ಆಂದುದೆಷ್ಟು, ಎಂಬ ವಿಚಾರ ವಿಮರ್ಶೆಗಳಿಗೆ ಇಂದಿನಿಂದೀ ವರೆಗೂ ಎಡೆಯಿಲ್ಲ.

"ಪಾರತಂತ್ರ್ಯವು ನರಕ–ಸ್ವಾತಂತ್ರ್ಯವೇ ಸ್ವರ್ಗ" ಎಂಬ ಪಲ್ಲವಿಯ ಮೋಹಕತೆಯಿಂದ ಆ ಕಾಲದಲ್ಲಿ ಎಲ್ಲರೂ ಅದನ್ನು ಹಾಡಿದ್ದರು ಹೊರತು ಅರ್ಥವರಿತಲ್ಲ; "ಸ್ವತಂತ್ರಾಡಳಿತೆಯು ಸಾರ್ಥಕವಾಗಿಲ್ಲ; ಸಮರ್ಪಕವಾಗಿಲ್ಲ" ಎಂಬ ಸ್ವರವೆದ್ದೊಡನೆ ಎಲ್ಲರೂ ಅದಕ್ಕೆ ಸ್ವರ ಕೂಡಿಸುತಿದ್ದಾರೆಯೇ ಹೊರತು ಎಲ್ಲಿ,ಎಷ್ಟಂಶ ಪರಾಭವಗೊಂಡಿದೆ ಎಂಬುದನ್ನು ವಿಮರ್ಶಿಸಿ ತಿಳಿದವರು ಬಹುಮಂದಿಯಿಲ್ಲ.

'ಜನಮತ'ವೆಂದರೆ, ಯಾವ ವಿಷಯದಲ್ಲೇ ಆದರೂ 'ಗುಂಪಿನೊಡನೆ ಗೋವಿಂದಾ!' ಹಾಕುವದೊಂದೇ–ಬೇರಲ್ಲ.

ಸಾಹಿತಿ, ಚಿತ್ರಗಾರ, ಸಂಗೀತಗಾರ, ಶಿಲ್ಪಿ, ಮುಂತಾದ ಯಾವ ಕಲಾವಿದರೇ ಇರಲಿ–ಹೇಗಾದರೂ ಒಮ್ಮೆ ಪ್ರಸಿದ್ಧಿಗೆ ಬಂದರೆಂದರೆ, ಮತ್ತೆಲ್ಲರೂ ಎಲ್ಲಾ ಸಂದರ್ಭಗಳಲ್ಲೂ ಅವರನ್ನು ಶ್ಲಾಘಿಸುವದೊಂದೇ; ಗುಣದೋಷಗಳನ್ನು ವಿಮರ್ಶಿಸಿ ತಿಳಿಯುವವರು ಹೆಚ್ಚು ಮಂದಿಯಿಲ್ಲ.

ಧನ, ಜನ ಬಲದಿಂದ ಅಥವಾ ಇನ್ನಾವುದೇ ಕಾರಣಗಳಿಂದ ವರ್ಚಸ್ಸನ್ನು ಗಳಿಸಿಕೊಂಡರಾಯಿತು – ಅಂಥವರನ್ನು ಸಂಗತಿ, ಸಂದರ್ಭಗಳ ತಾರತಮ್ಯವಿಲ್ಲದೆ ಎಲ್ಲರೂ ಎಲ್ಲೆಲ್ಲೂ ಗೌರವಿಸುವದೇ ಸರಿ.

'ಜನಮತ'ವನ್ನಾಧರಿಸಿ ರಾಷ್ಟ್ರದ ಭವಿಷ್ಯ ಅಥವಾ ಸರಕಾರ ರಚನೆಯಾಗಬೇಕಾದ ಈ ಜನತಾ ರಾಜ್ಯದ ಜನತೆಯ ಮನೋವೃತ್ತಿಯು ಈ ಮಾದರಿಯದಿದೆ! ಅಂದ ಮೇಲೆ, ಇಂತಹ ಅಲುಗಾಡುವ ಅಸ್ತಿಭಾರದ ಮೇಲೇರುವ ರಾಜ್ಯ ಕಟ್ಟಡವೆಂತಹದಿದ್ದೀತು, ಎಷ್ಟು

"ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

**ಗೀತೆಯ ಕೈಗನ್ನಡಿ**

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು–ದಿ। ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವು ದಿನಾತುಗಾರಿಕೆಯ ಮಾತುಗಳ ರೂಪದಲ್ಲಿಳಿದ ಥಟ್ಟನೆಯಾಗಿ ಎದ್ದು ಕಾಣುವುದು.

400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್, ಉಡುಪಿ, ದ. ಕನ್ನಡ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ

ಸುಭದ್ರವಾದೀತು, ಎಂಬುದನ್ನು ಊಹಿಸಬಹುದು

ಕೇವಲ ಮತದಾರ ಸ್ವಭಾವವನ್ನಷ್ಟೇ ನೋಡಿದರೆ ಸಾಕು. ಈ ವರೆಗಿನ ಚುನಾವಣೆಗಳಲ್ಲಿ ಪಕ್ಷ, ಪಂಗಡ ಅಥವಾ ವ್ಯಕ್ತಿಯ ಪ್ರತಿಷ್ಠೆ, ಪ್ರಭಾವಗಳ ಕೈವಾಡ ಮಾತ್ರ ತೋರಿ ಬಂದಿದ್ದಿತು ಹೊರತು, ಮತದಾರರ ಸ್ವಂತ ಯೋಚನೆಯೆಂಬುದಿರಲೇ ಇಲ್ಲ. ಬರುವ ವರುಷದ ಎಪ್ರಿಲಿನಲ್ಲಿ ಜರಗಲಿರುವ, ಜನತಾರಾಜ್ಯದ ಪ್ರಥಮ ಮಹಾ ಚುನಾವಣೆಯಲ್ಲಾದರೂ ಈ ದುಸ್ಥಿತಿ ಪೂರ್ಣ ಅಡಿಮೇಲಾದೀತೆಂದು ಆಶಿಸಲಾಗುವದಿಲ್ಲ. ಮತದಾರರ ಸಂಖ್ಯೆ ಇಮ್ಮಡಿ, ಮುಮ್ಮಡಿ ಬೆಳೆಯಲಿರುವ ಮುಂಬರುವ ಚುನಾವಣೆಯಲ್ಲಿ ಹೆಚ್ಚೆಂದರೆ ಈ ವರೆಗಿನ ಪ್ರತಿಷ್ಠೆ, ಪ್ರಭಾವಗಳ ಬದಲಿಗೆ ಪ್ರಚಾರದ ಪ್ರಾಮುಖ್ಯತೆಯುಂಟಾದೀತು. ಹೀಗಾದರೂ ಕೂಡಾ ಮತದಾನ ಕಾರ್ಯದಲ್ಲಿ ಅಪೂರ್ಣ ಸ್ಥಿತಿಯೆಂಬುದನ್ನು ತಿಳಿದಿರಬೇಕು. ಯಾವುದೇ ಪ್ರತಿಷ್ಠೆ, ಪ್ರಚಾರಗಳ ಪ್ರವಾಹದಿಂದಾದರೂ ಸೆಳೆಯಲ್ಪಟ್ಟ ರಾಶಿ ಬೀಳುವ ಬದಲಿಗೆ, ಸ್ವಂತ ವಿಚಾರ, ವಿಮರ್ಶೆಗಳಿಂದ ಸ್ವನಿರ್ಧಾರ ಮಾಡುವ—'ತನ್ನ ಕಾಲ ಮೇಲೆ ತಾನು ನಿಲ್ಲುವ' —ಸ್ಥಿತಿ ಮತದಾರರದಾದರೇನೇ ನ್ಯಾಯಬದ್ಧ ಮತದಾನ.

ಜನಸಾಮಾನ್ಯರು ಅಂತಹ ಉತ್ತಮ ದರ್ಜೆಗೇರುವ ವರೆಗೆ, ಜನಮತದಿಂದಾರಿಸಲ್ಪಡುವ ಆಡಳಿತೆಯು "ಜನಪ್ರತಿನಿಧಿ" ಎನ್ನಿಸಿದರೂ ಉತ್ತಮವಾಡಳಿತೆಯಾಗದು. ಜನಮತವು ಈ ರೀತಿ ಸುಧಾರಿಸಲ್ಪಡುವ ತನಕ ಜನತೆಯು ಕೊಡುವ ಸೂಚನೆ, ತೀರ್ಮಾನಗಳೆಲ್ಲವೂ ನ್ಯಾಯೋಚಿತವಾಗಲಾರವು. ಒಳಿತು ಕೆಡುಕು, ನ್ಯಾಯಾನ್ಯಾಯಗಳನ್ನು ಸ್ವತಃ ವಿಮರ್ಶಿಸಿ ಗೊತ್ತು ಹಚ್ಚಲಾಡುವ ಸ್ವಬುದ್ಧಿ ಜನತೆಯಲ್ಲಿ ಮೂಡುವ ತನಕ, ಸಾರ್ವಜನಿಕರ ಪರವಾಗಿ ಅಥವಾ ಸಾರ್ವಜನಿಕಾಭಿಮತವನ್ನಾಧರಿಸಿ, ಎಂತಹ ಅಕೃತ್ಯಗಳನ್ನಾದರೂ ಜರಗಿಸಲು ಸಾಧ್ಯವಿದೆ.

ಆದ್ದರಿಂದ, ಕೇವಲ ನ್ಯಾಯವಾಗಬೇಕು— ಸಾರ್ವತ್ರಿಕ ಪ್ರಗತಿಯೊಂದಬೇಕು— ಎಂದು ಬಯಸುವ ಯಾರೇ ಆದರೂ ಮುಂದಾಗಿ ಜನತೆಯಲ್ಲಿರುವ ಇಂದಿನ ದೋಷ ದೌರ್ಬಲ್ಯಗಳನ್ನು, 'ಗುಂಪುಗೋವಿಂದಾ' ಮನೋವೃತ್ತಿಯನ್ನು, ನಿವಾರಿಸಲು ಪ್ರಯತ್ನಿಸಿಯಾರು. ಬದಲಿಗೆ ತಮ್ಮ ಪಕ್ಷವು ಅಥವಾ ತಾವು ಗೆದ್ದರಾಯಿತು, ಎಂಬ ಆಶೆ ಮಾತ್ರವಿರುವವರು, ತಮ್ಮನ್ನು ಅವಲಂಬಿಸುವ ಆವಶ್ಯಕತೆಯು ಜನರಿಗಿನ್ನೂ ಇರುವಂತೆ, ಜನರ ಇಂದಿನ ಪರಾವಲಂಬನಾಬುದ್ಧಿಯು ಊರ್ಜಿತವಾಗಿರಲಿ, ಎಂದು ಹಾರೈಸಿಯಾರು.

ಮುಂಬರುವ ಚುನಾವಣೆಯಲ್ಲಾದರೂ ಜನಮತವನ್ನೊಲಿಸುವುದಕ್ಕಾಗಿ ಮಾತ್ರವೇ ಜನತಾ ಸಂಪರ್ಕವೆಂಬ ಸ್ಥಿತಿಮತಿ ಕಂಡು ಬರುತ್ತಿದೆ. ಇದಕ್ಕಿಂತ ವಿಶಾಲ ಧೋರಣೆ ವಹಿಸಿರುವ ಪಕ್ಷ, ಪಂಗಡಗಳಾವುವೂ ಸದ್ಯ ಕಾಣಿಸುತ್ತಿಲ್ಲ. ಹೀಗಾಗಿ ಪ್ರಚಲಿತ ಸ್ಥಿತಿಗತಿಗಳ ಮೇಲಿಂದ ರಾಜಕೀಯ ಪಕ್ಷಗಳ ವಿಜಯ ನಿರೀಕ್ಷೆಗಳಲ್ಲದೆ, ಸಾರ್ವತ್ರಿಕ ಪ್ರಗತಿಯ ಭರವಸೆ ತೋರಿಬರುವದಿಲ್ಲ.

# ಮುಂಬರುವ ಮಹಾ ಚುನಾವಣೆಗಾಗಿ-

## 1951ನೇ ಎಪ್ರಿಲಿನೊಳಗೆ ಸಾರ್ವತ್ರಿಕ ಚುನಾವಣೆ!

ಸ್ವತಂತ್ರ ಭಾರತದ ಜನತಾರಾಜ್ಯ ಭಾರ ಶಾಸನಸಭೆಗಳ ಸ್ಥಾನಗಳನ್ನು ಮತ್ತು ಚುನಾವಣಾ ಕ್ರಮ ವಿಧಾನಗಳನ್ನು ಒಳಗೊಂಡ 'ಜನತಾ ಪ್ರಾತಿನಿಧ್ಯ ಮಸೂದೆ'ಯು ಭಾರತ ಪಾರ್ಲಿಮೆಂಟಿನಲ್ಲಿ ಕಾನೂನು ಮಂತ್ರಿ ಡಾ. ಅಂಬೇಡ್ಕರರಿಂದ ಎಪ್ರಿಲ್ ತಾ. 12ರಲ್ಲಿ ಮುಂದೆ ಬಂದಿದ್ದಿತು. ಆ ಕುರಿತು ವಿಶೇಷ ರೀತಿಯ ಚರ್ಚೆ ಮತ್ತು ಪರ್ಯಾಲೋಚನೆ, ಪರಿಶೀಲನೆಗಳು ನಡೆದು ಕೆಲವು ಗಣ್ಯ ಬದಲಾವಣೆಗಳಾಗಿ ಎಪ್ರಿಲ್ ತಾ. 20ರ ಪಾರ್ಲಿಮೆಂಟ್ ಸಭೆಯಲ್ಲಿ ಮಸೂದೆ ಮಂಜೂರಾಗಿದೆ. ಈ ಮಸೂದೆಯ ಚರ್ಚೆಯ ವೇಳೆ ಪ್ರಧಾನಿ ಪಂಡಿತ ನೆಹರುಗಳು ಅಂದಂತೆ ಮಹಾ ಚುನಾವಣೆಯು 1951ನೇ ಎಪ್ರಿಲಿನಲ್ಲಿ ಜರಗಲಿದೆ; ಭಾರತಾಧ್ಯಕ್ಷರು ನೇಮಿಸಿರುವ 'ಚುನಾವಣಾ ಕಮಿಶನರ"ರಿಗೆ ಸಹಾಯಾರ್ಥ ಸಮಿತಿಯೊಂದು ಸಭಾಧ್ಯಕ್ಷರಿಂದ ನೇಮಿಸಲ್ಪಡಲಿದೆ. ಮತದಾರ ಕ್ಷೇತ್ರಗಳ ಪುನರ್ರಚನೆ ಮತ್ತು ಚುನಾವಣಾ ಸಂಬಂಧದ ಇತರ ಎಲ್ಲಾ ವಿಷಯಗಳ ಸವಿವರ ರೂಪರೇಖೆ ನಮೂದಿಸುವ ಒಂದು ಹೊಸ ಮಸೂದೆಯು ಪಾರ್ಲಿಮೆಂಟಿನ ಮುಂದೆ ಮುಂದಿನ ಅಧಿವೇಶನಗಳಲ್ಲಿ ಬರಲಿದೆ. ಜನರಾಜ್ಯದ ಉದ್ಘಾಟನೆಯೊಂದಿಗೆ ಆರಂಭಿಸಿ, ನಡೆಯುತ್ತಾ ಬಂದಿದ್ದ ಜನತಾರಾಜ್ಯ ಭಾರತದ ಪ್ರಥಮ ಪಾರ್ಲಿಮೆಂಟು ಅಧಿವೇಶನವು ಈ ವಿಷಯಗಳತ್ತ ತೀವ್ರಗಮನ ಪ್ರಕಾಶ ಬೀರಿ, ಸೆಕೆಕಾಲದ ವಿರಾಮಕ್ಕಾಗಿ ಇದೇ ತಾ.20ರಲ್ಲಿ ಮುಕ್ತಾಯಗೊಂಡಿತು.

ಅಂತಹ ಸ್ವಾರ್ಥ ಬುದ್ಧಿಯಿಲ್ಲದವರು, ಅಥವಾ ಸ್ವಾರ್ಥ ಸಾಧಕ ಯೋಗವೊದಗಲಾರದವರಾದರೂ ಸಾರ್ವತ್ರಿಕ ಹಿತ ಸಾಧನೆ ಅಥವಾ ನ್ಯಾಯ ಪಾಲನೆಯ ಆತುರಗೊಂಡಿದ್ದರೆ, ಅಂಥವರೀಗ ಜನತಾ ದೌರ್ಬಲ್ಯಗಳ ನಿವಾರಣೆಗಾಗಿ ನಡು ಬಿಗಿಯಬೇಕು. ಇದೇ ಇಂದಿನ ಕರ್ತವ್ಯ; ಇದೇ ಈ ಕಾರ್ಯಕ್ಕೆ ಹೇಳಿಸಿದ ಅವಧಿ.

### ಮೂಲ ಮಸೂದೆಯಲ್ಲಿ-

ತಾ. 12ರಲ್ಲಿ ಡಾ. ಅಂಬೇಡ್ಕರರು ಪಾರ್ಲಿಮೆಂಟಿನ ಮುಂದಿಡುವಾಗ, ಚುನಾವಣಾ ಸಂಬಂಧದ ಈ ಮಸೂದೆಯ ಮುಖ್ಯ ಭಾಗಗಳು ಹೀಗಿದ್ದುವು:-

"ಜನತಾ ಸಭೆ" (ಭಾರತ ಪಾರ್ಲಿಮೆಂಟು)ಯಲ್ಲಿ ಎಲ್ಲಾ ಸಂಸ್ಥಾನಗಳಿಂದ ಆರಿಸಲ್ಪಟ್ಟ 480 ಸದಸ್ಯರಿರತಕ್ಕದ್ದು. ಅಂದಾಜು ಜನಸಂಖ್ಯೆಯ ಪ್ರತಿ 7.2 ಲಕ್ಷಗಳಿಗೊಂದು ಸ್ಥಾನದಂತೆ। ಈ ಸ್ಥಾನಗಳನ್ನು ವಿತರಣೆ ಮಾಡಲಾಗಿದೆ. ಈ ಪೈಕಿ ಉತ್ತರ ಪ್ರದೇಶ (ಸಂಯುಕ್ತ ಪ್ರಾಂತ್ಯ) 86, ಮದ್ರಾಸ್ 75, ಅಸ್ಸಾಮ್ 12, ಬಿಹಾರ್ 55, ಬೊಂಬಾಯಿ 45, ಮಧ್ಯ ಪ್ರದೇಶ 29, ಒರಿಸ್ಸಾ 20, ಪಂಜಾಬು 18, ಪಶ್ಚಿಮ ಬಂಗಾಳ 34, ಹೈದರಾಬಾದ್ 25, ಜಮ್ಮು ಕಾಶ್ಮೀರ 6, ಮಧ್ಯ ಭಾರತ 11, ಮೈಸೂರು 11, ಪಾಟಿಯಾಲಾ ಮತ್ತು ಉತ್ತರ ಪಂಜಾಬು ಸಂಸ್ಥಾನಗಳ ಕೇಂದ್ರ 5, ರಾಜಸ್ಥಾನ್ 20, ಸೌರಾಷ್ಟ್ರ 6, ತಿರುವಾಂಕೂರು ಕೊಚ್ಚಿ 12, ವಿಂಧ್ಯ ಪ್ರದೇಶ 5, ದಿಲ್ಲಿ 3, ಹಿಮಾಚಲ ಪ್ರದೇಶ 2, ಅಜಮೀರ್ 1, ಭೋಪಾಲ್ 1, ಕೂರ್ಗು 1, ಬಿಲಾಸಪುರ 1, ಕಚ್ 1, ಮಣಿಪುರ 1, ತ್ರಿಪುರ 1, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು 1, ಈ ರೀತಿ ಸ್ಥಾನಗಳು ಹಂಚಲಾಗಲ್ಪಟ್ಟದ್ದುವು.

ಸಂಸ್ಥಾನಿಕ ಲೆಜಿಸ್ಲೇಟಿವ್ ಎಸೆಂಬ್ಲಿಗಳಲ್ಲಿರಬೇಕಾದ ಸ್ಥಾನಗಳ ಸಂಖ್ಯೆಯು ಈ ಕೆಳಗಿನಂತೆ ನಿರ್ಧರಿಸಲ್ಪಟ್ಟದ್ದಿತು:-ಅಸ್ಸಾಮ್ 108, ಬಿಹಾರ್ 275, ಬೊಂಬಾಯಿ 225, ಮಧ್ಯಪ್ರದೇಶ 174, ಮದ್ರಾಸ್ 300, ಒರಿಸ್ಸಾ 140, ಪಂಜಾಬು 126, ಉತ್ತರ ಪ್ರದೇಶ 344, ಪಶ್ಚಿಮ ಬಂಗಾಳ 204, ಹೈದರಾಬಾದ್ 150, ಮಧ್ಯ ಭಾರತ 77, ಮೈಸೂರು 77. ಪಾಟಿಯಾಲಾ ಪೂರ್ವ ಪಂಜಾಬು ಸಂಸ್ಥಾನ ಕೇಂದ್ರ 60, ರಾಜಸ್ಥಾನ್ 140, ಸೌರಾಷ್ಟ್ರ 60, ತಿರುವಾಂಕೂರು ಕೊಚ್ಚಿ, 84.

ಲೆಜಿಸ್ಲೇಟಿವ್ ಕೌನ್ಸಿಲುಗಳಿರುವ ಸಂಸ್ಥಾನಗಳಲ್ಲಿ ನಿರ್ಣಯವಾಗಿದ್ದ ಆಯಾಯಾ ಕೌನ್ಸಿಲಿನ ಸದಸ್ಯ ಸಂಖ್ಯೆ:- ಬಿಹಾರ್ 68, ಬೊಂಬಾಯಿ 56, ಮದ್ರಾಸ್ 75, ಪಂಜಾಬು 40, ಉತ್ತರ ಪ್ರದೇಶ 88, ಪಶ್ಚಿಮ ಬಂಗಾಳ 51, ಮೈಸೂರು 40.

ಚುನಾವಣಾ ಕಮಿಶನಿನ ಆಲೋಚನೆಗಳನ್ನು ಕೇಳಿಕೊಂಡು, ಎಲ್ಲಾ ಶಾಸನ ಸಭಾ ಸ್ಥಾನಗಳ ಮತದಾರ ಕ್ಷೇತ್ರದ ಗಡಿವಿಚ್ಛೇದನೆ ಮಾಡುವ ಅಧಿಕಾರವು ಭಾರತಾಧ್ಯಕ್ಷನದು.

1949ನೇ ಜುಲಾಯಿ 25ರೊಳಗೆ ಪಾಕಿಸ್ತಾನದಿಂದ ಭಾರತಕ್ಕೆ ಬಂದಿದ್ದ ನಿರಾಶ್ರಿತರಿಗೆ ಮತಾಧಿಕಾರ ದೊರೆಯುವಂತೆ, ನಿವಾಸ ಸಂಬಂಧದ ನಿಯಮ ನಿಬಂಧನೆಗಳನ್ನು ಸಡಲಿಸಲಾಗಿದೆ. ಈ ಅವಧಿಯ ನಂತರ ಬಂದವರು ಮತದಾರರಾಗಿ ಹೆಸರು ದಾಖಲು ಮಾಡುವ ಅರ್ಹತೆ ಕಳೆದುಕೊಳ್ಳುತ್ತಾರೆ.

ಮತದಾರ ಪಟ್ಟಿಗಳಲ್ಲಿ ಕಾಲೋಚಿತ ಕೂಡಿಸುವಿಕೆ, ಕಳೆಯುವಿಕೆ ಮತ್ತು ತಿದ್ದುಪಡಿಗಳು ಹೊಂದಿಕೊಳ್ಳುವಂತೆ, ಅವುಗಳನ್ನು ಪ್ರತಿ ವರುಷವೂ ತಯಾರಿಸುವ ನಿಬಂಧನೆಯಿದೆ.

ಪ್ರಥಮ ಮತದಾರ ಪಟ್ಟಿಯ ಮಟ್ಟಿಗೆ 1949ನೇ ಜನವರಿ 1ನೇ ತಾರೀಕು ಅರ್ಹತೆ ನಿಶ್ಚಯದ ದಿನ ಮತ್ತು 1915ನೇ ದಶಂಬರ್ 31ಕ್ಕೆ ಅಂತ್ಯವಾಗುವ ವರುಷವು ಅರ್ಹತೆ ನಿಶ್ಚಯದ ಅವಧಿಯಾಗಿ


Nambiar's
**ARYA VAIDYA SALA**
**UDIPI**
*Ideal House for Ayurvedic Treatment.*
T. N. Kelu Nambiar,
Vaidya.



**On this Memorable day**

Of the 26th of January in the year 1950 of the inauguration of the Indian Republic, we have the pleasure to announce the birth of our

**Vijaya Cash Certificates**

"Spend less and aSve more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices

Head Office:—**Kadri Road, Mangalore.**

Branches:- City-Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara.

**B. Manjaya Hegde.**
Advocate & President, District Board, S. Kanara.
CHAIRMAN
**VIJAYA BANK, LTD.**





Approved from by the Govt. of Mysore
Certificated by the Agent of the Govt of
Cylone & Indian.

# -ನಿರ್ಧಾರಗೊಂಡ ನಿಯಮ ನಿಬಂಧನೆ.

## ಸ್ಥಾನಗಳ ಮತ್ತು ಮತದಾರರ ಸಂಖ್ಯೆಯ ಹೆಚ್ಚಳ!

ಗಣಿಸಲ್ಪಟ್ಟಿವೆ. ಆ ನಂತರದ ಪಟ್ಟಿಗಳ ಮಟ್ಟಿಗೆ, ಮತದಾರರ ಪಟ್ಟಿಗಳು ತಯಾರಿಸಲ್ಪಡುವ ವರುಷದ ಮಾರ್ಚ 1ನೇ ತಾರೀಕನ್ನೇ ಅರ್ಹತೆ ನಿಶ್ಚಯದ ದಿನವಾಗಿಯೂ, ಅದರೊತ್ತು ಹಿಂದಿನ ವರುಷವನ್ನೇ ಅರ್ಹತೆಯ ಅವಧಿಯಾಗಿಯೂ ಗಣಿಸತಕ್ಕದ್ದು. ಅರ್ಹತೆ ನಿಶ್ಚಯಾತ್ಮಕ ದಿನದಲ್ಲಿ 21 ವರುಷ ಪ್ರಾಯ ತುಂಬಿದ್ದು, ಅರ್ಹತೆ ನಿರ್ಣಯ ಅವಧಿಯಲ್ಲಿ ಯಾವುದೇ ಕ್ಷೇತ್ರದಲ್ಲಿ 180 ದಿನಗಳಿಗೆ ಕಡಿಮೆಯಿಲ್ಲದೆ ವಾಸ ಮಾಡಿದ್ದ ಯಾರೇ ಆದರೂ, ಆ ಕ್ಷೇತ್ರದ ಮತದಾರ ಅರ್ಹತೆ ಪಡೆಯುತ್ತಾರೆ.

ಯಾವುದೇ ಸ್ಥಳದ ಚಿಕಿತ್ಸಾಲಯಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಅಥವಾ ಬುದ್ಧಿ ಅಸ್ವಾಸ್ಥ್ಯತೆ, ಯಾ, ಮೆದುಳ ದೋಷಗಳಿಗೊಳಗಾಗಿದ್ದರೆ, ಇಲ್ಲವೇ ಜೈಲು ಅಥವಾ ಇತರ ಕಾನೂನು ಬದ್ಧ ನಿರ್ಬಂಧಗಳಿಗೊಳಗಾಗಿದ್ದರೆ, ಅಂಥವರು ಅಂತಹ ವಾಸ ಯೋಗ್ಯತೆಯ ಮೇಲಿಂದ ಆ ಕ್ಷೇತ್ರದ ಮತದಾರರಾಗಲು ಅರ್ಹರಾಗುವದಿಲ್ಲ.

ಯಾವುದೇ ಸೇನಾ ರಾಜ್ಯದಲ್ಲಿ, ಅಥವಾ ಸೇನಾ ಸಂಬಂಧ ಕಾರ್ಯಗಳಿಗಾಗಿ ಇತರ ಕಟ್ಟಡ, ಸ್ಥಳ ಮೊದಲಾದೆಡೆಗಳಲ್ಲಿ ಮತದಾರ ಅರ್ಹತೆಯ ಅವಧಿ ವರೆಗೆ ವಾಸಿಸಿದವರೆಂಬ ಕಾರಣದಿಂದ ಸಶಸ್ತ್ರ ಸೇನೆಗಳ ಯಾರಿಗೂ ಅಂತಹ ಮತದಾರ ಕ್ಷೇತ್ರದ ಮತದಾರನಾಗುವ ಹಕ್ಕಿಲ್ಲ; ಅಂಥವರು ತಮ್ಮ ಮೂಲ ನಿವಾಸವಿರುವ ಕ್ಷೇತ್ರದ ಮತದಾರರೇ ಆಗಿರತಕ್ಕದ್ದು.

ಒಂದೇ ಮತದಾರ ಕ್ಷೇತ್ರದ ಮತದಾರನಾಗಿರಬೇಕಲ್ಲದೆ, ಯಾವ ಮತದಾರ ಕ್ಷೇತ್ರದಲ್ಲಾದರೂ ಒಂದು ಬಾರಿ ಮಾತ್ರವೇ ಹೆಸರು ದಾಖಲು ಮಾಡಿಸತಕ್ಕದ್ದು.

ಪ್ರಚಲಿತ ಮತದಾರ ಪಟ್ಟಿಯು ಯಾವುದೇ ದುರಸ್ತಿಗಾಗಿ ಯಾರಿಂದಾದರೂ ಸಕಾರಣವಾದ ಅರ್ಜಿ ಬಂದಲ್ಲಿ ಆ ಕ್ಷೇತ್ರದ ಮತದಾರ ದಾಖಲಾತಿ ಆಫೀಸರರು ವಿಚಾರಣೆ ನಡಿಸಿ, ತನಗೆ ಸರಿ ತೋರಿದರೆ ದುರಸ್ತಿ ಮಾಡಿಸಬಹುದು.

ಕಾನೂನಿನ ಉದ್ದೇಶಕ್ಕನುಸಾರವಾಗಿ ಚುನಾವಣಾ ಕಮಿಶನ ಅಭಿಪ್ರಾಯ ಪಡಕೊಂಡು ಅಗತ್ಯವುಳ್ಳ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವ ಅಧಿಕಾರವು ಕೇಂದ್ರ ಸರಕಾರದ್ದಿದೆ.

### ಪಾರ್ಲಿಮೆಂಟಿನ ಚರ್ಚೆ

ಮೇಲಿನ ಮುಖ್ಯ ವಿಭಾಗಗಳುಳ್ಳ 'ಜನತಾ ಪ್ರಾತಿನಿಧ್ಯ ಮಸೂದೆ'ಯನ್ನು ಡಾ. ಅಂಬೇಡ್ಕರರು ತಾ. 12ರಲ್ಲಿ ಪಾರ್ಲಿಮೆಂಟಿನ ಮುಂದೆ ಮಂಡಿಸಿದ್ದರೂ, ಸದಸ್ಯರು ಅದರ ಅಂಗೋಪಾಂಗಗಳ ನಿಕಟ ಪರಿಚಯ ಮಾಡಿಕೊಳ್ಳಲಾಗುವಂತೆ ಕೆಲವು ದಿನಗಳ ಅವಧಿಕೊಟ್ಟು, ತಾ. 18ರಲ್ಲಿ ಆ ಸಂಬಂಧದ ಚರ್ಚೆಯನ್ನು ಆರಂಭಿಸಲಾಗಿದ್ದಿತು. ಪ್ರಥಮತಃ ಡಾ. ಅಂಬೇಡ್ಕರರ ಗೈರುಹಾಜರಿಯಲ್ಲಿ ಶ್ರೀ ಕೆ. ಸಂತಾನಮರು ಮಸೂದೆಯನ್ನು ಚರ್ಚೆಗಿಳಿಸಿದರು; ಆ ಮೇಲೆ ಡಾ. ಅಂಬೇಡ್ಕರರಾಗಮಿಸಿ, ಸಭೆಯ ವಿಜ್ಞಾಪನಾನುಸಾರ ಮಸೂದೆಯ ವಿವಿಧ ವಿಭಾಗಗಳ ಸ್ಪಷ್ಟೀಕರಣ ಮಾಡಿದರು. ಅದನ್ನನುಸರಿಸಿ, ಸದಸ್ಯರು ತಂತಮ್ಮ ಅಭಿಪ್ರಾಯಗಳನ್ನು ಮುಂದಿಟ್ಟರು. ತಾ. 18ರಲ್ಲಿ ಆರಂಭಿಸಿದ ಚರ್ಚೆಯು ತಾ. 19 ಮತ್ತು 20ಕ್ಕೂ ಮುಂದುವರಿದು, ಅನಿರೀಕ್ಷಿತ ಆಕ್ಷೇಪಗಳು ಮುಂದೆ ಬಂದುವು. 'ಪಾರ್ಟಿವ್ಹಿಪ್'ನ ಆಜ್ಞೆಯನ್ನುಲ್ಲಂಘಿಸಿ, ಕಾಂಗ್ರೆಸ್ ಪಕ್ಷದ ಹಲವು ಪ್ರಮುಖ ಸದಸ್ಯರೇ ಅನಿರೀಕ್ಷಿತ ವಿರೋಧಗಳನ್ನು ಮುಂದೊಡ್ಡಿದುದು ಈ ಸಂದರ್ಭದ ವಿಶೇಷ ಘಟನೆಯೆನ್ನಬೇಕು. ಮಸೂದೆಯನ್ನು ವಿರೋಧಿಸಿ, ಮತ್ತು ಅದನ್ನೊಂದು ಪರಿಶೀಲನಾ ಸಮಿತಿಗೊಪ್ಪಿಸಬೇಕೆಂದು ಒತ್ತಾಯಿಸಿ, ಭಾಷಣವಿತ್ತ ಸದಸ್ಯರಿಗೆ ಸಭೆಯು ಪ್ರಚಂಡ ಉತ್ಸಾಹ ಧ್ವನಿಗಳ ಪ್ರೋತ್ಸಾಹವೀಯುತ್ತಿತ್ತು. ಡಾ. ಅಂಬೇಡ್ಕರರ ಚಾಣಾಕ್ಷತೆಯು ಹಿಡಿತತಪ್ಪಿ, ಅವರ ನಾವೆಯು ಅಡಿಮೇಲಾಗುವ ಅಪಾಯ ತೋರಿ ಬಂದಾಗ ಪಂಡಿತ ನೆಹರುಗಳು ಮಧ್ಯ ಪ್ರವೇಶಿಸಿ, ಪ್ರಶಾಂತ ಪರ್ಯಾಲೋಚನೆಯ ವಾತಾವರಣ ನಿರ್ಮಿಸಿದರು. ಶ್ರೀಗಳಾದ ಎಲ್. ಕೃಷ್ಣಸ್ವಾಮಿ ಭಾರತಿ, ಮಹಾವೀರ ತ್ಯಾಗಿ, ಕೆ. ಹನುಮಂತಯ್ಯ, ಗೋಕುಲಭಾಯಿ ಭಟ್, ಪಂಡಿತ ಠಾಕೂರ್‌ದಾಸ್ ಭಾರ್ಗವ, ಶ್ರೀಮತಿ ರೇಣುಕಾರೇ, ಡಾ. ಭಕ್ಷಿ ಟೇಕ್‌ಚಂದ್, ಡಾ. ಪಿ. ಯಸ್. ದೇಶಮುಖ, ಮಿ. ಹುಸ್ಸೇನ್ ಇಮಾಮ್ ಶ್ರೀ ಟಿ. ಟಿ. ಕೃಷ್ಣಮಾಚಾರಿ, ಶ್ರೀ ಕೆ. ಸಂತಾನಮ್, ಪಂಡಿತ ಕುಂಜ್ರು, ಶ್ರೀ ಅನಂತ ಶಯನಮ್ ಅಯ್ಯಂಗಾರ್, ಡಾ. ಪಂಜಾಬ್‌ರಾವ್ ದೇಶಮುಖ, ಪಂಡಿತ ಮುಕುಟ್‌ಬಿಹಾರಿಲಾಲ್ ಭಾರ್ಗವ, ಶ್ರೀ ದೇಶಬಂಧು ಗುಪ್ತ, ಶ್ರೀ ಯಚ್. ವಿ. ಕಾಮತ್ ಮೊದಲಾದವರು ಚರ್ಚೆಯಲ್ಲಿ ಭಾಗ ವಹಿಸಿದ್ದರು. ಮತದಾರಾರ್ಹತೆಯ ದಿನ ಮತ್ತು ಅವಧಿ–ಸಂಸ್ಥಾನ ಶಾಸನ ಸಭೆಗಳ ಸ್ಥಾನ ಸಂಖ್ಯೆ–ಮತದಾರ ಕ್ಷೇತ್ರದ ಪುನರ್ರಚನೆ, ಈ ಮೂರು ವಿಷಯಗಳ ಸಂಬಂಧವಾಗಿ ಮೂಲ ಮಸೂದೆಯ ವಿಧಾನಗಳ ಕುರಿತು ಸಭಿಕರ ತೀಕ್ಷ್ಣ ಭಿನ್ನಾಭಿಪ್ರಾಯಗಳಿದ್ದುವು. ಇಂತಹ ಪ್ರಾಮುಖ್ಯ ಮಸೂದೆಯನ್ನು ಪಾರ್ಲಿಮೆಂಟಿನ ಅಂತ್ಯಭಾಗದಲ್ಲಿ ಅವಸರದಿಂದ ಮಂಜೂರು ಮಾಡಿಸಿಕೊಳ್ಳುವ ಬದಲಿಗೆ, ಕೂಲಂಕುಷ ಪರಿಶೀಲನೆಗಾಗಿ 'ಸಿಲೆಕ್ಟ ಕಮಿಟಿ'ಯೊಂದಕ್ಕೊಪ್ಪಿಸಬೇಕೆಂಬ ಉಪಸೂಚನೆಗೆ ಹೆಚ್ಚಿನ ಬೆಂಬಲವಿದ್ದಂತೆ ತೋರಿತು. ಇತರ ಕೆಲವು ಉಪ ಸೂಚನೆಗಳೂ ಮುಂದೆ ಬಂದಿದ್ದುವು. ಈ ವಾದಾಂದೋಲನಗಳ ಪರಿಣಾಮವಾಗಿ ತಾ. 19ರಲ್ಲೇ ಮುಗಿಯಬೇಕಾಗಿದ್ದ ಪಾರ್ಲಿಮೆಂಟ್ ಅಧಿವೇಶನವು ತಾ. 20ಕ್ಕೂ ಮುಂದುವರಿಯಬೇಕಾಯಿತು. ಮಸೂದೆಯ ಶಾಂತ, ಕ್ಷಿಪ್ರ ಮಂಜೂರಾತಿಗಾಗಿ ಚರ್ಚೆಯ ನಡುವೆ ಪ್ರವೇಶಿಸಿ ಮಾತಾಡಿದ ಪ್ರಧಾನಿ ಜವಾಹರಲಾಲರು: "ಚುನಾವಣಾ ಸಂಬಂಧದ ಸರಕಾರೀ ಧೋರಣೆಗಳ ಯಥಾರ್ಥ ಚಿತ್ರವು ಈ ಮಸೂದೆಯಲ್ಲಿ ಮೂಡಿಲ್ಲ. ಕೊನೆಯ ಅಂಕದಲ್ಲಿ ಮತ್ತೊಂದು ಪೂರ್ಣಾಕಾರದ ಮಸೂದೆಯನ್ನು ನಾವೇ ಸಂಬಂಧವಾಗಿ ಪಾರ್ಲಿಮೆಂಟಿನ ಮುಂತರಲಿದ್ದೇವೆ. ಬರುವ ವರುಷದ ಎಪ್ರಿಲಿನೊಳಗೆ ಚುನಾವಣೆಗಳನ್ನು ನಡೆಸುವ ಸಿದ್ಧತೆಗಳಿಗಾಗಿ ಇಂದಿನ ಮಸೂದೆಯು ಅವಶ್ಯ ಬಿದ್ದಿದೆ. ಇದನ್ನು ಈಗ ಅಂಗೀಕರಿಸಿಕೊಳ್ಳದಿದ್ದರೆ ಚುನಾವಣೆಯು ಬಹಳ ಹಿಂದೆ ಬೀಳಬೇಕಾಗುವದು. ಸದ್ಯದ ರಾಜಕೀಯ, ಆರ್ಥಿಕ ಸ್ಥಿತಿಯಲ್ಲಿ ಹಾಗಾಗುವುದು ಅಪೇಕ್ಷಣೀಯವಲ್ಲ" ಎಂದು ಪ್ರತಿಹೇಳಿಕೊಂಡರು. ಡಾ. ಅಂಬೇಡ್ಕರರೂ ಈ ವಾದ ಸರಣಿಯನ್ನೇ ಅನುಕರಿಸಿ, ವಾದಿಸಿದರು. ಪರಿಶೀಲನಾ ಸಮಿತಿಗೊಪ್ಪಿಸಿ, ತಿದ್ದುಪಡಿಗಳನ್ನು ಮಾಡಿಸುವ ಬದಲಿಗೆ, ಪಾರ್ಲಿಮೆಂಟು ಸದಸ್ಯರು ಕಾನೂನು ಮಂತ್ರಿ ಡಾ| ಅಂಬೇಡ್ಕರರೊಡನೆ ಪರ್ಯಾಲೋಚನಾ ಸಮಿತಿಯಾಗಿ ಸೇರಿ, ಎಲ್ಲಾ ಉಪಸೂಚನೆಗಳ ಸಂಬಂಧವಲ್ಲಿಯೂ ಒಮ್ಮತಕ್ಕೆ ಬರಬೇಕೆಂದು ಸಭಾಧ್ಯಕ್ಷರು ತಾ 19ರಲ್ಲಿ ಸೂಚಿಸಿದಂತೆ, ತಾ 20ನೇ ಪೂರ್ವಾಹ್ನ ಕಾನೂನು ಮಂತ್ರಿಗಳೊಡನೆ ಪಾರ್ಲಿಮೆಂಟ್ ಸದಸ್ಯರ ಖಾಸಗೀ ಪರ್ಯಾಲೋಚನಾ ಸಭೆ ಸೇರಿ ಎಲ್ಲಾ ವಿವಾದಗಳೂ ತೀರ್ಮಾನಗೊಂಡುವು. ಆದರೆ ತಾ 20ರ ಸಭೆಯಲ್ಲಿ 'ಚುನಾವಣಾ ಕಮಿಶನರನಿಗೆ ಸಹಾಯಕವಾಗಿರುವ ಸಮಿತಿಯನ್ನು ಪಾರ್ಲಿಮೆಂಟೇ ಚುನಾಯಿಸತಕ್ಕದ್ದು' ಎಂಬ ತಿದ್ದುಪಡಿ ಸೂಚನೆಯನ್ನು ಶ್ರೀ. ಯಚ್. ವಿ. ಕಾಮತರು ಮುಂತಂದರು. 'ಸಮಿತಿಯನ್ನು ಪಾರ್ಲಿಮೆಂಟ್ ಅಧ್ಯಕ್ಷರು ನೇಮಿಸತಕ್ಕದ್ದು' ಎಂದು ಮಸೂದೆಯಲ್ಲಿದ್ದಿತು. ಈ ಕುರಿತೂ ತೀವ್ರ ಭಿನ್ನಾಭಿಪ್ರಾಯಗಳು ಕಂಡುಬಂದು, ಪಂಡಿತ ನೆಹರುಗಳೂ ಡಾ| ಅಂಬೇಡ್ಕರರೂ ಮೂಲ ಸೂಚನೆಯನ್ನು ಬಲವಾಗಿ ಸಮರ್ಥಿಸಬೇಕಾಯಿತು. ಎರಡು ವಾದಗಳು ಒಂದುಗೂಡಲೊಲ್ಲದೆ, ಕೊನೆಗೆ ಮತಕ್ಕೆ ಹಾಕಿದಾಗ ಶ್ರೀ. ಕಾಮತರ ಉಪ ಸೂಚನೆಯು ಪ್ರಬಲ ಪರಾಭವಕ್ಕೀಡಾಗಿ ಬಿದ್ದುಹೋಯಿತು. ಮೂರು ದಿನಗಳ ಹಾರ್ದಿಕ ಚರ್ಚೆಯ ಪರಿಣಾಮವಾಗಿ ಮಸೂದೆಯಲ್ಲಿ ಕೆಲವು ಪ್ರಾಮುಖ್ಯ ಬದಲಾವಣೆಗಳಾದುವು. ತಾ. 12ರಲ್ಲಿ ಮುಂದೆ ಬಂದಿದ್ದ ಮಸೂದೆಯು ತಾ. 20ರಲ್ಲಿ ಮಂಜೂರುಗೊಳ್ಳುವಾಗ ಕೆಲವೆಡೆ ಆಕಾರ ಬದಲಾಗಿದ್ದಿತು.

### ಮುಖ್ಯ ಬದಲಾವಣೆ

ಚುನಾವಣಾ ಸಂಬಂಧದ ಮಸೂದೆಯಲ್ಲಿ ಕೊನೆಗಾದ ಗಣ್ಯ ಮಾರ್ಪಾಟವೆಂದರೆ, ಕೇಂದ್ರ ಮತ್ತು ಸಂಸ್ಥಾನಿಕ ಶಾಸನ ಸಭೆಗಳ ಸ್ಥಾನಗಳನ್ನು ಹೆಚ್ಚಿಸಿದುದು. ಕೇಂದ್ರ ಜನತಾ ಸಭೆಯ (ಪಾರ್ಲಿಮೆಂಟಿನ) ಸದಸ್ಯಸಂಖ್ಯೆಯು 488 ಎಂದಿದ್ದುದನ್ನು 496ಕ್ಕೇರಿಸಲಾಗಿದೆ. ಹೀಗೆ ಏರಿದ 8 ಸ್ಥಾನಗಳನ್ನು ಒಂದೊಂದೇ ಪ್ರಾತಿನಿಧ್ಯವೆಂದಿದ್ದ 8 ಸಂಸ್ಥಾನಗಳಿಗೆ ಹೆಚ್ಚಿನ ಒಂದೊಂದು ಸ್ಥಾನವನ್ನು ಕೊಟ್ಟು ತುಂಬಿಸಿಕೊಳ್ಳಲಾಗಿದೆ. ಅಂತೆಯೇ ಎಲ್ಲಾ ಸಂಸ್ಥಾನಿಕ ಎಸೆಂಬ್ಲಿಗಳ ಸದಸ್ಯಸಂಖ್ಯೆಯನ್ನೂ ಹೆಚ್ಚಿಸಲಾಗಿದೆ. ಆ ಪ್ರಕಾರ ಮೂಲ ಮಸೂದೆಯಲ್ಲಿ 300 ಸ್ಥಾನಗಳೆಂದಿದ್ದ ಮದ್ರಾಸ್ ಎಸೆಂಬ್ಲಿಯ ಸ್ಥಾನಗಳು 375ಕ್ಕೇರಿವೆ. ಉತ್ತರ ಪ್ರದೇಶಕ್ಕೆ 344 ಎಂದಿದ್ದುದನ್ನು 430ಕ್ಕೇರಿಸಲಾಗಿದೆ. ಈ ರೀತಿ ಅಖಿಲ ಭಾರತದಲ್ಲಿ ಹೆಚ್ಚು ಜನಸಂಖ್ಯೆ ಮತ್ತು ತದನುಗುಣವಾಗಿ ಹೆಚ್ಚು ಎಸೆಂಬ್ಲಿ ಸ್ಥಾನಗಳುಳ್ಳ ಪ್ರಾಂತ್ಯವೆಂದರೆ ಉತ್ತರ ಪ್ರದೇಶ (ಸಂಯುಕ್ತ ಪ್ರಾಂತ್ಯ). ಅದಕ್ಕೆ ಎರಡನೆಯದೇ ಮದ್ರಾಸ್ ಸಂಸ್ಥಾನ. ಮದ್ರಾಸ್, ಬೊಂಬಾಯಿ, ಬಿಹಾರ್, ಉತ್ತರ ಪ್ರದೇಶಗಳ ಕೌನ್ಸಿಲುಗಳಲ್ಲಿ ಏಕಪ್ರಕಾರ ಒಂದೊಂದರಲ್ಲಿ 72 ಸ್ಥಾನಗಳಿರಬೇಕೆಂಬ ತಿದ್ದುಪಡಿಯಾಗಿದೆ. ಈ ಬದಲಾವಣೆಯಿಂದಾಗಿ ಮದ್ರಾಸ್ ಸಂಸ್ಥಾನದ ಮಟ್ಟಿಗೆ ಮೂಲ ಮಸೂದೆಯಲ್ಲಿ ನಮೂದಿಸಲ್ಪಟ್ಟದ್ದಕ್ಕಿಂತ 3 ಸ್ಥಾನಗಳು ಕಡಿಮೆಯಾದುವು. ಉತ್ತರ ಪ್ರದೇಶಕ್ಕೆ ನಮೂದಿಸಲ್ಪಟ್ಟಿದ್ದ ಮೂಲ ಅಂಕೆಗಿಂತ 14

THE BOMBAY LIFE ASSURANCE COMPANY, LTD.
ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್
(ಸ್ಥಾಪನೆ: 1908)
ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.
ಪ್ರಧಾನ ಏಜಂಟರು:
ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ ಉಡುಪಿ.
ಇವರ ಶಾಖಾ ಕಚೇರಿಗಳು:-
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.
ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.
ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾದಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಕಡಿಮೆಯಾದುವು.5000ಕ್ಕೆ ಕಡಿಮೆಯಿಲ್ಲದ ಜನ ಸಂಖ್ಯೆಮತ್ತು ವರ್ಷಾವಧಿ ಉತ್ಪನ್ನವು 10000 ರೂ. ಗಳಿಗೆ ಕಡಿಮೆಯಿರದ ಕ್ಷೇತ್ರಗಳಿಗೇನೇ 'ಮೇಜರ್ ಪಂಚಾಯತು'ಗಳೆಂದು ಇಲ್ಲಿ ಸ್ಪಷ್ಟೀಕರಿಸಲ್ಪಟ್ಟಿದೆ ಪ್ರಾಂತಿಕ ಎಸೆಂಬ್ಲಿಗಳ ಸ್ಥಾನಗಳನ್ನು ಹೆಚ್ಚಿಸಿದುದರಿಂದ ಬಹುತೇಕವಾಗಿ ಎಲ್ಲರೂ ತೃಪ್ತಿಗೊಂಡಿದ್ದಾರೆ. ಕೇಂದ್ರ ಸರಕಾರವು ಮದ್ರಾಸ್ ಸರಕಾರದ ಅಭಿಪ್ರಾಯ ಕೇಳಿದ್ದಾಗ [ಆದೂ ತನ್ನ ಸಂಸ್ಥಾನದ ಎಸೆಂಬ್ಲಿ ಸದಸ್ಯ ಸಂಖ್ಯೆಯನ್ನು 300ರಿಂದ 375ಕ್ಕೇರಿಸಬೇಕೆಂದು ಸೂಚಿಸಿದ್ದಿತು. ಕೊನೆಗಾದ ವಿಧಿ ವಿಧಾನಗಳೆಲ್ಲ ಪ್ರೋಹೆಚ್ಚಿನಂಶ ಸರ್ವ ಸಮಾಧಾನಕರವಿವೆ; ಇಂದಿಗೆ ಸರೀ ಒಂದು ವರುಷದಲ್ಲಿ-1951ನೇ ಎಪ್ರಿಲಿನಲ್ಲಿ—ಕೇಂದ್ರ 'ಜನತಾ ಸಭೆ'ಯು ಮತ್ತು ಸಂಸ್ಥಾನಿಕ ಎಸೆಂಬ್ಲಿ ಹಾಗೂ ಕೌನ್ಸಿಲುಗಳ ಮಹಾ ಚುನಾವಣೆ ನಡೆಯುವದು ಖಂಡಿತವೆಂದು ನಂಬಬಹುದು.

ಎಲ್ಲಾ ಸಂಸ್ಥಾನಗಳಲ್ಲೂ ಪ್ರೌಢ ಮತದಾರ ಯಾದಿಗಳು ತಯಾರಾಗಿ ಈಗ ಮುದ್ರಣಗೊಳ್ಳುತ್ತಿವೆ. ಇದೇ ಮೇ ತಿಂಗಳಾಂತ್ಯದೊಳಗೆ ಪ್ರತಿಯೊಂದು ಸಂಸ್ಥಾನದ ಪ್ರಥಮ ಮತದಾರ ಪಟ್ಟಿಗಳ ಮುದ್ರಣ ಮುಗಿದು, ಪ್ರಕಟವಾಗಲಿವೆ.

1951ನೇ ಫೆಬ್ರುವರಿ-ಮಾರ್ಚ ತಿಂಗಳಲ್ಲಿ ಭಾರತದ ಜನಗಣತಿ (ಖಾನೇಸುಮಾರಿ) ನಡೆಯಲಿದೆ. ಎಲ್ಲಾ ಆಧಾರಗಳನ್ನವಲಂಬಿಸಿ, ಮೇಲಿಂದ ಇದೇ ಮಾರ್ಚ ತಾ. [ರಲ್ಲಿ ಜನಗಣತಿ ಕಮಿಶನರರು ಕಟ್ಟಿರುವಅಂದಾಜು ಪ್ರಕಾರ ಈಗಿನ ಭಾರತದಜನ ಸಂಖ್ಯೆ 347 34[ಮಿಲಿಯಗಳು. ಹಿಂದಿನ ಖಾನೇಸುಮಾರಿಗಳ ಆಧಾರ ಮತ್ತಿತರ ಸರ್ವ ಆಗುಹೋಗುಗಳನ್ನು ಸರಿಯಾಗಿ ಗಮನಿಸಿ ತಾನೀ ಲೆಕ್ಕ ಹಾಕಿರುವುದರಿಂದ ತನ್ನ ಪ್ರತಿಯೊಂದು ವಿಭಾಗದ ಅಂದಾಜೂ 100ಕ್ಕೆ 75ರಷ್ಟು ಸರಿಯೆಂದು ಖಾನೇಸುಮಾರಿ ಕಮಿಶನರರನ್ನುತ್ತಾರೆ. ಅವರ ನಿರ್ಧಾರದಂತೆ ವಿವಿಧ ಸಂಸ್ಥಾನಗಳ ಜನ ಸಂಖ್ಯೆ ಹೀಗಿದೆ: ಅಸ್ಸಾಮು 8 51 ಬಿಹಾರು 39 12, ಬೊಂಬಾಯಿ 32·68, ಮಧ್ಯ ಪ್ರದೇಶ 20 92, ಮದ್ರಾಸ್ 54·29, ಒರಿಸ್ಸಾ 11 41, ಪಂಜಾಬ್ 12·61, ಉತ್ತರ ಪ್ರದೇಶ 61 62, ಪಶ್ಚಿಮ ಬಂಗಾಳ 24·32, ಹೈದರಾಬಾದ್ 17 69, ಜಮ್ಮು ಮತ್ತು ಕಾಶ್ಮೀರ 4·37, ಮಧ್ಯಭಾಂತ 7.87, ಮೈಸೂರು 8.08, ಪಾಟಿಯಾಲಾ ಮತ್ತು ಪೂರ್ವ ಪಂಜಾಬು ಸಂಸ್ಥಾನೀ ಕೇಂದ್ರ 3·32, ರಾಜಸ್ಥಾನ್ 14 69, ಸೌರಾಷ್ಟ್ರ 3·96, ತಿರುವಾಂಕೂರು ಮತ್ತು ಕೊಚ್ಚಿ 8 58, ಅಜ್ಮೀರ್ 0·73, ಭೋಪಾಲ್ 0·85, ಬಿಲಾಸ್‌ಪುರ 0·13. ಕೂರ್ಗ್ 0 17, ದಿಲ್ಲಿ 1.31, ಹಿಮಾಚಲ ಪ್ರದೇಶ 1·08, ಕಚ್ 0·55, ಮಣಿಪುರ 0·54, ತ್ರಿಪುರ 0·58· ವಿಂಧ್ಯ ಪ್ರದೇಶ 8 83 ಮಿಲಿಯ ಜನರಿದ್ದಾರೆ.

ಅಖಿಲ ಭಾರತದಲ್ಲೀಗ ಸುಮಾರು 35 ಕೋಟಿ ಜನರಿದ್ದಾರೆಂದ ಮೇಲೆ 21 ವರುಷ ತುಂಬಿದ ಪ್ರತಿಯೊಬ್ಬನಿಗೂ ಮತಾಧಿಕಾರವಿರುವ ಮುಂದಿನ ಮಹಾ ಚುನಾವಣೆಯಲ್ಲಿ ಸುಮಾರು 17 ಕೋಟಿ ಮತದಾರರಿರುವರೆಂದು ನಿರೀಕ್ಷಿಸಲಾಗಿದೆ. ಇಷ್ಟು ದೊಡ್ಡ ಮತದಾರ ಶಕ್ತಿಯು ಇಡೀ ಪ್ರಪಂಚದಲ್ಲಿ ಬೇರಾವ ರಾಷ್ಟ್ರದಲ್ಲೂ ಇಲ್ಲ. ಅಮೆರಿಕ ಮತ್ತು ಕೆನಡಾಗಳ ಒಟ್ಟು ಜನಸಂಖ್ಯೆಯು, ಭಾರತದ ಮತದಾರರ ಸಂಖ್ಯೆಯಷ್ಟು ಆಗುವದಿಲ್ಲ ಸೋವಿಯೆಟ್ ರಶ್ಯದಲ್ಲಿರುವ ವೋಟರರಸಂಖ್ಯೆ 10ಕೋಟಿ; ಅಮೆರಿಕದಲ್ಲಿ 6ಕೋಟಿ.ಜನಸಂಖ್ಯೆಯು ಮಟ್ಟಿಗೆ ಲೋಕದಲ್ಲೇ ಪ್ರಥಮ ಸ್ಥಾನ ಪಡೆದಿರುವ ಚೈನದಲ್ಲಿ ಪ್ರಾಯಸ್ಥರೆಲ್ಲರಿಗೂ ಮತಾಧಿಕಾರವಿಲ್ಲ. ಹೀಗಾಗಿ, 1951ನೇ ವಸಂತ ಋತುವಿನಲ್ಲಿ ನಡೆಯಲಿರುವ ಜನತಾ ರಾಜ್ಯ ಭಾರತದ ಸಾರ್ವತ್ರಿಕ ಮಹಾಚುನಾವಣೆಯು ಜಾಗತಿಕ ಚುನಾವಣಾ ಚರಿತ್ರೆಯಲ್ಲೇ ಒಂದು ಹೊಸ ದಾಖಲೆಯನ್ನು ನಿರ್ಮಿಸಲಿದೆ. ಅದು ದೇಶದ ಅತ್ಯಂತ ಗಂಭೀರ ಗದ್ದಲ, ಮಹಾ ಉತ್ಸವವಾಗಿ ಜರಗಲಿದೆ.

---

# ಭಾರತ ಪಾಕಿಸ್ತಾನ್ ನಾಯಕರ-

ಭಾರತ ಮತ್ತು ಪಾಕಿಸ್ತಾನವೆರಡರ ಪಾಲಿಗೂ ಈಗ ಭೇಟಿ ಮತ್ತು ಶಾಂತಿ ಬೇಟಿಯ ಯುಗಾರಂಭಿಸಿದೆ. ಸ್ವಾತಂತ್ರ್ಯ ಸ್ಥಾಪನೆಗೊಂಡಂದಿನಿಂದ ಬಹುತೇಕವಾಗಿ ಗೊಂದಲ ನಿವಾರಣೆ, ಒಳ ವ್ಯವಸ್ಥಾಪಾಲನೆ ಮತ್ತು ಆಹಿ ಭಾವನೆಗಳಲ್ಲೇ ನಿರತವಾಗಿರಬೇಕಾಗಿದ್ದ ಇವೆರಡು ರಾಷ್ಟ್ರಗಳ ಸರಕಾರಗಳೂ ಈಗ [ಸೌಹಾರ್ದತಾ ಸ್ಥಾಪನೆಗಾಗಿ ಓಡಾಟ,ಕೂಡಾಟಗಳನ್ನು ನಡೆಸುವ ಸುಖಕರ ಅಂಕಕ್ಕೆಬಂದವೆನ್ನಬೇಕು ಗತಕಾಲದ ಕಠೋರ ಅನುಭವಗಳೂ, ಭವಿಷ್ಯ ಗರ್ಭದಲ್ಲಡಗಿರಬಹುದಾದ ಮಹಾ ಘಟನೆಗಳ ಕಡೆಗಿನ ನೋಟವೂ ಭಾರತ-ಪಾಕಿಸ್ತಾನ್ ನಾಯಕರಲ್ಲಿ ವಿಶೇಷ ಜಾಗ್ರತಿ ನಿರ್ಮಿಸಿವೆ. ರಾಷ್ಟ್ರ ರಕ್ಷಣೆಯ ಜವಾಬ್ದಾರಿಯು ಪೂರ್ವಾಪರ ವಿಚಾರಿಗಳಾದ ಸಮರ್ಥರ ಕೈಯಲ್ಲಿದೆ ಎಂಬ ಭರವಸೆ-ಸ್ವತಂತ್ರ ಭಾರತದ ಬಾಲಗ್ರಹ ಪೀಡೆಗಳು ಕಳೆದು ಹೋಗಿ. ಅದು ಪುಷ್ಟಿ ಹೊಂದಲಾರಂಭಿಸಿತು ಎಂಬ ಸಂತೋಷ-ಈಗ ಮೂಡುತ್ತಿದೆ. ಭಾರತ ನಾಯಕರು ಶಾಂತಿ ಸೌಹಾರ್ದತಾ ಸ್ಥಾಪನೆಯ ಸಂಚಾರಗಳಲ್ಲೀಗ ತೊಡಗಿರುವ ದೃಶ್ಯ ಕಾಣಿಸುತ್ತಿದೆ.

**ನೆಹರು ಕರಾಚಿಗೆ**

ಪಾಕಿಸ್ತಾನ್ ಪ್ರಧಾನ ಮಂತ್ರಿ ಮಿ ಲಿಯಾಖತ್ ಆಲೀಖಾನರು ದಿಲ್ಲಿಗೆ ಬಂದು ಪಡೆದಿದ್ದ ಆಥಿತ್ಯವನ್ನು ಮರಳಿ ಪಡೆಯುವುದಕ್ಕಾಗಿಯೂ, ದಿಲ್ಲೀ ಒಪ್ಪಂದದ ಉತ್ತರಾರ್ಧವಾಗಿ, ಎರಡು ರಾಷ್ಟ್ರಗಳೊಳಗಿನ ಇತರ ವಿವಾದ ವಿಷಯಗಳನ್ನು ತೀರ್ಮಾನಿಸಿಕೊಳ್ಳುವ ಮಾತುಕತೆಗಾಗಿಯೂ ಪಂಡಿತ ನೆಹರುಗಳು ಇದೇ ತಾ. 26ರಲ್ಲಿ ಪಾಕಿಸ್ತಾನದ ರಾಜಧಾನಿ ಕರಾಚಿಗೆ ಹೋಗಿಅಲ್ಲಿ ಎರಡು ದಿನವಿದ್ದು ತಾ.28ಕ್ಕೆಮರಳಲಿದ್ದಾರೆ. ಅಲ್ಪ ಸಂಖ್ಯಾಕಸಮಸ್ಯೆಗಳ ಸಂಬಂಧದ ಮುಖಾಮುಖಿ ಮಾತುಕತೆಗಳಿಗಾಗಿ, ಆ ದಿನವೇ ನೆಹರೂ ಲಿಯಾಖತರಿಬ್ಬರೂ ಪರಸ್ಪರ ಒಬ್ಬರನ್ನೊಬ್ಬರು ತಮ್ಮಲ್ಲಿ ಆಮಂತ್ರಿಸಿಕೊಂಡಿದ್ದರಾದರೂ ಕೊನೆಗೆ ನೆಹರುಗಳಲ್ಲಿಗೆ ಲಿಯಾಖತರೇ ಬಂದು ಹೋದರು. ಮಿ ಲಿಯಾಖತರು ದಿಲ್ಲಿಯಲ್ಲಿ ಪುನಃ ನೆಹರುಗಳಿಗಾಮಂತ್ರಣವಿತ್ತಿದ್ದರಲ್ಲದೆ, ಪಾಲಮ್ ವಿಮಾನ ನಿಲ್ದಾಣದಲ್ಲಿ ವಿದಾಯ ಹಸ್ತಲಾಘವ ಕೊಡುವಾಗ ಕೂಡಾ 'ಕರಾಚಿಗೆ ಬನ್ನಿ' ಎಂದು ನೆನಪು ಕೊಟ್ಟಿದ್ದರು. ಆ ಮೇಲೆ ಕರಾಚಿಯಿಂದ ಪಂಡಿತಜೀಗೆ ಪುನಃ ಆಮಂತ್ರಣ ಪತ್ರ ಬಂದುದರಿಂದ ತಾ. 26ಕ್ಕೆ ಅತ್ತ ಹೊರಡುವ ನಿರ್ಧಾರವನ್ನು ಪಂಡಿತ ನೆಹರುಗಳು ಮಾಡಿದರು. ಲೀಗ್ ಚಳವಳವಾರಂಭಿಸಿದ್ದ, ಆ ಕಾಲದಿಂದಲೂ 'ತಮ್ಮ ಕಾಲ ಬಳಿಗೆ ಅವರು ಬರುವ' ಅಭಿಮಾನದ ಪ್ರಶ್ನೆಯೊಂದು ಇಲ್ಲಿಯ ರಾಜಕೀಯ ರಂಗದಲ್ಲಿ ಸುಳಿದಾಡುತ್ತಿದೆ. ಹೃದಯ ಪರಿವರ್ತನಾ ಪ್ರಯತ್ನದಲ್ಲಿ ತಳದವರೆಗೂ ತಗ್ಗಲು ಸಿದ್ಧರಿದ್ದ ಮಹಾತ್ಮಾಜೀಯೇ ಆಗಿಂದಾಗ ಮಿ॰ ಜಿನ್ನರ ಭೇಟಿಗೆ ಹೋಗುತ್ತಿದ್ದ ಕುರಿತು ಅಭಿಮಾನಿಗಳು ಮನನೋಯುವದಿದ್ದಿತು. ಆದರೂ ಪಾಕಿಸ್ತಾನ್ ಬೇಡಿಕೆಗೆ ಮೂಲ ಕಾರಣವಾಗಿದ್ದ ಮಿ. ಜಿನ್ನಾ ಸಾಹೇಬರ ಸ್ವನಿಕೃಷ್ಟತಾ ಯಾತನೆಯು, ಸಂಧಾನಾತುರದಿಂದ ಗಾಂಧಿಜೀಯಿದ್ದಲ್ಲಿಗೆ ಬರುವ ವಿನಯ ಸ್ವಭಾವವನ್ನು ಅವರಲ್ಲಿ ಎಂದೂ ಮೊಳೆಯಿಸಿದ್ದಿಲ್ಲ. ಪಾಕಿಸ್ತಾನದ ಪ್ರಧಾನ ಮಂತ್ರಿಗಳಿಗೆ ಅಂತಹ ಒಣಾಭಿಮಾನವನ್ನು ಕಟ್ಟಿಕೊಳ್ಳುವ ಅವಶ್ಯಕತೆಯಿಲ್ಲವಾದ್ದರಿಂದ ಅವರು ದಿಲ್ಲಿಗೆ ಬಂದು ಹೋದರು. ಅದನ್ನು ಸಂದಾಯಿಸಲು ಈ ದಿನ (ತಾ. 26) ನೆಹರುಗಳು ಕರಾಚಿಗೆ ಹೊರಟಿದ್ದಾರೆ. ಭಾರತ—ಪಾಕಿಸ್ತಾನಗಳೊಳಗೆ ಮೈತ್ರೀಭಾವ ನಿರ್ಮಿಸಲು, ದಿಲ್ಲಿಯಲ್ಲಿ ಆಗಿದ್ದ ಮಾತುಕತೆಗಳ ಮುಂದುವರಿಕೆ ಇಂದು ಕರಾಚಿಯಲ್ಲಿ ಆರಂಭಿಸಲಿದೆ.


ಗ್ಯಾರಂಟೀಯಾದ ಶುಚಿತ್ವ

ಗ್ಯಾರಂಟೀಯಾದ ಶುದ್ಧತೆ

ಅಗ್ಗವಾಗಿ ಸಿಗುವ ಮತ್ತು ಪೊಟ್ಣಗಳಲ್ಲಿ ಕಟ್ಟದಿರುವ ಚಹಗಳನ್ನು ಕೊಂಡು ವೃಥಾ ಏಕೆ ನಷ್ಟಕ್ಕೆ ಒಳಗಾಗುವಿರಿ. ಪ್ರತಿಯೊಂದು ಬ್ರೂಕ್ ಬಾಂಡ್ ಪೊಟ್ಣದಲ್ಲಿರುವ ಚಹವೂ ರುಚಿ ಮತ್ತು ಶುದ್ಧತೆಯ ಭರವಸೆ ಕೊಡುವುದಲ್ಲದೆ ಮಲಿನವಾಗದ ಹಾಗೆ ಕಾಪಾಡಲ್ಪಟ್ಟಿರುತ್ತದೆ. ಪ್ರತಿಯೊಂದು 2 ಔನ್ಸ್ ಪೊಟ್ಣದಿಂದ 30 ದೊಡ್ಡ ಕಪ್ಪುಗಳಿಗೆ ಆಗುವಷ್ಟು ಚಹ ಮಾಡಬಹುದು.

ನೀವು ಉತ್ತಮ ಗುಣ ಮತ್ತು ಪ್ರತಿಫಲವನ್ನು ಅಪೇಕ್ಷಿಸುವುದೇ ಆದರೆ ನೀವು ಕೊಳ್ಳಬೇಕಾದ್ದು

ಬ್ರೂಕ್ ಬಾಂಡ್ ಚಹಾ

BB/50/LOT/101

# —ಮೈತ್ರಿಸಾಧಕ ಸಂಚಾರಗಳು.

**ಕಲ್ಕತ್ತೆಯಲ್ಲಿ ಸರ್ದಾರರು.**

ಭಾರತ ಪಾಕಿಸ್ತಾನಗಳೊಳಗಿನ ವಿವಾದಗಳ ಶಾಂತ ತೀರ್ಮಾನಕ್ಕಾಗಿ, ಮನುಷ್ಯ ಸಾಧ್ಯ ಪ್ರಯತ್ನವೆಲ್ಲವನ್ನೂ ಮಾಡಿ, ಪ್ರಯೋಗಿಸಿ, ನೋಡಿಕೊಳ್ಳದೆ ದುಡುಕುವುದು ಹಿತಕರವಲ್ಲವೆಂಬುದು ಎಂತಹ ದುಡುಕು ಸ್ವಭಾವಿಗಳ ಮನಸ್ಸಿಗೂ ನಾಟುವ ರೀತಿಯಲ್ಲಿ ಸರ್ದಾರ್ ಪಟೇಲರು ಢಿಲ್ಲೀ ಒಪ್ಪಂದಕ್ಕೆ ನೆಹರೂಗಳ ಜೋಡಿಯಾಗಿ ಹೆಗಲು ಕೊಟ್ಟು ದುಡಿಯುತ್ತಿದ್ದಾರೆ. ಇದಕ್ಕಾಗಿಯೇ ಅಲ್ಪ ಸಂಖ್ಯಾಕ ಗೊಂದಲದ ಕೇಂದ್ರನೆಲೆ ಮತ್ತು ನೆಹರೂ ಲಿಯಾಖತ್ ಒಡಂಬಡಿಕೆಯ ಆಕ್ಷೇಪ ಕ್ಷೇತ್ರವಾಗಿರುವ ಕಲ್ಕತ್ತೆಗೆ ಬಂದು ಅಲ್ಲಿ ಏಳು ದಿನಗಳ ವರೆಗೆ ಜಯಶೀಲ ಪ್ರಯತ್ನ ಮಾಡಿ ಮರಳಿದ್ದಾರೆ. ಅಲ್ಲಿ ಮಂತ್ರಿಗಳೊಡನೆ, ನಾಗರಿಕ ಹಾಗೂ ಪೋಲಿಸ್ ಖಾತೆಯ ಅಧಿಕಾರಿಗಳೊಡನೆ, ಮತ್ತು ಕಾಂಗ್ರೆಸಿಗರೊಡನೆ ಕೂಲಂಕುಶ ವಿಚಾರ ವಿಮರ್ಶೆ ನಡಿಸಿ ಢಿಲ್ಲಿ ಒಪ್ಪಂದವನ್ನು ಅಕ್ಷರಶಃ ಜಾರಿಯಲ್ಲಿಡುವ ವ್ಯವಸ್ಥೆಗಳ ಕುರಿತು ಸಲಹೆಯಿತ್ತಿದ್ದಾರೆ. ಅಸ್ಸಾಮಿನ ಗವರ್ನರರೊಡನೆಯೂ ಅಷ್ಟಿಯೇ ಮಾತಾಡಿ ಕಾರ್ಯ ನಿರ್ದೇಶ ಮಾಡಿದ್ದಾರೆ ಪತ್ರಿಕೆಗಳವರು— ಪೂರ್ವ ಬಂಗಾಳದಿಂದ ಬಂದಿರುವ ಕಾಂಗ್ರೆಸಿಗರು—ಅಧಿಕಾರಿಗಳು ಮತ್ತು ಸಾರ್ವಜನಿಕರು ನೆಹರು ಲಿಯಾಖತ್ ಒಪ್ಪಂದದ ಯಶಸ್ವಿಗಾಗಿ ಯಾರು, ಹೇಗೆ ದುಡಿಯಬೇಕೆಂಬ ಕುರಿತು ತಕ್ಕ ಸಲಹೆಗಳನ್ನಿತ್ತಿದ್ದಾರೆ. ಪಂಡಿತ ನೆಹರೂಗಳು ಸಂಚಾರವೀರ; ಪ್ರಯಾಣವು ಅವರ ದೇಹ, ಮನಸ್ಸುಗಳಿಗೆ ಹಿತಕರ. ಆದರೆ ಸರ್ದಾರ್ ಪಟೇಲರು ದೀರ್ಘಾವಧಿಯಿಂದ ಆರೋಗ್ಯ ಕಡಿಸಿಕೊಂಡು, ಆಗಾಗ ಚಿಕಿತ್ಸೆ ಮತ್ತು ಪೂರ್ಣ ವಿರಾಮಗಳನ್ನು ಪಡೆಯುವ ಸ್ಥಿತಿಯಲ್ಲಿರುವ ಮುಂದಾಳು. ಕರಾಚಿ ವಿಮಾನ ಪ್ರಯಾಣ ಸರ್ದಾರರ ಪ್ರಕೃತಿಗೆ ಒಗ್ಗಲಾರದು—ಆದರೆ ಸರ್ದಾರರಿಲ್ಲದೆ ಆಗದು ಎಂದೇ ಆ ಬಾರಿ ಪಂಡಿತ ನೆಹರೂಗಳು ಕರಾಚಿಗೆ ಹೋಗಲಿಲ್ಲ, ಪಟೇಲರ ಸಂಚಾರಗಳಿಗೆಂದು ಅವರ ಪ್ರಕೃತಿಗೆ ಅನುಗುಣವಾದ ಸ್ಪೆಶಲ್ ವಿಮಾನವೊಂದನ್ನು ಸ್ವಿಸರ್ಲೆಂಡಿನಲ್ಲಿ ತಯಾರಿಸಿ, ಭಾರತ ಸರಕಾರವು ತರಿಸಿಕೊಂಡಿದೆ. ಕಲಕಾಲದಿಂದ ನಿಂತು ಭಾಷಣ ಕೊಡುವಷ್ಟು ಶಕ್ತಿ ಕೂಡಾ ಸರ್ದಾರರಲ್ಲಿಲ್ಲ. ಆದರೂ ಅವರು ತನ್ನ ನಿಶ್ಶಕ್ತತೆಯನ್ನು ಲೆಕ್ಕಿಸದೆ, ಢಿಲ್ಲೀ ಒಪ್ಪಂದದ ಜಯಶೀಲತೆಗಾಗಿ ಕಲ್ಕತ್ತೆಗೆ ಧಾವಿಸಿ ಒಂದು ದುಡಿದರು. ಕೆರಳಿ, ಕದಡಿ ಎದ್ದಿದ್ದ ಕಲ್ಕತ್ತಾ ಮತ್ತು ಪಶ್ಚಿಮ ಬಂಗಾಳ ವಾತಾವರಣದ ಮೇಲೆ ಸರ್ದಾರ್ ಪಟೇಲರ ತೂಕ ಮತ್ತು ಸಂಘಟನಾ ಶಕ್ತಿ ಭಾರ ಬಿದ್ದು, ಅದಲ್ಲೇ ಮೂಲ ನೆಲೆಗೊತ್ತಲ್ಪಡದೆ ಹೋಗಿದ್ದರೆ, ಅಲ್ಲಿಯ ನಿಯಂತ್ರಣವು ಡೋಯ ಸರಕಾರಕ್ಕೆ ಅತ್ಯಂತ ಕಷ್ಟದ ಕಾರ್ಯವಾಗುತ್ತಿತ್ತೆಂಬುದು ನಿಸ್ಸಂದೇಹ. ಒಂದು ವಾರದ ವಿಜಯೀ ಪ್ರಯತ್ನಾನಂತರ ಕಲ್ಕತ್ತ ಬಿಡುವ ಮೊದಲು ತಾ. 21ನೇ ರಾತ್ರಿ, ಆಕಾಶವಾಣಿ ಮೂಲಕ ಅವರು ಬಂಗಾಳಿಗಳಿಗೆ ಮಾಡಿಕೊಂಡ ವಿಜ್ಞಾಪನೆಯು, ಪಟೇಲರ ಹೃದಯ ಮತ್ತು ದೃಷ್ಟಿ ದೂರವೆಂತಹುದೆಂಬುದನ್ನು ತೋರಿಸುತ್ತಿದೆ. "ಢಿಲ್ಲೀ ಒಡಂಬಡಿಕೆಯು ಉತ್ತಮವಾದುದೋ ಕಳಪೆಯದೋ, ಅದು 'ಲಾಭದಾಯಕವೋ ನಷ್ಟಕಾರಿಯೋ,' ಎಂಬುದನ್ನು ನೋಡುವದು ಈಗ ಪಶ್ಚಿಮ ಬಂಗಾಳದವರ ಕೆಲಸವಲ್ಲ. ಬದಲಿಗೆ ಎರಡು ಸ್ವತಂತ್ರ ರಾಷ್ಟ್ರಗಳೊಳಗೆ ಹಂಚಲ್ಪಟ್ಟಿರುವ ವಿಭಜಿತ ಬಂಗಾಳದ ಸದ್ಯದ ಸ್ಥಿತಿಗತಿಗಳ ಮೇಲಿಂದ, ಇತ್ತೀಚಿನ ಗೊಂದಲಗಳಿಗೆ ಬಲಿಬಿದ್ದಿರುವ ಇಕ್ಕಡೆಯ ದುರ್ದೈವೀ ನಿರ್ಗತಿಕರಿಗೆ ಈ ಒಡಂಬಡಿಕೆಗಿಂತ ಹೆಚ್ಚಾಗಿ ಆಶೆ, ವಿಶ್ವಾಸ, ರಕ್ಷಣೆಯೀಯಬಲ್ಲ ಬೇರೊಂದು ಶಾಂತ ವಿಧಾನವೇನಾದರೂ ಇದೆಯೇ ಎಂಬ ಕಠೋರ ವಸ್ತುಸ್ಥಿತಿಯನ್ನು ನೋಡಬೇಕಾದುದೊಂದೇ ಈಗಿನ ಕರ್ತವ್ಯ. ಇಂತಹ ಒಪ್ಪಂದಗಳ ಜಯಶೀಲತೆಯ ಕುರಿತು ಗತಕಾಲದ ಸಂದೇಹಗಳನ್ನು ಮತ್ತು ಭವಿಷತ್ಕಾಲದ ಹೆದರಿಕೆಗಳನ್ನು ಕಟ್ಟಿಕೊಳ್ಳುವುದರಲ್ಲಿ ನಾನಾರಿಗೂ ಕಡಿಮೆಯವನಲ್ಲ. ಆದರೆ ನಂಬಿಕೆ ಮತ್ತು ವಿಶ್ವಾಸಕ್ಕೂ ನನ್ನ ಮೆದುಳಿನೆಡೆಯಲ್ಲೊಂದು ಸ್ಥಾನವಿದೆ; ಅವುಗಳೇ ಈ ಒಡಂಬಡಿಕೆಗೊಮ್ಮೆ ಪರೀಕ್ಷಾವಕಾಶ ಕೊಡಬೇಕೆಂಬ ನಿರ್ಧಾರವನ್ನು ನನ್ನಿಂದ ಮಾಡಿಸಿವೆ. ಬಂಗಾಳದ ಕುವರ ಕುವರಿಯರಿಂದ ಇದಕ್ಕಿಂತ ಹೆಚ್ಚಿನದೇನನ್ನೂ ನಾವು ಕೇಳುವದಿಲ್ಲ. ನಮ್ಮ ಮುಂದಿರುವ ಸಮಸ್ಯೆಯನ್ನು ವ್ಯವಹಾರ್ಯ ಮಾನುಷತ್ವದೊಡನೆ ಇದಿರಿಸೋಣ. ನಮ್ಮ ಶಕ್ತಿಯ ಮಿತಿಯನ್ನರಿತು, ನಂಬಿಕೆ ಭರವಸೆಗಳಿಂದ ಕಾರ್ಯಪ್ರವೃತ್ತರಾಗೋಣ. ರಾಷ್ಟ್ರೀಯ ಗೌರವ ಮತ್ತು ಘನತೆಗನುಗುಣವಾದ ನಮ್ಮ ಪಾಲಿನ ಕರ್ತವ್ಯಗಳನ್ನು ವಿಶಾಲ ಹೃದಯದಿಂದ ನಿರ್ವಹಿಸೋಣ. ನಮಗಿದರಲ್ಲಿ ಸಾರ್ಥಕತೆ ದೊರೆತರೆ ಶಾಂತಿ, ಸೌಹಾರ್ದತೆ ಹಾಗೂ ನೆರೆಕರೆ ಮೈತ್ರಿಯ ಶಾಂತಿ ಯುಗವನ್ನು ವಿನೀತ ವಿಧಾನವೊಂದರ ಮೂಲಕ ನಾವು ಆಚರಿಸಿದಂತಾಗುವದು. ಒಂದೊಮ್ಮೆಗಿದು ನಿರರ್ಥಕವಾದರೆ—ದೇವರ ದಯೆಯಿಂದ ಹಾಗಾಗದಿರಲಿ—ವಿಶೇಷ ಅಪಾಯಕರ ಸಮಸ್ಯೆಯೊಂದರ ಶಾಂತ ತೀರ್ಮಾನಕ್ಕಾಗಿ ಕೊನೆಯ ಪ್ರಯತ್ನವನ್ನೂ ಮಾಡಿದೆವೆಂಬ ಆತ್ಮ ಸಮಾಧಾನವಾದರೂ ನಮಗೆ ದೊರೆಯುವದು." ಎಂಬುದೇ ಸರ್ದಾರರ ವಿನಂತಿಯ ಸಾರ.

**ಇತರ ವಹಿವಾಟುಗಳು**

ಢಿಲ್ಲೀ ಒಪ್ಪಂದವಾದ ಮೇಲಿನ ಹನ್ನೊಂದೇ ದಿನಗಳ ಅನುಭವದಿಂದ, ಈ ಒಡಂಬಡಿಕೆಯು ಎರಡೂ ರಾಷ್ಟ್ರಗಳಲ್ಲಿ ಜಯಶೀಲವಾಗಿ ಜಾರಿಗೆ ಬರುತ್ತಿರುವ ಸಮಾಧಾನವಿದೆ, ಎಂದು ಪಂಡಿತ ನೆಹರೂಗಳು ಪಾರ್ಲಿಮೆಂಟಿನಲ್ಲಿ ಹೇಳಿರುವರು. ಪಾಕಿಸ್ತಾನದ ಪತ್ರಿಕೆಗಳು ದಿನ ಬೆಳಗಾಗುವುದರೊಳಗೆ ಸ್ವಭಾವ ಬದಲಾಯಿಸಿ ಶಾಂತ ವಾತಾವರಣ ನಿರ್ಮಿಸಲು ನೆರವಾಗಿವೆ; ಭಾರತದ ಪತ್ರಿಕೆಗಳಂತೂ ಢಿಲ್ಲೀ ಒಪ್ಪಂದ ಪಾಲನೆಗೆ ಪೂರ್ಣಾನುಕೂಲ ಪರಿಸ್ಥಿತಿಯನ್ನು ನಿರ್ಮಿಸಿವೆ. ಭಾರತ ಮತ್ತು ಪಾಕಿಸ್ತಾನ್ ಪತ್ರಿಕಾಕರ್ತರ ಜತೆ ಸಮ್ಮೇಳನ ಸೇರುವ ಸಂಭವವಿದೆ. ಕಲ್ಕತ್ತದಲ್ಲಿ ಪೂರ್ವ ಬಂಗಾಳ, ಪಶ್ಚಿಮ ಬಂಗಾಳ, ಮತ್ತು ಅಸ್ಸಾಮು ಸರಕಾರಗಳ ಮುಖ್ಯ ಕಾರ್ಯದರ್ಶಿಗಳ ಸಮ್ಮೇಳನ ಸೇರಿ ಮುಂದಿನ ಕಾರ್ಯಕ್ರಮಗಳ ನಿರ್ಧಾರಗಳಾಗಿವೆ. ಕರಾಚಿಯಲ್ಲಿ ಭಾರತ ಮತ್ತು ಪಾಕಿಸ್ತಾನ ಅಧಿಕಾರಿಗಳ ಜತೆ ಪರ್ಯಾಲೋಚನಾ ಸಭೆ ಸೇರಿ ರೂ 17 ಕೋಟಿ ಮೌಲ್ಯದ ವ್ಯಾಪಾರ ವಹಿವಾಟುಗಳ ಸಂಬಂಧದ ಒಂದು ಒಡಂಬಡಿಕೆಗೆ ತಾ. 21ರಲ್ಲಿ ಇಕ್ಕಡೆಯವರ ಸಹಿ ಬಿದ್ದಿದೆ. ಪಾಕಿಸ್ತಾನದ ಹತ್ತಿ, ಭಾರತದ ಇದ್ದಿಲುಗಳು ಈ ಕರಾರಿನಲ್ಲಿ ಸೇರಿಲ್ಲವೆಂದು ತಿಳಿದು ಬರುತ್ತದೆ. ಇದೇ ರೀತಿ ಭಾರತ-ಪಾಕಿಸ್ತಾನಗಳ ವಿವಿಧ ಜತೆ ಕೂಟಗಳು ಜರಗಿವೆ; ಜರಗಲಿವೆ. ಪರಸ್ಪರ ಟೀಕೆ, ದೂಷಣೆಗಳ ಅವಧಿ ಮುಗಿದು ಮುಖತಃ ವಿಚಾರ ವಿನಿಮಯ ನಡಿಸುವ ಹೊಸ ಅಂಕವಾರಂಭಿಸಿರುವುದು ಸ್ಪಷ್ಟವಿದೆ. 'ಪಾಕಿಸ್ತಾನದೊಡನೆ ಸಂಧಾನವೆಂಬುದು ನಿರರ್ಥಕ; ಅದು ಹಗಲ್ಗನಸೇ ಸರಿ' ಎಂಬ ಮೂಲ ಭಿನ್ನಾಭಿಪ್ರಾಯದಿಂದ ಕೇಂದ್ರ ಮಂತ್ರಿಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೊರಬಂದಿರುವ ಬಂಗಾಳೀ ಪ್ರಮುಖರು ಡಾ. ಶ್ಯಾಮಪ್ರಸಾದ್ ಮುಖರ್ಜಿ, ಶ್ರೀ ನಿಯೋಗಿಗಳಂದರೇ ಢಿಲ್ಲೀ ಒಪ್ಪಂದದ ವಿರುದ್ಧ ಪ್ರಚಾರಕ್ಕೆ ಮುಂದಾಗದೆ, ವೈರಿದೆಗೆದು ನಿಲ್ಲುವರೆಂದು ಸ್ಪಷ್ಟವಾಗಿದೆ. ವ್ಯವಹಾರ ಚತುರ, ಆದರಲ್ಲೂ ಭಾರತ-ಪಾಕಿಸ್ತಾನ್ ಸಂಧಾನ ತಜ್ಞ, ರಾಜಾಜಿಯ ಕಾರ್ಯ ಬಲವು ಈ ಕ್ಷೇತ್ರಕ್ಕಗತ್ಯವೆಂದು ಪ್ರಧಾನಿ ನೆಹರೂಗಳು ಶ್ರೀ. ಸಿ. ರಾಜಗೋಪಾಲಾಚಾರಿಯರ ಸಹಾಯವನ್ನು ಆಮಂತ್ರಿಸಿದ ಪರಿಂದ ಆಚಾರ್ಯರು ಭಾರತ ಸರಕಾರದ ಸಂಚಾರೀ ರಾಯಭಾರೀ ಸ್ಥಾನ ವಹಿಸಿ ಶಾಂತಿ ಸ್ಥಾಪನಾ ಕಾರ್ಯ ನಿರತರಾಗುವರೆಂದೂ ತಿಳಿದುಬಂದಿದೆ. ಅಂತೂ, ಒಮ್ಮೆ ಪರಮಾವಧಿ ಬಿಗಿಗೊಂಡಿದ್ದ ಭಾರತ-ಪಾಕಿಸ್ತಾನ್ ಸ್ವಭಾವ ಸಂಬಂಧವು ಈಗ ಶಿಥಿಲವಾಗೊಂಡಿದ್ದು, ಈ ಮೃದುತ್ವವನ್ನು ಚಿರಸ್ಥಾಯಿಗೊಳಿಸುವ ಯಥಾರ್ಥ ಪ್ರಯತ್ನಗಳು ಇಕ್ಕಡೆಗಳಲ್ಲೂ ನಡೆದಿವೆ. ಢಿಲ್ಲೀ ಒಪ್ಪಂದದಲ್ಲಿ ನಮೂದಿಸಲ್ಪಟ್ಟಿರುವ ವಿಧಾನಗಳು ಕಾರ್ಯಗತ ಕೈಕೊಳ್ಳಲ್ಪಡುತ್ತಿವೆ.

**ಇತರ ಪ್ರವಾಸಗಳು**

ಪಂಡಿತ ಜವಾಹಿರಲಾಲರು ಸದ್ಯದಲ್ಲೇ ಇಂಡೋನೇಶಿಯಕ್ಕೆ ಭೆಟಿ ಕೊಡಲಿರುವರೆಂದು ತಿಳಿದುಬರುತ್ತದೆ. ಡಚ್ ಪರಾಧೀನತೆಯಿಂದ ಇಂಡೋನೇಶಿಯವನ್ನು ತಪ್ಪಿಸಲು ಸಂಯುಕ್ತ ರಾಷ್ಟ್ರ ಸಂಘದ ಮೂಲಕ ಮತ್ತು ಏಷ್ಯಾ ರಾಷ್ಟ್ರಗಳ ಜತೆ ಪ್ರಯತ್ನದ ಮುಖಾಂತರ ಸಫಲ ಪ್ರಯತ್ನ ನಡಿಸಿ, ಬೇರಾವ ವಿದೇಶೀಯನೂ ಗಳಿಸದಂತಹ ಗೌರವವನ್ನು ಸಂಪಾದಿಸಿದ್ದವರು ಪಂಡಿತ ನೆಹರೂಗಳು. ಕಳೆದ ತಿಂಗಳ ನೋಡಲು ಇಂಡೋನೇಶಿಯದಲ್ಲಿ ಸ್ವತಂತ್ರ ಜನತಾ ರಾಜ್ಯ ಸ್ಥಾಪನೆಗೊಂಡಾಗ, ಅದರ ಉದ್ಘಾಟನೋತ್ಸವದಲ್ಲಿ ಭಾಗಿಯಾಗಲು ಪಂಡಿತ ನೆಹರೂಗಳಿಗೆ ಆಮಂತ್ರಣವಿದ್ದಿತು. ಆದರೆ ಕಾರ್ಯಬಾಹುಳ್ಯದಿಂದ ಪಂಡಿತಜೀಗೆ ಢಿಲ್ಲಿ ಬಿಡಲಿಕ್ಕಾಗದೆ, ಇಂಡೋನೇಶಿಯಕ್ಕೆ ತಾವು ರಾಯಭಾರಿಯಾಗಿ ನೇಮಿಸಿದ್ದ ಡಾ| ಸುಬ್ಬರಾಯನರೊಂದಿಗೆ ಕೇಂದ್ರ ಮಂತ್ರಿ ಶ್ರೀಮತಿ ಅಮೃತ ಕೌರರನ್ನು ಇವರು ಅಲ್ಲಿಗೆ

(೭ನೇ ಪುಟ ನೋಡಿರಿ)


## ಅಪೂರ್ವ ನಾಟ್ಯಕಲಾ ಪ್ರದರ್ಶನ!

ಕನ್ನಾನೂರಿನ ವಿಮಲಾ ಕುಮಾರಿ ಮತ್ತು ಪಾರ್ಟಿ ಇವರಿಂದ

ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್‌ನಲ್ಲಿ.

ತಾರೀಕು 29-4-50ನೇ ಶನಿವಾರ

ಸಂಜೆ ಘಂ 6 ಮತ್ತು

ರಾತ್ರಿ ಘಂ 9 30ಕ್ಕೆ

ನರ್ತಕಿಯರು—

ಶ್ರೀಮತಿ ವಿಮಲಾ ಕುಮಾರಿ

ಪದ್ಮಾವತಿ

ರುಕ್ಮಿಣಿ

ಜಯಲಕ್ಷ್ಮಿ—

ಮತ್ತಿನ್ನಿತರರು

ಹಿಮ್ಮೇಳದ ಸಂಗೀತ

ಶ್ರೀಮತಿ ಪಿ ಎ ಅಂಬುಜಮ್.

ಎಮ್. ಪಿ. ಜಯಮ್ಮ.

ಪಿಟೀಲು—ಕೆ. ಬಾಲನ್ ಭಾಗವತರ್. ಕೊಳಲು, ಕ್ಲೆರನೆಟ್—ಕೆ. ಅಚ್ಚುತನ್

ಮೃದಂಗ, ದೊಲಕ್—ಪಿ. ಕೆ. ಪಣಿಕ್ಕರ್

ಮೋರ್ಸಿಂಗ್—ಮುನಿಸ್ವಾಮಿ ಚೆಟ್ಟಿಯಾರ್

ದರ ರೂ. 5—0—0 3—0—0. 2—0—0, 1-0-0 ಮತ್ತು 0-8-0

ಕೆ ಗೋವಿಂದನ್,

ಪ್ರೊಪ್ರೈಟರ್.

THE
**Canara Banking Corporation Ltd.**
(Incorporated in India.)
Estd: 1906.
Head Office : UDIPI, (S. I.)

| | |
|---|---|
| Capital Authorised .... .... .... | Rs. 25,00,000 |
| Capital Issued, Subscribed & Paid up .... .... .... | Rs. 20,00,000 |
| Reserves .... ... .... | Rs. 9,44,765 |


ನವಯುಗ

ಗುರುವಾರ ಉಡುಪಿ ೨೭-೪-೧೯೫೦

## ಈ ಅಪಾಯ

ತೆಲಂಗಾಣದ ಒಂದೆರಡು ಜಿಲ್ಲೆಗಳಲ್ಲಿ ಮತ್ತು ಹೈದರಾಬಾದ್ ಗಡಿಯೊತ್ತಿನ ಕೆಲವು ಆಂಧ್ರ ಜಿಲ್ಲೆಗಳಲ್ಲಿ ಕಮ್ಯೂನಿಸ್ಟರಿಂದಾಗುತ್ತಿರುವ ಅತ್ಯಾಚಾರಗಳ ವಾರ್ತೆಗಳು ಮೇಲಿಂದ ಮೇಲೆ ಬರುತ್ತಿವೆ. ಅವುಗಳನ್ನು ನಿರ್ಮೂಲಿಸಲು ಪೋಲೀಸರು ಕೈಕೊಳ್ಳುತ್ತಿರುವ ಕಾರ್ಯಾಚರಣೆಗಳು ಕೂಡಾ ಸಾಮಾನ್ಯ ರೀತಿಯವುಗಳಲ್ಲ. ತಮ್ಮಲ್ಲಿ ಮಾನುಷತ್ವವೆಂಬುದೆಂತೂ ಇಲ್ಲ, ಮನುಷ್ಯ ಜೀವಕ್ಕೂ ಬೆಲೆಯಿಲ್ಲ, ಎಂಬಂತೆ ಕಮ್ಯೂನಿಸ್ಟರು ಕೊಲೆ, ಕೊಳ್ಳೆ, ಪರೋಪೀಡೆಗಳನ್ನು ನಡೆಸುತ್ತಿರುವಂತೆಯೇ ಅವರು ನಿಜಕ್ಕೂ ವನ್ಯ ಜಂತುಗಳೇ ಎಂಬಂತೆ ಸಿಕ್ಕಿದಲ್ಲಿ ಗುಂಡಿಟ್ಟು ಕೊಲ್ಲುವ ಪೋಲೀಸ್ ಕಠೋರತೆಯ ಸುದ್ದಿಗಳೂ ಇವೆ. ಅಂತೂ ಮದ್ರಾಸ್ ಮತ್ತು ಹೈದರಾಬಾದ್ ಸಂಸ್ಥಾನಗಳ ಕೆಲವು ಪ್ರದೇಶಗಳು, ಮಲಯದ ಗೊಂದಲ ಪೀಡಿತ ಕ್ಷೇತ್ರಗಳಿಗಿಂತ ಶಾಂತ ಸ್ಥಿತಿಯಲ್ಲೇನೂ ಇಲ್ಲ. ಒಂದು ವಿಧಾನದ ಗೊರಿಲ್ಲಾ ಕಾಳಗ ಅಥವಾ ಅಂತರ್ಯುದ್ಧವೆನ್ನಬಹುದಾದಷ್ಟು ಶರೀರ ಘರ್ಷಣೆಗಳು ಕಮ್ಯೂನಿಸ್ಟ್ ಮತ್ತು ಕಾನೂನು ಪಾಲಕರ ನಡುವೆ ಹಲವೆಡೆಗಳಲ್ಲಿ ನಡೆದಿವೆ. ಬಂಗಾಳ ಮತ್ತಿತರ ಕಡೆಗಳಲ್ಲಿಯೂ ಕಮ್ಯೂನಿಸ್ಟರ ಒಳಾಂದೋಲನಗಳು ಬೆಳೆದಿವೆ ಹೊರತು ಕುಗ್ಗಿಲ್ಲ. ಕಾಂಗ್ರೆಸ್ ಆಡಳಿತೆಯೊಂದಿಗೆ ಜನತೆಯಿಟ್ಟುಕೊಂಡಿರುವ ನಿಕಟ ಸಂಬಂಧದ ದೆಸೆಯಿಂದ, ಏಶ್ಯಾದ ಮಿಕ್ಕ ರಾಷ್ಟ್ರಗಳಲ್ಲಿರುವಷ್ಟು ಕಮ್ಯೂನಿಸ್ಟ್ ಹಾವಳಿಯು ಸ್ವತಂತ್ರ ಭಾರತದಲ್ಲಿಲ್ಲವೆಂಬುದೇನೋ ನಿಜ. ಆದರೆ, ಅಪಾಯ, ಶರೀರ ಅನಾರೋಗ್ಯವಿರುವಾಗ, ಅದಕ್ಕಗತ್ಯವುಳ್ಳ ಚಿಕಿತ್ಸೆ ನಡೆಯಿಸದೆ, ತಮಗಿಂತಲೂ ಕಠಿಣ ರೋಗಕ್ಕೀಡಾಗಿರುವವರು ಬೇರೆ ಇದ್ದಾರೆ ಎಂದಾರೂ ಆತ್ಮ ಸಮಾಧಾನದಿಂದಿರಲಾರರು. ಅಂತೆಯೇ ತುಲನಾತ್ಮಕವಾಗಿ ನೋಡುವಾಗ, ಭಾರತದ ಸ್ಥಿತಿಯೇ ವಾಸಿಯೆಂದು ತೋರಿದರೂ ಇಂದಿನ ಕಮ್ಯೂನಿಸ್ಟ್ ಹಾವಳಿಯು ಎಷ್ಟಕ್ಕೂ ಕಡೆಗಣಿಸುವಂತಹದಲ್ಲ. ಭಾರತದ ಭವಿಷ್ಯ ಬಿಂಬಕ್ಕೆ ರಾಹುವಾಗಬಲ್ಲ ಗಂಡಾಂತರಗಳಲ್ಲಿ ಕಮ್ಯೂನಿಸ್ಟ್ ಅಪಾಯವು ಎಲ್ಲಕ್ಕಿಂತ ಹೆಚ್ಚಿನದು. ಅದು ಲೋಕವ್ಯಾಪಿಯಾಗಿರುವಂತೆಯೇ ಗುಪ್ತಗಾಮಿಯೂ ಇದೆ. ಸಂದರ್ಭಾನುಸಾರವಾಗಿ ಬಹಿರಂಗ ಹೋರಾಟ, ಅಂತರಂಗಾಂದೋಲನ, ಇವೆರಡು ರೂಪಗಳನ್ನೂ ಅದು ತಾಳಬಲ್ಲುದು. ಪ್ರತ್ಯಕ್ಷ ಘರ್ಷಣೆಗೆದ್ದಲ್ಲಿ ವಿಸ್ತಾರ ಜಾಗತಿಕ ಕ್ಷೇತ್ರದ ಬೆಂಬಲದಿಂದಾಗಿ ಅದು ಅಜೇಯವಿದ್ದರೆ, ಗುಪ್ತ ಆಂದೋಲನಕ್ಕಿಳಿದಲ್ಲಿ, ಜನತಾ ಅತೃಪ್ತಿಗಳನ್ನು ಭದ್ರವಾಗಿ ಆಧರಿಸಿ ನಿಲ್ಲುವ ಅಭ್ಯಾಸ ಬಲದಿಂದ ಅದು ಅದಮ್ಯವಿದೆ. ಹೀಗಾಗಿ ಸುಲಭದಲ್ಲಿ ಗುಣಪಡಿಸಲಾಗದ ರೋಗ--ಸಾಮಾನ್ಯ ವಿಧಾನಗಳಿಂದ ಜಯಿಸಲಾಗದ ಹೋರಾಟಗಳ ಪೈಕಿ ಕಮ್ಯೂನಿಸ್ಟ್ ಆಂದೋಲನದಷ್ಟು ಗಡುತರವಾದುದು ಬೇರೊಂದಿಲ್ಲ. ಇದು ಭಾರತದ ಅನುಭವಸಿದ್ಧ ವಿಷಯ. ನವಸ್ವಾತಂತ್ರ್ಯದ ಆಕರ್ಷಣೆ— ನೆಹರೂ ವಲ್ಲಭಭಾಯಿ ನಾಯಕತ್ವಕ್ಕಿರುವ ಜನಬೆಂಬಲ— ಅಹಿಂಸಾ ಪ್ರವಾದಿ ಗಾಂಧಿಜೀಯಿಂದ ಶುದ್ಧೀಕರಣ ಪಡೆದಿರುವ ವಾತಾವರಣ— ಇಂತಹ ವಿಶೇಷಾನುಕೂಲತೆಗಳಿದ್ದು, ನಿರ್ದಾಕ್ಷಿಣ್ಯವಾಗಿ ಕಾನೂನು ಪ್ರಯೋಗ ನಡೆದಿದ್ದರೂ, ಕಮ್ಯೂನಿಸ್ಟ್ ಚಳವಳಿವು ಸಮೂಲ ನಾಶವಾಗದೆ, ಎಲ್ಲೆಲ್ಲೂ ಬೂದಿಯೊಳಗಿನ ಕೆಂಡವಾಗಿ ಉಳಿದುಕೊಂಡಿರುವುದು, ಮತ್ತು ಕೆಲವೆಡೆ ಅದು ಪ್ರಜ್ವಲಿಸಿ ಹತೋಟಿಗೆ ಬರಲೊಪ್ಪದಿರುವುದು ಕಂಡು ಬರುತ್ತಿದೆ. ಅತಿ ಪ್ರಚಾರ ಪಡೆದಿದ್ದ ಹೈದರಾಬಾದ್ ರಝಾಕಾರ್ ಪಕ್ಷವನ್ನು ಐದೇ ದಿನಗಳ ಪೋಲೀಸ್ ಆಚರಣೆಯಿಂದ ಸದೆಬಡಿದು, ಅದರ ಅವಶೇಷಗಳೆಲ್ಲವನ್ನೂ ಇಷ್ಟರಲ್ಲೇ ಪೂರ್ಣ ನಿವಾರಿಸಿಕೊಳ್ಳಲಾಗಿದೆಯಾದರೂ, ಅಲ್ಲಿಯ ಕಮ್ಯೂನಿಸ್ಟ್ ಹಾವಳಿ ಮಾತ್ರ ಬಹುತೇಕವಾಗಿ ಆಗ ಇದ್ದಷ್ಟೇ ಈಗಲೂ ಇದೆ. ಅಲ್ಪಾವಧಿಯೊಳಗೆ ಇಡೀ ಹೈದರಾಬಾದನ್ನು ರಝಾಕಾರರ ಕರಾಳ ಹಸ್ತದಿಂದ ಬಿಡಿಸಿಕೊಡಲು ಸಾಧ್ಯವಾದರೂ, ಅಲ್ಲಿಯ ಎರಡು ಮೂರು ಜಿಲ್ಲೆಗಳನ್ನು ಕಮ್ಯೂನಿಸ್ಟರ ಕಪಿಮುಷ್ಟಿಯಿಂದ ಬಿಡಿಸಿಕೊಳ್ಳಲು ಮಾತ್ರ ಈ ವರೆಗೂ ಸಾಧ್ಯವಾಗಿಲ್ಲ. ಭಾರತದ ಪಾಲಿಗೂ ಕಮ್ಯೂನಿಸ್ಟ್ ಚಳವಳವು ಚಿಕಿತ್ಸಾತೀತ ಉದರಶೂಲೆಯಂತಿದೆ ಎಂಬುದು ಸ್ವತಃಸಿದ್ಧ.

ಹೀಗಾಗಲು ಮೂಲ ಕಾರಣವೇನು, ಇವಕ್ಕೆ ಪರಿಹಾರೋಪಾಯವಾವುದು, ಇವುಗಳನ್ನು ಕಂಡುಕೊಳ್ಳುವ ಕಾರ್ಯಕ್ಕೆ ಕೈಹಾಕಬೇಕಾದುದು ಅತ್ಯಗತ್ಯ. ರುಂಡಗಳ ನಿಷ್ಪೇಷಣ ಮಾತ್ರದಿಂದ ಪ್ರಾಣ ಹೋಗಲೊಲ್ಲದ ಆಧುನಿಕ ರಾವಣಾಸುರನಾಗಿ ಕಮ್ಯೂನಿಸ್ಟ್ ಗೊಂದಲವುಳಿದುಕೊಳ್ಳಬೇಕಾದರೆ, ಅದರ ಗರ್ಭದೊಳಗೆ ಹುದುಗಿರುವ ಅಮರತ್ವವಾವುದು ಎಂಬ ಪ್ರಶ್ನೆಯೇಳುತ್ತಿದೆ. ಸಂಕಟ, ಸಂತಾಪಗಳಲ್ಲಿ ಸಿಲುಕಿ, ನಿಸ್ಸಹಾಯಕರಾಗಿರುವ ಜನಸಾಮಾನ್ಯರ ಆಂತರಿಕ ಅತೃಪ್ತಿಯೇ ಕಮ್ಯೂನಿಸ್ಟ್ ಚಳವಳದ ಒಳಜೀವ. ಈ ಅತೃಪ್ತಿಯುಳಿದಿರುವ ವರೆಗೂ ಕಮ್ಯೂನಿಸ್ಟ್ ಚಳವಳಕ್ಕೆ ಜೀವವಿದ್ದೇ ಇದೆ. ಏನಿಲ್ಲೆಂದರೂ, ಸ್ವಾತಂತ್ರ್ಯಾನಂತರ ಜನತೆಯ ಕಷ್ಟನಷ್ಟಗಳು ಹೆಚ್ಚಿವೆ ಹೊರತು ಕಡಿಮೆಯಾಗಿಲ್ಲ; ಇದರ ಕಾರಣ ಮತ್ತು ಹೊಣೆಗಾರಿಕೆಯೆಲ್ಲಿದ್ದರೂ ಕಾಂಗ್ರೆಸ್ ಆಡಳಿತೆಯ ಅವಧಿಯೇ ಜನತೆಯ ದುಸ್ಥಿತಿಯ ಕಾಲವೆಂಬುದು ಸಾಮಾನ್ಯರಿಗರ್ಥವಾಗುವ ಸತ್ಯಸ್ಥಿತಿ. ಈ ಮೇಲ್ನೋಟದೊಳಗಡೆಯ ಸೂಕ್ಷ್ಮ ವಿದ್ಯಮಾನಗಳನ್ನು ನೋಡಿಕೊಂಡೇ ಜನಸಾಮಾನ್ಯರು ತಮ್ಮ ಅಭಿಪ್ರಾಯ ರೂಪಿಸಿಕೊಳ್ಳಬೇಕೆಂದು ಆಶಿಸಲು ಜನತೆಯ ಸದ್ಯದ ಮನೋಸ್ಥಿತಿಯ ಮೇಲಿಂದ ಸಾಧ್ಯವಿಲ್ಲ. ಮೇಲಾಗಿ ಜನಸಾಮಾನ್ಯರ ನಿತ್ಯಜೀವನ ಸಂಕಷ್ಟಗಳನ್ನು ನಿವಾರಿಸಲು ಕಾಂಗ್ರೆಸ್ ಆಡಳಿತೆಯಿಂದ ತೃಪ್ತಿಕರ ಕಾರ್ಯಗಳಾಗಿವೆ, ಆಗುತ್ತಿವೆ ಎಂಬ ಸಮಾಧಾನವಾಗಲೀ, ಆಗಲಿವೆ ಎಂಬ ಸ್ವಪ್ನ ಭಾವನೆಯಾಗಲೀ ನಿಜಕ್ಕೂ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಕಮ್ಯೂನಿಸ್ಟ್ ದುರ್ಬೋಧನೆಗಳಿಗೆ ಜನಸಾಮಾನ್ಯರ ಬುದ್ಧಿ ದ್ವಾರ ತೆರೆಯಲ್ಪಡುವದು ಸ್ವಾಭಾವಿಕ. ಸ್ವಾತಂತ್ರ್ಯ ಪ್ರಾಪ್ತಿಯ ಬೆನ್ನಲ್ಲೇ ಎದ್ದಿದ್ದ ಜಾತೀಯ ಗೊಂದಲಗಳು, ಹೈದರಾಬಾದ್ ಕ್ರಿಯೆಗಳಂತಹ ವಿಶೇಷಾಚರಣೆಗಳು ಸರಕಾರೀ ನಾಯಕರಿಗೆ ಜನತೆಯ ಮುಂದಿಡಲಾಗುವ ಕಾರಣಗಳಾಗಿ ದೊರೆತಿದ್ದುವು; ತಾತ್ಕಾಲಿಕವಾಗಿ ಜನತೆಯ ಕಾಲಡಿಯ ಲಕ್ಷ್ಯವನ್ನು ತಪ್ಪಿಸಿ ತಮ್ಮ ಕಡೆಗವು ಎಳೆದುಕೊಂಡಿದ್ದುವು. ಅದರ ವಿಶೇಷ ವಿದ್ಯಮಾನಗಳು ಅಲ್ಪಾಯುಷಿಗಳಿವೆ. ಟೀಕಾಬಾಣಗಳಿಗಡ್ಡವಾಗಿ ಹಿಡಿಯುವ ಗುರಾಣಿಗಳಾಗಿ ಸದಾಕಾಲವೂ ಅವು ಇರುವಂತಹವಲ್ಲ; ಇರಕೂಡದು. ಹೊರಗಿನ ಆಕರ್ಷಣೆ ತಪ್ಪಿದೊಡನೆ, ಒಳಯಾತನೆಗಳ ಅನುಭವವಷ್ಟೇ ಜನಸಾಮಾನ್ಯರ ಪಾಲಿಗುಳಿಯುತ್ತಿದೆ ಹೊರತು ಸ್ವರಾಜ್ಯ ಸುಖಾನುಭವವು ನಿತ್ಯಜೀವನದಲ್ಲಾಗುತ್ತಿಲ್ಲ. ಸಾಲದುದಕ್ಕೆ 'ದೇಶದ ಸಂಪದಭಿವೃದ್ಧಿ' 'ಪರಮಾವಧಿ ಉತ್ಪನ್ನ' ಮುಂತಾದ ಸೊಲ್ಲುಗಳೊಡನೆ ಕಾಂಗ್ರೆಸ್ ಆಡಳಿತೆಯು ಪ್ರಚಲಿತ ಶ್ರೀಮಂತ ವರ್ಗವನ್ನೇ ಪ್ರೋತ್ಸಾಹಿಸುತ್ತಿರುವಂತೆ ತೋರುತ್ತಿದೆ– ಈ ಮೂಲಕ ಜನಸಾಮಾನ್ಯರ ಪಾಲಿಗೆ ಭವಿಷ್ಯದ ಆಸೆ ಕೂಡಾ ಕುಂಠಿತವಾಗಿದೆ. ಹೀಗಾಗಿ ಭಾರತದ ಇಂದಿನ ವಾತಾವರಣವು, ಸ್ಫೋಟಪೂರ್ವ ಹೊಗೆಯನ್ನು ಕಾರುತ್ತಿರುವ ಜ್ವಾಲಾಮುಖಿಯಂತಿದೆ. ಈ ಕುರಿತು ಸರ್ವರೂ ಸಕಾಲದಲ್ಲಿ ಕಣ್ಣು ತೆರೆಯಬೇಕಾದುದು ಅಗತ್ಯ. ಚುಟುಕಿನಲ್ಲಿ ಹೇಳುವದಾದರೆ– ಸರಕಾರೀ ಧೋರಣೆಯು ಮುಖವು ಆರ್ಥಿಕ ಸಮಾನತೆಯತ್ತ ತಿರುಗಬೇಕು; ಶ್ರೀಮಂತ ವರ್ಗದ ಮನೋವೃತ್ತಿ ಮತ್ತು ವರ್ತನಾ ರೀತಿ ನೀತಿಗಳು ಪೂರ್ಣ ಬದಲಾವಣೆಗೊಳ್ಳಬೇಕು; ಜನಸಾಮಾನ್ಯರಲ್ಲಿ ಸತ್ಯಸ್ಥಿತಿಯ ಜ್ಞಾನೋದಯವಾಗಬೇಕು. ಈ ಮಾರ್ಪಾಟಗಳಿಗೆ ಯಾರಿಂದ, ಎಂತೆಂತಹ ಕಾರ್ಯಗಳಾಗಬೇಕೋ, ಅವೆಲ್ಲವೂ ಸಂತೋಷ ಪೂರ್ವಕವೇ ಆಗಬೇಕು. ಇಷ್ಟಾಗದಿದ್ದರೆ ಬಾಗಿ ನಡೆಯದ ತಪ್ಪಿಗಾಗಿ, ತಾಗಿ ಬಾಗುವ ಶಿಕ್ಷೆಯನ್ನನುಭವಿಸುವ ಸಂದರ್ಭ ಬರಬಹುದು, ಎಂಬ ಭೀತಿಗೆಡೆಯಿದೆ.

## ಚುನಾವಣಾ—

"ಇನ್ನು ಒಂದು ವರುಷಾವಧಿಯೊಳಗೆ ಸಾರ್ವತ್ರಿಕ ಮಹಾ ಚುನಾವಣೆಯೆಂದಾದುದರಿಂದ ಅಗ್ರಗಣ್ಯ ನಾಯಕರಿಂದಾರಂಭಿಸಿ, ಸಾಮಾನ್ಯ ಹುರಿಯಾಳು ಸ್ಥಾನಯೋಗ್ಯರ ವರೆಗಿನ ಎಲ್ಲರ ಮನೋವೃತ್ತಿಯೂ ಬದಲಾಯಿಸಿರುವದನ್ನು ಕಾಣಬಹುದು. ಯಥಾರ್ಥ ಮತ್ತು ವಂಚನಾತ್ಮಕ ಧೋರಣೆ ಮಾರ್ಪಾಟಗಳನ್ನು ಇಲ್ಲಿಯೂ ವಿಂಗಡಿಸಿ ನೋಡಲಿಕ್ಕಿದೆ.

ಭಾರತದ ಸ್ವಾತಂತ್ರ್ಯಾಂದೋಲನವಾರಂಭಿಸಿದಂದಿನಿಂದ ಈ ವರೆಗೂ ಜನತಾ ಹೃದಯದಲ್ಲಿ ಅಚಲವಾಗಿ ಸ್ಥಾನ ಸಂಪಾದಿಸಿಕೊಂಡಿರುವ ನೆಹರೂ, ವಲ್ಲಭಾಯಿಗಳಂಥವರು ಅಧಿಕಾರಕ್ಕಾಗಿ ಚುನಾವಣಾ ಮಾರುಗ ಮನೋವೃತ್ತಿಯನ್ನು ತಮ್ಮಲ್ಲಿ ಆವಾಹನೆ ಮಾಡಿಕೊಳ್ಳುವಂತಿಲ್ಲ. ಆದರೆ ತಾವು ಹೋರಾಡಿ ಗಳಿಸಿ, ತಾವೇ ಒಪ್ಪಾಡಿ ಉಳಿಸಿಕೊಂಡು ಬಂದ ರಾಷ್ಟ್ರ ಸ್ವಾತಂತ್ರ್ಯದ ಭದ್ರತೆ ಮತ್ತು ಪ್ರಗತಿಯು ಬರುವ ಚುನಾವಣೆಯ ಫಲಿತಾಂಶವನ್ನಾಧರಿಸಿ ನಿಲ್ಲುವಂತಹದೆಂಬುದರಿಂದ, ಆ ಚುನಾವಣೆಯು ಪ್ರಮಾದವನ್ನು ನಿರ್ಮಿಸಬಾರದೆಂಬ ಆತುರವು ಸಹಜವಾಗಿ ಅವರಿಗಿದೆ. ಪೂರ್ಣ ಶಕ್ತಿಯಿಂದ ಈ ಹೊಣೆಗಾರಿಕೆಯನ್ನು ನಿರ್ವಹಿಸುವ ಸಂದರ್ಭವು ಮುಂಬರುವ ಚುನಾವಣೆಯ ಮೂಲಕ ಮತ್ತೊಮ್ಮೆ ಕಾಂಗ್ರೆಸಿಗೆ ದೊರಕಬೇಕೆಂಬ ಆಶೆ ಅವರದು. ಆದ್ದರಿಂದಲೇ ಅವರೀಗ ಕಾಂಗ್ರೆಸ್ ಯೋಗ್ಯತೆಯ ಹೆಚ್ಚಳದ ಕಡೆ ಪ್ರತ್ಯೇಕ ಲಕ್ಷ್ಯ ಕೊಡಹತ್ತಿದ್ದಾರೆ.

ಬಿಹಾರಿನ "ಜುಮಾರಿತಿಲಾಯ" ಎಂಬ ಗನಿ ಪ್ರದೇಶಕ್ಕೆ ಹೋಗಿದ್ದಲ್ಲಿ ಇದೇ ತಾ. 23ರಲ್ಲಿ ಅಲ್ಲಿಯ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡುತ್ತಾ, ಪಂಡಿತ ನೆಹರೂರವರೆಂದಿದ್ದಾರೆ: "ಗಾಂಧಿಜೀಯ ಬೋಧನೆ ಮತ್ತು ಕಾಂಗ್ರೆಸಿನ ಮೂಲ ತತ್ವಗಳನ್ನು ಕಾಂಗ್ರೆಸಿಗರು ಮರೆತು ಬಿಡಹತ್ತಿದರೆ, ಅವರು ಈ ಮಹಾ ಸಂಸ್ಥೆಯನ್ನು ಕೆಡಿಸುವುದಷ್ಟೇ ಅಲ್ಲ, ರಾಷ್ಟ್ರಕ್ಕೂ ಮಹತ್ತಾದ ಅಪಾಯವನ್ನು ತಂದೊಡ್ಡುವರು. ಕಾಂಗ್ರೆಸಿನ ಸ್ಥಾನಕ್ಕೆ ಬರಬಲ್ಲ ಬೇರೊಂದು ಪಕ್ಷವು ಪ್ರಕೃತ ಭಾರತದಲ್ಲಿಲ್ಲವಾದ್ದರಿಂದ ಕಾಂಗ್ರೆಸಿನಂತಹ ಮಹಾ ಸಂಸ್ಥೆಯು ದುರ್ಬಲಗೊಳ್ಳದಿರಬೇಕಾದುದು ರಾಷ್ಟ್ರದ ಹಿತದೃಷ್ಟಿಯಿಂದಲೇ ಅಗತ್ಯವೆಂಬುದು ನನ್ನ ನಿಶ್ಚಿತಾಭಿಪ್ರಾಯ" ಪಂಡಿತ ನೆಹರೂರವರ ಈ ಅಭಿಪ್ರಾಯವ

# ...ನೋಟದಿಂದ

...ಈ ಮೊದಲೂ ಹೊರಗೆಡಹಿದುದಿದೆ; ...ದರೆ ಮುಂದಿನ ಚುನಾವಣೆ ಸಮೀಪಿಸು...ತ್ತ ಬಂದಂತೆ 'ಕಾಂಗ್ರೆಸಿನ ಸ್ಥಾನಕ್ಕೆ ಬ...ಬಲ್ಲ ಬೇರೊಂದು ಪಕ್ಷವಿಲ್ಲ' ಎಂಬ ಸಂ...ತಜೇಯ ಮಾತು ಕ್ರಮಶಃ ಅಧಿಕಾಧಿಕ ...ರಣಾಮಗಳನ್ನು ಮಾಡುತ್ತಾ ಹೋಗಬಹು...ಂದು ಊಹಿಸಲಡ್ಡಿಯಿಲ್ಲ.

ಸರ್ದಾರ್ ಪಟೇಲರು ಕಲ್ಕತ್ತೆಗೆ ಹೋ... ಬಂಗಾಳಿಗಳ ಮನವೊಲಿಸಿ ಬಂದುದ...ಕ್ಕೆ ಬಾವೀ ಚುನಾವಣೆಗೂ ಸಂಬಂಧವಿ...ದಿಲ್ಲ. ತಾನಿರುವ ಕಾಂಗ್ರೆಸ್ ಪಕ್ಷವ...ನ್ನು ಅಲಕ್ಷ್ಯಿಸಿ, ಮದ್ರಾಸಿನ ಕೆಲವು ಮಂ...ಗಳ ಮೇಲಿನ ಅಪಾದನೆಗಳ ತನಿಖೆ ...ೇಡಿಕೆಯನ್ನು ಪ್ರತ್ಯಕ್ಷ ಎಸೆಂಬ್ಲಿಯ ...ುಂದಯೇ ಇಟ್ಟಿರುವ ಶ್ರೀ ಟಿ. ಪ್ರಕಾ...ಮರನ್ನು ಪುನರಾಲೋಚನೆಗಾಗಿ ಸ...ರ್ದಾರ್ ಪಟೇಲರಾಮಂತ್ರಿಸುವಾಗ ಮು...ಖ್ಯವಾಗಿ ಅವರ ದೃಷ್ಟಿಪಥದಲ್ಲಿದ್ದುದು ...ೆಂಬರುವ ಚುನಾವಣೆಯೇ. ಶ್ರೀ ಟಿ. ...ಪ್ರಕಾಶಮ್ ಮತ್ತು ಅವರ ಹಿಂಬಾಲಕ...ು ನಿಸ್ಸಂಕೋಚವಾಗಿ ಕಾಂಗ್ರೆಸ್ ಶಿಸ್ತ...ುಮುರಿದವರು. ಅದಕ್ಕಾಗಿ ಕಾಂಗ್ರೆಸ್ ಅಧಿ...ನಾಯಕ ಮಂಡಲಿಯು ಇಷ್ಟರಲ್ಲೇ ಶಿ...ಸ್ತು ಜಾರಿ ನೋಟೀಸು ಕೊಟ್ಟಿದೆ. ಅಂದ...ಮೇಲ ಪದ್ಧತಿ ಪ್ರಕಾರ ಈ ಶಿಸ್ತು ಭಂಡ...ನ್ನು ಘಾತಕ್ಕೊಳಪಡಿಸುವುದೇ ಮುಂದಿನ ...ಹೆಜ್ಜೆ. ಆದರೆ ಶ್ರೀ ಪ್ರಕಾಶಮರು ಅಂ...ಸ್ಯ ಬಲ್ಲ ಅದ್ವಿತೀಯ ಸ್ವಾರಸ್ಯವುಳ್ಳವರು, ...ಂಥವರು ಕಾಂಗ್ರೆಸಿನಿಂದ ದೂರ ಹಾಕ...ಲ್ಪಟ್ಟರೆ ಸ್ವತಃ ಅವರ ಕೀರ್ತಿಗೆ ಧಕ್ಕೆ ...ಒದಗುವಂತೆಯೇ ಆಂಧ್ರ ಪ್ರಾಂ...ತ್ಯದಲ್ಲಿ ಕಾಂಗ್ರೆಸಿನ ಪ್ರತಿಷ್ಠೆಗೂ ...ಪೆಟ್ಟು ಬೀಳದಿರದು. ಆದ್ದರಿಂದ ...ಶ್ರೀ. ಟಿ ಪ್ರಕಾಶಮರನ್ನು ತಿದ್ದಿ ಇದ್ದ...ಲ್ಲಿಯೇ ಇಟ್ಟುಕೊಳ್ಳುವುದು ವಾಸಿ, ಎಂ...ದು ನೆನಸಿ ಸರ್ದಾರರು ಕರೆಕೊಟ್ಟಿದ್ದಾರೆ. ...ನೆಹರುಗಳು ಕರಾಚಿಯಿಂದ ಮರಳಿದ ನಂ...ತರ ವಲ್ಲಭಭಾಯಿ-ಪ್ರಕಾಶಂ ಭೇಟಿ ನಡೆ...ಯಲಿದೆ. ಆಂಧ್ರ ಪ್ರಾಂತಿಕ ಕಾಂಗ್ರೆಸ್ ...ಸಮಿತಿಯು ಇಲ್ಲಿ ಮಧ್ಯವರ್ತಿಯಾಗಿ ಸ...ಮಜಾಯಿಸುವಿಕೆ ಪ್ರಯತ್ನ ನಡೆಸಲಿ...ರುವುದರಿಂದ ಈ ಭೇಟಿ ವಿಜಯಿಯಾಗು...ವ ಭರವಸೆಯಿದೆ.

ಉಮೇದ್ವಾರೀ ವರ್ಗಕ್ಕೆ ಜನ ಮತವನ್ನೊಲಿಸುವ ಆತುರವು ಈ ಕಾಲದಲ್ಲಿ ಹುಟ್ಟುವುದು ಸಹಜವಿರುವಂತೆಯೇ ಜನಸಾಮಾನ್ಯರಿಗೆ ಈ ಉಮೇದ್ವಾರಿಗಳನ್ನು ಪರೀಕ್ಷಿಸುವ ಪ್ರೇರಣೆಯೂ ಇದೇ ಅವಧಿಯಲ್ಲುಂಟಾಗುವದು ಸ್ವಾಭಾವಿಕ. ಆದ್ದರಿಂದ "ಮಾಡಬಲ್ಲವರು ನಾವು" ಎಂದು ಮುಂದೆ ಬರುವವರು ಸ್ವತಃ ಈ ಸಂದರ್ಭದಲ್ಲಿ ಸ್ವವಿಮರ್ಶೆ ಮಾಡಿಕೊಂಡಿರಾಗದೆ?

ಕಾಂಗ್ರೆಸಿಗರು, ತಾವು ಹಿಂದಿನ ಚುನಾವಣಾ ಘೋಷಣೆಯಲ್ಲಿ ಜನತೆಯ ಮುಂದಿಟ್ಟುದಷ್ಟು ಮಾತ್ರ ಆ ಪೈಕಿ ತಮ್ಮ ಅಧಿಕಾರಾವಧಿಯಲ್ಲಿ ಮಾಡಿಯದೆಷ್ಟು, ಎಂಬುದನ್ನು ತಾವೇ ವಿಚಾರಿಸಿ ನೋಡಿಕೊಳ್ಳಲಿ; ಈ ಅನುಭವವನ್ನು ಆಧರಿಸಿಯೇ ಮುಂದಿನ ಘೋಷಣೆ ಮತ್ತು ಕಾರ್ಯಕ್ರಮ ಪಟ್ಟಿಯನ್ನು ತಯಾರಿಸಲಿ.

ಕಾಂಗ್ರೆಸಿನ ಸ್ಥಾನಕ್ಕೆ ತಾವು ಈ ಬಾರಿ ಬಂದು ಬಿಡಬೇಕೆಂದು ಬಯಸುವ ಇತರ ಎಲ್ಲಾ ಪಕ್ಷೀಯರೂ, ಗತ ಕಾಲದಲ್ಲಿ ಕಾಂಗ್ರೆಸು ರಾಷ್ಟ್ರಕ್ಕೆ ಸಲ್ಲಿಸಿರುವ ಸೇವೆಯ ಬದಲಿಗಾಗುವಂತಹದು ತಮ್ಮದೇನಿದೆ, ಎಂಬುದನ್ನು ತಾವೇ ನೋಡಿಕೊಳ್ಳಲಿ. ಅಥವಾ ಗುಲಾಮ ಭಾರತದ ಸ್ಥಿತಿಗತಿಗಳಿಗನುಗುಣವಾಗಿ ಕಾಂಗ್ರೆಸು ಆ ಕಾಲದಲ್ಲಿ ಕೈಕೊಂಡಿದ್ದ ಸಮರ ಕಾರ್ಯಕ್ರಮಗಳೆಂಥವೇ ಇದ್ದರೂ, ಭಾವೀ ಭಾರತದ ಆಸಮಾನತೆ ಮತ್ತು ಬಡತನ ನಿವಾರಣೆಯ ಪಟ್ಟಿಗೆ ತಮ್ಮಲ್ಲಿವೆಯೇ ಎಂಬುದನ್ನಾದರೂ ನಿರೀಕ್ಷಿಸಿಕೊಳ್ಳಲಿ.

ಕಾಂಗ್ರೆಸ್ ಟಿಕೇಟಿನ ಬಲದಿಂದಲೂ ದೊಡ್ಡ ದೊಡ್ಡ ತತ್ವಗಳನ್ನು ಘೋಷಿಸಿಯೂ, ಸ್ಥಾನ ಸಂಪಾದಿಸಿಕೊಂಡು ನಿಶ್ಚಿತ ವಾಗಿದ್ದ ಮೀರಿಯೂ ಅಲ್ಲಿದ್ದು ಅನುಭವವುಳ್ಳವರೆಲ್ಲರೂ, ಈ ಅವಧಿಯಲ್ಲಿ ತಮ್ಮಿಂದಾದುದಷ್ಟು ಎಂಬುದನ್ನು ಏಕಾಂತದಲ್ಲಿ ಯೋಚಿಸಿಕೊಳ್ಳಲಿ. ಇನ್ನುಮುಂದೆ ಜನತಾ ಸೇವೆಗಾಗಿ ಹೋಗಲು ತಾವು ಅರ್ಹರೋ ಅಥವಾ ಜನತಾ ಸೇವೆ ಪಡೆಕೊಳ್ಳುವುದಕ್ಕಾಗಿ ಮಾತ್ರ ಹಾಗೋ, ಎಂಬುದನ್ನು ಸ್ವತಃ ತಮ್ಮ ಮನಸ್ಸಿನಲ್ಲೇ ವಿಂಗಡಿಸಿಕೊಳ್ಳಲಿ.

ಅಂತೂ, ಆವರವರನ್ನದೆ ಎಲ್ಲರೂ ಆತ್ಮವಿಮರ್ಶೆ ನಡೆಸಲಿ!

(೫ನೇ ಪುಟದಿಂದ ಮುಂದುವರಿದುದು)

ಕಳುಹಿದ್ದರು. ಭಾರತ ಜನತಾ ರಾಜ್ಯೋದ್ಘಾಟನಾ ಉತ್ಸವಕ್ಕೆ ಸಪತ್ನೀಕರಾಗಿ ಆಗಮಿಸಿದ್ದ ಇಂಡೋನೇಶಿಯದ ಅಧ್ಯಕ್ಷ ಡಾ! ಸುಕರ್ಣೋರವರು ಇಲ್ಲಿಯೂ ನೆಹರುಗಳಿಗೆ ಒಕ್ಕೂಟದ ಆಹ್ವಾನ ಕೊಟ್ಟುಹೋಗಿದ್ದುದರಿಂದ ನೆಹರುಗಳೀ ಬಾರಿ ಅಲ್ಲಿಗೆ ಹೋಗುವ ನಿರ್ಧಾರ ಮಾಡಿದ್ದಾರೆ.

ಅತ್ತ ಪಾಕಿಸ್ಥಾನದ ಪ್ರಧಾನ ಮಂತ್ರಿ ಮಿ. ಲಿಯಾಖತ್ ಅಲೀಖಾನರು, ಮೊದಲೇ ಬಂದಿದ್ದ ಅಮೆರಿಕಾಧ್ಯಕ್ಷ ಟ್ರುಮೇನರ ಆಮಂತ್ರಣಾನುಸಾರವಾಗಿ ಇದೇ ತಾ. 29ಕ್ಕೆ ಅಮೇರಿಕಕ್ಕೆ ಹೊರಡಲಿದ್ದಾರೆ. ಲಿಯಾಖತರು ಮುಂದಾಗಿ ಲಂಡನಿನಲ್ಲಿಳಿದು, ಅಲ್ಲಿ ಬ್ರಿಟಿಷ್ ಮಂತ್ರಿಗಳೊಡನೆ ಮಾತಾಡಿ, ಅಲ್ಲಿಂದ ಅಮೆರಿಕಕ್ಕೆ ಹೋಗಿ, ಅಲ್ಲಿ ಮೂರು ವಾರಗಳವರೆಗೆ ಸಂಚರಿಸಲಿದ್ದಾರೆ. ಅಂತೆಯೇ ಕೆನಡದಲ್ಲಿಯೂ ತಿರುಗಾಡಿ ಮರಳಿ ಲಂಡನ್ನಿಗೆ ಬಂದು ಅಲ್ಲಿ ಕೆಲವು ದಿನ ನಿಂತು ಪಾಕಿಸ್ಥಾನದ ಗಡಿ ರಕ್ಷಣೇ ಮಾರ್ಗಾದಿನ ಸಂಬಂಧದ ಮಾತುಕತೆಗಳನ್ನು ಬ್ರಿಟಿಷ್ ಸರಕಾರೀ ನಾಯಕರೊಡನೆ ನಡೆಸಲಿದ್ದಾರೆ. ನೆಹರುಗಳಿಗೆ ಬಂದಿದ್ದಂತೆಯೇ ಲಿಯಾಖತರನ್ನೊಯ್ಯಲು ಟ್ರುಮೇನರ ಸ್ವಂತ ವಿಮಾನವು ಲಂಡನ್ನಿಗೆ ಬರಲಿದೆ. ಕಳೆದ ಬಾರಿ ನೆಹರುಗಳನ್ನು ಸನ್ಮಾನಿಸಿದ್ದ ಮಟ್ಟದಲ್ಲೇ ಅಮೆರಿಕವು ಲಿಯಾಖತರನ್ನೂ ಸನ್ಮಾನಿಸಲಿದೆ. ಭಾರತವು ರಾಷ್ಟ್ರ ಕೂಟಗಳ ಪೈಕಿ ಯಾವ ಪಕ್ಷಕ್ಕೂ ಸೇರಲಾರದೆಂದು ದೃಢ ಸ್ವರದಿಂದ ಅಮೇರಿಕದಲ್ಲಿ ಸಾರಿ ಸಾರಿ ಹೇಳಿ, ಭಂಡವಾಳಶಾಹಿ ಚಕ್ರಮಾಣವನ್ನೂ ಕಮ್ಯೂನಿಸ್ಟ್ ಕಂಟಕವನ್ನೂ ಕಠಿಣ ಮಾತಿನಿಂದ ಖಂಡಿಸಿದ್ದ ಪಂಡಿತ ನೆಹರುಗಳ ಬಾಹ್ಯಾಂಡಿ ವರ್ತನೆಯು ಅಮೆರಿಕನರಲ್ಲಿ ಗೂಢ ಅತೃಪ್ತಿ ಮತ್ತು ಸಂಶಯವನ್ನು ಹುಟ್ಟಿಸಿದ್ದಿತೆಂಬುದನ್ನು ಮರೆಯಲಾಗದಿದ್ದಿಲ್ಲ. ಭಾರತದ ಸ್ಥಾನಮಾನ, ನೆಹರುಗಳ ವ್ಯಕ್ತಿಪ್ರಭಾವ ಮತ್ತು ಆಧಿಕ್ಯ ಸಭ್ಯತೆಯನ್ನು ಲಕ್ಷಿಸಿ ಅಮೆರಿಕವು ಪಂಡಿತ ನೆಹರುಗಳಿಗೆ ಅಪೂರ್ವ ಗೌರವವಿತ್ತಿದ್ದುದೇನೋ ನಿಜ. ಮುಂದಕ್ಕದರ ಭಾರತದ ಸಹಕಾರ ದೊರೆಸಿಕೊಳ್ಳಬಹುದೆಂದು ಹೊಂಚು ಹಾಕಿಯೂ ಅಮೆರಿಕವು ವಿಶೇಷ ಸದ್ಭಾವನೆ ತೋರಿಸಿದ್ದಿರಬೇಕು. ಈ ಬಾರಿ ಪಾಕಿಸ್ಥಾನ್ ಪ್ರಧಾನಿಗಳ ಮನಸ್ಸನ್ನು ಸೆರೆ ಹಿಡಿಯುವ ಮೋಹಕ ವಿದ್ಯೆಯನ್ನು ಅಮೆರಿಕವು ಪ್ರದರ್ಶಿಸುವದೆಂದು ನಿರೀಕ್ಷಿಸಬಹುದು.

ಪ್ರಯಾಣ ನಿಶ್ಚಯವಾಗಿದ್ದರೂ ಮನಸ್ಸು ಕೂಡಿಬಾರದ ಮಿ. ಲಿಯಾಖತರಿಗೆ ಹೋಗಲಾಗದ ರಾಷ್ಟ್ರವೆಂದರೆ ರಶ್ಯ.

## ಉಡುಪಿ

### ಹರಿಜನೋದ್ಧಾರಕ ಆಫೀಸರರ ಆಗಮನ

ಮದ್ರಾಸು ಸರಕಾರದ ಹರಿಜನೋದ್ಧಾರ ಶಾಖೆಯ ಡೈರೆಕ್ಟರರಾದ ಶ್ರೀ ಭಾಷ್ಯಂ ಅಯ್ಯಂಗಾರರು ತಾ.21ರಲ್ಲು ಸಂಜೆ ಉಡುಪಿಗೆ ಚಿತ್ತೈಸಿದಾಗ ಸರ್ಕಲ್ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿಯವರಾದ ಶ್ರೀ ಕೆ. ನರಸಪ್ಪ ಕಾಮತ್ ಮೊದಲಾದವರು ಅವರನ್ನು ಸ್ವಾಗತಿಸಿದರು. ಶ್ರೀ ಅಯ್ಯಂಗಾರರು ಕಾಡಬೆಟ್ಟು, ಕೊರಗರ ಕಾಲನಿಯನ್ನು ಸಂದರ್ಶಿಸಿ ರಾತ್ರಿ ಶ್ರೀಕೃಷ್ಣ ದರ್ಶನ ಲಾಭವನ್ನು ಪಡೆದರು.

ಮರುದಿನ ಬೆಳಿಗ್ಗೆ ಶ್ರೀ ಕೆ. ಜೆ. ಬಲ್ಲಾಳ್ ಮೊದಲಾದವರಿಗೆ ಭೇಟಿಯಿತ್ತು ಮಾನ್ಯ ಡೈರೆಕ್ಟರರು ಉದ್ಯಾವರಕ್ಕೆ ಹೋಗಿ ಅಲ್ಲಿಯ ಲೇಬರ್ ಶಾಲೆಯನ್ನು ಸಂದರ್ಶಿಸಿದರು. ಸ್ಥಳೀಯ ಮಹನೀಯರ ಕಡೆಯಿಂದ ಸಂಗ್ರಹಿಸಲ್ಪಟ್ಟ ಹಣದಿಂದ ಪಡೆದ ವಸ್ತ್ರಗಳನ್ನು ಹರಿಜನಬಾಲಕರಿಗೆ ಹಂಚಿದರು. ಪಟೇಲ್ ಶ್ರೀ. ಭಾಸ್ಕರ ಸೆಟ್ಟಿ ಮೊದಲಾದವರು ಈ ಸಂದರ್ಭದಲ್ಲಿ ಕಾಲೋಚಿತ ಮಾತುಗಳನ್ನಾಡಿದರು. ಅಲ್ಲಿಂದ ಹಿಂತಿರುಗಿ ಉಡುಪಿಗೆ ಬಂದು ಮಧ್ಯಾಹ್ನ ಪುತ್ತೂರು ಹರಿಜನ ಕಾಲನಿಯನ್ನು ಸಂದರ್ಶಿಸಿ ಅವರ ಕಾಲಾವಕಾಶಗಳನ್ನು ಲಾಲಿಸಿದರು.

**ಸಂಗೀತ ಕಚೇರಿ:-** ಇದೇ ತಾ.24ನೇ ರಾತ್ರಿ ಶ್ರೀ. ಮಾನೆಯವರ ಸಂಗೀತ ಕಚೇರಿಯು ಉಡುಪಿ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಜರಗಿತು.

**ಶಾಲಾವರ್ಧಂತಿ ಕಡಿಯಾಳಿ ಹಾ!** ಪ್ರಾ. ಶಾಲೆಯ ವರ್ಧಂತಿ ಸಮಾರಂಭವು ಇದೇ ತಾ 22ರಲ್ಲು ಶಾಲಾಡಿಸ್ಟ್ರಿಕ್ಟ್ ಇನ್ಸ್ಪೆಕ್ಟರ್ ಶ್ರೀ ಸಂಜೀವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ವಂದಿವಾಚನ, ಶಾಲಾಶ್ರೇಯಃ ಪ್ರಾರ್ಥನೆ, ಬಹುಮಾನವಿತರಣ, ವಿವಿಧವಿನೋದ ಕಾಲಕ್ಷೇಪ ಮೊದಲಾದ ಕಾರ್ಯಕ್ರಮಗಳಾದುವು. ಮರುದಿವಸ ಶಾಲಾ ಹಳೆವಿದ್ಯಾರ್ಥಿಗಳೂ ಉಪಾಧ್ಯಾಯರೂ ನಟವರ್ಗದಲ್ಲಿದ್ದುಕೊಂಡು 'ವರದಕ್ಷಿಣೆ' ಕನ್ನಡ ನಾಟಕವನ್ನು ಅಭಿನಯಿಸಿದರು.

**144ನೆ ಸೆಕ್ಷನ್ ಜ್ಯಾರಿ:** ಇದೇ ತಾ 24ರಿಂದ ಹದಿನೈದು ದಿನಗಳ ತನಕ ಮೋಟಾರು ಚಲನೆಗೆ ಸಂಬಂಧಿಸಿದ ಯಾವುದೇ ಸಭೆ, ಮೆರವಣಿಗೆ, ಭಾಷಣಾದಿಗಳಿಗೆ ಪ್ರತಿಬಂಧಾಜ್ಞೆ ಹೊರಡಿಸುವುದು.

**ನಾಟ್ಯೋತ್ಸವ:—** ಇಲ್ಲಿಯ ಶ್ರೀ ಮಹಾವಿಷ್ಣುಮೂರ್ತಿ ದೇವಸ್ಥಾನದಲ್ಲಿಯ ಕಾಲಾವಧಿ ಉತ್ಸವವು ಮೇ ತಾ|೧ರಿಂದ 5ರ ತನಕ ವಿವಿಧ ಕಾರ್ಯಕ್ರಮಗಳಿಂದ ಜರಗುವುದು.

### ನಿಧನ ವಾರ್ತೆಗಳು.

ಶ್ರೀ ಮುದ್ರಾಡಿ ಜನಾರ್ದನಾಚಾರ್ಯರು ಇತ್ತೀಚೆಗೆ ಮದ್ರಾಸಿನಲ್ಲಿ ನಿಧನಗೊಂಡರು. ಶ್ರೀಯುತರು 'ಶ್ರೀಕೃಷ್ಣ ಸಂದೇಶ' ಪತ್ರಿಕೆಯ ಸಂಪಾದಕರಾಗಿದ್ದಲ್ಲದೆ, ಸನಾತನ ಧರ್ಮಾನಿಷ್ಠರಾಗಿದ್ದು, ಆ ರಂಗದಲ್ಲಿ ದುಡಿಯುತ್ತಿದ್ದವರು.

ಪ್ರಸಿದ್ಧ ಮನೆತನ ಬ್ರಾಳ್ಕಟ್ಟೆ ಬೀಡಿನ ಹಿರಿಯ ಶ್ರೀ ನಾರಾಯಣ ಹೆಗ್ಡೆಯವರು ತನ್ನ ಪಕ್ವ ವಯಸ್ಸಿನಲ್ಲಿ ಕಳೆದ ವಾರ ನಿಧನಗೊಂಡರು

ಉಡುಪಿಯ ಶ್ರೀ ಬಿ. ಮುದ್ದಣ್ಣ ಸೆಟ್ಟರ ಸಹಧರ್ಮಿಣಿಯು ಹಿಂದಿನ ವಾರ, ಪ್ರಸವಾನಂತರ ಅಕಾಲ ನಿಧನಗೊಂಡರು.

### ಮಂಗಳೂರು.

ಈ ತಾಲೂಕಿನ ಬೋರ್ಡ ಎಲಿಮೆಂಟರಿ ಶಾಲಾ ಅಧ್ಯಾಪಕರ ಯೂನಿಯನ್ ಮಹಾಸಭೆಯು ಇದೇ ತಾ. 30ನೇ ಆದಿತ್ಯವಾರ ಪೂರ್ವಾಹ್ನ 11 ಗಂಟೆಗೆ ಗಣಪತಿ ಹೈಸ್ಕೂಲಿನಲ್ಲಿ ಜರಗುವುದಾಗಿ ಕಾರ್ಯದರ್ಶಿಯವರು ತಿಳಿಸುತ್ತಾರೆ.


ಜೀವವಿಮೆಗಾಗಿ

ವಿಚಾರಿಸಿರಿ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ

ಲೈಫ್ ಇನ್ಶೂರೆನ್ಸ್ ಕೊ, ಲಿಮಿಟೆಡ್.

(ಸ್ಥಾಪನೆ: 1934)

ಚೆಯರ್‌ಮೆನ್: ಶ್ರೀ. ಎಮ್. ಸಿಟಿ. ಎಮ್. ಚಿದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೋಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟು ಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,

ಕೇಂದ್ರ ಕಾರ್ಯಾಲಯ:
"ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್" ಪೋಸ್ಟು ಬಾಕ್ಸ್ ನಂಬ್ರ 142
ಮದ್ರಾಸು.



ಈ ಕಲಹಕ್ಕೆ ವ್ಯಾಜ್ಯವೂ ಇಲ್ಲ; ಅಪೀಲೂ ಇಲ್ಲ.
ಅಂದರೆ ಫಿಲ್ಮಸ್ಥಾನದ ಪ್ರಣಯ ಕಲಹ!

ಲೀಲಾ (ಫಿಲ್ಮಸ್ಥಾನ್)

ಶೋಭಾ, ಶಾನೂರ್ರೊ, ವೀರಾ.

ತಾರೀಕು 25—4—1950 ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಬರುವ ಚಿತ್ರ:— ಟಾರ್ಜನಿನ ಸಾಹಸಗಳು.

ನಿರೀಕ್ಷಿಸಿರಿ: ಜೆಮಿನಿ ತಯಾರಿಕೆ "ಕಲ್ಪನಾ"

## ದಿ ವಿಜಯಾ ಬ್ಯಾಂಕ್ ಲಿಮಿಟೆಡ್, ಕುಂದಾಪುರ.

### ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಮೇಲ್ಕೋರುವ ನಮ್ಮ ಬೇಂಕಿನಲ್ಲಿ ಚಿನ್ನಾಭರಣ ಗಳ ಅಡವಿನ ಮೇಲೆ ಪಡಕೊಂಡ ಅಸಲು ಐವೇಜು ವಾ ಬಡ್ಡಿ ಸಹಿತ ಬಹಳ ಕಾಲದಿಂದ ಬಾಕಿ ಮಾಡಿಕೊಂಡಿದ್ದು ಸದ್ರಿಯವರಿಗೆ ಕ್ರಮದಂತೆ ನೋಟೀಸು ವಾ ರಿಜಿಸ್ಟ್ರಿ ನೋಟೀಸು ಕೊಟ್ಟಾಗ್ಯೂ ಬೇಂಕಿಗೆ ಸಲತಕ್ಕ ಅಸಲು ವಾ ಬಡ್ಡಿ ಐವೇಜನ್ನು ಇನ್ನೂ ಬಾಕಿಮಾಡಿ ಕೊಂಡಿರುವುದರಿಂದ ಸದ್ರಿಯವರು ಬೇಂಕಿಗೆ ಸಲತಕ್ಕ ಅಸಲು ಬಡ್ಡಿ ವ ಇತರ ಖರ್ಚನ್ನು ಕೂಡಾ ತಾರೀಕು 6 5-1950ನೇ ಶನಿವಾರ 1 ಗಂಟೆಗೆ ಮೊದಲು ಬೇಂಕಿಗೆ ಸಲ್ಲಿಸಿ ಲೋನುಗಳನ್ನು ಬಿಡಿಸುವರೆ ತಪ್ಪಿದ್ದಲ್ಲಿ ತಾರೀಕು 9-5-1950ನೇ ಮಂಗಳವಾರ ಹಗಲು ಗಂಟೆ 3ಕ್ಕೆ ಯಾ ಬೇಂಕಿಗೆ ಯುಕ್ತತೋರುವ ಮುಂದಿನ ಯಾವುದೇ ದಿನಗಳಲ್ಲಿ ಬೇಂಕಿನ ವಠಾರದಲ್ಲಿ ಲೋನಿನ ಆಭರಣಗಳನ್ನು ಬಹಿರಂಗವಾಗಿ ಏಲಂ ಮಾಡುವುದಲ್ಲದೆ ಏಲಂ ನಲ್ಲಿ ಹುಟ್ಟಿಬಂದ ಐವೇಜು ಸಾಲಕ್ಕೆ ಕಡಿಮೆಯಾದ ಪಕ್ಷದಲ್ಲಿ ನಿಮ್ಮ ದೇಹ ಜವಾಬ್ದಾರಿ ವಾ ಸ್ಥಿರಚರ ಸೊತ್ತುಗಳ ಜವಾಬ್ದಾರಿಯಿಂದ ವಸೂಲು ಮಾಡಿಕೊಳ್ಳಲಾದೀತೆಂಬುದನ್ನೂ ತಿಳಿದಿರಲಿ.

| ಸಾಲದ ನಂಬ್ರ | ಹೆಸರು ಮತ್ತು ವಿಳಾಸ. | ಸಾಲದ ಮೊಬಲಗು Rs. As. Ps. |
|---|---|---|
| 63/46.7 | ಶ್ರೀ ಅಂತಯ್ಯ ಶೆಟ್ಟಿ, ಸುಬ್ಬಯ್ಯಶೆಟ್ರ ಮೊಮ್ಮಗ, ದೇವಲ್ಕುಂದ ಗ್ರಾಮ, ಬಿಲ್ಲಾಡಿಮನೆ ಪೋಸ್ಟು ಕಟ್ಟೆ ಬೆಲ್ತೂರು. ದ. ಕ. | 100—0—0 |
| 79/46.7 | ಶ್ರೀ ಕೆ. ಕೃಷ್ಣ ಶೇಟ್, ದೇವಣ್ಣ ಶೇಟರ ಮಗ. ಚಿನಿವಾರ, ಕುಂದಾಪುರ ದ. ಕ. | 56—0—0 |
| 204/46 7 | ಶ್ರೀ ಕೆ. ಕೃಷ್ಣ ಶೇಟ್, ದೇವಣ್ಣ ಶೇಟರ ಮಗ, ಚಿನಿವಾರ, ಕುಂದಾಪುರ, ದ. ಕ. | 82—0—0 |
| 300/46 7 | ಶ್ರೀ ಮಹಬಲಸೆಟ್ಟಿ, ಚಿಕ್ಕಯ್ಯಶೆಟ್ರ ಅಳಿಯ, ಹಲ್ನಾಡು ದೊಡ್ಡ ಮನೆ, ಪೋಸ್ಟು ಕಂಡ್ಲೂರು, ದ. ಕ. | 50—0—0 |
| 323/46.7 | ಯಮ್. ಮೈದಿನ್ ಬ್ಯಾರಿ, ಹಯಾತ್ ಬ್ಯಾರಿ ಮಗ, ಮರವಂತೆ ಗ್ರಾಮ, ಪೋಸ್ಟು ಕಿರಿಮಂಜೇಶ್ವರ ದ. ಕ. | 175—0—0 |
| 361/46.7 | ಶ್ರೀ ಯಸ್. ಕುಪ್ಪಯ ಶೆಟ್ಟಿ, ಯಸ್. ನಾಗಯ್ಯ ಶೆಟ್ರ ಅಳಿಯ, ಸಾಕೂರು ಗುಲ್ವಾಡಿ ಗ್ರಾಮ, ಪೋಸ್ಟು ಕಂಡ್ಲೂರು ದ. ಕ. | 85—0—0 |
| 505/16.7 | ಮಿಸೆಸ್. ಮಾಬೆಲ್ ಕೆರಿಯನ್ನ, ಜೇಮ್ಸ್ ಕೆರಿಯನ್ನರ ಮಗಳು, ಟೀಚರ್, ಭಗವಾನ್ ಬಿಲ್ಡಿಂಗ್ ಕುಂದಾಪುರ. | 4[illegible]—0—0 |
| 104/7.8 | ಶ್ರೀ ಕೃಷ್ಣ ಶೇಟ್, ದೇವಣ್ಣ ಶೇಟರ ಮಗ, ಚಿನಿವಾರ ಕುಂದಾಪುರ. | 60—0—0 |
| 181/7.8 | ಶ್ರೀ ಕೆ. ರಾಮ ಶೇಟ್, ಪುತ್ತು ಯಾನೆ ನಾರಾಯಣ ಶೇಟರ ಮಗ, ಚಿನಿವಾರ, ಕುಂದಾಪುರ | 140—0—0 |
| 219/7.8 | ಶ್ರೀ ಕೆ. ಶೇಷಗಿರಿ, ಮುತ್ತಯ್ಯನ ಮಗ, ಪೇದೆ, ಕೆನರಾ ಬ್ಯಾಂಕಿಗ್ ಕೊರ್ಪೋರೇಶನ್ ಲಿಮಿಟೆಡ್ ಕುಂದಾಪುರ. | 85—0—0 |
| 387/7.8 | ಶ್ರೀ ಹಿರಿಯಣ್ಣ ಶೆಟ್ಟಿ, ಲಿಂಗಯ್ಯ ಶೆಟ್ರ ಅಳಿಯ ಕಾಲ್ತೋಡು ಗ್ರಾಮ, ಪೋಸ್ಟು ಬೈಂದೂರು ದ. ಕ. | 40—0—0 |
| 590/7.8 | ಶ್ರೀ ಮುತ್ತ, ಮಂಜುನಾಥರ ಮಗ ಕುಂದಾಪುರ. | 25—0—0 |
| 887/7.8 | ಶ್ರೀ ಕೆ. ಕೃಷ್ಣ ಶೇಟ್, ದೇವಣ್ಣ ಶೇಟರ ಮಗ ಚಿನಿವಾರ, ಕುಂದಾಪುರ. | 55—0—0 |
| 530/8 9 | ಶ್ರೀ ಕೆ. ರಾಮ ಶೇಟ್, ಪುತ್ತು ಯಾನೆ ನಾರಾಯಣ ಶೇಟರ ಮಗ, ಚಿನಿವಾರ, ಕುಂದಾಪುರ. | 75—0—0 |
| 1030/6.7 | ಶ್ರೀ ಕೊರಗಯ್ಯ ಶೆಟ್ಟಿ, ಗಣಪಯ್ಯ ಶೆಟ್ರ ಮಗ, ಯಡಾಡಿ ಮನೆ, ಯಡಾಡಿ ಮತ್ಯಾಡಿ ಗ್ರಾಮ, ಪೋಸ್ಟು ಬಾರ್ಕೂರು, ದ. ಕ. | 100—0—0 |

Coondapur 22-4-50

**K. Nandyappa Shetty,**
Agent, Coondapur.



ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

# ರಾಯಲ್ ಮಹಾಲಿನಲ್ಲಿ

**ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!**

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

**ಪ್ರೊಪ್ರಾಯಿಟರ್:— ಕೆ. ವೆಂಕಟ್ರಮಣಭಟ್.**

**For up-to-date Lodging & Boarding**

**ROYAL MAHAL,**

**UDIPI**, S. Kanara.


### [illegible]

**ನೆಂಪಿನಪುರ:** ಇಲ್ಲಿಯ ಜೋಕ್ಲೋ ಎಲಿಮೆಂಟರಿ ಶಾಲಾ ವಾರ್ಷಿಕೋತ್ಸವವು ತಾ. 13-4-1950ನೇ ಗುರುವಾರ ವಿಜೃಂಭಣೆಯಿಂದ ಜರಗಿತು. ಅಂದು ಬೆಳಗ್ಗೆ ಪ್ರಭಾತ ಫೇರಿ, ರಾಷ್ಟ್ರಧ್ವಜಾರೋಹಣ, ಆಟದ ಸ್ಪರ್ಧೆ, ಮಕ್ಕಳಿಗೆ ತಿಂಡಿ ಹಂಚೋಣ, ಇತ್ಯಾದಿ ಕಾರ್ಯಕ್ರಮಗಳು ನಡೆದವು. ಸಾಯಂಕಾಲ ನಿಯೋಜಿತ ಸಭಾಧ್ಯಕ್ಷರಾದ ಅಧಮಾರು ಮಠಾಧಿಪತಿಗಳಾದ ಶ್ರೀ ವಿಬುಧೇಶ ತೀರ್ಥ ಶ್ರೀಪಾದಂಗಳವರು ಬೇಂಡು ವಾದ್ಯ ಮೊದಲಾದ ಬಿರುದಾವಲಿಗಳಿಂದ ಸಭಾಸ್ಥಾನವನ್ನು ಪ್ರವೇಶಿಸಿ ಅಧ್ಯಕ್ಷಪೀಠವನ್ನು ಅಲಂಕರಿಸಿ, ಧ್ವಜವನ್ನು ಅವರೋಹಣ ಮಾಡಿದರು. ಬಾಲಕಿಯರಿಂದ ಪ್ರಾರ್ಥನೆ, ವರದಿವಾಚನ, ಶಾಲಾ ಪ್ರಸ್ತಿವಾಚನ, ಸಭಿಕರ ಭಾಷಣ, ಬಹುಮಾನ ವಿತರಣೆ ಇತ್ಯಾದಿ ಕಾರ್ಯಕ್ರಮಗಳು ನೆರವೇರಿದ ನಂತರ ಅಧ್ಯಕ್ಷ ಮಹಾಶಯರು ಸಾಕ್ಷರತಾ ಪ್ರಚಾರ, ವಯಸ್ಕರ ಶಿಕ್ಷಣದ ಅವಶ್ಯಕತೆಯ ಕುರಿತು ಬೋಧಪ್ರದವಾದ ಭಾಷಣವನ್ನಿತ್ತರು. ಶಾಲಾ ಮಕ್ಕಳಿಂದ ವಿವಿಧ ವಿನೋದಾವಳಿ, "ರಾಮಪಟ್ಟಾಭಿಷೇಕ"? "ರಾಮಪರಂಧಾಮ" ಎಂಬ ಸಂಗೀತ ನಾಟಕಗಳು ಚಲೋದಾಗಿ ಅಭಿನಯಿಸಲ್ಪಟ್ಟವು. ನಾಟಕದ ಪಾತ್ರಧಾರಿಗಳಿಗೆ ಬಹುಮಾನಗಳು ಹಂಚಲ್ಪಟ್ಟ ನಂತರ ಧನ್ಯವಾದ ಸಮರ್ಪಣೆ, ಮಂಗಲ, ರಾಷ್ಟ್ರಗೀತೆಯೊಂದಿಗೆ ಸಭೆಯು ಚದರಿತು.

**ಕಟೀಲಿನಲ್ಲಿ ವಸಂತ ಸಾಹಿತ್ಯೋತ್ಸವ:** -ಕಿನ್ನಿಗೋಳಿ ಕರ್ನಾಟಕ ಸಂಘದ ವಸಂತ ಸಾಹಿತ್ಯೋತ್ಸವವು ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಸಹಕಾರ, ಸಹಾನುಭೂತಿಗಳಿಂದ ಕಟೀಲು ಉತ್ಸವದ ಸುಸಂಧಿಯಲ್ಲಿ ತಾ 19—4—50ರಂದು ಅಲ್ಲಿಯ ಹಾಯರ್ ಎಲಿಮೆಂಟರಿ ಶಾಲಾ ಕಟ್ಟಡದಲ್ಲಿ ಜಯಶೀಲವಾಗಿ ಜರಗಿತು. ಶ್ರೀ. ಸೇಡಿಯಾಪು ಕೃಷ್ಣಭಟ್ಟರು ಅಧ್ಯಕ್ಷತೆ ವಹಿಸಿದ್ದರು. ಪ್ರಾರ್ಥನೆಯಾಗಿ, ಕರ್ನಾಟಕ ಸಂಘದ ಕಾರ್ಯದರ್ಶಿ ಶ್ರೀ ಕೊಡತ್ತೂರು ಅನಂತಪದ್ಮನಾಭ ಉಡುಪರ ಮೊದಲ ಮಾತುಗಳಾದವು. ಆ ಮೇಲೆ ಶ್ರೀ ವಾಸು ಸೇರಿಗಾರ ಮತ್ತು ಗೆಳೆಯರ ವಾದ್ಯವಾದನವಾಯಿತು. 'ಧರ್ಮ ಹಾಗೂ ರಾಷ್ಟ್ರೀಯತ್ವ'ದ ಕುರಿತು ಶ್ರೀ ಎಂ. ವಿ. ಹೆಗ್ಡೆ, 'ಪ್ರಜಾಧರ್ಮ'ದ ಕುರಿತು ಶ್ರೀ. ಕೆ. ಶ್ರೀನಿವಾಸ ಉಡುಪ, 'ಧರ್ಮದಲ್ಲಿ ಪರಿವರ್ತನೆ ಬೇಕೆ?' ಎಂಬ ವಿಷಯವನ್ನೆತ್ತಿಕೊಂಡು ಶ್ರೀ ಕೆ. ರಾಮಕೃಷ್ಣ ಉಡುಪ, 'ದೇವಾಲಯಗಳೂ ಸಮಾಜೋನ್ನತಿಯೂ' ಎಂಬ ವಿಷಯದಲ್ಲಿ ಶ್ರೀ ಪೊಳಲಿ ಶಂಕರನಾರಾಯಣ ಶಾಸ್ತ್ರಿ, ಇವರ ಭಾಷಣಗಳಾದುವು. ಮಿ. ಯಮ್. ಇದಿನಬ್ಬನವರಿಂದ ಆಧುನಿಕ ಕವಿತಾ ವಾಚನ ಮತ್ತು ಶ್ರೀ ಬಾಲಗೋಪಾಲ, ಅವರಿಂದ 'ಪ್ರಹಸನ' ನಡೆಯಿತು, 'ವಿಶ್ವಧರ್ಮ'ದ ಕುರಿತು ಅಧ್ಯಕ್ಷರ ಭಾಷಣವಾದ ಮೇಲೆ 'ವರಪರೀಕ್ಷೆ' ಎಂಬ ನಾಟಕವು ಅಭಿನಯಿಸಲ್ಪಟ್ಟಿತು. ಕಾರ್ಯದರ್ಶಿ ಶ್ರೀ ಕೊ. ಅ. ಉಡುಪರು ಧನ್ಯವಾದಗಳನ್ನಿತ್ತು, ಕರ್ನಾಟಕ ಸಂಘಕ್ಕೆ ಊರವರ ಪ್ರೋತ್ಸಾಹ ಕೋರಿದರು. 'ಜನಗಣಮನ'ದೊಂದಿಗೆ ಸಮಾರಂಭ ಮುಗಿಯಿತು.

ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಮಾಮೂಲು ಮೇರೆಗಿನ ವರುಷಾವಧಿ ಉತ್ಸವಗಳು ಶ್ರೀ. ಕೊಡತ್ತೂರು ಶ್ರೀಧರ ಸೆಟ್ಟರ ಆಡಳಿತ ಮೊಕ್ತೇಸರಿಕೆಯಲ್ಲಿ ಕಳೆದವಾರ ಸಾಂಗವಾಗಿ ನೆರವೇರಿದುವು. ತಾ 20ರಲ್ಲಿ ಮಹೋತ್ಸವ.

**ಹಿರಿಯಡಕ:**—ಇಲ್ಲಿಯ ಮಹತೋಭಾರ ಶ್ರೀ ವೀರಭದ್ರಸ್ವಾಮಿ ಸನ್ನಿಧಿಯಲ್ಲಿ ಜರಗುವ ಕಾಲಾವಧಿ ಉತ್ಸವವು ತಾ 2.5.50 ಮೊದಲ್ಗೊಂಡು 7—5—50ರ ತನಕ ಜರಗುವುದು.

---

## ಮಂಗಳೂರಲ್ಲಿ ಮಾನ್ಯ ಮಂತ್ರಿದ್ವಯರು

ಮದ್ರಾಸು ಸರಕಾರದ ಪಬ್ಲಿಕ್ ವರ್ಕ್ಸ್ ಮತ್ತು ಶುದ್ಧಿ ಖಾತೆಯ ಮಂತ್ರಿಗಳಾದ ಮಾನ್ಯ ಶ್ರೀ ಎಮ್. ಭಕ್ತವತ್ಸಲಂರವರೂ ಒಕ್ಕಲತನ ಖಾತೆಯ ಮಂತ್ರಿಗಳಾದ ಮಾನ್ಯ ಶ್ರೀ ಎ. ಬಿ. ಸೆಟ್ಟರೂ ಇದೇ ತಾ. 22ರಲ್ಲಿ ಮಂಗಳೂರಿಗೆ ಆಗಮಿಸಿ ಸಂಜೆ ಬಲ್ಮಠದಲ್ಲಿಯ ದಿ ಕರ್ನಾಟಕ ಥಿಯೇಟರ್ಸ್‌ನವರು ಕಟ್ಟಿಸಿದ ಜ್ಯೋತಿ ಟಾಕೀಸನ್ನು ಉದ್ಘಾಟಿಸಿದರು.

ಮರುದಿವಸ ಬೆಳಗ್ಗೆ ಹಂಪನಕಟ್ಟೆಯಲ್ಲಿ ಮುನಿಸಿಪಾಲಿಟಿ ಕಡೆಯಿಂದ ಕಟ್ಟಿಸಿದ ಕೇಂದ್ರ ಬಸ್ ಸ್ಟೇಂಡನ್ನು ಮಾನ್ಯ ಮಂತ್ರಿ ಶ್ರೀ ಭಕ್ತವತ್ಸಲಂರವರು ತೆರೆದರು. ಮಾನ್ಯ ಮಂತ್ರಿ ಶ್ರೀ ಎ. ಬಿ. ಸೆಟ್ಟರೂ ಹಾಜರಿದ್ದರು. ಮಂತ್ರಿಗಳಿಬ್ಬರನ್ನು ಮುನಿಸಿಪಲ್ ಚೆಯರ್‌ಮೆನ್ ಶ್ರೀ ಎಲ್. ಸಿ. ಪಾಯಸ್, ಎಮ್. ಎಲ್. ಎ. ಅವರು ಸ್ವಾಗತಿಸಿದರು. ಕಮಿಶನರ್ ಶ್ರೀ ಸಂಜೀವ ತಲ್ವಾರರು ಕೇಂದ್ರ ಬಸ್‌ಸ್ಟೇಂಡಿನ ಕುರಿತು ವರದಿಯನ್ನರ್ಪಿಸಿದರು. ನಗರ ಸಭೆಯು ಪ್ರಯಾಣಿಕರ ಸೌಕರ್ಯಕ್ಕಾಗಿ ಇಂತಹ ಸವಲತ್ತುಗಳನ್ನು ನೀಡಿದುದಕ್ಕಾಗಿ ನಗರ ಸಭೆಯನ್ನು ಮಾನ್ಯ ಮಂತ್ರಿಗಳು ಅಭಿನಂದಿಸಿದರು. ಬಳಿಕ ಈ ಕಟ್ಟಡ ಕಟ್ಟಿಸಿದ ಕಂಟ್ರಾಕ್ಟರ್ ಮೊದಲಾದವರಿಗೆ ಉಡುಗೆರೆಗಳನ್ನು ಹಂಚಿದರು. ಮುನಿಸಿಪಲ್ ಕೌನ್ಸಿಲರ್ ಶ್ರೀ ಎಸ್. ಎಸ್. ಸುವರ್ಣರು ಧನ್ಯವಾದಗಳನ್ನರ್ಪಿಸಿದರು. ನಂತರ ಮಾನ್ಯ ಶ್ರೀ ಭಕ್ತವತ್ಸಲಂರವರಿಗೆ ಮುನಿಸಿಪಲ್ ಕಾರ್ಯಾಲಯದಲ್ಲಿ ಮಾನಪತ್ರ ಅರ್ಪಿಸಲಾಯಿತು. ಬಳಿಕ ಮುನಿಸಿಪಲ್ ಕೆಲಸಗಾರರ ಪ್ರತಿನಿಧಿಗಳು ಮಂತ್ರಿಗಳ ಮುಂದೆ ತಮ್ಮ ಕೇಳಿಕೆಗಳನ್ನು ಹೇಳಿಕೊಂಡರು. ಮುನಿಸಿಪಲ್ ಕೌನ್ಸಿಲರ್ ಶ್ರೀ ಸೂರ್ಯನಾರಾಯಣ ಅಡಿಗರು ಧನ್ಯವಾದಗಳನ್ನರ್ಪಿಸಿದರು.

**ಎಡ್ವಾನ್ಸ್‌ಮೆಂಟ್ ಎಸೋಸಿಯೇಶನ್:**—ದ. ಕ. ಜಿಲ್ಲಾ ಎಡ್ವಾನ್ಸ್‌ಮೆಂಟ್ ಎಸೋಸಿಯೇಶನಿನವರು ಜಿಲ್ಲಾ ಬೋರ್ಡು ಕಚೇರಿಯಲ್ಲಿ ಮಾನ್ಯ ಮಂತ್ರಿಗಳಿಬ್ಬರಿಗೂ ಬಿನ್ನವತ್ತಳೆಯನ್ನರ್ಪಿಸಿದರು. ಎಸೋಸಿಯೇಶನಿನ ಕಾರ್ಯದರ್ಶಿ ಶ್ರೀ ಪಿ. ಆರ್. ಪೂಂಜರು ಜಿಲ್ಲೆಯ ಅವಶ್ಯಕತೆಗಳನ್ನು ಮಂತ್ರಿಗಳ ಮುಂದಿಟ್ಟರು.

**ಆಹಾರ ಉತ್ಪಾದನಾ ಸಮಿತಿ**-ಮಧ್ಯಾಹ್ನ ಜಿಲ್ಲಾ ಕಲೆಕ್ಟರರ ಕಚೇರಿಯಲ್ಲಿ ಜಿಲ್ಲಾ ಆಹಾರ ಉತ್ಪಾದನಾ ಸಮಿತಿ ಸಭೆಗೆ ಮಂತ್ರಿಗಳಿಬ್ಬರೂ ಹಾಜರಾದರು. ಜಿಲ್ಲಾ ಕಲೆಕ್ಟರರು ಆಹಾರ ಉತ್ಪಾದನಾ ಸಮಿತಿಯ ವರದಿಯನ್ನೋದಿದರು.

**ರೈತರ ಸಭೆ:**-ಸಂಜೆ ಬೆಂಚ್‌ಕೋರ್ಟಿನಲ್ಲಿ ರೈತರ ಸಭೆ ಜರಗಿದಾಗ ಶ್ರೀ ಜಿನರಾಜ ಹೆಗ್ಡೆಯವರು ಮಲೆನಾಡಿನಲ್ಲಿ ಆಹಾರ ಬೆಳೆಸುವ ವಿಷಯದಲ್ಲಿ ಸರಕಾರವು ಕಾರ್ಯಕ್ರಮ ತೆಗೆದು ಕೊಳ್ಳಬೇಕೆಂದು ಸೂಚಿಸಿದರು. ಸಭೆಯಲ್ಲಿ ಶ್ರೀಗಳಾದ ಸದಾನಂದ ಹೆಗ್ಡೆ, ಡಿ. ಮಂಜಯ್ಯ ಹೆಗ್ಗಡೆ, ಕೆ. ಕೆ. ಸೆಟ್ಟಿ, ಬಿ. ಮಂಜಯ್ಯ ಹೆಗ್ಡೆ ಮೊದಲಾದವರು ಜಿಲ್ಲೆಯ ಕೃಷಿಕರ ಕುಂದುಕೊರತೆಗಳನ್ನು ಮಂತ್ರಿಗಳ ಗಮನಕ್ಕೆ ತಂದುದಲ್ಲದೆ ಮೂಲಗೇಣಿ ಒಕ್ಕಲುತನ ಮಸೂದೆ ಜ್ಯಾರಿಗೆ ತರಬೇಕೆಂದು ಸೂಚಿಸಿದರು. ಸಂಜೆ ಮಾನ್ಯ ಮಂತ್ರಿದ್ವಯರು ಬಂಟ್ಸ್ ಹೊಸ್ಟೆಲಿನಲ್ಲಿ ಚಹಾ ಸತ್ಕಾರವನ್ನು ಸ್ವೀಕರಿಸಿ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಜರಗಿದ ಕಾಂಗ್ರೆಸ್ ಕೆಲಸಗಾರರ ಸಭೆಗೆ ಚಿತ್ತೈಸಿದರು. ಡಾ। ನಾಗಪ್ಪ ಆಳ್ವ ಮೊದಲಾದವರು ಮಾತನಾಡಿದುದನ್ನು ಸಾವಧಾನಚಿತ್ತರಾಗಿ ಆಲಿಸಿದರು. ಸರಕಾರದ ಮತ್ತು ಜನತೆಯ ನಡುವೆ ಕಾಂಗ್ರೆಸ್ ಕೆಲಸಗಾರರು ಯಾವ ರೀತಿಯಲ್ಲಿ ಸಂಪರ್ಕವಿಟ್ಟುಕೊಂಡು ಕೆಲಸ ಮಾಡಬೇಕೆಂಬುದನ್ನು ವಿವರಿಸಿದರು. ತಾ. 24ರಲ್ಲು ಬೆಳಗ್ಗೆ ಮಂತ್ರಿದ್ವಯರು ಕಂಕನಾಡಿಯ ಭತ್ತದ ಕೇಂದ್ರಕ್ಕೆ ಭೇಟಿಯಿತ್ತರು, ಸಂಜೆ ಜಿಲ್ಲಾ ವಾಣಿಜ್ಯ ಸಂಘದವರು ಮಾನ್ಯ ಮಂತ್ರಿಗಳಿಗೆ ಬಿನ್ನವತ್ತಳೆಯೊಂದನ್ನರ್ಪಿಸಿದರು. (ಇತರ ವಿವರ ಮುಂದಿನ ಸಂಚಿಕೆಯಲ್ಲಿ)

# ದ. ಕ. ಜಿಲ್ಲಾ ಕಿಸಾನ್ ಪರಿಷತ್ತು

ಮೇಲಿನ ಪರಿಷತ್ತು ಮೂಲ್ಕಿಯ ಕಾರ್ನಾಡಿನಲ್ಲಿ ಇದೇ ಬರುವ ಮೇ ತಾ. 13 ಮತ್ತು 14ರಲ್ಲಿ ಕರ್ಣಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರೂ ಅಖಿಲ ಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರೂ ಆದ ಶ್ರೀಮಾನ್ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಮದ್ರಾಸ್ ಸರಕಾರದ ವಿದ್ಯಾ ಹಾಗೂ ಕಾನೂನು ಮಂತ್ರಿಗಳಾದ ಶ್ರೀಮಾನ್ ಕೆ. ಮಾಧವ ಮೆನನ್, ಇವರು ಪರಿಷತ್ತಿನ ಉದ್ಘಾಟನೆ ಮಾಡಲಿರುವರು.

ದಕ್ಷಿಣಕನ್ನಡ ಜಿಲ್ಲೆಯ ಕೃಷಿಕ್ಕೆಗಾರಿಕೆಯ ಬೆನ್ನೆಲುಬಾದ ಬಾಲಗೇಣಿ ಒಕ್ಕಲುಗಳ ಹಕ್ಕು ಬಾಧ್ಯತೆಗಳ ರಕ್ಷಣೆಯ ಕೂಗು ಹಾಗೂ ಚಳವಳವು ಈ ವರೆಗೆ ಪರಿಣಾಮಕಾರಿಯಾಗಿರುವುದಿಲ್ಲ. ಇದಕ್ಕೆ ಸದ್ರಿ ಜನತೆಯಲ್ಲಿರುವ ಸಂಘಟನೆಯ ಅಭಾವವೇ ಮೂಲಕಾರಣವಾಗಿದೆ. ಮಾತ್ರವಲ್ಲದೆ ಕಾಂಗ್ರೆಸ್ ಸರಕಾರದಲ್ಲಿ ಕೂಡಾ ಜನಸಾಮಾನ್ಯರ ಹಿತಕ್ಕಿಂತ ಮಾಲಕ ವರ್ಗದ ಸ್ಥಾನ ಮಾನಗಳನ್ನು ಭದ್ರವಾಗಿಡುವ ಮನೋವೃತ್ತಿಯು ಕೆಲ ಮಟ್ಟಿಗೆ ಕಂಡು ಬರುತ್ತದೆ. ಆದುದರಿಂದ ಜಿಲ್ಲೆಯ ಬಹುಜನ ವರ್ಗವಾದ ಕೃಷಿಕರೂ, ಕೃಷಿಕೆಲಸಗಾರರೂ ಸಕಾಲದಲ್ಲಿ ಎಚ್ಚೆತ್ತು ಸುಸಂಘಟಿತರಾಗಿ, ಸಂಘಟನಾ ಬಲದಿಂದಲೇ ತಮ್ಮ ಹಕ್ಕು ಬಾಧ್ಯತೆಯನ್ನು ಸಾಧಿಸಿಕೊಳ್ಳಬೇಕಾದ ಕಾಲವೀಗ ಬಂದಿದೆ.

ಕೊನೆಯದಾಗಿ ಒಂದೊಮ್ಮೆ ಇಡೀ ಜಿಲ್ಲೆಯ ಕೃಷಿಕರು ಒಂದೆಡೆ ಸೇರಿ, ತಮ್ಮ ಸಂಘಶಕ್ತಿಯ ಬಲವನ್ನು ಪ್ರದರ್ಶಿಸಿ, ಮದ್ರಾಸು ಸರಕಾರವು ಕೂಡಲೇ "ಸ್ಟೇ" ಮಸೂದೆಯನ್ನೂ "ಒಕ್ಕಲು ಹಿತ" ಮಸೂದೆಯನ್ನೂ ಜಾರಿಗೆ ತರುವಂತೆ ಏಕಕಂಠದಿಂದ ಘೋಷಿಸಬೇಕಾಗಿದೆ. ಅದಕ್ಕಾಗಿ ಜಿಲ್ಲೆಯ ಎಲ್ಲಾ ಕಡೆಗಳಿಂದಲೂ ಕೃಷಿಕರು ಪ್ರತಿನಿಧಿಗಳಾಗಿಯೂ, ಪ್ರೇಕ್ಷಕರಾಗಿಯೂ ಈ ಪರಿಷತ್ತಿಗೆ ತಂಡ ತಂಡವಾಗಿ ಬಂದು ತಮ್ಮ ನಿರ್ಧಾರವನ್ನು ಸರಕಾರದ ಮನಗಾಣಿಸಬೇಕಾಗಿದೆ. ನಿಶ್ಚಿತ ಅವಧಿಯೊಳಗೆ "ಒಕ್ಕಲು ಹಿತ" ಮಸೂದೆಯನ್ನು ತರುವ ಭರವಸೆಯು ಸರಕಾರದಿಂದ ದೊರೆಯದಿದ್ದರೆ ಮುಂದೆ ಅದನ್ನು ಸಾಧಿಸುವರೆ ಯಾವ ರೀತಿ ಆಂದೋಲನವನ್ನು ಹೂಡಬೇಕೆಂಬ ಮಹತ್ವದ ನಿರ್ಣಯವನ್ನೂ ಈ ಪರಿಷತ್ತಿನಲ್ಲಿ ಮಾಡಬೇಕಾಗಿದೆ. ಆದುದರಿಂದ ಈ ಪರಿಷತ್ತು ದ. ಕ. ಜಿಲ್ಲೆಯ ಕಿಸಾನ್ ಚಳವಳದ ಇತಿಹಾಸದಲ್ಲೆ ಪ್ರಾಮುಖ್ಯವಾದುದಾಗಿದೆ.

ಇದೇ ಸಂದರ್ಭದಲ್ಲಿ ದ. ಕ. ಜಿಲ್ಲೆಯ ಗ್ರಾಮೋದ್ಯೋಗಸ್ಥರ ಪರಿಷತ್ತು ಶ್ರೀಮಾನ್. ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಕಿಸಾನ್ ಪರಿಷತ್ತಿನೊಂದಿಗೇನೇ ಈ ಪರಿಷತ್ತಿನ ಪ್ರಾರಂಭೋತ್ಸವವನ್ನು ಮಾನ್ಯ ಮಂತ್ರಿ ಶ್ರೀಮಾನ್. ಮಾಧವ ಮೆನನ್‌ರೇ ಜರಗಿಸುವರು. ಕೃಷಿಕರ ಮಹಿಳಾ ಪರಿಷತ್ತೊಂದು. ಕಿಸಾನ್ ಪರಿಷತ್ತಿನೊಂದಿಗೆ ನಡೆಯಲಿರುವುದು. ಇದರ ಆರಂಭೋತ್ಸವವನ್ನು ಮಾನ್ಯ ಮಂತ್ರಿ ಮಾಧವ ಮೆನನರ ಸಹಧರ್ಮಿಣಿಯೂ, ಪ್ರಮುಖ ಕಾಂಗ್ರೆಸ್ ಕೆಲಸಗಾರ್ತಿಯೂ, ಮದ್ರಾಸು ಶಾಸನ ಸಭೆಯ ಸದಸ್ಯೆಯೂ, ಆದ ಶ್ರೀಮತಿ ಕುಟ್ಟಿಯಮ್ಮಾಳ್ ಅಮ್ಮ. ಬಿ. ಎ. ಇವರು ನಡಿಸಲಿರುವರು.

ಕರ್ಣಾಟಕ ಕಿಸಾನ್ ಕೆಲಸಗಾರರಲ್ಲದೆ ಹಿಂದೂಸ್ಥಾನದ ಪ್ರಸಿದ್ಧ ಕೃಷಿಕ ಬಂಧುವಾದ ಶ್ರೀಮಾನ್ ಜಿ. ಸಿ. ಕುಮಾರಪ್ಪನವರೂ, ಈ ಪರಿಷತ್ತಿಗೆ ಆಮಂತ್ರಿತರಾಗಿದ್ದಾರೆ. ಆದುದರಿಂದ ಜಿಲ್ಲೆಯ ಕೃಷಿಕರೆಲ್ಲರೂ, ಉತ್ಸಾಹದಿಂದ ನೆರೆದು ಬಂದು ಈ ಪರಿಷತ್ತನ್ನು ಅತ್ಯಂತ ಜಯಶೀಲ ಗೊಳಿಸಬೇಕಾಗಿ ಸ್ವಾಗತ ಸಮಿತಿಯ ವಿನಂತಿಯಿದೆ.

## ದ. ಕ. ಜಿಲ್ಲಾ ಸಮಾಚಾರ

**ಬನ್ನಾಡಿ:—** ಇಲ್ಲಿಯ ಪರಮಹಂಸ ಪ್ರೌಢಪ್ರಾಥಮಿಕ ಶಾಲಾ ವರ್ಧಂತ್ಯುತ್ಸವವು ಬರುವತಿಂಗಳ 4ನೆ ಗುರುವಾರ ವಿವಿಧ ಕಾರ್ಯಕ್ರಮಗಳಿಂದ ಜರಗಲಿರುವುದು.

---

## ದ. ಕ. ಸಬ್ ಜಡ್ಜರ ಕೋರ್ಟಿನಲ್ಲಿ.

O. S. 49/50

ಪದ್ಮಾವತಿ ಕೂಡಾ —ವಾದಿರು.

ಮತ್ತು

ಮುಂಡ್ಯಪ್ಪ ಕೂಡಾ —ಪ್ರತಿವಾದಿರು.

22ನೇ ಉಂಞಕ್ಕೆ—ದೂಮಕ್ಕೆ ಮಗಳು.
26 ನರಾಯಣ ಭಂಡಾರಿ—ಉಂಞಕ್ಕೆ ಮಗ.
27 ಗಿರಿಜ—ಉಂಞಕ್ಕೆ ಮಗಳು, ತನ್ನ ಸ್ವಂತದ ಬಗ್ಗೂ ಮತ್ತು ತನ್ನ ಮ್ಯಾನರ್ ಮಕ್ಕಳು 31ನೇ ಅಪ್ಪೋಜಿ, 32ನೇ ಉಚಕ್ಕೆ-ಇವರ ಗಾರ್ಡಿಯನ್ ಆಗಿ ಸಹಾ.
28 ಸದಾಶಿವ } 29 ವಿಶ್ವನಾಥ } ಗಿರಿಜಳ ಮಕ್ಕಳು.
(ಎಲ್ಲರೂ ಮಂಗ್ಳೂರು ಟೌನ್ ಬೋಳಾರದಲ್ಲಿರುವವರು.)

23 ಪವುಂಞ—ದೂಮಕ್ಕೆ ಮಗಳು, ತನ್ನ ಸ್ವಂತದ ಬಗ್ಗೂ ಮತ್ತು ತನ್ನ ಮ್ಯಾನರ್ ಮಕ್ಕಳು 50ನೇ ವಿಶ್ವನಾಥ, 51ನೇ ಕುಸುಮ, ಇವರ ಗಾರ್ಡಿಯನ್ ಆಗಿ ಸಹಾ.
37 ರಾಮಯ್ಯ ಶೇಕ—ಪವುಂಞ ಮಗ.
38 ದೇವಕಿ—ಪವುಂಞ ಮಗಳು. ಇವಳು ತನ್ನ ಸ್ವಂತದ ಬಗ್ಗೂ ತನ್ನ ಮ್ಯಾನರ್ ಮಕ್ಕಳು 53ನೇ ವಿನೋದ, 54ನೇ ಕೃಷ್ಣ, 55ನೇ ಬಾಬು 56ನೇ ದೂಮಕ್ಕೆ ಇವರ ಗಾರ್ಡಿಯನ್ ಆಗಿ ಸಹಾ.
52 ಮಾರಪ್ಪ—ದೇವಕಿ ಮಗ.
41 ಗುಲಾಬಿ—ಪವುಂಞ ಮಗಳು. ತನ್ನ ಸ್ವಂತದ ಬಗ್ಗೂ ತನ್ನ ಮ್ಯಾನರ್ ಮಕ್ಕಳು 63ನೇ ಗಿರಿಜ, 66ನೇ ಗಂಗಾಧರ ಇವರ ಗಾರ್ಡಿಯನ್ ಆಗಿ ಸಹಾ.
(ಎಲ್ಲರೂ ಮಂಗ್ಳೂರು ತಾಲ್ಲೂ ಅಡ್ಯಾರ ಗ್ರಾಮದಲ್ಲಿರುವವರು.)

30 ಪವುಂಞಕ್ಷಿ—ಗಿರಿಜಳ ಮಗಳು. ಇವಳು ತನ್ನ ಸ್ವಂತದ ಬಗ್ಗೂ ಮತ್ತು ತನ್ನ ಮ್ಯಾನರ್ ಮಕ್ಕಳು 34ನೇ ಮಾಯಿ, 35ನೇ ಸಂದೀಪ ಇವರ ಗಾರ್ಡಿಯನ್ ಆಗಿ ಸಹಾ. (ಮಂಗ್ಳೂರು ಟೌನ್ ಬೆಂದೂರಲ್ಲಿರುವವಳು.)
36 ಕಾವೇರಿ—ಪವುಂಞ ಮಗ. ತನ್ನ ಸ್ವಂತದ ಬಗ್ಗೂ, ಮತ್ತು ತನ್ನ ಮ್ಯಾನರ್ ಮಕ್ಕಳು 47ನೇ ವೆಂಕಪ್ಪ, 48ನೇ ಪವುಂಞಕ್ಷಿ 49ನೇ ರಮ್ಯಾ ಇವರ ಗಾರ್ಡಿಯನ್ ಆಗಿ ಸಹಾ. (ಮಂಗ್ಳೂರು ತಾಲ್ಲೂ ಕೋಣಾಜೆ ಗ್ರಾಮಸ್ಥಳು.)
39 ಕಮಲ—ಪವುಂಞ ಮಗಳು. ತನ್ನ ಸ್ವಂತದ ಬಗ್ಗೂ ಮತ್ತು ತನ್ನ ಮ್ಯಾನರ್ ಮಕ್ಕಳು 57ನೇ ಶಿವರಾಮ, 58ನೇ ಆನಂದ, 59ನೇ ಚಂದ್ರಾವತಿ 60ನೇ ತಾರಾ ಇವರ ಗಾರ್ಡಿಯನ್ ಆಗಿ ಸಹಾ. (ಮಂಗ್ಳೂರು ತಾಲ್ಲೂ ಪೆರಮನ್ನೂರು ಗ್ರಾಮಸ್ಥಳು.)
40 ರಾಧು—ಪವುಂಞ ಮಗ. ತನ್ನ ಸ್ವಂತದ ಬಗ್ಗೂ ಮತ್ತು ತನ್ನ ಮ್ಯಾನರ್ ಮಕ್ಕಳು 61ನೇ ಸಂಜೀವ, 62ನೇ ಜಯಾ, 63ನೇ ಬೇಬಿ, 64ನೇ ಬಾಬು, ಇವರ ಗಾರ್ಡಿಯನ್ ಆಗಿ ಸಹಾ. (ಕಾಸರಗೋಡು ತಾಲ್ಲೂ ಕೊಳ್ಯೂರು ಗ್ರಾಮಸ್ಥಳು.)
46ನೇ ಶಂಕರಿ—ಕಾವೇರಿ ಮಗಳು. ಮಂಗ್ಳೂರು ತಾಲ್ಲೂ ಬೆಳ್ಮ ಗ್ರಾಮಸ್ಥಳು.

ಮೇಲಿನ ಪ್ರತಿವಾದಿರಿಗೆ ಈ ಮುಖಾಂತ್ರ ತಿಳಿಯಪಡಿಸುವದೇನೆಂದ್ರೆ:—

ವಾದಿರು ನೀವು ಕೂಡಾ ಪ್ರತಿವಾದಿರ ಮೇಲೆ ಮಾಡಿರುವ ಮೇಲಿನ ವ್ಯಾಜ್ಯವು ತಾ: 8-6-1950ಕ್ಕೆ ತನ್ನಿಗೆ ಯಿಟ್ಟಿರುತ್ತದೆ. ಆ ದಿವ್ಸ ನೀವು ಖುದ್ದಾಗಲೀ ಯಾ ವಕೀಲರ ಮುಖಾಂತ್ರ ಆಗ್ಲಿ ಹಾಜರಾಗಿ ನಿಮ್ಮ ಆಕ್ಷೇಪಗಳೇನಾದ್ರೂ ಇದ್ದರೆ ತಿಳಿಸತಕ್ಕದ್ದು. ಇಲ್ಲದಿದ್ದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ನಂಬ್ರ ತೀರ್ಮಾನಿಸಲಾದೀತು. ತಿಳಿದಿರಲಿ.

—ಕೋರ್ಟು ಹುಕುಂ ಮೇರೆಗೆ—

ಮಂಗ್ಳೂರು, ತಾ. 19-4-50.

ಬಿ. ಮಂಜಯ್ಯ ಹೆಗ್ಡೆ, ವಾದಿರ ಕಡೆ ಎಡ್ವಕೇಟ್

---

## ನೋಟಿಸ್

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C 152/47 R. E. A. 49/50

ಅರ್ಜಿದಾರ. ಯಿಸೂಬ್ಬ ಹಸಂನಸ್ಸಾಬ.

ಎದ್ರಿ. ಅಂಣಪ್ಪಯ್ಯ.

ಎದ್ರಿಗೆ ತಿಳಿಸುವುದೇನೆಂದರೆ—

ಎದ್ರಿ. ಅಣ್ಣಪ್ಪಯ್ಯ- ಮಾಳಪ್ಪಯ್ಯನ ಮಗ. ಕುಂದಾಪುರ ತಾಲ್ಲೂ ಬಿಜೂರು ಗ್ರಾಮಸ್ಥ.

ಮೇಲ್ಕಂಡ ದಾವೆಯಲ್ಲಿ ಆದ ಡಿಕ್ರಿಯ ಅಮಲ್‌ಜಾರಿ ಬಗ್ಗೆ ಅಮಲ್‌ಜಾಯಿಂನು ಯಾಕೆ ನಡಿಸಕೂಡದು ಎಂಬುದಕ್ಕೆ ಸಬಬು ತೋರಿಸಲಿಕ್ಕೆ ತಾರೀಕು 3-6-1950ನೆ ಹಗಲು 11ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ನೀವು ಹಾಜರು ಆಗಬೇಕೆಂತ ನಿಮಗೆ ಯಿದರಿಂದ ನೋಟಿಸು ಕೊಡೋಣಾಗುತ್ತದೆ.

**B. Padmanabha Holla,**
Advocate for petitioner.

ತಾರೀಕು 17-4-50 }
ಮೊಕ್ಕಾಂ ಕುಂದಾಪುರ. }

---

## NOTICE

In the Court of the District Munsiff Udipi.

O.P. 16 of 1950.

K. Krishnaya, son of K. Annaya, Shivalli Brahmin, Ryot, residing in Kannarpadi of *Kadekar* village, Udipi Taluk... ...Petitioner.

The aforesaid petition filed by the petitioner praying for a succession certificate in his favour authorising him as the sole heir to his now deceased wife *Mahalaxiamma* to collect amounts due under a policy No. 4232 issued by The Canara Mutual Assurance Co Ltd., Udipi in her favour stands posted for hearing before this court on 7-6-50, and any interested therein may appear before the said court and urge his objections if any, on the said date at 10 A. M.

[By order of the court]

K. Vittal Nayak,
Vakil for *Petitioner*.

Udipi 24-4-50

---


ಶರೀರದಲ್ಲಿಯ ಅಸಹ್ಯ ಉಷ್ಣತೆಯನ್ನು ಇದರಿಂದಲೇ ತೆಗೆದು ಹಾಕಿರಿ




ಶರೀರದ ಒಳಗಿನ ಮತ್ತು ಹೊರಗಿನ ಉರುಪನ್ನು ತೆಗೆದು ಹಾಕಿ ... ಅಜೀರ್ಣವನ್ನು ಸರಿಪಡಿಸುವದು, ಶಾರೀರಿಕ ಮತ್ತು ಮಾನಸಿಕ ಶಕ್ತಿಯನ್ನು ಬೆಳೆಸುವದು, ಧಾತು ಸ್ಥಾನದಲ್ಲಿಯ ಉಷ್ಣತೆಯನ್ನು ಹೋಗಲಾಡಿಸಿ ಪುಷ್ಟಿಕರ ಮಾಡುವದು

ನಿಮ್ಮ ಹತ್ತಿರದ ಕೆಮಿಸ್ಟರ ಕಡೆಯಿಂದ ಇಂದೇ ಒಂದು ಬಾಟಲಿಯನ್ನು ತಂದು ಸೇವಿಸಲು ಪ್ರಾರಂಭಿಸಿರಿ.

ಪರ್ಲ ಎಂಡ್ ಕಂಪನಿ



BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD.



Highly perfumed and medicated, worth using daily by one and all, keeps hair black and relieves head-ache etc.

TRADE MARK

Manufactured by:-

Swadeshi Oushadhi Bhandara (Regd.)



ಮೂಲ್ಕಿ ಬೇಂಕ್.

ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,

# ವರ್ಣ ಭೇದದ ಕಪ್ಪುಕಲೆ

ಶ್ರೀ ಸಿ. ಎಚ್. ಶೆಟ್ಟಿ

ಕಳೆದ 1949ನೇ ಇಸವಿಯಲ್ಲಿ ಅಮೇರಿಕದ ಓರ್ವ ಶ್ರೀಮಂತನು ಅಲ್ಲಿರುವ ಜಫರ್ಸನ್ ಮಿಲಿಟರಿ ಕೋಲೇಜಿಗೆ 50,000,000 ಹವನುಗಳನ್ನು ಕೆಲವು ಶರ್ತಗಳ ಮೇಲೆ ಉದಾರ ದಾನಮಾಡುವುದಾಗಿ ವಾಗ್ದಾನವಿತ್ತಿದ್ದನಂತೆ. ಶರ್ತಗಳ ಪೈಕಿ ಕೆಲವು ವಿಚಾರಣೀಯವಾಗಿವೆ. ಆ ಮೋಹಕ ದಾನವು ಕಾರಣಾಂತರದಿಂದ ತಿರಸ್ಕರಿಸಲ್ಪಟ್ಟರೂ ಅವುಗಳ ಗೂಢಾರ್ಥವನ್ನು ವಿಮರ್ಶಿಸುವಾಗ ಹಲವು ವಿಶೇಷ ಸಂಗತಿಗಳು ನಮ್ಮ ಮನಸ್ಸಿಗೆ ಹೊಳೆಯುತ್ತವೆ. ಕೋಲೇಜಿನಲ್ಲಿ ಕಲಿಸುವವರು ಮತ್ತು ನೌಕರರು ಏಸ್ಯಾ ಮತ್ತು ಆಫ್ರಿಕ ವರ್ಗದ ಜನಾಂಗಕ್ಕೆ ಸೇರಿದವರಾಗಬಾರದೆಂತಲೂ ಅಧಿಕಾರಸ್ಥರಾಗಲೀ ವಿದ್ಯಾರ್ಥಿಗಳಾಗಲೀ ಆಂಗ್ಲೋ ಸೇಕ್ಸನ್ ಮತ್ತು ಲೆಟಿನ್ ಅಮೇರಿಕನ್ ಹುಟ್ಟಿನವರೇ ಆಗಬೇಕೆಂತಲೂ ಕೋಲೇಜಿನಲ್ಲಿ ಕಲಿಸತಕ್ಕ ವಿದ್ಯಾಭ್ಯಾಸದ ಕ್ರಮದಲ್ಲಿ ಕ್ರೈಸ್ತ ಮತದ ಮತ್ತು ಆಂಗ್ಲೋ ಸೇಕ್ಸನ್ ಮತ್ತು ಲೆಟಿನ್ ಅಮೇರಿಕನ್ ವಂಶದವರ ಉತ್ಕೃಷ್ಟತೆಯ ಪ್ರಚಾರದ ಬಗ್ಗೆ ಉಪಯೋಗಿಸಬೇಕೆಂತಲೂ ಇದೆಯಂತೆ.

ಈಗಿನ ನಾಗರಿಕ ಜನಾಂಗಗಳಲ್ಲಿ ಸರ್ವಸಮಾನತೆಯ ಭಾವನೆಯು ತುಂಬಿರುವದಾದರೂ ಆಚರಣೆಯಲ್ಲಿ ಇದು ಕಂಡು ಬರುವದಿಲ್ಲ. ಅಮೇರಿಕದವರು ಸ್ವಾತಂತ್ರ್ಯ ಸಾರಿದ ಮೇಲೆ, ಫ್ರಾನ್ಸಿನವರು ಕ್ರಾಂತಿಯಿಂದ ವ್ಯಕ್ತಿಗಳ ಸ್ವತಂತ್ರ ಹಕ್ಕನ್ನು ಸಾರಿದ ತರುವಾಯ, ಎಲ್ಲಾ ರಾಷ್ಟ್ರಗಳಲ್ಲಿ ಶಾಸನ ಮೂಲಕ ವೈಯಕ್ತಿಕ ಗುಲಾಮಗಿರಿಯು ರದ್ದುಗೊಳಿಸಲ್ಪಟ್ಟ ನಂತರ ಮಾನವರ ಸ್ಥಿತಿಯು ಬಹಳ ಸುಧಾರಿಸಿದೆಯಾದರೂ ಒಂದು ಜನಾಂಗವು ಇನ್ನೊಂದು ಜನಾಂಗವನ್ನು ಅಧಿಕಾರ ಬಲದಿಂದ ತಮ್ಮ ಅಂಕೆಯೊಳಗಿರಿಸಿಕೊಂಡು ತಮ್ಮ ಗುಲಾಮರಂತೆ ನೋಡುವದು ಮುಗಿಯಲೇ ಇಲ್ಲ. ಏಸ್ಯಾ ಮತ್ತು ಆಫ್ರಿಕಾ ಮೊದಲಾದ ಕಡೆಗಳಲ್ಲಿ ಹಿಂದುಳಿದ ಜನಾಂಗದವರನ್ನು (Backward people) ಇತರ ದೇಶದವರು ತಮ್ಮ ಸರ್ವಾಧಿಕಾರದೊಳಗಿಟ್ಟುಕೊಳ್ಳುವದು ನಡೆಯುತ್ತಲೇ ಇದೆ. ಆಳುವ ಹಕ್ಕು ತಮ್ಮದೆಂತಲೂ ತಾವು ಹುಟ್ಟಿನಿಂದ ಆಳುವ ಬಗ್ಗೆ ಎಂತಲೂ ತಾವೇ ಮುಂದಾಳುಗಳೆಂತಲೂ ತಾವೇ ಎಲ್ಲರಿಗೂ ಮಾದರಿ ಅಥವಾ ಮೇಲು ಪಂಕ್ತಿ ಎಂತಲೂ ಎಲ್ಲರನ್ನೂ ತಿದ್ದಿ ನಾಗರಿಕರನ್ನಾಗಿ ಮಾಡುವ ಮತ್ತು ರಕ್ಷಿಸುವ ಭಾರವು (whiteman's burden) ತಮ್ಮ ಪಾಲಿನದ್ದೇ ಆಗಿದೆ ಎಂಬ ತತ್ವವನ್ನು ಪ್ರಚಾರ ಮಾಡಿರುವರು. ಈ ತತ್ವಕ್ಕೆ "ಹೆರೆನ್‌ವಾಲ್ಕ್ ಅಥವಾ ಮಾಸ್ಟರ್‌ರೇಸ್‌ಥಿಯರಿ" (Herrenvolk or Master Race thoery) ಎನ್ನುವರು. ಇದರಿಂದ ಪ್ರತಿಯೋರ್ವ ಯೂರೋಪಿಯನನೂ ರಾಜಕುಲಕ್ಕೆ ಸೇರಿದವನೆಂಬ ಗರ್ವ ಭಾವನೆಯು ಪ್ರಚಾರ ಮತ್ತು ಆಚರಣೆಯ ಮೂಲಕ ಜ್ಯಾರಿಗೆ ಬಂದಿದೆ. ಹೀಗಾಗಿ ಅಧಿಕಾರದಲ್ಲಿರುವ ಜನಾಂಗದವರು ಇತರರನ್ನು ಕೀಳು ತರಗತಿಯವರೆಂದು ತುಚ್ಛೀಕಾರದಿಂದ ಓರೆಗಣ್ಣಿನಿಂದ ನೋಡುವದು ಸಂಪ್ರದಾಯವಾಗಿದೆ.

ಆದಿಪೂರ್ವದಲ್ಲಿ ಮಾನವರೆಲ್ಲರೂ ಒಂದೇ ವರ್ಗಕ್ಕೆ ಸೇರಿದವರೆಂದೂ ಅವರ ಮೂಲವು ಏಸ್ಯಾಖಂಡದ ಯಾವುದೋ ಒಂದು ಕಡೆಯಲ್ಲಿರಬೇಕೆಂದೂ ಮಾನವ ವೈಜ್ಞಾನಿಕರು (Anthropologists) ಮತ್ತು ಪ್ರಾಣಿಶಾಸ್ತ್ರಜ್ಞರು (Biologists) ಸರ್ವಸಮ್ಮತದಿಂದ ಒಪ್ಪಿರುವರು. ಮಾನವರು ತಮ್ಮ ಮೂಲ ಸ್ಥಾನದಿಂದ ಜೀವನೋಪಾಯಕ್ಕಾಗಿ ಒಂದೊಂದು ಶಾಖೆಯಾಗಿ ದಿಕ್ಕು ದಿಕ್ಕುಗಳಿಗೆ ಹೊರಟು ಅಲೆದಾಡಿದರು. ಹಾಗೆ ಹೋದಾಗ ಕೆಲವರು ಅಲ್ಲಲ್ಲಿ ನೆಲೆಯಾಗಿ ನಿಂತರು. ಹಾಗೆ ನೆಲೆಯಾಗಿ ನಿಂತ ಸ್ಥಳದ ಹವಾಗುಣದಿಂದಲೂ ವಾತಾವರಣಗಳಿಂದಲೂ ಕಪ್ಪುವರ್ಣ, ಬಿಳಿವರ್ಣ, ಕೆಂಪುವರ್ಣ ... ಸಹಿತವರ್ಣದವರಾಗಿ ಮಾರ್ಪಟ್ಟರು. ಫ್ರಾಂಚೀಸಿನಂತೆ ನಾಗರಿಕರಾದವರು ತಾವು ನೆಲಸಿರುವ ರಾಷ್ಟ್ರಗಳಲ್ಲಿ ತಮ್ಮ ಕಲೆ ಮತ್ತು ನಾಗರೀಕತೆಯನ್ನು ಸ್ಥಾಪಿಸಿ ಊರ್ಜಿತಗೊಳಿಸಿದರು. ಈ ಪೈಕಿ ಕೆಲವರು ಕಲಾ ಶಾಸ್ತ್ರವಿದ್ವತ್ತಿನಲ್ಲಿ ಮುಂದುವರಿದಿರುವರು. ಇನ್ನು ಕೆಲವರು ಹಿಂದುಳಿದಿರುವರು. ಮುಂದುವರಿದವರಿಗೆ ತಮ್ಮ ವರ್ಚಸ್ಸನ್ನು ಹಿಂದುಳಿದವರ ಮೇಲೆ ಬೀರಲು ಅವಕಾಶವಾಯಿತು. ಒಂದೊಂದು ಕಡೆಯವರು ಒಂದೊಂದು ಕಾಲದಲ್ಲಿ ಸರ್ವವಿಧಾನದಲ್ಲಿ ಇತರರಿಗೆ ಮಾದರಿಯಾದದ್ದು ಚರಿತ್ರೆಯಲ್ಲಿ ಕಂಡು ಬಂದಿದೆ ಹೊರತು, ಯಾರು ಮೇಲು, ಯಾರು ಕೀಳು ಎಂಬುದು ತಿಳಿದು ಬಂದದ್ದಿಲ್ಲ.

ಮಾನವರು ವಂಶವರ್ಗಗಳಾಗಿ ಪರಿಗಣಿಸಲ್ಪಟ್ಟು ವರ್ಣಭೇದಗಳನ್ನು ತಂದೊಡ್ಡಿರುವ ವಿಷಯವನ್ನೇ ನಾವೀಗ ವಿಚಾರಿಸಬೇಕಾಗಿದೆ. ಸುಮಾರು ಒಂದು ಶತಮಾನದ ಹಿಂದೆ ಫ್ರೆಂಚ್ ದೇಶದ ಡಿ. ಗೋಬಿನೋ ಎಂಬೊಬ್ಬ ಪಾಶ್ಚಾತ್ಯ ಲೋಕವಿದ್ವಾಂಸ (Oriental Scholar) ತುರ್ಕೀ ರಾಜಧಾನಿಯಲ್ಲಿ ಫ್ರೆಂಚ್ ರಾಯಭಾರಿಯಾಗಿ ನೇಮಿಸಲ್ಪಟ್ಟಿದ್ದರು. ಇವರು ವರ್ಣಭೇದ (Inequality of Races) ಎಂಬ ಗ್ರಂಥವನ್ನು ಬರೆದರು. ಇದರಿಂದ ಜರ್ಮನ್ ತತ್ವಜ್ಞಾನಿ ನೀಟ್ಸ್ ಎಂಬವರ 'ದಿವ್ಯಮಾನುಷ' (Superman) ಎಂಬ ತತ್ವಕ್ಕೆ ಹುರುಪುಗೊಟ್ಟಂತಾಗಿ, ಅದರಿಂದ ಯೂರೋಪು ಖಂಡದ ಅಮಿತ ರಾಷ್ಟ್ರಾಭಿಮಾನಿಗಳ ದಿವ್ಯವಂಶ (Super Race) ಎಂಬ ತತ್ವಕ್ಕೆ ಎಡೆದೊರೆಯಿತೆಂದು ಹಲವು ತಜ್ಞರು ಅಭಿಪ್ರಾಯಪಟ್ಟಿರುವರು. ಕಳೆದ ಮಹಾ ಯುದ್ಧಗಳೆರಡರಲ್ಲಿ ಐರೋಪ್ಯ ರಾಷ್ಟ್ರಾಭಿಮಾನಿಗಳು ಈ ತತ್ವವನ್ನೇ ಆಧರಿಸಿ ತಮ್ಮ ಯುದ್ಧದ ಧ್ಯೇಯವನ್ನು ಸಾರಿದರು. ನೀಟ್ಸ್ ಎಂಬವರು ಧಾರ್ಮಿಕ ಮತ್ತು ಆಧ್ಯಾತ್ಮಿಕ ದೃಷ್ಟಿಯಿಂದ ತಮ್ಮ ತತ್ವವನ್ನು ವಾದಿಸಿರುವರೇ ಹೊರತು ಈ ವಿಧಾನವನ್ನೇನೂ ಹೇಳಲಿಲ್ಲ. ಅವರ ತತ್ವದಿಂದ ಯಾರಿಗೂ ಯಾವ ಭೇದವೂ ಇಲ್ಲ. ಕೌಂಟ್ ಡಿ. ಗೋಬಿನೋ ಎಂಬವರು ತಮ್ಮ ಗ್ರಂಥವನ್ನು 'ನೈತಿಕ ಭೂಶಾಸ್ತ್ರ' (Moral Geology) ಎಂದು ಹೇಳಿರುವರು. ಅವರ ಗ್ರಂಥದಲ್ಲಿ ಇತಿಹಾಸದಲ್ಲಿ ಕಂಡು ಬಂದ ಅನುಭವವನ್ನು ಉಲ್ಲೇಖಿಸಿರುವರೇ ವಿನಹಾ ರಾಜಕಾರಣಗಳ ವಿವಾದದಲ್ಲಿ ಕೈಹಾಕಲಿಲ್ಲ. ಜಾತಿಗಳ ಉತ್ಕೃಷ್ಟತೆಯ ಕುರಿತು ಅವರು ತನ್ನ ಗ್ರಂಥದಲ್ಲಿ ವಿಚಾರ ವಿಮರ್ಶೆ ಮಾಡಲೇ ಇಲ್ಲ. ಅವರ ಗ್ರಂಥದಲ್ಲಿ ಯಾವ ಗುಣಗಳು ಹುಟ್ಟಿನಿಂದ ವ ವಾಸನಾಬಲದಿಂದ ಬಂದವುಗಳು—ಯಾವುವು ಅಭ್ಯಾಸದಿಂದ ವ ವಾತಾವರಣದಿಂದ ಬಂದವುಗಳು—ಯಾವುವು ವಂಶ ಪರಂಪರೆಯಾಗಿ ಬಂದವುಗಳು—ಯಾವುವು ಗಳಿಸಿದ ಗುಣಗಳಿಂದ ಬಂದವುಗಳು—ಎಂಬ ಭೇದವಾರು ವಿಮರ್ಶೆ ಇಲ್ಲ. ಅವರು ಮಾನವಶಾಸ್ತ್ರ (Anthropology)ದ ಗ್ರಂಥವನ್ನಾಗಲೀ ಪ್ರಾಣಿಶಾಸ್ತ್ರದ (Biology) ವಿವರಣೆಯನ್ನಾಗಲಿ ಬರೆಯಲೇ ಇಲ್ಲ.

ಜರ್ಮನಿಯಲ್ಲಿ ಡಾಕ್ಟರ್ ಗೋಕ್ ಎಂಬ ಮಹಾ ವಿದ್ವಾಂಸರೊಬ್ಬರು ಮಾನವ ವೈಜ್ಞಾನದ ಕುರಿತು ಒಂದು ದೊಡ್ಡ ಗ್ರಂಥವನ್ನು ಬರೆದಿರುವರು. ಆ ಗ್ರಂಥವನ್ನು ಮಾನವ ಶಾಸ್ತ್ರದ ಅಧಿಕೃತವಾದ ಗ್ರಂಥವೆಂದು ಹಲವರು ಒಪ್ಪಿರುವರಾದರೂ ಒಂದು ವಂಶದವರು ಉತ್ತಮರೆಂದೂ ಉಳಿದವರು ಹೀನರೆಂದೂ ಹೇಳಿರುವದು ಈ ಗ್ರಂಥದಲ್ಲೇ. ಜರ್ಮನರು ಉದ್ಭವಿಸಿದ ನೋರ್ಡಿಕ್ ವಂಶವು ಎಲ್ಲಾ ವಂಶಗಳಿಗಿಂತ ಶ್ರೇಷ್ಠವಾದದ್ದೆಂದು ಈ ಗ್ರಂಥಕರ್ತ ಹೇಳಿರುವರು. ಮಾತ್ರವಲ್ಲ ಮಿಕ್ಕುಳಿದ ಜನರೆಲ್ಲಾ ನೈಸರ್ಗಿಕ ರೀತಿಯಲ್ಲಿ ಮಧ್ಯಮ ತರಗತಿಯವರು ಅಂದರೆ, ನಶ್ವರ (Transient Species) ಪ್ರಾಣಿಗಳೆಂದು ಹೇಳಿರುವರು. ನೈಸರ್ಗಿಕ ಅನುಕ್ರಮದಂತೆ ಎಲ್ಲಾ ಪ್ರಾಣಿಗಳಾದ ನಂತರ ಮಂಗಗಳಾದವು, ಆ ಮೇಲೆ ಮಾನವರುಂಟಾದರು. ಈ ತತ್ವದ ಆಧಾರದ ಮೇಲೆಯೇ ಡಾಕ್ಟರ್ ಗೋಕ್ ಎಂಬವರು ಮನುಷ್ಯರೆಂದರೆ ನೋರ್ಡಿಕರೆಂದೆಣಿಸಿ ಅವರಿಗೂ ಮಂಗಗಳಿಗೂ ಮಧ್ಯ ತರಗತಿಯವರೇ ಇತರ ಜನಾಂಗದವರೆಂದು ಹೇಳಿದರು.

ವಂಶವೆಂಬ ಶಬ್ದವನ್ನು ನಾವು ಬಹು ಸಡಿಲಾಗಿ ಉಪಯೋಗಿಸುವೆವು. ಕೆಲವು ಸಮಯ ಚರ್ಮದ ಬಣ್ಣವನ್ನೇ ಎಣಿಕೆಗೆ ತಂದುಕೊಂಡು 'ಬಿಳೀ ಜನರು—ಕಪ್ಪು ಜನರು' ಎನ್ನುವೆವು. ಕೆಲವು ಸಮಯ ಮತಭೇದಗಳನ್ನು ಆಧರಿಸಿಯೂ ಕೆಲವು ಸಮಯ ಭೌಗೋಲಿಕ ಆಧಾರದ ಮೇಲೆಯೂ ಐರೋಪ್ಯರು, ಆಫ್ರಿಕಾನರು, ಅಮೇರಿಕಾನರೆಂದು ವಿಂಗಡಿಸುವೆವು. ಇನ್ನು ಕೆಲವು ಸಂದರ್ಭಗಳಲ್ಲಿ ಪ್ರಾಕೃತಿಕ ಸ್ವಭಾವವನ್ನು ನೋಡಿಯೂ ನಿರ್ಣಯಿಸುವೆವು. ಮಾನವ ವೈಜ್ಞಾನಿಕರು ವಂಶಗಳನ್ನು ಪ್ರಾಕೃತಿಕ ಭೇದಗಳಿಂದಲೂ, ಅಂದರೆ ದೇಹದ ನ್ಯೂನತೆ, ತಲೆಬುರುಡೆ, ಹಣೆ, ಮೂಗು, ತುಟಿ ಮತ್ತು ಕಿವಿ ಇವುಗಳ ಆಕಾರದಿಂದಲೂ ಕೂದಲು, ಕಣ್ಣು ಮತ್ತು ಚರ್ಮದ ಬಣ್ಣಗಳಿಂದಲೂ ಬೇರ್ಪಡಿಸಬಹುದೇ ಹೊರತು ನೈತಿಕ (moral) ಮಾನಸಿಕ (mental) ಮತ್ತು ಆಧ್ಯಾತ್ಮಿಕ (Psychological) ಭೇದಗಳಿಂದ ವಿಂಗಡಿಸುವದು ಕಷ್ಟವೆಂದಿರುವರು.

ಹೆರೆನ್‌ವೋಕ್ ಅಥವಾ ಮಾಸ್ಟರ್ ರೇಸ್ ಎಂಬ ತತ್ವವು ಜರ್ಮನಿಯಲ್ಲಿ ಚೆನ್ನಾಗಿ ಪ್ರಚಾರವಿದ್ದು ಜರ್ಮನ್ ಸಂಸ್ಕೃತಿ (German Culture) ಯನ್ನು ಲೋಕದಲ್ಲೆಲ್ಲಾ ಹರಡಬೇಕೆಂಬ ಮಹತ್ವಾಕಾಂಕ್ಷೆಯಿಂದಲೇ ಎರಡು ಮಹಾ ಯುದ್ಧಗಳನ್ನು ಅವರು ಹೂಡಿದರು. ಹಿಟ್ಲರನು ಅಧಿಕಾರಕ್ಕೆ ಬಂದೊಡನೆ ಇದು ಉದ್ರೇಕಗೊಂಡಿತು. ಲೋಕದ ಯಶಸ್ವಿಯಾದ ಸಕಲವೂ ತಮ್ಮ ವಂಶದ ಪಾಲಿಗೆ ಇರಬೇಕೆಂಬ ಆಸೆಯಿಂದ ಯೇಸು ಕ್ರಿಸ್ತನು ತಾಯಿಯ ಹುಟ್ಟಿಗೆ ಮಾತ್ರ ಯಹೂದ್ಯನೆಂತಲೂ ಐನ್‌ಸ್ಟೀನನು ತನ್ನ ರಿಲೇಟಿವಿಟಿ ತತ್ವಕ್ಕೆ (Relativity Theory) ಒಬ್ಬ ಸತ್ತ ಜರ್ಮನ್ ಯೋಧನ ಕಿಸೆಯಲ್ಲಿ ದೃಷ್ಟಿಯಿಂದ ಆಧಾರವನ್ನು ಕಂಡುಹಿಡಿದನೆಂದೂ ಸಾರಿದರು. ಜಪಾನಿನವರೊಡನೆ ಮೈತ್ರಿಯಿಂದಿರಬೇಕೆಂಬ ಅಪೇಕ್ಷೆಯಿಂದ ಅವರು ಆರ್ಯಕುಲಕ್ಕೆ ಸೇರಿದವರೆಂತ ಕೋಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಬೋಧಿಸಬೇಕೆಂದು ಹೇಳಿದಾಗ ಒಬ್ಬ ಪ್ರೊಫೆಸರನು ಇದಕ್ಕೊಪ್ಪದೆ ತನಗೆ ಗಂಡಾಂತರವು ಬರಬಹುದೆಂಬ ಹೆದರಿಕೆಯಿಂದ ಜರ್ಮನ್ ಗಡಿದಾಟಿ, ಸ್ವಿಜರ್‌ಲ್ಯಾಂಡಿಗೆ ಪಾರಾದನು. ಕಳೆದ ಮಹಾ ಯುದ್ಧದ ನಂತರ ನ್ಯೂರೆಂಬರ್ಗ ಪಟ್ಟಣದಲ್ಲಿ ನಡೆದ ರಾಜದ್ರೋಹ ವಿಚಾರಣೆಯಲ್ಲಿ ಲೆಫ್ಟಿನೆಂಟ್ ಹಾನ್ಸ್‌ರಿಟ್ಸ್ ಎಂಬವನಿಂದ ಇದರ ಸಂಪೂರ್ಣ ವಿಚಾರಣೆ ಹೊರಬಿದ್ದಿದೆ. ಹೀನಜನರನ್ನು (ರಷ್ಯದವರ ಸಮೇತ) ನಾಶಮಾಡಬೇಕೆಂದು ಹಿಟ್ಲರನ ಆಜ್ಞೆ ಇರುವುದಿದೆ ಮತ್ತು ಟಾಪ್‌ಸೀಕ್ರೆಟ್ ವಿಧಿಸುವಾಗ ಶಾಸನದ ಒಳತಿರುಳ (spirit)ನ್ನು ಗಮನಕ್ಕೆ ತಂದುಕೊಂಡರೆ ಸಾಕು, ಅಕ್ಷರಶಃ ನಡೆಯಬೇಕೆಂದಿಲ್ಲವೆಂದು ಗೆಸ್ಟೇಪೋ ಮುಖ್ಯಸ್ಥನಾದ ಹಿಮ್ಲರನ ಹುಕುಂ ಇದೆ ಎಂದನು. ಯಹೂದ್ಯರು ನೆಲೆಯಿಲ್ಲದೆ ಅಲೆದಾಡುವ ಜನಾಂಗವು. ತಮ್ಮದೇ ಆದ ರಾಷ್ಟ್ರವು ಅವರಿಗಿಲ್ಲದ ಕಾರಣ ಯಾವ ಕಡೆಯಲ್ಲಿ ಹೋದರೂ ಪರದೇಶಿಗಳೆಂದು ವಕ್ರದೃಷ್ಟಿಯಿಂದ ನೋಡಿ ಹೊರಗಟ್ಟುತ್ತಿದ್ದರು. ಕಳೆದ ಮಹಾಯುದ್ಧದಲ್ಲಿ ಜರ್ಮನರು ಇವರ ಮೇಲೆ ಉಗ್ರ ಘೋಷಣೆ ವಹಿಸಿ ಇವರನ್ನು ಬೇಟೆಯಾಡಿದರು. ರಷ್ಯದಲ್ಲಿರುವ ಇಲಿಯಗ್ರಿ ಗೋರಿವಿಚ್ ಎಂಬ ಮಹಾ ಬರಹಗಾರರೊಬ್ಬರು ಜರ್ಮನರ ಅತ್ಯಾಚಾರದ ಒಂದು ದೃಶ್ಯವನ್ನು ಈ ರೀತಿ ವಿವರಿಸಿರುವರು: ಉಕ್ರೇನಿನ ಒಂದು ಕಡೆಯಲ್ಲಿ ಒಬ್ಬ ಉಕ್ರೇನಿನವನು ಯಹೂದ್ಯಳೊಬ್ಬಳನ್ನು ಮದುವೆಯಾಗಿ ಅವಳಲ್ಲಿ ಹುಟ್ಟಿದ ಒಂದು ಶಿಶುವಿನೊಡನಿದ್ದನು. ಹೆಂಡತಿಯನ್ನು ಸ್ವಲ್ಪ ಸಮಯದ ನಂತರ ಜರ್ಮನರು ಕುಲ ಶುದ್ಧೀಕರಿಸುವ ಪ್ರಸಂಗದಲ್ಲಿ ಇಲ್ಲದಂತೆ ಮಾಡಿದರು. ಇದಾದ ಮೂರು ತಿಂಗಳ ನಂತರ ಒಂದು ದಿವಸ ಆತನು ತನ್ನ ಶಿಶುವನ್ನು ಕೈಯಲ್ಲಿ ಆಡಿಸುತ್ತಾ ಇರುವಾಗ ಯಾರೋ ಹೊರಗೆ ಬಾಗಿಲು ಬಡಿದ ಶಬ್ದ ಕೇಳಿತು. ಬಾಗಿಲು ತೆಗೆದು ನೋಡುವಾಗ ಮೂರು ಜರ್ಮನ್ ಯೋಧರು ನಿಂತಿದ್ದರು. ಅವರು ಒಂದು ಪಟ್ಟಿಯಿಂದ ಆತನ ಹೆಸರು, ಮಗುವಿನ ಪ್ರಾಯ ವಗೈರೆ ಓದಿಹೇಳಲು ಆತನು ವಿಸ್ಮಯಗೊಂಡು ಹೌದೆಂದು ತಲೆಯಾಡಿಸಿದನು. ಕೂಡಲೇ ಮಗುವನ್ನು ಆತನ ಕೈಯಿಂದ ಸೆಳೆದು ದ್ವಾರಕ್ಕೆ ಹೊಡೆದು ಸತ್ತ ಮಗುವನ್ನು ತಂದೆಯ ಕೈಗೆ ಕೊಟ್ಟು ತಾವು ಕುಲಶುದ್ಧೀಕರಿಸುವ ಸಂಸ್ಥೆಯವರೆಂದು ಹೇಳಿ ಹೊರಟು ಹೋದರು."

ಸಂಯುಕ್ತರಾಷ್ಟ್ರದವರು ಈ ತರಹದ ನಡತೆಯನ್ನು ಕಟುವಾಗಿ ಟೀಕಿಸಿರುವರಲ್ಲದೆ ಮಾನವರಿಗಿರುವ ಸ್ವತಂತ್ರ ಹಕ್ಕುಗಳನ್ನು ಸ್ಥಾಪಿಸಿರುವರು. ಆದರೂ ಬಿಳೀ ಜನರು ಅಧಿಕಾರದಲ್ಲಿರುವಲ್ಲೆಲ್ಲಾ ತಾವೇ ಉತ್ಕೃಷ್ಟರೆಂಬ ಅಹಂಭಾವವು ಉಳಿದೇ ಇದೆ. ಅಮೇರಿಕ ಮತ್ತು ಆಫ್ರಿಕ ದೇಶಗಳಲ್ಲಿ ವರ್ಣ ಭೇದವು ಇನ್ನೂ ಆಚರಣೆಯಲ್ಲಿದೆ. ಅಮೇರಿಕದಲ್ಲಿ ನೀಗ್ರೋ ಜನರನ್ನು ಸಮಾಜಬಹಿಷ್ಕೃತರಾಗಿ ಕಾಣುವರು. ಆಫ್ರಿಕದಲ್ಲಿ ಬಿಳೀಜನರ ಹೊರತು ಮಿಕ್ಕುಳಿದವರನ್ನೆಲ್ಲಾ ಎಪಾರ್ಥೀಡ್ (Apparthced) ಎಂಬ ಘೋಷಣೆಯಿಂದ ಬೇರ್ಪಡಿಸಿರುವರು. ಅಲ್ಲಿ ಬಿಳೀಜನರಿಗೆ ಒಂದು ಶಾಸನವೂ ಇತರರಿಗೆ ಇನ್ನೊಂದು ಶಾಸನವೂ ಇದೆ. ಆಫ್ರಿಕದಲ್ಲಿ ಜನರು ತಾವು ಉತ್ತಮರೆಂಬ ಅಹಂಕಾರ ಪಡುವದಲ್ಲದೆ ಉಳಿದವರನ್ನೆಲ್ಲಾ ಆಳುವ ಜವಾಬ್ದಾರಿಯು ತಮ್ಮ ಮೇಲಿದೆ ಎಂಬ ಹೇಂಕಾರ ವಹಿಸಿರುವರು.

ಕಳೆದ ಎರಡು ಮಹಾಯುದ್ಧಾನಂತರ ಉತ್ತಮರು ಹೀನರು ಎಂಬ ಭೇದವು ಮೂಲೆಗೊತ್ತಲ್ಪಟ್ಟಿದೆ. ಯುದ್ಧಕಾಲದಲ್ಲಿ ಯಾರು ಯಾರಿಗೂ ಹಿಂದಿಲ್ಲವೆಂಬುದು ಸಿದ್ಧವಾಗಿದೆ. ಮಾತ್ರವಲ್ಲ, ಕೆಲವು ಸಂಗತಿಗಳಲ್ಲಿ ಹಿಂದುಳಿದವರೇ ಮುಂದಾಳುಗಳಾಗಿದ್ದಾರೆ. ಪ್ರಾಣಿಶಾಸ್ತ್ರಜ್ಞರು ವರ್ಣಭೇದದ ತತ್ವವನ್ನು ಕಟ್ಟುಪುರಾಣವೆಂದು ತೆಗೆದುಹಾಕಿರುವರು. ಮಾನವವೈಜ್ಞಾನಿಕರು ಪ್ರಾಕೃತಿಕ ಭೇದಗಳೇ ವಿನಹಾ ನೈತಿಕ ಮಾನಸಿಕ ಭೇದಗಳು ಕಂಡುಬಂದದ್ದಿಲ್ಲವೆಂದು ಹೇಳಿರುವರು. ಅಮೇರಿಕದ ವೈಜ್ಞಾನಿಕರಾದ ಪ್ರೊಫೆಸರ್ ಹೂಟನ್ ಎಂಬವರು ಪರಿಶುದ್ಧ ಕುಲ ಯಾವ ಕಡೆಯಲ್ಲೂ ಇಲ್ಲವೆಂದೂ ಈಗ ಕಾಣುವ ಜನಾಂಗಗಳೆಲ್ಲವೂ ಬೆರಕೆಯ ಜನಾಂಗಗಳೆಂದೂ, ನೈತಿಕ ಮಾನಸಿಕ ಭೇದಗಳನ್ನು ಕಂಡು ಹಿಡಿಯಬೇಕಾದರೆ ಶುದ್ಧ ಕುಲದವರನ್ನೇ ಆರಿಸಿ ಪರೀಕ್ಷೆ ಮಾಡಬೇಕಾಗಿದೆ ಎಂದೂ ಈಗ ಆದಿವಾಸಿಗಳ ಪೈಕಿ ಅಂತಹ ಕುಲವಿರಬಹುದೇ ಹೊರತು ಬೇರೆಲ್ಲೂ ಕಾಣಲಾರದ್ದರಿಂದ ನೈತಿಕ ಮತ್ತು ಮಾನಸಿಕ ಭೇದಗಳನ್ನು ಕಂಡು ಹಿಡಿಯುವದು ಅಸಾಧ್ಯವೆಂದೂ ಈ ತತ್ವವನ್ನು ತೆಗೆದು ಹಾಕಿರುವರು.

ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವರ್ಗದಾರರಿಗೆ—ಶಾಲೆಗಳಿಗೆ-
ಬೇಕಾಗುವ ರಿಜಿಸ್ಟ್ರಿಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳೂ, ಎಕೌಂಟ್
ಪುಸ್ತಕಗಳೂ ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ಲೋಕ್ಯದ ಘನತೆಯನ್ನು, ಹಿರಿಮೆಯನ್ನು, ಜಗ
ಗೆ ತಾವುತಮ್ಮ ಅಹಿಂಸೆ, ಸತ್ಯಾಗ್ರಹಗಳ
ಮೂಲಕ ತೋರಿಸಿದ್ದೀರಲ್ಲದೆ ಮಾನವನ
ೞು ಪ್ರಕೃತಿಯನ್ನೆದುರಿಸಿ, ಅದರ ಪರಿಣಾ
ಮವಾದ ಎಲ್ಲಾ ಸಮಸ್ಯೆಗಳಿಗೂ ಈ ಮಾರ್ಗ
ಸಿದ್ಧ ಪಥವೆಂದು ಸಾರಿದ್ದೀರಿ.

ನನ್ನ ಬೇಡಿಕೆ ತಮ್ಮಲ್ಲಿ ಇಷ್ಟೆ. ಹೆಣ್ಣು
ಮಕ್ಕಳ ಸಮಸ್ಯೆಗಳು ನಿರ್ನಾಮವಾಗಲು
ಮಾರ್ಗ ಮಾಡಿರೆಂಬುದು. ರಾಜಾಜಿಯ
ವರು ಒಂದೇ ಮಾತಿನಲ್ಲಿ ಹೆಂಗಸರ ಸಮಸ್ಯೆ
ಎಂಬುದೇ ಇಲ್ಲವೆಂದು ಬಾಯಿ ಮುಚ್ಚಿಸಿ
ಬಿಡುತ್ತಾರೆ. ಇದು ರಾಜಕೀಯ ಸಮಸ್ಯೆ
ಯಾಗಿಲ್ಲದಿರಬಹುದು. ನಿಯಮ, ನಿಬಂಧನೆ
ಗಳನ್ನು ರಚಿಸಿ ಎಲ್ಲಾ ಉದ್ಯೋಗಗಳಲ್ಲೂ
ಹೆಂಗಸರು ಪ್ರವೇಶಿಸಲು ನೆರವಾಗಿ ಔದ್ಯೋ
ಗಿಕ ಸಮಸ್ಯೆಗಳಿಲ್ಲದಂತೆ ಮಾಡಬಹುದಲ್ಲವೆ?
ಯಾವ ಉದ್ಯೋಗ ದಂಧೆಗಳೂ ಹೆಂಗಸರ
ಸ್ವಾಭಾವಿಕ ಗುಣಗಳನ್ನು ಮಾರ್ಪಡಿಸಲಾರ
ವು. ಹೆಂಗಸರು ಗಂಡಸರಿಗಿಂತ ಭಿನ್ನ ಎಂಬು
ದನ್ನು ಬದಲಾಯಿಸಲಾಗುವುದಿಲ್ಲ. ಅಹಿಂಸೆ
ಮತ್ತು ಸತ್ಯಾಗ್ರಹಗಳು ನಮ್ಮ ದೌರ್ಬಲ್ಯ
ವನ್ನು ಮೆಟ್ಟಿ ಮುಂದಡಿಯಿಡಲು ತಕ್ಕಷ್ಟು
ಸಾಧನೆಯನ್ನೀಯಲಾರವು. ಪುರುಷನಂತೆ
ಸ್ತ್ರೀಯು ಆತ್ಮವೂ ಉತ್ತಮವಾದ ವಸ್ತು
ಗಳನ್ನು ಅಪೇಕ್ಷಿಸಿಯೇ ಅಪೇಕ್ಷಿಸುತ್ತದೆ.
ಗಂಡಸು ತನ್ನ ಪಶು ಪ್ರಕೃತಿಯನ್ನು ಜಯಿಸಿ
ಕೊಳ್ಳಲು ಅಹಿಂಸೆ, ಸತ್ಯಾಗ್ರಹಗಳ ಬೆಂಬಲ
ಬೇಗ ಅಗತ್ಯವೆಂದು ಭಾವಿಸುತ್ತಾನೆಯೋ

## ಮಹಿಳಾ ಪುಟ

## ಹೆಣ್ಣು ಗಂಡಿನ ಸಮಸ್ಯೆಗಳು

ಅನುವಾದಕರು: ಶ್ರೀಮತಿ ವಸಂತಿಬಾಯಿ, ಬಿಜಾಪುರ.

[ಹೆಣ್ಣು ಮಕ್ಕಳ ಸಮಸ್ಯೆ ಕುರಿತು ಒಬ್ಬ ವಿದ್ಯಾವತಿಯಾದ ವನಿತೆಯು ಮಹಾತ್ಮಾಗಾಂಧಿ ಯವರಿಗೆ ಒಮ್ಮೆ ಒಂದು ಪತ್ರ ಬರೆದರು. ಅದಕ್ಕೆ ಮಹಾತ್ಮರ ಉತ್ತರವೂ ದೊರಕಿತು. ಅವನ್ನು ಇಲ್ಲಿ ಒದಗಿಸಿ ಕೊಡಲಾಗಿದೆ.]

ಹಾಗೆಯೇ ಹೆಂಗಸು ಕೂಡ, ಗಂಡಸರಿಂದ ಭಿನ್ನವಾದ ತನ್ನ ಹೀನ ಪ್ರಕೃತಿಯನ್ನು ಗೆಲ್ಲಲು ಕೆಲವು ಕಟ್ಟು ಕಾಯಿದೆಗಳನ್ನು ಆಶಿಸುತ್ತಾಳೆ.

ಸ್ತ್ರೀಯಾದವಳಿಗೆ ಪ್ರಕೃತಿದತ್ತ ಗುಣಗಳೂ, ಅವಳ ಬದುಕು ಸಾಗುವ ಸನ್ನಿವೇಶ ಸೌಲಭ್ಯಗಳಿಂದ, ಅನುಭವಗಳಿಂದ, ಉಂಟಾದ ಪರಿಣಾಮಗಳೂ, ಅವಳನ್ನು ಬಹು ಮಟ್ಟಿಗೆ ಬದಲಾಯಿಸುವುವಲ್ಲದೆ. ಕೆಲವೊಮ್ಮೆ ಇವು ಅವಳಿಗೆ ಎದುರು ನಿಲ್ಲುವುದೂ ಉಂಟು. ಎಷ್ಟೋ ಕಾಲದಿಂದ ಸ್ವಾರ್ಥಿಯಾದ ಪುರುಷನು 'ಎಷ್ಟಾಗಲಿ, ಹೆಂಗಸು ಹೆಂಗಸೆ' ಎಂದು ಕೀಳು ಮಟ್ಟದಲ್ಲಿ ಕಾಣುತ್ತ ಬಂದಿರಲು ಇವೂ ಕಾರಣಗಳೇ. ಅಂದರೆ ಲೈಂಗಿಕ ಮಹತ್ವ ಎಷ್ಟು ಪ್ರಬಲ ಘಾತಿಯನ್ನುಂಟು ಮಾಡಿದೆ ಎಂಬುದು. ನಾವು ಪ್ರಯತ್ನಿಸಿದ್ದೇ ಆದರೆ ಈ ಪ್ರಕೃತಿ ದತ್ತ ಕೋಮಲತೆ, ಅನುತಾಪ, ದೌರ್ಬಲ್ಯಗಳನ್ನು ಮೆಟ್ಟಿ ಪ್ರಗತಿ ಪಥದಲ್ಲಿ ನಡೆಯಬಹುದು. ಗಂಡಸರಂತೆ ಹೆಂಗಸರಲ್ಲೂ ಈ ಮಾರ್ಪಾಟ ಅಂತರಂಗದಿಂದ ಬರಬೇಕು.

ಒಂದು ಉದಾಹರಣೆ: ಶಿಶು ಸಂರಕ್ಷಣಾರ್ಥವಾಗಿ, ಮೃದು ಹೃದಯ, ಕೋಮಲವಾದ ಮನಸ್ಸು, ಅನುತಾಪಗಳೇ ಮೊದಲಾದ ಗುಣಗಳು ಹೆಂಗಸರಲ್ಲಿ ನೈಸರ್ಗಿಕ, ಈ ಗುಣಗಳು ಅವಳನ್ನು ಅಂಧಳನ್ನಾಗಿ ಮಾಡಿ, ಅವಳ ಅರಿವಿಲ್ಲದಂತೆಯೇ ಪ್ರೇರಿಸಿ ಅವಳನ್ನು ಎಲ್ಲಿಗೋ ಎಳೆದೊಯ್ಯುತ್ತವೆ. ಅದರ ಪರಿಣಾಮವಾಗಿ ಬೇರೆ ಯಾವುದಾದರೂ ಕಾರ್ಯಕ್ಕೆ ಆಕೆ ತೊಡಗಬೇಕಾದಾಗ ಬಸವಳಿಯಬೇಕಾಗುತ್ತದೆ. ಗಂಡಸರೊಡನೆ ವ್ಯವಹರಿಸುವಲ್ಲಿ ಎಷ್ಟೋ ಅವಿವೇಕಗಳಿಗೆ ಬಲಿಬೀಳಬೇಕಾಗುತ್ತದೆ. ಅವಳು ಕ್ರಾಂತಿ ಕಾರಿಯಾಗಬೇಕಾದೆಡೆಯಲ್ಲಿ ಕರುಣಾಸಮುದ್ರಳಾಗಿ ಬಿಡುತ್ತಾಳೆ! ಬೆಡಗು, ಬಿನ್ನಾಣ, ಭೂಷಣಗಳಿಗೆ ಬೆರಗಾಗಿ ಅರಿವುಗೆಟ್ಟವಳಾಗುತ್ತಾಳೆ, ಬೆಲೆಬಾಳದಾಗುತ್ತಾಳೆ.

ಎಷ್ಟೋ ದಿನದಿಂದ ನಿಮ್ಮ ದರ್ಶನಕ್ಕಾಗಿ ಆಶೆ ಪಡುತ್ತಿದ್ದೆ. ಈ ಯೋಚನೆ ಬಂದ ಮೊದಲ ರಾತ್ರಿಯೆಲ್ಲಾ ಅದೇ ಯೋಚನೆಯಲ್ಲಿ ಕಣ್ಣ ಮೇಲೆ ರೆಪ್ಪೆಹಾಕಲಿಲ್ಲ. ತಮ್ಮ ಭೇಟಿ ಸಿಕ್ಕಿ ನನ್ನನ್ನು 'ಕುಳಿತುಕೊಳ್ಳಿರಿ' ಅಂದಾಗ ದೇಸಾಯಿಯವರ ಮರೆಯಲ್ಲಿ ಕುಳಿತೆ. ನಿಮ್ಮ ಮಾತು ಕೇಳುವುದಿರಲಿ! ಅಲ್ಲಿಂದ ತಮ್ಮನ್ನು ಕಾಣಲೂ ಸಹ ಆಗುತ್ತಿರಲಿಲ್ಲ. ಕಾರಣ ಇಷ್ಟೆ: ಹೆಂಗಸರದು ಚಂಚಲ ಸ್ವಭಾವ. ಅದು ಬಹು ಬೇಗ ಪ್ರಕಟಗೊಂಡು ಎಲ್ಲೆ ಮೀರಿ ಹೋಗುವುದೂ ಉಂಟು. ತಕ್ಕ ಶಿಕ್ಷಣ ದೊರೆತಲ್ಲಿ ಈ ಸ್ವಭಾವ ಬದಲು ಗೊಳಿಸಬಹುದು.

ಭಾವೀ ಭಾರತದಲ್ಲಿ ಹೆಣ್ಣು ಮಕ್ಕಳ ಪಾತ್ರ ಹೇಗಿರಬೇಕು? ಏನಿರಬೇಕು? ಎಂಬ ವಿಚಾರವಾಗಿ ರಾಷ್ಟ್ರೀಯ ಯೋಜನಾ ಸಮಿತಿಯವರಿಂದ ತಯಾರಿಸಲ್ಪಟ್ಟದ್ದ ಪ್ರಶ್ನೆಪತ್ರಿಕೆಗೆ ತಮ್ಮಿಂದ ಬಂದಿದ್ದ ಉತ್ತರಗಳನ್ನು ನಾನು ನೋಡುವ ಅವಕಾಶ ಸಿಕ್ಕಿತ್ತು. ಪ್ರಶ್ನೆಗಳು ಹೀಗಿವೆ: ನಿಮ್ಮ ಪ್ರಾಂತ್ಯದಲ್ಲಿ ನಿಮ್ಮ ಹೆಸರಿನಲ್ಲಿ ಆಸ್ತಿಯ ಹಕ್ಕು, ಅನುಭವ, ಮಾರಾಟ ಇತ್ಯಾದಿಗಳ ವಿಚಾರದಲ್ಲಿ ಹೆಣ್ಣು ಮಕ್ಕಳಿಗ ಎಷ್ಟರ ಸ್ವಾತಂತ್ರ್ಯವಿದೆ? ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ವಿಚಾರದಲ್ಲಿ ಆಗಬೇಕೆನ್ನುವ ವ್ಯವಸ್ಥೆಯೇನು? ಅವರ ಶಿಕ್ಷಣಕ್ಕೆ ಯೋಗ್ಯವಾದ ಉದ್ಯೋಗಗಳ ವಿಚಾರದಲ್ಲಿ ನಿಮ್ಮ ಪ್ರಾಂತ್ಯದಲ್ಲಿ ಏನು ಯೋಜನೆಗಳು ಸಿದ್ಧವಾಗಿವೆ? ಇದಕ್ಕೆ ಉತ್ತರವಾಗಿ ಒಬ್ಬ ಹೆಣ್ಣು ಮಗಳು "ಪುರಾತನ ಕಾಲದಲ್ಲಿ ಸ್ತ್ರೀ ವಿದ್ಯಾಭ್ಯಾಸವೆಂಬುದೇ ಇರಲಿಲ್ಲ ಎನ್ನುವುದು ಸರಿಯಲ್ಲ, ವೇದಗಳ ಕಾಲದಿಂದಲೂ ಹೆಂಗಸಿಗೆ ಗೌರವವಿತ್ತು. ವಿವಾಹವಾದ ಗಳಿಗೆಯಿಂದ ಮನೆಯ ಯಜಮಾನಿಕೆಯ ಗೌರವವು ಆಕೆಗೆ ಸಲ್ಲು

---

### ದಕ್ಷಿಣ ಕನ್ನಡ ಸಬ್ ಕೋರ್ಟಿನಲ್ಲಿ.

R. E. P. 11/1950.
& R. E. A. 50/1950.

ಸಂಕಮ್ಮ— ಅರ್ಜಿದಾರಳು.

ಮತ್ತು

1. ಪಕ್ರಿಂಞ ಯಾನೆ ಲಕ್ಷ್ಮಿ ಹೆಂಗ್ಸು.
2. ಅಕ್ಕಮ್ಮ.
3. ಕುಂಞ ಸುಲಯ—ರೆಸ್ಪೊಂಡೆಂಟ್ಸು

3ನೇ ರೆಸ್ಪೊಂಡೆಂಟ್:—ಕಾಸ್ರಗೋಡು ತಾಲ್ಲೂಕು ಕೋಡಿಬೈಲು ಗ್ರಾಮದಲ್ಲಿರುವ ವೇಯ್ಯಕ್ಕ ಮಗ ಕುಂಞ ಸುಲಯರಿಗೆ,

ಮೇಲಿನ ಅಮ್ಲಜ್ಯಾರಿಯಲ್ಲಿ ನಿಮ್ಮ ಬಾಬ್ತು ಅರುವಾರು ಸಕ್ಕಿನ ಆಸ್ತಿಯನ್ನು ಏಲಂ ಸಿಗೆ ಅಪೇಕ್ಷಿಸಿ, ಏಲಂ ಯಿಸ್ತಿಹಾರುದಾಖಲು ಮಾಡಿರುತ್ತಾಳೆ; ಮತ್ತು ಏಲಂ ಸಮಯ್ಯೆ ಸಿಲಂಮಿಗೆ ನಿಲ್ಲುವ ಬಗ್ಗೆ ಮ ಮುಚ್ಚಿ ಬಗ್ಗೆ ಸಹಾ ಮೇಲಿನ R. E. A. 50/50ನೇ ಅರ್ಜಿಯನ್ನು ದಾಖಲು ಮಾಡಿರುತ್ತಾಳೆ. ಸದ್ರಿ ಸಲಂಮಿನ ಶರತಗಳನ್ನು ನಿರ್ಣಯಿಸುವ ಬಗ್ಗೆ ಮತ್ತು ಅರ್ಜಿದಾರರಿಗೆ ಏಲಂಮಿಗೆ ನಿಲ್ಲುವರೆ ವ ಮುಚ್ಚಿ ಬಗ್ಗೆ ಕೊಟ್ಟ ಅರ್ಜಿ ತಸ್ಯ ಬಗ್ಗೆ ಈ ಕೋರ್ಟಿನಲ್ಲಿ ತಾರೀಕು 28-6-1950ಕ್ಕೆ ಯಿಟ್ಟಿರುತ್ತದೆ. ಆ ದಿವ್ಸ ಈ ಕೋರ್ಟಿನ ಮುಂದೆ 10ಘಂಟೆಗೆ ನೀವು ಖುದ್ದಾಗಲೀ ವಕೀಲದ್ವಾರವಾಗಲೀ ಹಾಜ್ರಾಗುವರ ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾದೀತು ಕಿರಿದಿರುವುದು

**N. Krishna Bhat.**
Advocate for Petitioner.
ಮಂಗಳೂರು. ತಾ. 10-4-1950.

---


# ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿ ಯಾ ಚಿಲ್ಲರೆಯಾಗಿಯೂ ದೊರೆಯುತ್ತವೆ.

**ಕಲ್ಯಂಜೆ ವ್ಯಾಸಾಚಾರ್ಯರ್,**
**ರಥಬೀದಿ, ಉಡುಪಿ.**



## ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ.

**೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ**

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಪುಟ ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

**ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ**

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

**ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,**
**ಆಯುರ್ವೇದ ಔಷಧಾಲಯ, ಗದಗ.**



— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

**ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ**
**ಆಯುರ್ವೇದ ಔಷಧಾಲಯ, ಗದಗ-ಸಿಟಿ-**

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಹಾಸಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಸ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ ಆರ್ ಎಲ್ ಕಮಲಬಾಯಿ ಕೆಮಿಸ್ಟ, ಹಾವೇರಿ, ಬ್ಯಾಡಗಿ


---

### ದ.ಕ ಕೃಷಿಕರ ಸಹಕಾರಿ ವ್ಯಾಪಾರಿ ಸಂಘ, ಲಿಮಿಟೆಡ್. ಮಂಗಳೂರು.

#### ನೋಟೀಸು

ಈ ಸಂಘದ ಬರುವ ಮಹಾಸಭೆಯನ್ನು ತಾರೀಕು 28-5-1950ರಲ್ಲು ಆದಿತ್ಯವಾರ ಅಪರಾಹ್ನ 2-30ಘಂಟೆಗೆ ಪುತ್ತೂರು ಸಹಕಾರಿ ಟೌನ್ ಬೇಂಕಿನ ವಠಾರದಲ್ಲಿ ಜರಗಿಸುವುದಾಗಿ ನಿರ್ಣಯಿಸಿಯದೆ. ಎಲ್ಲಾ ಮೆಂಬರರು ಹಾಜರಾಗಬೇಕಾಗಿ ವಿನಂತಿ. ಕಾರ್ಯಕ್ರಮವನ್ನು ಕೆಳಗಡೆ ಕಾಣಿಸಲಾಗಿದೆ.

ವಿ· ಸೂ:-ಸಂಘದ ಪ್ರತಿನಿಧಿಗಳು ಆಯಾಯ ಸಂಘದ ಮಹಾಸಭೆ, ಡ್ಯಾರೆಕ್ಟರರ ಅಥವಾ ಪಂಚಾಯತ ಸಭೆಯ ನಿರ್ಣಯದ ಮಂಜೂರು ನಕಲನ್ನು ಮುಂದಾಗಿ ಕಳಿಸಿಕೊಡಬೇಕು ಅಥವಾ ಬರುವಾಗ್ಯೆ ಅವರೊಡನೆ ತಂದು ಹಾಜರು ಪಡಿಸಬೇಕಾಗಿ ಅಪೇಕ್ಷೆ.

#### ಕಾರ್ಯಕ್ರಮ

1. 1948-49ನೇ ವರುಷದ ಬಾಬ್ತು ಡಿ। ರಿಜಿಸ್ತ್ರಾರರ ಆಡಿಟು ಸರ್ಟಿಫಿಕೇಟು ಮತ್ತು ಆಡಳಿತ ಮಂಡಳಿಯವರ ವರದಿ.
2. 1949-50ನೇ ವರುಷದ ಬಾಬ್ತು ದುರಸ್ತಿಪಡಿಸಿದ ಆಯವ್ಯಯದ ಪಟ್ಟಿ ಮತ್ತು 50-51ನೇ ವರುಷದ ಬಾಬ್ತು ಅಂದಾಜು ಆಯವ್ಯಯದ ಪಟ್ಟಿ.
3. ಸಂಘಕ್ಕೆ ಬರತಕ್ಕ ರೂಪಾ 10783-6-3ರಷ್ಟು ಕೆಟ್ಟ ಸಾಲಗಳನ್ನು ವಜಾ ಬರೆಯುವುದರ ಕುರಿತು.
4. ಸಂಘದ ನಂಬ್ರ 42(5)ನೇ ಉಪನಿಬಂಧನೆಯಲ್ಲಿ "ಮಂದು ತಿಂಗಳ ಸಂಬಳ" ಎಂಬುದರ ಬದಲಿಗೆ "ಎರಡು ತಿಂಗಳ ಸಂಬಳ" ಎಂದು ತಿದ್ದುಪಡಿ ಮಾಡುವುದು.
5. ಸಂಘದ ಸರ್ಕಾರಿ ಕಲಸದ ಬಾಬ್ತು ಉಪ ನಿಬಂಧನೆಗಳಿಗೆ ತಿದ್ದುಪಡಿ ಮಾಡುವುದರ ಕುರಿತು ಡಿ। ರಿಜಿಸ್ಟ್ರಾರರವರ ಪತ್ರ ಬಾಬ್ತು.
6. ವಿವರವಿಲ್ಲದ ಡಿವಿಡೆಂಡು ರೂಪಾ 486-10-0 ಮತ್ತು ಬೋನಸ್ಸು ರೂಪಾ 11-11-0ನ್ನು ಕ್ಷೇಮನಿಧಿ ಲೆಕ್ಕಕ್ಕೆ ವರ್ಗಾಯಿಸುವುದು.

(ಅಪ್ಪಣೆಪ್ರಕಾರ)
Sd/-ಪಿ. ಲಕ್ಷ್ಮೀನಾರಾಯಣರಾವ್,
ಮಂಗಳೂರು } ಕಾರ್ಯದರ್ಶಿ.
ತಾ 18-4-50 }

[illegible] ಇತ್ಯಾದಿಯಾಗಿ ಬರೆಯಲು ಲೇಖನಿಯನ್ನು [illegible] ಉತ್ತಮ [illegible] ಹೀಗೆ ಬರೆದಿರುವಿರಿ. ಈ ಪ್ರಶ್ನೆಗೆ ಕಾರಣ [illegible] ಪ್ರಶ್ನೆಗೆ ಬೇಕಾದ ಉತ್ತರ ಬರೆಯುವುದನ್ನು ಬಿಟ್ಟು ಇನ್ನಾವುದೋ ಬರೆಯುವುದೇ?

ಹೆಣ್ಣು ಮಕ್ಕಳಿಗಾಗಿಯೇ ಪ್ರತ್ಯೇಕವಾದೊಂದು ಮೂಲಾಧಾರ ಕೂಡಿದ ಶಿಕ್ಷಣ ಕ್ರಮವು ಇನ್ನೂ ಜನ್ಮವೆತ್ತಿಲ್ಲವೆಂಬುದು ತಮಗೆ ತಿಳಿಯದೇ ಇಲ್ಲ. ಸಲಹೆ ಕೇಳಿದಾಗಲೆಲ್ಲಾ 'ಹರಿಜನ ಪತ್ರಿಕೆ' ಓದುವಂತೆ ಹೇಳುತ್ತೀರಿ. ಎಷ್ಟೋ ಉತ್ಸಾಹದಿಂದ ಎಷ್ಟೋ ದಿನದಿಂದ ಓದುತ್ತಿದ್ದೇನೆ. ಆದರೆ ಹೆಂಗಸಿನ ಆತ್ಮವಿಕಾಸಕ್ಕೆ ಮಾರ್ಗವಾಗುವ ಬುದ್ಧಿವಾದವನ್ನು ಬೇರೆ ಕಾಣಲಿಲ್ಲ. ದೇಶಕ್ಕಾಗಿ ಹೋರಾಡುವುದೂ, ನೂಲುವುದೂ, ಶ್ರೇಷ್ಠವಾದ ಗುಣಗಳೇ. ಆದರೆ ಇದರಿಂದ ಲಭ್ಯವಾಗುವುದು ರಾಷ್ಟ್ರೀಯ ಶಿಕ್ಷಣವಷ್ಟೇ ಹೊರತು ಸ್ತ್ರೀಯರ ಆತ್ಮವಿಕಾಸಕ್ಕೆ ಸಾಧಕವಾಗುವಂಥದೇನೂ ಇಲ್ಲ. ಉಚ್ಚ ಶಾಸ್ತ್ರೀಯ ಭಾವನೆ, ಧ್ಯೇಯಗಳನ್ನು ಅಭಿಸುತ್ತಿರುವ ಸ್ತ್ರೀಯರು ಪಡೆಯುವಿದೆ ನನಗೆ "ಏನಾದರೂ ಹೆಂಗಸು ಹೆಂಗಸೇ" ಎಂಬ ಭಾವನೆಯಿಂದ ಮಾಡುವ ತಪ್ಪುಗಳು ಅವರಲ್ಲೂ ಅನೇಕವಾಗಿದ್ದೇ ಇವೆ.

ಗಂಡಸಿನಂತೆ ಹೆಂಗಸಾಗಿಬಿಡಬೇಕೆಂಬುದು ನನ್ನ ಅಭಿಪ್ರಾಯವಲ್ಲ, ಗಂಡಸರಿಗೆ ಅವರ ಹೀನ ಗುಣಗಳಿಂದ ಮುಕ್ತರಾಗಲು ಅಹಿಂಸಾ ತತ್ವ ಬೋಧೆಯನ್ನು ಮಾಡಿ ಮಾರ್ಗ ಹಾಕಿ ಕೊಟ್ಟಿರುವಂತೆ ನಮಗೂ ಒಂದು ದಾರಿ ತೋರಿರಿ. "ಎಷ್ಟೇ ಆಗಲಿ, ಬಿಡಿ ಹೆಂಗಸು" ಎಂದು ಯಾರಾದರೂ ಅಂದಾಗಲೆಲ್ಲಾ ನನ್ನ ಅಂತರಾತ್ಮವು ಅಳುತ್ತದೆ. ಒಮ್ಮೆ ಒಬ್ಬ ವಿಶಾಲ ಮನಸ್ಕರಾದ ಸಾಹಸೀಯರಲ್ಲಿ ಈ ವಿಚಾರ ಪ್ರಸ್ತಾಪ ಮಾಡಿದಾಗ 'ಅಲ್ಲಿ ನೋಡಿ, ಆ ಮಗುವಿನ ಕಡೆ ನೋಡಿ!, ಕೈಲಾಟ ಆಡುತ್ತಿದೆ. ಚಕ್ಕು ಪುಕ್ಕು ಎನ್ನುತ್ತಾ ಹೋಗುತ್ತಿದೆ. ಕಲ್ಲಿನಂಥ ಅಡ್ಡ ಬಂದರೆ ತಪ್ಪಿಸಿಕೊಂಡು ಹೋಗದೆ ತಳ್ಳಿಕೊಂಡು ಹೋಗಲು ಪ್ರಯತ್ನಪಡುತ್ತದೆ. ನಿಮ್ಮ ಪ್ರಯತ್ನಕ್ಕೂ ಅದಕ್ಕೂ ಏನು ವ್ಯತ್ಯಾಸ? ನಿಮ್ಮ ಮಾತು ಮನಶ್ಶಾಸ್ತ್ರಕ್ಕೆ ಸಂಬಂಧಪಟ್ಟದ್ದು. ಹೆಣ್ಣನ್ನು ಗಂಡು ಮಾಡಬೇಕೆಂಬುದು. ಇದರ ಪರಿಹಾರ ಪ್ರಯತ್ನ ಕಂಡರೆ ಯಾರು ತಾನೆ ನಗದೆ ಇದ್ದಾರು!"-ಎಂದು ಹಾಸ್ಯ ಮಾಡಿದರು."

## ಈ ಪ್ರಶ್ನೆಗೆ ಮಹಾತ್ಮರಿತ್ತ ಉತ್ತರ

"ಹೆಣ್ಣು ಮಕ್ಕಳ ಸಮಸ್ಯಾ ಪರಿಹಾರ ಮಾರ್ಗವನ್ನು, ನಾನು ಸತ್ಯಾಗ್ರಹ ತತ್ವ ಕಂಡು ಹಿಡಿದ ದಿನವೇ ಕಂಡು ಹಿಡಿದೆನೆಂದು ತಿಳಿದು ಹಿಗ್ಗಿದ್ದೆ. ಈ ವನಿತೆಯಾದರೋ ಹೆಣ್ಣು ಮಕ್ಕಳ ಸಮಸ್ಯಾ ಪರಿಹಾರಕ್ಕೆ ಗಂಡಸರಿಂದ ಭಿನ್ನವಾದ ತತ್ವಗಳಿರಬೇಕೆನ್ನುತ್ತಾಳೆ. ಹೀಗಾದರೆ ಅದಕ್ಕೆ ಪರಿಹಾರ ಮಾರ್ಗವನ್ನು ಕಂಡು ಹಿಡಿಯಲು ಯಾವ ಪುರುಷನಿಗೂ ಸಾಧ್ಯವಾಗದು ಎಂದು ಹೇಳಬೇಕಾಗುತ್ತದೆ. ಕಾರಣ ಪುರುಷನ ಸ್ವಭಾವ ಸ್ತ್ರೀಯಿಂದ ಭಿನ್ನವಾಗಿರುವುದು. ನೇಗಿಲಿನ ಗುಳಕ್ಕೆ ಸಿಕ್ಕಿದ ಕಪ್ಪೆಗಲ್ಲದೆ ರೈತನಿಗೆ ಹೇಗೆ ತಿಳಿದೀತು, ಅದಕ್ಕೆ ಎಲ್ಲಿ ಪೆಟ್ಟು ತಾಗುತ್ತದೆ ಎನ್ನುವುದು? ಹೆಂಗಸರು ತಮ್ಮ ಸಮಸ್ಯೆಗಳ ಪರಿಹಾರ ಮಾರ್ಗವನ್ನು ತಾವೇ ಕಂಡು ಹಿಡಿಯಬೇಕು.

ನನ್ನ ಅಭಿಪ್ರಾಯವಿದು: ಮೂಲತಃ ಹೆಣ್ಣು ಗಂಡುಗಳೆರಡೂ ಹೇಗೆ ಒಂದೇಯೋ ಹಾಗೆಯೇ ಅವರ ಸಮಸ್ಯೆಗಳೂ ತತ್ವಶಃ ಒಂದಲ್ಲದೆ ಬೇರಿಲ್ಲ. ಅವರ ಆತ್ಮಗಳಿಗೆ ಬೇಧವಿಲ್ಲ. ಇಬ್ಬರ ಜೀವನ ಕ್ರಮಗಳೂ ಒಂದೇ, ಹೆಣ್ಣು ಗಂಡಿನ, ಗಂಡು ಹೆಣ್ಣಿನ ಪ್ರತಿಬಿಂಬ, ಒಬ್ಬರೊಬ್ಬರು ಪರಸ್ಪರಾವಲಂಬಿಗಳು.

ಹೇಗೋ ಏನೋ ಅನಾದಿ ಕಾಲದಿಂದ ಪುರುಷನು ಸ್ತ್ರೀಯ ಮೇಲೆ ಅಧಿಕಾರವನ್ನು ಚಲಾಯಿಸುತ್ತ ಬಂದಿರುತ್ತಾನೆ. ಇದರಿಂದ ಹೆಣ್ಣಿನ ಮನಸ್ಸಿನಲ್ಲಿ ಅಧೀನ ಭಾವ, ಕೀಳುಭಾವಗಳು ಮೂಡಿ ಮೊಳೆತುಬಿಟ್ಟಿವೆ. ಗಂಡಸಿಗಿಂತ ತಾನು ಕೀಳೆಂಬ ಏಕಪಕ್ಷವಾದವನ್ನು ನಂಬಿ ಅಂಗೀಕರಿಸಿ ಬಿಟ್ಟಿದ್ದಾಳೆ. ಮಹರ್ಷಿಯರನೇಕರು ಹೆಂಗಸಿನ ಸಮಾನಾಧಿಕಾರವನ್ನು ಒಪ್ಪಿರುವ ನಿದರ್ಶನಗಳನೇಕವಿವೆ.

ಹೆಣ್ಣು ಗಂಡುಗಳು ಒಂದಲ್ಲ ಒಂದು ಕಾರಣದಿಂದ ಬೇರೆಯಾಗಲೇಬೇಕಾಗುವುದು. ಮೂಲದಲ್ಲಿ ಒಂದೇ ಆದರೂ ರೂಪಿನಲ್ಲಿ ಬೇಧವಿದೆ, ವೃತ್ತಿ ಪ್ರವೃತ್ತಿಗಳಲ್ಲಿ ಬೇಧವಿದೆ. ಗಂಡಸಿನಲ್ಲಿಲ್ಲದ ತಾಯಿತನಕ್ಕೆ ಬೇಕಾದ ಗುಣ ವಿಶೇಷಗಳು ಹೆಂಗಸಿನಲ್ಲಿವೆ. ಆಕೆಯು ತಾಳ್ಮೆಯ ತವರು, ಆತ ಎಷ್ಟಾದರೂ ಸ್ವಲ್ಪ ಕಠಿನ ಪ್ರಕೃತಿಯವನೇ. ಗೃಹಜೀವನದ ಯಜಮಾನಿಕೆ ಆಕೆಯ ಅಜನ್ಮ ಹಕ್ಕು. ಆತ ಹೊರಗೆ ದುಡಿದು ಸಂಸಾರಕ್ಕೆ ಬೇಕಾದ್ದನ್ನು ಆರ್ಜಿಸಿ ತರುವ ಹೊರೆ ಹೊತ್ತವ. ಈ ದುಡಿಮೆಯ ಗಳಿಕೆಯನ್ನು ಸರ್ವವ್ಯವಸ್ಥೆಯಿಂದ ವಿನಿಯೋಗಿಸುವವಳು ಆಕೆ. ಕುಟುಂಬ ಸಂರಕ್ಷಣೆ, ಮಕ್ಕಳ ಪಾಲನೆ, ಪೋಷಣೆ, ಇವುಗಳು ಆಕೆಯ ವಿಶೇಷ ಹಕ್ಕುಗಳು. ಆಕೆ ಪಾಲಿಸದಿದ್ದರೆ ಜನಾಂಗವೇ ನಿರ್ನಾಮವಾದೀತು.

ಮನೆಮಠಗಳಲ್ಲಿಯ ಸಮತೋಲನ ಸ್ಥಿತಿಯನ್ನು ಕಾಪಾಡಲು ಹೆಂಗಸನ್ನು ತಪ್ಪಿಸಿ, ಅವಳ ಸ್ಥಾನದಲ್ಲಿ ತುಪಾಕಿ ಹೊತ್ತ ಸಿಪಾಯಿಯನ್ನು ನೇಮಿಸುವುದು ಅಪಮಾನಕರ, ಅನಾಗರಿಕ ಲಕ್ಷಣ. ಹೀಗೆಯೇ ಪುರುಷನ ಸವಾರಿಯ ಕುದುರೆಯನ್ನು ಹತ್ತ ಹೋದ ಸ್ತ್ರೀ ತಾನು ಕೆಳಗುರುಳುವುದಲ್ಲದೆ ಆ ಕುದುರೆಯನ್ನೂ ಕೆಡವುತ್ತಾಳೆ. ಹೆಂಗಸು ಗೃಹಲಕ್ಷ್ಮಿಯಾಗಿರುವುದನ್ನು ತಪ್ಪಿಸಿ, ಅವಳನ್ನು ಪುಸಲಾಯಿಸಿಯಾಗಲೀ, ಬಲಾತ್ಕಾರದಿಂದಲೇ ಆಗಲೀ ಬೇರೆ ಮಾರ್ಗಕ್ಕೆ ಒಯ್ದರೆ ಆ ಪಾಪವು ಗಂಡಸಿನ ಮಡಿಲಿಗೆ ಬೀಳುತ್ತದೆ. ಮನೆಮಠಗಳ ಸಂರಕ್ಷಣೆ ಮಾಡುವುದರಲ್ಲಿ ಎಷ್ಟು ಪರಾಕ್ರಮ, ಗೌರವಗಳುಂಟೋ ಅಷ್ಟೇ ಗೌರವವು ಮನೆವಾರ್ತೆಯನ್ನು ಸರಿಯಾಗಿ ನಡೆಸಿಕೊಂಡು ಬರುವ ಹೆಂಗಸಿಗೂ ಸಲ್ಲಬೇಕಾಗುವುದು.

ಶಿವಗ್ರಾಮದ ಹತ್ತಿರ ಹಳ್ಳಿಯ ಜನದ ಜೀವನಕ್ರಮವನ್ನು ನೋಡಿದೇನೆ. ಹೆಣ್ಣು ಗಂಡುಗಳಿಗೆ ಬೇರೆ ಬೇರೆ ಕಾರ್ಯಗಳ ನಿರ್ವಹಣಾ ಜವಾಬ್ದಾರಿಯನ್ನು ಪ್ರಕೃತಿಯೇ ನಿರ್ಧರಿಸಿರುವುದು ಕಂಡು ಬರುತ್ತದೆ. ಹೆಂಗಸು ಕಮ್ಮಾರನ ಅಥವಾ ಬಡಗಿಯ ಕೆಲಸವನ್ನು ಮಾಡುವುದೇ ಇಲ್ಲ. ಆದರೆ ವ್ಯವಸಾಯಕ್ಕೆ ಸಂಬಂಧಿಸಿದ ಕಾರ್ಯಗಳಲ್ಲಿ ಆಕೆ ಪುರುಷನಿಗೆ ನೆರವಾಗುವಳು. ಆದರೂ ಹೆಚ್ಚು ಶ್ರಮಸಾಧ್ಯವಾದ ಕೆಲಸಗಳೆಲ್ಲಾ ಗಂಡಸಿನ ಪಾಲಿನದು. ಒಂದು ವೇಳೆ ಗಂಡಸಿನ ಸಂಪಾದನೆಯ ಜೊತೆಗೆ ಹೆಂಗಸೂ ಅಲ್ಪ ಸ್ವಲ್ಪ ಸಂಪಾದಿಸಿದರೂ, ಪ್ರಧಾನ ಸಂಪಾದನೆ ಪುರುಷನದೇ.

ಹೀಗೆ ಇವರ ಕಾರ್ಯರಂಗಗಳು ಬೇರೆಬೇರೆಯಾದರೂ ಇಬ್ಬರಿಗೂ ಬೇಕಾಗುವ ಮೂಲ ತತ್ವಗಳು ಒಂದೇ.

ಇವರ ಸಮಸ್ಯಾ ಪರಿಹಾರಕ್ಕೆ ನನ್ನ ಸಲಹೆ ಇದೆ. ವ್ಯಕ್ತಿಯಾಗಲೀ, ಸಮಾಜವೇ ಆಗಲೀ, ಪ್ರತಿ ಮಾರ್ಗದಲ್ಲೂ ಅಹಿಂಸೆ ಮತ್ತು ಸತ್ಯಗಳನ್ನು ಅನುಸರಿಸಬೇಕು. ಹೆಣ್ಣು ಗಂಡಿಗೆ ಮಾರ್ಗದರ್ಶಕಳಾಗಬಹುದೆಂಬ ನಂಬಿಕೆ (ಈ ವಿಚಾರದಲ್ಲಿ) ನನಗಿದೆ. ಇದರ ಪರಿಣಾಮವಾಗಿ ಹೆಂಗಸು ತಾನು ಕೀಳೆಂಬ ಮನೋಭಾವವನ್ನು ಬಿಟ್ಟು ಬಿಡುವಳೆಂಬ ನಂಬಿಕೆಯೂ ಇದೆ. ಪುರುಷರ ಭೋಗ್ಯ ವಸ್ತು ತಾನೆಂಬುದನ್ನು ಹೆಂಗಸು ಮರೆಯಬೇಕು. ಇಂದಿನ ಯುದ್ಧದಲ್ಲಿ ಭಾಗಿಗಳಾಗಿರುವ ಲಕ್ಷಾಂತರ ಮಂದಿ ಕಾಮಪ್ರೇರಿತರಾಗಿದ್ದಾರೆಂದು ನಾನು ತಿಳಿದಿಲ್ಲ. ಹೀಗೆಯೇ ರೈತ ಕಾಮಪ್ರೇರಿತನಾಗಿ ತನ್ನ ಕೆಲಸ ಕಾರ್ಯಗಳಲ್ಲೇನೂ ತೊಡಗುವುದಿಲ್ಲ. ಅಂದಮಾತ್ರಕ್ಕೆ ಇವರಲ್ಲಿ ಪ್ರಕೃತಿದತ್ತವಾದ ಕಾಮವಾಸನೆಯಿರುವುದಿಲ್ಲವೆಂದಲ್ಲ. ಆದರೆ ಅದೇ ಅವರ ಕಾರ್ಯ ಪ್ರಚೋದಕವಲ್ಲ. ಕಾಮಶಾಸ್ತ್ರ ಗ್ರಂಥಗಳಲ್ಲಿ ತಲ್ಲೀನರಾಗಿರುವವರನ್ನೇ ಕಾ[...] ಅತ್ಯಂತ ಪ್ರಭಾವಶಾಲಿಯಾಗಿ ಪ್ರಚೋ[...]ವುದು, ಜೀವನ ಸಮಸ್ಯೆಗಳ ಪರಿಹಾ[...]ಯತ್ನಗಳಲ್ಲಿ ಮಗ್ನರಾಗಿರುವ ಸ್ತ್ರೀಪುರು[...]ನ್ನು ಇದು ಸ್ವಲ್ಪವೂ ತೊಂದರೆಪಡಿಸದ[...]

'ಅಹಿಂಸೆಯ ಅವತಾರ ಹೆಂಗಸು' [...]ದು ಎಷ್ಟೋ ಸಾರಿ ನಾನು ಸಾರಿ ಹೇ[...]ನೆ, ಅಹಿಂಸೆಯೆಂದರೆ ಅಸೀಮಪ್ರೀತಿ. [...] ಸಹಿಷ್ಣುತೆ ಇದರಿಂದ. ಪ್ರಸವವೇದನೆಯ[...]ದ ಪ್ರಬಲ ಬಾಧೆಯನ್ನೂ ಸಹ ಬೇ[...] ಮರ್ಗಣದ ಸಂತೋಷದಲ್ಲಿ ಲೆಕ್ಕಿಸದೆ [...]ವ ತಾಳ್ಮೆ ಹೆಂಗಸಿಗಲ್ಲದೆ ಇನ್ನಾರಿಗಿದೆ? [...]ಳ ಪೋಷಣೆಯಲ್ಲಿ ಅವಳು ಪಡುವ ಕ[...]ಳನ್ನು ಇನ್ನಾರು ತಾನೇ ಪಟ್ಟಾರು!

ಇಂತಹ ಹೆಣ್ಣು ಕಾಮದ ವಸ್ತುವೆ? ಈ ಭಾವನೆ ಬಿಟ್ಟು ತನ್ನ ಪ್ರೀತಿಯ ಸಂ[...]ವನ್ನು ಲೋಕಕ್ಕೆ ಹರಡಲಿ. ಆಗ ಹೆಂ[...] ಗಂಡಸಿನ ತಾಯಿಯಾಗಿ, ಗುರುವಾಗಿ, [...]ವದಿಂದಲೇ ಅವನ ಗೌರವ, ಪ್ರತಿಷ್ಠೆ[...] ಮಾರ್ಗದರ್ಶಿನಿಯಾಗುತ್ತಾಳೆ.

ಶಾಂತಿಗಾಗಿ ಹೋರಾಡುವ ಜನಾ[...] ಶಾಂತಿಯ ಪಾಠ ಕಲಿಸಬಲ್ಲವಳು ಹೆಂ[...]

ಸತ್ಯಾಗ್ರಹಕ್ಕೆ ಬೇಕಾದ್ದು ಪುಸ್ತಕ[...]ಯಲ್ಲ, ಕಷ್ಟ ಸಹಿಷ್ಣುತೆ, ನಂಬಿಕೆಯ[...]ವಾಗಿ ಬರುವ ದೃಢ, ಅಚಲವಾದ ಮ[...] ಹೃದಯ.

ಹಿಂದೆ ಸಸೂನ್ ಆಸ್ಪತ್ರೆಯಲ್ಲಿ [...] ಸಂಗತಿ ಇದು. ಒಬ್ಬ ಹೆಣ್ಣು ಮಗಳಿ[...]ವಾದ ಶಸ್ತ್ರ ಚಿಕಿತ್ಸೆಯಾಗಬೇಕಾ[...] ಆಕೆ ಗರ್ಭವತಿಯಾಗಿದ್ದುದರಿಂದ ಮಗ[...] ಅಪಾಯವಾದೀತೆಂದು ಕ್ಲೋರೋಫಾ[...]ಗೆದುಕೊಳ್ಳಲು ನಿರಾಕರಿಸಿ ಆ ಶಸ್ತ್ರ ಚಿ[...]ಯ ಮಹಾ ವೇದನೆಯನ್ನು ಸಹಿಸಿಕೊ[...]ಳು. ಇದಕ್ಕೆ ಕಾರಣ ಆ ಗರ್ಭದ ಮೇಲಿ[...] ಸೀಮ ಪ್ರೀತಿ, ದೃಢ ಮನಸ್ಸು. ಇದರ[...]ಪ್ರಾದಾಗಲೆಲ್ಲ ಹೆಂಗಸಿನ ವಿಷಯದಲ್ಲಿ [...] ಅಸೂಯೆಪಡುವಂತಾಗುತ್ತದೆ. ಹೆಣ್ಣಾ[...]ನು ಗಂಡಾಗಿ ಹುಟ್ಟಲಿಲ್ಲವಲ್ಲಾ ಎಂದು [...]ತಿಸುವುದು ಹುಚ್ಚುತನ. ಗಂಡಸು ಹೆ[...] ಹುಟ್ಟಲಿಲ್ಲವಲ್ಲಾ ಎಂದು ಚಿಂತಿಸಬೇಕ[...] ಸಹಜ.

ಏನಾದರಾಗಲಿ, ಹೆಣ್ಣಾಗಲೀ, ಗಂ[...]ಲೀ, ಪ್ರಕೃತಿದತ್ತವಾದ ನಮ್ಮ ಜನ್ಮಗಳ[...] ಗುಣವಾಗಿ ಸಹಜಪ್ರವೃತ್ತಿಗಳಿಗೆ ಯೋ[...]ವಾಗಿ ನಿಯಮಿತವಾಗಿರುವ ಕರ್ತವ್ಯಪಾ[...] ಕಾರ್ಯದಲ್ಲಿ ನಿರತರಾಗುವುದು ಯೋ[...]ವಾದುದು. (ಕಥಾ[...]


### ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ಚುಚ್ಚುವುದು, ಚೇಳುವಿಷ ಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

REGD

ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.



### "ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ

**ನವಜೀವಾತು**

ಎಂಬ

**ಸೂತಿಕಾ ರಸಾಯನ**

ಬಾಣಂತಿಯರಿಗಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ದಿಷ್ಟತಯಾ ರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಸುಲಭವಾಗಿರುವುದು.



ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ.

ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಸ್ಥಾನಿಕರು:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.



### ಭಾರದ್ವಾಜರ

ಇಂಗ್ಲಿಷ್ × ಇಂಗ್ಲಿಷ್ × ಕನ್ನ[ಡ]

## ಡಿಕ್ಸ್‌ನರಿಗಳು

ದೊರೆಯುತ್ತವೆ.

ಬೆಲೆ. ರೂ. 5 0 0

ಸಿರಿಗನ್ನಡ ಅರ್ಥಕೋಶ 4 8

ನವಯುಗ ಪ್ರೆಸ್, ಉಡುಪಿ

ನವಯುಗ ಆಫೀಸು, ಉಡು[ಪಿ]



### ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋ[...]ಗಿಸಿದರೆ ಹದತಪ್ಪಿ ಋತುಸ್ರಾವವಾ[...]ದು, ಹಠೋಟಿಗೆ ಬರುವುದು, ಈ ಬಿ[...] ಸೇವನೆಯಿಂದ ತೀವ್ರ ಗುಣಹೊಂ[...]ದುವದು, ಯಾವ ಬಾಧಕವೂ ಯಿಲ್ಲ. [...]ರಾರು ಮಂದಿಗೆ ಖಾತ್ರಿ ಗುಣವಾಗಿ[...] ಬೆಲೆ: ರೂ 3-; ಸ್ಪೆಶಲ್ ರೂ. [...] ಅಧಿಕಾಧಿಕ ಸ್ಪೆಶಲ್ ರೂ, 8- [ಪ. [...] ಹನ್ನೆರಡಾಣೆ ಪ್ರತ್ಯೇಕ.]

MRS. D. DEVEE, F. DS. (N.

Tollygunge CALCUTTA.

ಸ್ಥಾನಿಕರು: ಶಹಾಕಂಪೆನಿ, ಮಂಗಳೂ[ರು]


EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 3618 | Estd: 1921 ಸ್ಥಾಪನೆ | 30ನೇ ವರ್ಷ 4-5-1950

LICENCE No. 31
Licensed to Post
without Prepayment

FOUNDER:
Sri. A. B. Shetty
Minister for Agriculture
& Veterinary

ನವ ಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30 ವಾರ ೩೬

# NAVAYUGA WEEKLY UDIPI, S. K.

Post Box No. 22

Vol 30 No. 36

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

ನಮ್ಮ ಧುರೀಣರ ಪ್ರಾಯ ಅರುವತ್ತು ದಾಟಿದೆ; ಪ್ರತಾಪ ಆರು ಪಟ್ಟು ಹೆಚ್ಚಿದೆ.

००

ಸ್ವಾತಂತ್ರ್ಯ ಬಂದ ಮೇಲೂ ಅಸಹ್ಯ ಸಂಕಟವುಳಿದುಕೊಂಡಿದೆ; ಮಳೆಗಾಲದಲ್ಲೂ ಒಮ್ಮೊಮ್ಮೆ ಕಠಿಣ ಬಿಸಿಲು ಕಾಯುವದಿದೆ.

००

ಉಪಾಧ್ಯಾಯಿನಿಯು ಬೆತ್ತದ ರುಚಿ ಉಂಡು ಸುಮ್ಮಗಿರುವ ಮಗು, ತಾಯಿಯೊಡನೆ ಸಲುಗೆಯ ಬಲದಿಂದ ಚಂಡಿ ಹಿಡಿಯುತ್ತದೆ. ವಿದೇಶೀ ಆಡಳಿತೆಗಾರರ ಕಠಿಣ ಕಾನೂನಿಗಂಜಿ ಥಂಡಾ ಇದ್ದವರೆಲ್ಲಾ ಸ್ವಾಡಳಿತ ನಾಯಕರ ಸಂಪರ್ಕ ಬಲದಿಂದ ಗುಡುಗುಡಿಸುತಿದ್ದಾರೆ.

००

ಕೊಟ್ಟ ಸಾಲ ಮತ್ತು ವಂದನೆ ಈ ದಿನಗಳಲ್ಲೂ ಮರಳಿ ದೊರೆಯುವದಿದೆ. ಢಿಲ್ಲಿಯಲ್ಲಿ ಲಿಯಾಖತರಿಗೆ ಕೊಟ್ಟದ್ದು ಕರಾಚಿಯಲ್ಲಿ ನೆಹರುಗಳಿಗೆ ದೊರೆಯಿತು.

००

ಮಕ್ಕಳಾರೈಕೆಯ ದಾದಿ ಒಮ್ಮೆ ಆ ಮಗುವನ್ನೆತ್ತಿಕೊಂಡರೆ, ಮತ್ತೊಮ್ಮೆ ಈ ಮಗುವನ್ನೆತ್ತಿಕೊಂಡಾಳು. ಅದೇ ಕೆಲಸದ ಟ್ರೂಮೇನ್ ಅಂದು ನೆಹರುಗಳನ್ನಾಮಂತ್ರಿಸಿಕೊಂಡರೆ, ಇಂದು ಲಿಯಾಖತರನ್ನು ಬರ ಮಾಡಿಕೊಂಡರು.

००

ಅರಮನೆಯವರು ಅತಿಥಿಯನ್ನು ಇದಿರ್ಗೊಳ್ಳಲು ಫರ್ಲಾಂಗು ದೂರಕ್ಕೆ ಆನೆ ಕಳುಹುತ್ತಾರೆ; ಅಮೆರಿಕಾಧ್ಯಕ್ಷರು ಲಂಡನ್ ವರೆಗೆ ವಿಮಾನ ಕಳುಹುತ್ತಾರೆ.

००

ಉಪಟಳ ಕೊಟ್ಟಂತೆ ಉದ್ರೇಕಗೊಳ್ಳುವವರಿರುವಂತೆಯೇ, ಉಪಕಾರ ಪಡೆದು ಉಬ್ಬುವವರಿದ್ದಾರೋ ನೋಡುವುದು ಬೇಡವೆ? ಅಮೆರಿಕವು ಆ ಶೋಧನೆಯಲ್ಲಿದೆ.

००

## ಆಧುನಿಕ ಅಮರವಾಣಿ

ಕೇವಲ 'ಪ್ರತಿ' ತೆಗೆದೇ ಬಾಳುವೆ ನಡಿಸುವ ಬರಹಗಾರರಿರುವಂತೆಯೇ ಆಡಳಿತೆಗಾರರೂ ಇದ್ದಾರೆ. ಪಾಕಿಸ್ತಾನ್ ಸಾಧನೆ, ಪಾಕಿಸ್ತಾನ್ ಘಟನೆ, ಅಮೆರಿಕಾ ಭೇಟಿ, ಮುಂತಾದುವುಗಳಲ್ಲಿ ಪಾಕಿಸ್ತಾನಿಗಳು ಮಾಡುತ್ತಿರುವುದಿದನ್ನೇ—ಭಾರತವು ಮಾಡಿದಂತೆ ಮಾಡುವದೊಂದನ್ನೇ.

००

ಕಣ್ಣು ಕೇಳುವದಕ್ಕೆ ಅಳುಕದ ಮನುಷ್ಯ ಹಣ್ಣು ಕೇಳುವದಕ್ಕೆ ಬೆದರಿಯಾನೆ? ರಕ್ತದ ಕಾಲುವೆ ಹರಿಯಿಸಿದವರು ಕಣ್ಣೀರು ಹರಿಯಿಸಲಿಕ್ಕೆ ಅಂಜುವರೇನು?

००

ನೇಗಿಲು ಹಿಡಿಯಲು ಕಲಿಯದೇನೇ 'ಬರಲು' ಹಾಕಲು ಕಲಿಯುವವರಂತೆ, ಅಧಿಕ ವ್ಯಾಸಂಗಕ್ಕೆ ಮನಸ್ಸು ಕೊಡದೆಯೇ ಅಧಿಕ ಪ್ರಸಂಗಕ್ಕೆ ತೊಡಗಿದ್ದಾರೆ.

००

ಮೈಮೇಲಿನ ವಸ್ತ್ರ ಸಡಿಲಾಗಿರುತ್ತಾದರೂ ಘಾಯಕ್ಕೆ ಕಟ್ಟುವ ವಸ್ತ್ರದ ಪಟ್ಟಿ ಬಿಗಿಯಾಗಿರುತ್ತದೆ. ಸಾಮಾನ್ಯ ಸ್ಥಿತಿಯಲ್ಲಿ ಶಾಸನವು ಸಡಿಲಾಗಿದ್ದರೂ, ಗೊಂದಲವೆದ್ದ ಕಡೆ ಅದು ಬಿಗಿಯಾಗಿರಲೇಬೇಕು.

००

ಕಲ್ಲುಗಳನ್ನು ಉರುಳಿಸಿ ಬಿಟ್ಟ ಬಿರುಗಾಳಿ ಕಾಯಿಗಳನ್ನು ಉದುರಿಸುವುದೊಂದು ಹೆಚ್ಚೆ? ರಾಜ ಮಹಾರಾಜರುಗಳ ಕಿರೀಟಗಳನ್ನು ಉದುರಿಸಿದ ಕಾಲ ಪ್ರಭಾವವು, ಶ್ರೀಮಂತ ವರ್ಗದ ಮುಂಡಾಸುಗಳನ್ನು ಹಾರಿಸದೆ ಬಿಟ್ಟೀತೆ?

००

ಸೂತ್ರ ಕಡಿದ ಹಾರದ ಮಣಿ ಕಸಗುಂಪೆಗಳಲ್ಲೂ ಹೆಕ್ಕಲು ಸಿಕ್ಕೀತು; ಗಾಂಧಿಜೀಯ ಹೆಸರು ಗಾಡೀ ಬಾಡಿಗೆ ಚರ್ಚೆಯಲ್ಲೂ ಕೇಳಿ ಬಂತು.

००

ನಗಾರಿ ಬಾರಿಸುವವನು ಉತ್ಸವದ ವೆಚ್ಚ ಹೊರುತ್ತಾನೇನು? ಯುದ್ಧ ನಗಾರಿ ಬಾರಿಸುವವರು ಕೂಡಾ ಅದರ ಕಷ್ಟ ನಷ್ಟದ ಜವಾಬ್ದಾರಿ ಹೊರುವಂತಿಲ್ಲ.

००

ಹಣ್ಣು ಮುದುಕ, ತಾನು ಹಿಂದೆ ಮಾಡಿಟ್ಟುದನ್ನೇ ವೆಚ್ಚ ಮಾಡಿ ದಿನ ದೂಡಬೇಕು; ಹಳೇ ಮರ್ಜಿಯ ಕಾಂಗ್ರೆಸಿಗರು ಗತ ಕಾಲದ ಕೀರ್ತಿ ಭಂಡಾರ ವ್ಯಯಿಸಿ ಮೆರೆದಾಡಲು ನೋಡುತ್ತಾರೆ.

००

ಕುಸ್ತಿ ತರಬೇತಿ ಪಡೆದವನು ಕಣದಲ್ಲಾಗುವ ಮಲ್ಲ ಯುದ್ಧಕ್ಕಾದಾನು ಹೊರತು ಬೀದೀ ಕಾಳಗಕ್ಕಾಗಲಾರ; ಕೇವಲ ಉಚ್ಚ ಶಿಕ್ಷಣ ಪಡೆದವನು ತನ್ನಂಥವರೊಡನೆ ಮಾತ್ರ ವ್ಯವಹರಿಸಲಿಕ್ಕಾದಾನು ಹೊರತು ಜನಸಾಮಾನ್ಯರ ವ್ಯವಹಾರಕ್ಕಾಗಲಾರ.

००

ದೊಡ್ಡವರ ಭೇಟಿ ಮಾತ್ರದಿಂದ ತಮ್ಮಲ್ಲೂ ದೊಡ್ಡಸ್ತಿಕೆ ಬಂತೆಂಬಷ್ಟು ಭ್ರಮೆಯಿಂದಿರುವ ನಮ್ಮ ಜನ, ಅಧಿಕಾರ ದೊರೆತೊಡನೆ ಆಪತ್ತೆಲ್ಲವೂ ನಿವಾರಣೆಯಾಗಲೇಬೇಕೆಂದು ಆಶಿಸುವುದು ಹೆಚ್ಚೆ?

००

ಸ್ವಾತಂತ್ರ್ಯವು, ಬೆಳೆಯದೇನೇ ಫಲ ಬಿಡಬಲ್ಲ ಹೊಸ ಜಾತಿಯ ಕಲ್ಪವೃಕ್ಷವಾಗಬೇಕಿದ್ದಿತು—ತಮ್ಮ ಪ್ರತಿಯೊಂದು ಆಶೀರ್ವಾದ ಮತ್ತು ಶಾಪವೂ ಕೂಡಲೇ ಫಲಿಸುವ ಮಹಾ ಮುನಿಗಳು ಇಲ್ಲಿಯ ಜನರಾಗಬೇಕಿದ್ದಿತು—ಭಾರತವು ಇಷ್ಟರಲ್ಲೇ ಸ್ವರ್ಗವಾಗಿಬಿಡುತಿತ್ತು!

००

ಹಸಿಯೆಲೆ ತೋರಣ ಶೃಂಗಾರಕ್ಕಾಗುವಾಗ ಒಣ ಎಲೆ ಮರಬರ ಸದ್ದು ಮಾಡುತ್ತದೆ; ಸುಖ ಜೀವಿಗಳು ಸಭ್ಯತೆಯ ವೈಯ್ಯಾರ ಪ್ರದರ್ಶನದಲ್ಲಿರುವಾಗ ಶ್ರಮಜೀವಿಗಳು ದೊರಗುತನ ತೋರಿಸುತಿದ್ದಾರೆ.

००

ಆಡು ತಪ್ಪಿಸಿಕೊಳ್ಳುವುದಕ್ಕೂ ಆನೆ ತಪ್ಪಿಸಿಕೊಳ್ಳುವುದಕ್ಕೂ ವ್ಯತ್ಯಾಸವಿದೆ. ಕಾಕಪೋಕರು ಕಾಣೆಯಾಗುವದಕ್ಕೂ ಲಾಯಕ್ ಆಲಿ ಸರ್ದಾರರಿಗೂ ತಾರತಮ್ಯವಿದೆ.

००

ಬಿಳಿ ಮುಖದವರ ಅಧಿಕಾರ ಹೋಗಿ ಬಿಳಿ ತಲೆಯವರ ಆಡಳಿತ ಬಂದರೂ ರಾಗಿ ಬೀಸಲು ಸಿಕ್ಕುವಂತಿಲ್ಲ.

००

ಬಡವನ ಕೈಗೆ ಕರೆನ್ಸಿ ನೋಟು ಬಂದರೂ, ಎಸೆಂಬ್ಲಿ ವೋಟು ಬಂದರೂ, ಅದನ್ನು ಧನಿಗೆ ಕೊಡಲೋ, ಸಾಹುಕಾರನಿಗೆ ಕೊಡಲೋ, ಸಾಲಗಾರನಿಗೆ ಕೊಡಲೋ ಎಂದೇ ಚಿಂತೆ.

००

ಓಟದ ಗದ್ದೆಗಿಳಿಯುವ ಕೋಣಗಳು ಕೂಡಾ ಡೋಲು, ವಾಲಗದೊಡನೆ ಹೊರಡುತ್ತವಂತೆ— ವೋಟಿನ ರಂಗಕ್ಕಿಳಿಯುವ ಕೋಣಗಳು ಗದ್ದಲವೆಬ್ಬಿಸದಿರುವವೆ?

००

ವೋಟು ದೊರೆಯುವ ತನಕ 'ಗೋಳಗುಮ್ಮಟ'ದಂತೆ ನೀವೆಂದುದನ್ನೆಲ್ಲಾ ಏಳೇಳು ಬಾರಿ ಪ್ರತಿಧ್ವನಿಸಿಯಾನು; ವೋಟು ದೊರೆತ ಮೇಲೆ, ನೀವು ಬೊಬ್ಬೆ ಹೊಡೆದರೂ ಕಲ್ಲ ಗುಮ್ಮಟನಾದಾನು.

---

THE UNITED KARNATAK INSURANCE COMPANY, LTD., DHARWAR.

Established: 1929.

Offers their valuable service to the public of India in making their sweet home, always happy.
For good investments and valuable connections, please consult us.

# ನೆಹರೂ ಲಿಯಾಖತ್ ಕರಾಚಿ ಸಂಭಾಷಣೆ

ಪ್ರಜಾಸತ್ತಾತ್ಮಕ ಭಾರತದ ಪ್ರಧಾನ ಮಂತ್ರಿ ಪಂಡಿತ ಜವಾಹರಲಾಲ ನೆಹರೂಜಿ. ಇದೇ ಏಪ್ರಿಲ್ ತಾ 26ರಲ್ಲಿ ಕರಾಚಿಗೆ ಹೋಗಿ, ಅಲ್ಲಿ ಎರಡು ದಿನಗಳಲ್ಲಿ ಸೌಹಾರ್ದಪೂರ್ಣ ಮಾತುಕತೆಗಳನ್ನು ಜರಗಿಸಿ, ತಾ 28ರಲ್ಲಿ ನವದಿಲ್ಲಿಗೆ ಮರಳಿ ಬಂದಿದ್ದಾರೆ; ದಿಲ್ಲೀ ಸಂಭಾಷಣೆಯಿಂದಾದ ಪರಸ್ಪರ ಒಡಂಬಡಿಕೆಯು ಕರಾಚಿ ಮಾತುಕತೆಗಳ ಮೂಲಕ ಮತ್ತೊಂದು ಅಂತಸ್ತು ಮೇಲಕ್ಕೆ ಏರಿದೆ. ಸ್ವಾಭಾವಿಕವಾಗಿ ಪ್ರಥಮ ಸಲದ ಆಕರ್ಷಣೆಯು ಎರಡನೇ ಬಾರಿ ಕಂಡು ಬಾರದಿದ್ದರೂ, ಪ್ರಗತಿ ಮಾತ್ರ ಸ್ಪಷ್ಟವಾಗಿ ಗೋಚರಿಸಿದೆ. ಕರಾಚಿಯಲ್ಲಿ ನಡೆಸಿದ ವಿಚಾರವಿನಿಮಯಗಳಲ್ಲಿ, ದಿಲ್ಲೀ ಒಪ್ಪಂದದ ಕಾರ್ಯ ರೀತಿ ಮತ್ತು ಪರಿಣಾಮಗಳನ್ನು ಇಬ್ಬರು ಪ್ರಧಾನಿಗಳು ಮನ ಬಿಚ್ಚಿ ಪರಿಶೀಲಿಸಿದ್ದರಲ್ಲದೆ, ಕಾಶ್ಮೀರದ ಪ್ರಶ್ನೆಯನ್ನೂ ಚರ್ಚಿಸಿದರೆಂದು ತಿಳಿದುಬಂದಿದೆ. ನೆಹರು-ಲಿಯಾಖತರೊಳಗೆ ಕಾಶ್ಮೀರ ವಿವಾದದ ಪರಿಶೀಲನೆ ನಡೆಯಿತೆಂದ ಮೇಲೆ ಭಾರತ ಪಾಕಿಸ್ತಾನಗಳ ನಡುವಿನ ವಾತಾವರಣವು ಪೂರ್ಣ ಶುದ್ಧವಾಗಿದೆ ಎಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಎರಡು ರಾಷ್ಟ್ರಗಳ ಅಲ್ಪಸಂಖ್ಯಾತರ ರಕ್ಷಣೆಯ ಸಮಸ್ಯೆಯೆಂಬುದು ಬಿಸೀ ಪ್ರಶ್ನೆ; ಅದು ವಿಶೇಷ ಕಿಡಿ ಕಾರುತ್ತಿದ್ದಾಗ ಸುಡುವಂತಾಗಿ ಕೈ ಬಿಟ್ಟು ಬಿಡಬೇಕಾಗಿ ಬಂದಿದ್ದರೂ, ಹಿಡಿಯಲು ಸಾಧ್ಯವಾದೊಡನೆ ಸುಲಭದಲ್ಲಿ ಮುಷ್ಟಿಯೊಳಗಾಗಿದ್ದಿತು; ಕಾಶ್ಮೀರದ ಪ್ರಶ್ನೆ ಹಾಗಲ್ಲ. ಅದು ಸುಮಾರು ಎರಡುವರುಷಗಳಿಂದ ಏಕಪ್ರಕಾರ ಕೊಳೆಯುತ್ತಿರುವ ಸಮಸ್ಯೆ. ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಕೌನ್ಸಿಲು, ಕಾಶ್ಮೀರ ಕಮಿಶನುಗಳಂತಹವು ವಿಧವಿಧ ಪ್ರಯತ್ನಗಳನ್ನು ನಡೆಸಿ, ಪರಾಭವ ಪಡೆದಿರುವ ಅತ್ಯಂತ ಜಟಿಲವಾದ ಒಗಟಿದು. ಹೀಗಾಗಲು ಕಾರಣ ಭಾರತ ಮತ್ತು ಪಾಕಿಸ್ತಾನಗಳೊಳಗಿನ ಪರಸ್ಪರ ಅವಿಶ್ವಾಸ ಮತ್ತು ಸಂದೇಹಗಳೇ. ಭಾರತ ಮತ್ತು ಪಾಕಿಸ್ತಾನಗಳ ಪ್ರಧಾನಮಂತ್ರಿಗಳು ಈ ವಿಷಯವನ್ನೀಗ ಚರ್ಚಿಸಿಕೊಂಡರೆನ್ನುವಾಗ ಅಂತಹ ಸಂದೇಹ, ಅವಿಶ್ವಾಸಗಳ ಕಾರ್ಮೋಡ ಚದರಿ ತಿಳಿವಾತಾವರಣ ನಿರ್ಮಾಣಗೊಂಡಿದೆಯೆಂದೇ ಅರ್ಥ. ಈ ದೃಷ್ಟಿಯಿಂದ ಕರಾಚಿ ಸಂಭಾಷಣೆಯು ಉಭಯ ರಾಷ್ಟ್ರಗಳೊಳಗಿನ ಸೌಹಾರ್ದತಾ ನಿರ್ಮಾಣ ಕಾರ್ಯದಲ್ಲಿ ಒಂದು ಸ್ಪಷ್ಟವಾದ ಪ್ರಗತಿ ಹೆಜ್ಜೆಯಾಗಿದೆ.

## ಪುನರಾವರ್ತನೆ

ಸಂಪ್ರದಾಯ ವಿರೋಧಿಗಳು, ಎಲ್ಲದರಲ್ಲೂ ಹೊಸತನವನ್ನೇ ಅಪೇಕ್ಷಿಸುವದಿದೆ. ಒಮ್ಮೆ ಆದುದೇ ಮತ್ತೊಮ್ಮೆ ಆಗುವದೆಂದರೂ ಪ್ರಗತಿಯಾಕಾಂಕ್ಷಿಗಳಿಗೆ ಅಸಹ್ಯವಾಗಿ ತೋರುವದಿದೆ. ಆದರೆ ನಾವು ಯಾವ ವಿಭಾಗವನ್ನೇ ಕಂಡರೂ, ಎಲ್ಲವೂ ನಿಶ್ಚಿತ ವಿಧಾನವನ್ನು ಅನುಸರಿಸಿಯೇ ನಡೆದಿರುವದು ಕಾಣಿಸುತ್ತಿದೆ. ರಾಜ ಕಾರ್ಯ ವಿಧಾನಗಳಿಂದಾರಂಭಿಸಿ, ಖಾಸಗೀ ವಹಿವಾಟುಗಳ ವರೆಗಿನ ಸರ್ವವೂ ನಿಯಮಬದ್ಧವಾಗಿ, ಸಂಪ್ರದಾಯಾನುಸಾರವಾಗಿ ಸಾಗುತ್ತಿವೆ; ಒಬ್ಬರ ಅನುಕರಣೆಯನ್ನು ಮತ್ತೊಬ್ಬರು ಮಾಡುತ್ತಿದ್ದಾರೆ. ನೆಹರೂ ಲಿಯಾಖತ್ ಭೇಟಿಗಳು ಕೂಡಾ ಇದಕ್ಕೆ ಹೊರತಾದವಾಗಿಲ್ಲ; ಲಿಯಾಖತರ ಅಪೇಕ್ಷಿತ ಭೇಟಿ ಕೂಡಾ ಹಾಗೆಯೇ. ದಿಲ್ಲಿಗೆ ಮಿ. ಲಿಯಾಖತ್ ಬಂದಾಗ ಮಾಡಿದ್ದಂತೆಯೇ ಕರಾಚಿಗೆ ಪಂಡಿತ ನೆಹರು ಹೋದಲ್ಲಿ ಮಾಡಿದರು. ಅಮೇರಿಕೆಗೆ ಪಂಡಿತ ನೆಹರೂ ಹೋದುದು ಹೇಗೋ, ಮತ್ತು ಅಲ್ಲಿ ಏನೇನೆಲ್ಲಾ ನಡೆದಿದ್ದಿತೋ ಹಾಗೆ ಮತ್ತು ಅದೇ ರೀತಿ ಮಿ. ಲಿಯಾಖತರೀಗ ಅಮೇರಿಕದಲ್ಲಿ ಜರಗುತ್ತಿದೆ ಚರಿತ್ರೆ ಯಥಾಪ್ರತಿ ಪುನರಾವರ್ತನೆಗೊಳ್ಳುತ್ತಿದೆ. ಈ ತಿಂಗಳ ಆದಿ ಭಾಗದ ಸ್ಥಾನದಲ್ಲಿ ಅಂತ್ಯ ಭಾಗವನ್ನು ಇಟ್ಟು, ದಿಲ್ಲಿಯ ಬದಲಿಗೆ ಕರಾಚಿಯೆಂದು ಗಣಿಸಿ, ಲಿಯಾಖತರಲ್ಲ, ನೆಹರುಗಳೆಂದು ನೆನಸಿಕೊಂಡರೆ ಮತ್ತೆಲ್ಲವೂ ಆ ಬಾರಿ ನಡೆದಂತೆಯೇ ಈ ಬಾರಿಯೂ ಅಕ್ಷರಶಃ ನಡೆದವು. ನೆಹರೂ ನಾಮದ ಬದಲಿಗೆ 'ಲಿಯಾಖತ್' ಹೆಸರನ್ನು ಹಾಕಿ ಬಿಟ್ಟರೆ ಅಮೇರಿಕದಲ್ಲಿ ಅಂದು ನಡೆದಿದ್ದುದೆಲ್ಲವೂ ಯಥಾಪ್ರಕಾರ ಇಂದೂ ನಡೆಯುತ್ತಿರುವಂತೆ ತೋರುತ್ತಿದೆ.

## ಕರಾಚೀ ಪ್ರಯಾಣ

ಪಾಕಿಸ್ತಾನ್ ಪ್ರಧಾನಿಗಳ ಆಮಂತ್ರಣಾನುಸಾರವಾಗಿ ಪ್ರಧಾನಮಂತ್ರಿ ಪಂಡಿತ ಜವಾಹರಲಾಲರು ಎಪ್ರಿಲ್ ತಾ 26ನೇ ಮುಂಜಾನೆ ತನ್ನ ಪುತ್ರಿ ಶ್ರೀಮತಿ ಇಂದಿರಾ ಗಾಂಧಿ, ಅಳಿಯ ಶ್ರೀ ಫಿರೋಜ್ ಗಾಂಧಿ, ಭಾರತದ ವಿದೇಶ ಸಂಬಂಧ ಶಾಖೆಯ ಜತೆ ಕಾರ್ಯದರ್ಶಿ ಶ್ರೀ ಯಸ್. ದತ್ತ, ಪ್ರಧಾನೀ ಖಾಸಗೀ ಕಾರ್ಯದರ್ಶಿ ಲೆಫ್ಟನೆಂಟ್ ಕರ್ನಲ್ ಮಹರಾಜ್ ಕುಮಾರ್ ಯಸ್. ವಿಕ್ರಮಶಹಾ, ಓವರ್ ಭದ್ರತಾ ಆಫೀಸರ್ ಮತ್ತು ತನ್ನ ಖಾಸಗೀ ನೌಕರ ಮಂಡಲಿಯೊಂದಿಗೆ ವಿಮಾನ ಹತ್ತುವಾಗ, ಅವರನ್ನು ಬೀಳ್ಕೊಳ್ಳಲು ಉಪಪ್ರಧಾನಿ ಸರ್ದಾರ್ ಪಟೇಲ್, ಮಂತ್ರಿ ಶ್ರೀ ದಿವಾಕರ, ಓರಿಸ್ಸಾದ ಪ್ರಧಾನಿ ಶ್ರೀ ಹರೆಕೃಷ್ಣ ಮೆಹತಾಬ್ ಮೊದಲಾದವರು, ನಿಲ್ದಾಣದಲ್ಲಿ ಹಾಜರಿದ್ದರು. ಅಧ್ಯಕ್ಷರು ತನ್ನ ಸೇನಾ ಕಾರ್ಯದರ್ಶಿ ಕರ್ನಲ್ ಬಚಟರ್ಜಿಯವರನ್ನು ಕಳುಹಿಕೊಟ್ಟಿದ್ದರು. ನೆಹರುಗಳು ಬಂದೊಡನೆ, ಸರ್ದಾರ್ ಪಟೇಲರು ಅವರನ್ನು ವಂದನಾಪೂರ್ವಕ ಸ್ವಾಗತಿಸಿ ಈ ಇಬ್ಬರು ರಾಷ್ಟ್ರ ನಾಯಕರೂ ಸ್ವಲ್ಪ ಹೊತ್ತು ಗೂಢ ಮಾತುಕತೆ ನಡೆಸಿದರು. ನೆಹರುಗಳು ವಿಮಾನ ಹತ್ತಿ ಎಲ್ಲರಿಗೂ ವಂದನೆ ಸಲ್ಲಿಸಿದೊಡನೆ, ಪರಿವಾರ ಸಮೇತ ಅವರನ್ನು ತುಂಬಿಕೊಂಡ ವಿಮಾನ ಘೋಂಕರಿಸುತ್ತಾ ನೆಲ ಬಿಟ್ಟಿತು. ಅದು ಅಧ್ಯಕ್ಷರ ಡಕೋಟಾ ವಿಮಾನ. ಭಾರತ ಮತ್ತು ಪಾಕಿಸ್ತಾನ್ ಧ್ವಜಗಳೆರಡೂ ಹಾರಾಡುತ್ತಿದ್ದ, ಆ ವಿಮಾನವು ಮಧ್ಯಾಹ್ನ 12 ತಾಸಿಗೆ ಸರಿಯಾಗಿ ಕರಾಚಿಯ ಮೌರಿಪುರ ನಿಲ್ದಾಣದಲ್ಲಿ ಇಳಿಯುವಾಗ ಭಾರತ ಪ್ರಧಾನಿಯ ಸ್ವಾಗತಕ್ಕೆ ಅಲ್ಲಿ ಪಾಕಿಸ್ತಾನ್ ಪ್ರಧಾನಿ ಮಿ. ಲಿಯಾಖತ್ ಅಲೀಖಾನರು ತನ್ನ ಬೇಗಮೊಂದಿಗೆ ತಯಾರಿದ್ದರು. ಪಾಕಿಸ್ತಾನ್ ವಿದೇಶ ಮಂತ್ರಿ ಸರ್. ಝಫರುಲ್ಲಾ, ಪಾಕಿಸ್ತಾನದಲ್ಲಿರುವ ಭಾರತ ಹೈಕಮಿಶನರ್ ಡಾ| ಸೀತಾರಾಮು, ಡಿಪ್ಯುಟಿ ಹೈಕಮಿಶನರ್ ಶ್ರೀ ಯಚ್. ಕೆ. ಕೃಪಾಲನಿ, ಪಾಕಿಸ್ತಾನದಲ್ಲಿರುವ ಸಿಲೋನು, ಇಂಗ್ಲಾಂಡು, ಕೆನಡಾಗಳ ಹೈಕಮಿಶನರರುಗಳು ಮತ್ತು ಪಾಕಿಸ್ತಾನ್ ಗವರ್ನರ್ ಜನರಲರ ಸೇನಾ ಕಾರ್ಯದರ್ಶಿ ಹಾಗೂ ಇತರ ಪಾಕಿಸ್ತಾನ್ ಅಧಿಕಾರಿಗಳು ಹಾಜರಿದ್ದರು. ವಿಮಾನದಿಂದ ಹೊರಗೆ ಕಾಲಿಟ್ಟೊಡನೆ ನೆಹರು, ಲಿಯಾಖತರು ಗಾಢ ಹಸ್ತಾಂದೋಲನ ಮಾಡಿಕೊಂಡ ಮೇಲೆ ಮಿ. ಲಿಯಾಖತರು ಪಂಡಿತ ನೆಹರುಗಳಿಗೆ ಅಲ್ಲಿದ್ದವರ ಪರಿಚಯ ಸಂಭಾವನೆ ಸಲ್ಲಿಸಿದರು. ಅಲ್ಲಿ ಕಾದಿದ್ದ ಪತ್ರಿಕಾಪ್ರತಿನಿಧಿಗಳ ಗುಂಪಿನಿಂದ ಬಂದ ಪ್ರಶ್ನಾವಳಿಕೆಗಳಿಗೆ ಪಂಡಿತಜೀ ಉತ್ಸಾಹಪೂರ್ವಕ ಉತ್ತರ ಕೊಟ್ಟರು. ಆ ವೇಳೆ ಮುಚ್ಚಿದ ಕಾರಿನಲ್ಲಿ ನೆಹರೂ ಲಿಯಾಖತರು ಕುಳಿತುಕೊಂಡು ಮುಂದಾಗಿ ಹೊರಟರು; ಅದರ ಹಿಂದೆ ಬೇಗಮ್ ಲಿಯಾಖತ್, ಶ್ರೀಮತಿ ಇಂದಿರಾ ಗಾಂಧಿ, ನೆಹರೂ ಪರಿವಾರವುಳ್ಳ ಕಾರುಗಳು ಹೊರಟವು. ಮುಂಭಾಗ ಮತ್ತು ಅಕ್ಕಪಕ್ಕಗಳಲ್ಲಿ ಮೋಟಾರು ಸೈಕಲುಗಳನ್ನೇರಿ ಪಾಕಿಸ್ತಾನದ ಸಶಸ್ತ್ರ ಸೇನೆ ಮತ್ತು ಪೋಲೀಸರ ಪಹರೇ ಸವಾರಿ ನಡೆದಿದ್ದಿತು. ನೆಹರೂ ರಕ್ಷಣೆಗಾಗಿ ಪಾಕಿಸ್ತಾನ್ ಸರಕಾರವು ವಿಶೇಷ ಮುಂಜಾಗ್ರತೆ ವಹಿಸಿದ್ದಿತು. ಸುಮಾರು ಸಾವಿರ ಮಂದಿ ಪೋಲೀಸರಲ್ಲದೆ, ಸೇನೆ ಮತ್ತು ವಿಮಾನದಳಗಳವರನ್ನೂ ಮುಸ್ಲಿಂಲೀಗ್ ಸ್ವಯಂಸೇವಕ ದಳಗಳನ್ನೂ ಸಹಾಯಕ್ಕಾಗಿ ಕರೆಯಲಾಗಿದ್ದಿತು. ವಿಮಾನ ನಿಲ್ದಾಣದಿಂದ ಸರಕಾರೀ ಭವನದ ವರೆಗಿನ ಕರಾಚಿಯ ಜನನಿಬಿಡ ರಸ್ತೆಯುದ್ದಕ್ಕೂ ಎರಡೂ ಪಕ್ಕಗಳಲ್ಲಿ ಸಹಸ್ರಾರು ಜನರು ಸಾಲುಗಟ್ಟಿ ನಿಂತು ಪಂಡಿತ ನೆಹರುಗಳಿಗೆ ವಂದನೆ, ಜಯಕಾರಗಳನ್ನರ್ಪಿಸುತ್ತಿದ್ದರು. ಕರಾಚಿ ನಗರದ ಬುಡ ಮತ್ತು ಮಿ. ಜಿನ್ನಾರ ಜನ್ಮಸ್ಥಳ ಖರ್ದಾರ್ ಕ್ಷೇತ್ರದಲ್ಲಿ ಜನಸಂದಣಿ ವಿಶೇಷ ನೆರೆದಿತ್ತಲ್ಲದೆ ಅಲ್ಲಿಂದ ಮುಂದೆ ಹೋದಂತೆ ಜನದಟ್ಟಣೆಯೊತ್ತೊತ್ತಾಗುತ್ತ 'ನೆಹರೂ ಝಿಂದಾಬಾದ್!' ಜೈಕಾರಗಳೇಳುತ್ತಿದ್ದವು. ಸರಕಾರೀ ಭವನಕ್ಕೆ ಬಂದೊಡನೆ ಲಿಯಾಖತ್ ದಂಪತಿಗಳು ಪಂಡಿತಜೀಯನ್ನು ಕಾರಿನಿಂದ ಇಳಿಸಿ ಗವರ್ನರ್ ಜನರಲರ ಕೋಣೆಗೆ ಕರೆದೊಯ್ದರು. ಅಲ್ಲಿ ಗವರ್ನರ್ ಜನರಲ್ ಖ್ವಾಜಾ ನಾಜಿಮುದ್ದೀನರು, ಪಂಡಿತಜೀಗೆ ಸಂಭಾವನೆ ಸಲ್ಲಿಸಿ, ದರ್ಬಾರ್ ಹಾಲಿಗೆ ಕರೆದೊಯ್ದರು. ಅಲ್ಲಿ ಗವರ್ನರ್ ಜನರಲರು ತಮ್ಮ ಸಿಬಂದಿಯ ಪರಿಚಯವನ್ನು ಪಂಡಿತರಿಗೂ, ಪಂಡಿತಜೀ ತನ್ನ ಪರಿವಾರದ ಪರಿಚಯವನ್ನು ಗವರ್ನರ್ ಜನರಲರಿಗೂ ಮಾಡಿದರು.

## ಮಾತುಕತೆ

ತಾ. 26ರಲ್ಲಿ 'ನೆಹರೂ-ಲಿಯಾಖತ್' ಮಾತುಕತೆಗಳಾರಂಭಿಸಿದುವು. ಪಾಕಿಸ್ತಾನ್ ಗವರ್ನರ್ ಜನರಲರೊಡನೆಯೂ ಪಂಡಿತಜೀ ವಿಚಾರ ವಿನಿಮಯ ನಡೆಸಿದರು. ಲಿಯಾಖತರು ದಿಲ್ಲಿಯಲ್ಲಿ ಗಾಂಧಿಜೀ ದಹನ ಸ್ಥಳಕ್ಕೆ ಪುಷ್ಪಹಾರವರ್ಪಿಸಿದ್ದಂತೆ ಪಂಡಿತಜೀ ಬಂದ ದಿನವೇ ಜಿನ್ನಾರ ಸಮಾಧಿಯನ್ನು ಸಂದರ್ಶಿಸಿ ಹಾರ ಸಮರ್ಪಣೆ ಮಾಡಿ ಒಂದು ಮಿನಿಟು ಮೌನಾಚರಣೆ ಮಾಡಿ ಬಂದರು. ಅಲ್ಲಿಂದ ಭಾರತದ ಹೈಕಮಿಶನರರ ಕಾರ್ಯಾಲಯ ಸಂದರ್ಶನ. ತಾ. 26ನೇ ರಾತ್ರಿ ಗವರ್ನರ್ ಜನರಲ್ ಖ್ವಾಜಾ ನಾಜಿಮುದ್ದೀನರು ಪಂಡಿತಜೀಯ ಗೌರವಾರ್ಥವಾಗಿ ಸಂಭ್ರಮದ ಔತಣ ಸತ್ಕಾರವಿತ್ತರು. ತಾ. 27ರಲ್ಲೂ ಇಬ್ಬರು ಪ್ರಧಾನಿಗಳೊಳಗೆ ಸುದೀರ್ಘ ಗುಪ್ತ ಮಾತುಕತೆಗಳು ನಡೆದು

**On this Memorable day**

Of the 26th of January in the year 1950 of the inauguration of the Indian Republic, we have the pleasure to announce the birth of our

**Vijaya Cash Certificates**

"Spend less and aSve more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices.

Head Office:—**Kadri Road, Mangalore.**

Branches:- City-Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara.

**B. Manjaya Hegde.**
Advocate & President, District Board, S. Kanara.
CHAIRMAN
VIJAYA BANK, LTD.,

*Nambiar's*
**ARYA VAIDYA SALA**
**UDIPI**
*Ideal House for Ayurvedic Treatment.*
*T. N. Kelu Nambiar,*
*Vaidya.*

# ಕಾಶ್ಮೀರದ ತೀರ್ಮಾನ ಸುಗಮವಾಗುವದೆ?

...ಂತೆಯೇ ಪಾಕಿಸ್ತಾನ್ ಗವರ್ನರ್ ಜನರಲರು ಪಂಡಿತಜೀಯೊಡನೆ ...ರ್ದೇಶ ಸಂಭಾಷಣೆ ನಡೆಸಿದರು. ...ಪಾಕಿಸ್ತಾನಗಳೊಳಗಾದ ...ಒಪ್ಪಂದ ಸಮಾಧಾನಕರವಾಗಿ ಸಾಗುತ್ತಿದೆ, ಇಬ್ಬರು ಪ್ರಧಾನಿಗಳು ಎಂದು ...ಡೆಸಿದ ಮುಖ್ಯ ಮಾತುಕತೆಗಳಲ್ಲಿ ...ರ ಸಮಸ್ಯೆಯು ಪರಿಶೀಲನೆಯೂ ...ಗಿತ್ತೆಂದೂ ತಿಳಿಸುವ ಜತೆ ಸರಕಾ...ರ ಪ್ರಕಟಣೆಯೊಂದು ತಾ. 27ರಲ್ಲಿ ಕ...ಮತ್ತು ಧಿಲ್ಲಿಯಿಂದ ಏಕಕಾಲದಲ್ಲಿ ...ಎತ್ತು. ಅಂದು ರಾತ್ರಿ ಮಿ. ಲಿ...ಯಾಕತ್ ಅಲೀಖಾನರು ಪಂಡಿತ ನೆಹ...ರು ಔತಣಕೂಟವಿತ್ತರು. ಪಾಕಿಸ್ತಾ...ನ ಪತ್ರಿಕಾವಾಲರ ಶಿಷ್ಟಮಂಡಲಿಯೊಂ...ದು ನೆಹರುಗಳ ಭೇಟಿ ಪಡೆಯಿತು. ಕರಾಚಿ...ಯಲ್ಲಿ ನೆಹರುಗಳು ತಿರುಗಾಡುವ ಎಲ್ಲಾ...ಕಡೆಗಳಲ್ಲೂ ಪಾಕಿಸ್ತಾನೀ ಜನರು ದರ್ಶ...ನಾಕಾಂಕ್ಷೆಯಿಂದ ಹಿಂಡುಗಟ್ಟಿ ನೆರೆಯುತಿ...ದ್ದರು. ...ರಕ್ಷಣಾ ದೃಷ್ಟಿಯಿಂದ ಯಾವ ಸಾ...ರ್ವಜನಿಕ ಪ್ರದರ್ಶನವೂ ಸಲ್ಲದೆಂದು ಸರ...ಕಾರ ಬಂದೋಬಸ್ತನ್ನಿಟ್ಟಿದ್ದರೂ ಎಲ್ಲೆ...ಡೆ ಜನರು ಉತ್ಸಾಹವು ನಿಯಂತ್ರ...ಣ ಗಡಿಮೀರಿ ಪ್ರವಹಿಸಿದ್ದಿತು. ತಾ. ...ಬೆಳಿಗ್ಗೆ ಮುಂಜಾನೆ, ಮಿ. ಲಿಯಾಕತ್ ...ಅಲೀಖಾನ್ ಮುಖ್ಯಾಧಿಕಾರಿಗಳೆಲ್ಲರೂ ವಿ...ಮಾನ ನಿಲ್ದಾಣದ ವರೆಗೆ ಬಂದು ಬೀ...ಳ್ಕೊಟ್ಟ ನಂತರ 8 ತಾಸಿಗೆ ಸರಿಯಾಗಿ ...ಕರಾಚಿಯಿಂದ ಧಿಲ್ಲಿಗಾಗಿ ಪಂಡಿತನೆಹರು ...ವಿಮಾನವೇರಿದರು. ...ಮಧ್ಯಾಹ್ನ ಧಿಲ್ಲಿಯ ...ಪಾಲಮ್ ನಿಲ್ದಾಣದಲ್ಲಿಳಿಯುವಾಗ ಉಪ...ಪ್ರಧಾನಿ ಸರ್ದಾರ್ ಪಟೇಲ್, ಸಾರಿಗೆ ...ಮಂತ್ರಿ ಶ್ರೀ ಎನ್. ಗೋಪಾಲಸ್ವಾಮಿ ...ಅಯ್ಯಂಗಾರ್ ಮತ್ತಿತರ ಪ್ರಮುಖರೆಲ್ಲ ...ರು ಉಥಾಕ್ಟ್ರರಾಂ ಸ್ವಾಗತಕ್ಕೆ ಕಾದಿದ್ದ...ರು. ಪಂಡಿತ ಜವಾಹರಲಾಲರು ಅಲ್ಲಿ ಹ...ಜರಾದೊಡನೆ ಪಟೇಲ್, ಅಯ್ಯಂಗಾ...ರರೊಡನೆ ಗುಪ್ತ ವಿಚಾರ ವಿನಿಮಯ ನಡೆ...ಯಿತು. ...ಕರಾಚಿ ಮಾತುಕತೆಗಳ ಒಳ...ಗುಟ್ಟುಗಳನ್ನು ಪಂಡಿತಜೀ ತನ್ನ ಸಹ...ಶಾಯಿಗಳ ಮನವರಿಕೆ ಮಾಡಿಸಿದರೆಂದು ...ತಿಳಿದು ಬರುತ್ತದೆ. ಈ ನಡುವೆ ಪಂಡಿತ ...ರು ಜನರಿಂದ ಆಮಂತ್ರಿಸಲ್ಪಟ್ಟಿದ್ದ ರಾ...ಜಾಜಿ ಮದ್ರಾಸಿನಿಂದ ಬೊಂಬಾಯಿಗಾ...ಗಿ ಧಿಲ್ಲಿಗೆ ಹೊರಟಿದ್ದವರು ಪಂಡಿತಜೀ ...ಮುಟ್ಟಿದ ಅರ್ಧ ತಾಸಿನ ನಂತರ ವಿ...ಮಾನದಲ್ಲಿ ಬಂದು ತಲುಪಿದರು. ನೆಹ...ರು, ಪಟೇಲ್ ಭಾಯಿ ಮತ್ತಿತರ ನಾಯಕರು ...ನಿಲ್ದಾಣದಲ್ಲೇ ನಿಂತು, ರಾಜಾಜಿಯನ್ನು ...ಬರಮಾಡಿಕೊಂಡರು. ಭಾರತದ ಮಾಜೀ ...ಗವರ್ನರ್ ಜನರಲರು ಅಧ್ಯಕ್ಷರ ಅತಿಥಿ...ಯಾಗಿ ಧಿಲ್ಲಿಯಲ್ಲಿ ಉಳಿದುಕೊಂಡಿದ್ದಾರೆ. ...ಮುಂದೆ ರಾಯಭಾರಿಯಾಗಿ, ಸರಕಾರ...ದ ಮೇಲಿನ ವಿಶೇಷ ಕಾರ್ಯಭಾರಗಳನ್ನು ...ವಹಿಸುವ ಹೊಣೆಗಾರಿಕೆಯು ರಾಜಾ...ಜಿಗೆ ದೊರೆಯುವದೆಂಬ ವಾರ್ತೆಗಳಿವೆ. ...ನನಗೆ ಏನೊಂದೂ ತಿಳಿದಿಲ್ಲ. ನನ್ನ ಸ...ಹೋದ್ಯೋಗಿಗಳೊಂದಿಗೆ ಕಾರ್ಯಭಾಗಿಯಾಗಲು ಉತ್ಸುಕನಾಗಿದ್ದೇನೆ; ಅಷ್ಟೆ" ಎಂದು ರಾಜಾಜಿ ಧಿಲ್ಲಿ ಮುಟ್ಟುವ ಮೊದಲು ಹೇಳಿದ್ದರು. ಪಟೇಲ್ ಕಲ್ಕತ್ತದಿಂದ, ನೆಹರು ಕರಾಚಿಯಿಂದ, ರಾಜಾಜಿ ಮದ್ರಾಸಿನಿಂದ ಆಗಮಿಸಿದ ನಂತರ ಧಿಲ್ಲಿಯಲ್ಲಿ ಭಾರತ ಸರಕಾರದ ಮೆದುಳುಮಂಥನ ನಡೆದಿದೆ. ಭದ್ರ, ಭವ್ಯ ವ್ಯವಸ್ಥೆಯು ರೂಪಿಸಲ್ಪಡುವ ಸಂಭವವಿದೆ.

## ಕಾಶ್ಮೀರ ಕಿರಣ

ಧಿಲ್ಲಿ ಒಪ್ಪಂದದ ಇದುವರೆಗಿನ ಕಾರ್ಯಕಲಾಪ ಪರಿಶೀಲನೆ—ಅದರ ಭಾವೀ ಪ್ರಗತಿ ಸಾಧನೆ—ನಿರಾಶ್ರಿತರ ಆಸ್ತಿಪಾಸ್ತಿ ವ್ಯವಸ್ಥೆ, ನೀರುಕಾಲುವೆ ಸಂಬಂಧದ ವಿವಾದ ತೀರ್ಮಾನ ಮುಂತಾದ ಇತರ ಒಡಂಬಡಿಕೆಗಳು - ಕರಾಚಿ ಮಾತುಕತೆಗಳ ವಿಷಯಗಳಾಗಿದ್ದುವು. ಕಾಶ್ಮೀರ ಸಮಸ್ಯೆಯ ಕುರಿತು ಇಬ್ಬರು ಪ್ರಧಾನಿಗಳು ಮುಖತಃ ಮಾತಾಡಿಕೊಂಡುದು ಇದೇ ಮೊದಲ ಬಾರಿ. ಈ ಸಂಭಾಷಣೆಯು ನಿರ್ಣಯಾತ್ಮಕವಾಗಿರದೆ, ಕೇವಲ ಪ್ರಸ್ತಾವನಾರೂಪದಲ್ಲಿದ್ದಿತೆಂಬುದು ಸ್ಪಷ್ಟ. ಆದರೆ ಅತ್ತ ಕಾಶ್ಮೀರ ವಿವಾದದ ಮಧ್ಯಸ್ಥಗಾರನಾಗಿ ಸರ್. ಓವೆನ್ ಡಿಕ್ಸನರು ನೇಮಿಸಲ್ಪಟ್ಟು ಅವರು ತನ್ನ ಕಾರ್ಯಭಾರ ವಹಿಸಿಕೊಳ್ಳಲು ಲೇಕ್ ಸಕ್ಸೆಸಿಗೆ ಹೋಗಿರುವಾಗ, ಇತ್ತ ಭಾರತ ಪಾಕಿಸ್ತಾನಗಳ ನಡುವೆ ಇಂತಹ ಸ್ನೇಹ ಬುದ್ಧಿ ತೋರಿಬಂದುದು ನಿಜಕ್ಕೂ ಶುಭಶಕುನ. ಮೇಲಾಗಿ "ಕಾಶ್ಮೀರ ವಿವಾದವು ಸಂಯುಕ್ತ ರಾಷ್ಟ್ರ ಸಂಘದ ಕ್ಷೇತ್ರ ಬಿಟ್ಟು ಹೊರವಲಯದಲ್ಲಿ ತೀರ್ಮಾನಿಸಲ್ಪಡಬಾರದೆಂದೇನೂ ಇಲ್ಲ" ಎಂದು ಪಾಕಿಸ್ತಾನದ ವಿದೇಶ ಮಂತ್ರಿ ಹಾಗೂ ಪ್ರತಿನಿಧಿ ಸರ್. ಝಫರುಲ್ಲಾರಂದಿದ್ದಾರೆ. ಹೊರಗಿನವರ ಕೈವಾಡವಿಲ್ಲದೆ ಭಾರತ ಪಾಕಿಸ್ತಾನಗಳು ಸ್ವತಃ ತಮ್ಮೊಳಗೆ ಈ ಜಗಳವನ್ನು ಇತ್ಯರ್ಥಿಸಿಕೊಳ್ಳಬಹುದೆಂಬುದೇ ಈ ಮಾತಿನ ತಾತ್ಪರ್ಯ. "ಕಾಶ್ಮೀರದ ತೊಂದರೆಗಳು ಮಂಜಿನಂತೆ ಕರಗುವ ಶಾಂತಿಯ ದೃಶ್ಯವು ಕಣ್ಣೆದುರಲ್ಲೇ ಕಾಣಿಸುವಂತಿದೆ" ಎಂದು ಕಾಶ್ಮೀರದ ಪ್ರಧಾನಿ ಶೇಖ್ ಅಬ್ದುಲ್ಲರಂದಿದ್ದಾರೆ. ಝಫರುಲ್ಲರು ಪಾಕಿಸ್ತಾನದ ಬಾಯಿಯಾಗಿದ್ದರೆ ಶೇಖ್ ಅಬ್ದುಲ್ಲಾರು ಕಾಶ್ಮೀರದ ಶಿರಸ್ಸು, ಕಾಶ್ಮೀರ ಜಗಳವು ತೀರ್ಮಾನಿಸಲ್ಪಡತಕ್ಕದ್ದೆಂದು ಇಕ್ಕಡೆಯು ಇವೆರಡು ಮುಖ್ಯಾಂಗಗಳೂ ಆಶೋತ್ಸಾಹ ಸೂಚಿಸುತ್ತಿರುವಾಗ ನಿಜಕ್ಕೂ ಆಶೆಗೆಡೆಯಿದೆ. ಆದರೆ ಭಾರತ—ಪಾಕಿಸ್ತಾನಗಳೊಳಗಿನ ಇಂದಿನ ಆಶಾದಾಯಕ ವಾತಾವರಣದಿಂದ ಇಂತಹ ತಂಪು ಹವೆ ಬೀಸುತ್ತಿದೆಯಾದರೂ, ದೀರ್ಘಾವಧಿಯಿಂದ ಕೊಳೆಯುತ್ತಿರುವ ಕಾಶ್ಮೀರ ಕೋಳಿನ ದುರ್ನಾತವು ಅಷ್ಟೊಂದು ಸುಲಭದಲ್ಲಿ ನಿವಾರಿಸಲ್ಪಡುವಂತಹುದಲ್ಲವೆಂಬುದನ್ನು ಮರೆಯಬಾರದು. ಸುಲಭ—ಕಷ್ಟವೆಂಬ ತಾರತಮ್ಯದ ಹೊರತು 'ಅಸಾಧ್ಯ'ವೆಂಬುದೇ ಇಲ್ಲವಾದ್ದರಿಂದ ಇಂದಿನ ಸ್ಥಿತಿಯಲ್ಲಿ ಕಾಶ್ಮೀರ ಸಮಸ್ಯೆಯು ಶಾಂತತೀರ್ಮಾನ ಹೊಂದೀತೆಂಬ ಭರವಸೆಗೆಡೆಯಿದೆ. ಇದೊಂದು ತೀರ್ಮಾನವಾದಲ್ಲಿ ಭಾರತ—ಪಾಕಿಸ್ತಾನಗಳ ಸುಸಂಬಂಧವು ಚಿರಸ್ಥಾಯಿಯಾಗಬಹುದು; ಮೈತ್ರೀಭಾವ ಶಾಶ್ವತವಾಗಬಹುದು. ಸ್ವಾತಂತ್ರ್ಯ ಸ್ಥಾಪನಾ ನಂತರ ಎರಡು ರಾಷ್ಟ್ರಗಳ ಇಬ್ಬರು ಪ್ರಧಾನಿಗಳೂ ರಾಜಧಾನಿ ಭೇಟಿ ಬದಲಾವಣೆಗಳನ್ನು ಮಾಡಿಕೊಂಡಂತೆಯೇ ಆಗತ್ಯಬಿದ್ದಾಗಲೆಲ್ಲಾ ಇಂತಹ ಕೂಟಗಳಿನ್ನೂ ನಡೆಯುತ್ತಾ ಹೋಗಬೇಕೆಂದು ಸಂಕಲ್ಪವಾಗಿದೆ.

## ಲಿಯಾಖತ್ ಅಮೇರಿಕಕ್ಕೆ

ನೆಹರುಗಳನ್ನು ಬೀಳ್ಕೊಟ್ಟ ಮರುದಿನವೇ ಪಾಕಿಸ್ತಾನ್ ಪ್ರಧಾನಿ ಮಿ. ಲಿಯಾಖತರು ಅಮೇರಿಕಕ್ಕೆ ಹೊರಟಿದ್ದಾರೆ. ಅಮೇರಿಕದಲ್ಲಿ ಮೂರು ವಾರ ಮತ್ತು ಕೆನಡದಲ್ಲಿ ಒಂದು ವಾರ, ಹೀಗೆ ಪೂರ್ತಿ ಒಂದು ತಿಂಗಳು ಅವರು ಅಲ್ಲಿ ತಿರುಗಾಡಿ ಬರಲಿದ್ದಾರೆ. ಈ ಪ್ರವಾಸದ ಬುಡ—ತುದಿ ದಿನಗಳಲ್ಲಿ ಮಿ. ಲಿಯಾಖತರು ಲಂಡನಿನಲ್ಲಿ ಬ್ರಿಟಿಷ್ ಮಂತ್ರಿಗಳೊಡನೆಯೂ ಮಾತಾಡಲಿದ್ದಾರೆ. ಅಮೇರಿಕಾಧ್ಯಕ್ಷ ಟ್ರೂಮೇನರ ಖಾಸಗೀ ವಿಮಾನವು ಮಿ. ಲಿಯಾಖತರನ್ನೊಯ್ಯಲು ಎರಡನೇ ಬಾರಿ ಲಂಡನಿಗೆ ಬಂದಿದೆ. ತಾನು ಯಾವ ಸಹಾಯಯಾಚನೆಗಾಗಿಯೂ ಅಮೇರಿಕಕ್ಕೆ ಹೋಗುತ್ತಿಲ್ಲವೆಂದೂ ಈ ಭೇಟಿಯು ಕೇವಲ ಸೌಹಾರ್ದತಾ ಸ್ವರೂಪದ್ದೆಂದೂ ಮಿ. ಲಿಯಾಖತರಂದಿದ್ದಾರೆ. "ಅಮೇರಿಕದ ನಿಕಟ ಸ್ನೇಹಿತ"ನೆಂದು ಸಂಬೋಧಿಸುತ್ತಾ ಅಮೇರಿಕನ ಪತ್ರಿಕೆಗಳೆಲ್ಲವೂ ಲಿಯಾಖತರಿಗೆ ಸುಸ್ವಾಗತ ಕೋರುತ್ತಿವೆ. ಕಳೆದ ಬಾರಿ ಪಂಡಿತ ನೆಹರುಗಳಿಗೆ ದೊರೆತಿದ್ದ ಸಂಭ್ರಮದ ಸ್ವಾಗತ ಸತ್ಕಾರಗಳೇ ಅಲ್ಲಿ ಈ ಬಾರಿ ಮಿ. ಲಿಯಾಖತರಿಗಾಗಿ ಪುನರಾವರ್ತನೆಗೊಳ್ಳಲಿವೆ. ಅಮೇರಿಕವು ಪಂಡಿತ ನೆಹರುಗಳನ್ನು ಆಮಂತ್ರಿಸಿದ್ದ ಆ ಕಾಲದಲ್ಲೇ ರಶ್ಯದ ಆಮಂತ್ರಣವು ಮಿ. ಲಿಯಾಖತರಿಗೆ ಬಂದಿದ್ದಿತು. ಎರಡೂ ಸ್ವೀಕಾರ ಹೊಂದಿದ್ದವಾದರೂ ಲಿಯಾಖತರ ರಶ್ಯಾ ಸಂಚಾರ ಮಾತ್ರ ನಡೆಯಲಿಲ್ಲ; ಅದು ಅಲ್ಲೇ ಅರೆ ಹೋಯಿತು. ತನ್ನ ಸಂಚಾರ ಕಾರ್ಯಕ್ರಮದಲ್ಲಿ ರಶ್ಯದಲ್ಲಿರುವ ಮುಸ್ಲಿಮ್ ಜನರ ವಲಯಗಳ ಸಂದರ್ಶನವನ್ನು ಸೇರಿಸತಕ್ಕದ್ದೆಂದು ಮಿ. ಲಿಯಾಖತರು ತಾನಾಗಿ ಸೂಚಿಸಿದುದು ರಶ್ಯಾ ಸರಕಾರಕ್ಕೆ ವಿಲಕ್ಷಣವಾಗಿ ತೋರಿ, ತಮ್ಮಲ್ಲಿಗೆ ಅತಿಥಿಯಾಗಿ ಬರುವವರು ಇಂತಹ ಅಪೇಕ್ಷೆ ಮುಂದಿಡುವುದು ಹೊಸತೆಂದು ಅದು ಉತ್ತರಿಸಿದ್ದಿತೆಂದು ವಾರ್ತೆಯಿದೆ. ಅತ್ತ ನೆಹರುಗಳನ್ನು ಪೂರ್ಣ ತಮ್ಮವರಾಗಿ ಮಾರ್ಪಡಿಸಿಕೊಳ್ಳುವ ಗುಪ್ತೋದ್ದೇಶದಿಂದ, ಮಹಾ ಸಂಭ್ರಮದ ಸತ್ಕಾರ ನಡೆಸಿದ್ದ ಅಮೇರಿಕಾದಲ್ಲಿ "ಭಾರತವು ಯಾವ ರಾಷ್ಟ್ರ ಸಂಗಡದೊಡನೆಯೂ ಸೇರಿಕೊಳ್ಳದೆ ತಟಸ್ಥವಾಗಿದ್ದು ಲೋಕ ಶಾಂತಿಪಾಲನೆಯ ಕರ್ತವ್ಯ ನಿರ್ವಹಿಸುವುದು", ಎಂದು ಖಂಡತುಂಡವಾಣಿಯಿಂದ ಸಾರಿದ ಪಂಡಿತಜೀ ಒಳ ಅತೃಪ್ತಿಯನ್ನು ನಿರ್ಮಿಸಿದ್ದರು. ಬೆನ್ನಲ್ಲೇ ಅಮೇರಿಕದ ಆಮಂತ್ರಣವು ಮಿ. ಲಿಯಾಖತರಿಗೆ ಬಂತು. ಭಾರತ ಪ್ರಧಾನಿಗಳಿಗಿಂತ ಜೆಚ್ಚಾಗಿ ಪಾಕಿಸ್ತಾನ್ ಪ್ರಧಾನಿಯು ತಮಗೊಲಿಯುವರೆಂಬ ಭರವಸೆಯು ಅಮೇರಿಕನರಲ್ಲೀಗ ಇರುವಂತೆ ಕಾಣುತ್ತಿದೆ. ಪರಿಣಾಮವೇನಾಗುವದೋ ನೋಡಲಿಕ್ಕಿದೆ. ಔಪಚಾರಿಕ ಒಪ್ಪಕೊಡುವುದರಲ್ಲಿ ರಶ್ಯವು ಅಮೇರಿಕದಷ್ಟು ಮುಂದುವರಿದಿಲ್ಲ; ಮತ್ತದು ಪ್ರದರ್ಶನಕ್ಕಂತಹ ಪ್ರಾಮುಖ್ಯತೆಯನ್ನೂ ಕೊಡುವದಿಲ್ಲ. ಇಲ್ಲವಾದರೆ ಇಷ್ಟರಲ್ಲೇ ರಶ್ಯದ ಆಮಂತ್ರಣವು ಪಂಡಿತ ನೆಹರುಗಳಿಗೆ ಬರುತಿತ್ತೇನೋ! ಅಂತೂ ಜಾಗತಿಕ ರಂಗದಲ್ಲೂ ಮುಖಸ್ತುತಿ ಮೂಲಕ ಮನಮೆಚ್ಚಿಸುವ ಹವ್ಯಾಸಗಳಿವೆ!


# ಕೆನರಾ ಬ್ಯಾಂಕ್, ಲಿಮಿಟೆಡ್

(ಸ್ಥಾಪನೆ ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಭಾರತದಲ್ಲಿ ಸಾಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯೂ ಅದಕ್ಕೆ ಮೇಲ್ಪಟ್ಟು ೧,೦೦೦ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೫೦ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ.

೬ ತಿಂಗಳು ... ನೂರಕ್ಕೆ ವರ್ಷಕ್ಕೆ ೨।

೪ ರಿಂದ ೫ ತಿಂಗಳು ... ,, ,, ೨॥

ರೂ ೧,೦೦೦ಕ್ಕೆ ಕಡಿಮೆಯಲ್ಲದ ರೂ. ೧೦,೦೦೦ ಕೆಳಗೆ ರೂ ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದು ಕೊಳ್ಳಬಹುದು.

ಮಂಗಳೂರು ಶಾಖೆಗಳು

[1] ಬಂದರ ರೋಡ್; [2] ಡೊಂಗರಕೇರಿ,

ಇತರ ಶಾಖೆಗಳು. ಕಾರ್ಕಳ, ಬಂಟವಾಳ, ಮುಲ್ಕಿ, ಕುಂದಾಪುರ, ಉಡುಪಿ, ಗಂಗೊಳ್ಳಿ, ಪುತ್ತೂರು, ಕಾಸರಗೋಡು, ಬೊಂಬಾಯಿ, ಇತ್ಯಾದಿ ಇತ್ಯಾದಿ.

**CANARA BANK, LIMITED**

**(Estd 1906)**



# ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

**The Moolky Bank Ltd.,**

**Moolky, S. K.**

# ಜಾಗತಿಕ ರಂಗದ ಆಂದೋಲನಗಳು.

ಪ್ರಸ್ತುತವಾಗಿ ಘನಾಸ್ತಿ ಕತ್ತಲ್ಲಿದ್ದ ಯುದ್ಧ-ಶಾಂತಿಗಳ ನಿರೀಕ್ಷಣ ತ್ರಿಶಂಕು ಅವಸ್ಥೆಯನ್ನೇ ಉಂಟುಮಾಡಿಸಿವೆ — ಇಂದಿನ ಜಾಗತಿಕ ಘಟನೆಗಳು. ಸದ್ಯದಲ್ಲೇ ಒಂದೋ ಆ ಗಡಿ, ಇಲ್ಲವೇ ಈ ಮೇರೆಯನ್ನು ಸೇರುವ ಭರವಸೆ ಕಾಣುವದಿಲ್ಲ. ಮಹಾ ಯುದ್ಧ ಅಥವಾ ನಿಶ್ಚಯಾತ್ಮಕ ಶಾಂತಿಯಾವುದೂ ಕ್ಲಿಪ್ತಾವಧಿಯೊಳಗೊದಗಬಹುದೆಂಬ ವಿಶ್ವಾಸ ಮೊಳೆಯುವದಿಲ್ಲ. ಲೋಕದ ಇಂತಹ ಸಂಧಿಗ್ಧಾವಸ್ಥೆಯ ಕಾರಣಕರ್ತರಿರುವ ಅಮೇರಿಕ ಮತ್ತು ರಶ್ಯಗಳೊಳಗಿನ ಸ್ಪರ್ಧೆಯನ್ನು ಮುಕ್ತಾಯಗೊಳಿಸಬಲ್ಲ ವಿಧ್ಯಮಾನಗಳಾಗಲೀ, ಜನರಾಗಲೀ ಸದ್ಯ ತೋರಿ ಬರುತ್ತಿಲ್ಲ. ಇಲ್ಲಿಯೂ ಒಂದು ವಿಷಯವನ್ನು ಊಹಿಸಲು ಬರುತ್ತಿದೆ. ರಶ್ಯವೀಗ ಇನ್ನೊಂದು ಮಹಾ ಯುದ್ಧವನ್ನು ಬಯಸುತ್ತಿಲ್ಲವೆಂಬುದು ಸ್ಪಷ್ಟ. ಆದರೆ ರಶ್ಯದ ಕಮ್ಯೂನಿಸಮ್ ತಾನಾಗಿ ಲೋಕವ್ಯಾಪಿಯಾಗುತ್ತಾ ಹೋಗುತ್ತಿರುವಾಗ, ಅದನ್ನು ಅದೇ ವಿಧಾನದಿಂದ ತಡೆಗಟ್ಟುವ ಸೌಕರ್ಯವಿರದ ಅಮೇರಿಕವು ಬಹಿರಂಗ ಪ್ರತಿಭಟನೆಗೆದ್ದಿದೆ; ರಶ್ಯದ ಕೈಯು ಬೇರಿನಿಂದ ಬೇರಿಗೆ ಹೋಗುತ್ತಿರುವಾಗ ಅಮೇರಿಕವು ಶಾಖೆಯಿಂದ ಶಾಖೆಗೆ ಹಗ್ಗ ಹಾಕುವುದರಲ್ಲಿದೆ. ಈ ಬುಡ-ತುದಿ ಸ್ಪರ್ಧೆಯು ಇದೇ ಅವಸ್ಥೆಯಲ್ಲಿ ಎಷ್ಟು ಕಾಲ ಉಳಿದುಕೊಳ್ಳಬಹುದೆಂದು ಈಗ ಹೇಳುವುದಸಾಧ್ಯವಾದರೂ, ಇನ್ನೂ ಹೆಜ್ಜೆ ಮುಂದಿಟ್ಟು ಪ್ರತ್ಯಕ್ಷ ಘರ್ಷಣೆಗೆ ಏಳಲು ಪ್ರಕೃತ ಇಕ್ಕಡೆಯವರೂ ತಯಾರಿಲ್ಲವೆಂಬುದು ಸ್ಪಷ್ಟವಿದೆ.

## ಅಂತರ್ದೇಶಿಯ ರಂಗ

ರಶ್ಯದ ಅಧಿಕಾರದೊಳಗಿನ ಸಮುದ್ರ ವಲಯದ ಮೇಲೆ ಹಾರಾಡಿದ್ದ ಅಮೆರಿಕನ್ ವಿಮಾನಗಳ ಮೇಲೆ ರಶ್ಯನ್ ಗುಂಡು ಹಾರಿ ಆ ಕುರಿತು ಪರಸ್ಪರ ನಿಷೇಧ ಸೂಚನೆಗಳಾದ ವಾರ್ತೆಗಳು ಕೆಲವು ದಿನಗಳಿಗೆ ಮೊದಲಿದ್ದರೂ ಈಗ ಈ ವಿವಾದ ಶಾಂತಗೊಂಡಿದೆ.

ಚೈನದ ನೈರುತ್ಯ ಪ್ರದೇಶದ ಟಿಬೇಟಿನೊತ್ತಿನ ಅತಿ ಭೀಕರ ಗುಡ್ಡಗಾಡು ಪ್ರದೇಶದ ಮೇಲೆ ಚೀನೀ ಕಮ್ಯೂನಿಸ್ಟರು ಅತ್ಯಂತ ಸಾಹಸದ ಧಾಳಿ ನಡಿಸಿ ರಾಷ್ಟ್ರೀಯ ಸರಕಾರದ ಸೇನೆಯ ಕೊನೆಯ ಅವಶೇಷಗಳನ್ನೂ ನಿರ್ನಾಮ ಮಾಡಿದರೆಂದು ಪ್ರಕಟವಾಗಿದೆ.

ಫ್ರಾನ್ಸಿನ ಅಗ್ರಗಣ್ಯ ಅಟಂ ವಿಜ್ಞಾನಿಯಾಗಿರುವ ಪ್ರೊಫೆಸರ್ ಫ್ರೆಡರಿಕ್ ಜೂಲಿಯೆಟ್ ಕ್ಯೂರಿ ಇವರು ಕಮ್ಯೂನಿಸ್ಟರಿರುವುದರಿಂದ, ಫ್ರೆಂಚ್ ಮಂತ್ರಿ ಮಂಡಲವು, ಅಟಂ ಶಕ್ತಿಯ ಹೈಕಮಿಶನರ್ ಸ್ಥಾನದಿಂದ ಅವರನ್ನು ಡಿಸ್‌ಮಿಸ್ ಮಾಡಿದೆ.

ಫ್ರೆಂಚ್ ಮೇಲಧಿಕಾರವಿದ್ದು ಈಗ ಕಮ್ಯೂನಿಸ್ಟರ ಭೀಕರ ಹೋರಾಟರಂಗವಾಗಿರುವ ಇಂಡೋಚೈನಕ್ಕೆ ಅಮೇರಿಕವು ಸೇನಾ ಸಹಾಯ ಕೊಡುವ ಮತ್ತು ಸಹಾಯವನ್ನು ವಿತರಣೆ ಮಾಡಿಕೊಳ್ಳುವ ಒಡಂಬಡಿಕೆ ಹಾಗೂ ವ್ಯವಸ್ಥೆಗಳಾಗಿವೆ.

ಇಂಗ್ಲಾಂಡಿನ ಕೂಲಿಗಾರ ಸರಕಾರವನ್ನು ಕಿತ್ತು ಹಾಕಿ, ಹೊಸ ಚುನಾವಣೆ ನಡೆಸಲು ಚರ್ಚಿಲ್ಲರು ನಡು ಬಿಗಿದಂತಿದೆ.

ತಳೆದ ಪ್ರತಿಕಾ ಇರಲು ಪ್ರೊಜೆಕ್ಟಿನಿಗಳ ನೀತಿ ಇಂಥದೆ ಪ್ರಕ್ರಿಯೆ ನಡೆದು ಸರಕಾರವು 5 ತಿಂಗಳುಗಳ ಅನುಭವದಿಂದ ಪಾರಾಯಿತು.

ಬ್ರಿಟನು ಭಾರತಕ್ಕೆ ಸಲ್ಲಿಸಬೇಕಾಗಿರುವ ಸ್ಟರ್ಲಿಂಗ್ ಸಾಲಗಳಲ್ಲಿ ಕೆಲವಂಶ ಭಾರವನ್ನು ಅಮೇರಿಕವು ಹೊರುವಂತೆ ಅದನ್ನು ಡಾಲರುಗಳಾಗಿ ರೂಪಾಂತರಿಸುವ ಸಂಬಂಧವಾಗಿ ಅಮೇರಿಕ, ಬ್ರಿಟನುಗಳೊಳಗೆ ಮಾತುಕತೆ ನಡೆದಿದೆ. ಈ ಸಂಬಂಧವಾಗಿ ಪ್ರತಿಯೊಂದಂಶದಲ್ಲೂ ತಮ್ಮೊಡನೆ ಪರ್ಯಾಲೋಚಿಸಿಕೊಳ್ಳಬೇಕೆಂದು ಭಾರತ ಸರಕಾರದ ಅರ್ಥ ಸಚಿವ ಡಾ| ಜೋನ್ ಮಥಾಯಿಗಳು ತಿಳಿಸಿದ್ದಾರೆ. ಪಾಕಿಸ್ತಾನ ಸರಕಾರದ ಅರ್ಥ ಸಚಿವ ಮಿ. ಗುಲಾಮ್ ಮಹಮ್ಮದರೂ ಆ ಸಂಬಂಧದ ಯಾವುದೇ ಒಡಂಬಡಿಕೆ ಮಾಡಿಕೊಳ್ಳಬೇಕಾದರೂ ತಮ್ಮ ಅಭಿಮತ ಕೇಳಿಕೊಳ್ಳತಕ್ಕದ್ದೆಂದು ಬ್ರಿಟಿಷ್ ಸರಕಾರಕ್ಕೆ ತಿಳುಹಿದ್ದಾರೆ.

ಆಸ್ಟ್ರೇಲಿಯದಲ್ಲಿ ಕಮ್ಯೂನಿಸ್ಟ ಪಾರ್ಟಿಯನ್ನೇ ವಿಸರ್ಜಿಸಿ ಬಿಡುವ ಮಸೂದೆಯನ್ನು ಆಸ್ಟ್ರೇಲಿಯ ಸರಕಾರ ತಯಾರಿಸಿದ್ದು ಅದೀಗ ಅಲ್ಲಿಯ ಪ್ರಧಾನಿ ಮೆನ್ಝೀಸರಿಂದ ಪಾರ್ಲಿಮೆಂಟಿನ ಮುಂದಿಡಲ್ಪಟ್ಟಿದೆ. ಈ ದೆಸೆಯಿಂದ ಆಸ್ಟ್ರೇಲಿಯದಲ್ಲಿ ವಿಶೇಷ ವಾತಾವರಣ ನಿರ್ಮಾಣಗೊಂಡಿದೆ. ಆಸ್ಟ್ರೇಲಿಯದ ಕಮ್ಯೂನಿಸ್ಟ ಪಕ್ಷವನ್ನೇ ಬೇಕಾಯಿದೇಶೀರಗೊಳಿಸಿ, ಅದರ ಆಸ್ತಿಸೊತ್ತುಗಳಿಗೆ ಮುಟ್ಟುಗೋಲು ಹಾಕುವದೇ ಈ ಮಸೂದೆಯ ಸಾರ. ಪ್ರಕೃತ ಭಾರತದಲ್ಲಿರುವಷ್ಟು ಕಮ್ಯೂನಿಸ್ಟ ಹಾವಳಿ ಆಸ್ಟ್ರೇಲಿಯದಲ್ಲಿ ಕಂಡು ಬರುತ್ತಿಲ್ಲ ಆದರೂ ಈ ಉಗ್ರ ಮಸೂದೆಯನ್ನು ಪಾರ್ಲಿಮೆಂಟಿನಲ್ಲಿ ಮಂಡಿಸುತ್ತಾ ಆಸ್ಟ್ರೇಲಿಯದ ಪ್ರಧಾನಿ ಮೆಂಝೀಸ್ ಅವರು "ಪ್ರಜಾಸತ್ತೆಗಳ ರಕ್ಷಣಾ ವ್ಯವಸ್ಥೆಗಳನ್ನು ಹಾಳು ಮಾಡುವ ಉದ್ದೇಶದಿಂದ ಪ್ರದರ್ಶನಗಳನ್ನು ನಡೆಸುವುದರೊಂದಿಗೆ, ರಶ್ಯವು ಥಂಡಾ ಸಂಗ್ರಾಮವನ್ನು ಹೂಡುತ್ತಿದೆ" ಎನ್ನುತ್ತಾ ಆಸ್ಟ್ರೇಲಿಯದ ಟ್ರೇಡ್ ಯೂನಿಯನುಗಳಲ್ಲಿ ಪ್ರಾಮುಖ್ಯ ಸ್ಥಾನಗಳನ್ನು ಸಂಪಾದಿಸಿ ಕೊಂಡಿರುವ 53 ಕಮ್ಯೂನಿಸ್ಟರ ಹೆಸರುಗಳನ್ನು ಹೇಳಿ, 'ಇಂತಹ ಕ್ರಾಂತಿಗಾರರನ್ನು ಮುಖ್ಯ ಸ್ಥಾನಗಳಲ್ಲಿ ಹಾಗೂ ಪ್ರಾಮುಖ್ಯೋದ್ಯಮಗಳಲ್ಲಿ ಇರಗೊಡಿಸಿ, ಅವರ ಧ್ವಂಸಾತ್ಮಕ ಕೃತ್ಯಗಳಿಗೆ ಅವಕಾಶ ಮಾಡಿ ಕೊಟ್ಟಲ್ಲಿ ಮತ್ತದನ್ನು ತಡೆಗಟ್ಟಲು ಯಾವ ಸೇನಾದಳಗಳಿಗೂ ಕಷ್ಟಸಾಧ್ಯವಾದೀತು. ಹೀಗಾಗಲು ಬಿಡುವುದೆಂದರೆ ಅದು ತಕ್ಷೀರುದಾರಿಯ ಮಹಾದ್ರೋಹವೇ ಸರಿ" ಅಂದಿದ್ದಾರೆ. ಮಸೂದೆ ಮಂಜೂರಾಗಿ ಕಾನೂನಾಗುವದು ಖಂಡಿತವಿರುವುದರಿಂದ ಆಸ್ಟ್ರೇಲಿಯದ ಕಮ್ಯೂನಿಸ್ಟ ಪಕ್ಷವು ತನ್ನ ಎಲ್ಲಾ ಚಟುವಟಿಕೆಗಳನ್ನು ಅಂತರ್ಗಾಮಿಯಾಗಿ ಸಾಗಿಸುವದೆಂದು ತಿಳಿದುಬಂದಿದೆ.

ಯುಗೊಸ್ಲೇವಿಯದ ನವಚುನಾಯಿತ ರಾಷ್ಟ್ರೀಯ ಎಸೆಂಬ್ಲಿಯು ಮಾರ್ಶಲ್ ಟಿಟೋನನ್ನೇ ಸರಕಾರೀ ಅಧಿನಾಯಕ ಮತ್ತು ರಕ್ಷಣಾ ಮಂತ್ರಿಯಾಗಿ ಪುನರ್ನೇಮಕ ಮಾಡಿಕೊಂಡಿತು; ಅವರು ಒಪ್ಪಿಸಿದ ಮಂತ್ರಿಮಂಡಳಿಯ ಹೆಸರನ್ನೂ ಮಂಜೂರು ಮಾಡಿಕೊಂಡಿತು. ರಶ್ಯಬದ್ಧವಿರೋಧಿ ಮಾರ್ಶಲ್ ಟಿಟೋ ತ್ರಿರಾ ಪ್ರತಿನಿಧಿಗಳಿಗಿತ್ತ ಭೇಟಿಯಲ್ಲಿ 'ನಾವು ನೋಡಲಾಗುವಷ್ಟು ದೂರದ ಭವಿಷ್ಯದಲ್ಲಿ ಯುದ್ಧವಾಗುವ ಸಂಭವವಿಲ್ಲ; ಕೊನೆಯ ಪಕ್ಷ ಅದೊಂದು ನಿಶ್ಚಿತಾವಧಿಯ ವರೆಗಾದರೂ ನಾವು ರಶ್ಯದೊಡನೆ ಸೌಹಾರ್ದತೆ ನಿರ್ಮಿಸಿಕೊಳ್ಳುವ ಸಾಧ್ಯತೆ ಕಾಣುವದಿಲ್ಲ" ಎಂದಿದ್ದಾರೆ. ಯುಗೊಸ್ಲೇವಿಯಕ್ಕೆ ಸಹಾಯ ಮಾಡಬೇಕೆಂಬ ಯಥಾರ್ಥ ಬಯಕೆಯಿಂದಿರುವ ಅಮೇರಿಕದ ಧೋರಣೆಯನ್ನು ಅವರು ಶ್ಲಾಘಿಸಿದ್ದಾರೆ. ಯುಗೊಸ್ಲೇವಿಯದಲ್ಲಿ ಭಾರತದ ಪ್ರಥಮ ರಾಯಭಾರಿಯಾಗಿ ನೇಮಕಗೊಂಡಿರುವ ಶ್ರೀ ಬಿ. ಆರ್. ಸೆನ್ನರು ಎಪ್ರಿಲ್ 29ರಲ್ಲಿ ಮಾರ್ಶಲ್ ಟಿಟೋನ ಭೇಟಿಮಾಡಿ, ಪಂಡಿತ ನೆಹರೂಗಳು ತನ್ನ ಜೈಲುವಾಸದ 1[illegible] ವರುಷಗಳ ಅವಧಿಯಲ್ಲಿ ಬರೆದಿದ್ದ ಕೆಲವು ಪುಸ್ತಕಗಳನ್ನು ಅವರಿಗೊಪ್ಪಿಸಿದ್ದರು. ಯುಗೊಸ್ಲೇವಿಯದ ಅದ್ಯಂತ ಸಂಚರಿಸಿ, ಜನರ ರಾಜಕೀಯ ಅಭಿವೃದ್ಧಿಯನ್ನಷ್ಟೇ ಅಲ್ಲ, ಆರ್ಥಿಕ ಸ್ಥಿತಿಗತಿಗಳನ್ನೂ ತಿಳಿದುಕೊಳ್ಳಬೇಕೆಂದು ಮಾರ್ಶಲ್ ಟಿಟೋ ಭಾರತ ರಾಯಭಾರಿಯನ್ನು ಕೇಳಿಕೊಂಡರು. ಕಾಶ್ಮೀರ ಸಮಸ್ಯೆಯಲ್ಲಿ ತನ್ನ ಗಾಢಾಸಕ್ತಿಯನ್ನು ಪ್ರದರ್ಶಿಸಿ, ಭಾರತ ಪಾಕಿಸ್ತಾನಗಳು ಆ ಕುರಿತು ತಾವಾಗಿ ಒಂದು ತೀರ್ಮಾನಕ್ಕೆ ಬರಲಿ ಎಂದು ಟಿಟೋ ಹಾರೈಸಿದರಲ್ಲದೆ, ಎಲ್ಲಾ ಅಂತರ್ರಾಷ್ಟ್ರೀಯ ಕ್ಷೇತ್ರಗಳಲ್ಲೂ ಭಾರತದ ನಿಕಟ ಸಂಬಂಧವು ಯುಗೊಸ್ಲೇವಿಯಕ್ಕೆ ದೊರೆಯುವದೆಂದು ಆಶಿಸಿದರು. "ಪಂಡಿತ ನೆಹರೂಗಳ ಗುಣನಡತೆಗಳೇ ಮಾರ್ಶಲ್ ಟಿಟೋರಲ್ಲಿವೆ" ಎಂದು ಶ್ರೀ ಸೆನ್ನರ ಅಭಿಪ್ರಾಯ.

ಬೆಲ್ಜಿಯಮಿನಲ್ಲಿ, ರಾಜ್ಯಬಿಟ್ಟಿರುವ ರಾಜಾ ಲಿಯೊಪೋಲ್ಡರನ್ನು ಮರಳಿ ಬರಮಾಡಿಸಿಕೊಳ್ಳುವ ಸಂಬಂಧವಾಗಿ ದೀರ್ಘಾವಧಿಯಿಂದಿರುವ ವಿವಾದವು ಬಗೆಹರಿಯದೆ, ಈಗ ಇದೇ ಪ್ರಶ್ನೆಯ ಮೇಲಿಂದ ಅಲ್ಲಿಯ ಪಾರ್ಲಿಮೆಂಟು ಬರ್ಖಾಸ್ತಾಗಿದೆ. ಹೊಸ ಸಾರ್ವತ್ರಿಕ ಚುನಾವಣೆ ನಡೆಯಲಿದೆ. ರಾಜಾ ಲಿಯೊಪೋಲ್ಡರು ಬೆಲ್ಜಿಯಮಿಗೆ ಬಂದು ತನ್ನ ಪುತ್ರ 19 ವರ್ಷ ಪ್ರಾಯದ ರಾಜಕುವರ ಬಾದುಹೋಯಿನ್‌ರಿಗೆ ಪಟ್ಟ ಬಿಟ್ಟುಕೊಟ್ಟು ಕೂಡಲೇ ಹೊರಟು ಹೋಗಬೇಕೆಂಬ ಸೂಚನೆಯಿದ್ದಿತು. ಆದರೆ ಲಿಯೊಪೋ


ಕೇಂದ್ರ ಸರಕಾರದಿಂದ ರಿಜಿಸ್ಟ್ರಿಸಲ್ಪಟ್ಟ ನಂ. **4672**

# ರೂ. 19,200

ಎಲ್ಲ ಸರಿಯಾದ 16 ಉತ್ತರಗಳಿಗೆ ಹಂಚಲಾಗುವುದು.

ರೂ. 1200/- ಎಲ್ಲ ಸರಿಯಾದ ಪ್ರತಿ ಉತ್ತರಕ್ಕೆ
ರೂ. 100/- ಎರಡು ಸಾಲು ಸರಿ ಇರುವ ,,
ರೂ. 20/- ಒಂದು ಸಾಲು ಸರಿ ಇರುವ ,,
} ಗ್ಯಾರಂಟಿ ಇದೆ.

ರೂ. 5/- ಎ. ಬಿ. ಅಥವಾ ಎ. ಸಿ. ಚೌಕದಲ್ಲಿಯ 2 ಸಂಖ್ಯೆ ಸರಿ ಇರುವ ಉತ್ತರಕ್ಕೆ.
ಅತ್ಯಧಿಕ ಉತ್ತರ ಕಳುಹಿಸುವವರಿಗೆ ರೂ. **500** ಬಹುಮಾನದ ಗ್ಯಾರಂಟಿ ಇದೆ.

ಇಲ್ಲಿ ತೋರುವ ಚೌಕದಲ್ಲಿ 10ರಿಂದ 25ರ ವರೆಗಿನ ಅಂಕೆಗಳನ್ನು ಉದ್ದಕ್ಕೆ, ಅಡ್ಡಕ್ಕೆ ಅಥವಾ ಮೂಲೆಯಿಂದ ಮೂಲೆಗೆ ಕೂಡಿಸುವಾಗ ಉತ್ತರ 70 ಬರುವಂತೆ ತುಂಬಿಸಿರಿ. ಒಂದು ಅಂಕೆಯನ್ನು ಒಮ್ಮೆ ಮಾತ್ರ ಬರೆಯಬಹುದು.

ಟಪ್ಪಾಲಿಗೆ ಹಾಕುವ ಕೊನೆಯ ತಾ 17—5—1950.
ಉತ್ತರ ತಾ. 24—5—1950.

ಪ್ರವೇಶ ಧನ: ಪ್ರತಿ ಉತ್ತರಕ್ಕೆ ರೂ. 1. 3 ಉತ್ತರಗಳಿಗೆ ರೂ. 2.
ಎಂಟು ಉತ್ತರಗಳಿಗೆ ರೂ. 4.

**ನಿಬಂಧನೆ:** ಮೇಲೆ ನಮೂದಿಸಿದ ದರದಲ್ಲಿ ಪ್ರವೇಶ ಧನದೊಂದಿಗೆ ಖಾಲಿ ಕಾಗದದಲ್ಲಿ ಎಷ್ಟೂ ಉತ್ತರ ಕಳುಹಬಹುದು. ಹಣವನ್ನು ಮನಿಯಾರ್ಡರ್ ಅಥವಾ ಕ್ರಾಸ್ ಮಾಡದ ಪೋಸ್ಟಲ್ ಆರ್ಡರ್ ಮೂಲಕ ಡಿಲ್ಲಿಯ ಚಾಂದನಿ ಚೌಕ ಪೋಸ್ಟಾಫೀಸಿನಲ್ಲಿ ಸಿಗುವಂತೆ ಕಳುಹಿಸಬೇಕು. ರೂ. 1200 ಕನಿಷ್ಟ ಬಹುಮಾನವನ್ನು **ದೆಹಲಿಯ ಪ್ರಸಿದ್ಧ ಬೇಂಕೊಂದರಲ್ಲಿ** ಭದ್ರಿಸಿಟ್ಟಿರುವುದು. ನಮ್ಮೊಡನೆ ಭದ್ರಿಸಲ್ಪಟ್ಟಿರುವ ಉತ್ತರಕ್ಕೆ ಸರಿ ಹೋಲುವವುಗಳು ಮಾತ್ರ ಸರಿಯಾದ ಉತ್ತರಗಳು. ಉತ್ತರದ ಫಲಿತಾಂಶ ಬೇಕಿದ್ದರೆ, ನಿಮ್ಮ ವಿಳಾಸ ಬರೆದು, ಸ್ಟಾಂಪು ಅಂಟಿಸಿದ ಲಕೋಟೆ ಕಳುಹಿಸಿರಿ. ವ್ಯವಸ್ಥಾಪಕರ ನಿರ್ಧಾರವೇ ಕೊನೆಯದು ಮತ್ತು ನ್ಯಾಯಬದ್ಧವಾದದ್ದು.

66 ಮೊತ್ತದ ಕಳೆದ ಬಾರಿಯ ಒಗಟಿನ ವಿವರ.

| | | | |
|---|---|---|---|
| 21 | 13 | 20 | 12 |
| 11 | 19 | 14 | 22 |
| 18 | 24 | 9 | 15 |
| 16 | 10 | 23 | 17 |

ನಿಮ್ಮ ಉತ್ತರ ಮತ್ತು ಪ್ರವೇಶಧನ ಇವರಿಗೆ ಕಳುಹಿಸಿರಿ.

THE ORGANIZER,
**Red Fort Trading Co (4) Regd.**
Katra Neel, DELHI.

# ಭಾರತದೊಳಗಡೆಯ ಆಗುಹೋಗುಗಳು.

...ಲ್ಲರು ಬೆಲ್ಜಿಯಮಿನ ತನ್ನ ಸಂಚಾರದ ಕುರಿತು ಯಾವ ಸ್ಪಷ್ಟ ಭರವಸೆಯನ್ನೂ ಕೊಡಲೊಪ್ಪಲಿಲ್ಲ. ಈ ಸಂಬಂಧವಾಗಿ ಕ್ರಿಶ್ಚಿಯನ್ ಪಕ್ಷ, ಸಮಾಜವಾದಿ ಪಕ್ಷ, ಮೊದಲಾದವುಗಳೊಳಗೆ ತೀವ್ರ ಭಿನ್ನಾಭಿಪ್ರಾಯಗಳಿದ್ದು ಅವು ಒಂದುಗೂಡಲೊಲ್ಲದೆ ಈಗ ಬೆಲ್ಜಿಯಮ್ ಪಾರ್ಲಿಮೆಂಟೇ ರದ್ದಾಗಿದೆ.

ಈಜಿಪ್ಟ್, ಸಾವುದಿ ಅರೇಬಿಯ, ಇರಾಕ್, ಯೆಮೆನ್, ಸಿರಿಯ, ಲೆಬನಾನ್, ಜೋರ್ಡನ್-ಈ ಏಳು ರಾಷ್ಟ್ರಗಳು ಸದಸ್ಯರಾಗಿ ಉಳ್ಳ ಅರಬ್ ಲೀಗನ್ನು ತಾವು ಬಿಡಲಿರುವೆವಾಗಿ ಜೋರ್ಡನಿನ ರಾಜಾ ಅಬ್ದುಲ್ಲರು ಸೂಚಿಸಿದ್ದಾರೆ. ಇದು ಪೆಲಸ್ತೈನಿನಲ್ಲಿ ಯೆಹೂದಿ-ಅರಬೀ ಹೋರಾಟವೆದ್ದೊಡನೆ, ಇಂದಿಗೈದು ವರುಷಗಳ ಮೊದಲು ಸ್ಥಾಪನೆಯಾಗಿದ್ದ ಲೀಗು. ಯೆಹೂದಿಗಳ ಇಸ್ರಾಯೆಲ್ ಸರಕಾರದೊಂದಿಗೆ ಯುದ್ಧಾರಂಭವಾದಂದಿನಿಂದ ಅರಬ್ ಸೇನೆಯ ವಶದಲ್ಲಿರುವ ಪೆಲಸ್ತೈನಿನ ವಿಶಾಲ ವಲಯವನ್ನು ಜೋರ್ಡನಿನೊಂದಿಗೆ ಸೇರಿಸಿಕೊಂಡು ಜೋರ್ಡನಿನ ವಿಸ್ತಾರವನ್ನೀಗ ರಾಜಾ ಅಬ್ದುಲ್ಲರು ಇಮ್ಮಡಿಗೊಳಿಸಿದ್ದಾರೆ. ಇದಕ್ಕೆ ಬ್ರಿಟಿಷ್ ಸರಕಾರವು ತನ್ನ ಸಮ್ಮತಿಯನ್ನಿತ್ತಿದೆ. ತಮ್ಮ ಮೇಲೆ ಇತರ ಅರಬ್ ರಾಷ್ಟ್ರಗಳು ಹೇರುವ ಯಾವ ಆರ್ಥಿಕ ದಿಗ್ಬಂಧನವನ್ನಾದರೂ ತಾವು ಒಡೆಯಬಲ್ಲೆವೆಂದೂ, ತನ್ನ ನೆರೆ ರಾಷ್ಟ್ರ (ಇಸ್ರಾಯೆಲ್)ದೊಡನೆ ಸಂಧಾನ ವ್ಯವಹಾರ ಹೂಡುವೆನೆಂದೂ, ರಾಜಾ ಅಬ್ದುಲ್ಲರಂದಿದ್ದಾರೆ. 'ಮಹಾಸಿರಿಯಾ' ಯೋಜನೆಯನ್ನು ಸಮರ್ಥಿಸುವ ಉದ್ದೇಶ ವ್ಯಕ್ತ ಮಾಡಿದ್ದಾರೆ. ಸಿರಿಯಾ, ಇರಾಕ್ ಮತ್ತು ಬಹುಶಃ ಜೋರ್ಡನನ್ನು ಸೇರಿಸಿ ಕಟ್ಟುವದೇ 'ಮಹಾ ಸಿರಿಯಾ ಯೋಜನೆ'ಯ ರೂಪರೇಖೆ. ಪೆಲಸ್ತೈನಿನ ಯೆಹೂದಿಗಳ ಇದಿರು ಪಕ್ಷ ಅರಬ್ ರಾಷ್ಟ್ರಗಳ ಒಕ್ಕಟ್ಟೇ ಈಗ ಮುಂದುಹೋಗಿ ಪೆಲಸ್ತೈನ್ ಭವಿಷ್ಯವು ಬದಲಾಗಿದೆ. ಅಲ್ಲಿಯ ಈಗಿನ ಸ್ಥಿತಿ ಚಿರಸ್ಥಾಯಿಯಾಗುವ ಸಂಭವವೆದ್ದಿದೆ.

ಪಶ್ಚಿಮ ಜಾವಾದಲ್ಲಿ ಓರ್ವ ಪ್ರಸಿದ್ಧ ಅಮೆರಿಕನ್ ಪತ್ರಿಕಾ ಪ್ರತಿನಿಧಿ ಮಕ್ಗ್ರೆರ್ವ ಅಮೆರಿಕನ್ ಪ್ರೊಫೆಸರರನ್ನು ಬಂಡುಗಾರ ಇಂಡೋನೇಶಿಯನರು ಗುಂಡಿಟ್ಟು ಕೊಂದಿದ್ದಾರೆ. ನೂತನ ಸ್ವತಂತ್ರ ರಾಷ್ಟ್ರ ಇಂಡೋನೇಶಿಯದ ಒಳಗಡೆ ಇನ್ನೂ ಶಾಂತಿ ಸ್ಥಾಪನೆಯಾಗಿಲ್ಲ.

ಬರ್ಮಾದಲ್ಲಿ ಸರಕಾರೀ ಸೇನೆಗಳು ಗಣ್ಯ ವಿಜಯ ಗಳಿಸಿದ ವರ್ತಮಾನ ಸುದ್ದಿಗಳವೆಯಾದರೂ ಬರ್ಮಾ ಯುದ್ಧವೀಗ ಹಳೇ ರೋಗವಾಗಿ ರಾಜಸತ್ತೆ ನಿರ್ಮಿಸುವ ಮಟ್ಟಕ್ಕಿಳಿದಿದೆ. ಬರ್ಮಾದಲ್ಲಿ ಹೊಸತಾಗಿ ಅಮೇರಿಕನ್ ರಾಯಭಾರಿಯಾಗಿ ನೇಮಕಗೊಂಡಿರುವ ಡಿ. ಡಿ. ಮೆಕೆಂಡ್ರಿಕ್ ಅವರು ಪತ್ರಿಕಾ ಕಟ್ಟದ ಮುಂದೆ ಮಾತಾಡುತ್ತಾ 'ಬರ್ಮಾದಲ್ಲಿ ಹಾಕಲ್ಪಡುವ ಅಮೆರಿಕದ ಖಾಸಗೀ ನಿಧಿಗಳಿಗೆ ಸದ್ವಿನಿಯೋಗ ಹೊಂದುವ ಆಶ್ವಾಸನೆ ದೊರೆಯಬೇಕಾಗಿದೆ' ಎಂಬ ಅಭಿಪ್ರಾಯ ಹೊರಗೆಡಹಿದ್ದಾರೆ. ಬರ್ಮಕ್ಕೆ ಬಂದು ಹೋಗಿದ್ದ ಗ್ರಿಫಿನ್ ಸಮಿತಿಯವರ ಶಿಫಾರಸುಗಳು ಈಗ ಅಮೆರಿಕ ಸರಕಾರದ ಪರಿಶೀಲನೆಯಲ್ಲಿವೆ.

## ಭಾರತದೊಳರಂಗ

ಭಾರತದೊಳಗಿನ ಆಗುಹೋಗುಗಳನ್ನು ಕಾಣುವಾಗ ಶಾಂತಿ, ವ್ಯವಸ್ಥಾಪಾಲನೆ ಮತ್ತು ಭವಿಷ್ಯದ ಯೋಜನೆಗಳೇ ಮುಖ್ಯವಾಗಿ ತೋರುತ್ತಿವೆ. ವಿಶೇಷ ರೀತಿಯ ಗೊಂದಲವಾವುದೂ ಪ್ರಕೃತ ಇಲ್ಲ.

ರಾಷ್ಟ್ರದ ಅಧಿಕಾರಿ, ಅನಧಿಕಾರಿ ನಾಯಕರುಗಳೊಟ್ಟಾಗಿ ರಾಷ್ಟ್ರದ ಭವಿಷ್ಯದ ಹಂಚಿಕೆಗಳನ್ನು ಯೋಜಿಸಲು ಕಾಂಗ್ರೆಸ್ ಅಧ್ಯಕ್ಷ ಡಾ| ಪಟ್ಟಾಭಿಗಳಿಂದ ಕರೆಯಲ್ಪಟ್ಟಿದ್ದ ಎಲ್ಲಾ ಸಂಸ್ಥಾನಗಳ ಮುಖ್ಯ ಮಂತ್ರಿಗಳ ಹಾಗೂ ಪ್ರಾಂತಿಕ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರುಗಳ ಜತೆ ಸಮ್ಮೇಳನವು ಎಪ್ರಿಲ್ ತಾ. 25 ಮತ್ತು 26ರಲ್ಲಿ ನವದಿಲ್ಲಿಯಲ್ಲಿ ಸೇರಿ ಒಂಭತ್ತು ನಿರ್ಣಯಗಳನ್ನು ಮಾಡಿದೆ. ಆ ಪೈಕಿ ಉತ್ಪನ್ನ, ಉದ್ಯಮ, ಮತ್ತು ಬೇಸಾಯಕ ಸಮಮಟ್ಟವನ್ನಾಧರಿಸಿರುವ ಸಾರ್ವತ್ರಿಕ ಆರ್ಥಿಕ ಸಮಾನತೆಯನ್ನು ಹೊಂದಬೇಕೆಂಬ ಮತ್ತು ಜನತೆಯ ಜೀವನ ಮಟ್ಟವನ್ನು ಖಚಿತವಾಗಿ ಮೇಲೇರಿಸುವ ಪ್ರಯತ್ನಗಳನ್ನು ಕೈಕೊಳ್ಳಬೇಕೆಂಬ 'ಉದ್ದೇಶಗಳ' ಸಂಬಂಧದ ನಿರ್ಣಯವು ಮುಖ್ಯವಾದುದು. ಅಲ್ಪಾವಧಿಯಲ್ಲಿ ಜಾರಿಗೆ ತರುವ ಕಾರ್ಯಕ್ರಮಗಳು ಅಲ್ಲಿ ನಿರ್ಣಯಿಸಲ್ಪಟ್ಟಿವೆ. ನಿಯಂತ್ರಣಗಳು ಅಗತ್ಯವೋ ಎಂಬುದನ್ನು ಹೊಸತಾಗಿ ಪರ್ಯಾಲೋಚಿಸತಕ್ಕದ್ದೆಂದೂ ಸಮ್ಮೇಳನವು ಠರಾಯಿಸಿದೆ. ಪಂಡಿತ ನೆಹರು, ಸರ್ದಾರ್ ಪಟೇಲ್ ಡಾ. ಪಟ್ಟಾಭಿಗಳು ಕಾಂಗ್ರೆಸಿನ ಅಧಿಕಾರಿ ಹಾಗೂ ಅನಧಿಕಾರೀ ನಾಯಕರ ಈ ಸಮ್ಮೇಳನದಲ್ಲಿ ಭಾಷಣವಿತ್ತಿದ್ದರು. ರಾಷ್ಟ್ರೀಯ ಯೋಜನೆಗಳನ್ನು ಜಾರಿಗೆ ತರುವ ಕುರಿತು ಸಾರ್ವಜನಿಕರ ಪೂರ್ಣ ಸಹಕಾರವನ್ನು ಗಳಿಸಿಕೊಳ್ಳಬೇಕೆಂದೂ ಅದಕ್ಕಾಗಿ ಜನತೆಯಲ್ಲಿ ನವೋತ್ಸಾಹವನ್ನು ಎಬ್ಬಿಸಬೇಕೆಂದೂ ಪಂಡಿತ ನೆಹರುಗಳು ಉಪದೇಶಿಸಿದ್ದರು. ಸರ್ದಾರ್ ಪಟೇಲರು ತನ್ನ ಭಾಷಣದಲ್ಲಂದಿದ್ದರು: "ಇಡೀ ಏಶ್ಯದಲ್ಲಿ ಸುಭದ್ರ ರಾಷ್ಟ್ರವೆಂದರೆ ಭಾರತವೊಂದೇ. ಆಕ್ರಮಣಗಳ, ಗೊಂದಲಗಳ ಮತ್ತು ವಿದೇಶೀ ತತ್ವ ಘೋಷಣೆಗಳ ತೆರೆಗಳನ್ನು ತಡೆದುಕೊಂಡು ನಿಲ್ಲಲಾಗುವ ಏಕಮಾತ್ರ ನೆಲೆಯಿದು. ಆಂತರಿಕ, ಬಾಹ್ಯ ಭದ್ರತೆಯುಂಟಾಗದೆ ಹೋದರೆ ಯಾವ ಯೋಜನೆಯೂ ಜಯಶೀಲವಾಗುವಂತಿಲ್ಲ. ವಿದೇಶೀ ತತ್ವಾಚರಣೆಗಳು ಇಲ್ಲಿ ಧಾಳಿ ಮಾಡಿದ್ದರೂ, ಜೀವನದ ಮೂಲಾವಶ್ಯಕ ಕೆಲವೇ ವಸ್ತುಗಳನ್ನು ನಾವು ಒದಗಿಸಿಕೊಟ್ಟರೆ, ಬಹುತೇಕವಾಗಿ ಈ ರಾಷ್ಟ್ರದ ಜನರು ಹೆಚ್ಚಿನ ತೃಪ್ತಿಗೊಳ್ಳುವರು. ಎಲ್ಲಾ ಜನರಿಗೆ ಬೇಕಾಗುವಷ್ಟು ಆಹಾರವು ಈ ದೇಶದಲ್ಲಿರದಿದ್ದರೆ ಇಲ್ಲಿ ಶಾಂತಿ ನೆಲೆಗೊಳ್ಳಲು ಸಾಧ್ಯವಿಲ್ಲ". ಮಹಾ ಚುನಾವಣೆಯು ಸನ್ನಿಹಿತವಾಗುತ್ತಿರುವಾಗ, ಕಾಂಗ್ರೆಸ್ ಆಡಳಿತೆಯ ಪರಿಣಾಮವಾಗಿ ತಮ್ಮ ಜೀವನ ದುಸ್ಥಿತಿಯಲ್ಲಾವ ಬದಲಾವಣೆಯೂ ಆಗಿಲ್ಲವೆಂಬ ಸಾರ್ವಜನಿಕ ಅತೃಪ್ತಿಯನ್ನು ಗಮನಿಸಿ, ದಿಲ್ಲಿಯ ಕಾಂಗ್ರೆಸ್ ಪ್ರಧಾನ ಮಂತ್ರಿಗಳ ಮತ್ತು ಅಧ್ಯಕ್ಷರುಗಳ ಸಮ್ಮೇಲನವು ಕಾರ್ಯದತ್ತ ಲಕ್ಷ್ಯ ಹರಿಸಿತು ಎನ್ನಬಹುದು.

ಈ ವರೆಗೂ ಫ್ರೆಂಚ್ ಆಳ್ವಿಕೆಯೊಳಗಿದ್ದು, ಕಳೆದ ಜೂನ್, 1949ರಲ್ಲಿ ನಡೆದಿದ್ದ ಜನಮತ ಸಂಗ್ರಹದಲ್ಲಿ ಭಾರತದೊಂದಿಗೆ ಸೇರುವುದಕ್ಕೆ ಪ್ರಬಲ ಬಹುಮತದೊರೆತಿದ್ದ ಚಂದ್ರನಾಗೋರ್ ನಗರದ ಆಡಳಿತೆಯು ಇದೇ ಮೇ ತಾ. 2ರಂದ ಭಾರತ ಸರಕಾರದ ಕೈಗೆ ಬಂದಿದೆ.

ಲಂಡನಿಗೆ ಬರಬೇಕೆಂದು ಬ್ರಿಟಿಷ್ ಸರಕಾರವು ಶ್ರೀ ಸಿ. ರಾಜಗೋಪಾಲಾಚಾರ್ಯರನ್ನು ಆಮಂತ್ರಿಸಿರುವುದೆಂದು ತಿಳಿದು ಬರುತ್ತದೆ. ಈಗ ದಿಲ್ಲಿಯಲ್ಲಿರುವ ರಾಜಾಜಿಯನ್ನು ಭಾರತ ಸರಕಾರವು ಯಾವ ಕಾರ್ಯಕ್ಕೆ ಹಚ್ಚುವದೆಂದು ತಿಳಿದು ಬಂದಿಲ್ಲ. ಅವರು ಲಂಡನಿಗೆ ಹೋಗುವಂತಾದರೆ ಭಾರತ ಸರಕಾರದ ಪರವಾಗಿ ಇತರ ಕೆಲವು ರಾಷ್ಟ್ರಗಳಿಗೂ ಭೇಟಿ ಕೊಡುವ ಸಂಭವವಿದೆ. ವಿದೇಶಗಳಲ್ಲಿ ಭಾರತದ ಪ್ರಚಾರವು ಸಾಕಷ್ಟು ನಡೆದಿಲ್ಲವೆಂಬ ಅತೃಪ್ತಿಯನ್ನೂ, ಪಾಕಿಸ್ತಾನ್ ಸಂಬಂಧದ ಸಮಸ್ಯೆಗಳನ್ನೂ ನಿವಾರಿಸುವುದಕ್ಕಾಗಿ ರಾಜಾಜಿಯು ಕಾರ್ಯರಂಗಕ್ಕಿಳಿಯುವ ಸಂಭವ ಕಾಣುತ್ತಿದೆ.

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಎಪ್ರಿಲ್ 29ರಂದ ನವದಿಲ್ಲಿಯಲ್ಲಿ ಸೇರಿದೆ. ಮುಂದಿನ ಕಾಂಗ್ರೆಸ್ ಮಹಾಧಿವೇಶನವನ್ನು ಜುಲಾಯಿ ಅಂತ್ಯ ಭಾಗದಲ್ಲಿ ಬೆಂಗಳೂರಿನಲ್ಲಿ ಜರಗಿಸಬೇಕೆಂದು ಹಿಂದಿನ ಸಭೆಯಲ್ಲಿ ಮಾಡಿದ್ದ ನಿರ್ಣಯವನ್ನು ಬದಲಾಯಿಸಿ, ಮುಂಬರುವ ನಾಸಿಕದಲ್ಲಿ ಜುಲಾಯಿ ಅಂತ್ಯಾವಧಿಯಲ್ಲೇ ಸೇರಿಸಬೇಕೆಂದು ನಿರ್ಣಯಿಸಿದೆ. ಈ ಬದಲಾವಣೆಗೆ ಕಾರಣ ಮೈಸೂರು ಕಾಂಗ್ರೆಸಿನ ಧೋರಣೆಯೇ. ಜುಲಾಯಿ ಅಂತ್ಯಭಾಗವು ಮಳೆಗಾಲವಾಗಿರುವುದರಿಂದಲೂ, ಆ ಸಮಯದಲ್ಲೇ ಬೆಂಗಳೂರು ನಗರ ಸಭೆಯ ಚುನಾವಣೆಗಳಿರುವುದರಿಂದಲೂ ಕಾಂಗ್ರೆಸ್ ಮಹಾಧಿವೇಶನದ ವ್ಯವಸ್ಥೆ ಮಾಡಲು ಕಷ್ಟವಿದೆ ಎಂದು ಮೈಸೂರು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ವಿಜ್ಞಾಪಿಸಿಕೊಂಡಿದ್ದಿತು. ಇದೇ ಹೊತ್ತಿನಲ್ಲಿಯೆ ಮುಂಬಾ ರಾಷ್ಟ್ರ ಪ್ರಾಂತಿಕ ಕಾಂಗ್ರೆಸ್ ಸಮಿತಿಯು ತನ್ನಲ್ಲಿಗೆ ಮಹಾಧಿವೇಶನವನ್ನು ಆಮಂತ್ರಿಸಿದುದರಿಂದ ನಾಸಿಕವನ್ನು ಆರಿಸಿಕೊಳ್ಳಲಾಯಿತು.

ಉತ್ತರ ಪ್ರದೇಶದ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ 24 ಮಂದಿ ಸದಸ್ಯರು ಪ್ರತ್ಯೇಕ ಪಂಗಡ ಕಟ್ಟಿ, ಶಾಸನ ಸಭೆಯಲ್ಲಿ ಬೇರೆ ಗುಂಪಾಗಿ ಕುಳಿತುಕೊಂಡು ಶಿಸ್ತುಭಂಗ ಮಾಡಿದುದರಿಂದ ಆ ಪೈಕಿ 19 ಮಂದಿಯನ್ನು ಪಕ್ಷದಿಂದ ಹೊರತಳ್ಳುವ ನಿರ್ಧಾರವು ನವದಿಲ್ಲಿಯ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸಭೆಯಲ್ಲಾಯಿತು. ಉಳಿದ 5 ಮಂದಿ ಸದಸ್ಯರ ಸಂಬಂಧದ ವಿಚಾರಣೆಯು ಮುಂದಕ್ಕಾಗಲಿದೆ. ಪಕ್ಷದಿಂದ ಹೊರಹಾಕಲ್ಪಟ್ಟ ಸದಸ್ಯರು ಮೇ ತಾ. 10ರೊಳಗೆ ತಮ್ಮ ಶಾಸನ ಸಭಾ ಸ್ಥಾನಗಳಿಗೆ ರಾಜೀನಾಮೆಯೊಪ್ಪಿಸಬೇಕೆಂದು ಕಾಂಗ್ರೆಸ್ ಅಧಿನಾಯಕ ಮಂಡಲಿ ತಿಳಿಸಿದೆ. ಆದರೆ ತಾವು ಶಾಸನ ಸಭಾ ಸ್ಥಾನಗಳಿಗೆ ರಾಜೀನಾಮೆ ಕೊಡದೆ ಪ್ರತ್ಯೇಕ ಪಕ್ಷ ಕಟ್ಟಿಕೊಂಡು ನಿಲ್ಲುವೆವೆಂದು ಈ ಪಂಗಡದ ನಾಯಕ ಶ್ರೀ ತ್ರಿಲೋಕ ಸಿಂಘರಂದಿದ್ದಾರೆ.

ಇದೇ ರೀತಿ ಮದ್ರಾಸ್ ಶಾಸನ ಸಭಾ ಕಾಂಗ್ರೆಸ್ ಪಕ್ಷದೊಳಗಿದ್ದುಕೊಂಡೇ ಎಸೆಂಬ್ಲಿಯಲ್ಲಿ ಪ್ರತ್ಯೇಕ ಪಾಳಯವಾಗಿ ಕುಳಿತುಕೊಳ್ಳುತ್ತಿರುವ ಶ್ರೀ ಟಿ. ಪ್ರಕಾಶಮ್ ಮತ್ತು ಅವರ 15 ಮಂದಿ ಅನುಯಾಯಿಗಳ ಮೇಲೆ ಕಾಂಗ್ರೆಸ್ ಅಧಿನಾಯಕ ಮಂಡಳಿಯ ಶಿಸ್ತುಕ್ರಮ ನಡೆಯಬೇಕು ಹೋಗಿದ್ದಿತು. ಆ ಪೈಕಿ ಮೂರು ಮಂದಿ ತಮ್ಮ ನಡತೆಗಾಗಿ ಪಶ್ಚಾತ್ತಾಪ ಸೂಚಿಸಿ ವಿರುದ್ಧ ಪಾಳಯ ಬಿಟ್ಟಿದ್ದಾರೆ. ಉಳಿದವರ ಸಂಬಂಧದ ವಿಚಾರಣೆಯು ಮೇ ತಾ. 10 ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಲ್ಲಿ ನಡೆಯುತ್ತದೆಂದು ತಿಳಿದುಬಂದಿದೆ. ಈ ಸಂಬಂಧವಾಗಿ ಒಂದು ರಾಜೀ ವ್ಯವಸ್ಥೆ ಮಾಡಲು ಆಂಧ್ರ ಪ್ರಾಂತಿಕ ಕಾಂಗ್ರೆಸ್ ಸಮಿತಿ ಶಿಷ್ಟಮಂಡಲವೊಂದು ದಿಲ್ಲಿಗೆ ಹೋಗಿ ಪಂಡಿತ ನೆಹರು ಮತ್ತು ಸರ್ದಾರ್ ಪಟೇಲರೊಡನೆ ಮಾತುಕತೆ ನಡೆಸಿರುವರೆಂದು ಗೊತ್ತಾಗಿದೆ. ಕರಾಚಿಯಿಂದ ಮರಳಿದ ಪಂಡಿತ ನೆಹರುಗಳು ತಾ. 29ರ ಕಾಂಗ್ರೆಸ್ ಕಾರ್ಯಕಾರೀ ಸಭೆಯಲ್ಲಿ ಅರ್ಧ ತಾಸು ಭಾಷಣವಿತ್ತಿದ್ದರು.


ಪ್ರಾಚೀನ ತರುಣರ ಆದರ್ಶಮೂರ್ತಿ-ಇಂದಿನ ಯುವಕರ ಅದ್ಭುತ ವ್ಯಕ್ತಿ-ನಮ್ಮ ನಿಮ್ಮೆಲ್ಲರ ಪುರಾಣದ ಪುಣ್ಯ ಪುರುಷ.

**ವೀರ ಅಭಿಮನ್ಯು**

(ತಮಿಳು)

ಯು. ಆರ್. ಜೀವರತ್ನಂ-ಎಸ್. ಎಮ್. ಕುಮಾರೇಶನ್-

ತಾರೀಕು 6—5—1950 ರಿಂದ

**ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.**

ನಿರೀಕ್ಷಿಸಿರಿ: ಜೆಮಿನಿ ತಯಾರಿಕೆ "ಕಲ್ಪನಾ"

THE
Canara Banking Corporation Ltd.
(Incorporated in India)
Estd: 1906.
Head Office : UDIPI, (S. I.)

Capital Authorised .... .... .... Rs. 25,00,000
Capital Issued, Subscribed & Paid up .... .... .... Rs. 20,00,000
Reserves .... .... .... Rs. 9,44,765

ಗುರುವಾರ ಉಡುಪಿ ೬-೫-೧೯೩೭

## ರೈತ ಸಂಘಟನೆ

ಇದೇ ತಾ. 13 ಮತ್ತು 14ರಲ್ಲಿ ಮೂಲ್ಕಿಯಲ್ಲಿ ಜರಗಲಿರುವ ದ. ಕ. ಜಿಲ್ಲಾ ಕೃಷಿಕ ಪರಿಷತ್ತಿನ ಪ್ರಕಟಣೆಯು ಈ ಸಂಚಿಕೆಯ ಬೇರೊಂದೆಡೆಯಲ್ಲಿ ಬಂದಿದೆ. ಕಳೆದ ವರುಷ ಪಾಣೆಮಂಗಳೂರಿನಲ್ಲಿ ಜರಗಿದ್ದ ಜಿಲ್ಲಾ ರಾಜಕೀಯ ಪರಿಷತ್ತು ಮತ್ತು ಅದರ ಅಂಗವಾಗಿ ಸೇರಿದ್ದ ರೈತ ಸಮ್ಮೇಳನವು ನಿರೀಕ್ಷಿಸಿದ್ದಷ್ಟು ಸತ್ಪರಿಣಾಮಕಾರಿಯಾಗಿರಲಿಲ್ಲ. ಇಂತಹ ಕಟು ಅನುಭವಗಳು ದ. ಕ. ಜಿಲ್ಲೆಯ ಪಾಲಿಗೆ ಮಾತ್ರವಾಗಿರದೆ, ರಾಷ್ಟ್ರದ ಸಾರ್ವಜನಿಕ ಜೀವನದಲ್ಲೆಲ್ಲಾ ಇದ್ದವುಗಳೇ. ನಮ್ಮ ಸಂಘ, ಸಂಸ್ಥೆ, ಸಭೆ ಸಮ್ಮೇಳನಗಳು ಪ್ರಚಾರ ಮೌಲ್ಯಕ್ಕಿಂತ ಹೆಚ್ಚಿನ ಬೆಲೆ ಬಾಳುವ ಕಾರ್ಯಕ್ಕೆಳೆಯುವುದರಲ್ಲಿ ತೀರ ಹಿಂದಿವೆ ಎಂಬುದು ಅನುಭವಸಿದ್ಧ ವಿಷಯ. ಕೇವಲ ಜನಮತ ಪ್ರದರ್ಶನದಿಂದಲೇ ಆಗುವಂತಹ ಕಾರ್ಯಗಳೆಷ್ಟೋ ಇವೆ; ಆದರೆ ರೈತ ಸಂಘಟನೆಯು ಅಂಥವುಗಳ ಪಂಗ್ತಿಗೆ ಸೇರುವಂತಹದಲ್ಲ. ಪ್ರಚಾರ ಕ್ಷೇತ್ರದಂತೆಯೇ ಪ್ರತ್ಯಕ್ಷ ಕಾರ್ಯರಂಗದಲ್ಲೂ ವಿಶೇಷ ರೀತಿಯಿಂದ ದುಡಿದೇ ರೈತರನ್ನು ಸಂಘಟಿಸಬೇಕಲ್ಲದೆ, ಅರೆಮನಸ್ಸಿನ ಅರ್ಧಮರ್ಧ ಪ್ರಯತ್ನದಿಂದ ಕೆಲಸವಾಗದು. ಭಾರತದ ಜನತೆಯ ಅಧಿಕ ಸಂಖ್ಯಾತರು ಪ್ರತ್ಯಕ್ಷಾಪ್ರತ್ಯಕ್ಷವಾಗಿ ಬೇಸಾಯವನ್ನೇ ಅವಲಂಬಿಸಿರುವವರು. ರಾಷ್ಟ್ರದ ಶ್ರಮಜೀವಿ, ಬಡಜನ ವರ್ಗಗಳ ಪೈಕಿ ರೈತ ವರ್ಗವೇ ದೊಡ್ಡದು. ಆದರೆ ಗಿರಣಿಗಳ, ಕಾರ್ಖಾನೆಗಳ, ಪೇಟೆ ಪಟ್ಟಣಗಳ ವಿವಿಧ ವರ್ಗದ ಮಜೂರರು ಇಂದು ಸಂಘಟನೆಗೊಂಡಿರುವಂತೆ ಕೃಷಿಕರು ಸಂಘಟನೆಗೊಂಡಿಲ್ಲ. ಮಿಕ್ಕ ಮಜೂರ ವರ್ಗಗಳು ಒಕ್ಕಟ್ಟಿನ ಬಲದಿಂದ ತಮ್ಮ ಸಂಕಷ್ಟಗಳ ನಿವಾರಣೆಗಾಗಿ ಚಳವಳಿಸುತ್ತಿರುವಂತೆ ರೈತವರ್ಗದ ಚಳವಳಿಗಳಿಲ್ಲ. ನಿದರ್ಶನಕ್ಕಾಗಿ ದ. ಕ. ಜಿಲ್ಲೆಯನ್ನೇ ನೋಡಬಹುದು ಹಂಚು ಕೆಲಸಗಾರರು, ಬೀಡಿ ಕೆಲಸಗಾರರು, ನೇಗಾರರು, ಮೋಟಾರು ಕೆಲಸಗಾರರೇ ಮೊದಲಾದ ಸಣ್ಣಪುಟ್ಟ ಶ್ರಮಜೀವಿ ವಿಭಾಗಗಳು, ಯಾವ ವಿಧಾನದಿಂದಾದರೂ ಒಂದಲ್ಲೊಂದು ಸಂದರ್ಭದಲ್ಲಿ ಸಂಘ ಮೂಲಕ ಚಟುವಟಿಕೆ ಪ್ರದರ್ಶಿಸಿದುದಿದೆ ಆದರೆ ಇಲ್ಲಿಯ ಮುಖ್ಯ ಕೆಲಸಗಾರ ವರ್ಗ ರೈತರು ಮಾತ್ರ ಅಂತಹ ಚೇತನವನ್ನು ಎಂದಿಗೂ ತೋರಿಸಿದುದಿಲ್ಲ. ರಾಷ್ಟ್ರಜೀವಾಳವಾಗಿರುವ ರೈತರಿಗಂತಹ ಪ್ರಾಮುಖ್ಯತೆಯಿಲ್ಲವೆನ್ನೋಣವೆ? ಅದು ತೀರಾ ಅಸಂಗತವಾದೀತು. ಕೃಷಿ ಪ್ರಧಾನ ರಾಷ್ಟ್ರ ಭಾರತದಲ್ಲಿ ರೈತರಿಗೆ ಸರ್ವಪ್ರಥಮ ಸ್ಥಾನವು ಸದಾ ಕಾಲಕ್ಕೂ ಮೀಸಲಿರುವಂತಹದೇ. ಆಹಾರ ಸ್ವಾವಲಂಬನೆಯ ನಿಶ್ಚಿತ ಗುರಿಯಿಟ್ಟುಕೊಂಡು, ಪ್ರತಿಯೊಂದಿಂಚು ನೆಲವೂ ಆಹಾರಾಭಾವ ನಿವಾರಣಾ ಯುದ್ಧದ ಕಣವಾಗಿ ಮಾರ್ಪಡಬೇಕು-ಪ್ರತಿಯೊಬ್ಬನೂ ಈ ಸಮರದ ಯೋಧನಾಗಬೇಕು.-ಎಂಬ ಡಂಗುರ ಕೇಳಿ ಬರುತ್ತಿರುವ ಈ ಕಾಲದಲ್ಲಂತೂ ಮೂಲ ಸೇನೆ ಕೃಷಿಕ ವರ್ಗದ ಪ್ರಾಮುಖ್ಯತೆ ಬಹಳ ಹೆಚ್ಚಿದೆ. ರೈತರು ಒಕ್ಕಟ್ಟಾಗಿ ಚಳವಳಿಸುವ ಆವಶ್ಯಕತೆಯೇ ಇಲ್ಲವೆನ್ನೋಣವೆ? ನಿಯಂತ್ರಣದ ಮತ್ತು ಅಧಿಕಾಹಾರೋತ್ಪನ್ನ ಚಳವಳಿಯ ಈ ಕಾಲದಲ್ಲಿ ರೈತರ ಜೀವನ ಮತ್ತು ವೃತ್ತಿಗೆ ಬಂದೊದಗಿರುವ ಅಡ್ಡಿ ಅಡಚಣೆಗಳು ಅಗಣಿತವಿದ್ದು ಸಂಘಟನಾ ಬಲದಿಂದಲೇ ಅವುಗಳನ್ನು ನಿವಾರಿಸಿಕೊಳ್ಳಬೇಕಾದ ಆವಶ್ಯಕತೆ ದೀರ್ಘ ಕಾಲದಿಂದ ಇದೆ. ರೈತರಲ್ಲಿ ಸಂಘಟನಾ ಅಭಿರುಚಿಯೇ ಇಲ್ಲವಾದ್ದರಿಂದ, ಅವರು ಸಾಂಘಿಕ ನೊಗಕ್ಕೆ ಹೆಗಲೊಡ್ಡುವವರಲ್ಲವೆನ್ನೋಣವೆ? ಈ ಸ್ವಾತಂತ್ರ್ಯಯುಗದಲ್ಲಿ ಬೇರೇನಿಲ್ಲದಿದ್ದರೂ ವಾರ್ತಾಪ್ರಸಾರವಧಿಕಗೊಂಡು, ಜನತೆಯಲ್ಲಿ ಅಸ್ತವ್ಯಸ್ತ ಜಾಗ್ರತಿಯಾದರೂ ಉಂಟಾಗಿರುವಾಗ ಕೃಷಿಕರು ಈ ಪ್ರಪಂಚವನ್ನೇ ಬಿಟ್ಟವರಂತಿಲ್ಲ. ಆದರೂ ದೇಶದ ಇತರ ಕಡೆಗಳಂತೆ ದ. ಕ. ಜಿಲ್ಲೆಯಲ್ಲೂ ರೈತಸಂಘಟನೆ ಸಾಕಷ್ಟು ನಡೆದಿಲ್ಲವಾದರೆ, ಅಂತಹ ಸಂಘಟನಾ ಕಾರ್ಯ ಮಾಡುವವರಿಲ್ಲದಿರುವುದೇ ಅದಕ್ಕೆ ಕಾರಣ. 'ಕಿಸಾನ್ ಸಭಾ' 'ಕಿಸಾನ್ ಸಂಘ' 'ಕಿಸಾನ್ ಪಂಚಾಯತಿ' 'ರೈತ ಸಂಘ' ದಂತಹ ಹೆಸರುಗಳು ಈ ಜಿಲ್ಲೆಯಲ್ಲೂ ಕೇಳಬರುತ್ತಿರುವುದೇನೋ ನಿಜ. ಆದರೆ ಇವು ಒಂದಲ್ಲೊಂದು ರಾಜಕೀಯ ಅಥವಾ ರಾಜಕೀಯೇತರ ಉದ್ದೇಶಗಳನ್ನು ಕಟ್ಟಿಕೊಂಡ ಕೆಲಮಂದಿ ಸಾರ್ವಜನಿಕ ಜೀವಿಗಳು, ರಾಜಕಾರಿಣಿಗಳಿಗೆ ತಾಗಿಕೊಂಡಿರುವ ರೈತರುಗಳ ಹೆಸರುಗಳನ್ನಷ್ಟೇ ಸಂಗ್ರಹಿಸಿ, ನೇತಾಡಿಸಿಕೊಂಡ ಬಿಲ್ಲೆಗಳು ಮಾತ್ರವೆಂದರೆ ಅತಿಶಯೋಕ್ತಿಯಾಗದು. ಪೇಟೆ, ಪಟ್ಟಣಗಳ ಮಜೂರರನ್ನು ಸಂಘಟಿಸಿದಷ್ಟು ಸುಲಭದಲ್ಲಿ ಹಳ್ಳಿಯ ರೈತರನ್ನು ಸಂಘಟಿಸಲು ಸಾಧ್ಯವಿಲ್ಲ-ಈ ಕಷ್ಟಸಾಧ್ಯ ಕೆಲಸ ನೆರವೇರಿಸಬಲ್ಲ ಕಠಿಣ ಕಾರ್ಯಕರ್ತರು ಮುಂದೆ ಬಂದಿಲ್ಲ-ಆದ್ದರಿಂದಲೇ ರೈತ ಸಂಘಟನೆ ತೀರಾ ಹಿಂದೆ ಬಿದ್ದಿದೆ, ಎಂಬುದು ವಸ್ತುಸ್ಥಿತಿ. ಮೂಲ್ಕಿಯ ಕಾರ್ನಾಡಿನಲ್ಲಿ ಸೇರಲಿರುವ ಕಿಸಾನ್ ಪರಿಷತ್ತು ಈ ಅತ್ಯಾವಶ್ಯ, ಶ್ರಮಸಾಧ್ಯ ಕಾರ್ಯಕ್ಕೆ ಪೀಠಿಕೆಯಾಗುವದೆಂದು ನಿರೀಕ್ಷಿಸಬಹುದೆ? ಪರಿಷತ್ತು ಸೇರುವ ಮುಖ್ಯೋದ್ದೇಶವಿದೇ ಎಂದು ಸಂಬಂಧಪಟ್ಟ ಪ್ರಕಟಣೆಗಳಲ್ಲಿದೆ. ರೈತ ಹಿತಸಾಧಕ ಕಾನೂನಿನ ಬೇಡಿಕೆಯಂತಹವು ಪರಿಷತ್ತಿನಲ್ಲಿ ಸರಿಯಾಗಿ ಪರ್ಯಾಲೋಚಿಸಲ್ಪಟ್ಟೇ ತೀರ್ಮಾನ ಹೊಂದಬೇಕಾದ ವಿಷಯಗಳಾದ್ದರಿಂದ ಇಲ್ಲಿ ವಿಮರ್ಶೆ ಅಪ್ರಾಸಂಗಿಕ. ಆದರೆ ರೈತರನ್ನಿಸಿಕೊಳ್ಳಬಲ್ಲ ಕೆಲವರನ್ನು ಒಂದೆರಡು ದಿನಗಳ ಮಟ್ಟಿಗೆ ಒಟ್ಟುಗೂಡಿಸಿ, ಅವಸರಾವಸರಗಳಿಂದ ನಿರ್ಣಯಗಳನ್ನು ಮಾಡಿಸಿಕೊಂಡ ಮಾತ್ರಕ್ಕೆ ಇಚ್ಛಿತ ಪರಿಣಾಮವಾದೀತೆಂದು ಆಶಿಸಲು ಸಾಧ್ಯವಿಲ್ಲ. ಒಕ್ಕಲೆಬ್ಬಿಸದಂತೆ ಪ್ರತಿಬಂಧಕ ಶಾಸನ ಮಾಡುವ ಆವಶ್ಯಕತೆಯೇನಿದೆ? ಅಂತಹ ಅತ್ಯಾಚಾರವಾಗುತ್ತಿದೆಯೆಂಬುದಕ್ಕೆ ನಿದರ್ಶನಗಳೆಲ್ಲಿವೆ? ಇಂತಹ ಶಾಸನದ ಬೇಡಿಕೆಗೆ ಜನಮತ ಬೆಂಬಲವೆಷ್ಟಿದೆ? ಎಂಬಂತಹ ಪ್ರಶ್ನೆಗಳನ್ನು ಕಳೆದ ವಾರ ದ. ಕ. ಜಿಲ್ಲೆಯಲ್ಲಿ ಸಂಚರಿಸಿದ್ದ ಮದ್ರಾಸ್ ಮಂತ್ರಿಗಳು ಕೇಳಿದ್ದರು. ವರುಷಕ್ಕೊಮ್ಮೆ, ಒಂದೆರಡು ದಿನಗಳ ಮಟ್ಟಿಗೆ ಸೇರುವ ಕೃಷಿಕ ಸಮ್ಮೇಳನವು ಈ ಮಾದರಿಯ ಎಲ್ಲಾ ಸಂದೇಹ ಮತ್ತು ಆಕ್ಷೇಪಾತಂಕಗಳನ್ನು ಎಲ್ಲಾ ಸಂದರ್ಭಗಳಿಗೂ ಆಗುವ ರೀತಿಯಲ್ಲಿ ನಿವಾರಿಸಿ ಬಿಡುವದೆಂದು ನಿರೀಕ್ಷಿಸಲು ಸಾಧ್ಯವಿದೆಯೆ? ಹಾಗಾಗಬೇಕಾದರೆ ಸುವ್ಯವಸ್ಥಿತ ಹಾಗೂ ಪ್ರಾತಿನಿಧ್ಯ ಸ್ವರೂಪವುಳ್ಳ ರೈತ ಸಂಘವಿರಬೇಕು. ಗ್ರಾಮ ಗ್ರಾಮಗಳಲ್ಲಿ ಮತ್ತು ತಾಲೂಕುವಾರು ಶಾಖೆಗಳುಳ್ಳ ಜಿಲ್ಲಾ ಕೃಷಿಕ ಸಂಘ ಸ್ಥಾಪನೆಗೊಳ್ಳಬೇಕು, ಚುನಾವಣೆಗಳ ಕಾಲದಲ್ಲಿ ವೋಟರರನ್ನೊಲಿಸಲು ಮೇಲಿಂದ ಮೇಲೆ ಮನೆ ಮನೆ ತಿರುಗುವ ಶ್ರಮ ವಹಿಸುವ ಮಾದರಿಯಲ್ಲೇ ರೈತ ಸಂಘಟನೆಗಾಗಿ ದುಡಿಯುವವರಿದ್ದರೆ, ಇಂತಹ ಸಂಘ ಸ್ಥಾಪನೆಯು ಅಸಾಧ್ಯವೇನೂ ಅಲ್ಲ. ಮೂಲ್ಕಿಯ ಪರಿಷತ್ತು ಈ ಕಾರ್ಯ ವ್ಯವಸ್ಥೆಯನ್ನು ರೂಪಿಸಬಲ್ಲುದಾದರೆ ಅದು ನಿಜಕ್ಕೂ ಸಾರ್ಥಕವಾದೀತು. ಇದಕ್ಕಿಂತ ಕಡಿಮೆಯದೇನಾದರೂ ನಡೆದರೆ ಅದಕ್ಕಾವ ಮೌಲ್ಯವೂ ಇಲ್ಲವೆಂಬ ಅರ್ಥವಲ್ಲ. ಕಾರ್ಯದ ಪರಿಮಾಣವನ್ನನುಸರಿಸಿ, ಪ್ರತಿಫಲವಿದ್ದೇ ಇದೆ. ಆದರೆ ವಿಸ್ತೃತ, ಶಾಶ್ವತ, ಹಾಗೂ ಸಶಕ್ತ ರೈತ ಸಂಘದ ಸ್ಥಾಪನೆಯಾದ ವಿನಹ ರೈತ ಹಿತಸಾಧಕ ಕಾರ್ಯಗಳು ಪೂರ್ಣಗೊಳ್ಳಲಾರವೆಂಬುದು ಖಂಡಿತ. ಮೂಲ್ಕಿ ಪರಿಷತ್ತು ಇಂತಹ ಪರಿಣಾಮಕಾರೀ ಕಾರ್ಯಕ್ಕೆ ಅಸ್ತಿವಾರ ಹಾಕುವಂತೆ ಮಾಡಲು, ರೈತರೆಲ್ಲರೂ ಅದರಲ್ಲಿ ಭಾಗಿಗಳಾಗಲಿ-ಪರಿಷತ್ತು ಜಯಶೀಲವಾಗಲಿ-ಎಂದು ಹಾರೈಸುತ್ತೇವೆ.

---

## ಮಂತ್ರಿ ಸಂಚಾರ—

ಮದ್ರಾಸ್ ಸರಕಾರದ ಮಂತ್ರಿಗಳಿಬ್ಬರ—ಸಾರ್ವಜನಿಕ ಕಾಮಗಾರಿ ಹಾಗೂ ಸುದ್ದಿ ಖಾತೆಯ ಮಂತ್ರಿ ಮಾನ್ಯ ಶ್ರೀ ಎಂ. ಭಕ್ತವತ್ಸಲಮ್ ಮತ್ತು ಬೇಸಾಯ ಖಾತೆಯ ಮಂತ್ರಿ ಮಾನ್ಯ ಶ್ರೀ ಎ. ಬಿ. ಶೆಟ್ಟಿ, ಇವರು—ಕಳೆದ ಇಡೀ ಒಂದು ವಾರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಚರಿಸಿ ಹೋದರು. ಏಳು ದಿನಗಳಲ್ಲಿ ಜಿಲ್ಲೆಯ ಆರು ತಾಲೂಕುಗಳಿಗೂ ಮಂತ್ರಿ ದ್ವಯರ ಭೇಟೀ ಯೋಗ ದೊರೆತಿದ್ದಿತು.

ಈ ಭೇಟಿಯ ಸಾಮಾನ್ಯ ಸ್ವರೂಪ ಮತ್ತು ಅದರ ಜಯಾಪಜಯಗಳ ಸ್ಥೂಲ ಅಂದಾಜಿನ ನೋಟ ಇಲ್ಲಿದೆ:—

ಥಿಯೇಟರು, ಬಸ್ ರೂಮ್ಯಾಗಳಂಥವುಗಳ ಉದ್ಘಾಟನೆ-ಸಂತ, ಸೇತುವೆ, ಮದಗ, ಕೆರೆ, ಅಣೆಕಟ್ಟು, ಛತ್ರದಾಸ್ಪತ್ರೆ, ಇತ್ಯಾದಿಗಳ ಸಂದರ್ಶನ—ಖಾಸಗೀ ಮಹನೀಯರ, ಕಾಂಗ್ರೆಸಿಗರ ಮತ್ತು ವ್ಯಾಪಾರೀ ಸಂಘ, ರೈತ ಕೂಟಗಳ ಭೇಟಿ—ಇವು ಮಂತ್ರಿದ್ವಯರ ಈ ಸಲದ ಮುಖ್ಯ ಕಾರ್ಯಕ್ರಮಗಳು.

ಈಗಿನ ಮದ್ರಾಸ್ ಸರಕಾರವು ದಕ್ಷಿಣಕನ್ನಡ ಜಿಲ್ಲೆಗೆ ಮಾಡಿರುವ ಮತ್ತು ಮಾಡಲಿರುವ ಉಪಕಾರ ಹಾಗೂ ಸಾಕಾರ್ಯಗಳನ್ನು ತಿಳಿಸಿದುದು—ಕೆಲವು ಪತ್ರಿಕೆಗಳ ಹೀನಮಟ್ಟ ಮತ್ತು ಕುತ್ಸಿತಟೀಕಾ ಸ್ವಭಾವವನ್ನು ಖಂಡಿಸಿದುದು—ಅಧಿಕ ಆಹಾರೋತ್ಪನ್ನ ಮತ್ತು ಕಾಂಗ್ರೆಸ್ ಆಡಳಿತೆಯೊಂದಿಗೆ ಪೂರ್ಣ ಸಹಕಾರವನ್ನು ಜನತೆಯಿಂದ ಆಶಿಸಿದುದು—ಇವು ಮಂತ್ರಿಗಳಿಂದ ಈ ಬಾರಿ ಆಗಿರುವ ಮುಖ್ಯ ಪ್ರಚಾರ ಕಾರ್ಯಗಳು.

ಇಬ್ಬರು ಮಂತ್ರಿಗಳ ಜಿಲ್ಲಾ ಸಂಚಾರವು ಯಶಸ್ವಿಯಾದುದೆಷ್ಟು ಎಂದು ವಿಮರ್ಶಿಸುವ ಅಂಶಗಳಿವೆ—ಕೇವಲ ಶ್ಲಾಘನೆ ಸಲ್ಲಿಸುವಂತಿಲ್ಲ.

ಮೊದಲನೆಯದಾಗಿ ಕಾಂಗ್ರೆಸ್ ಮಂತ್ರಿಗಳ ಈ ಕಾಲದ ಕರ್ತವ್ಯವೇನು? ಬ್ರಿಟಿಷ್ ಆಡಳಿತೆ ಕಾಲದ ಅಧಿಕಾರಿಗಳು ತೋರಿಸುತ್ತಿದ್ದಂತಹ ಘನಸ್ಥಿಕೆಯನ್ನೇ ಕಾಂಗ್ರೆಸ್ ಮಂತ್ರಿಗಳೂ ಇಂದೇಕೆ? ಅಥವಾ ಜನತೆಯೊಡನೆ ಸಲುಗೆಯ ಸಂಬಂಧವಿಟ್ಟುಕೊಂಡು ಸಂಚರಿಸಬೇಕೆ? ಹಿಂದಿನವರಂತೆ ಅಪೂರ್ವವಾಗಿ ಭೇಟಿ ಕೊಡಬೇಕೆ? ಇಂದಿನಂತೆ ಆಗಾಗ ಸಂದರ್ಶನವೀಯುವುದು ಅಗತ್ಯವೇ? ಕಾಂಗ್ರೆಸ್ ಮಂತ್ರಿಗಳ ಸಂಚಾರದಿಂದ ಆದ ಪ್ರಯೋಜನಗಳೇನು? ಅವರು ಸಾರ್ವಜನಿಕರಲ್ಲಿ ಸದ್ಭಾವನೆಯನ್ನು ನಿರ್ಮಿಸಿದರೆ? ದುರ್ಭಾವನೆಗನೆಳಸ್ಸೋ ಮೊದಲಾದ ಪ್ರಶ್ನೆಗಳ ಒರೆಗಲ್ಲಿನಿಂದ ಪರೀಕ್ಷಿಸಿಯೇ ಮಂತ್ರಿಗಳ ಸಂಚಾರದ ಜಯಾಪಜಯಗಳನ್ನು ಗೊತ್ತುಹಚ್ಚಬೇಕು.

ಜನಸಾಮಾನ್ಯರ ಬುದ್ಧಿ ಮತ್ತು ಹೃದಯಮಟ್ಟವು ಸಾಕಷ್ಟು ಎತ್ತರಕ್ಕೇನೂ ಬಂದಿಲ್ಲವಾದರಿಂದ, ಕಾಂಗ್ರೆಸ್ ಮಂತ್ರಿಗಳು ಇದ್ದಲ್ಲೇ ಇದ್ದು ಬಿಟ್ಟರೂ ಟೀಕೆ-ಆಗಾಗ ಸಂಚಾರಹೊರಟರೂ ಟೀಕೆ ತಪ್ಪಿದ್ದಲ್ಲ. ಜನತೆಯ ಸುಖದುಃಖಗಳನ್ನು ಅರಿತುಕೊಳ್ಳುವುದಕ್ಕಾಗಿ ಜನತಾ ಸಂಪರ್ಕ

## —ಒಂದು ನೋಟ.

ವಿಟ್ಟುಕೊಳ್ಳುವುದಕ್ಕಾಗಿ, ಮಂತ್ರಿಗಳಾದ ವರಿಗೆ ಸದಾ ಕಾಲ ಸಾರ್ವಜನಿಕರ ನಡುವೆಯೇ ಇರಲು ಸಾಧ್ಯವಾದರೂ ಕೂಡಾ ತಾತ್ಪರ್ಯವಿಲ್ಲ. ಆದರೆ ನಮ್ಮಲ್ಲಿಗೆ ಬಂದ ಬಂದ ಮಂತ್ರಿಗಳೆಲ್ಲರೂ ಸಾರ್ವಜನಿಕರ ಪೈಕಿ ಪೂರ್ವ ನಿಶ್ಚಿತ ಸಣ್ಣ ವಿಭಾಗವೊಂದರೊಡನೆಯೇ ಸಂಪರ್ಕ ಬೆಳೆಸಿ ಮರಳುತಿದ್ದಾರಲ್ಲದೆ ಸಾರ್ವಜನಿಕರೊಡನಲ್ಲ. ದೃಷ್ಟಾಂತಕ್ಕಾಗಿ ಈ ಬಾರಿಯ ಮಂತ್ರಿದ್ವಯರ ಭೇಟಿಗಾಗಿ 'ರೈತರಸಭೆ' ಯೆಂಬ ಹೆಸರಿನಿಂದ ಕರೆಯಲ್ಪಟ್ಟಿದ್ದ ಸಭೆಗಳನ್ನೇ ತೋರಿಸಬಹುದು. ಅಂತಹ ಸಭೆಗಳಲ್ಲಿ ಕಂಡು ಬಂದುದು ಅಧಿಕಾರಿಗಳು, ಮಂತ್ರಿಗಳನ್ನು ಬಳಸಿಕೊಂಡು ಬಂದ ಪೇಟೆ ಪಟ್ಟಣಗಳ ಶ್ರೀಮಂತರು ಮತ್ತು ಕೆಲವು ದೊಡ್ಡ ವರ್ಗದಾರರೇ ಹೊರತು ಸಾಮಾನ್ಯ ರೈತರಲ್ಲ. ಅಲ್ಲಿ ಮಂತ್ರಿಗಳಾದರೋ ತಮ್ಮ ನಿತ್ಯದ ಪಲ್ಲವಿಗಳನ್ನೇ ಹಾಡಿದ್ದರು ಹೊರತು ಪ್ರತ್ಯಕ್ಷ ಕೃಷಿಗೆ ಸಂಬಂಧಿಸುವ ವಿಷಯಗಳ ಕಡೆಗೆ ಸಾಕಷ್ಟು ಪ್ರಕಾಶ ಚೆಲ್ಲಲಿಲ್ಲ.

ಜನಸಾಮಾನ್ಯರ ಸಾಲಿಗೆ ಮಂತ್ರಿಗಳ ಷ್ಟೇ ದೂರದಲ್ಲಿರುವ ಒಂದು ವರ್ಗದ ಜನತೆಯೊಡನೆ ಮಂತ್ರಿಗಳು ಪ್ರತ್ಯಕ್ಷ ಸಂಬಂಧ ಬೆಳೆಸಿದ ಮಾತ್ರಕ್ಕೆ ಜನತಾ ಸಂಪರ್ಕ ಬೆಳೆಸಿದಂತಲ್ಲ. ಮಂತ್ರಿಗಳ ಈ ಬಾರಿಯ ಸಭೆ, ಸಮ್ಮೇಳನಗಳು ಕೂಡಾ ಹೆಚ್ಚಿನಂಶ ಖಾಸಗೀ ರೂಪದಲ್ಲಿದ್ದುವೇ ಹೊರತು ಸಾರ್ವಜನಿಕವಾಗಿರಲಿಲ್ಲ. ಒಂದೋ ಗತಕಾಲದ ಪರಕೀಯ ಸರಕಾರದ ಮಾದರಿಯಲ್ಲಿ ಅಧಿಕಾರ ಘನತೆಯಿಟ್ಟುಕೊಂಡು ಅಧಿಕಾರಿಗಳ ಮತ್ತು ಲಕ್ಷ್ಯಕೊಟ್ಟಂತಾಗಿಯೇ ಬಂದು ಹೋಗಬೇಕು; ಅಥವಾ ಕಾಂಗ್ರೆಸ್ ಮಂತ್ರಿಗಳ ಕರ್ತವ್ಯಾನುಸಾರವಾಗಿ, ಸಾರ್ವಜನಿಕರೊಡನೆ ಸಾರ್ವಜನಿಕ ರಂಗದಲ್ಲೇ ಬೆರೆತು, ಸಾರ್ವಜನಿಕರಲ್ಲಿ ಆಶೆ, ಹುರುಪನ್ನು ನಿರ್ಮಿಸಿಹೋಗಬೇಕು. ನಮ್ಮ ಮಂತ್ರಿಗಳ ಸಂಚಾರವಿಧಾನವು ಇವೆರಡರ ಪೈಕಿ ಯಾವ ವರ್ಗಕ್ಕೂ ಸೇರುವಂತಹದಲ್ಲ. ಹಿಂದಿನ ಕಾಲದ ಮಂತ್ರಿಗಳಂತೆ ಸಣ್ಣ ಗುಂಪಿನೊಡನೆ ವಹಿವಾಟು-ಕಾಂಗ್ರೆಸ್ ಮಂತ್ರಿಗಳ ಸಲುಗೆಮನೋವೃತ್ತಿ-ಇವೆರಡರ ಸಮ್ಮಿಶ್ರಣದಿಂದ ಈಗೀಗ ಮಂತ್ರಿ ಭೇಟಿಯ ಆಕರ್ಷಣೆ ಕುಂದಿದೆ; ಪರಿಣಾಮ ಕುಗ್ಗಿದೆ.

ನೀರಾವರಿ, ಸಂಕಸೇತುವೆಗಳಂತಹ ಸರ್ವ ಜನೋಪಯುಕ್ತ ಸ್ಥಳಗಳನ್ನೂ ಈ ಬಾರಿ ಮಂತ್ರಿಗಳು ಸಂದರ್ಶಿಸಿದ್ದರು; ಹಲವು ಉಪಯುಕ್ತ ಭರವಸೆಗಳನ್ನೂ ಕೊಟ್ಟಿದ್ದರೆಂಬುದೇನೋ ನಿಜ. ಆದರೆ ಮಂತ್ರಿಗಳ ಸ್ಥಳ ಸಂದರ್ಶನೆಯಿಂದಾಗಲೀ ಆಶ್ವಾಸನೆಗಳಿಂದಾಗಲೀ ಪೂರ್ವ ನಿಶ್ಚಯಕ್ಕಿಂತ ಹೆಚ್ಚಿನದೇನೂ ಆಗಲಾರದೆಂಬುದು ಖಂಡಿತ. ಅಂದ ಮೇಲೆ ಇವೆಲ್ಲವೂ ಬಂದುದಕ್ಕಾಗಿ ಮಾಡಿದ ಕಾರ್ಯಗಳೇ ಹೊರತು, ಈ ಕಾರ್ಯಗಳಿಗಾಗಿ ಈ ಆಗಮನವೇನೂ ಅಲ್ಲ.

'ಟೀಕೆ ಬಿಡಬೇಕು' ಎಂದು ಜನತೆಗೆ ಕೊಟ್ಟ ಉಪದೇಶ–ಆದಲ್ಲಲ್ಲಿ ಹೋದಲ್ಲೆಲ್ಲಾ ಪತ್ರಿಕಾ ಟೀಕೆಗಳ ಕುರಿತು ಹೊರಡಿದ ವಾಗ್ಬಾಣ–ಈ ಬಾರಿಯ ಸಂಚಾರೀ ಸಚಿವರ ವೈಶಿಷ್ಟ್ಯವೆನ್ನಬಹುದು. ಚುನಾವಣೆ ಸನ್ನಿಹಿತವಾಗಿರುವ ಈ ಕಾಲದ ಮತ್ತು ಕೆಲವು ಪತ್ರಿಕೆಗಳ ಸ್ವಭಾವ ಮಟ್ಟದ ಮೇಲಿಂದ ಮಂತ್ರಿಗಳ ಈ ಉಪದೇಶಗಳು ಅಸಹಜವೇನೂ ಅಲ್ಲ. ಆದರೆ ಮಂತ್ರಿಗಳು ಕೂಡಾ ನಿಸ್ಸಹಾಯಕರಂತೆ ಬಾಯಿ ಮೂಲಕ ಸ್ವಸಮರ್ಥನೆ ಮಾಡಿಕೊಳ್ಳುವ ಬದಲಿಗೆ ಕಾರ್ಯ ಮೂಲಕವೇ ಜನಪ್ರಿಯತೆ ಗಳಿಸಿಕೊಳ್ಳುವದಗತ್ಯವೆಂಬುದನ್ನು ಮರೆಯಬಾರದು.

ಸದ್ಯ ಸ್ಥಿತಿಯಲ್ಲಿ ಕಾಂಗ್ರೆಸ್ ಮತ್ತು ಕಾಂಗ್ರೆಸ್ ಮಂತ್ರಿಗಳು ಸಹಜ ವಿಧಾನಗಳಿಂದ ಜನಪ್ರಿಯತೆ ಗಳಿಸಿಕೊಳ್ಳುವುದಗತ್ಯವಿರುವದರಿಂದ, ಈ ದೃಷ್ಟಿಯಿಂದಲೇ ಮಂತ್ರಿದ್ವಯರ ದ. ಕ. ಜಿಲ್ಲಾ ಸಂಚಾರದ ಹಿತಾಹಿತಗಳನ್ನು ಅವಲೋಕಿಸಲಾಗಿದೆ ಹೊರತು ಇಲ್ಲಿ ಅನ್ಯೋದ್ದೇಶವಿಲ್ಲ.

ಸರ್ವ ಸಾಮಾನ್ಯ ರೀತಿಯಿಂದ ಈ ಸಂಚಾರವು ಜಯಶೀಲವಾಗಿದೆ ಎಂಬುದನ್ನೊಪ್ಪಬಹುದು.

---

### ತಿದ್ದುಪಡಿ

ಕಳೆದ ವಾರ ಪ್ರಕಟವಾದ, ನಿಧನ ವಾರ್ತೆಯಲ್ಲಿ 'ಶ್ರೀ ಬಿ. ಮುದ್ದಣ್ಣ ಸೆಟ್ಟರ ಸಹಧರ್ಮಿಣಿ' ಎಂದಿದ್ದ ಕಡೆ ಈ ರೀತಿ ತಿದ್ದಿಕೊಳ್ಳತಕ್ಕದ್ದು:—ಶ್ರೀ ಮುದ್ದಣ್ಣ ಸೆಟ್ಟಿ ಉಡ್ಪಿಕರ್', ಇವರ ಸಹಧರ್ಮಿಣಿ ಶ್ರೀಮತಿ ದೊಡ್ಡಕ್ಕ ಯಾನೆ ರಾಜಮ್ಮ ಸೆಟ್ಟಿಯರು ತನ್ನ 33ನೇ ವಯಸ್ಸಿನಲ್ಲಿ 11ನೇ ಪ್ರಸವಾನಂತರ ಕಾಹಿಲೆಗೀಡಾಗಿ ಎಪ್ರಿಲ್ ತಾ. 15ರಲ್ಲಿ ಅಕಾಲ ನಿಧನಗೊಂಡರು. ಮರುದಿನ ಅವರ ಶವಯಾತ್ರೆಯು ವಿಜೃಂಭಣೆಯಿಂದ ಜರಗಿತು. ಶ್ರೀಮತಿಯವರು ಪತಿಸೇವೆ ಮತ್ತು ಪುತ್ರ ಪುತ್ರಿಯರ ಆರೈಕೆಯಲ್ಲಿ ಮಾದರೀ ಗೃಹಿಣಿಯಾಗಿದ್ದರು. ಅವರ ಆತ್ಮಕ್ಕೆ ಶಾಂತಿ ಕೋರುತ್ತೇವೆ.

**ಹರಿಜನ ದಿನಾಚರಣೆ:**— ಉಡುಪಿಯ ಪುತ್ತೂರು ಹರಿಜನ ಕೊಲನಿಯ ಬಳಿ ಎಪ್ರಿಲ್ ತಾ. 30ರಲ್ಲಿ ಹರಿಜನ ದಿನಾಚರಣೆ ನಡೆಯಿತು. ಉಡುಪಿ ಸರ್ಕಲ್ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಕೆ. ನರಹರಿ ಕಾಮತರ ನೇತೃತ್ವದಲ್ಲಿ ಹರಿಜನರ ಸಮೇತ ಸ್ಥಳೀಯ ಹೋಟೇಲುಗಳ ಪ್ರವೇಶ ನಡೆದು ಪ್ರಚಾರ ಕಾರ್ಯವಾಯಿತು. ಆ ಮೇಲೆ ಶ್ರೀ ಕೆ. ನರಹರಿ ಕಾಮತರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಶ್ರೀ ಬಿ. ಬಿ. ಕುಂದರರಿಂದ ವರದಿವಾಚನ ನಡೆದು ಶ್ರೀ ಯು. ನಾಗಪ್ಪ ಕಾಮತ್, ಶ್ರೀ. ಪಿ. ಮುದ್ದು ಮಾಸ್ತರ್ ಮತ್ತು ಅಧ್ಯಕ್ಷರ ಭಾಷಣಗಳಾದವು.

**ಕೃತಜ್ಞತೆ** – ತಮ್ಮ 'ಮನೆಮದ್ದು' ಗ್ರಂಥಕ್ಕೆ ಸರಕಾರೀ ಬಹುಮಾನ ದೊರೆತುದಕ್ಕಾಗಿ, ಅಭಿವಂದನಾ ಪತ್ರಗಳನ್ನು ಬರೆದಿರುವ ಊರು ಪರವೂರುಗಳ ಎಲ್ಲಾ ಮಿತ್ರರಿಗೂ ಈ ಮೂಲಕ ಕೃತಜ್ಞತಾಪೂರ್ವಕ ಅಭಿವಂದನೆಗಳೆಂದು ಡಾ। ಕೊರಡ್ಕಲ್ ವೆಂಕಟರಾಯರು ತಿಳಿಸುತ್ತಾರೆ.

### ಕಟಪಾಡಿ

**ವಿವಾಹ**- ದಕ್ಷಿಣಕನ್ನಡ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಸಿ. ಲಕ್ಷ್ಮೀನಾರಾಯಣ ನಾಯ್ಕರ ಪುತ್ರಿ ಕುಮಾರಿ ಮಹಾಮಾಯಿಯವರ ವಿವಾಹವು ಶ್ರೀ ಉಳ್ಳಾಲ ವೆಂಕಟರಾಯ ಕಿಣಿಯವರ ಪುತ್ರ, ಶ್ರೀಮಾನ್ ನರಸಿಂಹ ಕಿಣಿಯವರೊಡನೆ ಎಪ್ರಿಲ್ ತಾ. 27 ರಲ್ಲಿ ಕಟಪಾಡಿಯ ಪಾಂಗಾಳ ನಾಯಕ್ ಮನೆಯಲ್ಲಿ ಅತ್ಯಂತ ವಿಜೃಂಭಣೆ ಮತ್ತು ಘನತೆಯಿಂದ ಜರಗಿತು. ಉಡುಪಿಯಿಂದ ಮೂಲ್ಕಿಗೆ ಹೊರಟಿದ್ದ ಮದ್ರಾಸ್ ಮಂತ್ರಿಗಳಿಬ್ಬರು, ಶ್ರೀ ಭಕ್ತವತ್ಸಲಂ ಮತ್ತು ಶ್ರೀ ಎ. ಬಿ. ಸೆಟ್ಟರು ಈ ವಿವಾಹ ಮಹೋತ್ಸವಕ್ಕಾಗಮಿಸಿ ಕೆಲಹೊತ್ತು ಸಹಭಾಗಿಗಳಾಗಿದ್ದರು.

### ಮಂಗಳೂರು

**ಮಂತ್ರಿಗಳ ನಿರ್ಗಮನ:**— ನಮ್ಮ ಜಿಲ್ಲೆಯ ಸಂಚಾರ ಕಾರ್ಯವನ್ನು ಕೈಕೊಂಡ ಮಂತ್ರಿವರ್ಯರು ದಿನಾಂಕ ೨೮ರಂದು ಸಭೆಗೆ ಮಂಗಳೂರಿಗೆ ಮರಳಿದಾಗ ಮಂಗಳೂರಿನ ರೋಟರಿ ಕ್ಲಬ್ಬಿನವರು ಅವರನ್ನು ರಾತ್ರಿಯ ಊಟಕ್ಕೆ ಆಮಂತ್ರಿಸಿ ಸತ್ಕರಿಸಿದರು. ಶ್ರೀ ಎಂ. ವೆಂಕಟೇಶ ಪೈಗಳು ಕ್ಲಬ್ಬಿನ ಸದಸ್ಯರಪರಿಚಯ ಮಾಡಿಸಿದರು. ಶ್ರೀ ವಿ. ಎಸ್. ಕುಡ್ವರು ಮಂತ್ರಿಗಳನ್ನು ಸ್ವಾಗತಿಸಿದರು. ಮರುದಿನ ಬೆಳಿಗ್ಗೆ ೭.೩೦ಕ್ಕೆ ಸರಿಯಾಗಿ ಮಂತ್ರಿವರ್ಯರನ್ನು ವಿಜಯ ಬೇಂಕಿನವರೂ ಆಮಂತ್ರಿಸಿ ಕಾಫಿ ಫಲಾಹಾರವಿತ್ತು ಸತ್ಕರಿಸಿ ಬೀಳ್ಕೊಟ್ಟರು. ಬೇಂಕಿನ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ಅಭಿನಂದಿಸಿದರು.

ಸಾರ್ವಜನಿಕ ಖಾತೆಯ ಮಂತ್ರಿಗಳಾದ ಶ್ರೀ ಎಂ. ಭಕ್ತವತ್ಸಲಂರವರು ದಿನಾಂಕ ೨೯ರಂದು ಬೆಳಿಗ್ಗಿನ ರೈಲಿಗೆ ಮದ್ರಾಸಿನತ್ತ ತೆರಳಿದರು.

---

## TENDER NOTICE.

Sealed tenders will be received by the Commissioner, Udipi Municipality upto 4. P. M. on 12-5-50 for the following works:—

| | Name of work | Amount of estimate | Tender deposit |
|---|---|---|---|
| 1. | Maintenance of Town roads– East Block for 1950-51 ... | Rs. 8850/= | Rs. 445/= |
| 2. | Maintenance of Town roads– West Block for 1950-51 .... | Rs. 6060/= | Rs. 305/= |
| 3. | Constructing a septic tank latrine and urinals of 2 seats in the Municipal Bus stand .... | Rs. 2500/= | Rs. 125/= |

For further particulars please apply to the Municipal Office, during office hours on working days.

Municipal Office, Udipi, 2nd May 1950.

Sd/ V. Balagangadharan, COMMISSIONER.

## The Catholic Bank, Ltd., Udipi.

### ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ಮೇಲ್ಕಾಣಿಸಿದ ಬ್ಯಾಂಕಿನಲ್ಲಿ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ಯಾ ಅದಕ್ಕಾಗುವ ಈ ತನಕದ ಬಡ್ಡಿಯನ್ನಾಗಲೀ ಕೊಡದೇ ಇರುವುದರಿಂದಲೂ, ಅಲ್ಲದೆ ಕ್ರಮಪ್ರಕಾರ ರಿಜಿಸ್ಟರ್ಡ್ ನೋಟೀಸು ಕೊಟ್ಟಲ್ಲಿ 1, 2, 3, 4, 5 ಮತ್ತು 6ನೇ ಅಸಾಮಿಗಳು ಆ ಎಡ್ರೆಸಿನಲ್ಲಿಲ್ಲವೆಂತಲೂ 7ನೇ ಅಸಾಮಿಯು ಮೃತಪಟ್ಟಿರುವನೆಂತಲೂ ಕೊಟ್ಟ ರಿಜಿಸ್ಟರ್ಡ್ ನೋಟೀಸು ಹಿಂದೆ ಬಂದಿರುವದರಿಂದ ಸದರೀಯವರೀಗೆ ಯಾ ಸದರೀಯವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ ಸದರೀಯವರು ಈಡಿಟ್ಟ ನಗಗಳನ್ನು ಇದೇ ಮೇ ತಿಂಗಳ ತಾರೀಖು 6ನೇ ಶನಿವಾರದೊಳಗೆ ಬಿಡಿಸಿಕೊಳ್ಳದೇಯಿದ್ದಲ್ಲಿ ಇದೇ ತಿಂಗಳ ತಾರೀಖು 13ನೇ ಶನಿವಾರ ಗಂಟೆ 12-30ಕ್ಕೆ ಯಾ ಬ್ಯಾಂಕಿಗೆ ಯುಕ್ತ ಕಂಡ ಯಿನ್ನಿತರ ದಿನಗಳಲ್ಲಿ ಪುನಃ ನೋಟೀಸು ಕೊಡದೇ ಬ್ಯಾಂಕಿನ ಮಠಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

| S.No. | DATE | J. L. No. | Names of the borrower. | Principal amount |
|---|---|---|---|---|
| 1 | 21-1-1948 | 23/974 | ಫಿಲಿಕ್ಸ್ ರೊಡ್ರಿಗಸ್, ಸಾಲ್ವದೋರ್ ರೊಡ್ರಿಗಸ್‌ರ ಮಗ, ಗರಡಿ ಮಜಲು ತೊಟ್ಟಂ P. O. | 45—0—0 |
| 2 | 21-1-1948 | 23/975 | ಅಕ್ಕು ಪೂಜಾರ್ತಿ, ಅಣ್ಣಪ್ಪಪೂಜಾರಿಯ ಸೊಸೆ, ಮೂಡನಿಡಂಬೂರು, ಉಡುಪಿ P. O. | 25—0—0 |
| 3 | 23-2-1948 | 23/1159 | ಅಬೂರು ಸೊಲೆಮಾನ್ ಸಾಹೇಬ್, ಸೊರೆಮಾನ್ ಸಾಹೇಬರ ಮಗ, ಬ್ಲಿಷ್ ಗ್ರಾಮ, ಉಚ್ಚಿಲ P. O | 40—0—0 |
| 4 | 23-2-1948 | 23/1168 | ಮೊಹಮ್ಮದ್, ಹಾಜಿ ಮೊಹಮ್ಮದ್‌ರ ಮಗ, ಉಡುಪಿ ಮಸೀದಿಯ ಹತ್ತಿರ ಉಡುಪಿ P O. | 10—0—0 |
| 5 | 13-3-1948 | 23/1300 | ಕೊರತಿ ಸೆಡ್ತಿ, ಅಂತಯ್ಯ ಸೆಟ್ರ ಸೊಸೆ ಕೊರಂಗ್ರಪಾಡಿ, ಉಡುಪಿ P. O. | 30—0—0 |
| 6 | 5-4-1948 | 23/1395 | ಟಿ. ಮಂಜುನಾಥ ಕಿಣಿ, ಕೆ. ಆರ್. ಕಿಣಿಯರ ಮಗ, ಬಡಗಬೆಟ್ಟು, ಉಡುಪಿ. | 20—0—0 |
| 7 | 5-4-1948 | 23/1396 | ಮೊಹಮ್ಮದ್, ಹಾಜಿ ಮೊಹಮ್ಮದ್‌ರ ಮಗ, ಉಡುಪಿ ಮಸೀದಿಯ ಹತ್ತಿರ ಉಡುಪಿ. | 60—0—0 |

ಉಡುಪಿ, ತಾ 1-5-1950

V. ANDRADE, ಏಜಂಟ್.

## ದಕ್ಷಿಣ ಕನ್ನಡ ಜಿಲ್ಲಾ ಕಿಸಾನ್ ಪರಿಷತ್ತು, ಮೂಲ್ಕಿ

ಬ್ರಿಟಿಷ್ ಪೋಷಿತ ಪಟ್ಟಭದ್ರರ [illegible]ಕೆಯೇ, ಹಿಂದುಸ್ಥಾನದ ಬಹುಜನ ವರ್ಗವಾದ ಕೃಷಿಕರೂ ಎಚ್ಚೆತ್ತು ಸಂಘಟಿತರಾಗಿ ತಮ್ಮ ಅಭ್ಯುದಯವನ್ನು ತಾವೇ ಸಾಧಿಸದಿದ್ದಲ್ಲಿ ಗತ್ಯಂತರವಿಲ್ಲ. ಕೃಷಿಕರು ಇತರರ ಸಹಾನುಭೂತಿ ಮತ್ತು ಸಹಾಯದ ಮೇಲೆ ಅವಲಂಬಿಸಿ, ಅನ್ಯರು ತಮ್ಮ ಉದ್ಧಾರ ಮಾಡುವರೆಂದು ಕತ್ತು ನೀಡಿ ಅದೃಷ್ಟವಾದಿಗಳಾಗಿ ಕಣ್ಣುಗಿದ್ದರೆ, ಅತ್ತ ಸಾಯಲೂ ಇತ್ತ ಬದುಕಲೂ ಇಲ್ಲದ ಪರಿಸ್ಥಿತಿಯಲ್ಲಿ ಇದ್ದಂತೆಯೇ ಬಿದ್ದಿರಬೇಕಾಗುವುದು.

ಇಂದೀಗ ಹಿಂದುಸ್ಥಾನದಲ್ಲಿ ಸ್ಥಾಪಿತವಾಗಿರುವ ಪ್ರಜಾರಾಜ್ಯದಲ್ಲಿ, ಪ್ರಾಮುಖ್ಯ ಹಾಗೂ ಬಹುಸಂಖ್ಯಾಕ ಪ್ರಜೆಗಳಾದ ಕೃಷಿಕರು, ತಮ್ಮ ಹಕ್ಕು ಬಾಧ್ಯತೆಗಳನ್ನು, ಅಗತ್ಯವಿದ್ದರೆ ಹೋರಾಡಿಯಾದರೂ ಸಾಧಿಸಿ, ಸ್ವಾಭಿಮಾನದಿಂದ ತಲೆಯೆತ್ತಿ ನಿಲ್ಲುವಂತಾಗದಿದ್ದರೆ, ಅದೆಂದಿಗೂ ನಿಜವಾದ ಪ್ರಜಾರಾಜ್ಯವಾಗಲಾರದು. ಹಿಂದಿನಂತೆಯೇ ಕೇವಲ ಮೇಲುವರ್ಗದವರ ರಾಜ್ಯವಾಗಿಯೇ ಉಳಿಯುವದು. ಆದುದರಿಂದ ಇಂದೀಗ ಕೃಷಿಕರು ಎಚ್ಚೆತ್ತು, ಎದ್ದು ನಿಂತು, ತಮ್ಮದೇ ಆದ ಸಂಘಬಲದಿಂದ ಹಿಂದೀ ಪ್ರಜಾರಾಜ್ಯದಲ್ಲಿ ಪ್ರಾಮುಖ್ಯ ಸ್ಥಾನಮಾನವನ್ನು ಗಳಿಸಿಕೊಳ್ಳಬೇಕು. ತಮ್ಮ ನೆಲೆವೀಡಾದ ಹಳ್ಳಿಗಾಡುಗಳನ್ನು ಪುನರುಜ್ಜೀವಿಸಿ ಸುಖಸುಭಿಕ್ಷೆಯ ತವರೂರಾಗಿ ಮಾಡಬೇಕು. ಪ್ರಜಾರಾಜ್ಯಕ್ಕೆ ಹಳ್ಳಿಯೇ ನಿಜವಾದ ತಳಹದಿಯಾಗಬೇಕು.

ಇಡೀ ಜಿಲ್ಲೆಯ ಕಿಸಾನ್ ಜನರೆಲ್ಲ ಇಂದೀಗ ಕಣ್ಣು ತೆರೆಯ ಹತ್ತಿರುತ್ತಾರೆ. ದೇಶಭಕ್ತ ಕಾರ್ನಾಡು ಸದಾಶಿವರಾಯರ ಊರಾದ ಕಾರ್ನಾಡಿನಿಂದ ಆರಂಭವಾದ ಕಿಸಾನ್ ಸಂಘಟನಾ ಶಕ್ತಿಯು ಇಂದೀಗ ವ್ಯಾಪಕವಾಗಿ ಹಬ್ಬುತ್ತಿದೆ. ಕಿಸಾನ್ ಜನರಲ್ಲೀ ನವಚೈತನ್ಯದ ಸಂಚಾಲನೆಯಾಗಿದೆ. ಆತ್ಮವಿಶ್ವಾಸದ ಕಿಡಿಯು ಮಿನುಗ ಹತ್ತಿದೆ. ಇದರ ಪರಿಣಾಮವೇ ಜಿಲ್ಲಾ ಕಿಸಾನ್ ಪರಿಷತ್ತಾಗಿರುತ್ತದೆ.

ಇಡೀ ಜಿಲ್ಲೆಯಲ್ಲಿ ಸ್ವತಂತ್ರ ಸ್ವಾವಲಂಬಿ ಕಿಸಾನ್ ಸಂಘಟನೆಯನ್ನು ಕಾಂಗ್ರೆಸಿನ ಆಶ್ರಯದಲ್ಲಿ ಬೆಳೆಸುವುದೇ ಈ ಪರಿಷತ್ತಿನ ಮುಖ್ಯ ಉದ್ದೇಶವಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚಿನ ಕೃಷಿಕರೆಂದರೆ ಚಾಲಗೇಣಿ ಒಕ್ಕಲುಗಳು. ತಾವು ಉಳುವ ಹೊಲದಲ್ಲಿ ಶಾಶ್ವತ ಮತ್ತು ಸುರಕ್ಷಿತವಾದ ಯಾವ ಹಕ್ಕೂ ಇಲ್ಲದೆ ಈ ಕೃಷಿಕರು ಇನ್ನೂ ನರಳಿಕೊಂಡಿರಬೇಕಾಗಿರುವಾಗ, ಪ್ರಜಾರಾಜ್ಯದ ಪ್ರಾಥಮಿಕ ಹಕ್ಕುಬಾಧ್ಯತೆಗಳೇನನ್ನಾದರೂ ಅವರು ಅನುಭವಿಸುವ ಬಗೆ ಹೇಗೆ? ಸ್ವತಂತ್ರವಾಗಿ ಓಟು ಕೊಡುವ ಸ್ವಾತಂತ್ರ್ಯವಾದರೂ ಅವರಿಗೆಲ್ಲಿದೆ? ತಾವು ರಾತ್ರಿ ಹಗಲು ಬೆವರು ಸುರಿಸಿ [illegible] ಬಿತ್ತಿ ಬೆಳೆದ ಯಾವ ಫಲವನ್ನಾದರೂ ತಿನ್ನುವೆವೆಂಬ ಭರವಸೆಯಾದರೂ ಇವರಿಗಿದೆ?

ಈ ಕುರಿತು ಹಲವು ವರ್ಷಗಳಿಂದ ಎಷ್ಟೊಂದು ಮನವಿ ಮಾಡಿಕೊಂಡು ಚಳವಳಿ ನಡೆದರೂ, ಮದ್ರಾಸ್ ಸರಕಾರವು ಈ ವರೆಗೆ ಗಮನಕೊಡದಿರುವುದು ಅತ್ಯಂತ ಶೋಚನೀಯ. ಜಿಲ್ಲೆಯ ಕೃಷಿಕರ ಜೀವಾಳವಾದ ಈ ಪ್ರಶ್ನೆಯನ್ನು ಮೊದಲಾಗಿ ಬಿಡಿಸದೆ, 'ಹೆಚ್ಚು ಆಹಾರ ಬೆಳೆಸಿರಿ!' ಎಂದು ಕೂಗಿ ಪ್ರಚಾರ ಮಾಡುವುದರ ಅವಿವೇಕವನ್ನು ಸರಕಾರವು ಇನ್ನೂ ಮನಗಾಣದಿರುವುದು ಆಶ್ಚರ್ಯ. ಪ್ರಜಾರಾಜ್ಯದಲ್ಲಿಯೂ ಸರಕಾರವು ಕಟ್ಟು ಕಟ್ಟಳೆಯಂತೆಯೇ ನಡೆಯುತ್ತಿರುವುದೆಂದು ಇದರಿಂದ ಸಿದ್ಧವಾಗುವುದು. ಆದುದರಿಂದ ಜಿಲ್ಲೆಯ ಕೃಷಿಕರು ಇನ್ನು ಮುಂದೆ ಸುಮ್ಮನಿರಲು ಸಾಧ್ಯವಿಲ್ಲ. ಒಂದು ವೇಳೆ ಅವರು ಪದ್ಧತಿ ಪ್ರಕಾರ ತಣ್ಣಗಿದ್ದರೂ, ಸ್ವಾರ್ಥಿ ಧನಿಗಳು ಹಲವು ರೀತಿಯ ಅನ್ಯಾಯ ಆಕ್ರಮಗಳನ್ನು ಮಾಡಿ ಅವರನ್ನು ಹೊಡೆದೆಬ್ಬಿಸಹತ್ತಿದ್ದಾರೆ. ಆದುದರಿಂದ ಪರಿಸ್ಥಿತಿಯು ಅಸಹನೀಯವಾಗಿದೆ. ನಿಶ್ಚಿತ ಅವಧಿಯಲ್ಲಿ ಮದ್ರಾಸ್ ಸರಕಾರವು, ಇಚ್ಛಾನುಸಾರ ಒಕ್ಕಲೆಬ್ಬಿಸದಂತೆ ಮತ್ತು ಗೇಣಿ ಹೆಚ್ಚಿಸದಂತೆ ತಡೆಹಾಕುವ ಸ್ತಂಭನ (ಸ್ಟೇ) ಮಸೂದೆಯನ್ನಾದರೂ ಜ್ಯಾರಿಗೆ ತರದಿದ್ದರೆ, ಅದನ್ನು ಸಾಧಿಸಲು ಜಿಲ್ಲೆಯ ಕೃಷಿಕರೆಲ್ಲರೂ ಯಾವುದಾದರೊಂದು ಬಗೆಯ ಸತ್ಯಾಗ್ರಹ ಹೂಡದೆ ನಿರ್ವಾಹವಿಲ್ಲದಾಗುತ್ತದೆ ಅದನ್ನು ಈ ಪರಿಷತ್ತಿನಲ್ಲೇ ನಿರ್ಧರಿಸಿ ಸರಕಾರಕ್ಕೆ ಕೊನೆಯ ಎಚ್ಚರ ಕೊಡಬೇಕಾಗಿದೆ.

ಇನ್ನು ಸರಕಾರವು ಕೃಷಿಕರಿಗೆ ಯಾವ ರೀತಿಯಲ್ಲಿ ಸಹಾಯ ಮಾಡಬೇಕು; ಸರಕಾರವು ಕೊಡುವ ಅನುಕೂಲತೆಗಳನ್ನು ಕೃಷಿಕರು ಹೇಗೆ ಉಪಯೋಗಿಸಿಕೊಳ್ಳಬೇಕೆಂಬ ಕುರಿತೆಲ್ಲ ನಿರ್ಣಯ ಮತ್ತು ಸಂಘಟಿತ ಚಳವಳಿ ಹೂಡುವ ಬಗ್ಗೆ ಕೂಡ ವಿಚಾರಿಸಬೇಕಾಗಿದೆ. ಈ ಪರಿಷತ್ತು ಜಿಲ್ಲೆಯ ಕೃಷಿಕ ಚಳವಳಿಯ ಇತಿಹಾಸದಲ್ಲೇ ಹೊಸ ಪರಿಚ್ಛೇದವನ್ನು ಆರಂಭಿಸುವಂತಹದಿದೆ. ಆದುದರಿಂದ ಇಡೀ ಜಿಲ್ಲೆಯ ಕೃಷಿಕರೂ, ಕೃಷಿ ಕೆಲಸಗಾರರೂ, ಕೃಷಿಕ ವರ್ಗದ ಸಹಾಯಕರೂ, ಪ್ರತಿನಿಧಿ, ಪ್ರೇಕ್ಷಕ ಮತ್ತು ಸ್ವಯಂ ಸೇವಕರಾಗಿ ಸೇರಿ, ಈ ಪರಿಷತ್ತನ್ನು ಅತ್ಯಂತ ಜಯಶೀಲಗೊಳಿಸಬೇಕಾಗಿ ಅಗ್ರಹದ ವಿನಂತಿ.

ರೂ. 5, ರೂ. 2, ರೂ. 1 ತೆತ್ತು ಸ್ವಾಗತ ಸಮಿತಿಯ ಸದಸ್ಯರಾಗಬಹುದು. ಪರಿಷತ್ತಿನ ಪ್ರತಿನಿಧಿ ಆಗಲು ರೂ. ಒಂದಾಗಿರುತ್ತದೆ. ರೂ. 5, 2, 1, ಆಣೆ 8 ಮತ್ತು 4 ಆಣೆ ತೆತ್ತು ಪ್ರೇಕ್ಷಕರಾಗಬಹುದು.

ಮದ್ರಾಸು ಸರಕಾರದ ಶಿಕ್ಷಣ ಮತ್ತು ಕಾನೂನು ಮಂತ್ರಿ ಶ್ರೀಮಾನ್ ಕೆ. ಮಾಧವ ಮೆನನರು ಈ ಪರಿಷತ್ತಿನ ಆರಂಭೋತ್ಸವ ನಡೆಸಲಿರುವರು. ಅಖಿಲ ಭಾರತ ಕಾಂಗ್ರೆಸಿನ ವರ್ಕಿಂಗ್ ಕಮಿಟಿಯ ಸದಸ್ಯರೂ, ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರೂ ಆದ ಶ್ರೀಮಾನ್ ಎಸ್. ನಿಜಲಿಂಗಪ್ಪನವರು ಅಧ್ಯಕ್ಷತೆ ವಹಿಸಲಿರುವರು.

(ಇದೇ ಸಂದರ್ಭದಲ್ಲಿ ಜಿಲ್ಲಾ ಗ್ರಾಮ ಉದ್ಯೋಗಸ್ಥರ ಪರಿಷತ್ತು ಶ್ರೀ ಕೆ. ಆರ್. ಕಾರಂತ ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲೂ ಕೃಷಿಕ ಮಹಿಳಾ ಪರಿಷತ್ತು ಮೈಸೂರು ಕಾಂಗ್ರೆಸ್ ಅಧ್ಯಕ್ಷೆ ಶ್ರೀಮತಿ ಯಶೋಧರಮ್ಮನವರ ಅಧ್ಯಕ್ಷತೆಯಲ್ಲೂ ಜರಗಲಿವೆ. ಮೊದಲನೆಯದನ್ನು ಮಂತ್ರಿ ಶ್ರೀ ಮಾಧವ ಮೆನನರೂ ಎರಡನೆಯದನ್ನು ಶ್ರೀ ಮೆನನರ ಪತ್ನಿ ಶ್ರೀ ಕುಟ್ಟಿ ಅಮ್ಮಾಳ್ ಅಮ್ಮ ಎಂ. ಎಲ್.ಎ. ಅವರೂ ಉದ್ಘಾಟಿಸಲಿದ್ದಾರೆ)— ಎಂದು ದ. ಕ. ಜಿಲ್ಲಾ ಕೃಷಿಕ ಪರಿಷತ್ತಿನ ಪರವಾಗಿ ಅಧ್ಯಕ್ಷ ಶ್ರೀ ಬಿ. ಕೆ. ಆರ್. ಕಕ್ಕೇರ ಮತ್ತು ಕಾರ್ಯದರ್ಶಿ ಶ್ರೀ ಕೆ. ಕೆ. ಶೆಟ್ಟರ ವಿಜ್ಞಾಪನೆಯಿದೆ.

---

## ದ. ಕ. ಜಿಲ್ಲಾ ಸಮಾಚಾರ

**ಮುಂಡ್ಕೂರು:—** ಇಲ್ಲಿಯ ಬೋರ್ಡ್ ಹಾ| ಪ್ರಾ| ಶಾಲಾ ವರ್ಧಂತಿ ಸಮಾರಂಭವು ಕಳೆದ ತಾ 22ರಲ್ಲು ಮೂಲ್ಕಿ ಗ್ರಾಮೋದ್ಧಾರ ಸಮಿತಿಯ ಅಧ್ಯಕ್ಷ ಶ್ರೀ ಎಮ್. ಆರ್. ಪೂಂಜರ ಅಧ್ಯಕ್ಷತೆಯಲ್ಲಿ ಜರಗಿತು. ಮುಂಡ್ಕೂರು, ಕಡಂದಲೆ, ಬೋಳ ಅಲ್ಲದೆ ನೆರೆಯ ಇನ್ನಿತರ ಗ್ರಾಮಗಳ ಸೌಕರ್ಯಾರ್ಥವಾಗಿ ಮುಂಡ್ಕೂರಲ್ಲಿ ಹೈಸ್ಕೂಲು ಒಂದನ್ನು ಸ್ಥಾಪಿಸುವ ಯೋಜನೆಯನ್ನು ಗ್ರಾಮಸ್ಥರು ಕಾರ್ಯರೂಪಕ್ಕೆ ತರುವಲ್ಲಿ ಫಿರ್ಕಾಭಿವೃದ್ಧಿ ಸಮಿತಿ ಕಡೆಯಿಂದಲೂ ಸಹಾಯ ದೊರಕಬಹುದಾಗಿ ಅಧ್ಯಕ್ಷರು ಹೇಳಿದರು.

**ಮಾಯಿಪಾಡಿ:—** ಕಳೆದ ತಾ 26ರಲ್ಲು ವಯಸ್ಕರ ಶಿಕ್ಷಣ ಕೇಂದ್ರವು ಸ್ಥಳೀಯ ಸರಕಾರಿ ತರಬೇತಿ ಶಾಲೆಯ ಕಡೆಯಿಂದ ಪ್ರಾರಂಭಿಸಲ್ಪಟ್ಟಿತು.

**ಆಲಿವೂರು:—** ಸ್ಥಳೀಯ ಸು. ಬೋಧಿನಿ ಹಾ| ಎಲಿಮೆಂಟರಿಶಾಲೆಯ ಶ್ರೀ ಭಾರತಿ ಬಾಲವೀರದಳದ ದ್ವಿತೀಯ ಶಿಬಿರಾಗ್ನಿಯು ಕಳೆದ ತಾ 29ರಲ್ಲು ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಿತು.

**ಹೆಜಮಾಡಿ ಕೋಡಿ:—** ಕಳೆದ ತಾ 27ರಲ್ಲು ಸ್ಥಳೀಯ ಸರಕಾರಿ ಫಿಶರೀಸ್ ಶಾಲೆಯ ವರ್ಧಂತಿ ಸಮಾರಂಭವು ದ. ಕ. ಜಿಲ್ಲಾ ಫಿಶರೀಸ್ ಅಸಿಸ್ಟೆಂಟ್ ಡೈರೆಕ್ಟರ್ ಶ್ರೀ ಮುಕುಂದನ್ ಎಚ್ಚ ಅವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು.

**ಪೆರ್ಡೂರು:—** ಸ್ಥಳೀಯ ಬಿ. ಇ. ಎಮ್. ಹಾ| ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ಕಳೆದ ತಾ 29ರಲ್ಲು ಶ್ರೀ ಎಚ್. ಸಂಜೀವ ರಾವ್, ಶಾಲಾ ಇನ್ಸ್‌ಪೆಕ್ಟರ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಅಂದು ಬೆಳಿಗ್ಗೆ ಶ್ರೀ ಎ. ಕೆ. ಹೆಗ್ಡೆಯವರು ಧ್ವಜಾರೋಹಣ ನಡೆಸಿದರು.

**ಉದ್ಯಾವರ:—** ಸ್ಥಳೀಯ ಬಿ. ಇ. ಎಮ್. ಹಾ| ಎಲಿಮೆಂಟರಿಶಾಲೆಯ ವರ್ಧಂತ್ಯುತ್ಸವವು ಕಳೆದ ತಾ 27ರಲ್ಲು ಶಾಲಾಇನ್ಸ್‌ಪೆಕ್ಟರ್ ಶ್ರೀ ಎಚ್. ಸಂಜೀವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಜಿ. ಎಮ್. ಸುವರ್ಣರು ಧ್ವಜಾರೋಹಣ ಮಾಡಿದರು. ಶಾಲಾ ಬಾಲಕಿಯರಿಂದ ವಿವಿಧ ವಿನೋದಾವಳಿಗಳಾದ ನಂತರ ಪಟೇಲ ಶ್ರೀ ಯು. ಬಿ. ಸೆಟ್ಟರು ಧನ್ಯವಾದಗಳನ್ನರ್ಪಿಸಿದರು.

ತಾ 29ರಲ್ಲಿ ಈ ಶಾಲೆಯ ಹಳೆವಿದ್ಯಾರ್ಥಿ ದಿನಾಚರಣೆಯು ಶಿರ್ವ ಹೈಸ್ಕೂಲಿನ ಹೆಡ್ಮಾಸ್ತರ್ ಶ್ರೀ ಶಿವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಯು. ಬಿ. ಸೆಟ್ಟರು ವರದಿವಾಚನ ಮಾಡುತ್ತಾ 10,000ಕ್ಕೂ ಮಿಕ್ಕ ಜನಸಂಖ್ಯೆಯುಳ್ಳ ಈ ಕೇಂದ್ರಕ್ಕೆ ಹೈಸ್ಕೂಲಿನ ಅವಶ್ಯಕತೆಯನ್ನು ಸೂಚಿಸಿದರು. ಶಾಲಾ ಹಳೆವಿದ್ಯಾರ್ಥಿಗಳು 'ಮೀರಾಬಾಯಿ' ಎಂಬ ನಾಟಕವನ್ನು ಸೊಗಸಾಗಿ ಅಭಿನಯಿಸಿದರು. ಐದು ಮಂದಿ ಉತ್ತಮ ಅಭಿನಯಗಾರರಿಗೆ ಪಟೇಲ್ ಶ್ರೀ ಯು. ಬಿ. ಸೆಟ್ಟರ [illegible]ದಿಂದ ಒಂದು ಚಿನ್ನದ ಮತ್ತು ನಾಲ್ಕು ರಜತಪದಕಗಳ ಬಹುಮಾನ ಕೊಡಲಾದುವು.

**ಬ್ರಹ್ಮಾವರ:—** ಕಳೆದ ತಾ 30ರಲ್ಲು ಇಲ್ಲಿಯ ಹರಿಜನ ವೆಲ್‌ಫೇರ್ ಶಾಲೆಯಲ್ಲಿ ಹರಿಜನದಿನಾಚರಣೆಯೂ, ಹರಿಜನಶಾಲಾ ವರ್ಧಂತಿಯುತ್ಸವವೂ ಕುಂದಾಪುರ ಸಬ್ ಕಲೆಕ್ಟರ್ ಶ್ರೀ ಎಸ್. ಅಬ್ದುಲ್ ರಹಿಮಾನ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು. ಶ್ರೀಗಳಾದ ಎಮ್. ಎಮ್. ಹೆಗ್ಡೆ, ರಾಧಾಕೃಷ್ಣ, ವಾಮನ, ಡಾ| ಆನಂದ ಸೆಟ್ಟಿ, ಡಾ| ರಾಜು ಬೋಂಟ್ರ, ಡಾ| ರಾಮನ್ ಗುರುಕಲ್ ಮೊದಲಾದವರು ಭಾಷಣವಿತ್ತರು. ಶ್ರೀಗಳಾದ ಬಿ. ಎಮ್. ಸೆಟ್ಟಿ ಮತ್ತು ಟಿ. ಗೋಪಾಲಕೃಷ್ಣ ಪೈಗಳವರು ಧರ್ಮಾರ್ಥ ಕೊಟ್ಟ ವಸ್ತ್ರಗಳನ್ನು ಹರಿಜನ ಬಾಲಬಾಲಕಿಯರಿಗೆ ಅಧ್ಯಕ್ಷರು ವಿತರಣೆಮಾಡಿದರು. ಶ್ರೀ ಮೋನಪ್ಪ ಸೆಟ್ಟರು ಧನ್ಯವಾದಗಳನ್ನರ್ಪಿಸಿದರು. ಈ ಸಮಾರಂಭಕ್ಕಾಗಿ ರೂಪಾಯಿ 273-0-0 ಜಮೆಯಾಗಿದ್ದು ರೂ. 268-12-6 ಖರ್ಚಾಗಿ ಉಳಿದ ರೂ. 4-3-6ನ್ನು ಹರಿಜನ ಶಾಲಾವಿದ್ಯಾರ್ಥಿಗಳ ಉಪಯೋಗಕ್ಕಾಗಿ ಶಾಲಾ ಹೆಡ್ಮಾಸ್ತರರ ಕೂಡೆ ಕೊಡಲಾಗಿದೆ.

**ಹಳ್ಯಾಡಿ ಹರ್ಕಾಡಿ:—** ಬೋರ್ಡ್ ಶಾಲೆಯ ಮುಖ್ಯೋಪಾಧ್ಯಾಯ ಶ್ರೀ ಗಾವಳಿ ವೆಂಕಟ್ರಮಣ ಕಿಣಿಯವರು ಕಟ್ಟಿಸಿದ ನೂತನ ಗೃಹದಲ್ಲಿ ಈಚೆಗೆ ಧರ್ಮಾರ್ಥ ವಾಚನಾಲಯವೊಂದು ಶ್ರೀ ಎಸ್. ಎಸ್. ಕೊಳ್ಕೆಬೈಲ್, ಅವರಿಂದ ಉದ್ಘಾಟಿಸಲಾಯಿತು.

---

**ಬೊಂಬಾಯಿ:—** ಲಲಿತ ಕಲಾ ಕರ್ನಾಟಕ ನಾಟಕ ಸಭಾ, ಬೊಂಬಾಯಿ, ಈ ಸಂಸ್ಥೆಯವರು ದಿನಾಂಕ 20ರಲ್ಲು ಕರ್ನಾಟಕ ನಾಟಕಾಲಂಕಾರ ಶ್ರೀ ಗರೂಡ ಸದಾಶಿವರಾಯರನ್ನು ಶ್ರೀ ಆನಂದ ಕರ್ಕೇರರ ಮನೆಗೆ ಆಮಂತ್ರಿಸಿ ಸತ್ಕಾರಕೂಟವಿತ್ತು ಗೌರವಿಸಿದರು. ಈ ಸಂದರ್ಭದಲ್ಲಿ ಸಭೆಯ ವ್ಯವಸ್ಥಾಪಕರಾದ ಶ್ರೀ ಬಿ. ಎಸ್. ನಾಯಕ್ ಮೊದಲಾದವರು ಶ್ರೀ ರಾಯರ ನಾಟ್ಯಕಲಾ ನಿಪುಣತೆಯನ್ನೆತ್ತಿ ಮಾತನಾಡಿದರು. ನಾಟ್ಯರಂಗದಲ್ಲಿ ಲಲಿತಕಲಾ ಕರ್ನಾಟಕ ಸಂಘವು ಅರ್ಪಿಸುವ ಸೇವೆಯನ್ನು ಕೊಂಡಾಡಿ ಸಂಘಕ್ಕೆ ಉತ್ತರೋತ್ತರ ಅಭಿವೃದ್ಧಿಯನ್ನು ಮಾನ್ಯ ಅತಿಥಿಯು ಬಯಸಿದರು.

---

## Notice

Applications are invited from qualified candidates for four posts of compounders permanently vacant under this District Board. The scale of pay allowed is Rs. 35-1-50 plus Rs. 5/- p.m. for doing ministerial work in L. F. Medical institutions. Applications with information regarding date of birth, qualifications, Native place and languages known should reach the President, District Board, South Kanara, Mangalore, with the original qualification certificates before 15-5-1950.

Sd. **B. V. Ramana.**
For President, Dt. Bd. S. K.
S. K. District Board Office,
Mangalore, dated 1—5—1950.

"ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

# ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು—ದಿ| ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯು ಮಾತುಗಳ ರೂಪದಲ್ಲಿಳಿದ ಛಟ್ಟೆಯಾಗಿ ಎದ್ದು ಕಾಣುವುದು.

**400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.**

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

**ನವಯುಗ ಪ್ರೆಸ್, ಉಡುಪಿ, ದ. ಕನ್ನಡ.**

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

## ಜಿಲ್ಲಾ ಬೋರ್ಡಿನ ಬಿನ್ನವತ್ತಳೆ

ದಿನಾಂಕ ೨೪ರಂದು ಮಂತ್ರಿದ್ವಯರು, ಕೃಷಿ ಇಲಾಖೆಯ ಡೈರೆಕ್ಟರರು ಮತ್ತು ಇತರ ಅಧಿಕಾರಿಗಳು ಕಂಕನಾಡಿಯ ಕೃಷಿ ಸಂಶೋಧನಾ ಕ್ಷೇತ್ರವನ್ನು ಸಂದರ್ಶಿಸಿದರು. ಈ ಕ್ಷೇತ್ರದ ವಿಸ್ತಾರವು ಈಗಾಗಲೇ ೨೫ ಎಕ್ರೆಗಳಷ್ಟಿದೆ. ಇನ್ನು ಮುಂದೆ ಸುಮಾರು ೨೭ ಎಕ್ರೆಗಳ ಹೊಲವನ್ನು ಸರಕಾರವು ಕೊಡುವ ನಿರ್ಧಾರ ಮಾಡಿದೆ. ಇದಲ್ಲದೆ ಮಂತ್ರಿವರ್ಯರು ಕೂಳೂರಲ್ಲಿ ಗುರುಪುರ ಹೊಳೆಗೆ ಸಂಕ ಹಾಕುವ ಸ್ಥಳವನ್ನೂ ನೋಡಿಕೊಂಡು ಬಂದರು.

ಅಂದು ಅಪರಾಹ್ನ ೩ ಗಂಟೆಗೆ ಸರಿಯಾಗಿ ಮಂತ್ರಿದ್ವಯರನ್ನು ಜಿಲ್ಲಾ ಬೋರ್ಡಿನವರು ಸ್ವಾಗತಿಸಿ ಒಂದು ಬಿನ್ನವತ್ತಳೆ ಅರ್ಪಿಸಿದರು. ಮಂತ್ರಿಗಳು ಬಂದೊಡನೆ ಜಿಲ್ಲಾ ಬೋರ್ಡಿನ ಅಧ್ಯಕ್ಷ ಶ್ರೀ ಡಿ. ಮಂಜಯ್ಯ ಹೆಗ್ಗಡೆಯವರು ಹಾರಗಳನ್ನರ್ಪಿಸಿ ತಮ್ಮ ಸ್ವಾಗತ ಭಾಷಣದಲ್ಲಿ ಭಕ್ತವತ್ಸಲಂರವರ ಕುರಿತು ಹೀಗೆಂದರು.

"ಸ್ವಾಮಿ, ತಾವು ನಮ್ಮ ಜಿಲ್ಲೆಗೆ ಹಲವು ಬಾರಿ ಬಂದುದರಿಂದ ನಮಗೇನು ಬೇಕೆಂಬುದು ತಮಗೆ ಚೆನ್ನಾಗಿ ಗೊತ್ತಿದೆ. ತಮ್ಮ ಹಿಂದಿನ ಸಂದರ್ಶನಗಳಿಂದ ಈ ಜಿಲ್ಲೆಗೆ ಪ್ರಯೋಜನವಾಗಿದೆಯೆಂದು ನನಗೆ ಗೊತ್ತಿದೆ. ಈ ಬಾರಿಯೂ ಹಾಗೆಯೇ ಆದೀತೆಂಬ ಭರವಸೆಯಿದೆ. ತಾವು ನಮ್ಮ ಕೇಳಿಕೆಗಳನ್ನು ಮದ್ರಾಸು ಸರಕಾರದ ಮುಂದಿಟ್ಟು ನಮಗವು ದೊರಕುವಂತೆ ಮಾಡುವಿರೆಂದು ಪ್ರಾರ್ಥಿಸುತ್ತೇನೆ."

ಶ್ರೀ ಎ. ಬಿ. ಶೆಟ್ಟರನ್ನು ಕುರಿತು ಹೀಗೆ ಹೇಳಿದರು: "ಸ್ವಾಮಿ, ತಾವು ನಮ್ಮವರೇ ಆಗಿದ್ದು ನಮ್ಮ ಜಿಲ್ಲೆಗೆ ಮಾಡಿದ ಸೇವೆಯನ್ನು, ಅದರಲ್ಲೂ ಬಸ್ಸುಗಳ ಜೊಯಿಂಟ್ ಕಂಪೆನಿಯಾಗುವಂತೆ ಮಾಡಿ, ಪ್ರಯಾಣ ಸೌಕರ್ಯ ಒದಗಿಸಿದ ತಮ್ಮ ಉಪಕಾರವನ್ನು ನಾವು ಮರೆಯೆವು. ನಮ್ಮ ಜಿಲ್ಲಾ ಬೋರ್ಡ ಅಧ್ಯಕ್ಷರಾಗಿದ್ದ ತಾವು ಸಂಸ್ಥಾನದ ಉಚ್ಚಾಧಿಕಾರಿ ಮಂಡಲವಾದ ಮಂತ್ರಿಮಂಡಲದಲ್ಲಿ ಗಣ್ಯಸ್ಥಾನ ಪಡೆದಿರುವುದು ನಮಗೊಂದು ಹೆಮ್ಮೆ"ಯೆಂದು ಹೇಳುತ್ತಾ ಇಬ್ಬರನ್ನೂ ಸ್ವಾಗತಿಸಿ ಈಗಾಗಲೇ ಮಂತ್ರಿಗಳಿಗೆ ಒಪ್ಪಿಸಿದ್ದ ವಿಸ್ತಾರವಾದ ಬಿನ್ನವತ್ತಳೆಯ ಸಾರಾಂಶ ತಿಳಿಸಿದರು.

---

### ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 103/50

ಗಣಪಯ್ಯ —ವಾದಿ.

ಮಾರ್ಟಿಸ್ ಡಾಲ್ಮೆದಿ ಸಹಾ —ಪ್ರತಿವಾದಿಗಳು.

ಸದ್ರಿ ವಾದಿಯು ಜಾಹೀರು ಮಾಡಿಕೊಳ್ಳುವದೇನೆಂದ್ರೆ:—

1 ಮಾರ್ಟಿಸ್ ಡಾಲ್ಮೆದಿ
2 ಬೊನಿಫಾಸ್ ಡಾಲ್ಮೆದಿ
-ಜುವಾಂ ಡಾಲ್ಮೆದಿ ಮಕ್ಕಳು.
3 ಕೆನದಿತ್ ಡಾಲ್ಮೆದಿ
4 ಚಾರ್ಲಿ ಡಾಲ್ಮೆದಿ
5 ಹೆನ್ರಿ ಡಾಲ್ಮೆದಿ
ಮೌರಿಸ್ ಡಾಲ್ಮೆದ ಮಕ್ಕಳು.
6 ಕಷ್ಮೀರಿನ್ ಗಾರ್ಡ್ಯನ್-ಸೋಬಿನ್ ಬ್ರಾಗಂಜ, ಸೇನಾಪುರ ಗ್ರಾಮ.

ವಾದಿಗೆ ಪ್ರತಿವಾದಿರಿಂದ ಬರತಕ್ಕ ಬಹಾಮೂಲಗೇಣಿ ಬಾಕಿ ರೂ 23-7-4 ಬರಮಾಡಿಕೊಳ್ಳುವರೆ ಮಾಡಿದ ದಾವೆಯು ತಾರೀಕು 14-6-50ಕ್ಕೆ ಅಖೈರಿ ತನ್ಕಿಗೆ ಯಿಡೋಣಾಗಿಯದೆ. ಆ ಕುರಿತು ನಿಮ್ಮದೇನಾದ್ರೂ ಆಕ್ಷೇಪವಿದ್ರೆ ಸದ್ರಿ ದಿವ್ಸ ಹಗ್ಲು 11ಗಂಟೆಗೆ ಸ್ವತಹಾ ವ ವಕೀಲರ ದ್ವಾರಾ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ವಾದಿರ ಕಡೆಯಿಂದ ಈ ಮೂಲಕ ತಿಳಿಯಪಡಿಸಿದೆ.

**G. Sanjiva Rao,**
Vakil.

Kundapoor, 25-4-1950

---

# ಜಿಲ್ಲೆಯಲ್ಲಿ ಮಂತ್ರಿಗಳ ಸಂಚಾರ

ಈ ಬಿನ್ನವತ್ತಳೆಯಲ್ಲಿ ಜಿಲ್ಲೆಯಲ್ಲಿನ ಪ್ರಯಾಣ ಸೌಕರ್ಯದಲ್ಲಿರುವ ತೊಂದರೆಗಳು, ಆಗಬೇಕಾದ ಸೇತುವೆಗಳು, ರಸ್ತೆಗಳ ದುರಸ್ತಿ ಇತ್ಯಾದಿಗಳನ್ನು ತಿಳಿಸಲಾಗಿತ್ತಲ್ಲದೆ, ರಸ್ತೆಗಳು ಖೈಸೇಯ ಆಡಳಿತೆಗೊಳಗಾದ ಮೇಲೆ ಕೆಟ್ಟು ಹೋದುವೆಂದು ಸೂಚಿಸಲಾಗಿತ್ತು. ಈ ಜಿಲ್ಲೆಯು ೪,೦೨೧ ಚದರ ಮೈಲು ವಿಸ್ತೀರ್ಣ ೮೦೬ ಚದರ ಮೈಲುಗಳ ಕಾಡಟ್ಟ ಕಾಡುಗಳಿಂದ ಕೂಡಿದ್ದು ಜಿಲ್ಲೆಯಲ್ಲಿ ೬,೬೦,೦೦೦ ಎಕ್ರೆಗಳು ಮಾತ್ರ ಸಾಗುವಳಿಗೆ ಉಪಯೋಗಿಸಲ್ಪಡುತ್ತಿವೆಯೆಂದು ತಿಳಿಸಿ ಗ್ರಾಮಸ್ಥರಿಗೆ ಕೃಷಿಗಾಗಿ ಕೊಡಬೇಕಾದ ಸಹಕಾರವನ್ನೂ ಯಾಚಿಸಲಾಗಿತ್ತು.

### ಮಂತ್ರಿಗಳ ಉತ್ತರ.

ಸಾರ್ವಜನಿಕ ಖಾತೆಯ ಮಂತ್ರಿಗಳು ಮೊದಲು ಮಾತನಾಡುತ್ತ ಈ ಜಿಲ್ಲೆಯಲ್ಲಿ ಸರಕಾರವು ಈಗಾಗಲೇ ೧೮ ಸಣ್ಣ ದೊಡ್ಡ ಸೇತುವೆಗಳ ನಿರ್ಮಾಣ ಕೈಕೊಂಡಿದೆಯೆಂದೂ, ಅವುಗಳ ಒಟ್ಟು ವೆಚ್ಚದ ಅಂದಾಜು ಸುಮಾರು ೨೬ ಲಕ್ಷಕ್ಕೂ ಮೇಲ್ಪಟ್ಟಿರುವುದೆಂದೂ ತಿಳಿಸಿದರು. ಮುತ್ತಿಗೆ, ಬ್ರಹ್ಮಕೊಡ್ಲು, ಮುಚ್ಚಮೊಗರು, ಎಣ್ಣೂರು, ಕಲ್ಲಕಟ್ಟ, ಕಂಬಿಲ, ಜುಡ್ಕಲ್, ಸೀತಾನದಿ, ಪಯಸ್ವಿನಿ ನದಿ, ಚಕ್ರನದಿ, ಹಾಲಾಡಿ ಹೊಳೆ, ಕೂಳೂರು ಹೊಳೆ ಮುಂತಾಗಿ ಹಲವು ಕಡೆಗಳಲ್ಲಿ ಸೇತುವೆ ಕಟ್ಟಲಾಗುವುದೆಂದೂ ರಸ್ತೆಗಳ ದುರಸ್ತಿಯಾಗುವುದೆಂದೂ ತಿಳಿಸಿದರಲ್ಲದೆ, ಕೆಲಸಕ್ಕೆ ಇರುವ ಅಡ್ಡಿತಡೆಗಳನ್ನೂ ವಿವರಿಸಿದರು. ರಸ್ತೆಗಳನ್ನು ಬೋರ್ಡಿನ ಸ್ವಾಧೀನವೀಯಬೇಕೆಂಬ ಸೂಚನೆಗೆ ಆ ಕೆಲಸಮಾಡಲು ಹಣವೆಲ್ಲಿಂದ ತರುತ್ತೀರೆಂದು ಕೇಳಿದರು. ಆ ಮೇಲೆ ಮಾತನಾಡಿದ ಶ್ರೀ ಎ. ಬಿ. ಶೆಟ್ಟಿಯವರು ತನ್ನ ಕಾಲದ ಮತ್ತು ಇಂದಿನ ಬೋರ್ಡಿನ ಪರಿಸ್ಥಿತಿಯನ್ನು ತಿಳಿಸಿ, 'ಅಂದು ನನಗೆ ಪರಕೀಯ ಸರಕಾರದಿಂದ ಸಹಾಯ ಸಿಗುತಿದ್ದಿಲ್ಲ; ಇಂದು ನಿಮ್ಮದೆ ಆದ ಸರಕಾರವಿದೆ. ಈ ಬೋರ್ಡಿನ ಆಡಳಿತೆಯ ಕೀರ್ತಿಯನ್ನು ಬೀಳದಂತೆ ಕಾಪಾಡಬೇಕು' ಎಂದು ಮುಂತಾಗಿ ತಿಳಿಸಿದರು. ಸಾರ್ವಜನಿಕ ಕಾರ್ಯದಲ್ಲಿ ಮುಂದಾಗಲು ಜಿಲ್ಲಾ ಬೋರ್ಡು ಒಂದು ತರಬೇತಿ ಕ್ಷೇತ್ರವೆಂದೂ ತಿಳಿಸಿದರು.

ಅಲ್ಲಿಂದ ಮಂತ್ರಿಗಳು ಜಿಲ್ಲಾ ವಾಣಿಜ್ಯ ಸಂಘದ ಕಚೇರಿಗೆ ಭೇಟಿಯಿತ್ತು ಅವರತ್ತ ಬಿನ್ನವತ್ತಳೆಯನ್ನು ಸ್ವೀಕರಿಸಿದರು. ಆ ಮನವಿಯಲ್ಲಿ ರಸ್ತೆಗಳು, ಸೇತುವೆಗಳು, ವಿದ್ಯುತ್ ಇತ್ಯಾದಿಗಳ ಕೇಳಿಕೆಯೊಂದಿಗೆ ಗುರುಪುರ ಹೊಳೆಗೆ ಹೊಸ ಅಳಿವೆ ಕಡಿಯುವುದರಿಂದ ವ್ಯಾಪಾರಕ್ಕೆ ಹಾನಿಯಾದೆಯೆಂದೂ ಸೂಚಿಸಿದ್ದರು. ಬಂದರದಲ್ಲಿ ಹಡಗು ಪ್ರಯಾಣಿಕರಿಗೊಂದು ನಿಲ್ದಾಣದ ವ್ಯವಸ್ಥೆಯಾಗಬೇಕೆಂದೂ ಹಾರೈಸಿದ್ದರು. ಈ ಮನವಿಯನ್ನು ವಾಣಿಜ್ಯ ಸಂಘದ ಕಾರ್ಯದರ್ಶಿ ಶ್ರೀ ಶೆಣೈಯವರು ಓದಿದರು. ಮಂತ್ರಿಗಳು ಅಲ್ಲಿಯೂ ಜಿಲ್ಲೆಯಲ್ಲಿ ಕೈಕೊಂಡ ಕಾರ್ಯವನ್ನು ಚುಟುಕಿನಲ್ಲಿ ಹೇಳಿ ಕೂಳೂರು ಸೇತುವೆಯ ಟೆಂಡರು ಪಡೆಯಲು ಸರಕಾರ ಪಟ್ಟ ಕಷ್ಟವನ್ನು ತಿಳಿಸಿದರು. ಅಧ್ಯಕ್ಷ ಶ್ರೀ ವಿ.ಎಸ್. ಕುಡ್ವರು ಮಂತ್ರಿಗಳನ್ನು ಅಭಿನಂದಿಸಿದರು.

ಅಲ್ಲಿಂದ ಶ್ರೀ ಭಕ್ತವತ್ಸಲಂರವರೊಬ್ಬರೇ ಡಾ। ಯು. ಪಿ. ಮಲ್ಯ ಮೊದಲಾದವರೊಂದಿಗೆ ತಲಪಾಡಿಗೆ ಹೋದರು. ಅಲ್ಲಿ ನದಿ ದಂಡೆಯಲ್ಲಿ ಶಾಲಾ ಬಾಲಕರೂ, ಊರವರೂ ಮಂತ್ರಿಗಳನ್ನು ಸ್ವಾಗತಿಸಿದರು. ಡಾ। ಮಲ್ಯರು ಮಂತ್ರಿಗಳ ಪರಿಚಯ ಮಾಡಿದರು. ಅಲ್ಲಿನ ಶಾಲಾ ವಿದ್ಯಾರ್ಥಿಗಳು ಕೊಟ್ಟ ಮನವಿಯಲ್ಲಿ ನದಿಗೊಂದು ಸೇತುವೆಯಾಗಲೇ ಬೇಕೆಂದು ಪ್ರಾರ್ಥಿಸಲಾಗಿತ್ತು.

ಅಲ್ಲಿಂದ ಮರಳುವಾಗ ಮಂತ್ರಿಗಳು ಉಳ್ಳಾಲದಲ್ಲಿ ಕೋಟೆ ಮಂಗಳೂರಲ್ಲಿ ಶ್ರೀ ಅಲ್ಬುಕರ್ಕರತ್ತ ಫಲಾಹಾರ ಸ್ವೀಕರಿಸಿದರು. ಅಲ್ಲಿನ ಜನರು ತಮಗೊಂದು ಗ್ರಾಮಾಸ್ಪತ್ರೆ ಬೇಕೆಂಬ ಮನವಿ ಇತ್ತರು. ಮಂತ್ರಿಗಳು ಪರ್ಯಾಲೋಚಿಸುವುದಾಗಿ ಆಶ್ವಾಸನೆಯಿತ್ತರು. ಅಲ್ಲಿಂದ ಮರಳುವಾಗ ಕತ್ತಲಾಗಿತ್ತು. ಮರುದಿನ ಮಂತ್ರಿಗಳಿಬ್ಬರೂ ಸುಬ್ರಹ್ಮಣ್ಯದತ್ತ ತೆರಳಿದರು.

**ಮಂತ್ರಿಗಳಿಬ್ಬರ ಪ್ರಯಾಣ:—** ಮದ್ರಾಸು ಸರಕಾರದ ಪಬ್ಲಿಕ್ ವರ್ಕ್ಸ್ ಶಾಖೆಯ ಮಾನ್ಯಮಂತ್ರಿ ಶ್ರೀ ಎಮ್. ಭಕ್ತವತ್ಸಲಂ ಮತ್ತು ಒಕ್ಕಲುತನ ಶಾಖೆಯ ಮಾನ್ಯಮಂತ್ರಿ ಶ್ರೀ ಎ. ಬಿ. ಶೆಟ್ಟರು ದಿನಾಂಕ ೨೬ರಲ್ಲಿ ಕಾರ್ಕಳಕ್ಕೆ ಆಗಮಿಸಿ ಇಲ್ಲಿಯ ಜನತೆಯ ಮನವಿಯೊಂದನ್ನು ಸ್ವೀಕರಿಸಿದರು. ಅನಂತರ ಹಾಲಾಡಿ ಮಾರ್ಗವಾಗಿ ಮಧ್ಯಾಹ್ನ ಕುಂದಾಪುರಕ್ಕೆ ಆಗಮಿಸಿ ಅಲ್ಲಿಯ ಶಿಷ್ಟಮಂಡಲಕ್ಕೆ ತಕ್ಕ ಉತ್ತರವನ್ನಿತ್ತರು. ಸಂಜೆ ಜರಗಿದ ಸಾರ್ವಜನಿಕ ಸಭೆಯಲ್ಲಿ ಕಾಂಗ್ರೆಸ್ ಕಮಿಟಿಯ ಕಡೆಯಿಂದ ಮನವಿಯೊಂದನ್ನು ಒಪ್ಪಿಸಲಾದುದಕ್ಕೆ ತಕ್ಕ ಉತ್ತರವನ್ನಿತ್ತರು. ಅಲ್ಲಿಂದ ಹೊರಟ ಮಂತ್ರಿಗಳಿಬ್ಬರು ಬ್ರಹ್ಮಾವರಕ್ಕೆ ಬಂದು ಬಾರ್ಕೂರು ಮದಗವನ್ನು ಪರಿಶೀಲಿಸಿ ಉಡುಪಿಗೆ ಬಂದರು. ತಾ ೨೭ರಲ್ಲಿ ಬೆಳಿಗ್ಗೆ ಉಡುಪಿ ತಾಲೂಕು ಕಚೇರಿಯಲ್ಲಿ ಕೂಡಿದ ರೈತರ ಸಭೆಗೆ ಹಾಜರಾದರು. ಕಾಂಗ್ರೆಸ್ ಕಮಿಟಿ ಕಡೆಯಿಂದ ಮಂತ್ರಿದ್ವಯರಿಗೆ ಶ್ರೀ ಕೆ. ನರಹರಿಕಾಮತರು ಮನವಿಗಳನ್ನರ್ಪಿಸಿದರು. ಮಾನ್ಯ ಮಂತ್ರಿಗಳಿಬ್ಬರೂ ಸದುತ್ತರವಿತ್ತರು. ವಿದ್ಯುತ್ ಪೂರೈಕೆ, ನೀರಾವರಿ ಯೋಜನೆಗಳು, ರಸ್ತೆ ಸೇತುವೆ ದುರಸ್ತಿ ಕಾರ್ಯಗಳು ಈ ತನಕ ಎಷ್ಟಾಗಿವೆ, ಇನ್ನು ಎಷ್ಟು ಮಾಡಲಿಕ್ಕಿವೆ, ಅವುಗಳ ಪೂರೈಕೆ ವಿಳಂಬವಾಗಲು ಸರಕಾರದ ಮುಂದಿರುವ ಎಡರು ತೊಡರುಗಳು, ಕಾಂಗ್ರೆಸ್ ಸರಕಾರವನ್ನು ಜನತಾ ಸರಕಾರವೆಂದು ಮನಗಂಡು ಅದು ಮಾಡುತ್ತಿರುವ ಕಾರ್ಯವನ್ನು ನೋಡಿ ಮುಂದೆ ಮಾಡಬಹುದಾದ ಕಾರ್ಯಗಳಿಗೆ ಜನತೆಯ ಸಹಕಾರ ಬೆಂಬಲವನ್ನೀಯಬೇಕೆಂಬುದೇ ಮಾನ್ಯ ಮಂತ್ರಿಗಳ ಭಾಷಣಗಳ ಸರ್ವಸಾಧಾರಣ ಅಭಿಪ್ರಾಯಗಳಾಗಿದ್ದುವು.

---

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

**ಪಥ್ಯ:**—ಹರವೀವಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ.

**ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ**

**ಆಯುರ್ವೇದ ಔಷಧಾಲಯ, ಗದಗ-ಸಿಟಿ.**

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ—
ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಡೇಶ್ವರ ಮೂರ್ತಿ ದಾವಣಗೇರಿ
ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಪುರ ಕೆಮಿಸ್ಟ್, ಹಾವೇರಿ, ಬ್ಯಾಡಗಿ

**ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ**

**೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ**

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಛಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧಶೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವೆ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

**ದಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ**

ಏಜಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,
ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
**ಆಯುರ್ವೇದ ಔಷಧಾಲಯ, ಗದಗ.**

**ಋತುಸ್ರಾವ ನಿಂತಿತು**

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹಠತಪ್ಪಿ ಋತುಸ್ರಾವವಾಗುವುದು, ಹೊಟ್ಟೆ ಕೋಟೆಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಶಾಂತಿ ಗುಣವಾಗಿದೆ— ಬೆಲೆ; ರೂ 3-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ, 8- [ವಿ. ಪಿ. ಖರ್ಚು ಪ್ರತ್ಯೇಕ.]

Mrs. P. DEVEE, F. 08. (N. J.)
Tollygunge CALCUTTA.

ಸ್ಟಾಕಿಸ್ಟರು: ಪಥಾಕಂಪೆನಿ, ಮಂಗಳೂರು

(ಗಾನ ಪಾಠದಿಂದ ಘಂಟಾಘಂಟಾವರೆಗೆ)ನು ಇನಂತ ಯಜಮಾನನಿಲ್ಲದೆ ನೆಟ್ಟಗೆ ಕೆಲಸ ಮಾಡುತ್ತಾ ಜೀವನ್ನ ಕಲ್ಯಾಣಕೆನಾಗ ಬೂಸ್ಸಿಸಲ್ಪಡುದು. ಹೀಗಾಗಿ ಬಲಾತ್ಕಾರದ ಆವಾರ್ಥದ ಸಮತ್ವ ಪೋಷಕಗಳಿಗೆ ತೌರು ಮನೆಯನ್ನು ಮಾಡಿಕೊಟ್ಟಂತಾಗುತ್ತದೆ. ಹೀಗೆ ಮಾಡುವುದನ್ನು ಯಾವ ಸಮಾಜವಾದಿಯೂ ಎತ್ತಿ ಹಿಡಿದಿಲ್ಲ.

ಇನ್ನೂ ಕೆಲವರು ಸಮತ್ವದ ಅವಶ್ಯಕತೆಯನ್ನು ಬಯಸಿದರೂ ಇದರಿಂದ ಉಂಟಾಗುವ ಪರಿಣಾಮಗಳನ್ನು ಊಹಿಸಿ ಸಮತ್ವ ಬೇಕೆಂದು ಘೋಷಿಸುವ ಸಮಾಜವಾದವನ್ನು ನಿರಾಕರಿಸಿದ್ದಾರೆ. ಇವರ ಪ್ರಕಾರ ಸಮತ್ವ ಬಂದರೆ ವ್ಯಕ್ತಿತ್ವವು ನಶಿಸಿ ಎಲ್ಲರೂ ಇರುವೆಯ ಸಾಲಿನಂತೆ ಗುರುತು ಸಿಗದೆ ಜೈಲಿನಲ್ಲಿರುವ ಖೈದಿಗಳನ್ನು ನಂಬರ್ ಮೂಲಕ ಕೂಗುವ ಹಾಗೆ ಆಗುತ್ತದೆ ಎಂದು ಹೆದರಿದ್ದಾರೆ. ಏಕೆಂದರೆ ಸಮತ್ವವೆಂದರೆ ಎಲ್ಲರೂ ಒಂದೇ ವಿಧವಾದ ಬಟ್ಟೆಯನ್ನು ಧರಿಸಬೇಕು, ಎಲ್ಲರ ಮನೆಯಲ್ಲಿ ಒಂದೇ ವಿಧವಾದ ಅಡಿಗೆಯನ್ನು ಮಾಡಬೇಕು, ಎಲ್ಲರೂ ನಗುತ್ತಿರಬೇಕು, ಇಲ್ಲವೇ ಅಳುತ್ತಿರಬೇಕು, ಅಥವಾ ಕೆಮ್ಮುತ್ತಿರಬೇಕು ಇತ್ಯಾದಿ, ಅಲ್ಲದೆ ಸಮತ್ವ ಬಂದರೆ ಹಿರಿಯರು, ಮಾತಾ-ಪಿತೃಗಳು ಎಂಬ ಭಾವನೆ ಹೋಗಿ ಚಿಕ್ಕವರು ಮದಾಂಧರಾಗಿ ಸ್ವೇಚ್ಛೆಯಾಗಿ ವರ್ತಿಸಲು ಅವಕಾಶ ಸಿಗುತ್ತದೆ. ಜನರಲ್ಲಿ ಭಯ ಭಕ್ತಿ ಕಟ್ಟುಗಳು ನಾಶವಾಗಿ ಸಮತ್ವದ ಹುಚ್ಚಾಟವಾಗುತ್ತದೆ.

ಇದೂ ಸಹ ತಪ್ಪು ಭಾವನೆ. ಈ ಭಾವನೆ ಬರುವುದಕ್ಕೆ ವಿಷಯಗಳನ್ನು ಮತ್ತು ವೈಜ್ಞಾನಿಕ ಸಮಾಜವಾದಿಗಳ ಬರಹಗಳನ್ನು ಕೂಲಂಕಷವಾಗಿ ಓದದೆ ಇರುವುದೇ ಕಾರಣವಾಗಿದೆ. (ಸಮಾಜವಾದದ ಬೆಳವಣಿಗೆಯಲ್ಲಿ ಈ ತೆರನಾಗಿ ವಾದಮಾಡಿದವರೂ ಇದ್ದಾರೆ, ಉದಾಹರಣೆಗೆ ಕ್ರಿಶ್ಚಿಯನ್ ಕಲ್ಪನಾತ್ಮಕ ಸಮಾಜವಾದಿಗಳು). ಪ್ರಸ್ತುತ ಪರಿಸ್ಥಿತಿಯಲ್ಲಿ ಈ ರೀತಿ ವಾದ ಮಾಡುತ್ತಿರುವವರು ಸಮಾಜವಾದವನ್ನು ಅವಹೇಳನ ಮಾಡಲು ಹೊರಟು ಅದರ ವಿಷಯವಾಗಿ ಸುಳ್ಳು ಪ್ರಚಾರ ಮಾಡಲು ಯತ್ನಿಸಿರುವರು.

ಸಮಾಜವಾದದಲ್ಲಿ ಸಮತ್ವ ಶಬ್ದಕ್ಕೆ ಇರುವ ಅರ್ಥ ಮೇಲೆ ಚರ್ಚಿಸಿದ ಅರ್ಥ ಆಗಿದ್ದರೆ ಅಂತಹ ಸಮಾಜವಾದ ಯಾರಿಗೂ ಬೇಡ. ಅಲ್ಲದೆ ಇಂತಹ ಸಮತ್ವ ನಾವು ಎಷ್ಟೇ ಬಯಸಿದರೂ ಸಾಧ್ಯವಿಲ್ಲ. ಹುಟ್ಟಿದ ಅವಳಿಜವಳಿ ಮಕ್ಕಳಲ್ಲಿ ವ್ಯತ್ಯಾಸವಿರುವಾಗ ಮನುಷ್ಯ ಸ್ವಭಾವದಲ್ಲಿ ಬುದ್ಧಿ ಶಕ್ತಿಯಲ್ಲಿ-ವ್ಯತ್ಯಾಸಗಳು ಇದ್ದೇ ಇರುತ್ತವೆ. ಎಲ್ಲಾ ಮನುಷ್ಯರನ್ನು ಆರು ಅಡಿ ಇರುವ ಹಾಗೆ ಮಾಡಲು ಸಾಧ್ಯವಿಲ್ಲ. ಅಥವಾ ಒಬ್ಬನು ಕೆಮ್ಮಿದರೆ ಎಲ್ಲರೂ ಕೆಮ್ಮಲು, ಒಬ್ಬನು ಕಾಲು ಮುರಿದುಕೊಂಡರೆ ಎಲ್ಲರೂ ಕಾಲು ಮುರಿದುಕೊಳ್ಳಲು ಸಾಧ್ಯವಿಲ್ಲ. ಅಥವಾ, ಸಮಾಜವಾದದ ಧ್ಯೇಯವು ಎಲ್ಲರೂ ಒಂದೇ ತೆರನಾಗಿ ಉಡುಪನ್ನು ಧರಿಸುವುದಕ್ಕೆ ಪ್ರಯತ್ನಿಸುವುದಕ್ಕಾಗಲಿ ಅಥವಾ ಒಬ್ಬನು ಕೆಮ್ಮಿದರೆ ಎಲ್ಲರೂ ಕೆಮ್ಮುವ ಹಾಗೆ ಶಾಸನ ಮಾಡುವುದಕ್ಕಾಗಲಿ ಜನಿಸಲಿಲ್ಲ. ಹೀಗೆ ಯಾರಾದರೂ ಹೇಳಿದ್ದರೆ ಅಥವಾ ಹೇಳುತ್ತಿದ್ದರೆ ಇವರು ಸಮಾಜವಾದಿಗಳೆಂದು ಕರೆದುಕೊಂಡರೂ ನಿಜವಾಗಿಯೂ ಅವರು ಸಮಾಜವಾದದ ಶತ್ರುಗಳು.

## ಸಮತ್ವದ ಬಗ್ಗೆ ಸ್ಟಾಲಿನ್ನರ ವಿವರಣೆ

ಸಮಾಜವಾದದಲ್ಲಿ ಸಮತ್ವ ಶಬ್ದಕ್ಕೆ ಇರುವ ಅರ್ಥ ಮೇಲ್ಕಂಡಂತೆ ಇರದೆ ಬೇರೊಂದು ರೀತಿಯಲ್ಲಿದೆ. ವೈಜ್ಞಾನಿಕ ಸಮಾಜವಾದವನ್ನು ಸ್ಥಾಪಿಸಿದ ಮಾರ್ಕ್ಸ್ ಮತ್ತು ಎಂಗಲ್ಸ್ ಸಮತ್ವಕ್ಕೆ ಕೊಟ್ಟಿರುವ ಅರ್ಥವನ್ನು ಸ್ಟಾಲಿನ್ನರು ವಿವರಿಸುತ್ತಾ ಹೀಗೆ ಹೇಳಿದ್ದಾರೆ.

'ಸಮಾಜವಾದವೆಂದರೆ ಪ್ರತಿಯೊಬ್ಬ ವ್ಯಕ್ತಿಯ ಅವಶ್ಯಕತೆಗಳನ್ನು ಮತ್ತು ಜೀವನವನ್ನು ಸಮಗೊಳಿಸುವುದಾಗಿದೆ ಎಂದು ಕೆಲವು ವಿರೋಧಿಗಳು ಯೋಚಿಸಿರುವ ಹಾಗೆ ಕಾಣುತ್ತದೆ. (levelling the requirements and the individual lives) ಇಂತಹ ಯೋಚನೆಗೂ ಮಾರ್ಕ್ಸ್ ಮತ್ತು ಲೆನಿನ್ನರ ಹೇಳಿಕೆಗೂ ಯಾವ ಸಂಬಂಧವೂ ಇಲ್ಲ. ಮಾರ್ಕ್ಸನ ಪ್ರಕಾರ ಸಮತ್ವವೆಂದರೆ ವ್ಯಕ್ತಿಗಳ ಅವಶ್ಯಕತೆಗಳನ್ನು ಮತ್ತು ಜೀವನವನ್ನು ಸಮಗೊಳಿಸುವುದೆಂದಲ್ಲ. ಅದು ವರ್ಗಗಳನ್ನು ನಾಶಪಡಿಸುವುದಾಗಿದೆ. (the abolition of classes) ಅಂದರೆ (ಅ) ಕಾರ್ಮಿಕರನ್ನು ಬಂಡವಾಳಗಾರರ ಹಿಡಿತದಿಂದ ತಪ್ಪಿಸುವುದು ಮತ್ತು ಕಾರ್ಮಿಕರ ದುಡಿತದ ಫಲದಿಂದ ಅವರು ಜೀವಿಸುವುದನ್ನು ತಪ್ಪಿಸುವುದಾಗಿದೆ. (ಆ) ಉತ್ಪತ್ತಿ ಸಾಧನಗಳಲ್ಲಿ ಪ್ರತ್ಯೇಕ ಹಕ್ಕುಗಳನ್ನು ಹೊಂದಿರುವುದನ್ನು ತಪ್ಪಿಸಿ ಆ ಸಾಧನೆಗಳನ್ನು ಸಮಾಜದ ಸ್ವತ್ತುಗಳನ್ನಾಗಿ ಮಾರ್ಪಡಿಸುವುದು (ಇ) ಪ್ರತಿಯೊಬ್ಬನೂ ತನ್ನ (ಶಕ್ತ್ಯಾನುಸಾರ ಇರುವ ಹಾಗೆ) ಕೆಲಸ ಮಾಡುವುದು, ಮತ್ತು ತಾನು ಮಾಡಿದ ಕೆಲಸಕ್ಕೆ ತಕ್ಕ ವೇತನವನ್ನು ಪಡೆಯುವುದು (ಸಮಾಜವಾದದ ಕಾಲದಲ್ಲಿ) (Socialist society) (ಈ) ಪ್ರತಿಯೊಬ್ಬನೂ ತನ್ನ ಶಕ್ತಿ ಮೀರಿಗೆ ಕೆಲಸ ಮಾಡುವುದು ಮತ್ತು ತಮ್ಮ ತಮ್ಮ ಅವಶ್ಯಕತೆಯನ್ನು ಅನುಸರಿಸಿ ತಕ್ಕ ವೇತನವನ್ನು ಹೊಂದುವುದು. (Communist society).

ಜನರ ಅಭಿರುಚಿ ಮತ್ತು ಅವಶ್ಯಕತೆಗಳು ಒಂದಾಗಿಲ್ಲ. ಅಥವಾ ಸಮವಾಗಿರಲಾರವು ಮತ್ತು ಎಂದಿಗೂ ಆಗಿರಲಾರವು. ಸಮಾಜವಾದದ ವ್ಯವಸ್ಥೆಯಲ್ಲೇ ಆಗಲಿ ಅಥವಾ ಕಮ್ಯೂನಿಸಂ ವ್ಯವಸ್ಥೆಯಲ್ಲೇ ಆಗಲಿ ಮಾರ್ಕ್ಸಿಸಮಿನಲ್ಲಿ ಸಮತ್ವಕ್ಕೆ ಕೊಟ್ಟಿರುವ ಅರ್ಥ ಇದೇ ಇಗಿದೆ. ಇನ್ನಾವ ವಿಧವಾದ ಅರ್ಥವನ್ನೂ ಯಾವಾಗಲೂ ಮಾರ್ಕ್ಸಿಸಮ್ ಒಪ್ಪಿಲ್ಲ. ಆದುದರಿಂದ ಸಮತಾವಾದವೆಂದರೆ ಎಲ್ಲವನ್ನೂ ಸಮಗೊಳಿಸುವುದು, ವ್ಯಕ್ತಿಗಳ ಅವಶ್ಯಕತೆಗಳನ್ನು ಒಂದೇ ತೆರನಾಗಿ ಮಾಡುವುದು, ಮತ್ತು ಅವರವರ ಅಭಿರುಚಿ ಮತ್ತು ಜೀವನವನ್ನು ಒಂದೇ ಪುಟ್ಟ ಅಥವಾ ಒಂದೇ ರೀತಿ ಇರುವ ಹಾಗೆ ಯತ್ನಿಸುವುದು-ಅಂದರೆ ಎಲ್ಲರೂ ಒಂದೇ ವಿಧವಾದ ಆಹಾರವನ್ನು ಸ್ವೀಕರಿಸುವುದು, ಎಲ್ಲರೂ ಒಂದೇ ವಿಧವಾದ ಬಟ್ಟೆಯನ್ನು ಧರಿಸುವುದು. ಇದು ಎಂದು ಭಾವಿಸಿದ್ದರೆ ಅಥವಾ ಹೇಳುತ್ತಿದ್ದರೆ ಈ ಭಾವನೆ ಮತ್ತು ಹೇಳಿಕೆ ಮಾರ್ಕ್ಸಿಸಮ್ ಅನ್ನು ತುಚ್ಛ ರೂಪಕ್ಕೆ ಇಳಿಸಿ ಅಪಪ್ರಚಾರ ಮಾಡುವುದಾಗಿದೆ. ಮಾರ್ಕ್ಸಿಸಮ್ ಅರ್ಥವಿಲ್ಲದ ಸಮತ್ವ ಮಾಡಲೆಳಸುವುದಕ್ಕೆ ಶತ್ರು ಎಂಬುದನ್ನು ತಿಳಿಯುವುದು ಇಲ್ಲಿ ಅತ್ಯಗತ್ಯ.' (It is time it was understood that Marxism is the enemy of equalization–Stalin Report to the 16th party congress.)

ಸ್ಟಾಲಿನ್ನರು ಹೇಳಿರುವುದನ್ನು ನಾವು ಪದೇ ಪದೇ ಓದಿ ಅದರ ಅರ್ಥವನ್ನು ಮನದಟ್ಟು ಮಾಡಿಕೊಳ್ಳಬೇಕಾಗಿದೆ. ಅವರು ತಿಳಿಸಿರುವ ಹಾಗೆ Marxism (cientific socialism) is the enemy of equalization) ಎಂಬ ವಿವರಣೆಯನ್ನು ನಾವು ಒಪ್ಪಬೇಕಾಗಿದೆ.

## ಸಮತ್ವ ಸ್ಥಾಪನೆಯ ಉದ್ದೇಶ-ವರ್ಗಗಳ ನಾಶ

ಸಮತ್ವ ಸ್ಥಾಪನೆ ಎಂದರೆ ವರ್ಗಗಳನ್ನು ನಾಶ ಮಾಡುವುದಾಗಿದೆ (ie, abolition of classes). ವರ್ಗ ವಿನಾಶವೆಂದರೆ ಅಲ್ಪಸಂಖ್ಯಾತರಾದ ಶ್ರೀಮಂತರು ಸಮಾಜ ಸ್ವತ್ತುಗಳಾದ ಭೂಮಿ, ಕೈಗಾರಿಕೆ ಮುಂತಾದುವುಗಳ ಮೇಲೆ ಒಡೆತನ ಹೊಂದಿದ್ದರೆ ಮಿಕ್ಕವರ ಹತ್ತಿರ ಯಾವ ಸ್ವತ್ತೂ ಇಲ್ಲದೆ ಶ್ರೀಮಂತರ ಹತ್ತಿರ ಕೂಲಿ ಅಥವಾ ವೇತನ ಪಡೆದು ಜೀವಿಸುವ ಬಹು ಸಂಖ್ಯಾತ ಕಾರ್ಮಿಕರ ವರ್ಗದ ಅಸಮತ್ವವನ್ನು ತಪ್ಪಿಸುವುದು. ಆದುದರಿಂದ ಸಮಾಜದಲ್ಲಿ ಸಮತ್ವ ಬರುತದೆ ಎಂದರೆ ಸಮಾಜ ಸಂಪತ್ತುಗಳು ಈ ಅಲ್ಪಸಂಖ್ಯಾತರ ಒಡೆತನದಲ್ಲಿದ್ದು ಅವರ ನೋಟಿಗೆ ಸಿಕ್ಕದ ಹಾಗೆ ಎಲ್ಲ ಸ್ವತ್ತುಗಳನ್ನು ಸಮಾಜೀಕರಣ ಅಥವಾ ರಾಷ್ಟ್ರೀಕರಣ ಮಾಡಿ (Nationalise) ಎಲ್ಲರೂ ಅವರವರ ಯೋಗ್ಯತಾನುಸಾರ ಕೆಲಸ ಮಾಡುವುದಾಗಿದೆ. ಬಂಡವಾಳಗಾರ ಸಮಾಜದಲ್ಲಿ ಸಮಾಜ ಸಂಪತ್ತುಗಳನ್ನು ಪ್ರತ್ಯೇಕವಾಗಿ ಹೊಂದಲು ಅವಕಾಶವಿದೆ ಇದಕ್ಕೆ ಸಮಾಜವಾದ ಸಮಾಜದಲ್ಲಿ ಅವಕಾಶವಿಲ್ಲ. ಈ ಬಂಡವಾಳಗಾರ ಸಮಾಜದಲ್ಲಿ ಪ್ರತ್ಯೇಕ ಹಕ್ಕುಳ್ಳವರು ಇತರರನ್ನು ಕೂಲಿಗಳಾಗಿಯೋ ಅಥವಾ ವೇತನಗಾರರಾಗಿಯೋ ಸೇರಿಸಿಕೊಂಡು ತಾವು ಕೆಲಸ ಮಾಡದೆಯೇ, ನ್ಯಾಯವಾಗಿ ಸಲ್ಲಬೇಕಾದ ಕೂಲಿ ಅಥವಾ ವೇತನದಲ್ಲಿ ಕಡಿಮೆ ಮಾಡಿ ಮಿಗಿಸಿಕೊಂಡು ಜೀವಿಸುತ್ತಾರೆ. ಇದು ಸಮಾಜವಾದ ಸಮಾಜವ್ಯವಸ್ಥೆಯಲ್ಲಿ ಸಾಧ್ಯವಿಲ್ಲ. ಇಲ್ಲಿ ಎಲ್ಲ ಸ್ವತ್ತುಗಳೂ ಸಮಾಜಕ್ಕೆ ಸೇರಿವೆ. ಸಮಾಜದ ಸ್ವತ್ತುಗಳ ಒಡೆತನದ ವಿಷಯದಲ್ಲಿ ಎಲ್ಲರೂ ಸಮಾನರು, ಸಮಭಾಗಿಗಳು, ಸಮತ್ವ ಹೊಂದಿದ್ದಾರೆ.

ಆದುದರಿಂದ ಸಮಾಜ ವಿರೋಧಿಗಳು ವಾದಿಸುವ ಹಾಗೆ ಇಲ್ಲಿ ಅಸಮತ್ವದ ವಿಷಯವು ಬರುವುದೇ ಇಲ್ಲ. ಮನುಷ್ಯ ವ್ಯಕ್ತಿಗಳಲ್ಲಿ ಅಸಮತ್ವವಿಲ್ಲವೆಂದು ಸಮಾಜವಾದವು ಹೇಳುವುದಿಲ್ಲ. ಸಮಾಜವಾದದಲ್ಲಿ ಸಮತ್ವವಿರಬೇಕು ಎಂದು ವಾದಿಸಿದರೆ ಸಮತ್ವದ ಅರ್ಥವಾಗದು. ಹಾಗೆ ನೋಡಿದರೆ ಒಬ್ಬರ ಬುದ್ಧಿ ಶಕ್ತಿ, ಚಾಕಚಕ್ಯತೆ, ಇನ್ನೊಬ್ಬನಲ್ಲಿ ಇಲ್ಲ.

## ಸಮಾಜವಾದ ವ್ಯವಸ್ಥೆಯಲ್ಲಿ ವ್ಯಕ್ತಿಯ ಬೆಳವಣಿಗೆಗೆ ಅವಕಾಶ

ಅಥವಾ ಸಮತ್ವಬೇಕೆಂದು ಅಸಿಪಟ್ಟು ಅದರಿಂದುಂಟಾಗುವ ಪರಿಣಾಮಗಳನ್ನು ಕಂಡು ಬೆದರುವವರ ವಾದದಲ್ಲಿ ಏನೂ ಹುರುಳಿಲ್ಲ. ಇದು ತಪ್ಪು ತಿಳುವಳಿಕೆಯ ಫಲ. ವ್ಯಕ್ತಿತ್ವವನ್ನು ಪ್ರಕಾಶಮಾನಕ್ಕೆ ತರುವುದರಲ್ಲಿ ಸಮಾಜವಾದ ಸಮಾಜವು ಶ್ರಮಿಸುವುದರಲ್ಲಿ ತೊಡಗಿದೆ. ಹಾಗೆ ನೋಡಿದರೆ ವ್ಯಕ್ತಿತ್ವವನ್ನು ಪ್ರಕಾಶಕ್ಕೆ ತರುವುದಕ್ಕೆ ಅವಕಾಶ ಕಲ್ಪಿಸದಿರುವ ಸಮಾಜವೆಂದರೆ ಬಂಡವಾಳಗಾರ ಸಮಾಜ. ಶ್ರೀಮಂತರು ತಮ್ಮ ಸ್ವೇಚ್ಛೆ ವ್ಯಯ ಮಾಡುವುದನ್ನು ಬಿಟ್ಟರೆ ಉಳಿದವರೆಲ್ಲರೂ ನಿರುದ್ಯೋಗ, ಹಣಕಾಸಿನ ಮುಗ್ಗಟ್ಟು, ಇವುಗಳಿಂದ ನರಳುತ್ತಿದ್ದಾರೆ. ವಿದ್ಯಾರ್ಜನೆ ಮತ್ತು ಸುಸಂಸ್ಕೃತ ಜೀವನ ನಡೆಸುವುದಕ್ಕೆ ಅವಕಾಶವೂ ಹಣ ಬಲವೂ ಇಲ್ಲದೆ ತಮ್ಮ ಬಾಳನ್ನೆಲ್ಲಾ ದುಡಿಮೆಯಲ್ಲೇ ಮುಕ್ತಾಯಗೊಳಿಸಿ ಗಾಣದ ಎತ್ತುಗಳಂತೆ ಜೀವಿಸುತ್ತಿದ್ದಾರೆ

ಸಮಾಜವಾದ ಸಮಾಜದಲ್ಲಿ ವ್ಯಕ್ತಿಯನ್ನು ಆರ್ಥಿಕ ಮುಗ್ಗಟ್ಟಿನಿಂದ ತಪ್ಪಿಸುವ ಹಾಗೆ ಮೊದಲು ನಿರುದ್ಯೋಗವನ್ನು ತೊಡೆದು ಹಾಕುತ್ತದೆ. ಆರ್ಥಿಕ ಭದ್ರತೆಯನ್ನು ಕಲ್ಪಿಸಿ ವಿರಾಮವನ್ನು ದೊರಕಿಸಿಕೊಡುತ್ತದೆ. ಆತನ ಯೋಗ್ಯತಾನುಸಾರ ಅಂದರೆ ವ್ಯಕ್ತಿಯು ಸಮಾಜದ ಸಂಪತ್ತಿನ ಬೆಳವಣಿಗೆಗೆ ಎಷ್ಟು ತನ್ನ ಶ್ರಮದಿಂದ ಯತ್ನಿಸುತ್ತಾನೋ, ಪ್ರಮಾಣದಲ್ಲಿ ಆತನಿಗೆ ಪ್ರತಿಫಲವಾಗಿ ಸಂಪತ್ತಿನ ಒಂದು ಭಾಗವನ್ನು ಕೊಟ್ಟು ಮಿಕ್ಕಿದ್ದನ್ನು ಸಮಾಜ ಸಂಪತ್ತುಗಳ ವೃದ್ಧೀಕರಣಕ್ಕೆ ಮೀಸಲಾಗಿಡುತ್ತದೆ. ಹೀಗೆ ಬಂದ ವೇತನವನ್ನು ಆತನು ತನ್ನ ಇಷ್ಟಾನುಸಾರ ವ್ಯಯ ಮಾಡಿ ತನಗೆ ಬೇಕಾದ ಬಟ್ಟೆ ಧರಿಸಬಹುದು ಅಭಿರುಚಿಯಂತೆ ಜೀವನ ಸೌಕರ್ಯಗಳನ್ನು ಕೊಂಡು ಜೀವಿಸಬಹುದು. ಇಷ್ಟಪಟ್ಟವರೊಡನೆ ಸ್ನೇಹ ಬೆಳೆಸಬಹುದು. ಪ್ರೀತಿ ಮಾಡಿದವರನ್ನು (ಅದಕ್ಕೆ ಪ್ರತಿ ಪ್ರೀತಿ ಅವರಲ್ಲಿದ್ದರೆ) ವಿವಾಹವಾಗಬಹುದು (ಚಿತ್ರಗುಪ್ತ)

---

### ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

O. S. No. 33/1950

ದೇವಕಿ ಅಮ್ಮ —ವಾದಿ.

ಮತ್ತು

ಸುಬ್ರಾಯ ಭಟ್ಟ —ಪ್ರತಿವಾದಿ.

ಇವರೊಳಗೆ

ಪ್ರತಿವಾದಿ ಸುಬ್ರಾಯಭಟ್ಟ, ಹೆಗ್ಡೆ ಕೃಷ್ಣ ಭಟ್ಟರ ಮಗ, ಕಾಸರಗೋಡು ತಾಲೂಕು ಬಾಡೂರು ಗ್ರಾಮದ ನೆರಿಯದಲ್ಲಿರುವವರು.

ವಾದಿಗೆ ಪ್ರತಿವಾದಿಯು ತಾರೀಕು 24-4-1945ರಲ್ಲಿ ಬರೆಕೊಟ್ಟ ಡಿ. ಪ್ರೊ. ನೋಟಿನ ಹಣ ವ್ಯಲಾತಿಬಗ್ಗೆ ವಾದಿಯು ಪ್ರತಿವಾದಿಯ ಮೇಲೆ ದಾಖಲು ಮಾಡಿದ ಸದ್ರಿ ವ್ಯಾಜ್ಯವು ತಾರೀಕು 15-6-1950ಕ್ಕೆ ತನಿಖೆಗೆ ಇಟ್ಟಿರುತ್ತದೆ. ಸದ್ರಿ ತಾರೀಕಿಗೆ ಪ್ರತಿವಾದಿಯು ಈ ಕೋರ್ಟಿನ ಮುಂದೆ ಹಾಜರಾಗದಿದ್ದರೆ ಅತನ ಗೈರಹಾಜರಿಯಿಂದ ಸದ್ರಿ ವ್ಯಾಜ್ಯವನ್ನು ಏಕಪಕ್ಷವಾಗಿ ತೀರ್ಮಾನಿಸಲಾದೀತೆಂಬ ಸಂಗ್ತಿ ಈ ಮೂಲಕ ತಿಳಿಸಲಾಗಿಯದೆ.

**B. S. Kakkilaya,**
Advocate for Plff.
Kasargod, 24-4-1950




Approved from by the Govt. of Mysore
Certificated by the Agent of the Govt of Cylone & Indian.



**Wanted**

For the ST. MARYS' HIGH SCHOOL, SHIRVA (South Kanara)

1. A Science or Mathematics B. T. or L. T. knowing Kannada. A Lady is preferred.
2. A Higher Grade Drawing Teacher.
3. A Spinning & Weaving Instructor.

Sceince or Mathematics Graduates and Lower Grade Drawing Teachers may also apply. Best terms will be offered.

Apply sharp to the Correspondent.





# ಸಮಾಜವಾದದಲ್ಲಿ 'ಸಮತ್ವ' ಶಬ್ದದ ಅರ್ಥ

ಶ್ರೀ ಎಲ್. ಶ್ರೀಕಂಠಯ್ಯ.

ಸಮಾಜವಾದವೆಂದರೆ ಅನೇಕರು ಅನೇಕ ರೀತಿಯಲ್ಲಿ ಅರ್ಥಕಲ್ಪಿಸಿ ಅದರ ಸ್ವರೂಪವನ್ನು ವಿಸಲೆತ್ನಿಸಿದ್ದಾರೆ. ಈಗ ನಾವು ಈ ವಿವಿಧ ಅರ್ಥಗಳನ್ನು ಪರೀಕ್ಷಿಸಿ ಇವುಗಳಲ್ಲಿ ಸರಿಯಾದದ್ದು ಯಾವುದು ಎಂಬುದನ್ನು ವಿಂಗಡಿಸಿ ಸಮಾಜವಾದದ ನಿಜಸ್ವರೂಪವನ್ನು ತಿಳಿಯೋಣ. ಇದರ ಅವಶ್ಯಕತೆಯನ್ನು ಇನ್ನೊಂದು ಬಾರಿ ಒತ್ತಿ ಹೇಳಬೇಕಾಗಿಲ್ಲ.

### ಸಮತ್ವ ಶಬ್ದದ ಅರ್ಥ.

ಮೊದಲು ಸಮಾಜವಾದದಲ್ಲಿ 'ಸಮತ್ವ' ಶಬ್ದಕ್ಕೆ ಇರುವ ಅರ್ಥವನ್ನು ತಿಳಿಯೋಣ. ಇದು ಎಷ್ಟು ಸುಲಭವಾಗಿದೆಯೋ ಅಷ್ಟೇ ಕಠಿಣವಾಗಿದೆ. ಲೋಕಾಭಿರಾಮವಾಗಿ ಈ ಶಬ್ದಕ್ಕೆ ನಾನಾ ವಿಧವಾದ ಅರ್ಥವನ್ನು ಕೊಟ್ಟಿದ್ದಾರೆ. ಹೀಗೆ ರೂಢಿಯಲ್ಲಿರುವ ಅರ್ಥಗಳನ್ನು ವಿಂಗಡಿಸಿ ತರವಾಯ 'ಸಮತ್ವ' ಶಬ್ದಕ್ಕೆ ವೈಜ್ಞಾನಿಕ ಸಮಾಜವಾದವನ್ನು ಸ್ಥಾಪಿಸಿದ ಮಾರ್ಕ್ಸ ಮತ್ತು ಏಂಗಲ್ಸರ ಪ್ರಕಾರ ಏನು ಅರ್ಥವಿದೆ ಎಂಬುದನ್ನು ತಿಳಿಯಬೇಕಾಗಿದೆ.

ಕೆಲವರು ಸಮತ್ವಕ್ಕೆ ವಿರೋಧಿಗಳು. ಇವರ ಪ್ರಕಾರ ಪ್ರಕೃತಿಯಲ್ಲೇ ಸಮತ್ವವಿಲ್ಲದಿರುವಾಗ ಸಮಾಜದಲ್ಲಿ ಸಮತ್ವ ಬರುವುದು ಬಹಳ ಕಷ್ಟ. ಪ್ರಕೃತಿಯಲ್ಲಿ ಸೌಮ್ಯತೆ, ಭೀತಿ, ರೌದ್ರತೆ ಎಲ್ಲವೂ ಇದೆ. ಒಂದು ಪ್ರಾಣಿಯು ಇನ್ನೊಂದರ ಮೇಲೆ ಬಲಪ್ರಯೋಗಮಾಡಿ ಜೀವಿಸುತ್ತದೆ. ಈ ಹೋರಾಟದಲ್ಲಿ ಕಷ್ಟನಷ್ಟಗಳು ಬಂದರೂ ಕ್ರೌರ್ಯವಿದ್ದರೂ, ಒಟ್ಟಿನಲ್ಲಿ ಒಂದು ರೀತಿಯ ಸಮತೆ ಇದೆ. ಎಲ್ಲ ಪ್ರಾಣಿವರ್ಗಗಳು, ಸಸ್ಯಗಳು, ಒಂದು ಇನ್ನೊಂದರ ಶತ್ರುವಾದರೂ ಅವು ಅವುಗಳ ಕ್ಷೇತ್ರದಲ್ಲಿ ಬಾಳಿಕೊಂಡು ಕಾಲ ನೂಕುತ್ತಿವೆ. ಇದರ ಪ್ರಕಾರ ಪ್ರಕೃತಿಯಲ್ಲಿ ಈ ತೆರನಾಟಕ ಭಗವಂತನ ಲೀಲೆ. ಈ ನಿಯಮವನ್ನು ಯಾರೂ ಬದಲು ಮಾಡಲು ಶಕ್ತರಲ್ಲ. ಪ್ರಕೃತಿಯು ಹೇಗೆ ಭಗವಂತನ ಲೀಲೆಯೋ ಸಮಾಜವೂ ಆತನ ಲೀಲೆ. ಇಲ್ಲಿ ಮನುಷ್ಯನ ಕೈವಾಡವೇ ಇಲ್ಲ. ಆದುದರಿಂದ ಬೇರೆ ಬೇರೆ ಜನಾಂಗಗಳಿದ್ದರೆ, ಕುಳ್ಳರಿದ್ದರೆ, ಜಾತಿಗಳಿದ್ದರೆ, ಬಡವರು ಶ್ರೀಮಂತರಿದ್ದರೆ ಎಲ್ಲವೂ ಭಗವಂತನ ನೇಮಕ ಅಥವ ಅವರವರ ಕರ್ಮ. ಎಲ್ಲರೂ ಶ್ರೀಮಂತರಾಗಿರಲು ಸಾಧ್ಯವಿಲ್ಲ, ಎಲ್ಲರೂ ಉದ್ದನೆಯ ಮನುಷ್ಯರಾಗಲು ಸಾಧ್ಯವಿಲ್ಲ; ವ್ಯತ್ಯಾಸ, ಅಸಮತ್ವ ಜೀವನದಲ್ಲಿ ನೆಲೆಗೊಂಡು, ವ್ಯಕ್ತಿಗಳನ್ನು ಪೋಟಿಗೆ ನಿಲ್ಲಿಸಿ ಅವರಲ್ಲಿರುವ ಉತ್ತಮ ಪ್ರತಿಭೆಗಳನ್ನು ಪ್ರಕಾಶಕ್ಕೆ ತರುತ್ತವೆ. ಉದಾಹರಣೆಯನ್ನು ಸಹ ಕೊಟ್ಟು ಪ್ರಕೃತಿಯಲ್ಲಿ ಹೇಗೆ ಅಸಮತ್ವವಿದೆಯೋ ಹಾಗೆ ಸಮಾಜದಲ್ಲೂ ಸಹ ಅಸಮತ್ವ ಸಹಜವೆಂದು ವಾದಿಸಿದ್ದಾರೆ. ನಿಮ್ಮ ಕೈ ಬೆರಳನ್ನು ನೋಡಿಕೊಳ್ಳಿ. ಅವು ಸಮವಾಗಿಯೇ ಇಲ್ಲ. ಆದುದರಿಂದ ಎಲ್ಲರೂ ಸಮವಾಗಿರಬೇಕೆಂದು ವಾದಿಸುವುದು ಮೂರ್ಖತನ.

ಈ ವಾದ ಸಮಂಜಸವಾಗಿ ಕಾಣುವುದಕ್ಕಿಂತ ಮುಂಚೆಯೇ ಅನೇಕ ಸಂದೇಹಾತ್ಮಕ ಪ್ರಶ್ನೆಗಳು ಮೂಡುತ್ತವೆ. ಪ್ರಕೃತಿಗೂ ಸಮಾಜಕ್ಕೂ ಯಾವ ಸಂಬಂಧವಿದೆ, ಒಂದು ವೇಳೆ ಇರುವುದಾದರೆ ಮನುಷ್ಯರು ಬರೀ ಮೃಗಗಳೇ? ಸಮಾಜಕ್ಕೂ ಪ್ರಕೃತಿಗೂ ನಿಕಟ ಸಂಬಂಧವಿರುವುದೇನೋ ನಿಜ. ಏಕೆಂದರೆ ಸಮಾಜದ ಪ್ರತಿ ವ್ಯಕ್ತಿಯೂ ತನ್ನ ಜೀವನಾಧಾರಕ್ಕೆ ಪ್ರಕೃತಿಯನ್ನು ಅವಲಂಬಿಸಬೇಕಾಗಿದೆ. ಪ್ರಕೃತಿಯು ಆಹಾರ ಕೊಡುತ್ತದೆ; ವಾಸಿಸುವುದಕ್ಕೆ ಮನೆಯನ್ನು ಕಟ್ಟಲು ಮಣ್ಣು ಮರ ಮುಂತಾದ ವಸ್ತುಗಳನ್ನು ಕೊಡುತ್ತದೆ. ಉಡಲು ಹತ್ತಿ ಮತ್ತು ಉಣ್ಣೆ(Wool)ಯನ್ನು ಕೊಡುತ್ತದೆ. ಸಂಚಾರ ಸೌಕರ್ಯಕ್ಕೆ ವಾಹನಗಳನ್ನು ಕಟ್ಟಲು ಮತ್ತು ನಡೆಸಲು ಕಬ್ಬಿಣ, ಕಲ್ಲಿದ್ದಲು, ಪೆಟ್ರೋಲ್, ವಿದ್ಯುಚ್ಛಕ್ತಿಗಳನ್ನು ಕೊಡುತ್ತದೆ. ಇಷ್ಟು ಮಾತ್ರಕ್ಕೆ ಪ್ರಕೃತಿಯಲ್ಲಿ ಸರಳ ಜೀವನವನ್ನು ನಡೆಸುತ್ತಿರುವ ಮೃಗಗಳೊಡನೆ ಮನುಷ್ಯನನ್ನು ಹೋಲಿಸುವುದಕ್ಕಾಗುತ್ತದೆಯೇ? ಹೋಲಿಕೆ ತಾನೆ ಎಲ್ಲಿದೆ? ಇವರ ವಾದ ಬಹು ಪ್ರಾಚೀನ ಕಾಲದಲ್ಲಿ ಮೃಗಗಳಂತೆ ಬೇಟೆಯಾಡಿ ಜೀವಿಸುತ್ತಿದ್ದ ಮನುಷ್ಯ ಜಂತುಗಳಿಗೆ ಹೋಲುತ್ತದೆಯೋ ಹೊರತು ಈಗಿನ ಕಾಲದ ಮನುಷ್ಯನೊಡನೆ ಹೋಲಿಕೆ ಇಲ್ಲ.

ಸಮಾಜ ವ್ಯಕ್ತಿಗಳು ಪ್ರಕೃತಿಯ ಮೇಲೆ ಜೀವಿಸಿದರೂ ಪ್ರಕೃತಿಯೂ ಸಮಾಜವೂ ಒಂದೇ ಅಲ್ಲ. ಸಮಾಜದಲ್ಲಿರುವ ವ್ಯಕ್ತಿಗಳ ಬೆಳವಣಿಗೆ ಎಂದರೆ ಸದಾ ಪ್ರಕೃತಿಯೊಡನೆ ಗುದ್ದಾಡಿ, ಅದರ ಗುಟ್ಟುಗಳನ್ನು ತಿಳಿದು ಅದನ್ನು ತನ್ನ ಸ್ವಾಧೀನಕ್ಕೆ ತಂದುಕೊಳ್ಳುವುದು. (Man has always tried to gain control over Nature) ಇದೇ ಮನುಷ್ಯನಿಗೂ ಮೃಗಗಳಿಗೂ ಇರುವ ಮೂಲ ವ್ಯತ್ಯಾಸ. ಮೃಗಗಳಲ್ಲಿರುವ ಹಾಗೆ ದೂರು, ಚೇತನ, ಇವುಗಳಿದ್ದರೂ ಮನುಷ್ಯನಿಗೆ ತನ್ನ ವಾತಾವರಣವನ್ನು (environment) ಬದಲುಗೊಳಿಸಿ ಅದು ತನ್ನ ಉಪಯೋಗಕ್ಕೆ ಅಥವ ತನ್ನ ಅಪೇಕ್ಷೆಯನ್ನು ತಾನು ಅಪೇಕ್ಷೆಪಟ್ಟ ವೇಳೆಯಲ್ಲಿ ಹೊಂದಲು ಮಾರ್ಪಡಿಸುವ ಶಕ್ತಿ ಇದೆ. ಇಂಥ ಶಕ್ತಿ ಮಾನವನಿಗೆ ಇಲ್ಲದೆ ಇದ್ದಿದ್ದರೆ ಅನೇಕ ಮೃಗಗಳು ಪ್ರಕೃತಿಯ ಮುಷ್ಟಿಗೆ ಸಿಕ್ಕಿ ನಶಿಸಿಹೋಗುವ ಹಾಗೆ ಮಾನವ ಕುಲವೇ ಅಳಿಯುತ್ತಿತ್ತು. ಉದಾಹರಣೆಗೆ ಮನುಷ್ಯ ಮಳೆಯನ್ನು ನಂಬಿ ವ್ಯವಸಾಯ ಮುಂದುವರಿಸುವುದು ಕಷ್ಟವಾದರೆ, ನದಿಗೆ ಅಣೆಕಟ್ಟು ಕಟ್ಟಿ ನೀರನ್ನು ಕೂಡಿಸಿ ನೀರಾವರಿ ಮೂಲಕ ವ್ಯವಸಾಯ ಮುಂದುವರಿಸುತ್ತಾನೆ. ಮೃಗವಾದರೆ ಹಸಿವು ಕಂಡಕೂಡಲೆ ಬೇಟೆಗೆ ಹೊರಟು ಕೈಗೆ ಸಿಕ್ಕಿದ ಪ್ರಾಣಿಯನ್ನು ಕೊಂದು ಹಸಿವನ್ನು ನೀಗಿಸಿಕೊಂಡು ಮಲಗುತ್ತದೆ. ಅದಕ್ಕೆ ಮುಂದಿನ ಯೋಚನೆ ಇಲ್ಲ. ಒಂದು ವೇಳೆ ಬೇಟೆಗೆ ಯಾವುದೂ ಸಿಗದಿದ್ದರೆ ಹಸಿವಿಗೆ ಈಡಾಗಿ ಸಾಯುತ್ತದೆ. ಮೃಗವು ಪ್ರಕೃತಿಯ ವಜ್ರಮುಷ್ಟಿಗೆ ಸದಾ ಸಿಕ್ಕಿರುತ್ತದೆ. ಆದರೆ ಮನುಷ್ಯನು ಪ್ರಕೃತಿಯನ್ನು ವಿಜ್ಞಾನದ ಮೂಲಕ ಜಯಿಸಿ, ತನ್ನ ಅಂಕೆಯಲ್ಲಿ ತರುವುದಕ್ಕೆ ಶಕ್ತಿಯನ್ನು ಸಂಪಾದಿಸಿರುವುದರಿಂದ ಪ್ರಕೃತಿಯ ಕ್ರೂರ ಮುಷ್ಟಿಯಿಂದ ತಪ್ಪಿಸಿಕೊಳ್ಳಬಲ್ಲ. ೧೦೦೦ ವರ್ಷಗಳ ಹಿಂದೆ ಇದ್ದ ಹುಲಿ, ಆನೆ, ಚಲನವಲನ ಈಗ ಇರುವ ಹುಲಿಯ ರೀತಿಯಲ್ಲೇ ಇದೆ. ಆದರೆ ೧೫೦೦ ವರ್ಷಗಳ ಹಿಂದೆ ಇದ್ದ ಮನುಷ್ಯನಿಗೂ ಈಗಿನ ಮನುಷ್ಯನಿಗೂ ಹೋಲಿಕೆಯೇ ಇಲ್ಲ.

### ಸಮಾಜದ ದೃಷ್ಟಿಯಲ್ಲಿ ವ್ಯಕ್ತಿಗಳು ಸಮಾನರು.

ಕೈಬೆರಳುಗಳ ವಾದದ ಮೂಲಕ ಅಸಮತ್ವವನ್ನು ಸಾಧಿಸುವುದಕ್ಕೆ ಹೊರಡುವುದು ವಿತಂಡವಾದ. ಇದು ವಾದವೇ ಅಲ್ಲ. ಹೋಲಿಕೆಗಳ ಮೂಲಕವಾದ ಸಮರ್ಥನೆಯನ್ನು ಮಾಡುವುದಾದರೆ ನಾವು ನಮಗೆ ಬೇಕಾದ ಹೋಲಿಕೆಯ ಮೂಲಕ ನಮ್ಮ ವಾದವನ್ನು ಸಮರ್ಥಿಸಿಕೊಳ್ಳಬಹುದು. ಉದಾಹರಣೆಗೆ ಒಬ್ಬ ತಂದೆಗೆ ನಾಲ್ಕು ಜನ ಮಕ್ಕಳಿದ್ದಾರೆಂದು ಭಾವಿಸೋಣ, ಇದರಲ್ಲಿ ಒಬ್ಬನು ದಡ್ಡ, ಇನ್ನೊಬ್ಬ ಜಾಣ, ಒಂದು ಹೆಣ್ಣು ಮಗು, ಒಂದು ಹುಟ್ಟುಕುರುಡು. ಈ ನಾಲ್ವರಲ್ಲಿ ಅಸಮತ್ವವಿದ್ದರೂ ಮಕ್ಕಳು ತಂದೆಯ ವಿಶ್ವಾಸ ಪ್ರೀತಿಯ ದೃಷ್ಟಿಯಲ್ಲಿ ಎಲ್ಲರೂ ಸಮಾನರು ಹಾಗೆಯೇ ಸಮಾಜವು ಒಬ್ಬ ದೊಡ್ಡ ತಂದೆ. ಆದುದರಿಂದ ಸಮಾಜದಲ್ಲಿ ಜೀವಿಸುವ ಎಲ್ಲ ವ್ಯಕ್ತಿಗಳು ಸಮಾಜದ ದೃಷ್ಟಿಯಲ್ಲಿ ಸಮಾನರು!

ಇನ್ನು ಕೆಲವರು ಸಮತ್ವ ತತ್ವಕ್ಕೆ ವಿರೋಧಿಗಳಲ್ಲ. ಆದರೆ ಇವರು ಸಮತ್ವಕ್ಕೆ ತಿಳಿದುಕೊಂಡಿರುವ ಅರ್ಥ ಅಪಾರ್ಥವಾಗಿದೆ. ಇವರ ಪ್ರಕಾರ ಸಮತ್ವವೆಂದರೆ ಹೀಗಿದೆ. ಉದಾಹರಣೆಗೆ ಮೂರು ಜನ- ಪತ್ತಿರ ತಲಾ ೩೦೦-೫೦೦ ೧೦೦೦ ರೂಪಾಯಿಗಳಿವೆಯೆಂದು ಭಾವಿಸೋಣ. ಇಲ್ಲಿ ಪ್ರತಿಯೊಬ್ಬನ ಹತ್ತಿರ ಅಸಮತ್ವ ಪ್ರಮಾಣದಲ್ಲಿ ಹಣವಿದೆ ಹೀಗೆ ಅಸಮತ್ವ ಪ್ರಮಾಣದಲ್ಲಿ ಹಣವಿರುವುದು ತಪ್ಪು. ಆದುದರಿಂದ ಸಮತ್ವ ಮಾಡುವುದಾದರೆ 1800/3-600 ರೂಪಾಯಿಗಳು ಪ್ರತಿಯೊಬ್ಬನಲ್ಲಿ ಸದಾ ಇರಬೇಕು. ಇನ್ನೂ ಕೆಲವರು ಕೂಲಿಗಾರರಾಗಿ ದಿನಕ್ಕೆ ೧ ರೂ. ಸಂಪಾದಿಸುತ್ತಿರುವರೆಂದು ಭಾವಿಸೋಣ. ಮತ್ತು ಇನ್ನೊಬ್ಬನಿಗೆ ಮಾಹೆ ೩೦೦ ರೂ.ಗಳು ವೇತನ ಬರುತ್ತಿವೆ ಎಂದು ಭಾವಿಸೋಣ. ಈ ತೆರನಾಗಿ ಒಬ್ಬನಿಗೆ ಮಾಹೆ ೩೦೦, ಇನ್ನೊಬ್ಬನಿಗೆ ೩೦ ರೂ.ಗಳು ಬರುವುದು ತಪ್ಪು. ಆದುದರಿಂದ ಇಬ್ಬರು ಎಷ್ಟೇ ಕೆಲಸ ಮಾಡಲಿ ಮತ್ತು ಕೆಲಸದಲ್ಲಿ ವ್ಯತ್ಯಾಸವಿರಲಿ, ಸಮನಾಗಿ ವೇತನ ಬರುವ ಹಾಗೆ ಇರಬೇಕು.

ಈ ಅರ್ಥ ಅಸಂಬದ್ಧ ಪ್ರಲಾಪವಾಗಿರುವುದಲ್ಲದೆ, ಈ ರೀತಿಯಲ್ಲಿ ಸಮತ್ವ ಬರುವುದೇ ಇಲ್ಲ. ಕಾರಣ ಪ್ರತಿಯೊಬ್ಬನ ಹತ್ತಿರ 1800/3 ಸ್ವಲ್ಪ ಕಾಲದವರೆಗೆ ಇದ್ದರೂ ಇನ್ನು ಕೆಲವು ಕಾಲದ ಮೇಲೆ ಒಬ್ಬನು ಸೋಮಾರಿಯಾಗಿ ಮನೆಯಲ್ಲಿ ಕುಳಿತು ಇರುವ ಹಣದ ಮೇಲೆ ಜೀವಿಸುತ್ತಾ ಎಲ್ಲವನ್ನೂ ಕಳೆದುಕೊಳ್ಳಬಹುದು. ಇನ್ನೊಬ್ಬ

(೧೦ನೇ ಪುಟ ನೋಡಿರಿ)


**ಅಮೃತಾಂಜನ**

...ವೇದನೆ, ಶಿರೋವೇದನೆ, ಉಳುಕು ..., ಭುಜ ಹಲ್ಲು ವೇದನೆಗಳಿಗೂ, ಎದೆ ...ಘಾಯಗಳು, ಬಾತುಕೊಳ್ಳುವುದು, ...ಷಮುಂತಾದವು, ಪಕ್ಷವಾತ, ಮೊಡಿಮೆ ...ವಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

REGD

...ಕಡ್ಡಿ ಮುದ್ದು ನಮ್ಮಲ್ಲಿ ಸಿಕ್ಕುತ್ತವೆ.

**ಅಮೃತಾಂಜನ ಲಿಮಿಟೆಡ್**

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.



*For Life Assurance*

CONSULT

**THE NEW GUARDIAN OF INDIA**

LIFE ASSURANCE Co. LTD.

(Established: 1934)

Chairman: **Sri. M. C. T. M. Chidambaram Chattiyar.**

A Policy in this progressive Life Office is a good investment; its Agency is a valuable business connection.

MANGALORE BRANCH:
K. S. R. Road,
Hampankatta, Mangalore.

HEAD OFFICE:
United India Life Building,
P. B. No. 142 MADRAS.



BUY INDIAN! ENCOURAGE INDIAN INDUSTRY!

**ಆಮಲಕೀ ತೈಲ AMALAKI HAIR OIL**

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD.



Highly perfumed and medicated, worth using daily by one and all, keeps hair black and relieves head-ache etc.

TRADE MARK

Manufactured by:-

**Swadeshi Oushadhi Bhandara** (Regd.)

KUNJAL P. O. Brahmavar, S. K.



**ವಿವಿಧ ಪಾತ್ರೆಗಳು**



ಪೂಜಾಪಾತ್ರೆ, ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,

ರಥಬೀದಿ, ಉಡುಪಿ.

ನವಶಿಲ್ಪಿ ಪುಟ

# ಕವಿಗಳು ಕಂಡ ಸ್ತ್ರೀ ಪಾತ್ರಗಳು

ತೃಷೆಯುತಿ ನಿತ್ರಂ

ಸಾಹಿ ಸಾಹಿತ್ಯ ಕ್ಷೇತ್ರ

ಪ್ರೇಮವನ್ನು ಬಳಸಿಕೊಳ್ಳದ ಸಾಹಿತ್ಯ ಕೃತಿಗಳ ಸಂಖ್ಯೆ ಅತ್ಯಲ್ಪ. ಬಹುಜನ ಪ್ರಿಯವಾದುದು ಶೃಂಗಾರವೆಂಬ ರಸ. ಹೆಣ್ಣುಗಂಡುಗಳನ್ನು ಗಂಟು ಹಾಕಿ ಮಥಿಸದ ಗ್ರಂಥಕರ್ತರೇ ವಿರಳ. ಆದರೆ ಈ ಮಥನದಿಂದ ಅಮೃತಕ್ಕಿಂತ ವಿಷ ಹುಟ್ಟಿದ್ದೇ ಹೆಚ್ಚು. ಇದಕ್ಕೆ ಪ್ರೇಮ ಚಿತ್ರಣ ಅತಿ ಸುಲಭ ಎಂದು ಹಲವು ಲೇಖಕರು ಇಟ್ಟುಕೊಂಡ ತಪ್ಪು ತಿಳುವಳಿಕೆಯೇ ಕಾರಣ.

ಪ್ರಾಚೀನ ಸಾಹಿತ್ಯದಲ್ಲಿ ರನ್ನನು ಭಾವಿಸಿದಂತೆ ಹೆಣ್ಣಿಗೆ ಒಪ್ಪುವುದು ಶೃಂಗಾರವೊಂದೇ ಎಂದು ಸಾಹಿತಿಗಳು ತಿಳಿದುಕೊಂಡಿದ್ದಂತೆ ತೋರುತ್ತದೆ. ಈಗಾದರೂ ಎಲ್ಲ ಕಲೆಗಾರರೂ ಹೆಚ್ಚಾಗಿ ಈ ಭ್ರಮೆಗೇ ಬಲಿಬಿದ್ದಿದ್ದಾರೆ. ಹೆಣ್ಣೆಂದ ಕೂಡಲೇ ಅವಳಿಗೆ ರೂಪಿದೆ, ಯೌವನವಿದೆ, ಪುರುಷಾನುಕೂಲ ವರ್ತನೆಯಿದೆ ಎಂದು ಲೇಖಕರು ಕಲ್ಪಿಸಿಕೊಂಡು ಬಿಡುತ್ತಾರೆ. ಹಳೆಯ ಕಲೆಯ (ಸಾಹಿತ್ಯದ) ಕೃತಿಗಳಲ್ಲಿ ಎಲ್ಲಿನೋಡಿದರೂ ಸ್ತ್ರೀಯ ಯೌವನ ಸಿರಿಯ ಸ್ತೋತ್ರಕ್ಕೇ ಅತಿಪ್ರಾಧಾನ್ಯ ಕೊಟ್ಟದ್ದು ಕಂಡುಬರುತ್ತದೆ.

ಸ್ವೈರಸಂಜಲ್ಪನಸ್ಮೇರಬಿಂಬಾಧರಾಃ ಪೀನಕುಚಕುಂಭದರ್ಪೋತ್ತ್ರುಟತ್ಕಂಚುಕಾಃ ಶಾಂಚಿಕೋಲ್ಲಾಸವಸನಶೀತೋರುಸ್ಥಲಾಃ ಪ್ರಥು ನಿತಂಬಸ್ಖಲಲ್ಲಟಹಗತಿವಿಭ್ರಮಾಃ

ಎಂಬಿವು ಅತ್ಯಲ್ಪ ಉದಾಹರಣೆಗಳು. ರೂಪಯೌವನ ಸಂಪನ್ನಳಾದ ಸ್ತ್ರೀ ಏನು ಮಾಡಿದರೂ ಅದು ಪ್ರಣಯವನ್ನು ಪ್ರತ್ಯಕ್ಷಾಪ್ರತ್ಯಕ್ಷ ರೀತಿಯಿಂದ ಸೂಚಿಸುವ ವಿಭ್ರಮವೆಂದೇ ಲೇಖಕರು ಅರ್ಥಮಾಡುತ್ತಾರೆ; ಅಂಥ ಉದಾಹರಣೆಗಳು ಸಾವಿರಾರು ಇವೆ.

ಕಥಾನಾಯಿಕೆಯರು ಯಾವ ಬಗೆಯ ವರ್ತನೆಯವರಾದರೂ ಅವರು ಪ್ರೇಮಮಯದ ಮೂರ್ತಿಗಳೆಂದು ಕಲ್ಪಿಸಿ ಅವರ ಅಜ್ಞಾನ, ಅಶ್ರದ್ಧೆ, ಅನಾಸಕ್ತಿಗಳೆಲ್ಲವೂ ಕ್ಷಮ್ಯವೆಂಬಂತೆ ತೋರಿಸುವ ಹವ್ಯಾಸ ಕವಿಜಾತಿಗೆ ಹಿಡಿದ ಒಂದು ರೋಗವಾಗಿದೆ. ಕಥಾನಾಯಕನು ಪ್ರೇಮಿಸಿದರೂ ಅದು ಕಾಮಪ್ರಧಾನವೆಂದೂ ಕಥಾನಾಯಿಕೆ ಕಾಮಿಸಿದರೂ ಅದು ಪ್ರೇಮವೆಂದೂ ತಿಳಿಯುವ ವರೆಗೆ ಲೇಖಕರ ಸ್ತ್ರೀ ಭ್ರಮೆ ಮೇರೆಮೀರಿದೆ. ಈ ಸತೀತ್ವದ ಅಮರಪ್ರೇಮದ ಮಿಥ್ಯಾರೋಪದ (ಏಕೆಂದರೆ ಅಂಥ ನಡೆನುಡಿಗಳು ಅವಳಲ್ಲಿವೆಯೆಂಬುವಕ್ಕೆ ಶಾಶ್ವತ ಹೆಚ್ಚು ಪ್ರಮಾಣಗಳನ್ನು ಲೇಖಕರು ಕೊಟ್ಟಿರುವುದಿಲ್ಲ) ಜೊತೆಗೆ ಪ್ರಾಕೃತವೂ ಪಶು ಸಹಜವೂ ಅಪ್ರಬುದ್ಧವೂ ಆದ ಅವಳ ಅಪತ್ಯ ಪ್ರೇಮವನ್ನೂ ಕಂಡಕಂಡಲ್ಲಿ ಕೊಂಡಾಡದ ಲೇಖಕನಿಲ್ಲ.

## ಸ್ತ್ರೀಯ ತಾರುಣ್ಯೇತರ ಅವಸ್ಥೆಗಳಿಗೆ ಬೆಲೆಯಿಲ್ಲ.

ಈ ಕಾರಣಗಳಿಂದ ಸ್ತ್ರೀಯ ಬಾಲ್ಯ, ಕೌಮಾರ್ಯ ಮತ್ತು ವಾರ್ಧಕ್ಯಗಳಿಗೆ ಯಾವ ಬೆಲೆಯೂ ಇಲ್ಲ; ಅವಳು ಯುವತಿ (ಅಂದರೆ ಯಾವಾಗಲೂ ಸುಂದರಿಯೆಂದೂ ತಿಳಿಯಲೇ ಬೇಕು!) ಎನಿಸಿ ಪ್ರಣಯ ಜೀವನವನ್ನಷ್ಟು ನಡೆಸಿಬಿಟ್ಟರೆ ಇಹಪರಗಳ ಇತಿ ಕರ್ತವ್ಯವಾಗಿ ಹೋಯಿತು ಎಂಬ ಭಾವನೆ ಸ್ತ್ರೀಯರಲ್ಲೂ ಪುರುಷರಲ್ಲೂ ಉಂಟಾಗುವಂತಾಯಿತು. ಮನೋ ವಿಶ್ಲೇಷಣಜ್ಞಾನ ದೃಷ್ಟಿಯಿಂದ ನೋಡಿದರೆ ಇಂಥ ಸ್ತ್ರೀಪಾತ್ರಗಳಿಗೆ ಮಾಂಸಬಲವೊಂದಲ್ಲದೆ ಬುದ್ಧಿ ಭಾವನೆಗಳ, ಜ್ಞಾನವಿವೇಕಗಳ ಸಂಸ್ಕಾರವಿರುವಂತೆ ತೋರುವದೇ ಇಲ್ಲ.

ಇತ್ತೀಚೆಗೆ ಗರತಿತನವನ್ನು ದಾಸ್ಯವೆಂದು ಚಿತ್ರಿಸಿ ಸ್ತ್ರೀಯ ಅವಿವೇಕಸಹಜ ಸ್ವೈರಾಚಾರಕ್ಕೆ ಸ್ವಾತಂತ್ರ್ಯವೆಂಬ ಹೆಸರಿಟ್ಟು ಚಿತ್ರಿಸುವ 'ಪ್ರಗತಿಶೀಲತೆ' ತಲೆದೋರಿದೆ. ಇದರ ಹಾವಳಿ ಮತ್ತಷ್ಟು ಭಯಂಕರ. ವಿದ್ಯೆ, ಬುದ್ಧಿ ರಸಿಕತೆ, ವಿವೇಕ ಈ ಯಾವುದೂ ಇಲ್ಲವೆಂಬಂತೆ ಸ್ತ್ರೀ ವರ್ತನೆಯನ್ನು ಚಿತ್ರಿಸಿಯೂ ಅವಳ ಅಕಾರಣ ಪ್ರೇಮ, ಅನಿಮಿತ್ತಹಾಸ, ಅವಿವೇಕಜನ್ಯ ಅನುಕಂಪ ಇವುಗಳನ್ನು ಅವಳ ಸಹಜಗುಣ, ಪ್ರವೃತ್ತಿ ಎಂದು ಮುಗಿಲು ಮುಟ್ಟುವ ವರೆಗೆ ಸ್ತೋತ್ರ ಮಾಡಿ ಬಿಟ್ಟರೆ ಶೃಂಗಾರ ಕಥೆಯಾಗಿ ಹೋಯಿತು!

ಇದಕ್ಕೊಂದೆರಡು ದೊಡ್ಡ ಉದಾಹರಣೆಗಳಿವೆ; ಅವುಗಳಲ್ಲೂ ಪ್ರಾಚೀನ ಪ್ರೌಢಿಯ ಎರಡು ನಿದರ್ಶನಗಳನ್ನು ಕೊಡಬಹುದು. ಮಹಾಭಾರತದಲ್ಲಿಯೂ ವಾತ್ಸ್ಯಾಯನನ ಕಾಮಶಾಸ್ತ್ರದಲ್ಲಿಯೂ ಸ್ತ್ರೀಹೃದಯವನ್ನು ಬಲ್ಲವರಿಲ್ಲವೆನ್ನಲಾಗಿದೆ. ಇದೇ ಮಾತನ್ನು ಈಗಿನ ಕಾಮಶಾಸ್ತ್ರ ವಿಶಾರದರುಮನ್ನ ವಿಜ್ಞಾನಿಗಳೂ ಪಡಿನುಡಿಯುತ್ತಾರೆ. ಇದರಿಂದ ಕಲಿತ ಕೆಲ ಸ್ತ್ರೀಯರಲ್ಲಿ ತಾವು ಅಭೇದ್ಯರು, ಅತರ್ಕ್ಯರು ಎಂದು ಹೆಮ್ಮೆಪಡುವ ಮೂರ್ಖತೆಯುಂಟಾಗಿದೆ. ಕಾಳಿದಾಸನು 'ಸ್ತ್ರೀಣಾಮಶಿಕ್ಷಿತ ಪಟುತ್ವಮಮಾನುಷೀಣಾಂ' ಎಂದು ಧೀರೋದಾತ್ತ ನಾಯಕನಾದ ದುಷ್ಯಂತನ ಬಾಯಿಂದ ಹೇಳಿಸುವುದು ಮೇಲಿನ ಅಭೇದ್ಯತೆಯ ವ್ಯಾಖ್ಯಾನವೇ ಸರಿ. ಅಭೇದ್ಯತೆಗೆ ಕಾರಣಗಳೆಂದರೆ ಸ್ತ್ರೀಯ ಅಪ್ರಬುದ್ಧತೆ, ಅನಿಶ್ಚಿತ ಬುದ್ಧಿ ಭಾವನೆಗಳು ಮತ್ತು ಅಸಂಬದ್ಧ ವರ್ತನೆ ಇವೇ.

### ಹೆಂಗಸಿನ ಓದು

ಸ್ತ್ರೀ ಓದಿದರೆ ಎರಡು ಮನೆಗಳು ಉದ್ಧಾರವಾಗುತ್ತವೆ, ಪುರುಷನು ಓದಿದರೆ ಒಂದೇ ಮನೆ ಮಾತ್ರ ಎಂಬ ಸ್ತ್ರೀವಾದಿಗಳು ಕಾಳಿದಾಸನು ಕುಮಾರಸಂಭವದಲ್ಲಿ ಪಾರ್ವತಿಯ ವಿದ್ಯಾಭ್ಯಾಸದ ಬಗ್ಗೆ ಏನು ಹೇಳಿದ್ದಾನೆಂಬುದನ್ನು ಅವಲೋಕಿಸುವುದು ಅವಶ್ಯಕ. ಪಾರ್ವತಿಯನ್ನು ಅವಳ ತಂದೆ ಯಾವ ಗುರುಮನೆಗೂ ವಿದ್ಯಾಭ್ಯಾಸಕ್ಕಾಗಿ ಕಳಿಸಿಲ್ಲ. ಏಕೆಂದರೆ ಪೂರ್ವ ಪುಣ್ಯದಿಂದ ಅವಳಿಗೆ ತನ್ನಿಂದ ತಾನೇ ಎಲ್ಲ ಶಾಸ್ತ್ರಗಳ ಪರಿಜ್ಞಾನವಾಗಿ ಹೋಯಿತಂತೆ! ಇದು ಈಗಿನ ಪಾಶ್ಚಾತ್ಯರು ಹೇಳುವ ಸ್ತ್ರೀ ಸಹಜ Intuition ಮೂಲಪ್ರವೃತ್ತಿಗೆ (ಇದು ಅನಾಗರಿಕ, ಪಶು ಸಹಜ, ಪ್ರಾಕೃತ) ಸಂ ಹೋಲುತ್ತದೆ. ಬಹುಶಃ ಕಾಳಿದಾಸನು ಚಿತ್ರಿಸಿದ ಅತ್ಯುದಾತ್ತ ಸ್ತ್ರೀ ಪಾತ್ರದಲ್ಲೂ ಅವನು ಈ ರೀತಿ ಶಿಕ್ಷಣಾಂಕವನ್ನು ಸಾಕಿರಿಕೆಯಿಂದ ಹೆಸರಿಸಿ ಮುಗಿಸಿ ಬಿಟ್ಟದ್ದನ್ನು ಕಂಡರೆ ಅವನಾದರೂ ಮರಿಡಿತ್ತನು ಒಂದೆಡೆ ಹೇಳಿರುವಂತೆ ವಿದ್ಯೆ ಸ್ತ್ರೀಗೆ ಅದರ ಗುರಿಯಂತೆ ಉದ್ದಿಷ್ಟ ಸಂಸ್ಕಾರವನ್ನು ಕೊಡಲು ನೂರಕ್ಕೆ ನೂರರಷ್ಟು ಎಂದೂ ಸಮರ್ಥವಾಗದು ಎಂದು ನಂಬಿರುವಂತೆ ತೋರುತ್ತದೆ ಎಂದು ಯಾರಾದರೂ ತರ್ಕಿಸಲು ಸಾಕಷ್ಟು ಅವಕಾಶವಿದೆ. ಸೀತೆ ಶಕುಂತಲೆಯರಲ್ಲಿ ಕೂಡ ನಾವು ಕಾರ್ಯ ದಕ್ಷತೆ, ಸಾಹಸಿಕತೆ, ರಸಿಕತೆ, ಉದಾತ್ತ ಕಾರ್ಯಕ್ಕಾಗಿ ದುಡಿಯುವ ಮತ್ತು ವಿಚಾರ ಮಾಡುವ ಪ್ರವೃತ್ತಿ ಇವನ್ನು ಆಧ್ಯಾಹೃತವೆಂದು ತಿಳಿಯಬೇಕಾಗುವುದಲ್ಲದೆ ಗ್ರಂಥಕರ್ತರು ಅವುಗಳ ನಿರ್ದಿಷ್ಟೋಲ್ಲೇಖವನ್ನು ವಾಚ್ಯವಾಗಿ (ಅಥವಾ ಸೂಚ್ಯ ರೀತಿಯಿಂದ ಕೂಡ) ಹೇಳಿಲ್ಲ ಇನ್ನು ಸರಿ ನ್ಯಾಯ ನಡತೆ ತನ್ನದೆಂಬ ಪುರುಷದೋಷದರ್ಶಿಗಳಾದ ಇಂದಿನ ಕೆಲ 'ಪ್ರಗತಿಶೀಲ' ನಾಯಿಕೆಯರನ್ನಂತೂ ಹೆಸರಿಸುವುದೇ ಬೇಡ. ಅವರ ಅಸಂಬದ್ಧ ವರ್ತನೆ ಸೂರ್ಯಪ್ರಕಾಶದಷ್ಟು ಸ್ಪಷ್ಟವಿದ್ದರೂ ಅದು ಸ್ತ್ರೀಗೆ ಸಹಜ ಎಂದು ಗ್ರಂಥಕರ್ತರು ಬೋಧಿಸುವಂತೆ ಬರೆಯುವ, ಸೂಚಿಸುವ ದುರ್ವೃತ್ತಿ ಹಿಂದಿಗಿಂತ ಹೆಚ್ಚಾಗಿ ಈಗ ಪಾಶ್ಚಾತ್ಯರಲ್ಲೂ ಪೌರಸ್ತ್ಯರಲ್ಲೂ ಅಜಸ್ರಧಾರೆಯಿಂದ ನಡೆದುಕೊಂಡು ಬರುತ್ತಿದೆ. ಸ್ತ್ರೀಯ ಬಾಲ್ಯ, ಕೌಮಾರ, ತಾರುಣ್ಯಗಳಲ್ಲಿ ವಿದ್ಯೆ, ಬುದ್ಧಿ, ಗಂಭೀರ ವಿಚಾರ, ಅರ್ಜವಯುಕ್ತ ಆಚಾರ, ಸುಸಂಬದ್ಧವಾದ ವರ್ತನೆ ಮತ್ತು ಮಾತೃಕತೆ, ಉದಾತ್ತೋದ್ದೇಶ, ಸಮ್ಯಕ್ಸಾಹಸ ಇವುಗಳಿಗೆ ಎಲ್ಲೆಲ್ಲೂ ಸ್ಥಾನವೇ ಇಲ್ಲದಾಗಿರುವುದು ಜೀವನದಲ್ಲಿ ಚೆನ್ನಾಗಿ ಪ್ರತಿಬಿಂಬಿಸಲ್ಪಟ್ಟಿದೆ.

### ಲಜ್ಜೆ ಕಾಟಸ್ಥ್ಯಗಳು

'ಅಪರಾಧೀನಾಮಾಹಂ' ಎಂಬ ಪುರೂರವನಂತೆ ಇಂದಿನ "ಪ್ರಗತಿಶೀಲ" ಕಥಾನಾಯಕರಾದರೂ ಪ್ರಣಯದಲ್ಲಿ ಈಷನ್ಮಾತ್ರವಾದರೂ ಅಪರಾಧಿಗಳೆಂದು ಚಿತ್ರಿಸಲ್ಪಡುವ ಆತ್ಮಾಧಮಭಾವ ಲೇಖಕರಿಗಿರುವುದು ಪುರುಷತ್ವದ ಬಗ್ಗೆ ಅವರಿಗಿರುವ ಕೇವಲ ಅಜ್ಞಾನದ ಒಂದು ಫಲ. ಈ ವಿಪರೀತ ದೃಷ್ಟಿಯಿಂದಲೇ ನಿರ್ಗುಣ ಬ್ರಹ್ಮದಂಥ ತರುಣಿಗಾದರೂ ಸೌಂದರ್ಯ, ಸೌಕುಮಾರ್ಯಗಳಿದ್ದು ಬಿಟ್ಟರೆ ಸಕಲಗುಣ ಸಂಪನ್ನತೆ ಬರುವುದೆಂದು ತಿಳಿಯುವ ಲೇಖಕರ ಅಜ್ಞಾನ, ಮುಗ್ಧತನ, ಮೋಹದ ಕಲ್ಪನೆಯು ಇಂದು ಸ್ವಾಭಾವಿಕವೆಂದು ಜನರು ತಿಳಿದುಕೊಳ್ಳುವಂತಾಗಿಬಿಟ್ಟಿದೆ! ಪೌರಸ್ತ್ಯ ಸ್ತ್ರೀಗಿಂತ ಹೆಚ್ಚಾಗಿ ಪಾಶ್ಚಾತ್ಯ ಸ್ತ್ರೀಗೆ ತನ್ನ ಬಾಳಿನ ಉದ್ದೇಶವೇ ಅರ್ಥವಾಗದಂತಾಗಿರುವುದು. ಈ ಅಪಪ್ರಚಾರದಿಂದಲೇ. Poets are the unacknoledged legislators ಕವಿಗಳು ಅಪ್ರತ್ಯಭಿಜ್ಞಾತ ಶಾಸನ ಕರ್ತರು ಎಂದು ಹೇಳುವುದು ಅಕ್ಷರಶಃ ನಿಜ. ಅವರ ಮತ್ತು ಇತರ ಕಲೆಗಾರರ ಸ್ತನಸ್ಮೇರ ವಿಲಾಸಿನೀನಿತಂಬ ಜಘನಸ್ತನ ಸೇವೆಯ ರಸಿಕತೆಯೇ ಸ್ತ್ರೀ ಸಮಸ್ಯೆಗಳೆಲ್ಲಕ್ಕೂ ಕಾರಣ. ಅವರು ಸ್ತ್ರೀಯ ಮಾಂದ್ಯ, ಜಾಡ್ಯ, ಮುಗ್ಧತೆಗಳನ್ನು ಹೊಗಳದೆ ವಿವೇಕ, ವಿಚಾರ ಶುದ್ಧಿ, ರಸಿಕತೆ, ಸುಸಂಬದ್ಧ ವರ್ತನೆ, ನೇರ ನಡೆಯ ಸಂಸ್ಕಾರ, ಸುಜ್ಞಾನ, ವಿಚಾರ ಪರತೆ ಮುಂತಾದವನ್ನೂ ಕರ್ತವ್ಯ ಧುರಂಧರತೆಯನ್ನೂ ಮಾದರಿಯಾಗಿ ಕೊಟ್ಟು ಮೆಚ್ಚುತದ್ವಿರುದ್ಧ ವರ್ತನೆಯ (ಪುಂಪಾತ್ರಗಳನ್ನು ಹೇಗೋ ಹಾಗೇ) ಸ್ತ್ರೀಪಾತ್ರಗಳನ್ನು ಕೀಳಾಗಿ ಬಣ್ಣಿಸಿದ್ದರೆ ಸಾಮಾಜಿಕ ಶಿಕ್ಷಣದಲ್ಲಿ (ನಿಶಾಲ ವಿದ್ಯಾಭ್ಯಾಸದ ರಸವಂತಿಕೆಯಲ್ಲಿ) ಸ್ತ್ರೀ ವಾಚಕ ಪ್ರೇಕ್ಷಕರಿಗೆ ನ್ಯಾಯವಾದ (ಪುರುಷಸದೃಶವಾದ) ಸಂಸ್ಕಾರವನ್ನು ಕೊಟ್ಟಂತಾಗುತ್ತಿತ್ತು. ಈ ದುಃಸಂಸ್ಕಾರ, ಮಿಥ್ಯಾ ಕಲ್ಪನೆ, ಸ್ತ್ರೀಪುರುಷರಿಗಾದುದನ್ನು ತೊಳೆಯಲು ಪುರುಷ ಹೃದಯದ ನಿಸರ್ಗಸಿದ್ಧ ಶಕ್ತಿಗಳನ್ನೂ ಅವಶ್ಯಕತೆಗಳನ್ನೂ ಅವುಗಳ ನ್ಯಾಯತೆಯನ್ನೂ ಅಳೆದು ತಿಳಿಯುವ ಮನೋವಿಶ್ಲೇಷಣ ಜ್ಞಾನ ಹೊಸ ಸಾಹಿತಿಗಳಿಗೆ ಅಳವಡಬೇಕು. ಇಲ್ಲವೆ ಸ್ತ್ರೀ ಸಾಹಿತಿಗಳು ಮುಂದೆ ಬಂದು ಪುರುಷ ನಿರ್ಮಿತ ಪ್ರಣಯ ಪ್ರಪಂಚವನ್ನು ತಿರುವು ಮುರುವು ಮಾಡಬೇಕು; ಹೊಸ ರಸಿಕತೆಯ ಪ್ರಬುದ್ಧತೆಯಿಂದ ಜೀವನವನ್ನು ನೋಡುವ ದೃಷ್ಟಿಯನ್ನು ಅಳವಡಿಸಿಕೊಂಡು ಪರಂಪರಾಗತವಾದ ಗಂಡಸು ಹೇಳುವ ರೀತಿಯ ತಾಟಸ್ಥ್ಯ ಲಜ್ಜೆಗಳ (Modesty is an ornament of the fair sex ಹೆಣ್ಣಿಗೆ ಲಜ್ಜೆಯೇ ಭೂಷಣ) ವ್ಯಕ್ತಿಯಿಂದ ಬುದ್ಧಿ ವರ್ತನೆಯನ್ನು ಬಿಟ್ಟು ನಿಲ್ಲುವ ಧೀರೋದಾತ್ತತೆಯ ಮಾದರಿಯನ್ನು ಜಗತ್ತಿನ ಸ್ತ್ರೀಪುರುಷ ರಸಿಕರೆದುರಿಡಬೇಕು. ಈ ವರೆ ಎಲ್ಲೆಡೆಯೂ ಎಲ್ಲ ಕಲೆಗಳೂ ಗಂಡಸಿನ ಸ್ವೈರ ಹಸ್ತದಲ್ಲಿ ಆಟಿಕವಾಗಿರುವುದು ಹೋಗಬೇಕಾದರೆ ಸ್ತ್ರೀ ಸಾಹಿತಿಗಳು ಅದನ್ನು ಕಸಿದುಕೊಳ್ಳಲು ಮುಂಬರಬೇಕು.

—ಕರ್ಮವೀ!


ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬ್ಯರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಶುಚಿ ಹೇಳಬೇಕೆ?

ಪ್ರೊಪ್ರೈಟರ್.—ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.



"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ, ಇವರ

ನವಜೀವಾತು ಎಂಬ ಸೂತಿಕಾ ರಸಾಯನ

ಬಾಣಂತಿಯರ ಫಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಸುಲಭವಾಗಿರುವುದು.



ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಸ್ವೀಕೃತರು:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.


EDITED, PRINTED & PUBLISHED BY K. H. SHETTY AT THE NAVAYUGA PRESS. UDIPI. S. INDIA.

Regd. No. M. 3618

Estd: 1921 ಸ್ಥಾಪನೆ

30ನೇ ವರ್ಷ
11-5-1950

LICENCE No. 31
Licensed to Post
without Prepayment

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

FOUNDER:
Sri A B. Shetty
Minister for Agriculture & Veterinary

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ವರ್ಷ 30 ವಾರ ೩೭

NAVAYUGA WEEKLY Post Box No. 22 UDIPI, S. K.

Vol 30 No. 37

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

# ಒಳ ನೋಟವಿರಲಿ!

ಒಂದು ವಸ್ತು ಅಥವಾ ವಿಷಯವು ಅಮೂಲ್ಯವಿದ್ದಷ್ಟೂ ಅಸಾಧ್ಯವಾಗಿರುತ್ತದೆ; ಅಂತಹದು ಸ್ವಾಭಾವಿಕವಾಗಿ ಅತ್ಯಂತ ಗುಪ್ತವಾಗಿ, ಅಕ್ಯಾಕದಲ್ಲಿ ಇಲ್ಲವೇ ಅತ್ಯಂತ ಜೋಪಾನನೆಯಲ್ಲಿ ಇರಬೇಕಾಗುತ್ತದೆ— ಕಲ್ಲು ಚೂರುಗಳು ಹಾದಿ ಬೀದಿಗಳಲ್ಲಿ ಬಿದ್ದಿದ್ದರೂ ವಜ್ರದ ತುಣುಕುಗಳು ಪೆಟ್ಟಿಗೆಯೊಳಗೆನೇ ಭದ್ರವಾಗಿರುವಂತೆ!

ಅತ್ಯಮೂಲ್ಯವಾಗಿರುವಂಥವುಗಳೆಲ್ಲವೂ ಅಸಾಮಾನ್ಯಗಳಾಗಿರುವುದರಿಂದ ಅವುಗಳನ್ನು ಹೊಂದುವುದೂ ಅಸಾಧ್ಯವೇ. ಸಾಮಾನ್ಯರಿಂದ ಮತ್ತು ಪ್ರತಿಯೊಂದು ಸಂದರ್ಭಗಳಲ್ಲೂ ಅತ್ಯಂತ ಶ್ರೇಷ್ಠ ವಿಧಾನವನ್ನೇ ಅನುಕರಿಸುವುದು ಅಸಾಧ್ಯವಾದ್ದರಿಂದ ಸಾಮಾನ್ಯರು ಸರ್ವಸಾಮಾನ್ಯ ವಿಧಾನಗಳನ್ನು ಅಂಗೀಕರಿಸುವುದರಿಂದಲೇ ದೊಡ್ಡ, ಸಣ್ಣ ಘರ್ಷಣೆಗಳಾಗುತ್ತವೆ.

ಅತಿ ಭೀಕರ ಹಿಂದೂಮುಸ್ಲಿಂ ಘರ್ಷಣೆಗಳಿದ್ದಾಗ, ಹಿಂದೂ ಮುಸ್ಲಿಂ ಸೋದರ ಭಾವನೆಯನ್ನು ಕಟ್ಟಿಕೊಳ್ಳುವುದು ಸಾಮಾನ್ಯರಿಗೂ ಸಾಧ್ಯವಾದ ವಿಷಯ. ಆದರೆ ಮಹಾತ್ಮಾ ಗಾಂಧಿಯವರು ಅಸಾಮಾನ್ಯರಿದ್ದುದರಿಂದ ಅಂತಹ ಉದ್ರೇಕಿತ ವಾತಾವರಣದಲ್ಲೂ ಈ ಅಸಾಮಾನ್ಯ ಭ್ರಾತೃ ಭಾವವನ್ನು ಪ್ರದರ್ಶಿಸಿ, ಅದಕ್ಕಾಗಿ ಪ್ರಾಣತ್ಯಾಗ ಮಾಡುವುದಕ್ಕೂ ಅವರು ಸಮರ್ಥರಾದರು. ಮಿಕ್ಕವರಿಗೆ ಎಟುಕದ ಮೌಲ್ಯವೆಂಬುದರಿಂದ ಗಾಂಧೀ ವಿಧಾನಕ್ಕೆ ದೂರದಿಂದಲೇ ಕೈಮುಗಿಯುವವರಿದ್ದಾರಾದರೂ, ಎಲ್ಲಾ ಪಾಪಗಳ ವಿಮೋಚನೆಗೂ ಅದೇ ಅಮೂಲ್ಯೋಪಾಯವೆಂಬುದು ಖಂಡಿತ.

ಪಾಕಿಸ್ತಾನಿಗಳು ತಮ್ಮ ಹುಟ್ಟು ಸಾನ್ಯ ಸ್ವಭಾವವನ್ನಾಧರಿಸಿ ದ್ವೇಷ ಭಾವನೆಯನ್ನೇ ಪ್ರದರ್ಶಿಸುತ್ತಾ ಬಂದಂತೆ, ಭಾರತದವರೂ ಅದಕ್ಕೆ ಪ್ರತಿಯಾಗಿ ವಿರೋಧ ಪ್ರದರ್ಶನ ಮಾಡುತ್ತಾ ಬಂದುದರಿಂದ ಪರಿಸ್ಥಿತಿಯು ಕೆಡುತ್ತಾ ಬಂದಿದ್ದಿತು. ಆದರೆ ಇಂತಹ ಕಲುಷಿತ ವಾತಾವರಣದ ಅಡಿಯಲ್ಲಿ ಹುದುಗಿಕೊಂಡಿದ್ದ ನ್ಯಾಯವನ್ನು ಎತ್ತಿಕೊಳ್ಳುವ ಅಮೂಲ್ಯ ಪ್ರಯತ್ನವು ಕಕ್ಕಡಿಯವರಿಂದಾಗಿ, ಎರಡು ರಾಷ್ಟ್ರಗಳೊಳಗೆ ಒಂದು ಒಡಂಬಡಿಕೆಯಾದುದರಿಂದಲೇ ಒಮ್ಮೆಗೆ ಶಾಂತಿ ಸ್ಥಾಪನೆಯಾಗಿದೆ. ಭಾರತ—ಪಾಕಿಸ್ತಾನಗಳೊಳಗೆ ಘರ್ಷಣೆ ಏಳುತ್ತಿದ್ದರೆ ಅದರ ಹೊಣೆ ಹೊರುವುದು ಜನತೆಯ ಪಾಲಿಗೆ ಅನಿವಾರ್ಯವಾಗುತಿತ್ತು; ಆದರೆ ಈಗ ಆಗಿರುವ ವ್ಯವಸ್ಥೆಯು ನಿಜಕ್ಕೂ ಜನತೆಯ ಅಪೇಕ್ಷೆಯದ್ದಿದೆ. ಸಾಮಾನ್ಯ ಮಟ್ಟದಿಂದ ಮೇಲೇರಿ ನಿಲ್ಲಬಲ್ಲವರ ಪಾಲಿಗೆ ಜಗಳಗಳಿಲ್ಲ, ಎಂಬುದಕ್ಕೆ ಇದೊಂದು ಉತ್ತಮ ನಿದರ್ಶನ.

ಇಂದು ಅಧಿಕಾರ ಮತ್ತು ಅನುಕೂಲತೆಗಳನ್ನು ಪಡೆದಿರುವ ವರ್ಗಗಳು "ವಿಧಾಯಕ ವಿಮರ್ಶೆ ಬೇಕಲ್ಲದೆ ವಿನಾಶಾತ್ಮಕ ಟೀಕೆ ಸಲ್ಲದು." ಎಂದು ಉಪದೇಶಿಸುವುದೊಂದು ಸರ್ವಸಾಮಾನ್ಯ ರೂಢಿಯಾಗಿದೆ ಇಂಥವರನ್ನು ಸರ್ವಸಂದರ್ಭಗಳಲ್ಲೂ "ಸ್ವಾರ್ಥ ಸಾಧಕರು, ಜನತಾ ದ್ರೋಹಿಗಳು" ಎಂದು ಹೇಳುತ್ತಾ ಹೋಗುವುದು ಅತೃಪ್ತ ವರ್ಗಗಳ ನಿತ್ಯಾಚರಣೆಯಾಗಿದೆ. ಇವೆರಡು ಸಾಮಾನ್ಯ ಪದ್ಧತಿಗೂ ಮಿಕ್ಕಿದ ಮೂರನೇ ಅಂತಸ್ತಿನಲ್ಲೇ ನ್ಯಾಯ ಮತ್ತು ನಿಜವಾದ ಹಿತಸಾಧನೆಯಿದೆ ಎಂಬುದನ್ನು ಮರೆಯಬಾರದು.

ಮದ್ರಾಸಿನ ಮಂತ್ರಿ ವರ್ಗ ಮತ್ತು ಶ್ರೀ ಟಿ. ಪ್ರಕಾಶಂ ಸಂಗಡಿಗರೊಳಗೆ ಪರಸ್ಪರ ದ್ವೇಷಾಸೂಯೆ, ಸ್ಪರ್ಧೆಗಳಿರುವುದರಿಂದಲೇ ಏನೇ ಮಾಡಿದರೂ ಸ್ವತಃ ಅವರೊಳಗೆ ಮನಸ್ಸು ಕೂಡಿ ಬರಲೊಪ್ಪಲಿಲ್ಲ; ಆದರೆ ನೆಹರೂ, ವಲ್ಲಭಭಾಯಿಗಳಂಥವರು ಈ ಸಮಾನ ದ್ವೇಷ, ಸ್ಪರ್ಧೆಗಳ ರಂಗದಿಂದ ಮೇಲಿನ ಮಟ್ಟದವರಾದ್ದರಿಂದಲೇ ಅವರ ಮಧ್ಯಸ್ಥಿಕೆಯು ಈ ವಿವಾದವನ್ನೊಮ್ಮೆಗೆ ಕೊನೆ ಮುಟ್ಟಿಸಿತು.

ಅತ್ಯಂತ ಜಿಪುಣರಾದವರು ಫಲ ತೊಟ್ಟು ನಡಿಸುವ ಅಣೆಪೈ ಚೌಕಾಶಿಯನ್ನು ಉದಾರಿಗಳಾದವರು ತಮ್ಮ ವ್ಯವಹಾರದಲ್ಲಿ ಬಿಟ್ಟು ಬಿಡುವುದನ್ನು ಕಾಣುತ್ತೇವೆ. ಅಂತೆಯೇ ಅತ್ಯಂತ ಸಂಕುಚಿತ ಬುದ್ಧಿಯ ರಾಜಕಾರಣಿಗಳು ಆಗ್ರಹ ತೊಟ್ಟು ವಾದಿಸುವ ಅಲ್ಪ ವಿಷಯಗಳನ್ನು ವಿಶಾಲ ಬುದ್ಧಿಯ ರಾಜಕೀಯ ನಾಯಕರು ಕಡೆಗಣಿಸುತ್ತಾರೆ.

ಹಿಟ್ಲರ್ ಮತ್ತು ಅವನ ಇದಿರುವಾದಿಗಳು ಸರ್ವಸಾಮಾನ್ಯ ದ್ವೇಷ ಭಾವನೆ, ಸ್ಪರ್ಧೆ, ಅಸೂಯೆಯನ್ನೇ ಕಟ್ಟಿಕೊಂಡುದರ ಪರಿಣಾಮವಾಗಿ ಕಳೆದ ಮಹಾಯುದ್ಧ ನಡೆದು ಹೋಯಿತು; ಇಂದಾದರೂ ಎರಡು ಪಾಳಯಗಳ ರಾಷ್ಟ್ರನಾಯಕರು ಸಾಧಾರಣ ದರ್ಜೆಯ ಮನಸ್ಥಿತಿಯನ್ನು ಕಟ್ಟಿಕೊಂಡು, ಸ್ಪರ್ಧಿಸುತ್ತಿರುವುದರಿಂದಲೇ ಲೋಕ ವಾತಾವರಣ ಮಬ್ಬಾಗಿದೆ. ಬದಲಿಗೆ ಗಾಂಧಿಜೀ ಮಾದರಿಯ ಅತ್ಯುತ್ತಮವಾದ ಅಥವಾ ಮೂಲಭೂತ ನ್ಯಾಯವನ್ನಾಧರಿಸುವ ಮನೋವೃತ್ತಿಯು ಈ ನಾಯಕರಲ್ಲಿ ಮೂಡುತಿದ್ದರೆ ವಿವಾದಗಳಿಗೆ ಸುಗಮ ಪರಿಹಾರೋಪಾಯ ದೊರೆತು ಕಳೆದ ಮಹಾಯುದ್ಧ ತಪ್ಪಿ ಹೋಗುತಿತ್ತು; ಇನ್ನೊಂದು ಯುದ್ಧದ ಮೋಡ ಕವಿಯುತ್ತಿರಲಿಲ್ಲ.

ಕೌಟುಂಬಿಕ ಜಗಳ, ವ್ಯಕ್ತಿಗತ ವಿವಾದಗಳನ್ನು ನೋಡಿದರೂ ಹೀಗೆಯೇ- ಮಾತಿಗೆ ಮಾತು, ಕೃತಿಗೆ ಪ್ರತಿಕೃತಿ ಎಂಬಂತಹ ಸರ್ವಸಾಮಾನ್ಯ ಮನೋವೃತ್ತಿಯಿರುವಲ್ಲಿಯೇ ತಂಟೆ, ತಕರಾರು, ಜಗಳಗಳೇಳುತ್ತವೆ. ಎಂತಹ ಉದ್ರೇಕಿತ ಸ್ಥಿತಿಯಲ್ಲಾದರೂ ಉಚ್ಚ ಮಾನುಷತ್ವವನ್ನು ಆಧರಿಸುವ, ಎಂತಹ ಕದಡು ವಾತಾವರಣದಲ್ಲಾದರೂ ಮೂಲ ನ್ಯಾಯವನ್ನು ಎತ್ತಿ ಹಿಡಿಯುವ ದೃಢ ಬುದ್ಧಿಯವರು ಮತ್ತು ನಿರ್ಮಲ ಹೃದಯಿಗಳಿರುವಲ್ಲಿ ಅಂತಹ ಬಿಕ್ಕಟ್ಟುಗಳೇಳುವಂತಿಲ್ಲ.

ಇಲ್ಲಿ ತಿಳಿಯಕೊಳ್ಳಬೇಕಾದುದಿಷ್ಟೆ: ಉದ್ರೇಕ, ಅಭಿಲಾಷೆ, ಅಹಂಕಾರ, ಈ ವರ್ಗಗಳಿಗೆ ಸೇರುವ ಎಲ್ಲಾ ವಿವಿಧ ವಿಕಾರಗಳೂ ಮಾನವನ ಮನೋರೋಗಗಳೇ. ಈ ರೋಗಗಳ ದೆಸೆಯಿಂದಲೇ ಲೋಕದ ಎಲ್ಲೆಡೆಯಲ್ಲೂ ವಿವಿಧ ರೀತಿಯ ನರಳಾಟಗಳು ಕೇಳಿ ಬರುತ್ತಿವೆ; ಅಕಾಲ ನಿಧನ, ಆಕಸ್ಮಿಕ ಅಪಘಾತಗಳಾಗುತ್ತಿವೆ. ರೋಗ ಮೂಲವನ್ನು ಕಂಡು ಹಿಡಿದು, ನಿವಾರಿಸಿಕೊಂಡು ಆರೋಗ್ಯಕರ ಬುದ್ಧಿಮಟ್ಟವನ್ನು ನಿರ್ಮಿಸಿಕೊಂಡಲ್ಲಿ ಎಲ್ಲಾ ವೇದನೆಗಳೂ ಅಲ್ಲಿಂದಲ್ಲಿಯೇ ಗುಣ ಹೊಂದಬಲ್ಲುವು.

ಆದರೆ, ವಾಡಿಕೆಯಾಗಿ ಬಂದಿರುವ, ಸರ್ವಸಾಮಾನ್ಯವಾಗಿ ಹಿಂತಿರುವ ಸ್ವಭಾವ ಅಥವಾ ಮಾತು-ಕೃತಿಗಳನ್ನು ಅನುಕರಿಸುವುದು ಎಲ್ಲಾ ಸಂದರ್ಭಗಳಲ್ಲೂ ಸುಲಭ. ಪ್ರಚಲಿತ ಸ್ಥಿತಿಗತಿಗಳಿಗಿಂತ ಅತೀ ಎತ್ತರದಲ್ಲಿ ಇಲ್ಲವೇ ಆಳದಲ್ಲಿ ಇರುವ ಅಮೂಲ್ಯ ವಿಧಾನವನ್ನು ಗೊತ್ತು ಹಚ್ಚಿ ಅದನ್ನೇ ನಿಷ್ಠೆಯಿಂದ ಅವಲಂಬಿಸುವುದು ಅಷ್ಟೇ ಪ್ರಯಾಸಕರ.

ಆದ್ದರಿಂದಲೇ ನಮ್ಮ ಇಂದಿನ ನಾಯಕರೂ ಹಿಂದಿನವರಂತೆಯೇ ಕೆಲವು ಗೊತ್ತು ಮಾಡಿಟ್ಟುಕೊಂಡ ಕೆಲವು ಸೊಲ್ಲುಗಳನ್ನು ಪದೇ ಪದೇ ಹಾಡುತಿದ್ದಾರೆ, ಹೊರತು ಅದಕ್ಕಿಂತ ಆಳಕ್ಕೆ ಮನಸ್ಸನ್ನು ಹೊಗಿಸಲಿಚ್ಛಿಸುತ್ತಿಲ್ಲ. ಟೀಕಾಕಾರರು ಕೂಡಾ ಪದ್ಧತಿಯ ನಿಂದಾ ಸ್ತುತಿಗಳನ್ನೇ ಸರ್ವಸಂದರ್ಭಗಳಲ್ಲೂ ಏಕಪ್ರಕಾರ ಉಪಯೋಗಿಸುತಿದ್ದಾರಲ್ಲದೆ, ನ್ಯಾಯ ಶೋಧನೆಗಾಗಿ ಆ ಗಡಿ ದಾಟಿ ಹೋಗಲು ಸಿದ್ಧರಿಲ್ಲ.

ನಮ್ಮಲ್ಲಿಯ ಬರೆಹಗಾರರು, ಭಾಷಣಗಾರರು, ಪದ್ಧತಿ ಪ್ರಕಾರ ವಿಷಯದ ಮೇಲ್ನೋಟ ಮಾತ್ರದಿಂದ ಕಟ್ಟಿಟ್ಟ ಉಡುಗೊರೆಗಳನ್ನೇ ಸಲ್ಲಿಸುತಿದ್ದಾರೆ—ಆಳಾಭ್ಯಾಸಕ್ಕಿಳಿದು ಮೂಲ ತಿರುಳನ್ನು ಹೊರಗೆಡಹುತ್ತಿಲ್ಲ ಅವರ ಹೊಗಳಿಕೆ ಮತ್ತು ತೆಗಳಿಕೆಗಳೆಲ್ಲವೂ ಹಿತ್ತಿಲು ಪಡಿವಾಟುಗಳೇ ಹೊರತು, ಗರ್ಭ ಗುಡಿಯೊಳಗಿನವುಗಳಲ್ಲ.

ಎಲ್ಲೆಲ್ಲೂ ಎಲ್ಲರಲ್ಲೂ ಲಘುತನ ವ್ಯಾಪಿಸಿ ಹೋಗಿದೆ— ಬಿಗುಮಾನವಿಲ್ಲ ಕೊಟ್ಟು ಕೇಳುವವರು ಹೆಚ್ಚಿದ್ದಾರೆ—ತಾಳಿ ಕೂಡಿ ತೆಗೆಯುವವರ ಅಭಾವವಿದೆ. ಇದೇ ನಮ್ಮ ಜನಜೀವನದ ದೊಡ್ಡ ದೋಷ.

ವಿದ್ಯೆ, ಬುದ್ಧಿ ಮತ್ತು ಸಂಸ್ಕಾರ ವಿಶೇಷಗಳಿಂದಲೇ ಹೊಂದಬೇಕಾದ ಉಚ್ಚಮಟ್ಟವು ಬರಿಯ ಉಪದೇಶದಿಂದ ಲಭಿಸುವಂತಹದಲ್ಲವೆನ್ನೋ ನಿಜ. ಆದರೆ ಸದಾ ಬಹಿರ್ಮುಖಿಯಾಗಿರುವ ತಮ್ಮ ಅಭಿರುಚಿಯನ್ನು ಅಂತರ್ಮುಖಿಯಾಗಿ ತಿರುಗಿಸಿಕೊಳ್ಳುವ ಮೂಲಕ ಇದ್ದ ಸ್ಥಿತಿಯಲ್ಲೇ ಪ್ರತಿಯೊಬ್ಬನೂ ಸುಧಾರಿಸಬಹುದು.

([illegible]ನೇ ಪುಟ ನೋಡಿರಿ)

**WANTED**

Capable and influential Orga-
sers for the Districts of South
nara, North Kanara & Coorg.
Good prospects for persons
th both Life and General
perience.

Please apply stating previous
urance experience, guarantee
d terms to:-

*The Branch Secretary,*
tional Insurance Co., Ltd.,
2, Netaji Subhas Chandra
se Road, Madras.

# ಅರುವತ್ತು ತುಂಬಿದ ಡಾ| ನಾ. ಸು. ಹರ್ಡೀಕರ.

ಡಾ| ಹರ್ಡೀಕರರಿಗೆ ಇದೇ ತಾ. 7-5-50ಕ್ಕೆ 60 ವರುಷ ತುಂಬಿ, ಈಗ 61ನೇ ವರುಷ ನಡೆದಿದೆ. ಅವರ ವಜ್ರ ಮಹೋತ್ಸವ ಸಮಾರಂಭವು ಬೊಂಬಾಯಿಯಲ್ಲಿ ತಾ 7ರಲ್ಲಿ ಅತ್ಯಂತ ವಿಜೃಂಭಣೆಯಿಂದ ಜರಗಿತು. ಹುಬ್ಬಳ್ಳಿ ಮತ್ತಿತರ ಕಡೆಗಳಲ್ಲೂ ಡಾಕ್ಟರರ ಷಷ್ಠ್ಯಬ್ದಿಪೂರ್ತಿ ಸಮಾರಂಭಗಳಾಗಿವೆ. ಈ ಸಂ

ಹಾಗೂ ಸಾಮಾನ್ಯ ಜನತೆಯನ್ನು ಅಸಾಮಾನ್ಯ ರೀತಿಯಿಂದ ಹುರಿದುಂಬಿಸಿ ಮುನ್ನಡೆಸುವ ಹೊಣೆಗಾರಿಕೆಯು ಮುಖ್ಯತಃ ಗಾಂಧಿಜೀ ಮತ್ತವರ ಒತ್ತಿನ ಅಗ್ರಗಣ್ಯ ನಾಯಕರದಾಗಿದ್ದರೂ ರಣರಂಗದಲ್ಲಿ ವ್ಯವಸ್ಥಿತ ಸೇನಾದಳಗಳನ್ನು ಚಾಲು ಮಾಡುವ ಸೇನಾನಿತ್ವ ಡಾ| ಹರ್ಡೀಕರರದಾಗಿತ್ತು. ರಾಷ್ಟ್ರೀಯ ಸಂಗ್ರಾಮದ ಮತ್ತು ಕಾಂಗ್ರೆಸಿನ ಮೂಲಬಲ 'ಹಿಂದುಸ್ಥಾನೀ ಸೇವಾದಳ'ದ ಸ್ಥಾಪಕರು ಮತ್ತು ನಾಯಕರು ಡಾ| ಹರ್ಡೀಕರರೇ ಶಿಸ್ತುಬದ್ಧ ಕಾರ್ಯನಿಷ್ಠೆಯನ್ನು ಹುಟ್ಟುಗುಣವಾಗಿ ಪಡೆಕೊಂಡು ಬಂದಿದ್ದ ಡಾ| ಹರ್ಡೀಕರ ಧೀರ ನಾಯಕ ಲಾಲಾಲಜಪತರಾಯರ ಅನುಯಾಯಿಯಾಗಿ ಅಮೇರಿಕದಲ್ಲಿ ಗಳಿಸಿದ್ದ ಅನುಭವದಿಂದ ಸಾಣೆಗೊಂಡ ಅಲಗಾಗಿ ಭಾರತಕ್ಕೆ ಮರಳಿದ್ದ ಕಾಲವದು. ಆ ಕಾಲದಲ್ಲೇ 1923ರಲ್ಲಿ ಸುಪ್ರಸಿದ್ಧ ನಾಗಪುರ ಧ್ವಜ ಸತ್ಯಾಗ್ರಹ ಪ್ರಾರಂಭಿಸಿತು. ದೇಶದ ಅಗ್ರಗಣ್ಯ ನಾಯಕರೊಂದಿಗೆ ಡಾ| ಹರ್ಡೀಕರರೂ ಅದರಲ್ಲಿ ಭಾಗವಹಿಸಿ ಸೆರೆಮನೆ ಕಂಡಿದ್ದರು. ಭಾರತದ ಎಲ್ಲಾ ಪ್ರಾಂತ್ಯಗಳಿಂದಲೂ ಈ ಸತ್ಯಾಗ್ರಹಕ್ಕಾಗಿ ಸ್ವಯಂಸೇವಕರು ನಾಗಪುರದಲ್ಲಿ ಜಮೆಯಾಗಿದ್ದರು; ಆ ಧ್ವಜ ಸತ್ಯಾಗ್ರಹವಾದರೋ ಕಟ್ಟಕಡೆಗೆ ಜಯಶಾಲಿಯಾಗಿದ್ದಿತು. ಆದರೆ ಅಂತಹ ವಿಜಯಗಳೇ ಸರ್ವಸ್ವವೆಂದು ನಂಬಿ ಅಹಂಕಾರ ಅಥವಾ ಆಲಸ್ಯಕ್ಕೀಡಾಗುವ ಜನ ಹರ್ಡೀಕರರಾಗಿರಲಿಲ್ಲ. ಆ ಸಂಗ್ರಾಮದ ಲೋಪ ದೋಷಗಳು

ಸ್ಪಿಗೆ ನಾಟಿತು. ಆ ಸ್ಫೂರ್ತಿ ಜ್ವಾಲೆಯು ಒಮ್ಮೆಗೇ ನಾಲಿಗೆ ಚಾಚಿ ನಂದಿ ಹೋದೊಡನೆ ಅಲ್ಲಿ ಬೂದಿ ಮಾತ್ರ ಉಳಿದುಕೊಂಡುದು-ಎಷ್ಟೋ ಮಂದಿ ಧ್ವಜ ಸತ್ಯಾಗ್ರಹ ಯೋಧರು ಜೈಲು ಕಷ್ಟವನ್ನು ಭವಿಸಲಾರದೆ ಕ್ಷಮೆ ಬೇಡಿದುದು-ಡಾ. ಹರ್ಡೀಕರರ ಹೃದಯವನ್ನು ಚುಚ್ಚಿತು. ಸುಸಂಘಟಿತ, ಶಿಸ್ತುಬದ್ಧ ಸ್ವಯಂಸೇವಕ ದಳದ ಸ್ಥಾಪನೆಯೇ ಈ ದೋಷ ನಿವಾರಣೆಗಿರುವ ಹಾದಿಯೆಂಬುದನ್ನು ಇವರು ಮನಗಂಡರು. ಕಾರಾಗೃಹದಲ್ಲಿದ್ದಾಗಲೇ ಈ ಕುರಿತು ನಾಯಕರೊಡನೆ ವಿಚಾರ ವಿನಿಮಯ ನಡೆಸಿದರು. ಜೈಲಿನಿಂದ ಹೊರ ಬಂದೊಡನೆ ಮುಖಂಡರ ಸಭೆ ಸೇರಿಸಿ ಅ. ಭಾ. ಸ್ವಯಂಸೇವಕ ಸಂಘದ ರೇಖಾ ಚಿತ್ರವನ್ನು ಅಲ್ಲಿ ಎಳೆದರು. ರಾಷ್ಟ್ರಕ್ಕೆ ಕರೆಕೊಟ್ಟರು. ಕೋಕನಾಡಾದಲ್ಲಿ ಕಾಂಗ್ರೆಸ್ ಮಹಾಧಿವೇಶನ ಸೇರಿದಾಗ, ಅಲ್ಲಿಯೇ ಪಂಡಿತ ಜವಾಹರಲಾಲರ ಅಧ್ಯಕ್ಷತೆಯಲ್ಲಿ ಸೇರಿದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ 'ಹಿಂದುಸ್ಥಾನೀ ಸೇವಾದಳ' ಸ್ಥಾಪಿಸಲ್ಪಟ್ಟಿತು; ದಳಪತಿಯಾಗಿ ಹರ್ಡೀಕರರು ಮುಂದೆ ಬಂದರು. ಇಲ್ಲಿ ಹೆಗಲು ಕೊಟ್ಟವರು ಡಾ| ಹರ್ಡೀಕರರು-ಬೇರಾರೂ ಅಲ್ಲ; ಅದ್ದರಿಂದಲೇ ನಿರ್ಣಯ ಮಾತ್ರವಾದುದಲ್ಲ-ಕೂಡಲೇ ಅದರ ನಿಜರೂಪ ದೇಶದಲ್ಲಿ ಮೂಡಿತು. ಹುಬ್ಬಳ್ಳಿಯಲ್ಲಿ 'ಹಿಂದುಸ್ಥಾನೀ ಸೇವಾದಳ' ಸ್ಥಾಪನೆಗೊಂಡು ದೇಶದ ಎಲ್ಲೆಲ್ಲೂ ಅದರ ಶಾಖೆಗಳು ತೆರೆಯಲ್ಪಟ್ಟುವು. ಮಹಿಳಾ ಶಾಖೆ ಪ್ರತ್ಯೇಕ ರಚನೆಗೊಂಡಿತು. ರಾಷ್ಟ್ರೀಯ ಯೋಧಕ್ಕೆ ಜನ್ಮ ತಾಳಿತು. ನೈತಿಕ, ಮಾನಸಿಕ, ದೈಹಿಕ ಶಕ್ತಿವರ್ಧನಾಂದೋಲನವಾರಂಭಿಸಿತು. ಸ್ವಯಂಸೇವಕರ ತರಬೇತಿ ಶಿಬಿರಗಳು, ಪ್ರಭಾತಫೇರಿ, ಮಾಸಿಕ ಧ್ವಜ ವಂದನೆ ಮೊದಲಾದ ಹೊಸ ಚಟುವಟಿಕೆಗಳು ತೋರಿ ಬಂದುವು. ತೋರುವಿಕೆಯು ಪರಾಧೀನವಿದ್ದ ಭಾರತದಲ್ಲಿ ಸ್ವತಂತ್ರ ನಾಯಕರಿರುವಂತೆಯೇ ಸ್ವತಂತ್ರ ಸೇನೆಯೂ ಇದೆ ಎಂಬ ಸ್ವಸಂಪೂರ್ಣತೆ ಡಾ. ಹರ್ಡೀಕರರಿಂದ ಆ ಕಾಲದಲ್ಲಾಯಿತು. 1930ರ ಸವಿನಯ ಕಾಯಿದೇಭಂಗ ಹೋರಾಟವು ದೇಶದಾದ್ಯಂತ ಹಿಂದುಸ್ಥಾನೀ ಸೇವಾದಳದ ಕೈಯಲ್ಲಿಯೇ ಇದ್ದಿತು. ಅವರೆಗೆ ಕಾಂಗ್ರೆಸಿನ ತಾತ್ವಿಕ ಸಂಬಂಧವಿಟ್ಟುಕೊಂಡು ಪ್ರತ್ಯೇಕ ಸಂಸ್ಥೆಯಾಗಿದ್ದ ಸೇವಾದಳವನ್ನು 1931ರಲ್ಲಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ತನ್ನದನ್ನಾಗಿ ಮಾಡಿಕೊಂಡಿತು; ಹಿಂದುಸ್ಥಾನೀ ಸೇವಾದಳವು ಕಾಂಗ್ರೆಸ್ ಸೇವಾದಳವಾಯಿತು. ಸೇನಾಪತಿಯು ಹುರುಪು ಮತ್ತು ದಳದಶಕ್ತಿ ಇಮ್ಮಡಿಸಿತು. 1932ರ ಮಹಾಚಳವಳಿದ ಒಳ ಹೊರಗಿನ ಚಲನೆಯಾಗಿದ್ದುದೆಂದರೆ ಹೆಚ್ಚಿನಂಶ ಕಾಂಗ್ರೆಸ್ ಸೇವಾದಳವೇ. ಆ ವರೆಗಿನ ಯಾವ ರಾಷ್ಟ್ರೀಯ ಚಳವಳದ ಮೇಲೂ ಹೇರದಿದ್ದಂತಹ ಕಠಿಣ ದಬ್ಬಾಳಿಕೆಯನ್ನು ಸರಕಾರವು 1932ರ ಆಂದೋಲನದ ಮೇಲೆ ಪ್ರಯೋಗಿಸಿದ್ದಿತು. ಕಾಂಗ್ರೆಸ್ ನಾಯಕರು ಮತ್ತು ಕಾರ್ಯಕರ್ತರೆಲ್ಲರೂ ಬಂಧಿಸಲ್ಪಟ್ಟು ಚಳವಳದ ಬಾಯಕಟ್ಟು ಕೀಲುಗಳೆಲ್ಲವೂ ಕಳಚಿ ಹೋಗಿದ್ದಾಗ ಸೇವಾದಳದ ಗುಪ್ತ ಸುದ್ದಿ ಖಾತೆಗಳು ಮತ್ತು ಗುಪ್ತಚರರು ಮತ್ತು ಜನತಾ ಪ್ರೇರೇಪಕರು ಅದನ್ನು ಸಜೀವವಾಗಿಟ್ಟು ಉಳಿಸಿಕೊಂಡರು. ಕಾಂಗ್ರೆಸ್ ಮತ್ತು ಅದರ ಶಾಖಾಂಗಗಳೆಲ್ಲವೂ ಬೇರೂ ಕಾಯಿದೇಶೀರಗೊಳಿಸಲ್ಪಟ್ಟವು; ಮುಖ್ಯತಃ ಹಿಂದೂಸ್ಥಾನೀ ಸೇವಾದಳ ಕಾಯಿದೆ ವಿರುದ್ಧವಾಯಿತು. ಆ ವೇಳೆ 1934ರಲ್ಲಿ ಕಾಂಗ್ರೆಸಿನ ಮೇಲಿನ ಬಹಿಷ್ಕಾರ ರದ್ದಾದರೂ ಸೇವಾದಳದ ಮೇಲಿನ ಬಹಿಷ್ಕಾರವನ್ನು ತೆಗೆಯಲು 1937ರಲ್ಲಿ ಕಾಂಗ್ರೆಸ್ ಮಂತ್ರಿಮಂಡಲಗಳೇ ಬರಬೇಕಾಯಿತು. ಆದರೆ ದುರ್ದೈವವಶಾತ್ 1932ರಲ್ಲಿ ಕಟ್ಟಿ ಹೋದ ಉಸಿರು 1937ರಲ್ಲಿ ಕುತ್ತಿಗೆ ಮೇಲಿನ ಕೈ ತೆಗೆಯಲ್ಪಟ್ಟ ಮೇಲಾದರೂ ಸೇವಾದಳಕ್ಕೆ ಮತ್ತೆ ಬರಲಿಲ್ಲ. 1942ರ 'ಕ್ವಿಟ್ ಇಂಡಿಯಾ' ಚಳವಳದಲ್ಲಿ ಕಾಂಗ್ರೆಸ್ ಸೇವಾದಳದ ಕಾರ್ಯಕರ್ತರ ಸ್ವತಂತ್ರ ಕೈ ಚಳಕಗಳಿದ್ದುವಾದರೂ ದಳದ ಸಂಘಟಿತ ಕಾರ್ಯಭಾಗಿತ್ವವಿರಲಿಲ್ಲ. ಅದಿಲ್ಲದಿದ್ದ ಕೊರತೆಯು ಸ್ವಾತಂತ್ರ್ಯ ಸಂಗ್ರಾಮದ ಮರ್ಮವರಿತ ಎಲ್ಲರಿಗೂ ಮನದಟ್ಟಾಗಿದ್ದಿತು. ಬೌದ್ಧಿಕ ಶಿಕ್ಷಣ, ಸೇವೆ ಮತ್ತು ಯೋಧತ್ವವೇ ಜೀವಕಳೆಯಾಗಿದ್ದ ಹಿಂದುಸ್ಥಾನೀ ಸೇವಾದಳ ಕೇವಲ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಗಳಲ್ಲಿ ಮಾತ್ರ ಭಾಗಿಯಾಗಿದ್ದುದಲ್ಲ; ಭೂಕಂಪಪೀಡಿತ ಬಿಹಾರಿನಂತೆಯೇ ಸ್ಥಿತಿ ಶೋಚನೀಯವಾಗಿದ್ದ ಇತರ ಸ್ಥಳಗಳಿಗೂ ಈ ಸ್ವಯಂಸೇವಕ ದಳದ ಸಹಾಯ ದೊರೆತಿದೆ. ಸಂದರ್ಭೋಚಿತ ಯೊ

ದಬ್ಬಾಳಿಕೆಗೆ ... ಹೋರಾಟದ [illegible] ವರ್ಣನೆಯಾಗಿದೆ.

## ಸೇನಾಪತಿ

ಅಧುನಿಕ ಭಾರತದಲ್ಲಿ ಡಾ. ಹರ್ಡೀಕರರಿಗೊಂದು ವಿಶಿಷ್ಟ ಸ್ಥಾನವಿದೆ. ರಾಷ್ಟ್ರದ ಸ್ವಾತಂತ್ರ್ಯ ಸಂಗ್ರಾಮಗಳ ಕ್ಷೇತ್ರ ಸೇನಾಪತಿ ಸ್ಥಾನವು ಡಾ. ಹರ್ಡೀಕರರದೇ. ಸಂಗ್ರಾಮ ನಿರ್ದೇಶಕತ್ವ

ಅವರ ಅಂತರಾಷ್ಟ್ರೀಯನ್ನು ತೆರೆಯಿಸಿದುವು ಯುದ್ಧ ಮರ್ಮವನ್ನು ಗೊತ್ತು ಹಚ್ಚುವದರಲ್ಲಿ ನಾಗಪುರ ರಣರಂಗದ ಅನುಭವಗಳನ್ನು ಈ ಹುಟ್ಟುಯೋಧ ಉಪಯೋಗಿಸಿಕೊಂಡರು. ಧ್ವಜ ಸತ್ಯಾಗ್ರಹಕ್ಕೆ ಕೊಡಲು ರಾಷ್ಟ್ರದ ಮೂಲೆ ಮೂಲೆಗಳಿಂದ ಬಂದಿದ್ದ ಸ್ವಯಂಸೇವಕರಲ್ಲಿ ಯೋಗ್ಯತೆಯಾಗಿ ಹೋರಾಟ ಸ್ಫೂರ್ತಿಯೊಂದೇ ಇತ್ತಲ್ಲದೆ ಶಿಸ್ತು, ನಿಯಮ ನಿಷ್ಠೆಯಾವುದೂ ಇಲ್ಲದಿದ್ದುದು ಇವರ ಮನ

(೧ನೇ ಪುಟದಿಂದ ಮುಂದುವರಿದುದು)

ತಮಗಾಗುತ್ತಿರುವ ಅನ್ಯಾಯಗಳಿಗಾಗಿ ಅಥವಾ ತಪ್ಪು ತಡೆಗಳಿಗಾಗಿ ಪರರ ದೋಷಗಳ ಕಡೆಗೇನೇ ನೋಡುವ ಬದಲಿಗೆ, ಅವುಗಳಿಗೆಲ್ಲಾ ಸ್ಥಾನಗಳಾಗಿ ತಮ್ಮಲ್ಲೇ ಉಳಿದುಕೊಂಡಿರುವ ದೋಷ ದುರ್ಗುಣಗಳಾವುವು ಎಂಬುದನ್ನು ಮುಂದಾಗಿ ಶೋಧಿಸಿಕೊಳ್ಳುವ ಅಭ್ಯಾಸ ಬರಬೇಕು. ಟೀಕಿಸುವ ಬದಲು ಆತ್ಮವಿಮರ್ಶೆ ಮಾಡುವ ಗುಣ ಮೂಡಬೇಕು ಮತ್ತು ಯಾವುದರಲ್ಲೇ ಆದರೂ ಅವಸರಪಡದೆ, ಸಹನೆ ತೋರಿಸಿ, ಸಾಧ್ಯವಿದ್ದಷ್ಟು ಆಳಕ್ಕೆ ನೋಡುವ ಮನೋವೃತ್ತಿಯಿರಬೇಕು.

ಆದಕ್ಕಾಗಿ ಅಖಿಲ ಭಾರತದಲ್ಲಿ 'ಆತ್ಮವಿಕಾಸ ಸಪ್ತಾಹ' 'ಸ್ವವಿಮರ್ಶಾದಿನ' ಮುಂತಾದವುಗಳನ್ನು ಆಚರಣೆಗೆ ತಂದರೂ ಹೆಚ್ಚಲ್ಲ. ಈ ನಿಶ್ಚಿತಾವಧಿಗಳನ್ನು ಗಾಢಾಭ್ಯಾಸ ಮತ್ತು ಸ್ವಚಿಂತನೆಗಾಗಿ ಮೀಸಲಿಟ್ಟು, ಆ ಮೂಲಕ ರಾಷ್ಟ್ರದ ಆದ್ಯಂತ ಆತ್ಮಶುದ್ಧಿ ಕಾರ್ಯ ನಡೆಯುವುದು ವಿಹಿತ.

'ರಾಷ್ಟ್ರೀಯ ವಾರ' 'ಚರಕಾ ಸಪ್ತಾಹ'ದಂಥವುಗಳಿಗೀಗ ಅವಧಿ ಬಾಧೆ ತಟ್ಟಿದೆ. ಅವುಗಳ ಸ್ಥಾನದಲ್ಲಿ ಸದ್ಯ ಸ್ಥಿತಿಗನುಗುಣವಾದ, ಆತ್ಮಶುದ್ಧೀ ದಿನ, ವಾರಗಳ ಆಚರಣೆ ಬರುವುದು ಅಗ


**On this Memorable day**

Of the 26th of January in the year 1950 of the inauguration of the Indian Republic, we have the pleasure to announce the birth of our

**Vijaya Cash Certificates**

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices

Head Office:—**Kadri Road, Mangalore.**

Branches City Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara

**B. Manjaya Hegde**

Advocate & President, District Board, S. Kanara.

CHAIRMAN

ಸಂದರ್ಭಗಳಲ್ಲೇ ಮಾಯವಾಗುವ ದುರ್ದೈವವು ಭಾರತವನ್ನು ಹೇಗೆ ಪೀಡಿಸುತ್ತಿದೆ ಎಂಬುದಕ್ಕೆ ಈ ಕಾಲದಲ್ಲೇ ಕಾಂಗ್ರೆಸ್ ಸೇವಾದಳವಿಲ್ಲದಿರುವದೊಂದು ದೊಡ್ಡ ನಿದರ್ಶನ. ನಿಷ್ಕಲ್ಮಷ ರಾಷ್ಟ್ರೀಯ ಭಾವನೆ ಮತ್ತು ಶಿಸ್ತು ವ್ಯವಸ್ಥಾಪಾಲನೆಯೇ ಜೀವಾಳವಾಗಿರುವ ಕಾಂಗ್ರೆಸ್ ಸೇವಾದಳವು ಜಾತೀಯ ಗೊಂದಲಗಳ ಕಾಲಗಳಲ್ಲಿ ಭಾರತಕ್ಕೆ ಅಗತ್ಯಬೇಕಿದ್ದಿತು-ಸ್ವಾತಂತ್ರ್ಯದ ಆದಿಭಾಗದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದನ್ನೇ ಅರಿಯದೆ ಕಕ್ಕಾವಕ್ಕಿಯಾದಂತಿರುವ ಭಾರತೀಯ ಜನತೆಯನ್ನು ಕ್ರಮಬದ್ಧವಾಗಿ ನಿಲ್ಲಿಸಲು ಕಾಂಗ್ರೆಸ್ ಸೇವಾದಳದ ಆವಶ್ಯಕತೆಯಿದ್ದಿತು- ಆರ್. ಯಸ್. ಯಸ್. ನಂತಹ ಪ್ರತಿಗಾಮೀ ದಳಗಳು ವ್ಯಾಪಿಸುತ್ತಾ ಹೋಗುತ್ತಿರುವಾಗ ಕಾಂಗ್ರೆಸಿನಲ್ಲಿ ಮಾತ್ರ ದಳಗಳೂ ಇರದೆ, ವಿಧಾಯಕ ಕಾರ್ಯಕ್ರಮವೂ ಇರದೆ ಲಾಲಸೆಗಳಷ್ಟೇ ತುಂಬಿವೆ ಎಂಬ ಅತೃಪ್ತಿಯಿಲ್ಲದಂತಾಗಬೇಕಿದ್ದಿತಾದರೆ ಈ ಸ್ವಯಂಸೇವಕ ದಳವೇ ಇಂಬೇಕಿತ್ತು. ಇಂತಹ ಕಾಲದಲ್ಲೇ ಕಾಂಗ್ರೆಸ್ ಸ್ವಯಂಸೇವಕ ದಳವಿಲ್ಲ!

## ಕಾರ್ಯಕರ್ತ

ಡಾ| ಹರ್ಡೀಕರರು ಸೇವಾಜೀವಿ; ಕರ್ತವ್ಯವೊಂದೇ ಬಯಕೆಯಾಗಿದ್ದ ನಿಷ್ಕಾಮ ಕರ್ಮ ಜೀವಿ. ಧನ, ಕೀರ್ತಿ ಲಾಲಸೆ, ಸ್ಥಾನಾಕಾಂಕ್ಷೆ ಯಾವುದೂ ಅವರಲ್ಲಿಲ್ಲ. ಸ್ವತಂತ್ರ ಭಾರತದಲ್ಲಿ ಡಾ| ಹರ್ಡೀಕರರಿಗೆ ಇಂದು ದೊರೆತಿರುವ ಸ್ಥಾನ ಮತ್ತು ಸ್ಥಿತಿಗತಿ ನಮ್ಮ ರಾಷ್ಟ್ರ ಜೀವನದ ತೂಕ ತಿಳಿಸುವ ತಕ್ಕಡಿಯೋ ಎಂಬಂತಿದೆ. ನಾರಾಯಣ ಸುಬ್ಬರಾವ ಹರ್ಡೀಕರರು ಕನ್ನಡಿಗ. ಧಾರವಾಡದ ಹಳ್ಳಿಯೊಂದರಲ್ಲಿ ಬಡ ಕುಟುಂಬವೊಂದರಲ್ಲಿ ಜನಿಸಿದವರು. ಬಾಲ್ಯದಲ್ಲೇ ತಂದೆ ತಾಯಿಗಳನ್ನು ಕಳೆದುಕೊಂಡು ಅಪ್ಪರ ಆಶ್ರಯಮಾತ್ರದಿಂದ ಬೆಳೆದವರು. ಅತಿ ಕಷ್ಟದಿಂದ ಪಡೆದ ಉಚ್ಚ ಶಿಕ್ಷಣದ ಪ್ರಯೋಜನವನ್ನಾದರೂ ಸ್ವಂತಕ್ಕಾಗಿ ಪಡೆಕೊಳ್ಳಲೊಪ್ಪದೆ, ಅತ್ಯಮೂಲ್ಯ ಸೊತ್ತುಗಳಾದ ತನ್ನ ಪ್ರತಿಭೆ ಮತ್ತು ಯೋಗ್ಯತೆಗಳೆಲ್ಲವನ್ನೂ ರಾಷ್ಟ್ರಾರ್ಪಣ ಮಾಡಿದವರು. ಅಮೇರಿಕದಲ್ಲಿ ಲಾಲಾ ಲಜಪತರಾಯರ ಬಲಗೈಯಾಗಿ ಭಾರತ ಸೇವೆ ಸಲ್ಲಿಸುತ್ತಿದ್ದಾಗ ಡಾ ನಾ. ಸು. ಹರ್ಡೀಕರರು ಗಳಿಸಿದ್ದ ಅನುಭವಗಳು ಅತಿ ಹೆಚ್ಚಿನವು ಹಾಗೂ ಅತ್ಯಮೂಲ್ಯವಿವೆ. ಅವರ ಇದುವರೆಗಿನ ಜೀವನ ಚಿತ್ರದಲ್ಲಿ ಎಲ್ಲಾ ಬಣ್ಣಗಳೂ ಮಿನುಗುತ್ತಿವೆ. ಪೆಟ್ಟಿಗೆಗಳಲ್ಲಿ ಕುಳಿತು ಓದಿದುದು-ಹೋಟೆಲು ತಟ್ಟೆ ತೊಳೆದು, ಕಸಬಳಿಸಿ, ಗೋಡೆಗೆ ಸುಣ್ಣ ಬಳಿದು ದಿನ ತೆಗೆದುದು-ಜೈಲು ವಾಸಾನುಭವ-ಕಠಿಣ ಕಾಹಿಲೆಗಳ ಪೀಡೆ-ತರುಣ ಜನಾಂಗದ ಮುಂದಾಳುತ್ವ-ರಾಷ್ಟ್ರೀಯ ಸೇನಾನಿತ್ವ-ಪತ್ರಿಕೋದ್ಯಮ-ದೇಶವಿದೇಶ ಪ್ರಚಾರ-ಮುಂತಾದ ಚಿತ್ತಾಕರ್ಷಕ ತಗ್ಗು ಏರುಗಳೆಲ್ಲವೂ ಡಾಕ್ಟರರ ಜೀವನದಲ್ಲಿ ಕಂಡುಬರುತ್ತಿವೆ. ಐಶ್ವರ್ಯ ಮತ್ತು ಅಧಿಕಾರ ಮಾತ್ರ ಅಲ್ಲಿ ತೋರಿ ಬರುವುದಿಲ್ಲ-ಇವುಗಳ ಕಡೆಗೆ ಈ ಮನುಷ್ಯನ ಲಕ್ಷ್ಯ ಹೋದುದೂ ತೋರುವುದಿಲ್ಲ. ಈ ಕಾರಣದಿಂದಾಗಿಯೇ ಇರಬಹುದ-ಡಾ| ನಾ. ಸು. ಹರ್ಡೀಕರರು ಇದುವರೆಗೆ ರಾಷ್ಟ್ರಕ್ಕೆ ಸಲ್ಲಿಸಿರುವ ಸೇವೆಗೆ ತಗುಣವಾದ ಸ್ಥಾನಮಾನಗಳನ್ನು ರಾಷ್ಟ್ರ ಜೀವನದಲ್ಲಿ ಪಡೆದಂತೆ ಕಾಣುವದಿಲ್ಲ. ಐಶ್ವರ್ಯಾಧಿಕಾರಗಳಂತೆಯೇ ಕೀರ್ತಿ ಕೂಡಾ ಡಾಕ್ಟರರು ಬಯಸದ ವಿಷಯವಾದ್ದರಿಂದ ಅವರೇನೂ ಇಂದು ಅತೃಪ್ತರಾಗಿಲ್ಲ, ಎಂಬ ಮಾತು ಬೇರೆ- ನಮ್ಮ ಸಾರ್ವಜನಿಕ ಜೀವನದಲ್ಲಾದರೂ ನ್ಯಾಯೋಚಿತ ಸಮಾನತೆ ಬಂದಿಲ್ಲವೆಂಬುದಕ್ಕೆ ಸೇವಾಜೀವಿ ಹರ್ಡೀಕರರಿಗೆ ದೊರೆತಿರುವ ಮೌಲ್ಯವೊಂದು ನಿದರ್ಶನವೆನ್ನಬಹುದು. ನಮ್ಮ ರಾಜಕೀಯ ರಂಗದಲ್ಲಿ ಕೂಡಾ ಪ್ರಚಾರ, ಐಶ್ವರ್ಯಾಧಿಕಾರಕ್ಕಿರುವ ಪ್ರಾಮುಖ್ಯತೆಯು ಯಥಾರ್ಥ ನಿರಾಡಂಬರ ಸೇವೆಗಳಿಗಿನ್ನೂ ದೊರೆತಿಲ್ಲವೆನ್ನುವಾಗ, ಅದಕ್ಕಿಂತ ಪ್ರಯಾಸದ ಅರ್ಥಿಕ, ಸಾಮಾಜಿಕ ರಂಗಗಳಲ್ಲಿ ಅದನ್ನೊಮ್ಮೆಗೇ ಬಯಸುವುದು ಅವ್ಯವಹಾರ್ಯವೆನ್ನಿಸೀತು. ಅಜ್ಞಾಧಿಕಾರ, ಸೇನಾಪತಿ ಠೀವಿ, ಎದೆಗಾರಿಕೆ, ಶಿಸ್ತು, ಸಂಯಮ, ಕಾರ್ಯವಾಹೀ ನುಡಿಗಾರಿಕೆ, ಪ್ರಸಂಗಾವಧಾನತೆ, ಸರಳ ಜೀವನ, ಆತ್ಮೀಯತಾ ಭಾವನೆ, ಸಂದರ್ಭೋಚಿತ ಲಗು ಬಿಗು ವರ್ತನೆ-ಇವುಗಳಲ್ಲಿ ಡಾ. ಹರ್ಡೀಕರರದು ಒಂದು ಮಾದರೀ ಜೀವನ. ಊರು, ಪ್ರಾಂತ್ಯ, ದೇಶದ ಆವರಣಗಳನ್ನು ಮೀರಿ ಪ್ರವಹಿಸಬಲ್ಲ ಉದಾತ್ತ ಕಾರ್ಯವಿಧಾನ ಮತ್ತು ಚೇತನ ಅವರದು. ಆದರೆ ಪ್ರಚಲಿತ ವಾತಾವರಣದಲ್ಲಿ ಅದೊಂದು ಕಿರುತೊರೆಯನ್ನಿಸುವಷ್ಟು ಬತ್ತಿ ಹೋದಂತಿದೆ. ಆದರೂ ಅದು ಆರಿ ಹೋಯಿತೆಂದರೆ ಕಾಲ ಕೆಟ್ಟಿತೆಂದೇ ಅರ್ಥ. ಹಾಗಾಗಲಾರದು; ಹಾಗಾಗಕೂಡದು.

ಡಾ| ನಾ. ಸು. ಹರ್ಡೀಕರರೀಗ 60ರ ಗಡಿ ದಾಟಿದ್ದಾರೆ. ಅವರು ಸುಖಿಯಾಗಲಿ; ಚಿರಂಜೀವಿಯಾಗಲಿ!

ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವರ್ಗದಾರರಿಗೆ—ಶಾಲೆಗಳಿಗೆ-
ಬೇಕಾಗುವ ರಿಜಿಸ್ಟ್ರಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳೂ, ಎಕೌಂಟ್
ಪುಸ್ತಕಗಳೂ ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

# ಕೇಂದ್ರ ಮಂತ್ರಿಮಂಡಲಿಯ ಪುನರ್ರಚನೆ.

ಭಾರತದ ಕೇಂದ್ರ ಮಂತ್ರಿಮಂಡಲವು ಇದೇ ತಾ 5ರಲ್ಲಿ ವಿಸರ್ಜನೆ ಮತ್ತು ಮರು ರಚನೆಗೊಂಡಿತು. ಕೇಂದ್ರ ಮಂತ್ರಿಮಂಡಲಿಯ ಪುನರ್ರಚನೆಯ ಮಾತುಕತೆಗಳು ದೀರ್ಘ ಕಾಲದಿಂದ ಕೇಳಿಬರುತ್ತಿದ್ದು, ಡಾ| ಶ್ಯಾಮ ಪ್ರಸಾದ ಮುಖರ್ಜಿ ಮತ್ತು ಶ್ರೀ. ನಿಯೋಗಿಗಳ ರಾಜೀನಾಮೆಯಿಂದ ಅದು ಅನಿವಾರ್ಯವಾಯಿತು. ಆದ್ದರಿಂದ ಘಟನಾಬದ್ಧ ನಿಯಮಾನುಸಾರವಾಗಿ ಇದೇ ತಾ 5ನೇ ಮಧ್ಯಾಹ್ನ ಪ್ರಧಾನಿ ಪಂಡಿತ ಜವಾಹಿರಲಾಲರು ತನ್ನ ಮತ್ತು ತನ್ನ ಮಂತ್ರಿಮಂಡಲಿಯ ಇತರ ಸದಸ್ಯರೆಲ್ಲರ ರಾಜೀನಾಮೆಗಳನ್ನೊಮ್ಮೆ ಅಧ್ಯಕ್ಷರಿಗೊಪ್ಪಿಸಿದರು; ಅಂದೇ ಅಪರಾಹ್ನ 2 ಘಂಟೆಗೆ ಅಧ್ಯಕ್ಷರು ಆ ರಾಜೀನಾಮೆಗಳನ್ನು ಸ್ವೀಕರಿಸಿ, ಪಂಡಿತ ಜವಾಹಿರಲಾಲರನ್ನು ಪುನಃ ಪ್ರಧಾನ ಮಂತ್ರಿಯಾಗಿ ನೇಮಿಸಿಕೊಂಡು ಮಂತ್ರಿಮಂಡಲಿಯ ಇತರ ಸದಸ್ಯರಾಗಿ ತಾನು ಯಾರಾರನ್ನು ನೇಮಿಸಿಕೊಳ್ಳತಕ್ಕದ್ದೆಂಬ ಸಲಹೆ ಕೊಡಬೇಕೆಂದು ಅವರನ್ನು ಕೇಳಿಕೊಂಡರು. ಅದಕ್ಕನುಸಾರವಾಗಿ ಪಂಡಿತ ನೆಹರುಗಳು ಹೆಸರು ಪಟ್ಟಿಯೊಪ್ಪಿಸಿದಂತೆ ಈ ಕೆಳಗಿನ 14 ಮಂದಿ ಮೂಲ ಮಂತ್ರಿಗಳು ಮತ್ತು 5 ಮಂದಿ ರಾಜ್ಯ ಮಂತ್ರಿಗಳುಳ್ಳ ಮಂತ್ರಿಮಂಡಲದ ರಚನೆಯಾಯಿತು—

## ಮಂತ್ರಿಮಂಡಲ

(1) ಪಂಡಿತ ಜವಾಹಿರಲಾಲ ನೆಹರು (2) ಸರ್ದಾರ್ ವಲ್ಲಭಾಯಿ ಜಾವೇರಭಾಯಿ ಪಟೇಲ್ (3) ಮೌಲಾನಾ ಅಬ್ದುಲ್ ಕಲಮ್ ಅಜಾದ್ (4) ಡಾ| ಜೋನ್ ಮಥಾಯಿ (5) ಸರ್ದಾರ್ ಬಲದೇವಸಿಂಗ್ (6) ಶ್ರೀ ಜಗಜೀವನ ರಾಮ್ (7) ಶ್ರೀ ರಾಫಿ ಅಹಮ್ಮದ್ ಕಿಡ್ವಾಯಿ, (8) ಶ್ರೀಮತಿ ಅಮೃತ ಕೌರ್ (9) ಡಾ| ಭೀಮರಾವ್ ರಾಮ್‌ಜೀ ಅಂಬೇಡ್ಕರ್ (10) ಶ್ರೀ ನರಹರ್ ವಿಷ್ಣು ಗಾಡ್ಗಿಲ್ (11) ಶ್ರೀ ನರಸಿಂಹ ಗೋಪಾಲ ಸ್ವಾಮಿ ಅಯ್ಯಂಗಾರ್ (12) ಶ್ರೀ ಜೈರಾಮದಾಸ್ ದೌಲತ್ ರಾಮ್ (13) ಶ್ರೀ ಹರಿಕೃಷ್ಣ ಮೆಹತಾಬ್ (14) ಶ್ರೀ ಕನ್ಹೈಲಾಲ್ ಮೇಣಕ್‌ಲಾಲ್ ಮುನ್ಶಿ.

ರಾಜ್ಯ ಮಂತ್ರಿ (ಮಿನಿಸ್ಟರ್ ಓಫ್ ಸ್ಟೇಟ್)ಗಳು— (1) ಶ್ರೀ ಚಾರುಚಂದ್ರ ಬಿಸ್ವಾಸ್ (2) ಶ್ರೀ ಮೋಹನಲಾಲ್ ಸಕ್ಸೇನಾ (3) ಶ್ರೀ ಕಸ್ತೂರಿರಂಗ ಸಂತಾನಮ್ (4) ಶ್ರೀ ರಂಗನಾಥ ರಾಮಚಂದ್ರ ದಿವಾಕರ, (5) ಶ್ರೀ ಸತ್ಯ ನಾರಾಯಣ ಸಿಂಹ.

ಶ್ರೀ ಖುರ್ಶೀದ್‌ಲಾಲ್ ಮತ್ತು ಡಾ. ಬಿ. ವಿ. ಕೇಸ್ಕರ್ ಇವರಿಬ್ಬರು ಡೆಪ್ಯುಟಿ ಮಂತ್ರಿಗಳಾಗಿ ಪ್ರಧಾನ ಮಂತ್ರಿಗಳಿಂದ ನೇಮಕಗೊಂಡಿದ್ದಾರೆ.

ಶ್ರೀ ಸಿ. ರಾಜಗೋಪಾಲಾಚಾರಿಯವರು ಮಂತ್ರಿ ಮಂಡಲದಲ್ಲಿ ಸೇರಕೊಳ್ಳಲು ಆಮಂತ್ರಿಸಲ್ಪಟ್ಟಿದ್ದಾರೆ; ಅವರು ಅದಕ್ಕೆ ಒಪ್ಪುವರೆಂಬ ಆಶೆಯಿದೆ. ಅರ್ಥಸಚಿವ ಡಾ. ಜೋನ್ ಮಥಾಯಿಗಳು ತನ್ನ ಸ್ಥಾನ ಬಿಡುವ ಬಯಕೆ ತೋರಿಸಿದ್ದರೂ ಪ್ರಧಾನ ಮಂತ್ರಿಗಳ ವಿಜ್ಞಾಪನಾನುಸಾರ ಈ ತಿಂಗಳಾಂತ್ಯದವರೆಗೆ ಅಲ್ಲಿರಲು ಒಪ್ಪಿದ್ದಾರೆ. ಅದೇ ರೀತಿ ಮಂತ್ರಿ ಸ್ಥಾನದಿಂದ ವಿದಾಯ ಹೊಂದಲಿಚ್ಛಿಸಿದ್ದ ಆಹಾರ ಮಂತ್ರಿ ಶ್ರೀ ಜೈರಾಮದಾಸ್ ದೌಲತ್‌ರಾಮ್ ಮತ್ತು ನಿರಾಶ್ರಿತ ವ್ಯವಸ್ಥಾ ಮಂತ್ರಿ ಶ್ರೀ ಮೋಹನ್‌ಲಾಲ್ ಸಕ್ಸೇನರು ಬದಲು ವ್ಯವಸ್ಥೆಗಳಾಗುವ ವರೆಗೆ ತಮ್ಮ ಸ್ಥಾನಗಳಲ್ಲಿರಲು ಒಪ್ಪಿಕೊಂಡಿದ್ದಾರೆ.

## ಈ ದುರಸ್ತಿ

ತಾ. 6ನೇ ಪೂರ್ವಾಹ್ನ 11 ಘಂಟೆಗೆ ಈ ಮಂತ್ರಿಗಳೆಲ್ಲರೂ ಅಧ್ಯಕ್ಷ ಪ್ರಸಾದರಿದಿರಲ್ಲಿ ಪ್ರಮಾಣಬದ್ಧರಾದರು. ಮಂಡಲೀ ಮಂತ್ರಿಗಳಾಗಿ ಶ್ರೀ ಕೆ. ಎಮ್. ಮುನ್ಶಿ ಮತ್ತು ಶ್ರೀ ಹರಿಕೃಷ್ಣ ಮೆಹತಾಬರೂ ಮಿನಿಸ್ಟರ್ ಓಫ್ ಸ್ಟೇಟ್ ಆಗಿ ಶ್ರೀ ಸಿ. ಸಿ. ಬಿಸ್ವಾಸರೂ ನೇಮಕಗೊಂಡುದೇ ಈ ಪುನರ್ರಚನೆಯಲ್ಲಿರುವ ಹೊಸತನ. ಶ್ರೀ ಕೆ. ಎಮ್. ಮುನ್ಶಿಗಳು ಹಿಂದಿನ ಬೊಂಬಾಯಿ ಪ್ರಾಂತಿಕ ಕಾಂಗ್ರೆಸ್ ಸರಕಾರದ ಗೃಹಮಂತ್ರಿಯಾಗಿದ್ದವರು. ಘಟನಾ ತಯಾರಿಯಲ್ಲಿ ಗಣ್ಯ ಭಾಗವಹಿಸಿದ್ದವರು. ಪೋಲೀಸ್ ಆಜ್ಞೆಯ ವೇಳೆ ಹೈದರಾಬಾದಿನಲ್ಲಿ ಭಾರತ ಸರಕಾರದ ಪ್ರತಿನಿಧಿಯಾಗಿದ್ದು ಜಾಣತನದಿಂದ ಕಾರ್ಯ ಮಾಡಿದ್ದವರು. ಭಾರತದ ಚತುರ ಮುತ್ಸದ್ದಿಗಳಲ್ಲೊಬ್ಬರೆಂದು ಹೆಸರಾಂತವರು. ಇವರೀಗ ಅಮೆರಿಕಾ ಸಂಚಾರದಲ್ಲಿದ್ದಾರೆ. ಕಮ್ಯೂನಿಸಮಿನ ಬದ್ಧ ವಿರೋಧಿಯಿದ್ದು ಅಮೇರಿಕ ಮತ್ತು ಭಾರತದ ಸ್ನೇಹ ಸಂಬಂಧವನ್ನು ಬಲಗೊಳಿಸುವ ಪ್ರಯತ್ನ ಇವರದು. ಶ್ರೀ ಹರಿಕೃಷ್ಣ ಮೆಹತಾಬರು ಒರಿಸ್ಸದ ಪ್ರಧಾನ ಮಂತ್ರಿ. 'ಕ್ವಿಟ್ ಇಂಡಿಯಾ' ಚಳವಳದ ಕಾಲದಲ್ಲಿ ಕಾಂಗ್ರೆಸ್ ಕಾರ್ಯಕಾರೀ ಸದಸ್ಯರಾಗಿದ್ದು ಕಾಂಗ್ರೆಸ್ ಅಧಿನಾಯಕರೊಂದಿಗೆ ಅಹಮ್ಮದ್‌ನಗರ ಸೆರ

THE BOMBAY LIFE ASSURANCE COMPANY, LTD.
ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್
(ಸ್ಥಾಪನೆ: 1908)
ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು
ಪ್ರಧಾನ ಏಜಂಟರು:
ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ ಉಡುಪಿ.
ಇವರ ಶಾಖಾ ಕಚೇರಿಗಳು..
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂದ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.
ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ
ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು
ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.
ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಮಾನ್ಯರೆನಿಸಿಕೊಂಡವರು. ಶ್ರೀ ಬಿಸ್ವಾಸರು ಕಲ್ಕತ್ತಾ ವಿಶ್ವವಿದ್ಯಾಲಯದ ವೈಸ್ ಚಾನ್ಸಲರು. ಬಂಗಾಳದ ಹಿಂದು ಮೈ[illegible] ಮಂತ್ರಿ ಸ್ಥಾನಗಳಲ್ಲೊಂದನ್ನಾದರೂ ಪೂರ್ವ ಬಂಗಾಳಿಗೆ ಕೊಡಬೇಕೆಂಬ ಉದ್ದೇಶದಿಂದ ಬಂಗಾಳದ ಪರವಾಗಿ ಇವರನ್ನು ಆರಿಸಿಕೊಳ್ಳಲಾಗಿದೆ. ಆದರೆ ಇವರು ಮಂಡಲೀ ಮಂತ್ರಿಯಾಗಿರದೆ 'ರಾಜ್ಯ ಮಂತ್ರಿ'ಯಾಗಿದ್ದಾರೆ. ಕೇಂದ್ರ ಮಂತ್ರಿ ಮಟ್ಟದಲ್ಲಿ ಮೂರು ಅಂತಸ್ತುಗಳಿವೆ. ಪ್ರಥಮಾಂತಸ್ತಿನ 14 ಮಂದಿ ಮಂತ್ರಿ ಮಂಡಲಿ ಸದಸ್ಯರು. ಮಂತ್ರಿ ಸಮಿತಿಯ ಅಧಿಕೃತ ಸಭಾಗಿಗಳು ಈ 14 ಜನ ಮಾತ್ರ. ಉಳಿದ ಐವರು ಎರಡನೆಯ ದರ್ಜೆಯಾದ 'ರಾಜ್ಯ ಮಂತ್ರಿ'ಗಳು; ಇವರದು ಮಂತ್ರಿ ಸಮಿತಿ ಮಟ್ಟವಲ್ಲ. ಆ ಮೇಲಿನ ಇಬ್ಬರು 'ಪಾರ್ಲಿಮೆಂಟರಿ ಸೆಕ್ರೆಟರಿ' ಸ್ಥಾನಕ್ಕೆ ಹೋಲಿಸಬಹುದಾದ ಉಪಮಂತ್ರಿಗಳು. ಪ್ರತಿಯೊಬ್ಬ ಮೂಲ ಮಂತ್ರಿಗೂ ಒಬ್ಬೊಬ್ಬ ಉಪಮಂತ್ರಿಯನ್ನು ನೇಮಿಸಿಕೊಳ್ಳುವ ಯೋಚನೆಯಿದೆ. ಮೂಲ ಮಂತ್ರಿಗಳಲ್ಲಿ ಒಬ್ಬನ ಬಿಡುಗಡೆಯು ಈ ತಿಂಗಳೊಳಗೆ, ಮತ್ತೊಬ್ಬರ ಹಾಗೂ ರಾಜ್ಯ ಮಂತ್ರಿಯೊಬ್ಬನ ಬಿಡುಗಡೆಯು ಬದಲು ವ್ಯವಸ್ಥೆಗಳಾದೊಡನೆ ಆಗಲಿರುವುದರಿಂದ ಕೇಂದ್ರ ಮಂಡಲಿಯಲ್ಲಿ ಈಗ ಆಗಿರುವ ಬದಲಾವಣೆಯೇ ಕೊನೆಯದಲ್ಲ.

**ಆಂತರ್ಯ ಮತ್ತು ಪರಿಣಾಮ**

ಕೇಂದ್ರ ಮಂತ್ರಿ ಮಂಡಲದ ಪುನರ್ರಚನೆಯ ಗಾಳಿ ಸುದ್ದಿಗಳು ಹಾಗೂ ಸಂಭಾವ್ಯ ವಾರ್ತೆಗಳು ದೀರ್ಘಕಾಲದಿಂದ ಹಬ್ಬುತ್ತಿದ್ದವು. ಭಾರತ ಪಾಕಿಸ್ತಾನ್ ವಿವಾದವು ಪರಮಾವಧಿ ಉಗ್ರತೆಗೇರಿದ್ದ ಕಾಲದಲ್ಲಿ ಮಂತ್ರಿ ಮಂಡಲಿಯು ಪುನರ್ಘಟನೆಗೊಳ್ಳುವುದೆಂದೂ ಪಂಡಿತ ನೆಹರೂಗಳು ಸಮತಾವಾದಿಗಳನ್ನೂ ಸೇರಿಸಿಕೊಳ್ಳುವರೆಂದೂ ದಟ್ಟವಾದ ವದಂತಿ ಹಬ್ಬಿದ್ದಿತು. ಪಾಕಿಸ್ತಾನ್ ಘೋಷಣೆಯಂತಹ ವಿಶೇಷ ಸಂದರ್ಭಗಳಲ್ಲಿ ಆಡಳಿತಗೆ ಹೆಗಲು ಕೊಡಲು ಶ್ರೀ ಜಯಪ್ರಕಾಶ ನಾರಾಯಣರಂಥವರು ನಿಜಕ್ಕೂ ತಯಾರಿದ್ದರು. ಆದರೆ ಸಾಮಾನ್ಯ ಸ್ಥಿತಿಗತಿಗಳಲ್ಲಿ ಈಗಿನ ರಾಜ್ಯಭಾರದೊಂದಿಗೆ ಜೊತೆಗೂಡಲು ಸಮತಾವಾದಿಗಳಿಗಿಷ್ಟ[illegible]ದರಿಂದ [illegible] ಮಂತ್ರಿಮಂಡಲ[illegible] 'ದನ್ನು ಸಂಘಟಿಸಿದ್ದರೆಂದು ಊಹಿಸಬಹುದು. ಸರ್ದಾರ್ ವಲ್ಲಭಭಾಯಿಗಳಂಥವರ ಸ್ವಭಾವಕ್ಕೂ ಸಮತಾವಾದಿ ನಾಯಕರ ಮನೋವೃತ್ತಿಗೂ ತಾಳಮೇಳ ಕೂಡಿಬರುವುದು ಕಷ್ಟವಾದ್ದರಿಂದಲೂ 'ಭಂಗವಾದ ಪಕ್ಷಪಾತ ಆಡಳಿತೆ'ಯೆಂದು ತಾವು ಹೆಸರಿಟ್ಟಿರುವ ಸರಕಾರದೊಡನೆ ರಾಷ್ಟ್ರೀಯ ವಿಪತ್ತಿನ ವೇಳೆಯಲ್ಲಿ ಹೊರತು ಸತ್ಯಸ್ಥಿತಿಗತಿಗಳಲ್ಲಿ ಕೂಡಿಕೊಳ್ಳಲು ಸಮತಾವಾದಿಗಳು ತಯಾರಿಲ್ಲದಿರುವುದರಿಂದಲೂ ಕೇಂದ್ರ ಮಂಡಲಿಯಲ್ಲಿ ಸಮತಾವಾದಿ ಮಿಶ್ರಣವಿಲ್ಲವೆಂದಾಗಿದೆ. ಈ ಬಾರಿಯ ಪುನರ್ರಚನೆಯು ಸಮರ್ಥರೆಲ್ಲರನ್ನೂ ಕೇಂದ್ರದಲ್ಲಿ ಜಮಾಯಿಸಿಕೊಳ್ಳುವ ಉದ್ದೇಶದ್ದೆಂಬುದು ಸ್ಪಷ್ಟವಿದೆ. ಪಂಡಿತ ನೆಹರೂಗಳು ಈಗ ಕಣ್ಣಿಟ್ಟಿರುವುದು ಹಾಗೂ ಸದ್ಯದಲ್ಲೇ ಕರೆದುಕೊಳ್ಳಲಿರುವುದು ರಾಜಾಜಿ ಮತ್ತು ಉತ್ತರ ಪ್ರದೇಶದ ಪ್ರಧಾನಿ ಪಂಡಿತ ಪಂತರನ್ನು. ಅಂತೆಯೇ ಆಸ್ಸಾಮಿನ ಗವರ್ನರ್ ಶ್ರೀ ಪ್ರಕಾಶ, ಪಶ್ಚಿಮ ಬಂಗಾಳದ ಗವರ್ನರ್ ಡಾ| ಕೈಲಾಸನಾಥ ಕಟ್ಜು, ಉತ್ತರ ಪ್ರದೇಶದ ವಿದ್ಯಾಮಂತ್ರಿ ಡಾ| ಸಂಪೂರ್ಣಾನಂದ ಮೊದಲಾದವರ ಹೆಸರುಗಳೂ ನಿಯೋಜಿತ ಕೇಂದ್ರಮಂತ್ರಿಗಳ ಹೆಸರು ಪಟ್ಟಿಯಲ್ಲಿ ಅಸ್ಪಷ್ಟವಾಗಿ ಕಾಣಿಸುತ್ತಿವೆ. ರಾಜಾಜಿಯ ಚಾತುರ್ಯ, ವಿವೇಚನಾ ಶಕ್ತಿ ಮತ್ತು ಅನುಭವದ ಉಪಯೋಗ ಪಡೆಯದೆ ಬಿಡಲು ಪಂಡಿತ ನೆಹರೂಗಳಿಗಷ್ಟಕ್ಕೂ ಮನಸ್ಸಿಲ್ಲವಾದ್ದರಿಂದಲೇ ಅವರೀ ಬಾರಿ ಆಚಾರ್ಯರನ್ನು ಡಿಲ್ಲಿಗೆ ತರಿಸಿ ಕೇಂದ್ರ ಮಂಡಲಿಯಲ್ಲಿ ಸೇರಿಕೊಳ್ಳುವಂತೆ ಒತ್ತಾಯಿಸಿರಬೇಕು; ಆಚಾರ್ಯರು ಸುಲಭದಲ್ಲಿ ಒಪ್ಪುವಂತಿಲ್ಲವಾದರೂ ನಿರಾಕರಿಸಿಲ್ಲವಾದ್ದರಿಂದ, ಅವರೂ ಸೇರಿಕೊಳ್ಳುವರೆಂಬ ಆಶೆಯು ಸರಕಾರೀ ಪ್ರಕಟಣೆಯ ಮೂಲಕ ಪ್ರಕಾಶಗೊಂಡಿದೆ. ಕಣ್ಣು ಬೇನೆಯಲ್ಲಿರುವ ರಾಜಾಜೀ ಪ್ರಕೃತ ಸ್ಪಷ್ಟ ನಿರ್ಣಯಕ್ಕೆ ಬಂದಿಲ್ಲ. ಅರ್ಥ ಮಂತ್ರಿ ಡಾ. ಜೋನ್ ಮಥಾಯಿಗಳು ಪ್ರಾಯಶಃ ಖಾಸಗೀ ಉದ್ಯಮದ ದೃಷ್ಟಿಯಿಂದಾಗಿರಬೇಕು— ಅಧಿಕಾರದಿಂದ ನಿವೃತ್ತಿ ಹೊಂದುವ ದೃಢ ಸಂಕಲ್ಪಮಾಡಿರುವುದರಿಂದ, ಆ ವಿಶೇಷ ಜವಾಬ್ದಾರಿಯ ಸ್ಥಾನಕ್ಕೆ ಪಂಡಿತ ಗೋವಿಂದವಲ್ಲಭ ಪಂತರು ನಿಶ್ಚಯಿಸಲ್ಪಟ್ಟಿರುವುದು ಸ್ವಾಭಾವಿಕವಾಗಿ ಖಂಡಿತವೆನ್ನಬಹುದು. ಆದರೆ ಭಾರತದ ಅತಿ ದೊಡ್ಡ ಪ್ರಾಂತ್ಯವಾಗಿದ್ದು, 24 ಮಂದಿಯನ್ನು ಕಾಂಗ್ರೆಸ್ ಪಕ್ಷದಿಂದಲೇ ಕಿತ್ತು ಹಾಕುವಷ್ಟು ಒಳಜಗಳಗಳಿಂದ ತುಂಬಿ ಹೋಗಿರುವ ಉತ್ತರ ಪ್ರದೇಶದ ನಾಯಕತ್ವಕ್ಕೆ ಪಂಡಿತ ಪಂತರಷ್ಟು ಯೋಗ್ಯ ಜನ ಬೇರೆ ಕಾಣುವದಿಲ್ಲ. ಆದ್ದರಿಂದಲೇ ದಯಮಾಡಿ ನಮಗೆ ಅವರ ನಾಯಕತ್ವವನ್ನು ತಪ್ಪಿಸಬೇಡಿ' ಎಂದು ಉತ್ತರ ಪ್ರದೇಶದ ಕಾಂಗ್ರೆಸ್ ಪಕ್ಷವು ನೆಹರೂ ಸರಕಾರವನ್ನು ವಿಜ್ಞಾಪಿಸಿಕೊಂಡಿದ್ದಿತು. ಆದರೆ ಒಂದು ಶಿಷ್ಟ ಮಂಡಲಿಯೂ ನೆಹರೂ ವಲ್ಲಭಭಾಯಿಗಳ ಭೇಟಿ ಮಾಡಿದ್ದಿತು. ಆದರೂ ಪಂಡಿತ ನೆಹರೂಗಳು ತನ್ನ ಮಂಡಲಿಯ ಪುಷ್ಟಿಗಾಗಿ ತನ್ನ ಪ್ರಾಂತ್ಯದ ಸ್ವಾರ್ಥವನ್ನು ಬಲಿಕೊಡಲು ತಯಾರಾದಂತಿದೆ. ಶ್ರೀ ಜೈರಾಮದಾಸ ದೌಲತರಾಮರ ಸ್ಥಾನಕ್ಕೆ ಶ್ರೀ ಶ್ರೀ ಪ್ರಕಾಶರು ನಿಯೋಜಿಸಲ್ಪಟ್ಟಂತಿದೆಯಾದರೂ, ಇಂದಿನ ಭಾರತ ನಕಾಶೆಯಲ್ಲಿ ಒಂದು ಆಯಕಟ್ಟಿನ ಸ್ಥಾನವಾಗಿ ನಿಂತಿರುವ ಆಸ್ಸಾಮಿನಲ್ಲಿ ಶ್ರೀ ಶ್ರೀ ಪ್ರಕಾಶರಂತಹ ಸಮರ್ಥ ಗವರ್ನರರಿರುವುದು ಅಗತ್ಯ. ಆದ್ದರಿಂದ ಅವರನ್ನು ಸ್ಥಾನದಿಂದ ಬಿಡಿಸುವುದು ಸುಲಭವಲ್ಲ. ಅಂತೆಯೇ ಪಶ್ಚಿಮ ಬಂಗಾಳದ ಈಗಿನ ಸ್ಥಿತಿಯಲ್ಲಿ ಡಾ. ಕಟಜುಗಳಂತಹ ಗವರ್ನರರೇ ಅಲ್ಲಿರಬೇಕಾಗಿರುವುದರಿಂದ ಅವರನ್ನಲ್ಲಿಂದ ಕದಲಿಸುವುದೂ ಕಷ್ಟ. ಹೀಗಿದ್ದರೂ ಕೇಂದ್ರ ನಾಯಕರು, ವಿವಿಧ ಪ್ರಾಂತ್ಯಗಳ ಸಮರ್ಥರೆಲ್ಲರನ್ನೂ ಡಿಲ್ಲಿಯಲ್ಲೇ ಒಟ್ಟು ಮಾಡಿಟ್ಟುಕೊಳ್ಳಲು ಈ ಬಾರಿ ತಯಾರಾದಂತೆ ಕಾಣುತ್ತಿದೆ. ಶ್ರೀ ಮಹತಾಬರನ್ನು ಒರಿಸ್ಸಾದ ಪ್ರಧಾನಿ ಸ್ಥಾನದಿಂದ ಕಿತ್ತು ಕೊಳ್ಳಲು, ಪಂಡಿತ ಪಂತರನ್ನು ಉತ್ತರ ಪ್ರದೇಶದ ಪ್ರಧಾನ ಮಂತ್ರಿ ಹುದ್ದೆಯಿಂದ ಎತ್ತಿಕೊಳ್ಳಲು ಡಿಲ್ಲಿಯ ನಾಯಕರು ದಾಕ್ಷಿಣ್ಯಪಡುತ್ತಿಲ್ಲ. ಡಿಲ್ಲಿಗೆ ಅಗತ್ಯವೆಂದು ತೋರುವ ಜನರು ಎಲ್ಲಿದ್ದರೂ ಅವರನ್ನು ಎಳೆದುಕೊಳ್ಳುವುದೇ ಸರಿಯೆಂದು ಕೇಂದ್ರ ನಾಯಕರು ನಿಶ್ಚಯಿಸಿದಂತಿದೆ. ಸುಭದ್ರ ಕೇಂದ್ರ ರಚನೆಯೊಂದೇ ಅವರ ದೃಷ್ಟಿಪಥದಲ್ಲಿ ಪ್ರಾಮುಖ್ಯದ್ದಾಗಿ ನಿಂತಿದೆ. ನವಶಾಸನದನ್ವಯ ಕೇಂದ್ರಾಧಿಕಾರವು ಅತಿ ಪ್ರಬಲ ಹಾಗೂ ಸರ್ವವ್ಯಾಪಿಯಾಗಿರುವುದು ನಿಜ; ಅದಕ್ಕನುಸಾರವಾಗಿ ಕೇಂದ್ರ ಮಂಡಲಿಯು ಸಶಕ್ತವಾಗಿರಬೇಕಾದುದು ಎಲ್ಲಕ್ಕಿಂತ ಹೆಚ್ಚು ಅಗತ್ಯವೆಂಬುದೂ ಸಹಜ. ಆದರೂ ವಿಶೇಷ ಸಂದರ್ಭಗಳಲ್ಲದೆ ಕೇಂದ್ರದ ಈ ವಿಶೇಷಾಧಿಕಾರವು ಸಂಸ್ಥಾನೀ ಜನತೆಯ ಗಮನಕ್ಕೆ ಬರುವಂತಹದಲ್ಲ. ಜನಜೀವನಕ್ಕೆ ಸಂಬಂಧಿಸಿದ ಹೆಚ್ಚಿನ ವಿಷಯಗಳು ಹಿಂದಿನಂತೆಯೇ ಇಂದೂ ಪ್ರಾಂತಿಕ ಆಡಳಿತೆಗಳ ಕೈಯಲ್ಲೇ ಇವೆ. ಮೇಲಾಗಿ, ಸರ್ವಮಾನ್ಯ ಪ್ರತಿಷ್ಠಿತ ನಾಯಕತ್ವಗಳ ಅಭಾವದಿಂದಾಗಿ ಪ್ರತಿಯೊಂದು ಪ್ರಾಂತ್ಯದ ಕಾಂಗ್ರೆಸ್ ಪಕ್ಷದೊಳಗಡೆಯಲ್ಲೂ ಈ ಕಾಲದಲ್ಲಿ ಬಿರುಕುಗಳು ಬಿದ್ದಿವೆ. ಇಂತಹ ಸ್ಥಿತಿಯಲ್ಲಿ 'ಇದ್ದ ಮಟ್ಟಿಗೆ ಉತ್ತಮ'ರೆನ್ನಿಸುವ ಈಗಿನ ಪ್ರಾಂತಿಕ ನಾಯಕರುಗಳನ್ನು ಕೂಡಾ ಕೇಂದ್ರದತ್ತ ಎಳೆದುಕೊಳ್ಳಲು ರಾಷ್ಟ್ರ ನಾಯಕರು ಮನಸ್ಸು ಮಾಡಿರುವುದು ಕಾಲೋಚಿತವೇ ಎಂಬ ಪ್ರಶ್ನೆಯೇಳುತ್ತದೆ.

ಇಂದಿನ ಕೇಂದ್ರ ಮಂಡಲಿಯ 14 ಸದಸ್ಯರ ಪೈಕಿ 10 ಮಂದಿ ಕಾಂಗ್ರೆಸಿಗರು. ಡಾ. ಜೋನ್ ಮಥಾಯಿಗಳು ರಾಜೀನಾಮೆ ಕೊಟ್ಟು ಪಂಡಿತ ಪಂತರು ಈ ತಿಂಗಳೊಳಗೆ ಬಂದು ಬಿಟ್ಟರೆ 11 ಮಂದಿ ಕಾಂಗ್ರೆಸಿಗರೊಂದಿಗೆ ಮೂರೇ ಮಂದಿ ಕಾಂಗ್ರೆಸೇತರರು ಅಲ್ಲಿ ಇದ್ದಂತಾಗುವದು. ಹಳೇ ಮಂತ್ರಿಗಳೆಲ್ಲರಿಗೂ ಹೆಚ್ಚಿನಂಶ ಮೊದಲಿನ ಖಾತೆಗಳೇ ಕೊಡಲ್ಪಟ್ಟಿವೆ. ಈಗಿನ ಮತ್ತು ಇನ್ನು ಮುಂದಿನ ದುರಸ್ತಿಗಳ ಪರಿಣಾಮವಾಗಿ ಪ್ರಾಂತಿಕ ನಾಯಕತ್ವ, ಮಂತ್ರಿತ್ವ, ಗವರ್ನರ್ ಹುದ್ದೆಗಳಲ್ಲಿ ಇನ್ನೂ ಕೆಲವು ಅದಲು ಬದಲುಗಳಾಗುವ ಸಂಭವವಿದೆ.


ಶರೀರದಲ್ಲಿಯ ಅಸಹ್ಯ ಉಷ್ಣತೆಯನ್ನು ಇದರಿಂದಲೇ ತೆಗದು ಹಾಕಿರಿ

ಶರೀರದ ಒಳಗಿನ ಮತ್ತು ಹೊರಗಿನ ಉರುವನ್ನು ತೆಗದು ಹಾಕಿ ರಕ್ತವನ್ನು [illegible]ವದು, ಅಪಚನ ಅಜೀರ್ಣವನ್ನು ಸರಿಪಡಿಸುವದು, ಶಾರೀರಿಕ ಮತ್ತು ಮಾನಸಿಕ ಶಕ್ತಿಯನ್ನು ಬೆಳೆಸುವದು, ಧಾತು ಸ್ಥಾನದಲ್ಲಿಯ ಉಷ್ಣತೆಯನ್ನು ಹೋಗಲಾಡಿಸಿ ಪುಷ್ಟಿಕರ ಮಾಡುವದು

ನಿಮ್ಮ ಹತ್ತಿರದ ಕೆಮಿಸ್ಟರ ಕಡೆಯಿಂದ ಇಂದೇ ಒಂದು ಬಾಟಲಿಯನ್ನು ತಂದು ಸೇವಿಸಲು ಪ್ರಾರಂಭಿಸಿರಿ

ಪರ್ಲ ಎಂಡ್ ಕಂಪನಿ
ಮುಂಬಯಿ



"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ನ್ಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಸುಲಭವಾಗಿರುವುದು.



ಹೆಚ್ಚಿನ ಮಾಹಿತಿಗೆ—ಡಾ| ಯಂ. ಸಿ. ಶಾಸ್ತ್ರೀ, ಯಲ್. ಐ
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಥಾನಿಕರು:—ಡಾ| ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.



**WANTED**

For the ST. MARYS' HIGH SCHOOL
SHIRVA (South Kanara)

1. A Science or Mathematic B. T. Or L.T. knowing Kannada. A Lady is preferred

2 A Higher Grade Drawing Teacher.

3. A Spinning & Weaving Instructor.

Science or Mathematics Graduates and Lower Grade Drawing Teachers may also apply. Best terms will be offered

Apply sharp to the Correspondent.



ಮೂಲ್ಕಿ ಬ್ಯಾಂಕ್,
ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

# ಜಾಗತಿಕ ರಂಗ

ಅಮೇರಿಕಾ-ರಶ್ಯಾ ಘರ್ಷಣೆ, ಭಾರತ ಪಾಕಿಸ್ತಾನ್ ವಿವಾದ ಒಪ್ಪಂದದಿಂದಾರಂಭಿಸಿ, ಸಣ್ಣ ದೊಡ್ಡ ಎಲ್ಲಾ ಕ್ಷೇತ್ರಗಳಲ್ಲೂ ಈಗ 'ಥಂಡಾ ಯುದ್ಧ' ನಡೆದಿದೆ ಎನ್ನಬಹುದು. ಇದಿರಾಳೀ ನರನಾಡಿಗಳ ಮೇಲೆ ಧಾಳಿ ನಡೆಸುವುದೇ ಈ ಯುದ್ಧದ ಸ್ವರೂಪ. ಪ್ರತಿಯೊಂದು ವಹಿವಾಟಿನಲ್ಲೂ ಇಂತಹ ಒಳ ಹೊಡೆತಗಳೇ ಇವೆ. ಲೋಕ ಸ್ವಭಾವವಾಗಿರುವ ಈ ಪರದೆಯೊಳಗಿನ ಆಟಗಳು ನಿಲ್ಲುವ ವರೆಗೂ ಜಾಗತಿಕ ಶಾಂತಿಯೆಂಬುದು ಬರಿಯ ಕನಸಾಗಿಯೇ ಉಳಿಯಲಿದೆ.

## ಅಮೇರಿಕ-ರಶ್ಯ

ಇಂದಿನ ಥಂಡಾ ಸಮರವನ್ನು ಮುಕ್ತಾಯಗೊಳಿಸುವ ಹೊಸ ಹಾಗೂ ಮಹಾ ಪ್ರಯತ್ನ ಮಾಡುವದಕ್ಕಾಗಿ ಸಂಯುಕ್ತ ರಾಷ್ಟ್ರ ಸಂಘದ ಮುಖ್ಯ ಕಾರ್ಯದರ್ಶಿ ಎಮ್. ಟ್ರಿಗ್ವಿಲೀ ಇವರೀಗ ಮೋಸ್ಕೋವಿಗೆ ಹೋಗಿದ್ದಾರೆ. ಅಲ್ಲಿ ಮಾರ್ಶಲ್ ಸ್ಟಾಲಿನರೊಡನೆ ಮುಖತಃ ಮಾತುಕತೆ ನಡಿಸಲಿದ್ದಾರೆ. ಲೀಯವರು ಲೋಕ ಶಾಂತಿ ಸಾಧನೆಗಾಗಿ ಕೆಲಕಾಲದಿಂದ ವಿಶೇಷ ರೀತಿಯಿಂದ ದುಡಿಯುತ್ತಾ ಬಂದಿದ್ದಾರೆ. ಭದ್ರತಾ ಕೌನ್ಸಿಲಿನ ಸಭೆಗಳನ್ನು ಸಂದಿ ಪ್ರಕಾರ ಪ್ರಮುಖ ರಾಷ್ಟ್ರಗಳ ರಾಜಧಾನಿಗಳಲ್ಲಿ ನೆರೆಯಿಸಿ, ಆಯಾ ರಾಷ್ಟ್ರ ನಾಯಕರು ಸ್ವತಃ ಸಭಾಭಾಗಿಗಳಾಗುವಂತೆ ಮಾಡುವ ಸೂಚನೆಯು ಎವ್ ಟ್ರಿಗ್ವೆಲೀ ಇವರದಿದೆ. ಅಂತರಾಷ್ಟ್ರೀಯ ಘರ್ಷಣೆಗಳ ದೆಸೆಯಿಂದ ಸಂಯುಕ್ತ ರಾಷ್ಟ್ರ ಸಂಘವು ನಿಷ್ಪ್ರಯೋಜಕವಾಗುತ್ತಿದೆಯಾದ್ದರಿಂದ ಮುಖ್ಯ ರಾಷ್ಟ್ರಗಳೊಳಗೆ ಒಡಂಬಡಿಕೆಯಾಗುವುದು ಅಗತ್ಯವೆಂದು ಲೀಯವರು ಆಗ್ರಹಗೊಂಡಿದ್ದಾರೆ. ಭದ್ರತಾ ಕೌನ್ಸಿಲಿನಲ್ಲಿ ಈಗ ಕೂಡಾ ಚೈನೀ ಕಮ್ಯೂನಿಸ್ಟ್ ಸರಕಾರದ ಪ್ರತಿನಿಧಿಗೆ ಸ್ಥಾನ ಕೊಡದೆ ಹಳೇ ಚಿಯಾಂಗ್ ಸರಕಾರದ ಪ್ರತಿನಿಧಿಯನ್ನೇ ಇರಿಸಿಕೊಂಡಿರುವುದರ ನಿಷೇಧಾರ್ಥವಾಗಿ ರಶ್ಯ ಮತ್ತು ಅದರ ಅನುಯಾಯೀ ಕಮ್ಯೂನಿಸ್ಟ್ ರಾಷ್ಟ್ರಗಳು ರಾಷ್ಟ್ರ ಸಂಘದ ಶಾಖಾ ಸಮಿತಿಗಳಾವುದರಲ್ಲೂ ಭಾಗವಹಿಸದೆ ಮೇಲಿಂದಮೇಲೆ ಸಭಾತ್ಯಾಗ ಮಾಡುತ್ತಾ ಬಂದಿವೆ. ರಶ್ಯದ ಪ್ರತಿನಿಧಿಗಳೀ ರೀತಿ 22 ಸಲ ಸಭಾತ್ಯಾಗ ಮಾಡಿದ ದಾಖಲೆಯು ಹಿಂದಿನ ವಾರದಲ್ಲೇ ನಿರ್ಮಾಣಗೊಂಡಿತ್ತು. ರಶ್ಯದ ಅಸಹಕಾರದ ದೆಸೆಯಿಂದ ಸಂಯುಕ್ತ ರಾಷ್ಟ್ರ ಕೂಟದ ಯಾವ ಕೆಲಸವೂ ಪರಿಣಾಮಕಾರಿಯಾಗಿ ನಡೆಯುತ್ತಿಲ್ಲ. ಅತ್ತ ಅಮೇರಿಕದ ಮಾಜೀ ಅಧ್ಯಕ್ಷ ಹೂವರು "ರಶ್ಯ ಮತ್ತದರ ಹಿಂಬಾಲಕ ಕಮ್ಯೂನಿಸ್ಟ್ ರಾಷ್ಟ್ರಗಳನ್ನು ಬಿಟ್ಟೇ ಸಂಯುಕ್ತ ರಾಷ್ಟ್ರ ಸಂಘವನ್ನು ಪುನರ್ರಚಿಸಿಕೊಳ್ಳಬೇಕು' ಎಂಬ ಅಭಿಪ್ರಾಯ ಸೂಚಿಸಿದ್ದಾರೆ. "ಇದು ತಪ್ಪು. ಸ್ವತಂತ್ರ ರಾಷ್ಟ್ರವಾವುದನ್ನೂ ಸಂಯುಕ್ತ ರಾಷ್ಟ್ರ ಕೂಟದಿಂದ ಹೊರಗಿಡ ಕೂಡದು" ಎಂದು ಈ ಕುರಿತು ಪಂಡಿತ ನೆಹರೂಗಳು ಅಭಿಪ್ರಾಯ ಸೂಚಿಸಿದ್ದಾರೆ. ರಾಷ್ಟ್ರ ಕೂಟ ವಲಯದ ರಶ್ಯಾ-ಅಮೇರಿಕಾ ಸ್ಪರ್ಧೆಯು ಬೆಳೆಯುತ್ತಾ ಬಂದಿದೆ.

ಎಪ್ರಿಲ್ 8ರಲ್ಲಿ ಬಾಲ್ಟಿಕ್ ಸಮುದ್ರ ವಲಯದ ಮೇಲೆ ಹಾರಾಡಿದ್ದ ಅಮೇರಿಕದ ವಿಮಾನವನ್ನು ರಶ್ಯಾನರು ಗುಂಡು ಹೊಡೆದು ಉರುಳಿಸಿದ್ದುದರ ಕುರಿತು ಅಮೆರಿಕಾ ರಶ್ಯಾಗಳೊಳಗಿನ ವಾಗ್ವಾದವೂ ಬೆಳೆದು ಬಿಸಿಗೊಂಡಿದೆ. ತನ್ನ ವಿಮಾನಕ್ಕೆ ವಿನಾಕಾರಣ ಗುಂಡು ಹೊಡೆದುದನ್ನು ಕುರಿತು ಅಮೇರಿಕಾ ಸರಕಾರವು ರಶ್ಯಾ ಸರಕಾರಕ್ಕೆ ನಿಷೇಧ ಪತ್ರ ಕಳುಹಿದಾಗ, ಆ ವಿಮಾನವು ರಶ್ಯದ ರಕ್ಷಣಾ ಕೇಂದ್ರಗಳ ಛಾಯಾಚಿತ್ರವೆತ್ತುವುದಕ್ಕಾಗಿ ತನ್ನ ಗಡಿಯೊಳಗೆ ಅಕ್ರಮಪ್ರವೇಶ ಮಾಡಿದ್ದಿತೆಂದು ರಶ್ಯವು ಉತ್ತರ ಕೊಟ್ಟಿದ್ದಿತು. ಇದಕ್ಕುತ್ತರವಾಗಿ ಅಮೇರಿಕ ಸರಕಾರವೀಗ ರಶ್ಯಕ್ಕೆ ಕಠೋರ ಶಬ್ದಗಳ ಎಚ್ಚರಿಕೆ ಕೊಟ್ಟಿದೆ. ತಮ್ಮ ವಿಮಾನವು ನಿಶ್ಶಸ್ತ್ರವಾಗಿತ್ತಲ್ಲದೆ, ರಶ್ಯದ ಹಕ್ಕಿನ ಭೂಮಿ ಅಥವಾ ಸಮುದ್ರದ ಮೇಲ್ಗಡೆಯಲ್ಲದು ಹಾರಾಡಿದ್ದೇ ಇಲ್ಲವೆಂದೂ ಅಂತರಾಷ್ಟ್ರೀಯ ಕ್ರಮನಿಯಮಗಳ ಪಾಲನೆಗೆ ರಶ್ಯಕ್ಕೆ ಸಾಧ್ಯವಾಗಿರುವಷ್ಟೇ ಅಲ್ಲ, ಆ ಉದ್ದೇಶ ಕೂಡಾ ಅದಕ್ಕಿಲ್ಲವೆಂಬ ಅರ್ಥವಾಗುತ್ತದೆಂದೂ, ಇಂತಹ ವರ್ತನೆ ಅತ್ಯಂತ ಆಕ್ಷೇಪಣೀಯವೆಂದು ತಾವು ರಶ್ಯಕ್ಕೆ ಗಂಭೀರ ಎಚ್ಚರಿಕೆ ಕೊಡಬೇಕಾಗಿದೆಯೆಂದೂ ಅಮೇರಿಕಾ ಸರಕಾರದ ಹೇಳಿಕೆಯಾಗಿದೆ.

## ಇತರ ಸಮಸ್ಯೆಗಳು

ಜಪಾನಿನೊಂದಿಗೆ ಶಾಂತಿ ಸಂಧಾನ ವ್ಯವಸ್ಥೆ ಮಾಡಿಕೊಳ್ಳುವ ಕುರಿತು ಕಾಮನ್‌ವೆಲ್ತ್ ರಾಷ್ಟ್ರಗಳ ಕಮಿಶನರರ ಸಭೆಯು ಲಂಡನಿನಲ್ಲಿ ಜರಗಿ ಮುಗಿದಿದೆ. ಮಾತುಕತೆಯು ಮಟ್ಟದ ಕುರಿತು ಭಿನ್ನಾಭಿಪ್ರಾಯಗಳು ಬಂದಿದ್ದರೂ ಅವುಗಳಿಗೆ ತೇಪೆ ಹಚ್ಚಿಕೊಂಡು ಪರ್ಯಾಲೋಚನೆಯು ಪ್ರಗತಿ ಹೊಂದುತ್ತಿದೆ, ಎಂದು ತಿಳಿದು ಬಂದಿದೆ.

ಮೂಲ ಚೈನದಿಂದ ಅಟ್ಟಲ್ಪಟ್ಟ ಫೋರ್ಮೋಸಾ ಮತ್ತು ಹೈನಾನ್ ದ್ವೀಪಗಳಲ್ಲಿ ಮಾತ್ರ ಉಳಿದುಕೊಂಡಿದ್ದ ಚೈನೀ ರಾಷ್ಟ್ರೀಯ ಸೇನೆಗಳು ಹೈನಾನ್ ದ್ವೀಪವನ್ನೂ ಸಂಪೂರ್ಣ ಖಾಲಿ ಮಾಡಿ ಫೋರ್ಮೋಸಾ ದ್ವೀಪವೊಂದನ್ನೇ ಈಗ ಆಶ್ರಯಿಸಿವೆ. ಅಲ್ಲಿಗೂ ಕಮ್ಯೂನಿಸ್ಟ್ ಧಾಳಿ ನಡೆಯುವ ಸಂಭವವಿದೆ.

ದಕ್ಷಿಣಾಫ್ರಿಕದ ಮಲಾನ್ ಸರಕಾರವು ವರ್ಣದ್ವೇಷಪೂರಿತ ಹೊಸಹೊಸ ಶಾಸನಗಳನ್ನು ಜಾರಿಗೆ ತರುವ ಪ್ರಯತ್ನದಲ್ಲೇ ಇದೆ. 'ಪಂಗಡ ಕ್ಷೇತ್ರಗಳ ಮಸೂದೆ'ಯೊಂದನ್ನು ಡಾ। ಮಲನರೀಗ ದಕ್ಷಿಣಾಫ್ರಿಕದ ಪಾರ್ಲಿಮೆಂಟಿನ ಮುಂದೆ ತಂದಿದ್ದು, ಅದು ಅಲ್ಲಿಯ ಭಾರತೀಯರೇ ಮೊದಲಾದ ಕಪ್ಪು ಜನಾಂಗದವರೆಲ್ಲರ ಮೇಲೂ ಎತ್ತಿದ ಗದೆಯಾಗಿರುವುದರಿಂದ ಆ ಕುರಿತು ಮಹತ್ವಾದ ಗಲಿಬಿಲಿಗಳೆದ್ದಿವೆ. ಈ ಮಸೂದೆಯ ಸಂಬಂಧವಾಗಿ ಭಾರತ ಸರಕಾರವು ದಕ್ಷಿಣಾಫ್ರಿಕ ಸರಕಾರದಿಂದ ಸ್ಪಷ್ಟೀಕರಣಗಳನ್ನು ಕೇಳಿದೆ. ಈ ಮೊದಲೂ ಅಂತಹ ಪತ್ರಗಳು ಭಾರತ ಸರಕಾರದಿಂದಹೋಗಿದ್ದರೂ ದಕ್ಷಿಣಾಫ್ರಿಕದ ಉತ್ತರವಿಲ್ಲ. ಅಪೇಕ್ಷೆಪಟ್ಟಲ್ಲಿ ಭಾರತದಂತೆಯೇ ದಕ್ಷಿಣಾಫ್ರಿಕವೂ ಕ್ರಾಂತಿ ಅಥವಾ ಏಕಾಂತವಾಸದ ಭೀತಿಯಿಲ್ಲದೆ 'ರಿಪಬ್ಲಿಕ್' ಆಗಬಲ್ಲುದೆಂದು ಡಾ। ಮಲನ್ ಅಂದಿದ್ದಾರೆ.

ಇಂಡೋಚೈನದಲ್ಲಿ ಫ್ರೆಂಚ್ ಮತ್ತು ಕಮ್ಯೂನಿಸ್ಟ್ ಮಾದರಿಯ ವಿಯೆಟ್‌ಮಿನ್ ಸರಕಾರ ಈ ಎರಡು ಕಡೆಗಳವರೂ ತಮ್ಮ ಸೇನೆಗಳನ್ನು ಹೆಚ್ಚಿಸಿಕೊಂಡಿದ್ದು ಅಲ್ಲಿಯ ಪರಿಸ್ಥಿತಿಯು ಬಹುತೇಕವಾಗಿ ಒಂದು ವರುಷಕ್ಕೆ ಮೊದಲಿನ ಚೈನಾದ ಮಟ್ಟಕ್ಕೇನೇ ಈಗ ಬಂದಿರುವಂತೆ ಕಾಣುತ್ತಿದೆ. 1950ನೇ ಇಸವಿಯು ತಮ್ಮನ್ನು ಫ್ರೆಂಚ್ ವಸಾಹತು ಬಂಧನದಿಂದ ಬಿಡುಗಡೆಗೊಳಿಸುವ ವರುಷವೆನ್ನುತ್ತಾ ಹೋ ಚಿಮಿನ್ನರ ವಿಯೆಟ್‌ಮಿನ್ ಸರಕಾರವು ತನ್ನಾಧೀನದ ಕ್ಷೇತ್ರಗಳಲ್ಲೆಲ್ಲಾ ಕಡ್ಡಾಯದ ಸೇನಾ ಸಂಗ್ರಹ ಮಾಡುತ್ತಿದೆ. ಕಳೆದ 80 ವರುಷಗಳ ಫ್ರೆಂಚ್ ಆಡಳಿತೆಯಿಂದ ದೊರೆಕದ ವಿದ್ಯೆ ಮತ್ತಿತರ ಸೌಕರ್ಯಗಳು ವಿಯೆಟ್‌ಮಿನ್ ಆಡಳಿತೆಯ ಅಲ್ಪಾವಧಿಯಲ್ಲೇ ತಮಗೆ ದೊರೆತುವೆಂದು ಆ ಭಾಗದ ಜನರೆಲ್ಲಾ ಅನಂದೋತ್ಸಾಹಗಳೆದ್ದಿವೆ. ಫ್ರೆಂಚರ ಮೇಲಧಿಕಾರದಲ್ಲಿ ಅವರ ಹಸ್ತಕ ಬಾವುದಾಯಿ ಸರಕಾರದ ವಶವಿರುವ ಕ್ಷೇತ್ರಗಳ ತರುಣರು ಕೂಡಾ ವಿಯೆಟ್‌ಮಿನ್ ಸರಕಾರದ ಸೈನಿಕರಾಗಿ ಸೇರುತಿದ್ದಾರೆ. ಈ ಕಮ್ಯೂನಿಸ್ಟ್ ಸರಕಾರಕ್ಕೆ ಅಲ್ಲಿಯ ಅತಿ ಹೆಚ್ಚಿನ ಜನತಾ ಬೆಂಬಲವಿದೆ. ಅದು ಭದ್ರ ಮತ್ತು ವಿಸ್ತಾರಗೊಳ್ಳುತ್ತಾ ಬರುತ್ತಿದೆ. ಚೈನಾದಲ್ಲಿ ಗಳಿಸಿದ ಜನಪ್ರಿಯತೆಯನ್ನೇ ಇಂಡೋಚೈನದಲ್ಲೂ ಕಮ್ಯೂನಿಸ್ಟರು ಸಂಪಾದಿಸಿಕೊಳ್ಳುತ್ತಿದ್ದಾರೆ. ಚೈನ ಮತ್ತದರ ಹೈನಾನ್ ದ್ವೀಪದ ಗತಿಯೇ ಇಂಡೋಚೈನಕ್ಕೂ ಒದಗಿದರೆ ಆಗ್ನೇಯ ಏಸ್ಯಾದ ಕಮ್ಯೂನಿಸ್ಟರಿಗೆ ಅಜೇಯ ಸ್ಥಾನ ದೊರೆತಂತಾಗುವದು. ಈ ಭಾಗದ ಯಾವ ರಾಷ್ಟ್ರವೂ ಆ ಮೇಲೆ ಕಮ್ಯೂನಿಸ್ಟ್ ವರ್ಚಸ್ಸಿಗೊಳಗಾಗದಿರುವದು ಅಸಾಧ್ಯವಾಗುವದು.

ಪಾಕಿಸ್ತಾನ್ ಪ್ರಧಾನ ಮಂತ್ರಿ ಮಿ. ಲಿಯಾಖತ್ ಅಲೀಖಾನರು ಅಧ್ಯಕ್ಷ ಟ್ರೂಮೇನರಿಂದ ಮತ್ತು ಅಮೆರಿಕ ಸರಕಾರದಿಂದ, ಆ ದಿನ ಪಂಡಿತ ನೆಹರುಗಳು ಪಡೆದಿದ್ದಂತಹ ಸ್ವಾಗತವನ್ನೇ ಅಕ್ಷರಶಃ ಪಡೆಯುತಿದ್ದಾರೆ. ತಾನು ಏನನ್ನು ಬೇಡುವದಕ್ಕೂ ಅಮೆರಿಕಕ್ಕೆ ಹೊರಟಿಲ್ಲವೆಂದು ಹೇಳಿದ್ದ ಮಿ. ಲಿಯಾಖತ್ ಅಲೀಖಾನರು ಪಾಕಿಸ್ತಾನ್ ಸೇನೆಗಳಿಗಾಗಿ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಅಮೆರಿಕವು ಸರಬರಾಯಿ ಮಾಡಬೇಕೆಂಬ ಬಯಕೆಯನ್ನು ಅಲ್ಲಿ ವ್ಯಕ್ತ ಪಡಿಸಿದ್ದಾರೆ. ಪಾಕಿಸ್ತಾನದ ಇಸ್ಲಾಮ್ ರಾಷ್ಟ್ರೀಯತೆಯು ವಿಶಾಲ ಸ್ವರೂಪದ್ದೆಂಬುದನ್ನು ತೋರಿಸಿಕೊಡಲು ಅವರು ತನ್ನ ಅಮೆರಿಕದ ಭಾಷಣಗಳಲ್ಲಿ ಯತ್ನಿಸಿರುವರಾದರೂ ಆ 'ಇಸ್ಲಾಂ' ವೈಶಿಷ್ಟ್ಯವನ್ನು ಅಲ್ಲಿ ಮುಂದೊಡ್ಡಿದ್ದಾರೆ. ಮಿ. ಲಿಯಾಖತರಿಗೆ ಅಗತ್ಯವುಳ್ಳ ಸಹಾಯಗಳನ್ನು ಕೊಡುವ ಆಶ್ವಾಸನೆಗೆ ಪ್ರತಿಯಾಗಿ ಅವರನ್ನು ಅವ್ಯಕ್ತ ರೀತಿಯಿಂದ ತಮ್ಮ ಬಲೆಯೊಳಗೆ ಕೆಡಹಿಕೊಳ್ಳುವುದರಲ್ಲಿ ಅಮೆರಿಕಾನರು ಜಯಶೀಲರಾಗುವದು ಸಂಭವನೀಯ.

## ಭಾರತದಲ್ಲಿ

ಭಾರತ–ಪಾಕಿಸ್ತಾನಗಳೊಳಗಿನ ಎಲ್ಲಾ ವಿವಾದಗಳೂ ಪರಸ್ಪರ ಮೈತ್ರಿ ವಾತಾವರಣದಲ್ಲಿ ಇವೆರಡು ರಾಷ್ಟ್ರಗಳೊಳಗೇನೇ ತೀರ್ಮಾನ ಹೊಂದಬಹುದೆಂಬ ಆಶೆ ಮತ್ತು ಹಾಗಾಗುವ ಲಕ್ಷಣಗಳು ಕಾಣಿಸುತ್ತಿವೆ. ಪಾಕಿಸ್ತಾನದ ವಿದೇಶ ಮಂತ್ರಿ ಸರ್. ಝಫರುಲ್ಲರು ಈ ಮೊದಲೇ ಹೇಳಿದ್ದಂತೆ ಪಾಕಿಸ್ತಾನ್ ಪ್ರಧಾನ ಮಂತ್ರಿ ಮಿ. ಲಿಯಾಖತ್ ಅಲೀಖಾನರು ಮೇ ತಾ. 6ರಲ್ಲಿ ನ್ಯೂಯೋರ್ಕಿನಲ್ಲಿ ಅಮೆರಿಕಾ ಪತ್ರಿಕಾ ಪ್ರತಿನಿಧಿಗಳ ಮುಂದೆ ಹೇಳಿಕೆ ಕೊಡುತ್ತಾ "ಇತ್ತೀಚಿನ ಭಾರತ–ಪಾಕಿಸ್ತಾನ್ ಒಪ್ಪಂದದ ಪರಿಣಾಮವಾಗಿ ಇವೆರಡು ರಾಷ್ಟ್ರಗಳೊಳಗಿನ ಸಂಬಂಧವು ಅತ್ಯಂತ ಸೌಹಾರ್ದತೆಯದೂ ಅತ್ಯಂತ ಸ್ನೇಹಮಯಿ ಮತ್ತು ಪೂರ್ಣ ಸಹಕಾರದ್ದೂ ಆಗುವದು. ಕಾಶ್ಮೀರದ ಪ್ರಶ್ನೆಯನ್ನು ಬಿಡಿಸಿಕೊಳ್ಳುವುದಕ್ಕೆ ನಾನು ಮತ್ತು ಪಂಡಿತ ನೆಹರುಗಳು ನಿಜವಾದ ಪ್ರಯತ್ನ ಮಾಡಲಿರುವೆವು; ನಮ್ಮೊಳಗಿನ ಎಲ್ಲಾ ವಿವಾದಗಳನ್ನೂ ಬಗೆಹರಿಸಿಕೊಳ್ಳುವ ಪ್ರಯತ್ನವನ್ನು ನಾವು ನಿಜಕ್ಕೂ ಮಾಡ

(೩ನೇ ಪುಟ ನೋಡಿರಿ)

ಕನ್ನಡಿಗರೆಲ್ಲರ ಕಣ್ಮನ ಸೆಳೆದು ಪ್ರಸಿದ್ಧವಾದ

ಮಧುವನ

ಅಖಿಲ ಕರ್ನಾಟಕದ ಪ್ರಾತಿನಿಧಿಕ ಕಥಾಸಂಕಲನ

25 ಕತೆಗಳು — ಬೆಲೆ ರೂ 3 0 0

ಸಿಗುವ ಸ್ಥಳಗಳು:-

1 ಕಿರಿಯರ ಪ್ರಪಂಚ, ಉಡುಪಿ
2 ನವಭಾರತ ಬುಕ್ ಡಿಪೊ, ಉಡುಪಿ
3 ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

THE
Canara Banking Corporation Ltd.
(Incorporated in India)
Estd: 1906.
Head Office : UDIPI, (S. I.)

| | |
|---|---|
| Capital Authorised .... .... .... | Rs. 25,00,000 |
| Capital Issued, Subscribed & Paid up .... .... .... | Rs. 20,00,000 |
| Reserves .... ... .... | Rs. 9,44,765 |


ನವಯುಗ

ಗುರುವಾರ ಉಡುಪಿ ೧೧-೫-೧೯೫೦

## ಈಗೇನು?

ಸ್ವತಂತ್ರ ಜನತಾರಾಜ್ಯ ಭಾರತದ ಇಂದಿನ ಸ್ಥಿತಿಗತಿಗಳ ಮೇಲಿಂದ ರಾಷ್ಟ್ರದ್ರೋಹಿಗಳು ಮತ್ತು ಪರಾಭವ ಮನೋವೃತ್ತಿಯವರ ಹೊರತು ಮಿಕ್ಕವರೆಲ್ಲರೂ ಸಮಾಧಾನಗೊಳ್ಳಲೇ ಬೇಕು. ಹಿಂದಿನ ಅಂಕಗಳ ಮಾತಂತಿರಲಿ- 1942ನೇ ಆಗೋಸ್ತು 9ರಿಂದ 1947ನೇ ಆಗೋಸ್ತು 15ರ ವರೆಗಿನ ಆಗುಹೋಗುಗಳನ್ನು ಪೀಠಿಕೆಯೆಂದು ಗ್ರಹಿಸಿ, ಆ ಮರುದಿನದಿಂದ ಈ ದಿನದ ವರೆಗಿನ ಅಪೂರ್ಣ ಚರಿತ್ರೆಯನ್ನು ವಿಮರ್ಶಾತ್ಮಕ ದೃಷ್ಟಿಯಿಂದ ನೋಡಿದರೂ ಟೀಕೆಗಿಂತ ಹೆಚ್ಚು ಶ್ಲಾಘನೆ ಸಲ್ಲಿಸಬೇಕಾಗುತ್ತದೆ. ಕಾರಣವಿಷ್ಟೆ: ಸಾಮಾನ್ಯ ಕಾಲಗಳಲ್ಲಿ ಸಂವತ್ಸರಗಳೇ ಹಿಡಿಯಬಹುದಾಗಿದ್ದ ಮಹಾ ಘಟನೆಗಳು ಈ ಅವಧಿಯಲ್ಲಿ ದಿನ, ಕ್ಷಣಗಳೊಳಗೆ ನಡೆದು ಹೋದುವು. ಅಮೂಲ್ಯ ವಸ್ತುಗಳನ್ನು ಅವಸರವಸರವಾಗಿ ಪಡೆದುಕೊಳ್ಳುವಾಗ ಅಧಿಕ ಬೆಲೆಯನ್ನೇ ತೆರಬೇಕಾಗುತ್ತದೆ. ಅಂತೆಯೇ ಭಾರತ ಸ್ವಾತಂತ್ರ್ಯವೂ ಮಹತ್ತಾದ ನಷ್ಟವನ್ನೊಡ್ಡಿರಬಹುದು. ಆದರದು ಸ್ವಾತಂತ್ರ್ಯಕ್ಕೆ ತೆತ್ತ ಬೆಲೆಯೆಂಬ ಸಮಾಧಾನವಿದೆ. ಹಾಗೆ ಪಡೆಕೊಂಡ ಸ್ವಾತಂತ್ರ್ಯವಾದರೂ ಕಂಟಕರಹಿತವಾಗಿರಲಿಲ್ಲ; ಆದಿ ಭಾಗದ ನವೋದಿತ ತೊಡಕುಗಳೆಲ್ಲವನ್ನೂ ನಾವಿಷ್ಟರಲ್ಲೇ ಜಯಶೀಲವಾಗಿ ನಿವಾರಿಸಿಕೊಂಡಿದ್ದೇವೆ. ಮೂಲಭೂತ ತೊಂದರೆಗಳನ್ನು-ಆರ್ಥಿಕ ಸಾಮಾಜಿಕ ಹೀನದೆಸೆ ಮತ್ತು ಅಸಮಾನತೆಗಳನ್ನು-ಹೋಗಲಾಡಿಸಿಕೊಳ್ಳಲು ಇಷ್ಟರೊಳಗೆ ನಮ್ಮಿಂದಾಗದಿರಬಹುದು. ಆದರವು ಇಂದಿನ ಸ್ವಾತಂತ್ರ್ಯದ ಕನಸು ಬೀಳುವದಕ್ಕೂ ಹಿಂದಿನ ಕಾಲದಿಂದ ಇದ್ದವುಗಳೇ; ರಾಷ್ಟ್ರ ಜೀವನದಲ್ಲಿ ಅತ್ಯಾಳದ ವರೆಗೂ ಬೇರುಬಿಟ್ಟು ನಿಂತಿರುವವುಗಳೇ; ಆದ್ದರಿಂದ ಅವುಗಳನ್ನು ಒಮ್ಮೆಗೇ ಕೀಳಲಿಕ್ಕಾಗದೆ ಹೋಗಿದ್ದರೆ- ಇಂತಹ ಗಟ್ಟಿ ಬೇರು ಕೀಳುವ ಪ್ರಯಾಸದ ಕೆಲಸವನ್ನು ಸದ್ಯಕ್ಕೆ ಹಿಂದೆ ಹಾಕಿ, ಕಾಲ್ತೊಡಕುವ ಬಳ್ಳಿಬೇಲಿಗಳನ್ನು ಸವರುವ ಕೆಲಸದಲ್ಲೇ

ರೆ–ಅಷ್ಟಕ್ಕಾಗಿ ಎದೆ ಕಳಕೊಳ್ಳಬೇಕೆಂದಿಲ್ಲ. ಬದಲಿಗೆ ಪೂರ್ಣ ದುರಸ್ತಿಯ ಕಾಲ ಬಂದೇ ತೀರುವದೆಂಬ ಭರವಸೆಯಿಂದಿರಬಹುದು. ಅಂತೂ ತುಲನಾತ್ಮಕ ದೃಷ್ಟಿಗೆ ಇಂದಿನ ಸ್ಥಿತಿಚಿತ್ರ ನಿರಾಶಾದಾಯಕವಾಗಿ ತೋರುವದಿಲ್ಲ.

ಆದರೆ ಶಕ್ತಿ ಮತ್ತು ಆಶೆಗೆ ಮಿತಿಯಿಲ್ಲವಾದರೂ ಜನಸಾಮಾನ್ಯರ ಬುದ್ಧಿ ಮತ್ತು ಹೃದಯ ಮಿತ ಪರಿಮಾಣದ್ದೇ. ತಮ್ಮ ಅನುಭವಕ್ಕೆ ಬಂದ ಕಷ್ಟನಷ್ಟಗಳು ತಪ್ಪಿಹೋದುದಕ್ಕಾಗಿ ಆನಂದಿಸಲು ಜನತೆಗೆ ತಿಳಿದಿದ್ದರೂ, ಪ್ರತ್ಯಕ್ಷ ತಮ್ಮ ಮುಂದೆ ಮೂಡಿತೋರುವ ಮೊದಲೇ ನಿರ್ಮೂಲಿಸಲ್ಪಟ್ಟ ಆಪತ್ತುಗಳನ್ನು ನೆನಸಿ ಹಿಗ್ಗುವಷ್ಟು ದೂರದೃಷ್ಟಿ ಅವರಲ್ಲಿರುವುದಿಲ್ಲ. ಅದೇ ರೀತಿ ತಮ್ಮ ನಿತ್ಯಾನುಭವಕ್ಕೆ ಬಾರದ ಸುಖಸಂತೋಷಗಳ ಪರಿಚಯವನ್ನು ಮಾಡಿಕೊಳ್ಳುವದಾಗಲೀ, ಅವುಗಳ ದೂರ ನೋಟದಿಂದಲೇ ತೃಪ್ತಿಪಟ್ಟುಕೊಂಡಿರುವುದಾಗಲೀ ಅವರಿಂದಾಗದು. ಜಾತೀಯ ಗೊಂದಲ, ಸಂಸ್ಥಾನೀ ಸಮಸ್ಯೆಗಳಂತಹ ಪ್ರತ್ಯಕ್ಷ ವಸ್ತುಗಳನ್ನು ನಿವಾರಿಸಿಬಿಟ್ಟುದಕ್ಕಾಗಿ ಹೆಗ್ಗಳಿಕೆ ಪಡಲರಿತವರು, ಸ್ವಾತಂತ್ರ್ಯದ ಎಳೇ ಸಸಿಗೆ ಒಳಗಿಂದೊಳಗೆ ತಾಗಿದ್ದ ಕೀಟಗಳನ್ನು ಸುದ್ದಿಸುಳಿವಿಲ್ಲದೆ ನಾಶ ಮಾಡಿಕೊಂಡ ಆಧ್ಯತೆಗಾಗಿ ಹಾಗೆಯೇ ಹಿಗ್ಗಲು ಕಲಿತಿಲ್ಲ. ಅಂತೆಯೇ ಆಹಾರ ಮತ್ತು ಜೀವನಾವಶ್ಯ ಸಾಮಗ್ರಿಗಳ ಕೊರತೆ, ತುಟ್ಟಿ, ಮುಂತಾದ ದೈನಂದಿನ ಕಹಿ ಅನುಭವಗಳಿಂದಾಗಿ ಚಡಪಡಿಸುತ್ತಿರುವವರು ಭವಿಷ್ಯದ ಸುಖಶಾಂತಿ ವ್ಯವಸ್ಥೆಗಳತ್ತ ನೋಡಿ ಸಮಾಧಾನ ತಂದುಕೊಳ್ಳುವದು ಅಸಾಧ್ಯ. ಇದು ಜನಸಾಮಾನ್ಯರ ಸ್ವಭಾವ ಚಿತ್ರ. ಇಲ್ಲಿ ಅಜ್ಞಾನ, ಅರೆಜ್ಞಾನಗಳವೆ ಎಂಬುದೇನೋ ನಿಜ. ಆದರೆ ಒಂದು ಪ್ರಜಾಸತ್ತಾ ರಾಜ್ಯದಲ್ಲಿ ಜನ ಮನೋಗತಿ ಹೇಗಿದ್ದರೂ ಅದನ್ನು ಆಧರಿಸಬೇಕಾಗುವುದು ಅನಿವಾರ್ಯ. ತಪ್ಪು ತಡೆಗಳನ್ನು ಆಧರಿಸುವುದರಿಂದ ಅಪರಾಧ ಅನ್ಯಾಯಗಳೇ ಉಂಟಾಗಬಹುದೆಂಬ ಭೀತಿಯಿದ್ದವರು, ಅಂತಹ ತಪ್ಪು ತಡೆಗಳ ನಿವಾರಣೆಗಾಗಿ ಪ್ರಯತ್ನಿಸಬೇಕು; ಜನಮನೋವೃತ್ತಿಯ ಶುದ್ಧಿಗಾಗಿ ಶ್ರಮಿಸಬೇಕು ಹೊರತು ಅದನ್ನು ಬಿಟ್ಟೇ ವರ್ತಿಸಲಾಗುವದಿಲ್ಲ. ನಾವೀ ಕುರಿತು ಮೇಲಿಂದ ಮೇಲೆ, ವಿವಿಧ ರೀತಿಗಳಿಂದ ಜನರ ಲಕ್ಷ್ಯವನ್ನೆಳೆದಿರುವೆವಾದ್ದರಿಂದ ಪುನರುಕ್ತಿ ಸರಿಯೆನ್ನಿಸದು. ಆದರೂ ಪ್ರಜಾ [illegible]

ಗಿ, ನವೀನ ಶಾಸನದನ್ವಯ ಜನಮತವನ್ನಾಧರಿಸಿ ಚುನಾವಣೆಗಳಾಗುವ ಕಾಲ ಸನ್ನಿಹಿತವಾಗಿರುವಾಗ ಎಲ್ಲವೂ ಇರಬೇಕಾದಂತಿಲ್ಲವೆಂಬುದನ್ನು ಎಷ್ಟು ಹೇಳಿದರೂ ಹೆಚ್ಚಲ್ಲ. ಜನತಾರಾಜ್ಯದಲ್ಲಿ ಜನರ ಪ್ರಾಯಪ್ರಬುದ್ಧತೆಯ ಮಿತಿ ನಿಶ್ಚಯಿಸುವುದಕ್ಕಿಂತಲೂ ಬುದ್ಧಿ ಪ್ರಬುದ್ಧತೆಯ ಒಂದು ಗೊತ್ತುಗುರಿಯಿರಬೇಕಾದುದು ಆಗತ್ಯವಲ್ಲವೆ? ಪ್ರಭುತ್ವದ ಸರಿಯಾದ ಜ್ಞಾನ ಮತ್ತು ಯೋಗ್ಯತೆಯು ಪ್ರಜೆಗಳಿಗಿಲ್ಲದಿರುವಲ್ಲಿಯೂ ಪ್ರಜಾಪ್ರಭುತ್ವವೆಂಬ ಭ್ರಾಂತಿ ಪ್ರದರ್ಶಿಸುವ ಬದಲಿಗೆ ಸರ್ವಾಧಿಕಾರವೇ ಯೋಗ್ಯವೆನ್ನಿಸದೆ?- ಎಂಬಂತಹ ಪ್ರಶ್ನೆಗಳು ಭಾರತದ ಇಂದಿನ ಕದಡು ವಾತಾವರಣದಲ್ಲಿ ಸಹಜವಾಗಿ ಹುಟ್ಟಬಲ್ಲುವು. ಆದರೆ ಇವು ಕೂಡಾ ನಿರಾಶಾವಾದಗಳೆಂಬುದನ್ನು ಮರೆಯಬಾರದು. ಪ್ರಜಾಸತ್ತಾತತ್ವಗಳು ಗಾಂಧೀ ತತ್ವಗಳಷ್ಟು ಅಮೂಲ್ಯವಾದವುಗಳೂ ಅಲ್ಲ; ಅಷ್ಟು ಅವ್ಯವಹಾರ್ಯವಿರುವವುಗಳೂ ಅಲ್ಲ. ಇಂತಹ ವ್ಯವಹಾರ್ಯ, ಸಾಮಾನ್ಯ, ಉತ್ತಮೋಪಾಯಗಳ ಆಚರಣೆ ಕೂಡಾ ಅಸಾಧ್ಯವಾಗಿರುವ ಜನರು ಮಾನವ ಮಟ್ಟಕ್ಕಿಂತ ಕೆಳಗಿನವರೆಂದಾಗುವದು. ಲೋಕದ ಉತ್ತಮ ಜನಾಂಗವೆನ್ನಿಸಬೇಕೆಂಬ ಆಶೆ ಮತ್ತು ಅನುಕೂಲತೆಗಳಿರುವ ಭಾರತೀಯರು ಅಂತಹ ಹೀನ ದರ್ಜೆಗೆಂದಿಗೂ ಇಳಿಯಬಾರದು. ಪ್ರಕೃತ ಸಾಮಾನ್ಯ ಪ್ರಜಾಸತ್ತಾ ರೀತಿನೀತಿಗಳ ಪೂರ್ಣ ಯೋಗ್ಯತೆಯಾದರೂ ಅವರಲ್ಲಿ ಕಂಡು ಬರಬೇಕು. ಇಂದು ಅಧಿಕಾರ ಜನತೆಯದಾಗಿದೆ; ಆ ಅಧಿಕಾರವನ್ನು ಪ್ರಯೋಗಿಸುವ ಕಾಲ ಕೂಡಾ ಸಮೀಪಿಸುತ್ತಿದೆ. ಈ ಅನುಕೂಲತೆ ಮತ್ತು ಅವಕಾಶಕ್ಕೆ ತಕ್ಕಂತಹ ಆಧ್ಯತೆಯನ್ನಷ್ಟೇ ಜನತೆ ಗಳಿಸಿಕೊಂಡರಾಯಿತು; ಗಳಿಸೀತೆಂದು ಆಶಿಸಬಹುದೆ?

# ವಿಚಾರಣೀಯ ವಿಷಯಗಳು

1951ರೊಳಗೆ ಭಾರತವು ಆಹಾರ ಸ್ವಾವಲಂಬಿಯಾಗತಕ್ಕದ್ದೆಂಬ ನಿಶ್ಚಿತ ಗುರಿ ಮುಟ್ಟಲಾಗುವಂತೆ ಮದ್ರಾಸ್ ಸರಕಾರವು ಅಧಿಕಾಹಾರೋತ್ಪನ್ನ ಕಾರ್ಯಗಳನ್ನು ಸಾಧ್ಯವಿದ್ದಷ್ಟು ಪರಿಣಾಮಕಾರಿಯಾಗಿ ಜರಗಿಸುತ್ತಿದೆ. ಪ್ರತಿಯೊಂದು ಜಿಲ್ಲೆಯಲ್ಲೂ ವ್ಯವಸ್ಥಿತ ನೀರಾವರೀ ಯೋಜನೆಗಳು ಜಾರಿಗೆ ಬರುತ್ತಿವೆ. ರೂ. 33,84,000 ವೆಚ್ಚದಿಂದ 515 ಕೆರೆಗಳ 115 ಕಾಲುವೆಗಳ ರಿಪೇರಿ, ಮತ್ತಿತರ 8 ನೀರಾವರಿ ಕಾರ್ಯಗಳನ್ನು ಕೈಕೊಳ್ಳಲಾಗಿದೆ. ಅಂತೆಯೇ ಆಂಧ್ರದಲ್ಲಿ ಬಿರುಗಾಳಿಯಿಂದ ಹಾಳಾಗಿದ್ದ ಸ್ಥಳಗಳ ದುರಸ್ತಿಯು ರೂ. 8,35,000 ಅಂದಾಜು ವೆಚ್ಚದಿಂದ ನಡೆಯುತ್ತಿದೆ. ಈ ದುರಸ್ತಿಗಳಿಂದಾಗಿ 41,335 ಎಕ್ರೆ ಭೂಮಿಗಳು ಹೊಸತಾಗಿ ಸಾಗುವಳಿಯಾಗಿ 32,000 ಟನ್ನುಗಳಷ್ಟು ಅಧಿಕಾಹಾರ ಧಾನ್ಯ ಬೆಳೆಯುವಂತಾಗುವದು. ಅಂತೆಯೇ 24 ಲಕ್ಷ ರೂ.ಗಳನ್ನು ವ್ಯಯಿಸಿ, ಪ್ರಾಂತ್ಯದ ಎಲ್ಲಾ ಜಿಲ್ಲೆಗಳಲ್ಲಿ ಪೂರ್ಣ ಮುಚ್ಚಿ ಹೋದ 457 ಕೆರೆಗಳನ್ನು ಪುನರ್ನಿರ್ಮಿಸುವ ಯೋಜನೆಗಳೂ ಮಂಜೂರಾಗಿವೆ. ಅಂತೂ ಇವೆಲ್ಲಾ ಪ್ರಯತ್ನಗಳ ಪರಿಣಾಮವಾಗಿ ಹೊಸತಾಗಿ 2 ಲಕ್ಷ ಎಕ್ರೆಯಷ್ಟು ಸ್ಥಳವು ಬೇಸಾಯವಾಗುವದೆಂದು ನಿರೀಕ್ಷಿಸಬಹುದು. ದ. ಕ. ಜಿಲ್ಲೆಯ ಒಟ್ಟು ಸಾಗುವಳಿ ಭೂಮಿಯ ಮೂರನೇ ಒಂದಂಶದಷ್ಟು ನೆಲವು ಈ ಯೋಜನೆಗಳ ದೆಸೆಯಿಂದಾಗಿ ಇಡೀ ಪ್ರಾಂತ್ಯದಲ್ಲಿ ಹೊಸತಾಗಿ ಬೇಸಾಯವಾಗಲಿದೆ. ಆದರೀ ವರ್ಷ ಮದ್ರಾಸ್ ಪ್ರಾಂತ್ಯದಲ್ಲಿರುವ ಆಹಾರ ಧಾನ್ಯಗಳ ದಾಸ್ತಾನು ಜೂನ್ ಅಂತ್ಯದೊಳಗೆ ಪೂರ್ಣ ಖಾಲಿಯಾಗುವಷ್ಟೇ ಇದೆ. ಕೇಂದ್ರಸರಕಾರವು ಸಹಾಯ ಮಾಡದಿದ್ದರೆ ಬರುವ ಜೂನಿನ ನಂತರ ಒಕ್ಟೋಬರದ ವರೆಗೆ ಈ ಪ್ರಾಂತ್ಯದವರು ದಿನ ತೆಗೆಯುವ ಬಗೆ ಹೇಗೋ!

ಪ್ರಚಲಿತ ಸ್ಥಿತಿಗತಿಗಳ ಆಸ್ತಿವಾರ ಬದಲಾಯಿಸದೆ ಇದ್ದಂತೆ ಸುಧಾರಣೆಗಳನ್ನು ಮುಂದೊಡ್ಡುವುದರಲ್ಲಿ ಮದ್ರಾಸ್ ಸರಕಾರವೇನೂ ಹಿಂದಿಲ್ಲ. ಆದರೆ ನೌಕರ ಯಂತ್ರದ ಚಲನೆಯಲ್ಲಿಯೂ ನಿಯೋಜಿತ ಯೋಜನೆಗಳನ್ನು ಕಾರ್ಯರೂಪಕ್ಕಿಳಿಸುವುದರಲ್ಲಿಯೂ ಅತಿರೇಕ ವಿಳಂಬಗಳೇಕೋ ಆಗುತ್ತಿವೆ. ತಮ್ಮ ಪ್ರಕಟಣೆ ಅಥವಾ ಆಜ್ಞೆ ಹೊರಡುವ ಮತ್ತು ಅವು ಕಾರ್ಯತಃ ಜಾರಿಯಲ್ಲಿ ಬರುವ ದಿನಗಳ ನಡುವೆ ಸರಾಸರಿ ಎಷ್ಟು ಕಾಲ ಕಳೆದು ಹೋಗುತ್ತಿದೆ ಎಂಬ ಕಡೆಗೆ ಮದ್ರಾಸ್ ಮಂತ್ರಿಗಳು ಲಕ್ಷ್ಯ ಕೊಡಬೇಕಾದುದೇ ಇಂದಿನ ಅವಶ್ಯಕತೆಯೆನ್ನಬಹುದು. ಮಾತ-ಕೃತಿಗಳೊಳಗಿನ ಮಧ್ಯಾಂತರದಷ್ಟು ದೊಡ್ಡ ವಿರೋಧ ಪ್ರಚಾರಕರು ಇಂದಿನ ಮದ್ರಾಸ್ ಆಡಳಿತೆಗೆ ಬೇರಿಲ್ಲವೆಂದು ಹೇಳಬೇಕಾಗಿದೆ.

೦೦

ಇದೇ ತಾ. 7ರಲ್ಲಿ ಬಿಹಾರಿನ ಪಾಟ್ನಾದ ಬಳಿ ನಡೆದ 'ಪಂಜಾಬ್ ಮೈಲ್' ಅಪಘಾತವು ಭಾರತದ ಅತಿ ದೊಡ್ಡ ರೈಲ್ವೇ ಅಪಘಾತಗಳಲ್ಲೊಂದು. ಕಮ್ಯೂನಿಸ್ಟರ ಧ್ವಂಸ ಹೋರಾಟದೊಂದು ಕಾರ್ಯಕ್ರಮವೆಂದು ಊಹಿಸಲ್ಪಟ್ಟಿರುವ ಕಂಬ ತಪ್ಪಿಸಿಡುವ ಅಮಾನುಷ ಕೃತ್ಯಗಳು ಇತ್ತೀಚೆಗೆ ಭಾರತದ ಹಲವೆಡೆಗಳಲ್ಲಿ ಆಗಿವೆ. ಭೀಕರ ರೈಲ್ವೇ ಅಪಘಾತಗಳ ದುರ್ವಾರ್ತೆಗಳನ್ನು ಮೇಲಿಂದ ಮೇಲೆ ಕೇಳುವಂತಾಗಿದೆ. ನಿರಪರಾಧಿ ಪ್ರಯಾಣಿಕರಿಗೆ ಅಪಮೃತ್ಯುವನ್ನೊಡ್ಡುವುದೂ ಒಂದು ಚಳವಳದ ಅಥವಾ ಪೌರುಷದ ಪಂಕ್ತಿಗೆ ಸೇರಬಲ್ಲುದೆ? ಅಂತಹ ಚಳವಳಗಾರರನ್ನೂ ಮಾನವ ಪಂಕ್ತಿಗೆ ಸೇರಿಸಿಕೊಳ್ಳಲು ಸಾಧ್ಯವೆ? ಎಷ್ಟೇ ರೈಲುಗಳನ್ನು ಡಿರೇಲು ಮಾಡಿದರೂ ಸರಕಾರವೇನೂ ಅಡಿಮೇಲಾಗದು. ಆದರೆ ಈ ಹವ್ಯಾಸವು ಇನ್ನೂ ಬೆಳೆದರೆ 'ಜೀವದಾಸೆ ಬಿಟ್ಟೇ ಪ್ರಯಾಣ'ವೆಂಬ ಸ್ಥಿತಿ ಮಾತ್ರ ನಿರ್ಮಾಣಗೊಂಡೀತು; ಇಡೀ ರಾಷ್ಟ್ರದ ಎಲ್ಲಾ ರೈಲ್ವೇ ಕಂಬಿಗಳಿಗೂ ಅಮೂಲಾಗ್ರವಾಗಿ ಪಹರೆಯಿಡುವುದು ಯಾವ ಸರಕಾರಕ್ಕಾದರೂ ಕಷ್ಟವೇ. ತಮ್ಮ ಯಾವ ಗುರಿಸಾಧನೆಗೂ ಬೇಡದ ಇಂತಹ ಸಂಕಷ್ಟ

ಸರೋ, ಎನ್ನಬೇಕಲ್ಲದೆ ಇಲ್ಲಿ ಬೇರಿಮಾತಿಗೆಡೆಯಿಲ್ಲ!

○○

ನಮ್ಮ ನಾಯಕ ಮಂಡಲಿಯ ಕೆಲವು ವರ್ತನೆಗಳು ಅವರ ನ್ಯಾಯನಿಷ್ಠುರತೆ ಮತ್ತು ನಿಷ್ಪಕ್ಷಪಾತತೆಗಳ ಇದಿರಿಗೇನೇ ಪ್ರಶ್ನಾರ್ಥಕ ಚಿಹ್ನೆಗಳಾಗಿ ನಿಲ್ಲುವಂತಹವಿವೆ. ಕಾಂಗ್ರೆಸ್ ಶಿಸ್ತಿಗೆ ಬದ್ಧ ವಿರೋಧವಾಗಿ ವರ್ತಿಸಿದರೆಂಬ ಕಾರಣದಿಂದ, ಆ ಸಂಬಂಧದ ಕ್ರಮಬದ್ಧ ವಿಚಾರಣೆಗಳೆಲ್ಲವನ್ನೂ ನಡೆಸಿದ ಮೇಲೆಯೇ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಮದ್ರಾಸಿನ ಶ್ರೀ ಟಿ. ಪ್ರಕಾಶಮ್ ಮತ್ತು ಅವರ ಅನುಯಾಯಿಗಳ ಮೇಲೆ ಶಿಸ್ತು ಜ್ಯಾರಿ ನೋಟೀಸು ಹೊರಡಿಸಿದ್ದಿತು. ಆದರೆ ಶ್ರೀ ಟಿ. ಪ್ರಕಾಶಮರು ನೆಹರು ವಲ್ಲಭಾಯಿಗಳ ಸಲಹೆಯಂತೆ ವರ್ತಿಸುವೆನೆಂಬ ವಾಗ್ದಾನವಿತ್ತರೆಂಬ ಅಸ್ಪಷ್ಟತೆಯೊಂದನ್ನಾಧರಿಸಿ ಕಾಂಗ್ರೆಸ್ ತನ್ನ ಶಿಸ್ತು ಜ್ಯಾರಿ ನೋಟಿಸನ್ನು ಹಿಂದೆಗೆದುಕೊಂಡಿತು. ಶ್ರೀ ಟಿ. ಪ್ರಕಾಶಮರು ಮಾಡಿದ್ದ ಅಪರಾಧವನ್ನೇ ಮಾಡಿದ್ದ ಉತ್ತರಪ್ರದೇಶದ 19 ಮಂದಿ ಕಾಂಗ್ರೆಸಿಗರಿಗೆ ಮಾತ್ರ ಇಂತಹ ರಿಯಾಯತಿ ದೊರೆಯದೆ ಅವರೆಲ್ಲರನ್ನೂ ಅಲ್ಲಿಯ ಕಾಂಗ್ರೆಸ್ ಪಕ್ಷದಿಂದ ಹೊರಗಟ್ಟಲಾಗಿದೆ. ಉತ್ತರ ಪ್ರದೇಶದ ಮತ್ತು ಮದ್ರಾಸಿನ ತಕ್ಷೀರುಳೊಳಗೆ, ಸಾರ್ವಜನಿಕರಿಗೆ ಮುಂದಟ್ಟಾಗಬಲ್ಲ ವ್ಯತ್ಯಾಸಗಳೇನೂ ಕಾಣುವದಿಲ್ಲ. ಮದ್ರಾಸಿನ ವಿರೋಧೀ ಮುಂದಾಳುವಿನಿಂದ ದೊರೆತಂತಹ ಭರವಸೆಯು ಉತ್ತರ ಪ್ರದೇಶದ ಅಸಂಘೀ ನಾಯಕನಿಂದ ದೊರೆಯದಿದ್ದುದರಿಂದಲೇ ಇವರಿಗೆ ರಿಯಾಯತಿ ದೊರೆತು ಅವರಿಗೆ ಶಿಕ್ಷೆಯಾಯಿತೆನ್ನೋಣವೆ? "ನಮ್ಮ ಮಟ್ಟಿಗೆ ಇಂತಹ ರಿಯಾಯತಿ ಕೊಡಲು ನಿಯಮಾಕ್ಷರಗಳನ್ನಾಧರಿಸಿ ಕಾಂಗ್ರೆಸ್ ಅಧಿನಾಯಕರು ನಿರಾಕರಿಸಿದ್ದರು" ಎಂದು ಉತ್ತರ ಪ್ರದೇಶದ ಶಿಸ್ತುಭಂಜಕ ಗುಂಪಿನ ನಾಯಕನ ಹೇಳಿಕೆಯಲ್ಲಿದೆ. ಹಾಗಾದರಿದು ಪಕ್ಷಪಾತವೆ?

○○

ಮೈಸೂರು ಸಂಸ್ಥಾನ ಕಾಂಗ್ರೆಸಿನ ದರ್ಜೆಯನ್ನು ಇತರ ಪ್ರಾಂತಿಕ ಕಾಂಗ್ರೆಸುಗಳ ಮಟ್ಟಕ್ಕೇನೇ ಏರಿಸುವ ನಿರ್ಧಾರವು ಕಳೆದ ವಾರ ದಿಲ್ಲಿಯಲ್ಲಿ ಸೇರಿದ್ದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಲ್ಲಾಗಿದೆ. ಇದೂ ಕಾಂಗ್ರೆಸ್ ನಾಯಕರ ಒಳ ಜಾಣ್ಮೆಯನ್ನು ಬಿಂಬಿಸುತ್ತಿದೆ ಹೊರತು ಅವರ ನೇರ ವರ್ತನೆಗೊಂದು ನಿದರ್ಶನವಾಗಿ ಕಾಣುವದಿಲ್ಲ. ಪ್ರಕೃತ ಎಲ್ಲಿಯೋ ಲಂಗರು ಹಾಕಿ ನಿಂತುಬಿಟ್ಟಂತಿರುವ ಕರ್ನಾಟಕ ಪ್ರಾಂತ್ಯ ಯಾಚನಾ ಹಡಗಕ್ಕೆ ಆಳದಿಂದ ಹೂಡಿದ 'ಟೋರ್ಪೆಡೋ' ಇದು! ಮೈಸೂರು ಸಮೇತ ಕರ್ನಾಟಕದ ಎಲ್ಲಾ ಭಾಗಗಳಿಗೂ ಒಂದೇ ಪ್ರಾಂತಿಕ ಕಾಂಗ್ರೆಸ್ ಸಮಿತಿಯು ಎಷ್ಟೋ ವರುಷಗಳಿಂದ ಇದೆ. ಈ ದೆಸೆಯಿಂದಾಗಿ ಕಾಂಗ್ರೆಸ್ ರಂಗದಲ್ಲಾದರೂ ಅಖಿಲ ಕರ್ನಾಟಕಕ್ಕೊಂದು ಏಕರೂಪವಿದ್ದಿತು. ಈಗ ಅದರ ಒಳಗಡೆಯಿಂದ ಮೈಸೂರು ಸಂಸ್ಥಾನದ ಕಾಂಗ್ರೆಸನ್ನು ವಿಂಗಡಿಸಿ, ಸಮಾನ ದರ್ಜೆಯಲ್ಲಿ ಇಟ್ಟುಬಿಟ್ಟುದರಿಂದ, ಕರ್ನಾಟಕ ಕಾಂಗ್ರೆಸಿನ ಏಕರೂಪ ಕೂಡಾ ಮಾಯವಾಯಿತು. ಈ ತನಕ ಕರ್ನಾಟಕ ಪ್ರಾಂತಿಕ ಕಾಂಗ್ರೆಸಿನ ಏಕಸ್ವರ ಕೇಳಬರುತಿದ್ದರೆ, ಇನ್ನು ಕ. ಪ್ರಾಂ. ಕಾಂಗ್ರೆಸಿನ ಮತ್ತು ಮೈ. ಸಂ. ಕಾಂಗ್ರೆಸಿನ ಭಿನ್ನಸ್ವರಗಳು ಹೊರಟವಾಯಿತು. ಏಕೀಕರಣದ ಕುರಿತು ಮೈಸೂರಿನ ಮರ್ಜಿ ಮೈಸೂರೇತರ ಭಾಗಗಳಿಗಿಂತ ಭಿನ್ನವಿದೆ ಎಂಬುದಿಷ್ಟರಲ್ಲೇ ಮನವರಿಕೆಯಾಗಿರುವ ಸಂಗತಿ.

○○

ಕೊಚ್ಚಿ ತಿರುವಾಂಕೂರು ಕೇಂದ್ರ ಸ್ಥಾಪನೆಯ ಕಾಲದಲ್ಲೇ ಮಾತು ಕೊಟ್ಟಿದ್ದಂತೆ ಸರ್ದಾರ್ ವಲ್ಲಭಾಯಿಗಳು ಇದೇ ತಾ. 12ರಲ್ಲಿ ಕೊಚ್ಚಿಗಾಗಮಿಸುವರೆಂದು ನಿಶ್ಚಯವಾಗಿದೆ. ಆರೋಗ್ಯ ಸಂಪಾದನೆಗಾಗಿ ಅವರು ಅಲ್ಲಿಯೇ ಕೆಲವು ದಿನ ನಿಲ್ಲಬಹುದು. ಇಂಡೋನೇಶಿಯಕ್ಕೆ ಹೊರಡಲಿರುವ ಪಂಡಿತ ಜವಾಹಿರಲಾಲರೂ ಕೊಚ್ಚಿಗೆ ಬಂದು ಹೋಗುವರೆಂದು ಗೊತ್ತಾಗಿದೆ. ನಮ್ಮ ನಾಯಕದ್ವಯರಲ್ಲಿ ಒಬ್ಬರಿಗೆ ಸಂಚಾರಾವಶ್ಯಕತೆ, ಮತ್ತೊಬ್ಬರಿಗೆ ಅನಾರೋಗ್ಯ ಬಡಿದಿರುವಾಗ, ಅವರು ತಮ್ಮ ಮಂಡಲಿಯಲ್ಲಿ ನಾಮಮಾತ್ರ ಬದಲಾವಣೆ ಮಾಡಿಕೊಂಡುದು ಸಾಕೇನು?

---

(೫ನೇ ಪುಟದಿಂದ ಮುಂದುವರಿದುದು)

ಲಿರುವೆವು" ಎಂದಿದ್ದಾರೆ. ಕಾಶ್ಮೀರದ ಜನಮತ ಸಂಗ್ರಹಾಧಿಕಾರಿಯಾಗಿ ನಿಯುಕ್ತರಾಗಿರುವ ಎಡ್ಮಿರಲ್ ನಿಮಿಟ್ಸ್‌ರು ಕೂಡಾ, ತಮ್ಮ ಸಹಾಯದ ಆವಶ್ಯಕತೆ ಬೀಳದೇನೇ ಭಾರತ ಪಾಕಿಸ್ತಾನಗಳು ತಮ್ಮೊಳಗೇ ಪ್ರಶ್ನೆಯನ್ನು ಇತ್ಯರ್ಥಿಸಿಕೊಳ್ಳಬಹುದು ಎಂಬ ಅಭಿಪ್ರಾಯ ಹೊರಗೆಡಹಿದ್ದಾರೆ. ಈ ಕುರಿತು ಸ್ಪಷ್ಟೀಕರಿಸುತ್ತಾ ತಾ 8ರ ಒಂದು ಹೇಳಿಕೆಯಲ್ಲಿ ಮಿ. ಲಿಯಾಖತರು, "ಕಾಶ್ಮೀರ ವಿಭಜನೆಗೆ ನಾವೆಂದಿಗೂ ಒಪ್ಪುವಂತಿಲ್ಲ. ಪಾಕಿಸ್ತಾನವು ಅಲ್ಲಿಯ ಜನಮತ ಸಂಗ್ರಹಕ್ಕೇನೇ ಕಟ್ಟುಬಿದ್ದಿದೆ", ಎಂದಿದ್ದಾರೆ.

ನೆಹರೂ-ಲಿಯಾಖತ್ ದಿಲ್ಲೀ ಒಪ್ಪಂದಕ್ಕನುಗುಣವಾಗಿ ಎರಡೂ ರಾಷ್ಟ್ರಗಳ ಜನಮತವನ್ನು ರೂಪಿಸುವ ವಿಧಾನಗಳನ್ನು ಗೊತ್ತು ಹಚ್ಚಲು ಮತ್ತು ಇವೆರಡು ರಾಷ್ಟ್ರಗಳೊಳಗೂ ಅವುಗಳ ಪತ್ರಿಕೆಗಳೊಳಗೂ ಸೌಹಾರ್ದತಾ ಸಂಬಂಧ ನಿರ್ಮಿಸಲು ಭಾರತ ಮತ್ತು ಪಾಕಿಸ್ತಾನಗಳ ಪತ್ರಿಕಾ ಸಂಪಾದಕರ ಜತೆ ಸಮ್ಮೇಳನವು ತಾ. 4 ಮತ್ತು 5ರಲ್ಲಿ ನವದಿಲ್ಲಿಯಲ್ಲಿ ನಡೆಯಿತು. ನಿರ್ಮಲ ವಾತಾವರಣ ನಿರ್ಮಿಸುವ ಸೂತ್ರಗಳನ್ನು ಮುಂದಿಟ್ಟ ಭಾರತ ಮತ್ತು ಪಾಕಿಸ್ತಾನ್ ಸಂಪಾದಕರುಗಳ ಅಮೂಲ್ಯ ಭಾಷಣಗಳಾದುವು. ಭಾರತ ಪ್ರಧಾನಿ ಪಂಡಿತ ನೆಹರೂಗಳು ಮತ್ತು ಭಾರತದ ಸುದ್ದಿ ಶಾಖೆಯ ಮಂತ್ರಿ ಶ್ರೀ ದಿವಾಕರರು ಈ ಪತ್ರಿಕಾ ಸಮ್ಮೇಳನಕ್ಕೆ ಕೊಟ್ಟ ಉಪದೇಶಗಳು ಸರ್ವಮಾನ್ಯವಿದ್ದುವು. ಪಾಕಿಸ್ತಾನ್ ಪತ್ರಿಕಾಕರ್ತರು ರಾಜಘಾಟಿಗೆ ಹೋಗಿ ಗಾಂಧಿಜೀ ಸಮಾಧಿಗೆ ಗೌರವ ಸಲ್ಲಿಸಿದ್ದರಲ್ಲದೆ ಅಧ್ಯಕ್ಷರೇ ಮೊದಲಾದವರಿಂದ ಸತ್ಕಾರಕೂಟಗಳನ್ನು ಪಡೆದಿದ್ದರು. ಮಿ. ಲಿಯಾಖತರ ಗೈರುಹಾಜರಿಯಲ್ಲಿ ಅಧಿಕೃತ ಮೈತ್ರೀ ವಹಿವಾಟುಗಳು ಹೊಸದಾಗಿ ನಡೆಯದಂತಾಗಿದ್ದರೂ ಆ ರಂಗವನ್ನು ಖಾಲಿಬೀಳಗೊಡದೆ ಇಕ್ಕಡೆಯ ಪತ್ರಿಕೆಗಳವರು ತಮ್ಮೊಳಗೆ ಸ್ನೇಹ ಸೂತ್ರಗಳನ್ನು ತಯಾರಿಸಿಕೊಂಡು, ಶುಭ್ರ ಭವಿಷ್ಯ ನಿರ್ಮಾಣಕ್ಕೆ ನೆರವಾದರು.

ಬಿಹಾರಿನ ಜಾಧಿಸಿ ಮತ್ತು ಸಿಮುಲ್ತಾಲಾ ಎಂಬಲ್ಲಿಯ ಮಧ್ಯ ಸ್ಥಳದಲ್ಲಿ ಇದೇ ತಾ. 7ನೇ ಅತಿ ಮುಂಜಾನೆ 'ಪಂಜಾಬ್ ಮೈಲ್' ಕಂಬಿ ತಪ್ಪಿಬಿದ್ದು 100ಕ್ಕಿಂತ ಹೆಚ್ಚು ಜನರು ಮಡಿದು ಇನ್ನೂ ಅಧಿಕ ಸಂಖ್ಯಾಕರು ಜಖಂಗೊಂಡರೆಂಬ ಶೋಚನೀಯ ವಾರ್ತೆ ಬಂದಿದೆ. ಇದೇ ರೈಲಿನಲ್ಲಿದ್ದ ಬಿಹಾರ್ ಮಂತ್ರಿ ಅಬ್ದುಲ್ ಕ್ವಯಾಮ್ ಅನ್ಸಾರಿಯವರಿಗೆ ಅದೃಷ್ಟ ಬಲದಿಂದೇನೂ ಆಗಿಲ್ಲ. ಸುಮಾರು ಒಂದು ತಿಂಗಳ ಮೊದಲು ಸೇನಾ ಸ್ಪೆಶ್ಯಲ್ ಬಂಡಿಯೊಂದು ಹೊರಟದ್ದಾಗ ಇದೇ ಸ್ಥಳದಲ್ಲಿ ರೈಲ್ವೇ ಕಂಬಿಗಳು ತಪ್ಪಿಸಿ ಹಾಕಲ್ಪಟ್ಟಿದ್ದರೂ ಸಕಾಲದಲ್ಲಿ ಅದನ್ನು ಕಂಡು ಹಿಡಿದುದರಿಂದ ಆ ಬಾರಿಯ ಅಪಾಯ ತಪ್ಪಿ ಹೋಗಿತ್ತೆಂದು ತಿಳಿದು ಬರುತ್ತದೆ. ಈ ಬಾರಿಯ ಅಪಘಾತಕ್ಕೂ ದುರಾತ್ಮರಾರೋ ಕಂಬಿಗಳನ್ನು ತಪ್ಪಿಸಿ ಹಾಕಿದ್ದುದೇ ಕಾರಣವೆಂದು ತಿಳಿದು ಬರುತ್ತದೆ.

## ಪ್ರಕಾಶಮ್ ಪ್ರಕರಣ

ಕಾಂಗ್ರೆಸ್ ಪಕ್ಷದ ಶಿಸ್ತು ವಿರುದ್ಧವಾಗಿ, ಮದ್ರಾಸ್ ಮಂತ್ರಿಗಳ ಮೇಲಿನ ಅಪವಾದನೆಗಳ ವಿಚಾರಣಾ ನೋಟಿಸನ್ನು ನೇರಾಗಿ ಎಸೆಂಬ್ಲಿಯಲ್ಲಿ ಕೊಟ್ಟದ್ದು ಮತ್ತು ಕಾಂಗ್ರೆಸ್ ಪಕ್ಷ ಬಿಟ್ಟು ಎಸೆಂಬ್ಲಿಯಲ್ಲಿ ಪ್ರತ್ಯೇಕ ಕುಳಿತುಕೊಳ್ಳಲಾರಂಭಿಸಿರುವ ಶ್ರೀ ಟಿ. ಪ್ರಕಾಶಮ್ ಮತ್ತು ಅವರ 14 ಮಂದಿ ಅನುಯಾಯಿಗಳ ಮೇಲೆ ಶಿಸ್ತು ಜ್ಯಾರಿಯ ನೋಟಿಸು ಕೊಟ್ಟಿದ್ದರೂ, ನೆಹರೂ ವಲ್ಲಭಾಯಿಗಳ ಸಲಹೆಗಾಧೀನವಾಗಿ ವರ್ತಿಸುವೆನೆಂಬ ವಾಗ್ದಾನವನ್ನು ಶ್ರೀ ಟಿ. ಪ್ರಕಾಶಮರಿಂದ ಪಡೆದುಕೊಂಡು ಕಳೆದ ವಾರ ದಿಲ್ಲಿಯಲ್ಲಿ ಸೇರಿದ್ದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಅವರ ಮೇಲಿನ ಶಿಸ್ತು ನೋಟಿಸನ್ನು ಹಿಂದೆಗೆದಿದೆ. ಆಂಧ್ರ ಪ್ರಾಂತಿಕ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಮತ್ತು ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸದಸ್ಯ ಪ್ರೊ. ರಂಗ ಮೊದಲಾದವರ ಮಧ್ಯಸ್ಥಿಕೆಯೇ ಈ ರಾಜೀ ವ್ಯವಸ್ಥೆಗೆ ಕಾರಣವಾಯಿತೆಂದು ತಿಳಿದು ಬಂದಿದೆ. ಮಂತ್ರಿಗಳ ಮೇಲಿನ ಆರೋಪಗಳನ್ನ ಹಿಂತೆಗೆದುಕೊಳ್ಳುವ ಅಥವಾ ಎಸೆಂಬ್ಲಿಯಲ್ಲಿ ಬೇರೆ ಕುಳಿತುಕೊಳ್ಳುವುದನ್ನು ಬಿಡುವ ವಾಗ್ದಾನವೇನನ್ನೂ ತಾನು ಕೊಟ್ಟಿದ್ದಿಲ್ಲವೆಂದು ಶ್ರೀ ಟಿ ಪ್ರಕಾಶಮರು ಈ ತೀರ್ಮಾನಾನಂತರವೂ ಹೇಳಿದ್ದಾರೆ. ಇದರ ಗೂಢವಿಷ್ಟೆ: ನೆಹರೂ ಪಟೇಲರು ಹೇಳಿದಂತೆ ವರ್ತಿಸುವೆನೆಂಬ ವಾಗ್ದಾನವನ್ನಲ್ಲದೆ ಶ್ರೀ ಟಿ. ಪ್ರಕಾಶಮರು ಬೇರಾವುದನ್ನೂ ಕೊಟ್ಟುದಿಲ್ಲ. ಹೀಗೆಯೇ ವರ್ತಿಸತಕ್ಕದ್ದೆಂದು ನೆಹರೂ ಪಟೇಲರು ಈ ತನಕ ಶ್ರೀ ಟಿ. ಪ್ರಕಾಶಮರಿಗೆ ಹೇಳಿಲ್ಲ. ಆದಕ್ಕಾಗಿ ಈ ತಿಂಗಳಾಂತ್ಯದಲ್ಲಿ ಅಥವಾ ಬರುವ ತಿಂಗಳ ಆದಿಭಾಗದಲ್ಲಿ ನೆಹರೂ ಪಟೇಲ್ ಮತ್ತು ಪ್ರಕಾಶಮರ ಭೇಟಿಯಾಗಲಿದೆ. ಆಗ, ಶ್ರೀ ಟಿ. ಪ್ರಕಾಶಮರು "ನಾನು ವಾಗ್ದಾನ ಮಾಡಿಲ್ಲ" ಎಂದಿರುವ ವಿಧಾನಗಳನ್ನೇ ನಾಯಕದ್ವಯರು ಅವರಿಗೆ ನಿರ್ದೇಶಿಸಲಿದ್ದಾರೆಂದು ಊಹಿಸಬಹುದು. ಈ ನಿರೀಕ್ಷೆಯಿಂದಲೇ ಅವರಮೇಲಿನ ಶಿಸ್ತಿನ ಗಡೆ ಕಳಗಿಳಿಯಿತು.

---

## ಉಡುಪಿ

ನಗರ ಸಭೆಯು ಕಳೆದ ತಾ29 ರಲ್ಲಿ ಚೆಯರ್ಮೆನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಜೆ. ಕೆ. ಪೈಗಳ ಮೆಂಬರಿಕೆಯನ್ನು ಊರ್ಜಿತಕ್ಕೆ ತರಲಾಯಿತು. ಕೌನ್ಸಿಲಿನ ಕೂಲಿ ವರ್ಗದವರಿಗೆ ಖಾದಿ ಉಡುಪನ್ನು ಕೊಡುವರೆ ಎಪ್ಪತ್ತೈದು ರೂಪಾಯಿ ಸೆಂಕ್ಷನ್ ಮಾಡಲಾಯಿತು. ಮುನಿಸಿಪಲ್ ಶಾಲೆಗಳಲ್ಲಿ ವರ್ಷಾರಂಭದಲ್ಲಿ ಒಂದೊಂದು ರೂಪಾಯಿ ವಿದ್ಯಾರ್ಥಿಗಳಿಂದ ವಸೂಲು ಮಾಡಿ ಅದನ್ನು ಶಾಲಾವರ್ಧಂತಿ ಮತ್ತು ಆಟಸಾಮಾಗ್ರಿಗಳಾಗಿ ಉಪಯೋಗಿಸಬಹುದೆಂಬ [ಕಮಿಶನರರ] ಸೂಚನೆಯನ್ನು ಈ ಬಾರಿ ಕಾರ್ಯರೂಪಕ್ಕೆ ತರುವುದು ಬೇಡವೆಂದಾಯಿತು.

**ಎಯಿಡೆಡ್ ಶಾಲಾ ಉಪಾಧ್ಯಾಯರ** ಸಭೆಯು ಕಳೆದ ತಾ. ೩೦ರಲ್ಲು ಶಾಲಾ ಡೆಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಎಚ್. ಸಂಜೀವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ದಿವಸಗಳನ್ನು 200ಕ್ಕೆ ತಗ್ಗಿಸಬೇಕೆನ್ನುವ, ಹತ್ತು ಯಾ ಅದಕ್ಕಿಂತ ಜಾಸ್ತಿ ಉಪಾಧ್ಯಾಯರಿರುವ ಶಾಲೆಗಳಿಗೆ ಒಬ್ಬ ಎಟೆಂಡರನ ಇಸಮು ಸೆಂಕ್ಷನ್ ಮಾಡುವುದಲ್ಲದೆ ಆ ಬಗ್ಗೆ ಗ್ರಾಂಟು ಸಿಗಬೇಕೆನ್ನುವ, ಖಾಸಗಿ ಶಾಲಾ ಹೆಡ್ಮಾಸ್ತರರಿಗೆ ಸ್ಪೆಶಲ್ ಸಂಬಳದ ಸ್ಕೇಲ್ ಸಿಗಬೇಕೆನ್ನುವ, ಸೆಂಟ್ರಲ್ ಪೇ ಕಮಿಶನ್ ಸ್ಕೇಲಿನಂತೆ ಖಾಸಗಿಶಾಲಾ ಉಪಾಧ್ಯಾಯರುಗಳಿಗೂ ಸಂಬಳದ ಗ್ರಾಂಟು ಸಿಗಬೇಕೆನ್ನುವ, ಮೂರು ವರುಷಯಾ ಅದಕ್ಕಿಂತ ಹೆಚ್ಚು ಸರ್ವಿಸು ಮಾಡಿದ ಉಪಾಧ್ಯಾಯರನ್ನು ಶಾಲಾ ಮೆನೇಜರರು ಸ್ವಾರ್ಥ ಇಲ್ಲವೆ ಅದಾವ ಕಾರಣಗಳಿಂದಾಗಲೀ ಕೆಲಸದಿಂದ ನಿವೃತ್ತಿ ಪಡಿಸದಂತೆ ಇಲಾಖಾ ಅಫೀಸರರು ನಿಗಾ ಕೊಡಬೇಕೆನ್ನುವ, ಹೆಚ್ಚು ಸರ್ವಿಸು ಮಾಡಿದ ಹೆಡ್ಮಾಸ್ತರರಿಗೆ ಮೆನೇಜ್‌ಮೆಂಟಿನವರು ಕೊಡುವ ಸಂಬಳ ಬಡ್ತಿಯನ್ನು ಸರಕಾರವು ಮೆನೇಜ್‌ಮೆಂಟಿಗೆ, ಕೊಡುವ ಪೋಷಣ ಗ್ರಾಂಟಿನಲ್ಲಿ ಸೇರಿಸಿಕೊಡಬೇಕೆನ್ನುವ-ಇತ್ಯಾದಿ ನಿರ್ಣಯಗಳಾದುವು.

**ಕ್ರಿಶ್ಚಿಯನ್ ಹೈಸ್ಕೂಲ್ ಹಳೆ ವಿದ್ಯಾರ್ಥಿ ಸಂಘವು**:—ಸ್ಥಾಪನೆಯಾಗಿ ಅದರ ಕಾರ್ಯವಾಹೀ ಮಂಡಳಿಯ ಸಭೆಯು ಕಳೆದ ತಾ. 25ರಲ್ಲು ಜರಗಿತು. ಶಾಲಾ ಹಳೆ ವಿದ್ಯಾರ್ಥಿಗಳೆಲ್ಲರೂ ಸದಸ್ಯರಾಗಿ ಸೇರಿ ಸಂಘವನ್ನು ಬಲಪಡಿಸಬೇಕಾಗಿ ಗೊತ್ತುವಳಿಯಾಗಿದೆ. ಸದಸ್ಯತನದ ಅರ್ಜಿ ಫಾರ್ಮುಗಳನ್ನೂ ಹೆಚ್ಚಿನ ಮಾಹಿತಿಯನ್ನೂ ಸಂಘದ ಕಾರ್ಯದರ್ಶಿಯರಿಂದ ಪಡೆಯಬಹುದು.

**ದ. ಕ. ಜಿಲ್ಲಾ ಕುಲಾಲ ಸಮಾಜೋದ್ಧಾರಕ ಸಮಿತಿ ಉಡುಪಿ ಶಾಖೆ** ಇದರ ದ್ವಿತೀಯ ವಾರ್ಷಿಕ ಮಹಾ ಸಭೆಯು ಇದೇ ತಾ 21ನೆ ಆದಿತ್ಯವಾರ ಬೆಳಿಗ್ಗೆ 9 ಗಂಟೆಗೆ ಉಡುಪಿ ಕಾಡಬೆಟ್ಟು ಮೊಡರ್ನ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಲಿರುವುದೆಂದೂ ಕುಲಾಲ ಬಂಧುಗಳೆಲ್ಲರೂ ಬರಬೇಕಾಗಿಯೂ ಸಮಿತಿಯ ಕಾರ್ಯದರ್ಶಿಯವರ ವಿನಂತಿಯಿದೆ.

**ನೇಮಕ**:—ತಹಶೀಲ್ದಾರ್ ಶ್ರೀ ಪಿ. ಯಸ್. ತಿಮ್ಮಪ್ಪಸೆಟ್ಟರು ದ. ಕ. ಜಿಲ್ಲೆಯಲ್ಲಿ ಡೆಪ್ಯುಟಿ ಕಲೆಕ್ಟರರಾಗಿ ಮಿ. ಯಸ್. ಅಬ್ದುಲ್ ರಹಿಮಾನರ ಬದಲಿಗೆ ನೇಮಿಸಲ್ಪಟ್ಟಿದ್ದಾರೆ. ಮದ್ರಾಸ್ ಸರಕಾರದ ಅರ್ಥಖಾತೆಯ ಉಪಕಾರ್ಯದರ್ಶಿಯಾಗಿದ್ದ ದ. ಕ. ಜಿಲ್ಲೆಯವರಾದ ಶ್ರೀ ಪಿ. ಎಮ್. ನಾಯಕ್, ಐ. ಸಿ. ಯಸ್, ಇವರು ಕೃಷ್ಣಾ ಜಿಲ್ಲೆಯ ಜಿಲ್ಲಾ ಕಲೆಕ್ಟರ್ ಮತ್ತು ಜಿಲ್ಲಾ ಮೆಜಿಸ್ಟ್ರೇಟ್ ಆಗಿ ನೇಮಕಗೊಂಡಿದ್ದಾರೆ.

3 ವರ್ಷದ ಶ್ರಮ. 20 ಲಕ್ಷ ರೂಪಾಯಿ ವೆಚ್ಚ. ಇದರ ಫಲಿತಾಂಶ.

**ಕಲ್ಪನಾ**

ತಾರೀಕು 11—5—1950 ರಿಂದ

ತಯಾರಿಸಿದವರು ಜೆಮಿನಿ.

ನಟಿಸಿ ದಿಗ್ದರ್ಶಿಸಿದವರು ಜಗದ್ವಿಖ್ಯಾತ ನರ್ತನಾಚಾರ್ಯ ಉದಯಶಂಕರ.

ಪ್ರದರ್ಶನ:—

**ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.**

ಬರುವ ಚಿತ್ರ, ರಿಟರ್ನ್ ಓಫ್ ಮೊಂಟಕ್ರಿಸ್ಟೊ (ಕೊಲೊಂಬಿಯಾ)

# ದ. ಕ. ಜಿಲ್ಲೆಗೆ ಸರಕಾರದಿಂದೊದಗಿಸಿರುವ ಸೌಕರ್ಯಗಳು

## ಮೊನ್ನೆ ಕೃಷಿ ಮಂತ್ರಿಗಳು ಕರೆದಿದ್ದ ಮಂಗಳೂರು ಪತ್ರಿಕಾ ಪರಿಷತ್ತಿನಲ್ಲಿ ಅಧಿಕಾರಿಗಳು ಕೊಟ್ಟ ವಿವರ.

ದಿನಾಂಕ ೩೯ರಂದು ನಮ್ಮ ಕೃಷಿ ಮಂತ್ರಿಗಳಾದ ಶ್ರೀ ಎ. ಬಿ. ಶೆಟ್ಟಿಯವರು ಮಂಗಳೂರಿನಲ್ಲಿ ಪತ್ರಿಕಾ ಪ್ರತಿನಿಧಿಗಳನ್ನು, ಡಿಸ್ಟ್ರಿಕ್ಟ್ ಬೋರ್ಡು ಕಚೇರಿಗೆ ಕರೆಯಿಸಿಕೊಂಡು, ಮದ್ರಾಸು ಸರಕಾರವು ಈ ಜಿಲ್ಲೆಗಾಗಿ ಕೈಕೊಂಡ ಸರ್ವಕಾರ್ಯಗಳನ್ನೂ ತಿಳಿಸಿದರು. ನೀರಾವರಿ ಯೋಜನೆಗಳು, ಹೆಚ್ಚು ಧಾನ್ಯ ಬೆಳೆಯಿಸಲು ಮಾಡಿದ ಪ್ರಯತ್ನಗಳು, ಜಿಲ್ಲೆಯಲ್ಲಿ ಗೋವುಗಳನ್ನೂ ಕೋಳಿಗಳನ್ನೂ ಹೆಚ್ಚಿಸಲು ಕೈಕೊಂಡ ಕಾರ್ಯಗಳು ಇತ್ಯಾದಿಗಳೆಲ್ಲ ವಿವರಿಸಲ್ಪಟ್ಟವು.

ಈ ಸಂದರ್ಭದಲ್ಲಿ ಈಗ ಹಂಗಾಮಿಯಾಗಿ ಜಿಲ್ಲಾ ಕಲೆಕ್ಟರರ ಸ್ಥಾನದಲ್ಲಿರುವ ಶ್ರೀ ಎಸ್. ಯು. ಪರಶುರಾಮ ನಾಯರ್, ಕೃಷಿ ಇಲಾಖೆಯ ಜಿಲ್ಲಾಧಿಕಾರಿಗಳಾದ ಶ್ರೀ ಕೆ. ಜಿ. ಎಸ್. ಭಂಡಾರಿ, ಗೋಶಾಲಾಧಿಕಾರಿ ಡಾ. ಎಸ್. ಎ. ಶಾಸ್ತ್ರಿ, ಡಿವಿಜನಲ್ ಹೈವೇ ಇಂಜನೀಯರ್ ಶ್ರೀ ಎಂ. ಉಮ್ಮಣ್ಣ ಸೇಮಿತ, 'ಅಧಿಕಾಹಾರ ಬೆಳೆಯಿಸುವ' ಶಾಖೆಯ ಅಸಿಸ್ಟಾಂಟ್ ಇಂಜಿನಿಯರ್ ಶ್ರೀ ಎಂ. ಪ್ರೇಮಾನಂದರಾವ್ ಮುಂತಾದ ಅಧಿಕಾರಿಗಳು ತಮ್ಮ ತಮ್ಮ ಶಾಖೆಯ ಕೆಲಸಗಳನ್ನು ತಿಳಿಸುವುದಕ್ಕಾಗಿ ಸಭೆಯಲ್ಲಿ ಹಾಜರಿದ್ದರು.

### ರಾಜಕೀಯ ಸಂತ್ರಸ್ತರಿಗೆ

ಭೂದಾನವೀಯುವ ಕೆಲಸವನ್ನು ಸಭಾರಂಭದಲ್ಲಿ ತಿಳಿಸಿದರು. ಈ ಭಾಗದಲ್ಲಿ ಈ ವರೆಗೆ ೭೩೪ ಅರ್ಜಿಗಳು ಬಂದಿದ್ದು ಅವುಗಳಲ್ಲಿ ೧೨೪ ಅರ್ಜಿಗಳಿಗೆ ೧೨೩೬.೩೭ ಎಕ್ರೆಗಳಷ್ಟು ಭೂಮಿ ಕೊಡಲಾಗಿದೆ. ಕೇಳಿದ ಭೂಮಿಗಳಿಗೆ ಆಕ್ಷೇಪವಿದ್ದ ನಿಮಿತ್ತ ೧೮೭ ಅರ್ಜಿಗಳನ್ನು ತೆಗೆದು ಹಾಕಲಾಗಿದೆ. ಸಮಿತಿಯ ಪರಿಶೀಲನೆಗೆ ಇನ್ನೂ ೫೦೩ ಅರ್ಜಿಗಳು ಉಳಿದಿವೆ.

### ಕೆರೆ ಬಾವಿಗಳ ಯೋಜನೆ

ಕೆರೆ ಬಾವಿಗಳಿಗೆ ಸಹಾಯವೀಯುವಲ್ಲಿ ಎರಡು ಯೋಜನೆಗಳಿಗನುಗುಣವಾಗಿ ಈ ಜಿಲ್ಲೆಯಲ್ಲಿ ಕೆಲಸವಾಗಿದೆ. ಮೊದಲನೆ ಯೋಜನೆಯಂತೆ ೭೭ ಬಾವಿಗಳ ಬಗ್ಗೆ ರೂ. ೧೦,೫೩೦ ಸಹಾಯ ನೀಡಲಾಗಿ, ೭೪ ಬಾವಿಗಳ ಕೆಲಸ ಸಂಪೂರ್ಣವಾಗಿವೆ. ಎರಡನೆಯ ಹೊಸ ಯೋಜನೆಯಂತೆ ಸುಮಾರು ೩೧೪ ಕೆರೆ ಬಾವಿಗಳಿಗೆ ಕಳೆದ ಮೂರು ವರ್ಷಗಳಲ್ಲಿ ೧,೪೫,೧೮೦ ರೂಪಾಯಿಗಳಷ್ಟು ಸಹಾಯವನ್ನು ಮಂಜೂರು ಮಾಡಿದೆ. ಈ ವರೆಗೆ ೯೭ ಕೆರೆ ಬಾವಿಗಳ ಕೆಲಸ ಮಾತ್ರವಾಗಿದೆ, ಉಳಿದವುಗಳ ಬಗ್ಗೆ ಇದೇ ಜೂನ್ ೩೦ರ ವರೆಗೆ ಸಮಯ ಕೊಡಲಾಗಿದೆ. ಈ ಮೂರು ವರ್ಷಗಳಲ್ಲಿ ಸರಕಾರವು ನಮ್ಮ ಪ್ರಾಂತದಲ್ಲಿ ಬಾವಿ ಕೆರೆಗಳ ದುರುಸ್ತಿಗಾಗಿ ೬ ಕೋಟಿ ರೂಪಾಯಿ ಮಂಜೂರು ಮಾಡಿದ್ದರೂ ಈ ಜಿಲ್ಲೆಗೆ ಉಪಯೋಗಕ್ಕೆ ಬಿದ್ದುದು ಬಹಳ ಕಡಿಮೆಯೆಂಬುದು ಇದರಿಂದ ತಿಳಿದು ಬರುತ್ತದೆ. ಈ ಯೋಜನೆಯಿಂದ ಅಧಿಕ ಹಣದ ಉಪಯೋಗ ಪಡೆಯುವಂತೆ ರೈತರೇ ಮುಂದೆ ಬರಬೇಕೆಂದು ಮಾನ್ಯ ಮಂತ್ರಿಗಳು ತಮ್ಮ ಆಶಯವನ್ನು ವ್ಯಕ್ತಗೊಳಿಸಿದರು.

### ನೀರಾವರಿ ಯೋಜನೆಗಳು

ನೀರಾವರಿ ಯೋಜನೆಗಳಲ್ಲಿ ನಾಲ್ಕು ದೊಡ್ಡ ಯೋಜನೆಗಳಿಗೆ ಸರಕಾರದ ಮಂಜೂರಾತಿ ದೊರೆತು ಕೆಲಸವಾಗುತ್ತಿದೆ. ಇವುಗಳಲ್ಲಿ ಶಿರಿಯಾ ಅಣೆಕಟ್ಟೇ ದೊಡ್ಡದು. ಅದರ ವೆಚ್ಚವು ೬,೮೧,೭೮೦ ರೂಪಾಯಿ. ೫೪೯ ಎಕ್ರೆಗಳಲ್ಲಿ ಈ ಅಣೆಕಟ್ಟಿನಿಂದ ೨ನೇ ಮತ್ತು ೩ನೇ ಬೆಳೆ ಯಾದೀತು. ಉಳಿದವುಗಳು—ಚಾಂಬಾರ ಮದಗ ಇದರ ವೆಚ್ಚ ರೂ. ೩೭,೭೩೧, ಉಪಯೋಗ ೪೫೩ ಎಕ್ರೆಗಳಿಗೆ. ಕುಂಟನ ಕೆರೆ, ವೆಚ್ಚ ರೂ. ೧,೩೮೯ ಉಪಯೋಗ ೪೬ ಎಕ್ರೆಗಳಿಗೆ. ತಾಲಮಕ್ಕಿ ಕೆರೆ; ವೆಚ್ಚ ರೂ. ೧೪,೩೬೩, ಉಪಯೋಗ ೬೪ ಎಕ್ರೆಗಳಿಗೆ. ಈ ಮೂರು ಕೆಲಸಗಳೂ ಈ ತಿಂಗಳಲ್ಲಿ ಸಂಪೂರ್ಣವಾಗಲಿವೆ. ಮೊನ್ನೆ ಬಂದಿದ್ದ ಮಂತ್ರಿದ್ವಯರು ಇವುಗಳನ್ನು ನೋಡಿಕೊಂಡು ಬಂದಿರುತ್ತಾರೆ.

೧) ಪಾವಂಜೆ ಹೊಳೆಗೆ ಒಂದು ಸ್ಥಿರವಾದ ಕಟ್ಟವನ್ನು ಹಾಕಿ ಸಮುದ್ರದ ನೀರು ಒಳನುಗ್ಗದಂತೆ ತಡೆಯುವುದರಿಂದ ಸುಮಾರು ೨೧೬ ಎಕ್ರೆಗಳಲ್ಲಿ ಬೆಳೆ ಬೆಳೆಸಬಹುದೆಂದು ಅಂದಾಜು ಮಾಡಿ ಅದಕ್ಕಾಗಿ ೯೧,೦೫೦ ರೂ. ಮಂಜೂರಾಗಿದೆಯಲ್ಲದೆ ಕೆಲಸದ ಟೆಂಡರ್ ಕೂಡ ಸ್ವೀಕರಿಸಲ್ಪಟ್ಟಿದೆ. ಇವುಗಳಲ್ಲದೆ ಜಿಲ್ಲೆಯಲ್ಲಿ ೧೯ ನೀರಾವರಿ ಕೆಲಸಗಳ ಬಗ್ಗೆ ಸಂಶೋಧನೆ ನಡೆದು, ಅವುಗಳ ವೆಚ್ಚದ ಅಂದಾಜು ಪಟ್ಟಿಯನ್ನು ಸರಕಾರಕ್ಕೆ ಕಳುಹಿಸಿಕೊಟ್ಟಿದೆ. ಇವುಗಳಲ್ಲಿ ಹೊಸದುರ್ಗ ತಾಲೂಕಿನ ತಿಮಿರಿ ಗ್ರಾಮದಲ್ಲಿ ಸುಮಾರು ೧೦೭೦ ಎಕ್ರೆಗಳಿಗೆ ನೀರೊದಗಿಸುವುದಕ್ಕಾಗಿ ರೂ. ೩೪ ಲಕ್ಷಗಳ ವೆಚ್ಚದಿಂದ ಕಾಲ್ಕೋಟೆ ತೋಡಿನಿಂದ ಒಂದು ಜಲಾಶಯವನ್ನು ನಿರ್ಮಿಸುವುದೇ ಮುಖ್ಯವಾಗಿದೆ. ಇತರ ದೊಡ್ಡ ಕೆಲಸಗಳ ಬಗ್ಗೆಯೂ ತನಿಖೆ ನಡೆದಿರುತ್ತದೆ. ಇವುಗಳಲ್ಲಿ ಮುಖ್ಯವಾದುವು ಕುಂದಾಪುರ ತಾಲೂಕಿನ ಹಾಲಾಡಿಯಲ್ಲಿನ ಜಲಾಶಯ ಯೋಜನೆ,— ವೆಚ್ಚ ರೂ. ೫೬ ಲಕ್ಷ. ಉಪಯೋಗ ೧೦,೦೦೦ ಎಕ್ರೆಗಳಿಗೆ- ಮತ್ತು ಬಿಜೂರ್ ಜಲಾಶಯ ಯೋಜನೆ, ವೆಚ್ಚ ರೂ. ೫೦ ಲಕ್ಷ, ಉಪಯೋಗ ೨,೫೦೦ ಎಕ್ರೆಗಳಿಗೆ.

ಮೇಲಿನ ಎಲ್ಲಾ ಕೆಲಸಗಳು ಸಂಪೂರ್ಣವಾಗುವಾಗ ಈ ಜಿಲ್ಲೆಗಾಗಿ ಸುಮಾರು ೨ ಕೋಟಿ ರೂಪಾಯಿಗಳ ವೆಚ್ಚವಾದಂತಾಗುವುದು. ಇದರಿಂದಾಗಿ ಸುಮಾರು ೧೧,೧೦೫ ಟನ್ ಅಕ್ಕಿ ಉತ್ಪತ್ತಿಯಾಗಬಹುದು. ಈ ಜಿಲ್ಲೆಯಲ್ಲಿ ಯಾವ ರೀತಿಯ ನೀರಾವರಿ ಯೋಜನೆಯೂ ಸಾಧ್ಯವಿಲ್ಲವೆಂಬುದಾಗಿ ಹಿಂದಿನ ಅಭಿಪ್ರಾಯವಾಗಿದ್ದರೂ ಇಷ್ಟು ಕೆಲಸಗಳಾಗಿವೆಯೆಂದು ಮಂತ್ರಿಗಳು ತಿಳಿಸಿದರು.

ಇವುಗಳಲ್ಲದೆ ಜಿಲ್ಲೆಯಲ್ಲಿ ರೆವೆನ್ಯೂ ಶಾಖೆಯ ಸಿಬಂದಿಯ ಮೂಲಕ ೩೩ ಕೆರೆಗಳ ದುರಸ್ತಿಯ ಬಗ್ಗೆ ರೂ. ೪೭,೯೭೫ ಮಂಜೂರಾಗಿ ಕೆಲಸ ಸಾಗುತ್ತಿದೆ. ೫ ಕೆಲಸಗಳು ಕುಂಬಳೆ ಅಭಿವೃದ್ಧಿ ಕ್ಷೇತ್ರದಲ್ಲೇ ಸಾಗುತ್ತಿವೆ. ಇವುಗಳ ವೆಚ್ಚವು ಸುಮಾರು ರೂ. ೧೧,೫೭೫. ಇವುಗಳಲ್ಲದೆ ೧೭ ಸಣ್ಣ ಪುಟ್ಟ ಕೆಲಸಗಳನ್ನು ಮಂಜೂರಾತಿಗಾಗಿ ರೆವೆನ್ಯೂ ಬೋರ್ಡಿಗೆ ಕಳುಹಿಸಿರುತ್ತದೆ. ಇವುಗಳ ವೆಚ್ಚವು ಸುಮಾರು ರೂ. ೫೧,೪೦೦ ಎಂದು ಅಂದಾಜು ಮಾಡಲಾಗಿದೆ. ಇವುಗಳಲ್ಲದೆ ಪುತ್ತೂರು, ಕಾರ್ಕಳ, ಕುಂದಾಪುರ ತಾಲೂಕುಗಳಲ್ಲಿ ಸುಮಾರು ೯೯ ಸಣ್ಣ ಕೆಲಸಗಳಿವೆಯೆಂದೂ ಅವುಗಳ ತನಿಖೆ ನಡೆಯುತ್ತಿದೆಯೆಂದೂ ತಿಳಿಸಿದರು.

ಅಧಿಕ ಬೆಳೆ ಬೆಳೆಸುವುದಕ್ಕಾಗಿ ಈ ಜಿಲ್ಲೆಯಲ್ಲಿ ೮೫೫ ಎಕ್ರೆಗಳನ್ನು ರೈತರಿಗೆ ಕೊಡಲಾಗಿದೆಯೆಂದೂ ಆ ಪೈಕಿ ೫೯೩ ಎಕ್ರೆಗಳಲ್ಲಿ ಸಾಗುವಳಿಯಾಗುತ್ತಿದೆಯೆಂದೂ ಅಧಿಕಾರಿಗಳು ತಿಳಿಸಿದರು.

### ಕೃಷಿ ಇಲಾಖೆಯ ಮೂಲಕ

ಆ ಮೇಲೆ ಕೃಷಿ ಇಲಾಖೆಯ ಜಿಲ್ಲಾಧಿಕಾರಿಗಳು ತಮ್ಮ ಸಿಬಂದಿಯ ಮೂಲಕ ಆದ ಕೆಲಸಗಳ ವರದಿಯನ್ನು ತಿಳಿಸಿದರು.

ಈ ಜಿಲ್ಲೆಯ ಮುಖ್ಯ ಬೆಳೆಯಾದ ಭತ್ತವು ೬ ಲಕ್ಷ ಎಕ್ರೆಗಳಲ್ಲಿ ಉತ್ಪತ್ತಿಯಾಗುತ್ತಿದೆ. ಸರಕಾರವು ಸುಮಾರು ೧೫ ರೀತಿಯ ಬೀಜಗಳನ್ನು ಇಲ್ಲಿಯ ರೈತರಿಗೊದಗಿಸಿರುವುದು. ಕಳೆದ ವರ್ಷದಲ್ಲಿ ಸುಮಾರು ೪,೫೦೦ ಎಕ್ರೆಗಳಿಗೆ ಬೇಕಾಗುವಷ್ಟು ಬೀಜ ಒದಗಿಸಿರುವುದು. ಸುಧಾರಿತ ಬೀಜಗಳಿಂದ ಸೇ. ೧೫ರಷ್ಟು ಫಸಲು ಹೆಚ್ಚಾಗುತ್ತಿದೆಯೆಂದು ತಿಳಿದುಬಂದಿದೆ. ಸಿಬಂದಿಯ ಮತ್ತು ಡಿಪೋಗಳ ಅನಾನುಕೂಲದಿಂದಾಗಿ ಹೆಚ್ಚು ಕೆಲಸ ಮಾಡಲಾಗಲಿಲ್ಲ.

ನವೀನ ರೀತಿಯ ಗೊಬ್ಬರದ ಉಪಯೋಗವಾಗುವಂತೆಯೂ ಪ್ರಯತ್ನ ಮಾಡಿದ್ದೇವೆ. ಸಸಿಗಳಿಗೆ ಹಾನಿತರುವ ಹುಳಗಳ ನಿವಾರಣೆಗಾಗಿ ಇಬ್ಬರು ಅಧಿಕಾರಿಗಳ ನೇಮಕವಾಗಿದೆ. ನೀರಿಗಾಗಿ ರೈತರು ಪಂಪುಗಳನ್ನು ಉಪಯೋಗಿಸುವಂತೆ ಪ್ರೋತ್ಸಾಹಿಸಿದ್ದರಿಂದ ಈಗ ೨೮ ಪೆಟ್ರೋಲ್ ಪಂಪುಗಳೂ, ೪೬ ಸೀಮೆಎಣ್ಣೆ ಪಂಪುಗಳೂ, ೭೧ ಡಿಸೆಲ್ ಎಣ್ಣೆ ಪಂಪುಗಳೂ ಕೆಲಸ ಮಾಡುತ್ತಿವೆ.

ರೈತರಿಗೆ ಸಾಲಕೊಡುವ ಯೋಜನೆಯಲ್ಲಿ ಈ ಜಿಲ್ಲೆಗೆ ಮಂಜೂರಾದ ೬೦ ಸಾವಿರದಲ್ಲಿ ೫೭ ಸಾವಿರದಷ್ಟು ಈಗಾಗಲೇ ಪಾವತಿಯಾಗಿದೆ. ಬಡರೈತರಿಗೆ ರೂ. ೮೦ಕ್ಕೆ ಹೆಚ್ಚಾಗದಂತೆ ಸಾಲಕೊಡುವ ಯೋಜನೆಯಂತೆ ಕಳೆದ ವರ್ಷ ೫೦ ಸಾವಿರಗಳ ಸಾಲವೀಯಲಾಗಿದೆ.

ಆ ಮೇಲೆ ಜಿಲ್ಲಾ ಗೋಶಾಲೆಯ ಅಧಿಕಾರಿಗಳು ಬೀಜದ ಹೋರಿಗಳ ಉಪಯೋಗ, ಆಡುಗಳ ವಿತರಣೆ, ಕೋಳಿ ಸಾಕಣೆಯ ಕುರಿತು ಸರಕಾರದ ಯೋಜನೆಗಳನ್ನು ವಿವರಿಸಿ ಹೆಚ್ಚಿನ ಮಾಹಿತಿಗೆ ತಮ್ಮ ಗೋಶಾಲೆಗೆ ಬಂದರೆ ಎಲ್ಲವನ್ನೂ ತಿಳಿಸುವೆವೆಂದು ಹೇಳಿದರು. ಆ ಮೇಲೆ ಡಿವಿಜನಲ್ ಹೈವೇ ಇಂಜಿನಿಯರರು ತನ್ನ ಕೆಲಸಗಳ ವಿವರವಾದ ವರದಿಯನ್ನು ಸೋಮವಾರ ಕೊಡುವೆನೆಂದು ಹೇಳಿದ ಮೇಲೆ ಪತ್ರಿಕಾ ಪರಿಷತ್ತು ಕೊನೆಗೊಂಡಿತು.

ಮಾನ್ಯ ಮಂತ್ರಿಗಳು ಪತ್ರಿಕಾ ಪ್ರತಿನಿಧಿಗಳಿಗೆ ಲಘು ಫಲಾಹಾರವಿತ್ತು ಕಳುಹಿಸಿಕೊಟ್ಟರು.


**ಋತುಸ್ರಾವ ನಿಂತಿತು**

'ಕುಮಾರಿ' ಪಿಲ್ಲುಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹಕೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ— ಬೆಲೆ; ರೂ 3-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ. 8- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

Mrs. D. DEVEE, F. DS. (N. J.)
Tollygunge CALCUTTA.

ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು



THE

**Vijaya Bank Ltd, Karkala,**

**ಏಲಂ ನೋಟೀಸು.**

ಈ ಕೆಳಗೆ ಹೆಸರು ಕಾಣಿಸಿದವರು ಮೇಲ್ಕಾಣಿಸಿದ ನಮ್ಮ ಬೇಂಕಿನಲ್ಲಿ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ಅದರ ಬಡ್ಡಿಯನ್ನಾಗಲೀ ವಾಯಿದೆಗೆ ಸರಿಯಾಗಿ ಕೊಡದೆ ಇರುವದ್ರಿಂದ ಸದ್ರಿಯವರಿಗೆ ಕ್ರಮಪ್ರಕಾರ ನೋಟೀಸು ಪಾ ರಿಜಿಸ್ಟರ್ಡ್ ನೋಟೀಸುಗಳನ್ನು ಕೊಟ್ಟಲ್ಲಿ 3, 5, 8, 9 ಮತ್ತು 12 ನೇ ಅಸಾಮಿಗಳು ಆ ಎಡ್ರೆಸ್ಸಿನಲ್ಲಿ ಇಲ್ಲವೆಂದು ಕೊಟ್ಟ ರಿಜಿಸ್ಟರ್ಡ್ ನೋಟೀಸು ವಾಪಾಸು ಬಂದಿರುವದ್ರಿಂದ ಸದ್ರಿಯವರಿಗೆ ವಾ ಸದ್ರಿಯವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ ಸದ್ರಿ ಸಾಲಗಾರರು ಅವರಿಂದ ಸಲ್ಲಲಿಕ್ಕಿರುವ ಅಸಲು ಬಡ್ಡಿ ವಗೈರೆ ಐವೇಜನ್ನು ಇದೇ ಮೇ ತಿಂಗಳ ತಾ. 25ರ ಒಳಗೆ ಪಾವತಿ ಮಾಡದಿದ್ದರೆ ತಾರೀಕು 27-5-1950ನೇ ಶನಿವಾರ ಮಧ್ಯಾಹ್ನ ಘಂಟೆ 12ಕ್ಕೆ ಯಾ ಬೇಂಕಿಗೆ ಯುಕ್ತಕಂಡ ಇನ್ನಿತರ ದಿನಗಳಲ್ಲಿ ಪುನಃ ನೋಟೀಸು ಕೊಡದೇ ಸಾಲದ ಬಾಬ್ತು ಚಿನ್ನಾಭರಣಗಳನ್ನು ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು. ತಿಳಿದಿರಲಿ.

| ಜಂತ್ರಿ ನಂಬ್ರ | ಸಾಲದ ನಂಬ್ರ | ಹೆಸರು ಮತ್ತು ವಿಳಾಸ. | ಸಾಲದ ಮೊಬಲಗು |
|---|---|---|---|
| 1 | 371/44-5 | ಕೊಲ್ಲಮ್ಮ ಹೆಗ್ಗಡ್ತಿ, ಸದಿಯಮ್ಮ ಹೆಗ್ಗಡ್ತಿಯರ ಮಗಳು, ನಡಿಬೆಟ್ಟು, ಯರ್ಲಪಾಡಿ ಗ್ರಾಮ, ಪೋಸ್ಟ್ ನೀರೆಬೈಲೂರು. | 225—0—0 |
| 2 | 426/44-5 | ಕೆ. ವಾಸು ಶೆಟ್ಟಿಗಾರ, ಮಾಧ ಶೆಟ್ಟಿಗಾರನ ಅಳಿಯ, ಪೆರ್ವಾಜೆ, ಕಾರ್ಕಳ ಕಸ್ಬಾ. | 10—0—0 |
| 3 | 432/44-5 | ಕೆ. ತಿಮ್ಮ ಸೆಟ್ಟಿ, ವಾಸುಸೆಟ್ರ ಅಳಿಯ, ಮೇಲ್ಮನೆ, ಪಾದೆಬೆಟ್ಟು ಗ್ರಾಮ, ಪೋಸ್ಟ್ ಪಡುಬಿದ್ರಿ. | 70—0—0 |
| 4 | 538/45-6 | ಕೆ. ಎಸ್. ಮಹಮ್ಮದ್ ಸಾಹೇಬ್, ಕ್ಲಾರ್ಕ್, ತಾಲ್ಲೂಕು ಆಫೀಸ್, ಕಾರ್ಕಳ. | 60—0—0 |
| 5 | 110/46-7 | ಕೆ. ಬಾಬುರಾವ್, ಟೈಲರ್, ಕಾರ್ಕಳ. | 20—0—0 |
| 6 | 248/46-7 | ಯಮ್. ಶಾಂತಿರಾಜ ಸಾಂಡಿ, ಪಟೇಲ್ ಮಾನಾಡಿ ಗ್ರಾಮ, ಪೋಸ್ಟ್ ಶಿರ್ತಾಡಿ. | 100—0—0 |
| 7 | 410/46-7 | ರಂಗಯ್ಯ ಸೆಟ್ಟಿ, ಬಾಬ ಸೆಟ್ರ ಅಳಿಯ, ಅನಂತಶಯನ, ಕಾರ್ಕಳ. | 90—0—0 |
| 8 | 458/46-7 | ಬೊಗ್ಗು ಶೆಟ್ಟಿ, ತಮ್ಮಯ ಸೆಟ್ರ ಮಗ, ಜೆಡ್ಡು ದೊಡ್ಡಮನೆ, ಕುಕ್ಕುಂದೂರು ಗ್ರಾಮ, ಪೋಸ್ಟ್ ಕುಕ್ಕುಂದೂರು. | 40—0—0 |
| 9 | 492/46-7 | ಕೆ. ರಾಮಚಂದ್ರ ರಾವ್, ಕೆ. ನರಸಿಂಗರಾಯರ ಮಗ, ಟೀಚರ್ ಕುಕ್ಕುಂದೂರು ಶಾಲೆ, ಕಾರ್ಕಳ. | 100—0—0 |
| 10 | 666/46-7 | ಸೈಯದ್ ಸಮಿಯುಲ್ಲಾ ಸಾಹೇಬ್, ಅಕ್ಬರ್ ಸಾಹೇಬರ ಮಗ, ಕಾರ್ಕಳ. | 90—0—0 |
| 11 | 475/47-8 | ಯಮ್. ಯಸ್. ನೇಮಿರಾಜ ಭಂಡಾರಿ, ಯಚ್. ಸಿ. ಕೆ. ಅತಿಕಾರಿಯವರ ಮಗ, ಮುನಿಯಾಲು ಪೋಸ್ಟು. | 400—0—0 |
| 12 | 576/47-8 | ರಾಘವಸೆಟ್ಟಿ, ಬೈಲೂರು ಗುತ್ತು, ನೀರೆ ಬೈಲೂರು ಗ್ರಾಮ, ಪೋಸ್ಟು ಬೈಲೂರು. | 500—0—0 |

Karkala, 6—5—1950

**K. Gopalkrishna Shetty,**
Agent.

# ದಕ್ಷಿಣಕನ್ನಡ ಜಿಲ್ಲೆಯ ಕಾಂಗ್ರೆಸ್ ಪಂಚಾಯತ ಚುನಾವಣೆ

## ಇದೇ ಮೇ ತಾ. ೧೫ಕ್ಕೆ ನೊಮಿನೇಶನ್ ಮತ್ತು ತಾ ೧೬ಕ್ಕೆ ಪರಿಶೀಲನೆ. ಮತ್ತು ಪ್ರಕಟಣೆ. ಮೇ ತಾ. ೨೦ರಿಂದ ೨೫ರ ವರೆಗೆ ಚುನಾವಣೆ.

ಕಾಂಗ್ರೆಸಿನ ಹೊಸ ಘಟನೆಯ ಮೇರೆಗೆ ದಕ್ಷಿಣ ಕನ್ನಡ ಜಿಲ್ಲೆಯ ಕಾಂಗ್ರೆಸ್ ಪಂಚಾಯತಗಳ ಚುನಾವಣೆಯು ಇದೇ ಮೇ ತಿಂಗಳಲ್ಲಿ ನಡೆಯಲಿರುವುದು. ಇದೇ ಜಿಲ್ಲೆಯ ೧೫ ಸರ್ಕಲುಗಳಿಗೆ ಈ ಕೆಳಗಣ ೧೫ ಮಂದಿ ಚುನಾವಣಾ ಅಫೀಸರರು ನೇಮಿಸಲ್ಪಟ್ಟಿರುತ್ತಾರೆ. ಪ್ರತಿ ಸರ್ಕಲಿನ ಬೇರೆ ಬೇರೆ ಪಂಚಾಯತ ಸದಸ್ಯತನಕ್ಕೆ ಉಮೇದ್ವಾರರಾಗ ಬಿಟ್ಟಸುವವರು ರೂ. ಒಂದರ ಹಾಸಲನ್ನು ಆಯಾ ಸರ್ಕಲ್ ಕಾಂಗ್ರೆಸ್ ಕಮಿಟಿಯ ಆಫೀಸಿನಲ್ಲಾಗಲಿ, ಚುನಾವಣಾ ಆಫೀಸರರೊಡನಾಗಲಿ ಆಫೀಸು ಸಮಯದಲ್ಲಿ ತೆತ್ತು ಇದೇ ಮೇ ತಾ. ೧೫ ನ್ನೂ ಆ ಮೊದಲು ನೋಮಿನೇಶನು ಹಾಕತಕ್ಕದ್ದು. ನೋಮಿನೇಶನು ಪತ್ರಗಳನ್ನು ಪ್ರತಿ ಸರ್ಕಲ್ ಕಾಂಗ್ರೆಸ್ ಕಮಿಟಿ ಆಫೀಸಿನಿಂದ ಅಥವಾ ಇಲೆಕ್ಶನ್ ಆಫೀಸರರಿಂದ ಪಡಕೊಳ್ಳಬಹುದು. ಪ್ರಾಥಮಿಕ, ಅಧಿಕೃತ ಮತ್ತು ಸಕ್ರಿಯ ಸದಸ್ಯರ ಯಾದಿಗಳು ಕೂಡಾ ಆಯಾ ಸರ್ಕಲ್ ಕಾಂಗ್ರೆಸ್ ಕಮಿಟಿಯ ಆಫೀಸಿನಲ್ಲಿ ಮತ್ತು ಚುನಾವಣಾ ಅಧಿಕಾರಿಗಳ ಹಸ್ತಾ ಇರುತ್ತವೆ.

ನೋಮಿನೇಶನುಗಳ ಪರಿಶೀಲನೆಯು ಇದೇ ಮೇ ತಾ ೧೬ರಲ್ಲು ನಡೆಸಲ್ಪಟ್ಟು ಸಂಧುನಾದುವುಗಳು ಅದೇ ದಿನ ಪ್ರಕಟಿಸಲ್ಪಡುವವು. ಚುನಾವಣೆಯು ಮೇ ತಾ. ೨೦ ರಿಂದ ೨೫ರ ವರೆಗೆ ನಡೆಸಲ್ಪಡುವುದು.

ಈ ಚುನಾವಣೆಯ ಸಂಬಂಧವಾದ ಕ್ರಮನಿಯಮಗಳನ್ನೆಲ್ಲ ಆಯಾ ಸರ್ಕಲ್ ಕಾಂಗ್ರೆಸ್ ಕಮಿಟಿಯ ಆಫೀಸಿನಿಂದಾಗಲಿ, ಜಿಲ್ಲಾ ಕಾಂಗ್ರೆಸ್ ಕಮಿಟಿ ಆಫೀಸಿನಿಂದಾಗಲಿ ಪಡಕೊಳ್ಳಬಹುದು.

ನೋಮಿನೇಶನುಗಳನ್ನು ಮೇ ತಾ. ೧೫ರಲ್ಲು ಚುನಾವಣಾ ಆಫೀಸರರ ಸಮಕ್ಷಮ ಹಾಕಬಹುದು, ಇಲ್ಲವೆ ಆ ಮೊದಲು ಸರ್ಕಲ್ ಕಾಂಗ್ರೆಸ್ ಕಮಿಟಿ ಆಫೀಸಿಗೊಪ್ಪಿಸಬಹುದು.

ಸರ್ಕಲ್ ಮತ್ತು ಚುನಾವಣಾ ಅಧಿಕಾರಿ ಹೆಸರು:—

1 ಕುಂದಾಪುರ ಸರ್ಕಲ್: ಶ್ರೀ ಬಿ. ಎಸ್. ಹೆಗ್ಡೆ ಎಡ್ವೊಕೇಟ್, ಉಡ್ಪಿ.

2 ಉಡ್ಪಿ ಸರ್ಕಲ್: ಶ್ರೀ ಬಿ. ಶಿವರಾಮ ಶೆಟ್ಟಿ, ವಕೀಲ್, ಕುಂದಾಪುರ.

3 ಬ್ರಹ್ಮಾವರ ಸರ್ಕಲ್: ಶ್ರೀ ಕೆ. ನಾರಾಯಣ ರಾವ್ ಬಿ. ಎ., ಎಲ್. ಎಲ್. ಬಿ, ವಕೀಲ್ ಕುಂದಾಪುರ.

4 ಕಟಪಾಡಿ ಸರ್ಕಲ್: ಶ್ರೀ ಕೊಟ್ಟಿಕಾರ್ ಮಂಜುನಾಥ ಪೈ, ಉಡ್ಪಿ.

5 ಕಾರ್ಕಳ ಸರ್ಕಲ್: ಶ್ರೀ ಎಚ್. ರಾಮರಾಯ ಮಲ್ಯ, ಮಂಗಳೂರು.

6 ಮೂಲ್ಕಿ ಸರ್ಕಲ್: ಶ್ರೀ ಕೆ. ವಿ. ಕಾಮತ್ ಎಡ್ವೊಕೇಟ್, ಕಾರ್ಕಳ.

7 ಮೂಡಬಿದ್ರಿ ಸರ್ಕಲ್. ಶ್ರೀ ಪದ್ಮರಾಜ ಆರಿಗ ಜೈನಿ ವಕೀಲ್, ಕಾರ್ಕಳ.

8 ಬಂಟ್ವಾಳ ಸರ್ಕಲ್: ಶ್ರೀ ಎ. ಶಂಕರ ಆಳ್ವ, ಎಡ್ವೊಕೇಟ್, ಮಂಗಳೂರು.

9 ಪಾಣೆಮಂಗಳೂರು ಸರ್ಕಲ್: ಶ್ರೀ ಬಿ. ನಾರಾಯಣ ನ್ಯಾಕ್, ಮಂಗಳೂರು.

10 ಮಂಗಳೂರು ಸರ್ಕಲ್: ಶ್ರೀ ಎಚ್. ಸಂಜೀವ ಶೆಟ್ಟಿ, ಎಡ್ವೊಕೇಟ್, ಪುತ್ತೂರು.

11 ಉಪ್ಪಿನಂಗಡಿ ಸರ್ಕಲ್: ಶ್ರೀ ಕೆ. ಎಸ್. ಮಲ್ಯ ಎಡ್ವೊಕೇಟ್, ಪುತ್ತೂರು.

12 ಪುತ್ತೂರು ಸರ್ಕಲ್: ಶ್ರೀ ಎಸ್. ಚಂದ್ರಶೇಖರ್ ಬಿಜ್ಜೆ, ಮಂಗಳೂರು.

13 ಮಂಜೇಶ್ವರ ಸರ್ಕಲ್: ಡಾಕ್ಟರ್ ಕೆ. ಸಿ. ಆಳ್ವ

14 ಕಾಸರಗೋಡು ಸರ್ಕಲ್: ಡಾಕ್ಟರ್ ಪಿ. ಎಸ್. ಶಾಸ್ತ್ರಿ, ಬದಿಯಡ್ಕ.

15 ಹೊಸದುರ್ಗ ಸರ್ಕಲ್: ಶ್ರೀ ಪಿ. ಕೆ. ನಾರಾಯಣ, ಮಂಗಳೂರು.

### ದಕ್ಷಿಣ ಕನ್ನಡ ಜಿಲ್ಲಾ ಕಿಸಾನ್ ಪರಿಷತ್ತು, ಮೂಲ್ಕಿ.

ಈ ಪರಿಷತ್ತು ಇದೇ ತಾ. ೧೪ ಮತ್ತು ೧೫ ರಲ್ಲು ಮೂಲ್ಕಿಯ ಕಾರ್ನಾಡಿನಲ್ಲಿ ಜರಗಲಿರುವುದು. ಮದ್ರಾಸ್ ಸರಕಾರದ ವಿದ್ಯಾ ಮತ್ತು ಕಾನೂನು ಮಂತ್ರಿ ಶ್ರೀ ಕೆ. ಮಾಧವ ಮೆನನರು ತಾ. ೧೪ನೇ ಅಪರಾಹ್ನ ಘಂಟೆ ೨ಕ್ಕೆ ಸರಿಯಾಗಿ ಪರಿಷತ್ತನ್ನು ತೆರೆಯಲಿರುವರು.

ತಾ. ೧೩ನೇ ಸಂಜೆ ಘಂಟೆ ೫ಕ್ಕೆ ಪರಿಷತ್ತಿನ ವಿಷಯ ನಿಯಾಮಕ ಸಮಿತಿಯ ಸಭೆ ನಡೆದು, ಪರಿಷತ್ತಿನ ಮುಂದೆ ತರಲ್ಪಡುವ ನಿರ್ಣಯ, ಮತ್ತು ಕಿಸಾನ್ ಕಾಂಗ್ರೆಸಿನ ಘಟನೆ ನಿಯಮಾದಿಗಳ ಚರ್ಚೆ ನಡೆಯಲಿರುವುದು. ಆದುದರಿಂದ ಪರಿಷತ್ತಿನ ಪ್ರತಿನಿಧಿಗಳು ತಾ. ೧೩ನೇ ಸಂಜೆಗೇನೇ ಬರಬೇಕಾಗಿರುವುದು. ಪರಿಷತ್ತಿನ ಮುಂದೆ ತರುವ ನಿರ್ಣಯಗಳನ್ನು ತಾ. ೧೩ನೇ ಸಂಜೆ ೪ ಘಂಟೆಯೊಳಗೆ ಪರಿಷತ್ತಿನ ಆಫೀಸಿಗೆ ಕಳುಹಿಸತಕ್ಕದ್ದು.

ಕೆ. ಕೆ. ಶೆಟ್ಟಿ,
ಕಾರ್ಯದರ್ಶಿ,
ದಕ್ಷಿಣ ಕನ್ನಡ ಜಿಲ್ಲಾ ಕಿಸಾನ್ ಕಾಂಗ್ರೆಸ್.

---

**ಈದು ಕೊಲ್ಲಂಜೆ:**-ಶ್ರೀ ಮುಜಲ್ನಾಯ ಶಾಲೆಯ ಎರಡನೆ ವರ್ಧಂತ್ಯುತ್ಸವವು ತಾ. 30-4-50ನೆ ರವಿವಾರ ಸಾಯಂಕಾಲ ಜೂನಿಯರ್ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರ್ ಶ್ರೀ ಪಿ. ಕೃಷ್ಣರಾಯರ ಸಭಾಪತಿತ್ವದಲ್ಲಿ ಜರಗಿತು. ಶ್ರೀಯುತರುಗಳಾದ ಕೆ. ಬಿ. ಶಾಸ್ತ್ರಿ, ನಾಭಿರಾಜಕಾಡ, ಅದಿರಾಜ ಶಾಸ್ತ್ರಿ, ಚಂದ್ರರಾಜ, ಭುಜಬಲಿ ಅಧಿಕಾರಿ, ಅನಂತಭಟ್ ಮತ್ತು ಮನೋಹರರಾವ್ ಮೊದಲಾದ ಮಹನೀಯರು ಯೋಗ್ಯ ವಿಚಾರಗಳ ಕುರಿತು ಮಾತಾಡಿದರು. ಸಭಾಪತಿಗಳು ಶಾಲೆಯನ್ನು ದೇವಸ್ಥಾನವೆಂತಲೂ; ಮಕ್ಕಳನ್ನು ದೇವರೆಂತಲೂ ಜನತೆಯು ಅರಿತಾಗಲೇ ನಮ್ಮ ಜನಾಂಗದ ಏಳಿಗೆ ಎಂಬವೇ ಮೊದಲಾದ ಉತ್ತಮ ವಿಚಾರಗಳ ಕುರಿತು ಮಾತಾಡಿದರು. ಮಕ್ಕಳು ನಾಟಕ ವಿನೋದಾವಳಿಗಳಿಂದ ಪ್ರೇಕ್ಷಕರನ್ನು ಸಂತೋಷಗೊಳಿಸಿದರು.

**ಶೀರೂರು ಕಲ್ಲಾಳೆ:**—ಬೋರ್ಡು ಎಲಿಮೆಂಟರಿ ಶಾಲೆಯ ವಾರ್ಷಿಕ ವರ್ಧಂತಿಯುತ್ಸವವು ಕಳೆದ ತಾ. 23ರಲ್ಲು ಶ್ರೀ ಮುದ್ರಾಡಿ ಕೃಷ್ಣಯ್ಯ ಸೆಟ್ಟಿ, ಜಿಲ್ಲಾ ಬೋರ್ಡು ಸದಸ್ಯ, ಅವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು.

**ನಂದಿಕೂರು:**—ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ಕಳೆದ ತಾ. 29ರಲ್ಲು ಬೆಳಿಗ್ಗೆ ಧ್ವಜವಂದನೆ, ಸಂಜೆ ಶ್ರೀ ಮೂಲ್ಕಿ ರಾಮಕೃಷ್ಣ ಪೂಂಜರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಭಾಷಣ, ಬಹುಮಾನ ವಿತರಣ, ವಿವಿಧ ವಿನೋದಾವಳಿ ಕಾರ್ಯಕ್ರಮಗಳಿಂದ ಸಾಂಗವಾಗಿ ಜರಗಿತು.

**ದ. ಕ. ಲೋಕ ಸೇವಾ ಸಂಘಕ್ಕೆ** ಸದಸ್ಯರನ್ನು ಸೇರಿಸುವ ಉದ್ದೇಶದಿಂದ ಸಂಘದ ವ್ಯವಸ್ಥಾಪಕರಾದ ಶ್ರೀ ಎಚ್. ರಾಮರಾಯ ಮಲ್ಯರು ಬಂಟ್ವಾಳ (ಇದೇ ತಾ10) ಮೂಲ್ಕಿ (ತಾ 14) ಕಾರ್ಕಳ (ತಾ 18) ಕುಂದಾಪುರ (ತಾ 20) ಉಡುಪಿ (ತಾ 21) ಉಪ್ಪಿನಂಗಡಿ (ತಾ 28) ಕುಂಬಳೆ (ತಾ 30) ಹೊಸದುರ್ಗ (ತಾ 31) ಬಜ್ಪೆ (ಜೂನ್ ತಾ 2) ಮಂಗಳೂರು (ಜೂನ್ ತಾ 4) ಪ್ರದೇಶಗಳಲ್ಲಿ ಸಭೆಗಳನ್ನು ಜರಗಿಸುವರು.

---

**ಮಂಗಳೂರು:**— ಈ ತಾಲೂಕಿನ ಬೋರ್ಡು ಎಲಿಮೆಂಟರಿ ಶಾಲಾ ಉಪಾಧ್ಯಾಯರ ಯೂನಿಯನ್ನಿನ ವಾರ್ಷಿಕ ಮಹಾಸಭೆಯು ಕಳೆದ ತಾ 30ರಲ್ಲು ಮಂಗಳೂರು ಗಣಪತಿ ಶಾಲೆಯಲ್ಲಿ ಶ್ರೀ ಬಿ. ಎಸ್. ಭಾಸ್ಕರ ರೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಯೂನಿಯನ್ ಕಾರ್ಯದರ್ಶಿ ಶ್ರೀ ಬಿ. ಭೋಜರಾಯರು ವರದಿಯನ್ನೋದಿದ ಬಳಿಕ ಈ ಕೆಳಗಿನ ನಿರ್ಣಯಗಳಾದುವು:

1936ಕ್ಕೆ ಪೂರ್ವದಲ್ಲಿರುವ ಬೋರ್ಡು ಎಲಿಮೆಂಟರಿ ಶಾಲಾ ಉಪಾಧ್ಯಾಯರಿಗೆ ದೊರಕುವಷ್ಟೆ ವೈದ್ಯಕೀಯ ರಜೆ ಮತ್ತು ಸಂಬಳದ ಸೌಕರ್ಯಗಳು ಅನಂತರ ನೇಮಕವಾದವರಿಗೂ ದೊರೆಯಬೇಕು. ಸರಕಾರಿ ಶಾಲೆಗಳಷ್ಟೇ ಸಂಬಳ ದೊರೆಯಬೇಕು. ಈ ಕೇಂದ್ರ ಸಭೆಗಳ ದಿನಗಳು ಸೇರಿ 230 ದಿನಗಳ ಕೆಲಸ ಮಾಡಬೇಕಾದುದನ್ನು 220 ದಿವಸಗಳಿಗಿಳಿಸಬೇಕು. ಜಿಲ್ಲಾ ಬೋರ್ಡು ಮತ್ತು ಪಂಚಾಯತ ಬೋರ್ಡುಗಳಲ್ಲಿ ಉಪಾಧ್ಯಾಯರ ಪ್ರತಿನಿಧಿಯೋರ್ವನಿರಬೇಕು. ವಾರದಲ್ಲಿ ಐದೇ ದಿವಸ ಕೆಲಸವಿರುವಂತಾಗಬೇಕು. ಈ ಉಪಾಧ್ಯಾಯರ ಮಕ್ಕಳಿಗೆ ಕನಿಷ್ಠ ಎಸ್. ಎಸ್. ಎಲ್. ಸಿ. ವರೆಗಾದರೂ ಧರ್ಮಾರ್ಥ ಶಿಕ್ಷಣ ದೊರೆಯುವ ವ್ಯವಸ್ಥೆ ಮಾಡಬೇಕು. ಪ್ರೊವಿಡೆಂಟ್ ಫಂಡಿನಿಂದ ಸೇಕಡಾ 80 ಸಾಲಪಡೆಯುವ ವ್ಯವಸ್ಥೆ ಮಾಡಬೇಕು ಎಂದು ಮುಂತಾದ ತೀರ್ಮಾನಗಳಾದುವು.

**ನಗರ ಸಭೆಯು:**-ಕಳೆದ ತಾ. 30ರಲ್ಲಿ ಶ್ರೀ ಎಲ್. ಸಿ. ಪಾಯಸರ ಅಧ್ಯಕ್ಷತೆಯಲ್ಲಿ ಜರಗಿತು. ಪೇಟೆಗಳ ವಿಸ್ತರಣ, ರಸ್ತೆಗಳ ದುರಸ್ತಿ, ಶಾಲೆಗಳ ರಿಪೇರಿ ಮೊದಲಾದುವುಗಳಿಗೆ ಹಣ ಮಂಜೂರಾಯಿತು. ಬಸ್‌ಸ್ಟ್ಯಾಂಡ್ ಕಮಿಟಿಯಿತ್ತ ಸೂಚನೆಯಂತೆ ಬಸ್ಸುಗಳ ಮೇಲಣ ತೆರಿಗೆಯನ್ನು ಮುನಿಸಿಪಲ್ ನೌಕರರೇ ವಸೂಲು ಮಾಡಬೇಕು. ಟಿಕೇಟು ಕೊಡುವ, ಸಾಮಾನು ಇಳಿವ ಕೊಟಡಿಗಳನ್ನು ಕಂಬೈಂಡ್ ಮತ್ತು ಕೂರ್ಗ್ ಮೋಟಾರ್ ಕಂಪೆನಿಗಳಿಗೆ ಬಾಡಿಗೆಗೆ ಕೊಡಬೇಕು. ಇತರ ಕೋಣೆಗಳನ್ನು ಬಹಿರಂಗವಾಗಿ ಏಲಂ ಮಾಡಬೇಕು ಎಂದು ಮುಂತಾಗಿ ತೀರ್ಮಾನಗಳಾದುವು.

ದ. ಕ. ಜಿಲ್ಲಾ ಸಿ. ಭಾ. ವೈದ್ಯ ಸಂಘದ ಮಹಾಸಭೆಯಲ್ಲಿ ವೈದ್ಯರಾದ ಯ. ಚ್. ತಿಮ್ಮಪ್ಪ ಪಂಡಿತ, ಕೆ. ಶ್ಯಾಮಭಟ್, ಬಿ. ಆರ್. ಹರಿದಾಸ್, ಎ. ವೆಂಕಪ್ಪಯ್ಯ, ಮತ್ತು ಎಮ್. ಆರ್. ಜೋಸ್ ಇವರುಗಳನ್ನು ಕ್ರಮವಾಗಿ ಅಧ್ಯಕ್ಷ ಉಪಾಧ್ಯಕ್ಷ ಖಜಾನ್ಜಿ ಮತ್ತು ಜತೆಕಾರ್ಯದರ್ಶಿಗಳನ್ನಾಗಿ ಆರಿಸಲಾಯಿತು. ಈ ತಿಂಗಳ ಮೂರನೆ ವಾರದಲ್ಲಿ ಕಾರ್ಕಳದಲ್ಲಿ ಜರಗಲಿರುವ ಅಖಿಲ ಕರ್ನಾಟಕ ಮತ್ತು ಜಿಲ್ಲಾ ಆಯುರ್ವೇದ ಸಮ್ಮೇಳನಗಳಿಗೆ ಸಹಾನುಭೂತಿ ತೋರಿಸಿ ಅವು ಯಶಸ್ವಿಯಾಗುವಂತೆ ಸಹಾಯ ನೀಡಬೇಕೆಂದಾಯಿತು.

---

## NOTICE

In the Court of the District Munsif of Coondapur.

R. E. P. No. 78/1950 in
O. S. 569/49

Between

Victor Denis Pikardo— Petitioner.

and

Abdulla Saheb— Respondent.

To

Abdulla Saheb son of Mahammad Saheb, residing at Bengre of Kody village, Udipi Taluk.

Please take notice that the above execution filed by the petitioner for the recovery of amounts due to the petitioner as per decree obtained in O. S. No. 569/49 on 6-12-49 stands posted to 5-6-1950. If you fail to appear on that day at 11 A.M. before the said court either in person or through duly instructed pleader you will be set exparte and your arrest will be ordered for the recovery of the amount as Caimed in the execution petition and costs of E. P.

**K. Ramappayya,**
Advocate for petitioner.

Coondapur, 3-5-1950.




Approved from by the Govt. of Mysore Certificated by the Agent of the Govt of Cylone & India.



"ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

**ಗೀತೆಯ ಕೈಗನ್ನಡಿ**

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು-ದಿ| ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಮಾತುಗಳ ರೂಪದಲ್ಲೀದ ಛಟ್ಟಿಯಾಗಿ ಎದ್ದು ಕಾಣುವುದು.

**400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.**

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

**ನವಯುಗ ಪ್ರೆಸ್, ಉಡುಪಿ, ದ. ಕನ್ನಡ.**

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

# ನಮ್ಮ ಹಳ್ಳಿಗಳು

ಶ್ರೀ. ಸಿ. ಪಬ್‌ ಶೆಟ್ಟಿ.

ನಾವೀಗ ಪರರಾಷ್ಟ್ರದವರ ಆಡಳಿತೆಯನ್ನು ತೆಗೆದು ಹಾಕಿರುವದಾದರೂ ಸಂಪೂರ್ಣ ಸ್ವತಂತ್ರವು ನಮಗೆ ದೊರೆಯಲಿಲ್ಲ. ರಾಜಕೀಯ ಸ್ವತಂತ್ರವನ್ನು ಪಡೆದಿರುವೆವೇ ಹೊರತು ಆರ್ಥಿಕ ಮತ್ತು ಸಾಮಾಜಿಕ ಸ್ವತಂತ್ರವನ್ನು ಗಳಿಸಬೇಕಾಗಿದೆ. ಸಾರ್ವಜನಿಕರ ಬಡತನ ಸುಧಾರಿಸಿದ ವಿನಹಾ ನಿಜವಾದ ಸ್ವಾತಂತ್ರ್ಯ ಸಿಕ್ಕದು. ಇದಾಗಬೇಕಾದರೂ ಸಾರ್ವಜನಿಕರ ಪ್ರಧಾನ ಅನುಪತ್ಯಗಳಾದ ಆಹಾರ ವಸ್ತ್ರ ಮತ್ತು ಆಶ್ರಯಗಳ ಕೊರತೆಗಳನ್ನು ಹೋಗಲಾಡಿಸಬೇಕಾಗಿಯದೆ. ನಮ್ಮ ದೇಶವು ವ್ಯವಸಾಯ ರಾಷ್ಟ್ರವಾಗಿದೆ, ಶೇಕಡಾ ತೊಂಭತ್ತರಷ್ಟು ಜನರು ಹಳ್ಳಿಗಳಲ್ಲಿ ವಾಸಿಸಿರುವರು, ಇವರ ಬಂಧನ ವಿಮೋಚನೆಯಾಗದೆ ದೇಶದ ಏಳಿಗೆಯಾಗದು. ಆದ್ದರಿಂದ ನಮ್ಮ ಸರಕಾರವು ಅದ್ಭುತ ಉದ್ಯಮಗಳ ಯೋಜನೆಗಳಲ್ಲಿ ಕೈಹಾಕುವ ಮೊದಲು ಹಳ್ಳಿಗರ ಗರಜು ತೀರಿಸುವದುತ್ತಮ.

ಪೂರ್ವ ಕಾಲದಲ್ಲಿ ಹಳ್ಳಿಗಳು ಯಾವ ರೀತಿಯಲ್ಲಿದ್ದವು ಎಂಬುದನ್ನು ತಿಳಿದವಿನಹಾ ಮುಂದಿನ ಸುಧಾರಣೆ ಕ್ರಮವು ನಮಗೆ ಸೂಚಿಸದು. ಬೇಸಾಯವೇ ನಮ್ಮ ವೈಶಿಷ್ಟ್ಯ. ದೇಶದ ಶೇಕಡ 90ರಷ್ಟು ಜನರು ಹಳ್ಳಿಗಳಲ್ಲಿರುವರು, ಇವರ ಪೈಕಿ ಎಪ್ಪತ್ತೆರಡು ಜನರು ಒಕ್ಕಲುತನದವರೇ. ಉಳಿದ ಹದಿನೆಂಟು ಜನರು ಒಂದಲ್ಲದಿದ್ದರಿನ್ನೊಂದು ರೂಪದಲ್ಲಿ ಇವರಿಗೆ ಸಹಾಯಕ ಉದ್ಯೋಗವನ್ನು ಕೈಕೊಂಡು ಇವರನ್ನೇ ಹೊಂದಿರುರು ಮನೆಗಳೆಲ್ಲಾ ಪ್ರತ್ಯೇಕವಾಗಿ ಒಂದು ಕೂಗಿನ ವರೆಗೂ ದೂರವಾಗಿವೆ. ಈ ಹಳ್ಳಿಗಳು ಗುಡ್ಡಗಾಡುಗಳಿಂದ ದೊಳೆಹಳ್ಳಗಳಿಂದ ಬೇರಾಗಿವೆ ಮತ್ತು ಸೇತುವೆ, ಸಂಕ ಮತ್ತು ರಸ್ತೆಗಳ ಪ್ರಯಾಣ ಸೌಕರ್ಯಗಳಿರದೆ ಗ್ರಾಮಗ್ರಾಮಗಳೊಳಗೆ ವಹಿವಾಟು ಬಹಳ ಕಡಿಮೆ. ಯಾವಾಗಲೂ ಹೊರಗಿನಿಂದ ಗ್ರಾಮಕ್ಕೆ ತರಬೇಕಾದ ಉಪ್ಪು ಸಕ್ಕರೆ ಮತ್ತು ಕೆರೋಸಿನ್ ಎಣ್ಣೆ ಮೊದಲಾದುವನ್ನು ಮಳೆಗಾಲದ ಖರ್ಚಿಗಾಗಿ ಬೇಸಿಗೆಯಲ್ಲೇ ತಂದಿಟ್ಟುಕೊಳ್ಳುವರು. ಚಿಕ್ಕ ಚಿಕ್ಕ ಸ್ವತಂತ್ರ ಬೇಸಾಯಗಾರರಾದ್ದರಿಂದ ಗ್ರಾಮಾಭಿವೃದ್ಧಿಯ ಬಗ್ಗೆ ಹೇರಳ ಹಣವು ಬೇಡ. ಸಾಗುವಳಿ ಉಪಯೋಗಕ್ಕೆ ಬೇಕಾಗುವ ಸಾಧನಗಳನ್ನು, ಸಣ್ಣ ಸಣ್ಣ ಕೈಗಾರಿಕೆಗಳಿಂದ ತಾವೇ ತಯಾರಿಸಿಕೊಳ್ಳುವದಾದ್ದರಿಂದ ಉದ್ಯಮ ಪ್ರವೀಣರ ಆಗತ್ಯವಿಲ್ಲ. ನಿತ್ಯ ಜೀವನಕ್ಕೆ ಬೇಕಾಗುವ ಸಕಲ ಸೌಕರ್ಯಗಳನ್ನು ತಾವೇ ಒದಗಿಸಿಕೊಳ್ಳುವದಾದ್ದರಿಂದ ಪರಿಮಾಣಟು ಕಡಿಮೆಯಾಗಿ ಸ್ಪರ್ಧೆಗೆ ಎಡೆಯಿಲ್ಲ. ಎಲ್ಲಾ ಗ್ರಾಮಗಳಲ್ಲಿಯೂ ಕುಂಬಾರ, ಕಮ್ಮಾರ, ಚಮ್ಮಾರ, ಕ್ಷೌರಿಕ, ಬಡಗಿ, ಮಡಿವಾಳ ಮತ್ತು ಪುರೋಹಿತ ಮೊದಲಾದ ವೃತ್ತಿಯವರಿರುವರು. ದೊಡ್ಡ ಹಳ್ಳಿಗಳಲ್ಲಿ ಗಾಣಿಗ ಮತ್ತು ನೂಲು ನೇಯುವವರು ಸಹಾ ಇರುವರು. ಈ ಉಪವೃತ್ತಿಯವರಿಗೆ ಮಜೂರಿಯನ್ನು ನಗದಾಗಿ ಕೊಡುವ ಸಂಪ್ರದಾಯವಿಲ್ಲ. ಕೆಲವರಿಗೆ ಗದ್ದೆಗಳನ್ನೇ ಕಲಬಿಗಾಗಿ ಬಿಟ್ಟಿರುವರು. ಇನ್ನು ಕೆಲವರಿಗೆ ಧಾನ್ಯದವಸಗಳನ್ನೇ ಕೊಡುವರು. ಈ ರೀತಿಯಲ್ಲಿ ಹಳ್ಳಿಗರು ಯಾರ ಹಂಗೂ ಇಲ್ಲದೆ ತೃಪ್ತಿಕರವಾದ ಜೀವನ ನಡಸಿಕೊಂಡಿದ್ದರು. ರಾಜ್ಯಾಡಳಿತವು ಒಬ್ಬರ ಕೈತಪ್ಪಿ ಇನ್ನೊಬ್ಬರಿಗಾದರೂ ದೇಶವು ಅಲ್ಲೋಲಕಲ್ಲೋಲವಾದರೂ ಯಾವ ಗಡಿಬಿಡಿಯೂ ಇಲ್ಲದೆ ನೆಮ್ಮದಿಯಾಗಿ ಜೀವಿಸಿಕೊಂಡಿದ್ದರು.

ಹಳ್ಳಿಗಳಲ್ಲಿ ಪಂಚರು ಅಥವಾ ಹತ್ತರ ಪಂಚಾಯಿತರು ಪ್ರಾಚೀನ ಕಾಲದಿಂದಲೂ ಇರುವರು, ಇವರು ಜಾತಿ, ಮತ, ರೆವೆನ್ಯು, ಕ್ರಿಮಿನಲ್ ಮತ್ತು ಸಿವಿಲ್ ವಿವಾದಗಳನ್ನು ತೀರ್ಮಾನಿಸುತ್ತಿದ್ದರು. ಇವರು ಹಳ್ಳಿಯ ಧರ್ಮಪಾಲನೆ ಮಾಡುವವರೆಂಬ ಭಾವನೆಯಿರುವದರಿಂದ ಇವರ ತೀರ್ಮಾನದಂತೆ ಎಲ್ಲರೂ ನಡೆಯುತ್ತಿದ್ದರು. ಗ್ರಾಮಗ್ರಾಮಗಳೊಳಗೆ ಸಭಾ ಪಂಚಾಯಿತರಿರುವರು. ಹಳ್ಳಿಗಳು ಪ್ರಾಚೀನ ಪದ್ಧತಿಯ ತೌರುಮನೆಯಾದರೂ ಜಾತಿಭೇದ ಮತ್ತು ಸಾಮಾಜಿಕ ಅಸಮಾನತ್ವಗಳಿಂದ ನಾರುತ್ತಿದ್ದರೂ ಜನರು ಸ್ವೈರಣೆಯಿಂದ ಏಕಮತದಿಂದ ಮತ್ತು ಹಿತದಿಂದ ಜೀವಿಸಿದ್ದರು.

ಹಿಂದಿನ ಕಾಲದಲ್ಲಿ ಸಾಗು ಮಾಡುವರೆ ಭೂಮಿಗಾಗಿ ಬೇಸಾಯಗಾರರೊಳಗೆ ಮೇಲಾಟವಿಲ್ಲ. ಭೂಮಾಲಿಕರು ಒಕ್ಕಲುಗಳಿಗಾಗಿ ಸ್ಪರ್ಧಿಸುತ್ತಿದ್ದರು. ದೇಶದಲ್ಲಿ ನೆಲೆಯಾದ ಸರಕಾರವಿಲ್ಲದ್ದರಿಂದ ರೈತರು ಒಂದೇ ಸ್ಥಳವನ್ನು ನಂಬಿಕೊಂಡಿರಲಿಲ್ಲ. ದಂಗೆಕೋರರನ್ನು ಕಳ್ಳರನ್ನು ಹೊಡೆದೋಡಿಸುವ ಬಗ್ಗೆ ಭೂಮಾಲಿಕರಿಗೆ ಒಕ್ಕಲುಗಳ ಸಹಾಯ ಬೇಕಿದ್ದುದರಿಂದ ಸ್ವೇಚ್ಛೆಯಿಂದ ವರ್ತಿಸದೆ ಪೂರ್ವಾಚರಣೆ ಮತ್ತು ಪದ್ಧತಿಯಂತೆ ನಡಕೊಂಡು ಒಕ್ಕಲುಗಳ ಮನ ನೋಯಿಸಲಿಚ್ಛಿಸಲಿಲ್ಲ.

ಕಾಲವು ಕಳೆದಂತೆ ಕ್ರಮವು ಬದಲಾಯಿತು. ದೇಶದಲ್ಲಿ ಸ್ಥಾಯಿ ಸರಕಾರ ಸ್ಥಾಪನೆಯಾಗಿ ಶಾಂತಿಯು ನೆಲೆಯಾಯಿತು. ಜನಸಂಖ್ಯೆಯು ಹೆಚ್ಚಿತು. ಸಾಗು ಮಾಡಲು ಕಷ್ಟಲವಾಗಿ ಸ್ಪರ್ಧೆಯೆಲ್ಲಾ ಕಾಣಿಸಲಾರಂಭಿಸಿತು. ಒಕ್ಕಲುಗಳಿಗೆ ಹೊಲಗಳ ಬಗ್ಗೆ ಪೈಪೋಟಿ ನಡೆಯಲಾರಂಭವಾಯಿತು, ನಗರವಾಸಿಗಳಿಗೆ ಹಿತ್ತಿಲಗಳ ಆದಾಯವೇ ಹಿರಿದು ತೋರಿಯಿತು. ಪರದೇಶದಿಂದ ಯಾಂತ್ರಿಕ ಸೊತ್ತುಗಳು ಅಗ್ಗವಾಗಿ ದೊರೆತು ಗ್ರಾಮ ಕೈಗಾರಿಕೆಗೆ ಧಕ್ಕೆ ಬಂತು. ನ್ಯಾಯಸ್ಥಾನದಲ್ಲಿ ಬ್ರಿಟಿಷ್ ಕ್ರಮದ ಭೂಮಿಯ ಹಕ್ಕು ಸ್ಥಾಪಿತವಾಗಲು ಒಕ್ಕಲುಗಳ ಕಷ್ಟವು ಹೆಚ್ಚಾಯಿತು. ಹಿತವಿಲ್ಲದ ಒಕ್ಕಲುಗಳನ್ನು ತೆಗೆದು ಹಾಕಲು ಒಡೆಯನಿಗೆ ಅನುಕೂಲವಾಯಿತು. ಪದ್ಧತಿ ಮತ್ತು ಆಚರಣೆ ಪ್ರಕಾರ ಭೂಮಾಲಿಕರಿಗೆ ಪ್ರತಿಬಂಧಕವಿರುವದಾದರೂ ಒಂದು ಒಕ್ಕಲು ಹೋಗಿ ಮತ್ತೊಂದು ಬರುವಾಗ ಗೇಣಿ ಹೆಚ್ಚಿಸಲು ಅವಕಾಶವಾಯಿತು, ಕೆಲವು ನಿಪುಣ ಭೂಮಾಲಿಕರು ನಾನಾ ತರದ ಕರಕಂದಾಯಗಳನ್ನು ಹೊರಿಸುತ್ತಿದ್ದರು. ವರ್ಗದಾರರ ಉಪಯೋಗಕ್ಕಾಗಿ ಆಳುಗಳನ್ನೂ ಜಾನುವಾರುಗಳನ್ನೂ ಬಿಟ್ಟಿ ಬೇಗಾರಿಯಾಗಿ ಕೊಡುವ ಸಾಂಪ್ರದಾಯ ಉಂಟು. ನ್ಯಾಯವರಿತು ಮಾಡತಕ್ಕ ತನ್ನ ಕೆಲಸವನ್ನು ಬಿಟ್ಟು ಒಡೆಯನ ಬಗ್ಗೆ ದುಡಿಯಬೇಕಾಗಿಯದೆ. ಇದಕ್ಕೆ ವಿರೋಧವಾಗಿ ನಡೆದಲ್ಲಿ ವರ್ಷದ ಅಂತ್ಯದಲ್ಲಿ ಒಕ್ಕಲುತನವನ್ನು ತೆಗೆದು ಹಾಕುವರು.

ವ್ಯವಸಾಯದ ಕಸಬೇ ಹೊರತು ಬೇರಾವ ಉಪ ಉದ್ಯೋಗವಿಲ್ಲದ ನಮ್ಮ ಹಳ್ಳಿಗರು ಇವರ ಶರ್ತಗಳಿಗೆ ತಲೆ ಬಾಗದೆ ಅನುಕೂಲವಿಲ್ಲ. ಬರೇ ಸಾಗುವಳಿಯಿಂದ ಈ ಕಾಲದಲ್ಲಿ ಜೀವನ ನಡೆಸುವದು ಕಷ್ಟ. ವರುಷದಲ್ಲಿ ಸುಮಾರು ಮೂರು ನಾಲ್ಕು ತಿಂಗಳು ನಿರುದ್ಯೋಗಿಗಳಾಗುವ ಕಾರಣ ಉಪವೃತ್ತಿಗಳು ಬೇಕಾಗಿವೆ. ಪೂರ್ವಕಾಲದಲ್ಲಿ ನಮ್ಮ ದೇಶದ ಉಪ ಉದ್ಯೋಗಗಳು ಹೇಗಿದ್ದವು ಎಂಬುದನ್ನು ತಿಳಿಯಬೇಕಾಗಿದೆ. ಬಂಗಾಳದ ಹಿಂದಿನ ಗವರ್ನರಾಗಿದ್ದ ಲೋರ್ಡ್ ಕಾರ್ನ್‌ವೇಲೀಸರ ಆದಮಸ್ತ್ರದ ಪ್ರಕರಣವನ್ನು ಪರಿಶೀಲಿಸಿದರೆ ಮಂದಟ್ಟಾಗುತ್ತದೆ. ನಮ್ಮಲ್ಲಿ ಪರಸ್ಪರ ಸಹಾಯಕ ಸಂಸ್ಥೆಗಳು ಸ್ಥಾಪನೆಯಾಗಿರುವವಾದರೂ ಒಕ್ಕಲುತನ ಮಸೂದೆ, ಡೆಟ್ ರಿಲೀಫ್ ಆಕ್ಟುಗಳು ಜ್ಯಾರಿಯಲ್ಲಿರುವದಾದರೂ ಒಂದು ಕೀಳಾಂಶವನ್ನು ಮಾತ್ರ ಸುಧಾರಿಸಿವೆ.

ಈಗಿನ ಕಾಲದ ಭೂಮಾಲಿಕರು ಪೇಟೆ ಪಟ್ಟಣಗಳ ಸುಖ ಮತ್ತು ಅನುಕೂಲತೆಗಳನ್ನಾಶಿಸಿ ಹಳ್ಳಿ ವಾಸವನ್ನು ತ್ಯಜಿಸಿ ಗೇಣಿ ವಸೂಲಿಗಾಗಿ ಮಾತ್ರ ಬರುವರು. ಕೆಲವರು ಇದಕ್ಕೂ ಬೇರೆ ಜನರನ್ನು ನೇಮಿಸಿರುವರು. ಇಂಥಾ ಗೈರು ಹಾಜರಿಯ ಜಮೀನ್ದಾರರು ಅನೇಕರಿರುವರು. ಹೀಗಾಗಿ ಗ್ರಾಮಗಳಲ್ಲಿ ದಕ್ಷ ನಿರ್ವಾಹಕರಿಲ್ಲದೆ ಶಾಂತತೆಯು ನಾಶವಾಗಿದೆ.

ಕಟ್ಟೆಗೆ ಪುರಾತನದ ವ್ಯಾಪಾರದಿಂದ ಜಣ ಕಾಲಿಪಾಡಿಸಿದ ಆಳೆಯಿಂದ ಪಟ್ಟಣಗಳಲ್ಲಿರುವ ಮುಲಕಟ್ಟುಗಳೆಲ್ಲಾ ನಾಶವಾದವು, ಸರಕಾರವು ಇತ್ತೀಚಿಗೆ ನೂರು ಗಜದ ಕುಮ್ಕಿ ಹಾಕ್ಕಿನ ಸ್ಥಳಗಳನ್ನು ದರ್ಖಾಸ್ತಿಗೆ ಕೊಡಕೂಡದೆಂತ ಆಜ್ಞೆ ಹೊರಡಿಸಿರುವದರಿಂದ ರೆವೆನ್ಯೂ ಕಾಡು ಸ್ವಲ್ಪ ಉಳಿದಿದೆ. ಇಂಥಾ ಸ್ಥಳಗಳನ್ನು ಆಹಾರೋತ್ಪತ್ತಿಯ ಬಗ್ಗೆ ಉಪ ಆಹಾರ ಒದಗಿಸುವವರಿಗೆ ಮಾತ್ರ ಕೊಡಬಹುದು. ಗುಡ್ಡಗಳಾಗಿದ್ದಲ್ಲಿ ಮಳೆ ಜಾಸ್ತಿ ಮತ್ತು ಭೂಮಿಯ ಮಣ್ಣು ನೀರಿನೊಟ್ಟಿಗೆ ಹೋಗುವದನ್ನು ತಡೆಗಟ್ಟುತ್ತದೆಂಬುದನ್ನು ಜನರಿನ್ನೂ ಅರಿತಿಲ್ಲ. ವ್ಯವಸಾಯಗಾರರಿಗೆ ದರಲೆ, ಸೊಪ್ಪು, ಕಟ್ಟಿಗೆ ಮುಂತಾದ್ದರಿಂದ ಸಾಗುವಳಿಗೆ ಪ್ರಯೋಜನ ಬೀಳುತ್ತದೆ.

ವ್ಯವಸಾಯಗಾರರು ದೇಶದ ಬೆನ್ನೆಲುಬಿನಂತಿರುವವರು. ಅವರ ನಿಜಸ್ಥಿತಿ ವಿಚಾರಿಸುವಾಗ ನಾವು ಹೆಮ್ಮೆಪಡುವದರ ಬದಲಿಗೆ ದುಃಖಸೂಚಿಸಬೇಕಾಗಿದೆ. ಹೆಚ್ಚು ಜನರಿಗೆ ಹೊಟ್ಟೆ ತುಂಬಾ ಊಟ ಮಾಡುವರೆ ಅನ್ನವಿಲ್ಲ. ಉಡುವರೆ ವಸ್ತ್ರವಿಲ್ಲ, ಆಶ್ರಯಕ್ಕೆ ಮನೆ ಇಲ್ಲ. ಒಂದೆರಡು ಜನರು ಮಲಗುವ ಸ್ಥಳದಲ್ಲಿ ಆರೇಳು ಜನರು ಮಲಗುವರು. ಸಣ್ಣ ಸಣ್ಣ ಕೊಟ್ಟಡಿಗಳಲ್ಲಿ ಎಂಟು ಯಾ ಹತ್ತು ಜನರು ವಾಸಿಸುವರು. ಮನೆಯಲ್ಲಿ ಬೆಳಕಿಲ್ಲ, ಗಾಳಿ ಇಲ್ಲ. ಕೆಲವು ಕಡೆಗಳಲ್ಲಿ ಈ ಕೊಟ್ಟಡಿಗೆ ಪಾರ್ಶ್ವ ಮಾಡು ವ ಕುಂ... ಮಾಡು ಮಾಡಿ ಬಚ್ಚಲ ಮನೆಗೆ ಸೇರಿಸು... ವರು. ಇನ್ನು ಕೆಲವು ಕಡೆ ಜಾನುವಾರು ಕೊಟ್ಟಿಗೆ ಕೂಡಿಸುವರು. ಅನೇಕ ಕಡೆಗಳಲ್ಲಿ ಕುಡಿಯುವ ನೀರಿನ ಅನುಕೂಲತೆಯು ಇಲ್ಲದೆ ಸಮೀಪದ ಹಳ್ಳದ ಅಥವಾ ತೋಡಿ... ಅಥವಾ ಕೆರೆಯ ನೀರನ್ನು ಕುಡಿಯುವರು. ಇನ್ನು ಕೆಲವೆಡೆಯಲ್ಲಿ ಕೃತಕ ಹೊಂಡದಿಂದ ನೀರು ತರುವರು. ಬಾವಿಗಳಿಗೆ ಆವರಣವಿಲ್ಲ, ಸುತ್ತುಮುತ್ತಲಿನ ನೀರು ಬಾವಿಗೆ ಪುನಃ ಹರಿದು ಹೋಗುವದುಂಟು. ಬಾವಿಯ ಸುತ್ತಲೂ ನೀರು ನಿಂತು ಮಣ್ಣು ಕೊಳೆತು ನಾರುತ್ತದೆ, ಸ್ನಾನವನ್ನು ಅಲ್ಲೇ ಮಾಡುವರು, ವಸ್ತ್ರವನ್ನು ಅಲ್ಲೇ ಒಗೆಯುವರು ಅಡಿಗೆ ಪಾತ್ರಗಳನ್ನು, ಊಟದ ಬಟ್ಟಲುಗಳನ್ನು ಅಲ್ಲೇ ತೊಳೆಯುವರು. ಮಕ್ಕಳ ಮಲಮೂತ್ರದ ವಸ್ತ್ರಗಳನ್ನು ಸಹಾ ಬಾವಿಯ ಸಮೀಪ ಚೊಕ್ಕ ಮಾಡುವರು ಬಾ...


## ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. P. No 19/1950

1. ಮುಕಾಂಬು ಯಾನೆ ಕಾವೇರಿಅಮ್ಮ 2ನೇಯವನ ಹೆಂಡ್ತಿ. 2. ಕೆ ವೆಂಕಟೇಶ ಕಾಮ್ತಿ. ಬಾಬು ಯಾನೆ ನಾರಾಯಣ ಕಾಮ್ತಿ ಮಗ. 3. ಕೆ. ಲಕ್ಷ್ಮಣ ಕಾಮ್ತಿ. 4, ಕೆ ಮಾಧವ ಕಾಮ್ತಿ. (ಮ್ಯಾನರ್ 14 ವರ್ಷ.) 1-2ನೇಯವರ ಮಕ್ಕಳು|ಕಾರ್ಕಳ ತಾಲ್ಲೂಕ ಕಾರ್ಕಳ ಕಸಬೆಯಲ್ಲಿರುವವರು.

—ಅರ್ಜಿದಾರರು.

ಈ ಮೂಲಕ ಕೋರ್ಟು ಹುಕುಂ ಪ್ರಕಾರ ಯಾವತ್ತು ಜನರಿಗೆ ತಿಳಿಸುವುದೇನಂದ್ರೆ:—

1-2ನೇ ಅರ್ಜಿದಾರರ ಮಗ ಯಿತ್ತಲಾಗೆ ಮೃತಪಟ್ಟ—ಕೆ. ಗಣಪತಿಕಾಮ್ತಿ ಬಾಬ್ತು ಅರ್ಜಿಯಲ್ಲಿ ಕಾಣಿಸಿದಂತೆ ಬಹಾ ಆವೇಜುಗಳು ವಸೂಲು ಮಾಡುವರೇ ಅರ್ಜಿದಾರರಗೋಸ್ಕರ 1ನೇ ಅರ್ಜಿದಾರಳಿಗೆ ಸಕ್ಸೆಶನ್ ಸರ್ಟೀಫಿಕೇಟು ಕೊಡಿಸಬೇಕಾಗಿ ದಾಖ್ಲಾ ಮಾಡಿದ ಸದ್ರಿ ಅರ್ಜಿ ಕುರಿತು ಆಕ್ಷೇಪ ಉಳ್ಳವರು ಯಿದೇ ತಾ 6-6-50ರಲ್ಲು ಬೆಳಿಗ್ಯೆ 10 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ಜಾಹೀರು ಮಾಡತಕ್ಕದ್ದು.

**Sd. K. Venkatesha Pai**

ಅರ್ಜಿದಾರರಕಡೆ ವಕೀಲ.



ಜೀವವಿಮೆಗಾಗಿ

ವಿಚಾರಿಸಿರಿ

## ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ ಲೈಫ್ ಇನ್ಶೂರೆನ್ಸ ಕೊ, ಲಿಮಿಟೆಡ್.

(ಸ್ಥಾಪನೆ: 1934)

ಚೆಯರ್‌ಮೆನ್: ಶ್ರೀ. ಎಮ್. ಸಿಟಿ. ಎಮ್. ಚಿದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,

ಕೇಂದ್ರ ಕಾರ್ಯಾಲಯ:
"ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್ ಪೋಸ್ಟು ಬಾಕ್ಸ ನಂಬ್ರ 142



## Notice

ಉಡ್ಪಿ ಡಿ. ಮು. ಕೋರ್ಟಿನಲ್ಲಿ.

O. P. ನಂಬ್ರ 18/50

1. ನರ್ಸಪ್ಪ j ಕರ್ಕೇರ. 2, ಅನಂದ j ಕೇರ. 3. ಶೀತು ಬಾಯಿ. 4. ಮಂಜಪ್ಪ ಅಂಗರ. 5. ತಿಮ್ಮ ಬಾಯಿ.

—ಅರ್ಜಿದಾರರು

ಮೇಲ್ಕಂಡ ಅರ್ಜಿದಾರರು ಉಡ್ಪಿ ತಾಲೂಕು ಪಡುಗ್ರಾಮದ ಪೊಲಿಪಿನಲ್ಲಿ ತಾ. 21-1-50ರಲ್ಲು ಮೃತಪಟ್ಟ ಜೋಗಿ ಅಂಗರನ ಬಾಬು "ಹಿಂದುಸ್ತಾನ್ ಕೋಪರೇಟಿವ್ ಇನ್ಶೂರೆನ್ಸ್ ಸೊಸೈಟಿ ಲಿಮಿಟೆಡ್ ಕಲ್ಕತ್ತ" ಯಿದರ ಪೊಲಿಸಿ ನಂಬ್ರ 154 719೦ ಪ್ರಕಾರ ಸಿಗಲಿರುವ ರೂಪಾಯಿ 1028-5-0ನ್ನು ಪಡೆಯುವರೆ ತಮ್ಮ ಪೈಕಿ 3ನೇ ಅರ್ಜಿದಾರಳಿಗೆ ಮೃತ ಜೋಗಿ ಅಂಗರನ ವಿಧವೆ ಹೆಸರಿಗೆ ಸರಿಸು ಸರ್ಟಿಫಿಕೇಟು ಕೊಡಬೇಕಾಗಿ ಕೇಳಿ ಮಾಡಿರುವ ಅರ್ಜಿ ತಾ. 14-6-50ಕ್ಕೆ ವಿಚಾರಣೆಗೆ ಡೋಣಾಗಿಯದೆ. ಆಕ್ಷೇಪವುಳ್ಳವರು ಸದ್ರಿ ದಿವಸ ಬೆಳಿಗ್ಗೆ 10ಗಂಟೆಗೆ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

**Narayana Rao, K.**

Camp Udipi. Date 6—5—50

Advocate for Petitioners.

ಟ್ಯಂ ಹತ್ತಿರ ಮತ್ತು ಅಡಿಗೆ ಮನೆಯು ಬಾಗ ಲಿಗೆ ಹೋದಲ್ಲಿ ದುರ್ವಾಸನೆಯು ಹೋಂತು ವದು; ಕೊಳಕ ಕೆಸರು ಕಾಣುವದು. ಮಲೇರಿಯಾ ಅಣುವು ಹೊರೆಯುವ ಸ್ಥಳವೇ ಇದಾಗಿ ಕಾಣುವದು.

ಹಳ್ಳಿಗಳಲ್ಲಿ ಹೆರಿಗೆಯ ಚಿಕಿತ್ಸಾಲಯವು ಮತ್ತು ಸೂಲಗಿತ್ತಿಯರು ಬಹಳ ಕಡಿಮೆ ಯಾದ್ದರಿಂದ ಗರ್ಭಿಣಿ ಸ್ತ್ರೀಯರ ಯೋಗ ಕ್ಷೇಮವನ್ನು ನೋಡುವ ವ್ಯವಸ್ಥೆ ಇಲ್ಲದೆ, ಪ್ರಸವವೇದನೆಯಿಂದ ಹೆಚ್ಚು ಜನ ಸಾಯು ವರು. ಸಣ್ಣ ಶಿಶುಗಳಿಗೆ ಹಾಲಿನ ವ್ಯವಸ್ಥೆ ಇಲ್ಲದೆ ಬಾಲ್ಯದಲ್ಲೇ ಸಾಯುವವು. ಇಂಥಾ ದುರ್ವ್ಯವಸ್ಥೆಯಲ್ಲಿ ಹುಟ್ಟಿದವುಕ್ಕಳು ಬದು ಕುವುದೇ ಕಷ್ಟ. ದೇವತಾನುಗ್ರಹದಿಂದ ಉಳಿ ದವು ದುರ್ಬಲವಾಗಿ ಕುಗ್ಗಿ ಬೆಳೆಯುವವು. ನಮ್ಮ ದೇಶದಲ್ಲಿ ಜನರ ಆಜಮಾಸು ಪ್ರಾಯವು ಬರೇ ಮೂವತ್ತು ವರುಷ. ಇತರ ದೇಶಗಳಲ್ಲಿ ಸರಾಸರಿ ಪ್ರಾಯ 50ರಿಂದ 70 ರ ವರೆಗಿರುವದು.

ಅನೇಕ ಹಳ್ಳಿಗಳಲ್ಲಿ ಮಕ್ಕಳಿಗೆ ಶಾಲೆಯೇ ಇಲ್ಲ. ಶಾಲೆಗಳಿರುವಲ್ಲಿ ಓದು ಬರಹ ಲೆಕ್ಕಗಳನ್ನು ಮಾತ್ರ ಕಲಿಸುವದಾದ್ದರಿಂದ ಹೆಚ್ಚು ಮಕ್ಕಳು ಶಾಲೆ ಬಿಟ್ಟೊಡನೆಯೇ ಇದನ್ನೆಲ್ಲಾ ಮರೆತುಬಿಡುವರು. ಹಳ್ಳಿಯಲ್ಲಿ ಕಡ್ಡಾಯ ಶಿಕ್ಷಣ ಜ್ಯಾರಿಗೆ ತರುವದು ಬಹಳ ಕಷ್ಟ. ಪ್ರಾಯಸ್ಥರಿಗೆ ಮೊದಲಾಗಿ ಶಿಕ್ಷಣ ಕೊಡುವುದು ಉತ್ತಮ. ಕುಟುಂಬವು ವೃದ್ಧಿಯಾಗಿ ಜನಸಂಖ್ಯೆಯು ಜಾಸ್ತಿಯಾಗಿದೆ, ವ್ಯವಸಾಯದ ಭೂಮಿಯ ವಿಸ್ತೀರ್ಣವು ಇದ್ದಂತೆಯೇ ಇದೆ. ಈ ಕಾರಣದಿಂದ ಉಳುವರೆ ಸಾಕಷ್ಟು ಹೊಲಗಳಿಲ್ಲ. ನಮ್ಮ ಹಳ್ಳಿಗಳಲ್ಲಿ ಶೇಕಡ ಐದರಷ್ಟು ಜನರಿಗೆ ಉಳುವರೆ ಭೂಮಿಯೇ ಇಲ್ಲ. ಇವರ ಸಂಖ್ಯೆಯು ಹೆಚ್ಚುವದರಲ್ಲಿದೆ.

ಹಳ್ಳಿಗರು ಹಳೇ ಪದ್ಧತಿಗೆ ಕಟ್ಟು ಬಿದ್ದವರಾಗಿ ತಾವು ತಮ್ಮಷ್ಟಕ್ಕೆ ಎಂಬಂತೆ ವರ್ತಿಸಿ ಒಂದೇ ಕ್ರಮದ ಸಾಗುವಳಿ, ಒಂದೇ ಜಾತಿಯ ಬೀಜ, ಒಂದೇ ರೀತಿಯ ಹತ್ಯಾರು ಒಂದೇ ನಮೂನೆಯ ಗೊಬ್ಬರವನ್ನು ಉಪಯೋಗಿಸುವರು. ಈಗಿನ ಹೊಸ ಸಾಧನ ಕೃತಕದ ಮತ್ತು ರಾಸಾಯನಿಕ ಗೊಬ್ಬರವನ್ನು ಉಪಯೋಗಿಸುವದೇ ಇಲ್ಲ. ಇದರಿಂದ ಭೂಮಿಯಲ್ಲಿರುವ ಒಂದೇ ತರದ ಧಾತು ನಷ್ಟವಾಗುವದು. ಪ್ರಾಚೀನ ಕಾಲದಲ್ಲಿ ಕೆಲವು ಗದ್ದೆಗಳನ್ನು ಪಾಳು ಕೆಡಹಿ ತಿರುಗಾಮುರುಗಾ ಸರ್ತಿಯ ಪ್ರಕಾರ ಸಾಗು ಮಾಡುತ್ತಿದ್ದರು. ಇದರಿಂದ ಕಳೆದು ಹೋದ ಧಾತು ಕೂಡಿ ಬರುತ್ತಿತ್ತು. ಒಂದೇ ತರದ ಬೆಳೆಯನ್ನು ಕಾಯಂ ಆಗಿ ಒಂದೇ ಸ್ಥಳದಲ್ಲಿ ಬೆಳೆಸಿದರೆ ಭೂಮಿಯಲ್ಲಿರುವ ಒಂದು ಜಾತಿಯ ಧಾತು ಪೂರ್ಣ ನಷ್ಟವಾಗುತ್ತದೆ. ಪೀರಾಕೆನಾಲು ದಡದಲ್ಲಿ ಹೀಗಾಗಿ ಕೆಲವು ಸ್ಥಳಗಳು ಬಂಜರು ಬಿದ್ದಿವೆ. ಈಗಿನ ಸ್ಥಳಾಭಾವದ ಕಾಲದಲ್ಲಿ ಆ ಕ್ರಮ ಸಾಧ್ಯವಿಲ್ಲದುದರಿಂದ ಇದ್ದ ಸ್ಥಳವನ್ನೇ ಪರಿಕ್ರಮಪಟ್ಟು ಸಾಗು ಮಾಡಬೇಕಾಗಿಯದೆ.

ಬೇರೆ ದೇಶಗಳಲ್ಲಿ ರೈತರಿಗೆ ಬಹು ವಿಸ್ತೀರ್ಣ ಸ್ಥಳಗಳು ಸಾಗುಮಾಡಲಿಕ್ಕಿವೆ. ನಮ್ಮಲ್ಲಿ ಕುಟುಂಬಗಳೊಳಗೆ ಭಾಗ, ಉಪಭಾಗಗಳಾಗಿ ಸಾಗುವಳಿ ಹೊಲದ ವಿಸ್ತೀರ್ಣವು ಬಹಳ ಚೂರುಮಾಡಾಗಿದೆ. ಕಮರುಗಳೊಳಗೆ ಪಾಲಾಗುವಾಗ ಒಳ್ಳೇದು ಮತ್ತು ಹಾಳು ಸ್ಥಳಗಳು ಸರಾಸರಿ ಪಾಲಾಗಬೇಕೆಂತ ಒಟ್ಟುತನವನ್ನು ಹಲವರು ತೋರಿಸುವದರಿಂದ ಗದ್ದೆಗಳೆಲ್ಲಾ ತುಂಡು ಮುರುಕುಗಳಾಗಿವೆ. ಕೆಲವೆಡೆ ಒಂದು ಜೊತೆ ಹೋರಿಗಳು ಉಳುವಾಗ ತಿರುಗುವದೇ ಕಷ್ಟ. ಬೇಸಾಯಗಾರರ ಗದ್ದೆಗಳು ಒಂದೇ ಕಡೆಯಲ್ಲಿ ಅಡಕವಾಗಿಲ್ಲ. ಇಲ್ಲೊಂದು ತುಂಡು ಅಲ್ಲೊಂದು ತುಂಡು. ಆದ್ದರಿಂದ ಬೇಲಿ ಮಾಡುವದು ಕಷ್ಟ. ನೀರು ದಾರಿ, ಜಾನುವಾರು ನಡೆಗಾಗಿ ಜಗಳವಾಗುತ್ತದೆ, ಕೆಲವು ಕಡೆ ಇತರರ ಅನುಕೂಲ ನೋಡಿ ಉಳಬೇಕಾಗುತ್ತದೆ.

ಭೂಮಿಯು ಫಲವತ್ತಾಗುವರೆ ನಮ್ಮ ಮುಂದೆ ಎರಡು ದಾರಿಗಳಿರುವವು. ಒಂದನೇಯದಾಗಿ ರಶ್ಯದಲ್ಲಿರುವ ಸಾಮುದಾಯಿಕ ವ್ಯವಸಾಯ (collective farming) ಎರಡನೇದಾಗಿ ಜರ್ಮನಿಯಲ್ಲಿರುವ ಹೊಲಗಳ ಜೋಡಣೆ ಅಥವಾ ಒಂದುಗೂಡುವಿಕೆಯ ವ್ಯವಸಾಯ (consolidated farming). ಈ ಪೈಕಿ ಒಂದನೆಯದರ ಕ್ರಮದಿಂದ ಜಾನುವಾರು ಉಳಿತಾಯವಿದೆ. ಅವುಗಳನ್ನು ಸಾಕುವ ಖರ್ಚು ಕಡಿಮೆಯಾಗುತ್ತದೆ ಸಾಗುವಳಿ ಉತ್ಪತ್ತಿಯೊಂದರಿಂದಲೇ ಜೀವನವಾಗುವದು ಕಷ್ಟವಾದ್ದರಿಂದ ಆ ಕಸಬಿನಲ್ಲಿ ಮನಸ್ಸಿಲ್ಲದವರು ಉಪಉದ್ಯೋಗಗಳಲ್ಲಿ ಕೈ ಹಾಕಬಹುದು. ಪ್ರತ್ಯೇಕ ಬೇಲಿ ಮಾಡುವ ಕೆಲಸ ಉಳಿಯುತು. ನೀರು ದಾರಿ, ಜಾನುವಾರಿ ನಡೆಯ ಜಗಳಗಳೂ ನಾಯವಾಗುತ್ತವೆ. ಪಂಜಾಬು ಕೆನಾಲ್ ದಡದಲ್ಲಿ ಇದನ್ನು ಯಶಸ್ವಿಯಾಗಿ ಜ್ಯಾರಿಗೆ ತಂದಿರುವರು. ಈಗ ಅನಾಶ್ರಿತರ ಬಗ್ಗೆ ಇದೇ ಕ್ರಮ ಅನುಸರಿಸಿರುವರು. ರಶ್ಯದಲ್ಲಿ ಪ್ರತಿಯೊಂದು ಹಳ್ಳಿಯೂ ಒಂದೊಂದು ಸಹಕಾರಿ ಸಾಗುವಳಿಯ ಸಂಘವಾಗಿರುವದು. ರಶ್ಯದಲ್ಲಿ ಜಯಂಗ್ಯಾಂಟಿಕ್ ಎಂಬ ಗೋದಿ ಹೊಲವು ಸುಮಾರು 50 ಮೈಲು ಉದ್ದ 40 ಮೈಲು ಅಗಲವಿರುವುದಂತೆ. ಸುಮಾರು 17000 ಜನರು ಅಲ್ಲಿ ಕೆಲಸ ಮಾಡುವರಂತೆ ಈ ಕ್ರಮವು ಸರಿಯಾಗಿ ನಡೆಯಬೇಕಾದರೆ ಜನರಲ್ಲಿ ವೈಯಕ್ತಿಕ ಭಾವನೆಯು ದೂರವಾಗಿ ಪರಸ್ಪರ ಸಹಾಯಕ ಮನೋಭಾವನೆ ಬೇಕು. ಇದಲ್ಲವಾದರೆ ಎರಡನೇದಾಗಿ ಹೇಳಿದ ಕ್ರಮವನ್ನೇ ಆಚರಿಸಬೇಕು. ಪ್ರತಿಯೊಂದು ರೈತ ಕುಟುಂಬವು ಬೇಸಾಯದ ಉತ್ಪತ್ತಿಯಿಂದಲೇ ಜೀವಿಸಬೇಕೆಂಬ ಧ್ಯೇಯದಿಂದ ಅವರಿಗೆ ಸಾಕಷ್ಟು ಭೂಮಿಯನ್ನು ನಿರ್ಣಯಿಸಿ ಕೊಡುವರು. ಶ್ರೀಮಂತರು ಇವುಗಳನ್ನು ಕೊಂಡುಕೊಂಡು ದೊಡ್ಡ ಭೂಸ್ವಾಮಿಕರಾಗದಂತೆ ಪ್ರತಿಬಂಧಕ ಶಾಸನವಿದೆ. ಅದರಲ್ಲಿ ಒಂದು ಕುಟುಂಬಕ್ಕಿರುವ ಭೂಮಿಗೆ ಮಿತಿಯಿದೆ ಭೂಮಿಯನ್ನು ಪರಾಧೀನ ಮಾಡುವರೆ, ವಿಭಾಗಿಸುವರೆ, ಮಳವಕ್ಕಲುಗಳಿಗೆ ಕೊಡುವರೆ ಶಾಸನ ಮೂಲಕ ಅತಂಕವಿದೆ. ಹೊಲವನ್ನು ಪಾಳು ಕೆಡವದರೆ ಸರಕಾರವು ಹೆಚ್ಚು ತೆರಿಗೆ ಹೊರಿಸುವದು. ಕಟ್ಟಕಡೆಗೆ ಅವರ ಹಕ್ಕನ್ನು ರದ್ದು ಮಾಡಿ ವಶ ಮಾಡಿಕೊಳ್ಳುವದು.

ವ್ಯವಸಾಯದ ಬಗ್ಗೆ ಮುಖ್ಯ ಗೊಬ್ಬರವು ಸೆಗಣಿ. ಗೊಬ್ಬರವನ್ನು ಹೊಲಕ್ಕೆ ಸಾಗಿಸುವರೆ, ಸಾಗುವಳಿಯ ಉತ್ಪತ್ತಿಯನ್ನು ಒಯ್ಯುವರೆ ನಮಗೆ ಹೋರಿಗಳು ಅಗತ್ಯ. ಶಾಕಾಹಾರದಂಥ ನಮ್ಮ ದೇಶದಲ್ಲಿ ಹಾಲು, ಬೆಣ್ಣೆ, ತುಪ್ಪ, ಮೊಸರು ಆಹಾರದ ಮುಖ್ಯಾಂಶಗಳಾಗಿರುವವು. ಗೋವುಗಳನ್ನು ದೇವರೆಂದು ಶಸ್ತ್ರ ಪೂಜೆ ಮಾಡಿದಂತೆಯೇ ವರ್ಷಕ್ಕೊಮ್ಮೆ ಪೂಜಿಸುವೆವು. ಅವುಗಳ ರಕ್ಷಣೆಯ ಕುರಿತು ಹೆಚ್ಚು ಮೋಹನತ್ತು ತೋರಿಸುವುದಿಲ್ಲ. ಹಲವು ಕಡೆಗಳಲ್ಲಿ ಕಾಡಿನ ಹುಲ್ಲು ಮೇದು ತೋಡಿನ ನೀರು ಕುಡಿದೇ ಬದುಕಬೇಕಾಗಿಯದೆ. ಚೈತ್ರ ವೈಶಾಖದಲ್ಲಿ ಇದು ಸಹಾ ಕೆಲವೆಡೆಗಳಲ್ಲಿ ಸಿಕ್ಕುವದು ಕಷ್ಟ. ಮಳೆಗಾಲದಲ್ಲಿ ಹಸುರು ಹುಲ್ಲನ್ನು ಚೆನ್ನಾಗಿ ಮೇದು ಅಜೀರ್ಣವಾಗಿ ಸಾಹಿಲೆಯುಂಟಾಗುತ್ತೆ. ಬೇಸಿಗೆಯಲ್ಲಿ ನೀರಡಿಕೆ ಸಹಾ ಇಲ್ಲದೆ ಕೃಶವೊಂದಿ ಎಲುಬುಗಳು ಚರ್ಮದ ಮೇಲಿಂದ ಹೊರಗೊತ್ತಿ ಉಕ್ಕಳಿಸಿ ತೋರುವವು. ಗೋವುಗಳ ಮೇವಿಗಾಗಿ ಸ್ಥಳ ಮೀಗಡಿಸಿಡಲಿಲ್ಲ. ನಮ್ಮಲ್ಲಿ ಸುಮಾರು 18 ಕೋಟಿ ಜಾನುವಾರುಗಳಿವೆ. ಆ ಪೈಕಿ ಶೇಕಡ 70ರಷ್ಟು ಹಾಲು ಕೊಡುವದೇ ಇಲ್ಲ. ಉಳಿದವುಗಳು ಬಹಳ ಕಡಿಮೆ ಪ್ರಮಾಣದಲ್ಲಿ ಹಾಲು ಕೊಡುತ್ತವೆ. ಜರ್ಮನಿಯಲ್ಲಿ 2½ ಕೋಟಿ ಜಾನುವಾರುಗಳಿಂದ ನಾವು ಪಡೆಯುವಷ್ಟೇ ಹಾಲನ್ನು ಪಡೆಯುವರು. ನಮ್ಮ ದೇಶದಲ್ಲಿ ಮೈಸೂರು, ಪೋರ್ಬಿ ಇವೇ ಒಂದೆರಡು ಕಡೆಗಳಲ್ಲಿ ವಿನಹಾ ಬೇರೆಲ್ಲೂ ಗೋವು ಪಾಲನೆ ಬಗ್ಗೆ ಶ್ರದ್ಧೆ ಕಾಣುವದಿಲ್ಲ. ಹಳ್ಳಿಗಳ ಉದ್ಧಾರದ ಬಗ್ಗೆ ಒಂದು ಯೋಜನೆಯನ್ನು ನಮ್ಮ ಸರಕಾರವು ತಯಾರಿಸಬೇಕು. ಪಟ್ಟಣಿಗರ ಪರವಾಗಿ ವಾತ್ಸಲ್ಯದಿಂದ ಕಾರ್ಯವಸಗುತ್ತಾರೆಂಬ ಅಪವಾದವನ್ನು ಜೆ. ಸಿ. ಕುಮಾರಪ್ಪನವರು ತಮ್ಮದೊಂದು ಪುಸ್ತಕದಲ್ಲಿ ಬರೆದಿರುವರು. ಅದ್ಭುತ ಉದ್ಯಮಗಳ ಯೋಜನೆಯನ್ನು ಕೈಗೊಂಡುದೇ ಇದಕ್ಕಾಗಿ ಎಂದಿರುವರು. ಆದರೆ ಶ್ರೀ. ಎಮ್. ಆರ್. ಮಸಾನಿಯವರು ಇದಕ್ಕೊಪ್ಪುವದಿಲ್ಲ. ಹಳ್ಳಿಗಳ ಉದ್ಧಾರದ ದೃಷ್ಟಿಯನ್ನೇ ನೋಡಿದರೆ ನಾವು ಬೇರೆ ರಾಷ್ಟ್ರಗಳಿಗಿಂತ ಹಿಂದುಳಿಯುವೆವೆಂದು ಹೇಳಿರುವರು. ದೊಡ್ಡ ಉದ್ಯಮಗಳ ವಿನಹಾ ದೇಶದ ಏಳಿಗೆಯಾಗದು ಎಂಬುದು ನಿಜ; ಆದರೆ ನಮ್ಮ ದೇಶವು ಉದ್ಯಮಗಳಲ್ಲಿ ಎಷ್ಟು ಮುಂದುವರಿದರೂ ನಮ್ಮಲ್ಲಿ ವರ್ಷ ವರ್ಷಕ್ಕೆ ಹೆಚ್ಚಾಗುವ ಜನಸಂಖ್ಯೆಯನ್ನು ಮತ್ತು ಈಗ ಕೆಲಸವಿಲ್ಲದ ಹತ್ತು ಕೋಟಿ ಜನರನ್ನು ಉದ್ಯಮಗಳು ಹೀರಲಾರವಾದಕಾರಣ ಜಪಾನು ದೇಶದ ಮಾದರಿಯಂತೆ ಅಲ್ಲಲ್ಲಿ ಚಿಕ್ಕ ಕೈಗಾರಿಕೆಗಳನ್ನು ಸ್ಥಾಪಿಸುವದು ಒಳ್ಳೆಯದು. ನಮಗೆ ಯೂರೋಪು ಅಮೇರಿಕಗಳಲ್ಲಿರುವ ದೊಡ್ಡ ಪಟ್ಟಣಗಳೂ ಬೇಕು ಮತ್ತು ಜಪಾನು ದೇಶದಲ್ಲಿರುವ ಚಿಕ್ಕ ಕೈಗಾರಿಕೆಗಳ ಶಹರು ಮತ್ತು ಪೇಟೆಗಳೂ ಬೇಕು.' ಯಾವುದಾದರೊಂದೇ ತರದ ಬೆಳವಣಿಗೆಯು ಈ ಕಾಲದಲ್ಲಿ ಹೇಳಿಸಿದ್ದಲ್ಲ. ಹಳ್ಳಿಗಳು ನಮ್ಮ ಮೂಲಾಧಾರವಾದ್ದರಿಂದ ಅವುಗಳ ಸಂಘಟನೆಯನ್ನು ನಾವು ಮೊದಲಾಗಿ ಕೈಕೊಳ್ಳಬೇಕಾಗಿದೆ.

## ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

O. P. No. 21/1950.

1. ಕೂಸುಶೆಡ್ತಿ, ಕಾವೇರಿಶೆಡ್ತಿ ಮಗಳು. 2. ಶಾನುಸೆಟ್ಟಿ. 3. ಶಿವಪ್ಪಜುಸೆಟ್ಟಿ 4 ಸುಶೀಲಾ-ಮ್ಯಾನರ. 1ನೇ ಅರ್ಜಿದಾರಳ ಮಕ್ಕಳು-ಮ್ಯಾನರಳ ಕ್ಷೇಮ ಚಿಂತಕಳು ತಾಯಿ 1ನೇ ಅರ್ಜಿದಾರಳು:—5) ಹರಿ.ಮ್ಯಾನರ 3ನೆ ಅರ್ಜಿದಾರಳ ಮಗ, ಕ್ಷೇಮ ಚಿಂತಕಳು ತಾಯಿ 3ನೆ ಅರ್ಜಿದಾರಳು:—ಮಂಗಳೂರು ತಾಲ್ಲೂಕ ಕರ್ನಿರೆ ಗ್ರಾಮದಲ್ಲಿರುವವರು.

—ಅರ್ಜಿದಾರರು.

ಲಿಂಗಪ್ಪಸೆಟ್ಟಿ. 1ನೆ ಅರ್ಜಿದಾರಳ ಮಗ, Sri Rama Arogya Bhavan, Hindu Hotel, Military Road, Vakula, Santa Cruze. Bombay No 25.

—ಎದ್ರಿ.

1ನೆ ಅರ್ಜಿದಾರಳ ಮಗ, 2ರಿಂದ 4ನೆ ಅರ್ಜಿದಾರರ ಮಯೆದ್ರಿಯ ಸಹೋದರ,5ನೆ ಅರ್ಜಿದಾರನ ಮಾವ ಹಾಲಿ ಮೃತಪಟ್ಟ ರಾಮ ಕೊರಗಸೆಟ್ಟಿಗೆ The Tropical Insurance Company Ltd Delhi, ಯಿದ್ರ Policy No. 21185ರ ರೂಪಾಯಿ 1000/- ವಗೈರೆ ಬರಮಾಡಿಕೊಳ್ಳುವರೆ 1ನೆ ಅರ್ಜಿದಾರಳ ಹೆಸರಿಗೆ ವಾರಿಸು ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ಬರಕೊಂಡ ಸದ್ರಿ ಅರ್ಜಿಯು ತಾರೀಕು 21-6-1950ಕ್ಕೆ ಇಟ್ಟಿರುವದ್ರಿಂದ ಅಕ್ಷೇಪ ಇದ್ದವರು ಸದ್ರಿ ದಿನ ಬೆಳಿಗ್ಗೆ 10ಘಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

**P. Ramachandra Rao.**

*Pleader for Petitioners.*

ಕಾರ್ಕಳ— ತಾರೀಕು 1—5—1950.

BUY INDIAN! ENCOURAGE INDIAN INDUSTRY!

ಆಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

Highly perfumed and medicated, worth using daily by one and all, keeps hair black and relieves head-ache etc.

REGD. TRADE MARK

Manufactured by:-

Swadeshi Oushadhi Bhandara (Regd.)

KUNJAL P. O. Brahmavar, S K.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರಾಯಿಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಹಿತ್ತಾಳೆ, ತಾಮ್ರ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ,

ರಥಬೀದಿ, ಉಡುಪಿ

ಮಹಿಳಾ ಪುಟ

# ಸ್ತ್ರೀಯರ ಅವರತ್ವ ಅಥವಾ ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್

ಲೇಖಕಿ:— ಶ್ರೀಮತಿ ಕಿಶೋರಿದೇವಿ, ಹುಬ್ಬಳ್ಳಿ

ತಾಯಿಯ ಗರ್ಭಾಶಯದ ಬೆಚ್ಚಗಿನ ಕೋಣೆಯನ್ನು ಬಿಟ್ಟು ಬಟ್ಟಬಯಲಾದ ಭೂಮಿಗೆ ಬಿದ್ದೊಡನೆ ಕರುವಿನ ಕಿವಿಗೆ ತಂಗಾಳಿ ಸೋಗ್ಗಿ ಅದನ್ನು ಅಸ್ತವ್ಯಸ್ತ ಜಿಗಿದಾಟಕ್ಕೆ ಪ್ರೇರಿಸುವಂತೆ ಆಧುನಿಕ ಸ್ತ್ರೀ ಸ್ವಾತಂತ್ರ್ಯವು ಹೆಂಗಳೆಯರ ಮನೋರಾಜ್ಯವನ್ನು ಅಸ್ತವ್ಯಸ್ತಗೊಳಿಸಿದೆ. ಸ್ವಾತಂತ್ರ್ಯವೆಂದರೆ ಸಮಾನಾಧಿಕಾರ ಎಂದು ಅರ್ಥ ಮಾಡಿ ಎಲ್ಲದರಲ್ಲೂ ಗಂಡಸರೊಡನೆ ಸೆಣಸಾಡಲು ಸುಧಾರಿಸಿದ(?) ಸ್ತ್ರೀಯರು ಪ್ರವೃತ್ತರಾಗುತ್ತಿದ್ದಾರೆ. "ಸುರಾಜ್ಯವಾದರೂ ಸ್ವರಾಜ್ಯವೇ ಮೇಲು" ಎಂದು ದಿವಂಗತ ಮಹಾತ್ಮಾಜಿಯವರು ಹೇಳುತ್ತಿದ್ದಂತೆ ತಪ್ಪು ಮಾಡುವ ಸ್ವಾತಂತ್ರ್ಯವು ಕೂಡ ಎಲ್ಲ ಸ್ತ್ರೀ ಪುರುಷರಿಗೂ ಸಮಾನವಾಗಬೇಕೆಂಬುದು ವಿವೇಕಕ್ಕೆ ಒಪ್ಪತಕ್ಕದ್ದೇ ಸರಿ. ಆದರೆ ಒಂದು ವ್ಯಕ್ತಿಯ ತಪ್ಪಿನಿಂದ ಮಿಕ್ಕ ವ್ಯಕ್ತಿ, ಸಮಾಜಗಳ ಹಿತಕ್ಕೆ ಬಾಧೆಯಾಗಬಾರದೆಂಬುದೂ ಅಷ್ಟೇ ಮಹತ್ವದ ತತ್ವವಾಗಿದೆ.

ಹೆಂಗಸು ಗಂಡಸಿನಂತೆ ವರ್ತಿಸಿದರೆ ಸಮಾಜಕ್ಕೆ ಹಿತವುಂಟೆ? ಆ ಹೆಂಗಸಿಗಾದರೂ ಅದರಿಂದ ಏಳಿಗೆಯುಂಟೆ? ಪ್ರಕೃತಿಯಲ್ಲಿ ಪ್ರತಿಯೊಂದು ವಸ್ತುವಿಗೂ ವೈಶಿಷ್ಟ್ಯವುಂಟು. ಮತ್ತು ಆ ವೈಶಿಷ್ಟ್ಯವನ್ನು ಪರಿಪೂರ್ಣತೆಗೊಯ್ಯುವದೇ ಆ ವಸ್ತುವಿನ ಜೀವನದ ಗುರಿಯಾಗಿದೆ. ಹೆಂಗಸಿನಲ್ಲಿರುವ ಹೆಣ್ತನದ ವಿಕಾಸದಿಂದಲೇ ಆವಳ ಜೀವನವು ಪೂರ್ಣತೆಯನ್ನು ಹೊಂದುವದು. ಹೆಂಗಸು ಗಂಡಸಿನಂತೆ ವರ್ತಿಸಿದರೆ ತನ್ನ ವೈಶಿಷ್ಟ್ಯಕ್ಕೆ ಅಪಮಾನ, ಪ್ರಕೃತಿಗೆ ದ್ರೋಹ ಬಗೆದಂತಾಯಿತು. ಮತ್ತು ವೈಶಿಷ್ಟ್ಯವನ್ನು ಕಳೆದುಕೊಂಡ ವಸ್ತು ವ್ಯಕ್ತಿಗಳು ಜೀವನ್ಮೃತರಾದಂತೆ, ಯಾವುದೇ ರಾಗದಲ್ಲಿಯ ಒಂದು ಸ್ವರವು ತನ್ನ ವೈಶಿಷ್ಟ್ಯವಾದ ತೀವ್ರತೆ, ಕೋಮಲತೆಗಳನ್ನು ಕಳೆದುಕೊಂಡರೆ ಅದು ಕೀಸರಾಟವಾಗುವದು.

ಗಂಡಸು ಎರಡು ಸಲ ಚಹ ಕುಡಿದರೆ ನಾನು ನಾಲ್ಕು ಸಲ ಕುಡಿಯುವೆನು! ಅವನು ವಾರಕ್ಕೊಂದು ಸಲ ಸಿನೆಮಾಕ್ಕೆ ಹೋದರೆ ನಾನು ದಿನಾಲು ಹೋಗುವೆನು! ಅವನು ಪರಿಷತ್ತುಗಳನ್ನು ಜರುಗಿಸಿ ಹತ್ತು ಗೊತ್ತುವಳಿಗಳನ್ನು ಮಾಡಿದರೆ ನಾನು ಇಪ್ಪತ್ತು ಗೊತ್ತುವಳಿಗಳನ್ನು ಮಾಡುವೆನು. ಇದೆಲ್ಲವನ್ನು ಮಾಡುವ ಅಧಿಕಾರವು ಗಂಡಸಿನಷ್ಟೇ ಹೆಂಗಸಿಗೂ ಇರಬೇಕೆಂದು ನಾನು ಒಪ್ಪಿಕ್ಕೇನೆ. ಆದರೆ ಗಂಡಸಿನ ಅನುಕರಣದಿಂದ ಹೆಂಗಸಿಗೆ ಹಿತವಿದೆಯೇ?

ಬೇರೊಂದು ರೀತಿಯಲ್ಲಿ ಯೋಚಿಸಿದರೆ ಈ ಪುರುಷಾನುಕರಣದ ಒಲವು ಹೆಂಗಸರಿಗಾಗಲು ಅವಳಲ್ಲಿರುವ ಅವರತ್ವ ಭಾವವೇ, ತಾನು ಅಬಲೆ ಎಂಬ ಭಾವವೇ ಕಾರಣವೆಂದು ವ್ಯಕ್ತವಾಗುವದು. ಮಾನವನ ಇತಿಹಾಸದ ತೀರ ಪ್ರಾರಂಭದ ಕಾಲವನ್ನಷ್ಟು ಬಿಟ್ಟರೆ ಮಿಕ್ಕ ಸಮಯದಲ್ಲೆಲ್ಲ ಆರ್ಥಿಕ, ಸಾಮಾಜಿಕ, ಧಾರ್ಮಿಕ, ರಾಜಕೀಯ ಕ್ಷೇತ್ರಗಳಲ್ಲಿ ಪುರುಷನೇ ಒಡೆಯನಾಗಿದ್ದಾನೆ. ಅದರ ಪರಿಣಾಮವಾಗಿ ಹೆಂಗಸಿನಲ್ಲಿ ತಾನು ಕೀಳು, ಅಬಲೆ, ಬುದ್ಧಿಹೀನೆಯೆಂದು ಅಚಲವಾಗಿ ನೆನೆದುಂಟಾಗಿದೆ. ಗಂಡಸನ್ನು ಮೆಚ್ಚಿಸುವದೇ ಬಾಳಿನ ಗುರಿಯಾಗಿದ್ದುದರಿಂದ ಅವಳಿಗೆ ಆಕರ್ಷಕಗಳನ್ನೆಲ್ಲ ಧಾರಾಳಕ್ಕೆ ಬಳ್ಳ ಬಳೆದು ಆಕರ್ಷಕವಾಗಿ ಮಾಡಲಾಗಿತ್ತು; ಕಬ್ಬಿಣದ ಬೇಡಿಗಳಿಗೆ ಬಂಗಾರದ ವೇಷ ಕೊಟ್ಟಿತ್ತು. ಈ ಇಪ್ಪತ್ತನೇ ಶತಮಾನದಲ್ಲಿ ಬೇಡಿಗಳೆಲ್ಲ ಕಳಚಿದರೂ ರೂಢಿಗಳೇ ಮನವನ್ನು ಬಿಗಿದಿವೆ. ಅಳುತನದ ನಿತ್ಯ ನೈಮಿತ್ತಿಕಗಳ ಹೊರತು ಬೇರೇನನ್ನೂ ಕಾಣದವಳು ಇಂದು ಸ್ವತಂತ್ರಳಾಗಿದ್ದರೂ ಗಂಡಸಿನ ನೀತಿ, ರೀತಿ, ನಡತೆಗಳನ್ನೇ ಗುರಿಯಾಗಿಟ್ಟುಕೊಂಡುದು ಸಹಜ. ತಾನು ಮೇಲು, ಬುದ್ಧಿವಂತೆ, ಸಮರ್ಥಳೆನಿಸಬೇಕಾದರೆ ಗಂಡಸಿನಂತೆ ನಡೆಯಬೇಕೆಂದು ಅಜ್ಞಾತವಾಗಿ ಅವಳು ಬಯಸುತ್ತಿದ್ದಾಳೆ.

ಹೆಂಗಸು ಎಲ್ಲಕ್ಕಿಂತ ಮುಂಚೆ ಈ ಅವರತ್ವ (ಅವರ ಎಂದರೆ ಶ್ರೇಷ್ಠಳಲ್ಲ ಎಂಬ ಭಾವದ) ಜಾಳಿಗೆಯೊಳಗಿನಿಂದ ಬಿಡುಗಡೆ ಹೊಂದಬೇಕು. ವೈಶಿಷ್ಟ್ಯಹೀನಳಾಗಿ ಮಾಡಬಾರದುದನ್ನು ಮಾಡುವುದಕ್ಕಿಂತ ಏನನ್ನೂ ಮಾಡದಿರುವುದೇ ಲೇಸು. ಏನಾದರೂ ಮಾಡಿ ತೋರಿಸುವ ಗಡಿಬಿಡಿಗಿಂತ ತಾನು ಮಾಡಬೇಕಾದುದೇನು ಎಂಬುದನ್ನು ನಿಚ್ಚಳವಾಗಿ ತಿಳಿಯಲು ಚಡಪಡಿಸುವುದು ಒಳಿತು. ತಂಗೀ, ನೀನು ಹೆಂಗಸೆಂಬುದನ್ನು ಮರೆಯಬಾರದೆಂದು ಪುನಃ ಪುನಃ ನಿನಗೆ ನೆನಪಿಸಿಕೊಟ್ಟರೆ ಬೇಸರಿಸಬೇಡ. ಎಲ್ಲ ಜಾತಿಯವರೂ ತಮ್ಮ ಜಾತಿ ಶ್ರೇಷ್ಠವೆನ್ನುವರು. ಎಲ್ಲರೂ ತನ್ನ ರೂಪ ಹೆಚ್ಚು ಸುಂದರವೆನ್ನುವರು. ಎಲ್ಲರಿಗೂ ತಮ್ಮ ಮಕ್ಕಳ ಮೇಲೆ ಹೆಚ್ಚು ಅಕ್ಕರ. ಹಾಗಾದರೆ ಹೆಂಗಸಿಗೆ ತಾನು ಹೆಂಗಸು ಎಂದು ಹೇಳಿಕೊಳ್ಳುವದರಲ್ಲಿ ನಾಚಿಕೆಯೇಕೆ? ಶಾಂತವಾದ ಏಕಾಂತದಲ್ಲಿ ಕುಳಿತು, ನಿನ್ನ ಹೆಣ್ತನದ ಬಗ್ಗೆ ಹೆಮ್ಮೆ ಪಡು. ಹೆಣ್ತನದ ವೈಶಿಷ್ಟ್ಯವೇನೆಂಬುದನ್ನು ಆಳವಾಗಿ ಯೋಚಿಸಿ ಅದರಂತೆ ಆಚರಿಸಲೆತ್ನಿಸು.

ದೀಪದ ವೈಶಿಷ್ಟ್ಯವೆಂದರೆ ಕತ್ತಲನ್ನು ಕಳೆಯುವದು, ಬೆಂಕಿಯ ವೈಶಿಷ್ಟ್ಯವು ಸುಡುವುದು, ಬೆಲ್ಲದ ವೈಶಿಷ್ಟ್ಯ ಬಾಯಿ ಸಿಹಿ ಮಾಡುವದು. ಹೀಗೆ ಹೆಂಗಸಿನ ವೈಶಿಷ್ಟ್ಯವೇನು? ಈ ತಾತ್ವಿಕ ಪ್ರಶ್ನೆಗೆ ಉತ್ತರವನ್ನು ಕೊಡುವದು ಕಠಿಣವಾಗಿದೆ. ಆದ್ದರಿಂದ ಆದಕ್ಕಿಂತ ಹೆಚ್ಚು ಸುಲಭವಾದ ಶಬ್ದಗಳಲ್ಲಿ ಅದೇ ಪ್ರಶ್ನೆಯನ್ನು ಹೀಗೆ ಕೇಳಿಕೋ, ಗಂಡಸಿನಲ್ಲಿ ಇಲ್ಲದುದು ಹೆಂಗಸಿನಲ್ಲಿ ಯಾವದುಂಟು? ದೇಹದ ವಿಷಯದಲ್ಲಿ ಹೇಳುವದಾದರೆ ಹೆಂಗಸಿಗೆ ಗರ್ಭಾಶಯವಿದೆ, ಡಿಂಭಾಶಯವಿದೆ, ಸ್ತನಗಳಿವೆ. ಮನಸ್ಸಿನಲ್ಲಿ ಹೇಳುವದಾದರೆ ಗಂಡಸಿಗಿಂತ ಹೆಂಗಸಿಗೆ ಮಕ್ಕಳಲ್ಲಿ ಪ್ರೀತಿ ಹೆಚ್ಚು. ಗಂಡಸಿಗೆ ಮಕ್ಕಳಲ್ಲಿ ಪ್ರೀತಿಯೆ ಇರುವದಿಲ್ಲ. ತನ್ನ ಪ್ರಿಯೆಯ ಮಕ್ಕಳೆಂದು ಅವರನ್ನು ಪ್ರೀತಿಸಲು ಅವನು ಕಲಿಯುವನೆಂದು ಜೀವಶಾಸ್ತ್ರಜ್ಞರು ಹೇಳುತ್ತಾರೆ.

ತಂಗೀ, ನಿನ್ನ ತನುಮನಗಳಲ್ಲಿರುವ ಮೇಲ್ಕಂಡ ವೈಶಿಷ್ಟ್ಯಗಳನ್ನು ನೀನು ಪುರುಷಾನುಕರಣದಿಂದ ನಿರ್ನಾಮಗೊಳಿಸಬಲ್ಲೆಯಾ? ಪ್ರಕೃತಿಯನ್ನು ನಿರ್ಮೂಲಗೊಳಿಸುವುದು ಯಾರಿಂದಲೂ ಸಾಧ್ಯವಿಲ್ಲ. ಪುರುಷಾನುಕರಣದಿಂದ ನಿನ್ನ ತನುಮನಗಳಲ್ಲಿ ಪುರುಷರ ಅಂಗಾಂಗ ಸ್ವಭಾವಗಳೆಂತೂ ಬರಲಾರವು. ಆದರೆ ನಿನ್ನ ಅಂಗಾಂಗ ಸ್ವಭಾವಗಳು ಮಾತ್ರ ಹಸಗೆಟ್ಟು ಮುಸಳಿಸುವವು. ಗಂಡಾಗಿ ಬೆಳೆಯಲಿಲ್ಲ, ಹೆಣ್ಣಾಗಿ ಉಳಿಯಲಿಲ್ಲ, ಎಂಬಂತೆ ನಿನ್ನ ದೆಸೆಗೇಡಾಗುವುದು. ಆದ್ದರಿಂದ ನೀನು ಬೇರೆ ಏನನ್ನು ಮಾಡದಿದ್ದರೂ ಚಿಂತೆಯಿಲ್ಲ, ಪುರುಷಾನುಕರಣವನ್ನು ಮಾತ್ರ ಮಾಡಬೇಡ.

ಬರಬರುತ್ತ ಜಗತ್ತಿಗೆ ಪುರುಷನ ಆಗತ್ಯವೇ ಉಳಿಯುವುದಿಲ್ಲ, ಎಂದು ಬರ್ಟ್ರೆಂಡ್ ರಸೆಲ್ಲರು ತಮ್ಮ 'ವಿವಾಹ ಮತ್ತು ನೀತಿ' ಎಂಬ ಪುಸ್ತಕದಲ್ಲಿ ತರ್ಕಿಸಿದ್ದಾರೆ. ವೈಜ್ಞಾನಿಕ ಪ್ರಯೋಗ ಶಾಲೆಗಳಲ್ಲಿ ಗಂಡಸಿನ ಅಂಶವಿಲ್ಲದೆಯೆ ಗರ್ಭದಾನ ಮಾಡಿಸುವ ಪ್ರಯತ್ನಗಳು ನಡೆದಿವೆ. ಹೀಗೆ ಜಗತ್ತು ಸ್ತ್ರೀತ್ವದತ್ತ ವಿಕಾಸ ಹೊಂದುತ್ತ ನಡೆದಿರುವಾಗ ಹೆಂಗಸು ತನ್ನ ಸ್ತ್ರೀತ್ವವನ್ನೇ ಬಲಿಗೊಡಲು ಸಿದ್ಧಳಾಗುತ್ತಿರುವುದು ಒಳಿತೆ?

'ಬರಿ ಮಕ್ಕಳನ್ನು ಹಡೆಯುತ್ತ ಮನೆಯ ಮೂಲೆಯಲ್ಲಿ ಬಿದ್ದಿರು' ಎಂದು ನಿನ್ನ ಉಪದೇಶವಷ್ಟೆ? ಎಂದು ನನ್ನನ್ನು ಸಿಟ್ಟಿನಿಂದ ಕೇಳುವಿಯಾ? ಅದಕ್ಕೆ ಮುಂದಿನ ಸಾರೆ ಉತ್ತರ ಕೊಡುವೆ. ಸದ್ಯಕ್ಕೆ ಹೆಂಗಸು ಕೀಳಲ್ಲ, ಅಬಲೆಯಲ್ಲ ಎಂಬ ಮಂತ್ರವನ್ನೇ ಮನನ ಮಾಡು. (ಆದರ್ಶ)

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀವಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು, ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಮಾನಪ್ಪ ಸಿದ್ಧಲಿಂಗಪ್ಪ, ಧಾರವಾಡಕರ ಬಿಜಾಪುರ   ನಂಜುಡೇಶ್ವರ ಮೂರ್ತಿ ದಾವಣಗೇರಿ
ದಾವಣಗೇರಿ:—ದಾವಣಗೇರಿ ಪ್ರೆಸ್   ಆರ್ ಎಲ್ ಅಮಲದಾರ ಕೆಮಿಸ್ಟ, ಹಾವೇರಿ ಬ್ಯಾಡಗಿ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಗಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉರುಉರು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೩ ರೂ.   ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ
ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ. ಗದಗ.

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಕೀಟವಿಷ ಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.




REGD
ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

Edited, Printed & Published by K. H. Shetty at the Navayuga Press, Udipi, S. India.

Regd. No. M. 3618 | Estd: 1921 ಸ್ಥಾಪನೆ | ೩೦ನೇ ವರ್ಷ 18-5-1950

LICENCE No. 31
Licensed to Post
without Prepayment

ನವ ಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

# ನವಯುಗ

FOUNDER:
Sri. A. B. Shetty
Minister for Agriculture
& Veterinary

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30 ವಾರ ೩೮

NAVAYUGA WEEKLY UDIPI, S. K.
Post Box No. 22

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol 30 No. 38

## ನಾಯಕತ್ವವೊ? ಅನಾಯಕತ್ವವೊ?

ಸಾಮಾನ್ಯ ಜನರ ನಾಯಕತ್ವ ವಹಿಸಲು ಮುಂದೆ ಬರುವವರ ಹಾವಳಿಯೋ ಈಗ ಭಾರತೀಯ ಜನತೆಯನ್ನು ಅನಾಯಕತ್ವದ ಕಡೆಗೆ ದೂಡುತ್ತಿರುವಂತಿದೆ. ಚುನಾವಣೆಯು ಸಮೀಪಿಸುತ್ತಾ ಬಂದಂತೆ ಜನತಾ ಬೋಧಕ ಸ್ಥಾನ, ನಿರ್ದೇಶಕತ್ವ, ನಾಯಕತ್ವ ಮತ್ತು ಪ್ರತಿನಿಧ್ಯ ಪಡೆಕೊಳ್ಳಲು ಚಡಪಡಿಸುವವರ ಹಾಗೂ ವಿವಿಧ ವೇಷಗಳಿಂದ ಜನತಾ ರಂಗದಲ್ಲಿ ಕಾಣಿಸಿಕೊಳ್ಳುವವರ ಸಂಖ್ಯೆ ಹೆಚ್ಚುತ್ತಾ ಹೋಗಬಹುದು.

ತ್ಯಾಗ, ಸೇವೆ ಮತ್ತು ಯೋಗ್ಯತೆಗಳಿಲ್ಲದೆ ಯಾರೂ ನಿಜವಾದ ಜನತಾ ಮುಂದಾಳುವಾಗಲಾರನಾದರೂ ರಾಜಕೀಯ ನಟನಾ ಚತುರನೊಬ್ಬನು ನಾಯಕ ಪಾತ್ರಧಾರಿಯಾಗಬಲ್ಲನು. ಗುಣಾವಗುಣಗಳ ತುಲನಾತ್ಮಕ ಜ್ಞಾನವಿರದ ಜನಸಾಮಾನ್ಯರು ಸಹಜ ಮತ್ತು ಕೃತಕತೆಯ ವ್ಯತ್ಯಾಸವರಿಯದೆ ಈ ವೇಷಧಾರಿಗಳ ಬಲೆಗೆ ಬೀಳುವದು ಸಂಭವನೀಯ.

ಹಿಂದೀ ಜನಸಾಮಾನ್ಯರಲ್ಲಿರುವ ಇಂದಿನ ಅಜ್ಞಾನ ಮತ್ತು ದೌರ್ಬಲ್ಯಗಳನ್ನೂ, ಜನತೆಯ ಈ ನಿಸ್ಸಹಾಯಕ ಸ್ಥಿತಿಯನ್ನು ಸ್ವಂತಕ್ಕಾಗಿ ಉಪಯೋಗಿಸಿಕೊಳ್ಳಲು ಮುಂದಾಗುತ್ತಿರುವವರಲ್ಲಿರುವ ಅನ್ಯೋದ್ದೇಶ, ಅಪೂರ್ಣ ಯೋಗ್ಯತೆ, ಅಯೋಗ್ಯತೆಗಳನ್ನೂ ಕಾಣುವಾಗ, ಭವಿಷ್ಯವು ಇನ್ನಷ್ಟು ಹಾಳಾಗುವ ಅಪಾಯ ಮೂಡಿದಂತೆ ತೋರುತ್ತಿದೆ. ಆದ್ದರಿಂದ ಭಾರತೀಯ ಜನಸಾಮಾನ್ಯರು ತಮ್ಮ ಪ್ರತಿನಿಧಿಗಳಾಗಿ ಆರಿಸಬಹುದಾದ ಮತ್ತು ಆಧರಿಸಬಹುದಾದ ಮುಂದಾಳುಗಳ ಯೋಗ್ಯತೆಯೆಂತಹದಿರಬೇಕು ಎಂಬುದರ ಸ್ಪಷ್ಟ ತಿಳುವಳಿಕೆ ಸಂಪಾದಿಸಿಕೊಳ್ಳುವದಗತ್ಯ.

ವಿವಿಧ ಮನೋವೃತ್ತಿ, ಮತ್ತು ಭಿನ್ನ ಭಿನ್ನ ಆಚರಣೆಗಳಿಂದ ಕೂಡಿರುವ ಜನತೆಯ ಭವಿಷ್ಯವನ್ನು ಎತ್ತಿಕೊಳ್ಳುವ ಹಸ್ತವು ಅತ್ಯಂತ ಭದ್ರ ಹಾಗೂ ನಿರ್ಮಲವಾಗಿರಬೇಕು. ಸಣ್ಣ ಪುಟ್ಟ ಕುಟುಂಬಗಳ ಹೊಣೆ ಹೊತ್ತವರು ಕೂಡಾ ನಿಷ್ಪಕ್ಷಪಾತವಾಗಿ, ನ್ಯಾಯಬದ್ಧವಾಗಿ ವರ್ತಿಸಲಾರದೆ ಪರಾಭವಗೊಳ್ಳುತ್ತಿರುವಾಗ ಸಾರ್ವಜನಿಕ ಜವಾಬ್ದಾರಿ ಹೊರುವುದೇನೂ ಸುಲಭದ ಕೆಲಸವಲ್ಲ.

ಇಲ್ಲಿ ಮುಖ್ಯವಾಗಿ ನೆನಪಿನಲ್ಲಿಡಬೇಕಾದ ನಿರ್ಧಾರ ಸೂತ್ರಗಳಿವು:- ಜನತೆಗಾಗಿ ನಾಯಕ ಹೊರತು ನಾಯಕನಿಗಾಗಿ ಜನತೆಯಲ್ಲ. ಎಷ್ಟೇ ದೊಡ್ಡ ಮನುಷ್ಯನಾದರೂ ಪೂರ್ಣ ನಿರ್ದೋಷಿ ಅಥವಾ ನಿಸ್ಸ್ವಾರ್ಥಿಯಾಗಿರಲಾರ. ಜನತೆ ಜಾಗ್ರತಿ ತಪ್ಪಿದಲ್ಲೆಲ್ಲಾ ನಾಯಕತ್ವ ಅಪಜಯಗೊಳ್ಳುವದೇ ಸರಿ.

ಆದ್ದರಿಂದ ಒಂದು ನಾಯಕತ್ವವು ಸಹಜ ಉದ್ಭವವೋ ಅಥವಾ ಸ್ವತಃ ಸೃಷ್ಟಿ ಮಾಡಿಕೊಂಡುದೋ ಎಂಬ ಶೋಧನೆಯ ಮೂಲಕವೇ ಅದರ ಪ್ರಥಮ ಪರೀಕ್ಷೆಯಾಗಬೇಕು. ಅದು ಸ್ವಂತ ಉದ್ದೇಶ ಸಾಧನೆಗಾಗಿ, ಅದಾಗಿ ತಮ್ಮ ಮೇಲೆ ಏರಿ ಬಂದುದು ಎಂದಾದರೆ, ಅದೊಂದೇ ಕಾರಣಕ್ಕಾಗಿ ಅಂತಹ ಮುಂದಾಳುತ್ವವನ್ನು ಅಲ್ಲಗಳೆಯಬೇಕು.

ಅದು ಯಾವುದೇ ಕಾಣ ಅಥವಾ ಆಧಾರದ ಬಲದಿಂದ ಸ್ವಾಭಾವಿಕ ಜನನಗೊಂಡುದಾಗಿದ್ದರೂ, ಅದರ ಗುಣದೋಷಗಳ ತುಲನೆ ಮಾಡಿ ನೋಡಿಕೊಳ್ಳುವ ಕೆಲಸ ಎರಡನೆಯದು. ಬೇರಾವ ಯೋಗ್ಯತೆ ಎಷ್ಟಿದ್ದರೂ ಜನತೆಯ ಪಾಲಿಗೆ ಗುಣಕ್ಕಿಂತ ಹೆಚ್ಚಿಗೆ ದೋಷವೇ ಇದೆಯೆಂದು ಕಂಡು ಬರುವ ನಾಯಕತ್ವ ಕೂಡಾ ಧಿಕ್ಕಾರಾರ್ಹವಿದೆ.

ಹೃದಯ ಮತ್ತು ತಲೆಯಲ್ಲಿ ಬೇರಾವ ದಕ್ಷತೆ ಸ್ಥಾನವಿರದೆ, ಸಾರ್ವಜನಿಕ ಸೇವಾ ಶಕ್ತಿಯೊಂದೇ ಇದ್ದು, ಅದನ್ನು ನಿರ್ವಹಿಸುವ ಧೈರ್ಯ, ಚಾತುರ್ಯ ಮತ್ತು ಕಾರ್ಯಶಕ್ತಿಯಿರುವ ಮುಂದಾಳುತ್ವವು ಉತ್ತಮವಾದುದು. ಸಜ್ಜನ ಮತ್ತು ಸಶಕ್ತನಾದವನು ಕೂಡಾ ಸಂದರ್ಭವಶಾತ್ ಕೆಟ್ಟ ಮತ್ತು ದುರ್ಬಲ ಕೀರ್ತಿವರ್ತನೆಗಳನ್ನು ಮಾಡ ಎಡೆಯಿದೆಯಾದ್ದರಿಂದ, ಇಲ್ಲಿಯೂ ಜನರ ಎಚ್ಚರಿಕೆಯಿಂದಿರುವ ಅವಶ್ಯಕತೆಯಿದ್ದೇ ಇದೆ.

ಜನತೆಗೆ ಪೂಜ್ಯ, ಜನತೆಗೆ ಮೇಲ್ಪಂಕ್ತಿ, ಜನತಾ ನಿರ್ದೇಶಕ, ಜನತಾ ಸಂಚಾಲಕ- ಮುಂತಾದ ಭಿನ್ನ ತರಗತಿಗಳು ಜನತಾ ಮುಂದಾಳು ವರ್ಗದಲ್ಲಿ ಇವೆ ಎಂಬುದನ್ನು ಮರೆಯಬಾರದು. ಈ ಭಿನ್ನ ಯೋಗ್ಯತೆಗಳ ಪೈಕಿ ಯಾವುದಾದರೊಂದು ಗುಣವಿದ್ದ ಮಾತ್ರಕ್ಕೇನೇ ಜನನಾಯಕನನ್ನಿಸಿಕೊಳ್ಳಲು ಸಾಧ್ಯವಿದೆ. ಆದರೆ ಜನಸಾಮಾನ್ಯರ ನಿಜವಾದ ಪ್ರಗತಿ ಸಾಧನೆಯಾಗಬೇಕಾದರೆ ಮುಂದಾಳುವು ಇವೆಲ್ಲಾ ವಿಧದ ಯೋಗ್ಯತೆಗಳ ಕೇಂದ್ರ ನೆಲೆಯಾಗಿರಬೇಕು.

ಪೂರ್ವ ಯುಗಗಳ 'ದೇವತಾ ಪುರುಷ'ರು, ಋಷಿ ಮುನಿಗಳು, ಧೀರೋದಾತ್ತರು ಕೂಡಾ ಜನತೆಗೆ ಪೂಜ್ಯರಾಗಿದ್ದಾರೆ; ಮೇಲ್ಪಂಕ್ತಿಯಾಗಿದ್ದಾರೆ. ಆದರೆ ಅವರು ನಮ್ಮ ಇಂದಿನ ನಾಯಕರಾಗಿಲ್ಲವೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಅದೇ ರೀತಿ ಮನುಷ್ಯ ವರ್ಗಕ್ಕಾಗುವ ನೀತಿ ತತ್ವ, ಸೂತ್ರಗಳನ್ನು ಒರೆದಿಟ್ಟಿರುವ ಹಿಂದಿನ ಕಾಲದ ನಿರ್ದೇಶಕರೂ, ತತ್ವ ಬೋಧಕ ಗ್ರಂಥಗಳೂ ನಮ್ಮಲ್ಲಿವೆ ಅವರಿಗೆ ಅಥವಾ ಅವುಗಳಿಗೆ ಇಂದಿನ ಜನನಾಯಕತ್ವ ಸಲ್ಲಲಾರದೆಂಬುದೂ ಸ್ವತಃ ಸಿದ್ಧ.

ಹಿಂದಿನವರಂತೆಯೇ ಇಂದಿನವರು ಕೂಡಾ- ಕೇವಲ ಪೂಜ್ಯರು, ಆದರ್ಶಜೀವಿಗಳು, ನಿರ್ದೇಶಕರು ಅಥವಾ ಬೋಧಕರು ಜನನಾಯಕರಲ್ಲವೆಂಬುದು ಖಂಡಿತ. ಜನತೆಯ ಗೌರವಕ್ಕರ್ಹರಾಗಿ, ಜನತೆಯ ದಿರು ಆದರ್ಶ ಜೀವಿಗಳಾಗಿ, ಜನತೆಗೆ ಬೋಧನೆ ಕೊಡುವವರು ಮತ್ತು ನಿರ್ದೇಶಿಸುವವರೂ ಆಗಿದ್ದು, ಜನತೆಯನ್ನು ಪ್ರತ್ಯಕ್ಷ ವ್ಯವಹಾರ ರಂಗದಲ್ಲಿ ಮುನ್ನಡೆಸಬಲ್ಲವರು ಮಾತ್ರ ನಿಜವಾದ ಜನನಾಯಕರಾಗಬಲ್ಲರು. ಇಂತಹ ಪೂರ್ಣ ಯೋಗ್ಯತೆಯುಳ್ಳವರೇ ಸಂಪೂರ್ಣ ಭರವಸೆಯಿಡಬಹುದಾದ ಮುಂದಾಳುಗಳಾಗಬಲ್ಲರು. ಎಲ್ಲೆಲ್ಲಿ, ಎಷ್ಟೆಷ್ಟರ ಅಂತಹ ಯೋಗ್ಯತೆಯ ಅಭಾವ ಕಾಣಿಸುತ್ತಿದೆಯೋ ಅಲ್ಲಿ ಅಷ್ಟರ ವಿಶೇಷ ಜಾಗರೂಕತೆಯಿಂದಿರಬೇಕಾದುದು ಜನತೆಯ ಕರ್ತವ್ಯ.

ನಿದರ್ಶನಕ್ಕಾಗಿ ಒಬ್ಬನಲ್ಲಿ ಹೋರಾಟ ಮನೋವೃತ್ತಿ ಹಾಗೂ ಯೋಧ ಶಕ್ತಿ ಮತ್ತು ಎದೆಗಾರಿಕೆ ಮಾತ್ರವಿರಬಹುದು. ಮುಂದಾಳುತ್ವದ ಯೋಗ್ಯತೆಗಳಲ್ಲಿ ಇದೂ ಒಂದಂಶವೆಂಬುದು ನಿಜವಾದರೂ ಅದೇ ಸಂಪೂರ್ಣವಲ್ಲ. ಆತನು ತನಗೆ ಬೇಡವೆನ್ನಿಸುವ ಎಲ್ಲವನ್ನೂ, ಎಲ್ಲರನ್ನೂ, ಎಲ್ಲಾ ಸಂದರ್ಭಗಳಲ್ಲಿಯೂ ಖಂಡಿಸಬಲ್ಲನು ಹೊರತು, ಅದಕ್ಕೆ ಪ್ರತಿಯಾಗಿ ಯಾವುದನ್ನೂ ಸೂಚಿಸಲಾರನು. ಇಂಥವನ ನಾಯಕತ್ವವು ಒಂದೇ ಗಾಲಿಯ ಬಂಡಿ-ಎಂದಿಗೂ ಮುನ್ನಡೆಯದು.

ಜನತೆಯು ಸಂಕಟ, ಸಮಸ್ಯೆಗಳಲ್ಲಿ ಸಿಕ್ಕಿಕೊಂಡ ವೇಳೆ ಅವುಗಳಿಗಿರುವ ಪರಿಹಾರೋಪಾಯಗಳ ಕುರಿತು ಓರ್ವನು ಅತ್ಯಂತ ಸೊಗಸಾಗಿ ಬೋಧಿಸಬಲ್ಲನು; ನಿರ್ದೇಶಿಸಬಲ್ಲನು. ಆ ಮೂಲಕ ಒಂದು ಪ್ರಕಾಶವನ್ನೇನೋ ಆ ಭಾಗಕ್ಕೆ ಚೆಲ್ಲಬಲ್ಲನು. ಆದರೆ ಜನತೆಯ ಪ್ರಗತಿಗಾತಂಕಗಳೆಂದರೆ ಏತಾವ ಣದ ಕತ್ತಲೆ ಅಥವಾ ಜನತಾ ಅಜ್ಞಾನ ಮಾತ್ರವಲ್ಲ; ಕೈಕಾಲು ಬಿದ್ದಂತಿರುವ ಜನಸಾಮಾನ್ಯರನ್ನು ಕೈಹಿಡಿದು ಮುನ್ನಡೆಯಿಸಿಕೊಂಡು ಹೋಗುವ ಮಾರ್ಗದರ್ಶಿಯೇ ಅವಲಂಬ ಬೇಕಾಗುತ್ತದೆ. ಆಚರಣೆಯ ಬೆಳಕು ತೋರದೆ, ಬೋಧನೆಯ ರೂಪದಿಂದಷ್ಟೇ ತೋರಿಸುವ ಮುಂದಾಳುತ್ವವೊಂದು ಕಟ್ಟಡದ ನಕಾಶೆ ಮಾತ್ರ—ಕಟ್ಟಡವೇ ಅದಲ್ಲ.

ಈ ರೀತಿ, ಯೋಗ್ಯತೆಯ ಅಪೂರ್ಣತೆ ಅಥವಾ ಅರ್ಧಮರ್ಧ ಪ್ರಕಾರದಿಂದ ಕೂ

(೨ನೇ ಪುಟ ನೋಡಿರಿ)

THE UNITED KARNATAK INSURANCE COMPANY, LTD., DHARWAR.
Established: 1929.

Offers their valuable service to the public of India in making their sweet home, always happy.
For good investments and valuable connections, please consult us.

# ತೃಪ್ತ ಮತ್ತು ಅತೃಪ್ತ ವರ್ಗ- ಅವುಗಳೊಳಗಿನ ಘರ್ಷಣೆ!

ನಿಸ್ಸಹಾಯಕತೆ ಮತ್ತು ನಿರಾಶೆ ವ್ಯಾಪಿಸಿರುವಲ್ಲಿ ಕ್ರೋಧ, ಆವೇಶ, ಗೊಂದಲ, ಗಲಿಬಿಲಿಗಳು ಸಹಜವಾಗಿ ನೆಲೆ ನಿಲ್ಲುತ್ತವೆ; ಅಸಹಾಯಕ್ಕೀಡಾಗಿ, ವಿಮೋಚನಾರಹಿತ ಅವಸ್ಥೆಗೆ ಸಿಲುಕಿಕೊಂಡಿರುವವರು ಸಿಡುಕಬೇಕು, ದುಡುಕಬೇಕು ಹೊರತು ಶಾಂತ, ದೃಢಚಿತ್ತದಿಂದಿರುವುದು ಅಸಾಧ್ಯ. ಖಾಸಗೀ ವಿಷಯಗಳಿಂದಾರಂಭಿಸಿ, ಜಾಗತಿಕ ರಾಜಕಾರಣದವರೆಗಿನ ಸಣ್ಣ ದೊಡ್ಡ ವಿದ್ಯಮಾನಗಳೆಲ್ಲದರಲ್ಲೂ ಇದೇ ಹವ್ಯಾಸವನ್ನು ಕಾಣಬಹುದು. ಅಂತೆಯೇ ತಮ್ಮ ಕಾರ್ಯ ಸಾಧಿಸಿಕೊಂಡವರ, ಅಥವಾ ಸಾಧನೆಯಾಗುವ ಆಸೆ, ಭರವಸೆಗಳಿರುವವರ ಮನಸ್ಸು ಶಾಂತವಾಗಿ, ಪ್ರಫುಲ್ಲವಾಗಿ ಇರುವುದು ಸ್ವಾಭಾವಿಕ. ಇಂತಹ ತೃಪ್ತರು ಸಭ್ಯತೆ, ನಾಗರಿಕತೆಗಳ ಮುಸುಕು ಹಾಕಿಕೊಂಡೇ ತಮ್ಮ ಸ್ವಾರ್ಥ ಸಾಧನೆ ಮಾಡಿಕೊಳ್ಳಲಡ್ಡಿಯಿಲ್ಲ. ಲೋಕದ ಎಲ್ಲಾ ರಂಗಗಳ ವಿವಿಧ ಮಾದರಿಯ ಸ್ಥಿತಿಗತಿಗಳಲ್ಲೂ ನಾವಿದನ್ನೇ ತಿರುಳಾಗಿ ಕಾಣುತಿದ್ದೇವೆ

oo oo

ನಿದರ್ಶನಕ್ಕಾಗಿ ಲೋಕದ ಪಾಲಿಗೆ ಇಂದಿನ ಮುಖ್ಯ ಸಮಸ್ಯೆಯಾಗಿರುವ ಅಮೆರಿಕ-ರಶ್ಯಾ ಘರ್ಷಣೆಯನ್ನೇ ನೋಡಬಹುದು. ಸೂಕ್ಷ್ಮದೃಷ್ಟಿಯಿಂದ ನೋಡುವಾಗ, ಭವಿಷ್ಯದ ಭರವಸೆ ತಪ್ಪಿರುವ ಅಮೆರಿಕವು ಗಲಿಬಿಲಿಗೊಂಡು ಯುದ್ಧಕ್ಕಾಗಿ ಹಾತೊರೆಯುತ್ತಿರುವ ದೃಶ್ಯವೇ ಕಾಣಿಸುತ್ತಿದೆ. ನಿಜವಾಗಿಯೂ ಇಂದು ರಶ್ಯಕ್ಕೆ ಪ್ರತ್ಯಕ್ಷ ಮಹಾ ಯುದ್ಧ ಬೇಕಾಗಿರಲಾರದು. ಒಂದು ರಾಷ್ಟ್ರವು ಇನ್ನೊಂದನ್ನು ಆಕ್ರಮಿಸಿಕೊಂಡಾಳುವ ಕಾಲವೆಂದೋ ಕಳೆದಿದೆ; ಈ ಮೇಲಧಿಕಾರದ ಶೇಷಾಂಶಗಳು ಕೆಲವೆಡೆಗಳಲ್ಲಿ ಇನ್ನೂ ಉಳಿದುಕೊಂಡಿರಬಹುದಾದರೂ ಅವು ಅಂತಿಮಾವಸ್ಥೆಯಲ್ಲಿವೆ ಹೊರತು ದೀರ್ಘಾಯುಗಳಾಗುವ ಆಶೆ ಮಲ್ಲಿಲ್ಲವೇ ಇಲ್ಲ ಆದ್ದರಿಂದ ರಾಜ್ಯಾಕ್ರಮಣದ ಆಶೆಯಿಂದ ಇಂದು ಯಾವ ಕಡೆಯವರೂ ಯುದ್ಧವನ್ನು ಅಪೇಕ್ಷಿಸಲಾರರು, ಆದರೆ ಇಡೀ ಲೋಕವೇ ತಮ್ಮ ಅನುಯಾಯಿಯಾಗಬೇಕು-ತಮ್ಮ ರಾಜಕೀಯ ಧರ್ಮ ಮತ್ತು ರೀತಿನೀತಿಗಳು ಲೋಕವ್ಯಾಪಿಯಾಗಬೇಕು- ಎಂಬ ಮಹತ್ವಾಕಾಂಕ್ಷೆ ಮಾತ್ರ ಇಂದು ರಶ್ಯ ಮತ್ತು ಅಮೇರಿಕಗಳಿಗಿರಬಹುದು. ಸದ್ಯಸ್ಥಿತಿಯಲ್ಲಿ ರಶ್ಯದ ಈ ಉದ್ದೇಶ ಸಾಧನೆಯು ತನ್ನಂತೆ ಆಗುತ್ತಾ ಹೋಗುತ್ತಿದೆ. ಕಳೆದ ಮಹಾ ಯುದ್ಧಾನಂತರ ಇಡೀ ಪ್ರಪಂಚದಲ್ಲಿ, ಅದರಲ್ಲೂ ಮುಖ್ಯವಾಗಿ ಏಶ್ಯಾ ಖಂಡದ ರಾಷ್ಟ್ರಗಳಲ್ಲಿ ರಶ್ಯದ ಕಮ್ಯೂನಿಸಮ್ ಎಷ್ಟೊಂದು ತೀವ್ರಗತಿಯಿಂದ ವ್ಯಾಪಿಸಿಕೊಂಡಿದೆ ಎಂಬುದನ್ನು ಊಹಿಸಬಹುದು. ಇದೇ ಪ್ರಮಾಣದಲ್ಲಿ ಕಮ್ಯೂನಿಸ್ಮ್ ಪ್ರಗತಿಯಾಗುತ್ತಾ ಹೋದರೆ ಇನ್ನು ಹತ್ತು ವರುಷಗಳೊಳಗೆ ಈ ದೃಷ್ಟಿಯಿಂದ ರಶ್ಯವು ಲೋಕ ವಿಜಯಿಯಾಗುವದು ಸಂಭವನೀಯ. ಪ್ರತ್ಯಕ್ಷ ಹೋರಾಟವಿಲ್ಲದೇನೇ ಪ್ರತಿ ದಿನವೂ ಇಂತಹ ವಿಜಯಗಳನ್ನು ತಾನು ದೊರಕಿಸಿಕೊಳ್ಳುತ್ತಿರುವಾಗ ರಶ್ಯವು ಯುದ್ಧವನ್ನು ಬಯಸುವುದಾದರೂ ಏತಕ್ಕಾಗಿ? ಆದರೆ ರಶ್ಯದ ಈ ಪ್ರಗತಿಯು ಅಮೆರಿಕಕ್ಕೆ ಬಲವಾದ ಎದೆನೋವನ್ನು ನಿರ್ಮಿಸಿದೆ; ಕಮ್ಯೂನಿಸಂ ಸಾಮಾನ್ಯ ಜನತೆಯ ಮೆದುಳು ಮತ್ತು ಹೃದಯವನ್ನು ಸೆರೆ ಹಿಡಿಯುತ್ತಾ ಬೆಳೆಯುತ್ತಿರುವ ಮಾದರಿಯಲ್ಲೇ ಅದನ್ನು ಅಲ್ಲಿಂದ ಹೊರ ದೂಡುತ್ತಾ ಹೋಗುವ ಸಾಧನಾಂಶವೇನೂ ಇಂದು ಅಮೇರಿಕದ ಕೈಯಲ್ಲಿಲ್ಲ. ಎಂತಹ ವಿಭಾಗ ಕೊಟ್ಟರೂ ಭಂಡವಾಳಶಾಹಿತ್ವವು ಲೋಕದ ಸಾಮಾನ್ಯ ಜನತೆಯ ಚಿತ್ತವನ್ನಾಕರ್ಷಿಸುವಂತಿಲ್ಲ. ಆರ್ಥಿಕ, ಸಾಮಾಜಿಕ ಸಮಾನತೆಯ ಮಟ್ಟಕ್ಕೇರಲು ಇಂದು ಚಡಪಡಿಸುತ್ತಿರುವ ಜನತೆಯು ಅಂತಹ ಪ್ರಗತಿಯ ಆಶ್ವಾಸನವಾಗಿರುವ ಕಮ್ಯೂನಿಸಮನ್ನು ಅಪ್ಪಿಕೊಳ್ಳುವ ಆತುರದಿಂದಿರುವುದು ಸ್ವಾಭಾವಿಕ. ಈ ಅಭಿಲಾಷೆಯು ಇದಕ್ಕಿಂತ ಉತ್ತಮ ವಿಧಾನದಿಂದ ಈಡೇರಿಸಲ್ಪಟ್ಟರೆ ಮಾತ್ರ ಕಮ್ಯೂನಿಸಮು ಗೆಡೆಯಿಂದು. ಇಲ್ಲವಾದರೆ, ಆಲ್ಲಲ್ಲಿಯ ಪರಿಸ್ಥಿತಿಗನುಸಾರವಾಗಿ ತೀವ್ರವಾಗಿ ಅಥವಾ ನಿಧಾನವಾಗಿ ಲೋಕವು ಕಮ್ಯೂನಿಸಮಿನತ್ತ ಧಾವಿಸುವುದೇ ಸರಿ. ತಮ್ಮ ಪಾಲಿಗೊದಗಿರುವ ಈ ಅಪಾಯವನ್ನು ಮನಗಂಡುದರಿಂದಲೇ ಅಮೆರಿಕಕ್ಕೆ ಸಮರ ದುಸ್ಫೂರ್ತಿ ಹುಟ್ಟಿರಬೇಕು; ನಿಸ್ಸಹಾಯಕ ಅತೃಪ್ತನ ಎದೆಗುದಿಯೇ ಅದಕ್ಕೀಗ ಉಂಟಾಗಿರಬೇಕು. ಕಮ್ಯೂನಿಸಮಿನ ಮೂಲ ಬುಗ್ಗೆ ರಶ್ಯವನ್ನೇ ಯುದ್ಧ ಬೇಗೆಯಿಂದ ಒಣಗಿಸಿಬಿಟ್ಟಲ್ಲಿ ಈ ಗಂಡಾಂತರವನ್ನು ತಪ್ಪಿಸಿಕೊಳ್ಳಬಹುದು ಎಂಬ ಒಳ ಪ್ರೇರಣೆಯಿಂದೀಗ ಅಮೆರಿಕವು ಚಡಪಡಿಸುತ್ತಿರಬಹುದು. ಇದಕ್ಕೆ ಪ್ರತಿಯಾಗಿ ರಶ್ಯವು ಯುದ್ಧವನ್ನಪೇಕ್ಷಿಸುತ್ತಿಲ್ಲವಾದರೂ ಅದು ತನ್ನ ಮೈಮೇಲೆ ಬಂದು ಬೀಳುತ್ತದಾದರೆ ಅದನ್ನಿದಿರಿಸುವ ಕೆಚ್ಚನ್ನು ರಶ್ಯವು ತೋರಿಸುತ್ತಿದೆ. ಈ ರೀತಿ ಇಂದಿನ ಜಾಗತಿಕ ಘರ್ಷಣೆಯು ಅನುಕೂಲ-ಪ್ರತಿಕೂಲ ವಿದ್ಯಮಾನಗಳ ದೆಸೆಯಿಂದಾಗಿ ಹುಟ್ಟಿಕೊಂಡ ತೃಪ್ತಾತೃಪ್ತರೊಳಗಿನ ಸ್ಪರ್ಧೆಯೇ ಹೊರತು ಬೇರೇನಲ್ಲ.

oo oo

ಇದೇ ರೀತಿ ಭಾರತದಲ್ಲಿ ಸ್ಥಾನ, ಮಾನ ಮತ್ತು ಐಶ್ವರ್ಯಗಳನ್ನು ಗಳಿಸಿಕೊಂಡು ತೃಪ್ತರಾಗಿದ್ದು ಪ್ರಚಲಿತ ಸ್ಥಿತಿಯೇ ಪೂರ್ಣತೆಯಲ್ಲಿರಲಿ, ಎಂದು ಬಯಸುವವರಲ್ಲಿಯೂ ಸಭ್ಯತೆ, ನಾಗರಿಕತೆ, ಗಾಂಭೀರ್ಯಗಳ ಮೂಲಕ ಆತ್ಮ ತೃಪ್ತಿ ಪ್ರದರ್ಶಿಸುತ್ತಿರುವುದನ್ನು ಕಾಣಬಹುದು; ಸ್ಥಾನ ಮಾನ, ಸ್ಥಿತಿಗತಿಗಳನ್ನು ಕೆಡಿಸಿಕೊಂಡು ನಿಸ್ಸಹಾಯಕರಾಗಿರುವವರು ಒರಟುತನ, ಗಲಿಬಿಲಿ, ಕ್ರಾಂತಿಕರ ಘೋಷಣೆ, ಪತಾಕೆಗಳನ್ನು ವಹಿಸುತ್ತಿರುವುದನ್ನೂ ನೋಡುತಿದ್ದೇವೆ. ಈ ಪೈಕಿ ಮೊದಲನೇ ವರ್ಗದವರನ್ನು ಸಂಭಾವಿತರೆಂದೂ, ಎರಡನೇ ವರ್ಗದವರನ್ನು ದುರ್ಮತನೆಯವರೆಂದೂ ಅಟ್ಟಿಕೊಳ್ಳುವ ಬದಲಿಗೆ, ಅವರ ಸ್ಥಿತಿ ಅಷ್ಟು ಮನೋಹರವಿರುವಾಗ ಇವರ ಸ್ಥಿತಿಯೇ ಇಷ್ಟು ದೊಂಗಾಗಿದೆ ಎಂಬುದನ್ನು ತಿಳಿದಿರಬೇಕಾದುದು ಅಗತ್ಯ. ಬದಲಾವಣೆಯು ಕ್ರಾಂತಿ ಸಂದರ್ಭಗಳಲ್ಲಿ ಹೊರತು ಸಾಮಾನ್ಯ ಕಾಲದಲ್ಲಿ ಶ್ರೀಮಂತರ ಅಥವಾ ಸ್ಥಾನಮಾನಾಪನ್ನರ ಚಿತ್ತ ಕ್ಷೋಭೆಗೊಳ್ಳುವ ಸಂದರ್ಭ ಬರುವಂತಿಲ್ಲ. ಬದಲಿಗೆ ತಮ್ಮೀ ಅನುಕೂಲ ಸ್ಥಿತಿಗತಿಗಳನ್ನು ಅಡ್ಡದಾರಿಗಳ ಮೂಲಕ ಉಪಯೋಗಿಸಿ, ಅವ್ಯಕ್ತ ರೀತಿಯಿಂದ ಸ್ವಾರ್ಥಸಾಧಿಸಿಕೊಳ್ಳುವ ಅವಕಾಶಗಳು ಕೂಡ, ಈ ಮುದ್ರೆಯೇ ವರ್ಗಕ್ಕಿವೆ. ನಿದರ್ಶನಕ್ಕಾಗಿ 'ಗಾಂಧಿಸ್ಮಾರಕ ನಿಧಿ'ಯ ದಾನದ ಕುರಿತು ಸೇಟ್ ದಾಲ್ಮಿಯಾರವರು ಹೊರಗೆಡಹಿರುವ ಅಭಿಪ್ರಾಯ ಮತ್ತದಕ್ಕೆ ಸರ್ದಾರ ವಲ್ಲಭಾಯಿಗಳತ್ತ ಉತ್ತರವನ್ನು ತೋರಿಸಬಹುದು. ಸೇಟ್ ರಾಮಕೃಷ್ಣ ದಾಲ್ಮಿಯರು ಭಾರತದ ಅಗ್ರಗಣ್ಯ ಉದ್ದಿಮೆ ಪ್ರಭುಗಳಲ್ಲೊಬ್ಬರು; ಕೈಬೆರಳಣಿಕೆಗೆ ಸಿಗಬಲ್ಲ ಪ್ರಥಮ ಶ್ರೇಣಿಯ ಭಂಡವಾಳಗರಲ್ಲೋರ್ವ. ಭಾರತ-ಪಾಕಿಸ್ತಾನಗಳ ಸಂಬಂಧವು ತೀರಾ ಕೆಟ್ಟು ಹೋಗಿದ್ದ ಬಂಗಾಳ ದುರಂತದ ವೇಳೆ "ಭಾರತವನ್ನು 'ಹಿಂದೂ ರಾಷ್ಟ್ರ'ವೆಂದು ಘೋಷಿಸಬೇಕು; ಪಾಕಿಸ್ತಾನದ ಮೇಲೆ ಉಗ್ರ ಪ್ರತೀಕಾರ ಕಾರ್ಯ ಕೈಕೊಳ್ಳಬೇಕು' ಎಂಬಂತಹ ಅಭಿಪ್ರಾಯಗಳನ್ನು ಹೊರಗೆಡಹಿ ಪಂಡಿತ ನೆಹರುಗಳ ತೀಕ್ಷ್ಣ ಖಂಡನೆಗೀಡಾಗಿದ್ದವರು. ಕಮ್ಯೂನಿಸ್ಟರು ಅಥವಾ ಸಮತಾವಾದಿಗಳಂತಹ ಆರ್ಥಿಕ ಸಮಾನತಾವಾದಿಗಳ ಭಂಡವಳಿಗಾ ಸ್ವಾರ್ಥಿಗಳ ನಾಮೋಚ್ಚಾಟಣೆ ಮಾಡಬೇಕಾಗಿ ಬರುವಾಗ ಬಿರ್ಲಾ, ದಾಲ್ಮಿಯಾ ಹೆಸರುಗಳೇ ಅವರ ನಾಲಿಗೆಯಲ್ಲಿ ನಲಿದಾಡುವ ಸಂಪ್ರದಾಯ. ಇಂತಹ ಸೇಟ್ ರಾಮಕೃಷ್ಣ ದಾಲ್ಮಿಯರು ತನ್ನ ಇತ್ತೀಚೆಗಿನ ಒಂದು ಹೇಳಿಕೆಯಲ್ಲಿ ಅಂದಿದ್ದರು. "ಕಾಶ್ಮೀರ, ಪಂಜಾಬು, ಸಿಂಧ, ಗಡಿನಾಡು ಪ್ರಾಂತ್ಯ ಮತ್ತು ವಿಶೇಷತಃ ಬಂಗಾಳದ ನಿರಾಶ್ರಿತರ ಸಂಕಷ್ಟಗಳು ಮತ್ತು ದುರಂತಗಳು ಈ ಪ[illegible]ಗೂ ನಮ್ಮ ಲಕ್ಷ್ಯವನ್ನು ಸೆರೆ ಹಿಡಿಂ[illegible]ಲಿಂದ ಹೋದುದೆಂಬುದು ವೇದನಾತ್ಮ[illegible] ಸಂಗತಿ ಗಾಂಧಿಜೀಯ ಸ್ಮಾರಕ ನಿಧಿ[illegible] ಕೊಡುಗೇ ಸಂಬಂಧದ ಕೆಟ್ಟ ಮಾ[illegible]ಯನ್ನು ನಾವು ಇಲ್ಲಿಯ ಪುನರಾವ[illegible]ಸಬ ರದು 35 ಕೋಟಿ ಜನಸಂಖ್ಯೆ[illegible]ಳ್ಳ ರಾಷ್ಟ್ರದಲ್ಲಿ ಸರಕಾರದ ಬೆಂಬಲದಿ[illegible] ಈ ನಿಧಿಗೆ ಸುಮಾರು 100 ಕೋಟಿ ರೂ[illegible]ಗಳ ಸಂಗ್ರಹವಾಗಬಹುದೆಂದು ನಾವು ನಿರೀಕ್ಷಿಸಿದ್ದೆವು ಆದರೆ ವಸ್ತುತಃ ತೀರಾ

(೧ನೇ ಪುಟದಿಂದ ಮುಂದುವರಿದುದು)

ಡಾ ಸಾರ್ವಜನಿಕ ಕಾರ್ಯಗಳಾಗಲಾರವೆಂಬುದು ಖಚಿತವಿರುವಾಗ ಕೇವಲ ಪ್ರತೀಕಾರೋದ್ದೇಶ ಅಥವಾ 'ಅಹಂ' ಸ್ವಭಾವ ಇಲ್ಲವೇ ಅನ್ಯ ಧ್ಯೇಯವಿಟ್ಟುಕೊಂಡು ಮುಂದೆ ಬರುವ ನಾಯಕತ್ವವೆಂದಿಗೂ ಸಾರ್ಥಕಗೊಳ್ಳಲಾರದು.

ಇಂತಹ ನಾಯಕ ಶೋಧನೆ ಕೂಡಾ ಲಗು ಬುದ್ಧಿಗೆ ಎಟಕದ ವಿಷಯ. ಭಾರತೀಯ ಜನ ಸಾಮಾನ್ಯರಲ್ಲಿ ಈ ಪರೀಕ್ಷಾ ಪ್ರೌಢಿಮೆ ಇನ್ನೂ ಬಂದಿಲ್ಲ. ಆದ್ದರಿಂದಲೇ ಪ್ರತೀಕಾರೋನ್ಮತ್ತರು, ಅತಿಗಾಮಿ ಪ್ರತಿಗಾಮಿಗಳು, ಕಾರ್ಯಹೀನರು ಮತ್ತು ಅರೆಪಕ್ವ ಬುದ್ಧಿಯವರು ಕೂಡಾ ಒಂದಲ್ಲೊಂದು ರೀತಿಯ ಮುಂದಾಳುತನ ದೊರಕಿಸಿಕೊಳ್ಳಲು ಮುಂದಾಗುತಿದ್ದಾರೆ. ಜನತೆಯ ಅಜ್ಞಾನ ಮತ್ತು ಅತೃಪ್ತ ಭಾವನೆಗಳನ್ನು ತಮ್ಮ ಅನುಕೂಲತೆಗಾಗಿ ಉಪಯೋಗಿಸಿಕೊಳ್ಳುವವರೇ ಹೆಚ್ಚಾಗಿ ಕಾಣಿಸಿಕೊಳ್ಳುತಿದ್ದಾರೆ ಹೊರತು, ಅವುಗಳನ್ನು ನಿವಾರಿಸುವವರು ಗೋಚರಿಸುತ್ತಿಲ್ಲ. ಬೆಂಕಿಬಿದ್ದಲ್ಲಿ ಬತ್ತಿ ಹೊತ್ತಿಸಿಕೊಳ್ಳುವವರ ಆಟ ನಡೆದಿದೆಯಲ್ಲದೆ, ಅದನ್ನು ನಂದಿಸುವ ಸಾಹಸ ಸಾಕಷ್ಟು ಕಾಣಿಸುತ್ತಿಲ್ಲ. ಜನತೆಯು ದುರದೃಷ್ಟತರು ಕವಲೊಡೆಯುತ್ತಿದೆ. ಅದರ ಬುಡಕ್ಕೆ ಕೊಡಲಿಯೇಟು ಬೀಳುತ್ತಿಲ್ಲ

ಆದ್ದರಿಂದ ತಮ್ಮ ಯೋಗ್ಯತಾನುಸಾರವಾಗಿಯಾದರೂ ಸಾರ್ವಜನಿಕರು ಕಣ್ಣುಮುಚ್ಚಿ ಅನುಸರಿಸಬಾರದು; ನಂಬಿ ಕೆಡಬಾರದು.


## ಕೆನರಾ ಬ್ಯಾಂಕ್, ಲಿಮಿಟೆಡ್

(ಸ್ಥಾಪನೆ ೧೯೦೬)

(ಜವಾಬ್ದಾರಿಕೆ ಪರಿಮಿತಿಸಲ್ಪಟ್ಟು ಭಾರತದಲ್ಲಿ ಸಾಂಘೀಕರಿಸಿದ್ದು)

**ಮುದ್ದತಿ ಠೇವುಗಳು**

ರೂ. ೧೦,೦೦೦ ಯೂ ಅದಕ್ಕೆ ಮೇಲ್ಪಟ್ಟು ೧,೦೦೦ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೫೦ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ.

೩ ತಿಂಗಳು . ... ನೂರಕ್ಕೆ ವರ್ಷಕ್ಕೆ ೨।

೪ ರಿಂದ ೫ ತಿಂಗಳು ... ... ,, ,, ೨॥

ರೂ ೧,೦೦೦ಕ್ಕೆ ಕಡಿಮೆಯಲ್ಲದ ರೂ. ೧೦,೦೦೦ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದು ಕೊಳ್ಳಬಹುದು.

ಮಂಗಳೂರು ಶಾಖೆಗಳು

[1] ಬಂದರ ರೋಡ್; [2] ಡೊಂಗರಕೇರಿ,

ಇತರ ಶಾಖೆಗಳು ಕಾರ್ಕಳ, ಬಂಟವಾಳ, ಮುಲ್ಕಿ, ಕುಂದಾಪುರ, ಉಡುಪಿ, ಗಂಗೊಳ್ಳಿ, ಪುತ್ತೂರು, ಕಾಸರಗೋಡು, ಬೊಂಬಾಯಿ, ಇತ್ಯಾದಿ ಇತ್ಯಾದಿ

**CANARA BANK, LIMITED**

**(Estd 1906)**

...ಪರಿಮಾಣದ ಸಹಾಯವು ಸಾರ್ವಜ...ಕರಿಂದ ದೊರೆತಿದ್ದಿತು. ಹೀಗಾ...ಯು ಭಾರತದ ಆರ್ಥಿಕ ಸ್ಥಿತಿಯು ಹಿಂ...ನಷ್ಟು ಸಮಾಧಾನಕರವಾಗಿಲ್ಲದಿರುವು...ದು ಕೆಲಮಟ್ಟಿಗೆ ಕಾರಣವಾಗಿರಬಹುದಾದ...ು ನಮ್ಮಲ್ಲಿರುವ ದುಡ್ಡಿನ ಆಶೆಯೇ ಇ...ಕ್ಕೆ ಹೆಚ್ಚಿನಂಶ ಕಾರಣ. ಗಾಂಧಿಜೀ ...ಸ್ಮಾರಕ ನಿಧಿಗಾದ ಒಟ್ಟು ಸಂಗ್ರಹವು ...ಮಾರು 10 ಕೋಟಿ ರೂಪಾಯಿ. ಈ ...ಕಿ ಸರೀ ಅರ್ಧಾಂಶದಷ್ಟನ್ನು ಕೆಲವು ...ರು ಮಂದಿ ಉದ್ದಿಮೇದಾರರಿಂದ ...ವೇ ಕೊಟ್ಟಿದ್ದವು. ನಾವು ಪರೋಪ...ರ ಬುದ್ಧಿಯಿಂದ, ಅಥವಾ ನಮ್ಮನ್ನ...ದ ಆ ಮಹಾ ಆತ್ಮದ ಕಡೆಗೆ, ನಮ್ಮ ...ವನ್ನರ್ಪಣೆ ಬಿಡುವ ಈ ಮಾದರಿಯ ...ಥಾರ್ಥ ಭಕ್ತಿಯಿಂದ ಇಂತಹ ದಾನ ...ಡಿದುದಲ್ಲ. ಅಧಿಕಾರಿಗಳು ಇಂತ ದಾನವನ್ನು ಕೇಳಿದರೆಂಬುದಕ್ಕಾಗಿ, ...ತು, ಹೀಗೆ ದಾನಮಾಡಿ ಬಿಟ್ಟರೆ ಮತ್ತೆ ...ನ್ನನ್ನು ತೆರಿಗೆ ವಂಚನಾ ಶೋಧಕ ...ಶನಿನ ಕಠಿಣ ಕಾರ್ಯಕ್ಕೆ ಬಲಿಕೊಡ...ರೆಂದು ನಮ್ಮಲ್ಲಿ ಹೆಚ್ಚಿನವರು ನಿರೀ...ಸಿದುದರಿಂದಾಗಿ—ಒಂದೋ ನಾವದ...ದ ತಪ್ಪಿಸಿಕೊಳ್ಳಬಹುದು, ಇಲ್ಲವೇ ನ...ಮೇಲಿನ ಮೊಕದ್ದಮೆಗಳು ಸಾಹು...ತಾ ಪೂರ್ವಕ ತೀರ್ಮಾನಗೊಳ್ಳಬಹು ಎಂಬ ಆಸೆ ನಮಗಿದ್ದುದರಿಂದಾಗಿ—...ವು ಆ ದಾನ ಮಾಡಿದ್ದೆವು. ಇಂತಹ ...ಲಾಸೆಗೆ ಬಲಿಬಿದ್ದವರಲ್ಲಿ ಕೊನೆಯ...ನು ನಾನೂ ಒಬ್ಬನಿದ್ದೇನೆ. ನನ್ನ ...ಟುಂಬಿಕರ ನಿಯಂತ್ರಣದಲ್ಲಿರುವ ಉ...ಮೆಗಳ ಮೂಲಕ ಹಲವು ಲಕ್ಷ ರೂ...ಯಿಗಳನ್ನು ಈ ಆಸೆಯಿಂದಲೇ ನಾನು ...ನಿಧಿಗೆ ಕೊಡಿಸಿದ್ದೇನೆ ಯಥಾರ್ಥವಾಗಿ ...ನಾವದಾದರೆ ಇದೊಂದು ಪರಿಶುದ್ಧ ...ನವಲ್ಲವೇ ಅಲ್ಲ. ಎಲ್ಲರಲ್ಲವಾದರೂ ...ಚ್ಚಿನವರು ನನ್ನಂತೆಯೇ ಇರಬಹುದು. ...ನೇನೂ ನಮಗೆ ಉಚಿತವಾದ ಸಂ...ಯಿಲ್ಲವಾದರೂ ಇದೀಗ ನಿಷ್ಕಪಟಿ...ಶಿ".

ಈ ಕಲ್ಮಷಪೂರಿತ ಹೃದಯ ಮತ್ತು ...ಚು ಮಾತುಗಳನ್ನು ಕಂಡು, ಕೇಳಿದೊ...ಯೇ ಸರ್ದಾರ್ ವಲ್ಲಭಾಯಿ ಪಟೇಲ ಸೇಟ್ ದಾಲ್ಮಿಯಾರಿಗೆ ಒಂದು ...ತ್ರ ಬರೆದು ಸ್ಪಷ್ಟವಾಗಿ ತಿಳಿಸಿದರು: ...ಮ್ಮ ಹೇಳಿಕೆಯನ್ನು ಓದಿ ನನಗೆ ಆ...

# ತೃಪ್ತರ ಸಭ್ಯ ನಾಗರಿಕ ನಟನೆ—ಅತೃಪ್ತರ ಸಹಜ ಒರಟುತನ!

ಶ್ಚರ್ಯ ಮತ್ತು ವೇದನೆಯಾಗಿದೆ. ತಮ್ಮ ಪಾಲುದಾರರ ಹಣವನ್ನು ಮಹಾತ್ಮಾ ಗಾಂಧಿ ಸ್ಮಾರಕ ನಿಧಿಗೆ ಸಹಾಯವಾಗಿ ಕೊಡುವ ಮೂಲಕ ತಮ್ಮ ಸ್ವಾರ್ಥ ಸಾಧಿಸಿಕೊಳ್ಳಬೇಕೆಂಬಷ್ಟು ಕೆಳ ಮಟ್ಟಕ್ಕೆ ಯಾವ ಉದ್ದಿಮೇದಾರನಾದರೂ ಇಳಿಯಬಹುದೆಂದು ನಾನು ನೆನಸುವದಿಲ್ಲ. ಆದಾಯ ತೆರಿಗೆಯನ್ನು ತಪ್ಪಿಸಿಕೊಳ್ಳುವ ಪ್ರಶ್ನೆಯು ಅಲ್ಲಿ ಲವ ಮಾತ್ರವಾದರೂ ಮುಂದೆ ಬಂದುದಿಲ್ಲ. ಈ ನಂಬಿಕೆಯಿಂದ ಅಥವಾ ಈ ಭಾವನೆಯನ್ನು ಹೊಂದಿಕೊಂಡು ಯಾವ ಹಣವಾದರೂ ಸಹಾಯವಾಗಿ ಕೊಡಲ್ಪಟ್ಟಿದ್ದರೆ, ನಿಜಕ್ಕೂ ಅಂತಹದನ್ನು ಕಳಂಕ ಹಣವೆಂದೇ ಗಣಿಸಿ, ಹಾಗೆ ಸಂಗ್ರಹಿಸಲ್ಪಟ್ಟ ಹಣವನ್ನು ವಾಪಾಸು ಕೊಡುವ ವ್ಯವಸ್ಥೆಯನ್ನು ನಾನು ಮಾಡುವುದಂತೂ ಖಂಡಿತ. ಆದ್ದರಿಂದ ನೀವೆಂದ ಮಾದರಿಯ, ದೂಷಿತ ಹಣವನ್ನು ಕಿತ್ತೊಗೆದು ನಿಧಿಯನ್ನು ಶುದ್ಧೀಕರಿಸಲಾಗುವಂತೆ ನೀವು ಮತ್ತು ನಿಮ್ಮ ಕುಟುಂಬಿಕರು ಈ ನಿಧಿಗೆ ಕೊಟ್ಟಿರುವ ಹಣವೆಷ್ಟು ಎಂಬುದನ್ನು ದಯವಿಟ್ಟು ತಿಳಿಸಿದರೆ, ನಾನು ನಿಮಗೆ ಕೃತಜ್ಞನಾಗಿದ್ದೇನೆ"

ಸರ್ದಾರ್ ಪಟೇಲರ ಈ ಹೊಡೆತಕ್ಕೆ ಬೆಲೆ ಬಂದಿದೆ. ಸೇಟ್ ದಾಲ್ಮಿಯರ ಪಾಲುಗಾರಿಕೆಯಲ್ಲಿರುವ 'ಮೆಸ್ಸರ್ಸ್ ದಾಲ್ಮಿಯಾ, ಜೈನ್ ಮತ್ತು ಕಂಪೆನಿ'ಯ ಶ್ರೀ ಜೆ. ದಾಲ್ಮಿಯಾ ಮತ್ತು ಶ್ರೀ ಎಸ್. ಪಿ. ಜೈನರು ಸೇಟ್ ದಾಲ್ಮಿಯರ ಅಭಿಪ್ರಾಯಗಳನ್ನು ಖಂಡಿಸಿ, ತಮ್ಮ ಕೊಡುಗೆಯಲ್ಲಿ ಯಾವ ಒಳ ಉದ್ದೇಶವೂ ಇರದೆ ಅದು ಕೇವಲ ಸ್ವಯಂಪ್ರೇರಣೆಯದಾಗಿತ್ತು ಎಂದು ಸ್ಪಷ್ಟಪಡಿಸಿದ್ದಾರೆ. ಅಂತೆಯೇ ಗಾಂಧಿ ಸ್ಮಾರಕ ನಿಧಿಯ 'ಉದ್ದಿಮೇ ಸಮಿತಿ'ಯ ಅಧ್ಯಕ್ಷ ಶ್ರೀ ಕಸ್ತೂರಿ ಭಾಯಿಲಾಲ್ ಭಾಯಿ ಅವರು ಕೂಡಾ ಗಾಂಧೀ ನಿಧಿಗೆ ಸಹಾಯ ಮಾತುವಾಗ ಉದ್ದಿಮೇದಾಲರು ಅನ್ಯೋದ್ದೇಶವಿಟ್ಟುಕೊಂಡಿದ್ದರೆಂದು ಭಾವಿಸುವುದು ತಪ್ಪೆಂದು ಸಾರಿದ್ದಾರೆ. ಆ ಉದ್ದೇಶವು ಬಾಹೀರ ಪ್ರದರ್ಶನಕ್ಕೆ ಬೀಳದಷ್ಟು ಸೋಗಿನದಲ್ಲವಾದ್ದರಿಂದ, ಸೇಟ್ ದಾಲ್ಮಿಯರೊಬ್ಬರು ಬಾಯಿಬಿಟ್ಟರೂ ಅವರ ವರ್ಗದ ವ್ಯಕ್ತಿಗಳು 'ಅದಿಲ್ಲ; ಇಲ್ಲ' ಎಂದು ಸಮರ್ಥಿಸಿಕೊಳ್ಳಲೇಬೇಕಾಗಿದೆ. ಆಶಾಭಂಗಗೊಂಡವರ, ಅತೃಪ್ತ ಕದಡು ಹೃದಯದ ಪರಿಣಾಮವಾಗಿ ಬರಬಾರದಂತಹ ಮಾತುಗಳು ಒಮ್ಮೊಮ್ಮೆ ಹೇಗೆ ಬಂದು ಬಿಡುತ್ತವೆ ಎಂಬುದಕ್ಕೆ ಸೇಟ್ ದಾಲ್ಮಿಯಾರ ಬಾಯಿಯಿಂದ ತಪ್ಪಿ ಉದುರಿಬಿದ್ದ ನುಡಿ ಮುತ್ತುಗಳೇ ಸಾಕ್ಷಿ! ದಾಲ್ಮಿಯಾರಂತಹ ಅಗ್ರಗಣ್ಯ ಲಕ್ಷ್ಮೀ ಪುತ್ರರುಕೂಡಾ ಸಂತೃಪ್ತಕ್ಕೀಡಾದಾಗ ಮತಿ ಕಳಕೊಂಡು ಆಡಿ ಬಿಡುತ್ತಾರೆನ್ನುವಾಗ ಜೀವ ಹಿಡಿದು ಬಾಳುವುದೇ ಅಸಹ್ಯವಾಗಿರುವವರು ಒರಟುತನ ಪ್ರದರ್ಶನಕ್ಕೆಳಸುವುದರಲ್ಲಿ ತಪ್ಪೇನಿದೆ ಎಂಬ ಪ್ರಶ್ನೆ ಹುಟ್ಟುತ್ತದೆ.

೦೦

ಹೇಗಿದ್ದರೂ ಯಾವ ಕಾರಣಕ್ಕಾಗಿಯೂ ಸಹನೆ ತಪ್ಪುವುದು ನ್ಯಾಯವಲ್ಲ. ಅಸಹನೀಯ ಅನಾಚಾರ ನಡೆದ ಸಂದರ್ಭದಲ್ಲಿ ಕೂಡಾ ಸಹನೆ ಮತ್ತು ದೃಢತೆಯಿಂದಿದ್ದರೇನೇ ಯೋಗ್ಯ ತೀರ್ಮಾನಕ್ಕೆ ಬರಲು ಸಾಧ್ಯವೆಂಬುದಕ್ಕೆ ಇತ್ತೀಚೆಗಿನ ಬಂಗಾಳಾ ದುರಂತದ ಸಂಬಂಧದಲ್ಲಿ ಭಾರತ ಸರಕಾರವು ಪಾಕಿಸ್ತಾನದೊಡನೆ ಮಾಡಿಕೊಂಡ ಒಪ್ಪಂದವೇ ನಿದರ್ಶನ. ಆವೇಶವೆಂದರದು ಅರೆ ಹುಚ್ಚುತನ ಹೊರತು ಬೇರಲ್ಲ ಯಾವ ವರ್ಗದ ಹುಚ್ಚಿನಿಂದಲೂ ಯಾವ ವಿಧದ ಸತ್ಕಾರ್ಯವೂ ಸಾಧಿಸುವಂತಿಲ್ಲ. ಚಾರಿತ್ರಿಕ, ಆಧುನಿಕ ಮಹಾಪುರುಷರ ಚರಿತ್ರೆಗಳನ್ನು ನೋಡಿದರೂ ನಿರ್ವಿಕಾರ ಬುದ್ಧಿ ಶಕ್ತಿಯ ಬಲದಿಂದಲೇ ಅವರೆಲ್ಲರೂ ಮಹತ್ಕಾರ್ಯಗಳನ್ನು ಸಾಧಿಸಿದ್ದುದು ಕಂಡುಬರುತ್ತದೆ. ಚರಿತ್ರಾರ್ಹ ದುಸ್ಸಾಧನೆಗಳನ್ನು ಮಾಡಿದ ದುಷ್ಟ ನಾಯಕರು ಕೂಡಾ ಆವೇಶದ ಗಲಿಬಿಲಿ ಸ್ವಭಾವದವರಾಗಿರಲಿಲ್ಲ; ದೃಢ, ನಿಶ್ಚಯಾತ್ಮಕ ಧೋರಣೆಯವರೇ ಆಗಿದ್ದರು. ಅತೃಪ್ತರು ಮತ್ತು ನಿಸ್ಸಹಾಯಕರಲ್ಲಿ ಕೃದ್ಧ ಒರಟುತನ, ಗೊಂದಲ ಬುದ್ಧಿಯಿರುವುದೂ ತೃಪ್ತರು ಹಾಗೂ ಅನುಕೂಲವಂತರಲ್ಲಿ ಕೃತಕ ರೂಪದಿಂದ್ದರೂ ಸಭ್ಯತೆ, ನಾಗರಿಕತೆ ತೋರಿಬರುವುದೂ ಸರ್ವಸಾಮಾನ್ಯವೆಂಬುದರಿಂದ ಇಲ್ಲಿಯೂ ಬಡಜನ ವರ್ಗದ ದುರ್ದೆಸೆಗಾಗಿ ಸಂತಾಪ ಪಡಲಿಕ್ಕಿದೆ. ಅವರ ಈ ಸ್ವಾಭಾವಿಕ ದೊರಗುತನವೇ ಹೆಚ್ಚಿನ ಸಂದರ್ಭಗಳಲ್ಲಿ ಅವರ ಕೆಲಸಗಳನ್ನು ಹಾಳು ಮಾಡುತ್ತಿದೆ. ಭಾರತದಲ್ಲಿಂದು ಕಂಡು ಬರುತ್ತಿರುವ ಕಮ್ಯೂನಿಸ್ಟ್ ಪುಂಡಾಟಿಗಳಿಗೆ ಇಂತಹ ನಿಸ್ಸಹಾಯಕ ಸ್ಥಿತಿ ಸಹಜ ವಕ್ರಬುದ್ಧಿಯೊಂದೇ ಕಾರಣವಲ್ಲ. ಸಂಘಟನಾ ಬದ್ಧವಾಗಿ ದುರುದ್ದೇಶ ಸಾಧಿಸುವ ಆತುರವೂ ಹೇತುವಾಗಿದೆ. ಇನ್ನಿತರ ವರ್ಗದ ಅತೃಪ್ತರಾದರೂ ತಮ್ಮ ಸ್ಥಿತಿಗೆ ಸಹಜವಾದ ಒರಟುತನವನ್ನು ಪ್ರದರ್ಶಿಸುವ ಮೂಲಕವೇ ತಮ್ಮ ಹೀನ ಸ್ಥಿತಿಗೆ ದೂಡಲ್ಪಡುತ್ತಿರುವುದನ್ನು ಕಾಣುತಿದ್ದೇವೆ. ಇಲ್ಲಿ ತಿಳಿದಿರಬೇಕಾದುದು ಇಷ್ಟು: ನಾಗರಿಕತೆ, ವಿನಯಶೀಲತೆ, ಸಭ್ಯತೆಗಳ ಹೆಸರಿನಿಂದ ತೃಪ್ತ ಶ್ರೀಮಂತ ವರ್ಗವನ್ನೂ ಅತೃಪ್ತ ಬಡ ಜನ ವರ್ಗವನ್ನೂ ಒಂದೇ ಮಟ್ಟದಿಂದ ಅಳೆಯಬಾರದು. ಅದೇ ರೀತಿ ಅತೃಪ್ತ ವರ್ಗವಾದರೂ ಕೇವಲ ಆರ್ಥಿಕ, ಸಾಮಾಜಿಕ ಮೇಲಂತಸ್ತಿಗೆ ಏರುವುದೊಂದನ್ನೇ ತಮ್ಮ ಧ್ಯೇಯವಾಗಿಇಟ್ಟುಕೊಳ್ಳದೆ ಸಾಂಸ್ಕೃತಿಕ, ಮಾನಸಿಕ ಮಟ್ಟಕ್ಕೇರುವುದನ್ನೂ ಗುರಿಯಾಗಿ ಇಟ್ಟುಕೊಳ್ಳಬೇಕು. ಸಹನೆ, ದೃಢ ಬುದ್ಧಿ, ಸಂಘಟಿತ ಸುವಿಧಾನಗಳ ಮೂಲಕವೇ ತಮ್ಮ ಉದ್ಧಾರ ಹೊರತು ಗಲಿಬಿಲಿ ಪ್ರದರ್ಶನದಿಂದಲ್ಲವೆಂಬುದನ್ನು ತಿಳಿದಿರಬೇಕು. ಮೇಲ್ವರ್ಗದವರ ಕುಂತು ಮಾತು ಬೇಡ. ಅವರು ಅಗ್ನಿ ಪರೀಕ್ಷೆಗೊಳಗಾಗುವ ಕಾಲವು ಮುಂದಿರುವುದರಿಂದ ಆಗಲೇ ಅವರ ಸಂಸ್ಕೃತಿ, ನಾಗರಿಕತೆಗಳ ನಿಜವಾದ ಪರೀಕ್ಷೆ ನಡೆಯಲಿದೆ





**On this Memorable day**

Of the 26th of January in the year 1950 of the inauguration of the Indian Republic, we have the pleasure to announce the birth of our

**Vijaya Cash Certificates**

"Spend less and save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices

Head Office:—**Kadri Road, Mangalore**

Branches: City-Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara.

**B. Manjaya Hegde.**
Advocate & President, District Board, S. Kanara.
CHAIRMAN
VIJAYA BANK, LTD.

**ಋತುಸ್ರಾವ ನಿಂತಿತು**

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಸದಕಷ್ಟ ಋತುಸ್ರಾವವಾದ ದು, ಹೊತ್ತೊಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ: ರೂ. ೩-; ಸ್ಪೆಶಲ್ ರೂ. ೫-; ಅಧಿಕಾಧಿಕ ಸ್ಪೆಶಲ್ ರೂ. ೮- [ವಿ. ಪಿ. ಖರ್ಚು ಪ್ರತ್ಯೇಕ.]

MRS. D. DEVEE, P. 08. (N. J.)
Tollygunge CALCUTTA
ಏಜೆಂಟರು: ... ಕಂಪೆನಿ, ಮಂಗಳೂರು

**ವಿವಿಧ ಪಾತ್ರೆಗಳು**



...ದೀಪ, ... ಕಳಶ, ... ಹಿತ್ತಾಳೆ, ... ಮೊದಲಾದುವುಗಳ ವಿವಿಧ ಪಾತ್ರೆಗಳೂ ... ಗಳೂ ... ಯೋಚಿತ್ತದರದಾಗಿಯೂ ದೊರೆಯುತ್ತವೆ.
ಕಲ್ಯಾಣ ಸ್ಟೀಲ್ ... ಯರ್,
ರಥಬೀದಿ, ಉಡುಪಿ.

# ಸರ್ದಾರರ ಸರಳ ಉಪದೇಶ–

ಭಾರತದ ಪ್ರಧಾನ ಮಂತ್ರಿ ಪಂಡಿತ ಜವಾಹರಲಾಲರು ಕಳೆದ ವಾರ ಕಾಶ್ಮೀರಕ್ಕೆ ಹೋಗಿದ್ದರು; ಸದ್ಯದಲ್ಲೇ ಇಂಡೋನೇಶಿಯಕ್ಕೆ ಹೋಗಲಿದ್ದಾರೆ. ಉಪಪ್ರಧಾನ ಮಂತ್ರಿ ಸರ್ದಾರ್ ಪಟೇಲರು ಕೊಚ್ಚಿಗೆ ಹೋಗಿ ಈಗ ತಿರುವಾಂಕೂರಿಗೆ ಬಂದಿದ್ದಾರೆ. ಪಾಕಿಸ್ತಾನದ ಪ್ರಧಾನಿ ಮಿ. ಲಿಯಾಖತ್ ಅಲೀಖಾನರಂತೂ ಅಮೆರಿಕದಲ್ಲಿದ್ದಾರೆ. ಭಾರತ-ಪಾಕಿಸ್ತಾನ್ ಅಗ್ರಗಣ್ಯಾಧಿಕಾರಿಗಳು ತಮ್ಮ ಮೂಲ ನೆಲೆ ಬಿಟ್ಟು ಈ ರೀತಿ ಸಂಚರಿಸ ಹತ್ತಿರುವುದು ಈಗ ಇವೆರಡೂ ರಾಷ್ಟ್ರಗಳೊಳಗುಂಟಾಗಿರುವ ಸಂಬಂಧ ಸಾಮ್ಯತೆಯ ಮತ್ತು ಎರಡೂ ರಾಷ್ಟ್ರಗಳೊಳಗಡೆಯಲ್ಲಿ ನಿರ್ಮಾಣಗೊಂಡಿರುವ ಸ್ಥಿತಿ ಶಾಂತತೆಯ ಬಲದಿಂದಲೇ. ದೇಶ ನಾಯಕರುಗಳು ಪ್ರಯಾಣ ನಿರತರಾಗಬೇಕಾದರೆ, ಅವರ ಪೂರ್ಣ ಲಕ್ಷ್ಯವನ್ನು ಸೆರೆಹಿಡಿಯತಕ್ಕ ದೊಡ್ಡ ಸಮಸ್ಯೆಗಳಿಲ್ಲದಿರಬೇಕು. ಇಂದು ತಾತ್ಕಾಲಿಕವಾಗಿ ಅಂತಹ ಸ್ಥಿತಿಯೊದಗಿದೆಯಾದರೂ ಇಷ್ಟರಿಂದಲೇ ಇದು ಶಾಶ್ವತವೆಂದು ಭಾವಿಸಿಕೊಳ್ಳಲೆಡೆಯಿಲ್ಲ. ಇಂದಿನ ಪ್ರಶಾಂತ ವಾತಾವರಣವನ್ನು ಉಳಿಸಿಕೊಳ್ಳುವುದಷ್ಟೇ ಅಲ್ಲ- ಈಗಲೂ ಉಳಿದಿರುವ ಕೆಲವು ಕಂಟಕಗಳನ್ನು ಕಿತ್ತೊಗೆದುಕೊಂಡು ಅದನ್ನು ಪೂರ್ಣಗೊಳಿಸುವ ಮತ್ತು ಪ್ರಗತಿ ಸಾಧಿಸುವ ಕೆಲಸಗಳು ಉಳಿದಿವೆ.

### ಸರ್ದಾರ್ ಪಟೇಲ್

ದಿಲ್ಲಿಯಿಂದ ಬೊಂಬಾಯಿಗೆ ಬಂದು, ಅಲ್ಲಿಂದ ಹೊರಟು ಇದೇ ತಾ. ತಾ. 13ನೇ ಅಪರಾಹ್ನ ಕೊಚ್ಚಿ ಬಂದರದಲ್ಲಿಳಿದು ಕೊಚ್ಚಿ ತಿರುವಾಂಕೂರು ಕೇಂದ್ರಗಳ ರಾಜಪ್ರಮುಖ ತಿರುವಾಂಕೂರು ಮಹಾರಾಜ, ಕೊಚ್ಚಿ ಮಹಾರಾಜ ಮತ್ತಿತರ ಪ್ರಮುಖ ಅಧಿಕಾರಿಗಳು ಹಾಗೂ ನಾಗರಿಕರಿಂದ ರಾಜ್ಯಯೋಗ್ಯ ಸ್ವಾಗತ ಸತ್ಕಾರಗಳೆಲ್ಲವನ್ನೂ ಪಡೆದಿರುವ ಸರ್ದಾರ್ ವಲ್ಲಭಭಾಯಿ ಪಟೇಲರು ಎರ್ನಾಕುಲಮಿನ ಕಾಂಗ್ರೆಸ್ ಕೆಲಸಗಾರರ ಸಭೆಯಲ್ಲಿ ಮತ್ತು ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಆಡಿದ್ದ ಕೆಲವು ಮಾತುಗಳು ಸದ್ಯ ಸ್ಥಿತಿಯಲ್ಲಿ ಜನತೆಗೆ ಕಾರ್ಯನಿರ್ದೇಶ ಮಾಡುವಂತಹವಿವೆ.

"ಸ್ವಾತಂತ್ರ್ಯವು ದೊರೆತೊಡನೆ ನಮ್ಮ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು ಮುಕ್ತಾಯಗೊಂಡುದಲ್ಲ; ಈಗ ತಾನೇ ಆರಂಭಿಸಿವೆ ಮಾತ್ರ, ಭಾರತದ ಭವಿಷ್ಯವು ಮುಂದಿನ ನಾಲ್ಕು ಅಥವಾ ಐದು ವರುಷಗಳಲ್ಲಿ ನಾವು ಮಾಡುವ ಕೃತ್ಯಗಳನ್ನೇ ಆಧರಿಸಿಕೊಂಡಿದೆ. ಸ್ವತಂತ್ರ ಭಾರತವು ಈಗ ತಾನೆ ಕಟ್ಟಲ್ಪಡುತ್ತಿದೆ. ಅದರೊಂದಿಗೆ ಅಗತ್ಯವಾಗಿ ಬಂದಿರುವ ಜವಾಬ್ದಾರಿಗಳನ್ನು ಮತ್ತು ಕರ್ತವ್ಯ ಬುದ್ಧಿಯನ್ನು ಜನತೆಯು ಮನವರಿಕೆ ಮಾಡಿಕೊಳ್ಳದೆ ಹೋದರೆ, ನಮ್ಮ ಕಠಿಣ ಪರಿಶ್ರಮದ ಫಲವಾದ ಸ್ವಾತಂತ್ರ್ಯವು ಕಳೆದು ಹೋದಿತೆಂಬ ದಿಗಿಲು ನನ್ನಲ್ಲಿ ಉಂಟಾಗಿದೆ. ಆದ್ದರಿಂದ ಕಾಂಗ್ರೆಸ್ ಕೆಲಸಗಾರರು ಸಣ್ಣ ಪುಟ್ಟ ಜಗಳಗಳಲ್ಲಿ ಮತ್ತು ಮತ್ಸರಗಳಲ್ಲಿ ಕಾಲಹರಣ ಮಾಡದೆ, ಒಕ್ಕಟ್ಟಾಗಿ ನಿಂತು ಶೀಘ್ರದಲ್ಲೇ ನಮ್ಮನ್ನೊಂದು ಮಹಾನ್ ರಾಷ್ಟ್ರವಾಗಿ ಮಾಡಬಲ್ಲ ಶಾಂತಿ ಮತ್ತು, ಸಹಕಾರವೇ [illegible] ಪ್ರೇಮಣವನ್ನು ಇದೇ ರಾಷ್ಟ್ರದಲ್ಲಿ ನಿರ್ಮಿಸಬೇಕೆಂದು ಕೇಳಿಕೊಳ್ಳುತ್ತೇನೆ." ಎಂದು ಸರ್ದಾರರು ಕಾಂಗ್ರೆಸ್ ಕಾರ್ಯಕರ್ತರಲ್ಲಿ ಕರ್ತವ್ಯ ಜಾಗೃತಿಯನ್ನುಂಟುಮಾಡಿದ್ದರು. ಪ್ರಾಂತ್ಯಕ್ಕರ ಪ್ರಾತಿನಿಧಿಕತೆ, ಪತ್ರಿಕಾ ಸ್ವಾತಂತ್ರ್ಯ, ಜನತಾ ಕರ್ತವ್ಯ, ತರುಣರ ಹೊಣೆಗಾರಿಕೆ, ಕಾಂಗ್ರೆಸಿನ ಭವಿಷ್ಯ, ಧರ್ಮದ ಮೌಲ್ಯ ಮೊದಲಾದ ಪ್ರಾಮುಖ್ಯ ವಿಭಾಗಗಳೆಲ್ಲವುಗಳ ಕುರಿತು ಎರ್ನಾಕುಲಮಿನ ಸಾರ್ವಜನಿಕ ಸಭೆಯಲ್ಲಿ ಸರ್ದಾರ್ ಪಟೇಲರು ಅಮೂಲ್ಯ ಉಪದೇಶಗಳನ್ನಿತ್ತಿದ್ದರು. ಅಕ್ಷರಶಃ ಅಮೂಲ್ಯವೆನಿಸ ಭಾಷಣದಲ್ಲಿ ಕಮ್ಯೂನಿಸ್ಟರಿಗೆ, ಮತ್ತು ಸಂಕುಚಿತ ಹಿಂದೂವಾದಿಗಳಿಗಾಗಿ ಅವರು ಹೇಳಿದ್ದ ಕೆಲವು ಹೃತ್ಪೂರ್ವಕ ಮಾತುಗಳು ಹೃದಯದಲ್ಲಿ ಶಾಶ್ವತ ಮುದ್ರೆಯೊತ್ತುವಂತಹವಿವೆ:–

### ಕಮ್ಯೂನಿಸ್ಟ್ ಆಟ

"ದೇಶದ ಈ ವಿಭಾಗದಲ್ಲಿ ಹಲವು ಜನರು ಕಮ್ಯೂನಿಸ್ಟರೆಂದು ಕರೆಯಲ್ಪಡುತ್ತಿರುವುದು ನನಗೆ ತೋರಿ ಬರುತ್ತಿದೆ. ಆದರೆ ಅವರು ಕಮ್ಯೂನಿಸ್ಟರಲ್ಲ. ಈ ರಾಜಕೀಯ ಬಿಲ್ಲೆ ಹಚ್ಚಿಕೊಳ್ಳಲು ಅವರು ಯೋಗ್ಯರಲ್ಲ. ಭಾರತದಲ್ಲಿ ಈಗ ಆಚರಣೆಯಲ್ಲಿರುವ ಕಮ್ಯೂನಿಸಮ್ ಭಿನ್ನ ಸ್ವರೂಪದ್ದಿದೆ. ಇಂಗ್ಲಂಡಿನಲ್ಲಿಯೂ ಕಮ್ಯೂನಿಸಮ್ ಇದೆ. ಆದರೆ ಅಲ್ಲಿ ಅವರು ಘಾತಾಯತಿ ಮತ್ತು ಕೊಲೆಗಳನ್ನು ಮಾಡುತ್ತಿಲ್ಲ. ಸಂಚಾರ ವಹಿವಾಟುಗಳನ್ನು ತಪ್ಪಿಸಿ ಹಾಳುವ ಕೆಲಸಗಳನ್ನವರು ಮಾಡುತ್ತಿಲ್ಲ. ಒಂದು ಅಥವಾ ಎರಡು ರೈಲುಗಳನ್ನು ಕೆಡಹಿದರೆ, ಇಲ್ಲವೇ ಸಾಲು ತಪ್ಪಿಸಿ ಹಾಕಿದರೆ, ರೈಲು ಪ್ರಯಾಣ ಮಾಡುವ ಎಷ್ಟು ಮಂದಿ ನಿರಪರಾಧಿಗಳ ಪ್ರಾಣಕ್ಕೆ ಅಪಾಯವಿದೆ!' ಇಂತಹ ಜನರಿಗೂ ತಾವು ಕಮ್ಯೂನಿಸ್ಟರೆಂದು ಹೇಳಲು? ನಮಗೆ [illegible] ಲ್ಲವೆ? ಕೈಲ್ಲೇ ಹಾದಿಗೆ ಬಂದರಿಂದ [illegible] ದಿಯ ವರೆಗೆ, ಪ್ರಾಂತಗಳ ಅಮೂಲಾಗ್ರವಾಗಿ, ಎಲ್ಲೆಲ್ಲಿಯೂ ಪೋಲೀಸರಿರಬೇಕೆಂದು ನೀವು ನಿರೀಕ್ಷಿಸಲಾರಿರಿ. ನಮ್ಮ ಸಂಚಾರ ರಸ್ತೆಗಳನ್ನು ಹಾಳುಗೆಡಹಲು ನಾವೇಕೆ ಬಿಡಬೇಕು? ಸಂಚಾರ ಪಥಗಳ ಧ್ವಂಸೀಕರಣಕ್ಕೂ ನಾವು ಅವಕಾಶಕೊಟ್ಟೆವಾದರೆ, ಭೂವಲಯದಲ್ಲಿ ನಮ್ಮ ಹೆಸರು ಹೇಗಾದೀತು? ನಮ್ಮ ವ್ಯಾಪಾರ, ವಹಿವಾಟು, ಉದ್ದಿಮೆಗಳು ಹಾಳಾಗುವುದರೊಂದಿಗೆ, ಆಳಲಿಕ್ಕೆ ಅಯೋಗ್ಯರಾದವರೆಂಬ ಕೆಟ್ಟ ಹೆಸರು ಕೂಡಾ ನಮಗೆ ಬಂದೀತು. ಚುನಾವಣೆ ಮೂಲಕ ಜಾಹೀರು ಘರ್ಷಣೆಗಿಳಿದು ತಾವು ಮೇಲೆ ಬೀಳಬಲ್ಲೆವೆಂಬ ಭಾವನೆಯು ಕಮ್ಯೂನಿಸ್ಟರಿಗಿದ್ದರೆ ಅವರು ಪ್ರಯತ್ನ ಮಾಡಲಿ. ಆದರೆ ಅವರು ದುರ್ವಿಧಾನಗಳನ್ನು ಕೈಕೊಂಡು, ಅವುಗಳನ್ನೇ ಮುಂದೊತ್ತುತ್ತಾರಾದರೆ, ಅವರಿಗೆ ಚುನಾವಣೆಯಲ್ಲಿ ಸ್ಥಾನವೇ ಇಲ್ಲ. ಕಮ್ಯೂನಿಸಮನ್ನೇ ಬಹಿಷ್ಕರಿಸಬೇಕೆಂದು ಹೇಳುವವರಿದ್ದಾರೆ. ಹೀಗನ್ನುವಂತೆ ಅವರನ್ನು ಒತ್ತಾಯಿಸಿರುವುದು ಅವರಲ್ಲುಂಟಾಗಿರುವ ಜಿಗುಪ್ಸೆಯೊಂದೇ. ಮದ್ರಾಸ್ ಮಾಡಿದಂತೆ, ಕೆಲವು ಸಂಸ್ಥಾನಗಳು ಒತ್ತಾಯ ಹಾಕಿದ ವಿನಹ ನಾವದನ್ನು ಮಾಡುವಂತಿಲ್ಲ. ಶಾಸನಬದ್ಧ ವಿಧಾನಗಳಿಂದ ಪ್ರಯತ್ನಿಸುವ ಇಚ್ಛೆ ಕಮ್ಯೂನಿಸ್ಟರಿಗಿದ್ದಲ್ಲಿ ಇನ್ನೂ ಅವರಿಗೆ ಸ್ವತಂತ್ರ ಕ್ಷೇತ್ರವನ್ನು ತೆರವಾಗಿ ಇಡಬೇಕೆಂಬುದಕ್ಕಾಗಿ ನಾವು ಅಖಿಲ ಭಾರತದಲ್ಲಿ ಅವರ ಮೇಲೆ ಅಂತಹ ಕೃತ್ಯ ಕೈಕೊಂಡಿಲ್ಲ. ಆದರೆ ಅವರು ಶಾಸನಬದ್ಧ ವಿಧಾನಗಳನ್ನಂಗೀಕರಿಸಿಕೊಳ್ಳದಿದ್ದರೆ, ಆಗ ಅವರಿಗೆ ಚುನಾವಣೆಗಳಲ್ಲಿ ಸ್ಥಾನ, ಸ್ವಾತಂತ್ರ್ಯದ ಅನುಭೋಗಾಧಿಕಾರ, ಎರಡೂ ಇಲ್ಲ.

### ಜನತೆಯೇನು ಮಾಡಬೇಕು?

ಈ ಜನರೊಡನೆ ವ್ಯವಹರಿಸುವ ಕೆಲಸವು ಕೇವಲ ಪೋಲೀಸರದೆಂದು ನೀವು ನೆನೆಸಬಾರದು. ಮಹತ್ತ್ವದ ಜವಾಬ್ದಾರಿ ನಿಮ್ಮ ಮೇಲಿದೆ. ನಿಮ್ಮ ನಡುವೆ ಅಂತಹ ಜನರಿರುವುದನ್ನು ನೀವರಿತುಕೊಂಡರೆ, ಅವರು ನಿಮ್ಮ ಸ್ವಂತ ಸಂಬಂಧಿಕರೇ ಆಗಿದ್ದರೂ ಕೂಡಾ, ಒಂದೋ ಅವರನ್ನು ಮಾರ್ಪಡಿಸುವದು ಇಲ್ಲವೇ ಆಡಳಿತಗೆ ಸುದ್ದಿ ಕೊಡುವದು, ಅಥವಾ ಅಧಿಕಾರಿಗಳಿಗೆ ಅವರನ್ನು ಹಿಡಿದುಕೊಡುವುದು, ಆ ಮೂಲಕ ನಮ್ಮೆಲ್ಲರ ರಕ್ಷಣೆಯನ್ನು ಮಾಡುವುದು ನಿಮ್ಮ ಕರ್ತವ್ಯವಾಗಿದೆ. ದಕ್ಷಿಣ ಭಾರತದಲ್ಲಿ ಕಮ್ಯೂನಿಸಮಿನ ಕುರಿತು ನಾನನೇಕ ಸುದ್ದಿಗಳನ್ನು ಕೇಳುತ್ತಿರುವೆನಾದ್ದರಿಂದ ಇದೀಗ ನಿಮಗೆ ನನ್ನ ವಿಶೇಷ ಸಂದೇಶವಾಗಿದೆ. ಪ್ರಕೃತ ನೀವಾ ಕುರಿತು ಅಷ್ಟೊಂದು ಆತುರಕ್ಕೀಡಾಗಿಲ್ಲವೇನೋ; ಆದರೆ ನೀವದನ್ನು ಬೆಳೆಯಬಿಟ್ಟರೆ ಅದು ನಿಮ್ಮನ್ನಾಕ್ರಮಿಸಿಕೊಂಡೀತು; ಮತ್ತದರ ವ್ಯವಸ್ಥೆ ಮಾಡುವದೇ ನಿಮಗೆ ಅಸಾಧ್ಯವಾದೀತು.

### ಕಾಂಗ್ರೆಸಿನ ಸ್ಥಾನ

ನಾನು ನಿಮಗೆ ಹೇಳತಕ್ಕ ಇನ್ನೊಂದು ಮಾತಿದೆ; ನಮಗೆ ಸ್ವಾತಂತ್ರ್ಯವನ್ನು ತಂದು ಕೊಟ್ಟ ಒಂದು ಸಂಸ್ಥೆ, ಕಾಂಗ್ರೆಸ್ ನಮ್ಮ ಪಾಲಿಗಿದೆ. ನೀವೆಲ್ಲರೂ ಅದರ ಕೆಲಸಗಳ ಕಡೆಗೆ ಸಾಕಷ್ಟು ಸಹಾನುಭೂತಿಯನ್ನು ತೋರಿಸಿದ್ದೀರಿ; ಮತ್ತದರ ಬೆಳವಣಿಗೆಗೆ ನೆರವಾಗಿದ್ದೀರಿ. ಸ್ವಾತಂತ್ರ್ಯ ಪ್ರಾಪ್ತಿಯ ನಂತರ, ಕಾಂಗ್ರೆಸನ್ನು ಬಲಗೊಳಿಸುವುದು ನಿಮ್ಮ ಪಾಲಿಗೆ ಬಂದಿದೆ ಹೊರತು, ಅದರಿಂದಿನ್ನು ಕೆಲಸವಿಲ್ಲವೆಂದು ಚಿಂತಿಸಿದರಾಗದು. ಅಧಿಕಾರ ಚಾಲು ಮಾಡಬಲ್ಲ ಮತ್ತು ಪ್ರಕೃತ ನಡೆದಿರುವುದಕ್ಕಿಂತ ಹೆಚ್ಚಿನದನ್ನು ಮಾಡಬಲ್ಲ ಬೇರೆ ಪಕ್ಷಗಳಿರುವುವಾದರೆ ಶಕ್ಯಕ್ಕೂ ಅವರದನ್ನು ಮಾಡಿ ನೋಡಲಿ.

In the Court of the Rent Controller, Coondapoor
H. R C O. P. 12/1950

Between
The Pangal Nayak Bank Ltd., Udipi- by its Secretary and Treasurer P. Laxshman Nayak } Petitioner
and
Katapadi Subraya Shenoy and five others- Counter-Petitioners.

To Katapadi Subraya Shenoy, son of Katapadi Mukunda Shenoy, Ajjarkadu, Udipi Town.

Take notice that the aforesaid H. R. C. O. P. 12/1950 filed against you for eviction from tiled building bearing Municipal Doors Nos. 13-3-42, 13-3-43, 13-3-44, 13-3-45 and 13-3-46 corresponding to old Nos. 4925A to 4925E/XII respectively situate in S. F. 84/1 of Moodanidambur village within Udipi Municipality stands posted to 13-6-1950 at Udipi for your appearence and final disposal. If you fail to appear that day before the aforesaid Court and file objections if any, the petition will be heard and decided Exparte against you. The other counterpetitioners are also hereby informed that their objections will be heard and decided that day by the said Court.

(By order of the Court)

Udipi
15—5—1950

**P. Laxshman Nayak,**
*Secretary and Treasurer,*
The Pangal Nayak Bank Limited.


**ಅಮೃತಾಂಜನ**

ತಲೆವೇದನೆ, ಶಿರೋವೇದನೆ, ಉಳುಕು ಉತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ಬಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.




REGD

ಎಲ್ಲ ಕಡೆ ಮದ್ದಿನಂಗಡಿಗಳಲ್ಲಿ ಸಿಕ್ಕುತ್ತದೆ.

**ಅಮೃತಾಂಜನ ಲಿಮಿಟೆಡ್**
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

# –ಭಾರತದ ಒಳ ಹೊರ ಸಂಬಂಧ.

ಆದರೆ ಅವರದನ್ನು ನಾಜೋಕಿನಿಂದ ನಡೆಸಲಿ; ಮತ್ತು ನಾಗರಿಕ ವಿಧಾನಗಳಿಂದ ಮಾಡಲಿ. ಕಮ್ಯೂನಿಸಮ್ ಅಥವಾ ಜಾತೀಯತೆಯ ವಿಷವನ್ನು ಮಾತ್ರ ಹರಡಬೇಡಿ. ಅಪಕೀರ್ತಿದಾಯಕ ಸಂಗತಿಗಳನ್ನು ಮಾತ್ರ ಮಾಡಬೇಡಿ. ನೀವು ಅಸಾಧ್ಯ ಬೆಲೆ ತೆರಬೇಕಾಗಿ ಬರುವ ಕೃತ್ಯಗಳಿಗೆ ಕೈಯಿಕ್ಕಬೇಡಿ; ಸಹನೆಯ ಹಾದಿ ಬಿಟ್ಟು ಹೋಗಬೇಡಿ. ಹಿಂದೂತ್ವವು ಅಪಾಯದಲ್ಲಿದೆ, ಎಂದು ಇಲ್ಲಿಯ ಜನರು ಹೇಳುತ್ತಿರುವುದನ್ನು ಕೇಳುವಾಗ, ಇಲ್ಲಿರುವ ಹಿಂದುಗಳೆಲ್ಲರೂ ಕಾಣೆಯಾಗಿರುವರೋ ಅಥವಾ ಸತ್ಯಕ್ಕೋ ಬೇರೇನಾದರೂ ನಡೆದಿರಬಹುದೇ, ಎಂದು ನಾನು ಚಕಿತನಾಗಿದ್ದೇನೆ. ಇಡೀ ಜಗತ್ತಿನಲ್ಲಿ ಭಾರತದ ಕೀರ್ತಿಯನ್ನು ಹರಡಿದವ ಓರ್ವ ಹಿಂದೂ–ಅದು ಗಾಂಧಿಜೀ ಎಂಬುದನ್ನು ನೀವು ಬಲ್ಲಿರಿ; ಅವರನ್ನು ಕೊಲೆಮಾಡಿದವನೂ ಓರ್ವ ಹಿಂದು. ಅದುವೇ ಹಿಂದೂತ್ವವಾಗಿತ್ತೆ? ಆ ವಿಧಾನದಿಂದ ನೀವು ಹಿಂದೂತ್ವವನ್ನು ರಕ್ಷಿಸಿಕೊಳ್ಳಬಲ್ಲಿರಾ? ಹಿಂದುಗಳ ನಡುವೆ ಎಷ್ಟು ಜಾತಿಗಳು, ಪಂಥಗಳು, ಉಪಜಾತಿಗಳು ಇವೆ? ಕ್ರೈಸ್ತರ ನಡುವೆ ಕೂಡಾ ಎಷ್ಟು ಜಾತಿ, ಉಪಜಾತಿಗಳಿವೆ? ಕ್ರೈಸ್ತತ್ವವು ಇದನ್ನೊಪ್ಪಿಕೊಳ್ಳುತ್ತದೆಯೆ? ನಾವು ನಮ್ಮ ಧರ್ಮವನ್ನೇ ಅನುಸರಿಸೋಣ. ನಾವದನ್ನು ಉಚಿತ ರೀತಿಯಿಂದ ಅನುಸರಿಸಿದೆವಾದರೆ ಯಾವುದಕ್ಕೂ ಯಾವ ಅಪಾಯವೂ ತಟ್ಟದು. ಕ್ರೈಸ್ತರು, ಹಿಂದುಗಳು, ಮುಸ್ಲಿಮರು, ಸಿಖ್ಖರು, ಪಾರ್ಸಿಗಳು, ಅಥವಾ ಯೆಹೂದಿಗಳು, ಯಾರೇ ಇದ್ದರೂ ಸಯೋಗ್ಯ ಮನುಷ್ಯರಾಗಿರೋಣ; ಯೋಗ್ಯ ಮಾನವ ಜೀವಿಗಳಾಗಿ ಬದುಕೋಣ. ಅಸಹನೆಯನ್ನು ಆಧರಿಸಿಕೊಂಡಿದ್ದರೆ ಯಾವ ಧರ್ಮವೂ ಪ್ರಗತಿ ಹೊಂದಲಾರದು”.

## ಮಿ. ಲಿಯಾಖತ್ ಆಲೀಖಾನ್

ಸರ್ದಾರ್ ವಲ್ಲಭಭಾಯಿಗಳ ಎರ್ನಾಕ್ಯುಲಮ್ ಭಾಷಣವು ಭಾರತದ ಪ್ರಚಲಿತ ಪ್ರಗತಿಗಳನ್ನು ತಿಳಿಸುವ ಸರಳ ಶಬ್ದಗಳ ಜಾತಕವೆಂಬುದು ನಿಸ್ಸಂದೇಹ. ಇತ್ತೀಚಿಗಿನ ಭಾರತ–ಪಾಕಿಸ್ತಾನ್ ಒಡಂಬಡಿಕೆಯ ನಂತರ ಸರ್ದಾರ್ ವಲ್ಲಭಭಾಯಿಗಳೂ ಪಂಡಿತ ನೆಹರುಗಳಂತೆಯೇ ಭಾರತದ ಕಮ್ಯೂನಿಸ್ಟರ ಸಮಪಂಗ್ತಿಯನ್ನೇ ಹಿಂದೂವಾದಿಗಳಿಗೀಯಹತ್ತಿದ್ದಾರೆ. ಆ ಮೊದಲಾದಲೂ ಅಪ್ರಾಗತಿಕ ಜಾತೀಯವಾದವನ್ನು ಸರ್ದಾರರು ಖಂಡಿಸದೆ ಬಿಡುತ್ತಿರಲಿಲ್ಲ. ಪ್ರಧಾನಿ ನೆಹರುಗಳಂತೂ ಏಕಪ್ರಕಾರ, ಎಲ್ಲಾ ವಿಧದ ಸಂಕುಚಿತ ಜಾತೀಯತೆಯನ್ನೂ ತೀಕ್ಷ್ಣವಾಗಿ ಖಂಡಿಸುತ್ತಾ ಬಂದವರು. ಭಾರತವು ಜಾತ್ಯತೀತ ಜನತಾರಾಜ್ಯವೆಂದು ಜಾಹೀರಾದ ಮೇಲೆ ರಾಜ್ಯನಿಷ್ಠೆಯಿದ್ದವರೆಲ್ಲರೂ ಜಾತೀಯತೆಯನ್ನು ಅನುಕೂಲಾಗ್ರವಾಗಿ ವಿರೋಧಿಸುವುದು ಅನಿವಾರ್ಯವಿದೆ. ನೆಹರೂ ವಲ್ಲಭಭಾಯಿಗಳಂತಹ ರಾಷ್ಟ್ರಧಾರೆ ಪುರುಷರಲ್ಲಿ ಎಲ್ಲರಿಗಿಂತ ಹೆಚ್ಚಿನ ರಾಜ್ಯನಿಷ್ಠೆಯಿದೆ, ಹಾಗಿರುವುದು ಅನಿವಾರ್ಯ ಕೂಡಾ–ಎಂಬುದು ಸ್ವತಃ ಸಿದ್ಧ. ಆದರೆ “ಇಸ್ಲಾಂ ರಾಷ್ಟ್ರ”ವೆಂದು ಹೇಳಿಕೊಳ್ಳುತ್ತಿರುವ ಪಾಕಿಸ್ತಾನದ ಪ್ರಧಾನಿಗಳಿಂದಾರಂಭಿಸಿ, ಸಾಮಾನ್ಯಾಗ್ರಗಣ್ಯರೊಳಗಿನ ಯಾರೇ ಆದರೂ, ಬಂಗಾಳಾ ದುರಂತವು ಭಾರತದ ಸಹನೆಯನ್ನು ಖಾಲಿ ಮಾಡಿದೆ ಎಂಬುದು ಗೋಚರಿಸುವವರೆಗೂ ಪಾಕಿಸ್ತಾನಿಗಳ ಜಾತೀಯತೆಯನ್ನು ಖಂಡಿಸಿ ಒಂದೇ ಒಂದು ಮಾತಾಡಿದುದಿಲ್ಲ. ಒಪ್ಪಂದಾನಂತರ, ಆದರ ಪಾಲನೆಗಾಗಿ ಮಿ. ಲಿಯಾಖತ್ ಅಲೀಖಾನರು ಉಚಿತ ಧೋರಣೆ, ವರ್ತನೆ ವಹಿಸಿರುವರೆಂಬುದು ನಿಜವಾದರೂ, ಸ್ವಭಾವ ಬಲದಿಂದ ಅಮೆರಿಕದಲ್ಲಿ ಒಮ್ಮೆ ಒಂದು ಅಚಾತುರ್ಯವು ಅವರಿಂದಾಗಿದ್ದಿತು. ಮೇ ತಾ. 11ರಲ್ಲಿ ಚಿಕಾಗೋದಲ್ಲಿ ಅಮೆರಿಕನ್ ಪತ್ರಿಕಾವಾಲರ ಸಮ್ಮುಖದಲ್ಲಿದ್ದಾಗ, ಮಿ. ಲಿಯಾಖತ್ ಅಲೀಖಾನರಿಗೆ ಓರ್ವ ಪತ್ರಿಕೋದ್ಯಮಿಯು ಡಾ| ಶ್ಯಾಮ ಪ್ರಸಾದ ಮುಖರ್ಜಿಯವರ ಹೇಳಿಕೆಯನ್ನು ಓದಿ ತೋರಿಸಿದ. ತಾನು ಭಾರತ ಕೇಂದ್ರ ಮಂಡಲಿಯ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟುದೇಕೆ, ಎಂಬುದರ ಕಾರಣಗಳನ್ನು ಕೊಟ್ಟ ಡಾ| ಶ್ಯಾಮ ಪ್ರಸಾದ ಮುಖರ್ಜಿಗಳಿತ್ತಿದ್ದ ಹೇಳಿಕೆಯದು. ಮಿ. ಲಿಯಾಖತರು ಡಿಲ್ಲಿಯಲ್ಲಿ ತಟ್ಟಿ ಮಲಗಿಸಿದ್ದಂದಿನಿಂದ ಆ ವರೆಗೂ ಅವರ ಅಂತರಾಳದಲ್ಲಿ ನಿದ್ರಿಸುತಿದ್ದ ಕೂಸು, ಡಾ| ಮುಖರ್ಜಿಗಳ ಹೇಳಿಕೇ ಸ್ವರದಿಂದ ಎದ್ದು ಕೂಗು ಹಾಕಿತು! ಕೆರಳಿದ ಮಿ. ಲಿಯಾಖತರೆಂದರು. “ಡಾ| ಶ್ಯಾಮಪ್ರಸಾದರ ಹೇಳಿಕೆಯೆಂಬುದು ಯಾವ ನ್ಯಾಯವೂ ಇರದ ಸುಳ್ಳುಗಳ ಕಂತೆ ಮತ್ತು ವಿಷ ಭಾವನಾ ಪೂರಿತ ಕೃತಕ ಆರೋಪಗಳ ಹೊರತು ಬೇರೇನೂ ಅಲ್ಲ. ಎರಡು ರಾಷ್ಟ್ರಗಳೊಳಗಿನ ಸಂಬಂಧಗಳನ್ನು ಹಾಳುಮಾಡಬಲ್ಲ ಯಾವ ವಿಷಯವನ್ನೂ ಹೇಳಕೂಡದೆಂಬ ಒಡಂಬಡಿಕೆಯೊಂದನ್ನು ಮಾಡಿಕೊಂಡಿರುವೆನಾದ್ದರಿಂದ ನಾನು ಉದ್ದೇಶಪೂರ್ವಕವಾಗಿ ಭಾರತದ ಕುರಿತು ಅಪ್ರಿಯವಾದುದೇನನ್ನೂ ಆಡಬಾರದೆಂದು ಸಂಕಲ್ಪಿಸಿದ್ದೆ. ಆದರೆ, ಪಾಕಿಸ್ತಾನದ ಸ್ಥಾಪನೆಯಾದಂದಿನಿಂದ ಇತ್ತೀಚಿಗಿನ ಗೊಂದಲಗಳ ವರೆಗಿನ ಅವಧಿಯಲ್ಲಿ, ಭಾರತದ ಹಲವು ಭಾಗಗಳಲ್ಲ ಮುಸ್ಲಿಮರ ಕೊಲೆ, ಮತ್ತು ಭಯಾನಕ ಕೃತ್ಯಗಳೇ ಮುಂತಾದುವು ನಡೆದಿದ್ದರೂ, ಪೂರ್ವ ಪಾಕಿಸ್ತಾನದಲ್ಲಿ ಜಾತೀಯತಾ ಸ್ವರೂಪದ ಒಂದೇ ಒಂದು ಗೊಂದಲವಾದರೂ ನಡೆದುದಿಲ್ಲವೆಂದು ನಾನೀಗ ಹೇಳಬೇಕಾಗಿದೆ”. ಹುಟ್ಟು ಸ್ವಭಾವವು ಎಷ್ಟು ದುರ್ದಮ್ಯವಾದುದೆಂಬುದಕ್ಕೆ ಮಿ. ಲಿಯಾಖತರ ಇಲ್ಲಿಯ ಒಂದು ವಾಕ್ಯದ ನಿದರ್ಶನವೇ ಸಾಕು. ಪೂರ್ವ ಪಾಕಿಸ್ತಾನವೆಂದರೆ ಪೂರ್ವ ಬಂಗಾಳ. ಅಲ್ಲಿ ಮಿ. ಲಿಯಾಖತರಂದ ಅವಧಿಯಲ್ಲಿ ಏಕಮಾತ್ರ ಜಾತೀಯ ದುರ್ಘಟನೆ ಕೂಡಾ ನಡೆದುದಿಲ್ಲವೆಂದು ಅಮೆರಿಕದ ಪ್ರಚಾರಕ್ಕಾಗಿ ಹೊರತು ಮನಸ್ಸಾಕ್ಷಿ ಪೂರ್ವಕವಾಗಿ ಮಿ. ಲಿಯಾಖತರು ಹೇಳಬಲ್ಲರೆ? ಅದು ಹೇಗಿದ್ದರೂ, ಡಾ. ಶ್ಯಾಮ ಪ್ರಸಾದ ಮುಖರ್ಜಿಗಳ ಹೇಳಿಕೆಗಾಗಿ, ಮಿ. ಲಿಯಾಖತರು ಭಾರತದ ಮೇಲೆ ಹೀಗೆ ಕೆಸರೆರಚಲು ಬಾಯಿತೆರೆಯುವಾಗಲೇ ಡಿಲ್ಲಿಯಲ್ಲಿ ತಾನು ಆ ದಿನ ಸಹಿ ಮಾಡಿದ್ದ ಒಪ್ಪಂದದ ನೆನಪು ಅವರಿಗೆ ಏಕಾಗಲಿಲ್ಲವೋ ತಿಳಿಯದು. ಡಾ. ಮುಖರ್ಜಿಗಳು ಭಾರತ ಸರಕಾರದ ಮಂತ್ರಿಸ್ಥಾನದಲ್ಲಿ ಇದ್ದುಕೊಂಡು ಪಾಕಿಸ್ತಾನ್ ವಿರುದ್ಧ ಭಾವನೆಯನ್ನು ಪ್ರಕಟಿಸಿದುದೇನೂ ಅಲ್ಲ; ಅವರು ಈ ಭಾವನೆಯನ್ನು ಕಟ್ಟಿಕೊಂಡುದರಿಂದಾಗಿಯೇ ಮಂತ್ರಿಸ್ಥಾನಕ್ಕೆ ರಾಜೀನಾಮೆಯೀಯಬೇಕಾಗಿ ಬಂದಿದ್ದುದರಿಂದ ಭಾರತ ಸರಕಾರಕ್ಕೆ ಒಪ್ಪಿಗೆಯಿಲ್ಲದ ಅಭಿಪ್ರಾಯವದು ಎಂಬುದು ಖಚಿತವಾಗಿದೆ. ಪಾಕಿಸ್ತಾನವನ್ನು ದೂಷಿಸಿದ ಡಾ. ಮುಖರ್ಜಿಗಳಿಗೆ ಭಾರತ ಸರಕಾರದಲ್ಲಿ ಸ್ಥಾನವೇ ಇಲ್ಲದಿರುವಾಗ, ಭಾರತವನ್ನು ದೂಷಿಸಿದ ಮಿ. ಲಿಯಾಖತ್ ಆಲೀಖಾನರು ಪಾಕಿಸ್ತಾನ್ ಸರಕಾರದ ಅಗ್ರಗಣ್ಯರಾಗಿದ್ದಾರೆ. ಆದ್ದರಿಂದ ಮುಖರ್ಜಿಗಳ ಅಭಿಪ್ರಾಯವು ಕೇವಲ ಮುಖರ್ಜಿಗಳದೇ ಆಗಿರುವಾಗ ಲಿಯಾಖತರ ಅಭಿಪ್ರಾಯವು ಪಾಕಿಸ್ತಾನದ್ದಿದೆ; ಪಾಕಿಸ್ತಾನವು ಈ ಸಂಧಾನ ಶಾಂತಿಯ ಕಾಲದಲ್ಲೂ ಭಾರತವನ್ನು ಆಪಾದಿಸಲು ಸಿದ್ಧವಿದೆಯೆಂದಾಯಿತು. ಮಿ. ಲಿಯಾಖತರಲ್ಲಿ ತೀರಾ ಸಾಮಾನ್ಯ ಮಟ್ಟದ ಅಸಹಿಷ್ಣುತೆಯೇ ತುಂಬಿಕೊಂಡಿದೆ, ಎಂಬುದಕ್ಕೆ ಡಿಲ್ಲೀ ಒಪ್ಪಂದವನ್ನು ಮರೆತ ಈ ರೀತಿ ಕಿಡಿ ಕಾರಿದ ದೃಷ್ಟಾಂತ ಕಂಡು ಬಂದರೆ, ಹುಟ್ಟುಸ್ವಭಾವವು ಬಚ್ಚಿಟ್ಟಲ್ಲಿಂದಲೂ ಹೇಗೆ ಇಣುಕುತ್ತದೆ ಎಂಬುದಕ್ಕೆ ನಿದರ್ಶನವಾಗಿ ಅಮೆರಿಕದಲ್ಲಿ ಅವರು ಹೊರಗೆಡಹಿದ್ದ ಇತರ ಅಭಿಪ್ರಾಯಗಳನ್ನೂ ತೋರಿಸಬಹುದು.

## ಪಾಕಿಸ್ತಾನ್ ಮುಂದೆ ಹೇಗೆ?

ಒಂದು ರಾಷ್ಟ್ರದ ಕೊರಳಿಗೆ, ಒಂದು ಧರ್ಮದ ಪಟ್ಟಿಯನ್ನು ನೇತಾಡಿಸುವುದು ಈ ನವಯುಗದಲ್ಲಿ ಆಧುನಿಕರಾರಿಗೂ ಸೊಗಸಾಗಿ ತೋರದ ಸಂಗತಿ. ತಮ್ಮ ‘ಇಸ್ಲಾಂ’ ಬಿಲ್ಲೆಯು ‘ಶುದ್ಧ ಪ್ರಜಾಸತ್ತಾ’ ಸ್ವರೂಪದ್ದೆಂಬುದನ್ನು ತೋರಿಸಲು ಮಿ. ಲಿಯಾಖತ್ ಆಲೀಖಾನರು ಅಮೇರಿಕದಲ್ಲಿ ವಿಶೇಷ ಸಾಹಸಪಟ್ಟು ಸಂಗತಿ ನಿರೂಪಣೆ ಮಾಡಿದ್ದಾರೆ. ಹಾಗಿದ್ದರೆ, ಜಾತ್ಯತೀತ ‘ಪ್ರಜಾಪ್ರಭುತ್ವದ’ದ ಸ್ಥಾನದಲ್ಲಿ ಒಂದು ಸಮಾಜ ವೈಶಿಷ್ಟ್ಯತೋರಬರುವ ‘ಇಸ್ಲಾಂ’ ತನವನ್ನು ನಿಲ್ಲಿಸಿಕೊಳ್ಳುವ ಅಗತ್ಯವಾದರೂ ಏನಿದೆ, ಎಂಬ ಪ್ರಶ್ನೆಯೇಳುವುದು ಸ್ವಾಭಾವಿಕ. ಪ್ರಪಂಚದ ಅತಿದೊಡ್ಡ ಮುಸ್ಲಿಂ ರಾಷ್ಟ್ರದ ನಾಯಕ ಸ್ಥಾನದಿಂದ ಮಿ. ಲಿಯಾಖತರು ಉದಾತ್ತ ವಾಣಿಗಳನ್ನು ಹೊರಗೆಡಹಿದಾಗಲೆಲ್ಲಾ ಅಮೆರಿಕಾನರಲ್ಲಿ ಈ ಸಂದೇಹ ಸಹಜವಾಗಿ ಮೊಳೆಯುವಂತಹದೇ. ಅಮೆರಿಕಾಧ್ಯಕ್ಷರು ಮತ್ತಲ್ಲಿಯ ಸರಕಾರವು ಅಂದು ಪಂಡಿತ ನೆಹರುಗಳಿಗೆ ಕೊಟ್ಟಿದ್ದ ಸ್ವಾಗತ, ಗೌರವಗಳಿಗೆ ಲವಮಾತ್ರವೂ ಕಡಿಮೆಯಿರದ ಸತ್ಕಾರಗಳನ್ನೇ ಮಿ. ಲಿಯಾಖತರಿಗೂ ಅತಿ ಜಾಗರೂಕತೆಯಿಂದ ಇತ್ತಿದೆ. ಕೊಡುವವರು ಅಂದಿನವರೇ ಇಂದು ಕೂಡಾ; ಆದರೆ ಅದನ್ನು ಪಡೆಯುವವರು ಬೇರೆ ತಾನೆ? ಪಂಡಿತ ನೆಹರುಗಳ ವಿಶಾಲೋದಾತ್ತ ಹೃದಯವನ್ನು ಮಿ. ಲಿಯಾಖತರಲ್ಲೂ ಕಾಣಬೇಕೆಂದರೆ ಸಾಧ್ಯವಿಲ್ಲ. ಪ್ರಪಂಚದ ಯಾವ ಮೂಲೆಗೆ ಹೋಗಿ ಇಳಿದರೂ ಅಲ್ಲಿ ತನ್ನ ವಿಶಿಷ್ಟ ಮುದ್ರೆಯೊತ್ತಬಲ್ಲ ಪಂಡಿತಜೀಯ ವ್ಯಕ್ತಿತ್ವವು–ಮಿ. ಲಿಯಾಖತರ ಮಾತಂತಿರಲಿ–ಆಧುನಿಕ ಜಗತ್ತಿನ ಯಾವನೊಬ್ಬ ನಾಯಕನಿಗಾದರೂ ಇರಲಾರದೆಂದು ಊಹಿಸಬಹುದು. ಅಮೆರಿಕದ ಸರಕಾರವೇನೋ ವಿದೇಶೀ ನಾಯಕರ ಪಾಲಿಗೆ, ನಿಶ್ಚೈಸಿಟ್ಟಿರುವ ಗೌರವಗಳನ್ನು ಭಿನ್ನ ಭೇದವಿಲ್ಲದೆ ಬಂದವರಿಗೆಲ್ಲಾ ಕೊಡಬೇಕಾದುದು ನ್ಯಾಯ. ಆದರೆ ಅಮೆರಿಕದ ಜನತೆಯ ಪಾಲಿಗೆ ಅಂತಹ ಕಟ್ಟುಕಟ್ಟ ನಿಬಂಧನೆಗಳೇನೂ ಇಲ್ಲವಾದ್ದರಿಂದ ವ್ಯಕ್ತಿ ತೂಕ ನೋಡಿ ಗೌರವಿಸುವ ಸ್ವಾತಂತ್ರ್ಯ ಅವರಿಗಿದೆ. ಹೀಗಾಗಿ ಅಮೆರಿಕದ ಸರ್ವಜನರಿಂದ ಪಂಡಿತ ನೆಹರುಗಳಿಗೆ ದೊರೆತಿದ್ದ ಸ್ವಯಂಪ್ರೇರಿತ ಗೌರವವು, ಅದೇ ಪರಿಮಾಣದಲ್ಲಿ ಮಿ. ಲಿಯಾಖತರಿಗೆ ದೊರೆತಿಲ್ಲವೆಂದು ವಾರ್ತಾ ವಿಮರ್ಶೆಯ ಮೂಲಕ ಅಂದಾಜು ಕಟ್ಟಬಹುದು. ಅಮೆರಿಕದ ಸೆನೆಟ್ ಸಭೆಗೆ ಮಿ. ಲಿಯಾಖತರ ಭೇಟಿ ಕೊಟ್ಟಾಗ, ಆ ಕಾನೂನು ರಚನಾ ಸಭೆಯ ‘ಕೋರಂ’ ಭರ್ತಿ ಮಾಡಿಕೊಳ್ಳುವುದಕ್ಕಾಗಿಯೇ ಅರ್ಧ ತಾಸು ಕಳೆದ! “ಈ ಮಾದರಿಯ ದುಸ್ಸಂಭಾವನೆ ಯಾವುದೇ ವಿದೇಶೀ ಪಾರ್ಲಿಮೆಂಟಿನಿಂದ ನಮ್ಮ ಅಧ್ಯಕ್ಷ ಟ್ರುಮೇನರಿಗೆ ದೊರೆಯುತ್ತಿದ್ದಲ್ಲಿ, ಇದೇ ಸಿನೇಟರರು ಅದನ್ನು ಖಂಡಿಸುತಿದ್ದರು.” ಎಂದು ನ್ಯೂಯೋರ್ಕಿನ ‘ನ್ಯೂಸ್ ವೀಕ್’ ಎಂಬ ಪತ್ರಿಕೆ ಟೀಕಿಸಿದೆ. ಭಾರತ–ಪಾಕಿಸ್ತಾನಗಳೊಳಗೆ ಉಂಟಾಗಿರುವ ನವೀನ ಸ್ನೇಹಾಚಾರ, ಕಾಶ್ಮೀರ ವಿವಾದವನ್ನು ಸೌಹಾರ್ದತೆಯಿಂದ ಬಗೆಹರಿಸಿಕೊಳ್ಳುವ ಬಯಕೆ, ಮುಂತಾದುವುಗಳ ಕುರಿತು ಅಮೆರಿಕದ ಕೆಲವೆಡೆಗಳಲ್ಲಿ ಮಿ. ಲಿಯಾಖತರು ಮಧುರವಾಣಿಗಳನ್ನೇನೋ ಆಡಿದ್ದಾರೆ. ಆದರೂ ಕಾಶ್ಮೀರದ ಕುರಿತಾಗಲೀ ಭಾರತದ ಸಂಬಂಧದ ವಿಷಯದಲ್ಲಾಗಲೀ ಪಾಕಿಸ್ತಾನದ ಧೋರಣೆಯು ಹಿಂದಿನದೇ ಎಂಬುದನ್ನು ಪಾಕಿಸ್ತಾನ್ ಪ್ರಧಾನಿಗಳು ಅನಗತ್ಯವಾಗಿಯೂ ಪ್ರಕಟ ಪಡಿಸಿದುದಿದೆ. ಪೂರ್ವಾಪರ ವಿಚಾರ ವಿಮರ್ಶೆ ಮಾಡಿ ನೋಡುವಾಗ, ಮಿ. ಲಿಯಾಖತರು ಅಮೆರಿಕಕ್ಕೆ ಹೊರಡುವ ಮೊದಲೇ ಡಿಲ್ಲೀ ಒಪ್ಪಂದವಾದುದರಿಂದ, ಅವರ ಬಾಯಿಗೊಂದು ಬೀಗ ಹಾಕಿ ಬಿಟ್ಟಂತಾಯಿತೆಂದು ತೋರುತ್ತದೆ. ಇಲ್ಲವಾದರೆ ಸರ್. ಝಫರುಲ್ಲಾ ಖಾನರು ಜಾಗತಿಕ ಸಂಘದಲ್ಲಿ ಭಾರತದ ಮೇಲೆ ಮಾಡಿದ್ದ ಅಪಪ್ರಚಾರದ ಮಾದರಿಯಲ್ಲೇ ಪಾಕಿಸ್ತಾನ್ ಪ್ರಧಾನಿಗಳೂ ಅಮೆರಿಕದಲ್ಲಿ ಡಂಗುರ ಬಾರಿಸುತಿದ್ದರೇನೋ! ಹೇಗಿದ್ದರೂ ಇದು ಹಿಂದಿನ ದುಸ್ವಭಾವವನ್ನು ಬಿಡುವ ಪ್ರಯತ್ನದ ಪ್ರಥಮಾಂಕ; ಈ ಆದಿಭಾಗದಲ್ಲಿ ಸಣ್ಣ ಪುಟ್ಟ ಪ್ರಮಾದಗಳು ನಡೆದರೂ ಕ್ರಮಶಃ ಅವು ಪೂರ್ಣ ಮಾಯವಾಗಿ ಎರಡೂ ರಾಷ್ಟ್ರಗಳ ಸ್ನೇಹಾಚಾರವು ಪರಿಶುದ್ಧವಾಗಿ ಶಾಶ್ವತಗೊಳ್ಳುವದೆಂದು ಹಾರೈಸೋಣ.

THE
Canara Banking Corporation Ltd.
(Incorporated in India.)
Estd: 1906.
Head Office : UDIPI, (S. I.)

| | | |
|---|---|---|
| Capital Authorised | .... .... .... | Rs 25,00,000 |
| Capital Issued, Subscribed & Paid up | .... .... .... | Rs. 20,00,000 |
| Reserves | .... ... .... | Rs. 9,44,765 |


ಗುರುವಾರ ಉಡುಪಿ ೧೮-೫-೧೯೫೦

## ಉಚಿತ ಹಾದಿ

ದಕ್ಷಿಣ ಭಾರತದ ಪಾಲಿಗೆ ಅಪೂರ್ವದ್ದಾದ, ಕೊಚ್ಚಿ ತಿರುವಾಂಕೂರುಗಳ ಮಟ್ಟಿಗೆ ಇದೇ ಪ್ರಥಮದ್ದಾದ, ಭೇಟಿಯನ್ನು ಸರ್ದಾರ್ ವಲ್ಲಭಭಾಯಿಗಳು ಈ ವಾರದಲ್ಲಿತ್ತಿದ್ದಾರೆ. ಎರ್ನಾಕ್ಯುಲಮ್ ಮತ್ತು ತ್ರಿವೇಂಡ್ರಮಿನ ಪ್ರಚಂಡ ಸಭೆಗಳಲ್ಲಿ ಸರ್ದಾರರು ಕೊಟ್ಟಿರುವ ಉಪದೇಶವನ್ನು ಅಖಿಲ ಭಾರತೀಯರು ಮನನ ಮಾಡಿಕೊಳ್ಳಬೇಕಾದುದು ಅತ್ಯಗತ್ಯವೆನ್ನುತ್ತೇವೆ. ಪ್ರಚಲಿತ ಸ್ಥಿತಿಯಲ್ಲಿ ರಾಷ್ಟ್ರದ ಆಪತ್ತು ಮತ್ತು ಆವಶ್ಯಕತೆಗಳಾವುವು ಎಂಬುದನ್ನು ಭಾರತದ ಉಪ ಪ್ರಧಾನಿಗಳು ಸರ್ವರಿಗೂ ಮನದಟ್ಟಾಗುವಂತೆ ವಿಂಗಡಿಸಿ ತೋರಿಸಿದ್ದಾರೆ. ಜನತೆಯ ಕರ್ತವ್ಯವೇನೆಂಬುದನ್ನು ಜನಸಾಮಾನ್ಯರಿಗರ್ಥವಾಗುವಂತೆ ತಿಳಿಸಿದ್ದಾರೆ. ಸರ್ದಾರರು ಉಪದೇಶಿಸಿದ ವಿಧಾನಗಳ ಕಡೆಗೆ ನಾವು ಈ ಮೊದಲೇ ಬಾರಿಬಾರಿಗೂ ಜನತೆಯ ಲಕ್ಷ್ಯವನ್ನೆಳೆದಿದ್ದೇವೆ. ಸಾಮಾನ್ಯರ ವಿಚಾರಾಲಾಪಗಳಿಗೆ ಅಧಿಕೃತ ವಾಣಿಯ ಶ್ರುತಿ ಸೇರುವ ಸಂದರ್ಭವಿದು. ಆದ್ದರಿಂದ ಸರ್ದಾರ್ ವಲ್ಲಭಭಾಯಿಗಳ ಸ್ಪಷ್ಟ ನಿರ್ದೇಶಗಳ ಕಡೆಗೆ ಜನತೆಯು ಲಕ್ಷ್ಯಕೊಡಬೇಕಾದುದು ಎಲ್ಲಾ ದೃಷ್ಟಿಯಿಂದಲೂ ಆಗತ್ಯವೆಂಬುದನ್ನು ಒತ್ತಿ ಹೇಳಬೇಕಾಗಿದೆ. "ಕಮ್ಯೂನಿಸ್ಟರ ದುರ್ವರ್ತನೆಗಳನ್ನು ಬೇರು ಸಮೇತ, ನಿರ್ಮೂಲಿಸುವ ಶಕ್ತಿ ಸರಕಾರಕ್ಕಿದೆ. ಆದರಾ ಶಕ್ತಿಯನ್ನು ನಮ್ಮ ಜನರ ಮೇಲೇನೇ ನಾವು ಪ್ರಯೋಗಿಸುವುದಲ್ಲವೆಂಬುದಕ್ಕಾಗಿ ಕೈತಡೆದಿದ್ದೇವೆ. ತಮ್ಮ ಧ್ಯೇಯ ಸಾಧನೆಗಾಗಿ ಶಾಸನಬದ್ಧ ವಿಧಾನಗಳಿಂದ ದುಡಿಯುವ ಸದ್ಬುದ್ಧಿಯು ಇನ್ನಾದರೂ ಕಮ್ಯೂನಿಸ್ಟರಲ್ಲಿ ಮೂಡಬಹುದೋ ನೋಡೋಣವೆಂದು ರಾಷ್ಟ್ರದ ಹೆಚ್ಚಿನ ಎಡೆಗಳಲ್ಲಿ ಅವರ ಮೇಲೆ ಬಹಿಷ್ಕಾರ ಹೇರದೆ ಸ್ವತಂತ್ರರಂಗವನ್ನು ತೆರವು ಮಾಡಿಟ್ಟಿದ್ದೇವೆ. ಅವರಿಗೆ ಇಚ್ಛೆ ಮತ್ತು ಧೈರ್ಯವಿದ್ದರೆ ಮತ ಪೆಟ್ಟಿಗೆಗಳ ಮೂಲಕ ಯೋಗ್ಯತೆ ಪ್ರದರ್ಶಿಸಲಿ, ಅಂತಹ ಶಾಸನಾನುಗುಣ ವಿಧಾನವನ್ನನುಕರಿಸದೆ ಇನ್ನೂ ವಿಧ್ವಂಸಕ ಚಟುವಟಿಕೆಗಳಲ್ಲೇ ಅವರು ನಿರತರಾಗುತ್ತಾರಾದರೆ ಚುನಾವಣೆಯಂತೆಯೇ ಸ್ವತಂತ್ರ ವಾತಾವರಣದ ಹಕ್ಕನ್ನು ಕೂಡಾ ಅವರು ಕಳಕೊಳ್ಳುತ್ತಾರೆ ಅತ್ಯಂತ ಅಪಾಯಕರ ಸಂಗತಿಯೆಂದರೆ ಧರ್ಮವಾರಾಗಿ ಪಕ್ಷಗಳನ್ನು ಅಥವಾ ಕಾರ್ಯಕ್ರಮಗಳನ್ನು ರಚಿಸಿಕೊಳ್ಳುವುದೇ. 'ಧರ್ಮ ಅಪಾಯದಲ್ಲಿದೆ' ಎಂಬ ಕೂಗು ಅರ್ಥರಹಿತವಾದುದು. ರಾಜಕೀಯ ಗುರಿ ಸಾಧನೆಗಳಿಗಾಗಿ ಧರ್ಮವನ್ನು ದುರುಪಯೋಗಿಸಿಕೊಳ್ಳುವ ದುರುದ್ದೇಶ ಇಲ್ಲದೆ; ನಿಜಕ್ಕೂ ಧರ್ಮಕ್ಕೆ ಅಪಾಯ ಒದಗುವುದು ಈ ಮೂಲಕವೇ" ಎಂದು ಸರ್ದಾರರು ತನ್ನ ಸ್ವಭಾವಬದ್ಧವಾಗಿ ಸ್ಪಷ್ಟವಾಣಿಗಳನ್ನಾಡಿದ್ದಾರೆ

ಮದ್ರಾಸ್ ಸಂಸ್ಥಾನ ಮತ್ತು ಕೇರಳದಲ್ಲಿ ವ್ಯಾಪಿಸಿಕೊಂಡಿರುವ ಕಮ್ಯೂನಿಸ್ಟ್ ಉಪಟಳದತ್ತ ಮತ್ತು ಕೊಚ್ಚಿ, ತಿರುವಾಂಕೂರುಗಳಲ್ಲಿರುವ ಹಿಂದೂ-ಕ್ರೈಸ್ತ ಒಳಸ್ಪರ್ಧೆಯ ಕಡೆಗೆ ದೃಷ್ಟಿಯಿಟ್ಟೇ ಸರ್ದಾರ್ ಪಟೇಲರು ಅಲ್ಲಿ ಇಂತಹ ಮಾತುಗಳನ್ನಾಡಿದುದಾಗಿರಬೇಕು. ಆಧುನಿಕ ಭಾರತದ ಚತುರ ಸಾರಥಿಯೆಂದು ಹೆಸರಾಗಿರುವ ಸರ್ದಾರ್ ಪಟೇಲರಾಡಿದ ಈ ಸಂಧರ್ಭೋಚಿತ ಮಾತುಗಳಲ್ಲಿ ತಪ್ಪನ್ನು ಕಂಡು ಹಿಡಿಯಲು ಇಂದಿನ ಆಡಳಿತೆಯ ವಿರೋಧಿಗಳಿಗಾದರೂ ಹೇಗೆ ಸಾಧ್ಯವೋ ನಮಗರಿಯದು. "ಯಾರಿಗೆ ಅಧಿಕಾರ ಚಲಾವಣೆ ಮಾಡಬೇಕೆಂಬ ಲವಲವಿಕೆ ಮತ್ತು ಇಂದಿನ ಸ್ಥಿತಿಗತಿಗಳನ್ನು ಉತ್ತಮಗೊಳಿಸಬೇಕೆಂಬ ಆತುರವಿರುವುದೋ ಅವರು ಅವಶ್ಯವಾಗಿ ಮುಂದೆ ಬರಲಿ" ಎಂದು ಸರ್ದಾರರು ಆಹ್ವಾನಿಸಿದ್ದಾರೆ. ಆದರೆ ಕಮ್ಯೂನಿಸಮ್ ಅಥವಾ ಜಾತೀಯತಾ ಕಳಂಕ ಹಸ್ತಗಳನ್ನು ಮಾತ್ರ ಮುಂದೆ ಚಾಚಬೇಡಿ ಎಂಬ ಶರ್ತ ಹಾಕಿದ್ದಾರೆ. ಕೆಸರು ಹಚ್ಚಿಕೊಂಡವರೊಡನೆ "ಸ್ನಾನ ಮಾಡಿಕೊಂಡು ಬಂದೇ ಔತಣಕ್ಕೆ ಕುಳಿತುಕೊಳ್ಳಿ" ಎಂದು ಹೇಳುವುದರಲ್ಲಿರುವುದಕ್ಕಿಂತ ಹೆಚ್ಚಿನ ಕಠೋರತೆಯಾವುದೂ ಸರ್ದಾರ್ ವಲ್ಲಭಭಾಯಿಗಳ ಮಾತುಗಳಲ್ಲಿಲ್ಲ. ಭಾರತ ರಾಜ್ಯ ಶಾಸನದಲ್ಲಿ ಈ ಶುದ್ಧಾಚಾರದ ಸ್ಪಷ್ಟ ನಿಯಮವಿದೆ. ಜಾತ್ಯಾತೀತ, ಪ್ರಜಾಸತ್ತಾತ್ಮಕ, ಜನತಾ ರಾಜ್ಯದಲ್ಲಿ ಧಾರ್ಮಿಕವಾರು ರಾಜಕೀಯ ಪಕ್ಷ ಹುಟ್ಟಿಕೊಳ್ಳುವುದು ನಿಯಮಬಾಹ್ಯವಿದೆ. ಅಂತೆಯೇ ಶಾಸನ ಬದ್ಧವಾದ ಚಳವಳಗಳನ್ನಲ್ಲದೆ, ಶಾಸನಗಳ ಸಮೇತ ಸರ್ವವನ್ನೂ ಧ್ವಂಸ ಮಾಡುವ ಗುರಿಯುಳ್ಳ ಆಂದೋಲನವನ್ನು [illegible] ಸರಕಾರವೇ ಅಲ್ಲ. [illegible] ಇಂದಿನ ಧಾರ್ಮಿಕ ರಾಜಕೀಯ [illegible] ಪ್ರವರ್ತಕರು ಕಮ್ಯೂನಿಸ್ಟ [illegible] ಗಳೇ [illegible] ಗ ಇಲ್ಲದೆ ಈ ಸ್ಥಾನವನ್ನು ಕಾಯಿದೇಶೀರವಲ್ಲದ ವಿಧಾನಗಳಿಂದ ಸಂಪಾದಿಸಿಕೊಳ್ಳಬಹುದೆಂಬ ಆಸೆಯು ಭಾರತದ ಧರ್ಮವಾರು ಪಕ್ಷಗಳಲ್ಲಾವುದಕ್ಕೂ ಸದ್ಯಕ್ಕಿಲ್ಲ. ಅಂಥವುಗಳ ಮೇಲೆ ಪೂರ್ಣ ಭರವಸೆಯಿಟ್ಟು ಸುಮ್ಮಗಿರಲು ಸಾಧ್ಯವಿಲ್ಲವಾದರೂ ರಾಷ್ಟ್ರದ ಪಾಲಿನ ಮಹಾ ಗಂಡಾಂತರಗಳಾಗಿ ಈ ದಿನ ಅವು ಬೆಳೆದಿಲ್ಲ. ಇನ್ನು ಮುಂದಿನದಂತೂ, ಅವುಗಳನ್ನು ಮುರುಟಿಸಿ, ಕರಟಿಸಿ, ಉರುಳಿಸಿಹಾಕುವ ಬೇಗೆ ಬಿರುಗಾಳಿಯ ಕಾಲ ಹೊರತು, ಅವುಗಳ ಪಾಲಿನ ವರ್ಷಋತುವಲ್ಲವೇ ಅಲ್ಲ. ಆದ್ದರಿಂದ, ಧರ್ಮಾಂಧ ಪಕ್ಷ ಪಂಗಡಗಳಿಗೆ ಭಾರತದಲ್ಲಿನ್ನು ಭವಿಷ್ಯವಿಲ್ಲವೆಂಬುದನ್ನು ಸ್ಪಷ್ಟ ತಿಳಿದಿರಬೇಕು. ಆದರೆ ಕಮ್ಯೂನಿಸ್ಟರ ಸ್ಥಿತಿ ಹೀಗಿಲ್ಲವೆಂಬುದೇನೋ ನಿಜ. ಜನಸಾಮಾನ್ಯದಲ್ಲಿ ದರಿದ್ರಾವಸ್ಥೆ ಇರುವ ವರೆಗೂ, ಕಮ್ಯೂನಿಸ್ಟರ ಪಾಲಿಗೆ ಸುಭದ್ರ ಹಾಗೂ ಸುವಿಸ್ತಾರ ಕ್ಷೇತ್ರವಿದ್ದೇ ಇದೆ; ಅರೆಹೊಟ್ಟೆ, ಕಷ್ಟ, ನಷ್ಟ, ಅಪಮಾನಗಳಿಂದ ಕುದಿಯುತ್ತಿರುವ ಸಾಮಾನ್ಯ ಜನತೆಯ ಎದೆಯೊಳಗಿರುವ ತನಕವೂ ಅದು ಕಮ್ಯೂನಿಸ್ಟರ ಸ್ಫೂರ್ತಿ ಕಿಡಿಯಾಗಿ ಹಾರಾಡಲಿದೆ; ಸಾಲದುದಕ್ಕೆ ಲೋಕ ವ್ಯಾಪೀ ಕಮ್ಯೂನಿಸಮಿನ ಆಧಾರ ಮತ್ತು ಪ್ರೇರಣೆ ಕೂಡಾ ಭಾರತೀಯ ಕಮ್ಯೂನಿಸ್ಟರಿಗಿದೆ. ಆದ್ದರಿಂದ ಇಲ್ಲಿಯ ಕಮ್ಯೂನಿಸ್ಟರಿಗೆ ಭದ್ರ ಭವಿಷ್ಯವಿರಬಹುದೆಂಬ ಭೀತಿಗೆಡೆಯಿದೆ. ಹೀಗಿದ್ದರೂ ಕೆಲವು ವಿಷಯಗಳನ್ನು ಮರೆಯಲಾಗುವದಿಲ್ಲ. ಜನಮತವನ್ನು ಸುಲಭದಲ್ಲಿ ಸೆರೆಹಿಡಿಯಲಾಗದಂತೆ ಕಮ್ಯೂನಿಸ್ಟರಿಗಿರುವ ಪ್ರಬಲ ಪ್ರತಿಬಂಧಕವೇ ಭಾರತದ ಇಂದಿನ ನಾಯಕತ್ವ. ಕಮ್ಯೂನಿಸ್ಟ್ ರಾಕ್ಷಸೀ ಕೃತ್ಯಗಳನ್ನೆಸಗುವದಕ್ಕಿಂತ, ಇಂದಿನ ನಿಸ್ಸಹಾಯಕ ಸ್ಥಿತಿಜನ್ಯ ಕಷ್ಟನಷ್ಟಗಳನ್ನನುಭವಿಸುವುದೇ ವಾಸಿಯೆಂಬ ಭಾವನೆ ಹುಟ್ಟುವಷ್ಟು, ಕಮ್ಯೂನಿಸ್ಟ್ ದುರಾಂದೋಲನಗಳು ಹಿಂದೀ ಜನತೆಗೆ ಅಪ್ರಿಯವಾಗಿವೆ. ಅಂತಹ ದುಷ್ಕೃತ್ಯಗಳ ಸ್ಪರ್ಶವಿಲ್ಲದೇನೆ ದಾರಿದ್ರ್ಯಭಾವಗಳನ್ನು ನಿವಾರಿಸಿ ಬಿಡುವೆವೆಂದು ಕಾಂಗ್ರೆಸು ಅಥವಾ ಸಮತಾವಾದಿಗಳು ಮುಂದಬಂದ - ದೂರದಷ್ಟೇ ಕಮ್ಯೂನಿಸ್ಟರು ಹಿಂದೆ ಬೀಳುತ್ತಾ ಹೋಗಬೇಕಾಗುವದು. ಕಮ್ಯೂನಿಸ್ಟ್ ವಿರೋಧಿ ಶಕ್ತಿಗಳಾಗಿರುವ ಇವೆಲ್ಲವೂ ಕುಸಿಯುತ್ತಾ ಹೋದರೆ ಮಾತ್ರ ಕಮ್ಯೂನಿಸ್ಟರು ಪ್ರಬಲಿಸುತ್ತಾ ಬಂದಾರು. ರಾಷ್ಟ್ರದ ದುರ್ದೈವದಿಂದ ಹೀಗಾಗಿ ಹೋದರೇನೇ ಭಾರತದ ಕಮ್ಯೂನಿಸ್ಟರ ಪಾಲಿಗೆ ಸುಕಾಲ ಹೊರತು ಅನ್ಯಥಾ ಇಲ್ಲ. ಅಸಾಧ್ಯ ಅಥವಾ ಅತ್ಯಂತ ಕಷ್ಟ ಸಾಧ್ಯವಾಗಿ ತೋರುತ್ತಿರುವ ಇಂತಹ ಸುಯೋಗವು ತಮಗೆ ಒಂದಲ್ಲೊಂದು ದಿನ ಖಂಡಿತವಾಗಿ ಒದಗುವದೆಂಬ ಭರವಸೆಯು ಒಂದೊಮ್ಮೆಗೆ ಕಮ್ಯೂನಿಸ್ಟರಿಗಿದ್ದಲ್ಲಿ, ಅಗ ಕೂಡ [illegible] ಸರ್ದಾರ್ ವಲ್ಲಭಭಾಯಿಗ [illegible] ಕಮ್ಯೂನಿ [illegible] ಬೇಕಾಗಿದೆ. ಒಂದು ಸ [illegible] ಹಿಂಸಾತ್ಮಕ ವಿಧಾನಗ [illegible] ದೊಡ್ಡ [illegible] ಶಾಸನಬದ್ಧವಾಗಿ [illegible] ಪಡಿಸಿಕೊಳ್ಳುವುದರಲ್ಲಿಲ್ಲ. [illegible] ಡಳಿತೆಯ ಕಾಲದ ಅಂದಿನ ಪಶ್ಚಿಮ [illegible] ಹರೂ ಆಡಳಿತೆಯ ಇಂದಿನ ಭಾರತ [illegible] ಪಶ್ಚಿಮ-ಪೂರ್ವದಷ್ಟು ವ್ಯತ್ಯಾಸಗಳಿ [illegible] ವಾಗ, ಆದಕ್ಕಾದುದೇ ಇದಕ್ಕೂ ಅ [illegible] ಲ್ಲವೆಂಬ ಭ್ರಮೆಯಿಂದಿರುವ ಭಾರತೀ[ಯ] ಕಮ್ಯೂನಿಸ್ಟರು ಎಂದಿಗೂ ಜಯಿಸಲ [illegible] ರು. ರಶ್ಯ ಮತ್ತಿತರ ಅಂತರ್‌ರಾಷ್ಟ್ರೀಯ [ಕ]ಮ್ಯೂನಿಸ್ಟ್ ಸೂತ್ರಕ್ಕೆ ಸಿಕ್ಕಿಕೊಳ್ಳ [illegible] ಹಿಂದೀ ಕಮ್ಯೂನಿಸ್ಟರು ಸ್ವೇಚ್ಛೆಯಿ [illegible] ಚಿಂತಿಸುವುದಾಗಿದ್ದರೆ, ಭಾರತದ ಇಂ[ದಿನ] ಸ್ಥಿತಿಗತಿಗಳನ್ನು ಗಮನಿಸಿ ಶಾಂತವಿಧಾ[ನ]ಗಳಿಂದ ಜನಮನವನ್ನೊಲಿಸಿಕೊಳ್ಳ [illegible] ದೊಂದೇ ತಮಗಿರುವ ಸುಗಮೋಪಾ[ಯ]ವೆಂಬುದನ್ನು ತಿಳಿಯುತ್ತಿದ್ದರು; ಅದ [illegible] ರಿಗೆ ರಾಲಡಿ ನೋಡುವ—ಸ್ವಚಿಂತನೆ [illegible] ಡುವ— ಸ್ವಾತಂತ್ರ್ಯವಿಲ್ಲವಾದ್ದರಿ[ಂದ] ಶಾಂತ ಹಾಗೂ ಶಾಸನಬ[ದ್ಧ] ವಿಧಾನಗಳನ್ನು ಬಿಟ್ಟು, ಹೊರ ಪ್ರೇ[ರಣೆ]ಗನುಸಾರವಾಗಿ ವಿನಾಶಾತ್ಮಕ ಕೃತ್ಯ[ಗಳ]ಲ್ಲೇ ತೊಡಗಿದ್ದಾರೆ. ಇಲ್ಲಿಯ ಕಮ್ಯೂನಿಸಮ್ ಹಾಳು ಮಾಡಲು ಮತ್ತು [illegible] ಳಾಗಲು ಹುಟ್ಟಿರುವಂತಹದಿದೆ ಹೊ[ರತು] ಬೇರಲ್ಲವೆಂಬುದು ಖಂಡಿತ. ಆದ್ದರಿ[ಂದ] ಸರ್ದಾರರು ಕೈ ತೋರಿಸಿದತ್ತ ನೋಡ [illegible] ಗುವ ಕಣ್ಣನ್ನು ಇಲ್ಲಿಯ ಕಮ್ಯೂನಿಸ್ಟ [illegible] ಕಳಕೊಂಡಿರಬಹುದು. ಹಾಗಿದ್ದರೆ [illegible] ಷ್ಟ್ರದ ಈ ಅಪಾಯಗಳನ್ನು ನಿವಾ [illegible] ಬಿಡುವ ಕಾರ್ಯಕ್ಕೆ ಸಾರ್ವಜನಿ [illegible] ಪೂರ್ಣ ಬೆಂಬಲ ಕೊಡಬೇಕೆಂಬ ಸರ್ದಾ[ರ]ರ ವಿಜ್ಞಾಪನೆಯಾದರೂ ಸರ್ವಮಾನ್ಯ [illegible] ಹೊಂದಲಿ ಎನ್ನುತ್ತೇವೆ.

ನಿಜಕ್ಕೂ ನೆಹರೂ ವಲ್ಲಭಭಾಯಿಗ [illegible] ಹ ದಣಿದ ಮುಂದಾಳುಗಳಿಗೆ ಸ್ವಂತ, [illegible] ರವ, ಮತ್ತು ಸ್ವಾರ್ಥ ಸಾಧನೆಗಾಗಿ ಇ [illegible] ದಿನ ಅಧಿಕಾರ ಬೇಕಾಗಿಲ್ಲ ಆದರೆ ತಾ [illegible] ಕೇದೆಂದು ಮೂರು ದಶಮಾನಗಳ [illegible] ದುಡಿದು ಸಂಪಾದಿಸಿದ ರಾಷ್ಟ್ರ ಸ್ವಾತಂ[ತ್ರ್ಯ]ವನ್ನು ರಕ್ಷಿಸಿ ಕೊಡುವ ಸಮರ್ಥರಿಲ್ಲ [illegible] ದಾಗ, ಅದು ನಷ್ಟ ಹೊಂದುವ ಅಪಾ[ಯ] ತಟ್ಟಿದಲ್ಲಿ ಆ ಮೇಲೂ ಭಾರತೀಯ [illegible] ಲೋಕದಿದಿರು ತೋರಿಸಲಾಗುವ ಮು [illegible] ಮತ್ತು ಅನುಭವಿಸಲಾಗುವ ಸುಖ, [illegible] ಲಾರದು ಎಂಬ ಮುಂಜಾಗರೂಕತೆಯಿ[ಂದ] ಅವರೀ ಸ್ವತಂತ್ರ್ಯಾಧಿಕಾರವನ್ನು ಸ [illegible] ಹಸ್ತಗಳಿಗೆ ಚೆಲ್ಲಿ ಕೊಡಲು ಹಿಂಜರಿ [illegible] ತ್ತಿದ್ದಾರೆ. ಎದೆ ಕುಗ್ಗಿಸುವ ಮತ್ತು ವೈ [illegible] ಗ್ಯ ಬರಿಸುವ ದುರ್ಘಟನೆಗಳೆಷ್ಟೇ ನ [illegible] ದ್ದರೂ ನೆಹರೂ ವಲ್ಲಭಭಾಯಿಗಳಂ [illegible] ನಾಯಕರು ಎಲ್ಲವನ್ನೂ ಸಹಿಸಿಕೊಂ [illegible] ಸ್ವರಾಜ್ಯಾಧಿಕಾರವನ್ನು ಭದ್ರಪಡಿಸ [illegible] ರುವುದು ಕೇವಲ ಈ ದೃಷ್ಟಿಯಿಂದ ಆದ್ದ [illegible] ದ ರಾಷ್ಟ್ರ ಹಿತಕ್ಕಾಗಿ ಅವರು ಜನತೆ [illegible] ದ ಬೇಡುವಂತಹದೆಲ್ಲವನ್ನೂ ಕೊಡಲು [illegible] ನತೆ ತಯಾರಿರಬೇಕು. ಕೊನೆಯ ಮಹಾ ಚುನಾವಣೆಯ ಮೂಲಕ ಹೊ [illegible] ಡಳಿತೆ ಸ್ಥಾಪನೆ ಹೊಂದುವ ವರೆಗಾದ [illegible] ಭಾರತೀಯರು ಈಗಿನ ನಾಯಕತ್ವ [illegible] ಷ್ಠಾವಂತ ಅನುಯಾಯಿಗಳಾಗಿರಬೇ [illegible] ದುದು ಅಗತ್ಯವೆನ್ನುತ್ತೇವೆ.

# ಲೋಕವೆತ್ತ ಸಾಗಿದೆ?

ಮಾತನಾಡುವುದು, ಮಾತುಕತೆಗಳನ್ನು ಹೂಡುವುದು-ಇವೆರಡೇ ಲೋಕದ ಇಂದಿನ ಜೀವನ ಪ್ರಾಮುಖ್ಯತೆಗಳಾಗಿವೆ ಎನ್ನಬಹುದು. ಎಲ್ಲೆಲ್ಲಿಯೂ ಇದೇ ಮಾತು-ಮಾತಿನದು ಹಾಗೂ ಮಾತುಕತೆಗಳದು!

೦೦

ಆಗ್ನೇಯ ಏಸ್ಯಾ ರಾಷ್ಟ್ರಗಳ ಕಾಮನ್‌ವೆಲ್ತ್ ಪರ್ಯಾಲೋಚನಾ ಸಂಪತ್ತು ಸಿಡ್ನೆಯಲ್ಲಿ ಇದೇ ತಾ. 15ರಲ್ಲಿ ಪ್ರಾರಂಭಿಸಿದೆ. ಭಾರತೀಯ ಪ್ರತಿನಿಧಿಮಂಡಲಿಯ ನಾಯಕರಾಗಿ ಸರ್. ಎ. ರಾಮಸ್ವಾಮಿ ಮುದಲಿಯಾರರು ಅದರಲ್ಲಿ ಭಾಗವಹಿಸಿದ್ದಾರೆ. "ಆಗ್ನೇಯ ಏಸ್ಯಾ ರಾಷ್ಟ್ರಗಳ ಹೀನ ಜೀವನ ಮಟ್ಟ ಮತ್ತು ಬಡತನಗಳು ಹೀಗೆಯೇ ಮುಂದುವರಿಯಲು ಬಿಡಲಾಗದ ಸ್ಥಿತಿಗತಿಗಳು" ಎಂದು ಅಲ್ಲಿ ಭಾರತ ಮತ್ತು ಪಾಕಿಸ್ತಾನದ ಪ್ರತಿನಿಧಿಗಳು ಒಮ್ಮತದ ಅಭಿಪ್ರಾಯವನ್ನು ಮುಂದಿಟ್ಟಿದ್ದಾರೆ. ಕಳೆದ ಬಾರಿ ಕೊಲಂಬೋದಲ್ಲಿ ಸೇರಿದ್ದ ಕಾಮನ್‌ವೆಲ್ತ್ ಸಮ್ಮೇಳನದ ಶಿಶುವಾಗಿ, ಆಗ್ನೇಯ ಏಸ್ಯಾ ರಾಷ್ಟ್ರಗಳಿಗೆ ಆರ್ಥಿಕಸಹಾಯವೆನ್ನು ಕೊಡುವ ಮೂಲಕ ಕಮ್ಯೂನಿಸಮನ್ನು ತಡೆಗಟ್ಟುವ ಉದ್ದೇಶದಿಂದ, ಸಿಡ್ನೆಯಲ್ಲಿ ಸೇರಿರುವ ಸಮ್ಮೇಳನವಿದು.

೦೦

ಜರ್ಮನಿಯ ಭವಿಷ್ಯದ ಕುರಿತು ಪರ್ಯಾಲೋಚಿಸಲು ಅಮೆರಿಕ, ಬ್ರಿಟನ್, ಫ್ರಾನ್ಸ್‌ಗಳ ವಿದೇಶ ಮಂತ್ರಿಗಳ ಸಮ್ಮೇಳನವು ಲಂಡನಿನಲ್ಲಿ ಸೇರಿ ರಶ್ಯವು ಕುರಿತು ವಹಿಸಿರುವ ಆಕ್ರಮಣಶೀಲ ಧೋರಣೆಯನ್ನು ಟೀಕಿಸಿದೆ. ರಶ್ಯದಲ್ಲಿರುವ ಜರ್ಮನ್ ಯುದ್ಧ ಕೈದಿಗಳನ್ನು ರಶ್ಯವು ಕಾಣುತ್ತಿರುವ ರೀತಿಯು ಮಾನವತ್ವಕ್ಕೇನೇ ಭಯಂಕರ ಆಘಾತ ಪ್ರಾಯವಾದುದೆಂದು ಘೋಷಿಸಿದೆ. ಜರ್ಮನಿಯನ್ನು ಸ್ವತಂತ್ರಗೊಳಿಸಿ, ಜರ್ಮನಿಯ ಮೇಲಿನ ನಿಯಂತ್ರಣವನ್ನೆಲ್ಲಾ ತೆಗೆದು ಹಾಕಿ ಅದನ್ನು ಯುರೋಪಿನ ಇತರ ಸ್ವತಂತ್ರ ರಾಷ್ಟ್ರಗಳ ಸಹಸಂಗ್ರಿಗೆ ಸೇರಿಸಿಕೊಳ್ಳಬೇಕಾದರೆ, ಜರ್ಮನಿಯು ಪಾಲಿಸಿಕೊಡಬೇಕಾದ ಶರ್ತಗಳನ್ನು ಈ ಸಮ್ಮೇಳನಭಾಗಿ ತ್ರಿರಾಷ್ಟ್ರಗಳು ಮುಂದಿಟ್ಟಿವೆ. ತಮ್ಮ ಪಾಲಿನ ಪಶ್ಚಿಮ ಜರ್ಮನಿಯು ಸಾಧ್ಯವಿದ್ದಷ್ಟು ಹೆಚ್ಚಿನ ಸ್ವಾತಂತ್ರ್ಯವನ್ನು ಪಡೆದು ಮುಂದೊತ್ತಬೇಕೆಂಬುದೇ ತಮ್ಮ ಬಯಕೆಯಾಗಿದ್ದರೂ, ಜರ್ಮನಿಯ ವಿಭಾಗ ಮತ್ತು ಅಂತರ್ರಾಷ್ಟ್ರೀಯ ಸ್ಥಿತಿಗತಿಗಳ ಮೇಲಿಂದ ಜರ್ಮನಿಯನ್ನು ತಾವು ಹಿಡಿದು ನಿಂತಿರಬೇಕಾಯಿತೆಂದು ಈ ಪಾಶ್ಚಾತ್ಯ ತ್ರಿರಾಷ್ಟ್ರಗಳ ಹೇಳಿಕೆಯಿದೆ.

೦೦

ಚೀನ ಕಮ್ಯೂನಿಸ್ಟ್ ಚೈನ ಮತ್ತು ಸೋವಿಯೆಟ್ ರಶ್ಯಗಳೊಳಗಿನ ರೈಲ್ವೇ ಹಾದಿಗಳನ್ನು ಜೋಡಿಸುವ ಹೊಸ ಪಥ ನಿರ್ಮಾಣದ ರಚನಾ ಕಾರ್ಯವನ್ನು ಚೈನದ ವಾಯವ್ಯ ಭಾಗದಲ್ಲಿ 25 ಸಾವಿರ ಚೈನೀ ಕೂಲಿಗಳು ಆರಂಭಿಸಿದ್ದಾರೆ. ರಶ್ಯ ಚೀನಗಳೊಳಗಿನ ಮೈತ್ರಿ ಮಾತುಕತೆಗಳಲ್ಲವೂ ಹಾಗೆಯೇ ಬೆಳೆದುಕೊಂಡಿವೆ. ಇತ್ತೀಚೆಗೆ ಅಮೆರಿಕದ ಗೃಹ ಕಾರ್ಯದರ್ಶಿ ಮಿ. ಡೀನ್ ಅಚಿಸನರಿಗೆ ಸ್ಪೆಶ್ಯಲ್ ಸಲಹೆಗಾರರಾಗಿ ನೇಮಕಗೊಂಡಿರುವ, ಅಮೆರಿಕದ ರಿಪಬ್ಲಿಕನ್ ಪಕ್ಷದ ವಿದೇಶ ವ್ಯವಹಾರ ತಜ್ಞ ಮಿ. ಜೋನ್ ಫೋಸ್ಟರರು ಒಂದು ಹೇಳಿಕೆ ಕೊಡುತ್ತಾ "ರಶ್ಯವು ಗುಂಡು ಹೊಡೆತ ಯುದ್ಧವೊಂದನ್ನು ಬಯಸುತ್ತಿದೆ ಎಂದು ನಾನು ನಂಬುವುದಿಲ್ಲ" ಎಂದಿದ್ದಾರೆ. "ಒಂದು ಯುದ್ಧಕ್ಕಭಿಮುಖವಾಗುವ ಆವಶ್ಯಕತೆ ನಮಗಿದೆ ಎಂದು, ನಾನು ನೆನಸುವದಿಲ್ಲ. ಆದರೆ 'ಥಂಡಾ' ಸಮರವನ್ನು ಗೆಲ್ಲಲು ನಾವು ಉತ್ತಮ ವಿಧಾನಗಳನ್ನು ಮತ್ತು ವಿಶೇಷಾಸಕ್ತಿಯನ್ನು ಸಂಪಾದಿಸಿಕೊಳ್ಳಬೇಕಾಗಿದೆಯೆಂದು ನನಗನ್ನಿಸುತ್ತದೆ. ವಿಶೇಷವಾಗಿ ಏಸ್ಯಾದ ವಿಜಯಗಳ ಮುಖಾಂತರ ರಶ್ಯಾನರು ಥಂಡಾ ಯುದ್ಧದಲ್ಲಿ ಏನ್ ಮುನ್ನಾಘಗಳನ್ನು ಗಳಿಸಿಕೊಂಡಿದ್ದು, ಗುಂಡು ಹೊಡೆವ ಯುದ್ಧದಲ್ಲಿ ಗೆಲ್ಲುತಿದ್ದರೆ ಜಪಾನರು ಸಂಪಾದಿಸಿಕೊಳ್ಳುತಿದ್ದುದಕ್ಕಿಂತ ಎಷ್ಟೋ ಹೆಚ್ಚಿನವಾದ ವಿಜಯಗಳನ್ನು ರಶ್ಯನರು ಈ ಥಂಡಾ ಯುದ್ಧದ ಮೂಲಕ ಗಳಿಸಿದ್ದಾರೆ" ಎಂದೇ ಮಿ. ಫೋಸ್ಟರ್ ಡುಲ್ಲೆಸರ ಅಭಿಮತ.

೦೦ ೦೦ ೦೦

ಭಾರತ ಪಾಕಿಸ್ತಾನಗಳೊಳಗಿನ ಮಾತುಕತೆಗಳ ಮೂಲಕ ಸ್ಥಾಪನೆಗೊಂಡ ಸ್ನೇಹಮೂಲವನ್ನಾಧರಿಸಿ, ಇನ್ನುಳಿದಿರುವ ವಿವಾದಗಳ ಸಂಬಂಧದಲ್ಲೂ ಮಾತುಕತೆಗಳು ನಡೆದಿವೆ. ಮೂಲ ನೆಲೆಗಳನ್ನು ಬಿಟ್ಟು ಓಡಿ ಹೋಗಿರುವ ನಿರಾಶ್ರಿತರ ಆಸ್ತಿ ಸೊತ್ತುಗಳ ಕುರಿತು ಭಾರತ ಮತ್ತು ಪಾಕಿಸ್ತಾನ್ ಸರಕಾರಗಳೊಳಗೆ ಮಂತ್ರೀ ಮಟ್ಟದ ಹೊಸ ಮಾತುಕತೆಗಳು ಇದೇ ತಿಂಗಳ ಮೂರನೇ ವಾರದಲ್ಲಿ ಕರಾಚಿಯಲ್ಲಿ ನಡೆಯಲಿವೆ ಎಂದು ಅಧಿಕೃತವಾಗಿ ಪ್ರಕಟವಾಗಿದೆ. ದಿನ ನಿಶ್ಚಯವಿನ್ನೂ ಆಗಿಲ್ಲ. ಈ ಸಂಬಂಧವಾಗಿ ಭಾರತ ಸರಕಾರದ ಪುನರ್ವ್ಯವಸ್ಥಾಮಂತ್ರಿ ಶ್ರೀ ಮೋಹನಲಾಲ್ ಸಕ್ಸೇನ ಮತ್ತು ಪ್ರಧಾನಮಂತ್ರಿ ಪಂಡಿತ ಜವಾಹರಲಾಲ ನೆಹರುಗಳು ನವದಿಲ್ಲಿಯಲ್ಲಿರುವ ನಿರಾಶ್ರಿತ ಪ್ರತಿನಿಧಿಗಳೊಡನೆ ಬಿಚ್ಚು ಮನಸ್ಸಿನ ಮಾತುಕತೆಗಳನ್ನು ನಡೆಸಿದ್ದರು. ಪಾಕಿಸ್ತಾನದ ನಿರಾಶ್ರಿತ ಖಾತೆಯ ಮಂತ್ರಿ ಖ್ವಾಜಾ ಶಹಬುದ್ದೀನ್ ಮತ್ತು ಭಾರತ ಸರಕಾರದ ಶ್ರೀ ಎನ್. ಜಿ. ಅಯ್ಯಂಗಾರ್, ಶ್ರೀ ಮೋಹನಲಾಲ್ ಸಕ್ಸೇನರೊಳಗೂ ಸಂಭಾಷಣೆಗಳಾಗಿದ್ದವು. ಕಾಲುವೇ ನೀರುಗಳ ಸಂಬಂಧವಾಗಿ ಭಾರತ—ಪಾಕಿಸ್ತಾನಗಳೊಳಗಿರುವ ವಿವಾದಗಳ ತೀರ್ಮಾನಕ್ಕಾಗಿಯೂ ಎರಡೂ ರಾಷ್ಟ್ರಗಳ ನೀರಾವರಿ ತಜ್ಞ ಅಧಿಕಾರಿಗಳ ಸಮ್ಮೇಳನವು ಇದೇ ತಾ. ೨1ನೇ ಆದಿತ್ಯವಾರ ನವದಿಲ್ಲಿಯಲ್ಲಿ ನಡೆಯಲಿದೆ. "ಒಂದು ಸಮೀಪದ ದಿನ"ದಲ್ಲಿ ಭಾರತ ಮತ್ತು ಪಾಕಿಸ್ತಾನಗಳು ಕಾಶ್ಮೀರ ಯುದ್ಧದ ಕೈದಿಗಳನ್ನು ಪರಸ್ಪರ ಬದಲಾಯಿಸಿಕೊಳ್ಳುವ ನಿರ್ಧಾರವಾಗಿದೆ. ಕರಾಚಿಯಲ್ಲಿ ನಡೆದ ನೆಹರೂ ಲಿಯಾಖತ್ ಮಾತುಕತೆಗಳಲ್ಲಿ ಈ ಕೈದೀ ಬದಲಾವಣೆಯ ವಿಷಯವು ಚರ್ಚಿಸಲ್ಪಟ್ಟಿದ್ದಿತು.

೦೦ ೦೦ ೦೦

ಪರಸ್ಪರ ಸೌಹಾರ್ದತೆಯ ನಡುವಿನಲ್ಲೂ ಭಾರತ—ಪಾಕಿಸ್ತಾನಗಳೊಳಗೆ ಕೆಲವು ಭಿನ್ನಾಭಿಪ್ರಾಯಗಳು ತೋರಿಬರುತ್ತಿವೆ. ಯಾವನೇ ಮುಸ್ಲಿಂ ನಿರಾಶ್ರಿತನು ಪಶ್ಚಿಮ ಪಾಕಿಸ್ತಾನದೊಳಗೆ ಪ್ರವೇಶಿಸದಂತೆ ಸಿಂಧ ಪ್ರಾಂತ್ಯದ ಗಡಿಯನ್ನೇ ಮುಚ್ಚಿಬಿಡಬೇಕೆಂದು ಈಗ ಪಾಕಿಸ್ತಾನ್ ಸರಕಾರ ಸಂಕಲ್ಪಿಸಿದೆ. ಹೀಗೆ ಮಾಡುವುದು ನೆಹರೂ—ಲಿಯಾಖತರೊಳಗೆ ಎಪ್ರಿಲ್ 8ರಲ್ಲಾಗಿರುವ ದಿಲ್ಲೀ ಒಪ್ಪಂದ ಶರ್ತಗಳಿಗೆ ವಿರುದ್ಧವಾಗುವದೆಂದು ಭಾರತ ಸರಕಾರವು ಪಾಕಿಸ್ತಾನ್ ಸರಕಾರಕ್ಕೆ ತಿಳಿಸಿದೆ. ದಿಲ್ಲೀ ಒಪ್ಪಂದದಲ್ಲಿ ಗ್ಯಾರಂಟಿ ಕೊಡಲ್ಪಟ್ಟಿರುವ 'ಚಲನಾ ಸ್ವಾತಂತ್ರ್ಯ ಮತ್ತು ಸಂಚಾರ ಕಾಲದ ರಕ್ಷಣೆ'ಯು ಪೂರ್ವ ಬಂಗಾಳ, ಪಶ್ಚಿಮ ಬಂಗಾಳ, ಅಸ್ಸಾಮು ಮತ್ತು ತ್ರಿಪುರಗಳ ಮಟ್ಟಿಗೆ ಮಾತ್ರ ಇದ್ದರೂ, ಪಶ್ಚಿಮ ಬಂಗಾಳದ ಗಡಿಗೆ ಬೀಗ ಮುದ್ರೆ ಹಾಕುವ ಉದ್ದೇಶದ ಹಿನ್ನೆಲೆಯನ್ನು ಪ್ರಶ್ನಿಸಬೇಕಾಗುವದೆಂದೂ, ಅಲ್ಪ ಸಂಖ್ಯಾಕ ಸಮಾಜಗಳವರಲ್ಲಿ ಅದು ಅನಗತ್ಯ ಗಲಿಬಿಲಿಯನ್ನು ನಿರ್ಮಿಸಬಹುದೆಂದೂ ಭಾರತ ಸರಕಾರವು ತಿಳಿಸಿದೆ.

೦೦

ಎರಡು ಬಂಗಾಳಗಳ ಸಂಬಂಧದ ವೈಮನಸ್ಯವನ್ನು ನಿವಾರಿಸಿಕೊಂಡ ಮಾತ್ರದಿಂದಲೇ ಭಾರತ-ಪಾಕಿಸ್ತಾನ್ ರಾಷ್ಟ್ರಗಳೊಳಗೆ ಎಂತಹ ಸ್ನೇಹಭಾವ ವ್ಯಾಪಿಸಿಕೊಂಡಿತೆನ್ನುವುದು ಈಗ ಕಾಣಿಸುತ್ತಿದೆ. ಈ ಬಿಳಿ ಛಾಯೆ ಹರಡಿ, ಇನ್ನೂ ಉಳಿದೇ ಇರುವ ಕರಿಚುಕ್ಕೆಗಳೆಲ್ಲಾ ಮುಚ್ಚಿ ಹೋಗಿವೆ. ಆದರೂ ಕಾಶ್ಮೀರ ವಿವಾದವೊಂದು ಉಳಿದಿರುವ ವರೆಗೆ, ಇವೆರಡು ರಾಷ್ಟ್ರಗಳೊಳಗಿನ ಕಂಟಕ ಕಳೆದುಹೋಯಿತು, ಎಂದು ಸರ್ವಥಾ ನಂಬಬಾರದು. ಈ ಕುರಿತು ನೆಹರು ಲಿಯಾಖತರು ಆಕಾಶವಾಣಿಗಳನ್ನಾಡಿದುದನ್ನು ಕಂಡು, ಭಾರತದಂತೆಯೇ ಕಾಶ್ಮೀರವೂ ಎರಡು ಹೋಳುಗಳಾಗಿ ತುಂಡರಿಸಲ್ಪಟ್ಟು ಪಾಲಾದೀತೆ? ಮತ ಸಂಗ್ರಹದ ಅಗತ್ಯವೇ ಬೀಳದೆ ಭಾರತ—ಪಾಕಿಸ್ತಾನ್ ನಾಯಕರೊಳಗಿನ ಮುಖಾಮುಖಿ ಮಾತುಕತೆಗಳಿಂದ ತೀರ್ಮಾನಗೊಂಡೀತೆ? ಎಂಬ ಪ್ರಶ್ನೆಗಳೆದ್ದಿದ್ದುವು. ಆದರೆ "ಜನಮತ ತೀರ್ಮಾನದ ಹೊರತು ಬೇರಾವ ಒಳಹಾದಿಯನ್ನೂ ನಾವು ಹಿಡಿಯುವಂತಿಲ್ಲ; ಕಾಶ್ಮೀರ ವಿಭಜನೆಗೆ ಸರ್ವಥಾ ಒಪ್ಪಲಾರೆವು" ಎಂದು ಮಿ. ಲಿಯಾಖತರು ಸ್ಪಷ್ಟಪಡಿಸಿದ್ದಾರೆ. ಜಮ್ಮು ಕಾಶ್ಮೀರ ರಾಷ್ಟ್ರೀಯ ಸಮ್ಮೇಳನದ ಕಲಸಗಾರರಿಗೆ ಭಾಷಣವೀಯುತ್ತಾ ಇದೇ ತಾ. 14ರಲ್ಲಿ ಪಂಡಿತ್ ನೆಹರುಗಳೂ ಇದೇ ಅಭಿಪ್ರಾಯವನ್ನು ಮತ್ತೊಮ್ಮೆ ಹೇಳಿದ್ದಾರೆ. "ಭಾರತವು ಕಾಶ್ಮೀರ ಸಂಬಂಧದಲ್ಲಿ ತಾನು ಆದಿಭಾಗದಲ್ಲಿ ಮಾಡಿದ್ದ ಜಾಹೀರುನಾಮೆಗೇನೇ ಕಟ್ಟುಬಿದ್ದಿದೆ. ಕಾಶ್ಮೀರದ ಭವಿಷ್ಯವನ್ನು ನಿರ್ಣಯಿಸುವ ಅಧಿಕಾರವು ಕಾಶ್ಮೀರದ ಜನತೆಗೆ ಮಾತ್ರವಿದೆ. ಅವರು ಭಾರತದೊಂದಿಗೆ ಕೂಡಿಕೊಳ್ಳಲು ಬಯಸಿದರೆ, ಅದಕ್ಕಡ್ಡ ಬರುವಂತಹದಾವುದೂ ಈ ಪ್ರಪಂಚದಲ್ಲಿಲ್ಲ ಎಂದಿದ್ದಾರೆ ಪಂಡಿತ ನೆಹರು. ಕಾಶ್ಮೀರದ ವಿಭಜನೆಗೂ ಪಾಕಿಸ್ತಾನದಂತೆಯೇ ಭಾರತ ಮತ್ತು ಕಾಶ್ಮೀರ ಸರಕಾರಗಳೂ ವಿರೋಧವಿವೆ.

---

## ಉಡುಪಿ

**ಆಹಾರ ಸಮಿತಿ ಸಭೆಯು** ಇದೇ ತಾ. 16ರಲ್ಲಿ ಕುಂದಾಪುರ ಡಿವಿಜನಲ್ ಆಫೀಸರ್ ಶ್ರೀ ಪಿ. ಎಸ್. ತಿಮ್ಮಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ರೇಶನ್ ಕ್ಷೇತ್ರ ಬಿಟ್ಟ ತಾಲೂಕಿನ ಹಳ್ಳಿಪಳ್ಳಿಗಳಿಗೆ ಈ ತಿಂಗಳಲ್ಲಿ ಸಕ್ಕರೆಯನ್ನು ಈ ರೀತಿಯಲ್ಲಿ ವಿಂಗಡಿಸಲಾಯಿತು. ಮದುವೆ ಮತ್ತು ಇತರ ವಿಶೇಷ ಸಮಾರಂಭಗಳಿಗೆ 25 ಚೀಲ, ಸೋಡಾ, ಬ್ರೆಡ್ ಇತ್ಯಾದಿಗಳಿಗೆ 12 ಚೀಲ, ಕಾಫಿಹೋಟೆಲುಗಳಿಗೆ 30 ಚೀಲ, ರೇಶನ್ ಕಾರ್ಡುದಾರರಿಗೆ 100 ಚೀಲ. ತಾಲೂಕಿನ ಜನಸಂಖ್ಯೆಯ ಪ್ರಮಾಣದಲ್ಲಿ ಜಾಸ್ತಿ ಸಕ್ಕರೆಯನ್ನು ಈ ತಾಲೂಕಿಗೆ ಕೊಡುವಂತೆ ಜಿಲ್ಲಾ ಕಲೆಕ್ಟರರನ್ನು ಕೇಳಿಕೊಳ್ಳಲಾಯಿತು. ಈ ತಾಲೂಕಿಗೆ ಗೋಧಿಯನ್ನು ಅಲ್ಪ ಪ್ರಮಾಣದಲ್ಲಾದರೂ ಕಳುಹುವಂತೆ ಜಿಲ್ಲಾ ಕಲೆಕ್ಟರರನ್ನು ವಿನಂತಿಸಲಾಯಿತು.

ಮಂಡ್ಸೆ:—ತಾ. 5—5—50ರಲ್ಲಿ ಮಾನ್ಯ ಜಿಲ್ಲಾ ಬೋರ್ಡು ಪ್ರಸಿಡೆಂಟ್ ಶ್ರೀ. ಬಿ. ಮಂಜಯ್ಯ ಹೆಗ್ಡೆಯವರು ಮತ್ತು ಮಂಡ್ಸೆ ಸರ್ಕಲಿನ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರಾದ ಶ್ರೀ ಕೊಳ್ಕೆಬೈಲು ಸೂರಪ್ಪ ಶೆಟ್ಟರು ಇಲ್ಲಿಗೆ ಆಗಮಿಸಿದರು. ಸಂಜೆ ಗಂಟೆ 4ಕ್ಕೆ ಮಿತ್ರ ಮಂಡಲಿಯ ನೇತೃತ್ವದಲ್ಲಿ ಸಾರ್ವಜನಿಕ ಸಭೆ ಜರಗಿತು. ಮಿತ್ರಮಂಡಲಿಯ ಕಡೆಯಿಂದ ಒಂದು ಬಿನ್ನವತ್ತಳೆಯನ್ನು ಅರ್ಪಿಸಲಾಯಿತು. ರೇಡಿಯೋ ಮಂದಿರದ ಬಗ್ಗೆ ಧನಸಹಾಯ, ವಾಚನಾಲಯ ಪುಸ್ತಕ ಭಂಡಾರಗಳಿಗೆ ಧನಸಹಾಯ, ಮಂಡ್ಸೆ ಬೋರ್ಡು ಎಲಿಮೆಂಟರಿ ಶಾಲೆಯನ್ನು ಹಯರ್ ಎಲಿಮೆಂಟರಿಯನ್ನಾಗಿ ಮಾರ್ಪಡಿಸುವುದು, ಕುಂದಾಪುರಕ್ಕೆ ರಸ್ತೆಯ ನಿರ್ಮಾಣ, ದೂರಬ್ ಆಸ್ಪತ್ರೆ ಬಗ್ಗೆ ಕಟ್ಟಡ, ಮಿಡ್‌ವೈಫಿಗೆ ಕಟ್ಟಡ, ವಯಸ್ಕರ ಶಿಕ್ಷಣ ಶಾಲೆಯ ಬಗ್ಗೆ ಅಗತ್ಯವಿರುವ ಸಲಕರಣಗಳು ಇತ್ಯಾದಿ ವಿಷಯಗಳನ್ನೊಳಗೊಂಡ ಬಿನ್ನವತ್ತಳೆಯನ್ನು ಅರ್ಪಿಸಲಾಯ್ತು. ಮೊದಲು ಶ್ರೀ ಕೊಳ್ಕೆಬೈಲು ಸೂರಪ್ಪ ಶೆಟ್ಟರು ಬಿನ್ನವತ್ತಳೆಗೆ ಉತ್ತರವೀಯುತ್ತಾ ತಮ್ಮಿಂದ ಸಾಧ್ಯವಿದ್ದಷ್ಟು ಪ್ರಯತ್ನಗಳನ್ನು ಮಾಡುವುದಾಗಿ ಆಶ್ವಾಸನೆಯಿತ್ತರು. ನಂತರ ಮಾನ್ಯ ಪ್ರಸಿಡೆಂಟರು ಮಾತಾಡುತ್ತಾ ಬೋರ್ಡಿನ ಆರ್ಥಿಕ ದುಃಸ್ಥಿತಿಯನ್ನು ವಿವರಿಸುತ್ತಾ ಸದ್ಯ ಎಲ್ಲಾ ಕೇಳಿಕೆಗಳನ್ನು ಪೂರೈಸುವುದು ಅಸಾಧ್ಯವಾಗಿಯೂ ಊರಿನ ಸಾರ್ವಜನಿಕರು ಶಾಲಾ ಕಟ್ಟಡ ಒದಗಿಸಿಕೊಡಬೇಕೆಂದೂ ಹೇಳಿದರು. ಅಲ್ಲದೆ ಇಂತಹ ಹಳ್ಳಿಯಲ್ಲಿಯೂ ಕೂಡಾ ತಮ್ಮ ಆವಶ್ಯಕತೆಗಳನ್ನು ಮನಗಂಡು ಅವುಗಳ ಪೂರೈಕೆ ಬಗ್ಗೆ ಜನರಲ್ಲಿ ಜಾಗೃತಿ ಉಂಟಾದುದು ಸಂತೋಷದ ವಿಷಯವೆಂದು ಹೇಳಿದರು. ಅಲ್ಲದೆ ಶಾಲೆಗೆ ಇನ್ನೊಬ್ಬರು ಉಪಾಧ್ಯಾಯರನ್ನು ನೇಮಿಸುವುದಾಗಿಯೂ ಆಶ್ವಾಸನೆಯಿತ್ತರು. ಇಲ್ಲಿ ಒಂದು ಸಾರ್ವಜನಿಕ ರೇಡಿಯೊ ತೆರೆಯಲ್ಪಟ್ಟಿದೆ ಎಂಬ ವಿಷಯದ ಬಗ್ಗೆ ತುಂಬಾ ಸಂತೋಷ ವ್ಯಕ್ತಪಡಿಸಿದರು. ಲಘು ಉಪಹಾರದೊಡನೆ ಸಭೆಯು ಮುಕ್ತಾಯವಾಯಿತು.

## ದಕ್ಷಿಣ ಕನ್ನಡ

**ಹೆಬ್ರಿ:**—ಕಳೆದ ದಿನಾಂಕ ೧೦-೫-೫೦ನೇ ಬುಧವಾರ, ಕರ್ನಾಟಕ ಮಲೆನಾಡು ಸುಧಾರಣಾ ಸಂಘದ ಅಧ್ಯಕ್ಷರಾದ ಶ್ರೀ ಎಂ. ಎನ್. ಭಿಡೆಯವರು ಮತ್ತು ಮಂಗಳೂರಿನ ಶ್ರೀ ಕೆ. ಬಿ. ಜಿನರಾಜ ಹೆಗ್ಡೆಯವರು ಹೆಬ್ರಿಗೆ ಆಗಮಿಸಿದರು. ಅಪರಾಹ್ನ ಗಂಟೆ ೩ಕ್ಕೆ ಶ್ರೀ ಎಂ. ನಾಗಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದಾಗ, ಮಾನ್ಯ ಜಿನರಾಜ ಹೆಗ್ಡೆ ಮತ್ತು ಭಿಡೆಯವರು ಮಲೆನಾಡು ಸಂಕಷ್ಟಗಳನ್ನೆಲ್ಲ ವಿವರಿಸಿ, ನಮ್ಮ ಜಿಲ್ಲೆಯ ಆಹಾರ ಸ್ವಾವಲಂಬಿಯಾಗ ಬೇಕಾದರೆ ಸರಕಾರವು ಮಲೆನಾಡಿಗೆ ಮಾಡಬೇಕಾದ ಹಲವು ತರದ ಅತ್ಯಗತ್ಯ ಸುಧಾರಣೆಗಳ ಕುರಿತು ಮಾತನಾಡಿದರು. ಸಭೆಗೆ ಶ್ರೀ ಮುದ್ರಾಡಿ ಕೃಷ್ಣಯ್ಯ ಸೆಟ್ಟಿ, ಶ್ರೀ ಎಚ್. ಭುಜಂಗ ಬಲ್ಲಾಳ ಮೊದಲಾದ ಮಹನೀಯರು ಬಂದಿದ್ದರು. ನಂತರ, ಆಸುಪಾಸಿನ ಒಂಭತ್ತು ಗ್ರಾಮಗಳಿಂದ ಕೂಡಿದ, ಕರ್ನಾಟಕ ಮಲೆನಾಡು ಸುಧಾರಣಾ ಸಂಘದ ಹೆಬ್ರಿ ಶಾಖಾ ಕೇಂದ್ರವನ್ನು ಸ್ಥಾಪಿಸಿ, ಹನ್ನೆರಡು ಮಂದಿ ಸದಸ್ಯರುಳ್ಳ ಒಂದು ಕಾರ್ಯಕಾರೀ ಮಂಡಳಿಯನ್ನು ರಚಿಸಲಾಯಿತು. ಮಲೆನಾಡು ಸಂಘದ ಸಂಬಂಧವಾದ ಕೆಲಸಗಳನ್ನು ಈ ಕೇಂದ್ರದಲ್ಲಿ ನಡೆಯಿಸುವರೆ ಶ್ರೀ ಎನ್. ಗಣೇಶ ಚಿಪಳೂಣಕರ್‌ರನ್ನು ಕಾರ್ಯದರ್ಶಿಯನ್ನಾಗಿ ಚುನಾಯಿಸಲಾಯಿತು.

**ಸೂಡ.**— ತಾರೀಕು 6—5—50ರಲ್ಲಿ ಸೂಡಾ ಶಾಸಿಕಾಡು ಎಲಿಮೆಂಟರಿಶಾಲೆಯ ಮಕ್ಕಳ ರಕ್ಷಕರ ಕೂಟವು ಶಿರ್ವಹಿಂದೂ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಯು. ಶಿವರಾವ್ B. A. B. T. ಇವರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು. ಪ್ರಾರ್ಥನಾ ನಂತರ ಗತಸಭೆಯ ವರದಿಯನ್ನು ಮುಖ್ಯೋಪಾಧ್ಯಾಯರು ಓದಿದೇಳಿದ ಬಳಿಕ ಶಾಲೆಯಲ್ಲಿ ಓದುತ್ತಿರುವ ಎಲ್ಲಾ ಹೆಮ್ಮಕ್ಕಳಿಗೆ ಬಹುಮಾನವಿತರಣೆಯ ಬಗ್ಗೆ ಶಾಲಾ ಹಿತೈಷಿಯ ಕಟ್ಪಾಡಿ S. V. S. ಸಂಘದವರಿಂದ ಕೊಡಲ್ಪಟ್ಟ ವಸ್ತ್ರವನ್ನು ತಲೆಗೆ ಗಜ ಒಂದರಂತೆ ಅಧ್ಯಕ್ಷರಿಂದ ಕೊಡಲ್ಪಟ್ಟಿತು, ಆ ತರುವಾಯ ಮಕ್ಕಳ ವಿವಿಧ ವಿನೋದಾವಳಿಗಳು ಕೊನೆಗೊಂಡ ಬಳಿಕ, ಸಭಿಕರ ಪೈಕಿ ಶ್ರೀ. ಕೆ ಕಟಪ್ಪ ಪಾಂಡುರಂಗ ಶೆಟ್ಟಿ ಹೆಗ್ಡೆ ರವರು ರಕ್ಷಕರು ತಮ್ಮ ಕರ್ತವ್ಯವನ್ನು ತಿಳಿದುಕೊಳ್ಳಬೇಕೆಂದೂ ಹೇಳಿ ಕೆಲವು ಮಕ್ಕಳು ಬರೆದ ಪಾಠ ಪುಸ್ತಕಗಳ ಪರಿಶೋಧನೆ ಮಾಡಿದ ಕುರಿತು ಅಧ್ಯಕ್ಷರು ಭಾಷಣದಲ್ಲಿ ಶಾಲಾ ಕಾರ್ಯಕ್ರಮ [illegible] ಸುಧಾರಿಸಿದರೆ [illegible] ಪ್ರಮಾಣಪತ್ರ [illegible]. ಹಾಡೊಂದ್ ಎಲಿಮೆಂಟರಿ ಶಾಲೆಯಾಗಿ ಬಾಳಿ ಒಳ್ಳೆಯ ಶಾಲೆ ಆಗಲಿ, ಧರ್ಮ [illegible] ಮಾಡಿದರು. [illegible] ಮಕ್ಕಳ ಗೀತೆಯೊಡನೆ ಸಣ್ಣ ಉಪಹಾರ ಕೂಟದೊಂದಿಗೆ ಸಭೆಯು ಚದರಿತು.



ಶ್ರೀ ಕೊರಡ್ಕಲ್ ಶ್ರೀನಿವಾಸರಾಯರ

'ಸುಲಭದಲ್ಲಿ ಇಂಗ್ಲಿಷ್'

(ENGLISH MADE EASY)

ಮನೆಯಲ್ಲಿ ನೀವಾಗಿ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.

ಬೆಲೆ ೧—೮—೦

ಮದ್ರಾಸು ಸರಕಾರದಿಂದ ಈಗತಾನೇ ಸಂಭಾವನೆ ಪಡೆದ

ಡಾಕ್ಟರ್ ಕೊರಡ್ಕಲ್ ವೆಂಕಟ್ರಾಯರ

'ಮನೆ ಮದ್ದು'

(HOME REMEDIES)

೨೦೦ ಕಾಯಿಲೆಗಳಿಗೆ ಮನೆಯಲ್ಲೇ ಮಾಡಿಕೊಳ್ಳಬಹುದಾದ ೧೦೦೦ ಮದ್ದುಗಳ ವಿವರವಿರುವ ಪುಸ್ತಕ. ಬೆಲೆ: ರೂ. ೩

ಪ್ರತಿಗಳು ನಿಮ್ಮೂರ ಪುಸ್ತಕವ್ಯಾಪಾರಿಗಳಲ್ಲಿ ಸಿಗದಿದ್ದರೆ ಬರೆಯಿರಿ-

**ನವಭಾರತ ಪುಸ್ತಕ ಭಂಡಾರ, ಉಡುಪಿ.**


## ನಿಖಿಲ ಕರ್ನಾಟಕ ಆಯುರ್ವೇದ ಸಮ್ಮೇಳನ

**ಕಾರ್ಕಳ**—ಇದೇ ಮೇ ತಿಂಗಳ ತಾರೀಕು ೧೯, ೨೦ರಲ್ಲಿ ನಿಖಿಲ ಕರ್ನಾಟಕ ಆಯುರ್ವೇದ ಮಂಡಲದ ೧೭ನೇ ಆಯುರ್ವೇದ ಸಮ್ಮೇಳನವೂ ಮತ್ತು ತಾರೀಕು ೨೧ರಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಆಯುರ್ವೇದ ವೈದ್ಯ ಪರಿಷತ್ತೂ ಕಾರ್ಕಳ S. V. T. H. ಶಾಲೆಯಲ್ಲಿ ನಿರ್ಮಿಸಿದ ಶಾಸ್ತ್ರಿ ನಗರದಲ್ಲಿ ಈ ಕೆಳಗೆ ಸೂಚಿಸಿದ ವಿವಿಧ ಕಾರ್ಯಕ್ರಮಗಳಿಂದೊಡಗೂಡಿ ಜರಗಲಿದ್ದು, ಸಮಯಾಭಾವದಿಂದ ಸರ್ವರಿಗೂ ಆಮಂತ್ರಣಗಳನ್ನು ಕಳುಹಿಸುವುದು ಇತ್ಯಾದಿ ಪ್ರಚಾರಕಾರ್ಯಗಳಿಗೆ ಕಷ್ಟಸಾಧ್ಯವಾದುದರಿಂದ ಇದೇ ಆಮಂತ್ರಣವೆಂದು ತಿಳಿದು ಸರ್ವರೂ ಬಂದು ಸಹಕರಿಸಬೇಕಾಗಿ ಕಾರ್ಯದರ್ಶಿಯರ ವಿನಂತಿ ಇದೆ.

### ಕಾರ್ಯಕ್ರಮ

**ತಾ. 19—5—50ನೇ ಶುಕ್ರವಾರ**

ಪ್ರಾತಃ ಘಂಟೆ 8ಕ್ಕೆ ಪ್ರಾರ್ಥನೆ. ಧ್ವಜಾರೋಹಣ: ವೈದ್ಯರಾಜ ಪಾಂಗಾಳ ಲಕ್ಷ್ಮೀನಾರಾಯಣ ನಾಯಕ, ಮೆಡಿಕಲ್ ಡೈರೆಕ್ಟರ್ ಭುವನೇಂದ್ರ ಫೌಂಡ್ರಿ ಲಿ. ಕಟಪಾಡಿ, ಅಧ್ಯಕ್ಷ,ಜಿಲ್ಲಾ ಕಾಂಗ್ರೆಸ್ ಸಮಿತಿ. ಇವರಿಂದ. ಘಂಟೆ 8-30ಕ್ಕೆ ಪ್ರದರ್ಶನ ಉದ್ಘಾಟನೆ: ಶ್ರೀ ಮತ್ ಸ್ವಾಮಿ ವಿಮಲಾನಂದಜೀ, ಅಧ್ಯಕ್ಷ, ಶ್ರೀ ರಾಮಕೃಷ್ಣ ಮಠ ಉರ್ವ,ಮಂಗಳೂರು ಇವರಿಂದ. ಸ್ವಾಗತ ಮತ್ತು ಪರಿಚಯ: ಶ್ರೀ B.A.B.L. [illegible] ಅಧ್ಯಕ್ಷರ ಮೆರವಣಿಗೆ [illegible] ಸ್ವಾಗತಾಧ್ಯಕ್ಷ ಶ್ರೀ [illegible] ಹೆಗ್ಡೆ, B.A. LL.B [illegible] 9ಕ್ಕೆ ಸಂಗೀತ ವಾದನ [illegible] ಉದ್ಘಾಟನ ಶ್ರೀ [illegible] B.A. LL.B. ಅಧ್ಯಕ್ಷ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ ಇವರಿಂದ. 10-45ಕ್ಕೆ ಪ್ರತಿನಿಧಿಗಳಿಂದ ಅಧ್ಯಕ್ಷರ ಅನುಮೋದನೆ, 11ಕ್ಕೆ ಅಧ್ಯಕ್ಷರ ಭಾಷಣ ವೈದ್ಯ ರಾ. ಕೃ. ಕುಲಕರ್ಣಿ ಜಿನರಾಳಕರ್, ಆಯುರ್ವೇದ ವಿಶಾರದ, ಆಚಾರ್ಯ, G. A. M. S. ಶಹಾಪುರ, ಬೆಳಗಾಂವ್ ಇವರಿಂದ 11-45ಕ್ಕೆ ವಿಷಯ ನಿಯಾಮಕ ಸಮಿತಿಯ ರಚನೆ. ಅಪರಾಹ್ನ ಘಂಟೆ 2-30ರಿಂದ 5ರ ವರೇಗೆ ತದ್ವಿದ್ಯ ಸಂಭಾಷಾಪರಿಷತ್, ಆಯುರ್ವೇದಾಂಗಗಳ ಕುರಿತು ನುರಿತ ವಿದ್ವಾಂಸರ ಭಾಷಣಗಳು. 5 30ರಿಂದ 7ರ ವರೇಗೆ ಸಂಗೀತ ಕಛೇರಿ (ದಕ್ಷಿಣಾದಿ) (ಹಿಮ್ಮೇಳಗಳ ಸಹಿತ ಓರ್ವ ಸಂಗೀತ ವಿಶಾರದೆಯವರಿಂದ.) ರಾತ್ರಿ ಘಂಟೆ 9ರಿಂದ ದಶಾವತಾರ ಯಕ್ಷಗಾನ(ಕಟೀಲು ಶಾಲೆಯ ವಿದ್ಯಾರ್ಥಿಗಳಿಂದ) (ಈ ದಿವಸ ಭಸ್ಮಾದಿ ಸಿದ್ಧ ಪ್ರಯೋಗದ ಪ್ರತ್ಯಕ್ಷ ಪ್ರದರ್ಶನವೂ ಇದೆ.)

**ತಾ. 20-5-50ನೇ ಶನಿವಾರ**

ಪ್ರಾತಃ ಘಂಟೆ8-30ರಿಂದ 9-30ರ ವರೇಗೆ ಪ್ರಕೃತಿ ಚಿಕಿತ್ಸೆ, ಆಸನ ಪ್ರಾಣಾಯಾಮಗಳ ಪ್ರತ್ಯಕ್ಷ ಪ್ರದರ್ಶನ ಪಂಡಿತ್ ಎಮ್ ಎಸ್. ಎ. ಶರ್ಮಾ, R.M.P ಕಂಕನಾಡಿ, ಮಂಗಳೂರು ಇವರಿಂದ. 9 30ಕ್ಕೆ ದ್ರವ್ಯಗುಣ ಪರಿಚಯ ವೈದ್ಯ ಪಾಜಾಜೆ ಶಂಕರ ನಾರಾಯಣ ಭಟ್ ಇವರಿಂದ 10-30ಕ್ಕೆ ವಿಷಯ ನಿಯಾಮಕ ಸಮಿತಿಯ ಕೂಡುವಿಕೆ ಅಪರಾಹ್ನ ಘಂಟೆ 2-30ರಿಂದ ಸಮ್ಮೇಳನದ ಮಹಾಧಿವೇಶನ. 7-15ಕ್ಕೆ ಅಧ್ಯಕ್ಷರ ಮುಕ್ತಾಯ ಭಾಷಣ. 7 45ಕ್ಕೆ ಧನ್ಯವಾದ. 8ಕ್ಕೆ ವಂದೇ ಮಾತರಂ 9ರಿಂದ ಭರತನಾಟ್ಯ: ಶ್ರೀ ಕೆ. ಕೆ ಪುರಾಣಿಕ ಮತ್ತು ಶಿಷ್ಯರಿಂದ.

**ತಾ. 21-5-50ನೇ ರವಿವಾರ.**

**ದ.ಕ. ಜಿಲ್ಲಾ ಚತುರ್ಥ ಸಮ್ಮೇಳನ**

ಪ್ರಾತಃ ಘಂಟೆ 9ಕ್ಕೆ ಪ್ರಾರ್ಥನೆ 9 15ಕ್ಕೆ ಸ್ವಾಗತ ಮತ್ತು ಪರಿಚಯ: ಪಂಡಿತ್ ಅರಾಜ ಶಾಸ್ತ್ರಿ ಆಯುರ್ವೇದ ಭೂಷಣ ಇವರಿಂದ 9.45ಕ್ಕೆ ಉದ್ಘಾಟನೆ ವೈದ್ಯಗುರು ಎಂ. ಆರ್. ಭಟ್, Ph D. ಮಂಗಳೂರು ಇವರಿಂದ. 10-30ಕ್ಕೆ ಆಯಾಯ ತಾಲೂಕು ಪ್ರತಿನಿಧಿಗಳಿಂದ ಅಧ್ಯಕ್ಷರ ಅನುಮೋದನೆ 10 45ಕ್ಕೆ ಅಧ್ಯಕ್ಷರ ಭಾಷಣ ಡಾ। ಪಿ.ಎನ್. ಭಟ್, L. I. M. 'ಸಂಸ್ಕೃತ ನೇತ್ರ ಚಿಕಿತ್ಸಾಲಯ' ಕಾಸರಗೋಡು ಇವರಿಂದ. 11 30ಕ್ಕೆ ವಿಷಯನಿಯಾಮಕ ಸಮಿತಿಯ ರಚನೆ ಅಪರಾಹ್ನ ಘಂಟೆ 1 30ಕ್ಕೆ ವಿಷಯನಿಯಾಮಕ ಸಮಿತಿಯ ಕೂಡುವಿಕೆ- 3ರಿಂದ ಸಮ್ಮೇಳನ ಮಹಾಧಿವೇಶನ. ರಾತ್ರೆ 7ಕ್ಕೆ ಅಧ್ಯಕ್ಷರ ಕೊನೆ ನುಡಿ. 7-25ಕ್ಕೆ ಧನ್ಯವಾದ 7-45ಕ್ಕೆ ಮಂಗಲಗೀತೆ. ರಾತ್ರೆ 9ರಿಂದ ಏಕಾಂಕ ನಾಟಕ 'ಯುವಾನ ಸೋಲು' ಕಲಾವೃಂದ, ಕಾರ್ಕಳ ಇವರಿಂದ.


**ಉತ್ತಮ ನಟವರ್ಗವಿದ್ದಲ್ಲಿ ಉತ್ತಮ ಚಿತ್ರನೇ ತಯಾರಾಗಬೇಕೆಂಬ ನಿಯಮವಿಲ್ಲ ಆದರೆ**

ಇದುಮಾತ್ರ ಹಾಗಲ್ಲ. ನೋಡುವವರ ಭಾಗ್ಯವೋ ತಯಾರಿಸಿದವರ ಪುಣ್ಯವೋ- ಅಂತೂ ಚಿತ್ರವೇ ಒಂದು ಪರಿಪೂರ್ಣ ಚಿತ್ರವಾಗಿದೆ.

# ಲಾಲ್ ಹವೇಲಿ

ಉಲ್ಲಾಸ್, ಜೀವನ್, ಯಾಕೂಬ್, ಸುರೇಂದ್ರ, ಬ್ರಿಜರಾಣಿ, ನೂರ್‌ಜಹಾನ್. ಮೊದಲಾದವರು.

ತಾರೀಕು 17—5—1950ರಿಂದ

**ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.**

ಬರುವ ಚಿತ್ರ, "ದುಸರಿ ಶಾದಿ"

ಗೋಪ್, ಮುಮತಾಜ್ ಶಾಂತಿ, ಕುಮಾರ್.



**"ಗೋಪಾಲ ಭೇಷಜಾಶ್ರಮ" ಮಂಗಳೂರು.**

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ ವಿ ಶಾಸ್ತ್ರೀ, ಇವರ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

**ನವಜೀವಾತು ಎಂಬ ಸೂತಿಕಾ ರಸಾಯನ**



ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಪ್ರತಿನಿಧಿ:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.


**ಶಿರ್ವ ಬಂಟಕಲ್ಲು**—ಇಲ್ಲಿಯ ಶಾಲೆ ದ್ವಿತೀಯವರ್ಧಂತ್ಯುತ್ಸವವು ತಾ 12-5-50ನೇ ರವಿವಾರ ಸಂಜೆ ಉಡುಪಿ ದಕ್ಷಿಣ ರೇಂಜ ಶಾಲೆಗಳ ಡಿಪ್ಟಿ ಇನ್‌ಸ್ಪೆಕ್ಟರ್ ಶ್ರೀ ಬಿ ಶ್ರೀನಿವಾಸಾಚಾರ್ ಬಿ ಎ. ಎಲ್. ಟಿ. ಇವರ ಸಭಾಪತಿತ್ವದಲ್ಲಿ ಜರಗಿತು. ಶ್ರೇಯುತರು ಆದ ಎ. ಸರ್ವೋತ್ತಮ ಸೆಟ್ಟಿ, ಯನ್. ದಾಮೋದರ ನಾಯಕ್, ಯಸ್. ಅಣ್ಣಯ್ಯ ಸೆಟ್ಟಿ, ಕೆ. ರಾಮಚಂದ್ರ ಶೆಣೈ, ಮೊದಲಾದ ಮಹನೀಯರುಗಳು ವಿದ್ಯೆಯ ವಿಷಯದ ಕುರಿತು ಮಾತಾಡಿದರು. ಭಾಷಣಕಾರರುಗಳು 'ಇಂದಿನ ಶಿಶುವೆ ಮುಂದಿನ ಜನಾಂಗ' ಎಂದುದರಿಂದ ಶಾಲೆಗೆ ಬೇಕಾಗಿರುವ ಜನತೆಯ ಪ್ರೋತ್ಸಾಹ, ವಿದ್ಯೆಯ ಮಹತ್ವ, ಇತ್ಯಾದಿ ವಿಷಯಗಳನ್ನು ಮಾತಾಡುತ್ತಾ ವಯಸ್ಕರ ಶಿಕ್ಷಣಕ್ಕೆ ಅನುಕೂಲತೆ ಪ್ರಾಧಾನ್ಯಗಳನ್ನು ಒತ್ತಿ ಹೇಳಿದರು. ತರುವಾಯ ಮಕ್ಕಳು 'ವಿದ್ಯೆಯ ಮಹಾತ್ಮೆ' ಎಂಬ ತುಳು ನಾಟಕವನ್ನೂ, ಕೃಷ್ಣಲೀಲಾ ಎಂಬ ಕನ್ನಡ ಸಂಗೀತ ನಾಟಕ, ವಿವಿಧ ವಿನೋದಾವಳಿಗಳನ್ನೂ ಪ್ರದರ್ಶಿಸಿದರು.

**ಯೇಣಗುಡ್ಡೆ ಶ್ರೀ ದುರ್ಗಾಪರಮೇಶ್ವರಿ ಶಾಲೆಯ** ವರ್ಧಂತ್ಯುತ್ಸವವು ಇದೇ ತಾ|15ನೇ ಅಪರಾಹ್ನ ಉಡುಪಿ ಸೌತ್ ರೇಂಜ್ ಶಾಲಾ ಡಿಪ್ಟಿ ಇನ್ಸ್‌ಪೆಕ್ಟರ್ ಶ್ರೀ ಬಿ ಶ್ರೀನಿವಾಸಾಚಾರ್, ಇವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಪ್ರಾರ್ಥನೆಯಾದ ಮೇಲೆ ಶಾಲಾ ಮೆನೇಜರ್ ಶ್ರೀ ನೈ ನಂದ್ಯಪ್ಪ ಹೆಗ್ಡೆ ಯವರು ವರದಿಯನ್ನೋದಿದರು. ಅಧ್ಯಕ್ಷರ ಹಸ್ತದಿಂದ ಬಹುಮಾನ ವಿತರಣೆಯಾದ ಮೇಲೆ ಶ್ರೀ ಎಂ. ವಿ. ಹೆಗ್ಡೆಯವರು ಶಾಲಾ ಅಭ್ಯುದಯ ಭಾಷಣವಿತ್ತರು. ಸಭಿಕರ ಪರವಾಗಿ ಶ್ರೀಗಳಾದ ಟಿ ನಂದ್ಯಪ್ಪ ಹೆಗ್ಡೆ, ಯು ಕೃಷ್ಣ ಸೆಟ್ಟಿ, ಪಾಂಗಾಳ ಶಾಲಾ ಮೆನೇಜಿಂಗ್ ಹೆಡ್ಮಾಸ್ಟರ್ ಮೊದಲಾದವರು ಶಾಲೆಯ ಏಳಿಗೆಗೆ ಅವರ ಕರ್ತವ್ಯ ಮುಂತಾದ ವಿಷಯಗಳನ್ನೆತ್ತಿಕೊಂಡು ಹಿತವಚನಗಳನ್ನಾಡಿದ ಶಾಲಾ ಬಾಲಕ ಬಾಲಕಿಯರಿಂದ 'ಭಾರತೀನ್ನಲೆಪ್ಪು'ಎಂಬ ಪಾಡ್ದನ 'ಸೀತಾಸ್ವಯಂವರ'ಎಂಬ ಕನ್ನಡನಾಟಕ,ಲೇಝಿಂ, ಕೋಲಾಟ, ನೃತ್ಯಗಳೂ ಹಳೇ ವಿದ್ಯಾರ್ಥಿಗಳಿಂದ 'ಪೋಟುದ ಬಿಲೆ'ಎಂಬ ತುಳು ನಾಟಕವೂ ಜಯಶೀಲವಾಗಿ ಪ್ರದರ್ಶಿಸಲ್ಪಟ್ಟವು. ಅಧ್ಯಕ್ಷರು ಭಾಷಣವೀಯುತ್ತಾ ಶಾಲಾ ಮೆನೇಜರರ ಸಾತ್ವಿಕ ಸ್ವಭಾವವನ್ನು ಶ್ಲಾಘಿಸಿ, ಶಾಲೆಯ ಅಭಿವೃದ್ಧಿಗಾಗಿ ಆನಂದ ಸೂಚಿಸಿ, ಊರವರ ಪ್ರೋತ್ಸಾಹ, ಸಹಕಾರಗಳನ್ನು ಕೋರಿದರು. ಶಾಲಾ ಮೆನೇಜರರಿಂದ ಧನ್ಯವಾದಾರ್ಪಣೆಯಾಗಿ 'ಜನಗಣಮನ'ದೊಂದಿಗೆ ಸಭಾರಂಭ ಮುಗಿಯಿತು.

## ಜಿಲ್ಲಾ ಆಹಾರ ಸಮಿತಿ ಸಭೆಯು

ದಿನಾಂಕ ೧೧ ರಂದು ಜರಗಿದಾಗ ಜಿಲ್ಲಾ ಪೂರೈಕೆ ಅಧಿಕಾರಿಗಳು ಈಗ ಜಿಲ್ಲೆಯಲ್ಲಿರುವ ಆಹಾರ ಧಾನ್ಯಗಳಿವೆಯೆಂದು ತಿಳಿಸಿದರು. ೨. ೭ರಂದು ಅಕ್ಕಿ–ಬತ್ತ ೨,೩೩೨ ಟನ್, ಗೋಧಿ ೧೫ ಟನ್, ಮೈದಾ ೧೫೬ ಟನ್, ಸಿಮೊಲಿನ ೧ ಟನ್, ಕಡಲೆ ಮತ್ತು ಬೇಳೆ ೧೦೮ ಟನ್‌ಗಳಷ್ಟು ಇವೆಯೆಂದೂ, ಇದು ಬರೇ ೧೨ ದಿನಗಳಿಗೆ ಸಾಕಾಗಬಹುದೆಂದೂ ತಿಳಿಸಿದರು. ಕಾರಗೋಡು ಹೊಸದುರ್ಗ ತಾಲೂಕಿನ ಪರಿಸ್ಥಿತಿಯು ಚಿಂತಾಜನಕವಿದೆಯೆಂದೂ ಹೇಳಿದರು. ವಿಜಯವಾಡದಿಂದ ಎಪ್ರಿಲ್ ತಿಂಗಳಿಗಾಗಿ ನಿಶ್ಚಿತವಾಗಿ ಬರಬೇಕಾಗಿದ್ದ ೪,೯೦೦ ಟನ್‌ಗಳಲ್ಲಿ ೧,೬೩೫ ಟನ್ ಅಕ್ಕಿ ಮಾತ್ರ ಬಂದಿದೆ. ಈಗ ೭,೦೦೦ ಟನ್ನು ಬರುತ್ತಿದೆ. ಇದರಂತೆ ಮೇ ತಿಂಗಳಿಗಾಗಿ ತಂಜಾವೂರಿನಿಂದ ಮಂಜೂರಾದ ೧,೭೦೦ ಟನ್ನುಗಳಲ್ಲಿ ೮೫೦ ಟನ್ನು ಬರುತ್ತಿದೆ. ಒಟ್ಟು ೧೫ ಸಾವಿರ ಟನ್ನು ಹೊರಗಿನಿಂದ ಬರಬೇಕಾದುದರಲ್ಲಿ ಈ ವರೆಗೆ ೩,೬೩೫ ಟನ್ನು ಮಾತ್ರ ಬಂದಿದೆ. ಜಿಲ್ಲೆಯಲ್ಲಿ ೧,೫೬೪ ಟನ್ ಸಂಗ್ರಹವಾಗಿದೆ. ಇನ್ನು ಮುಂದೆ ಅಕ್ಕಿ ಸಂಗ್ರಹಿಸುವುದು ಅಸಾಧ್ಯವಾಗಿದೆಯೆಂದು ಮುಂತಾಗಿ ತಿಳಿಸಿದ ಮೇಲೆ ವಿಜಯವಾಡದ ಬದಲಿಗೆ ಮದ್ರಾಸಿನಿಂದಲೇ ಅಕ್ಕಿ ಕಳುಹಿಸಬೇಕೆಂದು ಸರಕಾರಕ್ಕೆ ಬರೆದುಕೊಳ್ಳಲು ನಿಶ್ಚಯವಾಯಿತು.

ಆ ಮೇಲೆ ಸಕ್ಕರೆ ವಿತರಣೆಯಲ್ಲಿ ಚರ್ಚೆ ನಡೆದು ರೂ. ೫೦ರೊಳಗೆ ಸಂಬಳವಿರುವವರಿಗೆ ವಾರಕ್ಕೆ ೩೫ ತೊಲೆಯಂತೆಯೂ, ರೂ. ೫೦ರಿಂದ ೧೦೦ರ ಒಳಗಿನವರಿಗೆ ೮ ತೊಲೆಯಂತೆಯೂ ರೂ. ೧೦೦ಕ್ಕೆ ಮೇಲ್ಪಟ್ಟವರಿಗೆ ೧೦ ತೊಲೆಯಂತೆಯೂ ಸಕ್ಕರೆ ವಿತರಣೆಯಾಗಬೇಕೆಂದು ತೀರ್ಮಾನವಾಯಿತು.

**ಸಿಮೊಲಿನಾ ಸಜ್ಜಿಗೆಯು** ಇನ್ನು ಮುಂದೆ ಹಸುಗೆಯಿಂದ ಹೊರತಾಗಿ ರೇಶನ್ ಅಂಗಡಿಗಳಲ್ಲಿ ಸರಕಾರದ ನಿಯಂತ್ರಿತ ಧಾರಣೆಗಳಲ್ಲೇ ಸಿಗುವುದು.

**ದ. ಕ. ಜಿಲ್ಲಾ ಅಂಚೆ ಮತ್ತು ತಂತೀ ನೌಕರರ ಎರಡನೇ ಸಮ್ಮೇ**ಳನವು ದಿನಾಂಕ ೭ರಂದು ನಮ್ಮ ಮುನ್ಸಿಪಲ್ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಜರಗಿತು.

ಫಲಾಹಾರದ ನಂತರ ಬಹಿರಂಗ ಅಧಿವೇಶನವು ನೆರೆದಾಗ ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ಬಿ. ಗಂಗಾಧರ ದಾಸರು ಪ್ರತಿನಿಧಿಗಳನ್ನೂ ಅತಿಥಿಗಳನ್ನೂ ಸ್ವಾಗತಿಸಿದರು.

ಸಮ್ಮೇಳನವನ್ನು ಉದ್ಘಾಟಿಸುತ್ತಾ ಡಾ। ಯು. ಪಿ. ಮಲ್ಯರು ಆದಿತ್ಯವಾರ ಅಂಚೆ ಕೆಲಸ ನಿಲ್ಲಿಸಿದುದು ಸರಿಯಲ್ಲವೆಂದರು. ಕೆಲಸಗಾರರಿಗೆ ವಿಶ್ರಾಂತಿಯೊದಗಿಸಲು ಹೆಚ್ಚಿಗೆ ಸಿಬ್ಬಂದಿ ಮಾಡಬಹುದಿತ್ತಲ್ಲದೆ, ಹೀಗಾದುದರಿಂದ ಹೆಚ್ಚಿನ ತೊಂದರೆಯೆಂದರು. ಮುಂದುವರಿಸುತ್ತಾ ಯೋಗ್ಯ ರೀತಿಯ ಆಂದೋಲನಗಳಿಗೆ ಸಾರ್ವಜನಿಕ ಬೆಂಬಲ ಸಿಗುತ್ತದೆಂದು ಹೇಳುತ್ತಾ ಯಾವುದೊಂದು ರಾಜಕೀಯ ಪಕ್ಷದ ಕೈಗೊಂಬೆಯಾಗಿ ತಮ್ಮ ಸಂಸ್ಥೆಯಿರಬಾರದೆಂದು ಕೇಳಿಕೊಂಡರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಅಂಚೆ ತಂತಿ ಕೆಲಸಗಾರರ ಹೊಣೆಯನ್ನೂ ಅವರ ಮಹತ್ವವನ್ನೂ ತಿಳಿಸುತ್ತಾ ಬಲವಾಗಿರುವ ಅವರ ಸಂಸ್ಥೆಯು ಚಿರಸ್ಥಾಯಿಯಾಗಿರುವುದೆಂಬ ತನ್ನ ನಂಬುಗೆಯನ್ನು ವ್ಯಕ್ತಪಡಿಸಿದರು. ಅವರೂ ತಮ್ಮ ಭಾಷಣದಲ್ಲಿ ಕಮ್ಯೂನಿಸ್ಟರಿಂದ ದೇಶಕ್ಕೊದ್ದ ಅನರ್ಥಗಳನ್ನು ಹೇಳಿ ಎಚ್ಚರಿಕೆ ಕೊಟ್ಟರು.

ಸಭಿಕರ ಪರವಾಗಿ ಶ್ರೀ ಮುರುಳಿ ಭೀಮರಾಯರು ಮಾತಾಡುತ್ತ ಈ ಸಂಘವು ಉತ್ತರೋತ್ತರ ಅಭಿವೃದ್ಧಿಯಾಗಿ ನಾಲ್ಕು ದಿನಗಳ ವಿಜೃಂಭಣೆಯ ಸಮ್ಮೇಳನ ಜರಗುವಂತಾಗಲೆಂದು ಹಾರೈಸಿದರು.

ಆ ಮೇಲೆ ವಿಷಯ ನಿಯಾಮಕ ಸಮಿತಿಯು ಅಪರಾಹ್ನ ೨॥ ಗಂಟೆಗೆ ಸೇರಿ ಹಲವು ಗೊತ್ತುವಳಿಗಳನ್ನು ಸ್ವೀಕರಿಸಿತು. ಅವುಗಳು ಬಹಿರಂಗವಾಗಿ ಮಂಜೂರಾದವು.

೧. ಅಂಚೆ ಮತ್ತು ತಂತಿ ನೌಕರ ಸಂಘದ ಹಲವು ಕೇಳಿಕೆಗಳನ್ನು ಪೂರೈಸಿದ್ದಕ್ಕಾಗಿ ಸಂಪರ್ಕ ಮಂತ್ರಿಗಳನ್ನೂ ಅವರ ಮೂಲಕ ಕೇಂದ್ರ ಸರಕಾರವನ್ನೂ ಅಭಿನಂದಿಸುವ, ಉಳಿದ ಕೇಳಿಕೆಗಳನ್ನು ಮನ್ನಿಸಬೇಕೆನ್ನುವ; ೨. ಭಾರತ ಸರಕಾರವು ತರಲಿರುವ ಟ್ರೇಡ್ ಯೂನಿಯನ್ ಮಸೂದೆಯನ್ನು ವಿರೋಧಿಸುವ; ೩. ಕೇಂದ್ರ ಸಂಬಳ ಸಮಿತಿಯ ಸೂಚನೆಯಂತೆ ಭತ್ತೆ ಹೆಚ್ಚಿಸಲಾಗದಿದ್ದಲ್ಲಿ ಸರಕಾರವು ತನ್ನ ಘೋಷಣೆಯಂತೆ ಬೆಲೆ ಇಳಿಸುವ ಕಾರ್ಯಕ್ರಮ ಕೈಕೊಳ್ಳಬೇಕೆನ್ನುವ; ಎಕ್ಸ್ಟ್ರಾ ಡಿಪಾರ್ಟಮೆಂಟಲ್ ನೌಕರರಿಗೆ ೫ ವರ್ಷಕ್ಕೆ ಮೇಲ್ಪಟ್ಟ ಸರ್ವಿಸ್ ಉಳ್ಳವರಿಗೆ ವರ್ಷಕ್ಕೆ ೧ ತಿಂಗಳ ಸಂಬಳದಂತೆ ಸಹಾಯ ನೀಡಬೇಕೆನ್ನುವ ಗೊತ್ತುವಳಿಗಳು ಮಂಜೂರಾದುವು.

ಆ ವೇಳೆ ಹೊಸ ವರ್ಷದ ಚುನಾವಣೆಯಾಗಿ ಶ್ರೀ. ಬಿ. ಎನ್. ರಾಯರು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರಲ್ಲದೆ ಕಾರ್ಯ ಸಮಿತಿಯ ಚುನಾವಣೆಯೂ ನಡೆಯಿತು.

# ಮಂಗಳೂರು ಜಿಲ್ಲಾ ಸಮಾಚಾರ

### ರೂ. ೩೦೦೦ಗಳ ದಾನ

ಮದ್ರಾಸಿನ 'ವುಡ್‌ಲೇಂಡ್ಸ್' ಹೋಟೆಲಿನ ಒಡೆಯರಾದ ಶ್ರೀ ಕೆ. ಕೃಷ್ಣರಾಯರು ತಮ್ಮ ಜನಕ ಶ್ರೀ. ಕೆ. ಸುಬ್ಬಣ್ಣಭಟ್ಟರ 80ನೇ ಹುಟ್ಟು ಹಬ್ಬದ ದಿನ ಅವರ ಹೆಸರಿನಲ್ಲಿ ಜಿಲ್ಲೆಯ ವಿವಿಧ ವಿದ್ಯಾ ಸಂಸ್ಥೆಗಳಿಗೆ ರೂ. ೩ ಸಾವಿರಗಳ ದಾನ ಮಾಡಿದರಲ್ಲದೆ ಅತೀ ವಿಜೃಂಭಣೆಯಿಂದ ಈ ಶತಾಭಿಷೇಕೋತ್ಸವವನ್ನು ಜರಗಿಸಿದರು. ಈ ಉತ್ಸವಕ್ಕಾಗಿ ಉಡುಪಿ ಹಿರೆಪುತ್ತಿಗೆ ಮಠದ ಶ್ರೀ ಸುಧೀಂದ್ರ ತೀರ್ಥರು, ಅದಮಾರು ಮಠದ ಶ್ರೀ ವಿಬುಧೇಂದ್ರ ತೀರ್ಥರು ಮತ್ತು ಪಲಿಮಾರು ಮಠದ ಶ್ರೀ ರಘುವಲ್ಲಭ ತೀರ್ಥರು ಆಗಮಿಸಿದ್ದರು. ಅಂದು ಸಂಜೆ ಈ ಸಂಬಂಧವಾಗಿ ಸಾರ್ವಜನಿಕ ಸತ್ಕಾರವೂ ಭರತನಾಟ್ಯ ಕಚೇರಿಯೂ ಜರಗಿತು. ಸಭೆಯಲ್ಲಿ ಮಂಗಳೂರಿನ ಅಧಿಕಾರಿ, ಅನಧಿಕಾರಿ ಪ್ರಮುಖರೆಲ್ಲಾ ನೆರೆದಿದ್ದರು. ಸತ್ಕಾರವಾದೊಡನೆ ಶ್ರೀ ಕೃಷ್ಣರಾಯರ ಮಕ್ಕಳು ಕೆ. ಮೋಹಿನಿ, ಕೆ. ಪ್ರೇಮ ಮತ್ತು ಕೆ. ಸುಬ್ರಹ್ಮಣ್ಯ ಇವರ ಭರತ ನಾಟ್ಯ ಕಚೇರಿ ನಡೆಯಿತು. ಶ್ರೀ ಕೃಷ್ಣರಾಯರು ತಮ್ಮ ಜನಕನ ಹೆಸರಿನಲ್ಲಿ ಉಡುಪಿಯ ಸಂಸ್ಕೃತ ಕಾಲೇಜಿಗೆ ರೂ. ೧೦೦೦, ಉಡುಪಿ ಮಹಾತ್ಮಾಗಾಂಧಿ ಕಾಲೇಜಿಗೆ ರೂ. ೫೦೦, ಸುರತ್ಕಲ್ ವಿದ್ಯಾದಾಯಿನಿ ಹೈಸ್ಕೂಲಿಗೆ ರೂ. ೫೦೦, ಮಂಗಳೂರಿನ ಕೆನರಾ ಹೈಸ್ಕೂಲಿನ ಶಾಖೆಗೆ ರೂ. ೫೦೦, ಮತ್ತು ಬಾಲಿಕಾಶ್ರಮಕ್ಕೆ ರೂ. ೫೦೦- ಹೀಗೆ ದಾನಗಳನ್ನಿತ್ತರು. ಡಾ। ಯು. ಪಿ. ಮಲ್ಯರು ಕೃಷ್ಣರಾಯರನ್ನು ಅಭಿನಂದಿಸಿದರು. ಶ್ರೀ ಎಂ. ಗಿರಿಯಪ್ಪ, ವೈಕುಂಠ ಬಾಳಿಗ, ಶ್ರೀ ಎಂ. ವೆಂಕಟೇಶ ಶೆಣೈ, ಅದಮಾರು ಮಠದ ಸ್ವಾಮಿಗಳವರೇ ಮೊದಲಾದವರಿಂದ ಶ್ರೇಯಃಪರ ಭಾಷಣಗಳಾದುವು.

**ಮೂಲ್ಕಿ:**–ಬಿಲ್ಲವ ಸಮಾಜ ಸೇವಾ ಸಂಘದ 16ನೇ ವಾರ್ಷಿಕೋತ್ಸವವು ಇದೇ ಸಂ। 1950ನೇ ಇಸವಿ ಮೇ ತಿಂಗಳ ತಾ. 7ರಲ್ಲು ಜಿಲ್ಲಾ ಬಿಲ್ಲವ ಯೂನಿಯನಿನ ಅಧ್ಯಕ್ಷರಾದ ರಾವ್‌ಬಹದ್ದೂರ್ N. N. ಸುವರ್ಣರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ನಿಯೋಜಿತ ಅಧ್ಯಕ್ಷರು ಸಭಾವೇದಿಕೆಯನ್ನೇರಲು ಶ್ರೀದೇವತಾ ಪ್ರಾರ್ಥನೆಯಾಗಿ ಸಂಘದ ಗೌ. ಕಾರ್ಯದರ್ಶಿಯವರಿಂದ ಓದಲ್ಪಟ್ಟ ವರದಿಯು ಸರ್ವಾನುಮತದಿಂದ ಮಂಜೂರು ಮಾಡಲ್ಪಟ್ಟಿತು. ಬೇರೆ ಬೇರೆ ಕಡೆಗಳಿಂದ ಬಂದ ಶುಭಸಂದೇಶಗಳನ್ನು ಓದಿಹೇಳಿದ ನಂತರ ನೆರೆದ ಸಭಿಕರಲ್ಲಿ ಮೂಲ್ಕಿ ಪಂಚಾಯತಿ ಬೋರ್ಡು ಎಕ್ಸೆಕ್ಯೂಟಿವ್ ಆಫೀಸರರು ಶ್ರೀ ಯಂ. ಸೋಮನಾಥನವರೂ ಶ್ರೀ ವೆಂಕಪ್ಪನವರೂ ಶ್ರೀ ಗಂಗಾಧರನವರೂ ಮೂಲ್ಕಿ ಪಂಚಾಯತ್ ಬೋರ್ಡಿನ ಅಧ್ಯಕ್ಷರೂ ಮೂಲ್ಕಿ ಸರ್ಕಲಿನ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರೂ ಆದ ಶ್ರೀ ಕೆ. ರಾಮಣ್ಣ ಶೆಟ್ರು ಸಂಘದ ಕೆಲಸ ಮತ್ತು ಮುಂದಿನ ಹಾದಿಗಳ ಕುರಿತು ಭಾಷಣ ಮಾಡಿದರು. ಕಾರ್ಯಕಾರಿ ಸಮಿತಿಗೆ ಸದಸ್ಯರನ್ನಾರಿಸಿದ ನಂತರ ಸಭಾಧ್ಯಕ್ಷರು ಸಲಹೆ ಸೂಚನೆಗಳಿಂದ ಕೂಡಿದ ಮತ್ತು ವಿದ್ಯಾ ಕಡೆಗೆ ಗಮನವೀಯುವ ಮಕ್ಕಳ ಮತ್ತು ವಯಸ್ಕರ ಶಿಕ್ಷಣದ ಕುರಿತು ಒತ್ತಿ ಹೇಳಿದ್ದು ಮಾತ್ರವಲ್ಲದೆ ಮುಂಬರುವ ಚುನಾವಣೆಯ ಉಪಯುಕ್ತತೆಯ ಕುರಿತು ಬೋಧಪರ ಭಾಷಣವಿತ್ತರು. ನೆರೆದ ಸಭಿಕರಿಗೂ ಸಭಾಧ್ಯಕ್ಷರಿಗೂ ಧನ್ಯೋಕ್ತಿಗಳ ಸಮರ್ಪಣೆಯಾಗಿ ಶ್ರೀ ಗುರುಪೂಜೆ ಮತ್ತು ಭಜನಾ ಮಂಗಳೋತ್ಸವವಾಗಿ ಪ್ರಸಾದ ಹಂಚಲ್ಪಟ್ಟ ನಂತರ ಸಭೆಯು ಕೊನೆಗೊಂಡಿತು.

## NOTICE

**ಕುಂದಾಪುರ ಡಿ. ಮು. ಕೋರ್ಟಿನಲ್ಲಿ**

S. C. 174/50

ವಾದಿ—ವೈ. ಕೃಷ್ಣಪ್ಪಸೆಟ್ಟಿ, ಪವರ್ ಆಫ್ ಎಟಾರ್ನಿದಾರ ವೈ. ಸೂರ್ಯಣ್ಣ ಶೆಟ್ಟಿ.

ಪ್ರತಿವಾದಿರು—1 ಮಂಜುನಾಥ ಶೇರೆಗಾರ, 2 ವೆಂಕಟ್ರಮಣ ಶೇರೆಗಾರ, 3 ಅಣ್ಣಪ್ಪ ಶೇರೆಗಾರ, ದೇವಯ್ಯನ ಪುಟ್ಟ ಶೇರೆಗಾರನ ಮಕ್ಕಳು. ಕುಂದಾಪುರ ತಾಲ್ಲೂಕು ಬೈಂದೂರು ಗ್ರಾಮದ ಬಾಡದಲ್ಲಿರುವವರು.

ವಾದಿಯು ಪ್ರತಿವಾದಿರಿಂದ ಕಳೆದ ವ್ಯಯ ಸಂ। ರದ ಬಾಗಾಯ್ತು ವಿರೋಧಿ ಸಂ॥ರದ ಅಂತ್ಯದ ವರೇಗೆ ಬಹಾ ಮೂಲಗೇಣಿ ಗೇಣಿ ಬಾಕಿ ಅೈವೇಜು ರುಪ್ಯಾ 186-13-4ನ್ನು ಬರಮಾಡಿಕೊಳ್ಳುವರೆ ದಾಖಲು ಮಾಡಿದ ಮೇಲಿನ ದಾವೆಯು ತಾರೀಖು 16-6-50ಕ್ಕೆ ಇಟ್ಟಿದೆ. ಆ ಕುರಿತು ನಿಂಮ್ಮ ಉದಾಹರಣೆಯಿದ್ದರೆ ಸದ್ರಿ ದಿವ್ಸ ಬೆಳಿಗ್ಗೆ ಗಂಟೆ 11ಕ್ಕೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ತಿಳಿಸತಕ್ಕದ್ದು.

**Y. Manjaya Shetty,**
Advocate for Plffs.

ಮೊಕ್ಕಾಂ ಕುಂದಾಪುರ
ತಾ. 5-5-50


— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

**ಪಥ್ಯ:**—ಹರವೀವಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ.

**ಮಾಲಕರು:**—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

**ಆಯುರ್ವೇದ ಔಷಧಾಲಯ, ಗದಗ-ಸಿಟಿ.**

ವಿಜಂಟರು:—ಹುಬ್ಬಳಿ ಫಾರ್ಮಸಿ,—ಹುಬ್ಬಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ— ಪಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಪೂರ, ಕೆಮಿಸ್ಟ, ಹಾವೇರಿ, ಬ್ಯಾಡಗಿ

## ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

**೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ**

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೆ-ರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,
ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
**ಆಯುರ್ವೇದ ಔಷಧಾಲಯ. ಗದಗ.**

ಪಂಚಾಯತ ಬೋರ್ಡು,
ಗ್ರಾಮ ಕಮಿಟಿ, ಶಾಲಾ ಕೊಲೇಜು
ಮೊದಲಾದುವುಗಳ

**ಲೈಬ್ರೆರಿಗಳಿಗೆ**

ಬೇಕಾಗುವ ಕರ್ನಾಟಕದ ಎಲ್ಲಾ ಭಾಗಗಳ ಕನ್ನಡ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ವಿಚಾರಿಸಿರಿ:—

**ನವಭಾರತ ಪುಸ್ತಕ ಭಂಡಾರ,**
ಉಡುಪಿ. ಅಥವಾ
**ನವಯುಗ ಪ್ರೆಸ್, ಉಡುಪಿ.**

# ಮೂಲ್ಕಿಯಲ್ಲಿ ನಡೆದ ಕೃಷಿಕ ಸಮ್ಮೇಳನ

(ಪತ್ರಿಕಾ ಪ್ರತಿನಿಧಿ'ಯಿಂದ)

ದಕ್ಷಿಣ ಕನ್ನಡ ಜಿಲ್ಲಾ ಕೃಷಿಕ ಪರಿಷತ್ತು ಇದೇ ತಾ. 13-5-1950ರಲ್ಲಿ ಮೂಲ್ಕಿಯ ಕಾರ್ನಾಡಿನ ಗಾಂಧೀ ಮೈದಾನಿನಲ್ಲಿ ರಚಿಸಲ್ಪಟ್ಟ ಭವ್ಯ ಸಭಾಮಂದಿರ 'ಕಾರ್ನಾಡು ಸದಾಶಿವರಾವ್ ನಗರ'ದಲ್ಲಿ ಜಯಶೀಲವಾಗಿ ಜರಗಿತು. ಆ ಭಾಗದ ರೈತರು ಮತ್ತಿತರ ಕಾರ್ಯಕರ್ತರು ಅಧಿಕಸಂಖ್ಯೆಯಲ್ಲಿ ನೆರೆದು ಬಂದಿದ್ದರು. ಸಭಾ ವ್ಯವಸ್ಥೆ, ಸಭಿಕರ ಸಂಖ್ಯೆ, ಮಂತ್ರಿ ಮತ್ತಿತರ ಪ್ರಮುಖರ ಸಹಭಾಗಿತ್ವ ಮುಂತಾದ ಕೆಲವು ವಿಧಾನಗಳಿಂದ ಮೂಲ್ಕಿಯ ಕೃಷಿಕ ಸಮ್ಮೇಲನವು ದ. ಕ. ಜಿಲ್ಲೆಯ ಸಮ್ಮೇಳನಗಳ ಇತ್ತೀಚೆಗಿನ ಚರಿತ್ರೆಯಲ್ಲಿ ಒಂದು ಹೊಸ ದಾಖಲೆಯನ್ನು ನಿರ್ಮಿಸಿತೆನ್ನಬಹುದು. ಯಾವುದಾದರೊಂದು ವರ್ಗದ ಮತ್ತು ಅತಿ ವಿಸ್ತಾರ ಕ್ಷೇತ್ರದ ಗಂಭೀರ ಹೆಸರನ್ನಿಟ್ಟುಕೊಂಡು ನಡೆವ ಸಭೆ ಸಮ್ಮೇಲನಗಳಲ್ಲಿ ಆ ವರ್ಗದವರು ಕೈಬೆರಳೆಣಿಕೆಯಷ್ಟೇ ಮಂದಿ ಹಾಜರಿರುವ ದೃಶ್ಯವನ್ನು ಕಂಡು ಕಂಡು ಈ ಜಿಲ್ಲೆಯವರಿಗಭ್ಯಾಸವಾಗಿದೆ. ಅಂತಹ ನಾಮ ಮಾತ್ರ ಸಮ್ಮೇಳನಗಳು ನಡೆಸುವ ಅತಿಶಯೋಕ್ತಿಯ ಪ್ರಚಾರ ಮಾದರಿಯನ್ನೇ ಅನುಕರಿಸಿ ಹೇಳುವದಾದರೆ, ಅಂತಹ ಸಮ್ಮೇಳನಗಳ ಪ್ರಚಾರ ಪತ್ರಗಳು ಮತ್ತು ವರದಿಗಳು ಬಂದ ಪತ್ರಿಕಾ ತುಂಡುಗಳನ್ನು ಒಂದೆಡೆ ಜೋಡಿಸಿಟ್ಟರೆ ವಿಶಾಲವಾಗುವಷ್ಟು ಸ್ಥಳದಲ್ಲಿ ಮಾತ್ರ ಅದರ ಸಭೆಯನ್ನಾಡಿಸುವ ಕ್ರಮವಿಲ್ಲವೆನ್ನಬಹುದು! ಮೂಲ್ಕಿಯ ಪರಿಷತ್ತಿನಲ್ಲಿ ಅಂತಹ ಕೃತಕತೆಯಿರಲಿಲ್ಲವೆಂಬುದನ್ನಿಷ್ಟು ಬೇಕು. ವಿಸ್ತಾರ ಹಾಗೂ ದರ್ಶನೀಯ ಮೈದಾನಿನಲ್ಲಿ ಸ್ಥಳೀಯ ರೈತರು ಸ್ವತಃ ಶ್ರಮವಹಿಸಿ ರಚಿಸಿದ್ದ ಸಮ್ಮೇಳನ ಚಪ್ಪರ, ಸ್ವಾಗತ ಕಮಾನುಗಳು ಮತ್ತು ಧ್ವಜಸ್ತಂಭಾವರಣ ಮುಂತಾದುವು ಆಕರ್ಷಣೀಯವಿದ್ದುವು ಪರಿಷತ್ತಿನ ವ್ಯವಸ್ಥಾಪಕರು ಅಭಿವಂದನೀಯರಿದ್ದಾರೆ.

### ಸಮ್ಮೇಳನದ ಪೂರ್ವಾರ್ಧ

ಪೂರ್ವಾಹ್ನ 9 ತಾಸಿಗೆ ಧ್ವಜವಂದನಾ ಸಮಾರಂಭ ನಡೆಯಿತು. ಡಾ. ನಾಗಪ್ಪ ಆಳ್ವರು ಧ್ವಜಾರೋಹಣ ಮಾಡುತ್ತಾ ರಾಷ್ಟ್ರ ಧ್ವಜದ ಮಹತ್ವ ಮತ್ತದರ ಗೌರವ ರಕ್ಷಣೆಯಲ್ಲಿ ಜನತೆಯ ಪಾಲಿನ ಕರ್ತವ್ಯಗಳನ್ನು ವಿವರಿಸಿದರು. ಆ ಮೇಲೆ ವಿಷಯ ನಿಯಾಮಕ ಸಮಿತಿಯ ಸಭೆ ಸೇರಿ, ಪರಿಷತ್ತಿನ ಮುಂದಿಡುವ ಠರಾವುಗಳು ನಿರ್ಣಯಿಸಲ್ಪಟ್ಟುವು.

ಅಪರಾಹ್ನ ಸುಮಾರು 3 ತಾಸಿಗೆ ಮದ್ರಾಸ್ ಸರಕಾರದ ಮಾನ್ಯ ವಿದ್ಯಾ ಮಂತ್ರಿ ಶ್ರೀ ಕೆ. ಮಾಧವ ಮೆನನರು ತಮ್ಮ ಸಹಧರ್ಮಿಣಿ ಶ್ರೀಮತಿ ಕುಟ್ಟಿ ಅಮ್ಮಾಳ್ ಅಮ್ಮ, ಎಂ. ಎಲ್. ಎ. ಇವರೊಂದಿಗೆ ಮತ್ತು ಸ್ಥಳೀಯ ಪ್ರಮುಖರೊಂದಿಗೆ ಆಗಮಿಸಿ ಬೇಂಡುವಾಲಗದೊಡನೆ ಸ್ವಾಗತಿಸಲ್ಪಟ್ಟರು. ಕೃಷಿಕ್ ಬಾಲಕನೊಬ್ಬನಿಂದ ರಾಷ್ಟ್ರ ಗೀತೆ ಹಾಡಲ್ಪಡುವುದರೊಂದಿಗೆ ಸಮ್ಮೇಳನವಾರಂಭಿಸಿತು. ವಕೀಲ್ ಶ್ರೀ ಎಮ್. ಉಮೇಶರಾಯರು ಒಕ್ಕಲು ಹಿತ ಮಸೂದೆಯ ಬೇಡಿಕೆಯ ಓನ್ನೆಲೆಯನ್ನು ಪ್ರಸ್ತಾಪಿಸಿ, ಕೃಷಿಕ ಸಮ್ಮೇಳನದ ನಿಯೋಜಿತ ಅಧ್ಯಕ್ಷರನ್ನು ಸ್ಥಾನಾಪನ್ನರಾಗುವಂತೆ ಕೇಳಿಕೊಂಡರು. ಮಂಗಳೂರು ಮುನ್ಸಿಪಲ್ ಚೆಯರ್‌ಮೆನ್ ಮಿ ಎಲ್. ಸಿ. ಪಾಯಸ್, ಎಂ. ಎಲ್. ಎ. ಅವರು ಅಧ್ಯಕ್ಷ ಪೀಠವೇರಿದೊಡನೆ ಸ್ವಾಗತಾಧ್ಯಕ್ಷರಾದ ಶ್ರೀ ಬಿ. ಆರ್. ಕರ್ಕೇರರ ಸ್ವಾಗತ ಭಾಷಣವಾಯಿತು. ಅಧ್ಯಕ್ಷರ ಮೊದಲ ಮಾತುಗಳಾಗಿ ಮಾನ್ಯ ಮಂತ್ರಿ ಶ್ರೀ ಕೆ. ಮಾಧವ ಮೆನನರು ಸಮ್ಮೇಳನವನ್ನು ಉದ್ಘಾಟಿಸುತ್ತಾ ಸಮ್ಮೇಳನದ ವ್ಯವಸ್ಥಾಪಕರಾದ ಶ್ರೀಗಳಾದ ರುಕ್ಕಯ ಪೂಜಾರಿ, ಕೆ. ಕೆ. ಶೆಟ್ಟಿ, ಬಿ. ಆರ್. ಕರ್ಕೇರರೇ ಮೊದಲಾದವರನ್ನು ಅಭಿನಂದಿಸಿದರು. ಅನವಶ್ಯಕವಾಗಿ ಒಕ್ಕಲೆಬ್ಬಿಸುವುದನ್ನು ತಡೆಗಟ್ಟುವ [illegible] ಒಂದು ಅನುಚಿತ ಸ್ಥಿತಿಯಲ್ಲಿ ಸರಕಾರಕ್ಕೆ ಸೇರಿಸಲ್ಪಟ್ಟಿರುವು [illegible] ಜನ್ನು ತಿಳಿಸಿದರು. ಸರಕಾರೀ ಚಳುವಳಿಯಲ್ಲಿರುವ ಇಂತಹ ಹಲವು ಸತ್ಯ ಸಂಗತಿಗಳ ಕಾರ್ಯತಃ ಫಲಿಸದಂತೆ ಪಕ್ಷದೊಳಗಿನ ಕೆಲವರ ಸಮೋಹ ಬುದ್ಧಿ ಕಡೆಗೋಲುಗಳು ಈ ವರೆಗೂ ಸರಕಾರದ ಕೈ ಕಟ್ಟಿಡುತ್ತಿವೆ ಎಂದು ಹೇಳಿಕೊಂಡರು. ರೈತಹಿತ ರಕ್ಷಣೆಯ ಆವಶ್ಯಕ ವಿಧಾನವನ್ನು ಶೀಘ್ರದಲ್ಲೇ ಕೈಕೊಳ್ಳುವ ಆಶ್ವಾಸನೆ ಕೊಟ್ಟರು. ಸರಕಾರದ ವಿರುದ್ಧ ಪ್ರಚಾರಕರಿಗೆ ಮತ್ತು ಸಂದರ್ಭ ಸಾಧಕರಿಗೆ ಈಗ ರೈತರ ಮತ್ತು ಶ್ರಮಜೀವಿಗಳ ಹೆಸರು ಕಾಮಧೇನುವಾಗಿದೆ ಎಂದು ಟೀಕಿಸಿದರು. ಜನತೆಯು ಕಮ್ಯೂನಿಸ್ಟ್, ಸೋಶಿಯಲಿಸ್ಟ್, ಮತ್ತಿತರ ಯಾವುದೇ ಅಪಪ್ರಚಾರಕರ ಬಲೆಯೊಳಗೆ ಬಿದ್ದರೆ, ಜಾತೀಯ ಅಥವಾ ಆರ್ಥಿಕ ಗಂಡಾಂತರಗಳುಂಟಾಗಬಹುದೆಂದೂ ಕಾಂಗ್ರೆಸನ್ನು ಬಲಪಡಿಸುವದೊಂದೇ ಜನತೆಯ ಮುಂದಿರುವ ಹಾದಿಯೆಂದೂ ಬೋಧಿಸಿದರು. ಶ್ರೀ ಎನ್. ಎಸ್. ಕಿಲ್ಲೆಯವರು ಮಂತ್ರಿಗಳ ಭಾಷಣವನ್ನು ಭಾಷಾಂತರಿಸಿದರು. ಆ ಮೇಲೆ ಕೃಷಿಕ ಮಹಿಳಾ ಪರಿಷತ್ತಿನ ಉದ್ಘಾಟನೆಯನ್ನು ಶ್ರೀಮತಿ ಕುಟ್ಟಿಮಾಳ್ ಅಮ್ಮ ನೆರವೇರಿಸುತ್ತಾ, ಸರಕಾರವೆಂದರೆ ಹನ್ನೆರಡೇ ಮಂದಿ ಮಂತ್ರಿಗಳುಮಾತ್ರವಲ್ಲವೆಂದೂ, ಅವರು ಜನತೆಯ ಸೇವಕರಾಗಿ ಜನತೆಯ ಪಾಲಿನ ಕೆಲಸಗಳನ್ನು ನಿರ್ವಹಿಸುವದಕ್ಕಾಗಿ ಮಾತ್ರ ಅಲ್ಲಿರುವುದರಿಂದ ಜನತೆಯ ಮೇಲೆ ಯಜಮಾನಿಕೆಯ ಹೊಣೆಯಿದೆಯೆಂದೂ ಉಪಮಾ ಕಥೆಗಳೊಡನೆ ಭಾಷಣವಿತ್ತರು. ಮಹಿಳಾ ಸಮ್ಮೇಳನದ ಸ್ವಾಗತಾಧ್ಯಕ್ಷೆ ಶ್ರೀಮತಿ ಕಲ್ಯಾಣಿ. ಸೆಟ್ಟಿ ಮತ್ತು ಅಧ್ಯಕ್ಷೆ ಶ್ರೀಮತಿ ಶಾರದಾ ತಳ್ವಾರ್ ಬಿ. ಎ. ಅವರ ವಿಷಯ ನಿರೂಪಕ ಭಾಷಣಗಳಾದವು. ಆಗಲೇ ಮಾನ್ಯ ಮಂತ್ರಿ ಮಾಧವ ಮೆನನರು ದ. ಕ. ಜಿಲ್ಲಾ ಗ್ರಾಮ ಉದ್ಯೋಗಸ್ಥರ ಸಮ್ಮೇಳನದ ಉದ್ಘಾಟನಾ ಭಾಷಣವಿತ್ತು 'ಗ್ರಾಮಗಳಿಗೆ ಕೃಷಿಕರಿರುವಂತೆ ಸರಕಾರಕ್ಕೆ ಗ್ರಾಮ ಉದ್ಯೋಗಸ್ಥರಿದ್ದಾರೆ. ಇಂತಹ ಗ್ರಾಮಾಧಿಕಾರಿಗಳು ಹೆಚ್ಚಿನ ಹಕ್ಕು ಬಾಧ್ಯತೆಗಳನ್ನು ಕೇಳುವಾಗ ತಮ್ಮ ಹೊಣೆಗಾರಿಕೆಯನ್ನೂ ಅರಿತಿರಬೇಕು' ಎಂದು ಮುಂತಾಗಿ ಉಪದೇಶಿಸಿದರು. ತಮ್ಮ ಪ್ರವಾಸದ ಕಾರ್ಯನಿಮಿತ್ತ ಆ ಮೇಲೆ ಮಂತ್ರಿ ಮತ್ತು ಅವರ ಪತ್ನಿ ಹೊರಟುಹೋದರು.

### ಸಮ್ಮೇಳನದ ಉತ್ತರಾರ್ಧ.

ತುಸು ವಿರಾಮಾನಂತರ ಸಮ್ಮೇಳನಗಳ ಕಾರ್ಯಕ್ರಮಗಳು ಪುನಃ ಆರಂಭಿಸಿದಾಗ ಮಾನ್ಯ ಮಂತ್ರಿಗಳು ಗ್ರಾಮೋದ್ಯೋಗ ಸಮ್ಮೇಳನದ ಉದ್ಘಾಟಕರಾಗಿ ಮತ್ತವರ ಸಹಧರ್ಮಿಣಿಯು ಮಹಿಳಾ ಸಮ್ಮೇಳನದ ಉದ್ಘಾಟಕರಾಗಿ ಸಮಾಗಮಿಸದ ಕೊರತೆಯನ್ನು ಶ್ರೀ ಯನ್. ಎಸ್. ಕಿಲ್ಲೆಯವರು ಪೂರೈಸಿದರು. ಸಮ್ಮೇಳನಕ್ಕೆ ಬಂದಿದ್ದ ಶುಭಸಂದೇಶಗಳನ್ನು ಶ್ರೀ ಕೆ. ಕೆ. ಸೆಟ್ಟರು ಸಮ್ಮೇಳನಕ್ಕೆ ಬಂದಿದ್ದ ಸಂದೇಶಗಳನ್ನು ಓದಿ ಹೇಳಿದರು. ಗ್ರಾಮ ಉದ್ಯೋಗಸ್ಥರ ಸಮ್ಮೇಳನದ ಪ್ರಾರಂಭ ಭಾಷಣವನ್ನು ಶ್ರೀ ಪಿ ಆರಾನ್ನರವರು ಮಾಡಿದರು. ಈ ಸಮ್ಮೇಳನದ ಅಧ್ಯಕ್ಷ ಶ್ರೀ ಕೆ. ಬಿ. ಜಿನರಾಜ ಹೆಗ್ಡೆಯವರು ಮಾನ್ಯ ಮಂತ್ರಿಗಳ ಉಪದೇಶಗಳ ಕಡೆಗೆ ವಿಮರ್ಶಾತ್ಮಕ ಪ್ರಕಾಶ ಚೆಲ್ಲಿ ಗ್ರಾಮೋದ್ಯೋಗಸ್ಥರ ಸ್ಥಿತಿಗತಿ ಚಿತ್ರವನ್ನು ಮುಂದಿಟ್ಟು ಅವರ ಕರ್ತವ್ಯಗಳನ್ನು ತಿಳಿಸಿದರು. ಕೃಷಿಕ ಸಮ್ಮೇಳನದ ಅಧ್ಯಕ್ಷ ಮಿ. ಎಲ್. ಸಿ. ಪಾಯಸರು ತಮ್ಮ ಅಧ್ಯಕ್ಷ ಭಾಷಣವೀಯುತ್ತಾ ದ. ಕ. ಜಿಲ್ಲೆಯ ರೈತರ ಶೋಚನೀಯ ಸ್ಥಿತಿಗತಿಗಳನ್ನು ನಿವೇದಿಸಿಕೊಂಡರು. ಬೊಂಬಾಯಿ, ಮೈಸೂರು, ಉತ್ತರ ಪ್ರದೇಶ ಮೊದಲಾದ ಕಡೆಗಳಲ್ಲಿ ಬಂದಿರುವ ವಿವಿಧ ರೀತಿಯ ರೈತಹಿತ ಸಾಧಕ ಶಾಸನಗಳ ನೆನಪು ಮಾಡಿಕೊಟ್ಟು, ಮದ್ರಾಸ್ ಸರಕಾರವು ಈ ಪಟ್ಟಿಗೆ ಹಿಂದೆ ಬಿದ್ದಿರುವುದನ್ನು ತಿಳಿಸಿ, ಒಕ್ಕಲೆಬ್ಬಿಸಲು ಧನಿಗಳು ಕೋರ್ಟುಗಳಲ್ಲಿ ತಂದಿರುವ ದಾವೆಗಳನ್ನು ಸ್ಥಗಿತಗೊಳಿಸುವ ಮತ್ತು ಗೇಣಿಕೊಡುವ ಒಕ್ಕಲನ್ನು ಎಬ್ಬಿಸುವದನ್ನು ತಡೆಗಟ್ಟುವ ಸ್ಟೇ ಮಸೂದೆಯೊಂದನ್ನು ಮದ್ರಾಸ್ ಸರಕಾರವು ತರಬೇಕಾದುದೇ ಇಂದಿನ ಪರಮ ಆವಶ್ಯಕತೆಯೆಂದರು. ಆ ಮೇಲೆ ಕೆಲವರ ಅಭಿಪ್ರಾಯ ನಿವೇದನೆಗಳಾದುವು. ಶ್ರೀ ಕೆ. ಆರ್. ಕಾರಂತ, ರಾವ್ ಬಹದ್ದೂರ್ ಗಿರಿಯಪ್ಪ, ಶ್ರೀಮತಿ ಮೇರಿ ಬ್ರಿಟೋ, ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆ, ಶ್ರೀ ಎಮ್. ಬಿ. ಮೂಲ್ಕಿ, ಶ್ರೀ ಎನ್. ಎಸ್. ಕಿಲ್ಲೆ ಶ್ರೀ ಕೆ. ಕೆ. ಸೆಟ್ಟಿ, ಶ್ರೀ ಎಮ್. ಉಮೇಶರಾವ್ ಮೊದಲಾದವರ ಭಾಷಣಗಳಿದ್ದುವು. ಹೃದಯಸ್ಪರ್ಶಿ ಭಾಷಣವೆಂದರೆ ಮದ್ರಾಸಿನ ಮಾಜಿ ಕಂದಾಯ ಮಂತ್ರಿ ಶ್ರೀ ಕೆ. ಆರ್. ಕಾರಂತ, ಎಂ. ಎಲ್. ಎ., ಅವರದು. ಶ್ರೀಯುತರು ಮಂತ್ರಿ ಶ್ರೀ ಮಾಧವಮೆನನರ ಮತ್ತು ಶ್ರೀಮತಿ ಕುಟ್ಟಿ ಅಮ್ಮಾಳರ ಅಭಿಪ್ರಾಯಗಳನ್ನು ಟೀಕಿಸುತ್ತಾ ತಾನು ಕಂದಾಯ ಮಂತ್ರಿಯಾಗಿದ್ದಾಗ ತಯಾರಿಸಿದ್ದ ರೈತಹಿತ ಸಾಧಕ ಮಸೂದೆಯು ತಮ್ಮ ಸ್ಥಾನತ್ಯಾಗದೊಂದಿಗೇನೇ ಮೂಲೆಪಾಲಾದುದನ್ನೂ, ಅಂದಿನಿಂದಿದುವರೆಗಿನ ಮಂತ್ರಿಗಳು ಈ ವರೆಗೂ ವಹಿಸಿರುವ ಪ್ರತಿಕೂಲ ಮನೋವೃತ್ತಿಯನ್ನೂ ತೀಕ್ಷ್ಣ ಮಾತುಗಳಿಂದ ಖಂಡಿಸಿದರು. ಈಗ ಮದ್ರಾಸ್ ಸರಕಾರವು ನೇಮಿಸಿರುವ ಸಮಿತಿ ಕೂಡಾ ಕೇವಲ ಒಂದು ಕಪಟನಾಟಕವೆಂಬ ಅಭಿಪ್ರಾಯವನ್ನು ಕಾರಣ ಸಮೇತ ಮುಂದಿಟ್ಟು 'ಎಂಡೋಮೆಂಟ್ ಮಸೂದೆ'ಯಾಗಿತರ ಮದ್ರಾಸ್ ಸರಕಾರದ ಇತರ ಕಾರ್ಯ ಮತ್ತು ಧೋರಣೆಗಳನ್ನೂ ಖಂಡಿಸಿದರು. ಕಾಂಗ್ರೆಸಿನ ಚುನಾವಣಾ ಘೋಷಣೆಯಲ್ಲಿದ್ದ ಕೆಲವು ಅಂಶಗಳನ್ನು ಓದಿ [illegible] ಈ ಸಂಬಂಧವಾಗಿ ಜನತೆಯ [illegible] ವಂಚನೆಗೀಡಾಗಿದೆ ಎಂ[illegible] ದನ್ನು ಬಿಸಿ ನುಡಿಗಳಿಂದ ವರ್ಣಿಸಿದರು. "ನೀವು ಕೂಡಾ ಒಂದು ಆಟವಾಡು[illegible] ಮೆರೆಂಬುದರಿಂದ ಸರಕಾರವು ನಿಮ್ಮ ಕು[illegible] ತು ಸುಮ್ಮನಿದೆ. ಏನಾದರೂ ಕಂಕೋ[illegible] ಕಾರ್ಯ ಕೈಕೊಳ್ಳುವಿರೆಂದು ತೋರಿತೆಂದ[illegible] ನಿಮ್ಮ ಮೇಲೂ ಸರಕಾರದ ಗದೆ ಬೀಳು[illegible] ದು ಖಂಡಿತ" —ಈ ರೀತಿ ಕಾಂಗ್ರೆಸಿನಿಂದ [illegible] ನ ಹಿತ ಕಾರ್ಯವಾಗದೆಂದು ನನಗೆ ಖ[illegible] ವಾದರೆ ನಾನು ಕಾಂಗ್ರೆಸನ್ನು ಬಿಟ್ಟು ಹೊ[illegible] ನಡೆದು ಚಳವಳಿಸಲು ತಯಾರಿದ್ದೇನೆ. "ರೈತ ಸಾಧನೆಯಂತಹ ಕಾ[illegible] ಮಾಡದಿದ್ದಲ್ಲಿ ನಿಮ್ಮ ವೋಟನ್ನು ಕಮ್ಯೂ[illegible] ಸ್ಟರಿಗೋ, ಸೋಶಿಯಲಿಸ್ಟರಿಗೋ, ಅಥ[illegible] ಇನ್ನಾರಿಗೆ ಬೇಕಾದರೂ ಕೊಡಿ—ಕಾಂಗ್ರೆ[illegible] ಕೊಡಬೇಡಿ ಎಂದು ಸ್ಪಷ್ಟ ಹೇಳುತ್ತೇ[illegible] ಮುಂತಾದ ಹಲವು ತೀಕ್ಷ್ಣ ವಾಗ್ಬಾಣ[illegible] ನ್ನು ಈ ಸಂದರ್ಭದಲ್ಲಿ ಶ್ರೀ ಕಾರಂತರು [illegible] ಡೆದಿದ್ದರು. ಅವರ ಕೆಲವು ಮಾತುಗ[illegible] ಸಭೆಯ ಮೇಲೆ ಮಾಡಿದ್ದ ಪರಿಣಾಮ[illegible] ಆ ನಂತರದ ಎಲ್ಲ ಭಾಷಣಗಳಲ್ಲೂ [illegible] ಡುಬಂದಿದ್ದಿತು.

ಗೇಣಿಯನ್ನು ನಿಯತಪಡಿಸುವ ಒಕ್ಕಲು ಮಸೂದೆಯನ್ನು ಕೂಡಲೇ ತರಬೇಕೆ[illegible] ಮತ್ತು ಒಕ್ಕಲೆಬ್ಬಿಸದಂತೆ 'ಸ್ಟೇ' ಆಜ್ಞೆ[illegible] ರಡಿಸಬೇಕೆಂದು ಮದ್ರಾಸು ಸರಕಾರವ[illegible] ಕೇಳಿಕೊಳ್ಳುವ—ಒಂದೂ ಕಾನೂನು ತ[illegible] ಪಡಿ ಮಸೂದೆ ಮತ್ತು ಕರ್ನಾಟಕ ಪ್ರಾ[illegible] ರಚನೆಯ ಕಡೆಗೆ ಅನುಕೂಲ ಧೋರ[illegible] ಒಸಬೇಕೆಂದು ಕೇಂದ್ರ ಸರಕಾರ ವ[illegible] ಕಾಂಗ್ರೆಸ್ ಧುರೀಣರನ್ನು ಕೇಳಿಕೊಳ್ಳು[illegible] ಮಲೆನಾಡಿನ ಬಂಜರು ಭೂಮಿಗಳನ್ನು [illegible] ಸಾಯ ಮಾಡುವವರಿಗೆ ಹಂಚಿ ಕೊಡಬೇ[illegible] ದು ಮದ್ರಾಸ್ ಸರಕಾರವನ್ನು ಕೇಳಿಕೊ[illegible] ವ ಮತ್ತು ಗ್ರಾಮ ಉದ್ಯೋಗಸ್ಥರ ಹಿ[illegible] ಧನೆಗಳಿಗೆ ಸಂಬಂಧಪಟ್ಟ ಇತರ ಕೆಲವ[illegible] ವುಗಳು ಅಲ್ಲಿ ಮಂಜೂರಾದವು. ಮಂ[illegible] ಭಾಷಣ, ಉಪಕಾರ ಸ್ಮರಣೆಗಳಾಗಿ ಸ[illegible] ಸವು ಮಂಗಳಗೊಂಡಿತು. ರಾತ್ರಿ [illegible] ಲು ಮೇಳದವರ 'ದಶಾವತಾರ' ಬಯ[illegible] ನಡೆಯಿತು.

ಮೂಲ್ಕಿ ಬೇಂಕ್
ಲಿಮಿಟೆಡ್, ಮೂಲ್ಕಿ
1921ರಲ್ಲಿ ಸ್ಥಾಪಿತವಾಗಿ [illegible] ವರುಷಗಳಿಂದ ಊರ ಜನರ [illegible] ಕ್ಕಾಗಿ ಡಿಪೋಸಿಟ್ ಹಣಕ್ಕೆ [illegible] ಯವಾದ ಬಡ್ಡಿಯಿಂದಲೂ, ಸ[illegible] ದ ಹಣಕ್ಕೆ ಅತೀ ಕಡಿಮೆ ದ[illegible] ಬಡ್ಡಿಯಿಂದಲೂ ಜನ ಹಿತಸ[illegible] ನೆಯನ್ನು ಮಾಡುತ್ತಿರುವುದು.
The Moolky Bank Lt[d]
Moolky, S. K

For Life Assurance
CONSULT
THE NEW GUARDIAN OF INDIA
LIFE ASSURANCE Co. LTD.
(Established: 1934)
Chairman: Sri. M. C. T. M Chidambaram Chattiyar.
A Policy in this progressive Life Office is a good investment; its Agency is a valuable business connection.
MANGALORE BRANCH: HEAD OFFICE:
United India Life Building



Approved from by the Govt. o

## ಕೆಲವು ಲೋಪದೋಷಗಳು

ಮೂಲ್ಕಿಯ ಕೃಷಿಕ ಪರಿಷತ್ತು-ಗ್ರಾಮೋದ್ಯೋಗ ಪರಿಷತ್ತು-ಮಹಿಳಾ ಪರಿಷತ್ತು, ಇವೆಲ್ಲಾಗಿರುವ ನಿರ್ಣಯಗಳ ಕುರಿತು ಆಕ್ಷೇಪಿಸುವ ಅಂಶವೇನೂ ಇಲ್ಲ. ವಿನಾ ಕಾರಣ ಒಕ್ಕಲೆಬ್ಬಿಸುವುದನ್ನು ತಡೆಗಟ್ಟುವ, ಹೊಸ್ತು ಪ್ರಕೃತ ಕೋರ್ಟುಗಳಲ್ಲಿರುವ ಒಕ್ಕಲೆಬ್ಬಿಸುವ ದಾವೆಗಳನ್ನು ಸ್ಥಗಿತಗೊಳಿಸುವ ಸೂಚನೆಯೊಂದನ್ನು ಕೂಡಲೇ ತರುವಂತೆ ಸರಕಾರವನ್ನು ಒತ್ತಾಯಿಸುವುದೇ ಕೃಷಿಕ ಪರಿಷತ್ತಿನ ಮೂಲೋದ್ದೇಶವಿತ್ತೆನ್ನಬಹುದು. ಇದಕ್ಕಾವ ಕಡೆಯಿಂದಲೂ ಯಾರದ್ದೂ ಆಕ್ಷೇಪವಿಲ್ಲವೆಂಬುದನ್ನು ಮರೆಯಬಾರದು; ದ. ಕ. ಜಿಲ್ಲೆಯ ವರ್ಗದವರ ಪರವಾಗಿ ಶ್ರೀ ಕೆ. ಬಿ. ಜಿನರಾಜ ಹೆಗ್ಡೆಯವರಂಥವರ ಸಮ್ಮತಿ ಕೂಡ ಇದಕ್ಕೆ ದೊರಕಿದೆ; ಸರಕಾರವು ಇದಕ್ಕಾಗಿ ಸಮಿತಿಯೊಂದನ್ನು ರಚಿಸಿದೆ. ಕಾರ್ಯವಿಧಾನ ಮತ್ತು ಕಾಲಹರಣದ ಕುರಿತು ಭಿನ್ನಾಭಿಪ್ರಾಯಗಳಿವೆಯಾದರೂ ಮೂಲತಃ ಇದು ಸರ್ವಸಮ್ಮತ ವಿಷಯ. ಹೀಗಿದ್ದೂ ಈ ಸಂಬಂಧವಾಗಿ ಪರಿಷತ್ತಿನಲ್ಲಿ ಪ್ರಕಟವಾದ ಕೆಲವು ಸ್ಪಷ್ಟ ಅಭಿಪ್ರಾಯಗಳು ಔಚಿತ್ಯದ ಮೇರೆ ಮೀರಿದ್ದುವು; ಅತೃಪ್ತಿ ನಿರ್ಮಿಸುವಂತಹವು. ಶ್ರೀಮತಿ ಮಾಧವ ಮೆನನರು ಮುಂದಾಗಿ ಹೇಳಿದ್ದಂತೆ ರೈತರ ಹಿತದ ಬದಲಿಗೆ ತಮಗೊಂದು ಹೆಸರನ್ನು ಸಾಧಿಸಿಕೊಳ್ಳುವದಕ್ಕಾಗಿಯೇ ಬಾಯಿ ಬಿಟ್ಟವರೂ ಅಲ್ಲಿದ್ದರು.

ಮೂಲ್ಕಿಯ ಕೃಷಿಕ ಪರಿಷತ್ತು ಜಯಶಾಲಿಯಾಯಿತು. ಎನ್ನುವಾಗಲೇ ಅದು ದ. ಕ. ಜಿಲ್ಲಾ ಕೃಷಿಕ ಪರಿಷತ್ತಾಗಿರಲಿಲ್ಲ ಎಂಬುದನ್ನು ಮರೆಯಲಾಗುವದಿಲ್ಲ. ಮೂಲ್ಕಿ ಮತ್ತು ಆಸುಪಾಸಿನಲ್ಲಿ ಉಂಟಾಗಿರುವ ರೈತ ಜಾಗೃತಿ ಮತ್ತು ಸಂಘಟನೆಯು ಸರಿಯಾಗಿ ಪ್ರದರ್ಶಿಸಲ್ಪಟ್ಟಿದ್ದಿತು. ಆ ನಿರ್ದಿಷ್ಟ ಕ್ಷೇತ್ರದಿಂದ ಹೊರಗಿನ ಒಬ್ಬನೇ ಒಬ್ಬ ರೈತ ಪ್ರತಿನಿಧಿಯಾದರೂ ಪ್ರಾಯಶಃ ಅಲ್ಲಿರಲಿಲ್ಲ. ಜಿಲ್ಲಾ ಕೃಷಿಕ ಸಮ್ಮೇಳನವೆಂದು ಹೆಸರು ಹಾಕಿಕೊಂಡ ಈ ಪರಿಷತ್ತಿಗೆ ಜಿಲ್ಲೆಯ ಕೃಷಿಕರ ನಡುವಿನಿಂದ ಪ್ರತಿನಿಧಿಗಳು ಬಂದಿರಲಿಲ್ಲ-ಅಂತಹ ಜಿಲ್ಲಾ ಪ್ರಾತಿನಿಧ್ಯದ ಕ್ರಮನಿಯಮ ಅಥವಾ ವ್ಯವಸ್ಥೆಯೇನನ್ನಾದರೂ ಪರಿಷತ್ತಿನ ವ್ಯವಸ್ಥಾಪಕರು ಮಾಡಿದ್ದರೋ ಇಲ್ಲವೋ ತಿಳಿಯದು. ಮೂಲ್ಕಿ ಸಮ್ಮೇಳನದಲ್ಲಾದ ನಿರ್ಣಯಗಳು ಜಿಲ್ಲೆಯ ಕೃಷಿಕರ ಅಭಿಪ್ರಾಯವನ್ನು ಪ್ರತಿನಿಧಿಸಿರಬಹುದು; ಆದರೆ ಮೂಲ್ಕಿ ಸಮ್ಮೇಳನಕ್ಕೆ ಅಂತಹ ಪ್ರಾತಿನಿಧ್ಯ ರೂಪವಿರಲಿಲ್ಲ. ಅದು ಆ ಭಾಗದ ಗ್ರಾಮಗಳ ರೈತರ ಜಯಶೀಲ ಸಭೆ— ದ. ಕ. ಜಿಲ್ಲಾ ಕೃಷಿಕ ಪರಿಷತ್ತಲ್ಲ.

ಕೊನೆಯ ಮುಹೂರ್ತದಲ್ಲಿ ಅಧ್ಯಕ್ಷ ಬದಲಾವಣೆ— ಎರಡು ದಿನಗಳ ಕಾರ್ಯಕ್ರಮವು ಒಂದೇ ದಿನದಲ್ಲಿ ಮುಕ್ತಾಯ—'ಛಾನಗಾರ' ಬಿಲ್ಲೆ ತಾಗಿಸಿಕೊಂಡ ಯೋಗ್ಯತೆಯೊಂದರ ಬಲದಿಂದಲೇ ಕೆಲವರು ಉರುಳಿಸಿದ ಟೊಳ್ಳು ನುಡಿಗುಂಡುಗಳು... ಮುಂತಾದ ಅಭಾವಾತಿರೇಕಗಳೂ ಅಲ್ಲಿ ಇದ್ದುವು.

# ಪರಿಷತ್ತಿನಲ್ಲಿ ಪ್ರಕಟಗೊಂಡ ಅಧಿಕಪ್ರಸಂಗಗಳು!

### ಕಾರಂತರ ಭಾಷಣ - ಆಕ್ಷೇಪಣೀಯ!

ಶ್ರೀಮಾನ್ ಕೆ. ಆರ್. ಕಾರಂತರು ಅಲ್ಲಿ ಮಾಡಿದ ಆವೇಗಪೂರ್ಣ ಭಾಷಣದಲ್ಲಿ ಪ್ರತೀಕಾರ ಭಾವನೆಯೊಂದೇ ತಿರುಳಾಗಿದ್ದಿತು; ಅದು ತೀರಾ ಅನುಚಿತವಾದುದೆಂದು ಇಲ್ಲಿ ಸ್ಪಷ್ಟವಾಗಿ ಹೇಳಬೇಕಾಗಿದೆ. ಅವರ ಸಹವರ್ತಿಗಳನ್ನಿಸಿರುವ ಒಬ್ಬೊಬ್ಬರು ಆ ಮೇಲೆ ಅದಕ್ಕೆ ಒಪ್ಪಿ ಕೊಟ್ಟಂತೆ ಶ್ರೀ ಕಾರಂತರ ಕದಡಿದ ಅಂತಃಕರಣದಿಂದ ಸಿಡಿದ ಬಂದೂಗಳು, ಕುದಿ-ಹೃದಯದಿಂದ ವಾರಿದ ಕಿಡಿಗಳು, ಆ ಮಾತುಗಳಾಗಿರಬಹುದು. ಆದರೆ ಆ ಹೃದಯವು ಈ ರೀತಿ ಮಂಥನಗೊಳ್ಳಲು ಅಥವಾ ಬಿಸಿಯೇರಲು ಸಾರ್ವಜನಿಕ ಹಿತಸಾಧನೆಯಾಗುತ್ತಿಲ್ಲವೆಂಬ ಅತೃಪ್ತಿಯೊಂದೇ ಕಾರಣವೆಂದು ನಂಬಲಾಗದಷ್ಟು ದ್ವೇಷಾವೇಶವು ಶ್ರೀ ಕಾರಂತರ ಮಾತುಗಳಲ್ಲಿ ಕಂಡು ಬಂದಿದ್ದಿತು. ಶ್ರೀ ಕಾರಂತರ ಉಜ್ವಲ ಹಾಗೂ ಗಂಭೀರ ವ್ಯಕ್ತಿತ್ವದ ಮತ್ತು ಸದ್ಯದ ಅತೃಪ್ತ ವಾತಾವರಣದ ದೆಸೆಯಿಂದಲ್ಲದೆ, ಔಚಿತ್ಯದ ದೃಷ್ಟಿಯಿಂದ ಬೆಲೆ ಬಾಳುವ ಅಂಶವಾವುದೂ ಈ ಜನಪ್ರಿಯ ಮುಂದಾಳಿನ ಭಾಷಣದಲ್ಲಿರಲಿಲ್ಲವೆಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಮರುಪಕ್ಷೆ ಮಿಕ್ಕ ಕಂದಾಯ ಮಂತ್ರಿಯಾಗಿದ್ದ ಶ್ರೀಮಾನ್ ಕಾರಂತರು, ಮಂತ್ರಿ ಸ್ಥಾನ ಬಿಡುವ ಹೊತ್ತಿನಲ್ಲೇ ಅತ್ಯವಸರದ ಮತ್ತು ಅತಿಪ್ರಾಮುಖ್ಯವಾದ ರೈತಹಿತ ಸಾಧಕ ಮಸೂದೆಯೊಂದರ ಆಕಾರ ನಿರ್ಮಿಸಿದ್ದರೆಂದು ತಿಳಿದು ಬರುತ್ತದೆ. ಟೀಕಾ ಸ್ಫೂರ್ತಿಯಿದ್ದರೆ ಕಂದಾಯ ಮಂತ್ರಿ ಶ್ರೀ ಕಾರಂತರ ಈ ಕಾಲಹರಣವನ್ನು ಕೂಡಾ ಖಂಡಿಸಬಾರದೆಂದಿಲ್ಲ. ಕಾಂಗ್ರೆಸ್ ಧ್ಯೇಯ, ಧೋರಣೆಗಳಾಗಿ, ಮತ್ತು ಕಾಂಗ್ರೆಸಿನ ಚುನಾವಣಾ ಘೋಷಣೆಯಲ್ಲಿ ಇರುವ ಕಾರ್ಯಕ್ರಮಗಳೆಲ್ಲವೂ ಎಲ್ಲಿಯೂ ಜಾರಿಗೆ ಬಂದುದಿಲ್ಲ. ಅದಕ್ಕಾಗಿ ಶ್ರೀ ಕಾರಂತರು ಅಧಿಕಾರ ಚಾಲಕರನ್ನು ದೂರುತ್ತಿರುವಾಗ, ಆ ಹೊಣೆ ಹೊತ್ತವರು ತಮಗೇ ಕುರಿತು ಅಡ್ಡಬಂದಿರುವ ತಡೆ ತೊಡಕುಗಳಲ್ಲಿ ಪಕ್ಷ ಕಲಹವೂ ಒಂದೆನ್ನುತ್ತಾ, ಆ ಕಲಹಭಾಗಿಗಳಾಗಿರುವ ಶ್ರೀ ಕಾರಂತರಂಥವರ ಕಡೆಗೇನೇ ಅಪ್ರತ್ಯಕ್ಷವಾಗಿ ಬೆರಳು ತೋರಿಸುತ್ತಿದ್ದಾರೆ. ಅದು ಹೇಗಿದ್ದರೂ, ಕೆಲಸವಾಗಬೇಕೆಂಬ ನಿರ್ಮಲಾಸಕ್ತಿಯ ಹೊರತು, ಕೆಲಸದ ಹೆಸರು ಹೇಳಿ ತಮ್ಮ ದ್ವೇಷ ಸಾಧಿಸಿಕೊಳ್ಳುವ ಹರವಿಲ್ಲದ ಬೇರಾರೇ ಆದರೂ ನಿಜಕ್ಕೂ ಈ ಮಾದರಿಯ ವಾದಾಗ್ರಹ ಹೂಡಲಾರರು. ಮದ್ರಾಸ್ ಕಾಂಗ್ರೆಸ್ ಶಾಸನ ಸಭಾ ಪಕ್ಷದ ಸದಸ್ಯ—ಕಾಂಗ್ರೆಸ್ ಎಂ. ಎಲ್. ಎ.— ಶ್ರೀ ಕಾರಂತರು ಕಾಂಗ್ರೆಸ್ ಆಡಳಿತೆಯ ಕುರಿತು ಇಂತಹ ಬಹಿರಂಗ ದೂಷಣೆಗೆ ಇಳಿಯುವ ಆವಶ್ಯಕತೆಯೇನಿದೆ? ಪದ್ಧತಿ ಮತ್ತು ಶಿಸ್ತಿಗೆ ಇದು ವಿರುದ್ಧವಲ್ಲವೆ? ಎಂಬ ಪ್ರಶ್ನೆಗಳೇಳುತ್ತಿವೆ. ಮಂತ್ರಿಗಳಾಗಿರುವವರಿಗೆ ಕಾರ್ಯ ನಿರ್ದೇಶ ಮಾಡುವ ಮತ್ತು ಒತ್ತಾಯ ಹಾಕುವ ಅಧಿಕಾರವು ಶಾಸನ ಸಭಾ ಕಾಂಗ್ರೆಸ್ ಪಕ್ಷಕ್ಕಿದೆ. ಆ ಪಕ್ಷದ ಸದಸ್ಯರ ವಾದ ಹೋರಾಟ ರಂಗವೆಂದರೆ ಪಕ್ಷದ ಸಭೆಯೇ ಹೊರತು ಸಾರ್ವಜನಿಕ ಸಭೆ, ಸಮ್ಮೇಳನಗಳಲ್ಲ. ತಮ್ಮ ಪಾಲಿನ ಕರ್ತವ್ಯಗಳನ್ನು ಮೌನಶಕ್ತಿನಿಂದ ಮಾಡದೆ ದೊಡ್ಡಗಳ್ತನ ಪ್ರದರ್ಶಿಸುವುದು ತಪ್ಪಾಗಿದ್ದರೆ, ತಮ್ಮ ಸ್ಥಾನದ ಅಸ್ತಿತ್ವಕ್ಕೇನೇ ಆಧಾರವಾಗಿರುವ ಶಿಸ್ತು ಮತ್ತು ಔಚಿತ್ಯದ ಮೇರೆ ಮೀರುವುದಂತೂ ಅಕ್ಷಮ್ಯ ಅಪರಾಧ. ಇಂದಿನ ಮಂತ್ರಿಗಳು ಕರ್ತವ್ಯಬಾಹಿರರಾಗಿದ್ದಾರೆಂದು ಶ್ರೀ ಕಾರಂತರು ಮೇರೆ ಮೀರಿ ದೂಷಿಸಹತ್ತಿದ್ದಾರೆ— ಅವರು ತಪ್ಪು ಮಾಡಿದ್ದರೆ ಇವರು ಅಕ್ಷಮ್ಯ ಅಪರಾಧವನ್ನೇ ಮಾಡುತ್ತಿದ್ದಾರೆ. ನಾವು ಅಧಿಕಾರ ವಹಿಸಿದ ದಿನವೇ ಮುಷ್ಕರದ ನೋಟೀಸು ಕೊಟ್ಟ ಅಪರಾಧವು ಗ್ರಾಮ ಉದ್ಯೋಗಸ್ಥರಿಂದ ಆ ಕಾಲದಲ್ಲಿ ಆಗಿದ್ದಿತೆಂಬುದನ್ನು ಶ್ರೀಮಾನ್ ಕಾರಂತರು ಮೂಲ್ಕಿ ಪರಿಷತ್ತಿನಲ್ಲಿಯೂ ಪ್ರಸ್ತಾಪಿಸಿದ್ದರು. ಅಂತಹ ಕೃತ್ಯಕ್ಕಿಳಿದ ಗ್ರಾಮ ಉದ್ಯೋಗಸ್ಥರ ಪಾರಂಪರಿಕೆಯನ್ನೇ ರದ್ದು ಪಡಿಸಲಾಗುವುದೆಂಬ ಬೆದರಿಕೆಯನ್ನು ಆಗಿನ ಕಂದಾಯ ಮಂತ್ರಿ ಶ್ರೀ ಕಾರಂತರು ಬೀರಿದ್ದರೆಂಬ ನೆನಪು ನಮಗಿದೆ. ಗ್ರಾಮಾಧಿಕಾರಿಗಳ ಬೇಡಿಕೆಯು ಪೂರ್ಣ ಅನ್ಯಾಯದ್ದೆಂದು ಶ್ರೀ ಕಾರಂತರು ಹೇಳಲಾರರಾದರೂ ಅದಕ್ಕಾಗಿ ಆ ಕಾಲದಲ್ಲಿ ಅತಿರೇಕ ವರ್ತನೆಗಿಳಿಯುವುದು ತಪ್ಪೆಂಬುದರಿಂದಲೇ ಇವರು ಅಂತಹ ಉಗ್ರ ಧೋರಣೆ ವಹಿಸಿದುದಾಗಿರಬೇಕು. ಒಂದು ನ್ಯಾಯಕ್ಕಾಗಿಯಾದರೂ ಅತಿರೇಕಾಚರಣೆ ಸಲ್ಲದೆಂಬುದೇ ಇಲ್ಲಿರುವ ನೀತಿ. ಇದೇ ಮಟ್ಟದಿಂದ ಶ್ರೀ ಕೆ. ಆರ್. ಕಾರಂತರು ತನ್ನ ಇಂದಿನ ವರ್ತನೆಯನ್ನು ಅಳೆದುಕೊಂಡರೆ ಹೇಗನ್ನಿಸೀತು? "ಕಾಂಗ್ರೆಸು... ಮಾಡದಿದ್ದರೆ ಕಾಂಗ್ರೆಸಿಗೆ ವೋಟುಕೊಡಬೇಡಿ; ಕಮ್ಯೂನಿಸ್ಟರಿಗೋ, ಸೋಶಿಯಲಿಸ್ಟರಿಗೋ, ಇನ್ನಾರಿಗೆ ಬೇಕಾದರೂ ಕೊಡಿ; ಕಾಂಗ್ರೆಸಿಗೆ ಕೊಡಬೇಡಿ" ಎಂದು ಹೇಳುವ ಹಕ್ಕು ಕಾಂಗ್ರೆಸ್ ಎಂ. ಎಲ್. ಎ. ಶ್ರೀ ಕಾರಂತರಿಗಿದೆಯೆ? ಜನತೆಗೆ "ಕಾಂಗ್ರೆಸೊಂದೇ ನಿಜವಾದ ಆಶ್ರಯ; ಸಂದರ್ಭಸಾಧಕರಾಗಿ ಮುಂದೆಬರುವ ಕಮ್ಯೂನಿಸ್ಟರು, ಸೋಶಿಯಾಲಿಸ್ಟರ, ಮತ್ತಿತರ ಅಪಪ್ರಚಾರಕರನ್ನು ನಂಬಿದರೆ ಹಾನಿಯಿದೆ" ಎಂದು ಚುಚ್ಚಿ ಹೇಳಿದ ಮಂತ್ರಿ ಶ್ರೀ ಮಾಧವ ಮೆನನರ ಮಾತಿಗೆ ಪ್ರತಿಮಾತು ಹೊಡೆಯುವ ಆವೇಶದಲ್ಲಿ ಶ್ರೀ ಕಾರಂತರು ತನ್ನನ್ನು ತಾನೇ ಮರೆತುಬಿಟ್ಟುದು ಅತ್ಯಂತ ಶೋಚನೀಯ.

ಕಾಂಗ್ರೆಸ್ ಧ್ಯೇಯ, ಧೋರಣೆಗಳು ಮತ್ತು ತನ್ನ ದೃಷ್ಟಿ ಪಥದಲ್ಲಿಟ್ಟುಕೊಂಡಿರುವ ಕಾರ್ಯಕ್ರಮಗಳು ಜನತೆಗೆ ಮಾನ್ಯವಿರುವಂತೆಯೇ ಶ್ರೀ ಕಾರಂತರಿಗೂ ಸಮ್ಮತವಿವೆ. ಆದ್ದರಿಂದಲೇ ಅವರೀವರೆಗೂ ಕಾಂಗ್ರೆಸಿಗರಾಗಿ ಇದ್ದಾರೆ. ಆದರೆ ಕಾಂಗ್ರೆಸಿನ ಕೆಲವೊಂದು ವ್ಯಕ್ತಿಗಳು ಇಂದಿನ ಅಧಿಕಾರ ಚಾಲಕರಾಗಿರುವುದರಿಂದ ಕಾಂಗ್ರೆಸ್ ವಿಧಾನಗಳು ಜಾರಿಗೆ ಬರುತ್ತಿಲ್ಲವೆಂಬುದೊಂದೇ ಶ್ರೀ ಕಾರಂತರ ಆಕ್ಷೇಪ. ಆದರೆ ತಾನು ಕೊಡಲಿಗೆಂದು ಹಾಕುವ ಕತ್ತರಿಯು ಮುದುಳಿಗೂ ನಾಟದಂತೆ ಪ್ರಯೋಗಿಸುವ-ವ್ಯಕ್ತಿಗಳ ಮೇಲಿನ ತನ್ನ ಖಂಡನೆಯು ಸಂಸ್ಥೆಯ ನೇಲೂ ಬೀಳದಂತೆ ನೋಡುವ - ಜಾಗ್ರತೆಯಾದರೂ ಶ್ರೀ ಕಾರಂತರಲ್ಲಿರಬೇಕಿದ್ದಿತು. ಒಂದು ಕಾಲದಲ್ಲಿ ಶ್ರೀ ಕಾರಂತರು ಅಧಿಕಾರದಲ್ಲಿದ್ದರು; ಈ ದಿನ ಬೇರೆಯವರಿದ್ದಾರೆ; ನಾಳೆ ಪುನಃ ಶ್ರೀ ಕಾರಂತರೇ ಬರಬಾರದೆಂದಿಲ್ಲ. ಕಾಂಗ್ರೆಸಿನ ಕಾರ್ಯ ಸಾಗಿಸಲಾರದ ಅಯೋಗ್ಯರು ಅಥವಾ ಅಸಮರ್ಥರು ಇನ್ನೂ ಬಾರದಂತೆ ನೋಡುವದೊಂದೇ ಇಲ್ಲಿ ಶ್ರೀ ಕಾರಂತರ ಕೆಲಸ. ಹೊರತು ಕಾಂಗ್ರೆಸೇ ಬರಕೂಡದೆಂದು ಹಾರೈಸುವ ಹಕ್ಕು ಕಾಂಗ್ರೆಸಿಗರಾದ ಶ್ರೀ ಕಾರಂತರಿಗೆ ಸರ್ವಥಾ ಇಲ್ಲ. 'ಇಂತಹದೊಂದನ್ನು ಮಾಡದಿದ್ದರೆ ಕಾಂಗ್ರೆಸಿಗೆ ವೋಟು ಕೊಡಬಾರದು" ಎಂಬ ಸರ್ತ ತೀರ್ಮಾನವೊಂದನ್ನು ಶ್ರೀ ಕಾರಂತರು ನಾಳೆಗಾಗಿ ಈ ದಿನವೇ ಯಾವ ಅಧಿಕಾರದಿಂದ ಕೊಟ್ಟರೋ ನಮಗೆ ಅರ್ಥವಾಗುವದಿಲ್ಲ. 'ಜನತಾ ಸೇವೆಗಾಗಿ ಕಾಂಗ್ರೆಸನ್ನು ಬಿಡಲು' ಶ್ರೀ ಕಾರಂತರು ತಯಾರಿರುವಂತೆಯೇ, ಜನತಾ ಸೇವೆ ಮಾಡಲು ಕಾಂಗ್ರೆಸು ಮತ್ತು ಕಾಂಗ್ರೆಸಿನ ಪರವಾಗಿ ಅಧಿಕಾರ ವಹಿಸಿರುವವರೂ ತಯಾರೇ ಇದ್ದಾರೆ. ಅವರಲ್ಲಿ ಈಗಿನ ತಂತವನ್ನು ಕರ್ತವ್ಯ ಮತ್ತು ಹೊಣೆಗಾರಿಕೆಗಳನ್ನು ಅರಿತುಕೊಂಡು ಇಡಬೇಕು ಮತ್ತು ಮಾಡಬೇಕೇ ಹೊರತು ಅಧಿಕ ಪ್ರಸಂಗ ಸಲ್ಲದು. ಒಟ್ಟಿನ ಮೇಲೆ ಶ್ರೀಮಾನ್ ಕೆ. ಆರ್. ಕಾರಂತರು ಮದ್ರಾಸಿನ ಈಗಿನ ಕಾಂಗ್ರೆಸ್ ಆಡಳಿತೆಯ ಬದ್ಧ ವಿರೋಧ ಪ್ರಚಾರಕರಾಗಿ ಮುಂದೆ ಬಂದಿದ್ದಾರೆ; ಈ ಕಾರ್ಯ ಸಾಧನೆಗಾಗಿ ತನ್ನ ಪಾಲಿನ ಕ್ರಮ ನಿಯಮಗಳ ಗಡಿಮೀರಿ ಹೋಗಿಯೂ ಜನತೆಯ ಈಗಿನ ಅತೃಪ್ತ ಭಾವನೆಯ ಸಂಬಂಧ ಕಟ್ಟಿಕೊಳ್ಳಲು ಹವಣಿಸಿದ್ದಾರೆ. ಎಂಬ ಅಂತರ್ಯವನ್ನು ಪರಿಷತ್ತಿನ ಅವರ ಮಾತುಗಳು ಹೊರಗೆಡಹಿವೆ. ಇದು ಶೋಚನೀಯ ಮತ್ತು ಖಂಡನೀಯವೆನ್ನದೆ ನಿರ್ವಾಹವಿಲ್ಲ. ಬುಡದಿಂದ ತುದಿಯ ವರೆಗೂ ಖಂಡನಾ ಖಡ್ಗವನ್ನೋಡಿಸಿದ್ದೊಂದಲ್ಲದೆ, ತ್ಯಾಜ್ಯವಾದವುಗಳ ಸ್ಥಾನದಲ್ಲಿ ಪೂಜ್ಯವಾಗುವದಾವುದನ್ನೂ ಇಟ್ಟು ತೋರಿಸದೆ... ಶ್ರೀ ಕಾರಂತರೇಕೋ ರಭಸದಿಂದ ಕೆಳಗೆ ಜಾರುತ್ತಿದ್ದಾರೆ; ದುರ್ದೈವ!

ಶ್ರೀ ಕಾರಂತರ ಭಾಷಣದ ಬಿಸಿಯನ್ನಾರಿಸಲು ಪ್ರಯತ್ನಿಸಿದಂತೆ ತೋರಿಸಿಕೊಂಡ ಒಬ್ಬಿಬ್ಬರು, ಒಂದೆಡೆ ಆ ಕಿಡಿಗೆ ತಿದಿಯೂದಿದಂತೆಯೂ ಮತ್ತೊಂದೆಡೆ ಅದರ ಮೇಲೆ ಒಂದಿಷ್ಟು ನೀರು ಚಿಮುಕಿಸಿದಂತೆಯೂ ಮಾಡಿ, ಪರಾಭವಗೊಂಡರೆನ್ನಬಹುದು. "ಹೆಚ್ಚಾಗಿ ಬಿಲ್ಲವರು ಮತ್ತು ಕಥೋಲಿಕರೇ ಚಾಲಗೇಣಿ ಒಕ್ಕಲುಗಳಾಗಿದ್ದಾರೆ. ವಿಶ್ವವರಿಂದ ಕಷ್ಟನಷ್ಟಗಳಿಗೀಡಾಗಿದ್ದಾರೆ. ಪಾನನಿಷೇಧದಿಂದಾಗಿ ಬಿಲ್ಲವರ ಜೀವನ ವೃತ್ತಿಗೆ ಧಕ್ಕೆ ಬಂದಿರುವುದರಿಂದ ಒಕ್ಕಲು ಹಕ್ಕಿನ ಭದ್ರತೆಯಾದರೂ ಅವರಿಗೆ ಬೇಕು" ಎಂಬಂತಹ ಕೋಮುವಾರು ಭಾವನೆಗಳೂ ಅಲ್ಲಿ ಅಧ್ಯಕ್ಷಿಸುವವರಿಂದಲೇ ಪ್ರಕಟವಾಗಿದ್ದುವು.

ಅಂತೂ, ಮೂಲ್ಕಿ ಪರಿಷತ್ತಿನ ಭಾಷಣಗಳ ಮೂಲಕ ಪ್ರಕಟಗೊಂಡ ಕೆಲವು ಭಾವನೆ, ಧೋರಣೆಗಳು ಅತಿರೇಕ, ಅನುಚಿತ ಮತ್ತು ಅಯೋಗ್ಯವಿದ್ದುವು ಎಂದು ವ್ಯಸನಪೂರ್ವಕ ಹೇಳಬೇಕಾಗಿದೆ.

**WANTED**

for the ST. MARYS' HIGH SCHOOL.
SHIRVA (South Kanara.)

1. A Science or Mathematic L. T. Or L. T. knowing Kannada. A Lady is preferrend.
2. A Higher Grade Drawing Teacher.
3. A Spinning & Weaving Instructor.

Sceince or mathematics Graduates and Lower Grade Drawing Teachers may also apply. Best terms will be offered.

Apply sharp to the Correspondent.

BUY INDIAN! ENCOURAGE INDIAN INDUSTRY!

ಆಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.



Highly perfumed and medicated, worth using daily by one and all, keeps hair black and relieves head-ache etc.

REGD. TRADE MARK

Manufactured by:-
Swadeshi Oushadhi Bhandara (Regd.)
KUNJAL P. O. Brahmavar, S. K.

ವ್ಯಕ್ತಿತ್ವವೆಂದರೇನು? ವ್ಯಕ್ತಿ ಎಂದಿರುವ ಎಲ್ಲರಲ್ಲಿಯೂ ಅದಿದೆ. ಅಂದ ಬಳಿಕ ಸ್ತ್ರೀಯರಲ್ಲಿಲ್ಲವೆನ್ನುವುದು ಹೇಗೆ? ಅದು ಹೇಗಿದೆ? ಪ್ರಕಾಶಕ್ಕಿಂತಲೂ ಉಜ್ವಲವಾಗಿ! ಏಕೆಂದರೆ, ಪ್ರಕಾಶವಿದ್ದಲ್ಲಿ ಕತ್ತಲೆಯೂ ಇರುತ್ತದೆ! ವ್ಯಕ್ತಿಯಿದ್ದಲ್ಲಿ ಕೇವಲ ವ್ಯಕ್ತಿತ್ವ ಮಾತ್ರ ಪ್ರಕಾಶಿಸುತ್ತದೆ. ವ್ಯಕ್ತಿತ್ವ--ಅದೊಂದು ಶಕ್ತಿ! ಅದಿಲ್ಲದ ಜೀವನ ನೀರಸ. ಮನುಷ್ಯರಿಗೂ ಅನ್ಯಜೀವಿಗಳಿಗೂ ಇರುವ ಭೇದವನ್ನು ವ್ಯಕ್ತಿತ್ವದಿಂದಲೇ ಅರಿಯಲಾಗುತ್ತದೆ. ಎಲ್ಲಾ ಸಂಪತ್ತಿಗಿಂತಲೂ ವ್ಯಕ್ತಿತ್ವವು ಮಿಗಿಲಾದುದು. ನಿಂದೆಯನ್ನು ಯಾರಿಂದ ಸಹಿಸಲಾಗುತ್ತದೆ? ಅದರಿಂದ ಹಾನಿಯ ಭಯವಿಲ್ಲದಿದ್ದರೂ ಹೃದಯವು ಆಹತವಾಗುತ್ತದೆ. ಮನುಷ್ಯನು ಎಂತಹ ಆಘಾತವನ್ನೂ ಸಹಿಸಲು ಸಮರ್ಥನಿರುತ್ತಾನೆ. ಆದರೆ ವ್ಯಕ್ತಿತ್ವದ ಆಘಾತ ಅಸಹನೀಯವಿರುತ್ತದೆ. ಕಳೆಯಲಾಗದ ಅಮೂಲ್ಯ ರತ್ನ ವ್ಯಕ್ತಿತ್ವ; ಅದನ್ನುಳಿಸಲು ತನುಮನಧನಗಳನ್ನು ತೊರೆವವರಿರುತ್ತಾರೆ. ಅದನ್ನು ಗಳಿಸಲು ಎಷ್ಟು ಮಂದಿ ಎಷ್ಟು ಹಣವನ್ನು ವ್ಯಯಿಸುವುದಿಲ್ಲ! ಔತಣಾದಿಗಳನ್ನೇರ್ಪಡಿಸುವುದಿಲ್ಲ! ಆದರೆ, ಅದರಲ್ಲೆಲ್ಲಾ ವ್ಯಕ್ತಿತ್ವವಿದೆಯೆ? ಅದನ್ನು ಕರೆಸಿಕೊಳ್ಳಲಾಗುತ್ತದೆಯೆ? ಗಂಭೀರ ಮುದ್ರೆಯನ್ನು ಧರಿಸಿ ಬೀದಿಯಿಂದ ಮೆರೆಯುತ್ತಿದ್ದರೆ, ಅದಕ್ಕೆ ವ್ಯಕ್ತಿತ್ವವೆನ್ನುತ್ತಾರೆಯೆ? ಸಾಮಾನ್ಯರಲ್ಲಿ ಬೆರೆಯದೆ ತಾನೇ ತಾನಾಗಿದ್ದರೆ ತಾನೆ ವ್ಯಕ್ತಿತ್ವವನ್ನು ಗಳಿಸಲಾಗುತ್ತದೆಯೆ? ಇಲ್ಲ. ವ್ಯಕ್ತಿತ್ವವು ಡಂಭಾಚಾರದಿಂದಲಾಗಲಿ, ಹಣದಲ್ಲಾಗಲಿ ಇರುವುದಿಲ್ಲ. ಅತ್ಯಂತ ಹೀನಗುಣಗಳೂ ಕೂಡ ಲಕ್ಷಾಧೀಶರಾಗಿರುತ್ತಾರೆ. ಮಮತೆಯಿಲ್ಲದ ತಲೆಗಳು, ಸಂಕುಚಿತ ಹೃದಯಗಳು ಎಷ್ಟು ಮಂದಿ ಲಕ್ಷಾಧೀಶರಾಗಿಲ್ಲ! ದೊಡ್ಡ ದೊಡ್ಡ ಪದವಿಯುಳ್ಳವರೂ ಅದಿದೆಯೆ? ಇಲ್ಲ. ಹಾಗಿರುತ್ತಿದ್ದರೆ ವೈಸ್ರಾಯ್, ಗವರ್ನರ್, ಇವರನ್ನು ಬಿಟ್ಟರೆ ವ್ಯಕ್ತಿತ್ವವುಳ್ಳ ಅನ್ಯ ಜೀವಿಗಳೇ ಇರುತ್ತಿದ್ದಿಲ್ಲ. ನಮ್ಮಲ್ಲಿ ದೊಡ್ಡ ದೊಡ್ಡ ಆಫೀಸರರಿಗಿಂತಲೂ ಘನವ್ಯಕ್ತಿತ್ವವುಳ್ಳ ವ್ಯಕ್ತಿಗಳು ಎಷ್ಟೋ ಮಂದಿ ಇರುತ್ತಾರೆ.

ಹಾಗಾದರೆ ವ್ಯಕ್ತಿತ್ವವೇನು ದೈವಿಕ ವರವೆ? ಅಲ್ಲ. ಅದು ಪ್ರತಿಯೊಬ್ಬರಲ್ಲೂ ಸಮಾವೇಶವಾಗಿರುತ್ತದೆ. ಅದರದನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸದಿದ್ದರೆ ಕಂದಿಹೋಗುತ್ತದೆ. ಅದನ್ನು ತಿಳಿಯಲು ವಿಶೇಷ ದೃಷ್ಟಿ ಬೇಕಾಗುತ್ತದೆ. ಅದನ್ನು ಇತರರಿಂದಲೂ ಅಡಗಿಸಲಾಗುವುದಿಲ್ಲ. ಸುಳ್ಳು ಪ್ರಚಾರದಿಂದ ಪ್ರಕಾಶಪಡಿಸಲೂ ಸಾಧ್ಯವಾಗದು. ಆಚರಣೆಯೇ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿರುತ್ತದೆ. ವಿಚಿತ್ರಾಚರಣೆಯ ವ್ಯಕ್ತಿಯ ವ್ಯಕ್ತಿತ್ವವು ಜನರನ್ನಾಕರ್ಷಿಸುತ್ತದೆ. ಹೀನವೃತ್ತಿಯವನು ವ್ಯಕ್ತಿತ್ವಶೂನ್ಯನಾಗಿರುತ್ತಾನೆ. ನಡತೆಯು ಮನುಷ್ಯನ ಘನತೆಯನ್ನೇರಿಸುತ್ತದೆ. ಇದೇ ವ್ಯಕ್ತಿತ್ವ. ಎಂದರೆ, ನಡತೆಯು ವ್ಯಕ್ತಿತ್ವದ ಬುನಾದಿ. ಬೆಲ್ಲದಿಂದ ಸಕ್ಕರೆಯನ್ನೂ ಸಕ್ಕರೆಯಿಂದ ಕಲ್ಲುಸಕ್ಕರೆಯನ್ನೂ ಮಾಡಲಾಗುತ್ತದೆ. ಎಂದರೆ ಕಲ್ಲುಸಕ್ಕರೆಯು ಬೆಲ್ಲದ ಅಂತಿಮ ಕೃತಿ ಮತ್ತು ಫಲವಾಗಿರುತ್ತದೆ. ಹಾಗೆಯೇ ಮನುಷ್ಯನ ಶುದ್ಧ ಜೀವನದ ಅಂತಿಮ ಪರಿಣಾಮವೇ ವ್ಯಕ್ತಿತ್ವ. ಜೀವನದ ಎಲ್ಲಾ ಕೃತಿಗಳ ಅಂತ್ಯವೇ ವ್ಯಕ್ತಿತ್ವ. ಅದನ್ನು ಹಾರುಗಂಡವರಿಲ್ಲ. ಅದರ ಬಲದಿಂದ ಮನುಷ್ಯನು ಏನನ್ನೂ ಮಾಡಬಲ್ಲನು. ಉದಾಹರಣೆಗೆ, ಸತ್ಯವನ್ನಾಡಬೇಕೆಂದು ಎಲ್ಲರೂ ಅನ್ನುತ್ತಾರೆ. ಅನುಸರಿಸುವವರೆಷ್ಟು ಮಂದಿ? ಆದರೆ ಮಹಾಪುರುಷನೊಬ್ಬನು ಆ ವಿಷಯವಾಗಿ ಉಪನ್ಯಾಸಕೊಟ್ಟರ ಎಷ್ಟೋ ಮಂದಿ ಪ್ರಮಾಣಮಾಡಿ ಸತ್ಯವನ್ನನುಸರಿಸುವುದಾಗಿ ಪ್ರತಿಜ್ಞೆಗೊಳಗಾಗುತ್ತಾರೆ. ಏಕೆ? ಮೂಲಕಾರಣವೆಂದರೆ ಆ ಮಹಾಪುರುಷನ ವ್ಯಕ್ತಿತ್ವ ಅವರನ್ನು ಆ ರೀತಿ ಪ್ರಮಾಣಬದ್ಧರನ್ನಾಗಿ ಮಾಡಿಸುತ್ತದೆ.

ಮಹಿಳಾ ಪ್ರಪಂಚ

# ಸ್ತ್ರೀಯರಿಗೆ ವ್ಯಕ್ತಿತ್ವವಿಲ್ಲವೆ?

ಗಂಗಾಬಾಯಿ

*ವಿದ್ಯಾವಿಹೀನ ಮನುಷ್ಯನಿಗೂ ವ್ಯಕ್ತಿತ್ವಕ್ಕೆ ಬೆಲೆ ಇದೆ!*
*ಪದೆ-ಪದೆಗಳಲ್ಲಿ, ರೀತಿ ನೀತಿಗಳಲ್ಲಿ ಅದು ವ್ಯಕ್ತವಾಗುವುದು!*
*ಈ ಒಂದು ಲಕ್ಷಣವು ಸ್ತ್ರೀಸಮಾಜಕ್ಕೆ ಉಂಟೇ, ಇಲ್ಲವೇ*
*ಎನ್ನುವುದೇ ಇಲ್ಲಿನ ಪ್ರಶ್ನೆ?*

ವ್ಯಕ್ತಿತ್ವಕ್ಕೆ ಸ್ತ್ರೀಪುರುಷ ಭೇದವಿದೆಯೇ? ಇಲ್ಲ. ನಡತೆಯ ಉಚ್ಚ-ನೀಚತೆಯಿಂದ ವ್ಯಕ್ತಿತ್ವವನ್ನು ಗುರುತಿಸಲಾಗುವುದೆಂದ ಮೇಲೆ ಅದರಲ್ಲೂ ವ್ಯಕ್ತಿತ್ವವಿರಲೇ ಬೇಕಲ್ಲವೆ? ಆದರೆ ಶಾಸ್ತ್ರಕಾರರು ಅವರ ವ್ಯಕ್ತಿತ್ವವನ್ನು ಅಲ್ಲಗಳೆದಿರುತ್ತಾರೆ. ಅವರಲ್ಲಿ ದೋಷಗಳ ಹೊರೆಯನ್ನೇ ಹೊರಿಸಿರುತ್ತಾರೆ. ಪುರುಷರಿಲ್ಲದೆ ಅವರ ನಿರ್ವಾಹವೇ ಸಾಧ್ಯವಿಲ್ಲವೆಂದಿರುತ್ತಾರೆ. "ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ—" ಎಂದು ಮುಂತಾಗಿ ಸ್ತ್ರೀಯರನ್ನು ಪರಾವಲಂಬಿ ವ್ಯಕ್ತಿಗಳನ್ನಾಗಿ ಹೇಳಿರುತ್ತಾರೆ. ಹಾಗಾದರೆ ಪುರುಷರಿಲ್ಲದೆ ಸ್ತ್ರೀಯರಿಗೆ ಸ್ಥಾನವೇ ಇಲ್ಲವೆಂದಾಯಿತು. ಎಂದ ಮೇಲೆ ಅವರಿಗೆ ವ್ಯಕ್ತಿತ್ವವೆಲ್ಲಿ! ಆತ್ಮನಿರ್ಭರತೆಯಿಲ್ಲದ ವ್ಯಕ್ತಿ ಸ್ವತಂತ್ರರಾಗಲಾರರು. ಆದುದರಿಂದ ಪರಾವಲಂಬಿ ವ್ಯಕ್ತಿಗಳು ಸಚ್ಚರಿತರಾಗಿರುವುದೆಂತು? ಇಂತು ಶಾಸ್ತ್ರಕಾರರು ನಿರ್ದಾಕ್ಷಿಣ್ಯವಾಗಿ ಸ್ತ್ರೀಯ ವ್ಯಕ್ತಿತ್ವವನ್ನು ಅಲ್ಲಗಳೆದಿರುತ್ತಾರೆ. ಅಷ್ಟಕ್ಕೇ ನಿಲ್ಲಲಿಲ್ಲ. ಸ್ತ್ರೀಯರು ಅಹಂಭಾವಿಗಳೆಂಬ ದೋಷ ಬೇರೆ. ಸ್ವಾರ್ಥಿಗಳೆಂಬ ಟೀಕೆಯೂ ಇದೆ. ದಯಾ, ಕೋಮಲತೆಗಳ ಮೂರ್ತಿಗಳೆಂದಿದ್ದರೂ ಮೇಲಿನೆರಡು ದೋಷಗಳು!

ಜರ್ಮನಿಯ ದಾರ್ಶನಿಕನಾದ ಶೋಪೆನ ಹಾರನು ಸ್ತ್ರೀಯರನ್ನು ನಿಂದಿಸಿದುದನ್ನು ಕೇಳಿದರಂತೂ ರೋಮಾಂಚವುಂಟಾಗುತ್ತದೆ. ಸ್ತ್ರೀಯರಲ್ಲಿ ವಿಲಾಸತೆ, ಶೃಂಗಾರಾಧಿಕ್ಯ, ಶರೀರಪೋಷಣೆ, ಅನಾವ್ಯಯ, ವಸ್ತ್ರಾಭರಣಗಳ ಲಾಲಸೆ ಇನ್ನಿತರ ಇಂತಹ ಅನೇಕ ದೋಷಗಳನ್ನು ಹೊರಿಸಿರುತ್ತಾರೆ. ಅನ್ನಕಾಣದ ಬಡವೆಯಾದರೂ ಒಡವೆಯಾಸೆ ಬಿಟ್ಟವಳಲ್ಲ ಎಂಬ ಉದ್ಗಾರಕ್ಕೆ ಕೊರತೆಯಿಲ್ಲ. ಕಲಾಕಾರರಾದರೋ ಸ್ತ್ರೀಯರನ್ನು ಪತಂಗವೆಂದಿದ್ದಾರೆ. ಮಾಯಾ ಮಂದಿರ, ಸಂಸಾರ ಬಂಧನಗಳ ಮೂಲವೆಂದಿದ್ದಾರೆ. ಇದನ್ನೆಲ್ಲ ಒಪ್ಪಿದರೆ ಸ್ತ್ರೀಯರಿಗೆ ವ್ಯಕ್ತಿತ್ವವೇ ಇಲ್ಲವೆಂದ ಹಾಗಾಯಿತು. ವ್ಯಕ್ತಿತ್ವಕ್ಕಿರಬೇಕಾದ ಗುಣಗಳು ಮೂರು. ಸರಳತೆ, ಐಕ್ಯತೆ ಮತ್ತು ಆತ್ಮನಿರ್ಭರತೆ. ಈ ಮೂರು ಗುಣಗಳಿಲ್ಲದ ವ್ಯಕ್ತಿ ಶರೀರಧಾರಿಯಲ್ಲ, ಕೇವಲ ಮುಳ್ಳುಬೂರಗದ ಮರವೇ ಸರಿ! ಇದರ ಕಾರಣವೇನು? ಸ್ತ್ರೀಯರು ಪ್ರಚಲಿತ ಸಮಾಜದಲ್ಲಿ ಯಾವುದೇ ಆದರೂ ಸ್ಥಾನ ಪಡೆದಿದ್ದರೆ ಅದಕ್ಕೆ ಸಮಾಜವೇ ಹೊಣೆ. ವ್ಯಕ್ತಿಯು ಯಾರೇ ಇರಲಿ, ಸಮಾಜಕ್ಕನುಕೂಲವಾಗಿ ನಡೆಯಲೆತ್ನಿಸುತ್ತಾನೆ. ಹಾಗೆಯೇ ಸ್ತ್ರೀಯರು ಸ್ವಲ್ಪ ಅವಗುಣಗಳಿಗೆರಗಿದರೆ ಅದು ಅವರ ತಪ್ಪಲ್ಲ. ಅವರು ಸ್ವಾವಲಂಬಿಗಳಾಗಲು, ಪ್ರಗತಿಶೀಲರಾಗಲು ಸಮಾಜ ಸರಿಯಾದ ಎಡೆಗೊಟ್ಟಿಲ್ಲ. ಕುಪಮಂಡೂಕತೆ ಮತ್ತು ವಿಲಾಸಪ್ರಿಯತೆಗೆ ಪುರುಷರೇ ಕಾರಣರು. ತಮ್ಮ ಸ್ತ್ರೀಯರನ್ನು ನಾರಿಯರಂತೆ ಶೃಂಗರಿಸಿ ತೃಪ್ತಿಪಡುವ ಪತಿಯರು ಎಷ್ಟು ಮಂದಿ ಭಾರತದಲ್ಲಿಲ್ಲ? ಮದುವೆಯ ಮಂಟಪದಲ್ಲಿ ವಧುವಿನ ಮೂಗುತಿಯನ್ನಿಳಿಸಿದ ಗಂಡನನ್ನು ನಾನು ಬಲ್ಲೆ. ಕುಂಕುಮವು ಚಿಕ್ಕದ ಗಂಡನ ವಿಷಯವಾಗಿಯೂ ಕೇಳಿಬಲ್ಲೆ. ಪುರುಷರ ಬಯಕೆಯಿಂದಲೇ ಸ್ತ್ರೀಯರ ಶೃಂಗಾರ ಹೆಚ್ಚುತ್ತಿದೆ. ತಮ್ಮ ವಿಲಾಸ ವೃತ್ತಿಯನ್ನವರು ಸ್ತ್ರೀಯರ ಮೇಲೆ ಹೇರುತ್ತಾರೆ. ಸರಳಮುಗ್ಧೆಯರು ಅದರ ಭಯಂಕರ ಪರಿಣಾಮವನ್ನರಿಯದೆ ಶೃಂಗಾರಕ್ಕೆ ಬಲಿಬೀಳುವರು. ಈ ಶೃಂಗಾರ ಪ್ರಿಯತೆಯಿಂದ ಮಡದಿ ಗಂಡನ ಕೈಗೊಂಬೆಯಾಗಿ ವ್ಯಕ್ತಿತ್ವವನ್ನು ಕಳೆದುಕೊಳ್ಳುತ್ತಾಳೆ.

ಶಿಕ್ಷಣದ ಕೊರತೆ-ಪದವೀಧರೆಯರೆಂದ ಮಾತ್ರಕ್ಕೆ ಶಿಕ್ಷಿತೆಯರೆನ್ನಲಾಗುವುದಿಲ್ಲ-ಅಧೀನತೆ, ಸ್ವಾವಲಂಬನೆಯಿಲ್ಲದಿರುವಿಕೆ ಮುಂತಾದ ದೌರ್ಬಲ್ಯಗಳು ಸಮಾಜ ದೋಷದಿಂದುಂಟಾಗಿವೆ. ಮುಂದೆ ಅದನ್ನೇ ಬಾಳಿನಲ್ಲಿ ಬೆರೆಸಿಕೊಂಡರೆ ಅದಕ್ಕೆ ಅವರೇ ಹೊಣೆಯಾಗಬೇಕಾಗುವುದು ಅನ್ಯಾಯ. ಆಂತರಿಕ ಪ್ರವೃತ್ತಿಯು ಸ್ತ್ರೀಯರೂ ಇಲ್ಲದಿಲ್ಲ. ಅದಕ್ಕೆ ಅವರ ಅಜ್ಞಾನವೇ ಕಾರಣವೆಂದು ಬೇರೆ ಹೇಳಬೇಕಾಗಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಸ್ತ್ರೀಯರು ವ್ಯಕ್ತಿತ್ವವನ್ನಿಟ್ಟುಕೊಳ್ಳಬಲ್ಲರೆ? ಹೇಗೆ? ಅದು ಅತ್ಯಮೂಲ್ಯ ವಸ್ತು. ತಮ್ಮ ಅಸ್ತಿತ್ವವನ್ನೇ ಅರಿಯದವರು ವ್ಯಕ್ತಿತ್ವವನ್ನು ಹೇಗೆ ಉಳಿಸಿಕೊಳ್ಳಬಲ್ಲರು?

ಉತ್ತರ! ಹಿಂದೂಸ್ಥಾನದಲ್ಲಂತೂ ಸ್ತ್ರೀಯರು ಹಣ ಕಾಸುಗಳಂತೆ ಅಪಹರಿಸಲ್ಪಡುತ್ತಾರೆ. ಅಂಥವರಿಗೆಲ್ಲಿದೆ ವ್ಯಕ್ತಿತ್ವ? ತನ್ನ ಉನ್ನತಿ, ಅಧಿಕಾರಗಳ ಚಿಂತೆಯಿಲ್ಲದ ಗಂಡಸರನ್ನೇ ದೇವರೆನ್ನುವ ಸ್ತ್ರೀಯರಿಗೆಲ್ಲಿಂದ ವ್ಯಕ್ತಿತ್ವವಿರಬೇಕು? ಚರಿತ್ರೆಯು ಚಾಂದಬೀಬಿ, ಝಾನ್ಸಿರಾಣಿ, ರಜಿಯಾ, ವಿಕ್ಟೋರಿಯ ಮುಂತಾದವರು ಗಂಡಸರನ್ನೇ ಬೆರಳು ಕಚ್ಚಿಸುವಂತೆ ಮಾಡಿದುದರಿಂದಲೇ ಅವರ ವ್ಯಕ್ತಿತ್ವ ಇಂದಿಗೂ ಉಳಿದಿದೆ.

ವಿವಾಹವಿಲ್ಲದ ಜೀವನವು ಅಪೂರ್ಣವೆಂಬುದು ವಿಲಾಸಿಗಳ ವಾದ. ಮದುವೆಯ ಮರೆಯಲ್ಲಿ ಇಪ್ಪತ್ತನಾಲ್ಕು ತಾಸುಗಳಲ್ಲೂ ಸಮಾಜವನ್ನು ದೂಷಿತ ಮಾಡುವ ವ್ಯಕ್ತಿಗಳ ಜೀವನವು ಗುರಿ ಮುಟ್ಟಿದುದೆಂದು ಯಾರು ತಾನೆ ಹೇಳಬಲ್ಲರು? ಅರವತ್ತರ ಮುದುಕನು ಚಿಕ್ಕ ಹುಡುಗಿಯನ್ನು ಮದುವೆಯಾದರೆ ಆ ಜೀವನದ ಸಾಫಲ್ಯವೇನು? ಹಿಟ್ಲರನು ಮದುವೆಯಾಗಿದ್ದಿಲ್ಲ. ಆತನು ಪ್ರಪಂಚಾನುಭವಶೂನ್ಯನಾಗಿದ್ದನೆ? ಆತನ ಜಗತ್ಪ್ರಸಿದ್ಧತೆಗೆ ಮದುವೆ ಕಾರಣವಾಯಿತೆ? ಜೀವನಸಾಫಲ್ಯಕ್ಕೂ, ಸ್ತ್ರೀ ಪುರುಷರ ಸಹಯೋಗಕ್ಕೂ ಸಂಬಂಧವಿಲ್ಲ. ಹಾಗಿರುತ್ತಿದ್ದರೆ ಬುದ್ಧನು ತನ್ನ ಸ್ತ್ರೀಯನ್ನು ಬಿಟ್ಟು ಕಾಡಿಗೋಡುತ್ತಿರಲಿಲ್ಲ.

ವ್ಯಕ್ತಿತ್ವವು ಯಾರ ಸಹಾಯದಿಂದಲೂ ಉಂಟಾಗದು. ಸ್ತ್ರೀಯರ ವ್ಯಕ್ತಿತ್ವದಲ್ಲಿ ಕೊರತೆಯಿದ್ದರೆ ಅದು ಪುರುಷರ ಅವಲಂಬನೆಯಿಂದಾಗಿ. ಅವರಿಗೆ ರಕ್ಷಣೆ, ಭರಣ, ಪೋಷಣ ಮತ್ತು ವಸ್ತ್ರಾಭರಣ ಬೇಕು. ಆದುದರಿಂದ ಪುರುಷರು ಬೇಕು. ಪುರುಷರಿಲ್ಲದ ಜೀವನ ಶೂನ್ಯವೆಂದೇ ತಿಳಿದರೆ ಸ್ತ್ರೀಯರ ಉನ್ನತಿ ಎಂದೆಂದಿಗೂ ಆಗದು. ವ್ಯಕ್ತಿತ್ವವೂ ಇರದು. ನಮ್ಮ ಹುಚ್ಚು ಒಂಟಿಯಾಗಿಯೆ ಆಗುತ್ತದೆ. ನಾವು ಕೂಡ ಹಾಗೆಯೇ. ವ್ಯಕ್ತಿಯು ತನ್ನ ಉನ್ನತಿ-ಅವನತಿಯ ಯೋಚನೆಯನ್ನು ತಾನೇ ಮಾಡಬೇಕು. ಪುರುಷರ ಮೇಲಿನ ಭರವಸೆಯಿಂದಲೇ ಸ್ತ್ರೀಯರ ವ್ಯಕ್ತಿತ್ವವು ಅಳಿಯಿತು. ಆದುದರಿಂದ ಶೋಪೇನಹಾರನು, 'ಸ್ತ್ರೀಯರು ಯಾವ ವಸ್ತುವಿನಲ್ಲೂ ತಮ್ಮ ಸ್ವತಂತ್ರವಾದ ನಿಷ್ಠೆ ಇಟ್ಟವರಲ್ಲ. ಕಲಾರೂಪದಲ್ಲಿ ಸ್ತ್ರೀಯರು ಸಂಸಾರಕ್ಕೆ ಒಂದು ವಸ್ತುವನ್ನಾದರೂ ಕೊಟ್ಟಿಲ್ಲವೆಂಬುದು ಇಂದಿನವರೆಗಿನ ಇತಿಹಾಸದಿಂದ ತಿಳಿಯುತ್ತದೆ. ಸ್ತ್ರೀಯರ ಒಂದಾದರೂ ಅಮರ ಕೀರ್ತಿಯು ವಿಶ್ವದ ಯಾವ ಮೂಲೆಯಲ್ಲೂ ಕಾಣುವುದಿಲ್ಲ' ಎನ್ನುವನು. ಈ ಅಪಮಾನಕರವಾದ ಉದ್ಗಾರಕ್ಕಾಗಿ ಶೋಪೇನಹಾರನನ್ನೇಕೆ ದೂಷಿಸಬೇಕು? (ಕಥಾವಳಿ)


Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?
ಪ್ರೊಪ್ರೈಟರ್:—ಕೆ. ವೆಂಕಟ್ರಮಣಭಟ್.
For up-to-date Lodging & Boarding
ROYAL MAHAL,
UDIPI, S. Kanara.

ಭಾರದ್ವಾಜರ
ಇಂಗ್ಲಿಷ್ × ಇಂಗ್ಲಿಷ್ × ಕನ್ನಡ
ಡಿಕ್ಷನರಿಗಳು
ದೊರೆಯುತ್ತವೆ.
ಬೆಲೆ ರೂ ೬ ೦ ೦
ಸಿರಿಗನ್ನಡ ಅರ್ಥಕೋಶ ೪ ೮ ೦
ನವಯುಗ ಪ್ರೆಸ್, ಉಡುಪಿ


Edited, Printed & Published by K. H. Shetty at the Navayuga Press, Udipi, S. India

egd. No. M. 3618

Estd: 1921 ಸ್ಥಾಪನೆ

30ನೇ ವರ್ಷ
25—5—1950

LICENCE No. 31
Licensed to Post
without Prepayment

FOUNDER:
Sri. A. B. Shetty
Minister for Agriculture
& Veterinary

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30
ವಾರ ೩೯

# NAVAYUGA WEEKLY UDIPI, S. K.

Post Box No. 22

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol 30
No. 39

# ಇಂದು ಮತ್ತು ನಾವು

ಕಾಲಗರ್ಭದಲ್ಲಿ ಮತ್ತು ಮಹಾ...ಕ್ತಿಗಳ ಹೃದಯಾಂತರಾಳದಲ್ಲಿ ಏನೆ... ಹುದುಗಿರುವದೆಂಬುದು ಊಹಾ...ತ ವಿಷಯ. ಆದ್ದರಿಂದಲೇ ಸಾಮಾ...ತಃ ನಿರೀಕ್ಷಿಸಿರದ, ಅರಿಸದ ಸಂಗತಿ...ಷ್ಟೋ ನಡೆದು ಹೋಗುತ್ತವೆ. ಈ ...ಜ್ಞಾನ ಯುಗದಲ್ಲಿಯೂ ಶೋಧನೆ...ಸಿಕ್ಕದಿರುವ—ಅಂದಾಜು ತಪ್ಪಿ ಹೆಚ್ಚು ...ಾ ಕಡಿಮೆ ತೋರಿ ಬರುವ-ಸಂಗತಿಗಳೆಂ...ರೆ ಭವಿಷ್ಯದ ಘಟನೆಗಳು ಮತ್ತು ಅಸಾ...ನ್ಯರ ಅಂತರ್ಯ.

ಇಂದು ಮುಹೂರ್ತ ಭವಿಷ್ಯದಿಂದ ...ರಂಭಿಸಿ ವರುಷ ಭವಿಷ್ಯದ ವರೆಗೆ ಹೇಳ...ಲ್ಲವರು ಎಲ್ಲೆಲ್ಲೂ ಸಿಗುತಿದ್ದಾರೆ. ...ಜಕೀಯ ಭವಿಷ್ಯಗಳನ್ನಾಡುವ ಜೋ...ಯಸರುಗಳ ಹೊಸ ವರ್ಗವೊಂದು ಕೆಲವು ...ರುಷಗಳಿಂದ ನಮ್ಮ ನಡುವೆ ಮೂಡಿ...ಕೊಂಡಿದೆ. ಅನುಭವ ಮತ್ತು ವಾಸನೆ...ಬಲದಿಂದ ಇತರ ಭಾವೀ ಘಟನೆಗಳಂತೆ ...ಯ ರಾಜಕೀಯ ಭವಿಷ್ಯವನ್ನೂ ಕೆಲ...ಮಟ್ಟಿಗೆ ಸರಿಯಾಗಿ ಊಹಿಸಬಲ್ಲವರೂ ...ದ್ದಾರೆ. ಆದರೂ ಯಾರೂ ನಿರೀಕ್ಷಿಸಿ...ದಂತಹ ಆಶ್ಚರ್ಯಕರ ವಿಶೇಷ ಸಂಗತಿ...ಗಳು ನಡೆದುಹೋಗುತ್ತವೆ, ಎಂಬುದಂತೂ ...ಸಿದ್ಧ. ಪ್ರಾಪಂಚಿಕ ಆಗುಹೋ...ಗಳು ಮಾನವನ ಬುದ್ಧಿ ಮತ್ತು ಶಕ್ತಿಗೆ ...ಮೀರಿದವುಗಳಾದ್ದರಿಂದಲೇ 'ಅಮಾನು...' 'ಆಶ್ಚರ್ಯ' 'ಅತಿ ಮಹತ್ವ' 'ಅದ್ಭು...' 'ಅಕಸ್ಮಾತ್' ಮುಂತಾದ ಪದಗಳು ಉ...ಟಾಗಿಕೊಂಡಿವೆ.

...ಲೋಕದಲ್ಲೇ ಅತಿಹೆಚ್ಚಿನ ಊಹಾ...ಲ, ಯೋಚನಾಶಕ್ತಿಯುಳ್ಳ ಎಲ್ಲರ ಮ...ಗಳೂ ಒಂದಲ್ಲೊಂದು ವಿಧಾನದಿಂದ ಕ...ಸ ಮಹಾಯುದ್ಧದ ಸಿದ್ಧತೆ ಮತ್ತು ...ಲಕತ್ವದಲ್ಲಿ ವ್ಯಯಿಸಿದ್ದಿತು. ಆದರೆ ...ಯುದ್ಧದ ಸ್ಥಿತಗತಿಗಳನ್ನು ಸೂಕ್ಷ್ಮ...ಾಗಿ ಅವಲೋಕಿಸುವಾಗ ಸಂಪೂರ್ಣವಾ...ಯಾರ ಯಾವ ಅಂದಾಜಿನಂತೆಯೂ ...ನಡೆಯಲಿಲ್ಲವೆಂಬುದು ಸ್ಪಷ್ಟವಿದೆ.

ಪ್ರಥಮ ಜಾಗತಿಕ ಯುದ್ಧದಿಂದ ಪಾ...ರ್ಜಿತವಾಗಿದ್ದ ಜರ್ಮನಿಯನ್ನು ಉ...ರಿಸಿ, ಅತ್ಯಂತ ಶಕ್ತಿವಾನ್ ...ನಾಂಗ ಜರ್ಮನರಿಗೆ ಲೋಕದ ...ಸರ್ವೋತ್ಕೃಷ್ಟಸ್ಥಾನ ದೊರಕಿಸಿ ಕೊ...ಡಬೇಕೆಂಬ ಉದ್ದೇಶದಿಂದ ಹಿಟ್ಲರನು ...ಯಾವ ಪ್ರಮಾದಕ್ಕೂ ಎಡೆಕೊಡದೆ ಕೆ...ಲವು ವರುಷಗಳಲ್ಲಿ ಅಸಾಧಾರಣ ಸಂಘ...ನೆ ಮತ್ತು ಶಕ್ತಿವರ್ಧನೆ ಮಾಡಿದ್ದ.

ಮನುಷ್ಯ ಶಕ್ತಿ ಮತ್ತು ಬುದ್ಧಿಯು ಪೂರ್ಣಗೊಳ್ಳಲು ಸಾಧ್ಯವಿರುತ್ತಿದ್ದರೆ ಮನುಷ್ಯ ಸಾಧ್ಯ ಪ್ರಯತ್ನಗಳೆಲ್ಲವನ್ನೂ ಮಾಡಿದ್ದ ಹಿಟ್ಲರನು ಎಂದಿಗೂ ಪರಾಭವಗೊಳ್ಳುತ್ತಿರಲಿಲ್ಲ. ಆದರೆ ಲೋಕವು ವ್ಯಕ್ತಿಗಳ ನಿಯಂತ್ರಣಕ್ಕೊಳಗಾಗುವಂತಹುದಲ್ಲ; ಭವಿಷ್ಯವು ಯಾರ ಅರಿತೆಗೂ ಸಿಗುವಂತಹುದಲ್ಲ; ಮನುಷ್ಯ ಸಾಧ್ಯ ಸಾಹಸವೆಲ್ಲವನ್ನು ಪ್ರದರ್ಶಿಸಿದ ಹಿಟ್ಲರನಿಗೂ ಇವು ಎಟಕದೆ ಹೋದುವು.

ಹಿಟ್ಲರನು ಮಾತ್ರವೆಂದೇನು? ಲೋಕದಲ್ಲೇ ಚತುರರೆಂದು ಹೆಸರಾದ ಬ್ರಿಟಿಷರು ಆ ಯುದ್ಧದ ಕುರಿತು ಆದಿ ಭಾಗದಲ್ಲಿ ತಪ್ಪು ಅಂದಾಜು ವಹಿಸಿದ್ದುದರಿಂದಲೇ, ಲಂಡನ್ ನಗರ ಧ್ವಂಸವಾಯಿತು; ಬ್ರಿಟಿಷ್ ಸಾಮ್ರಾಜ್ಯವೇ ಬರ್ಖಾಸ್ತಾಗಿ ಹೋಗುವಷ್ಟು ದೊಡ್ಡ ಹೊಡೆತ ಬೀಳುವಂತಾಯಿತು. ಕೆಲವು ವರುಷಗಳಿಂದ ನಾಜೀ ಜರ್ಮನಿಯು ಮಾಡುತಿದ್ದ ಯುದ್ಧ ಸನ್ನಾಹಗಳನ್ನು ಕಾಣುತಿದ್ದರೂ ಮುಂಜಾಗರೂಕತೆಗೆ ಹೆಸರು ಹೋಗಿರುವ ಬ್ರಿಟಿಷರು ಆ ಕಡೆಗೆ ಸಾಕಷ್ಟು ಗಮನವೀಯದೆ ಆಲಸ್ಯ ವಹಿಸಿ, ನಾಜಿಗಳ ಆಕಾಶ ಧಾಳಿಯಿಂದ ನುಚ್ಚು ನೂರಿಗೊಂಡುದನ್ನು ನೆನಸುವಾಗ ಆಶ್ಚರ್ಯವಾಗುತ್ತಿದೆ. ಹಿಟ್ಲರನು ರಶ್ಯದ ಮೇಲೆಯೇ ಬೀಳುವನೆಂದೋ, ಏನೆಂದರೂ ಕೊನೆಗೆ ಸಂಧಾನವೇ ಆದೀತು ಹೊರತು ಯುದ್ಧವಾಗಲಾರದೆಂದೋ ತಪ್ಪು ಕಲ್ಪನೆ ಮಾಡಿಕೊಂಡು ಅವರು ಅಂತಹ ಅನಾಹುತಕ್ಕೀಡಾಗಿದ್ದರು.

ಅದೇ ರೀತಿ, ಕಳೆದ ಮಹಾ ಯುದ್ಧದ ಆದಿಯಲ್ಲಿ ನಡೆದ ರಶ್ಯಾ ಜರ್ಮನಿ ಒಪ್ಪಂದವನ್ನು ಅದರ ಮೊದಲ ದಿನದ ವರೆಗೂ ಯಾರಾದರೂ—ಸ್ವತಃ ಸ್ಟಾಲಿನ್ ಅಥವಾ ಹಿಟ್ಲರನಾದರೂ—ನಿರೀಕ್ಷಿಸಿದುದಿದೆಯೆ? ಕೊನೆಗೆ ರಶ್ಯದ ಮೇಲೆ ಜರ್ಮನಿಯು ಆ ರೀತಿ ಧಾಳಿ ನಡೆಸಬಹುದೆಂದು ಊಹಿಸಿದವರಿದ್ದಾರೆಯೆ? ಹಿಟ್ಲರನ ಆದಿ ಭಾಗದ ಪ್ರತಾಪ ಪ್ರಭಾವವನ್ನು ಕಂಡ ಮೇಲೆ ಕೊನೆಯ ಭಾಗದಲ್ಲಿ ಅವನು ಅಂತಹ ಪರಾಭವ ಹೊಂದಬಹುದೆಂದು ಯಾರಾದರೂ ನಂಬಿದ್ದರೆ? ಅಂತೂ ಮನುಷ್ಯ ಎಷ್ಟೇ ಬೆಳೆದರೂ ವಿಶ್ವಾಕಾರ ಹೊಂದಲಾರ; ಮಾನವ ಶಕ್ತಿ ಎಷ್ಟು ವಿಕಾಸಗೊಂಡರೂ ಪ್ರಾಪಂಚಿಕ ವಿಷಯಗಳೆಲ್ಲವನ್ನೂ ಆಕ್ರಮಿಸಿ ಹಿಡಿದುಕೊಳ್ಳಲಾರದು.

ಬ್ರಿಟಿಷರಿಗೆ ಭಾರತವೇನೂ ಕಾಯಂ ಹಕ್ಕಿನದಲ್ಲವೆಂಬುದು ಖಚಿತವಿದ್ದರೂ 1947ನೇ ಆಗೋಸ್ತು 15ರಲ್ಲಿಯೇ ಅವರು ಅಧಿಕಾರಬಿಟ್ಟು ಹೊರಟುಹೋಗುವರೆಂದು ಅಂದಿಗೆ ಆರು ತಿಂಗಳ ಮೊದಲು ಯಾರು ನೆನಸಿದ್ದರು? ಮಿ. ಜಿನ್ನರ ಆರ್ಭಟೆಗಳಲ್ಲಿ ಮಾತ್ರ ಆಕಾರಗೊಂಡು ತೋರುತಿದ್ದ ಪಾಕಿಸ್ತಾನವು ಎಷ್ಟೋ ಕಾಲ ಅಂತಹ ಕನಸಾಗಿಯೇ ಉಳಿಯುವಂತಹದೆಂದಲ್ಲದೆ 47ನೇ ಆಗೋಸ್ತು ಮಧ್ಯದಲ್ಲಿ ಪ್ರತ್ಯಕ್ಷ ಮೂಡಿ ನಿಲ್ಲುವಂತಹದೆಂದು ಯಾರು ಬಗೆದಿದ್ದರು?

1948ನೇ ಜನವರಿ 30ರ ಅಪರಾಹ್ನ 4-40ರ ಹೊತ್ತಿಗೆ ತಾನು ಹಾಗಾಗುವೆನೆಂಬುದನ್ನು ತ್ರಿಕಾಲ ಜ್ಞಾನಿ ಮಹಾತ್ಮರಾದರೂ ಊಹಿಸಿದ್ದರೆ? ಮಾರಣೇ ದಿನದ, ಮರುಕ್ಷಣದ ಸಂಭವಗಳ ಛಾಯೆ ಮಾತ್ರವಾದರೂ ಚಿತ್ತ ಪಟಲದಲ್ಲಿ ಮೂಡುತಿದ್ದರೆ ಪಂಜಾಬು, ಬಂಗಾಳ, ಮತ್ತಿತರ ಕಡೆಗಳ ಆ ಸಹಸ್ರಾರು ಮಂದಿ ಆ ರೀತಿ ಸಾಯುತಿದ್ದರೆ?

ಅಂತೂ 'ಭವಿಷ್ಯ ಹೀಗೆಯೇ' 'ಭಾವೀ ವ್ಯವಸ್ಥೆ ಇದು' ಎಂದು ಖಂಡಿತಮಾಡಿಕೊಳ್ಳಲು ಯಾವ ಸಂಬಂಧದಲ್ಲಾದರೂ ಯಾರಿಂದಾದರೂ ಅಸಾಧ್ಯ. ಭವಿಷ್ಯವು ನಂಬುಗೆಗರ್ಹವಾದುದಲ್ಲ. "ಗತಕಾಲದ ಲೋಪದೋಷಗಳನ್ನು ಮರೆತು ಬಿಟ್ಟು, ಪ್ರಚಲಿತ ಕುಂದು ಕೊರತೆಗಳನ್ನು ನಿವಾರಿಸಿಕೊಂಡು ಭವಿಷ್ಯದತ್ತ ದೃಷ್ಟಿಯಿಡೋಣ" ಎಂಬ ಉಪದೇಶಗಳನ್ನಿಂದು ರಾಷ್ಟ್ರ ನಾಯಕರಿಂದ ಕೇಳುತಿದ್ದೇವೆ—ತಪ್ಪಲ್ಲ. ದಿನದ ನಮ್ಮ ಪಾಲಿನ ಕರ್ತವ್ಯಗಳನ್ನು ನಾವಿಂದೇ ಸರಿಯಾಗಿ ನಿರ್ವಹಿಸಿಕೊಂಡರೆ, ಭವಿಷ್ಯವು ತಾನಾಗಿ ಭದ್ರ, ಭವ್ಯವಾಗುವದೆಂಬ ಸೂಚನೆಯಿಲ್ಲದೆ ಹೊರತು, ಇಂದೇ ನಾವು "ನಾಳೆ"ಯ ಆಕಾಶದಲ್ಲಿ ವಿಹರಿಸಬೇಕೆಂಬ ಬೋಧನೆಯಲ್ಲ. ನಾವು ಇರಬೇಕಾದ ರೀತಿಯಲ್ಲಿ ಇದ್ದರೆ ನಮ್ಮ ಪಾಲಿನ ಭವಿಷ್ಯ ಕೂಡಾ ಹೇಗಿರಬೇಕೋ ಹಾಗಾದೀತೆಂಬುದೊಂದೇ ಇದರ ಸಾರ. 'ಭವಿಷ್ಯಗೆಲ್ಲನ್ನಾಧರಿಸಿ ನಿಲ್ಲಿ—ಈಗಿನ ನೆಲ ಬಿಡಿ' ಎಂದು ಯಾರೂ ಹೇಳಲಾರರು. ಗತಕಾಲದ ಘಟನೆಗಳ ಅನುಭವಸಾರವನ್ನಲ್ಲದೆ, ಅವುಗಳ ಸಿಹಿಕಹಿಗಳನ್ನು ಕಟ್ಟಿಕೊಳ್ಳಕೂಡದೆಂಬುದೆಂತೂ ಉಪಯುಕ್ತ ಬೋಧೆ.

ಈ ವಿಚಾರ ಮಂಥನದ ಸಾರಾಂಶವಿಷ್ಟೆ:—'ಇಂದು ಮುಂದಿನ ವಿಚಾರ ವಿಕಾರಗಳಿಗೆ ಕಟ್ಟುಬೀಳದೆ ನಿರ್ವಿಕಾರ ಬುದ್ಧಿಯಿಂದ ಪಾಲಿಗೆ ಬರುವ ಕರ್ತವ್ಯ ನಿರ್ವಹಿಸಬೇಕಾದ್ದು.'

"ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

## ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು—ದಿ। ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥಸ್ವಾರಸ್ಯ ಮಾತುಗಾರಿಕೆಯು ಮಾತುಗಳ ರೂಪದಲ್ಲೇ ಭಟ್ಟಿಯಾಗಿ ಎದ್ದು ಕಾಣುವುದು.

**400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.**

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

**ನವಯುಗ ಪ್ರೆಸ್, ಉಡುಪಿ, ದ. ಕನ್ನಡ.**

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

ಹೀಗೆ ನಿಜಕ್ಕೂ ತಮ್ಮ ಪಾಲಿನದಾಗಿರುವ ಕರ್ತವ್ಯವೇನು? ಪ್ರಾಮಾಣಿಕ ಶಕ್ತಿ ಮತ್ತು ಊಹೆಗೆ ನಿಲುಕದೆ ನಡೆದುಹೋದಂತಹ ತಪ್ಪು-ಸರಿ ಸಂಗತಿಗಳಾವುವು? ಎಂಬ ಶುದ್ಧ ತಿಳುವಳಿಕೆ ಇಲ್ಲದೇನೇ ಇಂದು ದ್ವೇಷ, ನಿಂದೆ, ಸ್ಪರ್ಧೆಗಳು ಹುಟ್ಟಿಕೊಂಡಿವೆ. ಆಧುನಿಕ ಭಾರತದ ರಾಜಕೀಯ ರಂಗದ ಪ್ರಮಾದಗಳಿಗೆಲ್ಲಾ, ಈ ಕರ್ತವ್ಯಶುದ್ಧತೆಯ ಮತ್ತು ತಿಳುವಳಿಕೆಯ ಅಭಾವವೇ ಕಾರಣ. ಗೃಹಕಲಹ; ಖಾಸಗೀ ಜಗಳಗಳ ಮೂಲವೂ ಇದೇ.

ಸ್ವಾತಂತ್ರ್ಯ ಸಂಪಾದನೆ, ಪಾಕಿಸ್ತಾನ್ ಸ್ಥಾಪನೆ, ಜಾತೀಯ ಗೊಂದಲ, ಸ್ವಾತಂತ್ರ್ಯದ ಭದ್ರತೆ ಮತ್ತು ಅಸುರಕ್ಷಿತತೆ, ಆಹಾರ ಮತ್ತಿತರ ಸಾಮಗ್ರಿಗಳ ಅಭಾವ—ಮುಂತಾದ ಎಲ್ಲಾ ಉತ್ತಮಾಧಮ ವಿಷಯಗಳಲ್ಲೂ ಮನುಷ್ಯ ಶಕ್ತಿಗೆ ಮಿಕ್ಕಿದ ಕಾಲದ ಪ್ರಭಾವ ಮತ್ತು ಪ್ರಕೃತಿಯ ಆಟವಿದ್ದೇ ಇದೆ. ಆದ್ದರಿಂದ ಅವುಗಳಿಗಾಗಿ ಸಂಬಂಧವಿರುವ ಯಾವುದಾದರೂ ಪಕ್ಷ ಅಥವಾ ವ್ಯಕ್ತಿಗಳ ಶ್ಲಾಘನೆ ಇಲ್ಲವೇ ದೂಷಣೆ ಮಾಡುವುದು ಸರಿಯಲ್ಲ.

ಬ್ರಿಟಿಷರಾಡಳಿತೆಯ ಕಾಲದಲ್ಲಿ ಆಗುತಿದ್ದ ಲೋಪದೋಷಗಳನ್ನು ಖಂಡಿಸಿ, ಸ್ವಾತಂತ್ರ್ಯ ಬಂದರೆ ಇವೆಲ್ಲವೂ ಪರಿಹಾರವಾಗುವವೆಂದು ಕಾಂಗ್ರೆಸಿಗರು ಸಾರುತಿದ್ದಾಗ, ಆ ಸ್ವಾತಂತ್ರ್ಯವೆಂಬುದು ಇಂತಹ ಕಾಲದಲ್ಲಿ ಈ ಆಕಾರದಲ್ಲಿ ಬರಬಹುದೆಂದು ನೆನಸಿರಲಿಲ್ಲ. ಕಾಂಗ್ರೆಸಿಗರ ಆಗಿನ ಕಲ್ಪನೆಗೆ ಮೀರಿದ ತಡೆ, ಅನಾನುಕೂಲತೆಗಳೊದಗಿದುದರಿಂದಲೇ ಈಗ ಕಷ್ಟ ನಷ್ಟ, ಅತೃಪ್ತಿಗಳಿಗೀಡಾಗಬೇಕಾಗಿದೆ. ಇಂದಿನ ಕಾಂಗ್ರೆಸ್ ಆಡಳಿತೆಯ ಲೋಪದೋಷಗಳನ್ನು ಎತ್ತಿತೋರಿಸಿ, ತಮ್ಮ ಕಲ್ಪನೆಯ ಸ್ವರ್ಗ ಚಿತ್ರವನ್ನು ಮುಂದಿಡುತ್ತಿರುವ ಇತರ ಪಕ್ಷೀಯರೂ, ನಾಳೆ ತಾವು ಅಧಿಕಾರಕ್ಕೆ ಬಂದರೂ ಇದೇ ಅದೃಷ್ಟವೆಂದು ಈ ಅನುಭವದಿಂದ ಕಲಿತು ಸ್ವಕರ್ತವ್ಯಜ್ಞಾನದೊಡನೆ ತೂಕದ ನಡೆನುಡಿಗಳಿಂದ ಇರಬೇಕಾದುದು ಆಗತ್ಯ.

ಹಿರಿಯನ ಒಡೆತನದಿಂದ ದಂಗೆಯೇಳುವ ಕಿರಿಯನು ಸ್ವತಃ ಯಜಮಾನನಾದಾಗ, ಮೊದಲಿನವನಿಗಿಂತಲೂ ಹೆಚ್ಚಿನ ಪ್ರಮಾದಗಳನ್ನು ಮಾಡುವುದಿದೆ. ಧನಿಯಿದಿರು ಪ್ರಚಂಡ ಮುಷ್ಕರ ಹೂಡುವ ಕೆಲಸಗಾರನೇ ಮಾಲಕನಾದರೆ, ಆತನಿಗಿಂತ ಉಗ್ರವಾಗಿ ಈತನು ಮಜೂರರನ್ನು ದಬಾಯಿಸಿದ ನಿದರ್ಶನಗಳಿವೆ. ಹಿಂದಿನ ಅನುಭವಗಳನ್ನು ಮರೆತು, ಮುಂದಿನ ಬಯಲು ಸ್ವಪ್ನಗಳನ್ನು ಕಟ್ಟಿಕೊಂಡು, ಇಂದಿನ ಕರ್ತವ್ಯಗಳಲ್ಲಿ ತಪ್ಪಿ ಬೀಳುವ ಹವ್ಯಾಸವೇ ಈ ಅಸ್ವಸ್ಥತೆಗಳಿಗೆ ಕಾರಣ.

ಆದ್ದರಿಂದ ಈಗಿನ ಕರ್ತವ್ಯ ನಿರ್ವಹಣಾವಶ್ಯಕತ್ವವಿರುವಷ್ಟೇ ಗತಸ್ಮರಣೆ ಮತ್ತು ಭಾವೀಚಿಂತನೆ ಕಟ್ಟಿಕೊಂಡು ನಿರ್ವಿಕಾರಚಿತ್ತದಿಂದ, ಸರ್ವಶಕ್ತಿಯಿಂದ ಮುಂದೊತ್ತುವುದರಲ್ಲಿದೆ-ಮಾನುಷತ್ವ.


ಭಾರದ್ವಾಜರ

ಇಂಗ್ಲಿಷ್ × ಇಂಗ್ಲಿಷ್ × ಕನ್ನಡ

ಡಿಕ್ಷ್‌ನರಿಗಳು

ದೊರೆಯುತ್ತವೆ.

ಬೆಲೆ ರೂ 5 0 0

ಸಿರಿಗನ್ನಡ ಅರ್ಥಕೋಶ 4 8 0

ನವಯುಗ ಪ್ರೆಸ್, ಉಡುಪಿ.


# ಹಿಂದೀ ಕೇಂದ್ರ ಮಂತ್ರಿಮಂಡಲ–

ಪ್ರಕೃತದಲ್ಲೀಗ ನಿರೀಕ್ಷಿಸಿದ್ದಂತೆ ಭಾರತ ಜನ ಕೇಂದ್ರ ಮಂತ್ರಿ ಮಂಡಲದಲ್ಲಿ ವ್ಯಕ್ತಿ ವ್ಯತ್ಯಯ ಘಟನೆಗಳನ್ನು ಜರುಗಿಸಿಕೊಳ್ಳಲಾಯಿತು; ಪ್ರಧಾನಿಗಳ ಸೂಚನೆಯಂತೆ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿ ಮತ್ತು ಶ್ರೀ ಶ್ರೀ ಪ್ರಕಾಶರು ಕೇಂದ್ರ ಮಂತ್ರಿಗಳಾಗಿ ಭಾರತಾಧ್ಯಕ್ಷರಿಂದ ನೇಮಿಸಲ್ಪಟ್ಟಿದ್ದಾರೆ. ಇವರಿಬ್ಬರೂ ಈ ತಿಂಗಳಾಂತ್ಯದೊಳಗೆ ಅಧಿಕಾರ ಸ್ವೀಕರಿಸಲಿದ್ದಾರೆ. ನೇಮಿತ ಮಂತ್ರಿಗಳ ಪೈಕಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಕಣ್ಣು ನೋವು, ಜ್ವರ ಮತ್ತು ಬಲಶ್ವಾಸಕೋಶದ ರಕ್ತಾವರೋಧಕ್ಕೀಡಾಗಿ ಮದ್ರಾಸಿನಲ್ಲಿ ಚಿಕಿತ್ಸೆ ಪಡೆಯುತಿದ್ದಾರೆ; ಈಗ ಗುಣಮುಖವಾಗುತಿದ್ದಾರೆ. ಶ್ರೀ ಶ್ರೀ ಪ್ರಕಾಶರು ಅಸ್ಸಾಮಿನ ಗವರ್ನರ್. ಇವರ ಗವರ್ನರ್ ಸ್ಥಾನಕ್ಕೆ ಈತನಕ ಕೇಂದ್ರ ಸರಕಾರದ ಆಹಾರ ಮಂತ್ರಿಯಾಗಿರುವ ಶ್ರೀ ಜೈರಾಮ್‌ದಾಸ್ ದೌಲತರಾಮರು ನೇಮಿಸಲ್ಪಟ್ಟಿದ್ದು ಶ್ರೀ ಪ್ರಕಾಶ್–ದೌಲತರಾಮರ ಸ್ಥಾನ ಬದಲಾವಣೆಯೂ ಈ ತಿಂಗಳಾಂತ್ಯಕ್ಕೆ ನಡೆಯಲಿದೆ. ಇವರಿಬ್ಬರಲ್ಲದೆ ಮತ್ತಿಬ್ಬರು ಹೊಸ ಮಂತ್ರಿಗಳ ನೇಮಕ ಕೂಡಾ, ಪ್ರಧಾನ ಮಂತ್ರಿ ಪಂಡಿತ ನೆಹರುಗಳು ಇಂಡೋನೇಶಿಯಾ ಸಂಚಾರಕ್ಕೆ ಹೊರಡುವ ಮೊದಲೇ ಆಗಬಹುದೆಂದು ನಂಬಲಾಗಿದೆ. ಪ್ರತಿಯೊಬ್ಬ ಮೂಲ ಮಂತ್ರಿಗೊಬ್ಬನಂತೆ ಡಿಪ್ಯೂಟಿ ಮಂತ್ರಿಯನ್ನು ನೇಮಿಸಿಕೊಳ್ಳಬೇಕೆಂದಿದ್ದ ಆಲೋಚನೆಯನ್ನು ಸದ್ಯಕ್ಕೆ ಬಿಟ್ಟು ಬಿಡಲಾಗಿದೆ ಎಂದು ತಿಳಿದು ಬರುತ್ತದೆ. ಜೈರಾಮ್‌ದಾಸರದಾಗಿದ್ದ ಆಹಾರ ಖಾತೆಯನ್ನು ಶ್ರೀ ಕೆ. ಎಮ್. ಮುನ್ಶಿಗಳು ವಹಿಸಿಕೊಂಡಿದ್ದಾರೆ. ತನ್ನ ಗವರ್ನರ್ ಹುದ್ದೆಯನ್ನು ಜೈರಾಮ್‌ದಾಸರಿಗೆ ಕೊಟ್ಟು ಬರುವ ಶ್ರೀ ಪ್ರಕಾಶರಿಗೆ, ಶ್ರೀ ನಿಯೋಗಿಗಳು ಬಿಟ್ಟಿದ್ದ ವ್ಯಾಪಾರಖಾತೆಯು ದೊರೆಯುವದೆಂದು ತಿಳಿದುಬರುತ್ತದೆ. ರಾಜಾಜಿಗೆ ಯಾವ ಖಾತೆಯೆಂಬುದೀವರೆಗೆ ಪ್ರಕಟವಾಗಿಲ್ಲ. ಕೇಂದ್ರ ಮಂಡಲಿಯ ದೃಷ್ಟಿಪಥದಲ್ಲಿ ಈಗ ಮುಖ್ಯ ಕೊರತೆಯಾಗಿ

ಹಣಕಾಸು ಸ್ಥಾನದಿಂದ ಡಾ| ಜೋನ್‌ಮಥಾಯಿಗಳು ನಿರ್ಗಮಿಸಿದ ಬಳಿಕ ಅರ್ಥಮಂತ್ರಿ ಸ್ಥಾನಕ್ಕೆ ಯೋಗ್ಯನಾದ ಜನ ದೊರೆಯದಿರಲು ಕೊನೆಗೆ ಉತ್ತರ ಪ್ರದೇಶದ ಮುಖ್ಯ ಮಂತ್ರಿ ಪಂಡಿತ ಗೋವಿಂದ ವಲ್ಲಭ ಪಂತರನ್ನು ಅರ್ಥ ಮಂತ್ರಿಯಾಗಿ ಕರೆಸಿಕೊಳ್ಳುವ ಆತುರವು ಪಂಡಿತ ನೆಹರುಗಳದಿದ್ದಿತು. ಅಪೇಕ್ಷಿಸಲ್ಪಟ್ಟಂತೆ ಪಂಡಿತ ಪಂತರು ಆ ಬಾರಿಯ ಮಂತ್ರಿಮಂಡಲ ದುರಸ್ತಿಯ ವೇಳೆಯಲ್ಲಿ ನವದಿಲ್ಲಿಗೆ ಹೋಗಿ ತನ್ನ ಸ್ಥಿತಿಗತಿಗಳನ್ನು ನಿವೇದಿಸಿಕೊಂಡು ಬಂದಿದ್ದರು. ಕಳೆದ ವಾರದಲ್ಲೂ ಅವರು ಡಿಲ್ಲಿಗೆ ಹೋಗಿದ್ದರು. ಪಂತರ ರಾಜೀನಾಮೆಯಿಂದಾಗಿ ಖಾಲಿ ಬೀಳುವ ಉತ್ತರ ಪ್ರದೇಶದ ಸರಕಾರೀ ನಾಯಕತ್ವವನ್ನು ಅದೇ ರೀತಿ ತುಂಬಿಸಬಲ್ಲ ಬೇರೆ ಧುರೀಣತ್ವ ಅಲ್ಲಿ ಕಾಣುವದಿಲ್ಲ. ಕೇಂದ್ರ ಸರಕಾರದ ಅರ್ಥ ಸಚಿವ ಸ್ಥಾನವನ್ನು ತುಂಬಿಸಬಲ್ಲ ಬೇರೆ ಜನವೂ ಸದ್ಯ ರಾಷ್ಟ್ರನಾಯಕರ ದೃಷ್ಟಿ ಪಥದಲ್ಲಿಲ್ಲ. ಹೀಗಾಗಿ ಡಿಲ್ಲಿ ಮತ್ತು ಉತ್ತರ ಪ್ರದೇಶಗಳು ಪಂಡಿತ ಪಂತರನ್ನು ಅತ್ತಿಂದಿತ್ತ ಎಳೆದುಕೊಳ್ಳಲು ಪ್ರಯತ್ನಿಸುವಂತಿದೆ; ಕೊನೆಗೆ ತಾನು ತನ್ನ ಸಂಸ್ಥಾನದಲ್ಲೇ ನಿಂತು ಬಿಡುವ ನಿರ್ಧಾರವನ್ನು ಪಂಡಿತ ಪಂತರು ಮಾಡಿರಬೇಕು; ಈ ಬಾರಿ ಡಿಲ್ಲಿಗೆ ಬಂದ ಅವರು ಈ ಸಂಗತಿಯನ್ನು ಸ್ಪಷ್ಟ ಪಡಿಸಿರುವರೆಂದು ನಂಬಲಾಗಿದೆ. ಜೋನ್ ಮಥಾಯಿಗಳಂತೂ ಈ ತಿಂಗಳ ತಾ.31ಕ್ಕೆ ಅರ್ಥಖಾತೆಯ ಮಂತ್ರಿ ಪದದಿಂದಿಳಿದು ಮರು ದಿನವೇ ಕಾಶ್ಮೀರಕ್ಕೆ ಹೋಗಿ, ಅಲ್ಲಿ 2 ತಿಂಗಳುಗಳ ವಿಶ್ರಾಂತಿಯನ್ನು ಅನುಭವಿಸಿ, ಅಲ್ಲಿಂದ ಬಂದವರು ಕೆಲವು ತಿಂಗಳುಗಳ ವರೆಗೆ ದಕ್ಷಿಣ ಭಾರತ ಸಂಚಾರ ಮಾಡುವರೆಂದು ನಿಶ್ಚಯವಾಗಿದೆ; ಮತ್ತೆ ಅಲ್ಪಾವಧಿ ವಿದೇಶ ಪ್ರಯಾಣಕ್ಕೆ ಹೊರಡಬಹುದು; ಅವರು ಸ್ವತಂತ್ರ್ಯದಲ್ಲಿ ಮರಳಿ ಬಂದು ಮಂತ್ರಿಯಾಗುವ ಮೊದಲಿದ್ದಂತೆ 'ತಾತಾ' ಕಂಪೆನಿಯ ಡೈರೆಕ್ಟರಾಗಿ ಸೇರಿಕೊಳ್ಳಲಿದ್ದಾರೆ ಡಾ| ಜೋನ್ ಮಥಾಯಿಗಳು 1946ರಲ್ಲೇ ಮಧ್ಯಾವಧಿ ಸರಕಾರದ ಮಂತ್ರಿಯಾಗಿ ಕೆಲಸ ಮಾಡುತ್ತಾ

ಬಂದವರು. ಹೊಸತಾಗಿ ನೇಮಕಗೊಂ
ರುವ ರಾಜಾಜಿ ಅರ್ಥಸಚಿವ ಸ್ಥಾನಕ್ಕೆ
ರಲರ್ಹರೇ ಇದ್ದಾರೆ. ಆದರೆ ಅವರು
ಸ್ಥಾನಕ್ಕೇರಲು ನಿರಾಕರಿಸಿರುವರೆಂದು
ಳಿದುಬರುತ್ತದೆ ಹೀಗಾಗಿ, ಓರ್ವ ಹ
ಕಾಸಿನ ಮಂತ್ರಿಯ ಶೋಧನಾ ಚಿಂ
ಯಿಂದ ಇತ್ತೀಚಿಗಿನ ದಿನಗಳಲ್ಲಿ ನೆಹರು
ಹಣೆಯಲ್ಲಿ ಒಂದು ನೆರಿಗೆ ಹೆಚ್ಚಿಗೆ ಬಿದ್ದಿ
ಬೇಕು; ಸದ್ಯಕ್ಕೆ ನೆಹರೂ, ವಲ್ಲಭಾಯಿ
ಳ ಪೈಕಿ ಒಬ್ಬರ ಕೈಯಲ್ಲೇ! ಅರ್ಥಖಾ
ಉಳಿದುಕೊಳ್ಳಬಹುದೆಂದು ನಂಬಲಾಗಿದೆ

## ಈಗಿನ ಮಂತ್ರಿಮಂಡಲ

ಇನ್ನೂ ಹೆಚ್ಚಿಗೆ ಒಬ್ಬಿಬ್ಬರು ಸೇ
ಲಿಕ್ಕಿರುವ ಮತ್ತು ಖಾತೆಗಳ ಪುನರ್ವಿ
ರಣೆಯಾಗಲಿರುವ ಭಾರತ ಕೇಂದ್ರ ಮ
ತ್ರಿ ಮಂಡಲಿಯ ಇಂದಿನ ಸ್ವರೂಪ
ಅತ್ಯಂತ ಭವ್ಯವಾಗಿ ಕಾಣುತ್ತಿದೆ. ರಾಜಾ
ಜಿಯ ಸೇರ್ಪಡೆಯಿಂದಾಗಿ ಅಗ್ರಗಣ್ಯ
ಕಾಂಗ್ರೆಸ್ ನಾಯಕನೊಬ್ಬ ಅಲ್ಲಿ ಸೆ
ರ ಕೊಂಡಂತಾಯಿತು. ಇಂದಿನ ಹ
ನಾಲ್ಕು ಮಂದಿ ಮಂತ್ರಿಗಳಲ್ಲಿ 12 ಮಂ
ಕಾಂಗ್ರೆಸಿಗರೇ. ಭಾರತೀಯರಿಗೂ
ಸ್ವತಂತ್ರ ಅಧಿಕಾರ ಮಕುಟ ಹೊರು
ಭಾಗ್ಯವಿಲ್ಲದಿದ್ದ ಆ ಕಾಲದಲ್ಲಿ ಕೂಡ
ಭಾರತೀಯ ಜನತೆಯ ಪಾಲಿಗೆ ಅನಭಿ
ಷಿಕ್ತ ರಾಜರಂತಿದ್ದವರು ಇಂದ
ಹಿಂದೀ ಕೇಂದ್ರದಲ್ಲಿ ಮಿಲ
ಗೊಂಡಿದ್ದಾರೆ ಹೀಗಾಗಿ ಪ್ರಚಲಿತ ಭಾ
ತ ಕೇಂದ್ರಾಧಿಕಾರವು ರಾಷ್ಟ್ರದ ಸಾಂಬಿ
ದುವಾಗಿ– ರಾಷ್ಟ್ರವ್ಯಾಪೀ ಅಧಿಕಾರ,
ಚಸ್ಸು ಮತ್ತು ಗೌರವ ಭರಾಸೆಗ
ಮೂಲನೆಲೆಯಾಗಿ— ಕಂಗೊಳಿಸುತ್ತಿದೆ
ನೆಹರು, ವಲ್ಲಭಾಯಿ, ಅಜಾದ್, ರಾಜಾ
ಜಿಯಂಥವರ ಹೆಸರುಗಳು ಹತ್ತು, ವರು
ಷಗಳಿಗೆ ಮೊದಲೇ ರಾಷ್ಟ್ರದ ಎಲ್ಲರ ನಾಲಿ
ಗೆಯಲ್ಲೂ ನಲಿದಾಡುತ್ತಿದ್ದವುಗಳೇ;
ಅವುಗಳ ಮುಂಗಡೆ 'ಮಂತ್ರಿ'ಪದವ
ನ್ನಿಟ್ಟು ಸಂಬೋಧಿಸಲು ಸಂಕೋಚ ಪ
ಡುವವರಾರೂ ಭಾರತದಲ್ಲಿಲ್ಲ. ಈಗಿನ
ಕೇಂದ್ರ ಮಂತ್ರಿಗಳ ವ್ಯಕ್ತಿವೈಶಿಷ್ಟ್ಯವ
ನ್ನು ಚುಟುಕಾಗಿ ಇಲ್ಲಿ ಕೊಡಲಾಗಿದೆ.

ಪಂಡಿತ ನೆಹರು—ಹೃದಯ ಪ್ರೈ
ಶಾಲ್ಯದ ಮಟ್ಟಿಗೆ ಭಾರತದ ಈ


**THE BOMBAY LIFE ASSURANCE COMPANY, LTD.**

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ., ಲಿಮಿಟೆಡ್

(ಸ್ಥಾಪನೆ: 1908)

**ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.**

ಪ್ರಧಾನ ಏಜಂಟರು:

**ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.**

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು,

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾದಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.



ಶರೀರದಲ್ಲಿಯ ಅಸಹ್ಯ ಉಷ್ಣತೆಯನ್ನು ಇದರಿಂದಲೇ ತೆಗೆದು ಹಾಕಿರಿ




ಕಲ್ಕಾಡಾ ಶರೀರದ ಒಳಗಿನ ಮತ್ತು ಹೊರಗಿನ ಉರುವನ್ನು ತೆಗೆದು ಹಾಕಿ ಶಕ್ತಿಯನ್ನು ತಂಪಾಗಿಡುವದು, ಅಪಚನ ಅಜೀರ್ಣವನ್ನು ನಿರಿಪಡಿಸುವದು, ಶಾರೀರಿಕ ಮತ್ತು ಮಾನಸಿಕ ಶಕ್ತಿಯನ್ನು ಬೆಳೆಸುವದು ಧಾತು ಸ್ಥಾನದಲ್ಲಿಯ ಉಷ್ಣತೆಯನ್ನು ಹೋಗಲಾಡಿಸಿ ಪುಷ್ಟಿಕರ ಮಾಡುವದು

ನಿಮ್ಮ ಹತ್ತಿರದ ಕೆಮಿಸ್ಟರ ಕಡೆಯಿಂದ ಇಂದೇ ಒಂದು ಬಾಟಲಿಯನ್ನು ತಂದು ಸೇವಿಸಲು ಪ್ರಾರಂಭಿಸಿರಿ

**ಪರ್ಲ ಎಂಡ್ ಕಂಪನಿ**
ಮುಂಬಯಿ ೨

# ಅಮೂಲ್ಯ ರತ್ನಗಳುಳ್ಳ ಮುಕುಟ!

ಸರ್ವ ಸ್ಪರ್ಶವು ಪ್ರಯೋಗವನ್ನು ತಿಳಿಗೊಳ್ಳಬಲ್ಲವರಾ ಪ್ರಯೋಗಶಕ್ತ ಆಧುನಿಕ ಪ್ರಸಂಗದಲ್ಲೇ ಬೇರೆ ದೊರೆಯಲಾರದು. ಹೃದಯ ಶುದ್ಧತೆ, ವಿಶಾಲ ಭಾವನೆ, ಶೀಘ್ರದ ನೋಟದಂತೆಯೇ ಅವರ ಪ್ರಾಪಂಚಿಕ ಜ್ಞಾನ ಮತ್ತು ಬುದ್ಧಿ ಸೂಕ್ಷ್ಮತೆಯೂ ಅತಿ ಹೆಚ್ಚಿನದು. ತಮಗೆ ಬೇಕಾದೆಂದು ಲೋಕದ ಯಾವ ಮೂಲೆಯವರೂ ಹೇಳಲೊಲ್ಲದಂತಿರುವ ನಾಯಕತ್ವ ಪಂಡಿತ ನೆಹರುಗಳದು; ಅಂಥವರು ಜನ್ಮಾಧಿಕಾರದಿಂದ ಭಾರತದ ನಾಯಕರಾಗಿ ಉಳಿದುಕೊಂಡಿರುವದು ಭಾರತೀಯರ ಭಾಗ್ಯ ವಿಶೇಷ; ಆಧುನಿಕ ಭಾರತದ [illegible] ದೈವಗಳ ಪೈಕಿ ಇದು ಎಲ್ಲಕ್ಕಿಂತ ಹೆಚ್ಚಿನದು. ಹೀಗಿದ್ದರೂ ಅಧಿಕಾರ ಯಂತ್ರ ಚಾಲು ಮಾಡುವ ಕೌಶಲ್ಯವು ಪಂಡಿತ ನೆಹರುಗಳಲ್ಲಿ ಪರಿಪೂರ್ಣವಿದೆ ಎನ್ನಲಾಗುವದಿಲ್ಲ. ಸಣ್ಣಪುಟ್ಟ ಕಿರುಕುಳಗಳುಳ್ಳ ರಾಜಕೀಯ ಸಮಸ್ಯೆಗಳಲ್ಲಿ ಸಿಕ್ಕಿಕೊಂಡಾಗಲೆಲ್ಲಾ ಪಂಡಿತಜೀ ಜಿಡುಪಿನೊಳಗೆ ಸಿಕ್ಕಿಕೊಂಡ ಆನೆಯಂತಾಗುತ್ತಾರೆ; ಅವರ ವ್ಯಕ್ತಿತ್ವವೆಂಬುದು ಸಣ್ಣ ವಿಷಯಗಳಿಗೆ ಹಿಡಿಸಲಾರದಷ್ಟು ದೊಡ್ಡದು.

**ಸರ್ದಾರ್ ಪಟೇಲ್**— ನಿಜಕ್ಕೂ ಭಾರತದ ಆಡಳಿತ ರಥದ ಲಗಾಮು ಹಿಡಿದುಕೊಂಡಿರುವ ಕೈ ಸರ್ದಾರರದು. ಅವರ ದೃಢ ಬುದ್ಧಿ, ಸಂಘಟನಾ ಶಕ್ತಿ, ಖಂಡಿತ ಮಾತುಕೃತಿಗಳು 'ಭಾರತದ ಬಿಸ್ಮಾರ್ಕ್' 'ಉಕ್ಕಿನ ಮನುಷ್ಯ' ಎಂಬ ಬಿರುದುಗಳನ್ನು ಅವರಿಗೆ ಸಂಪಾದಿಸಿಕೊಟ್ಟಿವೆ. ಸರ್ದಾರರಿದ್ದಾರೆ—ಆದ್ದರಿಂದ ಭಯವಿಲ್ಲ. ಪಂಡಿತ ನೆಹರುಗಳು ಸ್ವತಂತ್ರ ಪ್ರಡಳಿತೆಯ ಹೃದಯದಂತಿದ್ದರೆ ಸರ್ದಾರ್ ಪಟೇಲರು ಅದರ ಕಣ್ಣು ಮತ್ತು ಭುಜವಾಗಿದ್ದಾರೆ.

**ರಾಜಾಜಿ**— ಈಗ ತಾನೇ ರಾಜಾಜಿ ಸೇರಿಕೊಂಡುದರಿಂದ, ಕೇಂದ್ರ ಮಂಡಲಿಗೆ ಹೊಸ ಜೀವ ಬಂದಂತಾಗಿದೆ. ಪ್ರಾಯಶಃ ಆಚಾರ್ಯರೊಂದು ಹೊಸ ದಾಖಲೆಯನ್ನೂ ನಿರ್ಮಿಸಿದರು. ಸ್ವತಂತ್ರ ಭಾರತದ ಸರ್ವ ಪ್ರಥಮ ಹಿಂದೀ ಗವರ್ನರ್ ಜನರಲ್ ರಾಜಾಜಿ ಆ ಪೀಠ ಬಿಟ್ಟ ಮೇಲೆ ಅಧ್ಯಕ್ಷ ಸ್ಥಾನಕ್ಕಿಂತ ಕಡಿಮೆಯದಾವುದನ್ನು ಸ್ವೀಕರಿಸುವುದೂ ಸಂಪ್ರದಾಯ ವಿರುದ್ಧ. ಗವರ್ನರ್ ಜನರಲ್ ಅಥವಾ ಅಧ್ಯಕ್ಷ ಹುದ್ದೆಯೆಂಬುದು ರಾಷ್ಟ್ರಾಧಿಕಾರದ ಕಲಶ; ಅಂತಹ ಶಿಖರವನ್ನು ಸಂದರ್ಭಾನುಸಾರವಾಗಿ, ಒಳಕೆಲಸಗಳಿಗೆ ಉಪಯೋಗಿಸುವುದೆಂದರೆ ಒಂದೋ ಅದರ ಪಾವಿತ್ರ್ಯ ತಗ್ಗಿಸಿದಂತಾಗುವದು; ಇಲ್ಲವೇ ಆ ಮೊದಲು ಅದನ್ನು ಶಿಖರಶೋಭೆಯಾಗಿ ಇಟ್ಟುದೇ ತಪ್ಪೆಂದಾಗುವುದು. ಸಂಗತಿ ಹೀಗಿದ್ದರೂ ಈ ಕಾಲದಲ್ಲಿ ರಾಜಾಜಿಯಂತಹ ನಿಪುಣನ ಅಸಾಮಾನ್ಯ ಮೆದುಳಿನ ಅಧಿಕೃತ ಸಹಾಯದ ಆವಶ್ಯಕತೆಯಿದೆ ಎಂಬುದರಿಂದ ಪಂಡಿತಜೀ ಒತ್ತಾಯಿಸಿದರು; ರಾಜಾಜಿ ಒಪ್ಪಿಕೊಂಡರು. ಅನಾರೋಗ್ಯ ಪೀಡೆಗೊಳಗಾಗಿದ್ದರೂ ಈ ಮಾಜೀ ಗವರ್ನರ್ ಜನರಲರು ಮಂತ್ರಿ ಕೆಲಸ ಮಾಡಲು ಒಪ್ಪಿಕೊಂಡುದರಿಂದ ಜನ ಸೇವೆಗಾಗಿ ವ್ಯಕ್ತಿಗತ ಘನತೆಯನ್ನು ಬದಿಗೊತ್ತಲು ಸಿದ್ಧರೆಂಬ ತತ್ವವನ್ನು ಸಾರಿದಂತಾಗಿ. ರಾಜಾಜೀ ಸೇರಿಕೊಂಡುದರ ಪರಿಣಾಮವು ಭಾರತದ ಮಂತ್ರಿ ಮಂಡಲದ ರಾಜಕೀಯ ಆಗುಹೋಗುಗಳ ಮೇಲೆ ತೋರಿ ಬರಲಿದೆ. ನೆಹರು ಸ್ವತಂತ್ರ ಭಾರತ ಆಡಳಿತೆಯ ಶಿರಸ್ಸು—ವಲ್ಲಭಾಯಿ ಕಣ್ಣು ಕೈ, ಆಗಿದ್ದರೆ ರಾಜಾಜಿ ಅದರ ಮೆದುಳಾಗಿದ್ದಾರೆ. ಈ ತ್ರಿಮೂರ್ತಿಗಳ ಮಿಲನದಿಂದ ಭಾರತಾಡಳಿತೆ ತ್ರಿಕಾಲಬಾಧಿತವಾಯಿತು; ಭದ್ರವಾಯಿತು.

**ಮೌ. ಅಜಾದ್**— ಪಾಕಿಸ್ಥಾನ್ ಮಹಾಂದೋಲನದ ಕಾಲದಲ್ಲಾದರೂ ಮಿ. ಜಿನ್ನರಿದಿರು ಕಾಂಗ್ರೆಸ್ ಪಾಳಯದಲ್ಲಿ ತೋರಿಬರುತಿದ್ದ ಮುಸ್ಲಿಮ್ ಘನವಂತನೆಂದರೆ ಮೌಲಾನಾ ಅಬುಲ್ ಕಲಮ್ ಅಜಾದರು. ಈಗ ಕೂಡಾ ಸುಮಾರು ನಾಲ್ಕು ಕೋಟಿಯಷ್ಟಿರುವ ಭಾರತೀಯ ಮುಸ್ಲಿಮರ ಮತ್ತು ಅಂದಿನಿಂದೀವರೆಗಿನ ರಾಷ್ಟ್ರೀಯ ಮುಸಲ್ಮಾನ್ ಪಂಗಡದ ಪ್ರತಿನಿಧಿಯಾಗಿ ಮೌಲಾನಾ ಆಜಾದರಿದ್ದಾರೆ. ಸ್ವಾತಂತ್ರ್ಯ ಹೋರಾಟ ಕಾಲದಲ್ಲೂ ಮುಖ್ಯ ರಾಷ್ಟ್ರ ನಾಯಕರ ಪಕ್ಕದಲ್ಲೇ ಇದ್ದವರು ಮೌಲಾನರು. ಈಗ ಆಡಳಿತ ಕಾಲದಲ್ಲಿ ಇವರನ್ನವರು ಅಗಲಿರುವದು ಅಸಾಧ್ಯ; ಜತೆಗೂಡಿಯೇ ಇದ್ದಾರೆ.

**ಸರ್ದಾರ್ ಬಲದೇವಸಿಂಗ್**— ತುಲನಾತ್ಮಕವಾಗಿ ಅಲ್ಪಸಂಖ್ಯಾಕರಾಗಿದ್ದರೂ ಅತ್ಯಂತ ಪ್ರಭಾವಶಾಲಿ ಸಮಾಜವಾಗಿರುವ ಸಿಖ್ಖರ ಪ್ರತಿನಿಧಿಯಾಗಿ ಇವರಿದ್ದಾರೆ. ಧೀರವೀರ ಸಿಖ್ಖರಿಗನುಗುಣವಾದ ಸೇನಾ ಮಂತ್ರಿಯಾಗಿಯೇ ಇದ್ದಾರೆ. ಮಧ್ಯಾವಧಿ ಮಂತ್ರಿ ಮಂಡಲದಿಂದಾರಂಭಿಸಿ, ಈವರೆಗೂ ರಕ್ಷಣಾ ಸಚಿವನಾಗಿದ್ದು ತನ್ನ ಅರ್ಹತೆಯನ್ನು ಪ್ರದರ್ಶಿಸಿದ್ದಾರೆ.

**ಡಾ. ಅಂಬೇಡ್ಕರ್**—ದಲಿತವರ್ಗದ ಮುಂದಾಳು ಇವರು. ಬುದ್ಧಿ ಶಕ್ತಿ, ಕಾನೂನು ಮತ್ತು ವಿಷಯಗಳ ಪರಿಜ್ಞಾನ, ನ್ಯಾಯ ನಿಷ್ಠುರತೆಯಲ್ಲಿ ಮುಂದುವರಿದ ಸಮಾಜಗಳ ಯಾವ ಮುಂದಾಳುವಿಗೂ ಡಾ. ಅಂಬೇಡ್ಕರರು ಹಿಂದಿಲ್ಲ. ನವರಾಜ್ಯ ಶಾಸನ ಮತ್ತು ಹಿಂದೂ ಕೋಡು ಮಸೂದೆಯಂತಹ ಪ್ರಾಮುಖ್ಯ ಮಸೂದೆಗಳ ತಯಾರಿ ನಿರ್ಮಿಸುವುದರಲ್ಲಿ ಡಾ. ಅಂಬೇಡ್ಕರರು ಪ್ರದರ್ಶಿಸಿರುವ ಪಾಂಡಿತ್ಯವು ಅಸಾಧಾರಣವಾದುದ; ಶ್ಲಾಘನೀಯವಾದುದು. ಇವರು ಅತ್ಯಂತ ಮೇಧಾವಿ. ಹರಿಜನರೇನೂ ಹಿಂದಿಲ್ಲವೆಂಬುದಕ್ಕೂ ಹರಿಜನರನ್ನೇನೂ ಹಿಂದೆ ಹಾಕುವದಿಲ್ಲವೆಂಬುದಕ್ಕೂ ಡಾ. ಅಂಬೇಡ್ಕರರ ವ್ಯಕ್ತಿತ್ವ ಮತ್ತು ಅವರು ಗಳಿಸಿರುವ ಸ್ಥಾನಮಾನಗಳೇ ನಿದರ್ಶನ.

**ಶ್ರೀ ಜಗಜೀವನರಾಮ್**-ಇವರು ಕಾಂಗ್ರೆಸ್ ಹರಿಜನ ಮಂತ್ರಿ. ಸಮರ್ಥರೂ ಯೋಗ್ಯರೂ ಇದ್ದಾರೆ. ಕೂಲಿಗಾರ ಮಂತ್ರಿಯಾಗಿರುವ ಇವರು ಮಜೂರರ ಕಡೆಗಿನ ಭಾರತ ಸರಕಾರದ ಧೋರಣೆಯನ್ನು ಸರಿಯಾಗಿ ಪ್ರತಿಬಿಂಬಿಸುವ ಕಾರ್ಯಗಳನ್ನು ಮಾಡಿದ್ದಾರೆ; ಬೋಧನೆಗಳನ್ನಿತ್ತಿದ್ದಾರೆ. ಇಬ್ಬರು ಹರಿಜನ ಮಂತ್ರಿಗಳು ಅಲ್ಲಿರುವುದೆಂದರೆ 'ಸವರ್ಣೀಯ ಹಿಂದುಗಳಿಂದ ಅಮಾನುಷ ರೀತಿಯಲ್ಲಿ ದಮನಿಸಲ್ಪಡುತ್ತಿರುವವರು' ಎಂಬ ಹೆಸರಿಗೀಡಾಗಿರುವ ಭಾರತೀಯ ಹರಿಜನರಲ್ಲಿ ಯೋಗ್ಯತೆಯಿದ್ದರೆ, ಅವರಿಗೆ ಎಂತಹ ಗೌರವಾರ್ಹ ಸ್ಥಾನಗಳೂ ಇವೆ ಎಂಬುದರ ದ್ಯೋತಕವಾಗಿ.

**ಶ್ರೀ ಕಿದ್ವಾಯಿ**-ಇವರು ಮತ್ತೊಬ್ಬ ಮುಸ್ಲಿಂ ಸಚಿವ. ಉತ್ತರ ಪ್ರದೇಶದವರು. ಹಿಂದೆ ತುಸು ವಿಶೇಷ ರೀತಿಯ ಸಮತಾವಾದ ಭಾವನೆ ಪ್ರದರ್ಶಿಸುತಿದ್ದವರು. ಈ ಬಾರಿ ಉತ್ತರಪ್ರದೇಶದ ಕಾಂಗ್ರೆಸ್ ಪಕ್ಷದಿಂದ ಒಡೆದು ಹೋಗಿರುವ ವಿರುದ್ಧ ಪಂಗಡಗಳ ಗುಪ್ತ ಚಾಲಕತ್ವವು ಶ್ರೀ ಕಿದ್ವಾಯಿಯವರದು, ಎಂಬ ಆಪಾದನೆಗಳಿವೆ. ಅದರದು ಪ್ರತ್ಯಕ್ಷ ತೋರಿಬರುವ ಆಕಾರದಲ್ಲಿರುತಿದ್ದರೆ ಕಿದ್ವಾಯಿಯವರು ಕೇಂದ್ರ ಮಂಡಲಿಯಲ್ಲಿ ಇರುವುದು ಅಸಾಧ್ಯವಾಗುತಿತ್ತು.

**ಶ್ರೀ ಗಡ್ಗಿಲ್**— ಇವರು ಡಾ| ಅಂಬೇಡ್ಕರರಂತೆಯೇ ಬೊಂಬಾಯಿಯವರು; ಅವರಂತೆಯೇ ವಯಸ್ಸಿನ ಮಧ್ಯ ಗಡಿ ದಾಟಿದ ಮೇಲೆ ವಿವಾಹವಾದವರು. ಮೇಧಾವಿಯೂ ಹೌದು. ರಾಜೀನಾಮೆ ಕೊಡುವರೆಂಬ ಸುದ್ದಿಯು ಇವರ ಕುರಿತೂ ಹುಟ್ಟಿದ್ದರೂ ಕೊಟ್ಟಿಲ್ಲ.

**ಶ್ರೀ ಎನ್. ಜಿ. ಅಯ್ಯಂಗಾರ್**- ದೇಶ ವಿಭಜನಾ ಯೋಜನೆಯು ಮೊದಲು ಬ್ರಿಟಿಷ್ ಮಂತ್ರಿ ಮಂಡಳಿಯು ಮುಂದಿಟ್ಟಿದ್ದ ಪ್ರಾಂತ್ಯ ಪಂಗಡಗಳ ಯೋಜನೆಯಲ್ಲಿ ಪ್ರಥಮತಃ ಯಾರ ಕಣ್ಣಿಗೂ ಬೀಳದಿದ್ದ ಹುಳುಕನ್ನು ಎತ್ತಿ ತೋರಿಸಿ, ಒಮ್ಮೆಗೇ ರಾಷ್ಟ್ರ ನಾಯಕರ ವಿಶೇಷ ಲಕ್ಷ್ಯವನ್ನಾಕರ್ಷಿಸಿ, ಮಂತ್ರಿಸ್ಥಾನಕ್ಕೆ ಬಂದವರು ಶ್ರೀ ಎನ್. ಗೋಪಾಲ ಸ್ವಾಮಿ ಅಯ್ಯಂಗಾರ್. ತನ್ನ ಈವರೆಗಿನ ಸಚಿವತನದ ಅವಧಿಯಲ್ಲಿ ಉಪಯುಕ್ತ ಹಾಗೂ ಶ್ಲಾಘನೀಯ ಕೆಲಸಗಳನ್ನು ಮಾಡಿದ್ದಾರೆ; ಪ್ರಾಂತ್ಯವಾರಾಗಿ ಹೇಳುವದಾದರೆ ಮದ್ರಾಸಿನವರು ರಾಜಾಜಿ ಮತ್ತು ಅಯ್ಯಂಗಾರರಂತಹ ಅಮೂಲ್ಯ ಮೆದುಳುಗಳನ್ನು ದಿಲ್ಲಿ ಮಂಡಲಿಯಲ್ಲಿ ತುರುಕಿಸಿದ ಕೀರ್ತಿ ಮದ್ರಾಸಿಗೆ ಸಲ್ಲುತ್ತದೆ.

**ಶ್ರೀ ಮೆಹತಾಬ್**-ಇವರು ಒರಿಸ್ಸಾದ ಪ್ರಧಾನ ಮಂತ್ರಿಯಾಗಿದ್ದವರು. 'ಕ್ವಿಟ್ ಇಂಡಿಯಾ' ಚಳವಳದ ವೇಳೆ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸದಸ್ಯನಾಗಿದ್ದು, ಗಾಂಧಿಜೀ ಸಮೇತ ಇತರ ಅಗ್ರಗಣ್ಯ ಮುಖಂಡರೊಂದಿಗೆ ಸ್ಥಾನಬದ್ಧತೆಯಲ್ಲಿಡಲ್ಪಟ್ಟಿದ್ದ ಸ್ವಾತಂತ್ರ್ಯವೀರ, ಧೈರ್ಯ, ಸ್ಥೈರ್ಯ, ಸೇವಾ ಸ್ಫೂರ್ತಿ ಮತ್ತು ಆಡಳಿತೆ ಜಾಣ್ಮೆಯಿದ್ದವರು.

**ಶ್ರೀ. ಕೆ. ಎಮ್. ಮುನ್ಷಿ**—ಭಾರತದ ಚುರುಕು ತಲೆಗಳ ಪೈಕಿ ಶ್ರೀ ಮುನ್ಷಿ ಒಬ್ಬರು; ಬೊಂಬಾಯಿ ಪ್ರಾಂತ್ಯದ ಹಿಂದಿನ ಮಂತ್ರಿ ಮಂಡಲಿಯಲ್ಲಿ ಇವರು ಗೃಹಸಚಿವನಾಗಿದ್ದರು. ತನ್ನ ಆಡಳಿತ ಸಾಮರ್ಥ್ಯವನ್ನು ವಿಶೇಷ ರೀತಿಯಿಂದ ಪ್ರದರ್ಶಿಸಿದ್ದರು. ಇವರು ವಕೀಲ, ಗ್ರಂಥಕರ್ತ, ಪತ್ರಿಕಾಕರ್ತ, ವಾಗ್ಮಿ, ಶಾಸನ ತಜ್ಞ, ಬಹುಮುಖದ ಪ್ರತಿಭೆಯುಳ್ಳ ಮನುಷ್ಯ. ಹೈದರಾಬಾದ್ 'ಪೋಲಿಸ್ ಆಕ್ರಮಣೆ'ಯ ವೇಳೆ ಭಾರತ ಸರಕಾರದ ಪ್ರತಿನಿಧಿಯಾಗಿ ಅಲ್ಲಿದ್ದವರು. ಆ ಬಿಕ್ಕಟ್ಟಿನ ಅವಧಿಯಲ್ಲಿ ಮುನ್ಷೀ ವ್ಯಕ್ತಿ ವೈಶಿಷ್ಟ್ಯವು ತೋರಿಬರುವ ವಿಶೇಷ ಕಾರ್ಯಗಳಾಗಿದ್ದವು. ಶ್ರೀ ಕನ್ಹೈಯಾಲಾಲ್ ಮಾಣಿಕ್‌ಲಾಲ್ ಮುನ್ಷಿಗಳ ಹೃದಯವನ್ನು ಮೆಚ್ಚದ ಪ್ರಗತಿಶೀಲರಿರಬಹುದು; ಆದರೆ ಅವರ ಮೆದುಳನ್ನು ಶ್ಲಾಘಿಸದಿರಲಾಗುವದಿಲ್ಲ. ಮುನ್ಷಿಗಳ ಸೇರ್ಪಡೆಯಿಂದ ಕೇಂದ್ರ ಮಂಡಲಿಯ ಬುದ್ಧಿವಂತಿಕೆ ಪರಿಮಾಣವು ಹೆಚ್ಚಿತೆಂಬುದು ನಿರ್ವಿವಾದ.

**ಶ್ರೀ ಶ್ರೀಪ್ರಕಾಶ**— ಅಸ್ಸಾಮಿನ ಗವರ್ನರ್ ಸ್ಥಾನದಿಂದ ಕೇಂದ್ರದ ಮಂತ್ರಿ ಸ್ಥಾನಕ್ಕೆ ವರ್ಗಾಯಿಸಲ್ಪಡುತ್ತಿರುವ ಶ್ರೀ ಶ್ರೀಪ್ರಕಾಶರು ವಿಶಾಲ ಹೃದಯದ ಸಂತ; ಪಾಕಿಸ್ತಾನದಲ್ಲಿ ಭಾರತದ ಹೈಕಮಿಶನರ್ ಆಗಿದ್ದು ಕಂಟಕಮಯ ವಾತಾವರಣದಲ್ಲಿ ಕಾರ್ಯ ಸಾಗಿಸಿದವರು. ದೀರ್ಘಾವಧಿಯಿಂದ ದೇಶಸೇವೆಯನ್ನು ಮಾಡುತ್ತಾ ಬಂದಿರುವ ನಿಷ್ಠಾವಂತ ಕಾಂಗ್ರೆಸಿಗ. ಸ್ವಾತಂತ್ರ್ಯ ಪೂರ್ವ ಕೇಂದ್ರ ಎಸೆಂಬ್ಲಿಯಲ್ಲಿ ಆಗಾಗ ಚುಚ್ಚುನಗೆಯನ್ನೆಬ್ಬಿಸಿ, ಅಲ್ಲಿಯ ಒಣ ವಾತಾವರಣದಲ್ಲಿಯೂ ವಿನೋದದ ಪ್ರವಾಹವನ್ನು ಹರಿಯಿಸುತ್ತಿದ್ದವರು ಶ್ರೀ ಪ್ರಕಾಶ್. ಆಡಳಿತ ಯೋಗ್ಯತೆ ಮತ್ತು ಗಂಭೀರತೆ


**On this Memorable day**

Of the 26th of January in the year 1950 of the inauguration of the Indian Republic, we have the pleasure to announce the birth of our

**Vijaya Cash Certificates**

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices

Head Office:—**Kadri Road, Mangalore.**

Branches:- City-Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara.

**B. Manjaya Hegde.**

Advocate & President, District Board, S. Kanara.

CHAIRMAN

**VIJAYA BANK, LTD.**

ಯು ಶ್ರೀ ಪ್ರಕಾಶರಲ್ಲಿ ಕಡಿಮೆಯಿಲ್ಲವಾದರೂ, ತಿಳಿ ಹಾಸ್ಯ ಬುದ್ಧಿಯು ಸಾಮಾನ್ಯ ಪರಿಮಾಣಕ್ಕೆ ಮಿಕ್ಕಿ ಅವರಲ್ಲಿರುವುದರಿಂದ ಘನವಂತನನ್ನಿಸುವುದಕ್ಕಿಂತ ಹೆಚ್ಚಿಗೆ ಸರಸಿಯನ್ನಿಸಿದ್ದಾರೆ. ಡಿಲ್ಲೀ ಸಚಿವ ಕೂಟದಲ್ಲಿ ಶ್ರೀ ಶ್ರೀ ಪ್ರಕಾಶರು ಸೇರಿಕೊಂಡುದರಿಂದ ವಿನೋದ ವಿಭಾಗಗಳ ಹೊಸ ಪ್ರಕಾಶವೂ ಅಲ್ಲಿ ಸೇರಿಕೊಂಡಂತಾಯಿತು.

ಶ್ರೀಮತಿ ಅಮೃತಕೌರ್–ಕೇಂದ್ರ ಮಂಡಲಿಯ ಏಕಮಾತ್ರ ಮಹಿಳಾ ಸದಸ್ಯೆ. ಸ್ವಾತಂತ್ರ್ಯ ಹೋರಾಟ ಕಾಲದಿಂದಲೂ ನಿಷ್ಠಾವಂತ ಗಾಂಧೀ ಅನುಯಾಯಿಯಾಗಿದ್ದ ಮಹಿಳೆ ಗಾಂಧೀತತ್ವ ಪ್ರಭಾವಕ್ಕೊಳಗಾಗಿ ಶ್ರೀಮಂತಿಕೆಯನ್ನು ಕಡೆಗಣಿಸಿ, ಸಾದಾ ಜೀವನವನ್ನನುಕರಿಸಿದವರಲ್ಲಿ ಈಕೆ ಒಬ್ಬರು. ಈ ಬಾರಿ ಜಾಗತಿಕ ಆರೋಗ್ಯ ಸಭೆಯ ಅಧ್ಯಕ್ಷೆಯಾಗಿ ಆರಿಸಲ್ಪಟ್ಟಿದ್ದಾರೆ. ಭಾರತದಲ್ಲಿ ಮಹಿಳೆಯರಿಗೆ ಸಾಕಷ್ಟು ಸ್ಥಾನಮಾನಗಳು ದೊರೆತಿಲ್ಲವೆಂಬ ದೂರು ಈಗಲೂ ಕೇಳಬರುವದಿದೆ, ಆದರೆ ಸ್ತ್ರೀ ಸ್ವಾತಂತ್ರ್ಯಕ್ಕೆ ಹೆಸರು ಹೋದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸ್ತ್ರೀಯರಿಗೆ ದೊರೆತಿರುವ ಪ್ರಾತಿನಿಧ್ಯಗಳೊಡನೆ ಹೋಲಿಸಿದರೂ ಹಿಂದೀ ಮಹಿಳೆಯರಿಗೆ ಸಿಕ್ಕಿರುವ ಸ್ಥಾನಮಾನಗಳೇ ಹೆಚ್ಚೆನ್ನಬಹುದು. ಭಾರತದ ಶಾಸನ ಸಭೆಗಳಲ್ಲಿ, ವಿದೇಶೀ ರಾಯಭಾರಿ ಕಚೇರಿಗಳಲ್ಲಿ ಮತ್ತಿತರ ವಿಭಾಗಗಳಲ್ಲಿ ಹಿಂದೀ ಮಹಿಳೆಯರು ಗಣ್ಯ ಸ್ಥಾನ ಗಳಿಸಿದ್ದಾರೆ. ಶ್ರೀಮತಿ ಅಮೃತಕೌರರು ಆ ಪೈಕಿ ಮೊದಲಿಗರು.

ಅಂತೂ, ಯಾವ ವಿಧದ ಅತೃಪ್ತಿಗೂ ಯಥಾರ್ಥ ಅವಕಾಶವಿಲ್ಲದಂತೆ–ಜನತಾ ವಿಶ್ವಾಸ, ಬುದ್ಧಿ ಮತ್ತು ಕಾರ್ಯಬಲ, ಲೋಕ ವರ್ಚಸ್ಸು ಇವುಗಳಲ್ಲಾವುದರ ಕೊರತೆಯೂ ಮೂಡದಂತೆ–ಭಾರತದ ಕೇಂದ್ರ ಮಂತ್ರಿ ಮಂಡಲಿಯು ಯೋಗ್ಯರನ್ನು ಮತ್ತು ಶಕ್ತರನ್ನೇ ಒಳಗೊಂಡಿದೆ. ಪಕ್ಷ ಭೇದವೇನನ್ನೂ ನೋಡದೆ, ಯೋಗ್ಯತೆಯೊಂದನ್ನೇ ನೋಡಿ ಆರಿಸಿಕೊಂಡವರುಳ್ಳ ಈ ಗುಂಪಿನಿಂದ, ಅದೇಕೋ ಕಾಂಗ್ರೆಸೇತರ ಸದಸ್ಯರು ಕೆಲವರು ಜಾರಿಬಿದ್ದು ಹೋದರು; ಅವರ ಸ್ಥಾನಗಳಿಗೆ ಕಾಂಗ್ರೆಸಿಗರೇ ಬಂದರು. ಹೇಗಿದ್ದರೂ, ಯಾವ ಭಾಗದಲ್ಲೂ ಕುಗ್ಗದೆ, ಇನ್ನಷ್ಟು ದೃಢಗೊಳ್ಳುವುದಕ್ಕಾಗಿಯೇ ಈ ದುರಸ್ತಿ ನಡೆದಿದೆ. ಭಾರತಕ್ಕೆ ಆದರ್ಶ ಕೇಂದ್ರ ಮಂತ್ರಿ ಮಂಡಲ ದೊರೆತಿದೆ.

## ವಿವಿಧರೂಪಿ ಲೋಕ ಘರ್ಷಣೆ

ಎಲ್ಲವೂ ಯಥಾಸ್ಥಿತಿ-ಹೆನ್ನಿಯಷ್ಟ ಕಡೆಗೇನೇ ಎಲ್ಲಾ ಘಟನೆಗಳ ಸವನ್ನು ಎನ್ನುವಂತಿವೆ ಪ್ರಾಪಂಚಿಕ ಆಗುಹೋಗುಗಳು. ಶಾಂತಿಯು ಯಥಾರ್ಥ ಆಶಯ ಮತ್ತು ಸಂದರ್ಭ ಬಂದರೆ ಅದನ್ನು ಕಾಯ್ದುಕೊಳ್ಳುವ ಶಕ್ತಿ ಸಾಮರ್ಥ್ಯ ತಮ್ಮಲ್ಲಿದೆ ಎಂಬುದನ್ನು ಪ್ರದರ್ಶಿಸುವದೇ ಇಂದು ಲೋಕದ ಎಲ್ಲರ ಪಾಲಿನ ಆಟವೂ ಆಗಿದೆ. ಈ ರೀತಿ ಪ್ರತಿಯೊಬ್ಬರೂ ಶಾಂತಿ ಸಾಧಕರೇ ಎಂದಂದ ಮೇಲೆ ಅಶಾಂತಿ ನಿರ್ಮಾಪಕರಾರು? ಒಂದೊಮ್ಮೆಗೆ ಯುದ್ಧವಾದಲ್ಲಿ ಅದನ್ನು ಗೆಲ್ಲುವವರೇ ಎಲ್ಲರೂ ಎಂದಾದರೆ ಮತ್ತೆ ಸೋಲ ಬಯಸುವವರಾರು ಎಂಬ ಯೋಚನೆಗಳೇಳುವುದು ಸ್ವಾಭಾವಿಕ. ಇಂತಹ ಸರ್ವವ್ಯಾಪೀ ಅಹಂಮನ್ಯತೆಯೇ ಜಾಗತಿಕ ಅಶಾಂತಿಯ ಅಸ್ತಿವಾರವಾಗಿದೆ, ಅದರಲ್ಲೇ ಮತ್ತೊಂದು ಲೋಕ ಯುದ್ಧದ ಬೀಜ ಹುದುಗಿಕೊಂಡಿದೆ.

### ಅಂತರರಾಷ್ಟ್ರೀಯ ರಂಗ

ಅಮೆರಿಕದ ಸಶಸ್ತ್ರ ಸೇನೆಗಳ ದಿನ ಇದೇ ತಾ. 20ರಲ್ಲಿ ಭಾಷಣಮಾಡುತ್ತಾ, ಅಮೆರಿಕಾಧ್ಯಕ್ಷ ಟ್ರೂಮೇನರಂದರು: "ಮಸ್ತಿಷ್ಕದ ಅರ್ಥ ಮಾತ್ರ ಬಲ್ಲವರಿಗಿದಿರಾಗಿ, ಶಾಂತಿ ರಕ್ಷಣೆ ಮಾಡುವ ಸ್ಪಷ್ಟ ಭರವಸೆಯಾಗಿ ಇಂದು ಅಮೆರಿಕದ ಸೇನಾ ಬಲವಿದೆ. ಶಾಂತಿಯನ್ನು ಅಸ್ತಿತ್ವದಲ್ಲಿ ತರುವುದಕ್ಕಗತ್ಯವುಳ್ಳ ಶಕ್ತಿಯನ್ನು ಯಥಾರ್ಥ ನಾಗರಿಕರ ಕೈಗೆ ಕೊಡದೆ ಹೋದರೆ ಶಾಂತಿಯುಳಿಯಲಾರದು" ಎಂದು ಘೋಷಿಸಿದ್ದಾರೆ.

ಪಾಕಿಸ್ತಾನಕ್ಕೆ ರವಾನಿಸುವುದಕ್ಕಾಗಿ ಅಮೆರಿಕದ ನ್ಯೂಜೆರ್ಸಿ ಬಂದರದಲ್ಲಿ ತುಂಬಿಸಿದ್ದ ಮದ್ದು ಗುಂಡುಗಳಿಗೆ ಇದೇ ತಾ 20ರಲ್ಲಿ ಬೆಂಕಿಹಿಡಿದು ಭಯಂಕರ ಸ್ಫೋಟವಾಗಿ ಹಲವರು ಮರಣಗೊಂಡರೆಂದು ತಿಳಿದು ಬರುತ್ತದೆ.

ಸಿಡ್ನಿಯಲ್ಲಿ ಸೇರಿದ ಕಾಮನ್‌ವೆಲ್ತ್ ರಾಷ್ಟ್ರಗಳ ಸಮಾಲೋಚನಾ ಸಮ್ಮೇಳನವು ಇದೇ ತಾ. 20ರಲ್ಲಿ ಮುಕ್ತಾಯಗೊಂಡಿದೆ. ಸಿಲೋನ್, ಭಾರತ, ನ್ಯೂಜೀಲೆಂಡ್, ಪಾಕಿಸ್ತಾನ್, ಬ್ರಿಟನ್‌ಗಳು ಈ ಸಮ್ಮೇಳನ ಭಾಗಿಗಳಾಗಿದ್ದು ಆರ್ಥಿಕ ದುರವಸ್ಥೆಯಲ್ಲಿರುವ ಕಾಮನ್‌ವೆಲ್ತ್ ಏಷ್ಯಾ ರಾಷ್ಟ್ರಗಳಿಗೆ ಸಹಾಯವನ್ನು ಸಲ್ಲಿಸಬೇಕೆಂಬ ನಿರ್ಧಾರವಾಗಿ, ಅದಕ್ಕಾಗಿ 8 ಮಿಲಿಯ ಪೌಂಡುಗಳನ್ನು ತೆಗೆದಿಡಲಾಗಿದೆ. ಕಾಮನ್‌ವೆಲ್ತಿನ ಸದಸ್ಯರಾಗಿರುವ ಅಸ್ಯೇತರ ರಾಷ್ಟ್ರಗಳವರಲ್ಲ [illegible] ಭಾರತ ಪ್ರತಿನಿಧಿ [illegible] ಸ್ಪಷ್ಟ ತೀರ್ಮಾನ ಮತ್ತು ಯಥಾರ್ಥತೆಯನ್ನು ಇತರ ರಾಷ್ಟ್ರಗಳ ಪ್ರತಿನಿಧಿಗಳು ಕೊಂಡಾಡಿದರು. ಎಂಟು ಮಿಲಿಯ ಪೌಂಡುಗಳ ಸಹಾಯ ಯೋಜನೆಯನ್ನು ಅವಲಂಬಿಸಿ, ಆಗ್ನೇಯ ಏಷ್ಯಾ ರಾಷ್ಟ್ರಗಳ 3000 ಮಂದಿಯು ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಒಂದು ವರುಷಾವಧಿಯ ವಿಶೇಷ ತರಬೇತಿ ಹೊಂದುವುದಕ್ಕಾಗಿ ಬ್ರಿಟನ್, ಕೆನಡಾ, ಆಸ್ಟ್ರೇಲಿಯ, ನ್ಯೂಜೀಲೆಂಡ್ ಮತ್ತು ಭಾರತಕ್ಕೆ ಬರಲಿದ್ದಾರೆ. ಭಾರತವು 300ರಿಂದ 500ರ ವರೆಗಿನ ಜನರನ್ನು ತರಬೇತಿಗಾಗಿ ತರಿಸಿಕೊಳ್ಳಲಿದೆ.

ಆಟ್ಲಾಂಟಿಕ್ ಒಪ್ಪಂದಕ್ಕೆ ಸೇರಿದ ಹನ್ನೆರಡು ರಾಷ್ಟ್ರಗಳ ವಿದೇಶ ಮಂತ್ರಿಗಳು ಕಳೆದ ವಾರ ಲಂಡನಿನಲ್ಲಿ ಸೇರಿ ಎರಡು ಪ್ರಾಮುಖ್ಯ ಪ್ರಕಟಣೆಗಳನ್ನು ಹೊರಡಿಸಿದ್ದಾರೆ. ತಮ್ಮ ಪೈಕಿ ಯಾರ ಮೇಲಾದರೂ ಹೊರಗಿನ ಧಾಳಿ ನಡೆದರೆ ಅದನ್ನು ಇದಿರಿಸಬಲ್ಲ ಸಮರ್ಥ ರಕ್ಷಣಾ ವ್ಯವಸ್ಥೆಯೊಂದನ್ನು ಮಾಡಿಕೊಳ್ಳಬೇಕೆಂಬುದೊಂದು, ಲಂಡನಿನಲ್ಲಿ ಸದಾ ನಿಂತು ಕೆಲಸಮಾಡುವ ಶಾಶ್ವತ 'ಆಟ್ಲಾಂಟಿಕ್ ಹೈಕಮಾಂಡ್' ಒಂದನ್ನು ಕೂಡಲೇ ರಚಿಸಬೇಕೆಂಬುದಿನ್ನೊಂದು. ಮಧ್ಯಪೂರ್ವ ರಾಷ್ಟ್ರಗಳಾದ ಗ್ರೀಸ್, ಟರ್ಕಿ, ಮತ್ತು ಪರ್ಶಿಯಾಗಳ ಸ್ವಾತಂತ್ರ್ಯ, ದೃಢತೆ, ಭದ್ರತೆಗಳ ರಕ್ಷಣೆಯಲ್ಲಿ ತಮಗಿರುವ ಆಸಕ್ತಿಯನ್ನು ಮತ್ತೊಮ್ಮೆ ಸ್ಪಷ್ಟಪಡಿಸಿ, ರಷ್ಯವು ಮಧ್ಯ ಪೂರ್ವದ ಮೇಲೆ ಇನ್ನಾವುದೇ ರೀತಿಯ ಒತ್ತಡವನ್ನು ಹಾಕದ ಹಾಗೆ ಕೈ ತೆಗೆಯತಕ್ಕದ್ದೆಂದು ರಷ್ಯಕ್ಕೆ ಎಚ್ಚರಿಕೆ ಕೊಡುವ ಹೇಳಿಕೆಯನ್ನು ಅಮೇರಿಕದ ಗೃಹ ಕಾರ್ಯದರ್ಶಿ ಮಿ. ಡೀನ್ ಅಚೆಸನ್ ಮತ್ತು ಬ್ರಿಟಿಷ್ ವಿದೇಶ ಮಂತ್ರಿ ಮಿ. ಅರ್ನೆಸ್ಟ್ ಬೆವಿನರು ಈ ಸಂದರ್ಭದಲ್ಲಿ ಕೊಟ್ಟಿದ್ದಾರೆ.

ಆಸ್ಟ್ರಿಯಾದಲ್ಲಿರುವ ತಂತಮ್ಮ ಸೇನಾ ನಾಯಕರ ಬದಲಿಗೆ ಸಿದ್ಧದಲ್ಲೇ ನಾಗರಿಕ ಹೈಕಮಿಶನರರನ್ನು ತಾವು ನೇಮಿಸಲಿರುವೆವೆಂದೂ, ಆಸ್ಟ್ರಿಯಾ ಸಂಒಪ್ಪಂದ ಬೇಗನೆ ರಚಿತವಾಗಬೇಕೆಂದೂ ಒಮ್ಮತಕ್ಕೆ ಬರದೆ [illegible] ಆಸ್ಟ್ರಿಯಾದ ಸ್ವಾತಂತ್ರ್ಯವನ್ನು [illegible] ಪರಸ್ಪರ ತಾವೇ ಮಾಡಿಕೊಳ್ಳುವೆವೆಂದೂ ಬ್ರಿಟನ್, ಫ್ರಾನ್ಸ್ ಮತ್ತು ಅಮೇರಿಕಗಳು ಜಾಹೀರು ಮಾಡಿವೆ.

ಹೈಡ್ರೋಜನ್ ಬಾಂಬುಗಳನ್ನು ತಯಾರಿಸಲು ಅಮೆರಿಕಕ್ಕೆ ತಿಳಿದಿರುವಷ್ಟೇ ರಷ್ಯಕ್ಕೂ ತಿಳಿದದೆಯೆಂದೂ, ಅಮೆರಿಕದ ಪಾಲಿಗೆ ಶಾಂತಿ ಕಾಲದ ಅತ್ಯಪಾಯಕರ ದಿನಗಳೆಂದರೆ ಬಹುಶಃ ಈಗಿನವುಗಳೆಂದೂ ಅಮೆರಿಕದ ಡೆಮೊಕ್ರೇಟಿಕ್ ನಾಯಕ ಸಿನೇಟರ್ ಸ್ಕೋಟ್‌ಲುಕಾಸರಂದಿದ್ದಾರೆ.

1950ನೇ ಜುಲಾಯಿ 19ರೊಳಗೆ ಬರ್ಮಾದಲ್ಲಿ ಶಾಂತಿ ನೆಲೆಗೊಳ್ಳುವದೆಂಬ ಆಶೆಯನ್ನು ಲಂಡನಿಗೆ ಹೋಗಿದ್ದ ಬರ್ಮಾದ ಪ್ರಧಾನ ಮಂತ್ರಿ ಥಕಿನ್‌ನೂ ಅವರು ಪ್ರಕಟಿಸಿದ್ದಾರೆ. ಕಳೆದ ವರುಷ ಜೂನ್ 19ರಲ್ಲಿ 'ಇನ್ನು ಒಂದು ವರುಷದೊಳಗೆ ಬರ್ಮಾ ಶಾಂತಿ' ಎಂಬ ಪ್ರತಿಜ್ಞೆಯೊಡನೆ ಕಾರ್ಯಾರಂಭಿಸಿದ್ದು, ಆ ನಿಶ್ಚಿತಾವಧಿಯೊಳಗೆ ವೈರಿಗಳನ್ನು ಸದೆಬಡಿಯಬಹುದೆಂದು ಥಾಕಿನ್‌ನೂ ಅವರು ಈಗಲೂ ಭರವಸೆಯಿಂದಿದ್ದಾರೆ.

ಲೋಕ ಶಾಂತಿ ಪ್ರಯತ್ನಕ್ಕಾಗಿ ರಷ್ಯಕ್ಕೆ ಹೋಗಿದ್ದ ಸಂಯುಕ್ತ ರಾಷ್ಟ್ರ ಸಂಘದ ಮುಖ್ಯ ಕಾರ್ಯದರ್ಶಿ ಜನರಲ್ ಟ್ರಿಗ್ವಿಲೀ, ಅವರು ಮೋಸ್ಕೋದಲ್ಲಿ ಮಾರ್ಶಲ್ ಸ್ಟಾಲಿನನ್ನೂ ಇತರ ರಷ್ಯನ್ ನಾಯಕರನ್ನೂ ಕಂಡು ಪರಿಣಾಮಕಾರೀ ಮಾತುಕತೆಗಳನ್ನು ನಡೆಸಿದ್ದಾರೆ, ಇದರ ಪ್ರತಿಫಲಗಳೇನೆಂಬುದನ್ನು ಇನ್ನು ತಾನೇ ಕಾಣಲಿಕ್ಕಿದೆ.

### ಭಾರತ ರಾಜಕೀಯ

ಭಾರತ ಪಾಕಿಸ್ತಾನಗಳ ಒಪ್ಪಿತಾನುಸಾರವಾಗಿ ಭದ್ರತಾ ಕೌನ್ಸಿಲಿನಿಂದ ಕಾಶ್ಮೀರ ವಿವಾದದ ಮಧ್ಯಸ್ಥಗಾರನಾಗಿ ನೇಮಕಗೊಂಡಿರುವ ಸರ್. ಓವೆನ್‌ಡಿಕ್ಸನರು ಇದೇ ಮೇ ತಾ 21ಕ್ಕೆ ಭಾರತಕ್ಕೆ ಹೊರಟಿರುವರೆಂದು ತಿಳಿದುಬರುತ್ತದೆ. ಮೇ 28ಕ್ಕೆ ಅವರು ನವದಿಲ್ಲಿಗೆ ಮುಟ್ಟಬಹುದು, ಅವರು ಮುಂದಾಗಿ ಭಾರತ ಪ್ರಧಾನಿ ಪಂಡಿತ ನೆಹರುಗಳೊಡನೆ ಮಾತಾಡಲಿದ್ದಾರೆ, ಆ ಮೇಲೆ ಕರಾಚಿಗೆ ಹೋಗಿ ಪಾಕಿಸ್ತಾನ್ ಅಧಿಕಾರಿಗಳೊಡನೆ ಪರ್ಯಾಲೋಚನೆ ನಡೆಸುವರು. ಸರ್. ಡಿಕ್ಸನರ ಮೊದಲ ಯೋಜನೆಯಂತೆ, ಅವರು ಪ್ರಥಮತಃ ಕರಾಚಿಗೆ ಹೋಗಿ, ಆ ಮೇಲೆ ಡಿಲ್ಲಿಗೆ ಬರಬೇಕಿದ್ದಿತು. ಆದರೆ ಪಂಡಿತ ನೆಹರುಗಳು ಮೇ 31ರಲ್ಲಿ ಇಂಡೋನೇಶಿಯಕ್ಕೆ ಹೊರಡಲಿರುವುದರಿಂದ, ಅದಕ್ಕನುಗುಣವಾಗಿ ಸರ್. ಡಿಕ್ಸನರು ತನ್ನ ಕಾರ್ಯಕ್ರಮವನ್ನು ಬದಲಾಯಿಸಿಕೊಂಡರು.

ಭಾರತವು ಪಾಕಿಸ್ತಾನದಿಂದ 150,000 ಟನ್ನು ಗೋಧಿಯನ್ನು ಪಡೆಕೊಳ್ಳುವ ಸಂಬಂಧದ ಒಪ್ಪಂದವೊಂದು ಇವೆರಡು ರಾಷ್ಟ್ರಗಳೊಳಗಾದ ಈ ಒಪ್ಪಂದದಲ್ಲಿ ಟನ್ನಿಗೆ 280 ರೂಪಾಯಿ


**ಮೂಲ್ಕಿ ಬೇಂಕ್,**
**ಲಿಮಿಟೆಡ್, ಮೂಲ್ಕಿ**

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

**The Moolky Bank Ltd.,**
**Moolky, S. K.**



# SOANS NURSERY

## ಆಹಾರ—ನಮ್ಮ ದೇಶದ ಅತ್ಯಾವಶ್ಯಕತೆ

ಪ್ರತಿಯೊಬ್ಬನೂ ತಾನು ಸ್ವತಂತ್ರವಾಗಿ ಸ್ವಲ್ಪವಾದರೂ ಆಹಾರ ವಸ್ತುಗಳನ್ನು ಬೆಳೆಸಿದರೆ ನಾವು ಮಿಲಿಯಗಟ್ಟಲೆ ಡಾಲರುಗಳನ್ನು ನಮ್ಮ ದೇಶದಲ್ಲೇ ಉಳಿಸಿಕೊಳ್ಳಬಹುದು ಸಾವಿರಾರು ಪ್ರಾಣಗಳನ್ನೂ ಕಾಪಾಡಬಹುದು

— ಮಳೆಗಾಲವು ಸಮೀಪಿಸಿದೆ —

ನಮ್ಮಲ್ಲಿ ಎಲ್ಲಾ ತರದ ದೇಶೀ ಮತ್ತು ವಿದೇಶೀ ತರಕಾರಿ ಮತ್ತು ಪುಷ್ಪಗಳ ಬೀಜಗಳ ಸಂಗ್ರಹವು ನಮ್ಮ ಕರಾವಳಿಯ ಬೇಡಿಕೆಯನ್ನು ಪೂರೈಸುವಷ್ಟು ಇದೆ. ಎಲ್ಲಾ ತರದ ಫಲ ಪುಷ್ಪ ಗಿಡಗಳೂ ದೊರೆಯುತ್ತವೆ ನಮ್ಮ ಗಿಡಗಳು 40 ವರ್ಷಗಳ ಅನುಭವದಿಂದ ತಯಾರಿಸಿದವುಗಳಾಗಿ, ಬೆಲ್ಲೆಯಲ್ಲಿ ಪ್ರಾಮುಖ್ಯ ಸ್ಥಾನ ಪಡೆದಿವೆ ನಿಮಗೆ ಗಿಡಗಳು ಬೇಕಾಗಿದ್ದಲ್ಲಿ ನಮ್ಮ ಮಂಗಳೂರು ಡಿಪೋವನ್ನು ಒಮ್ಮೆ ಸಂದರ್ಶಿಸಿರಿ

| CENTRAL DEPOT | GARDENS |
|---|---|
| Balmatta Road, Mangalore, S. K. | P. O. Uchil, S K |

# ಭಾರತೀಯರ ಇಂದಿನ ಹೊಣೆ

ಗಳಂತೆ ಧಾರಣೆ ನಿಶ್ಚೈಸಲ್ಪಟ್ಟಿದೆಯೆಂದೂ ಕೊಡಕೊಂಡವು ಎಂದು ಸರಕಾರಗಳೊಳಗೇನೇ ನಡೆಯುವದೆಂದೂ ತಿಳಿದು ಬರುತ್ತದೆ. ಪಾಕಿಸ್ತಾನ್ ಗೋಧಿಯ ಜುಮ್ಲಾ ಮೌಲ್ಯ 420 ಲಕ್ಷ ರೂ.ಗಳು ಭಾರತದ ರೂಪಾಯಿಯ ಮೂಲಕವೇ ಕೊಡಲ್ಪಡುವವು. ಪಾಕಿಸ್ತಾನವು ಭಾರತದ ಸಾಮಾನುಗಳನ್ನು ಪಡಕೊಳ್ಳುವ ಮೂಲಕ ಅವುಗಳನ್ನು ಭಾರತದಲ್ಲಿಯೇ ವ್ಯಯಿಸಲಿರುವುದು. ದಿಲ್ಲೀ ಒಡಂಬಡಿಕೆಯಿಂದ ನಿರ್ಮಾಣಗೊಂಡ ಸ್ನೇಹ ವಾತಾವರಣವು ಬಿಟ್ಟ ಸತ್ಫಲಗಳಲ್ಲಿ ಇದೂ ಒಂದೆನ್ನಬಹುದು.

'ಸಂಯುಕ್ತ ರಾಷ್ಟ್ರ ಸಂಘದ ಮೂಲಕ ಲೋಕ ಶಾಂತಿ ಅಸಾಧ್ಯ'ವೆಂಬ ನಿರಾಶೆಯು ಎಲ್ಲೆಲ್ಲೂ ಕವಿದಿರುವಾಗ, ಪಂಡಿತ ಜವಾಹಿರಲಾಲ ನೆಹರುರವರು ಇದೇ ತಾ. 20ರಲ್ಲಿ ನವದಿಲ್ಲಿಯಲ್ಲಿ ನೆರೆದಿದ್ದ ಸಂಯುಕ್ತ ರಾಷ್ಟ್ರ ಸಂಘದ ವಿದ್ಯಾರ್ಥಿ ಸಂಘದ ಸಭೆಯಲ್ಲಿ ಭಾಷಣ ಮಾಡುತ್ತಾ ಹೇಳಿದರು: "ಸಂಯುಕ್ತ ರಾಷ್ಟ್ರ ಸಂಘದ ಪರಾಭವವೆಂದರೆ, ಅದು ಕೇವಲ ಒಂದು ಸಂಘದ ಅಪಜಯವಲ್ಲ; ಅದಕ್ಕಿಂತಲೂ ಗಾಢತಮವಾದವುಗಳ ಮತ್ತು ಪ್ರಾಮುಖ್ಯವಾದವುಗಳ ಪರಾಭವವೇ ಸರಿ. ಪ್ರಚಲಿತ ಸ್ಥಿತಿ ಯೋಜನೆಗಳ-ಯಾವುದು ಇಲ್ಲದಿದ್ದರೆ ಲೋಕಕ್ಕೆ ದೊಡ್ಡ ನಷ್ಟವೋ ಆ ಮುಖ್ಯ ಸಂಗತಿಗಳ-ಪ್ರತಿನಿಧಿಯಾಗಿದೆ ಜಾಗತಿಕ ಸಂಸ್ಥೆ. ಸಂಯುಕ್ತ ರಾಷ್ಟ್ರ ಸಂಘದ ಸಭೆಗಳಲ್ಲಾಗುತ್ತಿರುವ ಅಪ್ರಿಯಕರ ಘರ್ಷಣೆಗಳಾದರೂ ಅತ್ಯಂತ ನಿಯಂತ್ರಿತ ಸ್ವರೂಪದವುಗಳವೆ. ನಾವು ಆ ಸಂಘದ ಕುರಿತು ಯೋಚಿಸುವಾಗ ಅದರ ಘೋಷಣೆ ಮತ್ತು ಅದಕ್ಕೆ ಪ್ರೇರಣೆಯಾಗಿರುವ ಮೂಲಿಯಾವಧಿ ಜನನ ತತ್ವಗಳನ್ನೇ ಚಿಂತಿಸಬೇಕು.

ಭಾರತದ ನಾವೇ ದಳ ಮತ್ತು ಆಕಾಶ ಬಲಗಳ ಜತೆ ಮಹಾ ಪ್ರದರ್ಶನವು-ಇದುವರೆಗೆಂದೂ ನಡೆಯದಿದ್ದಷ್ಟು ದೊಡ್ಡ ಪ್ರಮಾಣದ ಹೋರಾಟ ಪ್ರದರ್ಶನವು-ಇದೇ ತಿಂಗಳ ತಾ 28 ಮತ್ತು 29ರಲ್ಲಿ ಪಶ್ಚಿಮ ಕರಾವಳಿಯಲ್ಲಿ ಜರಗಲಿದೆ.

ಪಾಕಿಸ್ತಾನದ ಧೀಕರಾಚರಣೆಗಳ ಅತಿ ದೊಡ್ಡ ಕ್ಷೇತ್ರವಾಗಿದ್ದ ಢಾಕ್ಕಾ ಈಗ, ದಿಲ್ಲೀ ಒಪ್ಪಂದದ ಪರಿಣಾಮವಾಗಿ ಶಾಂತ ಸ್ಥಿತಿಗೆ ಬಂದಿದೆಯೆಂದೂ, ಒಪ್ಪಂದವು ಅಲ್ಲಿ ಜಾರಿಗೆ ತರಲ್ಪಡುತ್ತಿದೆಯೆಂದೂ ಅಲ್ಪ ಸಂಖ್ಯಾಕರಲ್ಲಿ ಭರವಸೆ ಮೂಡಿದೆಯೆಂದೂ ತಿಳಿದು ಬರುತ್ತದೆ. ಪಾಕಿಸ್ತಾನ್ ಸ್ಥಾಪನೆಯೊಡನೆ ಅಪ್ಘಾನಿಸ್ಥಾನವು ಹೂಡಿರುವ, ಗಡಿನಾಡು ಪ್ರಾಂತ್ಯವನ್ನು ಪಖ್ತೂನಿಸ್ಥಾನವಾಗಿ ನಿರ್ಮಿಸಬೇಕೆಂಬ ವಿವಾದದ ಕುರಿತು ಬ್ರಿಟನು ಮತ್ತು ಅಪ್ಘಾನಿಸ್ಥಾನ್ ಸರಕಾರಗಳೊಳಗೆ ಮಾತುಕತೆ ನಡೆಯಿತೆಂದು ತಿಳಿದು ಬಂದಿದೆ. ಇಂಗ್ಲೆಂಡಿನಲ್ಲಿ ಅಪ್ಘಾನ್ ರಾಯಭಾರಿಯಾಗಿ ನೇಮಕಗೊಂಡಿರುವ ಮಾರ್ಶಲ್ ಶಾ ವಾಲಿ ಬ್ರಿಟನಿನ ವಿದೇಶ ಮಂತ್ರಿ ಮಿ ಬೆವಿನರನ್ನು ತಾ. 22ರಲ್ಲಿ ಸಂಧಿಸಿರುವರು.

'1950ನೇ ಜನತಾ ಪ್ರಾತಿನಿಧ್ಯ ಶಾಸನ'ದನ್ವಯ ಬೇರೆ ಬೇರೆ ಸಂಸ್ಥಾನೀ ಎಸೆಂಬ್ಲಿಗಳ ಜಿಲ್ಲಾವಾರು ಪ್ರಾತಿನಿಧ್ಯಗಳ ಸಂಖ್ಯಾಮಾನಗಳು ಪ್ರಕಟವಾಗಿವೆ. ಆ ಪ್ರಕಾರ ಮದ್ರಾಸು ಸಂಸ್ಥಾನದ ಎಸೆಂಬ್ಲಿಯಲ್ಲಿ 375 ಸ್ಥಾನಗಳಿರುವವು. ಈ ಪೈಕಿ308 ಸಾರ್ವಜನಿಕ ಸ್ಥಾನಗಳು 62 ದಲಿತ ವರ್ಗದವುಗಳು ಮತ್ತು 5. ಗುಡ್ಡಗಾಡು ದಳಿತ ಜನಾಂಗದವುಗಳು. ಜನಸಂಖ್ಯೆಯಲ್ಲಿ ಪ್ರತಿ 1-45 ಲಕ್ಷಕ್ಕೊಂದರಂತೆ ಈ ಸ್ಥಾನಗಳನ್ನು ನಿರ್ಣಯಿಸಲಾಗಿದೆ. 1950ನೇ ಮಾರ್ಚ 31 ರಲ್ಲಿ ಮದ್ರಾಸ್ ಸಂಸ್ಥಾನದಲ್ಲಿರುವ ಒಟ್ಟು ಜನಸಂಖ್ಯೆ 5 ಕೋಟಿ ಮತ್ತು 42 ಲಕ್ಷಗಳೆಂದು ಅಂದಾಜು ಮಾಡಲಾಗಿದೆ. ಸಂಸ್ಥಾನದ ಒಟ್ಟು 375 ಸ್ಥಾನಗಳ ಪೈಕಿ ದಕ್ಷಿಣ ಕನ್ನಡ ಜಿಲ್ಲೆಗೆ 10 ಸ್ಥಾನಗಳು ದೊರೆಯುವವು. ಆ ಪೈಕಿ ಸಾರ್ವಜನಿಕ ಸ್ಥಾನಗಳು 9, ಹರಿಜನರಿಗೆ ಕಾದಿಟ್ಟ ಸ್ಥಾನ 1.

## ಪಟೇಲರ ಸಂದೇಶ

ಕಳೆದ ವಾರದ ಭಾರತೀಯ ರಾಜಕೀಯ ಹಲಗೆಯಲ್ಲಿ ಸುವರ್ಣಾಕ್ಷರಗಳಿಂದಾಗಿ ಹೊಳೆಯುತ್ತಿರುವದೆಂದರೆ ಸರ್ದಾರ್ ಪಟೇಲರ ಮಾತುಗಳು. ಕೊಚ್ಚಿ ತಿರುವಾಂಕೂರು ಯೂನಿಯನು ಕೇಂದ್ರಗಳಿಗೆ ಭೇಟಿ ಕೊಟ್ಟು ಮರಳಿದ ಸರ್ದಾರ್ ವಲ್ಲಭಾಯಿಗಳು ತನಗೆ ದೊರೆತ ಪ್ರತಿ ಸಂದರ್ಭದಲ್ಲೂ ಅಖಿಲ ಭಾರತೀಯ ಸಮಸ್ಯೆಗಳಿಗೆ— ಅದರಲ್ಲೂ ದಕ್ಷಿಣ ಭಾರತೀಯ ಸ್ಥಿತಿಗತಿಗಳಿಗೆ—ಮುಖ್ಯವಾಗಿ ಕಮ್ಯೂನಿಸ್ಟರು, ಧಾರ್ಮಿಕವಾದಿಗಳು, ಭಾಷಾವಾದಿ ಪ್ರಾಂತ್ಯಾಪೇಕ್ಷಿಗಳೇ ಮೊದಲಾದ ಎಲ್ಲಾ ಅತೃಪ್ತ ವರ್ಗಗಳಿಗೆ, ತಾಕವುಳ್ಳ ಹೃದಯ ಶುದ್ಧಿ ಮಾತುಗಳನ್ನಾಡಿದ್ದಾರೆ. ಆವುಗಳಲ್ಲಿ ಕೆಲವಂಶವನ್ನು ಇಲ್ಲಿ ಕೊಡಲಾಗಿದೆ:—

ತ್ರಿವೇಂದ್ರಮಿನಲ್ಲಿ ಪತ್ರಿಕಾಪ್ರತಿನಿಧಿಗಳ ಸಮ್ಮೇಳನದಲ್ಲಿ ಮಾತಾಡುತ್ತಾ ಸರ್ದಾರರೆಂದರು: "ನಾವೀಗ ಸ್ವತಂತ್ರ ಪ್ರಜಾಸತ್ತಾ ಜನತಾ ರಾಜ್ಯವಾಗಿದ್ದೇವೆ ಅದ್ದರಿಂದ ಪ್ರಜಾಪ್ರಭುತ್ವದ ವಿಜಯೀ ಚಲನೆಯು ನಾವು ಜನತೆಗೆ ಕೊಡುವ ತರಬೇತಿ ವಿಧಾನವನ್ನೇ ಹೆಚ್ಚಾಗಿ ಅವಲಂಬಿಸಿದೆ. ನಮ್ಮ ತತ್ವಾಭಿಮತಗಳನ್ನು ಜನತೆಗೆ ಮುಟ್ಟಿಸಿ, ಅವರನ್ನು ಸುಶಿಕ್ಷಿತರನ್ನಾಗಿ ಮಾಡಲಾಗುವ ನಮ್ಮ ಮುಖ್ಯ ಉಪಕರಣವೆಂದರೆ ಪತ್ರಿಕೆ. ಇದೀಗ ಪ್ರಥಮ ಬಾರಿ ನಮ್ಮಲ್ಲಿ ಪ್ರೌಢ ಮತಾಧಿಕಾರ ಬಂದಿದೆ. ಜನತೆ ತಮ್ಮೀ ಮತಾಧಿಕಾರವನ್ನು ಉಚಿತ ರೀತಿಯಿಂದ ಮತ್ತು ಬುದ್ಧಿವಂತಿಕೆಯಿಂದ ಉಪಯೋಗಿಸದಿದ್ದರೆ, ಅಥವಾ ಉಪಯೋಗಿಸಲು ಅಸಮರ್ಥವಾದರೆ, ಪ್ರಜಾಪ್ರಭುತ್ವದ ಕಾರ್ಯಭಾರ ಕಷ್ಟಸಾಧ್ಯವಾಗುವದು; ನಾವು ದೊಡ್ಡ ನಷ್ಟಕ್ಕೀಡಾಗಬೇಕಾಗುವದು. ಜನತಾ ಶಿಕ್ಷಣ ಕೊಡುವರೆ ಮತ್ತು ಜನಮತವನ್ನು ಪ್ರತಿಬಿಂಬಿಸುವರೆ ಪತ್ರಿಕೆಗಳಿಗೆ ಪೂರ್ಣ ಸ್ವಾತಂತ್ರ್ಯವಿರಬೇಕಾದರೂ, ಪತ್ರಿಕೆಗಳು ಕೂಡಾ ತಮ್ಮ ಸ್ವಂತ ಜವಾಬ್ದಾರಿಯನ್ನು ಮನವರಿಕೆ ಮಾಡಿಕೊಳ್ಳಬೇಕು. ಸ್ವಾತಂತ್ರ್ಯದೊಂದಿಗೆ ಸ್ವಂತ ಕರ್ತವ್ಯ ಬಾಧ್ಯತೆಗಳೂ ಕೆಲವಿವೆ. ಜನತೆಯನ್ನು ಸರಿಯಾದ ರೀತಿಯಿಂದ ಯೋಗ್ಯ ವಿಧಾನಗಳಿಂದ ತರಬೇತಿಗೊಳಿಸುವ ಮೂಲಕ ಅದರಲ್ಲೂ ಪ್ರಾಯಸ್ಥರಿಗೆ ಮತಾಧಿಕಾರ ಬಂದಿರುವ ಈ ಕಾಲದಲ್ಲಿ— ಭಾರತದ ಏಳ್ಗೆ ಸ್ವಾತಂತ್ರ್ಯವನ್ನು ರೂಪಿಸುವ ಅತಿ ಮಹತ್ವದ ಹೊಣೆಗಾರಿಕೆ ಪತ್ರಿಕೆಗಳ ಮೇಲಿದೆ. ಈ ಘನ ಜವಾಬ್ದಾರಿಗನುಸಾರವಾಗಿ, ಪತ್ರಿಕಾ ಸಂಪಾದಕರಾಗುವವರು, ಧೋರಣೆ ರೂಪಿಸಲು ಅಥವಾ ವರ್ಚಸ್ಸು ಬೀರಲು ಕೈಯಿಕ್ಕುವ ಮೊದಲು ಯಾವುದಾದರೂ ಪ್ರಸಿದ್ಧ ಪತ್ರಿಕೆಗಳಲ್ಲಿ ಅದೊಂದು ಅವಧಿಯ ವರೆಗೆ ತರಬೇತಿ ಉದ್ಯೋಗ ಮಾಡಿಕೊಳ್ಳುವುದು ಹಿತಕರ."

ತಾನು ಮರಳಿ ಹೊರಟಿದ್ದ ಪಿ. ಎಸ್. ಎಸ್. ದಿಲ್ಲಿ ಹಡಗದಲ್ಲೇ ಮಲಬಾರಿನ 120 ಮಂದಿ ಕಾಂಗ್ರೆಸ್ ಕೆಲಸಗಾರರಿಗೆ ಉಪದೇಶವೀಯುತ್ತಾ ಸರ್ದಾರರೆಂದರು: "ಈ ಕಾಲದಲ್ಲಿ ಕಾಂಗ್ರೆಸ್ ಕೆಲಸಗಾರರು ಖಂಡಿತಯವಾದ ಎಲ್ಲಾ ರೀತಿಯ ಜಗಳಗಳಲ್ಲೂ ನಿರತರಾಗಿದ್ದಾರೆ. ಸಮುದ್ರದ ಅಲೆಗಳಿಗಿಂತಲೂ ಹೆಚ್ಚು ಕಠೋರರಾಗಿದ್ದಾರೆ ಕಾಂಗ್ರೆಸ್ ಕೆಲಸಗಾರರು. ಕಾಂಗ್ರೆಸಿಗರು ತಮ್ಮತಮ್ಮೊಳಗೇನೇ ಪರಸ್ಪರ ಅಸೂಯೆಪಟ್ಟುಕೊಳ್ಳುತ್ತಿದ್ದಾರೆ. ಏನೆಂದರೂ, ನಾಯಕರು ನಿರ್ಮಾಣಗೊಂಡಿರುವುದು ಕೆಲಸಗಾರರ ನಡುವಿನಿಂದಲೇ. ಅದ್ದರಿಂದ ನಾಯಕರನ್ನು ನೇರಾಗಿ ನಿಲ್ಲಿಸಿಟ್ಟುಕೊಳ್ಳುವುದು ಕೆಲಸಗಾರರ ಕರ್ತವ್ಯವಿದೆ. ನಾಯಕರು ಪದವಿಗಳಿಗಾಗಿ ನಿರ್ಮಿಸಿರುವ ಜಗಳಗಳ ಸೆಳೆತಕ್ಕೆ ಸಿಕ್ಕಿ, ಕೆಲಸಗಾರರೂ ಅವುಗಳಲ್ಲಿ ನಿರತರಾಗಬಾರದೆಂದು ಎಚ್ಚರಿಸುತ್ತೇನೆ. ಕಾಂಗ್ರೆಸಿನೊಳಗಡೆಯಲ್ಲಿರುವ ಯಾರಾದರೂ ಅಸಮಾಧಾನಗೊಂಡರೆ ಅಂಥವರು ಸ್ಥಳೀಯ ಕಾಂಗ್ರೆಸ್ ಸಮಿತಿಗೆ ಮಾತ್ರವಲ್ಲ, ಜಿಲ್ಲಾ ಕಾಂಗ್ರೆಸ್ ಸಮಿತಿ, ಪ್ರಾಂತಿಕ ಕಾಂಗ್ರೆಸ್ ಸಮಿತಿಗೆ ಮತ್ತು ಅಖಿಲ ಭಾರತ ಕಾಂಗ್ರೆಸ್ ಸಮಿತಿಗೆ ಕೂಡಾ ದೂರನ್ನೊಯ್ಯಬಹುದು. ಕಾಂಗ್ರೆಸೆಂಬುದು ಆ ರೀತಿ ಜೋಡಣೆಗೊಂಡಿದೆ. ಶಿಸ್ತುಭಂಗವು ಆಗದಂತೆ ಕಾಂಗ್ರೆಸಿಗರು ತಮ್ಮನ್ನು ತಾವೇ ರಕ್ಷಿಸಿಕೊಳ್ಳಬೇಕು. ಅವರು ವಿಧಾಯಕ ಕಾರ್ಯನಿರತರಾಗಬೇಕು. ನಿಮ್ಮೀ ಭಾಗದ ಒಳ ಜಗಳ ಕಾರಣಗಳನ್ನು ಪತ್ರಿಕೆಗಳಲ್ಲಿ ಓದಿರುವುದಕ್ಕಿಂತ ಹೆಚ್ಚಿಗೆ ನಾನರಿಯೆ. ಎಲ್ಲರ ಮೇಲೆ ಮತ್ತು ದೈನಿಕ ಆಗುಹೋಗುಗಳ ಮೇಲೆ ಕಠಿಣ ಟೀಕೆ ಮಾಡುವುದು ಪ್ರಾಂತಿಕ ನಾಯಕರುಗಳಿಗೆ ಹೇಳಿಸಿದ್ದಲ್ಲ. ಕೆಲಸಗಾರರು ತಮ್ಮ ಪಾಲಿನ ಕರ್ತವ್ಯ ತಾವು ಮಾಡಿದರೆಂದರೆ, ಧುರೀಣರು ತಾವಾಗಿ ಹಾದಿಗೆ ಬರುವರು. ಈ ಕಾಲದ ತರುಣರು ಪೋಲೀಸರ ಮೇಲೆ ಧಾಳಿ ಮತ್ತು ಅತ್ಯಾಚಾರಗಳನ್ನು ನಡೆಸುತಿದ್ದಾರೆ; ಅವರನ್ನು ಸದ್ದಾರಿಗೆ ತರುವುದು ಕಾಂಗ್ರೆಸಿಗರ ಕೆಲಸ. ಒಂದು ಸ್ವತಂತ್ರ ರಾಷ್ಟ್ರದಲ್ಲಿ ಎಲ್ಲವೂ ಪೋಲೀಸರನ್ನೇ ಅವಲಂಬಿಸಿರಲು ಸಾಧ್ಯವಿಲ್ಲ. ಸಂಗತಿಗಳನ್ನು ಸರಿಗೊಳಿಸುವುದು ಸ್ವತಃ ನಮ್ಮ ಕರ್ತವ್ಯವಿದೆ. ಯಾವ ಕಾಂಗ್ರೆಸಿಗನೇ ಇರಲಿ, ಕಾಂಗ್ರೆಸಿನ ಮೇಲ್ದರ್ಜೆಯ ಸ್ಥಾನಗಳನ್ನು ಬಿಟ್ಟು ಬಂದ ಮೇಲಾದರೂ ಮಂತ್ರಿಗಳನ್ನು ಬಹಿರಂಗವಾಗಿ ಟೀಕಿಸುತ್ತಾ ಹೋಗುವುದು ಒಳ್ಳೆಯದಲ್ಲ. ಅಂಥವರನ್ನಿರುವ ನಿಜ ಕ್ಷೇತ್ರವೆಂದರೆ ಸ್ವತಃ ಕಾಂಗ್ರೆಸ್ ಸಂಸ್ಥೆಯೇ. ಅವರು ತಮ್ಮ ದೂರುಗಳನ್ನು ನೇರಾಗಿ ಪಾರ್ಲಿಮೆಂಟರೀ ಬೋರ್ಡಿಗೆ ಮುಟ್ಟಿಸಬಹುದು. ಕಾಂಗ್ರೆಸಿಗರು ಚುನಾವಣೆಯ ಕಾಲದಲ್ಲಿ ಮಾತ್ರವೇ ಕೆಲಸ ಮಾಡಿದರೆ ಸಾಲದು; ಸದಾಕಾಲವೂ ವಿಧಾಯಕ ಕಾರ್ಯಗಳನ್ನು ಮಾಡುತ್ತಿರಬೇಕು. ಮತ್ತು ಸರಕಾರದೊಂದಿಗೆ ಸಹಕರಿಸುತ್ತಿರಬೇಕು".

ಅಸೇರೀತಿ ಕಾರವಾರದಿಂದ, ಸರ್ದಾರ್ ಪಟೇಲರಿದ್ದ ಪಿ. ಎಸ್. ಎಸ್. ದಿಲ್ಲೀಹಡಗಕ್ಕೆಬಂದಿದ್ದ ಕರ್ನಾಟಕದ 40ಮಂದಿ ಕಾಂಗ್ರೆಸ್ ಕಾರ್ಯಕರ್ತರಿಗೆ ಹಿತಬೋಧೆ ಕೊಡುತ್ತಾ ಕಾಂಗ್ರೆಸಿಗರ ಇಂದಿನ ಕರ್ತವ್ಯಗಳೇನೆಂಬುದನ್ನು ಸರ್ದಾರ್ ಪಟೇಲರು ಮತ್ತೊಮ್ಮೆ ಖಚಿತ ಪಡಿಸಿದ್ದರು. ಕರ್ನಾಟಕ ಪ್ರಾಂತ್ಯದ ಕುರಿತು ಪ್ರಸ್ತಾಪಿಸುತ್ತಾ ಸರ್ದಾರ್ ವಲ್ಲಭಾಯಿಗಳೆಂದರು. "ಹಲವು ವಿಷಯಗಳಿಂದಾಗಿ ಕರ್ನಾಟಕ ಪ್ರಾಂತ್ಯದಲ್ಲಿ ಭಾವಾಂದೋಲನವೆದ್ದಿದೆ ಎಂಬುದನ್ನು ನಾನು ಬಲ್ಲೆ. ವಿಶೇಷತಃ ಅವರೊಂದು ಪ್ರತ್ಯೇಕ ಪ್ರಾಂತ್ಯವನ್ನು ಅಪೇಕ್ಷಿಸುತಿದ್ದಾರೆ. ಬೇರೆ ಕೆಲವರು ಕೂಡಾ ಸ್ವಪ್ರಾಂತ್ಯ ಯಾಚಿಸುತಿದ್ದಾರೆ. ಆ ಪೈಕಿ ಆಂಧ್ರವೂ ಒಂದು. ನಿಮಗೆಲ್ಲಾ ತಿಳಿದಿರುವಂತೆ ಈ ಪ್ರಶ್ನೆಯು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಮುಂದೆ ಬಂದಾಗ ಆಂಧ್ರವು ಪ್ರಥಮತಃ ರೂಪುಗೊಳ್ಳತಕ್ಕದ್ದೆಂದು ನಾವು ಯೋಚಿಸಿದ್ದೆವು. ಪ್ರತಿಯೊಂದು ಸಂಗತಿಯೂ ಸಕಾಲದಲ್ಲೇ ಆಗಬೇಕು, ಅವಸರದಿಂದಾಗುವುದಾವುದೂ ಒಳ್ಳೆಯದಾಗದು ಎಂದು ನಾನವರಿಗೆ ಹೇಳಿದ್ದೆ ನಾವು ಒಂದು ವಿಭ

(೬ನೇ ಪುಟ ನೋಡಿರಿ)

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

Highly perfumed and medicated, worth using daily by one and all keeps hair black and relieves headache etc.

REGD. TRADE MARK

Manufactured by:-
Swadeshi Oushadhi Bhandara (Regd.)
KUNJAL P. O. Brahmavar, S. K.

THE
Canara Banking Corporation Ltd.
(Incorporated in India)
Estd: 1906
Head Office : UDIPI, (S. I.)

| | |
|---|---|
| Capital Authorised .... .... .... | Rs. 25,00,000 |
| Capital Issued, Subscribed & Paid up .... .... ... | Rs 20,00,000 |
| Reserves .... ... .... | Rs. 9,44,765 |


ಗುರುವಾರ ಉಡುಪಿ ೨೫–೫–೧೯೫೦

## ಕಳ್ಳ ಪಾನ

ಅಮಲು ನಿಷೇಧದ ಮಟ್ಟಿಗೆ ಅಖಿಲ ಭಾರತದಲ್ಲೇ ಪ್ರಥಮ ಸ್ಥಾನ ಗಳಿಸಿರುವ ಮದ್ರಾಸ್ ಸಂಸ್ಥಾನದಲ್ಲಿ ಆ ಕಾರ್ಯಕ್ರಮ ಹೇಗೆ ಸಾಗಿದೆ, ಎಂಬ ಕಡೆಗೊಮ್ಮೆ ದೃಷ್ಟಿ ಬೀರುವುದು ಆಗತ್ಯವಿದೆ. ಮೂರು ಕಂತುಗಳಲ್ಲಿ ಇಡೀ ಪ್ರಾಂತ್ಯವನ್ನು ಒಣಗಿಸುವ ಯೋಜನೆಯು ಅಸ್ತಿತ್ವಕ್ಕೆ ಬರಲಾರಂಭಿಸಿ ಸುಮಾರು ಐದು ವರುಷಗಳಾಗುತ್ತಿವೆ. ಅದು ಪೂರ್ಣ ಜಾರಿಗೆ ಬಂದು ಒಂದೂವರೆ ವರುಷ ಕಳೆದಿದೆ. ಅಮಲು ಸೇವನೆಗೆ ಕಾಯಿದೇಶೀರವಾದ ಇರಸ್ವಿಕೆಯೇ ಇಂದಿಲ್ಲ; ಕೊಲೆ ದರೋಡೆ, ಕಳ್ಳತನ ಇತ್ಯಾದಿಗಳಂತೆಯೇ ಇದೂ ಶಿಕ್ಷಾರ್ಹವಾಗಿದೆ. ಆದರೆ ಮಿಕ್ಕೆಲ್ಲಾ ವಿಧದ ಅಪರಾಧಗಳಾಗುತ್ತಿರುವಂತೆಯೇ, ಪಾನ ಸಂಬಂಧದ ಅಪರಾಧಗಳೂ ನಡೆದೇ ಇವೆ; ಮಾನವ ಸ್ವಭಾವಬದ್ಧ ದೌರ್ಬಲ್ಯಗಳಲ್ಲಿ ಯಾವುದೇ ಆದರೂ ಕಾನೂನಿನ ಭೀತಿಯಿಂದ ತಲೆಮರೆಸಿಕೊಂಡೀತು ಹೊರತು, ತನ್ನನ್ನು ಕೊಲ್ಲುವ ಕಾನೂನು ಬಂತೆಂಬ ಕಾರಣದಿಂದ ಸ್ವತಃ ಆತ್ಮಹತ್ಯೆ ಮಾಡಿಕೊಳ್ಳಲಾರದು. ಅಮಲುಸೇವನಾ ಚಟವಾದರೂ ಪಾನನಿಷೇಧಶಾಸನ ಜಾರಿಯಲ್ಲಿದ್ದ ಮಾತ್ರಕ್ಕೇನೇ ಅದರ ಅಭ್ಯಾಸ ಬಿಟ್ಟುಹೋಗುವಂತಿಲ್ಲ; ಈಗಿನದಂತೂ ಆರಂಭದ ಅವಧಿ; ಚಿರಕಾಲದಿಂದ ಅಂಟಿಕೊಂಡು ಬಂದ ಚಟವೊಂದನ್ನು ಝಾಡಿಸಿಕೊಳ್ಳುವುದಕ್ಕೆ ಸಹಜವಾಗಿ ಹಿಡಿಯತಕ್ಕ ಕಾಲವಿದು. ಈ ಕಾಲದಲ್ಲಿ ಪಾನನಿಷೇಧ ತತ್ವ ಮತ್ತು ಶಾಸನಕ್ಕೆ ವಿರುದ್ಧವಾದ ತಕ್ಸೀರುಗಳು ಅಲ್ಲಲ್ಲಿ ನಡೆದಿದ್ದರೆ, ಅವು ಕೆಲಮಟ್ಟಿಗೆ ಸ್ವಾಭಾವಿಕವೆಂಬ ಭಾವನೆ ವಹಿಸಬೇಕಾಗುತ್ತದೆ. ಆದರೆ ಯಾವುದೂ ಮಿತಿ ತಪ್ಪಬಾರದು; ಔಚಿತ್ಯ ಅಥವಾ ಅನಿವಾರ್ಯ ಸ್ಥಿತಿಯ ಗಡಿಮೀರಿ ಹೋಗಬಾರದು. ಮದ್ರಾಸ್ ಸಂಸ್ಥಾನದ ವಿವಿಧ ಭಾಗಗಳಿಂದ ಕೇಳಿಬರುತ್ತಿರುವ ವಾರ್ತೆಗಳ ಆಧಾರದಿಂದ ಹಾಗೂ ದಕ್ಷಿಣ ಕನ್ನಡದ ಸ್ಥಿತಿಗತಿಗಳನ್ನು ಅವಲೋಕಿಸಿ ಹೇಳುವುದಾದರೆ, ಪಾನ ಪ್ರತಿಬಂಧಕದ ವಿರುದ್ಧಾಚರಣೆಗಳು ನಿಜಕ್ಕೂ ಮಿತಿಮೀರಿದಂತಿವೆ. ಒಂದು ಸಂದರ್ಭದಲ್ಲಿ ಮದ್ರಾಸಿನ ಒರ್ವ ಮಂತ್ರಿಗಳು, ಪಾನಸಂಬಂಧದ ಅಪರಾಧಗಳು ಅಧಿಕ ಸಂಖ್ಯೆಯಲ್ಲಾಗುತ್ತಿರುವ ಜಿಲ್ಲೆಗಳ ಹೆಸರುಗಳನ್ನು ಹೇಳಿದ್ದರು; ಅವುಗಳಲ್ಲಿ ದ. ಕ. ಜಿಲ್ಲೆಯ ಹೆಸರಿರಲಿಲ್ಲ. ಆದರೇ ಜಿಲ್ಲೆಯ ಅಂತರ್ವಾಹಿ ವಾರ್ತೆಗಳ ಸತ್ಯಸ್ಥಿತಿಯನ್ನು ಅರಿತವರಾರೂ ಇಲ್ಲಿಯ ಪಾನನಿರೋಧ ವ್ಯವಸ್ಥೆ ತೃಪ್ತಿಕರವೆಂದು ಹೇಳಲಾರರು; ಇಂತಹ ಅಸಮಾಧಾನಕರ ಸ್ಥಿತಿ ಕೂಡಾ ಸರಕಾರದ 'ಗಾಬರಿ ಪಟ್ಟಿ'ಯಲ್ಲಿ ಸೇರದಿರಬೇಕಾದರೆ ಇಲ್ಲಿಯ ದುಸ್ಥಿತಿಯೇ ಪ್ರಾಂತ್ಯದ ಹೆಚ್ಚಿನೆಡೆಗಳಲ್ಲಿರಬೇಕು; ಕೆಲವೆಡೆಗಳ ಸ್ಥಿತಿ ಇನ್ನಷ್ಟು ಭೀಕರವಾಗಿರಬೇಕು. ಸಂಗತಿ ಹೀಗಿರುವಾಗ ಮದ್ರಾಸ್ ಪ್ರಾಂತ್ಯದಲ್ಲಿ ಪಾನನಿರೋಧವು ಜಯಶೀಲವಾಗಿ ಸಾಗುತ್ತಿದೆ, ಎಂದು ಯಾರೂ ಸಮಾಧಾನ ಪಡಲಾರರು. ಈ ಸಂಬಂಧವಾಗಿ ಜನಮತ ಹೇಗಿದೆ ಎಂಬ ಕಡೆಗೆ ಸೂಕ್ಷ್ಮದೃಷ್ಟಿ ಬೀರಿದರೆ, ಮತ್ತಷ್ಟು ಅಸಮಾಧಾನಕ್ಕೆಡೆಯಿದೆ. ಕಾಂಗ್ರೆಸ್ ಆಡಳಿತೆಯು ಮದ್ರಾಸಿನಲ್ಲಿ ಪಾನನಿಷೇಧವನ್ನು ಜಾರಿಗೆ ತರಲಾರಂಭಿಸಿದ್ದ ಆ ಕಾಲದಲ್ಲಿ ಎಂತಹ ಸುದೈವಿಯಿದ್ದಿತು, ಮತ್ತದು ಈಗ ಎಂತಹ ದುರ್ದೈವಕ್ಕೀಡಾಗಿದೆ ಎಂಬುದಕ್ಕೆ ಪಾನ ನಿರೋಧ ಸಂಬಂಧದ ಅಂದ–ಇಂದಿನ ಜನಮತ ವ್ಯತ್ಯಾಸದ ನಿದರ್ಶನವೊಂದೇ ಸಾಕು. ಗಾಂಧೀಜಿಯ ಮೂಲನೀತಿ ಸೂತ್ರಗಳಲ್ಲೊಂದಾಗಿರುವ–ಕಾಂಗ್ರೆಸಿನ ಜಾಹೀರು ಘೋಷಣೆಯಾಗಿರುವ–ಪಾನ ನಿಷೇಧವು ಜಾರಿಗೆ ಬರುವ ಉತ್ಸಾಹದಿಂದ ಪ್ರವಾಹದಲ್ಲಿ ಹುಟ್ಟು ಕುಡುಕರು ಕೂಡಾ ಆಗ ತೇಲಿಹೋಗಿದ್ದರು; ಆದರೇ ದಿನ ಪಾನಾಭ್ಯಾಸವಿದ್ದವರೊಡನೆ ವಿಶ್ವದವರೂ ಪಾನ ನಿರೋಧದಿಂದಾಗಿರುವ ಅನ್ಯಾಯಗಳನ್ನು ಬಣ್ಣಿಸಹತ್ತಿದ್ದಾರೆ. ಕಾಂಗ್ರೆಸ್ ಆಡಳಿತೆಯ ಮೇಲಿನ ಆರೋಪಗಳ ಪೈಕಿ ಅಮಲು ನಿಷೇಧವೂ ಒಂದಾಗಿ ಕೇಳಬರುತ್ತಿದೆ. ಬರುವ ಚುನಾವಣೆಯಲ್ಲಿ "ನಾವು ಅಧಿಕಾರಕ್ಕೆ ಬಂದರೆ ಪುನಃ ಕಳ್ಳು ಅಂಗಡಿಗಳನ್ನಿಡುವೆವು" ಎಂಬ ಕಂಠೋಕ್ತ ಭರವಸೆಯೊಡನೆ ಸಶಕ್ತ ಪಕ್ಷವೊಂದು ಚುನಾವಣಾ ರಂಗಕ್ಕಿಳಿದಲ್ಲಿ, ಬೇರಾವುದೇ ಆಶ್ವಾಸನೆಯು ಸಂಪಾದಿಸಿ ಕೊಡಲಾರದಷ್ಟು ಮತಗಳನ್ನು ಈ ವಾಗ್ದಾನವು ದೊರಕಿಸಿ ಕೊಡಬಲ್ಲುದೆಂಬುದು ಖಂಡಿತ. ಸ್ವೇಚ್ಛೆಯಿಂದ ಒಪ್ಪೊತ್ತಿನ ಊಟ ಬಿಡಲಾಗುವಷ್ಟು ಹೊಟ್ಟೆ ತುಂಬಿಸುತ್ತಿದ್ದ—ಇಡೀ ದಿನದ ದುಡಿಮೆಯ ಆಯಾಸವನ್ನು ನಿವಾರಿಸಿ 'ನವಚೇತನ' ಮೂಡಿಸುತ್ತಿದ್ದ—ಪಾನಸುಖವನ್ನು ಆಹಾರಾಭಾವದ ಈ ಕಾಲದಲ್ಲಿ ತಪ್ಪಿಸಿ, ಸರಕಾರವು ತಮ್ಮನ್ನು ಉದ್ದೇಶಪೂರ್ವಕ ದಂಡಿಸಿದೆ, ಎಂಬಂತಹ ಭಾವನೆಯು ಕೂಲಿ ವರ್ಗದ ಜನರಲ್ಲಿ ವ್ಯಾಪಿಸಿಹೋಗಿದೆ. ಸರಕಾರವು ನಿರ್ಮಿಸಿರುವ ಪಾನನಿಷೇಧ ಕಾನೂನು ರಕ್ಷಕ ಸಿಬ್ಬಂದಿಗಳಿಂದ ಜನಮತದ ಶುದ್ಧೀಕರಣವಾಗುವಂತಿಲ್ಲ: ಕಳ್ಳಪಾನಕ್ಕೆ ವಿಶಾಲ ಅನುಕೂಲತೆಗಳಿರುವಾಗ ಹೃದಯ ಪರಿವರ್ತನೆಯಾಗದೆ ಕೇವಲ ಕಾನೂನಿನ ಬಲದಿಂದಲೇ ಅಂತಹ ಕೃತ್ಯಗಳನ್ನು ನಿರ್ಮೂಲಿಸಲಾಗುವುದೂ ಅಸಾಧ್ಯವೇ. ಮನಸ್ಸಿನೊಳಗೆ ನ್ಯಾಯ, ನೀತಿ ತತ್ವ — ಕಣ್ಣೆದುರಲ್ಲಿ ಕಾಯಿದೆಬೇಲಿ–ಮರೆಯಿಂದ ನಿಂತರೇನೇ ಪಾನ ನಿರೋಧ ಬಹುಮಟ್ಟಿಗೆ ಜಯಶಾಲಿಯಾಗಬಲ್ಲುದು. ಈ ಸಂಗತಿಯನ್ನು ಮನಗಂಡು ಮದ್ರಾಸ್ ಸರಕಾರವು 'ಪಾನ ನಿಷೇಧ ಪ್ರಚಾರಾಧಿಕಾರಿ'ಗಳನ್ನು ಪ್ರತಿ ತಾಲೂಕಿಗೊಬ್ಬರಂತೆ ನೇಮಿಸುವ ನಿರ್ಧಾರವನ್ನು ಕೆಲಕಾಲಕ್ಕೆ ಮೊದಲೇ ಮಾಡಿದ್ದಿತು; ಆ ಸ್ಥಾನಗಳ ಉಮೇದ್ವಾರರ 'ಪಂಚಾಯ್ತಿ' ಕಾರ್ಯವೂ ನಡೆದು ತಿಂಗಳುಗಳೇ ಕಳೆದಿವೆ. ಅವರೂ ಆ ಮೇಲಿನ ಸರಕಾರೀ ಹೆಜ್ಜೆ ತೋರಿಬರುತ್ತಿಲ್ಲ; ನಮ್ಮ ಸಂಸ್ಥಾನ ಸರಕಾರದ ಕಾರ್ಯಕಲಾಪಗಳಲ್ಲಿರುವ ದೋಷಗಳ ಪೈಕಿ ಈ ಮಾತು–ಕೃತಿಗಳ ನಡುವಿನ ಅಂತರವೇ ದೊಡ್ಡದು. ಇಂದು ಎಲ್ಲಾ ವಿಭಾಗಗಳಿಗೂ ಅಂಟಿಕೊಂಡಂತಿರುವ, ವ್ಯವಸ್ಥಿಕ ಕಾರ್ಯಗಳನ್ನು ಹಿಂದೆ ಹಾಕುತ್ತಾ ಹೋಗುವ ದುರಭ್ಯಾಸವನ್ನು ಸಂಪೂರ್ಣವಾಗಿ ನಿವಾರಿಸಿಕೊಂಡು ಸರಕಾರವು ಈ ಕುರಿತು ಸ್ಪಷ್ಟ ಹಾಗೂ ಕ್ಷಿಪ್ರ ಕಾರ್ಯಗಳನ್ನು ಕೈಗೊಳ್ಳುವದೆಂದು ನಂಬುತ್ತೇವೆ. ಒಂದು ಮಹತ್ಕಾರ್ಯ ಕೈಕೊಳ್ಳುವ ಮೊದಲೇ, ಅದರಲ್ಲಿರುವ ಗುಣದೋಷ, ಅನುಕೂಲತೆ ಅನಾನುಕೂಲತೆಗಳನ್ನು ಆಲೋಚಿಸಬೇಕು ಹೊರತು, ಕಾರ್ಯಕ್ಕೆ ಕೈಯಿಕ್ಕಿದ ನಂತರ ಆ ಸಡ್ಡೆ ಅಥವಾ ಅಡೆತಡೆಗಳಿಗಂಜಿ ಹಿಂದಬೀಳಬಾರದು. ಆದ್ದರಿಂದ ತಾನು ಜಾರಿಗೆ ತಂದಿರುವ ಪಾನನಿರೋಧವು ಸಂಪೂರ್ಣ ಹಾಗೂ ಸತ್ಪರಿಣಾಮಕಾರಿಯಾಗುವಂತೆ ಮಾಡುವುದಕ್ಕಾಗಿ, ತನ್ನ ಕಾರ್ಯರೀತಿಗಳಲ್ಲಿರುವ ಲೋಪದೋಷಗಳೆಲ್ಲವನ್ನೂ ಮದ್ರಾಸ್ ಸರಕಾರವು ನಿವಾರಿಸಿಕೊಳ್ಳುವದೆಂದು ನಂಬುತ್ತೇವೆ.

## ಸ್ವಾವಲಂಬನಾ ಅಷ್ಟ ಸೂತ್ರ

[illegible] ಮುನ್ಷಿಗಳು ಕೇಂದ್ರ ಸರಕಾರದಲ್ಲಿ ಆಹಾರ ಮಂತ್ರಿಯಾಗಿ ನೇಮಿಸಲ್ಪಟ್ಟೊಡನೆಯೇ ತನ್ನ ಚಾತುರ್ಯವನ್ನು ಕಾರ್ಯತಃ ಅನುಯೋಗಿಸಲಾರಂಭಿಸಿರುವುದು ಕಂಡು ಬಂದಿದೆ. ಶ್ರೀ ಮುನ್ಷಿಗಳು ಬೊಂಬಾಯಿಯ ಗೃಹ ಮಂತ್ರಿಯಾಗಿದ್ದಾಗ ಆ ದೇಶ ಪ್ರಾಮುಖ್ಯ ನಗರದಲ್ಲಿದ್ದ ಹಿಂದೂ–ಮುಸ್ಲಿಮ್ ದಂಗೆಯನ್ನು ನಿರ್ಮೂಲಿಸಿ ಬಿಟ್ಟ ರೀತಿಯು ಈಗಲೂ ಮಾದರೀ ವಿಧಾನವೆಂದು ಹಲವರಿಂದ ಶ್ಲಾಘಿಸಲ್ಪಡುತ್ತಿದೆ. ಜವಾಬ್ದಾರಿ ವಹಿಸಿಕೊಂಡೊಡನೆ, ಆ ಸಂಬಂಧದ ಚಿಂತನೆಯಲ್ಲೇ ಕಾಲಕಾಲವನ್ನಾದರೂ ಕಳೆಯುವ ಮಂತ್ರಿಗಳು ಅಪರೂಪ; ಹೆಚ್ಚಿನವರಂತೂ ತಮ್ಮ ಖಾತೆಯ ಪಾಲಿಗೆ ಕಟ್ಟಿಟ್ಟ ಸಾಮಾನ್ಯ ಕಾರ್ಯಕ್ರಮಗಳನ್ನು ನಿರ್ವಹಿಸುವುದರಲ್ಲೇ ತೃಪ್ತಿ ಪಡುತ್ತಾರೆ. ಆದರೆ ಮುನ್ಷಿಗಳ ಪ್ರತಿಭೆಯು ಸ್ವಂತ ಸ್ಫೂರ್ತಿಯಿಂದ ತುಂಬಿರುವಂತಹದು. ಅವರು ಸರ್ವಸಾಮಾನ್ಯ ಆಗುಹೋಗುಗಳಿಗೇನೇ ಕಟ್ಟುಬಿದ್ದು, ಅಲ್ಲೇ ತಟಸ್ಥರಾಗಿರದಂತೆ ಈ ಪ್ರತಿಭಾ ಸ್ಫುರಣೆ ಕೆಲಸ ಮಾಡಿದೆ. ಆಹಾರ, ಅನ್ನ, ಮತ್ತು ನೀರಿನ ಮಟ್ಟಿಗೆ ರಾಷ್ಟ್ರವು ಸ್ವಾವಲಂಬಿಯಾಗುವಂತೆ ಮಾಡುವ ಎಂಟು ಸೂತ್ರಗಳುಳ್ಳ ಯೋಜನೆಯೊಂದನ್ನು ಅವರೀಗ ಜಾಹೀರು ಪಡಿಸಿದ್ದಾರೆ. ಭಾರತದ 'ಇಂದಿನ ಪ್ರಾಮುಖ್ಯಾವಶ್ಯಕತೆ'ಯೆಂದರೆ ಆಹಾರ ಎಂಬುದು ಪ್ರತಿಯೊಬ್ಬನ ತಿಳುವಳಿಕೆಗೆ ಬಂದಿರುವುದಷ್ಟೇ ಅಲ್ಲ, ಕರುಳಿಗೇನೇ ನಾಟಿರುವ ಸಂಗತಿ, ಮಿಕ್ಕ ಅಭಾವಗಳ ತಿಳುವಳಿಕೆಯು ಅಗ್ರಗಣ್ಯಾಧಿಕಾರಿಗಳ ಕಡೆಯಾರಂಭಿಸಿ, ಕೆಳಗಿನಂತಸ್ತಿನವರ ತನಕ ಇಳಿಯುತ್ತಾ ಬಂದಂತೆ ಅಂಶತಃ ಕಡಿಮೆಯಾಗುತ್ತಾ ಬಂದು ಜನಸಾಮಾನ್ಯರಲ್ಲಿ ಏನೂ ಕಾಣದಿರುವದೂ ಇದೆ; ಆದರೆ ಆಹಾರಾಭಾವ ಹಾಗಲ್ಲ, ಅದು ತದ್ವಿರುದ್ಧವಾಗಿ ಜನಸಾಮಾನ್ಯರಿಗೇನೇ ಅಧಿಕಾನುಭವವುಳ್ಳದ್ದಿದ್ದು, ಅಲ್ಲಿಂದ ಮೇಲೆ ಹೋದಂತೆ ಅಂಶತಃ ಕಡಿಮೆ ಪರಿಮಾಣದಲ್ಲಿ ಕಂಡುಬರುವ ವಿಷಯ. ಅಂತೂ ಇದು ಅತಿ ಪ್ರಾಮುಖ್ಯದ್ದಿರುವ ಹಾಗೂ ಎಲ್ಲಕ್ಕಿಂತ ಮೊದಲನೆಯದಾಗಿರುವ ಸಮಸ್ಯೆ. ಆಹಾರಕ್ಕೆರಡನೆಯದೇ ವಸ್ತ್ರದ ಪ್ರಶ್ನೆ; ದಾರಕ್ಕೆ ಬೇಕಾಗುವ ನಾರು ಬೆಳೆಯುವ ಕ್ಷೇತ್ರಗಳಲ್ಲಿ ಪಾಕಿಸ್ತಾನವು ಇತ್ತೀಚೆಗೆ ಹಾಕಿದ ಪ್ರತಿಬಂಧದಿಂದಾಗಿ, ನಾರಿಗಾಗಿ ಪಾಕಿಸ್ತಾನವನ್ನು ಅವಲಂಬಿಸುವುದು ಎಷ್ಟೊಂದು ಅಪಾಯಕರವೆಂಬುದು ಮನದಟ್ಟಾಗಿದೆ. ರಾಜಕೀಯ ಚಾತುರ್ಯಮಿಶ್ರಿತ ಹಿಂದೂ ಅಭಿಮಾನವಿರುವ ಶ್ರೀ ಕೆ. ಎಮ್. ಮುನ್ಷಿಗಳಿಗಂತೂ ನಾರಿನ ಮಟ್ಟಿಗೆ ಪಾಕಿಸ್ತಾನವನ್ನವಲಂಬಿಸಬೇಕಾಗುವ ಸ್ಥಿತಿಯನ್ನು ನಿವಾರಿಸಲೇಬೇಕೆಂಬ ಹಠ ಹುಟ್ಟಿರಬೇಕು. ಹೀಗಾಗಿ ಶ್ರೀ ಮುನ್ಷಿಗಳು ಆಹಾರ ಮಂತ್ರಿಯಾದುದರ ನಡುವೆಯೇ ಆಕರ್ಷಣೀಯ ರೀತಿಯಿಂದ ಕಾರ್ಯಪ್ರವೃತ್ತರಾಗಿದ್ದಾರೆ. ಆಹಾರ, ವಸ್ತ್ರ ಮತ್ತು ನಾರು ಸ್ವಾವಲಂಬನೆಯ ಅಷ್ಟಸೂತ್ರಗಳ ಯೋಜನೆಯನ್ನು ಪ್ರಾಂತೀಯ ಮಂತ್ರಿಗಳ, ಹಾಗೂ ಆಹಾರ ಖಾತೆಯ ಅಧಿಕಾರಿಗಳ ಮುಂದೆ ಶ್ರೀ ಮುನ್ಷಿ ಪ್ರಕಟಪಡಿಸಿದ್ದಾರೆ.

### ಅಷ್ಟಸೂತ್ರಗಳ ಯೋಜನೆ

ತನ್ನೀ ಯೋಜನೆಯ ಕುರಿತು ಶ್ರೀ ಕೆ. ಎಮ್. ಮುನ್ಷಿಗಳು "ಭಾರತವಿಲ್ಲಿ

ಆಹಾರದ ಕೊರತೆ ಮಾತ್ರವಿರುವದಲ್ಲ, ಹತ್ತಿ ಮತ್ತು ನಾರಿನ ಕೊರತೆಗಳೂ ಇವೆ. ನಮ್ಮ ಉದ್ಯಮಗಳಿಗೆ ಬೇಕಾಗುವಷ್ಟು ಪ್ರಮಾಣದ ಹತ್ತಿ ಮತ್ತು ನಾರುಗಳನ್ನು ನಾವು ಸಂಬಂಧಾಯಿ ಪಡಿಸಲಾರೆವಾದರೆ, ನಾವೊಂದು ಅತಿ ಭೀಕರ ಉದ್ದಿಮೆ ಹಾಗೂ ಆರ್ಥಿಕ ಬಿಕ್ಕಟ್ಟಿಗೆ ಈಡಾಗಬೇಕಾಗುವದು". 1951ರ ನಂತರ ಹೊರಗಿನಿಂದ ಆಹಾರ ಧಾನ್ಯಗಳನ್ನು ತರಿಸದೆ ಪಡಿಸಿಕೊಳ್ಳುವಂತೆ ಕೇಂದ್ರ ಸರಕಾರದ ಪ್ರತಿಜ್ಞೆಯನ್ನು ಪುನಃ ದೃಢೀಕರಿಸಿ, ಈ ಪ್ರತಿಜ್ಞಾಪಾಲನೆಗಾಗಿ ನಾವು ಕಠಿಣವಾದ ಹಾಗೂ ಪರಿಮಾಣಬದ್ಧವಾದ ಕಾರ್ಯಕ್ರಮ ಕೈಕೊಳ್ಳಬೇಕೆಂದರು. ಮುನ್ಸೀ ಯೋಜನೆಯ ಅಷ್ಟಸೂತ್ರಗಳ ಸಾರಾಂಶ ಹೀಗಿದೆ:—

1. ಅಧಿಕಾಹಾರೋತ್ಪನ್ನ ಕಾರ್ಯವನ್ನು ಬಲಗೊಳಿಸುವದಕ್ಕಾಗಿ ಶ್ರೀ ಕೆ. ಎಮ್. ಮುನ್ಸಿಯವರೇ ಅಧ್ಯಕ್ಷರಾಗಿ ಉಳ್ಳ ಅಂತರ್ಯುದ್ಧ ಅವಸರ ಸಮಿತಿಯೊಂದು ರಚಿಸಲ್ಪಡುವುದು. ಕೇಂದ್ರಕ್ಕೂ ಪ್ರಾಂತಗಳಲ್ಲಿ ಇಂತಹ ಸಮಿತಿಗಳನ್ನು ಸಂಸ್ಥಾನಗಳೂ ರಚಿಸಿಕೊಳ್ಳಬೇಕು.

2. ಜಿಲ್ಲೆಗಳೇ ಅಧಿಕಾಹಾರ ಉತ್ಪನ್ನ ಯೋಜನೆಯ ಕಾರ್ಯದ ನಿಜ ಕ್ಷೇತ್ರಗಳಾಗಿರುವುದರಿಂದ ಜಿಲ್ಲಾ ಕಲೆಕ್ಟರುಗಳಲ್ಲಿ ಅವರಿಗೆ, ಡೆಪ್ಯುಟಿ ಕಮಿಶನರರಲ್ಲಿ ಅವರಿಗೆ, ಸ್ಥಳೀಯ ಸಾಗುವಳಿದಾರ ಗ್ರಾಮವಾಸಿಗಳಿಗೆ ಕರೆದು ಮೂರು ಅಥವಾ ನಾಲ್ಕು ಮಂದಿಯುಳ್ಳ ಸಮಿತಿಯು ಸಹಾಯಕವಾಗಿದ್ದು ಕೆಲಸ ಸಾಗಿಸತಕ್ಕದ್ದು. ಯುದ್ಧಕಾಲದಲ್ಲಾಗುವಂತೆ ಅಗತ್ಯಬಿದ್ದರೆ ಈ ಅಧಿಕಾರಿಯನ್ನು ಇತರ ಕಾರ್ಯಭಾರಗಳಿಂದ ವಿನಾಯತಿ ಪಡಿಸಬೇಕು.

3. ಪ್ರಚಲಿತ ಪ್ರಾತಿನಿಧಿಕ ಸಂಸ್ಥೆಗಳನ್ನು ಆಹಾರ ಕಾರ್ಯಕ್ಕಾಗಿ ಒಲಿಸುವದನ್ನು ಕಡೆಗಣಿಸಲಾಗುವದಿಲ್ಲ. ಬಂಡು ಭೂಮಿ ಬೇಸಾಯ, ಹಾಳುಬಿದ್ದ ಬಾವಿಗಳ ದುರಸ್ತಿ, ಗೊಬ್ಬರ ತಯಾರಿ ಮುಂತಾದ ಕಾರ್ಯಗಳು ಹಳ್ಳಿ ಕಮಿಟಿಗಳಿಂದ ಆಗಬೇಕಲ್ಲದೆ ವ್ಯಕ್ತಿಗಳಿಂದಲ್ಲ. ಗ್ರಾಮ ಅಭಿವೃದ್ಧಿ ಬೋರ್ಡುಗಳನ್ನು ಅವಶ್ಯವಿರುವಲ್ಲೆಲ್ಲಾ ರಚಿಸಲಾಗುವದು.

4. ಭೂಮಿಗೆ ನೀರು ಸಂಬಂಧಾಯಿ ಪಡಿಸುವ ಕಡೆಗೆ ಅತಿ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟು ಮೇಲಿನ ಸಮಿತಿಗಳ ಮೂಲಕ ಸ್ಥಳೀಯ, ಕೆರೆ, ಕಾಲುವೆಗಳ ಆಣೆಕಟ್ಟೆ, ದುರಸ್ತಿ ಇತ್ಯಾದಿಗಳನ್ನು ನಿರ್ವಹಿಸತಕ್ಕದ್ದು.

5. ನೆಲದಡಿಯ ನೀರಿನ ಸೌಕರ್ಯಗಳನ್ನು ಪಡೆಯಲಾಗುವಂತೆ ನಳಗೆ ಬಾವಿಗಳನ್ನು ನಿರ್ಮಿಸುವದು ಮತ್ತೊಂದು ಅತ್ಯಂತ ಪ್ರಾಮುಖ್ಯ ವಿಷಯ. ಇಂಥ ಬಾವಿಗಳ ನಿರ್ಮಾಣಕ್ಕೆ ಈಗ ಇರುವ ಕಡತೊಡಕುಗಳನ್ನು ನಿವಾರಿಸುವುದಕ್ಕಾಗಿ, ನಿರ್ಮಾಪಕರಿಗೆ ಅಗತ್ಯವುಳ್ಳ ಸಲಕರಣೆಗಳ ಪರ್ಮಿಟುಗಳನ್ನು ಕೂಡಲೇ ದೊರಕಿಸುವ ವ್ಯವಸ್ಥೆ ಮಾಡತಕ್ಕದ್ದು.

6. ಆಹಾರದಂತೆಯೇ ಕೊರತೆಯಿರುವ ಹತ್ತಿ ಮತ್ತು ನಾರುಗಳ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳುವುದಗತ್ಯ. ಅದ್ದರಿಂದ ಈ ಮೂರು ಬೆಳೆಗಳ ಯೋಗ್ಯ ಕ್ಷೇತ್ರಗಳನ್ನು ಗುರುತಿಸಿಕೊಂಡು ಅವುಗಳ ಉತ್ಪಾದನೆಯನ್ನು ಅಧಿಕಗೊಳಿಸುವ ಸುವ್ಯವಸ್ಥಿತ ಯತ್ನ ನಡೆಯತಕ್ಕದ್ದು.

7. ಕಳೆದ ಯುದ್ಧಾವಧಿಯಲ್ಲಿ ಮರಮಟ್ಟುಗಳಿಗಾಗಿ ಕಾಡುಗಳ ವಿಸ್ತಾರ ಭಾಗಗಳು ಕಡಿಯಲ್ಪಟ್ಟು ಖಾಲಿಯಾಗಿವೆ. ಇದರಿಂದ ಮಳೆ ಮತ್ತು ಕಟ್ಟಿಗೆ, ಸೊಪ್ಪು ಇತ್ಯಾದಿಗಳ ಅಭಾವವೂ ಉಂಟಾಗಿದೆ. ಆದ್ದರಿಂದ ದೇಶದ ಎಲ್ಲಾ ಕಡೆಗಳಲ್ಲೂ ಮರಗಿಡಗಳನ್ನು ಸಹಸ್ರ ಸಂಖ್ಯೆಯಲ್ಲಿ ನೆಡುವ ಕಾರ್ಯವಾಗತಕ್ಕದ್ದು.

8. ಹಸುಗೇ ಕ್ಷೇತ್ರಗಳಲ್ಲಿರುವ ಪೇಟೆ ಪಟ್ಟಣಗಳೊಳಗಿನ ಸ್ಥಳಗಳಲ್ಲಿ ಕಾಯಿಪಲ್ಯಗಳನ್ನು, ಒಟಾಟ ಮೊದಲಾದವುಗಳನ್ನು ಬೆಳೆಸಿ ಆಹಾರ ಧಾನ್ಯಗಳಿಗೆ ಪೂರವಣೀ ಆಹಾರ ವಸ್ತುಗಳನ್ನು ನಿರ್ಮಿಸತಕ್ಕದ್ದು.

---

(೫ನೇ ಪುಟದಿಂದ ಮುಂದುವರಿದುದು)

ಜನೆ ಮಾಡಿಕೊಂಡು, ಈಗಲೂ ಅದರ ನೋವುಗಳನ್ನು ಅನುಭೋಗಿಸುತ್ತಿದ್ದೇವೆ. ಅದು ನಮ್ಮ ಸ್ವಾತಂತ್ರ್ಯ ಸಾಧನೆಯನ್ನು ತ್ವರೆಗೊಳಿಸಿದರೂ ನಾವದಕ್ಕೆ ಅತಿ ಹೆಚ್ಚಿನ ಬೆಲೆತೆತ್ತೆವೆಂಬುದನ್ನು ನಾನು ಬಲ್ಲೆ. ಸಂಯುಕ್ತ ಭಾರತಕ್ಕೇನೇ ಸ್ವಾತಂತ್ರ್ಯ ದೊರಕಿಸಿಕೊಳ್ಳುತಿದ್ದರೆ, ನಾವು ಉತ್ತಮಾಭಿವೃದ್ಧಿ ಹೊಂದುತಿದ್ದೆವೆಂಬ ಕುರಿತು ನನಗೆ ಅನುಮಾನವಿಲ್ಲ. ಹೇಗಿದ್ದರೂ ನಮಗೆ ಸ್ವಾತಂತ್ರ್ಯ ದೊರಕಿಸಿಕೊಳ್ಳುವ ದಕ್ಕಾಗಿಯೇ ನಾವೀ ನಿರ್ಧಾರ ಮಾಡಿದ್ದೆವು; ವಿಭಜಿತ ಭಾರತದಲ್ಲಾದರೂ ನಾವು ಅಭಿವೃದ್ಧಿ ಹೊಂದಲು ಸಮರ್ಥರಾಗುವೆವೆಂದು ನನ್ನಾಶೆಯಿದೆ. ಅಂತೆಯೇ ನಮ್ಮ ಮತ್ತು ಪಾಕಿಸ್ತಾನದ ನಡುವಿನ ಸಂಬಂಧ ಕೂಡಾ ಉತ್ತಮಗೊಳ್ಳುವದೆಂದೂ ಆಶಿಸುತ್ತೇನೆ. ಪರಸ್ಪರ ಹೃದಯ ಸಮ್ಮಿಲನವಿದ್ದಲ್ಲಿ, ನಾವು ಮುಂದೂತ್ತಬಲ್ಲೆವು; ಆನಂದ ಮತ್ತು ಪ್ರಗತಿಯನ್ನು ಸಾಧಿಸಬಲ್ಲೆವು. ನಾವು ಇಕ್ಕಡೆಯವರು ಮತ್ತೊಮ್ಮೆ ಒಂದಾಗಬೇಕೆಂದು ಕೆಲವರು ಹೇಳುತಿದ್ದಾರೆಂಬುದನ್ನು ನಾನು ಬಲ್ಲೆ. ನಮ್ಮ ಪೈಕಿ ಪ್ರತಿಯೊಂದು ಕಡೆಯವರೂ ಸ್ವಂತ ವಿಧಾನಗಳಿಂದ ಸ್ವಾಭಿವೃದ್ಧಿ ಸಾಧನೆ ನಡಿಸುವುದು ನಮ್ಮ ಹಿತದೃಷ್ಟಿಯಿಂದಲೇ ಅಗತ್ಯವೆಂಬುದನ್ನು ಅಂಥವರಿಗೆ ಹೇಳಬಚ್ಛಿಸುತ್ತೇನೆ. ಯಥಾರ್ಥ ಐಕ್ಯತೆ ಒಂದೇ ರೀತಿ— ಪರಸ್ಪರ ಗೌರವ, ಸಹೃದಯತೆ ಮತ್ತು ಆಕಸ್ಮಿಕ ಸಾಕಷ್ಟು ಪ್ರಮಾಣದಲ್ಲಿ ಬೆಳೆಯಬೇಕು. ನಿಜವಾದ ಐಕ್ಯತೆಯೆಂದರೆ ಅದೇ. ಒತ್ತಾಯದ ಐಕ್ಯತೆ ಅಥವಾ ಹೊರ ಗಂಡಾಂತರಗಳ ದೆಸೆಯಿಂದ ಮಾಡುವ ಐಕ್ಯತೆ ಬಾಳುವಂತಿಲ್ಲ; ಅಥವಾ ಬೊಬ್ಬೆ ಹಾಕಿ ಇಲ್ಲವೇ ಆಂದೋಲನವೆಬ್ಬಿಸಿ ಅಂತಹ ಐಕ್ಯತೆಯನ್ನು ನಾವು ಸಂಪಾದಿಸಿಕೊಳ್ಳುವಂತೆಯೂ ಇಲ್ಲ. ಇಡೀ ಲೋಕವೀಗ ಭೀತಿಜನ್ಯ ಗೊಂದಲ ಮತ್ತು ಗಂಡಾಂತರಗಳಲ್ಲಿ ಸಿಕ್ಕಿಕೊಂಡಿದೆ. ಎಲ್ಲಾ ರಾಷ್ಟ್ರಗಳಿಗಿಂತ ಶ್ರೀಮಂತವೂ ಮತ್ತು ಅಗ್ರಗಣ್ಯ ಪ್ರಾಬಲ್ಯ ರಾಷ್ಟ್ರವಾಗಿರುವ ಅಮೇರಿಕದಲ್ಲಿ ಕೂಡಾ ಆ ಭೀತಿ ಭಯವಾವರಿಸಿಕೊಂಡಿದೆ. ಭಯಂಕರ ಅಸ್ತ್ರವೆಂಬುದೇ ಇಲ್ಲ ನಾವೆಂತಹ ಭೀತಿಗೆ ಅವಕಾಶ ಕೊಡಕೂಡದು. ಮರಣ ಭೀತಿಗಿಂತ ನಿಜಕ್ಕೂ ಮರಣವೇ ಸೈ, ಎಂದು ನಾನು ನಿಮಗೆ ಹಲವು ಬಾರಿ ಹೇಳಿದ್ದೇನೆ. ಹೇಗಿದ್ದರೂ ಪ್ರತಿಯೊಬ್ಬನೂ ಒಂದು ಸಲ ಸಾಯಲೇಬೇಕು. ಆದರೆ ಯಾರು ಹೆದರುತ್ತಾನೋ ಅತ ಪ್ರತಿ ಕ್ಷಣವೂ ಸಾಯುತ್ತಾ ಹೋಗುತ್ತಾನೆ. ಸ್ವಾತಂತ್ರ್ಯ ಸಂಗ್ರಾಮ ಕೊನೆಗೊಂಡಾಗ ಆತ್ಮತ್ಯಾಗದ ಪಾಠವನ್ನು ನಾವು ಕಲಿತಿದ್ದೆವು. ಈಗ ನಾವಾ ಪಾಠವನ್ನೇಕೆ ಮರೆತು ಬಿಡಬೇಕು?"

"ನಾವು ಸಂಪತ್ತನ್ನು ಸರಿಸಮ ವಿತರಣೆಗೊಳಿಸುವೆವೆಂದು ಕಮ್ಯೂನಿಸ್ಟರು ಮತ್ತು ಸೋಶಿಯಲಿಸ್ಟರು ಹೇಳುತ್ತಿದ್ದಾರೆ. ಆದರೆ ಈ ಸಮಾನಹಂಚೋಣಕ್ಕೆ ಐಶ್ವರ್ಯವೆಲ್ಲಿದೆ ಎಲ್ಲರ ನಡುವೆ ಹಂಚಲಾಗುವಂತೆ ನಾವು ನಮ್ಮ ಸಂಪತ್ತನ್ನು ಹೆಚ್ಚಿಸಿಕೊಳ್ಳಬೇಕು. ನಾವು ಆಹಾರ ಧಾನ್ಯಗಳನ್ನು ತರಿಸಿಕೊಳ್ಳಬೇಕಾಗಿರುವವರೆಗೂ ದಾರಿದ್ರ್ಯವನ್ನು ಝಾಡಿಸಿಕೊಳ್ಳಲಾರೆವು. ಸ್ವಾತಂತ್ರ್ಯಧಿಕಾರ ಬಂದಿದ್ದರೂ ನಮಗೆ ಆರ್ಥಿಕ ಸ್ವಾತಂತ್ರ್ಯ ಬಂದಿಲ್ಲ. ಭಾರತದ ಲಕ್ಷಾವಧಿ ಅವಶ್ಯಕತೆಗಳ ಕಡೆಗೆ ನೋಡಿರಿ. ಅವುಗಳನ್ನು ಪಡಿಸಿಕೊಂಡೇ ಅವೆಲ್ಲವುಗಳನ್ನೂ ನಾವು ತುಂಬಿಸಿಕೊಳ್ಳಬೇಕು. ನಮ್ಮ ಆವಶ್ಯಕತೆಗಳೆಲ್ಲವನ್ನೂ ನಾವೇ ತುಂಬಿಸಿಕೊಳ್ಳಲಾಗುವಂತೆ ನಮ್ಮ ದೇಶದಲ್ಲಿಯೇ ಅವೆಲ್ಲವನ್ನೂ ನಿರ್ಮಿಸಿಕೊಳ್ಳುವ ಗುರಿ ನಮ್ಮದಾಗಬೇಕು. ನಮ್ಮ ರಾಷ್ಟ್ರವೀ ವರೆಗೂ ಹಸುಗೂಸಿನ ಮಟ್ಟದಲ್ಲಿದೆ; ಆದರೆ ನಮ್ಮಲ್ಲಿ ಸೌಕರ್ಯ ಭಂಡಾರ ಮತ್ತು ಮೇಧಾವಿಗಳಿವೆ. ದುರ್ಭಾಗ್ಯವಶಾತ್ ನಮ್ಮ ಚರಿತ್ರೆಯೆಂಬುದು ಅತೃಪ್ತಿ ಮತ್ತು ವಿಭಜನೆಗಳಿಂದ ತುಂಬಿಕೊಂಡಿದೆ. ಚರಿತ್ರೆಯಿಂದ ಪಾಠ ಕಲಿತುಕೊಳ್ಳದಿದ್ದರೆ, ಅದು ಸ್ವತಃ ಪುನರಾವರ್ತಿಸುವುದು. 500ಕ್ಕೂ ಮಿಕ್ಕಿದ ರಾಜರು ಮತ್ತು ಸಂಸ್ಥಾನಗಳು ನಿರ್ಮೂಲವಾದವು; ಭಿನ್ನಭಿನ್ನ ಜಾತಿಗಳು ಮತ್ತು ಧರ್ಮಗಳು ನಮ್ಮಲ್ಲಿವೆ. ಕಳೆದ ಮೂರು ವರುಷಗಳಲ್ಲಿ ಎಷ್ಟೋ ಸಂಗತಿಗಳನ್ನು ನವೊಂದು ಮಟ್ಟಕ್ಕೆ ತಗ್ಗಿಸಿಕೊಂಡಿದ್ದೇವೆ. ಆರ್ಥಿಕಸಾಮರ್ಥ್ಯವನ್ನು ಹೊಂದಿದ್ದೇವೆ. ನಮ್ಮ ರಕ್ಷಣಾ ಸೇನೆಗಳೀಗ ವಿಕಾಸಗೊಂಡಿವೆ. ಇದ್ದುದರಲ್ಲೇ ಒಂದು ವಿಭಾಗ, ಮತ್ತೊಂದು ವಿಭಾಗದೊಳಗೆ ಸಮರೂಪ ಮಾಡಲಿದೆ. ಇವೆಲ್ಲವನ್ನೂ ನಾವು ಎರಡು ಯಾ ಮೂರು ವರುಷಗಳಲ್ಲಿ ಮಾಡಿಕೊಂಡೆವು. ಆದರೆ ನಮ್ಮ ಕರ್ತವ್ಯವಿನ್ನೂ ಮುಗಿದಿಲ್ಲ. ವಸ್ತುತಃ ಇದು ಆರಂಭ ಮಾತ್ರ. ನಿಮ್ಮ ರಾಷ್ಟ್ರದ ರಚನಾತ್ಮಕದಲ್ಲಿ ಕಾಂಗ್ರೆಸಿಗರು ಕಠಿಣ ಪರಿಶ್ರಮ ಪಡಬೇಕಾಗಿದೆ. ಯಥಾರ್ಥ ಸೇವಾ ಸ್ಫೂರ್ತಿ ಮತ್ತು ಸ್ವಾರ್ಥತ್ಯಾಗದೊಡನೆ ನವೆಲ್ಲರ ಮುಂದಿರುವ ಕಾರ್ಯಗಳಲ್ಲಿ ತಲ್ಲೀನರಾಗಬೇಕೆಂದು ನಾನು ನಿಮ್ಮೆಲ್ಲರನ್ನೂ ಕೇಳಿಕೊಳ್ಳುತ್ತೇನೆ'.

"ಕಾಂಗ್ರೆಸ್ ಸಂಸ್ಥೆಯಲ್ಲಿ ಮೈಸೂರು ಕಾಂಗ್ರೆಸಿಗೆ ಹೊಸತಾಗಿ ಕೊಟ್ಟಿರುವ ಸ್ಥಾನದ ಕುರಿತು ದೂರಿದ್ದೀರಿ. ಈ ಮಾದರಿಯ ಸಮಸ್ಯೆಗಳು ಪರಸ್ಪರ ಸೌಹಾರ್ದತೆಯಿಂದಲೇ ತೀರ್ಮಾನಗೊಳ್ಳಬೇಕು. ವಿಶ್ವಾಸ ಮತ್ತು ಸ್ನೇಹಭಾವದಿಂದ ಒಂದು ಉಚಿತ ವಾತಾವರಣ ನಿರ್ಮಾಣಗೊಳ್ಳಬೇಕು. ನಿಮ್ಮ ಅಭಿಮತಕ್ಕೊಪ್ಪುವಂತೆ ವೈಸೂರನ್ನು ಮಾರ್ಪಾಟುಗೊಳಿಸುವ ಪ್ರಯತ್ನವನ್ನು ನೀವು ಮಾಡಬೇಕು. ಇಲ್ಲವಾದರೆ, ಒತ್ತಾಯ ಹಾಕಿ ನೀವೆಂದೂ ಉದ್ದೇಶ ಸಾಧಿಸಿಕೊಳ್ಳಲಾರಿರಿ. ಅತ್ಯಧಿಕ ಸಂಖ್ಯಾತರಿಗೆ, ಅತ್ಯಧಿಕ ಹಿತವನ್ನು ಸಾಧಿಸಬೇಕೆಂಬುದೇ ನಮ್ಮ ಗುರಿ. ನಿಮ್ಮೊಡನೆ ಸೇರಿಕೊಳ್ಳುವದರಿಂದ ತಮಗೆ ಸುಖವಿದೆ ಎಂದು ಮೈಸೂರು ಜನತೆಗೆ ಮನವರಿಕೆಯಾದರೆ, ಅವರೆಲ್ಲರೂ ನೀವಿದ್ದಲ್ಲಿಗೆ ಬರುವರು. ಅವರಿಡುವ ಯಾವ ಹೆಜ್ಜೆಗಾದರೂ ನೀವು ಹೆದರಕೂಡದು. ನಾನು ನನ್ನ ಆಂಧ್ರ ಸ್ನೇಹಿತರಿಗೆ ಹೇಳಿದಂತೆ ಎಲ್ಲಾ ಸಂಗತಿಗಳೂ ಕಾಲ ಬಂದಾಗ ಆಗುವವು. ನೀವು ತಾಳ್ಮೆ ವಹಿಸಬೇಕು".

ರಾಜಾಜಿಗೆ ದೈನಂದಿನದ ಕಾರ್ಯಭಾರಗಳನ್ನು ವಹಿಸಿಕೊಡುವದು ತನ್ನ ಉದ್ದೇಶವಾಗಿಲ್ಲವೆಂದು ಪಂಡಿತ ನೆಹರೂ ಹೇಳಿದ್ದಾರೆ. ಪ್ರಸ್ತುತಃ ರಾಜಾಜಿಯವರು ಖಾತೆರಹಿತ ಮಂತ್ರಿಯಾಗಿ ಉಳಿದುಕೊಳ್ಳಲಿದ್ದಾರೆ. ಇಂಗ್ಲೆಂಡಿನಲ್ಲಿ 'ಲಾರ್ಡ್ ಪ್ರೆಸಿಡೆಂಟ್ ಓಫ್ ಕೌನ್ಸಿಲ್' ಹುದ್ದೆಯಿರುವಂತೆ ಭಾರತದಲ್ಲಿಲ್ಲವಾದರೂ ಅದೇ ಮಾದರಿಯ ಗೌರವಾರ್ಹ ಹೊಣೆಗಳನ್ನು ಮಾತ್ರವೇ ರಾಜಾಜಿಗೊಪ್ಪಿಸಬೇಕೆಂಬ ಬಯಕೆ ಪಂಡಿತ ನೆಹರೂರವರದ್ದಿದೆ.

---

## ಜಿಲ್ಲಾ ಬೋರ್ಡ್ ಉಪಚುನಾವಣೆ

ವಿಟ್ಲ ಸರ್ಕಲಿನ ಡಿಸ್ಟ್ರಿಕ್ಟ್ ಬೋರ್ಡಿನ ಸ್ಥಾನವು ಪ್ರಕೃತ ಖಾಲಿ ಬಿದ್ದಿರುವುದರಿಂದ ಆ ಸ್ಥಾನಕ್ಕೆ ಸದ್ಯದಲ್ಲೇ ಚುನಾವಣೆ ನಡೆಯಲಿದೆ. ಕಾಂಗ್ರೆಸ್ ಪಕ್ಷದಿಂದ ಉಮೇದ್ವಾರರಾಗಿ ನಿಲ್ಲಲು ಇಚ್ಛಿಸುವವರು ತಾ. 30-5-50ನೇ ಮಂಗಳವಾರದೊಳಗೆ ರೂ. 50. (ರೂ ಐವತ್ತು) ಠೇವಣಾತಿ ಸಮೇತ ಮಂಗಳೂರು ಹಂಪನಕಟ್ಟೆ ಪಬ್ಲಿಕ್ ವೈ ಬಿಲ್ಡಿಂಗ್ಸಿನಲ್ಲಿರುವ ದ. ಕ. ಜಿಲ್ಲಾ ಕಾಂಗ್ರೆಸ್ ಕಚೇರಿಗೆ ತಲಪಿಸಿಕೊಡತಕ್ಕದ್ದು ಎಂದು ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಧಾನಕಾರ್ಯದರ್ಶಿಗಳು ತಿಳಿಸುತ್ತಾರೆ.


ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ತಾರೀಕು 24—5—1950ರಿಂದ

ನವಯುಗ ಚಿತ್ರ

ಸಾಜನ್-ಕಾ-ಘರ್

ಜೈರಾಜ್, ರಂಜನಾ, ಕುಸುಮದೇಶಪಾಂಡೆ, ವಸಂತಠೆಂಗ್ಡಿ ಮೊದಲಾದವರು.

ಬರುವ ಚಿತ್ರ ಮಿನರ್ವಾದವರ "ದಿವಾನಿ"

ಮುಮತಾಜ್ ಶಾಂತಿ, ಶಾಸ್ತ್ರಿ.

## ಮಂಗಳೂರು

**ಮಲೆನಾಡಿಗೊಂದು ಹೊಸ ಬುನಾದಿ ಶಿಕ್ಷಣ ಟ್ರೈನಿಂಗ್ ಶಾಲೆ:—** ಮದ್ರಾಸ್ ಸರಕಾರದ ವಿದ್ಯೆ ಮತ್ತು ನ್ಯಾಯ ಖಾತೆಗಳ ಮಾನ್ಯ ಮಂತ್ರಿ ಶ್ರೀ। ಕೆ. ಮಾಧವ ಮೆನೊನರು ತಾ. ೧೨ರಂದು ಮಂಗಳೂರಿಗೆ ಬಂದಿದ್ದು ತಾ. ೧೩ನೇ ಬೆಳಿಗ್ಗೆ ಉಜ್ರೆಗೆ ತೆರಳಿದರು. ಶ್ರೀಮತಿ ಕುಟ್ಟಿಮಾಲು ಅಮ್ಮ ಎಂ. ಎಲ್. ಎ., ಜಿಲ್ಲಾ ಕಲೆಕ್ಟರರೇ ಮೊದಲಾದವರು ಜೊತೆಯಲ್ಲಿದ್ದರು ಉಜ್ರೆಯಲ್ಲಿ ಶ್ರೀ। ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು, ಶ್ರೀ।ಗಳಾದ ಕೆ. ಬಿ. ಜಿನರಾಜ ಹೆಗ್ಡೆ, ಎಮ್. ಎಸ್. ಭಿಡೆ ಮೊದಲಾದವರು ಇಲ್ಲಿಯ ಕರ್ನಾಟಕ ವಿದ್ಯಾಲಯದಲ್ಲಿ ಇವರನ್ನು ಸ್ವಾಗತೀಕರಿಸಿದರು. ಮಲೆನಾಡಿನವರ ಪರವಾಗಿ ಶ್ರೀ। ಕೆ. ಬಿ. ಜಿನರಾಜ ಹೆಗ್ಡೆಯವರು ಮಂತ್ರಿಯವರಿಗೆ ಒಂದು ಮನವಿ ಅರ್ಪಿಸಿದರು. ಮನವಿಗೆ ಉತ್ತರ ಕೊಡುತ್ತಾ ಶ್ರೀ। ಮಾಧವ ಮೆನೊನರು 'ಉಜ್ರೆಯ ಹ್ಯಾಸ್ಕೂಲು ಹಳ್ಳಿಯ ಮಧ್ಯದಲ್ಲಿದ್ದು ಬುನಾದಿ ಶಿಕ್ಷಣ ಟ್ರೈನಿಂಗ್ ಶಾಲೆಗೆ ಯೋಗ್ಯ ಸ್ಥಳ; ಇಲ್ಲಿ ಇಂಥ ಶಾಲೆ ತೆರೆಯಲು ಕೇಳಿದ ನಿಮ್ಮ ವಿನಂತಿಯನ್ನು ಸಂತೋಷದಿಂದ ಒಪ್ಪಿಕೊಳ್ಳುತ್ತೇನೆ'ಎಂದರು.

ಮಲೆನಾಡಿನ ಶಾಲೆಗಳಲ್ಲಿ ಮಕ್ಕಳಿಗೆ ಪ್ರವೇಶ ಕೊಡುವಾಗ ಪ್ರಾಯದ ಕುರಿತಿರುವ ನಿಯಮವೇ ಮೊದಲಾದ ಕೆಲವು ನಿಯಮಗಳನ್ನು ಸಡಿಲಿಸಲು ಮಂತ್ರಿಗಳು ಒಪ್ಪಿದರು.

ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ಧನ್ಯವಾದಗಳನ್ನು ಕೊಡುತ್ತ ಬುನಾದಿ ಶಿಕ್ಷಣ ಟ್ರೈನಿಂಗ್ ಶಾಲೆಗೆ ಬೇಕಾದ ಭೂಮಿ ಕೊಡಿಸುವುದಾಗಿ ಭರವಸೆಯಿತ್ತರು.

### ನೋಟೀಸು

**ಕಾರ್ಕಳ ಡಿ. ಮು. ಕೋರ್ಟಿನಲ್ಲಿ**

O. P. No. 20/1950

ಚರ್ಡಪ್ಪ ನಾಯ್ಕ, ಬೈಲಂಗಡಿ ವೆಂಕಟ್ರ ಮಣ ನಾಯ್ಕರ ಮಗ, ಕಾರ್ಕಳ ತಾಲ್ಲೂಕು ಕುಕ್ಕುಂಜೆ ಗ್ರಾಮದ ಬೈಲಂಗಡಿ ಎಂಬಲ್ಲಿರುವವ. —ಅರ್ಜಿದಾರ.

ಮತ್ತು

1) ಸುಬ್ರಾಯ ನಾಯ್ಕ, 2) ಅಚ್ಯುತ ನಾಯ್ಕ, 3) ಕೃಷ್ಣ ನಾಯ್ಕ, ಚರ್ಡಪ್ಪ ನಾಯ್ಕರ ಮಕ್ಕಳು, 1ನೇ ಯವನು ಬೆಂಗಳೂರು ಶಹರ ಪೈಕಿ ಶೇಷಾದ್ರಿಪುರ, ಲಿಂಕರೋಡ್ ಎಂಬಲ್ಲಿಯೂ, 2ನೇ ಯವನು ಕಾರ್ಕಳ ತಾಲ್ಲೂಕು ಕುಕ್ಕುಂಜೆ ಗ್ರಾಮದಲ್ಲಿಯೂ, 3ನೇ ಯವನು ಉಡ್ಪಿ ತಾಲ್ಲೂಕು ಕಾರ್ಕಳ ಗ್ರಾಮದ ಪೇಟೆಯಲ್ಲಿಯೂ ಇರುತ್ತಾರೆ.—ಎದ್ರಿರು.

ಈ ಮೂಲಕ ಎಲ್ಲಾ ಎದ್ರಿರಿಗೆ ತಿಳಿಯಪಡಿಸುವದೇನೆಂದ್ರೆ:-ಅರ್ಜಿದಾರನ ಮಗ ವ, ಎದ್ರಿರ ಸಹೋದರ ಇತ್ತಲಾಗೆ ಮೃತಪಟ್ಟ ವೆಂಕಟೇಶ ನಾಯ್ಕ ಎಂಬವನು ದಿ ಹಿಂದುಸ್ಥಾನ ಕೋ ಓಪರೇಟಿವ್ ಇನ್ಶೂರೆನ್ಸ್ ಸೊಸೈಟಿ ಲಿಮಿಟೆಡ್ ಕಲ್ಕತ್ತಾ ಇದ್ರಲ್ಲಿ ಪೊಲಿಸಿ ನಂಬ್ರ 149980ಕ್ಕೆ ಇನ್ಶೂರ ಮಾಡಿದ ಬಾಬ್ತು ಬರತಕ್ಕ ರೂಪಾಯಿ 1105 ನ್ನೂ ಮತ್ತು ಕುಕ್ಕುಂಜೆ ಗ್ರಾಮದ ಹೊಂಡರಂಗಡಿ ವೆಂಕಪ್ಪ ಶೆಟ್ಟಿಯರ ಮಗ ದೇವರಾಯ ಶೆಟ್ಟಿಯರು ಆತನಿಂದ ಸಾಲಪಡೆದ ರೂಪಾಯಿ 30 –ಕೂಡಾ ಬರಮಾಡಿಕೊಳ್ಳುವರೆ ತನಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರನು ದಾಖಲ್ಲು ಮಾಡಿದ ಮೇಲ್ಕಂಡ ಅರ್ಜಿಯ ತನಿಕ್ಕೆ ಬಗ್ಗೆ ತಾರೀಕು 13-6-1950ಕ್ಕೆ ಇಟ್ಟಿರುವದ್ರಿಂದ ಈ ಕುರಿತು ಯಾರದಾದ್ರೂ ಆಕ್ಷೇಪಯಿದ್ದರೆ ಸದ್ರಿ ತಾ. 13-6-1950ನೇ ದಿವಸ ಹಗಲು ಘಂಟೆ 10ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರು ಆಗಿ ಜ್ಯಾಹೀರು ಮಾಡತಕ್ಕದ್ದು, ತಪ್ಪಿದ್ರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

(ಕೋರ್ಟು ಹುಕುಂ ಪ್ರಕಾರ)

**K. V. Kamath,**

Advocate for Petitioner.

ಸಾಗು ಭೂಮಿಯಿಂದ ಒಂದು ಮೈಲು ದೂರವಾದರೂ ಕೂಡು ರಸ್ತೆ ಆಗಬೇಕೆಂದು ಸೂಚಿಸಿದರು.

**ಮಂಗಳೂರು ಪೌರಸಭಾ ಪುಸ್ತಕಾಲಯ ಸಭೆ**—ಉಪಾಧ್ಯಕ್ಷ ಶ್ರೀ। ಬಿ. ಗಂಗಾಧರದಾಸರ ಅಧ್ಯಕ್ಷತೆಯಲ್ಲಿ ದಿನಾಂಕ ೧೩ರಂದು ಜರಗಿದಾಗ, ಕೆಳವರ್ಗದ ಜನಗಳಿಗೆ ಉಡಿಗೆ ರೂ. ೧,೨೦೦ ಮಂಜೂರು ಮಾಡಲಾಯಿತು. ಲೈಬ್ರರಿ ಕಟ್ಟಡಕ್ಕಾಗಿ ೧-೪-೧ ಬೇಕೆಂದು ನಿರ್ಣಯ ಮಾಡಲಾಯಿತು. ಶ್ರೀ. ಬಿ. ದಾಮೋದರ ಬಾಳಿಗರು ಪುಸ್ತಕಾಲಯದ ಪ್ರತಿನಿಧಿಯಾಗಿ ಆರಿಸಲ್ಪಟ್ಟರು. ಸಿಟಿ ಬಸ್ ಸರ್ವಿಸ್ ಬಂದರದ ಗೇಟಿನವರೆಗೆ ಓಡಾಡುವಂತೆ ಶಿಫಾರಸು ಮಾಡಲಾಯಿತು.

**ದುರ್ಮರಣ:**—ಮಂಗಳೂರು ರೈಲು ನಿಲ್ದಾಣದಲ್ಲಿ ದಿನಾಂಕ ೧೨ರಂದು ಬೆಳಿಗ್ಗೆ ರೈಲು ಹೊರಡುವಾಗ ಓರ್ವ ಪ್ರೊಟೆಸ್ಟಾಂಟ್ ಪ್ರಾಯಸ್ಥರು ರೈಲುದಾರಿಯನ್ನು ದಾಟಿದಾಗ ರೈಲಿನ ಕೆಳಗೆ ಬಿದ್ದು ಮರಣಕ್ಕೀಡಾಗಿದ್ದಾರೆ.

**ಮಂಗಳೂರು ವೈದ್ಯಮಂಡಲ:**—ಮಂಗಳೂರು ವೈದ್ಯಮಂಡಲದ ಎರಡನೇ ವಾರ್ಷಿಕ ಮಹಾಸಭೆಯು ತಾ. ೧೧ರಂದು ವೈದ್ಯಗುರು ಡಾ। ಯಂ. ಆರ್. ಭಟ್ಟರ ವೈದ್ಯಭವನದಲ್ಲಿ ವೈದ್ಯ ಶ್ರೀ। ಪಿ ನರಸಿಂಹ ಪೈ ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಡಾ। ಯಂ. ಆರ್. ಭಟ್, ವೈದ್ಯಮಾಮನ ಮೊದಲಾದವರು ಪ್ರಕೃತದ ಕಾನೂನುಗಳಿಂದ ವೈದ್ಯರಿಗೆ ಒದಗಿ ಬಂದಿರುವ ಕಷ್ಟನಷ್ಟಗಳನ್ನು ಹೇಳಿದರಲ್ಲದೆ ವೈದ್ಯರೊಳಗೆ ಐಕ್ಯ ಸಾಧಿಸಬೇಕೆಂದು ನಿವೇದಿಸಿದರು.

ಹೊಸ ವರ್ಷದಲ್ಲಿ 'ಮಂಗಳೂರು ವೈದ್ಯಮಂಡಲ'ವನ್ನು 'ದಕ್ಷಿಣ ಕನ್ನಡ ವೈದ್ಯ ಮಂಡಲ'ವೆಂದು ಮಾರ್ಪಡಿಸಿ 'ರಿಜಿಸ್ಟರ್' ಮಾಡಬೇಕೆಂಬ ಠರಾವಾದ ಅನಂತರ ಕಾರ್ಯಕಾರಿ ಸಮಿತಿಯು ಆರಿಸಲ್ಪಟ್ಟಿತು.

ಸೆಕ್ರೇಟರಿ ಶ್ರೀ ಪ್ರತಿನಿಧಿ—ನಗರ ಸಂಗೀತ ಮಂಡಳಿಯ ಆಶ್ರಯದಲ್ಲಿ ದಿನಾಂಕ ೧೦ರಿಂದ ೧೩ರ ವರೆಗೆ ತ್ಯಾಗರಾಜ ಉತ್ಸವ ನಡೆಯಿತು. ಸಂಗೀತ ಕಛೇರಿ ನಡೆದವು, ಕೊನೆಯ ದಿವಸ ಸಂಗೀತಜ್ಞರಿಗೆ ಶ್ರೀ ಕಾಂಚಿ ಮಹಾಸ್ವಾಮಿಗಳವರ ಅಪ್ಪಣೆಯಂತೆ ಶ್ರೀ ಶಂಕರನ ಸಂಕೀರ್ತನ ಅವರಿಗೆ ಬೆಳ್ಳಿಯ ಬಟ್ಟಲುಗಳನ್ನು ಕೊಟ್ಟು ಮನ್ನಣೆ ಮಾಡಲಾಯಿತು.

**ದ. ಕ. ಜಿಲ್ಲಾ ರಾಷ್ಟ್ರೀಯ ಸ್ವಯಂ ಸೇವಕ ಸಂಘದವರು** ಬಂಗಾಳದ ನಿರಾಶ್ರಿತರಿಗಾಗಿ ಜಿಲ್ಲೆಯಿಂದ ಒಟ್ಟು ೧೬ ಸಾವಿರಕ್ಕೂ ಮಿಕ್ಕಿ ಸಂಗ್ರಹಿಸಿ, ಖರ್ಚು ಕಳೆದು ರೂ. ೧೫,೭೫೮-೬-೩ನ್ನು ಅಂಗೈಲ್ಸ್‌ಗೆ ಮಣಿಗಳನ್ನು ಬಟ್ಟೆಬರೆಗಳನ್ನೂ ಕಳುಹಿಸಿ ಕೊಟ್ಟಿರುತ್ತಾರೆ.

**ಸಾಧೂರು:—** ಇಲ್ಲಿಯ ಬಿ. ಇ. ಯಮ್. ಶಾಲಾ ವರ್ಧಂತ್ಯುತ್ಸವವು ತಾ. 17-5-50ನೇ ಬುಧವಾರ ಸಂಜೆ ಚರ್ಚ್ ಬೋರ್ಡು ಪ್ರೆಸಿಡೆಂಟ್ ಶ್ರೀ ಡಬ್ಲಿಯು. ಆರ್. ಸುನೀತ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆಯಾದ ಮೇಲೆ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ।ಐ. ಕೆ. ಕುಮಾರಯ್ಯರು ಶಾಲಾ ವಂದಿಯನ್ನೋದಿದರು. ಹೆತ್ತವರ ಕೂಟದ ಅಧ್ಯಕ್ಷ ಪಟೇಲ್ ನಾರಾಯಣ ಉಪಾಧ್ಯಾಯರು ಸ್ವಾಗತ ಭಾಷಣ ಮಾಡಿದರು. ಅಧ್ಯಕ್ಷರ ಹಸ್ತದಿಂದ ಬಹುಮಾನ ವಿತರಣೆಯಾದ ಬಳಿಕ ಸಭಿಕರ ಪರವಾಗಿ ಶ್ರೀಯುತರುಗಳಾದ ಶಾಲಾ ಮೆನೇಜರ್ ಯಸ್. ಟಿ. ಕ್ಲಾರ್, ಎಲೀಷ ಮಾಟಿನ್, ದಾದು ಮಾಸ್ಟರ್, ಭೋಜ ಶೆಟ್ಟಿ ಇವರುಗಳು ಭಾಷಣವಿತ್ತರು. ಶಾಲಾ ಬಾಲಕರಿಂದ "ಪ್ರಾಣಬಲಿ ನಿಷೇಧ" ಎಂಬ ತುಳು ನಾಟಕವೂ, ಬಾಲಕಿಯರಿಂದ "ಪಶ್ಚಾತ್ತಾಪ" ಎಂಬ ಕನ್ನಡ ನಾಟಕವೂ, ಕೋಲಾಟ, ಕುಮ್ಮಿ, ಲೆಝಿಮ್, ನೃತ್ಯಗಳೂ

ಪ್ರೇಕ್ಷಕರನ್ನು ರಂಜಿಸಲಲ್ಪಟ್ಟವು. ಅಧ್ಯಕ್ಷರ ... ವರ್ಧಂತ್ಯುತ್ಸವವನ್ನು ... ಕರ್ತವ್ಯ, ... ತೋರಿಸಬೇಕಾದ ... ವಿಷಯವನ್ನು ವಿವರಿಸಿದರು. ಕೊನೆಗೆ ವರ್ಧಂತ್ಯುತ್ಸವ ಸಮಿತಿ ... ಶ್ರೀ ಕೆ ವಾಸು ಸೆಟ್ಟರು ಧನ್ಯವಾದಗಳನ್ನರ್ಪಿಸಿದರು. "ಜನಗಣಮನ"ದೊಂದಿಗೆ ಸಮಾರಂಭ ಕೊನೆಗೊಂಡಿತು.

**ಮಣಿಪುರ:—** ಬಿಲ್ಲವ ಯೂನಿಯನ ಹನ್ನೆರಡನೆಯ ವಾರ್ಷಿಕೋತ್ಸವವು ... ನಾಂಕ ೧೪ರಂದು ಅಪರಾಹ್ನ ೩ ಗಂಟೆಗೆ ... ವ್ ಬಹದ್ದೂರ್ ಎಸ್. ಎಸ್. ಸುವಣ ... ಅಧ್ಯಕ್ಷತೆಯಲ್ಲಿ ಯೂನಿಯನ ... ಮಂದಿರದಲ್ಲಿ ಬಹು ವಿಜೃಂಭಣೆಯಿಂದ ... ಗಿತು, ಹಿಂದಿನ ದಿನ ಮೂಲ್ಕಿ ಬಿಲ್ಲವ ... ಮಾಜ ಸೇವಾ ಮಂದಿರದಿಂದ, ಹೆಜಮಾಡಿ ... ಪಡುಬಿದ್ರಿ, ಎರ್ಮಾಳು, ಉಚ್ಚಿಲ, ... ಕೂರು, ಕಾಪು, ಕಟಪಾಡಿ, ಮತ್ತು ಉ... ವರ ಮಾರ್ಗವಾಗಿ ಸಾವಿರಾರು ಜನರ ... ಪಣಿಗೆಯು ಮೂಲಕ ತಂದು ಶ್ರೀ ಗುರು... ಸಾದರಿಂದ ಪ್ರತಿಷ್ಠೆಯಾದ ಬ್ರಹ್ಮಶ್ರೀ ನಾ... ಯಣ ಗುರು ಸ್ವಾಮಿಯವರ ಪ್ರತಿಮೆಯ ... ನಾವರಣವನ್ನು ಶ್ರೀ. ಡಿ. ಆರ್. ಕಕೇರ... ನೆರವೇರಿಸಿದ ನಂತರ ಸುಧಾರಕ ವಾಚನ... ಯದ ಉದ್ಘಾಟನೆಯನ್ನು ಕೋಪರೇಟಿ... ಸೊಸೈಟಿಯ ಮಾಜಿ ರಿಜಿಸ್ಟ್ರಾರ್ ಶ್ರೀ... ಮ್.। ಗಿರಿಯಪ್ಪನವರು ನೆರವೇರಿಸಿದರು.

ಶ್ರೀ ಎಮ್. ಸುಬ್ಬ ಇವರಿಂದ ... ವಂದಿವಾಚನ, ಶ್ರೀ।ಗಳಾದ ವಿಲಿಯಂ ... ನ್ಸ್, ತಮ್ಮಯ ಮಾಸ್ತರ, ... ಟಿ. ಎಮ್. ಅಂಚನ್, ಶ್ರೀ ಡಿ. ಗಂ... ರ ದಾಸ್, ಎ. ಚೂಡಪ್ಪ ಎಮ್. ಸೋ... ನಾಥ, ಎಸ್. ಉಡುಪ ಇವರಿಂದ ... ಭೂರ್ಣಿತ ಭಾಷಣಗಳಾದ ಮೇಲೆ ಒಕ್ಕ... ಹಿತಮಹಾಸಭೆಯನ್ನು ಸಂಕರಾಂವು ... ಜಾಂಗಿ ತಂಬೇಕೆಂಬ, ಅನ್ಯಾಯವಾಗಿ ... ಲೆಬ್ಬಿಸಲ್ಪಟ್ಟವರಿಗೆ ಪರಿಹಾರ ನೀಡಬೇಕ... ವ ಮತ್ತು ಕೇಂದ್ರ ಸಂಸ್ಥಾನವು ಈಗ ... ರುವ ಹಿಂದುಳಿದವರಿಗೆ ಬೆಂಬಲವನ್ನು ... ಕೃಪಡಿಸುವ ಮೂರು ಠರಾವುಗಳು ... ಜೂರಾದುವು. ಶ್ರೀ ಸುವರ್ಣರು ತನ್ನ ... ಕ್ಷ ಭಾಷಣದಲ್ಲಿ ವಿದ್ಯಾಪ್ರಸಾರದ ಕಡೆಗೆ ... ಲ್ಲವ ಸಮಾಜವು ಬಿಚ್ಚಿನ ಗಮನವನ್ನೀ... ಬೇಕೆಂದೂ ಶ್ರೀ ಗುರುಸ್ವಾಮಿಯವರು ... ದಿದ ಸಮಾಜಸೇವೆಯ ಕುರಿತು ಪ್ರಸ್ತಾಪಿ... ರೀತಿಯಲ್ಲಿ ಪ್ರತಿಯೊಬ್ಬನೂ ತನ್ನಿಂದ... ಸೇವೆಯನ್ನು ಮಾಡಬೇಕೆಂದೂ ಹೀಗೆ ಮ... ದರೆ ಮಾತ್ರ ಯಾವುದಾದರೂ ಸಮಾ... ಮುಂದುವರಿಯಲು ಅನುಕೂಲವಿದ... ಮೂಚಿತ್ತ ಹೇಳಿದರು. ಶ್ರೀ. ಎಮ್. ... ವರು ಧನ್ಯವಾದಗಳನ್ನು ಅರ್ಪಿಸಿದ ನ... ಮಕ್ಕಳ ವಿವಿಧ ವಿನೋದಾವಳಿ, ಪ್ರಕಾಶ... ಮಾಯ ನರ್ತನ, ಬ್ರಹ್ಮಾವರ ಯಕ್ಷ... ನಾಟಕ ಮಂಡಳಿಯವರ "ಕೋಟಿ ... ಯ" ನಾಟಕ, ಸಪ್ತಾಹ ಮಂಗಲದಿಂದ ... ರುದಿನ ಬಳಿಗ್ಗೆ ಸಮಾರಂಭವು ಕೊ... ಗೊಂಡಿತು.

## ಬೊಂಬಾಯಿ

**ಕರ್ನಾಟಕ ನೂತನ ಸಂಗೀತ ಸಭಾ**—ಇತ್ತೀಚೆಗೆ ಕೂಡಿದ ಸಾಮಾನ್ಯ ಸಭೆಯಲ್ಲಿ ೧೯೫೦-೫೧ನೇ ವರ್ಷಗಳಿಗೆ ಈ ... ಗಿನ ಆಡಳಿತ ಸಮಿತಿಯನ್ನು ನೇಮಿಸ... ವೆ. ಶ್ರೀ।ಗಳಾದ ಭಾಸ್ಕರ್ ಕೋಟ್ಯಾನ್-ಕಾ... ದಿಗ್ದರ್ಶಕರು, ಜಿ. ಕೆ. ಅಮೀನ್-ಅಧ್ಯಕ್ಷ... ಎಚ್.ಕೆ. ಪುತ್ರನ್ ಮತ್ತು ಆರ್. ಬಿ. ... ಲ್.ಜತೆ ಕಾರ್ಯದರ್ಶಿಗಳು, ಎಸ್.ಎ. ಕೆ... ಟ್ಯಾನ್-ಕೋಶಾಧಿಕಾರಿ, ಬಿ. ಎಂ. ಕೆ... ಟ್ಯಾನ್, ಡಿ. ಟಿ. ಅಮೀನ್, ಸಿ. ಕೆ. ಪುತ್ರ... ಎಂ. ಎ. ಸಾಲಿಯಾನ್, ಡಿ. ಆರ್. ಕೆ... ಟ್ಯಾನ್, ಬಿ. ಕೆ. ಮೆಂಡನ್, ಕೆ. ಕೆ. ... ರ್ಣ, ಎಂ.ಕೆ. ಮೆಂಡನ್, ಟಿ. ಪಿ. ಉಚ್ಚಿ... ಪುತು, ಕುಮಾರ್ ಉಚ್ಚಿಲ್, ಸಹಸ...


**ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ**

# ರಾಯಲ್ ಮಹಾಲಿನಲ್ಲಿ

**ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!**

**ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!**

ನಿಮ್ಮ ಸ್ನಾನ, ಊಟ, ಉಪಹಾರ, ವೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರಾಯಟರ್:— ಕೆ. ವೆಂಕಟ್ರಮಣಭಟ್.

**For up-to-date Lodging & Boarding**

**ROYAL MAHAL,**

**UDIPI,** S. Kanara.

**"ಗೋಪಾಲ ಭೇಷಜಾಶ್ರಮ" ಮಂಗಳೂರು.**

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ, ಇವರ

**ನವಜೀವಾತು** ಎಂಬ **ಸೂತಿಕಾ ರಸಾಯನ**

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮಾಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಸುಲಭವಾಗಿರುವುದು.



ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ

ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಶಾಖೆ:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

## ದ. ಕನ್ನಡ

**ಎಡನೀರು:**— ಹಿಂದೂ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ತಾ 11-5-50 ರಂದು ಉಡ್ಪಿ ನೋರ್ತ್ ರೇಂಜ್ ಶಾಲೆಗಳ ಜ್ಯೂನಿಯರ್ ಡಿಪ್ಯುಟಿ ಇನ್ಸ್ಪೆಕ್ಟರ್ ಶ್ರೀಮಾನ್ ಎಚ್. ಸಂಜೀವರಾವ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೆನೇಜರ್ ಶ್ರೀ ಸೋಮಯ ಸೆಟ್ಟಿಯವರಿಂದ ವರದಿವಾಚನವಾಗಿ ಶ್ರೀ ಎಮ್. ರಾಮ ಸೆಟ್ಟಿಯವರು ಸ್ವಾಗತಭಾಷಣವನ್ನು ಮಾಡಿದರು. ಶ್ರೀ ಕುರುಶಾಲು ಗಣಪಯ್ಯ ಸೆಟ್ಟಿಯವರು ಮತ್ತು ಶ್ರೀ ಬಿ. ...ಯಣ್ಣ ಸೆಟ್ಟಿಯವರು ಸಭಿಕರ ಪರವಾಗಿ ಭಾಷಣವನ್ನಿತ್ತರು. ಶಾಲಾ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆಯಾಯಿತು. ಅಧ್ಯಕ್ಷರು ಹಲವು ಹಿತಸೂಚನೆಗಳನ್ನಿತ್ತು ಭಾಷಣ ಮಾಡಿದರು. ಬಳಿಕ ಶಾಲಾ ಬಾಲಕರಿಂದ "ಬನೆರೆ ಭೂತ" ಎಂಬ ತುಳು ಪ್ರಹಸನವೂ ಶಾಲಾ ಬಾಲಕಿಯರಿಂದ "ಶ್ರೀಮತಿ ಪರಿಣಯ" ಎಂಬ ಸಂಗೀತ ನಾಟಕ, ನರ್ತನಗಳೂ ಜರಗಿದವು. ಅಧ್ಯಾಪಕ ಶ್ರೀ ಬಿ. ಪರಮೇಶ್ವರ ತುಳು ನಾಟಕದ ಉದ್ದೇಶದ ಕುರಿತು ಹಿತಸೂಚನೆಯನ್ನಿತ್ತರು. ಶ್ರೀ ಕೆ. ದೂಜ್ಞ ಸೆಟ್ರು ಮನೋರಂಜಕವಾದ ಹಾಸ್ಯವನ್ನು ಪ್ರದರ್ಶಿಸಿದರು. ಶಾಲಾ ಮುಖ್ಯೋಪಾಧ್ಯಾಯರಿಂದ ಧನ್ಯವಾದ ಸಮರ್ಪಣೆಯಾದ ಬಳಿಕ 'ಜನಗಣಮನ' ಮಂಗಲಗೀತೆಯಾಯಿತು. ಆ ದಿನ ಪೂರ್ವಾಹ್ನ ಶಾಲಾ ಮಕ್ಕಳ ಓಡ ಸ್ಪರ್ಧೆ ಮತ್ತು ತಿಂಡಿ ಹಂಚೋಣ ಸಮಾರಂಭ ಜರಗಿತ್ತು.

**ಅಥವಮಾರು:**—ಅಥವಮಾರು ಹ್ಯಾಸ್ಕೂ ಕಮಿಟಿ ಹಾಗೂ ಶ್ರೀ ಅಥವಮಾರು ಮಠ ಸ್ವಾಮಿಗಳವರಿಂದ ಹ್ಯಾಸ್ಕೂಲಿಗಾಗಿ ಕಟ್ಟಲ್ಪಟ್ಟ ಶ್ರೀ ವಿಬುಧಪ್ರಿಯ ವಿದ್ಯಾಮಂದಿರದ ಪ್ರವೇಶೋತ್ಸವವನ್ನು ಇದೇ ತಾ 31ನೇ ಬುಧವಾರ ಪೂರ್ವಾಹ್ನ 10-30ಕ್ಕೆ ದ. ಕ. ಜಿಲ್ಲಾ ಬೋರ್ಡು ಪ್ರೆಸಿಡೆಂಟ್ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ನೆರವೇರಿಸಲಿರುವರು.

### ಬತ್ತದ ಅಗೆಗಳಿಗೆ ಹುಳದ ಹಾವಳಿ

ಉಡುಪಿ ತಾಲೂಕಿನ ಪೆರ್ಡೂರು, ಕಳತ್ತೂರು ಇತ್ಯಾದಿ ಗ್ರಾಮಗಳಲ್ಲಿ ಬತ್ತದ ಅಗೆಗೆ 'ಸ್ಪೋಡೋಪ್ಟರಾ ಮೋರೀಶಿಯಾ' ಎಂಬ ಹುಳದ ಬಾಧೆಯು ತೊಡಗಿರುವ ವಿಚಾರವು ತಿಳಿದು ಬಂದಿರುತ್ತದೆ.

ಉಡುಪಿ ಸರ್ಕಲಿನ ಎಗ್ರಿಕಲ್ಚರಲ್ ಡೆಮೋನ್ಸ್ಟ್ರೇಟರರಾದ ಶ್ರೀ. ಬಿ. ಶ್ರೀನಿವಾಸ ರಾಯರು ತಮ್ಮ ಸಹಾಯಕ ಸಿಬಂಧಿಯೊಡನೆ ಆ ಗ್ರಾಮಗಳಿಗೆ ಅವಶ್ಯ ಪಟ್ಟ ಪ್ರತಿಬಂಧಕ ಕ್ರಿಮಿನಾಶಕ ಔಷಧಿ ಮತ್ತು ಉಪಕರಣಗಳೊಂದಿಗೆ ಧಾವಿಸಿ ಚಿಕಿತ್ಸಾ ಕ್ರಮಗಳನ್ನು ಕೈಗೊಂಡಿರುತ್ತಾರೆ.

ಇದೇ ರೀತಿಯಲ್ಲಿ ಗುಂಪು ಗುಂಪಾಗಿ ಬರುವ ಈ ವಿಧದ ಸೈನ್ಯ ಹುಳಗಳ ಬಾಧೆಯು ಕಳೆದ ವರುಷದಲ್ಲಿ ಒಂದನೇ ಬೆಳೆಯ ಬತ್ತದ ಅಗೆಯಡಿಗೆ ತಗಲಿ ನಿವಾರಣೋಪಾಯಗಳನ್ನು ಕೈಗೊಂಡಾಗ್ಯೂ ಪರಿಹರಿಸಲು ಸಾಧ್ಯವಾದ ಮಟ್ಟಕ್ಕೆ ಸೇರಿಹೋದುದನ್ನು ಸಂಬಂಧ ಪಟ್ಟ ಕೃಷಿಕ ಬಂಧುಗಳು ಮರೆತಿರಲಾರರು. ಹೀಗಿರುವುದರಿಂದ ಈ ಭಾಗದಲ್ಲಿ ತುಂಬಾ ಜಾಗರೂಕತೆಯಿಂದಿದ್ದು ಇಲಾಖಾ ಸಿಬಂದಿಯು ಕೈಗೊಳ್ಳುವ ಶಮನ ಮಾರ್ಗಗಳಲ್ಲಿ ಅತ್ಯಂತ ಶ್ರದ್ಧೆಯಿಟ್ಟು ಸಹಕರಿಸುವರೆಂದು ನಿರೀಕ್ಷಿಸಲಾಗಿದೆ.

ಆಹಾರಾಭಾವದ ಈ ಸಂಧಿಗ್ಧ ಸಮಯದಲ್ಲಿ ದೇಶದ ಜೀವನಾಡಿಯಾಗಿರುವ ಕೃಷಿಕ ಬಂಧುಗಳ ಉದ್ಯಮವು ರೂಪಗೊಳ್ಳುವ ಮಹತ್ಕಾರ್ಯಕ್ಕೆ ಕುರಾಂಪ್ರಾಯವಾಗಿರುವ ಇದರ ಪರಿಹಾರಕ ಮಾರ್ಗಗಳು ಇವೆಯೇ? ಇರುವುದು ಪರಿ ಕೈಗೊಳ್ಳುವ ಕ್ರಮವೆಂತು? ಕೈಕೊಂಡರೆ ಎಷ್ಟರ ಮಟ್ಟಿಗೆ ಫಲ ಪ್ರದ? ಎಂಬ ಸಮಸ್ಯೆಗಳನ್ನು ಬಗೆಹರಿಸುವುದೇ ವ್ಯವಸಾಯ ಇಲಾಖೆಯ ಸಿಬಂದಿಯವರ ಮೂಲ ಚಿಂತನೆ, ಮುಖ್ಯೋದ್ದೇಶ, ಆದ್ಯ ಕರ್ತವ್ಯ ಇದಕ್ಕಾಗಿಯೇ ಅವರ ಇರವು, ಅವರ ದುಡಿತ, ಅವರ ಕರ್ತವ್ಯದಕ್ಷತೆ.

ಈ ವಿಧದ ರೋಗ ಪ್ರತಿಬಂಧಕ ಹೋರಾಟದಲ್ಲಿ ಲಭಿಸತಕ್ಕ ಸಫಲತೆಯು ರೈತವರ್ಗದ ಎಲ್ಲಾ ಸಹಕಾರವನ್ನೇ ಅವಲಂಬಿಸಿದೆ. ಹಾಗೆನ್ನುವಾಗ ಹುಳದ ಉತ್ಪತ್ತಿ, ಜೀವನ ಚರಿತ್ರೆ, ಸ್ವಯಂ ನಾಶಮಾಡುವ ಚಟುವಟಿಕೆಗಳನ್ನೆಲ್ಲಾ ಪರಿಶೀಲಿಸಿ ತಿಳಿದು ಬಂದಿರುವ ವಿಚಾರ ಶಮನೋಪಾಯಗಳು ಶೀಘ್ರವಾಗಿ, ಸಾಂಘಿಕವಾಗಿ, ಸಾರ್ವತ್ರಿಕವಾಗಿ, ಏಕಕಾಲದಲ್ಲಿ ನಿರ್ವಹಿಸಲ್ಪಡತಕ್ಕದ್ದು.

ಈ ಹುಳಗಳ ಹಾವಳಿಯು ತಲೆದೋರಿದ ಅಲ್ಪಕಾಲದಲ್ಲಿಯೇ ಬಾಧೆಯು ಅಪರಿಮಿತ ಪ್ರಮಾಣವನ್ನು ತಾಳುವುದರ ದೆಸೆಯಿಂದಾಗಿ ಪ್ರತಿಬಂಧಕ ಕಾರ್ಯಗಳನ್ನು ಅತ್ಯಂತ ಶೀಘ್ರವಾಗಿ ಕೈಕೊಳ್ಳುವ ಅಗತ್ಯವಿದೆ. ಅಪ್ರಯುಕ್ತ ಗ್ರಾಮಾಧಿಕಾರಿಗಳೂ, ಊರಿನ ಸುಶಿಕ್ಷಿತ ಮಹನೀಯರೂ ಈ ಕಡೆಗೆ ಗಮನವಿಟ್ಟು ವಂದಿಗಳನ್ನು ವ್ಯವಸಾಯ, ರೆವೆನ್ಯೂ ಇತ್ಯಾದಿ ಅಧಿಕಾರಿಗಳಿಗೆ ರವಾನಿಸುವುದರ ಮೂಲಕ ಯಶಸ್ವೀ ಕಾರ್ಯಕ್ರಮಗಳನ್ನು ಕೈಕೊಳ್ಳಲು ನೆರವಾಗಬೇಕು.

**ಮರ್ಣೆ:**—ತಾ 15—5—50ನೇ ಸೋಮವಾರದಿನ ಮರ್ಣೆ ಗೋವಿಂದ ಸೆಟ್ಟಿ ಚಿರಂಜೀವಿಗಳಿಬ್ಬರಿಗೆ ನಾಮಕರಣ ಮತ್ತು ಕರ್ಣವೇಧ ಸಂಸ್ಕಾರಗಳು ಶ್ರೀ. ಲಕ್ಷ್ಮಣ ದೇವ ವಿದ್ಯಾರ್ಥಿಯವರ ಪೌರೋಹಿತ್ಯದಲ್ಲಿ ನೆರವೇರಿಸಲ್ಪಟ್ಟವು. ಈ ಸಂದರ್ಭದಲ್ಲಿ ಶ್ರೀ. ವಿದ್ಯಾರ್ಥಿಯವರು ಅತಿಥಿಗಳಿಗೆ ವೈದಿಕಧರ್ಮದ ಮಹತ್ವ, ಸಂಸ್ಕಾರಗಳ ಅವಶ್ಯಕತೆ, ಮುಂತಾದ ವಿಷಯಗಳನ್ನು ಸ್ಪಷ್ಟೀಕರಿಸಿ ಸರಸವಾಗಿ ಭಾಷಣಮಾಡಿದರು.

**ಕಾಂತಾವರ**—ಇಲ್ಲಿಯ ಬೀಡಿ ಯೈಡೆಡ್ ಎಲಿಮೆಂಟರಿ ಶಾಲಾ ದ್ವಿತೀಯ ವರ್ಧಂತ್ಯುತ್ಸವವು ತಾ. 16-5-50ನೇ ಮಂಗಳವಾರ ಸದ್ರಿ ಶಾಲಾ ಜೀರ್ಣೋದ್ಧಾರ ಕಮಿಟಿಯವರಿಂದಲೂ, ಊರ ಪರವೂರ ಮಹನೀಯರ ನೆರವಿನಿಂದಲೂ ಸಂಭ್ರಮದಿಂದ ನೆರವೇರಿಸಲ್ಪಟ್ಟಿತು. ಸಾಯಂ. ಗಂಟೆ 3ಕ್ಕೆ ಶ್ರೀ ಕಾಂತೇಶ್ವರ ದೇವಸ್ಥಾನದಿಂದ ಪುರ ಮೆರವಣಿಗೆ ಹೊರಟು ಲಕ್ಷದಂದಾಗಿ ಶಾಲಾ ಮಂದಿರವನ್ನು ಪ್ರವೇಶಿಸಿತು. ಅನಂತರ ಸರಸ್ವತಿ ಪೂಜೆಯಾಗಿ ಶಾಲಾ ಹಿಡ್ಮಾಸ್ಟರ ಶ್ರೀ. ಕೆ. ಶ್ರೀನಿವಾಸರಾಯರು ವರದಿ ವಾಚನ ವನ್ನು ಮಾಡಿದರು. ಅನಂತರ ಶ್ರೀ. ಎಚ್. ಭೋಜರಾಯರು ಸಭಿಕರನ್ನುದ್ದೇಶಿಸಿ ತುಳುವಿನಲ್ಲಿ ಭಾಷಣ ಮಾಡಿದರು. ಮತ್ತು ಸದ್ರಿ ಶಾಲಾ ಮೆನೇಜರ್ ಶ್ರೀ ಜನಾರ್ಧನಯ್ಯನವರು ಭಾಷಣ ಮಾಡಿದರು. ನಂತರ ವಿವಿಧವಿನೋದಾವಳಿಗಳಾಗಿ, ಬಹುಮಾನ ವಿತರಣೆ ಮೊದಲಾದ ಕಾರ್ಯಕ್ರಮಗಳಾದುವು.


— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಳಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

**ಪಥ್ಯ:**—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

**ಮಾಲಕರು:**—ಹಾಲಪ್ಪಾ ಫಕೀರಪ್ಪಾ, ದಾವಣಗೇರಿ

**ಆಯುರ್ವೇದ ಔಷಧಾಲಯ, ಗದಗ-ಸಿಟಿ.**

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ— ಮಾನಪ್ಪ ಸಿದ್ದಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಂಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ...



**ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ**

**೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ**

ಶರೀರದಿಂದ ಕೀವು ಬರುತ್ತಿದ್ದರೆ, ಘೋತರಕ್ಕೆ ಹಳದೀ ದಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುಸೋಯುವದು ಸ್ತ್ರೀಯರ ಬಿಳಿಸೆರಗು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಭದಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ೧೮ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಫೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಂಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

**ಆಯುರ್ವೇದ ಔಷಧಾಲಯ, ಗದಗ.**


## Notice.

**ಕುಂದಾಪುರ ಡಿ. ಮು. ಕೋರ್ಟಿನಲ್ಲಿ**

O. P. No. 45/1950

ಅರ್ಜಿದಾರ— 1) ಗಂಗಾರಾಮ ಯಾನೆ ...ಬಾಯಿ, ಪರ್ಕಳ ಮಂಗೇರ ವೆಂಕಟ್ರ...ಣ ಶ್ಯಾನುಭಾಗರ ಮಗಳು.

2) ಮ್ಯಾನರ ದೇವಿದಾಸ, ಪ್ರಾಯ 8 ...r, 1ನೇ ಅರ್ಜಿದಾರಳ ಮಗ, ಪೋಷಕ ...ರಿಯನ್ ತಾಯಿ 1ನೇ ಅರ್ಜಿದಾರಳು. ...ರ್ಜಿದಾರರು ಉಡ್ಪಿ ಕಸಬಾ ತೆಂಕಪೇಟೆ...ಲ್ಲಿರುವವರು Post Udipi.

...ವರು ಜನರಲ್ ಪವರ್ ಓಫ್ ಎಟೋ...ನಾರ ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ...ಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡ್ಪಿ ...ರ ಏಜೆಂಟ ಅಫೀಸರ ಎನ್. ಎಸ್. ಭಂ..., ಮೂಡೂರು ವೆಂಕಟೇಶ ಭಂಡಾರಿಗಳ ..., ಉಡ್ಪಿ ಕಸಬಾ.

...ದ್ರಿದು—ಇಲ್ಲಾ.

...ಮೂಲಕ ಸರ್ವ ಜನರಿಗೂ ತಿಳಿಯ...ಸುವುದೇನೆಂದ್ರೆ—

...ರ್ಜಿಯವಳ ಗಂಡ 2ನೇಯವನ ತಂದೆ 19-11-49ರಲ್ಲು ಮೃತಪಟ್ಟ ಕಲ್ಲೂರು ...ಯ್ಯ ಪ್ರಭುಗಳಿಗೆ ಅರ್ಜಿಯಲ್ಲಿ ಕಾಣ್ಸಿ... ಬಹಾ ಇನ್ಶೂರೆನ್ಸಿನ ಹಣಗಳನ್ನು ಪ...ಲಿಕ್ಕೆ ತಾವು ಹಕ್ಕುದಾರರೆಂತಲೂ, ಸ...ಣ ಪಡೆಯುವರೇ ತಮಗೆ ಸಕ್ಸೆಶನ್ ...ಫಿಕೇಟು ಕೊಡಿಸಬೇಕಾಗಿ ಅರ್ಜಿದಾರರ...ರಿಂದ ಇವರ ಜನರಲ್ ಪವರ್ ಓಫ್ ...ರ್ನಿದಾರರು ಸದರೀ ಅರ್ಜಿ ಕೊಟ್ಟಿರು...ದ ಈ ಕುರಿತು ಯಾರಿದ್ದಾದ್ರು ಆಕ್ಷೇ...ದ್ದಲ್ಲಿ ತಾರೀಕು 6-6-50ನೇ ದಿವಸ ಹ... 11ಗಂಟೆಗೆ ಈ ಕೋರ್ಟಿನಲ್ಲಿ ಹಾಜರಾ...ಹೇಳ್ಯಾಡಿಕೊಳ್ಳತಕ್ಕದ್ದು. ಕಪ್ಪಿದಲ್ಲಿ ...ದಿನ ಹುಕುಂ ಮಾಡಲಾದೀತು ಎಂಬ ... ಕೋರ್ಟು ಹುಕುಂ ಪ್ರಕಾರ ಈ ...ಲಕ ತಿಳಿಸೋಣಾಗುತ್ತದೆ.

**K. Raghunatha Shenoi,**
Pleader for Petitioners.
...dapoor, 28-4-50

## Notice.

**ಕುಂದಾಪುರ ಡಿ. ಮು. ಕೋರ್ಟಿನಲ್ಲಿ**

S. C. 8/1950

ವಾದಿ—ಶ್ರೀನಿವಾಸ ಹತ್ವಾರ.

ಪ್ರತಿವಾದಿಯು—1) ಬಿ. ಲಕ್ಷ್ಮೀನಾರಾಯಣ ವರ್ಣ 2) ವೆಂಕಟಕೃಷ್ಣ ವರ್ಣ 3) ಅನಂತ ಕೃಷ್ಣ ವರ್ಣ.

ಬಂತಾಮಣಿಯಲ್ಲಿ ಪಾರ್ಥ ಸಾರಥಿ ಭವನದಲ್ಲಿರುವ ತಮ್ಮಯ್ಯ ವರ್ಣರ ಮಗ, ಬಿ. ಲಕ್ಷ್ಮೀನಾರಾಯಣ ವರ್ಣರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಪ್ರತಿವಾದಿಂದ ವಾದಿಗೆ ಕಳೆದ ಸರ್ವಧಾರಿ ಸಂವತ್ಸರಕ್ಕೆ ಬರತಕ್ಕ ಮೂಲಗೇಣಿ ಗೇಣಿಯನ್ನು ಬಲವಾಡಿಕೊಳ್ಳುವರೆ ವಾದಿಯು ಪ್ರತಿವಾದಿ ಮೇಲೆ ದಾವೆ ಮಾಡಿದ ಮೇ...ನ ದಾವೆಯು ತಾರೀಕು 6-6-50ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಮೇಲಿನ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗತಿ ಈ ಮೂಲಕ ತಿಳಿಯಪಡಿಸಿರುತ್ತದೆ.

**N. S. Parameshwariah,**
Advocate for Pltf.
Date 15-5-50, Coondapoor.


ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವರ್ತಕರಿಗೆ—ಶಾಲೆಗಳಿಗೆ—
ಬೇಕಾಗುವ ರಿಜಿಸ್ಟರುಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳು, ಎಕೌಂಟ್
ಪುಸ್ತಕಗಳೂ ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

# ಕಂಟ್ರೋಲುಗಳನ್ನು ತೆಗೆದುಹಾಕಬೇಕು

ಶ್ರೀ. ಕೆ. ವಿ. ಶೆಟ್ಟಿ. (ಬೆಂಗಳೂರು)

ಮಹಾತ್ಮಾ ಗಾಂಧಿಯವರು ಆಹಾರಕ್ಕೆ ಸಂಬಂಧಪಟ್ಟ ಕಂಟ್ರೋಲುಗಳ ದೆಸೆಯಿಂದ ಜನಸಾಮಾನ್ಯರಿಗೆ ಒದಗುತ್ತಿದ್ದ ಸಂಕಷ್ಟಗಳನ್ನೂ, ಅದನ್ನು ನಡೆಸಿಬರುವ ಸಿಬ್ಬಂದಿಯು ಲಂಚದ ತವರುಮನೆಯಾಗಿ ಬೆಳೆದು, ಅದರಿಂದ ಬಯಸಿದ ಒಳ್ಳೆಯದು ಜನತೆಗೆ ಸಿಕ್ಕದೆ ಹೋದಕಾರಣ ಆಹಾರದ ಬಗ್ಗೆ ಇರತಕ್ಕ ಯಾವತ್ತು ಕಂಟ್ರೋಲುಗಳೂ ಹೋಗಲೇಬೇಕೆಂಬ ದೀಕ್ಷೆಯನ್ನು ತೊಟ್ಟು, ಸರಕಾರದಿಂದ ಆ ಬಗ್ಗೆ ಕಂಟ್ರೋಲುಗಳನ್ನು ತೆಗೆಸಿಯೇ ಹಾಕಿದ್ದರು. ಆದರೆ ಅದು ಕೆಲ ತಿಂಗಳು ಮಾತ್ರ. ಮಹಾತ್ಮರ ಕಾಲಾನಂತರ, ನಮ್ಮ ಮುಂದಾಳುಗಳ ಭಾವನಾಭೀತಿಯಿಂದ ಪುನಃ ಮುಂಚಿನಂತೆಯೇ ನಿಯಂತ್ರಣಗಳು ಬಿದ್ದಿರುತ್ತವೆ. ಕಂಟ್ರೋಲುಗಳನ್ನು ಆ ವೇಳೆ ಅಕಾಲದಲ್ಲಿ ತೆಗೆದು, ಅಕಾಲದಲ್ಲಿ ಪುನಃ ಏರಿಸಿದ್ದರಿಂದ ಕಂಟ್ರೋಲುಗಳಿಲ್ಲದಿದ್ದರೆ ಬಾಧಕ ಸಾಧಕವೇನೆಂಬುದು ಸಂಪೂರ್ಣ ಜನತೆಗೆ ತಿಳಿಯುವ ಅವಕಾಶ ದೊರಕಲಿಲ್ಲ. ಅಲ್ಲದೆ ಅದರ ಹಿತಾಹಿತವನ್ನು ಕೆಲವೇ ತಿಂಗಳಲ್ಲಿ ತಿಳಿಯುವ ಸಂಗತಿಯೂ ಆಗಿರುವುದಿಲ್ಲ. ಕಂಟ್ರೋಲು ಹೋದುದನ್ನು ಪುನಃ ಏರಿಸಿದುದನ್ನು ನೋಡುವಾಗಲೂ, ಕಂಟ್ರೋಲನ್ನು ಯಾತಕ್ಕೆ ಇರಿಸಿದೆ ಎಂಬ ಬಗ್ಗೆ ನಮ್ಮ ಮುಂದಾಳುಗಳು ಅಂಕೆ ಸಂಖ್ಯೆಯಿಂದ ಕೊಡುವ ಕಾರಣಗಳನ್ನು ವಿಮರ್ಶಿಸಿ ನೋಡುವಾಗಲೂ ಈ ಕಂಟ್ರೋಲುಗಳು ಶಾಶ್ವತವಾಗಿ ನಿಲ್ಲುವವೋ—ಈ ನಿರ್ಬಂಧ ಜೀವನವನ್ನು ಮನುಷ್ಯನು ಎಷ್ಟು ಸಮಯ ಸಹಿಸಿಕೊಳ್ಳಲು ಸಾಧ್ಯವೋ ಎಂಬ ಭೀತಿಯು ಹುಟ್ಟುತ್ತದೆ. ನಮ್ಮ ದೇಶದ ಆಹಾರ ವಸ್ತುವಿನ ಹುಟ್ಟು ಇಷ್ಟು, ಖರ್ಚು ಇಷ್ಟು ಎಂಬ ಕೇವಲ ಗಣಿತಕ್ಕೆ ಸಂಬಂಧಪಟ್ಟ ಅಂಕೆಸಂಖ್ಯೆಗಳು ಸರಿಯಲ್ಲವೋ ಎಂಬ ಸಂದೇಹವು ಬಹಳವಿರುತ್ತದೆ. ಹಿಂದುಸ್ಥಾನವು ಸ್ವತಂತ್ರ ಲಭಿಸಿದ ನಂತರ ಆಹಾರಾಭಾವದ ಮಟ್ಟಿಗೆ ಸರಕಾರವು ಯಾವುದೇ ಕಾರಣವನ್ನು ಕೊಡಲಿ, ಆಹಾರ ಉತ್ಪನ್ನದ ಮಟ್ಟಿಗೂ ಮಿಗಿಲಾದ ಸಂದರ್ಭಗಳು ದೊರೆತಿವೆ. ಆದರೆ ಆ ಸಂದರ್ಭಗಳು ಈ ಕಂಟ್ರೋಲಿನ ನಿಮಿತ್ತವೇ ಸರಿಯಾಗಿ ದೊರಕದೆ ಹಿಂದುಳಿದು ದೇಶವು ಆ ರೀತಿಯ ನಷ್ಟವನ್ನು ಹೊಂದುತ್ತಿರುವುದು ಎಂದು ಹೇಳಬಹುದು. ಕಂಟ್ರೋಲುಗಳನ್ನು ತೆಗೆದರೆ ಒಮ್ಮೆಯೇ ಆಹಾರ ವಸ್ತುಗಳ ಕ್ರಯವು ಮಿತಿಮೀರಿ ಏರಿ ಬಹಳ ಪ್ರಯಾಸದ ಸ್ಥಿತಿಯು ಬಂದೊದಗುವುದು ಎಂಬ ಕಾರಣವನ್ನು ಎಲ್ಲರಕ್ಕಿಂತಲೂ ಒತ್ತಿ ಹೇಳುತ್ತಿದ್ದಾರೆ. ಇದರಿಂದ ಬಡ ಜನರಿಗೆ ಅಕ್ಕಿ ಪಡೆಕೊಳ್ಳಲು ಸಾಧ್ಯವಿಲ್ಲ. ಅನಾಹುತಗಳು ಬಂದೊದಗಬಹುದು ಎಂಬ ಶಂಕೆಗಳು ಅಧಿಕಾರಸ್ಥರಿಂದ ಕೊಡಲ್ಪಡುತ್ತವೆ. ಕ್ರಯವು ಏರುವುದು ಮತ್ತು ಇಳಿಯುವುದು ಹಾಗೆ ಬರುವುದು ಪ್ರತಿ ಒಂದು ಬದಲಾವಣೆಯ ಸ್ಥಿತಿಯಲ್ಲೂ ಇದ್ದೇ ಇರುತ್ತದೆ. ಅವಕ್ಕೆ ಸ್ವಲ್ಪ ಕಾಲದ ಜೀವನ ವಿನಹಾ ದೀರ್ಘ ಜೀವನ ಇರಲಾರದು. ಇದರಿಂದಾಗಿ ನಾವು ಜನತೆಗೆ ಸಾರ್ವತ್ರಿಕವಾಗಿ ಉಪದ್ರವಿರುವ ಕಂಟ್ರೋಲಿನಂತಹ ನಿರ್ಬಂಧ ಜೀವನವನ್ನು ತಡೆಯಿಲ್ಲದೆ ಮುಂದೊತ್ತಿಕೊಂಡು ಹೋಗುವುದಲ್ಲ. ಕಂಟ್ರೋಲು ತೆಗೆದ ಕೂಡಲೇ ಬರಬಹುದಾದ ಕಷ್ಟಗಳ ನಿವಾರಣೋಪಾಯಗಳು ಯಾವುವು ಎಂಬುದನ್ನು ತಿಳಿದು ಅವನ್ನು ಸಿದ್ಧತೆಯಲ್ಲಿ ಇಟ್ಟು ಕಂಟ್ರೋಲುಗಳನ್ನು ತೆಗೆಯತಕ್ಕದ್ದಿರುತ್ತದೆ.

ಕಂಟ್ರೋಲಿನಿಂದ ಆಗುತ್ತಿರುವ ಅನಾಹುತಗಳು ಆವುವು ಎಂದು ನಾವು ಒಂದೊಂದಾಗಿ ವಿಮರ್ಶಿಸಿದಲ್ಲಿ, ಈ ಕಂಟ್ರೋಲುಗಳು ಜನತೆಯು ಹಿತದೃಷ್ಟಿಯಿಂದಲೂ ರಾಷ್ಟ್ರದ ಹಿತದೃಷ್ಟಿಯಿಂದಲೂ ಏತಕ್ಕೆ ಹೋಗಬೇಕು ಎಂಬುದು ವಿಶದವಾಗುತ್ತದೆ.

1. ಮೊದಲನೆಯದಾಗಿ ಹೇಳುವುದಾದರೆ ಪೂಜ್ಯ ಗಾಂಧೀಜಿಯವರ ಪ್ರೇಮ ಪೂರ್ವಕವಾದ ಇಚ್ಛೆಯ ಪರಿಪಾಲನೆಯ ದೃಷ್ಟಿಯಿಂದ ಜನತೆಯೂ ಅಧಿಕಾರಿಗಳೂ ಈ ಕಂಟ್ರೋಲನ್ನು ತೆಗೆಯುವಲ್ಲಿ ತೆಗೆದುಹಾಕಬೇಕಾದ ಕಾರ್ಯಕ್ರಮವನ್ನು ಕೈಕೊಳ್ಳತಕ್ಕದ್ದಿರುತ್ತದೆ.

2. ಈ ಕಂಟ್ರೋಲಿನ ಪದ್ಧತಿಯಿಂದ ಜನತೆಯು ಸ್ವಲ್ಪ ಪರಿಶೀಲಿಸುವ ವಿಷಯಕ್ಕೆ ಎಷ್ಟು ಕಾಲ ಬೇಕೆಂಬ ಗೋಳಿನ ಕೇಳಬರುತ್ತದೆ. ಇದು ಕಂಟ್ರೋಲಿನಿಂದ ಎಂಬುದಾಗಿ ತಿಳಿಕೊಂಡ ಜನತೆಯು ಈ ದೂರನ್ನು ಅಧಿಕಾರದಲ್ಲಿರುವ ಸರಕಾರದ ಮೇಲೆ ಹೊರಿಸುತ್ತದೆ. ಕಾಂಗ್ರೆಸು ಸರಕಾರದಿಂದ ನಮಗೆ ಅರೆಹೊಟ್ಟೆಯಾಯಿತು ಎಂಬ ದೂರು ಜನಸಾಮಾನ್ಯರಿಂದ ಕೇಳಬರುತ್ತದೆ. ಈ ಸಂದರ್ಭವನ್ನು ಶಕ್ತಿ ಸಂಗ್ರಹಿಸಲು ಸಾರ್ವತ್ರಿಕ ಪ್ರಯತ್ನ ಮಾಡುತ್ತಿರುವ ಕಮ್ಯೂನಿಸ್ಟ್, ಸೋಶಲಿಸ್ಟ್ ಮೊದಲಾದ ಪಕ್ಷಗಳು ದುರುಪಯೋಗ ಪಡಿಸುತ್ತಿವೆ. ಕಾಂಗ್ರೆಸು ಸರಕಾರದ ಮೇಲೆ ಹೊರಿಸುವ ಹೆಚ್ಚಿನ ತಪ್ಪುಗಳಿಗೆ ಈ ಕಂಟ್ರೋಲೇ ಆರಂಭಸ್ಥಾನವಾಗಿ ನಿಂತಿದೆ. ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸಿನ ಬಲವನ್ನು ಬಹುಮಟ್ಟಿಗೆ ಕುಗ್ಗಿಸುತ್ತಿರುವ ಕಂಟ್ರೋಲು ಶೀಘ್ರದಲ್ಲೇ ಹೋಗುವುದು ಅವಶ್ಯವಿರುತ್ತದೆ.

3. ಕಂಟ್ರೋಲಿನ ನಿರ್ಬಂಧದ ಜೀವನದಿಂದ ಜನತೆ ಜೀವನದಲ್ಲಿ ಜಿಗುಪ್ಸೆಬಂದಂತೆ ತೋರುತ್ತದೆ. ಪ್ರತಿ ಕಮ್ಮಿಯಾದಲ್ಲಿ ಟೀಕೆ ಜಾಸ್ತಿ ಎಂಬ ನಾಣ್ಣುಡಿಗನುಸರಿಸಿ ಅಧಿಕಾರದಲ್ಲಿರುವ ಸರಕಾರವನ್ನು ಅದರ ಒಂದೊಂದು ಕೊರತೆಯನ್ನು ಹಿಡಿದುಕೊಂಡು ಜನತೆಯು ಒಂದೊಂದು ರೀತಿಯಲ್ಲಿ ಟೀಕಿಸುವುದು ಇಂದಿನ ಸಾಮಾನ್ಯ ಸ್ಥಿತಿ.

4. ಜನತೆಯ ಜನ್ಮಸಿದ್ಧ ಸ್ವತಂತ್ರ ವ್ಯಾಪಾರಸಾಧಾರ, ಇಚ್ಛಾನುಸಾರ ಬೆಳೆಸುವಿಕೆ, ಬೇಕಾದ ಊಟತಿನಸುಗಳಿಗೆ ಅಂತರಾಯವನ್ನು ಕಂಟ್ರೋಲುಗಳ ದೆಸೆಯಿಂದ ಕಟ್ಟಿದಂತಾಗುತ್ತದೆ. ಇದು ಸ್ವತಂತ್ರಿಯಾಗಿರುವ ದೇಶಕ್ಕೆ ಘನವಾದ ಕೊರತೆಯಿರುತ್ತದೆ. ಇತರ ದೇಶಗಳಲ್ಲಿ ಕಂಟ್ರೋಲು ಇರುತ್ತವೆ, ಇರಬಹುದು ಎಂಬ ಕಾರಣವು ಇಲ್ಲಿಯ ಸ್ಥಿತಿಯನ್ನು ಪುಷ್ಟೀಕರಿಸುವುದಿಲ್ಲ. ಅವನ್ನು ವಿಮರ್ಶಿಸಿ ನೋಡಿದರೆ ಅವಕ್ಕೂ ಇವಕ್ಕೂ ಹೋಲುವಿಕೆ ಇರಲಾರದು.

5. ಈ ಕಂಟ್ರೋಲುಗಳ ದೆಸೆಯಿಂದಾಗಿಯೇ ಜೀವನವೆಚ್ಚದ ಮಟ್ಟವು ಮಿತಿಮೀರಿ ಏರಿ ಜನಜೀವನವು ಕಷ್ಟಕ್ಕೀಡಿದೆ. ಯುದ್ಧ ಕಾಲದಲ್ಲಿ ಜೀವನ ವ್ಯಯ ಮಟ್ಟವು ಏರುವುದು ಸ್ವಾಭಾವಿಕವಾದ ವಿಷಯ. ಆದರೆ ಯುದ್ಧವು ಮುಗಿದು ಬಹು ಸಮಯವಾದರೂ ವರ್ಷದಿಂದ ವರುಷಕ್ಕೆ ಈ ಮಟ್ಟವು ಕೆಳಗಿಳಿಯುವ ಬದಲು, ಏರುತ್ತದೆ ಏಕೆಂಬ ಪ್ರಶ್ನೆಯು ಜನತೆಯು ಕೇಳತಕ್ಕ ವಿಷಯ. ಸಂದರ್ಭಗಳನ್ನು ಸರಿಯಾಗಿ ವಿಮರ್ಶಿಸಿ ನೋಡಿದಲ್ಲಿ ಈ ರೀತಿಯ ಜೀವನವೆಚ್ಚ ಮಟ್ಟವು ಏರುವಿಕೆಗೆ ಕಂಟ್ರೋಲುಗಳೇ ಕಾರಣವೆಂದು ಕಂಡುಬರುವುದು.

6. ಸರಕಾರವು ಈ ಕಂಟ್ರೋಲುಗಳನ್ನು ನಡಿಸಿಕೊಂಡು ಬರುವರೇ ಧಾರಾಳ ಸಿಬಂದಿಯನ್ನಿಟ್ಟುಕೊಂಡು ಆ ಕಡೆಗೆ ಧಾರಾಳ ಗಮನವನ್ನು ಕೊಟ್ಟುಕೊಂಡು ಬರುವುದು. ಈ ಕಂಟ್ರೋಲುಗಳು ಹೋಗುವುದರಿಂದ ಅನೇಕ ಹೊಸ ಯೋಜನೆಗಳಲ್ಲಿ ಕೈಹಾಕಲಿಕ್ಕಿರುವ ಸರಕಾರಕ್ಕೆ ಆ ವೆಚ್ಚವು ಉಳಿದು ಬಾರದೇ? ಅಲ್ಲದೆ ಆ ಯೋಜನೆಗಳ ಕಡೆಗೆ ಲಕ್ಷ್ಯವನ್ನು ಕೊಡಲು ಅಸ್ಪದವು ಜಾಸ್ತಿಯಾಗಿ ದೊರಕದೇ?

7. ಈ ಕಂಟ್ರೋಲುಗಳ ಬಗ್ಗೆ ಏರ್ಪಡಿಸಿರುವ ಕಾನೂನು ಮತ್ತು ಆಡಳಿತ ನಿಯಮಗಳು ಅಸಂಖ್ಯಾತವಿದ್ದು ಯಾವನೊಬ್ಬ ಮನುಷ್ಯನಿಗೂ ಸಂಪೂರ್ಣ ತಿಳಕೊಳ್ಳುವರೇ ಅಗಲೀ ಜ್ಞಾಪಕದಲ್ಲಿ ಇಡುವರೇ ಆಗಲೀ ಸಾಧ್ಯವಿಲ್ಲದ ಸ್ಥಿತಿಯಲ್ಲಿರುತ್ತದೆ. ಈ ರೀತಿಯ ಸ್ಥಿತಿಯಿದ್ದಲ್ಲಿ ಪ್ರತಿಯೊಬ್ಬನೂ ತಿಳಿದೂ ತಿಳಿಯದೆಯೂ ತನ್ನ ನಿತ್ಯ ಜೀವನದಲ್ಲಿ ಕಾನೂನಿನ ದೃಷ್ಟಿಯಿಂದ ಅನೇಕ ತಪ್ಪುಗಳನ್ನು ಮಾಡಿ ಅಪರಾಧಿ ಸ್ಥಾನದಲ್ಲಿರಲು ಸಾಧ್ಯವಿದೆ. ಅಲ್ಲದೆ ಸಂದರ್ಭ ಸನ್ನಿವೇಶಗಳನ್ನೂ ಸ್ಥಿತಿಗತಿಗಳನ್ನೂ ಗಣನೆಗೆ ತೆಗೆದುಕೊಂಡು ತುಲನೆ ಮಾಡಿದಲ್ಲಿ ನ್ಯಾಯ ವ ನೀತಿ ದೃಷ್ಟಿಯಲ್ಲಿ ತಪ್ಪಿತಸ್ಥನಲ್ಲದಿದ್ದರೂ, ಕಾನೂನಿನ ದೃಷ್ಟಿಯಲ್ಲಿ ತಪ್ಪಿತಸ್ಥನಾಗಲು ಸಾಧ್ಯವಿದ್ದು, ತಾನು ಯಾವ ಅನ್ಯಾಯಕ್ಕಾಗಿ ಶಿಕ್ಷಿಸಲ್ಪಟ್ಟನೆಂದು ನೀತಿ ದೃಷ್ಟಿಯಿಂದ ತಿಳಿಯಲು ಸಾಧ್ಯವಿಲ್ಲದೆ ಹೋಗುವ ಸಂದರ್ಭವಿದೆ. ಇದು ಹಿತಕರವಾದ ಸ್ಥಿತಿಯಲ್ಲ.

8. ಈ ಕಂಟ್ರೋಲುಗಳಿಗೆ ಸಂಬಂಧಿಸಿದ ಕಾನೂನುಗಳು ಚಿಕ್ಕಪುಟ್ಟ ಅಧಿಕಾರಿಗಳ ಮುಖಾಂತರ ಜಾರಿಗೆ ಬರುತ್ತಿದ್ದು, ಅಂತಹ ಅಧಿಕಾರಿಗಳು ಮನಸ್ಸಾಕ್ಷಿಯನ್ನು ಒತ್ತಿಯಿಟ್ಟು, ಆ ಕಂಟ್ರೋಲುಗಳ ಉದ್ದೇಶಕ್ಕೆ ವಿರೋಧವಾಗಿ ವರ್ತಿಸಿ, ಅವರ ಪೀಡನೆಗೆ ಜನಸಾಮಾನ್ಯರು ತುತ್ತಾಗುವುದು ದಿನಂಪ್ರತಿ ವಾಡಿಕೆಯಿಂದೇ ಹೇಳಬೇಕಾಗುವುದು. ಕಂಟ್ರೋಲಿಗೆ ಸಂಬಂಧಪಟ್ಟ ಅಂತಹ ಅಧಿಕಾರಗಳ ಮನೋಚರ್ಯೆಯೇ ಬದಲಾವಣೆ ಹೊಂದಿದ್ದು, ಅವರ ಸ್ಥಾನ ಮಾನ ಮತ್ತು ಸ್ಥಿತಿಯು ಈ ದೆಸೆಯಿಂದ ಬಹುವಾಗಿ ಮಾರ್ಪಾಟಗೊಂಡು,ಕಂಟ್ರೋಲುಗಳು ಉಪಕಾರಿ ಕಾಯಿದೆಗಳಾಗುವ ಬದಲು ಅವರ ಮೂಲಕ ಉಪದ್ರವಿ ಕಾಯಿದೆಗಳಾಗುತ್ತವೋ ಎಂಬಂತೆ ತೋರುತ್ತವೆ. ಈ ಕಂಟ್ರೋಲುಗಳ ಸಂಬಂಧ ಇಡತಕ್ಕ ರಿಕಾರ್ಡುಗಳ ಕ್ರಮದಿಂದ ಅಂತಹ ಅಧಿಕಾರಿಗಳಿಂದ ಹೊಂದುವ ತಪ್ಪನ್ನು ತೋರಿಸಿ ಕೊಡುವುದು ಬಹುಕಷ್ಟವಿರುತ್ತದೆ. ಅಲ್ಲದೆ ಜನಸಾಮಾನ್ಯರಿಗೆ ಅಂತಹ ಅಧಿಕಾರಿಗಳೊಡನೆ ನ್ಯಾಯಕ್ಕಾಗಿ ಹೋರಾಡಿ ದ್ವೇಷ ಕಟ್ಟಿಕೊಳ್ಳುವುದೂ ಕಷ್ಟವಿರುತ್ತದೆ.

9. ಈ ಕಂಟ್ರೋಲುಗಳೇ ಅಧಿಕಾರಿಗಳ ಲಂಚವೆಂಬ ದಟ್ಟವಾದ ಕೂಗಿಗೆ ಮೂಲಸ್ಥಾನ.

10. ಕಳ್ಳಸಂತೆಯು ಕಂಟ್ರೋಲು ಎಂಬುದರ ಒಟ್ಟಿಗೆ ಬಂದಿದ್ದು ಅದರೊಟ್ಟಿಗೆ ಹೋಗತಕ್ಕದ್ದಿರುತ್ತದೆ.

11. ಈ ಕಂಟ್ರೋಲಿನ ದೆಸೆಯಿಂದಾಗಿ ರೈತನಿಗೆ ತಾನು ಯಾತಕ್ಕಾಗಿ ಉತ್ಸಾಹದಿಂದ ಒಳ್ಳೇ ರೀತಿಯಲ್ಲಿ ಸಾಗುವಳಿ ಮಾಡಬೇಕು. ಅಥವಾ ಆಹಾರ ಪದಾರ್ಥ ಸಿದ್ಧಪಡಬೇಕು ಎಂಬ ಜಿಗುಪ್ಸೆ ಹುಟ್ಟಿಯದೆ. ಯಾಕೆಂದರೆ ತಾನು ಎಷ್ಟು ಬೆಳೆಸಿದರೂ ತನ್ನ ಖರ್ಚಿಗೆ ಅಲ್ಲಿಂದಲ್ಲಿ ಇಟ್ಟು ಮಿಕ್ಕದ್ದನ್ನು ಉಳಿತಾಯವಾಗಿ ಸಂಗ್ರಹವು ಕೊಂಡುಹೋಗುತ್ತದೆ. ಅಲ್ಲದೆ ಶ್ರಮಪಟ್ಟು ಒಳ್ಳೇ ಅಕ್ಕಿ ಮಾಡಿದರೂ ಮಾಡದಿದ್ದರೂ ಬೆಲೆ ಒಂದೇ ಎಂದಿರುವಾಗ ಯಾತಕ್ಕೆ ಶ್ರಮಪಡಬೇಕು ಎಂಬ ಸ್ವಭಾವಿಕವಾದ ಮನೋಪ್ರವೃತ್ತಿಯು ಅವನಲ್ಲಿ ಬರುತ್ತದೆ. ಇದರಿಂದಾಗಿ ಉತ್ತಮ ಆಹಾರ ವಸ್ತು ಮತ್ತು ಅಧಿಕ ಬೆಳೆಗೆ ಅವಕಾಶ ಕಮ್ಮಿ ಅಲ್ಲದೆ ಮುಖ್ಯ ಆಹಾರ ಪದಾರ್ಥಗಳನ್ನು ಬಿಟ್ಟು ಹೆಚ್ಚು ಬೆಲೆ ಬರುವ ವ್ಯಾಪಾರ ವಸ್ತುಗಳನ್ನು ಬೆಳೆಸುವುದರಲ್ಲಿ ಈಗ ತೋರಿ ಬರುವಂತೆ ರೈತರಿಗೂ ಆಸಕ್ತಿ ಜಾಸ್ತಿಯಿರುತ್ತದೆ.

12. Procurement ಅಥವಾ ಸಂಗ್ರಹಣ ಎಂಬ ಕಟ್ಟುಜ್ಞೆ ಏಡೆದು ತಮ್ಮ ಶಿಫಾರಸಿಗಾಗಿ ಒದ್ದಾಡುತ್ತಿರುವ ಚಿಕ್ಕ ಅಧಿಕಾರಿಗಳು, ದೊಡ್ಡ ದರ್ಪವನ್ನು ತೋರಿಸಿ ಹಳ್ಳಿಯಲ್ಲಿ ತಿರುಗಾಡುವುದು, ಕೂಲಿಯವರ ಮುಖಾಂತರಿಯ ಮೂಲಕ ಸಂಗ್ರಹಿಸಿಟ್ಟ ಅಕ್ಕಿ ಭತ್ತವನ್ನು ಕೂಡಾ ರಿಕ್ವಿಸಿಷನ್ ಮಾಡುವ ಕ್ರೂರದೃಷ್ಟಿ, ರೈತನ ವೆಚ್ಚಕ್ಕಾಗಿ ಬಿಟ್ಟ ಅಕ್ಕಿಯನ್ನು ಸಂದರ್ಭ ಬಂದಷ್ಟು ಸಲ ಆತನ ವ ಮನೆಯವರ ಗೋಳನ್ನು ಬದಿಗಿಟ್ಟು, ಮನೆಯಿಂದ್ದಕ್ಕೂ ಹುಡುಕುವ ನೆವನದಿಂದ ಹೋಗಿ ತರುವುದು, ಕೊನೆಗೆ ಆತನ ಅಕ್ಕಿಯನ್ನು ಕಮ್ಮಿ ಬೆಲೆಗೆ ಸ್ಟೋರಿಗೆ ಹಾಕಿ ಆತನ ಜೀವನಕ್ಕೆ ಅಳತೆಯ ಪರಿಮಾಣದಲ್ಲಿ ಜಾಸ್ತಿ ಬೆಲೆ ಕೊಡಿಸಿ ದೂರದಲ್ಲಿದ್ದ ಸ್ಟೋರುಗಳಿಂದ ಕೀಳು ತರಗತಿಯ ಅಕ್ಕಿಯನ್ನು ತರಿಸಿಕೊಳ್ಳುವ ವ್ಯವಸ್ಥೆಯನ್ನು B ಕಾರ್ಡು ಎಂಬುದರ ಮೂಲಕ ಮಾಡಿಸುವುದು, ಇವು ಸಾಮಾನ್ಯ ದೃಶ್ಯಗಳು.. ಈ ಸ್ಟೋರುಗಳಿಗೆ ಹೋಗಿ ಕಾಯುವರೆ, ಮೊದಲೇ ಕೆಲಸಕ್ಕೆ ಜನರಿಲ್ಲದ ಬರ್ದೆತನ ಒಂದು ಜನವನ್ನಿಟ್ಟುಕೊಳ್ಳಬೇಕು. ಈ ರೀತಿಯಲ್ಲಿ ಸಾಗುವಳಿ ಹೇಗೆ ನಡೆದೀತು, ಅಧಿಕ ಬೆಳೆಯಿಂದ ಕಂಟ್ರೋಲು ಹೋಗುವ ವ್ಯವಸ್ಥೆಯಾದರೂ ಎಲ್ಲಿ?

13. ಅಕಾಲದಲ್ಲಿ ಪೈರು ಕೊಯಿಸಿ ಅಕ್ಕಿ ತಯಾರಿಸುವ ಕ್ರಮದಿಂದ ರೈತನಿಗೆ ಆಗುವ ನಷ್ಟ, ಅಕ್ಕಿಯ ತರುಣ ಹೀನತೆ, ಬಾಳ್ವಿಕೆ ಕಮ್ಮಿ ಇತ್ಯಾದಿ ಅವಸ್ಥೆ ಮತ್ತು ಸ್ಟೋರುಗಳಲ್ಲಿ ಆತನು ಕೆಲ ಸಮಯ ದಿನಗಳ್ಳಲೆ ಕಾಯುವ ಸ್ಥಿತಿ, ತೂಕದಲ್ಲಿ ಹೊಂದತಕ್ಕ ನಷ್ಟ ವ ಇತರ ಅನೇಕ ತರದ ನಷ್ಟಗಳಿಗೆ ತುತ್ತಾಗುವ ರೈತನಿಗೆ ತನ್ನ ಕೆಲಸದಲ್ಲಿ ಏನು ಶ್ರದ್ಧೆ ಬಂದೀತು?

14. ಈ ರೀತಿ ತಯಾರಿಸಿದ ಅಕ್ಕಿ ವ ಇತರ ಆಹಾರ ಪದಾರ್ಥವನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಒಯ್ಯುವ ವಿಧಾನದಿಂದಲೂ ಗೋದಾಮುಗಳಲ್ಲಿ ಇಡುವ ವಿಸ್ತಾನು ಕ್ರಮದಿಂದಲೂ ವಿಪರೀತ ನಷ್ಟ ಹೊಂದುವ ಸಂದರ್ಭವಿರುತ್ತದೆ ಅಂತಹ ವರ್ತಮಾನಗಳು ಕೇಳಿಬರುತ್ತಿವೆ.

ಜನರ ಹಿತಕ್ಕೆಂದು ಮಾಡಿದ ವ ಕಂಟ್ರೋಲುಗಳು ಉಪದ್ರವಕಾರಿಯಾಗಿ ಪರಿಣಮಿಸಿದರೆ ಅದನ್ನು ತೆಗೆಯುವುದು ಎಷ್ಟೋ ಲೇಸು. ಕಂಟ್ರೋಲು ಹೋದರೆ ಏನಾಗುವುದೋ ಎಂಬ ವಿಚಾರವು ಕೇವಲ ಮನೋಭೀತಿ. ಕಂಟ್ರೋಲ್ ತೆಗೆದೊಡನೆಯೇ ಕ್ರಯ ಒಮ್ಮೆಗೇ ಏರಬಹುದು ಇದು ಬದಲಾವಣಾ ಸ್ಥಿತಿಯಲ್ಲಿ ಬಂದೇ ಬರುತ್ತದೆ ಇದರಿಂದಾಗಿ ಕಂಟ್ರೋಲಿಗೆ ಶಾಶ್ವತ ಜೀವ ಕೊಡಲಾಗುವುದಿಲ್ಲ. ಕ್ರಯದ ಮಟ್ಟಿಗೆ ಹಿಡಿತದಲ್ಲಿ ಹಿಡಿಯುವರೇ ಯುಕ್ತ ಸಿದ್ಧತೆ ಮಾಡಿಕೊಳ್ಳಬೇಕು. ಕ್ರಯವು ಏರಿದಾಗ ಒಂದು ಮಿತಿಯಲ್ಲೇ ನಮಿಸುತ್ತನ್ನು ಹೊಂದುವುದು. ಪ್ರತಿಯೊಂದು ಗ್ರಾಮದಲ್ಲಿಯೂ ದೊಡ್ಡ ರೈತರಿಂದ ಚುನಾಯಿಸಲ್ಪಟ್ಟ ಕಮಿಟಿಯನ್ನು ನಿರ್ಮಿಸಿ, ಯೋಗ್ಯ ಬೆಲೆಗೆ ಬೇಕಾದ ಅಕ್ಕಿಯನ್ನು ಗ್ರಾಮಸ್ಥರಿಗೆ ವಿಕ್ರಯಿಸುವ ವ್ಯವಸ್ಥೆಯನ್ನು ಗ್ರಾಮಸ್ಥರಿಂದಲೇ ಮಾಡಿ ಈ ಕಮಿಟಿಗಳ ಮೇಲ್ವಿಚಾರ, ಅವಕ್ಕೆ ಬೇಕಾಗುವ ಸಲಹೆಗಳನ್ನು ಸರಕಾರದವರು ಒಂದೆರಡು ವರುಷಕ್ಕೆ ಅಗತ್ಯಬಿದ್ದಲ್ಲಿ ಕೊಡಬೇಕಾಗುವುದು. ಈ ಮಧ್ಯ ಬಡವರ ಹಸಿವೆಯಲ್ಲಿ ವ್ಯಾಪಾರ ನಡೆಸಿ, ಅವರ ರಕ್ತ ಹೀರಿ ಒಂದೇ ಸವನೆ ವಿಪರೀತ ಬೆಲೆಯಿಂದ ಆಹಾರವಸ್ತುಗಳನ್ನು ಮಾರಿ ದೊಡ್ಡ ಮಾರಾಟಗಾರಿಕೆಯಿಂದ ಸಮಾಜ ದ್ರೋಹಿಗಳನ್ನು ಸಮಾಜವೇ ಹಿಡಿದೊಪ್ಪಿಸಿ, ಅವರು ಈ ರೀತಿಗಳಿದ ಸ್ಥಿತಿಗತಿಗೆ ಮಾನ್ಯತೆ ಕೊಡದೆ, ಬಹಿಷ್ಕಾರಕ್ಕೆ ಒಳಪಡಿಸಿದರೆ ಈ ಕಂಟ್ರೋಲುಗಳನ್ನು ತಗೆದು ಹಾಕುವುದು ಕಷ್ಟಕ್ಕೆ ನಿಲ್ಲಲಿಕ್ಕಿಲ್ಲ ಅದ್ದರಿಂದ ಮಾನ್ಯ ಪಂಡಿತ್ ಜವಹಿರಲಾಲರು 1951ನೇ ಇಸವಿಯ ನಂತರ ಅನ್ಯದೇಶದ ಅಕ್ಕಿಯನ್ನು ತರಿಸುವುದಿಲ್ಲವೆಂಬ ನಿರ್ಧಾರವನ್ನು ಹೇಗೆ ಮಾಡಿರುವರೋ ಹಾಗೆಯೇ ಇಂದು ಕೂಡಲೇ ಕಂಟ್ರೋಲುಗಳನ್ನು ತೆಗೆದು ಹಾಕುತ್ತೇವೆ ಎಂಬ ಅಧಿಕಾರಿ ನಿರ್ಧಾರವೂ ನಮಗೆ ಬೇಕು.

# ನಾವೇಕೆ ನಗಾಡುವೆವು?

ಲೇ:— ಶ್ರೀ. 'ಗಣೇಶ' ಮಡಿಕೇರಿ.

ಇದೆಂಥಾ ವಿಚಿತ್ರ ಪ್ರಶ್ನೆ ಎಂದು ಎಲ್ಲರೂ ಕೇಳದಿರರು. ಆದರೂ ಇದರಲ್ಲಿಯೇ ನಮಗೂ ಜಗತ್ತಿನ ಇತರ ಜೀವ ಜಂತುಗಳಿಗೂ ಇರುವ ಅಂತರವು ಕಂಡುಬರುತ್ತದೆ. ಮನುಷ್ಯನು ಭೂಮಿಯಲ್ಲಿ ತನಗಿಂತ ಬುದ್ಧಿವಂತನಿಲ್ಲವೆಂದು ಹೆಮ್ಮೆಪಟ್ಟುಕೊಳ್ಳುತ್ತಿದ್ದ ಕಾಲವಿತ್ತು. ಆದರೆ ಕಾಲಡಿಯಲ್ಲಿ ಹರಿದಾಡುವ ಇರುವೆಗಳು, ಆಕಾಶದಲ್ಲಿ ಸಂಗೀತ ಹಾಡುತ್ತಾ ಸಂಚರಿಸುವ ಜೇನ್ನೊಣಗಳು ತಮ್ಮ ಬುದ್ಧಿವಂತಿಕೆ, ಶಿಸ್ತು, ಸಂಘಟನೆ, ಸಾಮೂಹಿಕ ಜೀವನ ಕ್ರಮಗಳಿಂದ ಮನುಷ್ಯನು ತಲೆ ತಗ್ಗಿಸುವಂತೆ ಮಾಡಿವೆ. ಮನುಷ್ಯನಿಗೂ ಪ್ರಾಣಿಗಳಿಗೂ ಇರುವ ವ್ಯತ್ಯಾಸವೆಂದರೆ ಮನುಷ್ಯನಿಗೆ ವಿಚಾರ ಶಕ್ತಿ ಇದೆ; ಪ್ರಾಣಿಗಳಿಗೆ ಇಲ್ಲವೆಂದು ಕೆಲವರು ಹೇಳುತ್ತಾರೆ. ಆದರೆ ಪ್ರಾಣಿಗಳಿಗೂ ವಿಚಾರ ಶಕ್ತಿ ಅದರಲ್ಲೂ ಕೆಲವಕ್ಕೆ ಮನುಷ್ಯನನ್ನು ಮೀರಿಸುವ ವಿಚಾರ ಶಕ್ತಿ ಇದೆ ಎಂದು ಹೇಳಬೇಕಾಗುತ್ತದೆ. ಕೆಲವು ಹಕ್ಕಿಗಳು ಕಟ್ಟುವ ಗೂಡುಗಳು, ಮುಂದಿನ ಗಂಡಾಂತರಕ್ಕೆಂದು ಇಂದು ಅವು ಏರ್ಪಡಿಸಿಕೊಳ್ಳುವ ಅನುಕೂಲತೆಗಳು, ಕೇಡಿಯನ್ನು ಗುರ್ತಿಸಿ ವಿರೋಧಿಸುವ, ಪ್ರೀತಿಸುವವನ್ನು ಮೆಚ್ಚಿ ನಲಿದಾಡುವ ಅವುಗಳ ವಿಚಾರ ಶಕ್ತಿ ಕಡಿಮೆಯಲ್ಲ. ಹಿರಿಯರನ್ನು ಕಂಡು ಹರಿದಾಯುವ ದನವು ಮುದ್ದು ಮಕ್ಕಳೊಡನೆ ಸರಸವಾಡುವದು, ಆಧುನಿಕ ನಾಗರೀಕ ಸಂಸ್ಕಾರಗಳನ್ನು ಮೀರಿಸುವ ರಾಜ್ಯಭಾರ ಕ್ರಮವನ್ನು ಜಾರಿಗೆ ತಂದು ಸುಖದಲ್ಲಿ ಜೀವಿಸಿ ಜೇನ್ನೊಣಗಳು ಮನುಷ್ಯನ ಬಾಯಿ ಮುಚ್ಚಿಸಿವೆ. ಆದ್ದರಿಂದ ಮನುಷ್ಯನು ಪ್ರಾಣಿಗಳನ್ನು ಮೀರಿಸಿದವನೆಂದು ಹೇಳಲು ಸಾಧ್ಯವಿಲ್ಲ! ಮನುಷ್ಯನು ಶಕ್ತಿಶಾಲಿ ಎನಿಸಿದರೆ ಆತನಿಗಿಂತ ಶಕ್ತಿಯುತ ಪ್ರಾಣಿಗಳಿವೆ. ಹುಲಿಯು ಕ್ರೂರ ಪ್ರಾಣಿ ಎಂದರೆ ಮನುಷ್ಯನ ಕ್ರೌರ್ಯವೇನು ಕಡಿಮೆಯಲ್ಲ! ಮನುಷ್ಯನು ಪ್ರಾಣಿ ವರ್ಗದವನೆನ್ನಲು ಆತನಲ್ಲಿರುವ ಪ್ರಾಣಿ ಬುದ್ಧಿ ಒಂದೆರಡಲ್ಲ. ಆತನಲ್ಲಿ ನರಿಯ ಕುತಂತ್ರವೂ, ಇರುವೆಯ ಬುದ್ಧಿಯೂ, ಬಕನ ವೇಶವೂ ಸಮಾವೇಶಗೊಂಡಿವೆ. ಒಂದು ದೃಷ್ಟಿಯಿಂದ ಮನುಷ್ಯನೂ ಪ್ರಾಣಿಯೆ! ಆತನು ಒಂದು ವಿಧದಲ್ಲಿ ಮಾತಾಡಿದರೆ ಪ್ರಾಣಿಗಳು ಬೇರೆ ವಿಧದಲ್ಲಿ! ನಮಗರ್ಥವಾಗದ ಚೈನಿ ಯಾ ಇತರ ಭಾಷೆಗಳು ಪ್ರಾಣಿಗಳ ಕೂಗಿಗಿಂತ ಹೆಚ್ಚಿನ ಅರ್ಥವನ್ನು ನಮಗೆ ಕೊಡಲಾಪುವೇ?

ಇಷ್ಟೆಲ್ಲಾ ಪ್ರಾಣಿ ವರ್ಗಕ್ಕೂ ಮನುಷ್ಯ ಕುಲಕ್ಕೂ ಸಂಬಂಧವಿದ್ದರೂ ಒಂದು ವಿಚಾರದಲ್ಲಿ ಭಿನ್ನತೆ ಇದೆ. ಮನುಷ್ಯನು ನಗಾಡುತ್ತಾನೆ; ಇತರ ಯಾವ ಪ್ರಾಣಿಗಳೂ ನಗಾಡಲಾರವು! ತನ್ನ ಹೃದಯದ ಭಾವನೆಯನ್ನು ಬಚ್ಚಿಡದೆ ಒಡಲನ್ನು ಬಿಚ್ಚಿ ನಗುವಿನ ಮೂಲಕ ವ್ಯಕ್ತಪಡಿಸುವ ಭಾಗ್ಯ ಮನುಷ್ಯನಿಗೆ ಮಾತ್ರ ಇದೆ. ನಗುವು ಸುಖದ ಚಿಹ್ನೆ ಮಾತ್ರವಲ್ಲ; ಅದು ದುಃಖದ ಪ್ರತೀಕವೂ ಆಗಬಹುದು. ಸುಖದಲ್ಲಿಯೂ ದುಃಖದಲ್ಲಿಯೂ ಕಂಬನಿ ಸುರಿಸುವಂತೆ ನಗುವೂ ಕೂಡ ಒಂದು ಮನೋಹರವಾದರೆ ಮತ್ತೊಂದು ವಿಕೃತ ಮತ್ತು ಭೀಕರ!

ಮನೋವಿಜ್ಞಾನಿಗಳು ನಗುವಿನ ಆದಿ ಮತ್ತು ಅಂತ್ಯವನ್ನು ಕಂಡುಹಿಡಿಯಲು ನಾನಾ ರೀತಿಯ ವಿಶ್ಲೇಷಣ ಮಾಡಿದ್ದಾರೆ. ಅದರ ಅಂತರ್ಗತ ಮತ್ತು ಬಹಿರ್ಗತ ರಚನೆ, ನಿರ್ಮಾಣಗಳ ವಿಚಾರ ಆಲೋಚಿಸಿದ್ದಾರೆ. ನಗುವು ನಗುವಾತನಿಗೆ ಆಹ್ಲಾದಕರವಾಗಿರಬಹುದು. ಅದೇ ನಗು ಮತ್ತೊಬ್ಬನಿಗೆ ದುಃಖದಾಯಕವಾಗಲೂಬಹುದು. ಇಲ್ಲವೇ ಇನ್ನೊಬ್ಬನಲ್ಲೂ ನಗುವಿನ ಹೊನಲನ್ನು ಹರಿಸಬಹುದು. ಕಾಲೇಜಿಗೆ ಹೊಸದಾಗಿ ಒಬ್ಬ ವಿದ್ಯಾರ್ಥಿ ಸೇರಿದನೆನ್ನೋಣ. ಆತನನ್ನು ಟೀಕಿಸಿ ನಗುವದು ಕೆಲವರ ಹವ್ಯಾಸವಾದರೆ ಆತನಿಗೆ ಧೈರ್ಯ ಹೇಳಿ ಸಹಾನುಭೂತಿ ತೋರಿಸುವವರು ಕೆಲವರಿರುತ್ತಾರೆ. ರಸ್ತೆಯಲ್ಲಿ ಒಂದೇ ಕಣ್ಣಿರುವವನೊಬ್ಬನನ್ನು ಕಂಡಾಗ ಕೆಲವರು ನಗುತ್ತಾರೆ; ಮತ್ತೆ ಕೆಲವರು 'ಪಾಪ' ಎಂದು ಸಹಾನುಭೂತಿ ಪ್ರದರ್ಶಿಸುತ್ತಾರೆ. ಒಮ್ಮೆ ನಗುವನ್ನು ತಂದ ಪರಿಸ್ಥಿತಿಯೇ ಮತ್ತೊಮ್ಮೆ ಸಹಾನುಭೂತಿಯನ್ನು ಅದೇ ವ್ಯಕ್ತಿಯಲ್ಲಿ ತರಬಹುದು.

ನಗೆಯ ವಿಮರ್ಶೆ ಮಾಡಿ ವೈಜ್ಞಾನಿಕವಾಗಿ ಶೋಧಿಸಿದ ಹಲವರು ಅದರ ಕಾರಣವನ್ನು ಹಲವು ವಿಧವಾಗಿ ಕೊಟ್ಟಿದ್ದಾರೆ. "ಇನ್ನೊಬ್ಬರ ದುರಾದೃಷ್ಟವನ್ನು ಕಂಡು ನಾವು ನಗುತ್ತೇವೆ, ನಮ್ಮ ನಗೆಯು ನಾವು ಹೆಚ್ಚಿನವರು ಎಂಬ ಕ್ಷಿಪ್ತ ಭಾವನೆಯ ಹೆಗ್ಗಳಿಕೆಯ ಕಾರಣ ಹೊರಹೊಮ್ಮುವ ಅನಿರೀಕ್ಷಿತ ಘನತೆ" ಎಂದು ಹೋಬ್ಸ್ ಎಂಬವರು ಹೇಳಿದ್ದಾರೆ. ಇವರೆನ್ನುವಂತೆ ಕೆಲವು ನಗೆಗಳಲ್ಲಿ ಈ ಈರ್ಷೆ ಇಲ್ಲವೇ ತಾನು ಹೆಚ್ಚು ಎಂಬ ಸುಳಿವು ಇರಬಹುದಾದರೂ ಎಲ್ಲಾ ನಗುವಿನಲ್ಲಿ ಅದಿರಲಾರದು. ಆದ್ದರಿಂದಲೇ ಸಲ್ಲಿ ಎಂಬವರು "ಅದೊಂದು ಆಟ" ಎಂದಿದ್ದಾರೆ. ಆದರೆ ಆಟವೆಂದರೇನು? ಎಲ್ಲಾ ನಗುಗಳು ಆಟವಾಗಲಾರವು. ಪ್ರಸಿದ್ಧ ವಿಜ್ಞಾನಿ ಬರ್ಗ್‌ಸನ್ ಎಂಬವರು 'ನಗುವೆಂಬುದು ಮಾನವನ ಜೀವನದಲ್ಲಿ ಯಾಂತ್ರಿಕ ರೀತಿಯಲ್ಲಿ ಹೆಪ್ಪುಗಟ್ಟಿದ ಅನಿಷ್ಟ ಸರಡೆಯನ್ನು ಒಡೆಯುವ ಸಾಧನ. ಈ ರೀತಿ ಆ ಹೆಪ್ಪನ್ನು ಒಡೆದು ಮನುಷ್ಯನಿಗೆ ತುಳ್ಳು ಹಿಡಿಯುವಂತೆ ಮಾಡಿ ಆತನಿಗೆ ಹೊಸ ಚೇತನವನ್ನು ಕೊಡುವ ವಸ್ತು" ಎಂದು ಹೇಳಿದ್ದಾರೆ.

ಮಾನವನಲ್ಲಿ ಸ್ವೈಸರ್ಗಿಕವಾಗಿರುವ ಆದರೆ ನಾಗರೀಕ ಸಮಾಜದ ಕಟ್ಟುನಿಟ್ಟುಗಳಿಂದ ಒತ್ತಿ ಹಿಡಿಯಲ್ಪಟ್ಟ ಭಾವನೆಗಳು ಹಾಸ್ಯಕ್ಕೆ ಎಡೆ ಕೊಡುವವು. ಹಾಸ್ಯವು ನಗುವನ್ನು ಪ್ರಚೋದಿಸುವದು. ಆದ್ದರಿಂದ ಲೈಂಗಿಕ ವಿಚಾರಗಳಲ್ಲಿ ಹೆಚ್ಚಿನ ಹಾಸ್ಯಕ್ಕೆಡೆಯಾಗುವದಾಗಿದೆ! ಏಕೆಂದರೆ ಲೈಂಗಿಕ ವಿಚಾರಗಳಷ್ಟು ಹೆಚ್ಚಾಗಿ ಸಮಾಜದಲ್ಲಿ ಒತ್ತಿ ಹಿಡಿಯಲ್ಪಟ್ಟ ವಿಷಯಗಳು ಬೇರಿಲ್ಲ. ಆದ್ದರಿಂದ ಫ್ರಾಯ್ಡ್ ಎಂಬ ಮಹನೀಯರು ಹೀಗೆ ಹೇಳಿರುವರು. "ಭಾವನೆಯ ಮಿತವ್ಯಯದ ಕಾರಣವಾಗಿ ಹಾಸ್ಯದ ಸಂತೋಷವೂ ಯೋಚನೆಯ ಮಿತವ್ಯಯದ ಕಾರಣ ಜಾಣ್ಮೆಯ ಆನಂದವೂ ಹುಟ್ಟುತ್ತವೆ" ಈ ಎರಡು ಪ್ರಸಂಗಗಳಲ್ಲೂ ನಗುವು ಹೆಚ್ಚಾದ ಚೇತನವನ್ನು ಹೊರಚೆಲ್ಲುವ ಸಾಧನವಾಗಿದೆ.

ಮಾನವನಲ್ಲಿ ನೈಸರ್ಗಿಕ ಸಹಾನುಭೂತಿಯನ್ನು ಆಹ್ವಾನಿಸದ ಹದವರಿತ ವಿರಸವು ನಗುವನ್ನು ಪ್ರಚೋದಿಸುತ್ತದೆ. ಮನುಷ್ಯನ ಜೀವನದಲ್ಲಿ ಅನೇಕ ಚಿಕ್ಕ ಅಕಸ್ಮಿಕಗಳಿರುತ್ತವೆ. ಅವುಗಳಿಗೆ ಪರಿಹಾರ ಒದಗಿಸುವುದು ಕಷ್ಟ. ಅಂಥವುಗಳಿಗೆ ನಗುವಿನ ಮಾರ್ಗವೇ ಪರಿಹಾರ ಮಾರ್ಗ. ಮೆಕ್‌ಡುಗಲ್ ಎಂಬವರು ಹೇಳುವ ಈ ತರ್ಕವು ಎಲ್ಲಾ ಸಮಯದಲ್ಲಿ ಸರಿ ಹೋಗದು. ಯಾವ ಬಹಿರ್ವಿಚಾರಗಳನ್ನೂ ತಿಳಿಯದ ಮಗುವಿನ ನಗುವಿಗೆ ಅರ್ಥವನ್ನು ಈ ವಿವರಣೆ ಕೊಡಲಾರದು. ಅದ ಕಾರಣ ನಗುವಿನ ವಿಶಿಷ್ಟ ವೈಶಿಷ್ಟ್ಯಗಳನ್ನು ನಾವು ಪರಿಶೀಲಿಸಬೇಕಾಗುವದು.

ನಗಲು ಕಾರಣಗಳಿರುತ್ತವೆ. ಯಾವದೇ ಪ್ರಚೋದನೆ ಇದ್ದರೂ ಒಬ್ಬನು ಇನ್ನೊಬ್ಬನ ಸೂಚನೆಯಿಂದಾಗಿ, ವಿನಯ ಪ್ರದರ್ಶನಕ್ಕಾಗಿ, ಇನ್ನೊಬ್ಬನನ್ನು ಕಡೆ ಗಣಿಸಲಿಕ್ಕಾಗಿ ತನ್ನ ಮೌಢ್ಯತೆಯನ್ನೇ ನೆನೆದವನಾಗಿ ನಗಾಡುತ್ತಾನೆ. ಆಟದ ಆನಂದದ ಕಾಲದಲ್ಲಿ ನಗುವಿನ ಅಗತ್ಯ ಇರದಿದ್ದರೂ ನಗುವಿಲ್ಲದಿದ್ದರೆ ಆಟ ರುಚಿಸಲಾರದು. ಮುಗುಳು ನಗೆಗೂ ನಗುವಿಗೂ ವ್ಯತ್ಯಾಸವಿದೆ. ಮುಗುಳು ನಗೆ ಅಕ್ರಿಯವಾದುದು. ಅದು ನಗುವವನಿಗೆ ಮಾತ್ರ ಪರಿಮಿತವಾದುದು. ಆದರೆ ನಗೆಯು ಬಹಿರಂಗವಾದುದು. ಶಿಶುವು ನಗೆಯನ್ನು ಕಲಿಯುವ ಎರಡು ತಿಂಗಳಿನ ಮೊದಲೇ ಮುಗುಳು ನಗೆಯನ್ನು ಕಲಿಯುತ್ತೆ. ನಗೆಯು ಇನ್ನೊಬ್ಬನನ್ನು ನಗಿಸಬಹುದು. ಇನ್ನೊಬ್ಬನಿಗೆ ದುಃಖಕ್ಕೆ ಕಾರಣವಾಗಬಹುದು. ಇಲ್ಲವೇ ಸಿಟ್ಟಿಗೇರಿಸಬಹುದು. ಆದರೆ ಮುಗುಳು ನಗೆಯು ಹಾಗಲ್ಲ. ಯಾರಿಗೂ ಅದರಿಂದ ಹಾನಿಯಾಗದು. ಅದು ಆಂತರಿಕವಾದುದು, ಬಹಿರಂಗವಾದುದಲ್ಲ.

ಎಲ್ಲಾ ನಗೆಗಳಿಗೂ ಅರ್ಥವಿರಲಾರದು. "ಲಾಫಿಂಗ್ ಗೇಸ್" ಎಂಬುದನ್ನು ಮೂಸಿದರೆ ನಗುವು ಬರುತ್ತದೆ. ಹಿಡಿತವಿಲ್ಲದ ಈ ನಗುವಿನಲ್ಲಿ ಅರ್ಥವಿರಲಾರದು. ನಗುವು ಸಾಮಾಜಿಕವಾದುದು. ಒಬ್ಬನೇ ಏಕಾಂಗಿಯಾಗಿರುವಲ್ಲಿ ನಗುವಿರಲಾರದು. ಮಹಾಕವಿ ಬೈರನ್ ಹೇಳಿದಂತೆ "ನಾನು ಯಾವದೇ ಮನುಜನನ್ನು ನೋಡಿ ನಗುವದಾದರೆ ಆತನನ್ನು ನೋಡಿ ಅಳಬಾರದೆಂಬ ಕಾರಣದಿಂದ" ನಗು ಮತ್ತು ಅಳು ಇವೆರಡು ಒಂದೇ ನಾಣ್ಯದ ಎರಡು ಬದಿಗಳಂತೆ! ಆದ್ದರಿಂದಲೇ "ಏ ರೋನೆವಾಲೆ ಹಸನೆ ಕೆ ದಿನ್ ದೂರ್ ನಹೀ ಹೈ" ಎಂದು ಹಾಡಿರಬೇಕು.

ಈ ಮೇಲಿನ ವಿವರಣೆಗಳಿಂದ ನಗುವೆಂಬುದು ಶರೀರದ ಯಾ ಮನಸ್ಸಿನ ಯಾವುದೋ ಒಂದು ಬಿಗುವಿನ ಸ್ಫೋಟನ. ಈ ಸ್ಫೋಟನೆ ಯಾವಾಗ, ಎಂಥಾ ಸನ್ನಿವೇಶದಲ್ಲಾಗುವದೆಂದು ನಿರ್ದಿಷ್ಟವಾಗಿ ಹೇಳಲಾಗದು. ಆದರೆ ಜನಜೀವನದಲ್ಲಿ ನಗೆಯು ಅತೀ ಅವಶ್ಯ. ಗಾಳಿ ನೀರುಗಳಂತೆಯೇ ಮಾನವನ ಜೀವನದಲ್ಲಿ ಇದಕ್ಕೆ ಪ್ರಾಮುಖ್ಯ ಪಾತ್ರವಿದೆ. ಜೀವನವು ಹಗುರವಾಗಬೇಕಾದರೆ, ಬಾಳು ಗೋಳಾಗದೆ ಉಳಿಯಬೇಕಾದರೆ, ನಗುವಿನ ಸಂಜೀವಿನಿ ಬೇಕು. ನಗುವು ಮನುಷ್ಯನಿಗೆ ದೇವರು ಕೊಟ್ಟಿರುವ ಅತ್ಯಮೂಲ್ಯ ವರ ಪ್ರಸಾದ. ಮಾನವ ಸಮಾಜಕ್ಕೆ ಸೋಡುಮುಖ ಸಲ್ಲದು. ನಕ್ಕು ನಲಿಯಬೇಕು, ನೆರೆಯವರನ್ನೂ ನಗಿಸಬೇಕು. ಇದಕ್ಕೇ ವಿವೇಕಾನಂದರು "When we are the Children of immortal bliss, why should- we be morese" ಅಮರ ಆನಂದದ ಮಕ್ಕಳಾಗಿರುವಾಗ ನಾವೇಕೆ ಬಾಡಿದ ಮುಖದಿಂದಿರಬೇಕು ಎಂದು ಕೇಳಿದ್ದಾರೆ. ಅಮೇರಿಕಾದಲ್ಲಿ "Laugh and grow fat" ಎಂಬ ಚಳುವಳಿ ಇದೆಯಂತೆ, ಅಂದರೆ 'ನಕ್ಕು ಆರೋಗ್ಯವಂತರಾಗಿರಿ' ಎಂಬುದೇ ಅವರ ಸಿದ್ಧಾಂತ. ನಗುವು ಶಾರೀರಿಕ ಆರೋಗ್ಯಕ್ಕೆ ಮಾತ್ರ ಉಪಕಾರಿಯಲ್ಲ. ಸಮಾಜದ ರೋಗಗಳಿಗೂ, ವ್ಯಕ್ತಿ ವ್ಯಕ್ತಿಗಳೊಳಗಿನ ವೈಷಮ್ಯಕ್ಕೂ ರಾಮಬಾಣದಂತೆ. ಈ ಅಮೂಲ್ಯ ವಸ್ತುವನ್ನು ಪ್ರತಿಯೊಬ್ಬನೂ ಕರಗತ ಮಾಡಿಕೊಳ್ಳಬೇಕು. ನಗುವಿನ ಸ್ಪರ್ಶದಿಂದ ವಿರಸ ಸರಸವಾಗುವದು. ಆದ್ದರಿಂದಲೇ ಸರ್ವಜ್ಞನು ಹೀಗೆ ಹೇಳಿರಬೇಕು.

ಸ್ವಾತಿಯಾ ಹನಿಬಿದ್ದು
ಜಾತಿ ಮುತ್ತಾದಂತೆ
ಸಾತ್ವಿಕನ ಜೀವ ಹಗುರಾಗಿ ನಗುವಿಂದ
ಜ್ಯೋತಿಯಂತಕ್ಕು—ಸರ್ವಜ್ಞ.

(ಕೊಡಗು)


Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya.

ಜೀವವಿಮೆಗಾಗಿ
ವಿಚಾರಿಸಿರಿ
ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ
ಲೈಫ್ ಇನ್ಶ್ಯೂರೆನ್ಸ್ ಕಂ., ಲಿಮಿಟೆಡ್.
(ಸ್ಥಾಪನೆ: 1934)
ಚೆಯರ್‌ಮನ್: ಶ್ರೀ. ಎಮ್. ಸಿಟಿ. ಎಮ್. ಚಿದಂಬರಮ್ ಚೆಟ್ಟಿಯಾರ್
ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೋಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಇದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.
ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,
ಹಂಪನಕಟ್ಟೆ, ಮಂಗಳೂರು.
ಕೇಂದ್ರ ಕಾರ್ಯಾಲಯ:
"ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್ ಪೋಸ್ಟು ಬಾಕ್ಸ್ ನಂಬ್ರ 142
ಮದ್ರಾಸು.






Approved from by the Govt. of Mysore
Certificated by the Agent of the Govt of Cylone & Indian.



## ವಿವಿಧ ಪಾತ್ರೆಗಳು



ಭಾವತ್ತೂ, ವಿಧದ ಬೆಳ್ಳಿ ತಾಮ್ರ, ಹಿತ್ತಾಳೆ, ಕಂಚು ... ಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಮಹಿಳಾ ಪುಟ

# ಫ್ಯಾಶನ್ನಿನ ಪ್ರಭಾವ!

"ಗಿರಿಬಾಲೆ"

**ಫ್ಯಾಶನ್ನಿಗೆ ತುತ್ತಾಗುವವರಾರು?**
**ಇಂದಿನ ಕೌತುಕ ಫ್ಯಾಶನ್ ನಾಳೆಗೆ ನಿತ್ಯವ್ಯವಹಾರವಾಗುವುದು!**
**ದೃಷ್ಟಿ, ಪರಾನುಕರಣ-ಇವುಗಳೇ ಫ್ಯಾಶನ್ನಿನ ಮುಖ್ಯ ಗುರಿಗಳು!**

'ಫ್ಯಾಶನ್'! ಎನಿತಹ ಗೊಂದಲದ ಶಬ್ದ ಇದು! ಪ್ರಪಂಚದ [illegible], ಸ್ವಾತಂತ್ರ್ಯದ ಹೋರಾಟ, ಕ್ರಾಂತಿಗಳ ತಂತ್ರ, ಹಿಂಸೆ, ವಿನಾಶಗಳ [illegible] ಈ ಶಬ್ದದಲ್ಲಿ ಅಡಗಿರುವವು. ಈ ಶಬ್ದ ನನಗೆ ನಕ್ಷತ್ರದಿಂದಲೆ ತಲೆಯ ಮೇಲೆ [illegible] ಬಣ್ಣ ಬಣ್ಣದ ರೂಪದ ಸ್ತ್ರೀಯರನ್ನು ಕಣ್ಣ ಮುಂದೆ ತೆರೆಯುವ [illegible]. ಎಂತೆಂತಹ [illegible] ಗಳು ನನಗೆ ಬಂದು ಬಿಡುವುವು. ಆ ಶಬ್ದದ ಉಚ್ಚಾರ ಮಾತ್ರದಿಂದ ರೋಮಾಂಚಗೊಳ್ಳುವವರೆಷ್ಟು ಮಂದಿ! ಕಣ್ಣು ಮುಚ್ಚಿ, ಧ್ಯಾನವೆಳೆದು ಪುಲಕಿತರಾಗುವವರು ತಾನೆ ಕಡಿಮೆಯೆ?

'ಫ್ಯಾಶನ್' ಎಂದರೇನು? ಆ ಶಬ್ದವು ಕೊಂಚ ವಿಚಿತ್ರವಾಗಿಯೇ ಇದೆ. ಯಾರಾದರೂ ಬಳಕೆಯಲ್ಲಿಲ್ಲದ ರೀತಿಯಲ್ಲಿ ಬಟ್ಟೆಯುಟ್ಟಾಗ ಅಥವ ಹಿಂದೆ ನೋಡದ ಯಾವುದಾದರೊಂದು ರೀತಿಯಿಂದ ಒಬ್ಬರು ತಮ್ಮನ್ನು ಅಲಂಕರಿಸಿಕೊಂಡಾಗ ಥಟ್ಟನೆ ಬಾಯಿಂದ-ಅದು ಈಗಿನ ಫ್ಯಾಶನ್! ಎಂಬ ವಾಕ್ಯವು ಹೊರಬೀಳುವುದು. ಫ್ಯಾಶನ್ ಎಂಬುದು ಆಂಗ್ಲ ಭಾಷೆಯ ಶಬ್ದ. ಅದಕ್ಕೆ ಕನ್ನಡದಲ್ಲಿ ಸರಿಯಾದ ಶಬ್ದವಿರುವುದೆಂದು ತಿಳಿದುಬರುವುದಿಲ್ಲ. 'ಸುಧಾರಣೆ' ಎಂಬ ಅನ್ವರ್ಥನಾಮದಿಂದ ಗುರ್ತಿಸುವುದಿದೆ. ಈ ಫ್ಯಾಶನ್ನಿನ ರೋಗವು ಶಬ್ದದಂತೆಯೇ ಪರದೇಶಿಯಾಗಿರುತ್ತದೆ. ಯಥಾರ್ಥದಲ್ಲಿ ಫ್ಯಾಶನ್ ಎಂದರೆ ಪರರು ಮಾಡಿದುದನ್ನು ಅನುಕರಿಸುವುದು. ಪರರನ್ನು ಅನುಕರಿಸುವುದು ಮನುಷ್ಯನ ಹುಟ್ಟುಗುಣವೇ ಆಗಿರಬೇಕು. ಏಕೆಂದರೆ ಕಪಿಗಳು ಹೆಚ್ಚಾಗಿ ಪರರನ್ನು ಅನುಕರಿಸುತ್ತವೆ. ಕಪಿಗಳಿಂದಾಗಿ ಮನುಷ್ಯರ ಉದ್ಭವವೆಂಬ ಪಾಶ್ಚಾತ್ಯ ಪಂಡಿತರಾದ ಡಾರ್ವಿನ್ನರ ಸಿದ್ಧಾಂತದಂತೆ ಅದು ಜನ್ಮಸಿದ್ಧವಾದ ಹಕ್ಕೇ ಆದಂತಾಯಿತು.

ಪಶ್ಚಿಮದೇಶವು ಫ್ಯಾಶನ್ನಿನ ತವರುಮನೆ ಅದು ಮೊದಲು ಹುಟ್ಟಿದುದು ಇಂಗ್ಲೆಂಡಿನಲ್ಲಂತೆ! ಎಲಿಜಬೆತ್ ರಾಣಿಯು ಫ್ಯಾಶನ್ನಿನ ಏಕಾಂತ ಉಪಾಸಕಳಾಗಿದ್ದಳು. ಇಂದು ಅವಳು ಒಂದು ತರದ ಉಡುಪು ಧರಿಸಿದರೆ ಮಾರನೆ ದಿನ ಅವಳ ಸ್ನೇಹಿತೆಯರು ಹೋಲಿಸಿಕೊಳ್ಳುವರು. ಅವರಿಂದಾಗಿ ಬೇರೆಯವರು-ಹೀಗೆ ಊರೆಲ್ಲ ಆ ಫ್ಯಾಶನ್ನಿನ ಉಡುಪು ಪಸರಿಸಿಕೊಳ್ಳುತ್ತಿತ್ತು. ಆ ದೇಶದವರಿಗೆ ಅನುಕರಣ ಶಕ್ತಿ ಬಹಳ ಹೆಚ್ಚು. ಚರಿತ್ರೆ ಪಾಠಶಾಲೆಯಲ್ಲಿ ಉಪಾಧ್ಯಾಯಿನಿಯು ಒಮ್ಮೆ ಹೇಳಿದ ಕತೆಯೊಂದು ನೆನಪಿಗೆ ಬರುವಾಗ ಯಾವಾಗಲೂ ನನಗೆ ನಗು ಬರುವುದಿದೆ. ಒಮ್ಮೆ ಎಲಿಜಬೆತ್ ರಾಣಿಯು ದರ್ಬಾರಿನ ಉಡುಪಿನವರೆಗ-ಅದು ಹೊಸದಾದುದರಿಂದ ಗುಂಡಿಯ ತೂತು ಬಿಗಿಯಲ್ಪಟ್ಟದ್ದು ಸರಿಯಾಗಿ ಸಿಕ್ಕಿಸಲ್ಪಟ್ಟದ್ದಿಲ್ಲವಂತೆ-ಭುಜದ ಬಳಿಯ ಒಂದೆರಡು ಗುಂಡಿಗಳು ತಪ್ಪಿ ಬಟ್ಟೆಯು ಸರಿದುಬಿದ್ದು ತೋಳು ಕಾಣಿಸಿತಂತೆ. ಅದನ್ನು ನೋಡಿ ಅಲ್ಲಿ ನೆರೆದಿದ್ದ ಸ್ತ್ರೀಯರು ಈ ಹೊಸ ಫ್ಯಾಶನ್ನಿನ ಬಟ್ಟೆ ಹೊಲಿಸಿ ಯಾವಾಗ ತಮ್ಮನ್ನು ಅಲಂಕರಿಸಿಕೊಂಡೇವು ಎಂದು ತವಕಪಟ್ಟು ತತ್ತರಿಸಿದರಂತೆ. ಮರುದಿನವೇ ಊರೆಲ್ಲ ಒಂದು ತೋಳು ಕಾಣಿಸುವ ಉಡುಪು ಜಾರಿಯಲ್ಲಿ ಬಂದಿತಂತೆ! ಇದೀಗ ಕಥೆ—ಹೀಗಿದೆ ಫ್ಯಾಶನ್ನಿನ ಉತ್ಪತ್ತಿ!

ಗಂಡಸರಾದರೂ ಈ ಫ್ಯಾಶನ್ ಬಲೆಗೆ ಬೀಳದಿಲ್ಲ. ಒಮ್ಮೆ ಫ್ರಾನ್ಸಿನಲ್ಲಿ ಒಬ್ಬನು ಕ್ಷೌರ ಮಾಡಿಕೊಳ್ಳುತ್ತಿದ್ದಾಗ ಅರ್ಧ ಕ್ಷೌರ ಮುಗಿಸುವುದರೊಳಗೆ ಫೋನಿನ ಗಂಟೆಯಾಗಲು ವಿಷಯ ಕೇಳುತ್ತಾನೆ, ಅವನ ನಲ್ಲೆಯು ಯಾವುದೋ ಅಪಘಾತಕ್ಕೆ ಗುರಿಯಾಗಿ ಆಸ್ಪತ್ರೆಗೆ ಸಾಗಿಸಲ್ಪಟ್ಟುದಾಗಿತ್ತು. ಒಡನೆ ಕೋಟನ್ನು ಸಿಕ್ಕಿಸಿ ಕಕ್ಕಾಬಿಕ್ಕಿಯಾಗಿ ಆಸ್ಪತ್ರೆಯ ಕಡೆಗೆ ಹೊರಟ. ಅವನಿಗೆದುರಾದವರೆಲ್ಲ ಈ ಹೊಸ ಫ್ಯಾಶನ್ನಿನ ಕ್ಷೌರವನ್ನು ಪಕ್ಕದಂಗಡಿಗೆ ಹೋಗಿ ಮಾಡಿಸಿಕೊಂಡರು. ಅದೇ ಈಗಿನ ಫ್ರೆಂಚ್‌ಕಟ್! ಮಾಡಿದ ವಿಚಿತ್ರಗಳೆಲ್ಲ ಒಂದು ಫ್ಯಾಶನ್ ಆಗಿಬಿಡುವುದು. ಕೋಟು ಶರ್ಟುಗಳ ಕಾಲರ್ ಉತ್ಪತ್ತಿಯಾದರೂ ಅನುಕರಣದಿಂದಲೇ ಉಂಟಾಗಿದೆ. ಯಾವನೋ ಒಬ್ಬನು ಕುತ್ತಿಗೆಯಲ್ಲಿದ್ದ ಹುಣ್ಣಿಗೆ ಮುಲಾಮು ಹಚ್ಚಿ ಬಟ್ಟೆ ಸುತ್ತಿಕೊಂಡಿದ್ದ. ಸರಿ! ಮತ್ತೊಬ್ಬ ವಿನಾಕಾರಣ ಸುತ್ತಿದ, ಕಾಲಕ್ರಮೇಣ, ಒಂದು ಸುತ್ತು ಬಟ್ಟೆಯು ಶರ್ಟು—ಕೋಟುಗಳಿಗೆ ಅಂಟಿಕೊಂಡಿತು.

ಫ್ಯಾಶನ್ ರೋಗವು ಎಷ್ಟು ಬೇಗ ಹರಡುವುದೋ ಅಷ್ಟೇ ತ್ವರಿತದಲ್ಲಿ ಅದಕ್ಕೆ ಬೇರೆ ಬೇರೆ ರೂಪೂ ಉಂಟಾಗುವುದಿದೆ. ಒಮ್ಮೆ ಅದೇ ಪಶ್ಚಿಮ ದೇಶೀಯನೊಬ್ಬನು ಕೈಯಲ್ಲೊಂದು ಹೆಂಗಸಿನ ಟೊಪ್ಪಿಯನ್ನು ಹಿಡಿದುಕೊಂಡು ಬೇಗಬೇಗ ದಾರಿ ಸಾಗಿದ್ದ. ಪಕ್ಕದಿಂದೊಬ್ಬ-ಅವನ ಸ್ನೇಹಿತ-ತನ್ನ ಮನೆಗೆ ಸ್ವಲ್ಪ ಬಂದುಹೋಗುವಂತೆ ಹೇಳಿದ. ಅದಕ್ಕವನು ಅವಸರದಿಂದ 'ಕ್ಷಮಿಸು, ಈ ಟೊಪ್ಪಿಯನ್ನೊಮ್ಮೆ ನನ್ನ ಅರ್ಧಾಂಗಿನಿಗೆ ಕೊಟ್ಟು ಬರುವೆನು. ಇಲ್ಲದಿದ್ದರೆ ಫ್ಯಾಶನು ಬದಲಾಯಿಸಿಬಿಟ್ಟೀತು!' ಎಂದುತ್ತರವಿತ್ತನಂತೆ.

ಭಾರತದಲ್ಲಿ ಫ್ಯಾಶನ್ನಿನ ಅಧ್ವಾನವಾಗಿದೆಯೆನ್ನಬಹುದು, ಕೋತಿಯು ಕುಣಿದರೆ ಚೆನ್ನಾಗಿರುತ್ತದೆ ಅದನ್ನು ಕಂಡು ಒಂಟೆಯು "ನಾನೂ ಕುಣಿವೆ"ನೆಂದರೆ ಯಾರು ನಗುವುದಿಲ್ಲ! ಫ್ಯಾಶನ್ ರೋಗದಿಂದ ಆಗುವ ಅನರ್ಥಗಳಿಗೆ ಲೆಕ್ಕವಿಲ್ಲ ಅದರ ಮದ್ದಿಗೆ ಅಗಾಧ ಬೆಲೆ. ಅದು ತಿಳಿದೂ ತಾನಾಗಿ ಬಾರದ ಈ ರೋಗವನ್ನು ಬೇಕೆಂದೇ ಮೈಗೆ ಹಚ್ಚಿಕೊಳ್ಳುವವರನೇಕ. ಚಿಕ್ಕ ಮಕ್ಕಳಿಗೂ ಕೂಡ ಎರಡು ಕಾಸು ಮನೆಯ ಹಿರಿಯರಾದರೂ ಕೊಟ್ಟರೆ ಬಾಳೆಹಣ್ಣು ತೆಗೆದು ದೇವರಿಗೆ ನೈವೇದ್ಯಮಾಡಿಸಿ ತಿನ್ನಬೇಕೆಂಬ ಕಾಲ ಹೋಯಿತು. ಒಂದು ಗಜ ರಿಬ್ಬನ್ ತೆಗೆಯಬೇಕೆಂಬ ಆಸೆ ಹುಟ್ಟುತ್ತದೆ. ಪತಿಯು ಪ್ರೀತಿಯಿಂದ ತನ್ನವಳಿಗೆ ಪೇಟೆಯಿಂದ ಮರಳುವಾಗ ಏನು ತರಬೇಕೆಂದು ಕೇಳಿದಾಗ ಒಂದು ಕುಚ್ಚು ಹೂ ಎಂಬ ಕಾಲವೆಲ್ಲೋ!. ಸೆಂಟ್, ಪೌಡರ್, ಕ್ಲಿಪ್ಸ್-ಇನ್ನೂ ಏನೇನೋ ವಸ್ತುಗಳ ಪಟ್ಟಿಯು ದಾಖಲಾಗುವ ಕಾಲವಿದು.

ಈ ಫ್ಯಾಶನ್ನಿನಿಂದಾಗಿ ಜನರಿಗೆ ಏನಾದರೂ ಪ್ರಯೋಜನವುಂಟೆ? ಎಂದು ಯೋಚಿಸುವಾಗ, ದೊಡ್ಡ ದೊಡ್ಡ ಕೆಮಿಕಲ್ ಕಂಪೆನಿಗಳೂ, ಅದರಲ್ಲಿ ದುಡಿಯುವ ಜನರೂ, ಅವರ ಹೆಂಡತಿ ಮಕ್ಕಳೂ ಕಣ್ಣ ಮುಂದೆ ಬಂದು ನಿಂತು, 'ನಮ್ಮೆಲ್ಲರ ಪೋಷಕ ಶಿಶು ಈ ಫ್ಯಾಶನ್! ಅದು ಚಿರಕಾಲ ಬಾಳಲಿ!' ಎಂದು ಕೂಗುವ ಶಬ್ದ ಗಗನವನ್ನು ಭೇದಿಸುತ್ತಿರುವುದು. ಎಂದೋ ಮಣ್ಣುಪಾಲಾದ ಪ್ರಾಣಿಗಳ ಅಸ್ಥಿಗಳು, 'ನಾವು ಹಾಳು ಹೀನ ಜನ್ಮವೆತ್ತಿದರೂ, ನಮ್ಮ ಕೊಬ್ಬು, ಎಲುಬು ಮೊದಲುಗೊಂಡು ಚರ್ಮ, ಕೂದಲುಗಳ ವರೆಗೂ ಈ ಫ್ಯಾಶನ್ನಿನಿಂದಾಗಿ ಉಪಯೋಗಿಸಲ್ಪಟ್ಟು 'ಪರೋಪಕಾರಾರ್ಥಮಿದಂ ಶರೀರಮ್'' ಎಂಬ ವಾಕ್ಯವು ನಮ್ಮಿಂದ ಸಾರ್ಥಕವಾಗಿ ಮಾಡಲ್ಪಟ್ಟಿತು, ಫ್ಯಾಶನ್ ಚಿರಾಯುವಾಗಲಿ!' ಎಂಬ ಕೂಗು ಗಾಳಿಯೊಳಗೆ ಬೆರೆತಿರುವುದು.

ಫ್ಯಾಶನ್ನಿನಿಂದ ಕೆಡುಕುಂಟೆ? ಎಂದು ಚಿಂತಿಸುವಾಗ, ಮೊದಲು ಕಾಣುವುದು ನನ್ನ ಗೆಳತಿಯ ಬಾಡಿದ ಮುಖ. ಅವಳೊಬ್ಬ ಹಳ್ಳಿಯ ಹುಡುಗಿ, ಪಟ್ಟಣಿಗನೊಬ್ಬನ ಪತಿಯಾಗಿರುವಳು. ಅವಳ ಪತಿಗೆ ಬರುವುದು ತಿಂಗಳಿಗೆ ೬೦ ರೂಪಾಯಿ ಸಂಬಳ. ಅವಳಿಗೆ ಪಟ್ಟಣದ ಗಾಳಿ ತಾಗಿ ಫ್ಯಾಶನ್ ಮಾಡಬೇಕೆಂಬ ಆಸೆ, "ಕಟ್ ಬಾರ್ಡರ್ ಮಲ್ ಸೀರೆ ಬರೇ ಮೂರು ರೂಪಾಯಿ; ನೀವು ತರುವ ಹತ್ತು ರೂಪಾಯಿಗಳ ದಟ್ಟಿ ಸೀರೆಗೆ ೩ ಸೀರೆಗಳು ಬರುವುವು. ನೋಡಲಿಕ್ಕೆ ನಾಗರೀಕವಾಗಿರುತ್ತದೆ' ಎಂದು ಗಂಡನಲ್ಲಿ ಅವಳೆಷ್ಟು ಪೀಡಿಸಿದರೂ "ಆ ಮೂರು ಸೀರೆ ಮೂರು ತಿಂಗಳು ಬರುವುದಿಲ್ಲ. ಈ ಒಂದು ಸೀರೆ ಆರು ತಿಂಗಳಿಗೆ ಸಾಕು" ಎಂದವನು ಉತ್ತರ ಕೊಡುವನು. ಅದಕ್ಕಿಂತ ಹೆಚ್ಚು ಹೇಳಲು ಅವಳಿಗೆ ಧೈರ್ಯ ಸಾಲದು.

ಸುವಾಸನೆ ತೈಲ ಹಾಕಿಕೊಳ್ಳುವ ಹುಚ್ಚಿನಲ್ಲಿ, ಯಾವುದೋ ಸೆಂಟನ್ನು ಕೊಬ್ಬರಿ ಎಣ್ಣೆಗೆ ಬೆರೆಸಿ ಹಾಕಿದುದರ ಫಲವಾಗಿ, ಪಾಪ! ಕೂದಲು ಬಿಳಿಯಾಗ ತೊಡಗಿವೆ. ಒಂದು ದಿನ ಅಕ್ಕಿ ಹಿಟ್ಟನ್ನು ಮುಖಕ್ಕೆ ತಿಕ್ಕುವಾಗ ನಾನವಳನ್ನು ಕಂಡು, "ಏತಕ್ಕಾಗಿ ತಿಕ್ಕುವೆ" ಎಂದು ಕೇಳಿದೆ, ಅವಳು ದುಃಖದಿಂದ, "ಏನು ಮಾಡಲಿ? ಅವರು ಪೌಡರ್ ತಂದು ಕೊಡುವುದಿಲ್ಲ, ಎಲ್ಲರೂ ಹಾಕುವಾಗ ನನಗೂ ಆಸೆಯಾಗುತ್ತದೆ" ಎಂದಳು, ಅವಳ ಪತಿಯಂತೂ ಆರ್ಥಿಕ ಕಷ್ಟದ ದೆಸೆಯಿಂದ ತಂದು ಕೊಡುವ ಹಾಗಿಲ್ಲ. ಅವಳಿಗೆ ಮನಸ್ಸಮಾಧಾನವಿಲ್ಲ. ಆದರಿಂದಾಗಿ ಅವಳ ಮನೆಯಲ್ಲಿ ಕಲಹಗಳಿಗೆ ಕೊರತೆಯೂ ಇಲ್ಲ.

ನಮ್ಮ ದೇಶದಲ್ಲಿ ಸ್ತ್ರೀಯರಿಂದಲೇ ಆಸ್ತಿಕತನವು ಸ್ವಲ್ಪ ಮಟ್ಟಿಗಾದರೂ ಉಳಿದಿದೆ ಎಂಬ ಪ್ರತೀತಿಯು ಸಹ ಸುಳ್ಳಾಗುವ ಕಾಲವೂ ಬಂದಿದೆ. ಈ ಫ್ಯಾಶನ್ ರೋಗದಿಂದ! ಒಂದು ದಿನ ವಾಯು ಸೇವನೆಗಾಗಿ ಹೊರಟ ಸ್ಥಳದಲ್ಲಿ ಹಳೆ ಸ್ನೇಹಿತೆಯೊಬ್ಬಳ ಭೇಟಿಯಾಯಿತು. ಅವಳನ್ನು ನೋಡುತ್ತಲೆ ನನಗೆ ಎದೆಯೊಡೆದಂತಾಯಿತು. ಹಣೆಯಲ್ಲಿ ಕುಂಕುಮವಿಲ್ಲ; ಕತ್ತಿನಲ್ಲಿ ಕರಿಮಣಿಯಿಲ್ಲ, ದುಃಖದಿಂದ ಹೇಳಿದೆ. "ಬಹುಕಾಲದ ಮೇಲೆ ನಿನ್ನನ್ನು ಈ ಸ್ಥಿತಿಯಲ್ಲಿ ನೋಡಲು ಸಂಕಟವಾಗುತ್ತದೆ." ಅವಳು ಸಿಡುಕಿನಿಂದ ಹೇಳಿದಳು: "ನಾನು ಕಾನ್ವೆಂಟಿಗೆ ಹೋಗುವುದು ನಿನಗೆ ಗೊತ್ತಿಲ್ಲದಿದ್ದುದರಿಂದ ನೀನು ಹೀಗೆ ಹೇಳಿದೆ. ಅಲ್ಲಿ ನಾವು ಕೆಲವೇ ಜನ ಕುಂಕುಮವಿಡುವವರು. ನಾಚಿಕೆಯಾಗುತ್ತದೆ. ಇನ್ನು ಕರಿಮಣಿ ಹಾಕಿಕೊಂಡರೆ ಆ ಹುಡುಗಿಯರು ಕೇಳುವ ಪ್ರಶ್ನೆಗಳಿಗೆ ಉತ್ತರ ಕೊಟ್ಟೂ ಕೊಟ್ಟು ಸಾಕಾಗುತ್ತದೆ. ಅದ್ದರಿಂದ ತೆಗೆದಿಟ್ಟದ್ದೇನೆ, ಮತ್ತೇನಿಲ್ಲ. ಕುಂಕುಮ ಕರಿಮಣಿಗಳೇನೂ ಪತಿಯ ಆಯುಷ್ಯವನ್ನು ಹಿಡಿದಿಡುವ ಶಕ್ತಿಯನ್ನು ಹೊಂದಿಲ್ಲವಷ್ಟೆ? ಅಲ್ಲದೆ ಯೂನಿಫಾರ್ಮ್ ಡ್ರೆಸ್ಸಿಗೆ ಅದು ಸರಿ ಹೋಗುವುದಿಲ್ಲ' ಎಂದಳು! ಬೊಂಬಾಯಿಯ [illegible] ವಿಧವೆಯರೊಮ್ಮೆ 'ಕುಂಕುಮ ಹಚ್ಚಿಕೊಂಡರೇನು!' ಎಂದು ಹಾವಳಿ ಎಬ್ಬಿಸಿರುವಾಗ ಸಧವೆಯರು ಹೀಗೆ ಮಾಡುವುದೂ ಒಂದು ಫ್ಯಾಶನ್ ಇಂಬಹುದು.

"ಓದಲು ಒಂದೆರಡಕ್ಷರ ಕಲಿತರೋ, ಹುಡುಗರಾಗಲಿ, ಹುಡುಗಿಯರಾಗಲಿ ಹಾಳಾಗುತ್ತಾರೆ. ಹುಡುಗರು ಹೇಗೂ ಹೋಗಲಿ; ಲಕ್ಷಣವಾಗಿ ಗೃಹಲಕ್ಷ್ಮಿಯರಂತಿರಬೇಕಾದ ಹುಡುಗಿಯರು ಈ ಹಾಳು ಓದುವಿಕೆಯಿಂದ ಕ್ರಿಶ್ಚಿಯನರಂತಾಗುತ್ತಾರೆ." ಎಂದು ಅಜ್ಜಿಗಳಿಗೆ ಒಂದು ವಾಕ್ಯವನ್ನು ಹೇಳಿಕೊಟ್ಟದ ಈ ಫ್ಯಾಶನ್! ಓದುವಿಕೆಯು ಎಂದೂ ಇಂತಹುದನ್ನು ಹೇಳಿಕೊಡುವುದಿಲ್ಲವೆಂದು ಎಷ್ಟು ಶಂಖನಾದ ಮಾಡಿದರೂ ಅವರು ಕೇಳುವರೆ? ಶಾಲೆಗೆ ಹೋಗುವ ಹುಡುಗಿಯರು ಅನೇಕ ಜಾತಿಯ ಹುಡುಗಿಯರೊಂದಿಗೆ ಬೆರೆಯಬೇಕಾಗಿ ಬರುವುದೇನೋ ನಿಜ. ಆದರೆ ಯಾರೂ ಅವರಿಗೆ 'ನಮ್ಮಂತೆ ಮಾಡಿ' ಎನ್ನುವವರು ಇಲ್ಲ. ಬೇರೆಯವರಲ್ಲಿದ್ದ ಸದ್ಗುಣಗಳನ್ನು ಅನುಕರಿಸುವ ಶಕ್ತಿಯಿಲ್ಲದಿದ್ದರೂ ಇಂತಹ ಬೇಡದ ವಿಷಯಗಳು ಬಹುಬೇಗ ನಮ್ಮ ಹುಡುಗಿಯರಿಗೆ ತಾಗಿ ಅವರು ಬೆಳೆದು ಸ್ತ್ರೀಯರಾಗುವಾಗ ಅವು ಪರಮಾವಧಿಯನ್ನು ಹೊಂದುತ್ತವೆ.

ಚಿಕ್ಕ ಮಗುವಿಗೆ ಅಜ್ಜಿಯು ರಾಗಿ ಹಿಟ್ಟಿನ ಸತ್ತ್ವನ್ನು ಕೊಡಲು ಹೇಳಿದರೆ, ಅದು ಹಳೆಯ ಕಾಲದ ಆಹಾರ; ಈಗ 'ಮಕ್ಕಳ ಆಹಾರ'ವೆಂದು ಡಬ್ಬಿಗಳಲ್ಲಿ ಸಿಕ್ಕುವುದೇ ಉತ್ತಮವೆಂದು ಫ್ಯಾಶನ್ ರೋಗ ತಾಗಿದ ತಾಯಿಂದಿರ ವಾದ, ಮನೆಯಲ್ಲಿ ಮಾಡುವ ಮಿಠಾಯಿಗಳನ್ನು ಇದೀಗ ಎಷ್ಟು ಮಕ್ಕಳು ಪ್ರೀತಿಸುವರು? "ಚಾಕಲೇಟ್" ಎಂದರೆ ಅದೇ ಈಗ ದೈವಿಕ ಆಹಾರ. ಫ್ಯಾಶನ್ ರೋಗ ಪೀಡಿತರು ಅದನ್ನೇ ಆಗ್ರಹಪೂರ್ವಕ ತಮ್ಮ ಮಕ್ಕಳಿಗೆ ಕೊಡುವರು. ಸಾಯಂಕಾಲವಾಯಿತೆಂದರೆ ಮಕ್ಕಳನ್ನು ಕಂಡವರ ಪಾಲಿಗೆ ಬಿಟ್ಟು, ಕೈಯಲ್ಲಿ ಬ್ಯಾಟ್ ಹಿಡಿದು ಕ್ಲಬ್ಬಿಗೆ ಹೋಗುವ ಕಾಲವನ್ನು ಫ್ಯಾಶನ್ ತಂದೊಡ್ಡಿದೆ.

ಅಕಾಲನರೆತ, ಅಗ್ನಿಮಾಂದ್ಯ, ಚರ್ಮರೋಗ, ದೃಷ್ಟಿಮಾಂದ್ಯತೆ, ಮನೆಯಲ್ಲಿ ಅಸಮಾಧಾನ, ಮಕ್ಕಳ ಪ್ರತಿ ಅಲಕ್ಷ್ಯ. ಇವೆಲ್ಲ ಏತರಿಂದ? ಫ್ಯಾಶನ್ನಿನ ಪ್ರಭಾವದಿಂದ'

(ಕಥಾವಳಿ)


**ಅಮೃತಾಂಜನ**

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ಬಚ್ಚುಕೊಳ್ಳುವುದು, ಚೇಳುವಿಷದುಂಟಾದವು, ಪಕ್ಷವಾತ, ಮೊದಲಾದ ಎಲ್ಲ ರೋಗಗಳಿಗೂ ಸಿದ್ಧೌಷಧ.

REGD

ಹಳುಕಡ್ಡಿ|ಮದ್ದು|ನಮ್ಮಲ್ಲಿ ಸಿಕ್ಕುತ್ತದೆ.

**ಅಮೃತಾಂಜನ ಲಿಮಿಟೆಡ್**

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.



**ಋತುಸ್ರಾವ ನಿಂತಿತು**

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹೊಟ್ಟೆಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ–ಬೆಲೆ; ರೂ 3-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ. 8- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

MRS. P. DEVEE, F. DS. (N. J.)
Tollygunge CALCUTTA

ಸ್ಟಾಕಿಸ್ಟರು: ಶಹಾಕಂಪೆನಿ, ಮಂಗಳೂರು


EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.